ಕರ್ನಾಟಕ ವಿಧಾನ ಸಭೆಯ ನಡೆವಳಿಕೆಗಳು

KARNATAKA LEGISLATIVE ASSEMBLY DEBATES

ಕರ್ನಾಟಕ ರಾಜ್ಯ ಲೆಜಿಸ್ಲೇಚರ್,
ಗ್ರಂಥಾಲಯ,
ವಿಧಾನ ಸೌಧ, ಬೆಂಗಳೂರು,
ಪ್ರ.ಸಂ. [illegible] ದಿನಾಂಕ [illegible]

ಅಧಿಕೃತ ವರದಿ

OFFICIAL REPORT

ಹನ್ನೆರಡನೆಯ ಅಧಿವೇಶನ

TWELTH SESSION

ಸಂಪುಟ ೪ (ಕ್ರಮಾಂಕ ೧ರಿಂದ ೫)

VOLUME IV - (NOS. 1 TO 5)

(೨೨ನೇ ಮಾರ್ಚ್ ೧೯೯೪ರಿಂದ ೨೫ನೇ ಮಾರ್ಚ್ ೧೯೯೪ರವರೆಗೆ
ಮತ್ತು ೨೮ನೇ ಮಾರ್ಚ್ ೧೯೯೪)

(22nd March 1994 to 25th March 1994 & 28th March 1994)

ಕರ್ನಾಟಕ ವಿಧಾನ ಮಂಡಲದ ಕಾರ್ಯಾಲಯ ಬೆಂಗಳೂರು

Karnataka Legislature Secretariat, Bangalore

CONTENTS

TO THE :

KARNATAKA LEGISLATIVE ASSEMBLY DEBATES

Volume IV - (Nos 1 to 5)

(೨೨ನೇ ಮಾರ್ಚ್ ೧೯೯೪ರಿಂದ ೨೫ನೇ ಮಾರ್ಚ್ ೧೯೯೪
ಮತ್ತು ೨೮ನೇ ಮಾರ್ಚ್ ೧೯೯೪ರವರೆಗೆ)

ಮಂಗಳವಾರ ೨೨ನೇ ಮಾರ್ಚ್ ೧೯೯೪

ಚೈತ್ರ ೮, ಶಕ ೧೯೧೫

1. ಸಂತಾಪ ಸೂಚಕ ನಿರ್ಣಯ 1-2
2. ನಿಲುವಳಿ ಸೂಚನೆಗೆ ಅನುಮತಿ ಕೋರಿಕೆ 2
   (1) ಗ್ರಾಮ ಪಂಚಾಯಿತಿ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಚುನಾವಣೆಯಲ್ಲಿ ಸರ್ಕಾರದ ಹಸ್ತಕ್ಷೇಪ 2-7
3. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು 7-47
4. ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು 47-49
5. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು 50-60
6. ಪ್ರಕಟಣೆ 60-61
7. ಕಾರ್ಯದರ್ಶಿಯವರ ವರದಿ 61
8. ನಿಲುವಳಿ ಸೂಚನೆಗೆ ಅನುಮತಿ ಕೋರಿಕೆ 62
   (1) ಗ್ರಾಮಪಂಚಾಯಿತಿ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಚುನಾವಣೆಯಲ್ಲಿ ಸರ್ಕಾರದ ಹಸ್ತಕ್ಷೇಪ 62-160

ಬುಧವಾರ ೨೩ನೇ ಮಾರ್ಚ್ ೧೯೯೪

ಚೈತ್ರ ೯, ಶಕ ೧೯೧೫

1. ನಿಲುವಳಿ ಸೂಚನೆಗೆ ಅನುಮತಿ ಕೋರಿಕೆ 161
   1) ರಾಜ್ಯದಲ್ಲಿ ಗ್ರಾಮ ಪಂಚಾಯಿತಿಯ ಅಧ್ಯಕ್ಷರು-ಉಪಾಧ್ಯಕ್ಷರ ಚುನಾವಣೆಯಲ್ಲಿ ನಡೆದ ಗಲಭೆ ಹಾಗೂ ಅವ್ಯವಹಾರದ ಬಗ್ಗೆ ನ್ಯಾಯಾಂಗ ತನಿಖೆಗೆ ಒತ್ತಾಯ 161-171

ಗುರುವಾರ ೨೪ನೇ ಮಾರ್ಚ್ ೧೯೯೪

ಚೈತ್ರ ೧೦, ಶಕ ೧೯೧೫

1. ಸಂತಾಪ ಸೂಚಕ ನಿರ್ಣಯ 173-174
2. ಜನತಾದಳ ಸದಸ್ಯರಿಂದ ಧರಣಿ 174-176
3. ಪ್ರಸ್ತಾವ 176
   "ಜನತಾದಳ ಸದಸ್ಯರುಗಳನ್ನು ಈ ದಿವಸದ ಕಾರ್ಯಕಲಾಪಗಳು ಮುಗಿಯುವವರೆಗೆ ಸಭೆಯಲ್ಲಿ ಭಾಗವಹಿಸದಂತೆ ನಿಷೇಧ. 176-178
4. ತಾಲ್ಲೂಕು ಪಂಚಾಯತಿ ಹಾಗೂ ಜಿಲ್ಲಾಪಂಚಾಯತ್ ಚುನಾವಣೆಗಳನ್ನು ಮುಂದೂಡಿರುವುದು 178-181
5. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು 181-192
6. ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು 192-199
7. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು 199-213
8. ದಿನಾಂಕ : 23-3-94ರ ಚುಕ್ಕೆ ಗುರುತಿನ ಹಾಗೂ ಚುಕ್ಕೆ ಗುರುತಿಲ್ಲದ ಪ್ರಶ್ನೋತ್ತರಗಳ ಮಂಡನೆ 213-240
9. ಸಭೆಯ ಮುಂದಿಡಲಾದ ಕಾಗದ ಪತ್ರಗಳು 240-250
10. ಪ್ರಸ್ತಾವ 250
   (ಶ್ರೀ ಬಸವರಾಜ್ ರಾಯರೆಡ್ಡಿ ಅವರು ಸಭೆಯ ಕಾರ್ಯಕಲಾಪಗಳಿಗೆ ಅಡ್ಡಿಪಡಿಸುತ್ತಿರುವುದರಿಂದ ಅವರನ್ನು ಸಭೆಯ ಅಧಿವೇಶನ ಮುಗಿಯುವವರೆಗೆ ಸಭೆಗೆ ಹಾಜರಾಗದಂತೆ ನಿಷೇಧ) 250-251

11. ರಾಜ್ಯದ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರ-ಉಪಾಧ್ಯಕ್ಷರ ಚುನಾವಣೆಗಳಲ್ಲಿ ಆದ ಗಲಭೆ ಹಾಗೂ ಅವ್ಯವಹಾರಗಳ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳಿಂದ ಉತ್ತರ 251-266
12. ವರದಿಯನ್ನೊಪ್ಪಿಸುವುದು 266
13. ಗಮನ ಸೆಳೆಯುವ ಸೂಚನೆ
   1. ತೋಟಗಾರಿಕೆ ಬೆಳೆಗಳಿಗೆ ಹನಿ ನೀರಾವರಿ ಯೋಜನೆಯಿಂದ ತೊಂದರೆ 266-271
   2. ರಾಜ್ಯದಲ್ಲಿ ಕೊಬ್ಬರಿ ಬೆಲೆ ಕುಸಿತದಿಂದ ರೈತರಿಗೆ ತೊಂದರೆ. 271-276
14. ನಿಯಮ 334ರ ಮೇರೆಗೆ 276
   1. ಬೆಳಗಾವಿ ಜಿಲ್ಲೆಯ ಸಂಕೇಶ್ವರ ಮತ್ತು ಯಮಕನಮರಡಿ ಗ್ರಾಮದಲ್ಲಿ ವಿದ್ಯಾರ್ಥಿನಿಲಯ ಕಟ್ಟಲು ಮಂಜೂರಾತಿ 276-277
   2. ಬೆಳ್ತಂಗಡಿ ತಾಲ್ಲೂಕಿನಲ್ಲಿ ಖಾಲಿ ಇರುವ ವೈದ್ಯರ ದಾದಿಯರ ಹಾಗೂ ಇತರ ಹುದ್ದೆಗಳನ್ನು ಭರ್ತಿಮಾಡುವುದು 277-278
   3. ಸಾರ್ವಜನಿಕ ಶಿಕ್ಷಣ ಇಲಾಖೆಯ ಸಹಾಯಕ ವಿದ್ಯಾಧಿಕಾರಿಗಳ ಹಾಗೂ ಉಪ ನಿರ್ದೇಶಕರುಗಳ ಅಧಿಕಾರ ವ್ಯಾಪ್ತಿ 278-279
   4. ರಾಜ್ಯದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡುವುದು 279
15. ಚುನಾವಣಾ ಪ್ರಸ್ತಾವ 279-280
16. ಪ್ರಕಟಣೆ 280

ಶುಕ್ರವಾರ ೨೫ನೇ ಮಾರ್ಚ್ ೧೯೯೪

ಚೈತ್ರ ೧೧, ಶಕ ೧೯೧೫

1. ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲ್ಪಟ್ಟ ವಿಷಯ 281
   ಜನತಾ ದಳದ ಸದಸ್ಯರನ್ನು ಅಮಾನತ್ತುಗೊಳಿಸಿದ ಬಗ್ಗೆ 281-290
2. ಗ್ರಾಮ ಪಂಚಾಯತಿಗಳಲ್ಲಿ ಅಧ್ಯಕ್ಷರು ಮತ್ತು ಉಪಾಧ್ಯಕ್ಷರುಗಳನ್ನು ಮೀಸಲಾತಿ ಆಧಾರದ ಮೇಲೆ ಚುನಾಯಿಸಿರುವ ಕುರಿತು 290-310
3. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು 310-323
4. ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು 323-333

5. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು 333-370

6. ಸಭೆಯ ಮುಂದಿಡಲಾದ ಕಾಗದ ಪತ್ರಗಳು 370

7. ನಿಯಮ 334ರ ಮೇರೆಗೆ 370

   1. ತುಮಕೂರು ಜಿಲ್ಲೆ ಶಿರಾ ತಾಲ್ಲೂಕು ಬುಕ್ಕಪಟ್ಟಣ ಹೋಬಳಿ ಚಿಕ್ಕಸಂದ್ರ ಕಾವಲ್ ಸರ್ವೆ ನಂ. 1ರ 256 ಎಕರೆ ಜಮೀನನ್ನು ಕಂದಾಯ ಇಲಾಖೆಗೆ ವರ್ಗಾಯಿಸುವುದರ ಬಗ್ಗೆ 370-371
   2. ಸ್ನಾತಕೋತ್ತರ ಪರೀಕ್ಷೆಗೆ ಸೇವಾನಿರತ ವೈದ್ಯರುಗಳ ಆಯ್ಕೆ 371-372
   3. ಕೃಷ್ಣರಾಜಪೇಟೆಯಲ್ಲಿರುವ ಪ್ರಥಮ ದರ್ಜೆ ಕಾಲೇಜಿನಲ್ಲಿ 1993-94 ನೇ ಸಾಲಿಗೆ ಪ್ರವೇಶಾವಕಾಶಕ್ಕೆ ತೊಂದರೆ. 372-373

8. ಖಾಸಗೀ ಕಾರ್ಯಕಲಾಪಗಳು 373

   (ಖಾಸಗಿ ಸದಸ್ಯರ ವಿಧೇಯಕ ಮಂಡನೆ)
   1993ರ ಕರ್ನಾಟಕ ಸಹಕಾರಿ ಸಂಘಗಳ (ತಿದ್ದುಪಡಿ)ವಿಧೇಯಕ 373-374

9. ಅನುಬಂಧ 375-411

ಸೋಮವಾರ ೨೮ನೇ ಮಾರ್ಚ್ ೧೯೯೪

ಚೈತ್ರ ೧೪, ಶಕ ೧೯೧೫

1. ನಿಲುವಳಿ ಸೂಚನೆ 413

   ಗ್ರಾಮ ಪಂಚಾಯತಿ ಅಧ್ಯಕ್ಷರ ಚುನಾವಣೆಗಳಲ್ಲಿ ಸರ್ಕಾರದ ಹಸ್ತಕ್ಷೇಪವಾಗಿರುವ ಬಗ್ಗೆ 413-433

2. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು 434-487

3. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು 487-520

4. ವರದಿಗಳನ್ನೊಪ್ಪಿಸುವುದು 520

   ಅ) ವಿಧಾನ ಸಭೆಯ ಅರ್ಜಿಗಳ ಸಮಿತಿಯ 3ನೇ ವರದಿಯನ್ನು ಸಭೆಗೆ ಒಪ್ಪಿಸುವುದು 520

   ಆ) ಸಭೆಯ ಮುಂದಿಡಲಾದ ಕಾಗದ ಪತ್ರಗಳ ಸಮಿತಿಯ 13ನೇ ವರದಿಯನ್ನು ಸಭೆಗೆ ಒಪ್ಪಿಸುವುದು 520

5. ನಿರ್ಣಯ 520

ಶ್ರೀ ಎಂ. ನಾರಾಯಣ ಸ್ವಾಮಿ (ಜನತಾದಳ) ಅವರನ್ನು ಅಧಿವೇಶನ ಮುಗಿಯುವವರೆಗೆ ಸಭೆಗೆ ಹಾಜರಾಗದಂತೆ ನಿಷೇಧಿಸುವುದು 520-521

6. ಅಧ್ಯಕ್ಷರ ಅನುಮತಿ ಮೇರೆಗೆ ಪ್ರಸ್ತಾಪಿಸಲಾದ ವಿಷಯ 521

ಮಾತೃ ಭಾಷೆಯಲ್ಲಿ ಶಿಕ್ಷಣ ಕಡ್ಡಾಯವಾಗಬೇಕೆಂದು ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಜಾರಿಗೊಳಿಸುವುದರ ಬಗ್ಗೆ. 521-529

7. ವಿತ್ತೀಯ ಕಾರ್ಯಕಲಾಪಗಳು 529

1994-95ನೇ ಸಾಲಿನ ಆಯವ್ಯಯ ಪತ್ರದ ಮೇಲಿನ ಚರ್ಚೆ 529-575

8. ಸಂದೇಶ 575

"ಕಾಮನ್ವೆಲ್ತ್ ದಿನಾಚರಣೆಯ ಸಂದೇಶ 1994" 575-576

ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಮಂಗಳವಾರ, ೨೨ನೇ ಮಾರ್ಚ್ ೧೯೯೪, ಚೈತ್ರ ೮, ಶಕ ೧೯೧೫

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೧.೨೦ ಗಂಟೆಗೆ ಸಮಾವೇಶಗೊಂಡಿತು

ಅಧ್ಯಕ್ಷರು : (ಶ್ರೀ. ವಿ.ಎಸ್. ಕೌಜಲಗಿ) ಅವರು ಪೀಠವನ್ನು ಅಲಂಕರಿಸಿದ್ದರು.

ಸಂತಾಪ ಸೂಚಕ ನಿರ್ಣಯ

ಮಾಜಿ ಶಾಸಕರುಗಳಾದ ಶ್ರೀ ಕೆ.ಬಿ. ಶಿವಯ್ಯ, ಶ್ರೀ ಅಲ್ಲಂ ಕರೀಬಸಪ್ಪ, ಶ್ರೀ ಚಂದ್ರಶೇಖರ ಎನ್. ಪಾಟೀಲ್ ಮತ್ತು ಹಿರಿಯ ಚಿತ್ರ ನಟಿ ಶ್ರೀಮತಿ ದೇವಿಕಾ ರಾಣಿ, ಕಾದಂಬರಿಗಾರ್ತಿ ಶ್ರೀಮತಿ ಎಂ.ಕೆ. ಇಂದಿರಾ, ಕನ್ನಡದ ಹಿರಿಯ ನಾಟಕಕಾರ ಪರ್ವತವಾಣಿ ಶ್ರೀ ನರಸಿಂಗ್‌ರಾವ್ ಇವರುಗಳು ನಿಧಾನರಾದುದನ್ನು ಈ ಸದನಕ್ಕೆ ತಿಳಿಸಲು ವಿಷಾದಿಸುತ್ತೇನೆ.

1. ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಕೆ.ಬಿ. ಶಿವಯ್ಯನವರು ದಿನಾಂಕ 18-02-1994ರಂದು ನಿಧನರಾದರು.

ಸ್ವಾತಂತ್ರ್ಯ ಹೋರಾಟಗಾರರು, ಗಾಂಧೀವಾದಿಗಳು ಆಗಿದ್ದ ಶ್ರೀ ಶಿವಯ್ಯನವರು ಐದನೇ ಮತ್ತು ಆರನೇ ವಿಧಾನ ಸಭೆಗೆ ನಂಜನಗೂಡು ಕ್ಷೇತ್ರವನ್ನು ಪ್ರತಿನಿಧಿಸಿದ್ದರು. ಶ್ರೀ. ದೇವರಾಜ ಅರಸು ಅವರ ಮಂತ್ರಿ ಮಂಡಲದಲ್ಲಿ ರೇಷ್ಮೆ ಖಾತೆ ಸಚಿವರಾಗಿದ್ದರು. ಮೈಸೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿದ್ದರು. ಹಾಗೂ ಕರ್ನಾಟಕ ಪ್ರದೇಶ ಕಾಂಗ್ರೆಸ್ ಪಕ್ಷದ ಕಾರ್ಯದರ್ಶಿಯಾಗಿ ಕೂಡ ಸೇವೆ ಸಲ್ಲಿಸಿರುತ್ತಾರೆ.

2. ಮಾಜಿ ವಿಧಾನ ಸಭಾ ಸದಸ್ಯರಾಗಿದ್ದ ಶ್ರೀ ಅಲ್ಲಂ ಕರೀಬಸಪ್ಪನವರು ದಿನಾಂಕ 07-03-1994ರಂದು ನಿಧನರಾದರು.

ಶ್ರೀಯುತರು ಕುರುಗೋಡು ವಿಧಾನ ಸಭಾ ಕ್ಷೇತ್ರದಿಂದ ಮೂರನೇ ಮತ್ತು ನಾಲ್ಕನೇ ವಿಧಾನ ಸಭೆಗೆ ಚುನಾಯಿತರಾಗಿದ್ದರು. ಶ್ರೀಯುತರು ವೀರಶೈವ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾಗಿ, ಬಳ್ಳಾರಿ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ಅಧ್ಯಕ್ಷರಾಗಿ, ಬಳ್ಳಾರಿ ರೋಟರಿ ಕ್ಲಬ್ಬಿನ ಸದಸ್ಯರಾಗಿ ಹಾಗೂ ರಾಜ್ಯ ಪ್ರದೇಶ ಕಾಂಗ್ರೆಸ್ ಸಮಿತಿಯ ಕಾರ್ಯಕಾರಿ ಸಮಿತಿಯ ಸದಸ್ಯರಾಗಿಯೂ ಸೇವೆ ಸಲ್ಲಿಸಿರುತ್ತಾರೆ.

3. ವಿಧಾನ ಸಭೆಯ ಮಾಜಿ ಸದಸ್ಯರಾದ ಶ್ರೀ. ಚಂದ್ರಶೇಖರ ಎನ್. ಪಾಟೀಲ ಅವರು ದಿನಾಂಕ 09-03-1994ರಂದು ನಿಧನರಾದರು.

ಶ್ರೀ ಪಾಟೀಲ್‌ರವರು ರಾಯಚೂರು ಜಿಲ್ಲೆಯ ಲಿಂಗಸುಗೂರು ಕ್ಷೇತ್ರದಿಂದ ಐದನೇ ವಿಧಾನ ಸಭೆಗೆ ಆಯ್ಕೆಯಾಗಿದ್ದರು. ಶ್ರೀ ದೇವರಾಜ ಅರಸು ಅವರ ಮಂತ್ರಿ ಮಂಡಲದಲ್ಲಿ ಕೃಷಿ ಹಾಗೂ ಸಹಕಾರ ಸಚಿವರಾಗಿದ್ದರು. 1964 ರಿಂದ 1968ರವರೆಗೆ ಲಿಂಗಸೂರು ಪುರಸಭಾ ಅಧ್ಯಕ್ಷರಾಗಿದ್ದರು. 1968 ರಿಂದ 1970ರವರೆಗೆ ರಾಯಚೂರು ಜಿಲ್ಲೆಯ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿಯೂ ಸೇವೆ ಸಲ್ಲಿಸಿರುತ್ತಾರೆ.

4. ಭಾರತೀಯ ಚಲನಚಿತ್ರರಂಗದ ಸರ್ವಶ್ರೇಷ್ಠ ಅಭಿನೇತ್ರಿ ಶ್ರೀಮತಿ ದೇವಿಕಾ ರಾಣಿ ರೋರಿಚ್ ಅವರು ದಿನಾಂಕ 09-03-1994ರಂದು ನಿಧನರಾದರು.

ಟಾಕಿ ಚಿತ್ರದ ಮೊಟ್ಟಮೊದಲ ನಾಯಕನಟಿ ಶ್ರೀಮತಿ ದೇವಿಕಾರಾಣಿಯವರು 'ಅಚೂತ್ ಕನ್ಯ' 'ಜವಾನಿ ಕಿ ಹವ' 'ಜೀವನ್ ನ್ಯಾಯ' 'ಸಾವಿತ್ರಿ' ಹಾಗೂ ಇನ್ನಿತರ ಚಿತ್ರಗಳಲ್ಲಿ ನೀಡಿದ ಅಭಿನಯದಿಂದ ಖ್ಯಾತಿ ಹೊಂದಿದ್ದರು. ಚಲನಚಿತ್ರ ನಿರ್ಮಾಪಕಿಯಾಗಿಯೂ ಉತ್ತಮ ಚಿತ್ರಗಳನ್ನು ತೆರೆಗೆ ನೀಡಿದ್ದಾರೆ. ಅವರು ಸಂಗೀತ, ನೃತ್ಯ ಅಕಾಡಮಿ, ಕೇಂದ್ರ ನೃತ್ಯ, ನಾಟಕ, ಸಂಗೀತ ಅಕಾಡೆಮಿಗಳಲ್ಲಿ ಕೇಂದ್ರ ಸರ್ಕಾರದ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು. ಅವರು ಸಲ್ಲಿಸಿದ ಸೇವೆಗೆ ಪದ್ಮಶ್ರೀ ಪ್ರಶಸ್ತಿ, ಪ್ರಪ್ರಥಮ ದಾದಾಸಾಹೇಬ ಪಾಲ್ಕೆ ಸೋವಿಯತ್ ಲ್ಯಾಂಡ್ ನೆಹರೂ ಪ್ರಶಸ್ತಿಗಳೂ ದೊರಕಿದ್ದವು.

5. ಹಿರಿಯ ಕಾದಂಬರಿಗಾರ್ತಿ ಶ್ರೀಮತಿ ಎಂ.ಕೆ. ಇಂದಿರಾ ಅವರು ದಿನಾಂಕ: 15-03-1994ರಂದು ನಿಧನರಾದರು.

ಕನ್ನಡದ ಮಹಿಳಾ ಬರಹಗಾರರಲ್ಲಿ ಅಗ್ರಗಣ್ಯರಾಗಿದ್ದ ಶ್ರೀಮತಿ ಇಂದಿರಾರವರು ಕಾದಂಬರಿ ಕ್ಷೇತ್ರಕ್ಕೆ ನೀಡಿರುವ ಕೊಡುಗೆ ಸ್ಮರಣೀಯವಾದುದು. ಹೆಣ್ಣಿನ ನೋವು-ನಲಿವುಗಳ ಸಹಜ ಚಿತ್ರಣವನ್ನು ತಮ್ಮ ಬರವಣಿಗೆಯಲ್ಲಿ ರೂಪಿಸಿದ್ದಾರೆ. ಸ್ವಾತಂತ್ರ್ಯ ನಂತರದ ಭಾರತದ ಮಹಿಳೆಯ ಸಮಸ್ಯೆಗಳನ್ನೇ ತಮ್ಮ ಕಥೆಯಾಗಿಸಿ ಮಹಿಳೆಯರನ್ನು ಜಾಗೃತಗೊಳಿಸಿದ ಇವರಿಗೆ 1975ರಲ್ಲಿ ಶ್ರೇಷ್ಠ ಲೇಖಕ ಪ್ರಶಸ್ತಿ ಹಾಗೂ ನವರತ್ನ (ಕಥಾ ಸಂಕಲನ) ಸದಾನಂದ ಮತ್ತು ಫಣಿಯಮ್ಮ ಕೃತಿಗಳಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು ದೊರತಿವೆ.

6. ಕನ್ನಡದ ಹಿರಿಯ ನಾಟಕಕಾರ ಪರ್ವತವಾಣಿ ಶ್ರೀ ನರಸಿಂಗ್‌ರಾವ್ ಅವರು ದಿನಾಂಕ 17-03-1994ರಂದು ನಿಧನರಾದರು.

ಅದ್ಭುತ ಲವಲವಿಕೆಯ ಪಕ್ವ ಹಾಸ್ಯದ ಹೊನಲು ಹರಿಸಿ ನಗುವಿನ ಸಹಜ ಧರ್ಮ ಪಾಲಿಸಿದ ಕೀರ್ತಿ ಅವರದಾಗಿತ್ತು. ಅರ್ಥಶಾಸ್ತ್ರದಲ್ಲಿ ಬಿ.ಎ. (ಆನರ್ಸ್) ಮಾಡಿದ್ದರು. ಅವರು ನಾಟಕ ರಚನೆಯಲ್ಲಿ ಮಾತ್ರವಲ್ಲದೆ ರಂಗಸಜ್ಜಿಕೆಯಲ್ಲಿಯೂ ನಿಷ್ಣಾತರು. 80 ಕೃತಿಗಳನ್ನು ರಚಿಸಿರುತ್ತಾರೆ. ವಾರ್ಷಿಕೋತ್ಸವ ಆದಃಪಾತಾಳ, ಬಹುದ್ದೂರ ಗಂಡ, ಪುತ್ಥಳಿ, ಕವಿ ಭಿಕ್ಷೆ, ಕೀಚಕ, ಮುಕುಟ ಮೂಗುತಿ, ಅವರ ಪ್ರಮುಖ ನಾಟಕಗಳಾಗಿದ್ದವು. ಕೇಂದ್ರ ಸಾಹಿತ್ಯ ಅಕಾಡಮಿಯ ಫೆಲೋಷಿಪ್, ರಾಜ್ಯ ಸಾಹಿತ್ಯ ನಾಟಕ ಅಕಾಡೆಮಿಯ ಪ್ರಶಸ್ತಿ ಹಾಗೂ ರಾಜ್ಯೋತ್ಸವ ಪ್ರಶಸ್ತಿ ಸೇರಿ ಹಲವು ಗೌರವಗಳಿಗೆ ಅವರು ಪಾತ್ರರಾಗಿದ್ದರು.

ನಿಧನ ಹೊಂದಿದವರ ಸ್ಮರಣಾರ್ಥ ಮಾನ್ಯ ಸದಸ್ಯರುಗಳು ಒಂದು ನಿಮಿಷ ಎದ್ದು ನಿಂತು ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಸದಸ್ಯರು ಮೌನ ಆಚರಿಸಿದ ನಂತರ)

ಈ ಸಭೆ ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು.

ನಿಲುವಳಿ ಸೂಚನೆಗೆ ಅನುಮತಿ ಕೋರಿಕೆ

ರಾಜ್ಯದ ಕೆಲವು ಕಡೆ ಗ್ರಾಮ ಪಂಚಾಯಿತಿ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಚುನಾವಣೆಯಲ್ಲಿ ಸರ್ಕಾರದ ಹಸ್ತಕ್ಷೇಪ

+ ಶ್ರೀ ಆರ್.ವಿ. ದೇಶಪಾಂಡೆ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೇ, ಕರ್ನಾಟಕ ವಿಧಾನಸಭೆ ನಿಯಮ ಹಾಗೂ ಕಾರ್ಯವಿಧಾನದ ನಿಯಮಾವಳಿ

274ರ ಪ್ರಕಾರ ಇವತ್ತಿನ ದಿವಸ ಪ್ರಶ್ನೋತ್ತರ ವೇಳೆಯನ್ನು ಅಮಾನತ್ತುಗೊಳಿಸುವ ಬಗ್ಗೆ ತಮ್ಮ ಅನುಮತಿಯನ್ನು ನಮ್ಮ ಪಕ್ಷದಿಂದ ನಮ್ಮ ಪಕ್ಷದ ಸದಸ್ಯರು ಕೇಳಿದ್ದಾರೆ. ನಾವು ನಿಯಮ 59 ಹಾಗೂ 60ರ ಪ್ರಕಾರ ಒಂದು ಅಡ್ಜರ್ನ್‌ಮೆಂಟ್ ಮೋಷನ್ ಮೂವ್ ಮಾಡಿದ್ದೇವೆ. ಮುಖ್ಯವಾಗಿ ರಾಜ್ಯದಲ್ಲಿ ಇತ್ತೀಚೆಗೆ ಏನು ಪಂಚಾಯಿತಿ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರ ಚುನಾವಣೆಗಳು ಆದವು ಆ ಚುನಾವಣೆಗಳಲ್ಲಿ ಆದ ಹಿಂಸಾಚಾರ, ಅತ್ಯಾಚಾರ, ರಾಷ್ಟ್ರೀಯ ಹಸ್ತಕ್ಷೇಪ ಮತ್ತು ಇಡೀ ರಾಜ್ಯದಲ್ಲಿ ಒಂದು ಗೊಂದಲದ ವಾತಾವರಣ ನಿರ್ಮಾಣವಾಗಿದೆ. ಹೀಗಾಗಿ ಪ್ರಶ್ನೋತ್ತರ ವೇಳೆಯನ್ನು ಸಸ್ಪೆಂಡ್ ಮಾಡಿ ನಮ್ಮ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಮತ್ತು......

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಈ ನಿಲುವಳಿ ಸೂಚನೆಗೆ ತಾವು ಅವಕಾಶ ಕೊಡುತ್ತೀರಿ ಎನ್ನುವ ಭರವಸೆ ದೊರೆತರೆ ನಾವು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇವೆ. ಈ ನಿಲುವಳಿ ಸೂಚನೆ ಏನು ತಂದಿದ್ದಾರೆ ಅದರ ಬಗ್ಗೆ ನಾವೂ ಮಾತನಾಡಬೇಕು. ಎಲ್ಲರೂ ಮಾತನಾಡಬೇಕಾಗಿದೆ. ಇದರ ಜೊತೆಯಲ್ಲಿ ಮಾಲೂರು ಕ್ಷೇತ್ರದ ಶಾಸಕರೊಬ್ಬರ ಕೊಲೆ ಪ್ರಯತ್ನ ನಡೆದಿರತಕ್ಕದ್ದು ಕೂಡ ಚರ್ಚೆ ಆಗಬೇಕು.

ಶ್ರೀ ಆರ್.ವಿ. ದೇಶಪಾಂಡೆ : ಬರೀ ಜನತಾ ದಳ ಅಷ್ಟೇ ಅಲ್ಲ, ಸದನದಲ್ಲಿ ಇರುವ ಎಲ್ಲಾ ಶಾಸಕರೂ ಇದರಲ್ಲಿ ಮಾತನಾಡುವುದಕ್ಕೆ ಇಚ್ಛೆ ಇಟ್ಟುಕೊಂಡಿರಬಹುದು. ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಬಹುದು.

ಶ್ರೀ ವಾಟಾಳ್ ನಾಗರಾಜ್ : ನಿಮ್ಮನ್ನು ಬೆಂಬಲಿಸಿ ನಾನು ಮಾತನಾಡುತ್ತಿದ್ದೇನೆ.

ಶ್ರೀ ಆರ್.ವಿ. ದೇಶಪಾಂಡೆ : ಹೀಗಾಗಿ ಇವತ್ತು ಗಂಭೀರ ಸಮಸ್ಯೆ ಇದೆ. ನಾರ್ಮಲ್ ಪ್ರಾಕ್ಟೀಸ್‌ನಲ್ಲಿ ಪ್ರಶ್ನೋತ್ತರ ವೇಳೆ ಸಸ್ಪೆಂಡ್ ಮಾಡುವುದು ಸರಿಯಲ್ಲವೆಂದು ನನಗೂ ಗೊತ್ತಿದೆ. ಅದನ್ನು ನಾವೂ ಕೇಳುವುದು ಸರಿಯಲ್ಲ. ಆದರೆ ಇವತ್ತು ಯಾವ ಒಂದು ಪರಿಸ್ಥಿತಿ ಈ ರಾಜ್ಯದಲ್ಲಿ ನಿರ್ಮಾಣ ಆಗಿದೆ ಎಂದರೆ ಹಲವಾರು ಜನರು ಇವತ್ತು ತಮ್ಮ ಹಳ್ಳಿಯನ್ನೇ ಬಿಟ್ಟು ಓಡಿ ಹೋಗಿದ್ದಾರೆ. ಇಷ್ಟೊಂದು ಹಿಂಸಾಚಾರದ ಜೊತೆಗೆ ಪೋಲೀಸ್ ಗೋಲೀಬಾರ್ ಆಗಿ 6-7 ಜನ ಸತ್ತಿದ್ದಾರೆ. ಇಂತಹ ಒಂದು ಪರಿಸ್ಥಿತಿಯಲ್ಲಿ ಈ ಒಂದು ಗಂಭೀರತೆಯನ್ನು ತಾವು ಪರಿಗಣಿಸಿ, ಇವತ್ತು ಪ್ರಶ್ನೋತ್ತರವನ್ನು ಸಸ್ಪೆಂಡ್ ಮಾಡಿ, ಈ ನಿಲುವಳಿ ಸೂಚನೆಯನ್ನು ತೆಗೆದುಕೊಂಡು ರಾಜ್ಯದಲ್ಲಿ ಏನು ನಡೆಯುತ್ತಾ ಇದೆ, ಅದನ್ನು ಪ್ರಸ್ತಾಪ ಮಾಡುವುದಕ್ಕೆ ನಮಗೆ ಅವಕಾಶ ಮಾಡಿಕೊಡಬೇಕೆಂದು ನಾನು ಒತ್ತಾಯಿಸುತ್ತಿದ್ದೇನೆ. ಈಗಾಗಲೇ ಹೇಳಿದ ಹಾಗೆ, ಇದು ಬಹಳ ಮಹತ್ವದ ವಿಷಯವಿದೆ. ಮಾನ್ಯ ಕಾನೂನು ಮತ್ತು ಸಂಸದೀಯ ಸಚಿವರು ಪ್ರಶ್ನೋತ್ತರವಾದ ಮೇಲೆ ತೆಗೆದುಕೊಳ್ಳಿ ಎಂದು ಹೇಳಬಹುದು

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ತಮ್ಮಲ್ಲಿ ಒಂದೇ ಒಂದು ಮನವಿ. ಈ ವಿಚಾರವಾಗಿ ನಾವು ನಿಲುವಳಿ ಸೂಚನೆಯನ್ನು ತರುವುದಕ್ಕೆ ಮುಂಚೆ, ಸರ್ಕಾರವೇ ಈ ಬಗ್ಗೆ ತುದಿಗಾಲಿನಲ್ಲಿ ನಿಂತು, ಒಂದು ಹೇಳಿಕೆಯನ್ನು ಮಾಡಬೇಕಾಗಿತ್ತು. ಈ ಗ್ರಾಮಪಂಚಾಯಿತಿ ಚುನಾವಣೆಗಳಲ್ಲಿ ಆಗಿರತಕ್ಕ ದುರಂತಗಳೇನು, ಏನೇನು ಆಗಿದೆ, ರಾಜ್ಯದಲ್ಲಿ ಏನು ಅಶಾಂತ ವಾತಾವರಣ ನಿರ್ಮಾಣವಾಗಿದೆ ಎಂಬುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರೇ ಈ ಸದನಕ್ಕೆ ಒಂದು ಹೇಳಿಕೆಯನ್ನು ನೀಡಬೇಕಾಗಿತ್ತು. ಆದ್ದರಿಂದ ಈಗಲಾದರೂ ಈ ವಿಚಾರದಲ್ಲಿ ಚರ್ಚೆಗೆ ಅವಕಾಶ ಕೊಡಿ. ಯಾವಾಗ

ಕೊಡುತ್ತೀರಿ ಎಂಬುದು ತಮಗೆ ಸೇರಿದ್ದುದು, ಆದರೆ, ದಯವಿಟ್ಟು ಈ ಚರ್ಚೆಗೆ ಅವಕಾಶ ಕೊಡಬೇಕು.

SRI QUAMARUL ISLAM : The whole House knows the situation that is prevailing in Gulbarga. Immediately after the elections to the post of President and Vice President more than four persons were killed and many were injurned and many elected representatives wre kidnapped and still they have not come to their houses. We want the Question Hour to be suspended. I have also given notice of Ajournment motion. This is a very serious matter and therefore the Question Hour has to be suspended and this matter has to be taken up immediately for discussion.

ಶ್ರೀ ಡಿ.ಬಿ. ಚಂದ್ರೇಗೌಡ : ಸಾಮಾನ್ಯ ಪರಿಸ್ಥಿತಿಯಾಗಿದ್ದರೆ, ನಾವು ತಮ್ಮ ವಿಶೇಷ ಅಧಿಕಾರವನ್ನು ಚಲಾವಣೆ ಮಾಡಿ, 344ನೇ ನಿಯಮದಲ್ಲಿ ಅವಕಾಶ ಕೊಡಿ ಎಂದು ಕೇಳುವುದಕ್ಕೆ ಹೋಗುತ್ತಿರಲಿಲ್ಲ. ಅಸಾಮಾನ್ಯವಾದಂಥ ಪರಿಸ್ಥಿತಿ ಏನು ಅಂದರೆ...

(ಗೊಂದಲ)

ಒಬ್ಬ ಸದಸ್ಯರು : ಮಾನ್ಯ ಅಧ್ಯಕ್ಷರೇ, ಪ್ರಶ್ನೋತ್ತರವಾದ ಮೇಲೆ ಅವರು ಪ್ರಾರಂಭ ಮಾಡಲಿ

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಇಂತಹ ಪರಿಸ್ಥಿತಿಗೆ ಈ ಸದಸ್ಯರೇ ಕಾರಣ. ರಾಜ್ಯಾಂಗ ಬದ್ಧವಾಗಿ ವಿಶೇಷವಾದ ಪರಿಸ್ಥಿತಿ ಏನಿದೆ ಎನ್ನುವುದನನು ತಮ್ಮ ಗಮನಕ್ಕೆ ತರಬೇಕಾದದ್ದು ನಮ್ಮ ಕರ್ತವ್ಯ. ರಾಜ್ಯದ ಉದ್ದಗಲಕ್ಕೂ 5641 ಪಂಚಾಯಿತಿಗಳ ಚುನಾವಣೆಗಳು ನಡೆದಿವೆ. ಸರ್ಕಾರ ಬೆನ್ನು ತಟ್ಟಿಕೊಂಡಿದೆ. ಅದು ರಾಜ್ಯಪಾಲರ ಭಾಷಣದಲ್ಲಿರಬಹುದು ಅಥವಾ ಬಜೆಟ್ ಭಾಷಣದಲ್ಲಿರಬಹುದು. ಆದರೆ ನಡೆದಿರತಕ್ಕ ಪ್ರಕ್ರಿಯೆಗಳೇನು? ಈ ದೇಶದಲ್ಲಿ ಒಂದು ಶಾಸನವನ್ನು ಜಾರಿ ಕೊಡತಕ್ಕ ಕಾಲದಲ್ಲಿ ಜನತಂತ್ರದ ವ್ಯವಸ್ಥೆಯನ್ನು ಜಾರಿ ಕೊಡತಕ್ಕ ಕಾಲದಲ್ಲಿ ಜನರನ್ನು ಹಿಗ್ಗಾಮುಗ್ಗಾ ಎಳೆದು, 6-7 ಜನರನ್ನು ಕೊಂದು ಪೋಲೀಸಿನ ವಾದ ಗೋಳೀಬಾರಿಗೆ ತುತ್ತಾಗಿದ್ದಾರೆ. ಹೆಣ್ಣುಮಕ್ಕಳ ಸೀರೆ ಹರಿದಿದ್ದಾರೆ. ಕಿಡ್‌ನ್ಯಾಪ್ ಮಾಡಿ ಹೆಣ್ಣುಮಕ್ಕಳನ್ನು ಹೊತ್ತುಕೊಂಡು ಹೋಗಿದ್ದಾರೆ. ಇಂತಹ ವಿಷಯವನ್ನು ಶಾಸನಸಭೆಯಲ್ಲಿ ಚರ್ಚೆ ಮಾಡಬಾರದೇ?

ಶ್ರೀ ಹಾರನಹಳ್ಳಿ ರಾಮಸ್ವಾಮಿ : ಮಾನ್ಯ ಅಧ್ಯಕ್ಷರೇ, ಪಾಯಿಂಟ್ ಆಫ್ ಆರ್ಡರ್....

SRI D.B. CHANDRE GOWDA : Kindly use your discretion and see atleast that the law is set in motion. ಈ ಸಮಯದಲ್ಲಿ ತಾವು ಅಧಿಕಾರವನ್ನು ಬಳಸದೇ ಇದ್ದರೆ, ನಾನು ಹೇಳುತ್ತೇನೆ, ಈ ಶಾಸನಸಭೆಗೆ ಗೌರವ ಬರುವುದಿಲ್ಲ.

ಶ್ರೀ ಹಾರನಹಳ್ಳಿ ರಾಮಸ್ವಾಮಿ : 344ನೇ ವಿಧಿಯ ಪ್ರಕಾರ, ಒಂದು ಪ್ರಸ್ತಾವನೆಯನ್ನು ವಿರೋಧಪಕ್ಷದ ನಾಯಕರು ಮಂಡಿಸಿದ್ದಾರೆ. ಈಗ ಸಭೆಯ ಮುಂದಿರತಕ್ಕ ವಿಷಯ ಶ್ರೀಮಾನ್ ದೇಶಪಾಂಡೆಯವರು ಮಂಡಿಸಿರತಕ್ಕ ಪ್ರಸ್ತಾವನೆ ಅದರಲ್ಲಿ ತಾತ್ಕಾಲಿಕವಾಗಿ 37ನೇ ನಿಯಮವನ್ನು ತಡೆಹಿಡಿಯಬೇಕೆಂದು ಇದೆ. ಆ ಪ್ರಸ್ತಾವನೆ ತಮ್ಮ ಮುಂದೆ ಬಂದತಕ್ಷಣ ತಾವು ಸಭೆಯ ಅಭಿಪ್ರಾಯಗಳನ್ನು ಕೇಳಿ, ತೀರ್ಮಾನ ಮಾಡಬೇಕೆಂದು ನಿಯಮ ಇದೆ. ಅದರಂತೆ ತಾವು ಕ್ರಮ ತೆಗೆದುಕೊಳ್ಳಬಹುದು.

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ : ನಾನು ಬಹಳ ಮುಖ್ಯವಾದ ಒಂದು ಮಾತನ್ನು ಹೇಳುತ್ತಿದ್ದೇನೆ. We are not against the elections. ಇವತ್ತು ಈ ಸಮಸ್ಯೆಯ ಗಂಭೀರತೆಯನ್ನು ತಿಳಿದುಕೊಳ್ಳಬೇಕು. ಇಡೀ ಸದನದ ಎಲ್ಲಾ ಸದಸ್ಯರ ಅಭಿಪ್ರಾಯವೂ ಇದೇ ಆಗಿದೆ. ಮತ್ತೊಂದು ನಾನು ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. ಇವತ್ತಿನ ಪರಿಸ್ಥಿತಿ ಏನಾಗಿದೆ. ಮೀಸಲಾತಿ ವಿಚಾರದಲ್ಲಿ ನಮ್ಮ ಯಾವುದೇ ತಕರಾರು ಇಲ್ಲ. ಪ್ರತಿಯೊಂದು ಮಂಡಲದಲ್ಲಿಯೂ ಅರಾಜಕತೆ ತಲೆದೋರಿದೆ. ಅದರ ಬಗ್ಗೆ ಈ ಸದನದಲ್ಲಿ ಚರ್ಚೆಯಾಗಬೇಕಾಗಿದೆ. ಹಲವಾರು ಜನ ಇವತ್ತು ಹಳ್ಳಿಗಳನ್ನು ಬಿಟ್ಟು ಓಡಿಹೋಗಿದ್ದಾರೆ. ಇವತ್ತು ಪ್ರಜಾಸತ್ತೆಯ ಕೊಲೆಯಾಗಿದೆ. ಹಾಗಾಗಿ ಇದೊಂದು ಮಹತ್ವದ ವಿಷಯ ಇದೆ.

(ಗೊಂದಲ)

ಶ್ರೀ ಸಿ. ಬೈರೇಗೌಡ : ಮಾನ್ಯ ಮಂತ್ರಿಗಳು, ಸಭೆಯ ಮತಕ್ಕೆ ಹಾಕಬೇಕೆಂದು ಹೇಳಿದ್ದಾರೆ. ಆದರೆ, ಅದರ ಅವಶ್ಯಕತೆ ಇಲ್ಲ. ತಮಗೇ ಅಧಿಕಾರ ಇದೆ. ನಿಯಮಾವಳಿ ಪ್ರಕಾರ, ಪರಿಶೀಲನೆ ಮಾಡುವುದಕ್ಕೆ ತಮಗೆ ಅಧಿಕಾರ ಇದೆ. ಆದ್ದರಿಂದ ದಯವಿಟ್ಟು ಪ್ರಶ್ನೋತ್ತರವನ್ನು ಮುಂದೂಡಿ, ಅತ್ಯಂತ ಜರೂರಾಗಿರತಕ್ಕ ವಿಷಯವನ್ನು ತಾವು ಪರ್ಯಾಲೋಚನೆಗೆ ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳುತ್ತೀರೋ ಇಲ್ಲವೋ ಎಂಬುದನ್ನು ತಾವು ನೇರವಾಗಿ ಹೇಳಬೇಕು. ಸಂಸದೀಯ ಸಚಿವರು ಏಕೋ ಏನೋ ಇತ್ತೀಚೆಗೆ ಬದಲಾವಣೆಯಾಗುತ್ತಿದ್ದಾರೆ. ನಿಮಗೆ ಬೇಕಾದಾಗ ಸಭೆಗೆ ಬಿಡುತ್ತೀರಿ. ಬೇಡವಾದಾಗ ಅಧ್ಯಕ್ಷರಿಗೆ ಬಿಡುತ್ತೀರಿ.

ಅಧ್ಯಕ್ಷರು : ತಾವು ಕಳುಹಿಸಿದ ನಿಲುವಳಿ ಸೂಚನೆಯನ್ನು ನಾನು ಪರಿಶೀಲನೆ ಮಾಡಿದ್ದೇನೆ. ಒಂದನೆಯದಾಗಿ ನಾನು ಆ ಚರ್ಚೆಗೆ ಅವಕಾಶ ಕೊಡುತ್ತೇನೆ. ಆದರೆ, ಸರ್ವೇಸಾಧಾರಣವಾಗಿ ಸಭೆಯ ಸದಸ್ಯರ ಪ್ರಶ್ನೋತ್ತರ ಏನಿದೆ, ಅದನ್ನು ಮೊಟಕುಗೊಳಿಸುವುದು ಬೇಡ, ಹಿಂದಿನಿಂದ ನಾವು ಈ ಪರಂಪರೆಯನ್ನೂ ಹಾಕಿಲ್ಲ. ಒಂದು ಗಂಟೆಕಾಲ ಪ್ರಶ್ನೋತ್ತರ ಮುಗಿದ ನಂತರ ನಾನು ಈ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ತಮ್ಮ ತೀರ್ಪಿನ ವಿರುದ್ಧ ನಾನಿಲ್ಲ. ಆದರೆ, ಪ್ರಶ್ನೆ ಏನಿದೆಯೆಂದರೆ, ತಾವು ಚರ್ಚೆಗೆ ಅವಕಾಶ ಮಾಡಿಕೊಡುತ್ತೇವೆಂದು ಹೇಳಿದ್ದೀರಿ. ಧನ್ಯವಾದಗಳು. ಇದು ಮಹತ್ವದ ಪ್ರಶ್ನೆ ಇರುವುದರಿಂದ, ತಮ್ಮಲ್ಲಿ ಪುನಃ ವಿನಂತಿ ಮಾಡುತ್ತಿದ್ದೇನೆ. ಮುಖ್ಯವಾಗಿ ಇದನ್ನು ಮೊದಲು ತೆಗೆದುಕೊಳ್ಳಬೇಕು. ದಯಮಾಡಿ, ಇದನ್ನು ಮೊದಲು ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ಒತ್ತಾಯಿಸುತ್ತಿದ್ದೇನೆ. ಇಲ್ಲದೇಹೋದರೆ ಇದರ ಮಹತ್ವ ಕಡಿಮೆಯಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಅಧ್ಯಕ್ಷರೇ, We would like that it should be discussed here. ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ನಿಲುವಳಿ ಸೂಚನೆಯನ್ನು ಸದನಕ್ಕೆ ಒಪ್ಪಿಸಿದ್ದಾರೆ. ಮತ್ತು ಅದರ ಬಗ್ಗೆ ಚರ್ಚೆ ಮಾಡಬೇಕೆಂದು ಒತ್ತಾಯ ಮಾಡಿದ್ದೀರಿ. ಇಲ್ಲಿ, ಈ ಕಡೆಯವರು ಯಾರೂ ಕೂಡ ಚರ್ಚೆಗೆ ಅಡ್ಡಿ ಬರುವುದಿಲ್ಲ. ಆ ಚರ್ಚೆ ಎಷ್ಟು ಹೊತ್ತಾಗಬೇಕೋ ಆಗಲಿ. ಏಕೆಂದರೆ, ತಮ್ಮ ಮನಸ್ಸಿನಲ್ಲಿ ಈ ಬಗ್ಗೆ ಇರತಕ್ಕ ಆತಂಕ, ಅದು ಸತ್ಯವೋ ಅಸತ್ಯವೋ, ಅಥವಾ ಅದು ಗಂಭೀರವಾಗಿದೆಯೋ ಅಥವಾ ಲಘುವಾಗಿದೆಯೋ ಅಥವಾ ತೀವ್ರವಾಗಿದೆಯೋ ಇಲ್ಲವೇ ತೀವ್ರತೆ ಇಲ್ಲದೇ ಇದೆಯೋ ಆ ವಿಚಾರ ಸದನಕ್ಕೆ ಗೊತ್ತಾಗಲಿ. ತಾವು ಈ ಕರ್ನಾಟಕ ರಾಜ್ಯದ ಜನತೆಯ ಗಮನವನ್ನು ಸೆಳೆಯತಕ್ಕ ಕೆಲಸ ಮಾಡುತ್ತಿದ್ದೀರಿ, ನಾವು ಸ್ವಾಗತಿಸುತ್ತೇವೆ. ಇಲ್ಲಿ ಚರ್ಚೆ ಮಾಡಬೇಕು.

ಇಲ್ಲಿ ಚರ್ಚೆ ಮಾಡಬೇಕೆಂಬುದೇ ನಮ್ಮ ಉದ್ದೇಶ. ತಮ್ಮ ಉದ್ದೇಶವೂ ಕೂಡ ಅದೇ ಎಂದು ನಾವು ತಿಳಿದುಕೊಂಡಿದ್ದೇವೆ. ಆದರೆ, ಆ ಚರ್ಚೆ ಸರಿಯಾದ ರೀತಿಯಲ್ಲಿ ಆಗಬೇಕು. ಸರಿಯಾದ ರೀತಿಯಲ್ಲಿ ಆಗದಿದ್ದರೆ ನೀವು ಎತ್ತಿಕೊಂಡ ವಿಚಾರಕ್ಕೂ ಕೂಡ ನ್ಯಾಯ ಸಿಕ್ಕಿದ ಹಾಗೆ ಆಗುವುದಿಲ್ಲ. ಮತ್ತೆ ಎರಡೂ ಕಡೆ ಕೂಡ ಚರ್ಚೆ ಮಾಡಲಿ. ಏಕೆಂದರೆ ಇದೊಂದು ಇಡೀ ದೇಶದಲ್ಲಿಯೇ ಒಂದು ಹೊಸ ರಾಜಕೀಯ, ಕ್ರಾಂತಿಕಾರಿ ಪ್ರಯೋಗ. ಇದು ಎಷ್ಟರಮಟ್ಟಿಗೆ ಯಶಸ್ವಿಯಾಗಿದೆ ಅಥವಾ ಆಗಲಿಲ್ಲ ಅಥವಾ ಆಗದೇ ಇದ್ದರೆ ಯಾವ ರೀತಿಯಲ್ಲಿ ಅದನ್ನು ನಾವು ಸರಿದೂಗಿಸಿಕೊಂಡು ಹೋಗಬೇಕು ಎಂಬುದನ್ನು ವಿಚಾರ ಮಾಡಬೇಕು. ಏಕೆಂದರೆ, ಮುಂದೆ ತಾಲ್ಲೂಕು ಪಂಚಾಯ್ತಿ ಜಿಲ್ಲಾ ಪಂಚಾಯ್ತಿ ಚುನಾವಣೆಗಳು ಬರುತ್ತಿವೆ. ತಾಲ್ಲೂಕು ಪಂಚಾಯ್ತಿ ಮತ್ತು ಜಿಲ್ಲಾ ಪಂಚಾಯ್ತಿ ಚುನಾವಣೆಗಳು ಇನ್ನು ಆಗಬಾರದು ಎಂದು ಹೇಳಿ, ಆತಂಕ ತರುವುದಕ್ಕೆ ಇದನ್ನು ತಂದಿದ್ದೀರಿ ಎಂಬುದನ್ನು ನಾನು ನಂಬುವುದಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ: ನಮಗೆ ಗೌರ್ನಮೆಂಟ್ ಇನ್‌ಟೆಂಷನ್ ಬಗ್ಗೆ ಡೌಟ್ ಇದೆ. ತಾಲ್ಲೂಕು ಪಂಚಾಯತ್ ಚುನಾವಣೆ ಆಗಬೇಕು. ಅದರಲ್ಲಿ ನಮಗೆ ಯಾವ ಸಂದೇಹ ಇಲ್ಲ.

(ಗೊಂದಲ)

ಅಧ್ಯಕ್ಷರು: ತಾವು ಕುಳಿತುಕೊಳ್ಳಿ.

ಶ್ರೀ ಎಂ. ವೀರಪ್ಪ ಮೊಯಿಲಿ: ಆದ್ದರಿಂದ ದಯಮಾಡಿ ಪ್ರಶ್ನೋತ್ತರ ವೇಳೆ ಆಗಲಿ. ಏಕೆಂದರೆ ಇದು ಸದಸ್ಯರ ಮೂಲ ಭೂತವಾದ ಹಕ್ಕು. ಪ್ರಶ್ನೋತ್ತರ ವೇಳೆ. ಏಕೆಂದರೆ ಅನೇಕ ವೇಳೆ ಅನೇಕ ಸದಸ್ಯರು ಎಲ್ಲಾ ಚರ್ಚೆಗಳಲ್ಲಿ ಭಾಗವಹಿಸಲು ಆಗುವುದಿಲ್ಲ. ಕಡಿಮೆ ಪಕ್ಷ ಅವರವರ ಕ್ಷೇತ್ರದ ಕರ್ನಾಟಕ ರಾಜ್ಯದ ಸಮಸ್ಯೆಗಳನ್ನು ಇಲ್ಲಿ ತೆಗೆಯತಕ್ಕಂಥ ಒಂದು ಅವಕಾಶ, ಆ ಅವಕಾಶ ನಾವು ಕಸಿಯಬೇಕು. ಎಂದು ಹೇಳಿ ವಿರೋಧಪಕ್ಷದ ನಾಯಕರು ಅಪೇಕ್ಷೆಪಡುತ್ತಾರೆ ಎಂದು ನನಗೆ ಅನಿಸುವುದಿಲ್ಲ. ಆದ್ದರಿಂದ ನಾವು ಚರ್ಚೆಗೆ ಅವಕಾಶ ಕೊಡುತ್ತೇವೆ. ಚರ್ಚೆಗೆ ಅಡ್ಡಿ ಬರುವುದಿಲ್ಲ, ತಾವು ಎಷ್ಟು ಬೇಕೋ ಆ ವಿಚಾರ ಮಾತನಾಡಲಿ. ಪೂರ್ಣ ಅವಕಾಶ ಕೊಡುತ್ತೇವೆ. ನಾವು ಯಾರೂ ಕೂಡ ಮಾತನಾಡುವುದಿಲ್ಲ. ನಾವು ಮೌನವಾಗಿ ಕುಳಿತುಕೊಂಡಿರುತ್ತೇವೆ. ತಾವು ಏನು ವಾದ ಮಾಡುತ್ತೀರಿ ಏನು ವಿಚಾರ ಹೇಳುತ್ತೀರಿ ಅದನ್ನು ನಾವು ಮೌನವಾಗಿ ಕೇಳಿಕೊಂಡು ಇಲ್ಲಿ ಕುಳಿತುಕೊಳ್ಳುತ್ತೇವೆ. ನಮ್ಮವರೂ ಕೂಡ ಏನು ಅವರ ವಿಚಾರ ಇದ್ದರೆ ಅವರು ಅದನ್ನು ಮುಂದೆ ತರುತ್ತಾರೆ. ಸರ್ಕಾರದ ಬಗ್ಗೆ ಏನು ಮಾಹಿತಿ ಇದೆ ಅದನ್ನು ನಾವು ಕೊಡುತ್ತೇವೆ. ಇಲ್ಲಿ ತಳಮಳ ಆಗುತ್ತದೆ if situation unsettle ಆಗುವಾಗ ಏಕೆಂದರೆ ಒಂದು ರೀತಿ ಸಾಮಾಜಿಕವಾದಂತಹ ರಾಜಕೀಯವಾದಂತಹ ಕ್ರಾಂತಿಯಾಗುವಾಗ things will unsettle. Then sometimes some of the forces which are settled, they get unsettled; they get disturbed. ಅದು ಆಗುತ್ತದೆ. ಒಂದು ರೀತಿಯ ಅಸಮತೋಲನದ ವಿಪ್ಲವ ಒಂದು ಪ್ರದೇಶದಲ್ಲಿ ಆಗುತ್ತದೆ. ನಾವು ಹೇಳಿದ್ದು ಅದು ಶಾಂತಿಯಿಂದ ಆಗಬೇಕು ಎಂದು. ಕೆಲವು ಸಾರಿ ಅಶಾಂತಿಯಾದರೆ ಅದನ್ನು ತಡೆಯಲಿಕ್ಕೆ ನಾವೆಲ್ಲರೂ ಕುಳಿತುಕೊಂಡು ಮಾತನಾಡಬೇಕು. ನಾವು ಸಮಾಲೋಚನೆ ಮಾಡೋಣ ಇದೆಲ್ಲಾ ಪ್ರಜಾಪ್ರಭುತ್ವದ ಈ ಪ್ರಕ್ರಿಯೆಗಳು ಸಮಾಲೋಚನೆಯಿಂದ ಮಾಡಬೇಕು. ಶಾಂತಿಯನ್ನು ತರಲಿಕ್ಕೆ ನಾವು ಎರಡೂ ಕಡೆಯಿಂದ ಪ್ರಯತ್ನಮಾಡಬೇಕು. ಆದ್ದರಿಂದ ಚರ್ಚೆ ಆಗಲಿ ದೀರ್ಘವಾಗಿ ಚರ್ಚೆಯಾಗಲಿ. ಇದು ಆಗಲೇಬೇಕು. ಏಕೆಂದರೆ ಇಡೀ ರಾಷ್ಟ್ರದ ಗಮನ ಈ ಚುನಾವಣೆಗಳ ಬಗ್ಗೆ ತೆಳೆದಿದ್ದಾರೆ. ಮತ್ತು ರಾಜಕೀಯ ಹಕ್ಕು

ಪಡೆಯುವುದಕ್ಕೆ ಆಗುತ್ತದೆ. ಮತ್ತು ವಿಕೇಂದ್ರಿಕರಣ ಆದರೆ ಸಾಲದು. ವಿಕೇಂದ್ರೀಕರಣ ಆಗಿ ಆ ಕೊನೆ ಮಟ್ಟದಲ್ಲಿರತಕ್ಕಂಥ ಮನುಷ್ಯನಿಗೂ ಕೂಡ ಅಧಿಕಾರ ಹೋಗಬೇಕು.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಅತ್ಯಂತ ಗೌರವದಿಂದ ಒಂದು ಮಾತನ್ನು ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಬಳಸಿದ ಭಾಷೆಯನ್ನು ನಾನು ಬಳಸುವುದಿಲ್ಲ. ಇದರಲ್ಲಿ ಅವರು ಸಭಾ ನಾಯಕರಾಗಿ ಇಲ್ಲಿ ರಾಜಕೀಯವನ್ನು ತೂರಿಸತಕ್ಕಂಥ ಪ್ರಯತ್ನ ಏನು ಮಾಡಿದರು ಅದನ್ನು ಅವರು ಮಾಡಕೂಡದು. ಚರ್ಚೆಗೆ ಮುಕ್ತವಾದ ಒಂದು ಅವಕಾಶ ಇದೆ ಎಂದು ಹೇಳಿದ್ದಾರೆ. ಅದಕ್ಕಿಂತ ವಿಶೇಷವಾಗಿ 58ನೇ ನಿಯಮದ ಪ್ರಕಾರ ಕೊಟ್ಟಿರತಕ್ಕಂಥಾದ್ದನ್ನು ನಿಲುವಳಿ ಸೂಚನೆಯನ್ನು ಚರ್ಚೆಗೆ ಕೊಟ್ಟಿದ್ದೀರಿ ಎಂದು ಹೇಳಿಬಿಟ್ಟಿದ್ದೀರಿ. ಆದ್ದರಿಂದ ನಮ್ಮ ಬಾಯಿ ಕಟ್ಟಿದೆ. ಇಲ್ಲದಿದ್ದರೆ ಮುಖ್ಯಮಂತ್ರಿಗಳಿಗೆ ನಾವು ಉತ್ತರ ಕೊಡಬಹುದಿತ್ತು. ಉತ್ತರ ಕೊಡುವುದಕ್ಕೆ ಹೋಗುವುದಿಲ್ಲ. ಅದಕ್ಕಾಗಿ ನಾನು ತಮ್ಮನ್ನು ಅಭಿನಂದಿಸುತ್ತೇನೆ. ನಾವು ಈಗ ಇದನ್ನು ಒತ್ತಾಯ ಮಾಡುವುದಿಲ್ಲ. ಈ ಪ್ರಶ್ನೋತ್ತರ ಆದಮೇಲೆ ಇದನ್ನು ತೆಗೆದುಕೊಳ್ಳಿ.

ಅಧ್ಯಕ್ಷರು : ಆಯಿತು ಈಗ ಪ್ರಶ್ನೋತ್ತರವೇಳೆ.

ಚುಕ್ಕೆಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಲೆವಿ ಸಕ್ಕರೆಯ ಎತ್ತುವಳಿ

506 - ಶ್ರೀಮತಿ ದಮಯಂತಿ ಬೋರೇಗೌಡ (ಶ್ರೀರಂಗಪಟ್ಟಣ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸಾರ್ವಜನಿಕ ಪಡಿತರ ಸರಬರಾಜು ಯೋಜನೆಯನ್ವಯ ಸರಬರಾಜಾಗುತ್ತಿರುವ ಲೆವಿ ಸಕ್ಕರೆಯನ್ನು ಆಯಾಯ ಜಿಲ್ಲೆಗಳ ಅಥವಾ ಹತ್ತಿರದ ಜಿಲ್ಲೆಗಳ ಸಕ್ಕರೆ ಕಾರ್ಖಾನೆಗಳಿಂದ ನೀಡದೆ ಬೀದರ್ ಜಿಲ್ಲೆಗೆ ಮಂಡ್ಯ ಜಿಲ್ಲೆಯಿಂದ ಮಂಡ್ಯ ಜಿಲ್ಲೆಯವರಿಗೆ ಬೆಳಗಾಂ ಜಿಲ್ಲೆಯಿಂದ ಎತ್ತುವಳಿ ಮಾಡಲು ಆದೇಶ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಇದರಿಂದ ಸಗಟು ಮಾರಾಟದಾರರಿಗೆ ಅದರಲ್ಲೂ ತಾಲ್ಲೂಕು ಮಾರಾಟ ಸಹಕಾರ ಸಂಘಗಳಿಗೆ ಸಾಗಾಣಿಕೆಯ ವೆಚ್ಚದಲ್ಲಿ ನಷ್ಟವಾಗುತ್ತಿದ್ದು ಇದರಿಂದಾಗಿ ಸಂಘಗಳು ನಷ್ಟದಲ್ಲಿರುತ್ತವೆಯೇ ?

ಇ) ಸಗಟು ಮಾರಾಟದಾರರಿಗೆ ಎತ್ತುವಳಿ ಆದೇಶ ನೀಡುವಾಗ ಕರ್ನಾಟಕ ರಾಜ್ಯ ಆಹಾರ ಮತ್ತು ನಾಗರೀಕ ಸರಬರಾಜು ನಿಗಮದವರಿಗೆ ಮತ್ತು ಇತರರಿಗೆ ತಾರತಮ್ಯ ಮಾಡಲಾಗುತ್ತಿದೆಯೇ ?

ಈ) ಹಾಗಿದ್ದಲ್ಲಿ, ತಾಲ್ಲೂಕು ಮಾರಾಟ ಸಹಕಾರ ಸಂಘಗಳಿಗೆ ಆಗುತ್ತಿರುವ ನಷ್ಟವನ್ನು ಸರ್ಕಾರ ತುಂಬಿಕೊಡುವ ಯೋಜನೆ ಇದೆಯೇ ?

ಉ) ಹಾಗಿಲ್ಲದಿದ್ದಲ್ಲಿ ಸರ್ಕಾರದ ನೀತಿಯಿಂದ ಆಗುವ ನಷ್ಟಕ್ಕೆ ಯಾರು ಜವಾಬ್ದಾರರು ?

ಶ್ರೀಮತಿ ಮನೋರಮ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) ಸಾರ್ವಜನಿಕ ಪಡಿತರ ಸರಬರಾಜು ಯೋಜನೆಯನ್ವಯ ಸರಬರಾಜಾಗುತ್ತಿರುವ ಲೆವಿ ಸಕ್ಕರೆಯನ್ನು ಆಯಾಯಾ ಜಿಲ್ಲೆಯ ಅಥವಾ ಹತ್ತಿರದ ಜಿಲ್ಲೆಗಳ ಸಕ್ಕರೆ

ಕಾರ್ಖಾನೆಗಳಿಂದ ಸಾಧ್ಯವಾದಷ್ಟು ಮಟ್ಟಿಗೆ ನೀಡಲಾಗುತ್ತಿದೆ. ಆದರೆ ಮಂಡ್ಯ ಜಿಲ್ಲೆಯವರಿಗೆ ಬೆಳಗಾಂ ಜಿಲ್ಲೆಯಿಂದ ಎತ್ತುವಳಿ ಮಾಡಲು ಯಾವಾಗಲೂ ಹಂಚಿಕೆ ಮಾಡಿಲ್ಲ, ಅದೇ ರೀತಿ ಬೀದರ್ ಜಿಲ್ಲೆಗೆ ಮಂಡ್ಯ ಜಿಲ್ಲೆಯಿಂದ ಹಂಚಿಕೆ ಮಾಡಿಲ್ಲ. ಸಾಧ್ಯವಾದಷ್ಟು ಮಟ್ಟಿಗೆ ಅಕ್ಕಪಕ್ಕದ ಕಾರ್ಖಾನೆಗಳಿಂದಲೇ ಎತ್ತುವಳಿ ಮಾಡಲು ಹಂಚಿಕೆ ಮಾಡಲಾಗುತ್ತಿದೆ.

ಸಗಟು ಕೇಂದ್ರದಿಂದ ಕಾರ್ಖಾನೆಗೆ ಇರುವ ದೂರಕ್ಕೆ ಅನುಗುಣವಾಗಿ ಸಾಗಾಣಿಕೆ ವೆಚ್ಚವನ್ನು ಸರ್ಕಾರದ ಆದೇಶ ಸಂ.ಎಫ್‌ಟಿಡಿ 1 ಎಫ್‌ಟಿಆರ್ 90 ದಿನಾಂಕ 16.5.91ರ ಮೇರೆಗೆ ನೀಡಲಾಗುತ್ತಿದೆ.

ಇ) ಇಲ್ಲ

ಈ) ಉದ್ಭವಿಸುವುದಿಲ್ಲ

ಉ) ಉದ್ಭವಿಸುವುದಿಲ್ಲ.

ಶ್ರೀಮತಿ ದಮಯಂತಿ ಬೋರೇಗೌಡ : ಮಾನ್ಯ ಅಧ್ಯಕ್ಷರೇ, ಉತ್ತರದಲ್ಲಿ ಅಯಾಯಾ ಜಿಲ್ಲೆಗಳಲ್ಲೇ ನಾವು ಆದಷ್ಟು ಅಲಾಟ್ ಮಾಡುತ್ತೇವೆಂದು ಹೇಳಿದ್ದೀರಿ. ಆದರೆ ಆ ರೀತಿ ಆಗುತ್ತಿಲ್ಲ, ಬಹುಶಃ ತಾವು ಯಾವಾಗ ಈ ರೀತಿಯ ಸುಧಾರಣೆ ತರುತ್ತೀದ್ದೀರಿ ಎಂಬುದನ್ನು ಹೇಳಬೇಕು.

ಶ್ರೀಮತಿ ಮನೋರಮ ಮಧ್ವರಾಜ್ : ಮಾನ್ಯ ಅಧ್ಯಕ್ಷರೇ ಮಂಡ್ಯ ಜಿಲ್ಲೆಯ ಮಟ್ಟಿಗೆ ಹೇಳುವುದಿದ್ದರೆ ಕಳೆದ 6 ತಿಂಗಳ ವರದಿ ನನ್ನ ಹತ್ತಿರ ಉಂಟು. ಅಕ್ಟೋಬರ್ 93ರಲ್ಲಿ ಮಂಡ್ಯದಿಂದಲೇ ಪಾಂಡವಪುರ ಗಂಗಾವತಿ. ಮತ್ತು ಸಮೀರವಾಡಿ ಅಂದರೆ ಬಿಜಾಪುರ ಜಿಲ್ಲೆಯಿಂದ ಒಂದು ಸಾರಿ ಬಿಟ್ಟರೆ ಮತ್ತೆ ನವೆಂಬರ್ 93ರಲ್ಲಿ ಮಂಡ್ಯ ಚಾಮುಂಡೇಶ್ವರಿ ಮತ್ತು ಹೇಮಾವತಿ, ಡಿಸೆಂಬರ್ 93ರಲ್ಲಿ ಮಂಡ್ಯ ಚಾಮುಂಡೇಶ್ವರಿ ಕೊಳ್ಳೆಗಾಲ ಕೆ.ಆರ್. ನಗರ ಮತ್ತು ದಾವಣಗೆರೆ, 94ರಲ್ಲಿ ಚಾಮುಂಡೇಶ್ವರಿ, ಮಂಡ್ಯ ಕೊಳ್ಳೇಗಾಲ, ಫೆಬ್ರವರಿ 94 ರಲ್ಲಿ ಮಂಡ್ಯ ಚಾಮುಂಡೇಶ್ವರಿ, ಭದ್ರಾವತಿ, ಮಾರ್ಚಿ 94 ರಲ್ಲಿ ಮಂಡ್ಯ ದಾವಣಗೆರೆ

ಶ್ರೀಮತಿ ದಮಯಂತಿ ಬೋರೇಗೌಡ : ಮಾನ್ಯ ಅಧ್ಯಕ್ಷರೇ, ಮಂಡ್ಯದಲ್ಲಿ 3 ಸಹಕಾರ ಸಕ್ಕರೆ ಕಾರ್ಖಾನೆಗಳು ಇದ್ದರೂ ಸಹ ಹೊರಗಡೆ ತರುವಂತಹ ಅವಶ್ಯಕತೆ ಏನು ಇದೆ?

ಶ್ರೀಮತಿ ಮನೋರಮ ಮಧ್ವರಾಜ್ : ಆ ಸಕ್ಕರೆ ಸಾಕಾದರೆ ನಮ್ಮದೇನೂ ಅಭ್ಯಂತರ ಇಲ್ಲ, ಅದು ಏನೋ ವಿಶೇಷ ಕಾರಣಗಳಿಂದ ಇಲ್ಲಿಂದ ತರಿಸಿರಬಹುದು. ನಾನು ಅಧಿಕಾರಿಗಳ ಹತ್ತಿರ ಸಮಾಲೋಚನೆ ಮಾಡಿ ಆದಷ್ಟು ಮಟ್ಟಿಗೆ ಮಂಡ್ಯದಿಂದಲೇ ಸರಬರಾಜು ಮಾಡುವ ಹಾಗೆ ಸೂಚಿಸುತ್ತೇನೆ.

ಶ್ರೀ ಡಿ. ಹಲಗೇಗೌಡ : ಮಾನ್ಯ ಅಧ್ಯಕ್ಷರೇ, ನಾನು ಹೇಳತಕ್ಕಂಥಾದ್ದು ಈ ಪಾಂಡವಪುರಕ್ಕೆ ಸಂಕೇಶ್ವರದಿಂದ ಸಂಕೇಶ್ವರದಿಂದ ಚಾಮುಂಡೇಶ್ವರಿಗೆ ಹೀಗೆ ಅನೇಕ ವೇಳೆ ಆಗುತ್ತಿದೆ. ಇದಕ್ಕೆ ಸಾರಿಗೆ ಖರ್ಚು ಬೀಳುವುದಿಲ್ಲವೇ? ಅದನ್ನು ತರಬೇಕಾದರೆ ಎಷ್ಟು ತೊಂದರೆ ಆಗುತ್ತದೆ. ಇಲ್ಲಿಂದಲೇ ಸಕ್ಕರೆ ತೆಗೆದುಕೊಂಡು ಅಕ್ಕಪಕ್ಕದ ಜಿಲ್ಲೆಗಳನ್ನು ಹೊಂದಾಣಿಕೆ ಮಾಡಿಕೊಂಡು ಆದಷ್ಟು ಹತ್ತಿರ ಕೊಡತಕ್ಕಂಥಾದ್ದು ಒಳ್ಳೆಯ ವ್ಯವಸ್ಥೆ ಅಲ್ಲವೇ? ಏಕೆ ಈ ರೀತಿ ಮಾಡುತ್ತಾರೆ? ಇದು ಸರ್ಕಾರದ ಗಮನಕ್ಕೆ ಬರುತ್ತದೆಯೇ ಒಳ್ಳೆಯ ವ್ಯವಸ್ಥೆ ಅಲ್ಲವೇ? ಏಕೆ ಈ ರೀತಿ ಮಾಡುತ್ತಾರೆ? ಇದು ಸರ್ಕಾರದ ಗಮನಕ್ಕೆ ಬರುತ್ತದೆಯೇ

ಶ್ರೀಮತಿ ಮನೋರಾಮ ಮಧ್ವರಾಜ್ : ನಾನು ಈಗಾಗಲೇ ಹೇಳಿದ್ದೇನೆ. ಆದಷ್ಟು ಮಟ್ಟಿಗೆ ಮಂಡ್ಯ ಜಿಲ್ಲೆಯಿಂದಲೇ ಸಕ್ಕರೆ ಕೊಡುವ ಹಾಗೆ ಪ್ರಯತ್ನ ಮಾಡುತ್ತೇನೆ.

ಮಹಾಜನ ಆಯೋಗದ ನೇಮಕ ಹಾಗೂ ವರದಿಯ ಅನುಷ್ಠಾನ

526 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಹಾರಾಷ್ಟ್ರ - ಕರ್ನಾಟಕ ನಡುವಿನ ಗಡಿ ವಿವಾದದ ಬಗ್ಗೆ ವರದಿಯನ್ನು ನೀಡಲು ಮಹಾಜನ್ ಆಯೋಗವನ್ನು ಯಾವಾಗ ನೇಮಿಸಲಾಯಿತು ?

ಆ) ಆ ಸಮಿತಿಯು ಎಂದು ತನ್ನ ವರದಿಯನ್ನು ನೀಡಿತು.

ಇ) ಆ ವರದಿಯಲ್ಲಿನ ಮುಖ್ಯ ಅಂಶಗಳೇನು ?

ಈ) ಈ ವರಿದಿಯಲ್ಲಿ ರಾಜ್ಯದ ಹಿತಾಸಕ್ತಿಗೆ ಅನುಕೂಲವಾಗುವ ಶಿಫಾರಸುಗಳಿರುವುದು ನಿಜವೇ ?

ಉ) ಹಾಗಿದ್ದಲ್ಲಿ ಆ ವರದಿಯನ್ನು ಜಾರಿಗೊಳಿಸುವಂತೆ ಎಷ್ಟು ಬಾರಿ ಕೇಂದ್ರದ ಮೇಲೆ ಒತ್ತಡ ತರಲಾಗಿದೆ ?

ಊ) ಎಷ್ಟು ಭಾರಿ ವಿಧಾನಮಂಡಲದಲ್ಲಿ ಅವಿರೋಧ ನಿರ್ಣಯಗಳನ್ನು ಮಾಡಿ ಕಳುಹಿಸಿಕೊಡಲಾಗಿದೆ ?

ಋ) ಇತ್ತೀಚೆಗೆ ಮಹಾರಾಷ್ಟ್ರದ ಸಚಿವರೊಬ್ಬರು ಆ ಬಗ್ಗೆ ಪ್ರಸ್ತಾಪಿಸಿರುವುದರಿಂದ ಮತ್ತೆ ಕೇಂದ್ರದ ಮೇಲೆ ಒತ್ತಡ ಹೇರಲು ರಾಜ್ಯ ಸರ್ಕಾರವು ಸರ್ವ ಪಕ್ಷಗಳ ನಿಯೋಗವನ್ನು ಕರೆದೊಯ್ಯುವುದೇ ?

ೠ) ಇಲ್ಲದಿದ್ದಲ್ಲಿ, ಅದಕ್ಕೆ ಕಾರಣಗಳೇನು ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿ) :

ಅ) 25.10.1966

ಆ) 25.8.1967

ಇ) ವರದಿಯ ಮುಖ್ಯಾಂಶಗಳನ್ನು ಲಗತ್ತಿಸಿದೆ.

ಈ) ಹೌದು

ಉ) ಒಂಬತ್ತು ಬಾರಿ

ಊ) ನಾಲ್ಕು ಬಾರಿ

ಋ) ಇಲ್ಲ

ೠ) ಈಗಾಗಲೇ ಕರ್ನಾಟಕ ವಿಧಾನಮಂಡಲವು ಸರ್ವಾನುಮತದಿಂದ ವರದಿಯನ್ನು ಜಾರಿಗೊಳಿಸಬೇಕೆಂದು ಗೊತ್ತುವಳಿಯನ್ನು ಸ್ವೀಕರಿಸುವುದರಿಂದ ಸರ್ವಪಕ್ಷಗಳ ನಿಯೋಗವೊಂದನ್ನು ಕರೆದುಕೊಂಡು ಹೋಗುವ ಅವಶ್ಯಕತೆ ಇಲ್ಲ.

EXTRACT OF THE SUMMARY OF THE RECOMMENDATION OF THE MAHAJAN COMMISSION

The Following areas are recommended for transfer from the state of Mysore to the state of Maharashtra.

i) the town of Nipani with 40 villages of the Nipani Bhag in Chikodi taluka of Belgaum district. The population recommended for transfer is 1,17,783

out of which 89,983 is Marathi-speaking, their percentage being 76.3,

ii. 9 villages of Hukeri taluka of Belgaum district out of the 18 villages claimed by the State of Maharashtra. The population recommended for transfer is 9,229 with 90.5 percent marathi-speakers,

iii. 62 villages of Belgaum taluka out of the 86 originally claimed by the Government of Maharashtra. The population recommended for transfer is 75,303, Marathi speaking perccentage being 80.6

The claim to the town of Belgaum is disallowed and the city is not recommended for transfer to the state of Maharashtra.

iv. 152 villages of the Khanapur taluka out of 206 claimed by State of Maharashtra. The towns of kahanapur and Nandgad stand transferred. The population recommended for transfer is 78,685, percentage of Marathi speaking being 80.5

2. Thus, out of the total of 814 villages claimed by the State of Maharashtra, their claim is recommended in respect of a total of 264 villages along with the towns of Nipani, khanapur and Nandgad covering an area of 656.3 sq. Miles. The total population thus transferred is 2,81,000 Marathi speaking percentage being 79.1

3. The claim of the Government of Maharashtra to the villages in the district of Bidar, in the three talukas of the district of North Kanara, for nine villages in Athani and to 13 villages out of 22 in the taluks of Hukeri is not recommended. As stated above, the claim to the town of Belgaum along with 40 more villages in the Khanapur taluka is also not recommended.

4. The following areas are recommended for transfer from the State of Maharashtra to the State of Mysore

i. the whole taluka of Akkalkot along with the town of Akkalkot. Thepopulation recommended for transfer is 1,75,333 Kannada-speaking percent age being 56.0

ii 44 villages in the taluka of Jath as offered by the State of Maharashtra to the State of Mysore. The population recommended for tranfer is 65, 207, per-centage of Kannada-speaking being 69.1, the counter claim of the State of Mysore for the other 54 villages in this taluks is disallowed.

iii) 65 villages in the taluka of South Sholapur, as offered by the State of Maharashtra. The population recommended for transfer is 88,839, percentage of Kannada-speaking being 51.4. The Counter claim of the State of Mysore regarding the entire taluka is rejected.

iv) 15 villages in the taluka of Gadhinglaj out of 24 offered by the State of Maharashtra to the State of Mysore with a population of 20,060, Kannada speaking percentage being 57.6. The Mysore Government's claim to nine villages out of the 24 originally offered but later on withdrawn is disallowed.

5. The offer of the State of Maharashtra to transfer 19 villages in the taluka of Shirol to the State of Mysore has subsequently been withdrawn. The Commission does not find it possible to recommend the transfer of any village in this taluka to the State of Mysore. Similarly, the Commission is unable to recommend the transfer of the nine villages offered by the state of Maharashtra to State of Mysore in the taluka of Mangalwadha.

6. The counter claim of the State of Mysore to the city of Sholapur, the taluka of Chandgad and the taluka of North Sholapur stands rejected.

7. The result is that out of 260 villages offered by the State of Bombay to the State of Mysore in the year 1957, 227 villages covering an area of 1,368 sq. miles are recommended for transfer. The population of the area recommended for transfer is 3,49,439, Kannada-speaking percentage being 57.9.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಮಾನ್ಯ ಅಧ್ಯಕ್ಷರೇ, ನಾನು ಮಹಾರಾಷ್ಟ್ರ ಮತ್ತು ಕರ್ನಾಟಕದ ಗಡಿ ನಾಡಿನ ವಿವಾದದ ಬಗ್ಗೆ ಕೇಳಿ ಮಹಾಜನ್ ಕಮಿಷನ್ ರಿಪೋರ್ಟ್ ಯಾವಾಗ ಕೊಟ್ಟಿದ್ದಾರೆ ಎನ್ನುವುದಕ್ಕೆ ಉತ್ತರ ಕೊಟ್ಟಿದ್ದಾರೆ. ಅದರಲ್ಲಿ ತಾವು ಎಷ್ಟು ಸಾರಿ ತಾವು ಪ್ರಯತ್ನ ಮಾಡಿ ಕೇಂದರ ಸರ್ಕಾರಕ್ಕೆ ಕಳುಹಿಸಿದ್ದೀರಿ? ಕೇಂದ್ರ ಸರ್ಕಾರಕ್ಕೆ 9 ಸಾರಿ ಮಾತ್ರ ಒತ್ತಾಯ ಮಾಡಿದ್ದೇವೆಂದು ಹೇಳಿದ್ದಾರೆ. ಆಮೇಲೆ ತಾವು ಏನಾದರೂ ನಿಯೋಗ ಕಳುಹಿಸುತ್ತೀರೋ ಅಂದರೆ ಇಲ್ಲ ಎಂದು ಹೇಳಿದ್ದಾರೆ. ಈಗ ಮಹಾರಾಷ್ಟ್ರದಲ್ಲಿ ಮುಖ್ಯಮಂತ್ರಿಗಳು ಮೊನ್ನೆ ಹೇಳಿದ್ದಾರೆ. ಅದೂ ನಮ್ಮ ಗಡಿ ನಾಡಿನಲ್ಲಿ ವಿಶೇಷವಾದ ಚರ್ಚೆ ನಡೆಯುತ್ತಿದೆ. ಆಗಿದ್ದಲ್ಲಿ ತಾವು ನಿಯೋಗ ಹೋಗುವ ಅವಶ್ಯಕತೆ ಇಲ್ಲ ಮತ್ತು 62ರಲ್ಲಿ ರಿಪೋರ್ಟ್ ಕೊಟ್ಟಿದ್ದರೂ ಸಹ ಇವತ್ತಿನವರೆಗೂ ತಾವು ಬರೇ 9 ಸಾರಿ ಮಾತ್ರ ನಾವು ಪ್ರಯತ್ನಪಟ್ಟಿದ್ದೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದೀರಿ. ವಿಧಾನ ಸಭೆಯಲ್ಲಿ ಒಮ್ಮತ ನಿರ್ಣಯ 4ಸಾರಿ ಎಂದು ಹೇಳಿದ್ದೀರಿ: ಆದರೆ ಪುನಃ ಈ ವಿಧಾನ ಸಭೆಯಲ್ಲಿ ಒಂದು ನಿರ್ಣಯ ತೆಗೆದುಕೊಂಡು ಒಂದು ನಿಯೋಗ ಏತಕ್ಕೆ ಹೋಗಬಾರದು? ಅದರ ಬಗ್ಗೆ ತಾವು ಇಲ್ಲ ಎಂದು ಏತಕ್ಕೆ ಹೇಳುತ್ತೀರಿ?

ಶ್ರೀ ಎಂ. ವೀರಪ್ಪಮೊಯಿಲಿ : ಮಾನ್ಯ ಅಧ್ಯಕ್ಷರೇ, ಈಗ ತಮಗೆಲ್ಲಾ ತಿಳಿದ ಪ್ರಕಾರ ನಮ್ಮ ಒಂದು ಕರ್ನಾಟಕ ರಾಜ್ಯದ ವಿಧಾನ ಮಂಡಲದ ಅಭಿಪ್ರಾಯವನ್ನು ಬಹಳ ಸ್ಪಷ್ಟವಾಗಿ ಕೇಂದ್ರ ಸರ್ಕಾರಕ್ಕೆ ಪ್ರಧಾನ ಮಂತ್ರಿಗಳಿಗೆ ಮತ್ತು ಎಲ್ಲರಿಗೂ ಕೂಡ ಸ್ಪಷ್ಟಪಡಿಸಿದ್ದೇವೆ. ಅದು ಏನೆಂದರೆ ನಾವು ಮಹಾಜನ್ ಆಯೋಗದ ವರದಿಯೇ ಅಂತಿಮ. ಎಂದೂ ಯಾವಾಗಲೂ ಕೂಡ ಅದಕ್ಕೆ ನಾವು ಬದ್ಧರಾಗಿದ್ದೇವೆ ಎಂಬ ವಿಚಾರವನ್ನು ನಾವು ಮೊದಲಿನಿಂದಲೂ ಕೂಡ ನಾವು ಹೇಳುತ್ತಲೇ

ಬಂದಿದ್ದೇವೆ. ಈ ಮಧ್ಯೆ ಮಹಾರಾಷ್ಟ್ರದ ಅನೇಕ ಮುಖಂಡರು ಬೇರೆ ಬೇರೆ ಕಾಲದಲ್ಲಿ ಈ ವಿಚಾರವನ್ನು ಅವರು ಎತ್ತುತ್ತಲೇ ಬಂದಿದ್ದಾರೆ. 22-2-94ರಂದು ಕೂಡ ಮಹಾರಾಷ್ಟ್ರದ ಮುಖ್ಯಮಂತ್ರಿಗಳಾದ ಶ್ರೀ ಶರದ್‌ಪವಾರ್‌ರವರು ಮಹಾರಾಷ್ಟ್ರದ ಸರ್ವಪಕ್ಷದ ಮುಖಂಡರೊಂದಿಗೆ ಮಾತನಾಡುತ್ತಾ ಮಹಾರಾಷ್ಟ್ರದ ಏಕೀಕರಣ ಸಮಿತಿಯವರ ಜೊತೆಯಲ್ಲಿ ಕೂಡ ಮಾತನಾಡುತ್ತಾ ಸರ್ವಪಕ್ಷ ಸಮೀಕ್ಷಾ ಸಮಿತಿ ಮಾಡುತ್ತೇವೆ ಎಂದು ಕೂಡ ಹೇಳಿದ್ದುದು ಪತ್ರಿಕೆಯಲ್ಲಿ ಅಲ್ಲಿ ಬಂದಿದೆ. ಈ ಸಮಿತಿಯ ನಂತರ ಸರ್ವಪಕ್ಷಗಳ ನಿಯೋಗ ನಾವು ತೆಗೆದುಕೊಂಡು ಹೋಗುತ್ತೇವೆ ಎಂದೂ ಕೂಡ ಮತ್ತು ಪ್ರಧಾನಿಯವರನ್ನು ಭೇಟಿ ಮಾಡುವುದಾಗಿ ಕೂಡ ಅವರು ಅಲ್ಲಿ ಹೇಳಿದ್ದರು ಎಂದು ಹೇಳಿ ಹೇಳಿದ್ದಾರೆ. ಆದರೆ ಅದು ಅವರು ಹೇಳಲಿಲ್ಲ. ಅದು ಯಾರೋ ಮತ್ತೊಬ್ಬರು ಸದಸ್ಯರು ಹೇಳಿದ್ದಾರೆ ಎಂದು ಹೇಳಿ ಕೂಡ ಪತ್ರಿಕೆಯಲ್ಲಿ ಇದೆ. ಆ ಮಾತು ಕೂಡ ಬಂದಿದೆ. ಮತ್ತೆ ಈಗ ನಾವು ನಮ್ಮ ಒಂದು ಹಕ್ಕಿನ ಬಗ್ಗೆ ಮಹಾಜನ್ ಸಮಿತಿಯ ವರದಿಯ ಬಗ್ಗೆ ವಿಧಾನಮಂಡಲದಲ್ಲಿ ಏನು ನಿರ್ಣಯ ತೆಗೆದುಕೊಂಡಿದ್ದೇವೆ ಅದಕ್ಕಿಂತ ಒಂದು ಇಂಚು ಕೂಡ ಬದಲಾವಣೆ ಇಲ್ಲ. ಈತನ ಮಧ್ಯೆ ನಾವು ಕೂಡ ತಾವು ಹೇಳಿದ ಹಾಗೆ ಅಗತ್ಯಬಿದ್ದರೆ ಸರ್ವಪಕ್ಷಗಳ ನಿಯೋಗವನ್ನು ಅಗತ್ಯಬಿದ್ದರೆ ನಾವು ಪ್ರಧಾನ ಮಂತ್ರಿಗಳಿಗೆ ತೆಗೆದುಕೊಂಡು ಹೋಗಬಹುದು. ಅದಕ್ಕೆ ನಾನು ಸಿದ್ಧನಿದ್ದೇನೆ. ಆದರೆ ಸೂಕ್ತ ಕಾಲದಲ್ಲಿ ಹೋಗೋಣ. ನಾವು ಪುನಃ ಅದನ್ನು ಕೆದಕಬೇಕಾದಂತಹ ಅವಶ್ಯಕತೆ ಇಲ್ಲ. ಅಗತ್ಯಬಿದ್ದರೆ ನಾವು ಹೋಗೋಣ. ಆದರೆ ನಮ್ಮ ಹಕ್ಕನ್ನು ಯಾರೂ ಕೂಡ ಕಸಿದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಅವರು ನಿಯೋಗ ಹೋಗುತ್ತೇವೆಂದು ಹೇಳಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ: ನಿಯೋಗ ಹೋಗುತ್ತೇವೆಂದು ಹೇಳಿದ್ದಾರೆ; ಫೆಬ್ರವರಿಯಲ್ಲಿ ಅಧ್ಯಯನ ಮಾಡಿದ ಮೇಲೆ ಆ ಸಮಿತಿಯವರು ನಿರ್ಣಯ ಮಾಡಿದ ಮೇಲೆ ನಾವು ಅಲ್ಲಿ ಹೋಗೋಣ. ಎಂದು ಹೇಳಿದ್ದಾರೆ. ಅದು ಸೂಕ್ತ ಸಂದರ್ಭ ಬಂದರೆ ವಿಧಾನ ಸಭೆ ನಡೆಯುತ್ತಲೇ ಇರುತ್ತದೆ. ಆಗ ಬೇಕಾದರೆ ನಾವು ಒಂದು ಸಭೆ ಸೇರೋಣ. ಇದರ ಬಗ್ಗೆ ಅಗತ್ಯಬಿದ್ದರೆ ನಿಯೋಗ ತೆಗೆದುಕೊಂಡು ಹೋಗುವುದರಲ್ಲಿ ನನ್ನದೇನೂ ಅಭ್ಯಂತರ ಇಲ್ಲ.

11.50 ಎ.ಎಂ

ಶ್ರೀ ಎಂ.ವಿ. ವೆಂಕಟಪ್ಪ: ಗಡಿ ವಿವಾದದ ಬಗ್ಗೆ ಮಹಾರಾಷ್ಟ್ರದ ಮುಖ್ಯಮಂತ್ರಿಗಳಾಗಲಿ ಪ್ರಧಾನ ಮಂತ್ರಿಗಳಾಗಲಿ ತಮ್ಮ ಜೊತೆ ಅನೌಪಚಾರಿಕವಾಗಿ ಆದರೂ ಮಾತನಾಡಿದ್ದಾರೆಯೇ?

ಶ್ರೀ ಎಂ. ವೀರಪ್ಪ ಮೊಯಿಲಿ: ನನ್ನ ಜೊತೆ ಯಾವುದೇ ರೀತಿಯ ಔಪಚಾರಿಕ ಅಥವಾ ಅನೌಪಚಾರಿಕ ಮಾತುಕತೆ ನಡೆದಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಅಧ್ಯಕ್ಷರೇ, ಮಹಾಜನ ವರದಿ ತೀರ್ಪಿನಿಂದಾಗಿ ನಮ್ಮ ರಾಜ್ಯಕ್ಕೆ ಆಗಿರುವ ಅನ್ಯಾಯವನ್ನು ಸರಿಪಡಿಸಲಿಕ್ಕೆ ಈ ವರದಿಯನ್ನು ಮಾಡಿರುವುದು. ಇದನ್ನು ಪರ್‌ಸ್ಯೂ ಮಾಡಲಿಕ್ಕೆ ಕೇಂದ್ರ ಸರ್ಕಾರಕ್ಕೆ ನಾವು 9 ಸಲ ಹೋಗಿ ಬಂದು ಸುಮ್ಮನೆ ತಟಸ್ಥರಾಗಿದ್ದೇವೆ. ಇದನ್ನು ಪರ್‌ಸ್ಯೂ ಮಾಡಲಿಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂಬುದನ್ನು ಮುಖ್ಯಮಂತ್ರಿಗಳು ಈ ಸದನಕ್ಕೆ ತಿಳಿಸಬೇಕು. ಏಕೆಂದರೆ ಅನ್ಯಾಯವಾಗಿರುವುದು ನಮಗೆ, ನ್ಯಾಯ ಸಿಗಬೇಕಾಗಿರುವುದು ನಮಗೆ. ವರದಿಯಲ್ಲಿ ಕೂಡ ಅದನ್ನು ಹೇಳಿದ್ದಾರೆ. ಇಂತಹ ಸನ್ನಿವೇಶದಲ್ಲಿ ರಾಜ್ಯಸರ್ಕಾರ ಸುಮ್ಮನೆ ಇರುತ್ತೇವೆ ಎಂದರೆ ಹೇಗೆ? ಇದನ್ನು ಪರ್‌ಸ್ಯೂ ಮಾಡಲಿಕ್ಕೆ ನೀವೇನು ಕಾರ್ಯಕ್ರಮ ಇಟ್ಟುಕೊಂಡಿದ್ದೀರಾ?

SRI B.I. PATIL : Sir, the Mahajan Commission Report has been rejected by the Central Government. At no point of time the Centre has said that it will accept and implement the report. Secondly, it is replied that Karnataka Legislature has passed unanimous resolutions on this issue. But MES has never supported the resolutions passed in the legislature and therefore, it is wrong on the part of the government to say that resolutions were passed unanimously. The Union Home Minister when he visited the State last year, has categorially said that Mahajan Commission report is not final and it is still pending with the Central Government. We even now urge the Central Government to find an amicable solution to this border dispute outside the Mahajan Commission report.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೇ, ಮಹಾಜನ್ ಕಮಿಷನ್ ಬೇಕೇ ಬೇಡವೇ ಎಂಬ ಚರ್ಚೆಯಲ್ಲ ಇದು. ಅದು ತೀರ್ಮಾನ ಆಗಿಹೋಗಿದೆ. ಅದು ಮುಗಿದ ಅಧ್ಯಾಯ. ನಮಗೆ ಉಳಿದಿರುವುದು ಮಹಾಜನ ವರದಿಯನ್ನು ಕೇಂದ್ರ ಸರ್ಕಾರದಲ್ಲಿ ನಮಗಾಗಿ ಅಂಕಿತ ಕೊಡಬೇಕಾದ್ದು ಉಳಿದಿರುವುದು. ಅದು ಲೋಕಸಭೆಯ ಆಸ್ತಿಯಾಗಿ ಈಗ ಉಳಿದಿದೆ. ಶ್ರೀಮತಿ ಇಂದಿರಾಗಾಂಧಿಯವರು ಪ್ರಧಾನಮಂತ್ರಿಯಾಗಿದ್ದಾಗ ಮಹಾಜನ್ ವರದಿ ಅಂತಿಮ ಎಂದು ಅವರು ಒಪ್ಪಿದ್ದಾರೆ. ಮಹಾಜನ್ ಕಮಿಷನ್ ನೇಮಕವಾಗುವ ಮುಂಚೆ ಮಹಾರಾಷ್ಟ್ರದ ಎಲ್ಲಾ ಮುಖಂಡರು ಈ ವರದಿಯನ್ನು ಚಾಚೂ ತಪ್ಪದೆ ಒಪ್ಪುತ್ತೇವೆಂದು ಹೇಳಿದ್ದಾರೆ. ಆದಾದ ಮೇಲೆ ತಂಟೆ ತೆಗೆದಿರುವವರು ಮತ್ತೆ ಮಹಾರಾಷ್ಟ್ರದವರು. ಅದು ಬಿಟ್ಟರೆ ಪ್ರಶ್ನೆ ಇಲ್ಲವೇ ಇಲ್ಲ. ಆ ವರದಿ ಸಂಪೂರ್ಣವಾಗಿ ನಮಗೆ ಅನುಕೂಲ ಎಂದು ನಾವು ಹೇಳದೇ ಇದ್ದರೂ ನಮಗೆ ಈ ಗಡಿ ಸಮಸ್ಯೆ ಬಗೆಹರಿಯಲಿ ಎಂಬ ಸದುದ್ದೇಶದಿಂದ ಮಹಾಜನ ವರದಿ ಕಾರ್ಯಗತಮಾಡಬೇಕೆಂದು ಈಗಿರುವುದು. ಮಹಾಜನ ವರದಿಯಲ್ಲಿ ಕಾಸರಗೋಡು ಕರ್ನಾಟಕಕ್ಕೆ ಸೇರಬೇಕೆಂದು ಇದೆ. ಅದು ಬಹಳ ಮುಖ್ಯ. ಈ ಬಗ್ಗೆ ಮತ್ತೆ ಮಹಾರಾಷ್ಟ್ರ ಮುಖ್ಯಮಂತ್ರಿಗಳು, ಮುಖಂಡರು ಅವರ ಸಚಿವಸಂಪುಟದ ಸಚಿವರು ಹೊರಟಿದ್ದಾರೆ ಈ ಬಗ್ಗೆ ನೀವು ಎಚ್ಚರಿಕೆ ಕೊಡಬೇಕು ಕೇಂದ್ರಸರ್ಕಾರದ ಜೊತೆಯಲ್ಲಿ ಕೂಡಲೇ ನೀವು ತಕ್ಷಣ ಮಾತಾಡಬೇಕು ಪ್ರಧಾನಮಂತ್ರಿಗಳ ಜೊತೆ ತಾವು ಭೇಟಿ ಮಾಡಬೇಕು. ಯಾವ ರೀತಿಯಾದರೂ ಭೇಟಿ ಮಾಡಿ, ತಾವಾದರೂ ಮಾಡಬಹುದು ಅಥವಾ ಸರ್ವಪಕ್ಷಗಳ ನಿಯೋಗ ಕರೆದುಕೊಂಡು ಹೋಗುವುದಾದರೆ ಅದಕ್ಕೂ ನಾವು ಸಂತೋಷಪಡುತ್ತೇವೆ. ಇದಕ್ಕೆ ಅಂತಿಮ ತೆರೆ ಎಳೆಯಬೇಕು. ಪಾರ್ಲಿಮೆಂಟಿನಲ್ಲಿ ಕೂಡಲೇ ಮಹಾಜನ ವರದಿಯನ್ನು ಒಪ್ಪಬೇಕೆಂಬ ನಿಯೋಗವನ್ನು ತೆಗೆದುಕೊಂಡು ಹೋಗಿ ಪ್ರಧಾನಮಂತ್ರಿಗಳ ಮುಂದೆ ಒಪ್ಪಿಸುತ್ತೀರಾ ಎಂದು ನಾವು ಕೇಳುತ್ತಿದ್ದೇವೆ.

ಶ್ರೀ ಎಂ. ನಾರಾಯಣಸ್ವಾಮಿ : ಅಧ್ಯಕ್ಷರೇ, ಈ ಮಹಾಜನ ವರದಿಯನ್ನು ಕೇಂದ್ರ ಸರ್ಕಾರಕ್ಕೆ 67ರಲ್ಲಿ ಕೊಟ್ಟಾದ ಮೇಲೆ ನಾವು ಕೂಡ 9 ಬಾರಿ ಒತ್ತಾಯ ಮಾಡಿದ್ದೇವೆಂದು ಮುಖ್ಯ ಮಂತ್ರಿಗಳು ತಿಳಿಸಿದ್ದಾರೆ. ಆದರೆ ನಮ್ಮ ಹಕ್ಕನ್ನು ಕೇಳಲಿಕ್ಕೆ ಪ್ರಯತ್ನ ಮಾಡಿದೆವು, ಕೇಂದ್ರದ ಬಳಿ ವರದಿ ಇದ್ದರೂ ಅದನ್ನು ಜಾರಿ ಮಾಡುವ ಕೆಲಸ ಕೇಂದ್ರ ಸರ್ಕಾರದ ಜವಾಬ್ದಾರಿ. ಅದನ್ನು ಒತ್ತಾಯ ನಾವು ಮಾಡದೇ ಇದ್ದರೆ ಕೇಂದ್ರ ಸರ್ಕಾರ ಮಾಡುವುದಿಲ್ಲ ಎಂದು ನಮ್ಮ ಅನಿಸಿಕೆ. ಉದಾಹರಣೆಗೆ ಕಾವೇರಿ ತೆಗೆದುಕೊಂಡಾಗ ಮದ್ರಾಸ್‌ನವರು ಬಹಳ ಒತ್ತಾಯ ಮಾಡಿ ಸುಪ್ರೀಂ ಕೋರ್ಟಿಗೆ ಹೋಗಿ, ಅವರ ಒತ್ತಾಯಕ್ಕಾಗಿ ಅವರಿಗೆ ಅನುಕೂಲವಾಯಿತು. ಆದ್ದರಿಂದ ನಮ್ಮ ಗಡಿಯನ್ನು ಉಳಿಸಿಕೊಳ್ಳಬೇಕಾದರೆ ನಾವು ಕೇಂದ್ರಸರ್ಕಾರದ ಮೇಲೆ ಎಲ್ಲ

ಪಕ್ಷಗಳವರೂ ಸೇರಿ ಒತ್ತಾಯ ಮಾಡಲೇಬೇಕು ಎಂದು ಮಾನ್ಯ ಮುಖ್ಯಮಂತ್ರಿಗಳನ್ನು ಒತ್ತಾಯ ಮಾಡುತ್ತೇನೆ. ಆದ್ದರಿಂದ ಮುಂದಿನ ತಿಂಗಳಲ್ಲಿ ನಿಯೋಗ ಹೋಗುವುದಕ್ಕೆ ಅಸ್ಪದ ಮಾಡುತ್ತಾರೆಂದು ನಾನು ಪ್ರಶ್ನೆ ಕೇಳುತ್ತಿದ್ದೇನೆ.

ಪ್ರೊ॥ ಎಂ.ಡಿ. ನಂಜುಂಡಸ್ವಾಮಿ : ಅಧ್ಯಕ್ಷರೇ, ಎಲ್ಲಾ ಆಯೋಗಗಳ ವರದಿ ಮೇಲೆ ವಿಚಿತ್ರವಾದ ಚರ್ಚೆಗಳು ನಡೆದಿದೆಯೋ ಅದೇ ರೀತಿ ವಿಚಿತ್ರವಾದ ಶಿಫಾರಸ್ಸ್‌ಗಳನ್ನು ಮಹಾಜನ್ ವರದಿ ಮಾಡಿದೆ. ಮಹಾಜನ ವರದಿಯನ್ನು ನಾವು ಒಪ್ಪಿದ್ದೇವೆ ಅದು ಜಾರಿಗೆ ಬರಬೇಕೆನ್ನುವುದು ನಮ್ಮ ಸರ್ಕಾರದ ನಮ್ಮ ರಾಜ್ಯದ ನಿಲುವು, ಅದು ಸರಿ. ಆದರೆ ಇಲ್ಲಿ ಏನು ಶಿಫಾರಸ್ ಮಾಡಿದ್ದಾರೆ ಮುಖ್ಯಮಂತ್ರಿಗಳು ಸ್ವಲ್ಪ ದೆಹಲಿಗೆ ಹೋಗಿ ಇದರ ಬಗ್ಗೆ ಚರ್ಚೆ ಮಾಡಬೇಕು. ಮಹಾಜನ ವರದಿ ಏನು ಶಿಫಾರಸ್ ಮಾಡುತ್ತದೆಂದರೆ the population re-commended for transfer is.......

ಅಧ್ಯಕ್ಷರು : ಪ್ರೊಫೆಸರ್ ಅದರ ಡೀಟೈಲಡ್ ಡಿಸ್ಕಷನ್ ಮಾಡುತ್ತಿಲ್ಲ.

ಪ್ರೊ॥ ಎಂ.ಡಿ. ನಂಜುಂಡಸ್ವಾಮಿ : ಡಿಸ್ಕಷನ್ ಅಲ್ಲ, ಒಂದೇ ಒಂದು ಸಲಹೆ, ನನಗೆ ನೆನಪಿರುವ ಪ್ರಕಾರ ಮಹಾಜನ್ ಅವರು ಬಂದಾಗಲೂ ಈ ಪ್ರದೇಶದ ಜನಗಳ ಜೊತೆ ಮಾತನಾಡಿಲ್ಲ ಏಕೆಂದರೆ transfer of territories ಎಂದು ಏನು ಮಾಡುತ್ತೇವೆ ನಾವು ಅದಕ್ಕೆ ಅಂತರರಾಷ್ಟ್ರೀಯವಾಗಿ ಒಪ್ಪಿರುವ ಸೂತ್ರ. plebiscite. ಇವರು population transfer ಎಂದು ಮಾತನಾಡುತ್ತಾರೆ, ಈ ಜನಗಳನ್ನು ಮಹಾಜನ್ರವರು ಮಾತನಾಡಿಸಿದರಾ? ಅಥವಾ ನೀವು ಈಗ ಆ ಜನಗಳನ್ನು ಮಾತನಾಡಿಸುತ್ತೀರಾ ಹೋಗುತ್ತೀರೋ ಇರುತ್ತೀರೋ ಎಂದು. ಅವರ ಒಪ್ಪಿಗೆ ಇಲ್ಲದೇ who are you to tell them to go to Maharashtra? They are willing to stay here. ಅದನ್ನು ನಾನು ಸೂಚನೆ ಕೊಡುತ್ತಿದ್ದೇನೆ. Transfer of population, no Commission can recommend. ಅವರ ಒಪ್ಪಿಗೆಯನ್ನು ಕೇಳಿಲ್ಲ. Plebiscite is not conducted.

ಶ್ರೀ ಸಿ. ಬೈರೆಗೌಡ : ಅಧ್ಯಕ್ಷರೇ, ಇದು ರಾಜಕೀಯವಾಗಿ ತೀರ್ಮಾನವಾಗಬೇಕಾಗಿರುವ ವಿಚಾರ. ಬಹಳ ವರ್ಷಗಳಿಂದ ಅದು ಹಾಗೇ ಉಳಿದುಕೊಂಡಿದೆ. ಈಗ ಮಹಾರಾಷ್ಟ್ರದಲ್ಲಿ ಅದರ ಹೊಗೆ ಹೊರಡುವುದಕ್ಕೆ ಪ್ರಾರಂಭವಾಗಿದೆ. ಇದನ್ನು ನೀವು ತೀರ್ಮಾನ ಮಾಡಿಸದೇ ಇದ್ದರೆ ನೀವು ರಾಜಕೀಯವಾಗಿ ಸಂಪೂರ್ಣ ವಿಫಲರಾಗಿದ್ದಾರೆಂದು ನಾವು ಹೇಳಬೇಕಾಗುತ್ತದೆ. ನಿಮ್ಮ ರಾಜಕೀಯ ವರ್ಚಸ್ಸನ್ನು ಕೇಂದ್ರ ಸರ್ಕಾರದ ಮೇಲೆ ಬೀರಿ, ಇವತ್ತು ತಾವು ಬಹಳ ಆಯಕಟ್ಟಿನ ಸ್ಥಾನದಲ್ಲಿದ್ದೀರಿ, ನಿಮ್ಮ ಆ ಸ್ಥಾನವನ್ನು ಬೇರೆಯದಕ್ಕೆ ಉಪಯೋಗಿಸಿಕೊಳ್ಳದೆ ರಾಜ್ಯದ ಹಿತಕ್ಕೆ ನೀವು ಉಪಯೋಗಿಸಿಕೊಳ್ಳುವಂತಹ ಪ್ರಯತ್ನ ನಿಮ್ಮಿಂದ ವೈಯಕ್ತಿಕವಾಗಿ ಮತ್ತು ನಿಮ್ಮ 180 ಸಂಖ್ಯೆ ಇವತ್ತು ಸದನದಲ್ಲಿದೆ ಇದನ್ನು ಈ ರಾಜ್ಯದ ಹಿತವನ್ನು ಕಾಪಾಡಲಿಕ್ಕೆ ತಾವು ಬಳಸುತ್ತೀರಾ ಮತ್ತು ಇವತ್ತು ಹೊಸೂರು ತಾಳವಾಡಿ ಮತ್ತು ಇನ್ನು ಕೆಲವು ತಮಿಳುನಾಡಿನಲ್ಲಿರುವ ಅನೇಕ ಪ್ರದೇಶಗಳು ಬಿಟ್ಟುಹೋಗಿವೆ. ಅದರ ಬಗ್ಗೆ ನೀವು ಏನು ಹೇಳುತ್ತೀರಿ?

ಶ್ರೀ ಆರ್.ವಿ. ದೇಶಪಾಂಡೆ : ಅಧ್ಯಕ್ಷರೇ, ಮಹಾಜನ ಕಮೀಷನ್ ನೇಮಕವಾಗಿದ್ದುದು ಮಹಾರಾಷ್ಟ್ರ ಸರ್ಕಾರದ ಒತ್ತಾಯದ ಮೇಲೆ. ಆ ವರದಿ ಏನು ಬರುತ್ತದೆ ಅದನ್ನು ನಾವು ಒಪ್ಪಿಕೊಳ್ಳುತ್ತೇವೆಂದು ಅವರು ಭರವಸೆ ಕೊಟ್ಟಿದ್ದರು. ಆದರೆ 20 ವರ್ಷಗಳ ನಂತರ ಆ ವರದಿ ಬಂದದನಂತರ ಹಲವಾರು ಬಾರಿ ಮಹಾರಾಷ್ಟ್ರದ ಮುಖ್ಯಮಂತ್ರಿಗಳು ಮತ್ತು ನಾಯಕರು ಇದರ ಬಗ್ಗೆ ಯಾವುದಾದರೂ ಒಂದು ಪ್ರಸ್ತಾಪ ಮಾಡುತ್ತಲೇ

ಇದ್ದಾರೆ. ನಮ್ಮ ಕರ್ನಾಟಕ ಸರ್ಕಾರ ಇದಕ್ಕೆ ಒಪ್ಪಿ ಕೊಂಡಿದ್ದೇವೆ. ಇನ್ಟೋಟೋ ಮಹಾಜನ ಕಮಿಷನ್ ವರದಿ ಜಾರಿಗೆ ಬರಬೇಕೆಂದು ನಾವು ಅಕ್ಸೆಪ್ಟ್ ಮಾಡಿದ್ದೇವೆ; ಅದರೊಳಗೆ ನಮಗೆ ಸಾಕಷ್ಟು ಹಾನಿಯೂ ಆಗಿದೆ. ಆ ಸಮಸ್ಯೆ ಬಗೆಹರಿಸಬೇಕೆಂದು ನಾವು ಮಾಡಿದ್ದೇವೆ. ಈಗ ಮಹಾರಾಷ್ಟ್ರದ ಮುಖ್ಯಮಂತ್ರಿಗಳು ಮತ್ತು ನಾಯಕರು ಹೇಳಿದ ನಂತರ ಇನ್ನೂ ತನಕ ಮುಖ್ಯಮಂತ್ರಿಗಳು ಅದರ ಬಗ್ಗೆ ಒಂದು ಚಕಾರ ಮಾತನಾಡಲಿಲ್ಲ. ಅದರ ಬಗ್ಗೆ ನನಗೆ ಬಹಳ ವಿಷಾದವಾಗುತ್ತದೆ. ಇಷ್ಟರೊಳಗಾಗಿ ಅವರು ಹೇಳಬೇಕಾಗಿತ್ತು. ಎರಡನೆಯದು, ಇವತ್ತು ಮತ್ತೊಂದು ವಿಷಯ ಮಹಾರಾಷ್ಟ್ರದಲ್ಲಿ ಮಾತನಾಡುತ್ತಿದ್ದಾರೆ, ದಕ್ಷಿಣ ಕನ್ನಡ ಜಿಲ್ಲೆ, ಉತ್ತರ ಕನ್ನಡ ಜಿಲ್ಲೆ, ಬೆಳಗಾವಿ ಜಿಲ್ಲೆಯ ಕೆಲವು ಭಾಗ, ಗೋವಾ ಮತ್ತು ಮಹಾರಾಷ್ಟ್ರದ ಕೆಲವು ಭಾಗ ಸೇರಿ ಕೊಂಕಣ ಸ್ಟೇಟ್ ಮಾಡಬೇಕೆಂದು ಚರ್ಚೆ ನಡೆಯುತ್ತಿದೆ. ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ವಿನಂತಿ ಮಾಡುತ್ತಿದ್ದೇನೆ. ತಮ್ಮ ಸ್ಪಷ್ಟವಾದ ನೀತಿ ಇದರ ಬಗ್ಗೆ ಹೇಳಬೇಕು. ಮಹಾರಾಷ್ಟ್ರದ ಮುಖ್ಯಮಂತ್ರಿಗಳು ಒಮ್ಮೆ ಸ್ಪಷ್ಟವಾಗಿ ಹೇಳುತ್ತಾರೆ. ನಾನು ಮಾತನಾಡುವುದಿಲ್ಲ ಕರ್ನಾಟಕದ ಮುಖ್ಯಮಂತ್ರಿಗಳ ಜೊತೆ; ಆಮೇಲೆ ಮಾತನಾಡುತ್ತೇನೆಂದು ಹೇಳುತ್ತಾರೆ. ಹಾಗಾಗಿ ತಮ್ಮ ನೀತಿ ಏನು ಮತ್ತು ತಾವೂ ಸಹ ನಮ್ಮ ರಾಜ್ಯದ ಸಂರಕ್ಷಣೆ ಮಾಡಲಿಕ್ಕೆ ಒಂದು ನಿಯೋಗ ತೆಗೆದುಕೊಂಡು ಹೋಗುವುದು ತಪ್ಪಲ್ಲ ಎಂದು ಸಲಹೆ ಮಾಡುತ್ತೇನೆ.

SRI K.C. MODGEKAR DESAI : Mr. Speaker Sir, I want to know from the Hon'ble Chief Minister, is it a fact that Government of India has not accepted the recommendations of the Mahajan Commission's report? Does it not mean that the report of the Mahajan Commission is a kind of trash? Don't you think that the report is biased one?

(Interruptions)

MR. SPEAKER :You ask supplementary.

SRI K.C. MODGEKAR DESAI : The Central Government is not implementing it and it is not binding on both the States. Whether the quality of the said report is worth to be thrown into a dust bin?

ಶ್ರೀ ಎಂ. ವೀರಪ್ಪ ಮೊಯಿಲಿ: ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಪ್ರಕಾರ ಮಹಾಜನ ಮಹಾಜನ ವರದಿಯನ್ನು ನಾವೆಲ್ಲರೂ ಒಪ್ಪಬೇಕಾಗುತ್ತದೆ. ಆದರೆ ಪೂರ್ತಿ ನಮಗೆ ನ್ಯಾಯ ಸಿಕ್ಕಿದೆ ಎಂದು ನಾವು ಹೇಳುತ್ತಿಲ್ಲ, ಆದರೂ ಕೂಡ ಒಂದು ಆಯೋಗದ ವರದಿ ಬಂದ ಮೇಲೆ ಅದಕ್ಕೆ ಮನ್ನಣೆ ಕೊಡಬೇಕಾಗುತ್ತದೆ. ಇದು ನಮ್ಮ ದೇಶದ, ಈ ಪ್ರಜಾಪ್ರಭುತ್ವದ ಒಂದು ಸಂಸ್ಕೃತಿಯಾಗಿದೆ. ಇದು ನಮ್ಮ ನಾಡಿನ ಜನರ ಒಂದು ನೀತಿಯಾಗಿದೆ. ಅನೇಕ ಸಂದರ್ಭದಲ್ಲಿ ಈ ಸದನದಲ್ಲಿ ಚರ್ಚೆಯಾಗಿದೆ. ಮಹಾಜನ ವರದಿಯನ್ನು ನಾವು ಪೂರ್ತಿಯಾಗಿ ಒಪ್ಪುತ್ತೇವೆಂದು ನಿರ್ಣಯ ಮಾಡಿಕೊಂಡಿದ್ದೇವೆ. ಅದಕ್ಕೆ ನಾವೆಲ್ಲರೂ ಬದ್ಧರು. ಅದರ ಬಗ್ಗೆ ಪ್ರಶ್ನೆ ಮಾಡತಕ್ಕಂಥಾದ್ದು ಇವತ್ತು ಉಳಿದಿಲ್ಲ. ನಮಗೆ ಬೇಕಾದ್ದು ಮಹಾಜನ ವರದಿ ಇನ್ ಟೋಟೋ ಅನುಷ್ಠಾನವಾಗಬೇಕು. ಅದೇ ನಮ್ಮ ಕರ್ನಾಟಕ ರಾಜ್ಯದ ಈ ಸದನದ ಒತ್ತಾಯ. ಈ ಸದನದ ಮೂಲಕ ಕೇಂದ್ರಕ್ಕೆ ಒತ್ತಾಯ ಮಾಡುತಿದ್ದೇವೆ. ಇದನ್ನು ಒಪ್ಪಿಕೊಂಡು ಇದಕ್ಕೆ ಅಂತಿಮ ತೆರೆ ಎಳೆಯಿರಿ ಎಂದು ಹೇಳಬಯಸುತ್ತೇನೆ. ಮಹಾಜನ ವರದಿ ಏನು ಶಿಫಾರಸ್ಸುಗಳನ್ನು ಮಾಡಿದೆ ಇದಕ್ಕೊಂದು ಅಂತಿಮ ಪ್ರಕಟಣೆ ಕೊಡಬೇಕಾಗುತ್ತದೆ. ಇದು ನಮ್ಮ ಮುಂದಿರತಕ್ಕಂತಹ ಒಂದು ವಿಚಾರ.

ಕೇಂದ್ರ ಸರಕಾರದ ಮುಂದೆ ಇರತಕ್ಕಂತಹ ಒಂದು ಬೇಡಿಕೆ. ಲೋಕಸಭೆ ಈ ಕೆಲಸ ಮಾಡುತ್ತದೆ. ಆದ್ದರಿಂದ ಮಹಾರಾಷ್ಟ್ರ ಏಕೀಕರಣ ಸಮಿತಿಯವರು, don't have any extra-territorial loyalty. ಇದನ್ನು ಇಟ್ಟುಕೊಳ್ಳಲಿಕ್ಕೆ ಹೋಗಬೇಡಿ. ನಿಮಗೆ ಓಟು ಕೊಡತಕ್ಕಂತಹ ಜನ ಮಹಾರಾಷ್ಟ್ರದವರು ಅಲ್ಲ. ನಿಮಗೆ ಓಟು ಕೊಡುವವರು ಕರ್ನಾಟಕದ ಕನ್ನಡ ನಾಡಿನವರು. You should be loyal to Karnataka, not to Maharashtra. ಆ ಕೆಲಸ ಮಾಡಲಿಕ್ಕೆ ಹೋಗಬೇಡಿ. ತಾವುಗಳು ಕರ್ನಾಟಕ ರಾಜ್ಯದ ವಿಧಾನ ಸಭಾ ಸದಸ್ಯರಾಗಿ ಪ್ರಮಾಣವಚನವನ್ನು ತೆಗೆದುಕೊಂಡಿದ್ದೀರಿ. ಆದ್ದರಿಂದ ಕರ್ನಾಟಕ ರಾಜ್ಯದ ವಿಧಾನ ಸಭಾ ಸದಸ್ಯರಾಗಿ ತಾವು ನಡೆದುಕೊಳ್ಳಬೇಕು.

(ಈ ಹಂತದಲ್ಲಿ ಶ್ರೀ ವಾಟಾಳ್ ನಾಗರಾಜ್ ಅವರು ಮಹಾರಾಷ್ಟ್ರ ಏಕೀಕರಣ ಸಮಿತಿಗೆ ಧಿಕ್ಕಾರವೆಂದು ಕೂಗಿದರು.)

(ಬೆಳಗಾಂ ಜಿಲ್ಲೆಯ ಕೆಲವು ಸ್ವತಂತ್ರ ಸದಸ್ಯರುಗಳು ಇದನ್ನು ಪ್ರತಿಭಟಿಸಿ ವಾಕೌಟ್ ಮಾಡಿದರು.)

ಶ್ರೀ ವೀರಪ್ಪ ಮೊಯಿಲಿ : ದಯಮಾಡಿ ರಾಷ್ಟ್ರ ನಾಯಕರಾದ ಶಿವಾಜಿ ಮಹಾರಾಜರ ಹೆಸರನ್ನು ನಿಮ್ಮ ಸ್ವಾರ್ಥಕ್ಕಾಗಿ ಉಪಯೋಗ ಮಾಡಿಕೊಳ್ಳುವುದಕ್ಕೆ ಹೋಗಬೇಡಿ. ಅವರು ರಾಷ್ಟ್ರದ ನಾಯಕರು. ಮಹಾರಾಷ್ಟ್ರದ ನಾಯಕರೆಂದು ತಿಳಿದುಕೊಳ್ಳಬೇಡಿ. ಅವರ ಹೆಸರಿಗೆ ಅಪಚಾರ ಮಾಡಬೇಡಿ. ಕೇಂದ್ರ ಗೃಹ ಸಚಿವರು ಈ ಬಗ್ಗೆ ಒಂದು ಮಾತನ್ನು ಹೇಳಿದ್ದಾರೆ. ಎಲ್ಲಾ ರಾಜ್ಯದ ಕೆಲವು ಜಿಲ್ಲೆಗಳನ್ನು ಸೇರಿಸಿ ಒಂದು ಹೊಸ ರಾಜ್ಯವನ್ನು ಮಾಡಿ ಎಂದು ಹೇಳಿದ್ದಕ್ಕೆ ಸ್ಪಷ್ಟವಾಗಿ ಇದು ಸಾಧ್ಯವೇ ಇಲ್ಲವೆಂದು ಕೇಂದ್ರ ಸರಕಾರದ ಮಂತ್ರಿಗಳಾದ ಶ್ರೀ ರಾಜೇಶ್ ಫೈಲಟ್ ಅವರು ತಳ್ಳಿ ಹಾಕಿದ್ದಾರೆ. ತಾವು ಹೇಳಿದಂತಹ ಪ್ರಸ್ತಾಪ ಇಲ್ಲ. ಈ ಬಗ್ಗೆ ಮಾತುಕತೆ ಮಾಡಿಕೊಳ್ಳಲಿಕ್ಕೆ ಸಾಧ್ಯವಿಲ್ಲ. ಈ ವಿಧಾನ ಮಂಡಲದಲ್ಲಿ ಏನು ಮಾತುಕತೆ, ನಿರ್ಣಯವಾಗಿದೆ ಅದಕ್ಕೆ ನಾವೆಲ್ಲರೂ ಬದ್ಧರಾಗಿರಬೇಕಾಗುತ್ತದೆ. ಮಹಾಜನ ಸಮಿತಿ ವರದಿ ಶಿಫಾರಸ್ಸು ಮಾಡಬೇಕು ಇದಕ್ಕೆ ಸೀಮಿತವಾದ ಮಾತುಕತೆಯೇ ಹೊರತು ಅದಕ್ಕಿಂತ ಹೊರತಾದ ವಿಚಾರಕ್ಕೆ ಕರ್ನಾಟಕ ಸರಕಾರ ಬೇರೆ ಮಾತುಕತೆಗೆ ಸಿದ್ಧವಿಲ್ಲ. ಇಷ್ಟನ್ನು ಮಾತ್ರ ಹೇಳುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಇಷ್ಟೆಲ್ಲಾ ಹೇಳುತ್ತಿದ್ದೀರಿ. ಮಾನ್ಯ ವಿರೋಧ ಪಕ್ಷದ ಸದಸ್ಯರು ಹೇಳಿದಂತೆ ಸರ್ವ ಪಕ್ಷಗಳ ನಿಯೋಗವನ್ನು ತೆಗೆದುಕೊಂಡು ಹೋಗುತ್ತಿದ್ದೀರಾ? ನಿಮ್ಮ ರಾಜ್ಯದ ವತಿಯಿಂದ ನಿಯೋಗವನ್ನು ತೆಗೆದುಕೊಂಡು ಹೋಗಿ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡುತ್ತೀರಾ?

SRI R.V. DESHAPANDE : How are you going to counter it? That is our worry.

ಶ್ರೀ ವಾಟಾಳ್ ನಾಗರಾಜ್ : ಈ ಸದನದಲ್ಲಿ ತಾವು ಉತ್ತರ ಹೇಳುತ್ತಿದ್ದೀರಿ. ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡುವುದಕ್ಕೇನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ.

ಶ್ರೀ ಎಂ. ವೀರಪ್ಪ ಮೊಯಿಲಿ : ತಮ್ಮ ಅನಿಸಿಕೆಗಳನ್ನು ಇಲ್ಲಿ ತಾವು ಪ್ರಸ್ತಾಪ ಮಾಡಿದ್ದೀರಿ. ಮುಂದೆ ಬರತಕ್ಕಂತಹ ದೆಹಲಿಯ ಸಂದರ್ಶನದಲ್ಲಿ ಈ ವಿಚಾರವನ್ನು, ತಮ್ಮ ಅನಿಸಿಕೆಗಳನ್ನು ಮಾನ್ಯ ಪ್ರಧಾನ ಮಂತ್ರಿಯವರಿಗೆ ತಿಳಿಯಪಡಿಸುತ್ತೇನೆ. ನಿಯೋಗವನ್ನು ಕೊಂಡು ಹೋಗಬೇಕೆಂದು ಹೇಳುತ್ತಿದ್ದೀರಿ. ನಾವೆಲ್ಲಾ ಸಮಾಲೋಚನೆ ಮಾಡಿ ಇದಕ್ಕೆ ಯಾವ ಸಂದರ್ಭದಲ್ಲಿ ಹೇಗೆ ಹೋಗಬೇಕೆಂಬ ಬಗ್ಗೆ ವಿಚಾರ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ತಾಳವಾಡಿ, ಹೊಸೂರು, ಡೆಂಕನಕೋಟೆ ಈ ಬಗ್ಗೆ ಮುಖ್ಯಮಂತ್ರಿಗಳ ನಿಲುವೇನು?

ಶ್ರೀ ಸಿ. ಬೈರೇಗೌಡ: ಅದರ ಬಗ್ಗೆ ಏನೂ ಹೇಳಲೇ ಇಲ್ಲ.

ಬಿ.ಡಿ.ಎ. ನಿವೇಶನಗಳ ಹಂಚಿಕೆ

430 - ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿ.ಡಿ.ಎ. ರವರು ಇದುವರೆಗೂ ಕಟ್ಟಿರುವ ವಾಣಿಜ್ಯೋದ್ಯಮ ಸಂಕೀರ್ಣಗಳೆಷ್ಟು?

ಆ) ಅವುಗಳಲ್ಲಿ ಪ್ರಾರಂಭವಾಗಿರುವವುಗಳೆಷ್ಟು ಮತ್ತು ಪ್ರಾರಂಭವಾಗದೇ ಇರುವುಗಳೆಷ್ಟು?

ಇ) ಆ ಮಳಿಗೆಗಳಿಂದ ಬರುವ ವಾರ್ಷಿಕ ಆದಾಯದ ಮೊತ್ತವೆಷ್ಟು?

ಈ) ಈ ಮಳಿಗೆಗಳನ್ನು ಯಾರಿಗೆ ಕೊಡಲಾಗಿದೆ ಅವರುಗಳಿಂದ ಬಾಡಿಗೆ ರೂಪದ ಹಣ ಸಂದಾಯ ಕ್ರಮಬದ್ಧವಾಗಿ ನಡೆಯುತ್ತಿದೆಯೇ?

ಉ) ಇಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು ಹಾಗೂ ಯಾರ್ಯಾರಿಂದ ಎಷ್ಟೆಷ್ಟು ಬಾಡಿಗೆ ಹಣ ಪಡೆಯಬೇಕಾಗಿದೆ?

ಊ) ಬಾಕಿದಾರರಿಂದ ಹಣವನ್ನು ವಸೂಲಿ ಮಾಡದೆ ಇರಲು ಕಾರಣಗಳೇನು?

ಋ) ಶೀಘ್ರ ಬಾಕಿ ಚುಕ್ತಾ ಮಾಡುವಲ್ಲಿ ಸರ್ಕಾರದವರು ಸಕಾಲಿಕ ಕ್ರಮ ಜರುಗಿಸುವರೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು):

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು 11 (ಹನ್ನೊಂದು) ವಾಣಿಜ್ಯ ಸಂಕೀರ್ಣಗಳನ್ನು ಈವರೆಗೆ ನಿರ್ಮಿಸಿರುತ್ತದೆ.

ಆ) ಪ್ರಸ್ತುತ ಪ್ರಾರಂಭವಾಗಿ ಚಟುವಟಿಕೆಯಿಂದ ಕೂಡಿರುವ 7 ಮಳಿಗೆಗಳಿದ್ದು, ಮತ್ತೆರಡು ಮಳಿಗೆಗಳು ಪ್ರಾರಂಭವಾಗಿದ್ದರೂ ಚಟುವಟಿಕೆಯಿಂದ ಕೂಡಿರದೆ, ಎರಡು ಮಳಿಗೆಗಳನ್ನು ಇನ್ನೂ ಹಂಚಿಕೆ ಮಾಡಿರದಿರುವುದರಿಂದ, ಹೀಗೆ 4ವಾಣಿಜ್ಯ ಸಂಕೀರ್ಣಗಳು ಪ್ರಾರಂಭವಾಗದೇ ಇರುತ್ತದೆ.

ಇ) ಎಲ್ಲಾ ವಿಭಾಗದ ವಾಣಿಜ್ಯ ಸಂಕೀರ್ಣಗಳಿಂದ ಬರುವ ಒಟ್ಟು ವಾರ್ಷಿಕ ಆದಾಯ ರೂ 87,44,440-00 ಆಗಿರುತ್ತದೆ.

ಈ) ಈ ಮಳಿಗೆಗಳನ್ನು ಸಾರ್ವಜನಿಕರಿಗೆ ಮತ್ತು ಸರ್ಕಾರೀ ಕಛೇರಿಗಳಿಗೆ ಕೊಡಲಾಗಿದೆ. ಇವರಲ್ಲಿ ಕೆಲವರು ಕ್ರಮ ಬದ್ಧವಾಗಿ ಹಣ ಸಂದಾಯ ಮಾಡುತ್ತಿರುವುದಿಲ್ಲ. ಹಂಚಿಕೆದಾರರ ಪಟ್ಟಿಯನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ.

ಉ) ಒಟ್ಟು ರೂ. 1,85,36,240-00ಗಳ ಪರವಾನಗಿ ಶುಲ್ಕ ಪ್ರಾಧಿಕಾರಕ್ಕೆ ಬಾಕಿ ಇರುತ್ತದೆ. ಹಂಚಿಕೆದಾರರು ತಾವಾಗಿಯೇ ಹಣ ಪಾವತಿ ಮಾಡಲು ಮುಂದೆ ಬರುತ್ತಿಲ್ಲ. ಈ ಬಗ್ಗೆ ವಿವರಗಳನ್ನು ಪಟ್ಟಿಯಲ್ಲಿ ನೀಡಲಾಗಿದೆ.

ಊ) ಕಾನೂನಿನ ಅವಕಾಶಗಳಂತೆ ಕ್ರಮಬದ್ಧವಾಗಿ ಪರವಾನಗಿ ಶುಲ್ಕವನ್ನು ವಸೂಲಿ ಮಾಡಲು ಕ್ರಮ ಕೈಗೊಳ್ಳದಿರುವುದು ಕಾರಣವಾಗಿರುತ್ತದೆ.

ಋ) ಎಲ್ಲಾ ಡಿಫಾಲ್ಟರ್ಸ್‌ಗಳಿಗೆ ಕಾರಣಾಪೇಕ್ಷಿತ ಪತ್ರವನ್ನು ಜಾರಿ ಮಾಡಿ, ಒತ್ತಾಯ ಕ್ರಮಗಳನ್ನೂ ಸೇರಿ ಎಲ್ಲಾ ರೀತಿಯ ಕಾನೂನು ಕ್ರಮಗಳನ್ನು ಕೈಗೊಂಡು ಇಂಥವರುಗಳಿಂದ ಬಾಕಿಯನ್ನು ವಸೂಲಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಅನುಬಂಧ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಹಂಚಿಕೆ ಮಾಡಿರುವ ವಾಣಿಜ್ಯ ಸಂಕೀರ್ಣಗಳ ಹಂಚಿಕೆದಾರರ ವಿವರಗಳು

ಕ್ರಮ ಸಂಖ್ಯೆ	ಮಳಿಗೆ ಸಂಖ್ಯೆ	ಹಂಚಿಕೆದಾರರ ಹೆಸರು ಶ್ರೀಮತಿ : ಶ್ರೀ	ಬಾಕಿಯಿರುವ ಬಾಡಿಗೆ ಹಣ ರೂ.ಗಳಲ್ಲಿ
01.	1ಬಿ	ಬೆಂಅಿ.ಪ್ರಾ.,	-
02.	2ಬಿ	ಬೆಂ.ಅಿ.ಪ್ರಾ.,	-
03.	3ಬಿ	ಬೆಂ.ಅಿ.ಪ್ರಾ.,	-
04.	4ಬಿ	ಬೆಂ.ಅಿ.ಪ್ರಾ.,	-
05.	5ಬಿ	ಬೆಂ.ಅಿ.ಪ್ರಾ.,	-
06.	6ಬಿ	ಬೆಂ.ಅಿ.ಪ್ರಾ.,	-
07.	7ಬಿ	ಜನರಲ್ ಮ್ಯೊನೇಜರ್ ಡಿಸ್ಟ್ರಿಕ್ಟ್ ಇಂಡಸ್ಟ್ರೀಸ್ ಸೆಂಟರ್, ಬೆಂಗಳೂರು.	-
08.	8ಬಿ	ಬೆಂ.ಅಿ.ಪ್ರಾ	-
09.	9ಬಿ	ಕಾರ್ಯನಿರ್ವಾಹಕ ಅಭಿಯಂತರರುಕೆ.ಇ.ಬಿ. ಬೆಂಗಳೂರು	ರೂ. 17,46,057-00
10.	10ಬಿ	ಕರ್ನಾಟಕ ಕೋ-ಮಿಲ್ಕ ಪ್ರಾಡೆಕ್ಟ್ ಲಿಮಿಟೆಡ್	1,896-00
11.	11ಬಿ	ಮಂಡ್ಯ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘ	-
12.	15ಬಿ	ಬೆಂ.ಅಿ.ಪ್ರಾ.,	-
13.	16ಬಿ	ಬೆಂ.ಅಿ.ಪ್ರಾ.,	-
14.	1ಸಿ	ಕೆ.ಜಿ. ಮಹದೇವ ಪೈ	
15.	2ಸಿ	ಸಿಟಿ ಸೆಂಟ್ರಲ್ ಲೈಬ್ರೆರಿ	
16.	3ಸಿ	”	
17.	4ಸಿ	”	
18.	5ಸಿ	”	
19.	6ಸಿ	ರಾಜ್ಯ ಅಬಕಾರಿ ಇಲಾಖೆ	
20.	7ಸಿ	”	
21.	8ಸಿ	”	
22.	9ಸಿ	”	
23.	10ಸಿ	ಸಿಟಿ ಸೆಂಟ್ರಲ್ ಲೈಬ್ರರಿ	
24.	11ಸಿ	”	
25.	12ಸಿ	”	

26.	13ಸಿ	”		
27.	14ಸಿ	”		
28.		2 ಹಾಲ್‌ಗಳನ್ನು ಕರ್ನಾಟಕ ವಿದ್ಯುಚ್ಛಕ್ತಿ ನಿಗಮಕ್ಕೆ ಹಂಚಿಕೆ ಮಾಡಲಾಗಿದೆ		
29.		2 ಸೆಲ್ಲಾರ್ ಮಳಿಗೆಗಳನ್ನು ರಾಜ್ಯ ಅಬಕಾರಿ ಇಲಾಖೆಗೆ ಹಂಚಿಕೆ ಮಾಡಲಾಗಿದೆ		
30.		ನಂದಿನಿ ಬಡಾವಣೆ ಅಂಚೆ ಕಛೇರಿ	ರೂ.	7,258-00
	1 - 2			
		ಒಟ್ಟು	ರೂ.	17,55,211-00

ಬನಶಂಕರಿ ವಾಣಿಜ್ಯ ಸಂಕೀರ್ಣ ಮಳಿಗೆಗಳ ಪಟ್ಟಿ

ಕ್ರ. ಸಂ.	ಮಳಿಗೆ ಸಂ.	ಹಂಚಿಕೆದಾರರ ಹೆಸರು ಶ್ರೀ : ಶ್ರೀಮತಿ	ಬಾಕಿಯರುವ ಬಾಡಿಗೆ ಹಣ ರೂ.ಗಳಲ್ಲಿ
1	2	3	4
1	1	ಟಿ.ಆರ್. ಮಂಜುನಾಥ್	73931-00
			89121-00
2	2	ಎಂ. ರಾಮಚಂದ್ರ	6707-00
3	3	ಅಹಮದ್ ಉಲ್ಲಾ ಷರೀಫ್	47752-00
4	4	ಜಿ.ಆರ್.ಮಲ್ಲಪ್ಪ	59464-00
5	5	ವಾಸುದೇವಮೂರ್ತಿ	124267-00
6	6	ಹರಿಹರಚರಕ	25148-65
7	7	ಹರಿಶ್ಚಂದ್ರ ಶೆಟ್ಟಿ	3146-00
8	8	ವಿ. ಪ್ರಭು	116402-00
9	9	ಸಿ.ಎನ್. ಮಹೇಶ್ವರಿ	128986-00
10	10	ಕೆ.ಬಿ. ಕೋಳಿರಾವ್	127413-00
11	11	ಡಿ. ಚಂದ್ರಶೇಖರ್	132132-00
12	12	ಪಿ.ಎಲ್. ಗೋಪಾಲ್	114043-00
13	13	ಆರ್. ವಿಮಲಾದೇವಿ	122132-00
14	14	ಕೆಂಪಮ್ಮ	66432-00
15	15	ವಿನಾಯಕ ಪ್ರಸಾದ್	3256-00
16	16	ಮದ್ಯಪ್ರದೇಶ ಟೆಕ್ಸ್‌ಟೈಲ್ಸ್ ಕಾ	23584-85
17	17	ಯಶೋಧ	97526-00
18	18	ವಿನಾಯಕ ಬೈಲು	43132-00

19	19	ಎಸ್.ಎಸ್. ಶಿವಪ್ರಸಾದ್	10899-00
20	20	ಎಂ. ರಾಮಯ್ಯ	17730-00
21	21	ಸನಾಉಲ್ಲಾ ಖಾನ್	10934-65
22	22	ಎಲ್ ಶಿವರಾಮ್	26424-00
23	23	ಗೋವಿಂದಮ್ಮ	11578-00
24	24	ಪಿ. ನಾಗೇಶ್	46335-00
25	25	ಎಸ್ ಛಾಯ	45300-00
26	26	ಎಸ್. ನಾಗೇಂದ್ರ	63042-00
27	27	ಶೇಖ್ ಅಹಮದ್	11325-00
28	28	ಸಂಪಂಗಿರಾಮ ರೆಡ್ಡಿ	43840-00
29	29	ಎಲ್ ಭಾಗ್ಯಲಕ್ಷ್ಮಿ	-00
30	30	ಮಂಜುಳಾಭಾಯಿ	58552-00
31	31	ಎನ್ ನಾಗರತ್ನ	23408-00
32	32	ಮಲ್ಲಿಯಪ್ಪ ಪಿ ಎಂ	63420-00
33	33	ಮುನಿನರಸಿಂಹಯ್ಯ	39260-00
34	34	ಶಕುಂತಲ	4540-00
35	35	ಅಮಾನುಲ್ಲಾ ಖಾನ್	61910-00
36	36	ಹಳೇ ಬಾಗಲ್	57380-00
37	37	ಎಸ್ಎಸ್ ಮುತ್ತುರಾಜು	2265-00
38	38	ಪಿ.ಆರ್. ವೇಣುಗೋಪಾಲ್	59410-00
39	39	ಆರ್ ಭಾಸ್ಕರ್	8160-00
40	40	ಗೀತಾ ಸಂಜಯ	60920-00
41	41	ಸಿ ಜಗನ್ನಾತ್	1515-00
42	42	ಕೆ.ಎಸ್.ಎಫ್.ಸಿ.ಎಸ್.ಲಿ	47565-00
43	43	ಖಾಲಿ ಇದೆ	
44	44	ಎನ್ ರಂಗನಾಥ್	53605-00
45	45	ಡಿ ರಂಗರಾಜ್	115724-00
46	46	ಕೆ.ಎಂ.ಎಫ್	ಬಾಕಿ ಇಲ್ಲ
47	47	ವಿ.ಎಸ್. ಅಶ್ವತ್ ನಾರಾಯಣ	115724-00
48	48	ವೆಂಕಟೇಶ್	38459-00
49	49	ಸಿ. ಮೋಹನ್	28187-50
50	50	ಕೋಮಲಕುಮಾರಿ ಯಮುನ	3415-00
51	51	ಸೈಯದ್ ಖಳಂದರ್ ಷಾ	37005-00
52	52	ಪಾರ್ವತಮ್ಮ	ರದ್ದು ಪಡಿಸಲಾಗಿದೆ.
53	53	-"-	220-00
54	54	ಜಿ.ಎಂ. ಕೃಷ್ಣಮೂರ್ತಿ	620-00
55	55	ಎಂ. ಲಕ್ಷಮ್ಮ	3321-15

56	56	ಎಂ. ಜಯರಾಮ್	2025-00
57	57	ಕೆ. ರಾಜು	223-55
58	58	ಪಾರ್ಥಸಾರಥಿ	1012-00
59	59	ಜಯಲಕ್ಷ್ಮಿ	ಬಾಕಿ ಇಲ್ಲ
60	60	ಜಯಮ್ಮ	2211-20
61	61	ಜಯಲಕ್ಷ್ಮಿ	556-05
62	62	ಲಿಂಗಮ್ಮ	4235-00
63	63	ರೇಣುಕಾ ಪ್ರಭು	1990-00
64	64	ಜಯಮ್ಮ ವಿ	ಬಾಕಿ ಇಲ್ಲ
65	65	ರೇಣುಕಾ ದೇವಿ	ವಿವರಗಳು ಇಲ್ಲ
66	66	ಸ್ಯೆಯಿದ್ ವಜಾ ಬುದ್ದಿನ್	ವಿವರಗಳು ಇಲ್ಲ
67	67	ಮುನಿಕೃಷ್ಣಪ್ಪ	3149-00
68	68	ರಘುನಾಥ್	4075-00
69	69	ಮುನಿಸ್ವಾಮಿ ಶೆಟ್ಟಿ	7133-50
70	70	ಪುಟ್ಟತಾಯಮ್ಮ	ರದ್ದುಗೊಳಿಸಲಾಗಿದೆ.
71	71	ವಿ.ಕೆ. ಮಂಜುನಾಥ್	43458-00
72	72	ಕೆ.ಎಲ್. ಗಂಗಾಧರ ಗೌಡ	28656-00
73	73	ಹೆಚ್.ಪಿ. ಉಪೇಂದ್ರರಾವ್	23855-00
74	69ಎ	ಎ.ಎಸ್. ಸುಧಾ	22233-00
		ಒಟ್ಟು	2721377-00

1	2	3	4
41	41	Annappa B	18848.00
42	42	Taranathan Rao T	1376.00
43	43	Javid Hider	19704.00
44	44	Chandrashekhar	654.00
45	45	Venugopal R.	1962.00
46	46	Mohamed Iliya Baig	13376.00
47	47	Raghupathi. D	30504.00
48	48	Parimala	5578.00
49	49	Balaram.K.A.	4263.00 50
50	50	Basheer Ahamed	654.00
51	51	Nagaraj P.K.	28776.00
52	52	Sonik P. Shetty	6430.00
53	53	Suresh Kumari K.	31433.00
54	54	Vijayalakshmi	42652.00
55	55	Shankar G.L.S.	4578.00

56	56	Emmenull	54941.00
57	57	Pradeep P.	45935.00
58	58	Subjaan	15696.00
59	1	Mahadeva gowda	8728.00
60	2	Manjulamma	1171.15
61	3	Raghavendra T.	3544.00
62	4	Lakshman.C.	2869.00
63	5	Jayaram.V	4041.00
64	6	Naganna	2008.00
65	7	Kanthamma	.00
66	8	K.Reddy	344.00
67	9	Saroja devi	2500.00
68	10	Rukminiyamma.M	11769.00
69	11	V.Srinivasa	688.00
70	12	Prakash M.V.	172.00
71	1	Dinesh H.V.	13608.00
72	2	Kursheed ahamed	26133.00
73	2	F M.V. Ramchandra	2526.00
74	3	FE Rekha Tyagarajan	1780.00
75	5	FF Geetha Nayak	93177.00
76	6	FF Padma G.N.	11625.00
77		Puttan Hotel Ltd.	15140.00
78		Omkarnath	42.00
79		KEB Office	1159200.00
80		Telecommunication	25434.00
81		R.T.O. Office	149500.00
		Total	2039374.15

Bangalore Development Authority Statement showing the details of the Trade and D.C.B. in Kormangala Shopping complex, as on 19-02-1994

List of Closed Shops

Sl.	Shop	Name of the Allottee	Balance as on 15-2-1994
1.	51	Nagaraja P.K	28776.00
2.	53	Suresh Kumari.K	31433.00
3.	54	Vijayalakshmi	42652.00

4.	56	Emmenull	54941.00
5.	57	P. Pradeep	45935.00
6.	02	Kusheed Ahamed	26133.00
		Total	229870.00

Bangalore Development Authority R.M.V. Shopping Complex

Sl.No	Name of the Licencee	Shop No.	Balance
1.	Veena Srichand	1	2225
2.	Yathik Travels	2	11611.30
3.	N. Madhusudana Babu	3	9749.30
4.	Srinivasan.P.R.	4	4551.89
5.	Prasanna Kumar.B.R.	5	119376.00
6.	M. Narasimha	6	355.40
7.	Kumar B.M.L.	7	24952.65
8.	Yathi Travels	8 and 9	76250.00
9.	Bharath Borewell	10	13550.00
10.	Ravi Datta	11	14996.00
11.	Sharan N.D.	12 and 16	18907.00
12.	Mani M.S.	13 and 20	24640.00
13.	Jain B.N.	14	17600.00
14.	Manohar Lal Nichani	17	22845.00
15.	Jayasri Devi	19	356.00
			324151.39

Bangalore Development Authority R.T. Nagar Shopping Complex. Bangalore

Sl.No	Name of the Licencee	Shop No.	Balance
1	2	3	4
1.	Puttachannaiah	1	11680
2.	Fahameeda Khanum	2	32650
3.	Mohamed Ghouse	3	4088
4.	Ronila D. Kalra	4	17466.50
5.	Ravi	5	16936
6.	Kusuma Wadhi	6	584
7.	Nataraja S.A.	7	2920
8.	Kamal Narayan	8	1168

9.	Gowaramma	9	20929.80ps
10.	Kamala Kumar	10	6780
11.	K. Suresh	11	9344
12.	B. Govind	12	2890
13.	Syed Mahabood	13	2916
14.	Lakshman B.N.	14	4860
15.	Mohamed P.K.	15	972
16.	Srikantan.K.	16	12393
17.	Mohamed Tanveer Ahamed	17	1095
18.	Manjunath B.N.	18	3978
19.	Mathew C.A.	19	46136
20.	Llliya S.K.	20	2752
21.	Arssoji Rao.O.	21	2064
22.	Sathyanarayan.V.	22	5228
23.	Muni Gowda.R.	23	14600
24.	Kottarappa	25	1168
25.	Shantha Kumari.P.	26	26864
26.	Venkatesh	27	31536
27.	Dist.Manager KFCS	28	2920
28.	rema Udaya kumar	29	5236
29.	Rajiva Chancholi	30	34090
30.	R. Balaji	31	.00
31.	Siddaraju.A.	32	29574
32.	Harsha Vinay	33	12122
33.	Umadevi.	34	9720
34.	Vasigh Ahmedkhan	35	21016
35.	Hema Chowdri	36	.00
36.	Bikram Jeet singh Kalswy	37	6192
37.	Ayyappa	39	36525
38.	V. Gunashekar	40	6966
39.	Dastagir Shariff	41	25155
40.	Srinivasamurthy G.S.	43	5011
41.	Sudavshan.A	44	23638
42.	Sangeetha	45	3505
43.	R.A. Swaminathan	46	3505
44.	Manjunath	62	9286
45.	Tilakan.B.R.	63	24768

46.	H. Dhanakeerthy	64	36061
47.	Gurumurthy	65	5031
48.	Vasantha Nayak	66,	.00
			527823.30

Statement showing the details of trade & D.C.B. in Austin Town Shopping Complex as on 21.02.1994

Sl.No	Shop No.	Name of Licencee	Balance as on 15.02.94
01.	01	Abdul Khudus	536.00
02.	02	Vijaya	7776.00
03.	03	Kunni Kannan P.K.	18224.00
04.	04	Chandrashekar P.	4680.00
05.	05	Mohammed Anwar	12120.00
06.	06	Hemavathi D.G.	536.00
07.	07	Jusudas	536.00
08.	08	Pooswamy	4360.00
09.	09	District Manager	1608.00
10.	10	A.C.Co. Op-society	13383.00
11.	11	L.B.Subramanayam	33232.00
12.	12	Dr. Mathew Abharam	5360.00
13.	13	Mehaboob Jan	2600.00
14.	14	Abdul Rahim M.	11680.00
15.	15	Hema Mellen	7740.00
16.	16	V. Nagaraj	0.00
17.	17	Logasundari	4750.00
18.	18	Babu G.	3420.00
19.	19	Shanavaz Begum	9200.00
20.	20	S.P.S. Sunder	6896.00
21.	21	Azeea Ahmed	33768.00
22.	22	Thomas	2158.00
23.	23	Joice S.A.	4660.00
24.	24	Krishna Murthy G.	13128.00
25.	25	Shiek Bobjan	1820.00
26.	26	Mohammed M.B.	3080.00
27.	27	K. Gajendra	718.00

28.	28	Nabi Mirza	15876.00
29.	29	Ramesh Babu M.G.	15533.00
30.	30	Leena S.	42880.00
31.	31	N.R. Murthy	8820.00
32.	32	S.G. Reddy	0.00
33.	33	Hayathamnisa	2144.00
34.	34	B.M. Pathanaswamy	38056.00
35.	35	M.A. Abdul Rahaman	17344.00
36.	36	M. Selvarajan	536.00
37.	37	K. Prathasarathy	2144.00
38.	38	Nandeer	5840.00
39.	39	Muniswamy	11040.00
40.	40	Ravi M.	8040.00
41.	41	R. Selvamani	4380.00
42.	42	Sylster Arnold H.	3920.00
43.	43	Inreem	6240.00
44.	44	R.P. Reddy	6440.00
45.	45	M/s. Noble Graphics	5980.00
46.	46	P. Anthony Paul	20880.00
47.	47	Meera K. Rao	1072.00
48.	48	M. Mohamed Ali	1300.00
49.	49	Gulam Mohamed	260.00
50.	50	C.A. Ahamed	7808.00
51.	51	Mohamed Ali Khan	12480.00
52.	52	Padmavathi	3120.00
53.	53	Faiz Basith	7780.00
54.	54	R. Srinath	2872.00
55.	55	Mohamed Ali	11472.00
56.	56	Lavakumar P.	25272.00
57.	57	K. Balan	.00
58.	58	Abdul Sharief	6120.00
59.	59	M. Alphous	9360.00
60.	60	M.K. Mustafa	2680.00
61.	61	M. Saraswathi	260.00
62.	62	J. Suresh	16120.00
63.	63	N. Padmanabha rao	2080.00
64.	64	P.N. Zubari	2600.00

65.	65	K. Geetha	42880.00
66.	66	B.V. Krishnappa	7500.00
67.	67	H. Basheer Ahamed	8960.00
68.	68	N.A. Tazuddin	1820.00
69.	69	Peter.S	1560.00
70.	70	J. Robert	3120.00
71.	71	Abdul Kaleel	2340.00
72.	72	L.N. Parvathi bai	12700.00
73.	73	Mohamed Initaz	7180.00
74.	74	Mohamed Ghouse	1560.00
75.	75	Pavankumar	780.00
76.	76	Mallikarjuna H.S.	6428.00
77.	77	R. Thyagaraja	6432.00
78.	78	Paramesh.R	1072.00
79.	79	Abdul Salam	1072.00
80.	80	K. Shetty	23584.00
81.	81	Yousuf	1072.00
82.	82	Jayarama J	3770.00
83.	83	Easteren Rani	390.00
84.	84	M. Raja	4450.00
85.	85	Noorjahan	3510.00
86.	86	K.N. Thomas	4121.00
87.	87	Babu	3765.00
88.	88	M. Abdul Khaimayata	1520.00
89.	89	Srinivas.V	195.00
90.	90	R. Karunakaran	2485.00
91.	91	Nazeeruddin.A	3315.00
92.	92	Udayakumar	3580.00
93.	93	Shankaran	2879.00
94.	94	Rahamat ulla	3900.00
95.	95	Abdul Gafoor	4185.00
96.	96	Sheik Abdul Razack	5270.00
97.	97	Ameer amanulla	2610.00
98.	98	K.E.B. office	441783.60
		Total	1164448.60

Statement showing the D.C.B in respect of Indiranagar Shopping Complex as on 24.2.94

Sl. No.	Name of the Licencee	Shop No.	Balance as on 24.04.94
01.	Gowru Bai	01	24020.00
02.	G.R. Hanumantha Rao	02	105160.00
03.	Ashok G. Narsingh	03	168911.00
04.	Roma S. Francis	4,5,6	223540.00
05.	Indira Rani	7	0.00
06.	Aziz Khan	8	0.00
07.	Post Office	9	37385.00
08.	Pajanthri	10	58671.00
09.	G.H. Hedries	11	202936.00
10.	N.S. Nagaraja	12	50391.00
11.	Shankanthala Mallappa	13	134747.00
12.	Tele-communication	14 & 49	25240.00
13.	Nawab	15 & 48	269372.00
14.	Syed Equbal	16	205440.00
15.	Panjeev Kumar	17	8106.00
16.	H.D.C	18 & 45	9324.00
17.	K. Ramesh Rao	19	1966.00
18.	Pratap Rai	20	2200.00
19.	R.O. Office, B.D.A	21 & 22	00.00
20.	Engineering office	23 & 24	00.00
21.	K.E.B. office	25	753540.00
22.	K.E.B. office	26	50600.00
23.	Spectra Printers	27	189030.00
24.	Nagamja Nayak	28	76950.00
25.	Mysore Wood Craft	29	99136.00
26.	Mariyamma	30	105434.00
27.	N. Suphendra Kumari	31	191632.00
28.	N. Jayaram	32	58156.00
29.	Dr. Shashikala Marali	33	44161.00
30.	Shivakumar V	34	57349.0
31.	Fisheries Corporation	35	.2312.00
32.	Balakrishna Rao	36	3468.00
33.	Sri Durga Reprographics	37	3138.00

34.	Sate Shoe Company	38	3132.00
35.	R. Seena R. Ashwini	39	102234.00
36.	Wai Khan Soman	40	111464.00
37.	Vijaya Bakery	41	67395.00
38.	Sharadha Sunder Raj	42	67116.00
39.	Carona Shoe Company	43	3060.00
40.	Golden Can Mech.	44	63916.00
41.	Deepa Lamba	46	41400.00
42.	Mysore sewing Machine	47	41072.00
43.	P. Mohan Bhat	50	127402.00
44.	B.R. Anand Kumar	51	157570.00
45.	Dr. T.N. Lokesh	52	16560.00
46.	Syed Saleem	53	134144.00
47.	Savithramma	54	84680.00
48.	Mose Raya Sabeb & Sons	55	47844.00
49.	Chin Chin Yung	56	2736.00
50.	B.R. Harish	57	109172.00
51.	Sunder Motor Driving School	58	72310.00
52.	Le Tung Hung	59	65104.00
53.	Shivaji Raj	60	126978.00
54.	Sanjeeva Soni	61	176827.00
55.	Umesh Soni	62	189692.00
56.	Sathyanarayana	63	126914.00
57.	Jaya Appachi	64	137160.00
58.	Mohan Enterprises	65	179404.00
59.	Pee Kumar	66	116520.00
60.	Excise Department	67	0.00
61.	Excise Department	68	0.00
62.	Nagarajan J.	69	2200.00
63.	B.K. Prasanna Kumar	70	94185.00
64.	B.K. Prasanna Kumar	71	94185.00
65.		72	0.00
66.		73	0.00
67.	Office Use (E.E.)	74	0.00
68.	Office Use (E.E.)	75	0.00
69.	Office Use (E.E.)	76	0.00

70.	Seaton Engineers	77	2945.00
71.	Spectra Phota Limited	78	1464.00
72.	Seaton Engineering	79	5952.00
73.	Vijaya Kumar	80	2976.00
74.		81	0.00
75.	C.A.T.	FS.F	3228100.00
76.	K.A.T.	GF.FF	1120500.00
77.	R.T.O.	S.F.	275216.00
78.	K.E.B.	S.F.	307385.00
	Total		9993857.00

ಶ್ರೀ ಲಕ್ಕಣ್ಣ: ಸನ್ಮಾನ್ಯ ಅಧ್ಯಕ್ಷರೇ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ವಾಣಿಜ್ಯ ಸಂಕೀರ್ಣಗಳನ್ನು ಕಟ್ಟಿದ್ದಾರೆ. ಅದರಲ್ಲಿ 11 ಕಟ್ಟಿದ್ದಾರೆ, ಏಳು ಮುಗಿದಿದೆ, ಇನ್ನು ನಾಲ್ಕು ಬಾಕಿಯಾಗಿ ಉಳಿದಿದೆ. ಈಗ ಅರ್ಧಂಬರ್ಧಕಟ್ಟಿ ಸುಮಾರು ಕೋಟ್ಯಾಂತರ ರೂಪಾಯಿ ಅಭಿವೃದ್ಧಿ ಪ್ರಾಧಿಕಾರದ ಹಣ ಹೋಗುತ್ತಿದೆ. ಅದನ್ನು ಪೂರ್ಣ ಮಾಡಿಲ್ಲ. ಈಗೇನು ಅಲಾಟ್‌ಮೆಂಟ್ ಮಾಡಿದ್ದಾರೆ. ಅವರುಗಳಿಂದ ಸುಮಾರು 1 ಕೋಟಿ 85 ಲಕ್ಷ 36 ಸಾವಿರ, 240 ರೂಪಾಯಿ (1,85,36,240) ಬರಬೇಕಾಗಿದೆ. ಸುಮಾರು ವರ್ಷಗಳಿಂದ ಇದು ಬಾಕಿಯಾಗಿ ಉಳಿದಿದೆ. ಅದನ್ನು ವಸೂಲು ಮಾಡತಕ್ಕಂಥ ಸರಿಯಾದ ವ್ಯವಸ್ಥೆಯನ್ನು ಅಭಿವೃದ್ಧಿ ಪ್ರಾಧಿಕಾರ ಮಾಡುತ್ತಿಲ್ಲ. ಅವರು ಕೋರ್ಟು ಕಛೇರಿಗೆ ಹೋಗುವುದು ಅಲ್ಲಿಂದ ಸ್ಟೇ ಆರ್ಡರ್ ತಂದು ಬಾಡಿಗೆಗಳನ್ನು ಕಟ್ಟುತ್ತಿಲ್ಲ. ಅದಕ್ಕೆ ಒಂದು ತಿದ್ದುಪಡಿಯನ್ನು ತಂದು ಅವರಿಂದ ವಸೂಲು ಮಾಡತಕ್ಕಂಥ ಒಂದು ವ್ಯವಸ್ಥೆಯನ್ನು ಮಾನ್ಯ ಮುಖ್ಯಮಂತ್ರಿಗಳು ಮಾಡದಿದ್ದರೆ ಈ ಬಾಕಿ ಹಣ ಇನ್ನೂ ಹೆಚ್ಚುಹೆಚ್ಚಾಗಿ ಮುಂದುವರೆಯುತ್ತದೆ ಎಂದು ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಚ್ಛೆ ಪಡುತ್ತಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೇ, ತಾವು ಹೇಳಿದ ಹಾಗೆ ಸುಮಾರು 286 ಜನ ಈಗ ಬಾಕಿದಾರರಾಗಿದ್ದಾರೆ. ಅದು ಬಹಳ ಸಮಯದಿಂದ ಅವರಿಗೆ ನಾವು ಸಡಿಲ ಬಿಟ್ಟಿದ್ದರಿಂದ ಬಾಕಿಯನ್ನು ಅವರು ಕೊಟ್ಟಿಲ್ಲ. ಈಗ ನಾವು ಅದಕ್ಕೆ ಕಾನೂನಿನ ಪ್ರಕಾರ ನೋಟೀಸ್‌ನ್ನು ಕೊಟ್ಟಿದ್ದೇವೆ. ಅವರಿಗೆ ನೋಟೀಸ್ ಕೊಟ್ಟು ಅವರು ತಕ್ಕ ಕಾಲದಲ್ಲಿ ಕೊಡದಿದ್ದರೆ ಅದನ್ನು ಸ್ವಾಧೀನ ಮಾಡಿಕೊಳ್ಳತಕ್ಕಂಥ ಕಟ್ಟುನಿಟ್ಟಿನ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಲಕ್ಕಣ್ಣ: ಮಾನ್ಯ ಅಧ್ಯಕ್ಷರೇ, ಇದಕ್ಕೆ ಒಂದು ತಿದ್ದುಪಡಿಯನ್ನು ತರಬೇಕು. ಸ್ಟೇ ತರುವುದಕ್ಕೆ ಕೋರ್ಟುಗಳಿಗೆ ಹೋಗುತ್ತಾರೆ. ಕೋರ್ಟುಗಳಿಗೆ ಹೋಗಿ ಲಕ್ಷಾಂತರ ರೂಪಾಯಿ ಬಾಕಿ ಹಣವನ್ನು ಇಟ್ಟುಕೊಂಡಿದ್ದಾರೆ. ಕೋರ್ಟಿಗೆ ಹೋಗದ ಹಾಗೆ ಒಂದು ತಿದ್ದುಪಡಿಯನ್ನು ತಂದು ಹಣವನ್ನು ಕಟ್ಟಿದ ನಂತರ ಹೋಗಬೇಕು ಎನ್ನುವ ರೀತಿ ಒಂದು ತಿದ್ದುಪಡಿಯನ್ನು ತರಬೇಕು. ಇಲ್ಲದಿದ್ದರೆ ಸಾಧ್ಯವಾಗುವುದಿಲ್ಲ. ಹಣವನ್ನು ವಸೂಲು ಮಾಡುವುದಕ್ಕಾಗುತ್ತಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ: ಮಾನ್ಯ ಅಧ್ಯಕ್ಷರೇ, ಈಗ ನಾನು ತಿಳಿದುಕೊಂಡಂತೆ ಈಗ ಇರತಕ್ಕಂಥ ಕಾನೂನುಗಳಲ್ಲಿ ನಾವು ಅದನ್ನು ಸ್ವಾಧೀನ ಪಡಿಸಿಕೊಳ್ಳತಕ್ಕಂಥ ಅವಕಾಶ ಇದೆ. ಅದನ್ನು ಅನುಷ್ಠಾನ ಮಾಡಲಿಲ್ಲ. ಅದನ್ನು ಎನ್‌ಫೋರ್ಸ್ ಮಾಡಬೇಕು. ಆ ಎನ್‌ಫೋರ್ಸ್ ಮಾಡತಕ್ಕಂಥ ಕೆಲಸವನ್ನು ಮಾಡುತ್ತೇವೆ.

ಕಾನೂನುಪ್ರಕಾರ ಅಷ್ಟು ಶಕ್ತಿ ಇದೆ. ಅದನ್ನು ಉಪಯೋಗ ಮಾಡದೆ ಇಷ್ಟರವರೆಗೆ ನಾವು ಬಿಟ್ಟಿದ್ದೇ ತಪ್ಪು. ಆದರೆ ಇನ್ನು ಮುಂದೆ ಕಟ್ಟುನಿಟ್ಟಿನ ಕಾರ್ಯಕ್ರಮವನ್ನು ಇರತಕ್ಕ ಕಾನೂನಿನಲ್ಲಿಯೇ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು : ಶ್ರೀ ಬಸವರಾಜ್, ತಮ್ಮ ಪ್ರಶ್ನೆಗೆ ಉತ್ತರ ಬಂದಿಲ್ಲ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೈಗಾರಿಕೆಗಳಿಗಾಗಿ ವಶಪಡಿಸಿಕೊಂಡ ಭೂಸ್ವಾಧೀನದ ವಿಸ್ತೀರ್ಣ

496 - ಶ್ರೀ ವಿಜಯಕುಮಾರ ಶೆಟ್ಟಿ (ಸುರತ್ಕಲ್) : ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೃಹತ್ ಉದ್ಯಮಗಳಿಗಾಗಿ ಈವರೆಗೆ ವಶಪಡಿಸಿಕೊಂಡ ಭೂಮಿಯ ವಿಸ್ತೀರ್ಣ ಎಷ್ಟು?

ಆ) ಈ ಉದ್ಯಮಗಳಿಗೆ ಆದ್ಯತೆ ನೀಡಿ ಸಾರ್ವಜನಿಕರು ಅಪಾರ ತೊಂದರೆಯನ್ನು ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಭವಿಷ್ಯದಲ್ಲಿ ಯಾವುದೇ ಭೂಮಿಯನ್ನು ವಶಪಡಿಸಿಕೊಳ್ಳದಿರುವ ನಿರ್ಣಯ ಸರ್ಕಾರ ಕೈಗೊಳ್ಳಲಿದೆಯೇ?

ಶ್ರೀ ರಾಮಲಿಂಗರೆಡ್ಡಿ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಕೆಳಕಂಡಂತೆ ಭೂ ಸ್ವಾಧೀನಪಡಿಸಲಾಗಿದೆ.

ಎಂ.ಆರ್.ಪಿ.ಎಲ್.	1669-75 ಎಕರೆಗಳು
ಬಿ.ಎ.ಎನ್.ಎಫ್.	19-55
	182-15
ಪುನರ್ವಸತಿ ಯೋಜನೆ	99-31
ಒಟ್ಟು ವಿಸ್ತೀರ್ಣ	1970-76 ಎಕರೆಗಳು

ಆ) ಭೂ ಸ್ವಾಧೀನತೆಗೆ ಒಳಗಾದ ಜಮೀನುಗಳ ಬಗ್ಗೆ ಸರ್ವೆ ಸಮಿತಿಯಿಂದ ಒಪ್ಪಂದದ ಮೇರೆಗೆ ಪರಿಹಾರ ದನ ಪಾವತಿ ಮಾಡಲಾಗುತ್ತಿದೆ. ಕಟ್ಟಡ ಮತ್ತು ಮಾಲ್ಕಿಗಳ ಮೌಲ್ಯವನ್ನು ಮಾರುಕಟ್ಟೆ ದರದಲ್ಲಿ ನಿಷ್ಕರ್ಷಿಸಲಾಗುತ್ತದೆ. ಮತ್ತು ಪಾವತಿ ಮಾಡಲಾಗುತ್ತದೆ.

ಇ) ಸಂಬಂಧಿಸಿದ ಶಾಸನಬದ್ಧ ಭೂಸ್ವಾಧೀನ ಕಾಯ್ದೆ ನಿಬಂಧನೆಯನ್ವಯ ಅವಶ್ಯಕತೆಯಿದ್ದಲ್ಲಿ ತೆಗೆದುಕೊಳ್ಳಲಾಗುವುದು.

ಶ್ರೀ ಕೆ. ವಿಜಯಕುಮಾರ್ ಶೆಟ್ಟಿ : ಮಾನ್ಯ ಅಧ್ಯಕ್ಷರೇ, ಉತ್ತರ ಬಂದಿದೆ. ಇದು ಬಹಳಷ್ಟು ಗಂಭೀರವಾದ ಪ್ರಶ್ನೆ. ನಾನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೃಹತ್ ಉದ್ಯಮಿಗಳಾಗಿ ಈವರೆಗೆ ವಶಪಡಿಸಿಕೊಂಡಿರುವ ಭೂಮಿಯ ವಿಸ್ತೀರ್ಣವೆಷ್ಟು ಎಂದು ಹೇಳಿದ್ದೇನೆ. 1970 ಎಂದು ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಆದರೆ ವಾಸ್ತವವಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 7900 ಎಕರೆಯನ್ನು ಈಗಾಗಲೇ ವಶಪಡಿಸಿಕೊಂಡು ಕೊಟ್ಟಾಗಿದೆ. ಅದಲ್ಲದೆ 3720 ಎಕರೆಗೆ ಪ್ರಸ್ತಾವನೆ ಸರ್ಕಾರದ ಮುಂದಿದೆ. ಇದನ್ನು ಸನ್ಮಾನ್ಯ ಮಂತ್ರಿಯವರು ಎಲ್ಲಿಂದ ಈ ಉತ್ತರ ಅವರಿಗೆ ಬಂತೋ ಗೊತ್ತಿಲ್ಲ. ಇದು ಬಹುಶಃ ತಪ್ಪು ಉತ್ತರ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ದಯವಿಟ್ಟು ಇದನ್ನು ಸರಿಯಾಗಿ ಪರಿಶೀಲಿಸಿ ತಾವು ನಿಜವಾಗಲೂ ಎಷ್ಟು ಎಕರೆಯನ್ನು ಸ್ವಾಧೀನಪಡಿಸಿದ್ದೀರಿ, ಎಷ್ಟು ಎಕರೆ ಬೇರೆ ಬೇರೆ ಇಂಡಸ್ಟ್ರೀಸ್‌ಗೆ ಕೊಟ್ಟಿದ್ದೀರಿ

ಎಂಬುದನ್ನು ತಿಳಿಸಬೇಕು. ಮತ್ತು ನಾನು ಈಗ ಪ್ರಾಮುಖ್ಯವಾಗಿ ಹಲವಾರು ಬೃಹತ್ ಗಾತ್ರದ ಉದ್ದಿಮೆಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬರುತ್ತಿದೆ. ಆದರೆ ಈ ಉದ್ದಿಮೆದಾರರು ನಮ್ಮ ಸರ್ಕಾರದ ನೌಕರರು ಉದ್ದಿಮೆದಾರರು ಯಾವ ರೀತಿ ಹೇಳುತ್ತಾರೋ ಅದನ್ನು ಕೇಳಿಕೊಂಡು ಅವರಿಗೆ ಬೇಕಾದ ರೀತಿಯಲ್ಲಿ ವರ್ತಿಸುತ್ತಾರೆ. ಇದು ಬಹಳ ಖಂಡನೀಯವಾದುದು. ನಮಗೆ ಮೊನ್ನೆ ತಾನೆ ಮಂಗಳೂರು ರಿಫೈನರಿ ಪ್ರಾಜೆಕ್ಟ್‌ಗೆ ರೀಹಾಬಿಲಿಟೇಷನ್ ಆಯಿತು. ಏಪ್ರಿಲ್ 23ಕ್ಕೆ ರೀಹ್ಯಾಬಿಲಿಟೇಷನ್ ಈ ಜನರನ್ನು ಒಕ್ಕಲೆಬ್ಬಿಸಿದ್ದಾರೆ. ನಾಡಿದ್ದು ಏಪ್ರಿಲ್ 23ಕ್ಕೆ ಒಂದು ವರ್ಷ ಸಂಪೂರ್ಣವಾಯಿತು. ಇಷ್ಟರವರೆಗೆ ವಿದ್ಯುಚ್ಛಕ್ತಿಯನ್ನು ಒದಗಿಸಿಲ್ಲ.

ಇಷ್ಟರವರೆಗೆ ನೀರು ಸರಬರಾಜು ಆಗಿಲ್ಲ. ಇಷ್ಟರವರೆಗೆ ಪೋಲೀಸರು ಬಂದು, ಪೋಲೀಸರ ಮುಖಾಂತರ ಒಕ್ಕಲೆಬ್ಬಿಸುತ್ತಾರೆಯೇ ಹೊರತು ಅವರಿಗೆ ನಿವೇಶನವನ್ನು ಕೊಡದಂತಹ ಜನರು ಇದ್ದಾರೆ. ಇದು ಬಹಳ ಖಂಡನೀಯವಾದುದು. ಇದರ ಬಗ್ಗೆ ಮಾನ್ಯ ಸಚಿವರು ಯೋಚಿಸಲಿ. ಮಾನ್ಯ ಮುಖ್ಯ ಮಂತ್ರಿಗಳೊಡನೆ ನಾನು ವಿನಂತಿಸುವುದು, ಇದರ ಬಗ್ಗೆ ನಿಗಾ ವಹಿಸಿ ರಿಹ್ಯಾಬಿಲಿಟೇಷನ್ ವ್ಯವಸ್ಥೆ ಏನು ಇದೆ, ಇದನ್ನು ಕೆಐಡಿಬಿ ಮುಖಾಂತರ ಏನು ಕಾನೂನು ಇದೆ. ಅದೇ ರೀತಿಯಲ್ಲಿ ತಾವು ಮಾಡಿಕೊಡಬೇಕು. ಮತ್ತು ಅಲ್ಲಿ ಕೊಡುವುದರಲ್ಲಿ ಬಹಳಷ್ಟು ವ್ಯತ್ಯಾಸ ಮಾಡುತ್ತಾರೆ. ಎಸ್.ಆರ್.ರೇಟ್ ಕಟ್ಟಡಗಳಿಗೆ ಕೊಡುತ್ತೇವೆಂದು ಒಂದು ಕಡೆ ಹೇಳುತ್ತಾರೆ. ಬೇರೆ ಬೇರೆ ಕಂಪನಿಗಳ ಅಧಿಕಾರಿಗಳು ಬಂದು ನಮ್ಮ ಅಧಿಕಾರಿಗಳು ಎಸ್‌ಆರ್ ರೇಟ್ ಕೊಟ್ಟಿದ್ದನ್ನು ರಿವೈಸ್ ಮಾಡಿಕೊಂಡು ಅವರು ಖುಷಿ ಇದ್ದಂತೆ ಅದನ್ನು ತಿದ್ದುಪಡಿ ಮಾಡುತ್ತಿದ್ದಾರೆ. ಎಸ್.ಆರ್. ರೇಟನ್ನು ನಿಗದಿ ಪಡಿಸುತ್ತಾರೆ. ಇದು ಹೀಗೆ ಆಗಬಾರದು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಾಮುಖ್ಯವಾಗಿ ಕೃಷಿ ಯೋಗ್ಯವಾದ ಹಲವಾರು ಜಮೀನುಗಳು ಇವೆ. ನಾನು ಮಾನ್ಯ ಅಧ್ಯಕ್ಷರೊಡನೆ ಮತ್ತೊಮ್ಮೆ ವಿನಂತಿ ಮಾಡಿಕೊಳ್ಳುವುದು ಏನೆಂದರೆ ಬೃಹತ್ ಉದ್ದಿಮೆಗಳಿಗೆ ಜಮೀನು ಕೊಡುವುದು ಬೇಡ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾತ್ರವಲ್ಲ, ಕರ್ನಾಟಕದಲ್ಲಿ ಬಹಳಷ್ಟು ಉದ್ದಿಮೆಗಳು ಬಂದಿವೆ. ಸಣ್ಣ ಸಣ್ಣ ಇಂಡಸ್ಟ್ರಿಗಳಿಗೆ ಹೆಚ್ಚು ಅವಕಾಶ ಕೊಡಬೇಕು. ಈಗಾಗಲೇ ಬಂದಿರತಕ್ಕಂಥ ಮಂಗಳೂರು ರಿಫೈನರಿ ಪ್ರಾಜೆಕ್ಟ್‌ಗೆ ಬರೇ 1700 ಎಕರೆ ತೆಗೆದುಕೊಂಡಿದ್ದಾರೆ. ಮಹಾರಾಷ್ಟ್ರದಲ್ಲಿ ಈ ಪ್ರಾಜೆಕ್ಟ್‌ಗೆ 250 ಎಕರೆ 300 ಎಕರೆ ತೆಗೆದುಕೊಂಡಿದ್ದಾರೆ.

ಅಧ್ಯಕ್ಷರು : ತಮಗೆ ಏನು ಆಗಬೇಕಾಗಿದೆ ಅದನ್ನು ಹೇಳಿ. ಮಂತ್ರಿಗಳು ಉತ್ತರ ಹೇಳುತ್ತಾರೆ.

ಶ್ರೀ ಕೆ. ವಿಜಯಕುಮಾರ್ ಶೆಟ್ಟಿ : ಅವರು ಕೊಟ್ಟ ಒಂದು ಸ್ಟೇಟ್‌ಮೆಂಟ್ ತಪ್ಪಾಗಿದೆ.

ಶ್ರೀ ರಾಮಲಿಂಗಾರೆಡ್ಡಿ : ಮಾನ್ಯ ಸದಸ್ಯರು ಏನು ಪ್ರಶ್ನೆ ಕೇಳಿದ್ದಾರೆ. ಅದಕ್ಕೆ ನಾವು ಸರಿಯಾದ ಉತ್ತರಗಳನ್ನು ಕೊಟ್ಟಿದ್ದೇವೆ. ಅವರು ಕೇಳಿದ್ದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೃಹತ್ ಉದ್ದಿಮೆಗಳಿಗೆ ಈವರೆಗೆ ವಶಪಡಿಸಿಕೊಂಡ ಭೂಮಿಯ ವಿಸ್ತೀರ್ಣ ಎಷ್ಟು ಎಂದು ಕೇಳಿದ್ದಾರೆ. ಎಷ್ಟು ವಶಪಡಿಸಿಕೊಂಡಿದ್ದೇವೆ. ಅಷ್ಟು ಕೊಟ್ಟಿದ್ದೇವೆ. ಇನ್ನೂ ಪ್ರೊಸೆಸ್‌ನಲ್ಲಿ ಇರಬಹುದು. ಅಕ್ವಿಸಿಷನ್‌ನಿಂದ ಮುಂದೆ ಮಾಡಿಕೊಳ್ಳುವುದಕ್ಕೆ ಬಹಳಷ್ಟು ಇರಬಹುದು. ಆದರೆ ವಶಪಡಿಸಿಕೊಂಡಿರುವುದು ಎಷ್ಟು ಎಂದು ಕೇಳಿರುವುದು. ಅದಕ್ಕೆ ಕರೆಕ್ಟ್ ಆನ್ಸರ್ ಕೊಟ್ಟಿದ್ದೇವೆ.

ಶ್ರೀ ಕೆ. ವಿಜಯಕುಮಾರ ಶೆಟ್ಟಿ : ನಿಮ್ಮ ಸ್ಟೇಟ್‌ಮೆಂಟ್ ನನ್ನ ಹತ್ತಿರ ಇದೆ. 7900 ಎಕರೆ ವಶಪಡಿಸಿಕೊಂಡಿದ್ದು, 3700 ಇವರ ಪ್ರಸ್ತಾವನೆ ಕೈಯಲ್ಲಿ ಇದೆ. ನೀವು 1900 ಎಕರೆ ಎಂದು ಹೇಳುತ್ತೀರಿ.

ಶ್ರೀ ರಾಮಲಿಂಗರೆಡ್ಡಿ : ಅವರ ಪ್ರಶ್ನೆಗೆ ನಾವು ಕರೆಕ್ಟ್ ಉತ್ತರ ಕೊಟ್ಟಿದ್ದೇವೆ. ಇನ್ನು ಅಕ್ವಿಸಿಷನ್ ಪ್ರೊಸೆಸ್‌ನಲ್ಲಿ ಇರಬಹುದು.

ಶ್ರೀ ಕೆ. ವಿಜಯಕುಮಾರ್ ಶೆಟ್ಟಿ : 7900 ಎಕರೆ ವಶಪಡಿಸಿಕೊಂಡಿದ್ದು ನೀವು 1900 ಎಕರೆ ಎಂದು ಹೇಳಿದ್ದೀರಿ. ಕರೆಕ್ಟ್ ಇಲ್ಲ.

ಶ್ರೀ ರಾಮಲಿಂಗರೆಡ್ಡಿ : ಕರೆಕ್ಟ್ ಇದೆ. ನೀವು ಪ್ರಶ್ನೆ ಕೇಳಿದ್ದಕ್ಕೆ ಕರೆಕ್ಟ್ ಉತ್ತರ ಇದೆ.

ಶ್ರೀ ಕೆ. ವಿಜಯಕುಮಾರ್ ಶೆಟ್ಟಿ : ನಿಮಗೆ ತಪ್ಪು ಉತ್ತರಗಳನ್ನು ಅಧಿಕಾರಿಗಳು ಒದಗಿಸಿದ್ದಾರೆ.

ಅಧ್ಯಕ್ಷರು : ಅವರನ್ನೂ ಕರೆದು ಮಾತನಾಡಿ.

ಶ್ರೀ ಕೆ. ವಿಜಯಕುಮಾರ್ ಶೆಟ್ಟಿ : ಅಕ್ವಿಸಿಷನ್ ವ್ಯವಸ್ಥೆ ಇನ್ನೂ ಸರಿಯಾಗಿ ಮಾಡಿಲ್ಲ.

ಅಧ್ಯಕ್ಷರು : ನಿಮ್ಮನ್ನೂ ಕರೆದು ಮಾತನಾಡುತ್ತೇವೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಏನು ಆತಂಕವನ್ನು ವ್ಯಕ್ತಪಡಿಸಿದ್ದಾರೆ, ಅವರ ಜೊತೆ ಮಾನ್ಯ ಸಚಿವರನ್ನೂ ನಾನು ಕರೆದು ಮಾತನಾಡುತ್ತೇನೆ. ಭೂ ಸ್ವಾಧೀನಪಡಿಸಿಕೊಂಡ ರೈತರ ಸಮಸ್ಯೆ ಏನು ಇದೆ, ಆ ಕುರಿತು ಚರ್ಚೆ ಮಾಡಿ ಅವರ ಸಮಸ್ಯೆಗಳನ್ನು ಪರಿಹಾರ ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಅನೇಕ ಮಾರ್ಗಗಳಲ್ಲಿ ಬಸ್ಸುಗಳನ್ನು ಓಡಿಸದಿರುವುದು

536 - ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಹೊಂದಿರುವ ವಾಹನಗಳ ಅಂದರೆ ಬಸ್ಸುಗಳ ಸಂಖ್ಯೆ ಎಷ್ಟು?*

ಆ) *ಪ್ರಸ್ತುತ ಸಾರಿಗೆ ಸಂಸ್ಥೆಯಲ್ಲಿ ಬಸ್ಸುಗಳ ಕೊರತೆ ಇರುವುದೆ?*

ಇ) *ಸಾರಿಗೆ ಸಂಸ್ಥೆಯಲ್ಲಿ ಅನೇಕ ಮಾರ್ಗಗಳಲ್ಲಿ ಬಸ್ಸುಗಳನ್ನು ಓಡಿಸದಿರಲು ಕಾರಣವೇನು?*

ಈ) *ಕಳೆದೆರಡು ವರ್ಷಗಳಿಂದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಆಯ ವ್ಯಯವೆಷ್ಟು?*

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) 9774

ಆ) ಇಲ್ಲ (ಸದ್ಯ ಇರುವ ಅನುಸೂಚಿಗಳಿಗಾಗಿ)

ಇ) ಸಾರಿಗೆ ಕಾರ್ಯಾಚರಣೆಯಲ್ಲಿ ಅಡಚಣೆಗಳು , ಸಿಬ್ಬಂದಿ ಕೊರತೆ, ಕೆಟ್ಟ ರಸ್ತೆಗಳು, ವಾಹನ ಕೊರತೆ, ಅವಗಡಗಳು ಅಪಘಾತ ಸಿಬ್ಬಂದಿ ಗೈರುಹಾಜರಿ ಇತ್ಯಾದಿ ಕಾರಣಗಳಿಂದ ಉಂಟಾಗುತ್ತದೆ. ಮೇ 1993ಕ್ಕೆ ಶೇ. 15.2 ರಷ್ಟಿದ್ದ ರದ್ದತಿ ಕ.ಮಿ.ಗಳು ಫೆಬ್ರವರಿ 94ಕ್ಕೆ ಶೇ. 9.5ಕ್ಕೆ ಇಳಿದಿದ್ದು, ಸಾರಿಗೆಗಳ ಕಾರ್ಯಾಚರಣೆಯ ದಕ್ಷತೆಯೂ ಸಹ ಉತ್ತಮಗೊಳ್ಳುತ್ತಲಿದೆ.

ಈ)

	1991-92 (ಲಕ್ಷ ರೂ.ಗಳಲ್ಲಿ)	1992-93 (ಲಕ್ಷ ರೂ.ಗಳಲ್ಲಿ)
ಆದಾಯ	56,587.36	60,576.17
ವೆಚ್ಚ	58,496.82	66,704.86

ಶ್ರೀ ಎಂ.ಎಸ್. ಆತ್ಮಾನಂದ: ಮಾನ್ಯ ಅಧ್ಯಕ್ಷರೇ, ಇವರ ಉತ್ತರದಲ್ಲಿ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಹೊಂದಿರುವ ವಾಹನಗಳ ಸಂಖ್ಯೆ 9774 ಎಂದು ಹೇಳಿದ್ದಾರೆ. ಈಗ ಇರತಕ್ಕ ಶೆಡ್ಯೂಲ್ ಸಾಕಾಗುತ್ತದೆ ಎಂದು ಹೇಳಿದ್ದಾರೆ. ಆದರೆ ಗ್ರಾಮಾಂತರ ಪ್ರದೇಶದಲ್ಲಿ ಒಂದೊಂದು ಬಸ್‌ಗೆ ನಾಲ್ಕೈದು ಶೆಡ್ಯೂಲ್ ಇರುತ್ತದೆ. ಅಂದರೆ ಬಸ್ ಶೆಡ್ಯೂಲ್‌ಗಳು ಕ್ಯಾನ್ಸಲ್ ಆಗತಕ್ಕ ಪರಿಸ್ಥಿತಿ ಇದೆ. ಆದರೆ ಮುಂದೆ ಅನೇಕ ಮಾರ್ಗಗಳಲ್ಲಿ ಬಸ್‌ಗಳನ್ನು ಓಡಿಸದಿರಲು ಕಾರಣವೇನೆಂದು ಕೇಳಿದರೆ ವಾಹನ ಕೊರತೆ, ಅವಗಡಗಳು, ಸಿಬ್ಬಂದಿ ಗೈರು ಹಾಜರಿ ಇತ್ಯಾದಿ ಕಾರಣ ಹೇಳುತ್ತಾರೆ. ಮತ್ತು ಬಹಳಷ್ಟು ಸಿಬ್ಬಂದಿಗಳನ್ನು ಗೈರು ಹಾಜರಿ ಆಗಲಿಕ್ಕೆ ಕಾರಣವೇನು? ವಾಹನ ಕೊರತೆ ಇರತಕ್ಕದ್ದನ್ನು ತಾವು ಗಮನಿಸಲಿಲ್ಲವೇ? ಯಾವ ಹಂತದ ಸಿಬ್ಬಂದಿ ಕೊರತೆ ಇದೆ ಎನ್ನತಕ್ಕದ್ದನ್ನು ತಾವು ತಿಳಿಸಬೇಕೆಂದು ಕೇಳುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ: ವಾಹನ ಈಗ ಎಷ್ಟು ಸಧ್ಯಕ್ಕೆ ಇದೆ, ಎಕ್ಸಿಸ್ಟಿಂಗ್ ಶೆಡ್ಯೂಲ್ ಎಷ್ಟು ಇದೆ, ಆ ಶೆಡ್ಯೂಲ್ ಪ್ರಕಾರ ವೆಹಿಕಲ್ಸ್‌ಗೆ ಎಷ್ಟು ಡ್ರೈವರ್ ಬೇಕೋ ಅದು ಇದೆ. ನಾಲ್ಕು ಸಾವಿರ ಕಡಿಮೆ ಇತ್ತು, ಅಪಾಯಿಂಟ್‌ಮೆಂಟ್ ಮಾಡುತ್ತೇವೆ, ಆ ಪ್ರಕಾರ ವ್ಯವಸ್ಥೆಯನ್ನು ಒದಗಿಸುತ್ತೇವೆ. 9774 ವೆಹಿಕಲ್ಸ್ ಇದೆ. ಆ ಪ್ರಕಾರ ಶೆಡ್ಯೂಲ್ ಇವೆ. ಎಲ್ಲಿ ಮತ್ತೆ ಅವಶ್ಯಕತೆ ಇದೆ ಅದನ್ನು ತಿಳಿದುಕೊಂಡು existing is enough ಎಂದು ಹೇಳಿದ್ದೇವೆ. ತಾವು ಅನೇಕ ಮಾರ್ಗಗಳಲ್ಲಿ ಬಸ್‌ಗಳನ್ನು ಓಡಿಸದಿರಲು ಕಾರಣ ಕೇಳಿದ್ದೀರಿ. They are, shortage of crew, vehicles breakdown, repairs, accidents, bad roads, and absenteism.

ಈ ಪ್ರಕಾರ ಬಂದಿವೆ. ಮೊದಲು 20 ಪರ್ಸೆಂಟ್ ಇತ್ತು, ಅದನ್ನು 15 ಪರ್ಸೆಂಟ್ ಮಾಡಿದ್ದೇವೆ. ಈಗ 9 ಪರ್ಸೆಂಟ್ ಇದೆ. ಇನ್ನೂ ಸ್ವಲ್ಪ ದಿವಸದಲ್ಲಿ 3-4 ಪರ್ಸೆಂಟ್‌ಗೆ ಬರಬಹುದು. ಅದೃಷ್ಟದಿಂದ ನಾವು ಸುಧಾರಣೆ ಮಾಡುತ್ತಾ ಇದ್ದೇವೆ ಎನ್ನುವ ಆಶ್ವಾಸನೆಯನ್ನು ಕೊಡುತ್ತಿದ್ದೇನೆ.

ಶ್ರೀ ಎಂ.ಎಸ್. ಆತ್ಮಾನಂದ: ಗ್ರಾಮಾಂತರ ಪ್ರದೇಶದಲ್ಲಿ ನೋಡಿರತಕ್ಕದ್ದು ಅನೇಕ ಬಸ್ ಟ್ರಿಪ್‌ಗಳು ಹೋಗುವುದಿಲ್ಲ. ಗ್ರಾಮಾಂತರ ಪ್ರದೇಶದಲ್ಲಿ ತುಂಬಾ ತೊಂದರೆ ಆಗಿದೆ. ಗ್ರಾಮಾಂತರ ಪ್ರದೇಶದಲ್ಲಿ ಬಸ್‌ಗಳ ವ್ಯವಸ್ಥೆ ಸುಧಾರಿಸಲು ಏನು ಕ್ರಮವನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಕೈಗೊಳ್ಳುತ್ತದೆ? ದಕ್ಷತೆ ಉತ್ತಮಗೊಳ್ಳುತ್ತಿದೆ ಎಂದು ಹೇಳಿದ್ದೀರಿ. ಆದರೆ ಎಷ್ಟರಮಟ್ಟಿಗೆ ಎಂದು ನಾನು ನೋಡಿದ್ದೇನೆ. ನಾನು ಇದನ್ನು ಕೂಡ ಹತ್ತಿರ ನೋಡಿರತಕ್ಕವನು. ಇನ್ನೂ ಕೂಡ ದಕ್ಷತೆ ಆಗಬೇಕು. ರೊಟೇಷನ್ ಸಿಸ್ಟಂ ಏನು ಬಂದಿದೆ, ಆದರಿಂದಲೇ ಈ ತರಹ ಆಗುತ್ತಿದೆ ಎಂದು ನಾವು ಸ್ಥಳೀಯವಾಗಿ ವಿಚಾರಿಸಿದರೆ ಹೇಳುತ್ತಾರೆ. ಕಂಡಕ್ಟರ್, ಡ್ರೈವರ್ ಇಲ್ಲ ಬಸ್ ಸ್ಟ್ಯಾಂಡಿಗೆ ಹೋಗಲಿಕ್ಕೆ ಆಗುವುದಿಲ್ಲ ಎಂದು ಉತ್ತರ ಕೊಡುತ್ತಿದ್ದಾರೆ. ಇದನ್ನು ಸುಧಾರಿಸಲಿಕ್ಕೆ ಏನು ಕ್ರಮ ಕೈಗೊಳ್ಳುತ್ತೀರಿ ಎಂದು ನಾನು ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ: ಇದಕ್ಕೆಲ್ಲಾ ಕಾರಣ ಹಿಂದೆ ರೋಸ್ಟರ್ ಸಿಸ್ಟಮ್ ಜಾರಿಯಲ್ಲಿ ಇಲ್ಲದಿದ್ದರಿಂದ ಬೋಗಸ್ ಟಿಕೇಟುಗಳ ಹಾವಳಿಯಿಂದ ಆದಾಯದಲ್ಲಿ

ಸೋರಿಕೆ ಆಗುತ್ತಿತ್ತು. ಸೋರಿಕೆ ತಡೆಗಟ್ಟುವ ದೃಷ್ಟಿಯಿಂದ ನಾವು ರೋಸ್ಟರ್ ಸಿಸ್ಟಮ್ ಮಾಡಲಾಯಿತು, ಈಗ ಸೋರಿಕೆ ಕಡಿಮೆಯಾಗಿದೆ. ಇದರ ಜೊತೆಗೆ ಏನು ಸುಧಾರಣೆಯಾಗಬೇಕು, ಯಾವ ರೀತಿ ಬಸ್ ನಿಗದಿಯಾದ ಅವಧಿಗೆ ಹೊರಡಬೇಕು, ಅದರ ಪ್ರಕಾರ ಇವೊತ್ತಿನ ತನಕ ಆಗುತ್ತಿದೆ. ಈ ರೀತಿ ಮಾಡಿದ್ದರಿಂದ ಸ್ವಲ್ಪ ದಿವಸ ಪ್ರತಿಭಟನೆ ಕೇಳಿ ಬಂತು. ಮನುಷ್ಯನಿಗೆ ಯಾವ ರೀತಿ ಸ್ವತಂತ್ರವಿರುತ್ತದೋ, ಹೊಸ ಪದ್ಧತಿ ಜಾರಿಗೆ ತರುವುದರಿಂದ ಸ್ವಲ್ಪ ತೊಂದರೆಯಾಗುತ್ತದೆ. ಇದಕ್ಕೆ ಕಾರ್ಮಿಕ ಸಂಘಟನೆಯವರು ಉದ್ದೇಶಪೂರ್ವಕವಾಗಿ ಅಡ್ಡಿಪಡಿಸಿದರು, ಇದೆಲ್ಲವನ್ನೂ ನಾವು ನಿವಾರಣೆ ಮಾಡಿದ್ದೇವೆ, ಅವರಿಗೂ ಇದು ಗೊತ್ತಾಗಿದೆ. ರೋಸ್ಟರ್ ಸಿಸ್ಟಮ್ ಮಾಡುವುದರಿಂದ ಒಳ್ಳೆಯ ಅನುಕೂಲಗಳಿವೆ. 68 ಕಾರ್ಪೊರೇಷನ್‌ಗಳಲ್ಲಿ ಈ ಪದ್ಧತಿ ಇದೆ. ಇಲ್ಲಿ ಎಕ್ಸೆಪ್ಷನ್ ಮಾಡಲು ಆಗುವುದಿಲ್ಲ, ಆ ದೃಷ್ಟಿಯಿಂದ ರೋಸ್ಟರ್ ಸಿಸ್ಟಮ್ ಮಾಡಿದ್ದೇವೆ, ಇವೊತ್ತು ಸರಿಯಾದ ರೀತಿಯಲ್ಲಿ ವಾಹನಗಳ ಸಂಚಾರ ನಡೆಸುವ ಹಂತದಲ್ಲಿದ್ದೇವೆ, ಇದರಿಂದ ಸಂಸ್ಥೆಯನ್ನು ಲಾಭದಾಯಕವಾಗಿ ಮಾಡಬಹುದೆಂದು ಹೇಳುತ್ತಿದ್ದೇನೆ.

ಕಲಘಟಗಿ ನಗರದಲ್ಲಿ ಬಸ್ ಡಿಪೋ ತೆರೆಯುವುದು

465 - ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಲಘಟಗಿ ನಗರದಲ್ಲಿ ರಾಜ್ಯ ರಸ್ತೆ ಸಾರಿಗೆ ಬಸ್ ಡಿಪೋ ತೆರೆಯುವ ಪ್ರಸ್ತಾವನೆಯು ಸರ್ಕಾರದ ಮುಂದೆ ಇದೆಯೇ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):

ಅ) ಇಲ್ಲ

ಶ್ರೀ ಪಿ.ಸಿ. ಸಿದ್ದನಗೌಡರ್: ಮಾನ್ಯ ಅಧ್ಯಕ್ಷರೆ, ನಾನು ಕೇಳಿರುವ ಪ್ರಶ್ನೆಗೆ ಉತ್ತರವನ್ನು ಸರಿಯಾಗಿ ಕೊಡದೆ ತಪ್ಪು ಉತ್ತರ ಕೊಟ್ಟಿದ್ದಾರೆಂದು ಹೇಳುತ್ತಿದ್ದೇನೆ. ಕಲಘಟಗಿ ನಗರದಲ್ಲಿ ರಾಜ್ಯ ರಸ್ತೆ ಸಾರಿಗೆ ಬಸ್ ಡಿಪೋ ತೆರೆಯುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ ಎಂದು ಕೇಳಿದ್ದಕ್ಕೆ ಇಲ್ಲವೆಂದು ಉತ್ತರಿಸಿದ್ದಾರೆ. ಈ ಬಗ್ಗೆ ಪರಿಶೀಲಿಸುತ್ತೇವೆಂದು ಹಿಂದೆ ಹೇಳಿದ್ದರು. ಅದಕ್ಕೆ ಇನ್ನೊಂದು ಪ್ರಶ್ನೆ ಕೇಳಿದಾಗ ತಪ್ಪು ಮಾಹಿತಿ ಏನು ಕೊಡುತ್ತಿದ್ದಾರೆ. ಇದಕ್ಕೊಂದು ಉದಾಹರಣೆ ಕೊಡುತ್ತಿದ್ದೇನೆ. ನಗರದಲ್ಲಿ ಬಸ್ ನಿಲ್ದಾಣ ಸೌಕರ್ಯವಿಲ್ಲವೆಂದು ಕೇಳಿದರೆ, ಇಲ್ಲ ಎಂದು ಉತ್ತರ ಕೊಡುತ್ತಾರೆ. ಇದರ ಜೊತೆಗೆ ಒದಗಿಸಲಾಗಿದೆ ಎಂದೂ ಕೊಟ್ಟಿದ್ದಾರೆ. ಇದರಲ್ಲಿ ಮಾಹಿತಿ ಯಾವುದು ತಿಳಿದುಕೊಳ್ಳಬೇಕೆಂಬುದರ ಬಗ್ಗೆ ಸಂಶಯ ಬಂದಿದೆ. ಆದುದರಿಂದ, ಕಲಘಟಗಿ ನಗರಕ್ಕೆ ಬಸ್ ಡಿಪೋ ತೆರೆಯುವ ಕುರಿತು ಏನು ಕ್ರಮ ತೆಗೆದುಕೊಳ್ಳಲಾಗುತ್ತದೆಂಬುದರ ಬಗ್ಗೆ ಮಾನ್ಯ ಸಚಿವರು ತಿಳಿಸಬೇಕು.

ಶ್ರೀ ಭೀಮಣ್ಣ ಖಂಡ್ರೆ: ನೀವು ಕೇಳಿದ ಮಾಹಿತಿಗೆ ನಾವು ಉತ್ತರ ನೀಡಿದ್ದೇವೆ. ತಾವು ಭೂಮಿಯನ್ನು ಕೊಡಿಸುವುದಾದರೆ ಆ ನಗರದಲ್ಲಿ ಬಸ್ ಡಿಪೋ ತೆರೆಯುವ ಕುರಿತು ಆಲೋಚಿಸಬಹುದು. ಆದರೆ, ಇವೊತ್ತಿನ ಪರಿಸ್ಥಿತಿಯಲ್ಲಿ there is no necessity for any bus-stand there.

ಶ್ರೀ ಪಿ.ಸಿ. ಸಿದ್ದನಗೌಡರ್: ನಾನು ಕೇಳಿರುವ ಪ್ರಶ್ನೆಗೆ ಒದಗಿಸಿರುವ ಉತ್ತರ ಸರಿಯಿಲ್ಲವೆಂದು ಹೇಳುತ್ತಿದ್ದೇನೆ. ಪ್ರಸ್ತಾವ ಸರ್ಕಾರದ ಗಮನದಲ್ಲಿದ್ದು, ಪರಿಶೀಲಿಸಲಾಗುತ್ತಿದೆ ಎಂದು ಹೇಳಿ ಈಗ ಅದು ಸರ್ಕಾರದ ಗಮನಕ್ಕೆ ಬಂದಿಲ್ಲವೆಂದು ಹೇಳುತ್ತಿದ್ದಾರೆ. ನನ್ನ ಪಾಯಿಂಟ್ ಏನೆಂದರೆ, ಬೇರೆ ತಾಲ್ಲೂಕಿಗೆ ಬಸ್ ಡಿಪೋ ಒದಗಿಸಿಕೊಟ್ಟಿದ್ದೀರಿ,

ಆದರೆ, ನಮಗೆ ಅಂದರೆ ವಿರೋಧ ಪಕ್ಷದವರು ಕೇಳಿರುವುದಕ್ಕೆ ಕೊಟ್ಟಿಲ್ಲವೆಂದು ಹೇಳುತ್ತಿದ್ದೇನೆ. ಈ ಕುರಿತು ಅನೇಕ ಪ್ರಸ್ತಾವನೆಗಳಿದ್ದವು, ಬೇರೆ ಕಡೆ ಬಸ್ ಡಿಪೋಗಳನ್ನು ಕೊಟ್ಟಿದ್ದೀರಿ. ನಿಮ್ಮ ಪಕ್ಷಕ್ಕೆ ಸೇರಿದವರು ಕೇಳಿದರೆ ಮಾತ್ರ ಕೊಡಬೇಕೆಂದು ಏನಾದರೂ ಇದೆಯೇ ಎಂದು ಕೇಳುತ್ತಿದ್ದೇನೆ.

ಶ್ರೀ ಭೀಮಣ್ಣ ಖಂಡ್ರೆ : ಎಲ್ಲೆಲ್ಲಿ ಬಸ್ ಡಿಪೋಗಳ ಅಗತ್ಯವಿದೆಯೋ ಅಲ್ಲೆಲ್ಲಾ ಒದಗಿಸಿಕೊಡುತ್ತೇವೆಂದು ಹೇಳಿದ್ದೇವೆ.

ಶ್ರೀ ಪಿ.ಸಿ. ಸಿದ್ಧನಗೌಡರ್ : ಕಲಘಟಗಿ ನಗರದಲ್ಲಿ ವರ್ಕ್‌ಲೋಡ್ ಜಾಸ್ತಿ ಇರುವುದರಿಂದ ಬಸ್ ಡಿಪೋ ತೆರೆಯಬೇಕೆಂದು ಕೇಳುತ್ತಿದ್ದೇನೆ.

ದಂತಚೋರ ವೀರಪ್ಪನ್‌ನನ್ನು ಬಂಧಿಸುವುದು

517 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಂತಚೋರ ಕೊಲೆ ಗಡುಕ ವೀರಪ್ಪನ್‌ನನ್ನು ಹಿಡಿಯುವ ಬಗ್ಗೆ ಇದುವರೆಗೆ ಸರ್ಕಾರ ಸಾಧಿಸಿರುವ ಪ್ರಗತಿ ಏನು?

ಆ) ವೀರಪ್ಪನ್‌ನನ್ನು ಹಿಡಿಯಲು ನೇಮಿಸಿರುವ ಗಡಿಭದ್ರತಾ ಪಡೆಗೆ ಇದುವರೆಗೂ ಆಗಿರುವ ಹಣದ ವೆಚ್ಚವೆಷ್ಟು?

ಇ) ವೀರಪ್ಪನ್‌ನಿಂದ ಇದುವರೆವಿಗೂ ಆಗಿರುವ ಪ್ರಾಣಹಾನಿ ಎಷ್ಟು? ಹಾಗೂ ಆಸ್ತಿಪಾಸ್ತಿಗಳಿಗೆ ಎಷ್ಟು ನಷ್ಟ ಒದಗಿಸಿದೆ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ದಿನಾಂಕ 20-3-1994ರ ವರೆಗೆ ವೀರಪ್ಪನ್ ತಂಡದ 53 ಸದಸ್ಯರು ಸೇರಿದಂತೆ ಒಟ್ಟು 197 ಜನರನ್ನು ಬಂಧಿಸಲಾಗಿದೆ. ಬಂಧಿತ 197 ಜನರಲ್ಲಿ 60 ಮಂದಿ ವೀರಪ್ಪನ್ ತಂಡದ ಸದಸ್ಯರಿದ್ದು, ಉಳಿದ 137 ಜನರು ವೀರಪ್ಪನ್ ತಂಡಕ್ಕೆ ಆಹಾರ ಪದಾರ್ಥಗಳನ್ನು ಪೂರೈಸುವವರಾಗಿರುತ್ತಾರೆ. ಈ ಪ್ರದೇಶದಲ್ಲಿ ಕಳೆದ ಒಂದು ವರ್ಷದಿಂದ ಶಾಂತಿ ಸುವ್ಯವಸ್ಥೆಯನ್ನು ಪುನರ್ ಸ್ಥಾಪಿಸಲಾಗಿದೆ.

ಆ) ಗಡಿ ಭದ್ರತಾ ಪಡೆಗೆ ಪ್ರತಿ ತಿಂಗಳೂ ರೂ. 10.51 ಲಕ್ಷ ದಂತೆ ದಿನಾಂಕ 9-3-94ರ ವರೆಗೆ ಕೇಂದ್ರ ಸರ್ಕಾರಕ್ಕೆ ಒಟ್ಟು ರೂ. 94,59,000-00 ಗಳನ್ನು ಸಂದಾಯ ಮಾಡಬೇಕಾಗಿದೆ. ಇನ್ನು ಮುಂದೆ ಕಾರ್ಯಾಚರಣೆ ಮುಗಿಯುವವರೆಗೆ ಪ್ರತಿ ತಿಂಗಳು ರೂ. 4,20,000 ರಂತೆ ಸಂದಾಯ ಮಾಡಬೇಕಾಗುವುದು.

ಇ) ಇಲ್ಲಿಯವರೆಗೆ 94 ಜನರ ಪ್ರಾಣ ಹಾನಿಯಾಗಿದೆ. ಇದರಲ್ಲಿ 28 ಜನ ಪೋಲೀಸ್ ಅಧಿಕಾರಿಗಳಾಗಿದ್ದು, 10 ಮಂದಿ ಅರಣ್ಯ ಅಧಿಕಾರಿಗಳು ಹಾಗೂ 56 ಜನರು ಸಾರ್ವಜನಿಕರು ಸೇರಿದ್ದಾರೆ.

ದಂತ ಕಳ್ಳ ಸಾಗಾಣಿಕೆಯಿಂದ ಒಟ್ಟು 8 ಕೋಟಿ ರೂ. ಹಾಗೂ ಶ್ರೀಗಂಧ ಕಳ್ಳ ಸಾಗಾಣಿಯಿಂದ 125 ಕೋಟಿ ರೂ.ಗಳಷ್ಟು ಆಸ್ತಿ ನಷ್ಟವಾಗಿದ್ದು, ಮತ್ತು ಸಾರ್ವಜನಿಕರಿಂದ 84 ಲಕ್ಷ ರೂ.ಗಳನ್ನು ಬಲಾತ್ಕಾರವಾಗಿ ವಸೂಲಿ ಮಾಡಿರುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆ ಈ ಸದನದಲ್ಲಿ ಅನೇಕ ಬಾರಿ ಪ್ರಸ್ತಾಪವಾಗಿದ್ದರೂ ಸರಿಯಾದಂಥ ಉತ್ತರ ದೊರಕದಿರತಕ್ಕಂಥಾದ್ದು ದುರ್ದೈವ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿರುವ ಉತ್ತರದಲ್ಲಿ ಕೆಲವು ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ಏನೆಂದರೆ, ಆ ಪ್ರದೇಶದಲ್ಲಿ ಕಳೆದ ಒಂದು ವರ್ಷದಿಂದ ಶಾಂತಿ ಸುವ್ಯವಸ್ಥೆ ಕಾಪಾಡಲಾಗಿದೆಯೆಂದು ತಿಳಿಸಿದ್ದಾರೆ. ಅಂದರೆ, ಒಂದು ವರ್ಷದಿಂದ ಅಲ್ಲಿ ಏನೂ ನಡೆದಿಲ್ಲವೆ? ಗಲಾಟೆ ನಡೆದಿಲ್ಲವೆ? ಯಾರನ್ನೂ ಕೊಂದಿಲ್ಲವೆ? ಕಳ್ಳ ಸಾಗಾಣಿಕೆ ನಡೆದಿಲ್ಲವೆ ಎನ್ನುವ ವಿಷಯ ಸರ್ಕಾರದ ಗಮನಕ್ಕೆ

ಬಂದಿದೆಯೇ? ಎರಡನೆಯದಾಗಿ, ಗಡಿ ಭದ್ರತಾ ಪಡೆಯವರು ಮೊನ್ನೆಯೇ ದಿವಸ ವಾಪಸ್ಸು ತೆರಳಿದರು. ಅವರು ಹಿಂದಕ್ಕೆ ಹೋಗುವ ಬಗ್ಗೆಯಾಗಲಿ ಅಥವಾ ಬರುವ ಬಗ್ಗೆಯಾಗಲಿ ನಮ್ಮ ಸರ್ಕಾರಕ್ಕೂ ಅವರಿಗೂ ಮಧ್ಯೆ ನಡೆದಿರತಕ್ಕಂಥ ಮಾತುಗಳೇನು ಮತ್ತು ಅವರು ವಾಪಸ್ಸು ಹೋಗಬೇಕಾದರೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ಜೊತೆಯಲ್ಲಿ ಏನು ಮಾತುಕತೆಯಾಡಿದ್ದಾರೆ? ಅವರು ಹಿಂದಕ್ಕೆ ಹೋಗಬೇಕಾದಂಥ ಷರತ್ತುಗಳೇನು? ಕಾರ್ಯಾಚರಣೆಗೆ ಬರಬೇಕಾದಂಥ ಷರತ್ತುಗಳೇನು? ಇವರ ಮುಂದಿನ ಯೋಜನೆ ಏನು? ದಂತ ಚೋರ ವೀರಪ್ಪನ್‌ನನ್ನು ಹಿಡಿಯುವ ಬಗ್ಗೆ ಸರ್ಕಾರ ಕೈಗೊಂಡಿರತಕ್ಕಂಥ ಪರಿಣಾಮಕಾರಿ ಯೋಜನೆ ಏನು? ಈ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು "ಅತಿ ಶೀಘ್ರದಲ್ಲಿ ಆತನನ್ನು ಹಿಡಿಯುತ್ತೇವೆ, ಈ ವಿಚಾರದಲ್ಲಿ ಯಾರೂ ಗದ್ದಲ ಮಾಡಬೇಡಿ" ಎಂದು ಪ್ರತಿಬಾರಿಯೂ ಹೇಳುತ್ತಾರೆ. ಇದರಿಂದ ನಮಗೂ ಒಂದು ರೀತಿಯ ನಾಚಿಕೆಯಾಗುತ್ತದೆ. ಹಾಡಿದ್ದೇ ಹಾಡೋ ಕಿಸಬಾಯಿ ದಾಸ ಎನ್ನುವ ಹಾಗೆ ನಾವು ಹೇಳಿದ್ದೇ ಹೇಳುವಂಥ ಪರಿಸ್ಥಿತಿ ಬಂದಿದೆ. ಈ ಕುರಿತು ಸರ್ಕಾರ ತನ್ನ ಸ್ಪಷ್ಟ ನಿಲುವು ಹೇಳಲಿ. ಆತನನ್ನು ಹಿಡಿಯುವುದಕ್ಕೆ ಆಗುತ್ತದೆ ಅಥವಾ ಇಲ್ಲ ಎಂದು ಸ್ಪಷ್ಟ ನಿಲುವು ತಾಳಿ ಹೇಳುವುದು ಒಳ್ಳೆಯದು. ಕಳೆದ ಸುಮಾರು ನಾಲ್ಕು ವರ್ಷಗಳಿಂದಲೂ ಸನ್ಮಾನ್ಯ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಯಾಗಿದ್ದ ಕಾಲದಿಂದಲೂ 'ವೀರಪ್ಪನ್‌ನನ್ನು ಈಗಲೇ, ಇನ್ನೈದು ನಿಮಿಷದಲ್ಲಿ, ಇನ್ನೊಂದು ವಾರದಲ್ಲಿ, ಅತಿ ಶೀಘ್ರದಲ್ಲಿ ಹಿಡಿಯುತ್ತೇವೆ' ಎನ್ನುವ ಮಾತನ್ನು ಒಂದೇ ಸಮನೆ ಹೇಳಿಕೊಂಡು ಬರುತ್ತಿದ್ದೀರಿ. ನಮ್ಮ ಕೈಯಲ್ಲಿ ಆತನನ್ನು ಹಿಡಿಯುವುದಕ್ಕಾಗುತ್ತದೆ. ಅಥವಾ ಇಲ್ಲವೆನ್ನುವ ಏನಾದರೊಂದು ನಿರ್ಧಾರ ಹೇಳಿ. ಇದ್ಯಾವುದನ್ನೂ ನೀವು ಹೇಳದೆ ಈ ಸದನಕ್ಕೆ ನೂರಾರು ಬಾರಿ ಭರವಸೆಗಳನ್ನು ಕೊಟ್ಟಿದ್ದು, 'ನಾನು ಯಾವುದೂ ಸುಳ್ಳು ಹೇಳುವುದಿಲ್ಲ' ಎಂದು ನೀವು ಹೇಳುತ್ತೀರಿ. ಇನ್ನು ನಾವು 'ಸುಳ್ಳು ಭರವಸೆಗಳ ಸರಮಾಲೆ' ಎಂದು ಹೇಳಬೇಕಾಗಿದೆ. ಆದುದರಿಂದ, ಈ ವಿಚಾರದಲ್ಲಿ ಸರ್ಕಾರದ ಸ್ಪಷ್ಟ ನಿಲುವು ಏನು ಎಂಬುದನ್ನು ಸ್ಪಷ್ಟಪಡಿಸಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ: ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಹಿರಿಯ ಸದಸ್ಯರಾದಂಥ ವಾಟಾಳ್‌ನಾಗರಾಜ್‌ರವರು ಆ ಭಾಗದಿಂದ ಬಂದಿರತಕ್ಕವರು. ಆದ್ದರಿಂದ ತಮಗೆ ಆ ಪ್ರಕರಣದ ಬಗ್ಗೆ, ಆ ತಂಡದ ಚಲನಾವಲನದ ಬಗ್ಗೆ, ಆ ತಂಡದವರು ಮಾಡತಕ್ಕ ಅಕ್ರಮ, ಅಕೃತ್ಯಗಳ ಬಗ್ಗೆ ಸಾಕಷ್ಟು ಮಾಹಿತಿಯನ್ನು ತಿಳಿದುಕೊಂಡಿದ್ದೀರಿ. ಮತ್ತು ಈ ಸಮಸ್ಯೆ ಕೂಡ ಎಷ್ಟೊಂದು ಗಂಭೀರವಾಗಿದೆ ಎನ್ನುವ ಬಗ್ಗೆ ತಮ್ಮ ಗಮನಕ್ಕೆ ಬಂದಿದೆ.

ಶ್ರೀ ವಾಟಾಳ್ ನಾಗರಾಜ್: ನೀವು ಎಲ್ಲಿಗೋ ಹೋಗುತ್ತಿದ್ದೀರಿ, ದಾರಿ ತಪ್ಪಿಬಿಟ್ಟಿದ್ದೀರಿ. ನಾನು ಅವನ ಬಗ್ಗೆ ಚಲನಾವಲನವನ್ನು ತಿಳಿದುಕೊಂಡಿದ್ದೇನೆಂದು ಹೇಳಿದರೆ, ನಾನು ಎಲ್ಲ ತಿಳಿದುಕೊಂಡಿದ್ದೇನೆ?

ಶ್ರೀ ಎಂ. ವೀರಪ್ಪ ಮೊಯಿಲಿ: ಆ ರೀತಿ ನಾನು ಹೇಳಲಿಲ್ಲ, ತಿಳಿದುಕೊಂಡಿದ್ದೀರಿ ಎಂದು ಹೇಳಿದೆ.

ಶ್ರೀ ವಾಟಾಳ್ ನಾಗರಾಜ್: ಸರ್ಕಾರ ಏನು ಮಾಹಿತಿಯನ್ನು ನೀಡುತ್ತದೋ ಅದರ ಮೇಲೆ ನಾವು ನಿಂತುಕೊಂಡಿದ್ದೇವೆ. ಅದನ್ನು ಬಿಟ್ಟರೆ ಬೇರೆ ನಮಗೆ ಯಾವುದೇ ವಿಧವಾದಂಥ ಮಾಹಿತಿಯೂ ಗೊತ್ತಿಲ್ಲ. ತಾವು ಕಾಲಕಾಲಕ್ಕೆ ಈ ಸದನಕ್ಕೆ ಅವನ ಬಗ್ಗೆ ಆ ರೀತಿ ಇದೆ, ಈ ರೀತಿ ಇದೆ, ಇನ್ನೇನು ಅವನು ಕೆಂಗೇರಿಯ ಹತ್ತಿರ ಬಂದಿದ್ದಾನೆ, ಬೆಂಗಳೂರಿನ ಹತ್ತಿರ ಬಂದಿದ್ದಾರೆ. ಹಿಡಿದುಬಿಡುತ್ತೇವೆಂದು ಹೇಳಿಕೊಂಡು ಬಂದಿದ್ದೀರಿ ಅದರ ಬಗ್ಗೆ ಅವನ ಚಲನವಲನದ ಬಗ್ಗೆ ಏನೆಂದು ಹೇಳಿ. ಅವನ ಚಲನಾವಲನದ ಬಗ್ಗೆ ನಿಮ್ಮ ನಿಲುವು ನಮಗೆ ಅರ್ಥವಾಗುತ್ತಿಲ್ಲ. ಆದ್ದರಿಂದ ಅವನ ಚಲನಾವಲನದ ಬಗ್ಗೆ ತಾವು ಸ್ವಲ್ಪ ಹೇಳಿದರೆ ನಮಗೆ ಅರ್ಥವಾಗುತ್ತದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಇದರಲ್ಲಿ ಏನು ಮಾಹಿತಿ ಇದೆ ಎಂಬುದು ಗೃಹ ಮಂತ್ರಿಗಳಿಗೆ ಗೊತ್ತಿದೆ ಎಂದು ನಮಗೆ ತೋರುತ್ತಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ: ಮಾನ್ಯ ಗುರುಪಾದಪ್ಪನವರು ವಾಟಾಳ್ ನಾಗರಾಜ್‌ರವರಿಗೆ ಸುಮ್ಮನೆ ಪ್ರಚೋದನೆ ಮಾಡುತ್ತಿದ್ದಾರೆ. ಅವರು ಗಾಬರಿಯಾಗತಕ್ಕ ಅವಶ್ಯಕತೆ ಇಲ್ಲ. ವಾಟಾಳ್‌ನಾಗರಾಜ್‌ರವರಿಗೆ ಎಲ್ಲಾ ಗೊತ್ತಿದೆ. ನಾನು ಏಕೆ ಈ ರೀತಿ ಹೇಳಿದೆ ಎಂದರೆ ಮಾನ್ಯ ವಾಟಾಳ್‌ನಾಗರಾಜ್‌ರವರು ಈ ಪ್ರಕರಣದ ಹತ್ತಿರ ಇರುವ ಕ್ಷೇತ್ರದವರು. ಅಲ್ಲಿ ಏನು ಪರಿಸ್ಥಿತಿ ಇದೆ ಎನ್ನತಕ್ಕ ಮಾಹಿತಿಯನ್ನು ಅವರು ಜನರಿಂದ, ಪತ್ರಿಕೆಗಳಿಂದ ಇಲ್ಲವೇ?

ಸರ್ಕಾರದಿಂದ ಮಾಹಿತಿಯನ್ನು ಕೇಳಿ ತಿಳಿದುಕೊಂಡಿರಬಹುದು. ಈಗ ತಾವು ಒಪ್ಪಿಕೊಳ್ಳುತ್ತೀರಿ. ನಾವು 13-14 ತಿಂಗಳುಗಳ ಹಿಂದೆ ಇದರ ಬಗ್ಗೆ ವಿಶೇಷವಾಗಿ ಕ್ರಮ ತೆಗೆದುಕೊಂಡು 5 ಬಿ.ಎಸ್.ಎಫ್ ದಳಗಳನ್ನು ತರಿಸಿದೆವು. ಅಂದರೆ, ನಾವು ಮತ್ತು ತಮಿಳುನಾಡು ಪೊಲೀಸರ ಸಹಯೋಗದೊಂದಿಗೆ ಜಾಯಿಂಟ್ ಕಮಾಂಡ್‌ನ್ನು ಮಾಡಿದೆವು. ಏಕೆಂದರೆ, ಈ ಮೊದಲು ಅವನನ್ನು ನಮ್ಮಿಂದ ಓಡಿಸಿದರೆ ತಮಿಳುನಾಡಿನ ಕಡೆಗೆ ಹೋಗುತ್ತಿದ್ದ, ಅಲ್ಲಿ ಓಡಿಸಿದರೆ ಇಲ್ಲಿಗೆ ಬರುತ್ತಿದ್ದ. ತಮಗೆ ಗೊತ್ತಿರುವ ಹಾಗೆ ಸುಮಾರು 7-8 ಸಾವಿರ ಎಕರೆ ವ್ಯಾಪ್ತಿಯುಳ್ಳ ಈ ಕಾಡಿನಲ್ಲಿ ಇವನು ಮತ್ತು ಇವನ ಸಹಚರರ ಒಂದು ಸಂಚಾರವಾಗುತ್ತಿದೆ. ಒಂದು ಸಣ್ಣ ಹಳ್ಳಿ ಅಥವಾ ಎರಡು ಹಳ್ಳಿಯ ಪ್ರಶ್ನೆ ಅಲ್ಲ. 7 ಸಾವಿರ ಎಕರೆ ಅರಣ್ಯದಲ್ಲಿ ಅವನಿದ್ದಾನೆ. ಹಿಂದೆ ಪೊಲೀಸ್‌ನವರನ್ನು, ಅರಣ್ಯ ಇಲಾಖೆಯವರನ್ನು ಭೇಟಿ ಮಾಡಿ ಕೊಲೆ ಮಾಡುತ್ತಿದ್ದ. He was on aggressive mood. ಈಗ ಅವನು ಡಿಫೆನ್‌ಸೀವ್‌ನಲ್ಲಿದ್ದಾನೆ. ತಮಗೆ ಗೊತ್ತಿದೆ ಸುಮಾರು 13-14 ತಿಂಗಳುಗಳಿಂದ ಅವನ ತಂಡದ 197 ಜನರನ್ನು ಬಂಧಿಸಿದ್ದೇವೆ. ಅದರಲ್ಲಿ ಸುಮಾರು 60 ಜನರು ಅವನ ಜೊತೆಯಲ್ಲಿಯೇ ಇರುತ್ತಿದ್ದ ಪಕ್ಕಾ ಸಹಚರರು. ಉಳಿದ 137 ಜನರು ಅವನಿಗೆ ಆಹಾರ ಪದಾರ್ಥಗಳನ್ನು ಮತ್ತು ಬೇರೆ ಬೇರೆ ವಸ್ತುಗಳನ್ನು ಒದಗಿಸತಕ್ಕಂಥ, ಪ್ರಚೋದನೆಯನ್ನು ನೀಡತಕ್ಕಂಥ ಹಣವನ್ನು ಕೊಡತಕ್ಕಂಥ ಕೆಲಸವನ್ನು ಮಾಡುತ್ತಿದ್ದರು. ನಾನು ಉತ್ತರವನ್ನು ಕೊಡುವಾಗ ಒಂದು ಮಾತನ್ನು ಹೇಳಿದೆ, ಅದೇನೆಂದರೆ, ಈ ಪ್ರದೇಶದಲ್ಲಿ ಈಗ ಶಾಂತಿ ನೆಲೆಸಿದೆ. ಅದನ್ನು ಯಾರೂ ಅಲ್ಲಗಳೆಯಲು ಆಗುವುದಿಲ್ಲ. ಆ ರೀತಿ ಶಾಂತಿ ಇಲ್ಲದಿದ್ದರೆ ಅವನ ಭಯ, ಗಲಾಟೆ, ಹಿಂಸೆ, ಅಧಿಕಾರಿಗಳನ್ನು ಕೊಲ್ಲತಕ್ಕದ್ದು ಸಾರಾಸಗಟಾಗಿ ನಡೆಯುತ್ತಿತ್ತು. ಆ ಕೃತ್ಯವನ್ನು ನಾವು ನಿಲ್ಲಿಸಿದ್ದೇವೆ. ಹಳ್ಳಿಯ ಜನರು ಸುವ್ಯವಸ್ಥೆಯಿಂದ, ಯಾವುದೇ ರೀತಿಯಾದ ತೊಂದರೆ, ಆತಂಕವಿಲ್ಲದೆ ಅವರವರ ದಿನನಿತ್ಯದ ಜೀವನವನ್ನು ಸುಗಮವಾಗಿ ಸಾಗಿಸತಕ್ಕ ಪರಿಸ್ಥಿತಿ ಈಗ ಆ ಪ್ರದೇಶದಲ್ಲಿ ಬಂದಿದೆ. ಅವನ ಕಡೆ ಉಳಿದಿರತಕ್ಕ ಸಹಚರರು ಎಷ್ಟು ಎಂದು ತಾವು ಕೇಳಿದ್ದೀರಿ, ಅವನ ಕಡೆ ಉಳಿದಿರತಕ್ಕ ಸಹಚರರು ಕೇವಲ 7 ಜನರು, ಇವನನ್ನೂ ಸೇರಿಸಿದರೆ ಒಟ್ಟು 8 ಜನರು ಮಾತ್ರ ಅಲ್ಲಿ ಉಳಿದಿದ್ದಾರೆ. ಈ ಎಂಟು ಜನರನ್ನು ಇರತಕ್ಕ ಏಳು ಸಾವಿರ ಎಕರೆ ಅರಣ್ಯ ಪ್ರದೇಶದಲ್ಲಿ ಎಲ್ಲಿದ್ದಾರೆ ಎಂದು ಹುಡುಕತಕ್ಕ ಕೆಲಸ ಬಹಳ ಸುಲಭವೆಂದು ನಾವು ಮತ್ತೆ ತಾವೂ ಸಹ ತಿಳಿದುಕೊಂಡಿಲ್ಲ, ಆದರೆ ನಾವು ಕರೆಸಿದ್ದ 5 ಬಿ.ಎಸ್.ಎಫ್.ನ ಕಂಪನಿಗಳಲ್ಲಿ ನಮಗೆ ಎರಡೇ ಕಂಪನಿ ಸಾಕು ಎಂದು ಉಳಿದ ಮೂರು ಬಿ.ಎಸ್.ಎಫ್.ನ ಕಂಪೆನಿಗಳನ್ನು ವಾಪಸ್ಸು ಕಳಿಸಿಕೊಟ್ಟಿದ್ದೇವೆ. ಬಿ.ಎಸ್.ಎಫ್.ನವರೂ ಸಹ ಆ ರೀತಿ ಕಳುಹಿಸಿಕೊಡಲು ಕೇಳಿಕೊಂಡಿದ್ದರು. ನಮಗೆ ಎಲ್ಲಿಯವರೆಗೆ ಬಿ.ಎಸ್.ಎಫ್. ನ ಉಳಿದಿರತಕ್ಕ ಕಂಪೆನಿಗಳ ಅಗತ್ಯವಿದೆಯೋ ಅಲ್ಲಿಯವರೆಗೆ ಅವರನ್ನು ಉಳಿಸಿಕೊಳ್ಳುತ್ತೇವೆಂದು ಹೇಳಿದ್ದೇವೆ. ತಮಿಳುನಾಡು ಕರ್ನಾಟಕ ಪೊಲೀಸ್ ಮತ್ತು

ಬಿ.ಎಸ್.ಎಫ್. ಈ ಮೂರೂ ಸೇರಿ ಜಾಯಿಂಟ್ ಕಮಾಂಡ್ ಆಧಾರದ ಮೇಲೆ ಅವನನ್ನು ಹಿಡಿಯತಕ್ಕಂಥ ಆತ್ಮವಿಶ್ವಾಸ, ಆಶಾಭಾವನೆ ನಮ್ಮಲ್ಲಿದೆ. ಆದರೆ, ಅವನನ್ನು ಹಿಡಿಯುವ ಬಗ್ಗೆ ಸಮಯವನ್ನು ಕೊಡಲು ನಾವು ಸಿದ್ಧರಿಲ್ಲ.

12.20 ಪಿ.ಎಂ.

ನಾವು ಇದಕ್ಕೆ ಟೈಮ್ ಕೇಳುವುದಕ್ಕೆ ಸಿದ್ಧವಿಲ್ಲ. ಏಕೆಂದರೆ ಅದು ತಮಗೂ ಗೊತ್ತಿದೆ. ಚಂಬಲ್‌ಕಣಿವೆಯಲ್ಲಿ ಒಬ್ಬಿಬ್ಬರನ್ನು ಹಿಡಿಯುವುದಕ್ಕೆ 10-15 ವರ್ಷಗಳು ಆಗಿದೆ. 2-3 ವರ್ಷಗಳಲ್ಲೂ ಆಗಿದೆ. ಆದ್ದರಿಂದ ತಾವು ಇದನ್ನು ಅರ್ಥಮಾಡಿಕೊಳ್ಳಬೇಕು. ಇಲ್ಲಿ 7 ಸಾವಿರ ವಿಸ್ತೀರ್ಣದ ಕಾಡಿನಲ್ಲಿ 7-8 ಜನರನ್ನು ಹಿಡಿಯುವಂತಹ ಕೆಲಸವಿದೆ. ಅದರ ಮಾಹಿತಿಯನ್ನು ಇಲ್ಲಿ ಹಂಚಿಕೊಳ್ಳುವುದಕ್ಕೆ ಆಗುವುದಿಲ್ಲ. ಅವರು ಎಷ್ಟು ಹತ್ತಿರ ಬಂದಿದ್ದಾರೆ. ಎಂಬ ಮಾತನ್ನು ಮತ್ತು ಇದಕ್ಕೆ ನಾವು ಗಡುವು ಕೊಡುತ್ತಿಲ್ಲ. ಆದರೆ ನಾವು ಅವರನ್ನು ಹಿಡಿಯುವಂತಹ ಆತ್ಮವಿಶ್ವಾಸವನ್ನು ಹೊಂದಿದ್ದೇವೆ. ಇಷ್ಟು ಜನರನ್ನು ಅವನ ಸಂಬಂಧಿಗಳನ್ನು, ಅವನ ಹತ್ತಿರ ಸಂಬಂಧಿಗಳನ್ನು ಹಿಡಿದ್ದೇವೆ. ಅವನ ಅತ್ಯಂತ ನಿಕಟ ಸಂಬಂಧಿಗಳನ್ನು ಹಿಡಿಯುವುದಕ್ಕೆ ತಲೆಗೆ 20 ಲಕ್ಷ ರೂಪಾಯಿಗಳಷ್ಟು ಇನಾಮ್ ಇಟ್ಟಂಥ ಅನೇಕ ಜನರನ್ನು ಹಿಡಿದಿದ್ದೇವೆ. ನಾಟ್‌ದಟ್ ವೀ ಹ್ಯಾವ್ ನಾಟ್ ಕಾಟ್. ಅದು ಯಶಸ್ಸಿನ ಹಾದಿಯಲ್ಲಿ ಅದು ಖಂಡಿತವಾಗಿಯೂ ಇದೆ. ಆದುದರಿಂದ ತಮಗೆ ಹೇಳತಕ್ಕದ್ದು ಎಷ್ಟು ದೂರ ಇದ್ದಾರೆ, ಎಷ್ಟು ಹತ್ತಿರ ಇದ್ದಾರೆ, ಇದನ್ನೆಲ್ಲಾ ಹೇಳುವುದಕ್ಕೆ ಆಗುವುದಿಲ್ಲ. ಆದರೆ ಅವರನ್ನು ಹಿಡಿಯುವುದಕ್ಕೆ ಎಲ್ಲಾ ಪ್ರಯತ್ನಗಳನ್ನು ನಮ್ಮ ಜನರು ಅಂದರೆ ಶ್ರೀ ಶಂಕರ್ ಬಿದ್ರಿ ಅವರ ದಕ್ಷ ಆಡಳಿತದಲ್ಲಿ ವೀರಪ್ಪನ್‌ನನ್ನು ಹಿಡಿಯುವುದಕ್ಕೆ ಪೊಲೀಸ್‌ನವರು ಬಹಳ ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ತಮಿಳುನಾಡಿನ ಪೊಲೀಸ್‌ನವರು ಸಹ ಒಳ್ಳೆಯ ಕೆಲಸವನ್ನು ಮಾಡುತ್ತಿದ್ದಾರೆ. ಬಿ.ಎಸ್.ಎಫ್. ಅವರ ಮೋರೇಲ್ ಇಸ್ ಹೈಯಸ್ಟ್. ಹಿಂದೆ ಪೊಲೀಸ್‌ನವರು ಭಯದಿಂದ ರಜಾ ಹಾಕಿ ಹೋಗುವುದು ಮತ್ತೊಂದು ಮದುವೆ ಎಂದು ಹೋಗುವುದು ಇತ್ತು. ಆದರೆ ಈಗ ಪ್ರತಿಯೊಬ್ಬ ಪೊಲೀಸ್‌ನವರು ಅಲ್ಲಿ ಡ್ಯೂಟಿಯಲ್ಲಿದ್ದಾರೆ. ಅವರಿಗೆ ಅಷ್ಟು ಆತ್ಮವಿಶ್ವಾಸವಿದೆ. ನಾವು ಅವನನ್ನು ಹಿಡಿಯುತ್ತೇವೆಂದು, ನಾನು ಕೂಡ ಸಹಭಾಗಿಯಾಗಿದ್ದೇನೆ ಮತ್ತು ಅವರ ಜೊತೆಯಲ್ಲಿದ್ದೇನೆ. ಆದುದರಿಂದ ತಾವು ಇದರ ಬಗ್ಗೆ ಅನುಮಾನ ಇಟ್ಟುಕೊಳ್ಳುವಂತಹ ಅವಶ್ಯಕತೆ ಇಲ್ಲ.

ಅಧ್ಯಕ್ಷರು : ಅವರು ಸವಿಸ್ತಾರವಾಗಿ ಎಲ್ಲಾ ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಮುಖ್ಯಮಂತ್ರಿಗಳು ಆತ್ಮ ವಿಶ್ವಾಸದ ಬಗ್ಗೆ ಹೇಳಿದ್ದಾರೆ. ನಮ್ಮ ಹಳ್ಳಿಗಳಲ್ಲಿ ಒಂದು ಗಾದೆಯನ್ನು ಹೇಳುತ್ತಾರೆ. ಮದುವೆಯಾಗಿ 15 ವರ್ಷಗಳಾಯಿತು ಮಕ್ಕಳಾಗಲಿಲ್ಲ ಅಂಥ..

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಅವರು ಹಾಗೆ ಹೇಳಿಕೊಂಡು ಬರುತ್ತಿದ್ದಾರೆ. ಇದರಿಂದ ಏನೂ ಪ್ರಯೋಜನವಾಗಿಲ್ಲ. ಮೊನ್ನೆ ಪೊಲೀಸ್ ಇಲಾಖೆಯ ಅಧಿಕಾರಿಗಳ ಮಾದೇಶ್ವರ ಜಾತ್ರೆಯಲ್ಲಿ ಹಸ್ತಪ್ರತಿಗಳನ್ನು ಹಂಚಿದ್ದಾರೆ. ಅದು ವೀರಪ್ಪನ್ ಕಡೆಯವರನ್ನು ಹಿಡಿದುಕೊಟ್ಟವರಿಗೆ ತಲೆಗೆ 40 ಲಕ್ಷ ರೂ.ಗಳು ಎಂದು ಬೀದಿಬೀದಿಯಲ್ಲಿ ಹಸ್ತ ಪ್ರತಿಗಳನ್ನು ಹಂಚಿದ್ದಾರೆ. ಇವರ ಹಣೆಬರಹ ಹೀಗಾಗಿದೆ ಆದುದರಿಂದ ಮಾನ್ಯ ಮುಖ್ಯಮಂತ್ರಿಗಳು ಸುಮ್ಮನೆ ಆತ್ಮವಿಶ್ವಾಸ ಅಂಥ ಹೇಳಿ ನಮ್ಮನಿಮ್ಮ ಎರಡು ಆತ್ಮವಿಶ್ವಾಸಗಳು ಬೇರೆ ಕಡೆ ಹೋಗುವುದು ಬೇಡ. ದಯಮಾಡಿ ತಾವು ಹಿಡಿಯುತ್ತೇವೆ, ಇಲ್ಲ, ಆಗುವುದಿಲ್ಲ ಎಂದು ಹೇಳಿ. ಅದನ್ನು ಬಿಟ್ಟು ಸುಮ್ಮನೆ ಉಪದೇಶ ಹೇಳಿದರೆ ಎಲ್ಲಿಯವರೆಗೆ ಸಾಧ್ಯ? ಈ ಉಪದೇಶದಿಂದ ಅಲ್ಲಿ ನಮ್ಮ ಸಮಸ್ಯೆ ಬಗೆಹರಿಯುತ್ತದೆ

ಎಂದು ನಾನು ಅಂದುಕೊಂಡಿಲ್ಲ, ಈ ಬಗ್ಗೆ ತಮ್ಮ ಸ್ಪಷ್ಟ ನಿಲುವು ಏನು ಎಂಬುದನ್ನು ಸ್ಪಷ್ಟವಾಗಿ ಹೇಳಿ. ಅವರನ್ನು ಹಿಡಿಯುತ್ತೇವೆಂದು ಪ್ರತಿ ಸಾರಿಯೂ ಹೇಳಿದ್ದೀರಿ. ಈ ಬಗ್ಗೆ ಕಡತವನ್ನು ತೆಗೆಯಿರಿ, ನಿಮ್ಮ ಪ್ರತಿ ಉತ್ತರಗಳು ಹಿಂದೆ ಇದ್ದಂತಹ ಮುಖ್ಯಮಂತ್ರಿಗಳು, ಎಲ್ಲಾ ಹೇಳಿರುವಂತಹ ಭರವಸೆಗಳು ಈ ಕಡತದಲ್ಲಿವೆ. ಅದರಿಂದ ಏನೂ ಪ್ರಯೋಜನವಾಗಿಲ್ಲ, ಆದುದರಿಂದ ತಾವು ಸ್ಪಷ್ಟವಾಗಿ ಹೇಳಿ.

ಶ್ರೀ ಸಿ. ಬೈರೇಗೌಡ : ಹಿಡಿಯುತ್ತೇವೆ, ಎಂಬುದನ್ನು ಬಿಟ್ಟು ಇನ್ನು ಏನು ಹೇಳುವುದಕ್ಕೆ ಆಗುತ್ತದೆ?

ಉಚ್ಚ ನ್ಯಾಯಾಲಯದಲ್ಲಿ ಮಹಿಳಾ ನ್ಯಾಯಾಧೀಶರು

537 - ಶ್ರೀ ಆರ್. ನಾರಾಯಣ (ಬಳ್ಳಾರಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಾರತ ದೇಶದಲ್ಲಿ ಬೇರೆ ಬೇರೆ ರಾಜ್ಯಗಳ ಉಚ್ಚ ನ್ಯಾಯಾಲಯದಲ್ಲಿ ಮಹಿಳಾ ನ್ಯಾಯಾಧೀಶರಿರುವುದು ಸರ್ಕಾರದ ಗಮನದಲ್ಲಿದೆಯೇ?

ಆ) ಹಾಗಿದ್ದ ಪಕ್ಷದಲ್ಲಿ ಕರ್ನಾಟಕದಲ್ಲಿ ಅರ್ಹತೆಯುಳ್ಳ ಮಹಿಳಾ ನ್ಯಾಯವಾದಿಗಳು ಇರುವರೆ?

ಇ) ಅರ್ಹತೆಯುಳ್ಳ ಮಹಿಳಾ ನ್ಯಾಯವಾದಿಗಳು ಇದ್ದಲ್ಲಿ ಕರ್ನಾಟಕದಲ್ಲಿ ಏಕೆ ಆರಿಸಿ ಬಂದಿಲ್ಲ?

ಈ) ಪ್ರತಿಯೊಂದು ಕ್ಷೇತ್ರದಲ್ಲೂ ಮಹಿಳೆಯರಿಗೆ ಮೀಸಲು ಎಂದು ಹೇಳುವ ಸರ್ಕಾರ ಈ ಬಗ್ಗೆ ಗಮನಹರಿಸಿಲ್ಲವೇಕೆ?

ಉ) ಗಮನ ಹರಿಸಿದ್ದಲ್ಲಿ, ಮುಂದಿನ ಆಯ್ಕೆಯಲ್ಲಿ ಮಹಿಳಾ ನ್ಯಾಯಾಧೀಶರನ್ನು ನೇಮಿಸಲಾಗುವುದೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) :

ಅ) ಬೇರೆ ಬೇರೆ ರಾಜ್ಯಗಳ ಉಚ್ಚ ನ್ಯಾಯಾಲಯದಲ್ಲಿನ ಮಹಿಳಾ ನ್ಯಾಯಾಧೀಶರುಗಳ ಸಂಖ್ಯೆಯ ಬಗ್ಗೆ ಸದ್ಯದಲ್ಲಿ ಮಾಹಿತಿ ಇರುವುದಿಲ್ಲ. ಇದನ್ನು ಭಾರತದ ಸರ್ವೋಚ್ಚ ನ್ಯಾಯಾಲಯದಿಂದ ಪಡೆದುಕೊಳ್ಳಲಾಗುವುದು. ಅದಾಗ್ಯೂ ಕರ್ನಾಟಕದ ಉಚ್ಚ ನ್ಯಾಯಾಲಯದಲ್ಲಿ ಮಹಿಳಾ ನ್ಯಾಯಾಧೀಶರು ಇರುವುದಿಲ್ಲ.

ಆ) ಈ ವಿಷಯಗಳ ಬಗ್ಗೆ ಉಚ್ಚ ನ್ಯಾಯಾಲಯವು ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ ಎಂಬುದಾಗಿ ಉಚ್ಚ ನ್ಯಾಯಾಲಯವು ಉತ್ತರ ನೀಡಿದೆ.

ಈ) ಉಚ್ಚ ನ್ಯಾಯಾಲಯದ ನ್ಯಾಯಾಧೀಶರ ನೇಮಕಾತಿಯನ್ನು ರಾಷ್ಟ್ರಪತಿಯವರು ಮಾಡುವುದರಿಂದ ಈ ಬಗ್ಗೆ ಕೇಂದ್ರ ಸರ್ಕಾರ ಕ್ರಮ ಕೈಗೊಳ್ಳುವುದು.

ಶ್ರೀ ಆರ್. ನಾರಾಯಣ : ಮಾನ್ಯ ಅಧ್ಯಕ್ಷರೆ, ರಾಜ್ಯದ ಉಚ್ಚ ನ್ಯಾಯಾಲಯಗಳಲ್ಲಿ ಮಹಿಳಾ ನ್ಯಾಯಾಧೀಶರುಗಳನ್ನು ನೇಮಕ ಮಾಡುವ ಬಗ್ಗೆ ರಾಜ್ಯ ಉಚ್ಚ ನ್ಯಾಯಾಲಯಗಳ ಶಿಫಾರಸ್ಸುಗಳ ಅನ್ವಯ ರಾಷ್ಟ್ರಪತಿಯವರು ಮಾಡುತ್ತಾರೆ ಎಂದು ಉತ್ತರಕೊಟ್ಟಿದ್ದಾರೆ ಆದುದರಿಂದ ಮಾನ್ಯ ಮುಖ್ಯಮಂತ್ರಿಗಳು ಏಕೆ ಈ ವಿಷಯದ ಬಗ್ಗೆ ರಾಜ್ಯ ಉಚ್ಚ ನ್ಯಾಯಾಲಯಗಳ ಅಭಿಪ್ರಾಯದ ರೂಪದಲ್ಲಿ ಮನವಿಯನ್ನು ಏಕೆ ಮಾಡಬಾರದೆಂದು ನಾನು ಕೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ,ನಮ್ಮ ಅಭಿಪ್ರಾಯ ಕೂಡ ಅದೇ ಆಗಿದೆ. ನಮ್ಮ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಒಬ್ಬ ಮಹಿಳಾ ನ್ಯಾಯಾಧೀಶರು ಇರಬೇಕೆಂಬ ಅಪೇಕ್ಷೆ ನಮಗೂ ಇದೆ. ಮುಂದೆ ನೇಮಕಾತಿ ಆಗುವಾಗ ಅದು ಆಗಬೇಕು ಎಂಬ ಒತ್ತಾಯವನ್ನು ನಾನು ಖಂಡಿತವಾಗಿ ಸರ್ಕಾರದ ಪರವಾಗಿ ಹೇಳುತ್ತೇನೆ.

ಪೊಲೀಸ್ ಸಿಬ್ಬಂದಿಗೆ ವಸತಿ ಸೌಲಭ್ಯ

534 - ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದರೆ): ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೂಡಬಿದರೆಯ ಪೊಲೀಸ್ ಠಾಣೆಯ ಪೊಲೀಸ್ ಠಾಣಾಧಿಕಾರಿಗಳಿಗೆ ಮತ್ತು ಪೊಲೀಸರಿಗೆ ವಸತಿ ನಿರ್ಮಾಣ ಯಾವಾಗ ಮಾಡಲಾಗುವುದು?

ಆ) ಅಲ್ಲಿ ಎಷ್ಟು ವಸತಿ ಗೃಹಗಳು ಆಗಬೇಕಾಗಿದೆ?

ಇ) ಅಲ್ಲಿಯ ಪೊಲೀಸ್ ಇಲಾಖೆಗೆ ಜೀಪಿನ ಅನುಕೂಲತೆ ಯಾವಾಗ ಒದಗಿಸಲಾಗುವುದು?

ಶ್ರೀ. ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿ):

ಅ) 1994-95ನೇ ಸಾಲಿನಲ್ಲಿ ಪೊಲೀಸ್ ಠಾಣಾಧಿಕಾರಿಗೆ ಹಾಗೂ ಸಿಬ್ಬಂದಿ ವರ್ಗದವರಿಗೆ ವಸತಿ ಗೃಹಗಳನ್ನು ನಿರ್ಮಿಸುವ ಬಗ್ಗೆ ಹಣಕಾಸಿನ ಲಭ್ಯತೆಯನ್ನು ನೋಡಿಕೊಂಡು ಸದರಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

ಆ)
ಪೊಲೀಸ್ ಸಬ್ ಇನ್‌ಸಪೆಕ್ಟರ್	-	ಒಂದು
ಅಸಿಸ್ಟೆಂಟ್ ಸಬ್ ಇನ್ಸ್‌ಪೆಕ್ಟರ್	-	ಎರಡು
ಹೆಡ್‌ಕಾನ್ಸ್‌ಟೇಬಲ್‌ಗಳು	-	ನಾಲ್ಕು
ಪೇದೆಗಳು	-	ಹನ್ನೆರಡು

ಇ) ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ. ಕೆ. ಸೋಮಪ್ಪ ಸುವರ್ಣ: ಮಾನ್ಯ ಅಧ್ಯಕ್ಷರೆ, ಮೂಡಬಿದರೆಯ ಪೊಲೀಸ್ ಠಾಣೆಯ ಸಿಬ್ಬಂದಿಗಳಲ್ಲಿ 19 ಮಂದಿಗೆ ಇನ್ನೂ ಸಹ ನಿವಾಸ ಇಲ್ಲದೆ ಬಹಳ ತೊಂದರೆಯಲ್ಲಿ ಇದ್ದಾರೆ ಎನ್ನುವ ವಿಚಾರವನ್ನು ಅವರು ಉತ್ತರದಲ್ಲಿ ತಿಳಿಸಿದ್ದಾರೆ. ಸುಮಾರು ಶತಮಾನದಷ್ಟು ಹಳೆಯದಾದಂತಹ ಪೊಲೀಸ್ ಠಾಣೆಯಲ್ಲಿ ಇರುವಂತಹ 29 ಮಂದಿಯಲ್ಲಿ 19 ಮಂದಿಗೆ ನಿವಾಸ ಇಲ್ಲ, ಇದು ಬಹಳ ಕಷ್ಟವಾಗಿದೆ. ಅಲ್ಲಿ ತೊಂದರೆ ಏನೆಂದರೆ ಆ ಏರಿಯಾ ಸ್ವಲ್ಪ ಸೆನ್ಸಿಟಿವ್ ಏರಿಯಾ ಆಗಿದ್ದು, ಪೊಲೀಸ್‌ನವರಿಗೆ ಮನೆಯಲ್ಲಿಯೂ ಒಂದು ಸರಿಯಾಗಿ ನಿಲ್ಲದಂತಹ ಒಂದು ವಾತಾವರಣ ಇರುವ ಕಾರಣ, ಶತಮಾನದಷ್ಟು ಹಳೆಯ ಈ ಪೊಲೀಸ್ ಠಾಣೆಗೆ ಆದ್ಯತೆ ರಂಗದಲ್ಲಿ ಇದಕ್ಕೆ ನಿವಾಸವನ್ನು ಮಾಡುವುದಕ್ಕೆ, ಅದರಲ್ಲೂ ಮುಖ್ಯವಾಗಿ ಸಬ್‌ಇನ್ಸ್‌ಪೆಕ್ಟರ್‌ರವರಿಗೂ ಇಲ್ಲ, ಅಸಿಸ್ಟೆಂಟ್ ಸಬ್‌ಇನ್ಸ್‌ಪೆಕ್ಟರ್ ಮತ್ತು ಹೆಡ್ ಕಾನ್ಸ್‌ಟೇಬಲ್ ರವರಿಗೂ ಸಹ ಅಲ್ಲಿ ವಸತಿಗಳು ಇಲ್ಲ. ಇದನ್ನು ಯಾವಾಗ ಮಾಡುತ್ತೀರಿ? ಈ ವರ್ಷದ ಬಜೆಟ್‌ನಲ್ಲಿಯೂ ಸಹ ನನಗೆ ಮೂಡಬಿದರೆ ಹೆಸರು ಕಾಣಸಿಗಲಿಲ್ಲ. ಆದುದರಿಂದ ತಾವು ಅಲ್ಲಿಗೆ ಯಾವಾಗ ಒದಗಿಸುತ್ತೀರಿ ಎಂದು ಕೇಳುತ್ತೇನೆ?

ಶ್ರೀ ಎಂ. ವೀರಪ್ಪ ಮೊಯಿಲಿ: ಮಾನ್ಯ ಅಧ್ಯಕ್ಷರೇ, ಮಾನ್ಯ ಶಾಸಕರ ಅಪೇಕ್ಷೆಯಂತೆ 1994-95ರ ಅಂತ್ಯದ ವರ್ಷದಲ್ಲಿ ಈ ಕಾಮಗಾರಿಯನ್ನು ಕೈಗೆತ್ತಿಕೊಳ್ಳುತ್ತೇವೆ.

ಶ್ರೀ ಕೆ. ಸೋಮಪ್ಪ ಸುವರ್ಣ: ಇನ್ನು ಎರಡನೇ ಪ್ರಶ್ನೆ, ಮೂಡಬಿದರೆ ವಲಯದ ಪೊಲೀಸ್ ಠಾಣೆಗೆ ಒಂದು ಜೀಪ್ ಬೇಕು ಎಂದು ಕೇಳಿದ್ದೆ. ಸುಮಾರು 34 ಗ್ರಾಮಗಳನ್ನು ಒಳಗೊಂಡಂತಹ ಹಳ್ಳಿ ವಲಯದಿಂದ ಸೇರಿದಂತಹ ಈ ಕ್ಷೇತ್ರದಲ್ಲಿ ಜೀಪ್ ಇಲ್ಲದೆ ಒಂದು ಬೈಕಿನಲ್ಲಿ ಹೋಗುವಾಗ ಎಷ್ಟೋ ಸಾರಿ ರಕ್ಷಣೆಯನ್ನು ಕೊಡುವಂತಹ ಪೊಲೀಸರ ಮೇಲೆ ಆಕ್ರಮ ನಡೆದು ಅವರು ತೊಂದರೆಯನ್ನು ಅನುಭವಿಸುತ್ತಿದ್ದಾರೆ. 4 ವರ್ಷದಿಂದ ಜೀಪನ್ನು ಕೊಡಬೇಕು ಎಂದು ಹತ್ತಾರು ಸಾರಿ ಈ ಪ್ರಶ್ನೆಯನ್ನು ಅಸೆಂಬ್ಲಿಯಲ್ಲಿ ಎತ್ತಿದ್ದೇನೆ. ಈ ಬಾರಿಯಾದರೂ ಆ ಜೀಪನ್ನು

ಪೊಲೀಸ್ ಅಧಿಕಾರಿಗಳಿಗೆ ಕೊಟ್ಟು ರಕ್ಷಿಸುವಂತಹ ಪೊಲೀಸರ ರಕ್ಷಣೆಯನ್ನು ಸರ್ಕಾರ ಮಾಡಬೇಕು ಎಂದು ನಾನು ಕೇಳುತ್ತಿದ್ದೇನೆ. ನೀವು ಯಾವಾಗ ಜೀಪ್ ಒದಗಿಸುತ್ತೀರಿ ಎಂದು ಕೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಈಗ ಒಂದೊಂದೇ ತಮ್ಮ ಬೇಡಿಕೆಗಳು ನಮ್ಮ ಮುಂದೆ ಬರುತ್ತಿವೆ. ಏಪ್ರಿಲ್ ತಿಂಗಳಿನಲ್ಲಿ ಕೆಲವು ಜೀಪ್‌ಗಳು ಬರುತ್ತಿವೆ. ಅದರಲ್ಲಿ ಒಂದು ಜೀಪ್‌ನ್ನು ಮೂಡಬಿದರೆ ಪೊಲೀಸ್ ಠಾಣೆಗೆ ಕೊಡುತ್ತೇವೆ.

ಹೊನ್ನಾವರ - ಭಟ್ಕಳದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳನ್ನು ಓಡಿಸುವುದು

505 - ಶ್ರೀ ಆರ್.ಎನ್. ನಾಯ್ಕ (ಭಟ್ಕಳ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1991-92 ಹಾಗೂ 1992-93ನೇ ಸಾಲುಗಳಲ್ಲಿ ಹೊನ್ನಾವಾರ - ಭಟ್ಕಳ ತಾಲ್ಲೂಕಿನ ಯಾವ್ಯಾವ ಹಳ್ಳಿಗಳಿಗೆ ಪ್ರತಿ ದಿನ ಎಷ್ಟೆಷ್ಟು ಸಲ ಕೆ.ಎಸ್.ಆರ್.ಟಿ.ಸಿ. ಬಸ್ ಓಡಿಸಲಾಗುತ್ತಿತ್ತು?

ಆ) 1993-94ನೇ ಸಾಲಿನಲ್ಲಿ ಇಂದಿನ ದಿನಾಂಕಕ್ಕೆ ಯಾವ್ಯಾವ ಹಳ್ಳಿಗಳಿಗೆ ಎಷ್ಟೆಷ್ಟು ಸಲ ಬಸ್‌ಗಳು ಓಡಾಡುತ್ತಲಿದೆ?

ಇ) ಹೊನ್ನಾವರ - ಮೊಗೋಡ್‌ಗೆ ಹಿಂದೆ ಬಸ್ ಓಡಿಸಲಾಗಿತ್ತೆ?

ಈ) ಹಾಗಿದ್ದಲ್ಲಿ ಯಾವಾಗ ಓಡಿಸಲಾಗುತ್ತಿದೆ?

ಉ) ಇಲ್ಲದಿದ್ದಲ್ಲಿ ಎಂದಿನಿಂದ ಬಸ್ ಓಡಿಸಲಾಗುವುದು?

ಊ) ಭಟ್ಕಳ - ಹೊನ್ನಾವರ ಮಧ್ಯೆ ದೂರದ ಬಸ್ಸು ಹೊರತುಪಡಿಸಿ ಎಷ್ಟು ಬಸ್ಸುಗಳನ್ನು ಭಟ್ಕಳ ಡಿಪೋದಿಂದ ಓಡಿಸಲಾಗುತ್ತಿದೆ?

ಋ) ಈಗ ಅಲ್ಲಿ ಓಡಿಸುವ ಬಸ್‌ಗಳ ಸಂಖ್ಯೆ ಮೊದಲಿಗಿಂತ ಕಡಿಮೆ ಇದೆಯೇ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) ಕ.ರಾ.ರ. ಸಾ.ಸಂ.ಯು ಭಟ್ಕಳದಲ್ಲಿರುವ 64 ಗ್ರಾಮಗಳ ಪೈಕಿ 54 ಗ್ರಾಮಗಳಿಗೆ ಹಾಗೂ ಹೊನ್ನಾವರ ತಾಲ್ಲೂಕಿನ 97 ಗ್ರಾಮಗಳ ಪೈಕಿ 82 ಗ್ರಾಮಗಳಿಗೆ ವಾಹನ ಸಂಚಾರಿ ಸೇವೆಯನ್ನು ಒದಗಿಸಿರುತ್ತದೆ. ವಿವರಗಳನ್ನು ಅನಬಂಧದಲ್ಲಿ ನೀಡಲಾಗಿದೆ.

ಆ) ಭಟ್ಕಳ ತಾಲ್ಲುಕಿನಲ್ಲಿ 59 ಟ್ರಿಪ್ಪುಗಳು ಹಾಗೂ ಹೊನ್ನಾವರ ತಾಲ್ಲೂಕಿನಲ್ಲಿ 143 ಟ್ರಿಪ್ಪುಗಳನ್ನು ಓಡಿಸಲಾಗಿರುತ್ತದೆ. ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಇ) ವಾಹನ ಸಂಚಾರಕ್ಕೆ ಯೋಗ್ಯವಾಗಿರುವ ರಸ್ತೆ ಇಲ್ಲದಿರುವುದರಿಂದ ವಾಹನ ಸಂಚಾರ ಸೇವೆಯನ್ನು ಒದಗಿಸಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಅವಗೋಡುವಿನಿಂದ ಮಾಗೋಡಿಗೆ ಇರುವ ಮಾರ್ಗದ ಭಾಗದ ರಸ್ತೆಯು ರಿಪೇರಿಯಾಗದೆ ಇದ್ದು ರಸ್ತೆಯು ವಾಹನ ಸಂಚಾರಕ್ಕೆ ಯೋಗ್ಯವಾಗಿಲ್ಲ. ರಸ್ತೆಯು ದುರಸ್ತಿಗೊಂಡ ಮೇಲೆ ಈ ವಾಹನ ಸಂಚಾರವನ್ನು ಒದಗಿಸಲು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಊ) ಭಟ್ಕಳ ಮತ್ತು ಕಾಸರಗೋಡದ ಮಧ್ಯೆ ಹೊನ್ನಾವರ ಮಾರ್ಗದಲ್ಲಿ 26 ಟ್ರಿಪ್ಪುಗಳ ಸಾರಿಗೆ ಸೇವೆಯನ್ನು ಒದಗಿಸಲಾಗಿದೆ.

ಋ) ಇಲ್ಲ.

THE DETAILS SHOWING THE NO. OF VILLAGES AND TRIPS PROVIDED WITH TRANSPORT FACILITIES BY KSRTC IN HONNAVAR & BHATAL TALUK DURING THE YEAR 1991-92, 1992-93 AND 1993-94.

Sl .No.	Name of the Route		Kms	1991-92 trips	1992-93 trips	1993-94 trips
Bhatkal Taluk						
1.	Bhatkal	Kasargod	41	12	3	6
2.	"	Tengangudi	9	2	3	4
3.	"	Koppa via Chittara	12	2	3	4
4.	"	Bailur via Chittara, Murdeswar	25	2	3	3
5.	"	Haduvalli via Marukeri	16	3	5	5
6.	"	Kalsavalli	84	1	1	1
7.	"	Baindur	19	9	10	12+4 single trip
8.	"	Aravakki	16	2	3	4
9.	"	Bandara	6	1	1	1
10.	"	Ganganadu	9	1	1	1
11.	"	Baindur via Toodalli	32	1	1	2+1 single trip
12.	"	Baindur via Dombi	22	1	2	2
13.	"	Kargal via Kogara	70	1	1	1
14.	"	Uttara Koppa via Chittara Murdeshwar	32	2	3	3
15.	"	Ganganadu via Baindur	28	1	1	1
16.	"	Nagavalli	27	1	1	1

17.	”	Toodalli	18	1	1	1
18.	“	Kurandur	19	2	2	2
Honnavar Taluk						
1.	Kasarkod	annige	26	3	4	5
2.	Kasarkod	Mulkod	11	2	3	4
3.	Kasarkod	-Idagunji	17	2	3	3
4.	Kasarkosd	-Chittara Via, Banasale	17	1	2	2
5.	Kasarkod	-Talgod via Idagunji	24	3	4	5
6.	Honnavar	- Hosgoda	30	-	1	12
7.	Honnavar-Kasarkod		3	1	16	22
8.	Honnavar	-Hosada	19	5	6	7
9.	Honnavar	-Kodathok-Kumta	36	7	7	7
10.	Honnavar	-Kenchagara via Gundibail	15	2	3	4
11.	Honnavar	-Kumta via Navilgon Haladipur	41	1	1	1
12.	Kumta	-Honnavar	22	5	6	27+8 single trips
13.	Honnavar	-Salkoda	13	2	3	4
14.	Honnavar	-Padukuli via Nadhgeri	19	2	2	15
15.	Honnavar	-Gundibail	13	1	2	3
16.	Kumta	-Hippihakkal Honnavar	36	2	3	4
17.	Honnavar	-Madgeri-Chippihakkal - Kumte	36	2	3	4
18.	Honnavar	-Gerusoppa	35	2	2	3
19.	”	Vindur via Hodake	18	1	1	3
20.	“	Tolasani via Kerekon	19	2	3	4
21.	”	Gundbal via				

		Kadchalla	19	2	2	3
22.	"	Gundabal	17	1	2	2
23.	"	Kereckona	13	1	2	3
24.	"	Nagere	13	1	2	2
25.	"	Jalavalli	24	1	2	2
26.	"	Herangadi	24	1	2	2

ಶ್ರೀ ಆರ್.ಎನ್. ನಾಯ್ಕ್: ಮಾನ್ಯ ಅಧ್ಯಕ್ಷರೇ, ಹೊನ್ನಾವರ ಮಾಗೋಡದ ಹಿಂದೆ ಬಸ್ ಓಡಿಸಲಾಗಿತ್ತೇ ಎಂದು ಕೇಳಿದರೆ ಅದಕ್ಕೆ ವಾಹನ ಸಂಚಾರ ಯೋಗ್ಯವಾಗಿರುವ ರಸ್ತೆ ಇಲ್ಲದೆ ಇರುವುದರಿಂದ ವಾಹನ ಸಂಚಾರ ಸೇವೆಯನ್ನು ಒದಗಿಸಿರುವುದಿಲ್ಲ ಎಂಬ ಉತ್ತರ ಕೊಟ್ಟಿದ್ದಾರೆ. ನಾನು ಕೇಳುತ್ತೇನೆ, ಹಿಂದೆ ಬಸ್ ಓಡಿಸಲಾಗಿತ್ತೇ? ಇವರು ಈಗಿನ ವಿಚಾರ ಮಾತನಾಡುತ್ತಾರೆ. ಇದರಲ್ಲಿ ತಪ್ಪು ಮಾಹಿತಿಯನ್ನು ಅಧಿಕಾರಿಗಳು ಮಂತ್ರಿಗಳಿಗೆ ಒದಗಿಸಿದ್ದಾರೆ. ಹಿಂದೆ ಅಲ್ಲಿ ಬಸ್ ಓಡುತ್ತಿತ್ತು. ಮಧ್ಯೆ ಒಂದು ಬ್ರಿಡ್ಜ್ ಕನ್ಸ್‌ಟ್ರಕ್ಷನ್ ಆಗುವ ಅವಶ್ಯಕತೆ ಇರುವುದರಿಂದ ಆ ಸ್ಥಳದಲ್ಲಿ ಬಸ್ ಓಡಿಸುವುದು ನಿಂತಿದ್ದು 3-4 ವರ್ಷವಾಯಿತು. ಈಗ ಬ್ರಿಡ್ಜ್ ಆಗಿದೆ. ಅದು ಪಿಡಬ್ಲ್ಯೂಡಿ ರಸ್ತೆ. ಆ ರಸ್ತೆ ಕಂಡೀಷನ್‌ನಲ್ಲಿದೆ. ಹಾಗಿದ್ದರೂ ಸಹ ಹಠ ಹಿಡಿದು ಅಲ್ಲಿ ಬಸ್ ಓಡಿಸದೇ ಇರುವ ಹಾಗೆ ಕೆಎಸ್‌ಆರ್‌ಟಿಸಿ ಅಧಿಕಾರಿಗಳು ನೋಡಿಕೊಂಡಿದ್ದಾರೆ. ಇದರ ಬಗ್ಗೆ ತಪ್ಪು ಮಾಹಿತಿ ಕೊಟ್ಟವರ ಬಗ್ಗೆ ಮಂತ್ರಿಗಳು ಕ್ರಮ ಕೈಗೊಳ್ಳುತ್ತೀರೋ ಹೇಗೆ? ಕೊಟ್ಟ ಮಾಹಿತಿ ಪ್ರಕಾರವೇ ಭಟ್ಕಳ, ಕಾಸರಗೋಡು ಈ ಮಧ್ಯೆ 91-92 ರಲ್ಲಿ 12 ಟ್ರಿಪ್ ಓಡಿಸುತ್ತಿತ್ತು. 92-93ರಲ್ಲಿ 3 ಟ್ರಿಪ್ ಓಡುತ್ತಿತ್ತು. 93-94ರಲ್ಲಿ 6 ಟ್ರಿಪ್ ಎಂದು ಇಲ್ಲಿ ಹೇಳುತ್ತೀರಿ. 12 ಟ್ರಿಪ್ ಇರುವುದನ್ನು 3ಕ್ಕೆ ಮಾಡಿ, 3 ರಿಂದ 6ಕ್ಕೆ ಏರಿಸಿದ್ದಾರೆ. ಇಲ್ಲಿ ಏನಾಗಿದೆ, ಟೆಂಪೋಗಳ

ಡ್ರೈವರುಗಳು ಕೆಎಸ್‌ಆರ್‌ಟಿಸಿಡ್ರೈವರ್‌ಗಳ ರಿಲೇಷನ್. ಡ್ರೈವರ್‌ಗಳ ಮಾಲೀಕರು ಆ ಟೆಂಪೋಗಳನ್ನು ಅಲ್ಲಿ ಓಡಿಸುತ್ತಾರೆ. ಹಾಗಾಗಿ ಬಸ್ ಶೆಡ್ಯೂಲ್‌ಗಳನ್ನು ಕ್ಯಾನ್ಸಲ್ ಮಾಡಿ ಪ್ರೈವೇಟ್‌ನವರಿಗೆ ಲಾಭವಾಗಲಿ ಎನ್ನುವ ದೃಷ್ಟಿಯಿಂದ ಕೆಎಸ್‌ಆರ್‌ಟಿಸಿ ಅಧಿಕಾರಿಗಳು ಪ್ರೈವೇಟ್ ಟೆಂಪೋ ಓನರ್‌ಗಳಿಗೆ ಶಾಮೀಲಾಗಿದ್ದಾರೆ. ಅದು ಈ ರೀತಿ ಅಲ್ಲಿ ನಡೆಯುತ್ತಿದೆ. ಅಲ್ಲಿ ಮೊದಲಿನ 12 ಟ್ರಿಪ್‌ಗಳು ಓಡಿಸುತ್ತೀರಾ? ಹೇಗೆ? ಇದನ್ನು ದಯಮಾಡಿ ತಿಳಿಸಬೇಕು.

ಶ್ರೀ ಭೀಮಣ್ಣ ಖಂಡ್ರೆ: ಮಾನ್ಯ ಅಧ್ಯಕ್ಷರೇ, ನನ್ನ ಮಾಹಿತಿ ಪ್ರಕಾರ ಟ್ರಿಪ್‌ಗಳ ಸಂಖ್ಯೆ ಕಡಿಮೆ ಆಗಿಲ್ಲ. 91-92ರಲ್ಲಿ ಭಟ್ಕಳ ತಾಲ್ಲೂಕಿನಲ್ಲಿ ಈ ಹೊನ್ನಾವರಕ್ಕೆ ಬರುವ ಟ್ರಿಪ್‌ಗಳ ಸಂಖ್ಯೆ 45.

ಶ್ರೀ ಆರ್.ಎನ್. ನಾಯಕ್: ನಾನು ಒಂದನ್ನೇ ಕೇಳುತ್ತಿದ್ದೇನೆ. ತಾವು ಮೊದಲು ಹೋಗಿ ನೋಡಿ. ಭಟ್ಕಳ ಕಾಸರಕೋಡು 41 ಕಿ.ಮೀ. 91-92ರಲ್ಲಿ 12 ಟ್ರಿಪ್ಪು 92-93ರಲ್ಲಿ 3 ಟ್ರಿಪ್ಪು 93-94ರಲ್ಲಿ ಆರು ಟ್ರಿಪ್ಪುಗಳು ಎಂದು ಇದೆ. ಅದು ಏನಾಗಿದೆ ಎಂದರೆ 40 ಕಿ.ಮೀ ಅಂತರದಲ್ಲಿ ಅಲ್ಲಿ ಬಸ್ ಓಡಾಡುತ್ತಿಲ್ಲ. ನ್ಯಾಷನಲ್ ಹೈವೇಯಲ್ಲಿ ಟೆಂಪೋಗಳು ಓಡಾಡುತ್ತಿತ್ತು. ಇದನ್ನು ಸ್ವಲ್ಪ ಹೇಳಿ.

ಶ್ರೀ ಭೀಮಣ್ಣ ಖಂಡ್ರೆ: ನನ್ನ ಉತ್ತರದಲ್ಲಿ ಅವರು ಏನು ಕೇಳುತ್ತಿದ್ದಾರೆ ಅದಕ್ಕೆ ಉತ್ತರ ಬರುತ್ತಿದೆ. ಅದನ್ನು ಹೇಳುತ್ತಿದ್ದೇನೆ. 91-92ರಲ್ಲಿ 45 ಟ್ರಿಪ್ ಹೆಚ್ಚು ಮಾಡಿದ್ದೇವೆ. 92-93ರಲ್ಲಿ ಮತ್ತೆ 45 ಹೆಚ್ಚು ಮಾಡಿದ್ದೇವೆ. 93-94ರಲ್ಲಿ 59 ಟ್ರಿಪ್ಪು. ಹಾಗಾಗಿ ಒಟ್ಟು 149 ಟ್ರಿಪ್ಪುಗಳು ಈ ಮೂರು ವರ್ಷಗಳಲ್ಲಿ ಹೆಚ್ಚಾಗಿವೆ.

ಎರಡನೆಯದಾಗಿ 91-92ರಲ್ಲಿ ಹೊನ್ನಾವರ 52 trips we have increased. 92-93, 87 trips have been added. 87 ಟ್ರಿಪ್ಪುಗಳು ಹೆಚ್ಚಾಗಿವೆ. 93-94ರಲ್ಲಿ 143 ಟ್ರಿಪ್ಸ್ ಅಂದರೆ 286 ಆಗಿವೆ. ನೀವು ತಪ್ಪು ಮಾಹಿತಿ ಎಂದು ಏನು ಹೇಳುತ್ತಿದ್ದೀರಿ. ನಾನು ಮತ್ತೊಮ್ಮೆ ಕೇಳುತ್ತಿದ್ದೇನೆ ಅಲ್ಲಿ ಮೊದಲ ಜಿಲ್ಲೆಗೆ ಇದು ಅಷ್ಟೇ ಆಗುತ್ತದೆಯೇ ಎಂದು? ನೀವು ಇಲ್ಲ ಎಂದು ಹೇಳುತ್ತಿದ್ದೀರಿ. ನಾನು ನಿನ್ನೆ ಡಿ.ಸಿ. ಯವರಿಗೆ ಕೇಳಿದಾಗ ಅವರು ಇರಲಿಲ್ಲ, ಯಾರೋ ಸಬಾರ್ಡಿನೇಟ್ ಉತ್ತರ ಕೊಟ್ಟಿದ್ದಾರೆ. ಅದು 3 ವರ್ಷದ ಮೇಲೆ ಆಗುತ್ತಿದೆ ಎಂದು ಹೇಳಿದ್ದಾರೆ. ಬ್ರಿಡ್ಜ್ ಕಂಪ್ಲೀಟ್ ಆಗಿಲ್ಲ ಎಂದು ನಮ್ಮಲ್ಲಿ ಉತ್ತರ ಬಂದಿದೆ. ನಮ್ಮ ಮಾಹಿತಿ ಪ್ರಕಾರ ಇನ್ನೂ ದಾರಿ ಸರಿಯಾಗಿ ಆಗಿಲ್ಲ ಅದು ಆಗುತ್ತಿದೆ. ಅದು ಆದ ನಂತರೇ ನೀವು ಕೇಳಿದ ರೂಟ್ ಪ್ರಕಾರ ನಾವು ಮಾಡುತ್ತೇವೆ.

ಶ್ರೀ ಆರ್.ಎನ್. ನಾಯಕ್: ಅಧ್ಯಕ್ಷರೇ, ಹೊನ್ನಾವರ ಮಾಗೋಡು ಸುಮಾರು 32 ಕಿ.ಮೀ. ಅಂತರದ ಪ್ರದೇಶ ಅದರಲ್ಲಿ ಸುಮಾರು 8-10 ಪಂಚಾಯಿತಿ ಪ್ರದೇಶ ಬರುತ್ತದೆ. ನಿಮ್ಮ ಇಲಾಖೆಗೆ ಬಸ್ ಓಡಿಸಲು ಆಗದೆ ಹೋದರೆ ಖಾಸಗಿಯವರಿಗೆ ಕೊಡಿ. ಖಾಸಗಿಯವರು ಒಂದೆರಡು ಬಸ್ಸುಗಳನ್ನು ಓಡಿಸಲು ಅವಕಾಶ ಕೊಡಿ. ನಮ್ಮಲ್ಲಿ ರಸ್ತೆ ಸರಿಯಾಗಿಲ್ಲ ಎಂದು ಹೇಳುತ್ತೀರಲ್ಲಾ, ಆಗಿದ್ದರೆ ಖಾಸಗಿಯವರು ಅಪ್ಲಿಕೇಷನ್ ಹಾಕಿದರೆ ಖಾಸಗಿಯವರಿಗೆ ಕೊಡಲು ತಯಾರು ಇದ್ದೀರಾ? ಅದನ್ನಾದರೂ ಹೇಳಿ.

ಶ್ರೀ ಭೀಮಣ್ಣ ಖಂಡ್ರೆ: ನಾನು ಈಗಾಗಲೇ ಉತ್ತರ ಕೊಟ್ಟಿದ್ದೇನೆ. ಮೂರು ವರ್ಷಗಳಲ್ಲಿ 150 ಟ್ರಿಪ್ ಹೆಚ್ಚು ಮಾಡಿದ್ದೇವೆ. ಅಲ್ಲಿ ಖಾಸಗಿಯವರ ಒತ್ತಡ ಬರುವುದಿಲ್ಲ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್‌ಗಳು ಇವೆ. ನಾವು ಓಡಿಸುತ್ತಿದ್ದೇವೆ.

ಶ್ರೀ ಆರ್.ಎನ್. ನಾಯಕ್: ನೀವು ಈ ರೀತಿ ಉತ್ತರ ಕೊಟ್ಟರೆ ನಾವು ಯಾರಿಗೆ ಹೇಳಬೇಕು? ಅಲ್ಲಿ ಬಸ್ ಓಡಬೇಕೋ ಬೇಡವೋ? ರಸ್ತೆ ಚೆನ್ನಾಗಿದೆ, ಅದು ಜಿಲ್ಲಾಪರಿಷತ್ ರಸ್ತೆ ಅಲ್ಲ, ಪಿ.ಡಬ್ಲ್ಯೂಡಿ ರಸ್ತೆ; ಅಲ್ಲಿ ಬ್ರಿಡ್ಜ್ ಆಗಿದೆ. ಎಲ್ಲಾ ಸರಿ ಇದೆ. ಬಸ್ಸನ್ನು ಅವರ ಆಫೀಸರಸ್ಸ್ ಹಟ ಹಿಡಿದು ಓಡಾಡಿಸುತ್ತಿಲ್ಲ.

ಶ್ರೀ ಭೀಮಣ್ಣ ಖಂಡ್ರೆ: ಅವರು ಹೇಳಿದ್ದು ವಾಸ್ತವಿಕ ಆದರೆ ನಾವು ಎಂಟು ದಿವಸದೊಳಗಾಗಿ ಓಡಾಡಿಸುತ್ತೇವೆ.

ಶ್ರೀ ಆರ್.ಎನ್. ನಾಯಕ್: ಬಸ್ ಕೊಡುತ್ತೇವೆಂದು ಹೇಳಿ.

ಶ್ರೀ ಭೀಮಣ್ಣ ಖಂಡ್ರೆ: ಮಾನ್ಯ ಸದಸ್ಯರು ನಮ್ಮ ಅಧಿಕಾರಿಗಳ ಜೊತೆ ಹೋಗಿ ಅವರು ಹೇಳಿದ ವಿಚಾರ ವಾಸ್ತವವಾಗಿದ್ದರೆ We will ply. our buses within eight days.

ಶ್ರೀ ಆರ್.ಎನ್. ನಾಯಕ್: ಪಂಚಾಯತ್ ಚುನಾವಣೆಯಾದಾಗ, ಆ ರಸ್ತೆಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ಹೋಗಿ ಡಬ್ಬ ತೆಗೆದುಕೊಂಡು ಬಂದಿತು. ಅದನ್ನು ಮಾಡುವುದಕ್ಕೆ ರಸ್ತೆ ಸರಿ ಇರುತ್ತದೆ, ಇದಕ್ಕೆ ಸರಿ ಇರುವುದಿಲ್ಲ, ತಾವು ವಿಚಾರ ಮಾಡಿ. ನಾವು ಇನ್ನು ಏನು ಹೇಳಬೇಕು? ನಮ್ಮ ತೊಂದರೆ ನಾವು ಎಲ್ಲಿ ಪರಿಹಾರ ಮಾಡಿಕೊಳ್ಳಬೇಕು.

ಶ್ರೀ ಭೀಮಣ್ಣ ಖಂಡ್ರೆ: ನನ್ನ ಮಾಹಿತಿ ಪ್ರಕಾರ ಅಲ್ಲಿ ಸರಿಯಾಗಿಲ್ಲ, ಇವರ ಮಾಹಿತಿ ಪ್ರಕಾರ ಸರಿಯಾಗಿದೆ. ಅದಕ್ಕೆ ನಾವು ಮತ್ತು ನೀವು ನಮ್ಮ ಅಧಿಕಾರಿಗಳ ಜೊತೆ ಹೋಗಿ. If what you have said is correct, within eight days we will

ply the buses. If it is not correct, we will wait for some more time.

ಅಧ್ಯಕ್ಷರು : ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಗಿಯಿತು. ಇನ್ನು ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು.

ಬೆಂಗಳೂರು ಸುತ್ತಮುತ್ತ ನಿವೇಶನಗಳ ಹಂಚಿಕೆ

420 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಸುತ್ತಮುತ್ತ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿ.ಡಿ.ಎ.) ಮೂಲಕ ಬೇರೆ ಬೇರೆ ಮಾರ್ಗಗಳ ಜನರಿಗೆ ನಿವೇಶನ ಹಂಚಲು, ಕಳೆದ ಮೂರು ವರ್ಷಗಳಲ್ಲಿ 1991-92, 1992-93 ಮತ್ತು 1993-94ರಲ್ಲಿ ಎಷ್ಟು ವಿಸ್ತೀರ್ಣ ಜಮೀನು ಪಡೆಯಲಾಗಿದೆ?

ಆ) ಈ ಮೂರು ವರ್ಷಗಳಲ್ಲಿ ಬೇರೆ ಬೇರೆ ವರ್ಗಗಳಿಂದ ಬಂದ ಅರ್ಜಿಗಳೆಷ್ಟು; ಮತ್ತು ಎಷ್ಟು ಜನರಿಗೆ ನಿವೇಶನ ನೀಡಲಾಗಿದೆ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) :

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಸ್ವಾಧೀನ ಪಡಿಸಿಕೊಂಡ ಜಮೀನಿನ ವಿವರಗಳು ಈ ಕೆಳಕಂಡಂತೆ ಇವೆ:

ವರ್ಷ	ಸ್ವಾಧೀನ ಪಡಿಸಿಕೊಂಡ ವಿಸ್ತೀರ್ಣ
	ಎ - ಗುಂ
1991-92	9 - 21
1992-93	6 - 15
1993-94	184 - 11
ಒಟ್ಟು	200 - 07

ಆ) ಈ ಮೂರು ವರ್ಷಗಳಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ನಿವೇಶನ ಹಂಚಿಕೆಗೆ ಪ್ರಕಟಣೆ ಹೊರಡಿಸಿ ಅರ್ಜಿಗಳನ್ನು ಸ್ವೀಕರಿಸಿರುವುದಿಲ್ಲ. ಮತ್ತು ಈ ಅವಧಿಯಲ್ಲಿ ನಿವೇಶನಗಳನ್ನು ನೀಡಲಾಗಿರುವುದಿಲ್ಲ. ಆದರೆ 1992 ಮತ್ತು 1993ರಲ್ಲಿ, ಜುಲೈ 1987 ಮತ್ತು ಮಾರ್ಚ್ 1988ರ ಪ್ರಕಟಣೆಗನುಗುಣವಾಗಿ ಹಂಚಿಕೆಯಾದ 2391 ಹಂಚಿಕೆದಾರರಿಗೆ ನಿವೇಶನ ಸಂಖ್ಯೆಗಳನ್ನು ನೀಡಲಾಗಿದೆ.

ಹುಕ್ಕೇರಿ ತಾಲ್ಲೋಕಿನಲ್ಲಿ ಕ್ರೀಡಾಂಗಣ ನಿರ್ಮಾಣ

468 - ಶ್ರೀ ಉಮೇಶ್ ವಿ ಕತ್ತಿ (ಹುಕ್ಕೇರಿ) : ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತಾಲ್ಲೂಕು ಸ್ಥಳವಾದ ಹುಕ್ಕೇರಿಯಲ್ಲಿ ತಾಲ್ಲೂಕು ಕ್ರೀಡಾಂಗಣ ನಿರ್ಮಿಸಲು ಸರ್ಕಾರ ಕ್ರಮಕೈಗೊಳ್ಳದಿರಲು ಕಾರಣವೇನು;

ಆ) ಆ ಕ್ರೀಡಾಂಗಣಕ್ಕಾಗಿ ಜಮೀನು ಸ್ವಾಧೀನಪಡಿಸಿಕೊಳ್ಳಲು ಸರ್ಕಾರದವರು ಕೈಗೊಂಡ ಕ್ರಮಗಳೇನು;

ಶ್ರೀ ಹೆಚ್. ವಿಶ್ವನಾಥ್ (ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು):

ಅ) ಸೂಕ್ತ ನಿವೇಶನ ಲಭ್ಯವಿರುವುದಿಲ್ಲ.

ಆ) ಹುಕ್ಕೇರಿಯಲ್ಲಿ ನಿವೇಶನ ಹೊರೆಯದಿದ್ದ ಕಾರಣ ಸಂಕೇಶ್ವರದಲ್ಲಿ ಕ್ರೀಡಾಂಗಣ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆ.

ಶಹಾಬಾದ್ ಪಟ್ಟಣದಲ್ಲಿ ಆಹಾರ ವಿತರಣಾ ಉಪಕಛೇರಿಯ ಪ್ರಾರಂಭ

533 - ಶ್ರೀ ಬಾಬುರಾವ್ ಚವಾಣ್ (ಶಹಾಬಾದ್): ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಹಾಬಾದ್ ಪಟ್ಟಣದಲ್ಲಿ ಆಹಾರ ವಿತರಣಾ ಉಪ ಕಛೇರಿ ತೆಗೆಯುವ ಕಾರ್ಯಕ್ರಮ ಸರ್ಕಾರದ ಗಮನದಲ್ಲಿ ಇದೆಯೇ.

ಆ) ಹಾಗಿದ್ದಲ್ಲಿ ಅದನ್ನು ಯಾವಾಗ ಪ್ರಾರಂಭಿಸಲಾಗುವುದು.

ಇ) ಶಹಾಬಾದ್ ಜನತೆಗೆ ತೊಂದರೆ ಇರುವುದರಿಂದ ಈಗಲಾದರೂ ಆಹಾರ ವಿತರಣಾ ಉಪ ಕಛೇರಿ ತೆರೆಯಲಾಗುವುದೇ?

ಶ್ರೀಮತಿ ಮನೋರಮಾ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಸವದತ್ತಿ ತಾಲ್ಲೂಕು ಪೈಕಿ ಮುರಗೋಡ ಗ್ರಾಮದಲ್ಲಿ ಬಸ್ ನಿಲ್ದಾಣ ನಿರ್ಮಾಣ

508 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂ ಜಿಲ್ಲೆ ಸೌದತ್ತಿ ತಾಲ್ಲೂಕು ಪೈಕಿ ಮುರಗೋಡ್ ಗ್ರಾಮದಲ್ಲಿ ಕೆ.ಎಸ್.ಆರ್.ಟಿ.ಸಿ.ಯವರು ಬಸಸ್ಟ್ಯಾಂಡ್ ಕಟ್ಟುವ ಸಲುವಾಗಿ ಸ್ಥಳವನ್ನು ವಶಪಡಿಸಿಕೊಂಡ ಸಂಗತಿ ನಿಜವೇ;

ಆ) ಬಸಸ್ಟ್ಯಾಂಡ್ ಕಟ್ಟಲು ಸರ್ಕಾರದವರು ಯಾವ ಕ್ರಮವನ್ನು ಕೈಗೊಂಡಿರುವರು;

ಇ) ಎಷ್ಟು ದಿವಸಗಳಲ್ಲಿ ಬಸಸ್ಟ್ಯಾಂಡನ್ನು ಕಟ್ಟುವ ಕೆಲಸವನ್ನು ಪ್ರಾರಂಭ ಮಾಡಲಾಗುವುದು;

ಈ) ಆ ಕೆಲಸಕ್ಕೆ ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿ ನೀಡಲಾಗಿದೆಯೇ;

ಉ) ನೀಡಿದ್ದಲ್ಲಿ ಯಾವ ದಿನಾಂಕದಂದು ನೀಡಲಾಗಿರುವುದು?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):

ಅ) ಹೌದು.

ಆ) ಬಸ್‌ನಿಲ್ದಾಣದ ನಕ್ಷೆ ಮತ್ತು ಅಂದಾಜು ಪಟ್ಟಿಗಳನ್ನು ಸಿದ್ಧಪಡಿಸಿ ಮಂಜೂರಾತಿ ನೀಡಲಾಗಿದೆ.

ಇ) ಬಸ್‌ನಿಲ್ದಾಣ ನಿರ್ಮಾಣ ಕಾರ್ಯಕ್ಕಾಗಿ ಟೆಂಡರುಗಳನ್ನು ಕರೆದು ಉಳಿದ ಕ್ರಮವನ್ನು ನಿಯಮಾವಳಿ ಅನುಸರಿಸಿ ಗುತ್ತಿಗೆದಾರರನ್ನು ನೇಮಿಸಲು ಸುಮಾರು 3 ತಿಂಗಳ ಕಾಲಾವಕಾಶ ಬೇಕಾಗುತ್ತದೆ. ನಂತರ ನಿರ್ಮಾಣ ಕಾರ್ಯ ಪ್ರಾರಂಭಿಸಲಾಗುವುದು.

ಈ) ನೀಡಲಾಗಿದೆ.

ಉ) ದಿನಾಂಕ: 8.3.94ರಂದು

ಕರ್ನಾಟಕ ಸರ್ಕಾರ ಸಚಿವಾಲಯದ ಉಪಹಾರ ಮಂದಿರ

531 - ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೆನರಸೀಪುರ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಸರ್ಕಾರದ ಸಚಿವಾಲಯದ ಉಪಹಾರ ಮಂದಿರವನ್ನು ಸರ್ಕಾರದಿಂದ ನೇಮಿಸಿರುವ ಸಮಿತಿ ನಡೆಸುತ್ತಿರುವುದು ನಿಜವಲ್ಲವೇ?

ಆ) ಆ ಉಪಹಾರ ಮಂದಿರವನ್ನು ಯಾವ ದಿನಾಂಕದಿಂದ ಸರ್ಕಾರವು ನೇಮಿಸಿರುವ ಸಮಿತಿ ನಡೆಸುತ್ತಿದೆ?

ಇ) ಆ ಉಪಹಾರ ಮಂದಿರದಲ್ಲಿ ಒಟ್ಟು ಕೆಲಸ ಮಾಡುತ್ತಿರುವ ನೌಕರರ ಸಂಖ್ಯೆ ಎಷ್ಟು?

ಈ) ಆ ನೌಕರರುಗಳ ಪೈಕಿ ಎಷ್ಟು ಜನ ಹತ್ತು ವರ್ಷಕ್ಕೂ ಮೀರಿ ನಿರಂತರ ಸೇವೆ ಸಲ್ಲಿಸುತ್ತಿದ್ದಾರೆ?

ಉ) ಸುಪ್ರೀಮ್ ಕೋರ್ಟ್ ಆದೇಶದಂತೆ ಹತ್ತು ವರ್ಷಕ್ಕೂ ಮೇಲ್ಪಟ್ಟು ಕೆಲಸ ಮಾಡುತ್ತಿರುವ ಆ ನೌಕರರುಗಳನ್ನು ಖಾಯಂಗೊಳಿಸಲಾಗಿದೆಯೇ?

ಊ) ಇಲ್ಲದಿದ್ದಲ್ಲಿ ಕೂಡಲೇ ಆ ನೌಕರರುಗಳನ್ನು ಮಾನವೀಯ ದೃಷ್ಟಿಯಿಂದ ಖಾಯಂಗೊಳಿಸಲು ಕ್ರಮ ಕೈಗೊಳ್ಳುವುದೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):

ಅ) ಹೌದು.

ಆ) 19-11-1974

ಇ) 70 (ಎಪ್ಪತ್ತು)

ಈ) 35 (ಮೂವತ್ತೈದು)

ಉ) ಇವರುಗಳು ಸಾರ್ವಜನಿಕ ಸೇವೆಯನ್ನು ಸಲ್ಲಿಸಲು ಸರ್ಕಾರದಿಂದ ನೇಮಿತರಾದ ನೌಕರರಲ್ಲ. ಆದುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಊ) ಪರಿಶೀಲನೆ ಮಾಡಲಾಗುತ್ತಿದೆ.

ಹಿರೇಬಾಗೇವಾಡಿಯಲ್ಲಿ ಬಸ್ ನಿಲ್ದಾಣದ ನಿರ್ಮಾಣ

584 - ಶ್ರೀ ಕೆ.ಸಿ. ಮೊಡಗೇಕರ್ ದೇಸಾಯಿ (ಬಾಗೇವಾಡಿ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ತಾಲ್ಲೂಕಿನ ಹಿರೇಬಾಗೇವಾಡಿಯಲ್ಲಿ ಯೋಗ್ಯವಾದ ಬಸ್ಸಿಲ್ದಾಣದ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ;

ಆ) ಹಾಗಿದ್ದರೆ, ಜಮೀನು ಸ್ವಾಧೀನ ಪಡಿಸಿಕೊಳ್ಳಲು ಸರ್ಕಾರ ಕೈಗೊಂಡಿರುವ ಕ್ರಮವೇನು;

ಇ) ಮುಂದಿನ ಆಯವ್ಯಯದಲ್ಲಿ ಎಷ್ಟು ಹಣ ಕಾದಿರಿಸಲಾಗಿದೆ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ಸಚಿವರು): ದಿನಾಂಕ 22-3-94ರ ಲಿಖಿತ ಮೂಲಕ ಉತ್ತರಿಸುವ 10ನೇ ಪಟ್ಟಿಯಲ್ಲಿರುವ 20 ಪ್ರಶ್ನೆಗಳ ಪೈಕಿ 512, 507 ಮತ್ತು 524 ಹೊರತು ಪಡಿಸಿ ಇನ್ನುಳಿದ 17 ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಉತ್ತರಗಳನ್ನು ತಮ್ಮ ಮುಂದಿಡುತ್ತೇನೆ. ದಿನಾಂಕ 18-2-94ರ ವಿಧಾನ ಸಭೆಯ ಅಧಿವೇಶನ ರದ್ದಾದ ಕಾರಣ ಆ ದಿನದ 9ನೇ ಪಟ್ಟಿಯ, 20 ಪ್ರಶ್ನೆಗಳ ಪೈಕಿ 13 ಪ್ರಶ್ನೆಗಳ ಉತ್ತರಗಳನ್ನು ಚುಕ್ಕೆ ಗುರುತಿಲ್ಲದ 39 ಪ್ರಶ್ನೆಗಳ ಪೈಕಿ 31 ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದಿಡಬಯಸುತ್ತೇನೆ.

ನೂತನ ಕೈಗಾರಿಕಾ ನೀತಿಯಲ್ಲಿನ ಉತ್ತೇಜನ ಮತ್ತು ರಿಯಾಯಿತಿಗಳ ಬಗ್ಗೆ.

523 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್): ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) *ಕರ್ನಾಟಕ ಕೈಗಾರಿಕಾ ನೀತಿ ಮತ್ತು ಉತ್ತೇಜನಗಳು ಹಾಗೂ ರಿಯಾಯಿತಿ (1993-94)ಗಳನ್ನು ಯಾವಾಗ ಪ್ರಕಟಿಸಲಾಯಿತು.*

ಆ) *ಈ ನೀತಿಯನ್ವಯ ಬೆಂಗಳೂರು ನಗರ ಪ್ರದೇಶದಲ್ಲಿ (ಅಭಿವೃದ್ಧಿ ಹೊಂದಿದ ಪ್ರದೇಶ ವಲಯ-1) ಮಹಿಳೆಯರು ಜಂಟಿ ಪಾಲುದಾರಿಕೆಯಲ್ಲಿ ವಿಶೇಷ ವರ್ಗದಲ್ಲಿ ಬರುವ (ಥ್ರಸ್ಟ್ ಸೆಕ್ಟರ್) ಸಿದ್ಧ ಉಡುಪುಗಳ (ಗಾರ್ಮೆಂಟ್ಸ್) ಘಟಕಗಳನ್ನು ಸುಮಾರು 15 ಲಕ್ಷ ರೂ.ಗಳ ಬಂಡವಾಳದಲ್ಲಿ (ಕೆ.ಎಸ್.ಎಫ್.ಸಿ. ಮೂಲಕ) ಪ್ರಾರಂಭಿಸಿದಲ್ಲಿ ಅಂತಹವರಿಗೆ ಮೇಲ್ಕಂಡ ನೂತನ ಕೈಗಾರಿಕಾ ನೀತಿಯಲ್ಲಿ ಯಾವ ಯಾವ ರಿಯಾಯಿತಿ ಹಾಗೂ ಉತ್ತೇಜನಗಳನ್ನು ನೀಡಲಾಗುವುದು; (ಉತ್ತೇಜನ ಹಾಗೂ ರಿಯಾಯಿತಿಗಳ ಬಗ್ಗೆ ಪೂರ್ಣ ವಿವರಗಳನ್ನು ನೀಡುವುದು).*

ಇ) *ಇಂತಹ ಘಟಕಗಳಿಗೆ ನೀಡಲಾಗುವ ಸಬ್ಸಿಡಿಯ ಮೊತ್ತವೆಷ್ಟು ಮತ್ತು ತೆರಿಗೆ ರಿಯಾಯಿತಿಯ ಮೊತ್ತವೆಷ್ಟು ಹಾಗೂ ಎಷ್ಟು ಅವಧಿಯವರೆಗೆ ತೆರಿಗೆ ರಿಯಾಯಿತಿ ನೀಡಲಾಗುವುದು;*

ಈ) *ಈ ಬಗ್ಗೆ ಸರ್ಕಾರಿ ಆದೇಶವನ್ನು ಹೊರಡಿಸಲಾಗಿದೆಯೇ;*

ಉ) *ಹಾಗಿದ್ದಲ್ಲಿ, ಯಾವಾಗ ಹೊರಡಿಸಲಾಗಿದೆ (ವಿವರಗಳನ್ನು ನೀಡುವುದು);*

ಶ್ರೀ ರಾಮಲಿಂಗ ರೆಡ್ಡಿ (ಭಾರಿ ಮತ್ತು ಮಧ್ಯಮ ಕೈಗಾರಿಕಾ ರಾಜ್ಯ ಸಚಿವರು):

ಅ) 1993ರ ಪರಿಸ್ಕೃತ ಕೈಗಾರಿಕಾ ನೀತಿ ಹಾಗೂ ಪ್ರೋತ್ಸಾಹ ಕ್ರಮಗಳು ಹಾಗೂ ರಿಯಾಯಿತಿಗಳನ್ನು ಸರ್ಕಾರದ ಆದೇಶ ಸಂಖ್ಯೆ: ಸಿಐ 140 ಎಸ್ಪಿಸಿ 93, ದಿ: 12-7-93ರಲ್ಲಿ ಪ್ರಕಟಿಸಲಾಗಿದೆ.

ಆ) ಪರಿಸ್ಕೃತ 1993ರ ಕೈಗಾರಿಕಾ ಮತ್ತು ರಿಯಾಯಿತಿಗಳ ಅಡಿಯಲ್ಲಿ ವಲಯ-1ರಲ್ಲಿ ಅಂದರೆ ಬೆಂಗಳೂರು ದಕ್ಷಿಣ ತಾಲ್ಲೂಕು ಉತ್ತರ ತಾಲ್ಲೂಕು ಹಾಗೂ ಬೆಂಗಳೂರು ನಗರವೂ ಸೇರಿದಂತೆ ಪ್ರದೇಶದಲ್ಲಿ ಸಿದ್ಧ ಉಡುಪುಗಳ (ರೆಡಿಮೇಡ್ ಗಾರ್ಮೆಂಟ್ಸ್) ಸೇರಿದಂತೆ ಐದು ಚಟುವಟಿಕೆಗಳಿಗೆ ಮಾತ್ರ ರಿಯಾಯಿತಿಗಳನ್ನು ನೀಡಲಾಗುವುದು. ಈ ಸಿದ್ಧ ಉಡುಪು ತಯಾರಿಸುವ ಸಣ್ಣ ಕೈಗಾರಿಕೆಗಳಿಗೆ ಶೇ.25 ರಷ್ಟು ಬಂಡವಾಳದ (ಜಮೀನು ಕಟ್ಟಡ ಹಾಗೂ ಯಂತ್ರೋಪಕರಣಗಳು) ಮೇಲೆ ಸಹಾಯಧನ ಹಾಗೂ ಪ್ರಥಮ 4 ವರ್ಷಗಳ ಅವಧಿಗೆ ತೆರಿಗೆ ವಿನಾಯಿತಿ ಅಥವಾ 6 ವರ್ಷಗಳ ಕಾಲ ತೆರಿಗೆ ಮುಂದೂಡುವಿಕೆ ಸೌಲಭ್ಯವನ್ನು ನೀಡಲಾಗುವುದು.

ಗ್ರಂಥಾಲಯ,
ವಿಧಾನ ಸೌಧ, ಬೆಂಗಳೂರು,
ದಿನಾಂಕ..............

ಜೊತೆಯಲ್ಲಿ ಮಹಿಳಾ ಉದ್ಯಮಿಗಳು ಪ್ರಾರಂಭಿಸುವ ಕೈಗಾರಿಕೆಗಳಿಗೆ ಶೇ. 5ರಷ್ಟು ಹೆಚ್ಚಿನ ಸಹಾಯಧನ (ರೂ. 1-00 ಲಕ್ಷಕ್ಕೆ ಮೀರದಂತೆ) ನೀಡಲಾಗುವುದು. ಜೊತೆಯಲ್ಲಿ ಈ ಘಟಕಗಳಿಗೆ ನೀಡಲಾಗುವ ಇತರೆ ರಿಯಾಯಿತಿಗಳು ಈ ಕೆಳಗಿನಂತಿವೆ:

(ಅ) ಹಣಕಾಸು ಸಂಸ್ಥೆಗಳಿಂದ ಪಡೆದ ಸಾಲಕ್ಕೆ ದಾಖಲೆಗಳನ್ನು ನೊಂದಾಯಿಸುವಾಗ ಸ್ಟಾಂಪ್ ಶುಲ್ಕ ವಿನಾಯಿತಿ ಹಾಗೂ ಕಡಿಮೆ ದರದಲ್ಲಿ ನೊಂದಣಿ ಶುಲ್ಕ ಪಾವತಿ.

(ಆ) ಮಹಿಳಾ ಉದ್ಯಮಿಗಳು ಸ್ಥಾಪಿಸುವ ಕೈಗಾರಿಕೆಗಳಿಗೆ ಷೆಡ್ಡಗಳನ್ನು, ಪ್ಲಾಟುಗಳನ್ನು ಹಂಚಿಕೆ ಮಾಡುವಾಗ ಆದ್ಯತೆ ನೀಡಲಾಗುವುದು.

ಇ) ದಿನಾಂಕ: 12-7-93ರಿಂದ ಹೊಸ ಕೈಗಾರಿಕಾ ನೀತಿ ಜಾರಿಗೆ ಬಂದಿರುವುದರಿಂದ ಜುಲೈ 1993ರ ನಂತರ ಉದ್ದೇಶಿಸಿರುವ ಹೊಸ ಕೈಗಾರಿಕಾ ಘಟಕಗಳು ಸ್ಥಾಪನೆಯ ವಿವಿಧ ಹಂತದಲ್ಲಿರುತ್ತವೆ. ಈ ಘಟಕಗಳಿಂದ ಮುಂಬರುವ ದಿನಗಳಲ್ಲಿ ಸಹಾಯ ಸೌಲಭ್ಯಗಳನ್ನು ಪಡೆಯಲು ಅರ್ಜಿಗಳನ್ನು ನಿರೀಕ್ಷಿಸಲಾಗಿದೆ.

ಈ) ಹೌದು.

ಉ) ಸರ್ಕಾರದ ಆದೇಶ ಸಂಖ್ಯೆ: ಸಿಐ 140 ಎಸ್ಪಿಸಿ 93 ದಿನಾಂಕ: 12-7-93 ಹಾಗೂ ಹಣಕಾಸು ಇಲಾಖೆಯ ಅಧಿಸೂಚನೆ ಸಂಖ್ಯೆ : ಎಫ್ಡಿ: 171:ಸಿಎಸ್ಎಲ್:93 ದಿನಾಂಕ: 28-8-93 ರಂದು ಹೊರಡಿಸಲಾಗಿದೆ.

ಬೆಳಗಾಂ ಜಿಲ್ಲೆಯಲ್ಲಿ ಹಸಿರು ಕಾರ್ಡ್‌ನ್ನು ಎಲ್ಲಾ ಅರ್ಹ ಜನರಿಗೆ ಒದಗಿಸದೆ ಇರುವುದು

511 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂ ಜಿಲ್ಲೆಯಲ್ಲಿ ಇನ್ನೂವರೆಗೂ ಎಲ್ಲಾ ಅರ್ಹ ಜನರಿಗೆ ಹಸಿರು ಕಾರ್ಡು ಒದಗಿಸದೇ ಇದ್ದ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಸರ್ಕಾರದವರು ಎಲ್ಲಾ ಅರ್ಹ ಜನರಿಗೂ ಹಸಿರು ಕಾರ್ಡನ್ನು ಒದಗಿಸಲು ಯಾವ ಕ್ರಮ ಕೈಗೊಂಡಿರುವುದು;

ಇ) ಎಷ್ಟು ಜನರಿಗೆ ಇನ್ನೂವರೆಗೂ ಹಸಿರು ಕಾರ್ಡ್ಗಳನ್ನು ಒದಗಿಸಿರುವುದಿಲ್ಲ?

ಶ್ರೀಮತಿ ಮನೋರಮ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) ಹೌದು.

ಆ) ಇದುವರೆವಿಗೂ ಗುರುತಿಸಲಾದ 3,51,367 ಫಲಾನುಭವಿಗಳ ಪೈಕಿ 3.40,500 ಅರ್ಹ ಕುಟುಂಬಗಳಿಗೆ ಹಸಿರು (ತ್ರಿವರ್ಣ) ಪಡಿತರ ಚೀಟಿಗಳನ್ನು ನೀಡಲಾಗಿದೆ. ಉಳಿದ ಅರ್ಹ ಜನರಿಗೂ ಶೀಘ್ರದಲ್ಲಿಯೇ ಕೊಡಲಾಗುವುದು.

ಇ) 10,867

ರಾಜ್ಯ ಸರ್ಕಾರಿ ಅಧಿಕಾರಿಗಳ ನಿವಾಸಗಳಿಗೆ ದೂರವಾಣಿ ನೀಡಿರುವ ಬಗ್ಗೆ

528 - ಶ್ರೀ ಪುಟ್ಟಸ್ವಾಮಿಗೌಡ (ಹೊಳೆನರಸೀಪುರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರದಲ್ಲಿ ಯಾವ ದರ್ಜೆಯ ಅಧಿಕಾರಿಗಳ ನಿವಾಸಗಳಿಗೆ ಸರ್ಕಾರದ ಖರ್ಚಿನಲ್ಲಿ ದೂರವಾಣಿಗಳನ್ನು ಒದಗಿಸಲಾಗುತ್ತಿದೆ?

ಆ) ಅವುಗಳಿಗಾಗಿ ಸರಾಸರಿ ಪ್ರತಿವರ್ಷ ಆಗುತ್ತಿರುವ ಖರ್ಚು ಎಷ್ಟು?

ಇ) ಕೇಂದ್ರ ಸರ್ಕಾರದಲ್ಲಿ ಕೇವಲ ಮೇಲ್ಪಟ್ಟದ ಅಧಿಕಾರಿಗಳಿಗೆ ಮಾತ್ರ ದೂರವಾಣಿ ಸೌಕರ್ಯವನ್ನು ಅವರ ನಿವಾಸಗಳಿಗೆ ಒದಗಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಈ ಬಗ್ಗೆ ಮರುಪರಿಶೀಲನೆ ಮಾಡಿ ಆ ವೆಚ್ಚವನ್ನು ಕಡಿಮೆ ಮಾಡಲು ಸರ್ಕಾರ ಕ್ರಮ ಕೈಗೊಂಡಿದೆಯೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) :

ಅ) ಸರ್ಕಾರದ ಉಪ ಕಾರ್ಯದರ್ಶಿ ಮತ್ತು ಅವರಿಗೂ ಮೇಲ್ಪಟ್ಟ ದರ್ಜೆಯ ಅಧಿಕಾರಿಗಳಿಗೆ ಅವರ ನಿವಾಸದಲ್ಲಿ ದೂರವಾಣಿಗಳನ್ನು ಒದಗಿಸಲಾಗುತ್ತಿದೆ.

ಆ) ಸರ್ಕಾರದ ಉಪ ಕಾರ್ಯದರ್ಶಿ ಹಾಗೂ ಅವರ ಮೇಲ್ಪಟ್ಟ ಅಧಿಕಾರಿಗಳು ಸರ್ಕಾರದ ನಾನಾ ಇಲಾಖೆಗಳಲ್ಲಿ ಹಾಗೂ ರಾಜ್ಯದ ಎಲ್ಲೆಡೆಯಲ್ಲಿ ಕೆಲಸ ಮಾಡುತ್ತಿರುತ್ತಾರೆ. ಆದುದರಿಂದ ವೇಳೆ ಕಡಿಮೆ ಇರುವ ಕಾರಣ ಮಾಹಿತಿ ಒದಗಿಸಲು ಸಾಧ್ಯವಾಗಿರುವುದಿಲ್ಲ.

ಇ) ಇದು ಕೇಂದ್ರ ಸರ್ಕಾರದ ಅಧಿಕಾರಿಗಳಿಗೆ ಸಂಬಂಧಿಸಿದ ಕಾರಣ ಮಾಹಿತಿ ಇರುವುದಿಲ್ಲ.

ಈ) ಹೌದು.

ಕರ್ನಾಟಕ – ಮಹಾರಾಷ್ಟ್ರಗಡಿ ವಿವಾದ

532 - ಶ್ರೀ ಪುಟ್ಟಸ್ವಾಮಿ ಗೌಡ (ಹೊಳೆನರಸೀಪುರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ - ಮಹಾರಾಷ್ಟ್ರ ಗಡಿವಿವಾದವನ್ನು ಬಗೆಹರಿಸಲು ಮಹಾರಾಷ್ಟ್ರ ಮುಖ್ಯಮಂತ್ರಿಯವರು ತಮ್ಮ ರಾಜ್ಯದ ಎಲ್ಲಾ ರಾಜಕೀಯ ಪಕ್ಷಗಳ ನಿಯೋಗವನ್ನು ಪ್ರಧಾನಮಂತ್ರಿಯವರ ಬಳಿಗೆ ಕೊಂಡೊಯ್ಯಲು ನಿರ್ಧರಿಸುವುದು ನಿಜವೇ?

ಆ) ಹಾಗಿದ್ದಲ್ಲಿ, ಕರ್ನಾಟಕ ಸರ್ಕಾರವು ಎಲ್ಲಾ ರಾಜಕೀಯ ಪಕ್ಷಗಳ ನಿಯೋಗವನ್ನು ಕೊಂಡೊಯ್ಯಲು ಕ್ರಮ ಕೈಗೊಳ್ಳುವುದೇ?

ಇ) ಮಹಾಜನ್ ವರದಿಯನ್ನು ಅನುಷ್ಠಾನಗೊಳಿಸಬೇಕೆಂದು ಸರ್ಕಾರ ಮತ್ತೊಮ್ಮೆ ಪ್ರಧಾನ ಮಂತ್ರಿಯವರಿಗೆ ಹಾಗೂ ಕೇಂದ್ರ ಗೃಹ ಸಚಿವರಿಗೆ ಒತ್ತಾಯಿಸುತ್ತದೆಯೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) :

ಅ) ಹೌದು.

ಆ) ಇಲ್ಲ.

ಇ) ಹೌದು.

ಬೆಳಗಾಂ ಜಿಲ್ಲೆಯ ಹುದಲಿತಾಲ್ಲನಲ್ಲಿ ಪೋಲೀಸ್ ಠಾಣೆ ನಿರ್ಮಾಣ

583 - ಶ್ರೀ ಕೆ.ಸಿ. ಮೊಡಗೇಕರ್ ದೇಸಾಯಿ (ಬಾಗೇವಾಡಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂ ಜಿಲ್ಲೆಯ ಹುದಲಿ ತಾಲ್ಲನಲ್ಲಿ ಪೋಲೀಸ್ ಠಾಣೆಯನ್ನು ನಿರ್ಮಾಣ ಮಾಡುವ ಪ್ರಸ್ತಾವನೆಯನ್ನು ಪ್ರಸಕ್ತ ಆಯವ್ಯಯದಲ್ಲಿ ಸೇರಿಸಲು ಸ್ವೀಕರಿಸಲಾಗಿದೆಯೇ;

ಆ) ಹಾಗಿದ್ದಲ್ಲಿ, ಯಾವಾಗ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗುವುದು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) :

ಆ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಮೈಸೂರು ಅಸಿಟೇಟ್ ಕೆಮಿಕಲ್ಸ್ ಲಿಮಿಟೆಡ್ ಮಂಡ್ಯ ಇದರ ಬಗ್ಗೆ

535 - ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ): ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಅಸಿಟೇಟ್ ಕೆಮಿಕಲ್ಸ್ ಲಿಮಿಟೆಡ್ ಸಂಸ್ಥೆಯ ಉತ್ಪನ್ನಗಳಾವುವು:

ಆ) ಈ ಉತ್ಪನ್ನಗಳಿಗೆ ಮಾರುಕಟ್ಟೆಯ ವ್ಯವಸ್ಥೆ ಇರುವುದೇ?

ಇ) ಮೈಸೂರು ಅಸಿಟೇಟ್ ಕೆಮಿಕಲ್ಸ್ ಕಂಪನಿಯು ಕಳೆದ ನಾಲ್ಕು ವರ್ಷಗಳಿಂದ ಗಳಿಸಿರುವ ಲಾಭವೆಷ್ಟು (ವಿವರಗಳನ್ನು ನೀಡುವುದು)?

ಶ್ರೀ ರಾಮಲಿಂಗ ರೆಡ್ಡಿ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು):

ಅ) ಎಂ.ಎ.ಸಿ.ಸಿ. ಕಂಪನಿಯು ಈ ಕೆಳಕಂಡ ಉತ್ಪನ್ನಗಳನ್ನು ಉತ್ಪಾದಿಸುತ್ತದೆ.

1) ಸೆಲ್ಯುಲೋಸ್ ಟ್ರೈ ಅಸಿಟೇಟ್

2) ಸೆಲ್ಯುಲೋಸ್ ಅಸಿಟೇಟ್ ಮೌಲ್ಡಿಂಗ್ ಗ್ರಾನ್ಯೂಯಲ್ಸ್

3) ಸೆಲ್ಯುಲೋಸ್ ಅಸಿಟೇಟ್

4) ಅಸೆಟಿಕ್ ಅನ್ಹೈಡ್ರೈಡ್

5) ಬ್ಲೀಚ್ ಮಾಡಿದ ಮತ್ತು ಬ್ಲೀಚ್ ಮಾಡದ ಕಾಟನ್ ಲಿಂಟರ್ಸ್

6) ಈಥೈಲ್ ಥಾಲೇಟ್ ಹೈ ಮಿಥೇಲ್ ಥಾಲೇಟ್

7) ಈಥೇಲ್ ಅಸಿಟೇಟ್

ಆ) ಹೌದು.

ಇ) ಎಂಎಸಿಸಿ ಕಂಪನಿಯು ಕಳೆದ ನಾಲ್ಕು ವರ್ಷಗಳಿಂದ ಗಳಿಸಿದ ಲಾಭದ ವಿವರಗಳು ಈ ಕೆಳಕಂಡಂತೆ ಇದೆ:

	ಲಕ್ಷ ರೂ.ಗಳಲ್ಲಿ
1992-93	248.61
1991-92	284.91
1990-91	462.00
1989-90	149.71

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈಜುಕೊಳ ಸೌಲಭ್ಯ

587 - ಶ್ರೀ ಪಿ. ಬಸವರಾಜ್ (ಬ್ರಹ್ಮಾವರ): ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಭಿವೃದ್ಧಿಪಡಿಸಿದ ಈಜುಕೊಳಗಳು ಎಲ್ಲೆಲ್ಲಿ ಇರುತ್ತವೆ; (ಸ್ಥಳದೊಂದಿಗೆ ವಿವರ ನೀಡುವುದು) ;

ಆ) ಈಜುಕೊಳಗಳನ್ನು ಅಭಿವೃದ್ಧಿಪಡಿಸಲು ಸರ್ಕಾರ ಸಮಾಜ ಸೇವಕ ಸಂಸ್ಥೆಗಳಿಗೆ ಸಹಾಯಕಲ್ಪಿಸುತ್ತಿದೆಯೆ; (ವಿವರ ನೀಡುವುದು);

ಇ) ಉಡುಪಿ ತಾಲ್ಲೂಕು ಸಾಲಿಗ್ರಾಮ ಪುರಸಭಾ ವ್ಯಾಪ್ತಿಯ ಕೋಟ ವಿವೇಕ ಜೂನಿಯರ್ ಕಾಲೇಜು ಬಳಿ ಇರುವ ಅಂಬಲ ಕೆರೆಯನ್ನು ಸರ್ವಕಾಲಿನ

ಈಜುಕೊಳವಾಗಿ ಪರಿವರ್ತಿಸಲು ಸ್ಥಳೀಯ ಲಯನ್ಸ್ ಸಂಸ್ಥೆಯವರು ಉದ್ದೇಶಿಸಿದ್ದು ಆ ಸಂಸ್ಥೆಗೆ ಸರ್ಕಾರವು ನೆರವು ನೀಡುವುದೇ?

ಶ್ರೀ ಹೆಚ್. ವಿಶ್ವನಾಥ್ (ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು):

ಅ) ದಕ್ಷಿಣ ಕನ್ನಡದಲ್ಲಿ ಒಟ್ಟು ಮೂರು ಈಜುಕೊಳಗಳಿದ್ದು ಮೂರು ಮಂಗಳೂರಿನಲ್ಲಿರುತ್ತದೆ.

ಆ) ಇಲ್ಲ.

ಇ) ಇಲ್ಲ.

ಕೆ.ಎಸ್.ಆರ್.ಟಿ.ಸಿ.ಯವರು ಹೊಸ ಬಸ್ಸುಗಳನ್ನು ಖರೀದಿಸುವ ಬಗ್ಗೆ

509 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1993-94ನೇ ಸಾಲಿನಲ್ಲಿ ಕೆ.ಎಸ್.ಆರ್.ಟಿ.ಸಿ. ಯವರು ಎಷ್ಟು ಬಸ್ಸುಗಳನ್ನು ಖರೀದಿ ಮಾಡಿರುವರು;

ಆ) ಕೆ.ಎಸ್.ಆರ್.ಟಿ.ಸಿ. ಯವರು ಇನ್ನೂ ಎಷ್ಟು ಹೊಸ ಬಸ್ಸುಗಳನ್ನು ಖರೀದಿ ಮಾಡಬೇಕೆಂದು ಉದ್ದೇಶಿಸಿರುವರು;

ಇ) ಹೊಸ ಬಸ್ಸುಗಳು ಇಲ್ಲದೇ ಇರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬೆಳಗಾಂ ವಿಭಾಗದಲ್ಲಿ ಹೊಸ ಬಸ್ಸುಗಳ ಕೊರತೆ ಇದ್ದುದರಿಂದ ಹಳೆಯ ಬಸ್ಸುಗಳನ್ನು ಓಡಿಸುತ್ತಿದ್ದ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಹಾಗಿದ್ದಲ್ಲಿ, ಬೆಳಗಾಂ ವಿಭಾಗಕ್ಕೆ ಹೊಸ ಬಸ್ಸುಗಳನ್ನು ಒದಗಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೆ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):

ಅ) 1399

ಆ) 16

ಇ) ಹೌದು.

ಈ) ಹೌದು.

ಉ) ಹೌದು.

ಶ್ರೀ ಕ್ಷೇತ್ರ ಸೋಗಲದಲ್ಲಿ ಕೇಂದ್ರ ಸರ್ಕಾರದ ನೆರವಿನಿಂದ ಯೂತ್ ಹಾಸ್ಟೆಲ್

510 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ): ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೇಂದ್ರ ಸರ್ಕಾರದ ನೆರವಿನಿಂದ ಬೆಳಗಾಂ ಜಿಲ್ಲೆ ಶ್ರೀ ಕ್ಷೇತ್ರ ಸೋಗಲದಲ್ಲಿ ಯೂತ್ ಹಾಸ್ಟೇಲ್‌ನ್ನು ಕಟ್ಟುವ ಸಲುವಾಗಿ ಕೇಂದ್ರ ಸರ್ಕಾರಕ್ಕೆ ಸ್ಥಳವನ್ನು ಹಸ್ತಾಂತರ ಮಾಡಿದ ಸಂಗತಿ ನಿಜವೇ;

ಆ) ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ಯುತ್ ಹಾಸ್ಟೇಲ್‌ನ್ನು ಕಟ್ಟುವ ಸಲುವಾಗಿ ಸ್ಥಳವನ್ನು ಕೊಟ್ಟರೂ ಸಹಾ ಇನ್ನೂವರೆಗೂ ಅಲ್ಲಿ ಹಾಸ್ಟೇಲ್‌ನ್ನು ಕಟ್ಟದೇ ಇರುವುದಕ್ಕೆ ಕಾರಣವೇನು;

ಇ) ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದ ಕೂಡಲೇ ಇಲ್ಲಿ ಯೂತ್ ಹಾಸ್ಟೇಲ್ ಕಟ್ಟಲು ಕ್ರಮ ಕೈಗೊಳ್ಳುವರೆ;

ಈ) ಈ ಕೆಲಸಕ್ಕೆ ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿ ನೀಡಲಾಗಿದೆಯೇ;

ಉ) ನೀಡಿದ್ದಲ್ಲಿ, ಎಷ್ಟು ಮೊತ್ತಕ್ಕೆ ನೀಡಲಾಗಿರುವುದು?

ಶ್ರೀ ಹೆಚ್. ವಿಶ್ವನಾಥ್ (ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು):

ಅ) ಹೌದು.

ಆ) ನೀಲಿ, ನಕಾಶಾ ಮತ್ತು ಆಡಳಿತಾತ್ಮಕ ಟಿಪ್ಪಣಿಯು ಕೇಂದ್ರ ಸರ್ಕಾರದಿಂದ ಬಂದ ಮೇಲೆ ಯುವನಿಲಯ ಕಟ್ಟಡದ ಕಾರ್ಯವನ್ನು ಕೇಂದ್ರ ಸರ್ಕಾರದ ಲೋಕೋಪಯೋಗಿ ಇಲಾಖೆ ತೆಗೆದುಕೊಳ್ಳಲಾಗುವುದು.

ಇ) ಹೌದು.

ಈ) ಇಲ್ಲ.

ಉ) ಅಂದಾಜು ಮೊತ್ತ ರೂ. 47.74 ಲಕ್ಷಗಳು.

ಗ್ರಾಮಾಂತರ ಪ್ರದೇಶಗಳಲ್ಲಿ ಪಡಿತರ ವಸ್ತುಗಳನ್ನು ಕುಟುಂಬದಲ್ಲಿರುವ ಜನಸಂಖ್ಯೆ ಆಧಾರದ ಮೇಲೆ ವಿತರಣೆ

530 - ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೆನರಸೀಪುರ): ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಟ್ಟಣದಲ್ಲಿ ಪಡಿತರ ಚೀಟಿಗಳನ್ನು ಹೊಂದಿರುವವರಿಗೆ ಕುಟುಂಬದಲ್ಲಿರುವ ಜನಸಂಖ್ಯೆ ಆಧಾರದ ಮೇಲೆ ಪಡಿತರ ವಸ್ತುಗಳನ್ನು ನೀಡುತ್ತಿರುವುದು ನಿಜವೇ;

ಆ) ಹಾಗಿದ್ದಲ್ಲಿ, ಈ ಪದ್ಧತಿಯನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಪಡಿತರ ಚೀಟಿ ಹೊಂದಿರುವವರಿಗೆ ಅನ್ವಯಿಸದೇ ಇರಲು ಕಾರಣಗಳೇನು?

ಶ್ರೀಮತಿ ಮನೋರಮ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):

ಅ) ಹೌದು. (ಅನೌಪಚಾರಿಕ ಪಡಿತರ ಪ್ರದೇಶಗಳಲ್ಲಿ ಮಾತ್ರ).

ಆ) ಗ್ರಾಮಾಂತರ ಪ್ರದೇಶದಲ್ಲಿ ಈ ಪದ್ಧತಿಯನ್ನು ಅನುಸರಿಸುತ್ತಿಲ್ಲ. ಏಕೆಂದರೆ ಗ್ರಾಮಾಂತರ ಪ್ರದೇಶದ ಜನರು ಸಾಮಾನ್ಯವಾಗಿ ಬೆಳೆಗಾರರಾಗಿದ್ದು ಅವರ ಅವಶ್ಯಕ ಆಹಾರಧಾನ್ಯಗಳನ್ನು ಅವರೇ ಬೆಳೆಯುತ್ತಾರೆ. ಅಡುಗೆಗಾಗಿ ಉರುವಲು ಉಪಯೋಗಿಸುತ್ತಾರೆ. ಸೀಮೆಎಣ್ಣೆಯನ್ನು ಕೇವಲ ದೀಪ ಉರಿಸಲು ಮಾತ್ರ ಉಪಯೋಗಿಸುತ್ತಾರೆ. ಆದರೆ ಪಟ್ಟಣ ನಿವಾಸಿಗಳು ಅವರ ಅವಶ್ಯಕತೆಗಾಗಿ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನೇ ಆಧರಿಸುತ್ತಾರೆ. ಇದಲ್ಲದೆ ಕೇಂದ್ರ ಸರ್ಕಾರವು ನಮ್ಮ ಅವಶ್ಯಕತೆಗನುಸಾರ ಆಹಾರ ಧಾನ್ಯ: ಅಗತ್ಯ ವಸ್ತುಗಳನ್ನು ಹಂಚಿಕೆ ಮಾಡುತ್ತಿಲ್ಲವಾದುದರಿಂದ ಈ ಪ್ರದೇಶದ ಪಡಿತರ ಚೀಟಿಗಳಿಗೆ ಕೊಡುತ್ತಿದ್ದ ಪ್ರಮಾಣ ಸರಿಸಮವಾಗಿ ಹಂಚುವ ದೃಷ್ಟಿಯಿಂದ ಎಲ್ಲರಿಗೂ ಒಂದೇ ರೀತಿಯಲ್ಲಿ ಪಡಿತರ ಚೀಟಿಗಳ ಆಧಾರದ ಮೇಲೆ ಕೊಡಲಾಗುತ್ತಿದೆ.

ಹತ್ತನೆಯ ಹಣಕಾಸು ಆಯೋಗಕ್ಕೆ ರಾಜ್ಯ ಸರ್ಕಾರವು ಸಲ್ಲಿಸಿರುವ ವರದಿ

529 - ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೆನರಸೀಪುರ): ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹತ್ತನೇ ಹಣಕಾಸು ಆಯೋಗವು ರಾಜ್ಯಕ್ಕೆ ಯಾವಾಗ ಭೇಟಿ ನೀಡಿತ್ತು?

ಆ) ಆ ಆಯೋಗವು ರಾಜ್ಯದಲ್ಲಿ ಯಾವ ಯಾವ ಸ್ಥಳಗಳಿಗೆ ಭೇಟಿ ನೀಡಿತ್ತು?
ಇ) ಆ ಆಯೋಗದ ಮುಂದೆ ರಾಜ್ಯ ಸರ್ಕಾರವು ಸಲ್ಲಿಸಿರುವ ಮನವಿಯ ಮುಖ್ಯ ಸಾರಾಂಶವೇನು?
ಈ) ಕೇಂದ್ರ ಸರ್ಕಾರವು ಆದಾಯ ತೆರಿಗೆ ಮಿತಿಯನ್ನು ಏರಿಸಿರುವುದರಿಂದ ಹಾಗೂ ರಾಜ್ಯ ಸರ್ಕಾರಿ ನೌಕರರುಗಳಿಗೆ ಆಗಿಂದಾಗ್ಗೆ ತುಟ್ಟಿಭತ್ಯೆ ನೀಡಬೇಕಾಗಿರುವುದರಿಂದ ಉಂಟಾಗಿರುವ ಹಣಕಾಸಿನ ತೊಂದರೆಯನ್ನು ಆ ಆಯೋಗದ ಗಮನಕ್ಕೆ ತರಲಾಗಿದೆಯೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು):

ಅ) 1994ರ ಮಾರ್ಚ್ 8 ಮತ್ತು 9ರಂದು.

ಆ) ಬೆಂಗಳೂರು.

ಇ) ಅನುಬಂಧ 1 ರಲ್ಲಿ ನೀಡಲಾಗಿದೆ.

ಈ) ಆದಾಯ ತೆರಿಗೆ ಮಿತಿಯನ್ನು ಏರಿಸಿರುವುದರಿಂದ ಆದಾಯ ತೆರಿಗೆಯಲ್ಲಿನ ರಾಜ್ಯದ ಪಾಲಿನಲ್ಲಿ ಕಡಿತವಾಗುತ್ತದೆ. ಆದರೆ ಒಟ್ಟಾರೆ ತೆರಿಗೆ ಆದಾಯದ ವೃದ್ಧಿ ತೆರಿಗೆ ಸಂಗ್ರಹಣೆಯಲ್ಲಿ ಸುಧಾರಣೆ ಮತ್ತು ತೆರಿಗೆದಾರರಿಂದ ತೆರಿಗೆ ಕಾನೂನುಗಳ ಪಾಲನೆ ಈ ಅಂಶಗಳು ಆಗಬಹುದಾಗಿದ್ದ ಕಡಿತವನ್ನು ನಿವಾರಿಸುತ್ತವೆ. ಹಾಗಾಗಿ ರಾಜ್ಯಕ್ಕೆ ನಷ್ಟ ಉಂಟಾಗುವ ಸಂಭವವಿಲ್ಲ. ಈ ಕಾರಣದಿಂದಾಗಿ ಈ ವಿಷಯದ ಬಗ್ಗೆ ಆಯೋಗಕ್ಕೆ ಮನವಿಯನ್ನು ಸಲ್ಲಿಸಿಲ್ಲ. ನೌಕರರಿಗೆ ನೀಡುವ ತುಟ್ಟಿ ಭತ್ಯೆಯನ್ನು ಕುರಿತು ಆಯೋಗದ ಗಮನ ಸೆಳೆಯಲಾಗಿದೆ.

ಅನುಬಂಧ-1

ಹತ್ತನೇ ಆರ್ಥಿಕ ಆಯೋಗಕ್ಕೆ ರಾಜ್ಯಸರ್ಕಾರವು ಸಲ್ಲಿಸಿದ ಮನವಿಯ ಮುಖ್ಯಾಂಶಗಳು

ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಲು ರಾಜ್ಯ ಸರ್ಕಾರಗಳಿಗೆ ದೊಡ್ಡ ಪ್ರಮಾಣದಲ್ಲಿ ಸಂಪನ್ಮೂಲದ ಅಗತ್ಯ ಇರುವುದರಿಂದ ಕೋಶೀಯ ಕೊರತೆ (ಫಿಸ್ಕಲ್ ಡೆಫಿಸಿಟ್)ಯನ್ನು ಕಡಿಮೆ ಮಾಡುವ ನೆಪದಲ್ಲಿ ರಾಜ್ಯ ಸರ್ಕಾರಗಳಿಗೆ ನೀಡುವ ಹಣವನ್ನು ಕಡಿತಗೊಳಿಸಬಾರದು.

ಆದಾಯ ತೆರಿಗೆ ಮತ್ತು ನಿಗಮ ತೆರಿಗೆಗಳನ್ನು ಒಟ್ಟುಗೂಡಿಸಿ ಒಟ್ಟು ಮೊತ್ತದ ಶೇಕಡಾ 50 ರಷ್ಟು ಅಥವಾ ಆದಾಯ ತೆರಿಗೆಯಿಂದ ಬರುವ ನಿವ್ವಳ ಆದಾಯದ ಶೇಕಡಾ 85ರಷ್ಟು ಮತ್ತು ನಿಗಮ ತೆರಿಗೆಯಿಂದ ಬರುವ ನಿವ್ವಳ ಆದಾಯದ ಶೇಕಡಾ 15ರಷ್ಟನ್ನು ರಾಜ್ಯಗಳಿಗೆ ಹಂಚಬೇಕು. ದಂಡ, ಬಡ್ಡಿ ಮತ್ತು ಮಾರಾಟಗಳಿಂದ ಬರುವ ಆದಾಯವನ್ನು ರಾಜ್ಯಗಳಿಗೆ ಹಂಚಿಕೆ ಮಾಡುವ ಆದಾಯ ತೆರಿಗೆಯಲ್ಲಿ ಸೇರಿಸಬೇಕು. ಆದಾಯ ತೆರಿಗೆಯನ್ನು ರಾಜ್ಯಗಳಿಗೆ ಹಂಚಿಕೆ ಮಾಡುವಾಗ ಅನುಸರಿಸುವ ಸೂತ್ರಗಳಲ್ಲಿ ರಾಜ್ಯಗಳ ತೆರಿಗೆ ಸಂಗ್ರಹಣೆ ಪ್ರಯತ್ನ ಹಾಗೂ ರಾಜ್ಯದಲ್ಲಿ ಸಂಗ್ರಹವಾಗುವ ಆದಾಯ ತೆರಿಗೆ ಪ್ರಮಾಣ ಈ ಅಂಶಗಳಿಗೆ ಹೆಚ್ಚಿನ ಒತ್ತು ನೀಡಬೇಕು.

ಒಕ್ಕೂಟದ ಮೂಲ ಉತ್ಪಾದನಾ ಶುಲ್ಕದ ನಿವ್ವಳ ಆದಾಯ ಶೇಕಡಾ 50 ರಷ್ಟನ್ನು ರಾಜ್ಯಗಳಿಗೆ ಹಂಚಿಕೆ ಮಾಡಬೇಕು. ವೆಚ್ಚ ತೆರಿಗೆಯಿಂದ ಬರುವ ಆದಾಯ ಮತ್ತು ಅಡ್ಮಿನಿಸ್ಟರ್ಡ್ ಬೆಲೆಗಳ ಹೆಚ್ಚಳದಿಂದ ಬರುವ ಆದಾಯ ಇವುಗಳನ್ನು ರಾಜ್ಯಕ್ಕೆ ಹಂಚಿಕೆ ಮಾಡುವ ಒಕ್ಕೂಟದ ಮೂಲ ಉತ್ಪಾದನಾ ಶುಲ್ಕದೊಂದಿಗೆ ಸೇರಿಸಬೇಕು.

ಒಕ್ಕೂಟದ ಮೂಲ ಉತ್ಪಾದನಾ ಶುಲ್ಕವನ್ನು ರಾಜ್ಯಗಳಿಗೆ ಹಂಚಿಕೆ ಮಾಡಲು ಅನುಸರಿಸುವ ಸೂತ್ರದಲ್ಲಿ ರಾಜ್ಯಗಳ ತೆರಿಗೆ ಸಂಗ್ರಹಣೆ ಪ್ರಯತ್ನ ಮತ್ತು ರಾಜ್ಯದಲ್ಲಿನ ಜನಸಂಖ್ಯೆ ಈ ವಿಷಯಗಳಿಗೆ ಹೆಚ್ಚಿನ ಒತ್ತು ಕೊಡಬೇಕು.

ಪ್ರತಿ ರಾಜ್ಯದ ಮಾರಾಟ ತೆರಿಗೆಯ ಆದಾಯ 1990-91 ರಿಂದ 1993-94ರ ಅವಧಿಯಲ್ಲಿ ಎಲ್ಲ ರಾಜ್ಯಗಳ ಒಟ್ಟು ಮಾರಾಟ ತೆರಿಗೆಯ ಆದಾಯಕ್ಕೆ ಯಾವ ಪ್ರಮಾಣಾನುಪಾತವನ್ನು ಹೊಂದಿದೆಯೋ ಅದೇ ಪ್ರಮಾಣಾನುಪಾತದಲ್ಲಿ ಮಾರಾಟ ತೆರಿಗೆಯ ಬದಲು ನೀಡಲಾಗುತ್ತಿರುವ ಅಧಿಕ ಉತ್ಪಾದನಾ ಶುಲ್ಕವನ್ನು ರಾಜ್ಯಗಳಿಗೆ ನೀಡಬೇಕು. ಸಂವಿಧಾನದ 269ನೇ ಅನುಚ್ಛೇದದಲ್ಲಿ ನಮೂದಿಸಲಾಗಿರುವ ಎಲ್ಲ ತೆರಿಗೆಗಳನ್ನು ರಾಜ್ಯಸರ್ಕಾರಗಳ ಅನುಕೂಲಕ್ಕಾಗಿ ಕೇಂದ್ರ ಸರ್ಕಾರವು ವಿಧಿಸಬೇಕು. ರೈಲ್ವೆ ಪ್ರಯಾಣ ದರದ ಬದಲಾಗಿ ನೀಡುತ್ತಿರುವ ಅನುದಾನವನ್ನು ಕಳೆದ 3 ವರ್ಷಗಳಲ್ಲಿ ನಾನ್ ಸಬರ್ಬನ್ ಪ್ರಯಾಣ ದರದಿಂದ ಬಂದ ಸರಾಸರಿ ಆದಾಯದ ಶೇಕಡಾ 12ಕ್ಕೆ ಸಮನಾಗಿ ನಿಗದಿ ಮಾಡಬೇಕು. ಇಲ್ಲದಿದ್ದಲ್ಲಿ ರೈಲ್ವೆ ಪ್ರಯಾಣ ದರದ ಮೇಲಿನ ತೆರಿಗೆಯನ್ನು ಪುನಃ ವಿಧಿಸಬೇಕು.

ಬರಗಾಲ ಪರಿಹಾರಕ್ಕಾಗಿ ಪ್ರಕೃತಿ ವಿಕೋಪ ಪರಿಹಾರ ವಿಧಿಗೆ ಕೇಂದ್ರ ಸರ್ಕಾರವು ನೀಡುವ ವಾರ್ಷಿಕ ವಂತಿಕೆಯನ್ನು ಸುಮಾರು 80 ಕೋಟಿ ರೂ.ಗಳಿಗೆ 1995-96ರಿಂದ ಜಾರಿಗೆ ಬರುವಂತೆ ಹೆಚ್ಚಿಸಬೇಕು. ಅಲ್ಲದೆ ಆಯೋಗದ ಶಿಫಾರಸ್ಸಿನ ಅವಧಿಯಲ್ಲಿ (1995-2000) ಈ ವಂತಿಕೆಯು ಪ್ರತಿ ವರ್ಷ ಶೇಕಡಾ 10 ರಷ್ಟು ಹೆಚ್ಚಾಗುವಂತೆ ಸೂಕ್ತ ಬದಲಾವಣೆ ಮಾಡಬೇಕು. ಪ್ರವಾಹಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ಅಧಿಕಾರಿಗಳ ತಂಡ ಸ್ಥಳ ತನಿಖೆ ಮಾಡಿ ತಯಾರಿಸುವ ಅಂದಾಜಿನ ಆಧಾರದ ಮೇಲೆ ಅನುದಾನ ನೀಡುವ ಹಿಂದಿದ್ದ ವ್ಯವಸ್ಥೆಯನ್ನು ಪುನಃ ಜಾರಿಗೆ ತರಬೇಕು.

ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳಿಗೆ ನೀಡಿರುವ ಸಾಲಗಳನ್ನು ಒಟ್ಟುಗೂಡಿಸಿ ಅವುಗಳ ಮರು ಪಾವತಿಯನ್ನು ರೀಶ್ಡ್ಯೂಲ್ ಮಾಡಬೇಕು. ಸಣ್ಣ ಉಳಿತಾಯ ಸಂಗ್ರಹಣೆಯ ಬಾಬ್ತು ರಾಜ್ಯ ಸರ್ಕಾರಗಳಿಗೆ ನೀಡುತ್ತಿರುವ ಸಾಲದ ಪ್ರಮಾಣವನ್ನು ನಿವ್ವಳ ಸಂಗ್ರಹಣೆಯ ಶೇಕಡಾ 90ಕ್ಕೆ ಏರಿಸಬೇಕು ಮತ್ತು ಈ ಸಾಲಗಳನ್ನು ನಿರಂತರ ಸಾಲಗಳೆಂದು ಪರಿಗಣಿಸಬೇಕು. ಸಂವಿಧಾನದ 73 ಮತ್ತು 74ನೇ ತಿದ್ದುಪಡಿಗಳನ್ನು ಅನುಷ್ಠಾನಗೊಳಿಸಲು 1995-2000 ಅವಧಿಗೆ ರಾಜ್ಯಕ್ಕೆ ಬೇಕಾಗುವ 610 ಕೋಟಿ ರೂ.ಗಳನ್ನು ಕೇಂದ್ರ ಸರ್ಕಾರವು ಒದಗಿಸಬೇಕು.

ಫೈನಾನ್ಸ್ ಬಿಲ್ 1994ರ ಪ್ರಕಾರ ಟೆಲಿಫೋನ್ ಬಿಲ್ಲುಗಳು, ವಿಮಾ ಪ್ರೀಮಿಯಂ ಮತ್ತು ಶೇರು ದಳ್ಳಾಳಿಗಳು ಪಡೆಯುವ ದಳ್ಳಾಳಿ ಶುಲ್ಕ ಇವುಗಳ ಮೇಲೆ ವಿಧಿಸಲಾಗಿರುವ ಸೇವಾ ತೆರಿಗೆಯಿಂದ ಬರುವ ಆದಾಯವನ್ನು ಎಲ್ಲ ರಾಜ್ಯಗಳಿಗೆ ಹಂಚಿಕೆ ಮಾಡಬೇಕು.

ಜಿಲ್ಲಾ ಮಟ್ಟದಲ್ಲಿ ಪೋಲೀಸ್ ಸಂಪರ್ಕ ಸಭೆಗಳನ್ನು ನಡೆಸುವುದು

525.- ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರ ಪೋಲೀಸ್ ಆಯುಕ್ತರು, ಬೆಂಗಳೂರಿನಲ್ಲಿ ಇತ್ತೀಚೆಗೆ ಪೋಲೀಸ್ ಸಂಪರ್ಕ ಸಭೆಗಳನ್ನು ನಡೆಸುತ್ತಿರುವುದು ನಿಜವೇ;

ಆ) ಆ ಪೋಲೀಸ್ ಸಂಪರ್ಕ ಸಭೆಗಳು ಯಶಸ್ವಿಯಾಗಿ ನಡೆಯುತ್ತಿದ್ದು, ಅಂತಹ ಸಭೆಗಳಿಂದಾಗಿ ನಾಗರೀಕರು ತಮ್ಮ ಸಮಸ್ಯೆಗಳನ್ನು ಹೇಳಿಕೊಂಡು ಪರಿಹಾರಗಳನ್ನು ಕಂಡುಕೊಳ್ಳುತ್ತಿರುವುದರಿಂದ, ಅದೇ ರೀತಿಯ ಸಭೆಗಳನ್ನು ಜಿಲ್ಲಾಮಟ್ಟದಲ್ಲಿ ಕನಿಷ್ಠ ತಿಂಗಳಿಗೊಂದು ಬಾರಿಯಾದರೂ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳು ನಡೆಸುವ ವ್ಯವಸ್ಥೆಯನ್ನು ಮಾಡಲಾಗುವುದೇ?

ಇ) ಇಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):

ಅ) ಹೌದು.

ಆ) ಸಭೆಗಳನ್ನು ನಡೆಸುವಂತೆ ಸೂಕ್ತ ನಿರ್ದೇಶನ ನೀಡಲಾಗಿದೆ.

ಇ) ಉದ್ಭವಿಸುವುದಿಲ್ಲ.

ಉಡುಪಿ ತಾಲ್ಲೂಕಿನ ಸಾಲಿಗ್ರಾಮಕ್ಕೆ ರಸ್ತೆ ಸಾರಿಗೆ ನಿಗಮದ ಹೆಚ್ಚಿನ ಸೌಲಭ್ಯ

586 - ಶ್ರೀ ಪಿ. ಬಸವರಾಜು (ಬ್ರಹ್ಮಾವರ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಉಡುಪಿ ತಾಲ್ಲೂಕು ಸಾಲಿಗ್ರಾಮದಿಂದ ಸುವಿಹಾರಿ ಬಸ್ಸಿನ ಸೌಲಭ್ಯ ಕಲ್ಪಿಸಿದ್ದು, ಈ ಬಸ್ಸಿಗೆ ಪ್ರಯಾಣಿಕರ ಸಹಕಾರ ಒಳ್ಳೆಯ ರೀತಿಯಲ್ಲಿರುವುದು ನಿಜವೇ,

ಆ) ಬೆಂಗಳೂರಿನಿಂದ ಸಾಲಿಗ್ರಾಮಕ್ಕೆ ಪರಸ್ಪರ ಪ್ರಯಾಣದ ದರವನ್ನು ನಿಗಧಿಪಡಿಸದೆ ಇರುವುದರಿಂದ ಪ್ರಯಾಣಿಕರು ಕುಂದಾಪುರದ ದರವನ್ನೇ ನೀಡುತ್ತಿರುವುದು ನಿಜವೇ,

ಇ) ರಾಜ್ಯ ರಸ್ತೆ ಸಾರಿಗೆ ನಿಗಮದವರು ಬೆಂಗಳೂರು-ಸಾಲಿಗ್ರಾಮದ ಸ್ಟೇಜ್ ದರ ನಿಗಧಿಪಡಿಸಿ ಮತ್ತು ಸ್ಥಳೀಯವಾಗಿ ದಿವಸಕ್ಕೆ ಗಂಟೆ ಮುಂಗಡದ ಬುಕ್ಕಿಂಗ್ ಸೌಲಭ್ಯ ಒದಗಿಸಿ ಪ್ರಯಾಣಿಕರಿಗೆ ಹೆಚ್ಚಿನ ಅನುಕೂಲತೆ ಒದಗಿಸುವುದೇ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):

ಅ) ಹಾಲಿ ಕಾರ್ಯಾಚರಣೆಯಲ್ಲಿದ್ದು, ಬೆಂಗಳೂರು ಉಡುಪಿ ಬಸ್ಸನ್ನು ದಿನಾಂಕ 28-2-94ರಿಂದ ಉಡುಪಿ ತಾಲ್ಲೂಕಿನ ಸಾಲಿಗ್ರಾಮಕ್ಕೆ ವಿಸ್ತರಿಸಲಾಗಿದೆ. ಸದರಿ ಸಾರಿಗೆಯ ಪ್ರಯಾಣಿಕರಿಂದ ಸಹಕಾರ ಪಡೆದಿರುವ ಬಗ್ಗೆ ತಿಳಿಯಲು ಕಾಲಾವಕಾಶ ಬೇಕಾಗಿರುತ್ತದೆ.

ಆ) ಇಲ್ಲ

ಇ) ಸಾಲಿಗ್ರಾಮದಲ್ಲಿ ಹಂತ ನಿಗಧಿಪಡಿಸುವುದನ್ನು ಮರುಮಾರ್ಗದ ಸಮೀಕ್ಷೆ ನಡೆಸಿದ ನಂತರ ಪರಿಗಣಿಸಲಾಗುವುದು. ಸಾಲಿಗ್ರಾಮವು ರಾಷ್ಟ್ರೀಕೃತವಲ್ಲದ ವಲಯದಲ್ಲಿದ್ದು, ಒಂದು ದೂರದ ಸಾರಿಗೆ ಮಾತ್ರ ಕಾರ್ಯಚರಣೆಯಲ್ಲಿರುತ್ತದೆ. ಮುಂಗಡ ಬುಕ್ಕಿಂಗ್ ವ್ಯವಸ್ಥೆಯನ್ನು ತೆರೆಯುವ ಅವಶ್ಯಕತೆ ಕಂಡು ಬರುವುದಿಲ್ಲ.

ಹುಬ್ಬಳ್ಳಿಯಿಂದ ಬಾಳೆಹೊನ್ನೂರಿಗೆ ಸಾರಿಗೆ ಬಸ್ಸನ್ನು ಓಡಿಸುವುದು

463 - ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿಯಿಂದ ಬಾಳೆಹೊನ್ನೂರಿಗೆ ನೇರ ಬಸ್ ಸೌಕರ್ಯ ಒದಗಿಸಲಾಗಿದೆಯೇ;

ಆ) ಇಲ್ಲದಿದ್ದಲ್ಲಿ ಹುಬ್ಬಳ್ಳಿಯಿಂದ ಬಾಳೆಹೊನ್ನೂರಿಗೆ ನೇರ ಬಸ್ ಸೌಕರ್ಯ ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):

ಅ) ಇಲ್ಲ.

ಆ) ಶಿವಮೊಗ್ಗ ಮತ್ತು ಬಾಳೆಹೊನ್ನೂರು ಮಾರ್ಗವು ಎನ್.ಆರ್. ಪುರ ಕೊಪ್ಪ ಮತ್ತು ಶೃಂಗೇರಿ ಮಾರ್ಗದಲ್ಲಿದ್ದು 142 ಕಿ.ಮೀ.ಗಳ ಅಂತರವಿದ್ದು ರಾಷ್ಟ್ರೀಕೃತ ವಲಯವಲ್ಲದ ಮಾರ್ಗವಾಗಿದ್ದು ಖಾಸಗಿ ವಾಹನಗಳು ಪ್ರಯಾಣಿಕರ ಬೇಡಿಕೆಯನ್ನು ಪೂರೈಸುತ್ತಿದೆ. ಆದುದರಿಂದ ಹುಬ್ಬಳ್ಳಿ ಮತ್ತು ಬಾಳೆಹೊನ್ನೂರು ನಡುವೆ ನೇರ ಬಸ್ ಸಂಚಾರವನ್ನು ಪ್ರಾರಂಭಿಸುವುದು ಸದ್ಯಕ್ಕೆ ಸಮಂಜಸವಲ್ಲ.

ಕಲಘಟಗಿ – ಬೆಂಗಳೂರು ನಡುವೆ ಮುಂಡಗೋಡ್ ಮಾರ್ಗವಾಗಿ ಸಂಚರಿಸುವ ಬಸ್ಸುಗಳು

464 - ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಲಘಟಗಿ ಬೆಂಗಳೂರು ನಡುವೆ ಪ್ರತಿ ದಿನ ಎಷ್ಟು ಬಸ್ಸುಗಳು ಸಂಚರಿಸುತ್ತಿರುವುದು.

ಆ) ಅವುಗಳ ಪೈಕಿ ಎಷ್ಟು ಬಸ್ಸುಗಳು ಮುಂಡಗೋಡ ಮಾರ್ಗವಾಗಿ ಸಂಚರಿಸುತ್ತಿವೆ,

ಇ) ಬೆಂಗಳೂರು ನಗರಿಂದ ಕಲಘಟಗಿ ಮುಂಡಗೋಡ ಮಾರ್ಗವಾಗಿ ನೇರ ಬಸ್ ಸೌಕರ್ಯವನ್ನು ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):

ಅ) ಹಳಿಯಾಳ ಮತ್ತು ಬೆಂಗಳೂರು ನಡುವೆ ಓಡುವ ಎರಡು ಬಸ್ಸುಗಳು ಕಲಘಟಗಿ ಮಾರ್ಗವಾಗಿ ನಿತ್ಯವೂ ಸಂಚರಿಸುತ್ತಿವೆ.

ಆ) ಹಳಿಯಾಳ ಮತ್ತು ಬೆಂಗಳೂರು ನಡುವೆ ಕಲಘಟಗಿ ಮತ್ತು ಮುಂಡಗೋಡ ಮಾರ್ಗವಾಗಿ ಒಂದು ಬಸ್ಸನ್ನು ಕಾರ್ಯಾಚರಣೆಗೆ ಒಳಪಡಿಸಲಾಗುತ್ತಿದೆ.

ಇ) ಈ ಮಾರ್ಗದಲ್ಲಿ ಪ್ರಯಾಣಿಕರ ಸಂಚಾರ ಸಾಕಷ್ಟು ಪ್ರಮಾಣದಲ್ಲಿ ಇಲ್ಲದಿರುವುದರಿಂದ ನೇರ ಬಸ್ ಸೌಕರ್ಯವನ್ನು ಒದಗಿಸುವುದು ಸಮಂಜಸವಲ್ಲ ಎಂದು ಪರಿಗಣಿಸಲಾಗಿದೆ.

ಕಲಘಟಗಿ – ಹುಬ್ಬಳ್ಳಿ ನಡುವೆ ಬಸ್ಸುಗಳನ್ನು ಓಡಿಸುವುದು

466 - ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಲಘಟಗಿ ಹುಬ್ಬಳ್ಳಿಗಳ ನಡುವೆ ಪ್ರತಿದಿನ ಎಷ್ಟು ಬಸ್ಸುಗಳು ಸಂಚರಿಸುತ್ತಿವೆ;

ಆ) ಪ್ರಯಾಣಿಕರ ಒತ್ತಡ ಹೆಚ್ಚುತ್ತಿರುವುದರಿಂದ ಹೊಸದಾಗಿ ಇನ್ನೂ 4 ಬಸ್ಸುಗಳನ್ನು ಕಲಘಟಗಿ-ಹುಬ್ಬಳ್ಳಿ ನಡುವೆ ಓಡಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):

ಅ) 36 ಬಸ್ಸುಗಳು.

ಆ) ಈಗಾಗಲೇ ಫೆಬ್ರವರಿ ತಿಂಗಳು 1994ರಲ್ಲಿ ಒಂದು ಹೆಚ್ಚುವರಿ ಅನುಸೂಚಿಯನ್ನು ಪ್ರಾರಂಭಿಸಿದ್ದು 7 ಸುತ್ತುವಳಿ ಟ್ರಿಪ್ಪುಗಳನ್ನು ಅಳವಡಿಸಲಾಗಿದೆ.

ಕಲಘಟಗಿ ಬಸ್ ನಿಲ್ದಾಣದಲ್ಲಿ ಕುಡಿಯುವ ನೀರಿನ ಸೌಲಭ್ಯ

467 - ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಲಘಟಗಿ ಬಸ್ ನಿಲ್ದಾಣದಲ್ಲಿ ಪ್ರಯಾಣಿಕರಿಗೆ ಕುಡಿಯುವ ನೀರು, ಶೌಚಾಲಯ ಮುಂತಾದ ಸೌಲಭ್ಯಗಳನ್ನು ಒದಗಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಅವುಗಳನ್ನು ಅಲ್ಲಿ ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):

ಅ) ಇಲ್ಲ, ಒದಗಿಸಲಾಗಿದೆ.

ಆ) ಉದ್ಭವಿಸುವುದಿಲ್ಲ.

ಅಧ್ಯಕ್ಷರು : ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಉತ್ತರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ಪ್ರಕಟಣೆ

ಅಧ್ಯಕ್ಷರು : ದಿನಾಂಕ 21ನೇ ಮಾರ್ಚ್ 1994ರಂದು ನಡೆದ ವಿಧಾನಸಭೆಯ ಕಾರ್ಯಕಲಾಪಗಳ ಸಲಹಾ ಸಮಿತಿಯ ಸಭೆಯು ಪ್ರಸ್ತುತ ಅಧಿವೇಶನದಲ್ಲಿ ಈ ಕೆಳಕಂಡಂತೆ ಕಾರ್ಯಕಲಾಪಗಳನ್ನು ನಡೆಸಲು ತೀರ್ಮಾನಿಸಿತು.

ಮಂಗಳವಾರ, ದಿನಾಂಕ 22-3-1994 ರಿಂದ	1. ಪ್ರಶ್ನೆಗಳು, ಗಮನ ಸೆಳೆಯುವ ಸೂಚನೆ
ಗುರುವಾರ, ದಿನಾಂಕ 24-3-1994 ರವರೆಗೆ	2. ಆಯವ್ಯಯದ ಮೇಲೆ ಸಾಮಾನ್ಯ ಚರ್ಚೆ
ಶುಕ್ರವಾರ, ದಿನಾಂಕ 25-3-1994	1. ಪ್ರಶ್ನೆಗಳು, ಗಮನ ಸೆಳೆಯುವ ಸೂಚನೆ
	2. ಆಯವ್ಯಯದ ಮೇಲೆ ಸಾಮಾನ್ಯ ಚರ್ಚೆ
	3. ಖಾಸಗಿ ಕಾರ್ಯಕಲಾಪಗಳು.
ಸೋಮವಾರ, ದಿನಾಂಕ 28-3-1994	1. ಪ್ರಶ್ನೆಗಳು, ಗಮನ ಸೆಳೆಯುವು ಸೂಚನೆ
	2. ಆಯವ್ಯಯದ ಮೇಲೆ ಸಾಮಾನ್ಯ ಚರ್ಚೆ
ಮಂಗಳವಾರ, ದಿನಾಂಕ 29-3-1994	1. ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರ
ಬೆಳಿಗ್ಗೆ 10.00 ಗಂಟೆಯಿಂದ 1.00 ಗಂಟೆಯವರೆಗೆ	2. ಧನವಿನಿಯೋಗ ವಿಧೇಯಕ ಹಾಗೂ ವಿತ್ತೀಯ ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು.
ಮಧ್ಯಾಹ್ನ 2-30 ಗಂಟೆಯಿಂದ 6-00 ಗಂಟೆಯವರೆಗೆ	3. ಪ್ರಶ್ನೆಗಳು, ಗಮನ ಸೆಳೆಯುವ ಸೂಚನೆಗಳು
ಬುಧವಾರ, ದಿನಾಂಕ 30-3-1994	1. ಪ್ರಶ್ನೆಗಳು, ಗಮನ ಸೆಳೆಯುವ ಸೂಚನೆ
	2. 1993-94ನೇ ಸಾಲಿಗೆ ಸಂಬಂಧಿಸಿದ ಪೂರಕ ಅಂದಾಜುಗಳ (ಅಂತಿಮ ಕಂತು) ಮೇಲೆ ಚರ್ಚೆ ಹಾಗೂ ಮತಕ್ಕೆ ಹಾಕುವುದು.
	3. ಶಾಸನ ರಚನೆ: ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು.

ಗುರುವಾರ, ದಿನಾಂಕ 31-3-1994	4. ಶಾಸನಾತ್ಮಕ ನಿರ್ಣಯ 1. ಪ್ರಶ್ನೆಗಳು, ಗಮನ ಸೆಳೆಯುವ ಸೂಚನೆ 2. ಶಾಸನ ರಚನೆ: ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು. 3. ಶಾಸನಾತ್ಮಕ ನಿರ್ಣಯ
ಸೋಮವಾರ, ದಿನಾಂಕ 4-4-1994 ರಿಂದ ಬುಧವಾರ, ದಿನಾಂಕ 6-4-1994ರವರೆಗೆ	ಶಾಸನ ರಚನೆ: ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು.

ಕಾರ್ಯದರ್ಶಿಯವರ ವರದಿ

ಕಾರ್ಯದರ್ಶಿ : ಕಳೆದ ಅಧಿವೇಶನದಲ್ಲಿ ಒಪ್ಪಿಸಿದ ವರದಿಯ ನಂತರ ರಾಜ್ಯಪಾಲರಿಂದ ಒಪ್ಪಿಗೆಯನ್ನು ಪಡೆದಿರತಕ್ಕ ವಿಧೇಯಕಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಕ್ರಮ ಸಂಖ್ಯೆ	ವಿಧೇಯಕದ ಹೆಸರು.	ಒಪ್ಪಿಗೆಯನ್ನು ಪಡೆದ ದಿನಾಂಕ.	ಒಪ್ಪಿಗೆಯನ್ನು ನೀಡಿದವರು.
1.	ಕರ್ನಾಟಕ ಅಬ್ಕಾರಿ (ತಿದ್ದುಪಡಿ) ವಿಧೇಯಕ, 1993	10-02-1994	ರಾಜ್ಯಪಾಲರು.
2.	ಕರ್ನಾಟಕ ಅಬ್ಕಾರಿ (ಎರಡನೇ ತಿದ್ದುಪಡಿ) ವಿಧೇಯಕ, 1993	10-02-1994	ರಾಜ್ಯಪಾಲರು.
3.	ಕರ್ನಾಟಕ ಸಿವಿಲ್ ನ್ಯಾಯಾಲಯಗಳ (ತಿದ್ದುಪಡಿ) ವಿಧೇಯಕ, 1993	10-02-1994	ರಾಜ್ಯಪಾಲರು.
4.	ಕರ್ನಾಟಕ ಧನವಿನಿಯೋಗ ವಿಧೇಯಕ, 1994	4-03-1994	ರಾಜ್ಯಪಾಲರು.
5.	ಕರ್ನಾಟಕ ಉಚ್ಚ ನ್ಯಾಯಾಲಯ (ತಿದ್ದುಪಡಿ) ವಿಧೇಯಕ, 1993	8-03-1994	ರಾಜ್ಯಪಾಲರು.
6.	ಕರ್ನಾಟಕ ಸಚಿವರ ವೇತನಗಳ ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ, 1993	8-03-1994	ರಾಜ್ಯಪಾಲರು.
7.	ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕ, 1993	10-03-1994	ರಾಜ್ಯಪಾಲರು.

ಅಧ್ಯಕ್ಷರು : ವರದಿಯನ್ನು ಮಂಡಿಸಲಾಯಿತು.

ನಿಲುವಳಿ ಸೂಚನೆಗೆ ಅನುಮತಿ ಕೋರಿಕೆ.

ರಾಜ್ಯದಲ್ಲಿ ಗ್ರಾಮಪಂಚಾಯಿತಿ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಚುನಾವಣೆಯಲ್ಲಿ ಸರ್ಕಾರದ ಹಸ್ತಕ್ಷೇಪ.

+ ಶ್ರೀ ಆರ್.ವಿ. ದೇಶಪಾಂಡೆ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೇ, ಈ ಗ್ರಾಮ ಪಂಚಾಯಿತಿ ಚುನಾವೆಯ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಚುನಾವಣೆಯಲ್ಲಿ ಸರ್ಕಾರದ ಹಸ್ತಕ್ಷೇಪ ಆಗಿ ರಾಜ್ಯದ ನಾನಾ ಭಾಗಗಳಲ್ಲಿ ತೀವ್ರ ಗಲಭೆ ಉಂಟಾಗಿ ಅರಾಜಕತೆ, ಅಶಾಂತಿಯುತ ಆಗಿ, ಪ್ರಜಾಹಿತ ಕಗ್ಗೊಲೆಯಾಗಿರುವುದರ ಬಗ್ಗೆ ನಾವು ನಿಯಮ 59ರ ಪ್ರಕಾರ ಒಂದು ನಿಲುವಳಿ ಸೂಚನೆ ಕೊಟ್ಟಿದ್ದೇವೆ. ತಾವೂ ಸಹ ಪ್ರಶ್ನೋತ್ತರ ಕಾಲದ ಮುಂಚೆ ಈ ವಿಷಯ ಪ್ರಸ್ತಾಪ ಮಾಡಿದಾಗ ಚರ್ಚೆಗೆ ಅವಕಾಶ ಮಾಡಿಕೊಡುತ್ತೇವೆ ಎಂದು ಹೇಳಿದ್ದೀರಿ ಅದರ ಬಗ್ಗೆ ಧನ್ಯವಾದಗಳು. ಇವತ್ತು ವಿಕೇಂದ್ರಕರಣ ವ್ಯವಸ್ಥೆಯಲ್ಲಿ ನಮ್ಮ ವಿಶ್ವಾಸ ಇದೆಯೆಂದು ಇವತ್ತು ಸರ್ಕಾರ ಹೇಳಿ ಕೇವಲ ಅಧಿಕಾರದ ವಿಕೇಂದ್ರಿಕರಣ ಅಷ್ಟೇ ಮಾಡಿಲ್ಲ. ಅಲ್ಲಿದ್ದ ಚುನಾಯಿತ ಪ್ರತಿನಿದಿಗೆ ಇವತ್ತು ಅಧಿಕಾರ ಕೊಟ್ಟು ನಾವು ಚುನಾವಣೆ ಮಾಡಿದ್ದೇವೆ ಅಂಥ ತಮ್ಮ ಬೆನ್ನನ್ನು ತಾವೇ ಚಪ್ಪರಿಸಿದ್ದಾರೆ. ಇವತ್ತು ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆಗೆ ಸಂಬಂಧಪಟ್ಟಂತೆ ಇಡೀ ರಾಜ್ಯದಲ್ಲಿ ಗಲಭೆ, ಪೋಲೀಸ್ ಫೈರಿಂಗ್, ಹಿಂಸಾಚಾರ ಅತ್ಯಾಚಾರ, ರಾಜಕೀಯ ಹಸ್ತಕ್ಷೇಪ ಕೂಡ ಆಯಿತು ಎಂದು ನಾನು ಭಾವಿಸುತ್ತೇನೆ. ನಮ್ಮ ರಾಜಕೀಯ ಇತಿಹಾಸದಲ್ಲಿ ಯಾವಾಗಲೂ ಯಾವ ಸಂದರ್ಭದಲ್ಲಿಯೂ ಇದು ಆಗಿಲ್ಲ, ಮಾನ್ಯ ಗ್ರಾಮೀಣ ಅಭಿವೃದ್ಧಿ ಸಚಿವರು ಚುನಾವಣೆ ಮಾಡುತ್ತೇವೆ; ಚುನಾವಣೆ ಮಾಡಿಲ್ಲವೆಂದರೆ ರಾಜೀನಾಮೆ ಕೊಡುತ್ತೇವೆ ಎಂದು ಹೇಳಿದ್ದರು. ಆ ಪ್ರಕಾರ ಚುನಾವಣೆ ಮಾಡಿಸಿದರು ಆದರೆ ಪಂಚಾಯಿತಿ ಚುನಾವಣೆ ಆಗುವಾಗ ಒಂದು ಮಾತು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಅಲ್ಲೆ ಇಲ್ಲಿ ಸ್ವಲ್ಪ ಲಾ ಅಂಡ್ ಆರ್ಡರ್ ಸುಚುಯೇಷನ್ ಕ್ರಿಯೇಟ್ ಆದರೂ ಸಹ ಎಲ್ಲಾ ಕಡೆ ಚುನಾವಣೆ ಸರಿ ಆಯಿತು. ಅದನ್ನು ನಾನು ಪ್ರಾಮಾಣಿಕವಾಗಿ ಒಪ್ಪಿಕೊಳ್ಳಬೇಕಾಗುತ್ತದೆ. ಆದರೆ ಈ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಚುನಾವಣೆಗಳು ಏನಾದವು ಅಲ್ಲಿ ಹಿಂಸಾಚಾರ ಆಯಿತು, ಸಿವಿಲ್ ಮೆಷನರಿ ಮತ್ತು ಪೋಲೀಸ್ ಮೇಷನರಿಗಳ ದುರುಪಯೋಗ ಆಯಿತು, ಅಧಿಕಾರ ಪಕ್ಷದ ಶಾಸಕರ ಹಸ್ತಕ್ಷೇಪ ಏನು ಆಯಿತು ಅದರ ಪರಿಣಾಮವಾಗಿ ಇವತ್ತು ಇಡೀ ರಾಜ್ಯದಲ್ಲಿ ಒಂದು ಅಶಾಂತಿ ನಿರ್ಮಾಣ ಆಗಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಇವತ್ತು ಯಾವ ನೆಮ್ಮದಿಯೂ ಇಲ್ಲ, ಹಲವಾರು ಹಳ್ಳಿಯಿಂದ ಜನ ಓಡಿ ಹೋಗಿದ್ದಾರೆ. ಹಲವಾರು ವಿರೋಧಪಕ್ಷದ ಕಾರ್ಯಕರ್ತರ ಮೇಲೆ ಇವತ್ತುಐಪಿಸಿ 302,307 ಕೆಳಗೆ ಮೊಕದ್ದಮೆ ದಾಖಲು ಆಗಿವೆ. ಗುಲ್ಬರ್ಗ, ಬಳ್ಳಾರಿಯಲ್ಲಿ ಪೋಲೀಸ್ ಫೈರಿಂಗ್ ಆಯಿತು, ಹಲವಾರು ಕಡೆ ಕಿಡ್ನ್ಯಾಪಿಂಗ್ಗಳು ಆಯಿತು. ಇದನ್ನು ತಾವು ಒಪ್ಪಿಕೊಳ್ಳುವುದಿಲ್ಲ ಮೆಚ್ಚಿಕೊಳ್ಳುವುದಿಲ್ಲ ಎಂದು ನಾನು ಭಾವಿಸುತ್ತೇನೆ.

ಇದರಿಂದಾಗಿ ನಿಮ್ಮ ಸರ್ಕಾರಕ್ಕೆ ಗೌರವ ಬಂದಿಲ್ಲ, ಸರ್ಕಾರ ಇದನ್ನು ಸ್ಪಷ್ಟವಾಗಿ ಒಪ್ಪಿಕೊಳ್ಳಬೇಕು. ತಾವು ಈ ಚುನಾವಣೆಯನ್ನು ಶಾಂತಿಯುತವಾಗಿ, ಕಾನೂನುಬದ್ಧವಾಗಿ ಮಾಡುವುದರಲ್ಲಿ ವಿಫಲವಾಗಿದೆ ಬಹುಶಃ ಡಿಸೆಂಬರ್ 23, 1993 ರಂದು ತಾವು ಒಂದು ಆದೇಶವನ್ನು 400 ಬಿಂದುಗಳ ಆಧಾರದ ಮೇಲೆ ರೋಸ್ಟರ್ ಪ್ರಕಾರ ಚುನಾವಣೆಯನ್ನು ನಡೆಸಬೇಕೆಂದು ಹೊರಡಿಸಿದಿರಿ. ಈ ಆದೇಶಕ್ಕೆ ಯಾರದ್ದೂ ವಿರೋಧವಿಲ್ಲ. ನಾವೂ ಕೂಡ ವಿರೋಧ ಮಾಡಿಲ್ಲ, ಆದರೆ, ಒಂದು ಮಾತನ್ನು ಮಾತ್ರ ಒಪ್ಪಿಕೊಳ್ಳುತ್ತೇವೆ. ಈ ಆದೇಶವನ್ನು ಹೊರಡಿಸುವುದಕ್ಕೆ ಮುಂಚೆ ತಾವೂ

ಮತ್ತು ತಮ್ಮ ಕಾರ್ಯದರ್ಶಿಯವರೂ ಸೇರಿ ಮಾಡಿರಬಹುದು. ಆದರೆ ಈ ಸಂದರ್ಭದಲ್ಲಿ ಹಸ್ತಕ್ಷೇಪ ತಾವು ಮಾಡಿಲ್ಲ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ತಮ್ಮ ಶಾಸಕಾಂಗ ಪಕ್ಷದಲ್ಲಿದ್ದಂಥ ಡಿಸಿಡೆಂಟ್ಸ್‌ಗೆ, ತಮ್ಮ ಶಾಸಕರಿಗೆ ಖುಷಿ ಮಾಡುವುದಕ್ಕೆ, ಅವರು ಏನು ಹೇಳುತ್ತಾರೆ ಅದರ ಪ್ರಕಾರ ನಡೆಯಬೇಕೆಂಬ ಉದ್ದೇಶದಿಂದ ತಾವು ಈ ಸರ್ಕ್ಯುಲರ್‌ನ್ನು ವಾಪಸ್ಸು ತೆಗೆದುಕೊಂಡು ಮತ್ತೊಂದು ಸರ್ಕ್ಯುಲರ್‌ನ್ನು 93ರ ಡಿಸೆಂಬರ್ 21ರಂದು ಏನು ಹೊರಡಿಸಿದಿರಿ ಅದು ನೂರಕ್ಕೆ ನೂರು ಸರಿಯಾಗಿದೆ ಎಂದು ತಾವು ಒಪ್ಪಿಕೊಳ್ಳುವುದಕ್ಕೂ ತಯಾರಿಲ್ಲ, ಇವತ್ತು ಏನು ಗಲಭೆ, ಗಲಾಟೆಗಳಾದುವು ಅದರಿಂದ ಇದು ಆಗುವುದಕ್ಕೆ ಸಾಧ್ಯ ಆಗುವುದಿಲ್ಲ. ಇವತ್ತು ಮುಖ್ಯವಾಗಿ ಇಡೀ ರಾಜ್ಯದಲ್ಲಿ ಇಷ್ಟೊಂದು ಗಲಾಟೆಯಾಗುವುದಕ್ಕೆ ಕಾರಣ ಏನೆಂದರೆ, ಚುನಾವಣಾ ಪ್ರತಿನಿಧಿಗಳ ಮನಸ್ಸಿನಲ್ಲಿ ಒಂದು ಭಾವನೆ ಏನು ಬಂತು ಎಂದರೆ, ಶಾಸಕರು ಈ ನಿರ್ಣಯವನ್ನು ಮಾಡಿದ್ದಾರೆ, ಮೀಸಲಾತಿ ಎಲ್ಲಿರಬೇಕು, ಪರಿಶಿಷ್ಟ ಜಾತಿಯ ಜನಾಂಗ ಯಾವ ಮಂಡಲದಲ್ಲಿರಬೇಕು, ಎಲ್ಲೆಲ್ಲಿ [illegible] ವರ್ಗದವರು ಇರಬೇಕು, ಎಲ್ಲೆಲ್ಲಿ ಹಿಂದುಳಿದ ವರ್ಗದವರು ಇರಬೇಕೆಂಬ ನಿರ್ಣ[illegible] ಶಾಸಕರು ಮಾಡಿದ್ದಾರೆ ಎಂಬ ಭಾವನೆಯಿಂದ ಈ ಗಲಾಟೆ ಆಗಿದೆ. [illegible] ವೇಳೆ ಈ ಭಾವನೆ ಇಲ್ಲದಿದ್ದರೆ ಇವತ್ತು ಈ ಗಲಾಟೆ ಆಗುವುದಕ್ಕೆ ಕಾ[illegible]ವೇ ಇರಲಿಲ್ಲ. ಇವತ್ತು ರಾಜ್ಯದಲ್ಲಿ ಈ ಅರಾಜಕತೆ, ಹಿಂಸಾಚಾರ, ಗೋಲಿಬಾರ್ ಇನ್ನೂ ಮುಂತಾದಕ್ಕೆ ಇವತ್ತು ತಮ್ಮ ಸರ್ಕಾರ ಜವಾಬ್ದಾರಿಯಾಗಿದೆ ಎಂಬುದನ್ನು ತಾವು ಒಪ್ಪಿಕೊಳ್ಳಬೇಕು. ಈ ಹೊಣೆಗಾರಿಕೆಯನ್ನು ತಾವು ಒಪ್ಪಿಕೊಳ್ಳಬೇಕಾಗುತ್ತದೆ. ಇವತ್ತು ಶಾಸಕರ ಒತ್ತಡಕ್ಕೆ ತಾವು ಒಂದು ಸರ್ಕ್ಯುಲರ್‌ನ್ನು ಇಷ್ಯೂ ಮಾಡಿದಿರಿ, ಅದು 2-2-94ರಂದು. ತಾವು ಏನು ಆದೇಶ ಹೊರಡಿಸಿದಿರಿ? ಅದರಲ್ಲಿ ಎಲ್ಲಿ ಪರಿಶಿಷ್ಟ ಜಾತಿಯ ಜನಾಂಗದವರು ಹೆಚ್ಚಿಗೆ ಆರಿಸಿ ಬಂದಿದ್ದರೆ ಅಲ್ಲಿ ಪರಿಶಿಷ್ಟ ಜಾತಿಯವರಿಗೆ ರಿಸರ್ವೇಷನ್ ಮಾಡಿ, ಎಲ್ಲಿ ಪರಿಶಿಷ್ಟವರ್ಗದವರು ಹೆಚ್ಚು ಆರಿಸಿ ಬಂದಿದ್ದಾರೆ. ಅಲ್ಲಿ ಪರಿಶಿಷ್ಟ ವರ್ಗದವರಿಗೆ ರಿಸರ್ವೇಷನ್ ಮಾಡಿ, ಎಲ್ಲಿ ಹಿಂದುಳಿದ ವರ್ಗದವರು ಹೆಚ್ಚು ಆರಿಸಿ ಬಂದಿದ್ದಾರೆ ಅಲ್ಲಿ ಹಿಂದುಳಿದವರ್ಗದವರನ್ನು ರಿಸರ್ವೇಷನ್ ಮಾಡಿ ಎಂದು ಹೇಳಿದ್ದೀರಿ. ಕಳೆದ ಸದನದಲ್ಲಿ ನಾನು ಇದರ ಬಗ್ಗೆ ತಮಗೆ ಒಂದು ಕಾಷನ್ ಕೊಟ್ಟೆ. ಇದೇ ಮನೆಯಲ್ಲಿ ನಾನು ತಮಗೆ ಹೇಳಿದೆ,

ಇದರಿಂದ ಮುಂದೆ ನೀವು ತೊಂದರೆಯನ್ನು ಅನುಭವಿಸಬೇಕಾಗುತ್ತದೆ ಎಂದು. ಆವತ್ತು ನಾನು ತಮಗೆ ಒಂದು ಎಚ್ಚರಿಕೆಯನ್ನು ಕೊಟ್ಟೆ ತಾವು ಇದರಲ್ಲಿ ಶಾಸಕರಿಗೆ ಅವರ ವಿವೇಚನೆಗೆ ಬಿಟ್ಟಿದ್ದೀರಿ, ಆ ವಿವೇಚನೆಯ ಲಾಭವನ್ನು ಯಾವ ಪ್ರಮಾಣದಲ್ಲಿ ತೆಗೆದುಕೊಳ್ಳುತ್ತಾರೆ. ಯಾವ ಪ್ರಕಾರ ತೆಗೆದುಕೊಳ್ಳುತ್ತಾರೆ, ಅದರ ಮೇಲೆ ಚುನಾವಣೆ ಪರಿಣಾಮ ನಿಲ್ಲುತ್ತದೆ, ಆದ್ದರಿಂದ ನೀವು ಮಾಡಿರತಕ್ಕದ್ದು ಸರಿಯಲ್ಲವೆಂದು. ಆಗ ತಾವು ಹೇಳಿದಿರಿ, ನಾವು ಜಿಲ್ಲಾಧಿಕಾರಿಯವರಿಗೆ ಅಧಿಕಾರವನ್ನು ಕೊಟ್ಟಿದ್ದೇವೆ, ಆ ಜಿಲ್ಲಾಧಿಕಾರಿಗಳೇ ಇದನ್ನು ಸರಿಪಡಿಸುತ್ತಾರೆಂದು ತಾವು ಹೇಳಿದಿರಿ. ಆದ್ದರಿಂದ ನಾನು ತಮ್ಮನ್ನು ಸ್ಪಷ್ಟವಾಗಿ ಕೇಳುತ್ತಿದ್ದೇನೆ, ಈ ಅಧಿಕಾರ ಜಿಲ್ಲಾಧಿಕಾರಿಗಳಿಗೆ ಉಳಿದಿಲ್ಲ. ಜಿಲ್ಲಾಧಿಕಾರಿಗಳ ಕೈಯಲ್ಲಿ ಈ ಅಧಿಕಾರವಿದ್ದರೆ ನೀವು ಈ ಚುನಾವಣೆಯನ್ನು ಏತಕ್ಕೆ ಮುಂದಕ್ಕೆ ಹಾಕಿದಿರಿ? ಹಲವಾರು ಜಿಲ್ಲೆಗಳಲ್ಲಿ ಏತಕ್ಕೆ ಮುಂದಕ್ಕೆ ಹಾಕಿದಿರಿ? ತಾವು ಜಿಲ್ಲಾಧಿಕಾರಿಯವರ ಮುಖಾಂತರ ತಮ್ಮ ಪಕ್ಷದ ಶಾಸಕರ ಮಾತು ನಡೆಯಬೇಕು ಎಂಬ ದುರುದ್ದೇಶದಿಂದ ತಾವು ಈ ಸರ್ಕ್ಯುಲರನ್ನು ಹೊರಡಿಸಿ ಇವತ್ತು ತಾವು ಹಿಂದುಳಿದ ಜನಾಂಗ, ಪರಿಶಿಷ್ಟ ಜಾತಿ ಜನಾಂಗದ ಮೇಲೆ ಬಹಳ ದೊಡ್ಡ ಅತ್ಯಾಚಾರವನ್ನು ಮಾಡಿದಿರಿ ನಾವು ಇವತ್ತು ಮೀಸಲಾತಿ ವಿರುದ್ಧ ಇಲ್ಲ; ಎಂಬುದನ್ನು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ.

ಮೀಸಲಾತಿ ಮಾಡಿದ್ದನ್ನು ಸರಿ ಅದಕ್ಕೆ ನಮ್ಮ ಬೆಂಬಲವಿದೆ. ಆದರೆ ಪ್ರಶ್ನೆ ಏನಿದೆ ಎಂದರೆ ಯಾವ ಕಾರಣಕ್ಕಾಗಿ, ಯಾವ ವರ್ಗಕ್ಕಾಗಿ ತಾವು ಮೀಸಲಾತಿ

ಮಾಡಿದಿರಿ, ಆ ವರ್ಗಕ್ಕಾಗಿ ಮೀಸಲಾತಿ ಹೋಗಿದೆಯೋ ಇಲ್ಲವೋ ಎಂಬುದನ್ನು ತಾವು ಹೇಳಬೇಕಾಗುತ್ತದೆ. ಯಾವ ಪ್ರಮಾಣದಲ್ಲಿ ಹೋಗಿದೆ ಎಂಬುದನ್ನು ತಾವು ಹೇಳಬೇಕಾಗುತ್ತದೆ. ಆದರೆ ಅದೆಲ್ಲವನ್ನೂ ತಾವು ಇವತ್ತು ಬಿಟ್ಟು ಮನಸ್ಸುಬಂದಹಾಗೆ ಚುನಾವಣೆಗಳನ್ನು ಮುಂದೆ ಹಾಕುವುದು, ಚುನಾವಣೆಗಳನ್ನು ರದ್ದುಪಡಿಸುವುದು ಸರಿಯಲ್ಲ. ಮತ್ತೊಂದು ಆಜ್ಞೆಯನ್ನು ತಾವು ಹೊರಡಿಸಿದಿರಿ. 22-2-1994ರಲ್ಲಿ, ಆ ಆಜ್ಞೆ ಪ್ರಕಾರ ಏನಾಯಿತು; ಅದಕ್ಕೆ ಸ್ಪಷ್ಟೀಕರಣವಿದೆ. ಆ ಸ್ಪಷ್ಟೀಕರಣದ ಪ್ರಕಾರ ಯಾವ ಒಂದು ಮೀಸಲಾತಿ ಬ್ಯಾಕ್‌ವರ್ಡ್‌ಕ್ಲಾಸ್‌ಗೆ ಇದೆ, ಅಲ್ಲಿ ಸಾಮಾನ್ಯ ಕ್ಷೇತ್ರದಿಂದ ಯಾರು ಆರಿಸಿ ಬಂದರೂ ಸಹ ಅವರು ಒಂದು ಸರ್ಟಿಫಿಕೇಟ್ ನನ್ನ ಆದಾಯ ಕಡಿಮೆ ಇದೆ ಎಂದು ಕೊಟ್ಟರೂ ಸಹ ಅವರು ಕಂಟೆಸ್ಟ್ ಮಾಡಬಹುದು. ಇದು ಹಿಂದುಳಿದ ಜನಾಂಗಕ್ಕೆ ಕೊಡುವ ಒಂದು ಮೀಸಲಾತಿಯೇ ಎಂದು ನಾನು ಕೇಳುತ್ತೇನೆ. ಕೆಲವು ಸಾಮಾನ್ಯ ಕ್ಷೇತ್ರಕ್ಕೆ ಕಂಟೆಸ್ಟ್ ಮಾಡಿದರು. ಕೆಲವು ಜನ ಸರ್ಟಿಫಿಕೇಟ್ ಕೊಟ್ಟಿದ್ದು ರಿಜೆಕ್ಟ್ ಆಯಿತು. ಬಿ.ಸಿ.ಎಂ. ಎಂದು ಕೊಟ್ಟಿದ್ದ ಸರ್ಟಿಫಿಕೇಟ್ ರಿಜೆಕ್ಟ್ ಆಯಿತು.

ಶ್ರೀ ಎಂ. ವೀರಪ್ಪ ಮೊಯಿಲಿ: ಇದು ನಿಮ್ಮ ಡೆಫನೇಷನ್ನೋ?

ಶ್ರೀ ಆರ್.ವಿ. ದೇಶಪಾಂಡೆ: ಇಲ್ಲ, ಇದು ನಮ್ಮ ಡೆಫನೇಷನ್ ಅಲ್ಲ, ತಾವು ಹಲವಾರು ಬಾರಿ ಹೇಳಿದ್ದೀರಿ ಅದಕ್ಕೆ ನಾವು ಇಲ್ಲವೆಂದೂ ಹೇಳಿದ್ದೇವೆ. ಆ ಒಂದು ವಾದವಿವಾದಕ್ಕೆ ನಾನು ಹೋಗುವುದಿಲ್ಲ, ತಾವು ಮೇಲ್ಮನೆಯಲ್ಲಿ ಇದಕ್ಕೆ ಹೇಳಿದ್ದೀರಿ. ಜನತಾ ಸರ್ಕಾರವಿದ್ದಾಗ ಆ ಡೆಫನಿಷನ್ ಮಾಡಿದ್ದು for purposes of education. It was not for election reservation.

ಅದರ ದುರುಪಯೋಗವನ್ನು ತಾವು ತೆಗೆದುಕೊಂಡು ಇವತ್ತು ಆರ್ಥಿಕ ಮೀಸಲಾತಿ ಮಾಡಿ ಹಲವಾರು ಹಿಂದುಳಿದ ಜನಾಂಗಕ್ಕೆ ತಾವು ಅನ್ಯಾಯ ಮಾಡಿದ್ದೀರಿ. ಅದನ್ನು ತಾವು ಒಪ್ಪಿಕೊಳ್ಳಬೇಕಾಗಿದೆ. 21-2-94ರಲ್ಲಿ ಏನು ಸರ್ಕ್ಯೂಲರ್‌ನ್ನು ಹೊರಡಿಸಿದ್ದೀರಿ. ಆ ಸರ್ಕ್ಯೂಲರ್ ಪ್ರಕಾರ a person who has been elected on a general seat, if he produce a certificate that his income is less than Rs. 8,000/-, he could contest as a backward candidate.

ಆದರೆ ರಿಸರ್ವೇಷನ್ ಏನು ಉಳಿಯಿತು? ಏತಕ್ಕೆ ರಿಸರ್ವೇಷನ್ ಮಾಡಿದಿರಿ? ಏತಕ್ಕೆ ಮೀಸಲಾತಿಯನ್ನು ಇಟ್ಟಿರಿ. ಯಾವ ವರ್ಗಕ್ಕೆ ಲಾಭಮಾಡಲಿಕ್ಕೆ ಈ ಮೀಸಲಾತಿಯನ್ನು ಮಾಡಿದಿರಿ? ಇವತ್ತು ಸರ್ಕಾರದಲ್ಲಿ ಸ್ಪಷ್ಟವಾದ ನೀತಿ ಇಲ್ಲ. ಮೀಸಲಾತಿ ವಿಚಾರದಲ್ಲಿ ನಿಮ್ಮ ಸ್ಪಷ್ಟವಾದ ನೀತಿ ಇಲ್ಲ, ಪರಿಶಿಷ್ಟ ಜನಾಂಗ, ಹಿಂದುಳಿದ ಜನಾಂಗಕ್ಕೆ ಮೀಸಲಾತಿ ಕೊಡುವುದರಲ್ಲಿ, ಸ್ಪಷ್ಟವಾದ ನೀತಿ ನಿಮ್ಮಲ್ಲಿ ಇಲ್ಲ. ಅಷ್ಟೇ ಅಲ್ಲ ದ್ವಂದ್ವ ನಿರ್ಮಾಣಮಾಡಿ ಹಲವಾರು ಸರ್ಕ್ಯೂಲರ್‌ಗಳು, ಹಲವಾರು ಆಜ್ಞೆಗಳನ್ನು ಮಾಡಿ ಕೇವಲ ಈ ಗೊಂದಲದಿಂದ ರಾಜ್ಯದಲ್ಲಿ ಹಿಂಸಾಚಾರ ನಡೆಯಲು ಸಾಧ್ಯವಾಯಿತು.

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಎಂ. ವೀರಪ್ಪ ಮೊಯಿಲಿ: ಇದನ್ನು ನಿಮ್ಮ ಸ್ವಂತಬುದ್ಧಿಯಿಂದ ಹೇಳುತ್ತಿದ್ದೀರಾ ಏನೋ ಗೊತ್ತಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ: ಕೇಳಿ ನೀವೇನಾದರೂ ಬುದ್ಧಿಯನ್ನು ಕೊಟ್ಟರೆ ನಾನು ಬೇಕಾದರೆ ಬೇರೆ ಹೇಳುತ್ತೇನೆ. ಸ್ವಂತ ಬುದ್ಧಿ ಬೇರೆ ಎಂದು ಹೇಳಿದರೆ ನಾವು ಹೇಳುತ್ತೇನೆ. ಮುಖ್ಯವಾಗಿ ಇಂಥ ಹಲವಾರು ಸರ್ಕ್ಯೂಲರ್‌ನ್ನು ತಾವು ಹೊರಡಿಸಿ ಗೊಂದಲಮಯವಾದ ವಾತಾವರಣವನ್ನು ನಿರ್ಮಾಣ ಮಾಡಿದಿರಿ. ನಿಮ್ಮ

ಸರ್ಕಾರದಲ್ಲಿ ಒಂದು ನಿರ್ದಿಷ್ಟವಾದ ನೀತಿ ಇಲ್ಲ. ಪರಿಶಿಷ್ಟ ಜನಾಂಗಕ್ಕೆ, ಹಿಂದುಳಿದ ಜನಾಂಗಕ್ಕೆ ಮೀಸಲಾತಿಯನ್ನು ಕೊಡಬೇಕೆಂದು ಒಂದು ಗಂಭೀರವಾದ ನಿರ್ಣಯವಿಲ್ಲ. ಎಷ್ಟು ಕ್ಯಾಬಿನೇಟ್ ನೀವು ಸೇರಿದಿರಿ; ರಾತ್ರಿ ಎಲ್ಲಾ ಕ್ಯಾಬಿನೇಟ್ ಮೀಟಿಂಗ್ ಮಾಡುತ್ತೀರಿ, ಚುನಾವಣೆಗಳನ್ನು ಮುಂದಕ್ಕೆ ಹಾಕುತ್ತೀರಿ, ನಾನು ಒಮ್ಮೆ ನಿಮ್ಮನ್ನು ಕೇಳುತ್ತೇನೆ, ಚುನಾವಣೆ ಪ್ರಕ್ರಿಯೆ ಪ್ರಾರಂಭವಾದನಂತರ ಆ ಪ್ರಕ್ರಿಯೆಯನ್ನು ಸ್ಟಾಪ್ ಮಾಡತಕ್ಕಂಥ ಅಧಿಕಾರ ನಿಮಗೆ ಇಲ್ಲ, ಕರ್ನಾಟಕ ಪಂಚಾಯತ್ ರಾಜ್ಯದ ಕಾಯಿದೆ 44ರ ಪ್ರಕಾರ

12.50 ಪಿ.ಎಂ.

"Election of Adhyaksha and Upadhyaksha":

"Every Gram Panchayat shall, as soon as may be, choose two Members of the Gram Panchayat to be respectively Adhyaksha and Upadhyaksha. In the event of occurence of any vacancy by reasons of death, resignation or removal or otherwise, in the office of the Adhyaksha or Upadhyaksha, the Gram Panchayat shall choose another member to be Adhyaksha or Upadhyaksha, as the case may be, subject to the general or special orders of the Government." ಎಂದು ರಿಸರ್ವೇಷನ್ ಕೊಟ್ಟಿರಿ. ಎಷ್ಟು ಪರ್ಸೆಂಟ್ ಎಸ್ಸಿಗೆ ಇರಬೇಕು, ಎಷ್ಟು ಪರ್ಸೆಂಟ್ ಎಸ್‌ಟಿಗೆ ಇರಬೇಕು, ಬ್ಯಾಕ್‌ವರ್ಡ್ ಕ್ಲಾಸ್‌ಗೆ ಎಷ್ಟು ಪರ್ಸೆಂಟ್ ಇರಬೇಕೆಂದು ಹೇಳಿದಿರಿ. ನಾನು ಕೇಳುತ್ತೇನೆ. ಪಂಚಾಯತ್ ಚುನಾವಣೆ ಮಾಡುವ ಅಧಿಕಾರ ಎಲೆಕ್ಷನ್ ಕಮೀಷನರ್‌ಗೆ. ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆ ಮಾಡುವ ಅಧಿಕಾರ ಸರ್ಕಾರ ಇಟ್ಟುಕೊಂಡಿರಿ. ಇದೇ ಅಲ್ಲಿ ತಪ್ಪಾಗಿದುದು. ಸರ್ಕಾರ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಚುನಾವಣೆ ಮಾಡುವ ಅಧಿಕಾರ ನಿಮ್ಮ ಕೈಯಲ್ಲಿ ತೆಗೆದುಕೊಂಡಿರಿ. ಅಧಿಕಾರ ದುರುಪಯೋಗದಿಂದ ಇವತ್ತು ತಾವು ಹಲವಾರು ಕಡೆ ಎಲ್ಲೆಲ್ಲಿ ನಮ್ಮ ಜನರು ಆರಿಸಿ ಬಂದರು, ಯಾವ ಜನರ ಮೆಜಾರಿಟಿ ಇತ್ತು ಅದನ್ನು ತಾವು ಅಧಿಕಾರ ಬಲದ ಮೇಲೆ ನೆಗೇಟೀವ್ ಮಾಡಿ ನಿಮ್ಮ ಜನರನ್ನು ಅಧಿಕಾರಕ್ಕೆ ತರುವ ಪ್ರಯತ್ನ ಮಾಡಿದಿರಿ. ಇವತ್ತು ಚುನಾವಣಾ ಆದೇಶ ಇದೆ. ಚುನಾವಣಾ ಆದೇಶದ ನಂತರ ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ತಾವು ಏನು ಒಂದು ಮಾತು ಹೇಳಿದಿರಿ? ಜಿಲ್ಲಾಧಿಕಾರಿಗಳಿಗೆ ಅಧಿಕಾರ ಕೊಟ್ಟಿದ್ದೇವೆಂದು ಹೇಳಿದಿರಿ. ಅದು ಡಿಸ್ಕ್ರಿಷನ್ ಮಿಸ್‌ಯೂಸ್ ಆಗುತ್ತದೆ. ಜಿಲ್ಲಾಧಿಕಾರಿಗಳಿಗೆ ಅಧಿಕಾರ ಕೊಡುವುದರಿಂದ ಸರಿಯಾಗಿ ಕೆಲಸ ಆಗುವುದಿಲ್ಲವೆಂದು ತಾವು ಮನಸ್ಸಿನಲ್ಲಿ ಒಪ್ಪಿದರೂ ಸಹ ಶಾಸನಸಭೆಯಲ್ಲಿ ಆ ಮಾತನ್ನು ಒಪ್ಪಿಕೊಂಡಿಲ್ಲ. ಆದರೆ ನಿಮ್ಮ ಮೇಲೆ ನನಗೆ ವಿಶ್ವಾಸ ಇದೆ. ತಾವು ವಿಶ್ವಾಸದಿಂದ ಒಪ್ಪಿಕೊಳ್ಳುತ್ತೀರಿ. ನಿಮ್ಮ ಮನಸ್ಸಿಗೆ ನೋವಾಗಿದೆ. ರಾಜ್ಯದಲ್ಲಿ ಗಲಾಟೆ, ಗಲಭೆಗಳು ಆದವು. ಅದರಲ್ಲಿ ನಿಮಗೆ ಏನೂ ಗೌರವ, ಘನತೆ ಬಂದಿಲ್ಲ. You have also to bow your head in shame that have not taken place in the history of Karnataka.

ಇದರ ಹಿಂದೆ ಪಂಚಾಯಿತಿ ಎಲೆಕ್ಷನ್ ಆಗಿರಬಹುದು, ಟಿಡಿಬಿ ಎಲೆಕ್ಷನ್ ಆಗಿರಬಹುದು, ಗ್ರಾಮ ಪಂಚಾಯಿತಿ ಎಲೆಕ್ಷನ್ ಆಗಿರಬಹುದು, ಮಂಡಲ ಪಂಚಾಯತಿ ಎಲೆಕ್ಷನ್ ಆಗಿರಬಹುದು. ಆದರೆ ಅಧ್ಯಕ್ಷ ಉಪಾಧ್ಯಕ್ಷ ಚುನಾವಣೆಯಲ್ಲಿ ಈ ತರಹ ಒಂದು ಹಿಂಸೆ, ಕಿಡ್‌ನ್ಯಾಪಿಂಗ್ ಗಲಾಟೆ, ಗಲಭೆ ಎಲ್ಲಿಯೂ ಆಗಿಲ್ಲ.

ಶ್ರೀ ಡಿ. ಹಲಗೇಗೌಡ : ಮಾನ್ಯ ವಿರೋಧ ಪಕ್ಷದ ನಾಯಕರು ಹೇಳುತ್ತಿದ್ದಾರೆ. ಬಹುಶಃ ಆಡಳಿತ ಪಕ್ಷದಲ್ಲಿರತಕ್ಕ ಯಾವ ಸದಸ್ಯರು ಈ ಕಾರ್ಯದಲ್ಲಿ ಭಾಗಿ ಆಗಿಲ್ಲ. ನನ್ನ ಕ್ಷೇತ್ರದಲ್ಲಿ ಹೇಳುವುದಾದರೆ ಅವರ ಪಕ್ಷದಲ್ಲಿರತಕ್ಕ ಮಾಜಿ ಶಾಸಕರು ಮತ್ತು

ಅವರ ಗುಂಪಿನವರು ಇವತ್ತಿಗೂ ನಮ್ಮ ಕಾಂಗ್ರೆಸ್ ಪಕ್ಷಕ್ಕೆ ಸೇರಿದ ಎರಡು ಪಂಚಾಯಿತಿಯ ಸದಸ್ಯರನ್ನು ಅಪಹರಿಸಿಕೊಂಡು ಹೋಗಿ 15 ದಿವಸವಾದರೂ ಇನ್ನೂ ಬಿಡಲಿಲ್ಲ. ಆಮೇಲೆ ಚುನಾವಣೆ ನಡೆಯುವ ದಿವಸ ಅಲ್ಲಿ ಗಲಾಟೆಯಾದಾಗ ಹಾಗೆಯೇ ಕಾರಿನಲ್ಲಿ ಅವರನ್ನು ತುಂಬಿಕೊಂಡು ಹೋಗಿ ಇನ್ನೂ ಬಿಟ್ಟಿಲ್ಲ. ಚುನಾವಣೆ ನಡೆಯುವುದಕ್ಕೆ ಬಿಡಲಿಲ್ಲ.

(ಗೊಂದಲ)

ಶ್ರೀಮತಿ ಮೋಟಮ್ಮ: ಇದು ಎಲ್ಲಾ ಕಡೆ ಆಗಿದೆ. ಇದು ಅವರೆ ಮಾಡಿರುವ ಕೆಲಸ

ಶ್ರೀ ಆರ್.ವಿ. ದೇಶಪಾಂಡೆ: ನಿಮ್ಮ ಮೇಲೆ ಸಾಕಷ್ಟು ಗೌರವ ಇದೆ.

(ಗೊಂದಲ)

ಯಾವ ವಿಚಾರವನ್ನು ಮಾನ್ಯ ಹಲಗೇಗೌಡರು ಪ್ರಸ್ತಾಪ ಮಾಡಿದ್ದಾರೆ ಅದಕ್ಕೆ ಹೇಳಬಹುದು..

(ಗೊಂದಲ)

ಉಪಾಧ್ಯಕ್ಷರು: ದಯವಿಟ್ಟು ಕುಳಿತುಕೊಳ್ಳಿ. ಒಬ್ಬೊಬ್ಬರು ಹೇಳಿ. ಕಾಳಮರಿಗೌಡರು ಮಾತನಾಡಲು ನಿಂತಿದ್ದಾರೆ, ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಲ್.ಆರ್. ಶಿವರಾಮೇಗೌಡ: ಇದರ ಬಗ್ಗೆ ಬಹಿರಂಗವಾಗಿ ತನಿಖೆಯಾಗಲಿ. ನಮ್ಮಲ್ಲಿ 7 ಪಂಚಾಯಿತಿಗಳಲ್ಲಿ ಹೊತ್ತುಕೊಂಡು ಹೋಗಿರತಕ್ಕವರನ್ನು ಇನ್ನೂ ಬಿಟ್ಟಿಲ್ಲ. ಅದನ್ನು ಒತ್ತಾಯ ಮಾಡಿ, ಅದರ ಬಗ್ಗೆ ತನಿಖೆಯಾಗಲಿ. ಸಭಾಧ್ಯಕ್ಷರೇ ನಾನು ಸರ್ಕಾರಕ್ಕೆ ಒಂದು ಮನವಿ ಮಾಡುತ್ತೇನೆ, ಇದರ ಬಗ್ಗೆ ನಿಷ್ಪಕ್ಷಪಾತ ತನಿಖೆ ಮಾಡಬೇಕು.

ಉಪಾಧ್ಯಕ್ಷರು: ಕಾಳಮರಿಗೌಡರು ಏನೋ ಹೇಳುತ್ತಿದ್ದಾರೆ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಎಂ. ನಾರಾಯಣಸ್ವಾಮಿ: ಎಲ್ಲೆಲ್ಲಿ ಏನೇನಾಗಿದೆ ಎಂಬುದನ್ನು ಕಂಡುಹಿಡಿಯುವುದಕ್ಕೆ ಕಮಿಷನ್ ಅಪಾಯಿಂಟ್ ಮಾಡಿ.

ಶ್ರೀ ಎಲ್.ಆರ್. ಶಿವರಾಮೇಗೌಡ: ಎಲ್ಲಾ ಪಂಚಾಯಿತಿ ಸದಸ್ಯರನ್ನು ಹೊತ್ತುಕೊಂಡು ಹೋಗಿರುವವರು ಯಾರು? ಇದರ ಬಗ್ಗೆ ತನಿಖೆಯಾಗಬೇಕು. ಸರ್ಕಾರ ಒಂದು ಗುಪ್ತ ವರದಿ ತರಿಸಬೇಕು.

ಉಪಾಧ್ಯಕ್ಷರು: ಮಾನ್ಯ ಶಿವರಾಮೇಗೌಡರೇ, ಕುಳಿತುಕೊಳ್ಳಿ.

ಶ್ರೀ ಎಂ. ನಾರಾಯಣಸ್ವಾಮಿ: ಮಾನ್ಯ ಅಧ್ಯಕ್ಷರೇ....

ಉಪಾಧ್ಯಕ್ಷರು: ನಾನು ಮಾನ್ಯ ಕಾಳಮರೀಗೌಡರನ್ನು ಕರೆದಿದ್ದೇನೆ. ಮಾನ್ಯ ನಾರಾಯಣಸ್ವಾಮಿಯವರು ದಯಮಾಡಿ ಕುಳಿತುಕೊಳ್ಳಬೇಕು.

ಶ್ರೀ ಎಲ್.ಆರ್. ಶಿವರಾಮೇಗೌಡ: ಯಾರು ಯಾರು ಯಾವ ಪಕ್ಷದವರನ್ನು ಹೊತ್ತುಕೊಂಡು ಹೋಗಿದ್ದಾರೆ ಎಂಬ ಬಗ್ಗೆ ತನಿಖೆಯಾಗಬೇಕು.

ಶ್ರೀ ಕೆ.ಎಸ್. ಕಾಳಮರಿಗೌಡ: ನಮ್ಮ ದೇಶಪಾಂಡೆಯವರು, ವಿರೋಧಪಕ್ಷದ ನಾಯಕರು ಕಾಂಗ್ರೆಸ್ ಶಾಸಕರ ಬಗ್ಗೆ ಹೇಳಿ ಕಾಂಗ್ರೆಸ್ ಎಲ್ಲೆಲ್ಲಿದೆಯೋ ಅಂಥ ಕಡೆ ಮಾತ್ರ ಗಲಾಟೆ ನಡೆದಿದೆ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಅದಕ್ಕೆ ನಮ್ಮ ಪಾಂಡವಪುರ ಶಾಸಕರಾದ ಶ್ರೀ ಹಲಗೇಗೌಡರು ಕೂಡ ಹೇಳಿದ್ದಾರೆ. ತಮ್ಮದೇ ಕ್ಷೇತ್ರದಲ್ಲಿ ನಡೆದಿದೆ ಸಾರ್ ಇದು. ಕೊಪ್ಪ ಎನ್ನತಕ್ಕದ್ದು ಒಂದು ಗ್ರಾಮ. ಬಯಲುಕುಪ್ಪೆ ಎನ್ನತಕ್ಕದ್ದು ಒಂದು ಗ್ರಾಮ. ಅದು ಪಂಚಾಯಿತಿಯ ಪ್ರದೇಶಗಳು.

ಅಲ್ಲಿ ಈ ಜನತಾ ದಳದ ಐದಾರು ಜನ ನಮ್ಮ ಉಮೇದುವಾರರನ್ನು ಆವತ್ತು ಬಯಲುಕುಪ್ಪೆಯಂಥ ಕ್ಷೇತ್ರಕ್ಕೆ ಅಭ್ಯರ್ಥಿಯಾಗಿ ಹಾಕಬೇಕಾಗಿತ್ತು... ಅಭ್ಯರ್ಥಿಯಾಗಿ ಹಾಕಿದ್ದೆವು.

ಶ್ರೀ ಆರ್.ವಿ. ದೇಶಪಾಂಡೆ : ಏನು ಸಾರ್ ಇದು?

(ಹಲವಾರು ಸದಸ್ಯರು ಒಟ್ಟಿಗೆ ಮಾತನಾಡುತ್ತಿದ್ದರು. ಗೊಂದಲದ ವಾತಾವರಣ ಇತ್ತು.)

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಉಪಾಧ್ಯಕ್ಷರೆ, ಪಾಯಿಂಟ್ ಆಫ್ ಆರ್ಡರ್ ಇದ್ದರೆ ಹೇಳಲಿ ಅವರು.

ಶ್ರೀ ಕೆ.ಎಸ್. ಕಾಳಮರಿಗೌಡ : ಬಯಲುಕುಪ್ಪೆಗ್ರಾಮದಲ್ಲಿ ಚುನಾವಣೆ ನಡೆಯಬೇಕಾಗಿತ್ತು ಬೆಳಗ್ಗೆ 11 ಗಂಟೆಗೆ.

ಶ್ರೀ ಆರ್.ವಿ. ದೇಶಪಾಂಡೆ : ಕಾಳಮರಿಗೌಡರು ಪಾಯಿಂಟ್ ಆಫ್ ಆರ್ಡರ್ ಇದ್ದರೆ ರೈಸ್ ಮಾಡಲಿ....

ಉಪಾಧ್ಯಕ್ಷರು : ಕಾಳಮರಿಗೌಡರೇ, ನೀವು ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿದ್ದೀರಾ? ಇಲ್ಲ ಅಂದರೆ ದಯಮಾಡಿ ಕುಳಿತುಕೊಳ್ಳಿ. ತಾವು ಮುಂದುವರೆಸಿ ದೇಶಪಾಂಡೆಯವರೇ..

ಶ್ರೀ ಆರ್.ವಿ. ದೇಶಪಾಂಡೆ : ಹೇಗೆ ಮಾತನಾಡಲಿ? ನಾನು ಏನು ಮಾತನಾಡಲಿ?

ಶ್ರೀ ಕೆ.ಎಸ್. ಕಾಳಮರಿಗೌಡ : 11 ಗಂಟೆಗೆ ಜನತಾ ದಳದ 5 ಜನರು ಗುಂಪು ಕಟ್ಟಿಕೊಂಡು ಕಾರಿನಲ್ಲಿ ಬಂದು ಅವನನ್ನು ಅಡ್ಡಹಾಕಿ ಕಿಡ್ನ್ಯಾಪ್ ಮಾಡಿಕೊಂಡು ಹೊತ್ತುಕೊಂಡು ಹೋದರು. ಆಮೇಲೆ ಪೊಲೀಸರಿಗೆ ದೂರು ಕೊಟ್ಟರು. ಪೊಲೀಸರು ದೂರು ತೆಗೆದುಕೊಳ್ಳಲಿಲ್ಲ. ಆಮೇಲೆ ಗಲಾಟೆಯಾದಾಗ ಅವನನ್ನು ಅರೆಸ್ಟ್ ಮಾಡತಕ್ಕ ರೀತಿಯಲ್ಲಿ ಮಾಡಿದರು.

ಉಪಾಧ್ಯಕ್ಷರು : ದಯಮಾಡಿ, ಕುಳಿತುಕೊಳ್ಳಿ.

ಶ್ರೀ ಕೆ.ಎಸ್. ಕಾಳಮರಿಗೌಡ : ಇದು ಕಾಂಗ್ರೆಸ್ ಇರತಕ್ಕ ಕಡೆ ಮಾತ್ರ ನಡೆದಿಲ್ಲ, ಎಲ್ಲಿ ಜನತಾ ದಳದವರು ಇದ್ದಾರೋ ಅಲ್ಲಿ ಇಂಥ ಗಲಾಟೆಗಳು ಜಾಸ್ತಿಯಾಗಿರುವುದನ್ನು ತಮ್ಮ ಗಮನಕ್ಕೆ ತಂದಿದ್ದೇನೆ.

ಶ್ರೀ ಬಿ.ಎಚ್. ಬನ್ನಿಕೋಡ್ : ಎಲ್ಲಿ ಅವರ ಪಕ್ಷದ ಸದಸ್ಯರು ಆರಿಸಿಬಂದಿಲ್ಲ ಅಲ್ಲಿ ಈ ರೀತಿ ಮಾಡುತ್ತಿದ್ದಾರೆ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ನಾವು ಒಂದು ಮಾತನ್ನು ಒಪ್ಪಿಕೊಳ್ಳಬೇಕಾಗಿದೆ. ಆ ಭಾಗದ ಸದಸ್ಯರು ಇರಬಹುದು, ಈ ಕಡೆ ಸದಸ್ಯರು ಇರಬಹುದು. ತಾವು ಜನತಾ ದಳದವರು ಮಾಡಿದ್ದಾರೆ ಎಂದು ಹೇಳುತ್ತಿದ್ದೀರಿ. ನಾವು ಕಾಂಗ್ರೆಸ್‌ನಿಂದ ಆಗಿದೆ ಎಂದು ಹೇಳುತ್ತಿದ್ದೇವೆ. ಇದರ ಅರ್ಥ ಏನು? ಅತ್ಯಾಚಾರ ಆಗಿದೆ ಎಂಬುದನ್ನು ಒಪ್ಪಿಕೊಳ್ಳುತ್ತೀರಲ್ಲಾ? ಮುಗಿಯಿತು. ಆ ಪಾಯಿಂಟ್‌ಗೆ ನಾನು ಬರುತ್ತಿದ್ದೇನೆ.

ಪ್ರೊ|| ಎಂ.ಡಿ. ನಂಜುಂಡಸ್ವಾಮಿ : ಸನ್ಮಾನ್ಯ ಸಭಾಧ್ಯಕ್ಷರೆ, ಈಗ ಎರಡೂ ಕಡೆ ಮಾತು ಕೇಳುತ್ತಿದ್ದೇನೆ. ಕೊನೆಗೆ ದೇಶಪಾಂಡೆಯವರು ಈ ಕಡೆ ಸದಸ್ಯರು ಎಂದು ಹೇಳುತ್ತಿದ್ದರು. ಈ ಕಿಡ್ನ್ಯಾಪಿಂಗ್‌ಗೂ ರೈತಸಂಘಕ್ಕೂ ಏನೇನೂ ಸಂಬಂಧ ಇಲ್ಲ. ಇವರಿಬ್ಬರ ಮಾತು ಕೇಳಿದರೆ ಒಂದು ಸ್ಪಷ್ಟವಾಗಿದೆ. Kidnappings have been successfully decentralised. ಇದು ಒಂದು ಸ್ಪಷ್ಟವಾಗಿದೆ. ಡೀಸೆಂಟ್ರಲೈಸೇಷನ್ ಬಹಳ ಸಕ್ಸಸ್‌ಫುಲ್ ಆಗಿದೆ. Kidnappings have been successfully decentralised. ಎರಡೂ

ಪಕ್ಷದವರು ತಮ್ಮ ನಡತೆಯನ್ನು ಉತ್ತಮ ಮಾಡಿಕೊಂಡರೆ ಬಹಳ ಒಳ್ಳೆಯದು ಎಂದು ನಾನು, ನಡುವೆ ಸಿಕ್ಕಿಹಾಕಿಕೊಂಡಿರುವವನು, ಹೇಳುತ್ತಿದ್ದೇನೆ.

ಶ್ರೀ ಆರ್.ವಿ. ದೇಶಪಾಂಡೆ: ಮಾನ್ಯ ಪ್ರೊಫೆಸರ್‌ರವರು ಏನು ಹೇಳಿದ್ದಾರೆ ಅದರ ಬಗ್ಗೆ ಟೀಕೆ ಟಿಪ್ಪಣಿ ಮಾಡುವುದಕ್ಕೆ ಹೋಗುವುದಿಲ್ಲ. ಸಮಯ ಬಂದಾಗ ಅದಕ್ಕೆ ಜನರು ಉತ್ತರ ಕೊಡುತ್ತಾರೆ. ರಾಜ್ಯದಲ್ಲಿ ಚುನಾವಣಾ ಕಾಲದಲ್ಲಿ ಗಲಭೆ, ಗಲಾಟೆ, ಕಿಡ್ನಾಪಿಂಗ್ ಆಗಿವೆ. ಹೀಗಾಗಿ ವಿಚಾರಣೆ ಆಗಬೇಕಾಗುತ್ತದೆ. ನಮ್ಮ ಪಕ್ಷದವರ ಕಡೆಯಿಂದ ಅನ್ಯಾಯ ಆಗಿದ್ದರೆ ನಮಗೆ ಶಿಕ್ಷೆ ಆಗುತ್ತದೆ. ಜನತಾದಳದ ಕಾರ್ಯಕರ್ತರಿಂದ ಅನ್ಯಾಯವಾಗಿದ್ದರೆ, ನಮಗೂ ಶಿಕ್ಷೆ ಆಗುತ್ತದೆ. ಅದಕ್ಕೆ ನಾವು ಸಿದ್ಧರಿದ್ದೇವೆ. ಆದರೆ ತಾವು ಸಿದ್ಧರಿದ್ದೀರಾ ಎಂದು ಕೇಳುತ್ತೇನೆ. ಅಧ್ಯಕ್ಷರು, ಉಪಾಧ್ಯಕ್ಷರ ಚುನಾವಣೆಗಳನ್ನು ಮುಂದಕ್ಕೆ ಹಾಕಿದರು. ಬೆಂಗಳೂರಿನ ಹೊಸಕೋಟೆ ತಾಲ್ಲೂಕಿನಲ್ಲಿ, ಉತ್ತರ ಕನ್ನಡದ ಕಾರವಾರ ತಾಲ್ಲೂಕಿನಲ್ಲಿ ಬಿಜಾಪುರದ ಬಾದಾಮಿಯಲ್ಲಿ, ಕೋಲಾರದ ಮಾಲೂರು ತಾಲ್ಲೂಕಿನಲ್ಲಿ ಚುನಾವಣೆ ಮುಂದೆ ಹಾಕುವುದಕ್ಕೆ ಅಧಿಕಾರವನ್ನು ನಿಮಗೆ ಯಾರು ಕೊಟ್ಟರು? ಸರಿಯೋ ತಪ್ಪೋ ಒಮ್ಮೆ ಚುನಾವಣಾ ಪ್ರಕಟಣೆ ಆದಮೇಲೆ, ಜಿಲ್ಲಾಧಿಕಾರಿಗಳು ಆದೇಶ ಮಾಡಿ ಚುನಾವಣಾ ದಿನಾಂಕ ನಿಗಧಿ ಮಾಡಿ ನಾಮಿನೇಷನ್ಸ್ ಫೈಲ್ ಆಗಿದ್ದು, ಅಲ್ಲಿ ಕೆಲವು ಮಂತ್ರಿಗಳು ಕೆಲವು ಶಾಸಕರು ನಿಮ್ಮ ಮೇಲೆ ಒತ್ತಡ ತಂದಮೇಲೆ ರಾತ್ರಿ ಕ್ಯಾಬಿನೆಟ್ ಸೇರಿ ಪುನಃ ಬೆಳಿಗ್ಗೆ ಸಮಿತಿ ಸೇರಿ ಈ ಚುನಾವಣೆ ಮುಂದೆ ಮುಂದಕ್ಕೆ ಹಾಕಿದ್ದುದು ಪ್ರಜಾಪ್ರಭುತ್ವದ ಕೊಲೆ ಅಲ್ಲವೇ? ಇದಕ್ಕೆ ಉತ್ತರ ಏನು? ಯಾವ ಅಧಿಕಾರದಿಂದ ಇದನ್ನು ಮುಂದೆ ಹಾಕಿದಿರಿ? ಒಂದು ವೇಳೆ ಜಿಲ್ಲಾಧಿಕಾರಿಗಳು ಸರಿ ಮಾಡಿಲ್ಲ, ಮೀಸಲಾತಿಯಲ್ಲಿ, ತಪ್ಪು ಆಗಿದೆ ಎಂದಿದ್ದರೆ ಆ ಬಗ್ಗೆ ತಾವು ಫೈಲ್ ತರಿಸಿದ್ದೀರಾ? ವಿಚಾರಣೆ ಮಾಡಿದ್ದೀರಾ? ಯಾವ ರಿಪೋರ್ಟ್ ತರಿಸಿದ್ದೀರಿ? ಯಾವುದೇ ರಿಪೋರ್ಟ್ ಇಲ್ಲ, ಜಿಲ್ಲಾಧಿಕಾರಿಗಳನ್ನು ಕರೆದೂ ಇಲ್ಲ, ಕೇವಲ ನಿಮ್ಮ ಶಾಸಕರು, ನಿಮ್ಮ ಮಂತ್ರಿಗಳು ಹೇಳಿದರು. ಆ ಆಧಾರದ ಮೇಲೆ ತಾವು ಚುನಾವಣೆ ಮುಂದೆ ಹಾಕಿದ್ದೀರಿ. ಇದು ನ್ಯಾಯಬದ್ಧ ಇದೆಯೋ ಇಲ್ಲವೋ ಒಂದು ತಾವು ಉತ್ತರ ಕೊಡಬೇಕಾಗುತ್ತದೆ. ಈ ನಾಡಿನ ಜನ ಇದರ ಬಗ್ಗೆ ತೀರ್ಮಾನ ಮಾಡಬೇಕಾಗುತ್ತದೆ. ತಾವು ಪ್ರಜಾಪ್ರಭುತ್ವದ ಕೊಲೆ ಮಾಡಿದ್ದೀರಿ. ಚುನಾವಣೆ ಮಾಡುತ್ತೇವೆಂದು ಹೇಳಿ ಕೇವಲ ತಮ್ಮ ಜನ ಆರಿಸಿ ಬರಬೇಕೆಂಬ ದೃಷ್ಟಿಯಿಂದ ತಾವು ಪ್ರಯತ್ನ ಮಾಡಿದ್ದೀರಿ. ತಾವು ಇಡೀ ಪೊಲೀಸ್ ಮತ್ತು ಸಿವಿಲ್ ಮೆಷಿನರಿಯನ್ನು ದುರುಪಯೋಗ ಮಾಡಿದ್ದೀರಿ. ಆದ್ದರಿಂದ ತಾವು ಯಾವ ಕಾಯ್ದೆ, ಕಲಮ್‌ನಲ್ಲಿ ಚುನಾವಣೆ ಮುಂದೆ ಹಾಕಿದ್ದೀರಿ ಎಂದು ನಾನು ಕೇಳುತ್ತೇನೆ? ಆ ಅಧಿಕಾರ ನಿಮಗೆ ಇದೆಯೇ? ಯಾವ ಕಾರಣಕ್ಕೆ ಮುಂದು ಹಾಕಿದ್ದೀರಿ? ಕಾರವಾರದಲ್ಲಿ, ಹೊಸಕೋಟೆಯಲ್ಲಿ, ಬಾದಾಮಿಯಲ್ಲಿ, ಮಾಲೂರಿನಲ್ಲಿ ಯಾವ ಕಾರಣಕ್ಕೆ ಚುನಾವಣೆ ಮುಂದೆ ಹೋದವೆಂದು ನಮಗೆ ಗೊತ್ತಾಗಬೇಕು. ಒಂದು ವೇಳೆ ಜಿಲ್ಲಾಧಿಕಾರಿಗಳು ಮೀಸಲಾತಿ ಸರಿಯಾಗಿ ಅನುಸರಿಸಿಲ್ಲದಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಿ. Either you have to convince the House that the Deputy Commissioners who had made reservations had done it wrongly or you have to say they had done it correctly but to please our MLAs, our Ministers, we had to stop this election and we have bowed to their pressure. ಎಂದು ತಾವು ಹೇಳಬೇಕಾಗುತ್ತದೆ, ಸದನದ ಮುಂದೆ ಹೇಳಬೇಕಾಗುತ್ತದೆ. ಅದು ನಮಗೆ ಗೊತ್ತಾಗಬೇಕಾಗುತ್ತದೆ. ಯಾವ ಜಿಲ್ಲಾಧಿಕಾರಿಯೂ ತಮಗೆ ಬೇಕಾದ ಹಾಗೆ ಮಾಡುವುದಕ್ಕೆ ಹೋಗುವುದಿಲ್ಲ. ಅವರಿಗೆ ನೌಕರಿ ಬೇಡ ಆಗಿದೆಯೇ? ಅಥವಾ ನೀವೇ ಖಾಯಂ ಇಲ್ಲಿ ಉಳೀತೀರಿ ಎಂದು ಅವರು ತಿಳಿದುಕೊಳ್ಳುತ್ತೀರೋ? ಕೆಲವು ಕಡೆ ಜಿಲ್ಲಾಧಿಕಾರಿಗಳು ತಮ್ಮ ಕೆಲಸ ತಾವು ಮಾಡಿದ್ದಾರೆ. ಕೆಲವು ಜಿಲ್ಲಾಧಿಕಾರಿಗಳು

ಸ್ಪಷ್ಟವಾಗಿ ಹೇಳಿದ್ದಾರೆ. ನಾವು ಏನು ಮಾಡಿದ್ದೇವೆ ಅದನ್ನು ಬದಲಾವಣೆ ಮಾಡುವುದಕ್ಕೆ ತಯಾರು ಇಲ್ಲ, We stick to our proposals; if you want you do it ಎಂದು ಹೇಳಿದ್ದಾರೆ, ಅದರ ಅರ್ಥ ಜಿಲ್ಲಾಧಿಕಾರಿ ತಾನು ಮಾಡಿದ್ದು ಸರಿ ಎಂಬ ಬಗ್ಗೆ he was confident. ಆದರೆ ತಾವು ಫೈಲ್ ತರಿಸಿ, ಶಾಸಕರು, ಮಂತ್ರಿಗಳನ್ನು ಕರೆಯಿಸಿ ಯಾವ ಪ್ರಕಾರ ನಿನಗೆ ಬೇಕು ಮಾಡಪ್ಪ ಎಂದು ಹೇಳಿ ನೀವು ಮಾಡಿ ಕಳುಹಿಸಿದ್ದೀರಿ. ಸತ್ಯ ಇದ್ದರೆ ಸತ್ಯ ಎಂದು ಒಪ್ಪಿಕೊಳ್ಳಿ. I have confidence in you. Come on, reply whether it is true or not. ಇಲ್ಲ ನೀವೇ ಸ್ಪಷ್ಟವಾಗಿ ಹೇಳಿ. ಜಿಲ್ಲಾಧಿಕಾರಿಗಳು ತಪ್ಪು ಮಾಡಿದರು ಎಂದು ಹೇಳಿ. ಆ ಕಾರಣಕ್ಕೆ ಸರಿ ಇರಲಿಲ್ಲ, ಹಾಗಾಗಿ ಬದಲಾವಣೆ ಮಾಡಿದ್ದೇವೆಂದು ಹೇಳಿ. For that, you have to reply either of the one ಏನೂ ಹೇಳದೇ ಕೇವಲ ತಾವು, ತಮ್ಮ ಜನ ಅಧಿಕಾರದಲ್ಲಿ ಬರಬೇಕು, ಜನತಾದಳ ಅಥವಾ ರೈತ ಸಂಘ ಅಥವಾ ಬಿಜೆಪಿ ಹೆಚ್ಚು ಸಂಖ್ಯೆಯಲ್ಲಿ ಬಂದಿದ್ದಾರೆ, ಅವರು ಅಧ್ಯಕ್ಷರು ಹಾಗೂ ಉಪಾಧ್ಯಕ್ಷರು ಆಗುತ್ತಾರೆ ಎಂದು .....

ಶ್ರೀ ಎಂ. ವೀರಪ್ಪ ಮೊಯಿಲಿ : ಜನತಾದಳ ಬಂದಿದ್ದರೆ ಇಷ್ಟು ಹತಾಷೆ ಮಾಡಿ ಕೊಳ್ಳುವ ಅವಶ್ಯಕತೆ ಇರಲಿಲ್ಲ, ನೀವು ಬಹುಮತದಿಂದ ಬಂದಿದ್ದರೆ ಸನ್ಮಾನ್ಯ ದೇವೇಗೌಡರು ಸ್ವಾಲ್ ಮಾಡುವ ಅವಶ್ಯಕತೆಯೇ ಇರಲಿಲ್ಲ.

SRI. DESHAPANDE : I object, he has taken the name of my president; he is not a member here.

SRI M. VEERAPPA MOILY : When you are taking up politically,

SRI R.V. DESHPANDE : I have not taken it politically. Why are you worried?

ಶ್ರೀ ಎಂ. ವೀರಪ್ಪ ಮೊಯಿಲಿ : ಪಂಚಾಯಿತಿ ಚುನಾವಣೆಗಳು ಕಾಯ್ದೆ ಪ್ರಕಾರ ಯಾವ ರಾಜಕೀಯ ಪಕ್ಷದ ಒಂದು ಭಾಗವಹಿಸುವಿಕೆಯಿಂದ ಆಗಿಲ್ಲ, ನಾನ್ ಪಾರ್ಟಿ ಬೇಸಿಸ್‌ನಲ್ಲಿ ಆಗಿದೆ. ಹೀಗಿರುವಾಗ ಜನತಾ ದಳದವರು ಹೆಚ್ಚು ಚುನಾಯಿತರಾಗಿ ಬಂದಿದ್ದಾರೆ, ಆದುದರಿಂದ ಹೀಗೆ ಮಾಡುತ್ತಿದ್ದಾರೆಂದು ತಾವು ಹೇಳುವುದಾದರೆ, ತಾವು ರಾಜಕೀಯ ತೆಗೆದ ಮೇಲೆ ಈ ಕಡೆಯಿಂದ ಕೂಡ ರಾಜಕೀಯ ಬರುತ್ತದೆಂದು ಹೇಳಿ ನಿರೀಕ್ಷೆ ಮಾಡಿ ರಾಜಕೀಯವಾಗಿ ಮಾತನಾಡಬೇಕು. ನೀವು ರಾಜಕೀಯವಾಗಿ ಮಾತನಾಡಿದರೆ ನಾವೂ ರಾಜಕೀಯವಾಗಿ ಉತ್ತರ ಕೊಡುವುದಕ್ಕೆ ಶಕ್ತರಿದ್ದೇವೆಂಬುದನ್ನು ತಾವು ಸ್ವಲ್ಪ ತಿಳಿದುಕೊಂಡು ಮಾತನಾಡಬೇಕು. ರಾಜಕೀಯ ಇಲ್ಲ, ಕೇವಲ ಕಾನೂನು ಪ್ರಕಾರ ತಾವು ಮಾತನಾಡುವುದಾದರೆ ನಾವೂ ಕೂಡ ಅದೇ ಪ್ರಕಾರ ಮಾತನಾಡುತ್ತೇವೆ. ರಾಜಕೀಯವಾಗಿ ತೆಗೆದುಕೊಂಡರೆ ನೀವೂ ಕೂಡ ರಾಜಕೀಯವಾಗಿ ತೆಗೆದುಕೊಳ್ಳಬೇಕಾಗುತ್ತದೆ. ಆಗ ತಮ್ಮ ಸ್ಥಾನ ಎಲ್ಲಿ ಇರುತ್ತದೆಂದು ನಾವು ಹೇಳಬೇಕಾಗುತ್ತದೆ.

ಶ್ರೀ ಆರ್.ಎಲ್. ಜಾಲಪ್ಪ : ನಾನ್ ಪಾರ್ಟಿ ಬೇಸಿಸ್‌ನಲ್ಲಿ ಮಾಡಬೇಕೆಂದು ತಾವು ಮಾಡಿದಿರಿ. ತಮಗೆ...

ಶ್ರೀ ಎಂ. ವೀರಪ್ಪ ಮೊಯಿಲಿ : ಪಕ್ಷದ ವತಿಯಿಂದ ನೀವು ಏಕೆ ಮಾತನಾಡಿದ್ದೀರಿ? That is what I want. You are attributing party motivies which is totally unwarranted.

ತಾವು ಸ್ವಲ್ಪ ಕೂಲ್ ಆಗಿ. ನಾನು ಮಾತನಾಡುವುದು ಬೇಡ ಎಂದು ಇದ್ದೆ. ಸಾವಧಾನವಾಗಿ ಕೇಳಬೇಕೆಂದು ಇದ್ದೆ. ಪಕ್ಷಾತೀತವಾಗಿ ಅಭ್ಯರ್ಥಿಗಳು ನಿಂತು ಚುನಾವಣೆ ಆಗಿದೆ. ಎಂದು ನಮ್ಮ ತಿಳುವಳಿಕೆ ಪ್ರಕಾರ, ಆ ಉದ್ದೇಶದಿಂದ ನಾವು

ಮಾತನಾಡುತ್ತಿದ್ದೇವೆ. ವಾತಾವರಣ ಹೀಗೆ ಇರುವಾಗ ತಾವು ಹೇಳಬೇಕು. ಚುನಾವಣೆಯಲ್ಲಿ ಅವರವರ ಹಸ್ತಕ್ಷೇಪ ಆಗಿದೆ ಎಂದು ಹೇಳುತ್ತಿದ್ದೀರಿ. ಆ ಆಕ್ಷೇಪಣೆ ಏನಾದರೂ ಇವತ್ತಿನದಿವಸ ಇದ್ದರೆ ಅದನ್ನು ಎತ್ತುವುದಕ್ಕೆ ಸಾಕಷ್ಟು ಶಕ್ತಿ ಇದೆ. ತಾವು ಎತ್ತಬಹುದು. ನಮ್ಮ ಆಕ್ಷೇಪಣೆ ಇಲ್ಲ. ಆದರೆ ತಮ್ಮ ರಾಜಕೀಯ ಪಕ್ಷದ ಪರವಾಗಿ ಈ ಮಾತು ಎತ್ತುವುದಾದರೆ ನಾವು ಆಕ್ಷೇಪಣೆ ಮಾಡಬೇಕಾಗುತ್ತದೆ. ಏಕೆ ಹೇಳುತ್ತಿದ್ದೇನೆ ಎಂದರೆ, ತಮ್ಮ ಪಕ್ಷದ ನಾಯಕರು ಹೇಳಿಕೆ ಕೊಟ್ಟರು. ಅದು ಪತ್ರಿಕೆಗಳಲ್ಲಿ ಬಂದಿದೆ. ಅದು ರಹಸ್ಯವಾಗಿ ಉಳಿದಿಲ್ಲ. ಏನು ಹೇಳಿಕೆ ಕೊಟ್ಟರು? ನಾವು ಇಲ್ಲಿ ಸದನ ನಡೆಯುವುದಕ್ಕೆ ಬಿಡುವುದಿಲ್ಲ ಎಂದು ಹೊರಗಡೆಯಿಂದ ಹೇಳಿಕೆ ಕೊಟ್ಟರು. We could have brought the privilege motion againt him, but we do not want. Because as a political party.

ಒಂದು ರಾಜಕೀಯ ಪಕ್ಷದ ಅಧ್ಯಕ್ಷರು, ಒಂದು ಪ್ರಜಾಪ್ರಭುತ್ವದ ಪಂಚಾಯಿತಿ ರಾಜ್ ಒಂದು ತತ್ವಕ್ಕೆ ಯಾವುದೇ ಪಕ್ಷ ಬದ್ಧವಾಗಿರಬೇಕಾಗುತ್ತದೆ. ಅಲ್ಲವೇ? ಕಮಿಟ್‌ಮೆಂಟ್ ಇರಬೇಕಾಗುತ್ತದೆ. ಪಕ್ಷಾತೀತ ಚುನಾವಣೆ ಆಗಿದೆ. ಪಕ್ಷಾತೀತವಾಗಿ ಚುನಾವಣೆಯಾದಮೇಲೆ ಒಂದು ಪಕ್ಷದ ಈಗ ಒಬ್ಬ...

ಶ್ರೀ ವಾಟಾಳ್ ನಾಗರಾಜ್: ಪಕ್ಷಾತೀತವಾಗಿ ಆಗಿದೆ ಎಂದಮೇಲೆ ಬದಲಾವಣೆ ಏಕೆ ಆಗಬೇಕು?

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ: ಒಂದು ಜವಾಬ್ದಾರಿ ಪಕ್ಷದ ನಾಯಕರು. ಪಕ್ಷದ ಹೆಸರನ್ನು ಉಪಯೋಗ ಮಾಡಿಕೊಂಡು ಪಂಚಾಯಿತಿ ಚುನಾವಣೆಯಲ್ಲಿ ತಮ್ಮ ಪಕ್ಷಕ್ಕೆ ಅನ್ಯಾಯವಾಗಿದೆ ಎಂದು ಹೇಳಿ ಇವತ್ತು ಸದನ ನಡೆಯುವುದಕ್ಕೆ ಬಿಡುವುದಿಲ್ಲ ಎಂದರೆ ಈ ಸದನಕ್ಕೆ ಮಾಡಿದದ ಅಪಚಾರ.

ಶ್ರೀ ಆರ್.ವಿ. ದೇಶಪಾಂಡೆ: ಹೇಗೆ?

(ಗೊಂದಲ)

ಶ್ರೀ ಆರ್.ಎಲ್. ಜಾಲಪ್ಪ: ಹಾಗಿದ್ದರೆ ಪ್ರಿವಿಲೇಜ್ ಮೂವ್ ಮಾಡಿ. We will fight politically.

SRI. R.V. DESHAPANDE : Move it. We are not afraid of it.

(interruptions)

I am still balanced in my attack. I am fair in my attack.

(ಗೊಂದಲ)

ಶ್ರೀ ಎಂ. ವೀರಪ್ಪಮೊಯಿಲಿ : ಸನ್ಮಾನ್ಯ ವಿರೋಧಪಕ್ಷದ ನಾಯಕರು, ಅವರ ಪಕ್ಷದ ನಾಯಕರು, ಈ ಪಂಚಾಯಿತಿ ಚುನಾವಣೆಗೆ ಏನು ಹಚ್ಚಿದ್ದಾರೆ, ಅದಕ್ಕೆ ನಾನು ಆಕ್ಷೇಪಣೆ ಎತ್ತಲೇಬೇಕಾಗುತ್ತದೆ. ಏಕೆಂದರೆ, that shows you havd no commitment to this Panchayat Act.

ಶ್ರೀ ಆರ್.ಎಲ್. ಜಾಲಪ್ಪ: ನಾವು ಹೇಳುವುದನ್ನು ಕೇಳಿ, ಆಮೇಲೆ ನೀವು ಹೇಳಿ. ಪಕ್ಷಾತೀತವಾಗಿರಬೇಕು, ಈ ಚುನಾವಣೆಗಳು ಪಂಚಾಯಿತಿ ಲೆವೆಲ್‌ನಲ್ಲಿ ಪಕ್ಷಗಳು ಇರಬಾರದು ಎಂದು ಹೇಳಿದರು. ತಮಗೆ ಏನಾದರೊಂದು ತಿಳುವಳಿಕೆ ಇದ್ದರೆ, ಅಥವಾ ತಮ್ಮವರು ಏನೋ ಹೇಳಿದ್ದರೆ, ಪ್ರತಿಯೊಬ್ಬ ಅಭ್ಯರ್ಥಿಯೂ, 1-2 ಪರ್ಸೆಂಟ್ ಬಿಟ್ಟರೆ, ಮಿಕ್ಕವರೆಲ್ಲರೂ ಪಕ್ಷದ ನಾಯಕರ ಫೋಟೋಗಳನ್ನು ಹಾಕಿಕೊಂಡೇ,

ನಾನು ಕಾಂಗ್ರೆಸ್ ಪಕ್ಷಕ್ಕೆ ಸೇರಿದವರು, ನಾನು ಜನತಾ ದಳಕ್ಕೆ ಸೇರಿದವರನು, ಬಿ.ಜೆ.ಪಿ.ಗೆ ಸೇರಿದವನು ಎಂದು ಪ್ರಚಾರ ಮಾಡಿದ್ದಾರೆ. ಇದರಲ್ಲಿ ಪಕ್ಷ ಎಲ್ಲಿ ಬಂತು? ಇವೆಲ್ಲವೂ ನಿಮಗೆ ಗೊತ್ತಾಗುವುದಿಲ್ಲವೇ? ನಿಮ್ಮ ಮಂತ್ರಿಗಳಿಗೆ ಮತ್ತು ಶಾಸಕರಿಗೆ ಗೊತ್ತಾಗುವುದಿಲ್ಲವೇ? ಪ್ರತಿಯೊಬ್ಬರೂ ನಿಮ್ಮ ಫೋಟೋಗಳನ್ನು ಹಾಕಿಕೊಂಡು ಮಾಡಿದ್ದಾರೆ, ನಮ್ಮ ಫೋಟೋಗಳನ್ನು ಹಾಕಿಕೊಂಡು ಚುನಾವಣೆಗೆ ಹೋಗಿದ್ದಾರೆ. ಈ ರೀತಿ ನಿಮ್ಮ ತಾಲ್ಲೂಕಿನಲ್ಲಿ ಮಾಡಿಲ್ಲವೇ? ಎಲ್ಲಾ ತಾಲ್ಲೂಕಿನಲ್ಲಿಯೂ ಇದೇ ರೀತಿ ಮಾಡಿದ್ದಾರೆ. ಪಕ್ಷ ಎಲ್ಲಿ ಬಂತು? ಇವತ್ತು ಪಕ್ಷದ ಮೇಲೆಯೇ ನಿಂತಿದ್ದರೆ, ಇವತ್ತು ನಿಮಗೆ ಅವಕಾಶ ಸಿಗುತ್ತಿರಲಿಲ್ಲ. ನಮ್ಮ ಕಡೆಯಿಂದು ಕರೆದುಕೊಂಡು ಹೋಗಿ ಡಿಬೆಟ್ ಮಾಡುತ್ತಿದ್ದರು. ಆ ಸಂದರ್ಭ ಬಂದಾಗ ನಾನು ಮಾತನಾಡುತ್ತೇನೆ. ಆದ್ದರಿಂದ, ಪಕ್ಷಾತೀತ ಎನ್ನುವುದನ್ನು ದಯವಿಟ್ಟು ಮರೆತುಬಿಡಿ.

ಶ್ರೀ ಆರ್.ವಿ. ದೇಶಪಾಂಡೆ: ಮಾನ್ಯ ಮುಖ್ಯಮಂತ್ರಿಯವರಿಗೆ ನೇರವಾದ ಒಂದು ಪ್ರಶ್ನೆ ಕೇಳುತ್ತೇನೆ. ಪಕ್ಷಾತೀತವಾಗಿ ಚುನಾವಣೆ ಮಾಡಬೇಕೆಂದು ನಿರ್ಣಯವಾಗಿದ್ದುದು ನಿಜ. ಆದರೆ, ನಿಜವಾಗಿಯೂ, ಚುನಾವಣೆಯಾದಾಗ, ಮಾನ್ಯ ಹಿರಿಯ ಸದಸ್ಯರಾದಂಥ ಜಾಲಪ್ಪನವರು ಹೇಳಿದಹಾಗೆ, ತಮ್ಮ ಪಕ್ಷದಿಂದ ಇಂದಿರಾಗಾಂಧಿ, ರಾಜೀವ್‌ಗಾಂಧಿಯವರ ಫೋಟೋಗಳನ್ನು ಹಾಕಿರಬಹುದು, ನಮ್ಮ ಪಕ್ಷದವರೂ ಫೋಟೋಗಳನ್ನು ಹಾಕಿರಬಹುದು. ನಿಮ್ಮ ಈ ಚುನಾವಣೆಯಾದ ನಂತರ, ನಿಮ್ಮ ಕೆಪಿಸಿಸಿ (ಐ) ಜನರಲ್ ಸೆಕ್ರೆಟರಿ ಎಷ್ಟು ಪ್ರೆಸ್ ಕಾನ್‌ಫರೆನ್ಸ್ ಮಾಡಿ ಹೇಳಿದರು. ಐದುಸಾವಿರದ ಆರುನೂರು ಚಿಲ್ಲರೆ ಮಂಡಲಗಳಲ್ಲಿ, ಕಾಂಗ್ರೆಸ್(ಐ) ಗೆ ಇಷ್ಟು ಮಂಡಲಗಳಲ್ಲಿ ಬಹುಮತ ಸಿಕ್ಕಿದೆ ಎಂದು ಏಕೆ ಹೇಳಿದರು.

(ಗೊಂದಲ)

ಪಕ್ಷಾತೀತ ಎಂದು ಹೇಳಿದರೆ, What right he has got to say that?

(ಗೊಂದಲ)

ಶ್ರೀ ಆರ್.ಎಲ್. ಜಾಲಪ್ಪ: ಏಕೋ ಸ್ವಲ್ಪ ತಿರುವು ಮುರುವು ಆಗಿದೆ. ಕೇಂದ್ರದಿಂದ 12 ಸೂತ್ರಗಳನ್ನು ಕೊಟ್ಟರಲ್ಲಾ, ಅದು ಬಂದನಂತರ ಏಕೋ ಸ್ವಲ್ಪ ತಿರುವು ಮುರುವು ಆಗಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ: ಈ 12 ಸೂತ್ರದಿಂದ ನಿಮಗೆ ಏನಾಗಿದೆ ಎಂಬುದು ನಿಮಗೆ ಗೊತ್ತಿದೆ. ನಮ್ಮ ವಿಷಯ ಏತಕ್ಕೆ ಬೇಕು. ನಿಮಗೆ?

ಶ್ರೀ ಆರ್.ಎಲ್. ಜಾಲಪ್ಪ: ನಿಮ್ಮ ಇಂಟೆಲಿಜೆನ್ಸ್‌ನವರು ಸರಿಯಾಗಿ ಕೆಲಸ ಮಾಡುವುದಾದರೆ, ದಯವಿಟ್ಟು ಪಂಚಾಯಿತಿ ಚುನಾವಣೆಯಲ್ಲಿ ಏನಾಗಿದೆ ಎಂದು ತರಿಸಿಕೊಳ್ಳಿ. ತಾವು ಮಾಡುತ್ತೇವೆಂದು ಹೇಳಿದಿರಲ್ಲಾ, ತಾಲ್ಲೂಕು ಪಂಚಾಯ್ತಿ, ಜಿಲ್ಲಾಪಂಚಾಯ್ತಿ, ಅವುಗಳನ್ನು ಮಾಡಿಬಿಡಿ ಏನಾಗುತ್ತದೆ ಎಂಬುದನ್ನು ನಾಳೆ ದಿವಸ ನೋಡೋಣ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ: ಈ ಚುನಾವಣೆಯನ್ನೇ ತಡೆದುಕೊಳ್ಳುವುದಕ್ಕಾಗಲಿಲ್ಲ. ಇನ್ನು ಜಿಲ್ಲಾಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆಗಳಲ್ಲಿ ತಮ್ಮ ಗತಿ ಏನಾಗುತ್ತದೆ. ಎಂದು ಗೊತ್ತಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಹಿಂದೆ ಮಾನ್ಯ ಮುಖ್ಯಮಂತ್ರಿಗಳ ಧ್ವನಿ ಈ ಸದನದಲ್ಲಿ ವಿರೋಧ ಪಕ್ಷದ ಬಗ್ಗೆ ಅವರು ಮಾತನಾಡುತ್ತಿರುವುದನ್ನು ನೋಡಿದಾಗ,

ಇಷ್ಟು ವಿರುದ್ಧನಿ ಇರಲಿಲ್ಲ. ಈಗ ಈ ವಿರು ಧ್ವನಿ ಬರುವುದಕ್ಕೆ ಕಾರಣಗಳು ಏನು? ನಿಮ್ಮ ಮೇಜನ್ನು ಕುಟ್ಟಿ, ಹಿಂದೆ ತಿರುಗಿ ನೋಡಿ. ಹೇಳತಕ್ಕಂತಾದ್ದು ನಿಮಗೆ ಏನು ಸನ್ನಿವೇಶ? ನೀವು ಅದನ್ನು ನಮಗೆ ಹೇಳಿದರೆ, ಸದನದಲ್ಲಿ ಗೊತ್ತಾಗುತ್ತದೆ. ಎಷ್ಟು ಪ್ರಮಾಣದ ಶಕ್ತಿ ನಿಮಗೆ ಬಂದಿದೆ, ಮತ್ತೆ ಇಲ್ಲಿ ಕೆಲವರನ್ನು ನೋಡಿದೆ, ಹಗಲುರಾತ್ರಿ ನಿಮ್ಮನ್ನು ವಿರೋಧ ಮಾಡುತ್ತಿದ್ದವರು ಎದ್ದು ಎದ್ದು ನಿಮ್ಮಪರ ನಿಲ್ಲುತ್ತಿದ್ದಾರೆ. ಇದೆಲ್ಲಾ ನಿಮಗೆ ಶಕ್ತಿ ಬಂದಿರಬೇಕೆಂದು ಕಾಣುತ್ತದೆ. ಇಲ್ಲಿ ಕುಳಿತಿದ್ದವರೆಲ್ಲಾ ನಿಮ್ಮ ಪರ ಎದ್ದು ನಿಲ್ಲುತ್ತಿದ್ದಾರೆ. ಈ ಶಕ್ತಿಯಿಂದ ನೀವು ವಿರೋಧ ಪಕ್ಷದವರ ಮೇಲೆ ದಾಳಿ ಮಾಡುತ್ತಿದ್ದೀರೋ ಹೇಗೆ ಆದ್ದರಿಂದ, ನೀವು ಇಲ್ಲಿ ಸತ್ಯವನ್ನು ಹೇಳಬೇಕು. ನಿಮಗೆ ವಿರೋಧಪಕ್ಷದ ಮೇಲೆ ಯಾವಾಗಲೂ ಈ ಧಾಳಿ ಇರಲಿಲ್ಲ. ಆದರೆ, ನಿಮ್ಮ ಧ್ವನಿ ಬದಲಾವಣೆ ಆಗುವುದಕ್ಕೆ ಕಾರಣ ಏನು? ಒಂದು ವಿಚಾರದಲ್ಲಿ ನಾವು, ನೀವು ಈ ಸಭೆಯಲ್ಲಿ ಸತ್ಯ ಹೇಳೋಣ?

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ: ನಮಗೇನು ಭಯವಿದೆ ಎಂದರೆ, ಮಾನ್ಯ ವಾಟಾಳ್ ನಾಗರಾಜ್ ಹೇಳಿದಹಾಗೆ, ಯಾರು ಮಾನ್ಯ ಮುಖ್ಯಮಂತ್ರಿಯವರ ಮೇಲೆ, ಅವರ ಪಕ್ಷದ ಶಾಸಕರು ಧಾಳಿ ಮಾಡುತ್ತಿದ್ದರೋ, ಅವರು ಇವತ್ತು ಬಹಳ ಗೌರವದಿಂದ ಮಾತನಾಡುತ್ತಿದ್ದಾರೆ, ಅವರಿಗೆ ಬೆಂಬಲ ಕೊಡುತ್ತಿದ್ದಾರೆ. ಸಂತೋಷ. ಏಕೆಂದರೆ, ಆ ಪಕ್ಷದಲ್ಲಿ ಶಿಸ್ತು ಇರಬೇಕು. ಆದರೆ, ಏಪ್ರಿಲ್ ಮೊದಲನೇ ವಾರದಲ್ಲಿ ಮಂತ್ರಿಮಂಡಲ ಪುನರ್ ರಚನೆಯಾಗುತ್ತದೆಂದು ವಿಸ್ತರಣೆಯಾಗುತ್ತದೆಂದು ನಾನು ಕೇಳಿದ್ದೇನ, ಅದು ಆದನಂತರವೂ ಈ ಪ್ರೀತಿ ಉಳಿಯಲಿ ಎಂದು ಹೇಳುತ್ತೇನೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಆದ್ದರಿಂದ ನೀವು ಮಂತ್ರಿಮಂಡಲವನ್ನು ಜಾಸ್ತಿ ಮಾಡಬೇಡಿ.

ಶ್ರೀ ಆರ್.ವಿ. ದೇಶಪಾಂಡೆ: ಸರ್ಕಾರಕ್ಕೆ ಚುನಾವಣೆ ಮುಂದೆ ಹಾಕುವ ಅಧಿಕಾರ ಇದೆಯೋ ಇಲ್ಲವೋ. ಒಮ್ಮೆ ಚುನಾವಣೆಯ ಪ್ರಕ್ರಿಯೆ ಪ್ರಾರಂಭವಾದ ನಂತರ, ಯಾವ ನಿಯಮದ ಪ್ರಕಾರ, ಯಾವ ಕಾಯಿದೆ ಪ್ರಕಾರ ತಾವು ಚುನಾವಣೆ ಮುಂದೆ ಹಾಕುತ್ತೀರಿ? ಅದಕ್ಕೆ ಕಾರಣಗಳು ಏನು? ಕೇವಲ ನಮ್ಮ ಶಾಸಕರಿಗೆ, ನಮ್ಮ ಮಂತ್ರಿಗಳಿಗೆ ಬೇಕಾಗಿತ್ತು? ಹಾಗಾಗಿ ನಾವು ಮುಂದೆ ಹಾಕುತ್ತೇವೆ ಎಂದು ಹೇಳಿದರೆ, ಅದು ಬೇರೆ ಪ್ರಶ್ನೆ. ಆದರೆ, ಒಮ್ಮೆ ಒಂದು ಚುನಾವಣೆಯ ಪ್ರಕ್ರಿಯೆ ಪ್ರಾರಂಭವಾದ ನಂತರ, ನಾಮಿನೇಷನ್ಸ್ ಫೈಲ್ ಆದನಂತರ, ನೋಟಿಫಿಕೇಷನ್ ಆದನಂತರ, ಯಾವಾಗಲೂ ಚುನಾವಣೆಯನ್ನು ಮುಂದಕ್ಕೆ ಹಾಕುವುದಿಲ್ಲ. ಯಾವುದಾದರೂ ಲಾ ಅಂಡ್ ಆರ್ಡರ್ ಪ್ರಾಬ್ಲಮ್ ಇದ್ದರೆ, ಅಥವಾ ಅಭ್ಯರ್ಥಿ ಸತ್ತರೆ, ಆ ಸಂದರ್ಭದಲ್ಲಿ ಚುನಾವಣೆ ಮುಂದೆ ಹೋಗುತ್ತವೆ. ನಿಮಗೆ ಯಾವ ಕಾರಣಗಳಿದ್ದವು? ಯಾವ ಕಾರಣದಿಂದ ಚುನಾವಣೆಗಳನ್ನು ಮುಂದೆ ಹಾಕುವುದಕ್ಕೆ ಅವಶ್ಯವಾಯಿತು? ಇದರ ಬಗ್ಗೆ ಸರ್ಕಾರದಿಂದ ಸ್ಪಷ್ಟೀಕರಣ ಬರಬೇಕಾಗುತ್ತದೆ. ಇವತ್ತು ಮಾನ್ಯ ಮುಖ್ಯಮಂತ್ರಿಯವರು ಪಕ್ಷಾತೀತ ಚುನಾವಣೆ ಬಗ್ಗೆ ಹೇಳಿದರು. ನಿಜವಾಗಿಯೂ ಈ ಒಂದು ಮಸೂದೆ ಪಾಸಾದಾಗ, ಪಕ್ಷಾತೀತವಾದ ಚುನಾವಣೆಯಾಗಬೇಕೆಂದು ಎಲ್ಲರ ಸದಿಚ್ಛೆ ಇತ್ತು. ಗ್ರಾಮಾಂತರ ಪ್ರದೇಶದಲ್ಲಿ ಏಕೆ ತಿಕ್ಕಾಟ ಪಕ್ಷ ಪಕ್ಷದಲ್ಲಿ ಆದರೆ, ಸನ್ಮಾನ್ಯ ಶ್ರೀ ಜಾಲಪ್ಪನವರು ಹೇಳಿದಹಾಗೆ, ನಿಜವಾಗಿಯೂ ಚುನಾವಣೆಯಾದಾಗ ಆ ಪರಿಸ್ಥಿತಿ ಉಳಿದಿಲ್ಲ, ಎಲ್ಲರೂ ನೇರವಾಗಿ ಜನತಾ ದಳ ಅಥವಾ ಕಾಂಗ್ರೆಸ್ ಅಥವಾ ಕರ್ನಾಟಕ ಕಾಂಗ್ರೆಸ್ ಅಥವಾ ಬಿ.ಜೆ.ಪಿ.ಯವರು ನಿಂತಿಲ್ಲವೆಂದರೂ ಸಹ ಆ ಪಕ್ಷದ

ಕಾರ್ಯಕರ್ತರು ಚುನಾವಣೆಯ ಕಣದಲ್ಲಿ ಇಳಿದರು. ಇವತ್ತು ಚುನಾವಣೆಯಲ್ಲಿ ಇಳಿದ ನಂತರ, ಒಂದು ಪಕ್ಷಕ್ಕೆ ಬಹುಮತ ಬಂತು, ಮತ್ತೊಂದು ಕಡೆ ಬಂದಿಲ್ಲ. ಹಾಗಾಗಿ, ನಾನು ಈಗಾಗಲೇ ಹೇಳಿದಹಾಗೆ, ಚುನಾವಣೆಯಾದ ನಂತರ ನಾವೂ ಹೇಳಿದ್ದೆವು. ರಾಜ್ಯದ ಬಹುಭಾಗದಲ್ಲಿ ನಮಗೆ ಮೆಜಾರಿಟಿ ಇದೆ ಎಂದು ನಾವು ಹೇಳಿದ್ದೆವು. ಹಾಗೆಯೇ ಬಿ.ಜೆ.ಪಿ. ಯವರು, ಕಾಂಗ್ರೆಸ್‌ನವರು ನಮಗೆ ಮೆಜಾರಿಟಿ ಇದೆ ಎಂದು ಹೇಳಿದರು. ನಿಮಗೆ ಸರಿಯಾದ ಪಾಠ ಸಿಕ್ಕಿದೆ ಎಂದು ಮುಖ್ಯಮಂತ್ರಿ ಕೇಳುತ್ತಾರೆ. ಇದರ ಬಗ್ಗೆ ಸಮೀಕ್ಷೆ ಮಾಡಬೇಕು. ಯಾವ ಗ್ರಾಮಪಂಚಾಯ್ತಿಗಳಲ್ಲಿ ಹೆಚ್ಚು ಸದಸ್ಯರು ಯಾವ ಪಕ್ಷದಿಂದ ಆರಿಸಿ ಬಂದಿದ್ದಾರೆ ಎಂಬ ಬಗ್ಗೆ ಒಂದು ಸಮೀಕ್ಷೆ ಮಾಡಿದರೂ ನಮ್ಮದೇನೂ ತಕರಾರು ಇಲ್ಲ. ನಮಗೆ ತೊಂದರೆ ಇಲ್ಲ. ಏಕೆಂದರೆ, ನಮಗೆ ವಿಶ್ವಾಸವಿದೆ, ಹೆಚ್ಚಿನ ಪ್ರಮಾಣದಲ್ಲಿ ನಮ್ಮ ಸದಸ್ಯರು ಬಂದಿದ್ದಾರೆ. ನಮ್ಮ ದಿವಂಗತ ನಜೀರ್‌ಸಾಬ್‌ರವರು ಮತ್ತು ನಮ್ಮ ನೆಚ್ಚಿನ ನಾಯಕರಾದ ರಾಮಕೃಷ್ಣ ಹೆಗಡೆಯವರ ನೇತೃತ್ವದಲ್ಲಿ ಈ ಮಸೂದೆಯನ್ನು ಜಾರಿಗೆ ತಂದು, ಈ ವ್ಯವಸ್ಥೆಯನ್ನು ಕಾರ್ಯರೂಪಕ್ಕೆ ತಂದಾಗ, ಚುನಾವಣೆಗಳು ಪಕ್ಷದ ಆಧಾರದ ಮೇಲೆ ಆದವು.

1.20 ಪಿ.ಎಂ.

ಆದರೆ ಆಗ ಗಲಭೆ ಗಲಾಟೆ ಆಗಿಲ್ಲ. ಸಣ್ಣ ಪ್ರಮಾಣದಲ್ಲಿ ಆಗಿರಬಹುದ. You have not heard me when I was speaking ...

ಪಂಚಾಯತ್ ಚುನಾವಣೆ ಆದಾಗ ಕಡಿಮೆ ಗಲಭೆಗಳು ಆದವು ಎಂದು ನಾನು ಹೇಳಿದೆ. ನಾನು ಅಡ್ಮಿಟ್ ಮಾಡಿಕೊಂಡೆ. ಎಷ್ಟು ಕೊಲೆಗಳು ಆದವು, ಎಷ್ಟು ಕಿಡ್‌ನ್ಯಾಪಿಂಗ್ ಆಯಿತು ಎಂಬುದನ್ನು ನಾನು ಕೇಳುತ್ತೇನೆ. I am subject to correction.

ಶ್ರೀ ಎಂ. ವೀರಪ್ಪ ಮೊಯಿಲಿ : ಹಿಮಾಲಯದಷ್ಟು ಆಗಿದೆ.

ಶ್ರೀ ಆರ್.ವಿ. ದೇಶಪಾಂಡೆ : ನಿಮ್ಮದು ಹಿಮಾಲಯ ಬಿಟ್ಟು ಮೇಲೆ ಹೋಗಿಬಿಟ್ಟಿದೆಯಲ್ಲಾ. ಹಾಗಾಗಿ ಮಾನ್ಯ ಅಧ್ಯಕ್ಷರೇ, ಚುನಾವಣೆಗಳು ಆದವು. ಇಲ್ಲಿ ಅಲ್ಲಿ ಸ್ವಲ್ಪ ಸ್ವಲ್ಪ ಗಲಭೆಗಳು ಆಗಿರಬಹುದು. ಆದರೆ ಇವತ್ತು ಕಾಣಿಸುತ್ತಿವೆ. ಯಾವ ಪ್ರಕಾರ ಆ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಚುನಾವಣೆ ಆಯಿತು ಪರಿಶಿಷ್ಟಜಾತಿಯ ಹೆಣ್ಣು ಮಕ್ಕಳಿಗೆ ನೇಕೆಡ್ ಮಾಡುವುದು ಕಿಡ್‌ನ್ಯಾಪ್ ಮಾಡುವುದು ಅಬ್‌ಡಕ್ಟ್ ಮಾಡುವುದು ಹರಾಜಿಗೆ 25 ಸಾವಿರಕ್ಕೆ ನಾನು ತೆಗೆದುಕೊಳ್ಳುತ್ತೇನೆ 30 ಸಾವಿರಕ್ಕೆ ನಾನು ತೆಗೆದುಕೊಳ್ಳುತ್ತೇನೆಂದು ಹರಾಜು ಹಾಕುವುದು ಇದಕ್ಕಿಂತ ಇವತ್ತು ಪಕ್ಷದ ಹೆಸರಿನ ಮೇಲೆ ಚುನಾವಣೆ ಆಗಿದ್ದರೆ ಒಳ್ಳೆಯದು. ಆ ಅಭಿಪ್ರಾಯಕ್ಕೆ ನಾವು ಬರುತ್ತೇವೆ. ಪಕ್ಷದ ಆಧಾರದ ಮೇಲೆ ಇವತ್ತು ಚುನಾವಣೆ ಆದಾಗ ಒಂದು ಪ್ರಣಾಳಿಕೆ ಇರುತ್ತದೆ ಒಂದು ಕಾರ್ಯಕ್ರಮ ಇರುತ್ತದೆ ಒಂದು ಸಿಂಬಲ್ ಇರುತ್ತದೆ; ಆಂಟಿ ಡಿಫೆಕ್ಷನ್ ಆಗುತ್ತದೆ. ಒಂದು ನಿರ್ಬಂಧ ಹಾಕಬಹುದು ಆದರೆ ಇವತ್ತ ಏನೋ ಒಳ್ಳೆಯದು ಆಗುತ್ತದೆ......

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ : ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧಪಕ್ಷದ ನಾಯಕರು ಹಲವಾರು ಅಪಾದನೆಗಳ ಬಗ್ಗೆ ಹೇಳುತ್ತಿದ್ದಾರೆ. ಇವರು ಹೇಳತಕ್ಕಂಥ ಆಪಾದನೆ ಯಾವ ಊರಿನಲ್ಲಿ ನಡೆಯಿತು? ಎಲ್ಲಿ ನಡೆಯಿತು? ಏಕೆಂದರೆ ಈ ನಿಲುವಳಿ ಸೂಚನೆಯಲ್ಲಿ ಸ್ಪೆಸಿಫಿಕ್ ಮ್ಯಾಟರ್ ಆಫ್ ದಿ ಅರ್ಜೆಂಟ್ ಇಂಪಾಟೆನ್ಸ್ ಎಂದು ಇದೆ. ತಾವು ಕೊಟ್ಟಿರತಕ್ಕಂಥ ನೋಟೀಸ್‌ನಲ್ಲಿ ಕೂಡ Specific matter of urgent public importance that is there. There is no mention about specific matter of public importance. ಆದ್ದರಿಂದ ಸಾರಾಸಗಟು ಮಾತನಾಡುವಾಗ ಎಲ್ಲಿ ಆಯಿತು ಏನು ಆಯಿತು ಎನ್ನುವ ಬಗೆ ಅರ್ಥಕೆ. [illegible]

ಶ್ರೀ ಆರ್.ವಿ. ದೇಶಪಾಂಡೆ: ಎಲ್ಲಾ ಸುತ್ತಾಡಿಸುತ್ತಾ ಈಗ ಬಂದಿದ್ದೀರಿ. ನಾನು ಏನು ಮಾತನಾಡಿದೆ ಎಂಬುದು ಅವರಿಗೆ ಗೊತ್ತಿಲ್ಲ. ಮಾನ್ಯ ನಮ್ಮ ಗ್ರಾಮೀಣ ಅಭಿವೃದ್ಧಿ ಸಚಿವರು ಬಹಳ ತಾಳ್ಮೆಯಿಂದ ಕೇಳುತ್ತಿದ್ದಾರೆ. ನಾನು ಏನು ಮಾತನಾಡಿದೆ ಎಂಬುದರ ಬಗ್ಗೆ ಅವರನ್ನು ಕೇಳಿ. ನಾನು ಏನು ಮಾತನಾಡಿದೆ ಎಂಬುದರ ಬಗ್ಗೆ ಅವರನ್ನು ಕೇಳಿ. ನಾನು ಏನಾದರೂ ಬಹಳ ಅನ್‌ಫೇಲ್ ಆಗಿ ಮಾತನಾಡಿದ್ದರೆ ಅವರನ್ನು ಕೇಳಿ. ನಾನು ಬಹಳ ಬ್ಯಾಲೆನ್ಸ್ ಆಗಿ ಫ್ಯಾಕಟ್ಸ್‌ಗಳನ್ನು ಹೇಳುತ್ತಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ: ಈಗ ಸಾರಾಸಗಟಾಗಿ ನೇಕಿಡ್ ಮಾಡಿದ್ದಾರೆ ಅಂದ್ರೆ ಏನು ಎಲ್ಲಿ ಹೇಳಿ. ಜನರಲ್ ಆಗಿ ಹೇಳಿದರೆ ಏನಾದರೂ ಅರ್ಥ ಇದೆಯೇ? ಸನ್ಮಾನ್ಯ ವಿರೋಧಪಕ್ಷದ ನಾಯಕರು ಸರ್ಕಾರ ನಡೆಸಿದವರು. ಆಪಾದನೆ ಮಾಡುವುದಿದ್ದರೆ ಮಾಡಿ. ಇಂತಹ ನಿದರ್ಶನಗಳು ಆಗಿದೆ ಎಂದು ಹೇಳಿದರೆ ನಮ್ಮ ಗಮನಕ್ಕೆ ಬಂದರೆ ನಾವು ಅದರ ಬಗ್ಗೆ ವಿಚಾರ ಮಾಡುವುದಕ್ಕೆ ಆಗುತ್ತದೆ. ನಮಗೆ ಗೊತ್ತಿದ್ದ ಪ್ರಕಾರ ನನ್ನ ಗಮನಕ್ಕೆ ಬಂದಾಗ ತಾವು ಏನು ನೇಕೆಡ್ ಮಾಡಿದ್ದಾರೆಂದು ಹೇಳುವಂತಾದ್ದು ನನ್ನ ಗಮನಕ್ಕೆ ಬಂದ ಪ್ರಕಾರ ಸರ್ಕಾರದ ಮಾಹಿತಿ ಪ್ರಕಾರ ಅದು ಸತ್ಯ ಅಲ್ಲ. ತಾವು ಅನಾವಶ್ಯಕವಾಗಿ ಸಾರಾಸಗಟಾಗಿ ಆಪಾದನೆ ಮಾಡಿಕೊಂಡು ಯಾರ ಮೇಲಾದರೂ ಗೂಬೆ ಕೂರಿಸತಕ್ಕಂಥ ಕೆಲಸ ದಯಮಾಡಿ ಮಾಡಬೇಡಿ.

ಉಪಾಧ್ಯಕ್ಷರು: ಮಾನ್ಯ ಜಾಲಪ್ಪನವರೇ, ತಾವು ಮಾತನಾಡುತ್ತೀರಿ ತಾನೇ ಆಗ ಮಾತನಾಡಿ.

ಶ್ರೀ ಆರ್.ಎಲ್. ಜಾಲಪ್ಪ: ನಾನು ಮಾತನಾಡುವಾಗ ಅವರು ಇರುತ್ತಾರೋ ಇಲ್ಲವೋ, ದಲಿತ ಸದಸ್ಯೆಯ ವಸ್ತ್ರಾಪಹರಣ. ಇದು ನನ್ನ ತಾಲ್ಲೂಕಿನಲ್ಲಿ ಭಕ್ತರಹಳ್ಳಿ ಮಂಡಲ ಪಂಚಾಯತಿಯಲ್ಲಿ ಕಾಡುದಿಬ್ಬೂರಿನ ಒಬ್ಬ ಮಹಿಳೆ ಗೌರಮ್ಮ ಎನ್ನುವವರ ವಸ್ತ್ರಾಪಹರಣ ಮಾಡಿ ಅವರು ಕಿತ್ತುಕೊಂಡು ಓಡಿ ಹೋಗಿ ಓಟು ಮಾಡಿದ್ದಾರೆ. ಅವರು ನಮ್ಮ ಪಕ್ಷಕ್ಕೆ ಸೇರಿದವರು. ಪೊಲೀಸ್ ರಿಪೋರ್ಟ್ ಆಗಿದೆ. 2-3 ಜನರನ್ನು ಅರೆಸ್ಟ್ ಸಹ ಮಾಡಿದ್ದಾರೆ. ಎಲ್ಲಿ ಆಗಿದೆ ಎಂದು ನಿಮಗೆ ಅಂದರೆ ಗೃಹಮಂತ್ರಿಗಳಿಗೆ ಇನ್‌ಫರ್‌ಮೇಶನ್ ಬರಬೇಕಲ್ಲಾ ಸ್ವಾಮಿ. ನಿಮ್ಮ ಗಮನಕ್ಕೆ ಸಣ್ಣ ಸಣ್ಣದು ಬರುವುದಿಲ್ಲ ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಇಂತಾವುಗಳಾದರೂ ಬರಬೇಕು. This will have far reaching effect and that too, on a women belonging to the Scheduled caste. ಏನು ಇಲ್ಲ ಎಂದು ಹೇಳುತ್ತೀರಲ್ಲಾ. ಬೇಕಾದಷ್ಟು ಇದೆ ಹೇಳುತ್ತೇನೆ. ನಾನು ಬೇಕಾದರೆ ಹೇಳುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ: ನಮ್ಮ ಹಿರಿಯ ಸಚಿವರಾದಂತಹ ಹಾರ್‍ನಹಳ್ಳಿ ರಾಮಸ್ವಾಮಿಯವರು ಹೇಳಿದ ಹಾಗೆ ನಾನು ಎಲ್ಲೆಲ್ಲಿ ಘಟನೆ ಆಗಿದ್ದಾವೆ ಅದನ್ನು ಮಾತ್ರ ಹೇಳಿ ಬಾಕಿ ಇರುವುದರ ಬಗ್ಗೆ ನಮ್ಮ ಸದಸ್ಯರು ಬೆಳಕು ಚೆಲ್ಲುತ್ತಾರೆ. ಇವತ್ತು ನಾನು ಹೇಳಿದೆ ತಾವು ಏನು ಎರಡನೇ ಆರ್ಡರ್ ಮಾಡಿದ್ದೀರಿ ಅದರಿಂದ ಡಿಸ್‌ಕ್ರಿಷನ್ ಏನು ಆಯಿತು? ಶಾಸಕರ ಕೈಯಲ್ಲಿ ಹೋಯಿತು. ಎಲ್ಲಿ 2 ಜನ ಎಸ್‌ಸಿ ಬಂದಿದ್ದಾರೆ. ಅಲ್ಲಿ ಯಾರಿಗೂ ಸ್ಕೋಪ್ ಸಿಕ್ಕಿಲ್ಲ. ಆದರೆ ಎಲ್ಲಿ ಈಕ್ವಲ್ ನಂಬರ್ ಇತ್ತು ಅಲ್ಲಿ ಅವರಿಗೆ ಸ್ಕೋಪ್ ಸಿಕ್ಕಿತ್ತು. ಉದಾಹರಣೆ ಕೊಡುತ್ತೇನೆ. ನಿಮ್ಮದೇ ಪಕ್ಷದ್ದು ಕೊಡುತ್ತೇನೆ.

ಒಂದು ಮಂಡಲದಲ್ಲಿ 15 ಜನ ಇದ್ದು 10 ಜನ ನೀವು ಆರಿಸಿ ಬಂದರೂ ಸಹ ನಮ್ಮದೇ ಪಕ್ಷದಿಂದ 5 ಜನ ಬಂದರೆ ಒಂದು ವೇಳೆ ಯಾವ ಒಂದು 5 ಜನ ನನ್ನ ವರ್ಗಕ್ಕೆ ಸೇರಿದ್ದಾರೆ ಆಗ ನೀವು ಮೀಸಲಾತಿಯನ್ನು ಮಾಡಿದರೆ ಏನಾಯಿತು ನಿಮ್ಮ ಜನ 10 ಜನ ಬಂದರೂ ಸಹ ಅಲ್ಲಿ ನಿಮ್ಮ ಪಕ್ಷದವರು ಅಧ್ಯಕ್ಷರಾಗಲು ಸಾಧ್ಯವಾಗಲಿಲ್ಲ. ಇವತ್ತು ಜನರ ಒಂದು ಮ್ಯಾಂಡೇಟ್ ಏನು ಇತ್ತು

ಜನರತೀರ್ಪು ಏನು ಇತ್ತು ಅದು ನಿಮ್ಮ ಈ ಆದೇಶದಿಂದ ನೆಗೆಟೀವ್ ಆಯಿತು. ನಮ್ಮ ದೇಶದ ಪ್ರಜಾಪ್ರಭುತ್ವ ಮತ್ತು ಚುನಾವಣೆ ವ್ಯವಸ್ಥೆಯಲ್ಲಿ ಈ ಪ್ರಕಾರದ ಪ್ರಕ್ರಿಯೆ ಯಾವಾಗಲೂ ಆಗಿಲ್ಲ, ಈ ಪ್ರಕಾರದ ಅಕ್ರಮಗಳು ಯಾವಾಗಲೂ ಆಗಿಲ್ಲ. ಈಗ ಏನಾಗಿದೆ ಒಂದು ಕಡೆ ಪ್ರಧಾನರು ಆರಿಸಿ ಬಂದಿದ್ದಾರೆ. ಅವರಿಗೆ ಮೆಜಾರಿಟಿ ಇಲ್ಲ. ಮೀಸಲಾತಿಯಿಂದ ಆರಿಸಿ ಬಂದಿದ್ದಾರೆ. ಆ ಮಂಡಲ ನಡೆಯಬೇಕಲ್ಲಾ. ಅಲ್ಲಿ ಅಭಿವೃದ್ಧಿ ಆಗಬೇಕು. ಜನರ ಸಮಸ್ಯೆಗಳು ನಿವಾರಣೆ ಆಗಬೇಕು. ಕುಂದುಕೊರತೆ ನಿವಾರಣೆ ಆಗಬೇಕು. ನಾನು ಏನು ಕೇಳುತ್ತೇನೆ ಈ ರೀತಿ ಆದರೆ ಯಾವ ಪ್ರಕಾರ ಮಂಡಲ್ ನಡೆಯುವುದಕ್ಕೆ ಸಾಧ್ಯ? ಎಲ್ಲಿಮೆಜಾರಿಟಿ ಇಲ್ಲದಿದ್ದರೆ ಕೋರಂ ಆಗುವುದಿಲ್ಲ, ಅಲ್ಲಿ ಏನು ಮಾಡುವುದು? ಒಂದು ಮಂಡಲದಲ್ಲಿ ಸಮ ಇರುತ್ತಾರೆ. ನಮ್ಮ ಮಲೆನಾಡು ಜಿಲ್ಲೆಯಲ್ಲಿ ಮಂಡಲಗಳು ಬಹಳ ಸಣ್ಣವು ಇದೆ. ನನ್ನದೇ ಒಂದು ಮಂಡಲ ಉದಾಹರಣೆ ಕೊಡುತ್ತೇನೆ. ಹಿತ್ತಲಹಳ್ಳಿಮಂಡಲ್‌ನಲ್ಲಿ 4 ಜನ ಆರಿಸಿ ಬಂದಿದ್ದಾರೆ. 2 ಜನ ನಮ್ಮಪಕ್ಷದವರು ಒಬ್ಬರು ಬಿಜೆಪಿ ಯವರು ಒಬ್ಬರು ಕಾಂಗ್ರೆಸ್ ಪಕ್ಷದವರು. ಆ ಮಂಡಲದಲ್ಲಿ ಪ್ರಧಾನರೇ ಇಲ್ಲ ಈಗ. ಏಕೆಂದರೆ ಮಂಡಲ್ ಪ್ರಧಾನರು ಆಗಬೇಕಾದರೆ ಸೆಕೆಂಡ್ ಮತ್ತು ಪ್ರೊಪೋಸ್ ಮಾಡಬೇಕು. ಆ ಮಂಡಲದಲ್ಲಿ ಪ್ರಧಾನರೇ ಇಲ್ಲ. ಈ ಸಮಸ್ಯೆಯನ್ನು ಯಾವ ಪ್ರಕಾರ ಬಗೆಹರಿಸುತ್ತೀರಿ? ಇವತ್ತು ಇಂತಹ ಹಲವಾರು ಸಮಸ್ಯೆಗಳು ಇವತ್ತು ನಿರ್ಮಾಣ ಆಗಿದ್ದಾವೆ. ಈ ಎರಡನೇ ಆದೇಶದಿಂದ ಅದಕ್ಕೆ ತಾವು ಉತ್ತರ ಕೊಡಬೇಕಾಗುತ್ತದೆ. ಹಾಗಾಗಿ ಇವತ್ತು ವಿಕೇಂದ್ರಿಕರಣ ಮಾಡುತ್ತೇವೆಂದು ಹೇಳಿ ಸಂಪೂರ್ಣ ಕೇಂದ್ರೀಕರಣ ಮಾಡಿ ಇವತ್ತು ಹೊಸ ಒಂದು ಗಲಾಟೆ ಅತ್ಯಾಚಾರ ಅನ್ಯಾಯ ಕಿಡ್‌ನ್ಯಾಪಿಂಗ್ ಆಬ್‌ಡಕ್ಷಿಂಗ್ ಈ ಪ್ರಮಾಣದಲ್ಲಿ ಆದರೆ ಅದು ಸರಿಯೇ? ಮುಖ್ಯಮಂತ್ರಿಯವರು ಹೇಳುತ್ತಾರೆ. ತಾವು ನೇರವಾಗಿ ಹೇಳಿ ಎಂದು. ಏನು ನೇರವಾಗಿ ಹೇಳಲಿ? ಹಲವಾರು ಪತ್ರಿಕೆಗಳಲ್ಲಿ ಏನೇನು ನಡೆದಿದೆ ಎಂದು ಡೀಟೈಲ್ ಆಗಿ ಬಂದಿದೆ. ಈಗ ಏನಾಗಿದೆ ಅದರ ಬಗ್ಗೆ ನಾವು ತಲೆತಗ್ಗಿಸಬೇಕಾಗುತ್ತದೆ. ಆದರೆ ಅಧಿಕಾರದಲ್ಲಿದ್ದಂತಹವರು ತಾವು ಆ ಜವಾಬ್ದಾರಿ ಆ ಹೊಣೆ ತೆಗೆದುಕೊಳ್ಳಬೇಕಾಗುತ್ತದೆ. ಜವಾಬ್ದಾರಿಯಿಂದ ಓಡಿ ಹೋಗುವುದಕ್ಕೆ ಆಗುವುದಿಲ್ಲ. ತಾವು ಒಪ್ಪಿಕೊಳ್ಳಬೇಕಾಗುತ್ತದೆ. ಎಲ್ಲಿ ಅನ್ಯಾಯವಾಗಿದೆ, ಎಲ್ಲಿ ಅತ್ಯಾಚಾರ ಆಗಿದೆ ಎಂಬುದರ ಬಗ್ಗೆ ವಿಚಾರಣೆ ಮಾಡಬೇಕಾಗಿದೆ. ಕೆಲವು ನಮ್ಮ ಕಾಂಗ್ರೆಸ್ ಪಕ್ಷದ ಸದಸ್ಯರು ಹೇಳಿದರು ನಿಮ್ಮ ಪಕ್ಷದ ಕಾರ್ಯಕರ್ತರಿಂದ ಅನ್ಯಾಯ ಆಗಿದೆ ಎಂದು ನನಗೆ ಬೇಜಾರು ಇಲ್ಲ, ತಾವು ಎನ್‌ಕ್ವೈರಿ ಮಾಡಿ. ಅದರ ಬಗ್ಗೆ ನನ್ನ ತಕರಾರು ಇಲ್ಲ. ವಿಚಾರಣೆ ಆಗಬೇಕು ಅಷ್ಟೇ.

ಶ್ರೀ ಎಂ.ವೈ. ಘೋರ್ಪಡೆ : ಮಾನ್ಯ ಅಧ್ಯಕ್ಷರೇ, ನಾನು ಮಧ್ಯೆ ಪ್ರವೇಶ ಮಾಡಿ ಮಾತನಾಡುವುದಕ್ಕೆ ಇಷ್ಟಪಡುತ್ತಿಲ್ಲ. ಏಕೆಂದರೆ ಸಂಪೂರ್ಣವಾದ ಸ್ವಾತಂತ್ರ ನಮ್ಮನ್ನು ಟೀಕೆ ಮಾಡಲಿಕ್ಕೆ ಇರಲಿ ಎಂಬ ಉದ್ದೇಶದಿಂದ ಹಾಗೆ ಅಂದ ಹೇಳಿದ ತಕ್ಷಣ ನೀವು ಹೇಳಿದ ಎಲ್ಲಾ ಮಾತನ್ನು ನಾನು ಒಪ್ಪಿಕೊಳ್ಳುತ್ತಿದ್ದೇನೆ ಎಂದು ಯಾರೂ ಭಾವಿಸಬಾರದು. ನಾನು ಉತ್ತರ ಕೊಡುವ ಕಾಲಕ್ಕೆ ತಮ್ಮ ಟೀಕೆಗೆ ಪ್ರತಿಯೊಂದು ಪ್ರಶ್ನೆಗೆ ಪ್ರಾಮಾಣಿಕವಾದ ಉತ್ತರ ಕೊಡಲಿಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ಅದರಲ್ಲಿ ಅನುಮಾನ ಇರಬೇಕಾದುದು ಇಲ್ಲ, ಆದರೆ ತಮ್ಮ ಟೀಕೆ ಪ್ರಭಾವಶಾಲಿ ಆಗಬೇಕಾದರೆ ಆದಷ್ಟು ಮಟ್ಟಿಗೆ ಅತಿರೇಕ ಅತಿಶಯೋಕ್ತಿ ಸ್ವಲ್ಪ ಕಡಿಮೆ ಮಾಡಿಕೊಂಡರೆ ಉತ್ತಮ.

ಶ್ರೀ ಆರ್.ವಿ. ದೇಶಪಾಂಡೆ : ಅತಿಶಯೋಕ್ತಿ ಮಾಡಿದರೆ ತಾವು ಹೇಳಬಹುದು. ಈ ಕಾರಣಕ್ಕೆ ಅತಿಶಯೋಕ್ತಿ ಮಾಡಿದಿರಿ ಎಂದು ಹೇಳಬಹುದು. ಆ ಅಧಿಕಾರ ತಮಗೂ ಇದೆ. ಆ ಅಧಿಕಾರ ನಾನು ನಿಮ್ಮಿಂದ ಕಸಿದುಕೊಂಡಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಕೆಲವು ಉದಾಹರಣೆಗಳನ್ನು ಕೊಡಿ ಎಂದು ಹೇಳಿದರು. ಈಗ ನಿಮ್ಮ ಸಂಪುಟದಲ್ಲಿದ್ದ ನಿಮ್ಮ ಒಬ್ಬ ಮಂತ್ರಿಗಳು ಮಾನ್ಯ ನಿಸ್ಸಾರ್ ಅಹ್ಮದ್ರವರು

ಕೋಲಾರದಿಂದ ಈ ಎಲ್ಲಾ ಗಲಭೆ ಆಗಲಿಕ್ಕೆ ನಾವೇ ಕಾರಣ ಎಂದು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ.

ಶ್ರೀ ಕೆ. ನಿಸ್ಸಾರ್ ಅಹ್ಮದ್ : ಮಾನ್ಯ ಅಧ್ಯಕ್ಷರೇ, ನಾನು ಆ ಸ್ಟೇಟ್ಮೆಂಟನ್ನು ಈಗಾಗಲೇ ಡಿನೇ ಮಾಡಿ ಹೇಳಿಕೆ ಕೊಟ್ಟಿದ್ದೇನೆ. ನಾನು ಆ ತರಹ ಹೇಳಿಲ್ಲ. ಆಲ್ರೆಡಿ ಡಿನೈ ಮಾಡಿದ್ದೇನೆ ಪತ್ರಿಕೆಯವರಿಗೂ ಕೊಟ್ಟಿದ್ದೇನೆ. 19ನೇ ತಾರೀಖು ಬೇರೆ ಲೋಕಲ್ ಪತ್ರಿಕೆಗಳಲ್ಲಿ ಕೂಡ ನೋಡಬಹುದು. ನಾನು ಆ ತರಹ ಹೇಳಲೇ ಇಲ್ಲ. ನಾನು ಡಿನೇ ಮಾಡಿರುವುದು ಪತ್ರಿಕೆಯಲ್ಲಿ ಇದೆ.

ಶ್ರೀ ಆರ್ವಿ ದೇಶಪಾಂಡೆ : ತಾವು ಡಿನೈ ಮಾಡಿದರೂ ಸಹ ಆ ಭಾಗದ ಜನ ಅದರ ಬಗ್ಗೆ ನಿರ್ಣಯ ತೆಗೆದುಕೊಳ್ಳುತ್ತಾರೆ. ಸರಿಯೋ ಸತ್ಯವೋ ಅಸತ್ಯವೋ ನನಗೆ ಗೊತ್ತಿಲ್ಲ. I leave it there. I leave it you. When the Hon'ble Minister say I have to believe ಆದರೆ ಈ ಸ್ಟೇಟ್ಮೆಂಟ್ ತಾವು ಕೊಟ್ಟರೆ ಒಂದು ಮಾತು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ತಾವು ಮಂತ್ರಿಯಾಗಿ ಒಳ್ಳೆಯ ಕೆಲಸ ಮಾಡಿದಿರಿ, ಪ್ರಾಮಾಣಿಕವಾಗಿ ಈ ಸ್ಟೇಟ್ಮೆಂಟ್ ಕೊಟ್ಟಿದ್ದೀರಿ ಎಂದು ಹೇಳಬೇಕಾಗುತ್ತದೆ.

ಶ್ರೀ ಕೆ.ಎ. ಸಗೀರ್ ಅಹಮದ್ : ಈ ಭಾಗದ ಸದಸ್ಯರಾಗಲಿ ಆ ಭಾಗದ ಸದಸ್ಯರಾಗಲಿ ಅವರನ್ನು ರಕ್ಷಣೆ ಮಾಡುವ ಕರ್ತವ್ಯ ನಮ್ಮದು ಎಂದು ನಾವು ಭಾವಿಸುತ್ತೇವೆ. ನೇರವಾಗಿ ಮಾನ್ಯ ಮಂತ್ರಿಗಳು ಹೇಳುತ್ತಾರೆ ಅಂತಹ ಹೇಳಿಕೆಯನ್ನು ನಾನು ಪತ್ರಿಕೆ ಮೂಲಕ ಹೇಳಲೇ ಇಲ್ಲ ಎಂದು. ಅವರು ಹೇಳಲಿಲ್ಲ ಎಂದು ನೇರವಾಗಿ ಡಿನೇ ಮಾಡುತ್ತಿದ್ದಾರೆ.

ಶ್ರೀ ಆರ್.ವಿ. ದೇಶಪಾಂಡೆ : ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನಲ್ಲಿ ಏನಾಯಿತು ಎಂಬುದು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಬಂದಿರಬಹುದು. ಇನ್ನಬೆಟ್ಟು ಪಂಚಾಯತಿ, ಬೆಳ್ತಂಗಡಿ ತಾಲ್ಲೂಕು, ಅಲ್ಲ ಏನಾಯಿತು ಎಂದರೆ ವರ್ಮ ಅನ್ನುವ ಒಬ್ಬ ಲೆಕ್ಚರರ್ ಇದ್ದರು. ಅಲ್ಲ ಭಗವಾನ್ದಾಸ್ ಅಂತ ಸಿಪಿಐ. ಆ ಮಂಡಲದಲ್ಲಿ ನಮ್ಮ ಪಕ್ಷದ ಅಭ್ಯರ್ಥಿಗೆ ಬೆಂಬಲ ಕೊಡುವ 8 ಜನ, ನಿಮ್ಮ ಪಕ್ಷಕ್ಕೆ ಬೆಂಬಲ ಕೊಡುವ 7 ಜನ, ಆದರೆ ಚುನಾವಣೆಗಿಂತ ಮುಂಚೆ ಒಬ್ಬ ಸದಸ್ಯರು ನಮ್ಮ ಪಕ್ಷ ಬಿಟ್ಟು ನಿಮ್ಮ ಕಡೆ ಹೋದರು. ಆಗ ಏಳೇಳು ಆಯಿತು. ಟಾಸ್ನಿಂದ ಚುನಾವಣೆಯಾಗಬೇಕಾಗಿತ್ತು. ಅಷ್ಟರಲ್ಲಿ ಅಲ್ಲೇನಾಯಿತು ಎಂದರೆ ಸಿಪಿಐ ಭಗವಾನ್ದಾಸ್ ಇವರ ನೇತೃತ್ವದಲ್ಲಿ ಇವರು ಅಧಿಕಾರದ ಪಕ್ಷಕ್ಕೆ ಸಹಾಯ ಮಾಡಬೇಕೆಂಬ ಭಾವನೆಯಿಂದ ಹೊನ್ನಮ್ಮ ಎಂಬ ಎಸ್ಸಿ ಹೆಣ್ಣುಮಕ್ಕಳಿಗೆ 10ನೇ ತಾರೀಖು ಮುಂಚೆ ಕಿಡ್ನ್ಯಾಪ್ ಮಾಡಲು ಸಹಾಯ ಮಾಡಿದರು. ಈ ಹೆಣ್ಣುಮಗಳನ್ನು ಕಿಡ್ನ್ಯಾಪ್ ಮಾಡಿಕೊಂಡು ಮಂಗಳೂರಿಗೆ ತೆಗೆದುಕೊಂಡು ಹೋದರು. ಮಂಗಳೂರಿನಲ್ಲಿ ಗಂಗಾಧರ್‌ಶಿವತಾ ಎಂಬ ವಿಶ್ವಹಿಂದೂ ಪರಿಷತ್ನ ಅಧ್ಯಕ್ಷರ ಮನೆಯಲ್ಲಿಟ್ಟರು. ಬಹಳ ಗಲಾಟೆಯಾಯಿತು ಬೆಳ್ತಂಗಡಿಯಲ್ಲಿ, 16ನೇ ತಾರೀಖು ಚುನಾವಣೆ, ಶಾಸಕರ ಮನೆಗೂ ಘೆರಾವ್ ಹಾಕಿದರು, ಪೋಲಿಸರಿಗೆ ಕಂಪ್ಲೇಂಟ್ ಕೊಟ್ಟರು, ಆದರೆ ಯಾವ ಕ್ರಮನೂ ಆಗಿಲ್ಲ, ಕಲ್ಲುತೂರಾಟ ಆಗಿದೆ, ಗಲಾಟೆ ಆಗಿದೆ 16ನೇ ತಾರೀಖು ಚುನಾವಣೆಯಾಯಿತು. ಚುನಾವಣೆಯ ಮುಂಚೆ ಹೊನ್ನಮ್ಮಳ ತಂದೆ ಬೆಳ್ತಂಗಡಿ ಪೋಲೀಸರಿಗೆ ಕಂಪ್ಲೇಟ್ ಕೊಟ್ಟರು, ಅಲ್ಲಿದ್ದ ಕಾಂಗ್ರೆಸ್ ಪಕ್ಷದ ಮುಖಂಡರ ಮೇಲೆ, ಮನೋವರ್ಸ್ಲೇತ್, ಬಾಬು, ಮೈಲೊತ್ತಾಯ, ಇಬ್ರಾಹಿಂ, ಸನ್ನು ಸಾಹೇಬ್ ಮತ್ತು ಸ್ಥಳೀಯ ಶಾಸಕರ ಮೇಲೆ. ಚುನಾವಣೆಯಾದ ನಂತರ ಅಮೇಲೆ ಬಿಡುಗಡೆಯಾಯಿತು. ಇವತ್ತು ಮುಖ್ಯಮಂತ್ರಿಗಳು ಹೇಳಿದರು, ನಿಮಗೇನು ಗೊತ್ತು ಎಂದು, ನಾನು ಅವರ ಗಮನಕ್ಕೆ ಈ ಕಂಪ್ಲೇಂಟ್ ಎಫ್ಐಆರ್ ಎರಡೂ ಕಳುಹಿಸುತ್ತೇನೆ. ಕಿಡ್ನ್ಯಾಪ್ ಮಾಡಿದ ಬಗ್ಗೆ ಈ 4 ಜನ ಸ್ಥಳೀಯ ಶಾಸಕರ ಮೇಲೆ ಅಕ್ಯೂಸ್ ಮಾಡಿದ್ದಾರೆ.

ಶ್ರೀ ಕೆ. ಗಂಗಾಧರಗೌಡ : ಅಧ್ಯಕ್ಷರೇ, ನನ್ನ ಹೆಸರು ಎತ್ತಿದ್ದಾರೆ...

ಉಪಾಧ್ಯಕ್ಷರು : ಕುಳಿತುಕೊಳ್ಳಿ.

(ಸದನವು ಮಧ್ಯಾಹ್ನ 1 ಗಂಟೆ 36 ನಿಮಿಷಕ್ಕೆ ಮುಂದೂಡಲ್ಪಟ್ಟಿತು ಮತ್ತೆ 2.30 ನಿಮಿಷಕ್ಕೆ ಮತ್ತೆ ಸೇರಲು ಮುಂದೂಡಲ್ಪಟ್ಟಿತು.)

(ಸಭೆಯು 3-10 ನಿಮಿಷಕ್ಕೆ ಪ್ರಾರಂಭವಾಯಿತು)

(ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದ್ದರು)

ಶ್ರೀ ಕೆ. ಗಂಗಾಧರಗೌಡ : ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧಪಕ್ಷ ನಾಯಕರು ಮಾತನಾಡುವಾಗ ನನ್ನ ಮೇಲೆ ಅಪಾದನೆ ಮಾಡಿದ್ದಾರೆ.

ಶ್ರೀ ಆರ್.ವಿ. ದೇಶಪಾಂಡೆ : ನಾನು ಅವರು ಕಾರಣರು ಎಂದು ಹೇಳಲಿಲ್ಲ. ಅದರಲ್ಲಿ ನೀವು ಅಕ್ಯೂಸ್ಡ್ ಎಂದು ಹೇಳಿದ್ದೇನೆ.

ಶ್ರೀ ಕೆ. ಗಂಗಾಧರಗೌಡ : ನಾನು ಆ ಬಗ್ಗೆ ಕೆಲವು ವಿಚಾರಗಳನ್ನು ಹೇಳಬೇಕಾಗುತ್ತದೆ.

ಶ್ರೀ ಆರ್.ವಿ. ದೇಶಪಾಂಡೆ : ನಾನು ಅವರ ಬಗ್ಗೆ ಏನೂ ಹೇಳಲಿಲ್ಲ.

ಶ್ರೀ ಕೆ. ಗಂಗಾಧರಗೌಡ : ನನ್ನದೊಂದು ಪಾಯಿಂಟ್ ಆಫ್ ಆರ್ಡರ್. ನೀವು ಹೇಳುವಾಗ ನನ್ನ ಮೇಲೆ ಅಪಾದನೆ ಬರುತ್ತದೆ. ಆದ್ದರಿಂದ ಇದರ ಬಗ್ಗೆ ಎರಡು ಮಾತು ಹೇಳಲು ಅವಕಾಶ ಕೊಡಬೇಕು. ಇದು ಪಾಯಿಂಟ್ ಆಫ್ ಆರ್ಡರ್. ಇನ್ನಬೆಟ್ಟು ಮಂಡಲದಲ್ಲಿ ಕಿಡ್ನ್ಯಾಪ್ ಆಗಿದೆ ಎಂದು ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದರು. ಅದರಲ್ಲಿ ಸ್ಥಳೀಯ ಶಾಸಕರ ಕೈವಾಡ ಇದೆ ಎಂದು ಪ್ರಸ್ತಾಪ ಮಾಡಿದ್ದಾರೆ. ಆದರೆ ವಿರೋಧ ಪಕ್ಷದ ನಾಯಕರಿಗೆ ಕೆಲವು ವಿಚಾರ ತಮ್ಮ ಮೂಲಕ ಹೇಳಬೇಕಾಗುತ್ತದೆ. ಇವರು ಏನು ಮಾಡಿದ್ದಾರೆ ಅದನ್ನೂ ಕೂಡ ಅವರು ತಿಳಿದುಕೊಳ್ಳಬೇಕಾಗುತ್ತದೆ. 1985ರಲ್ಲಿ ಬಿಜೆಪಿಯ ಸದಸ್ಯರನ್ನು ಇವರು ಕಿಡ್‌ನ್ಯಾಪ್ ಮಾಡಿದರು.

ಶ್ರೀ ಆರ್.ವಿ. ದೇಶಪಾಂಡೆ : ಇದು ಪಾಯಿಂಟ್ ಆಫ್ ಆರ್ಡರೇ?

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ : ಮಾನ್ಯ ಸದಸ್ಯರಿಗೆ ಸಂಬಂಧಪಟ್ಟಂತೆ ತಾವು ಹೇಳಿದಾಗ ಅವರು ಸಭೆಯಲ್ಲಿದ್ದುದರಿಂದ ಹೇಳುತ್ತಿದ್ದಾರೆ...

(ಗೊಂದಲ)

ಶ್ರೀ ಸಿ. ಬೈರೇಗೌಡ : ನಾನು ಮಾಡಬಾರದ್ದೆಲ್ಲ ಮಾಡಿದ್ದೇನೆ ಎಂದು ಅವರೇ ಒಪ್ಪಿಕೊಂಡಿದ್ದಾರೆ, ಆದ್ದರಿಂದ ಇದು ವ್ಯಥಾ ಚರ್ಚೆ, ಆದ್ದರಿಂದ ಸದನದ ಸಮಯ ಹಾಳಾಗುತ್ತಿದೆ.

ಉಪಾಧ್ಯಕ್ಷರು : ಅವರು ಪಾಯಿಂಟ್ ಆಫ್ ಆರ್ಡರ್ ಹೇಳುತ್ತಿದ್ದಾರೆ, ಕುಳಿತುಕೊಳ್ಳಿ.

ಶ್ರೀ ಕೆ. ಗಂಗಾಧರಗೌಡ : ನಾನು ಹಿನ್ನೆಲೆಯನ್ನು ಹೇಳುತ್ತಿದ್ದೇನೆ. 1985ರಲ್ಲಿ ಬೆಳ್ತಂಗಡಿಯಲ್ಲಿ ಒಬ್ಬ ಶಾಸಕರಿದ್ದರು, ಅವರನ್ನು ಇವರು ಅಪಹರಣ ಮಾಡಿ ಇವರ ಪಕ್ಷಕ್ಕೆ ತೆಗೆದುಕೊಂಡರು ಅದರ ಒಂದು ಪ್ರತಿಧ್ವನಿ ಅಲ್ಲಿ ನಡೆದಿದೆ. ನಾನೇನೂ ಜವಾಬ್ದಾರನಲ್ಲ. ಇವರು ಹೇಳುತ್ತಿದ್ದಾರೆ ವಿಶ್ವಹಿಂದೂ ಪರಿಷತ್ತಿನ ಅಧ್ಯಕ್ಷರ ಮನೆಯಲ್ಲಿ ಆ ಸದಸ್ಯರನ್ನು ಕೊಂಡೊಯ್ದು ಕೂರಿಸಿದರು. ಇಂತಿಂತಹ ಬೇರೆ ಬೇರೆ ಜನರ ಹೆಸರು ಹೇಳಿ ಕೇಸ್ ರಿಜಿಸ್ಟರಾಗಿದೆ ಎಂದು ಹೇಳುತ್ತಿದ್ದಾರೆ. ಅದಕ್ಕೂ ನನಗೂ

ಯಾವುದೇ ಸಂಬಂಧ ಇಲ್ಲ, ಅಲ್ಲಿ ನಡೆದ ಘಟನೆ ಏನೆಂದರೆ ವಿಎಚ್ಪಿ ಆಗಿರಲಿ, ಬಿಜೆಪಿ ಆಗಿರಲಿ ಇವರು ಜನತಾದಳದ ಹಿನ್ನೆಲೆಯಲ್ಲಿ ಏನು ಕೆಲಸ ಮಾಡಿದ್ದಾರೆ, ಏನು ಕಿಡ್ನ್ಯಾಪ್ ಮಾಡಿದ್ದಾರೆ ಅದರ ಹಿನ್ನೆಲೆ ನಡೆಯುತ್ತಿದೆ ಇಲ್ಲಿ. ಅಲ್ಲಿ ಶಾಸಕರು, ಇನ್ಸ್‌ಪೆಕ್ಟರಗ ಇನ್ವಾಲ್ವ್ ಆಗಿದ್ದಾರೆ ಎಂದು ಹೇಳುವಂತಹ ಅವಶ್ಯಕತೆ ಇಲ್ಲ. ಬದಲಾಗಿ ಇವರೇ ಹಳದಂಗಡಿ ಮಂಡಲ ಎಂಬಲ್ಲಿ ಇವರೇ ಕಿಡ್ನ್ಯಾಪ್ ಮಾಡಿದರು. ಹೇಮಾವತಿ ಎಂಬ ಸದಸ್ಯರನ್ನು ಇವರು ಕಿಡ್ನ್ಯಾಪ್ ಮಾಡಿದಾಗ ನಮ್ಮ ಜನ ಹೋಗಿ ಹಿಂದಕ್ಕೆ ಎಳೆತಂದರು.

ಉಪಾಧ್ಯಕ್ಷರು : ವಿರೋಧಪಕ್ಷದ ನಾಯಕರು ನಾನು ಹಾಲಿ ಶಾಸಕರು ಇನ್ವಾಲ್ವ್ ಆಗಿದ್ದಾರೆಂದು ಹೇಳಲೆ ಇಲ್ಲವೆಂದು ಹೇಳಿದ್ದಾರೆ.

ಶ್ರೀ ಕೆ. ಗಂಗಾಧರಗೌಡ : ಆ ಮಾತನ್ನು ಅವರು ಹಿಂದಕ್ಕೆ ತೆಗೆದುಕೊಳ್ಳಬೇಕು.

(ಗೊಂದಲ)

ಶ್ರೀ ಕೆ. ಗಂಗಾಧರಗೌಡ : ಇವರು ಕಂಪ್ಲೇಂಟನ್ನು ದುರುದ್ದೇಶದಿಂದ ಕೊಟ್ಟಿರಬಹುದು, ಕಂಪ್ಲೇಂಟನ್ನು ಕೊಟ್ಟಾಗ ರಿಜಿಸ್ಟರ್ ಮಾಡಲೇಬೇಕಾಗುತ್ತದೆ. ಇಲ್ಲದೇ ಹೋದರೆ ರಾಜಕೀಯವಾಗಿ ಅದನ್ನು ಮುಚ್ಚಿಹಾಕಿದರು ಎಂಬ ಅಪಾದನೆ ಬರುತ್ತದೆ. ನೀವು ಮತ್ತು ಬಿಜೆಪಿಯವರು ಸೇರಿ ಮಾಡಿರುವ ಕಿತಾಪತಿ ಇದು ಎಂದು ನಾನು ಹೇಳುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ : ನಮ್ಮ ವಿರೋಧಪಕ್ಷದ ನಾಯಕರು ಬರೀ ಎಫ್ಐಆರ್ ಕೊಟ್ಟಿದ್ದಾರೆ. ಅವರು ನೇರವಾಗಿ ಇವರ ಮೇಲೆ ಹೇಳುವುದಿದ್ದರೆ ತಮಗೆ ಬರೆದುಕೊಡಲಿ, ಆಮೇಲೆ ಹೇಳಲಿ.

ಶ್ರೀ ಆರ್.ವಿ. ದೇಶಪಾಂಡೆ : ನಾನು ಬೆಳ್ತಂಗಡಿ ವಿಷಯವಾಗಿ ಹೇಳುತ್ತಿದ್ದೆ, ಅಲ್ಲೊಂದು ಕಂಪ್ಲೇಂಟ್ ರಿಜಿಸ್ಟರಾಗಿದೆ. ಸ್ಥಳೀಯ ಶಾಸಕರನ್ನು ಆರೋಪಿ ಮಾಡಿದ್ದಾರೆ ಎಂದು ಹೇಳಿದೆ. ಇವರು ಕಿಡ್ನ್ಯಾಪ್ ಮಾಡಿಕೊಂಡು ಹೋಗಿದ್ದಾರೆ ಎಂದು ಹೇಳಲಿಲ್ಲ, ಇವರ ಮನೆಗೂ 10ನೇ ತಾರೀಖಿನಲ್ಲಿ ಮುತ್ತಿಗೆ ಹಾಕಿದ್ದರು ಅದು ಸರಿಯೋ ಸುಳ್ಳೋ ಹೇಳಿ.

ಶ್ರೀ ಕೆ. ಗಂಗಾಧರಗೌಡ : ನಮ್ಮ ಮನೆಗೆ ಯಾರೂ ಮುತ್ತಿಗೆ ಹಾಕಲಿಲ್ಲ, ಸುಮ್ಮ ಸಮ್ಮನೆ ನೀವು ಏನೇನೂ ಹೇಳುವ ಅವಶ್ಯಕತೆ ಇಲ್ಲ.

ಶ್ರೀ ಆರ್.ವಿ. ದೇಶಪಾಂಡೆ : ಹೊನ್ನಮ್ಮ ಅವರಿಗೆ 10ನೇ ತಾರೀಖು ರಾತ್ರಿ ಬಿಡುಗಡೆ ಮಾಡಿದರು. ಈಗೇನಾಗ್ತಿದೆ ಎಂದರೆ ಅಲ್ಲಿನ ಸಿಬಿಐ ಭಗವಾನ್ದಾಸ್ ಮತ್ತು ಡೆಪ್ಯುಟಿ ತಹಸೀಲ್ದಾರ, ಮತ್ತು ಅಲ್ಲಿನ ಸಬ್‌ಇನ್ಸ್‌ಪೆಕ್ಟರ್, ಕಾಯಿದೆ ಬದ್ಧವಾಗಿ ಕ್ರಮ ತೆಗೆದುಕೊಂಡಿದ್ದಾರೆ. ಆತನನ್ನು ನಾನು ಮೆಚ್ಚುತ್ತೇನೆ. ಕಂಪ್ಲೇಂಟ್ ಲಾಡ್ಜ್ ಮಾಡಿದ್ದಾನೆ, ಎಫ್ಐಆರ್ ಹಾಕಿ ಕೋರ್ಟಿಗೆ ಕಳುಹಿಸಿದ್ದಾನೆ, ಇನ್ವೆಸ್ಟಿಗೇಷನ್ ಮಾಡುತ್ತಿದ್ದಾನೆ. ಈಗ ಆ ಪಿಎಸ್ಐಗೆ ಟ್ರಾನ್ಸ್‌ಫರ್ ಮಾಡಲಿಕ್ಕೆ ಎಲ್ಲಾ ಯತ್ನ ನಡೆಯುತ್ತಿದೆ. ಇಂತಹ ಪ್ರಕರಣಗಳಲ್ಲಿ ಇವತ್ತು ನಾನು ವಿಚಾರಣೆಯಾಗಬೇಕು ಎಂದು ನಾನು ಹೇಳುತ್ತಿದ್ದೇನೆ. ಅದರಲ್ಲಿ ಸ್ಥಳಿಯ ಶಾಸಕರ ಪಾತ್ರ ಇಲ್ಲದಿದ್ದರೆ ನಿಮ್ಮ ಮೇಲೆ ಹೇಗೆ ದೂರು ಮಾಡಲಿಕ್ಕಾಗುತ್ತದೆ? ಇದ್ದರೆ ತಾವು ಆ ಎನ್ಕ್ವೈಯರಿ ಫೇಸ್ ಮಾಡಬೇಕಾಗುತ್ತದೆ. ಅದೇ ಪ್ರಕಾರ ಅಧ್ಯಕ್ಷರೇ ಇವತ್ತು ರಾಜ್ಯದ ಬೇರೆ ಬೇರೆ ಭಾಗಗಳಾದ ಕೆಆರ್ ನಗರ ತಾಲ್ಲೂಕಿನಲ್ಲಿ ಪಿಎಸ್ಐ ಮುಂದೆ ಜನತಾದಳದ ಸದಸ್ಯರನ್ನು ಕಿಡ್ನ್ಯಾಪ್ ಮಾಡಿ ಒಯ್ದಿದ್ದಾರೆ. ಅದರ ನಂತರ ರಾಯಚೂರು ಜಿಲ್ಲೆಯ ಸಿಂಧನೂರಿನಲ್ಲಿ ಲಿಂಗಸುಗೂರಿನಲ್ಲಿ ರಾಯಚೂರು ತಾಲ್ಲೂಕಿನಲ್ಲಿ ಅದೇ ಪ್ರಕಾರ ಹರಿಹರ ತಾಲ್ಲೂಕು

ಚಿತ್ರದುರ್ಗ ಜಿಲ್ಲೆಯಲ್ಲಿ ಹಾಸನ ಜಿಲ್ಲೆಯ ಹೊಳೇನರಸೀಪುರ ತಾಲ್ಲೂಕಿನಲ್ಲಿ ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನಲ್ಲಿ, ಬೆಂಗಳೂರು ಜಿಲ್ಲೆ ದೊಡ್ಡ ಬಳ್ಳಾಪುರ ತಾಲ್ಲೂಕಿನಲ್ಲಿ ಹೀಗೆ ಹಲವಾರು ಕಡೆ ಇಂತಹ ಕಿಡ್ನ್ಯಾಪಿಂಗ್, ಅಬ್ಡಕ್ಷನ್ ಅತ್ಯಾಚಾರ, ಅನ್ಯಾಯ, ಗಲಭೆಗಳು, ಥ್ರೆಟನ್ ಮಾಡುವುದು ಈ ಕೆಲಸ ಸರ್ಕಾರ ಇವತ್ತು ಸಿಸ್ಟಮ್ಯಾಟಿಕ್ಕಾಗಿ ಪೋಲೀಸ್ ಅಧಿಕಾರಿಗಳ ಮೂಲಕ ಮಾಡಿದೆ. ಕೆಲವು ಕಡೆ ಪೋಲೀಸ್ ಅಧಿಕಾರಿಗಳು ನಿಷ್ಕ್ರಿಯರಾಗಿ ಕುಳಿತಿದ್ದಾರೆ. ಈ ಭಾಗದಲ್ಲಿ ಆದ ವಿವರಣೆಗಳನ್ನು ನಮ್ಮ ಶಾಸಕರು ಹೇಳುತ್ತಾರೆ. ಯಾವ ಕ್ಷೇತ್ರದಲ್ಲಿ ಏನೇನು ಘಟನೆ ಆಗಿತ್ತು ಎಂಬುದು ರಿಪಿಟೇಷನ್ ಆಗಬಾರದುವೆಂದು ನಾನು ಹೇಳುತ್ತಾ ಇಲ್ಲ. ಇವತ್ತು ಬಳ್ಳಾರಿ ಜಿಲ್ಲೆಯ ಕೊಟ್ಟೂರು ಕ್ಷೇತ್ರದ ಕುಡಲ ಬಿದಗೆಯಲ್ಲಿ.... ಅಧ್ಯಕ್ಷರೇ, ಯಾವ ಮಂತ್ರಿಗಳೂ ಇಲ್ಲ; ಮುಖ್ಯಮಂತ್ರಿಗಳಿಲ್ಲ.

ಶ್ರೀ ಸಿ. ಬೈರೇಗೌಡ : ಹಾರ್ನಳ್ಳಿ ರಾಮಸ್ವಾಮಿಯವರು ಇದ್ದಾರೆ, ನೀವು ಉತ್ತರ ಕೊಡುತ್ತೀರಾ? ವಿರೋಧ ಪಕ್ಷದ ನಾಯಕರು ಮಾತನಾಡುವಾಗ....

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ : ನೀವು ಹೇಳುವುದನ್ನೆಲ್ಲಾ ಅವರ ಗಮನಕ್ಕೆ ತಂದು ಉತ್ತರ ಕೊಡಿಸುತ್ತೇವೆ.

ಶ್ರೀ ಸಿ. ಬೈರೇಗೌಡ : ಅವರ ಗಮನಕ್ಕೆ ತರುವುದು ಯಾವಾಗ? ಅವರು ಉತ್ತರ ಕೊಡುವುದು ಯಾವಾಗ? ಇವತ್ತು ಉತ್ತರ ಕೊಡಬೇಕಲ್ಲಾ. ನೀವು ಮಾತನಾಡಲು ಹೋಗಬೇಡಿ, ಸಂಬಂಧಪಟ್ಟವರು ಬರುವವರೆಗೆ. ಇದಕ್ಕೆ ಅರ್ಥ ಏನು? ಇದಕ್ಕಿಂತ ಬೇರೆ ಮುಖ್ಯವಾದ ಕೆಲಸ ಏನಿದೆ?

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ : ಏಕೆ ಇಷ್ಟು ಸಿಟ್ಟಾಗುತ್ತೀರಿ? ನೀವು ಏನು ಹೇಳುತ್ತೀರೋ ಅವರಿಗೆ ಅದನ್ನು ತಿಳಿಸುವಷ್ಟು ಕೆಪ್ಯಾಸಿಟಿ ಇಲ್ಲವೇ?

ಶ್ರೀ ಸಿ. ಬೈರೇಗೌಡ : ನಾನು ನಿಮ್ಮ ಕೆಪ್ಯಾಸಿಟಿ ಬಗ್ಗೆ ಕೇಳುತ್ತಿಲ್ಲ. ಅವರನ್ನು ಈಗ ಕರೆಸುವುದಕ್ಕೆ ಆಗುತ್ತದೆಯೋ ಇಲ್ಲವೋ ಹೇಳಿ.

ಉಪಾಧ್ಯಕ್ಷರು : ಅವರನ್ನು ಕರೆಯಿಸುತ್ತಿದ್ದಾರೆ. ದಯವಿಟ್ಟು ಕುಳಿತುಕೊಳ್ಳಿ

ಶ್ರೀ ಬಿ.ಎಚ್. ಬನ್ನಿಕೋಡ್ : ಗ್ರಾಮೀಣ ಸಚಿವರಂತೂ ವಿಧಾನಸೌಧದ ಕಛೇರಿಯಲ್ಲಿ ಎಂದು ಸಿಕ್ಕುವುದಿಲ್ಲ. ಅಸೆಂಬ್ಲಿ ನಡೆಯುವಾಗಲಾದರೂ ಬಂದು ಕುಳಿತರೆ ಅನುಕೂಲವಾಗುತ್ತದೆ. ದಯವಿಟ್ಟು ಅವರನ್ನು ಕರೆಯಿಸಿ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ : ಮೇಲ್ಮನೆಯಲ್ಲಿ ಇದೇ ನಿಲುವಳಿ ಸೂಚನೆ ಬಂದಿದೆ. ಅದಕ್ಕಾಗಿ ಘೋರ್ಪಡೆಯವರು ಅಲ್ಲಿಗೆ ಹೋಗಿದ್ದಾರೆ. ಈಗ ಬರುತ್ತಾರೆ.

ಶ್ರೀ ಆರ್.ವಿ. ದೇಶಪಾಂಡೆ : ಬಳ್ಳಾರಿ ಜಿಲ್ಲೆಯ ಕೂಡಲಗಿ ತಾಲ್ಲೂಕಿನ ಗಂಡೆ ಬೊಮ್ಮನಹಳ್ಳಿ ಪಂಚಾಯಿತಿಯಲ್ಲಿ 16ನೇ ತಾರೀಖು ಚುನಾವಣೆ ಇತ್ತು. ಆ ದಿನ ಸದಸ್ಯರ ಕಿಡ್ನ್ಯಾಪಿಂಗ್ ಅಟೆಂಪ್ಟ್ ಆಯಿತು, ಸಾವಿರಾರು ಜನ ಅಲ್ಲಿ ಸೇರಿದ್ದರು; ಕಲ್ಲು ತೂರಾಟ ಆಯಿತು, ದುರ್ದೈವದಿಂದ ಆ ಶಾಲೆ ಪಕ್ಕದಲ್ಲಿ ಬಡ 120 ಪರಿಶಿಷ್ಟ ಜನಾಂಗದ ಮನೆಗಳಿದ್ದವು. ಒಂದು ಗುಂಪಿನವರು ಅದಕ್ಕೆ ಬೆಂಕಿ ಹಚ್ಚಿದರು. 20-22 ಮನೆಗಳು ಸುಟ್ಟು ಭಸ್ಮವಾಗಿವೆ. ಪೋಲೀಸ್ ಫೈರಿಂಗ್ ಮಾಡಿದರು ಅದರಲ್ಲಿ 3 ಜನ ಸತ್ತರು. ಇದೇ ನಿಮ್ಮ ಪಂಚಾಯತ್ ವ್ಯವಸ್ಥೆ ಏನು ಎಂದು ನಿಮ್ಮ ಮುಖಾಂತರ ಸರಕಾರಕ್ಕೆ ಹೇಳುತ್ತಿದ್ದೇನೆ. ಈ ಪ್ರಕಾರದ ವ್ಯವಸ್ಥೆ ಮಾಡಬೇಕಾದರೆ ಈ ಪ್ರಕಾರ ಅರಾಜಕತೆ, ಹಿಂಸಾಚಾರಕ್ಕೆ ಪ್ರಚೋದನೆ ಕೂಡ ಬೇಕಾದರೆ, ಈ ವ್ಯವಸ್ಥೆ ಅವಶ್ಯಕತೆ ಇಲ್ಲ, ಗ್ರಾಮಾಂತರ ಪ್ರದೇಶದಲ್ಲಿ ನೆಮ್ಮದಿಯ ವಾತಾವರಣ ಹೋಗಿದೆ. ಕೇವಲ ಗಲಭೆ, ಅತ್ಯಾಚಾರ ನಡೆಯುತ್ತಿದೆಯೇ ವಿನಃ ಇದರಿಂದ

ಹಿಂದುಳಿದ ವರ್ಗದವರ ಮೇಲಾಗುತ್ತಿರುವ ಘರ್ಷಣೆಗೇನೂ ಫುಲ್ಸ್ಟಾಫ್ ಸಿಗುವುದಿಲ್ಲ. ಇದು ಮುಂದೆಯೂ ಸಹ ನಡೆಯುತ್ತದೆ. ಇದರ ನೈತಿಕ ಹೊಣೆಯನ್ನು ಸರಕಾರ ತೆಗೆದುಕೊಳ್ಳಬೇಕಾಗುತ್ತದೆ. ಪೋಲೀಸ್ ಫೈರಿಂಗ್ನಿಂದ ಜನ ಸತ್ತಿದ್ದಾರೆ. ಇದನ್ನು ಏಕೆ ಮಾಡಿದರು? ಇದರ ಅವಶ್ಯಕತೆ ಏನು ಇತ್ತು ಎಂಬುದನ್ನು ನಾವು ವಿಚಾರ ಮಾಡಬೇಕಾಗುತ್ತದೆ. ಅಲ್ಲಿ ಟೆನ್ಶನ್ ಇದೆ ಎಂದು ಪೋಲೀಸಿನವರಿಗೂ ಗೊತ್ತಿತ್ತು. ಮುಂಚೆ ಈ ಮಂಡಲ ಹೆಡ್ಕ್ವಾರ್ಟರ್ ಬಾರದೆಂದು ತಕರಾರು ಇತ್ತು. ಕಾಂಗ್ರೆಸ್ನವರು ಈ ಮಂಡಲವನ್ನು ತಮ್ಮ ವಶದಲ್ಲಿ ತೆಗೆದುಕೊಳ್ಳಲಿಕ್ಕೆ ಪ್ರಯತ್ನ ಮಾಡಿದರು. ಅದರಿಂದಾಗಿ ಈ ಘಟನೆಯಾಯಿತು. ಪೋಲೀಸರು ಮುಂಚೆಯೇ ಪ್ರಿಕಾಷನರಿ ಮೆಷರ್ಸ್ ತೆಗೆದುಕೊಳ್ಳಲಿಕ್ಕೆ ಆಗುತ್ತಿತ್ತು. ಆದರೆ ಅವರು ತೆಗೆದುಕೊಂಡಿಲ್ಲ. ಈ ಒಂದು ಇನ್ಸಿಡೆಂಟ್, ಅನ್ನು ನಾನು ಜ್ಯುಡಿಷಿಯಲ್ ವಿಚಾರಣೆಗೆ ಕೇಳುತ್ತಿದ್ದೇನೆ. ಹೈಕೋರ್ಟಿನ ಒಬ್ಬ ಜಡ್ಜವರಿಂದ ನ್ಯಾಯಾಂಗ ವಿಚಾರಣೆಯಾಗಬೇಕು. ಯಾರು ತಪ್ಪಿತಸ್ಥರಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಗುಲ್ಬರ್ಗ ಜಿಲ್ಲೆಯ ಶಹಾಪುರ ಮತದಾರರ ಕ್ಷೇತ್ರದ ಕರಡಗಲ್ ಮಂಡಲದಲ್ಲಿ ಮೊನ್ನೆ ಗಲಾಟೆಯಾಯಿತು. ಆ ಸಂದರ್ಭದಲ್ಲಿ ಅಲ್ಲೂ ಕೂಡ ಪೋಲೀಸ್ ಫೈರಿಂಗ್ ಆಯಿತು. 4 ಜನ ಸತ್ತಿದ್ದಾರೆ 3 ಜನರಿಗೆ ಗಾಯಗಳಾಗಿವೆ. ಇಲ್ಲಿ ಏನು ಪರಿಸ್ಥಿತಿ ಅಂದರೆ ಈ ಕರಡಗಲ್ ಗ್ರಾಮದಲ್ಲಿ 7 ಜನ ಆರಿಸಿ ಬಂದಿದ್ದಾರೆ. ಈ ಪಂಚಾಯತಿಗೆ ಸೇರಿದ ಬೇರೆ 3 ಹಳ್ಳಿಯಲ್ಲಿ ಮಲ್ಲಹಳ್ಳಿ, ಬರಗನ ಹಳ್ಳಿ, ಕರಡಳ್ಳಿ ಇಲ್ಲಿ 8 ಜನ ಆರಿಸಿ ಬಂದಿದ್ದಾರೆ. ಈ ಹಳ್ಳಿಯ ಜನರಲ್ಲಿ ಘರ್ಷಣೆಯಾಯಿತು. ಮಂಡಲ ಹೆಡ್ ಕ್ವಾರ್ಟರ್ಸ್ ಬಗ್ಗೆ ಘರ್ಷಣೆ ಇತ್ತು. ಉದ್ದೇಶಪೂರ್ವಕವಾಗಿ ಎಲ್ಲಿ ಮಂಡಲ ಹೆಡ್ಕ್ವಾರ್ಟರ್ಸ್ ಮಾಡಬೇಕಾಗಿತ್ತು ಎಲ್ಲಿ ಸಾರ್ವಜನಿಕ ಸೌಲಭ್ಯಗಳು ಚೆನ್ನಾಗಿವೆ ಅಲ್ಲಿ ಮಾಡಿಲ್ಲ. ಮಂಡಲ ಹೆಡ್ ಕ್ವಾರ್ಟರ್ಸ್ ಮಾಡುವಾಗ ರಾಜಕೀಯ ಹಸ್ತಕ್ಷೇಪವಾಗಿದೆ. ಅದೂ ಕೂಡ ಒಂದು ಕಾರಣ. ಆದ್ದರಿಂದ ಈ ಕರಡಗಲ್ ಹಳ್ಳಿಯಲ್ಲಿ ಬೇರೆ 3 ಹಳ್ಳಿಯ ಜನರು ಎಲೆಕ್ಟೆಡ್ ಜನರಿಗೆ ಒಳಗೆ ಬರಲಿಕ್ಕೆ ಬಿಡಲಿಲ್ಲ. ಪೋಲೀಸರು ಪ್ರಿಕಾಷನರಿ ಮೆಷರ್ಸ್ ತೆಗೆದುಕೊಳ್ಳಬಹುದಿತ್ತು. ಆದರೆ ಇವರೇನೂ ಮುನ್ನೆಚ್ಚರಿಕೆ ಕ್ರಮ ತೆಗೆದುಕೊಳ್ಳದೆ ಫೈರಿಂಗ್ ಮಾಡಿದ್ದಾರೆ. ಇದಕ್ಕೆ ಕಾರಣರು ಯಾರು? ಯಾರು ಫೈರಿಂಗ್ ಮಾಡಲಿಕ್ಕೆ ಆದೇಶ ಕೊಟ್ಟರು? ಫೈರಿಂಗ್ ಮಾಡಲಿಕ್ಕೆ ಅವಶ್ಯಕತೆ ಏನು ಇತ್ತು? ಈ ಘರ್ಷಣೆ ನಡೆದಿದ್ದು ಅದೇ ದಿನ ಅಲ್ಲ, ಕಳೆದ 6-7 ತಿಂಗಳಿನಿಂದ ಈ ಹಳ್ಳಿಯಲ್ಲಿ ಘರ್ಷಣೆ ನಡೆದಿದೆ. ಪೋಲೀಸ್ ಇಲಾಖಾಧಿಕಾರಿಗಳಿಗೆ ಗೊತ್ತಿತ್ತು. ಹಾಗಾಗಿ ಇಲ್ಲಿ ಜವಾಬ್ದಾರಿ ಫಿಕ್ಸ್ ಆಗಬೇಕಾಗಿದೆ. ಈಗೇನು ಮಾಡುತ್ತಿದ್ದಾರೆಂದರೆ ಇಂತಹ ಘಟನೆಗಳಾಗುತ್ತವೆ, ಅಲ್ಲಿ ನಮ್ಮ ಜನತಾ ದಳದ ಕಾರ್ಯಕರ್ತರ ಮೇಲೆ ಸೆಕ್ಷನ್ 302, ಹಾಗೂ 307 ರಲ್ಲಿ ಕೇಸ್ ಹಾಕುತ್ತಿದ್ದಾರೆ. ಎಲ್ಲಾ ಜನರನ್ನು ನಿಮ್ಮ ಕಸ್ಟಡಿಯಲ್ಲಿಟ್ಟು ಚುನಾವಣೆ ಮಾಡುತ್ತಿದ್ದಾರೆ. ಇವತ್ತು ಕೂಡ ಕೆಲವು ಕಡೆಯಲ್ಲಿ ಚುನಾವಣೆ ಇದೆ. ಚುನಾಯಿತ ಪ್ರತಿನಿಧಿಗಳು ಏನು ಇದ್ದಾರೆ ಅವರನ್ನು ಬೇರೆ ಬೇರೆ ಐಪಿಸಿ ಕಲಂ, ಮೇಲೆ ಅರೆಸ್ಟ್ ಮಾಡಿ ಎಲ್ಲಿ ಬಹುಮತ ಇಲ್ಲ ಅಲ್ಲಿ ಬಹುಮತವನ್ನು ಸ್ಥಾಪನೆ ಮಾಡುವುದಕ್ಕೆ ಹೊರಟಿದ್ದಾರೆ. ಪ್ರಜಾಪ್ರಭುತ್ವದ ಕೊಲೆ ಆಗುತ್ತಿದೆ. ಈ ಘಟನೆ 19ನೇ ತಾರೀಖು ಕರಿಬಸಪ್ಪಗೌಡ ಎಂಬ ಜನತಾ ದಳದ ಕಾರ್ಯಕರ್ತರನ್ನು ಅರೆಸ್ಟ್ ಮಾಡಿದರು. 19ನೇ ತಾರೀಖು ರಾತ್ರಿ ಆಯಿತು. ಅವರು ಕರಡಗಿ ಗ್ರಾಮದವರು. ಕೆಲವು ಜನ ಅವರೇ ಕಾರಣ ಎಂದು ಅವರ ಮೇಲೆ ದೂರು ಮಾಡಿದರು.

ಪೋಲೀಸರು ಅವನನ್ನು ಅರೆ ಮಾಡಿ, ಕೆಂಪಾಬಿ ಪೋಲೀಸ್ ಸ್ಟೇಷನಗೆ ತೆಗೆದುಕೊಂಡು ಹೋದರು. ಅಲ್ಲಿ ಲಾಕಪ್ನಲ್ಲಿ ಇಟ್ಟು ಸಾಕಷ್ಟು ಹೊಡೆದಿದ್ದಾರೆ. ಒಂದು ವೇಳೆ ತಪ್ಪು ಮಾಡಿದ್ದರೆ ಕೇಸನ್ನು ಹಾಕಿ. ಅದರ ಬಗ್ಗೆ ವಿರೋಧ ಮಾಡುವುದಿಲ್ಲ. ಅವರು ಯಾವ ಪಕ್ಷದವರೇ ಇರಲಿ. ಆದರೆ ನಿನ್ನೆ ಏನು

ಮಾಡಿದ್ದಾರೆ, ಅವರಿಗೆ ಕೆಂಪಾಬಿ ಪೋಲೀಸ್ ಸ್ಟೇಷನ್ ಮುಂದೆ ಇದ್ದ ಪ್ಲೇಗ್ರೌಂಡ್ ಏನಿದೆ, ಅಲ್ಲಿ ಅವನನ್ನು ಅಂಡರ್‌ವೇರ್‌ನಲ್ಲಿ ಓಪನ್ ಮಾಡಿ ಮೇಲೆ ಓಡಿಸಿದ್ದಾರೆ. ಪೋಲೀಸರು ಮತ್ತು ಅಲ್ಲಿನ ಜನ ಸೇರಿಸಿ ಅವನಿಗೆ ಹೊಡೆದಿದ್ದಾರೆ. ಅಷ್ಟೇ ಅಲ್ಲ, ನಮ್ಮ ಕರಿಬಸಪ್ಪ ಮನೆಯಲ್ಲಿ ಕೆಲಸ ಮಾಡುವ ಆಳು ಏನಿದ್ದಾನೆ, ಅವನನ್ನ ಕರಿಬಸಪ್ಪನ ಹೆಗಲಮೇಲೆ ಕೂಡಿಸಿ ನಿನ್ನೆ ಇಡೀ ಕೆಂಪಾಬಿ ಪೋಲೀಸ್ ಸ್ಟೇಷನ್ ಮುಂದೆ ಇರುವ ಗ್ರೌಂಡ್ಮೇಲೆ ಓಡಿಸಿದ್ದಾರೆ. ಅವನ ಕೈಲಿ ಹೊಡೆಸಿದ್ದಾರೆ. ಇದೇನು ಅರಾಜಕತೆಯೋ? ನಿಮ್ಮ ಸರ್ಕಾರ ಇದೆಯೋ? ಈ ಸರ್ಕಾರದಲ್ಲಿ ಲಾ ಅಂಡ್ ಆರ್ಡರ್ ಇದೆಯಾ? ಒಂದು ವೇಳೆ ಯಾರಾದರೂ ಕಾಯ್ದೆಬದ್ಧವಾಗಿ ಕ್ರಮ ತೆಗೆದುಕೊಂಡರೆ ಕ್ರಮ ತೆಗೆದುಕೊಳ್ಳಬಹುದು. ಐಪಿಸಿ ಇದೆ, ಸಿಆರ್‌ಪಿ ಇದೆ, ಬೇರೆ ಬೇರೆ ಕಾಯ್ದೆಕಾನೂನುಗಳು ಇವೆ, ಆದರೆ ತಾವು ತಮ್ಮ ಪೋಲೀಸ್ ಅಧಿಕಾರಿಗಳು ತಮ್ಮ ಸ್ಥಳೀಯ ಶಾಸಕರು ಯಾವ ಪ್ರಕಾರ ಹೇಳುತ್ತಾರೋ ಆ ಪ್ರಕಾರ ಕುಣಿದುಕೊಂಡು ಇವತ್ತು ವಿರೋಧ ಪಕ್ಷದ ಕಾರ್ಯಕರ್ತರ ಮೇಲೆ ಅನ್ಯಾಯ ಮಾಡುತ್ತಿದ್ದಾರಲ್ಲಾ, ಅದರ ಬಗ್ಗೆ ನಿಮಗೆ ಪ್ರಶ್ನೆ ಕೇಳುತ್ತಿದ್ದೇನೆ, ಏನು ಅಧಿಕಾರ ಇದೆ ನಿಮಗೆ ಈ ಸ್ಥಾನದಲ್ಲಿ ಉಳಿಯುವುದಕ್ಕೆ? ರಾಜ್ಯದ ಬೇರೆ ಭಾಗದಲ್ಲಿ ಗುಲ್ಬರ್ಗ ಇರಬಹುದು, ರಾಯಚೂರು ಇರಬಹುದು, ಹಾಸನ ಜಿಲ್ಲೆ ಇರಬಹುದು, ಬೆಳಗಾಂ ಜಿಲ್ಲೆಯ ಕೆಲವು ಭಾಗ ಇರಬಹುದು.

ಪ್ರತಿಯೊಂದು ಕಡೆ ಇವತ್ತು ಮೈಸೂರು ಜಿಲ್ಲೆ ಇರಬಹುದು, ಕೋಲಾರ ಜಿಲ್ಲೆ ಇರಬಹುದು, ಅಲ್ಲಿ ಗಲಭೆಯಾಗಿದೆಯೇ ವಿನಹ ಶಾಂತಿಯಿಂದ ಚುನಾವಣೆಯಾಗಿದ್ದುದು ಬಹಳ ಕಡಿಮೆ. ಇದರ ಹೊಣೆಯನ್ನು ತಾವು ಸಂಪೂರ್ಣವಾಗಿ ತೆಗೆದುಕೊಳ್ಳುವುದಕ್ಕೂ ಸಿದ್ಧವಾಗಬೇಕಾಗುತ್ತದೆ. ಇವತ್ತು ಕೆಲವು ಜಿಲ್ಲಾಧಿಕಾರಿಗಳು ನಿಜವಾಗಿ ಧೈರ್ಯದಿಂದ ಕೆಲಸ ಮಾಡಿದ್ದಾರೆ. ಆದರೆ ಅವರ ಮಾತು ನಡೆದಿಲ್ಲ. ಅವರು ಏನು ಮಾಡಿದರೂ ಅದಕ್ಕೆ ಸರ್ಕಾರ ಒಪ್ಪಿ ಕೊಂಡಿಲ್ಲ. ಇವರು ಮನಸ್ಸು ಬಂದ ಹಾಗೆ ಇಲ್ಲಿಂದ ಆದೇಶವನ್ನು ಕೊಟ್ಟಿದ್ದಾರೆ. ಯಾರು ಅಧಿಕಾರ ಕೊಟ್ಟರು ಇವರು ಆದೇಶವನ್ನು ಇಲ್ಲಿಂದ ಕೊಡುವುದಕ್ಕೆ? ಹಾಗಾದರೆ ಆರ್ಡರ್ ಏತಕ್ಕೆ ಮಾಡಿದಿರಿ ಫೆಬ್ರವರಿಯಲ್ಲಿ? ಕೆಲವು ಜಿಲ್ಲಾಧಿಕಾರಿಗಳು ಪಪೆಟ್ ಆಗಿ ಆಟವನ್ನು ಆಡಿಸಿದ್ದಾರೆ. ಇವರು ಏನು ಹೇಳುತ್ತಾರೋ ಆ ಪ್ರಕಾರ ಕಣ್ಣುಮುಚ್ಚಿ ಸಹಿ ಹಾಕಿ ಆ ಪ್ರಕಾರವಾಗಿ ರೆಸಲ್ಯೂಷನ್ ಮಾಡಿದ್ದಾರೆ. ರೂಲಿಂಗ್ ಪಾರ್ಟಿಯವರು ತನ್ನ ಶಾಸಕರ ಮತದಾರರ ಕ್ಷೇತ್ರದಲ್ಲಿ ಅವರಿಗೆ ಸಹಾಯ ಮಾಡುವುದಕ್ಕೆ ಏನೊಂದು ಈ ಡಿಸ್ಕ್ರೀಷನ್ ಪವರ್ ಕೊಟ್ಟಿರಲ್ಲಾ, ಅದರಿಂದ ಈ ಗಲಭೆ ಗಲಾಟೆ ಮುಖ್ಯವಾಗಿ ಆಯಿತು. ಜನರ ಒಂದು ಮನಸ್ಸಿನಲ್ಲಿ ಸಂತಾಪ, ಒಂದು ಆಕ್ರೋಶ; ಇದೆ. ನಾವು ಚುನಾಯಿತರಾಗಿದ್ದೇವೆ; ನಮ್ಮ ನಿರ್ಣಯವನ್ನು ನಾವು ಮಾಡುತ್ತೇವೆ. ಶಾಸಕರು ಯಾರು ಡಿಸೈಡ್ ಮಾಡುವವರು ಎಂದು ಅವರ ಆಕ್ರೋಶ ಇದೆ. ಹಾಗಾಗಿ ಇವತ್ತು ಸರ್ಕಾರ ಇದರ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕಾಗಿದೆ. ಈ ಜವಾಬ್ದಾರಿಯಿಂದ ಇವತ್ತು ಸರ್ಕಾರ ಓಡಿಹೋಗುವುದಕ್ಕೂ ಸಾಧ್ಯವಿಲ್ಲ. ತಮಗೆ ನೆನಪಿಗೆ ಬರಬಹುದು, 8ನೇ ತಾರೀಖಿಗೆ (ಎಂಟನೇ ಮಾರ್ಚಿಯಂದು) ನಮ್ಮ ಪಕ್ಷದಿಂದ ಇಡೀ ರಾಜ್ಯಾದ್ಯಂತ ಒಂದು ಪ್ರತಿಭಟನೆ ಮಾಡಿದೆವು. ಈ ಅಧ್ಯಕ್ಷರ, ಉಪಾಧ್ಯಕ್ಷರ ಚುನಾವಣೆಯಲ್ಲಿ ಎಲ್ಲಾ ಕಡೆ ಅನ್ಯಾಯವಾಗುತ್ತಿದೆ, ಕಾಯ್ದೆಬದ್ಧವಾಗಿ ಆಗುತ್ತಿಲ್ಲ, ಹಿಂದುಳಿದ ಜನಾಂಗಕ್ಕೆ, ಪರಿಶಿಷ್ಟ ಜಾತಿಯವರಿಗೆ ಅನ್ಯಾಯವಾಗುತ್ತಿದೆ ಎಂದು ನಾವು ಹೇಳಿದ್ದೇವೆ. ಮೀಸಲಾತಿ ವಿರುದ್ಧ ನಾವಿಲ್ಲ ಎಂದು ಅದನ್ನು ನಾವು ಸ್ಪಷ್ಟವಾಗಿ ಹೇಳಿದ್ದೇವೆ. ಸರ್ಕಾರಕ್ಕೆ ಅದೊಂದು ವಾರ್ನಿಂಗ್ ಇತ್ತು. 8ನೇ ತಾರೀಖಿನ ಒಂದು ಪ್ರೊಟೆಸ್ಟ್‌ನಲ್ಲಿ It was a warning to the Government. ಅದನ್ನು ನೀವು ಕೇರ್ ಮಾಡಿಲ್ಲ. ನಿಮಗೆ ಬುಲ್ಡೋಜರ್ ಮೆಜಾರಿಟಿ ಇದೆ. ದೈತ್ಯ ಶಕ್ತಿ ಇದೆ. ಏನು ಮಾಡಿದರೂ ನಡೆಯುತ್ತದೆ ಎಂದು ತಿಳಿದುಕೊಂಡು ತಾವು ಮಾಡಿದಿರಿ. ಅದಕ್ಕೆ ಸರಿಯಾದ ಪಾಠವನ್ನು ಜನರು ನಿಮಗೆ

ಕಲಿಸುತ್ತಾರೆ. ಇವತ್ತು ಒಂದು ಮಾತನ್ನು ನಿಮಗೆ ಹೇಳುತ್ತೇನೆ, ದಿವಂಗತ ನಜೀರ್ ಸಾಹೇಬರು, ರಾಮಕೃಷ್ಣಹೆಗಡೆಯವರ ನೇತೃತ್ವದಲ್ಲಿದ್ದಂಥ ಸರ್ಕಾರದಲ್ಲಿ ಏನು ಒಂದು ವ್ಯವಸ್ಥೆಯನ್ನು ತಂದರು, ಆ ವ್ಯವಸ್ಥೆ ಪುನಃ ಈ ರಾಜ್ಯದಲ್ಲಿ ಸ್ಥಾಪನೆಯಾಗಬೇಕಾಗಿದೆ. ನಿಮ್ಮ ಈ ವ್ಯವಸ್ಥೆಯಿಂದ ಕೇವಲ ಅಸಹಕಾರ, ಅಶಾಂತಿ, ಅತ್ಯಾಚಾರ ಗಲಭೆಗಳಾಗಿದೆಯೇ ವಿನಹ ನಿಜವಾದ ಅಧಿಕಾರದ ವಿಕೇಂದ್ರೀಕರಣವಾಗಿಲ್ಲ. ಇವತ್ತು ಗ್ರಾಮಾಂತರ ಪ್ರದೇಶದಲ್ಲಿ ನೆಮ್ಮದಿ ಇಲ್ಲ, ಅಭಿವೃದ್ಧಿಯಾಗಲಿಕ್ಕೆ ಸಾಧ್ಯವಿಲ್ಲ. ಪರಸ್ಪರ ಸಂಘರ್ಷಗಳಿದ್ದಾವೆ. ನಾಳೆ ಜನರು ನಮಗೆ ಪುನಃ ಅಲ್ಲಿಗೆ ಹೋಗುವುದಕ್ಕೆ ಒಂದು ಅವಕಾಶವನ್ನು ಕೊಟ್ಟರೆ ನಮಗೆ ಅಲ್ಲಿ ಕೂಡುವುದಕ್ಕೆ ಅವಕಾಶವನ್ನು ಕೊಟ್ಟರೆ ಪುನಃ ನಾವು ಈ ವ್ಯವಸ್ಥೆಯನ್ನು ಜಾರಿಗೆ ತರುತ್ತೇವೆ ಎಂದು ನಾಡಿನ ಜನರಿಗೆ ಮಾನ್ಯ ಅಧ್ಯಕ್ಷರ ಮುಖಾಂತರ ಇವತ್ತು ನಾನು ಹೇಳುತ್ತಿದ್ದೇನೆ. ಏಕೆಂದರೆ ಚುನಾವಣೆಯಾಗುತ್ತದೆ. ಪ್ರಜಾಪ್ರಭುತ್ವದಲ್ಲಿ ಚುನಾವಣೆಯಾದಾಗ ಆ ತೀರ್ಪುಗೆ ನಾವು ಬಗ್ಗಬೇಕಾಗುತ್ತದೆ. ತಲೆಬಾಗಬೇಕಾಗುತ್ತದೆ. ಅದಕ್ಕೆ ಮಾನ್ಯತೆಯನ್ನು ಕೊಡಬೇಕಾಗುತ್ತದೆ. ಆದರೆ ಎಲ್ಲೆಲ್ಲಿ ವಿರೋಧ ಪಕ್ಷದ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆರಿಸಿ ಬಂದಿದ್ದಾರೆ. ಅಲ್ಲಲ್ಲಿ ತಾವು ತಮ್ಮ ಜನರನ್ನು ಅಧಿಕಾರದಲ್ಲಿ ತರುವುದಕ್ಕೆ ಪ್ರಯತ್ನ ಮಾಡಿದಿರಿ, ಇದನ್ನು ಯಾರು ಕ್ಷಮೆ ಮಾಡಲಿಕ್ಕೆ ಸಾಧ್ಯವಿಲ್ಲ. ನಾಡಿನ ಜನರೂ ನಿಮ್ಮನ್ನು ಕ್ಷಮೆ ಮಾಡುವುದಿಲ್ಲ.

ಗುಲ್ಬರ್ಗಾ ಮತ್ತು ಬಳ್ಳಾರಿಯಲ್ಲಿ ಪೋಲೀಸ್ ಫೈರಿಂಗ್ ಏನು ಒಂದು ಅನಾವಶ್ಯಕವಾಗಿ ಆಯಿತು, ಅದರ ಬಗ್ಗೆ ಒಂದು ಜ್ಯುಡಿಷಿಯಲ್ ಎನ್ಕ್ವೈರಿಗೆ ಸರ್ಕಾರ ಆರ್ಡರ್ ಮಾಡಬೇಕು. ರಾಜ್ಯದ ಬೇರೆ ಬೇರೆ ಭಾಗದಲ್ಲ ಹಿಂಸೆ ಆಗಿದೆ, ಅತ್ಯಾಚಾರ ಆಗಿದೆ, ಕಿಡ್ನ್ಯಾಪಿಂಗ್ ಆಗಿದೆ, ಅಬ್ಡಕ್ಷನ್ ಆಗಿದೆ, ಭ್ರಷ್ಟಾಚಾರ ಆಗಿದೆ. ಕೆಲವು ಸದಸ್ಯರಿಗೆ ಹೆರ್‍ರ್ಯಾಸ್ ಮಾಡಲು ಪ್ರಯತ್ನ ಮಾಡಿದ್ದಾರೆ. ಅದರಲ್ಲಿ ಪರಿಶಿಷ್ಟ ಜಾತಿ ಜನಾಂಗ, ಹಿಂದುಳಿದ ಜನಾಂಗಕ್ಕೆ ಸಾಕಷ್ಟು ಅನ್ಯಾಯ ಆಗಿದೆ; ಅದರ ಬಗ್ಗೆ ತಮ್ಮ ಪಕ್ಷದ ಕೆಲವು ಸದಸ್ಯರೂ ಹೇಳಿದರು. ನಮ್ಮ ಕಡೆ ಇಂತಹ ಗಲಭೆ ಆಗಿದೆ ಎಂದು ಹೇಳಿದರು, ನಾವೂ ಹೇಳಿದ್ದೇವೆ. ಹಾಗಾಗಿ ಈ ರಾಜ್ಯದ ಎಲ್ಲಾ ಕಡೆ ಗಲಭೆಗಳು, ಅನ್ಯಾಯಗಳು ಆಗಿವೆ ಎಂಬುದನ್ನು ತಾವು ಒಪ್ಪಿಕೊಳ್ಳಬೇಕಾಗುತ್ತದೆ. ಅದಕ್ಕೆ ಸದನದ ಒಂದು ಸಮಿತಿಯನ್ನು ಮಾಡಬೇಕೆಂದು ನಾನು ಒತ್ತಾಯಿಸುತ್ತಿದ್ದೇನೆ. ಎಲ್ಲೆಲ್ಲಿ ಇಂತಹ ಗಲಭೆಗಳು ಆಗಿದ್ದಾವೆ, ಅಲ್ಲಲ್ಲಿ ಚುನಾವಣೆಗಳು ಸರಿಯಾಗಿ ಆಗಿಲ್ಲ ಎನ್ನುವ ದೂರುಗಳು ಇವೆ, ಅಲ್ಲಲ್ಲಿ ಸದನದ ಸಮಿತಿ ಭೇಟಿ ಕೊಟ್ಟು ಈ ಸದನಕ್ಕೆ ವರದಿ ಕೊಡಬೇಕು. ಒಂದು ವೇಳೆ ನಮ್ಮ ಪಕ್ಷದ ಕಾರ್ಯಕರ್ತರು ತಪ್ಪು ಮಾಡಿದರೆ, ನಮ್ಮಿಂದ ತಪ್ಪು ಆದರೆ ತಾವು ಶಿಕ್ಷೆ ಅನುಭವಿಸುವುದಕ್ಕೆ ತಯಾರು ಇದ್ದೇವೆ. ಇದಕ್ಕೆ ನೀವೂ ತಯಾರು ಆಗಬೇಕಾಗಿದೆ. ಹಾಗಾಗಿ ಮುಖ್ಯವಾಗಿ ನಾನು ಜುಡಿಷಿಯಲ್ ಎನ್ಕ್ವೈರಿಯನ್ನು ಗುಲ್ಬರ್ಗ ಹಾಗೂ ಬಳ್ಳಾರಿ ವಿಷಯದಲ್ಲಿ ಮಾಡಬೇಕು ಎಂದು ಕೇಳುತ್ತಿದ್ದೇನೆ. ರಾಜ್ಯದ ಬೇರೆ ಬೇರೆ ಭಾಗದಲ್ಲಿ ಆದಂತಹ ಅನ್ಯಾಯಗಳು, ಅತ್ಯಾಚಾರಗಳು, ಕಿಡ್ನ್ಯಾಪಿಂಗ್ ಇತ್ಯಾದಿ ವಿಚಾರಗಳು, ಆಗಿವೆ. ಎಲ್ಲೆಲ್ಲಿ ಚುನಾವಣೆಗಳು ನ್ಯಾಯಬದ್ಧವಾಗಿ ನಡೆದಿಲ್ಲ, ಅಧಿಕಾರಿಗಳ ಹಸ್ತಕ್ಷೇಪದಿಂದ ಅಧಿಕಾರಿಗಳು ಕೈಗೊಂಬೆಯಾಗಿ ಎಲ್ಲೆಲ್ಲಿ ಕೆಲಸ ಮಾಡಿದ್ದಾರೆ ಅಲ್ಲಿಯೂ ಸಹ ಸದನದ ಒಂದು ಸಮಿತಿ ಮಾಡಬೇಕು. ಎಲ್ಲಾ ಪಕ್ಷದ ಸದಸ್ಯರೂ ಇರುತ್ತಾರೆ. ನಿಷ್ಪಕ್ಷಪಾತವಾಗಿ ರಿಪೋರ್ಟ್ ಬರುತ್ತದೆ. ಅದರ ಬಗ್ಗೆ ಯಾರೂ ಭಯ ಪಡುವ ಕಾರಣ ಇಲ್ಲ, ಆದ ಕಾರಣ ಸದನ ಸಮಿತಿ ರಚನೆ ಮಾಡುವುದಕ್ಕೆ ಸರ್ಕಾರ ಒಪ್ಪಿಕೊಳ್ಳಬೇಕು. ತಾವು ಇದಕ್ಕೆ ಆದೇಶ ಕೊಡ ಬೇಕು ಎಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಕೊನೆಯದಾಗಿ ಒಂದು ವಿಚಾರ. ಮಾನ್ಯ ಮುಖ್ಯಮಂತ್ರಿಗಳು ಇವತ್ತು ಹೋಮ್ ಮಿನಿಸ್ಟರ್ ಸಹ ಆಗಿದ್ದಾರೆ. 7 ಜನ ಸತ್ತಿದ್ದಾರೆ, ಹಲವಾರು ಜನ ಗಾಯಗೊಂಡಿದ್ದಾರೆ.

ಎಷ್ಟೋ ಜನಗಳ ಮೇಲೆ ಅನ್ಯಾಯ ಅತ್ಯಾಚಾರ ಆಗಿದೆ. ಅದರ ಹೊಣೆಯನ್ನು ಮಾನ್ಯ ಮುಖ್ಯಮಂತ್ರಿಗಳು ತೆಗೆದುಕೊಳ್ಳಬೇಕಾಗುತ್ತದೆ. ಅವರು ಓಡಿ ಹೋಗುವುದಕ್ಕೆ ಆಗುವುದಿಲ್ಲ. ಈ ಒಂದು ನೈತಿಕ ಜವಾಬ್ದಾರಿ ಅವರ ಮೇಲೆ ಇದೆ. ಆದ್ದರಿಂದ ಅವರ ರಾಜೀನಾಮೆಯನ್ನೂ ಸಹ ನಾನು ಕೇಳುತ್ತಿದ್ದೇವೆ. ಈ ಒಂದು ಸ್ಥಾನದಲ್ಲಿ ಉಳಿಯುವುದಕ್ಕೆ ಅವರಿಗೆ ಅಧಿಕಾರ ಇಲ್ಲ, ಏಕೆಂದರೆ ಅಧಿಕಾರ ವಿಕೇಂದ್ರೀಕರಣ ಮಾಡುತ್ತೇವೆ, ಗ್ರಾಮಾಂತರ ಪ್ರದೇಶದ ಜನರ ಕೈಯಲ್ಲಿ ಅಧಿಕಾರ ಕೊಡುತ್ತೇವೆ ಎಂದು ಹೇಳಿ, ಇವತ್ತು ಅಧಿಕಾರಿ ಕೇಂದ್ರೀಕರಣ ಅಷ್ಟೇ ಮಾಡಲಿಲ್ಲ, ಗ್ರಾಮಾಂತರ ಜನರ ಮೇಲೆ ದೊಡ್ಡ ಅನ್ಯಾಯ ಮಾಡಿದ್ದಾರೆ, ಅತ್ಯಾಚಾರ ಮಾಡಿದ್ದಾರೆ. ಆದ್ದರಿಂದ ಈ ಒಂದು ಪವಿತ್ರವಾದ ಸ್ಥಾನದಲ್ಲಿರುವುದಕ್ಕೆ ಅವರಿಗೆ ಅಧಿಕಾರ ಇಲ್ಲ. ಅವರ ರಾಜೀನಾಮೆಯನ್ನು ನಾವು ಕೇಳುತ್ತಿದ್ದೇನೆ. ಮತ್ತು ಎಲ್ಲಾ ಬೇಡಿಕೆಗಳನ್ನು ಒತ್ತಾಯಿಸುತ್ತಾ ತಾವು ಈ ವಿಷಯದಲ್ಲಿ ಕೆಲವು ವಿಚಾರವನ್ನು ಹೇಳಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ, ಇದರ ಬಗ್ಗೆ ತಮಗೆ ಕೃತಜ್ಞತೆ ಸಲ್ಲಿಸುತ್ತೇನೆ. ಬಹಳ ಡೀಟೇಲಾಗಿ ನಮ್ಮ ಪಕ್ಷದ ಸದಸ್ಯರು ಹಾಗೂ ಬೇರೆ ಪಕ್ಷದ ಸದಸ್ಯರುಗಳು ಈ ವಿಚಾರದ ಬಗ್ಗೆ ಬೆಳಕನ್ನು ಚೆಲ್ಲುತ್ತಾರೆ. ಪ್ರತಿಯೊಬ್ಬರಿಗೂ ತಾವು ಸಾಕಷ್ಟು ಸಮಯ ಕೊಡಬೇಕು.

ಮಾನ್ಯ ಅಧ್ಯಕ್ಷರು ಸಮಯ ಕೊಡುತ್ತೇವೆಂದು ಒಪ್ಪಿಕೊಂಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಲೂ ಹೇಳಿದರು. ಎರಡು ದಿನ ಬೇಕಾದರೆ ಚರ್ಚೆ ನಡೆಯಲಿ ನನಗೆ ಯಾವುದೇ ಅಭ್ಯಂತರ ಇಲ್ಲ ಎಂದು ಹೇಳಿದರು. ಹಾಗಾಗಿ ಇದರ ಮೇಲೆ ಬೆಳಕನ್ನು ಚೆಲ್ಲಬೇಕಾಗಿದೆ. ಏಕೆಂದರೆ ಪ್ರಜಾಪ್ರಭುತ್ವದಲ್ಲಿ ಈ ಪ್ರಕಾರದ ಘಟನೆಗಳು ಆದರೆ ಪ್ರಜಾಪ್ರಭುತ್ವ ವ್ಯವಸ್ಥೆಗೆ ಒಳ್ಳೆಯ ಭವಿಷ್ಯ ಇಲ್ಲ. ಹಾಗಾಗಿ ನಾವೆಲ್ಲರೂ ಕೂಡ ಇದರ ಬಗ್ಗೆ ಚಿಂತನೆ ಮಾಡಬೇಕಾಗಿದೆ. ಎಲ್ಲೆಲ್ಲಿ ಇಂತಹ ಘಟನೆಗಳು ಆಗಿದೆ, ಅದನ್ನು ನಾವು ಖಂಡಿಸಬೇಕಾಗಿದೆ. ಆ ದೃಷ್ಟಿಯಿಂದ ಎಲ್ಲರಿಗೂ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ ಎಂದು ಹೇಳಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ): ಮಾನ್ಯ ಅಧ್ಯಕ್ಷರೇ, ಈ ಚರ್ಚೆಯನ್ನು ಪ್ರಾರಂಭ ಮಾಡಿದಾಗ ಸಂಬಂಧಪಟ್ಟ ಮಂತ್ರಿಗಳು ಇಲ್ಲ ಎನ್ನತಕ್ಕ ಆರೋಪವನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಮಾಡಿದ್ದಾರೆ. ನಾನು ಈ ಆರೋಪವನ್ನು ಮಾಡುವುದಕ್ಕೆ ಹೋಗುವುದಿಲ್ಲ, ಕಾರಣ ಈ ಪಂಚಾಯತ್ ಶಾಸನದ ರಚನೆಯಿಂದ ಹಿಡಿದು ಚುನಾವಣೆವರೆಗೆ ಅವರು ಜವಾಬ್ದಾರಿಯಿಂದ ನಡೆದುಕೊಂಡಿಲ್ಲ ಎಂಬುದು ಮೊದಲಿನಿಂದಲೂ ನನ್ನ ಆಪಾದನೆ. ಆದ್ದರಿಂದ ಜವಾಬ್ದಾರಿ ರಹಿತ ಆದಂಥ ಈ ಶಾಸನ ಸಭೆಯಲ್ಲಿ ಇಲ್ಲ ಎಂದು ಹೇಳುವುದು ನನ್ನ ದೃಷ್ಟಿಯಲ್ಲಿ ಒಂದು ಅಪಚಾರ. ಇದು ಒಂದು ಕಾರಣ. ಎರಡನೆಯದು ಈಗ ಇದು ಪಂಚಾಯತಿ ವ್ಯವಸ್ಥೆಗೆ ಸಂಬಂಧಪಟ್ಟ ವಿಚಾರ ಅಲ್ಲ, ಪಂಚಾಯತಿ ವ್ಯವಸ್ಥೆಯಿಂದ ಹೊರ ಬಂದು ಕಾನೂನು ಮತ್ತು ಸುವ್ಯವಸ್ಥೆ ಮತ್ತು ರಾಜ್ಯದ ಮುಖ್ಯಮಂತ್ರಿಗಳ ಕೈಯಲ್ಲಿರತಕ್ಕಂಥ ಪೊಲೀಸ್ ಇಲಾಖೆಯು ನಡೆದುಕೊಂಡಿರತಕ್ಕ ರೀತಿ. ಆದರಿಂದ ನೇರವಾಗಿ ಇದು ಮಾನ್ಯ ಮುಖ್ಯಮಂತ್ರಿಗಳಿಗೆ ಸಂಬಂಧಪಟ್ಟ ವಿಚಾರ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಇಲ್ಲ ಎಂದು ಹೇಳಿದರೆ ಅದು ಸರಿಯಾಗುತ್ತದೆ ಎಂದು ನಾನು ಭಾವನೆ ಮಾಡುತ್ತೇನೆ.

3.40 ಪಿ.ಎಂ.

ಮುಖ್ಯವಾಗಿ ಡಿಸೆಂಬರ್ ಅಂತ್ಯದೊಳಗಾಗಿ ಚುನಾವಣೆ ನಡೆಸಬೇಕೆಂದು ಸರ್ವೋಚ್ಚ ನ್ಯಾಯಾಲಯ ಆದೇಶ ಕೊಟ್ಟಿದ್ದರಿಂದ ಒಂದು ಚುನಾವಣಾ ನಾಟಕ ಈ ರಾಜ್ಯದಲ್ಲಿ ನಡೆಯಿತು. ಸರ್ವೋಚ್ಚ ನ್ಯಾಯಾಲಯದ ತೀರ್ಪಿಗೆ ಮಾನ್ಯತೆ ಕೊಟ್ಟಿದ್ದೇವೆ, ಸರ್ವೋಚ್ಚ ನ್ಯಾಯಾಲಯದ ಆದೇಶವನ್ನು ಪಾಲಿಸಿದ್ದೇವೆಂದು ಅಧಿಕೃತ ಶಾಸನಸಭೆಯಲ್ಲಿ ಒಂದಲ್ಲ, ಹಲವು ಬಾರಿ ಹೇಳಿದ್ದಾರೆ. ರಾಜ್ಯಪಾಲರ ಬಾಷಣ ಮತ್ತು ಆಯವ್ಯಯದ ಮಂಡನೆಯ

ಸಂದರ್ಭದಲ್ಲೂ ಕೂಡ ಬಹಳ ಸುದೀರ್ಘವಾಗಿ ಪ್ರಸ್ತಾಪಿಸಿ ತಮ್ಮ ಬೆನ್ನನ್ನು ತಾವೇ ತಟ್ಟಿಕೊಂಡಿದ್ದಾರೆ. ಆದರೆ, ನಿಜವಾಗಿಯೂ ಸರ್ವೋಚ್ಚ ನ್ಯಾಯಾಲಯದ ಆದೇಶದ ಪಾಲನೆ ಯಾವಾಗ ಆಗುತ್ತದೆಂದರೆ ವಿಕೇಂದ್ರೀಕೃತ ವ್ಯವಸ್ಥೆಯಲ್ಲಿ ಪರಿಪೂರ್ಣವಾಗಿ ಚುನಾವಣೆಗಳು ನಡೆದಾಗ ಮಾತ್ರ. ಈಗ ನಡೆದಿರತಕ್ಕಂಥ ಚುನಾವಣೆಗಳ ಅಧ್ವಾನವನ್ನು ಗಮನದಲ್ಲಿಟ್ಟುಕೊಂಡು ಚುನಾವಣಾ ಪ್ರಕ್ರಿಯೆಗಳು ಪ್ರಾರಂಭವಾದಾಗ ಅಥವಾ ಚುನಾವಣಾ ಪ್ರಕ್ರಿಯೆಗಳು ಮುಗಿದಾಗ ಮಾತ್ರ ಸರ್ವೋಚ್ಚ ನ್ಯಾಯಾಲಯದ ಆದೇಶಕ್ಕೆ ಮಾನ್ಯತೆ ಕೊಟ್ಟಂತಾಗುತ್ತದೆಯೇ ಹೊರತು ಅಣುಕು ಚುನಾವಣೆ ಮಾಡಿ ಸರ್ವೋಚ್ಚ ನ್ಯಾಯಾಲಯದ ತೀರ್ಪಿಗೆ ಮಾನ್ಯತೆ ಕೊಟ್ಟಿದ್ದೇವೆಂದು ಹೇಳತಕ್ಕಂಥ ಮಾತು ಸರ್ವಸಮ್ಮತವಲ್ಲವೆಂದು ನಾನು ಮೊದಲು ಹೇಳುವುದಕ್ಕೆ ಇಷ್ಟಪಡುತೇನೆ. ಮಾನ್ಯ ಉಪಾಧ್ಯಕ್ಷರೆ, ಯಾವುದೇ ಚುನಾವಣೆ ಅದು ಶಾಸನ ಸಭೆ ಚುನಾವಣೆಯಾಗಲಿ, ಸಂಸತ್ತಿನ ಚುನಾವಣೆಯಾಗಲಿ, ಚುನಾವಣೆಗಳು ಶಾಸನಬದ್ಧವಾಗಿ ನಡೆಯಬೇಕು, ಶಾಸನದ ಆದೇಶಗಳಂತೆ ನಡೆಯಬೇಕು ಮತ್ತು ಶಾಸನದ ವ್ಯಾಪ್ತಿಯೊಳಗೆ ನಡೆಯಬೇಕು. ರಾಜ್ಯದಲ್ಲಿ ಪಂಚಾಯತಿ ಚುನಾವಣೆಗಳು ಏನು ನಡೆದಿದೆ, ಚುನಾವಣಾ ಕಾಯಿದೆಗಳನ್ನು ನಾವೇ ರಚಿಸಿಕೊಂಡಿದ್ದು ಚುನಾವಣೆಗಳು ಶಾಸಬಾಹಿರವಾಗಿ ನಡೆದಿದೆ. ಸುತ್ತೋಲೆ ಮೇರೆಗೆ ಚುನಾವಣೆ ನಡೆಯುತ್ತದೆ.

ರಾಜ್ಯ ಸರ್ಕಾರದ ಮಂತ್ರಿಗಳು ಮತ್ತು ಸಂಬಂಧಪಟ್ಟ ಇಲಾಖೆಯವರು ದಿನಕ್ಕೊಂದೊಂದು ಸುತ್ತೋಲೆಯನ್ನು ಕಳುಹಿಸುತ್ತಾರೆ. ಆ ಸುತ್ತೋಲೆ ಮೇರೆಗೆ ಚುನಾವಣೆಗಳು ನಡೆಯುತ್ತವೆ. ಇದರ ಮೊದಲ ಪರಿಣಾಮವೇನೆಂದರೆ, ಜನತಂತ್ರದ ಹೆಸರಿನಲ್ಲಿ ಕಾಂಗ್ರೆಸ್ ಶಾಸಕರ ಪಾಳೆಗಾರಿಕೆ ಎಂದು ನಾನು ಮತ್ತೆ ಹೇಳುತ್ತೇನೆ: ಜನತಂತ್ರದ ಹೆಸರು, ಜನತಂತ್ರದ ಶಾಸನ ನಡೆಯುತ್ತಿರತಕ್ಕಂಥಾದ್ದು ಆಳುವ ಪಕ್ಷದ ಶಾಸಕರ ಪಾಳೆಗಾರಿಕೆಯಿಂದ. ನಾವುಗಳೆಲ್ಲೂ ಸೇರಿ ಇಲ್ಲಿ ಏನು ಶಾಸನ ಮಾಡಿದ್ದೇವೆ ಅದಕ್ಕೆ ಬೆಂಕಿ ಹಚ್ಚುವುದೊಳ್ಳೆಯದು. ಇಲ್ಲವೇ ಇದರ ಆಧಾರದಂತೆ ನಡೆಯಬೇಕು.ಶಾಸನದಲ್ಲಿ ಎಲ್ಲಿಯೂ 'ಇಂತಹ ಕ್ಷೇತ್ರ ಇಂಹವರಿಗೇ ಮೀಸಲು' ಎಂದು ಹೇಳಿಲ್ಲ. ಹಿಂದುಳಿದವರಿಗೆ ಈ ಕ್ಷೇತ್ರ, ಇಂತಹ ಅಧ್ಯಕ್ಷರು ಹರಿಜನರು, ಇಂತಹ ಅಧ್ಯಕ್ಷರು ಹರಿಜನ ಮಹಿಳೆ ಎಂಬ ಮಾತನ್ನು ಮೊದಲೇ ಹೇಳಿದ್ದರೆ ಕನಿಷ್ಠ ಪಕ್ಷ ನಾವು ಆಯಾ ಜಾಗಕ್ಕೆ ಬೇಕಾದಂಥ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಜವಾಬ್ದಾರಿ ಹೊರತಕ್ಕಂಥ ಜನರನ್ನು ತಯಾರಿಸಬಹುದಿತ್ತು. ಸಾಧ್ಯವಿದೆ. ಆದರೆ, ನನ್ನ ಕ್ಷೇತ್ರವಾದ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಪರಿಶಿಷ್ಟ ವರ್ಗದವರಿಲ್ಲ. ಏನು ಮಾಡುವುದು? ಏನಾದರೂ ಮಾಡಿ ಚುನಾವಣೆಗೆ ಪರಿಶಿಷ್ಟ ವರ್ಗದವರು ಬೇಕೆಂಬ ಕಾರಣಕ್ಕಾಗಿ ದಕ್ಷಿಣ ಕನ್ನಡ ಜಿಲ್ಲೆಯಿಂದ ಮೈಗ್ರೇಷನ್ ಸರ್ಟಿಫಿಕೇಟ್ ತರಿಸಿ ಚುನಾವಣೆಗೆ ಪರಿಶಿಷ್ಟ ವರ್ಗ ಎಂದು ಅವರನ್ನು ಅಧ್ಯಕ್ಷರನ್ನಾಗಿ ಮಾಡಿದರು.

ಇಂತಹ ಪ್ರಕರಣಗಳು ಹತ್ತು ಇವೆ, ನಾನು ಎಲ್ಲವನ್ನೂ ವಿಸ್ತಾರವಾಗಿ ಹೇಳುವುದಕ್ಕೆ ಹೋಗುವುದಿಲ್ಲ, ಈ ಬಗ್ಗೆ ಶಾಸನದ ತಿದ್ದುಪಡಿ ಬರುವುದರಿಂದ ಆಗ ನಾನು ಹೇಳುತ್ತೇನೆ. ಒಂದು ಕಾಲಕ್ಕೆ ಚುನಾವಣೆಗಳಲ್ಲಿ ರಾಜಕೀಯ ಪಕ್ಷಗಳಲ್ಲಿ ಜಗಳ ನಡೆಯಿತು, ಈಗ ಜಾತಿ-ಜಾತಿಗಳಲ್ಲಿ ಜಗಳ, ವರ್ಗ-ವರ್ಗಗಳಲ್ಲಿ ಜಗಳ, ಊರು ಊರುಗಳಲ್ಲಿ ಜಗಳ. ಪಂಚಾಯತಿ ಚುನಾವಣೆಗಳಲ್ಲಿ ನಮ್ಮ ಪಕ್ಷದ ಹೆಸರನ್ನು ನಮೂದಿಸುವುದು ಬೇಡವೆಂದು, ಒಂದು ವೇಳೆ ನಮೂದಿಸಿದರೆ ಗ್ರಾಮಗಳಲ್ಲಿ ಇದರಿಂದ ಘರ್ಷಣೆಗಳುಂಟಾಗುತ್ತದೆಂಬುದನ್ನು ನಾವು ಮೊದಲು ಆಲೋಚಿಸಿದೆವು. ಈಗ ನೋಡಿದರೆ ಪಕ್ಷದ ಹೆಸರನ್ನು ಹಾಕದಿರುವುದೇ ಘರ್ಷಣೆಗೆ ಕಾರಣವಾಗಿದೆ. ಕಾರಣವೇನು? ಬಹುಶಃ ಯಾವುದೋ ಒಂದು ಮಂಡಲ ಪಂಚಾಯತಿಯಲ್ಲಿ ಕಾಂಗ್ರೆಸ್ ಸದಸ್ಯರು ಬಹು ಮತದಲ್ಲಿದ್ದರೆ ಅವರು ಮತ ಚಲಾಯಿಸುತ್ತಾರೆ. ಇಲ್ಲದಿದ್ದರೆ, Anti-defection Law. ಇದೆಯೆನ್ನುವ ಭೀತಿಯಿಂದ ಸದಸ್ಯತ್ವ ಹೋಗುತ್ತದೆಂದು ಗಂಭೀರವಾದ ಗಲಾಟೆಗಳಿಗೆ ಅವಕಾಶವಿರಲಿಲ್ಲ. ಆದರೆ, ಮೂಲತಃ ದೋಷ ಎಲ್ಲಿ

ಉಂಟಾಗಿದೆ? ಜನತಾ ದಳದವರು ಪ್ರಬಲವಾಗಿದ್ದ ಕಡೆ, ಭಾರತೀಯ ಜನತಾ ಪಕ್ಷದವರು ಪ್ರಬಲವಾಗಿದ್ದ ಕಡೆ ಅಥವಾ ರೈತ ಸಂಘದವರು ಪ್ರಬಲವಾಗಿರುವ ಕಡೆ ಅವರವರ ಪಾಡಿಗೆ ಚುನಾವಣೆ ನಡೆಯುತ್ತಿತ್ತು. ಈಗ ಬೇಕಾಬಿಟ್ಟಿಯಾಗಿ ಯಾರು ಯಾರನ್ನು ಬೇಕಾದರೂ ಹೊತ್ತುಕೊಂಡು ಹೋಗಬಹುದು. ಆದರೆ ಪಕ್ಷಾತೀತವಾಗಿ ಚುನಾವಣೆಯನ್ನು ಮಾಡಿದ್ದೇವೆಂದು ಘೋಷಣೆಯನ್ನು ಮಾಡಿದ್ದಾರೆ. ಇವತ್ತು ಪಕ್ಷಗಳ ಸಂಘರ್ಷವಾಗಿದೆಯೆಂದು ನೇರವಾಗಿ ಹೇಳಬಹುದು. ಈ ಸಂಘರ್ಷಕ್ಕೆ ನೇರವಾದ ಕೇಂದ್ರ ಬಿಂದು ಕಾಂಗ್ರೆಸ್ ಪಕ್ಷ. ಅವರು ಗಂಡಬೊಮ್ಮನಹಳ್ಳಿಯ ಬಗ್ಗೆ ಪ್ರಸ್ತಾಪ ಮಾಡಿದರು. ನಾನು ಅದರ ಬಗ್ಗೆ ವಿವರವಾಗಿ ಮಾತನಾಡುವುದಿಲ್ಲ. ಎರಡು ಮೂರು ವಿಚಾರಗಳನ್ನು ಮಾತ್ರ ಹೇಳುತ್ತೇನೆ. ಸವಿಸ್ತಾರವಾಗಿ ಹೋಗುವುದಿಲ್ಲ. ಅಲ್ಲಿ ಕರ್ನಾಟಕ ಕಾಂಗ್ರೆಸ್‌ಗೂ ದಿಲ್ಲಿ ಕಾಂಗ್ರೆಸ್‌ಗೂ ಜಗಳ. ಅಲ್ಲಿ ಯಾವುದು ಯಾವ ಕಾಂಗ್ರೆಸ್ ಎಂಬುದನ್ನು ಜನರೇ ನಿರ್ಧಾರ ಮಾಡುತ್ತಾರೆ. ದಿಲ್ಲಿ ಕಾಂಗ್ರೆಸ್ ಸರಿಯೋ, ಕರ್ನಾಟಕ ಕಾಂಗ್ರೆಸ್ ಸರಿಯೋ ಎಂಬುದನ್ನು ಜನರು ನಿರ್ಧಾರ ಮಾಡುತ್ತಾರೆ. ಮತ್ತೆ ಗುಲ್ಬರ್ಗದ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡಿದರು. ಅಲ್ಲಿ ಜನತಾ ದಳದವರಿಗೂ ಕಾಂಗ್ರೆಸ್‌ಗೂ ಜಗಳ. ಮಾಲೂರಿನಲ್ಲಿ ಕಾಂಗ್ರೆಸ್‌ಗೂ, ಜನತಾ ದಳಕ್ಕೂ ಜಗಳ. ಇನ್ನೊಂದು ಕಡೆ ಬಿಜೆಪಿಗೂ ಕಾಂಗ್ರೆಸ್‌ಗೂ ಜಗಳ. ಮತ್ತೊಂದು ಕಡೆ ರೈತ ಸಂಘಕ್ಕೂ ಕಾಂಗ್ರೆಸ್‌ಗೂ ಜಗಳ. ಅಂದರೆ ಈ ಜಗಳಕ್ಕೆ ಮೂಲ ಕಾರಣಕರ್ತರೆಂದರೆ ಕಾಂಗ್ರೆಸ್ ಪಕ್ಷ.

ಅದೇ ಕೇಂದ್ರ ಬಿಂದು. ಆದರೆ ಕಾಂಗ್ರೆಸ್ ಪಕ್ಷವೆಂದು ಹೇಳುವುದಿಲ್ಲ, ಏಕೆಂದರೆ ಕಾಂಗ್ರೆಸ್ ಎಂದರೆ ಯಾವುದು ಎಂದು ಕೇಳುತ್ತಾರೆ. ಅದಕ್ಕಾಗಿ ದಿಲ್ಲಿ ಕಾಂಗ್ರೆಸ್ ಎಂದು ಹೇಳುತ್ತೇನೆ. ಕರ್ನಾಟಕ ಕಾಂಗ್ರೆಸ್ ಬೇರೆ ಇದೆ. ಈ ದಿಲ್ಲಿ ಕಾಂಗ್ರೆಸ್ ಪಕ್ಷಕ್ಕೂ ಉಳಿದ ರಾಜಕೀಯ ಪಕ್ಷಗಳಿಗೂ ಜಗಳವನ್ನು ತಂದಿಟ್ಟ ಕೀರ್ತಿ ಈ ಸರ್ಕಾರಕ್ಕೆ, ಸಂಬಂಧಪಟ್ಟ ಮಂತ್ರಿಗಳಿಗೆ ಸಲ್ಲುತ್ತದೆ. ಕೂಡ್ಲಿಗಿಯಲ್ಲಿ, ಗಂಡಬೊಮ್ಮನಹಳ್ಳಿಯಲ್ಲಿ 14-3-94ರಂದು ಪೋಲೀಸ್ ಗೋಲಿಬಾರ್ ಆಯಿತು. ಮೂರು ಜನರು ಸತ್ತರು. ಗುಲ್ಬರ್ಗದ ಸುರಪುರ ತಾಲ್ಲೂಕಿನ ಕರಾಡಕಲ್ ಗ್ರಾಮದಲ್ಲಿ, 18ನೇ ಶನಿವಾರದಂದು ಗಲಭೆಯಾಯಿತು. ಆಗ ಪೋಲೀಸ್ ಗೋಲಿಬಾರ್ ಆಯಿತು. ನಾಲ್ಕು ಜನರು ಮೃತಪಟ್ಟರು. ಒಟ್ಟು 7 ಜನರು ಸತ್ತರು. ನೀವು ಚುನಾವಣೆಯಲ್ಲಿ ಏನು ಸಾಧನೆ ಮಾಡಿದ್ದೀರೆಂದರೆ, ಏಳು ಜನರನ್ನು ಕೊಂದಿದ್ದೀರಿ. ನೂರಾರು ಜನರು ಜೈಲಿನಲ್ಲಿದ್ದಾರೆ. ಸಾವಿರಾರು ಜನರು ಗಾಯಗೊಂಡಿದ್ದಾರೆ. ಕೋಲಾರ ಜಿಲ್ಲೆಯಲ್ಲಿನ ಮಾಲೂರು ತಾಲ್ಲೂಕಿನಲ್ಲಿ ಶಾಸಕರನ್ನೇ ಕೊಲೆ ಮಾಡತಕ್ಕ ಪ್ರಯತ್ನ ನಡೆಯಿತು ಎಂದು ಮತ್ತು ಅದರ ಸಂಬಂಧವಾಗಿ ಹನ್ನೊಂದು ಜನರನ್ನು ಅರೆಸ್ಟ್ ಮಾಡಿದ್ದಾರೆಂದು ಹೇಳಿದ್ದಾರೆ. ಅಂದರೆ ಶಾಸಕರುಗಳ ಸ್ಥಿತಿ ಎಲ್ಲಿಗೆ ಹೋಗಿದೆ? ಅದು ವಿರೋಧ ಪಕ್ಷಗಳ ಶಾಸಕರು ಇರಬಹುದು, ಬೇರೆ, ಶಾಸಕರು ಇರಬಹುದು, ಶಾಸಕರೆಂದರೆ ಎಲ್ಲರೂ ಒಂದೇ, ಮಾನ್ಯ ಮುಖ್ಯ ಮಂತ್ರಿಯವರು ಬೆಳಿಗ್ಗೆ ಪ್ರಾಸ್ತಾವಿಕ ಭಾಷಣ ಮಾಡುತ್ತಾ ಒಂದು ಮಾತನ್ನು ಹೇಳಿದರು. ಎಲ್ಲಿಯೋ ದೊಡ್ಡ ಸಮಾಜಕ್ಕೂ, ಶೋಷಿತ ಸಮಾಜಕ್ಕ ಘರ್ಷಣೆಯ ಆಗುತ್ತಿದೆ. ಆ ವಿಪ್ಲವ ಯಾವುದು? ಯಾರು ಅದನ್ನು ನಿರ್ಮಾಣ ಮಾಡಿದರು? ಇದನ್ನು ನಾವು ಮಾಡಿದ್ದೇ? ಶಾಸನ ಮಾಡಿತೇ? ಇದನ್ನು ಮಾಡಿದವರು ನೀವು. ಇಂಥ ವಿಪ್ಲವವನ್ನು ಮಾಡಿ ಚುನಾವಣೆಗಳನ್ನು ನಾಟಕವಾಗಿ ನಡೆಸಿದ್ದೀರಿ. ಅದಕ್ಕೆ ನಾನು ಹೇಳಿದ್ದೆ. ಮೊದಲೇ ಒಂದು ಕ್ಷೇತ್ರವನ್ನು ಹರಿಜನರಿಗಾಗಿ ಮೀಸಲೆಂದು ಹೇಳಿದರೆ ಆ ಕ್ಷೇತ್ರದಲ್ಲಿ ಗಲಭೆಗೆ ಕಾರಣವೇ ಇರುತ್ತಿರಲಿಲ್ಲ. ಹರಿಜನ ಅಭ್ಯರ್ಥಿಯು ಆಯ್ಕೆಯಾಗಿ ಬರುತ್ತಿದ್ದರು. ಅವನು ಅಧ್ಯಕ್ಷನಾಗಿದ್ದಾನೆಂದು ಊರಿಗೇ ಗೊತ್ತಿರುತ್ತಿತ್ತು. ಅಲ್ಲಿ ಇನ್ನೊಬ್ಬರು ಪ್ರವೇಶ ಮಾಡುವುದಕ್ಕೆ ಅವಕಾಶವೇ ಇರುತ್ತಿರಲಿಲ್ಲ.

ತತ್ಪರಿಣಾಮವಾಗಿ ಏನು ಆಗಿದೆ ಎಂದರೆ, ಎಲ್ಲೆಲ್ಲಿ ಹರಿಜನ ಅಭ್ಯರ್ಥಿಗಳು, ಮಹಿಳೆಯರು, ಹಿಂದುಳಿದವರು, ಬ್ಯಾಕ್‌ವರ್ಡ್ ಟ್ರೈಬ್ಸ್‌ನವರು ಅಧ್ಯಕ್ಷರಾಗಬೇಕಾಗಿತ್ತೋ ಅಲ್ಲೆಲ್ಲಾ ಬಹುತೇಕವಾಗಿ ಅಧ್ಯಕ್ಷರ ಚುನಾವಣೆಯೇ ಆಗಿಲ್ಲ. ಬರೀ ಉಪಾಧ್ಯಕ್ಷರ ಚುನಾವಣೆ ಮಾತ್ರ ಆಗಿದೆ. ದಯವಿಟ್ಟು ಅದನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳಿ. ಏಕೆಂದರೆ ಅವರಿಗೆ ಯಾವುದು ಅನುಕೂಲವೋ ಅದನ್ನು ಮಾಡಿಕೊಂಡಿದ್ದಾರೆ. ಇನ್ನು ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಎರಡೂ ಬೇಡವೆನ್ನುವ ಕಡೆಗಳಲ್ಲಿ ಚುನಾವಣೆಯೇ ಆಗಿಲ್ಲ.

ನನ್ನ ಕ್ಷೇತ್ರವಾದ ತೀರ್ಥಹಳ್ಳಿಯಲ್ಲಿಯೇ ಆಗಿಲ್ಲ. ಏಕೆಂದರೆ ಅವರಿಗೆ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಇಬ್ಬರೂ ಬರಬೇಕಾಗಿಲ್ಲ. ಅಂಥ ವಿಪ್ಲವ ಮಾಡಿದ್ದಾರೆ. ಮುಖ್ಯಮಂತ್ರಿಯವರು ಭಾಷೆಯನ್ನು ಬಳಸುವಾಗ, ಏಕೆಂದರೆ ನಿಮಗೆ 2-3 ವರ್ಷದಿಂದ ಪ್ರತೀ ಬಜೆಟ್ ಭಾಷಣದಲ್ಲಿ, ರಾಜ್ಯಪಾಲರ ಭಾಷಣದಲ್ಲಿ ಕನ್ನಡದ ನಿಘಂಟಿನ ಎಲ್ಲಾ ಘೋಷಣೆಗಳನ್ನು ಅಭ್ಯಾಸ ಮಾಡಿಕೊಳ್ಳಬೇಕು. ತಾವು ಈ ಸಾರಿ ಹನ್ನೊಂದು ಘೋಷಣೆಗಳನ್ನು ಮಾಡಿದ್ದೀರಿ: ಘೋಷಣೆಗಳನ್ನು ಮಾಡುವವರಿಗೇ ಆ ಹೆಸರುಗಳು ಗೊತ್ತಿದೆಯೋ ಅಥವಾ ಇಲ್ಲವೋ? ಈಗ ಒಂದು ಘೋಷಣೆ, ವಿಪ್ಲವ ನೀಡಿರುವ ಬಗ್ಗೆ, ಏನು ವಿಪ್ಲವ ನಡೆದಿದೆ? ಎಲ್ಲಿ ವಿಪ್ಲವ ನಡೆದಿದೆ? ಏಕೆ ಆ ರೀತಿ ನಡೆದಿದೆ? ಈ ಮೂರೂ ಪ್ರಶ್ನೆಗಳಿಗೆ ಉತ್ತರವನ್ನು ಕೊಡಬೇಕು. ಇನ್ನೂ ಅದು ನಡೆಯುತದೆ. ಬೆಳ್ತಂಗಡಿಯಲ್ಲಿ ಮಾನ್ಯ ಸದಸ್ಯರು ಅದಕ್ಕೂ ನನಗೂ ಸಂಬಂಧವಿಲ್ಲವೆಂದು, ನೀವು ಹೊತ್ತುಕೊಂಡು ಹೋದಿರಿ, ಯಾರು ಯಾರನ್ನು ಯಾವ್ಯಾವ ಕಾಲದಲ್ಲಿ ಹೊತ್ತುಕೊಂಡು ಹೋದರೋ ಅದರ ಬಗ್ಗೆ ಕರ್ನಾಟಕದ ಇತಿಹಾಸದಲ್ಲಿ, ಚರಿತ್ರೆಯಲ್ಲಿ ಬರೆಯುವುದಾದರೆ ಬಹುಶಃ ಕನ್ನಡ ಸಾಹಿತ್ಯ ಲೋಕದ ದೊಡ್ಡ ನಿಘಂಟೇ ಆಗುತ್ತದೆ. ಎಷ್ಟು ಹೊತ್ತಿಗೆಯನ್ನು ಬರೆಯುವುದಕ್ಕೆ ಅವಕಾಶವಿದೆ. 15ನೇ ತಾರೀಖು ಬೆಳಗಿನಜಾವ ನಾನು ಬೆಳ್ತಂಗಡಿಯನ್ನು ನೋಡಬೇಕೆಂದು ಹೋಗಿರಲಿಲ್ಲ.

ನನ್ನ ಕ್ಷೇತ್ರವಾದ ತೀರ್ಥಹಳ್ಳಿಯ ಒಬ್ಬರು ಸ್ನೇಹಿತರು ಮಣಿಪಾಲದ ಆಸ್ಪತ್ರೆಯಲ್ಲಿ ಇದ್ದರು. ಅವರನ್ನು ನೋಡಿಕೊಂಡು ಆ ಮಾರ್ಗದಲ್ಲಿ ಬರುತ್ತಿದ್ದೆ. ನಾನು ಬೆಳ್ತಂಗಡಿಯನ್ನು ಪ್ರವೇಶ ಮಾಡಿದಾಗ ಬೆಳಿಗ್ಗೆ 10-30 ಸಮಯ. 4-6 ಜನರು ನನ್ನ ಕಾರನ್ನು ನೋಡಿ ಓಡಿ ಹೋದರು. ಏನು ಸಮಾಚಾರವೆಂದರೆ, ಸ್ವಾಮಿ - ಪೋಲೀಸ್‌ನವರಿಗೆ ಫೋನ್ ಮಾಡಬೇಕೆಂದರು. ಶ್ರೀಮತಿ ಹೊನ್ನಮ್ಮನವರನ್ನು ಅಪಹರಣ ಮಾಡಿದ್ದಾರೆಂದು ವಿಷಯ ತಿಳಿದಾಗ ಸಮಯ 10.30 ಆಗಿತ್ತು. ಅಪಹರಣ ಮಾಡಿದ ಕಾರಿನಲ್ಲಿ 4-5 ಜನರು ಇದ್ದರು. ಇವತ್ತು ಚುನಾವಣೆ ನಡೆಯಬೇಕು ಎಂದು ಅಲ್ಲಿಯ ಜನರು ಹೇಳಿದರು. ದಯಮಾಡಿ ಈ ವಿಷಯವನ್ನು ಪೋಲೀಸ್‌ನವರಿಗೆ ತಿಳಿಸಿ ಎಂದು ಜನರು ನನಗೆ ಹೇಳಿದರು ಏಕೆ ಅಪಹರಣ ಮಾಡಿದ್ದಾರೆ ಎಂದರೆ ಇದೇ ಕಾರಣಕ್ಕಾಗಿ ಮಾಡಿದ್ದಾರೆಂದು ಹೇಳಿದರು. ಶ್ರೀ ಗಂಗಾಧರಗೌಡರು ಇದರಲ್ಲಿ ಪಾತ್ರವಹಿಸಿದ್ದಾರೆ. ಅವರು ಮನೆಗೆ ಕರೆಸಿಕೊಂಡಿದ್ದರಂತೆ. ಈ ವಿಷಯವೆಲ್ಲಾ ನನಗೆ ಗೊತ್ತಿಲ್ಲ. ವಿವರಗಳನ್ನು ಅವರೇ ಹೇಳಬೇಕು. ಅಥವಾ ತನಿಖೆಯಿಂದ ತಿಳಿಯಬೇಕು. ನನಗೆ ಅತ್ಯಾಶ್ಚರ್ಯವಾಯಿತು. ನಾವು ಧರ್ಮಸ್ಥಳಕ್ಕೆ ಹೋಗಿ ಊರಿಗೆ ಬರುವವರೆಗೆ ನಮ್ಮ ಕೆಲಸ ಏನೆಂದರೆ ಇಲ್ಲಿ ಪಂಚಾಯಿತಿ ಅಧ್ಯಕ್ಷರ ಅಪಹರಣವಾಗಿದ್ದ ಬಗ್ಗೆ ನಾವು ಬೆಳ್ತಂಗಡಿಯಲ್ಲಿ ಪೋಲೀಸ್ ಅಧಿಕಾರಿಯನ್ನು ಸಂಪರ್ಕ ಮಾಡಲು ಪ್ರಯತ್ನ ಮಾಡಿದ್ದೆ, ಅದು ಸಾಧ್ಯವಾಗಲಿಲ್ಲ. ಬಹುಶಃ ಅವರು ಇದರಲ್ಲಿ ಪಾಲ್ಗೊಂಡಿದ್ದರೋ ಅಥವಾ ಏನೋ ತೊಂದರೆಯಾಗಿದೆ ಎಂದು ಅವರನ್ನು ಬಿಡಿಸುವುದಕ್ಕೆ ಹೋಗಿದ್ದರೋ ನನಗೆ ಗೊತ್ತಿಲ್ಲ. ನಾವು ಇಲ್ಲಿ ಕುಳಿತುಕೊಂಡು ನಾವು ನಮ್ಮ ಪರಿಸ್ಥಿತಿಯ ಬಗ್ಗೆ ವಿವರಣೆಯನ್ನು ಹೇಳಬಹುದು. ಆದರೆ ನೇರವಾಗಿ ಜನರಲ್ಲಿ ಏನಾಗಿದೆ ಎನ್ನತಕ್ಕಂಥದ್ದು ದಿನಾಂಕ 15-3-94ರಂದು ಇಲ್ಲಿ ಇಂಥಹ ಒಂದು ಪ್ರಕರಣ ನಡೆದಿದೆ.

ಶ್ರೀ ಕೆ. ಗಂಗಾಧರಗೌಡ : ನೀವು ಊರಿಗೆ ಹೋಗಿದ್ದೀರಿ, ಬೆಳ್ತಂಗಡಿಗೆ ಬಂದಿದ್ದೀರಿ ಅದನ್ನು ನೀವು ಹೇಳಿದ್ದೀರಿ. ಆದರೆ ಅದು ತಪ್ಪು ಅರ್ಥ ಬರುತ್ತದೆ. ನಾನು ನಿಮ್ಮನ್ನು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದೇನೆ. ನಮ್ಮ ಕ್ಷೇತ್ರದ ಎಂ.ಪಿಗಳಾಗಿದ್ದ ನೀವು ಹೀಗೆ ಹೇಳುವುದು ಸರಿಯಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ನಿಮ್ಮ ಮೇಲೆ ಅಪಾದನೆ ಮಾಡುತ್ತಿಲ್ಲ. ಜನರು ನನ್ನ ಹತ್ತಿರ ಬಂದಿದ್ದರು. ಅವರು ಏಕೆ ಬಂದಿದ್ದರು ಎಂದರೆ ನಾನು ಲೋಕಸಭೆಗೆ ಸದಸ್ಯನಾಗಿದ್ದೆ. ಬೆಳ್ತಂಗಡಿ ಮತ್ತು ಕಾರ್ಕಳ ಕ್ಷೇತ್ರಗಳು ನನಗೆ ಸೇರಿತ್ತು. ಆದರಿಂದ ನನ್ನ ಪರಿಚಯವಿದ್ದ ಜನರು ಚಂದ್ರೇಗೌಡರು ಬಂದಿದ್ದಾರೆ ದೊಡ್ಡ ಮನುಷ್ಯ ಎಂದು ಅವರೇನೂ ಬಂದಿರಲಿಲ್ಲ. ನನ್ನನ್ನು ನೋಡಿದ ಜನರು ಬಂದು ಈ ದೂರನ್ನು ನನಗೆ ಹೇಳಿದರು. ನಾನು ಸಾಧ್ಯವಾದರೆ ಅದನ್ನು ಪೂರೈಸಬೇಕೆಂದು ಪ್ರಯತ್ನ ಮಾಡಿದೆ. ಆದರೆ ಸಾಧ್ಯವಾಗಲಿಲ್ಲ.

ಶ್ರೀ ಎ. ರುಕ್ಮಯ ಪೂಜಾರಿ : ಹೊನ್ನಮ್ಮನವರು ಹೇಳದೇ ಇರುವಂತಹ ಹೇಳಿಕೆಯನ್ನು ತಾವು ಹೇಳುವುದು ಸರಿಯಲ್ಲ.

ಶ್ರೀ ಕೆ. ಗಂಗಾಧರಗೌಡ : ಆಗಲೇ ಶ್ರೀ ದೇಶಪಾಂಡೆಯವರು ವಿರೋಧಪಕ್ಷದ ನಾಯಕರು ಇದರ ಬಗ್ಗೆ ಒಂದು ರೀತಿಯಾಗಿ ಮಾತನಾಡಿದರು. ನೀವು ಒಂದು ರೀತಿಯಾಗಿ ಮಾತನಾಡುತ್ತೀರಿ. ಈಗ ಇದರ ಬಗ್ಗೆ ಚರ್ಚೆ ಮಾಡುವುದಾದರೆ ಏನೇನೋ ಚರ್ಚೆ ಮಾಡಬಹುದು. ಶ್ರೀ ಚಂದ್ರೇಗೌಡರು ದೆಹಲಿಯಲ್ಲಿ ಕಾಂಗ್ರೆಸ್ ಪಕ್ಷದಲ್ಲಿ ಕೆಲಸ ಮಾಡಿಕೊಂಡು ಬಂದವರು. ನಮಗೆ ಅವರು ರಾಜಕೀಯಕ್ಕೆ ಬರುವುದಕ್ಕೆ ಅವಕಾಶ ಮಾಡಿಕೊಟ್ಟವರು. ಎರಡು ಸಾರಿ ಚಿಕ್ಕಮಗಳೂರು ಕ್ಷೇತ್ರದಿಂದ ಲೋಕಸಭೆಗೆ ಸ್ಪರ್ಧಿಸಿದವರು. ನಾನು ಏನು ಎನ್ನುವುದನ್ನು ಅವರು ಚೆನ್ನಾಗಿ ತಿಳಿದುಕೊಂಡಿದ್ದಾರೆ. ಯಾರ ಯಾರ ಜಗಳವನ್ನು ನನ್ನ ತಲೆಗೆ ತಂದು ಹಾಕಬೇಡಿ. ನೀವು ಬಿ.ಜೆ.ಪಿ. ಸದಸ್ಯರಾಗಿದ್ದಂತಹ ವಸಂತ ಬಗೇರಾ ಎನ್ನುವವರನ್ನು ಡಿಫೆಕ್ಷನ್ ಮಾಡಿಬಿಟ್ಟು ಇವತ್ತು ಅಲ್ಲಿ ಗಲಾಟೆ ನಡೆಯುತ್ತಿದೆ. ವಿರೋಧಪಕ್ಷದ ನಾಯಕರು ವಿಶ್ವ ಹಿಂದೂ ಪರಿಷತ್ತಿನವರು ಕೊಂಡು ಹೋದರು ಎಂದು ಹೇಳಿದರು. ಅಲ್ಲಿ ಹೊನ್ನಮ್ಮನ ನಾಪತ್ತೆಗೆ ಯಾರು ಕಾರಣರು ಎಂಬುದನ್ನು ಪೋಲೀಸ್‌ನವರು ತನಿಖೆ ಮಾಡುತ್ತಾರೆ; ಅದನ್ನು ರುಜುವಾತು ಮಾಡುತ್ತಾರೆ. ಅದನ್ನು ನೀವು ಗಂಗಾಧರಗೌಡರು ಹಾಗೆ ಮಾಡಿದರು, ಅವರಿಗೆ ಗೊತ್ತೆ ಅಥವಾ ಅವರ ಮನೆಗೆ ಅವರು ಹೋಗಿದ್ದರು ಎಂದು ಹೇಳುವುದು ಸರಿಯಲ್ಲ. ಈಗ ನಾನು ಶಾಸಕನಾಗಿರುವಾಗ ಎಲ್ಲರೂ ನನ್ನ ಮನೆಗೆ ಬರುತ್ತಾರೆ. ಇದು ಬಿ.ಜೆ.ಪಿ. ಮತ್ತು ಜನತಾದಳದ ಜಗಳ, ಇದರ ಮಧ್ಯೆ ನನ್ನನ್ನು ಏಕೆ ತರುತ್ತೀರಿ? ದಯಮಾಡಿ ಈ ಜಗಳದಲ್ಲಿ ನನ್ನನ್ನು ಎಳೆಯಬೇಡ.

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಹೇಳುವುದು ನಿಮಗೆ ಅರ್ಥವೇ ಆಗಿಲ್ಲ. ನಾನು ಹೇಳಿದ್ದುದು ದಿನಾಂಕ 15 ರಂದು ಬೆಳಿಗ್ಗೆ ಬೆಳ್ತಂಗಡಿಗೆ ಬಂದಿದ್ದೆ, ಆದರೆ ಅಲ್ಲಿಗೆ ಹೋಗುವ ಕಾರ್ಯಕ್ರಮ ಏನೂ ಇರಲಿಲ್ಲ. ನಾನು ಆ ದಾರಿಯಲ್ಲಿ ಹೋಗುವಾಗ ನನ್ನ ಕಾರು ನೋಡಿದ ಜನರು ಕಾರನ್ನು ತಡೆದರು. ನಾನು ಏನು ಸಮಾಚಾರವೆಂದು ಕೇಳಿದೆ. ಒಬ್ಬ ಹೆಣ್ಣುಮಗಳನ್ನು ಅಪಹರಿಸಿದ್ದಾರೆ ಎಂದು ವರದಿಯನ್ನು ಕೊಟ್ಟರು. ಇದರಲ್ಲಿ ಗಂಗಾಧರಗೌಡರ ಪಾಲು ಏನಾದರೂ ಇದೆಯೋ ಎಂದು ಕೇಳಿದೆ. ಅದಕ್ಕೆ ಅವರದ್ದೂ ಇದ್ದಿರಬಹುದು ಎನ್ನತಕ್ಕಂಥ ಮಾತನ್ನು ಹೇಳಿದರು.

(ಗೊಂದಲ)

ಶ್ರೀ ಎ. ರುಕ್ಮಯ ಪೂಜಾರಿ : ಗಂಗಾಧರಗೌಡರು ಇದರಲ್ಲಿ ಬಿ.ಜೆ.ಪಿ.ಯವರ ಪಾಲು ಇದೆ ಎಂದು ಹೇಳಿದರು. ನಮಗೂ ಇದಕ್ಕೂ ಸಂಬಂಧವೇ ಇಲ್ಲ. ಅಲ್ಲ ಬಿ.ಜೆ.ಪಿ. ಸದಸ್ಯರೇ ಇಲ್ಲ, ಅದು ನಿಮ್ಮಗಳ ಗಲಾಟೆ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಅಲ್ಲಿಯ ಜಗಳ ಯಾವುದು ನನಗೆ ಗೊತ್ತಿಲ್ಲ. ಆದರೆ ಪದೇ ಪದೇ ಬಿ.ಜೆ.ಪಿ.ಯವರು ಅಪಹರಣ ಮಾಡಿದರು ಎಂದು...

ಶ್ರೀ ಕೆ. ಗಂಗಾಧರಗೌಡ : ವಿಶ್ವ-ಹಿಂದೂ-ಪರಿಷತ್ತಿನವರು ಕರೆದುಕೊಂಡು ಮನೆಯೊಳಗೆ ಇಟ್ಟಿದ್ದಾರೆ ಎಂದು ವಿರೋಧಪಕ್ಷದ ಅಧ್ಯಕ್ಷರು ಹೇಳುತ್ತಾರೆ. ಗಂಗಾಧರ ಶೇಖ್ ಆಗಲಿ, ಸಾಯಿ ಪ್ರಕಾಶ್ ಶೇಖ್ ಆಗಲಿ ಅವರು ವಿಶ್ವ ಹಿಂದೂ ಪರಿಷತ್ತಿನವರು; ಕಾಂಗ್ರೆಸ್‌ನವರಿಗೂ ಅವರಿಗೂ ಏನು ಸಂಬಂಧವಿಲ್ಲ. ಇದಕ್ಕೆ ಸುಮ್ಮನೆ ನಮ್ಮನ್ನು ಏಕೆ ಎಳೆಯುತ್ತೀರಿ? ಬಿ.ಜೆ.ಪಿ. ವಿಧಾನ ಪರಿಷತ್ತಿನ ಸದಸ್ಯರನ್ನು ಅಪಹರಣ ಮಾಡಿದಂತಹ ಪಕ್ಷದವರು. ಆ ಒಂದು ಗ್ರೂಪ್‌ನಲ್ಲಿ ನಡೆಯುತ್ತಿದೆ. ಇವರ ಜಗಳ ಮುಂದುವರೆದಿದೆ. ಅದರಲ್ಲಿ ನಾವು ಏಕೆ ಜವಾಬ್ದಾರರಾಗಬೇಕು?

ಶ್ರೀ ಡಿ.ಬಿ. ಚಂದ್ರೇಗೌಡ : ಶ್ರೀ ವೆಂಕಟೇಶ್ ಅವರನ್ನು ಕಾಂಗ್ರೆಸ್‌ನವರು ಅಪಹರಣ ಮಾಡಿದ್ದನ್ನು ನಾನು ಹೇಳಲೇ? ನಿಮಗೆ ಇರುವ ಸಂಖ್ಯೆ ಸಾಲದೆಂದು ಅವರನ್ನೂ ನೀವು ಕರೆದುಕೊಂಡಿರಿ.

(ಗೊಂದಲ)

ಶ್ರೀ ಎ. ರುಕ್ಮಯ ಪೂಜಾರಿ : ಇದನ್ನು ದಳದವರು ಮಾಡಿದ್ದಾರೆ, ಕಾಂಗ್ರೆಸ್‌ನವರು ಮಾಡಿದ್ದಾರೆ. ಎಲ್ಲೆಲ್ಲಿ ಯಾರಿಗೆ ಶಕ್ತಿ ಇದೆ, ಅಲ್ಲಲ್ಲಿ ಅವರು ಮಾಡಿಕೊಂಡಿದ್ದಾರೆ. ಅದರಲ್ಲಿ ತಪ್ಪಿಲ್ಲ. ಈಗ ಯಾರ್‍ಯಾರು ತಪ್ಪು ಮಾಡಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಿ.

ಶ್ರೀ ಡಿ.ಬಿ. ಚಂದ್ರೇಗೌಡ : ಬಿಜೆಪಿಯವರು ಸದನದ ಹೊರಗಡೆ ಏನೂ ತಿಳಿಯದೆ ಯಾರ್‍ಯಾರು ಸಿಗುತ್ತಾರೋ ಅವರನ್ನು ಕರೆದುಕೊಂಡು ಬಂದರು. ಅಲ್ಲಿ ಹೆಚ್ಚಾಗಿ ಬೈಪಾಸ್ ಆದವರು ಅವರೂ ಇವರೂ ಎಲ್ಲಾ ಸಿಕ್ಕಿದರೆ ಅವರನ್ನೆಲ್ಲಾ ಕರೆದುಕೊಂಡು ಬರುತ್ತಾರೆ. ಇವರದ್ದು ಈ ಶಾಸನ ಸಭೆಯಲ್ಲಿ ಒಳಗೆ ಹಿಂದೆ ಯಾವುದೋ ಆಗಿತ್ತು ಎಂದು ಹೇಳಿ ಎಷ್ಟು ಜನ ಎಂಬ ಬಗ್ಗೆ ಪಟ್ಟಿ ಮಾಡಿಕೊಡಲಿ ನಾನು. ಪಾಪ ಹೋಗೋದು ಹೋಗಿಬಿಟ್ಟಿದ್ದಾರೆ, ಅಲ್ಲಿಂದ ತಪ್ಪಿಸಿಕೊಂಡು ಬರುವುದು ಹೇಗೆ ಎಂದು ಅವರಿಗೆ ಗೊತ್ತಾಗಿಲ್ಲ. ಆದುದರಿಂದ ನಾನು ಆ ವಿಚಾರವನ್ನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಮುಖ್ಯವಾಗಿ ಅಷ್ಟಕ್ಕೆ ಸೀಮಿತವಾಗಿ ನಾನು ಇದ್ದ ಕಾರಣವನ್ನು ಹೇಳಿದೆ. ಪ್ರತಾಪ ಚಂದ್ರ ಶೆಟ್ಟರು ಹೇಳಿದ ಹಾಗೆ, ಆ ಮಹಿಳೆ ನನಗೆ ಸಿಕ್ಕಿರ ಹೇಳಿದ್ದಲ್ಲ. ಆ ಮಹಿಳೆ ನನಗೆ ಸಿಕ್ಕಿದ್ದರೆ ಅಪಹರಣ ಮಾಡುವುದಕ್ಕೆ ಬಿಡುತ್ತಿರಲಿಲ್ಲ. ಆದುದರಿಂದ ಇದರ ಜವಾಬ್ದಾರಿ ಎಲ್ಲರದ್ದೂ ಇದೆ. ಆ ಜವಾಬ್ದಾರಿ ನಿಮ್ಮದೂ ಇದೆ.

ಶ್ರೀ ಕೆ. ಗಂಗಾಧರಗೌಡ : ಮಾನ್ಯ ಚಂದ್ರೇಗೌಡರು ಬೆಳ್ತಂಗಡಿಗೆ ಬಂದಾಗ ಹೊನ್ನಮ್ಮನ ಅಪಹರಣ ಮಾಡಿದ್ದನ್ನು ಹೇಳಿದರು; ಆದರೆ ಹೇಮಾವತಿಯನ್ನು ಅಪಹರಣ ಮಾಡಿದ್ದನ್ನು ನಿಮಗೆ ಯಾರೂ ಹೇಳಲಿಲ್ಲವೇ? ಹೇಮಾವತಿಯನ್ನು ಬೆಳ್ತಂಗಡಿಯಲ್ಲಿ ನಿಮ್ಮ ಪಕ್ಷದವರೇ ಅಪಹರಣ ಮಾಡಿದರು.

ಶ್ರೀ ಬಿ.ಹೆಚ್ ಬನ್ನಿಕೋಡ್ : ಅಧ್ಯಕ್ಷರೇ, ಅವರು ಏನು ಹೇಳಬೇಕೋ ಅದನ್ನು ಅನಂತರ ಹೇಳಲಿ, ಮಧ್ಯದಲ್ಲಿ ಪದೇ ಪದೇ ಇಂಟರ್‌ಫಿಯರ್ ಮಾಡಿದರೆ ಹೇಗೆ?

(ಗೊಂದಲ)

ಶ್ರೀ ಕೆ. ಗಂಗಾಧರಗೌಡ : ಮಾನ್ಯ ಅಧ್ಯಕ್ಷರೇ, ಪದೇ ಪದೇ ಹೇಳುವಂತಹ ಅಭ್ಯಾಸ ನನಗೆ ಇಲ್ಲ, ನನ್ನ ಮೇಲೆ ಆಪಾದನೆ ಬಂದರೆ ನಾನು ಹೇಳಿಯೇ

ಹೇಳುತ್ತೇನೆ. ಮಧ್ಯದಲ್ಲಿ ಎದ್ದು ಮಾತನಾಡುವವನು ನಾನಲ್ಲ, ನಾನು ನಿಮ್ಮ ಆಪಾದನೆ ಹೊತ್ತುಕೊಂಡು ಹೋಗುವುದಕ್ಕೆ ತಯಾರು ಇಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : 81 ಸಾವಿರ ಜನ ಸದಸ್ಯರಲ್ಲಿ ಮಾನ್ಯ ಮುಖ್ಯಮಂತ್ರಿಯವರು ಬೆಳಿಗ್ಗೆ ಅಥವಾ ನಿನ್ನೆ ಬಜೆಟ್ ಭಾಷಣದಲ್ಲಿ ಹೇಳಿದರು, ಶೇಕಡ 43ರಷ್ಟು ಮಹಿಳೆಯರು ಬಂದಿದ್ದಾರೆ ಎಂದು. ಅವರಲ್ಲಿ ಯಾರ್‍ಯಾರು ಯಾರ್‍ಯಾರನ್ನು ಅಪಹರಿಸಿದರೋ ನನಗೆ ಗೊತ್ತಿಲ್ಲ. ನಾನು ಆ ವಿಚಾರ ಕೇಳಿದೆ. ಇಲ್ಲಿ ನಿಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟ ಮಹಿಳೆಯ ವಿಚಾರ ಅಷ್ಟೇ ನನಗೆ ಬೇಕಾಗಿರುವುದು. ಇನ್ನು 43 ಪರ್ಸೆಂಟ್ ಮಹಿಳೆಯರನ್ನೆಲ್ಲಾ ಅಪಹರಿಸಿದ್ದಾರೆ ಎಂದು ನಾನು ಜನರಲ್ ಸ್ಟೇಟ್‌ಮೆಂಟ್ ಮಾಡಲಿಲ್ಲ. ಆದುದರಿಂದ ಮಾನ್ಯ ಅಧ್ಯಕ್ಷರೇ, ಚಿತ್ರದುರ್ಗ ಜಿಲ್ಲೆ ಹರಿಹರದಲ್ಲಿ ಹಳೇ ಪಾಳ್ಯ ಗ್ರಾಮದಲ್ಲಿ ಪಂಚಾಯತ್ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧೆ ಮಾಡಬೇಕಾಗಿದ್ದ ಹೆಣ್ಣುಮಗಳನ್ನು ಅಪಹರಿಸಿದರು. ಎಲ್ಲಾ ಹೆಣ್ಣುಮಕ್ಕಳೇ ಅಪಹರಣಕ್ಕೆ ಸಿಕ್ಕಿರುವವರು. ಇಲ್ಲಿ ಅಪಹರಣಕ್ಕೆ ಈಡಾಗಿರುವವಳು ಹರಿಜನ ಮಹಿಳೆ ಆಕೆ. ಅಲ್ಲಿ ಯಾರು ಈ ಹೊನ್ನಮ್ಮನನ್ನು ಅಪಹರಿಸಿದರು, ಇಲ್ಲಿ ಯಾವ ಹರಿಜನ ಹಣ್ಣುಮಗಳನ್ನು ಅಪಹರಿಸಿದರು, ಇನ್ನು ಯಾರೋ ಹೇಮಾವತಿ ಎಂದು ಏನು ಅಪಹರಿಸಿದರು, ಈ ಎಲ್ಲಾ ಪ್ರಕ್ರಿಯೆಗಳು ತನಿಖೆಯಾಗಿ ಸತ್ಯಶೋಧನೆ ಆಗಬೇಕು. ಹೇಗೆ ಮಾಡಬೇಕು ಈ ಸತ್ಯದ ಶೋಧನೆ. ಅದಕ್ಕಾಗಿ ನಾನು ಏನು ಹೇಳುತ್ತೇನೆ ಈ ಸತ್ಯಶೋಧನೆಗಾಗಿ ಒಂದು ಸದನದ ಸಮಿತಿಯನ್ನು ನೇಮಕ ಮಾಡಿ. ಅದಕ್ಕೆ ಒಂದು ಟೈಂಬೌಂಡ್ ಪ್ರೋಗ್ರಾಂ ಕೊಡಿ. ಆದರೆ ಈಗ ನನಗೆ ಸದನದ ಸಮಿತಿ ಮೇಲೆ ವಿಶ್ವಾಸ ಉಳಿದಿಲ್ಲ. ಇಲ್ಲಿ ಈಗ ಬೈರೇಗೌಡರು ಎಲ್ಲೋ ಹೋದರು; ಪವರ್‌ಗೆ ಒಂದು ಸಮಿತಿ ಮಾಡಿದರು, ಆದರೆ ಇದುವರೆವಿಗೂ ಒಂದು ರೀಪೋರ್ಟ್ರೇ ಕೊಡಲಿಲ್ಲ. ಅದರಲ್ಲಿ ನಮ್ಮವರೇ ಇದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೇ, ಅದರಲ್ಲಿ ನಾವೆಲ್ಲಾ ಇದ್ದೇವೆ. ನೀವು ಟೈಪ್ ಮಾಡುವುದಕ್ಕೆ ಒಂದು ಟೈಪಿಸ್ಟ್ ಕೊಡಲಿಲ್ಲ. ಏಕೆ ಈ ರೀತಿ ಹೇಳುತ್ತೀರಿ.

ಶ್ರೀ ಡಿ.ಬಿ. ಚಂದ್ರೇಗೌಡ : ಅದರ ಬಗ್ಗೆ ಇನ್ನೂ ವರದಿ ಬಂದಿಲ್ಲಲ್ ನಮಗೆ; ಹಾಗಾದರೆ ನಮಗೆ ಹೇಗೆ ಗೊತ್ತಾಗಬೇಕು? ಅದು ನಿಮ್ಮ ವರದಿ ಬಂದಮೇಲೆ ತಾನೇ ಗೊತ್ತಾಗಬೇಕು. ಆದುದರಿಂದ ನಮ್ಮ ಅವಧಿ ಮುಗಿಯುವುದರ ಒಳಗೆ....

ಶ್ರೀ ಎಂ. ವೀರಪ್ಪ ಮೊಯಿಲಿ : ಸ್ವಾಮಿ ಮಾಧುಸ್ವಾಮಿಯವರೆ, ತಾವು ಏನು ಹೇಳಿದಿರಿ, ಟೈಪಿಸ್ಟ್ ಕೊಡಲಿಲ್ಲ ಎಂದು ಹೇಳಿದಿರಿ. That will reflect on the Speaker. ಏಕೆಂದರೆ ಅದು ಸದನದ ಸಮಿತಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ನಾನು ಖಂಡಿತ ನಿಜ ಹೇಳಿದ್ದೇನೆ. ಕಂಪೆಲ್ ಮಾಡಲಿಲ್ಲ, ಕಮಿಟಿಗೆ ಡ್ರಾಫ್ಟ್ ಮಾಡಿ ಕೊಡುವುದಕ್ಕೆ ಅವರು 2 ತಿಂಗಳು ತೆಗೆದುಕೊಂಡಿದ್ದಾರೆ. 3 ತಿಂಗಳು ಎಕ್ಸ್‌ಟೆನ್‌ಷನ್ ಕೊಡಿ ಎಂದು ನಾವು ಬೇಗ್ ಮಾಡಿದ್ದೇವೆ.

ಶ್ರೀ ಡಿ.ಬಿ. ಚಂದ್ರೇಗೌಡ : ಕೆ.ಆರ್. ನಗರದಲ್ಲಿ ಸದಸ್ಯರ ಅಪಹರಣ ಆಯಿತು. ರಾಯಚೂರು ಜಿಲ್ಲೆಯ ಚಿಕ್ಕಸೂರಿನಲ್ಲಿ 10 ಮಂದಿಗೆ ಹೊಡೆದಾಟ ಆಗಿ 5 ಮಂದಿ ಆಸ್ಪತ್ರೆಗೆ ಹೋದರು. ಇನ್ನು 5 ಮಂದಿ ಏನೇನು ಆದರೋ ನನಗೆ ಗೊತ್ತಿಲ್ಲ. ಹಾಸನ ಜಿಲ್ಲೆಯಲ್ಲಿ, ಕೊಪ್ಪಳದಲ್ಲಿ, ಗಂಗಾವತಿಯಲ್ಲಿ, ಹೊಳೇನರಸೀಪುರದಲ್ಲಿ, ಹೀಗೆ ಪಟ್ಟಿ ಮಾಡುತ್ತಾ ಹೋದರೆ ಒಂದು ದೊಡ್ಡ ಪಟ್ಟಿ ಆಗುತ್ತದೆ.ಆದುದರಿಂದ ಈ ಪರಿಸ್ಥಿತಿಯನ್ನು ನಿಭಾಯಿಸುವುದು ಹೇಗೆ? ಅದಕ್ಕೆ ಕನಿಷ್ಟ ನಾವು ಈ ಚುನಾವಣೆಗಳು ಯಾರ ಸರ್ಕ್ಯುಲರ್ ಮೇಲೆ ನಡೆದವು? ಅವು ಶಾಸನ [illegible]

ಈ ಚುನಾವಣೆಗಳಲ್ಲಿ ಇಂತಹ ಗಲಭೆಗೆ ಅವಕಾಶ ಇರಲಿಲ್ಲ. ಬೆಳಿಗ್ಗೆ ತಾನೇ ನಾಲ್ಕುನೂರು ಬಿಂದು ಒಂದು ಕಾರ್ಯಕ್ರಮ 'ಪಟ್ಟಿ' ಆ ಬಿಂದುವಿನಲ್ಲಿ ನಾವು ಲೆಕ್ಕ ಹಾಕಿದರೆ ಅಲ್ಪಸ್ವಲ್ಪ ಬುದ್ಧಿ ಇರುವ ನಮ್ಮಂತಹವರು ಕುಳಿತರೆ ಯಾವ ಕ್ಷೇತ್ರದಲ್ಲಿ ಯಾವುದು ಮೀಸಲಾತಿ ಎಂಬುದು ನಮಗೆ ಗೊತ್ತಾಗುವುದಿಲ್ಲ. ಎಕ್ಸೆರ್‌ಸೈಸ್ ಮಾಡಿ ತಿಳಿದುಕೊಂಡು ಈ ಚುನಾವಣೆಯಲ್ಲಿ ತಯಾರು ಮಾಡಿಕೊಳ್ಳುವ ಹೊತ್ತಿಗೆ ಮತ್ತೊಂದು ಸರ್ಕ್ಯುಲರ್. ಅದನ್ನು ತಯಾರು ಮಾಡಿಕೊಳ್ಳುವ ಹೊತ್ತಿಗೆ 3ನೇ ಸರ್ಕ್ಯುಲರ್. 3ನೇ ಸರ್ಕ್ಯುಲರ್‌ನಲ್ಲಿ ಹಿಂದುಳಿದ ವರ್ಗದವರು ಯಾರು?

ಯಾರು ಚುನಾವಣೆಯಲ್ಲಿ ಜನರಲ್ ಕ್ಷೇತ್ರದಲ್ಲಿ ಗೆದ್ದಿದ್ದರೋ ಅಂಥವರು ಹಿಂದುಳಿದ ವರ್ಗದ ಸರ್ಟಿಫಿಕೇಟ್ ಬೇಕು ಎಂದು ತಂದರೆ ಅವರು ಆಗ ಹಿಂದುಳಿದವರು ಪುನಃ ಅವರು ಅಧ್ಯಕ್ಷರು. ಇದು ನನ್ನ ಕ್ಷೇತ್ರದಲ್ಲಿ ನಡೆದ ಹಾಗೆ ಎಲ್ಲಾ ಕ್ಷೇತ್ರದಲ್ಲೂ ನಡೆದಿದೆ. ಇದರ ಮಧ್ಯೆ ಅಧ್ಯಕ್ಷ ಉಪಾಧ್ಯಕ್ಷರ ಚುನಾವಣೆಯಲ್ಲಿ ಈ ಗೊಂದಲದ ಜೊತೆಯಲ್ಲಿ ನಾನು ಅರ್ಥ ಮಾಡಿಕೊಳ್ಳುತ್ತೇನೆ. ಎಲ್ಲಾ ಮಂತ್ರಿಗಳು ಪ್ರವೇಶ ಮಾಡಿದ್ದಾರೆ ಎಂದು ಅಲ್ಲ. ನಮ್ಮ ದೂರು ಏನೆಂದರೆ ಮುಖ್ಯ ಮಂತ್ರಿಗಳು ಶಿವಮೊಗ್ಗ ಜಿಲ್ಲೆಗೆ ಒಂದನೇ ತಾರೀಖು ಬಂದಿದ್ದರು. ನಮ್ಮ ಆಪಾದನೆ ಏನೆಂದರೆ ಶಿವಮೊಗ್ಗ ಜಿಲ್ಲೆಯ ಮಂತ್ರಿಗಳು ಒಂದು ಪಟ್ಟಿ ತಯಾರಿಸಿ ಜಿಲ್ಲಾಧಿಕಾರಿಗಳಿಗೆ ಕೊಟ್ಟರು. ಪಾಪ ಅವರು ತಿಳಿದೋ, ತಿಳಿಯದೆಯೋ ಕೊಟ್ಟರು. ಅವರೂ ನಿರಾಕರಣೆ ಮಾಡಿದ್ದಾರೆ. ನಾವು ಅವರು ಕೊಟ್ಟ ಕಾಗದ ಸುಟ್ಟು ಹಾಕಿಬಿಟ್ಟಿದ್ದೇವೆ. ಅವರು ಒಂದು ಕಾಗದ ಬರೆದಿದ್ದರಲ್ಲಾ ಅದರ ನಕಲು ಸುಟ್ಟಿದ್ದೇವೆ. ಸಂದರ್ಭ ಬೇಕು ಅಂದರೆ ಅದರ ಒರಿಜನಲ್ ಅನ್ನು ಪ್ರೊಡ್ಯೂಸ್ ಮಾಡಲಿಕ್ಕೆ ನಾವು ಪ್ರಯತ್ನ ಮಾಡುತ್ತೇವೆ. ಆ ಮಾತು ಬೇರೆ. ಒಂದನೇ ತಾರೀಖು ಶಿವಮೊಗ್ಗಕ್ಕೆ ಮುಖ್ಯಮಂತ್ರಿಗಳು ಬಂದಿದ್ದರು ಎಂದು ನಾನು ಹೇಳಿದೆ. ಅವರಿಂದ ಒತ್ತಡಗಳು ಬಂದಿವೆ. ಪಂಚಾಯತ್ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಚುನಾವಣೆ ಯಾವ್ಯಾವ ಕ್ಷೇತ್ರ ಹೇಗೆ ಮಾಡಬೇಕು ಎಂಬುದರ ಬಗ್ಗೆ ನಿಮಗೂ ಒತ್ತಡಗಳು ಬಂದಿವೆ. ನಮ್ಮ ಪಕ್ಷದವರೂ, ನಿಮ್ಮ ಪಕ್ಷದವರೂ ಒತ್ತಡಗಳನ್ನು ತಂದಿದ್ದಾರೆ. ಇಲ್ಲಿಯವರೆಗೆ ನಮಗೆ ಬಂದಿರತಕ್ಕ ಸುದ್ದಿ ಮುಖ್ಯಮಂತ್ರಿಗಳು ಹೇಳಿದ್ದಾರೆ. ಆ ದಿವಸದ ಮಟ್ಟಿಗೆ ಎಲ್ಲಾ ತಾಲ್ಲೂಕಿನಲ್ಲೂ ಈ ಅಧ್ಯಕ್ಷರು, ಉಪಾಧ್ಯಕ್ಷರ ಸ್ಥಾನಗಳ ಪಟ್ಟಿ ತಯಾರು ಆಗಿತ್ತು. ಆ ಪಟ್ಟಿ ಮಾನ್ಯ ಪರಿಸರ ಮಂತ್ರಿಗಳಾದ ಹಾಲಪ್ಪನವರು, ಪರಿಸರ ಮಂತ್ರಿಗಳು ಎಂದು ನಾನು ಏಕೆ ಹೇಳಿದೆ ಅಂದರೆ ಇಲ್ಲಿನ ಪರಿಸರವನ್ನು ಅವರು ಸಂಪೂರ್ಣವಾಗಿ ಕೆಡಿಸಿದ ಕೀರ್ತಿಗೆ ಭಾಗಿಯಾಗಿದ್ದರಿಂದ ಪರಿಸರ ಮಂತ್ರಿಗಳು ಎಂದು ಹೇಳಿದೆ. ಈ ಪರಿಸರವನ್ನು ಕೆಡಿಸಿದ ಮಂತ್ರಿಗಳು. ಡೆಪ್ಯುಟಿ ಕಮಿಷನರ್‌ರವರಿಗೆ ಪತ್ರ ಬರೆಯುವುದು ಎಲ್ಲಿದೆ ಜನ ತಂತ್ರ? ಅದಕ್ಕೆ ಮುಖ್ಯ ಮಂತ್ರಿಗಳ ಬಳಿಗೆ ನೂರಾರು ಜನ ಬಂದು ಇದೊಂದು ಕಾಗದ ಸ್ವಾಮಿ, ಡಿ.ಸಿ.ಯವರಿಗೆ ಹೇಳಬೇಕು ಎಂದು ಕೊಟ್ಟರೆ, ಹಾಗೆಯೇ ಮಂತ್ರಿಗಳು ಕೊಟ್ಟ ಒಂದು ಕಾಗದವನ್ನು ನೀವು ಡಿ.ಸಿ. ಯವರಿಗೆ ಕೊಟ್ಟಿರಬಹುದು. ನಿಮಗೆ ತಿಳಿದು ಕೊಟ್ಟರೋ, ಅಥವಾ ತಿಳಿಯದೇ ಕೊಟ್ಟರೋ. ಮುಖ್ಯ ಮಂತ್ರಿಗಳ ಆದೇಶವೂ ಇತ್ತು ಎನ್ನುವುದು ನಮಗೆ ಬಂದ ಮಾಹಿತಿ. ಇಲ್ಲದಿದ್ದರೆ ಇಲ್ಲ ಎಂದು ಹೇಳಿ. ಹೀಗೆ ವಿಕೇಂದ್ರೀಕರಣ ವ್ಯವಸ್ಥೆಯ ಶಾಸನವನ್ನು ಕಸದ ಬುಟ್ಟಿಗೆ ಹಾಕಿ ಸರ್ಕುಲರ್ ಮೂಲಕ ಸರ್ಕಾರದ ಮೂಲಕ ಮಂತ್ರಿಗಳ ಮೂಲಕ ಶಾಸಕರ ಮೂಲಕ......

ಶ್ರೀ ಎಂ. ವೀರಪ್ಪ ಮೊಯಿಲಿ : ಏನಾದರೂ ಒಂದು ಕಡೆ ಅಲ್ಲಿ ಅನ್ಯಾಯ ಆಗಿದೆ ಸರಿ ಆಗಲಿಲ್ಲ, ಸರ್ಕಾರ ಕೊಟ್ಟ ಮಾರ್ಗದರ್ಶನದ ಪ್ರಕಾರ ಅಲ್ಲಿ ಚುನಾವಣೆ ಪ್ರಕ್ರಿಯೆ ನಡೆಯಲಿಲ್ಲ ಎಂದು ಹೇಳಿದರೆ ನಾವು ಅದನ್ನು ಕಾನೂನು ಪ್ರಕಾರ, ನಿಯಮಾವಳಿ, ಪ್ರಕಾರ ಚುನಾವಣೆ ಪ್ರಕ್ರಿಯೆ ನಡೆಯದೆ ಇದ್ದರೆ ಅದನ್ನು ಪರಿಶೀಲನೆ

ಮಾಡಿ ಎಂದು ಹೇಳಿ ನಾವು ಆದೇಶ ಕೊಟ್ಟಿಲ್ಲ. ಯಾವುದೇ ಚುನಾವಣೆ ನಿಲ್ಲಿಸಿ ಅಥವಾ ಯಾವುದೇ ಚುನಾವಣೆ ಇದೇ ತರಹ ಮಾಡಿ ಹೀಗೆ ನಾವು ಹೇಳತಕ್ಕಂತಹ ಯಾವುದೇ ಕೆಲಸ ಮಾಡಲಿಲ್ಲ. ಆದರೆ ಸ್ವಲ್ಪ ಸದಸ್ಯರು ಆ ಕಡೆ ಸದಸ್ಯರು ಈ ಕಡೆ ಸದಸ್ಯರು ಅನೇಕ ಬಾರಿ ಸರಿಯಾದ ಮಾರ್ಗದರ್ಶನ ಕಳುಹಿಸಿದ್ದೆವು, ಸರ್ಕುಲರ್ ಪ್ರಕಾರ ನಿಯಮಾವಳಿ ಪ್ರಕಾರ ಒಂದು ವೇಳೆ ಚುನಾವಣೆ ಇಲ್ಲಿ ಆಗಲಿಲ್ಲ.

(ಅಧ್ಯಕ್ಷರು, ಅಧ್ಯಕ್ಷರ ಸ್ಥಾನವನ್ನು ಅಲಂಕರಿಸಿದರು)

ಡಿ.ಸಿ. ಅವರು ಆ ನಿಯಮವನ್ನು ಅನುಸರಿಸಲಿಲ್ಲ ಎಂದು ಹೇಳಿದ ಮೇಲೆ ಆ ನಿಯಮವನ್ನು ನೀವು ಅನುಸರಿಸಬೇಕಾದ ಪರಿಸ್ಥಿತಿ ಇದೆ ಅಂತ ಹೇಳಿ ನೀವು ಆರ್.ಡಿ.ಪಿ.ಆರ್.ಗೆ ಸೆಕ್ಯುರಿಟಿ ನೀವು ಪರಿಶೀಲನೆ ಮಾಡಬೇಕು ಅಂತ ಹೇಳಿ. ನಾವು ಬರಬೇಕಾಗುತ್ತದೆ. ಏಕೆಂದರೆ ನಿಯಮಾವಳಿ ತಳ್ಳಿ ಚುನಾವಣೆ ನಡೆಯಬಾರದು. ನಿಯಮಾವಳಿ ಕಾಪಾಡಿಕೊಂಡು ಬರುವ ಜವಾಬ್ದಾರಿ ಸರ್ಕಾರಕ್ಕೆ ಇದೆ. ಆ ಸರ್ಕಾರ ಅಂತಹ ಜವಾಬ್ದಾರಿ ನುಣುಚಿಕೊಳ್ಳುವುದಕ್ಕೆ ಆಗುವುದಿಲ್ಲ. ಆದರೆ ಕಾನೂನು ಮೀರಿ ಮಾಡಬೇಕು ಎನ್ನುವ ಆದೇಶ ಕೊಟ್ಟಂತಹ ದಾಖಲೆ ಏನಾದರೂ ಇದ್ದರೆ ನಮಗೆ ದಯವಿಟ್ಟು ತಿಳಿಸಿ. ನಿಯಮಾವಳಿ ಮೀರಿ ಯಾರಾದರೂ ಜಿಲ್ಲಾಧಿಕಾರಿಗಳು ಯಾವುದೇ ಒಂದು ಪಕ್ಷಕ್ಕಾಗಲೀ ಅಥವಾ ಯಾವುದೇ ಒಬ್ಬ ಶಾಸಕರಿಗಾಗಲಿ ಸಹಾಯ ಮಾಡಬೇಕು ಎನ್ನುವ ಉದ್ದೇಶದಿಂದ ಮಾಡಿದ್ದರೆ ಅಂತಹ ಜಿಲ್ಲಾಧಿಕಾರಿಗಳ ಬಗ್ಗೆ ನಾವು ಖಂಡಿತವಾಗಿ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಎಂ.ಎಸ್. ಪಾಟೀಲ್ : ಈಗ ಪರಿಶೀಲನೆ ಮಾಡುವುದಕ್ಕೆ ಆದೇಶ ಏನು ಕಳುಹಿಸಿದ್ದೀರಿ. ಇದನ್ನು ಕಳುಹಿಸಿದರೆ ಡಿ.ಸಿ. ಯವರು ಒಂದು ವಿಷಯದ ಮೇಲೆ ನಿರ್ಣಯಕ್ಕೆ ಬಂದಿದ್ದರು: ಅವರ ಮೇಲಿನ ಅಧಿಕಾರಿಗಳು ಪರಿಶೀಲನೆ ಮಾಡಬೇಕಾಗಿದೆ. ಒಂದು ವೇಳೆ ಅವರು ಮಾಡಿದ ಪರಿಶೀಲನೆ ತಪ್ಪು ಇದೆ ಅಂದರೆ ತಪ್ಪು ಮಾಡುವವರು ತಪ್ಪಿಸಿಕೊಂಡಂತಾಗುತ್ತದೆ. ಅವರು ಅದನ್ನು ಪರಿಶೀಲನೆ ಮಾಡುವುದಕ್ಕೆ ಹೇಗೆ ಆಗುತ್ತದೆ? ನೀವು ಡಿವಿಜನಲ್ ಕಮೀಷನರ್‌ಗೋ ಬೇರೆ ಒಬ್ಬ ಅಧಿಕಾರಿಗಳಿಗೋ ಪರಿಶೀಲನೆ ಮಾಡಿರಿ ಅಂದರೆ ಅದು ತಪ್ಪು ಇದೆ ಎಂದು ಒಂದು ತೀರ್ಮಾನಕ್ಕೆ ಬರಬಹುದಾಗಿತ್ತು. ಯಾರು ನಿರ್ಣಯ ತೆಗೆದುಕೊಂಡಿದ್ದರೋ ಅದನ್ನೇ ಹೇಗೆ ಪರಿಶೀಲನೆ ಮಾಡುವುದಕ್ಕೆ ಸಾಧ್ಯ? ಅವರು ನಾನು ಮಾಡಿರುವುದು ಸರಿ ಎಂದು ಹೇಳುತ್ತಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಜಿಲ್ಲಾಧಿಕಾರಿಗಳು ಸರಿ ಮಾಡಿದ್ದರೆ ಅದು ಅವರ ಪರ್ಯಾಲೋಚನೆಗೆ ಬಿಟ್ಟಿದ್ದು. ದಯಮಾಡಿ ತಾವು ತಪ್ಪು ಅಭಿಪ್ರಾಯ ಮಾಡಿಕೊಳ್ಳಬಾರದು. ಏಕೆಂದರೆ ಜಿಲ್ಲಾಧಿಕಾರಿಗಳು ಸರಿಯಾಗಿ ಚುನಾವಣೆ ನಡೆಸಬೇಕು. ನಿಯಮಾವಳಿ ಪ್ರಕಾರ ಕಾನೂನು ಪ್ರಕಾರ ನಡೆಸಬೇಕು. ಯಾರದೇ ವ್ಯಾಮೋಹಕ್ಕೆ ಅಥವಾ ದಾಕ್ಷಿಣ್ಯಕ್ಕೆ ಒಳಗಾಗಿ ಅವರು ಕಾರ್ಯನಿರ್ವಹಿಸುವಂಥ ಅವಶ್ಯಕತೆ ಇಲ್ಲ. ಇದನ್ನು ಸ್ಪಷ್ಟವಾಗಿ ಎಲ್ಲಾ ಜಿಲ್ಲಾಧಿಕಾರಿಗಳಿಗೆ ನಮ್ಮ ಅಧಿಕಾರಿಗಳ ಮುಖಾಂತರ ತಿಳಿಸಿದ್ದೇನೆ. ಯಾವುದೇ ಜಿಲ್ಲಾಧಿಕಾರಿಗಳು ಯಾವುದೇ ಒಂದು ಒತ್ತಾಯದಿಂದ, ಪ್ರಭಾವದಿಂದ ನಿರ್ಣಯ ತೆಗೆದುಕೊಳ್ಳದಿದ್ದರೆ ಅವರು ಮಾಡಿದ್ದುದು ತಪ್ಪು ಅಂತಹ ನಿರೀಕ್ಷೆಯನ್ನು ಯಾವ ಜಿಲ್ಲಾಧಿಕಾರಿಗಳಿಂದಲೂ ಕೂಡ ನಾವು ಮಾಡುವುದಿಲ್ಲ. ಯಾರೇ ಆಗಲೀ ಯಾವ ಪಕ್ಷದವರೇ ಆಗಲೀ, ಇಂತಹ ಒಂದು ಅನ್ಯಾಯವಾಗಿದೆ ಎಂದು ಕಂಡು ಬಂದರೆ ಪರಿಶೀಲನೆ ಮಾಡಬೇಕು ಎಂದು ಹೇಳತಕ್ಕಂಥ ಒಂದು ನೀತಿಯಿಂದ ನಾವು ಜಾರಲಿಕ್ಕೆ ತಯಾರಿಲ್ಲ. We are holding a Government. We want everything should be done according to rule of law.

ರೂಲ್ ಆಫ್ ಲಾ ಪ್ರಕಾರ ಆಗದೆ ಇದ್ದರೆ ಅಂತಹ ಪ್ರಸಂಗದಲ್ಲಿ ಯಾವುದೇ ಜಿಲ್ಲಾಧಿಕಾರಿಗಳ ಮೇಲೆ ಯಾರೂ ಕೂಡ ...

ಅಂಥಹ ಜಿಲ್ಲಾಧಿಕಾರಿಗಳು He has to know his responsibility. He has to run it according to Rule of law. If he is not running according to rule of law, we are entitled to ask him to run according to rule of law or issue necessary orders according to rule of law. Nobody is above law. ಅವರು ಅಕ್ರಮ ಮಾಡಿದ್ದರೆ, ತೊಂದರೆ ಮಾಡಿದ್ದರೆ, ಇದೇ ಸರಿಯೆಂದು ಹೇಳಿಕೊಳ್ಳುವುದಕ್ಕೆ ನಮ್ಮ ಸರ್ಕಾರದಲ್ಲಿ ನಮ್ಮ ಕರ್ನಾಟಕದಲ್ಲಿ ಅದಕ್ಕೆ ಜಾಗ ಇಲ್ಲ, ಅವಕಾಶ ಇಲ್ಲ.

ಶ್ರೀ ಎಂ.ಎಸ್. ಪಾಟೀಲ್ : ಅಧ್ಯಕ್ಷರೇ, ಈಗ 5 ಜಿಲ್ಲೆಗಳಲ್ಲಿ ಮರುಪರಿಶೀಲನೆ ಮಾಡಬೇಕು, ಸ್ಥಗಿತ ಆಗಬೇಕು ಎನ್ನತಂಥದ್ದು ಕ್ಯಾಬಿನೆಟ್ ನಿರ್ಣಯ ಆಯಿತು. ಇದು ನಮಗೆ ಬಂದಂಥ ಮಾಹಿತಿ. ಅದು ಸರಿಯೋ, ತಪ್ಪೋ ಗೊತ್ತಿಲ್ಲ, ಅದರ ಪ್ರಕಾರ ರಾಯಚೂರು ಜಿಲ್ಲೆಯಲ್ಲಿ ಒಂದು ಇದೆ ಎಂದು ಮಾಹಿತಿ ಬಂತು, ಅವಾಗಲೂ ನಾವು ಡೆಪ್ಯೂಟಿ ಕಮಿಷನರ್ ಅವರನ್ನು ಕೇಳಿದಾಗ ಮರುಪರಿಶೀಲನೆ ಯಾರು ಮಾಡಬೇಕು ಸರ್ಕಾರದ ತೀರ್ಮಾನದ ಪ್ರಕಾರ 5 ಜಿಲ್ಲೆಗಳಲ್ಲಿ ಮರುಪರಿಶೀಲನೆ ಮಾಡಬೇಕು ಎಂದು ಆದೇಶ ಹೊರಡಿಸಿದ್ದೀರಿ. ಯಾರಿಗೆ ಮರು ಪರಿಶೀಲನೆ ಅಧಿಕಾರ ಕೊಡಬೇಕಾಗಿತ್ತು. ಅಂದರೆ ಅದಕ್ಕಿಂತ ಮೇಲಿರತಕ್ಕ ಒಬ್ಬ ಅಧಿಕಾರಿಗೆ ಆದರೆ ತಾವೇನು ಡೆಪ್ಯೂಟಿ ಕಮಿಷನರ್ ಅವರಿಗೆ ಮರುಪರಿಶೀಲನೆ ಮಾಡುವುದಕ್ಕೆ ಕೊಟ್ಟರಿ, ಅದು ತಪ್ಪು ನಿರ್ಣಯ ಎಂದು ಹೇಳತಕ್ಕಂಥದ್ದು.

ಶ್ರೀಮತಿ ಮೋಟಮ್ಮ : ಅಧ್ಯಕ್ಷರೇ, ಈ ಮಂಡಲ ಪಂಚಾಯತಿಗೆ ಸರ್ಕಾರ ಏನು ನಿಯಮ ನಿಗಧಿ ಪಡಿಸಿದೆ ಅದರ ಪ್ರಕಾರ ಚುನಾವಣೆ ಮಾಡಿದ್ದೇವೆ. ಅದರ ಬಗ್ಗೆ ನಮ್ಮ ವಿರೋಧ ಪಕ್ಷದ ಹಿರಿಯರೆಲ್ಲರೂ ಮಾತನಾಡುವುದು ನೋಡಿದರೆ ನನಗೆ ಒಂದು ರೀತಿಯ ಆಶ್ಚರ್ಯ ಆಗುತ್ತದೆ. ಏಕೆಂದರೆ ಮೊದಲು ನೋಟಿಫಿಕೇಷನ್ ಆಗಿದ್ದನ್ನು ನೀವು ವಿರೋಧ ಮಾಡಿದ್ದೀರಿ ಏಕೆಂದರೆ ಪರಿಜನ ಗಿರಿಜನರಿಗೆ ನೀವು ಅಧ್ಯಕ್ಷರನ್ನು ಇಂಥ ಕಡೆ ಮಾಡಿ ಎಂದು ನೋಟಿಫಿಕೇಷನ್ ಮಾಡಿಬಿಟ್ಟಿದ್ದೀರಿ. ಅಲ್ಲಿ ಪರಿಜನ ಅಭ್ಯರ್ಥಿಯೇ ಇಲ್ಲ ಗಿರಿಜನ ಅಭ್ಯರ್ಥಿಯೂ ಇಲ್ಲ ಇನ್ನು ಹೇಗೆ ಅಧ್ಯಕ್ಷರನ್ನು ಮಾಡುವುದು ಎಂದು ಹೇಳಿ ಇದೇ ಅಸ್ಲೆಂಬಿಯಲ್ಲಿ ಹಿಂದೆ ಮಾತನಾಡಿದ್ದೀರಿ. ವಿರೋಧ ಪಕ್ಷದ ನಾಯಕರು ಹೇಳುವುದನ್ನು ನಾನು ಒಪ್ಪುವುದಿಲ್ಲ. ಬೇಕಾದರೆ ಪ್ರೊಸಿಡಿಂಗ್ಸ್ ತೆಗೆದು ನೋಡೋಣ. ಅದರಲ್ಲಿ ನೀವು ವಿರೋಧ ಮಾಡಿದ್ದರೆ ನೀವು ಮಾಡಿರುವ ನೋಟಿಫಿಕೇಷನ್ ಸರಿಯಿಲ್ಲ, ಅಲ್ಲಿ ಸಂಬಂಧಪಟ್ಟ ಅಭ್ಯರ್ಥಿ ಇಲ್ಲದಿದ್ದಾಗ ನೀವು ಅಲ್ಲಿ ಅಧ್ಯಕ್ಷರನ್ನು ಮಾಡುವುದು ಈ ಸೂತ್ರ ಸರಿಯಿಲ್ಲ ಎಂದು ಹೇಳಿದ್ದಿರಿ, ಈಗ ನಾವು ಕೊಟ್ಟಿರುವ ಸೂತ್ರ ಆಲ್‌ಜಿಬ್ರಾ ಸೂತ್ರದ ತರಹ ಇದೆ. ಆ ಪ್ರಕಾರ ಅಷ್ಟು ಸರಿಯಾದ ಸೂತ್ರವನ್ನು ನಾವು ಕೊಟ್ಟಾಗ ಈಗ ನೀವು ಹೇಳಿದ ಪ್ರಕಾರ ಹರಿಜನರು ಹೆಚ್ಚಾಗಿ ಎಲ್ಲಿ ಎಲೆಕ್ಟ್ ಆಗಿದ್ದಾರೆ ಅಲ್ಲಿ ಹರಿಜನರು ಅಧ್ಯಕ್ಷರು ಆಗಬೇಕು, ಗಿರಿಜನರು ಚುನಾಯಿತ ಪ್ರತಿನಿಧಿಗಳು ಎಲ್ಲಿ ಜಾಸ್ತಿ ಇದ್ದಾರೆ ಅಲ್ಲಿ ಗಿರಿಜನರು ಆಗಬೇಕು, ಬಿಸಿಎಂನ ಚುನಾಯಿತ ಪ್ರತಿನಿಧಿಗಳು ಎಲ್ಲ ಜಾಸ್ತಿ ಇದ್ದಾರೆ ಅಲ್ಲಿ ಬಿಸಿಎಂ ಆಗಬೇಕು. ಹೀಗಿರಬೇಕಾದರೆ ಸೂತ್ರ ಎಲ್ಲಿಂದ ತಪ್ಪಲಿಕ್ಕೆ ಆಗುತ್ತದೆ ನೀವೇ ಹೇಳಿ. ಹಾಗಾಗಿ ಇದರ ಬಗ್ಗೆ ವಾದವಿವಾದ ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ಈಗ ಏನಾಗಿದೆ ಎಂದರೆ ಒಂದೊಂದು ಸಲ ಒಬ್ಬೊಬ್ಬರಿಗೆ ನಾವು ಉತ್ತರ ಹೇಳಬೇಕು. ನಾನು ಈ ಪ್ರಶ್ನೆಗೆ ಆಗಲೇ ಉತ್ತರ ಹೇಳಿದ್ದೇನೆ. ಅವರು ಇದ್ದಿದ್ದರೆ ಚೆನ್ನಾಗಿತ್ತು. ಯಾವಾಗಲೋ ಬಂದು ಬಿಡುತ್ತಾರೆ ಧಿಡೀರ್ ಎಂದು ಎದ್ದುಬಿಡುತ್ತಾರೆ. ಏನು ಸಮಸ್ಯೆ ಎಂದು ಗೊತ್ತಿರುವುದಿಲ್ಲ, ವ್ಯಾಖ್ಯಾನ ಮಾಡುತ್ತಾರೆ. ನಾನು ಏನು ಹೇಳುತ್ತೇನೆ ಎಂದರೆ ಯಾವುದೇ ಮಂಡಲಪಂಚಾಯಿತಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಚುನಾವಣೆಯನ್ನು ಅಲ್ಲಿಯ

ಚುನಾವಣೆಗೆ ಮುಂಚೆಯೇ ಪ್ರಸಿದ್ಧಿ ಪಡಿಸಿದ್ದರೆ ಈ ಗೊಂದಲಗಳಿಗೆ ಕಾರಣ ಇರಲಿಲ್ಲ. ನೀವು ಚುನಾವಣೆ ಮಾಡಿಕೊಂಡು ಆಮೇಲೆ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಚುನಾವಣೆಯ ಸ್ವಾತಂತ್ರ್ಯವನ್ನು ನೀವು ಸರ್ಕ್ಯುಲರ್ ಮೂಲಕ ಕಿತ್ತುಕೊಂಡಿರಿ, ಇದಾಗಬಾರದಿತ್ತು. ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಇಂತಿಂಥ ಮಂಡಲಕ್ಕೆ ಇಂತಹವರು ಎಂದು ನಿರ್ಧಾರ ಮಾಡಿದ್ದರೆ ಅದಕ್ಕೆ ಸಂಬಂಧಪಟ್ಟಹಾಗೆ ಸದಸ್ಯರನ್ನು ತಯಾರು ಮಾಡುವುದಕ್ಕೆ ನಿಮ್ಮ ಪಾರ್ಟಿನಲ್ಲೂ ಮಾಡಬಹುದು. ನಮ್ಮ ಪಾರ್ಟಿನಲ್ಲೂ ಮಾಡಬಹುದು ಮತ್ತು ಇನ್ನೊಂದು ಪಾರ್ಟಿನಲ್ಲೂ ಕೂಡ ಮಾಡಬಹುದು. ಚುನಾವಣೆ ಆದಮೇಲೆ ಅವರ ಸ್ವಾತಂತ್ರ್ಯವನ್ನು ಹರಣ ಮಾಡುವುದಕ್ಕಾಗಿ ಬೇಕಾಬಿಟ್ಟಿಯಾಗಿ ಮೂರು ಮೂರು ಸರ್‌ಕ್ಯುಲರ್‌ಗಳನ್ನು ಕಳುಹಿಸಿ ಚುನಾವಣೆ ಮಾಡುವುದಕ್ಕಾಗುವುದಿಲ್ಲ. ಮೂರು ಮೂರು ಸರ್‌ಕ್ಯುಲರ್ ಹೋಗಿದ್ದು ಕೊನೆಯ ಸರ್‌ಕ್ಯುಲರ್ ಒಂದು ವಿವರಣೆಯನ್ನು ನಿಮಗೆ ಹೇಳುತ್ತೇನೆ. ಬ್ಯಾಕ್ ವರ್ಡ್ ಕ್ಲಾಸ್ ಅಂದರೆ ಏನು? ಮೊದಲು ಚುನಾವಣೆಗೆ ನಿಲ್ಲುವುದಕ್ಕೆ ಬ್ಯಾಕ್ ವರ್ಡ್ ಕ್ಲಾಸ್ ಸರ್ಟಿಫಿಕೇಟ್ ಕೊಡಲಿಲ್ಲ ಎಂದು ಹೇಳಿ ಯಾರು ತಿರಸ್ಕೃತ ಆಗಿದ್ದಾನೆ ಆತ ಚುನಾವಣೆ ಆಗಿ ಗೆದ್ದುಬಂದಮೇಲೆ ಆತ ಇರಬಹುದು ಆಕೆ ಇರಬಹುದು ಜನರಲ್ ಕ್ಷೇತ್ರದಲ್ಲಿ ಆಯ್ಕೆಯಾಗಿ ಬಂದಮೇಲೆ ಈಗ ಪುನಃ ಬ್ಯಾಕ್ ವರ್ಡ್ ಕ್ಲಾಸ್ ಸರ್ಟಿಫಿಕೇಟ್ ತಂದರೆ ನೀವೂ ಅಧ್ಯಕ್ಷರು ಆಗಬಹುದು.

4.10 ಪಿ.ಎಂ

ಬಹಳಷ್ಟು ಜನರು ಸರ್ಟಿಫಿಕೇಟ್‌ಗಳನ್ನು ತಂದುಕೊಟ್ಟಿದ್ದಾರೆ. ಅವರ ಹೆಸರುಗಳನ್ನೆಲ್ಲಾ ಹೇಳಿ ನಾನು ನಿಮ್ಮನ್ನು ಹರಾಜು ಹಾಕುವುದಕ್ಕೆ ಸಿದ್ಧವಾಗಿಲ್ಲ. ಈ ಚುನಾವಣೆಗೆ ಬೇಕಾದಂಥ ಸಕಲ ಸಿದ್ಧತೆಗಳನ್ನೆಲ್ಲಾ ಮಾಡಿಕೊಂಡು ಮಾಡಿರುವುದರಿಂದ ಇಲ್ಲಿ ಬಹಳಷ್ಟು ಶಾಸನಸಭಾ ಸದಸ್ಯರು ತಮ್ಮ ಪಾಳೇಗಾರಿಕೆಯನ್ನು ಮಾಡಿದ್ದಾರೆ. ಶಾಸನ ಇಲ್ಲಿ ಸತ್ತುಹೋಗಿದೆ. ಜನತಂತ್ರ ಸತ್ತುಹೋಗಿದೆ. ಯಾರ್‍ಯಾರು ಅಧ್ಯಕ್ಷರಾಗಬೇಕೆಂದು ನಾವು ನಿರ್ದೇಶನ ಮಾಡುತ್ತೇವೆ ಅದರಂತೆ ಅವರು ಅಧ್ಯಕ್ಷರಾಗಿದ್ದಾರೆ. ಈ ಕಾರಣದಿಂದಾಗಿ ಇವತ್ತು ಹಳ್ಳಿಗಳಲ್ಲಿ ಸಂಘರ್ಷವಾಗುವಂಥ ಪರಿಸ್ಥಿತಿಯನ್ನು ಮುಟ್ಟಿದೆ. ಆದ್ದರಿಂದಲೇ ನಾನು ಹೇಳಿದ್ದೆ. ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆಗೆ ಮುಂಚೆ ಯಾವ ರಾಜಕೀಯ ಪಕ್ಷಗಳು ಸ್ಪರ್ಧೆ ಮಾಡಬಾರದೆಂದು ನೀವು ತೀರ್ಮಾನ ಮಾಡಿದ್ದಿರೋ, ನಿಜವಾಗಿ ನೀವು ಕಾಯ, ವಾಚಾ, ಮನಸಾ ನೀವು ನಡೆದುಕೊಂಡಿದ್ದಿದ್ದರೆ ಈ ಸರ್ಕ್ಯುಲರ್‌ಗಳ ಹಾವಳಿಯೇ ಇರುತ್ತಿರಲಿಲ್ಲ.

ಶ್ರೀ ಎ. ರುಕ್ಮಯ್ಯ ಪೂಜಾರಿ : ನಮ್ಮ ಜಿಲ್ಲೆಯಲ್ಲಿ ಚುನಾವಣೆಗೆ ಮೊದಲು ಯಾರು ಹಿಂದುಳಿದವರ್ಗಗಳ ಸರ್ಟಿಫಿಕೇಟ್‌ಗಳನ್ನು ಮಾಡಿಸಿದ್ದಾರೆ ಅವರಿಗೆ ಮಾತ್ರ ಅವಕಾಶವನ್ನು ಕೊಟ್ಟಿದ್ದಾರೆ. ಆದರೆ ತಾವು ಬೇರೆ ವಿಚಾರವನ್ನು ಹೇಳುತ್ತಿದ್ದೀರಿ. ಇಡೀ ರಾಜ್ಯದಲ್ಲಿ ಒಂದೊಂದು ಜಿಲ್ಲೆಯಲ್ಲಿ ಒಂದೊಂದು ರೀತಿ ವಿತಕ್ಕೆ ಆಗಿದೆ. ಚುನಾವಣೆ ಆದಮೇಲೆ ಸರ್ಟಿಫಿಕೇಟ್ ಮಾಡಿಸಿಕೊಂಡವರಿಗೆ ನಮ್ಮ ಜಿಲ್ಲೆಯಲ್ಲಿ ಅವಕಾಶ ಕೊಟ್ಟಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಮುಖ್ಯಮಂತ್ರಿಗಳು ಮತ್ತೊಂದು ಮಾತನ್ನು ಏನು ಹೇಳಿದರೆಂದರೆ ಜಿಲ್ಲಾಧಿಕಾರಿಗಳು ತಪ್ಪು ಮಾಡಿದ್ದರೆ ನಾವು ಹೋಗಿ ನೋಡುವುದಕ್ಕಾಗುವುದಿಲ್ಲ ಎಂದು. ಚುನಾವಣೆಗೆ ಸಂಬಂಧಪಟ್ಟಂತೆ ಜಿಲ್ಲಾಧಿಕಾರಿಗಳು ತಪ್ಪು ಮಾಡಿದ್ದರೆ ಅದನ್ನು ಸರಿಪಡಿಸುವವರು ನೀವಲ್ಲ. ಶಾಸನದಲ್ಲಿ ಇದಕ್ಕೆ ಬೇರೆ ಕಾನೂನು ಇದೆ. ಈ ಕಾನೂನನ್ನು ನಿಮ್ಮ ಕೈಗೆ ತೆಗೆದುಕೊಳ್ಳುವುದಕ್ಕೆ ನಿಮಗೆ ಯಾವ ಅಧಿಕಾರ ಇದೆ? ನಾವು ಸರ್ಕಾರವನ್ನು ನಡೆಸುವವರು ಎಂದು ತಿಳಿದು ಚುನಾವಣಾ ಜವಾಬ್ದಾರಿಯನ್ನೂ ನೀವೇ ತೆಗೆದುಕೊಂಡು ಈ ಚುನಾವಣೆಯನ್ನು

ಹೀಗೇ ಮಾಡಬೇಕೆಂದು ಜಿಲ್ಲಾಧಿಕಾರಿಯವರಿಗೆ ನಿರ್ದೇಶನ ಕೊಡುವ ಅಧಿಕಾರ ನಿಮಗಿಲ್ಲ. ಇದನ್ನು ತೀರ್ಮಾನ ಮಾಡತಕ್ಕದ್ದು ಕೋರ್ಟ್. ಶಾಸನಬದ್ಧವಾಗಿ ಇದು ಕೋರ್ಟಿಗೆ ಹೋಗಬೇಕು. ಆರ್ಟಿಕಲ್ 226ರ ಒರಿಜಿನಲ್ ರಿಟ್ ಜ್ಯೂರಿಸ್‌ಡಿಕ್ಷನ್ ಪ್ರಕಾರ ಈ ಚುನಾವಣೆಯಲ್ಲಿ ಅನ್ಯಾಯ ನಡೆದಿದೆ ಎಂದು ಜಿಲ್ಲಾ ಮುನ್ಸೀಫ್ ಕೋರ್ಟಿಗೆ ಹೋಗಬೇಕು. ಆರ್ಡರ್ಸ್ ಇದ್ದರೂ ಕೂಡ ನಿಮಗೆ ಅಧಿಕಾರ ಎಲ್ಲಿದೆ? ಯಾವ ಶಾಸನದಲ್ಲಿ ನಿಮಗೆ ನಾವು ಅಧಿಕಾರವನ್ನು ಕೊಟ್ಟಿದ್ದೇವೆ ಎಂಬುದನ್ನು ಹೇಳಿ. ಜಿಲ್ಲಾಧಿಕಾರಿಯವರು ನಿಮ್ಮ ಆಡಳಿತದ ವ್ಯಾಪ್ತಿಯಲ್ಲಿ ಬರುತ್ತಾರೆಂದು ನೀವು ಜಿಲ್ಲಾಧಿಕಾರಿಯವರನ್ನು ತೆಗೆದುಹಾಕುವುದಕ್ಕಾಗುವುದಿಲ್ಲ. ಹಾಗೇನಾದರೂ ಈ ಶಾಸಕಾಂಗವೇ ಸರ್ವೋಚ್ಛ ಎಂದು ತೀರ್ಮಾನ ಮಾಡಿ ಸರ್ಕಾರವೇ ಫೈನಲ್ ಅಥಾರಿಟಿ ಎಂದು ಹೇಳಿ Let there not be any appeals on any question of law ಎಂದು ಹೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಚುನಾವಣೆಯ ಬಗ್ಗೆಯಾದರೂ ಕೂಡ ಹಸ್ತಕ್ಷೇಪ ಮಾಡುವುದಿಲ್ಲ. ಜಿಲ್ಲಾಧಿಕಾರಿಯವರ ಕಾರ್ಯವ್ಯಾಪ್ತಿಯಲ್ಲಿ ಯಾರೂ ಕೂಡ ಹಸ್ತಕ್ಷೇಪ ಮಾಡಿಲ್ಲ, ಮಾಡುವುದೂ ಇಲ್ಲ, ಅಷ್ಟೇ ಅಲ್ಲ ಮಾಡುವುದಕ್ಕೂ ಸಾಧ್ಯವಿಲ್ಲ. ತಾವು ಹೇಳುವುದನ್ನು ನಾನು ನೂರಕ್ಕೆ ನೂರು ಪಾಲು ಒಪ್ಪುತ್ತೇನೆ. ಇದು ಸಂಪೂರ್ಣವಾಗಿ ಜಿಲ್ಲಾಧಿಕಾರಿಯವರ ವಿವೇಚನೆಗೇ ಬಿಟ್ಟಿದ್ದುದು. ಅವರು ಇದನ್ನು ತೀರ್ಮಾನ ಮಾಡಬೇಕು. He has to decide. Government may ask or Election Commission may ask some clarification. It is between the Government and the..... ಚುನಾವಣೆ ಆದ ಮೇಲೆ ಅದು ಕೋರ್ಟಿನಲ್ಲಿ ತೀರ್ಮಾನವಾಗುತ್ತದೆ. ಚುನಾವಣೆ ಆಗುವವರೆಗೆ he has to conform to certain rules which have been chalked out by the Government and also the Election Commission. ಇದರಲ್ಲಿ ಯಾರೂ ಕೂಡ ಹಸ್ತಕ್ಷೇಪ ಮಾಡತಕ್ಕ ಅವಶ್ಯಕತೆಯೇ ಇಲ್ಲ. It is for the Deputy Commissioner and the Deputy Commissioner alone to fix.

ಎಲ್ಲೆಲ್ಲಿ ಚುನಾವಣೆ ಆಗಬೇಕು, ಹೇಗೆ ಚುನಾವಣೆ ಆಗಬೇಕು, ಎಷ್ಟೆಷ್ಟು ಮೀಸಲಾತಿ ಆಗಬೇಕು, It is not for me to decide and none of us have to interfere. The Government can see whether he is working in conformity with the rules or not, as a watch dog, it is for the Election Commission or the Government, as the case may be, according to the Act and rules, they may clarify things. That is all but the decision part is absolutely Deputy Commissioner's job and he has to do it.

ಶ್ರೀ ಬಿ.ಹೆಚ್. ಬನ್ನಿಕೋಡ್ : ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಚುನಾವಣೆಯನ್ನು ಮುಂದೂಡಿದ್ದಾರೆ. ಈ ರೀತಿ ಚುನಾವಣೆಯನ್ನು ಮುಂದೂಡುವುದಕ್ಕೆ ಕಾನೂನಿನಲ್ಲಿ ಏನು ಅವಕಾಶವಿದೆ. ಈಗ ಆಗಿರುವುದು ಚುನಾವಣೆಯಲ್ಲಿ ಹಸ್ತಕ್ಷೇಪ ಮಾಡಿದಂತಾಗಿದೆಯೋ ಇಲ್ಲವೋ? ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಹೇಳಬೇಕು.

ಶ್ರೀ ಆರ್.ಎಲ್. ಜಾಲಪ್ಪ : ಮಲಗಿ ನಿದ್ದೆ ಮಾಡುತ್ತಿರುವವರನ್ನು ಏನಾದರೂ ಮಾಡಿ ಎಬ್ಬಿಸಬಹುದು. ಆದರೆ ಸುಮ್ಮಸುಮ್ಮನೆ ನಿದ್ದೆ ಮಾಡುವವರಂತೆ ಸೋಗುಹಾಕಿಕೊಂಡಿರುವವರನ್ನು ಎಬ್ಬಿಸುವುದು ಬಹಳ ಕಷ್ಟ. ಅದೇ ರೀತಿ ನಮ್ಮ ಮಾನ್ಯ ಮುಖ್ಯ ಮಂತ್ರಿಗಳ ಉತ್ತರ ಇದೆ.

ಶ್ರೀ ಆರ್.ಎನ್. ನಾಯಕ್ : ಮಲಗಿ ನಿದ್ದೆ ಮಾಡುತ್ತಿರುವವರನ್ನು ಎಬ್ಬಿಸಬಹುದು, ಎದ್ದಿರುವವರನ್ನು ಎಬ್ಬಿಸುವುದಕ್ಕಾಗುವುದಿಲ್ಲ. ನಿಮ್ಮ ಕಾಲದಲ್ಲಿ ಸತ್ತವರನ್ನೆಲ್ಲಾ ಎಬ್ಬಿಸುತ್ತೇವೆಂದು ಜನರಿಗೆ ಪ್ರಾಮಿಸ್ ಮಾಡಿದ್ದೀರಿ.

ಶ್ರೀ ಆರ್.ಎಲ್. ಜಾಲಪ್ಪ : ನೀವು ಬಂದಿರುವುದನ್ನು ಮುಖ್ಯ ಮಂತ್ರಿಗಳು ಈಗಾಗಲೇ ನೋಡಿದ್ದಾರೆ. ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಮುಖ್ಯ ಮಂತ್ರಿಗಳು

ಈ ಚುನಾವಣೆಯಲ್ಲಿ ಹಸ್ತಕ್ಷೇಪ ನಡೆದಿಲ್ಲವೆಂದು ಹೇಳುತ್ತಿದ್ದಾರೆ. ಆದರೆ ಹಸ್ತಕ್ಷೇಪ ನಡೆದಿದೆ ಎಂದು ನಾವು ಹೇಳುತ್ತಿದ್ದೇವೆ. ಏಕೆಂದರೆ ನಮ್ಮ ಹತ್ತಿರ ಸಾಕಷ್ಟು ಪುರಾವೆಗಳಿವೆ. ಆದುದರಿಂದಲೇ ಈ ಸದನದ ಒಂದು ಸಮಿತಿಯನ್ನು ಮಾಡಿ ಎಂದು ನಾವು ಹೇಳುತ್ತಿರುವುದು. 15-3-94ರಲ್ಲಿ ತಾವು ಒಂದು ಕ್ಯಾಬಿನೆಟ್ ಮೀಟಿಂಗ್ ಮಾಡಿದ್ದೀರಿ. ಅದು 16-3-ರಲ್ಲಿ ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಬಂದಿದೆ.

"Ministers condemn IAS men: Ministers participating in the Cabinet Meeting on Tuesday unanimously resented IAS Officers for flouting cabinet instructions while holding elections to the posts of Presidents and Vice Presidents of Gram Panchayats in the State. The Minister's was so great that at one stage several senior ministers urged Chief Minister Veerappa Moily to take stringent action against errant district Officers.

However, no official decision was taken to discipline these District Officers, a source said. The Cabinet had in an earlier meeting instructed. Deputy Commissioners to conduct elections for these posts wherever there were no complaints from the public regarding reservations for these posts. In areas where there were complaints, the Cabinet had been given clear instructions to review the situation and re-schedule the elections as early as possible. But the IAS Officials and the district police officials submitted only a general report in those Gram Panchayats where there were complaints about reservations. Instead of re-scheduling the elections, they went ahead and conducted polls in all the Gram panchayats in the State, it is learnt."

ಏತಕ್ಕೆ? ಇದನ್ನು ಚರ್ಚೆ ಮಾಡುವ ಉದ್ದೇಶವೇನಿತ್ತು? ಅಲ್ಲಿನ ಲೋಕಲ್ ಎಂಎಲ್‌ಎ ಇಂಟರ್‌ಫಿಯರ್ ಆಗದೇ ಇದ್ದಿದ್ದರೆ...

ಶ್ರೀ ಎಂ. ವೀರಪ್ಪ ಮೊಯಿಲಿ: ಸನ್ಮಾನ್ಯ ಜಾಲಪ್ಪನವರಿಗೆ, ನಾನು ಹೇಳುತ್ತೇನೆ ತಾವು ಸಂಪುಟದಲ್ಲಿ ಕೆಲಸ ಮಾಡಿದಂಥ ಒಬ್ಬ ಜವಾಬ್ದಾರಿ ಸದಸ್ಯರಾಗಿದ್ದೀರಿ. ಏನು ವರದಿ ಇದೆ ಅದು ಸತ್ಯಕ್ಕೆ ದೂರವಾಗಿದೆ. ಅದು ಅರ್ಥವಿಲ್ಲದ್ದು, ಆದರೆ it is only out of some figment of imagination that has come.

SRI R.L. JALAPPA : I believe in you. You should have told the press that it is not correct, the very next day or your press secretary should have told or your Secretary should have told the press that this is not correct. Did you do it, Sir?

ಶ್ರೀ ಬಿ.ಹೆಚ್. ಬನ್ನಿಕೋಡ್: ಈ ಸದನ ತಮ್ಮ ಮಾತನ್ನು ನಂಬಬೇಕೇ?

ಶ್ರೀ ಡಿ.ಬಿ. ಚಂದ್ರೇಗೌಡ: ಮಧ್ಯ ಪ್ರವೇಶವಿಲ್ಲವೆನ್ನತಕ್ಕಂಥ ಮಾತನ್ನು ಸಮರ್ಥನೆ ಮಾಡುವುದಕ್ಕೆ ಮುಖ್ಯಮಂತ್ರಿಗಳು ಹೋಗಿ ಮತ್ತಷ್ಟು ಗೊಂದಲಕ್ಕೆ ಸಿಕ್ಕಿಹಾಕಿಕೊಳ್ಳುತ್ತಿದ್ದಾರೆ. ಶ್ರೀಮಾನ್ ಬನ್ನಿಕೋಡ್‌ರವರು ಒಂದು ಸರಿಯಾದ ಪ್ರಶ್ನೆಯನ್ನು ಕೇಳಿದರು. ಐದು ಜಿಲ್ಲೆಗಳಲ್ಲಿ ಚುನಾವಣೆಯನ್ನು ಸರ್ಕಾರ ಮುಂದೂಡಿದೆ. ಇದನ್ನು ಮುಂದೂಡುವುದಕ್ಕೆ ಏನಿತ್ತು ನಿಮಗೆ ಅಧಿಕಾರ? What was the report? Was there any law and order situation prevailing? Under what circumstances did you postpone the elections?

ಇದಕ್ಕೆ ನಿಮಗೆ ಇಚ್ಛೆ ಬಂದಹಾಗೆ ಚುನಾವಣೆಗಳನ್ನು ಬೇಕಾದಾಗ ಮುಂದಕ್ಕೆ ಹಾಕುವುದು, ಬೇಡವಾದಾಗ ಹಿಂದಕ್ಕೆ ತೆಗೆದುಕೊಂಡು ಬರುವುದು ಇದೆಲ್ಲಾ ನಡೆಸಿ ನಾವೇನು ಪ್ರವೇಶ ಮಾಡಿಲ್ಲವೆಂದು ಹೇಳುವುದಿಲ್ಲ. ಅದಕ್ಕೆ ನಾನು ಹೇಳುವುದು ಈ ಶಾಸನ, ಜಿಲ್ಲಾಪರಿಷತ್ತಿನ ಹೊಸ ಶಾಸನವೆಂದು ಬೆನ್ನುತಟ್ಟಿಕೊಂಡಿದ್ದೀರಲ್ಲಾ, ಅದನ್ನು ಬೆಂಕಿಯಲ್ಲಿ ಹಾಕಿ ಸುಟ್ಟುಬಿಡಬೇಕು ಈಗ. ಮಾನ್ಯ ಅಧ್ಯಕ್ಷರೇ, ಸಂಸದೀಯ ವ್ಯವಹಾರಗಳ ಮಂತ್ರಿಗಳು ಬಳ್ಳಾರಿಯಲ್ಲಿ ಹೇಳಿಕೆಯನ್ನು ಮಾಡುತ್ತಾ ಜಿಲ್ಲಾಪಂಚಾಯಿತಿಯ ಚುನಾವಣೆಯನ್ನು ಮುಂದೂಡುವ ಸಾಧ್ಯತೆ ಇದೆ ಎಂದು ಹೇಳಿದ್ದಾರೆ. ಆದ್ದರಿಂದ ನಿನ್ನೆ ಕೂಡ ಬಜೆಟ್‌ನಲ್ಲಿ ಬೆನ್ನುತಟ್ಟಿಕೊಂಡಿರುತ್ತಾರೆ. ಸರ್ವೋಚ್ಚ ನ್ಯಾಯಾಲಯದ ತೀರ್ಪಿಗೆ ಬಹಳ ಗೌರವವನ್ನು ತೋರಿಸಿದ್ದೇವೆ ಎಂದು ಹೇಳುತ್ತೀರಿ. ಅದಕ್ಕೆ ಗೌರವವನ್ನು ಸಂಪೂರ್ಣವಾಗಿ ತೋರಿಸಬೇಕಾದರೆ ಈ ಮೂರು ಚುನಾವಣೆಗಳು ಆಗಬೇಕು. ಅದು ಒಂದಕ್ಕೊಂದು ಸಂಬಂಧವಿದೆ ಚುನಾವಣೆಗಳಲ್ಲಿ. ಮಂಡಲ್ ಪಂಚಾಯತ್, ಗ್ರಾಮ ಪಂಚಾಯತ್‌ಗಳಿಗೆ ಚುನಾವಣೆಯನ್ನು ಮಾಡಿ ತಾಲ್ಲೂಕು ಪಂಚಾಯತ್‌ಗಳಿಗೆ ಚುನಾವಣೆಯನ್ನು ಮಾಡದಿದ್ದರೆ ಯಾವುದು ಪ್ರತಿ ವರ್ಷದ ಆಯವ್ಯಯವನ್ನು ತಯಾರು ಮಾಡಿ ತಾಲ್ಲೂಕ್ ಪಂಚಾಯತ್‌ನ ಒಪ್ಪಿಗೆಯನ್ನು ಪಡೆಯಬೇಕೋ ಅದು ಆಗದಿದ್ದರೆ ನೀವು ಈಗ ಮಾಡಿರತಕ್ಕಂಥ ಚುನಾವಣೆಗಳಿಗೆ ಮೂರುಕಾಸಿನ ಬೆಲೆ ಇಲ್ಲ. ಹಣಕಾಸಿನ ವ್ಯವಸ್ಥೆಯನ್ನು ಯಾರು ಮಾಡಿಕೊಡುವವರು? ಆದ್ದರಿಂದ ನಾವೆಲ್ಲಾ ಎಷ್ಟು ಜನ ಶಾಸಕರು ಇದ್ದೇವೆ ಪ್ರತಿಯೊಬ್ಬರೂ ತಾಲ್ಲೂಕಿನ ಪಂಚಾಯತಿಯ ಸಭೆಯ ಅಧ್ಯಕ್ಷತೆಯನ್ನು ವಹಿಸಿದವರು ಇವತ್ತಿಗೂ ಮುಂದೆ ಆ ತಾಲ್ಲೂಕು ಪಂಚಾಯತಿ ನಡೆಸಲು ನಾವು ಅಧ್ಯಕ್ಷತೆಯನ್ನು ವಹಿಸಬೇಕೋ, ಬೇಡವೋ ಸದಸ್ಯರು ಯಾರು, ಈ ಮಂಡಲದ ಪ್ರಧಾನರಲ್ಲಿ ಒಟ್ಟು ಆಯ್ಕೆಯಾಗಿರತಕ್ಕಂಥವರಲ್ಲಿ ಮೂರನೆ ಒಂದು ಭಾಗದ ಸದಸ್ಯರನ್ನು ಅವರು ಆಯ್ಕೆ ಮಾಡಿ ತಾಲ್ಲೂಕು ಪಂಚಾಯತಿಗಳಿಗೆ ಕಳುಹಿಸಿಕೊಡಬೇಕೋ, ಆ ತಾಲ್ಲೂಕು ಪಂಚಾಯತ್‌ಗಳಿಗೆ ಚುನಾವಣೆಗಳು ಆಗಿಲ್ಲ. ಅದಕ್ಕೆ ಏನು ಮಾಡಬೇಕು ನಾವು? ಎ.ಡಿ.ಪಿ. ಮೀಟಿಂಗ್ ಮತ್ತು ಡಿ.ಪಿ.ಎಸ್. ಮೀಟಿಂಗ್ ಮುಂದೆ ನಡೆಸಬೇಕೇ? ನಡೆಸಬೇಕಾದರೆ ಏನು ಮಾರ್ಗದರ್ಶನ? ಮತ್ತೆ ಯಾವ ಸರ್ಕ್ಯುಲರ್ ಬರುತ್ತದೆ ಇವೆಲ್ಲಾ ನಮಗೆ ಗೊತ್ತಾಗಬೇಕು. ಆದ್ದರಿಂದ ಈ ಗೊಂದಲಗಳು ಪುನರಾಯ ಮಹಾಕಪಿ ಎಂದು ಹೇಳಿ ಪುನಃ ತಾಲ್ಲೂಕು ಮತ್ತು ಜಿಲ್ಲಾಪಂಚಾಯತಿಗಳಲ್ಲಿ ಈ ಗೊಂದಲಗಳು ಆಗದ ಇರುವ ಹಾಗೆ ಕನಿಷ್ಟಪಕ್ಷ ಒಂದು ನಿರ್ಧಾರಕ್ಕೆ ಬರುವುದಕ್ಕೆ ನಮಗೊಂದು ಮಾರ್ಗಸೂಚಿ ಸಿಗಬಹುದು. ಆ ದೃಷ್ಟಿಯಿಂದಲೇ ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ನಿಮ್ಮ ಮಾರ್ಗದರ್ಶನದಲ್ಲಿ ಒಂದು ಸದನದ ಸಮಿತಿಯನ್ನು ಮಾಡಿ ಎಂದು.

ಆ ಸಮಿತಿಗೆ ನಿಖರವಾದ ಸಮಯಕೊಡಿ. ಇಂತಿಷ್ಟು ದಿನಗಳಲ್ಲಿ ವರದಿ ಕೊಡಬೇಕೆಂದು ಹೇಳಿ. ಅದು ಮುಂದೆ ಮಾರ್ಗಸೂಚಿಯಾಗಬಹುದು. ಆ ಮಾರ್ಗಸೂಚಿಯ ಆಧಾರದ ಮೇಲೆ ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತಿಗಳ ಚುನಾವಣೆ ಮಾಡುವುದಕ್ಕೆ ಸಾಧ್ಯವಾಗಬಹುದು. ಆದುದರಿಂದ ಒಂದು ಸದನದ ಸಮಿತಿ ಮಾಡಿ ಎಂಬುದು ನಮ್ಮ ಒತ್ತಾಯ. ಇದರ ಜೊತೆಗೆ ಮತ್ತೊಂದು ಭಾಗ, ಅದು ಗೋಲಿಬಾರ್ ನಡೆದು 7 ಜನರು ಏನು ಸತ್ತಿದ್ದಾರೆ ಅದರ ಬಗ್ಗೆ ತನಿಖೆ ಆಗಬೇಕು. ಬಳ್ಳಾರಿ ಮತ್ತು ಗುಲ್ಬರ್ಗಾ ಜಿಲ್ಲೆಗಳನ್ನು ಈಗ ತಾನೇ ಪ್ರಸ್ತಾಪ ಮಾಡಿದೆವು, ಇಲ್ಲಿ ನಿರ್ದಾಕ್ಷಿಣ್ಯವಾದಂಥ ಒಂದು ನ್ಯಾಯಾಂಗ ತನಿಖೆ ಆಗಬೇಕು. ಆ ನ್ಯಾಯಾಂಗ ತನಿಖೆಗೆ ನಾವು ಯಾವ ಮಾರ್ಗಸೂಚಿಗಳನ್ನು ಕೊಡಬೇಕು ಅಗತ್ಯ ಬಿದ್ದರೆ ಅದನ್ನು ಕೊಡುವುದಕ್ಕೆ ನಾವು ಸಿದ್ಧರಾಗಿರಬೇಕು. ಆದುದರಿಂದ ನ್ಯಾಯಾಂಗ ತನಿಖೆಗೆ ಸರ್ಕಾರ ಒಪ್ಪಿಕೊಳ್ಳಬೇಕು ಮತ್ತು ಸದನದ ಸಮಿತಿಯ ರಚನೆಗೆ ಅವಕಾಶ ಮಾಡಿಕೊಡಬೇಕು. ಇವೆರಡೂ ಸಾಧ್ಯವಿಲ್ಲವೆಂದು ಆದರೆ ನೀವು ಮಧ್ಯೆ ಪ್ರವೇಶ

ಮಾಡಿದ್ದೀರೆಂಬುದನ್ನು ಇಂಡೈರೆಕ್ಟ್ ಆಗಿ ಒಪ್ಪಿಕೊಂಡಿದ್ದೀರಿ. ಆದುದರಿಂದ ಶಾಸನದ ಪ್ರಕ್ರಿಯೆಯನ್ನು ಹೊರತುಪಡಿಸಿ ಕಾರ್ಯಾಂಗ ಮಧ್ಯೆ ಪ್ರವೇಶಿಸಿ ಚುನಾವಣೆಯಂಥ ವಿಶೇಷ ಸಂದರ್ಭಗಳಲ್ಲಿ ಮಧ್ಯೆ ಪ್ರವೇಶ ಮಾಡಿದ್ದರೆ ಅವರು ಆ ಜಾಗದಲ್ಲಿ ಇರುವುದಕ್ಕೆ ಅರ್ಹರಾಗುವುದಿಲ್ಲ. ಅರ್ಹರಾಗಿದ್ದಾರ್ರೋ ಇಲ್ಲವೋ ಎಂಬುದನ್ನು ನಾವು ನೋಡಬೇಕಾಗಿದೆ. ಆದುದರಿಂದ ನಾನು ಅಧ್ಯಕ್ಷರಲ್ಲಿ ಪ್ರಾರ್ಥನೆ ಮಾಡುತ್ತೇನೆ ಕನಿಷ್ಠ ಈ ಎರಡು ಕೆಲಸ ಮಾಡುತ್ತೇವೆಂದರೆ ಮೂರನೆಯದನ್ನು ಕೇಳಬೇಕೇ ಬೇಡವೇ ಎಂಬುದನ್ನು ಆಲೋಚನೆ ಮಾಡುತ್ತೇನೆ. ನಮಗೆ ಕನಿಷ್ಠ ಮಾಹಿತಿಯಾದರೂ ಸಿಗುತ್ತದೆ. ಆ ಮಾಹಿತಿಯ ಆಧಾರದ ಮೇಲೆ ಮುಂದೆ ಏನು ಮಾಡಬೇಕೆಂಬ ನಿರ್ಣಯ ಮಾಡಬಹುದು. ನನ್ನ ಕೊನೆಯ ಮಾತು ಪುನಃ ಹೇಳುತ್ತೇನೆ. ಯಾವ ಜನ ಅಧಿಕಾರವನ್ನು ನಡೆಸತಕ್ಕಂಥ ಜವಾಬ್ದಾರಿಯನ್ನು ಈ ಕಾಂಗ್ರೆಸ್ ಪಕ್ಷಕ್ಕೆ 4 ವರ್ಷಗಳ ಹಿಂದೆ ಕೊಟ್ಟು ಮೂರನೇ ಮಹಡಿಗೆ ಕೂರಿಸಿದರೋ, ಆ ಮೂರನೇ ಮಹಡಿಯಲ್ಲಿರತಕ್ಕ ಜನ, ಜನರ ಅಧಿಕಾರವನ್ನು ಅವರೇ ಮಾಡಿಕೊಂಡಿರತಕ್ಕ ಅಧಿಕಾರದಲ್ಲಿ ಹಸ್ತಕ್ಷೇಪ ಮಾಡತಕ್ಕ ಅಪರಾಧವನ್ನು ಮಾಡಕೂಡದು, ಮಾಡುವುದಿಲ್ಲವೆಂಬ ಆಶ್ವಾಸನೆಯನ್ನು ನಾನು ಇವರಿಂದ ನಿರೀಕ್ಷಿಸಿ ನನ್ನ ಮಾತು ಮುಗಿಸುತ್ತೇನೆ.

(ಶ್ರೀ ಎನ್.ಜಿ. ಹಾಲಪ್ಪನವರು ಮಾತನಾಡಲು ನಿಂತರು)

ಪೂರ್ತಿ ಪರಿಸರವನ್ನು ಕೆಡಿಸಿರುವವರು ನೀವು, ಆದುದರಿಂದ ದಯವಿಟ್ಟು ನೀವು ಕುಳಿತುಕೊಳ್ಳುವುದು ಒಳ್ಳೆಯದು.

ಶ್ರೀ ಎನ್.ಜಿ. ಹಾಲಪ್ಪ (ಚನ್ನಗಿರಿ): ಮಾನ್ಯ ಸದಸ್ಯರು ನನ್ನ ಹೆಸರು ತೆಗೆದುಕೊಂಡು ಮಾತಾಡಿದ್ದರಿಂದ ಅದರ ಹಿನ್ನೆಲೆಯನ್ನು ಹೇಳುತ್ತೇನೆ. ಅವರು ಮೊನ್ನೆ ವಿಧಾನಸೌಧಕ್ಕೆ ಮುತ್ತಿಗೆ ಹಾಕಿದರು. ಸಾಯಂಕಾಲದ ಸಭೆಯಲ್ಲಿ ಮಾನ್ಯ ದೇವೇಗೌಡರು ನಾನು ಬರೆದ ಕಾಗದ ಎಂದು ಹೇಳಿ ಬೆಂಕಿ ಹಚ್ಚಿ ಸುಟ್ಟರು. ನಾನು ಮುಖ್ಯಮಂತ್ರಿಗಳಿಗೆ ಕಾಗದ ಬರೆದಿದ್ದೇನೆ; ಮುಖ್ಯಮಂತ್ರಿಗಳು ಅದನ್ನು ಜಿಲ್ಲಾಧಿಕಾರಿಗಳಿಗೆ ಕಳುಹಿಸಿದ್ದಾರೆ. ನಮ್ಮ ಪಾರ್ಟಿಯವರಿಗೆ ಅನುಕೂಲ ಮಾಡಬೇಕೆಂದು ಹಾಗೆ ಎಂದು ಅವರು ಹೇಳಿದ್ದಾರೆ. ನಾನು ಆ ಲೆಟರ್ ಚಾಲೆಂಜ್ ಮಾಡಿದ್ದೇನೆ. I have never written such a letter. ಅದನ್ನು ಬಿಟ್ಟು ಜಿಲ್ಲಾಧಿಕಾರಿಗಳು ಏನೋ ಬರೆದಿದ್ದಾರೆ because they couldn't prove it. ಅದನ್ನು ಹೇಳುತ್ತೇ. ಅವತ್ತು ನಾನು ಮತ್ತು ಕರಿಯಣ್ಣನವರು ಕೂಡಿ ಹೋಗಿದ್ದೆವು. We had taken some suggestion to the DC, both myself and Mr. Karianna have signed that suggestion. ನಮ್ಮ ಜಿಲ್ಲಾಧಿಕಾರಿಗಳು ಕಾನೂನಿನ ಚೌಕಟ್ಟಿನೊಳಗೆ ಮಾಡುತ್ತಾರೆಯೇ ಹೊರತು ನಮ್ಮ ಎದುರಿಗೆ ರೈಟೋ ರಾಂಗೋ ಹಾಕಿಬಿಟ್ಟರು. ನಾನು ಅಧಿಕಾರಿಗಳಿಗೆ ಆ ರೀತಿ ಪ್ರಭಾವ ಬೀರುವ ಕೆಲಸ ಮಾಡಿಲ್ಲ. Being an Advocate myself, do you expect me to write such a letter to the Chief Minister, which he in turn referred it to the DC?

ಶ್ರೀ ಡಿ.ಬಿ. ಚಂದ್ರೇಗೌಡ: ನೀವು ಮಂತ್ರಿಯಾದ ಮೇಲೆ ವಕಾಲತ್ತು ಮಾಡುವುದನ್ನು ಮರೆತಿದ್ದೀರಿ. ಅದಕ್ಕೆ ನಾನು ನೆನಪು ಮಾಡಿಕೊಟ್ಟೆ.

SRI N.G. HALAPPA : I have never done on such thing in my life and i will never do it, I assure my friend. Because you want to cover your previous mistakes and see that the Deputy Commissioner's made a scapegoat. ಮಾದಪ್ಪನವರು ಇದ್ದರು ನಿಮ್ಮ ಎಂಎಲ್ಸಿ. It was an open discussion. ನೀವು ಬೇಕಾದರೆ ತರಿಸಿ ನೋಡಿ. ನಾವು ಬರೆದದ್ದು ಎಲ್ಲಾ ಇಲ್ಲೀಗಲ್ ಎಂದು ಒಪ್ಪಿಕೊಂಡಿ

ಬಿಟ್ಟಿದ್ದಾರೆ. ಅದು ಬೇರೆ ವಿಷಯ. He has never budged an inch from the ruel of law. This is for the information of the House and for my learned friend.

ಶ್ರೀ ಎಂ.ಎಸ್. ಪಾಟೀಲ್ : ಅದರ ಅರ್ಥ ಇಷ್ಟೇ ಆಗುತ್ತದೆ. ಅವರು ಪ್ರಯತ್ನ ಮಾಡಿದರು. ಅವರು ಈಲ್ಡ್ ಆಗಲಿಲ್ಲ.

SRI R.L. JALAPPA : With due respect to you Sir, where was the need to go to the Deputy Commissioner with his suggestions when you expect that the Deputy Commissioner will do it according to law?

ಶ್ರೀ ಎನ್.ಜಿ. ಹಾಲಪ್ಪ : ಜಿಲ್ಲಾಧಿಕಾರಿಗಳು ಊಟಕ್ಕೆ ಕರೆಯಲಿಲ್ಲ. ಅವರು ಈ ಸಮಸ್ಯೆ ತಿಳಿದುಕೊಳ್ಳಬೇಕು ಹಾಗೂ ನಮ್ಮ ಜೊತೆ ಚರ್ಚೆ ಮಾಡಬೇಕೆಂದು ಕರೆದರು. ಅವರು ಕರೆಕ್ಟ್ ಆಗಿ ಮಾಡಿದ್ದಾರೆ. We have no quarrel with his orders.

ಶ್ರೀ ಬಿ.ಹೆಚ್. ಬನ್ನಿಕೋಡ್ : ನಮ್ಮ ಪರಿಸರ ಬಹಳ ಚೆನ್ನಾಗಿತ್ತು. ಆದರೆ ಮಂತ್ರಿಮಂಡಲದಲ್ಲಿ ಸೇರಿದ ಮೇಲೆ ತಮ್ಮ ಪರಿಸರ ಸರಿಯಾಗಿ ಉಳಿದಿಲ್ಲ ಎಂದು ಕಾಣುತ್ತದೆ.

+ ಶ್ರೀ ಆರ್.ಎಲ್. ಜಾಲಪ್ಪ (ದೊಡ್ಡಬಳ್ಳಾಪುರ) : ಸನ್ಮಾನ್ಯ ಅಧ್ಯಕ್ಷರೆ, ಸ್ವಾಮಿ, ನಾನು ಬಹಳ ತಳ್ಳಿಕೊಂಡು ತಳ್ಳಿಕೊಂಡು ಬಂದೆ. ಕಡೆಗೂ ಇದು ಆಗಲಿಲ್ಲ. ಏನೋ ಬ್ಯಾಕ್ವರ್ಡ್ ಕ್ಲಾಸ್ನವರು ಮುಖ್ಯಮಂತ್ರಿಯಾಗಿದ್ದಾರೆ, ಸುಮ್ಮನೆ ಗೊಂದಲ ಹುಟ್ಟಿಸುವುದು ಬೇಡ ಎಂದು ಇದ್ದೆ. ಒಬ್ಬ ಬ್ಯಾಕ್ವರ್ಡ್ ಕ್ಲಾಸ್ ಮುಖ್ಯಮಂತ್ರಿ ಬಂಗಾರಪ್ಪನವರು ಇದ್ದರು. ಹಾಳಾಗಿ ಹೋಗಲಿ, ಅವರು ಏನು ಮಾಡುತ್ತಾರೋ ಮಾಡಲಿ ಎಂದು ಸುಮ್ಮನೆ ಇದ್ದೆವು. ಅವರಿಂದಲೂ ಏನೂ ಮಾಡುವುದಕ್ಕೆ ಆಗಲಿಲ್ಲ. ಇವರು ಬ್ಯಾಕ್ವರ್ಡ್ ಕ್ಲಾಸ್ನವರು ಬಂದಿದ್ದಾರೆ, ಏನಾದರೂ ಸ್ವಲ್ಪ ಎಡರುತೊಡರುಗಳಿದ್ದರೂ ಚಿಂತೆಯಿಲ್ಲ, ನಾವು ಅಡ್ಡಗಾಲು ಹಾಕಬಾರದು ಎಂದು ಹೇಳಿ ಬಂದೆವು. ಮೂರು ನಾಲ್ಕು ತಿಂಗಳು ಇರುತ್ತಾರೆ, ಹೋಗುತ್ತಾರೆ ಎಂದಿದ್ದೆವು. ಕಡೆ ಗಳಿಗೆಯಲ್ಲಿ ನಮ್ಮ ಎಗ್ಸಿಸ್ಟೆನ್ಸ್ಗೇ ಅವಕಾಶ ಇಲ್ಲ ಎಂದರೆ we have to assert ourselves. ಆದ್ದರಿಂದ ಮಾತನಾಡುತ್ತಿದ್ದೇನೆ ಅಷ್ಟೆ. ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಪಂಚಾಯಿತಿರಾಜ್ ಸಚಿವರು ಈ ಒಂದು ಬಿಲ್ಲನ್ನು ತಂದಾಗ ನಾನಂತೂ ಸ್ವಾಗತಿಸಿದೆ. ನಾನೇನೂ ಅದನ್ನು ವಿರೋಧ ಮಾಡುವುದಕ್ಕೆ ಹೋಗಲಿಲ್ಲ. ಆದರೆ ನನಗೆ ಗೊತ್ತಿತ್ತು ಇದು ಪ್ರಾಕ್ಟಿಕಲ್ ಅಲ್ಲ ಎಂದು. ಏಕೆಂದರೆ ಈ ರಾಜಕಾರಣ ಎಂಬುದು ಈಗ ಮನುಷ್ಯನ ರಕ್ತದಲ್ಲಿ ಸೇರಿಕೊಂಡು ಹೋಗಿದೆ. ಎಲ್ಲೋ ಕೆಲವರು ಬುದ್ಧಿಜೀವಿಗಳು ಎನ್ನುವವರು ಸ್ವಲ್ಪ ರಾಜಕಾರಣದಿಂದ ಹೊರಗಡೆ ಇರಬಹುದೇ ವಿನಾ ಗ್ರಾಮಾಂತರ ಪ್ರದೇಶದಲ್ಲಿ ಇವತ್ತು ರಾಜಕಾರಣದಿಂದ ಹೊರಗಡೆ ಇದ್ದಾರೆ ಎಂದರೆ ನಾನು ನಂಬುವುದಿಲ್ಲ. ಸ್ವಲ್ಪ ಅನುಭವಸ್ಥರು ನಮ್ಮ ಮಾನ್ಯ ಮಂತ್ರಿಗಳೆಂದು ಅವರು ಹೇಳಿದರು, ನಾವು ಒಪ್ಪಿಕೊಂಡೆವು. ಆದರೆ ಈಗ ಆಗಿದ್ದೇನು? ವಸ್ತು ಸ್ಥಿತಿ ತಮಗೂ ಗೊತ್ತಿದೆ, ನಮಗೂ ಗೊತ್ತಿದೆ. ಚುನಾವಣೆಗೆ ನಿಂತಾಗ ಆಯಾಯಾ ಪಕ್ಷದವರ ಫೋಟೋಗಳನ್ನುಹಾಕಿಕೊಂಡರು. ನಮ್ಮ ಪಕ್ಷದವರು ಚುನಾವಣೆಗೆ ನಿಂತಾಗ ನಮ್ಮ ಪಕ್ಷದ ನಾಯಕರ ಫೋಟೋಗಳನ್ನು ಹಾಕಿಕೊಂಡು ಜನತಾ ದಳದವರು ಅಂತಲೇ ನಮ್ಮ ಕಾರ್ಯಕರ್ತರು ಚುನಾವಣೆಗೆ ಹೋದರು. ಕಾಂಗ್ರೆಸ್ನವರು ಅದೇ ರೀತಿ ಹೋದರು. ಬಿ.ಜೆ.ಪಿ.ಯವರು ಮತ್ತು ಇನ್ನೊಂದು ಪಕ್ಷದವರೂ ಅದೇ ರೀತಿ ಮಾಡಿದ್ದಾರೆ. ಆದ್ದರಿಂದ ಅಲ್ಲಿ ಪಕ್ಷಾತೀತವಾದದ್ದು ಏನು ಉಳಿಯಲಿಲ್ಲ. 1986ರಲ್ಲಿ

ನಾವು ಇದನ್ನು ತಂದಾಗ ಒಂದು ಶಿಸ್ತಾದರೂ ಇತ್ತು. ಆ್ಯಂಟಿ ಡಿಫೆಕ್ಷನ್ ಆಕ್ಟ್ ಇತ್ತು. ಸದಸ್ಯರು ಒಂದು ವರ್ಷದಿಂದ ಗೆದ್ದು ಇನ್ನೊಂದು ಪಕ್ಷಕ್ಕೆ ಹೋಗುವುದಕ್ಕೆ ಆಗುತ್ತಾ ಇರಲಿಲ್ಲ, ತಾವು ಈ ಒಂದು ಮಸೂದೆಯನ್ನು ತಂದು ನಮ್ಮಿಂದ ಒಪ್ಪಿಗೆ ಪಡೆದ ಮೇಲೆ ಈಗ ಏನಾಯಿತು? ಫುಲ್ ಲೈಸೆನ್ಸ್ ಆಡಳಿತ ಪಕ್ಷದವರಿಗೆ ಸಿಕ್ಕಿತು. ಎಲ್ಲೆಲ್ಲಿ ಕಡಿಮೆ ಬಂದಿದೆಯೋ ಅಲ್ಲೆಲ್ಲಾ ಬೇರೆ ಪಕ್ಷದವರನ್ನು ಎಳೆದುಕೊಂಡು ಹೋಗುವುದು ಅಥವಾ ಕದಿಯುವುದು ಅಥವಾ ಹಣ, ಲಂಚ ಕೊಡುವುದೋ ಏನೋ ಮಾಡಿ ಒಂದೊಂದು ತಾಲ್ಲೂಕಿನಲ್ಲಿ ಮೂರು ನಾಲ್ಕು ಪಂಚಾಯಿತಿಗಳನ್ನು ಜಾಸ್ತಿ ಮಾಡಿಕೊಳ್ಳುವುದಕ್ಕೆ ಅವಕಾಶ ಆಯಿತು. ಇದರಿಂದ ಕೆಲವು ತಾಲ್ಲೂಕುಗಳಲ್ಲಿ ಈ ಮಂಡಲ ಪಂಚಾಯಿತಿ ಚುನಾವಣೆಗಳು ಬಹಳ ಅಧೋಗತಿಗೆ ಬಂದಿವೆ. ಇದು ಕಾಂಗ್ರೆಸ್ಸಿನ ಪರಿಸ್ಥಿತಿ. ಒಂದು ತಾಲ್ಲೂಕಿನಲ್ಲಿ ಏಳೆಂಟು ಕಡೆ ನಮ್ಮ ಪಕ್ಷದಿಂದ ಗೆದ್ದವರಿಗೆ ತಾವು ಆಮಿಷಗಳನ್ನು ತೋರಿಸಿ, ಎಲ್ಲೆಲ್ಲಿ ಅದಕ್ಕೆ ಯಾರು ಒಳಗಾಗುವುದಿಲ್ಲ ಅವರನ್ನು ಕದ್ದು ತೆಗೆದುಕೊಂಡು ಹೋಗಿ.... ಯಾರು ಬರೆದುಕೊಳ್ಳುತ್ತಿದ್ದಾರೆ ಇದನ್ನು?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಮುಖ್ಯಮಂತ್ರಿಗಳೂ ಇಲ್ಲ, ಮಂತ್ರಿಗಳೂ ಇಲ್ಲ, ಯಾರ ಸಲುವಾಗಿ ಹೇಳಬೇಕು, ಯಾರು ಇಲ್ಲ ಅಲ್ಲಿ.

(ಹಲವಾರು ಸದಸ್ಯರು ಮಂತ್ರಿಗಳಿಲ್ಲ, ಮುಖ್ಯಮಂತ್ರಿಗಳಿಲ್ಲ ಎಂದು ಹೇಳುತ್ತಿದ್ದರು.)

ಶ್ರೀ ಬಿ.ಎಚ್. ಬನ್ನಿಕೋಡ್: ಇಷ್ಟೊಂದು ಅನ್ಯಾಯವಾಗಿದೆ ಎಂದು ಹೇಳುತ್ತಿರುವಾಗ ಕೇಳಲಿಕ್ಕೆ ಯಾರೂ ಇಲ್ಲ, ಹಿರಿಯ ಸಚಿವರು ಇಲ್ಲ, ಮುಖ್ಯಮಂತ್ರಿಗಳು ಹೋದರು. ಸಂಬಂಧಪಟ್ಟ ಸಚಿವರೂ ಹೋದರು.

ಅಧ್ಯಕ್ಷರು: ವಿಚಾರ ವಿನಿಮಯ ಮಾಡುವುದಕ್ಕೆ ಹೋಗಿದ್ದಾರೆ.

ಶ್ರೀ ಸಿ.ಆರ್. ಸಗೀರ್ ಅಹಮದ್: ಕಡತ ತರುವುದಕ್ಕೆ ಮಂತ್ರಿಗಳು ಹೊರಗಡೆ ಹೋಗಿದ್ದಾರೆ.

ಶ್ರೀ ಆರ್.ಎಲ್. ಜಾಲಪ್ಪ: ಈ ತರಹ ಕಾಂಗ್ರೆಸ್ಸವರ ಮೋಸಕ್ಕೆ ಬಲಿ ಆದವರು ಪರಿಶಿಷ್ಟ ವರ್ಗದವರು ಮತ್ತು ಮಹಿಳೆಯರು. ಎಲ್ಲೆಲ್ಲಿ ಜಾಸ್ತಿ ಕಿಡ್ನ್ಯಾಪ್ ಮಾಡಿದ್ದಾರೆ ಅಥವಾ ಅಬ್ಡಕ್ಟ್ ಮಾಡಿದ್ದಾರೆ ಅಥವಾ ಗೂಂಡಾಗಿರಿ ಮಾಡಿದ್ದಾರೆ ಅದಕ್ಕೆ ಬಲಿಯಾಗಿರುವವರು ಪರಿಶಿಷ್ಟ ವರ್ಗದವರು, ಪರಿಶಿಷ್ಟ ಜಾತಿಯವರು ಮತ್ತು ಮಹಿಳೆಯರು. ಹಿಂದುಳಿದ ವರ್ಗದ ರಿಸರ್ವೇಷನ್ ಸರ್ಟಿಫಿಕೇಟ್ ಇದು ಒಂದು ಫ್ರಾಡ್. ದಯವಿಟ್ಟು ಇದನ್ನು ಎನ್‌ಕ್ವೈಯರಿ ಮಾಡಿಸಿ. ಶೇಕಡ 80 ರಷ್ಟು ಜನ ಸ್ಥಿತಿವಂತರು, ಟ್ರಾಕ್ಟರ್ ಇಟ್ಟುಕೊಂಡಿರುವವರು, ಹತ್ತಾರು ಎಕರೆ ಜಮೀನು ಇಟ್ಟುಕೊಂಡಿರುವವರು, ಹಾಲಿನ ಫೆಡರೇಷನ್ನಲ್ಲಿ ಲಾರಿ ಬಾಡಿಗೆ ಕೊಟ್ಟಿರುವವರು ಹಿಂದುಳಿದ ವರ್ಗದವರು ಎಂದು ಸರ್ಟಿಫಿಕೇಟ್ ತಂದು ಇವತ್ತಿನ ದಿವಸ ಅಧ್ಯಕ್ಷರು ಆಗಿದ್ದಾರೆ? ಇದಕ್ಕೆ ಬೆಲೆ ಏನು?

ಶ್ರೀ ಎಂ.ವೈ. ಘೋರ್ಪಡೆ: ಮಾನ್ಯ ಅಧ್ಯಕ್ಷರೇ, ಈ ವಿಚಾರ ಪದೇ ಪದೇ ಬರುತ್ತಿದೆ. ಆದ್ದರಿಂದ ಹೇಳಬೇಕಾಗುತ್ತದೆ: ಇದು ಹೊಸದಾಗಿ ಮಾಡಿದ್ದುದು ಅಲ್ಲ, 1986ರಲ್ಲಿ ಮಾಡಿದ ಆರ್ಡರ್ ಪ್ರಕಾರ ಈ ಬ್ಯಾಕ್ವರ್ಡ್ ಕ್ಲಾಸ್ ಡೆಫನೇಷನ್ ಏನು ಇತ್ತು ಅದನ್ನು ನಾವು ಮುಂದುವರಿಸಿಕೊಂಡು ಹೋಗಿದ್ದೇವೆ. ಅಲ್ಲಿ 10 ಸಾವಿರ ರೂಪಾಯಿ ಇನ್ಕಮ್ ಲಿಮಿಟ್ ಇತ್ತು. ಸರ್ಟಿಫಿಕೇಟ್ ತರುವ ಅವಶ್ಯಕತೆ ಇತ್ತು. ಇದು ಅಲ್ಲದೇ ಅವರು ಹೇಳುತ್ತಿದ್ದಾರೆ. ಇದನ್ನು ರಾಜಕೀಯವಾಗಿ ನಾವು ಇಟ್ಟುಕೊಂಡದ್ದು ಅಲ್ಲ. ಇದರಲ್ಲಿ ಆರ್ಟಿಕಲ್ 15-4, 16-4 ಉಪಯೋಗಿಸಿದೆ. ನೀವು ಇನ್ಕಮ್ ಲಿಮಿಟ್ ಅನ್ನು ಆ ಕಾಲದಲ್ಲಿಯೇ ಉಪಯೋಗ ಮಾಡಿದ್ದೀರಿ; 6

ಸಾವಿರಕ್ಕಿಂತ ಕಡಿಮೆ ಇರುವವರನ್ನು ನಾಮಿನೇಟ್ ಮಾಡಬೇಕು ಎಂದು. ಆದಕಾರಣ ಮೀಸಲಾತಿ ಪದ್ಧತಿ ಡೆಫನಿಷನ್ ಏನು ಇದೆ ಅದನ್ನು ಫ್ರಾಡ್ ಎಂದು ನೀವು ಹೇಳುವುದಾದರೆ, ಈ ಫ್ರಾಡ್ನು ನಾವು ಹೊಸದಾಗಿ ಹುಟ್ಟಿಸಿದ್ದು ಅಲ್ಲ. ಇದರಲ್ಲಿ ಅಕ್ರಮವಾಗಿ ಸರ್ಟಿಫಿಕೇಟ್ನು ಯಾರೂ ತೆಗೆದುಕೊಳ್ಳುವುದಕ್ಕೆ ಸಾಧ್ಯ ಇಲ್ಲ ಎಂದು ನಾನು ಹೇಳುವುದಕ್ಕೆ ಇಷ್ಟಪಡುವುದಿಲ್ಲ, ಆದರೆ ಇದರ ಬಗ್ಗೆ ನಾವು ಎಲ್ಲರೂ ಜಾಗರೂಕತೆಯಿಂದ ನೋಡುತ್ತಾ ಇರಬೇಕಾಗುತ್ತದೆ. ಪ್ರತಿಯೊಬ್ಬರೂ ಫ್ರಾಡ್ ಸರ್ಟಿಫಿಕೇಟ್ ತರುತ್ತಾರೆ, ಆದಕಾರಣ ಈ ಈ ಓಬಿಸಿ ರಿಸರ್ವೇಷನ್ ಬೇಡ ಎಂದು ಹೇಳುವುದಕ್ಕೆ ನೈತಿಕವಾಗಿಯಾಗಲೀ, ರಾಜಕೀಯವಾಗಿಯಾಗಲೀ, ನಮಗಾಗಲೀ ಅಥವಾ ನಿಮಗಾಗಲೀ ಅಧಿಕಾರ ಇಲ್ಲ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಆರ್.ಎಲ್ ಜಾಲಪ್ಪ: 1986ರಲ್ಲಿ ಈ ಆರ್ಡರ್ ಬಂದಿದ್ದು ನಿಜ. ಆದರೆ ಅದು ಎಲೆಕ್ಷನ್ ಪರ್ಪಸ್ಗೆ ಅಲ್ಲ ತಂದಿದ್ದು. ಅದನ್ನು ಎಜ್ಯುಕೇಷನ್ ಮತ್ತು ಅಪಾಯಿಂಟ್ಮೆಂಟ್ಗೆ ತಂದಿದ್ದು. ಇದರಲ್ಲಿ ತಪ್ಪು ಆಗಿದೆ ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇವೆ. ತಾವು ಯೋಜನೆ ಮಾಡಿ. ತಮ್ಮ ಮೇಲೆ ಅಪವಾದ ಹೊರಿಸುತ್ತಾ ಇಲ್ಲ. ಇಲ್ಲಿ ತಪ್ಪಾಗಿದೆ. ನಿಮ್ಮ ಅಧಿಕಾರಿಗಳು ಯಾರಿಗೂ ರೆಫ್ಯೂಸ್ ಮಾಡಿಲ್ಲ. ಹೋದವರಿಗೆಲ್ಲರಿಗೂ ಕೊಟ್ಟಿದ್ದಾರೆ.

ಶ್ರೀ ಎಂ.ವೈ. ಘೋರ್ಪಡೆ: ಇನ್ಕಮ್ ಸರ್ಟಿಫಿಕೇಟ್ ಕೊಡುವ ಪದ್ಧತಿ ಟೈಟನ್ ಮಾಡಬೇಕೆಂದರೆ ಅದನ್ನು ಮಾಡಬೇಕಾಗುತ್ತದೆ.

ಶ್ರೀ ಆರ್.ಎಲ್ ಜಾಲಪ್ಪ: ಅದನ್ನೇ ನಾನು ಹೇಳಿದ್ದುದು.

ಶ್ರೀ ಸಿ.ಎಸ್. ನಾಡಗೌಡ: ಟ್ರಾಕ್ಟರ್, ಲಾರಿಗಳನ್ನು ಇಟ್ಟುಕೊಂಡಿರುವವರೂ ಸರ್ಟಿಫಿಕೇಟ್ ತೆಗೆದುಕೊಂಡಿದ್ದಾರೆ. ಅಂತಹದ್ದು ನಮ್ಮ ಗಮನಕ್ಕೆ ಬಂದಮೇಲೆ ನಾವು ಅದನ್ನು ಜಿಲ್ಲಾಧಿಕಾರಿಗಳವರ ಗಮನಕ್ಕೆ ತಂದಮೇಲೆ ಅವರಿಗೂ ಪವರ್ ಇಲ್ಲ ಎಂದು ತಿಳಿಯಿತು. ಯಾರು ಇಷ್ಯೂ ಮಾಡಿರುತ್ತಾರೋ ಅವರೇ ವಿತ್ಡ್ರಾ ಮಾಡಬೇಕು. ಇಷ್ಯೂ ಮಾಡಿದವರು ರಜಾ ಹಾಕಿ ಹೋಗಿದ್ದಾರೆ. ಎಂತಹ ಅರೋಗೆನ್ಸ್ ನೋಡಿ. ಅಂತಹವರ ಮೇಲೆ ಕ್ರಮ ಜರುಗಿಸುತ್ತೀರಾ? ಸಸ್ಪೆಂಡ್ ಮಾಡುತ್ತೀರಾ? ಇಷ್ಯೂ ಮಾಡಿ ರಜ ಹಾಕಿದ್ದಾರೆ.

SRI M.Y. GHORPADE : The point is well taken. The procedure and system for issuing of certificates-we will tighten the system.

ಶ್ರೀ ಹಂಪನಗೌಡ ಪಾಟೀಲ್: ಫಾಲ್ಸ್ ಸರ್ಟಿಫಿಕೇಟ್ ತೆಗೆದುಕೊಂಡಿರುವವನ್ನು ಸೀಜ್ ಮಾಡುತ್ತೀರಾ? ಮಾಡುವವರು ನೀವೇ ಹೇಳೋವವರು ನೀವೇ.

ಶ್ರೀ ಆರ್.ಎನ್ ನಾಯಕ್: ನೀವು ಕೆಲವು ವಿಚಾರ ಹೇಳಿದ್ದೀರಿ. ಕೆಲವು ವಿಚಾರಗಳನ್ನು ನಾವು ಕೂಡ ಸರ್ಕಾರದ ಮುಂದೆ ಇಡುತ್ತೇವೆ. ಈಗ ದೇಶಪಾಂಡೆಯವರು ಇದ್ದಾರೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಅವರು ಬ್ಯಾಕ್ವರ್ಡ್ ಕ್ಲಾಸ್ಗೆ ಅವರು ಸೇರುವುದಿಲ್ಲ. ನಾನು ಉತ್ತರ ಕನ್ನಡ ಜಿಲ್ಲೆಯಲ್ಲಿ ಬ್ಯಾಕ್ವರ್ಡ್‌ಕ್ಲಾಸ್‌ಗೆ ಸೇರುತ್ತೇನೆ. ಯಾರು ಬ್ಯಾಕ್‌ವರ್ಡ್‌ಕ್ಲಾಸ್ ಅಲ್ಲ, ಯಾರು ಇದ್ದಾರೆ ಎನ್ನುವುದು ಎಲ್ಲರಿಗೂ ಗೊತ್ತಿದ್ದ ವಿಚಾರ. ಆದರೆ ಇವತ್ತು ದೇಶಪಾಂಡೆ ಕಮ್ಯುನಿಟಿಗೆ ಸೇರಿದವರೇ ಬ್ಯಾಕ್ವರ್ಡ್ ಕ್ಲಾಸ್ ಸರ್ಟಿಫಿಕೇಟ್ ತಂದು ಸ್ಪರ್ಧೆಗೆ ನಿಂತಿದ್ದಾರೆ. ಸ್ವಲ್ಪ ಕೇಳಿ. ನಿಮ್ಮ ಪರವಾಗಿ ಎಂದು ಅಲ್ಲ. ಯಾವಾಗಲೂ ನಾನು ನಿಮ್ಮ ಪರವಾಗಿ ಹೇಳುವುದಿಲ್ಲ. ನಿಮ್ಮ ವಿಚಾರ ಏನಾಗಿದೆ? ಇನ್ಕಮ್ ಸರ್ಟಿಫಿಕೇಟ್ ಕೊಡುವಾಗ ಅಧಿಕಾರಿಗಳು ಆಸ್ತಿಪಾಸ್ತಿ ವಗೈರೆ ಸ್ವಲ್ಪ ನೋಡಬೇಕಾಗಿತ್ತು. ಅದನ್ನು ನೋಡಿಲ್ಲ. ಅದನ್ನು ನೋಡಿದ್ದರೆ ಸರ್ಕಾರಕ್ಕೆ ಈ ರೀತಿ ವಿರೋಧ ಪಕ್ಷದವರು ಹೇಳುವ ಪರಿಸ್ಥಿತಿ ಬರುತ್ತಾ ಇರಲಿಲ್ಲ. ಆದರೆ ಸರ್ಕಾರದ ಮಂತ್ರಿಗಳು ತಹಶೀಲ್ದಾರರ ಬುಡಕ್ಕೆ ಹೋಗಿ ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ನೀವು ಸರ್ಕಾರಕ್ಕೆ ಸಹಾಯ ಮಾಡಿ. ಅಂತಹ ಕೇಸುಗಳು ಇದ್ದರೆ ಹೇಳಿ.

ಉದಾಹರಣೆಗೆ ನಾನು ಬೇಕಾದರೆ ಹೇಳುತ್ತೇನೆ. ನಿಮ್ಮ ಪಕ್ಷದವರೇ ಮಾಡಿದ್ದಾರೆ. ಅಂತಹ ಎರಡು ಕೇಸ್ಗಳನ್ನು ಹೇಳಲೇ? ಹೇಳುವುದಕ್ಕಾಗುತ್ತದೆಯೇ? ಅದನ್ನು ಪೊಲಿಟಿಕಲೈಸ್ ಮಾಡಬಾರದು ಎಂದು ವಿಚಾರ ಮಾಡಿದ್ದೇನೆ. ಈಗ ಏನಾದರೂ ಅಲ್ಲಿ ತಪ್ಪುಗಳು ಆಗಿದ್ದರೆ ಒಟ್ಟಾರೆ ಮಂತ್ರಿಮಂಡಲದ ಎಲ್ಲಾ ಸದಸ್ಯರು ಸೇರಿ ತಪ್ಪು ಮಾಡಿದ್ದಾರೆಂದಾಗುತ್ತದೆಯೇ? ಮಾನ್ಯ ಚಂದ್ರೇಗೌಡರು ಮಾತನಾಡುತ್ತಾ ಎಲ್ಲಾ ಶಾಸಕರು ಎಂದು ಎಂತಹದ್ದೋ ಶಬ್ದ ಬಳಕೆ ಮಾಡಿದರು. ನಾವೇ ತಹಸೀಲ್ದಾರರಿಗೆ ಶಾಸಕರೆಲ್ಲಾ ಹೇಳಿ ಮಾಡಿಸಿದ ಹಾಗೆ ಶಾಸಕರು ಎಲ್ಲಾ ದಬ್ಬಾಳಿಕೆ ಮಾಡಿದ್ದಾರೆ ಎಂದು ಹೇಳಿದ್ದಾರೆ. ಹಾಗೆ ಅವರು ಹೇಳಬಾರದು. ತಮಗೆ ಅನುಭವ ಆಗಿದೆ. ತಮ್ಮ ಕಾಲದಲ್ಲಿ ಏನೇನಾಗಿದೆ ಎಂದು ಸ್ವಲ್ಪ ನೋಡಿ. ನಿಮ್ಮ ಕಾಲದಲ್ಲಿ ಇದ್ದ ಹಾಗೆ ನಾವು ಇರಬೇಕೆಂದು ಅಲ್ಲ. ಅದು ಬೇರೆ ಮಾತು. ತಪ್ಪು ಆಗಿದೆ ಎಂದು ಮುಚ್ಚು ಮರೆ ಇಲ್ಲ. ವೈಯುಕ್ತಿಕವಾಗಿ ಹೇಳುವುದಾದರೆ ಒಪ್ಪಿಕೊಳ್ಳುತ್ತೇನೆ. ಆದರೆ ಅಂತಹದ್ದನ್ನು ನೀವೂ ನಾವೂ ಸೇರಿ ಕೇರ್ಫುಲ್ ಆಗಿ ಮಾಡಬೇಕು. ಅಂತಹದ್ದು ಹುಡುಕಿಸಿ ನೋಡೋಣ. ಯಾರು ಯಾರಿಗೆ ಇನ್ಕಮ್ ಸರ್ಟಿಫಿಕೇಟ್ ಕೊಟ್ಟಿದ್ದಾರೋ ಅಂತಹವರ ಇನ್ಕಮ್ ಸರ್ಟಿಫಿಕೇಟ್ ಪರಿಷ್ಕೆ ಮಾಡಿಸಿ. ಎಲ್ಲರದ್ದೂ ತರಿಸಿ ನೋಡಿ. ಬ್ಯಾಕ್ವರ್ಡ್ ಕ್ಲಾಸ್ ಎಂದು ಸರ್ಟಿಫಿಕೇಟ್ ಕೊಟ್ಟು ಯಾರು ಯಾರು ಪ್ರಧಾನರಾಗಿದ್ದಾರೆ ಅವರ ಸರ್ಟಿಫಿಕೇಟ್ ಸ್ಕ್ರೂಟಿನಿ ಮಾಡಲು ಸರ್ಕ್ಯುಲರ್ ಹೊರಡಿಸಿ. ಆಗ ಏನಾಗುತ್ತದೋ ನೋಡೋಣ.

ಶ್ರೀ ಆರ್.ಎಲ್. ಜಾಲಪ್ಪ: ಮಾನ್ಯ ನಾಯಕ್ ಅವರ ಬುದ್ಧಿವಾದಗಳಿಗೆ ಬಹಳ ವಂದನೆಗಳು. ನಿಮ್ಮ ಪರವಾಗಿ ಮಾತನಾಡಿ. ದಯಮಾಡಿ ನಮ್ಮ ಪರವಾಗಿ ಮಾತನಾಡಬೇಡಿ. ನಿಮ್ಮನ್ನು ಎಲ್ಲಿ ಹೆಗಲಿಗೆ ಎತ್ತಿ ತಿರುಗೋದು ನಾವು. ಈಗ ಅವರವರದ್ದು ಅನುಭವಿಸಿದರೆ ಸಾಕಾಗಿದೆ. ನೀವು ಎಲ್ಲೆಲ್ಲಿ ಯಾರ ಯಾರ ಪರವಾಗಿ ಮಾತನಾಡುತ್ತೀರೋ ಅದು ನಿಮಗೇ ಗೊತ್ತು. ಅದು ನಮಗೆ ಬೇಡ.

ಶ್ರೀ ಆರ್.ಎನ್. ನಾಯಕ್: ನಾವು ಅಲ್ಲಿ ಕುಳಿತಿದ್ದೆವು. ನಾನು ಅಲ್ಲಿ ಕುಳಿತಿದ್ದರೆ ಸರಿಯಾಗಿ ಮಾತನಾಡುತ್ತಾ ಇದ್ದೆ ಕೆಲವು ವಿಚಾರ. ನಾವು ಅಲ್ಲಿ ಇದ್ದಾಗ ಏನು ಕೆಲಸ ಮಾಡಿದೆವೋ ಅದನ್ನು ನಿಮಗೆ ಮಾಡಲು ಬರಲೇ ಇಲ್ಲ. ಹಾಗಾಗಿ ನಮ್ಮನ್ನು ಮತ್ತೊಂದು ಸಾರಿ ಇಲ್ಲಿ ತರುತ್ತೀರಿ ಈಗ.

ಶ್ರೀ ಆರ್.ಎಲ್. ಜಾಲಪ್ಪ: ನಾನು ಒಬ್ಬ ಹಿಂದುಳಿದ ವರ್ಗದಿಂದ ಬಂದಿದ್ದೇನೆ. ಹಿಂದುಳಿದ ವರ್ಗದವರ ಮೀಸಲಾತಿ ಬಗ್ಗೆ, ಮಹಿಳೆಯರಿಗೆ ಸ್ಥಾನ ಮೀಸಲಾತಿ ಇಡುವ ಬಗ್ಗೆ ರಾಜ್ಯಾಂಗ ತಿದ್ದುಪಡಿ ತಂದು ಅವರ ಕೈಗೆ ಅಧಿಕಾರ ಕೊಡಬೇಕಾಗಿದೆ. ಇವತ್ತು ಏನು ಮೀಸಲಾತಿ ತಂದಿದ್ದೇವೆ ಅದರ ಸಾಧನೆ ಆಗಿದೆಯೇ? ಅವರ ಉದ್ದೇಶ ಸಾಧನೆ ಆಗಿದೆಯೇ? ದಯವಿಟ್ಟು ಅದನ್ನು ಗಮನಿಸಬೇಕು. ಮಹಿಳೆಯರಿಗೆ ಸರಿ. ಅದರಲ್ಲೂ ಹಿಂದುಳಿದ ವರ್ಗದವರ ಸರ್ಟಿಫಿಕೇಟ್ ವಿಚಾರದಲ್ಲಿ ಬಹಳ ವ್ಯತ್ಯಾಸ ಆಗಿದೆ. ವಿಚಾರ ಪರಿಶಿಷ್ಟ ಜಾತಿ ಹಾಗೂ ಪಂಗಡದವರ ಬಗ್ಗೆ ಬಂದಾಗ ನನಗೆ ಬಹಳ ಸಂತೋಷ. ಯಾರು ತಮ್ಮ ಜೀವಮಾನದಲ್ಲೇ ಸದಸ್ಯರಾಗುವುದಕ್ಕೆ ಯೋಚನೆ ಮಾಡುವುದಕ್ಕಾಗುತ್ತಾ ಇರಲಿಲ್ಲವೋ, ಅಧ್ಯಕ್ಷರು ಉಪಾಧ್ಯಕ್ಷರಾಗಲು ಯೋಚನೆ ಮಾಡುವುದಕ್ಕೆ ಸಾಧ್ಯವಿರಲಿಲ್ಲವೋ ಅಂತಹವರು ಇವತ್ತು ಅಧ್ಯಕ್ಷರು, ಉಪಾಧ್ಯಕ್ಷರು ಆಗಿದ್ದಾರೆ. ಬಹಳ ಸಂತೋಷ. ನಾವು ಈ ಬಗ್ಗೆ ಹಿಂದೆ ಹೋಗುವುದಿಲ್ಲ. ಮೀಸಲಾತಿ ಇರಬೇಕು ಎಂದು ಹೇಳಿ ನಾವು ಕೇಂದ್ರದಲ್ಲಿ ಅಧಿಕಾರವನ್ನು ಕಳೆದುಕೊಂಡವರು. ತಾವು ಇದನ್ನು ಜ್ಞಾಪಕ ಇಟ್ಟುಕೊಳ್ಳಬೇಕು. ಮೀಸಲಾತಿಗೆ ನಾವು ಯಾರೂ ವಿರೋಧ ಅಲ್ಲ. ಆದರೆ ಅದಕ್ಕೋಸ್ಕರ ತಾವು ಅನುಸರಿಸುತ್ತಿರುವ ಮೆಥಡ್ ಏನು, ಆದರಿಂದ ಏನು ಸಾಧನೆ ಆಯಿತು, ಯಾರಿಗೆ ಫಲ ಹೋಗಬೇಕೋ ಅದು ಅವರಿಗೆ ಹೋಗಿದೆಯೇ? ಅದಕ್ಕೋಸ್ಕರ ನಾನು ಇನ್ಕಮ್ ಸರ್ಟಿಫಿಕೇಟ್

ಅದು ಫ್ರಾಡ್ ಎಂದು ಹೇಳಿದ್ದೇನೆ. ನನ್ನದೇ ಒಂದು ಪಂಚಾಯಿತಿ ಉದಾಹರಣೆ ಕೊಡುತ್ತೇನೆ. ಕಾಡನೂರು ಪಂಚಾಯಿತಿಗೆ ಎಸ್ಟಿ ಅಭ್ಯರ್ಥಿಗಳು ಯಾರೂ ಮೊದಲು ಅರ್ಜಿ ಹಾಕಿರಲಿಲ್ಲ. ಅಲ್ಲಿ 2-3 ಕುಟುಂಬದವರು ಇದ್ದು ಯಾರೂ ಮುಂದೆ ಬರಲಿಲ್ಲ. ಆಮೇಲೆ ಎಲೆಕ್ಷನ್ ಆಯಿತು. ಇನ್ನೊಂದು ಸಾರಿ ಅದೇ ಸೀಟ್ಗೆ ಎಲೆಕ್ಷನ್ ಆಯಿತು. ಒಬ್ಬ ಎಸ್ಸಿ ಪಂಗಡದವನು ಎಸ್ಟಿ ಎಂದು ಸರ್ಟಿಫಿಕೇಟ್ ತಂದರು. ಅದನ್ನು ತಹಶೀಲ್ದಾರರು ಕೊಟ್ಟರು. ಏಕೆ ಹೀಗೆ ಆಯಿತು ಎಂದು ಕೇಳಿದಾಗ ಕಡೆ ಘಳಿಗೆಯಲ್ಲಿ ಗೊತ್ತಾಯಿತು, ಏನೂ ಮಾಡುವುದಕ್ಕೆ ಆಗಲಿಲ್ಲ ಎಂದರು. ಆ ನಂತರ ಜಿಲ್ಲಾಧಿಕಾರಿಗಳ ಹತ್ತಿರ ಹೋಗಿ ತಿಳಿಸಲಾಗಿ, ಈ ರೀತಿ ಎಸ್ಸಿ ಅವರಿಗೆ ಎಸ್ಟಿ ಎಂದು ಕೊಟ್ಟಿದ್ದುದು ಸರಿ ಅಲ್ಲ ಎಂದರೂ ಜಿಲ್ಲಾಧಿಕಾರಿಗಳು ಏನೂ ಮಾಡುವುದಕ್ಕೆ ಆಗಲಿಲ್ಲ. ವಿಚಾರಿಸುತ್ತೇವೆ ಎಂದು ಹೇಳಿದರು. ಆ ಬಗ್ಗೆ ವಿಚಾರ ಮಾಡಿಲ್ಲ. ಆ ನಂತರ ಚುನಾವಣೆ ಆಯಿತು. ಅಲ್ಲಿ ಸರಿಸಮ ವೋಟ್ಸ್ ಬಂದವು. ಆಮೇಲೆ ಡ್ರಾ ಎತ್ತಿದರು. ಕಾಂಗ್ರೆಸ್ನವರು ಬಂದರು. ಸಂತೋಷ. ಆದರೆ ಎಸ್ಸಿ ಅವರಿಗೆ ಎಸ್ಟಿ ಸರ್ಟಿಫಿಕೇಟ್ ಕೊಟ್ಟವರ ಮೇಲೆ ಏನು ಕ್ರಮ? ಈ ಬಗ್ಗೆ ಅಂಕುಶ ಇದೆಯೇ? ಡಿಸಿ ಅವರೂ ಕೈ ಎತ್ತುತ್ತಾರೆ. ಎಲೆಕ್ಷನ್ ಕಮಿಷನ್ ಕೂಡ ಕೈ ಎತ್ತುತ್ತಾರೆ. ಕೋರ್ಟಿಗೆ ಹೋದರೆ, ಎಲೆಕ್ಷನ್ ಪ್ರೋಸಸ್ ನಡೆಯುತ್ತಿದೆಯಾದ್ದರಿಂದ ಏನು ಮಾಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಾರೆ. ಇಂಟರ್ಫಿಯರ್ ಆಗುವುದಿಲ್ಲ ಎಂದು ಕೋರ್ಟಿನವರು ಹೇಳುತ್ತಾರೆ. ಈ ಅನ್ಯಾಯವನ್ನು ಸರಿ ಮಾಡುವವರು ಯಾರು? ಇನ್ಫ್ಲುಯೆನ್ಸ್ ಮೇಲೆ ಸರ್ಟಿಫಿಕೇಟ್ ಕೊಟ್ಟರು. ಮಾಡಿದವರಿಗೆ ಗೊತ್ತು ಇದು. ಇನ್ನೊಂದು ಅನಾಹುತದ ಬಗ್ಗೆ ಹೇಳುತ್ತೇನೆ. ಹಾಡೋನಹಳ್ಳಿ ಪಂಚಾಯಿತಿಯಲ್ಲಿ ನಮ್ಮವರು 6 ಜನ, ಅವರ ಕಡೆಯವರು 6 ಜನ ಬಂದರು. ಅಲ್ಲಿ ರಿಟರ್ನಿಂಗ್ ಆಫೀಸರ್ ಲಾಟರಿ ಡ್ರಾ ಮಾಡಿದರು. ಅದು ಹೇಗೆ? ಅಲ್ಲೇ ಪಕ್ಕದಲ್ಲಿ ಒಂದು ಶಾಲೆ ಇತ್ತು. ಆ ಶಾಲೆಯಿಂದ 6 ವರ್ಷದ ಒಬ್ಬ ಹುಡುಗನನ್ನು ಕರೆದು ಆತನಿಂದ ಚೀಟಿ ಎತ್ತಿಸಿದರು. ಅದರಲ್ಲಿ ನಾವು ಗೆದ್ದೆವು.

4.40 ಪಿ.ಎಂ.

ಆದರೆ, ನಾವು ಗೆದ್ದ ಮೇಲೆ ನಮಗೆ ಸಿಕ್ಕಿದ ಟ್ರೀಟ್ಮೆಂಟ್ ಏನು? ಕಾರದಪುಡಿ ಕಣ್ಣಿಗೆ ಹಾಕಿ, ದೊಣ್ಣೆ ತೆಗೆದುಕೊಂಡು ಹೊಡೆದು, ಒಬ್ಬ ಕಾಲು ಮುರಿದುಕೊಂಡು ಆಸ್ಪತ್ರೆಯಲ್ಲಿ ಬಿದ್ದಿದ್ದಾನೆ. ನಾನಾ ಜನ ಏಟು ತಿಂದಿದ್ದಾರೆ, ಪೋಲೀಸಿನವರು ನೋಡುತ್ತಾ ನಿಂತಿದ್ದರು. ಏಕೆ, ಹೀಗಾಯಿತು? ನಾನು 11ನೇ ತಾರೀಖು ಮದ್ರಾಸಿಗೆ ಹೋಗುವಾಗ, ಎಲ್ಲಾ ಪೋಲೀಸ್ ಅಧಿಕಾರಿಗಳಿಗೆ ಹೇಳಿದ್ದೇನೆ. ಕಂಟೆಸ್ಟ್ ಮಾಡಿರುವವನು ರೌಡಿ, ಅವನು ಸೋತರೂ ನಮ್ಮವರನ್ನು ಹೊಡಿಸುತ್ತಾನೆ, ಗೆದ್ದರೂ ನಮ್ಮವರನ್ನು ಹೊಡಿಸುತ್ತಾನೆ, ಹುಷಾರಾಗಿರಿ ಎಂದು ಹೇಳಿದ್ದೇನೆ. ಇಷ್ಟು ಹೇಳಿದ ಮೇಲೂ ಕೂಡ, ಅವರು ಸುಮ್ಮನೇ ಆಗಬೇಕಾದರೆ, ಇದು ರಾಜಕೀಯ ಹಸ್ತಕ್ಷೇಪವಲ್ಲವೇ? ಇದಕ್ಕೆ ನೀವು ಏನೆಂದು ಹೇಳುತ್ತೀರಿ? ಆಮೇಲೆ, ನಾನು ಮದ್ರಾಸಿನಿಂದ ವಾಪಸ್ಸ್ ಬಂದೂವರೆ, ಎರಡು ಗಂಟೆಗೆ ಬಂದಮೇಲೆ ಈ ವಿಷಯ ಗೊತ್ತಾದಮೇಲೆ, ನಾನು ಎಸ್.ಪಿ. ಯವರ ಹತ್ತಿರ ಮಾತಾಡಿದಾಗ, ಮತ್ತು ಡಿ.ಜಿ.ಯವರ ಹತ್ತಿರ ಮಾತಾಡಿದಾಗ, ಅವರು ಆಗ ಅಡಿಷನಲ್ ಎಸ್.ಪಿ.ಯವರನ್ನು ಅಲ್ಲಿಗೆ ಕಳುಹಿಸಿ, ಅದನ್ನು ತಹಬಂದಿಗೆ ತಂದಿದ್ದು ಅಲ್ಲದೆ, 3 ಜನರನ್ನು ಅರೆಸ್ಟ್ ಮಾಡಿದರು. ಇನ್ನು 20 ಜನ ಸಿಕ್ಕಲಿಲ್ಲ. ಇದು ರಾಜಕೀಯ ಹಸ್ತಕ್ಷೇಪ ಅಲ್ಲವೇ? ಅವರು ಏಕೆ ಸಿಕ್ಕಲಿಲ್ಲ? ಆಮೇಲೆ ಇನ್ನೊಂದು ಭಕ್ತರಹಳ್ಳಿ ವಿಷಯ. ಇಲ್ಲಿ ನಮ್ಮದು 8, ಅವರದ್ದು 5 ಸ್ವಾಮಿ. ಅತ್ಯಂತ ಹಿಂದುಳಿದ ಪ್ರದೇಶ. ನಮ್ಮ ತಾಲ್ಲೂಕಿನ ವಿಚಾರ, ಮಾನ್ಯ ಅಂಜನಮೂರ್ತಿಯವರಿಗೆ ಗೊತ್ತಿದೆ. ಸಾಸಲೋಬಳಿ, ಅತ್ಯಂತ ಹಿಂದುಳಿದ ಪ್ರದೇಶ, ಆರ್ಥಿಕವಾಗಿ ಸಾಮಾಜಿಕವಾಗಿ

ಯಾವುದರಲ್ಲೂ ಅವರು ಇಲ್ಲ. ಈಗ ಒಂದೆರಡು ಹೈಸ್ಕೂಲು ಮಾಡಿ, 7-8 ವರ್ಷದಿಂದ ಸ್ವಲ್ಪ ಸ್ವಲ್ಪ ಅವರಿಗೆ ಎಜುಕೇಷನ್ ಸಿಗುತ್ತಾ ಇದೆ. ಬಹಳ ಹಿಂದುಳಿದ ಪ್ರದೇಶ. ಅಲ್ಲಿ ಗೊಲ್ಲರು ಜಾಸ್ತಿ. ಇರತಕ್ಕ ತಾಲ್ಲೂಕು. ಮತ್ತು ಷೆಡ್ಯೂಲ್ಡ್ ಕ್ಯಾಸ್ಟವರು, ನಾಯಕರು ಆ ಹೋಬಳಿಯಲ್ಲಿದ್ದಾರೆ. ಒಬ್ಬರು ಷೆಡ್ಯೂಲ್ಡ್ ಟ್ರೈಬ್, ಇನ್ನು 3 ಜನ ಹೆಂಗಸರಿಗೆ ರಿಸರ್ವೇಷನ್. ಅದೇ ಮಜರೆ ಹೋಬಳಿ, 5 ಪಂಚಾಯ್ತಿಯೊಳಗೆ, ಒಬ್ಬರು ಮಹಿಳೆ, ಇನ್ನು 4 ಜನ ಜನರಲ್. ಬಹಳ ಫಾರ್ವರ್ಡ್ ಏರಿಯಾ, ಎಜುಕೇಷನ್ ಜಾಸ್ತಿಯಾಗಿದೆ. ಇದು ಹೇಗಾಯಿತು. ಮಂತ್ರಿಗಳಿಗೆ, ನಾನು ಒಂದು ಕಾಗದ ಬರೆದೆ. ಈ ತರಹ ಆಗಿದೆ, ಸ್ವಲ್ಪ ದಯವಿಟ್ಟು ನೋಡಿ, ಇದು ಬಹಳ ಬ್ಯಾಕ್ವರ್ಡ್ ಏರಿಯಾ, ಮಹಿಳೆಯರು ಬಂದು ಏನು ಮಾಡುವುದಕ್ಕಾಗುತ್ತದೆ. ತಾವೇನೂ ಇದ್ಕಕೆ ಉತ್ತರ ಕೊಡಲಿಲ್ಲ, ದಯವಿಟ್ಟು ಕ್ಷಮಿಸಿ. ಮತ್ತು ಕಾರ್ಯದರ್ಶಿಯವರಿಗೂ ನಾನು ಒಂದು ಕಾಗದ ಬರೆದಿದ್ದೇನೆ. ಅಲ್ಲಿ ಏನಾಯಿತು ನಮ್ಮ ಪಕ್ಷದ್ದು 8, ನಿಮ್ಮ ಪಕ್ಷದ್ದು 5. ಇದರಲ್ಲಿ, ಮೊದಲು ಜಯಲಕ್ಷ್ಮಮ್ಮ ಎಂದು ಒಬ್ಬ ಎಸ್.ಟಿ. ಯವರನ್ನು ಅಪಹರಣ ಮಾಡಿದರು. ಇದಾದಮೇಲೆ, ಅಲ್ಲಿಗೇನಾಯಿತು. 7,6 ಆಯಿತು. ಚುನಾವಣೆ ದಿವಸ, ಪೋಲಿಂಗ್ ಸ್ಟೇಷನ್ಗೆ ಹೋಗುತ್ತಿದ್ದಾರೆ, ಕಾಡತಿಪುರ ಗ್ರಾಮದ ಒಟ್ಟು ಹೆಣ್ಣುಮಗಳು, ಹರಿಜನ ಹೆಣ್ಣುಮಗಳು ನಮ್ಮ ಪರವಾಗಿ ಗೆದ್ದು ಓಟು ಮಾಡುವುದಕ್ಕೆ ಹೋಗುತ್ತಿದ್ದಾಗ, ಪುಂಡರು ದಾರಿಯಲ್ಲಿ ಅಡ್ಡ ಹಾಕಿ, ಆಕೆಯ ಸೀರೆಯನ್ನು ಕಿತ್ತುಹಾಕಿ, ಕುಪ್ಪಸ ಎಲ್ಲಾ ಹರಿದುಹಾಕಿ, ಹರಿದ ಲಂಗದೊಳಗೆ ಪೋಲಿಂಗ್ ಸ್ಟೇಷನ್ಗೆ ಓಡಿಹೋದಳು. ಆಗ, ಅಲ್ಲಿದ್ದ ಗಂಡಸೊಬ್ಬರು, ಆಕೆಗೆ ಕಟ್ಟಿಕೊಳ್ಳುವುದಕ್ಕೆ ಪಂಚೆ ಬಿಚ್ಚಿಕೊಟ್ಟ. ಆಮೇಲೆ ಹೊರಗಡೆ ಇಬ್ಬರು ಪೋಲೀಸಿನವರು ಇದ್ದರು. ಹರಿದುಹೋಗಿರುವ ಸೀರೆಯನ್ನು ತಂದು ಕೊಟ್ಟರು. ನಂತರ ಓಟು ಮಾಡಿದರು, ಬಂದರು. ಇದೇನಾಗುತ್ತಾ ಇದೆ. ಇಷ್ಟು ಧೈರ್ಯ ಬರಬೇಕಾದರೆ ಯಾರು ಕಾರಣ? ನಿಮ್ಮ ರಾಜಕೀಯ ಹಸ್ತಕ್ಷೇಪವೇ ಇದಕ್ಕೆ ಕಾರಣ. ಅದು ಕಾಡತಿಪುರ ಬಹಳ ರಿಮೋಟ್ವಿಲೇಜ್. ನನಗಂತೂ ಆಶ್ಚರ್ಯವಾಯಿತು. ಈ ಊರಿನಲ್ಲಿಯೂ ರೌಡಿಗಳು ಬಂದರೇ ಎಂದು. ಏಕೆಂದರೆ, ಕಾನೂನಿನ ಕೈ ಅಷ್ಟು ದೂರ ಹೋಗುವುದಿಲ್ಲ. ಇದು ಬಹಳ ಅನ್ಯಾಯ. ಇದರ ಬಗ್ಗೆ ತಾವು ದಯವಿಟ್ಟು ಏನು ಮಾಡುತ್ತೀರಿ. ರಂಗನಾಥ್ರವರೇ, ತಾವು ಇರಲಿಲ್ಲ. ನಮ್ಮ ತಾಲ್ಲೂಕಿನಲ್ಲಿ ಭಕ್ತರಹಳ್ಳಿ ಎಂದು ಬಹಳ ಹಿಂದುಳಿದ ಪ್ರದೇಶ. ಅಲ್ಲಿ ನಮ್ಮ ಪಕ್ಷದವರು 8 ಜನ ಗೆದ್ದಿದ್ದರು, ನಿಮ್ಮ ಪಕ್ಷದವರು 5 ಜನ ಗೆದ್ದಿದ್ದರು. ಪ್ರೆಸಿಡೆಂಟ್ ಚುನಾವಣೆಗೆ ಮೂರು ದಿವಸ ಮೊದಲು, ಅಲ್ಲಿ ನಿಮ್ಮ ಫೋಟೋಗಳೂ ಇದ್ದವು. ನಮ್ಮ ಫೋಟೋಗಳೂ ಇದ್ದವು. ಕ್ಯಾಂಡಿಡೇಟ್ ಹಾಕಲಿಲ್ಲ ಅಷ್ಟೆ. ಸಿಂಬಲ್ ಕೊಟ್ಟಿರಲಿಲ್ಲ ಅಷ್ಟೆ. ಕಂಟೆಸ್ಟ್ ಮಾಡಿದ್ದು ಪಕ್ಷದವರೇ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಪಕ್ಷದ ಕ್ಯಾಂಡಿಡೇಟ್ ಇಲ್ಲದೇ ಇದ್ದರೆ, ನಿಮ್ಮ ಪಾರ್ಟಿಯವರು ಎಂಭತ್ತು ಪರ್ಸೆಂಟ್ ಬಂದಿದ್ದಾರೆಂದು ಮುಖ್ಯಮಂತ್ರಿಯವರೇ ಹೇಳಿದ್ದಾರೆ. ಯಾವ ರೀತಿ ಹೇಳಿದರು?

ಶ್ರೀ ಆರ್.ಎಲ್. ಜಾಲಪ್ಪ : ಕಾಡತಿಪ್ಪೂರು ಎಂದು ಒಂದು ಗ್ರಾಮ; ಮತ್ತು ಒಂದು ಪಂಚಾಯ್ತಿ. ಇಲ್ಲಿ 8 ಜನ ನಮ್ಮವರು ಗೆದ್ದರು, 5 ಜನ ನಿಮ್ಮವರು ಗೆದ್ದರು. ಚುನಾವಣೆ ಮೂರು ದಿವಸ ಇದ್ದಾಗ, ಗೌರಮ್ಮ ಎಂಬ ಎಸ್.ಟಿ. ಹೆಣ್ಣುಮಗಳನ್ನು ಅವರು ಕರೆದುಕೊಂಡು ಹೊರಟುಹೋದರು. ಅಲ್ಲಿಗೆ 7,6 ಆಯಿತು. ಇದಾದಮೇಲೆ ಏನಾಯಿತು. ಒಬ್ಬ ಹರಿಜನ ಮಹಿಳೆಯನ್ನು, ನಾವು ನಿನಗೆ ದುಡ್ಡು ಕೊಡುತ್ತೇವೆ, ನೀನು ಓಟು ಮಾಡುವುದಕ್ಕೆ ಬರಬೇಡ. ಅಥವಾ ಓಟು ನಮ್ಮ ಕಡೆ ಮಾಡು ಎಂದು ಹೇಳಿದರು. ಆಕೆ ಒಪ್ಪಲಿಲ್ಲ, ಅವರು ನಮ್ಮ ಕಡೆಯಿಂದ ಎಲೆಕ್ಟ್ ಆದವರು. ಪೋಲಿಂಗ್ ಭೂತ್ಗೆ ಹೋಗುವಾಗ, ದಾರಿಯಲ್ಲಿ ಅಡ್ಡ ಹಾಕಿ,

ಕಂಪ್ಲೀಟ್ ಸೀರೆ ಬಿಚ್ಚಿಹಾಕಿ, ಕುಪ್ಪಸ ಎಲ್ಲಾ ಹರಿದುಹಾಕಿ, ಗಲಾಟೆ ಮಾಡಿದರು. ಆಕೆ ಥಡ ಥಡ ಪೋಲಿಂಗ್ ಸ್ಟೇಷನ ಓಡಿ ಹೋದರು. ಅಲ್ಲಿ ಒಬ್ಬ ಗಂಡಸು ಪಂಚೆ ಬಿಚ್ಚಿ, ಆಕೆಗೆ ಉಟ್ಟುಕೊಳ್ಳಲು ಕೊಟ್ಟರು. ಆದಾದ 15 ನಿಮಿಷವಾದ ಮೇಲೆ, ಪೋಲೀಸ್ನವರು, ಹೊರಗಡೆ ಹಾಕಿದ್ದ ಹರಿದುಹೋದ ಸೀರೆಯನ್ನು ತಂದುಕೊಟ್ಟರು. ಅನಂತರ ಆಕೆ ಓಟು ಮಾಡಿದರು. ಈ ತರಹ ಗೂಂಡಾಗಿರಿ ಆದರೆ, ನೀವು ಪಾರ್ಟಿ ಸಿಂಬಲ್ಮೇಲೆ ಎಲೆಕ್ಷ್ ಮಾಡಿದ್ದಿದ್ದರೆ, ಅವತ್ತಿನ ದಿವಸ ಈ ಪರಿಸ್ಥಿತಿ ಬರುತ್ತಿತ್ತೇನು? ಬರುತ್ತಿರಲಿಲ್ಲ. 1986ರಲ್ಲಿ ಮೆಂಬರ್ಶಿಪ್ ಚುನಾವಣೆಯಾದಾಗ ಸ್ವಲ್ಪ ಗಲಾಟೆಗಳಾಗಿವೆ, ಇಲ್ಲವೆಂದು ಹೇಳುವುದಿಲ್ಲ. ಆಗ ರಾಜ್ಯದಲ್ಲಿ ಇಬ್ಬರು ಸತ್ತಿದ್ದಾರೆ. ಆದರೆ, ಈ ಬಾರಿ ಆಗಿದ್ದೇನು?

ಎಲ್ಲಾ ಡಿಫೆಕ್ಷನ್. ಹೆಚ್ಚಿಗೆ ಬಲಿಯಾದವರು ಹೆಣ್ಣುಮಕ್ಕಳು ಮತ್ತು ಪರಿಶಿಷ್ಟ ವರ್ಗದವರೇ. ಅವರನ್ನು ಕರೆದುಕೊಂಡುಹೋಗಿ, ಅವರಿಗೆ ಕುಡುಸಿದರು. ಒಂದು ಕಡೆ ಕುಡಿಸಿ ಸಾಯಿಸೇ ಬಿಟ್ಟಿದ್ದಾರೆ. ಚಿತ್ರದುರ್ಗ ಜಿಲ್ಲೆಯಲ್ಲಿ ಕಾಣುತ್ತದೆ, ಅದನ್ನು ನಾನು ಹೇಳುತ್ತೇನೆ. ಮೂಢಪ್ಪ ಎಂದು, ಆತನನ್ನು ಕರೆದುಕೊಂಡು ಹೋಗಿ ಜಾಸ್ತಿ ಕುಡಿಸಿ ಆತ ಸತ್ತೇ ಹೋದ. ಹೊಸದುರ್ಗ ತಾಲ್ಲೂಕಿನಲ್ಲಿ ಬುಕ್ಕೆರೆಯೊಳಗೆ, ಷೆಡ್ಯೂಲ್ಡ್ ಕ್ಯಾಸ್ಟ್ ಮೆಂಬರ್ ಮೂಢಪ್ಪ ಎಂಬುವವನಿಗೆ ಹೆಚ್ಚಿಗೆ ಕುಡಿಸಿ, ಆತ ಸತ್ತೇಹೋದ. ಇದರ ಬಗ್ಗೆ ಪ್ರೆಸ್ ರಿಪೋರ್ಟ್ ಕೂಡ ಬಂದಿದೆ. ಇದನ್ನು ಎಷ್ಟರಮಟ್ಟಿಗೆ ಫೇರ್ ಆಗಿ ಈ ಚುನಾವಣೆ ನಡೆಯಿತು ಎಂಬುದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಹೇಳುತ್ತಿದ್ದೇನೆ. ನನ್ನ ಪಕ್ಕದ ತಾಲ್ಲೂಕು ದೇವನಹಳ್ಳಿ. ಕಾರಹಳ್ಳಿ ಎಂಬ ಒಂದು ಪಂಚಾಯ್ತಿ. ಅದರಲ್ಲಿ ಏನಾಯಿತು, 9 ಜನ ನಾವು, 5 ಜನ ನಿಮ್ಮ ಪಕ್ಷದವರು ಗೆದ್ದರು. ಆ ಊರಿನಲ್ಲಿ ಪುಣ್ಯಾತ್ಮರು ಮೂರು ಜನರನ್ನು ಕದ್ದುಕೊಂಡು ಹೋದರು. ಒಬ್ಬ ಬ್ರಾಹ್ಮಣರ ಹೆಂಗಸು ಮದುವೆಗೆ ಹೋಗಿದ್ದರೆ, ಅವರು ಮತ್ತು ಅವರ ಗಂಡನನ್ನು ಅಲ್ಲಿಯೇ ಕೂಡಿಸಿಕೊಂಡು ಹೊರಟು ಹೋದರು. 11 ಗಂಟೆಗೆ ಸರಿಯಾಗಿ ರಿಟರ್ನಿಂಗ್ ಆಫೀಸರ್ ಹೋದರು. ಅವರು 6 ಜನ ಹೋಗಿ ಕುಳಿತುಕೊಂಡರು, 11-15-20ರ ವರೆಗೆ ನೋಡಿದರು. ಬರಲಿಲ್ಲ. ಚುನಾವಣೆ ಆಗಿಹೋಯಿತು. ಆದಾದ ಮೇಲೆ ಅವರು ಬಂದರು. ಬರುವಾಗ ಜೊತೆಯಲ್ಲಿ ರೌಡಿಗಳನ್ನು ಕರೆದುಕೊಂಡು ಬಂದಿದ್ದರು. ಅದರಲ್ಲಿ ಇಲ್ಲಿ ಕೆಲವರನ್ನು ಚಚ್ಚಿದರು. ಆಮೇಲೆ ಇವರೂ ತಿರುಗಿ ಬಿದ್ದರು, ಕಾರನ್ನು ಕ್ರಾಷ್ ಮಾಡಿದರು. ಸ್ವಾಮಿ, ಈ ನಂಬರನ್ನು ಗುರುತುಹಾಕಿಕೊಂಡು, ಇದನ್ನು ವೆರಿಫೈ ಮಾಡಿಸಿ. ದಯವಿಟ್ಟು, ಇದರ ಡ್ರೈವರು ಯಾರು ಎಂಬುದನ್ನು ಸ್ವಲ್ಪ ನೋಡಿ. ಕೆಎಓ 5, ಎಂ 4760, ಡ್ರೈವರ್ ಮಹಮದ್ ರಫಿ. ಇದನ್ನು ವೆರಿಫೈ ಮಾಡಬೇಕು, ಇದು ಸರ್ಕಾರದ ವಾಹನವೇ.

ಶ್ರೀ ಜೆ.ಸಿ. ಮಾಧುಸ್ವಾಮಿ : ಕಂಪ್ಲೇಂಟ್ನಲ್ಲಿಯೇ ಇದೆಯಲ್ಲಾ, ಕೆಎಂಎಫ್ ಕಾರು ಹೋಗಿತ್ತು, ಕೆಎಂಎಫ್ ಕಾರನ್ನು ಕಿಡ್ನ್ಯಾಪ್ ಮಾಡಿದ್ದಾರೆ, ನಿಂತುಕೊಂಡು ಹೊಡೆದು ಹಾಕಿದ್ದಾರೆ, ಡ್ರೈವರ್ ಅರೆಸ್ಟ್ ಆಗಿದ್ದಾನೆ. ಅಂದರೆ, ಈ ದೇಶದಲ್ಲಿ ಕೆಎಂಎಫ್ ಅನ್ನು ಈ ಸ್ಥಿತಿಗೆ ತಂದಿದ್ದಾರಲ್ಲ.

ಶ್ರೀ ಆರ್.ಎಲ್. ಜಾಲಪ್ಪ: ಡ್ರೈವರನ್ನೂ ಅರೆಸ್ಟ್ ಮಾಡಲಿಲ್ಲ. ಗಾಡಿಯನ್ನು ಈಗ ರಿಪೇರಿಗೆ ಬಿಟ್ಟಿದ್ದಾರೆ. ನಮ್ಮ ಮುಖ್ಯಮಂತ್ರಿಗಳು ಹೇಳುತ್ತಾರೆ.....

ಶ್ರೀ ಮುನಿನರಸಿಂಹಯ್ಯ : ಮಾನ್ಯ ಅಧ್ಯಕ್ಷರೇ, ಮಾನ್ಯ ಹಿರಿಯ ಸದಸ್ಯರಾದ ಜಾಲಪ್ಪನವರು ಮಾತನಾಡಬೇಕಾದರೆ, ದೇವನಹಳ್ಳಿ ಕ್ಷೇತ್ರದ ಬಗ್ಗೆ ಅವರು ಮಾತನಾಡಿದ್ದಾರೆ. ಅವರಿಗೆ ಗೊತ್ತಾದ ವಿಚಾರವನ್ನು ಅವರು ಹೇಳಬೇಕಾದ್ದೇ ಮಾತನಾಡಲಿ. ದಿನಾಂಕ: 9ನೇ ತಾರೀಖು ಮೊಟ್ಟಮೊದಲನೆಯದಾಗಿ ನನ್ನ ಕ್ಷೇತ್ರದಲ್ಲಿ ಕಾರಹಳ್ಳಿ ಗ್ರಾಮಪಂಚಾಯ್ತಿಯಲ್ಲಿ ಚುನಾವಣೆ ಘೋಷಣೆಯಾಗಿತ್ತು. ಅದರ ಪ್ರಕಾರ, ಎಲ್ಲಾ ಸದಸ್ಯರಿಗೂ ಕೂಡ ನೋಟೀಸನ್ನು ಕೊಟ್ಟು 9ನೇ ತಾರೀಖು 11 ಗಂಟೆಗೆ ಹಾಜರಾಗಬೇಕೆಂದು ಸದಸ್ಯರಿಗೆ

ತಿಳಿಸಿತ್ತು. ಆದರೆ, ನಮ್ಮ ಕಡೆ 8 ಜನ ಸದಸ್ಯರು ಗೆದ್ದಿದ್ದು ನಿಜ. ಅವರ ಕಡೆ 6 ಜನ ಸದಸ್ಯರು ನಿಜ. ಅವರು, ಆ ಗ್ರಾಮದಲ್ಲಿ ಆರೇ ಜನ ಉಳಿದುಕೊಂಡು, 8 ಜನ ನಮ್ಮ ಸದಸ್ಯರು ಹೋಗಬೇಕಾದರೆ, ರಸ್ತೆಯಲ್ಲಿ ಹೆಣ್ಣುಮಕ್ಕಳನ್ನು ಅಡ್ಡ ಮಲಗಿಸಿ, ಆ ಕಾರು ಹೋದತಕ್ಷಣವೇ, ಮೂರು ಕಾರಿಗೆ ಅವರು ಜಖಂ ಮಾಡಿದರು. ನಮಗೆ ಈ ಗಲಾಟೆ ನಡೆಯುತ್ತದೆ ಎಂದು ಗೊತ್ತಿರಲಿಲ್ಲ. ಏಕೆಂದರೆ, ತಾಲ್ಲೂಕಿನ ಮೊದಲನೆಯ ದಿವಸದ ಚುನಾವಣೆ. ನಾವು ಯಾರೂ ಇದರಲ್ಲಿ ಪ್ರವೇಶವೇ ಆಗಿಲ್ಲ. ಯಾರು ಸದಸ್ಯರು ಗೆದ್ದಿದ್ದಾರೆ, ಅವರು ತಮ್ಮ ಪಾಡಿಗೆ ಚುನಾವಣೆ ಮಾಡಿಕೊಳ್ಳಲಿ, ಎಂದು ನಮ್ಮ ಪಾಡಿಗೆ ನಾವು ತಾಲ್ಲೂಕು ಕೇಂದ್ರದಲ್ಲಿ ಅಥವಾ ಬೇರೆ ಕಡೆಗಳಲ್ಲಿ ಕೆಲಸ ಮಾಡಿಕೊಂಡಿದ್ದೆವು. ಅಲ್ಲಿ, ಆ ಊರಿನವರೆಲ್ಲರೂ ಸೇರಿ, ಹೊರಗಡೆಯಿಂದ ಬರುವಂಥ 8 ಜನರನ್ನು, ಊರಿನೊಳಗೆ ಬಿಡಲಿಲ್ಲ. ಬೇಕಾದರೆ, ಸಂಬಂಧಪಟ್ಟಂಥ ಪೋಲೀಸ್ ಇಲಾಖೆಯ ರಿಪೋರ್ಟ್ ಇದೆ, ಅಲ್ಲಿ, ಅವತ್ತಿನದಿವಸ ತಹಶೀಲ್ದಾರ್‌ರವರೇ ಸ್ಥಳದಲ್ಲಿದ್ದರು. ಅವರಿಂದ ವರದಿ ಸಹಾ ಬಂದಿದೆ. ನಮ್ಮ 8 ಜನ ಸದಸ್ಯರನ್ನೂ ಕೂಡ, ಆ ಊರಿನವರೆಲ್ಲಾ ಸೇರಿ ಹೊಡೆದು, ಒಬ್ಬ ಹೆಣ್ಣುಮಗಳಿಗೆ ಕೈ ಮುರಿದಿದ್ದಾರೆ. ಮತ್ತು ಮಚ್ಚು, ದೊಣ್ಣೆಗಳಲ್ಲಿ ಹೊಡೆದು, ನಮ್ಮ ಸದಸ್ಯರೇನು ಮಾಡಿದರು. ಚುನಾವಣೆ ಇಲ್ಲದೇ ಇದ್ದರೂ ಚಿಂತೆ ಇಲ್ಲವೆಂದು, ವಾಪಸ್ಸು ಬಂದು, ದೇವನಹಳ್ಳಿಯಲ್ಲಿರತಕ್ಕ ಸರ್ಕಾರಿ ಆಸ್ಪತ್ರೆಗೆ ದಾಖಲೆಯಾಗಿ, ಅವರು ಚಿಕಿತ್ಸೆ ಪಡೆದಿರತಕ್ಕ ಎಲ್ಲಾ ದಾಖಲೆಗಳೂ ಇವೆ. ಆದರೆ, ಇವತ್ತು ಈ ರೀತಿಯಾಗಿ ನಮ್ಮ ಸದಸ್ಯರನ್ನು ಇವರು ಎತ್ತಿಕೊಂಡು ಹೋಗಿದ್ದರು. ಅವರೇ ಗೂಂಡಾಗಳನ್ನು ಕರೆದುಕೊಂಡು ಬಂದು ಇಲ್ಲಿ ಹೊಡೆಸಿದರು ಎಂಬ ಮಾತನ್ನು ಹಿರಿಯರೇನು ಹೇಳುತ್ತಿದ್ದಾರೆ, ಅದು ಸತ್ಯಕ್ಕೆ ದೂರವಾಗಿದೆ. ಇದಕ್ಕೆ ನಾನು ಈ ಸದನದಲ್ಲಿ ಒತ್ತಾಯ ಮಾಡುತ್ತೇನೆ. ಇದಕ್ಕೆ ತಾವೇನು ಸದನದ ಸಮಿತಿ ಮಾಡುತ್ತೀರಿ, ಆ ಸಮಿತಿ ಮುಖೇನ, ಅಲ್ಲಿ ನಡೆದಂಥ ಚುನಾವಣೆಯ, ಘಟನೆಗಳನ್ನೂ ಕೂಡ ನೀವು ತನಿಖೆ ಮಾಡಿಸಬೇಕು, ಅದರಲ್ಲಿ ಯಾರು ತಪ್ಪಿತಸ್ಥರಾಗಿದ್ದರೂ ಕೂಡ, ಅವರ ಮೇಲೆ ಕಾನೂ ರೀತಿ ಕ್ರಮ ತೆಗೆದುಕೊಳ್ಳುವುದಕ್ಕೆ ತಾವು ಆದೇಶ ನೀಡಬೇಕೆಂದು ಈ ಸಂದರ್ಭದಲ್ಲಿ ಮನವಿ ಮಾಡುತ್ತಿದ್ದೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಯಾರ್‍ಯಾರದು ಫೋಟೋಗ್ರಾಫ್ ಕೊಟ್ಟಿದೆ. ಪೋಲೀಸ್ ಕಂಪ್ಲೇಂಟ್ ಲಾಡ್ಜ್ ಆಗಿದೆ, ಆ ಕಾರಿನಲ್ಲಿ ಏತಕ್ಕೆ ಈ ಮೆಂಬರ್ಸ್ ಹೋಗುತ್ತಿದ್ದರು? ಕಾರು ಏಕೆ ಅಲ್ಲಿ ಜಖಂ ಆಯಿತು; ಆ ಕಾರನ್ನು ಏತಕ್ಕೆ ಅಲ್ಲಿ ಜಜ್ಜಿ ಹಾಕಿದರು ಎಂದು ಅವರು ಹೇಳಿಬಿಡಲಿ. ಸ್ವಲ್ಪ ಬರೀ ಇಷ್ಟು ಹೇಳಿಬಿಟ್ಟರೆ ಹೇಗೆ ಆಗುತ್ತದೆ? ಆ ಕಾರು ಏಕೆ ಅಲ್ಲಿ ಇತ್ತು? ಅದನ್ನು ಏಕೆ ಅಲ್ಲಿ ಜಜ್ಜಿ ಹಾಕಿದರು? ಅವರು ಏಕೆ ನಿಮ್ಮ ಕಾರು ಬಿಟ್ಟು ಹೋದರು ಅಲ್ಲಿ?

ಶ್ರೀ ಆರ್.ಎಲ್. ಜಾಲಪ್ಪ: ಸನ್ಮಾನ್ಯ ಸದಸ್ಯರು ಹೇಳಿರುವುದಕ್ಕೆ ನನ್ನ ಪೂರ್ಣ ಸಹಮತಿ ಇದೆ.

ಶ್ರೀ ಮುನಿನರಸಿಂಹಯ್ಯ: ಅವತ್ತಿನ ದಿವಸ ಹಾಲು ಉತ್ಪಾದಕರ ಸಂಘವನ್ನು ತನಿಖೆ ಮಾಡುವುದಕ್ಕೋಸ್ಕರ ಹಾಲು ಉತ್ಪಾದಕರ ಸಹಕಾರ ಸಂಘದ ನಮ್ಮ ಜಿಲ್ಲಾಧ್ಯಕ್ಷರು ಅಲ್ಲಿಗೆ ಹೋಗಿದ್ದಾರೆ. ಆ ಸಂದರ್ಭದಲ್ಲಿ ಅವರ ಮೇಲೆ ಕೂಡ ಹಲ್ಲೆ ನಡೆದಿದೆ.

ಶ್ರೀ ಆರ್.ಎಲ್. ಜಾಲಪ್ಪ: ನಾಲಿಗೆ ಮೇಲೆ ಹಿಡಿತ ಇಲ್ಲದೆ ಏನು ಬೇಕಾದರೂ ಮಾತನಾಡಬಹುದು. ನಾನು ಅದನ್ನು ಚಾಲೇಂಜ್ ಆಗಿ ತೆಗೆದುಕೊಳ್ಳುತ್ತೇನೆ.

(ಗೊಂದಲ)

ಶ್ರೀ ಮುನಿನರಸಿಂಹಯ್ಯ: ಬೆಂಗಳೂರಿನಲ್ಲಿರುವ ಹಾಲು ಉತ್ಪಾದಕರ ಸಂಘದ ಅಧ್ಯಕ್ಷರು ಅಲ್ಲಿಗೆ ಹೋಗಿದ್ದರು. ಅವತ್ತು ಗೂಂಡಾಗಳು ಅವರ ಮೇಲೆ ಹಲ್ಲೆ ಮಾಡಿದ್ದಾರೆ. ಇವರು ಅಲ್ಲಿ ರಾಜಕೀಯ ಮಾಡಿ ನಮ್ಮ ಮೇಲೆ ಮತ್ತೆ ಹೇಳುತಿದಾರೆ.

(ಗೊಂದಲ)

ಶ್ರೀ ಆರ್.ಎಲ್. ಜಾಲಪ್ಪ: ಅವರು ಬಾಯಿಗೆ ಬಂದ ಹಾಗೆ ಏನೇನೋ ಹೇಳುತ್ತಿದ್ದಾರೆ.

ಶ್ರೀ ಮುನಿನರಸಿಂಹಯ್ಯ: ಕೆ ಎಂ ಎಫ್ ಛೇರ್ಮನ್ನು ಅಲ್ಲಿಗೆ ಇನ್ಸ್‌ಪೆಕ್ಷನ್ಗೆ ಹೋಗುತ್ತಿದ್ದರು. ತಾವು ಇದನ್ನು ರಾಜಕೀಯವಾಗಿ ಬಳಸಿಕೊಳ್ಳುತ್ತಿದ್ದೀರಿ.

(ಗೊಂದಲ)

ಶ್ರೀ ಆರ್.ಎಲ್. ಜಾಲಪ್ಪ: ಇವರಿಗೆ ನಾಚಿಕೆ ಆಗಬೇಕು.

ಅಧ್ಯಕ್ಷರು : ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಆರ್.ಎಲ್. ಜಾಲಪ್ಪ: ನಾನು ಸತ್ಯ ಹೇಳುತ್ತಿದ್ದೇನೆ. ಇದರಲ್ಲಿ ರಾಜಕೀಯ ಇಲ್ಲ.

(ಗೊಂದಲ)

ಶ್ರೀ ಮುನಿನರಸಿಂಹಯ್ಯ: ಮಾನ್ಯ ಜಾಲಪ್ಪನವರೇ, ತನಿಖೆ ಮಾಡಿಸಿ ಸದನದ ಸಮಿತಿಯಿಂದ ತನಿಖೆಯಿಂದ ಗೊತ್ತಾಗಲಿ ಯಾರು ಎಷ್ಟು ಜನ ಸದಸ್ಯರು ಗೆದ್ದಿದ್ದರು ಎಂದು. ಇವತ್ತು ನೀವು ಆ ಸದಸ್ಯರನ್ನೆ ಪ್ರಶ್ನೆ ಮಾಡಿ ಅವರು ಯಾವ ಪಕ್ಷದ ಸದಸ್ಯರು ಎಂದು ಆ ಸದಸ್ಯರೇ ಹೇಳುತ್ತಾರೆ ನಿಮಗೆ. ನೀವು ಹೇಳುತ್ತೀರಿ ನಾವು 8 ಗೆದ್ದು 6 ನೀವು ಇಟ್ಟುಕೊಂಡು ಕೌಂಪೌಂಡ್ ಒಳಗಡೆ ಬಿಡದೆ ಚುನಾವಣೆ ಮಾಡಿ ನೀವು ನಮ್ಮ ಮೇಲೆ ದೋಷಾರೋಪ ಮಾಡುತ್ತಿದ್ದೀರಾ ತಾವು. ಇದು ಸತ್ಯಕ್ಕೆ ದೂರವಾದ ಮಾತು. ಮಾನ್ಯ ಅಧ್ಯಕ್ಷರೇ, ತಾವು ಅದನ್ನು ಸದನದ ಸಮಿತಿಯಿಂದ ತನಿಖೆ ಮಾಡಿಸಬೇಕು. ಈಗ ಏನು ಅನ್ಯಾಯ ಆಗಿದೆ ಆ ಚುನಾವಣೆಯನ್ನು ರದ್ದು ಮಾಡಬೇಕು. ಪುನಃ ತಾಲ್ಲೂಕು ಹೆಡ್ ಕ್ವಾರ್ಟರ್ಸ್‌ನಲ್ಲಿ ಚುನಾವಣೆ ನಡೆಸಬೇಕು ಎಂದು ನಾನು ಈಗಾಗಲೇ ಮನವಿ ಸಲ್ಲಿಸಿದ್ದೇನೆ.

ಶ್ರೀ ಡಿ.ಕೆ. ಶಿವಕುಮಾರ್: ರಾಜಕೀಯದಲ್ಲಿ ಎಲ್ಲರೂ ಕಳ್ಳರೇ, ಏಕೆ ಮಧ್ಯೆ ಮಧ್ಯೆ ಇವರು ಅವರು ಎದ್ದೆದ್ದು ಮಾತನಾಡುವುದು?

ಶ್ರೀ ಆರ್.ಎಲ್. ಜಾಲಪ್ಪ: ಇದು ಒಳ್ಳೆಯ ತಮಾಷೆ ಆಯಿತಲ್ಲಾ. ನಾವು ಇಲ್ಲಿಗೆ ಬಂದಿರುವುದು ಮಾತನಾಡುವುದಕ್ಕೆ. ಈಗ ಅವರು ಏನು ಚಾಲೇಂಜ್ ಮಾಡಿದ್ದಾರೆ ತನಿಖೆಗೆ ನಾನು ಅದಕ್ಕೆ ಒಪ್ಪಿಕೊಂಡಿದ್ದೇನೆ. ನಾನು ಹೇಳಿರುವುದರಲ್ಲಿ ಏನಾದರೂ ಸುಳ್ಳು ಇದೆ ಎಂದು ಗೊತ್ತಾದರೆ ಅವತ್ತೇ ಬೆಳಿಗ್ಗೆ ನಾನು ಈ ಸದನದ ಸದಸ್ಯತ್ವಕ್ಕೆ ರಾಜೀನಾಮೆ ಕೊಡುತ್ತೇನೆ. ಅವರೂ ಒಪ್ಪಿಕೊಳ್ಳಲಿ ನಾನು ರಾಜೀನಾಮೆ ಕೊಡುತ್ತೇನೆಂದು.

ಶ್ರೀ ಮುನಿನರಸಿಂಹಯ್ಯ: ಆ ದಿನ ಗಲಭೆಯಲ್ಲಿ ಗೂಂಡಾಗಿರಿ ಯಾರು ಮಾಡಿದ್ದಾರೆ ಅವರು ಸೆಂಟ್ರಲ್ ಜೈಲ್ನಲ್ಲಿ ಇವತ್ತೂ ಇದ್ದಾರೆ. ಅವರನ್ನು ಕೇಳಿದರೆ ಅವರೇ ಹೇಳುತ್ತಾರೆ. ಅವರು ನಮ್ಮ ಕಡೆಯವರೋ ಅಥವಾ ಅವರ ಕಡೆಯವರೋ ಎಂದು ಅಲ್ಲಿಂದಲೇ ವರದಿ ತರಿಸಿ.

ಶ್ರೀ ಆರ್.ಎಲ್. ಜಾಲಪ್ಪ: ನಾನು ಜವಾಬ್ದಾರಿಯಿಂದ ಹೇಳುತ್ತಿದ್ದೇನೆ. ತಾವು ಈಗ ಮಾತು ತಿರುಗಿಸುವುದು ಬೇಡ. ಈಗ ನಾನು ಇದನ್ನು ಹೇಳಿದ್ದೇನೆ.

ಶ್ರೀ ಟಿ.ಎಂ. ಮಂಜುನಾಥ್: ಮಾನ್ಯ ಜಾಲಪ್ಪನವರೇ, ಒಂದು ನಿಮಿಷ. ಮಾನ್ಯ ಜಾಲಪ್ಪನವರು ಹಿರಿಯ ಸದಸ್ಯರಿದ್ದಾರೆ ಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ. ಅವರು ಹೇಳತಕ್ಕಂಥಾದ್ದು ವಾಸ್ತವಾಂಶ ಇರಬಹುದು. ಅದನ್ನು ನಾನು ವಿರೋಧ

ಮಾಡುವುದಿಲ್ಲ, ಆದರೆ ಈ ಚುನಾವಣೆಯು ನಡೆದಿರತಕ್ಕಂಥಾದ್ದು ಕರ್ನಾಟಕ ರಾಜ್ಯದಲ್ಲಿ ಪ್ರಪ್ರಥಮವಾಗಿ ನಡೆದಿದೆ. ಈ ಒಂದು ಪದ್ಧತಿಯಲ್ಲಿ ಗ್ರಾಮ ಪಂಚಾಯತಿಗಳು ಪಕ್ಷರಹಿತವಾಗಿ ಪಕ್ಷಾಂತರ ಅಲ್ಲದೆ ಪಕ್ಷರಹಿತವಾಗಿರತಕ್ಕಂಥ ಒಂದು ಚುನಾವಣೆಗಳು ನಡೆದಿರತಕ್ಕಂಥ ಸಂಧರ್ಭದಲ್ಲಿ ಕೆಲವಾರು ಅಹಿತಕರವಾದ ಘಟನೆಗಳು ನಡೆದಿರಬಹುದು. ಅದನ್ನು ನಾನು ಇಲ್ಲ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಇಂತಹ ಸಂದರ್ಭದಲ್ಲಿ ಯಾರ ಕಡೆಯವರೋ ಇವರ ಕಡೆಯವರು ಅವರ ಕಡೆಯವರು ಎನ್ನುವ ಭಾವನೆ ಬಾರದ ಹಾಗೆ ನಡೆದಿರತಕ್ಕಂಥ ಅನ್ಯಾಯಗಳ ಬಗ್ಗೆ ಸಾಕಷ್ಟು ಅಧಿಕಾರಿಗಳು ಇದ್ದಾರೆ ಕೂಲಂಕಷವಾಗಿ ಅದಕ್ಕೆ ಸಂಬಂಧಪಟ್ಟ ಹಾಗೆ ದೂರುಗಳನ್ನು ಕೊಟ್ಟಿದ್ದಾರೆ ಅದನ್ನು ಅವರು ಮಾಡುತ್ತಾರೆ. ಅದನ್ನೇ ಹೆಚ್ಚಿಗೆ ಬೆಳೆಸದೇ ವಾತಾವರಣ ಸುಮಧುರವಾಗಿ ಹೋಗುವುದಕ್ಕೆ ಒಂದು ಅವಕಾಶವನ್ನು ಕಲ್ಪಿಸಬೇಕಾದಂತಾದ್ದು ಅವಶ್ಯಕತೆ ಇದೆ. ಯಾವಾಗ ಪಕ್ಷ ಇಲ್ಲ ಅಂದಾಗ ಕೆಲವರು ಆ ಕಡೆ ಹೋಗುತ್ತಾರೆ ಕೆಲವರು ಈ ಕಡೆ ಹೋಗುತ್ತಾರೆ. ನಡೆದಂತಹ ಘಟನೆಗಳಿಗೆ ಯಾವ ರಾಜಕೀಯ ಬಣ್ಣವನ್ನು ಬಳಿಯದೇ ಅಂತಹ ಘಟನೆಗಳು ನಡೆದಿರತಕ್ಕಂಥಾದ್ದಕ್ಕೆ ಒಂದು ವಿಚಾರರಹಿತವಾದಂಥ ಕ್ರಮವನ್ನು ಅನುಸರಿಸಿ ನ್ಯಾಯವನ್ನು ದೊರಕಿಸಿಕೊಡುವುದಕ್ಕೆ ಚುನಾವಣಾ ಅಧಿಕಾರಿಗಳು ಇದ್ದಾರೆ, ಅಲ್ಲಿ ಅವರು ಬೇಕಾದರೆ ತಕರಾರು ಅರ್ಜಿ ಹಾಕಬಹುದು ಅದರ ಬಗ್ಗೆ ಹೆಚ್ಚಿಗೆ ಮಾಹಿತಿಯನ್ನು ಕೊಡಬೇಕೆಂದು ನಾನು ಹೇಳಲು ಬಯಸಿದೆ ಅಷ್ಟೇ.

ಶ್ರೀ ಆರ್.ಎಲ್. ಜಾಲಪ್ಪ : ಆದರೆ ಇನ್ನೊಬ್ಬರ ಮೇಲೆ ಲೇಪ ಬಳಿಯುವುದು ಸರಿಯೇ?

ಶ್ರೀ ಜೆ.ಸಿ. ಮಾಧುಸ್ವಾಮಿ : ಅವರ ಮೇಲೆ ನಾವು ಹೇಳುವುದು ನಿಮ್ಮ ಮೇಲೆ ಅವರು ಹೇಳುವುದು ಅಲ್ಲ, ಇದು ತಮ್ಮ ಕ್ಷೇತ್ರದಲ್ಲೇ ಜಚ್ಚಾಡಿರುವುದು. ನಿಮ್ಮ ಕ್ಷೇತ್ರದಲ್ಲಿ ಕಾರುಗಳನ್ನು ಸುಟ್ಟು ಹಾಕಿದಿರಿ. ನಿಮ್ಮ ಕ್ಷೇತ್ರದಲ್ಲಿ ಕೈಗಳನ್ನು ಕಡಿಸಿ ಹಾಕಿದಿರಿ.

ಶ್ರೀ ಟಿ.ಎಂ. ಮಂಜುನಾಥ್ : ಎಲ್ಲಿ ಯಾವ ಕೈಗಳನ್ನು ಕಡಿಸಿ ಹಾಕಿದ್ದಾರೆ ಹೇಳಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಳವಳ್ಳಿಯಲ್ಲಿ ನಾವು ಗೆದ್ದಿರಲಿಲ್ಲವೇ.

ಶ್ರೀ ಟಿ.ಎಂ. ಮಂಜುನಾಥ್ : ಜನತಾ ದಳದವರು ಹೊಡೆಸಿದ್ದಾರೆ. ಅದಕ್ಕೆ ನಾವು ಹೋಗುವುದಿಲ್ಲ, ಅದಕ್ಕೋಸ್ಕರ ಯಾವ ಪಕ್ಷದ ಮೇಲೆ ಹೇಳುವುದು ಬೇಡ.

ಶ್ರೀ ಜೆ.ಸಿ. ಮಾಧುಸ್ವಾಮಿ : ರಂಗಾಪುರದಲ್ಲಿ, ಮಳವಳ್ಳಿಯಲ್ಲಿ ಏಕೆನೀವು ಹೊಡೆಸಿದಿರಿ?

ಶ್ರೀ ಟಿ.ಎಂ. ಮಂಜುನಾಥ್ : ಮಳವಳ್ಳಿಯಲ್ಲಿ ಯಾರು ಹೊಡೆದರು ರಂಗಾಪುರದಲ್ಲಿ ಯಾರು ಹೊಡೆದರು ಎಂಬುದು ಎಲ್ಲರಿಗೂ ಗೊತ್ತಿದೆ. ತಾವು ಆತ್ಮಪರಿಶೋಧನೆ ಮಾಡಿಕೊಂಡು ಹೇಳಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ನಮ್ಮ ಆತ್ಮ ಚೆನ್ನಾಗಿದೆ. ನೀವು ನನ್ನ ಕ್ಷೇತ್ರಕ್ಕೆ ಕೈ ಹಾಕಿ ಹೊಡೆದಾಡಿಸಲು ಬರಬಾರದಾಗಿತ್ತು.

ಅಧ್ಯಕ್ಷರು : ಜಾಲಪ್ಪನವರೇ, ತಾವು ಹೇಳಿ.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೇ, ಈಗ ಈ ವಿಷಯದಲ್ಲಿ ಇಷ್ಟು ಮಾತ್ರ ನಾನು ಹೇಳುತ್ತಿದ್ದೇನೆ. ನಾನು ಈ ಸದನದ ಸದಸ್ಯನಾಗಿ 83 ರಿಂದ ಇಲ್ಲಿ ಇದ್ದೇನೆ. ಮತ್ತು ಕೆಲವು ದಿವಸ ಮಂತ್ರಿಯಾಗಿ ಕೂಡ ಕೆಲಸ ಮಾಡಿದ್ದೇನೆ. ಇವತ್ತು ನಾನು ಏನು ಇಲ್ಲಿ ತಮ್ಮ ಎದುರಿಗೆ ಹೇಳುತ್ತಿದ್ದೇನೆ: ಇವತ್ತ

ಬಗ್ಗೆ ಒಂದು ಸಮಿತಿಯನ್ನು ಮಾಡಿ. ಇದು ಸುಳ್ಳು ಎಂದು ಆದರೆ ರಿಪೋರ್ಟ್ ಬಂದ ಮಾರನೇ ದಿವಸವೇ ನಾನು ಈ ಸದನದ ಸದಸ್ಯತ್ವಕ್ಕೆ ರಾಜೀನಾಮೆ ಕೊಡುತ್ತೇನೆ. ಇದು ನಿಜ ಎಂದು ಕಂಡು ಬಂದರೆ ಮಾನ್ಯ ಸದಸ್ಯರು ರಾಜೀನಾಮೆ ಕೊಡುತ್ತಾರಾ ಕೇಳಿ. ಅಷ್ಟೇ, ಇನ್ನು ಜಾಸ್ತಿ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಇದರ ಜೊತೆಗೆ ಇದು ಸಣ್ಣ ವಿಚಾರ ಅಲ್ಲ. ಸುಳ್ಳು ಹೇಳಬೇಕಾದ ಅವಶ್ಯಕತೆ ಇಲ್ಲ. ನಾನು ಇಲ್ಲಿ ಸುಳ್ಳು ಹೇಳಬೇಕಾದುದು ಅನಾವಶ್ಯಕ ನಾನು ಏಕೆ ಸುಳ್ಳುಹೇಳಬೇಕು? ನಾನು ಸುಳ್ಳು ಹೇಳಬೇಕಾದು ಅನಾವಶ್ಯಕ ಮತ್ತು ಸುಳ್ಳು ಆಪಾದನೆಗಳನ್ನು ಸರ್ಕಾರದ ಮೇಲೆ ಮಾಡಬೇಕಾದುದು ಅನಾವಶ್ಯಕ. ಇದು ನಾವು ಅನುಭವಿಸಿರುವುದು ಇದು ನನ್ನ ಪಕ್ಕದ ತಾಲ್ಲೂಕು ಪಕ್ಕದ ಹೋಬಳಿ. ನಾನು ನೋಡಿರುವುದನ್ನು ಇವತ್ತು ತಮಗೆ ಹೇಳುತ್ತಿದ್ದೇನೆ ಇವತ್ತಿನ ದಿವಸ. ಸುಳ್ಳು ಏತಕ್ಕೆ ಹೇಳಬೇಕು? ಸದಸ್ಯರ ಮೇಲೆ ಆಗಲಿ ನಾನು ಏತಕ್ಕೆ ಸುಳ್ಳು ಹೇಳಲಿ? ಕೆಎಂಎಫ್ ಛೇರ್ಮನ್, ನಾನು ಫ್ರೆಂಡ್ಸ್. ನಾನು ಅವರ ಸುದ್ದಿಯೇ ಎತ್ತಿರಲಿಲ್ಲ ಇದು ಕೆ.ಎಂ.ಎಫ್. ಗಾಡಿ ಎಂದು ನಾನು ಹೇಳಿರಲಿಲ್ಲ. ಅಧ್ಯಕ್ಷರ ಗಾಡಿ ಎಂದು ನಾನು ಹೇಳಿರಲಿಲ್ಲ. ಇದು ಯಾವುದು ವೆರಿಫೈ ಮಾಡಿಸಿ ಎಂದು ಹೇಳಿದೆನೇ ವಿನಹಃ ಇದು ಆದ ಮೇಲೆ ಎಲಿಯಾರು ಮತ್ತು ಕೊಯಿರಾ ಎಲ್ಲಾ ನಮ್ಮದೇ ಮೆಜಾರಿಟಿ ಇದ್ದಿದ್ದು ಪ್ರತಿಯೊಂದು ಕಡೆಯೂ ಒಬ್ಬೊಬ್ಬರನ್ನು ಇಬ್ಬಿಬ್ಬರನ್ನು, ಕರೆದುಕೊಂಡು ಹೋಗಿ ಅವರು ಗೆದ್ದುಕೊಂಡರು. ಹೋಗಲಿ ಒಂದು ನಾನು ಹೇಳುತ್ತೇನೆ ಸದಸ್ಯರನ್ನು ನೀವು ಕಿಡ್ನಾಪ್ ಮಾಡಿರಬಹುದು ಸದಸ್ಯರಿಗೆ ಓಟು ಕೊಟ್ಟರಲ್ಲಾ ಜನತಾ ದಳಕ್ಕೆ ಅವರನ್ನು ನೀವು ಕಿಡ್ನಾಫ್ ಮಾಡುವುದಕ್ಕೆ ಆಗುವುದಿಲ್ಲ. ಆ ಓಟು ನಮ್ಮ ಜೊತೆಯಲ್ಲೇ ಇದೆ. ಅದನ್ನು ನೀವು ಕಿಡ್ನಾಪ್ ಮಾಡುವುದಕ್ಕೆ ಆಗುವುದಿಲ್ಲ ಆಮೇಲೆ ಸುರಪುರ, ಮೂಡ್ಲಗಿ, ಚಳ್ಳಕರೆ ಚನ್ನರಾಯಪಟ್ಟಣದ ನುಗ್ಗೆಹಳ್ಳಿ, ನವಿಲೆ, ಚಿತ್ರದುರ್ಗದಲ್ಲಿ, ಜಗಳೂರು, ಹೊಳಲ್ಕೆರೆ, ಹೊಸದುರ್ಗ, ಇಲ್ಲೆಲ್ಲಾ ಏನಾಗಿದೆ ಎಂಬುದು ಎಲ್ಲರಿಗೂ ಗೊತ್ತಿದೆ. ನಾನು ಆಗಲೇ ಹೇಳಿದ ಹಾಗೆ ಹೊಸದುರ್ಗ ತಾಲ್ಲೂಕಿನಲ್ಲಿ ಬುಕ್ಕಿರೆಯಲ್ಲಿ ಮೂಡ್ಲಪ್ಪ ಎನ್ನುವವರಿಗೆ ಹೆಚ್ಚಿಗೆ ಕುಡಿಸಿಬಿಟ್ಟು ಸತ್ತಿದ್ದಾನೆ. ಅದು ಕೇಸ್ ರಿಜಿಸ್ಟರ್ ಆಗಿದೆ. ಮತ್ತು ಆಳಂದ ತಾಲ್ಲೂಕಿನದ್ದು ಈಗಾಗಲೇ ಅವರು ಹೇಳಿದ್ದಾರೆ. ಅರಸೀಕೆರೆಯಲ್ಲಿ.....

ಡಾ|| ಎನ್.ಬಿ. ನಂಜಪ್ಪ: ಮಾನ್ಯ ಅಧ್ಯಕ್ಷರೇ, ನುಗ್ಗೆಹಳ್ಳಿ, ನವಿಲೇ ವಿಚಾರ ಬಂದಿದ್ದರಿಂದ ನಾನು ಸ್ವಲ್ಪ ಮಾತನಾಡಬೇಕಾಗಿದೆ. ನುಗ್ಗೆಹಳ್ಳಿಯಲ್ಲಿ ಕಾರಾಪುಡಿ ತೆಗೆದುಕೊಂಡು ಹೋಗಿ ಎಲೆಕ್ಷನ್ ನಡೆಯುವಾಗ ಸದಸ್ಯರು ಹೊಡೆದಾಡಿ ಅಲ್ಲಿ ಗಲಭೆ ಎಬ್ಬಿಸಿ ಎಲೆಕ್ಷನ್ ನಿಂತಿದೆ. ಅದಕ್ಕೆ ಕಾರಣ ಯಾರು? ಇವರು ನಾವೇನೂ ಮಾಡಿಲ್ಲ ಇನ್ನು ಉಳಿದಿದ್ದು ಎಲ್ಲಾ ಬೇರೆಯವರು ಮಾಡಿದ್ದಾರೆ ಎಂದು. ಅದೇ ಕಾರಣ. ನವಿಲೆಯಲ್ಲಿ 6 ಜನ ಕೈ ಎತ್ತಿದ್ದಾರೆ. 4 ಜನ ಒಂದು ಕಡೆ ಕುಳಿತಿದ್ದಾರೆ 6 ಜನ ಒಂದು ಕಡೆ ಕುಳಿತಿದ್ದಾರೆ ನಾಲ್ಕು ಜನ ಇದ್ದಂತಪವರು ಸೋಲನ್ನು ಒಪ್ಪಿಕೊಂಡು ಹೊರಗಡೆ ಬಂದಿದ್ದರೆ ಆಗುತ್ತಿತ್ತು. ಒಬ್ಬ ಅರ್ಧಕ್ಕೆ ಮಾತ್ರ ಕೈ ಎತ್ತಿದ ಎಂದು ಹೇಳಿ ಅದಕ್ಕೆ 5-5 ಆಯಿತು ಇಲ್ಲಪ್ಪ ನಾನು ಇನ್ನೊಂದು ಸಾರಿಬೇಕಾದರೂ ಕೈ ಎತ್ತುತ್ತೇನೆಂದು ಕೈ ತೋರಿಸಿದರೂ ಎಲೆಕ್ಷನ್ ಆಫೀಸರ್ರು ಗಲಾಟೆ ಮಾಡಿ ಅಲ್ಲಿ ಲಾಟಿ ಚಾರ್ಜ್ ಆಗುವಂತೆ ಮಾಡಿ ಗಲಾಟೆ ಮಾಡಿ ಅವರು ಹೊರಗಡೆ ಬಂದರೆ ಅವರನ್ನು ಹಿಡಿದುಕೊಂಡು ಹೊಡೆಯುತ್ತೇವೆ. ಅವರನ್ನೆಲ್ಲಾ ಕೊಂದು ಹಾಕುತ್ತೇವೆಂದು ಹೇಳಿ ಪೋಲೀಸ್ ಜೀಪ್ನ ಎಸ್ಕಾರ್ಟ ಮಾಡಿ ಎಲೆಕ್ಷನ್ ಡಿಕ್ಲೇರ್ ಮಾಡಿದ್ದಾರೆ. ಹೀಗೆ ಕಿಡ್ನಾಪ್ ಮಾಡುವುದು ಗಲಾಟೆ ಮಾಡುವುದು; ನಾಲ್ಕಾರು ದಿವಸದಿಂದ ಜನತಾಪಾರ್ಟಿಯವರು ತಿರುಗುತ್ತಾ ಇದ್ದಾರೆ ಅಲ್ಲಿ ಜನತಾ ದಳದವರು. ತಾಲ್ಲೂಕಿನಲ್ಲಿ ಎಲ್ಲಾ ಕಿಡ್ನಾಪ್ ಏತಕ್ಕೆ ಮಾಡಬೇಕು ಲೀಡರ್ ಆದವರು ಏತಕ್ಕೆ ಇದನ್ನು ಮಾಡಬೇಕು ಈಗ ಏನು ಪಕ್ಷದ ಮೇಲೆ ಎಲೆಕ್ಷನ್ ನಡೆದಿಲ್ಲ. ಯಾರು

ಗೆದ್ದಿದ್ದರೆ ಯಾರದ್ದು ಮೆಜಾರಿಟಿ ಇರುತ್ತದೆಯೋ ಅವರದ್ದು ಡಿಕ್ಲೇರ್ ಆಗುತ್ತದೆ. 6 ಜನ ಇದ್ದರೇನು 4 ಜನ ಇದ್ದರೇನು; ಇವತ್ತು ಬೆಳಿಗ್ಗೆಯಿಂದ ಆರೋಪ ಮಾಡಿರತಕ್ಕಂಥ ಆ ಇನ್ಸಿಡೆನ್ಸ್ ಏನು ಎಂಬುದನ್ನು ನಾನು ಹೇಳುತ್ತೇನೆ.

ಅಧ್ಯಕ್ಷರು : ತಮ್ಮನ್ನು ಕರೆದಾಗ ಮಾತನಾಡಿ.

ಡಾ॥ ಎನ್.ಬಿ. ನಂಜಪ್ಪ : ಇದು ತನಿಖೆ ಆಗಿದೆ. ನಾವು ಅದನ್ನು ಮಾಡಿಲ್ಲ. ನಾವು ಯಾವ ಕಾರನ್ನು ತೆಗೆದುಕೊಂಡು ಹೋಗಿಲ್ಲ. ಕಿಡ್ನಾಪ್ ಮಾಡುವುದಕ್ಕೆ ನಾವು ಯಾವ ಊರಿಗೆ ಕಾರು ತೆಗೆದುಕೊಂಡು ಹೋಗಿ ಹೊಡೆದಾಟ ಮಾಡಿಸಿಲ್ಲ. ಇವತ್ತು ಯಾರಾದರೂ ಹೊಡೆದಾಟ ಮಾಡಿದ್ದರೆ ಯಾರಿಗಾದರೂ ಅಪಾಯ ಆಗಿದ್ದರೆ ನಡೆದಿರತಕ್ಕಂಥಾದ್ದು ಬಿಜೆಪಿ ಮತ್ತು ಜನತಾದಳವರಿಂದ ಏತಕ್ಕೆ ಸಿಂಬಲನ್ನು ಮಾಡಲಿಲ್ಲ ಅಧ್ಯಕ್ಷರೇ? ಹಳ್ಳಿಗಳಲ್ಲಿ ಗಲಾಟೆ ಆಗಬಾರದು, ಹಳ್ಳಿಗಳಲ್ಲಿ ರಕ್ತಕೋಡಿ ಹರಿಯಬಾರದು ಎಂದು ಸಿಂಬಲನ್ನು ಅಲಾಟ್ ಮಾಡಲಿಲ್ಲ. ಈಗ ಗೆದ್ದಿರುವುದು ಪಕ್ಷಾತೀತವಾಗಿ ಗೆದ್ದಿರುವುದು. ಅಲ್ಲಿ ನಮ್ಮವರು ಜಾಸ್ತಿ ಗೆದ್ದಿದ್ದಾರೆ ಎಂದು ಹೇಳಿಕೊಳ್ಳುವ ನೈತಿಕ ಹಕ್ಕು ಜನತಾದವರಿಗೆ ಎಲ್ಲಿದೆ? ನಾನು ಬಹಳ ಸಾರಿ ಪೇಪರ್‌ಗಳಲ್ಲಿ ನೋಡಿದ್ದೇನೆ. ನಾವೇ ಎಲ್ಲಾ ಗೆದ್ದುಬಿಟ್ಟಿದ್ದೇವೆ ಎಂದು ಬರೆದಿದ್ದಾರೆ. ಗೆದ್ದಿದ್ದಾರಾ ಅವರು? ನಾನು ಹೇಳುತ್ತೇನೆ 80% of the congress candidates have won the elections if they take the account into consideration. ಅದನ್ನೆಲ್ಲಾ ಬಿಟ್ಟು ಸುಮ್ಮನೆ ಇಲ್ಲಿ ಸುಳ್ಳು ಹೇಳಿಕೊಂಡು ಏನೇನೋ ಭಾಷಣ ಮಾಡಿಕೊಳ್ಳುವುದರಲ್ಲಿ ಅರ್ಥವಿಲ್ಲ. ನಾನು ಮಾಹಿತಿ ಕೊಡುತ್ತೇನೆ.

(ಗೊಂದಲ)

ರೋಸ್ಟರ್ ಸಿಸ್ಟಂ ಮೇಲೆ ಸೀಟ್ಸ್ ಅಲಾಟ್ ಆಗಿದೆ, ಯಾವ ಎಂಎಲ್‌ಎಗೂ ಏನೂ ಕೈವಾಡ ಇಲ್ಲ, ಅದನ್ನೇ ಪೇಪರ್‌ನಲ್ಲಿ ಹಾಕಿಕೊಂಡು ಕೈವಾಡ ಎಂಎಲ್‌ಎ ಮಾಡಿದರು, ಬೇಕುಬೇಕಾದವರನ್ನು ಚೇಂಜ್ ಮಾಡಿದರು ಎಂದು ಹೇಳಿಕೊಂಡು. ಕಂಪ್ಯೂಟರೈಸ್ ಮಾಡಿದ್ದಾರೆ, ರೋಸ್ಟರ್ ಸಿಸ್ಟಂ ಮಾಡಿದ್ದಾರೆ. ಪಾಪುಲೇಷನ್ ಮೇಲೆ ಸೀಟ್ ಕೊಟ್ಟಿದ್ದಾರೆ, ಎಲ್ಲಿ ಅನ್ಯಾಯ ನಡೆದಿದೆ? ಯಾವ ಎಂಎಲ್‌ಎ ಆಗಲಿ ಅಥವಾ ಡಿಸಿ ಆಗಲಿ ಕೈವಾಡ ಮಾಡುವುದಕ್ಕೆ ಸಾಧ್ಯವೇ ಇಲ್ಲ. ಅದಕ್ಕೋಸ್ಕರ ಇದು ನಿಜಸ್ಥಿತಿ ಅಲ್ಲ ಎಂಬ ಮಾತನ್ನು ಈ ಸದನದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ನನ್ನ ತಾಲ್ಲೂಕಿನಲ್ಲಿ ಏನಾದರ ಗಲಾಟೆ ನಡೆದಿದ್ದರೆ ಅವರಿಂದ ನಡೆದಿದೆಯೇ ಹೊರತು ನಮ್ಮಿಂದಲ್ಲ ಎಂದು ಹೇಳಲು ಇಷ್ಟಪಡುತ್ತೇನೆ.

ಶ್ರೀ ಆರ್.ಎಲ್ ಜಾಲಪ್ಪ : ಅಧ್ಯಕ್ಷರೇ, ನಮ್ಮ ಡಿಮಾಂಡ್ ಎಲ್ಲೆಲ್ಲಿ ಫೈರಿಂಗ್ ಆಗಿದೆ ಅಲ್ಲಿ ನ್ಯಾಯಾಂಗ ವಿಚಾರಣೆ ಮಾಡಿಸಿ ಮೊದಲು ಒಂದು ಸದನ ಸಮಿತಿ ಮಾಡಿ ಎಲ್ಲೆಲ್ಲಿ ಈ ತರಹ ಕಂಪ್ಲೇಂಟ್ ಹೋಗಿದೆ ಅಲ್ಲಿ ಮಾಡಿಸಿ ಎಂದು. ಜನತಾದಳದವರು ಮಾಡಿದ್ದರೆ ನಾನು ಅನುಭವಿಸಬೇಕು. ನೀವು ಮಾಡಿದ್ದರೆ ನೀವೂ ಅನುಭವಿಸಬೇಕು. ಸದನ ಸಮಿತಿ ಮಾಡಿದರೆ ಬರೀ ನಮ್ಮ ಪರವಾಗಿ ಬರೀತಾರೇನು ಅವರು? ನಿಮ್ಮವರೇ ಮೆಜಾರಿಟಿ ಇರುತ್ತಾರೆ. ಅದನ್ನು ಮುಖ್ಯಮಂತ್ರಿಗಳಿಗೆ ಹೇಳಿ. Let him be prepared. You tell your Chief Minister. Let him be prepared.

ಡಾ॥ ಎನ್.ಬಿ. ನಂಜಪ್ಪ : ಅಧ್ಯಕ್ಷರೇ, If anybody takes the law into hands.

(Interruptions)

ಅಧ್ಯಕ್ಷರು : ಆಯಿತು, ನಂಜಪ್ಪನವರೇ, ಕುಳಿತುಕೊಳ್ಳಿ.

ಶ್ರೀ ಆರ್.ಎಲ್. ಜಾಲಪ್ಪ : ಅಧ್ಯಕ್ಷರೇ, I don't like this sort of interference. ಪದೇ ಪದೇ ಇದ್ದು ಇನ್‌ಟರ್‌ಫಿಯರ್ ಮಾಡಬೇಕಾದರೆ ಅವರದ್ದು guilty conscience. I didnot accuse him. I have only said, there have been troubles in those

areas. ನೀವ್ಯಾಕೆ ಎದ್ದು ಇಷ್ಟೊಂದು ಕೂಗಾಡುತ್ತೀರಿ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಆಮೇಲೆ ಇನ್ನೊಂದನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರಬೇಕು. ನಾನು ಕಳೆದ ಅಧಿವೇಶನದಲ್ಲಿ ರಾಜ್ಯಪಾಲರ ಭಾಷಣದ ಮೇಲೆ ಇಲ್ಲಿ ಚರ್ಚೆ ನಡೆಯುತ್ತಿರುವಾಗ ಮಾನ್ಯ ಮಂತ್ರಿಗಳಿಗೆ ಎರಡು ಕಾಗದ ಕೊಟ್ಟೆ; ಏನು ಅಂದರೆ ಅಸಿಸ್ಟೆಂಟ್ ಕಮಿಷನರ್ ಮತ್ತು ಡಿಸಿ ರೆಕಮೆಂಡ್ ಮಾಡಿದ್ದಾರೆ. ಕಣಸವಾಡಿ ಕ್ಷೇತ್ರಕ್ಕೆ ಬಿಸಿಎಂ ಮಹಿಳೆ ಎಂದು, ಸೆಕ್ರೆಟರಿ ಲೆವೆಲ್‌ನಲ್ಲಿ ಇದು ಬಿಸಿಎಂ ಗಂಡಸು ಎಂದು ಆಗಿದೆ. ಇದನ್ನು ತಾವು ದಯವಿಟ್ಟು ಪರಾಂಬರಿಸಬೇಕು ಅವರ ಕೈಗೆ ಕೊಟ್ಟೆ. ಅದರ ಕಾಪಿಯನ್ನೇ ನಾನು ತಮ್ಮ ಕಾರ್ಯದರ್ಶಿಯವರಿಗೆ ಕಳಿಸಿದೆ. ಡೆಪ್ಯುಟಿ ಕಮೀಷನರ್ ರಿಪೋರ್ಟ್ ಸರ್ಕಾರಕ್ಕೆ ಏನು ಕಳಿಸಿದ್ದರು ಅದನ್ನು ಕೂಡ ತಮಗೆ ಕಳುಹಿಸಿದ್ದೆ, ಇಲ್ಲಿಯವರೆಗೆ ನನಗೆ ಏನೂ ಗೊತ್ತಾಗಲಿಲ್ಲ. ಇದು ರಾಜಕೀಯ ಹಸ್ತಕ್ಷೇಪದಿಂದ ಆಗಿರುವುದು. ಏಕೆಂದರೆ ಈ ಕಣಸವಾಡಿ ಹೋಬಳಿ ನನ್ನ ಕ್ಷೇತ್ರಕ್ಕೆ ಸೇರುವುದಿಲ್ಲ, ಅದು ಪಕ್ಕದ ತಾಲ್ಲೂಕಿನಗೆ ಸೇರುತ್ತದೆ. ಸೆಕ್ರೆಟರಿ ಲೆವೆಲ್‌ನಲ್ಲಿ ಇದನ್ನು ಚೇಂಜ್ ಮಾಡುವುದಕ್ಕೆ ಏನು ಕಾರಣ? ತಾವು ಕೇಳಿ. ಇದೆಲ್ಲಾ ನೋಡಿದಾಗ ನಿಮ್ಮ ಹಸ್ತಕ್ಷೇಪ ಎಷ್ಟರಮಟ್ಟಿಗೆ ಆಗಿದೆ ಎಂದು ತೀರ್ಮಾನವಾಗಬೇಕಾದರೆ ಸದನದ ಸಮಿತಿ ಆಗಬೇಕು ಮತ್ತು ನ್ಯಾಯಾಂಗ ವಿಚಾರಣೆ ಆ ಎರಡು ಕಡೆ ಎಲ್ಲಿ ಫೈರಿಗ್ ಆಗಿದೆ 7 ಜನ ಸತ್ತು ಈಗ ನೂರಾರು ಜನ ಜೈಲ್‌ನಲ್ಲಿದ್ದಾರೆ ಇದರ ಬಗ್ಗೆ ನ್ಯಾಯಾಂಗ ವಿಚಾರಣೆ ಆಗಬೇಕಾಗಿದೆ. ಇದನ್ನು ಮಾಡದೇ ಇದ್ದರೆ ನೀವು ಮುಂದಿನ ತಾಲ್ಲೂಕು ಪಂಚಾಯಿತಿ ಜಿಲ್ಲಾ ಪಂಚಾಯಿತಿ ಒಳಗೆ ನಮಗೆ ಮೋಸ ಮಾಡುವುದಕ್ಕೆ ಎಲ್ಲಾ ಸಿದ್ಧತೆಮಾಡಿಕೊಳ್ಳುತ್ತಿದ್ದೀರಿ ಎಂದು ನಮಗೆ ಹೆದರಿಕೆ ಬಂದಿದೆ. ಆದ್ದರಿಂದ ನ್ಯಾಯದ ಮತ್ತು ನೈತಿಕ ದೃಷ್ಟಿಯಿಂದ ಇದನ್ನು ಮಾಡಬೇಕು. ಇದನ್ನು ನಾನು ಡಿಮಾಂಡ್ ಮಾಡುತ್ತೇನೆ. ಇದರ ಜೊತೆಗೆ ಕೆಲವು ಕಡೆ ನಮಗೆ ಬಂದಿರುವ ರಿಪೋರ್ಟ್ ಮುಖ್ಯಮಂತ್ರಿಗಳ ಕಚೇರಿಯಿಂದ ನೇರವಾಗಿ ಪೊಲೀಸರಿಗೆ ಇನ್‌ಸ್ಟ್ರಕ್ಷನ್ ಹೋಗಿದೆ not to take action or to twist the complaint ಆದ್ದರಿಂದ, ನನ್ನ ಡಿಮ್ಯಾಂಡ್ ಏನೆಂದರೆ ಎಲ್ಲೆಲ್ಲಿ ಗೋಲಿಬಾರ್ ಆಗಿದೆ ಅಲ್ಲಿ ದಯಮಾಡಿ ನ್ಯಾಯಾಂಗ ವಿಚಾರಣೆ ಮಾಡಿಸಬೇಕು ಮತ್ತು ಎಲ್ಲೆಲ್ಲಿ ಕಂಪ್ಲೇಂಟ್ಸ್ ಬಂದಿದೆ ಅಷ್ಟರಮಟ್ಟಿಗೆ ಆದರೂ ಕಂಪ್ಲೇಂಟ್ಸ್ ಬರದಿರುವುದು ನೂರಾರೂ ಇವೆ, ಕಂಪ್ಲೇಂಟ್ಸ್ ಬಂದಿರವ ಕಡೆ ಪರಿಶೀಲನೆ ಮಾಡುವುದಕ್ಕೆ ಸದನದ ಸಮಿತಿ ಮಾಡಬೇಕು ಮತ್ತು ಏನಾದರೂ ಜವಾಬ್ದಾರಿ ಇದ್ದರೆ ಮಾನ್ಯ ಮುಖ್ಯಮಂತ್ರಿಗಳ ರಾಜೀನಾಮೆ ಕೊಡಬೇಕು. ಅವರು ಕೊಡುವುದಿಲ್ಲ, ಎಂದು ನಮಗೆ ಗೊತ್ತಿದೆ ಅದನ್ನು ನಾವು ಡಿಮಾಂಡ್ ಮಾಡುವುದರಲ್ಲಿ ಪ್ರಯೋಜನ ಇಲ್ಲ, ಆದರೂ ನೈತಿಕ ಹಕ್ಕು ಉಳಿಸಿಕೊಂಡು ರಾಜೀನಾಮೆ ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

+ SRI QUAMARUL ISLAM (GULBARGA) : Mr. Speaker Sir, I have also given notice of adjournment motion. I am thankful that you have allowed the discussion suspending the other business of the house. During the time of election of president and Vice-President to Grama Panchayats in Gulbarga District the State Police have fired resulting in 6 deaths and injuries to 20 persons. Many elected Panchayat members have been kidnapped. As per the latest information, one Mr. Ramachandra of Shadipur village of Chincholi Taluk in Gulbarga District is missing and till now he has not come to his house. There is also a rumour that his body has been found somewhere in the area. This is a very serious matter. I would like to know from the

Government whether this rumour is correct. One question arises in the mind as to why such a tension has been prevailing in Gulbarga District and that too during the time of election of President and Vice President to Gramapanchayats. It is crystal clear that ruling party MLAs have used their influence over the Deputy Commissioner for selecting Head Quarters for Gramapanchayat. I will cite one example where this firing took place. That is, Karadakal village in Shorapur Taluk where this 4 deaths have occured. This villge is having only 7 members whereas the other village i.e., Parasanahalli panchayat have got 9 members i.e., majority of the members. parasanahalli villages was not made the Head Quarters of Gramapanchayat office. Even the President and Vice President of the Grama Panchayat were chosen from Karadakal village where 7 members were elected. In this was tension has been created. Here, whoever has the influence i.e., Minister or Member, with the Deputy Commissioner they have influenced over the Deputy Commissioner and they clubbed with the executive and they have done all these things. This is a very serious matter and Gulbarga has become a heaven or a paradise for the policemen to shoot. Tigers usually hunt for animals, but there is one particular tiger which hunt only humanbeings instead of animals and that tiger is called as 'adamkor'. Now. Gulbarga police have become 'adamkors' now a days. Since one and half years how many deaths were occured? They were not able to control it by Lathi charge or teargass. Some of the police officers and officials have also been injured.

5.10 ಪಿ.ಎಂ.

They have simply started firing whenever such situations arises. We know this is a very emotional issue. There are two groups. But, it does not mean that the Police Start firing and this has happened in the previous timings also. This is a very very serious situation. Even when I am saying that some of the MLAs have used their influence, even it has appeared in the paper. In the Chttapur Taluk, one of my very good friends, Sri Baburao Chinchansur, he is MLA from my District. In Hebbal village, there are five Congress(I) Members....

SRI N.G. NAYAK : What were you doing as MLA at that time?

ಶ್ರೀ ಖಮರುಲ್ ಇಸ್ಲಾಂ : ನಾನು ಚಾರ್ಜ್ ಮಾಡಲಿಲ್ಲ, ಪ್ರೇಮ್ ಮಾಡುತ್ತಿದ್ದೇನೆ.

His car was stoned. I wanted that the God should give him hundred years of life. I thank in this House that our Hon'ble MLA from Chittapur was saved, his life was saved, because his car was stoned. The paper report says, he has gone for influencing. Iam not quoting whether this party or that party. Now a days both the sides, they say it is a Non-Party election. But, acutally it is a party Election. In the Village of Shadipur, this is a very very serious matter, one Sri Ramachandra S/O Sri Lakshman who was the candidate for the Vice-Presidentship having a majority supporters of nine, he was kidnapped on 15th. The electi took place on 17th. The President election was not taken place. But the Vice President election was taken place. A complaint was given and the police is still hiding and police know where this man is. And now the latest information is, this man has already been killed and this is the rumour about the elected representative. This is the fate of the elected representative and of this Government. Hence I don't want to go into the length of the many things, happened in the other parts, and of firing in Bellary District and so many things happened in other parts of the state. I only demad in this House that there should be a House Committee to enquire all these matters and there should be a judicial enquiry about the firing which took place. With these two demands through you in this House, I conclude my speech. I don't want to take much time.

+ ಶ್ರೀ ಸಿ. ಬೈರೇಗೌಡ (ವೇಮಗಲ್): ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾತನಾಡಿದಂತಹ ನಮ್ಮ ಅನೇಕ ಸ್ನೇಹಿತರು ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಇಂದು ಅಧಿಕಾರದ ವಿಕೇಂದ್ರಿಕರಣದ ಮುಖ್ಯ ಅಂಗವಾಗಿ ಈ ಕಾನೂನನ್ನು ನಮ್ಮ ರಾಜ್ಯದಲ್ಲಿ pomp and pageantry ಆಗಿ ಜಾರಿಗೆ ಕೊಟ್ಟಿದ್ದಾರೆ. ಇದೇನೂ ಹೊಸ ಕಾನೂನು ಅಲ್ಲ. ಇದಕ್ಕಿಂತ ಉತ್ತಮವಾದ ಕಾನೂನು ನಿಜವಾದಂತಹ ಅಧಿಕಾರದ ವಿಕೇಂದ್ರೀಕರಣ ರಾಜ್ಯದಲ್ಲಿ 85-86 ರಲ್ಲಿ ಜಾರಿಗೆ ಬಂದಿತ್ತು. ಅದಕ್ಕೆ ವಿಕೃತವಾದ ರೂಪವನ್ನು ಇಂದು ಜಾರಿಗೆ ಕೊಡತಕ್ಕಂತಹ ಪ್ರಯತ್ನ ನಡೆದಿದೆ. ಅದಕ್ಕೆ ವಿಕೃತವಾದಂತಹ ಪ್ರಯತ್ನ ರಾಜ್ಯಾದ್ಯಂತ ಅನೇಕ ಕಡೆ ಆಗುತ್ತಿದೆ. ಅನೇಕ ಕಡೆ ಗಲಭೆಗಳು, ಪೊಲೀಸಿನವರು ಗುಂಡು ಹಾರಿಸತಕ್ಕಂಥಾದ್ದು ಚುನಾಯಿತ ಸದಸ್ಯರನ್ನು ಹೊತ್ತುಕೊಂಡು ಹೋಗತಕ್ಕಂಥಾದ್ದು ಮತ್ತು ಹೆಣ್ಣುಮಕ್ಕಳ ಸೀರೆ ಎಳೆಯತಕ್ಕಂಥಾದ್ದು ಇವೆಲ್ಲವೂ ಕಾರಣವಾಗಿದೆ. ಈ ರೀತಿ ಅಧಿಕಾರದ ವಿಕೇಂದ್ರಿಕರಣವನ್ನು ನಾವು ಯಾರೂ ಬಯಸುವುದಿಲ್ಲ. ನಿಜವಾದ ಅಧಿಕಾರ ವಿಕೇಂದ್ರಿಕರಣವಾಗುವ ಕಡೆ ಇವತ್ತು ಎಲ್ಲಿ ನೋಡಿದರೂ ದೊಂಬಿ ಗಲಭೆ, ಸದಸ್ಯರನ್ನು ಹೊತ್ತುಕೊಂಡು ಹೋಗತಕ್ಕಂತಹ ರೂಪದಲ್ಲಿ ವಿಕೇಂದ್ರಿಕರಣವಾಗುತ್ತಿರತಕ್ಕಂಥಾದ್ದನ್ನು ನಾವು ನೋಡುತ್ತಿದ್ದೇವೆ. ಅನೇಕ ಕಡೆ ಈ ರೀತಿಯಾದಂತಹ ಗಲಭೆಗಳು. ಈ ಮೊದಲು ನಡೆದಿರಲಿಲ್ಲ.

ಅನೇಕ ಹಳ್ಳಿಗಳಲ್ಲಿ ಈ ರೀತಿಯಾದಂಥ ಪರಿಸ್ಥಿತಿ ಉದ್ಭವ ಹಿಂದೆ ಯಾವ ಎಂಥ ಚುನಾವಣೆಯಲ್ಲೂ ಸಹ ಆಗಿರಲಿಲ್ಲ. ಅಂಥ ಹಳ್ಳಿಗಳಲ್ಲೂ ಸಹ ದೊಂಬಿ ಗಲಾಟೆ, ಪೊಲೀಸರ ಲಾಠಿ ಏಟು, ಗುಂಡು ಹಾರಿಸತಕ್ಕಂಥದ್ದು ಇವತ್ತು ನಡೆಯುತ್ತಿದೆ. ಗ್ರಾಮಾಂತರ ಪ್ರದೇಶದಿಂದ ಬಂದಿರತಕ್ಕಂಥ ನಾನು ಇದನ್ನೆಲ್ಲಾ ನೋಡಿದಾಗ ನಿಜವಾಗಿಯೂ ಕೂಡ ವ್ಯಥೆಯಾಗುತ್ತದೆ. ಇವತ್ತಿನ ದಿವಸ ಏನು ನಾವು ಎಲ್ಲಿಗೆ ಹೋಗುತ್ತಿದ್ದೇವೆ? ಇವತ್ತು ಅಧಿಕಾರ ವಿಕೇಂದ್ರಿಕರಣ ಆಗುವುದಕ್ಕೆ ಬದಲಾಗಿ ಈ ಕ್ರಿಮಿನಲ್ ಆಕ್ಟಿವಿಟೀಸ್ ವಿಕೇಂದ್ರಿಕರಣ ಆಗುತ್ತಿದೆ ಅಧಿಕಾರ ವಿಕೇಂದ್ರಿಕರಣಕ್ಕೆ ಬದಲಾಗಿ

ಈ ಕ್ರಿಮಿನಲ್ ಆಕ್ಟಿವಿಟೀಸ್ ವಿಕೇಂದ್ರೀಕರಣವಾಗುತ್ತಿದೆ. ಇದಕ್ಕೆ ಎಲ್ಲರೂ ಕೂಡ ಈ ಕಡೆ ಇರತಕ್ಕಂಥ ಸದಸ್ಯರಾಗಲಿ, ಆ ಕಡೆ ಇರತಕ್ಕಂಥ ಸದಸ್ಯರಾಗಲಿ ಯಾರೇ ಆಗಲಿ ಎಲ್ಲರೂ ವ್ಯಥೆಪಡಬೇಕಾಗಿರತಕ್ಕಂಥದ್ದು. ಈ ಚುನಾವಣೆಗಳು ಕಾನೂನು ಪ್ರಕಾರ ಪಕ್ಷಾತೀತವಾಗಿ ನಡೆದಿದೆ ಎಂದು ಹೇಳುತ್ತಾರೆ. ಕಾನೂನಿನಲ್ಲಿ ಅದಕ್ಕೆ ಅವಕಾಶ ಇಲ್ಲ, ನಿಜ ಒಪ್ಪುತ್ತೇವೆ. ಆದರೆ ವಾಸ್ತವಿಕವಾಗಿ ನಡೆದಿರತಕ್ಕಂಥದ್ದು ಏನು? ಅದು ಎಲ್ಲರಿಗೂ ಕೂಡ ಗೊತ್ತಿರುವಂಥದ್ದು. ಯಾರೂ ಕೂಡ ಪಕ್ಷಾತೀತವಾಗಿ ಚುನಾವಣೆ ನಡೆದಿದೆ ಎಂದು ಹೇಳಿ ಈ ಕಡೆ ಸದಸ್ಯರೂ ಒಪ್ಪುವುದಿಲ್ಲ. ಆ ಕಡೆ ಸದಸ್ಯರೂ ಸಹ ಒಪ್ಪುವುದಿಲ್ಲ. ಎಲ್ಲಾ ಸದಸ್ಯರು ಸಹಾ ಪಕ್ಷದ ಆಧಾರದಮೇಲೆ ನಡೆದಿದೆ ಎನ್ನುವುದನ್ನು ಒಪ್ಪುತ್ತಾರೆ. ಇದು ಪ್ರಾರಂಭವಾಗಿದ್ದೇನು? ಕೆಲವು ಹಳ್ಳಿಗಳನ್ನು ಸೇರಿಸಿ ಒಂದು ಪಂಚಾಯಿತಿಯಾಗಿ ಪುನರ್ ವಿಂಗಡಣೆ ಮಾಡಬೇಕಾಗಿರತಕ್ಕಂಥದ್ದು. ಅಲ್ಲಿಂದಲೇ ಮೊದಲ ಹೆಜ್ಜೆ ಪ್ರಾರಂಭವಾಯಿತು. ಹಳ್ಳಿಗಳನ್ನು ಸೇರಿಸಿ ಒಂದು ಪಂಚಾಯಿತಿಯನ್ನಾಗಿ ಮಾಡತಕ್ಕಂಥದ್ದು ಏನಿದೆ, ಅಲ್ಲಿಂದಲೇ ಪ್ರಾರಂಭವಾಯಿತು. ಇಂಥ ಹಳ್ಳಿಗಳು ಇಲ್ಲಿಯೇ ಇರಬೇಕು, ಇಂಥದ್ದಕ್ಕೆ ಇಂಥದ್ದೇ ಕೇಂದ್ರಸ್ಥಾನವಾಗಬೇಕು, ದೊಡ್ಡದಾಗಿ ರಾಜ್ಯಾದ್ಯಂತ ಅವಾಂತರವೇ ಸೃಷ್ಟಿಯಾಯಿತು. ಇಂಥ ಅಧಿಕಾರ ವಿಕೇಂದ್ರಿಕರಣ ಬೇಕೇ ಮಾನ್ಯ ಸಭಾಧ್ಯಕ್ಷರೇ? ಕೆಲವು ಕಡೆ ನಡೆದಿರತಕ್ಕಂಥ ಘಟನೆಗಳನ್ನು ನೋಡಿದಾಗ ನಾವು ತಲೆ ತಗ್ಗಿಸಬೇಕಾಗುತ್ತದೆ. ಆ ಒಂದು ಘಟ್ಟ ಮುಗಿಯಿತು. ಅದು ಸರಿಯೋ ತಪ್ಪೋ ಅಂತೂ ಒಂದು ಘಟ್ಟ ಮುಗಿಯಿತು. ಆಧಾರದಮೇಲೆ ಪಂಚಾಯಿತಿ ಕೇಂದ್ರಗಳನ್ನು ರಚನೆ ಮಾಡತಕ್ಕಂಥದ್ದರಲ್ಲಿ ಎಲ್ಲಿ ಏನೂ ಇಲ್ಲದೇ ಇರತಕ್ಕಂಥದ್ದರ ಕಡೆ ಕುಡಿಯುವುದಕ್ಕೆ ನೀರೂ ಸಹ ಸಿಗುವುದಿಲ್ಲ. ಅಂಥ ಕಡೆ ಪಂಚಾಯಿತಿ ಕೇಂದ್ರಗಳು ಇವತ್ತಿನ ದಿವಸ ಆಗಿವೆ. ಮರದ ನೆರಳೂ ಸಹ ಇಲ್ಲ, ಅಂಥ ಕಡೆಯಲ್ಲೂ ಇವತ್ತು ಪಂಚಾಯಿತಿ ಕೇಂದ್ರಗಳಾಗಿವೆ. ಮುಖ್ಯಮಂತ್ರಿಗಳು ತಮ್ಮ ಬಜೆಟ್ ಭಾಷಣದಲ್ಲಿ ಏನೋ ಹೇಳಿದ್ದಾರೆ.

ಒಂದೊಂದು ಲಕ್ಷ ರೂಪಾಯಿಗಳನ್ನು ಒಂದೊಂದು ಪಂಚಾಯಿತಿಗೆ ಕೊಡುತ್ತೇನೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ನೋಡೋಣ, ನೀವು ಅಧಿಕಾರದಲ್ಲಿ ಅಲ್ಲಿ ಕುಳಿತಿರುತ್ತೀರೋ ಇಲ್ಲ ನಾವೇ ಅಲ್ಲಿಗೆ ಬರುತ್ತೇವೋ ಎಂದು ನೋಡೋಣ. ಈಗಲೇ ಸ್ಪಷ್ಟವಾಗಿ ಹೇಳುತ್ತೇನೆ, ನಾನು ಆ ಕಡೆ ಬಂದು ಕುಳಿತರೆ ಮೊದಲನೇ ಕೆಲಸ ಇದನ್ನು ಕಿತ್ತು ಬಿಸಾಕುತ್ತೇವೆ. ಮೊದಲನೇ ಕೆಲಸವನ್ನು ನಾವಂತೂ ಖಂಡಿತಾ ಇದನ್ನು ಮಾಡುತ್ತೇವೆ. ಇಂಥ ವಿಕೃತ ರೂಪ ಏನಿದೆ ಅಧಿಕಾರದ ವಿಕೇಂದ್ರಿಕರಣಕ್ಕೆ ಬದಲಾಗಿ ಈ Criminalisation of this decentralisation. ಇದನ್ನಂತೂ ಕೂಡ ಕಿತ್ತು ಬಿಸಾಕುತ್ತೇವೆ. ಇದನ್ನು ಮೊದಲೇ ಸ್ಪಷ್ಟವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ. ಶಂಕರ್ ರೆಡ್ಡಿ: ನೀವು ಯಾವ ರೀತಿ ಮಾಡಿದ್ದೀರಿ ಎಂದು ಉದಾಹರಣೆಯನ್ನಾಗಿ ಹೇಳಲೇನು? ಸ್ವಾಮಿ, ಒಂದು ಊರಿನಲ್ಲಿ 22 ಮನೆ, ಅದಕ್ಕೆ 16 ಗ್ರಾಮಗಳನ್ನು ಸೇರಿಸಿ ಆರು ಸಾವಿರ ಜನಸಂಖ್ಯೆ ಇರತಕ್ಕಂಥದ್ದನ್ನು ಬಿಟ್ಟು 22 ಮನೆ ಇರುವುದನ್ನು ಈ ದೊಡ್ಡ ಮನುಷ್ಯರೇ ಮಾಡಿದರು.ಒಂದು ಊರಿಗೆ ದಾರಿಯೇ ಇಲ್ಲ. ಆ ಊರಿಗೆ ಹೋಗುವುದಕ್ಕೆ. ಅದನ್ನು ಮಂಡಲ್ ಹೆಡ್ ಕ್ವಾರ್ಟರ್ಸ್ ಮಾಡಿದರು. ಮತ್ತೆ ಅವರು ಚುನಾವಣೆಯಲ್ಲಿ ಗೆಲ್ಲಲಿಲ್ಲ. ಇಬ್ಬರನ್ನು ನಾಮಿನೇಟ್ ಮಾಡಿದರು. ಆಗ ಇವರು ಬಂದರು. ತಾವು ಮಾತನಾಡುವಾಗ ಹಿಂದೆ ನಾನು ಮಾಡಿದ್ದೇವೆ ಎಂದು ನೋಡಬೇಕಾಗುತ್ತದೆ. ನಮ್ಮ ಬೆನ್ನ ಹಿಂದೆ ಏನು ಇದೆ ಎಂದು ನೋಡಬೇಕಾಗುತ್ತದೆ.

ಶ್ರೀ ಸಿ. ಬೈರೇಗೌಡ: ಇದೆಲ್ಲಾ ಚರ್ಚೆಯಾಗಿದೆ. ವೀರಪ್ಪ ಮೊಯಿಲಿಯವರೂ ಸಹ ಇಲ್ಲಿ ಬಂದು ಕುಳಿತಿದ್ದರು. ಇದೆಲ್ಲಾ ಚರ್ಚೆಯಾಗಿದೆ. ಮಾನ್ಯ ಮುಖ್ಯಮಂತ್ರಿಗಳಿಗೆ ಜ್ಞಾಪಕ ಇರಬೇಕು. ನೀವೆಲ್ಲಾ ಇಲ್ಲಿಗೆ ಬಂದಿದ್ದೀರಿ. ಬಾವಿಯೊಳಗಡೆಯೆಲ್ಲಾ ಬಂದಿದ್ದೀರಿ. ಇದೆಲ್ಲಾ ಚರ್ಚೆ ಈಗಾಗಲೇ ಆಗಿದೆ. ಆ ಹಂತ ಮುಗಿದುಹೋಗಿದೆ. ಇವತ್ತು

ಎಲ್ಲವೂ ಕೂಡ ಎಷ್ಟು ಸಣ್ಣದಾಗಿದ್ದರೂ ಅಲ್ಲಿ ಧೂಳು ಕುಳಿತುಕೊಳ್ಳತಕ್ಕಂಥ ಪರಿಸ್ಥಿತಿ ಇತ್ತು. ಈಗ ಒಂದು ಲಕ್ಷ ರೂಪಾಯಿಗಳನ್ನು ಕೊಡುತ್ತೇವೆ ಎಂದು ಹೇಳಿದ್ದೀರಿ. ಕನಿಷ್ಟ ಅಲ್ಲಿ ಒಂದು ಕಛೇರಿಯನ್ನು ನಡೆಸಬೇಕಾಗಿದ್ದರೆ ಒಂದು ಲಕ್ಷ ರೂಪಾಯಿಗಳನ್ನು ಹತ್ತು ವರ್ಷ ಕೆಲವು ಕಡೆ ಕೊಡಬೇಕಾಗುತ್ತದೆ. ಇವತ್ತು 10-15 ಲಕ್ಷ ರೂಪಾಯಿಗಳು ಖರ್ಚಾಗಬೇಕಾಗುತ್ತದೆ. ಒಂದು ಕಛೇರಿ ಬೇಕಾಗುತ್ತದೆ, ಒಂದು ಕಟ್ಟಡ ಅದಕ್ಕೆ ಬೇಕಾಗುತ್ತದೆ. ಉಳಿದಿರತಕ್ಕಂಥ ಎಲ್ಲಾ ವ್ಯವಸ್ಥೆ ಆಗಬೇಕಾಗಿದ್ದರೆ ಇದು ಗ್ರಾಮಗಳ ಅಭಿವೃದ್ಧಿಗಾಗಿ ಆಗಿರತಕ್ಕಂತದ್ದು ಬದಲಾಗಿ ಇವತ್ತು ಗ್ರಾಮ ಪಂಚಾಯಿತಿಗಳ ಕೇಂದ್ರಗಳ ಅಭಿವೃದ್ಧಿಯಾಗಬೇಕಾಗುತ್ತದೆ. ಆ ಕೇಂದ್ರಗಳ ಅಭಿವೃದ್ಧಿಯಾಗಬೇಕಾದರೆ ಇನ್ನು ಹತ್ತು ವರ್ಷಗಳು ಬೇಕಾಗುತ್ತದೆ.

ಒಂದು ಕಛೇರಿ ಬೇಕಾಗುತ್ತದೆ, ಒಂದು ಕಟ್ಟಡ ಬೇಕಾಗುತ್ತದೆ. ಉಳಿದಂತಹ ಎಲ್ಲಾ ವ್ಯವಸ್ಥೆ ಕೂಡ ಆಗಬೇಕಾಗಿದ್ದರೆ ಇದು ಗ್ರಾಮಗಳ ಅಭಿವೃದ್ಧಿಗಾಗಿ ಆಗಿರುವ ಬದಲಾಗಿ ಇವತ್ತು ಗ್ರಾಮ ಪಂಚಾಯಿತಿಗಳ ಕೇಂದ್ರಗಳ ಅಭಿವೃದ್ಧಿ ಆಗಬೇಕಾಗುತ್ತದೆ. ಇನ್ನು ಹತ್ತು ವರ್ಷ ಬೇಕಾಗುತ್ತದೆ. ಆ ಕೇಂದ್ರಗಳ ಅಭಿವೃದ್ಧಿ ಆಗಬೇಕಾದರೆ, ಅರ್ಥ ಆಗುತ್ತಿಲ್ಲ, ಯಾವ ಕಾರಣ ಏನು ಎಂದು. ಮೊದಲು ಇದ್ದಂತಹ ಗ್ರಾಮ ಪಂಚಾಯತಿ ಏನು? ಅನೇಕ ಕಡೆ ಗ್ರಾಮ ಪಂಚಾಯತಿಗಳ ಕೇಂದ್ರವನ್ನು ಬದಲಾವಣೆ ಮಾಡಿದ್ದಾರೆ. ಅದನ್ನು ಅಭಿವೃದ್ಧಿ ಮಾಡಬೇಕಾಗಿದ್ದರೆ ಇನ್ನೂ ಹತ್ತು ವರ್ಷ ಆಗುತ್ತದೆ. ನೀವು ಈ ಹಣವನ್ನು ಇದಕ್ಕೇ ಉಪಯೋಗ ಮಾಡುತ್ತೀರಾ? ಅನೇಕ ಕಡೆ ಇವತ್ತಿನ ದಿವಸ ಚರಂಡಿ ಇಲ್ಲ. ಕೊಳೆತು ನಾರತಕ್ಕ ಹಳ್ಳಿಗಳು ಇವೆ. ಹೋಗಿ ಬರುವುದಕ್ಕೆ ದಾರಿ ಇಲ್ಲದಂತಹ ಅನೇಕ ಹಳ್ಳಿಗಳು ಇದ್ದಾವೆ. ವಿದ್ಯುದ್ದೀಪ ಇಲ್ಲ. ಅಂತಹ ಪರಿಸ್ಥಿತಿ ಅನೇಕ ಹಳ್ಳಿಗಳಲ್ಲಿ ಇದ್ದಾವೆ. ಅದಕ್ಕೆ ಖರ್ಚಾಗಬೇಕಾಗಿರತಕ್ಕ ಹಣ ಇವತ್ತು ಪಂಚಾಯತಿ ಕೇಂದ್ರಗಳಿಗೆ ಖರ್ಚು ಆಗುತ್ತಿದೆ. ಇಂತಹ ಪರಿಸ್ಥಿತಿ ಇವತ್ತಿನ ದಿವಸ ಉಂಟಾಗಿದೆ. ಇನ್ನು ಆ ಕೇಂದ್ರ ಸ್ಥಾನಗಳನ್ನು ನಿಗದಿ ಮಾಡಿದ್ದು ಆಯಿತು. ಇದಾದ ಮೇಲೆ ಈಗ ಯಾವ್ಯಾವ ಊರಿಗೆ ರಿಸರ್ವೇಷನ್ ಇರಬೇಕು. ಯಾರ್‍ಯಾರಿಗೆ ಮೀಸಲಾತಿ ಇಡಬೇಕು ಎಂಬ ಪ್ರಶ್ನೆ. ಇದರ ಬಗ್ಗೆ ಚರ್ಚೆನಡೆಯಿತು. ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ 10-15 ದಿವಸ ಬೇರ ಕೆಲಸವೇ ಇಲ್ಲ. ಬೆಳಿಗ್ಗೆಯಿಂದ ಸಂಜೆಯವರೆಗೆ ಸಂಜೆ ಅಲ್ಲ ಅರ್ಧ ರಾತ್ರಿಯವರೆಗೆ ಅನೇಕ ಸಾರಿ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಚರ್ಚೆ ನಡೆಯಿತು. ಈ ಮೀಸಲಾತಿ ಎಲ್ಲಿ ಯಾವ ಸ್ಥಾನ ಇರಬೇಕು ಏನು ಎನ್ನತಕ್ಕದ್ದರ ಬಗ್ಗೆ ಸರಿಯೋ ತಪ್ಪೋ ಒಂದು ಆಜ್ಞೆ ಹೊರಡಿಸಿದರು. ಆಜ್ಞೆ ಹೊರಡಿಸಿದ ಮೇಲೆ ಅದಕ್ಕೆ ಒಂದು ತಿದ್ದುಪಡಿ ಬೇಡ. ಏನು ಈ ತಿದ್ದುಪಡಿ ಜಾರಿಗೆ ಬರಬೇಕಾಗಿತ್ತು. ಇದನ್ನು ಜಾರಿ ಕೊಡಬೇಕಾದರೆ ಏನು ಕಾರಣ ಇದೆ. ಅದಕ್ಕೇ ಹೇಳಿದ್ದುದು ಪ್ರತಿ ಹಂತದಲ್ಲೂ ಸಹ ಈ ಹಸ್ತಕ್ಷೇಪ ಆಗಿದೆ. ಹಳ್ಳಿಗಳನ್ನು ವಿಂಗಡಿಸುವುದರಲ್ಲಿ, ಕೇಂದ್ರ ಸ್ಥಾನಗಳನ್ನು ರಚನೆ ಮಾಡುವುದರಲ್ಲಿ ಮೀಸಲಾತಿಗಳನ್ನು ಮಾಡುವುದರಲ್ಲಿ, ಪ್ರತಿ ಒಂದು ಹಂತದಲ್ಲೂ ಕೂಡ ಹಸ್ತಕ್ಷೇಪ. ಈ ಹಸ್ತಕ್ಷೇಪೇ ಆಗಿರುವುದರಿಂದ ಇದು ಒಂದು ವಿಕೃತವಾದಂತಹ ಮಸೂದೆ, ವಿಕೃತವಾದಂತಹ ಒಂದು ವ್ಯವಸ್ಥೆ ಜಾರಿಗೆ ಕೊಡುವಂತಹ ಪ್ರಯತ್ನ ನಡೆದಿದೆ. ಇನ್ನು ಚುನಾವಣೆ. ಇದರ ಬಗ್ಗೆ ಕೂಡ ಹೇಳಬೇಕಾಗುತ್ತದೆ. ಈ ಚುನಾವಣೆಗಳು ಆಗುತ್ತದೋ ಇಲ್ಲವೋ ಎನ್ನುವ ಪರಿಸ್ಥಿತಿ. ತಮಗೆ ಗೊತ್ತಿದೆ, ತಾವು ಅಧ್ಯಕ್ಷ ಸ್ಥಾನದಲ್ಲಿ ಕುಳಿತಿದ್ದರೆ, ನಮ್ಮ ಆ ಕಡೆಯ ಅನೇಕ ಸದಸ್ಯರು ಸುಮಾರು 60-70 ಜನ ಸದಸ್ಯರು ಇಲ್ಲಿ ಬಂದು ಧರಣ ನಡೆಸಿದ್ದುದೂ ಕೂಡ ತಮಗೆ ಗೊತ್ತಿದೆ. ಕಾರಣ ಕೂಡ ಗೊತ್ತಿದೆ. ಅದನ್ನು ತಪ್ಪಿಸಿಕೊಳ್ಳುವುದಕ್ಕೋಸ್ಕರ ನೋಡಿ ನಾವು ಪಂಚಾಯತಿ ರಾಜ್ಯ ಚುನಾವಣೆ ಮಾಡುತ್ತಿದ್ದೇವೆ ಎಂದು ಹೇಳಿದರು. ಇವರ ಮುಖ್ಯಮಂತ್ರಿಗಳ ಗದ್ದುಗೆಗೆ ಆಪತ್ತು ಬಂದಿತ್ತು. ಅವರ ಸ್ಥಾನ ಖುರ್ಚಿ, ಅಲುಗಾಡುತ್ತಿತ್ತು. ಆ ಅಲುಗಾಡುತ್ತಿರತಕ್ಕ ಸಂದರ್ಭದಲ್ಲಿ ಪರಿಸ್ಥಿತಿಯಲ್ಲಿ ಕೇಂದ್ರದವರಿಗೆ ಹೇಳಬೇಕಾಗಿತ್ತು, ಏನೆಂದು, ನಾನು

ಪಂಚಾಯತಿ ರಾಜ್ಯ ಚುನಾವಣೆಯನ್ನು ನಡೆಸುತ್ತಿದ್ದೇನೆ, ಆದ್ದರಿಂದ ಇವತ್ತಿನ ದಿವಸ ನನ್ನ ಮುಖ್ಯಮಂತ್ರಿ ಗದ್ದುಗೆಯನ್ನು ಅಲುಗಾಡಿಸುವುದು ಬೇಡ ಎಂದು ಹೇಳುವುದಕ್ಕೆ ಮುಖ್ಯಮಂತ್ರಿಗಳಿಗೆ ಒಂದು ನೆಪ ಬೇಕಾಗಿತ್ತು. ಅದನ್ನು ಬಹಳ ಯಶಸ್ವಿಯಾಗಿ ತಾವು ಉಪಯೋಗಿಸಿಕೊಂಡಿದ್ದೀರಿ. ತಮ್ಮ ಅನುಕೂಲಕ್ಕೋಸ್ಕರ ತಮ್ಮ ಗದ್ದುಗೆ ಅಲ್ಲಾಡುತ್ತಿತ್ತಲ್ಲ, ಕುರ್ಚಿ ಅಲ್ಲಾಡುತ್ತಿತ್ತಲ್ಲಾ ಅದನ್ನು ಭದ್ರಪಡಿಸಿಕೊಳ್ಳುವುದಕ್ಕೋಸ್ಕರ ಈ ಚುನಾವಣೆಯನ್ನು ನೀವು ಬೇಹಳ ಯಶಸ್ವಿಯಾಗಿ ಉಪಯೋಗಿಸಿಕೊಂಡಿದ್ದೀರಿ. ಇದು ಒಂದನೆಯ ಹಂತದ ಚುನಾವಣೆ ಈಗೇ ಆಗಿದೆ. ಇನ್ನು ಎರಡು ಹಂತಗಳ ಚುನಾವಣೆ, ಎರಡು ಸಮಸ್ಯೆಗಳ ಚುನಾವಣೆ ಆಗಬೇಕಾಗಿದೆ. ತಾಲ್ಲೂಕು ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ಕೂಡ ಚುನಾವಣೆ ಆಗಬೇಕಾಗಿದೆ. ಇವತ್ತು ಅದರ ಸದ್ದು ಗದ್ದಲ ಏನೂ ಇಲ್ಲ. ಯಾವಾಗ ನಡೆಯುತ್ತದೆ? ಅವರೇ ಪ್ರಚುರ ಪಡಿಸಿದ ಕಾರ್ಯಕ್ರಮಗಳ ಪ್ರಕಾರ ಮುಂದಿನ ತಿಂಗಳು ಚುನಾವಣೆ ನಡೆಯಬೇಕು. ಚುನಾವಣೆಯು ನಡೆಯಬೇಕು. ಇಲ್ಲಿಯವರೆಗೂ ಕೂಡ ಚುನಾವಣೆ ನಡೆಯುತ್ತದೆ ಅಥವಾ ಇಲ್ಲ ಎನ್ನತಕ್ಕ ಸೂಚನೆ ಇಲ್ಲ. ಒಬ್ಬ ಜವಾಬ್ದಾರಿ ಮಂತ್ರಿಗಳು, ಮಾನ್ಯ ಸಂಸದೀಯ ವ್ಯವಹಾರಗಳ ಖಾತೆಯ ಸಚಿವರು ಹೇಳಿದ್ದಾರೆ. ಅದನ್ನು ಮುಂದಕ್ಕೆ ಹಾಕತಕ್ಕಂಥ ಸಂಭವ ಇದೆ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಸಂಪುಟದ ಒಬ್ಬ ಸಚಿವರೇ ಇವತ್ತಿನ ದಿವಸ ಹೇಳಿದ್ದಾರೆ. ಪುನಃ ಇದನ್ನು ತಾವು ರಾಜಕೀಯ ದಾಳವನ್ನಾಗಿ ಉಪಯೋಗಿಸಿಕೊಳ್ಳಲು ಹೊರಟಿದ್ದೀರಿ. ಅಧಿಕಾರದ ವಿಕೇಂದ್ರೀಕರಣ ಎಂದರೆ ತಮ್ಮ ರಾಜಕೀಯ ದಾಳವನ್ನಾಗಿ ಉಪಯೋಗಿಸಿಕೊಳ್ಳುವುದಕ್ಕೆ ತಾವು ಪ್ರಯತ್ನ ಪಡುತ್ತಿದ್ದೀರಿ. ಏಕೆಂದರೆ ಈ ಸದನ, ಈ ಅಧಿವೇಶನ ಮುಗಿದ ತಕ್ಷಣ ನಿಮ್ಮ ಮಂತ್ರಿಮಂಡಲದ ವಿಸ್ತರಣೆ ಮಾಡುತ್ತೀರಿ. ಮಂತ್ರಿಮಂಡಲ ವಿಸ್ತರಣೆ ಮಾಡುವುದರಿಂದ ಏನು ಆಗುತ್ತದೆ. ಅದು ನನಗೆ ಗೊತ್ತಿಲ್ಲ. ಇವತ್ತು ನಮ್ಮ ಸರ್ಕಾರ ಭದ್ರವಾಗಿದೆ ಎಂದು ಬಹಳ ಲವಲವಿಕೆಯಿಂದ ತಾವು ಇದ್ದೀರಿ. ಬಹಳ ಸಂತೋಷ ನೀವು ಹಾಗೆಯೇ ಇರಬೇಕು. ಒಬ್ಬ ರಾಜ್ಯದ ಮುಖ್ಯಮಂತ್ರಿಯಾಗಿರತಕ್ಕವರು ರಾಜ್ಯದ ಕ್ಷೇಮವನ್ನು ಕಾಪಾಡತಕ್ಕದ್ದರಲ್ಲಿ ಬಹಳ ಲವಲವಿಕೆಯಿಂದ ಇರಬೇಕು, ಗೆಲುವಿನಿಂದ ಇರಬೇಕು, ನಾನು ಒಪ್ಪುತ್ತೇನೆ. ನಿನ್ನೆ ಹಾಗೂ ಇವತ್ತಿನ ಎರಡು ದಿವಸದ ಲವಲವಿಕೆ ಇದೆಯಲ್ಲಾ ನಿಮ್ಮದು, ಆ ಲವಲವಿಕೆ ಮಂತ್ರಿ ಮಂಡಲ ವಿಸ್ತರಣೆ ಇದೇ ರೀತಿ ಇರುತ್ತದೆಯೋ ಇಲ್ಲವೋ ಗೊತ್ತಿಲ್ಲ. ಅದಕ್ಕೆ ಪುನಃ ಉಪಯೋಗಿಸಿಕೊಳ್ಳತಕ್ಕದ್ದು, ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿ ಚುನಾವಣೆಗಳನ್ನು ಮುಂದೆ ಪುನಃ ಬರತಕ್ಕ ಆಪತ್ತು ಇದೆಯಲ್ಲಾ ಆ ಆಪತ್ತಿಗೆ ನೀವು ಉಪಯೋಗಿಸಿಕೊಳ್ಳುತ್ತೀರಿ ಎನ್ನುವುದೇ ನನ್ನ ಬಲವಾದ ನಂಬಿಕೆ. ಅದು ಹಾಗೆಯೇ ಇರಲಿ. ನಿಜವಾದಂತಹ ಅಧಿಕಾರ ವಿಕೇಂದ್ರಿಕರಣ ಆಗಬೇಕಾದ ಅವಶ್ಯಕತೆ ಇದೆ. ನಿಜವಾದಂತಹ ಆ ಶ್ರದ್ಧೆ, ಆ ಒಂದು -ಇಚ್ಛಾಶಕ್ತಿ ತಮ್ಮಲ್ಲಿದ್ದರೆ ಆಗ ನಿಮ್ಮ ರಾಜಕೀಯದ ದಾಳವನ್ನು ಈ ಅಧಿಕಾರದ ವಿಕೇಂದ್ರಿಕರಣ ಉಪಯೋಗಿಸಿಕೊಳ್ಳದೆ ನಿಜವಾದ ಅರ್ಥದಲ್ಲಿ ಅಧಿಕಾರದ ವಿಕೇಂದ್ರಿಕರಣ ಆಗಬೇಕಾಗಿರತಕ್ಕದ್ದು ಅವಶ್ಯಕತೆ ಇದೆ.

ಮಾನ್ಯ ಅಧ್ಯಕ್ಷರೇ, ಮುಂದೆ ಸರ್ಕಾರ ಏನು ಮಾಡುತ್ತದೆಂಬುದನ್ನು ನೋಡೋಣ. ಈಗ ಅಧ್ಯಕ್ಷರು ಮತ್ತು ಉಪಾಧ್ಯಕ್ಷ ಚುನಾವಣೆಗಳು ಯಾವ ರೀತಿ ನಡೆದಿದೆಯೆಂಬುದರ ಕುರಿತು ಅನೇಕ ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ಇದಕ್ಕೆ ನಮ್ಮ ಜಿಲ್ಲೆಯೂ ಸಹ ಹೊರತಾಗಿಲ್ಲ. ನಮ್ಮ ಜಿಲ್ಲೆಯಲ್ಲಿ ಚುನಾವಣಾ ಸಂದರ್ಭದಲ್ಲಿ ಪೊಲೀಸರಿಂದ ಗೋಲಿಬಾರ್ ನಡೆದಿಲ್ಲ ಆ ಪರಿಸ್ಥಿತಿಗೆ ನಮ್ಮ ಜಿಲ್ಲೆ ತಲುಪಿಲ್ಲ. ಇದು ಸಂತೋಷ ಪಡಬೇಕಾದ ವಿಚಾರವಾಗಿದೆ. ಅಲ್ಲಿ ಎಳೆದಾಟ, ಕಚ್ಚಾಟ ಎಲ್ಲವೂ ಕೂಡ ನಡೆದಿದೆ. ನಾನು ಪುನಃ ಹೇಳಬಯಸುತ್ತೇನೆ. ಈ ಪಕ್ಷ, ಆ ಪಕ್ಷದವರು ಎನ್ನತಕ್ಕಂಥ ಮಾತನ್ನು ಹೇಳುವುದಿಲ್ಲ. ಆದರೆ, ಇವೊತ್ತು ಯಾರ್ಯಾರಿಗೆ ಯಾವ್ಯಾವ ರೀತಿ ಅಧಿಕಾರ ದುರುಪಯೋಗ ಪಡಿಸಿಕೊಳ್ಳುವುದಕ್ಕೆ ಅವಕಾಶ ಸಿಕ್ಕಿದೆಯೋ ಅದೆಲ್ಲವನ್ನೂ ಮಾಡಿದ್ದಾರೆ. ನಾನು ಆಗಲೇ ತಿಳಿಸಿದಂತೆ ಕೋಲಾರದ ಒಂದು ಮೀಸಲಾತಿ ಕ್ಷೇತ್ರದ ಬಗ್ಗೆ

ನೋಟಿಫಿಕೇಷನ್ ಮಾಡಿದರು. ಹದಿನೈದ ಪಂಚಾಯತಿಗಳಲ್ಲಿ ಒಂದನೇ ಪಂಚಾಯತಿಯಿಂದ ಹದಿನೈದನೇ ಪಂಚಾಯತಿವರೆಗೆ ಅದಕ್ಕೆ ತಿದ್ದುಪಡಿ ಮಾಡಿದರು. ಯಾರ ಹಸ್ತಕ್ಷೇಪ ಇದು? ಹಸ್ತಕ್ಷೇಪ ಇಲ್ಲದೆ ಈ ರೀತಿ ತಿದ್ದುಪಡಿಯಾಗುವುದಕ್ಕೆ ಕಾರಣವೇನು? ಹಸ್ತಕ್ಷೇಪವಿಲ್ಲದೆ ಇದು ಸಾಧ್ಯವೇ ಇಲ್ಲ. ಬರೀ ಪಂಚಾಯತಿಗಳಿಗೆ ಮಾತ್ರವಲ್ಲದೆ ತಾಲ್ಲೂಕು ಸಮಿತಿಗಳಿಗೂ ಸಹ ಪುನಃ ಅದೇ ರೀತಿಯಲ್ಲಿ ಮೀಸಲಾತಿಯ ಯಾವ ಸ್ಥಾನ ಎಲ್ಲಿರಬೇಕೆಂಬುದರ ಬಗ್ಗೆ ಅದಕ್ಕೂ ತಿದ್ದುಪಡಿ. ಇದು ಅಲ್ಲಿಗೆ ನಿಲ್ಲುವುದಿಲ್ಲ. ಇದಕ್ಕೊಂದು ಮಿತಿ ಬೇಡವೇ? ಇತಿ-ಮಿತಿ ಏನೂ ಇಲ್ಲವೇ? ನಿಮಗೆ ಅಧಿಕಾರವಿದೆಯೆಂದು ಯಾವುದೋ ರೀತಿಯಲ್ಲಿ ಅಧಿಕಾರ ದುರುಪಯೋಗಪಡಿಸಿಕೊಂಡರೆ ವಾಸ್ತವವಾಗಿ ಏನಾಗುತ್ತದೆಂದರೆ, ನನ್ನಂಥವರಿಗೂ ಸಹನೆ ಮೀರುತ್ತದೆ. ಆ ಸಹನೆ ಮೀರಿದಂಥ ಸಂದರ್ಭಗಳಲ್ಲಿ ಏನಾಗುತ್ತದೆಂದರೆ, ಇವೊತ್ತು ರಾಜ್ಯಾದ್ಯಂತ ಏನಾಗಿದೆಯೋ ಅದು ಆಗುತ್ತದೆ. ಸುಸಂಸ್ಕೃತ ಜೀವನ, ನಾಗರಿಕ ಜೀವನ ನಡೆಸುವುದಕ್ಕೆ ಕಾನೂನು ಸಹಕಾರಿಯಾಗಬೇಕು. ಆದರೆ, ಆ ರೀತಿ ಸಹಕಾರಿಯಾಗಿಲ್ಲ. ಇವರು ಕಾನೂನು ದುರುಪಯೋಗಪಡಿಸಿಕೊಂಡಿರುವುದರಿಂದ ಇವೊತ್ತು ಜನರ ಸಹನೆ ಮೀರಿದೆ, ಸಹನೆ ಮೀರಿರುವುದರಿಂದ ಅನೇಕ ದುರ್ಘಟನೆಗಳು ನಡೆದಿದೆ. ಗೌರಿಬಿದನೂರು ತಾಲ್ಲೂಕಿನ ಕುರುಡಿ ಎಂಬ ಗ್ರಾಮದಲ್ಲಿ ಚುನಾವಣೆ ನಡೆಯುತ್ತಿದೆ, ಅವರು ಅಲ್ಲಿಗೆ ಹೋಗಿ ನಡವಳಿಕೆಗಳನ್ನು ಬರೆದುಕೊಳ್ಳಬೇಕಾಗುತ್ತದೆ. ಆದರೆ, ಪರಿಸ್ಥಿತಿ ಎಲ್ಲಿಯವರೆಗೆ ತಲುಪಿದೆಯೆಂದರೆ, ಪುಸ್ತಕ, ಕಾಗದ ಪತ್ರಗಳನ್ನೆಲ್ಲಾ ಹರಿದು ಬಿಸಾಕಿದರು. ಹೇಳುವವರು, ಕೇಳುವವರು ಯಾರೂ ಬೇಡವೇ? ಇದರ ಬಗ್ಗೆ ದೂರು ಕೊಟ್ಟರೂ ಏನೂ ಪ್ರಯೋಜನವಾಗಲಿಲ್ಲ. ಇಲ್ಲಿ ಯಾವ ಪಕ್ಷದವರು ಎಷ್ಟು ಸಂಖ್ಯೆಯಲ್ಲಿದ್ದರೆಂಬುದನ್ನು ಹೇಳುವುದಕ್ಕೆ ನಾನು ಹೋಗುವುದಿಲ್ಲ. ಚುನಾವಣೆ ನಡೆದ ದಿವಸ ಚುನಾವಣಾಧಿಕಾರಿಗಳು ತಂದಿರತಕ್ಕಂಥ ಕಾಗದ ಪತ್ರಗಳೇನಿವೆ, ಅದೆಲ್ಲವನ್ನೂ ಹರಿದು ಬಿಸಾಕಿದರು. ಸ್ಥಳದಲ್ಲಿ ಅಲ್ಲಿನ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಇದ್ದರು. ಅವರ ಉಸ್ತುವಾರಿಯಲ್ಲಿ ಕಾಗದ ಪತ್ರಗಳನ್ನು ಹರಿದು ಬಿಸಾಡುವಂಥ ಪ್ರಸಂಗ ನಡೆಯಿತು. ಏನು ಸ್ವಾಮಿ, ಈ ರೀತಿಯಾದಂಥ ಆಡಳಿತವನ್ನೇ ನೀವು ಕೊಡತಕ್ಕಂಥಾದ್ದು? ಪೊಲೀಸರು ಇರುವುದು ಕಾನೂನು ಸುವ್ಯವಸ್ಥೆಯನ್ನು ಕಟ್ಟುನಿಟ್ಟಾಗಿ ಕಾಪಾಡುವುದಕ್ಕೆ ಹೊರತು ಅವ್ಯವಸ್ಥೆಯನ್ನು ಉಂಟು ಮಾಡುವುದಕ್ಕಲ್ಲ. ಅವ್ಯವಸ್ಥೆಗೆ ಅವರು ಸಹಕರಿಸುವುದಕ್ಕಲ್ಲ ಇರುವುದು. ಇವೊತ್ತು ಅಲ್ಲಿನ ಸ್ಥಳೀಯ ಪೊಲೀಸ್ ಸಬ್ ಇನ್ಸ್‌ಪೆಕ್ಟರ್, ಅಧಿಕಾರಿಗಳು ಮತ್ತು ತಹಶೀಲ್ದಾರರು ನಿಮ್ಮ ಕೈಗೊಂಬೆಗಳಾಗಿ ನಡೆದುಕೊಂಡಿದ್ದಾರೆ.

ಒಂದು ಪಕ್ಷ ನಾನು ಹೇಳಿದ ರೀತಿಯಲ್ಲಿ ಯಾರಾದರೂ ಅಧಿಕಾರಿಗಳು ನಡೆದರೆ ಅದನ್ನೂ ಸಹ ನಾನು ಒಪ್ಪತಕ್ಕವನಲ್ಲ. ನಮ್ಮ ಪಕ್ಷದವರು ಯಾರಾದರೂ ಆ ರೀತಿ ಹೇಳಿದ್ದರೆ, ಆ ರೀತಿ ಯಾವ ಅಧಿಕಾರಿಯಾದರೂ ನಡೆದಿದ್ದರೆ, ಕಾನೂನಿಗೆ ವಿರುದ್ಧವಾಗಿ ನಡೆದಿದ್ದರೆ, ಅದನ್ನೂ ಸಹ ನಾನು ಒಪ್ಪತಕ್ಕವನಲ್ಲ, ಅಧಿಕಾರಿ ಇರತಕ್ಕದ್ದು ಕಾನೂನನ್ನು ಪಾಲಿಸುವುದಕ್ಕೋಸ್ಕರ. ಪೊಲೀಸರು ಇರತಕ್ಕದ್ದು ಕಾನೂನಿನ ಸುವ್ಯವಸ್ಥೆಯನ್ನು ಕಾಪಾಡುವುದಕ್ಕೋಸ್ಕರ. ಅದಕ್ಕೆ ಬದಲಾಗಿ ಅಲ್ಲಿರತಕ್ಕ ದಾಖಲೆಗಳನ್ನು, ಅಧಿಕೃತ ಪತ್ರಗಳನ್ನು ಹರಿದು ಬಿಸಾಕಿದರೆ ಅದನ್ನು ನೋಡಿ ಪೊಲೀಸರು ಸಹ, ಸಬ್‌ಇನ್ಸ್‌ಪೆಕ್ಟರ್ ಸಹ ಮೂಕ ಪ್ರೇಕ್ಷಕನಾಗಿರುತ್ತಾನೆಂದರೆ ಕಾನೂನು ಎಲ್ಲಿದೆ ಅಧ್ಯಕ್ಷರೆ? ಯಾವ ಪುರುಷಾರ್ಥಕ್ಕೋಸ್ಕರ ಈ ರೀತಿಯಾಗಿರತಕ್ಕ ಕಾನೂನಿನ ಅವ್ಯವಸ್ಥೆ ರಾಜ್ಯದಲ್ಲಿ ಉಂಟಾಗಿದೆ. ಅದಷ್ಟೇ ಅಲ್ಲ, ಗೌರಿಬಿದನೂರು ತಾಲ್ಲೂಕಿನ ಆಲಗನಹಳ್ಳಿಯಲ್ಲಿ ಎರಡು ಗುಂಪುಗಳು. ಒಂದು ಗುಂಪಿನವರು ಮತ್ತೊಂದು ಗುಂಪಿನವರ ಕಣ್ಣಿಗೆ ಖಾರದ ಪುಡಿಯನ್ನು ಎಸೆದರು. ಆದರೆ ಯಾರು ಖಾರದ ಪುಡಿಯನ್ನು ಎಸೆದರೋ ಅವರ ಮೇಲೆ ಕೇಸನ್ನು ದಾಖಲು ಮಾಡುವುದಿಲ್ಲ, ಯಾರು ಖಾರದ ಪುಡಿಯನ್ನು ಹಾಕಿಸಿಕೊಂಡರೋ ಅವರ ಮೇಲೆ ಕೇಸನ್ನು ರಿಜಿಸ್ಟರ್ ಮಾಡುತ್ತಾರೆ. ದೂರನ್ನು ಕೊಟ್ಟರೂ ಕೂಡ ಖಾರದ ಪುಡಿಯನ್ನು ಎಸೆದವರ ಮೇಲೆ ಕೇಸನ್ನು ರಿಜಿಸ್ಟರ್ ಮಾಡದೆ ಅದಕ್ಕೆ ಬದಲಾಗಿ ಖಾರದ ಪುಡಿಯನ್ನು ಹಾಕಿಸಿಕೊಂಡವರ ಮೇಲೆ ಕೇಸನ್ನು

ರಿಜಿಸ್ಟರ್ ಮಾಡತಕ್ಕ ಪರಿಸ್ಥಿತಿ ಉಂಟಾಗಿದೆ. ಇದಕ್ಕೆ ಏನು ಹೇಳಬೇಕು? ಇಂಥ ಪರಿಸ್ಥಿತಿ ಉಂಟಾದಾಗ ಒಬ್ಬ ಪ್ರಜ್ಞಾವಂತನಾಗಿರುವವನು ಸಮಾಧಾನಚಿತ್ತನಾಗಿರುವವನೂ ಸಹ ಉದ್ವೇಗ, ಕೋಪಗೊಳ್ಳುತ್ತಾನೆ. ಆ ಸಮಯದಲ್ಲಿ ಕಾನೂನಿನ ಸುವ್ಯವಸ್ಥೆ ಎನ್ನತಕ್ಕದ್ದು ಮುರಿದು ಬೀಳುತ್ತದೆ. ಅದಕ್ಕೆ ಏಕೆ ಅವಕಾಶ ಕೊಡುತ್ತೀರಿ? ತಪ್ಪು ಯಾರೇ ಮಾಡಿರಲಿ, ನಮ್ಮ ಪಕ್ಷದವರೇ ಮಾಡಿರಲಿ ಅವರ ಮೇಲೆ ಕ್ರಮ ತೆಗೆದುಕೊಳ್ಳಿ. ಆದರೆ ಆ ಕೆಲಸ ಆಗಲಿಲ್ಲ. ಆದರೆ ಇವರು ಯಾರು ಖಾರದ ಪುಡಿಯನ್ನು ಹಾಕಿಸಿಕೊಂಡರೋ ಅವರ ಮೇಲೆ ಕೇಸು ದಾಖಲು ಮಾಡಿ, ಖಾರದ ಪುಡಿಯನ್ನು ಹಾಕಿದವರ ಮೇಲೆ ಏನನ್ನೂ ಮಾಡಲಿಲ್ಲ. ನಿಮ್ಮ ಕಾನೂನು ಸುವ್ಯವಸ್ಥೆ ಇದೆಯೋ?

ಮಾಲೂರಿನಲ್ಲಿ ಒಂದು ಘಟನೆಯಾಯಿತು. ಆ ರೀತಿಯಾದ ಘಟನೆ ಆಗಬಾರದಾಗಿತ್ತು. ಅಲ್ಲಿ ಈ ಸದನದ ಶಾಸಕರೊಬ್ಬರ ಮೇಲೆ ಕೈ ಮಾಡಿರತಕ್ಕ ಪ್ರಸಂಗ ನಡೆದಿದೆ. ಆ ರೀತಿ ಆಗಬಾರದಿತ್ತು. ಇದರ ಬಗ್ಗೆ ಈಗಾಗಲೇ ಕೋರ್ಟ್‌ನ ಮುಂದೆ ಹೋಗಿದೆ. ಆದರೆ ಈ ಘಟನೆಗೆ ಕೊಟ್ಟಿರುವ ಪ್ರಚಾರವೇನೆಂದರೆ, ಅವರನ್ನು ಕೊಲೆ ಮಾಡತಕ್ಕಂಥ ಉದ್ದೇಶದಿಂದ ಈ ಘಟನೆಯಾಗಿದೆ ಎಂದು. ಅವರನ್ನು ಕೊಲೆ ಮಾಡತಕ್ಕ ಉದ್ದೇಶ ಹೊಂದಿದ್ದರೆ ಇವತ್ತು ಮಾಜಿಸ್ಟ್ರೇಟರ್ ಮುಂದೆ ಹೋಗಿದ್ದರೆ ಅವರು ಆ ತಕ್ಷಣ ಬೇಲನ್ನು ಕೊಟ್ಟು ವಾಪಸ್ಸ್ ಬಂದಿದ್ದಾರೆ. ಅಲ್ಲಿ ಸಣ್ಣಪುಟ್ಟ ಘಟನೆಯಾಗಿದೆ ಅದೂ ಕೂಡ ನಡೆಯಬಾರದಾಗಿತ್ತು. ಅದನ್ನು ಯಾರೇ ಮಾಡಿರಲಿ ನಾನು ಖಂಡಿಸುತ್ತೇನೆ. ಮಾಲೂರಿನಲ್ಲಿ ಶಾಸಕರಾದ ನಾಗರಾಜ್‌ರವರ ಮೇಲೆ ಯಾರು ಕೈ ಮಾಡಲು ಪ್ರಯತ್ನ ಮಾಡಿದರೋ ಅದನ್ನು ನಾನು ಖಂಡಿಸುತ್ತೇನೆ. ಆ ರೀತಿ ಆಗಬಾರದಾಗಿತ್ತು. ಆದರೆ ಆ ಘಟನೆಗೆ ಕೊಟ್ಟಿರತಕ್ಕಂಥ ಪ್ರಚಾರವೇನೆಂದರೆ, ನಮ್ಮ ಪಕ್ಷದವರೇ ಅವರ ಮೇಲೆ ಕೈ ಮಾಡಿರತಕ್ಕದ್ದೆಂದು. ನಮ್ಮ ಪಕ್ಷದ ವ್ಯಕ್ತಿ ಎಂದು ನಮ್ಮ ಪಕ್ಷದ ಹೆಸರನ್ನು ದೊಡ್ಡದಾಗಿ ದಪ್ಪ ಅಕ್ಷರಗಳಲ್ಲಿ ಎಲ್ಲಾ ಪತ್ರಿಕೆಗಳಲ್ಲೂ ಬರತಕ್ಕಂಥ ರೀತಿಯಲ್ಲಿ ಅದನ್ನು ನಡೆಸಿದರು. ನಮ್ಮ ಪಕ್ಷದವರೇನಾದರೂ ಆ ರೀತಿ ಮಾಡಿದ್ದರೆ ಅದು ತಪ್ಪು, ಅದು ತಪ್ಪಲ್ಲವೆಂದು ನಾನು ಹೇಳುವುದಿಲ್ಲ. ಅದನ್ನು ನಾನು ಖಂಡಿಸುತ್ತೇನೆ. ಆದರೆ ನಮ್ಮ ಪಕ್ಷದವರು ಮಾಡಿದರೆಂದು ಪ್ರಚಾರ ಮಾಡುವ ಏನು ಪ್ರಯತ್ನ ಮಾಡಿದ್ದಾರೆ ಅದರ ಬಗ್ಗೆ ನನಗೆ ವ್ಯಥೆಯಾಗಿದೆ. ನಮ್ಮ ತಾಲ್ಲೂಕಿನಲ್ಲಿ ಆಕಸ್ಮಿಕವಾಗಿ ಒಂದು ಘಟನೆಯಾಗಿದೆ. ನೂಕುನುಗ್ಗಲಿನಲ್ಲಿ ಒಬ್ಬ ವ್ಯಕ್ತಿ ಸಾಯುತ್ತಾನೆ. ಆ ವಿಷಯವನ್ನು ಕೇಳಿ ನನಗೂ ಸಹ ಬಹಳ ವ್ಯಸನವಾಯಿತು. ಅನ್ಯಾಯವಾಗಿ ಒಬ್ಬ ವ್ಯಕ್ತಿಯ ಪ್ರಾಣ ಹೋಯಿತಲ್ಲಾ, ಒಬ್ಬ ವ್ಯಕ್ತಿ ಸತ್ತು ಹೋದನಲ್ಲಾ ಎಂದು ವ್ಯಸನವಾಯಿತು. ಅದು ಆಗಬಾರದಾಗಿತ್ತು. ಆ ವ್ಯಕ್ತಿಯ ಸಾವು ನೂಕು ನುಗ್ಗಲಿನಲ್ಲಿ ಆಗಿರತಕ್ಕದ್ದು. ಆದರೆ ಅದಕ್ಕೆ ಇವತ್ತು ಕೊಲೆಯ ಮೊಕದ್ದಮೆಯನ್ನು ದಾಖಲು ಮಾಡಿದ್ದಾರೆ. ಇದಕ್ಕೆ ಏನು ಹೇಳಬೇಕು? ಅದು ನೂಕುನುಗ್ಗಲಿನಲ್ಲಿ ಆದ ಸಾವು, ಆ ರೀತಿ ಆಗಬಾರದಾಗಿತ್ತು, ಆದರೂ ಕೂಡ ನಡೆದಿದೆ. ಈ ಮಣಿಘಟ್ಟ ಎನ್ನತಕ್ಕವರಲ್ಲಿ ಯಾರಾದರೂ ಕೂಡ ಕಾರಣಕರ್ತರಾಗಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಿ ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಆದರೆ ಆ ಸಾವು ಆಕಸ್ಮಿಕವಾಗಿ ಆಗಿರತಕ್ಕದ್ದು. ಅವನನ್ನು ಸಾಯಿಸಬೇಕು ಎನ್ನತಕ್ಕ ಉದ್ದೇಶ ಯಾರಿಗೂ ಸಹ ಇರಲಿಲ್ಲ. ಒಂದು ವೇಳೆ ಯಾರ ತಪ್ಪಿನಿಂದಲಾದರೂ ಆ ಸಾವು ಆಗಿದ್ದರೆ, ಯಾರು ಕಾರಣಕರ್ತರೋ ಅವರ ಮೇಲೆ ಮಾತ್ರ ಮೊಕದ್ದಮೆಯನ್ನು ದಾಖಲು ಮಾಡಬೇಕಾಗಿತ್ತು ಆದರೆ ಊರಿನಲ್ಲಿರತಕ್ಕ ಎಲ್ಲರಮೇಲೂ ಮೊಕದ್ದಮೆ ಹಾಕುತ್ತಾರೆ. ಕೃಷ್ಣಪ್ಪ ಎನ್ನತಕ್ಕಂಥ ಸಂಭಾವಿತ ಮತ್ತು ಸಹನಶೀಲ ವ್ಯಕ್ತಿ. ಅವರ ಮೇಲೆ ಕೂಡ ಇವತ್ತು 304ನೇ ನಿಯಮದ ಪ್ರಕಾರ ಕೇಸನ್ನು ದಾಖಲು ಮಾಡಿದ್ದಾರೆ. ಯಾರ್‍ಯಾರು ನಮ್ಮ ಪಕ್ಷದ ಮುಖಂಡರಾಗಿರುತ್ತಾರೋ ಯಾರ್‍ಯಾರು ಜನರ ಮೆಚ್ಚುಗೆಯನ್ನು ಪಡೆದಿರುತ್ತಾರೋ ಅವರನ್ನು ಈ ಕೇಸ್‌ನಲ್ಲಿ ಸೇರಿಸತಕ್ಕದ್ದು ಮಾಡುತ್ತಿದ್ದಾರೆ.

ಇನ್ನು ನಾನು ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇಂತಹ ಘಟನೆಗಳು ನಡೆಯುವುದಿಲ್ಲವೆಂದು ಭಯಪಡಬೇಡಿ. ಆಕಸ್ಮಿಕವಾಗಿ ನಡೆಯುತ್ತವೆ. ಅಂತಹ ಘಟನೆಗಳಲ್ಲಿ ನಮಗೂ ಅವಕಾಶ ಸಿಕ್ಕುತ್ತವೆ. ಎಂಬುದನ್ನು ದಯಮಾಡಿ ತಾವು ಮರೆಯಬಾರದು. ಸಿಕ್ಕಿದರೂ ಸಹ ನಾವು ಉಪಯೋಗಿಸಿಕೊಳ್ಳುವುದಿಲ್ಲ ಎಂಬ ಮಾತನ್ನು ಕೂಡ ಈ ಸಂದರ್ಭದಲ್ಲಿ ಹೇಳಲು ಇಷ್ಟಪಡುತ್ತೇನೆ. ಇಡೀ ತಾಲ್ಲೂಕಿನಲ್ಲಿ ಸಂಭಾವಿತರಾದಂತಹ ಮತ್ತು ಜನರು ಮೆಚ್ಚಿರುವಂತಹ ಮನುಷ್ಯ ಯಾರಿದ್ದಾರೆ, ಅಂಥವರ ಮೇಲೆ ಕೊಲೆ ಮೊಕದ್ದಮೆಯನ್ನು ಮಾಡಿಸಿದ್ದಾರೆ. ಇವತ್ತಿನ ದಿವಸ ಇದರ ಬಗ್ಗೆ ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ, ಬಹುಶಃ ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ಉತ್ತರ ಕೊಡುತ್ತಾರೆ ಎಂದು ತಿಳಿದುಕೊಂಡಿದ್ದೇನೆ. ತಾವು ಅದರ ವಿವರಗಳ ಕೇಸ್ ಡೈರಿಯನ್ನು ತರಿಸಿ ಅದರಿಂದ ಏನು ಎಂಬುದು ನೋಡೋಣ. ಅವರು ಅದರಲ್ಲಿ ಕೊಟ್ಟಿರುವ ಮೊದಲ ಮಾಹಿತಿ ಆ ಮನುಷ್ಯ ಆ ಸ್ಥಳದಲ್ಲಿ ಸಾಯುತ್ತಾನೆ ಎಂದು ಎಫ್.ಐ.ಆರ್.ನಲ್ಲಿದೆ. ಅದರಲ್ಲಿ ಇಂಥವರು ಕುಸಿದು ಬಿದ್ದರು, ಬಿದ್ದಮೇಲೆ ಅವರನ್ನು ಇಂತಹ ಕಡೆ ಕರೆದುಕೊಂಡು ಹೋದೆವು. ಅಲ್ಲಿ ಹಾಲು ಕುಡಿಸಿದೆವು. ಹಾಲು ಕುಡಿಯುವುದಕ್ಕೆ ಆಗಲಿಲ್ಲ, ಎಂದು ಎಫ್.ಐ.ಆರ್.ನಲ್ಲಿದೆ. ಆಮೇಲೆ ಅವರನ್ನು ಆಸ್ಪತ್ರೆಗೆ ಸಾಗಿಸಿದೆವು. ಅದು ಯಾರ ಕಾರಿನಲ್ಲಿ ಆಸ್ಪತ್ರೆಗೆ ಸಾಗಿಸಿದ್ದಾರೆ ಎಂದರೆ ಯಾರ ಮೇಲೆ ಆರೋಪ ಹೊರಿಸಿದ್ದಾರೋ ಅವರ ಕಾರಿನಲ್ಲಿ ಆಸ್ಪತ್ರೆಗೆ ಸಾಗಿಸಿದ್ದಾರೆ ಅಲ್ಲಿ ಡಾಕ್ಟರ್ ಮನುಷ್ಯ ಮೃತನಾಗಿದ್ದಾನೆ ಎಂದು ಸುಮಾರು 10.00 ಗಂಟೆಗೆ ಹೇಳಿದ್ದಾರೆ. ಕಂಪ್ಲೆಂಟ್ ರಿಜಿಸ್ಟರ್ ಸಂಜೆ ಮೂರು ಗಂಟೆಗೆ ಆಗುತ್ತದೆ. ಸುಮಾರು 5 ಗಂಟೆಗೆ ಮ್ಯಾಜಿಸ್ಟ್ರೇಟರ್ ಹತ್ತಿರ ಹೋಗುತ್ತದೆ. ಅಧ್ಯಕ್ಷರೇ, ಅಲ್ಲಿ ಚುನಾವಣೆಯು ನಡೆದಿದೆ. ನಮ್ಮ ಪಕ್ಷದವರೇ ಗೆದ್ದಿದ್ದಾರೆ. ಚುನಾವಣೆಯಲ್ಲಿ ಮಾತ್ರ ಯಾವ ವಿಧವಾದಂತಹ ಅಡ್ಡಿಅಡಚಣೆಗಳು ಆಗಿಲ್ಲ, ಇದನ್ನು ತಾವು ಸ್ವಲ್ಪ ಆಲೋಚನೆ ಮಾಡಬೇಕು. ಒಬ್ಬ ಮನುಷ್ಯ ಸಣ್ಣ ನೂಕುನುಗ್ಗಲಿನಲ್ಲಿ ಸತ್ತರೆ ದೊಡ್ಡ ಘರ್ಷಣೆಯೇ ನಡೆದು ಹೋಗುತ್ತದೆ. ಅಂಥದ್ದರಲ್ಲಿ ಚುನಾವಣೆಯು ಶಾಂತಿಯುತವಾಗಿ ನಡೆದಿದೆ. ಅಧ್ಯಕ್ಷರು, ಉಪಾಧ್ಯಕ್ಷರು ಚುನಾಯಿತರಾಗಿದ್ದಾರೆ. ನೀವು ಅದನ್ನು ಕೊಲೆ ಎಂದು ತೋರಿಸುವುದಕ್ಕೆ ಹೊರಟಿದ್ದೀರಲ್ಲಾ, ಈ ರೀತಿಯಾದಂತಹ ದಾಳವನ್ನು ಆಡುವುದಕ್ಕೆ ತಾವು ಹೊರಟಿದ್ದೀರಲ್ಲಾ? ಇದನ್ನು ಜನರು ಕ್ಷಮಿಸುತ್ತಾರೆಂದು ತಿಳಿದುಕೊಂಡಿದ್ದಾರಾ? ಖಂಡಿತವಾಗಿ ಕ್ಷಮಿಸುವುದಿಲ್ಲ, ಇದನ್ನು ತಾವು ದಯಮಾಡಿ ಅರ್ಥ ಮಾಡಿಕೊಳ್ಳಬೇಕು. ಅವರು ಮೃತ ವ್ಯಕ್ತಿಯನ್ನು ಆಸ್ಪತ್ರೆಗೆ ತರುತ್ತಾರೆ. ಅಲ್ಲಿ ಅಪಘಾತದ ಪುಸ್ತಕದಲ್ಲಿ ದಾಖಲಾಗುತ್ತದೆ. ಅವನು ತುಳಿತಕ್ಕೆ ಸಿಕ್ಕಿ ಸತ್ತಿದ್ದಾನೆ ಎಂದು ದಾಖಲು ಆಗಿದೆ. ಆಸ್ಪತ್ರೆಯಲ್ಲಿ ಮೊದಲ ಇನ್‌ಫರ್ ಮೇಷನ್ ಅದು. ಅದರ ಆಧಾರದ ಮೇಲೆ ಕೇಸ್ ರಿಜಿಸ್ಟಾರ್ ಆಗಬೇಕಾಗಿತ್ತು. ಅದು ಸರಿಯಾಗಿ ಆಗಲಿಲ್ಲ, ಯಾರು ರಾಜಕೀಯವಾಗಿ ವಿರೋಧವಾಗಿದ್ದಾರೆ. ಆ ರಾಜಕೀಯ ವಿರೋಧಿಗಳನ್ನು ಈ ಕೇಸ್‌ನಲ್ಲಿ ಸಿಕ್ಕಿಸುವಂತಹ ಪ್ರಯತ್ನ ನಡೆದಿದೆ. ಇದು ನಿಮಗೆ ಸಾಧಾರಣವೆಂದು ತಿಳಿದುಕೊಂಡಿದ್ದಿರಾ? ಆಸ್ಪತ್ರೆಯಿಂದ ಅಪಘಾತ ದಾಖಲೆಯ ಪುಸ್ತಕದಲ್ಲಿ 10.30 ಗಂಟೆಗೆ ಸತ್ತ ವ್ಯಕ್ತಿಯ ದೂರು, 3 ಗಂಟೆಗೆ, ಆಗಿದೆ. ಅಲ್ಲಿ 10-15ಕಂಪ್ಲೆಂಟ್ ಗಳನ್ನು ಬರೆದು ಹರಿದು ಬಿಸಾಡಿದ್ದಾರೆ. ಯಾರು ಯಾರನ್ನು ಸೇರಿಸಬೇಕು ಎಂದು ಚರ್ಚೆ ನಡೆದು, ಇಂಥವರನ್ನು ಸಿಕ್ಕಿಸಬೇಕು, ಇಂಥವರನ್ನು ಸಿಕ್ಕಿಸಬಾರದು ಎಂದೆಲ್ಲಾ ದೊಡ್ಡ ಚರ್ಚೆ ನಡೆದು ಕೊನೆಗೆ ಯಾರು ಹೋದ ಸಾರಿ ಚುನಾವಣೆಯಲ್ಲಿ ನಮ್ಮ ಪಕ್ಷದ ಅಭ್ಯರ್ಥಿಯಾಗಿ ನಿಂತಿದ್ದರೋ ಅಂಥವರನ್ನು ಸಿಕ್ಕಿಸುವಂತಹ ಪ್ರಯತ್ನ ನಿಮ್ಮ ಪಕ್ಷದಿಂದ ನಡೆಯುತ್ತಿದೆ. ಇದಕ್ಕೆ ಜನರು ಉತ್ತರ ಕೊಡುತ್ತಾರೆ. ಆದರೆ ನೀವು ಮಾಡುವಂತಹ ಕೆಲಸವನ್ನು ನಾವು ಮಾಡುವುದಕ್ಕೆ ಹೋಗುವುದಿಲ್ಲ, ಈಗಾಗಲೇ ಜನರು ಇದರ ಬಗ್ಗೆ ಯಾವ ರೀತಿಯಾಗಿ ಉತ್ತರ ಕೊಡಬೇಕು ಎಂಬುದನ್ನು ಅವರು ತೀರ್ಮಾನ ಮಾಡಿದ್ದಾರೆ. ಈ ರೀತಿಯಾದ

ವ್ಯವಸ್ಥೆಗೆ, ಸೇಡಿನ ರಾಜಕೀಯವನ್ನು ನಡೆಸುವಂಥದ್ದು ಏನಿದೆ. ಇದು ಸರಿಯಲ್ಲ ಆಕಸ್ಮಿಕವಾದಂತಹ ಸಾವನ್ನು ಇವತ್ತಿನ ದಿವಸ ಕೊಲೆ ಎಂದು ಕುತಂತ್ರ ರಾಜಕೀಯ ಮಾಡುವುದಕ್ಕೆ ತಾವು ಹೊರಟಿದ್ದಿರಿ. ಅದಕ್ಕೆ ಇಡೀ ಜಿಲ್ಲೆಯ ಜನರು ಪಾಠ ಕಲಿಸುತ್ತಾರೆ. ಇದರ ಬಗ್ಗೆ ನಾನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಇದನ್ನು ಯಾರೇ ನಡೆಸಲಿ ಅದನ್ನು ನಾನು ಖಂಡಿಸುತ್ತೇನೆ. ನಮ್ಮ ಕಾರ್ಯಕರ್ತರೇ ಕಾರಣರಾದರೂ ನಾನು ಎಕ್ಸ್‌ಕ್ಯೂಸ್ ಮಾಡುವಂಥವನಲ್ಲ. ಮಾಡುವುದೂ ಇಲ್ಲ. ಆದರೆ ಇದು ಆಗಬಾರದಾಗಿತ್ತು ಆಗಿ ಹೋಗಿದೆ. ಇಂತಹ ಆಕಸ್ಮಿಕವಾದ ಸಾವಿನಲ್ಲೂ ರಾಜಕೀಯವನ್ನು ನಡೆಸುವಂತಹ ಪ್ರಯತ್ನ ಇವತ್ತು ನಡೆದಿದೆ. ಸಾವು ನೋವಿನಲ್ಲೂ ರಾಜಕೀಯ ಮಾಡುವುದಕ್ಕೆ ತಾವು ಹೊರಟಿದ್ದೀರಲ್ಲಾ ಇದು ಬಹಳ ದಿವಸ ನಡೆಯುತ್ತದೆಂದು ತಿಳಿದುಕೊಂಡಿದ್ದೀರಾ?

5.40 ಪಿ.ಎಂ

ನಡೆಯುವುದಕ್ಕೆ ಸಾಧ್ಯ ಇಲ್ಲ. ಆದುದರಿಂದ ಇವತ್ತು ತಾವು ಇದರ ಬಗ್ಗೆ ವಿವರಣೆ ಕೊಡಬೇಕು. ಆಕ್ಸಿಡೆಂಟ್ ರಿಜಿಸ್ಟರ್‌ನಲ್ಲಿ ಏನು ನಮೂದಾಗಿದೆ ಅದನ್ನು ತರಿಸಿ, ಗೊತ್ತಾಗುತ್ತದೆ. ನಮ್ಮ ಸ್ನೇಹಿತರು ಎಲ್ಲಿ ಗೋಲಿಬಾರ್ ಆಗಿದೆ ಅಲ್ಲಿ ನ್ಯಾಯಾಂಗ ತನಿಕೆಯಾಗಬೇಕು ಎನ್ನುವಂತಹ ಮಾತನ್ನು ಹೇಳಿದ್ದಾರೆ. ಆ ನ್ಯಾಯಾಂಗ ತನಿಖೆಗೆ ಇದನ್ನೂ ಸಹ ಸೇರಿಸಬೇಕು, ವಿಚಾರಣೆ ಆಗಬೇಕು. ತಪ್ಪಿತಸ್ಥರು ಯಾರು ಮತ್ತು ಯಾವ ರೀತಿ ನಡೆಯಿತು ಎನ್ನತಕ್ಕಂಥದ್ದು ತೀರ್ಮಾನವಾಗಲಿ. ಅಧಿಕಾರವನ್ನು ದುರುಪಯೋಗ ಪಡಿಸತಕ್ಕಂಥ ಪ್ರಯತ್ನ ಇಲ್ಲಿ ನಡೆಯುತ್ತಿದೆ. ಅದು ಯಾರು ಅಧಿಕಾರ ದುರುಪಯೋಗ ಪಡಿಸಿಕೊಂಡಿದ್ದಾರೆ ಎನ್ನುವಂಥಾದ್ದು ತೀರ್ಮಾನವಾಗಲಿ. ಆದುದರಿಂದ ಮಾನ್ಯ ಅಧ್ಯಕ್ಷರೇ, ತಮ್ಮ ಮೂಲಕ ನಾನು ಸರ್ಕಾರಕ್ಕೆ ಕೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಎಲ್ಲಿ ಗಲಭೆ ಗಲಾಟೆಗಳು ನಡೆದಿದೆ ಅಲ್ಲಿ ಸದನದ ಸಮಿತಿ ವಿಚಾರ ನಡೆಸಬೇಕು. ಮತ್ತು ನಮ್ಮ ತಾಲ್ಲೂಕಿನ ಮಣಿಗಟ್ಟಿದಲ್ಲಿ ನಡೆದಿರತಕ್ಕಂತಹ ಘಟನೆ ಏನು ಇದೆ ಇದನ್ನು ಸಹ ನ್ಯಾಯಾಂಗ ತನಿಖೆಗೆ ಒಳಪಡಿಸಬೇಕಾಗಿರತಕ್ಕಂತಹ ಅವಶ್ಯಕತೆ ಇದೆ. ಆ ನಿರಾಪರಾಧಿಗಳು, ಸೌಮ್ಯ ವ್ಯಕ್ತಿಗಳ ಮೇಲೆ, ಅತ್ಯಂತ ಗೌರವಾನ್ವಿತ ವ್ಯಕ್ತಿಗಳ ಮೇಲೆ ಕೊಲೆ ವಿಚಾರದಲ್ಲಿ ಸಿಕ್ಕಿ ಹಾಕಿಸತಕ್ಕಂಥ ಪ್ರಯತ್ನ ಏನು ನಡೆಯುತ್ತಿದೆ ಅದನ್ನೂ ಕೂಡ ಜ್ಯುಡಿಷಿಯಲ್ ಎನ್‌ಕ್ವಯರಿ ಸೇರಿಸಬೇಕಾಗಿರತಕ್ಕಂತಹ ಅವಶ್ಯಕತೆ ಇದೆ. ಇನ್ನು ಮುಂದೆ ಈ ರೀತಿಯಾದಂತಹ ರಾಜಕೀಯವನ್ನು ನಡೆಸುವುದು ಬೇಡ. ಎಂದು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಸಾವಿನಲ್ಲಿ ನೋವಿನಲ್ಲಿ ರಾಜಕೀಯವನ್ನು ನಡೆಸತಕ್ಕಂಥಾದ್ದು ಬೇಡ. ಅದು ಯಾರಿಗೂ ಕೂಡ ಶೋಭಾಯಮಾನ ತರತಕ್ಕಂಥಾದ್ದು ಅಲ್ಲ. ತಮ್ಮ ಆಕ್ಸಿಡೆಂಟ್ ರಿಜಿಸ್ಟರ್‌ನ್ನು ತರಿಸಿ.

ಶ್ರೀ ಎಂ. ವೀರಪ್ಪ ಮೊಯಿಲಿ: ತಾವು ಈ ರೀತಿ ಸುಮ್ಮನೆ ಕಥೆ ಕಟ್ಟಿ ವರ್ಣಮಯವಾದ ಕಥೆ ಮಾಡಿ ನೀವು ರಾಜಕೀಯವನ್ನು ಮಾಡುತ್ತೀರಿ, ಅದು ಮಾಡುತ್ತೀರಿ ಎಂದು ಹೇಳಿದರೆ ಹೇಗೆ? ತಾವು ಈ ವಿಷಯದ ಬಗ್ಗೆ ಹೇಳಿದ್ದೀರಿ. ಅದನ್ನು ತರಿಸಿ ನೋಡೋಣ, ಎಲ್ಲಿಯೂ ಸಹ ಅನ್ಯಾಯ ಮಾಡುವಂತಹ ಪರಿಸ್ಥಿತಿಗೆ ಹೋಗುವುದಿಲ್ಲ. ಅಲ್ಲಿ ಅನ್ಯಾಯವಾಗಿ ಮತ್ತೊಬ್ಬರ ಮೇಲೆ ಕೇಸ್ ಮಾಡತಕ್ಕಂಥಹ ಆ ಪಾಪದ ಕೆಲಸ ನಾನು ಮಾಡುವುದಿಲ್ಲ. ಅದು ನಮಗೆ ಬೇಕಾಗಿಲ್ಲ. ನಿಮ್ಮ ಪಾಲಿಗೆ ಇರಲಿ. ಆದುದರಿಂದ ಇದರ ಬಗ್ಗೆ ನೀವು ಶಂಕೆ ಪಡಬೇಕಾಗಿಲ್ಲ. ನಾವು ರಿಜಿಸ್ಟರ್ ತರಿಸಿ ಅದರಲ್ಲಿ ಏನು ಇದೆ ಅದನ್ನು ಡಿಜಿಪಿಯವರ ಹತ್ತಿರ ಹೇಳಿ, ಅವರ ಹತ್ತಿರವೇ ಖುದ್ದು ಪರಿಶೀಲನೆ ಮಾಡಿ ಅದು ಏನಿದೆ ಅದರ ಸತ್ಯಾಸತ್ಯತೆ ನಾವು ಹೇಳುತ್ತೇವೆ. ಆದರೆ ತಾವು ಸುಮ್ಮನೆ ಈ ತರಹ ಮಾಡುತ್ತಿದ್ದೀರಿ, ಆ ತರಹ ಮಾಡುತ್ತಿದ್ದೀರಿ ಎಂದು ಬಹಳ ವರ್ಣಮಯವಾಗಿ ಹೇಳುತ್ತಿದ್ದೀರಿ. ನಿಮಗೆ ಇದರಿಂದ ಸದನದಲ್ಲಿ ಸಂತೋಷ ತರುವುದಿದ್ದರೆ You can enjoy it.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ನಿಜ ಘಟನೆಯನ್ನು ನಾನು ಹೇಳಿದ್ದೇನೆ. ನಾನು ಪುಸ್ತಕ ಬರೆಯತಕ್ಕಂತವನು ಅಲ್ಲ. ಸಿನಿಮಾ ತಯಾರು ಮಾಡತಕ್ಕಂಥವನು ಅಲ್ಲ, ಮತ್ತು ಸುಳ್ಳು ಹೇಳತಕ್ಕಂತವನು ಅಲ್ಲ, ಏನು ನಡೆದಿದೆ ಅದನ್ನು ಹೇಳಿದ್ದೇನೆ. ಆದರೆ ಅವರು ಅದೆಲ್ಲಾ ನಿಮಗೆ ಇರಲಿ ಎಂದು ಹೇಳಿದ್ದಾರೆ. ಆ ರೀತಿ ಹೇಳತಕ್ಕಂಥಾವನು ಅಲ್ಲ. ಅದನ್ನು ಯಾರೇ ಮಾಡಿದ್ದರೂ ಕೂಡ ಖಂಡಿಸುತ್ತೇನೆ. ಅವರು ಏನು ಹೇಳುತ್ತಾರೆಂದರೆ ನಿಮಗೆ ಇರಲಿ ಎಂದು ಹೇಳುತ್ತಿದ್ದಾರೆ. ಸ್ವಾಮಿ, ಅದು ನಿಮಗೂ ಬೇಡ ನಮಗೂ ಬೇಡ.ಏನು ನಡೆದಿದೆ ಅದನ್ನು ನಡೆಸಿ, ನಿಜಾಂಶ ಏನು ಇದೆ ಅದಕ್ಕೆ ತಾವು ಕಟ್ಟು ಬೀಳಿರಿ.

ಶ್ರೀ ಕೆ. ಹೆಚ್. ರಂಗನಾಥ್ : ಮಾನ್ಯ ಅಧ್ಯಕ್ಷರೇ, ಒಬ್ಬರು ಕವನ ಬರೆಯುತ್ತಾರೆ, ಒಬ್ಬರು ಕತೆ ಬರೆಯುತ್ತಾರೆ, ಒಬ್ಬೊಬ್ಬರು ಪೈಟಿಂಗ್ ಮಾಡುತ್ತಾರೆ. ಒಬ್ಬೊಬ್ಬರು ಬಹಳ ಚೆನ್ನಾಗಿ ವರ್ಣರಂಜಿತವಾಗಿ ಭಾಷಣ ಮಾಡುತ್ತಾರೆ, ತಮಗೆ ಯಾವ ಕಲೆ ಇದೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಮಾನ್ಯ ಮುಖ್ಯಮಂತ್ರಿಗಳು ಎಲ್ಲಾ ಕಲೆಗಳನ್ನು ಕರಗತ ಮಾಡಿಕೊಂಡಿದ್ದಾರೆ. ಎಲ್ಲಾ ಕಲೆಯೂ ಅವರಲ್ಲೇ ಇದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಭಾಷಣ ಕೇಳುವಷ್ಟು ತಾಳ್ಮೆ ಕಳೆದುಕೊಂಡು ಬಿಟ್ಟರು. ಈಗ ನಿಮಗೆ ಉತ್ತರ ಕೊಡುವುದಕ್ಕೆ ಸಾಕಷ್ಟು ಅವಕಾಶ ಇದೆ. ಆ ಉತ್ತರ ಕೊಡುವಾಗ ನೀವು ವರ್ಣಮಯವಾಗಿ ಅವರು ಹೇಳಿದ್ದನ್ನೇ ನೀವು ಹೇಳಬಹುದು. ಅದರಲ್ಲಿ ನನ್ನ ಅಭ್ಯಂತರ ಇಲ್ಲ, ಇದ್ದಕ್ಕಿದ್ದ ಹಾಗೆ ಕೂರಿಸಿಬಿಟ್ಟಿರಿ. ನಮ್ಮ ಬೈರೇಗೌಡರನ್ನು, ನಾವು ಇಲ್ಲಿ ಅನೇಕ ಬಾರಿ ಜಿಲ್ಲಾಪರಿಷತ್ತಿನ ಅಧ್ಯಕ್ಷರ ಚುನಾವಣೆ ಮೀಸಲಾತಿ ಬಗ್ಗೆ ಒಂದಲ್ಲ ಅನೇಕ ಬಾರಿ ಹೇಳಿದಾಗ ಈ ಸದನದಲ್ಲಿ ಒಂದು ಭರವಸೆಯನ್ನು ಮಾನ್ಯ ಮುಖ್ಯಮಂತ್ರಿಗಳು ಕೊಟ್ಟರು. ಅದೇ ರೀತಿ ಸಂಬಂಧಪಟ್ಟಂತಹ ಪಂಚಾಯತ್ ವ್ಯವಸ್ಥೆ ಸಚಿವರಾದಂತಹ ಘೋರ್ಪಡೆಯವರು ಸಹ ಬಹಳ ಮುಕ್ತ ಮನಸ್ಸಿನಿಂದ ನಾನು ಕಾಯಿದೆಯನ್ನು ಬಹಳ ಪ್ರಾಮಾಣಿಕವಾಗಿ ಮಾಡಿದ್ದೇನೆ, ಇದರಲ್ಲಿ ಏನೂ ರಾಜಕೀಯ ಇಲ್ಲ. ಈ ಬಗ್ಗೆ ಆ ರೀತಿ ಏನಾದರೂ ಅನಾನುಕೂಲ ಆಗಿದ್ದರೆ, ಮತ್ತೆ ನಾವು ಅದನ್ನು ಜಿಲ್ಲಾಧಿಕಾರಿಯವರಿಗೆ ವಹಿಸಿದ್ದೇವೆ ಎಂದು ಹೇಳಿದರು. ಆಗ ನಾವು ಈ ಸದನದಲ್ಲಿ ಜಿಲ್ಲಾಧಿಕಾರಿಗಳಿಗೆ ನೀವು ವಹಿಸಿದರೆ ಸಾರ್ವಜನಿಕರುಗಳ ಕೈಯಲ್ಲಿ ಅಧಿಕಾರ ಕೊಟ್ಟಹಾಗೆ ಆಗುವುದಿಲ್ಲ ಎಂದು ಹೇಳಿ ನಾವು ಬಹಳ ತೀವ್ರವಾದ ಒತ್ತಡ ತಂದೆವು.

ಗೋಪ್ಯವಾಗಿ ಅವರು ಜಿಲ್ಲಾಧಿಕಾರಿಗಳಿಗೆ, ಸಂಬಂಧಪಟ್ಟ ಶಾಸಕರು ಮತ್ತು ಲೋಕಸಭಾ ಸದಸ್ಯರು, ಸಾಧ್ಯವಾದರೆ ವಿಧಾನ ಪರಿಷತ್ ಸದಸ್ಯರು ಎಲ್ಲರನ್ನೂ ಕರೆದು ಮಾತುಕತೆ ಆಡಿ ಎಂದು ಹೇಳಿದರು. ನನಗೂ ಕಾಗದ ಬಂದಿತ್ತು. ನಾನೂ ಸಹ ಜಿಲ್ಲಾಧಿಕಾರಿಗಳ ಹತ್ತಿರ ಹೋದೆ. ನೀವು ನಮ್ಮನ್ನು ಕರೆದಿರುವ ಉದ್ದೇಶ ಏನು ಮೊದಲೇ ಉದ್ದೇಶ ಇರಬೇಕಲ್ಲಾ. ನೀವು ನಮ್ಮನ್ನು ಕರೆದ ಮೇಲೆ ನಮ್ಮ ಮಾತಿಗೆ ನೀವು ಬೆಲೆಯನ್ನು ಕೊಡಬೇಕು, ಸುಮ್ಮನೆ ನೀವು ನಮ್ಮನ್ನು ಕರೆದ ಮೇಲೆ ನಮ್ಮ ಮಾತಿಗೆ ನೀವು ಬೆಲೆಯನ್ನು ಕೊಡಬೇಕು, ಸುಮ್ಮನೆ ನೀವು ನಮ್ಮನ್ನು ಕರೆದು ನೀವು ನಮ್ಮ ಮುಂದೆ ತಮ್ಮ ಮುಂದೆ ಇರತಕ್ಕ ಜಿಲ್ಲಾಧಿಕಾರಿಗಳ ಮುಂದೆ ತಾವು ಏನು ಮಸೂದೆಯನ್ನು ಮಾಡಿದ್ದೀರಿ, ಅದರಲ್ಲಿ ಒಂದು ಸಣ್ಣ ಚುಕ್ಕೆಯನ್ನೂ ಸಹ ಬದಲಾವಣೆ ಮಾಡುವುದಿಲ್ಲ ಅನ್ನುವುದಾದರೆ ನಮ್ಮನ್ನು ಜಿಲ್ಲಾಧಿಕಾರಿಗಳು ಕರೆದು ಮಾತನಾಡತಕ್ಕಂತಹ ಅವಶ್ಯಕತೆ ಇಲ್ಲ. ನೀವು ಅಷ್ಟಕ್ಕೇ ಬಿಟ್ಟಿದ್ದರೆ ನಾವು ಗೌರವವಾಗಿ ಉಳಿದುಕೊಳ್ಳುತ್ತಿದ್ದೆವು. ಈಗ ನಮ್ಮನ್ನು ಬೀದಿಗೆ ಇಳಿಸಿ ಬಿಟ್ಟರಿ. ಸರ್ಕಾರದವರೇ ತೀರ್ಮಾನ ಮಾಡಿದ್ದಾರೆ. ಒಂದೊಂದು ತಾಲ್ಲೂಕಿಗೆ ಒಂದೊಂದು ರೀತಿ ಸಂಖ್ಯೆ ಕೊಟ್ಟು ಮುಗಿಸಿದ್ದಾರೆ. ನಮ್ಮದು ಏನೂ ಇಲ್ಲ ನೀವು ಯಾವುದೂ ಬದಲಾವಣೆ

ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿ ಧೈರ್ಯವಾಗಿ ಇದ್ದು ಬಿಟ್ಟೆವು. ಅವರು ಯಾರೂ ನಮ್ಮ ಹತ್ತಿರ ಬಂದಿಲ್ಲ. ನೀವು ಏನಾದರೂ ಮಾಡಿ ಬದಲಾವಣೆ ಮಾಡಿ ಸ್ವಾಮಿ, ಆ ಕ್ಷೇತ್ರ ಬದಲಾವಣೆ ಆಗಬೇಕು. ಕ್ಷೇತ್ರದ ಅಧ್ಯಕ್ಷರ ಬದಲಾವಣೆಯಾಗಬೇಕು. ಎಂದು ಇಲ್ಲಿ ಅನೇಕ ಒತ್ತಡಗಳನ್ನು ತಂದರು. ತಂದಾಗ ನಾವು ನಮ್ಮ ಹತ್ತಿರ ಏನೂ ಇಲ್ಲ. ಸರ್ಕಾರವೇ ಅಲ್ಲಿಂದ ವಿಧಾನಸೌಧದಿಂದ ಒಂದು ಹುಕ್ಕುಂ ಹೊರಡಿಸಿದ್ದಾರೆ. ಅವರು ಯಾರ್‍ಯಾರಿಗೆ ಹೇಳುತ್ತಾರೋ ಅವರೇ ಅದರ ಅಧ್ಯಕ್ಷರಾಗಬೇಕು ಎಂದು ನಾವು ಸುಮ್ಮನೆ ಇದ್ದೆವು. ನೀವು ಮತ್ತೆ ನಮ್ಮನ್ನು ಬೀದಿಗೆ ತಂದಿರಿ. ನಮಗೂ ನೀವು ಬಂದಿಷ್ಟು ಕೊಟ್ಟು ಶೇಕಡ 30 ಭಾಗವಾದರೂ ಶೇಕಡ 40 ಭಾಗ ಆದರೂ ನೀವು ಶಾಸಕರು ಹೇಳಿದ ಹಾಗೆ ಮಾಡುತ್ತೇವೆ ಎಂದು ನೀವು ನಮ್ಮ ಕೈಯನ್ನು ಭದ್ರ ಮಾಡದೆ ನೀವು ಧಾರಾಳವಾಗಿ ಕೊಟ್ಟಿದ್ದರೆ ಆಗ ನಾವು ಹೇಳಿದ ಮಾತಿಗೆ ಬೆಲೆ ಬರುತ್ತಿತ್ತು. ನಾನು ನಮ್ಮ ಜಿಲ್ಲಾಧಿಕಾರಿಗಳ ಹತ್ತಿರ ಹೋದೆ, ನಾನು ಅವರನ್ನು ಆಕ್ಷೇಪಣೆ ಮಾಡುತ್ತಿಲ್ಲ, ಸರಿಯಾಗಿ ಸರ್ಕಾರ ಮಾಡಿರುವ ಕಾಯಿದೆಯನ್ನು ಅವರು ನಮ್ಮ ಮುಂದಿಟ್ಟು ನೀವು ನೋಡಿ ಎಂದು ಹೇಳಿದರು. ತಕ್ಷಣ ಅವರು ಬೆಂಗಳೂರಿಗೆ ಕಾರ್ಯದರ್ಶಿಯವರ ಫೋನ್ ತೆಗೆದುಕೊಟ್ಟರು. ನಾನು ಕಾರ್ಯದರ್ಶಿಯವರಿಗೆ ಫೋನ್ ಮಾಡಿದೆ, ಕಾರ್ಯದರ್ಶಿಯವರು ನೀವು ಮಾಡಿದ್ದನ್ನು ನಾನೂ ಚಾಚು ತಪ್ಪುವುದಿಲ್ಲ ಎಂದು ಅವರು ಹೇಳಿದರು. ಇದಾದ ಮೇಲೆ ಮುಖ್ಯ ಮಂತ್ರಿಗಳು ಕಾರ್ಯದರ್ಶಿಯವರನ್ನು ಭೇಟಿ ಮಾಡಲು ಹೋದೆವು. ಯಾರನ್ನಾದರೂ ಅಧ್ಯಕ್ಷರನ್ನಾಗಿ ಮಾಡಬಹುದು.

ಶಾಸಕರು, ಕೊಟ್ಟ ಪಟ್ಟಿಯಲ್ಲಿ ಏನೋ ಬದಲಾವಣೆ ಆಗಿ ಬಿಟ್ಟಿದೆ ಎಂದು ಸುದ್ದಿ ಹುಟ್ಟಿತು. ಈ ಮುಖ್ಯ ಮಂತ್ರಿಗಳ ಕಾರ್ಯಾಲಯಕ್ಕೂ ಸಹ ಕೆಲವು ಶಾಸಕರು ತಮ್ಮ ಅಧ್ಯಕ್ಷರು ಯಾರ್‍ಯಾರು ಬೇಕು ಎಂದು ಹೇಳಿ ಪಟ್ಟಿ ಮಾಡಿ ಕೊಟ್ಟಿದ್ದಾರೆ. ನಮ್ಮದೂ ಹಾಗೆ ಇರಬಹುದು. ಪಟ್ಟಿ ಮಾಡಿ ಕೊಟ್ಟರೆ ಆಗುತ್ತದೆ ಎಂದು ನಾವು ತಿಳಿದುಕೊಂಡಿದ್ದೆವು. ಅದು ಆಗಲಿಲ್ಲ. ಜಿಲ್ಲಾಧಿಕಾರಿಗಳು ಒಂದು ಅಕ್ಷರವನ್ನೂ ಸಹ ಬದಲಾವಣೆ ಮಾಡಲಿಲ್ಲ. ನಮಗೆ ನಮ್ಮ ಊರಿನವರು ನಮ್ಮ ಕ್ಷೇತ್ರ ಬದಲಾವಣೆ ಮಾಡಬೇಕು. ಅದು ಏನು ಗಂಡಸು ಮಾಡಿಸಿ ಬಿಟ್ಟಿರಲ್ಲಾ ನೀವು. ಇಲ್ಲಾ ನನ್ನ ಮಾತು ಒಪ್ಪಲಿಲ್ಲ ಅಂದರೂ ನೀವೇ ಮಾಡಿಸಿ ಬಿಟ್ಟರೆ ನಮಗೆ ಅನ್ಯಾಯ ಆಯಿತು ಎಂದು ಈ ತರಹ ಆಕ್ಷೇಪಣೆಗಳ ಮೇಲೆ ಆಕ್ಷೇಪಣೆಗಳು ನಮ್ಮನ್ನು ಬಿಡದೆ ನಮಗೆ ಮೂಗಿನ ಮೇಲೆ ತುಪ್ಪ ಹಚ್ಚಿ ಬಿಟ್ಟರಿ. ಅದು ಒಂದು ಜಿಲ್ಲೆಯ ಶಾಸಕರ ಸಭೆ, ತಾವು ನೋಡಬೇಕು ಆ ಜಿಲ್ಲಾಧಿಕಾರಿಗಳು ಕಾರ್ಯಾಲಯದ ಮುಂದೆ ಸ್ವಾಮಿ ಮಾನ್ಯ ಅಧ್ಯಕ್ಷರೇ, ಮೈಸೂರಿನಲ್ಲಿ 10 ಸಾವಿರ ಜನರ ಸೇರಿದ್ದರು. ಶಾಸಕರು ಬದಲಾವಣೆ ಮಾಡಿಸಿಕೊಡುತ್ತಾರೆ ಎಂದು ಶಾಸಕರು ತಪ್ಪಿಸಿಕೊಂಡು ಹೊರಗಡೆ ಬರುವುದಕ್ಕೆ ಕಷ್ಟವಾಯಿತು. ನಮಗೂ ನೀವು ರಕ್ಷಣೆ ಕೊಡಬೇಕಾದ ಪರಿಸ್ಥಿತಿ ಈ ಪರಿಸ್ಥಿತಿಗೆ ತಂದುಬಿಟ್ಟರೆ ನೀವು ನಾವು ಯಾರನ್ನಾದರೂ ಅಧ್ಯಕ್ಷರನ್ನಾಗಿ ಮಾಡಿಕೊಂಡಿದ್ದರೂ ನಮಗೂ ಏನೂ ಅಭ್ಯಂತರ ಇರಲಿಲ್ಲ. ತಾವು ನಮಗೆ ಸ್ವಲ್ಪ ಹೇಳಿ ನಿಮ್ಮದೂ ಮಾತು ನಡೆಯುತ್ತದೆ ಎಂದೆ ಹೇಳು ನಮಗೆಲ್ಲಾ ಕಾಗದ ಕೊಟ್ಟು

ಶ್ರೀ ಎಂ. ವೀರಪ್ಪ ಮೊಯಿಲಿ : ನಮ್ಮ ಹತ್ತಿರ ಮುತ್ತಿಗೆ ಹಾಕುವುದರ ಬದಲು ಅಲ್ಲಿ ಮುತ್ತಿಗೆ ಹಾಕುತ್ತಾರೆ ಅಷ್ಟೆ.

ಶ್ರೀ ವಾಟಾಳ್ ನಾಗರಾಜ್ : ನಿಮ್ಮ ಮೇಲೆ ನಾನು ನಂಬಿಕೆ ಇಟ್ಟುಕೊಂಡಿದ್ದೆ, ಇದು ಏಕೆ ಹೀಗೆ ನೀವು ಪ್ರತಿ ದಿನ ನನ್ನ ಆಡಳಿತ ಬಹಳ ಸ್ವಚ್ಛ, ನಾನು ಬಹಳ ಸತ್ಯ ಅಂತ ಹೇಳಿ ನನಗೂ ಸುಳ್ಳು ಹೇಳಿಬಿಟ್ಟರಿ. ನಿಮಗೆ ಪಟ್ಟಿ ಕೊಟ್ಟರೆ ಆಗಿ ಹೋಗುತ್ತದೆ ಎಂದು ನಾನು ಪಟ್ಟಿ ತಯಾರು ಮಾಡಿಕೊಂಡಿದ್ದೆ. ನೀವು -

ಅಂದರೆ ನಿಮ್ಮ ಕೆಲವು ವ್ಯವಸ್ಥೆಗಳು ಹೀಗೆ ಇವೆ. ನಿಮ್ಮ ಕಾರ್ಯಾಲಯಕ್ಕೆ ಕೆಲವು ಶಾಸಕರ ಪಟ್ಟಿ ಬಂದಿಲ್ಲವೇ? ನನಗೂ ಅದೇ ಭಾಸವಾಗಿತ್ತು. ನಾನು ಸಭೆಗೆ ಹೋಗದೆ ಮುಖ್ಯಮಂತ್ರಿಗಳಿಂದ ಒಂದು ಹುಕ್ಕುಂ ಹೊರಡಿಸಿ ಬಿಡೋಣ ಎಂದು ಪಟ್ಟಿ ತಯಾರು ಮಾಡಿಕೊಂಡಿದ್ದೆ, ನೋಡಿದರೆ ಏನೂ ಇಲ್ಲ ಅಲ್ಲಿ ಅದಾದ ನಂತರ ಸಿಂಧ್ಯ ಅವರೇ ನಿಮಗೂ ಫೋನ್ ಮಾಡಿದೆ. ಅವರು ಹೇಳಿದರು ಕಾರ್ಯದರ್ಶಿ ಪಾಂಡೆ ಅವರನ್ನು ಭೇಟಿ ಮಾಡಿದೆ, ಮತ್ತು ಜಿಲ್ಲಧಿಕಾರಿಗಳನ್ನು ಭೇಟಿ ಮಾಡಿದೆ ಏನೂ ಇಲ್ಲ ಸ್ವಲ್ಪ ಹೆಚ್ಚೂ ಕಡಿಮೆ 30 ಭಾಗ ಆದರೂ ಆಗಬಹುದು ಎಂದು ಇವರೂ ನನಗೆ ಮೋಸ ಮಾಡಿದರು.

ಶ್ರೀ ಪಿ.ಜಿ.ಆರ್. ಸಿಂಧ್ಯ: ಇವತ್ತು ಇವರು ಸದನಕ್ಕೆ ತಪ್ಪು ಮಾಹಿತಿಯನ್ನು ಕೊಡಬಹುದು. ಆದರೆ ಇದು ನನ್ನ ಕಾನ್ಸಿಟ್ಟೆಟ್ಯೂಯನ್ಸಿಯ ಮೇಲೆ ಬಹಳ ಕೆಟ್ಟ ಪರಿಣಾಮವನ್ನು ಬೀರುತ್ತದೆ. ಸರ್ಕಾರದಿಂದ ಹೊರಟಿರುವಂತ 2-3 ಗೊಂದಲಮಯ ಆದೇಶಗಳಲಿಗೆ ಸಂಬಂಧಪಟ್ಟಂತೆ ಮಾನ್ಯವಾಟಾಳ್ ನಾಗರಾಜ್‌ರವರೂ ಮತ್ತು ನಾನೂ ದೂರವಾಣಿಯಲ್ಲಿ ಮಾತನಾಡಿಕೊಂಡುವು. ಮತ್ತೆ ಕೆಲವು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು, ಕೆಲವು ಶಾಸಕರುಗಳು ಮಾನ್ಯ ಮುಖ್ಯಮಂತ್ರಿಯವರಿಗೆ, ಗ್ರಾಮೀಣಾಭಿವೃದ್ಧಿ ಮಂತ್ರಿಗಳಿಗೆ, ಕಾರ್ಯದರ್ಶಿಯವರಿಗೆ ಪತ್ರಗಳನ್ನು ಕೊಟ್ಟಿರತಕ್ಕದ್ದು ನಿಜ. ನಮ್ಮನ್ನೂ ಕೂಡ ಇವವು ದೂರವಾಣಿಯ ಮೂಲಕ ಕರೆದು ಇದರ ಬಗ್ಗೆ ನಿಮ್ಮ ಅಭಿಪ್ರಾಯವೇನಾದರೂ ಇದೆಯೇ ಎಂದು ಕೇಳಿದರು. ಇವರು ನಮ್ಮನ್ನು ಕರೆದುದು ತಪ್ಪು ಎಂದು ನಾನು ಹೇಳುತ್ತಿದ್ದೇನೆ. ಸಾರ್ವಜನಿಕ ಜೀವನದಲ್ಲಿ 20-25 ವರ್ಷಕಾಲ ಕೆಲಸ ಮಾಡಿದ್ದೇವೆ. ಈ ಸದನದಲ್ಲೂ ಕೂಡ 10-12 ವರ್ಷಕಾಲ ಸದಸ್ಯರಾಗಿ ಕೆಲಸ ಮಾಡಿದ್ದೇವೆ. ಒಬ್ಬ ಜಿಲ್ಲಾಧಿಕಾರಿಯವರ ಹತ್ತಿರ ನಾವು ಹೋಗಿ 2-3 ದಿನ ಕಾಯಬೇಕೆಂದರೆ, ಇದರ ಬಗ್ಗೆ ನಾನು ಬಹಳ ಬಲವಾಗಿ ಪ್ರೊಟೆಸ್ಟ್ ಮಾಡಬಯಸುತ್ತೇನೆ. ಏಕೆಂದರೆ, ನೀವು ನಮ್ಮನ್ನು ಕರೆಯಬೇಕಾದ ಅವಶ್ಯಕತೆ ಇರಲಿಲ್ಲ.

2-3 ದಿನದವರೆಗೆ ಒಬ್ಬ ಐ.ಎ.ಎಸ್. ಅಧಿಕಾರಿಯ ಹತ್ತಿರ ನಾವು ಹೋಗಿ ಕುಳಿತುಕೊಳ್ಳಬೇಕೆಂದರೆ ಹೇಗೆ? ನಾನಂತೂ ವಿರೋಧಪಕ್ಷದಲ್ಲಿದ್ದೇನೆ. ಆದರೆ ನಿಮ್ಮ ಆಡಳಿತ ಪಕ್ಷದ ಎಂ.ಎಲ್.ಎ.ಗಳೂ ಕೂಡ 2-3 ದಿನ ಕಾದಿದ್ದಾರೆ. ನನ್ನ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ, ನಾನು ಹೇಳಿದಂಥಾದ್ದು ಒಂದನ್ನೂ ಕೂಡ ಅವರು ಬದಲಾವಣೆ ಮಾಡಿರಲಿಲ್ಲ. ಸರ್ಕಾರದ ನೀತಿ ಏನಿದೆ ಅದರ ಪ್ರಕಾರವೇ ಅವರು ಚುನಾವಣೆಯನ್ನು ಮಾಡಿದ್ದಾರೆ. ಆದರೆ ಅದನ್ನು ಬದಲಾವಣೆ ಮಾಡಿ ಎಂದು ಒತ್ತಯ ಮಾಡುವುದಕ್ಕೂ ಕೂಡ ನಾನು ಹೋಗಲಿಲ್ಲ, ನಿಮ್ಮ ಕಾನೂನು ಏನಿದೆ ಅದರ ಪ್ರಕಾರ ನೀವು ಮಾಡಿಕೊಂಡು ಹೋಗಿ ಎಂದು ಹೇಳಿದೆ. ನಮ್ಮನ್ನು ಕರಿಯಿಸುವ ಅವಶ್ಯಕತೆಯಾದರೂ ನಿಮಗೆ ಏನಿತ್ತು. 2-3 ದಿನ ನಮ್ಮನ್ನು ಕಾಯಿಸಿ ಅನಂತರ ಅವರ ಮನಸ್ಸಿಗೆ ಬಂದಂತೆ ಮಾಡಿದರು. ನಾವು ಕೋತಿಗಳಾದೆವು. ಅವರು ವರ್ಗಾವಣೆ ಆತುರದಲ್ಲಿ ದೆಹಲಿಗೆ ಹೊರಟುಹೋದರು. ಅಂದಮೇಲೆ ನಮ್ಮ ಪರಿಸ್ಥಿತಿ ಯಾವ ಮಟ್ಟಕ್ಕೆ ಹೋಯಿತು ನೋಡಿ. ನಮ್ಮ ಹಳ್ಳಿಗಳಲ್ಲಿ ನಮ್ಮನ್ನು ಜನರು ನಂಬಲೊಲ್ಲರು. ನಮ್ಮ ಕ್ಷೇತ್ರದಲ್ಲಿ ನಮ್ಮನ್ನು ನಂಬುವುದಿಲ್ಲ. ನೀವು ಬೇಕಂತಲೇ ರಾಜಕೀಯವಾಗಿ ನಮ್ಮ ಜಾತಿಯವರನ್ನು ತುಳಿಯಬೇಕೆಂದು ಈರೀತಿ ಮಾಡಿದ್ದೀರಿ ಎಂದು ಹೇಳುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಮುಖ್ಯಮಂತ್ರಿಗಳು ಸುಮ್ಮನೆ ಗಂಭಿರವಾಗಿರುವುದಕ್ಕೆ ಬದಲು ನಮ್ಮನ್ನೂ ಕೂಡ ಇಕ್ಕಟ್ಟಿನ ಪರಿಸ್ಥಿತಿಗೆ ಸಿಕ್ಕಿಸಿದರು. ನಾವು ಹೇಗೋ ತಪ್ಪಿಸಿಕೊಂಡಿದ್ದೆವು. ನಮಗೆ ಇದು ಒಂದು ರೀತಿಯಲ್ಲಿ ಒಳ್ಳೆಯದಾಗಿತ್ತು. ನೀವು ಯಾರನ್ನು ಬೇಕಾದರೂ ಅಧ್ಯಕ್ಷರನ್ನಾಗಿ ಮಾಡಿಕೊಂಡು ಹೋಗಿ ಎಂದು ಗಂಭೀರವಾಗಿದ್ದೆವು. ನೀವು ಇಂಥ ಪರಿಸ್ಥಿತಿಯನ್ನು ನಿರ್ಮಾಣ ಮಾಡಿ, ನಮ್ಮನ್ನೂ ಬೀದಿಗಳೆದು, ಇಡೀ ತಾಲ್ಲೂಕಿನಲ್ಲಿ ನಮ್ಮನ್ನು ನಂಬಿದವರೂ ಕೂಡ ಕೈಬಿಡುವಂತೆ ಮಾಡಿದ್ದೀರಿ. ಸ್ವಲ್ಪ

ಹೆಚ್ಚು ಕಡಿಮೆ ಅವರು ನಮ್ಮನ್ನನು ಕೈಬಿಟ್ಟಿದ್ದಾರೆ. ನಾನು ಜಿಲ್ಲಾಧಿಕಾರಿಗಳನ್ನಾಗಲಿ, ಕಾರ್ಯದರ್ಶಿಯವರನ್ನಾಗಲಿ ಆಕ್ಷೇಪಣೆ ಮಾಡುವುದಿಲ್ಲ. ಕಾರಣವೆಂದರೆ, ತಾವೇ ಮಾಡಿ ಕಳುಹಿಸಿರುವುದನ್ನು ನಾವು ಯಾವುದೇ ರೀತಿಯಲ್ಲೂ ಬದಲಾವಣೆ ಮಾಡುವುದಕ್ಕಾಗುವುದಿಲ್ಲ ಎಂದು ಬಹಳ ಸ್ಪಷ್ಟವಾದ ಮಾತಿನಲ್ಲಿ ಅವರು ಹೇಳಿರುವುದನ್ನು ನಾನೂ ಕೂಡ ನಂಬುತ್ತೇನೆ.

ನಾನು ಅಧಿಕಾರಿಗಳ ಬಗ್ಗೆ ಆಕ್ಷೇಪಣೆ ಮಾಡುವುದಕ್ಕೆ ಹೋಗುವುದಿಲ್ಲ. ನನಗನಿಸಿತು, ನಾವೇ ಒಂದು ರೀತಿಯಲ್ಲಿ ಮೂರ್ಖರಾಗಿಬಿಟ್ಟೆವಲ್ಲಾ, ಎಂದು ಸರ್ಕಾರದ ಮತ್ತು ಮಾನ್ಯ ಮುಖ್ಯಮಂತ್ರಿಗಳ ಮಾತನ್ನು ನಾವು ಕೇಳಿ ನಾವೇ ಒಂದು ರೀತಿಯ ಮೂರ್ಖರಾದೆವಲ್ಲಾ ಎಂದು ಅಂದುಕೊಂಡೆವು ಏಕೆಂದರೆ, ನಮ್ಮನ್ನು ಮೂರ್ಖರನ್ನಾಗಿ ಮಾಡುವುದರಲ್ಲಿ ಮಾನ್ಯ ಮುಖ್ಯಮಂತ್ರಿಗಳು ಯಶಸ್ವಿಯಾದರು. ನಮ್ಮನ್ನು ಎಂದರೆ ಈ ಇಡೀ ಸದನದ ಎಲ್ಲಾ ಶಾಸಕರನ್ನೂ ಮೂರ್ಖರನ್ನಾಗಿ ಮಾಡುವುದರಲ್ಲಿ, ಈ ಚುನಾವಣೆಯಲ್ಲಿ ಮಾನ್ಯ ಮಂತ್ರಿಕಗಳಾದ ಮಾನ್ಯ ವೀರಪ್ಪಮೊಯ್ಲಿಯವರು ಅತ್ಯಂತ ಯಶಸ್ವಿಯಾಗಿದ್ದಾರೆ. ಇದರಲ್ಲಿ ಎರಡನೇ ಅಭಿಪ್ರಾಯವವಿಲ್ಲ ನಾನು ಈ ಮಾತನ್ನು ಅತ್ಯಂತ ಮನನೊಂದು ಹೇಳುತ್ತಿದ್ದೇನೆ. ತಮಗೆ ಒಂದು ಮಾತನ್ನು ಹೇಳುವುದಾದರೆ, ನನಗೆ ಚುನಾವಣೆಯಲ್ಲಿ ಹಗಲೂ ರಾತ್ರಿ ದುಡಿಯುತ್ತಿದ್ದ 8 ಜನ ಕಾರ್ಯಕರ್ತರು ನನ್ನನ್ನು ಬಿಟ್ಟು ಹೊರಟುಹೋದರು. ನಮ್ಮ ಕ್ಷೇತ್ರ ಗಂಡಸು ಆಗಬೇಕಾಗಿತ್ತು. ಆದರೆ ನೀವು ಹೆಂಗಸನ್ನಾಗಿ ಮಾಡಿದಿರಿ ಮಾಹದೇಶ್ವರನ ಮೇಲೆ ಆಣೆ ಇಟ್ಟರೂ ಕೇಳುವುದಿಲ್ಲ. ಯಾರು ಆಣೆ ಇಟ್ಟರೂ ಕೇಳುವುದಿಲ್ಲ. ನಮ್ಮನ್ನು ಮಾನ್ಯ ಮುಖ್ಯಮಂತ್ರಿಗಳು ಈ ಪರಿಸ್ಥಿತಿಗೆ ತಂದಿಟ್ಟಿದ್ದಾರೆ. ಇದು ನೀವು ಮಾಡಿರತಕ್ಕ ಒಂದು ದೊಡ್ಡ ಉಪಕಾರ. ನೀವು ಹೇಳುವುದನ್ನು ಹೇಳಿದಿರಿ. ಆದರೆ ನನಗೆ ಆರೀತಿ ಭರವಸೆಯನ್ನೇನೂ ಕೊಡಲಿಲ್ಲ ಎನಿಸುತ್ತದೆ. ನೀವು ಹೇಳುವುದನ್ನೇ ಹೇಳಿ, ಮಾಡುವುದನ್ನೇ ಮಾಡಿದಿರಿ. ನೀವು ಎಷ್ಟೇ ಕೂಗಾಡಿದರೂ ಚಿಂತೆ ಇಲ್ಲ, ನನ್ನದೇ ನನ್ನದು ಎಂದು ನೀವು ಮಾಡುವುದನ್ನೇ ಮಾಡಿದಿರಿ. ಇದು ಸರಿಯಿಲ್ಲ, ಇದು ಸರಿಯಿಲ್ಲ, ಇದು ಸರಿಯಿಲ್ಲ ಎಂದು ನಾವು 3 ಸಾರಿ ಕೂಗಿಕೊಂಡೆವು. ಅದೇ ರೀತಿ ನನ್ನದೇ ಸರಿ ಎಂದು 3 ಸಾರಿ ಹೇಳಿ ನಿಮ್ಮ ಆಜ್ಞೆಯನ್ನು ನೀವು ಕಳುಹಿಸಿಕೊಟ್ಟಿರಿ. ಆ ಆಜ್ಞೆಯನ್ನೇ ನಿಮ್ಮ ಅಧಿಕಾರಿಗಳೂ ಕೂಡ ಚಾಚೂ ತಪ್ಪದೆ ಪಾಲನೆ ಮಾಡಿದ್ದಾರೆ. ಕೆಲವು ಕಡೆ ಅಧಿಕಾರಿಗಳು ಏನು ಹೇಳಿದರೆಂದರೆ, ಒಂದು ಕಡೆ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಮತ್ತು ಗ್ರಾಮಪಂಚಾಯಿತಿಗಳಲ್ಲಿ ಒಂದೇ ಜಾತಿಯವರು ಬರುತ್ತಿದ್ದಾರೆ, ಅದನ್ನಾದರೂ ಬದಲಾವಣೆ ಮಾಡಬಹುದೇ ಎಂದು, ಜಿಲ್ಲಾಧಿಕಾರಿಗಳೂ ಕೂಡ ಇದು ಸರಿಯಲ್ಲ, ಇದನ್ನು ಬದಲಾವಣೆ ಮಾಡಬಹುದೇನೋ, ಎಂಬ ಪ್ರಶ್ನೆ ಬಂದು ಅವರು ತಮ್ಮ ಕಾರ್ಯದರ್ಶಿಯವರ ಅಪಪಾಲನ್ನು ಕೇಳಿದರು. ಅವಕ್ಕೆ ಇಲ್ಲ, ಇದು ಸರಿಹೋಗುವುದಿಲ್ಲ. ಅದು ಆ ಸಭೆಗೇ ಹೋಗಬೇಕು, ನಮಗೂ ಇದಕ್ಕೂ ಸಂಬಂಧವಿಲ್ಲ ಎಂದು ಸ್ಪಷ್ಟವಾಗಿ ಮಾನ್ಯ ಪಾಂಡೆಯವರು ನೇರವಾಗಿ ಹೇಳಿದರು. ಅವರು ನೇರವಾಗಿ ಹೇಳಿದ್ದಕ್ಕೆ ನನ್ನ ಅಭಿನಂದನೆ ಇದೆ. ನಾವು ನಾಳೆ ಇದನ್ನು ಬದಲಾವಣೆ ಮಾಡುತ್ತೇವೆಂದು ನಮ್ಮನ್ನು ಅವರೇನೂ ಕರೆದು ಹೇಳಿಲ್ಲ. ನಿಮ್ಮನ್ನು ನಾನು ಎಲ್ಲಿ ಆಕ್ಷೇಪಣೆ ಮಾಡುತ್ತೇನೆಂದರೆ, ನಾವು ಗಂಭೀರವಾಗಿದ್ದೆವು. ಆದರೆ ನೀವು ನಮಗೆ ಒಂದು ಪತ್ರವನ್ನು ಬರೆದು, ಜಿಲ್ಲಾಧಿಕಾರಿಯವರ ಕಛೇರಿಗೆ ಶಾಸಕರು ಬರಬೇಕು, ಜಿಲ್ಲಾ ಉಸ್ತುವಾರಿ ಮಂತ್ರಿಗಳು ಬರಬೇಕು ಎಂದು ಮಾಡಿದಿರಿ.

ಈ ರೀತಿ ಪರಿಸ್ಥಿತಿಯನ್ನು ತಂದಿಟ್ಟಿತು ಸ್ವಾಮಿ. ನಾನು ತಮಗೆ ಹೇಳುತ್ತೇನೆ. ಈಗ ನಮ್ಮ ಸ್ನೇಹಿತರು ಮಾತನಾಡಿದ್ದಾರೆ. ಪಕ್ಷರಹಿತವಾದಂಥ ಚುನಾವಣೆ, ನೇರವಾಗಿ ಮಾತನಾಡೋಣ, ನಮ್ಮ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವಲ್ಲಿ ಸೊಗಸಾದ ಉತ್ತರವನ್ನು ಕೊಡುತ್ತಾರೆ, ಸುಂದರವಾಗಿ ಮಾತನಾಡುತ್ತಾರೆ, ಅವರು ಎಂದು ಯಾರಮೇಲೂ ಮುನಿಸಿಕೊಳ್ಳತಕ್ಕಂಥ ಸ್ವಭಾವ ಇಲ್ಲ. ಅವರು ಒಂದು ದೊಡ್ಡ

ಗುಣದ ಬಗ್ಗೆ ನಾವು ಅತ್ಯಂತ ಪ್ರಾಮಾಣಿಕವಾಗಿ ಅಭಿನಂದಿಸುತ್ತೇನೆ. ಆದರೆ ಪಕ್ಷಾತೀತವಾದಂಥ ಚುನಾವಣೆ ಎಂದು ಹೇಳಿ, ಮಾತೆತ್ತಿದರೆ ಆತ್ಮಸಾಕ್ಷಿ, ಆತ್ಮಸಾಕ್ಷಿ ಎಂದು ಹೇಳುತ್ತಾರೆ, ಅವರ ಆತ್ಮ ಸಾಕ್ಷಿಯಾಗಿ ಹೇಳಲಿ ಸ್ವಾಮಿ. ಪಕ್ಷಾತೀತವಾದ ಚುನಾವಣೆ ಎಂದು. ಯಾವುದು ಪಕ್ಷಾತೀತವಾದ ಚುನಾವಣೆ, ಈಗಾಲೂ ಸುದಾ ಕಾಂಗ್ರೆಸ್‌ನವರು ಅಧ್ಯಕ್ಷರು ಜನತಾದಳದವರು ಅಧ್ಯಕ್ಷರು ಬಿ.ಜೆ.ಪಿ.ಯವರು ಅಧ್ಯಕ್ಷರು ಎಂದು ಇದೇ ನಡೆಯುತ್ತಿದಿಯೇ ಹೊರತು ಪಕ್ಷಾತೀತವೆನ್ನತಕ್ಕಂಥದ್ದು ಇದರಲ್ಲಿ ಏನೂ ಇಲ್ಲ. ಮೇಲ್ನೋಟಕ್ಕೆ ಸರ್ಕಾರಿ ಆದೇಶದಲ್ಲಿ ಪಕ್ಷಾತೀತವೆಂದು ಇದೆಯೇ ಹೊರತು ಅದನ್ನು ಸಮಗ್ರವಾಗಿ ಚಿಂತನೆ ಮಾಡಿಲ್ಲ. ಚುನಾವಣೆ ನಡೆದಿರತಕ್ಕಂಥದ್ದು ಪಕ್ಷದ ಹೆಸರಿನಲ್ಲಿ ನಡೆಯುತ್ತಿರತಕ್ಕಂಥ ಮಾತನ್ನು ತಮಗೆ ನಾನು ಹೇಳುತ್ತಿದ್ದೇನೆ ಸ್ವಾಮಿ. ಕೊನೆಯದಾಗಿ ಇಲ್ಲಿ ಈ ಚುನಾವಣೆಯಲ್ಲಿ ಸುದೈವದಿಂದ ನಮ್ಮ ತಾಲ್ಲೂಕಿನಲ್ಲಿ ಏನು ಗಲಾಟೆಗಳಾಗಲಿಲ್ಲ. ನನಗೇನೂ ಹೇಗೋ ಚುನಾವಣೆಗಳಾಗಲಿ ಎಂದು ಸುಮ್ಮನಾದೆ. ಇನ್ನೊಂದು ತಮ್ಮ ಗಮನಕ್ಕೆ ಬಂದಿದಿಯೋ ಏನೋ ಗೊತ್ತಿಲ್ಲ. ಕೆಲವು ತಾಲ್ಲೂಕುಗಳಲ್ಲಿ ಸರ್ಕಾರದವರೇ ಮುಂದೂಡಿದರು, ನಮ್ಮ ತಾಲ್ಲೂಕಿನಲ್ಲಿ ಚುನಾವಣೆ ಬೇಡ ಎಂದ ತಕ್ಷಣ ಮುಂದೂಡುತ್ತಾ ಹೋದರು. ಒಂದು ಚುನಾವಣಾ ದಿನಾಂಕವನ್ನು ನಿಗದಿ ಪಡಿಸಿದ ಮೇಲೆ ತಾಲ್ಲೂಕುಗಳಲ್ಲಿ ಆ ದಿನಾಂಕಕ್ಕೆ ತಕ್ಕಂಥ ಚುನಾವಣೆಗಳನ್ನು ನಡೆಸಿದಿರಿ, ಇನ್ನು ಕೆಲವು ತಾಲ್ಲೂಕುಗಳಲ್ಲಿ ಯಾರು ಯಾರು ಬಂದು ಹೇಳಿದರೋ ಅವರಿಗೆಲ್ಲಾ ಪರವಾನಿಗೆಯನ್ನು ಕೊಟ್ಟಿರಿ. ಅದು ಹೇಗೆ ಮಾಡಿದಿರಿ? ಇಂಥ ಚುನಾವಣೆಗಳು ಹೇಗೆ ಆಗುತ್ತದೆ. ಇದು ನಿಜವಾಗಿಯೂ ಹಸ್ತಕ್ಷೇಪ ಅಲ್ಲವೇ? ಈಗ ನಾನು ಹೇಳುವ ಪ್ರಕಾರ ಕೆಲವು ಜಿಲ್ಲೆಗಳವರು, ಕೆಲವು ತಾಲ್ಲೂಕುಗಳವರು ಮುಖ್ಯಮಂತ್ರಿಗಳಿಗೆ ಬಂದು ಅರ್ಜಿ ಕೊಟ್ಟತಕ್ಷಣ ಅವರನ್ನು ಮುಂದೆ ಹಾಕುವುದು. ಹೊಸಕೋಟೆಯದನ್ನು ಮುಂದಕ್ಕೆ ಹಾಕಲಿಲ್ಲವೇ ಸ್ವಾಮಿ? ರಾಯಚೂರು ಜಿಲ್ಲೆಯಲ್ಲಿ ಬೀದರ್ ಜಿಲ್ಲೆಯಲ್ಲಿ, ಗುಲ್ಬರ್ಗಾ ಜಿಲ್ಲೆಯಲ್ಲಿ ನೀವು ಮುಂದಕ್ಕೆ ಹಾಕಿದರಲ್ಲಾ, ಯಾವ ಕಾರಣಕ್ಕಾಗಿ ಹಾಕಿದಿರಿ? ಆ ರೀತಿಯಾದ ಅವಕಾಶವನ್ನು ಎಲ್ಲಾ ಶಾಸಕರಿಗೂ ನೀವು ಕೊಡಬೇಕಾಗಿತ್ತು. ಅದನ್ನು ಬಿಟ್ಟು ನಿಮಗೆ ಬೇಕಾದವರಿಗೆ ಸಂಪೂರ್ಣವಾದ ಆದೇಶವನ್ನು ಕೊಡುವುದು ಏನಿದು? ಇದು ಚುನಾವಣೆ ಎನ್ನಿಸಿಕೊಳ್ಳುತ್ತದೆಯೇ? ಇದನ್ನು ಚುನಾವಣೆಗಳೆಂದು ಹೇಳುವುದಕ್ಕೆ ಸಾಧ್ಯವೇ ಇಲ್ಲ. ತಮಗೆ ನಾನು ಹೇಳುತ್ತಿದ್ದೇನೆ, ಮಾನ್ಯ ಅಧ್ಯಕ್ಷರೇ ಚುನಾವಣೆಯಲ್ಲಿ ಗಲಭೆಗಳಾಗಿಲ್ಲ. ಅನ್ಯಾಯಗಳಾಗಿಲ್ಲ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳುವುದನ್ನು ಸಂಪೂರ್ಣವಾಗಿ ನಾನು ಒಪ್ಪುವುದಕ್ಕೆ ಸಾಧ್ಯವಿಲ್ಲ. ಇವತ್ತು ನೇರವಾಗಿ ಹೇಳುತ್ತಿದ್ದೇನೆ, ಮಾಲೂರಿನ ಶಾಸಕರು ಮಾನ್ಯ ನಾಗರಾಜ್ ಬಗ್ಗೆ ನಾವು ಪತ್ರಿಕೆಗಳಲ್ಲಿ ಓದಿದ್ದೇವೆ ಯಾವ ಸಂದರ್ಭದಲ್ಲಿ ಎಂದರೆ ಇದೇ ಚುನಾವಣೆಯ ಗೊಂದಲದಲ್ಲಿ ಪೋಲೀಸ್ ಸ್ಟೇಷನ್‌ನಲ್ಲಿ ನಿಂತಾಗ ಗುಂಪಿನವರು ಬಂದು ಅವರ ಮೇಲೆ ದಾಳಿ ಮಾಡಿ ಒಬ್ಬಶಾಸಕರನ್ನು ಕೊಲೆಯ ಮಾಡುವ ಮಟ್ಟಕ್ಕೆ ಹೋದದ್ದು ಇದು ಗಲಭೆಯಲ್ಲವೇ? ಇದರ ಬಗ್ಗೆ ನೀವು ಕ್ರಮವನ್ನು ತೆಗೆದುಕೊಂಡಿರುತ್ತೀರಿ. ನಾಲ್ಕು ಜನರನ್ನು ಬಂಧನ ಮಾಡುವುದನ್ನು ಬಿಟ್ಟರೆ ಈ ಸದನದ ಯಾವುದೇ ಪಕ್ಷದ ಶಾಸಕರಾಗಿರಲಿ ಈ ಶಾಸಕರುಗಳ ಬಗ್ಗೆ ನೀವು ಏನು ಚಿಂತನೆಯನ್ನು ಮಾಡಿದ್ದೀರಿ. ಅನೇಕ ತಾಲ್ಲೂಕುಗಳಲ್ಲಿ ಇದೇ ರೀತಿ ಶಾಸಕರುಗಳ ಬಗ್ಗೆ ರಾಜಕೀಯವನ್ನು ತಂದು ಮೇಲೆ ಬೀಳತಕ್ಕಂಥ ಗೊಂದಲ ಇವತ್ತು ಎಲ್ಲಾ ತಾಲ್ಲೂಕುಗಳಲ್ಲಿ ನಡೆದಿದೆ ನಾನು ಮಾಲೂರು ಶಾಸಕರಾದಂಥ ಶ್ರೀಮಾನ್ ನಾಗರಾಜ್ ರವರ ಬಗ್ಗೆ ಮಾತನಾಡುವಾಗ ಇಡೀ ಸದನದ ಎಲ್ಲಾ ಶಾಸಕರುಗಳಿಗೂ ಸಂಪೂರ್ಣವಾದ ರಕ್ಷಣೆಯನ್ನು ಸರ್ಕಾರದವರು ಕೊಡಬೇಕಾಗುತ್ತದೆ. ಇಂಥ ಚುನಾವಣೆಯ ಸಂದರ್ಭದಲ್ಲಿ ಗೊಂದಲವಾಗುತ್ತದೆ. ಗದ್ದಲವಾಗುತ್ತದೆ. ಒಬ್ಬರೇ ಶಾಸಕರು ಹೋಗುತ್ತಿರುತ್ತಾರೆ, ಅವರ ಮೇಲೆ ಗುಂಪು ನೇರವಾಗಿ ಬೀಳುತ್ತದೆ ಇಂಥ ಸಂದರ್ಭದಲ್ಲಿ ಅನಾಹುತಗಳಾಗುತ್ತದೆ. ಶಾಸಕರುಗಳ ಮೇಲೆ ಆಗತಕ್ಕಂಥ ಅನಾಹುತವನ್ನು ತಪ್ಪಿಸುವುದಕ್ಕೆ ಸರ್ಕಾರದವರು ಯಾವುದಾದರೂ ಒಂದು ನಿರ್ದಿಷ್ಟವಾದ ಕ್ರಮವನ್ನು ಕೈಗೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ

ಯಾರು ಯಾರನ್ನಬೇಕಾದರೂ ಹೊಡೆಯಬಹುದು. ಎನ್ನುತಕ್ಕಂಥ ಪ್ರಶ್ನೆ ಬಂದರೆ ಇದು ಸರಿಯಾದಂಥ ನೀತಿಯಲ್ಲ. ಯಾವ ಪಕ್ಷದವರೇ ಆಗಿರಲಿ ಅವರವರ ಶಾಸಕರು ರಾಜಕಾರಣ ಮಾಡುತ್ತಾರೆಂಬ ಪ್ರಶ್ನೆಯಲ್ಲ, ರಾಜಕಾರಣ ನಾವು ಮಾಡುತ್ತೇವೆ. ನೀವು ವಿರೋಧಪಕ್ಷದಲ್ಲಿವವರು ನೀವು ಮಾಡಿ. ಆದರೆ ಶಾಸಕರಮೇಲೆ ಕೊಲೆಯನ್ನು ಮಾಡ ತಕ್ಕಂಥ ಮಟ್ಟಕ್ಕೆ ಹೋಗುವುದಾದರೆ ಇದನ್ನು ಪ್ರಜಾಪ್ರಭುತ್ವವೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಮತ್ತು ಅಂಥ ಶಾಸಕರುಗಳಿಗೆ ರಕ್ಷಣೆ ಕೊಡುವುದಕ್ಕೆ ನಿಮ್ಮ ಸರ್ಕಾರದಲ್ಲಿ ಯಾವುದೇ ಒಂದು ವ್ಯವಸ್ಥೆ ಇಲ್ಲ, ಯಾವುದೇ ಒಂದು ಸಿಬ್ಬಂದಿ ಇಲ್ಲ, ಯಾವುದೇ ಒಂದು ಚಿಂತನೆ ಇಲ್ಲವೆಂದರೆ ಈ ಸದನದ ಶಾಸಕರಾಗಿ ಯಾವ ಕಾರಣಕ್ಕಾಗಿ ಇರಬೇಕೆಂಬ ಮಾತನ್ನು ನಾನು ನೇರವಾಗಿ ಕೇಳುತ್ತಿದ್ದೇನೆ.

ಆದುದರಿಂದ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವಾಗ ಈ ಶಾಸಕರುಗಳಿಗೆ ಯಾವ ರೀತಿಯ ರಕ್ಷಣೆ ಕೊಡುತ್ತೀರೆಂಬುದನ್ನು ಮೊದಲು ಸ್ಪಷ್ಟಪಡಿಸಬೇಕು. ಇದನ್ನೆಲ್ಲ ನಾನು ಶಾಸಕರ ಪರವಾಗಿ ಸಂಪೂರ್ಣ ಪಕ್ಷಾತೀತವಾಗಿ ಮಾತನಾಡುತ್ತಿದ್ದೇನೆ. ಇಲ್ಲದಿದ್ದರೆ ನಾಳೆ ಯಾರೋ ಬರುತ್ತಾರೆ, ಎಲ್ಲೋ ಬರುತ್ತಾರೆ, ಏನು ಕಥೆಯೋ ಅವರದ್ದು. ಯಾರು ಮೇಲೆ ಬೀಳುತ್ತಾರೋ, ಸುದೈವದಿಂದ ಅವರು ಈ ಸದನದಲ್ಲಿದ್ದಾರೆ, ನನಗೆ ಅದೇ ಸಂತೋಷ. ಏನಾದರೂ ಹೆಚ್ಚು ಕಡಿಮೆ ಆಗಿದ್ದರೆ ಈ ಸದನದಲ್ಲಿ ನಮ್ಮ ಪರಿಸ್ಥಿತಿ ಏನು? ನಮ್ಮ ಸ್ನೇಹಿತರು ಸನದಕ್ಕೆ ಯಾವುದೇ ಪಕ್ಷದವರಾಗಲಿ ಶಾಸಕರಾಗಿ ಬಂದಿದ್ದಾರೆ. ಇದನ್ನು ನಾನು ಮುಕ್ತಕಂಠದಿಂದ ಅವರು ಕಾಂಗ್ರೆಸ್ ಸದಸ್ಯರಾದರೂ, ಯಾರೇ ಮಾಡಿದ್ದರೂ ನಾನು ಖಂಡಿಸುತ್ತೇನೆ. ತಾವು ಈ ಬಗ್ಗೆ ಸ್ಪಷ್ಟವಾದ ಆದೇಶ ಕೊಡಬೇಕು. ಕೊನೆಯದಾಗಿ ಕೂಡ್ಲಿಗಿ ಬಳಿ ಪೊಲೀಸ್ ಗುಂಡಿಗೆ 3 ಜನರ ಬಲಿ. ಗಂಡುಬೊಮ್ಮನಹಳ್ಳಿಯಲ್ಲಿ 5 ಸಾವಿರ ಜನ ಚುನಾವಣಾ ಕಾರ್ಯಲಯಕ್ಕೆ ಮುತ್ತಿಗೆ ಹಾಕಿದರಂತೆ ಆ ಊರಿನ ಜನಸಂಖ್ಯೆ ಎಷ್ಟು? ಚುನಾವಣಾ5 ಸಾವಿರ ಕಾರ್ಯಾಲಯಕ್ಕೆ 5 ಸಾವಿರ ಜನ ಮುತ್ತಿಗೆ ಹಾಕಬೇಕಾದರೆ, ಒಬ್ಬ ಅಧ್ಯಕ್ಷರ ಚುನಾವಣೆಗೆ 5 ಸಾವಿರ ಜನ ಸೇರಿದ್ದರೆ ಎಂಬುದು ಒಂದು ಪ್ರಶ್ನೆ. ಸಾಮಾನ್ಯವಾಗಿ ಮುಖ್ಯಮಂತ್ರಿಕಗಳ ಚುನಾವಣೆಗೆ 5 ಸಾವಿರ ಜನ ಸೇರುವುದಿಲ್ಲ, ಒಬ್ಬ ಅಧ್ಯಕ್ಷರ ಚುನಾವಣೆಗೆ 5 ಸಾವಿರ ಜನ ಸೇರಿದ್ದರು, ನುಗ್ಗುತ್ತಿದ್ದರು, ಧಾಳಿ ಮಾಡುವುದಕ್ಕೆ ಹೊರಟರು ಅಂದರೆ ಆಮೇಲೆ ನಿಮ್ಮ ಕ್ರಮ ಏನು ಪೊಲೀಸರ ಕ್ರಮ ಏನು? ಏನೇನು ವಿಧಾನ ಅನುಸರಿಸಿದಿರಿ? ಯಾವ ವಿಧಿ ವಿಧಾನಗಳನ್ನು ಅನುಸರಿಸದೆ ನೇರವಾಗಿ ನಿಮ್ಮ ಬಂದೂಕಿಗೆ ಹೇಳಿದಿರಿ ಬಂದೂಕಿನಲ್ಲಿ ಹೊಡೆದಿರಿ, 3 ಜನರನ್ನು ಉರುಳಿಸಿದಿರಿ. ಗೋಲೀಬಾರ್ ಮಾಡುವುದಕ್ಕೆ ಅನೇಕ ವಿಧಿ ವಿಧಾನಗಳಿವೆ. ಗೋಲೀಬಾರ್ ಮಾಡುವುದಕ್ಕೆ ಮುಂಚೆ ನಿಮಗೆ ಮೊದಲು ಖಾತ್ರಿ ಆಗಬೇಕು. 5 ಸಾವಿರ ಜನರಿಂದ 10 ಸಾವಿರ ಜನ ಕೊಲೆ ಆಗಬಹುದು. ಸ್ಟೇಷನ್ನಿಗೆ ನುಗ್ಗಬಹುದು. ಪೊಲೀಸರ ಮೇಲೆ ಧಾಳಿ ಆಗಬಹುದು. ಇದೆಲ್ಲಾ ಆದಾಗ ವಿಧಾನಗಳು ಏನು? ವಿಧಾನಗಳು, ಮೊದಲು ನೀವು ಬೆತ್ತ ಪ್ರಹಾರ ಮಾಡಬೇಕು. ಟೀಯರ್ ಗ್ಯಾಸ್ ಹೊಡೆಯಬೇಕು. ಅದಕ್ಕೂ ಜಗ್ಗಲಿಲ್ಲ ಅಂದಾಗ ಗಾಳಿಯಲ್ಲಿ ಗುಂಡು ಹಾರಿಸಬೇಕು. ಅದಕ್ಕೂ ಆಗಲಿಲ್ಲವೆಂದರೆ ಗೋಲೀಬಾರ್ ಮಾಡಬಹುದು. ಅದು ಬಿಟ್ಟು ನೇರವಾಗಿ ಗುಂಡು ಹೊಡೆದು 3 ಜನರನ್ನು ಕೊಂದಿದ್ದೀರಿ. 3 ಜನರನ್ನು ಕೊಂದರೂ ಸರ್ಕಾರ ಇದುವರೆಗೆ ಏನು ಕ್ರಮ ತೆಗೆದುಕೊಂಡಿದೆ? ಈ ಕ್ಷಣದವರೆಗೆ 3 ಜನರಿಗೆ ಪರಿಹಾರ ಕೊಟ್ಟಿದ್ದೀರಾ? ಆ 3 ಜನರ ಬಗ್ಗೆ ತನಿಖೆ ನಡೆದಿದೆಯೇ? ಗೋಲೀಬಾರ್ ಆಗುವುದಕ್ಕೆ ಕಾರಣವೇನು? ಇದರ ಬಗ್ಗೆ ಸ್ಪಷ್ಟವಾದ ಆದೇಶವನ್ನು ಸರ್ಕಾರ ಕೊಡಬೇಕು. ಇದು ರಾಜ್ಯಾದ್ಯಂತ ನಡೆಯದೆ ಇರಬಹುದು.

ಆದರೆ ಕೂಡ್ಲಿಗಿಯನ್ನು ನೋಡಿದರೆ, ನೇರವಾಗಿ ಗೋಲೀಬಾರ್ ಮಾಡುವುದು

ಜನರು ಬಂದರು. ಅವರನ್ನು ನಿಲ್ಲಿಸಿ ಕೇಳಿ ಯಾವ ರೀತಿ ಮಾಡಬೇಕು ಎಂಬುದಕ್ಕಿಂತ ಹೆಚ್ಚಾಗಿ ಗುಂಡಿಗೆ ಒಡ್ಡುವುದಾದರೆ ಇದು ಬಹಳ ಅನ್ಯಾಯ ಎಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವತ್ತು ಪೊಲೀಸ್ ಇಲಾಖೆಯಲ್ಲಿ ಒಳ್ಳೆಯ ಅಧಿಕಾರಿಗಳಿದ್ದಾರೆ, ಅವರಿಗೆ ನಾನು ಅಭಿನಂದನೆ ಸಲ್ಲಿಸುತ್ತೇನೆ. ಆದರೆ ಈ ಪರಿಸ್ಥಿತಿಗೆ ಅವರು ಅವಕಾಶ ಕೊಡಬಾರದು. ಕೊಟ್ಟರೆ ಇದು ಒಳ್ಳೆಯ ನೀತಿ ಆಗುವುದಿಲ್ಲ ಎಂಬ ಮಾತನ್ನು ಅತ್ಯಂತ ನೋವಿನಿಂದ ಹೇಳಿ ಈ ಬಗ್ಗೆ ಸಮಗ್ರವಾಗಿ ನ್ಯಾಯಾಂಗ ತನಿಖೆ ಆಗಬೇಕೆಂದು ಹೇಳುತ್ತೇನೆ. ಸತ್ತ 3 ಜನರ ಕುಟುಂಬಗಳಿಗೆ ಕನಿಷ್ಟ ಒಂದು ಲಕ್ಷ ರೂಪಾಯಿಗಳನ್ನು ಕೂಡಲೇ ಪರಿಹಾರವಾಗಿ ಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳನ್ನು ಒತ್ತಾಯಿಸುತ್ತೇನೆ. ಈ ಬಗ್ಗೆ ಪೊಲೀಸ್ ಇಲಾಖೆಗೆ ಏನೇನು ಮಾಹಿತಿ ಬಂದಿದೆ ಎಂಬುದನ್ನು ಈ ಸದನದಲ್ಲಿ ಮಂಡಿಸಬೇಕೆಂದು ಹೇಳುತ್ತೇನೆ. ಕರ್ನಾಟಕ ರಾಜ್ಯದಲ್ಲಿ ಈ ರೀತಿ ತಕ್ಷಣ ಗೋಲೀಬಾರ್ ಆಗತಕ್ಕದ್ದು, ತಕ್ಷಣ ಹೊಡೆದು ಉರುಳಿಸತಕ್ಕದ್ದು ಇತ್ತೀಚಿನ ದಿನಗಳಲ್ಲಿ ಇರಲಿಲ್ಲ. ಏನೋ ಹಿಂದಿನಿಂದ ನಡೆದುಕೊಂಡು ಬಂದಿವೆ ಎಂಬ ದೃಷ್ಟಿಯಿಂದ ಆಗಬಾರದು. ನಮ್ಮಲ್ಲಿ ಎಂಥೆಂಥ ಒಳ್ಳೆಯ ಪೊಲೀಸ್ ಅಧಿಕಾರಿಗಳು ಇದ್ದಾರೆ, ಅವರ ಬಗ್ಗೆ ನನಗೆ ಮೆಚ್ಚುಗೆ ಇದೆ. ಅವರೆಲ್ಲಾ ಅನುಭವಸ್ಥರು ಇದ್ದಾರೆ. ತಿಳಿವಳಿಕಸ್ಥರು ಇದ್ದಾರೆ. ಆ ಅಧಿಕಾರಿಗಳ ಬಗ್ಗೆ ನಾನು ಅಭಿನಂದನೆ ಸಲ್ಲಿಸುತ್ತೇನೆ. ಅನೇಕ ಇಲಾಖೆಗಳಲ್ಲಿ ಒಳ್ಳೊಳ್ಳೆಯ ಅಧಿಕಾರಿಗಳನ್ನು ನಿಮ್ಮ ಆಡಳಿತದಲ್ಲಿ ಇಟ್ಟಿದ್ದೀರಿ. ಆ ಬಗ್ಗೆ ನಾನು ನಿಜವಾಗಿಯೂ ಮುಕ್ತ ಕಂಠದಿಂದ ಹೇಳುತ್ತೇನೆ. ಆ ಅಧಿಕಾರಿಗಳ ಬಗ್ಗೆ ಅಪಾರವಾದ ಗೌರವ ಇದೆ. ಅವರು ಏನು ಇಂಥ ಸಂದರ್ಭದಲ್ಲಿ ಎಚ್ಚರಿಕೆ ವಹಿಸಬೇಕೆಂಬುದನ್ನು ಪ್ರಾಮಾಣಿಕವಾಗಿ ಹೇಳಿ ಈ ಬಗ್ಗೆ ತಾವು ಏನು ಅಂತಿಮವಾಗಿ ಆದೇಶ ಕೊಡುತ್ತೀರಿ ಅದನ್ನು ಕೊಡಬೇಕೆಂದು ಹೇಳಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್ : ಅದು ಕೇವಲ 120 ಜನ ಇರುವಂಥ ಊರು ಎಂದು ಪತ್ರಿಕೆಯಲ್ಲಿ ಓದಿದೆ. ನಾನು ಅಲ್ಲಿ ಹೋಗಿರಲಿಲ್ಲ. ಅಲ್ಲಿ 20 ಜನ ಹರಿಜನರ ಮನೆ ಇದೆಯಂತೆ ಆ 20 ರಲ್ಲಿ 11 ಮನೆಗಳನ್ನು ಸುಟ್ಟಿದ್ದಾರೆ. ಆ ಊರಿಗೆ ಮಂಡಲದ ಹೆಡ್ ಕ್ವಾರ್ಟರ್ ಮಾಡಿದ್ದಾರೆ. 20 ಹರಿಜನರ ಮನೆ ಇರತಕ್ಕ ಆ ಊರನ್ನು ಹೆಡ್‌ಕ್ವಾರ್ಟರ್ ಮಾಡಿದ್ದಾರೆ. ಆ ಊರಿಗೆ ಯಾವ ಸಂಪರ್ಕವೂ ಇಲ್ಲ, ಅಲ್ಲಿ 11 ಮನೆಗಳನ್ನು ಸುಟ್ಟು ಹಾಕಿದ್ದಾರೆ. 20 ಅನ್ನು ಸುಟ್ಟಿದ್ದರೆ ಬಹಳ ಚೆನ್ನಾಗಿತ್ತು. ಅವರಿಗೆ ಅನುಕೂಲ ಮಾಡಿಕೊಡತಕ್ಕದ್ದು, ಮತ್ತೊಂದು ಆ ಕಾಟ ತಪ್ಪುತ್ತಿತ್ತು. 5 ಸಾವಿರ ಜನ ಆ ಊರಿನಲ್ಲಿ ಗಲಾಟೆ ಮಾಡುವುದಕ್ಕೆ ಹೋದರೆ ಅದನ್ನು ಹೇಗೆ ನಿಯಂತ್ರಣ ಮಾಡಬೇಕು? ನಮ್ಮ ಊರನ್ನು ಗ್ರಾಮಪಂಚಾಯಿತಿ ಹೆಡ್‌ಕ್ವಾರ್ಟರ್ ಮಾಡಿ ಎಂದು. ಅವರೇನು ಅರ್ಜಿ ಹಾಕಿದ್ದರೇ, ಇದನ್ನು ಈ ಸದನದಲ್ಲಿರತಕ್ಕ ನಾವು ಸ್ವಲ್ಪ ವಿಚಾರ ಮಾಡಬೇಕು. ಏನೋ ಸುದ್ದಿಯಿಂದ ಬಹಳ ಗುಂಡು ಹಾರಿಸಿದ್ದು ಆಯಿತು. 20 ಗುಡಿಸಲುಗಳಲ್ಲಿ 11 ಗುಡಿಸಲು ಸುಟ್ಟಿವೆ.

ಶ್ರೀ ಆರ್.ವಿ. ದೇಶಪಾಂಡೆ : 120 ಒಟ್ಟು ಗುಡಿಸಲುಗಳು

ಶ್ರೀ ಕೆ.ಎಚ್. ರಂಗನಾಥ್ : 120 ಜನಸಂಖ್ಯೆ ನಾನು ಪತ್ರಿಕೆಯಲ್ಲಿ ಓದಿದ್ದುದು

ಶ್ರೀ ಆರ್.ವಿ. ದೇಶಪಾಂಡೆ : 120 ಗುಡಿಸಲು. ಅದರಲ್ಲಿ 20 ಸುಟ್ಟಿದ್ದಾರೆ.

ಶ್ರೀ ಕೆ.ಎಚ್. ರಂಗನಾಥ್ : ನಾನು ಪತ್ರಿಕೆಯಲ್ಲಿ ಓದಿದ್ದು ಹೇಳಿದ್ದೇನೆ. Subject to correction, ಇರಲಿ, 120 ಗುಡಿಸಲೇ 120 ಗುಡಿಸಲು ಇರತಕ್ಕ ಸಂಪರ್ಕದ ವ್ಯವಸ್ಥೆ ಇಲ್ಲದಿರುವ ಊರು ಹೆಡ್ ಕ್ವಾರ್ಟರ್ ಆಗಿದೆ. ಅವರು ಏನಪ್ಪ ಇಂಥದ್ದಾಗಿದೆ ಸಧ್ಯ ಎಂದು ಮೊದಲೇ ಬದಲಾವಣೆಯನ್ನಾದರೂ ಮಾಡಿಸಿಕೊಳ್ಳಬಹುದಾಗಿತ್ತು. 5

ಸಾವಿರ ಜನ ಸೇರಿ ಪ್ರಧಾನರನ್ನು ಮತ್ತೆ ಚುನಾವಣೆ ಮಾಡುವ ಬದಲು ಬದಲಾವಣೆಯನ್ನಾದರೂ ಮಾಡಿಸಿಕೊಳ್ಳಬಹುದಾಗಿತ್ತು. ಪೋಲೀಸರ ಬಗ್ಗೆ- ಸದನದಲ್ಲಿ ಪ್ರಸ್ತಾವ ಮಾಡಿದ್ದೀರಿ. ನಾನು ಓದಿದ ಹಾಗೆ ಬೆತ್ತ ಪ್ರಹಾರ ಆಯಿತು, ಟಿಯರ್ ಗ್ಯಾಸ್ ಎಲ್ಲಾ ಆಯಿತು, ಕೊನೆಗೆ ವಿಧಿ ಇಲ್ಲದೆ ಅವರು ಹೊಡೆದಿದ್ದಾರೆ ಎಂದು ನಾನು ಪತ್ರಿಕೆಯಲ್ಲಿ ಓದಿದ್ದೇನೆ. ಆದರೆ ಇವತ್ತು ನಾವು ಯಾವುದೇ ಪಕ್ಷಕ್ಕೆ ಸೇರಿರಲಿ ಬಹಳ ದೊಡ್ಡ ಮಾತು ಆಡುತ್ತೇವೆ. ನಾವು ಪರಿಜನರಿಗೆ ಅಸ್ಪೃಶ್ಯರಿಗೆ ಹಾಗೆ ಮಾಡುತ್ತೇವೆ ಹೀಗೆ ಮಾಡುತ್ತೇವೆ ಎಂದು. ಇಂಥದ್ದರಲ್ಲಿ ತಾಳ್ಮೆ ಇಲ್ಲದ ಪರಿಸ್ಥಿತಿಯಲ್ಲಿ ನಡೆದುಕೊಂಡರೆ ಏನು ಮಾಡಬೇಕಾಗುತ್ತದೆ ನಾವು.

ಶ್ರೀ ವಾಟಾಳ್ ನಾಗರಾಜ್ : ತಾವು ಹೇಳಿದಮೇಲೆ, 20 ಗುಡಿಸಲುಗಳಲ್ಲಿ 10 ಗುಡಿಸಲುಗಳನ್ನು ಸುಟ್ಟಿದ್ದಾರೆಂದರೆ ಯಾರೂ ಅದನ್ನು ಸಹಿತಸಕ್ಕದ್ದಲ್ಲ. ಇದನ್ನು ಖಂಡನೆ ಮಾಡಬೇಕಾದುದು, ಇದು ಅನ್ಯಾಯ ಎನ್ನತಕ್ಕದ್ದು ಸ್ಪಷ್ಟ. ಮತ್ತು ರಕ್ಷಣೆ ಕೊಡಬೇಕಾಗಿರುವುದು ಸರ್ಕಾರದ ಆದ್ಯಕರ್ತವ್ಯ. ಯಾವ ರಕ್ಷಣೆ ಕೊಡಬೇಕು? 5 ಸಾವಿರ ಜನ ಬಂದಾಗ ರಕ್ಷಣೆ ಕೊಡದಿರುವುದು ಸರ್ಕಾರದ ವೈಫಲ್ಯ ತಾನೇ?

ಶ್ರೀ ಕೆ.ಎಚ್. ರಂಗನಾಥ್ : ಪತ್ರಿಕೆಯಲ್ಲಿ ಬಂದಿದ್ದು ನಾನು ಓದಿದ್ದೇನೆ. ಇದರಲ್ಲಿ ವಾಸ್ತವಾಂಶ ತಿಳಿಯಲು ವಿಚಾರಣೆ ಮಾಡಿಸುವುದೋ ಮತ್ತೇನಾದರೂ ಮಾಡಿಸುವುದೋ ಮಾಡಲಿ. ಆದರೆ ಇವತ್ತು ಪರಿಸ್ಥಿತಿಗೆ ಬಂದಿದ್ದೇವೆ? ಬೆಲ್ಚಿಯಲ್ಲಿ ಆಯಿತಲ್ಲಾ ಅದಕ್ಕಿಂತ ದಾರುಣವಾದ ಪರಿಸ್ಥಿತಿಗೆ ಕರ್ನಾಟಕದಲ್ಲಿ ಬಂದಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಇದನ್ನು ಖಂಡನೆ ಮಾಡಬೇಕು.

ಶ್ರೀ ಕೆ.ಎಚ್. ರಂಗನಾಥ್ : ಪತ್ರಿಕೆಯವರೂ ಕೂಡ ಇಂಥ ಅನ್ಯಾಯವಾಯಿತು ಎಂದು ಬರೆದಿಲ್ಲ, ಪತ್ರಿಕೆಗಳು ಕೂಡ ಚುನಾವಣೆಯಲ್ಲಿ ಏನೋ ಅನಾಹುತವಾಗಿದೆ ಎಂದು ಹೇಳಿವೆಯೇ ವಿನಹ ಬಡಪಾಯಿಗಳ ಬಗ್ಗೆ ಏನೂ ಹೇಳಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಪತ್ರಿಕೆಗಳಲ್ಲಿ ಪ್ರಭಾವಿತವಾದ ದೊಡ್ಡ ಪತ್ರಿಕೆ ಪ್ರಜಾವಾಣಿಯಲ್ಲಿ ಬಂದಿರುವ ವರದಿಯ ಆಧಾರದ ಮೇಲೆ ಮಾತನಾಡುತ್ತಿದ್ದೇನೆ ಸ್ವಾಮಿ ನಾನೂ ಪತ್ರಿಕೆಯಲ್ಲಿ ಬಂದಿರುವುದು ಹೇಳುತ್ತಿದ್ದೇವೆ. ಇದರಲ್ಲಿ ರಬ್ಬರ್ ಗುಂಡನ್ನು ಹಾಕಿರುವುದಾಗಲೀ ಟಿಯರ್ ಗ್ಯಾಸ್ ಹೊಡೆದಿರುವುದಾಗಲೀ ಯಾವುದೂ ಇಲ್ಲ.

ಅಧ್ಯಕ್ಷರು : ವಾಟಾಳ್ ನಾಗರಾಜ್ ಅವರೇ, ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ : ಇದರಲ್ಲಿ ಎಂದು ತಮ್ಮ ಮೂಲಕ ಹೇಳುತ್ತಿದ್ದೇನೆ.

ಅಧ್ಯಕ್ಷರು : ಆಯಿತು, ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ : ಅದರ ಬಗ್ಗೆ ಗಮನ ಇದರಲ್ಲಿ ಎನ್ನತಕ್ಕ ಮಾತನ್ನು ತಮ್ಮ ಮೂಲಕ ಹೇಳುತ್ತೇನೆ. ವಿಧಿವಿಧಾನಗಳು ಯಾವುದು ಅನುಸರಿಸಿದರು ಎಂಬುದನ್ನು ಸಾಮಾನ್ಯವಾಗಿ ಕೊಡಬೇಕಾಗಿತ್ತು. ನಾನು ನೋಡಿದ ಪ್ರಕಾರ ಕೊಟ್ಟಿಲ್ಲ, ತಮಗೂ ಕಳುಹಿಸುತ್ತೇನೆ ನೋಡಿ.

ಶ್ರೀ ಕೆ.ಎಚ್. ರಂಗನಾಥ್ : ಪತ್ರಿಕೆಯಲ್ಲಿ, ಸುದ್ದಿ ಮಾಧ್ಯಮದಲ್ಲಿ ಬಂದಿರುವುದು ಹೇಗೆಂದರೆ ಚುನಾವಣೆಯಲ್ಲಿ ದೊಡ್ಡ ಗೊಂದಲಗಳಾಯಿತು ಎಂಬ ರೀತಿಯಲ್ಲಿ ಬಂದಿದೆಯೇ ವಿನಹ ಬಡಪಾಯಿಗಳ ಮೇಲೆ ಆದಂಥದ್ದರ ಬಗ್ಗೆ ಕನಿಕರದಿಂದ ಏನೂ ಬರಲಿಲ್ಲ. ಈ ಧೋರಣೆ ಏನಿದೆ ಇದು ಬಹಳ ವ್ಯಸನಪಡತಕ್ಕ ಧೋರಣೆ.

ಶ್ರೀ ವಾಟಾಳ್ ನಾಗರಾಜ್ : ಬಡಪಾಯಿಗಳನ್ನು ಉಳಿಸತಕ್ಕ ಒಂದು ವ್ಯವಸ್ಥೆ ಆಗಬೇಕಾದರೆ ಈ ಅನ್ಯಾಯವನ್ನು ಸಾರ್ವಜನಿಕವಾಗಿ ಪಕ್ಷಾತೀತವಾಗಿ ಖಂಡಿಸಬೇಕಾಗುತ್ತದೆ.

ಸುದ್ದಿ ಗೊತ್ತಾಯಿತೇ ವಿನಹ 'ಇದರಲ್ಲಿ ಬೇರೇನೂ ಇಲ್ಲ. ಗುಡಿಸಲು ಸುಟ್ಟಿದ್ದು ಇಲ್ಲ. ನಾವು ಯಾವುದನ್ನು ನಂಬಬೇಕು? ನಿಮಗಾದರೆ ಸರ್ಕಾರ ಇದೆ. ನಮಗೆ.

ಶ್ರೀ ಕೆ.ಎಚ್. ರಂಗನಾಥ್: ಪತ್ರಿಕೆಯಲ್ಲಿ ಓದಿರುವುದು ನಾನು ಹೇಳಿದೆ.

ಶ್ರೀ ವಾಟಾಳ್ ನಾಗರಾಜ್: ನಾನೂ ಪತ್ರಿಕೆಯಲ್ಲಿ ಬಂದಿರುವುದನ್ನು ಹೇಳುತ್ತಿದ್ದೇನೆ. ಇದರಲ್ಲಿ ಏನು ಬರೆದಿದೆ ನೋಡಿ. ಪ್ರಜಾವಾಣಿ ಪತ್ರಿಕೆಯಲ್ಲಿ ಬಂಧಿರತಕ್ಕ ವರದಿಯನ್ನು ತಮಗೆ ಹೇಳುತ್ತಿದ್ದೇನೆ. ಮೊದಲಾದರೂ ಅಲ್ಲಿ ಏನೇನು ನಡೆದಿದೆ ಎಂಬುದನ್ನು ಸರ್ಕಾರದಿಂದ ನಮಗೇನಾದರೂ ಮಾಹಿತಿ ಒದಗಿಸಿದ್ದರೆ ನಾನು ಮಾಡನಾಡತಕ್ಕ ಅವಕಾಶ ಇದ್ದೆ. ನೀವು ಏನೂ ಮಾಹಿತಿ ಒದಗಿಸದಿದ್ದರೆ ನಾವೇನು ಮಾಡಬೇಕು? ಪತ್ರಿಕೆಗಳೇ ನಮಗೆ ಅತಿ ಮುಖ್ಯ. ಪ್ರತಿಕೆಗಳೇ ಪ್ರಜಾಪ್ರಭುತ್ವದಲ್ಲಿ ಪ್ರಮುಖವಾದ ಅಂಗ. ಅದರ ಮುಖ ಪುಟ ಹಿಡಿದುಕೊಂಡೇ ನಾವು ಮಾತನಾಡತಕ್ಕ ಪರಿಸ್ಥಿತಿ ಆದರೆ ತಾವು ಹೇಳಿದಿರಿ. ನನಗೂ ಮನಸ್ಸಿಗೆ ನೋವಾಗುತ್ತದೆ. ಗುಡಿಸಲುಗಳಿಗೆ ಬೆಂಕಿ ಇಟ್ಟು ಚುನಾವಣೆಯನ್ನು ಯಾರೂ ಮಾಡತಕ್ಕದ್ದಲ್ಲ. ಇದು ಹೇಯವಾದ ಕೃತ್ಯ. ಎಲ್ಲರೂ ಖಂಡಿಸಬೇಕು ಎನ್ನತಕ್ಕ ಮಾತನ್ನು ಹೇಳುತ್ತಿದ್ದೇನೆ.

6.10 ಪಿ.ಎಂ.

+ ಶ್ರೀ ಕೆ.ವಿ. ರವೀಂದ್ರನಾಥ್ ಬಾಬು: ಮಾನ್ಯ ಅಧ್ಯಕ್ಷರೇ, ಈ ಕ್ಷೇತ್ರ ನನ್ನದು ನನಗೆ ಗೊತ್ತಿದೆ ಅಲ್ಲಿ ಏನಾಗಿದೆ ಎಂದು. ಇವರು ಪೇಪರ್‌ನಲ್ಲಿ ಓದಿದ್ದು ಮಾತ್ರ ಹೇಳುತ್ತಿದ್ದಾರೆ. ಅಲ್ಲಿ ಗ್ರಾಮ ಚಿಕ್ಕದು ಇರಬಹುದು. ಅಲ್ಲಿ ಕಂಟ್ರೋಲ್ ಮೀರಿ ಅಲ್ಲಿ ಜನಸಂಖ್ಯೆ ಬಂದು, ಇವರನ್ನು ಎಲ್ಲಾ ಸುಟ್ಟಾಕಬೇಕೆನ್ನುವ ಅಭಿಪ್ರಾಯದಿಂದ ಬಂದರು. ಹರಿಜನರ ಗುಡಿಸಲಿಗೆ ಯಾವಾಗ ಬೆಂಕಿಯನ್ನು ಇಟ್ಟರು ಆಗ ಪೋಲೀಸಿನವರು ಫೈರ್ ಮಾಡಲೇ ಬೇಕಾಗಿ ಬಂತು. ಆ ತಕ್ಷಣಕ್ಕೆ ಪೋಲೀಸರು ಫೈರ್ ಮಾಡದೇ ಇದ್ದಿದ್ದರೆ ಇಡೀ ಊರನ್ನು ಸುಟ್ಟುಹಾಕುತ್ತಿದ್ದರು. ಆ ಬಡವರನ್ನು ಎಲ್ಲಾ ಕೊಂದುಬಿಡುತ್ತಿದ್ದರು ಅಷ್ಟು ಮಂದಿ ಮೆಂಬರ್ಸ್‌ನೂ ಸ್ಕೂಲ್‌ನಲ್ಲಿ ಹಾಕಿ ಸುಡುವುದಕ್ಕೆ ಅವರು ಪ್ರಯತ್ನ ಮಾಡಿದ್ದವರು. ಅದಕ್ಕಾಗಿ ಪೋಲೀಸಿನವರು ಆಕ್ಷನ್ ತೆಗೆದುಕೊಂಡಿದ್ದುದು ಸರಿಯಾದ ಕ್ರಮ. ಅದು ತಪ್ಪಲ್ಲ. 5 ಸಾವಿರ ಜನ ಎಂದರೆ, ಅವರು ಹೋಗಿ ಅಲ್ಲಿ ಲೆಕ್ಕ ಮಾಡುವುದಕ್ಕಾಗುತ್ತದೆಯೇ, ಇಷ್ಟು ಜನ ಇದ್ದರು ಎಂದು? ಸರಿಸುಮಾರು 5 ಸಾವಿರ ಇರಬಹುದು. 2 ಸಾವಿರ ಇರಬಹುದು. 3 ಸಾವಿರ ಮಂದಿ ಇರಬಹುದು. ಆ ಗುಂಪು, ಗದ್ದಲದಲ್ಲಿ ಕಲ್ಲು ಬೀಸಿ ಕೊಂಡು ಬರುತ್ತಿದ್ದಾರೆ ಅವರು ಒಂದು ಕಡೆಯಿಂದ ಅದನ್ನು ತಡೆಯಲು ಟಿಯರ್ ಗ್ಯಾಸ್ ಹೊಡೆದರು. ಲಾಠಿಛಾರ್ಜ್ ಮಾಡುವುದಕ್ಕೆ ಪ್ರಯತ್ನ ಮಾಡಿದರು. ಅಲ್ಲಿ ಹೊಲಗಳು. ಇಲ್ಲಿಯ ಬೆಂಗಳೂರು ಸಿಟಿ ರೀತಿ ಇರುವುದಿಲ್ಲ, ಹಳ್ಳಿಗಳಲ್ಲಿ. ಅವರು ಇನ್ನೊಂದು ಕಡೆಯಿಂದ ಬಂದರು, ಬಂದು ಹರಿಜನರ ಗುಡಿಸಲುಗಳಿಗೆ ಬೆಂಕಿ ಇಟ್ಟರು. ಅಲ್ಲಿ ಹೆಣ್ಣುಮಕ್ಕಳನ್ನು, ಮಕ್ಕಳನ್ನು ಎಲ್ಲಾ ಒಳಗಡೆ ಹಾಕಿ ಬೀಗ ಹಾಕಿ ಬೆಂಕಿ ಹಚ್ಚುವುದಕ್ಕೆ ಪ್ರಯತ್ನ ಮಾಡಿದರು. ಬಡವರು ಸುಟ್ಟು ಹೋದರೆ ಪರ್ವಾಗಿಲ್ಲವಾ? ಹರಿಜನರು ಸತ್ತುಹೋದರೆ ಪರ್ವಾಗಿಲ್ಲವಾ? ದರೋಡೆ ದೌರ್ಜನ್ಯ ಮಾಡುವವರಿಗೆ ಕೊಲ್ಲಬಾರದೇ? ಈ ಜನರಿಗೆ ಪ್ರೊಟೆಕ್ಷನ್ ಕೊಡಬಾರದೇ? ಈ ರೀತಿ ಪ್ರೊಟೆಕ್ಷನ್ ಕೊಟ್ಟಿದ್ದಕ್ಕಾಗಿ, ಅದು ಪೇಪರ್‌ನಲ್ಲಿ ಬಂದಿದೆ ದೊಡ್ಡದಾಗಿ ಮಾತನಾಡುತ್ತಾರೆ ಇವರು. 5 ಸಾವಿರ ಜನರು ಎಲ್ಲಿಂದ ಬಂದರು? ಸುತ್ತಮುತ್ತ ಅಲ್ಲಿ 13 ಹಳ್ಳಿಗಳು ಇವೆ. ಗಂಡುಬೊಮ್ಮನಹಳ್ಳಿ ಮಂಡಲ ಪಂಚಾಯಿತಿ ಮೊದಲಿನಿಂದಲೂ ಇದೆ. ಮಂಡಲ ಪಂಚಾಯಿತಿ ಹೆಡ್ ಕ್ವಾರ್ಟರ್ಸ್ ಪಕ್ಕದ ತಿಮ್ಮನಹಳ್ಳಿ. ಅಡ್ಮಿನಿಸ್ಟ್ರೇಟಿವ್ ಆಫೀಸ್ ಅಲ್ಲಿ ಇದೆ. ಅದು ಒಂದು ಫರ್ಲಾಂಗ್ ಆಗುವುದಿಲ್ಲ. ಬೆಂಗಳೂರು - ಮೈಸೂರು ಇದ್ದ ಹಾಗೆ ಇತ್ತು. ದಾವಣಗೆರೆ - ಚಿತ್ರದುರ್ಗ ಇದ್ದಹಾಗೆ ಇತ್ತು. ಇವತ್ತೂ ಅದೇ ರೀತಿ ಅಲ್ಲಿ ನಡೆಯುತ್ತಿದೆ. ಅದರಲ್ಲಿ ತಪ್ಪೇನೂ ಇಲ್ಲ. 5 ಸಾವಿರ ಮಂದಿ ಎಂದರೆ, 5 ಸಾವಿರ ಎಂದು ಲೆಕ್ಕಹಾಕಿ

ಹೇಳುವುದಕ್ಕಾಗುವುದಿಲ್ಲ ಅಲ್ಲಿ. ಅಷ್ಟು ಮಂದಿ ಬಡವರನ್ನು ರಕ್ಷಿಸಲು ಪೋಲೀಸರು ಶೂಟ್ ಮಾಡಬೇಕಾಗಿ ಬಂತು. ಇಲ್ಲದಿದ್ದರೆ ಇಡೀ ಊರೇ ಹೋಗುತ್ತಿತ್ತು. ಆ ಜಾಗ ನೋಡಲು ಯಾರು ಹೋಗಿದ್ದರು ಎಂದು ಕೇಳಿ. ಎಂ.ವೈ.ಘೋರ್ಪಡೆಯವರು ಅಲ್ಲಿಗೆ ಹೋಗಿ ಬಂದಿದ್ದಾರೆ. ನಾನೂ ಅಲ್ಲಿಗೆ ಹೋಗಿ ಬಂದೆ. ಅಲ್ಲಿ ಪರಿಸ್ಥಿತಿ ಹೋಗಿ ನೋಡಿದರೆ ಗೊತ್ತಾಗುತ್ತದೆ. ಈ ರೀತಿ ಪೇಪರ್ ಓದಿ ಹೇಳುವುದು ಅಲ್ಲ.

ಶ್ರೀ ಎಸ್. ಚಿಕ್ಕಮಾಧು : ಮಾನ್ಯ ಅಧ್ಯಕ್ಷರೇ, ನಾನೂ ಮಾತನಾಡಬೇಕು.

ಅಧ್ಯಕ್ಷರು : ನಿಲುವಳಿ ಸೂಚನೆ ಮೇಲೆ ಎಲ್ಲರೂ ಮಾತನಾಡಬೇಕು ಎಂದರೆ ಹೇಗೆ ?

ಶ್ರೀ ಜೆ.ಸಿ. ಮಾಧುಸ್ವಾಮಿ : ನಾವೂ ಮಾತನಾಡಬೇಕಾಗುತ್ತದೆ.

ಅಧ್ಯಕ್ಷರು : ನಿಯಮದ ಪ್ರಕಾರ ಎಲ್ಲರೂ ಮಾತನಾಡಲು ಅವಕಾಶ ಇಲ್ಲ. ರೂಲ್ ಪ್ರಕಾರ 3 ಜನರಿಗೆ ಅವಕಾಶ ಕೊಡಬೇಕೆಂದು ಇದೆ. ನಾನು 6 ಜನರಿಗೆ ಅವಕಾಶವನ್ನು ಕೊಟ್ಟಿದ್ದೇನೆ. ಅವರಿಗೂ ಮಾತನಾಡಲು ನಾನು ಸಾಕಷ್ಟು ನಿರ್ಬಂಧನ ಹಾಕಲಿಲ್ಲ. ಎಲ್ಲರಿಗೂ ಅವಕಾಶ ಕೊಡಬೇಕೆಂದರೆ ಕಷ್ಟ ಆಗುತ್ತದೆ.

ಶ್ರೀ ಆರ್.ವಿ. ದೇಶಪಾಂಡೆ ; ವಿವರವಾದ ಚರ್ಚೆ ಆಗಲಿ ಎಂದು ಅವರೇ ಹೇಳಿದ್ದಾರೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ ; ಆಯವ್ಯಯದ ಮೇಲೆ ಬೇಕಾದಷ್ಟು ಮಾತನಾಡಲು ಅವಕಾಶ ಇದೆ. ಅಡ್ಮಿಟ್ ಮಾಡಬೇಕೇ ಬೇಡವೇ ಎನ್ನುವ ಬಗ್ಗೆ ಸೀಮಿತವಾಗಿ ಇರಬೇಕಾದದ್ದು. ಆದರೆ ಒಂದು ದಿನವೇ ಚರ್ಚೆ ಆಗಿದೆ. ಆದ್ದರಿಂದ ಇಲ್ಲಿಗೆ ಮುಕ್ತಾಯ ಮಾಡಿ ಉತ್ತರ ಕೊಡುವುದಕ್ಕೆ ಅವಕಾಶ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಎಂ.ವೈ. ಘೋರ್ಪಡೆ : ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದಲ್ಲಿ ಇತ್ತೀಚೆಗೆ ನಡೆದಿರತಕ್ಕ ಐತಿಹಾಸಿಕವಾದ ಚುನಾವಣೆಯಲ್ಲಿ ಆಗಿರತಕ್ಕ ಘಟನೆಗಳ ಬಗ್ಗೆ ಸುದೀರ್ಘವಾಗಿ...

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾನು ಇನ್ನೂ ಮಾತನಾಡಿಲ್ಲ. ಈ ಕಡೆಯ ಸದಸ್ಯರು ಇನ್ನೂ ಮಾತನಾಡಬೇಕೆಂದು ಕೇಳುತ್ತಿದ್ದಾರೆ. ಬ್ಯಾಕ್ ಬೆಂಚರ್ಸ್‌ಗೆ ತಾವು 5 ನಿಮಿಷ ಮಾತನಾಡಲು ಅವಕಾಶ ಮಾಡಿಕೊಡಿ. ಅವರು ತಮ್ಮತಮ್ಮ ಕ್ಷೇತ್ರದಲ್ಲಿ ಆಗಿರುವ ಘಟನೆಗಳ ಬಗ್ಗೆ ಹೇಳುವವರಿದ್ದಾರೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ವಿಷಯದ ಪೂರ್ಣ ಚರ್ಚೆಗೆ ಇನ್ನೂ ಅವಕಾಶ ಕೊಟ್ಟಿಲ್ಲ. ಪೂರ್ಣ ದಿವಸ ಇದು ಚರ್ಚೆ ಆಗಿದೆ. ಇವತ್ತು ಆರೂವರೆಗಂಟೆಗಿಂತ ಹೆಚ್ಚಾಗಿ ಇವತ್ತು ಸಭೆಯನ್ನು ನಡೆಸುವುದಕ್ಕೆ ಬೇರೆ ಕಾರಣಗಳಿಂದ ಆಗುತ್ತಾ ಇಲ್ಲ. ಹೀಗೆ ಮಾತನಾಡಬೇಕೆಂದರೆ ಇವತ್ತು ಉತ್ತರ ಬೇಡ ಎಂದು ಹೇಳುತ್ತೀರಾ? ವಾಟಾಳ್ ನಾಗರಾಜ್ ಅವರು 2 ನಿಮಿಷ ಎಂದು ಹೇಳಿ 20 ನಿಮಿಷ ಮಾತನಾಡಿದರು.

ಶ್ರೀ ವಾಟಾಳ್ ನಾಗರಾಜ್ : ಮಾರಿ ಕಣ್ಣು ಹೋತನಮೇಲೆ ಎನ್ನುವ ಹಾಗೆ ಇವರಿಗೆ ನನ್ನ ಮೇಲೇ ಕಣ್ಣು

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ತಾವು ಮಾಮೂಲು ಟೈಮ್‌ಗಿಂತ ಕಡಿಮೆ ಮಾತನಾಡಿದ್ದೀರಿ.

ಶ್ರೀ ಬಿ.ಹೆಚ್. ಬನ್ನೀಕೋಡ್ : ಮಾನ್ಯ ಅಧ್ಯಕ್ಷರೇ, ಸದನದ ಅಮೂಲ್ಯ ಸಮಯವನ್ನು ಸದುಪಯೋಗ ಮಾಡಿಕೊಳ್ಳಬೇಕೆಂದು ಏನು ಸಂಸದೀಯ ಸಚಿವರು ಹೇಳಿದರು. ಅದನ್ನು ನಾವು ಒಪ್ಪುತ್ತೇವೆ. ಆದರೆ ಇರತಕ್ಕ ಸಮಸ್ಯೆ ಗಂಭೀರವಾದಂತಥದ್ದು

ಇದೆ. ಇಲ್ಲಿ ಆಡಳಿತ ಪಕ್ಷದವರು 2-3ದಿವಸಧರಣೆ ಮಾಡಿ ಸದನದ ಕಾರ್ಯಕಲಾಪಗಳನ್ನು ನಡೆಸದಂತೆ ಮಾಡಿದಾಗ ಸಮಯ ಹಾಳು ಆಗಲಿಲ್ಲವೇ? ಇವತ್ತು ಸಂಸದೀಯ ಸಚಿವರು ವಿರೋಧ ಪಕ್ಷದವರಿಗೆ ಬುದ್ಧಿ ಹೇಳುತ್ತಿದ್ದಾರಲ್ಲಾ ನಾವು ಸಾರ್ವಜನಿಕ ಹಿತದೃಷ್ಟಿಯಿಂದ ನಾವು ಇಲ್ಲಿ ಮಾತನಾಡುವುದಕ್ಕೆ ಹೋದರೆ, ಅವರ ಪಕ್ಷದವರು ಧರಣೆ ಮಾಡಲು ಹೋದಾಗ ಅದನ್ನು ನಿಲ್ಲಿಸಲು ಸಂಸದೀಯ ಸಚಿವರಿಗೆ ಆಗಲಿಲ್ಲ. ಅಧ್ಯಕ್ಷರಿಗೆ ಸರಿ ಕಂಡರೆ ಸಮಯವನ್ನು ದಯವಿಟ್ಟು ಕೊಡಬಹುದು.

ಶ್ರೀ ಎಸ್. ಚಿಕ್ಕಮಾಧು : ನಾನೂ ಮಾತನಾಡಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ : ನನಗೆ ಮಾತನಾಡಲು 2 ನಿಮಿಷ ಅವಕಾಶ ಕೊಡಿ.

ಶ್ರೀ ಎಸ್. ಇಸಾಮಿಯಾ : ನಮ್ಮ ಕ್ಷೇತ್ರದಲ್ಲೂ ಪ್ರಕರಣಗಳು ನಡೆದಿವೆ. ನಮಗೂ ಅವಕಾಶ ಮಾಡಿಕೊಡಿ.

ಅಧ್ಯಕ್ಷರು : ಮಾಧುಸ್ವಾಮಿಯವರೇ, 2 ನಿಮಿಷ ಮಾತನಾಡಿ.

+ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ) : ಮಾನ್ಯ ಅಧ್ಯಕ್ಷರೆ, ಈ ವ್ಯವಸ್ಥೆ ಒಂದು ಕಡೆ ರಾಜಕೀಯವಾಗಿ ಆಗಿದೆ ಎಂದರೆ, ಇನ್ನೊಂದು ಕಡೆ ಆಡಳಿತದಲ್ಲಿ ಆಗಿರುವುದನ್ನೂ ಕೆಲವು ದೋಷಗಳ ಬಗ್ಗೆ ಆದರೂ ನಾನು ಇಲ್ಲಿ ಮಾತನಾಡಲು ಬಯಸುತ್ತೇನೆ. ತಮಕೂರು ಜಿಲ್ಲೆ ಬಗ್ಗೆ ಮಾತನಾಡಬೇಕೆಂದರೆ 4ನೇ ತಾರೀಖು, 7ನೇ ತಾರೀಖು, 9ನೇ ತಾರೀಖು ಚುನಾವಣೆ ಆಗಿದೆ. 2 ನೇ ತಾರೀಖು, ಆದರೂ ಕೂಡ ಯಾವ ಯಾವ ಮಂಡಲಕ್ಕೆ ಯಾರು ಯಾರು ಅಧ್ಯಕ್ಷರು ಆಗಬೇಕು, ಯಾರು ಯಾರು ಉಪಾಧ್ಯಕ್ಷರಾಗಬೇಕು ಎನ್ನುವ ಬಗ್ಗೆ ನೋಟಿಫಿಕೇಷನ್‌ಇಲ್ಲ. ಯಾವ ಮಂಡಲ ಪಂಚಾಯಿತಿಗೆ ಯಾರು ನಾಮಿನೇಷನ್ ಹಾಕಬೇಕು, ಇದು ಯಾರಿಗೆ ರಿಸರ್ವ್ ಆಗಿದೆ ಎಂದು ಹೇಳಿ ಒಂದೇ ಒಂದು ನೋಟೀಸ್ ತೋರಿಸಿಲ್ಲ. ಯಾರು ರಿಟರ್ನಿಂಗ್ ಆಫೀಸರ್ ಇದ್ದಾರೆ ಅವರ ಆಫೀಸಿಗೆ ಹೋಗಬೇಕು, ಅರ್ಜಿಯನ್ನು ಹಾಕಬೇಕು ಅಧ್ಯಕ್ಷರು ಆಗಬೇಕು, ಉಪಾಧ್ಯಕ್ಷರು ಆಗಬೇಕು ಎಂದು ಹೇಳಿ 3ನೇ ತಾರೀಖು 4ನೇ ತಾರೀಖು ಆದರೂ ನಾವು ಅಲ್ಲಿ ಅಭ್ಯರ್ಥಿಗಳನ್ನು ಹುಡುಕುತ್ತಿದ್ದೇವೆ. ಯಾರಿಗೆ ರಿಸರ್ವ ಆಗಿದೆ ಹೇಳಿ. 4ನೇ ತಾರೀಖು ಚುನಾವಣೆ ಆಗುತ್ತಿರುವ ನನ್ನ ತಾಲ್ಲೂಕಿನ 10 ಮಂಡಲದಲ್ಲಿ 3ನೇ ತಾರೀಖು ಆದರೂ ನೋಟಿಫಿಕೇಷನ್ ಇಷ್ಯೂ ಆಗಿಲ್ಲ ಯಾರುಯಾರಿಗೆ ರಿಸರ್ವೇಷನ್ ಆಗಿತ್ತು ಎಂಬುದನ್ನು ಹೇಳಿ. ಈ ಮಂಡಳಕ್ಕೆ ಯಾರು ನಾಮಿನೇಷನ್ ಹಾಕಬೇಕು ಎಂದು ನಾವು ತಹಶೀಲ್ದಾರ್ ಅವರನ್ನು ಕೇಳುತ್ತಿದ್ದೆವು. 2ನೇ ತಾರೀಖು ತಹಶೀಲ್ದಾರರಿಗೆ ಗೊತ್ತಿಲ್ಲ ಸ್ವಾಮಿ. ತಾವು ಇದನ್ನು ತರಿಸಿ ನೋಡಬೇಕು. ಡಿ.ಸಿ.ಆಫೀಸಿನಲ್ಲಿ ನೋಟಿಫಿಕೇಷನ್ ಇಷ್ಯೂ ಆಗಿರುವುದೇ 2ನೇ ತಾರೀಖು ನಮ್ಮ 10 ಮಂಡಲಗಳಿಗೆ ಎಲೆಕ್ಷನ್ ಆಗುವುದಕ್ಕೆ ನಾವು ನಮ್ಮ ಇಡೀ ಚಿಕ್ಕನಾಯಕನ ಹಳ್ಳಿ ವ್ಯಾಪ್ತಿಯಲ್ಲಿ ಯಾರಿಗೆ ರಿಸರ್ವ ಆಗಿದೆ. ನಾಮಿನೇಷನ್ ಯಾರು ಫೈಲ್ ಮಾಡಬೇಕು ಎಂದು ಕೇಳುವಷ್ಟು ಅಧಿಕಾರ ನಮಗೆ ಬೇಡವೇ? ಜನರಲ್ ಸೀಟ್‌ಗೆ ಅರ್ಜಿ ಹಾಕಬೇಕೆಂದು ನಾವು ಹೋಗಿದ್ದೆವು ಆಗ ಕೇಳಿದಾಗ ಅದು ಲೇಡಿಗ್ ರಿಸರ್ವ ಆಗಿದೆ ಎಂದು ಹೇಳಿದ್ದಾರೆ. ನಾವು ಜನರಲ್ ಆಗಿದೆ, ಷೆಡ್ಯೂಲ್ಡ್ ಕಾಸ್ಟ್‌ಗೆ ಆಗಿದೆ ಎಂದು ಹೇಳಿ ನಾವು ಅಲ್ಲಿಗೆ ಹೋಗುವುದು. ಅಲ್ಲಿ ನಾವು ಹೋದಾಗ ಬದಲಾವಣೆ ಆಗ ನಾವು ಕ್ಯಾಂಡಿಡೇಟ್‌ಗಳನ್ನು ಹುಡುಕಿಕೊಂಡು ಹೋಗಬೇಕು. ನಿಮ್ಮ ಪಾರ್ಟಿ ಅಧ್ಯಕ್ಷರಿಗೆ ನಮಗಿಂತಲೂ ಮೊದಲೇ ಚೆನ್ನಾಗಿ ಗೊತ್ತಿತ್ತು. ಅವರು ತಯಾರಿ ಮಾಡಿ ಇಟ್ಟುಕೊಂಡಿದ್ದಾರೆ. ಇಂತಿಂಥ ಕ್ಯಾಂಡಿಡೇಟ್ ಹಾಕಬೇಕು ಎಂದು ಮತೆ ಅದಕೆ.

ಎಷ್ಟು ನಿಮ್ಮ ಅಧ್ಯಕ್ಷರುಗಳ ಮನೆಗಳು ಗೆಸ್ಟ್ ಹೌಸ್. ನನಗೆ ಗೊತ್ತಿಲ್ಲ, ನನ್ನ ಕಷ್ಟವನ್ನು ನಾನು ಹೇಳಿಕೊಳ್ಳುತ್ತಿದ್ದೇನೆ. ತಿಮ್ಮಪ್ಪನವರೇ ತಾವು ಪ್ರಭಾವಿ ಇದ್ದೀರಿ. ತಮಗೆ ಗೊತ್ತಿತ್ತೋ ಇಲ್ಲವೋ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಚಿಕ್ಕನಾಯಕನಹಳ್ಳಿಯಲ್ಲಿ ಮತ್ತು ತುಮಕೂರು ಜಿಲ್ಲೆಯಲ್ಲಿ ಫಸ್ಟ್ ಫೇಸ್ ಚುನಾವಣೆ ಆದ ದಿವಸ ನಮಗೆ ಗೊತ್ತೇ ಇರಲಿಲ್ಲ, ಯಾರು ನಾಮಿನೇಷನ್ ಫೈಲ್ ಮಾಡಬೇಕು, ಯಾವ ಯಾವ ಮಂಡಲ ಪಂಚಾಯಿತಿಗೆ ಯಾರು ಯಾರು ರಿಸರ್ವ್ ಆಗಿದ್ದಾರೆ ಎಂದು ಎರಡನೆಯದಾಗಿ ಅಲ್ಲಿ ಎಲ್ಲೂ ಪೋಲೀಸರು ಇಲ್ಲ. ಒಂದೊಂದು ಮಂಡಲ ಚುನಾವಣೆಗೆ ಒಬ್ಬೊಬ್ಬ ಪೋಲೀಸ್ ಕಾನ್‌ಸ್ಟೇಬಲ್ ಹಾಕಿಬಿಟ್ಟು ಚುನಾವಣೆ ನಡೆಸಿ ಎಂದು ನಾವು ಅವರನ್ನು ಹುಡುಕಿಕೊಂಡು, ಊರು ಬಿಟ್ಟು ಓಡಾಡಬೇಕಾದ ಪರಿಸ್ಥಿತಿ ನಿರ್ಮಾಣ ಆಗಿದೆ. ಯಾರ ತೆವಲಿಗೆ, ಯಾರ ಅರ್ಜೆಂಟ್‌ಗೆ ಎಲೆಕ್ಷನ್ ಆಯಿತೋ ನನಗೆ ಗೊತ್ತಿಲ್ಲ. ಮತ್ತೆ ಮಂಡಲ ಹೆಡ್ ಕ್ವಾರ್ಟರ್ಸ್‌ನಲ್ಲಿ ಇವರು ನಾಮಿನೇಷನ್ ತೆಗೆದುಕೊಳ್ಳಲಿಲ್ಲ, ಕನ್‌ಸರ್ನ್ ರಿಟರ್ನಿಂಗ್ ಆಫೀಸ್‌ಗೆ ಹೋಗಿ ನಾಮಿನೇಷನ್ ಫೈಲ್ ಮಾಡಬೇಕಂತೆ ತಮ್ಮ ಸರ್ಕುಲರ್ ತೆಗೆದು ನೋಡಿ. ಎ.ಇ.ಓ. ರಿಟರ್ನಿಂಗ್ ಆಫೀಸರ್ ಇದ್ದರೆ ಅವನ ಆಫೀಸಿಗೆ ಹೋಗಬೇಕು. ಎಇಇ ರಿಟರ್ನಿಂಗ್ ಆಫೀಸರ್ ಇದ್ದರೆ ಅವನ ಆಫೀಸಿಗೆ ಹೋಗಬೇಕು, ಅಲ್ಲೊಂದು ಮಂಡಲ್ ಹೆಡ್‌ಕ್ವಾರ್ಟರ್ಸ್ ಇಲ್ಲ. ಚುನಾವಣೆಯನ್ನೂ ಅಲ್ಲೇ ಮಾಡಬೇಕಾಗಿತ್ತು. ಮತ್ತೆ ಕೆಲವು ಊರಲ್ಲಿ ನಮಗೆ ಹೆಡ್‌ಕ್ವಾರ್ಟರ್ಸ್ ನಮಗೆ ಗೊತ್ತಿಲ್ಲ. ಎಲ್ಲಿ ಹೋಗಿ ಓಟು ಹಾಕಬೇಕೆಂದು ಸದಸ್ಯರಿಗೇ ಗೊತ್ತಿಲ್ಲ. ವ್ಯಾಪಕವಾದ ಅವ್ಯವಸ್ಥೆ ಸೃಷ್ಟಿ ಮಾಡಿ ಹೇಳಿಕೆ ಕೊಡುವುದು. ನಾವು ಇಷ್ಟು ಪರ್ಸೆಂಟೇಜ್ ಗೆದ್ದಿದ್ದೇವೆ ಎಂದು ಏಕೆ ಹೇಳಿಕೊಳ್ಳಿ ಎಲ್ಲಾ ನಿಮ್ಮದೇ ಪರ್ಸೆಂಟೇಜ್ ಎಂದು. ಊರಿನಲ್ಲಿ ನಮ್ಮ ಮೆಂಬರ್ಸ್ ಅಲ್ಲಿ ಒಳಕ್ಕೆ ಹೋಗುವ ಹಾಗೆ ಇಲ್ಲ. ಚಿಕ್ಕನಾಯಕನಹಳ್ಳಿಯಲ್ಲಿ ಜೋಗಿಹಳ್ಳಿ ಎನ್ನುವ ಒಂದು ಪಂಚಾಯಿತಿ ಇವರ ಲೀಡರ್‌ಗಳೇ ಹೋಗಿ ಮುಂದೆ ನಿಂತು ಪೋಲೀಸಿನವರ ಎದುರು ಎಳೆದುಕೊಂಡು ಒಂದು ಕಾರ್‌ಗೆ ಹಾಕಿಕೊಂಡು ಹೊತ್ತುಕೊಂಡು ಹೋದರು.

ಏಕೆಂದರೆ ನಮ್ಮದು ಸಮ ಆಗಿಬಿಟ್ಟಿದೆ ಎಂದು. ಚಿಕ್ಕನಾಯ್ಕನಹಳ್ಳಿಯಲ್ಲಿ ಜೋಗಿಹಳ್ಳಿ ಟೌನ್ ನೊಳಗೆ ಬರುವಂಥ ಜಾಗ ಎತ್ತಿಕೊಂಡು ಹಾಡುಹಗಲೇ, ಜನಗಳ ಎದುರಿಗೇ ಎಳೆದುಕೊಂಡು ಕಾರಿಗೆ, ನೀವು ಹಾಕಿಕೊಂಡುಹೋಗುತ್ತೀರಿ. ನಾವೇಕೆ ಎಂ.ಎಲ್.ಎ.ಗಳಾಗಬೇಕು. ಈ ಸ್ಥಿತಿಗೆ ಗೆಲ್ಲುವುದಾದರೆ, ಘೋಷಣೆ ಮಾಡಿಕೊಂಡು ಬಿಡಿ. ನಾವೇ ಗೆದ್ದಿದ್ದೇವೆ ಎಂದು, ನಿಮಗೆ ಉದ್ದೇಶವೂ ಅದೇ ಇತ್ತು. ಪಕ್ಷಾತೀತವಾಗಿ ಚುನಾವಣೆ ಮಾಡಿದ್ದೇ ನೀವು ಕೇಂದ್ರಸರ್ಕಾರಕ್ಕೆ ರಿಪೋರ್ಟ್‌ಮಾಡಿಕೊಳ್ಳುವುದಕ್ಕೆ, ಎಲ್ಲಾ ನಾವೇ ಗೆದ್ದಿದ್ದೇವೆಂದು. ಮಾಡಿಕೊಂಡುಬಿಡಿ. 80 ಪರ್ಸೆಂಟ್ ಏಕೆ, ಇನ್ನು 20 ಪರ್ಸೆಂಟ್ ಸೇರಿಸಿ ಬರೆದುಕೊಳ್ಳಬಹುದಿತ್ತು. ಈಗಲೂ ತಾವು ಆ ಕೆಲಸ ಮಾಡಿಕೊಳ್ಳಿ ಎಂದು ಹೇಳುತ್ತಾ, ಸ್ವಾಮಿ ಇದರ ಬಗ್ಗೆ ಸಮರ್ಪಕವಾದ ವಿಚಾರಣೆ ಆಗಲೇಬೇಕು. ತುಮಕೂರು ಮಟ್ಟಿಗೆ ನಾನು ಸ್ಪಷ್ಟವಾಗಿ ಹೇಳುತ್ತೇನೆ. ನನ್ನ ಸ್ವಂತ ಗ್ರಾಮ ಎರಡು ಮಂಡಲ್ ಪಂಚಾಯ್ತಿಗಳೂ ವಿಭಜನೆ ಆಯಿತು. ಎರಡು ಪಂಚಾಯ್ತಿಗೆ ನನ್ನದೇ ಊರು ಸೇರಿದೆ. ನನ್ನ ಊರು ಒಂದು ಪಂಚಾಯ್ತಿ, ನನ್ನ ಪಕ್ಕದೂರು ಒಂದು ಪಂಚಾಯ್ತಿಗೆ, ಒಂದು ಹಳ್ಳಿಯನ್ನು ವಿಭಜನೆ ಮಾಡುತ್ತಾರೆ. ನಾವು ಕೇಳಿದರೆ ಹೇಳುವುದಿಲ್ಲ. ಕಾನೂನಿನಲ್ಲಿ ಮಾಡಬಾರದು ಎಂದು ಇದೆ. ನಾನು ಕೂಡ ನಿಮ್ಮ ಹಾಗೆ ಶಾಸನ ಸಭೆಯ ಸದಸ್ಯ ಜವಾಬ್ದಾರಿ ಅರಿತು ಮಾತನಾಡುತ್ತಿದ್ದೇನೆ. ಆರ್.ಡಿ.ಪಿ.ಆರ್. ಸೆಕ್ರಟರಿಯವರಿಗೆ ಬರೆದುಕೊಟ್ಟಿದ್ದೇನೆ. ಒಂದೇ ಗ್ರಾಮವನ್ನು ಎರಡು ಪಂಚಾಯ್ತಿಗೆ ತಾವು ಹಾಕಿದ್ದೀರಿ. ನಾವು ಕೇಳಿದಾಗ ಹಾಕುವುದಕ್ಕೆ ಬರುವುದೇ ಇಲ್ಲವೆಂದು ಹೇಳಿದ್ದೀರಿ. ನನ್ನ ಹುಟ್ಟೂರನ್ನೇ ಹಾಕಿದ್ದೀರಿ. ಏಕೆ ಎಂದು ಕೇಳಿದ್ದೇನೆ. ಇವತ್ತಿನವರೆಗೂ ಅವರು ಹೇಳಿಲ್ಲ, ನಾನೇನು ಕೇಳದೇ ಬಂದಿಲ್ಲ. ಯಾರ ಅನುಕೂಲಕ್ಕಾಗಿ ಇವೆಲ್ಲಾ

ಮಾಡುತ್ತಿದ್ದಾರೆಂಬ ಮಾಹಿತಿ ಬೇಕು.ಹಾಗಾಗಿ, ಇದಕ್ಕೆ ಒಂದು ನ್ಯಾಯಾಂಗ ತನಿಖೆಯನ್ನು ನೇಮಿಸಲೇಬೇಕು. ಸದನದ ಸಮಿತಿ ಮಾಡುತ್ತೀರೋ, ತನಿಖೆ ಮಾಡಿಸುತ್ತೀರೋ ತಮ್ಮ ವ್ಯವಸ್ಥೆಗೆ ಬಿಟ್ಟಿದ್ದು ಎಂದು ಹೇಳುತ್ತಾ ಈ ಅತಿಕ್ರಮಣವನ್ನು ಹತ್ತಿಕ್ಕದೇ ಹೋದರೆ ನಾವೆಲ್ಲಾ ಇಲ್ಲಿ ಶಾಸಕರಾಗಿ ಬರಬೇಕಾದ ಅಗತ್ಯವಿಲ್ಲ. ನಮ್ಮ ಕಣ್ಣೆದುರಿಗೇ ಹೊತ್ತುಕೊಂಡು ಹೋಗುವುದು, ಯಾರಿಗೆ ಶಕ್ತಿ ಇದೆಯೋ ಅವರು ನಿಂತುಕೊಂಡು ಗೆದ್ದಿದ್ದೇವೆಂದು ಹೇಳುವುದು. ನಾನು ಉಪಾಧ್ಯಕ್ಷರಿಗೆ, ಎರಡು ಮೆಂಬರುಗಳನ್ನು ಎತ್ತಿಕೊಂಡು ಹೋಗಿ, ಕಾಂಗ್ರೆಸ್ (ಐ) ಉಪಾಧ್ಯಕ್ಷರು ಎಂದು ಘೋಷಣೆ ಮಾಡಿಕೊಂಡಿದ್ದಾರೆ. ಈ ಸ್ಥಿತಿಯಲ್ಲಿ ಈ ಚುನಾವಣೆಯನ್ನು ಮಾಡಬೇಕಾಗಿದೆಯೇ ಎಂದು ಹೇಳಿ ತಮಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು): ಮಾನ್ಯ ಅಧ್ಯಕ್ಷರೇ, ಈ ಒಂದು ಗ್ರಾಮಪಂಚಾಯಿತಿಗಳ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಚುನಾವಣೆ ಯಾವ ಹಂತಕ್ಕೆ ತಲುಪಿದೆ ಎನ್ನುವುದನ್ನು ಈಗಾಗಲೇ ಅನೇಕ ಹಿರಿಯ ಸದಸ್ಯರು ಹೇಳಿದ್ದಾರೆ. ನಾನು ಹೆಚ್ಚು ಸಮಯವನ್ನು ತೆಗೆದುಕೊಳ್ಳದೇ ಈ ಸರ್ಕಾರದವರು ಈ ಚುನಾವಣೆಯನ್ನು ಮಾಡುವಾಗ, ಮುಂದೆ ಆಗಬಹುದಾದಂಥ ಸಮಸ್ಯೆಗಳನ್ನು ಈ ಸದನದಲ್ಲಿ ಹೇಳಿದರೂ ಸಹಿತ,ಸಮಸ್ಯೆಗಳು ಬಂದಾಗ ನೋಡೋಣ ಎಂದು ಹೇಳಿ. ಸರ್ಕಾರ ಈ ಚುನಾವಣೆಗಳನ್ನು ಘೋಷಣೆ ಮಾಡಿದರು. ಅಲ್ಲಿಗೆ ಬೇಕಾದಂಥ ರೂಲ್ಸ್ ಇಲ್ಲ, ಗ್ರಾಮಪಂಚಾಯ್ತಿ ನಿಯಮಗಳನ್ನು ಕೇವಲ ಸುತ್ತೋಲೆಯ ಮೇಲೆ, ತೋಟಿ ಆದೇಶದ ಮೇಲೆ, ರಾತ್ರಿ ಆದೇಶ ಕೊಡುತ್ತಾರೆ. ಮುಂಜಾನೆ ಚುನಾವಣೆಗಳನ್ನು ನಡೆಸುತ್ತಾರೆ ಈ ರೀತಿ ಸರ್ಕಾರ ಯಾವ ಕಾನೂನು ಮಾಡಬೇಕು ಮತ್ತು ಕಾನೂನು ಮಾಡಿದನಂತರ ಕಾನೂನನ್ನು ಪರಿಪಾಲನೆ ಮಾಡಬೇಕು. ಈ ಚುನಾವಣೆಯಲ್ಲಿ ಆ ವ್ಯವಸ್ಥೆಯನ್ನೇ ಸರ್ಕಾರ ಸಂಪೂರ್ಣ ಹಾಳು ಮಾಡಿದೆ. ಕೇವಲ ತಮ್ಮ ಮನಸ್ಸಿಗೆ ಬಂದಾಗ, ತಮ್ಮ ರಾಜಕೀಯಕ್ಕೆ ಅನುಕೂಲವಾದ ರೀತಿಯಲ್ಲಿ ಸುತ್ತೋಲೆಗಳನ್ನು ಹೊರಡಿಸಿ ಈ ವ್ಯವಸ್ಥೆಯನ್ನು ಗ್ರಾಮಮಟ್ಟದಲ್ಲಿ ತಮ್ಮ ಹಿಡಿತದಲ್ಲಿಟ್ಟು ಕೊಳ್ಳಲು ಅನೇಕ ಪ್ರಯತ್ನಗಳನ್ನು ಮಾಡಿದ್ದಾರೆ. ತಮಗೆ ಒಂದು ಉದಾಹರಣೆಯನ್ನು ಹೇಳಬೇಕಾದರೆ, ಧಾರವಾಡ ಜಿಲ್ಲೆಯ ಹುಬ್ಬಳ್ಳಿ ತಾಲ್ಲೂಕಿನಲ್ಲಿ ಬ್ಯಾಹಟ್ಟಿ ಕುಪಗಲ್ ಮತ್ತು ಹೆಬ್ಬಾಳ ಹೆಬ್ಬಿಸೂರು. ಈ ಮೂರು ಮಂಡಲಗಳಿಗೆ ಜಿಲ್ಲಾಧಿಕಾರಿಗಳು ಸರ್ಕಾರದವರು ಕಳುಹಿಸಿದ ನಿಯಮದ ಪ್ರಕಾರ, ಸುತ್ತೋಲೆ ಪ್ರಕಾರ ರಿಸರ್ವೇಷನ್ ಮಾಡಿ, ಡಿಕ್ಲೇರ್ ಮಾಡಿದರು. ಆಗ, ಅಲ್ಲಿನ ಪ್ರಭಾವಿ ಸ್ಥಾನಿಕ ಸಚಿವರು ಅದಕ್ಕೆ ವಿರೋಧ ಮಾಡಿದರು ಎಂದು ಕೇಳಿದೆ. ಆದರೂ ಜಿಲ್ಲಾಧಿಕಾರಿಗಳು ನೇರವಾಗಿ, ಇದು ಸರ್ಕಾರದ ಸುತ್ತೋಲೆ, ಈ ನಿಯಮದ ಚೌಕಟ್ಟಿನಲ್ಲಿ ನಾನು ಕೆಲಸ ಮಾಡಬೇಕು. ಇದರ ಬಗ್ಗೆ ತಾವು ಏನಾದರೂ ಹೇಳುವುದಿದ್ದರೆ ಹೇಳಿ. ಕಾನೂನಿನಲ್ಲಿ ಏನಾದರೂ ಹೆಚ್ಚುಕಡಿಮೆ ಇದ್ದರೆ ಸರಿಪಡಿಸುತ್ತೇನೆ, ಆದರೆ, ನೀವು ಹೇಳಿದ್ದೇ ಆಗಬೇಕೆಂದರೆ ಸಾಧ್ಯವಿಲ್ಲ ಅಲ್ಲಿ ಸದಸ್ಯರ ಸಂಖ್ಯಾಬಲದ ಮೇಲೆ ಹರಿಜನರೋ, ಗಿರಿಜನರೋ ಹಿಂದುಳಿದವರೋ ಈ ರೀತಿ ಮಾಡಬೇಕೆಂದು ಹೇಳಿದರೆ, ಅಲ್ಲಿ ಇಂಥದ್ದನ್ನೇಮಾಡಬೇಕು, ಜನರಲ್‌ನ್ನೇ ಮಾಡಬೇಕೆಂದು ಹೇಳಿ. ಅಗ್ರಹ ಮಾಡಿದರು. ಈಗ ಕೊನೆಯದಾಗಿ ಸರ್ಕಾರ, ಹುಬ್ಬಳ್ಳಿ ತಾಲ್ಲೂಕಿನ ಬ್ಯಾಹಟ್ಟಿ, ಕುಸುಗಲ್ ಮತ್ತು ಕನಸೂರು, ಈ ಮೂರು ಚುನಾವಣೆಗಳನ್ನು ಯಾವುದೇ ಕಾರಣವಿಲ್ಲದೆ, ಏಕೆ ಮುಂದೂಡಿದರು.ಇಲ್ಲಿ ಸರ್ಕಾರದ ಪ್ರಭಾವ ಇಲ್ಲವೇ, ಒಬ್ಬಮಂತ್ರಿ ತನ್ನ ಮನಸ್ಸಿಗೆ ಬಂದವರನ್ನು ಅಲ್ಲಿಗೆ ಪ್ರಧಾನರನ್ನಾಗಿ ಮಾಡಬೇಕು, ಹರಿಜನ ಗಿರಿಜನರಿಗೆ ಆ ಸೀಟು ಸಿಗಬಾರದು ಎಂದು ಹೇಳಿ,

ಅವರ ಮನಸ್ಸಿನ ಪ್ರಕಾರ ಜಿಲ್ಲಾಧಿಕಾರಿಗಳು ಮಾಡದೇ ಹೋಗಿದ್ದಕ್ಕೆ, ಕಾನೂನು ಪ್ರಕಾರ ಕೆಲಸ ಮಾಡಿದ್ದಕ್ಕೆ, ಸರ್ಕಾರದ ಮೇಲೆ ಒತ್ತಾಯ ತಂದು ಮುಂದೆ ಹಾಕಿಸಿದ್ದಾರಲ್ಲಾ, ಇದು ಈ ಸರ್ಕಾರದ ನೀತಿಯೇ? ಒಂದು ಕಡೆ ರಿಸರ್ವೇಷನ್ ಎಂದು ಹೇಳುತ್ತಾರೆ, ಹರಿಜನ ಗಿರಿಜನರ ಉದ್ಧಾರ ಇನ್ನೊಂದುಕಡೆ ಸರ್ಕಾರದಲ್ಲಿಯೇ

ಇದ್ದುಕೊಂಡು, ಅದನ್ನು ವಿರೋಧ ಮಾಡಿ, ಜನರಲ್ ಬೇಕೆಂದು ಚುನಾವಣೆಯನ್ನು ಮುಂದೆ ಹಾಕಿದ್ದಾರೆ. ಇದಕ್ಕೆ ಏನು ಕಾರಣ. ಯಾವುದೇ ಕಾರಣ ಇಲ್ಲ. ಅಲ್ಲಿ ಹೊಡೆದಾಟ ಇಲ್ಲ, ಬಡಿದಾಟ ಇಲ್ಲ, ದೊಂಬಿ ಆಗಿಲ್ಲ. ತನ್ನ ಪಕ್ಷದವರಿಗೆ ತನಗೆ ಬೆಂಬಲ ಕೊಡುವಂಥವರಿಗೆ, ಜನರಲ್‌ನವರಿಗೆ ಅಲ್ಲಿ ಪ್ರಧಾನರನ್ನಾಗಿ ಮಾಡಬೇಕೆಂದು ಇವತ್ತು ಅಲ್ಲಿ ಜಿಲ್ಲಾಧಿಕಾರಿಗಳು ಈಗಾಗಲೇ ಘೋಷಣೆ ಮಾಡಿದ್ದಾರೆ. ಅದನ್ನು ಮುಂದೆ ಹಾಕಿದರು. ಅಲ್ಲಿ ಏನು ಕಾರಣ ಇತ್ತು. ಅಶಾಂತಿ ಇತ್ತೇ, ಅಲ್ಲೇನು ಜನರು ದೊಂಬಿ ಮಾಡಿದ್ದರೇ. ಅಥವಾ ಆ ಜನ ಏನಾದರೂ ಅಲ್ಲಿ ಜನರಲ್ ಬೇಕು ಎಂದು ಸತ್ಯಾಗ್ರಹ ಮಾಡಿದ್ದರೇ; ಧರಣಿ ಮಾಡಿದ್ದರೇ? ತಮ್ಮ ವೈಯಕ್ತಿಕ ರಾಜಕೀಯದ ಹಿತಾಸಕ್ತಿಗಾಗಿ, ಸರ್ಕಾರದಲ್ಲಿದ್ದುಕೊಂಡು, ಯಾರು ಇವತ್ತು ಕಾನೂನು ಪ್ರಕಾರ ನಡೆಯಬೇಕು, ಕಾನೂನು ಪರಿಪಾಲನೆ ಮಾಡಬೇಕು, ಅದನ್ನು ಮಾಡದೇ ಇವತ್ತು ಕಾಯುವವರೇ ಕೊಲ್ಲುತ್ತಿದ್ದಾರೆ. ಈ ರೀತಿ ಸರ್ಕಾರ ಮಾಡಿದರೆ, ಒಳ್ಳೆಯ ರೀತಿಯಿಂದ ಈ ಸರ್ಕಾರ ರಾಜೀನಾಮೆ ಕೊಟ್ಟು ಮನೆಗೆ ಹೋಗುವುದು ಒಳ್ಳೆಯದೇ ವಿನಹ ಈ ರೀತಿ ಮುಂದುವರಿಯುವುದಕ್ಕೆ ಯಾವ ನೈತಿಕ ಹಕ್ಕಿಲ್ಲ. ಹೇಳುವುದು ಹರಿಜನರ ಬಗ್ಗೆ, ಗಿರಿಜನರ ಬಗ್ಗೆ. ಆದರೆ, ಮಾಡುವುದು ಇಂತಹ ಅಪಚಾರ. ಇವರಿಗ ಯಾವ ನೈತಿಕ ಹಕ್ಕಿದೆ; ಈ ಸರ್ಕಾರಕ್ಕೆ, ಇಂತಹ ಮಂತ್ರಿಗಳನ್ನು ಇಟ್ಟುಕೊಳ್ಳುವುದಕ್ಕೆ. ಮುಖ್ಯಮಂತ್ರಿಗಳು, ಅಂತಹ ಮಂತ್ರಿಗಳಿಂದ ರಾಜಕೀಯ ಮಾಡುವುದಕ್ಕೆ ಅಥವಾ ಅಧಿಕಾರದಲ್ಲಿ ಮುಂದುವರಿಯುವುದಕ್ಕಿಂತ,

ಅವರನ್ನು ಬಿಟ್ಟು, ನೀವು ಸರ್ಕಾರ ಮಾಡಿ. ಇಲ್ಲದೇ ಇದ್ದರೆ ಸರ್ಕಾರವೇ ರಾಜೀನಾಮೆ ಕೊಟ್ಟು ಮನೆಗೆ ಹೋಗುವುದು ಒಳ್ಳೆಯದು ಎಂದು ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಸಲಹೆಯನ್ನು ಕೊಡುತ್ತೇನೆ. ಇಂತಹ ಜನರನ್ನು ಇಟ್ಟುಕೊಂಡು, ಹರಿಜನ ಗಿರಿಜನರನ್ನು ಉದ್ಧಾರ ಮಾಡುತ್ತೇವೆ, ಬಡವರನ್ನು, ಹಿಂದುಳಿದವರನ್ನು ಉದ್ಧಾರ ಮಾಡುತ್ತೇವೆ ಎಂದು ಹೇಳುವುದಕ್ಕಿಂತ, ಅಂತಹವರನ್ನು ಹೊರಗೆ ಹಾಕಿ. ಇಲ್ಲವೇ ನೀವೇ ರಾಜಿನಾಮೆ ಕೊಟ್ಟು, ರಾಜ್ಯದಲ್ಲಿ ಜನರ ಕಲ್ಯಾಣ ಮಾಡಿ ಎಂದು, ಅಧ್ಯಕ್ಷರ ಮೂಲಕ ನಾನು ಹೇಳುವುದಕ್ಕೆ ಇಚ್ಛಿಸುತ್ತೇನೆ. ಅಧಿಕಾರದ ಮೇಲೆ ಎಷ್ಟೊಂದು ಒತ್ತಡ, ಎಷ್ಟೊಂದು ಪ್ರಭಾವ, ಎಷ್ಟೊಂದು ಆಕ್ರೋಶ, ಇವರು ಮಂತ್ರಿಯಾಗಿ ಕಾನೂನು ಪರಿಪಾಲನೆ ಮಾಡುವುದು ಬಿಟ್ಟು, ಅಧಿಕಾರಿಗಳ ಮೇಲೆ ಆಕ್ರೋಶ. ಇವತ್ತು ಒಳ್ಳೆಯ ಅಧಿಕಾರಿಗಳಿದ್ದಾರೆ. ಧಾರವಾಡ ಜಿಲ್ಲೆಯ ಜಿಲ್ಲಾಧಿಕಾರಿ ಇವತ್ತು ಕಾನೂನುಬದ್ಧವಾಗಿ ಮಾಡುತ್ತಿದ್ದಾರೆ. ನನ್ನ ಕರೆದಾಗ ಹೇಳಿದೆ, ನಾನು ಬರುವುದಿಲ್ಲ, ಕಾನೂನು ಪ್ರಕಾರ ಏನಿದೆ, ಯಾವ ಯಾವ ಸೀಟು ಎಸ್‌ಸಿ ಎಸ್‌ಟಿ, ಜನರಲ್ ಇದೆ ಅದನ್ನು ಮಾಡುತ್ತೀರಾ? ಮತ್ತು ಲೇಡೀಸ್ ಸೀಟ್ ಇದ್ದರೆ, ಹೆಣ್ಣುಮಕ್ಕಳಿಗೆ ಅವಕಾಶ ಕೊಡುತ್ತೀರಾ? ಕಾನೂನು ಪ್ರಕಾರ ಏನದೆ ಮಾಡಿ ಎಂದು ಹೇಳಿದೆವು. ಸುದೈವಕ್ಕೆ ನಮ್ಮ ತಾಲ್ಲೂಕಿನಲ್ಲಿ ಹಿರೇಕೆರೂರು ತಾಲ್ಲೂಕಿನಲ್ಲಿ ಜನ ಪ್ರಜ್ಞಾವಂತ ಜನ. ಕಾನೂನಿನ ಚೌಕಟ್ಟಿನಲ್ಲಿ ಕಾನೂನು ಬದ್ಧವಾಗಿ, ಚುನಾವಣೆಯನ್ನು ಶಾಂತಿಯುತವಾಗಿ ಮುಗಿಸಿದ್ದಾರೆಂದು ತಮ್ಮ ಮೂಲಕ ಹೇಳುತ್ತಿದ್ದೇನೆ. ಆದರೆ, ನಮ್ಮ ಜಿಲ್ಲೆಯಲ್ಲಿದ್ದುಕೊಂಡು, ಜಿಲ್ಲೆಯ ಉಸ್ತುವಾರಿ ಮಂತ್ರಿಗಳಾಗಿ ಈ ರೀತಿ ಮಾಡಿದರೆ, ಇದು ಸರಿಯಲ್ಲ. ಇದರ ಬಗ್ಗೆ ಸರ್ಕಾರ ವಿವರವಾದ ಉತ್ತರವನ್ನು ಸಭೆಗೆ ಕೊಡಬೇಕಾಗುತ್ತದೆ. ಜನತೆ ಇದನ್ನು ಕೇಳುವುದಕ್ಕೆ ಕಾತುರರಾಗಿದ್ದಾರೆ. ಈ ಚುನಾವಣೆಗಳನ್ನು ಮುಂದೆ ಹಾಕುವುದಕ್ಕೆ ಅಧಿಕಾರ ಯಾರಿಗಿತ್ತು. ಯಾವ ಕಾನೂನಿನ ಚೌಕಟ್ಟಿನಲ್ಲಿ, ಯಾವ ಕಾನೂನು ನಿಮಗೆ ಅಧಿಕಾರ ಕೊಟ್ಟಿತ್ತು. ಸರ್ಕಾರ ತನ್ನ ಮನಸ್ಸಿಗೆ ಬೇಕಾದಂಥ, ತನಗೆ ಬೇಕಾದವರನ್ನು ಅಧಿಕಾರಕ್ಕೆ ತರುವುದಕ್ಕೆ, ತಮ್ಮ ರಾಜಕೀಯ ಹಿತಾಸಕ್ತಿಯನ್ನು ಬೆಳೆಸಿಕೊಳ್ಳುವುದಕ್ಕೆ, ಕೇವಲೇ ಹಿಂದುಳಿದವರು, ಹರಿಜನ ಗಿರಿಜನರ ಹೆಸರಿನಲ್ಲಿ ಮಾಡಿದಂಥ ದೊಂಬರಾಟವೇ ವಿನಹ ನಿಜವಾದ ಕಳಕಳಿ ಹಿಂದುಳಿದವರ

ಬಗ್ಗೆ ಅವರಿಗಿಲ್ಲ. ಹರಿಜನ ಗಿರಿಜನರ ಬಗ್ಗೆ ಇಲ್ಲ. ಒಂದು ವೇಳೆ ಕಳಕಳಿ ಅವರಿಗಿದ್ದರೆ, ಈ ಚುನಾವಣೆಯನ್ನು ಮುಂದೆ ಹಾಕುತ್ತಿರಲಿಲ್ಲ. ಚುನಾವಣೆಯನ್ನು ಮಾಡಿಸುತ್ತಿದ್ದರು. ಯಾವುದೇ ಘಟನೆ ಇಲ್ಲಿ ನಡೆದಿಲ್ಲ, ಬದಲಾಗಬೇಕು, ಅವರಿಗೆ ಜನರಲ್ ಬೇಕು ನಾವು ಕಾಗೋಡು ತಿಮ್ಮಪ್ಪನವರಿಗೆ ಹೇಳಬೇಕಾಗಿಲ್ಲ. ಸರ್ಕಾರವೇ ಈ ರೀತಿ ನಡೆಸುತ್ತಿದೆ ಎಂದು ಹೇಳುವಾಗ, ಇನ್ನು ಅವರಿಗೆ ಬೆಂಬಲ ಕೊಟ್ಟಂಥವರು ಎಂಥಹವರು. Tell me, who is your friend. I will tell you how you are.

ಈ ಸರ್ಕಾರಕ್ಕೆ ಬೆಂಬಲ ಕೊಟ್ಟಂಥವರು, ಎಂಥವರೋ ಅಂಥ ಸರ್ಕಾರ ಇದೆ. ಅದಕ್ಕಾಗಿ ನಾನು ಅವರಿಗೆ ಹೇಳುವುದಕ್ಕೆ ಮನಸ್ಸು ಮಾಡುವುದಿಲ್ಲ. ಇವತ್ತು ಗ್ರಾಮೀಣಾಭಿವೃದ್ಧಿ ಸಚಿವರು ಹೇಳಿದರು. ನಮಗೆಲ್ಲಾ ಅವರು ಕಾಗದ ಬರೆದರು. ಶಾಸಕರು ಏನು ಹೇಳುತ್ತಾರೆ. ಆ ರೀತಿ ಅಧ್ಯಕ್ಷರನ್ನು, ಉಪಾಧ್ಯಕ್ಷರನ್ನು ಮೀಸಲಾತಿ ಮಾಡುತ್ತೇವೆ ಎಂದು. ಇದು ಸಾರ್ವಜನಿಕರಲ್ಲಿ ತಪ್ಪು ತಿಳುವಳಿಕೆ ಕೊಡತಕ್ಕ ಒಂದು ಕೆಲಸವಾಯಿತು. ತಾವು ಹೇಳಿದಿರಿ, ಶಾಸಕರು ಏನು ಹೇಳುತ್ತಾರೋ ಆ ಪ್ರಕಾರ ಜಿಲ್ಲಾಧಿಕಾರಿಗಳು ಮಾಡುತ್ತಾರೆ ಎಂದು ಪತ್ರಿಕೆಯಲ್ಲ, ರೇಡಿಯೋದಲ್ಲಿ ಸುಲಭವಾಗಿ ಬಂತು. ಪ್ರಚಾರ ಆಯಿತು. ಅಲ್ಲಿ ಇರತಕ್ಕಂಥಾದ್ದು, ಸುತ್ತೋಲೆ ಪ್ರಕಾರ, ಅವರು ಕಾನೂನುಬದ್ಧವಾಗಿ ಮಾಡಬೇಕು. ಇದು ತಿಳಿದು, ತಿಳಿದೂ ಭಿನ್ನಮತೀಯ ಕೆಲವು ಶಾಸಕರು, ಸರ್ಕಾರದ ಮೇಲೆ, ಮಂತ್ರಿಗಳ ಮೇಲೆ, ಮುಖ್ಯಮಂತ್ರಿಗಳ ಮೇಲೆ ಒತ್ತಡ ತಂದರೆಂದು ಹೇಳಿ, ಮುಖ್ಯಮಂತ್ರಿಗಳು ಯಾವಾಗಲೂ ರಾಜಕೀಯ ತಂತ್ರ ಮಾಡುತ್ತಿದ್ದಾರೆ. ಎತ್ತಿದಕ್ಕೆ, ಇಳಿದರೆ ಸಾಕೆಂದು ಹೇಳಿ, ಆ ಕ್ಷಣಕ್ಕೆ ಪಾರಾಗಲಿಕ್ಕೆ, ನಿಮ್ಮನ್ನೆಲ್ಲಾ ಕೇಳಿಯೇ ಮಾಡುತ್ತಾರೆಂದು ಹೇಳಿ ಪತ್ರಿಕೆಗಳಿಗೆ ಕೊಟ್ಟರು. ಎಲ್ಲಾ ಜನರೂ ಬಂದು, ನೀವು ಹೇಳಿದಹಾಗೆ ಮಾಡುತ್ತಾರೆಂದು ಬಂದರು. ಆದರೆ, ಸರ್ಕಾರದ ಸುತ್ತೋಲೆ ಪ್ರಕಾರ, ಕಾನೂನು ಬದ್ಧವಾಗಿ, ಕಾನೂನು ಪ್ರಕಾರ ಮಾಡುತ್ತಾರೆಂದು ಹೇಳಿದರೆ, ಜನ ಕೇಳಲಿಲ್ಲ.

ದಯವಿಟ್ಟು ಇವತ್ತಾದರೂ ಈ ಸದನದಲ್ಲಿ ಹೇಳಬೇಕು. ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆ ಶಾಸಕರ ಹೇಳಿಕೆ ಪ್ರಕಾರ ನಡೆದಿಲ್ಲ, ಮೀಸಲಾತಿ ಪ್ರಕಾರ ಮಾಡಿಲ್ಲ. ಕಾನೂನು ಪ್ರಕಾರ ಸರ್ಕಾರ ಸುತ್ತೋಲೆ ಕಳುಹಿಸಿದೆ. ಅಲ್ಲಿ ಆಯ್ಕೆಯಾದಂಥ ಸದಸ್ಯರ ಸಂಖ್ಯೆ ಬಂದ ಮೇಲೆ ಇದು ನಡೆದಿದೆಯೇ ವಿನಹ ಬೇರೆ ರೀತಿಯಲ್ಲಿ ನಡೆದಿಲ್ಲ ಎಂದು. ಎಲ್ಲಾದರೂ ಅಧಿಕಾರದ ದುರುಪಯೋಗ ನಡೆದಿದ್ದರೆ ಮಂತ್ರಿಗಳ ವರ್ಚಸ್ಸಿನಿಂದ ನಡೆದಿದ್ದರೆ ಅಂಥಾದ್ದು ಏನಾದರೂ ಕೆಲವು ಉದಾಹರಣೆಗಳನ್ನು ಕೊಟ್ಟಿದ್ದರೆ, ಕಾನೂನು ಬಾಹಿರ ಕೆಲಸ ಮಾಡಿಸಿದ್ದರ ಬಗ್ಗೆ. ತಾವು ತನಿಖೆಯನ್ನು ಮಾಡಿಸಿ. ಮತ್ತೆ ಈ ಗೋಲಿಬಾರ್‌ಗಳನ್ನು ಅನೇಕ ಕಡೆಗಳಲ್ಲಿ ಮಾಡಿದ್ದೀರಿ ಇದಕ್ಕೆ ಕಾರಣ ಏನು? ಏಕಾಏಕಿ ಕಾನೂನು ಬಾಹಿರವಾಗಿ ಅಲ್ಲಿ ಗೋಲಿಬಾರ್ ಮಾಡಿದಂತಹದ್ದರ ಬಗ್ಗೆ ನ್ಯಾಯಾಂಗ ವಿಚಾರಣೆ ಆಗಲೇಬೇಕು ಎಂದು ನಮ್ಮ ವಿರೋಧಪಕ್ಷದ ನಾಯಕರು ಹೇಳಿದ್ದಾರೆ. ಇದು ಅನಿವಾರ್ಯ ಇಲ್ಲದೆ ಹೋದರೆ ಈ ಗೋಲಿಬಾರ್ ಎನ್ನುವುದು ಸರ್ವೆ ಸಾಮಾನ್ಯವಾಗುತ್ತದೆ. ಇದನ್ನು ಯಾವಾಗಲೂ ಕೊನೆಯ ಅಸ್ತ್ರವಾಗಿ ಬಳಸಬೇಕು ಅಲ್ಲಿ ಆದಂತಹ ಕಾನೂನು ಬಾಹಿರ ಗೋಲಿಬಾರಿನ ಬಗ್ಗೆ ಸತ್ಯಾಂಶಗಳನ್ನು ಕಂಡು ಹಿಡಿಯುವುದಕ್ಕೆ ನ್ಯಾಯಾಂಗ ತನಿಖೆ ನಡೆಸಬೇಕು. ಈ ಸರ್ಕಾರ ಇನ್ನು ಮುಂದಾದರೂ ಇದನ್ನು ಬಿಟ್ಟು ನಾಳೆ ಬರತಕ್ಕಂಥ ಜಿಲ್ಲಾಪಂಚಾಯತ್ ಮತ್ತು ತಾಲ್ಲೂಕು ಪಂಚಾಯತಿಗಳಿಗೆ ಯಾರು ಅಧ್ಯಕ್ಷರು ಮತ್ತು ಯಾರು ಉಪಾಧ್ಯಕ್ಷರು ಮೊದಲೇ ಘೋಷಣೆ ಮಾಡಿಬಿಡಿ. ಅದನ್ನು ಮಾಡಿದರೆ ಇದು ತಪ್ಪುತ್ತದೆ. ಅಲ್ಲಿ ಯಾರು ಒಳ್ಳೆಯವರು ಮೊದಲೇ ಘೋಷಣೆ ಮಾಡಿಬಿಡಿ. ಅದನ್ನು ಮಾಡಿದರೆ ಇದು ತಪ್ಪುತ್ತದೆ. ಅಲ್ಲಿ ಯಾರು ಒಳ್ಳೆಯವರು ಇದ್ದಾರೆ ಅದು ಎಸ್.ಸಿ. ಎಸ್.ಟಿ. ಇರಲಿ

ಯೋಗ್ಯವಾಗಿದ್ದಂತಹವರು ಅಲ್ಲಿ ಆಡಳಿತ ಮಾಡಿಕೊಳ್ಳುವುದಕ್ಕೆ ಒಂದು ಸದವಾಕಾಶವಿರುತ್ತವೆ. ಇದರಿಂದ ಕಾನೂನು ಪರಿಪಾಲನೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಎಂದು ನಾನು ತಮ್ಮ ಮೂಲಕ ಹೇಳುವುದಕ್ಕೆ ಇಷ್ಟಪಡುತ್ತೇನೆ. ಪಕ್ಷಾತೀತ ಚುನಾವಣೆ ಮಾಡಿದ್ದೇವೆಂದು ಹೇಳಿ ಮೊಟ್ಟಮೊದಲಿಗೆ ಪತ್ರಿಕಾ ಹೇಳಿಕೆಯನ್ನು ಕೊಟ್ಟವರು ಮುಖ್ಯಮಂತ್ರಿಗಳು. ನಮ್ಮ ಪಕ್ಷ ನೂರಕ್ಕೆ ಎಂಭತ್ತರಷ್ಟು ಗ್ರಾಮಪಂಚಾಯಿತಿ ಚುನಾವಣೆಯಲ್ಲಿ ಗೆದ್ದಿವೆ ಎಂದು ಹೇಳಿದರು. ಆ ನಂತರ ಉಳಿದ ಎಲ್ಲಾ ಪಕ್ಷದವರು ಹೇಳಿಕೊಂಡೆವು. ಪಕ್ಷಾತೀತವಾಗಿ ಚುನಾವಣೆ ಆದರೆ ಗ್ರಾಮಗಳ ಆಡಳಿತ ಒಳ್ಳೆಯದು ಆಗುತ್ತದೆಂದು ಯಾವ ಒಂದು ವಿಚಾರವನ್ನು ಇಟ್ಟುಕೊಂಡು ನಾವು ಹೇಳಿದ್ದೆವು. ಅದು ಉಳಿದಿಲ್ಲ. ಕಾನೂನು ಮಾಡುವವರೇ ನಾವು ಕಾನೂನು ತಪ್ಪಿ ಕಾನೂನು ಚೌಕಟ್ಟು ಮೀರಿ ಹೋಗುವುದಕ್ಕಿಂತ, ಕಾನೂನು ತಿದ್ದುಪಡಿ ಮಾಡಿಕೊಳ್ಳುವುದು ಸೂಕ್ತ. ಯಾವ ಒಳ್ಳೆಯ ಉದ್ದೇಶ ಇಟ್ಟುಕೊಂಡು ಪಕ್ಷಾತೀತ ಚುನಾವಣೆ ಮಾಡಿದೆವು ಆ ಉದ್ದೇಶವನ್ನು ಇವತ್ತು ಸಾಧಿಸಿಲ್ಲ, ಅದಕ್ಕಾಗಿ ಮೊದಲೇ ಏನು ಇತ್ತಲ್ಲಾ ಪಕ್ಷದಟಿಕೆಟ್‌ನ ಆಧಾರದ ಮೇಲೆ ಪಕ್ಷದ ಆಧಾರದ ಮೇಲೆ ಚುನಾವಣೆ ನಡೆಯುವುದು ಸೂಕ್ತ ಎಂಬುದು ನನ್ನ ಅಭಿಪ್ರಾಯ. ಇನ್ನು ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತ್ ಚುನಾವಣೆಗಳೂ ಸಹ ಈರೀತಿ ಅವ್ಯವಸ್ಥೆಯಾಗದಂತೆ ಮೊದಲೇ ಅಲ್ಲಿ ಅವಶ್ಯಕತೆ ಇರತಕ್ಕಂಥ ನೀತಿ ನಿಯಮಗಳನ್ನು ಸರ್ಕಾರ ಮಾಡಿಕೊಂಡು ಸುವ್ಯವಸ್ಥಿತವಾಗಿ ಈಗಾಗಲೇ ಸರ್ಕಾರ ಹೇಳಿಕೆ ಕೊಟ್ಟಪ್ರಕಾರ ಏಪ್ರಿಲ್ 1 ರಿಂದ ಏಪ್ರಿಲ್ 27 ರ ಒಳಗಾಗಿ ತಾಲ್ಲೂಕು ಪಂಚಾಯಿತಿ ಜಿಲ್ಲಾ ಪಂಚಾಯಿತಿ ಚುನಾವಣೆ ನಡೆಸಿದರೆ ಮುಖ್ಯಮಂತ್ರಿಗಳ ಹೇಳಿಕೆ ಪ್ರಕಾರ ನೂರಕ್ಕೆ ಎಂಭತ್ತರಷ್ಟು ಗ್ರಾಮಪಂಚಾಯಿತಿಗಳಲ್ಲಿ ಆಯ್ಕೆಯಾಗಿದ್ದೇವೆಂದು ಹೇಳುತ್ತಾರಲ್ಲಾ ಅದರ ಸತ್ಯಾಂಶ ಮುಂದೆ ಬರತಕ್ಕಂಥ ತಾಲ್ಲೂಕು ಪಂಚಾಯತಿ ಚುನಾವಣೆಯಲ್ಲಿ ಅವರಿಗೆ ಜನತೋರಿಸುತ್ತಾರೆ ಎನ್ನುವ ಮಾತನ್ನು ಹೇಳಿ ಅವರಿಗೆ ಮಾಡುವುದಕ್ಕೆ ಮನಸ್ಸು ಇಲ್ಲ ಜೂನ್ ನವೆಂಬರ್‌ಗೆ ಚುನಾವಣೆ ಆದರೆ ವಿರೋಧಪಕ್ಷ ಸಂಘಟನೆ ಆಗುತ್ತದೆಂದು ತಿಳಿದುಕೊಂಡು ಈ ಕೂಡಲೇ ಲೇಖಾನುದಾನ ತೆಗೆದುಕೊಂಡು ಚುನಾವಣೆ ಮಾಡಿದರೆ ಒಳ್ಳೆಯದು ಎಂದು ಸ್ವಲ್ಪ ಮಟ್ಟಿಗಾದರೂ ನಮ್ಮ ಸ್ಥಾನಗಳು ಉಳಿದುಕೊಳ್ಳಬಹುದು ಎಂದು ಹೇಳಿ ಆ ವಿಚಾರದಲ್ಲಿ ಅವರು ಇದ್ದಾರೆ. ಅದಕ್ಕೆ ಇದನ್ನು ಬಿಟ್ಟು ತಾವು ಹೇಳಿದ ಪ್ರಕಾರ ತಾಲ್ಲೂಕು ಮತ್ತು ಜಿಲ್ಲಾಪಂಚಾಯತ್ ಚುನಾವಣೆಗಳನ್ನು ನಡೆಸಬೇಕು ಎಂದು ಹೇಳಿ ಈ ಸದನದ ಸಮಿತಿಯ ಮುಖಾಂತರ ವಿಚಾರಣೆ ಆಗಬೇಕು ಎಂದು ಹೇಳಿ ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ.

+ ಶ್ರೀ ಎಸ್. ಚಿಕ್ಕಮಾಧು (ಹುಣಸೂರು): ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧಪಕ್ಷದ ನಾಯಕರು ಈ ಗ್ರಾಮಪಂಚಾಯತಿ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಚುನಾವಣೆಗಳು ನಡೆದಂತದ್ದರ ಬಗ್ಗೆ ನಿಲುವಳಿ ಸೂಚನೆಯ ಮುಖಾಂತರ ಪ್ರಸ್ತಾಪ ಮಾಡಿದರು. ಅವರ ಮಾತಿನ ಉದ್ದಕ್ಕೂ ಕೂಡ ಪದೇ ಪದೇ ಆಡಳಿತ ಪಕ್ಷದ ಶಾಸಕರ ತೃಪ್ತಿಪಡಿಸುವಂತಹ ಒಂದು ಸುತ್ತೋಲೆ ಇದು ಆಡಳಿತ ಪಕ್ಷದ ಶಾಸಕರ ಹಸ್ತಕ್ಷೇಪ. ಕೆಲವು ಗ್ರಾಮಪಂಚಾಯತಿಗಳಲ್ಲಿ ಸದಸ್ಯರ ಅತ್ಯಾಚಾರ, ಅಪಹರಣ ಎನ್ನತಕ್ಕಂಥ ಮಾತುಗಳನ್ನು ಅವರು ಈ ಸದನದಲ್ಲಿ ಬಳಸಿದರು. ಸರ್ಕಾರ 2-2-94ರಲ್ಲಿ ಒಂದು ಸುತ್ತೋಲೆಯನ್ನು ಏನು ಹೊರಡಿಸಿದ್ದಾರೆ ಅದರಲ್ಲಿ ಸ್ಪಷ್ಟವಾಗಿದೆ. ಯಾವ ಗ್ರಾಮ ಪಂಚಾಯತಿಯಲ್ಲಿ ಯಾವ ಸದಸ್ಯರ ಸಂಖ್ಯೆ ಹೆಚ್ಚಿಗೆ ಇದೆ ಅಂತಹ ಒಂದು ಸಂಖ್ಯೆಗೆ ಅನುಗುಣವಾಗಿ ಮೀಸಲಾತಿಯನ್ನು ಮಾಡಿ ಎಂದು ಹೇಳಿ ಸರ್ಕಾರ ಸ್ಪಷ್ಟವಾದ ಆದೇಶವನ್ನು ಕೊಟ್ಟಿದೆ. ಸರ್ಕಾರದ ಆದೇಶದಲ್ಲಿ ಆಡಳಿತ ಪಕ್ಷದ ಶಾಸಕರನ್ನು ತೃಪ್ತಿಪಡಿಸುವುದಕ್ಕೋಸ್ಕರ ಅಥವಾ ಆಡಳಿತ ಪಕ್ಷದ ಶಾಸಕರ ಸಲಹೆ ಮೇರೆ ಮಾಡಿರತಕ್ಕಂಥ ಸುತ್ತೋಲೆ ಖಂಡಿತ ಇಲ್ಲ ಮಾನ್ಯ ವಿರೋಧಪಕ್ಷದ ನಾಯಕರು ಅವರ ಭಾಷಣದ ಉದ್ದಕ್ಕೂ ಆಡಳಿತ ಪಕ್ಷದ ಶಾಸಕರನ್ನು

ತೃಪ್ತಿಪಡಿಸುವುದಕ್ಕೋಸ್ಕರ ಮಾಡಿದದ್ದಾರೆಂದು ಹೇಳಿದರು. ಇದು ನೂರಕ್ಕೆ ನೂರರಷ್ಟು ಸತ್ಯಕ್ಕೆ ದೂರವಾದ ಸಂಗತಿ.

ಅಧ್ಯಕ್ಷರು : ನಿಮ್ಮ ಕ್ಷೇತ್ರದಲ್ಲಿ ಏನೋ ಆಗಿದೆ ಎಂದು ಹೇಳಿದಿರಿ; ಅದು ಹೇಳಿ.

ಶ್ರೀ ಎಸ್. ಚಿಕ್ಕಮಾಧು : ನನ್ನ ಕ್ಷೇತ್ರದ್ದು ಹೇಳುತ್ತಿದ್ದೇನೆ. ಅವರು ಪ್ರಸ್ತಾಪ ಮಾಡಿದಂಥಾದ್ದು ಆಡಳಿತ ಪಕ್ಷದ ಸದಸ್ಯರುಗಳು ಚುನಾಯಿತ ಪ್ರತಿನಿಧಿಗಳನ್ನು ಅಪಹರಣ ಮಾಡಿದರು ಎನ್ನುವಂತಹ ಪದವನ್ನು ಉಪಯೋಗಿಸಿದ್ದಾರೆ ಈ ಜನತಾದಳದ ಕಾರ್ಯಕರ್ತರುಗಳು ಮುಖಂಡರುಗಳು ನನ್ನ ತಾಲ್ಲೂಕಿನ ಒಂದು ಗ್ರಾಮ ಪಂಚಾಯತಿಯ ಚುನಾವಣೆಯಲ್ಲಿ ಒಬ್ಬ, ಅಲ್ಪಸಂಖ್ಯಾತರ ಗುಂಪಿಗೆ ಸೇರಿದಂತಹ ಶಂಕರಾಚಾರಿಯನ್ನು ಆಯ್ಕೆ ಮಾಡಿದಂಥ ಸಂದರ್ಭದಲ್ಲಿ ಸ್ವಇಚ್ಛೆಯಿಂದ ಚುನಾಯಿತ ಪ್ರತಿನಿಧಿಗಳು ಆ ಶಂಕರಾಚಾರಿಯವರಿಗೆ ಹೆಚ್ಚಿನ ಬಹುಮತವನ್ನು ಕೊಟ್ಟು ಅವರನ್ನು ಅಧ್ಯಕ್ಷರನ್ನಾಗಿ ಮಾಡಿದರು. ಆಯ್ಕೆ ಮಾಡಿ ಹೊರಗಡೆ ಬಂದಂತಹ ಸಂದರ್ಭದಲ್ಲಿ ನಮ್ಮ ಪಕ್ಷದ ಬೆಂಬಲಿತ ಅಭ್ಯರ್ಥಿಗೆ ಮತವನ್ನು ಕೊಡಲಿಲ್ಲ ಎಂದು ಹೇಳಿ ಸಾವಿರಾರು ಜನ ಸಾರ್ವಜನಿಕರ ಎದುರಿನಲ್ಲೇ ಜನತಾ ದಳದ ಕಾರ್ಯಕರ್ತರುಗಳು ಜನತಾ ದಳದ ಹೆಸರಿನಲ್ಲಿ ಆ ಮಹಿಳೆಯನ್ನು ಹೊರಗಡೆಯಿಂದ ಹೊತ್ತುಕೊಂಡು ಬಂದು ಸೀರೆ ಬಿಚ್ಚಿ ಅಪಮಾನ ಮಾಡಿದಂತಹ ಪ್ರಸಂಗಗಳನ್ನು ಈ ಜನತಾ ದಳದ ಕಾರ್ಯಕರ್ತರು ಮಾಡಿದ್ದಾರೆ. ಇದಕ್ಕಿಂತ ನಾಚಿಕೆಗೇಡಿನ ಕೆಲಸವನ್ನು ನಾವ್ಯಾರು ಮಾಡಿಲ್ಲ. ಇದು ಎಲ್ಲಿಯೂ ಕೂಡ ನಡೆದಿಲ್ಲ. ಅದಕ್ಕೆ ಈ ಸಂದರ್ಭದಲ್ಲಿ ನಾನು ಮನವಿ ಮಾಡುತ್ತೇನೆ. ಇದು ಮುಕ್ತವಾದ ತನಿಖೆ ಆಗಲಿ ಸದನದ ಸಮಿತಿ ಮುಖಾಂತರ ಬೇಕಾದರೆ ತನಿಖೆ ಮಾಡಿ ತನ್ನ ಸ್ವಇಚ್ಛೆಯಿಂದ ಮತವನ್ನು ಚಲಾಯಿಸಿದಂತಹ ಒಬ್ಬ ಹೆಣ್ಣು ಮಗಳ ಮೇಲೆ ಹಲ್ಲೆ ಮಾಡಿ ಸೀರೆ ಬಿಚ್ಚಿಹಾಕಿದಂತಹ ಒಂದು ಕೆಲಸವನ್ನು ಜನತಾ ದಳದ ಕಾರ್ಯಕರ್ತರು ಮಾಡಿದರು. ಇದರ ಬಗ್ಗೆ ವಿಚಾರಣೆ ಮಾಡಲು ಸದನದ ಸಮಿತಿ ಆಗಬೇಕು ಎಂದು ನಾನು ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತೇನೆ.

+ ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೇ, ಈ ವಿಷಯದ ಮೇಲೆ ಸುಧೀರ್ಘವಾಗಿ ಚರ್ಚೆ ಮಾಡಲಿಕ್ಕೆ ಅವಕಾಶ ಕೊಟ್ಟಿದ್ದೀರಿ. ತಮಗೆ ಧನ್ಯವಾದಗಳನ್ನು ನಾನು ಅರ್ಪಿಸುತ್ತೇನೆ. ಮತ್ತೆ ಇದರಲ್ಲಿ ಮುಖ್ಯಾಂಶಗಳಿಗೆ ಆದರೂ ನಾನು ಸಂಕ್ಷಿಪ್ತವಾಗಿ ಉತ್ತರ ಹೇಳಬೇಕಾಗುತ್ತದೆ. ಅದಕ್ಕಿಂತ ಮುಂಚೆ ಒಂದು ಮಾತನ್ನು ನಾನು ಬಹಳ ಸ್ಪಷ್ಟವಾಗಿ ಹೇಳಬೇಕು ಇದು ಐತಿಹಾಸಿಕವಾದಂತಹ ಒಂದು ಕ್ರಾಂತಿಕಾರಕವಾದಂತಹ ಒಂದು ಹೆಜ್ಜೆ ನಾವು ಇಟ್ಟಿದ್ದೇವೆ. ಇದು ಬರೀ ವಿಕೇಂದ್ರೀಕರಣ ಅಷ್ಟೇ ಅಲ್ಲ ಇದು ಭ್ರಷ್ಟಾಚಾರದ ವಿಕೇಂದ್ರೀಕರಣ ಅಲ್ಲ ಸಾಮಾಜಿಕ ನ್ಯಾಯದ ಜೊತೆಗೆ ವಿಕೇಂದ್ರೀಕರಣ ಮಾಡಲಿಕ್ಕೆ ನಾವು ಹೊರಟಿದ್ದೇವೆ ಇದಕ್ಕೋಸ್ಕರ ಈ ಮೀಸಲಾತಿಯ ವಿಚಾರ ಏನು ಇದೆ ಇದನ್ನು ಬಹಳ ಆಳವಾಗಿ ಈ ವ್ಯವಸ್ಥೆಯಲ್ಲಿ ನಾವು ಅಳವಡಿಸಿದ್ದೇವೆ. ರಾಜ್ಯಾಂಗದ ತಿದ್ದುಪಡಿ ಏನು ಆಯಿತು ಅದರಲ್ಲಿ ಈ ಮೀಸಲಾತಿ ವ್ಯವಸ್ಥೆ ಸದಸ್ಯರ ಮಟ್ಟದಲ್ಲಿ ಅಷ್ಟೆ ಅಲ್ಲ ಛೇರ್ ಪರ್ಸನ್ಸ್ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಚುನಾವಣೆಯಲ್ಲಿ ಕೂಡ ಮೀಸಲಾತಿಯು ವ್ಯವಸ್ಥೆಯನ್ನು ಅನ್ವಯಿಸಲಿಕ್ಕೆ ಏನು ನಮಗೆ ಅವಕಾಶಬಂತು ಅದನ್ನು ನಾವು ಸಂಪೂರ್ಣವಾಗಿ ಉಪಯೋಗಿಸಿ ಈ ದೇಶದ ಇತಿಹಾಸದಲ್ಲಿ ಪ್ರಥಮವಾಗಿ ಕರ್ನಾಟಕ ರಾಜ್ಯದಲ್ಲಿ ಈ ಮೀಸಲಾತಿ ವ್ಯವಸ್ಥೆಯನ್ನು ನಾವು ಆದಷ್ಟು ಪ್ರಾಮಾಣಿಕವಾಗಿ ಅನುಷ್ಠಾನಕ್ಕೆ ತರಲಿಕ್ಕೆ ಪ್ರಯತ್ನ ಮಾಡಿದ್ದೇವೆ. ತಮ್ಮೆಲ್ಲರ ಕರ್ನಾಟಕ ರಾಜ್ಯದ ಜನತೆಯ ಸಹಕಾರದಿಂದ ಅದರಲ್ಲಿ ನಾವು ಸಂಪೂರ್ಣವಾಗಿ ಯಶಸ್ವಿಯಾಗಿದ್ದೇವೆ ಎಂದು ನಾನು ಹೇಳಲಿಕ್ಕೆ ಇಷ್ಟಪಡುತ್ತೇನೆ.

ಏಕೆಂದರೆ ಇದರ ಕಡೆ ಇಡೀ ದೇಶ ನೋಡುತ್ತಿದೆ. ಪ್ರಧಾನಮಂತ್ರಿಗಳು ಬೇರೆ ಬೇರೆ ರಾಜ್ಯದ ಮುಖ್ಯ ಮಂತ್ರಿಗಳು ಜನತೆ ನೋಡುತ್ತಿದ್ದಾರೆ. ಈ ಒಂದು ಪ್ರಯೋಗ ಯಶಸ್ವಿಯಾದರೆ ಇದೇ ರೀತಿ ದೇಶದ ಬೇರೆ ಬೇರೆ ಭಾಗಗಳ್ಲಿ ಕೂಡ ಮಾಡುವುದಕ್ಕೆ ಅವರಿಗೆ ಒಂದು ಉತ್ಸಾಹ ಒಂದು ಆತ್ಮವಿಶ್ವಾಸ ಬರುತ್ತದೆ ಆ ದೃಷ್ಟಿಯಿಂದ ಇದು ಐತಿಹಾಸಿಕವಾದಂತಹ ಚುನಾವಣೆ ಮತ್ತೆ ಈ ಚುನಾವಣೆಯಲ್ಲಿ ನಾವು ಸಂಪೂರ್ಣವಾಗಿ ಯಶಸ್ವಿ ಆಗಿದ್ದೇವೆ ಎನ್ನುವುದಕ್ಕೆ ಕೆಲವು ಅಂಕಿಅಂಶಗಳನ್ನು ನಾನು ಕೊಡಬೇಕಾಗುತ್ತದೆ. ಕರ್ನಾಟಕದಲ್ಲಿ 5640 ಪಂಚಾಯತಿಗಳು ಇವೆ. ಈಗ ಈ ಚುನಾವಣೆಗಳನ್ನು ಸಂಪೂರ್ಣವಾಗಿ ಅರ್ಥ ಮಾಡಿಕೊಳ್ಳದೆ ನಾನಾ ಕಾರಣಗಳಿಂದ ಅದಕ್ಕೆ ತಡೆ ಅಥವಾ ಆತಂಕ ಮಾಡುವುದಕ್ಕೆ ಪ್ರಯತ್ನ ನಡೆಯಿತು ಎಂಬ ವಿಚಾರತಮಗೆಲ್ಲಾ ಗೊತ್ತಿದೆ. ಕಾನೂನು ಕೋರ್ಟ್ ಕಚೇರಿ ಅದು ಕೂಡ ನಡೆಯಿತು ಅಷ್ಟೆಲ್ಲಾ ಇದ್ದರೂ ಕೂಡ 5640 ಪಂಚಾಯತಿಗಳಲ್ಲಿ 145 ಪಂಚಾಯಿತಿಗಳನ್ನು ಬಿಟ್ಟರೆ ಬಾಕಿ ಎಲ್ಲಾ ಪಂಚಾಯತಿಗಳಲ್ಲಿ ಚುನಾವಣೆಗಳನ್ನು ನಾವು ಯಶಸ್ವಿಯಾಗಿ ನಡೆಸಿದ್ದೇವೆ. ನನ್ನದೇ ಆದ ಸ್ವಂತಕ್ಷೇತ್ರವಾದ ಸಂಡೂರು ನೇರವಾದಂತಹ ಅನುಭವವನ್ನು ನಾನು ತಮಗೆ ಹೇಳಬೇಕು. ನನ್ನ ತಾಲ್ಲೂಕಿನಲ್ಲಿ ಸ್ವಲ್ಪ ಹೆಚ್ಚು ಕಡಿಮೆ 20 ಪಂಚಾಯಿತಿಗಳು ಇವೆ. ಈ ಎಲ್ಲಾ 20 ಪಂಚಾಯತಿಗಳಿಗೆ ಶಾಂತಿಯುತವಾಗಿ ಚುನಾವಣೆಗಳು ನಡೆದು ಮೊನ್ನೆ ಅಧ್ಯಕ್ಷರು ಉಪಾಧ್ಯಕ್ಷರು ಆಯ್ಕೆಯಾಗಿ ಅವರೆಲ್ಲರೂ ರಾಜಕೀಯ ವಿಚಾರಕ್ಕೆ ಸೇರಿರಬಹುದು. ಆದರೂ ಕೂಡ ಒಂದೇ ಕುಟುಂಬಕ್ಕೆ ಸೇರಿರತಕ್ಕಂಥ ಒಂದು ಮನೋಭಾವನೆಯಿಂದ ಬಂದು ನಾವೆಲ್ಲರೂ ಸೇರಿ ಇದರ ಬಗ್ಗೆ ಸಂತೋಷಪಟ್ಟೆವು ಈ ಸಂಡೂರು ಕರ್ನಾಟಕದ ಒಂದು ಭಾಗ ಇದೆ ಒಂದು ತಾಲ್ಲೂಕು ಅದಕ್ಕೆ ನಾನು ಆ ಉದಾಹರಣೆ ಕೊಡುತ್ತಿದ್ದೇನೆ ಸಂಡೂರಿನಲ್ಲಿ ಏನು ಮಾಡಲಿಕ್ಕೆ ಸಾಧ್ಯ ಅದೇ ಪ್ರತಿಯೊಂದು ತಾಲ್ಲೂಕಿನಲ್ಲಿ ಮಾಡಲಿಕ್ಕೆ ಸಾಧ್ಯ ಎನ್ನುವುದನ್ನು ನಾನು ಸಂಪೂರ್ಣವಾಗಿ ನಂಬಿದ್ದೇನೆ.

6.40 ಪಿ.ಎಂ.

ಈ ಮಂಡಲ್ಸ್ ಚುನಾವಣೆ ಇಷ್ಟು ಶಾಂತಿಯುತವಾಗಿ ನಡೆಯಲಿಕ್ಕೆ ಮುಖ್ಯವಾದಂಥ ಕಾರಣವೇನೆಂದರೆ ಇದನ್ನು ನಾವು ಪಕ್ಷಾತೀತವಾಗಿ ನಡೆಸಿರತಕ್ಕಂಥಾದ್ದು. ಇಲ್ಲದೆ ಹೋದರೆ ನಾವು ಪಕ್ಷದ ವತಿಯಿಂದ ನಾವು ಅದರಲ್ಲಿ ಹಸ್ತಕ್ಷೇಪವನ್ನು ಮಾಡಿದ್ದರೆ ಅದು ಇಷ್ಟು ಶಾಂತಿಯುತವಾಗಿ ನಡೆಯುತ್ತಿರಲಿಲ್ಲವೆಂಬುದು ನನ್ನ ಅನುಭವದ ಮಾತು. ಇಷ್ಟೊಂದು ದೊಡ್ಡ ಚುನಾವಣೆಯು ಇಷ್ಟು ಶಾಂತಿಯುತವಾಗಿ ಕರ್ನಾಟಕದ ಇತಿಹಾಸದಲ್ಲಿಯೇ ನಡೆದಿರಲಿಲ್ಲ ಎಂದು ನನಗನ್ನಿಸುತ್ತದೆ. ಅದನ್ನು ನಮ್ಮ ಹಳ್ಳಿಯ ಜನರು ಕೂಡ ಹೇಳಿಕೊಳ್ಳುತ್ತಾರೆ. ಹೆಣ್ಣುಮಕ್ಕಳು, ಗಂಡುಮಕ್ಕಳು, ಇಷ್ಟು ಉತ್ಸಾಹದಿಂದ ಇಷ್ಟು ಶಾಂತಿಯುತವಾಗಿ ಸಾಮರಸ್ಯದಿಂದ ಯಾವ ಚುನಾವಣೆಯಲ್ಲಿಯೂ ಭಾಗವಹಿಸಿಲ್ಲವೆಂದು ಹಳ್ಳಿಯವರು ಹೇಳುತ್ತಿದ್ದಾರೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಮಾನ್ಯ ಸಚಿವರು ತಮ್ಮ ಕ್ಷೇತ್ರದ ವಿಚಾರ ಹೇಳುತ್ತಿದ್ದಾರೆ. ಅವರ ಕ್ಷೇತ್ರವು ರಾಜಮನೆತನಕ್ಕೆ ಸೇರಿದ್ದು ಆಗಿತ್ತು. ಹಾಗಾಗಿ ಅಲ್ಲಿ ಜನರು ಮೊದಲಿನಿಂದಲೂ ತುಂಬಾ ಶಾಂತಿಯುತವಾಗಿ ನಡೆದುಕೊಳ್ಳುತ್ತಿದ್ದಾರೆ. ಆದರೆ ಬೇರೆ ಕಡೆಗಳಲ್ಲಿನ ಪರಿಸ್ಥಿತಿಯು ಹಾಗಿಲ್ಲ.

ಶ್ರೀ ಎಂ.ವೈ. ಘೋರ್ಪಡೆ : ಹಾಗೇನು ಇಲ್ಲ, ರಾಜತನವು ಹೋಗಿ ಬಹಳ ದಿವಸ ಆಯಿತು. ನಮ್ಮ ಕ್ಷೇತ್ರದಲ್ಲಿ ನೋಡಿದರೆ, ಮುಗ್ಧ ಜನರು, ಯಾರಿಗೆ ರಾಜಕೀಯ ಅನುಭವ ಇಲ್ಲ, ರಾಜಕಾರಣಿಗಳೂ ಅಲ್ಲ, ಅಂಥ ಸ್ವಚ್ಛ ಮತ್ತು ಮುಗ್ಧ ಜನರು ಜನಪ್ರತಿನಿಧಿಗಳನ್ನು ಆರಿಸಿದ್ದಾರೆ. ಅಂಥ ಪ್ರಜಾಪ್ರಭುತ್ವದ ಬುನಾದಿಯನ್ನು ಕಟ್ಟುವಂಥ ಒಂದು ಪ್ರಯತ್ನವನ್ನು ಕರ್ನಾಟಕದ ಜನತೆ ಮಾಡಿದಾಗ ಅದನು

ಸಂಪೂರ್ಣವಾಗಿ ಆಶೀರ್ವಾದ ಮಾಡಬೇಕಾದುದು ನಮ್ಮ ಕರ್ತವ್ಯ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಚೆ ಪಡುತ್ತೇನೆ. ಮಾನ್ಯ ದೇಶಪಾಂಡೆಯವರು ಹಲವಾರು ವಿಷಯಗಳನ್ನು ಟೀಕೆ ರೂಪದಲ್ಲಿ ಮಾಡಿದ್ದಾರೆ. ಅದರ ಬಗ್ಗೆ ಹೇಳಬೇಕಾದುದು ನನ್ನ ಮೊದಲನೇಯ ಕರ್ತವ್ಯವಾಗಿದೆ. ನಾವು ಗೊಂದಲಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ ಎಂಬ ಒಂದು ಮಾತನ್ನು ಅವರು ಹೇಳಿದ್ದಾರೆ. ಈ ಹೊಸ ಪ್ರಯೋಗದಲ್ಲಿ ನಾವು ಎಷ್ಟರಮಟ್ಟಿಗೆ ಗೊಂದಲವನ್ನು ಕಡಿಮೆ ಮಾಡಿಕೊಳ್ಳಲು ಸಾಧ್ಯ ಎಂಬ ಬಗೆಗಿನ ಪ್ರಯತ್ನವನ್ನು ನಾವು ಬಹಳ ಪ್ರಾಮಾಣಿಕತೆಯಿಂದ ಬಹಳ ಶಾಸ್ತ್ರೀಯವಾಗಿ ಮಾಡಿದ್ದೇವೆ. ಹಾಗೆಯೇ ನಾವು ಮಾಡಿರತಕ್ಕಂಥ ರೋಸ್ಟರ್ ಪದ್ಧತಿಯು ಬಹಳ ಚೆನ್ನಾಗಿತ್ತು ಎಂದು ಅವರೇ ಹೇಳಿದ್ದಾರೆ. ಈಗಲಾದರೂ ಆ ರೋಸ್ಟರ್ ಪದ್ಧತಿಯನ್ನು ಅವರು ಮೆಚ್ಚಿದ್ದಾರಲ್ಲಾ ಎಂದು ನನಗೆ ಸಂತೋಷವಾಯಿತು. ಆ ರೋಸ್ಟರ್ ಪದ್ಧತಿಯನ್ನು ನಾವು ಕೈಬಿಟ್ಟಿಲ್ಲ ಎಂದು ನಿಮಗೆ ಹೇಳಬಯಸುತ್ತೇನೆ. ಈ ರೋಸ್ಟರ್ ಪದ್ಧತಿಯನ್ನು ಯಾವ ರೀತಿಯಿಂದ ನಾವು ನ್ಯಾಯವಾಗಿ ಇಡೀ ರಾಜ್ಯಕ್ಕೆ ಹಂಚಲಿಕ್ಕೆ ಸಾಧ್ಯ? ಏಕೆಂದರೆ ಮೀಸಲಾತಿಯ ವ್ಯವಸ್ಥೆಯು ಒಂದೇ ಕಡೆಯಲ್ಲಿ ಬಂಚಿಂಗ್ ಆಗಬಾರದು.

ಅದಕ್ಕೋಸ್ಕರವಾಗಿ ರಾಜ್ಯದ ಎಲ್ಲಾ ಭಾಗಗಳಿಗೆ ಮೀಸಲಾತಿಯನ್ನು ಹಂಚುವ ದೃಷ್ಟಿಯಿಂದ ರೋಸ್ಟರ್‌ನ್ನು ನಾವು ಉಪಯೋಗಿಸಿದ್ದೇವೆ. ರೋಸ್ಟರ್ ಪ್ರಕಾರ ಯಾವ್ಯಾವ ತಾಲ್ಲೂಕಿಗೆ, ಯಾವ್ಯಾವ ಕೆಟಗರಿ, ಯಾವ ಗುಂಪಿನ ಮೀಸಲಾತಿಯ ಸಂಖ್ಯೆಗಳು ಬಂದುವು, ಆ ಸಂಖ್ಯೆಗಳು ಇವೊತ್ತಿಗೂ ಅದೇ ರೀತಿಯಲ್ಲಿದೆ. ಜಿಲ್ಲಾಪರಿಷತ್ ಮೆಂಬರ್ ರಿಸರ್ವೇಷನ್ಸ್ ಏನಿದೆ ಅದು ಎಸ್‌ಸಿ/ ಎಸ್‌ಟಿಗೆ ಅಷ್ಟೇ ಇದೆ. ಈಗ ಅದನ್ನು ನಾವು ತಾಲ್ಲೂಕು ಮಟ್ಟದಲ್ಲಿ ಯಾವ ರೀತಿಯಲ್ಲಿ ಹಂಚಲೇಬೇಕೆಂಬ ಪ್ರಶ್ನೆಯು ಬಂದಾಗ ಇಲ್ಲಿಯೂ ಕೂಡ ಅದರ ಬಗ್ಗೆ ಬೇಕಾದಷ್ಟು ಟೀಕೆಗಳು ಬಂದವು. ಎಲ್ಲಿ ಎಸ್‌ಸಿ.ಎಸ್‌ಟಿ ಜನರು ಇಲ್ಲ ಅಂಥ ಕಡೆಗಳಲ್ಲಿ ಎಸ್‌ಸಿ.ಎಸ್‌ಟಿ ರಿಸರ್ವೇಷನ್ ಮಾಡಲಿಕ್ಕೆ ಇವರು ಹೊರಟಿದ್ದಾರೆ ಎಂದು ಹೇಳಿದ್ದಾರೆ. ಕೆಲವು ಕಡೆಗಳಲ್ಲಿ ಆ ರೀತಿಯಾಗಿ ಆಗಿರಬಹುದು. ಆದರೆ ನಮ್ಮ ವಿಚಾರ ಏನೆಂದರೆ ಈ ಟೀಕೆಗಳಿಂದ ನಮ್ಮ ಹೊಸ ವ್ಯವಸ್ಥೆಗೆ ಯಾವುದೇ ಧಕ್ಕೆ ಬರಬಾರದು ಎಂದು ಅದನ್ನು ಗಮನಿಸಿ, ಅದನ್ನು ಎಷ್ಟರಮಟ್ಟಿಗೆ ಸರಿಪಡಿಸಲು ಸಾಧ್ಯ ಎಂಬ ಬಗ್ಗೆ ಪ್ರಯತ್ನವನ್ನು ಮಾಡಿದ್ದೇವೆ. ನಾವು ಅದನ್ನೇ ಮುಂದುವರಿಸಿದ್ದರೂ ನಡೆಯುತ್ತಾ ಇತ್ತು. ಆದರೆ ಆ ಟೀಕೆಗಳಿಗೆ ಗಮನಕೊಟ್ಟು ಇವೊತ್ತು ರೋಸ್ಟರ್ ಪ್ರಕಾರ ತಾಲ್ಲೂಕಿಗೆ ರಿಸರ್ವೇಶನ್ ಎಷ್ಟೆಷ್ಟು ಬಂದಿದೆ, ಅದನ್ನು ಹಂಚುವಾಗ ತಾಲ್ಲೂಕುಮಟ್ಟದಲ್ಲಿ ಯಾವ ಪಂಚಾಯತ್‌ಗೆ ಅದನ್ನು ಅನ್ವಯಿಸಬೇಕು ಎಂಬ ಪ್ರಶ್ನೆ ಬಂದಾಗ ಈ ಗೈಡ್‌ಲೈನ್ಸ್ ಕೊಡುವ ವಿಚಾರ ಬಂತು. ನಮ್ಮ ಪಕ್ಷದಲ್ಲಿಯೂ ಬಂತು, ನೀವೂ ಕೂಡ ಇದರ ಬಗ್ಗೆ ಸಾಕಷ್ಟು ಚರ್ಚೆ ಮಾಡಿದ್ದೀರಿ. ಪ್ರಶ್ನೋತ್ತರ ಕಾಲಕ್ಕೆ ಗೈಡ್‌ಲೈನ್ಸ್‌ನ್ನು ಯಾವರೀತಿಯಾಗಿ ಕೊಟ್ಟಿದ್ದೇವೆ ಎಂಬ ಬಗ್ಗೆ ಇಲ್ಲಿ ಚರ್ಚೆಯದೆ. ಗೈಡ್‌ಲೈನ್ಸ್ ಕೊಡುವಾಗ ನಾವು ಏನು ಮಾಡಿದ್ದೇವೆ ಅಂದರೆ ಒಂದು ತಾಲ್ಲೂಕಿನಲ್ಲಿ ನಾಲ್ಕು ಎಸ್‌ಸಿ ಕ್ಷೇತ್ರಗಳು ಇರಬೇಕೆಂದಾಗ ಯಾವ ಪಂಚಾಯತಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಈ ಜನರು ಆರಿಸಿ ಬಂದಿದ್ದಾರೆ, ಅಂಥ ಪಂಚಾಯತಿಗಳಿಗೆ ಆದ್ಯತೆಯನ್ನು ಕೊಟ್ಟಿದ್ದೇವೆ ಎನ್ನುವ ವಾದವನ್ನು ತಪ್ಪಿದಕ್ಕೋಸ್ಕರವಾಗಿ ಗೈಡ್‌ಲೈನ್ಸ್‌ನ್ನು ನಾವು ಮಾಡಿದ್ದೇವೆ. ಗೈಡ್‌ಲೈನ್ಸ್ ಮಾಡುವಾಗಲೂ ಕೂಡ ಇದರಲ್ಲಿ ಏನು ಡಿಸ್ಕ್ರಿಷನ್ ಇದೆ, ಡಿ.ಸಿ.ಯವರ ಡಿಸ್ಕ್ರಿಷನ್ ಏನಿದೆ ಅದನ್ನು ಸಂಪೂರ್ಣವಾಗಿ ತಪ್ಪಿಸಲಾಗಲಿಲ್ಲ, ಏಕೆಂದರೆ ಎಲ್ಲಿ ಆ ಮೆಂಬರ್ಸ್ ಸರಿಸಮಾನವಾಗಿ ಇದ್ದಾರೆ, ಅಲ್ಲಿ ಮೂರು ಅಥವಾ ನಾಲ್ಕು ಕಡೆಗಳಲ್ಲಿ ಮೀಸಲಾತಿಯನ್ನು ಅನ್ವಯಮಾಡಲು ಸಾಧ್ಯವಾಗುತ್ತದೆ. ಈ ಪ್ರಶ್ನೆ ಬಂದಾಗ ಆ ಡಿಸ್ಕ್ರೇಶನ್‌ನ್ನು ನಾವು ಉಪಯೋಗಿಸಬೇಕಾಗುತ್ತದೆ. ಇದೇ ಪ್ರಶ್ನೆಯು ಸದನದಲ್ಲಿ ಬಂದಾಗ ಅದಕ್ಕೆ ನಾನು ಲಿಖಿತ ಮತ್ತು ಮೌಖಿಕ ಉತ್ತರವನ್ನು ಹೇಳಿದ್ದೇನೆ. ಈ ಡಿಸ್ಕ್ರಿಶನ್ ಬಂದಾಗ ಸ್ವಇಚ್ಛೆಯಿಂದ ಏನು ಬೇಕಾದರೂ

ಮಾಡಲು ಅವಕಾಶವಿಲ್ಲ. ಡಿ.ಸಿ. ಆಯಾಯ ಎಂ.ಎಲ್‌ನ ಅಥವಾ ಸಂಬಂಧಪಟ್ಟ ಜನರ ಅಭಿಪ್ರಾಯಗಳನ್ನು ಗಮನದಲ್ಲಿಟ್ಟು ಅದಕ್ಕೆ ಬೆಲೆ ಕೊಡುವುದಕ್ಕೆ ಆಸ್ಪದ ಇದೆ. ಮತ್ತು ಎಲ್ಲಿ ಭಿನ್ನಾಭಿಪ್ರಾಯ ಬರುತ್ತದೆ ಅಲ್ಲಿ ಲಾಟ್ ಎತ್ತಲಿಕ್ಕೂ ಕೂಡ ಅಸ್ಪದ ಇದೆ. ಈ ರೀತಿಯಲ್ಲಿ ಅಲ್ಲಿ ಎಂ.ಎಲ್.ಎ.ಗಳ ಅಭಿಪ್ರಾಯವನ್ನು ತೆಗೆದುಕೊಳ್ಳಬಾರದು ಎಂಬ ಪ್ರಶ್ನೆ ಬರುವುದಿಲ್ಲ. ಆದರೆ ಎಂ.ಎಲ್.ಎ. ರವರು ಹೇಳಿದ ಹಾಗೆ ಮಾಡಬೇಕೆಂದು ನಾವು ಯಾವ ಗೈಡ್‌ಲೈನ್ಸ್‌ನ್ನೂ ಕೊಟ್ಟಿಲ್ಲ. ಪ್ರಜಾಪ್ರಭುತ್ವದಲ್ಲಿ ಅಧಿಕಾರಸ್ಥರು ಆ ಡಿಸ್ಕ್ರೀಷನ್‌ನ್ನು ಉಪಯೋಗ ಮಾಡುವಾಗ ಶಾಸಕರ ಅಭಿಪ್ರಾಯವನ್ನು ತೆಗೆದುಕೊಂಡ ತತ್‌ಕ್ಷಣ ಅದೊಂದು ಮಹಾಪಾಪದ ಕೆಲಸ ಎಂದು ಹೇಳುವುದಕ್ಕಾಗುವುದಿಲ್ಲ. ಸುದೈವದಿಂದ ನಾವು ಈ ಕಡೆಯಲ್ಲಿ ಹೆಚ್ಚು ಸದಸ್ಯರಿದ್ದೇವೆ. ದುರ್ದೈವದಿಂದ ನೀವುಗಳು ಅಲ್ಲಿ ಕಡಿಮೆ ಇದ್ದೀರಿ. ಅದು ಬೇರೆ ವಿಚಾರವಾಗುತ್ತದೆ. ಆದರೆ ಎಂ.ಎಲ್.ಎ. ಅಭಿಪ್ರಾಯಕ್ಕೆ ಈ ಡಿಸ್ಕ್ರಿಷನ್ ಉಪಯೋಗ ಮಾಡುವಾಗ ಬೆಲೆ ಕೊಟ್ಟರೆ ಅದು ತಪ್ಪು ಎಂದು ಹೇಳುವುದಕ್ಕಾಗುವುದಿಲ್ಲ.

ಆದಕಾರಣ ಈ ಗೈಡ್‌ಲೈನ್ಸ್‌ಗಳನ್ನು ಈ ರೀತಿಯಾಗಿ ಉಪಯೋಗಿಸಿದ್ದಾರೆ. ಇನ್ನು ಪೋಸ್ಟ್‌ಪೋನ್ ಮಾಡಿದ್ದು ಏಕೆ ಎಂಬುದು ಬಹಳ ಮುಖ್ಯವಾದ ಪ್ರಶ್ನೆ. ದೇಶಪಾಂಡೆಯವರು ಕೆಲವು ಕಡೆಗಳಲ್ಲಿ ಇಲೆಕ್ಷನ್ ಪೋಸ್ಟ್‌ಪೋನ್ ಮಾಡಿದ್ದೀರಿ ಎಂದು ಹೇಳಿದ್ದಾರೆ. ಆದರೆ ನಾವು ಇಲೆಕ್ಷನ್ ಪೋಸ್ಟ್‌ಪೋನ್ ಮಾಡಿಲ್ಲ. ಎಲ್ಲೆಲ್ಲಿ ಗೈಡ್‌ಲೈನ್ಸ್ ಪ್ರಕಾರ ಸರಿಯಾಗಿ ಮಾಡಿಲ್ಲ ತಪ್ಪು ಮಾಡಿದ್ದಾರೆ ಎಂಬ ಬಗ್ಗೆ ದೂರುಗಳು ಬಂದಾಗ ಅಂಥ ವಿಚಾರಗಳ ಬಗ್ಗೆ ಪ್ರಜಾಪ್ರಭುತ್ವದಲ್ಲಿ ಸಂಪೂರ್ಣವಾಗಿ ನಿರ್ಲಕ್ಷ್ಯ ಮಾಡುವುದು ಬಹಳ ಕಷ್ಟವಾಗುತ್ತದೆ. ಆದಕಾರಣ ಕ್ಯಾಬಿನೆಟ್ ಮಟ್ಟದಲ್ಲಿ ಇದರ ಬಗ್ಗೆ ನಾವು ಚಿಂತನೆ ಮಾಡಿ, ಈ ದೂರುಗಳನ್ನು ತಪ್ಪಿಸುವುದಕ್ಕೋಸ್ಕರ, ಎಲ್ಲೆಲ್ಲಿ ಆ ದೂರುಗಳು ಬಂದಿದ್ದವು ಅಂಥ ಕಡೆಗಳಲ್ಲಿ ಜಿಲ್ಲಾಧಿಕಾರಿಗಳನ್ನು ಎಲೆಕ್ಷನ್‌ನ್ನು ರಿ-ಶೆಡ್ಯುಲ್ ಮಾಡಬಹುದು ಎಂದು ಹೇಳಿದ್ದೇವೆ. ರಿ-ಶೆಡ್ಯೂಲ್ ಮಾಡುವುದು ಎಂದ ತತ್‌ಕ್ಷಣ ಅವರು ಗೈಡ್‌ಲೈನ್ಸ್ ಬಿಟ್ಟು ಕೆಲಸ ಮಾಡಬೇಕೆಂದು ಯಾರೂ ಹೇಳಲಿಲ್ಲ. ರೀ -ಶೆಡ್ಯೂಲ್ ಎಂದರೆ 2-3 ಮೂರು ದಿನಗಳ ಕಾಲ ಮುಂದಕ್ಕೆ ಹಾಕಲು ಅವಕಾಶವನ್ನು ನಾವು ಮಾಡಿಕೊಟ್ಟಿದ್ದೇವೆ. ಈ ರೀತಿಯಾಗಿ ಗೈಡ್‌ಲೈನ್ಸ್ ಪ್ರಕಾರ ಮಾಡಿಲ್ಲ ಎಂಬ ಬಗ್ಗೆ ಈ ಉತ್ತರಗಳನ್ನು ಹೇಳಿದ್ದೇನೆ.

ಶ್ರೀ ಆರ್.ವಿ. ದೇಶಪಾಂಡೆ: ತಮ್ಮಲ್ಲಿ ಬಹಳ ವಿನಯದಿಂದ ನಾನು ರಿಕ್ವೆಸ್ಟ್ ಮಾಡುತ್ತಿದ್ದೇನೆ. ಕೆಲವು ಡಿ.ಸಿ.ಗಳು ಮಾಡಿದ ರಿಸರ್‌ವೇಷನ್ ಬಗ್ಗೆ ದೂರುಗಳು ಬಂದಿದ್ದು ಹಾಗಾಗಿ ನಾವು 2-3 ದಿನಗಳ ಮುಂದಕ್ಕೆ ಹಾಕಲು ರಿ-ಶೆಡ್ಯೂಲ್ ಮಾಡಲು ಹೇಳಿದ್ದೇವೆ ಎಂದು ಹೇಳಿದ್ದೀರ. ಜಿಲ್ಲಾಧಿಕಾರಿಗಳು ತಮ್ಮ ಗೈಡ್‌ಲೈನ್ ಪ್ರಕಾರ ಮಾಡಿಲ್ಲದಿದ್ದರೆ ನಾನು ನಿಮ್ಮ ಮಾತುಗಳನ್ನು ಒಪ್ಪಿಕೊಳ್ಳುತ್ತೇನೆ. ನೀವು ಎಲ್ಲೆಲ್ಲಿ ಚುನಾವಣೆಯನ್ನು ರಿ-ಶೆಡ್ಯೂಲ್ ಮಾಡಲಿಕ್ಕೆ ಹೇಳಿದ್ದೀರಿ. ಅಲ್ಲಲ್ಲಿ ಯಾವ್ಯಾವ ಜಿಲ್ಲಾಧಿಕಾರಿಗಳು ಏನು ತಪ್ಪು ಮಾಡಿದ್ದರು, ಅದನ್ನು ತಾವುಗಳು ಹೇಗೆ ಸುಧಾರಣೆ ಮಾಡಿದ್ದೀರಿ ಎಂಬ ವಿಚಾರಗಳನ್ನು ತಾವುಗಳು ಸದನದ ಮುಂದೆ ಇಡುತ್ತೀರಾ?

ಶ್ರೀ ಎಂ.ವೈ. ಘೋರ್ಪಡೆ: ಮೆಂಬರ್ಸ್ ಇಲೆಕ್ಷನ್ ಆಗುವಾಗ ಇದು ಕಮಿಷನ್‌ಗೆ ಬಿಟ್ಟಿರತಕ್ಕಂಥಾದ್ದು. ಅದರಲ್ಲಿ ನಾವು, ನೀವು ಹಸ್ತಕ್ಷೇಪ ಮಾಡುವ ಪ್ರಶ್ನೆಯೇ ಬರುವುದಿಲ್ಲ. ಅಸೆಂಬ್ಲಿ ಸದಸ್ಯರು ಆರಿಸಿ ಬಂದ ನಂತರ ಸಿ.ಎಂ. ಚುನಾವಣೆ ಇದೆಯಲ್ಲಾ ಅದಕ್ಕೆ ಬೇರೆ ದಿನಾಂಕ ಫಿಕ್ಸ್ ಮಾಡಿ ಇಲ್ಲಿಗೆ ಆರಿಸಿ ಬಂದಂತಹ ಜನ ಸಿ.ಎಂ. ಅನ್ನು ಆರಿಸುತ್ತಾರೆ. ಸದಸ್ಯರ ಚುನಾವಣೆಯಂತೂ ಆಗಿ ಹೋಗಿದೆ. ಈಗ ಅಧ್ಯಕ್ಷ, ಉಪಾಧ್ಯಕ್ಷ ಚುನಾವಣೆ ಯಾವ ದಿನ ಯಾವ ಹಳ್ಳಿಯಲ್ಲಿ ಆಗಬೇಕು. ಇದು ಆಡಳಿತಾತ್ಮಕ ಕ್ರಮ. ಅಡ್ಮಿನಿಸ್ಟ್ರೇಟಿವ್ ಆಕ್ಷನ್.

SRI. R.V. DESHPANDE : you reschedule the election because you received complaints that the Deputy Commissioners had not done the job as per directions.

ಈ ಸದನದ ಮುಂದಿಡಲಿಕ್ಕೆ ಆಗುವುದಿಲ್ಲವೇನು? ಅವರೇನು ತಪ್ಪು ಮಾಡಿದರು ನೀವೇನು ಸುಧಾರಣೆ ಮಾಡಿದ್ದೀರಿ ಎಂದು ಹೇಳಿ. Let me know about it.

ಶ್ರೀ ಎಂ.ವೈ. ಘೋರ್ಪಡೆ: ಕಾನೂನು ಪ್ರಕಾರ ಮಾಡಿಲ್ಲವೆಂದು ಯಾವುದಾದರೂ ಕಡೆಯಿಂದ ದೂರುಗಳು ಬಂದಾಗ ನಾವು ಅದಕ್ಕೆ ಸಂಪೂರ್ಣವಾಗಿ ನಿರ್ಲಕ್ಷ್ಯ ಮಾಡುವುದಕ್ಕಾಗುವುದಿಲ್ಲ. ನಮ್ಮ ಉದ್ದೇಶವೇನೆಂದರೆ ಐತಿಹಾಸಿಕವಾದಂತಹ ಚುನಾವಣೆಯನ್ನು ನಾವು ಪೂರ್ತಿ ಮಾಡಬೇಕು. ಅದರಲ್ಲಿ ಭಿನ್ನಾಭಿಪ್ರಾಯ ಬಂದರೆ ತಪ್ಪು ತಿಳಿವಳಿಕೆಯಿಂದ ಕಷ್ಟಗಳು ಬಂದರೆ ಅದರ ಕಡೆ ನಿರ್ಲಕ್ಷ್ಯ ಮಾಡಬಾರದು. ಆ ಉದ್ದೇಶದಿಂದ ನಾವು ರೀ-ಷೆಡ್ಯೂಲ್ ಮಾಡುವ ಅವಶ್ಯಕತೆಯಿದ್ದರೆ 2-3 ದಿನ ರೀ ಷೆಡ್ಯೂಲ್ ಮಾಡಬಹುದೆಂದು ಸಚಿವ ಸಂಪುಟದಲ್ಲಿ ಹೇಳಿದ್ದೆವು. 5ನೇ ತಾರೀಖಿನೊಳಗಾಗಿ ಚುನಾವಣೆ ನಡೆಯಬೇಕಾಗಿತ್ತು. ಅದು 4-5 ದಿನ ಮುಂದಕ್ಕೆ ಹಾಕಿದ್ದಾಯಿತು. ಮುಂದಕ್ಕೆ ಹೋಗಬೇಕೆಂಬುದರ ಅರ್ಥ ಗೈಡ್‌ಲೈನ್ಸ್ ಬಿಟ್ಟು ಹೋಗಲಿಕ್ಕೆ ಡಿ.ಸಿ.ಗಳಿಗೆ ಅಧಿಕಾರ ಕೊಟ್ಟಿದ್ದೇವೆಂದು ಹೇಳುವುದರಲ್ಲಿ ಅರ್ಥವಿಲ್ಲ. ಆ ಅಧಿಕಾರ ಕೊಟ್ಟಿಲ್ಲ. ಗೈಡ್‌ಲೈನ್ಸ್ ಪ್ರಕಾರ ನಡೆದಿಲ್ಲವೆಂದು ದೂರುಗಳು ಬಂದಾಗ ಅದನ್ನು ನೋಡಲಿಕ್ಕೆ ಆಸ್ಪದ ಕೊಡಬೇಕಾಗುತ್ತದೆ. ಒಟ್ಟಿನಲ್ಲಿ ನಾವು ಅದರ ಬಗ್ಗೆ ಹೇಳುವುದಿಷ್ಟೆ. ಅದು ಕಾನೂನು ಪ್ರಕಾರ ಆಡಳಿತಾತ್ಮಕವಾದಂತಹ ಒಂದು ಪ್ರಕ್ರಿಯೆ ಇರುವುದರಿಂದ ಅದು ಕಾನೂನಿಗೆ ಅಡ್ಡ ಕಾನೂನಿಗೆ ವಿರೋಧವಾಗಿ ಮಾಡಿದ್ದೇವೆಂದು ಹೇಳುವುದಕ್ಕೆ ಆಸ್ಪದವಿಲ್ಲವೆಂದು ಹೇಳಬಯಸುತ್ತೇನೆ. ಅದರ ಅವಶ್ಯಕತೆ ಎಷ್ಟರ ಮಟ್ಟಿಗೆ ಇತ್ತು ಅದು ಅಭಿಪ್ರಾಯದ ಪ್ರಶ್ನೆ ಇದೆ. 3-4ದಿನ ಮುಂದಕ್ಕೆ ಹಾಕಿದರೆ ಅದರಿಂದ ಯಾವ ಅನಾಹುತವಾಗಲಿಲ್ಲವೆಂದು ಹೇಳಬಯಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ: ನನ್ನ ಪ್ರಶ್ನೆಗೆ ತಾವು ಉತ್ತರ ಕೊಡುತ್ತಿಲ್ಲ. ತಾವು ಏಕೆ ರೀಷೆಡ್ಯೂಲ್ ಮಾಡಿದ್ದಿರಿ ಎಂದರೆ ದೂರುಗಳು ಬಂದವು ಅದಕ್ಕೆ ಮಾಡಿದ್ದೀರಿ ; ನಾನು ಒಪ್ಪಿಕೊಳ್ಳುತ್ತೇನೆ. ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆಯಲ್ಲಿ ದೂರುಗಳು ಬಂದರೆ, ತಾವು ರಿ ಷೆಡ್ಯೂಲ್ ಮಾಡಲಿಕ್ಕೆ ಹೇಳಿದ್ದೀರಿ ಆದರೆ ಆ ದೂರುಗಳು ಸರಿಯೋ ತಪ್ಪೋ ಎಂಬುದನ್ನು ವೆರಿಫೈ ಮಾಡಿದ್ದೀರಾ? ವೆರಿಫೈ ಮಾಡಿದ್ದರೆ ಏನು ತಪ್ಪನ್ನು ಡಿ.ಸಿ.ಗಳು ಮಾಡಿದ್ದಾರೆ ತಾವೇನು ಗೈಡ್‌ಲೈನ್ಸ್ ಕೊಟ್ಟಿರಿ ಎಂಬುದನ್ನು ಸದನದ ಮುಂದಿಡಿ.

ಶ್ರೀ ಎಂ.ವೈ. ಘೋರ್ಪಡೆ : ಈ ಪ್ರಶ್ನೆ ಇಲ್ಲಿ ಉಳಿದಿಲ್ಲ. ಎಲ್ಲಾ ಕಡೆ ಚುನಾವಣೆ ಮುಗಿದಿದೆ. ಎಲ್ಲೆಲ್ಲಿ ಇಂತಹ ದೂರುಗಳಿಗೆ ಅವಕಾಶವಿರುವುದಿಲ್ಲ ಅಲ್ಲಿ ನಮ್ಮ ಜಿಲ್ಲಾಧಿಕಾರಿಗಳು ಬದಲಾಯಿಸಲಿಕ್ಕೆ ಹೋಗಿಲ್ಲ. ಎಲ್ಲಿ ಬದಲಾಯಿಸುವ ಅವಶ್ಯಕತೆ ಅವರಿಗೆ ಕಂಡು ಬಂತು ಅಲ್ಲಿ ಮಾತ್ರ ಮಾಡಲಿಕ್ಕೆ ಅವರಿಗೆ ಅವಕಾಶ ಕೊಟ್ಟಿದ್ದೇವೆ. ಎಲ್ಲಿ ಅವರು ಸರಿ ಮಾಡಿದ್ದಾರೆ ಅದು ಸರಿ ಎಂದು ಅವರು ಸಮರ್ಥನೆ ಮಾಡಿದ್ದಾರೆ.

SRI. R.V. DESHPANDE : You are replying against your conscience. I understand your difficulty. Go ahead.

ಶ್ರೀ ಎಂ.ವೈ. ಘೋರ್ಪಡೆ: 4-5 ಮುಂದಕ್ಕೆ ಹೋಗಬೇಕಾಗಿತ್ತೋ ಇಲ್ಲವೋ ಇದರ ಬಗ್ಗೆ ಬೇರೆ ಬೇರೆ ಅಭಿಪ್ರಾಯವಿರಬಹುದು. ಈ ರೋಸ್ಟರ್ ಪದ್ಧತಿ ಚೆನ್ನಾಗಿತ್ತೆಂದು ತಾವು ಹೇಳಿದಿರಿ. ಆದರೂ ಕೂಡ ತಾಲ್ಲೂಕು ಮಟ್ಟದಲ್ಲಿ ಗೈಡ್‌ಲೈನ್ಸ್ ಮಾಡುವ ಅವಶ್ಯಕತೆ ಹೇಗೆ ಬಂತು? ರೋಸ್ಟರ್ ಪ್ರಕಾರ ಯಾವ್ಯಾವ ತಾಲ್ಲೂಕಿಗೆ

ಇಷ್ಟಿಷ್ಟು ಮೀಸಲಾತಿ ಎಂದು ಕೊಟ್ಟಿದ್ದೂ ಆಯಿತು. ಅದನ್ನು ಅನ್ವಯಿಸುವಾಗ ಯಾವ ಪಂಚಾಯತಿಗೆ ಯಾವ ಮೀಸಲಾತಿ ಕೊಡಬೇಕು ಇದರ ಬಗ್ಗೆ ನಾವು ಗೈಡ್‌ಲೈನ್ಸ್ ಮಾಡಬೇಕಾಗಿತ್ತು. ನಮ್ಮ ಕಡೆಯಿಂದ ನಿಮ್ಮ ಕಡೆಯಿಂದ ಟೀಕೆ ಬಂತು. ಈ ಟೀಕೆಯನ್ನು ನಿರ್ಲಕ್ಷ್ಯ ಮಾಡಲಿಕ್ಕಾಗಲಿಲ್ಲ. ಗೈಡ್‌ಲೈನ್ಸ್ ಮಾಡಿದ ನಂತರ ಕ್ಲಾರಿಫಿಕೇಷನ್; ಕ್ಲಾರಿಫಿಕೇಷನ್ ಕೂಡ ಗೈಡ್‌ಲೈನ್ಸ್ ಅದನ್ನು ನಾವು ಬದಲಾಯಿಸಲಿಲ್ಲ. ಕೆಲವು ಕ್ಲಾರಿಫಿಕೇಷನ್ ಉದಾಹರಣೆಗಾಗಿ ಯಾರು ಅನ್ ರಿಸರ್ವ್ಡ್ ಕೇಟಗರಿಯಲ್ಲಿ ಬಂದರು.....

ಶ್ರೀ ಎಂ.ಎಸ್. ಪಾಟೀಲ್: ಇದನ್ನು ತಾವು ಸಂಪೂರ್ಣವಾಗಿ ಒಪ್ಪಿಕೊಂಡಂತೆ ಆಗುತ್ತದೆ. ಚುನಾವಣೆಯಲ್ಲಿ ನಾವು ಇಂಟರ್‌ಫಿಯರ್ ಆಗಿದ್ದೇವೆ ಎಂದು ಹೇಳಿ ಸ್ಪಷ್ಟವಾಗಿ ಒಪ್ಪಿಕೊಂಡ ಹಾಗೆ ಆಯಿತು ಚುನಾವಣೆಯನ್ನು ಮುಂದೆ ಹಾಕುವಂಥ ಒಂದು ತೀರ್ಮಾನದಿಂದ ಚುನಾವಣಾ ಪ್ರಕ್ರಿಯೆಯಲ್ಲಿ ನಾವು ಇಂಟರ್‌ಫಿಯರ್ ಆಗಿದ್ದೀರಿ, ಅದು ಆಕ್ಷನಲ್ಲಿ ಇರತಕ್ಕಂಥಾದ್ದು ಇಲ್ಲ. ಕಾನೂನು ಬಾಹಿರವಾಗಿ ನೀವು ಇಂಟರ್‌ಫಿಯರ್ ಆಗಿದ್ದೀರಿ. ಜನರೇನಾದರೂ ಇಂಟರ್‌ಫಿಯರ್ ಆಗಿದ್ದರೆ ಕೋರ್ಟಿಗೆ ಹೋಗುವುದಕ್ಕೆ ಅವಕಾಶ ಇತ್ತು. ಸರ್ಕಾರಕ್ಕೆ ಬರತಕ್ಕಂಥದ್ದು ಇಲ್ಲ. ಇದನ್ನು ಮುಂದೆ ಹಾಕುವ ಮುಖಾಂತರ ಎಲೆಕ್ಷನ್ ಪ್ರಕ್ರಿಯೆಯಲ್ಲಿ ಇಂಟರ್‌ಫಿಯರ್ ಆಗಿದ್ದೀರಿ ಎಂದು ಒಪ್ಪಿಕೊಳ್ಳುತ್ತಿದ್ದೀರಿ. ಅದೇ ನಮ್ಮ ವಾದ.

ಶ್ರೀ ಎಂ.ವೈ. ಘೋರ್ಪಡೆ: ಅದು ದೇಶಪಾಂಡೆಯವರಿಗೆ ಗೊತ್ತಿದೆ. ಹಿಂದೆ ಚುನಾವಣೆಯಾದ ನಂತರ ತಿಂಗಳುಗಟ್ಟಲೆ ನೀವು ಛೇರ್ಮನ್ ಎಲೆಕ್ಷನನ್ನು ಮಾಡುತ್ತಿರಲಿಲ್ಲ. ಅದಕ್ಕೋಸ್ಕರ ನಾವ ಇವತ್ತು ಅಮೆಂಡ್‌ಮೆಂಟ್ಸ್ ತಂದು ಚುನಾವಣೆಯಾದ ನಂತರ ಒಂದೇ ತಿಂಗಳಲ್ಲಿ....

(ಗೊಂದಲ)

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಕೋರ್ಟ್‌ನಲ್ಲಿ ಸ್ಟೇ ತಂದು ನಿಲ್ಲಿಸಿದೆ. ನಾವು ಯಾವುದನ್ನು ಮುಂದೆ ಹಾಕಿಲ್ಲ.

(ಗೊಂದಲ)

ಶ್ರೀ ಎಂ.ವೈ. ಘೋರ್ಪಡೆ: ಈ ಚುನಾವಣಾ ಪ್ರಕ್ರಿಯೆ ಏನಿದೆ, ಅದಕ್ಕೆ ಯಾವ ತರಹದ ಧಕ್ಕೆ ಕೂಡ ಬಂದಿಲ್ಲ.

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್: ಒಂದು ತಿಂಗಳಲ್ಲಿ ಚುನಾವಣೆಯಾಯಿತೇನು? ತಾವು ಒಂದು ತಿಂಗಳಲ್ಲಿ ಮಾಡಬೇಕು ಎಂದು ಕಾನೂನು ತಂದಿರಿ, ತಿಂಗಳಲ್ಲಿ ಅಧ್ಯಕ್ಷರ ಉಪಾಧ್ಯಕ್ಷರ ಚುನಾವಣೆಯನ್ನು ಮಾಡಿದಿರಿ? ನಿಮ್ಮ ಮನಸ್ಸಿನ ವಿರುದ್ಧ ಹೇಳುತ್ತಿರುವುದಂತೂ ನಿಜ. ಇದನ್ನು ನೀವು ಒಪ್ಪುವುದಿಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ನಿಮ್ಮ ಮನಸ್ಸಿನ ವಿರುದ್ಧ ಹೇಳುತ್ತಿರುವುದು ನಿಜ. ಇದನ್ನು ನೀವು ಒಪ್ಪುವುದಿಲ್ಲ. ಏಕೆಂದರೆ ನೀವು ಯಾವತ್ತೂ ನಿಜ ಹೇಳುತ್ತೀರಿ.

(ಗೊಂದಲ)

ಶ್ರೀ ಎಂ.ವೈ. ಘೋರ್ಪಡೆ: ಸಂಡೂರು ಮಟ್ಟಿಗೆ ಹೇಳಬೇಕಾದರೆ ನನಗೆ ಡಿಸ್ಕ್ರೀಷನ್ ಇದ್ದರೂ ಅದನ್ನು ನಾನು ಉಪಯೋಗಿಸಲಿಲ್ಲ. ನಾನು ಡೆಪ್ಯೂಟಿ ಕಮೀಷನರಿಗೆ ಅವರು ಡಿಸ್ಕ್ರಿಷನ್ ಯಾವ ರೀತಿ ಸಂಡೂರಿನಲ್ಲಿ ಉಪಯೋಗಿಸಬೇಕು, ಎಂಬುದರ ಬಗ್ಗೆ ಎಷ್ಟಾದರೂ ನಾನು ಎಂಎಲ್‌ಎ ಇದ್ದೇನೆ, ಜಿಲ್ಲಾ ಮಂತ್ರಿ ಇದ್ದೇನೆ, ನಾನು ಹೇಳಬಹುದಾಗಿತ್ತು. ಅಲ್ಲಿ ನಾನು ಹೇಳುವ ಅವಶ್ಯಕತೆ ಕಂಡುಬರಲಿಲ್ಲ.

(ಗೊಂದಲ)

ಶ್ರೀ ಹೆಚ್. ಬನ್ನಿಕೋಡ್ : ಶಾಸಕರಿಗೆ ಅಗೌರವ ಮಾಡಿದ್ದಾರೆ.ತಾವು ಪತ್ರಿಕಾ ಹೇಳಿಕೆ ಕೊಟ್ಟು ಶಾಸಕರು ಹೇಳಿದಹಾಗೆ ಮಾಡಿ ಎಂದು ಹೇಳಿ ನಮಗೆಲ್ಲಾ ಅಗೌರವ ಮಾಡಿದ್ದೀರಿ. ನಾವೇನು ಅದನ್ನು ಹೇಳುವುದಕ್ಕೆ ಹೋಗಿಲ್ಲ.

ಶ್ರೀ ಎಂ.ವೈ. ಘೋರ್ಪಡೆ : ಅದು ನನಗೆ ಬಿಟ್ಟಿದ್ದುದು. ಇನ್ನು ಕೆಲವು ಎಂಎಲ್‌ಎಗಳಿಗೆ ನೀವೇ ಆಗಲಿ, ನಮ್ಮ ಕಡೆಯವರೂ ಆಗಲಿ, ಅವರು ಅಭಿಪ್ರಾಯವನ್ನು ಕೊಡಬೇಕೆಂದು ಇಷ್ಟಪಟ್ಟರೆ ಅದು ತಪ್ಪು, ಹಸ್ತಕ್ಷೇಪ ಎಂದು ನಾನು ಹೇಳುವುದಕ್ಕೆ ತಯಾರಿಲ್ಲ, ಏಕೆಂದರೆ ನಾವು ಕಡ್ಡಾಯವಾಗಿ ಅವರು ಹೇಳಿದ್ದೇ ಮಾಡಬೇಕು ಎಂದು ಹೇಳಿ ನಾವು ನಮ್ಮ ಜಿಲ್ಲಾಧಿಕಾರಿಗಳಿಗೆ ಹೇಳಿಲ್ಲ, ಆ ಡಿಸ್ಕ್ರಿಷನ್‌ನಲ್ಲಿ ಅವರ ಸಲಹೆ ಏನಾದರೂ ಇದ್ದರೆ ಮತ್ತು ಅವರ ಅಭಿಪ್ರಾಯವನ್ನು ತಿಳಿದುಕೊಳ್ಳುವುದಾದರೆ, ತಿಳಿದುಕೊಳ್ಳುವುದಕ್ಕೆ ಪ್ರಾರಂಭದಿಂದ ಅವಕಾಶ ಇದೆ.

ಶ್ರೀ ಬಸವರಾಜ್ ರಾಯರೆಡ್ಡಿ : ನೀವೇ ಹೇಳುತ್ತೀರಿ. ಯಾರು ಹೇಳಿಲ್ಲ, ಪತ್ರಿಕೆಯಲ್ಲಿ ಏನು ಹೇಳಿದ್ದೀರಿ ಎಂದರೆ ಶಾಸಕರನ್ನು ಕೇಳಿ ಮಾಡಲಿಕ್ಕೆ ಸೂಚನೆ ಕೊಟ್ಟಿದ್ದೇವೆ ಎಂದು.ಅದರಿಂದ ಜನರು ನಮ್ಮನ್ನು ಬಯ್ಯುವಂತೆ ಮಾಡಿದಿರಿ.

(ಗೊಂದಲ)

ಶ್ರೀ ಹೆಚ್. ಬನ್ನಿಕೋಡ್ : ಅನೇಕ ಕಡೆ ಡಿಸ್ಕ್ರೀಷನ್‌ಗೆ ಅವಕಾಶವೇ ಇಲ್ಲ.

ಶ್ರೀ ಎಂ.ವೈ. ಘೋರ್ಪಡೆ : ನೀವು ಕೂಡ ಹೇಳಿದಿರಿ, ನಮಗೆ ಡಿಸ್ಕ್ರಿಷನ್ ಆದಷ್ಟು ಮಟ್ಟಿಗೆ ಕಡಿಮೆ ಕೊಡಿ, ಕೊಡಬೇಡಿ, ತೊಂದರೆಯಾಗುತ್ತದೆ. ಜನರು ನಮಗೆ ಹಿಂಸೆಯನ್ನು ಕೊಡುತ್ತಾರೆ. ಎಂದು ಆ ಕಾರಣ ಗೈಡ್‌ಲೈನ್ಸ್ ಮಾಡುವಾಗ ಕೂಡ ಎಷ್ಟು ಡಿಸ್ಕ್ರಿಷನ್ ಕಡಿಮೆ ಮಾಡುವುದಕ್ಕೆ ಸಾಧ್ಯವೋ ಅಷ್ಟನ್ನು ಮಾಡಿದ್ದೇವೆ. ಆದರೂ ಕೂಡ ಸ್ವಲ್ಪಮಟ್ಟಿಗೆ ಡಿಸ್ಕ್ರೀನ್ ಅದರಲ್ಲಿ ಉಳಿಯಿತು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ನಮಗೆ ತಲೆನೋವಾಗುತ್ತದೆ, ಅಧಿಕಾರಿಗಳನ್ನೇ ಹಾಕಬೇಡಿ ಎಂದು ಹೇಳಿದೆವು.

ಶ್ರೀ ಎಂ.ವೈ. ಘೋರ್ಪಡೆ : ಆ ವಿಷಯವನ್ನು ಇಲ್ಲಿಗೆ ಬಿಡೋಣ. ಈಗ ಇದರಲ್ಲಿ ಪೀಸ್‌ಫುಲ್ ಆಗಿ ಏನು ಎಲೆಕ್ಷನ್ ನಡೆದಿದೆ, ಇವತ್ತು....

(ಗೊಂದಲ)

ಶ್ರೀ ಹೆಚ್. ಬನ್ನಿಕೋಡ್ : ಬಹಳ ವಿಚಿತ್ರವಾದ ಸಂಗತಿಯನ್ನು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ಮಹಿಳೆಯರ ಮಾನಭಂಗವಾಗಿದೆ. ರಾಜ್ಯದಲ್ಲಿ ರಕ್ತಕ್ರಾಂತಿಯಾಗಿದೆ. ರಾಜ್ಯದಲ್ಲಿ ಇವತ್ತು ಅಶಾಂತಿ ತಾಂಡವವಾಡುತ್ತಿದೆ. ಶಾಂತಿಯಿಂದ ನಡೆಯಿತು ಎಂದು ಹೇಳುತ್ತೀರಲ್ಲಾ ಇದು ಸರಿಯೇ?

(ಗೊಂದಲ)

ಶ್ರೀ ಬಸವರಾಜ್ ರಾಯರೆಡ್ಡಿ : ನಿಮ್ಮ ಪ್ರಕಾರ ಅತ್ಯಾಚಾರ ನಡೆದರೆ ಶಾಂತಿಯೇ? ಮಹಿಳೆಯರನ್ನು ಕಿಡ್‌ನ್ಯಾಪ್ ಮಾಡುತ್ತಾರೆ. ಅದು ಶಾಂತಿಯೇ?

(ಗೊಂದಲ)

ಶ್ರೀ ಎಂ.ವೈ. ಘೋರ್ಪಡೆ : ಗ್ರಾಮ ಪಂಚಾಯಿತಿ ಸದಸ್ಯರ ಎಲೆಕ್ಷನ್ ಬಹಳ ಪೀಸ್‌ಫುಲ್ ಆಗಿ ನಡೆಯಿತು. ಛೇರ್ಮನ್, ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಚುನಾವಣೆ ಬಂದಾಗ ಸ್ವಲ್ಪ ಗಲಾಟೆ, ಗಲಭೆ ಅಲ್ಲಿ ಇಲ್ಲಿ ನಡೆದವು.

ದುರಾದೃಷ್ಟಕರವಾದಂಥ ಘಟನೆಗಳು ಕೂಡ ನಡೆದಿದ್ದು ಆದರೆ ಹಿಂದೆ ಏನು ಆಯಿತು ಎನ್ನುವುದನ್ನು ನೀವು ಸ್ವಲ್ಪ ಅದಕ್ಕೆ ಹೋಲಿಸಿ ನೋಡಬೇಕಾಗುತ್ತದೆ. ಈಗ ನನ್ನ ಕಡೆ ಇರುವ ವರದಿ ಪ್ರಕಾರ ಇಡೀ ಕರ್ನಾಟಕ ರಾಜ್ಯದಲ್ಲಿ 49 ಕಡೆ ಈ ಇನ್ಸಿಡೆಂಟ್ಸ್ ಆಗಿದೆ. ಹಿಂದೆ ಮಂಡಲ್ ಪಂಚಾಯತಿ ಮಾಡಿದಾಗ 654 ಇನ್ಸಿಡೆಂಟ್ಸ್ ಆಗಿದೆ.

ಶ್ರೀ ಬಸವರಾಜ ರಾಯರೆಡ್ಡಿ: ಹಿಂದೆ ಆಗಿದ್ದನ್ನ ಈಗ ಕಂಪೇರ್ ಏಕೆ ಮಾಡುತ್ತಾರೆ?

(ಗೊಂದಲ)

ಶ್ರೀ ಹೆಚ್. ಬನ್ನಿಕೋಡ್: ಒಂದು ಕಡೆ ಶಾಂತಿಯುತವಾಗಿ ಆಗಿದೆ ಎಂದು ಹೇಳುತ್ತಾರೆ ಇನ್ನೊಂದು ಕಡೆ 50 ಕಡೆ ಗಲಾಟೆ ಆಗಿದೆ ಎಂದು ಹೇಳುತ್ತಾರೆ. ಹೇಳಲಿ ಘರ್ಷಣೆ ಆಗಿದೆ ಹೇಳಲಿ ಸತ್ಯಸಂಗತಿಯನ್ನು ಮರೆಮಾಡಿ ಹೇಳಿದರೆ ಹೇಗೆ?

ಶ್ರೀ ಬಸವರಾಜ ರಾಯರೆಡ್ಡಿ: ಹಿಂದೆ ಆಗಿರುವುದನ್ನು ಕಂಪೇರ್ ಮಾಡಬಾರದು. ಆಗ ತಪ್ಪು ಆಗಿರಬಹುದು.

ಶ್ರೀ ಎಂ.ವೈ. ಘೋರ್ಪಡೆ: ಫ್ಯಾಕಟ್ಸ್ ನಿಮ್ಮ ಮುಂದೆ ಇಡಬೇಕಾಗುತ್ತದೆ. ಗಲಾಟೆ ಆಗಲಿಕ್ಕೆ ನನ್ನನ್ನು ಕೇಳಿದರೆ ಮುಖ್ಯವಾದ ಕಾರಣ ಏನೆಂದರೆ ಎರಡೂ ಗುಂಪಿನವರು ಹೆಚ್ಚು ಕಡಿಮೆ ಸರಿಸಮಾನವಾದ ಸ್ಟ್ರೆಂಗ್ಥ್ ಇದ್ದರೆ ಆಗ ಒಬ್ಬರನ್ನು ಇಬ್ಬರನ್ನು ಎಳೆದುಕೊಂಡು ಹೋಗುವುದು ಅಥವಾ ನಾವು ಕಿಡ್‌ನ್ಯಾಪಿಂಗ್ ಎಂದು ಏನು ಹೇಳುತ್ತೇವೆ. ಇದು ನಡೆದಾಗ ಆವಾಗ ಅಲ್ಲಿ ಘರ್ಷಣೆ ನಡೆಯುತ್ತದೆ. ಇದು ನಡೆದಾಗ ಎಲೆಕ್ಷನ್‌ನಲ್ಲಿ ಯಾರಿಗೆ ನಾವು ಯಶಸ್ವಿ ಆಗುವುದಿಲ್ಲ ಇದರಲ್ಲಿ ಹಸ್ತಕ್ಷೇಪ ಮಾಡಿ, ಅಥವಾ ಎಳೆದುಕೊಂಡು ಹೋಗಿ ಅಕ್ರಮ ಮಾಡಿದರೂ ಕೂಡ ಯಶಸ್ವಿ ಆಗುವುದಿಲ್ಲ ಎಂದು ಯಾರಿಗೆ ಅನಿಸುತ್ತದೆ. ಅಲ್ಲಿ ಅವರು ಎಲೆಕ್ಷನ್‌ಗೆ ಅಡ್ಡ ಬರುವಂತಹ ಪ್ರಯತ್ನ ಮಾಡುತ್ತಾರೆ. ಇದು ಇಡೀ ದೇಶದ ಪ್ರಜಾಪ್ರಭುತ್ವದಲ್ಲಿ ನಾವು ನೋಡಿದ್ದೇವೆ. ಬೂತ್ ಕ್ಯಾಪ್ಚರಿಂಗ್ ಎಂದು ಹೇಳುತ್ತಾರಲ್ಲಾ, ಆ ತರಹ ಎಲೆಕ್ಷನ್ ನಿಲ್ಲಿಸಿಬಿಡುವುದು. ಇದು ಮುಖ್ಯವಾದ ಕಾರಣ. ಯಾರೋ ಹೇಳಿದರು. ಕಿಡ್‌ನ್ಯಾಪಿಂಗ್ ವಿಕೇಂದ್ರಿಕರಣ ನೀವು ಮಾಡಲಿಕ್ಕೆ ಹೊರಟಿದ್ದೀರಿ ಎಂದು. ಈಗ ಕಿಡ್‌ನ್ಯಾಪಿಂಗ್ ಮನೋಭಾವ ನಮ್ಮ ಮನಸ್ಸಿನಲ್ಲಿದ್ದರೆ ಅದರ ವಿಕೇಂದ್ರಿಕರಣ ಕೂಡ ಆಗುತ್ತದೆ. ಆದ ಕಾರಣ ಮೂಲಭೂತವಾಗಿ ನಾವು ಇಂತಹ ಘಟನೆಗಳನ್ನು ಸಂಪೂರ್ಣವಾಗಿ ನಿಲ್ಲಿಸುವುದಾದರೆ ನಮ್ಮ ಮನಸ್ಸಿನಲ್ಲಿರತಕ್ಕ ಅಕ್ರಮ ಅಥವಾ ಕಿಡ್ ನ್ಯಾಪಿಂಗ್ ಮಾಡುವಂತಹ ಮನೋಭಾವ ಏನು ಇದೆ ಅದನ್ನು ಸಂಪೂರ್ಣವಾಗಿ ತ್ಯಜಿಸಬೇಕು. ತ್ಯಜಿಸಿಬಿಟ್ಟರೆ ಆವಾಗ 100 ಪರ್ಸೆಂಟ್ ಪೀಸ್‌ಫುಲ್ ಎಲೆಕ್ಷನ್ ಮಾಡುವುದಕ್ಕೆ ಸಾಧ್ಯ. ಇನ್ನೂ ನಮ್ಮ ಪ್ರಜಾಪ್ರಭುತ್ವ ಆ ಮಟ್ಟಕ್ಕೆ ಬಂದಿಲ್ಲ. ದುರ್ದೈವದಿಂದ ಬೇರೆ ಜನ ಅದರಲ್ಲಿ ಹಸ್ತಕ್ಷೇಪ ಮಾಡಿದಾಗ ಅದು ಸ್ವಲ್ಪ ಪ್ರಕೋಪಕ್ಕೆ ಹೋಗುತ್ತದೆ. ಅದಕ್ಕೋಸ್ಕರ ನಾನು ಹೇಳಿದೆ, ಜಾತ್ಯಾತೀತವಾಗಿ ನಾವು ಎಲೆಕ್ಷನ್ಸ್ ಮಾಡೋಣ. ನಾವು ಅದರಲ್ಲಿ ಪಕ್ಷಾತೀತವಾಗಿ ಮಾಡೋಣ, ನಾವು ಪಕ್ಷದ ವತಿಯಿಂದ ಅದರಲ್ಲಿ ಪ್ರವೇಶ ಆಗುವುದು ಬೇಡ. ಪಕ್ಷಾತೀತವಾಗಿ ಮಾಡಬೇಕು ಎಂಬ ಈ ವಿಚಾರ ಏನು ಇದೆ, ಇದು ಬಹಳಷ್ಟು ಯಶಸ್ವಿಯಾಗಿ ಆಗಿದೆ ಎಂದು ನಾನು ಇವತ್ತು ಹೇಳಲಿಕ್ಕೆ ಇಷ್ಟಪಡುತ್ತೇನೆ. ಪಕ್ಷಾತೀತವಾಗಿ ನಡೆದಿದೆ. ಈಗ ಲಾ ಅಂಡ್ ಆರ್ಡರ್ ಸಿಚ್ಯುಯೇಷನ್ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಬಹುದು. ಆದರೆ ಲಾ ಅಂಡ್ ಆರ್ಡರ್, ಈ ಕೊಲೆ ಇದು ಹೊಸದೇನೂ ಅಲ್ಲ. ಇವತ್ತು 8 ಜನ ಸತ್ತಿದ್ದಾರೆ. ಅದರ ಬಗ್ಗೆ ನಮ್ಮ ಮನಸ್ಸಿನಲ್ಲಿ ಬಹಳ ಅಸಮಾಧಾನ ಇದೆ. ಮತ್ತೆ ಇದು ದುರಾದೃಷ್ಟಕರವಾದ ಘಟನೆ ಎಂದು ಬಹಳ ಸ್ಪಷ್ಟ ಆಗಿದೆ. ಆದರೆ ಇದು ಹಿಂದೆ ಕೂಡ ಇದೇ ರೀತಿ ನಡೆದಿದೆ. ಇದು ಹೊಸದೇನೂ ಅಲ್ಲ. ಈಗ

ತಮ್ಮ ಪಕ್ಷಕ್ಕೆ ಸೇರಿದವರೇ ಒಬ್ಬರು ಒಂದು ಪತ್ರಿಕೆಯಲ್ಲಿ ಹೇಳಿಕೆ ಕೊಟ್ಟಿದ್ದಾರೆ. ಏನೆಂದರೆ ಆ ಕಾಲಕ್ಕೆ ಮಂಡಲ್ ಪಂಚಾಯತಿಗೆ ಮರ್ಡರ್ ಪಂಚಾಯತ್ ಎಂದು ಜನ ಹೇಳುತ್ತಿದರು. ಅಂದರೆ ಕೆಲವು ಕಡೆ ಮರ್ಡರ್ಸ್ ನಡೆದುಬಿಟ್ಟಿದೆ. ಅದಕ್ಕೆ ಮಂಡಲ್ ಪಂಚಾಯತಿ ಅಲ್ಲ, ಮರ್ಡರ್ ಪಂಚಾಯತ್ ಎಂದು ಹೇಳುತ್ತಿದ್ದರು. ಇವತ್ತಿನ ಪತ್ರಿಕೆಯಲ್ಲಿ ಬಂದಿದೆ. ಈಗ ಇದು ತೋರಿಸುತ್ತದೆ ಎಂದರೆ.

ಶ್ರೀ ಎಂ.ಎಸ್. ಪಾಟೀಲ್ : ಕೇವಲ ಏಳು ಆಗಿದೆಯಲ್ಲಾ ಇನ್ನೂ ಹೆಚ್ಚು ಏಕೆ ಆಗಲಿಲ್ಲ ಎನ್ನುವುದು ಅಸಮಾಧಾನ ಅವರಿಗೆ ಆಗಿದೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಕೊಲೆ ಕೇವಲ 8 ಆಗಿದೆ ಎಂದು ಅಸಮಾಧಾನ ಆಗಿದೆ. ಇನ್ನೂ ಹೆಚ್ಚು ಆಗಿದ್ದರೆ ಅಸಮಾಧಾನ ಆಗುತ್ತಿತ್ತು.

ಶ್ರೀ ಎಂ.ವೈ. ಘೋರ್ಪಡೆ : ನಾನು ನೇರವಾಗಿ ಮಾನ್ಯ ವಾಟಾಳ್ ನಾಗರಾಜ್ ರವರ ಪ್ರಶ್ನೆಗೆ ಉತ್ತರ ಹೇಳಲಿಕ್ಕೆ ಇಷ್ಟಪಡುತ್ತೇನೆ. ಗಂಡಬೊಮ್ಮನಹಳ್ಳಿ ಮಾತ್ರ. ಗಂಡಬೊಮ್ಮನಹಳ್ಳಿ ನನ್ನ ಜಿಲ್ಲೆಯಲ್ಲಿರತಕ್ಕ ಒಂದು ಸಣ್ಣ ಗ್ರಾಮ. ಅಲ್ಲಿ ಮೂರು ಜನ ಗೋಲಿಬಾರ್‌ನಲ್ಲಿ ಸತ್ತಿದ್ದಾರೆ ಎಂದು ಕೇಳಿದಾಗ ಯಾರಿಗಾದರೂ ಮನಸ್ಸಿಗೆ ಬಹಳ ಅಸಮಾಧಾನ ಆಗುತ್ತದೆ. ಡಿಐಜಿ ಅವರು ಇದ್ದರು, ಡೆಪ್ಯುಟಿ ಕಮೀಷನರ್ ಹಾಗೂ ಎಲ್ಲಾ ಸಂಬಂಧಪಟ್ಟ ಅಧಿಕಾರಿಗಳೂ ಅದೇ ಹಳ್ಳಿಯಲ್ಲಿದ್ದು ಏನೇನು ಮಾಡಬೇಕು ಮಾಡಿದ್ದಾರೆ. ನಮಗೂ ಕಂಟಾಕ್ಟ್ ಮಾಡಿ ಏನೇನು ಹೇಳಬೇಕು ಎಲ್ಲಾ ಹೇಳಿದ್ದಾರೆ.

ನಾನೂ ಕೂಡ ಅಲ್ಲಿಗೆ ಹೋಗಿ ನೋಡಿದಾಗ ನನಗೂ ಆಶ್ಚರ್ಯವಾಯಿತು. ಆ ಒಂದು ಚಿಕ್ಕ ಹಳ್ಳಿಯಲ್ಲೂ ಕೂಡ ಗುಂಪುಗಾರಿಕೆ ಇತ್ತು. ಹತ್ತು ಜನರು ಒಂದು ಗುಂಪಿನಲ್ಲಿದ್ದರೆ ಇನ್ನತ್ತು ಜನ ಇನ್ನೊಂದು ಗುಂಪಿನಲ್ಲಿದ್ದರು. ಅವರಲ್ಲಿ ಒಬ್ಬಿಬ್ಬರನ್ನು ಎಳೆದುಕೊಂಡು ಹೋದರೆ ಚುನಾವಣೆ ಸರಿಯಾಗಿ ನಡೆಯುತ್ತದೆಂಬುದು ಕೆಲವರ ಅಭಿಪ್ರಾಯವಾಗಿತ್ತು. ಅದ್ಯಾವುದೂ ಯಾವಾಗ ಸಾಧ್ಯವಾಗಲಿಲ್ಲವೋ ಆಗ ಅವರು ಉದ್ರೇಕಗೊಂಡು ಕಲ್ಲು ತೂರಾಟ ನಡೆಸಿ ಗಲಭೆ ಪ್ರಾರಂಭ ಮಾಡಿದರು, ಅದು ಅಷ್ಟಕ್ಕೇ ನಿಲ್ಲಲಿಲ್ಲ. ಗಲಭೆ ಮಿತಿ ಮೀರಿದಾಗ ಪೊಲೀಸರು ಅಶ್ರುವಾಯು ಸೆಲ್‌ಗಳನ್ನು ಸಿಡಿಸಿ ಲಾಠಿ ಚಾರ್ಜ್ ಮಾಡಿದರು. ಕಲ್ಲು ತೂರಾಟದಲ್ಲಿ ತೊಡಗಿದ್ದ 4-5 ಸಾವಿರ ಬಡ ಜನರು ವಾಸವಾಗಿದ್ದ ಗುಡಿಸಲುಗಳಿಗೆ ಬೆಂಕಿ ಇಟ್ಟರು. 18 ಗುಡಿಸಲುಗಳನ್ನು ಸುಟ್ಟರು. ಈ ಸಂದರ್ಭದಲ್ಲಿ ಗುಡಿಸಲೊಳಗಿರತಕ್ಕಂಥ ಬಡ ಜನರ ಪ್ರಾಣಕ್ಕೆ ಅಪಾಯವೊದಗುವ ಪ್ರಸಂಗ ಬಂದಾಗ ಪೊಲೀಸರು ಗೋಲಿಬಾರ್ ನಡೆಸಿ ಉದ್ರಿಕ್ತ ಗುಂಪನ್ನು ಚದುರಿಸಲು ಆಕಾಶದಲ್ಲಿ ಐದು ಗುಂಡು ಹಾರಿಸ ಬಳಿಕ ಮೂರು ಗುಂಡುಗಳನ್ನು ಹಾರಿಸಿದ್ದಾರೆ. ಆ ಕ್ಷಣದಲ್ಲಿ ಗುಂಪು ಚದುರಿ ಓಡಿತು. ನಾನೂ ಕೂಡ ಅಲ್ಲಿರತಕ್ಕ ಎಲ್ಲಾ ಜನರಿಗೆ ಹೇಳಿದಾಗ ಅವರು ಪೊಲೀಸರು ನಮ್ಮನ್ನು ರಕ್ಷಣೆ ಮಾಡದೆ ಹೋಗಿದ್ದರೆ ಹಳ್ಳಿ ಸಂಪೂರ್ಣವಾಗಿ ನಾಶವಾಗುತ್ತಿತ್ತು. ನಮ್ಮನ್ನೆಲ್ಲಾ ಸಾಯಿಸುತ್ತಿದ್ದರು ಎಂದು ಹೇಳಿದರು. ಈ ಮಾತನ್ನ ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ನಾವು ಪ್ರಜಾಪ್ರಭುತ್ವ ಪ್ರಕ್ರಿಯೆಯನ್ನು ಕಾಪಾಡಿಕೊಂಡು ಹೋಗಲೇಬೇಕಾಗುತ್ತದೆ. ಜನರ ಆಸ್ತಿ, ಪ್ರಾಣಕ್ಕೆ ಧಕ್ಕೆಯೊದಗಿದಾಗ there can be no compromise. ತಮ್ಮ ಆಸ್ತಿ-ಪಾಸ್ತಿ, ಪ್ರಾಣಗಳನ್ನು ರಕ್ಷಣೆ ಮಾಡುವಂಥ ಒಂದು ಸರ್ಕಾರ ಇದೆಯೆಂದು ಗಂಡಬೊಮ್ಮನಹಳ್ಳಿಯಂಥ ಬಡ ಗ್ರಾಮಗಳಲ್ಲಿ ವಾಸಿಸತಕ್ಕಂಥ ಜನರು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಬೇಕಾಗುತ್ತದೆ. ಒಂದು ಕಾಲಕ್ಕೆ ಗಂಡಬೊಮ್ಮನಹಳ್ಳಿ ನನ್ನ ಕ್ಷೇತ್ರಕ್ಕೆ ಸೇರಿದುದಾಗಿತ್ತು. ಅಲ್ಲಿ ಕಡು ಬಡತನವಿದೆ. ದೇವರಾಜ್ ಅರಸ್‌ರವರು ಮುಖ್ಯಮಂತ್ರಿಯಾಗಿದ್ದಂಥ ಕಾಲದಲ್ಲಿ ಅಲ್ಲೊಂದು ಕೆರೆಯನ್ನು ನಿರ್ಮಾಣ ಮಾಡಿದ್ದರು. ಅಲ್ಲಿನ ಬಡತನ ಈಗ ಸಂಪೂರ್ಣ ನಿವಾರಣೆಯಾಗಿದೆಯೆಂದು ಹೇಳುವುದಕ್ಕೆ ನಾನು ಇಷ್ಟಪಡುವುದಿಲ್ಲ, ಏಕೆಂದರೆ, ನಾನು ಸ್ವತಃ ನೋಡಿರತಕ್ಕಂಥ, ಗೊತ್ತಿರತಕ್ಕಂಥ ಜಾಗ ಅದಾಗಿದೆ. ಅಲ್ಲಿ ಚುನಾವಣಾ ಸಂದರ್ಭದಲ್ಲಿ ಗೋಲಿಬಾರ್ ನಡೆದ ತಕ್ಷಣ ಅನ್ಯಾಯ,

ಅಕ್ರಮ ನಡೆದಿದೆ, ಆದಕಾರಣ ಈ ಬಗ್ಗೆ ನ್ಯಾಯಾಂಗ ತನಿಖೆ ಮಾಡಿಸಬೇಕೆಂದು ಹೋರಟರೆ ಯಾವ ಜನರಿಗೆ ನಾವು ರಕ್ಷಣೆ ಕೊಡುವುದಕ್ಕೆ ಹೋರಟಿದ್ದೇವೆಯೋ ಅವರ ಮನಸ್ಸಿಗೆ ನೆಮ್ಮದಿ ಉಂಟಾಗುವುದಿಲ್ಲ, ಆದುದರಿಂದ, ನನಗನ್ನಿಸುತ್ತದೆ. ಇದುವರೆಗೆ ನಾನು ಮುಖ್ಯವಾದ ವಿಷಯಗಳಿಗೆ ಉತ್ತರ ಹೇಳಿದ್ದೇನೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಕೂಡ ಮಾತನಾಡುವವರಿದ್ದಾರೆ. ಪಂಚಾಯತಿ ಚುನಾವಣೆಗಳೇನಿವೆ, ಆದಷ್ಟು ಮಟ್ಟಿಗೆ ಎಲ್ಲರಿಗೂ ಸಾಮಾಜಿಕ ನ್ಯಾಯ ಕೊಡುವ ದೃಷ್ಟಿಯಿಂದ ಹಾಗೂ ಸಮಾನಾವಕಾಶ ಒದಗಿಸುವ ದೃಷ್ಟಿಯಿಂದ ಏನು ಮಾಡಿದ್ದೇವೆ. ಅದರಲ್ಲಿ ಅಲ್ಪಸ್ವಲ್ಪ ದೋಷಗಳೇನಾದರೂ ಇದ್ದಲ್ಲಿ ಅದನ್ನು ದೊಡ್ಡದಾಗಿ ಮಾಡಬಾರದೆಂದು ನಾನು ತಮ್ಮಲ್ಲಿ ವಿನಂತಿಸಿ, ಈ ಸಾಮಾಜಿಕ ನ್ಯಾಯದ ಜೊತೆಗೆ ವಿಕೇಂದ್ರಿಕರಣದ ಪ್ರಕ್ರಿಯೆ ಏನಿದೆ, ಇದಕ್ಕೆ ತಾವು ತಮ್ಮ ತುಂಬು ಹೃದಯದ ಬೆಂಬಲ ಕೊಟ್ಟು ಸ್ವಾಗತಿಸಿದರೆ ಮಾತ್ರ ಇದನ್ನು ದೊಡ್ಡ ಪ್ರಮಾಣದಲ್ಲಿ ಬೆಳೆಸುವುದಕ್ಕೆ ಸಾಧ್ಯವಾಗುತ್ತದೆ. ಕರ್ನಾಟಕದ ಜನತೆ ಮತ್ತು ಪ್ರತಿನಿಧಿಗಳು ಹಾಗೆ ನಡೆದುಕೊಳ್ಳುತ್ತಾರೆಂದು ನಂಬಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು): ಮಾನ್ಯ ಅಧ್ಯಕ್ಷರೇ, ಹಿರಿಯ ಸಚಿವರಾದಂಥ ಸನ್ಮಾನ್ಯ ಶ್ರೀ ಘೋರ್ಪಡೆಯವರು ಬಹಳ ಸವಿಸ್ತಾರವಾಗಿ ಸಮರ್ಪಕವಾಗಿ ವಿಶ್ಲೇಷಣೆ ಮಾಡಿ ಉತ್ತರ ಕೊಟ್ಟಿದ್ದಾರೆ. ಆದುದರಿಂದ, ಈ ವಿಷಯವನ್ನು ನಾನು ಬಹಳ ಲಂಬಿಸುವುದಕ್ಕೆ ಖಂಡಿತವಾಗಿಯೂ ಹೋಗುವುದಿಲ್ಲ. ಅನೇಕ ಮಾನ್ಯ ಸದಸ್ಯರುಗಳು ಈ ದಿವಸ ಈ ಚರ್ಚೆಯಲ್ಲಿ ಭಾಗವಹಿಸಿದ್ದಾರೆ. ಬೆಳಿಗ್ಗೆ ನಾನು ಈ ವಿಷಯದ ಬಗ್ಗೆ ಪ್ರಸ್ತಾಪ ಮಾಡಾದಗಲೇ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಇದರ ಬಗ್ಗೆ ಸಾಕಷ್ಟು ಚರ್ಚೆ ಆಗಲಿ ಎಂದು ಹೇಳಿದ್ದೆ. ಏಕೆಂದರೆ ತಾವು ಅಲ್ಲಿ ಇದ್ದೀರಿ ನಾವು ಇಲ್ಲಿ ಇದ್ದೇವೆ ಎನ್ನತಕ್ಕ ಪ್ರಶ್ನೆಯಲ್ಲ. ನಾವು ಈ ಕಡೆ ಇದ್ದೇವೆ ಎನ್ನತಕ್ಕ ಪ್ರತಿಷ್ಠೆಯಿಂದ ಈ ವಿಷಯದ ಬಗ್ಗೆ ವಾಗ್ವಾದ ಮಾಡಬೇಕಾದಂಥ ಅವಶ್ಯಕತೆ ಇಲ್ಲ, ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರಾದ ಘೋರ್ಪಡೆಯವರು ಹೇಳಿದಂತೆ ಅಧಿಕಾರ ವಿಕೇಂದ್ರೀಕರಣವನ್ನು ತಾವು ಕೂಡ ಒಪ್ಪಿಕೊಂಡಂಥದ್ದು. ಆ ತತ್ವ ಸಿದ್ಧಾಂತದ ಬಗ್ಗೆ ಬಹುಶಃ ನಮ್ಮ ಮತ್ತು ನಿಮ್ಮ ಇಬ್ಬರ ಮಧ್ಯೆ ಯಾವ ವ್ಯತ್ಯಾಸವೂ ಇಲ್ಲ. ಆದರೆ ಬರೀ ಭೌಗೋಳಿಕವಾದಂಥ ಅಧಿಕಾರ ವಿಕೇಂದ್ರೀಕರಣವಾದರೆ ಸಾಕಾಗುವುದಿಲ್ಲ, ತಾವು ಏನು 1988ನೇ ಇಸವಿಯಲ್ಲಿ ಅದರ ಬಗ್ಗೆ ಮಾಡಿದ್ದೀರಿ ಅದು ಭೌಗೋಳಿಕ ಅಧಿಕಾರ ವಿಕೇಂದ್ರೀಕರಣವಾಗಿದೆ. ಅಂದರೆ ಅಧಿಕಾರ ಮಂಡಲದ ಮಟ್ಟಿಗೆ ಬಂದಿರತಕ್ಕದ್ದು. ಅದಕ್ಕಿಂತ ಒಂದು ಹೆಜ್ಜೆ ಮುಂದಕ್ಕೆ ಈಗ ಹೋಗಿದೆ. ರಾಷ್ಟ್ರದಲ್ಲಿ ಸಂವಿಧಾನದ ತಿದ್ದುಪಡಿಯಾದ ಮೇಲೆ ಸಾಮಾಜಿಕವಾಗಿ ಕೂಡ ಅಧಿಕಾರ ವಿಕೇಂದ್ರಿಕರಣ ಮೈಕ್ರೋ ಲೆವೆಲ್‌ನಲ್ಲಿ ಬರಬೇಕು ಎನ್ನತಕ್ಕ ಉದ್ದೇಶದಿಂದ ಹಿಂದಿನ ಪ್ರಧಾನ ಮಂತ್ರಿಗಳಾಗಿದ್ದ ದಿವಂಗತ ರಾಜೀವ್‌ಗಾಂಧಿಯವರ ಆಸೆಯನ್ನು, ಕನಸನ್ನು ನನಸು ಮಾಡತಕ್ಕ ಅಪೇಕ್ಷೆಯಿಂದ ನಮ್ಮ ಈಗಿನ ಪ್ರಧಾನ ಮಂತ್ರಿಗಳಾಗಿರುವ ಸನ್ಮಾನ್ಯ ನರಸಿಂಹರಾವ್‌ರವರು ಸಂವಿಧಾನದ ತಿದ್ದುಪಡಿ ಮಾಡಿದ ಮೇಲೆ ಆ ಒಂದು ಸಿದ್ಧಾಂತಕ್ಕೆ ನಾವು ಒಪ್ಪಿಕೊಂಡೆವು. ಇಲ್ಲಿ ಬರೀ ನಾವೇ ಈ ಮಸೂದೆಯನ್ನು ಪಾಸ್ ಮಾಡಿದ್ದೇವೆಂದು ನಾನು ಹೇಳುತ್ತಿಲ್ಲ. ಇಡೀ ಸದನ, ತಾವೂ ಕೂಡ ಈ ಮಸೂದೆಗೆ ಒಪ್ಪಿಗೆ ಕೊಟ್ಟಿದ್ದೀರಿ. ಅದರಲ್ಲಿ ಬೇಕಾದಂಥ ಕೆಲವು ಹೊಸ ಮೀಸಲಾತಿಯನ್ನು ನಾವು ಮಾಡಿಕೊಂಡು ಇಡೀ ರಾಷ್ಟ್ರದಲ್ಲಿ ಪ್ರಪ್ರಥಮವಾಗಿ ಸಂವಿಧಾನದ ಪ್ರಕಾರ ಅಧಿಕಾರ ವಿಕೇಂದ್ರಕರಣ ಸಾಮಾಜಿಕವಾಗಿ, ಭೌಗೋಳಿಕವಾಗಿ ಮಾಡಿದಂಥ ಕೀರ್ತಿ ಖಂಡಿತವಾಗಿ ಬರೀ ನಮ್ಮ ಪಕ್ಷದವರಿಗೆ ಸೇರಿದ್ದಲ್ಲ, ಅದು ಇಡೀ ಕರ್ನಾಟಕ ರಾಜ್ಯದ ಜನತೆಗೆ ಸೇರಿದ್ದುದು. ಮತ್ತು ಇಡೀ ಸದನದಲ್ಲಿನ ಸದಸ್ಯರಿಗೆ ಆ ಕೀರ್ತಿಯಲ್ಲಿ ಪಾಲು ಇದೆ ಎಂದು ಒತ್ತಿ ಹೇಳಲು ನಾನು ಅಪೇಕ್ಷೆ ಪಡುತ್ತೇನೆ. ಆ ಮಸೂದೆಯನ್ನು ಅನುಷ್ಠಾನ ಮಾಡತಕ್ಕ ಜವಾಬ್ದಾರಿ ಕೇವಲ ಅಧಿಕಾರದಲ್ಲಿರತಂಥ ನಮಗೆ ಮಾತ್ರವಲ್ಲ ತಮಗೂ ಕೂಡ ಸೇರಿರತಕ್ಕದ್ದು.

ಇಡೀ ಕರ್ನಾಟಕ ರಾಜ್ಯದ ಜನರಿಗೆ ಸೇರಿರತಕ್ಕದ್ದು. ಆ ಒಂದು ಜವಾಬ್ದಾರಿಯನ್ನು ನಾವು ಮನಸಾರೆ ಸ್ವೀಕಾರ ಮಾಡಬೇಕಾಗುತ್ತದೆ. ಆ ಒಂದು ತತ್ವದಲ್ಲಿ ನಮಗೆ ಸಂಪೂರ್ಣವಾದಂಥ ನಿಷ್ಠೆ, ವಿಶ್ವಾಸ ಇರಬೇಕಾಗುತ್ತದೆ.

ನಮಗೆ ಬಹಳ ಸಂತೋಷವೇನೆಂದರೆ, ಗ್ರಾಮ ಪಂಚಾಯಿತಿಗಳ ಚುನಾವಣೆಯನ್ನು ನಾವು ಮಾಡಿದಾಗ ಬಹುಶಃ ಈ ದೇಶದ ಇತಿಹಾಸದಲ್ಲಿ ಅದು ಆಗಿರಲಿಕ್ಕಿಲ್ಲ. ಕರ್ನಾಟಕ ರಾಜ್ಯದ ಇತಿಹಾಸದಲ್ಲೂ ಅದು ಆಗಿರಲಿಲ್ಲ. ಬಹಳ ಶಾಂತಿಯುತವಾಗಿ ಗ್ರಾಮ ಪಂಚಾಯಿತಿಗಳ ಚುನಾವಣೆ ಆಗಿದೆ. ಬಹಳ ಶಾಂತವಾಗಿ ಚುನಾವಣೆಯ ಪ್ರಕ್ರಿಯೆ ಮುಗಿದಿದೆ. ಆ ರೀತಿ ಚುನಾವಣೆ ಆದನಂತರ, ಗ್ರಾಮ ಪಂಚಾಯಿತಿಗಳ ಪ್ರಧಾನರ ಮತ್ತು ಉಪ-ಪ್ರಧಾನರುಗಳ ಚುನಾವಣೆಯ ಪ್ರಕ್ರಿಯೆಯನ್ನು ನಾವು ಮಾಡಿದಾಗ, ಅದನ್ನು ಪಕ್ಷಾತವಾಗಿ ಮಾಡಬೇಕೆನ್ನುವ ನಮ್ಮ ಉದ್ದೇಶ ಸ್ಪಷ್ಟವಾಗಿದೆ. ಅದನ್ನು ಇವತ್ತು ನಾವು ಅರ್ಥ ಮಾಡಿಕೊಳ್ಳಬೇಕು. ಆ ರೀತಿ ನಾವು ಪಕ್ಷಾತೀತವಾಗಿ ಚುನಾವಣೆಯನ್ನು ಮಾಡಬೇಕೆಂದು ಹೇಳಿದಾಗ ಅವುಗಳು ಪಕ್ಷಾತೀತವಾಗಿ ಆಗಿದೆ. ಈ ಚುನಾವಣೆಯ ಪ್ರಕ್ರಿಯೆಯಲ್ಲಿ ಅನೇಕ ರಾಜಕೀಯ ಪಕ್ಷಗಳಿಗೆ ಸೇರಿದಂಥ, ನಂಬಿಕೊಂಡಂಥ ಅನೇಕ ಜನರು ಚುನಾಯಿಸಿ ಬರುವುದು ಸಹಜ. ಅದನ್ನು ನಿಲ್ಲಿಸಲು ಯಾವ ಕಾನೂನೂ ಇರುವುದಿಲ್ಲ. ಆ ವಿಷಯ ನಮ್ಮ ಮತ್ತು ತಮ್ಮ ಅನುಭವಕ್ಕೆ ಬಂದಿರತಕ್ಕದ್ದು. ಆದರೆ ಪಕ್ಷದ ಮಟ್ಟದಲ್ಲಿ ಚುನಾವಣೆ ಆಗಿಲ್ಲ, ಆದರೆ ಪಕ್ಷಗಳಿಗೆ, ಅದು ಜನತಾದಳವಾಗಲಿ, ಕಾಂಗ್ರೆಸ್ ಪಕ್ಷವಾಗಿರಲಿ, ಬಿ.ಜೆ.ಪಿ. ಪಕ್ಷವಾಗಿರಲಿ, ರೈತ ಸಂಘದ ಪಕ್ಷವಾಗಿರಲಿ ಅಥವಾ ಬೇರೆ ಸ್ವತಂತ್ರ್ಯವಾಗಿ ಸ್ಪರ್ಧಿಸಿ ಗ್ರಾಮ ಪಂಚಾಯಿತಿಯಲ್ಲಿ ಚುನಾವಣೆಯಾಗಿ ಬಂದಿದ್ದಾರೆ. ಇದು ಬಹಳ ಸಂತೋಷದ ವಿಚಾರವೆಂದು ಹೇಳಬಹುದು. ನಾವು ಇಂತಿಷ್ಟೇ ಸಂಖ್ಯೆಯನ್ನು ನಿಗದಿ ಮಾಡಿ ಮೀಸಲಾತಿಯನ್ನು ಕೊಟ್ಟರೂ ಸಹ ಅದಕ್ಕಿಂತಾ ಹೆಚ್ಚಾಗಿ ಮೀಸಲಾತಿಯಲ್ಲಿ ಸದಸ್ಯರುಗಳು ಚುನಾವಣೆಯಲ್ಲಿ ಆಯ್ಕೆಯಾಗಿ ಬಂದಿದ್ದಾರೆ. ಒಟ್ಟು 80,631 ಸೀಟುಗಳಲ್ಲಿ ಮಹಿಳೆಯರಿಗಾಗಿ 33 ಸಾವಿರ ಮೀಸಲಾತಿ ಇತ್ತು.

43.64 ಪರ್ಸೆಂಟ್, ಅಂದರೆ 35,182 ಮಂದಿ ಚುನಾವಣೆಯಾಗಿ ಬಂದಿದ್ದಾರೆ, ಅದೇ ಪ್ರಕಾರ ಪರಿಶಿಷ್ಟ ಜಾತಿಯಲ್ಲಿ ಕೂಡ 22.19 ಪರ್ಸೆಂಟ್ ಬಂದಿದ್ದಾರೆ, ಹಿಂದುಳಿದ ವರ್ಗದಲ್ಲಿ 33.28 ಪರ್ಸೆಂಟ್ ಬಂದಿದ್ದು ಪರಿಶಿಷ್ಟ ವರ್ಗದಲ್ಲಿ 9.39 ಪರ್ಸೆಂಟ್ ಬಂದಿದ್ದಾರೆ. ಉಳಿದವರು 35.14 ಪರ್ಸೆಂಟ್ ಬಂದಿದ್ದಾರೆ. ಈ ಒಂದು ರೀತಿಯ ಚುನಾವಣಾ ಪ್ರಕ್ರಿಯೆ ಬಹಳ ಯಶಸ್ವಿಯಾಗಿ, ಶಾಂತವಾಗಿ ಕರ್ನಾಟಕ ರಾಜ್ಯದಲ್ಲಾಗಿದೆ. ಇದನ್ನು ನಾನು ಹೋಲಿಸುವುದಕ್ಕೆ ಅಪೇಕ್ಷಿಸುವುದಿಲ್ಲ. ಹಿಂದೆ ಇದೇ ರೀತಿ ಮಂಡಲ ಪಂಚಾಯತಿ ಚುನಾವಣೆಗಳು ಜರುಗಿದಾಗ ತಮಗೆ ಗೊತ್ತಿದೆ, ಆಗ ಮಂಡಲ ಪಂಚಾಯತಿ ಚುನಾವಣೆ ನಡೆದಾಗ ಬಹಳ ವಿಶೇಷವಾದಂಥ ಕೆಲವು ಸಮಸ್ಯೆಗಳನ್ನು ನಾವು ಎದುರಿಸಬೇಕಾಗಿ ಬಂತು, ಸುಮಾರು 654 ಕಡೆ ಗಲಭೆಗಳಾದವು, ಇವೆಲ್ಲವನ್ನೂ ಈಗ ನೆನಪಿಸಿಕೊಳ್ಳಬೇಕಾದ ಅವಶ್ಯಕತೆ ಇದೆ. ಆದರೆ, ಇವೊತ್ತು ಮೀಸಲಾತಿ ಇಟ್ಟು ಸಾಮಾಜಿಕವಾಗಿ, ಭೌಗೋಳಿಕವಾಗಿ ಎರಡೂ ರೀತಿಯಲ್ಲೂ ಕೂಡ ನಾವು ಅಧಿಕಾರ ವಿಕೇಂದ್ರೀಕರಣ ಮಾಡಿದಾಗ ಸದಸ್ಯರುಗಳ ಚುನಾವಣೆ ನಡೆದಾಗ ಯಾವ ವಿಶೇಷ ರೀತಿಯ ಘಟನೆಗಳು ನಡೆಯದೆ 654 ಘಟನೆಗಳು ಬರೀ ಮಂಡಲ ಪಂಚಾಯತಿ ಸದಸ್ಯರ ಚುನಾವಣೆಯಲ್ಲಾಗಿದೆ ಎಂಬುದನ್ನು ಕೂಡ ನಾವು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಏಕೆಂದರೆ, ಪ್ರಧಾನರ ಮತ್ತು ಉಪ ಪ್ರಧಾನರ ಚುನಾವಣೆ ನಡೆದಾಗ ಸುಮಾರು 49 ಘಟನೆಗಳು ನಡೆದಿವೆ. ಆದರೆ, 1987ರಲ್ಲಿ ಪ್ರಧಾನರ ಮತ್ತು ಉಪ ಪ್ರಧಾನರ ಚುನಾವಣೆ ಜರುಗಿದಾಗ 133 ವಿಶೇಷ ರೀತಿಯ ಘಟನೆಗಳಾಗಿವೆ, ಕೆಲವು ಕಡೆ ಗಲಭೆಗಳಲ್ಲಿ ಗುಂಡು ಹಾರಿಸಿದ ಪ್ರಸಂಗಗಳಿದ್ದರೆ,

ಕೆಲವು ಕಡೆ ಕೊಲೆ ಆದ ಘಟನೆ ಇದೆ. ಅದನ್ನು ವಿಸ್ತಾರವಾಗಿ ಜಿಲ್ಲಾವಾರು ಮತ್ತೊಂದು ರೀತಿ ಮಾಡಿ ಹೇಳುವುದು ಬೇಡ.

ಶ್ರೀ ಆರ್.ವಿ. ದೇಶಪಾಂಡೆ : ಸದನದಲ್ಲಿ ತಾವು ಏನು ಹೇಳುತ್ತಿದ್ದೀರಿ, ಅದು ನಾಳೆ ಪತ್ರಿಕೆಗಳಲ್ಲಿ ವರದಿಯಾಗುತ್ತದೆ. ಫೈರಿಂಗ್ ಆಗಿದೆ ಎಂದು ತಾವು ಹೇಳುತ್ತಿದ್ದೀರಿ. ಫೈರಿಂಗ್ ಆಗಿದ್ದರೆ, ಎಲ್ಲಿ ಆಗಿದೆ, ಇದರಿಂದ ಎಷ್ಟು ಜನ ಸತ್ತರು ಎಂಬುದನ್ನು ಹೇಳಬೇಕು. ಸುಮ್ಮನೆ ಫೈರಿಂಗ್ ಆಗಿದೆ ಎಂದರೆ ಏನರ್ಥ? ನಮ್ಮ ದೃಷ್ಟಿಯಲ್ಲಿ ಯಾವುದೇ ಫೈರಿಂಗ್ ಆಗಿಲ್ಲ, ಯಾವುದೇ ಗಲಾಟೆಯಾಗಿಲ್ಲ, you please be clear. Don't be vague. The statistics which you are giving are all concocted figures.

ಶ್ರೀ ಎಂ. ವೀರಪ್ಪ ಮೊಯಿಲಿ : ಐದು ಕಡೆಗಳಲ್ಲಿ ಫೈರಿಂಗ್ ಆಗಿದೆ, ಮೂರು ಕೊಲೆಗಳಾಗಿವೆ. I have got statistics. ಇದನ್ನು ವಿಶ್ಲೇಷಣೆ ಮಾಡಬೇಕೆಂದರೆ ಬಹಳ ಸಮಯ ಬೇಕಾಗುತ್ತದೆ, ಆದರೂ ಹೇಳಬಹುದು. ಆದರೆ ಮುಖ್ಯವಾಗಿ ಹೇಳಬೇಕಾದದ್ದು 654 ಘಟನೆಗಳು ಪಂಚಾಯತಿ ಚುನಾವಣೆಗಳಲ್ಲಿ ಏನು ನಡೆದಿದೆ, As regards 654 incidents are concerned, perhaps not even a single incident has taken place in the Gram Panchayat Members elections.

ಈಗ ಗ್ರಾಮ ಪಂಚಾಯತಿ ಅಧ್ಯಕ್ಷರ, ಉಪಾಧ್ಯಕ್ಷರ ಚುನಾವಣೆಗಳಲ್ಲಿ 49 ಘಟನೆಗಳು ನಡೆದಿದ್ದರೆ, ಆ ಸಂದರ್ಭದಲ್ಲಿ 133 ಘಟನೆಗಳು ನಡೆದಂಥ ವಿಚಾರವನ್ನು ಇಂತಹ ಸ್ಥಳದಲ್ಲಿ ಬಹಳ ತೀವ್ರವಾದ ಗಲಭೆಯುಂಟಾಯಿತು, ಅಶಾಂತಿ ವಾತಾವರಣ ನಿರ್ಮಾಣವಾಯಿತು. ಪ್ರಜಾಪ್ರಭುತ್ವದ ಕಗ್ಗೊಲೆಯಾಯಿತು. ಎಂದು ತಾವು ಹೇಳಿದಂತೆ ಬಹುಶಃ ಆಗ ನಾವು ಸದನದಲ್ಲಿ ಅತ್ತ ಕಡೆ (ವಿರೋಧ ಪಕ್ಷ) ನಾವು ಕುಳಿತಿದ್ದಾಗ ಈ ರೀತಿಯಲ್ಲಿ ಮಾತನಾಡಲಿಲ್ಲ, ತಾವು ಈ ರೀತಿಯಲ್ಲಿ ಹೇಳಿದರೆ ದೇಶಪಾಂಡೆಯವರೇ, ತಮಗೆ ಗೊತ್ತಿದೆ, ಹಿರಿಯ ಸಚಿವರಾದಂಥ ಘೋರ್ಪಡೆಯವರು ಹೇಳಿದ ಪ್ರಕಾರ ಕರ್ನಾಟಕ ರಾಜ್ಯದಲ್ಲಿ ಹಿಂದೆ ಭೂ ಮಸೂದೆ ಜಾರಿಗೆ ಬಂದಾಗ ಅನೇಕ ಕೊಲೆಗಳಾದವು, ಈ ಮಸೂದೆಯನ್ನು ಜಾರಿಗೊಳಿಸುವಲ್ಲಿ ಅನೇಕ ವರ್ಷಗಳ ಕಾಲ ಸಂಘರ್ಷಗಳಾಯಿತು. ಸಂಘರ್ಷಗಳಾದಾಗ ಸರ್ಕಾರ ನಿಷ್ಫಲವಾಗಿದೆ. ಎಂದು ಹೇಳಿ, ನಿಮ್ಮ ವಿಚಾರವನ್ನು ನಾವು ಹೇಳುವುದಕ್ಕೆ ಬಹಳ ಸುಲಭ. ಏಕೆಂದರೆ, ಇವೊತ್ತು ಇಷ್ಟು ಘಟನೆಗಳಾದರೂ ಕೂಡ, ಇದನ್ನು ಹತೋಟಿಗೆ ತಂದು ಎಲ್ಲಾ ಪ್ರಧಾನ ಮತ್ತು ಉಪ ಪ್ರಧಾನರ.....

ಶ್ರೀ ಆರ್.ಎಲ್. ಜಾಲಪ್ಪ : ರಾಜ್ಯಾದ್ಯಂತ ನಡೆದ ಪಂಚಾಯತಿ ಚುನಾವಣೆಗಳಲ್ಲಿ 600ಕ್ಕೂ ಮೀರಿ ಗಲಾಟೆಗಳಾದವು ಎಂದು ನೀವು ಹೇಳುತ್ತಿರುವುದನ್ನು ಗಮನಿಸಿದರೆ ನಮಗಂತೂ ಇದರಲ್ಲಿ ಅನುಮಾನವಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಅನುಮಾನವಿಲ್ಲ, ತಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ, ಮೈನ್‌ಟೇನ್ ಮಾಡಿರುವ ರೆಕಾರ್ಡ್ ಪ್ರಕಾರವೇ ನಾನು ಹೇಳುತ್ತಿರುವುದು.

ಶ್ರೀ ಆರ್.ಎಲ್. ಜಾಲಪ್ಪ : ಇರಬಹುದು, ಆದರೆ ಪ್ರಧಾನರ, ಉಪಪ್ರಧಾನರ ಚುನಾವಣೆಯಲ್ಲಿ ಗಲಾಟೆಗೆ ಅವಕಾಶವೇ ಇರಲಿಲ್ಲ. ಏಕೆಂದರೆ ಅದು ಪಾರ್ಟಿ ಸಿಸ್ಟಂ ಅಲ್ಲಿ ನಡೆದಿದ್ದು. ಅಲ್ಲಿ ಹೋಗಿ ಕೈ ಎತ್ತಬೇಕಾಗಿತ್ತು, ಬರಬೇಕಿತ್ತು. ಅಲ್ಲಿ ಗಲಾಟೆ ಏಕೆ ಆಗುತ್ತದೆ. ಈಗಿನ ಹಾಗೆ ಡಿಫೆಕ್ಟ್ ಮಾಡುವ ಹಾಗೆ ಇರಲಿಲ್ಲ, ಈಗಿನ ಹಾಗೆ ಕಿಡ್‌ನ್ಯಾಪ್ ಮಾಡುವ ಪರಿಸ್ಥಿತಿ ಆಗ ಇರಲಿಲ್ಲ. ಎಲ್ಲರೂ ಹೋಗಬೇಕು, ಪಾರ್ಟಿಯವರು ಒಂದೆ ಕಡೆ ಕುಳಿತುಕೊಳ್ಳುತ್ತಿದ್ದರು. ಕೈ ಎತ್ತುತ್ತಿದ್ದರು ಬರುತ್ತಿದ್ದರು. ಇದು ಆಗಲು ಕಾರಣ ಇಲ್ಲವಲ್ಲ, ಹೇಗಾಯಿತು. We suspect the figures.

SRI M. VEERAPPA MOILY : I am very sorry. This is available for your verification.

SRI R.L. JALAPPA : Will you kindly provide us that list?

SRI M. VEERAPPA MOILY : I will send all these particulars to you.

SRI R.L. JALAPPA : Where incident has taken place, it may not be possible now. Atleast within 8 days will you kindly send us the list?

SRI M. VEERAPPA MOILY : This is the record maintained by the Government. That is all. Of course, it is unpleasant ಆದುದರಿಂದ ಕೆಲವು ಸಾರಿ ನಾವು ಎಷ್ಟೆಲ್ಲಾ ಭಾಷಣ ಮಾಡಿದಮೇಲೂ ಈ ಅಂಕಿ ಸಂಖ್ಯೆ ತಂದು ಕೊಟ್ಟು, ಇದು ಬೇಕಾಗಿರಲಿಲ್ಲ, ನಿಮಗೂ ಬೇಕಾಗಿರಲಿಲ್ಲ, ನನಗೂ ಬೇಕಾಗಿರಲಿಲ್ಲ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಆದರೆ ಈ ಅಂಕಿಸಂಖ್ಯೆ ಹೇಳುವುದರಲ್ಲಿ ಏನೂ ತಪ್ಪಿಲ್ಲ, ಹಿಂದೆ ಆಗಿರಬಹುದು. ಆದರೆ ನಮ್ಮ ಸರ್ಕಾರ ಇದ್ದಾಗ ಅವೆಲ್ಲಾ ದಾಖಲೆ ಮಾಡಿಕೊಂಡಿದ್ದೇವೆ. ಆದರೆ ನೀವು ಪ್ರಚೋದನೆ ಕೊಟ್ಟು ಆ ದಾಖಲೆಯನ್ನೇ ಮಾಡಿಲ್ಲ, ಅನೇಕ ಕಡೆ ನಿಮ್ಮವರೇ ಪ್ರಚೋದನೆ ಕೊಟ್ಟಿದ್ದರಿಂದ ಕೇಸ್‌ಗಳನ್ನೇ ದಾಖಲೆ ಮಾಡಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ಅದಕ್ಕೆ ಉತ್ತರ ಯಾರೂ ಕೊಡುವುದಕ್ಕೆ ಸಾಧ್ಯ ಇಲ್ಲ. ಬನ್ನಿಕೋಡ್‌ರವರು ಬೃಹಸ್ಪತಿ ತರಹ ಏನಾದರೂ ಹೇಳುತ್ತಿರುತ್ತಾರೆ; ಅದನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ನಮಗೇನೂ ಅದಕ್ಕೆ ವಾದ ವಿವಾದ ಇಲ್ಲ. ಈಗ ಪ್ರಶ್ನೆ ಬಹಳ ಸೂಕ್ಷ್ಮವಾದುದು. ಏಕೆಂದರೆ ಮುಖ್ಯವಾಗಿ ಘಟನೆ ನಡೆದಿದ್ದು ಎರಡು ಕಡೆ ಪೋಲೀಸ್ ಫೈರಿಂಗ್ ಆಗಿದೆ. ಒಂದು ಪೊಲೀಸ್ ಫೈರಿಂಗ್ ಸನ್ಮಾನ್ಯ ರವೀಂದ್ರನಾಥ ಬಾಬು ಅವರ ಕ್ಷೇತ್ರದಲ್ಲಿ ಆಯಿತು. ಅವರೇ ಹೇಳಿದರು ಪೋಲೀಸ್‌ನವರು ಮಾಡಿದರು ಎಂದು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಮುಖ್ಯಮಂತ್ರಿಗಳೇ ನಾನು ಈ ಚರ್ಚೆಯಲ್ಲಿ ಸಮಯದ ಅಭಾವದಿಂದಾಗಿ ಭಾಗವಹಿಸಲಿಲ್ಲ. ಆದರೆ ಒಂದು ಪ್ರಶ್ನೆಗೆ ಮಾನ್ಯ ಗ್ರಾಮೀಣ ಅಭಿವೃದ್ಧಿ ಸಚಿವರು ಅದಕ್ಕೆ ಉತ್ತರ ಕೊಡುತ್ತಾರೆ ಎಂದು ನಿರೀಕ್ಷೆ ಮಾಡಿದ್ದೆ. ಅದಕ್ಕೆ ಅವರು ಉತ್ತರ ಕೊಡಲಿಲ್ಲ. ಈಗ ಲಾ ಅಂಡ್ ಆರ್ಡರ್ ಬಗ್ಗೆ ಫೈನಲ್ ಸ್ಟೇಜ್‌ಗೆ ನೀವು ಏನು ಮಾಡುತ್ತೀರಿ ಎಂದು ಹೇಳಿ ನಮ್ಮ ಡಿಮ್ಯಾಂಡ್ಸ್ ಬಗ್ಗೆ ಹೇಳುವುದಕ್ಕೆ ಹೊರಟಿದ್ದೀರಿ. ಅದಕ್ಕೆ ಮೊದಲು ನಾನು ನಿಮಗೆ ಒಂದು ಕೇಳುತ್ತಿದ್ದೇನೆ. ಈ ಮಂಡಲ ಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರು ಸ್ಥಾನಗಳನ್ನು ಎಲೆಕ್ಷನ್ ಕ್ಯಾಲೆಂಡರ್ ಆಫ್ ಈವೆಂಟ್ಸ್‌ನ ನೀವು ಅನೌನ್ಸ್ ಮಾಡುವುದಕ್ಕೆ ಮುಂಚೆ ನೀವು ಮಾಡಿಬಿಟ್ಟಿದ್ದರೆ, ಬಹುಶಃ ಇದು ಯಾವುದೂ ಸಹ ಆಗುತ್ತಿರಲಿಲ್ಲ. What was the difficulty in announcing that this Pradhan is reserved for Scheduled Caste and Scheduled Tribes.

ಈಗ ಏನಾಗುತ್ತಿದೆ, ಒಂದು ಕಡೆ ನೀವು ಸೋಷಿಯಲ್ ಜಸ್ಟೀಸ್ ಬಗ್ಗೆ ಮಾತನಾಡುತ್ತಿದ್ದೀರಿ, ಶೆಡ್ಯೂಲ್ ಕ್ಯಾಸ್ಟ್ ರಿಸರ್ವೇಷನ್ ಬಗ್ಗೆ ನಾವು ಅದನ್ನು ಮಾಡುತ್ತಿದ್ದೇವೆ. ನಾವು ಸೈಲೆಂಟ್ ರೆವಲ್ಯೂಷನ್ ತೆಗೆದುಕೊಂಡು ಬಂದಿದ್ದೇವೆ ಎಂದು ಹೇಳುತ್ತೀರಿ. ಇದನ್ನು ಅನೌನ್ಸ್ ಮಾಡುವುದಕ್ಕೆ ನಿಮಗೆ ಏನು ತೊಂದರೆ ಆಗಿತ್ತು

SRI R.V. DESHAPANDE : The Hon'ble Minister for Rural Development did it 29-12-93ರಂದು ಎಲೆಕ್ಷನ್ ಆಯಿತಲ್ಲಾ, ಅದಕ್ಕಿಂತ ಮೊದಲು ನೀವು 400

ಬಿಂಧುಗಳನ್ನು ಕೊಟ್ಟರಲ್ಲಾ ಆಗ ಅಲ್ಲಿ ರಿಸರ್ವೇಷನ್ ಇತ್ತು. Subsequently you have changed it....

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಸಿಂಧ್ಯಾರವರು ಬಹಳ ಪ್ರಮುಖವಾದಂತಹ ಪ್ರಶ್ನೆಯನ್ನೇ ಎತ್ತಿದ್ದಾರೆ. ಅದಕ್ಕೆ ಉತ್ತರ ಈ ಘಟನೆಗಳಲ್ಲಿ ಇದೆ. ಆದರೆ ಎರಡು ಪ್ರಮುಖವಾದಂತಹ ಘಟನೆಗಳು ಏನು ಪೋಲೀಸ್ ಫೈರಿಂಗ್ ಆಯಿತು ಈ ಘಟನೆಗಳಿಗೆ ಕಾರಣ, ತಾವು ಹೇಳಿದಂತಹ ಕಾರಣ ಅಲ್ಲವೇ ಅಲ್ಲ. ಎರಡು ಘಟನೆಗಳಿಗೆ ಕಾರಣ ಅಲ್ಲಿ ಹೆಡ್ ಕ್ವಾರ್ಟರ್ಸ್ ಆಫ್ ದಿ ಪಂಚಾಯತ್ ತಾವು ಬಹುಶಃ 400 ಬಿಂದು, 200 ಬಿಂದು ಮಾಡಿದ್ದರೂ ಕೂಡ ಹೆಡ್ ಕ್ವಾರ್ಟರ್ಸ್ ಬಗ್ಗೆ ಡಿಸ್ಪ್ಯುಟ್ ಇರುತ್ತಿತ್ತು. ಗಂಡಬೊಮ್ಮನ ಹಳ್ಳಿಯಲ್ಲಿ ಕೂಡ ಹೆಡ್ ಕ್ವಾರ್ಟರ್ಸ್ ಬಗ್ಗೆ ಡಿಸ್ಪ್ಯೂಟ್ ಪ್ರಾರಂಭವಾದದ್ದು. ಸೊರಾಪುರ್ ಫೈರಿಂಗ್ ಆಯಿತು. ಅಲ್ಲಿ ಕೂಡ ಕರಟ್ಕಲ್, ಪರಸನಹಳ್ಳಿ 2 ಕಡೆ ಹೆಡ್ ಕ್ವಾರ್ಟರ್ಸ್ ಬಗ್ಗೆ ಡಿಸ್ಪ್ಯೂಟ್ ಆಯಿತು. ಆದರೆ ತಾವು ಏನು ಹೇಳಿದ್ದಿರಿ ಮಾನ್ಯ ಸಿಂಧ್ಯಾರವರೇ, 2 ವಿಶೇಷವಾಗಿ ಏನು ಘಟನೆಗಳು ಆಗಿ ಫೈರಿಂಗ್ ಆರ್ಡರ್ ಆಗಿದೆ ಆ ಎರಡೂ ಕಡೆಯಲ್ಲಿ ಕೂಡ ಕಾರಣ ಇದು ಅಲ್ಲ, ಕಾರಣ ಪ್ರಮುಖವಾಗಿರತಕ್ಕಂಥಾದ್ದು. ಅದು ಗ್ರಾಮ ಪಂಚಾಯಿತಿ ಹೆಡ್ ಕ್ವಾರ್ಟರ್ಸ್ ಬಗ್ಗೆ ಆದಂತಹ ವಿವಾದದಿಂದ ಈ ಪ್ರಶ್ನೆಗಳು ಉದ್ಭವವಾಗುತ್ತವೆ. ಎಲ್ಲಿಯೂ ಕೂಡ ಅಷ್ಟೇ, ಅದರ ಬಗ್ಗೆ ಸಾಕಷ್ಟು ವಿವರಗಳು ಬಂದಿವೆ. ತಾವೇ ಆಲೋಚನೆ ಮಾಡಿ. ಅನೇಕ ಜನರನ್ನು ಬಾಗಿಲು ಹಾಕಿ, ಬೀಗ ಹಾಕಿ ಸುಡತಕ್ಕಂತಹ ಪ್ರಶ್ನೆ ಬಂದಾಗ ಏನು ಮಾಡಬೇಕು. ಅಲ್ಲಿ ಲಾಠಿ ಚಾರ್ಜ್ ಮಾಡಿದ್ದಾರೆ, ಟಿಯರ್ ಗ್ಯಾಸ್ ಹಾಕಿದ್ದಾರೆ, ರಬ್ಬರ್ ಬುಲೆಟ್ ಉಪಯೋಗ ಮಾಡಿದ್ದಾರೆ. ಇವು ಮೂರು ಉಪಯೋಗ ಮಾಡಿದಮೇಲೆ ಇದು ಹತೋಟಿಗೆ ಬರುವುದಿಲ್ಲ ಅಲ್ಲಿ ನೂರಾರು ಜನ ಕೊಲೆ ಆಗುತ್ತಾರೆ ಎಂಬುದನ್ನು ಮನಗಂಡು ಪೋಲೀಸ್‌ನವರು ಕೊನೆಗೆ ಫೈರಿಂಗ್ ಆರ್ಡರ್ ಮಾಡಬೇಕಾದಂತಹ ಪರಿಸ್ಥಿತಿ ಬಂದಿದ್ದನ್ನು ಇವತ್ತು ಮಾನ್ಯ ಘೋರ್ಪಡೆಯವರು ವಿವರಿಸಿ ಹೇಳಿದ್ದಾರೆ. ಮಾನ್ಯ ರವೀಂದ್ರನಾಥ ಬಾಬು ಅವರೂ ಕೂಡ ಹೇಳಿದ್ದಾರೆ.

ಆದರ ಮೇಲೆ ನಾವು ಜ್ಯೂಡಿಷಯಲ್ ಎನ್‌ಕ್ವೈಯರಿ ಮಾಡಿದರೆ ಮುಂದೆ ಯಾವ ಪೋಲೀಸ್‌ನವರು ಯಾರ ರಕ್ಷಣೆಗೆ ಬರುತ್ತಾರೆ ಎಂಬುದನ್ನು ತಾವೇ ಆಲೋಚನೆ ಮಾಡಬೇಕು. ಇವತ್ತು ನಾವು ಜ್ಯೂಡಿಷಿಯಲ್ ಎನ್‌ಕ್ವೈರಿ ಮಾಡುತ್ತೇವೆಂದು ಘೋಷಣೆ ಮಾಡುವುದು ಬಹಳ ಸುಲಭ. ರಾಜಕೀಯವಾಗಿ ಅದರಿಂದ ನಮಗೂ ಅನುಕೂಲವಾಗಬಹುದು ತಮಗೂ ಆಗಬಹುದು. ಆದರೆ ನಾವು ರಾಜಕೀಯ ಉದ್ದೇಶದಿಂದ ಅಂಥಹ ಜ್ಯೂಡಿಷಿಯಲ್ ಪ್ರೋಬ್ ಆಗಬೇಕೆಂದು ನಾನೂ ಅಪೇಕ್ಷೆಪಡುವುದಿಲ್ಲ. ಬಹುಶಃ ಈ ಸದನದಲ್ಲಿ ಯಾರೂ ಕೂಡ ಅಪೇಕ್ಷೆಪಡುವುದಿಲ್ಲ. ಅಲ್ಲಿ ಪೋಲೀಸ್‌ನವರು ರಬ್ಬರ್ ಬುಲೇಟ್ ಉಪಯೋಗ ಮಾಡಿದ್ದಾರೆ. ಆದರೆ ಇಂಥ ಸಂದರ್ಭದಲ್ಲಿ ಜ್ಯೂಡಿಷಿಯಲ್ ಎನ್‌ಕ್ವೈರಿಯರಿ ಮಾಡಿದರೆ ಮುಂದೆ ಯಾವ ಪೋಲೀಸಿನವರು ಯಾರ ರಕ್ಷಣೆಗೆ ಬರುವುದಕ್ಕೆ ಸಾಧ್ಯವಿದೆ ಎಂಬುದನ್ನು ತಾವು ಸ್ವಲ್ಪ ವಿಚಾರ ಮಾಡಬೇಕಾದಂಥ ಅವಶ್ಯಕವಿದೆ. ಸೊರಾಪುರದಲ್ಲಿ ಕೂಡ ಕರಟ್‌ಕಲ್ಲ್ ಮತ್ತು ಪರಶನಹಳ್ಳಿ.........

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಸತ್ಯ ಶೋಧನೆಯಾಗಬೇಕಾಗಿದೆ

ಶ್ರೀ ಎಂ. ವೀರಪ್ಪ ಮೊಯಿಲಿ : ಘಟನೆಗಳ ಒಂದು ಪುರಾವೆಗಳಿಂದ ವಿಶ್ಲೇಷಣೆಯಿಂದ ನಮಗೆ ಯಾರ ಮೇಲಾದರೂ ಸಂಶಯ ಬಂದರೆ ಜ್ಯೂಡಿಷಿಯಲ್ ಎನ್‌ಕ್ವೈರಿಯನ್ನು ಹಾಕುವುದಕ್ಕೆ ನಾನು ಒಪ್ಪುತ್ತೇನೆ. ತಾವು ಒಪ್ಪಬೇಕಾಗುತ್ತದೆ. ಅದಕ್ಕೆ ನಾನು ಅಡ್ಡಿ ಬರುವುದಿಲ್ಲ. ಆದರೆ ಇದಕ್ಕೆ ಸರಿಯಾದಂತಹ ಪುರಾವೆ ಬೇಕಾಗುತ್ತದೆ.

ಮಾನ್ಯ ರವೀಂದ್ರನಾಥ ಬಾಬುರವರು ಹೇಳಿದ್ದಾರೆ ಮತ್ತು ಮಾನ್ಯ ಸಚಿವರು ಹೇಳಿದ್ದಾರೆ. ಈ ಘಟನೆಯ ಸಂಪೂರ್ಣವಾದಂತಹ ಚಿತ್ರ ತಮ್ಮ ಮುಂದೆ ಇರುವಾಗ ಇದರ ಬಗ್ಗೆ ಚಿಂತನೆ ಮಾಡತಕ್ಕಂಥ ಪರಮಾಧಿಕಾರ ಹೊಂದಿರುವ ಈ ಸದನ ಇರುವಾಗ ಜ್ಯೂಡಿಷಿಯಲ್ ಪ್ರೋಬ್‌ಗೆ ಹಾಕತಕ್ಕಂಥ ಅವಶ್ಯಕತೆ ಇದೆಯೆ ಇಲ್ಲವೇ ಎನ್ನುವುದನ್ನು ನಾವು ಇವತ್ತು ಆಲೋಚನೆ ಮಾಡಬೇಕಾಗುತ್ತದೆ.

ಶ್ರೀ ಆರ್.ಎಲ್ ಜಾಲಪ್ಪ: ಶ್ರೀ ರವೀಂದ್ರನಾಥ ಬಾಬು ಅವರಿಗೆ ಬೇಕಾದ ಹಾಗೆ ಅವರು ಹೇಳಿಕೊಳ್ಳುತ್ತಾರೆ. ಬೊಮ್ಮಣ್ಣನವರು ಅವರಿಗೆ ಬೇಕಾದ ಹಾಗೆ ಅವರು ಹೇಳಿಕೊಳ್ಳುತ್ತಾರೆ. ಅದು ನಮಗೆ ಬೇಕಾಗಿಲ್ಲ. ಈಗ ರವೀಂದ್ರನಾಥ ಬಾಬು ಹೇಳಿದ್ದೇ ಸತ್ಯ ಎಂದು ನಂಬಿಸುವುದು ಬೇಡ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ: ರವೀಂದ್ರನಾಥ್ ಬಾಬು ಅವರು ಕೂಡ ಜವಾಬ್ದಾರಿಯುತವಾದ ಶಾಸಕರು, ತಾವೂ ಕೂಡ ಜವಾಬ್ದಾರಿಯುತವಾದ ಶಾಸಕರು ಅವರ ಮಾತಿಗೂ ನಾವು ಗೌರವ ಕೊಡಬೇಕಾಗುತ್ತದೆ. ಅವರ ಮಾತನ್ನು ನಾವು ತೆಗೆದುಕೊಂಡು ಜವಾಬ್ದಾರಿಯಿಂದ ನಡೆಯಬೇಕಾಗುತ್ತದೆ. ಅನುಕೂಲಕ್ಕಾಗಿ ಯಾರೂ ಹೇಳುವುದಿಲ್ಲ.

ಶ್ರೀ ಆರ್.ಎಲ್. ಜಾಲಪ್ಪ: ಅವರು ಹೇಳಿದ್ದಾರೆ ಜ್ಯೂಡಿಷಿಯಲ್ ಎನ್‌ಕ್ವೈಯರಿಯಾಗಲಿ ಎಂದು ಹೇಳಿದ್ದಾರೆ.

ಶ್ರೀ ಬಿ.ಹೆಚ್. ಬನ್ನಿಕೋಡ್: ಇದರ ಬಗ್ಗೆ ಆ ಕಡೆಯ ಮತ್ತು ಈ ಕಡೆಯ ಸದಸ್ಯರು ವಿಚಾರಣೆಯಾಗಬೇಕು ಸತ್ಯಾಂಶ ಹೊರಗಡೆ ಬರಬೇಕೆಂದು....

ಶ್ರೀ ಎಂ. ವೀರಪ್ಪ ಮೊಯಿಲಿ: ಒಂದು ಮಾತನ್ನು ಈ ಸದನಕ್ಕೆ ಹೇಳುವುದಕ್ಕೆ ಇಚ್ಛಿಸುತ್ತೇನೆ. ಇಷ್ಟೆಲ್ಲಾ ಜನರು ಇವತ್ತು ವಿರೋಧಪಕ್ಷದ ನಾಯಕರು ಪ್ರಮುಖ ನಾಯಕರು ಈ ಕಡೆಯಿಂದ ಕೂಡ ಮಾತನಾಡಿದರು. ಗ್ರಾಮಪಂಚಾಯತ್ ಬಗ್ಗೆ ಸರ್ಕಾರದ ಹಸ್ತಕ್ಷೇಪದಿಂದ ರಾಜ್ಯದ ನಾನಾ ಭಾಗಗಳಲ್ಲಿ ತೀವ್ರವಾದ ಗಲಭೆಗಳು ಉಂಟಾಗಿ ಪ್ರಜಾಪ್ರಭುತ್ವದ ಕಗ್ಗೊಲೆಯಾಗಿದೆ. ಇದರ ಬಗ್ಗೆ ಒಂದು ವಿಚಾರವನ್ನು ಸ್ಪಷ್ಟವಾಗಿ ಹೇಳುತ್ತೇನೆ. ಇವತ್ತು ಕಡತವನ್ನು ತೆಗೆದು ತಾವು ಸಾವಧಾನವಾಗಿ ಪರಿಶೀಲನೆ ಮಾಡಿ. ಇಲ್ಲಿ ಒಂದು ವೇಳೆ ಸರ್ಕಾರ ಅಥವಾ ನೇರವಾಗಿ ಮುಖ್ಯಮಂತ್ರಿಯಾಗಲಿ, ಮಂತ್ರಿಗಳಾಗಲಿ, ಅಥವಾ ಯಾವುದೇ ಶಾಸಕರಾಗಲೀ ಹಸ್ತಕ್ಷೇಪ ಈ ಚುನಾವಣೆಯಲ್ಲಿ ಮಾಡಿ, ಅಧ್ಯಕ್ಷರ ಅಥವಾ ಉಪಾಧ್ಯಕ್ಷರ ಚುನಾವಣೆಯಲ್ಲಿ ಹಸ್ತಕ್ಷೇಪ ಮಾಡಿ, ನನ್ನ ಕ್ಷೇತ್ರದಲ್ಲಿ ಅಥವಾ ಇಂಥ ಒಂದು ಗ್ರಾಮ ಪಂಚಾಯತ್‌ನಲ್ಲಿ ಕಾನೂನು ಪ್ರಕಾರ ನಿಯಮಾವಳಿಗಳ ಪ್ರಕಾರ ಅಥವಾ ಸರ್ಕಾರ ಕೊಟ್ಟ ಮಾರ್ಗದರ್ಶನದ ಪ್ರಕಾರ ಚುನಾವಣಾ ಪ್ರಕ್ರಿಯೆ ನಡೆಯಲಿಲ್ಲ ಅದರಲ್ಲಿ ಚುನಾವಣಾ ಪ್ರಕ್ರಿಯೆಯಲ್ಲಿ ವ್ಯತ್ಯಾಸ ಆಗಿದೆ ಅಥವಾ ಸರಿಯಾಗಿ ಆಗಲಿಲ್ಲ ಎಂದು ಒಬ್ಬರೂ ಕೂಡ ಧ್ವನಿ ಎತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್: ಅನೇಕ ಕಡೆ ಮುಂದಾಗಿದ್ದಿರಲ್ಲಾ...

ಶ್ರೀ ಎಂ. ವೀರಪ್ಪ ಮೊಯಿಲಿ: ಯಾರೂ ಆಪಾದನೆಯನ್ನು ಮಾಡಿಲ್ಲ. ಇದು ಬಹಳ ಮುಖ್ಯ.

(ಗೊಂದಲ)

SRI M. VEERAPPA MOILY : Nobody has said. No, no, you never said. Give me an example of one Gram panchayat Election to the President and

ಗ್ರಂಥಾಲಯ, ವಿಧಾನ ಸೌಧ, ಬೆಂಗಳೂರು

Vice-President held contrary to these rules framed and directions issued. Even after postponement, elections are held. There is not even a single iota of allegations, charges made that in any one of the Panchayat election is distorted or done contrary to the rules. I don't think there is no evidence at all - not a one sentence - if I can find one sentence.

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್ : ಇದು ಸರ್ಕಾರದ ಹಸ್ತಕ್ಷೇಪ. ನಿಮ್ಮ ಪಕ್ಷದ ಶಾಸಕರ ಹಸ್ತಕ್ಷೇಪ. ಮಂತ್ರಿಗಳ ಹಸ್ತಕ್ಷೇಪ.

(ಗೊಂದಲ)

SRI M. VEERAPPA MOILY : Suppose the ruling party has used police or suppose the ruling party has used the Tahsildar, suppose the ruling party has used the Deputy Commissioner or suppose the ruling party has misused or abused its position or office in distorting any election or conducting any practice in any election or helped any election of any President or a Vice President of any Grama Panchayat, I would have understood their arguments. There is absolutely no charge.

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್ : ಚುನಾವಣೆಯನ್ನು ಏತಕ್ಕೆ ಮುಂದಕ್ಕೆ ಹಾಕಿದಿರಿ ಎಂದರೆ ಅದಕ್ಕೆ ನಿಮ್ಮಲ್ಲಿ ಉತ್ತರ ಇಲ್ಲ.

(Interruptions)

ಶ್ರೀ ಬಿ.ಹೆಚ್. ಬನ್ನಿಕೋಡ್ : ತಾವು ಈಲ್ಡ್ ಆದರೆ ಹೇಳುತ್ತೇನೆ. ಇದರಲ್ಲಿ ಮಂತ್ರಿಗಳ ಹಸ್ತಕ್ಷೇಪ.

SRI M. VEERAPPA MOILY : I am on my legs. I am not yielding.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಇದರಲ್ಲಿ ಒಂದು ದೊಡ್ಡ ಅನುಮಾನ ಬಂದಿದೆ. ಇಲ್ಲಿ ಯಾರು ಸೋತಿದ್ದಾರೆ. ಯಾರು ಗೆದ್ದಿದ್ದಾರೆ ಎಂಬುದೇ ಒಂದು ಅನುಮಾನವಾಗಿದೆ. ಮಾನ್ಯ ಮುಖ್ಯ ಮಂತ್ರಿಗಳು ನಾವು ಗೆದ್ದಿದ್ದೇವೆ ಎಂದು ಹೇಳುತ್ತಾರೆ, ಇವರು ನಾವು ಗೆದ್ದಿದ್ದೇವೆ ಎಂದು ಹೇಳುತ್ತಾರೆ. ನಮಗೆ ಸ್ಪಷ್ಟವಾದ ಚಿತ್ರ ಬರುತ್ತಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ನಾನು ಸೋರಾಪುರದ ವಿಚಾರವನ್ನು ಹೇಳುತ್ತಿದ್ದೆ. ತಾವು ನನಗೆ ಸ್ವಲ್ಪ ಅವಕಾಶ ಕೊಟ್ಟರೆ ಹೇಳುತ್ತೇನೆ. ಬೆಳಗ್ಗಿನಿಂದಲೂ ನೀವು ಅದನ್ನೇ ಹೇಳುತ್ತಿದ್ದೀರಿ.

ಶ್ರೀ ಎಂ.ಎಸ್. ಪಾಟೀಲ್ : ಪಾಯಿಂಟ್ ಆಫ್ ಆರ್ಡರ್.

(ಗೊಂದಲ)

ಅಧ್ಯಕ್ಷರು : ಯಾವ ನಿಯಮದ ಪ್ರಕಾರ ನಿಮ್ಮ ಪಾಯಿಂಟ್ ಆಫ್ ಆರ್ಡರ್?

(ಗೊಂದಲ)

ಅಧ್ಯಕ್ಷರು : ಪಾಯಿಂಟ್ ಆಫ್ ಆರ್ಡರ್ ಎಂದರೆ ಯಾವ ರೂಲ್ ಪ್ರಕಾರ ಹೇಳಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಮಾನ್ಯ ಸದಸ್ಯರು ಪಾಯಿಂಟ್ ಆಫ್ ಆರ್ಡರ್ ಎತ್ತಿದರೆ ಅದಕ್ಕೆ ನೀವು ಅವಕಾಶ ಕೊಡುವುದಿಲ್ಲವೇ? ಅವರು ಕ್ರಿಯಾಲೋಪವನ್ನು ಎತ್ತಿದ್ದಾರೆ. ಅವರಿಗೆ ತಾವು ಅವಕಾಶ ಕೊಡಿ. ನೀವು ಅವರನ್ನು ಯಾವ ರೂಲ್ ಪ್ರಕಾರ ಎಂದು ಕೇಳುತ್ತಿರುವುದು ಸರಿಯಲ್ಲ.

SRI R.L. JALAPPA : Please Listen to him. If there is no point of order, you tell him that there is no Point of Order. Listen to him.

SRI M. VEERAPPA MOILY : I am on my Legs.

SRI R.V. DESHAPANDE : If it is not in order, you can reject it. Please allow him to ask.

ಅಧ್ಯಕ್ಷರು : ಕೇವಲ ಪಾಯಿಂಟ್ ಆಫ್ ಆರ್ಡರ್ ಎಂದು ಮಾತ್ರ ಅವರು ಹೇಳಿದ್ದಾರೆ. ಯಾವ ರೂಲ್ ಎಂದು ಅವರು ಹೇಳಲಿ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ಅವರು ಪಾಯಿಂಟ್ ಆಫ್ ಆರ್ಡರ್ ಎಂದು ಹೇಳಿದಮೇಲೆ ಅವರಿಗೆ ತಾವು ಯಾವ ರೂಲ್ ಎಂದು ಕೇಳುತ್ತಿದ್ದೀರಿ. ನೀವು ಅವರು ಹೇಳುವುದನ್ನು ಕೇಳಿ. ಅದು ಸರಿಯಾಗಿದ್ದರೆ ಒಪ್ಪಿಕೊಳ್ಳಿ, ಇಲ್ಲದಿದ್ದರೆ ರಿಜೆಕ್ಟ್ ಮಾಡಿ.

(ಗೊಂದಲ)

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಧಾರವಾಡ ಜಿಲ್ಲಾ ಉಸ್ತುವಾರಿ ಮಂತ್ರಿಗಳು ಚುನಾವಣೆ ನಡೆದಾಗ ಏನು ಮಾಡಿದರು ಗೊತ್ತೆ? ಚುನಾವಣೆಯನ್ನು ಮುಂದಕ್ಕೆ ಹಾಕಿದಾಗ ಜಿಲ್ಲಾಧಿಕಾರಿಗಳ ಮೇಲೆ ಜೋರು ಮಾಡಿದ್ದಾರೆ.

ಶ್ರೀ ಎಂ.ಎಸ್. ಪಾಟೀಲ್ : ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿ ಒಂದು ವಿಚಾರವನ್ನು ಏನು ಹೇಳಿದರೆಂದರೆ, ಯಾರಾದರೂ, ಎಲ್ಲಾದರೂ ಯಾವುದೇ ಒಂದು ಕ್ಷೇತ್ರದಲ್ಲಿ, ಯಾವುದೇ ಒಂದು ಮಂಡಲದಲ್ಲಿ ಇಂಥಾದ್ದು ಆಗಿರುವ ಬಗ್ಗೆ ಒಂದು ನಿದರ್ಶನವನ್ನು ಕೊಡಿ ಎಂದು ಹೇಳಿದರು. ನಾವು ಹಲವಾರು ಸಾರಿ ಹೇಳಿದ್ದೇವೆ. ರಾಯಚೂರು ಜಿಲ್ಲೆಯಲ್ಲಿ ಚಿಕ್ಕಸೂಗೂರು ಕ್ಷೇತ್ರದಲ್ಲಿ ಇವತ್ತು ಹಸ್ತಕ್ಷೇಪವನ್ನು ಮಾಡಿ ಎಸ್.ಪಿ.ಯವರು ಕೊಟ್ಟಂಥ ರಿಪೋರ್ಟ್‌ನ ವಿರುದ್ಧ ಅಲ್ಲಿ ನಡೆಯದೇ ಇದ್ದಂಥ ಒಂದು ಘಟನೆಯನ್ನು ಡಿಕ್ಲೇರ್ ಮಾಡಿದ್ದಾರೆ. ಇದರ ಬಗ್ಗೆ ಎನ್‌ಕ್ವೈರಿ ಮಾಡಬೇಕು. ಇನ್ನೊಂದು ವಿಚಾರ ಎಂದರೆ ಲಿಂಗಸೂಗೂರು ತಾಲ್ಲೂಕಿನ ಈಚನಾಳು ಗ್ರಾಮದಲ್ಲಿ ಹಸ್ತಕ್ಷೇಪ ಮಾಡಿ ಅಲ್ಲಿ ನಡೆಯಬೇಕಾದ ಚುನಾವಣೆ ನಿಲ್ಲಿಸಿದ್ದಾರೆ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಯಾವುದೂ ನಡೆದಿಲ್ಲವೆಂದು ತಾವು ಹೇಳುತ್ತಿದ್ದೀರಿ. ಆದರೆ ನಾನು ಈ ಎರಡು ಉದಾಹರಣೆಗಳನ್ನು ತಮಗೆ ಕೊಡುತ್ತಿದ್ದೇನೆ. ಇಂಥ ಹಲವಾರು ಪ್ರಕರಣಗಳನ್ನು ನಾವು ತಮಗೆ ಕೊಡಬಹುದು.

(ಗೊಂದಲ)

ಅಧ್ಯಕ್ಷರು : ನೀವು ಒಬ್ಬೊಬ್ಬರೇ ಮಾತನಾಡಿದರೆ, ಅವಕಾಶ ಕೊಡಬಹುದು. ಎಲ್ಲರೂ ಕೂಡಿ ಮಾತನಾಡಿದರೆ ಹೇಗೆ?

(ಗೊಂದಲ)

ಶ್ರೀ ಪಿ.ಸಿ. ಸಿದ್ಧನಗೌಡರ್ : ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಕ್ಕೆ ನಾನು ಹೇಳುತ್ತಿದ್ದೇನೆ.

ಅಧ್ಯಕ್ಷರು : ಮಾನ್ಯ ಮುಖ್ಯ ಮಂತ್ರಿಗಳು ಏನು ಹೇಳುತ್ತಾರೋ ಕೇಳಿ.

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್ : ಸತ್ಯವನ್ನು ಬಚ್ಚಿಡತಕ್ಕ ಇವರ ಪ್ರಯತ್ನಕ್ಕೆ ನಾವು ಪ್ರತಿಭಟನೆಯನ್ನು ಮಾಡಬೇಕಾಗುತ್ತದೆ.

ಅಧ್ಯಕ್ಷರು : ಅವರು ಹೇಳುವುದನ್ನು ಕೇಳಿ.

ಶ್ರೀ ಪಿ.ಸಿ. ಸಿದ್ಧನಗೌಡರ್ : ಧಾರವಾಡ ಜಿಲ್ಲಾಧಿಕಾರಿಗಳಿಗೆ ಹೆದರಿಸಿ, ನಿಮ್ಮನ್ನು ವರ್ಗ ಮಾಡುತ್ತೇವೆಂದು ಹೇಳಿ ಅಲ್ಲಿ ಕ್ಯಾನ್ಸಲ್ ಮಾಡಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಅಧ್ಯಕ್ಷರೇ, ನಾನು ಇಷ್ಟೇ ಹೇಳಿದ್ದುದು 2-2-94ಕ್ಕೆ ಮಾರ್ಗದರ್ಶನ ಕೊಟ್ಟಿದ್ದೇವೆ. ಗೈಡ್‌ಲೈನ್ಸ್ ಕೊಟ್ಟಿದ್ದೇವೆ, ಆ ರಿಸರ್ವೇಷನ್ ಯಾವ ರೀತಿ ಪಾಲಿಸಬೇಕೆಂದು ಹೇಳಿ ಜಿಲ್ಲಾಧಿಕಾರಿಗಳಿಗೆ ಹೋಗಿದೆ. ನನ್ನ ಪ್ರಶ್ನೆ ಇಷ್ಟೇ, ಯಾವುದೇ ಇರಲಿ ಸುಮಾರು ಇದರಲ್ಲಿ ಮಾರ್ಗದರ್ಶನಗಳು ನಮೂದಿಸಲ್ಪಟ್ಟಿರುತ್ತವೆ. ಅಂಥ ಯಾವುದೇ ಮಾರ್ಗದರ್ಶನವನ್ನು ಉಲ್ಲಂಘಿಸಿಲ್ಲ. ಅಧ್ಯಕ್ಷರ ಅಥವಾ ಉಪಾಧ್ಯಕ್ಷರ ಚುನಾವಣೆಯು ಯಾರದೇ ಹಸ್ತಕ್ಷೇಪದ ಮುಖೇನ ಆಗಿಲ್ಲ.

ಶ್ರೀ ಕೆ.ಹೆಚ್. ರಂಗನಾಥ್ : ಹಾಗೆಂದು ಯಾರು ಹೇಳಿಯೇ ಇಲ್ಲ, ಮಾನ್ಯ ಅಧ್ಯಕ್ಷರೇ, 49 ಘಟನೆಗಳು ನಡೆದಿವೆ, 49 ಘಟನೆಗಳಲ್ಲಿ ಎಲ್ಲೂ ಕೂಡ ಅಂಥದ್ದು ಆಗಿಲ್ಲವೆಂದು ಹೇಳಿರತಕ್ಕಂಥದ್ದು. ಯಾರೂ ಹೇಳಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಹಿರಿಯ ಸದಸ್ಯರಾದಂಥ ಶ್ರೀ ಡಿ.ಬಿ. ಚಂದ್ರೇಗೌಡರು ಒಂದು ಮಾತನ್ನು ಹೇಳಿದರು. ಬಹುಶಃ ನಾವೆಲ್ಲಾ ಅದನ್ನು ಗಮನದಲ್ಲಿಟ್ಟುಕೊಂಡಿದ್ದೇವೆ. ಅವರು ಪಂಚಾಯತಿ ಚುನಾವಣೆಗಳ ಬಗ್ಗೆ ನಾವು ಹೇಳಿಲ್ಲ, ನಾವು ಅದರ ಬಗ್ಗೆ ಆಪಾದನೆ ಮಾಡುತ್ತಿಲ್ಲ, ಅಧ್ಯಕ್ಷ ಮತ್ತು ಉಪಾಧ್ಯಕ್ಷ ಚುನಾವಣೆಗಳ ಪ್ರಕ್ರಿಯೆಗಳ ಬಗ್ಗೆ ಮಾತನಾಡುತ್ತಿಲ್ಲ ಲಾ ಅಂಡ್ ಆರ್ಡರ್ ಬಗ್ಗೆ ಮಾತ್ರ ನಮಗೆ ಸೀಮಿತವಾಗುತ್ತದೆ ಎನ್ನುವ ಮಾತನ್ನು ಹೇಳಿರುವುದು ಅದು ರೆಕಾರ್ಡ್‌ನಲ್ಲಿದೆ. ನಾವೆಲ್ಲಾ ಕೇಳಿಸಿಕೊಂಡಿರುತ್ತೇವೆ, ಮಾನ್ಯ ಬನ್ನಿಕೋಡ್‌ರವರು ನಮ್ಮ ಎದುರಿನಲ್ಲಿಯೇ ಇದ್ದಾರೆ, ಅವರ ಭಾಷಣವನ್ನು ನಾನು ಬಹಳ ಕೂಲಂಕಷವಾಗಿ ಕೇಳಿದ್ದೇನೆ. ಅವರು ಹೇಳಿದ್ದಾರೆ ನನ್ನ ಕ್ಷೇತ್ರದಲ್ಲಿ ಏನೂ ಘಟನೆಗಳಾಗಿಲ್ಲ, ಜಿಲ್ಲಾಧಿಕಾರಿಗಳು ಬಹಳ ಒಳ್ಳೆಯವವರಿದ್ದಾರೆಂದು.

(ಗೊಂದಲ)

ದಯಮಾಡಿ ಬೇರೆ ಕಥೆಯನ್ನು ಹೇಳಲಿಕ್ಕೆ ಹೋಗಬೇಡಿ. ನಿಮ್ಮ ಕ್ಷೇತ್ರದ್ದೇನಾದರೂ ಇದ್ದರೆ ಹೇಳಿ. ಸನ್ಮಾನ್ಯ ದೇಶಪಾಂಡೆಯವರು ಅವರ ಕ್ಷೇತ್ರದಲ್ಲಿ ಏನಾದರೂ ನಮ್ಮ ಮಾರ್ಗದರ್ಶನ ಬಿಟ್ಟು, ಮೀಸಲಾತಿ ನಿಯಮಗಳನ್ನು ಬಿಟ್ಟು ಚುನಾವಣೆಗಳೇನಾದರೂ ಆಗಿದ್ದರೆ ಹೇಳಲಿ. ಸನ್ಮಾನ್ಯ ಉಪನಾಯಕರಾದ ಸಿಂಧ್ಯಾರವರು ಇದ್ದಾರೆ. ಅವರು ಹೇಳಲಿ ಮಾರ್ಗದರ್ಶನವನ್ನೇನಾದರೂ ಬಿಟ್ಟು ಕಾನೂನು ಬಾಹಿರವಾಗಿ ಏನಾದರೂ ಚುನಾವಣೆ ಎಲ್ಲಾದರೂ ಅವರ ಕ್ಷೇತ್ರದಲ್ಲಿ ಆಗಿದ್ದರೆ ಅದನ್ನು ಹೇಳಲಿ. ಸನ್ಮಾನ್ಯ ಹಿರಿಯ ನಾಯಕರಾದಂಥ ವಾಟಾಳ್ ನಾಗರಾಜ್‌ರವರು ಇದ್ದಾರೆ, ಅವರ ಕ್ಷೇತ್ರದಲ್ಲಿ ಏನಾದರೂ ನಿಯಮಗಳನ್ನು ಮುರಿದು ಯಾವುದೇ ಹಸ್ತಕ್ಷೇಪ ಚುನಾವಣೆಗಳು ಆಗಿದ್ದರೆ ಅವರು ಹೇಳಲಿ. ಸನ್ಮಾನ್ಯ ಬೈರೇಗೌಡರು ಇದ್ದಾರೆ....

(ಗೊಂದಲ)

ಶ್ರೀ ಆರ್.ಎಲ್. ಜಾಲಪ್ಪ: ಶೇಕಡಾ 80 ಭಾಗದಷ್ಟು ಸುಳ್ಳು ಸಾಕ್ಷಿ ಹೆಸರುಗಳನ್ನು ಕೊಟ್ಟಿದ್ದಾರೆ.

(ಗೊಂದಲ)

ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ: ಅವರಲ್ಲಿ ಆಗಿಲ್ಲ, ನನ್ನ ಕ್ಷೇತ್ರದಲ್ಲಿ ಆಗಿರುವುದನ್ನು ಹೇಳುತ್ತಿದ್ದೇನೆ, ಅದನ್ನು ಒಪ್ಪಬೇಕಲ್ಲಾ,

(ಗೊಂದಲ)

ಶ್ರೀ ಆರ್.ಎಲ್. ಜಾಲಪ್ಪ: ಸುಳ್ಳು ಸರ್ಟಿಫಿಕೇಟ್‌ಗಳನ್ನು ಕೊಟ್ಟಿದ್ದಾರಲ್ಲಾ, ಇದು ಕಾನೂನು ಬಾಹಿರವಲ್ಲವೇ? ರಿಟರ್ನಿಂಗ್ ಆಫೀಸರ್‌ಗೆ ಕೊಟ್ಟಿದ್ದಾರೆ, ಇದು ಕಾನೂನು ಬಾಹಿರವಲ್ಲವೆ?

ಶ್ರೀ ಆರ್.ವಿ. ದೇಶಪಾಂಡೆ: ಇದು ಬಹಳ ಸಿಂಪಲ್, ನಿಮಗೆ ನೇರವಾಗಿ ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಕೆಲವು ಕಡೆ ದೂರುಗಳು ಬಂದಾಗ ಜಿಲ್ಲಾಧಿಕಾರಿಗಳಿಗೆ ನಾವು ಉದ್ದೇಶಪೂರ್ವಕವಾಗಿ ಎಲೆಕ್ಷನ್ ಮಾಡಲಿಕ್ಕೆ ಹೇಳಿಲ್ಲ, ರೀಷೆಡ್ಯುಲ್ ಮಾಡಲಿಕ್ಕೆ ಹೇಳಿದ್ದೇವೆಂದು ಹೇಳಿದಿರಿ.

ಶ್ರೀ ಕೆ.ಹೆಚ್. ರಂಗನಾಥ್: ಪರಿಶೀಲನೆ ಮಾಡುವಾಗ ರೀಷೆಡ್ಯೂಲ್ ಮಾಡುವ ಬಗ್ಗೆ ಗಮನಹರಿಸುವುದು ಎಂದು ಹೇಳಿರುವುದು.

7.40 ಪಿ.ಎಂ

ಶ್ರೀ ಆರ್.ವಿ. ದೇಶಪಾಂಡೆ: ರೀಷೆಡ್ಯೂಲ್ ಮತ್ತು ಪರಿಶೀಲನೆ ಮಾಡುವುದಕ್ಕೆ ಹೇಳಿದಿರಿ. ಹಾಗಾದರೆ ಜಿಲ್ಲಾಧಿಕಾರಿಗಳು ಎಲ್ಲೆಲ್ಲಿ ಪರಿಶೀಲನೆ ಮಾಡಿದ್ದಾರೆ, ರೀಷೆಡ್ಯೂಲ್ ಮಾಡಿದ್ದಾರೆ ಆ ಕ್ಷೇತ್ರಗಳು ಯಾವುವು? ನಾನು ಒಂದು ಉದಾಹರಣೆ ಕೊಟ್ಟೆ, ರಾಯಚೂರು ಜಿಲ್ಲೆ, ಗುಲ್ಬರ್ಗಾ ಜಿಲ್ಲೆ, ಉತ್ತರ ಕನ್ನಡ ಜಿಲ್ಲೆ, ಕಾರವಾರದಲ್ಲಿ ಬೆಂಗಳೂರಿನ ರೂರಲ್‌ನಲ್ಲಿ ಹೊಸಕೋಟೆಯಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಹೀಗೆ ಎಲ್ಲೆಲ್ಲಿ ಚುನಾವಣೆಯನ್ನು ಮುಂದೆ ಹಾಕಿದರಲ್ಲಾ ಅಲ್ಲಿಯ ಜಿಲ್ಲಾಧಿಕಾರಿಗಳು ನಿಮಗೆ ದೂರು ಬರುವುದಕ್ಕೆ ಮುಂಚೆ ಏನು ಮೀಸಲಾತಿ ಮಾಡಿದ್ದರು ಯಾವ ಕ್ಷೇತ್ರಗಳನ್ನು ಮೀಸಲಾತಿ ಮಾಡಿದ್ದರು ಅಲ್ಲಿ ತಮ್ಮ ಆದೇಶ ಹೋದನಂತರ ಬದಲಾವಣೆ ಆಗಿದೆಯೇ ಇಲ್ಲವೇ? ಬದಲಾವಣೆ ಆಗಿದ್ದರೆ ಜಿಲ್ಲಾಧಿಕಾರಿಗಳು ಏನು ತಪ್ಪು ಮಾಡಿದರಲ್ಲಾ ಆ ತಪ್ಪುಗಳು ಯಾವುವು? ಅವುಗಳ ಬಗ್ಗೆ ತಾವು ಏನು ಕ್ರಮ ಕೈಗೊಳ್ಳುತ್ತೀರಿ? ಒಂದು ವೇಳೆ ತಪ್ಪು ಮಾಡಿಲ್ಲವೆಂದು ನಿಮ್ಮ ಶಾಸಕರ ಸಮಾಧಾನಕ್ಕೋಸ್ಕರ ಮೀಸಲಾತಿಯನ್ನು ಬದಲಾವಣೆ ಮಾಡಿದ್ದರೆ ಹಸ್ತಕ್ಷೇಪವನ್ನು ಮಾಡಿದಂತೆ ಆಯಿತು.

ಶ್ರೀ ಎಂ. ವೀರಪ್ಪ ಮೊಯಿಲಿ: ನನ್ನ ಪ್ರಶ್ನೆಯೂ ಕೂಡ ಅದೆ. ನಾನು ಹೇಳುವುದು ಏನೆಂದರೆ a circular has been issued by the RDPR Secretary fixing up. ಯಾವ ರೀತಿಯಲ್ಲಿ ಮೀಸಲಾತಿ ಮಾಡಬೇಕೆಂದು ಡೈರೆಕ್ಷನ್ ಹೋಗಿದೆ. ಡೈರೆಕ್ಷನ್ ಹೋದಮೇಲೆ ಅದಕ್ಕೆ ವಿರುದ್ಧವಾಗಿ ಯಾವುದೇ ಜಿಲ್ಲಾಧಿಕಾರಿಗಳು ಯಾವುದೇ ಮಂಡಲ ಪಂಚಾಯಿತಿ ಎಲೆಕ್ಷನ್ ಮಾಡಿದಂತ ನಿದರ್ಶನ ಇಲ್ಲ. ನೀವು ಕೂಡ ಆಪಾದನೆ ಮಾಡಲಿಲ್ಲ, ಒಂದು ವೇಳೆ ಜಿಲ್ಲಾಧಿಕಾರಿಗಳು ಆ ಮಾರ್ಗದರ್ಶನದ ಪ್ರಕಾರ, ಗೈಡ್‌ಲೈನ್ಸ್ ಪ್ರಕಾರ ಹೋಗದಿದ್ದರೆ ಬದಲಾವಣೆ ಮಾಡಿದ್ದರೆ, it should not be contrary to the rules. ಒಂದು ಆಪಾದನೆ ಕೂಡ ಇಲ್ಲದಿದ್ದರೆ ಯಾವ ಆಧಾರದ ಮೇಲೆ ಹೌಸ್ ಕಮಿಟಿ ಮಾಡಬೇಕು?

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ: ಏತಕ್ಕೆ ಅವಸರ ಮಾಡುತ್ತೀರಿ? ಬೆಳಗಿನಿಂದ ಗಂಟೆಗಟ್ಟಲೆ ಮಾತನಾಡಿದ್ದೀರಿ.

SRI R.L. JALAPPA : We want a convincing answer, not a silencing answer. We want a convincing answer. You cannot silence us. Please try to convince us.

ಶ್ರೀ ಪಿ.ಜಿ.ಆರ್. ಸಿಂಧ್ಯ: ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳಲ್ಲಿ ವಿನಂತಿಸುವುದು ಏನೆಂದರೆ, ತಾವು ಈ ಸದನದಲ್ಲಿ 22-23 ವರ್ಷಗಳ ಕಾಲ ಶಾಸಕರಾಗಿ ಕೆಲಸ ಮಾಡಿದ್ದೀರಿ. ದಿ: ದೇವರಾಜ ಅರಸು ಅವರ ಸಚಿವ ಸಂಪುಟದಲ್ಲಿ ಕೆಲಸ ಮಾಡಿದ್ದೀರಿ. ನಾವು ಅಲ್ಲಿ ಕುಳಿತುಕೊಳ್ಳುತ್ತಿದ್ದೆವು ಅರಸುರವರು ಮುಖ್ಯ ಮಂತ್ರಿಗಳಾಗಿದ್ದಾಗ ಅನೇಕ ಆಪಾದನೆಗಳನ್ನು ಈ ಕಡೆಯ ಸದಸ್ಯರು ಮಾಡತಕ್ಕ ಸಂದರ್ಭದಲ್ಲಿ ಸರ್ಕಾರದವರು ನ್ಯಾಚುರಲ್ ಆಗಿ ಅವರಿಗೆ ಸರ್ಕಾರಿ ಅಧಿಕಾರ ಯಂತ್ರದಿಂದ ಬರತಕ್ಕಂಥ ವಸ್ತು ಸ್ಥಿತಿಯ ಮೇಲೆ ಅಂಕಿಅಂಶಗಳ ಮೇಲೆ ಉತ್ತರವನ್ನು ನೀವು ಇದ್ದರೂ ಕೊಡುತ್ತೀರಿ, ನಾವು ಇದ್ದರೂ ಕೊಡುತ್ತೇವೆ, ನೀವು ಕೊಟ್ಟುಕೊಂಡು ಬಂದಿದ್ದೀರಿ. ನಾವು ಏನು ಆಪಾದನೆ ಮಾಡಿರತಕ್ಕದ್ದು, ಕೊನೇ ಪಕ್ಷ 3-4 ಜಿಲ್ಲೆಗಳಲ್ಲಿ ವಾಸ್ತವಾಂಶದಲ್ಲಿ ತಮಗೂ ಸಹ ಗೊತ್ತಿದೆ ತಮ್ಮ ಆತ್ಮಕ್ಕೂ ಸಹ ಗೊತ್ತಿದೆ. ಜಿಲ್ಲಾಧಿಕಾರಿಗಳು ಮಾಡಿರತಕ್ಕದ್ದು ತಪ್ಪು, ಅದನ್ನು ರೀಷೆಡ್ಯೂಲ್ ಮಾಡಬೇಕೆಂಬ ಸೂಚನೆಯನ್ನು ಆರ್‌ಡಿಪಿಆರ್ ಸೆಕ್ರೆಟರಿ ಮತ್ತು ಮಿನಿಸ್ಟರಿಂದ ಹೋಗಿರತಕ್ಕದ್ದು ನಿಜ. ಅದು ಸರಿಯೋ ತಪ್ಪೋ? ನೀವು ಹೇಳುತ್ತೀರಿ ತಪ್ಪಿಲ್ಲವೆಂದು ನಾವು ಹೇಳುತ್ತೇವೆ ತಪ್ಪು ಮಾಡಿದ್ದಾರೆ ಎಂದು. ಅದಕ್ಕೋಸ್ಕರ ನಾವು ಏನು ಹೇಳುತ್ತಿದ್ದೇವೆಂದರೆ ಒಂದು ಹೌಸ್ ಕಮಿಟಿಯನ್ನು ಅಪಾಯಿಂಟ್ ಮಾಡಿ, ಹೌಸ್ ಕಮಿಟಿ ಅಪಾಯಿಂಟ್ ಮಾಡಿದರೆ ಒಂದೆರಡು ತಿಂಗಳಲ್ಲಿ ಜಿಲ್ಲಾಧಿಕಾರಿಗಳು ತಪ್ಪು ಮಾಡಿದ್ದಾರೋ ಇಲ್ಲವೋ ಎಂಬುದನ್ನು ಪತ್ತೆ ಮಾಡಬಹುದು. ಇನ್ನೊಂದು ಏನಾಗಿದೆ ಎಂದರೆ ನಿಮ್ಮ ಪಕ್ಷದ ಶಾಸಕರ ಮೇಲೆ ಗೂಬೆ ಕೂಳಿತಿದೆ. ಇವತ್ತಿನ ದಿವಸ ಹಳ್ಳಿಗಳಿಗೆ ಹೋದರೆ ಅವರು ಏನು ಹೇಳುತ್ತಾರೆ ಎಂದರೆ ಇದನ್ನು ಬೇಕು ಎಂದು ತಪ್ಪಿಸುವುದಕ್ಕೆ ಲೇಡೀಸ್‌ಗೆ ಮಾಡಿದ್ದಾರೆ, ನನಗೆ ತಪ್ಪಿಸುವುದಕ್ಕೆ ಮತ್ತೊಬ್ಬರಿಗೆ ಮಾಡಿದ್ದಾರೆಂದು ಹೇಳುತ್ತಾರೆ. ಅದರಿಂದ ನಾವು ವಿಮುಕ್ತರಾಗುತ್ತೇವೆ ಅದು ಮೊದಲನೆಯದು, ಎರಡನೆಯದಾಗಿ, ವೈಯಲೆನ್ಸ್ ಏನಿದೆ ಅದು ಜನತಾ ದಳದ ಸಂದರ್ಭದಲ್ಲಿ ಆಗಿಲ್ಲ, ಮತ್ತೊಂದು ಆಗಿಲ್ಲವೆಂದು ಡಿಫೆನ್ಸ್ ತೆಗೆದುಕೊಳ್ಳುವುದರಿಂದ ಉಪಯೋಗವಾಗುವುದಿಲ್ಲ. ನಾವು ಏನು ಕೇಳುತ್ತಿದ್ದೇವೆ, ಬಡವರಿಗೆ ರಕ್ಷಣೆ ಕೊಡುವುದಕ್ಕೆ ಪೊಲೀಸರು ಇರತಕ್ಕದ್ದು. ಅದರ ಬಗ್ಗೆ ಸಂಶಯ ಇಲ್ಲ, ಹರಿಜನರಿಗೆ ರಕ್ಷಣೆ ಕೊಡಬೇಕೆಂಬುದು ನಿರ್ವಿವಾದದ ವಿಚಾರ. ದುರ್ಬಲ ವರ್ಗದವರಿಗೆ ರಕ್ಷಣೆ ಕೊಡಬೇಕೆಂಬುದು ನಿರ್ವಿವಾದದ ವಿಚಾರ. ಅಲ್ಲಿ ಆಗಿರತಕ್ಕದ್ದು ಏನು? ಬಂಗಾರಪ್ಪನವರ ಪಕ್ಷಕ್ಕೂ, ಕಾಂಗ್ರೆಸ್ ಪಕ್ಷಕ್ಕೂ ಇರತಕ್ಕ ಜಗಳ ಎಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ಇದರ ಹಿನ್ನೆಲೆಯಲ್ಲಿ ನಾವು ಏನು ಕೇಳುತ್ತಿದ್ದೇವೆ, ಇದರ ಅವಶ್ಯಕತೆ ಇತ್ತೇ, ನಾವು ಆಪಾದನೆ ಮಾಡಬಹುದು, ಆದರೆ ನಾನು ಮಾಡುವುದಕ್ಕೆ ಹೋಗುವುದಿಲ್ಲ. ಯಾರೋ ಒಬ್ಬ ಪರ್ಟಿಕ್ಯುಲರ್ ಅಧಿಕಾರಿ ಕೆಳಮಟ್ಟದಲ್ಲಿರುವವರಿಗೆ ಎರಡು ಪಾರ್ಟಿ ರೈವಲರಿಯಿಂದಾಗಿ ಬೇಕಾಗದೆ ಇರತಕ್ಕವರು ಇನ್‌ಸ್ಟಿಗೇಟ್ ಮಾಡಿರಬಹುದು, ಪರ್ಚೇಸ್ ಮಾಡಿರಬಹುದು, ಬ್ರೈಬ್ ಮಾಡಿರಬಹುದು. ಅದರ ಪಾಸಿಬಿಲಿಟೀಸ್ ಇದೆ. ಅದಕ್ಕೋಸ್ಕರ ನಾವು ಕೇಳುತ್ತಿದ್ದೇವೆ, ತಾವು ಜ್ಯೂಡಿಷಿಯಲ್ ಪ್ರೋಬ್ ಮಾಡಿ ಎಂದು. ದೇವರಾಜ ಅರಸು ಅವರು ಹೇಗೆ ಮೇಲ್ಮಟ್ಟಕ್ಕೆ ಎತ್ತರವಾಗಿ ಬೆಳೆದರು, ಅವರಂತೆ ನೀವು ಬನ್ನಿ ಹೇಳಿ, ಏನಾಗುತ್ತದೆ ಅದರಲ್ಲಿ?

ನೀವು ಹಸ್ತಕ್ಷೇಪ ಮಾಡಿಲ್ಲ ಎಂದು ಹೇಳಿ. ವಿರೋಧಪಕ್ಷದ ನಾಯಕರಾಗಲೀ ಜಾಲಪ್ಪನವರಾಗಲೀ ನಿಮ್ಮ ಆಫೀಸಿನಿಂದ ಸೂಚನೆ ಹೋಗಿದೆ ಎಂದು ನಾವು ಯಾರೂ ಹೇಳಿಲ್ಲ. ಎಲ್ಲ ಪಕ್ಷದವರೂ ಹೇಳುತ್ತಿದ್ದಾರೆ. ನಿಮ್ಮ ಪಾರ್ಟಿಯ ದೇವನಹಳ್ಳಿ ಶಾಸಕರೂ ಸಹ ಹೇಳಿದರು. ನೀವು ಹೌಸ್ ಕಮಿಟಿ ಅಥವಾ ಜ್ಯೂಡಿಷಿಯಲ್ ಪ್ರೋಬ್ ಬಗ್ಗೆ ಅನೌನ್ಸ್ ಮಾಡಿ. ತಾವು ಎತ್ತರಕ್ಕೆ ಬೆಳೆಯುತ್ತೀರಿ. ಏನು ತೊಂದರೆಯಾಗುತ್ತದೆ ಇದರಿಂದ ತಾವು ಅದನ್ನು . ಹೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಅಧ್ಯಕ್ಷರೆ, ಈಗ ಮತ್ತೊಂದು ವಾದವಿವಾದ ಆಗುವಂಥ ಸಂದರ್ಭದಲ್ಲಿ ಒಂದು ವಿಚಾರವನ್ನು ಬಹುಶಃ ನಾವು ಬಹಳ ಗಮನಕೊಟ್ಟು ವಿಚಾರ ಮಾಡಬೇಕು. ಏಕೆಂದರೆ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಚುನಾವಣೆ ಬಗ್ಗೆ ಕ್ಯಾಲೆಂಡರ್ ಆಫ್ ಇವೆಂಟ್ಸ್ ಇಷ್ಯೂ ಮಾಡುವುದಿಲ್ಲ. ಡಿ.ಸಿ.ಯವರು ಪ್ರಿಸ್ಕ್ರೈಬ್ಡ್ ಆಫೀಸರ್ ಎಂದು ನೇಮಕ ಮಾಡುತ್ತಾರೆ. ಅದು ಡೆಪ್ಯುಟಿ ತಹಸೀಲ್ದಾರ್ ಇರಬಹುದು ತಹಸೀಲ್ದಾರ್ ಇರಬಹುದು ಯಾರೇ ಇರಬಹುದು ಅವರು ಏನು ಮಾಡುತ್ತಾರೆಂದರೆ 24 ಗಂಟೆ ನೋಟೀಸ್‌ನ್ನು ಚುನಾಯಿತರಾದವರಿಗೆ ಕೊಡುತ್ತಾರೆ. ಅಲ್ಲಿ ಮೀಟಿಂಗ್ ಆಗುತ್ತದೆ. ಕ್ಯಾಲೆಂಡರ್ ಆಫ್ ಇವೆಂಟ್ಸ್ ಆಗುವುದಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ : ಇಲ್ಲ, ಇಲ್ಲ, ನಿಮಗೆ ಗೊತ್ತಿಲ್ಲ. No nominations are called ಕ್ಯಾಲೆಂಡರ್ ಆಫ್ ಇವೆಂಟ್ಸ್ ಇರುತ್ತದೆ. Date of Nomination is there. Date of withdrawal is there. It is there. ಅದೆಲ್ಲಾ ಇದೆ. ನಿಮಗೆ ಗೊತ್ತಿಲ್ಲ ಅದು. ಬೇಸಿಕ್ ಪ್ರೊಸೀಜರೇ ಮುಖ್ಯಮಂತ್ರಿಗಳಿಗೆ ಗೊತ್ತಿಲ್ಲ.

SRI M. VEERAPPA MOILY : I know it. But, there is no such calendar of events. I know it

24 ಗಂಟೆಯೊಳಗೆ....

(ಹಲವಾರು ವಿರೋಧಪಕ್ಷದ ಮಾನ್ಯ ಸದಸ್ಯರು ಮಾತನಾಡುತ್ತಿದ್ದರು)

ಶ್ರೀ ಎಂ. ವೀರಪ್ಪ ಮೊಯಿಲಿ : ಸ್ವಲ್ಪ ಕೇಳಿ. ನಾಮಿನೇಷನ್ ಇದೆ. ನಾಮಿನೇಷನ್ ಇಲ್ಲ ಎಂದು ಹೇಳುತ್ತಿಲ್ಲ. I am not telling. I never said. 24 ಗಂಟೆಯೊಳಗೆ ಪ್ರಕ್ರಿಯೆ ನಡೆಯತಕ್ಕದ್ದು. ಕ್ಯಾಲೆಂಡರ್ ಆಫ್ ಇವೆಂಟ್ಸ್ ಇಲ್ಲ. ನಾಮಿನೇಷನ್ ಹಾಕಿ ಸೆಕೆಂಡ್ ಮಾಡಿ ಅಲ್ಲೇ ಮೀಟಿಂಗ್ ಕರೆಯತಕ್ಕದ್ದು ಇದೆ. ಆದರೆ ಚುನಾವಣಾ ಪ್ರಕ್ರಿಯೆ ಎಂದು ಹೇಳಿ there is no such election process. It is a meeting which is important.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರನ್ನು ಚುನಾಯಿಸಬೇಕಾಗಿದೆ, ಈ ಸಂದರ್ಭದಲ್ಲಿ ಇಷ್ಟು ಹೊತ್ತಿಗೆ ನಾವು ಸೇರುತ್ತಿದ್ದೇವೆ ಎಂದು ಹೇಳಿ ಯಾರು ಅಧ್ಯಕ್ಷಸ್ಥಾನಕ್ಕೆ ನಿಲ್ಲುವವರು ನಾಮಿನೇಷನ್ ಕೊಡಿ ಎಂದರೆ . ಏನರ್ಥ?

SRI R.V. DESHAPANDE : Seven days notice if given. Nominations are called and on the date of election, the elections held. If there are two nominations, they will hold the election. But, 7 days' time is there.

ಅವರು ಚಾವಡಿಯಲ್ಲಿ, ತಹಸೀಲ್ದಾರ್ ಕಛೇರಿಯಲ್ಲಿ ಇಂಥ ದಿನ ಇಂಥ ಮಂಡಲದ ಎಲೆಕ್ಷನ್ ಆಗುತ್ತದೆ, ಈ ತಾರೀಖಿನೊಳಗೆ ನಾಮಿನೇಷನ್ ಫೈಲ್ ಮಾಡಬೇಕು ಎಂದು ತಿಳಿಸಿದ್ದಾರೆ. ಎಲ್ಲಾ ಕಡೆ ಮಾಡಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಪ್ರತಿಯೊಬ್ಬರಿಗೂ ನೋಟೀಸ್ ಕೊಡುತ್ತಾರೆ. But, it is decided in a meeting. But, there is no such election process. In

the first meeting the elections of Panchayat Presidents and Vice Presidents are held ಸೆಕ್ಷನ್ 44(2)ರ ಪ್ರಕಾರ ಡೈರೆಕ್ಷನ್ ಕೊಡತಕ್ಕ ಅಧಿಕಾರ ಇದೆ. ಸೆಕ್ಷನ್ 44ರ ಪ್ರಕಾರ Election of Adhyakshas and Upadhyakshas.

ಇದೆಲ್ಲಾ ಪ್ರೋಸೆಸ್ ಇದೆ. ಆದ್ದರಿಂದ (2) Subject to the general or special order of the government, the Deputy Commissioner shall reserve such number of Offices of Adhyakshas....." It is an administrative act. What the government does is not a judicial act like any other election. It is an administrative act on behalf of the government. ಒಂದು ವೇಳೆ ರಿಸರ್ವೇಷನ್ ಆರ್ಡರ್ ಇಲ್ಲದಿದ್ದರೆ, yes, nobody can interfere with the Deputy Commissioner. ಅಡ್ಮಿನಿಸ್ಟ್ರೇಟಿವ್ ಆರ್ಡರ್ ಇರುವಾಗ ರಿಸರ್ವೇಷನ್ ಯಾವ ತರಹ ಇರಬೇಕು ಎಂಬ ಬಗ್ಗೆ ಮಾರ್ಗದರ್ಶನ ಕೊಡತಕ್ಕ ಅಧಿಕಾರ ಆರ್.ಡಿ.ಪಿ.ಆರ್. ಸೆಕ್ರೆಟರಿಯವರಿಗೆ ಇದೆ.

According to 44 (2) 'Subject to the general or special order of the government, the Deputy Commissioner shall reserve.... Suppose a clarification required, still the Government is entitled to issue a clarification. Suppose any deputy Commissioner finds it difficult and if a clarification is required in respect of reservation of seats as to how they should conduct, the government, is entitled to issue. ಇಲ್ಲಿ ಪ್ರಶ್ನೆ ಏನು ಬಂತು ಎಂದರೆ ಡೆಪ್ಯುಟಿ ಕಮಿಷನರ್ ಅವರ ಚುನಾವಣಾ ಪ್ರಕ್ರಿಯೆಯಲ್ಲಿ ಹಸ್ತಕ್ಷೇಪ ಮಾಡತಕ್ಕ ಅಧಿಕಾರ ಕ್ಯಾಬಿನೆಟ್‌ಗಾಗಲೀ ಅಥವಾ ಸರ್ಕಾರಕ್ಕಾಗಲೀ ಇಲ್ಲ ಎಂಬ ಮಾತು ಏನು ಬಂದಿದೆ 44 (2) will not speak about it. 44(2) entails the government to issue a special order or the general order to the Deputy Commissioner with regard to this. So, the order issued by the government or a clarification issued by the government to the Deputy Commissioner is very much in consonance with this Act.

SRI R.V. DESHAPANDE : Please Don't misguide the House.

SRI M. VEERAPPA MOILY : You can always say that.

SRI R.V. DESHAPANDE : Subject to the general or special order of the government, the Deputy Commissioner shall

SRI M. VEERAPPA MOILY : It is only one-time reservation. I will complete it.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಹೇಳಿದಹಾಗೆ ಎಲ್ಲಿ ಎಷ್ಟು ಪರ್ಸೆಂಟೇಜ್ ರಿಸರ್ವ್ ಆಗಬೇಕೋ ಅದು 44 ಎ, 44 ಬಿ, 44 ಸಿ ಯಲ್ಲಿ ಹೇಳಿದ್ದಾರೆ. ಎಸ್‌ಸಿಎಸ್‌ಟಿ, ಬಿಸಿ ಹಾಗೂ ಲೇಡೀಸ್‌ಗೆ ರಿಸರ್ವ್ ಎಷ್ಟು ಇರಬೇಕೆಂದು ಹೇಳಿದ್ದಾರೆ. ಆದರೆ ಪ್ರಶ್ನೆ ಅದು ಅಲ್ಲ. ಪ್ರಶ್ನೆ ಎಂದರೆ, ತಾವು ಈ ರಿಸರ್ವೇಷನ್ ಬಗ್ಗೆ ಡೈರೆಕ್ಷನ್ ಕೊಟ್ಟಿದ್ದರೆ ಅದರ ಬಗ್ಗೆ ತಕರಾರು ಇಲ್ಲ, ವಾದ ಇಲ್ಲ ಆ ಬಗ್ಗೆ ಕ್ಲಾರಿಫಿಕೇಷನ್ ಕೊಟ್ಟರೂ ವಾದ ಇಲ್ಲ. ಆದರೆ ತಾವು ಚುನಾವಣೆಗಳನ್ನೇ ರೀಷೆಡ್ಯೂಲ್ ಮಾಡುವುದಕ್ಕೆ ಹೇಳಿದ್ದೀರಿ. ಜಿಲ್ಲಾಧಿಕಾರಿಗಳು ಮಾಡಿದ ನಂತರ ಮಾನ್ಯ ಸಚಿವರು ಹೇಳಿದರು, ನಮಗೆ ದೂರು ಬಂದವು ಹಾಗಾಗಿ ನಾವು ರೀಷೆಡ್ಯೂಲ್ ಮಾಡಿದ್ದೇವೆ ಎಂದು. ರೀಷೆಡ್ಯೂಲ್ ಮಾಡಿ ಜಿಲ್ಲಾಧಿಕಾರಿಗಳು ಮಾಡಿದ್ದನ್ನು ತಾವು ಬದಲಾವಣೆ ಮಾಡಿದಿರಿ. ಯಾವ ಕ್ಷೇತ್ರದಲ್ಲಿ ಜಿಲ್ಲಾಧಿಕಾರಿಗಳು ಮೀಸಲಾತಿ ಮಾಡಿದ್ದರೋ ಅದನ್ನು ಬದಲಾವಣೆ ಮಾಡುವುದಕ್ಕೆ ಆದೇಶ ಕೊಟ್ಟಿರಿ. ಇದು ಒಂದು. ಇದು ನಿಮ್ಮ ಇನ್ನು ಎರಡನೆಯದಾಗಿ

ಸರ್ಕಾರದಿಂದ ಆದೇಶ ಕೊಟ್ಟಿದ್ದು ಆದರಲ್ಲಿ ಫರ್ದರ್ ಗೈಡ್‌ಲೈನ್ಸ್ ಕೊಟ್ಟರು. ಎಲ್ಲಿ ಪರಿಶಿಷ್ಟ ಜಾತಿಯವರು ಹೆಚ್ಚು ಆರಿಸಿಬಂದಿದ್ದಾರೆ ಅಲ್ಲಿ ಪರಿಶಿಷ್ಟ ಜಾತಿಗೆ, ಪಂಗಡದವರು ಹೆಚ್ಚು ಬಂದಿರುವ ಕಡೆ ಪಂಗಡವರಿಗೆ ಕೊಡಿ ಎಂದು ಗೈಡ್‌ಲೈನ್ಸ್ ಕೊಟ್ಟಿರಿ. ಈ ಒಂದು ಇಂಟರ್‌ಫಿಯರೆನ್ಸ್ ಮಾಡಿದಿರಲ್ಲಾ ಅದಕ್ಕಿಂತಲ್ಲೂ ಮುಖ್ಯ rescheduling of elections and changing the reservations made by the Deputy Commissioner in various districts.

ಅದರ ಬಗ್ಗೆ ಉತ್ತರ ಕೊಡಿ.

ಶ್ರೀ ಎಂ. ವೀರಪ್ಪ ಮೊಯಿಲಿ: ಸನ್ಮಾನ್ಯ ಅಧ್ಯಕ್ಷರೇ, ಇಷ್ಟೇ ಹೇಳಿದ್ದುದು. There are two important things. It is an administrative order by the government. Under 44 (2) the government has issued this. Government had asked only for review of reservation order and to ensure that it is done properly and if that is not done properly reschedule it and do it in conformity with the guidelines issued under this Act. This is the only thing done by the government. Nothing more the government has done. We have said that if it is not reserved in accordance with the guidelines issued by the government under the government order, you have to reschedule the election and ensure that it is done in consonance with the Act. What is wrong?

(Interruptions)

SRI R.V. DESHAPANDE : We are not satisfied with the answer. We are urging for the House Committee and we are urging for the judicial probe. We have to take up our rights. We have no other alternative than to take to Dharna.

(Janata Dal Members and Sri Vatal Nagaraj came to the well of the House.)

(Interruptions)

SRI M. VEERAPPA MOILY : Their grievance is not that we have interfered.

(Interruptions)

SRI M. VEERAPPA MOILY : Now I must let the cat out of the bag. Do you know, your fate is sealed in the electorate of Karnataka? Your fate is sealed, According to the information which I will pass over to you, you can verify yourself, Out of the total seats of 53,543 seats, 36782 seats were bagged by Congress. It shows that 80% of the seats....

(Interruptions)

ಕರ್ನಾಟಕ ರಾಜ್ಯದ ಮತದಾರರನ್ನು ಎದುರಿಸಲಿಕ್ಕೆ ಆಗದೇ ಇರತಕ್ಕ ಈ ಜನ ಇವತ್ತು ರಾಜಕೀಯ ದುರುದ್ದೇಶದಿಂದ ಈ ನಿಲುವಳಿ ಸೂಚನೆಯನ್ನು ತಂದಿದ್ದಾರೆ. ಅದಕ್ಕೆ ಯಾವ ಆಧಾರವೂ ಇಲ್ಲ. ಅದಕ್ಕೆ ಯಾವ ಬೆಲೆಯೂ ಇಲ್ಲ. ಆದುದರಿಂದ ಇದು ರಾಜಕೀಯ ದುರುದ್ದೇಶದಿಂದ ತಂದ ಒಂದು ನಿರ್ಣಯ. ಅದನ್ನು ಕಿತ್ತುಹಾಕಿರಿ.

(ಗೊಂದಲ)

ಅಧ್ಯಕ್ಷರು : ಮಾನ್ಯ ವಿರೋಧಪಕ್ಷದ ನಾಯಕರು ಏನಾದರೂ ಕ್ಲಾರಿಫಿಕೇಷನ್ ಕೇಳುವುದು ಇದ್ದರೆ ಅವರು ದಯಮಾಡಿ ಅವರ ಸ್ಥಾನಕ್ಕೆ ಹೋಗಿ ಅಲ್ಲಿಂದ ಕೇಳಬೇಕೆಂದು ಹೇಳುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : (ಸದನದ ಬಾವಿಯಿಂದ ತಮ್ಮ ಸ್ಥಾನಕ್ಕೆ ತೆರಳಿ), ಮಾನ್ಯ ಅಧ್ಯಕ್ಷರೇ, ನಮಗೆ ತಮ್ಮ ಮೇಲೆ ಗೌರವ ಇದೆ. ಮಾನ್ಯ ಮುಖ್ಯ ಮಂತ್ರಿಗಳ ಉತ್ತರವನ್ನು ನೋಡಿದರೆ ಯಾವುದು ಪರಿಸ್ಥಿತಿ ಇದೆ ಅದನ್ನು ಒಪ್ಪಿಕೊಳ್ಳುವುದಕ್ಕೆ ಪ್ರಯತ್ನವನ್ನೇ ಮಾಡಿಲ್ಲ. ಅವರು ನ್ಯಾಯಾಂಗ ತನಿಖೆಗೆ, ಸದನ ಸಮಿತಿಗೆ ಒಪ್ಪಿಕೊಳ್ಳುತ್ತಿಲ್ಲ. ಆದ್ದರಿಂದ ನಮ್ಮ ಬೇಡಿಕೆ ಈಡೇರದಿದ್ದಾಗ ನಾವು ಧರಣಿ ಮಾಡದೇ ವಿಧಿ ಇಲ್ಲ. ಕಾಂಗ್ರೆಸ್‌ನವರು ಇಷ್ಟು ಜನ ಆರಿಸಿ ಬಂದರು ಎಂದು ಮುಖ್ಯ ಮಂತ್ರಿಯವರು ಹೇಳಿದರು. ಆದರೆ ಅವರೇ ಮುಂಜಾನೆ ವಾದ ಮಾಡಿದರು. ಪಕ್ಷಾತೀತವಾದ ಚುನಾವಣೆ ಆಗಿದೆ ಎಂದು ಹೇಳಿದರು. ನಾನು ಮುಖ್ಯಮಂತ್ರಿಯವರನ್ನು ಕೇಳುತ್ತೇನೆ. ಇದು ತಮಗೆ ಹೇಗೆ ಗೊತ್ತಾಯಿತು?

ಹಾಗಾಗಿ we have no other alternative but to continue the Dharna.

(ನ್ಯಾಯಾಂಗ ತನಿಖೆ ಆಗಲೇಬೇಕೆಂಬ ಕೂಗು ಬಾವಿಯಿಂದ ಕೇಳಿಬರುತ್ತಿತ್ತು)

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ, ಬೆಳಿಗ್ಗೆಯಿಂದ ಸಂಜೆಯ ವರೆಗೆ ಸಾಕಷ್ಟು ಚರ್ಚೆ ಆಗಿದೆ. ಬಹುಶಃ ನಿಲುವಳಿ ಸೂಚನೆಯಲ್ಲಿ ಇಷ್ಟು ದೀರ್ಘವಾದ ಚರ್ಚೆ ಅನೇಕ ಸಂದರ್ಭಗಳಲ್ಲಿ ಆದದ್ದಿಲ್ಲ. ಆದರೂ ಕೂಡ ತಾಳ್ಮೆಯಿಂದ ನಾವು ಯಾವುದಕ್ಕೂ ಅಡ್ಡಿ ಬರಲಿಲ್ಲ. ಮೆಜಾರಿಟಿ ಇದ್ದೇವೆಂದು ಮೈನಾರಿಟಿ ಮೇಲೆ ಧಾಳಿ ಮಾಡಬೇಕೆಂದು ಹೇಳುವುದಿಲ್ಲ. ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಸಾಕಷ್ಟು ಚರ್ಚೆ ಮಾಡುವುದಕ್ಕೆ ಅವಕಾಶ ಕೊಡದೇ ಇದ್ದರೆ ವಿರೋಧಪಕ್ಷದವರು ಬಾವಿಗೆ ಬರತಕ್ಕದ್ದು ಅವಶ್ಯಕ. ಆದರೆ ಇಲ್ಲಿ ಅವರು ಬಾವಿಗೆ ಬರತಕ್ಕ ಅವಶ್ಯಕತೆ ಏನು ಇದೆ? ಮಾನ್ಯ ಅಧ್ಯಕ್ಷರೇ ಅವಕಾಶ ಕೊಟ್ಟು ಚರ್ಚೆ ಮಾಡಿದ ಮೇಲೆ ಬಾವಿಗೆ ಬೀಳತಕ್ಕ ಅವಶ್ಯಕತೆ ಏನಿದೆ? ನಾನು ತಮ್ಮ ಮುಖಾಂತರ ವಿರೋಧ ಪಕ್ಷದ ನಾಯಕರು ಹಾಗೂ ವಿರೋಧ ಪಕ್ಷಗಳ ಎಲ್ಲಾ ನಮ್ಮ ನಾಯಕರುಗಳನ್ನು ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ತಾವುಗಳು ತಮ್ಮ ತಮ್ಮ ಸ್ಥಾನಕ್ಕೆ ಬನ್ನಿ. ತಾವು ಯಾವುದೇ ಸ್ಪಷ್ಟೀಕರಣ ಕೇಳುವುದಿದ್ದರೆ ಕೇಳಿ. ಅದಕ್ಕೆ ನಾವು ಉತ್ತರವನ್ನು ಕೊಡುವುದಕ್ಕೆ ಸಿದ್ಧರಿದ್ದೇವೆ. ಇಲ್ಲಿ ಸರ್ಕಾರದ ಮನವೊಲಿಸುವುದು ತಮ್ಮ ಕರ್ತವ್ಯ. ನ್ಯಾಯಾಂಗ ವಿಚಾರಣೆ ಆಗಬೇಕು, ಸದನದ ಸಮಿತಿ ಮಾಡಬೇಕೆಂದು ತಾವು ಹೇಳುತ್ತಿದ್ದೀರಿ. ಆ ಬಗ್ಗೆ ತಾವು ಸರ್ಕಾರದ ಮನವೊಲಿಸತಕ್ಕ ಕೆಲಸವನ್ನು ಮಾಡದೇ ತಾವು ನೇರವಾಗಿ ಬಾವಿಗೆ ಬಿದ್ದರೆ ನಿಮ್ಮನ್ನು ಎತ್ತುವವರು ಯಾರು ಎಂದು ನಮಗೆ ಗೊತ್ತಾಗುತ್ತಿಲ್ಲ. ತಾವು ತಮ್ಮ ಸ್ಥಾನಗಳಿಗೆ ಹೋಗಿ. ತಮಗೆ ಸ್ಪಷ್ಟೀಕರಣ ಬೇಕಿದ್ದರೆ ನಾವು ಕೊಡುತ್ತೇವೆ. ಚುನಾವಣೆಯಲ್ಲಿ ಸೋಲು ಗೆಲುವು ಇದ್ದೇ ಇದೆ. ಸೋತಿರಿ ಎಂದು ಏಕೆ ಬಾವಿಗೆ ಬೀಳುತ್ತೀರಿ? ಪುನಃ ಚುನಾವಣೆ ಬರುತ್ತದೆ. ಚುನಾವಣೆಯನ್ನು ಎದುರಿಸಿ ತಮ್ಮ ಶಕ್ತಿಯನ್ನು ಚುನಾವಣೆಯಲ್ಲಿ ತೋರಿಸಿ.

ಆದ್ದರಿಂದ ದಯಮಾಡಿ ತಾವು ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ. ನೀವು ಸಿಂಬಲ್ ಇಲ್ಲದೇ ಸೋತಿದ್ದೀರಿ. ಸಿಂಬಲ್ ಬಂದಮೇಲೆ, ಗೆಲ್ಲುತ್ತೇವೆಂಬ ವಿಶ್ವಾಸ ನಿಮಗೆ ಇದ್ದರೆ, ಮುಂದೆ ಬರತಕ್ಕ ಚುನಾವಣೆಗಳಲ್ಲಿ, ಸಿಂಬಲ್ ಇರತಕ್ಕ ಚುನಾವಣೆಗಳಲ್ಲಿ ಎದುರು ಬನ್ನಿ, ನಾವು ಎದುರಿಸುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : 80 ಭಾಗ ನಾವು ಗೆದ್ದಿದ್ದೇವೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಿದ್ದಾರೆ. ಅವರು ಮಾತೆತ್ತಿದ್ದರೆ, ನಮ್ಮ ಆತ್ಮ ವಿಶ್ವಾಸದಿಂದ

ಎಂದು ಹೇಳುತ್ತಿದ್ದಾರೆ. ಈ 80 ಭಾಗ ಗೆದ್ದಿರತಕ್ಕ ಅಂಕಿಅಂಶಗಳನ್ನು ಯಾರು ತಂದುಕೊಟ್ಟರು, ಯಾವಾಗ ಬಂತು, ಯಾವ ಯಾವ ಊರಿನದ್ದು, ಯಾವ ಜಿಲ್ಲೆ, ಯಾವ ತಾಲ್ಲೂಕು ಎಂಬ ಬಗ್ಗೆ ದಯವಿಟ್ಟು ಈ ಸದನದಲ್ಲಿ ಅವರು ಮಂಡಿಸಬೇಕು. ಬಾವಿಗೆ ಬೀಳುವುದಿರಲಿ, ನಾವು ಬಿದ್ದಿದ್ದೇವೆ, ಈಜುತ್ತೇವೆ, ಈಜು ಕಲಿತಿದ್ದೇವೆ, ಆಮೇಲೆ ಏಳುತ್ತೇವೆ.ಆ ಪ್ರಶ್ನೆ ಬೇರೆ. ಅವರಿಗೆ, ನಮ್ಮ ಬಗ್ಗೆ ಅನುಕಂಪ ಬೇಡ. ದಯಮಾಡಿ, ಇದನ್ನು ತಾವು ಸ್ಪಷ್ಟಪಡಿಸಬೇಕು.

ಶ್ರೀ ಎಸ್. ಭೀಮಣ್ಣ ಖಂಡ್ರೆ : ನೀವು 60 ಪರ್ಸೆಂಟ್ ಗೆದ್ದಿದ್ದೀರೆಂದು ಯಾರು ಮಾಹಿತಿ ಕೊಟ್ಟರೋ, ಅವರೇ ಈ ಮಾಹಿತಿಯನ್ನೂ ಕೊಟ್ಟರು.

ಶ್ರೀ ವಾಟಾಳ್ ನಾಗರಾಜ್ : ಹಾಗಾದರೆ, ಇವರಿಬ್ಬರೂ ಸುಳ್ಳು ಎಂದು ತೀರ್ಮಾನವಾಗಬೇಕಾಗುತ್ತದೆ. 60-80 ಸೇರಿದರೆ 140 ಆಗುತ್ತದೆ.

ಅಧ್ಯಕ್ಷರು : ಈಗ ತಾವು, ತಮ್ಮ ತಮ್ಮ ಸ್ಥಳಗಳಿಗೆ ಹೋಗಿ, ವಿರೋಧಪಕ್ಷದ ನಾಯಕರು ಮತ್ತು ಸದಸ್ಯರಲ್ಲಿ ನಾನು ಕೇಳಿಕೊಳ್ಳುವುದೇನೆಂದರೆ, ತಾವು, ತಮ್ಮ ತಮ್ಮ ಸ್ಥಳಗಳಿಗೆ ಹೋಗಿ, ತಮಗೆ ಏನು ಕ್ಲಾರಿಫಿಕೇಷನ್ ಬೇಕು, ಅವುಗಳನ್ನು ಮುಖ್ಯಮಂತ್ರಿಗಳು ಕೊಡುವುದಕ್ಕೆ ತಯಾರಾಗಿದ್ದಾರೆ, ತಾವು ಸ್ಥಳಗಳಿಗೆ ಹೋಗಿ, ಕ್ಲಾರಿಫಿಕೇಷನ್ ಕೇಳಬೇಕೆಂದು ಪುನಃ ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ಹೇಳಿದ್ದೇನೆ. ನಮ್ಮ ಸನ್ಮಾನ್ಯ ಹಿರಿಯ ಸಚಿವರಾದ ಘೋರ್ಪಡೆಯವರು ಹೇಳಿದ್ದಾರೆ. ಇದೊಂದು ಕರ್ನಾಟಕದಲ್ಲಿ, ಇಡೀ ರಾಷ್ಟ್ರದಲ್ಲಿ ಹೊಸ ಪ್ರಯೋಗ ಮಾಡಿದ್ದೇವೆ. ಖಂಡಿತವಾಗಿಯೂ ಐತಿಹಾಸಿಕವಾಗಿ ನಡೆದಿದೆ. ಆದ್ದರಿಂದ, ನನಗೆ ವಿಶ್ವಾಸವಿದೆ. ಏಕೆಂದರೆ ವಿ.ಪಿ.ಸಿಂಗ್‌ರವರು ತಮ್ಮ ನಾಯಕರು. ಬಹುಶಃ ನೀವು ಬ್ಯಾಕ್‌ವರ್ಡ್ ಕ್ಲಾಸ್‌ಗೆ ರಿಸರ್ವೇಷನ್ ಮಾಡಿದ್ದೇವೆ, ಮಹಿಳೆಯರಿಗೆ ರಿಸರ್ವೇಷನ್ ಮಾಡಿದ್ದೇವೆ, ಎಸ್‌ಸಿ.ಗಳಿಗೆ ವಿರೋಧ ಮಾಡಿದ್ದೇವೆಂದು ಹೇಳಿ, ನೀವು ಈ ರೀತಿ ನಮ್ಮನ್ನು ತಡೆಯುತ್ತೀರೆಂದು ಹೇಳಿದರೆ, ನಿಮ್ಮ ಗತಿ ಏನಾಗುತ್ತದೋ ಗೊತ್ತಿಲ್ಲ, ಈಗ ಮೊದಲೇ ನೀವು ಕಷ್ಟದಲ್ಲಿದ್ದೀರಿ. ನಿಮ್ಮ ನೋವು ಎಲ್ಲಿದೆ ಎಂದು ನನಗೆ ಗೊತ್ತಿದೆ. You want a feudalistic hold of the villages which you don't want to be disturbed and you plead for the feudals - I know that. ಅಧಿಕಾರ ತಪ್ಪಿದೆ ಎಂಬ ಹೆದರಿಕೆ ಇದೆ. ವಿ.ಪಿ. ಸಿಂಗ್‌ರವರು ಭಾಷಣ ಮಾಡುವುದು ಒಂದು, ನೀವು ಮಾಡುವುದು ಒಂದು.

(ಗೊಂದಲ)

ಅಧ್ಯಕ್ಷರು : ವಿರೋಧಪಕ್ಷದ ನಾಯಕರು ಮತ್ತು ಸದಸ್ಯರು ಕೂಡಿ, ಗ್ರಾಮಪಂಚಾಯಿತಿಯ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಚುನಾವಣೆಯಲ್ಲಿ ಸರ್ಕಾರದ ಹಸ್ತಕ್ಷೇಪವಾಗಿರುವುದರಿಂದ, ರಾಜ್ಯದ ನಾನಾ ಭಾಗಗಳಲ್ಲಿ ತೀವ್ರ ಗಲಭೆಗಳುಂಟಾಗಿ, ಅರಾಜಕತೆ, ಅಶಾಂತಿಯಿಂದ, ಪ್ರಜಾಪ್ರಭುತ್ವದ ಕಗ್ಗೊಲೆಯಾಗಿರುವ ಬಗ್ಗೆ ಕಳುಹಿಸಿದ ನಿಲುವಳಿ ಸೂಚನೆಗೆ, ಸರ್ಕಾರದ ಉತ್ತರದಿಂದಾಗಿ, ನಿಲುವಳಿ ಸೂಚನೆಗೆ ಅನುಮತಿಯನ್ನು ತಡೆಹಿಡಿದ್ದೇನೆ. ಈಗ ಸಭೆಯ ಕಲಾಪಗಳನ್ನು ಮುಂದೂಡಿ, ನಾಳೆ 11 ಗಂಟೆಗೆ ಸೇರಲಾಗುವುದು.

ಸದನವು, 8-05ಕ್ಕೆ ಮುಕ್ತಾಯವಾಗಿ, ಮತ್ತೆ 23-3-94ರಂದು ಬೆಳಿಗ್ಗೆ 11 ಗಂಟೆಗೆ ಸೇರಲು ನಿಶ್ಚಯಿಸಿತು

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಬುಧವಾರ ೨೩ನೇ ಮಾರ್ಚ್ ೧೯೯೪, ಚೈತ್ರ ೯, ಶಕ ೧೯೧೬

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೧೧.೧೦ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : (ಶ್ರೀ ವಿ. ಎಸ್. ಕೌಜಲಗಿ)ರವರು ಪೀಠವನ್ನು ಅಲಂಕರಿಸಿದ್ದರು.

ನಿಲುವಳಿ ಸೂಚನೆಗೆ ಅನುಮತಿ ಕೋರಿಕೆ

ರಾಜ್ಯದಲ್ಲಿ ಗ್ರಾಮ ಪಂಚಾಯತಿಯ ಅಧ್ಯಕ್ಷರು ಉಪಾಧ್ಯಕ್ಷರ ಚುನಾವಣೆಯಲ್ಲಿ ನಡೆದ ಗಲಭೆ ಹಾಗೂ ಅವ್ಯವಹಾರದ ಬಗ್ಗೆ ನ್ಯಾಯಾಂಗ ತನಿಖೆಗೆ ಒತ್ತಾಯ.

(ಸಭೆ ಪ್ರಾರಂಭವಾದಾಗ ಜನತಾದಳ ಸದಸ್ಯರು ಧರಣಿ ಕುಳಿತಿದ್ದರು)

+ ಶ್ರೀ ಆರ್. ವಿ. ದೇಶಪಾಂಡೆ (ವಿರೋಧಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ನಮ್ಮ ಬೇಡಿಕೆಗಳನ್ನು ನಿನ್ನೆ ನಾವು ಇಟ್ಟಿದ್ದೇವೆ. ಗುಲ್ಬರ್ಗ ಮತ್ತು ಬಳ್ಳಾರಿಗಳಲ್ಲಿ ಏನು ಫೈರಿಂಗ್ ಆಗಿದೆ ಅದರ ಬಗ್ಗೆ ನ್ಯಾಯಾಂಗ ತನಿಖೆಯಾಗಬೇಕು ಎಂದು ನಾವು ವಿನಂತಿ ಮಾಡಿದ್ದೇವೆ. ಅದರ ಪ್ರಕಾರ ಸರ್ಕಾರ ಒಪ್ಪಿಕೊಂಡಿಲ್ಲ. ಒಂದು ಸದನ ಸಮಿತಿಯನ್ನು ಮಾಡಿ ಎಲ್ಲೆಲ್ಲಿ ಇಂತಹ ಗಲಭೆಗಳಾಗಿವೆ ಅಲ್ಲೆಲ್ಲ ಎನ್‌ಕ್ವೈಯರಿ ಮಾಡಬೇಕೆಂದು ನಾವು ಒತ್ತಾಯ ಮಾಡಿದ್ದೇವೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಉತ್ತರದಲ್ಲಿ ಏನೂ ಹೇಳಿಲ್ಲ. ನಾನು ಬಹಳ ನೊಂದ ಮನಸ್ಸಿನಿಂದ ಹೇಳುತ್ತೇನೆ, ಅವರು ಇದನ್ನು ಬಹಳ ಲಘುವಾಗಿ ತೆಗೆದುಕೊಂಡು ಇದರ ಬಗ್ಗೆ ಒಂದು ಮಾತೂ ಪ್ರಸ್ತಾಪ ಮಾಡಿಲ್ಲ. ಹಾಗಾಗಿ ನಮಗೆ ಬೇರೆ ಆಲ್ಟರ್‌ನೇಟಿವ್ ಇಲ್ಲ. ಈ ನಮ್ಮ ಡಿಮಾಂಡ್ ಫುಲ್‌ಫಿಲ್ ಆಗುವತನಕ ನಾವು ಧರಣಿ ಕಂಟಿನ್ಯೂ ಮಾಡುತ್ತೇವೆ. ಸದನದ ಕಲಾಪಕ್ಕೆ ಅಡ್ಡಿ ಮಾಡಬೇಕೆನ್ನುವ ಇಚ್ಛೆ ನಮಗೆ ಇಲ್ಲ. ನಮಗೆ ಗೊತ್ತಿದೆ, ಸದನ ನಡೆಯುವಾಗ ನಾವು ಸಹಕರಿಸಬೇಕಾಗುತ್ತದೆ. ಬಹಳ ಮಹತ್ವದ ವಿಷಯಗಳಿವೆ. ಅದೆಲ್ಲ ನಮಗೆ ಗೊತ್ತಿದೆ. ಆದರೆ ನಾವು ನಿನ್ನೆ ಪ್ರಸ್ತಾಪ ಮಾಡಿದ ವಿಷಯ ಬಹಳ ಮುಖ್ಯವಾದುದು ಇದೆ. ಇವತ್ತು ಹಳ್ಳಿ ಹಳ್ಳಿಗಳಲ್ಲಿ ಗಲಾಟೆ ಗಲಭೆಗಳು ನಡೆಯುತ್ತಿವೆ. ಎಷ್ಟೋ ಜನ ಇವತ್ತು ಹಳ್ಳಿಗಳನ್ನು ಬಿಟ್ಟು ಹೋಗಿದ್ದಾರೆ. ಹಳ್ಳಿಯಲ್ಲಿ ಇವತ್ತು ನೆಮ್ಮದಿಯಿಂದ ಉಳಿದುಕೊಳ್ಳುವುದಕ್ಕೆ ಒಳ್ಳೆಯ ವಾತಾವರಣವಿಲ್ಲ. ಇಂತಹ ಪರಿಸ್ಥಿತಿಯಲ್ಲಿ ವಿಚಾರಣೆಗೆ ಆರ್ಡರ್ ಮಾಡಿದರೆ, ಒಂದು ಸಮಿತಿ ಬರುತ್ತದೆಂದು ಹೇಳಿದರೆ ಏನಾಗುತ್ತದೆಂದರೆ, ಜನರಲ್ಲಿ ವಿಶ್ವಾಸ ಬರುತ್ತದೆ. ಯಾರು ಇಂತಹ ಕೆಲಸ ಮಾಡುತ್ತಾರೆ ಅವರು ಯಾವ ಭಾಗದಲ್ಲಿಯೇ ಇರಬಹುದು ಯಾವ ಪಕ್ಷದವರೇ ಇರಬಹುದು ಇನ್ನು ಮುಂದೆ ಮಾಡಲಿಕ್ಕೆ ಅವರಿಗೆ ಅವಕಾಶವಿರುವುದಿಲ್ಲ. ಪುನಃ ಏಪ್ರಿಲ್‌ನಲ್ಲಿ ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗಳಿಗೆ ಎಲೆಕ್ಷನ್ ಆಗುತ್ತದೆ. ಇದೇ ಪ್ರಕಾರ ಗಲಭೆ ಗಲಾಟೆಗಳು ಮುಂದೆ ಆದರೆ ಹೇಗೆ? ಹಾಗಾಗಿ ಸರ್ಕಾರ ಒಂದು ದಿಟ್ಟ ನಿಲುವನ್ನು ತಾಳಿದರೆ ಒಂದು ರೀತಿಯ ಪರಿಣಾಮವುಂಟಾಗುತ್ತದೆ. ಆ ದೃಷ್ಟಿಯಿಂದ ನಾನು ಪುನಃ ತಮ್ಮ ಮುಖಾಂತರ ಸರ್ಕಾರಕ್ಕೆ ವಿನಂತಿ ಮಾಡುತ್ತಿದ್ದೇನೆ. ನಾವು ನಿನ್ನೆ ಏನು ಡಿಮಾಂಡ್ ಇಟ್ಟಿದ್ದೇವೆ ಅದನ್ನು ದಯಮಾಡಿ ತಾವು ಒಪ್ಪಿಕೊಳ್ಳಿ. in the interest of the State, in the interest of the panchayat system. ಇಲ್ಲವೆಂದರೆ ಎಂಟೈರ್ ಪಂಚಾಯತ್ ಸಿಸ್ಟಂ ಡೆಸ್ಟ್ರಾಯ್ ಮಾಡಿದ ರೆಸ್ಪಾನ್ಸಿಬಿಲಿಟಿ ನಿಮ್ಮ ಮೇಲೆ ಬರುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ನಿನ್ನೆ ತಾವು ತಮ್ಮ ತೀರ್ಪನ್ನು ಕಾದಿರಿಸಿದ್ದೀರಿ. ನಿಲುವಳಿ ಸೂಚನೆಯನ್ನು ಏನು ಮಾಡಬೇಕೆಂದು ಕೊನೆಯಲ್ಲಿ ತಮ್ಮ ತೀರ್ಪಿನಲ್ಲಿ ತಡೆಹಿಡಿದಿದ್ದೇನೆ ಎಂದು ಹೇಳಿದ್ದೀರಿ. ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಎರಡೂ ಕಡೆಯ ಮುಖಂಡರುಗಳನ್ನು ಕರೆಸಿ ತಮ್ಮ ಕಾರ್ಯಾಲಯದಲ್ಲಿ ಕುಳಿತು ಮಾತನಾಡಿ ಬಗೆಹರಿಸಬೇಕೆನ್ನುವುದು ನನ್ನ ಅತ್ಯುತ್ತಮವಾದ ಸಲಹೆ. ಸದನಸಮಿತಿ ಮಾಡುವುದರಿಂದ ದೊಡ್ಡದೇನೂ ಆಗುವುದಿಲ್ಲ. ಇಂತಹ ಅನೇಕ ಸಂದರ್ಭಗಳು ಬಂದಾಗ ತಾವೇ ಆ ಪೀಠದಲ್ಲಿ ಕುಳಿತುಕೊಂಡು ಸದನಸಮಿತಿ ಮಾಡತಕ್ಕ ಆದೇಶವನ್ನು ನೀಡಿರತಕ್ಕ ನಿದರ್ಶನಗಳು ಬೇಕಾದಷ್ಟು ಇವೆ. ಇದು ಬಹಳ ಮಹತ್ವವಾದ ಪ್ರಶ್ನೆಯಾಗಿರುವುದರಿಂದ ಇಡೀ ರಾಜ್ಯದಲ್ಲಿ ದೊಡ್ಡ ಗೊಂದಲ ವಾತಾವರಣ ಉಂಟಾಗಿರತಕ್ಕದ್ದು ಇದೆ. ನ್ಯಾಯಾಂಗ ತನಿಖೆಗೂ ಒತ್ತಾಯ ಮಾಡಿದ್ದೇವೆ. ಅನೇಕ ಕಡೆ ಗ್ರಾಮಪಂಚಾಯಿತಿ ಚುನಾವಣೆ ಮತ್ತು ಅಧ್ಯಕ್ಷರ, ಉಪಾಧ್ಯಕ್ಷರ, ಚುನಾವಣೆ ನಡೆದಾಗ ಆಗಿರತಕ್ಕ ಅಕ್ರಮಗಳ ಬಗ್ಗೆ ಒಂದು ತನಿಖೆ ಆಗಬೇಕೆಂದು ಹೇಳತಕ್ಕ ವಿಷಯವನ್ನು ಅನೇಕ ಬಾರಿ ಒತ್ತಾಯ ಮಾಡಿದ್ದೇವೆ. ಆದರೆ ಉಳಿದಿರತಕ್ಕದ್ದು ಏನೆಂದರೆ, ತಮ್ಮಲ್ಲಿ ಅತ್ಯಂತ ಕಳಕಳಿಯಿಂದ ಮನವಿ ಮಾಡಿಕೊಳ್ಳತಕ್ಕದ್ದು, ಮಾನ್ಯ ಮುಖ್ಯಮಂತ್ರಿಗಳು ಸಭೆಗೆ ದಯಮಾಡಿಸಿದ್ದಾರೆ, ತಾವು ಇದ್ದೀರಿ, ಇಲ್ಲಿ ಧರಣಾ ಮತ್ತೆ ಮುಂದುವರೆಯುತ್ತಾ ಇದೆ. ತಾವು ಸ್ವಲ್ಪ ಸಮಯ ಸಭೆಯನ್ನು ಮುಂದೂಡಿ ತಮ್ಮ ಕಛೇರಿಗೆ ಎಲ್ಲರನ್ನು ಕರೆಸಿ ಕುಳಿತು ಮಾತನಾಡಬೇಕು ಇದರ ಬಗ್ಗೆ ಯಾವುದಾದರೂ ಒಂದು ಸೂತ್ರವನ್ನು ಕಂಡುಹಿಡಿಯತಕ್ಕದ್ದು ಒಳ್ಳೆಯದೆಂದು ತಮ್ಮಲ್ಲಿ ಹೇಳುತ್ತೇನೆ. ಸದನಸಮಿತಿ ಮಾಡುವುದರಿಂದ ಆಕಾಶವೇನು ಕಳಚಿ ಬೀಳುವುದಿಲ್ಲ. ಒಂದು ಸದನಸಮಿತಿಯನ್ನು ಮಾಡಿ ಇಷ್ಟು ದಿವಸದೊಳಗೆ ಒಂದು ವರದಿಯನ್ನು ಕೊಡಿಯೆಂದು ಹೇಳಿ. ಅನೇಕ ವಿಚಾರಗಳಲ್ಲಿ ಸದನಸಮಿತಿ ಮಾಡಿರತಕ್ಕ ನಿದರ್ಶನಗಳು ಇವೆ. ಆದ್ದರಿಂದ ತಾವು ಮಾಡಬಹುದು. ಅದರಿಂದ ಸರ್ಕಾರಕ್ಕೂ ಗೌರವ ಬರುತ್ತದೆ. ನೀವೇನು ಮಾಡಿದ್ದೀರಿ ಎನ್ನುವುದನ್ನು ಸದನಸಮಿತಿ ತೀರ್ಮಾನ ಮಾಡಲಿ. ಅದರಿಂದ ನಿಮಗೂ ಗೌರವ ಬರುತ್ತದೆ ಎನ್ನುವ ಮಾತನ್ನು ತಮಗೆ ಹೇಳುತ್ತಿದ್ದೇನೆ. ತಾವು ನಿನ್ನೆ ಒಳ್ಳೆಯ ಸೂಚನೆಯನ್ನು ಕೊಟ್ಟಿದ್ದೀರಿ. ನಿಲುವಳಿ ಸೂಚನೆಯನ್ನು ತಡೆಹಿಡಿದಿರತಕ್ಕದ್ದು ಅದನ್ನು ನಾನು ಮೆಚ್ಚುತ್ತೇನೆ. ತಾವು ತೀರ್ಪು ಕೊಡುವುದಕ್ಕೆ ಮುಂಚೆ ತೀರ್ಮಾನ ಮಾಡಬೇಕೆಂದು ತಮ್ಮಲ್ಲಿ ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

+ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ಇದರಲ್ಲಿ ಯಾವುದೇ ಪ್ರತಿಷ್ಠೆ ಪ್ರಶ್ನೆ ಇಲ್ಲ. ಮುಖ್ಯಮಂತ್ರಿಗಳು ನಿನ್ನೆ ಉತ್ತರ ಮಾಡಿದ ಧಾಟಿಯನ್ನು ನೋಡಿದರೆ, ಅವರಿಗೂ ಎಲ್ಲೋ ಒಂದುಕಡೆ ಇದರಲ್ಲಿ ಅಪಚಾರವಾಗಿದೆ, ಸತ್ಯಶೋಧನೆಯಾಗಬೇಕು ಎಂದು ಭಾಸವಾಗಿದೆ. ಯಾರು ಸತ್ಯಶೋಧನೆ ಮಾಡುವುದು? ಈಗ ತಾನೇ ನನಗೆ ಹಾಸನದಿಂದ ಟೆಲಿಫೋನ್ ಬರುತ್ತಿದೆ. ಸತ್ಯಮಂಗಲ ಮತ್ತು ಭೂವನಹಳ್ಳಿ ಕ್ಷೇತ್ರಗಳಲ್ಲಿ ಪೊಲೀಸ್ ವ್ಯಾನ್ ತೆಗೆದುಕೊಂಡು ಹೋಗಿ ಸದಸ್ಯರನ್ನು ಅಪಹರಣ ಮಾಡುತ್ತಿದ್ದಾರೆ ಎಂದು. ಏನು ಮಾಡಬೇಕೆಂದು ನಾವು ನಿರ್ಧಾರಕ್ಕೆ ಬರುತ್ತೇವೆ? ಎಲ್ಲಿಯಾದರೂ ಇಲ್ಲಿ ಒಂದು ಕಡೆ ಸತ್ಯಶೋಧನೆಗೆ ಬಹಳ ದೊಡ್ಡ ಭಾಷಣವನ್ನು ನಾವು ಮಾಡಬಹುದು, ಅಥವಾ ಅನೇಕ ವಿಷಯಗಳನ್ನು ಇಲ್ಲಿ ಪ್ರಸ್ತಾಪ ಮಾಡಬಹುದು, ನಮ್ಮ ಪ್ರತಿಷ್ಠೆಯನ್ನು ಬೆಳೆಸಿಕೊಳ್ಳತಕ್ಕಂಥ ಪ್ರಶ್ನೆ ಇಲ್ಲ. ಇಲ್ಲಿ ಒಂದೇ ಒಂದು ಉದ್ದೇಶ ಎಂದರೆ, ಸತ್ಯ ಶೋಧನೆ ಆಗಬೇಕು ಎನ್ನುವುದು ಒಂದು. ಮತ್ತೊಂದು ಕಡೆ ಗೋಲಿಬಾರ್ ಏನಾಗುತ್ತದೆ. ಅದರ ನ್ಯಾಯಾಂಗ ತನಿಖೆ ಮಾಡುವುದಕ್ಕೆ ಸರ್ಕಾರಕ್ಕೆ ಏನು ತೊಂದರೆ ಇದೆ? ಎಲ್ಲಾ ಕಡೆಗೂ ನ್ಯಾಯಾಂಗ ತನಿಖೆಯಾಗುತ್ತದೆ. ಹಾಗಿದ್ದರೆ ಇದರಲ್ಲಿ ಏನೋ ಮುಚ್ಚಿಡುವುದಕ್ಕೆ ಇವರು ಪ್ರಯತ್ನ ಮಾಡುತ್ತಿದ್ದಾರೆ. ಅವರ ವತಿಯಿಂದಲೇ ಗೋಲಿಬಾರ್ ಆಗಿದೆಯೆಂದು ಆಪಾದನೆ

ಮಾಡಿದರೆ ಅದನ್ನು ತಪ್ಪು ಎಂದು ತಿಳಿಯಬಾರದು. ತಾವು ಏನು ಈ ವಿಚಾರದಲ್ಲಿ ನಿರ್ದಿಷ್ಟವಾಗಿ ತಮ್ಮ ಅಭಿಪ್ರಾಯವನ್ನು ಅಭಿವ್ಯಕ್ತ ಮಾಡುವುದಕ್ಕೆ ಮುಂಚೆ ಅದನ್ನು ತಡೆದಿಟ್ಟಿದ್ದೀರಿ, ಸರ್ಕಾರ ಒಪ್ಪದೇ ಇದ್ದರೂ, ಮಾನ್ಯ ವಾಟಾಳ್ ನಾಗರಾಜ್ ಅವರು ಹೇಳಿದ ಹಾಗೆ ಸದನಸಮಿತಿಯನ್ನು ಮಾಡುವುದಕ್ಕೆ ತಮಗೆ ಅಧಿಕಾರ ಇದೆ. ಯಾರನ್ನು ಬೇಕಾದರೂ ಹಾಕಿ. ನಾನು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳುತ್ತೇನೆ. ನಮ್ಮನ್ನು ಬೇಕಾದರೆ ಹೊರಗೆ ಇಟ್ಟು ಸದನ ಸಮಿತಿಯನ್ನು ಮಾಡಿ. ವಿರೋಧ ಪಕ್ಷದ ಎಲ್ಲ ಮುಖಂಡರನ್ನೂ ಹೊರಗಿಟ್ಟು ಸದನ ಸಮಿತಿಯನ್ನು ಮಾಡಿ. ನ್ಯಾಯವಾದ ಸಮಿತಿಯನ್ನು ಅವರೇ ಮಾಡಿ, ಕಾಂಗ್ರೆಸ್ ಪಕ್ಷದ ಸದಸ್ಯರೇ ಹೋಗಿಬರಲಿ. ಒಂದು ಸತ್ಯಶೋಧನೆಯ ವರದಿಯನ್ನು ಅವರೇ ಕೊಡಲಿ. ಅದಕ್ಕೆ ಬಹಳ ದಿವಸ ಬೇಕಾಗಿಲ್ಲ, ಈ ಅಧಿವೇಶನ ಮುಗಿಯುವುದರೊಳಗೆ ಈ ವರದಿಯನ್ನು ತರಿಸಬಹುದು. ಸಾಕಷ್ಟು ಎಲ್ಲ ಬೇಕಾದ ಮಾಹಿತಿಗಳನ್ನು ಕೊಡುವುದಕ್ಕೆ ನಾವು ಸಿದ್ಧರಿದ್ದೇವೆ. ಆದ್ದರಿಂದ ಈ ಎರಡು ವಿಚಾರಗಳಲ್ಲಿ ನಮ್ಮದು ಕಾಂಪ್ರಮೈಸ್ ಇಲ್ಲ. ನಾವು ಕೇಳತಕ್ಕದ್ದು ನಮಗೆ ಅನ್ಯಾಯವಾಗಿದೆ ಎಂದು ಅಲ್ಲ. ಈ ದೇಶದ ಒಟ್ಟು ವಿಕೇಂದ್ರೀಕೃತ ವ್ಯವಸ್ಥೆಗೆ ಅನ್ಯಾಯ ನಡೆದಿದೆ. ಈ ಅನ್ಯಾಯವನ್ನು ಸರಿಪಡಿಸುವುದಕ್ಕೆ ಮುಂಚೆ ಅದರ ಸತ್ಯಶೋಧನೆ ಮಾಡಿ. ನೀವು ಹೇಳಿದ್ದೇ ಸರಿಯಾಗಿದ್ದರೆ, ಸಮಿತಿ ಮಾಡುವುದಕ್ಕೆ ತಮಗೆ ಏನು ಭಯ ಇದೆ? ಮುಖ್ಯಮಂತ್ರಿಗಳೇ ಗೋಲಿಬಾರ್ ನ್ಯಾಯವಾಗಿ ಆಗಿದೆ ಎಂದು ಹೇಳಿದ್ದಾರಲ್ಲ, ನ್ಯಾಯವಾಗಿ ಆಗಿದೆ ಎಂತಲೇ ವರದಿ ಬರಲಿ. ಅದರಿಂದ ಏನು ಅಪರಾಧ ಆಗುತ್ತದೆ? ಆದ್ದರಿಂದ ಇದರಲ್ಲಿ ಯಾವುದೇ ಪ್ರೆಸ್ಟೀಜ್ ಬೇಡ. ದಯಮಾಡಿ ಯಾವುದೇ ಒಂದು ಭಾವನೆಯೂ ಇಲ್ಲದೆ, ನಾವು ಭಾವನಾತ್ಮಕವಾಗಿ ಪ್ರಚೋದನೆ ಮಾಡಿಕೊಳ್ಳದೆ, ದಯವಿಟ್ಟು ಇವೆರಡಕ್ಕೂ ಒಪ್ಪಿಗೆ ಕೊಡುವುದು ನಿಮ್ಮ ದೃಷ್ಟಿಯಿಂದ ಹಾಗೂ ಜನತಂತ್ರ ವ್ಯವಸ್ಥೆಯ ದೃಷ್ಟಿಯಿಂದಲೂ ಒಳ್ಳೆಯದು. ಹಾಗಿಲ್ಲದೆ ಇದ್ದರೆ, ಕಾಂಗ್ರೆಸ್ ಪಕ್ಷ, ಕಾಂಗ್ರೆಸ್ ಸರ್ಕಾರ ಹಸ್ತಕ್ಷೇಪ ಮಾಡಿದೆ, ಬೇಕಾಗಿ ಗೋಲಿಬಾರ್ ಮಾಡಿಸಿದ್ದಾರೆ, ಸಾವಿರಾರು ಜನರನ್ನು ಜೈಲಿನಲ್ಲಿಟ್ಟಿದ್ದಾರೆ ಎಂಬ ನಮ್ಮ ಆಪಾದನೆಯಲ್ಲಿ ನಿಜವಾಗಿಯೂ ಸತ್ಯ ಇದೆ ಎಂಬುದು ನನ್ನ ವಾದ.

(ನಂತರ ಮಾನ್ಯ ಸದಸ್ಯರು ಧರಣಿ ಕುಳಿತವರೊಡನೆ ಬಂದು ಸೇರಿಕೊಂಡರು)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಒಂದು ವಿಷಯವನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇವತ್ತು ಪತ್ರಿಕೆಯಲ್ಲಿ ಬಂದಿದೆ, ನೋಡಿ. "ಏಕೈಕ ಅಭ್ಯರ್ಥಿಯಾದರೂ ಸೋಲು" ಎಂದು. ಅಂದರೆ ಏನು ಮಾಡಬಹುದಿತ್ತು? ಚುನಾವಣೆಯಾಗಿದೆ. ಅವರನ್ನೇ ಸಂಪೂರ್ಣವಾಗಿ ಚುನಾಯಿತರಾಗಿದ್ದಾರೆಂದು ಮಾಡಿ, ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಹೇಳಬೇಕಾಗಿತ್ತು. ಆದರೆ ಹಾಗೆ ಘೋಷಿಸದೆ, ಚುನಾವಣೆಯನ್ನು ಮುಂದೂಡಿದ್ದು, ಇದು ಹಸ್ತಕ್ಷೇಪ ಅಲ್ಲವೇನು? ಆದ್ದರಿಂದ ಮುಖ್ಯಮಂತ್ರಿಗಳು ಇದರಲ್ಲಿ ತಮ್ಮ ಪ್ರತಿಷ್ಠೆಯ ಪ್ರಶ್ನೆ ಮಾಡಿಕೊಳ್ಳದೆ, ಪ್ರಜಾಪ್ರಭುತ್ವದ ರಕ್ಷಣೆಗೆ ಸಂಪೂರ್ಣವಾಗಿ ಬೆಂಬಲ ಕೊಡಬೇಕೆಂದು ಅವರಲ್ಲಿ ನಾನು ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ಮತ್ತು ಈ ಧರಣಿಗೆ ನನ್ನದೂ ಸಂಪೂರ್ಣವಾದ ಬೆಂಬಲವನ್ನು ಕೊಡುತ್ತಿದ್ದೇನೆ.

ಅಧ್ಯಕ್ಷರು : ಈಗ ಚರ್ಚೆಯಾಗಿದೆ.

ಶ್ರೀ ಎ. ರುಕ್ಮಯ್ಯ ಪೂಜಾರಿ : ನಮ್ಮ ಮಿತ್ರರಾದ ಜನತಾದಳದವರು ಕಳೆದ ಗ್ರಾಮಪಂಚಾಯತಿ ಚುನಾವಣೆಯಲ್ಲಿ ಮತ್ತು ಅಧ್ಯಕ್ಷರು, ಉಪಾಧ್ಯಕ್ಷರು ಚುನಾವಣೆಯಲ್ಲಿ ಅವ್ಯವಹಾರ ಆಗಿದೆ ಎಂದು ಸರ್ಕಾರ ಹಸ್ತಕ್ಷೇಪ ನಡೆಸಿದೆ ಎಂಬ ವಿಷಯವನ್ನು ತಮ್ಮ ಮುಂದಿಟ್ಟು ಇದರ ಬಗ್ಗೆ ಧರಣಿಯನ್ನು ಮಾಡುತ್ತಿದ್ದಾರೆ. ನಾನು ಕೂಡ ಈ ಸಂದರ್ಭದಲ್ಲಿ ಹೇಳುತ್ತೇನೆ, ಈಗ ಸರ್ಕಾರದ ಮಟ್ಟದಲ್ಲಿ ಮತ್ತು ಎಲ್ಲೆಲ್ಲಿ ರಾಜಕೀಯ ಪಾರ್ಟಿ ಶಕ್ತಿ ಇದೆ, ಅಲ್ಲಿ ಅಧಿಕಾರ ದುರುಪಯೋಗ ನಡೆದಿದೆ.

ಮತ್ತು ಈ ಕಿಡ್ನೇಪಿಂಗ್ ಎಲ್ಲಿಂದ ಪ್ರಾರಂಭವಾಗಿದೆ ಎಂದರೆ, ಅಭ್ಯರ್ಥಿಗಳ ಆಯ್ಕೆ ಮಾಡುವಲ್ಲಿಂದ ಇದು ಪ್ರಾರಂಭವಾಗಿದೆ. ಇದರ ಬಗ್ಗೆ ಜನತೆಗೆ ಸತ್ಯಸಂಗತಿ ಗೊತ್ತಾಗಬೇಕೆಂಬ ದೃಷ್ಟಿಯಿಂದ ಸರ್ಕಾರ ಸದನ ಸಮಿತಿ ಮಾಡಬೇಕೆಂದು ನಾನು ಕೂಡ ಒತ್ತಾಯ ಮಾಡುತ್ತೇನೆ. ಇದರಿಂದ ಜನತೆಗೆ ಸತ್ಯಸಂಗತಿ ಗೊತ್ತಾಗುತ್ತದೆ. ಇಲ್ಲದಿದ್ದರೆ ಈಗ ಏನು ಅಪಪ್ರಚಾರ ಮಾಡುತ್ತಿದ್ದಾರೆ, ಅದು ಸರಿ ಎಂದು ಜನ ಕೂಡ ತಿಳಿದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಆ ದೃಷ್ಟಿಯಿಂದ ಸದನ ಸಮಿತಿಯನ್ನು ಮಾಡುವುದು ಉತ್ತಮವೆಂದು ನಾನು ಕೂಡ ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತಿದ್ದೇನೆ.

+ ಶ್ರೀ ಬಿ.ಎಚ್. ಬನ್ನಿಕೋಡ್ : ಮಾನ್ಯ ಅಧ್ಯಕ್ಷರೆ, ನನ್ನದು ಒಂದು ಕ್ಲಾರಿಫಿಕೇಶನ್ ಇದೆ. ತಾವು ದಯವಿಟ್ಟು ಕೇಳಬೇಕು. ಇವತ್ತು ಪತ್ರಿಕೆಯಲ್ಲಿ ಬಂದಿದೆ. ನಿನ್ನೆ ಮುಂಜಾನೆಯಿಂದ ಸಾಯಂಕಾಲದವರೆಗೆ ವಿರೋಧಪಕ್ಷದವರು ಎಲ್ಲೆಲ್ಲಿ ಶಾಸಕರ ಹಸ್ತಕ್ಷೇಪ ಆಡಳಿತದಲ್ಲಿ ನಡೆದಿದೆ, ಜಿಲ್ಲಾಧಿಕಾರಿಗಳ ಮೇಲೆ ಒತ್ತಾಯ ನಡೆದಿದೆ, ಎಂದು ಹೇಳಿದ್ದಾರೆ. ಇದೇ ರೀತಿ ನನ್ನ ಜಿಲ್ಲೆಯಲ್ಲಿ ಕೂಡ ಜಿಲ್ಲಾ ಮಂತ್ರಿಗಳು ಹುಬ್ಬಳ್ಳಿ ತಾಲ್ಲೂಕಿನ ಕುಸಗಲ್ಲು, ಬ್ಯಾಟಹಳ್ಳಿ ಇನ್ನೂ ಅನೇಕ ಕಡೆಗಳಲ್ಲಿ ಹಸ್ತಕ್ಷೇಪ ಮಾಡಿ ಜಿಲ್ಲಾಧಿಕಾರಿಗಳ ಮೇಲೆ ಒತ್ತಾಯವನ್ನು ತಂದಿದ್ದಾರೆ. ಆದರೆ ಮುಖ್ಯ ಮಂತ್ರಿಗಳು ಜಿಲ್ಲಾಧಿಕಾರಿಗಳು ಕಾನೂನುಬದ್ಧವಾಗಿ ಮಾಡುತ್ತಾರೆ, ಹಸ್ತಕ್ಷೇಪ ನಡೆದಿಲ್ಲವೆಂದು ಹೇಳುತ್ತಾರೆ. ಬನ್ನಿಕೋಡರು ಶಾಸಕರು, ಎಲ್ಲಿಯೂ ಕೂಡ ಹಸ್ತಕ್ಷೇಪ ನಡೆದಿಲ್ಲ, ಕಾನೂನು ಬದ್ಧವಾಗಿ ಚುನಾವಣೆ ನಡೆದಿದೆ ಎಂದು ಹೇಳಿದ್ದಾರೆಂದು ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ವರದಿಯಾಗಿದೆ. ಆದ್ದರಿಂದ ನಾನು ತಮ್ಮ ಮೂಲಕ ಹೇಳುತ್ತಿದ್ದೇನೆ, ಅದು ಎಲ್ಲಿಯೂ ನಾನು ಹೇಳಿದ್ದು ಅಲ್ಲ. ಎಲ್ಲ ಹಂತಗಳಲ್ಲೂ ಶಾಸಕರು, ವಿಧಾನಪರಿಷತ್ ಸದಸ್ಯರು ಸಹಿತ ಹಸ್ತಕ್ಷೇಪ ಮಾಡಿದ್ದಾರೆ, ಮಂತ್ರಿಗಳು ಕೂಡ ಹಸ್ತಕ್ಷೇಪ ಮಾಡಿದ್ದಾರೆ; ಗೋಲಿ ಬಾರ್ ಆಗಿದೆ, ನ್ಯಾಯಾಂಗ ತನಿಖೆ ಆಗಬೇಕೆಂದು ಹೇಳಿದ್ದೇವೆ. ಆಪಾದನೆ ಮಾಡಿದರೂ ಸಹಿತ ಏನೂ ಆಗಿಲ್ಲವೆಂದು ಹೇಳಿದರೆ ಇದನ್ನು ಸಾರ್ವಜನಿಕರು ನಂಬಬೇಕೇ? ಈ ಸದನವನ್ನು ಸಾರ್ವಜನಿಕರನ್ನು ತಪ್ಪುದಾರಿಗೆ ಎಳೆಯತಕ್ಕಂಥ ಹೇಳಿಕೆಯನ್ನು ಮುಖ್ಯಮಂತ್ರಿಯವರು ಕೊಟ್ಟಿದ್ದಾರೆ. ಇವತ್ತು ನನ್ನ ಮೇಲೆ ಆಪಾದನೆ ಮಾಡಿದರು. ನಡೆದಿರತಕ್ಕಂಥ ಗಲಾಟೆ, ದೊಂಬಿಗೆ ಕಾಂಗ್ರೆಸ್ಸಿನವರು ಕಾರಣ ಎಂದು ನಾವು ಹೇಳಿದರೆ, ಇದು ಜನತಾದಳದವರು ಮಾಡಿದ್ದಾರೆ ಎಂದು ಅವರು ಹೇಳಿದ್ದಾರೆ. ಆಗಲಿ, ನಮ್ಮ ಪಕ್ಷದವರು ಮಾಡಿದ್ದರೆ ನ್ಯಾಯಾಂಗ ತನಿಖೆಯಲ್ಲಿ ಅದು ಗೊತ್ತಾಗುತ್ತದೆ. ತಪ್ಪಿತಸ್ಥರು ನಮ್ಮವರು ಇದ್ದರೆ, ಅವರಿಗೆ ತಕ್ಕ ಪಾಠವನ್ನು ಕಲಿಸಬಹುದು. ಪ್ರಜಾಪ್ರಭುತ್ವದ ಉಳಿವಿಗಾಗಿ ಇದು ಅವಶ್ಯಕತೆ ಇದೆ. ಈಗ ಅವರು ಹೇಳತಕ್ಕದ್ದನ್ನು ನೋಡಿದರೆ ನ್ಯಾಯಾಂಗ ತನಿಖೆಗೂ ಒಪ್ಪುತ್ತಿಲ್ಲ. ಸದನ ಸಮಿತಿಗೂ ಒಪ್ಪುತ್ತಿಲ್ಲ. ಇದನ್ನು ನೋಡಿದರೆ ಮುಖ್ಯಮಂತ್ರಿಗಳು ಅಥವಾ ಆಡಳಿತ ಪಕ್ಷದವರೇ ಹಸ್ತಕ್ಷೇಪ ಮಾಡಿದ್ದಾರೆ, ಪ್ರಾಮಾಣಿಕ ಅಧಿಕಾರಿಗಳ ಮೇಲೆ ಒತ್ತಡವನ್ನು ತಂದಿದ್ದಾರೆ. ಇವತ್ತು ಕ್ರಿಮಿನಲ್ ಮೊಕದ್ದಮೆಗಳಿಗೆ ಅವರೇ ಕಾರಣರು ಎಂದು ನಾನು ತಮ್ಮ ಮೂಲಕ ಮುಖ್ಯಮಂತ್ರಿಗಳಿಗೆ ಹೇಳುತ್ತಿದ್ದೇನೆ. ಇದನ್ನು ಅವರು ಒಪ್ಪಿಕೊಂಡಹಾಗೆ ಆಗುತ್ತದೆ. ಆದ್ದರಿಂದ ಸತ್ಯಸಂಗತಿಯನ್ನು ಹೊರತರುವುದಕ್ಕೆ ಸದನ ಸಮಿತಿಯನ್ನು ಮಾಡಬೇಕು ಮತ್ತು ಈ ಗೋಲಿಬಾರ್ ಏನಾಗಿದೆ, ಅಲ್ಲಿ ನ್ಯಾಯಾಂಗ ತನಿಖೆ ಮಾಡಬೇಕೆಂದು ತಮ್ಮ ಮೂಲಕ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುತ್ತೇನೆ.

+ ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೆ, ನಿನ್ನೆ ನಿಲುವಳಿ ಸೂಚನೆಯನ್ನು ಸ್ವೀಕರಿಸುವ ಮೊದಲು ಪ್ರಾಸ್ತಾವಿಕವಾಗಿ ವಿಚಾರವನ್ನು ಎತ್ತಲಿಕ್ಕೆ ಮಾನ್ಯ

ವಿರೋಧಪಕ್ಷದ ನಾಯಕರಿಗೆ ತಾವು ಅವಕಾಶವನ್ನು ಕೊಟ್ಟಿದ್ದೀರಿ. ನಾವು ಕೂಡ ಹೇಳಿದ್ದೆವು. ಇದರ ಬಗ್ಗೆ ಬೇಕಾದರೆ ತಮ್ಮ ಮನ ಒಲಿಸಲಿಕ್ಕೆ ನಿಲುವಳಿ ಸೂಚನೆಯನ್ನು ಸ್ವೀಕಾರ ಮಾಡುವುದಕ್ಕೆ ಅವರು ಎಷ್ಟು ಹೊತ್ತು ತೆಗೆದುಕೊಳ್ಳುತ್ತಾರೋ, ಎಷ್ಟು ಜನ ಮಾತನಾಡುತ್ತಾರೋ ಅದಕ್ಕೆ ತಾವು ಅವಕಾಶ ಕೊಡಿ ಎಂದು ನಾವು ಮುಕ್ತ ಮನಸ್ಸಿನಿಂದ ನಿನ್ನೆದಿವಸ ತಮಗೂ,ಸದನಕ್ಕೂ ಕೂಡ ಹೇಳಿದ್ದೆವು. ಬೆಳಿಗ್ಗೆಯಿಂದ ಎಳೂವರೆ ಗಂಟೆವರೆಗೆ ಕೂಡ ವಿಪುಲವಾದ ಚರ್ಚೆಯಾಯಿತು. ವಿಪುಲವಾದ ಚರ್ಚೆಯಾದ ಮೇಲೆ ತಾವು ಅದಕ್ಕೆ ತಮ್ಮ ವಿವೇಚನೆಯಲ್ಲಿ ನಮ್ಮ ಉತ್ತರ ಕೊಟ್ಟ ಮೇಲೆ ಸ್ವೀಕಾರ ಮಾಡುವುದಕ್ಕೆ ಅದು ಯೋಗ್ಯವಾದ ನಿರ್ಣಯ ಅಲ್ಲವೆಂದು ತಳ್ಳಿಹಾಕಿರಿ. ನಿರ್ಣಯವನ್ನು ತಡೆಹಿಡಿದಿದ್ದೀರಿ ಎಂದರೆ ಅದನ್ನು ವಿತ್‌ಹೆಲ್ಡ್ ಮಾಡಿದ್ದೀರಿ.

ಒಬ್ಬರು ಮಾನ್ಯ ಸದಸ್ಯರು : ನಿರಾಕರಿಸಿಲ್ಲ, ತಡೆಹಿಡಿದಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಆಯಿತು. ನಿನ್ನೆಯೇ ಅಡ್ಜರ್ನಮೆಂಟ್ ಮೋಶನ್ ಆಯುಷ್ಯ ನಿನ್ನೆಗೇ ಮುಗಿಯಿತು. ವಿಧಾನಮಂಡಲದ ಕಾರ್ಯಕಲಾಪ ಅಥವಾ ನಿಯಮಗಳಿಗೆ ಸರಿಯಾಗಿ ನಿನ್ನೆ ತಾವು ದಾಖಲು ಮಾಡಿದಂಥ ನಿಲುವಳಿ ಸೂಚನೆ ನಿನ್ನೆಗೆ ಮುಕ್ತಾಯವಾಯಿತು. ಮುಕ್ತಾಯವಾದ ಮೇಲೆ ಇವತ್ತು ಏಕೆ ತಾವುಗಳು ಕುಳಿತುಕೊಂಡಿದ್ದೀರಿ ಎಂದು ನನಗೆ ಆಶ್ಚರ್ಯವಾಗುತ್ತದೆ. ನಿನ್ನೆ ವಿಷಯ ಇತ್ಯರ್ಥವಾದಮೇಲೆ, ಇದು ಮುಗಿದಮೇಲೆ ಇವತ್ತು ಏಕೆ ಪುನಃ ಬಂದು ಬಾವಿಯಲ್ಲಿ ಬೀಳತಕ್ಕಂಥ ದುರ್ದೆಶೆ ತಮಗೆ ಬಂತು? ತಮಗೆ ಈ ದುರ್ದೆಶೆ ಏಕೆ ಬಂತೆಂದು ನನ್ನ ವಿವೇಚನೆಗೆ ಬರುತ್ತಿಲ್ಲ. ಈ ದುರ್ದೆಶೆ ತಮಗೆ ಬರಬಾರದು. ಅದರಲ್ಲೂ ಕೂಡ ಹಿರಿಯ ಶಾಸಕರಾದ ಶ್ರೀ ದೇಶಪಾಂಡೆಯವರು, ಆದರೆ ಅವರ ಜೊತೆಯಲ್ಲಿ ಶ್ರೀ ವಾಟಾಳ್ ನಾಗರಾಜ್ ಅವರು ಹೋಗಿರುವುದಕ್ಕೆ ಕಾರಣ ಏನು?

ಶ್ರೀ ವಾಟಾಳ್ ನಾಗರಾಜ್ : ನಾನು ಸಂಧಾನ ಮಾಡುತ್ತಿದ್ದೇನೆ.

ಶ್ರೀ ಎಂ. ವೀರಪ್ಪಮೊಯಿಲಿ : ಸನ್ಮಾನ್ಯ ವಾಟಾಳ್ ನಾಗರಾಜ್ ಅವರು ಸಂಧಾನ ಮಾಡುವುದಿದ್ದರೆ ನಮಗೂ ಒಪ್ಪಿಗೆ. ಅವರು ಸಂಧಾನ ಮಾಡುವುದಿದ್ದರೆ ಬೇಕಾದರೆ ಅವರನ್ನು ಕರೆಸಿ ಅಲ್ಲಿ ಕೂಡಿಸಿ ಸಂಧಾನ ಮಾಡಿರಿ. ನಮ್ಮ ಪಾಲಿಗೆ ಇದರಲ್ಲಿ ಪ್ರತಿಷ್ಠೆ ಇಲ್ಲ, ನಿನ್ನೆ ದಿವಸ ಏನು ವಿಚಾರವನ್ನು ಎತ್ತಿದ್ದೀರಿ......

(ಗೊಂದಲ)

ನಮ್ಮದು ಪ್ರತಿಷ್ಠೆ ಏನೂ ಇಲ್ಲ. ಪ್ರತಿಷ್ಠೆ ಇರುವುದು ನಿಮ್ಮದು. ಪ್ರತಿಷ್ಠೆ ಯಾರಿಗೂ ಒಳ್ಳೆಯದಲ್ಲ. ದುರ್ಯೋಧನ ಪ್ರತಿಷ್ಠೆಯಿಂದಲೇ ಕೆಟ್ಟುಹೋದ. ಆದರೆ ನೀವು ಆ ಪ್ರತಿಷ್ಠೆಯ ಮೇಲೆ ನಿಲ್ಲಬೇಡಿ. ನಾವು ನಿಲ್ಲುವುದಿಲ್ಲ, ಪ್ರತಿಷ್ಠೆಯ ಮೇಲೆ ನಾವು ಇಲ್ಲ, ನಾನು ನಿನ್ನೆ ಏನು ಉತ್ತರ ಕೊಟ್ಟೆ ಎಂದರೆ ಯಾವುದಾದರೂ ಎಲ್ಲಾದರೂ ಗ್ರಾಮ ಪಂಚಾಯತಿ ಚುನಾವಣೆಯಲ್ಲಿ ನಿಯಮಾವಳಿಗೆ ವಿರುದ್ಧವಾಗಿದ್ದ ಒಂದೇ ಒಂದು ಪ್ರಸಂಗ ಹೇಳಿ ಆಗ ಇದು ವಿಚಾರಣೆಗೆ ಯೋಗ್ಯವಾಗಿರುತ್ತದೆ ಎಂದು ಹೇಳಿದೆ. ಇದು ಏನಾಗಿದೆ ಆ ಒಂದು ಮೆರಿಟ್ ಮೇಲೆ ಏನಾದರೂ ಒಂದು ವಿಚಾರಣೆ ಆಗುವುದಿದ್ದರೆ ಸದನದ ಸಮಿತಿ ಆಗುವುದಿದ್ದರೆ ಆಗಲಿ, ಆದರೂ ಕೂಡ ತಾವು ಇದನ್ನು ಒಂದು ಪ್ರತಿಷ್ಠೆಯ ವಿಚಾರವಾಗಿ ತಂದು ಆ ವಿಷಯ ಮುಗಿದಿದ್ದರೂ ಕೂಡ ಇವತ್ತು ಬಂದು ಬಾವಿಯಲ್ಲಿ ಬಿದ್ದುಬಿಟ್ಟಿರಿ. ಪ್ರತಿಷ್ಠೆಯ ಕಾರಣದಿಂದ ಬಾವಿಗೆ ಬಿದ್ದಂತಹ ನಿಮ್ಮನ್ನು ಮೇಲೆ ಎತ್ತಬೇಕಂಥ ಒಂದು ವಾಮನ ರೂಪವಾಗಿ ನಮ್ಮ ವಾಟಾಳ್‌ನಾಗರಾಜ್‌ರವರು ಕೆಲಸ ಮಾಡುವುದಿದ್ದರೆ ಅವರಿಗೆ ನಾವು ಸಹಕಾರ ಹಸ್ತ ನೀಡುವುದಕ್ಕೆ ಸಿದ್ಧನಾಗಿದ್ದೇನೆ. ವಾಟಾಳ್‌ನಾಗರಾಜ್‌ರವರು ವಾಮನ ಸ್ವರೂಪವಾಗಿ ಬಂದು ಇವತ್ತು ಬಾವಿಗೆ ಬಿದ್ದವರನ್ನು ಮೇಲೆ ಎಬ್ಬಿಸಿ

ಅವರ ಪ್ರತಿಷ್ಠೆಯನ್ನು ಉಳಿಸಿಕೊಳ್ಳುವುದಿದ್ದರೆ ನಾವು ನಿಮ್ಮ ಜೊತೆಯಲ್ಲಿದ್ದೇವೆ. ಆದ್ದರಿಂದ ಮಾನ್ಯ ಸಭಾಪತಿಗಳು ನಮ್ಮನ್ನು ಒಳಗೆ ಕರೆಸಿ ಮಾತನಾಡಿ. ರಾತ್ರಿ ನೋಡಿದ ಬಾವಿಗೆ ಹಗಲು ಹೋಗಿ ಏತಕ್ಕೆ ಬೀಳುತ್ತೀರಿ. ನಾವು ಬಿದ್ದಂತಹ ಬಾವಿಗೆ ನೀವು ಏತಕ್ಕೆ ಬೀಳಬೇಕು. ನಮ್ಮ ಸನ್ಮಾನ್ಯ ಚಂದ್ರೇಗೌಡರು ಏನು ಹೇಳುತ್ತೀರಿ, ನಾವೆಲ್ಲ ಇವತ್ತು ಚುನಾಯಿತರಾಗಿ ಏತಕ್ಕೆ ಬಂದಿದ್ದೇವೆ ಇವತ್ತು ನಮ್ಮ ಕರ್ತವ್ಯಗಳು ಕೆಲವು ಇವೆ. ಇವತ್ತು ಬಜೆಟ್ ಅಧಿವೇಶನನ ನಡೆಯುತ್ತಿದೆ. ಆ ಕರ್ತವ್ಯವನ್ನು ನಾವು ನಿರ್ವಹಿಸಬೇಕಾಗುತ್ತದೆ. ಅದಕ್ಕೆ ಬಾಧಕತರತಕ್ಕಂಥ ಯಾವ ಕೆಲಸವನ್ನು ಕೂಡ ನಾವು ಮಾಡಬಾರದು. ನಮ್ಮ ಸರ್ಕಾರದ್ದು ಮುಕ್ತ ವ್ಯವಹಾರ. ಯಾರನ್ನೂ ರಕ್ಷಣೆ ಮಾಡಬೇಕಾದಂತಹ ಅವಶ್ಯಕತೆ ಇಲ್ಲ ನಾವು ಈಗಾಗಲೇ ಫೈರಿಂಗ್ ಬಗ್ಗೆ ಮ್ಯಾಜಿಸ್ಟ್ರೇಟ್ ಎನ್‌ಕ್ವೈರಿ ಮಾಡಿದ್ದೇವೆ. ಆದರೂ ಕೂಡ ತಮ್ಮ ಸಮಾಧಾನಕ್ಕೆ ಏಕೆಂದರೆ ತಾವು ಆ ಕಡೆ ಬಂದು ಮುಂದೆ ನಡೆಯತಕ್ಕಂಥ ಈ ಆಯವ್ಯಯ ಅಧಿವೇಶನದಲ್ಲಿ ಸಕ್ರಿಯವಾಗಿ ಭಾಗವಹಿಸತಕ್ಕಂಥ ಅಪೇಕ್ಷೆಯಿಂದ ಆಯವ್ಯಯ ಭಾಷಣದಲ್ಲಿ ನೆಮ್ಮದಿ ಎನ್ನತಕ್ಕಂಥ ಒಂದು ಕಾರ್ಯಕ್ರಮವನ್ನು ನಾವು ಘೋಷಣೆ ಮಾಡಿದ್ದೇವೆ. ಆದ್ದರಿಂದ ನೆಮ್ಮದಿ ನಿಮ್ಮ ಮನಸ್ಸಿಗೆ ಬರುವಂತಹ ಒಂದು ಅಪೇಕ್ಷೆ ನಮ್ಮಲ್ಲಿ ಇರುವುದರಿಂದ ಸಭಾಧ್ಯಕ್ಷರೇ ನಮ್ಮನ್ನು ಅವರನ್ನು ತಮ್ಮ ಕೊಠಡಿಗೆ ಕರೆಸಿ ವಾಟಾಳ್‌ನಾಗರಾಜ್‌ರವರು ಮಧ್ಯಸ್ಥಿಕೆ ವಹಿಸಿ ತಮ್ಮ ಆಶೀರ್ವಾದದಿಂದ ಇದಕ್ಕೆ ಒಂದು ಅಂತಿಮ ತೆರೆ ಎಳೆಯುವುದಿದ್ದರೆ ನಮ್ಮದೇನೂ ಆಕ್ಷೇಪಣೆ ಇಲ್ಲ.

ಅಧ್ಯಕ್ಷರು : ಈಗ ನಾನು ಸದನದ ಕಾರ್ಯಕಲಾಪಗಳನ್ನು 15 ನಿಮಿಷ ಮುಂದೂಡುತ್ತೇನೆ.

(ಸದನ ಮತ್ತೆ 1-35ಕ್ಕೆ ಸೇರಿತು, ಸಭೆಯ ಅಧ್ಯಕ್ಷತೆಯನ್ನು ಮಾನ್ಯ ಉಪಾಧ್ಯಕ್ಷರು ವಹಿಸಿದ್ದರು)

ಉಪಾಧ್ಯಕ್ಷರು : ಮಾನ್ಯ ವಿರೋಧ ಪಕ್ಷದ ನಾಯಕರ ಜೊತೆಯಲ್ಲಿ ಸಂಧಾನ ರೂಪದಲ್ಲಿ ಚರ್ಚೆ ನಡೆಯುತ್ತಿದೆ. ಆದ್ದರಿಂದ ಮತ್ತೆ ಸದನವನ್ನು ಮುಂದೂಡಿ 2-30ಕ್ಕೆ ಮತ್ತೆ ಸಮಾವೇಶಗೊಳ್ಳುತ್ತದೆ.

(ಸದನವು 2 ಗಂಟೆ 55 ನಿಮಿಷಕ್ಕೆ ಪುನಃ ಸಮಾವೇಶಗೊಂಡಿತು. ಮಾನ್ಯ ಸಭಾಧ್ಯಕ್ಷರು ಉಪಸ್ಥಿತರಿದ್ದರು)

(ಸಭೆ ಪ್ರಾರಂಭವಾದಾಗ ಜನತಾದಳದ ಸದಸ್ಯರು ಮಾನ್ಯ ಸಭಾಧ್ಯಕ್ಷರ ಪೀಠದ ಮುಂದಿನ ಆವರಣದಲ್ಲಿ ಧರಣಿ ಕುಳಿತಿದ್ದರು. 'ನ್ಯಾಯಾಂಗ ತನಿಖೆಯಾಗಬೇಕು, ಸದನ ಸಮಿತಿ ಆಗಬೇಕು' ಎಂದು ಘೋಷಣೆಗಳನ್ನು ಕೂಗುತ್ತಿದ್ದರು)

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಗ್ರಾಮಪಂಚಾಯತಿ ಚುನಾವಣೆ ಸಂದರ್ಭದಲ್ಲಿ ಏಳು ಕಡೆ, ಗುಲ್ಬರ್ಗಾದಲ್ಲಿ, ಬಳ್ಳಾರಿಯಲ್ಲಿ ಗೋಲಿಬಾರ್‌ನಿಂದ ಸತ್ತಿರುವಂಥಾದ್ದು ತಮಗೆಲ್ಲರಿಗೂ ಗೊತ್ತಿರುವ ಸಂಗತಿ. ಇದರ ಬಗ್ಗೆ ನ್ಯಾಯಾಂಗ ತನಿಖೆಯಾಗಬೇಕು, ಇದರಿಂದ ಸತ್ಯಾಸತ್ಯತೆ ಹೊರಗಡೆಗೆ ಬರುತ್ತದೆ ಎನ್ನುವುದಾದರೆ ಒಂದೇ ನಿಮಿಷದಲ್ಲಿ ಸರ್ಕಾರ ಒಪ್ಪಿಕೊಳ್ಳಬೇಕಾಗಿತ್ತು. ತಪ್ಪು ಮಾಡಿದವರಿಗೆ ಶಿಕ್ಷೆಯಾಗಬೇಕಾಗಿದೆ. ಇಂತಹ ಅನಾಹುತವಾದಾಗ ವಿರೋಧ ಪಕ್ಷದಲ್ಲಿರತಕ್ಕಂಥ ನಾವು ಅದನ್ನು ಪ್ರಸ್ತಾಪ ಮಾಡಬೇಕಾದದ್ದು ನಮ್ಮ ಧರ್ಮ ಮತ್ತು ಕರ್ತವ್ಯ. ಅದನ್ನು ನಾವು ಮಾಡಿದ್ದೇವೆ. ಇದೇ ಕಾರಣಕ್ಕೋಸ್ಕರ ಸದನವನ್ನು ಮೂರು ಬಾರಿ ಮುಂದೂಡಿ, ಸರ್ಕಾರ ಒಪ್ಪಿಕೊಳ್ಳದೇ ಇರುವಂಥಾದ್ದು, ಈ ರೀತಿ ಕಪಿಮುಷ್ಠಿಯಲ್ಲಿ ಕುಳಿತುಕೊಳ್ಳುವಂಥಾದ್ದು ಬಹುಶಃ ಇದು ಸರ್ಕಾರಕ್ಕೆ ಗೌರವ ತರುವಂಥ ಸಂಗತಿ ಅಲ್ಲ, ನಾನು ಅಗ್ರಹ

ಮಾಡುತ್ತಿದ್ದೇನೆ. ಇವತ್ತು ಆಗಿರುವಂಥ ಅನಾಹುತ ಎಲ್ಲರಿಗೂ ಅರ್ಥವಾಗಿರುವ ಸಂಗತಿ. ಈ ಘಟನೆಗಳಲ್ಲಿ ಸರ್ಕಾರದ ಹಸ್ತಕ್ಷೇಪ ನಡೆದಿದೆ. ಅದಕ್ಕೋಸ್ಕರ ಇದರ ಬಗ್ಗೆ ನ್ಯಾಯಾಂಗ ತನಿಖೆ ಮಾಡಿ, ಸದನಸಮಿತಿಯನ್ನು ಮಾಡಿ ಸತ್ಯಾಸತ್ಯತೆ ಎನ್ನುವುದನ್ನು ಕಂಡುಹಿಡಿದು ಇದು ಪುನರಾವರ್ತನೆ ಆಗದಂತೆ ಮಾಡಬೇಕು ಎನ್ನುವಂಥ ಬೇಡಿಕೆಯನ್ನು ವಿರೋಧಪಕ್ಷದವರು ನಾವು, ಒಕ್ಕೊರಲಿನಿಂದ ಮಾಡುತ್ತಿದ್ದೇವೆ. ತಮಗೆ ಗೊತ್ತಿರುವ ಹಾಗೆ, ಸದನದ ಕಾರ್ಯಕಲಾಪಗಳು ನಡೆದಿಲ್ಲ. ನೂರು ದಿವಸ ನಡೆಸುತ್ತೇವೆ ಎಂದು ಹೇಳಿ, ಒಂದು ರೀತಿಯಲ್ಲಿ ದೊಂಬರಾಟ ಮಾಡಿ ಕಾರ್ಯಕಲಾಪ ಆಗದೇನೆ, ಜನ ಸಾಯುತ್ತಿದ್ದಾರೆ, ಆರ್ಥಿಕ ಪರಿಸ್ಥಿತಿ ಹದಗೆಟ್ಟುಹೋಗಿದೆ, ಅಭಿವೃದ್ಧಿ ಕಾರ್ಯಗಳು ಸ್ಥಗಿತವಾಗಿವೆ. ಅನೇಕ ಗಂಭೀರವಾದ ವಿಷಯಗಳನ್ನು ಚರ್ಚೆಮಾಡುವ ಸಲುವಾಗಿ ಸದನವನ್ನು ಕರೆದಿರುವುದು. ಆದರೆ ಸರ್ಕಾರದವರು ಈ ರೀತಿಯಾಗಿ ಕೈಕಟ್ಟಿ ಕುಳಿತುಕೊಂಡು, ಸದನದ ಕಾರ್ಯಕಲಾಪಗಳು ನಡೆಯದಂತೆ ನೋಡಿಕೊಳ್ಳುವಂಥ ಷಡ್ಯಂತ್ರ ನಡೆದಿರಬೇಕೆಂದು ನನಗೆ ಭಯ ಉಂಟಾಗಿದೆ. ನಾವು ಧರಣಿ ಕುಳಿತುಕೊಳ್ಳಬೇಕು. ಸದನದ ಕಾರ್ಯಕಲಾಪ ನಡೆಯಬಾರದು, ಅಭಿವೃದ್ಧಿ ಕಾರ್ಯಗಳು ಸ್ಥಗಿತಗೊಳ್ಳಬೇಕು, ಸರ್ಕಾರದ ಬೊಕ್ಕಸ ಖಾಲಿಯಾಗಿ ಜನ ಸಾಯುತ್ತಿದ್ದಾರೆ; ಇಂತಹ ಸಂದರ್ಭದಲ್ಲಿ.....

(ಸಭೆಯಲ್ಲಿ ಅತೀವ ಗೊಂದಲ. ಆಡಳಿತ ಪಕ್ಷದ ಕೆಲವು ಸದಸ್ಯರು ಏಕಪ್ರಕಾರವಾಗಿ ಮಾತನಾಡುತ್ತಲೇ ಇದ್ದರು)

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಇದು ಸದನಕ್ಕೆ ಗೌರವ ತರುವಂಥ ಸಂಗತಿಯಲ್ಲ. ಗ್ರಾಮಪಂಚಾಯತಿ ಚುನಾವಣೆಯನ್ನು ಸರಿಯಾಗಿ, ಯಾವ ಪ್ರಕಾರವಾಗಿ ನಡೆಸಬೇಕಿತ್ತೋ, ಆ ಪ್ರಕಾರವಾಗಿ ನಡೆಸದೆ ಏಳು ಕಡೆ .....

(ಆಡಳಿತ ಪಕ್ಷದ ಸದಸ್ಯರು ಮಾತಾಡುತ್ತಿದ್ದರು. ಧರಣಿ ಕುಳಿತಿದ್ದ ಜನತಾದಳದ ಸದಸ್ಯರು ಕೂಡ ಮಾತನಾಡುತ್ತಿದ್ದರು. ಸಭೆಯಲ್ಲಿ ಗೊಂದಲ)

ಅಧ್ಯಕ್ಷರು : ನೀವು ಕುಳಿತುಕೊಳ್ಳಿ. ಬಾವಿಯಲ್ಲಿದ್ದವರು ಶಾಂತರೀತಿಯಿಂದ ವರ್ತನೆ ಮಾಡಿರಿ. ಯಡಿಯೂರಪ್ಪನವರೇ, ನಿನ್ನೆಯ ದಿವಸ ನೀವು ಇದ್ದಿರಲಿಲ್ಲ, ಚರ್ಚೆಗೆ ನಾನು ಸಾಕಷ್ಟು ಆಸ್ಪದವನ್ನು ಮಾಡಿಕೊಟ್ಟಿದ್ದೇನೆಂದರೆ ಆದರೆ ನಿನ್ನೆ ನೀವು ಇರಲಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಪ್ರಶ್ನೆ ಮಾಡುವಂಥಾದ್ದು ಏನೆಂದರೆ ಸದನದ ಸಮಿತಿ ಮಾಡುವುದಕ್ಕೆ, ಜ್ಯೂಡಿಶಿಯಲ್ ಎನ್‌ಕ್ವೈರಿ ಮಾಡುವುದಕ್ಕೆ ಏನು ತೊಂದರೆ ಇದೆ? ನಾನು ಜನತಾದಳದ ಶಾಸಕಮಿತ್ರರಲ್ಲಿ ಪ್ರಾರ್ಥನೆ ಮಾಡುತ್ತೇನೆ. ವಿರೋಧ ಪಕ್ಷದ ಸದಸ್ಯರು ಧರಣಿ ಕುಳಿತುಕೊಳ್ಳುವುದರಿಂದ, ಸದನದ ಕಾರ್ಯಕಲಾಪ ಮುಂದೆ ಹೋಗುತ್ತದೆ. ಗಂಭೀರವಾದ ವಿಷಯ ಚರ್ಚೆಯಾಗದಂತೆ ನೋಡಿಕೊಳ್ಳುವುದು ಆಡಳಿತ ಪಕ್ಷದ ತಂತ್ರ ಇದೆ. ನಾವು ವಿರೋಧಪಕ್ಷದಲ್ಲಿ ಕುಳಿತುಕೊಂಡು ಆ ಕೆಲಸ ಮಾಡಿದ್ದೇವೆ ಎಂಬ ಆಪಾದನೆಗೆ ಗುರಿಯಾಗುವಂಥ ಸಂದರ್ಭ ಇದೆ. ಇದು ಸರಿಯಲ್ಲ....

(ಗೊಂದಲ)

(ಆಡಳಿತ ಪಕ್ಷದ ಸದಸ್ಯರು ಏಕಕಾಲದಲ್ಲಿ ಮಾತನಾಡುತ್ತಿದ್ದರು. ಮಾನ್ಯ ಸದಸ್ಯರಾದ ಶ್ರೀ ಗೋಪಾಲ ಮುಕುಂದ ಕಾನಡೆಯವರು ಪ್ರಮುಖವಾಗಿ ಮಾತನಾಡುತ್ತಿದ್ದರು)

ಅಧ್ಯಕ್ಷರು : ಎಲ್ಲರೂ ಏಕೆ ಒಟ್ಟಿಗೆ ನಿಂತುಕೊಂಡು ಮಾತನಾಡುತ್ತಿದ್ದೀರಿ?

ಶ್ರೀ ಬಿ.ಎಸ್. ಯಡಿಯೂರಪ್ಪ : ಸದನದಲ್ಲಿ ಮಾತನಾಡುವುದಕ್ಕೆ ನನಗೆ ಅಧಿಕಾರ ಇಲ್ಲವೇನು? ಇವರು ಏಕೆ ಅಡ್ಡಿ ಮಾಡುತ್ತಿದ್ದಾರೆ?

ಅಧ್ಯಕ್ಷರು : ಶ್ರೀ ಕಾನಡೆಯವರೇ, ಅವರು ಏನು ಹೇಳುತ್ತಾರೋ ಹೇಳಲಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ ....

(ಗೊಂದಲ)

ಶ್ರೀ ವಾಟಾಳ್‌ನಾಗರಾಜ್ : ಮಾನ್ಯ ಅಧ್ಯಕ್ಷರೇ, ತಾವು ತಮ್ಮ ಕಾರ್ಯಾಲಯದಲ್ಲಿ ನಮ್ಮೆಲ್ಲರನ್ನು ಕರೆದು ಮಾತುಕತೆ....

(ಗೊಂದಲ)

ಅಧ್ಯಕ್ಷರು : ತಾವೆಲ್ಲ ಕುಳಿತುಕೊಳ್ಳಿ ವಾಟಾಳ್ ನಾಗರಾಜ್‌ರವರೇ ತಾವು ಹೇಳಿ....

(ಗೊಂದಲ)

ಶ್ರೀ ಬಿ. ಸ್ವಾಮಿರಾವ್ : ಮಾನ್ಯ ಅಧ್ಯಕ್ಷರೇ, ಪಂಚಾಯತಿಗಳಲ್ಲಿ ಹರಿಜನರು ಜಾಸ್ತಿ ಸಂಖ್ಯೆಯಲ್ಲಿ ಅಧ್ಯಕ್ಷರು ಉಪಾಧ್ಯಕ್ಷರು ಆಗಿರುವುದರಿಂದ ಇವರು ಈ ರೀತಿ ಮಾಡುತ್ತಿದ್ದಾರೆಂದು ಕಾಣುತ್ತದೆ.

(ಗೊಂದಲ)

ಅಧ್ಯಕ್ಷರು : ಸ್ವಾಮಿರಾವ್ ಮತ್ತು ಕಾನಡೆಯವರೇ ತಾವಿವು ಕುಳಿತುಕೊಳ್ಳಿ....

(ಗೊಂದಲ)

ಶ್ರೀ ಗೋಪಾಲಮುಕುಂದ ಕಾನಡೆ : ಮಾನ್ಯ ಅಧ್ಯಕ್ಷರೇ, ಅವರನ್ನು ಎತ್ತಿ ಹೊರಗೆ ಹಾಕಿ ಸಭೆಯ ಕಾರ್ಯಕಲಾಪಗಳನ್ನು ನಡೆಸಿ. ಒಂದು ಗಂಟೆಗೆ 40 ಸಾವಿರ ರೂಪಾಯಿ ಖರ್ಚು ಆಗುತ್ತದೆ.

(ಗೊಂದಲ)

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ನಮ್ಮನ್ನು ಎತ್ತಿ ಹಾಕುವಷ್ಟು ತಾಕತ್ತು ಇದೆಯೇ?

(ಗೊಂದಲ)

ಶ್ರೀ ಗೋಪಾಲ ಮುಕುಂದ ಕಾನಡೆ : ಮಾನವೀಯತೆ ದೃಷ್ಟಿಯಿಂದ ಆ ಕೆಲಸ ಮಾಡಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಧರಣಿ ಕುಳಿತುಕೊಂಡಿರತಕ್ಕಂಥಾದ್ದು ಏತಕ್ಕೆ ಎನ್ನತಕ್ಕಂಥಾದ್ದೇ ಆ ಕಡೆಯ ಕೆಲವು ನಮ್ಮ ಸ್ನೇಹಿತರಿಗೆ ಅರ್ಥವಾಗಿಲ್ಲ.

ಶ್ರೀ ಆರ್. ಎನ್. ನಾಯಕ್ : ನಮಗೆ ಅರ್ಥವಾಗಿದೆ. ಇದೆಲ್ಲಾ ನ್ಯಾಯಾಂಗ ತನಿಖೆ ಆಗಲೇಬೇಕು ಎನ್ನುವುದಕ್ಕೆ.

(ಗೊಂದಲ)

ಅಧ್ಯಕ್ಷರು : ತಾವು ಹೇಳುವಾಗ ಧಾಟಿ ಸ್ವಲ್ಪ ಬದಲಾವಣೆ ಮಾಡಿ ಹೇಳಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ,ಇಲ್ಲಿ ಒಂದು ಪ್ರಶ್ನೆ ಏನೆಂದರೆ, ಚುನಾವಣೆಯಲ್ಲಿ ಹರಿಜನರಿಗೆ ಏನು ಮೀಸಲಾತಿಯನ್ನು ಇಟ್ಟಿದ್ದಾರೆ ಅದನ್ನು ವಿರೋಧ ಮಾಡಿ ನಾವು ಯಾರು ಧರಣಿ ಮಾಡುತ್ತಿಲ್ಲ, ಅದನ್ನು ತಿರುಗಿಸಿ ಜನಗಳಲ್ಲಿ ಒಂದು ರೀತಿ ಕೆಟ್ಟ ಭಾವನೆ ನಿರ್ಮಾಣ ಮಾಡತಕ್ಕಂಥ ಯೋಜನೆಯನ್ನು ಇಲ್ಲಿ ನಾಲ್ಕು ಜನ ಮಾಡುತ್ತಿದ್ದಾರೆ; ಅದಲ್ಲ, ನಾನು ಬಹಳ ಸ್ಪಷ್ಟವಾಗಿ ತಮಗೆ ಹೇಳುತ್ತೇನೆ. ತಮ್ಮ ಕಾರ್ಯಾಲಯದಲ್ಲಿ ಒಂದು ಸಭೆಯನ್ನು ಕರೆದು ಮಾತನಾಡಿದ್ದೀರಿ. ಒಂದು ಸಾರಿ ಸಭೆ ನಡೆದಿದೆ. ಮಾನ್ಯ ಮುಖ್ಯಮಂತ್ರಿಗಳು ದಯಮಾಡಿಸಿದ್ದರು, ತಾವೂ ಇದ್ದಿರಿ. ಆಗ ನಾವು ಅತ್ಯಂತ ಸೌಜನ್ಯವಾದಂಥ ಬೇಡಿಕೆಯನ್ನು ತಮ್ಮ ಮುಂದೆ ಇಟ್ಟಿದ್ದೇವೆ.

(ಗೊಂದಲ)

ಶ್ರೀ ಗೋಪಾಲ ಮುಕುಂದ ಕಾನಡೆ : ತಾವು ಭಾಷಣ ಮಾಡಿ ಇಲ್ಲಾ ಧರಣಿ ಮಾಡಿ, ಎರಡೂ ಒಟ್ಟಿಗೆ ಮಾಡುವುದಕ್ಕಾಗುವುದಿಲ್ಲ. ಎರಡೂ ಏತಕ್ಕೆ ಒಂದೇ ಸಾರಿ ಮಾಡುತ್ತೀರಿ ....

(ಗೊಂದಲ)

ಶ್ರೀ ವಾಟಾಳ್ ನಾಗಾರಾಜ್ : ಈ ರೀತಿ ಮಾಡಿದರೆ ಕೂಗಾಟ ಮಾಡಲು ನಮಗೂ ಬರುತ್ತದೆ ನಮಗೂ ಗೊತ್ತಿದೆ .....

(ಗೊಂದಲ)

ಅಧ್ಯಕ್ಷರು : ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ಮತ್ತು ಸದಸ್ಯರಲ್ಲಿ ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ. ಈಗ ಇದರ ಬಗ್ಗೆ ಸಾಕಷ್ಟು ಚರ್ಚೆ ಆಗಿದೆ. ತಾವು ತಮ್ಮ ಸ್ಥಳಗಳಿಗೆ ಹೋಗಿ ಕುಳಿತುಕೊಂಡರೆ ನಾನು ಸಭೆಯ ಕಾರ್ಯಕಲಾಪಗಳನ್ನು ನಡೆಸಲು ಸಾಧ್ಯವಾಗುತ್ತದೆ. ಸಭೆಯ ಕಾರ್ಯಕಲಾಪಗಳನ್ನು ನಡೆಸಲು ಅನುಕೂಲ ಮಾಡಿಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ ನಾನು ವೆಲ್‌ನಲ್ಲಿರುವಂಥ ನಮ್ಮ ಜನತಾ ದಳದ ಸ್ನೇಹಿತರಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ,

ನಾವೆಲ್ಲರೂ ಸಹ ವೆಲ್‌ನಲ್ಲಿ ಬರದೇ ಇದ್ದರೂ ಸಹ ಇಲ್ಲಿ ಇರುವ ಎಲ್ಲಾ ವಿರೋಧ ಪಕ್ಷದವರ ಸಹಮತ ಇದೆ. ಇವತ್ತು ಗುಲ್ಬರ್ಗದಲ್ಲಿ, ಬಳ್ಳಾರಿ ಜಿಲ್ಲೆಯಲ್ಲಿ 7 ಜನ ವ್ಯಕ್ತಿಗಳ ಕೊಲೆ ಆಗಿದೆ. ಅನೇಕ ಹಲ್ಲೆ ಆಗಿದೆ ಸರ್ಕಾರದ ಹಸ್ತಕ್ಷೇಪ ಆಗಿದೆ ಎಂದು ಏನು ನಮ್ಮ ಭಾವನೆ ಬಂದಿದೆ ......

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಗೋಲಿಬಾರ್‌ನಿಂದ 7 ಜನ ಮೃತ್ಯುವನ್ನು ಅನುಭವಿಸಿದ್ದಾರೆ. ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆ ಎಂದರೆ, ಸನ್ಮಾನ್ಯ ಅಧ್ಯಕ್ಷರೇ, ಇವತ್ತು ಸರ್ಕಾರಕ್ಕೆ ನಮ್ಮ ಎಲ್ಲಾ ಶಕ್ತಿಯನ್ನು ಹಾಕಿ ಬೆಳಿಗ್ಗೆಯಿಂದ ನಮ್ಮ ಜನತಾ ದಳದ ಸ್ನೇಹಿತರು ವೆಲ್‌ನಲ್ಲಿ ಕುಳಿತುಕೊಂಡು ನ್ಯಾಯಾಂಗ ತನಿಖೆ ಆಗಬೇಕು ಸದನದ ಸಮಿತಿ ಆಗಬೇಕು ಎನ್ನುವಂತಹ ಒತ್ತಾಯವನ್ನು ನಾವು ಮಾಡುತ್ತಿದ್ದೇವೆ. ಇವತ್ತು ಸನ್ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿದ್ದಾರೆ. ಸರ್ಕಾರದ ಹಸ್ತಕ್ಷೇಪ ಆಗಿಲ್ಲ ಅಲ್ಲಿ ಅನಿವಾರ್ಯ ಕಾರಣಗಳಿಂದ ಈ ಘಟನೆ ಆಗಿದೆ ಎಂದು ಅವರಿಗೆ ಮನವರಿಕೆ ಆಗಿದ್ದರೆ ಅಥವಾ ಸತ್ಯಸಂಗತಿಗಳು ಹೊರಗಡೆ ಬರಬೇಕು ಎನ್ನುವಂತಹ ಅಪೇಕ್ಷೆ ಸನ್ಮಾನ್ಯ ಸಭಾನಾಯಕರಿಗೆ ಮತ್ತು

ಸರ್ಕಾರಕ್ಕೆ ಇದ್ದರೆ ನಾವು ವಿನಂತಿ ಮಾಡುತ್ತಿದ್ದೇವೆ. ಆಗದೇ ಇರುವಂತಹ ಯಾವುದೇ ಬೇಡಿಕೆಯನ್ನು ನಾವು ವಿರೋಧಪಕ್ಷದವರು ತಮ್ಮ ಮುಂದೆ ಇಡುತ್ತಿಲ್ಲ. ಆದ್ದರಿಂದ ನಾನು ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ. ಸದನದ ಕಾರ್ಯಕಲಾಪ ನಡೆಯಬೇಕಾಗಿದೆ. ಅನೇಕ ಪ್ರಮುಖ ಅಂಶಗಳ ಬಗ್ಗೆ ಚರ್ಚೆ ಆಗಬೇಕಾಗಿದೆ. ಬಹಳ ದಿನಗಳ ನಂತರ ನಾವು ಸದನದ ಕಾರ್ಯಕಲಾಪ ನಡೆಸುತ್ತಾ ಇದ್ದೇವೆ. ಅಭಿವೃದ್ಧಿ ಕೆಲಸಗಳು ಸ್ಥಗಿತವಾಗಿ ಹಣಕಾಸು ಬಿಡುಗಡೆಯಾಗದೆ ಅನೇಕ ಪ್ರಮುಖವಾದ ವಿಷಯಗಳ ಬಗ್ಗೆ ಚರ್ಚೆ ಆಗಬೇಕಾಗಿದೆ. ಅದಕ್ಕಾಗಿ ನಾನು ಸಭಾನಾಯಕರಲ್ಲಿ ವಿನಂತಿ ಮಾಡುತ್ತಿದ್ದೇನೆ. ನಮ್ಮ ನ್ಯಾಯಯುತವಾದ ಈ ಎರಡು ಪ್ರಮುಖ ಬೇಡಿಕೆಗಳನ್ನು ಒಪ್ಪಿಕೊಂಡು ನ್ಯಾಯಾಂಗ ತನಿಖೆಗೆ ಅದನ್ನು ಅಳವಡಿಸಿ ಮತ್ತು ಸದನದ ಸಮಿತಿಯನ್ನು ಮಾಡಬೇಕೆನ್ನುವ ವಿನಂತಿಯನ್ನು ನಾನು ಮಾಡುತ್ತಿದ್ದೇನೆ. ಒಂದು ವೇಳೆ ಸರ್ಕಾರ ಇದು ಸಾಧ್ಯ ಇಲ್ಲ ಎನ್ನುವುದಾದರೆ ಇಲ್ಲ ಯಡಿಯೂರಪ್ಪನವರೇ ನಿಮ್ಮ ಬೇಡಿಕೆಯನ್ನು ನಾವು ಈಡೇರಿಸುವುದಿಲ್ಲ ಸಾಧ್ಯ ಇಲ್ಲ ಎನ್ನುವುದು ನಿಮ್ಮ ನಿಲುವು ಆದರೆ ನಾನು ಅಧ್ಯಕ್ಷರಿಗೆ ವಿನಂತಿ ಮಾಡುತ್ತೇನೆ, ದಯಮಾಡಿ ಹಾಗಾದರೆ ಈ ಕಾರ್ಯಕಲಾಪ ನಡೆಯಬೇಕಾಗಿದೆ, ಈ ಕಾರಣಕ್ಕೋಸ್ಕರ ನಾವು ಹಿಂದೆ ಸದನದಲ್ಲಿ ಧರಣಿ ಕುಳಿತು ಪ್ರಮುಖವಾದ ಅಂಶ ಇದ್ದು ಸದನ ಮುಂದಕ್ಕೆ ಹೋಗುವುದಾದರೆ ಜನ ಏನು ಹೇಳುತ್ತಾರೆ ಇವತ್ತು ಸರ್ಕಾರ ಒಪ್ಪಿಕೊಳ್ಳುವುದಕ್ಕೂ ರೆಡಿ ಇಲ್ಲ. ಅನೇಕ ಪ್ರಮುಖವಾದಂತಹ ವಿಷಯಗಳ ಚರ್ಚೆ ಆಗದೆ ಒಂದು ರೀತಿ ಸರ್ಕಾರಕ್ಕೆ ನಾವು ಸಹಾಯ ಮಾಡುತ್ತೇನೆ ಎನ್ನುವ ಭಾವನೆ ಆಗಿದೆ. ಹಿಂದೆಯೂ ಅನೇಕ ಸಾರಿ ಆಗಿದೆ. ನಿಮ್ಮ ಅಪೇಕ್ಷೆ ಅದೇ ಇದೆ. ನಾವು ಇಲ್ಲಿ ವೆಲ್‌ನಲ್ಲಿ ಕುಳಿತುಕೊಳ್ಳಬೇಕು, ಯಾವುದೇ ತೀರ್ಮಾನ ತೆಗೆದುಕೊಳ್ಳದೆ ಇಲ್ಲಿ ಯಾವುದೇ ಪ್ರಮುಖವಾದ ವಿಷಯಗಳ ಬಗ್ಗೆ ಚರ್ಚೆ ಆಗದೆ ಹೇಗೋ ಸದನದ ಕಾರ್ಯಕಲಾಪಗಳನ್ನು ಮುಂದೂಡಬೇಕು ಎನ್ನುವ ಒಂದು ತಂತ್ರಗಾರಿಕೆ, ಒಂದು ಷಡ್ಯಂತರ ಇಲ್ಲಿ ನಡೆಯುತ್ತಾ ಇದೆಯೋ ಏನೋ ಎನ್ನುವಂತೆ ಜನ ಅನುಮಾನ ಪಡುವಂತಹ ರೀತಿ ಇವತ್ತು ಇಲ್ಲಿ ಕಾಣುತ್ತಾ ಇದೆ. ನಾವು ಅದನ್ನೇ ಒತ್ತಾಯ ಮಾಡುತ್ತಿದ್ದೇವೆ. ಇವತ್ತು ತಾವು ಉತ್ತರ ಕೊಡುವಂತಹ ಸಂದರ್ಭದದಲ್ಲಿ ಹೇಳಬೇಕಾಗಿದೆ. ಇದು ಇಷ್ಟೇ ಅಲ್ಲ, ಈ ನಾಡಿನ ಜನರಿಗೆ ತಾವು ಭರವಸೆ ಕೊಟ್ಟಂತೆ, ತಾಲ್ಲೂಕ ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿ ಚುನಾವಣೆ ತಾವು ನಡೆಸಬೇಕಾಗಿದೆ. ಸುಪ್ರೀಂ ಕೋರ್ಟಿನಲ್ಲಿ ಅಂಡರ್‌ಟೇಕಿಂಗ್ ತಾವು ತೆಗೆದುಕೊಂಡಿದ್ದೀರಿ. ಚುನಾವಣೆಯ ಡೇಟ್ ಫಿಕ್ಸ್‌ಆಗಿದೆ. ಏಪ್ರಿಲ್ 4ನೇ ತಾರೀಖು ಕ್ಯಾಲೆಂಡರ್ ಆಫ್ ಇವೆಂಟ್ಸ್ ಹಾಕುತ್ತಿದ್ದಾರೆ. ಇಂತಹ ಒಂದು ನೋಟಿಫಿಕೇಷನ್ ಹೊರಡಿಸುವಂತಹ ಸಂದರ್ಭದಲ್ಲಿ ಇವತ್ತು ಪತ್ರಿಕೆಯಲ್ಲಿ ಬಂದಿದೆ. ತಮ್ಮ ಸಿ.ಎಲ್.ಪಿ. ಮೀಟಿಂಗ್‌ನಲ್ಲಿ ಚುನಾವಣೆ ಮುಂದೂಡಬೇಕು ಎನ್ನುವಂಥಾದ್ದು, ಮಂತ್ರಿಮಂಡಲ ಸಭೆಯಲ್ಲಿ ಮುಂದೂಡಬೇಕು ಎನ್ನುವಂಥಾದ್ದು ಬಂದಿದೆ.

ಅಧ್ಯಕ್ಷರು : ಇದಕ್ಕೆ ಸಂಬಂಧಪಟ್ಟಂತೆ ಮಾತನಾಡಿ, ಅದು ಬೇಡ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದಕ್ಕೆ ಸಂಬಂಧಪಟ್ಟಂತೆ ಹೇಳುತ್ತಿದ್ದೇನೆ. ತಾಲ್ಲೂಕು ಪಂಚಾಯತಿ ಜಿಲ್ಲಾ ಪಂಚಾಯತಿ ಚುನಾವಣೆಯನ್ನು ಮಾಡುತ್ತೇವೆ ಎನ್ನುವ ಭರವಸೆಯನ್ನು ಈ ಸದನಕ್ಕೆ ಕೊಡಬೇಕಾಗಿದೆ.

(ಗೊಂದಲ)

ಇಲ್ಲವೆಂದರೆ ನೀವೇನೋ ತಂತ್ರಗಾರಿಕೆ ಮಾಡುತ್ತಿದ್ದೀರೆಂದು ಅನಿವಾರ್ಯವಾಗಿ ಆರೋಪ ಮಾಡಬೇಕಾಗುತ್ತದೆ.

ಅಧ್ಯಕ್ಷರು : ಈಗ ಸದನದ ಕಲಾಪವನ್ನು 10 ನಿಮಿಷ ಮುಂದೂಡುತ್ತೇನೆ. ಈಗ ಮಾನ್ಯ ಮುಖ್ಯಮಂತ್ರಿಗಳು ಮತ್ತು ವಿರೋಧಪಕ್ಷದ ನಾಯಕರು ನನ್ನ ಕೊಠಡಿಗೆ ಬರಬೇಕೆಂದು ಕೋರುತ್ತೇನೆ.

(ಸಭೆಯು ಪುನಃ 4.30 ಗಂಟೆಗೆ ಸಮಾವೇಶಗೊಂಡಿತು. ಮಾನ್ಯ ಅಧ್ಯಕ್ಷರು ಶ್ರೀ ವಿ.ಎಸ್. ಕೌಜಲಗಿಯವರು ಪೀಠದಲ್ಲಿದ್ದರು)

+ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಸದನದ ಕಾರ್ಯಕಲಾಪವನ್ನು ಮುಂದೂಡಬೇಡಿ. ನಿಮ್ಮ ಕೊಠಡಿಗೆ ಬಂದಾಗ ಸದನ ಸಮಿತಿ ಮಾಡುತ್ತೇನೆಂದು ಮುಖ್ಯಮಂತ್ರಿಗಳು ಒಪ್ಪಿಕೊಂಡಿದ್ದಾರೆ. ನೀವು ಸದನವನ್ನು ಮುಂದೂಡಿದರೆ ಇವರು ಮಾತನಾಡಿಕೊಂಡು ಸದನದ ಕಾರ್ಯಕಲಾಪವನ್ನು ಮುಂದಕ್ಕೆ ಹಾಕಿಕೊಂಡಿದ್ದಾರೆಂದು ಆಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಸದನದ ಕಾರ್ಯಕಲಾಪವನ್ನು ಮುಂದಕ್ಕೆ ಹಾಕುವುದಿಲ್ಲವೆಂದು ತಾವು ಹೇಳಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಆಡಳಿತ ಪಕ್ಷದವರ ಬಗ್ಗೆ ವಿರೋಧಪಕ್ಷದವರ ಬಗ್ಗೆ ಅಪನಂಬಿಕೆ ಪಡುವಂತಹ ಪರಿಸ್ಥಿತಿ ಬರುತ್ತದೆ. ದಯಮಾಡಿ ಯಾವುದೇ ಕಾರಣಕ್ಕೆ ಸದನವನ್ನು ಮುಂದೂಡಬೇಡಿ. ಚರ್ಚೆಗೆ ಅವಕಾಶ ಮಾಡಿಕೊಡಿ. ಸದನ ಸಮಿತಿ ಮಾಡುತ್ತೇನೆಂದು ಮುಖ್ಯಮಂತ್ರಿಗಳು ಒಪ್ಪಿಕೊಂಡಿದ್ದಾರೆ. ನಮಗೂ ಅದರ ಬಗ್ಗೆ ಒಪ್ಪಿಗೆ ಇದೆ. ಒಂದು ಸಾರಿ ಚರ್ಚೆಯಾದ ಮೇಲೆ ನಮಗೆ ನಂಬಿಕೆಯಿದೆ. ಇಲ್ಲದಿದ್ದರೆ ಆಡಳಿತ ಪಕ್ಷದವರು ಮತ್ತು ವಿರೋಧ ಪಕ್ಷದವರು ಹೊಂದಿಕೊಂಡು ಏನೋ ಒಂದು ತರಹ ಸಭೆ ನಡೆಸುತ್ತಿದ್ದಾರೆನ್ನುವ ಭಾವನೆ ಜನರಲ್ಲಿ ಬರಬಹುದು; ಮತ್ತು ಇದರಿಂದ ಕೆಟ್ಟ ಅಭಿಪ್ರಾಯಕ್ಕೆ ಅವಕಾಶವಾಗುತ್ತದೆ. ಇಲ್ಲಿ ಬಹಳ ಗಂಭೀರವಾದ ವಿಷಯಗಳ ಬಗ್ಗೆ ಚರ್ಚೆ ಮಾಡುವ ಅಗತ್ಯವಿದೆ. ನಿಮ್ಮ ಕೊಠಡಿಗೆ ಬಂದಾಗ ಸದನ ಸಮಿತಿ ಮಾಡುತ್ತೇನೆಂದು ಮುಖ್ಯಮಂತ್ರಿಗಳು ಒಪ್ಪಿಕೊಂಡಿದ್ದಾರೆ. ಸರ್ಕಾರದ ನಿಲುವು ಏನಿದೆ ಅದನ್ನು ಘೋಷಣೆ ಮಾಡಲಿ. ಆಮೇಲೆ ನಮ್ಮ ನಿಲುವು ಏನಿದೆ ಅದನ್ನು ನಾವು ಸ್ಪಷ್ಟಮಾಡುತ್ತೇವೆ. ವಿನಾಕಾರಣ ಸದನ ಮುಂದೂಡುವುದು ಈ ಪ್ರಜಾತಂತ್ರ ವ್ಯವಸ್ಥೆಗೆ ಧಕ್ಕೆ ಬರುವಂತಹದ್ದು ಈ ತರಹ ಕಾರ್ಯಕಲಾಪ ನಡೆಯುವುದಕ್ಕೆ ತಾವು ಅವಕಾಶ ಮಾಡಿಕೊಡಬಾರದು. ಮಾನ್ಯ ಸಭಾನಾಯಕರು ಅದರ ಬಗ್ಗೆ ಸರ್ಕಾರದ ನಿಲುವು ಏನಿದೆ ಅದನ್ನು ದಯಮಾಡಿ ಸ್ಪಷ್ಟಮಾಡಬೇಕೆಂದು ನಾನು ಅವರಲ್ಲಿ ವಿನಂತಿ ಮಾಡುತ್ತೇನೆ. ಇಲ್ಲದಿದ್ದರೆ ಆಡಳಿತ ಪಕ್ಷದವರು ಮತ್ತು ವಿರೋಧಪಕ್ಷದವರು ಸೇರಿಕೊಂಡು ಏನೋ ಮಾತನಾಡಿಕೊಂಡು ಕಾರ್ಯಕಲಾಪ ನಡೆಸುತ್ತಿದ್ದಾರೆನ್ನುವ ಭಾವನೆ ಬರುತ್ತದೆ. ಅದಕ್ಕೆ ನಾವು ಪಾರ್ಟಿಯಾಗುವುದಕ್ಕೆ ಸಾಧ್ಯವಿಲ್ಲ. ನಾವು ಸದನವನ್ನು ಬಿಟ್ಟು ಹೊರಗೆ ಹೋಗಬೇಕಾಗುತ್ತದೆ. ಆಡಳಿತ ಪಕ್ಷದ ನಡವಳಿಕೆಯನ್ನು ಪ್ರತಿಭಟನೆ ಮಾಡಿ ಸಭೆಯಿಂದ ಹೊರಗಡೆ ಹೋಗುತ್ತೇವೆ.

ಅಧ್ಯಕ್ಷರು : ಈಗ ಸದನದ ಕಾರ್ಯಕಲಾಪವನ್ನು ಮುಂದೂಡಿ, ನಾಳೆ ಬೆಳಿಗ್ಗೆ 11 ಗಂಟೆಗೆ ಸಭೆ ಮತ್ತೆ ಸೇರುತ್ತದೆ.

(ಸದನವು ಸಂಜೆ 4 ಗಂಟೆ 32 ನಿಮಿಷಕ್ಕೆ ಮುಕ್ತಾಯವಾಗಿ ಪುನಃ ದಿನಾಂಕ24ನೇ ಮಾರ್ಚಿ ಮಾಹೆ 1994ರ ಗುರುವಾರದಂದು ಬೆಳಿಗ್ಗೆ 11-00 ಗಂಟೆಗೆ ಸೇರಲು ನಿಶ್ಚಯಿಸಿತು)

(+ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ).

BLANK PAGE

ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಗುರುವಾರ ೨೪ನೇ ಮಾರ್ಚ್, ೧೯೯೪, ಚೈತ್ರ ೧೦, ಶಕ ೧೯೧೬

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಗ್ಗೆ ೧೧.೨೫ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : (ಶ್ರೀ ವಿ.ಎಸ್. ಕೌಜಲಗಿ) ಅವರು ಪೀಠವನ್ನು ಅಲಂಕರಿಸಿದ್ದರು.

ಸಂತಾಪ ಸೂಚನೆಗಳು

ಅಧ್ಯಕ್ಷರು : ವಿಧಾನ ಸಭೆಯ ಮಾಜಿ ಸದಸ್ಯರುಗಳಾದ ಶ್ರೀ ಗೌಸ್ ಮೊಹಿಯುದ್ದೀನ್ ಹಾಗೂ ಶ್ರೀ ನಜೀರ್ ಅಹಮದ್ ಸಿದ್ದಿಕಿ, ಇವರುಗಳ ನಿಧನರಾದುದನ್ನು ಈ ಸದನಕ್ಕೆ ವಿಷಾದದಿಂದ ತಿಳಿಸುತ್ತಿದ್ದೇನೆ.

1. ವಿಧಾನ ಸಭೆಯ ಮಾಜಿ ಸದಸ್ಯರಾದ ಶ್ರೀ ಗೌಸ್ ಮೊಹಿಯುದ್ದೀನ್ ಅವರು ದಿನಾಂಕ 22-3-1994ರಂದು ನಿಧನರಾದರು.

ಶ್ರೀಯುತರು ಮೂರನೇ ವಿಧಾನ ಸಭೆಗೆ ರಾಯಚೂರು ಕ್ಷೇತ್ರದಿಂದ ಚುನಾಯಿತರಾಗಿದ್ದರು. ಶಿಕ್ಷಕರಾಗಿ, ವಕೀಲರಾಗಿ, ರಾಯಚೂರು ಪಟ್ಟಣದ ಮುನ್ಸಿಪಲ್ ಕೌನ್ಸಿಲರಾಗಿ ಹಾಗೂ ರಾಯಚೂರು ಬಾರ್ ಅಸೋಸಿಯೇಷನ್ನಿನ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿರುತ್ತಾರೆ.

ವಿಧಾನ ಸಭೆಯ ಮಾಜಿ ಸದಸ್ಯರಾದ ಶ್ರೀ ನಜೀರ್ ಅಹಮದ್ ಸಿದ್ದಿಕಿ ಅವರು ದಿನಾಂಕ 24-3-1994ರಂದು ನಿಧನರಾದರು.

ಶ್ರೀಯುತರು ಐದನೇ ಹಾಗೂ ಆರನೇ ವಿಧಾನ ಸಭೆಯ ಸದಸ್ಯರಾಗಿದ್ದರು. ಶ್ರೀಯುತರು ಶ್ರೀ ದೇವರಾಜ ಅರಸು ಮಂತ್ರಿಮಂಡಲದಲ್ಲಿ ವಕ್ಫ್ ಖಾತೆಯ ರಾಜ್ಯ ಮಂತ್ರಿಗಳಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರ ಸ್ಮರಣಾರ್ಥ ಮಾನ್ಯ ಸದಸ್ಯರುಗಳು ಒಂದು ನಿಮಿಷ ಎದ್ದು ನಿಂತು ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಸದನವು ಎದ್ದು ನಿಂತು ಮೃತರ ಗೌರವಾರ್ಥ ಒಂದು ನಿಮಿಷ ಮೌನವನ್ನಾಚರಿಸಿತು.)

ಅಧ್ಯಕ್ಷರು : ಈ ಸಭೆ ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತ್ ಚುನಾವಣೆಗಳನ್ನು ಮುಂದಕ್ಕೆ ಹಾಕಿರುವ ಬಗ್ಗೆ ಪತ್ರಿಕೆಯಲ್ಲಿ ಬಂದಿದೆ. ಈ ಸದನ ನಡೆಯುತ್ತಿರುವಾಗ ಈ ಸದನಕ್ಕೆ ತಿಳಿಸದೇ ಈ ಸಭೆಯ ಹಕ್ಕುಚ್ಯುತಿಯಾಗಿದೆ.....

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ: ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟೀಕರಣ ನೀಡಬೇಕು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇದು ಆಗಬಾರದು. ಪ್ರಜಾಪ್ರಭುತ್ವ ವ್ಯವಸ್ಥೆಯ ಕೊಲೆ ಆಗಿದೆ....

ಜನತಾದಳ ಸದಸ್ಯರಿಂದ ಧರಣಿ

(ಈ ಹಂತದಲ್ಲಿ ಜನತಾ ದಳದ ಸದಸ್ಯರು ಬಾವಿಯಲ್ಲಿ ಧರಣಿ ಮಾಡತೊಡಗಿದ್ದರು.)

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೇ, ಇದು ಶಾಸನ ಸಭೆಗೆ ಮಾಡಿದಂತಹ ಅಗೌರವ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಶಾಸನ ಸಭೆ ನಡೆಯುತ್ತಿರುವಾಗ ಅಲ್ಲಿ ಚರ್ಚೆ ಮಾಡದೇ ಚುನಾವಣೆಯನ್ನು ಮುಂದಕ್ಕೆ ಹಾಕಿರುವುದು ಪ್ರಜಾತಂತ್ರದ ಕೊಲೆ ಆಗಿದೆ. ಪ್ರಜಾಪ್ರಭುತ್ವದ ಕೊಲೆ ಆಗಿದೆ. ಈ ಸದನವನ್ನು ಸರ್ಕಾರ ಕಡೆಗಣಿಸಿದೆ. ಈ ಸರ್ಕಾರದ ನೀತಿಯನ್ನು ವಿರೋಧಿಸಿ, ನಾನು ಚುನಾವಣೆಯನ್ನು ಮುಂದಕ್ಕೆ ಹಾಕಿರುವ ನೀತಿಯನ್ನು ವಿರೋಧಿಸಿ ಸಭಾತ್ಯಾಗ ಮಾಡುತ್ತೇನೆ.

(ಶ್ರೀ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಡಾ|| ಜೀವರಾಜ ಆಳ್ವ: ಮಾನ್ಯ ಅಧ್ಯಕ್ಷರೇ, ಚುನಾವಣೆಯನ್ನು ಮುಂದೂಡಿರುವುದು ರಾಜ್ಯ ಚುನಾವಣೆ ಆಯೋಗ. ಅವರು ಏನು ತೀರ್ಮಾನ ತೆಗೆದುಕೊಂಡಿದ್ದಾರೆ ಎಂದರೆ, ಈ ರಾಜ್ಯದ ಡೈರೆಕ್ಟರ್ ಜನರಲ್ ಆಫ್ ಪೋಲೀಸ್‌ನವರು ಲಾ ಅಂಡ್ ಆರ್ಡರ್ ಸರಿಯಾಗಿಲ್ಲ ಎಂದು ಹೇಳಿದ್ದಾರೆ ಎನ್ನುವ ಕಾರಣದ ಮೇಲೆ ಮುಂದಕ್ಕೆ ಹಾಕಿದ್ದಾರೆ......

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ: ಇವರು ಉದ್ದೇಶಪೂರ್ವಕವಾಗಿ ವಿವಾದ ಸೃಷ್ಟಿ ಮಾಡಿ ಚುನಾವಣೆ ನಡೆಯದಂತೆ ನೋಡಿಕೊಳ್ಳುವ ಸಂಚು ಇದು. ಇದನ್ನು ಉದ್ದೇಶಪೂರ್ವಕವಾಗಿ ಮಾಡಿದ್ದಾರೆ. ಇದರಲ್ಲಿ ಜನತಾದಳದವರು ಶಾಮೀಲಾಗಿದ್ದಾರೆ. ಈ ಸದನ ನಡೆಯುತ್ತಿರಬೇಕಾದರೆ ತಾವು ಏತಕ್ಕೆ ಚುನಾವಣಾ ಆಯೋಗಕ್ಕೆ ಪತ್ರ ಬರೆದಿರಿ. ಈ ಮನೆಯನ್ನು ತಾವು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಾಗಿತ್ತು, ಲಾ ಅಂಡ್ ಆರ್ಡರ್ ಕೆಟ್ಟಿದೆ ಎನ್ನುವುದನ್ನು ಮುಂದೆ ಮಾಡಿ ಚುನಾವಣೆ ಮುಂದಕ್ಕೆ ಹಾಕಿದಿರಿ. ಲಾ ಅಂಡ್ ಆರ್ಡರ್ ಕೆಟ್ಟಿದ್ದರೆ ಅದನ್ನು ನಿರ್ವಹಿಸಲಿಕ್ಕೆ ಆಗದೆ ಇರುವಂತಹ ಸಂದರ್ಭದಲ್ಲಿ ಮಾನ್ಯಮುಖ್ಯಮಂತ್ರಿಗಳು ರಾಜೀನಾಮೆ ಕೊಟ್ಟು ಹೋಗಿ. ಅಧಿಕಾರದ ವಿಕೇಂದ್ರೀಕರಣ ಮಾಡುತ್ತೇವೆಂದು ಸುಪ್ರೀಂ ಕೋರ್ಟ್‌ನಲ್ಲಿ ಅಂಡರ್ ಟೇಕಿಂಗ್ ಕೊಟ್ಟು ಚುನಾವಣೆಯನ್ನು ನಡೆಸುತ್ತೇವೆಂದು ಹೇಳಿ ಚುನಾವಣೆ ಮುಂದಕ್ಕೆ ಹಾಕುವಂತಹ ಸಂಚುಮಾಡಿದ್ದೀರಿ. ಈ ಸದನವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಪತ್ರವನ್ನು ತಾವು ಚುನಾವಣೆ ಆಯೋಗಕ್ಕೆ ಬರೆದಿದ್ದೀರಿ. ಅದಕ್ಕೆ ವಿಶೇಷವಾದ ಕಾರಣ ಏನು ಇತ್ತು ಎಂದು ಮಾನ್ಯ ಮುಖ್ಯಮಂತ್ರಿಗಳು ತಿಳಿಸಬೇಕು. ತಾವು ಗೃಹ ಖಾತೆಯನ್ನು ಹೊಂದಿರುವುದರಿಂದ ಅಂಕಿಅಂಶಗಳನ್ನು ಸಭೆಯ ಮುಂದೆ ಇಡಿ......

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ: ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿ ಚುನಾವಣೆಗಳನ್ನು ಮುಂದೂಡುವ ಬಗ್ಗೆ ಸದನದ ವಿಶ್ವಾಸವನ್ನು ತೆಗೆದುಕೊಳ್ಳದೆ....

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ: ವೀರೇಂದ್ರ ಪಾಟೀಲರ ಕಾಲದಲ್ಲಿ ಶಾಂತಿಯನ್ನು ಕಾಪಾಡುವುದಕ್ಕೆ ಆಗಲಿಲ್ಲ ರಾಜೀನಾಮೆ ಕೊಡಿ ಎಂದು ಹೇಳಿ ರಾಜೀನಾಮೆಯನ್ನು ಕೊಡಿಸಿದಿರಿ. ಇವತ್ತು ಇಡೀ ರಾಜ್ಯದಲ್ಲಿ ಶಾಂತಿ ಇಲ್ಲ ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಹೋಗುತ್ತಾರೇನು?

(ಗೊಂದಲ)

ಅಧ್ಯಕ್ಷರು: ಮಾನ್ಯ ಮುಖ್ಯಮಂತ್ರಿಗಳು ಏನು ಉತ್ತರ ಕೊಡುತ್ತಾರೋ ಕೇಳೋಣ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೇ, ಇವತ್ತು ವಿರೋಧಪಕ್ಷವಾದ ಜನತಾದಳದವರು ನೈತಿಕ ಹಕ್ಕು ಕಳೆದುಕೊಂಡಿದ್ದಾರೆ. ಪೋಲೀಸ್ ಅಧಿಕಾರಿಗಳು ಸಹ ನೈತಿಕ ಹಕ್ಕು ಕಳೆದುಕೊಂಡಿದ್ದಾರೆ. ಪೋಲೀಸ್ ಅಧಿಕಾರಿಗಳು ಲಾ ಅಂಡ್ ಆರ್ಡರ್ ಕಂಟ್ರೋಲ್ ಮಾಡಲು ಆಗದೆ ನೈತಿಕ ಹಕ್ಕು ಕಳೆದುಕೊಂಡಿದ್ದಾರೆ. ಗೃಹ ಖಾತೆಯನ್ನು ಹೊಂದಿರುವ ಮುಖ್ಯಮಂತ್ರಿಗಳು ತಮ್ಮ ಸ್ಥಾನಕ್ಕೆ ಕೂಡಲೇ ರಾಜೀನಾಮೆಯನ್ನು ಕೊಟ್ಟು ಮನೆಗೆ ಹೋಗಲಿ. ಚುನಾವಣೆ ಆಯೋಗಕ್ಕೆ ಏನು ಪತ್ರ ಬರೆದಿದ್ದಾರೆ ಅದನ್ನು ಸದನಕ್ಕೆ ಹೇಳಬೇಕು, ಅದನ್ನು ಸದನದ ಮುಂದೆ ಇಡಬೇಕು, ಯಾವ ಕಾರಣಕ್ಕೋಸ್ಕರ ಪತ್ರ ಬರೆದಿದ್ದಾರೆ? ಇವರು ಏತಕ್ಕೆ ಸದನವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲಿಲ್ಲ, ನಿಮಗೆ ಅಧಿಕಾರ ವಿಕೇಂದ್ರೀಕರಣದಲ್ಲಿ ವಿಶ್ವಾಸ ಇಲ್ಲದೆ.........

(ಧರಣಿ ಮಾಡುತ್ತಿದ್ದ ಸದಸ್ಯರು ನ್ಯಾಯಾಂಗ ತನಿಖೆ ಆಗಲೇಬೇಕು ಎಂದು ಘೋಷಣೆ ಕೂಗಿದರು)

(ಗೊಂದಲ)

ಅಧ್ಯಕ್ಷರು: ತಾವು ತಮ್ಮ ಸ್ಥಳಕ್ಕೆ ಹೋಗಿ ಮಾತನಾಡಿ ಯಡಿಯೂರಪ್ಪನವರೇ.

(ಈ ಹಂತದಲ್ಲಿ ಬಿ.ಜೆ.ಪಿ. ಸದಸ್ಯರು ಧರಣಿಯಲ್ಲಿ ಪಾಲ್ಗೊಂಡರು)

ಶ್ರೀ ಬಿ.ಎಸ್. ಯಡಿಯೂರಪ್ಪ: ಈ ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿ ಚುನಾವಣೆಗಳು ನಡೆಯಬಾರದು ಎಂದು ಜನತಾ ದಳದ ಸದಸ್ಯರು ಈ ವಿವಾದವನ್ನು ಸೃಷ್ಟಿ ಮಾಡಿದರು. ಇದರಲ್ಲಿ ತಾವೂ ಸಹ ಶಾಮೀಲಾಗಿದ್ದೀರಿ.......

(ಗೊಂದಲ)

ಡಾ|| ಜೀವರಾಜ ಆಳ್ವ: ವಿಧಾನ ಸಭೆ ನಡೆಯುವಾಗ ಮೊನ್ನೆ ಬಜೆಟ್ ಭಾಷಣದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಒಂದು ದೇಶದಲ್ಲಿ ಆದಂತಹ ಐತಿಹಾಸಿಕ ನಿರ್ಣಯ; ಈ ಎಲೆಕ್ಷನ್ ಪ್ರೋಸೆಸ್ ಒಂದು ಹೆಜ್ಜೆ ಮುಂದುವರೆದಿದ್ದೇವೆ, ಎರಡನೇ ಹೆಜ್ಜೆ ನಡೆಯುತ್ತಾ ಇದೆ. we have scheduled the elections ಎಂದು ಹೇಳಿದ್ದಾರೆ. ಅಲ್ಲಿಗೆ ಮುಕ್ತಾಯವಾಯಿತು. ಇವತ್ತು ವಿಧಾನಸಭೆ ನಡೆಯುವಾಗ ಚುನಾವಣೆಯನ್ನು ಮುಂದುಹಾಕಿದ್ದೇವೆಂದು ರಾಜ್ಯ ಚುನಾವಣಾ ಕಮೀಶನರ್ ಹೇಳುತ್ತಾರೆ.....

(ಗದ್ದಲ)

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ನಾನು ಮಾನ್ಯ ಸದಸ್ಯರಲ್ಲಿ ಬಹಳ ಕಳಕಳಿಯಿಂದ ವಿನಂತಿ ಮಾಡುತ್ತೇನೆ.

(ಗದ್ದಲ)

ಶ್ರೀ ವಾಟಾಳ್ ನಾಗರಾಜ್ : ಪಂಚಾಯತಿ ರಾಜ್ ಸಚಿವರು ಚುನಾವಣೆ ಮುಂದೂಡಿದರೆ ರಾಜೀನಾಮೆ ಕೊಡುತ್ತೇನೆಂದು ಹೇಳಿದ್ದರು, ಅವರು ರಾಜೀನಾಮೆ ಕೊಟ್ಟಿದ್ದಾರೆಯೇ? ಅವರ ರಾಜೀನಾಮೆ ಬಂದಿದೆಯೇ?

ಅಧ್ಯಕ್ಷರು : ಆಯಿತು, ಕುಳಿತುಕೊಳ್ಳಿ, ನಾನು ಎದ್ದ ಮೇಲೆ ನೀವೆಲ್ಲ ಕುಳಿತುಕೊಳ್ಳಬೇಕು. ಅದು ನನ್ನ ಗಮನಕ್ಕೆ ಬಂದಿಲ್ಲ, ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರು ರಾಜೀನಾಮೆ ಕೊಡಬೇಕಾದ ಅಗತ್ಯವಿಲ್ಲ.

(ಗೊಂದಲ)

ಅಧ್ಯಕ್ಷರು : ನಾನು ಮಾತನಾಡಿದ ನಂತರ ತಮಗೆಲ್ಲಾ ಮಾತನಾಡಲು ಮಾತನಾಡಲು ಅವಕಾಶ ಮಾಡಿಕೊಡುತ್ತೇನೆ. ಈಗ ಕಳೆದೆರಡು ದಿವಸಗಳಿಂದ ಸದನದಲ್ಲಿ ಈ ಪ್ರಸ್ತಾವನೆ ನಡೀತಾ ಇದೆ. ಪುನಃ ನಾನು ವಿರೋಧಪಕ್ಷದ ನಾಯಕರು ಮತ್ತು ಸದಸ್ಯರನ್ನು ಬಹಳ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ, ತಾವು ತಮ್ಮ ಸ್ಥಳಗಳಿಗೆ ಹೋಗಬೇಕು, ಕಾರ್ಯಕಲಾಪಗಳನ್ನು ನಡೆಸಲು ಅನುಕೂಲ ಮಾಡಿಕೊಡಬೇಕೆಂದು ಕೇಳುತ್ತೇನೆ. ಈ ವಿಷಯದಲ್ಲಿ ಮುಖ್ಯಮಂತ್ರಿಗಳೂ ಸ್ವಲ್ಪ ಹೇಳಲಿ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ : ಸಭೆ ನಡೆಸಲು ಅವಕಾಶ ಕೊಡದೇ ಇರುವ ತಾವು ಪ್ರಜಾಪ್ರಭುತ್ವದ ಪಾಠ ಈ ದೇಶಕ್ಕೆ ಹೇಳಿಕೊಡಬೇಕಾದ ಅಗತ್ಯ ಇಲ್ಲ. ಆದ್ದರಿಂದ ದಯಮಾಡಿ ಪ್ರಜಾಪ್ರಭುತ್ವದ ಪದ್ಧತಿ ಪ್ರಕಾರ ಸದನ ನಡೆಸಿ ಕೊಡುವುದನ್ನು ಮೊದಲು ಕಲಿತುಕೊಳ್ಳಿ. ಆಮೇಲೆ ಪ್ರಜಾಪ್ರಭುತ್ವದ ವಿಷಯ ಮಾತನಾಡಿ.

— (ಗೊಂದಲ)

(ಈ ಹಂತದಲ್ಲಿ ವೆಲ್ನಲ್ಲಿದ್ದ ವಿರೋಧ ಪಕ್ಷದ ಸದಸ್ಯರು ಪ್ರಜಾಪ್ರಭುತ್ವ ವಿರೋಧಿ ಸರಕಾರಕ್ಕೆ ಮತ್ತೆ ನ್ಯಾಯಾಂಗ ತನಿಖೆ ಮಾಡದೇ ಇರುವ ಸರಕಾರಕ್ಕೆ ಧಿಕ್ಕಾರವೆಂದು ಘೋಷಣೆ ಕೂಗಿದರು.)

ಪ್ರಸ್ತಾವ

ಅಧ್ಯಕ್ಷರು : ಮಾನ್ಯ ಸದಸ್ಯರುಗಳು ತಮ್ಮ ಸ್ಥಾನಗಳಿಗೆ ಹೋಗಬೇಕೆಂದು ವಿನಂತಿಸಿಕೊಂಡಿದ್ದೆನು. ಆದರೆ ಅವರುಗಳು ನನ್ನ ಮನವಿಗೆ ಪುರಸ್ಕಾರ ಕೊಡದೇ ನನ್ನ ಅಧಿಕಾರದ ವಿಷಯದಲ್ಲಿ ಲಕ್ಷ್ಯವಿಲ್ಲದೆ ತಿರಸ್ಕಾರ ಮಾಡುತ್ತಾ ಸದನದ ಕಾರ್ಯಕಲಾಪಗಳಿಗೆ ಒಂದೇ ಸಮನಾಗಿ ಮತ್ತು ಉದ್ದೇಶಪೂರ್ವಕವಾಗಿ ಅಡಚಣೆಯನ್ನುಂಟು ಮಾಡುತ್ತಿದ್ದಾರೆ. ಆದುದರಿಂದ ನಾನು ನಿಯಮ 33ರ ಮೇರೆಗೆ ಈ ಕೆಳಕಂಡ ಸದಸ್ಯರು ಸಭೆಯ ಕಾರ್ಯ ಕಲಾಪಗಳಿಗೆ ಸತತವಾಗಿ ಅಡ್ಡಿಪಡಿಸಿದುದಕ್ಕಾಗಿ ಈ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸುವುದನ್ನು ನಿಷೇಧಿಸಲಾಗಿದೆ. ನಾನು ಈ ಕೆಳಕಂಡ ಮಾನ್ಯ ಸದಸ್ಯರನ್ನು ಹೆಸರಿಸುತ್ತೇನೆ.

ಶ್ರೀಯುತರುಗಳಾದ :

1) ಆರ್.ವಿ. ದೇಶಪಾಂಡೆ
2) ಪಿ.ಜಿ.ಆರ್. ಸಿಂಧ್ಯ
3) ಡಿ.ಬಿ. ಚಂದ್ರೇಗೌಡ

4) ಡಾ|| ಜೀವರಾಜಆಳ್ವ
5) ಬಿ. ಹಂಪನಗೌಡ
6) ಪಿ.ಸಿ. ಸಿದ್ಧನಗೌಡರ್
7) ಎಂ.ಎಸ್. ಪಾಟೀಲ್
8) ಬಿ.ಹೆಚ್. ಬನ್ನಿಕೋಡ್
9) ಹೆಚ್.ವೈ. ಮೇಟಿ
10) ಜೆ.ಸಿ. ಮಾಧುಸ್ವಾಮಿ
11) ಗುರುಪಾದಪ್ಪ ನಾಗಮಾರಪಲ್ಲಿ
12) ಹೆಚ್. ಏಕಾಂತಯ್ಯ
13) ಶಿವಾನಂದ ಎಚ್. ಕೌಜಲಗಿ
14) ಜಿ.ಜಿ. ಯಲ್ಲಿಗುತ್ತಿ
15) ಎನ್. ನಾರಾಯಣಸ್ವಾಮಿ
16) ಅಜಯಕುಮಾರ್ ಸರನಾಯಕ್
17) ಬಸವರಾಜ ಪಾಟೀಲ್ ಅಟ್ನೂರ್
18) ಉಮೇಶ್ ಕತ್ತಿ
19) ಕೆ.ಎಸ್. ಈಶ್ವರಪ್ಪ
20) ಎ. ರುಕ್ಮಯ್ಯ ಪೂಜಾರಿ
21) ನಾರಾಯಣರಾವ್ ಮನಹಳ್ಳಿ.

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೇ,

ತಮ್ಮ ಅಪ್ಪಣೆ ಪಡೆದು ಈ ಕೆಳಗಿನ ನಿರ್ಣಯವನ್ನು ಮಂಡಿಸುತ್ತೇನೆ "ಈ ಕೆಳಗಿನ ಮಾನ್ಯ ಸದಸ್ಯರುಗಳು ಅನಾವಶ್ಯಕವಾಗಿ ಸಭೆಯ ಕಾರ್ಯಕಲಾಪಗಳಿಗೆ ಅಡ್ಡಿ ಪಡಿಸುತ್ತಿರುವುದರಿಂದ ಅವರನ್ನು ಈ ಸಭೆಯ ಈ ದಿನದ ಅಧಿವೇಶನ ಮುಗಿಯುವವರೆಗೆ ಸಭೆಗೆ ಹಾಜರಾಗದಂತೆ ನಿಷೇಧಿಸಬೇಕು."

ಶ್ರೀಯುತರುಗಳಾದ:

1) ಆರ್.ವಿ. ದೇಶಪಾಂಡೆ
2) ಪಿ.ಜಿ.ಆರ್. ಸಿಂಧ್ಯ
3) ಡಿ.ಬಿ. ಚಂದ್ರೇಗೌಡ
4) ಡಾ|| ಜೀವರಾಜಆಳ್ವ
5) ಬಿ. ಹಂಪನಗೌಡ
6) ಪಿ.ಸಿ. ಸಿದ್ಧನಗೌಡರ್
7) ಎಂ.ಎಸ್. ಪಾಟೀಲ್
8) ಬಿ.ಹೆಚ್. ಬನ್ನಿಕೋಡ್
9) ಹೆಚ್.ವೈ. ಮೇಟಿ
10) ಜೆ.ಸಿ. ಮಾಧುಸ್ವಾಮಿ
11) ಗುರುಪಾದಪ್ಪ ನಾಗಮಾರಪಲ್ಲಿ

12) ಹೆಚ್. ಏಕಾಂತಯ್ಯ
13) ಜಿ.ಜಿ. ಯಲ್ಲಿಗುತ್ತಿ
14) ಎನ್. ನಾರಾಯಣಸ್ವಾಮಿ
15) ಅಜಯಕುಮಾರ್ ಸರನಾಯಕ್
16) ಶಿವಾನಂದ ಎಚ್. ಕೌಜಲಗಿ
17) ಬಸವರಾಜ ಪಾಟೀಲ್ ಅಟ್ಟೂರ್
18) ಉಮೇಶ್ ಕತ್ತಿ
19) ಕೆ.ಎಸ್. ಈಶ್ವರಪ್ಪ
20) ಎ. ರುಕ್ಮಯ್ಯ ಪೂಜಾರಿ
21) ನಾರಾಯಣರಾವ್ ಮನಹಳ್ಳಿ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಅಧ್ಯಕ್ಷರು : ಮೇಲೆ ಉಲ್ಲೇಖಿಸಿರುವ ಸದಸ್ಯರುಗಳನ್ನು ಈ ದಿವಸದ ಕಾರ್ಯಕಲಾಪಗಳು ಮುಗಿಯುವವರೆಗೆ ಸಭೆಗೆ ಬಾರದಂತೆ ನಿಷೇಧಿಸಲಾಗಿದೆ.

(ಗೊಂದಲ)

ಅಧ್ಯಕ್ಷರು : ಸಭೆಯನ್ನು ಈಗ 10 ನಿಮಿಷಗಳ ಕಾಲ ಮುಂದೂಡುತ್ತೇನೆ.

(ಸದನವು ಮತ್ತೆ 12.05 ನಿಮಿಷಕ್ಕೆ ಸಮಾವೇಶಗೊಂಡಿತು- ಮಾನ್ಯ ಅಧ್ಯಕ್ಷರು ತಮ್ಮ ಪೀಠವನ್ನು ಅಲಂಕರಿಸಿದರು)

ತಾಲ್ಲೂಕು ಪಂಚಾಯತಿ ಹಾಗೂ ಜಿಲ್ಲಾ ಪಂಚಾಯತಿ ಚುನಾವಣೆಗಳನ್ನು ಮುಂದೂಡಿರುವ ಬಗ್ಗೆ

ಶ್ರೀ ಬಿ.ಎಸ್. ಯಡಿಯೂರಪ್ಪ : ತಾಲ್ಲೂಕು ಪಂಚಾಯತಿ ಹಾಗೂ ಜಿಲ್ಲಾ ಪಂಚಾಯತಿ ಚುನಾವಣೆಗಳನ್ನು ಏತಕ್ಕೋಸ್ಕರ ಮುಂದೂಡಲಾಗಿದೆ?

(ಈ ಹಂತದಲ್ಲಿ ಸದನದ ಬಾವಿಯಲ್ಲಿ ಕುಳಿತಿದ್ದ ಜನತಾ ದಳದ ಸದಸ್ಯರುಗಳು

"ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿ ಚುನಾವಣೆಗಳು ಆಗಲೇಬೇಕು, ನ್ಯಾಯಾಂಗ ತನಿಖೆಯಾಗಲೇಬೇಕು, ಕಾಂಗ್ರೆಸ್ ಸರ್ಕಾರಕ್ಕೆ ಧಿಕ್ಕಾರ, ಪ್ರಜಾಪ್ರಭುತ್ವ ವಿರೋಧಿ ಸರ್ಕಾರಕ್ಕೆ ಧಿಕ್ಕಾರ, ಪ್ರಜಾಪ್ರಭುತ್ವವನ್ನು ಕಗ್ಗೊಲೆ ಮಾಡಿದ ಸರ್ಕಾರಕ್ಕೆ ಧಿಕ್ಕಾರ" ಇತ್ಯಾದಿ ಘೋಷಣೆಗಳನ್ನು ಹಾಕಿ ಎಂದು ಒಂದೇ ಸಮನೇ ಕೂಗುತ್ತಿದ್ದರು)

(ತದನಂತರ ಸದನದ ಕಾರ್ಯಕಲಾಪಗಳಿಗೆ ಅಡ್ಡಿಯನ್ನುಂಟು ಮಾಡುತ್ತಿದ್ದ ಜನತಾದಳದ ಸದಸ್ಯರನ್ನು ಹೊರಕ್ಕೆ ಹಾಕಬೇಕೆಂದು ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಾರ್ಶಲ್ರವರು ತಮ್ಮ ಸಿಬ್ಬಂದಿಗಳೊಡನೆ ಮಾನ್ಯ ಸದಸ್ಯರುಗಳಾದ ಶ್ರೀ ಹಂಪನಗೌಡ, ಗುರುಪಾದಪ್ಪ ನಾಗಮಾರಪಲ್ಲಿ, ಪಿ.ಸಿ. ಸಿದ್ದನಗೌಡರ್ ಮತ್ತು ಬಿ.ಹೆಚ್. ಬನ್ನಿಕೋಡ್ ಅವರುಗಳನ್ನು ಬಲವಂತವಾಗಿ ಎತ್ತಿಕೊಂಡು ಹೊರಕ್ಕೆ ಹಾಕಿದರು; ಹಾಗೆಯೇ ಜನತಾ ದಳದ ಇತರ ಸದಸ್ಯರುಗಳು ತಾವಾಗಿಯೇ ಹೊರಗೆ ನಡೆದರು)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಮಾತನಾಡುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು : ಅವಕಾಶ ಕೊಡುವುದಿಲ್ಲ.

(ಮಾತನಾಡುವುದಕ್ಕೆ ಅವಕಾಶ ಕೊಡಲೇಬೇಕೆಂದು ಸನ್ಮಾನ್ಯ ಸದಸ್ಯರಾದ ಶ್ರೀ ವಾಟಾಳ್ನಾಗರಾಜ್ರವರು ಈ ಹಂತದಲ್ಲಿ ಒತ್ತಾಯಿಸುತ್ತಿದ್ದರು)

ಅಧ್ಯಕ್ಷರು : ಮೊದಲು ಪ್ರಶ್ನೋತ್ತರ ಅವಧಿ ಮುಗಿಯಲಿ, ನಂತರ ತಮಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ವೈ.ಕೆ. ರಾಮಯ್ಯ : ಅಧ್ಯಕ್ಷರೆ, ಇದು ನಾಚಿಕೇಗೇಡು. ನಿಮಗೆ ನಾಚಿಕೆಯಾಗುವುದಿಲ್ಲವೇ ?

(ಗೊಂದಲ)

(ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಾದ ವೈ.ಕೆ.ರಾಮಯ್ಯನವರು ಮತ್ತು ಜಾಲಪ್ಪನವರು ಸಭಾಧ್ಯಕ್ಷರ ಪೀಠದತ್ತ ತೆರಳಿ ಮಾತನಾಡುತ್ತಿದ್ದರು)

(ಗೊಂದಲ)

ಅಧ್ಯಕ್ಷರು : ಸದಸ್ಯರುಗಳಾದ ವೈ.ಕೆ. ರಾಮಯ್ಯ ಹಾಗೂ ಆರ್.ಎಲ್. ಜಾಲಪ್ಪನವರು ಪದೇ ಪದೇ ಕಾರ್ಯಕಲಾಪಗಳಿಗೆ ಅಡ್ಡಿಯುಂಟು ಮಾಡುತ್ತಿರುವುದರಿಂದ ಇವೊತ್ತು ಅವರನ್ನು ಸದನದಿಂದ ಅಮಾನತ್ತುಗೊಳಿಸಲಾಗಿದೆ.

(ಈ ಹಂತದಲ್ಲಿ ಸನ್ಮಾನ್ಯ ಹಿರಿಯ ಸಚಿವರಾದಂಥ ಪ್ರೊ: ಎಂ.ಡಿ. ನಂಜುಂಡ ಸ್ವಾಮಿಯವರು ಸಭಾಧ್ಯಕ್ಷರ ಪೀಠದತ್ತ ತೆರಳಿ ಪ್ರಶ್ನೋತ್ತರ ಪಟ್ಟಿಯನ್ನು ಹರಿದು ಬಿಸಾಕಿ ಸಭಾತ್ಯಾಗ ಮಾಡಿದರು)

ಶ್ರೀ ವಾಟಾಳ್ ನಾಗರಾಜ್ : ತಮ್ಮ ಕೋಪ ಸ್ವಲ್ಪ ಕಡಿಮೆಯಾಗಬೇಕು, ತಮಗೇನಾದರೂ ರಕ್ತದೊತ್ತಡವಿದ್ದರೆ ಅದು ಕಡಿಮೆಯಾಗಬೇಕು. ಈ ಸದನದಲ್ಲಿ ಹಿಂದೆಂದೂ ನಡೆಯದಂಥ ಕೋಲಾಹಲ ನಡೆದಿದೆ. ಆದುದರಿಂದ, ನಾನು ತಮ್ಮಲ್ಲಿ ಹೇಳುತ್ತಿದ್ದೇನೆ. ಇದು ಸರಿಯಾದಂಥ ಮಾರ್ಗ ಅಲ್ಲ, ತಮ್ಮಲ್ಲಿ ನಾನು ಕಳಕಳಿಯ ಮನವಿ ಮಾಡಿಕೊಳ್ಳುವುದೇನೆಂದರೆ...........

ಶ್ರೀ ಬಿ.ಎಸ್. ಯಡಿಯೂರಪ್ಪ : ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯಿತಿ ಚುನಾವಣೆಗಳನ್ನು ನಡೆಸಬೇಕು. ರಾಜ್ಯದಲ್ಲಿ ಲಾ ಅಂಡ್ ಆರ್ಡರ್ ಸಿಚ್ಯುಯೇಷನ್ ಸರಿಯಿಲ್ಲವೆಂದರೆ ಅಂತಹ ಪರಿಸ್ಥಿತಿ ಏನು ಬಂದಿದೆ ? ಎಂಬುದರ ಬಗ್ಗೆ ಸದನಕ್ಕೆ ವರದಿ ಕೊಡಬೇಕು. ಪ್ರಶ್ನೋತ್ತರ ಅವಧಿಯನ್ನು ಸಸ್ಪೆಂಡ್ ಮಾಡಿ. ನೀವು ಪ್ರಜಾಪ್ರಭುತ್ವದ ವ್ಯವಸ್ಥೆಯನ್ನು ಕಗ್ಗೊಲೆ ಮಾಡುತ್ತಿದ್ದೀರಿ, ಇದನ್ನು ಸಹಿಸುವುದಕ್ಕಾಗುತ್ತಿಲ್ಲ, ಇವೊತ್ತು ಲಾ ಅಂಡ್ ಆರ್ಡರ್ ಸಿಚ್ಯುಯೇಷನ್ ಕೆಟ್ಟಿದ್ದರೆ ಹೇಳಿ. ನಿಮಗೆ ವಿಕೇಂದ್ರೀಕರಣ ವ್ಯವಸ್ಥೆ ಬಗ್ಗೆ ವಿಶ್ವಾಸವಿಲ್ಲ.

(ಈ ಹಂತದಲ್ಲಿ ಸನ್ಮಾನ್ಯ ಸದಸ್ಯರಾದ ಶ್ರೀ ಬಿ.ಎಸ್ ಯಡಿಯೂರಪ್ಪನವರು ಸಭಾಧ್ಯಕ್ಷರ ಪೀಠದತ್ತ ತೆರಳಿ ನಿಂತು ಮಾತನಾಡುತ್ತಿದ್ದರು)

ಶ್ರೀ ವಾಟಾಳ್ ನಾಗರಾಜ್ : ಯಾವ ಕಾರಣದಿಂದ ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯತಿ ಚುನಾವಣೆಗಳನ್ನು ಮುಂದೂಡಲಾಗಿದೆ ? ಪ್ರಶ್ನೋತ್ತರ ಕಾಲವನ್ನು ಮುಂದೂಡಬೇಕು. ಇದರ ಬಗ್ಗೆ ಚರ್ಚೆಗೆ ತಾವು ಅವಕಾಶ ಮಾಡಿಕೊಡಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ: ಯಡಿಯೂರಪ್ಪನವರೆ ಇತ್ತೀಚೆಗೆ ನಡೆದ ಗ್ರಾಮ ಪಂಚಾಯತಿ ಚುನಾವಣೆ ಫಲಿತಾಂಶದಲ್ಲಿ ಶೇಕಡ 31ರಷ್ಟಿದ್ದ ನಿಮ್ಮ ಪಕ್ಷದ (ಬಿ.ಜೆ.ಪಿ) ಬಲ ಶೇಕಡ 9ಕ್ಕೆ ಕುಸಿದಿದೆ.

(ಈ ಸಂದರ್ಭದಲ್ಲಿ ಆಡಳಿತ ಪಕ್ಷದ ಎಲ್ಲಾ ಸದಸ್ಯರುಗಳು ಮೇಜು ಕುಟ್ಟಿ ಸಂತೋಷ ವ್ಯಕ್ತಪಡಿಸಿದರು)

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಎಲ್ಲಾ ಸದಸ್ಯರುಗಳನ್ನು ಹೊರಕ್ಕೆ ಹಾಕಿ, ಈ ಸದನದಲ್ಲಿ ಕಾಂಗ್ರೆಸ್ ಪಕ್ಷದ ಕಾರ್ಯಾಲಯವಾಗಿ ಮಾಡಬೇಡಿ. ಇವೊತ್ತಿನ ದಿವಸ ಪ್ರಜಾಪ್ರಭುತ್ವದ ಕೊಲೆಯಾಗಿದೆ.

(ಈ ಹಂತದಲ್ಲಿ ಸದಸ್ಯರಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಸಭಾಧ್ಯಕ್ಷರ ಪೀಠದ ಮುಂದೆ ನಿಂತು "ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯತಿ ಚುನಾವಣೆಯನ್ನು ಮುಂದೂಡಿರುವಂತಾದ್ದು ಅತ್ಯಂತ ಅಪರಾಧವಾಗಿದ್ದು, ಇದು ಸರಿಯಲ್ಲ, ನೀವು ಸರ್ವಾಧಿಕಾರಿಯೇ? ಇವೊತ್ತು ಚುನಾವಣೆ ನಡೆಸುವುದಕ್ಕಾಗದೆ, ಲಾ ಅಂಡ್ ಆರ್ಡರ್ ಸಿಚ್ಯುಯೇಷನ್ ಸರಿ ಮಾಡುವುದಕ್ಕಾಗದೆ ಹೇಗೆ ನೀವು ಅಧಿಕಾರದಲ್ಲಿ ಮುಂದುವರೆಯುತ್ತೀರಿ, ಇದನ್ನು ಪ್ರತಿಭಟಿಸಿ ನಾನು ಧರಣಿ ಮಾಡುತ್ತೇನೆ" ಎಂದು ಸದನದ ಬಾವಿಯಲ್ಲಿ ಧರಣಿ ಕುಳಿತರು)

ಶ್ರೀ ವಾಟಾಳ್ ನಾಗರಾಜ್: ತಮ್ಮ ಪ್ರಶ್ನೋತ್ತರಕ್ಕೆ ಬೆಂಕಿ ಹಚ್ಚಿ, ಯಾವ ಪ್ರಶ್ನೋತ್ತರ ಇದು? ಇದು ಸರಿಯಲ್ಲ, ಸರಿಯಾದ ನೀತಿಯಲ್ಲ.

(ಈ ಸಂದರ್ಭದಲ್ಲಿ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಪ್ರಶ್ನೋತ್ತರ ಪಟ್ಟಿಯನ್ನು ಸದನದಲ್ಲಿ ಹರಿದು ಬಿಸಾಡಿದರು)

(ಮಾನ್ಯ ಸದಸ್ಯರಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಸದನದ ಬಾವಿಯಲ್ಲಿ ನಿಂತು ಮಾತನಾಡುತ್ತಿದ್ದರು)

ಅಧ್ಯಕ್ಷರು: ಯಡಿಯೂರಪ್ಪನವರೆ, ತಾವು ಪದೇ ಪದೇ ಸದನದ ಕಾರ್ಯಕಲಾಪಗಳಿಗೆ ಅಡ್ಡಿಯುಂಟು ಮಾಡುತ್ತಿರುವುದರಿಂದ ನಿಮ್ಮನ್ನು ಇವೊತ್ತು ಸದನದಿಂದ ಸಸ್ಪೆಂಡ್ ಮಾಡಲಾಗಿದೆ.

(ಸದಸ್ಯರಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಪ್ರತಿಭಟಿಸುತ್ತಾ ಸದನದಿಂದ ಹೊರ ನಡೆದರು)

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ನಾನು ತಮ್ಮನ್ನು ವಿನಯದಿಂದ ಕೈಮುಗಿದು ಪ್ರಾರ್ಥಿಸಿಕೊಳ್ಳುತ್ತಿದ್ದೇನೆ. ಈ ಪರಿಸ್ಥಿತಿಯನ್ನು ನಿನ್ನೆ ನೋಡಿದ್ದು ಆಯಿತು, ಇಂದೂ ನೋಡಿದ್ದಾಯಿತು.

ಅಧ್ಯಕ್ಷರು: ಈಗ ಏನೂ ರಿಕಾರ್ಡ್ಗೆ ಹೋಗುವುದಿಲ್ಲ ಯಾವುದನ್ನೂ ರಿಕಾರ್ಡ್ ಮಾಡಬಾರದು.

ಶ್ರೀ ವಾಟಾಳ್ ನಾಗರಾಜ್: ಈ ಸದನ ನಡೆಯುವಾಗ........

ಅಧ್ಯಕ್ಷರು: ಇದು ಅತಿಶಯೋಕ್ತಿ ಆಗುತ್ತದೆ. ನಾನು ಅವಕಾಶ ಕೊಡುತ್ತೇನೆಂದು ಹೇಳಿದ್ದೇನೆ. ಇದೇ ರೀತಿ ಆಗಬೇಕು ಎಂದು ಹಠ ಮಾಡಿದರೆ ಆಗುವುದಿಲ್ಲ, ಪ್ರಶ್ನೋತ್ತರ ಮುಗಿಯಲಿ ಅವಕಾಶ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ತಾವು ಈ ಸದನವನ್ನು ಕಾಪಾಡುವಂತಹವರು. ಆದರೆ ಎಲ್ಲಾ ಸದಸ್ಯರನ್ನು ಹೊರ ಹಾಕಿ ಈ ಸದನ ನಡೆಸುವುದು ಉಚಿತವೇ?

ಈ ದಿನ ಪ್ರಜಾಪ್ರಭುತ್ವದ ಕೊಲೆ ಆಗುತ್ತಿದೆ. ಶಾಸಕರಿಗೆ ರಕ್ಷಣೆ ಕೊಡಬೇಕು. ನೀವು ಈಗ ಈ ರೀತಿ ಮಾಡುತ್ತಿರುವುದು ಸರಿಯಲ್ಲ, ಇದು ಅಕ್ರಮ ಸಭೆ, ತಾವು ಅಕ್ರಮಕ್ಕೆ ದಾರಿ ಮಾಡಿಕೊಡಬಾರದು. ಈ ಸಭೆ ಸಂಪ್ರದಾಯ ಬಿಟ್ಟು ನಡೆಯುವಂತೆ ಆಗಬಾರದು. ಆದುದರಿಂದ ನಾನು ತಮ್ಮಲ್ಲಿ ಅತ್ಯಂತ ಕೃತಜ್ಞತೆಯಿಂದ ಮನವಿ ಮಾಡುತ್ತೇನೆ......

ಅಧ್ಯಕ್ಷರು : ನೀವು ನನ್ನ ಮಾತನ್ನು ಕೇಳದಿದ್ದರೆ ನಾನು ಉಗ್ರವಾದ ಕ್ರಮವನ್ನು ತಮ್ಮ ಮೇಲೆ ಕೈಗೊಳ್ಳಬೇಕಾಗುತ್ತದೆ. ಶ್ರೀ ವಾಟಾಳ್ ನಾಗರಾಜ್‌ರವರು ಕಾರ್ಯಕಲಾಪಕ್ಕೆ ಬಹಳ ಅಡಚಣೆ ಉಂಟು ಮಾಡುತ್ತಿದ್ದಾರೆ. ಆದುದರಿಂದ ಇವತ್ತಿನ ಕಲಾಪಕ್ಕೆ ಅವರನ್ನು ಅಮಾನತ್ತು ಮಾಡಬೇಕೆಂದು ನಾನು ಹೇಳುತ್ತಿದ್ದೇನೆ.

(ಶ್ರೀ ವಾಟಾಳ್ ನಾಗರಾಜ್‌ರವರನ್ನು ಮಾರ್ಷಲ್ರವರು ಮತ್ತು ಅವರ ಸಿಬ್ಬಂದಿಯವರು ಅವರನ್ನು ಬಲವಂತವಾಗಿ ಎತ್ತಿಕೊಂಡು ಹೊರಕ್ಕೆ ಹಾಕಿದರು)

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾಧ ಉತ್ತರಗಳು.

ಗುಲ್ಬರ್ಗ ಜಿಲ್ಲೆಯಲ್ಲಿ ತೊಗರಿ ಬೆಳೆ ಪರಿಹಾರ ಧನ.

722 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲಬರ್ಗಾ ಜಿಲ್ಲೆಯಲ್ಲಿ ರೈತರಿಗೆ ತೊಗರಿ ಪರಿಹಾರ ಧನವನ್ನು ನೀಡುವ ಕುರಿತು ದಿನಾಂಕ 10-2-1994 ರಂದು ಸದನದಲ್ಲಿ ಚರ್ಚೆಗೆ ಬಂದಾಗ 2 ಕೋಟಿ 7 ಲಕ್ಷ 67 ಸಾವಿರ ಉಳಿದಿರುವ ಪರಿಹಾರ ಧನ ಅತಿ ಶೀಘ್ರದಲ್ಲಿ ವಿತರಣೆ ಮಾಡಲಾಗುತ್ತದೆಂದು ಆಶ್ವಾಸನೆ ನೀಡಿರುವುದು ನಿಜವೇ?

ಆ) ಅದರಲ್ಲಿ ಇಲ್ಲಿಯವರೆಗೆ ರೈತರಿಗೆ ಎಷ್ಟು ಪರಿಹಾರ ಧನ ವಿತರಣೆ ಮಾಡಲಾಗಿದೆ?

ಇ) ಈ ಉಳಿದಿರುವ 2 ಕೋಟಿ 7 ಲಕ್ಷ 67 ಸಾವಿರ ಹಣದಲ್ಲಿ ಕೇವಲ 56 ಲಕ್ಷ ರೂ. ಬಿಡುಗಡೆ ಮಾಡಲಾಗಿದೆಯೆಂದು ತಿಳಿದಿರುವುದು ನಿಜವೇ?

ಈ) ಈ ಪ್ರಕಾರ ಪೂರ್ತಿ ಹಣ ಬಿಡುಗಡೆ ಮಾಡದೆ ಸ್ವಲ್ಪ ಮಟ್ಟಿಗೆ ಬಿಡುಗಡೆ ಮಾಡಿರುವುದರಿಂದ, ರೈತರಿಗೆ ವಿತರಣೆ ಮಾಡುವಲ್ಲಿ ತಾರತಮ್ಯವಾಗುವುದಿಲ್ಲವೆ?

ಉ) ಹಾಗಿದ್ದಲ್ಲಿ, ಈಗಾಲಾದರೂ ಅತಿ ಶೀಘ್ರದಲ್ಲಿಯೇ ವಿತರಣೆ ಮಾಡುವ ವ್ಯವಸ್ಥೆ ಮಾಡಲಾಗುವುದೇ?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು) :

ಅ) ಹೌದು.

ಆ) ಉಳಿದಿರುವ ಹಣವಾದ 2.0767 ಕೋಟಿ ರೂ.ಗಳನ್ನು ಈಗಾಗಲೇ ಸರ್ಕಾರಿ ಆದೇಶ ದಿನಾಂಕ 22-3-94ರಲ್ಲಿ ಬಿಡುಗಡೆ ಮಾಡಲಾಗಿದೆ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ: ಗುಲ್ಬರ್ಗ ಜಿಲ್ಲೆಯ ತೊಗರಿ ಬೆಳೆ ನಾಶವಾಗಿರುವ ಪರಿಹಾರಧನ 7,67,33,000 ರೂಪಾಯಿಗಳನ್ನು ವಿಚಾರಣೆ ಮಾಡಿದ ನಂತರ ಉಳಿದಿರುವ ಹಣ 2,07,67,000 ರೂಪಾಯಿಗಳನ್ನು ಬಡ ರೈತರಿಗೆ ವಿತರಣೆ ಮಾಡಲು ಸುಮಾರು ಒಂದು ವರ್ಷ ವಿಳಂಬ ಆಗಿರುತ್ತದೆ ಅಲ್ಲವೇ? ಈಗ 21-3-94 ರಂದು ಉಳಿದಿರುವ ಹಣ ಎರಡು ಕೋಟಿ ಏಳು ಲಕ್ಷ 67 ಸಾವಿರ ರೂಪಾಯಿ ಬಿಡುಗಡೆ ಆಗಿದ್ದು ಒಂದು ವಾರದ ಒಳಗೆ ವಿತರಣೆ ಮಾಡುವ ವ್ಯವಸ್ಥೆ ಮಾಡಬಹುದೇ?

ಶ್ರೀ ಎನ್. ಹುಚ್ಚಮಾಸ್ತಿಗೌಡ: ಹಣ ಬಿಡುಗಡೆ ಆಗಿದೆ.

ಅಧ್ಯಕ್ಷರು: ಟಿ.ಬಿ. ಜಯಚಂದ್ರರವರೇ ನಿಮ್ಮ 692ನೇ ಪ್ರಶ್ನೆಗೆ ಮಂತ್ರಿಗಳು ಕಾಲಾವಕಾಶ ಕೋರಿದ್ದಾರೆ.

ಶ್ರೀ ಟಿ.ಬಿ. ಜಯಚಂದ್ರ: ಕೆರೆ ಕೆಲಸಗಳು ಆಗುವಂತಹ ಲಕ್ಷಣಗಳು ಕಾಣುತ್ತಿಲ್ಲ ನಮ್ಮ ಅವಧಿ ಮುಗಿಯುವುದರೊಳಗಾದರೂ ಉತ್ತರ ಬರುತ್ತದೆಯೆ?

ಅಧ್ಯಕ್ಷರು: ಆಯಿತು.

ಮೂಡಬಿದರೆಯ ನ್ಯಾಯಬಸದಿಯಲ್ಲಿ ತೋಟಗಾರಿಕಾ ಉದ್ಯಾನವನ

560 - ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದರೆ): ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೂಡಬಿದರೆಯ ನ್ಯಾಯ ಬಸದಿಯ ಬಳಿ ತೋಟಗಾರಿಕಾ ಇಲಾಖೆಯಲ್ಲಿ ಎಷ್ಟು ಎಕರೆ ಸ್ಥಳವಿದೆ?

ಆ) ಈ ಬಾರಿ ನೆರಳಿನ ಎಷ್ಟು ಗಿಡಗಳನ್ನು ನೆಡಲಾಗಿದೆ?

ಇ) ಈ ಗಿಡಗಳಿಗೆ ನೀರು ಒದಗಿಸಲು ಏನು ವ್ಯವಸ್ಥೆ ಮಾಡಲಾಗಿದೆ?

ಈ) ಇದರ ಮೇಲ್ವಿಚಾರಣೆ ಮಾಡಲು ಸೇವಕರನ್ನು ನೇಮಕ ಮಾಡಲಾಗಿದೆಯೇ?

ಉ) ಈ ತೋಟದ ಸಂಪೂರ್ಣ ಅಭಿವೃದ್ಧಿ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಳ್ಳುವುದು?

ಶ್ರೀ ಎ. ಕೃಷ್ಣಪ್ಪ (ತೋಟಗಾರಿಕೆ ರಾಜ್ಯ ಮಂತ್ರಿಗಳು):

ಅ) 8.20 ಎಕರೆ

ಆ) 1993ನೇ ಸಾಲಿನಲ್ಲಿ ಜೂನ್ ಮತ್ತು ಜುಲೈ ಮಾಹೆಯಲ್ಲಿ 5,000 ಗಿಡಗಳನ್ನು ನೆಡಲಾಗಿದೆ.

ಇ) ಒಂದು ಕೊಳವೆ ಬಾವಿಯಿಂದ ನೀರನ್ನು ಒದಗಿಸಲಾಗಿದೆ.

ಈ) ಇದರ ಮೇಲ್ವಿಚಾರಣೆಗೆ ಒಬ್ಬ ಕಾವಲುಗಾರನನ್ನು ನೇಮಿಸಲಾಗಿದೆ.

ಉ) 1994-95ನೇ ಸಾಲಿನಲ್ಲಿ ತೋಟಗಾರಿಕೆ ಇಲಾಖೆವತಿಯಿಂದ ಸುಂದರ ರಾಕ್ ಗಾರ್ಡ್ನ ಅಭಿವೃದ್ಧಿಪಡಿಸಲು ಕಾರ್ಯಕ್ರಮ ಯೋಜಿಸಲಾಗಿದೆ. ಈ ಬಗ್ಗೆ ಒಂದು ಯೋಜನೆಯನ್ನು ತಯಾರಿಸಿ ಶೀಘ್ರವೇ ಅನುಷ್ಠಾನಕ್ಕೆ ತರಲಾಗುವುದು.

ಶ್ರೀ ಕೆ. ಸೋಮಪ್ಪ ಸುವರ್ಣ: ಸನ್ಮಾನ್ಯ ಅಧ್ಯಕ್ಷರೇ, ಮೂಡಬಿದರೆಯ ಚಾರಿತ್ರಿಕ ನ್ಯಾಯ ಬಸಿದಿಯ ಸುಂದರ ಸ್ಥಳದಲ್ಲಿ 5 ಸಾವಿರ ಸಸಿಗಳನ್ನು ಈ ಸಾರಿ ತೋಟಗಾರಿಕಾ ಇಲಾಖೆಯವರು ನೆಟ್ಟಿದ್ದಾರೆ. ಅಲ್ಲಿ ಒಂದು ಕೊಳವೆ ಬಾವಿಯನ್ನು

ತೆಗೆದಿದ್ದು ಅದಕ್ಕೆ ವಿದ್ಯುತ್ ಪಂಪನ್ನೂ ಸಹ ಜೋಡಣೆ ಮಾಡಿ ವಿದ್ಯುತ್ತಿನ ಸಂಪರ್ಕ ನೀಡದಿರುವುದರಿಂದ ನೀರನ್ನು ಸಸಿಗಳಿಗೆ ಒದಗಿಸಲಾಗಿದೆ 5 ಸಾವಿರ ಸಸಿಗಳು ಏಪ್ರಿಲ್ ಮೇ ತಿಂಗಳಿನಲ್ಲಿ ಒಣಗಿ ಹೋಗಿ ಅವುಗಳ ಬದಲಿಗೆ ಬರುವ ವರ್ಷ ಹೊಸ ಸಸಿಗಳನ್ನು ನೆಡುವಂತಹ ಪರಿಸ್ಥಿತಿ ಬಂದಿದೆ. ಆದ್ದರಿಂದ ಈ ತೋಟದ ರಕ್ಷಣೆಗೆ ಮತ್ತು ಆ ಚಾರಿತ್ರಿಕ ನ್ಯಾಯಬಸಿದಿಯ ಸೌಂದರ್ಯವನ್ನು ಹೆಚ್ಚಿಸುವಂತಹ ಯೋಜನೆಯನ್ನು ಅಳವಡಿಸಿದಂತ ತಾವುಗಳು ನೀರನ್ನು ಕೊಡಿಸಲಿಕ್ಕೆ ಏಕೆ ಸೂಕ್ತ ಕ್ರಮವನ್ನು ಕೈಗೊಳ್ಳಬಾರದು ಎಂದು ತಮ್ಮನ್ನು ಕೇಳುತ್ತಿದ್ದೇನೆ.

ಶ್ರೀ ಎ. ಕೃಷ್ಣಪ್ಪ : ಮಾನ್ಯ ಸಭಾಧ್ಯಕ್ಷರೇ, ಕೊಳವೆಬಾವಿ ವಿಚಾರದಲ್ಲಿ ಹೇಳಿದ್ದಾರೆ. ಈಗಾಗಲೇ ಕ್ರಮ ತೆಗೆದುಕೊಂಡಿದ್ದೇನೆ ಮತ್ತು ಅಲ್ಲಿ ಸುಂದರವಾದಂತಹ ವಾತಾವರಣವನ್ನು ಸೃಷ್ಟಿ ಮಾಡಲಿಕ್ಕೆ ಏನೇನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ಸರ್ಕಾರ ಈ ಆರ್ಥಿಕ ವರ್ಷದಲ್ಲಿ ತೆಗೆದುಕೊಳ್ಳುತ್ತದೆ ಎನ್ನುವ ಮಾತನ್ನು ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

ಶ್ರೀ ಕೆ. ಸೋಮಣ್ಣ ಸುವರ್ಣ : ಮಾನ್ಯ ಅಧ್ಯಕ್ಷರೆ, ಏಪ್ರಿಲ್ ಮೇ ತಿಂಗಳಲ್ಲಿ ಬಹಳಷ್ಟು ಬಿಸಿಲಿರುವುದರಿಂದ ಅಲ್ಲಿರುವ ಸಸಿಗಳೆಲ್ಲ ಒಣಗಿಹೋಗುವ ಕಾರಣ ನೀವು ಇಷ್ಟೆಲ್ಲಾ ಖರ್ಚುಮಾಡಿದರೂ ಸಹ ನೀರಿನಲ್ಲಿ ಹೋಮ ಮಾಡಿದಂತೆ ಆಗುತ್ತದೆ. ಆದ್ದರಿಂದ ಕೂಡಲೇ ವಿದ್ಯುತ್ ಜೋಡಣೆ ಮಾಡಿ ಆ ನೀರನ್ನು ಸಸಿಗಳಿಗೆ ಉಣಿಸುವಂತಹ ಕೆಲಸವನ್ನು ಕೂಡಲೇ ಮಾಡಬೇಕು, ಯಾವಾಗ ಮಾಡುತ್ತೀರಾ ಎಂದು ತಮ್ಮನ್ನು ಕೇಳುತ್ತಿದ್ದೇನೆ.

ಶ್ರೀ ಎ. ಕೃಷ್ಣಪ್ಪ : ಒಂದು ತಿಂಗಳ ಒಳಗಡೆ ಅವರು ಕೇಳಿರುವ ಸೌಕರ್ಯವನ್ನು ಒದಗಿಸಿಕೊಡಲಾಗುವುದು.

ಅಧ್ಯಕ್ಷರು : ಶ್ರೀ ಕೆ. ಸಿದ್ಧಯ್ಯನವರೇ ನಿಮ್ಮ 592ನೇ ಪ್ರಶ್ನೆಗೆ ಮಾನ್ಯ ಮಂತ್ರಿಗಳು ಕಾಲಾವಕಾಶವನ್ನು ಕೋರಿದ್ದಾರೆ.

ಮಂಗಳೂರು ಜನತಾ ಬಜಾರ್‌ನಲ್ಲಿ ಅವ್ಯವಹಾರ

498 - ಶ್ರೀ ವಿಜಯಕುಮಾರ್ ಶೆಟ್ಟಿ (ಸುರತ್ಕಲ್) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮಂಗಳೂರು ಜನತಾ ಬಜಾರ್ ಕಳೆದ 5 ವರ್ಷಗಳಿಂದ ವ್ಯಾಪಕ ನಷ್ಟ ಅನುಭವಿಸಿರುವುದು ನಿಜವೇ?*

ಆ) *ಜನತಾ ಬಜಾರ್‌ನ "ನಿರ್ದೇಶಕ ಮಂಡಳಿಯ" ಸದಸ್ಯರು ಸಹಕಾರ ಕಾಯ್ದೆಗೆ ವ್ಯತಿರಿಕ್ತವಾಗಿ ನಿರ್ದೇಶಕರಾಗಿ ಮುಂದುವರಿದಿರುವುದು ಇಲಾಖೆಯ ಗಮನಕ್ಕೆ ಬಂದಿದೆಯೇ?*

ಇ) *ಜನತಾ ಬಜಾರ್‌ನ ನೇಮಕಾತಿಗಳಲ್ಲಿ "ಮೀಸಲಾತಿ" ನಿಯಮಗಳನ್ನು ಅನ್ವಯಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಈ) *ಜನತಾ ಬಜಾರ್‌ನ ಆಡಳಿತ ಮಂಡಳಿಯನ್ನು ರದ್ದುಗೊಳಿಸಿ ಆಡಳಿತಾಧಿಕಾರಿ ನೇಮಕ ಮಾಡಲು ಕ್ರಮ ಕೈಗೊಳ್ಳಲಾಗುವುದೇ?*

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು) :

ಅ) ಹೌದು.

ಆ) ಹೌದು. (ಇಬ್ಬರು ಸದಸ್ಯರ ಬಗ್ಗೆ ಮಾತ್ರ)

ಇ) ಹೌದು

ಈ) ಜನತಾ ಬಜಾರಿನ ವ್ಯವಹಾರಗಳ ಬಗ್ಗೆ ಸಹಕಾರ ಕಾಯ್ದೆ ಕಲಂ 65ರನ್ವಯ ಉಪ ನಿಬಂಧಕರು, ಪರಿವೀಕ್ಷಣೆ ನಡೆಸುತ್ತಿದ್ದು, ಅವರ ವರದಿ ಬಂದ ನಂತರ ಮುಂದಿನ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಶ್ರೀ ವಿಜಯಕುಮಾರ್ ಶೆಟ್ಟಿ: ಮಾನ್ಯ ಅಧ್ಯಕ್ಷರೆ, ಈಗ ಮಂಗಳೂರಿನ ಜನತಾ ಬಜಾರ್ ಸಾಧಾರಣ ಅವ್ಯವಹಾರಕ್ಕೆ ಇನ್ನೊಂದು ಹೆಸರು ಇದ್ದ ಹಾಗಿದೆ, ಈ ಒಂದು ವಿಷಯದಲ್ಲಿ ಸನ್ಮಾನ್ಯ ಸಚಿವರೊಡನೆ ಈಗಾಗಲೇ ಒತ್ತಾಯ ಮಾಡಿದ್ದೇನೆ. ಈ ಎಲ್ಲ ಪ್ರಶ್ನೆಗಳಿಗೂ ಹೌದು ಎಂದು ಉತ್ತರ ಕೊಡುತ್ತಿದ್ದಾರೆ. ಆದರೆ ಅದರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕಾಗಿಲ್ಲ, ಅಲ್ಲಿ ಅಡ್ಮಿನಿಸ್ಟ್ರೇಟರನ್ನು ಹಾಕಲಿಕ್ಕೆ ಕ್ರಮ ಕೈಗೊಳ್ಳಲಾಗುವುದೇ ಎಂದರೆ, ಉಪನಿಬಂಧಕರು ಪರಿವೀಕ್ಷಣೆ ನಡೆಸುತ್ತಿದ್ದು ಅವರ ವರದಿ ಬಂದನಂತರ ಮುಂದಿನ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು" ಎಂದು ಹೇಳಿದ್ದಾರೆ. ಈ ಮೂರು ಪ್ರಶ್ನೆಗಳಿಗೆ 'ಹೌದು' ಎಂದು ಒಪ್ಪಿದ ಮೇಲೆ ಮತ್ತೆ ಅವರಿಂದ ರಿಪ್ಲೈ ಬರುವ ಅಗತ್ಯ ಇಲ್ಲ ಎಂದು ನಾನು ಭಾವಿಸುತ್ತೇನೆ. ತಾವು ದಯವಿಟ್ಟು ಕೂಡಲೇ ಅಡ್ಮಿನಿಸ್ಟ್ರೇಟರನ್ನು ಹಾಕಬೇಕು. ಅವರ ಪಕ್ಷದ ಕಾರ್ಯಕರ್ತರನ್ನು ಯಾವುದೇ ನಮ್ಮ ಮೀಸಲಾತಿಯ ನಿಯಮಾವಳಿಯೂ ಇಲ್ಲದೆ ಅದಕ್ಕೆ ಅಪಾಯಿಂಟ್ಮೆಂಟ್ ಮಾಡುತ್ತಿದ್ದಾರೆ. ದಯವಿಟ್ಟು ಇವತ್ತಿನಿಂದಲೇ ಅದಕ್ಕೆ ಅಡ್ಮಿನಿಸ್ಟ್ರೇಟರನ್ನು ಹಾಕುವುದು ಅತ್ಯಂತ ಸೂಕ್ತ ಎಂದು ನನ್ನ ಅನಿಸಿಕೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಆದಷ್ಟು ಬೇಗನೆ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ವಿಜಯಕುಮಾರ್ ಶೆಟ್ಟಿ: ಮಂಗಳೂರಿನಿಂದ ರಿಪೋರ್ಟ್ ಈಗಾಗಲೇ ಮೈಸೂರಿಗೆ ಬಂದು ಎರಡು ತಿಂಗಳು ಆಗಿದೆ. ಮಂಗಳೂರಿನಿಂದ ಬೆಂಗಳೂರಿಗೆ ಬರುವುದಕ್ಕೆ ಬಹುಶಃ 5-6 ತಿಂಗಳು ಆಗುತ್ತದೆಯೇ ಅಥವಾ 1 ವರ್ಷ ಆಗುತ್ತದೆಯೋ ಗೊತ್ತಾಗುವುದಿಲ್ಲ. ರಿಪೋರ್ಟನ್ನು ಅಲ್ ರೆಡಿ ಸಬ್ಮಿಟ್ ಮಾಡಿದ್ದಾರೆ. ಬಹುಶಃ ಮಧ್ಯೆ ಇರುವಂಥ ಕೆಲವು ಅಧಿಕಾರಿಗಳು ಇದರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಬಿಡುವುದಿಲ್ಲ, ದಯವಿಟ್ಟು ಇದನ್ನು ಈ ಘಳಿಗೆಯಲ್ಲಿಯೇ ನೀವು ಮಾಡುವುದು ಅತ್ಯಂತ ಸೂಕ್ತ. ನನಗೆ ಅಲ್ಲಿಯ ಕೆಲಸಗಾರರು ಬಂದು ಇದನ್ನು ಹೇಳುತ್ತಿದ್ದು, ತಾವು ದಯವಿಟ್ಟು ಕೂಡಲೇ ಇದಕ್ಕೆ ಅಡ್ಮಿನಿಸ್ಟ್ರೇಟರನ್ನು ಹಾಕುವುದು ಉತ್ತಮ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಈಗಾಗಲೇ ಹೇಳಿದ್ದೇನೆ. ಕಾನೂನು ಪ್ರಕಾರ ನೋಟೀಸ್ ಕೊಟ್ಟು ವಿಚಾರಣೆ ಮಾಡಬೇಕಾಗುತ್ತದೆ, ಈ ಬಗ್ಗೆ ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಈಗ ನಾವು ಕ್ರಮ ತೆಗೆದುಕೊಂಡರೆ ನಾಳೆ ಅವರು ಹೈಕೋರ್ಟಿಗೆ ಹೋಗಿ ಸ್ಟೇ ತರುವುದಕ್ಕೆ ಅವಕಾಶ ಮಾಡಿಕೊಡಬಾರದು. ವ್ಯವಸ್ಥಿತವಾಗಿ ಮಾಡಬೇಕು ಎನ್ನತಕ್ಕಂಥ ದೃಷ್ಟಿಯಿಂದ ಈಗ ನೀವು ಕೊಟ್ಟ ಆಪಾದನೆಗಳನ್ನು ವಿಚಾರಣೆ ಮಾಡಿದ ಮೇಲೆ ಕೆಲವು ಪ್ರೂವ್ ಆಗಿವೆ. ಅದಕ್ಕಾಗಿ ಅವರ ಮೇಲೆ ತಕ್ಷಣ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಹೇಳಿದ್ದೇನೆ. ಮತ್ತು ಈಗಾಗಲೇ ನಮ್ಮಲ್ಲಿ ರಿಪೋರ್ಟ್ ಬಂದಿದೆ ಸದಸ್ಯರ ಮೇಲೂ ಕೂಡ ಬಂದಿದೆ ಮತ್ತು ಯಾವರೀತಿಯಾಗಿ ನಷ್ಟ ಆಗಿದೆ ಎಂದೂ ಕೂಡ ಈಗಾಗಲೇ ನಾನು ತಮಗೆ ಸ್ಪಷ್ಟಪಡಿಸಿದ್ದೇನೆ, ಉತ್ತರದಲ್ಲೂ ಕೂಡ ಇದೆ. ಅದನ್ನು ಈಗಲೇ ಅಂದರೆ ವಿಧಾನಸೌಧದಲ್ಲಿ ಮಾಡುವುದಕ್ಕಾಗುವುದಿಲ್ಲ, ಆಫೀಸಿಗೆ ಹೋಗಿ ಫೈಲ್ ನೋಡಿ ಅದರಲ್ಲಿ ಉತ್ತರ ಏನು ಬಂದಿದೆ ನೋಡಿಕೊಂಡು ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ವಿಜಯಕುಮಾರ್ ಶೆಟ್ಟಿ: ನೀವು ಉತ್ತರ ಕೊಟ್ಟಿದ್ದೀರಿ, ಈ ಸಹಕಾರಿ ಕಾಯಿದೆಗೆ ವ್ಯತಿರಿಕ್ತವಾಗಿ ನಿರ್ದೇಶಕರು ಮುಂದುವರಿಯುತ್ತಿದ್ದಾರೆ ಎಂದು. ಇದು ಇನ್ನೂ ಅಂಗೈ ಮೇಲೆ ಇದೆ ಮತ್ತು ಮೀಸಲಾತಿಯಲ್ಲಿಯೂ ಸಹ ನಿಯಮಾವಳಿಗಳನ್ನು

ಅನುಸರಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆಂದು ಹೇಳುತ್ತೀರಿ ಮತ್ತೆ ಯಾರದೋ ಒಬ್ಬರ ರಿಪೋರ್ಟ್ಗಾಗಿ ಏತಕ್ಕೆ ಕಾಯಬೇಕು ಎಲ್ಲಾ ಆಗಿದ್ದು ಇಷ್ಟೊಂದು ಕ್ಲಿಯರ್ ಇರುವಾಗ ನೀವು ಅಡ್ಮಿನಿಸ್ಟ್ರೇಟರನ್ನು ಹಾಕಲಿಕ್ಕೆ ಆಗುವುದಿಲ್ಲವೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ನಾನು ಈಗಾಗಲೇ ಹೇಳಿದ್ದೇನೆ, ಅದರಲ್ಲಿ ಲೋಪದೋಷಗಳು ಕಂಡಿವೆ, ಅಪಾಯಿಂಟ್ಮೆಂಟ್ಸೂ ಕೂಡ ಸರಿಯಾಗಿ ಮಾಡಿಲ್ಲ ಮತ್ತು ಕೆಲವು ಸದಸ್ಯರು ಕೂಡ ಅವರು ಸೊಸೈಟಿನಲ್ಲಿ ಡಿಫಾಲಟರ್ಸ್ ಇದ್ದು ಇಲ್ಲಿ ಬಂದಿದ್ದಾರೆ. ಇವೆಲ್ಲವೂ ಕೂಡ ಇದೆ. ಅದಕ್ಕಾಗಿ ನಾನು ತಕ್ಷಣ ಕ್ರಮ ತೆಗೆದುಕೊಳ್ಳುತ್ತೇನೆ ಎಂಬ ಮಾತನ್ನು ಹೇಳಿದ್ದೇನೆ.

ಶ್ರೀ ಕೆ. ಸೋಮಪ್ಪ ಸುವರ್ಣ: ಮಾನ್ಯ ಅಧ್ಯಕ್ಷರೆ, ಇದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಹಳ ಪ್ರಾಮುಖ್ಯವಾದ ವಿಷಯವಾಗಿ ಪರಿಣಮಿಸಿದೆ. ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡು ಅಲ್ಲಿ ದುಡಿಯುವಂಥ ನೌಕರರಿಗೆ ತೊಂದರೆ ಮಾಡುತ್ತಿದ್ದಾರೆ. ಅನಾವಶ್ಯಕವಾಗಿ ಬಹಳಷ್ಟು ನಷ್ಟಗಳನ್ನು ಅನುಭವಿಸುತ್ತಿದ್ದೇವೆ. ಈ ದಿಸೆಯಲ್ಲಿ ಎಷ್ಟು ತಡವಾಗುತ್ತದೆಯೋ ಅಷ್ಟೂ ನಮಗೆ ಅನ್ಯಾಯವಾಗುತ್ತದೆ ಅಷ್ಟು ನಮಗೆ ನಷ್ಟವುಂಟಾಗುತ್ತದೆ. ಅವರು ತಡಮಾಡುವಂಥ ನೀತಿಯನ್ನು ಅನುಸರಿಸುತ್ತಿದ್ದಾರೆ. ಇಷ್ಟು ದಕ್ಷವಾದ ಮಂತ್ರಿಗಳಾದ ತಾವು ಈ ವಿಚಾರದಲ್ಲಿ ಇಷ್ಟೊಂದು ತಡವಾಗುವುದಕ್ಕೆ ಏತಕ್ಕೆ ಅವಕಾಶ ಮಾಡಿಕೊಡುತ್ತಿದ್ದೀರೆಂದು ನಮ್ಮಲ್ಲಿ ಜನರು ಮಾತನಾಡಿಕೊಳ್ಳುತ್ತಿದ್ದಾರೆ. ಆದ್ದರಿಂದ ಈ ದಿಸೆಯಲ್ಲಿ ತಾವು ಆದ್ಯತಾ ಕ್ರಮದಲ್ಲಿ ಎಷ್ಟುಬೇಗ ಕ್ರಮ ಕೈಗೊಳ್ಳುವುದಕ್ಕೆ ಸಾಧ್ಯವೋ ಅಷ್ಟು ಬೇಗ ತೆಗೆದುಕೊಂಡು ಅವರಿಗೆ ನ್ಯಾಯವನ್ನು ದೊರಕಿಸಿಕೊಡಬೇಕೆಂದು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಪರವಾಗಿ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ನಮ್ಮಿಂದ ತಡವಾಗಿದೆ. ಆದರೆ ಕಾನೂನು ಪ್ರಕಾರ ನೋಟೀಸ್ ಕೊಡಬೇಕಾಗುತ್ತದೆ, ಎನ್ಕ್ವೈರಿ ಮಾಡಬೇಕಾಗುತ್ತದೆ. ಅವರು ಇದನ್ನೆಲ್ಲಾ ಹೇಳಿದಮೇಲೆ ನಾನು ಇಷ್ಟೆಲ್ಲಾ ಮಾಡಿದ್ದೇನೆ. ಅವರೆಲ್ಲಾ ಹೇಳಿದಮೇಲೆ ನಾನು ಚುನಾವಣೆಯನ್ನೂ ಕೂಡ ಅಲ್ಲಿ ಮಾಡಿಸಿದೆ. ಆ ಚುನಾವಣೆಯಲ್ಲಿ ಯಾರು ಗೆದ್ದರೆಂಬುದನ್ನು ನಾನು ಈಗ ಹೇಳಬಾರದು. ಅವರು ಹೇಳಿದಂತೆ ನಾಮಿನೇಷನ್ ಮಾಡಿಸಿದ್ದೇವೆ, ಆದರೆ ಅದು ಕೈಗೆ ಬರಲಿಲ್ಲ. ಆ ಮಾತು ಬೇರೆ. ನಾವು ರೂಲ್ಸ್ ಪ್ರಕಾರ ಮಾಡದಿದ್ದರೆ ನಾಳೆ ಹೈ ಕೋರ್ಟ್ನಲ್ಲಿ ನನ್ನ ಮೇಲೆ ಸ್ಟ್ರಿಕ್ಚರ್ಸ್ ಪಾಸ್ ಮಾಡಿದರೆ ನನ್ನ ರಿಸ್ಕೆ ಯಾರೂ ಬರುವುದಿಲ್ಲ, ಆಗ ಎಲ್ಲರೂ ಟೀಕೆ ಮಾಡುತ್ತಾರೆ. ಇವತ್ತು ನಾನು ಫೈಲ್ ನೋಡಿದಮೇಲೆ ಆರ್ಡರ್ ಪಾಸ್ ಮಾಡಬೇಕೇ ಬೇಡವೇ ಎಂಬುದನ್ನು ನೋಡುತ್ತೇನೆ. ಆದರೆ ಈ ಪ್ರಶ್ನೋತ್ತರ ಕಾಲದಲ್ಲಿ ಯಾವುದನ್ನೂ ನೋಡದೆ ತಕ್ಷಣ ಮಾಡುತ್ತೇನೆಂದು ಹೇಳುವುದು ಸರಿಯಾಗಿ ಕಾಣುವುದಿಲ್ಲ. ನಿಧಾನ ಮಾಡುವ ಪ್ರಶ್ನೆಯೇ ನನ್ನಲ್ಲಿಲ್ಲ. ಅವರು ಬಂದಾಗ ನಾನು ಸ್ಪಷ್ಟವಾಗಿ ಹೇಳಿರುವುದರ ಜೊತೆಗೆ ಅವರು ಹೇಳಿದಂತೆ ಕೂಡಲೇ ಕೆಲಸವನ್ನೂ ಕೂಡ ಮಾಡಿಕೊಟ್ಟಿದ್ದೇನೆ. ನೀವು ಪುನಃ ಪುನಃ ಇದನ್ನೇ ಕೇಳುವುದಾದರೆ ನಾನು ಇದೇ ಉತ್ತರವನ್ನೇ ಹೇಳಬೇಕಾಗುತ್ತದೆ.

ಧಾರವಾಡ ಜಿಲ್ಲಾ ಪರಿಷತ್ತಿನಿಂದ ಗ್ರಾಮೀಣ ಕುಡಿಯುವ ನೀರಿನ ಯೋಜನೆ

715 - ಶ್ರೀ ಮಂಜುನಾಥ್ ಸಿ. ಕುನ್ನೂರ (ಶಿಗ್ಗಾಂ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲಾ ಪರಿಷತ್ತಿಂದ ಕುಡಿಯುವ ನೀರಿನ ಯೋಜನೆಗಳಿಗೆ ಎಷ್ಟು ಹಣ ಖರ್ಚು ಮಾಡಲಾಗಿದೆ?

ಆ) ಎಷ್ಟು ಕೊಳವೆ ಬಾವಿಗಳನ್ನು ಕೊರೆಯಲಾಗಿದೆ? ಹಾಗೂ ಎಷ್ಟು ಕೊಳವೆ ಬಾವಿಗಳು ರಿಪೇರಿಯಲ್ಲಿವೆ?

ಇ) ಕೊಳವೆ ಬಾವಿ ರಿಪೇರಿ ಮಾಡಲು ಪ್ರತಿಯೊಂದಕ್ಕೆ ಎಷ್ಟು ಹಣ ಖರ್ಚು ಮಾಡಲಾಗುವುದು?

ಈ) ಶಿಗ್ಗಾಂ ಮತ್ತು ಸವಣೂರ ತಾಲ್ಲೂಕಿನಲ್ಲಿ ಎಷ್ಟು ಕೊಳವೆ ಬಾವಿಗಳಿವೆ?

ಉ) ಎಷ್ಟು ಕಿರು ನೀರು ಸರಬರಾಜು ಹಾಗೂ ಸಂಚಾರಿ ನೀರು ಸರಬರಾಜು ಯೋಜನೆಗಳನ್ನು ತೆಗೆದುಕೊಳ್ಳಲಾಗಿದೆ? ಹಾಗೂ ಅವು ಯಾವ ಹಂತದಲ್ಲಿದೆ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯರಾಜ್ ಸಚಿವರು):

ಅ)1993-94ನೇ ಸಾಲಿನಲ್ಲಿ ಇಲ್ಲಿಯವರೆಗೆ 421.32 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ.

ಆ) 1993-94ನೇ ಸಾಲಿನಲ್ಲಿ ಒಟ್ಟು 229 ಕೊಳವೆ ಬಾವಿಗಳನ್ನು ಕೊರೆಯಲಾಗಿದೆ. ಜಿಲ್ಲಾ ಪಂಚಾಯತ್ ಪ್ರಾರಂಭದಿಂದ 7871 ಕೊಳವೆ ಬಾವಿಗಳನ್ನು ಕೊರೆದಿದ್ದು ಅವುಗಳಲ್ಲಿ 100 ಕೊಳವೆ ಬಾವಿಗಳು ರಿಪೇರಿಯಲ್ಲಿವೆ.

ಇ) ಸುಮಾರು ರೂ. 400 ರಿಂದ 600 ಗಳವರೆಗೆ ಖರ್ಚಾಗಬಹುದು.

ಈ) ಶಿಗ್ಗಾಂ ತಾಲ್ಲೂಕಿನಲ್ಲಿ 595 ಕೊಳವೆ ಬಾವಿಗಳು ಹಾಗೂ ಸವಣೂರು ತಾಲ್ಲೂಕಿನಲ್ಲಿ 355 ಕೊಳವೆ ಬಾವಿಗಳಿವೆ.

ಉ) 1993-94ರ ಸಾಲಿನಲ್ಲಿ ಶಿಗ್ಗಾಂ ತಾಲ್ಲೂಕಿನಲ್ಲಿ ಕಿರು ನೀರು ಸರಬರಾಜು ಯೋಜನೆಗಳನ್ನು ತೆಗೆದುಕೊಂಡಿದ್ದು ಅವುಗಳ ಪೈಕಿ 2 ಯೋಜನೆಯು ವಿದ್ಯುದ್ದೀಕರಣ ಕೆಲಸ ಹೊರತುಪಡಿಸಿ ಪೂರ್ಣಗೊಳಿಸಿದೆ. ಇನ್ನೊಂದು ಯೋಜನೆಯು ಪ್ರಗತಿಯಲ್ಲಿದೆ.

ಸವಣೂರು ತಾಲ್ಲೂಕಿನಲ್ಲಿ 2 ಕಿರು ನೀರು ಸರಬರಾಜು ಯೋಜನೆಗಳಿದ್ದು, ಒಂದು ಯೋಜನೆಯು ಪೂರ್ಣಗೊಂಡಿದ್ದು ಇನ್ನೊಂದು ಪ್ರಗತಿಯಲ್ಲಿದೆ.

ಸಂಚಾರಿ ನೀರು ಸರಬಾರಾಜು ಯೋಜನೆಗಳ ಪ್ರಸ್ತಾವನೆಗಳಿಲ್ಲ.

ಶ್ರೀ ಮಂಜುನಾಥ್ ಸಿ. ಕುನ್ನೂರು: ಮಾನ್ಯ ಅಧ್ಯಕ್ಷರೆ, ಧಾರವಾಡ ಜಿಲ್ಲಾ ಪರಿಷತ್ ವತಿಯಿಂದ 7871 ಕೊಳವೆಬಾವಿಗಳನ್ನು ಕೊರೆಯಲಾಗಿದೆ ಆ ಪೈಕಿ 100 ಕೊಳವೆಬಾವಿಗಳು ರಿಪೇರಿಯಲ್ಲಿದೆ. ಎಂದು ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ನನ್ನ ಮತ ಕ್ಷೇತ್ರವಾದ ಶಿಗ್ಗಾವಿ ಮತ್ತು ಸವಣೂರಿನಲ್ಲಿ 100 ಕೊಳವೆ ಬಾವಿಗಳು ರಿಪೇರಿಯಲ್ಲಿರುವುದರಿಂದ ಮಾನ್ಯ ಮಂತ್ರಿಗಳು ಕೊಟ್ಟಿರುವ ಉತ್ತರ ಸರಿಯಲ್ಲವೆಂದು ಹೇಳಬಯಸುತ್ತೇನೆ. ಇದರ ಜೊತೆಗೆ ಪ್ರತಿ ಬೋರ್ವೆಲ್ ರಿಪೇರಿಗೆ 250 ರೂಪಾಯಿನಂತೆ ಜಿಲ್ಲಾ ಪರಿಷತ್ವತಿಯಿಂದ ಕೊಡುತ್ತಿದ್ದು ತಮ್ಮ ಉತ್ತರದಲ್ಲಿ 400 ರಿಂದ 600 ರೂಪಾಯಿಗಳವರೆಗೆ ಖರ್ಚಾಗಬಹುದೆಂದು ಹೇಳಿದ್ದಾರೆ. ಆದರೆ ಬೋರ್ವೆಲ್ ರಿಪೇರಿಗೆ ಹೆಚ್ಚು ಹಣವನ್ನು ಕೊಡುವುದರ ಜೊತೆಗೆ ಹೆಚ್ಚು ಹೆಚ್ಚು ಬೋರ್ವೆಲ್ಲಗಳಿಗೂ ಕೂಡ ಹಣವನ್ನು ಕೊಡುವುದು ಅತ್ಯವಶ್ಯಕವೆಂದು ಹೇಳಬಯಸುತ್ತೇನೆ.

ಶ್ರೀ ಎಂ.ವೈ. ಘೋರ್ಪಡೆ: ಮಾನ್ಯ ಸದಸ್ಯರ ಕ್ಷೇತ್ರದಲ್ಲಿ ಕಳೆದವರ್ಷ 229 ಕೊಳವೆ ಬಾವಿಗಳನ್ನು ನಾವು ಕೊರೆಸಿದ್ದೇವೆ. ಒಟ್ಟು ತೆಗೆಸಿರುವ 7871 ಕೊಳವೆಬಾವಿಗಳು ಸಂಖ್ಯೆಯಲ್ಲಿ ಕಡಿಮೆ ಎಂದು ಯಾರೂ ಕೂಡ ವಾದ ಮಾಡಲು ಬರುವುದಿಲ್ಲ.

ಶಿಗ್ಗಾವ್ನಲ್ಲಿ 3 ಮತ್ತು ಸವಣೂರಿನಲ್ಲಿ 2 ಮಿನಿ ವಾಟರ್‌ಸ್ಕೀಂಗಳನ್ನು ಮಾಡಿದ್ದೇವೆ. ಈ ಕೆಲಸ ಯಶಸ್ವಿಯಾಗಿ ನಡೆದಿದೆ ಎಂಬುದು ಇಲ್ಲಿ ಸ್ಪಷ್ಟವಾಗಿ ಗೊತ್ತಾಗುತ್ತದೆ. ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ನಾನು ಸ್ಪಷ್ಟವಾಗಿ ಉತ್ತರವನ್ನು ಹೇಳಿದ್ದೇನೆ. ಪ್ರತಿ ಕೊಳವೆಬಾವಿ ರಿಪೇರಿಗೆ 400 ರಿಂದ 600 ರೂಪಾಯಿವರೆಗೆ ಖರ್ಚಾಗುತ್ತದೆ. ಆದರೆ ಇಷ್ಟೇ ಹಣ ಖರ್ಚಾಗುತ್ತದೆಂದು ಖಚಿತವಾಗಿ ಹೇಳುವುದಕ್ಕೆ ಬರುವುದಿಲ್ಲ. 400 ರೂಪಾಯಿ ಆಗಬಹುದು, ಕಡಿಮೆಯೇ ಆಗಬಹುದು. 250 ರೂಪಾಯಿಗಳನ್ನು ನಾವು ಕೊಟ್ಟರೂ ಕೂಡ ಮಂಡಲ ಪಂಚಾಯಿತಿಯವರಿಗೆ ಇದರ ಬಗ್ಗೆ ಜವಾಬ್ದಾರಿ ಇದೆ. ನಮ್ಮ ಗ್ರಾಮಪಂಚಾಯಿತಿಯ ಹೊಸ ವ್ಯವಸ್ಥೆಯ ಪ್ರಕಾರ ಪ್ರತಿ ಗ್ರಾಮ ಪಂಚಾಯಿತಿಗೆ 1 ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಜಿಲ್ಲಾ ಪರಿಷತ್ತಿನಿಂದ ಎಷ್ಟು ಹಣ ಬರುತ್ತದೆ ಅದರ ಜೊತೆಗೆ ನಾವೂ ಕೊಡುತ್ತಿದ್ದೇವೆ. ಆದ್ದರಿಂದ ಇನ್ನು ಮುಂದೆ ಈ ರೀತಿಯ ಮೇಂಟೆನೆನ್ಸ್ ಪ್ರಾಬ್ಲಂ ಬರುವುದಿಲ್ಲವೆಂದು ನನ್ನ ಅಭಿಪ್ರಾಯ.

12.35 ಪಿ.ಎಂ

ಶ್ರೀ ಮಂಜುನಾಥ್ ಸಿ. ಕುನ್ನೂರ : ಮಾನ್ಯ ಅಧ್ಯಕ್ಷರೆ, 7871 ಕೊಳವೆ ಬಾವಿಗಳನ್ನು ಅತಿ ಹೆಚ್ಚಿನ ಸಂಖ್ಯೆಯಲ್ಲಿ ನಮ್ಮ ಸರ್ಕಾರದವರು ತೆಗೆಸಿರುತ್ತಾರೆಂಬುದನ್ನು ಕೇಳಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಆದರೆ ಈ ರಿಪೇರಿಯಲ್ಲಿರತಕ್ಕಂಥ ಕೊಳವೇ ಬಾವಿಗಳ ಪರಿಸ್ಥಿತಿಯನ್ನು ಹೇಳಬೇಕಾಗಿದೆ. ಅವುಗಳನ್ನು ರಿಪೇರಿ ಮಾಡದೆ ಕೇವಲ ಹೊಸ ಹೊಸ ಬೋರ್‌ವೆಲ್ಗಳನ್ನು ಹಾಕುತ್ತಾ ಇರುವ ಒಂದು ಕಾರ್ಯ ತಮ್ಮ ಇಲಾಖೆಯವತಿಯಿಂದ ನಡೆಯುತ್ತಿದೆ. ಇಂಥ ಕಾರ್ಯಗಳು ಆಗಬಾರದು. ಜೊತೆಗೆ ಮಿನಿವಾಟರ್ ಸಪ್ಲೆ ಮತ್ತು ಪೈಪ್ವಾಟರ್ ಸಪ್ಲೆ ಇವುಗಳನ್ನು ಮಾಡತಕ್ಕಂಥ ಸಂದರ್ಭದಲ್ಲಿ ವಿದ್ಯುತ್ತಿನ ಅಭಾವದಿಂದ ತೊಂದರೆಯುಂಟಾಗಿದೆ. ಇದರಿಂದಾಗಿ ಸರ್ಕಾರದವರು ಎರಡೆರಡು ಮೂರುಮೂರು ವರ್ಷಗಳಿಂದ ನೀರನ್ನು ಕೊಡದಿರತಕ್ಕಂಥ ಪರಿಸ್ಥಿತಿಯನ್ನು ಎದುರಿಸುತ್ತಿದ್ದೇವೆ. ಆದಕಾರಣ ಎಲೆಕ್ಟ್ರಿಸಿಟಿಕೆನ್ನಿಂದ ಯಾವ ತೊಂದರೆಯೂ ಆಗದಂತೆ ಸರ್ಕಾರದವರು ಕಾಳಜಿಯನ್ನು ವಹಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಘೋರ್ಪಡೆ : ರಿಪೇರಿ ವ್ಯವಸ್ಥೆ ಮತ್ತಷ್ಟು ದಕ್ಷತೆಯಿಂದ ನಡೆಯಬೇಕೆಂಬುದನ್ನು ಹೇಳುವುದಾದರೆ ಅದರ ಬಗ್ಗೆ ನನ್ನ ಆಕ್ಷೇಪಣೆ ಇಲ್ಲ. ಆ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ. ಮತ್ತೆ ತಾಲ್ಲೂಕು ಮಟ್ಟದಲ್ಲಿ ಮೊಬೈಲ್ ಯೂನಿಟ್ ಮಾಡಿ ಒಂದು ಸ್ಪಷ್ಟವಾದಂಥ ಕಾರ್ಯಕ್ರಮವನ್ನು ತಾಲ್ಲೂಕಿನಲ್ಲಿ ಹಾಕಿ ಯಾವ ದಿನ ಆ ಮೊಬೈಲ್ ಯೂನಿಟ್ ಯಾವ ಹಳ್ಳಿಗೆ ಹೋಗಬೇಕೆಂದು ಹೇಳಿ ನಿರ್ದಿಷ್ಟವಾದಂಥ ರಿಪೇರಿ ಕಾರ್ಯಕ್ರಮವನ್ನು ಹಾಕಿಕೊಂಡು ಮಾಡಿದರೆ ಕೆಲವೇ ದಿನಗಳಲ್ಲಿ ಕೆಲವೇ ವಾರಗಳಲ್ಲಿ ಎಲ್ಲೆಲ್ಲಿ ರಿಪೇರಿಯ ಅವಶ್ಯಕತೆ ಇದೆ ಅಲ್ಲಿ ಮಾಡಿಸಲಿಕ್ಕೆ ಸಾಧ್ಯತೆ ಇದೆ, ಆ ಪ್ರಯತ್ನ ತಾವು ಮಾಡಬೇಕು.

ಎರಡನೆಯದು ಮಿನಿವಾಟರ್ ಬಗ್ಗೆ ಮಾನ್ಯ ಸದಸ್ಯರು ಹೇಳುವುದರಲ್ಲಿ ಸ್ವಲ್ಪ ಸತ್ಯ ಇದೆ. ನಾವು ಅದನ್ನು ಪೂರ್ತಿ ಮಾಡಿದರೂ ಕೂಡ ಇದಕ್ಕೆ ಎಲೆಕ್ಟ್ರಿಸಿಟಿ ಕನೆಕ್ಷನ್ ಕೊಡದೆ ಅದು ಹಾಗೆಯೇ ಬಿದ್ದಿರುತ್ತದೆ. ಉದಾಹರಣೆಗಾಗಿ ಶಿಗ್ಗಾವಿಯಲ್ಲಿ ಮೂರು ಮಿನಿವಾಟರ್ ಸ್ಕೀಮ್ಸ್ ಮಾಡುತ್ತಿದ್ದೇವೆ. ಅದರಲ್ಲಿ ಎರಡು ಪೂರ್ತಿ ಮಾಡಿದ್ದೇವೆ. ಅದರಲ್ಲಿ ಒಂದು ಎಲೆಕ್ಟ್ರಿಸಿಟಿ ಅಭಾವದಿಂದ ಇನ್ನು ಕಮೀಷನ್ ಆಗಿಲ್ಲ. ಇಂಥದ್ದು ಇಡೀ ರಾಜ್ಯದಲ್ಲಿ ಎಷ್ಟಿದೆ ಎಂಬುದನ್ನು ಪಟ್ಟಿ ಮಾಡಿ ನಾವು ಎಲೆಕ್ಟ್ರಿಸಿಟಿ ಬೋರ್ಡಿಗೆ ಕಳುಹಿಸಿದ್ದೇವೆ. ಆದಷ್ಟು ಬೇಗ ಇದನ್ನು ಮಾಡುವಂಥ ಪ್ರಯತ್ನ ನಾವು ಮಾಡುತ್ತೇವೆ. ಅದೇ ರೀತಿಯಲ್ಲಿ ಸವಣೂರಿನಲ್ಲಿ ಎರಡು ಮಿನಿವಾಟರ್ ಸ್ಕೀಮ್ಸ್ ಇದೆ. ಅದರಲ್ಲಿ ಒಂದು [illegible]

ಶ್ರೀ ಎಲ್.ಆರ್. ಶಿವರಾಮೇಗೌಡ : ಮಾನ್ಯ ಅಧ್ಯಕ್ಷರೇ, ಇದು ಶಿಗ್ಗಾವಿ ಕ್ಷೇತ್ರದಲ್ಲಿ ಮಾತ್ರವಲ್ಲ. ಇಡೀ ರಾಜ್ಯದಲ್ಲೇ ಇದು ಒಂದು ಮಹತ್ತರವಾದಂಥ ಪ್ರಶ್ನೆಯಾಗಿದೆ. ಈಗಾಗಲೇ 250 ರೂಪಾಯಿಗಳನ್ನು ಒಂದು ಬೋರ್ವೆಲ್ಗೆ ರಿಪೇರಿಗಾಗಿ ಒಂದು ವರ್ಷಕ್ಕೆ ಕೊಡುತ್ತಿದ್ದಾರೆ. ಇದು ಯಾವುದಕ್ಕೂ ಸಾಲದು. ಮಾನ್ಯ ಉಪಮುಖ್ಯಮಂತ್ರಿಗಳು ಮೊನ್ನೆ ಮಂಡ್ಯದಲ್ಲಿ ಸಭೆಯಲ್ಲಿ ಮಾತನಾಡುತ್ತಾ, ತಮ್ಮ ಆತಂಕವನ್ನು ವ್ಯಕ್ತಮಾಡಿರುತ್ತಾರೆ. ಜಿಲ್ಲಾಪರಿಷತ್ತಿನವರು ಯಾವುದೇ ರೀತಿಯಿಂದ ಹಣವನ್ನು ಕೊಡಲಿಕ್ಕೆ ಬರುವುದಿಲ್ಲ. ನಮ್ಮ ಮಂಡಲ್ ಪಂಚಾಯತ್ಗಳಲ್ಲೂ ಸಹಿತ ಒಂದು ಲಕ್ಷ ರೂಪಾಯಿಗಳನ್ನು ನೀಡಲಿಕ್ಕೆ ಸಿದ್ಧವಾಗಿದ್ದೇವೆಂದು ಹೇಳುತ್ತಾರೆ. ಆದರೆ ಬರಿ ಬೋರ್ವೆಲ್ ರಿಪೇರಿಗೂ ಕೊಡಲಿಕ್ಕೆ ಸಾಧ್ಯವಾಗುತ್ತಿಲ್ಲ. ಇವರು ಓಬಿರಾಯನ ಕಾಲದಲ್ಲಿ ಇಟ್ಟಿರತಕ್ಕಂಥ ಒಂದು ಬೋರ್ವೆಲ್ ರಿಪೇರಿಗೆ 250 ರೂಪಾಯಿ ಹಣವನ್ನು ದಯವಿಟ್ಟು ಜಾಸ್ತಿ ಮಾಡಬೇಕು. ಜಾಸ್ತಿ ಮಾಡದಿದ್ದರೆ ಬೋರ್ವೆಲ್ ರಿಪೇರಿಯನ್ನು ಮಾಡಲಿಕ್ಕೆ ಆಗುವುದಿಲ್ಲ ಸ್ವಾಮಿ. ದಯವಿಟ್ಟು ಸರ್ಕಾರದವರು ಇದಕ್ಕೆ ಆದೇಶವನ್ನು ಕೊಡಬೇಕು. ಈಗ ಬೇಸಿಗೆ ಕಾಲ ಬಹಳ ಜಾಸ್ತಿಯಾಗಿದೆ. ಎಲ್ಲಾ ಹಳ್ಳಿಗಳಲ್ಲಿಯೂ ಕುಡಿಯುವ ನೀರಿನ ತೊಂದರೆ ಜಾಸ್ತಿಯಾಗಿದೆ. ಆದ್ದರಿಂದ 250 ರೂಪಾಯಿಗೆ ಬದಲಾಗಿ ಕೊನೇ ಪಕ್ಷ 500 ರೂಪಾಯಿಗಳನ್ನಾದರೂ ಕೊಡದೆ ಹೋದರೆ ಬೋರ್ವೆಲ್ ಹಾಕಿಯೂ ಸಹ ಪ್ರಯೋಜನವಾಗುವುದಿಲ್ಲ. 500 ರೂಪಾಯಿಗಳನ್ನು ಕೊಡತಕ್ಕಂಥದ್ದಕ್ಕೆ ಮಾನ್ಯ ಮಂತ್ರಿಗಳು ಏನಾದರೂ ಹೇಳುತ್ತಾರೆಯೇ ಎಂದು ಕೇಳುತ್ತೇನೆ.

ಶ್ರೀ ಎಂ.ವೈ. ಘೋರ್ಪಡೆ : ಆಯಿತು.

ಡಾ॥ ಎನ್.ಬಿ. ನಂಜಪ್ಪ : ಮಾನ್ಯ ಸಚಿವರು ಸಂಚಾರಿ ನೀರಿನ ವ್ಯವಸ್ಥೆ ಎಂದು ಹೇಳಿದರು, ಅದು ಏನೆಂಬುದು ಗೊತ್ತಾಗಲಿಲ್ಲ. ಸಂಚಾರಿ ನೀರಿನ ವ್ಯವಸ್ಥೆ ಎಂದು ಕರ್ನಾಟಕ ರಾಜ್ಯದಲ್ಲಿ ಇದೆಯೇ ಎಂಬುದು ನನ್ನ ಪ್ರಶ್ನೆ. ಕ್ಷೆಶ್ಚನ್ನಲ್ಲಿ ಸಂಚಾರಿ ನೀರಿನ ವ್ಯವಸ್ಥೆ ಎಂದು ಇದೆ. ರೂರಲ್ ಏರಿಯಾದಲ್ಲಿ ಸಂಚಾರಿ ನೀರಿನ ವ್ಯವಸ್ಥೆ ಇದೆಯೇ ಎನ್ನುವುದು ನನ್ನ ಕ್ಲಾರಿಫಿಕೇಷನ್?

ಶ್ರೀ ಎಂ.ವೈ. ಘೋರ್ಪಡೆ : ಮಾನ್ಯ ಅಧ್ಯಕ್ಷರೆ, ಸಂಚಾರಿ ನೀರಿನ ವ್ಯವಸ್ಥೆ ಎನ್ನುವುದು ಬಹಳ ಮುಖ್ಯವಾದುದು. ಆಕಸ್ಮಾತ್ ತಮ್ಮ ತಾಲ್ಲೂಕಿನಲ್ಲಿ ಇಲ್ಲದಿದ್ದರೆ ತಕ್ಷಣ ನನಗೆ ತಿಳಿಸಿದರೆ ನಾನು ಅದನ್ನು ನೋಡುತ್ತೇನೆ. ಏತಕ್ಕೆಂದರೆ ಪ್ರತಿಯೊಂದು ತಾಲ್ಲೂಕಿನಲ್ಲಿ ಆ ಸಂಚಾರಿ ವ್ಯವಸ್ಥೆ, ಆ ರಿಪೇರಿ ಟೀಮ್ ಎಲ್ಲಾ ಕಡೆ ಹೋಗಿ ರಿಪೇರಿ ಮಾಡತಕ್ಕಂಥ ವ್ಯವಸ್ಥೆ ಇದೆ.

(ಗೊಂದಲ)

ಡಾ॥ ಎನ್.ಬಿ. ನಂಜಪ್ಪ : ಮಾನ್ಯ ಕುನ್ನೂರ್‌ರವರು ಕೇಳಿದರು, ಅದಕ್ಕೋಸ್ಕರ ಕೇಳಿದೆ. ಇದರಲ್ಲಿ ಇದೆ.

ಶ್ರೀ ಎಂ.ವೈ. ಘೋರ್ಪಡೆ : ಮಾನ್ಯ ಅಧ್ಯಕ್ಷರೇ, ಭಾಷೆಯ ಪ್ರಶ್ನೆ ಇದೆ. ನನಗಿಂತ ಅವರಿಗೆ ಭಾಷೆ ಚನ್ನಾಗಿ ಗೊತ್ತಿದೆ ಎಂಬುದನ್ನು ಒಪ್ಪಿಕೊಳ್ಳುವುದಕ್ಕೆ ನನ್ನದೇನೂ ಅಭ್ಯಂತರವಿಲ್ಲ. ಮೊಬೈಲ್ ಯೂನಿಟ್ಸ್ ಬಗ್ಗೆ ನಾನು ಹೇಳಿದೆ.

ಡಾ॥ ಎನ್.ಬಿ. ನಂಜಪ್ಪ : ಸಂಚಾರಿ ನೀರಿನ ವ್ಯವಸ್ಥೆ ಎಂದು ಅವರು ಕೇಳಿದ್ದರಿಂದ ಅದು ನನಗೆ ಗೊತ್ತಾಗಲಿಲ್ಲ, ಅದಕ್ಕೆ ನಾನು ಕೇಳಿದೆ.

ಡಾ॥ ಎನ್.ಬಿ. ನಂಜಪ್ಪ : ಮಾನ್ಯ ಅಧ್ಯಕ್ಷರೇ, ಎಲ್ಲೆಲ್ಲಿ ನೀರಿನ ತೀವ್ರ ಅಭಾವ ಇಂಗ ಕಡೆ ಟ್ಯಾಂಕಲಿ ನೀರನ್ನು ತೆಗೆದುಕೊಂಡು ಹೋಗಿ ಕೊಡುವಂಥ ಒಂದು

ವ್ಯವಸ್ಥೆ. ಅದನ್ನು ಖಂಡಿತವಾಗಿ ಮಾಡುತ್ತೇವೆ. ಅದರಲ್ಲೂ ಏನೂ ಅನುಮಾನ ಪಡಬೇಕಾಗಿಲ್ಲ.

ಶ್ರೀ ಎಲ್.ಆರ್. ಶಿವರಾಮೇಗೌಡ : ಬೋರ್‌ವೆಲ್ ರಿಪೇರಿಗೆ 250 ರೂಪಾಯಿಗಳಿಗಿಂತ ಜಾಸ್ತಿ ಕೊಡತಕ್ಕಂಥ ವಿಚಾರ ಇದೆಯೇ ಎಂದು ಕೇಳುತ್ತಿದ್ದೇನೆ.

ಶ್ರೀ ಎಂ.ವೈ. ಘೋರ್ಪಡೆ : ಈಗ ಹೊಸ ಗ್ರಾಮ ಪಂಚಾಯತಿಗಳು ಸ್ಥಾಪನೆಯಾದುದರಿಂದ, ಜಿಲ್ಲಾ ಪಂಚಾಯತಿಗಳಿಂದ ಎಷ್ಟು ಬರಬೇಕು, ಅವರು ಏನು ಮಾಡಲಿಕ್ಕೆ ಸಾಧ್ಯ ಇದನ್ನು ಸ್ವಲ್ಪ ಪರಿಶೀಲಿಸಿ ಇನ್ನು ಹೆಚ್ಚಿಗೆ ಕೊಡತಕ್ಕಂಥ ಅವಶ್ಯಕತೆ ಇದ್ದರೆ.... ಇದು ಬರೀ ಹಣದ ಪ್ರಶ್ನೆಯಿಲ್ಲ ರಿಪೇರಿ ಮಾಡುವಂಥ ಜನರಿಂದ ಆ ಪ್ರಯತ್ನ ನಡೆಯಬೇಕಾಗಿರುತ್ತದೆ. ನಾವು ಸುಮ್ಮನೆ ಜಾಸ್ತಿ ಮಾಡಿಬಿಟ್ಟರೆ ರೀಪರಿ ಮಾಡಿದಂತಾಗುವುದಿಲ್ಲ. ಆದಕಾರಣ ಹಣದ ಅಭಾವದಿಂದ ರಿಪೇರಿಗೆ ಏನಾದರೂ ತೊಂದರೆಯಾಗಿದ್ದರೆ ಅದನ್ನು ಸರಿಪಡಿಸೋಣ.

ಶ್ರೀ ಎಲ್.ಆರ್. ಶಿವರಾಮೇಗೌಡ : ಇವತ್ತಿನ ದಿವಸ ನಾವು ಹಳ್ಳಿಗಳಿಗೆ ಹೋಗುವುದಕ್ಕಾಗುವುದಿಲ್ಲ.

ಅಧ್ಯಕ್ಷರು : ಕುಡಿಯುವ ನೀರಿನ ವ್ಯವಸ್ಥೆ ಮಾಡುತ್ತೇವೆಂದು ಹೇಳಿದ್ದಾರಲ್ಲ ಅವರು.

ಶ್ರೀ ಎಲ್.ಆರ್. ಶಿವರಾಮೇಗೌಡ : ಕುಡಿಯುವ ನೀರಿನ ಅಭಾವ ಜಾಸ್ತಿಯಾಗಿದೆ, ಯಾವಾಗ ಮಾಡುವುದು ? ನಮ್ಮ ಕಷ್ಟವನ್ನು ನಿಮ್ಮ ಹತ್ತಿರ ಅಲ್ಲದೆ ಇನ್ನು ಯಾರ ಹತ್ತಿರ ಹೇಳಿಕೊಳ್ಳಬೇಕು ? 250 ರೂಪಾಯಿಗಳನ್ನು ಕೊಟ್ಟರೆ ಬೋರ್‌ವೆಲ್ ರಿಪೇರಿ ಮಾಡುವುದಕ್ಕಾಗುತ್ತದೆಯೆ ಹೇಳಿ. ಮಾನ್ಯ ಉಪ ಮುಖ್ಯ ಮಂತ್ರಿಗಳು ಸಭೆಯಲ್ಲಿದ್ದರು. ಅವರೂ ಆತಂಕ ವ್ಯಕ್ತ ಮಾಡಿದರು.

ಅಧ್ಯಕ್ಷರು : ಅವರು ಹೇಳಿದ್ದುದನ್ನು ತಾವು ತಿಳಿದುಕೊಳ್ಳಲಿಲ್ಲ. ಅವರಿಗೆ ದುಡ್ಡಿನ ಪ್ರಶ್ನೆ ಅಲ್ಲ, ರಿಪೇರಿ ಮಾಡುವ ಪ್ರಸಂಗ ಬಂದರೆ ದುಡ್ಡು ಹೆಚ್ಚು ಆದರೂ ಕೊಡುತ್ತೇವೆಂದು ಹೇಳಿದ್ದಾರೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಎಲ್ಲಾ ಜಿಲ್ಲೆಗಳಲ್ಲಿ, ಎಲ್ಲಾ ತಾಲ್ಲೂಕುಗಳಲ್ಲಿ ಈ ಸಮಸ್ಯೆ ಇದೆ.

(ಗೊಂದಲ)

ಅಧ್ಯಕ್ಷರು : ತಾವು ಕುಳಿತುಕೊಳ್ಳಿ. ಇದು ಶಿಗ್ಗಾಂ ಪ್ರಶ್ನೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಇದು ಇಡೀ ರಾಜ್ಯದ ಪ್ರಶ್ನೆ.

ಅಧ್ಯಕ್ಷರು : ಕುಳಿತುಕೊಳ್ಳಿ. ಇದು ಪ್ರಶ್ನೋತ್ತರ ವೇಳೆ.

ಒಬ್ಬ ಮಾನ್ಯ ಸದಸ್ಯರು : ಕುಡಿಯುವ ನೀರಿನ ಸಮಸ್ಯೆ ಇಡೀ ರಾಜ್ಯದಲ್ಲಿದೆ, ಮಾನ್ಯ ಶಿವರಾಮೇಗೌಡರು ಹೇಳುವ ಹಾಗೆ 250 ರೂಪಾಯಿಗಳಲ್ಲಿ ಎಲ್ಲಿ ಬೋರ್‌ವೆಲ್ಲನ್ನು ರಿಪೇರಿ ಮಾಡುವುದಕ್ಕಾಗುತ್ತದೆ ?

ಅಧ್ಯಕ್ಷರು : ತಾವು ಕುಳಿತುಕೊಳ್ಳಬೇಕು.

ಶ್ರೀ ಎಲ್.ಆರ್. ಶಿವರಾಮೇಗೌಡ : ದಯವಿಟ್ಟು ತಾವು ನಮ್ಮ ತೊಂದರೆಯನ್ನು ಅರ್ಥಮಾಡಿಕೊಳ್ಳಬೇಕು. ನೀವು ನಮ್ಮ ಸಹಾಯಕ್ಕೆ ಬರಬೇಕು.

ಅಧ್ಯಕ್ಷರು : ನೀವು ನಿಮ್ಮ ಕಷ್ಟ ಏನಾದರೂ ಇದ್ದರೆ ಅವರ ಹತ್ತಿರ ಹೋಗಿ ಮಾತನಾಡಿ. ಮಾನ್ಯ ಮಂತ್ರಿಗಳ ಹತ್ತಿರ ಹೋಗಿ ಮಾತನಾಡಿ.

ಶ್ರೀ ಎಲ್.ಆರ್. ಶಿವರಾಮೇಗೌಡ : ಮಂತ್ರಿಗಳು ಕೊಟ್ಟ ಉತ್ತರ ತಮಗೆ ಸಮಾಧಾನವಾಗಿದ್ದರೆ ನಾನು ಕುಳಿತುಕೊಳ್ಳುತ್ತೇನೆ. 250 ರೂಪಾಯಿಗಳನ್ನು ಒಂದು ಬೋರ್‌ವೆಲ್ ರಿಪೇರಿಗೆ ಕೊಡುತ್ತೇವೆಂದರೆ ಹೇಗೆ? 500 ರೂಪಾಯಿಗಳನ್ನು ಖರ್ಚು ಮಾಡಿದರೂ ಇವತ್ತು ಒಂದು ಬೋರ್‌ವೆಲ್ ರಿಪೇರಿ ಮಾಡುವುದಕ್ಕಾಗುವುದಿಲ್ಲ. 250 ರೂಪಾಯಿಗಳನ್ನು ಕೊಡುತ್ತೇವೆ, ಪರಿಶೀಲನೆ ಮಾಡುತ್ತೇವೆಂದು ಅವರು ಹೇಳಿದ್ದಕ್ಕೆ ನಾವು ಕುಳಿತುಕೊಳ್ಳುವುದಾದರೆ ನಾವು ಏತಕ್ಕೆ ಇಲ್ಲಿ ಶಾಸಕಗಿರಿ ಮಾಡಬೇಕು?

ಅಧ್ಯಕ್ಷರು : ಹೆಚ್ಚಿಗೆ ಖರ್ಚು ಬಂದರೂ ಮಾಡುತ್ತೇವೆಂದು ಹೇಳಿದರಲ್ಲ.

ಶ್ರೀ ಎಲ್.ಆರ್. ಶಿವರಾಮೇಗೌಡ : ಯಾವಾಗ ಮಾಡುವುದು, ಸದನದಲ್ಲಿ ಉತ್ತರ ಕೊಡಲಿ.

ಅಧ್ಯಕ್ಷರು : ಈಗ ಸದ್ಯ ಮಾಡುವುದಕ್ಕಾಗುತ್ತದೆಯೆ?

ಶ್ರೀ ಎಂ.ವೈ. ಘೋರ್ಪಡೆ : ಇನ್ನಷ್ಟು ಹಣ ಕೊಡುವ ಅವಶ್ಯಕತೆ ಇದ್ದರೆ ಕೊಡುತ್ತೇವೆ. ಅದಕ್ಕೇನೂ ತೊಂದರೆ ಇಲ್ಲ. ಆದರೆ ಅದನ್ನು ಇಲ್ಲಿ ಹೇಳುವುದಕ್ಕಾಗುತ್ತದೆಯೇ? ಸಾವಿರ ರೂಪಾಯಿ ಮಾಡಿದ್ದೇವೆ, ಐನೂರು ರೂಪಾಯಿ ಮಾಡಿದ್ದೇವೆಂದು ಈಗಲೇ ಹೇಳುವುದಕ್ಕಾಗುತ್ತದೆಯೇ? ಇದ್ದ ಪರಿಸ್ಥಿತಿಯನ್ನು ಹೇಳಿದೆ. ರಿಪೇರಿಗೋಸ್ಕರ ಹಣ ಜಾಸ್ತಿ ಮಾಡುವ ಪ್ರಶ್ನೆ ಇದ್ದರೆ ಸಹಾನುಭೂತಿಯಿಂದ, ನಾವು ಪರಿಶೀಲನೆ ಮಾಡುತ್ತೇವೆ. ಇವತ್ತೇ ನಾನು ಅದನ್ನು ಅನೌನ್ಸ್ ಮಾಡುವುದಕ್ಕಾಗುವುದಿಲ್ಲ. ಹೆಚ್ಚಿಗೆ ಮಾಡಿ ಎಂಬ ಪ್ರಶ್ನೆ ಬಂದತಕ್ಷಣ ನಾನು ಹೇಳುವುದಕ್ಕಾಗುವುದಿಲ್ಲ.

(ಮಾನ್ಯ ಸದಸ್ಯರೊಬ್ಬರು ಮಾತನಾಡಲು ನಿಂತರು)

ಅಧ್ಯಕ್ಷರು : ತಾವು ದಯವಿಟ್ಟು ಕುಳಿತುಕೊಳ್ಳಬೇಕು. ಇದು ಪ್ರಶ್ನೋತ್ತರವೋ ಅಥವಾ ಏನು ಇದು? ನೀವು ಹೋಗಿ ಮಾನ್ಯ ಮಂತ್ರಿಗಳನ್ನು ಭೇಟಿಯಾಗಿ.

ರಾಜ್ಯದಲ್ಲಿ ರಾಸಾಯನಿಕ ಗೊಬ್ಬರದ ವಿತರಣೆಯಲ್ಲಿ ಅವ್ಯವಹಾರ

522 - ಶ್ರೀಮತಿ ದಮಯಂತಿ ಬೋರೇಗೌಡ (ಶ್ರೀರಂಗಪಟ್ಟಣ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳನ್ನು ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಲದಿಂದ ವಿತರಣೆ ಮಾಡಲಾಗುತ್ತಿರುವ ಸಾರಜನಕ ಗೊಬ್ಬರಗಳು ಸರಿಯಾಗಿ ವಿತರಣೆಯಾಗದೆ ಅವ್ಯವಹಾರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಈ ರೀತಿ ಇದ್ದಲ್ಲಿ ಅದರ ವಿವರಗಳೇನು ಹಾಗೂ ಮುಂದೆ ಈ ರೀತಿ ಆಗದಂತೆ ಸರ್ಕಾರದಿಂದ ಕ್ರಮ ತೆಗೆದುಕೊಳ್ಳುವ ಭರವಸೆ ನೀಡಲಾಗುವುದೇ?*

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಆರ್.ಎನ್. ನಾಯಕ್ (ಶ್ರೀಮತಿ ದಮಯಂತಿ ಬೋರೇಗೌಡರ ಪರವಾಗಿ): ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆಗೆ ಚಿಕ್ಕದಾದ ಮತ್ತು ಉತ್ತಮವಾದ ಉತ್ತರವನ್ನು ಕೊಟ್ಟಿದ್ದಾರೆ. ಸಾರ್ವಜನಿಕ ಗೊಬ್ಬರ ಸರಿಯಾಗಿ ವಿತರಣೆಯಾಗದೆ ಅವ್ಯವಹಾರ ಆಗಿರುವುದರ ಬಗ್ಗೆ ಈ ಹಿಂದೆ ಸಾರ್ವಜನಿಕರಿಂದ ಮಾನ್ಯ ಮಂತ್ರಿಗಳಿಗೆ ಅಥವಾ ಅವರ ಅಧಿಕಾರಿಗಳಿಗೆ ದೂರು ಬಂದಿದೆಯೆ? ಬಂದಿದ್ದರೆ ಎಷ್ಟು ದೂರುಗಳು ಬಂದಿವೆ? ಆ ದೂರುಗಳ ಬಗ್ಗೆ ಏನೇನು ಕ್ರಮ ತೆಗದುಕೊಂಡಿದ್ದೀರಿ?

ಶ್ರೀ ಎನ್. ಹುಚ್ಚಮಾಸ್ತಿಗೌಡ: ಸರ್ಕಾರಕ್ಕೆ ಗೊತ್ತಿರುವ ಹಾಗೆ ಈ ವ್ಯವಹಾರ ಎಷ್ಟರಮಟ್ಟಿಗೆ ಇದೆ ಎಂಬುದನ್ನು ಸ್ಪಷ್ಟವಾಗಿ ತಿಳಿದುಕೊಳ್ಳುವುದಕ್ಕೆ ಆಗಿಲ್ಲ. ನನಗೆ ತಿಳಿದ ಮಟ್ಟಿಗೆ ಈ ತರಹ ವ್ಯವಹಾರ ನಡೆಯಲಾರದೆಂಬ ಭರವಸೆ ಇದೆ. ಅಂಥದ್ದು ಏನಾದರೂ ಇದ್ದರೆ ಅದನ್ನು ವಿಚಾರಣೆ ಮಾಡಿ ಮುಂದಿನ ಕ್ರಮ ತೆಗೆದುಕೊಳ್ಳುವುದಾಗಿ ಭರವಸೆ ಕೊಡುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಆರ್.ಎನ್. ನಾಯಕ್: ಈ ಕರ್ನಾಟಕ ರಾಜ್ಯದಲ್ಲಿ ಈ ಸಹಕಾರ ಮಾರಾಟ ಮಹಾಮಂಡಲದಿಂದ ಗೊಬ್ಬರ ವಿತರಣೆ ಮಾಡುವುದರಲ್ಲಿ ತಪ್ಪಾಗಿದೆ ಎಂದು ತಮಗೆ ಸಾರ್ವಜನಿಕರಿಂದ ಎಷ್ಟು ದೂರುಗಳು ಇಲ್ಲಿಯವರೆಗೆ ಬಂದಿದ್ದವು? ಆ ತರಹ ಬಂದಿದ್ದರೆ ತಾವು ಆ ದೂರುಗಳ ಮೇಲೆ ಏನಾದರೂ ಕ್ರಮ ತೆಗೆದುಕೊಂಡಿದ್ದೀರೋ ಹೇಗೆ? ಅಥವಾ ನಿಮ್ಮ ಅಧಿಕಾರಿಗಳಿಗೆ ದೂರು ಏನಾದರೂ ಬಂದಿತ್ತೋ? ಬಂದಿದ್ದರೆ ಅದರ ಮೇಲೆ ಅವರು ಏನು ಕ್ರಮ ತೆಗೆದುಕೊಂಡಿದ್ದಾರೆ?

ಶ್ರೀ ಎನ್. ಹುಚ್ಚಮಾಸ್ತಿಗೌಡ: ದೂರುಗಳು ನನಗೆ ಸಾಮಾನ್ಯವಾಗಿ ಬರಬಹುದು. ಆದರೆ ಈ ಸಂದರ್ಭದಲ್ಲಿ ಅದರಲ್ಲಿ ಎಷ್ಟರಮಟ್ಟಿಗೆ ಸತ್ಯಾಂಶ ಇದೆ ಎಂಬುದು ಸ್ಪಷ್ಟವಾಗಿ ಗೊತ್ತಾಗಿಲ್ಲ. ಇದನ್ನು ವಿಚಾರಣೆ ಮಾಡಿ ಅದರಲ್ಲಿ ಸತ್ಯಾಂಶ ಇರುವ ಹಾಗೆ ಕಂಡುಬಂದರೆ ಮುಂದಿನ ಕ್ರಮವನ್ನು ಖಂಡಿತವಾಗಿ ನಾವು ತೆಗೆದುಕೊಳ್ಳುತ್ತೇವೆ. ಇಂಥ ವ್ಯವಹಾರಗಳು ಪಡೆಯದಿರುವ ಹಾಗೆ ಸರ್ವಪ್ರಯತ್ನವನ್ನೂ ನಾನು ಮಾಡುತ್ತೇನೆ.

ಶ್ರೀ ಆರ್.ಎನ್. ನಾಯಕ್: ಈಗ ತಮ್ಮ ಉತ್ತರದಿಂದ ತಮಗೆ ದೂರುಗಳು ಬಂದಿದೆಯೋ ಹೇಗೆ ಎಂಬ ಪರಿಚಯ ಇದ್ದ ಹಾಗೆ ಇಲ್ಲ. ದಯಮಾಡಿ ನೆನಪು ಮಾಡಿಕೊಳ್ಳಿ, ತಮಗೇನಾದರೂ ಗೊಬ್ಬರ ಅವ್ಯವಹಾರ ಬಗ್ಗೆ ದೂರುಗಳು ಬಂದಿದ್ದಾವೋ ಹೇಗೆ? ನಿಮಗೆ ಅಥವಾ ನಿಮ್ಮ ಅಧಿಕಾರಿಗಳಿಗೆ ದೂರುಗಳು ಬಂದಿದೆಯೋ ಹೇಗೆ? ದೂರುಗಳು ಬಂದಿದ್ದರೆ ಆ ದೂರುಗಳ ಬಗ್ಗೆ ಈ ತನಕ ಏನಾದರೂ ವಿಚಾರಣೆ ಮಾಡಿದ್ದಾರೋ ಹೇಗೆ?

ಶ್ರೀ ಎನ್. ಹುಚ್ಚಮಾಸ್ತಿಗೌಡ: ಆಗಲೇ ನಾನು ಹೇಳಿದೆ. ದೂರುಗಳು ಬಂದರೆ ಕೂಡಲೇ ಅದನ್ನು ವಿಚಾರಣೆ ಮಾಡಿ ಯಾರ ಮೇಲೆ ಕ್ರಮ ತೆಗೆದುಕೊಳ್ಳಬೇಕೋ ಆ ಏರ್ಪಾಡೆಲ್ಲಾ ಇವತ್ತಿರತಕ್ಕ ಕ್ರಮದಲ್ಲಿದೆ. ಅದಷ್ಟೇ ಅಲ್ಲದೆ, ಕೂಡಲೇ ಅವ್ಯವಹಾರ ಮಾಡತಕ್ಕವರಿಂದ ಈ ವ್ಯವಹಾರವನ್ನು ಕೈತಪ್ಪಿಸಿ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದು ಕೂಡ ಇದೆ. ಆದ್ದರಿಂದ ಮಾನ್ಯ ಸದಸ್ಯರು ಈ ವಿಷಯದಲ್ಲಿ ಅನುಮಾನ ಪಡಬೇಕಾಗಿಲ್ಲ. ಅಂಥದ್ದೇನಾದರೂ ಇದ್ದರೆ ನನಗೆ ತಿಳಿಸಿ. ಆದಷ್ಟು ಬೇಗ ಮುಂದಿನ ಕ್ರಮ ತೆಗೆದುಕೊಂಡು ಸಮಾಧಾನಕರವಾದ ಉತ್ತರ ಕೊಡುತ್ತೇನೆ.

ಅಧ್ಯಕ್ಷರು: ಮಾನ್ಯ ಲಕ್ಕಣ್ಣನವರೇ, ತಮ್ಮ ಪ್ರಶ್ನೆಯನ್ನು ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಗೆ ವರ್ಗಾಯಿಸಿದೆ. ಅದನ್ನು ಮುಂದೆ ತೆಗೆದುಕೊಳ್ಳುತ್ತೇನೆ.

ಕುಡಿಯುವ ನೀರು ಹಾಗೂ ಗ್ರಾಮ ನೈರ್ಮಲ್ಯ ಯೋಜನೆ

554 - ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಶ್ವಬ್ಯಾಂಕ್ನ ನೆರವಿನಿಂದ ರಾಜ್ಯದಲ್ಲಿ ಕುಡಿಯುವ ನೀರಿನ ಹಾಗೂ ಗ್ರಾಮ ನೈರ್ಮಲ್ಯದ ಬಗ್ಗೆ ಯೋಜನೆಯನ್ನು ಏನಾದರೂ ಕೈಗೊಳ್ಳಲಾಗಿದೆಯೇ?

ಆ) ಹಾಗಿದ್ದಲ್ಲಿ, ಯಾವ ಜಿಲ್ಲೆಗಳಲ್ಲಿ ಈ ಯೋಜನೆ ಅನುಷ್ಠಾನಕ್ಕೆ ಬರುತ್ತದೆ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು):

ಅ) ಹೌದು

ಆ)

1) ಬೆಂಗಳೂರು (ಗ್ರಾಮಾಂತರ)
2) ಶಿವಮೊಗ್ಗ
3) ಮೈಸೂರು
4) ಮಂಡ್ಯ
5) ದಕ್ಷಿಣ ಕನ್ನಡ
6) ಬೆಳಗಾಂ
7) ಗುಲ್ಬರ್ಗಾ
8) ಬೀದರ್
9) ರಾಯಚೂರು
10) ಬಳ್ಳಾರಿ
11) ತುಮಕೂರು, ಹಾಗೂ
12) ಹಾಸನ.

ಶ್ರೀ ಎಂ. ತಮ್ಮಣ್ಣ (ಶ್ರೀ ಎಂ.ಎಸ್. ಆತ್ಮಾನಂದ ಅವರ ಪರವಾಗಿ): ಸನ್ಮಾನ್ಯ ಸಭಾಧ್ಯಕ್ಷರೆ, ವಿಶ್ವಬ್ಯಾಂಕಿನ ನೆರವಿನಿಂದ ರಾಜ್ಯದಲ್ಲಿ ಕುಡಿಯುವ ನೀರಿನ ಯೋಜನೆ ತೆಗೆದುಕೊಂಡಿದ್ದು ಅದರಲ್ಲಿ ಮಂಡ್ಯ ಜಿಲ್ಲೆಯೂ ಒಂದಾಗಿದೆ. ಈ ಮಂಡ್ಯ ಜಿಲ್ಲೆಯಲ್ಲಿ ಎಷ್ಟು ಗ್ರಾಮಗಳನ್ನು ಇದಕ್ಕೆ ಅಳವಡಿಸಿದ್ದಾರೆ? ಇಲ್ಲಿಯವರೆಗೆ ಎಷ್ಟು ಕಾರ್ಯಕ್ರಮಗಳು ಪ್ರಾರಂಭವಾಗಿವೆ ಎಂಬುದನ್ನು ಕೇಳಲು ಇಚ್ಛಿಸುತ್ತೇನೆ.

ಅಧ್ಯಕ್ಷರು: ಪ್ರಶ್ನೆಯನ್ನು ಇನ್ನೊಮ್ಮೆ ಕೇಳಿ. ಅವರಿಗೆ ಸರಿಯಾಗಿ ಕೇಳಲಿಲ್ಲ.

ಶ್ರೀ ಎಂ. ತಮ್ಮಣ್ಣ: ಸನ್ಮಾನ್ಯ ಸಭಾಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಒಟ್ಟು 12 ಜಿಲ್ಲೆಗಳು ವಿಶ್ವಬ್ಯಾಂಕಿನ ಯೋಜನೆಗೆ ಒಳಪಟ್ಟಿವೆ. ಅದರಲ್ಲಿ ನಮ್ಮ ಮಂಡ್ಯ ಜಿಲ್ಲೆಯೂ ಒಂದು. ಮಂಡ್ಯ ಜಿಲ್ಲೆಯಲ್ಲಿ ಎಷ್ಟು ಗ್ರಾಮಗಳನ್ನು ಈ ಯೋಜನೆಗೆ ಅಳವಡಿಸಿದ್ದಾರೆ? ಇಲ್ಲಿಯವರೆಗೆ ಎಷ್ಟು ಕಾರ್ಯಕ್ರಮಗಳನ್ನು ಪ್ರಾರಂಭಿಸಿದ್ದೀರಿ?

ಶ್ರೀ ಎಂ.ವೈ. ಘೋರ್ಪಡೆ: ಜಿಲ್ಲಾವಾರು ಮಾಹಿತಿ ನನ್ನ ಕಡೆ ಇಲ್ಲ. ವರ್ಲ್ಡ್ ಬ್ಯಾಂಕ್ ಯೋಜನೆಯಡಿಯಲ್ಲಿ ಎಷ್ಟು ಸೇರಿಸಿದ್ದೇವೆ ಆ ಮಾಹಿತಿ ಕೊಟ್ಟಿದ್ದೇನೆ. ಆದರೆ ಯಾವ ಯಾವ ಹಳ್ಳಿಗಳು ಅನ್ವಯಿಸುತ್ತವೆ ಎಂಬುದು ತಮಗೇ ಗೊತ್ತಿರಬೇಕು. ಈ ತಕ್ಷಣ ಆ ಮಾಹಿತಿ ನನ್ನ ಕಡೆ ಇಲ್ಲ. ಬೇಕಾದರೆ ಕಳುಹಿಸಿಕೊಡುತ್ತೇನೆ. ಯಾವ ಯಾವ ಹಳ್ಳಿ ಸೇರಿಧೆ, ಯಾವ ಯಾವ ಕೆಲಸ ಪ್ರಾರಂಭವಾಗುತ್ತದೆ, ಎಷ್ಟು ಖರ್ಚಾಗುತ್ತದೆ ಈ ವಿವರಗಳು ನಮ್ಮ ಕಡೆ ಇದೆ. ಸದ್ಯಕ್ಕೆ ಇಲ್ಲಿ ನಮ್ಮ ಕಡೆ ಇಲ್ಲ. ತಮಗೆ ನಾನು ಕಳುಹಿಸಿಕೊಡುತ್ತೇನೆ.

ಶ್ರೀ ಎಂ. ತಮ್ಮಣ್ಣ: ಮಂಡ್ಯ ಜಿಲ್ಲೆಯಲ್ಲಿ ಎಷ್ಟು ಹಳ್ಳಿಗಳನ್ನು ವಿಶ್ವ ಬ್ಯಾಂಕಿನ ಯೋಜನೆಗೆ ಅಳವಡಿಸಿದ್ದಾರೆ? ಈಗಾಗಲೇ ಎಷ್ಟು ಕಾರ್ಯಕ್ರಮ ಪ್ರಾರಂಭಿಸಿದ್ದೀರಿ?

ಶ್ರೀ ಎಂ.ವೈ. ಘೋರ್ಪಡೆ: ಡೀಟೈಲ್ಸ್ ಇದ್ದರೆ ಕಳುಹಿಸಿಕೊಡುತ್ತೇನೆ. ಯಾವ ಯಾವ ಹಳ್ಳಿ ಸೇರಿವೆ, ಎಷ್ಟೆಷ್ಟು ಖರ್ಚಾಗುತ್ತದೆ ಎಂಬ ವಿವರಗಳನ್ನು ಕಳುಹಿಸಿಕೊಡುತ್ತೇನೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಬೆಲ್ಲದ ಬಾಗೇವಾಡಿ ಗ್ರಾಮದಲ್ಲಿ ಕುಡಿಯುವ ನೀರಿನ ಯೋಜನೆ

477 - ಶ್ರೀ ಉಮೇಶ್ ವಿ. ಕತ್ತಿ (ಹುಕ್ಕೇರಿ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಆ) ಹುಕ್ಕೇರಿ ತಾಲ್ಲೂಕಿನ ಬೆಲ್ಲದ ಬಾಗೇವಾಡಿ ಗ್ರಾಮಕ್ಕೆ ಕುಡಿಯುವ ನೀರಿನ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ತೊಂದರೆ ಹೋಗಲಾಡಿಸಲು ಘಟಪ್ರಭಾ ನದಿಯಿಂದ ಕೊಳವೆ ಮೂಲಕ ನೀರು ಒದಗಿಸುವ ಯೋಜನೆ ಸರ್ಕಾರದಲ್ಲಿ ಇದೆಯೇ?

ಇ) ಇದ್ದಲ್ಲಿ, ಅದನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು):

ಅ) ಹೌದು

ಆ) ಇಲ್ಲ.

ಆದರೆ, ಈ ಗ್ರಾಮವನ್ನು ವಿಶ್ವಬ್ಯಾಂಕ್ ನೆರವಿನ ಸಮಗ್ರ ಗ್ರಾಮೀಣ ನೀರು ಸರಬರಾಜು ಮತ್ತು ಪರಿಸರ ನೈರ್ಮಲ್ಯ ಯೋಜನೆಯಲ್ಲಿ ಸೇರಿಸಲಾಗಿದೆ.

ಇ) 1996-97

ಪಂಚಾಯಿತಿ ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಚುನಾವಣೆಗಳನ್ನು ಮುಂದೂಡಿರುವುದು

628 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪಂಚಾಯತಿ ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಚುನಾವಣೆಗಳನ್ನು ನಿಗದಿಪಡಿಸಿ ನಂತರ ಕೆಲವು ಜಿಲ್ಲೆಗಳಲ್ಲಿ ಅವುಗಳನ್ನು ಮುಂದೂಡಲಾದ ಸಂಗತಿ ನಿಜವೇ?

ಆ) ಹಾಕಿದ್ದಲ್ಲಿ ಅವುಗಳನ್ನು ಮುಂದೂಡಲು ಕಾರಣಗಳೇನು?

ಇ) ಜಿಲ್ಲಾಧಿಕಾರಿಗಳು ಆ ಪಂಚಾಯತಿ ಚುನಾವಣೆಗಳನ್ನು ಮುಂದೂಡಲಾದ ಕ್ಷೇತ್ರಗಳಲ್ಲಿ ಯಾವ ಯಾವ ತಪ್ಪನ್ನು ಮಾಡಿದ್ದರು?

ಈ) ಉಳಿದ ಜಿಲ್ಲೆಗಳಲ್ಲಿಯೂ ಸಹ ಇದೇ ಪ್ರಕಾರವಾಗಿ ಜಿಲ್ಲಾಧಿಕಾರಿಗಳು ಅಧ್ಯಕ್ಷ ಹಾಗೂ ಉಪಾಧ್ಯಕ್ಷರನ್ನು ಆರಿಸಬೇಕಾದ ನಿಯಮಗಳನ್ನು ಅನುಸರಿಸಿದ್ದರೂ ಕೂಡ ಆ ಕ್ಷೇತ್ರಗಳಲ್ಲಿ ಚುನಾವಣೆಗಳನ್ನು ಏಕೆ ಮುಂದೂಡಲಾಗಿರುವುದು?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) ಹೌದು.

ಆ) ಗ್ರಾಮ ಪಂಚಾಯತಿಗಳ ಅಧ್ಯಕ್ಷ ಮತ್ತು ಉಪಾಧ್ಯಕ್ಷರುಗಳ ಸ್ಥಾನಗಳ ಮೀಸಲಾತಿಯನ್ನು ಸರ್ಕಾರವು ನೀಡಿದ ಮಾರ್ಗದರ್ಶನದ ಆಜ್ಞೆಯ ಸಂಖ್ಯೆ : ಗ್ರಾಅಪ:755 ಜಿಪಸ 93 ದಿ : 2-2-94ನ್ನು ಅನುಸರಿಸದೇ ಕೆಲವು ಜಿಲ್ಲಾಧಿಕಾರಿಗಳು ಹುದ್ದೆಗಳನ್ನು ಮೀಸಲಿಡಲು ಆಜ್ಞೆಗಳನ್ನು ನೀಡಿದ್ದಾರೆ ಎಂದು ಸರ್ಕಾರಕ್ಕೆ ಮನವಿಗಳು ಬಂದಿರುತ್ತದೆ. ಅಂತಹ ಜಿಲ್ಲಾಧಿಕಾರಿಗಳನ್ನು ಗ್ರಾಮ ಪಂಚಾಯತಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರುಗಳ ಸ್ಥಾನಗಳ ಮೀಸಲಾತಿಯ ಬಗ್ಗೆ ಸರ್ಕಾರವು ನೀಡಿದ ಮಾರ್ಗದರ್ಶನದ (ಗೈಡೈನ್ಸ್) ಅನ್ವಯ ಅವರ ಆಜ್ಞೆಗಳನ್ನು ಪರಿಶೀಲಿಸಿ ನಂತರ ಚುನಾವಣೆಗಳನ್ನು ನಡೆಸುವಂತೆ ಸೂಚಿಸಲಾಗಿತ್ತು.

ಡಂಕಲ್ ಪ್ರಸ್ತಾವ ಹಾಗೂ ಗ್ಯಾಟ್ ಒಪ್ಪಂದ

558 - ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಡಂಕಲ್ ಪ್ರಸ್ತಾವನೆ ಹಾಗೂ ಗ್ಯಾಟ್ ಒಪ್ಪಂದದ ಮುಖ್ಯ ಅಂಶಗಳೇನು?
ಆ) ಈ ಒಪ್ಪಂದವನ್ನು ಭಾರತ ಸರ್ಕಾರವು ಯಾವಾಗ ಮಾಡಿಕೊಂಡಿದೆ?
ಇ) ಡಂಕಲ್ ಪ್ರಸ್ತಾವನೆ ಹಾಗೂ ಗ್ಯಾಟ್ ಒಪ್ಪಂದದಿಂದ ರಾಜ್ಯದ ರೈತರಿಗೆ ಯಾವ ಯಾವ ಅನುಕೂಲವಾಗುತ್ತವೆ?
ಈ) ಒಂದು ವೇಳೆ ಈ ಒಪ್ಪಂದದಿಂದ ಅನುಕೂಲಕ್ಕಿಂತ ಅನಾನುಕೂಲವೇ ಹೆಚ್ಚಾದಲ್ಲಿ ರಾಜ್ಯದ ರೈತರ ಹಿತವನ್ನು ಗಮನದಲ್ಲಿಟ್ಟು ರಾಜ್ಯ ಸರ್ಕಾರವು ಕೇಂದ್ರಕ್ಕೆ ತನ್ನ ಅಸಮ್ಮತಿಯನ್ನು ಸೂಚಿಸುವುದೇ?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು):

ಅ) ಗ್ಯಾಟ್ ಅಂದರೆ 'ದಿ ಜನರಲ್ ಅಗ್ರಿಮೆಂಟ್ ಆನ್ ತಾರಿಫ್ಸ್ ಅಂಡ್ ಟ್ರೇಡ್' ಎಂಬುದು 107 ದೇಶಗಳನ್ನು ಒಳಪಡಿಸಿರುವ ಬಹುಪಕ್ಷೀಯ ಒಪ್ಪಂದ. ಇದರಲ್ಲಿ ವಿಶ್ವದ ಒಟ್ಟು ವಾಣಿಜ್ಯ ವಹಿವಾಟಿನಲ್ಲಿ ಶೇ :90ರಷ್ಟು ಹೊಂದಿರುತ್ತದೆ. ಇದರಲ್ಲಿ ಭಾರತವು ಒಂದು ಸದಸ್ಯ ರಾಷ್ಟ್ರವಾಗಿರುತ್ತದೆ. ಈ ಒಪ್ಪಂದವು 1948ರಲ್ಲಿ ಸ್ಥಾಪಿತವಾಗಿದೆ. ಇದರ ಮುಖ್ಯ ಉದ್ದೇಶಗಳು ಈಗಿವೆ.

1. ಅಂತರರಾಷ್ಟ್ರೀಯ ವಾಣಿಜ್ಯವನ್ನು ವ್ಯವಸ್ಥಿತ ರೀತಿಯಲ್ಲಿ ನಡೆಸಲು ಬಹು ಪಕ್ಷಿಯವಾಗಿ ಸಮ್ಮತಿಸಿರುವ ನಿಯಮಗಳನ್ನು ವಿಧಿಸುತ್ತದೆ.
2. ವಾಣಿಜ್ಯ ವ್ಯವಹಾರವನ್ನು ನಡೆಸಲು ಇದರಿಂದ ವಾಣಿಜ್ಯ ಸನ್ನಿವೇಶವನ್ನು ಉದಾರಗೊಳಿಸಲು ಮತ್ತು ಇದನ್ನು ಹೆಚ್ಚು ಮುನ್ ಸೂಚಿಸಲು ಗ್ಯಾಟ್ ಒಂದು ವೇದಿಕೆಯಾಗಿ ಕಾರ್ಯಗತಗೊಳಿಸುತ್ತದೆ.
3. ಇದು ಇತರ ಸದಸ್ಯ ರಾಷ್ಟ್ರಗಳೊಡನೆ ಉದ್ಭವಿಸಬಹುದಾದ ವಾಣಿಜ್ಯ ವ್ಯಾಜ್ಯಗಳನ್ನು ತೀರ್ಮಾನಿಸಲು ಒಂದು ಅಂತರ ರಾಷ್ಟ್ರೀಯ ನ್ಯಾಯಾಲಯವಾಗಿ ಕಾರ್ಯ ನಿರ್ವಹಿಸುತ್ತದೆ.

ಬಹು ವಾಣಿಜ್ಯ ಒಪ್ಪಂದಗಳು ಉರುಗುವೆಯಲ್ಲಿ ಪ್ರಾರಂಭವಾಗಿದ್ದು ಕೆಲವು ತೀಕ್ಷ್ಣ ವ್ಯತ್ಯಾಸಗಳ ಕಾರಣ ಯಾವ ನಿರ್ಧಾರವು ತೆಗೆದುಕೊಳ್ಳಲಾಗಿಲ್ಲ.

ಆದ್ದರಿಂದ ಡಿಸೆಂಬರ್ 91ರಲ್ಲಿ ಡೈರೆಕ್ಟರ್ ಜನರಲ್ ಅವರು ಕೆಳಕಂಡ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಒಂದು ಪ್ರಸ್ತಾವನೆಯನ್ನು ತಯಾರಿಸಿರುತ್ತಾರೆ.

1. ಸದಸ್ಯರುಗಳು ಮಾಡಿಕೊಂಡ ಒಪ್ಪಂದಗಳು,
2. ವ್ಯತ್ಯಾಸವಿದ್ದ ಕ್ಷೇತ್ರಗಳು.
3. ಎಲ್ಲಾ ರಾಷ್ಟ್ರಗಳ ಹಿತವನ್ನು ಹೊಂದಿಸುವಂತ ಒಂದು ಸಮಗ್ರ ಪ್ರಸ್ತಾವನೆಯನ್ನು ಸೂಚಿಸಿರುತ್ತಾರೆ.

ಇದನ್ನು ಡಂಕಲ್ ಪ್ರಸ್ತಾವನೆಯೆಂದು ಕರೆಯಲಾಗುತ್ತಿದೆ.

ಆ) ಭಾರತ ಸರ್ಕಾರವು ಜನವರಿ 1948 ರಿಂದ ಗ್ಯಾಟ್ನ ಒಂದು ಸದಸ್ಯ ರಾಷ್ಟ್ರವಾಗಿರುತ್ತದೆ. ಡಂಕಲ್ ಪ್ರಸ್ತಾವನೆಯನ್ನು ಇನ್ನು ಭಾರತ ಸರ್ಕಾರವು ಸಹಿ ಮಾಡಬೇಕಾಗಿರುತ್ತದೆ.

1 ಈ ನೀತಿಯು ಅಭಿವೃದ್ಧಿಗೊಳ್ಳುತ್ತಿರುವ ರಾಷ್ಟ್ರಗಳು ಒಂದು ಸ್ಥಿರ ಮತ್ತು ಮುನ್ಸೂಚಿಸುವ ವಾಣಿಜ್ಯಕ್ಕೆ ಎಡೆ ಮಾಡಿಕೊಡುತ್ತದೆ. ಮತ್ತು ವಾಣಿಜ್ಯವನ್ನು ಒಪ್ಪಿಕೊಂಡಿರುವ ನಿಯಮಗಳ ಪ್ರಕಾರ ಹಾಗೂ ಯಾವ ತಾರತಮ್ಯವಿಲ್ಲದೆ ನಡೆಸಿಕೊಂಡು ಹೋಗುವಂತೆ ಸಾಧ್ಯವಾಗಲು ಅನುವು ಮಾಡಿಕೊಡುತ್ತದೆ.
2. ಕೃಷಿ ರಫ್ತಿಗೆ ಇದರಿಂದ ಹೆಚ್ಚಿನ ಉತ್ತೇಜನ ಸಿಗುವ ನಿರೀಕ್ಷೆಯಿದೆ.

ಈ) ಡಂಕಲ್ ಪ್ರಸ್ತಾವನೆಯಲ್ಲಿ ಭಾರತ ಕೃಷಿ ನೀತಿ ಮತ್ತು ಕಾರ್ಯಕ್ರಮಗಳನ್ನು ಜಾರಿಗೊಳಿಸುವ ಸ್ವತಂತ್ರ ಹಾಗೂ ಹೊಂದಿಸಿಕೊಳ್ಳಲು ಧಕ್ಕೆಯಾಗುವಂತ ಯಾವುದೇ ನಿಬಂಧನೆಗಳು ಇರುವುದಿಲ್ಲ.

ಎಲ್.ಓ.ಸಿ. ಹಣ ಬಿಡುಗಡೆ

552 - ಶ್ರೀ ಬಾಬುರಾವ್ ಚವಾಣ್ (ಶಹಬಾದ್) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಜಿಲ್ಲಾ ಪರಿಷತ್ತಿನಲ್ಲಿ ಬರುತ್ತಿರುವ ಎಲ್.ಓ.ಸಿ. ಹಣ (ಎಂ.ಎನ್.ಪಿ) ಅಥವಾ 20 ಜೆ.ಆರ್.ವೈ ಹಾಗೂ ಇನ್ನಿತರ ಹಣವು ಮತ ಕ್ಷೇತ್ರವಾರು ಬಿಡುಗಡೆ ಮಾಡಲಾಗುವುದೇ ಅಥವಾ ತಾಲ್ಲೂಕುವಾರು ಬಿಡುಗಡೆ ಮಾಡಲಾಗುವುದೇ ?

ಆ) ಕೆಲವು ತಾಲ್ಲೂಕುಗಳಲ್ಲಿ ನಾಲ್ಕು ಶಾಸಕರು ಇರುವುದರಿಂದ ಒಬ್ಬ ಶಾಸಕರಿಗೆ ಅಧಿಕಾರಿಗಳು ಮಲತಾಯಿ ಧೋರಣೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಸಮನಾಗಿ ಎಲ್.ಓ.ಸಿ. ಹಂಚಲು ಸರ್ಕಾರದ ನಿಯಮಗಳೇನು ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಜಿಲ್ಲಾ ಪಂಚಾಯತ್ನಿಂದ ಎಂ.ಎನ್.ಪಿ ಮತ್ತು ಶೇ. 20ರಷ್ಟು ಜ.ರೋ.ಯೇ. ಅಡಿಯಲ್ಲಿ ಸ್ವೀಕೃತಿಯಾಗವ ಅನುದಾನದ ಹಣವನ್ನು ಶೀರ್ಷಿಕೆವಾರು ಜಿಲ್ಲಾ ಮಟ್ಟದ ಅನುಷ್ಠಾನಾಧಿಕಾರಿಗಳಿಗೆ ಈ ಕಾರ್ಯಕ್ರಮಗಳಿಗಾಗಿ ಒಪ್ಪಿಗೆಯಾಗಿರುವ ಕ್ರಿಯಾ ಯೋಜನೆಯ ಪ್ರಕಾರ ಅವಶ್ಯಕತೆ ಮತ್ತು ಆದ್ಯತೆ ಮೇರೆಗೆ ಬಿಡುಗಡೆ ಮಾಡಲಾಗುವುದು. ತಾಲ್ಲೂಕುವಾರು ಅಥವಾ ಮತಕ್ಷೇತ್ರವಾರು ಬಿಡುಗಡೆ ಮಾಡುವುದಿಲ್ಲ.

ಆ) ಇಲ್ಲ

ಇ) ಉದ್ಭವಿಸುವುದಿಲ್ಲ.

ಬೀದರ್ ಸಾಲಗಳ ಜಿಲ್ಲೆಯಲ್ಲಿ ಮೇಲಿನ ಸುಸ್ತಿ ಬಡ್ಡಿ ಮನ್ನಾ

632 - ಶ್ರೀ ಬಸವರಾಜ ಪಾಟೀಲ್ ಅಟ್ಟೂರು (ಬಸವಕಲ್ಯಾಣ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೀದರ್ ಜಿಲ್ಲೆಯಲ್ಲಿ ರೈತರು ತೆಗೆದುಕೊಂಡಿರುವ ಸಹಕಾರ ಬ್ಯಾಂಕುಗಳಲ್ಲಿನ ಸಾಲದ ಸುಸ್ತಿ ಬಡ್ಡಿಯನ್ನು ಸರ್ಕಾರ ಮನ್ನಾ ಮಾಡಿದೆಯೇ ?

ಆ) ಹಾಗಿದ್ದಲ್ಲಿ ಬೀದರ್ ಜಿಲ್ಲೆಯಲ್ಲಿ ಇತ್ತೀಚೆಗೆ ಭೂಕಂಪ ಸಂಭವಿಸಿದ್ದರಿಂದ ರೈತರಿಗೆ ಅಪಾರ ಹಾನಿಯುಂಟಾಗಿರುವುದರಿಂದ ಬೀದರ್ ಜಿಲ್ಲೆಯ ಎಲ್ಲಾ ರೈತರ ಸಾಲದ ಬಡ್ಡಿಯನ್ನು ಮನ್ನಾ ಮಾಡಲು ಸರ್ಕಾರ ಆಲೋಚಿಸುತ್ತಿದೆಯೇ ?

ಇ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಯಾವಾಗ ನಿರ್ಧಾರ ಕೈಗೊಳ್ಳುವುದು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು) :

ಅ)1-7-1993 ರಿಂದ 31-3-1994 ರ ಒಳಗೆ ರಾಜ್ಯದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಮತ್ತು ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳಿಗೆ ಬಡ್ಡಿಯೊಂದಿಗೆ ಪೂರ್ತಿಯಾಗಿ ಅಸಲನ್ನು ಮರುಪಾವತಿ ಮಾಡಿದ ರೈತರ ಸಾಲದ ಮೇಲಿನ ಸುಸ್ತಿ ಬಡ್ಡಿಯನ್ನು ಸರ್ಕಾರ ಮನ್ನಾ ಮಾಡಿದೆ.

ಆ) ಇಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ರಾಜ್ಯದ ಜಿಲ್ಲಾ ಪರಿಷತ್ತುಗಳಿಗೆ ಮಂಜೂರಾದ ಹಣದ ಮೊತ್ತ

602 - ಶ್ರೀಮತಿ ಸುಮಾ ವಸಂತ (ವಿರಾಜಪೇಟೆ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 1993-94ನೇ ಸಾಲಿನಲ್ಲಿ ಫೆಬ್ರವರಿ 28ರವರೆಗೆ ರಾಜ್ಯದ ಜಿಲ್ಲಾ ಪರಿಷತ್ತುಗಳಿಗೆ ಮಂಜೂರಾದ ಹಣ ಎಷ್ಟು (ಜಿಲ್ಲಾವಾರು ವಿವರ ಕೊಡಿ)

ಆ) ಆ ಮಂಜೂರಾದ ಹಣದಲ್ಲಿ ಫೆಬ್ರವರಿ ಅಂತ್ಯದವರೆಗೆ ಎಷ್ಟು ಹಣ ಬಿಡುಗಡೆಯಾಗಿದೆ ?

ಇ) ಕೊಡಗು ಜಿಲ್ಲೆಯ 3ತಾಲ್ಲೂಕುಗಳಿಗೆ ಮಂಜೂರಾದ ಮತ್ತು ಬಿಡುಗಡೆಯಾಗಿರುವ ಹಣವೆಷ್ಟು ?

ಈ) ಉಳಿದ ಹಣವನ್ನು ಮಾರ್ಚ್ 94ರ ಒಳಗಡೆ ಮಾಡಲಾಗುವುದೇ ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣ ಅಭಿವೃದ್ಧಿ ಮತ್ತು ಪಂ. ರಾಜ್ ಸಚಿವರು) :

ಅ) 1993-94ನೇ ಸಾಲಿನಲ್ಲಿ ರಾಜ್ಯದ ಜಿಲ್ಲಾ ಪಂಚಾಯತಿಗಳಿಗೆ ಮಂಜೂರಾದ ಹಣಗಳ ವಿವರ ಈ ರೀತಿ ಇದೆ.

	(ಕೋಟಿ ರೂ.ಗಳಲ್ಲಿ)
ಯೋಜನೆ	771.31
ಯೋಜನೇತರ	1085.98
ಮೊತ್ತ	1857.29

ಜಿಲ್ಲಾವಾರು ವಿವರಗಳನ್ನು ಲಗತ್ತಿಸಿರುವ ಅನುಬಂಧ-1ಮತ್ತು 2ರಲ್ಲಿ ತೋರಿಸಲಾಗಿದೆ.

ಆ) ಮಂಜೂರಾದ ಹಣದಲ್ಲಿ 1994ರ ಫೆಬ್ರವರಿ ಅಂತ್ಯದವರೆಗೆ ಬಿಡುಗಡೆಯಾದ ಅನುದಾನ ಈ ರೀತಿ ಇದೆ.

	(ಕೋಟಿ ರೂ.ಗಳಲ್ಲಿ)
ಯೋಜನೆ	556.50
ಯೋಜನೇತರ	679. 71
ಮೊತ್ತ	1236.21

ವಿವರಗಳನ್ನು ಲಗತ್ತಿಸಿರುವ ಅನುಬಂಧ-1 ಮತ್ತು 2 ರಲ್ಲಿ ತೋರಿಸಲಾಗಿದೆ.

ಇ) ಸರ್ಕಾರದಿಂದ ತಾಲ್ಲೂಕುವಾರು ಮಂಜೂರಾತಿ ಮಾಡುವ ಕ್ರಮವಿಲ್ಲ, ಜಿಲ್ಲಾ ಪರಿಷತ್ತಿಂದ 3 ತಾಲ್ಲೂಕುಗಳಿಗೆ ಬಿಡುಗಡೆ ಮಾಡಿದ ವಿವರ ಹೀಗಿವೆ.

	(ಕೋಟಿ ರೂ.ಗಳಲ್ಲಿ)
ಮಡಕೇರಿ	1.39
ಸೋಮವಾರಪೇಟೆ	1.69
ವಿರಾಜಪೇಟೆ	1.24
ಮೊತ್ತ	4.32

ಈ) ಉಳಿದ ಹಣವನ್ನು ವೆಚ್ಚ ಪ್ರಗತಿಯ ಆಧಾರದ ಮೇಲೆ ಬಿಡುಗಡೆ ಮಾಡಲಾಗುತ್ತಿದೆ.

ಅನುಬಂಧ-1

1993-94ರ ಸಾಲಿನಲ್ಲಿ ಜಿಲ್ಲಾ ಪಂಚಾಯತ್ಗಳಿಗೆ ನಿಗಧಿಪಡಿಸಿದ ಅನುದಾನ ಹಾಗೂ ಫೆಬ್ರವರಿ 1994ರ ಅಂತ್ಯದವರೆಗೆ ಬಿಡುಗಡೆ ಮಾಡಿದ ಅನುದಾನಗಳ ವಿವರವಾದ ತಖ್ತೆ (ಯೋಜನೆ)

ರೂ. ಲಕ್ಷಗಳಲ್ಲಿ

ಕ್ರಮ ಸಂಖ್ಯೆ	ಜಿಲ್ಲಾ ಪಂಚಾಯತ್ ಹೆಸರು	1993-94ನೇ ಸಾಲಿನ ನಿಗಧಿತ ಅನುದಾನ	ಫೆಬ್ರವರಿ 94ರ ಅಂತ್ಯದವರೆಗೆ ಬಿಡುಗಡೆ ವಿವರ
1)	ಬೆಂಗಳೂರು(ಗ್ರಾಮಾಂತರ)	3460.77	424.545
2)	ಚಿತ್ರದುರ್ಗ	4549.96	3243.18
3)	ಕೋಲಾರ	4855.19	3745.32
4)	ಶಿವಮೊಗ್ಗ	3856.17	2593.56
5)	ತುಮಕೂರು	4902.65	3578.99
6)	ಮೈಸೂರು	5499.07	3823.70
7)	ಚಿಕ್ಕಮಗಳೂರು	2803.69	2094.21
8)	ದಕ್ಷಿಣ ಕನ್ನಡ	4253.02	3045.84
9)	ಹಾಸನ	3267.96	2459.82
10)	ಬೆಳಗಾವಿ	5477.73	4025.30
11)	ಮಂಡ್ಯ	3068.75	2110.78
12)	ಬಿಜಾಪುರ	5290.41	3640.36
13)	ಕೊಡಗು	1521.38	1215.85
14)	ಧಾರವಾಡ	5365.64	3794.13
15)	ಉತ್ತರ ಕನ್ನಡ	2722.03	2236.17
16)	ಗುಲ್ಬರ್ಗಾ	5295.23	3716.94
17)	ಬಳ್ಳಾರಿ	3691.30	2897.78
18)	ಬೀದರ್	2765.38	1997.22
19)	ರಾಯಚೂರು	4484.46	3005.92
	ರೂ.	771 30.79	55649.62

ರೂ. 771.30 ಕೋಟಿಗಳು. 556.49 ಕೋಟಿಗಳು

ಅನುಬಂಧ-2

1993-94ರ ಸಾಲಿನಲ್ಲಿ ಜಿಲ್ಲಾ ಪಂಚಾಯತ್ಗಳಿಗೆ ನಿಗಧಿಪಡಿಸಿದ ಅನುದಾನ ಹಾಗೂ ಫೆಬ್ರವರಿ 1994ರ ಅಂತ್ಯದವರೆಗೆ ಬಿಡುಗಡೆ ಮಾಡಿದ ಅನುದಾನಗಳ ಜಿಲ್ಲಾವಾರು ವಿವರ

ಯೋಜನೇತರ (ರೂ. ಲಕ್ಷಗಳಲ್ಲಿ)

ಕ್ರ. ಸಂ.	ಜಿ.ಪ. ಹೆಸರು	1993-94ನೇ ಸಾಲಿನ ನಿಗಧಿ ಪಡಿಸಿದ ಅನುದಾನ	ಫೆಬ್ರವರಿ 94ರ ಅಂತ್ಯದಲ್ಲಿ ಬಿಡುಗಡೆಯಾದ ಮೊತ್ತ
1)	ಬೆಂಗಳೂರು (ಗ್ರಾಮಾಂತರ)	4735.38	4151.43
2)	ಚಿತ್ರದುರ್ಗ	6470.24	5758.32
3)	ಕೋಲಾರ	6337.25	5604.33
4)	ಶಿವಮೊಗ್ಗ	5406.19	5017.67
5)	ತುಮಕೂರು	7457.23	6387.92
6)	ಮೈಸೂರು	7314.43	6680.60
7)	ಚಿಕ್ಕಮಗಳೂರು	3577.60	3151.28
8)	ದಕ್ಷಿಣ ಕನ್ನಡ	7256.82	6460.98
9)	ಹಾಸನ	4802.58	4214.62
10)	ಕೊಡಗು	1878.04	1654.70
11)	ಮಂಡ್ಯ	4819.18	4197.75
12)	ಬೆಳಗಾವಿ	8788.12	7870.58
13)	ಬಿಜಾಪುರ	7615.31	6780.25
14)	ಧಾರವಾಡ	9010.59	7940.93
15)	ಉತ್ತರ ಕನ್ನಡ	4663.24	4283.21
16)	ಗುಲ್ಬರ್ಗಾ	6292.71	5710.35
17)	ಬಳ್ಳಾರಿ	4203.17	3710.30
18)	ಬೀದರ್	3476.00	3167.61
19)	ರಾಯಚೂರು	4493.82	3964.48
		108597.90	**167971.36**

ರೂ. 1085.97 ಕೋಟಿಗಳು ರೂ. 679.71 ಕೋಟಿಗಳು

ಗ್ರಾಮ ಪಂಚಾಯಿತಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆಯಲ್ಲಿ ಸ್ಥಾನ ಮೀಸಲಾತಿ

616 - ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇತ್ತೀಚೆಗೆ ನಡೆದ ಗ್ರಾಮ ಪಂಚಾಯತಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರುಗಳ ಚುನಾವಣೆಗಳಲ್ಲಿ ಆ ಸ್ಥಾನಗಳ ಮೀಸಲಾತಿಗಳ ಬಗ್ಗೆ ಸರ್ಕಾರಕ್ಕೆ ದೂರುಗಳು ಬಂದಿವೆಯೇ?

ಆ) ಬಂದಿದ್ದಲ್ಲಿ, ಸರ್ಕಾರ ಆ ಬಗ್ಗೆ ತೆಗೆದುಕೊಂಡಿರುವ ಕ್ರಮಗಳೇನು?

ಇ) ಕೆಲವು ಹಿತಾಸಕ್ತಿಗಳ ಅನುಕೂಲಕ್ಕಾಗಿ ಆ ಚುನಾವಣೆಗಳನ್ನು ಮುಂದೆ ಹಾಕಿರುವುದಕ್ಕೆ ಸರ್ಕಾರ ಸೂಚನೆ ಕೊಟ್ಟಿದೆಯೇ?

ಈ) ಕೊಟ್ಟಿದ್ದಲ್ಲಿ ಅವುಗಳಿಗೆ ಕಾರಣಗಳೇನು?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಹೌದು.

ಆ) ಅಂತಹ ತಾಲ್ಲೂಕುಗಳಲ್ಲಿ ಗ್ರಾಮ ಪಂಚಾಯತ್ಗಳ ಅಧ್ಯಕ್ಷ ಮತ್ತು ಉಪಾಧ್ಯಕ್ಷರುಗಳ ಮೀಸಲಾತಿಯನ್ನು ಸರ್ಕಾರದ ನಿಯಮಕ್ಕೆ (ಗೈಡ್ಲೈನ್ಸ್) ಅನುಗುಣವಾಗಿ ಮರು ಪರಿಶೀಲಿಸಿ ಚುನಾವಣೆ ನಡೆಸಬೇಕೆಂದು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ದಿನಾಂಕ 24-3-1994 ರ ಲಿಖಿತ ಮೂಲಕ ಉತ್ತರಿಸುವ 12ನೇ ಪಟ್ಟಿಯಲ್ಲಿರುವ 20 ಪ್ರಶ್ನೆಗಳ ಪೈಕಿ ಪ್ರಶ್ನೆಗಳ ಸಂಖ್ಯೆ : 435, 554ಎ ಮತ್ತು 553ಎ ಪ್ರಶ್ನೆಗಳನ್ನು ಹೊರತುಪಡಿಸಿ ಇನ್ನುಳಿದ 17 ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಎಪಿಎಂಸಿ ಮಾರ್ಕೆಟ್ ಯಾರ್ಡನಲ್ಲಿ ಸೆಸ್ ಮುಖಾಂತರ ವಸೂಲು ಮಾಡಿದ ಹಣದಿಂದ ರಸ್ತೆಗಳ ದುರಸ್ತಿ.

630 - ಶ್ರೀ. ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಎಪಿಎಂಸಿಯವರು ರೈತರ ಕಡೆಯಿಂದ ಸೆಸ್ ಮುಖಾಂತರ ವಸೂಲು ಮಾಡಿದ ಹಣದಲ್ಲಿ ಎಪಿಎಂಸಿ ಕಮಾಂಡ್ ಏರಿಯಾದಲ್ಲಿ ಬರುವ ರಸ್ತೆ ದುರಸ್ತಿ ಸಲುವಾಗಿ ಹಣ ಬಿಡುಗಡೆ ಮಾಡಲು ಲೋಕೋಪಯೋಗಿ ಇಲಾಖೆ ಅಧಿಕಾರಿಗಳ ಕಡೆಯಿಂದ ಹಣ ವಸೂಲು ಮಾಡಲಾಗುವುದೇ;

ಆ) ಹಾಗಿದ್ದಲ್ಲಿ, ಎಪಿಎಂಸಿ ಕಮಾಂಡ್ ಏರಿಯಾದಲ್ಲಿ ಬರುವ ರಸ್ತೆಗಳನ್ನು ದುರಸ್ತಿ ಮಾಡಲು ಹಣ ಬಿಡುಗಡೆಮಾಡಲಾಗುವುದೇ;

ಇ) ಬೆಳಗಾಂ ಜಿಲ್ಲೆಯಲ್ಲಿಯ ಪ್ರತಿಯೊಂದು ಮಾರ್ಕೆಟ್‌ಯಾರ್ಡ್‌ನಲ್ಲಿ ಸೆಸ್ ಮುಖಾಂತರ ಎಷ್ಟು ಹಣವನ್ನು ಸಂದಾಯ ಮಾಡಲಾಗಿದೆ;

ಈ) ಬೆಳಗಾವಿ ಜಿಲ್ಲೆಯಲ್ಲಿರುವ ಪ್ರತಿಯೊಂದು ಮಾರ್ಕೆಟ್ ಯಾರ್ಡ್‌ನಲ್ಲಿ ರೈತರ ಕಡೆಯಿಂದ ಸೆಸ್ ಮುಖಾಂತರ ಸಂದಾಯ ಮಾಡಿದ ಹಣದಲ್ಲಿ ಎಷ್ಟು ಹಣ ಖರ್ಚು ಮಾಡಲಾಗಿರುವುದು ಹಾಗೂ ಇನ್ನೂ ಎಷ್ಟು ಹಣ ಉಳಿದಿರುವುದು (ಸಂಪೂರ್ಣವಾದ ಮಾಹಿತಿಯನ್ನು ನೀಡುವುದಾಗಬೇಕು)

ಶ್ರೀ ಮದನಗೋಪಾಲ್ ನಾಯಕ್ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು):

ಅ) ಇಲ್ಲ

ಆ) ಪ್ರಶ್ನೆ ಉದ್ಭವಿಸುವುದಿಲ್ಲ

ಇ)

1. ರಾಮದುರ್ಗ	-	ರೂ.	5,13,598-28
2. ಬೆಳಗಾವಿ	-	ರೂ.	27,29,903-33
3. ನಿಪ್ಪಾಣಿ	-	ರೂ.	1,40,193-04
4. ಸಂಕೇಶ್ವರ	-	ರೂ.	4,15,515-96
5. ನಂದಗಡ	-	ರೂ.	1,52,046-96
6. ಕುಡಚಿ	-	ರೂ.	1,29,154-95
7. ಬೈಲಹೊಂಗಲ	-	ರೂ.	12,35,094-22
8. ಸವದತ್ತಿ	-	ರೂ.	7,31,897-29
9. ಗೋಕಾಕ್	-	ರೂ.	19,63,227-24
10. ಅಥಣಿ	-	ರೂ.	4,56,529-79

ಈ) ವಿವರಗಳು ಸಧ್ಯಕ್ಕೆ ಲಭ್ಯವಿರುವುದಿಲ್ಲ. ವಿವರಗಳನ್ನು ಪಡೆದು ನಂತರ ಮಾನ್ಯ ಸದಸ್ಯರಿಗೆ ಒದಗಿಸಲಾಗುವುದು.

ಕರ್ನಾಟಕ ರಾಜ್ಯ ಬೀಜ ನಿಗಮದ ಪ್ರಗತಿ

555 - ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ಬೀಜ ನಿಗಮವನ್ನು ಯಾವಾಗ ಪ್ರಾರಂಭಿಸಲಾಯಿತು:

ಆ) ಅದರಲ್ಲಿ ತೊಡಗಿಸಲಾಗಿರುವ ಬಂಡವಾಳವೆಷ್ಟು?

ಇ) ಅದರ ಕಾರ್ಯ ಚಟುವಟಿಕೆಗಳೇನು?

ಈ) ಇದುವರೆಗೆ ನಿಗಮವು ಯಾವ ಯಾವ ವರ್ಷಗಳಲ್ಲಿ ನಷ್ಟವನ್ನು ಅನುಭವಿಸಿಕೊಂಡು ಬರುತ್ತಿದೆ.

ಉ) ಅದಕ್ಕೆ ಕಾರಣಗಳೇನು?. ಹಾಗೂ ಅದನ್ನು ತಪ್ಪಿಸಲು ಸರ್ಕಾರದ ಮುಂದಿರುವ ಕ್ರಮಗಳೇನು?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು):

ಅ) ಕರ್ನಾಟಕ ರಾಜ್ಯ ಬೀಜ ನಿಗಮವು 1973ರಲ್ಲಿ ಕರ್ನಾಟಕ ರಾಜ್ಯ ಆಗ್ರೋ ಬೀಜ ನಿಗಮ ನಿಯಮಿತ ಎಂಬ ಹೆಸರಿನಲ್ಲಿ ಕರ್ನಾಟಕ ಆಗ್ರೋ ಇಂಡಸ್ಟ್ರೀಸ್‌ನ ಅಧೀನದಲ್ಲಿ ಆರಂಭಗೊಂಡಿತು. ತರುವಾಯ, ರಾಷ್ಟ್ರೀಯ ಬೀಜ ಯೋಜನೆಯಡಿಯಲ್ಲಿ 1978ರಿಂದ ಕರ್ನಾಟಕ ರಾಜ್ಯ ಬೀಜ ನಿಗಮವಾಗಿ ಸ್ವತಂತ್ರವಾಗಿ ತನ್ನ ಕಾರ್ಯವನ್ನು ನಿರ್ವಹಿಸುತ್ತಿದೆ.

ಗ್ರಂಥಾಲಯ,
ವಿಧಾನ ಸೌಧ, ಬೆಂಗಳೂರು,

ಆ) ಕರ್ನಾಟಕ ರಾಜ್ಯ ನಿಗಮವು ರೂ. 500 ಲಕ್ಷದ ಬಂಡವಾಳವನ್ನು ಹೂಡಲು ಪರವಾನಗಿ ಪಡೆದಿದೆ. ಅದರಲ್ಲಿ ರೂ. 300 ಲಕ್ಷದಷ್ಟು ಬಂಡವಾಳವನ್ನು ಹೂಡಲು ಕರೆ ನೀಡಲಾಗಿದೆ. ಅದರಲ್ಲಿ ಈ ತನಕ ರೂ. 194.03 ಲಕ್ಷಗಳಷ್ಟು ಬಂಡವಾಳ ಹೂಡಲಾಗಿದೆ. ನಿಗಮದ ಒಟ್ಟು ಬಂಡವಾಳದಲ್ಲಿ ಕರ್ನಾಟಕ ರಾಜ್ಯ ಸರ್ಕಾರ, ಭಾರತ ಸರ್ಕಾರ (ರಾಷ್ಟ್ರೀಯ ಬೀಜ ನಿಗಮದ ಮೂಲಕ) ಹಾಗೂ ಬೀಜ ಬೆಳೆಗಾರರು ಶೇ. 35:30:35 ರಂತೆ ಕ್ರಮವಾಗಿ ಬಂಡವಾಳವನ್ನು ಹೂಡಬಹುದಾಗಿದೆ.

ಇ) ಕರ್ನಾಟಕ ರಾಜ್ಯದ ಬೀಜದ ಉದ್ಯಮದಲ್ಲಿ ಮುಂದಾಳಾಗಿ ಸತತವಾಗಿ ಒಳ್ಳೆಯ ಗುಣಮಟ್ಟದ ಸಾಕಷ್ಟು ಬೀಜಗಳನ್ನು ಒಳ್ಳೆಯ ಗುಣಮಟ್ಟದ ಸಾಕಷ್ಟು ಬೀಜಗಳನ್ನು ವೇಳೆಗೆ ಸರಿಯಾಗಿ, ಬೇಕಾದ ಸ್ಥಳದಲ್ಲಿ ಯೋಗ್ಯ ದರದಲ್ಲಿ ಬೀಜಗಳನ್ನು ಒದಗಿಸಲು ಉದ್ದೇಶವನ್ನು ನಿಗಮವು ಹೊಂದಿದೆ.

ಈ) ಕರ್ನಾಟಕ ಬೀಜ ನಿಗಮವು ರಾಷ್ಟ್ರೀಯ ಬೀಜ ಯೋಜನೆಯಡಿ ಪ್ರತ್ಯೇಕ ಸಂಸ್ಥೆಯಾಗಿದ್ದಿನದಿನದಿಂದ, ಮೊದಲನೆ ವರ್ಷ ಬಿಟ್ಟು ಇಂದಿನವರೆಗೂ ಹೆಚ್ಚಿನ ಲಾಭವನ್ನು ಗಳಿಸಿ, ತನ್ನ ಕಾರ್ಯ ಚಟುವಟಿಕೆಗಳನ್ನು ಬಲಪಡಿಸುತ್ತಾ ಕೆಲಸ ಮಾಡುತ್ತಿದೆ.

ಉ) ಉದ್ಭವಿಸುವುದಿಲ್ಲ.

ಉತ್ತರ ಕರ್ನಾಟಕದಲ್ಲಿ ತೋಟಗಾರಿಕೆ ಅಭಿವೃದ್ಧಿ

627 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕರ್ನಾಟಕದಲ್ಲಿ ತೋಟಗಾರಿಗೆ ಇಲಾಖೆಯವರು ಅಭಿವೃದ್ಧಿ ಪಡಿಸಲು ಯಾವುದೇ ಹೆಚ್ಚಿನ ಕ್ರಮವನ್ನು ಕೈಗೊಳ್ಳುತ್ತಿಲ್ಲವೆಂಬ ಸಂಗತಿ ಸರಕಾರದ ಗಮನಕ್ಕೆ ಬಂದಿದೆಯೇ.

ಆ) ಹಾಗಿದ್ದಲ್ಲಿ, ಉತ್ತರ ಕರ್ನಾಟಕದಲ್ಲಿಯೂ ಸಹ ತೋಟಗಾರಿಕೆಯನ್ನು ಅಭಿವೃದ್ಧಿ ಪಡಿಸುವ ಬಗ್ಗೆ ಬೇಕಾದ ಎಲ್ಲಾ ಸವಲತ್ತುಗಳನ್ನು ಹೊಂದಿದ್ದರೂ ಕೂಡ ಅಲ್ಲಿ ಅಭಿವೃದ್ಧಿ ಪಡಿಸಲು ಹಿಂಜರಿಯುತ್ತಿರಲು ಕಾರಣವೇನು.

ಇ) ಹಾಗಿದ್ದಲ್ಲಿ ಇನ್ನು ಮುಂದೆಯಾದರೂ ಉತ್ತರ ಕರ್ನಾಟಕದಲ್ಲಿ ತೋಟಗಾರಿಕೆಯನ್ನು ಅಭಿವೃದ್ಧಿ ಪಡಿಸಲು ಕ್ರಮಕೈಗೊಳ್ಳಲಾಗುವುದೇ.

ಈ) ಶ್ರೀ ಕ್ಷೇತ್ರ ಸೊಗಲದಲ್ಲಿ ತೋಟಗಾರಿಕೆಯನ್ನು ಅಭಿವೃದ್ಧಿ ಪಡಿಸಲು ಸಾಕಷ್ಟು ಸ್ಥಳಾವಕಾಶವಿದ್ದರೂ ಕೂಡ ಅಲ್ಲಿ ಅಭಿವೃದ್ಧಿ ಮಾಡದೆ ಇರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ

ಉ) ಇನ್ನು ಮುಂದೆಯಾದರೂ ಶ್ರೀ ಕ್ಷೇತ್ರ ಸೊಗಲದಲ್ಲಿ ತೋಟಗಾರಿಕೆಯನ್ನು ಅಭಿವೃದ್ಧಿಪಡಿಸಲಾಗುವುದೇ?

ಊ) ವೆಸ್ಟರನ್ ಘಟ್ಟದಲ್ಲಿ ಶ್ರೀ ಕ್ಷೇತ್ರ ಸೊಗಲದಲ್ಲಿ ತೋಟಗಾರಿಕೆ ಇಲಾಖೆಯಿಂದ ಅಭಿವೃದ್ಧಿ ಪಡಿಸಲಾಗುವುದೆಂದು ವಿಧಾನಸಭೆಯಲ್ಲಿ ಆಶ್ವಾಸನೆ ನೀಡಿದ್ದರೂ ಕೂಡ ಇದುವರೆಗೂ ಅಭಿವೃದ್ಧಿ ಪಡಿಸದೇ ಇರಲು ಕಾರಣಗಳೇನು?

ಶ್ರೀ ಎ. ಕೃಷ್ಣಪ್ಪ (ತೋಟಗಾರಿಕೆ ರಾಜ್ಯ ಮಂತ್ರಿಯವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) 1993-94ನೇ ಸಾಲಿನಲ್ಲಿ ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ ತೋಟಗಾರಿಕೆಯನ್ನು ಅಭಿವೃದ್ಧಿ ಪಡಿಸಲು ರಾಜ್ಯವಲಯ : ಜಿಲ್ಲಾವಲಯದಡಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ಜಿಲ್ಲಾವಾರು ನಿಗದಿ ನಿಗದಿ ಪಡಿಸಲಾಗಿರುವ ಆಯವ್ಯಯ ಈ ಕೆಳಕಂಡಂತಿದೆ.

ಕ್ರಮ ಸಂ.	ಜಿಲ್ಲೆಗಳು	1993-94ನೇ ಸಾಲಿನಲ್ಲಿ ರಾಜ್ಯವಲಯ (ಕೇಂದ್ರ ಪುರಸ್ಕೃತ : ಕೇಂದ್ರ ವಲಯ ಯೋಜನೆಗಳು ಒಳಗೊಂಡಂತೆ) : ಜಿಲ್ಲಾವಲಯ ಯೋಜನೆಗಳಡಿಯಲ್ಲಿ ಒದಗಿಸಿರುವ ಆಯವ್ಯಯ (ರೂ. ಲಕ್ಷಗಳಲ್ಲಿ)
1.	ಧಾರವಾಡ	93.48
2.	ಬೆಳಗಾಂ	53.31
3.	ಬಿಜಾಪುರ	153.34
4.	ಗುಲ್ಬರ್ಗ	65.15
5.	ರಾಯಚೂರು	58.59
6.	ಬೀದರ್	51.70
7.	ಬಳ್ಳಾರಿ	66.08
	ಒಟ್ಟು	541.65

ಅಲ್ಲದೆ 1994-95ನೇ ಸಾಲಿಗೆ ತೋಟಗಾರಿಕೆ ಅಭಿವೃದ್ಧಿಗೆ ಸಾಕಷ್ಟು ಅನುದಾನವಿದ್ದು ಅದರಂತೆ ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ ತೋಟಗಾರಿಕೆ ಅಭಿವೃದ್ಧಿಗೆ ಹೆಚ್ಚಿಗೆ ಒತ್ತು ನೀಡಲಾಗಿದೆ. ಅವುಗಳಲ್ಲಿ ಮುಖ್ಯವಾದುಗಳೆಂದರೆ

1. 1994-95ನೇ ಸಾಲಿನಲ್ಲಿ ಬೆಳಗಾಂ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ರಫ್ತು ಮಾಡಲು ದ್ರಾಕ್ಷಿ ಅಭಿವೃದ್ಧಿಗೆ ಒಂದು ವಿಶೇಷ ಯೋಜನೆಯನ್ನು ರೂ. 10.00 ಲಕ್ಷಗಳ ಆಯವ್ಯಯದಲ್ಲಿ ಹಮ್ಮಿಕೊಳ್ಳಲಾಗಿದೆ.
2. 1994-95ನೇ ಸಾಲಿನಲ್ಲಿ ಮಹಾರಾಷ್ಟ್ರ ರಾಜ್ಯದ ಮಾದರಿಯಲ್ಲಿ ತೋಟಗಾರಿಕೆ ಅಭಿವೃದ್ಧಿಯನ್ನು 5000 ಹೆಕ್ಟೇರ್ ಪ್ರದೇಶದಲ್ಲಿ ರೂ. 4 ಕೋಟಿ ವೆಚ್ಚದಲ್ಲಿ ರೈತರ ಜಮೀನಿನಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.
3. ಉತ್ತರ ಕರ್ನಾಟಕ ಬೆಳಗಾಂ, ಧಾರವಾಡ, ಬಿಜಾಪುರ ರಾಯಚೂರು ಹಾಗೂ ಬೀದರ್ ಜಿಲ್ಲೆಗಳಲ್ಲಿ ಮಾರುಕಟ್ಟೆ ವ್ಯವಸ್ಥೆ ಅಭಿವೃದ್ಧಿಗಾಗಿ 146.00 ಲಕ್ಷ ರೂ.ಗಳನ್ನು ನೀಡಲಾಗಿದೆ.
4. 1994-95ನೇ ಸಾಲಿನಲ್ಲಿ ತೋಟಗಾರಿಕೆ ಮಾರುಕಟ್ಟೆ ವ್ಯವಸ್ಥೆಯ ಅಭಿವೃದ್ಧಿಗಾಗಿ ಉತ್ತರ ಕರ್ನಾಟಕದ ಬೆಳಗಾಂ ಮತ್ತು ಗುಲ್ಬರ್ಗಾದಲ್ಲಿ ಸಂಘಗಳನ್ನು ಸ್ಥಾಪಿಸುವ ಯೋಜನೆಯನ್ನು ಹಾಪ್ಕಾಮ್ಸ್ ಮಾದರಿಯಲ್ಲಿ ಹಮ್ಮಿಕೊಳ್ಳಲಾಗಿದೆ.

ಈ) ಬಂದಿದೆ.

ಉ) ದಿನಾಂಕ 11-11-93ರಲ್ಲಿ ನಡೆದ ಭರವಸೆ ಸಮಿತಿಯಲ್ಲಿ ನಿರ್ಣಯ ತೆಗೆದುಕೊಂಡಂತೆ ಹಾಗೂ ಬೆಳಗಾಂ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಶ್ರೀ ಕ್ಷೇತ್ರ

ಸೊಗಲದಲ್ಲಿ ಹಾಗೂ ಬೈಲಹೊಂಗಲ ತಾಲ್ಲೂಕಿನ ಬೈಲಾವಾದವರ್ತಿಯಲ್ಲಿ ಪಶ್ಚಿಮಘಟ್ಟ ಯೋಜನೆಯಡಿಯಲ್ಲಿ ಹೂ ತೋಟ ನಿರ್ಮಿಸಲು ಬೆಳಗಾಂ ಜಿಲ್ಲೆಯ ತೋಟಗಾರಿಕಾ ಉಪನಿರ್ದೇಶಕರು 5 ವರ್ಷಗಳಿಗೆ ಬೇಕಾಗುವ ಹಣ ರೂ. 13,54,000ಕ್ಕೆ ವಾರ್ಷಿಕ ಕ್ರಿಯಾ ಯೋಜನೆಯನ್ನು ತಯಾರಿಸಿ, ಹಣ ಬಿಡುಗಡೆ ಮಾಡಿಕೊಡಲು ಮುಖ್ಯಕಾರ್ಯದರ್ಶಿಗಳು, ಜಿಲ್ಲಾ ಪರಿಷತ್ ಬೆಳಗಾಂರವರಿಗೆ ದಿನಾಂಕ 22-3-93ರಲ್ಲಿ ಪತ್ರ ಬರೆದು ಕೇಳಿಕೊಳ್ಳಲಾಗಿದೆ. ಆದರೆ ಈವರೆವಿಗೂ ಹಣ ಬಿಡುಗಡೆಯಾಗಿರುವುದಿಲ್ಲ. ಹಣ ಬಿಡುಗಡೆಯಾದ ಕೂಡಲೇ ಕೆಲಸ ಕಾರ್ಯಗತ ಗೊಳಿಸಲಾಗುವುದು.

ಊ) ಜಿಲ್ಲಾ ಪಂಚಾಯತ್ನಿಂದ ಇಲ್ಲಿಯವರೆವಿಗೂ ಹಣ ಬಿಡುಗಡೆಯಾಗಿರುವುದಿಲ್ಲ. ಹಣ ಬಿಡುಗಡೆಯಾದ ತಕ್ಷಣ ಕೆಲಸ ಕೈಗೆತ್ತಿಕೊಳ್ಳಲಾಗುವುದು.

ಗುಲ್ಬರ್ಗಾ ಜಿಲ್ಲೆಯ ಸೇಡಂ ಕ್ಷೇತ್ರದ ಗ್ರಾಮಗಳಿಗೆ ಕುಡಿಯುವ ನೀರಿನ ಸಮಸ್ಯೆ ನಿವಾರಣೆ.

723 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1) ಗುಲ್ಬರ್ಗಾ ಜಿಲ್ಲೆಯ ಸೇಡಂ ರಾಜ್ಯದ ಚಿತ್ತಾಪುರ ತಾಲ್ಲೂಕಿನ ಸಂಕನೂರ, ರಾಜೋಳಾ, ದಂಡ ಗುಂಡ, ಪಣ್ಣೆಕೇರಾ, ಅಲ್ಲೂರ(ಬಿ) ಬೆಳಗೇರಾ ಗ್ರಾಮಗಳ ಕುಡಿಯುವ ನೀರಿನ ಯೋಜನೆಗಳು ಮಂಜೂರಾಗಿ ನೀರು ಸರಬರಾಜು ಇಲ್ಲದೆ ನಾಲ್ಕು ವರ್ಷಗಳಿಂದ ತಪ್ಪು ಮಾಹಿತಿಗಳನ್ನು ನೀಡಿ ಕುಡಿಯುವ ನೀರಿಗಾಗಿ ಸಮಸ್ಯಾತ್ಮಕ ಗ್ರಾಮಗಳನ್ನಾಗಿ ಮಾಡಿದ್ದು ನಿಜವಲ್ಲವೆ ?

2) ಸುಮಾರು 4ವರ್ಷಗಳಿಂದ ಪ್ರತಿ ವರ್ಷ ಜಿಲ್ಲಾ ಪರಿಷತ್ ಇಂಜಿನಿಯರಿಂಗ್ವವರು ಮಾರ್ಚ್ ಒಳಗಾಗಿ ನೀರು ಸರಬರಾಜು ಮಾಡಲು ತಕ್ಕ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದ್ದು ಪ್ರತಿ ಸಲ ಸದನಕ್ಕೆ ತಪ್ಪು ಮಾಹಿತಿ ನೀಡುತ್ತಿದ್ದು ಸಂಬಂಧಪಟ್ಟ ಮೇಲಧಿಕಾರಿಗಳು ಈ ಉತ್ತರವನ್ನು ಗಮನಿಸದೇ ಇರುವುದರಿಂದ ಅವ್ಯವಸ್ಥೆಯಾಗಿ ಕುಡಿಯುವ ನೀರಿನ ಸಮಸ್ಯಾತ್ಮಕ ಗ್ರಾಮಗಳೆಂದು ಮಾಡಿದ್ದು ನಿಜವಲ್ಲವೆ ?

3) ಈಗಲಾದರೂ ಸಹ ಇದೇ ಮಾರ್ಚ್ ತಿಂಗಳ ಒಳಗಾಗಿ ಕುಡಿಯುವ ನೀರಿನ ಸರಬರಾಜು ಮಾಡಿ ಗ್ರಾಮಗಳ ನಾಗರೀಕರಿಗೆ ಕುಡಿಯುವ ನೀರಿನ ಸಮಸ್ಯೆ ನಿವಾರಿಸಬಹುದೇ.

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

1) ಸಮಸ್ಯಾತ್ಮಕ ಗ್ರಾಮಗಳಾಗಿರುವುದು ನಿಜ.

2) ಈ ಎಲ್ಲಾ ಗ್ರಾಮಗಳಿಗೆ ನೀರಿನ ನೆಲೆಯು ಆಗಬಹುದೆಂದು ಊಹಿಸಿ ಕಾಮಗಾರಿಗಳನ್ನು ಮುಗಿಸಬಹುದೆಂದು ತಿಳಿಸಲಾಗಿತ್ತು. ಆದರೆ ನೀರಿನ ನೆಲೆಯು ಮೇಲಿಂದ ಮೇಲೆಗೆ ವಿಫಲವಾಗುತ್ತಾ ಬಂದಿರುವುದರಿಂದ ಯೋಜನೆಗಳನ್ನು ನಿಗದಿತ ಅವಧಿಯಲ್ಲಿ ಮುಗಿಸಲು ಸಾಧ್ಯವಾಗಲಿಲ್ಲ. ಆದುದರಿಂದ ಸದರೀ ಗ್ರಾಮಗಳು ಸಮಸ್ಯಾತ್ಮಕ ಗ್ರಾಮಗಳಾಗಿ ಉಳಿದಿವೆ.

3) ಈ ಆರು ಗ್ರಾಮಗಳಲ್ಲಿ ಕುಡಿಯುವ ನೀರು ಸರಬರಾಜು ಯೋಜನೆಗಳ ಕೆಲಸಗಳ ಪ್ರಗತಿ ಕೆಳಗಿನಂತಿದೆ.

ಪಣ್ಣೆಕೇರಾ : ಕೆಲಸ ಮುಗಿದು ಕಾರ್ಯಗತಗೊಳಿಸಲಾಗಿದೆ.

ದಂಡಗುಂಡ ಮತ್ತು

ರಾಜೋಳಾ

ಅಲ್ಲೂರ(ಬಿ) : ಮೇ 1994ರ ಅಂತ್ಯದೊಳಗೆ ಪೂರ್ತಿಗೊಳಿಸಲಾಗುವುದು.
ಬೆಳಗೇರಾ ಮತ್ತು
ಸಂಕನೂರ : ಜುಲೈ 1994ರ ಅಂತ್ಯದೊಳಗೆ ಪೂರ್ತಿಗೊಳಿಸಲಾಗುವುದು.

ರಾಜ್ಯದಲ್ಲಿ ಎಪಿಎಂಸಿ ಚುನಾವಣೆಗಳನ್ನು ನಡೆಸುವುದು

629 - ಶ್ರೀ ಶಿವಾನಂದ ಹೆಚ್ ಕೌಜಲಗಿ (ಬೈಲಹೊಂಗಲ) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಪಿಎಂಸಿ ಚುನಾವಣೆಗಳನ್ನು ಯಾವಾಗ ನಡೆಸಲಾಗುವುದು;

ಆ) ಎಪಿಎಂಸಿ ಚುನಾವಣೆಗಳನ್ನು ಬಹಳ ದಿನಗಳಿಂದ ನಡೆಸದೇ ಇರುವುದರಿಂದ ಎಪಿಎಂಸಿ ಆಡಳಿತ ಹದಗೆಡುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ ಸರ್ಕಾರದವರು ಎಪಿಎಂಸಿ ಚುನಾವಣೆಗಳನ್ನು ಕೂಡಲೇ ನಡೆಸಲು ಕ್ರಮಕೈಗೊಳ್ಳುವರೇ?

ಶ್ರೀ ಮದನಗೋಪಾಲ್ ನಾಯಕ್ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :

ಅ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಗೆ ಚುನಾವಣೆ ನಡೆಸುವ ಅವಧಿಯು ಮುಂಬರುವ ಸಾರ್ವತ್ರಿಕ ಚುನಾವಣೆಗಳು ನಡೆಯುವ ಅವಧಿಯ ಸಮೀಪ ಬರುವ ಹಿನ್ನೆಲೆಯಲ್ಲಿ ಸರ್ಕಾರವು ಸದರಿ ಸಮಿತಿಗಳಿಗೆ ಚುನಾವಣೆ ನಡೆಸಲು ಸಾಧ್ಯವಾಗಲಾರದೆಂದು ಅಭಿಪ್ರಾಯಪಟ್ಟಿದೆ.

ಆ) ಇಲ್ಲ

ಇ) (ಅ)ದಲ್ಲಿಯ ಉತ್ತರವು ಇದಕ್ಕೂ ಸಂಬಂಧಿಸಿದೆ.

ರೈತರು ಸಬ್ಸಿಡಿ ಸೌಲಭ್ಯದಿಂದ ವಂಚಿತರಾಗಿರುವ ಬಗ್ಗೆ

633 - ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಡಂಕಲ್ ಪ್ರಸ್ತಾವನೆಗಳು ಜಾರಿಗೆ ಬಂದಲ್ಲಿ ಕೃಷಿ ಕ್ಷೇತ್ರದ ಮೇಲೆ ತೀವ್ರತರ ಪರಿಣಾಮ ಬೀಳುವುದು ನಿಜವೇ?

ಆ) ರಾಜ್ಯದ ರೈತರು ಸಬ್ಸಿಡಿ ಸೌಲಭ್ಯಗಳಿಂದ ವಂಚಿತರಾಗುವುದು ನಿಜವೇ?

ಇ) ಈ ಡಂಕಲ್ ಪ್ರಸ್ತಾವನೆಯನ್ನು ವಿರೋಧಿಸಿ, ರಾಜ್ಯ ಸರ್ಕಾರ ಏನಾದರೂ ನಿರ್ಧಾರ ಕೈಗೊಂಡಿದೆಯೇ?

ಈ) ಇಲ್ಲದಿದ್ದಲ್ಲಿ ರೈತರಲ್ಲಿ ಉಂಟಾಗಿರುವ ತೊಂದರೆ ಹಾಗೂ ಭೀತಿಯ ವಾತಾವರಣವನ್ನು ನಿವಾರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎನ್. ಪುಟ್ಟಸ್ವಾಮಿಗೌಡ (ಕೃಷಿ ಸಚಿವರು) :

ಅ) ಭಾರತವು ತನ್ನ ಕೃಷಿ ನೀತಿ ಮತ್ತು ಕಾರ್ಯಕ್ರಮಗಳನ್ನು ಪಾಲಿಸಲು ಇರುವ ಸ್ವಾತಂತ್ರ್ಯೇಯ ಮತ್ತು ಸಂಯಮವನ್ನು ಪ್ರತಿಕೂಲವಾಗಿ ಬಾಧಿಸುವ ಯಾವ ರೀತಿಯ ಅವಕಾಶವು ಡಂಕಲ್ ಪ್ರಸ್ತಾವನೆಯಲ್ಲಿ ಇರುವುದಿಲ್ಲ. ಆಹಾರ ಭದ್ರತೆ ಮತ್ತು ಆಹಾರ ನಿಧಿಯು ಸಂಪೂರ್ಣತೆ ಈ ವಿಷಯಗಳು ನಮಗೆ ಪ್ರಮುಖ ಆದ್ಯತೆಯಾಗಿರುತ್ತದೆ. ಈ ವಿಷಯಗಳಿಗೆ ಡಂಕಲ್ ಪ್ರಸ್ತಾವನೆಯಲ್ಲಿ ಮಾನ್ಯತೆ ನೀಡಲಾಗಿದೆ.

ಆ) ಇಲ್ಲ

ಇ) ಕೇಂದ್ರ ಸರ್ಕಾರವನ್ನು ರೈತರ ಹಿತವನ್ನು ದೃಷ್ಟಿಯಲ್ಲಿಟ್ಟುಕೊಂಡು ಡಂಕಲ್ ಪ್ರಸ್ತಾವನೆಯ ಬಗ್ಗೆ ನಿರ್ಣಯ ತೆಗೆದುಕೊಳ್ಳಲು ರಾಜ್ಯ ಸರ್ಕಾರವು ಕೋರಿದೆ.

ಈ) ಉದ್ಭವಿಸುವುದಿಲ್ಲ.

ಗುಲ್ಬರ್ಗಾ ಜಿಲ್ಲೆಯಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಚುನಾವಣೆಗಳನ್ನು ಮುಂದೂಡಿರುವುದು

634 ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರ ಹಾಗೂ ಉಪಾಧ್ಯಕ್ಷರುಗಳ ಚುನಾವಣೆಗಳನ್ನು ಸರ್ಕಾರ ಮುಂದಕ್ಕೆ ಹಾಕಿದೆಯೇ;

ಆ) ಹಾಗಿದ್ದಲ್ಲಿ ಅದಕ್ಕೆ ಕಾರಣವೇನು?

ಇ) ರಾಜ್ಯದ ಇತರ ಯಾವ ಯಾವ ಜಿಲ್ಲೆಗಳಲ್ಲಿ ಈ ರೀತಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರುಗಳ ಚುನಾವಣೆಯನ್ನು ಮುಂದೆ ಹಾಕಲಾಗಿದೆ;

ಈ) ಈ ಚುನಾವಣೆಗಳನ್ನು ಯಾವಾಗ ನಡೆಸಲಾಗುವುದು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು):

ಅ) ಹೌದು.

ಆ) ಜಿಲ್ಲಾಧಿಕಾರಿಗಳು ಅಧ್ಯಕ್ಷ, ಉಪಾಧ್ಯಕ್ಷರ ಹುದ್ದೆಗಳಿಗೆ ಮೀಸಲಾತಿ ನಿಗದಿ ಪಡಿಸಿ ಹೊರಡಿಸಿದ ಆದೇಶವು ಸರಿಯಲ್ಲ ಎಂಬ ಮನವಿಗಳು ಸ್ವೀಕೃತವಾದುದರಿಂದ.

ಇ) ರಾಜ್ಯದ 10 ಜಿಲ್ಲೆಗಳಲ್ಲಿ ಒಟ್ಟು 37 ತಾಲ್ಲೂಕುಗಳಲ್ಲಿ (ಪಟ್ಟಿ ಲಗತ್ತಿಸಿದೆ)

ಈ) 1994ರ ಮಾರ್ಚಿ 31 ರೊಳಗೆ ಈ ಚುನಾವಣೆಗಳನ್ನು ನಡೆಸಲಾಗುವುದು.

ಅನುಬಂಧ

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ತಾಲ್ಲೂಕಿನ ಹೆಸರು
1	ಗುಲ್ಬರ್ಗಾ	ಎಲ್ಲಾ ತಾಲ್ಲೂಕುಗಳು
2	ರಾಯಚೂರು	ಎಲ್ಲಾ ತಾಲ್ಲೂಕುಗಳು
3	ಬಳ್ಳಾರಿ	ಸಿರಗುಪ್ಪ ತಾಲ್ಲೂಕು, ಹೊಸಪೇಟೆ ತಾಲ್ಲೂಕು, ಹರಪನಹಳ್ಳಿ ತಾಲ್ಲೂಕು, ಕೂಡ್ಲಗಿ ತಾಲ್ಲೂಕು.
4	ಬಿಜಾಪುರ	ಮುದ್ದೇಬಿಹಾಳ್ ತಾಲ್ಲೂಕು, ಬಸವನಬಾಗೇವಾಡಿ ತಾಲ್ಲೂಕು.
5	ಬೆಂಗಳೂರು (ಗ್ರಾಮಾಂತರ)	ಹೊಸಕೋಟೆ ತಾಲ್ಲೂಕು, ರಾಮನಗರ ತಾಲ್ಲೂಕು, ಚನ್ನಪಟ್ಟಣ ತಾಲ್ಲೂಕು, ನೆಲಮಂಗಲ ತಾಲ್ಲೂಕು.

6	ಬೆಂಗಳೂರು (ನಗರ)	ಯಲಹಂಕ (ಬೆಂಗಳೂರು ಉತ್ತರ) ಆನೇಕಲ್ ವರ್ತೂರು ವಿಧಾನ ಸಭಾ ಕ್ಷೇತ್ರ
7	ಕೋಲಾರ	ಮಾಲೂರು
8	ಮಂಡ್ಯ	ಮಳವಳ್ಳಿ, ಮದ್ದೂರು
9	ಧಾರವಾಡ	ಹುಬ್ಬಳ್ಳಿ (ಗ್ರಾಮಾಂತರ)
10	ಉತ್ತರ ಕನ್ನಡ	ಕಾರವಾರ ಸೂಪಾ

ಬಸವಕಲ್ಯಾಣದಲ್ಲಿ ಪಟ್ಟಣ ಸಹಕಾರಿ ಬ್ಯಾಂಕ್ ತೆರೆಯುವುದು

635 - ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಎಲ್ಲೆಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳನ್ನು ತೆರೆಯಲಾಗಿವೆ.

ಆ) ಬೀದರ್ ಜಿಲ್ಲೆಯಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳ ಸಂಖ್ಯೆ ಎಷ್ಟು ?

ಇ) ಬಸವ ಕಲ್ಯಾಣದಲ್ಲಿ ಪಟ್ಟಣ ಸಹಕಾರ ಬ್ಯಾಂಕು ತೆರೆಯಲು ಸರ್ಕಾರ ರಿಸರ್ವ್ ಬ್ಯಾಂಕಿನ ಅನುಮತಿ ಕೋರಿದೆಯೇ ?

ಈ) ಹಾಗಿದ್ದಲ್ಲಿ ಯಾವಾಗ ಬಸವ ಕಲ್ಯಾಣದಲ್ಲಿ ಪಟ್ಟಣ ಸಹಕಾರ ಬ್ಯಾಂಕ್ನು ತೆರೆಯಲಾಗುವುದು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು) :

ಅ) ರಾಜ್ಯದ ಪಟ್ಟಣ, ಅರೆ ಪಟ್ಟಣ ಪ್ರದೇಶಗಳಲ್ಲಿ ಒಟ್ಟು 223 ಪಟ್ಟಣ ಸಹಕಾರ ಬ್ಯಾಂಕುಗಳನ್ನು ನೋಂದಾಯಿಸಲಾಗಿದೆ.

ಆ) 3

ಇ) ಇಲ್ಲ

ಈ) ಉದ್ಭವಿಸುವುದಿಲ್ಲ.

ಬೈಲಹೊಂಗಲದಲ್ಲಿ ಪರತಂತ್ರ ಜೀವಿ ಪ್ರಯೋಗಲಯ ಕಟ್ಟಡ

631 - ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಳಗಾಂ ಜಿಲ್ಲೆ ಬೈಲಹೊಂಗಲದ ಪರತಂತ್ರ ಜೀವಿ ಪ್ರಯೋಗ ಶಾಲೆ ಕಟ್ಟಡ ಕಟ್ಟುವ ಸಲುವಾಗಿ ಮನವಿಗಳು ಬಂದಿವೆಯೇ ?

ಆ) ಹಾಗಿದ್ದಲ್ಲಿ, ಸರ್ಕಾರದವರು ಅಲ್ಲಿ ಪರತಂತ್ರಜೀವಿ ಪ್ರಯೋಗ ಶಾಲೆಯ ಕಟ್ಟಡ ಕಟ್ಟಲು ಯಾವ ಕ್ರಮ ಕೈಗೊಂಡಿರುವರು.

ಇ) ಕೃಷಿ ಇಲಾಖೆ ಅಧಿಕಾರಿಗಳು ನೀಡಿದ ಆದೇಶದ ಪ್ರಕಾರ ಭೂ ಸೇನಾ ನಿಗಮದವರು ಅಲ್ಲಿ ಕಟ್ಟಡ ಕಟ್ಟಲು ಅಂದಾಜು ವೆಚ್ಚ ಪತ್ರಿಕೆಯನ್ನು ತಯಾರಿಸಿದ ಸಂಗತಿ ನಿಜವೇ ?

ಈ) ಭೂ ಸೇನಾ ನಿಗಮದವರು ತಯಾರಿಸಿದ ಅಂದಾಜು ವೆಚ್ಚ ಪತ್ರಿಕೆ ಪ್ರಕಾರ ಎಷ್ಟು ಹಣ ಬೇಕಾಗುವುದು.

ಉ) ಈ ಹಣವನ್ನು ಸನ್ 1993-94ನೇ ಸಾಲಿನಲ್ಲಿ ಅಥವಾ 1994-95ನೇ ಸಾಲಿನಲ್ಲಿ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು) :

ಅ) ಮನವಿಗಳು ಬಂದಿಲ್ಲ.

ಆ) ಬೈಲಹೊಂಗಲದಲ್ಲಿ 1993-94ನೇ ಸಾಲಿನಲ್ಲಿ ಹೊಸದಾಗಿ ಪರತಂತ್ರ ಜೀವಿ ಪ್ರಯೋಗ ಶಾಲೆ ಕಟ್ಟಡ ಕಟ್ಟಲು ಅನುದಾನ ಬಿಡುಗಡೆ ಮಾಡುವ ಬಗ್ಗೆ ಸರ್ಕಾರದಲ್ಲಿ ಪರಿಶೀಲಿಸಲಾಗುತ್ತಿದೆ.

ಇ) - ನಿಜ -

ಈ) ಭೂ ಸೇನಾ ನಿಗಮದವರು 93-94ನೇ ಸಾಲಿನಲ್ಲಿ ತಯಾರಿಸಿರುವ ಅಂದಾಜಿನಂತೆ ಈ ಕಾಮಗಾರಿಗೆ 12.50 ಲಕ್ಷ ರೂ. ಗಳಾಗುತ್ತದೆ.

ಉ) ಈ ಬಗ್ಗೆ ಪರಿಶೀಲಿಸಲಾಗುವುದು.

ಕೊಡಗು ಜಿಲ್ಲಾ ಪರಿಷತ್ತಿನ ಅಭಿವೃದ್ಧಿ ಕಾರ್ಯಗಳ ಕಾಮಗಾರಿಗಳಿಗೆ ಬಿಡುಗಡೆ ಮಾಡಿರುವ ಹಣ

601 - ಶ್ರೀಮತಿ ಸುಮಾ ವಸಂತ (ವಿರಾಜಪೇಟೆ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1992-93, 1993-94ನೇ ಸಾಲಿನಲ್ಲಿ ಕೊಡಗು ಜಿಲ್ಲೆಯಲ್ಲಿ ಜಿಲ್ಲಾ ಪರಿಷತ್ತಿನ ಇಂಜನಿಯರಿಂಗ್ ವಿಭಾಗಕ್ಕೆ ಮಂಜೂರಾದ ಹಣವೆಷ್ಟು?

ಆ) ಈ ಪೈಕಿ ಪ್ರತಿ ವರ್ಷ 3 ತಾಲ್ಲೂಕುಗಳಿಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ.

ಇ) ಸರಿಯಾಗಿ ಕಂಟ್ರಾಕ್ಟರ್ದಾರರಿಗೆ ಹಣ ಬಿಡುಗಡೆಯಾಗದೆ ಕಾಮಗಾರಿ ಅರ್ಧದಲ್ಲಿ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣ ಅಭಿವೃದ್ಧಿ ಮತ್ತು ಪಂ.ರಾಜ್ ಸಚಿವರು):

ಅ) ಕೊಡಗು ಜಿಲ್ಲಾ ಪಂಚಾಯತಿಯ ಇಂಜನಿಯರಿಂಗ್ ವಿಭಾಗಕ್ಕೆ ಜಿಲ್ಲಾ ಪಂಚಾಯತಿಯಿಂದ ಮಂಜೂರಾದ ಹಣದ ವಿವರ ಹೀಗಿದೆ.

(ರೂ. ಲಕ್ಷಗಳಲ್ಲಿ)

	1992-93	1993-94
ಯೋಜನೆ	454.66	555.45
ಯೋಜನೇತರ	117.35	113.92
ಒಟ್ಟು ರೂ.	572.01	669.37

ಆ. ಸರ್ಕಾರದಿಂದ ಜಿಲ್ಲಾ ಪಂಚಾಯತಿಗೆ ತಾಲ್ಲೂಕುವಾರು ಹಣ ಬಿಡುಗಡೆ ಮಾಡುವ ಕ್ರಮವಿರುವುದಿಲ್ಲ, ಬಿಡುಗಡೆ ಮಾಡಿದ ಅನುದಾನಗಳ ವಿವರಗಳು ಹೀಗಿವೆ.

(ರೂ. ಲಕ್ಷಗಳಲ್ಲಿ)

	1992-93	1993-94
ಯೋಜನೆ	438.96	422.85
ಯೋಜನೇತರ	117.33	80.78
ಒಟ್ಟು ರೂ.	556.29	503.63

ಇ. ಇಲ್ಲ

ಈ. ಉದ್ಭವಿಸುವುದಿಲ್ಲ.

ಕಂಟ್ರಾಕ್ಟ್ ಕೆಲಸಗಳನ್ನು ವ್ಯವಸಾಯ ಕೂಲಿಗಾರರಿಗೆ ನೀಡುವ ಬಗ್ಗೆ

591 - ಶ್ರೀ ಕೆ. ಸಿದ್ದಯ್ಯ (ಸಂತೇಮಾರನಹಳ್ಳಿ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಂಟ್ರಾಕ್ಟ್ ಕೆಲಸಗಳನ್ನು ವ್ಯವಸಾಯ ಕೂಲಿಗಾರರಿಗೆ ನೀಡಲು ಸರ್ಕಾರವು ಪರಿಗಣಿಸುವುದೇ ?

ಆ) ರಾಜ್ಯದಲ್ಲಿ ಕೂಲಿಗಾರರ ಸಹಕಾರ ಸಂಘಗಳಿರುವುದು ವಾಸ್ತವಾಂಶವಲ್ಲವೇ ?

ಇ) ಅವುಗಳು ಸ್ಥಗಿತಗೊಂಡಿರುವುದಕ್ಕೆ ಕಾರಣಗಳೇನು

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು) :

ಅ) ಸರ್ಕಾರವು ಗ್ರಾಮಾಂತರ ಪ್ರದೇಶಗಳಲ್ಲಿ ಅಭಿವೃದ್ಧಿ ಕಾರ್ಯವನ್ನು ಕೈಗೆತ್ತಿಕೊಂಡಾಗ ಸ್ಥಳೀಯ ಕಾರ್ಮಿಕರು ಉದ್ಯೋಗಾವಕಾಶ ಪಡೆಯುವರು.

ಆ) ಹೌದು.

ಇ) ಸಮರ್ಥ ನಾಯಕತ್ವದ ಅಭಾವ, ಅಸಮರ್ಥ ನಿರ್ವಹಣೆ ಮತ್ತು ಸದಸ್ಯರಲ್ಲಿ ಆಂತರಿಕ ಬಿಕ್ಕಟ್ಟು ಇತ್ಯಾದಿ.

ಮೂರ್ತೆದಾರರ ಸೊಸೈಟಿಗಳ ಸಂಖ್ಯೆ

553 - ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದರೆ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಮೂರ್ತೆದಾರರ ಸೊಸೈಟಿಗಳಿವೆ ?

ಆ) ಇನ್ನೆಷ್ಟು ಸಹಕಾರಿ ಸಂಘಗಳು ನೋಂದಾವಣೆಗೆ ಅರ್ಜಿ ಸಲ್ಲಿಸಿವೆ ?

ಇ) ಅವುಗಳನ್ನು ಯಾವಾಗ ಮಾಡಲಾಗುವುದು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು) :

ಅ) 35

ಆ) 19

ಇ) ಅಬಕಾರಿ ಇಲಾಖೆಯಿಂದ ಅನುಮತಿ ದೊರೆತ ತಕ್ಷಣ.

ರೈತರು ಪಡೆದು ಕೊಂಡಿರುವ ಸಹಕಾರಿ ಸಾಲದ ಮೇಲಿನ ಬಡ್ಡಿ ಮನ್ನಾ

557 - ಶ್ರೀ ಗುರುಪಾದಪ್ಪ ನಾಗಮಾರಹಳ್ಳಿ (ಔರಾದ್) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿನ ವಿವಿಧ ಸಹಕಾರ ಸಂಘಗಳಿಂದ ಹಾಗೂ ಸಹಕಾರಿ ಬ್ಯಾಂಕುಗಳಿಂದ ರೈತರು ಪಡೆದುಕೊಂಡಿರುವ ಸಾಲದ ಮೊತ್ತವೆಷ್ಟು ?

ಆ) ಎಷ್ಟು ವರ್ಷಗಳಿಂದ ಈ ಸಾಲದ ಮರುಪಾವತಿಯಾಗಿಲ್ಲ ಹಾಗೂ ಇದಕ್ಕೆ ಸೇರಿರುವ ಬಡ್ಡಿಯ ಮೊತ್ತವೆಷ್ಟು ?

ಇ) ಇತ್ತೀಚಿನ ವರ್ಷಗಳಲ್ಲಿ ರಾಜ್ಯದ ರೈತರು ಅತಿವೃಷ್ಟಿ ಅನಾವೃಷ್ಟಿ ಹಾಗೂ ಭೂಕಂಪದಂತಹ ನೈಸರ್ಗಿಕ ದುರಂತಗಳನ್ನು ಎದುರಿಸುತ್ತಿರುವುದರಿಂದ ಸರ್ಕಾರವು ಕಡೇ ಪಕ್ಷ ಸಹಕಾರಿ ಸಾಲದ ಮೇಲೆ ಬಡ್ಡಿಯನ್ನಾದರೂ ಮನ್ನಾಮಾಡುವುದೇ ?

ಈ) ಇಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು) :

ಅ) ರಾಜ್ಯದಲ್ಲಿ ಸಹಕಾರ ಸಂಘಗಳಿಂದ ಹಾಗೂ ಸಹಕಾರಿ ಬ್ಯಾಂಕುಗಳಿಂದ ರೈತರು ಕಳೆದ ಮೂರು ವರ್ಷಗಳಲ್ಲಿ ಪಡೆದ ಸಾಲದ ವಿವರ:

(ರೂ. ಲಕ್ಷಗಳಲ್ಲಿ)

	ವರ್ಷಗಳು		
ಸಾಲದ ವಿವರ	1990-91	1991-92	1992-93
1. ಅಲ್ಪಾವಧಿ	9678.87	8993.21	21105.00
2. ಮಧ್ಯಮಾವಧಿ	863.37	760.03	918.00
3. ಮಧ್ಯಮಾವಧಿ ಪರಿವರ್ತಿತ	159.58	36.53	849.60
4. ಧೀರ್ಘಾವಧಿ	7216.54	9721.30	12056.95
ಒಟ್ಟು	17918.36	19511.07	34929.55

ಆ) ದಿನಾಂಕ 30-6-1993ಕ್ಕೆ 350.91 ಕೋಟಿ ರೂ.ಗಳ ಸಾಲ ಮರುಪಾವತಿಯಾಗಿಲ್ಲ, ವರ್ಷಾವಾರು ವಿವರಗಳು ಕೆಳಕಂಡಂತೆ ಇವೆ.

(ಕೋಟಿ ರೂ.ಗಳಲ್ಲಿ)

ಒಂದು ವರ್ಷದ ಒಳಗೆ	102.54
ಒಂದರಿಂದ ಮೂರು ವರ್ಷ	132.83
3 ವರ್ಷದಿಂದ ಮೇಲ್ಪಟ್ಟು	115.54
ಒಟ್ಟು	350.91

ಮರುಪಾವತಿಯಾಗಿಲ್ಲವಾದ ಸಾಲದಲ್ಲಿ ಸೇರಿರುವ ಬಡ್ಡಿ 147.14ಕೋಟಿ ರೂ.ಗಳಷ್ಟು ಇರುತ್ತವೆ.

ಇ) ಇಲ್ಲ

ಈ) ರೈತರು ಹಾಗೂ ಸಹಕಾರ ಸಂಘಗಳ ಹಿತದೃಷ್ಟಿಯಿಂದ ಬಡ್ಡಿ ಮನ್ನಾ ಮಾಡಿರುವುದಿಲ್ಲ.

ಮೂಲ್ಕಿ ಸೊಸೈಟಿಯಲ್ಲಿ ಚಿನ್ನಾಭರಣದ ಕಳುವು

561 - ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದರೆ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಲ್ಕಿ ಸಂಘದಲ್ಲಿ ಅಡವಿಟ್ಟ ಚಿನ್ನಾಭರಣ ಎಷ್ಟು ಮೌಲ್ಯದ್ದು ಕಳುವಾಗಿದೆ?

ಆ) ಇನ್ಶೂರೆನ್ಸಿನಿಂದ ಎಷ್ಟು ಪರಿಹಾರ ಸಿಕ್ಕಿದೆ?

ಇ) ಈ ಸೊಸೈಟಿಯ ಆರ್ಥಿಕ ಕಷ್ಟದಿಂದಾಗಿ ಈಗ ನಡೆಸಲಿಕ್ಕಾಗದ ಪರಿಸ್ಥಿತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಈ ಸೊಸೈಟಿಯ ಪುನಃ ಯೋಗ್ಯ ರೀತಿಯಲ್ಲಿ ವ್ಯವಹಾರ ನಡೆಸಲು ಸರ್ಕಾರ ಏನು ಕ್ರಮ ಕೈಗೊಳ್ಳುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು) :

ಅ) ರೂ. 22,64,062-00

ಆ) ರೂ. 6,42,870-00

ಇ) ಹೌದು.

ಈ) ಸಂಘದ ಆಡಳಿತ ಮಂಡಳಿಯನ್ನು ರದ್ದುಗೊಳಿಸಿ, ಆಡಳಿತಾಧಿಕಾರಿಯನ್ನು ನೇಮಕ ಮಾಡಲಾಗಿದೆ. ಈ ಸಂಘವು ಪುನಃ ಯೋಗ್ಯ ರೀತಿಯಲ್ಲಿ ವ್ಯವಹಾರ ನಡೆಸಲು ವ್ಯವಹಾರ ಅಭಿವೃದ್ಧಿ ಯೋಜನೆ (ಬಿ.ಡಿ.ಪಿ) ಯ ಮುಖಾಂತರ ವ್ಯಾಪಕ ಕಾರ್ಯಕ್ರಮ ಹಾಕಿಕೊಳ್ಳಲಾಗುವುದು.

ದಕ್ಷಿಣ ಕನ್ನಡ ಜಿಲ್ಲೆಯ ಪಂಚಾಯತಿ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರ ಸಂಖ್ಯೆ

559 - ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದರೆ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಬಾರಿಯ ಚುನಾವಣೆಯಲ್ಲಿ ಆಯ್ಕೆಯಾದ ಮಂಡಳ ಅಧ್ಯಕ್ಷರು, ಉಪಾಧ್ಯಕ್ಷರುಗಳಾರು (ವಿವರ ಕೊಡಿ)

ಆ) ಅವರಲ್ಲಿ

(1) ಮಹಿಳಾ ಅಧ್ಯಕ್ಷರುಗಳೆಷ್ಟು ;
(2) ಮಹಿಳಾ ಉಪಾಧ್ಯಕ್ಷರುಗಳೆಷ್ಟು ;
(3) ಪರಿಶಿಷ್ಟ ಜಾತಿ ಅಧ್ಯಕ್ಷರುಗಳೆಷ್ಟು ;
(4) ಪರಿಶಿಷ್ಟ ಜಾತಿ ಉಪಾಧ್ಯಕ್ಷರುಗಳೆಷ್ಟು ;
(5) ಪರಿಶಿಷ್ಟ ಪಂಗಡಗಳ ಅಧ್ಯಕ್ಷರುಗಳೆಷ್ಟು ;
(6) ಪರಿಶಿಷ್ಟ ಪಂಗಡಗಳ ಉಪಾಧ್ಯಕ್ಷರುಗಳೆಷ್ಟು ;
(7) ಹಿಂದುಳಿದ ವರ್ಗಗಳ ಉಪಾಧ್ಯಕ್ಷರುಗಳೆಷ್ಟು ;
(8) ಹಿಂದುಳಿದ ವರ್ಗಗಳ ಉಪಾಧ್ಯಕ್ಷರುಗಳೆಷ್ಟು ;

ಇ) ಈ ವಿಭಾಗದ ಅಧ್ಯಕ್ಷರ ಕಾರ್ಯನಿರ್ವಹಣೆಗೆ ಅನುಕೂಲವಾಗುವಂತೆ ಸರ್ಕಾರ ಏನು ಸಹಾಯ ಒದಗಿಸುವುದು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.):

ಅ)	ಅಧ್ಯಕ್ಷರು	ಉಪಾಧ್ಯಕ್ಷರು
	336	331

(ಪಟ್ಟಿಯನ್ನು ಲಗತ್ತಿಸಿದೆ)

ಆ)		
	1) ಮಹಿಳಾ ಅಧ್ಯಕ್ಷರು	132
	2) ಮಹಿಳಾ ಉಪಾಧ್ಯಕ್ಷರು	149
	3) ಪರಿಶಿಷ್ಟ ಜಾತಿ ಅಧ್ಯಕ್ಷರು	53
	4) ಪರಿಶಿಷ್ಟ ಜಾತಿ ಉಪಾಧ್ಯಕ್ಷರು	59
	5) ಪರಿಶಿಷ್ಟ ಪಂಗಡದ ಅಧ್ಯಕ್ಷರು	18
	6) ಪರಿಶಿಷ್ಟ ಪಂಗಡದ ಉಪಾಧ್ಯಕ್ಷರು	19
	7) ಹಿಂದುಳಿದ ವರ್ಗಗಳ ಅಧ್ಯಕ್ಷರು	125
	8) ಹಿಂದುಳಿದ ವರ್ಗಗಳ ಉಪಾಧ್ಯಕ್ಷರು	127

ಇ) ಅಗತ್ಯವಾದ ಎಲ್ಲಾ ಸಹಾಯವು ಗ್ರಾಮ ಪಂಚಾಯತಿಗಳಿಂದ ದೊರಕುತ್ತದೆ.

ಅನುಬಂಧ

ಕ್ರಮ ಸಂಖ್ಯೆ	ತಾಲ್ಲೂಕು	ಒಟ್ಟು		ಮಹಿಳಾ	ಮಹಿಳಾ	ಪಂ.ಜಾತಿ	ಪ.ಜಾತಿ	ಪ.ಪಂ	ಪ.ಪಂ	ಹಿಂ.ವರ್ಗ	ಹಿಂ.ವರ್ಗ
		ಆಯ್ಕೆಯಾದ ಅಧ್ಯಕ್ಷರು	ಉಪಾಧ್ಯಕ್ಷರು	ಅಧ್ಯಕ್ಷರು	ಉಪಾಧ್ಯಕ್ಷರು	ಅಧ್ಯಕ್ಷರು	ಉಪಾಧ್ಯಕ್ಷರು	ಅಧ್ಯಕ್ಷರು	ಉಪಾಧ್ಯಕ್ಷರು	ಅಧ್ಯಕ್ಷರು	ಉಪಾಧ್ಯಕ್ಷರು
1	2	3	4	5	6	7	8	9	10	11	12
1	ಸುಳ್ಯ	25	26	7	15	4	5	2	-	7	9
2	ಬಂಟ್ವಾಳ	45	44	16	14	8	9	3	2	18	19
3	ಕುಂದಾಪುರ	48	46	19	17	10	11	2	2	19	17
4	ಮಂಗಳೂರು	44	44	19	25	8	8	1	3	15	14
5	ಕಾರ್ಕಳ	38	39	16	19	6	7	1	2	12	11
6	ಬೆಳ್ತಂಗಡಿ	41	38	20	17	8	5	3	4	18	19
7	ಪುತ್ತೂರು	39	38	12	17	7	6	2	2	13	14
8	ಉಡುಪಿ	56	56	23	25	12	8	4	4	23	24
	ಒಟ್ಟು	336	331	132	149	53	59	18	19	125	127

ಹುಕ್ಕೇರಿ ತಾಲ್ಲೂಕಿನಲ್ಲಿ ಜೆ.ಆರ್.ವೈ. 80% ಜೆ.ಆರ್.ವೈ. 20% ಯೋಜನೆಯಲ್ಲಿ ತೆಗೆದುಕೊಂಡ ಕಾಮಗಾರಿ ಕೆಲಸ

478 - ಶ್ರೀ ಉಮೇಶ.ವಿ. ಕತ್ತಿ (ಹುಕ್ಕೇರಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಕ್ಕೇರಿ ತಾಲ್ಲೂಕಿನ ಜೆ.ಆರ್.ವೈ. 80% ಜೆ.ಆರ್.ವೈ. 20% ಯೋಜನೆ ಅಡಿಯಲ್ಲಿ ತೆಗೆದುಕೊಂಡ ಕಾಮಗಾರಿಗಳ ವೆಚ್ಚವೆಷ್ಟು;

ಆ) ಆ ಕಾರ್ಯಗಳು ಅರ್ಧಕ್ಕೆ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ, ಅದನ್ನು ಯಾವಾಗ ಪೂರ್ತಿಗೊಳಿಸಲಾಗುವುದು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) 94ನೇ ಫೆಬ್ರವರಿ ಅಂತ್ಯದವರೆಗೆ ಜೆ.ಆರ್.ವೈ. 80% ಮತ್ತು 20% ರಲ್ಲಿ ಕ್ರಮವಾಗಿ ಈ ಕೆಳಕಂಡಂತೆ ವೆಚ್ಚ ಮಾಡಲಾಗಿದೆ.

80 % : ರೂ. 37.217 ಲಕ್ಷ
20% : ರೂ. 8.437 ಲಕ್ಷ

ಆ) ಇಲ್ಲ.

ಇ) ಪ್ರಶ್ನೆ (ಅ)ಗೆ ಉತ್ತರಿಸಿರುವಂತೆ ಇದು ಉದ್ಭವಿಸುವುದಿಲ್ಲ.

ಬೆಂಗಳೂರು ಗಾಯತ್ರಿನಗರ ಗೃಹ ನಿರ್ಮಾಣ ಸಂಘ ಕುರಿತು

436 - ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ಗಾಯತ್ರಿನಗರ ಗೃಹನಿರ್ಮಾಣ ಸಹಕಾರ ಸಂಘದವರು ಅದರ ಸದಸ್ಯರಲ್ಲದವರಿಗೆ ನಿವೇಶನಗಳನ್ನು ಹಂಚಿದ್ದಾರೆ ಎಂಬ ಬಗ್ಗೆ ಸದಸ್ಯರಿಂದ ದೂರುಗಳು ಸರ್ಕಾರಕ್ಕೆ ಬಂದಿವೆಯೇ?

ಆ) ಸದರಿ ಗೃಹ ನಿರ್ಮಾಣ ಸಂಘದವರು ಹಂಚಿರುವ ನಿವೇಶನಗಳ ಸಂಖ್ಯೆ ಎಷ್ಟು ಅದರಲ್ಲಿ ನಿವೇಶನಗಳನ್ನು ಪಡೆದ ಹಳೆಯ ಸದಸ್ಯರುಗಳು ಮತ್ತು ಹೊಸ ಸದಸ್ಯರೇತರರುಗಳು ಎಷ್ಟು?

ಇ) ನಿಯಮ ಬಾಹಿರವಾಗಿ ಸದಸ್ಯರೇತರರಿಗೆ ನಿವೇಶನಗಳನ್ನು ಹಂಚಿರುವ ಈ ಗೃಹನಿರ್ಮಾಣ ಸಂಘದವರ ಮೇಲೆ ಕಾನೂನು ರೀತ್ಯಾ ಕ್ರಮಗಳನ್ನು ಸರಕಾರ ಜರುಗಿಸುವುದೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು) :

ಅ) ಇಲ್ಲಾ.

ಆ) 120 ನಿವೇಶನಗಳನ್ನು ಸಂಘ ಹಂಚಿರುತ್ತದೆ. ಹೊಸ ಸದಸ್ಯರೇತರರಿಗೆ ಹಂಚಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ದಿನಾಂಕ 23.3.94ರಂದು ವಿಧಾನಸಭೆಯಲ್ಲಿ ಪ್ರಶ್ನೋತ್ತರಗಳು ನಡೆಯದ ಕಾರಣ ಆ ದಿನದ 11ನೇ ಪಟ್ಟಿಯ ಚುಕ್ಕೆ ಗುರುತಿನ

19 ಪ್ರಶ್ನೆಗಳಿಗೆ ಉತ್ತರಗಳನ್ನು ಮತ್ತು ಚುಕ್ಕೆ ಗುರುತಿಲ್ಲದ 18 ಪ್ರಶ್ನೆಗಳ ಉತ್ತರಗಳನ್ನು ಈ ಸಭೆಯ ಮುಂದೆ ಮಂಡಿಸುತ್ತೇನೆ.

23-3-94ರ ಚುಕ್ಕೆ ಗುರುತಿನ ಪ್ರಶ್ನೋತ್ತರಗಳು

ಹೊಳೆನರಸೀಪುರದಲ್ಲಿರುವ ಪದವಿಪೂರ್ವ ಕಾಲೇಜುಗಳು

544 - ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೆನರಸೀಪುರ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹೊಳೆನರಸೀಪುರ ತಾಲ್ಲೂಕಿನಲ್ಲಿರತಕ್ಕ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ ಎಷ್ಟು;

ಆ) 1993-94ರಲ್ಲಿ ಆ ತಾಲ್ಲೂಕಿನಲ್ಲಿ ಎಷ್ಟು ಸರ್ಕಾರಿ ಪದವಿ ಪೂರ್ವಕಾಲೇಜುಗಳನ್ನು ತೆರೆಯಲಾಗಿದೆ.

ಇ) 1994-95ರಲ್ಲಿ ಹೊಳೇನರಸೀಪುರ ತಾಲ್ಲೂಕಿನಲ್ಲಿ ಎಷ್ಟು ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ತೆರೆಯಲಾಗುವುದು.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು) :

ಅ) ಹೊಳೆನರಸೀಪುರ ತಾಲ್ಲೂಕಿನಲ್ಲಿ ಒಟ್ಟು 5 ಸರ್ಕಾರಿ ಪದವಿ ಪೂರ್ವ ಕಾಲೇಜುಗಳು ಇರುತ್ತವೆ.

ಆ) 1993-94ರಲ್ಲಿ ಆ ತಾಲ್ಲೂಕಿನಲ್ಲಿ ಯಾವುದೇ ಸರ್ಕಾರಿ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಿರುವುದಿಲ್ಲ.

ಇ) 1994-95ರಲ್ಲಿ ಹೊಳೆನರಸೀಪುರ ತಾಲ್ಲೂಕಿನಲ್ಲಿ ಯಾವುದೇ ಸರ್ಕಾರಿ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ಪ್ರಸ್ತಾವನೆ ಬಂದಿರುವುದಿಲ್ಲ. ಪ್ರಸ್ತಾವನೆ ಬಂದಲ್ಲಿ ಪರಿಶೀಲಿಸಲಾಗುವುದು.

ಮಾಟೋಳ್ಳಿ ಮತ್ತು ಎಕ್ಕುಂಡಿ ಗ್ರಾಮಗಳಲ್ಲಿ ಮೀನುಗಾರರಿಗೆ ಮನೆಗಳ ನಿರ್ಮಾಣ

516 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಳಗಾಂ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಕೆಂಗಾನೂರು ಹಾಗೂ ಸೌದತ್ತಿ ತಾಲ್ಲೂಕಿನ ಮಾಟೋಳ್ಳಿ ಮತ್ತು ಎಕ್ಕುಂಡಿ ಗ್ರಾಮಗಳಲ್ಲಿ ಮೀನುಗಾರರು ಮನೆಗಳನ್ನು ಕಟ್ಟುವ ಸಲುವಾಗಿ ಸೊಸೈಟಿ ಮುಖಾಂತರ ಸ್ಥಳವನ್ನು ಸರ್ಕಾರಕ್ಕೆ ಒದಗಿಸಿದ ಸಂಗತಿ ನಿಜವೇ ?

ಆ) ಹಾಗಿದ್ದಲ್ಲಿ ಆ ಮೀನುಗಾರರಿಗೆ ಮನೆಗಳನ್ನು ಕಟ್ಟಲು ಸರ್ಕಾರದವರು ಯಾವ ಕ್ರಮವನ್ನು ಕೈಗೊಂಡಿರುವರು ?

ಇ) ಇನ್ನು ಎಷ್ಟು ದಿವಸಗಳಲ್ಲಿ ಅವರಿಗೆ ಮನೆಗಳನ್ನು ಕಟ್ಟಲು ಕ್ರಮಕೈಗೊಳ್ಳಲಾಗುವುದು ?

ಈ) ಸೊಸೈಟಿ ಮುಖಾಂತರ ಎಷ್ಟು ಜನ ಮೀನುಗಾರರು ಸ್ಥಳವನ್ನು ಸರ್ಕಾರಕ್ಕೆ ಮನೆಕಟ್ಟಲು ಕೊಟ್ಟಿರುವರು (ಅವರ ಹೆಸರುಗಳನ್ನು ವಿವರವಾಗಿ ನೀಡುವುದಾಗಬೇಕು)

ಉ) ಸರ್ಕಾರದ ನಿರ್ಲಕ್ಷತನದಿಂದ ಅಲ್ಲಿ ಮನೆಗಳನ್ನು ಕಟ್ಟಲು ವಿಳಂಬವಾಗುತ್ತಿದೆಂಬ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಊ) ವಿಧಾನ ಸಭೆಯಲ್ಲಿ ಆಶ್ವಾಸನೆ ನೀಡಿವರೂ ಸಹ ಕೂಡಲೇ ಮನೆಗಳನ್ನು ಕಟ್ಟಿದೆ ವಿಳಂಬ ಮಾಡುತ್ತಿರುವ ಸಂಗತಿ ನಿಜವೇ?

ಶ್ರೀ ವಸಂತ ವಿ. ಸಾಲಿಯಾನ್ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :

ಅ) ಹೌದು.

ಆ) ಈ ಯೋಜನೆಗೆ ಕೇಂದ್ರ ಸರ್ಕಾರದ ಆಡಳಿತಾತ್ಮಕ ಮಂಜೂರಾತಿ ದೊರೆತಿದ್ದು ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಈ ಯೋಜನೆಯಡಿ ಕೇಂದ್ರದ ಪಾಲಿನ ಅನುದಾನ ಬಿಡುಗಡೆಯಾಗಬೇಕಿದ್ದು ಸದರಿ ಅನುದಾನ ಬಿಡುಗಡೆಯಾದ ಕೂಡಲೇ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಈ) ಕೆಂಗಾನೂರು ಗ್ರಾಮದ 64 ಮೀನುಗಾರರಿಗೆ ಮೋಟೊಳ್ಳಿ ಗ್ರಾಮದ 37 ಮೀನುಗಾರರಿಗೆ ಮತ್ತು ಯಕ್ಕುಂಡಿ ಗ್ರಾಮದ 27 ಮೀನುಗಾರರಿಗೆ ಮನೆ ಕಟ್ಟಿಕೊಡಲಾಗುವುದು.

(ಫಲಾನುಭವಿಗಳ ಪಟ್ಟಿ ಲಗತ್ತಿಸಿದೆ)

ಉ) ಭಾರತ ಸರ್ಕಾರದ ಮಂಜೂರಾತಿ ತಡವಾಗಿ ಬಂದಿರುವ ಕಾರಣ, ಈ ವಿಚಾರದಲ್ಲಿ ಮುಂದಿನ ಕ್ರಮ ತೆಗೆದುಕೊಳ್ಳುವಲ್ಲಿ ವಿಳಂಬವಾಗಿದೆ.

ಊ) ಇಲ್ಲ.

ಮಾಟೊಳ್ಳಿ ಗ್ರಾಮದ ಫಲಾನುಭವಿಗಳ ಹೆಸರು :

1) ಶ್ರೀ ಮಡಿವಾಳಪ್ಪಾ ಭೀಮಪ್ಪಾ ಭೋವಿ
2) ಶ್ರೀ ಭೀಮಪ್ಪಾ ಹಣಮಂತಪ್ಪಾ ಭೋವಿ
3) ಶ್ರೀ ರುದ್ರಪ್ಪಾ ಹಣಮಂತಪ್ಪಾ ಭೋವಿ
4) ಶ್ರೀ ಯಮನಪ್ಪಾ ಫಕೀರಪ್ಪಾ ಭೋವಿ
5) ಶ್ರೀ ಫಕೀರಪ್ಪ ಗಂಗಪ್ಪಾ ಭೋವಿ
6) ಶ್ರೀ ಮಲ್ಲಪ್ಪಾ ಗಂಗಪ್ಪಾ ಭೋವಿ
7) ಶ್ರೀ ಗಂಗಪ್ಪಾ ಪರಶುರಾಮ ಭೋವಿ
8) ಶ್ರೀ ಹುಚ್ಚಪ್ಪಾ ದೊ-ಹಣಮಂತಪ್ಪಾ ಭೋವಿ
9) ಶ್ರೀ ಈರಪ್ಪಾ ದೊ-ಹಣಮಂತಪ್ಪಾ ಭೋವಿ
10) ಶ್ರೀ ಯಲ್ಲಪ್ಪಾ ಮಲ್ಲಪ್ಪಾ ಭೋವಿ
11) ಶ್ರೀ ಗಂಗಪ್ಪಾ ಫಕೀರಪ್ಪಾ ಭೋವಿ
12) ಶ್ರೀ ಬಸಪ್ಪಾ ಫಕೀರಪ್ಪಾ ಭೋವಿ
13) ಶ್ರೀ ಯಲ್ಲಪ್ಪಾ ಮಂಡಲೀಕಪ್ಪಾ ಭೋವಿ
14) ಶ್ರೀ ಶೆಟ್ಟಪ್ಪಾ ಈರಪ್ಪಾ ಭೋವಿ
15) ಶ್ರೀ ಉದ್ದಪ್ಪಾ ಕಲ್ಲಪ್ಪಾ ಬಾಗ ಬಾಗಡಿ (ಭೋವಿ)
16) ಶ್ರೀ ಅಲ್ಲಾಸಾಬ ರಾಜೇಸಾಬ ಮೆಕಾನದಾರ
17) ಶ್ರೀ ದಿಲಾವಾರಸಾಬ ರಾಜೇಸಾಬ ಮೆಕಾನ್‌ದಾರ

18) ಶ್ರೀ ಮುಗಟ ಹುಸೇನಸಾಬ ನೇಟಗತ್ತಿ
19) ಶ್ರೀ ಇಬ್ರಾಹಿಂ ಮುಗಟಸಾಬ ನೇಟಗತ್ತಿ
20) ಶ್ರೀ ನೀಲಕಂಠ ನಿಂಗಪ್ಪಾ ಭೋವಿ
21) ಶ್ರೀ ಮಹಾದೇವ ನಾಗಪ್ಪಾ ಭೋವಿ
22) ಶ್ರೀ ಬಸಪ್ಪಾ ರಾಮಪ್ಪಾ ಭೋವಿ
23) ಶ್ರೀ ರಮೇಶ ಬಸಲಿಂಗಪ್ಪಾ ಭೋವಿ
24) ಶ್ರೀ ಮಾರುತಿ ಯಮನಪ್ಪಾ ಭೋವಿ
25) ಶ್ರೀ ಫಕೀರಪ್ಪ ಯಮನಪ್ಪಾ ಭೋವಿ
26) ಶ್ರೀ ಮಚ್ಚಪ್ಪಾ ಹಣಮಂತಪ್ಪಾ ಕಟ್ಟಿಣ್ಣನವರ ಭೋವಿ
27) ಶ್ರೀ ಯಲ್ಲಪ್ಪಾ ಹಣಮಂತಪ್ಪಾ ಕಟ್ಟಿಣ್ಣನವರ ಭೋವಿ
28) ಶ್ರೀ ಭೀಮಪ್ಪ ರಾಮಪ್ಪ ಭೋವಿ
29) ಶ್ರೀ ನಾಗಪ್ಪಾ ಬಸಪ್ಪಾ ಭೋವಿ
30) ಶ್ರೀ ಪುಂಡಲೀಕಪ್ಪಾ ಸಿದ್ದಪ್ಪಾ ಹರಿಜನ
31) ಶ್ರೀ ನಿಂಗಪ್ಪಾ ಗಂಗಪ್ಪಾ ತಳವಾರ
32) ಶ್ರೀ ಬಸಪ್ಪಾ ಗಂಗಪ್ಪಾ ಭೋವಿ
33) ಶ್ರೀ ಇಸ್ಮಾಯಿಲ್‌ಸಾಬ ಆ ಮನಿಯಾರ
34) ಶ್ರೀ ಗೋರೆಸಾಬ ದೊ ಫಕೀರಸಾಬ ನೂಲಗಿ
35) ಶ್ರೀ ದೇವಪ್ಪ ನಿಂಗಪ್ಪ ಭೋವಿ
36) ಶ್ರೀ ಫಕೀರಪ್ಪ ಬಸಪ್ಪ ಭೋವಿ
37) ಶ್ರೀ ರಾಜಪ್ಪ ಈರಪ್ಪ ಭೋವಿ

<u>ಯಕ್ಕುಂಡಿ ಗ್ರಾಮದ ಫಲಾನುಭವಿಗಳ ಹೆಸರು</u>

1) ಶ್ರೀ ಗಾಸಫೀರಾ ಸೈಯದ್ ಫೀರಾ ಫೀರಜಾದ್
2) ಶ್ರೀ ರಹೀಮಸಾಬ ರಸೂಲು ಸಾಬ ಮುಜಾವರ
3) ಶ್ರೀ ದಿಲಾವರ್ ಸಾಬ ರಸೂಲ ಸಾಬ ಮುಜಾವರ
4) ಶ್ರೀ ಗೋರಿಸಾಬ ಅಪ್ಪಾಸಾಬ ಮುಜಾವರ
5) ಶ್ರೀ ಫಕೀರ ಸಾಬ್ ಖಾನಿ ಸಾಬ ನದಾಫ್
6) ಶ್ರೀ ಮಲ್ಲಪ್ಪಾ ಗಂಗಪ್ಪಾ ಭೋವಿ
7) ಶ್ರೀ ಬಾಬೂಸಾಬ ಬತ್ತೇಸಾಬ ತರಗೋಲ
8) ಶ್ರೀ ದಾದುಸಾಬ ಮತ್ತೇಸಾಬ ತರಗೋಲ
9) ಶ್ರೀ ಮಹ್ಮದ್‌ಗೋರಿ ಗೋರಿಸಾಬ ಮುಲ್ಲಾ
10) ಶ್ರೀ ಇಸ್ಮಾಯಿಲ್‌ಸಾಬ ಗೋರಿಸಾಬ ಮುಲ್ಲಾ
11) ಶ್ರೀ ರಫೀಕ ಮಹ್ಮದ್‌ಗೋರಿ ಮುಲ್ಲಾ
12) ಶ್ರೀ ಖಾರುಖಾ ಹುಸೇನ ಸೈಯದ್ ಫೀರಾ ಫಿರಜಾದ್
13) ಶ್ರೀ ಸಣ್ಣ ಇನಾಶಾ ಗೋರಸಾಬ ಮದನಸ್

14) ಶ್ರೀ ಮಹ್ಮದ್‌ಸಾಬ ದಿಲಾವರಸಾಬಮುಲ್ಲಾ
15) ಶ್ರೀ ಇಮಾಮಸಾಬ ಮಸ್ತಾನಸಾಬ ಬಿಜಲ್‌ಖಾನ
16) ಶ್ರೀ ಹುಸನ್‌ಫೀರಾ ಸೈಯದ್ ಫೀರಾ ಫಿರಜಾನ್
17) ಶ್ರೀ ದಿಲಾವರಸಾಬ ಹಯತಸಾಬ ಮುಜಾವರ
18) ಶ್ರೀ ದಿಲಾವರಸಾಬ ಬುಡ್ಡೆಸಾಬ ಮದಲೂರ
19) ಶ್ರೀ ಉಸ್ಮಾನ ಸಾಬ ದಿಲಾವರ ಸಾಬ ಅತ್ತಾರ
20) ಶ್ರೀ ರಫೀಕ್ ರಸೂಲಸಾಬ್ ಮುಜಾವರ
21) ಶ್ರೀ ಮಹ್ಮದ್‌ಗೋರಿ ರಸೂಲ ಸಾಬ ಮುಜಾವರ
22) ಶ್ರೀ ಕುತುಬುದ್ದೀನ್ ಇಮಾಮಸಾಬ್ ಮುಲ್ಲಾ
23) ಶ್ರೀ ಮಾಬೂಬಸಾಬ ಇಮಾಮಸಾಬ ದೊಡ್ಡಮನಿ
24) ಶ್ರೀ ದಿಲಾವರ ಸಾಬ ಫಕೀರಸಾಬ ನದಾಫ್
25) ಶ್ರೀ ಸಣ್ಣಪ್ಪ ಧರೆಪ್ಪ ಶಿಂಧೋಣಿ
26) ಶ್ರೀ ಗೋರೆಸಾಬ ದಾದಸಾಬ ತೋರಗಲ್ಲ
27) ಶ್ರೀ ಭೀಮಪ್ಪ ರಾಮಪ್ಪ ಭೋವಿ

ಫಲಾನುಭವಿಗಳ ಹೆಸರು

1) ಶ್ರೀ ಮಡವಾಳಪ್ಪ ಸಣ್ಣಪ್ಪ ಭೋವಿ
2) ಶ್ರೀ ಗಂಗಪ್ಪ ಮಡವಾಳಪ್ಪ ಭೋವಿ
3) ಶ್ರೀ ಮಲ್ಲಪ್ಪ ಸಣ್ಣಪ್ಪ ಭೋವಿ
4) ಶ್ರೀ ಗುರುನಾಥ ಮಲ್ಲಪ್ಪ ಭೋವಿ
5) ಶ್ರೀ ಬಸಪ್ಪ ಸಣ್ಣಪ್ಪ ಭೋವಿ
6) ಶ್ರೀ ಸಿದ್ದಪ್ಪ ಬಸಪ್ಪ ಭೋವಿ
7) ಶ್ರೀ ಸೋಮಪ್ಪ ರುದ್ರಪ್ಪ ಭೋವಿ
8) ಶ್ರೀ ರುದ್ರಪ್ಪ ಸೋಮಪ್ಪ ಭೋವಿ
9) ಶ್ರೀ ವೀರಪ್ಪ ರುದ್ರಪ್ಪ ಭೋವಿ
10) ಶ್ರೀ ಪುಂಡಲೀಕಪ್ಪ ಬಸಪ್ಪ ಭೋವಿ
11) ಶ್ರೀ ಯಲ್ಲಪ್ಪ ಬಸಪ್ಪ ಭೋವಿ
12) ಶ್ರೀ ಮದ್ದಪ್ಪ ಬಸಪ್ಪ ಭೋವಿ
13) ಶ್ರೀ ಭೀಮಪ್ಪ ರಾಜಪ್ಪ ಭೋವಿ
14) ಶ್ರೀ ಶಂಕ್ರಪ್ಪ ಭೀಮಪ್ಪ ಭೋವಿ
15) ಶ್ರೀ ಬಸವರಾಜ ಯಲ್ಲಪ್ಪ ಭೋವಿ
16) ಶ್ರೀ ಮಹಾಂತೇಶ್ ಯಲ್ಲಪ್ಪ ಭೋವಿ
17) ಶ್ರೀ ಗಂಗಪ್ಪ ಫಕೀರಪ್ಪ ಭೋವಿ
18) ಶ್ರೀ ಚಂದ್ರಪ್ಪ ಗಂಗಪ್ಪ ಭೋವಿ

19) ಶ್ರೀ ಬಸಪ್ಪ ಫಕೀರಪ್ಪ ಭೋವಿ
20) ಶ್ರೀ ಪರಮಪ್ಪ ಬಸಪ್ಪ ಭೋವಿ
21) ಶ್ರೀ ಅಶೋಕ ಯಲ್ಲಪ್ಪ ಭೋವಿ
22) ಶ್ರೀ ಸಿದ್ದಪ್ಪ ಬಸಪ್ಪ ಭೋವಿ
23) ಶ್ರೀ ದೇವಪ್ಪ ಶಿದ್ದಪ್ಪ ಭೋವಿ
24) ಶ್ರೀ ಗಂಗಪ್ಪ ದೇವಪ್ಪ ಭೋವಿ
25) ಶ್ರೀ ಪುಂಡಲೀಕಪ್ಪ ಶಿದ್ದಪ್ಪ ಭೋವಿ
26) ಶ್ರೀ ಬಸಪ್ಪ ಶಿದ್ದಪ್ಪ ಭೋವಿ
27) ಶ್ರೀ ಫಕೀರಪ್ಪ ಯಲ್ಲಪ್ಪ ಭೋವಿ
28) ಶ್ರೀ ಯಲ್ಲಪ್ಪ ಫಕೀರಪ್ಪ ಭೋವಿ
29) ಶ್ರೀ ಫಕೀರಪ್ಪ ಬಸಪ್ಪ ಭೋವಿ
30) ಶ್ರೀ ನಾಗಪ್ಪ ಬಸಪ್ಪ ಭೋವಿ
31) ಶ್ರೀ ಶೆಟ್ಟೆಪ್ಪ ಶಿದ್ದಪ್ಪ ಭೋವಿ
32) ಶ್ರೀ ಪುಂಡಲೀಕಪ್ಪ ಫಕೀರಪ್ಪ ಭೋವಿ
33) ಶ್ರೀ ಮಲ್ಲಪ್ಪ ಫಕೀರಪ್ಪ ಭೋವಿ
34) ಶ್ರೀ ಬಸಪ್ಪ ಫಕೀರಪ್ಪ ಭೋವಿ
35) ಶ್ರೀ ಫಕೀರಪ್ಪ ಯಲ್ಲಪ್ಪ ಭೋವಿ

ಕೆಂಗಾನೂರು ಗ್ರಾಮ

36) ಶ್ರೀ ಶಿವಾಜಿ ಯಲ್ಲಪ್ಪ ಭೋವಿ
37) ಶ್ರೀ ಭೀಮಪ್ಪ ಶಿದ್ದಪ್ಪ ಭೋವಿ
38) ಶ್ರೀ ಬಸುರಾಜ ಭೀಮಪ್ಪ ಭೋವಿ
39) ಶ್ರೀ ಫಕೀರಪ್ಪ ಬಸಪ್ಪ ಭೋವಿ
40) ಶ್ರೀ ಪುಂಡಲೀಕ ಫಕೀರಪ್ಪ ಭೋವಿ
41) ಶ್ರೀ ಬಸಪ್ಪ ಫಕೀರಪ್ಪ ಭೋವಿ
42) ಶ್ರೀ ಮುತ್ತಪ್ಪ ಹನುಮಂತಪ್ಪ ಭೋವಿ
43) ಶ್ರೀ ಅಜ್ಜಪ್ಪ ಮುತ್ತಪ್ಪ ಭೋವಿ
44) ಶ್ರೀ ಹನುಮಂತಪ್ಪ ಮುತ್ತಪ್ಪ ಭೋವಿ
45) ಶ್ರೀ ಬಸಪ್ಪ ವೀರಪ್ಪ ಕೊಡ್ಲಿ
46) ಶ್ರೀ ಭೀಮಪ್ಪ ರಾಯಪ್ಪ ತಳವಾರ
47) ಶ್ರೀ ಸಿಂಗಪ್ಪ ವೀರಪ್ಪ ಕೊಡ್ಲಿ
48) ಶ್ರೀ ನಾಗಪ್ಪ ನಿಂಗಪ್ಪ ದೇವಕ್ಕನವರ
49) ಶ್ರೀ ಶಿಡ್ಲಂಗಪ್ಪ ಶಿವನಿಂಗಪ್ಪ ಮಡಿವಾಳರ
50) ಶ್ರೀ ಮಹಾದೇವ ಮಲ್ಲಪ್ಪ ತೇಲಕಾರ
51) ಶ್ರೀ ಸೋಮಪ್ಪ ಮಡಿವಾಳಪ್ಪ ತಲಕಾರ

52) ಶ್ರೀ ರಹಿಮಾನ ಸಾಬ ಮೇದಿಸಾಬ ಕಿತ್ತೂರ
53) ಶ್ರೀ ಬಾಬು ಗುಡು ಸಾಬ ಮಂದಿಮನಿ
54) ಶ್ರೀ ದೇವರ ಗುರುಸಾಬ ನದಾಫ್
55) ಶ್ರೀ ಬಾಬು ಮಗನಸಾಬ ನದಾಫ್
56) ಶ್ರೀ ದಸ್ತಗೀರಸಾಬ ಹುಸೇನಸಾಬ ನದಾಫ್
57) ಶ್ರೀ ರಸೂಲ ಹುಸೇನಸಾಬ ನದಾಫ್
58) ಶ್ರೀ ದೀವಾ ಇಮಾಮಸಾಬ ಹುಲಮನಿ
59) ಶ್ರೀ ಇಮಮಿಣ್ಣಾ ಮೊದಿನಸಾಬ ಹುಲಮನಿ
60) ಶ್ರೀ ದುರುಗಪ್ಪ ಶಿದ್ದಪ್ಪ ಹರಿಜನ
61) ಶ್ರೀ ಯಲ್ಲಪ್ಪ ಗಂಗಪ್ಪ ಹರಿಜನ
62) ಶ್ರೀ ಗಂಗಪ್ಪ ಯಂಕಪ್ಪ ಭೋವಿ
63) ಶ್ರೀ ಅರ್ಜುನ ಸೋಮಪ್ಪ ಭೋವಿ
64) ಶ್ರೀ ರಾಮಪ್ಪ ಗುಡಿಗಪ್ಪ ತುಬಾಕ

ಹೆಮ್ಮರ ಗಾಲದಲ್ಲಿ ಪ್ರೌಢಶಾಲಾ ಕಟ್ಟಡ ನಿರ್ಮಾಣ

588 - ಶ್ರೀ ಕೆ. ಸಿದ್ಧಯ್ಯ (ಸಂತೇಮಾರನಹಳ್ಳಿ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಂಜನಗೂಡು ತಾಲ್ಲೂಕು, ಹೆಮ್ಮರಗಾಲದ ಗ್ರಾಮಸ್ಥರು ಪ್ರೌಢಶಾಲಾ ಕಟ್ಟಡ ನಿರ್ಮಾಣಕ್ಕಾಗಿ 20,000-00 ರೂ.ಗಳನ್ನು ತಮ್ಮ ವಂತಿಗೆಯಾಗಿ ಠೇವಣಿ ಕೊಟ್ಟಿರುವುದು ಮತ್ತು ಈ ಶಾಲಾ ಕಟ್ಟಡಕ್ಕಾಗಿ ನಿವೇಶನ ಸಹ ಇರುವುದು ನಿಜವೇ?

ಆ) ಹಾಗಿದ್ದಲ್ಲಿ ಸರ್ಕಾರವು ಈ ಬಗ್ಗೆ ಯಾವಕ್ರಮ ಕೈಗೊಂಡಿದೆ?

ಇ) ಹಿಂದುಳಿದ ಪ್ರದೇಶಗಳಲ್ಲಿನ ಹಿಂದುಳಿದ ವರ್ಗಗಳವರಿಗೆ ಶಿಕ್ಷಣದ ಅವಶ್ಯಕತೆಯನ್ನು ಮನಗಂಡು ಗ್ರಾಮಸ್ಥರ ಕೋರಿಕೆಯನ್ನು ಸರ್ಕಾರವು ಪರಿಗಣಿಸುವುದೇ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

ಅ) ಹೌದು

ಆ) ಹೆಮ್ಮರಗಾಲದ ಗ್ರಾಮಸ್ಥರು ನೂತನವಾಗಿ ಪ್ರೌಢಶಾಲೆ, ಕಟ್ಟಡನಿರ್ಮಾಣ ಮಾಡುವ ನಿಮಿತ್ತ ರೂ. 10,000-00 ಗಳನ್ನು ಮಾತ್ರ ಬ್ಯಾಂಕ್ ಡ್ರಾಫ್ಟ್ ಸಂಖ್ಯೆ: 924702 ಮೂಲಕ ದಿನಾಂಕ: 19-10-82 ರಲ್ಲಿ ಠೇವಣಿ ಮಾಡಿದ್ದು ಈ ಹಣವನ್ನು ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಈ ಶಾಖೆಯ ಮೂಲಕ ಚಲನ್ ಸಂಖ್ಯೆ: 23 ದಿನಾಂಕ: 23-11-73 ರಲ್ಲಿ ಸರ್ಕಾರಕ್ಕೆ ಪಾವತಿ ಮಾಡಲಾಗಿದೆ. ಮತ್ತು ಈ ಶಾಲಾ ಕಟ್ಟಡಕ್ಕೆಂದು 5 ಎಕರೆ ಜಮೀನನ್ನು ದಿನಾಂಕ: 18-10-72 ರಂದು ಸರ್ಕಾರದ ಪರವಾಗಿ ನಂಜನಗೂಡು ಸಹಾಯಕ ಶಿಕ್ಷಣಾಧಿಕಾರಿಗಳಿಗೆ ನಂಜನಗೂಡಿನ ಉಪ ನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿ ಸಂಖ್ಯೆ: 2531-1972-73 ಪುಟ 1 ವಾಲ್ಯೂಂ 2531 ಪುಸ್ತಕ ಸಂಖ್ಯೆ: 2ರ ಪ್ರಕಾರ ನೊಂದಣಿಯಾಗಿರುತ್ತದೆ.

ಜಿಲ್ಲಾ ಪಂಚಾಯಿತಿಯು ಸದರಿ ಗ್ರಾಮದಲ್ಲಿ ಪ್ರೌಢಶಾಲಾ ಕಟ್ಟಡ ನಿರ್ಮಾಣ ಮಾಡಲು ಕ್ರಮ ಕೈಗೊಳ್ಳುತ್ತಿದೆ.

ಇ) ಉತ್ತರ ಮೇಲಿನಂತೆ

ಉತ್ತರ ಕನ್ನಡಜಿಲ್ಲೆಯಲ್ಲಿ ಅರಣ್ಯ ಭೂಮಿಯ ಪಂಚಿಕೆ

513 - ಶ್ರೀ ಆರ್.ಎನ್. ನಾಯ್ಕ (ಭಟ್ಕಳ): ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಅರಣ್ಯ ಭೂಮಿ ಅತಿಕ್ರಮಿಸಿ ಮಂಜೂರಾತಿಗೆ ವಿನಂತಿಸಿ ಇದುವರೆಗೆ ಬಂದಿರುವ ಅರ್ಜಿಗಳೆಷ್ಟು?

ಆ) ಎಷ್ಟು ಅರ್ಜಿಗಳನ್ನು ಮಂಜೂರಾತಿಗಾಗಿ ಶಿಫಾರಸ್ಸು ಮಾಡಿದೆ?

ಇ) ಭಟ್ಕಳ್ ತಾಲ್ಲೂಕು ಹೆಬಳೆ ಗ್ರಾಮದಲ್ಲಿ ಸರ್ವೆ ನಂ. 214 ಎ ಹಿಸ್ಸಾ ನಂ. 1 ಎರಲ್ಲಿ ಯಾರ್‍ಯಾರು ಎಷ್ಟೆಷ್ಟು ಅತಿಕ್ರಮಣ ಮಾಡಿದ್ದಾರೆ?

ಈ) ಈ ಭೂಮಿ ಅತಿಕ್ರಮಣ ಮಾಡಿದವರ ಪೈಕಿ ಒಬ್ಬರಿಗೆ ಹೆಬಳೆ ಗ್ರಾಮ ಮ್ಯುಟೇಷನ್ ಎಂಟ್ರಿ ನಂ. 4237 ರ ಪ್ರಕಾರ 5.00 ಎಕರೆ ಜಮೀನು ಇದ್ದು ಆ ಪೈಕಿ 3.00 ಎಕರೆ ಈಗಾಗಲೇ ಅರಣ್ಯ ಭೂಮಿ ಮಂಜೂರಾತಿಯನ್ನು ಅರಣ್ಯ ಅಧಿಕಾರಿಗಳು ಅಭ್ಯಸಿಸಿದ್ದಾರೆಯೇ?

ಶ್ರೀ ಎಂ.ಪಿ. ಕೇಶವಮೂರ್ತಿ (ಅರಣ್ಯ ರಾಜ್ಯ ಸಚಿವರು):

ಅ) 1978ಕ್ಕಿಂತ ಪೂರ್ವದಲ್ಲಿ ಆದ ಅರಣ್ಯ ಅತಿಕ್ರಮಣಕ್ಕೆ ಸಂಬಂಧಿಸಿ ಬಂದಿರುವ ಅರ್ಜಿಗಳ ಸಂಖ್ಯೆ: 4590

ಆ) 1978ರ ಪೂರ್ವದಲ್ಲಿ ಆಗಿರುವಂತಹ ಪ್ರಕರಣಗಳೆಂದು ಖಾತರಿ ಪಡಿಸಿಕೊಂಡು ಕೇಂದ್ರ ಸರ್ಕಾರದ ಪೂರ್ವಾನುಮತಿ ಪಡೆಯಲು ಪ್ರಸ್ತಾವನೆಗಳನ್ನು ಪರಿಶೀಲಿಸಲಾಗುತ್ತಿದೆ. ಇಂಥ ಪ್ರಕರಣಗಳನ್ನು ಪರಿಶೀಲಿಸಲು ಸರ್ಕಾರದ ಆದೇಶ ಸಂಖ್ಯೆ : ಎಫೆಚ್‌ಎಫ್‌ಎಫ್ 5 ಎಫ್ಜಿಎಲ್ 90 ಭಾಗ -2) ದಿನಾಂಕ : 10-10-91ರಲ್ಲಿ ಮಾರ್ಗಸೂಚಿ ಹೊರಡಿಸಲಾಗಿದೆ.

ಇ) ಒಟ್ಟು 6 ಜನಗಳು ಅರಣ್ಯ ಜಮೀನನ್ನು ಅತಿಕ್ರಮಣ ಮಾಡಿರುತ್ತಾರೆ. ವಿವರ ಕೆಳಕಂಡಂತೆ ಇರುತ್ತದೆ.

1)	ಶ್ರೀಮತಿ ಜುಟ್ಟಮ್ಮ ಕೋಂ ಮದೇವನಾಯ್ಕ	1.28 ಎಕರೆ
2)	ಶ್ರೀ ಬಾಬುನಾಗಪ್ಪ ಹೆಬಳೆ	1.35 ಎಕರೆ
3)	ಶ್ರೀಮತಿ ಸರೋಜಿನಿ ಕೋಂ ಗಣಪತಿ ಮೊಗೆರಾ	2.35 ಎಕರೆ
4)	ಶ್ರೀ ಟಿ.ಡಿ. ಪ್ರಭು	1.18 ಎಕರೆ
5)	ಶ್ರೀ ಪುಂಡಲೀಕನಾಗಪ್ಪ ಹೆಬಳೆ	0.19 ಎಕರೆ
6)	ಹುಲಿಯಾ ಕೋಂ ಫೊರೂಕ್ ಸಾಬ್	0.02 ಎಕರೆ

ಈ) ಸದರಿ ಪ್ರದೇಶದಲ್ಲಿ ಅರಣ್ಯ ಅಧಿಕಾರಿಗಳು ಭೂಮಿ ಮಂಜೂರು ಮಾಡಿರುವುದಿಲ್ಲ, ಆದರೆ ಹೆಬಳೆ ಅರಣ್ಯ ಸರ್ವೆ ನಂ. 214 ಎ 3 ರಲ್ಲಿ ನಾಗಪ್ಪ ಈರಪ್ಪ ಜಾನ್ ಮನೆ ಇವರ ಹೆಸರಿಗೆ ಜಿಲ್ಲಾಧಿಕಾರಿ ಉತ್ತರ ಕನ್ನಡ ಕಾರವಾರವರ ಆದೇಶ ಸಂಖ್ಯೆ: ಎಫ್‌ಒಆರ್.ಟಿಆರ್ 6799 ದಿನಾಂಕ : 14-03-1963ರಂತೆ ಹಂಗಾಮಿ ಲಾಗಣೆಯಾಗಿ ಮಂಜೂರು ನೀಡಿದೆ. ಸದರಿಯವರು 3.00 ಎಕರೆ ಭೂಮಿಯನ್ನು ನಿಗದಿಪಡಿಸಿದ ಷರತ್ತಿನಂತೆ ಸಾಗುವಳಿ ಮಾಡಿರುವುದರಿಂದ ನಿರ್ವಣೆಕರಿಸಿ ಜಿಲ್ಲಾಧಿಕಾರಿ ಉತ್ತರ ಕನ್ನಡ ಕಾರವಾರ ಇವರ ಆದೇಶ ಸಂಖ್ಯೆ: [illegible]

189:80-81 ದಿನಾಂಕ 19-06-1980ರ ಪ್ರಕಾರ ಹಂಚಿಕೆ ಮಾಡಿರುತ್ತಾರೆ. ಈಗ ನಾಗಪ್ಪ ಈರಪ್ಪ ಜಾನ್ಸನ್ ಇವರು 23-2-1981ರಂದು ಮೃತಪಟ್ಟಿರುವುದರಿಂದ ಅವರ ಯಾವತ್ತು ಆಸ್ತಿಗೆ ಸದರಿಯವರ ಹಿರಿಯ ಮಗ ಪುಂಡಲಿಕ ನಾಗಪ್ಪ ಹೆಬಳೆಯವರ ಹೆಸರಿಗೆ ಮ್ಯುಟೇಷನ್ ಎಂಟ್ರಿ ಕ್ರಮ ಸಂಖ್ಯೆ: 4237ರ ಪ್ರಕಾರ ನೋಂದಾಯಿಸಿರುವುದಾಗಿ ಜಿಲ್ಲಾಧಿಕಾರಿ ಉತ್ತರ ಕನ್ನಡ ಕಾರವಾರರವರ ಪತ್ರ ಸಂಖ್ಯೆ: ಎಲ್‌ಎನ್ಡಿ. ಇಎಸ್‌ಆರ್ 1-189:83-84 ದಿನಾಂಕ: 20-12-1983ರಂದು ಆದೇಶ ಹೊರಡಿಸಿರುತ್ತಾರೆ.

ಮಾರೂರಿಗೆ ಪ್ರೌಢಶಾಲೆ ಮಂಜೂರಾತಿ

542 - ಶ್ರೀ ಕೆ. ಸೋಮಪ್ಪ ಸುವರ್ಣ (ಮುಲ್ಕಿ ಮೂಡಬಿದ್ರೆ): ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾರೂರಿಗೆ ಹೈಸ್ಕೂಲಿನ ಅವಶ್ಯಕತೆಯಿದ್ದು ಮಂಜೂರಾತಿ ನೀಡಲು ಮನವಿಗಳು ಬಂದಿದೆಯೇ?

ಆ) ಈ ವರ್ಷ ಅಲ್ಲಿಯ ಹೈಸ್ಕೂಲಿಗೆ ಮಂಜೂರಾತಿ ನೀಡಲಾಗುವುದೇ?

ಇ) ಅಲ್ಲಿಯ ಮಕ್ಕಳು ಪ್ರೌಢಶಿಕ್ಷಣಕ್ಕಾಗಿ ಆರು ಕಿಲೋಮೀಟರ್‌ಗಿಂತಲೂ ಹೆಚ್ಚಿನ ದೂರ ಶಾಲೆಗೆ ಹೋಗುವ ವಿಚಾರ ಸರಕಾರಕ್ಕೆ ತಿಳಿದಿದೆಯೇ?

ಈ) ಹತ್ತಿರ ಹೈಸ್ಕೂಲ್ಗಳಲ್ಲಿ ಸೀಟು ಸಿಗದೆ ಮಕ್ಕಳು ವಿದ್ಯಾಭ್ಯಾಸ ನಿಲ್ಲಿಸಬೇಕಾದ ವಿಚಾರ ಸರಕಾರದ ಗಮನಕ್ಕೆ ಬಂದಿದೆಯೇ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು):

ಅ) ಹೌದು.

ಆ) 1994-95ನೇ ಸಾಲಿನಲ್ಲಿ ಪರಿಶೀಲಿಸಲಾಗುವುದು.

ಇ) ಇಲ್ಲ.

ಈ) ಇಲ್ಲ.

ಸಂತ್ರಸ್ತ ಮೀನುಗಾರರಿಗೆ ಮೀನುಗಾರಿಕೆ ಜೆಟ್ಟಿ ನಿರ್ಮಾಣ

497 - ಶ್ರೀ ವಿಜಯಕುಮಾರ್ ಶೆಟ್ಟಿ (ಸುರತ್ಕಲ್): ಮಾನ್ಯ ಮೀನುಗಾರಿಕೆ ಮತ್ತು ಬಂಧರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನವ ಮಂಗಳೂರು ಬಂದರು ನಿರ್ಮಾಣ ಹಂತದಲ್ಲಿ ಸಂತ್ರಸ್ಥ ಮೀನುಗಾರರಿಗೆ ಬಂಧರು ಪ್ರದೇಶದ ವ್ಯಾಪ್ತಿಯಲ್ಲಿ ಮೀನುಗಾರಿಕೆ ಜೆಟ್ಟಿ ನಿರ್ಮಿಸಲು ಆಶ್ವಾಸನೆ ನೀಡಲಾಗಿದೆಯೇ?

ಆ) ಈ ಜೆಟ್ಟಿ ನಿರ್ಮಾಣಕ್ಕಾಗಿ ಸರ್ಕಾರ ಈವರೆಗೆ ಕೈಗೊಂಡ ಕ್ರಮಗಳೇನು?

ಇ) ಸಂತ್ರಸ್ಥ ಮೀನುಗಾರರಿಗೆ ಅನುಕೂಲ ಮಾಡಿಕೊಡಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ವಸಂತ ವಿ. ಸಾಲಿಯಾನ್ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು):

ಅ) ಹೌದು.

ಆ) ನವ ಮಂಗಳೂರು ಬಂದರು ಪ್ರಾಧಿಕಾರದವರು ಇಲ್ಲಿ ಮೀನುಗಾರಿಕಾ ಬಂದರು ನಿರ್ಮಾಣದ ಬಗ್ಗೆ ಸಾಧಕ - ಬಾಧಕಗಳನ್ನು ಪರಿಶೀಲಿಸುತ್ತಿದ್ದು ಇದಕ್ಕೆ ಬೇಕಾಗಿರುವ ಮಾಹಿತಿಗಳನ್ನು ಒದಗಿಸಲಾಗಿದೆ.

ಇ) ಸಂತ್ರಸ್ಥ ಮೀನುಗಾರರಿಗೆ ಮಂಗಳೂರು ಹಳೆ ಬಂದರಿನಲ್ಲಿ ಒಂದು ಪ್ರತ್ಯೇಕ ಸಣ್ಣ ಮೀನುಗಾರಿಕಾ ಬಂದರನ್ನು ನಿರ್ಮಿಸಲಾಗಿದೆ.

ನಾಗರಹೊಳೆ ಅರಣ್ಯದಲ್ಲಿ ಬೆಂಕಿ ಅಪಘಾತ ಸಂಭವಿಸಿರುವುದು

520 - ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ): ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಾಗರಹೊಳೆ ಅಭಯಾರಣ್ಯ ಪ್ರದೇಶದಲ್ಲಿ ಆಗಾಗ್ಗೆ ಬೆಂಕಿ ಅನಾಹುತಗಳು ಸಂಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಇತ್ತೀಚೆಗೆ ಆ ರೀತಿ ಸಂಭವಿಸಿದ ಪ್ರಕರಣಗಳು ಯಾವುವು?

ಇ) ಈ ಅನಾಹುತಗಳು ನಡೆಯಲು ವಿಶೇಷ ಕಾರಣಗಳೇನಾದರೂ ಇವೆಯೇ?

ಈ) ಅವುಗಳನ್ನು ತಡೆಗಟ್ಟಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ?

ಶ್ರೀ ಎಂ.ಪಿ. ಕೇಶವಮೂರ್ತಿ (ಅರಣ್ಯ ರಾಜ್ಯ ಸಚಿವರು):

ಅ) ಬಂದಿದೆ.

ಆ) ಬೆಂಕಿ ಅನಾಹುತ ಈ ಕೆಳಗೆ ತಿಳಿಸಿದ ಅರಣ್ಯ ಪ್ರದೇಶಗಳಲ್ಲಿ ಆಗಿರುತ್ತದೆ.

1) ನಾಗರಹೊಳೆ ರಾಷ್ಟ್ರೀಯ ಉದ್ಯಾನವನ

2) ಬಂಡೀಪುರ ರಾಷ್ಟ್ರೀಯ ಉದ್ಯಾನವನ

3) ಭದ್ರಾ ಅಭಯಾರಣ್ಯ

4) ಶೆಟ್ಟಿಹಳ್ಳಿ ಅಭಯಾರಣ್ಯ

5) ಬಿಳಿಗಿರಿರಂಗಸ್ವಾಮಿ ದೇವಸ್ಥಾನ ಅಭಯಾರಣ್ಯ.

ಇ) ಹೌದು

ಈ) ಕಾಡಿಗೆ ಬೆಂಕಿ ಬೀಳುವುದನ್ನು ತಡೆಗಟ್ಟಲು ವ್ಯಾಪಕ ಕ್ರಮಗಳನ್ನು ಕೈಗೊಳ್ಳಲಾಗಿದೆ. ಬೆಂಕಿ ನಿರೋಧಕ ವಾಹನಗಳ ನೇಮಕ, ಬೆಂಕಿ, ಲೈನುಗಳನ್ನು ಎಳೆಯುವುದು, ಬೆಂಕಿ ವೀಕ್ಷಣಾ ಗೋಪುರಗಳನ್ನು ನಿರ್ಮಿಸುವುದು ಇತ್ಯಾದಿ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಬೆಂಗಳೂರಿನಲ್ಲಿ ಹಾಲಿನ ಡೈರಿಯಲ್ಲಿ ನಷ್ಟ

549 - ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್): ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನಲ್ಲಿರುವ ಮದರ್ ಡೈರಿಯು ಸೇರಿದಂತೆ ಯಾವ ಯಾವ ಜಿಲ್ಲಾ ಹಾಲು ಒಕ್ಕೂಟಗಳು ನಷ್ಟವನ್ನು ಅನುಭವಿಸುತ್ತಿವೆ?

ಆ) ಯಾವ ಯಾವ ವರ್ಷಗಳಿಂದ ಎಷ್ಟೆಷ್ಟು ಪ್ರಮಾಣದ ನಷ್ಟವನ್ನು ವಿವಿಧ ಜಿಲ್ಲಾ ಹಾಲು ಒಕ್ಕೂಟಗಳು ಅನುಭವಿಸುತ್ತಿವೆ. (ಮದರ್ ಡೈರಿಯೂ ಸೇರಿದಂತೆ)

ಇ) ಅದಕ್ಕೆ ಕಾರಣಗಳೇನು ಮತ್ತು ಈ ನಷ್ಟವನ್ನು ತಡೆಗಟ್ಟಲು ಸರ್ಕಾರದ ಮುಂದಿರುವ ಕ್ರಮಗಳೇನು ?

ಈ) ನಷ್ಟದಲ್ಲಿರುವ ಹಾಲು ಒಕ್ಕೂಟಗಳನ್ನು ಖಾಸಗಿಯವರಿಗೆ ವಹಿಸಿಕೊಡುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆಯೇ ?

ಶ್ರೀ ಕೆ.ಎನ್. ನಾಗೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) 1992-93ನೇ ಸಾಲಿನಲ್ಲಿ ನಷ್ಟದಲ್ಲಿರುವ ಹಾಲು ಒಕ್ಕೂಟಗಳ ವಿವರ ಈ ಕೆಳಕಂಡಂತಿದೆ.

1) ಮದರ್ ಡೈರಿ, 2) ಮೈಸೂರು 3) ತುಮಕೂರು 4) ಹಾಸನ
5) ಬೆಳಗಾಂ 6) ಬಳ್ಳಾರಿ 7) ಮಂಡ್ಯ 8) ಬಿಜಾಪುರ,
9) ಧಾರವಾಡ

ಆ) ವಿವರಗಳನ್ನು ಅನುಬಂಧ - ಅ ನಲ್ಲಿ ನೀಡಲಾಗಿದೆ.

ಇ) ನಷ್ಟಕ್ಕೆ ಕಾರಣಗಳು :

1) ಹಾಲು ಉತ್ಪನ್ನಗಳಿಗೆ ಕಡಿಮೆ ಮಾರುಕಟ್ಟೆ ಬೇಡಿಕೆ ಮತ್ತು ಬೆಲೆ

2) ಮಡಿಯುವ ಬಂಡವಾಳದ ಮೇಲಿನ ಬಡ್ಡಿ ಪಾವತಿ.

3) ವಿದ್ಯುತ್ ಇಂಧನ ಮತ್ತು ಸಾಗಾಣಿಕೆ ದರಗಳಲ್ಲಿ ಹೆಚ್ಚಳ.

4) ಹಾಲಿನ ಸುಗ್ಗಿ ಕಾಲದಲ್ಲಿ ಹಾಲಿನ ಉತ್ಪಾದಕರಿಗೆ ಹೆಚ್ಚಿನ ಶೇಖರಣಾ ದರ.

5) ಗ್ರಾಹಕರಿಗೆ ಹೊರೆಯಾಗದಂತೆ ಹಾಲಿನ ಮಾರಾಟ ಬೆಲೆಯನ್ನು ಹೆಚ್ಚಿಸದೇ ಇರುವುದು.

ನಷ್ಟವನ್ನು ತಡೆಗಟ್ಟಲು ತೆಗೆದುಕೊಂಡಿರುವ ಕ್ರಮಗಳು

1) ಹಾಲಿನ ಮತ್ತು ಹಾಲು ಉತ್ಪನ್ನಗಳ ಮಾರುಕಟ್ಟೆಯನ್ನು ಹೆಚ್ಚಿಸುವುದು.

2) ಮೇಲು ಖರ್ಚುಗಳನ್ನು ಕಡಿಮೆಗೊಳಿಸುವುದು.

3) ಮುಂಬರುವ ಬೇಸಿಗೆಯಲ್ಲಿ ಹಾಲು ಉತ್ಪನ್ನಗಳ ಬೆಲೆ ಹೆಚ್ಚುವ ಸಂಭವ.

ಈ) ಇಲ್ಲ.

ಅನುಬಂಧ - ಆ

ಹಾಲು ಒಕ್ಕೂಟಗಳು (ಮದರ್ ಡೈರಿಯನ್ನೊಳಗೊಂಡಂತೆ) 1987-88ರಿಂದ 1992-93ನೇ ಸಾಲಿನವರೆಗೆ ಅನುಭವಿಸಿದ ನಷ್ಟದ ಬಗೆಗಿನ ಪಟ್ಟಿ

(ರೂ. ಲಕ್ಷಗಳಲ್ಲಿ)

ಒಕ್ಕೂಟ	1987-88	1988-89	1989-90	1990-91	1991-92	1992-93
ಬೆಂಗಳೂರು	-	68.09	-12.63	79.85	78.00	28.79
ಕೋಲಾರ	7.64	8.97	1.90	18.84	21.54	21.33
ಮೈಸೂರು	-12.16	-14.21	18,68	-18.67	-44.12	-104,59
ತುಮಕೂರು	4.69	-13.61	55.99	-329.98	9.55	-240.18
ಗುಲ್ಬರ್ಗಾ	-18.18	-22.44	17.96	-8.06	-24.00	23.14
ಶಿವಮೊಗ್ಗ	-	-8.65	-0.07	0.37	-46.66	-6.01
ಧಾರವಾಡ	-	26.63	02.83	-231.94	-87.20	-181.34
ಮಂಡ್ಯ	2.52	20.52	-128.64	-57 .12	36.52	-32.19
ಹಾಸನ	-51.83	-43.62	-43.51	2.41	14.00	-21.50
ದಕ್ಷಿಣ ಕನ್ನಡ	6.37	-9.50	19.03	-26.12	-36.80	14.01
ಬೆಳಗಾಂ	-14.57	0.38	-10.17	-27.13	1.95	-76.56
ಬಳ್ಳಾರಿ	-44.60	-12.93	-54.54	-20.96	-1.66	-76.29
ಬಿಜಾಪುರ	-1.24	-1.05	-1.95	-5.10	-49.39	-141.06
ಮದರ್ ಡೈರಿ	-23.59	3.36	41.43	51.49	64.65	-24.12

ಟಿಪ್ಪಣಿ : (-) ನಷ್ಟದ ಗುರುತು.

ರಾಯನಾಳ ಗ್ರಾಮದ ಪ್ರೌಢ ಶಾಲೆಯನ್ನು ಮೇಲ್ದರ್ಜೆಗೇರಿಸುವುದು

473 - ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ತಾಲ್ಲೂಕಿನ ರಾಯನಾರ ಗ್ರಾಮದಲ್ಲಿರುವ ಸರ್ಕಾರಿ ಪ್ರೌಢಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು?

ಆ) ಆ ಪ್ರೌಢಶಾಲೆಯನ್ನು ಸರ್ಕಾರಿ ಪದವಿ ಪೂರ್ವ ಕಾಲೇಜನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ?

ಇ) ಹಾಗಿದ್ದಲ್ಲಿ ಅದನ್ನು ಯಾವಾಗ ಮೇಲ್ದರ್ಜೆಗೇರಿಸಲಾಗುವುದು?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು) :

ಅ) ರಾಯನಾಳ ಸರ್ಕಾರಿ ಪ್ರೌಢಶಾಲೆಯಲ್ಲಿ 210 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ.

ಆ) ರಾಯನಾಳ ಸರ್ಕಾರಿ ಪ್ರೌಢಶಾಲೆಯನ್ನು ಪದವಿ ಪೂರ್ವ ಕಾಲೇಜಾಗಿ ಸರ್ಕಾರವು ಈಗಾಗಲೇ ಪರಿವರ್ತಿಸಿದೆ.

ಇ) ಸರ್ಕಾರಿ ಆದೇಶ ಸಂಖ್ಯೆ ಇಡಿ 420 ಎಸ್ಟೆಟ್ಬಿಟ್ 91 ದಿನಾಂಕ 11-9-1991ರಲ್ಲಿ ರಾಯನಾಳ ಸರ್ಕಾರಿ ಪ್ರೌಢಶಾಲೆಯನ್ನು ಪದವಿ ಪೂರ್ವ ಕಾಲೇಜಾಗಿ 1991-92ನೇ ಸಾಲಿನಿಂದ ಮೇಲ್ದರ್ಜೆಗೇರಿಸಿದೆ.

ಕಾದಿಟ್ಟ ಅರಣ್ಯ ಪ್ರದೇಶದ ಒತ್ತುವರಿಯ ಸಕ್ರಮ

539 - ಶ್ರೀ ಆರ್. ನಾರಾಯಣ (ಬೆಳ್ಳಾವಿ) : ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾದಿಟ್ಟ ಅರಣ್ಯ ಪ್ರದೇಶಗಳೆಂದು ಮಹಾರಾಜ ಸರ್ಕಾರದಲ್ಲಿ (1917, 1927) ಘೋಷಿಸಿರುವ ಪ್ರದೇಶಗಳ ಗಡಿಗಳು ಸಮರ್ಪಕವಾಗಿ ನಿರ್ವಹಿಸಲಾಗುತ್ತಿದೆಯೆ?

ಆ) ಸದರಿ ಕಾದಿಟ್ಟ ಅರಣ್ಯ ಪ್ರದೇಶಗಳನ್ನು ಅತಿಕ್ರಮಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಅತಿಕ್ರಮಣದ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದ್ದಲ್ಲಿ ಅದರ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಈ) ಕಾದಿಟ್ಟ ಅರಣ್ಯಗಳೆಂದು ಘೋಷಿಸಲ್ಪಟ್ಟಂತಹ ಪ್ರದೇಶವು ಕಂದಾಯ ಇಲಾಖೆಯ ದಾಖಲಾತಿಗಳಲ್ಲಿ ನಮೂದಿಸಲ್ಪಟ್ಟಿದೆಯೇ?

ಉ) 'ಸಿ ಮತ್ತು ಡಿ' ವರ್ಗದ ಪ್ರದೇಶಗಳಲ್ಲಿ ಸಾಮಾಜಿಕ ಅರಣ್ಯೀಕರಣ ನಡೆದಿದ್ದು ಸದರಿ ಜಮೀನು ಅರಣ್ಯ ಇಲಾಖೆಗೆ ಕಂದಾಯ ಇಲಾಖೆಯಿಂದ ವರ್ಗಾಯಿಸಲ್ಪಟ್ಟಿದೆಯೇ?

ಊ) ಸದರಿ 'ಸಿ ಮತ್ತು ಡಿ' ವರ್ಗದ ಜಮೀನುಗಳು ಕಂದಾಯ ಇಲಾಖೆಯಿಂದ ವರ್ಗಾವಣೆ ಆಗದಿದ್ದಲ್ಲಿ ಸರ್ಕಾರವರು ಈ ಬಗ್ಗೆ ತೆಗೆದುಕೊಂಡ ಕ್ರಮವೇನು?

ಋ) ಸಾಮಾಜಿಕ ಅರಣ್ಯೀಕರಣ ಇದ್ದ ನೆಡುತೋಪುಗಳಲ್ಲಿ ಅಕ್ರಮಸಾಗುವಳಿ ಮಾಡಿ ಸಕ್ರಮಗೊಳಿಸಲು ತಾಲ್ಲೂಕು ಅಕ್ರಮ ಸಾಗುವಳಿಯನ್ನು ಸಕ್ರಮಗೊಳಿಸುವ ಸಮಿತಿಯ ಮುಂದೆ ಅರ್ಜಿ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ೠ) ಬಂದಿದ್ದಲ್ಲಿ ಆ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಎಂ.ಪಿ. ಕೇಶವಮೂರ್ತಿ (ಅರಣ್ಯ ರಾಜ್ಯ ಸಚಿವರು) :

ಅ) ನಿರ್ವಹಿಸಲಾಗುತ್ತಿದೆ.

ಆ) ಬಂದಿದೆ.

ಇ) ದಿನಾಂಕ : 27-4-78ರ ಪೂರ್ವದಲ್ಲಾದ ಅತಿಕ್ರಮಣಗಳನ್ನು ಸಕ್ರಮಗೊಳಿಸಲು ಸರ್ಕಾರದ ಆದೇಶ ಸಂ: ಎಹೆಚ್‌ಎಫ್‌ಎಫ್ 5 ಎಫ್ಟಿಎಲ್ 90 (ವಾಲ್ಯೂಂ- 2) ದಿ: 9-11-92ರಲ್ಲಿ ತಾಲ್ಲೂಕು ಮಟ್ಟದ ಸಮಿತಿಗಳನ್ನು ರಚನೆ ಮಾಡಿದೆ. ತಾಲ್ಲೂಕು ಮಟ್ಟದ ಸಮಿತಿ ಶಿಫಾರಸ್ಸಿನಂತೆ ಪ್ರಸ್ತಾವನೆಗಳನ್ನು ಕೇಂದ್ರ ಸರ್ಕಾರಕ್ಕೆ ಒಪ್ಪಿಸಿ ಅರಣ್ಯ ಸಂರಕ್ಷಣಾ ಕಾಯ್ದೆ 1980ರ ಮೇರೆಗೆ ಪೂರ್ವಾನುಮತಿ ದೊರಕಿದರೆ ಸಕ್ರಮಗೊಳಿಸಲಾಗುವುದು. ಮತ್ತು ದಿನಾಂಕ : 27-4-78ರ ನಂತರದ ಅರಣ್ಯ ಅತಿಕ್ರಮಣಗಳನ್ನು ತೆರವುಗೊಳಿಸಲು 10-10-91ರ ಅದೇ ಸಂಖ್ಯೆಯ ಆದೇಶದಲ್ಲಿ ಸೂಚಿಸಲಾಗಿದೆ.

ಈ) ರಾಜ್ಯದ ಕೆಲವು ಭಾಗಗಳಲ್ಲಿ ನಮೂದಿಸಲಾಗಿದೆ ಇನ್ನೂ ಕೆಲವು ಕಡೆ ಮಾಡುವುದಿದೆ.

ಉ) ಸರ್ಕಾರವು ತನ್ನ ಆದೇಶ ಸಂ. ಆರ್.ಡಿ 106 ಎಲ್ಜಿಪಿ 88, ದಿ: 7-6-93ರಲ್ಲಿ ಲ್ಯಾಂಡ್ ಬ್ಯಾಂಕ್ಗೆ 2.58 ಲಕ್ಷ ಹೆಕ್ಟೇರ್ ಸಿ ಮತ್ತು ಡಿ ವರ್ಗದ ಜಮೀನನ್ನು ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ಹಸ್ತಾಂತರಿಸಲು ಆದೇಶ ಮಾಡಿದೆ ಇದು ಈಗಾಗಲೇ ನೆಡುತೋಪು ಬೆಳೆಸಿರುವ 1.25 ಲಕ್ಷ ಹೆಕ್ಟೇರ್ ಹಾಗೂ ಸೆಕ್ಷನ್ 4ರ ಅಧಿಸೂಚನೆ ಹೊರಡಿಸಿರುವ 67,000 ಹೆಕ್ಟೇರ್ ಸಿ ಮತ್ತು ಡಿ ವರ್ಗದ ಜಮೀನು ಹೊರತುಪಡಿಸಿದೆ.

ಊ) ಈ ಬಗ್ಗೆ ಸರ್ಕಾರದ ಪತ್ರ ಸಂಖ್ಯೆ : ಎಹೆಚ್‌ಎಫ್‌ಎಫ್ 7 ಎಫ್‌ಎಎಫ್ 93, ದಿ: 15-7-93ರಲ್ಲಿ ಈಗಾಗಲೇ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳ ಅವರ ಅಧೀನದಲ್ಲಿರುವ ಸಿ ಮತ್ತು ಡಿ ವರ್ಗದ ಜಮೀನುಗಳನ್ನು ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ಹಸ್ತಾಂತರಿಸಲು ಕೋರಲಾಗಿದೆ.

ಋ) ಇಲ್ಲ

ೠ) ಉದ್ಭವಿಸುವುದಿಲ್ಲ.

ಉಡುಪಿ ತಾಲ್ಲೋಕು ಮೂಡುಗಿಳೆಯೂರು ಗ್ರಾಮಕ್ಕೆ ಶಾಲೆಯ ಮಂಜೂರಾತಿ

589 - ಶ್ರೀ ಪಿ. ಬಸವರಾಜ್ (ಬ್ರಹ್ಮಾವರ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ತಾಲ್ಲೂಕು ಮೂಡುಗಿಳೆಯೂರು ಗ್ರಾಮದಲ್ಲಿ ಪ್ರೌಢಶಾಲೆಯ ಸೌಲಭ್ಯ ಕುರಿತಂತೆ ಸಾರ್ವಜನಿಕರು ಒತ್ತಾಯಿಸುತ್ತಿರುವುದು ನಿಜವಲ್ಲವೇ

ಆ) ಗ್ರಾಮದಲ್ಲಿ 94-95ರ ಶೈಕ್ಷಣಿಕ ವರ್ಷದಿಂದಲೇ ಪ್ರೌಢಶಾಲೆಯನ್ನು ಆರಂಭಿಸಲು ಸರ್ಕಾರ ಕ್ರಮ ಕೈಕೊಳ್ಳಬಹುದೇ

ಶ್ರೀಮತಿ. ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು) :

ಅ) ಸ್ಥಳೀಯರಿಂದ ಇದುವರೆಗೆ ಯಾವುದೇ ಬೇಡಿಕೆ ಪತ್ರ ಬಂದಿರುವುದಿಲ್ಲ.

ಆ) 1994-95 ನೇ ಸಾಲಿನಲ್ಲಿ ಪ್ರಸ್ತಾವನೆ ಬಂದಲ್ಲಿ ಪರಿಶೀಲಿಸಲಾಗುವುದು.

ಶಿಕಾರಿಪುರ ತಾಲ್ಲೋಕಿನ ಆಸ್ಪತ್ರೆಗಳಿಗೆ ಔಷಧಿಗಳ ಸರಬರಾಜು

421 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಕಾರಿಪುರ ತಾಲ್ಲೂಕಿನ ಆಸ್ಪತ್ರೆಗಳಿಗೆ ಔಷಧಿಗಳ ಸರಬರಾಜು ಇಲ್ಲದೆ ಜನ ತೊಂದರೆಗೊಳಗಾಗಿರುವುದು ನಿಜವೇ?

ಆ) 1993-94ನೇ ಸಾಲಿನಲ್ಲಿ ಸರಬರಾಜು ಆಗಬೇಕಾದ ಔಷಧಿಗಳು ಶಿಕಾರಿಪುರ ಜನರಲ್ ಆಸ್ಪತ್ರೆಗೆ ಇತರೆ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಪ್ರಾಥಮಿಕ ಆರೋಗ್ಯ ಘಟಕಗಳಿಗೆ ಔಷಧಿಗಳನ್ನು ಸರಬರಾಜು ಮಾಡಲಾಗಿದೆಯೇ?

ಇ) ಶಿಕಾರಿಪುರ ಜನರಲ್ ಆಸ್ಪತ್ರೆಗೆ 300 ಎಂ.ಎ. ಕ್ಷ-ಕಿರಣ ಆಗತ್ಯ ವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಈಗಿರುವ 100 ಎಂ.ಎ. ಕ್ಷ-ಕಿರಣ ರೋಗಿಗಳ ಆಗತ್ಯ ಪೂರೈಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು) :

ಅ) ಇದು ನಿಜವಲ್ಲ.

ಆ) ಸರ್ಕಾರಿ ಔಷಧಿ ಮಳಿಗೆಯಿಂದ ಸರಬರಾಜು (ಔಷದಿಗಳನ್ನು ಮಾಡಬೇಕಾದ ಶಿಕಾರಿಪುರ ತಾಲ್ಲೂಕಿನ ಆಸ್ಪತ್ರೆ, ಪ್ರಾಥಮಿಕ ಆರೋಗ್ಯ ಕೇಂದ್ರ) ಪ್ರಾಥಮಿಕ ಆರೋಗ್ಯ ಘಟಕಗಳಿಗೆ ಕೆಳಕಂಡಂತೆ ಭಾಗಶಃ ಸರಬರಾಜು ಮಾಡಲಾಗಿದೆ. ಉಳಿದ ಔಷಧಿಗಳನ್ನು ಸಂಬಂಧಪಟ್ಟ ಆಸ್ಪತ್ರೆಗಳಿಂದ ಬೇಡಿಕೆಗಳು ಬಂದನಂತರ ತಕ್ಷಣ ಸರಬರಾಜು ಮಾಡಲಾಗುವುದು.

(ಸರಬರಾಜು ಪಟ್ಟಿಯನ್ನು ಲಗತ್ತಿಸಲಾಗಿದ)

ಇ) ಇಲ್ಲಾ

ಈ) ಇಲ್ಲಾ

1993-94ನೇ ಸಾಲಿನಲ್ಲಿ ಶಿಕಾರಿಪುರ ತಾಲ್ಲೂಕು ಆಸ್ಪತ್ರೆ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರ:ಘಟಕಗಳಿಗೆ ಔಷಧಿಗಳನ್ನು ಪೂರೈಸಿರುವ ವಿವರ

ಕ್ರಮ ಸಂಖ್ಯೆ	ಸಂಸ್ಥೆಗಳು	ಅನುಧಾನ ಮೌಲ್ಯ ರೂ:	ಔಷಧಿಗಳ ಪೂರೈಕೆಯ ಮೌಲ್ಯ
1.	ತಾಲ್ಲೂಕು ಆಸ್ಪತ್ರೆ, ಶಿಕಾರಿಪುರ	45,000-00	44,272-98
2.	ಪ್ರಾಥಮಿಕ ಆರೋಗ್ಯ ಕೇಂದ್ರ ಕಾಗಿನಲ್ಲಿ	30,000-00	20,700-00
3.	" ಸುಣ್ಣದ ಕೊಪ್ಪ	30,000-00	17,726-67
4.	" ಶಿರಾಳ ಕೊಪ್ಪ	30,000-00	13,170-44
5.	" ಚಿಕ್ಕ ಜೋಗಿಪಳ್ಳಿ	30,000-00	22,241-38
6.	" ಸಾಲೂರು	30,000-00	13,254-35
7.	" ಚಿಕ್ಕಜಾಜೂರು	30,000-00	13,105-18
8.	" ಘಟಕ : ಹೋತನಕಟ್ಟೆ	30,000-00	19,147-92
9.	" " ಹಾರಿಗೆ	30,000-00	19,147-92
10.	" " ಹಿತ್ತಾಲೆ	30,000-00	19,147-92
11.	" " ಮರವಳ್ಳಿ	30,000-00	19,147-92
12.	" " ಯಲಗೇರಾ	30,000-00	19,147-92
	ಜಿಲ್ಲಾ ಪರಿಷತ್ತಿನ ವತಿಯಿಂದ ಸರಬರಾಜಾದ ಔಷದಿಗಳ ವಿವರ		
1.	ತಾಲ್ಲೂಕು ಆಸ್ಪತ್ರೆ, ಶಿಕಾರಿಪುರ	30,000-00	35,772-00
2.	ಶಿರಾಳಕೊಪ್ಪ	20,000-00	9,155-00
3.	ಚಿಕ್ಕ ಜೋಗಿಪಳ್ಳಿ	20,000-00	4,560-00
4.	ಸುಣ್ಣದ ಕೊಪ್ಪ	20,000-00	16,920-00
5.	ಕಾಗಿನೆಲೆ	20,000-00	5,271-00
6.	ಚಿಕ್ಕ ಜಂಬೂರು	20,000-00	2,304-00

ಹುಕ್ಕೇರಿ ತಾಲ್ಲೂಕಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳು

475 - ಶ್ರೀ ಉಮೇಶ್ ವಿ. ಕತ್ತಿ (ಹುಕ್ಕೇರಿ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಕ್ಕೇರಿ ತಾಲ್ಲೂಕಿಗೆ ಮಂಜೂರಾದ ಪ್ರಾಥಮಿಕ ಆರೋಗ್ಯ ಕೇಂದ್ರಗಳೆಷ್ಟು? ಹಾಗೂ ಅವುಗಳು ಯಾವ ಗ್ರಾಮಗಳಿಗೆ ಮಂಜೂರಾಗಿದೆ.

ಆ) ಮಂಜೂರಾದ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆಯೇ?

ಇ) ಇಲ್ಲದಿದ್ದಲ್ಲಿ ವಿಳಂಬ ಆಗಲು ಕಾರಣವೇನು? ಮತ್ತು ಅವುಗಳನ್ನು ಪ್ರಾರಂಭಿಸಿ ಪೂರ್ತಿ ಗೊಳಿಸಲಾಗುವುದು.

ಶ್ರೀ ಬಿ.ಎಸ್. ಪಾಟೀಲ್ ಸಾಸನೂರು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಹುಕ್ಕೇರಿ ತಾಲ್ಲೂಕಿಗೆ ಒಟ್ಟು 10 ಕೆಳಕಂಡ ಗ್ರಾಮಗಳಿಗೆ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮಂಜೂರಾಗಿದೆ.

1. ಅಮ್ಮಣಗಿ (ಭಾರತ ಸರ್ಕಾರಿ ಮಾದರಿ)
2. ದಡ್ಡಿ (ಭಾರತ ಸರ್ಕಾರಿ ಮಾದರಿ)
3. ಕಣಗಲೆ
4. ಯು.ಖಾನಾಪುರ
5. ಪಾಶ್ಚಾಪುರ
6. ಯಮಧನಮರಡಿ
7. ಇಂಸ್ಲಾಮಪುರ
8. ಉಲ್ಲಳ್ಳಿ
9. ನೇಗಿನಾಳ್
10. ಸಂಕೇಶ್ವರ

ಆ) ಮೇಲ್ಕಂಡ ಎಲ್ಲ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

ಇ) ಉದ್ಭವಿಸುವುದಿಲ್ಲ.

ಗೇರು ಅಭಿವೃದ್ಧಿ ನಿಗಮಕ್ಕೆ ಅರಣ್ಯ ಭೂಮಿಯ ಹಂಚಿಕೆ

548 - ಶ್ರೀ ಗೋಪಾಲ ಮುಕುಂದ ಕಾನಡೆ (ಸಿರಸಿ ಕ್ಷೇತ್ರ) : ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ಸರ್ಕಾರವು ಗೇರು ಅಭಿವೃದ್ಧಿ ನಿಗಮಕ್ಕೆ ಹಳೆಯ ಗೇರು ತೋಪಿರುವ ಭೂಮಿ 20 ಸಾವಿರ ಹೆಕ್ಟೇರು ಪ್ರದೇಶವನ್ನು ವಹಿಸಿಕೊಟ್ಟಿದ್ದು ನಿಜವೇ.

ಆ) ಈ ಬಗ್ಗೆ ಅರಣ್ಯ ಇಲಾಖೆಯ ಅಧಿಕಾರಿಗಳು ಸರ್ಕಾರಿ ಆದೇಶವನ್ನು ಉಲ್ಲಂಘಿಸಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಬಂದಿದ್ದಲ್ಲಿ ಅಂತಹ ಅಧಿಕಾರಿಗಳ ಮೇಲೆ ಸರ್ಕಾರ ಏನು ಕ್ರಮ ಕೈಗೊಂಡಿದೆ.

ಶ್ರೀ ಎಂ.ಪಿ. ಕೇಶವಮೂರ್ತಿ (ಅರಣ್ಯ ರಾಜ್ಯ ಸಚಿವರು) :

ಅ) ಸರ್ಕಾರಿ ಆದೇಶ ಸಂಖ್ಯೆ ಎಹೆಚ್‌ಎಫ್‌ಎಫ್ 173 ಎಫ್‌ಪಿಸಿ 91, ದಿನಾಂಕ :05-04-93 ರಲ್ಲಿ 20 ಸಾವಿರ ಹೆಕ್ಟೇರ್ ಗೇರು ನೆಡುತೋಪನ್ನು ಗೇರು ಅಭಿವೃದ್ಧಿ ನಿಗಮಕ್ಕೆ ವಹಿಸಿಕೊಡಲು ಆದೇಶಿಸಲಾಗಿದೆ.

ಆ) ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರು ಸರ್ಕಾರದ ಆದೇಶವನ್ನು ಮರುಪರಿಶೀಲಿಸಲು ಕೋರಿರುತ್ತಾರೆ. ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ನಂತರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರಿಗೆ ದಿ : 5-4-93ರ ಆದೇಶವನ್ನು ಜಾರಿಗೆ ಬರುವಂತೆ ಕೋರಲಾಗಿದೆ.

ಇ) ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರಿಗೆ ಸರ್ಕಾರದ ಆದೇಶವನ್ನು ಕೂಡಲೇ ಜಾರಿಗೆ ತರುವವಂತೆ ಆದೇಶಿಸಲಾಗಿದೆ.

ಮಂಡ್ಯ ಜಿಲ್ಲೆಯಲ್ಲಿ ಆಸ್ಪತ್ರೆಗಳ ಅಭಿವೃದ್ಧಿ

540 - ಶ್ರೀ ಎಂ.ಎಸ್ ಆತ್ಮಾನಂದ (ಮಂಡ್ಯ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮಂಡ್ಯಾ ಜಿಲ್ಲಾ ಆಸ್ಪತ್ರೆ ಮಂಡ್ಯದಲ್ಲಿರುವ ಹಾಸಿಗೆಗಳ ಸಂಖ್ಯೆ ಎಷ್ಟು?

ಆ) ಈ ಹಾಸಿಗೆಗಳ ಸಂಖ್ಯೆ ಆಸ್ಪತ್ರೆಗೆ ಬರುವ ರೋಗಿಗಳ ಪ್ರಮಾಣಕ್ಕಿಂತ ಕಡಿಮೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಇ) ಹಾಗಿದ್ದಲ್ಲಿ ಅಲ್ಲಿ ಹಾಸಿಗೆಗಳ ಸಂಖ್ಯೆ ಹೆಚ್ಚಿಸಲು ಏನು ಕ್ರಮ ಕೈಗೊಂಡಿದೆ.

ಈ) ಭಾರತ ಜನಸಂಖ್ಯಾ ಯೋಜನೆ-9 ಕರ್ನಾಟಕ ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ಅನುಷ್ಠಾನಕ್ಕೆ ಬರುತ್ತದೆ.

ಉ) ಈ ಯೋಜನೆಯ ವಿವರಗಳೇನು?

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) 250

ಆ) ಬಂದಿದೆ.

ಇ) ಹೆಚ್ಚುವರಿಯಾಗಿ 174 ಹಾಸಿಗೆಗಳನ್ನು ಅಳವಡಿಸಲು ಕಟ್ಟಡ ನಿರ್ಮಾಣದ ಪ್ರಸ್ತಾವನೆಗೆ ಒಪ್ಪಿಗೆ ನೀಡುವ ಬಗ್ಗೆ ಪರಿಶೀಲನೆಯಾಗುತ್ತಿದೆ.

ಈ) ಭಾರತ ಜನಸಂಖ್ಯಾ ಯೋಜನೆ-9(ಕ) ಯು, ಕರ್ನಾಟಕ ರಾಜ್ಯದ 10 ಜಿಲ್ಲೆಗಳಲ್ಲಿ ಅನುಷ್ಠಾನಕ್ಕೆ ತರಲು ಯೋಚಿಸಿದೆ. ಅವುಗಳು ಬಳ್ಳಾರಿ, ಚಿಕ್ಕಮಗಳೂರು, ಚಿತ್ರದುರ್ಗ, ದಕ್ಷಿಣ ಕನ್ನಡ, ಹಾಸನ ಕೊಡಗು, ಮಂಡ್ಯ, ಮೈಸೂರು, ಶಿವಮೊಗ್ಗ ಹಾಗೂ ಉತ್ತರ ಕನ್ನಡ,

ಊ) ಈ ಯೋಜನೆಯ ಮುಖ್ಯ ವಿವರಗಳು ಗ್ರಾಮಾಂತರ ಪ್ರದೇಶಗಳಲ್ಲಿ ಕುಟುಂಬ ಕಲ್ಯಾಣ ಯೋಜನೆಯ ವಿವಿಧ ಹಂತಗಳಾದ ಜನನ ಪ್ರಮಾಣ ತಾಯಿ ಮಕ್ಕಳ ರಕ್ಷಣೆ, ಹಾಗೂ ದಂಪತಿ ರಕ್ಷಣೆಯ ಪ್ರಮಾಣವನ್ನು ಏರಿಸುವುದಾಗಿರುತ್ತದೆ. ಹಾಗೂ

1. ಸಮುದಾಯದಲ್ಲಿ ಕುಟುಂಬ ಕಲ್ಯಾಣ ಸೇವೆಗಳಲ್ಲಿ ಹೆರಿಗೆ ಪದ್ಧತಿಯನ್ನು ಸುಧಾರಿಸುವುದು.
2. ಸೇವಾ ನಿರ್ವಹಣೆಯನ್ನು ಬಲಪಡಿಸುವುದು.
3. ಸೇವಾ ಗುಣಮಟ್ಟವನ್ನು ಸುಧಾರಿಸಲು ಕೆಳಕಂಡ ಸಂಸ್ಥೆಗಳಿಗೆ ಅಂದರೆ ಅಧಿಕಾರಿಗಳು ಅಧಿಕಾರೇತರರು ದಾದಿಯವರು, ಸಮುದಾಯ ಮುಖಂಡರುಗಳು ಹಾಗೂ ಸ್ವಯಂ ಸೇವಾ ಸಂಸ್ಥೆಗಳಿಗೆ ವಿವಿಧ ರೀತಿಯಲ್ಲಿ ತರಬೇತಿ ನೀಡಲಾಗುವುದು.
4. ಎಲ್ಲಾ ಹಂತಗಳಲ್ಲಿ ಆಡಳಿತ ಸಮಾಚಾರ, ಮೌಲ್ಯ ಮಾಪನ ಹಾಗೂ ಮಾಹಿತಿ ಶಿಕ್ಷಣ ಮತ್ತು ಸಂಪರ್ಕವನ್ನು ಬಲಪಡಿಸಲಾಗುವುದು.
5. ಮೇಲ್ಕಂಡ ಉದ್ದೇಶಗಳಿಗಾಗಿ ಕೆಲವು ಉಪಕೇಂದ್ರಗಳು ಕೆಲವು ಪ್ರಾಥಮಿಕ ಆರೋಗ್ಯಕೇಂದ್ರಗಳು ವಸತಿ ಗೃಹಗಳು ಕೆಲವು ಜಿಲ್ಲಾ ತರಬೇತಿ ಕೇಂದ್ರಗಳು ಹಾಗೂ ಕೆಲವು ಇತರ ತರಬೇತಿ ಕೇಂದ್ರಗಳನ್ನು ಕಟ್ಟಲು ಉದ್ದೇಶಿಸಲಾಗಿದೆ. ಇದಲ್ಲದೆ ಕೆಲವು ಜಿಲ್ಲೆಗಳಲ್ಲಿ ಕೆಲವು ಉಪಕೇಂದ್ರಗಳು ಕೆಲವು ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ ಕೆಲವು ಸಮುದಾಯ ಆರೋಗ್ಯ ಕೇಂದ್ರಗಳನ್ನು ದುರಸ್ಥಿ ಮಾಡಲು ಉದ್ದೇಶಿಸಲಾಗಿದೆ. ಈ ಯೋಜನೆಯು ವಿಶ್ವಬ್ಯಾಂಕಿನ ಧನಸಹಾಯದಿಂದ ಜಾರಿಗೆ ಬರುವ ಯೋಜನೆಯಾಗಿದ್ದು, ಇದರ ಅವಧಿಯು 7 ವರ್ಷಗಳಾಗಿರುತ್ತದೆ. ಇದಕ್ಕೆ ಒಟ್ಟು ಅಂದಾಜು ವೆಚ್ಚ ರೂ.108 ಕೋಟಿಗಳನ್ನು ನಿಗಧಿಪಡಿಸಲಾಗಿದೆ. ಈ ಯೋಜನೆಯು ಇನ್ನೂ ಮಾತುಕತೆಯ ಹಂತದಲ್ಲಿದೆ.

ರಾಜ್ಯದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಖಾಲಿ ಇರುವ ವೈದ್ಯರುಗಳ ಹುದ್ದೆಗಳ ಭರ್ತಿ.

547 - ಶ್ರೀ. ನಾರಾಯಣಸ್ವಾಮಿ (ಬೇತಮಂಗಲ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಒಟ್ಟು ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಂಖ್ಯೆ ಎಷ್ಟು?

ಆ) ಆ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಖಾಲಿ ಇರುವ ವೈದ್ಯರುಗಳ ಸಂಖ್ಯೆ ಎಷ್ಟು? ಮತ್ತು ಅಲ್ಲಿ ವೈದ್ಯರುಗಳನ್ನು ಸರ್ಕಾರ ಯಾವಾಗ ತುಂಬುವುದು.

ಇ) ಬೆಂಗಳೂರು ಜಿಲ್ಲೆಯ ಗ್ರಾಮಾಂತರ ಹಾಗೂ ನಗರ ಪ್ರದೇಶಗಳಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ವೈದ್ಯರುಗಳೆಷ್ಟು? ಹೆಸರುಗಳೊಂದಿಗೆ ವಿವರ ನೀಡಿ.

ಈ) ಈ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಕಳೆದ ಐದು ವರ್ಷಗಳಿಂದ ಒಂದೇ ಜಾಗದಲ್ಲಿ ಸೇವೆ ಸಲ್ಲಿಸುತ್ತಿರುವ ವೈದ್ಯರುಗಳ ಸಂಖ್ಯೆ ಎಷ್ಟು? ಮತ್ತು ವೈದ್ಯರುಗಳ ಖಾಲಿಯಿರುವ ಜಾಗಗಳಾವುವು? (ಹೆಸರುಗಳೊಂದಿಗೆ ಪ್ರತ್ಯೇಕ ವಿವರ ನೀಡಿ)

ಶ್ರೀ ಬಿ.ಸ್. ಪಾಟೀಲ್ (ಸಾಸನೂರು) (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) 1305

ಆ) ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ 272 (ಪ್ರಾಥಮಿಕ ಆರೋಗ್ಯ ಘಟಕಗಳನ್ನು ಹೊರತು ಪಡಿಸಿ) ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ (ಸ.ಕ.ವೈ.)ಗಳ ಹುದ್ದೆಗಳು ಖಾಲಿ ಇದ್ದು ಈ ಹುದ್ದೆಗಳನ್ನು ಸ್ನಾತಕೋತ್ತರ ವ್ಯಾಸಂಗ ಮುಗಿಸಿ ಬರಲಿರುವ ಹಾಗೂ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿ ಆದಷ್ಟು ಜರೂರಾಗಿ ಭರ್ತಿ ಮಾಡಲಾಗುತ್ತಿದೆ.

ಇ) ಬೆಂಗಳೂರು ನಗರ ಹಾಗೂ ಗ್ರಾಮಾಂತರ ಜಿಲ್ಲೆಗಳಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳು 72 ಇರುತ್ತವೆ. ಈ ಕೇಂದ್ರಗಳಲ್ಲಿ 96 ವೈದ್ಯರುಗಳು ಸೇವೆ ಸಲ್ಲಿಸುತ್ತಿದ್ದಾರೆ (ಪಟ್ಟಿ ಲಗತ್ತಿಸಿದೆ)

ಈ) ಕಳೆದ ಐದು ವರ್ಷಗಳಿಂದ ಒಂದೇ ಸ್ಥಳದಲ್ಲಿ ಸೇವೆ ಸಲ್ಲಿಸುತ್ತಿರುವ ವೈದ್ಯರ ಸಂಖ್ಯೆ : 3. ಖಾಲಿ ಹುದ್ದೆಗಳ ಬಗ್ಗೆ ವಿವರಗಳು ಈ ಕೆಳಕಂಡಂತಿದೆ.

1. ಪ್ರಾ. ಆ. ಕೇಂದ್ರ ಚನ್ನರಾಯಪಟ್ಟಣ
2. ಪ್ರಾ. ಆ. ಕೇಂದ್ರ, ಅರದೇಶನಹಳ್ಳಿ.
3. ಪ್ರಾ. ಆ. ಕೇಂದ್ರ, ನಂದಗುಡಿ,
4. ಪ್ರಾ. ಆ. ಕೇಂದ್ರ, ತಿಪ್ಪಸಂದ್ರ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಬರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ವೈದ್ಯರುಗಳ ವಿವರ

ಕ್ರಮ ಸಂಖ್ಯೆ	ಪ್ರಾಥಮಿಕ ಆರೋಗ್ಯ ಕೇಂದ್ರ,		ವೈದ್ಯಾಧಿಕಾರಿಗಳ ಹೆಸರು
1	2		3
	ದೊಡ್ಡಬಳ್ಳಾಪುರ ತಾಲ್ಲೂಕು		ಡಾಕ್ಟರ್
1.	ಸಮುದಾಯ ಆರೋಗ್ಯ ಕೇಂದ್ರ (ಸಿ.ಎಸ್.ಸಿ) ದೊಡ್ಡಬಳ್ಳಾಪುರ	1.	ಎಲ್. ರುದ್ರಾನಾಯಕ್
		2.	ಹೆಚ್. ಎನ್. ವಿನುತ
		3.	ರಮೇಶ ನಾಯಕ್
		4.	ಕೆ. ಜಗದೀಶ್
2.	ಕನಸವಾಡಿ	1.	ಎ.ಹೆಚ್. ರಮೇಶ್
		2.	ಡಿ. ತುಳಸೀದೇವಿ
3	ತೂಬುಗೆರೆ	1.	ಬಿ.ವಿ. ದಿವಾಕರ್
4.	ಹೊಸಹಳ್ಳಿ	1.	ಕೆ.ಎ. ಗುರುಪುಟ್ಟಪ್ಪ
5.	ಕೊನೇನಹಳ್ಳಿ	1.	ಎ. ವಿಶ್ವನಾಥ್
6.	ಕೊನೇಘಟ್ಟ	1.	ಕೆ.ಎಸ್. ರವಿಕುಮಾರ್
	ದೇವನಹಳ್ಳಿ		
1.	ಕುಂದಾಣ	1.	ಆರ್. ತಿಪ್ಪಾನಾಯಕ್
2.	ನಲ್ಲೂರು	1.	ಕೆ.ಪಿ. ನಿರ್ಮಲ್ ಕುಮಾರ್
3.	ಆವತಿ	1.	ಎಸ್.ವಿ. ದಯಾನಂದ
	ನೆಲಮಂಗಲ ತಾಲ್ಲೂಕು		
1.	ದಾಬಸ್ ಪೇಟೆ	1.	ತುಳಸೀರಾಮ್
2.	ತ್ಯಾಮಗೊಂಡ್ಲು	1.	ಸಿ. ಸಿದ್ಧಲಿಂಗಸ್ವಾಮಿ
		2.	ಬಿ.ಎಸ್. ನಾಗರತ್ನ
3.	ಶಿವಗಂಗೆ	1.	ನಟರಾಜ್
4.	ಎಲೆಕ್ಯಾತನಹಳ್ಳಿ	1.	ಕೆ. ಶೈಲೇಂದ್ರ
	ಹೊಸಕೋಟೆ ತಾಲ್ಲೂಕು		
1.	ಜಡಿಗೇನಹಳ್ಳಿ	1.	ಕೆ. ಶ್ರೀನಿವಾಸ ಗೌಡ
		2.	ತ್ರಿಶೂಲ ಗುರುನಾಥ್ ಜೋಶಿ
2.	ಸೂಲಿಬೆಲೆ	1.	ಎಂ. ನಾರಾಯಣಸ್ವಾಮಿ
		2.	ಸಿ. ಗಾಯಿತ್ರಿದೇವಿ
3.	ಅನುಗೊಂಡನಹಳ್ಳಿ	1.	ವಿ. ದೊಡ್ಡವೀರೇಗೌಡ
4.	ಮುಗುಬಾಳ	1.	ಎ.ಆರ್. ಅಬ್ಬು
5.	ನಂದಗುಡಿ	1.	ಎಸ್. ಅಂಜಣ್ಣ

	ರಾಮನಗರ ತಾಲ್ಲೂಕು		
1.	ಬಿಡದಿ	1.	ಆರ್. ನಿಂಗಪ್ಪ
		2.	ಎನ್.ಜಿ. ರುಕ್ಮಿಣಿ
2.	ಜಾಲಮಂಗಲ	1.	ಸೈಯದ್ ಸಲಾವುದ್ದೀನ್
3.	ಕೈಲಂಚ	1.	ಕೆ. ವಿಶ್ವನಾಥ್
4.	ಸುಗ್ಗನಹಳ್ಳಿ	1.	ಜಿ. ವಿಜಯನರಸಿಂಹ
5.	ಬೈರಮಂಗಲ	1.	ಎಸ್. ರಾಮಚಂದ್ರ
	ಚನ್ನಪಟ್ಟಣ ತಾಲ್ಲೂಕು		
1.	ಅಕ್ಕೂರು ಹೊಸಹಳ್ಳಿ	1.	ಹೆಚ್.ಕೆ. ನಾಗರಾಜ್,
		2.	ಬಿ.ಎಂ. ಮುಷಾಕುನ್ನಿ
2.	ಮುದುಗೆರೆ	1.	ಪಿ. ಜಯಂತಿರಾಜ್
		2.	ರವಿಶಂಕರ್ ಕಾಟೇಕರ್
3.	ಕೂಂಗನೂರು	1.	ಜಸವರಾಯನ
4.	ನಾಗವಾರ	1.	ಆರ್.ಎ. ವಿಜಯವರ್ಧನ್
5.	ಬಿ.ವಿ.ಹಳ್ಳಿ	1.	ಬಾಲಕೃಷ್ಣ
6.	ಎಲೆತೋಟದ ಹಳ್ಳಿ	1.	ಜಿ. ನವಮಣಿ
7.	ಕೋಡಂಬಳ್ಳಿ	1.	ಸಿ.ಎಸ್. ಮಧುಸೂದನ್
	ಮಾಗಡಿ ತಾಲ್ಲೂಕು		
1.	ಮಾಗಡಿ	1.	ಎಂ. ಮಲ್ಲಿಕಾರ್ಜುನಪ್ಪ
		2.	ಎಂ.ಸಿ. ಮಲ್ಲಮ್ಮ
2.	ಸೋಲೂರು	1.	ಸಿ.ಇ.. ರವಿಪ್ರಕಾಶ್
3.	ಕುದೂರು	1.	ಪಿ. ನರೇಂದ್ರ
4.	ಬಾನವಾಡಿ	1.	ಎಂ. ಮಹೇಶ್
5.	ಸಂಕೀಘಟ್ಟ	1.	ಕೆ.ಎಸ್. ನರಸಿಂಹಮೂರ್ತಿ
6.	ಚಕ್ರಭಾವಿ	1.	ಎಂ.ಎಲ್. ರವಿಕುಮಾರ್
7.	ಡಿ.ಜಿ.ದೊಡ್ಡಿ	1.	ಉಮೇಶ್ ಜಿ. ಶೆಟ್ಟರ್
	ಕನಕಪುರ ತಾಲ್ಲೂಕು		
1.	ಹೊಸದುರ್ಗ	1.	ಕೆ.ಎಸ್. ಸುಬ್ಬಯ್ಯ
		2.	ಎಂ. ಸುರೇಂದ್ರ
2.	ದೊಡ್ಡಮರಳವಾಡಿ	1.	ಎಸ್.ಜಿ. ಗಣಮುಕಿ
3.	ಹಾರೋಹಳ್ಳಿ	1.	ಜಿ. ಕೃಷ್ಣ
4	ಸಾತನೂರು	1.	ಕೆ. ಜಗರೂಪ್‌ಸಿಂಗ್
5.	ಕೋಡಿಹಳ್ಳಿ	1.	ವಿ.ಹೆಚ್. ಜಯರಾಮೇಗೌಡ
6.	ದೊಡ್ಡ ಆಲಹಳ್ಳಿ	1	ಹೆಚ್.ವಿ. ಶಿವಕುಮಾರ್
7.	ಚಿಕ್ಕಮುದವಾಡಿ	1.	ಜಿ.ಕೆ.ವಸಂತ
8.	ಕೋಟೆ ಕೊಪ್ಪ	1.	ಎಂ. ಸತೀಶ್
9.	ಗೋದೂರು	1.	ಕೃಷ್ಣರಾಜೇಂದ್ರ

ಬೆಂಗಳೂರು(ನಗರ) ಜಿಲ್ಲೆಯ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಸೇವೆಸಲ್ಲಿಸುತ್ತಿರುವ ಆರೋಗ್ಯಾಧಿಕಾರಿ ಹಾಗೂ ಸಹಾಯಕ ಶಸ್ತ್ರ ಚಿಕಿತ್ಸಕರ ಪಟ್ಟಿ

ಕ್ರ.ಸಂ.	ವೈದ್ಯರ ಹೆಸರು	ಪ್ರಾ. ಆ. ಕೇಂದ್ರದ ಹೆಸರು	
1.	ಎಸ್. ರಾಮಾನಾಯಕ್	ಪ್ರಾ. ಆ. ಕೇಂದ್ರ	ಆನೇಕಲ್
2.	ಶೈಲಜಾ ಎಸ್. ಪಾಂಡುರಂಗ	”	ಆನೇಕಲ್
3.	ಎ. ಶೇಖರನ್	”	ದೊಮ್ಮಸಂದ್ರ
4.	ಸಿ.ಕೆ. ಶಶಿಕಲ	”	ದೊಮ್ಮಸಂದ್ರ
5.	ಎಸ್. ಶ್ರೀಕಂಠಸ್ವಾಮಿ	(ಐ.ಸಿ.ಡಿ.ಎಸ್.)	ದೊಮ್ಮಸಂದ್ರ
6.	ಎಸ್.ಆರ್. ಲೋಕೇಶ್ವರ ರೆಡ್ಡಿ	ಪ್ರಾ.ಆ.ಕೇಂದ್ರ)	ಅತ್ತಿಬೆಲೆ
7	.ಡಿ. ಗೋವಿಂದರಾಜುಲು	”	ಜಿಗಣಿ
8.	ಎಸ್.ಎ. ನಾರಾಯಣಪ್ರಸಾದ್	”	ಸರ್ಜಾಪುರ
9.	ಎಂ. ಸುಬ್ಬೇಗೌಡ	”	ಮರಸೂರು
10.	ಟಿ. ಅಮರನಾಥ್	”	ಹೆಸರಘಟ್ಟ
11.	ಹೇಮಲತ ಕೃಷ್ಣಮೂರ್ತಿ	”	ಹೆಸರಘಟ್ಟ
12.	ಎನ್.ಎಂ.ಪ್ರಭುಚಂದ್ರ	”	ಕಾಡುಗೊಂಡನಹಳ್ಳಿ
13.	ಎನ್.ಎನ್. ಜಯಮಾಲ	”	ಕಾಡುಗೊಂಡನಹಳ್ಳಿ
14.	ಸಿ.ಕೆ. ಸಂಗ್ರಾಮ್ ಸಿಂಗ್	”	ಅಬ್ಬಿಗೆರೆ

16.	ಡಿ.ಆರ್. ನರೇಂದ್ರ	”	ಯಲಹಂಕ
17.	ಎಂ.ಎಸ್. ದೇವೀರಮ್ಮ	”	ಯಲಹಂಕ
18.	ಎನ್. ಸುಂದರ್	”	ಬೆಟ್ಟಹಲಸೂರು,
19.	ವಾಣಿ ಆರ್. ಭಟ್	”	ಬೆಟ್ಟಹಲಸೂರು,
20	ಸಿ. ಹನುಮಯ್ಯ	”	ಸೊಂಡೆಕೊಪ್ಪ
21.	ಕೆ.ಎಂ. ಚೆನ್ನಕೇಶವ	”	ಗೋಪಾಲಪುರ
22.	ಕೆ.ಆರ್. ಉಮಾಬಾಯಿ	”	ಕೋಣನಕುಂಟೆ
23.	ಶ್ರೀಧರ್	”	ಕೋಣನಕುಂಟೆ
24.	ಎಸ್. ರಾಮಕೃಷ್ಣ	”	ಸಿಂಗಸಂದ್ರ
25.	ದಿಲೀಪ್ ಬಂಡಾರ್‌ಕರ್	”	ಸಿಂಗಸಂದ್ರ
26.	ಬಿ. ಗಂಗಾಧರಯ್ಯ	”	ಕಗ್ಗಲೀಪುರ
27.	ಎಂ.ವಿ. ಷಣ್ಮುಗ ಸುಂದರಂ	”	ಕೆ.ಗೊಲ್ಲಹಳ್ಳಿ
28.	ಟಿ.ವಿ. ಹರಿಸರ್ವೋತ್ತಮರಾವ್	”	ಬೇಗೂರು
29.	ಕಮಲಮ್ಮ	”	ಬೇಗೂರು
30.	ನರಸಿಂಹಯ್ಯ	”	ವರ್ತೂರು
31.	ಬಿ.ಎಸ್. ರಜನಿ	”	ವರ್ತೂರು
32.	ಕೆ.ಎನ್.ಶ್ರೀ ರಾಮಶೆಟ್ಟಿ	”	ಕೆ.ಆರ್.ಪುರಂ
33.	ಹೆಚ್. ಭಾರತಿ ಬಾಯಿ	”	ಕೆ.ಆರ್.ಪುರಂ
34.	ಸಿ.ಎಸ್. ರವೀಂದ್ರ	”	ಕಾಡುಗೋಡಿ
35.	ಕೆ.ವಿ. ವಿಜಯಲಕ್ಷ್ಮಿ	”	ಕಾಡುಗೋಡಿ
36.	ಜಿ.ಎಸ್. ಬ್ರಹ್ಮರಾಜ್	”	ತಾವರೆಕೆರೆ
37.	ಎಸ್.ಎನ್. ಲೀಲಾವತಿ	”	ಕಾಡುಸೊಣ್ಣಪ್ಪನಹಳ್ಳಿ
38.	ಸುನಿಲ್ ಇಂಚಲ್	”	ಕೆಂಗೇರಿ ಉಪನಗರ

ಆರೋಗ್ಯ ಇಲಾಖೆಯಲ್ಲಿರುವ ವಾಹನಗಳ ಸಂಖ್ಯೆ

431 - ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ ಕ್ಷೇತ್ರ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿನ ಆರೋಗ್ಯ ಇಲಾಖೆಯಲ್ಲಿರುವ ವಾಹನಗಳ ಒಟ್ಟು ಸಂಖ್ಯೆ ಎಷ್ಟು? ಹಾಗೂ ಪ್ರತಿಯೊಂದು ಜಿಲ್ಲೆಗೂ ಅಗತ್ಯಕ್ಕನುಸಾರವಾಗಿ ವಾಹನಗಳು ಒದಗಿಸಲ್ಪಟ್ಟಿವೆಯೆ?

ಆ) ಅವುಗಳಲ್ಲಿ ಎಷ್ಟು ವಾಹನಗಳು ಉಪಯೋಗಿಸುವ ಸ್ಥಿತಿಯಲ್ಲಿದೆ ಮತ್ತು ಎಷ್ಟು ಅನುಪಯೋಗ ಸ್ಥಿತಿಯಲ್ಲಿವೆ?

ಇ) ಅನುಪಯೋಗ ಸ್ಥಿತಿಯಲ್ಲಿರುವ ವಾಹನಗಳು ದುರಸ್ತಿಗಾಗಿ ಬಹಳ ದಿನಗಳಿಂದ ಬೆಂಗಳೂರಿನ ಕೇಂದ್ರ ಕಾರ್ಯಾಗಾರದಲ್ಲಿ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ದುರಸ್ತಿಗಾಗಿ ಬರುವ ವಾಹನಗಳನ್ನು ತ್ವರಿತವಾಗಿ ದುರಸ್ಥಿಗೊಳಿಸುವ ಬಗ್ಗೆ ಕಾರ್ಯಯೋಜನೆ ಇಲಾಖೆಯಲ್ಲಿ ಇದೆಯೇ? ಪೂರ್ಣ ವಿವರಗಳನ್ನು ನೀಡುವುದು.

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಇಲಾಖೆಯಲ್ಲಿ ಒಟ್ಟು 1633 ವಾಹನಗಳಿದ್ದು, ಇವುಗಳನ್ನು ಅಗತ್ಯಕ್ಕನುಸಾರವಾಗಿ ಹಾಗೂ ಕಾರ್ಯಕ್ರಮಗಳಿಗೆ ಅನುಗುಣವಾಗಿ ವಿವಿಧ ಜಿಲ್ಲೆಗಳಿಗೆ ಒದಗಿಸಲಾಗಿದೆ.

ಆ) 1310 ವಾಹನಗಳು ಉಪಯೋಗ ಸ್ಥಿತಿಯಲ್ಲಿದ್ದು ಉಳಿದ 323 ವಾಹನಗಳಲ್ಲಿ ಕೆಲವು ದುರಸ್ಥಿಗಾಗಿ ಹಾಗೂ ಕೆಲವು ಅನುಪಯೋಗ ಸ್ಥಿತಿಯಲ್ಲಿವೆ.

ಇ) ಅನುಪಯೋಗ ಸ್ಥಿತಿಯಲ್ಲಿರುವ ವಾಹನಗಳನ್ನು ನಿಷ್ಕ್ರಿಯಗೊಳಿಸಿ ವಿಲೇವಾರಿ ಮಾಡುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ.

ಈ) ಇಲಾಖೆಯ ಕೇಂದ್ರೀಯ ಕಾರ್ಯಾಗಾರದಲ್ಲಿ ವಾಹನ ದುರಸ್ಥಿ ಕಾರ್ಯವನ್ನು ಸರ್ಕಾರದ ನಿಯಮದಂತೆ ವ್ಯವಸ್ಥಿತವಾಗಿ ನಿರ್ವಹಿಸುತ್ತಿದೆ.

ಮುಲ್ಕಿ ಮೀನುಗಾರಿಕಾ ಬಂದರು

543 - ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದರೆ) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮುಲ್ಕಿ - ಮೀನುಗಾರಿಕಾ ಅಳಿವೆಯ ರಚನೆಯ ಬಗ್ಗೆ ತಜ್ಞರಿಂದ ಪರಿಶೀಲನಾ ಕಾರ್ಯವಾಗಿದೆಯೇ ?

ಆ) ಅವರು ಯಾವ ತರಹದ ವರದಿ ಕೊಟ್ಟಿರುವರು.

ಇ) ಆ ಬಂದರಿನ ಕಾರ್ಯ ಯಾವಾಗ ಪ್ರಾರಂಭವಾಗುವುದು

ಈ) ಆ ಕಾರ್ಯಕ್ಕೆ ಒಟ್ಟು ಎಷ್ಟು ಖರ್ಚು ತಗಲುವುದು.

ಉ) ಕೇಂದ್ರದ ಸಹಾಯ ಪಡೆಯುವಲ್ಲಿ ಸರ್ಕಾರ ಏನು ಕ್ರಮ ಕೈಗೊಂಡಿದೆ ?

ಶ್ರೀ ವಸಂತ ವಿ. ಸಾಲಿಯಾನ್ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :

ಹೆಜಮಾಡಿ ಕೋಡಿ (ಮುಲ್ಕಿ)ಯನ್ನು ಮೀನುಗಾರಿಕಾ ಬಂದರಾಗಿ ಅಭಿವೃದ್ಧಿ ಪಡಿಸಲು ತಜ್ಞರಿಂದ ಪ್ರಾರಂಭಿಸಿದ ಪರಿಶೀಲನಾ ಕಾರ್ಯ ಮುಗಿದಿದೆ.

ಆ) ಅವರು ಅನುಕೂಲಕರ ವರದಿ ನೀಡಿರುವರು.

ಇ) 1994-95ನೇ ಸಾಲಿನಲ್ಲಿ ಈ ಕಾರ್ಯವನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ.

ಈ) ಪ್ರಸ್ತುತ ಈ ಕಾರ್ಯಕ್ರಮಕ್ಕೆ ಒಟ್ಟು ರೂ. 100.00 ಲಕ್ಷಗಳ ಖರ್ಚು ತಗಲುವುದೆಂದು ಅಂದಾಜಿಸಲಾಗಿದೆ.

ಉ) ಕೇಂದ್ರ ಸರ್ಕಾರದ ಅನುಮೋದನೆಗಾಗಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ಅವರ ಆದೇಶದ ಮೇರೆಗೆ ಮೀನುಗಾರಿಕೆ ತಂಗುದಾಣ ಇಳಿದಾಣ ನಿರ್ಮಾಣಕ್ಕೆ ಬೇಕಾಗಿರುವ ಜಮೀನನ್ನು ಭೂ ಸ್ವಾಧೀನಪಡಿಸಿ ಕೊಂಡು ಒಂದು ವರದಿಯನ್ನು ಕೇಂದ್ರಕ್ಕೆ ಸಲ್ಲಿಸಲು ಕ್ರಮ ಕೈಗೊಳ್ಳಲಾಗಿದೆ.

ಹೊಳೇನರಸೀಪುರ ತಾಲ್ಲೂಕಿನಲ್ಲಿ ಕಾಯಿಲೆಯಿಂದ ರಾಸುಗಳು ಸಾಯುತ್ತಿರುವ ಬಗ್ಗೆ.

545 - ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಹೊಳೆನರಸೀಪುರ) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹೊಳೆನರಸೀಪುರ ತಾಲ್ಲೂಕಿನಲ್ಲಿ ರಾಸುಗಳು ಖಾಯಿಲೆಯಿಂದ ಸಾಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಇಲ್ಲಿಯವರೆಗೆ ಎಷ್ಟು ರಾಸುಗಳು ಖಾಯಿಲೆಯಿಂದ ಸತ್ತುಹೋಗಿವೆ.

ಇ) ಈ ಸಾಂಕ್ರಾಮಿಕ ಖಾಯಿಲೆಯನ್ನು ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಈ) ಈ ರಾಸುಗಳನ್ನು ಕಳೆದುಕೊಂಡ ರೈತರಿಗೆ ಸರ್ಕಾರ ಪರಿಹಾರ ನೀಡಿದೆಯೇ?

ಶ್ರೀ ಕೆ. ಎನ್. ನಾಗೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) ಹೌದು

ಆ) 18

ಇ) ರೋಗದ ವಿರುದ್ಧ 1290 ರಾಸುಗಳಿಗೆ ಲಸಿಕೆಯನ್ನು ಹಾಕಲಾಗಿದೆ.

ಈ) ಇಲ್ಲಾ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ರಂಫಣಿ ಪಂಥಿನವರಿಗೆ ಸರ್ಕಾರದ ಸಹಾಯ

541 - ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದರೆ) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಹಿಂದೆ ಮೀನುಗಾರಿಕೆಯ ಮುಖ್ಯ ರಂಪಣಿ ಫಂಡುಗಳಲ್ಲಿ ಈಗ ಎಷ್ಟು ಅಸ್ತಿತ್ವದಲ್ಲಿದೆ.

ಆ) ರಂಪಣಿ ಫಂಡಿನವರಿಗೆ ಸರ್ಕಾರ ಸಹಾಯ ಯಾವ ರೀತಿಯಲ್ಲಿ ಒದಗಿಸುತ್ತದೆ.

ಇ) ಯಾಂತ್ರೀಕೃತ ಮೀನುಗಾರಿಕೆಗೆ ಬೇಕಾದ ಸಹಾಯಧನ ಒದಗಿಸುತ್ತಿರುವಾಗ, ಈ ರಂಪಣಿ ಮೀನುಗಾರಿಕಾ ಫಂಡಿಗೆ ಸಹಾಯ ಒದಗಿಸದಿರಲು ಕಾರಣವೇನು?

ಈ) ಇದನ್ನು ಉಳಿಸುವಲ್ಲಿ ಸರ್ಕಾರ ಏನು ಕ್ರಮ ಕೈಗೊಳ್ಳುವುದು.

ಶ್ರೀ ವಸಂತ ವಿ. ಸಾಲಿಯಾನ್ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :

ಅ) ಒಂದು ರಂಪಣಿ ಫಂಡು

ಆ) ರಂಪಣಿ ಫಂಡಿನವರಿಗೆ ಸರ್ಕಾರದ ವತಿಯಿಂದ ಸಹಾಯ ಒದಗಿಸಲು ಪ್ರಸ್ತುತ ಯಾವ ಯೋಜನೆಯು ಅಸ್ತಿತ್ವದಲ್ಲಿರುವುದಿಲ್ಲ.

ಇ) ರಂಪಣಿ ಮೀನುಗಾರಿಕೆಯು ನಶಿಸಿಹೋಗಿ ಇಂದಿನ ಆಧುನಿಕ ಯಾಂತ್ರೀಕೃತ ಮೀನುಗಾರಿಕೆಗಿಂತ ಜನಪ್ರಿಯತೆ ಹಾಗೂ ಲಾಭದಾಯಕವಾಗಿಲ್ಲದಿರುವುದು ಕಾರಣ.

ಈ) ಇದನ್ನು ಉಳಿಸಿಕೊಳ್ಳುವ ಅವಶ್ಯಕತೆಯಿರುವುದಿಲ್ಲ.

ಶ್ರೀಕ್ಷೇತ್ರ ಸೋಗಲದಲ್ಲಿ ರಾಷ್ಟ್ರೀಯ ನಂದನವನ

514 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಶ್ರೀ ಕ್ಷೇತ್ರ ಸೋಗಲದಲ್ಲಿ ರಾಷ್ಟ್ರೀಯ ನಂದನವನ್ನು ಕೈಗೊಳ್ಳಬೇಕೆಂದು ಅಂದಾಜು ಸಮಿತಿಯವರು ಶಿಫಾರಸ್ಸು ಮಾಡಿದ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ ಸರ್ಕಾರದವರು ಅಂದಾಜು ಸಮಿಯ ಶಿಫಾರಸ್ಸಿನ ಪ್ರಕಾರ ರಾಷ್ಟ್ರೀಯ ನಂದನವನ ಕೈಗೊಳ್ಳಲು ಯಾವ ಕ್ರಮ ಕೈಗೊಂಡಿರುವಿರಿ?

ಇ) ಶ್ರೀ ಕ್ಷೇತ್ರ ಸೋಗಲದಲ್ಲಿ ಅರಣ್ಯ ಬೆಳೆಸಲು ಸಾಕಷ್ಟು ಸ್ಥಳ ಇದ್ದು ಅಲ್ಲಿ ಹೆಚ್ಚಿಗೆ ಅರಣ್ಯ ಬೆಳಸಲು ಕ್ರಮ ಕೈಗೊಳ್ಳುವರೇ?

ಈ) ಅತಿಕ್ರಮಣವನ್ನು ತಪ್ಪಿಸುವ ಸಲುವಾಗಿ ಶ್ರೀ ಕ್ಷೇತ್ರ ಸೊಗಲದಲ್ಲಿ ಸುತ್ತಲೂ ಗೋಡೆಯನ್ನಾಗಲೀ ಅಥವಾ ತಂತಿ ಬೇಲಿಯನ್ನಾಗಲೀ ಹಾಕಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಎಂ.ಪಿ. ಕೇಶವ ಮೂರ್ತಿ (ಅರಣ್ಯ ರಾಜ್ಯ ಸಚಿವರು):

ಅ) ರಾಷ್ಟ್ರೀಯ ನಂದನವನ ಕೈಗೊಳ್ಳುವ ವಿಚಾರ ಗಮನಕ್ಕೆ ಬಂದಿರುವುದಿಲ್ಲ. ಆದರೂ ಅಂದಾಜು ಸಮಿತಿಯು ತಮ್ಮ 91-92ನೇ ಸಾಲಿನ ಮೂರನೇ ವರದಿ (ಒಂಬತ್ತನೇ ವಿಧಾನ ಸಭೆ)ಯಲ್ಲಿ ಶ್ರೀ ಕ್ಷೇತ್ರ ಸೋಗಲ ಇಲ್ಲಿ ಉದ್ಯಾನವನ ಮಾಡುವ ಎಲ್ಲಾ ಸೌಕರ್ಯ ಹೊಂದಿರುವುದರಿಂದ ಸರ್ಕಾರದವರು ಕೂಡಲೇ ರೂ. 25.00 ಲಕ್ಷಗಳನ್ನು ಬಿಡುಗಡೆ ಮಾಡುವಂತೆ ಶಿಫಾರಸ್ಸು ಮಾಡಿರುತ್ತದೆ.

2. ಈಗಾಗಲೇ ಶ್ರೀ ಕ್ಷೇತ್ರ ಸೋಗಲದಲ್ಲಿ ಒಂದು ಚಿಗರೆ ವನದ ನಿರ್ಮಾಣ ಕೆಲಸವನ್ನು ಕೈಗೆತ್ತಿಗೊಂಡಿದ್ದು ಇದು ಮುಕ್ತಾಯ ಹಂತದಲ್ಲಿದ್ದು ಇದುವರೆಗೆ ರೂ. 4.35 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

3. ಸರ್ಕಾರವು ಬಿಡುಗಡೆ ಮಾಡುವ ಅನುದಾನ ಚೌಕಟ್ಟಿನಲ್ಲಿ ಒಳಗೆ ಈ ಕ್ಷೇತ್ರದಲ್ಲಿ ಸಾಧ್ಯವಾದಷ್ಟು ಹೆಚ್ಚಿಗೆ ಅರಣ್ಯವನ್ನು ಬೆಳಸಲು ಕ್ರಮಗಳನ್ನು ತೆಗೆದುಕೊಳ್ಳಲಾಗುವುದು. ಇಲ್ಲಿವರೆಗೆ 103.69 ಹೆಕ್ಟೇರ್ ಪ್ರದೇಶದಲ್ಲಿ ಅರಣ್ಯವನ್ನು ಬೆಳಸಲಾಗಿದೆ.

4. ಹೆಚ್ಚುವರಿ ಅನುದಾನ ಬಿಡುಗಡೆ ಮಾಡುವ ಬಗ್ಗೆ ಪರಿಶೀಲಿಸಿ ಈ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗುವುದು.

ರಾಜಾಜಿನಗರ ವಲಯಕ್ಕೆ ಸೇರಿದ ಶಾಲಾಕಟ್ಟಡಗಳಿಗೆ ಹಣ ಮಂಜೂರಾತಿ

432 - ಶ್ರೀ ಕೆ. ಲಕ್ಕಣ (ರಾಜಾಜಿನಗರ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1993-94ನೇ ಸಾಲಿನ ಆಯವ್ಯಯದಲ್ಲಿ ರಾಜಾಜಿನಗರ ವಿಭಾಗಕ್ಕೆ ಸೇರಿದ ಶಾಲಾ ಕಟ್ಟಡ ಕಟ್ಟಲು ಎಷ್ಟು ಹಣ ಮಂಜೂರು ಮಾಡಿದೆ?

ಆ) ಹಾಗಿದ್ದಲ್ಲಿ ಆದರಲ್ಲಿ ಇದುವರೆವಿಗೂ ಬಿಡುಗಡೆ ಮಾಡಿದ ಹಣದ ಮೊತ್ತವೆಷ್ಟು?

ಇ) ಇಲ್ಲಿಯವರೆಗೂ ಶಾಲಾ ಕಟ್ಟಡಗಳಿಗಾಗಿ ವ್ಯಯ ಮಾಡಲಾಗಿರುವ ಹಣ ಎಷ್ಟು?

ಈ) ಇನ್ನುಳಿದ ಹಣವನ್ನು ಶೀಘ್ರದಲ್ಲಿಯೇ ಉದ್ದೇಶಿತ ಕಾರ್ಯಗಳಿಗಾಗಿ ಬಳಸಲು ಕ್ರಮಕೈಗೊಳ್ಳಲಾಗುವುದೇ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):

ಅ) ರಾಜಾಜಿನಗರ ವಿಭಾಗಕ್ಕೆ 1993-94ನೇ ಸಾಲಿನಲ್ಲಿ 3ಕೆಲಸಗಳು ಮಂಜೂರಾಗಿದ್ದು ಒಟ್ಟು ಅಂದಾಜು ವೆಚ್ಚ ರೂ.12.00 ಲಕ್ಷಗಳು ಇದಕ್ಕೆ ಈ ಸಾಲಿನಲ್ಲಿ ರೂ.4.00 ಲಕ್ಷ ಅನುದಾನವಿರುತ್ತದೆ.

ಆ) ಈ ಕಾಮಗಾರಿಗಳಿಗೆ ಪ್ರತ್ಯೇಕವಾಗಿ ಹಣ ಬಿಡುಗಡೆಯಾಗಿರುವುದಿಲ್ಲ. ಆದರೆ ಈ ವಿಭಾಗಕ್ಕೆ ಇಮುವರೆವಿಗೂ ರೂ.15.86 ಲಕ್ಷ ಹಣ ಬಿಡುಗಡೆಯಾಗಿರುತದೆ.

ಇ) ಈ ವಿಭಾಗದಲ್ಲಿ ಇದುವರೆವಿಗೂ ರೂ.15.86 ಲಕ್ಷ ವೆಚ್ಚ ಮಾಡಲಾಗಿದೆ (ಫೆಬ್ರವರಿ ಅಂತ್ಯಕ್ಕೆ)

ಈ) ಕೆಲಸವು ಪ್ರಗತಿಯಾದ ಮೇರೆಗೆ ಹಣವನ್ನು ಖರ್ಚುಮಾಡಲು ಕ್ರಮ ತೆಗೆದುಕೊಳ್ಳಲಾಗುವುದು.

ಕಲಘಟಗಿ ತಾಲ್ಲೋಕ್ ಮಿಶ್ರಿ ಕೋಟೆ ಗ್ರಾಮದಲ್ಲಿ ಸರ್ಕಾರಿ ಉರ್ದು ಪ್ರೌಢಶಾಲೆ

469 - ಶ್ರೀ ಪಿ.ಸಿ. ಸಿದ್ದನಗೌಡರ (ಕಲಘಟಗಿ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಲಘಟಗಿ ತಾಲ್ಲೂಕು ಮಿಶ್ರಿಕೋಟೆ ಗ್ರಾಮದಲ್ಲಿ ಸರ್ಕಾರಿ ಉರ್ದು ಪ್ರೌಢಶಾಲೆಯನ್ನು ತೆರೆಯುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ

ಆ) ಹಾಗಿದ್ದಲ್ಲಿ ಯಾವಾಗ ಆ ಪ್ರೌಢಶಾಲೆ ಪ್ರಾರಂಭಿಸಲಾಗುವುದು?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು) :

ಅ) ಸರ್ಕಾರದ ಮುಂದಿದೆ

ಆ) ಪರಿಶೀಲಿಸಲಾಗುವುದು.

ಕಲಘಟಗಿ ತಾಲ್ಲೋಕ್ ಹುಲಕೊಪ್ಪ ಮತ್ತು ಮಿಶ್ರಿಕೋಟೆ ಗ್ರಾಮದಲ್ಲಿ ಸರ್ಕಾರಿ ಪದವಿಪೂರ್ವ ಕಾಲೇಜು

470 - ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಲಘಟಗಿ ತಾಲ್ಲೂಕಿನಲ್ಲಿ ಇರತಕ್ಕ ಒಟ್ಟು ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ ಎಷ್ಟು?

ಆ) ಆ ತಾಲ್ಲೂಕು ಹುಲಕೊಪ್ಪ ಮತ್ತು ಮಿಶ್ರಿಕೋಟೆ ಗ್ರಾಮದಲ್ಲಿ ಪದವಿ ಪೂರ್ವ ಕಾಲೇಜನ್ನು ತೆರೆಯುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ?

ಇ) ಹಾಗಿದ್ದಲ್ಲಿ, 1994-95ನೇ ಸಾಲಿನಲ್ಲಿ ಆ ಮೇಲ್ಕಂಡ ಸ್ಥಳಗಳಲ್ಲಿ ಸರ್ಕಾರಿ ಪದವಿ ಪೂರ್ವಕಾಲೇಜನ್ನು ತೆರೆಯಲು ಸರ್ಕಾರ ಅನುಮತಿ ನೀಡುವುದೇ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು) :

ಅ) ಕಲಘಟಗಿ ತಾಲ್ಲೂಕಿನಲ್ಲಿ ಯಾವುದೇ ಸರ್ಕಾರಿ ಪದವಿ ಪೂರ್ವ ಕಾಲೇಜು ಇರುವುದಿಲ್ಲ.

ಆ) ಹುಲಕೊಪ್ಪ ಮತ್ತು ಮಿಶ್ರಿಕೋಟೆ ಗ್ರಾಮದಲ್ಲಿ ಪದವಿ ಪೂರ್ವ ಕಾಲೇಜು ತೆರೆಯುವ ಬಗ್ಗೆ ಪ್ರಸ್ತಾವನೆ ಬಂದಿರುವುದಿಲ್ಲ.

ಇ) ಪ್ರಸ್ತಾವನೆ ಬಂದಲ್ಲಿ ಪರಿಶೀಲಿಸಿ ಕ್ರಮ ತೆಗೆದುಕೊಳ್ಳುವುದು.

ಕಲಘಟಗಿ ತಾಲ್ಲೋಕ್ ಬಮ್ಮಿಗಟ್ಟಿ ಗ್ರಾಮದಲ್ಲಿ ಪದವಿಪೂರ್ವ ಕಾಲೇಜು ಪ್ರಾರಂಭ

471 - ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಲಘಟಗಿ ತಾಲ್ಲೂಕ್ ಬಮ್ಮಿಗಟ್ಟಿ ಗ್ರಾಮದಲ್ಲಿ ಸರ್ಕಾರಿ ಪ್ರೌಢಶಾಲೆ ಇರುವುದು ನಿಜವೇ

ಆ) ಆ ಗ್ರಾಮದಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜು ತೆರೆಯುವ ಬಗ್ಗೆ ಪ್ರಸ್ತಾವನೆಗಳು ಸರ್ಕಾರದ ಮುಂದೆ ಇದೆಯೇ?

ಇ) ಹಾಗಿದ್ದಲ್ಲಿ 1994-95ನೇ ಸಾಲಿನಲ್ಲಿ ಸರ್ಕಾರವು ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ಸರ್ಕಾರ ಅನುಮತಿ ನೀಡುತ್ತದೆಯೇ?

ಶ್ರೀಮತಿ ನಾಗಮ್ಮ ಸಿ. ಕೇಶವ ಮೂರ್ತಿ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು) :

ಅ) ನಿಜ

ಆ) ಇಲ್ಲ

ಇ) ಪ್ರಸ್ತಾವನೆ ಬಂದಲ್ಲಿ ಪರಿಶೀಲಿಸಿ ಕ್ರಮ ತೆಗೆದುಕೊಳ್ಳಲಾಗುವುದು.

ಕಲಘಟಗಿ ಮತ್ತು ಹುಬ್ಬಳ್ಳಿ ತಾಲ್ಲೋಕುಗಳಲ್ಲಿ ಸರ್ಕಾರಿ ಪದವಿಪೂರ್ವ ಕಾಲೇಜುಗಳನ್ನು ತೆರೆಯುವುದು

472 - ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಕಿ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಲಘಟಗಿ ತಾಲ್ಲೂಕ್ ಸೂರಶೆಟ್ಟಿ ಕೊಪ್ಪಗ್ರಾಮ ಹಾಗೂ ಹುಬ್ಬಳ್ಳಿ ತಾಲ್ಲೂಕಿನ ವಿಶ್ವೇಶ್ವರಯ್ಯ ನಗರದಲ್ಲಿ ಹೊಸದಾಗಿ ಸರ್ಕಾರಿ ಪದವಿ ಪೂರ್ವ ಕಾಲೇಜನ್ನು ತೆರೆಯುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ

ಆ) ಹಾಗಿದ್ದಲ್ಲಿ 1994-95ರಲ್ಲಿ ಆ ಸ್ಥಳಗಳಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜನ್ನು ತೆರೆಯಲಾಗುವುದೇ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು) :

ಅ) ಕಲಘಟಗಿ ತಾಲ್ಲೂಕು ಸೂರಶೆಟ್ಟಿ ಕೊಪ್ಪ ಸರ್ಕಾರಿ ಪ್ರೌಢಶಾಲೆಯಲ್ಲಿ ಪದವಿ ಪೂರ್ವ ಕಾಲೇಜು ಪ್ರಾರಂಭಿಸುವ ಬಗ್ಗೆ ಪ್ರಸ್ತಾವನೆ ಬಂದಿದೆ. ಆದರೆ ವಿಶ್ವೇಶ್ವರಯ್ಯ ನಗರದಲ್ಲಿ ಹೊಸದಾಗಿ ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರಾರಂಭಿಸುವ ಬಗ್ಗೆ ಪ್ರಸ್ತಾವನೆ ಬಂದಿರುವುದಿಲ್ಲ.

ಆ) ಸೂರಶೆಟ್ಟಿ ಕೊಪ್ಪಗ್ರಾಮದಲ್ಲಿ ಪದವಿಪೂರ್ವ ಕಾಲೇಜನ್ನು ಪ್ರಾರಂಭಿಸುವ ಪ್ರಸ್ತಾವನೆಯನ್ನು ತಿರಸ್ಕರಿಸಲಾಗಿದೆ. ಹುಬ್ಬಳ್ಳಿ ತಾಲ್ಲೂಕಿನ ವಿಶ್ವೇಶ್ವರಯ್ಯ ನಗರದಲ್ಲಿ ಹೊಸದಾಗಿ ಸರ್ಕಾರಿ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸುವ ಬಗ್ಗೆ ಪ್ರಸ್ತಾವನೆ ಬಂದಲ್ಲಿ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಬಸಾಪೂರ ಜೂನಿಯರ್ ಕಾಲೇಜಿನ ಮಂಜೂರಿ ಮತ್ತು ಕೆಲಸದ ಬಗ್ಗೆ

474 - ಶ್ರೀ ಉಮೇಶ್ ವಿ. ಕತ್ತಿ (ಹುಕ್ಕೇರಿ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಸಾಪೂರ ಜೂನಿಯರ್ ಕಾಲೇಜು ಪ್ರಾರಂಭಿಸುವ ಸಲುವಾಗಿ ಸರ್ಕಾರದ ಕ್ರಮವೇನು?

ಆ) ಬಹುದಿನಗಳ ಬೇಡಿಕೆಯಾದ ಆ ಕಾಲೇಜನ್ನು ಪ್ರಾರಂಭಿಸಲಾಗುವುದೇ

ಇ) ಹಾಗಿದ್ದಲ್ಲಿ ಅದಕ್ಕೆ ಯಾವಾಗ ಮಂಜೂರಿ ಕೊಡುವುದು ಮತ್ತು ಆ ಬಗ್ಗೆ ಪ್ರಸ್ತಾವನೆ ಸರ್ಕಾರಕ್ಕೆ ಬಂದಿದೆಯೇ

ಈ) ಬಂದಿದ್ದಲ್ಲಿ ಯಾವಾಗ ಕೆಲಸ ಪ್ರಾರಂಭಿಸಲಾಗುವುದು?

ಶ್ರೀಮತಿ ನಾಗಮ್ಮ ಸಿ. ಕೇಶವ ಮೂರ್ತಿ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು):

ಅ)ಬಸಾಪುರದಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸುವ ಪ್ರಸ್ತಾವನೆಯನ್ನು 1994-95ನೇ ಸಾಲಿನಲ್ಲಿ ಪರಿಗಣಿಸಲಾಗಿಲ್ಲ.

ಆ) ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಇ) ಬಂದಿದೆ

ಈ) 'ಆ' ನಲ್ಲಿನ ಉತ್ತರ ಅನ್ವಯಿಸುವುದು

ಶ್ರೀ ಬಸವರಾಜ ರಾಯರೆಡ್ಡಿ: ಮಾನ್ಯ ಅಧ್ಯಕ್ಷರೇ......

ಅಧ್ಯಕ್ಷರು: ಈಗ ಸಭೆಯ ಮುಂದಿಡುವ ಕಾಗದ ಪತ್ರಗಳು ರಾಯರೆಡ್ಡಿ ಅವರೇ, ತಾವು ಕುಳಿತುಕೊಳ್ಳಿ.

ಶ್ರೀ ಬಿ.ಎಂ. ಕಾನಡೆ: ಅವರು ಸಸ್ಪೆಂಡ್ ಆಗಿದ್ದಾರೆ. ಅವರನ್ನು ಹೊರಗಡೆ ಹಾಕಬೇಕು.

(ಗೊಂದಲ)

ಅಧ್ಯಕ್ಷರು: ತಾವು ಸಭೆಯ ಕಾರ್ಯಕಲಾಪಗಳನ್ನು ಅರ್ಥಮಾಡಿಕೊಳ್ಳಬೇಕು. ಸಭೆಯ ಮುಂದೆ ಕಾಗದಗಳ ಮಂಡನೆ ಆಗಲಿ.

ಶ್ರೀ ಬಸವರಾಜ ರಾಯರೆಡ್ಡಿ: ಇವತ್ತು ನ್ಯಾಯಾಂಗ ತನಿಖೆ ಆಗಬೇಕು. ಗೋಲೀಬಾರ್ ನಿಂದ 7 ಜನ ಸತ್ತಿದ್ದಾರೆ. ಮತ್ತು 3 ಜನರ ಕೊಲೆ ಆಗಿದೆ.

ಅಧ್ಯಕ್ಷರು: ತಾವು ಏನು ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

(ಅಧ್ಯಕ್ಷರ ಆಜ್ಞೆ ಮೇರೆಗೆ ಮಾನ್ಯ ಸದಸ್ಯರು ಹೇಳಿದ್ದನ್ನು ರೆಕಾರ್ಡ್ ಮಾಡಲಿಲ್ಲ)

ಅಧ್ಯಕ್ಷರು: ಈಗ ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು.

3. ಸಭೆಯ ಮುಂದಿಡಲಾದ ಕಾಗದ ಪತ್ರಗಳು.

I. ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿ): ಮಾನ್ಯ ಅಧ್ಯಕ್ಷರೆ,

1965ನೇ ಇಸವಿಯ ಕರ್ನಾಟಕ ಅಬಕಾರಿ ಅಧಿನಿಯಮ 71 (4) ನೇ ಕಲಮಿನ ಮೇರೆಗೆ,

1. 1967ನೇ ಇಸವಿಯ ಕರ್ನಾಟಕ ಅಬಕಾರಿ ಪರವಾನಗಿಗಳ (ಸಾಮಾನ್ಯ ಷರತ್ತುಗಳು) ನಿಯಮಗಳ ತಿದ್ದುಪಡಿಗೆ ಸಂಬಂಧಿಸಿದಂತೆ ದಿನಾಂಕ 6-12-93 ರಂದು ಹೊರಡಿಸಲಾದ ಎಫ್ ಡಿ 20 ಪಿ.ಇ.ಎಸ್ 92 ನೇ ಕ್ರಮಾಂಕದ ಅಧಿಸೂಚನೆ.

   1964 ನೇ ಸಾಲಿನ ಕರ್ನಾಟಕ ಸಿನಿಮಾ (ನಿಯಂತ್ರಣ) ಅಧಿನಿಯಮದ 22ನೇ ಕಲಮಿನ ಮೇರೆಗೆ

2. ಧಾರವಾಡ ಜಿಲ್ಲೆ ಹಿರೇಕೆರೂರಿನ ಶ್ರೀ ಕುಮಾರೇಶ್ವರ ಸಂಚಾರಿ ಚಿತ್ರಮಂದಿರವನ್ನು ಅರೆ ಖಾಯಂ ಚಿತ್ರಮಂದಿರವನ್ನಾಗಿ ಪರಿವರ್ತಿಸುವ ಸಂಬಂಧದಲ್ಲಿ ದಿನಾಂಕ 30-12-93ರಂದು ಹೊರಡಿಸಲಾದ ಹೆಚ್‌ಡಿ 197 ಸಿಎನ್ಎ 93 ನೇ ಕ್ರಮಾಂಕದ ಅಧಿಸೂಚನೆ.

3. ತುಮಕೂರು ಜಿಲ್ಲೆ ಗುಬ್ಬಿಯ ಸೈಟ್ ನಂ 290. 2260ರಲ್ಲಿ ಖಾಯಂ ಚಿತ್ರಮಂದಿರ ನಿರ್ಮಿಸಲು ಶ್ರೀ ಜಿ.ಎಸ್. ಗಿರೀಶ್ ರವರ ಮನವಿಯ ಸಂಬಂಧವಲ್ಲಿ ದಿನಾಂಕ 20-1-94ರಂದು ಹೊರಡಿಸಲಾದ ಹೆಚ್ ಡಿ 161 ಸಿಎನ್ಎ 93ನೇ ಕ್ರಮಾಂಕದ ಅಧಿಸೂಚನೆ.

4. ಶಿವಮೊಗ್ಗ ಜಿಲ್ಲೆ ಸೊರಬ ತಾಲ್ಲೂಕು ಅನವಟ್ಟಿ ಗ್ರಾಮದ ಶ್ರೀ ಮಾಲತೇಶ ಸಂಚಾರಿ ಚಿತ್ರಮಂದಿರವನ್ನು ತಾತ್ಕಾಲಿಕ ಚಿತ್ರಮಂದಿರವನ್ನು ಪರಿವರ್ತಿಸುವ ಸಂಬಂಧದಲ್ಲಿ ದಿನಾಂಕ 4-2-1994ರಂದು ಹೊರಡಿಸಲಾದ ಹೆಚ್ ಡಿ 149 ಸಿಎನ್ಎ 93 ನೇ ಕ್ರಮಾಂಕದ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

II ಶ್ರೀ ಎನ್.ಹುಚ್ಚಮಾಸ್ತಿಗೌಡ (ಕೃಷಿ ಮಂತ್ರಿ) ಮಾನ್ಯ ಅಧ್ಯಕ್ಷರೆ, 1963ನೇ ಸಾಲಿನ ಕೃಷಿ ವಿಶ್ವವಿದ್ಯಾನಿಲಯಗಳ ಅಧಿನಿಯಮ 38 (3) ನೇ ಕಲಮಿನ ಮೇರೆಗೆ

1. 1991-92 ನೇ ಸಾಲಿನ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ವಾರ್ಷಿ ವರದಿ

2. 1991-92 ನೇ ಸಾಲಿನ ಧಾರವಾಡ ಕೃಷಿ ವಿಶ್ವವಿದ್ಯಾನಿಲಯದ ವಾರ್ಷಿಕ ವರದಿ,

3. 1991-92ನೇ ಸಾಲಿನ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಲೆಕ್ಕ ಪರಿಶೋಧನಾ ವರದಿ ಮತ್ತು ಉತ್ತರಗಳನ್ನು ಮಂಡಿಸುತ್ತೇನೆ.

III. ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿ) ಮಾನ್ಯ ಅಧ್ಯಕ್ಷರೆ 1993ನೇ ಸಾಲಿನ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದ 320ನೇ ಕಲಮಿನ ಮೇರೆಗೆ

1. 1993ನೇ ಸಾಲಿನ ಕರ್ನಾಟಕ ಪಂಚಾಯತ್ ರಾಜ್ (ಚುನಾವಣೆ ನಡೆಸುವ) ನಿಯಮಗಳು

2. 17-11-1993ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ ಗ್ರಾ ಅಪ 602 ಜಿಪನ 93ನೇ ಕ್ರಮಾಂಕದ ಅಧಿಸೂಚನೆ ಕರ್ನಾಟಕ ಪಂಚಾಯತ್ ರಾಜ್ (ಹಿಂದುಳಿದ ವರ್ಗಗಳ) ನಿಯಮಗಳು 1993, ಹಾಗೂ ಮೇಲ್ಕಂಡ ಅಧಿಸೂಚನೆಯನ್ನು ಜಾರಿಗೊಳಿಸುವುದಕ್ಕೆ ಸಂಬಂಧಿಸಿದಂತೆ

(1) ದಿನಾಂಕ 10-5-1993ರಂದು ಹೊರಡಿಸಲಾದ ಆದೇಶ ಸಂಖ್ಯೆ ಆರ್‌ಡಿಪಿ 96 ಜಿಎಸಿ 93 ಹಾಗೂ

(2) 10-5-1993ರಂದು ಹೊರಡಿಸಲಾದ ಆರ್‌ಡಿಪಿ 258 ಜಡ್‌ಪಿಎಸ್ 93ನೇ ಕ್ರಮಾಂಕದ ಆದೇಶಗಳು.

1993ನೇ ಸಾಲಿನ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 262(3)ನೇ ಕಲಮಿನ ಮೇರೆಗೆ

3. 1989-90 ಹಾಗೂ 1990-91ನೇ ಸಾಲುಗಳ ಗುಲ್ಬರ್ಗಾ ಜಿಲ್ಲಾ ಪಂಚಾಯತ್‌ನ ವಾರ್ಷಿಕ ಲೆಕ್ಕಗಳು ಮತ್ತು ಲೆಕ್ಕಪರಿಶೋಧನಾ ವರದಿಗಳನ್ನು ಮಂಡಿಸುತ್ತೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ

IV. ಶ್ರೀ ಧರಮ್‌ಸಿಂಗ್ (ಸಮಾಜ ಕಲ್ಯಾಣ ಮತ್ತು ಕಂದಾಯ ಮಂತ್ರಿ) ಅವರ ಪರವಾಗಿ 1964ನೇ ಸಾಲಿನ ಕರ್ನಾಟಕ ಭೂ ಕಂದಾಯ ನಿಯಮ ಪ್ರಕರಣ

194(2)ನೇ ಕಲಮಿನ ಮೇರೆಗೆ

1. ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲ್ಲೂಕಿನ 221 ಗ್ರಾಮಗಳ 1989-90ನೇ ಸಾಲಿನ ಭೂ ಕಂದಾಯ 114037.35 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 27-1-1994ರಂದು ಹೊರಡಿಸಲಾದ ಆರ್‌ಡಿ 85 ಟಿಆರ್‌ಎಂ 91ನೇ ಕ್ರಮಾಂಕದ ಅಧಿಸೂಚನೆ

   1956ನೇ ಸಾಲಿನ ಕಂಪನಿಗಳ ಅಧಿನಿಯಮ 619(ಎ) ಕಲಮಿನ ಮೇರೆಗೆ

2. 1991-92ನೇ ಸಾಲಿನ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತದ 6ನೇ ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳನ್ನು ಮಂಡಿಸುತ್ತೇನೆ.

   ಶ್ರೀ ಹಾರ್‍ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ,

V. ಶ್ರೀ ಎಸ್.ಎಂ. ಯಾಹ್ಯಾ (ಉನ್ನತ ಶಿಕ್ಷಣ ಮತ್ತು ವಕ್ಫ್ ಮಂತ್ರಿ) ಅವರ ಪರವಾಗಿ 1976ನೇ ಸಾಲಿನ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 42(3)ನೇ ಕಲಮಿನ ಮೇರೆಗೆ

   1990-91ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಲೆಕ್ಕ ಪರಿಶೋಧನಾ ವರದಿಯನ್ನು ಮಂಡಿಸುತ್ತೇನೆ.

ಶ್ರೀ ಹಾರ್‍ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ

VI. ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಮಂತ್ರಿ) ಅವರ ಪರವಾಗಿ 1964ನೇ ಸಾಲಿನ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಅಧಿನಿಯಮ 86(2)ನೇ ಕಲಮಿನ ಮೇರೆಗೆ

   1992-93ನೇ ಸಾಲಿನ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯ ಸಾಧನೆಯ ವರದಿಯನ್ನು ಮಂಡಿಸುತ್ತೇನೆ.

ಶ್ರೀ ಹಾರ್‍ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

VII ಶ್ರೀ ರಾಮಲಿಂಗಾರೆಡ್ಡಿ (ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ರಾಜ್ಯ ಮಂತ್ರಿ) : ಅವರ ಪರವಾಗಿ 1956ನೇ ಸಾಲಿನ ಕರ್ನಾಟಕ ಖಾದಿ ಮತ್ತು ಗ್ರಾಮೋದ್ಯೋಗ ಕಾಯ್ದೆ 26ನೇ ಕಲಮಿನ ಮೇರೆಗೆ

ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ 1990-91ನೇ ಸಾಲಿನ ವಾರ್ಷಿಕ ವರದಿ ಹಾಗೂ 1989-90 ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತೇನೆ.

I. ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿ) : ಮಾನ್ಯ ಅಧ್ಯಕ್ಷರೆ, 1978 ಇಸವಿಯ ಕರ್ನಾಟಕ ರಾಜ್ಯ ನಾಗರೀಕ ಸೇವಾ ಅಧಿನಿಯಮದ 8(3) ನೇ ಕಲಮಿನ ಮೇರೆಗೆ

1. ಕರ್ನಾಟಕ ಸಾಮಾನ್ಯ ಸೇವೆಗಳು (ಖಜಾನೆ ಶಾಖಾ) (ನೇಮಕಾತಿ) ನಿಯಮಾವಳಿಗಳು 1961ನ್ನು ಪರಿಷ್ಕರಿಸುವ ಸಂಬಂದದಲಿ ದಿನಾಂಕ

24-1-1994 ರಂದು ಹೊರಡಿಸಲಾದ ಸಿಆಸುಇ 37 ಸೇನಿಡಿ 93 ಕ್ರಮಾಂಕದ ಅಧಿಸೂಚನೆ,

2. ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಲೆಕ್ಕ ಪರಿಶೋಧನೆ ಇಲಾಖೆಯಲ್ಲಿ 'ಡಿ' ಗ್ರೂಪ್ ನೌಕರರಿಗೆ ಪದೋನ್ನತಿ ನೀಡಲು ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳು 1973ಕ್ಕೆ ತಿದ್ದುಪಡಿ ಮಾಡುವ ಸಂಬಂಧದಲ್ಲಿ ದಿನಾಂಕ 21-2-1994ರಂದು ಹೊರಡಿಸಲಾದ ಸಿಆಸುಇ 16 ಸೇನಿಡಿ 93 ಕ್ರಮಾಂಕದ ಅಧಿಸೂಚನೆ.

3. ಕರ್ನಾಟಕದ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖಾ ಸೇವೆಗಳ (ನೇಮಕಾತಿ) ನಿಯಮಾವಳಿಗಳು, 1982ರ ತಿದ್ದುಪಡಿಯ ಸಂಬಂಧದಲ್ಲಿ ದಿನಾಂಕ 28-2-94ರಂದು ಹೊರಡಿಸಲಾದ ಸಿಆಸುಇ 26 ಸೇನಿಡಿ 93ನೇ ಕ್ರಮಾಂಕದ ಅಧಿಸೂಚನೆ

4. ಕರ್ನಾಟಕ ರೇಷ್ಮೆ ಇಲಾಖೆ ಸೇವೆಗಳು (ನೇಮಕಾತಿ) ನಿಯಮಗ 1984ಕ್ಕೆ ತಿದ್ದುಪಡಿ ತರುವ ಸಂಬಂಧದಲ್ಲಿ ದಿನಾಂಕ 19-2-1994ರಂದು ಹೊರಡಿಸಲಾದ ಸಿಆಸುಇ 09 ಸೇನಿಡಿ 93ನೇ ಕ್ರಮಾಂಕದ್ದ ಅಧಿಸೂಚನೆ.

<u>1965 ನೇ ಇಸವಿಯ ಕರ್ನಾಟಕ ಅಬಕಾರಿ ಅಧಿನಿಯಮ 71(4) ನೇ ಕಲಮಿನ ಮೇರೆಗೆ</u>

5. 1968 ನೇ ಇಸವಿಯ ಕರ್ನಾಟಕ ಅಬಕಾರಿ (ಅಬಕಾರಿ ಡ್ಯೂಟೀಸ್ ಮತ್ತು ಫೀ ನಿಯಮಗಳ ತಿದ್ದುಪಡಿಗೆ ಸಂಬಂಧಿಸಿದಂತೆ ದಿನಾಂಕ 6-1-94 ರಂದು ಹೊರಡಿಸಲಾದ ಎಫ್‌ಡಿ 35 ಪೀಇಎಸ್ 93 (1) ನೇ ಕ್ರಮಾಂಕದ ಅಧಿಸೂಚನೆ

6. 1993 ನೇ ಇಸವಿಯ ಕರ್ನಾಟಕ ಅಬಕಾರಿ (ಅಬಕಾರಿ ಡ್ಯೂಟೀಸ್ ಮತ್ತು ಫೀ (2ನೇ ತಿದ್ದುಪಡಿ) ನಿಯಮಗಳ ತಿದ್ದುಪಡಿಗೆ ಸಂಬಂಧಿಸಿದಂತೆ ದಿನಾಂಕ 6-1-94 ರಂದು ಹೊರಡಿಸಲಾದ ಎಫ್‌ಡಿ 35 ಪೀಇಎಸ್ 93(2)ನೇ ಕ್ರಮಾಂಕದ ಅಧಿಸೂಚನೆ.

<u>1957ನೇ ಇಸವಿಯ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ 39 ನೇ ಕಲಮಿನ ಮೇರೆಗೆ</u>

7. ತಕ್ಷಣವೇ ಜಾರಿಗೆ ಬರುವಂತೆ ಹೊಸ ಪ್ರವಾಸಿ ಘಟಕಗಳಲ್ಲಿ ಆಹಾರ ಮತ್ತು ಪಾನೀಯ ಮಾರಾಟದ ಸಂಬಂಧದಲ್ಲಿ ಪಾವತಿ ಮಾಡಬೇಕಾಗಿರುವ ತೆರಿಗೆ ವಿನಾಯಿತಿಗೆ ಸಂಬಂಧಿಸಿದಂತೆ ದಿನಾಂಕ 30-12-1993ರಂದು ಹೊರಡಿಸಲಾದ ಎಫ್‌ಡಿ 188 ಸಿಎಸ್‌ಎಲ್ 92 ನೇ - ಕ್ರಮಾಂಕದ ಅಧಿಸೂಚನೆ -1

<u>1979ನೇ ಇಸವಿಯ ಕರ್ನಾಟಕ ವಿಲಾಸ ತೆರಿಗೆ (ಹೋಟೆಲ್ ಮತ್ತು ವಸತಿ ಗೃಹಗಳು) ಅಧಿನಿಯಮ 20(3) ನೇ ಕಲಮಿನ ಮೇರೆಗೆ</u>

8. ಕರ್ನಾಟಕ ವಿಲಾಸ ತೆರಿಗೆ (ಹೋಟೆಲ್‌ಗಳು ಮತ್ತು ವಸತಿ ಗೃಹಗಳು)1979ರ ಅಧಿನಿಯಮದ ಮೇರೆಗೆ ರಾಜ್ಯದಲ್ಲಿ ಹೊಸದಾಗಿ ಪ್ರವಾಸಿ ಕೇಂದ್ರಗಳನ್ನು ತೆರೆಯುವುದಕ್ಕೆ ಸಂಬಂಧಿಸಿದಂತೆ ನೀಡಬೇಕಾದ ತೆರಿಗೆಯನ್ನು ಮನ್ನಾ ಮಾಡುವ ಕುರಿತು ದಿನಾಂಕ 30-12-93 ರಂದು ಹೊರಡಿಸಲಾದ ಎಫ್‌ಡಿ 188 ಸಿಎಸ್‌ಎಲ್ 92ನೇ ಕ್ರಮಾಂಕದ ಅಧಿಸೂಚನೆ-2

<u>1964 ನೇ ಸಾಲಿನ ಕರ್ನಾಟಕ ಸಿನಿಮಾ (ನಿಯಂತ್ರಣ) ಅಧಿನಿಯಮದ 22ನೇ ಕಲಮಿನ ಮೇರೆಗೆ</u>

9. ಬಿ.ಇ.ಎಲ್. ಕಲಾಕ್ಷೇತ್ರದಲ್ಲಿ 35 ಎಂ.ಎಂ. ಚಲನಚಿತ್ರ ಪ್ರದರ್ಶನಕ್ಕೆ ವಿನಾಯಿತಿ ನೀಡುವ ಸಂಬಂಧದಲ್ಲಿ ದಿನಾಂಕ 14-2-94ರಂದು ಹೊರಡಿಸಲಾದ ಹೆಚ್ ಡಿ 234 ಸಿಎನ್ಎ 93ನೇ ಕ್ರಮಾಂಕದ ಆದೇಶಗಳನ್ನು ಮಂಡಿಸುತ್ತೇನೆ.

II ಶ್ರೀ ಎಸ್.ಎಂ.ಕೃಷ್ಣ (ಉಪಮುಖ್ಯಮಂತ್ರಿ ಹಾಗೂ ನೀರಾವರಿ ಮತ್ತು ಇಂಧನ ಮಂತ್ರಿ)ಮಾನ್ಯ ಅಧ್ಯಕ್ಷರೆ, 1956ನೇ ಸಾಲಿನ ಕಂಪನಿಗಳ ಅಧಿನಿಯಮದ 619 (ಎ) ಕಲಮಿನ ಮೇರೆಗೆ

ಬಿಜಾಪುರದಲ್ಲಿರುವ ಕೃಷ್ಣಾ ಜಲಾನಯನ ಏತ ನೀರಾವರಿ ನಿಗಮದ 1989-90ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) :

III ಶ್ರೀ ಧರಮ್‌ಸಿಂಗ್ (ಸಮಾಜ ಕಲ್ಯಾಣ / ಮತ್ತು ಕಂದಾಯ ಮಂತ್ರಿ) ಅವರ ಪರವಾಗಿ

1964ನೇ ಸಾಲಿನ ಕರ್ನಾಟಕ ಭೂ ಕಂದಾಯ ನಿಯಮದ ಪ್ರಕರಣ 194(2) ನೇ ಕಲಮಿನ ಮೇರೆಗೆ

1. ಬೆಳಗಾವಿ ಜಿಲ್ಲೆಯ ಗೋಕಾಕ್ ತಾಲ್ಲೂಕಿನ 4 ಗ್ರಾಮಗಳ 1989-90ನೇ ಸಾಲಿನ ಭೂ ಕಂದಾಯ 24487.54 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 16-2-94 ರಂದು ಹೊರಡಿಸಲಾದ ಆರ್‌ಡಿ 15 ಟಿಆರ್‌ಎಂ 94ನೇ ಕ್ರಮಾಂಕದ ಅಧಿಸೂಚನೆ.
2. ವಿಜಾಪುರ ಜಿಲ್ಲೆಯ ಬಾದಾಮಿ ತಾಲ್ಲೂಕಿನ 29 ಗ್ರಾಮಗಳ 1984-85ನೇ ಸಾಲಿನ ಭೂ ಕಂದಾಯ 52396.05 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 15-2-94ರಂದು ಹೊರಡಿಸಲಾದ ಆರ್‌ಡಿ 6 ಟಿಆರ್‌ಎಂ 91ನೇ ಕ್ರಮಾಂಕದ ಅಧಿಸೂಚನೆ,
3. ಬೆಳಗಾವಿ ಜಿಲ್ಲೆಯ ಗೋಕಾಕ್ ತಾಲ್ಲೂಕಿನ 11 ಗ್ರಾಮಗಳ 1974-75ನೇ ಸಾಲಿನ ಭೂ ಕಂದಾಯ 31677.69 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 16-2-94ರಂದು ಹೊರಡಿಸಲಾದ ಆರ್‌ಡಿ 17 ಟಿಆರ್‌ಎಂ 94ನೇ ಕ್ರಮಾಂಕದ ಅಧಿಸೂಚನೆ,
4. ವಿಜಾಪುರ ಜಿಲ್ಲೆಯ ಬಾದಾಮಿ ತಾಲ್ಲೂಕಿನ 4 ಗ್ರಾಮಗಳ 1983-84ನೇ ಸಾಲಿನ ಭೂ ಕಂದಾಯ 6380.28 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 16-2-94 ರಂದು ಹೊರಡಿಸಲಾದ ಆರ್‌ಡಿ 22 ಟಿಆರ್‌ಎಂ 91ನೇ ಕ್ರಮಾಂಕದ ಅಧಿಸೂಚನೆ
5. ಬೆಳಗಾವಿ ಜಿಲ್ಲೆಯ ರಾಯಭಾಗ ತಾಲ್ಲೂಕಿನ 12 ಗ್ರಾಮಗಳ 1985-86ನೇ ಸಾಲಿನ ಭೂ ಕಂದಾಯ 17671.73 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 25-2-1994 ರಂದು ಹೊರಡಿಸಲಾದ ಆರ್‌ಡಿ 16 ಟಿಆರ್‌ಎಂ 94ನೇ ಕ್ರಮಾಂಕದ ಅಧಿಸೂಚನೆ,
6. ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ 3 ಗ್ರಾಮಗಳ 1984-85ನೇ ಸಾಲಿನ ಭೂ ಕಂದಾಯ 21538.72ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿಂಕ 18-2-94ರಂದುಪ ಹೊರಡಿಸಲಾದ ಆರ್‌ಡಿ 44 ಟಿಆರ್‌ಎಂ 94 ನೇ ಕ್ರಮಾಂಕದ ಅಧಿಸೂಚನೆ.

7. ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ 15 ಗ್ರಾಮಗಳ 1972-73ನೇ ಸಾಲಿನ ಭೂ ಕಂದಾಯ 86896.25 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 18-2-94ರಂದು ಹೊರಡಿಸಲಾದ ಆರ್‌ಡಿ 38 ಟಿಆರ್‌ಎಂ 94ನೇ ಕ್ರಮಾಂಕದ ಅಧಿಸೂಚನೆ

8. ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ 6 ಗ್ರಾಮಗಳ 1986-87ನೇ ಸಾಲಿನ ಭೂ ಕಂದಾಯ 12488.74 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 18-2-94ರಂದು ಹೊರಡಿಸಲಾದ ಆರ್‌ಡಿ 35 ಟಿಆರ್‌ಎಂ 94ನೇ ಕ್ರಮಾಂಕದ ಅಧಿಸೂಚನೆ,

9. ಬೆಳಗಾವಿ ಜಿಲ್ಲೆಯ ರಾಯಭಾಗ ತಾಲ್ಲೂಕಿನ 12 ಗ್ರಾಮಗಳ 1977-78ನೇ ಸಾಲಿನ ಭೂ ಕಂದಾಯ 27119.60ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 17-2-94 ರಂದು ಹೊರಡಿಸಲಾದ ಆರ್‌ಡಿ 45 ಟಿಆರ್‌ಎಂ 94ನೇ ಕ್ರಮಾಂಕದ ಅಧಿಸೂಚನೆ

10. ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ 6 ಗ್ರಾಮಗಳ 1973-74ನೇ ಸಾಲಿನ ಭೂ ಕಂದಾಯ 16144.85 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 18-2-94ರಂದು ಹೊರಡಿಸಲಾದ ಆರ್‌ಡಿ 36 ಟಿಆರ್‌ಎಂ 94ನೇ ಕ್ರಮಾಂಕದ ಅಧಿಸೂಚನೆ.

11. ಬೆಳಗಾವಿ ಜಿಲ್ಲೆಯ ಗೋಕಾಕ್ ತಾಲ್ಲೂಕಿನ 10 ಗ್ರಾಮಗಳ 1988-89ನೇ ಸಾಲಿನ ಭೂ ಕಂದಾಯ 38234.73 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 18-2-94ರಂದು ಹೊರಡಿಸಲಾದ ಆರ್‌ಡಿ 31 ಟಿಆರ್‌ಎಂ 94 ನೇ ಕ್ರಮಾಂಕದ ಅಧಿಸೂಚನೆ,

12. ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ 4 ಗ್ರಾಮಗಳ 1971-72ನೇ ಸಾಲಿನ ಭೂ ಕಂದಾಯ 19220.67 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 18-2-94ರಂದು ಹೊರಡಿಸಲಾದ ಆರ್‌ಡಿ 37 ಟಿಆರ್‌ಎಂ 94ನೇ ಕ್ರಮಾಂಕದ ಅಧಿಸೂಚನೆ.

13. ರಾಯಚೂರು ಜಿಲ್ಲೆಯ ಯಲಬುರ್ಗ ತಾಲ್ಲೂಕಿನ 121ಗ್ರಾಮಗಳ 1992-93ನೇ ಸಾಲಿನಭೂ ಕಂದಾಯ 232069.18 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 23-2-94ರಂದು ಹೊರಡಿಸಲಾದ ಆರ್‌ಡಿ 29 ಟಿಆರ್‌ಎಂ 94ನೇ ಕ್ರಮಾಂಕದ ಅಧಿಸೂಚನೆ.

14. ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ 46 ಗ್ರಾಮಗಳ 1985-86ನೇ ಸಾಲಿನ ಭೂ ಕಂದಾಯ 204112.59 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 25-2-1994ರಂದು ಹೊರಡಿಸಲಾದ ಆರ್‌ಡಿ 41 ಟಿಆರ್‌ಎಂ 94ನೇ ಕ್ರಮಾಂಕದ ಅಧಿಸೂಚನೆ.

15. ವಿಜಾಪುರ ಜಿಲ್ಲೆಯ ವಿಜಾಪುರ ತಾಲ್ಲೂಕಿನ 56 ಗ್ರಾಮಗಳ 1982-83ನೇ ಸಾಲಿನ ಭೂ ಕಂದಾಯ 127509.80 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 23-2-94ರಂದು ಹೊರಡಿಸಲಾದ ಆರ್‌ಡಿ 78 ಟಿಆರ್‌ಎಂ 92ನೇ ಕ್ರಮಾಂಕದ ಅಧಿಸೂಚನೆ.

16. ಬೆಳಗಾವಿ ಜಿಲ್ಲೆಯ ಗೋಕಾಕ್ ತಾಲ್ಲೂಕಿನ 28 ಗ್ರಾಮಗಳ 1986-87ನೇ ಸಾಲಿನ ಭೂ ಕಂದಾಯ 72801.68 ರೂ.ಗಳನ್ನು ಮನ್ನಾ ಮಾಡುವ

ಸಂಬಂಧದಲ್ಲಿ ದಿನಾಂಕ 23-2-94ರಂದು ಹೊರಡಿಸಲಾದ ಆರ್‌ಡಿ 24 ಟಿಆರ್‌ಎಂ 94ನೇ ಕ್ರಮಾಂಕದ ಅಧಿಸೂಚನೆ.

17. ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ 28 ಗ್ರಾಮಗಳ 1984-85ನೇ ಸಾಲಿನ ಭೂ ಕಂದಾಯ 30268.06 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 23-2-94ರಂದು ಹೊರಡಿಸಲಾದ ಆರ್‌ಡಿ 30 ಟಿಆರ್‌ಎಂ 94ನೇ ಕ್ರಮಾಂಕದ ಅಧಿಸೂಚನೆ.

18. ಬೆಳಗಾವಿ ಜಿಲ್ಲೆಯ ಗೋಕಾಕ್ ತಾಲ್ಲೂಕಿನ 26 ಗ್ರಾಮಗಳ 1986-87ನೇ ಸಾಲಿನ ಭೂ ಕಂದಾಯ 16125.06 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 21-2-94ರಂದು ಹೊರಡಿಸಲಾದ ಆರ್‌ಡಿ 77 ಟಿಆರ್‌ಎಂ 92ನೇ ಕ್ರಮಾಂಕದ ಅಧಿಸೂಚನೆ

19. ವಿಜಾಪುರ ಜಿಲ್ಲೆಯ ಮುಧೋಳ್ ತಾಲ್ಲೂಕಿನ 13 ಗ್ರಾಮಗಳ 1967-68 ನೇ ಸಾಲಿನ ಭೂ ಕಂದಾಯ 16125.06ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 21-2-94 ರಂದು ಹೊರಡಿಸಲಾದ ಆರ್‌ಡಿ 77 ಟಿಆರ್‌ಎಂ 92 ನೇ ಕ್ರಮಾಂಕದ, ಅಧಿಸೂಚನೆ

20. ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ 22 ಗ್ರಾಮಗಳ 1986-87ನೇ ಸಾಲಿನ ಭೂ ಕಂದಾಯ 39068.30 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 21-2-94 ರಂದು ಹೊರಡಿಸಲಾದ ಆರ್‌ಡಿ 42 ಟಿಆರ್‌ಎಂ 94ನೇ ಕ್ರಮಾಂಕದ ಅಧಿಸೂಚನೆ.

21. ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ 44 ಗ್ರಾಮಗಳ 1986-87ನೇ ಸಾಲಿನ ಭೂ ಕಂದಾಯ 122772.15 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 25-2-94ರಂದು ಹೊರಡಿಸಲಾದ ಆರ್‌ಡಿ 43 ಟಿಆರ್‌ಎಂ 94ನೇ ಕ್ರಮಾಂಕದ ಅಧಿಸೂಚನೆ

22. ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನಲ್ಲಿ 30 ಗ್ರಾಮಗಳ 1988-89 ನೇ ಸಾಲಿನ ಭೂ ಕಂದಾಯ 91736.65 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 25-2-94ರಂದು ಹೊರಡಿಸಲಾದ ಆರ್‌ಡಿ 43 ಟಿಆರ್‌ಎಂ 94ನೇ ಕ್ರಮಾಂಕದ ಅಧಿಸೂಚನೆ.

23. ಬೆಳಗಾವಿ ಜಿಲ್ಲೆಯ ಗೋಕಾಕ್ ತಾಲ್ಲೂಕಿನ 28 ಗ್ರಾಮಗಳ 1972-73ನೇ ಸಾಲಿನ ಭೂ ಕಂದಾಯ 119401.03 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 23-2-94ರಂದು ಹೊರಡಿಸಲಾದ ಆರ್‌ಡಿ 39 ಟಿಆರ್‌ಎಂ 94ನೇ ಕ್ರಮಾಂಕದ ಅಧಿಸೂಚನೆ.

24. ಬೆಳಗಾವಿ ಜಿಲ್ಲೆಯ ಗೋಕಾಕ್ ತಾಲ್ಲೂಕಿನ 28 ಗ್ರಾಮಗಳ 1987-88ನೇ ಸಾಲಿನ ಭೂ ಕಂದಾಯ 75525.49ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 21-2-94 ರಂದು ಹೊರಡಿಸಲಾದ ಆರ್‌ಡಿ 26 ಟಿಆರ್‌ಎಂ 94ನೇ ಕ್ರಮಾಂಕದ ಅಧಿಸೂಚನೆ.

25. ಬೆಳಗಾವಿ ಜಿಲ್ಲೆಯ ಗೋಕಾಕ್ ತಾಲ್ಲೂಕಿನ 26 ಗ್ರಾಮಗಳ 1985-86ನೇ ಸಾಲಿನ ಭೂ ಕಂದಾಯ 81615.73 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 23-2-94ರಂದು ಹೊರಡಿಸಲಾದ ಆರ್‌ಡಿ 27 ಟಿಆರ್‌ಎಂ 94ನೇ ಕ್ರಮಾಂಕದ ಅಧಿಸೂಚನೆ.

26. ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ 20 ಗ್ರಾಮಗಳ 1973-74ನೇ ಸಾಲಿನ ಭೂ ಕಂದಾಯ 39983.74 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 21-2-94ರಂದು ಹೊರಡಿಸಲಾದ ಆರ್‌ಡಿ 40 ಟಿಆರ್‌ಎಂ 94ನೇ ಕ್ರಮಾಂಕದ ಅಧಿಸೂಚನೆ.

27. ವಿಜಾಪುರ ಜಿಲ್ಲೆಯ ಬಾದಾಮಿ ತಾಲ್ಲೂಕಿನ 114 ಗ್ರಾಮಗಳ 1982-83ನೇ ಸಾಲಿನ ಭೂಕಂದಾಯ 115424.82 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 23-2-94 ರಂದು ಹೊರಡಿಸಲಾದ ಆರ್‌ಡಿ 4 ಟಿಆರ್‌ಎಂ 91ನೇ ಕ್ರಮಾಂಕದ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

ಶ್ರೀ ಹಾರ್‍ನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

IV. ಶ್ರೀ ಮಲ್ಲಿಕಾರ್ಜುನ ಎಂ.ಖರ್ಗೆ (ಸಹಕಾರ ಮಂತ್ರಿ) ಅವರ ಪರವಾಗಿ 1962ನೇ ಸಾಲಿನ ಉಗ್ರಾಣ ನಿಗಮಗಳ ಕಾಯ್ದೆ 31(11) ನೇ ಕಲಮಿನ ಮೇರೆಗೆ 1990-91ನೇ ಸಾಲಿನ ಕರ್ನಾಟಕ ರಾಜ್ಯ ಉಗ್ರಾಣ ನಿಗಮದ 33ನೆಯ ವಾರ್ಷಿಕ ವರದಿ ಮತ್ತು ಪರಿಶೋಧಿತ ಲೆಕ್ಕಪತ್ರವನ್ನು ಮಂಡಿಸುತ್ತೇನೆ.

V ಶ್ರೀ ಹಾರ್‍ನಳ್ಳಿ ರಾಮಸ್ರಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ,

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಮಂತ್ರಿ) : ಅವರ ಪರವಾಗಿ

1957ನೇ ಇಸವಿಯ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಅಧಿನಿಯಮದ 16(2) ನೇ ಕಲಮಿನ ಮೇರೆಗೆ.

1. ಚರ್ಚ್ ಆಫ್ ಸೌತ್ ಇಂಡಿಯಾ ಬೆಂಗಳೂರು ಈ ಸಂಸ್ಥೆಯು ಹೊಂದಿರುವ ವಾಹನ ಸಂಖ್ಯೆ ಕೆಎ : 04-ಯು-4936ಕ್ಕೆ ತೆರಿಗೆ ವಿನಾಯಿತಿ ನೀಡುವ ಸಂಬಂಧದಲ್ಲಿ ದಿನಾಂಕ 4-2-94ರಂದು ಹೊರಡಿಸಲಾದ ಎಫ್‌ಟಿಡಿ 364 ಟಿಎಂಟಿ 92ನೇ ಕ್ರಮಾಂಕದ ಅಧಿಸೂಚನೆ.

2. ನವಜೀವನ ನಿಲಯ, ಬೆಂಗಳೂರು ಇವರ ವಾಹನ ಸಂಖ್ಯೆ : ಸಿಕೆಎಸ್ 2798ಕ್ಕೆ ತೆರಿಗೆ ವಿನಾಯಿತಿ ನೀಡುವ ಸಂಬಂಧದಲ್ಲಿ ದಿನಾಂಕ 8-2-94ರಂದು ಹೊರಡಿಸಲಾದ ಎಫ್‌ಟಿಡಿ 11 ಟಿಎಂಟಿ 93ನೇ ಕ್ರಮಾಂಕದ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

ಶ್ರೀ ಹಾರ್‍ನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ,

VI ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಮಂತ್ರಿ) ಅವರ ಪರವಾಗಿ 1987ನೇ ಸಾಲಿನ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರದ ಅಧಿನಿಯಮ 48(5)ನೇ ಕಲಮಿನ ಮೇರೆಗೆ

1. 1992-93ನೇ ಸಾಲಿನ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಲೆಕ್ಕಪರಿಶೋಧನಾ ವರದಿ

2. 1992-93ನೇ ಸಾಲಿನ ವಿಜಾಪುರ ನಗರಾಭಿವೃದ್ಧಿ ಪ್ರಾಧಿಕಾರದ ಲೆಕ್ಕ ತಪಾಸಣಾ ವರದಿಗಳನ್ನು ಮಂಡಿಸುತ್ತೇನೆ.

VII ಶ್ರೀ ಎಂ.ಪಿ. ಕೇಶವಮೂರ್ತಿ (ಅರಣ್ಯ ರಾಜ್ಯ ಮಂತ್ರಿ) ಮಾನ್ಯ ಅಧ್ಯಕ್ಷರೆ, 1956ನೇ ಸಾಲಿನ ಕಂಪನಿಗಳ ಅಧಿನಿಯಮ 619 (ಎ) ಕಲಮಿನ ಮೇರೆಗೆ

1992-93ನೇ ಸಾಲಿನ ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತದ 22ನೇ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಅಧ್ಯಕ್ಷರೆ,

VIII. ಶ್ರೀ ರಾಮಲಿಂಗಾರೆಡ್ಡಿ (ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ರಾಜ್ಯ ಮಂತ್ರಿ) ಅವರ ಪರವಾಗಿ 1956ನೇ ಸಾಲಿನ ಕಂಪನಿಗಳ ಅಧಿನಿಯಮ 619 (ಎ) ಕಲಮಿನ ಮೇರೆಗೆ

1. 1992-93ನೇ ಸಾಲಿನ ಕರ್ನಾಟಕ ರೇಷ್ಮೆ ಮಾರಾಟ ಮಂಡಲಿ ನಿಯಮಿತದ 14ನೇ ವಾರ್ಷಿಕ ವರದಿ
2. 1992-93ನೇ ಸಾಲಿನ ದಿ ಮೈಸೂರು ಅಸಿಟೇಟ್ ಮತ್ತು ಕೆಮಿಕಲ್ಸ್ ಕಂಪನಿ ಲಿಮಿಟೆಡ್‌ನ 29ನೇ ವಾರ್ಷಿಕ ವರದಿ ಹಾಗೂ ಲೆಕ್ಕಪತ್ರಗಳು.
3. 1992-93ನೇ ಸಾಲಿನ ಚಾಮುಂಡಿ ಮೆಷಿನ್ ಟೂಲ್ಸ್ ಲಿಮಿಟೆಡ್‌ನ 17ನೇ ವಾರ್ಷಿಕ ವರದಿ
4. 1992-93ನೇ ಸಾಲಿನ ತುಂಗಭದ್ರಾ ಸ್ಟೀಲ್ ಪ್ರಾಡಕ್ಟ್ ನಿಯಮಿತದ 33ನೆಯ ವಾರ್ಷಿಕ ವರದಿ

1966ನೇ ಸಾಲಿನ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮದ 24(4)ನೇ ಕಲಮಿನ ಮೇರೆಗೆ

5. 1988-89ನೇ ಸಾಲಿನ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ವಾರ್ಷಿಕ ವರದಿಗಳನ್ನು ಮಂಡಿಸುತ್ತೇನೆ.

ಅಧ್ಯಕ್ಷರು ; ಎಲ್ಲಾ ಕಾಗದಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ಶ್ರೀ ಬಸವರಾಜ ರಾಯರೆಡ್ಡಿ: ಮಾನ್ಯ ಅಧ್ಯಕ್ಷರೇ, ತಾವು ಅಪ್ಪಣೆ ಕೊಡುತ್ತೀರೆಂದು ಭಾವಿಸಿಕೊಳ್ಳುತ್ತೇನೆ

ಅಧ್ಯಕ್ಷರು : ನಾನು ಕೊಡುತ್ತೇನೆ, ತಾವು ಕುಳಿತುಕೊಳ್ಳಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಅಧ್ಯಕ್ಷರೆ, ಇವತ್ತು ವಿಶೇಷವಾದಂಥ ದುಃಖದಿಂದ ನಾನು ಕೆಲವು ವಿಚಾರಗಳನ್ನು ತಮ್ಮಲ್ಲಿ ಪ್ರಸ್ತಾಪ ಮಾಡಬೇಕೆಂದು ಅಪೇಕ್ಷೆ ಪಡುತ್ತಿದ್ದೇನೆ. ನಾವು ಜನಪ್ರತಿನಿಧಿಗಳು, ಪ್ರಜಾಪ್ರಭುತ್ವದ ಚೌಕಟ್ಟಿನಲ್ಲಿ ಈ ಸದನಕ್ಕೆ ನಾವು ಚುನಾಯಿತರಾಗಿ ಬಂದು ನಾವು ನಮ್ಮ ನಡವಳಿಕೆ ಏನು ಇರಬೇಕು ಎನ್ನುವುದಕ್ಕೆ ನಿಯಮಾವಳಿಗಳನ್ನು ಕೂಡ ರಚನೆ ಮಾಡಿಕೊಂಡು.......

ಶ್ರೀ ಬಸವರಾಜ ರಾಯರೆಡ್ಡಿ: ಮಾನ್ಯ ಅಧ್ಯಕ್ಷರೆ.........

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ : ಪ್ರಜಾಪ್ರಭುತ್ವವನ್ನು ಒತ್ತೆಯಿಟ್ಟು ಈ ಸದನವನ್ನು, ಕರ್ನಾಟಕ ರಾಜ್ಯ ಜನತೆಯನ್ನು ಇವತ್ತು ಬ್ಲಾಕ್ ಮೇಲ್ ಮಾಡತಕ್ಕ ನಿಮ್ಮ ಏನು ರಾಜಕೀಯ ಕುತಂತ್ರಗಳಿವೆ, ರಾಜಕೀಯ ಷಡ್ಯಂತ್ರಗಳೇನಿವೆ ಅವಕ್ಕೆ ನಾವು ಅವಕಾಶವನ್ನು ಕೊಡುವುದಿಲ್ಲ.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ: ಅದನ್ನು ಅವರು ವಾಪಸ್ಸು ತೆಗೆದುಕೊಳ್ಳಬೇಕು.

ಅಧ್ಯಕ್ಷರು : ಅವರು ಏನು ಹೇಳುತ್ತಾರೋ ಕೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ : ವಾಪಸ್ಸು ಏಕೆ ತೆಗೆದುಕೊಳ್ಳಬೇಕು?

(ಗೊಂದಲ)

ಅಧ್ಯಕ್ಷರು : ರಾಯರೆಡ್ಡಿಯವರೇ, ತಾವು ಕುಳಿತುಕೊಳ್ಳಿ. ಚರ್ಚೆ ಸಾಕಷ್ಟು ಆಗಿದೆ. ಅವರು ಏನು ಹೇಳುತ್ತಾರೆ ಅದನ್ನು ಕೇಳಿ.

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಮುಖ್ಯಮಂತ್ರಿಗಳು ಅರ್ಥಮಾಡಿಕೊಳ್ಳಬೇಕು. ಕುತಂತ್ರ ಎಂದು ಏನು ಹೇಳಿದ್ದಾರೆ ಅದು ಬೇಡ

ಶ್ರೀ ಎಂ. ವೀರಪ್ಪ ಮೊಯಿಲಿ : ಇದು ಒಂದು ಕುತಂತ್ರ ಷಡ್ಯಂತರ ಇದು ಪ್ರಜಾಪ್ರಭುತ್ವದ ಪ್ರಕ್ರಿಯೆಯನ್ನು ಒತ್ತೆ ಇಡತಕ್ಕ ಒಂದು ಪಿತೂರಿ ಇಂಥಾದ್ದನ್ನು ಜನತಾದಳ ಮತ್ತು ಬಿಜೆಪಿ ಪಕ್ಷಗಳು ಮಾಡಿವೆ. ಗ್ರಾಮಪಂಚಾಯಿತಿ ಚುನಾವಣೆಯಲ್ಲಿ ಇವತ್ತು ಮಣ್ಣು ಮುಕ್ಕಿ ಇವತ್ತು ಜನತೆಯನ್ನು ವಂಚಿಸುವುದಕ್ಕೆ ಈ ಸದನವನ್ನು ದುರುಪಯೋಗ ಮಾಡತಕ್ಕ ಕೆಲಸವನ್ನು ಅವರು ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ : ನಾವು ನ್ಯಾಯಾಂಗ ತನಿಖೆ ಆಗಬೇಕು ಎಂದಿದ್ದೇವೆಯೇ ಹೊರತು ನಿಮ್ಮ ಮೇಲೆ ಆಪಾದನೆ ಮಾಡಿಲ್ಲ.

ಅಧ್ಯಕ್ಷರು : ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ತಾವು ದಯವಿಟ್ಟು ಕುಳಿತುಕೊಳ್ಳಿ. ಪದೇಪದೇ ಇದನ್ನೇ ಹೇಳಿದರೆ ಹೇಗೆ?

ಶ್ರೀ ಬಸವರಾಜ ರಾಯರೆಡ್ಡಿ : ಇದರಲ್ಲಿ ಕುತಂತ್ರ ಹೇಗೆ ಆಗುತ್ತದೆ? ದಯಮಾಡಿ ಆ ಕುತಂತ್ರ ಎನ್ನುವ ಪದ ಅನ್ ಪಾರ್ಲಿಮೆಂಟರಿ ಆದ್ದರಿಂದ ಆ ಪದವನ್ನು ತೆಗೆಯಬೇಕು.

ಅಧ್ಯಕ್ಷರು : ಆ ಪದ ಅಸಂಸದೀಯ ಪದ ಇದ್ದರೆ ಅದನ್ನು ನಾನು ನೋಡುತ್ತೇನೆ.

ಶ್ರೀ ಬಸವರಾಜ ರಾಯರೆಡ್ಡಿ : ಆ ಪದ ಬೇಡ.

ಶ್ರೀ ಎಂ. ವೀರಪ್ಪ ಮೊಯಿಲ್ಲಿ : ಹಾಗಿದ್ದರೆ ಬೇರೆ ಶಬ್ದ ನೀವು ಹೇಳಿ. ನಾನು ಹೇಳುತ್ತೇನೆ ಬೇರೆ ಶಬ್ದ

ಶ್ರೀ ಬಸವರಾಜ ರಾಯರೆಡ್ಡಿ : ನ್ಯಾಯಂಗ ತನಿಖೆಗೆ ದಯವಿಟ್ಟು ಸರ್ಕಾರ ಒಪ್ಪಿಕೊಳ್ಳಬೇಕು.

ಅಧ್ಯಕ್ಷರು : ಅದು ಮುಗಿದುಹೋದ ವಿಷಯ ಮುಗಿದ ವಿಷಯವನ್ನು ಮತ್ತೆ ಪ್ರಸ್ತಾಪ ಮಾಡಬಾರದು.

ಶ್ರೀ ಬಸವರಾಜ ರಾಯರೆಡ್ಡಿ : ಈ ಮನೆಯ ಸದಸ್ಯನಾದ ನನಗೆ ಮಾತನಾಡುವ ಅವಕಾಶವನ್ನು ಕೊಡಿ

ಅಧ್ಯಕ್ಷರು : ನಿಮಗೆ ಅವಕಾಶವನ್ನು ಈಗ ಕೊಟ್ಟಿಲ್ಲ.

ಶ್ರೀ ಬಸವರಾಜ ರಾಯರೆಡ್ಡಿ : ನನಗೆ ಮಾತನಾಡಲು ಅವಕಾಶ ಕೊಡಿ ಎಂದು ಕೇಳುತ್ತಿದ್ದೇನೆ. ಎಲ್ಲಿಯವರೆಗೆ ಕುಳಿತುಕೊಳ್ಳಬೇಕು?

ಅಧ್ಯಕ್ಷರು : ನೀವು ಕುಳಿತುಕೊಳ್ಳಿ. ನಾನು ಈಗ ಮಾನ್ಯ ಮುಖ್ಯಮಂತ್ರಿಗಳನ್ನು ಕರೆದಿದ್ದೇನೆ. ಅವರು ಮಾತನಾಡುತ್ತಿದ್ದಾರೆ.

ಶ್ರೀ ಬಸವರಾಜ ರಾಯರೆಡ್ಡಿ: ಇಷ್ಟು ಹೊತ್ತು ಕುಳಿತುಕೊಳ್ಳಿ ಎಂದು ಹೇಳಿದಿರಿ. ಇನ್ನೂ ಎಷ್ಟು ಹೊತ್ತು ಕುಳಿತುಕೊಳ್ಳಬೇಕು? ಸಾಯಂಕಾಲದವರೆಗೆ ಕುಳಿತುಕೊಳ್ಳಿ ಎಂದರೆ ಹೇಗೆ?

ಅಧ್ಯಕ್ಷರು: ನೀವು ಅದನ್ನು ಪ್ರಶ್ನೆ ಮಾಡತಕ್ಕದಲ್ಲ. ನಾನು ಸದನದ ಕಾರ್ಯಕಲಾಪಗಳನ್ನು ನಡೆಸಿಕೊಂಡು ಹೋಗಬೇಕಾಗುತ್ತದೆ. ಸದನದ ಸಮಯವನ್ನು ತಾವು ಹೀಗೆ ಹಾಳುಮಾಡಬಾರದು. ತಾವು ಏನು ಹೇಳಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ ಮಾನ್ಯ ರಾಯರೆಡ್ಡಿಯವರು ಮಾತನಾಡುವುದು ಯಾವುದೂ ಕಲಾಪದ ಕಡತದಲ್ಲಿ ಹೋಗಬಾರದು.

(ಅಧ್ಯಕ್ಷರ ಆಜ್ಞೆ ಮೇರೆಗೆ ಮಾನ್ಯ ಸದಸ್ಯರು ಹೇಳಿದ್ದನ್ನು ರೆಕಾರ್ಡ್ ಮಾಡಲಿಲ್ಲ)

ಶ್ರೀ ಎಂ. ವೀರಪ್ಪ ಮೊಯಿಲಿ: ಸದನದ ಹೊರಗಡೆ ಅರಾಜಕತೆಯನ್ನು ಸೃಷ್ಟಿ ಮಾಡಿ, ಏನು ಪಿತೂರಿ ಮಾಡಬೇಕೋ ಅದೆಲ್ಲಾ ಮಾಡಿ ಈಗ ಸದನದ ಒಳಗೆ ಈ ಅರಾಜಕತೆಯನ್ನು ಸೃಷ್ಟಿ ಮಾಡುವುದಕ್ಕೆ ಇವತ್ತು ಬಂದಿದ್ದಾರೆ. ದಯಮಾಡಿ ಹಾಗೆ ಮಾಡುವುದಕ್ಕೆ ಹೋಗಬೇಡಿ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೇ, ಮಾನ್ಯ ಬಸವರಾಜ ರಾಯರೆಡ್ಡಿಯವರು ಈ ಸಭೆಯ ಕಾರ್ಯಕಲಾಪಗಳಿಗೆ ತೊಂದರೆಯನ್ನು ಉಂಟು ಮಾಡುತ್ತಿರುವುದರಿಂದ ಈ ದಿವಸದ ಮಟ್ಟಿಗೆ ಸಭೆಯಿಂದ ಅವರನ್ನು ಹೊರ ಹಾಕಬೇಕೆಂದು ನಾನು ಸೂಚನೆಯನ್ನು ಮಂಡಿಸುತ್ತೇನೆ.

ತಮ್ಮ ಅಪ್ಪಣೆ ಪಡೆದು ಈ ಕೆಳಗಿನಂತೆ ಒಂದು ನಿರ್ಣಯವನ್ನು ಮಂಡಿಸುತ್ತೇನೆ.

"ಶ್ರೀ ಬಸವರಾಜ ರಾಜರೆಡ್ಡಿ ಅವರು ಅನಾವಶ್ಯಕವಾಗಿ ಸಭೆಯ ಕಾರ್ಯಕಲಾಪಗಳಿಗೆ ಅಡ್ಡಿ ಪಡಿಸುತ್ತಿರುವುದರಿಂದ, ಅವರನ್ನು ಈ ಸಭೆಯ ಅಧಿವೇಶನ ಮುಗಿಯುವವರೆಗೆ ಸಭೆಗೆ ಹಾಜರಾಗದಂತೆ ನಿಷೇಧಿಸಬೇಕು."

ಪ್ರಸ್ತಾವ

ಅಧ್ಯಕ್ಷರು: ಪ್ರಸ್ತಾವ ಏನೆಂದರೆ, "ಶ್ರೀ ಬಸವರಾಜ ರಾಯರೆಡ್ಡಿ ಅವರು ಅನಾವಶ್ಯಕವಾಗಿ ಸಭೆಯ ಕಾರ್ಯಕಲಾಪಗಳಿಗೆ ಅಡ್ಡಿಪಡಿಸುತ್ತಿರುವುದರಿಂದ, ಅವರನ್ನು ಈ ಸಭೆಯ ಅಧಿವೇಶನ ಮುಗಿಯುವವರೆಗೆ ಸಭೆಗೆ ಹಾಜರಾಗದಂತೆ ನಿಷೇಧಿಸಬೇಕು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಅಧ್ಯಕ್ಷರು : ಮಾನ್ಯ ರಾಯರೆಡ್ಡಿಯವರೇ, ತಾವು ಸದನದಿಂದ ಹೊರಗಡೆ ಹೋಗಬೇಕು. ತಾವು ಸಭೆಯಿಂದ ಹೊರಗೆ ಹೋಗದಿದ್ದರೆ ಮಾರ್ಷಲ್ ಅವರಿಗೆ ಆ ಬಗ್ಗೆ ಸೂಚನೆ ನೀಡಬೇಕಾಗುತ್ತದೆ.

(ಗೊಂದಲ)

1.05 ಪಿ.ಎಂ.

ಅಧ್ಯಕ್ಷರು: ಇವತ್ತಿನ ದಿವಸಕ್ಕೆ ತಮ್ಮನ್ನು ಸದನದ ಕಾರ್ಯಕಲಾಪದಿಂದ ಹೊರಗೆ ಹಾಕಲಾಗಿದೆ.

(ಶ್ರೀ ಬಸವರಾಜ ರಾಯರೆಡ್ಡಿಯವರನ್ನು ಮಾರ್ಷಲ್‌ರವರು ಸದನದಿಂದ ಹೊರಗಡೆ ಕರೆದುಕೊಂಡು ಹೋದರು)

ರಾಜ್ಯದ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರ ಉಪಾಧ್ಯಕ್ಷರ ಚುನಾವಣೆಗಳಲ್ಲಿ ಆದ ಗಲಭೆ ಹಾಗೂ ಅವ್ಯವಹಾರಗಳ ಬಗ್ಗೆ ಮುಖ್ಯ ಮಂತ್ರಿಗಳಿಂದ ಉತ್ತರ

+ ಶ್ರೀ ಎಂ. ವೀರಪ್ಪಮೊಯ್ಲಿ (ಮುಖ್ಯ ಮಂತ್ರಿಗಳು): ಸನ್ಮಾನ್ಯ ಅಧ್ಯಕ್ಷರೇ, ಈಗ ನಾನು ಹೇಳುತ್ತಾ ಇದ್ದೆ. ಈ ಸದನ ಹೇಗೆ ನಡೆಯಬೇಕೆಂದು ಕೆಲವು ನಿಯಮಾವಳಿಗಳನ್ನು ನಾವೇ ರಚನೆ ಮಾಡಿಕೊಂಡಿದ್ದೇವೆ. ಅದನ್ನು ನಿರ್ವಹಿಸತಕ್ಕಂಥ ಒಂದು ಅಧಿಕಾರದಲ್ಲಿ ಈ ಸದನ ಇದೆ ಮತ್ತು ತಾವು ಇದ್ದೀರಿ. ಯಾವುದೇ ಒಂದು ಚರ್ಚೆ, ಅದು ಎಷ್ಟೇ ಗಂಭೀರ ಸ್ವರೂಪದಲ್ಲಿರಲಿ ಅಥವಾ ಎಷ್ಟೇ ಘನವಾದ ವಿಚಾರ ಇರಲಿ, ಅದನ್ನು ಚರ್ಚೆ ಮಾಡತಕ್ಕಂಥ ಅವಕಾಶ ನಮ್ಮ ಬೇರೆ ಬೇರೆ ನಿಯಮಾವಳಿಗಳಲ್ಲಿ ಇದೆ. ಅದನ್ನು ಉಪಯೋಗ ಮಾಡಿಕೊಂಡು ಚರ್ಚೆಗಳನ್ನು ಮಾಡಿ, ಜನತೆಯ ಸಮಸ್ಯೆಗಳನ್ನು, ಮುಂದೆ ಇಟ್ಟುಕೊಂಡು, ಅದಕ್ಕೆ ಪರಿಹಾರವನ್ನು ಹುಡುಕಿ, ಜನತೆಯ ಗಮನವನ್ನು ಸರ್ಕಾರದ ಗಮನವನ್ನು ಸೆಳೆಯತಕ್ಕ ಒಂದು ಜವಾಬ್ದಾರಿ, ಇಲ್ಲಿ ಪ್ರತಿನಿಧಿಗಳಾಗಿ ಬಂದಂಥ ನಮಗೆಲ್ಲರಿಗೂ ಇದೆ. ಪ್ರಜಾಪ್ರಭುತ್ವದ ಸಂಪ್ರದಾಯದ ಪ್ರಕಾರ ಸರ್ಕಾರವನ್ನು ನಡೆಸಬೇಕು. ವಿರೋಧಪಕ್ಷದವರೂ ಕೂಡ ಅಥವಾ ನಮ್ಮ ಸನ್ಮಾನ್ಯ ಸದಸ್ಯರೂ ತಮ್ಮ ವಿಚಾರಗಳನ್ನು ಇಲ್ಲಿ ಹೇಳುವುದಕ್ಕೆ ಸಾಕಷ್ಟು ಅವಕಾಶ ಇದೆ. ಮೊನ್ನೆ ಈ ಸಭೆಯು ಪ್ರಾರಂಭವಾಗುವ ಮೊದಲು, ಜವಾಬ್ದಾರಿಯುಳ್ಳಂಥ ಒಂದು ಪಕ್ಷದ ಅಧ್ಯಕ್ಷರು ಒಂದು ಹೇಳಿಕೆಯನ್ನು ಈ ಸದನದ ಹೊರಗೆ ಕೊಟ್ಟರು ಅವರು ಇಲ್ಲಿ ಏನು ಹೇಳಿದ್ದಾರೆಂದರೆ, he has told the party legislators not to allow functioning of the House until Government bow to pressure. He was not for obstructing the budget because of the sanctity attached to it and asked the legislators not to disturb the proceedings in the Assembly today.

ಅಂದರೆ, ಇಲ್ಲಿ ಕೆಲವು ವಿಚಾರಗಳು ಏನು ನಡೆಯುತ್ತವೆ, ಚರ್ಚೆಯಾಗುತ್ತವೆ, ಚಕಮುಕಿಗಳು ನಡೆಯುತ್ತವೆ, ಇವತ್ತು ಯಾವುದೋ ಒಂದು ವಿಚಾರ ಗಂಭೀರ ಪರಿಸ್ಥಿತಿಗೆ ಬರುತ್ತದೆ, ಅದಕ್ಕ ನಾವು ಸದನದಲ್ಲಿ ಯಾವ ರೀತಿಯಲ್ಲಿ ಪ್ರತಿಕ್ರಿಯಿಸಬೇಕು ಎಂದು ವಿರೋಧಪಕ್ಷದವರು ಯೋಚಿಸಬೇಕು. ನಾವೂ ಕೂಡ ವಿರೋಧಪಕ್ಷದಲ್ಲಿ ಕುಳಿತು ಕೆಲಸ ಮಾಡಿದ್ದೇವೆ. ಅದರ ಬಗ್ಗೆ ನಾವು ನಿರ್ಣಯ ಮಾಡಿದ್ದೇವೆ. ಆದರೆ, ಇಲ್ಲಿ ಈ ಎರಡು ದಿವಸಗಳ ಕಾಲ, ಇದು ಮೂರನೆಯ ದಿವಸ ಇವತ್ತು ಮೂರು ದಿವಸಗಳ ಕಾಲ, ಸದನದಲ್ಲಿ ಏನು ಕಾರ್ಯಕಲಾಪ ನಡೆದಿದೆ, ಇದರ ಬಗ್ಗೆ

ಸನ್ಮಾನ್ಯ ವಿರೋಧಪಕ್ಷದವರು ತೆಗೆದುಕೊಂಡ ನಿರ್ಣಯ ಅಲ್ಲ. ಅಥವಾ ಈ ನಿರ್ಣಯ ಈ ಸದನದ ಕಾರ್ಯಕಲಾಪಗಳ ಬೆಳವಣಿಗೆಯಿಂದ ಉದ್ಭವವಾದ ನಿರ್ಣಯ ಕೂಡ ಅಲ್ಲ ಈ ನಿರ್ಣಯ, ಈ ಸದನದ ಹೊರಗಡೆ ಮಾರ್ಚ 19-20ಕ್ಕೆ ಆಗಿ 21ರ ಪತ್ರಿಕೆಯಲ್ಲಿ ಇದು ಬಂದಿದೆ. ಅಂದರೆ, ಪೂರ್ವಾಗ್ರಹಪೀಡಿತ ಭಾವನೆಗಳಿಂದ ಸದನದಲ್ಲಿ ಇವತ್ತು ವಿರೋಧಪಕ್ಷದವರು ಬಂದು ನಾವು ಈ ಸದನವನ್ನು ನಡೆಸುವುದಕ್ಕೆ ಬಿಡುವುದಿಲ್ಲ ನಾವು ಹಾಕಿದಂಥ ಗೆರೆ ಏನಿದೆ, ಅದನ್ನು ಇವತ್ತು ಸರ್ಕಾರ ತುಳಿಯಬೇಕು ಎಂಬ ರೀತಿಯಲ್ಲಿ ಒಂದು ದಿಗ್ಬಂಧನವನ್ನು ವಿರೋಧಪಕ್ಷದವರು ಏನು

ಮಾಡಿದ್ದಾರೆ, ಅದು ರಾಜಕೀಯವಾದ, ಅವರ ರಾಜಕೀಯ ಉದ್ದೇಶವನ್ನು, ರಾಜಕೀಯ ಗುರಿಯನ್ನು ಸಾಧನೆ ಮಾಡತಕ್ಕಂಥ ಒಂದು ಏಕೈಕ ಉದ್ದೇಶದಿಂದ ಈ ಸದನದ, ಈ ಪವಿತ್ರವಾದ ವೇದಿಕೆಯನ್ನು ಉಪಯೋಗ ಮಾಡಿಕೊಳ್ಳುವುದಿದ್ದರೆ, ಬಹುಶಃ ಯಾವುದೇ ನ್ಯಾಯವಾದ ಒಂದು ನಡವಳಿಕ ಈ ಸದನದಲ್ಲಿ ಯಾವುದೇ ಪಕ್ಷ ಅಧಿಕಾರದಲ್ಲಿರಲಿ, ಯಾವುದೇ ಪಕ್ಷ ವಿರೋಧಪಕ್ಷದಲ್ಲಿರಲಿ, ಅದನ್ನು ಎಂದೂ ಕೂಡ ನಡೆಸಿಕೊಡುವುದಕ್ಕೆ ಖಂಡಿತವಾಗಿಯೂ ಸಾಧ್ಯವಾಗುವುದಿಲ್ಲ 1989ನೇ ಇಸವಿಯಲ್ಲಿ ನಡೆದ ಚುನಾವಣೆಯಲ್ಲಿ ಚುನಾಯಿತರಾಗಿ ನಾವು ಅಧಿಕಾರಕ್ಕೆ ಬಂದಿದ್ದೇವೆ, ಅವರೂ ಚುನಾಯಿತರಾಗಿ ವಿರೋಧಪಕ್ಷದಲ್ಲಿದ್ದಾರೆ ಅವರೂ ಕೂಡ ಮೊದಲು ಅಧಿಕಾರದಲ್ಲಿದ್ದರು. ನನಗೆ ಗೊತ್ತು ಚುನಾವಣೆಯಲ್ಲಿ ಅನೇಕ ಆಶ್ವಾಸನೆಗಳನ್ನು ಕೊಟ್ಟು ನಾವು ಬಂದಿದ್ದೇವೆ. ಇವತ್ತು ಗ್ರಾಮ ಪಂಚಾಯ್ತಿ ಚುನಾವಣೆಯ ವಿಚಾರವನ್ನೇ ತೆಗೆದುಕೊಳ್ಳುವುದಿದ್ದರೆ, ನಮ್ಮ ಸರ್ಕಾರವನ್ನು ಅಪಾದಿತರ ಸ್ಥಾನದಲ್ಲಿ ನಿಲ್ಲಿಸತಕ್ಕ ಪ್ರಯತ್ನ, ರಾಜಕೀಯವಾಗಿ ವಿರೋಧಪಕ್ಷದಿಂದ ನಡೆದಿದೆ. ಸನ್ಮಾನ್ಯ ಅಧ್ಯಕ್ಷರೇ, ಸಂವಿಧಾನದ 73-74ನೇ ನಿಯಮಗಳನ್ನು ತಿದ್ದುಪಡಿ ಮಾಡಿದ ಮೇಲೆ, ಇಡೀ ರಾಷ್ಟ್ರದಲ್ಲಿ ಕಾಯಿದೆಯನ್ನು ಮಂಜೂರ್ಮಾಡಿದಂಥ ಸರ್ಕಾರ ನಮ್ಮ ಸರ್ಕಾರ. ಈ ದೇಶದಲ್ಲಿ ಇವತ್ತು ಜನತಾದಳದ ಸರ್ಕಾರ ಮಾಡಲಿಲ್ಲ. ಈ ದೇಶದಲ್ಲಿ ಬಿ.ಜೆ.ಪಿ. ಸರ್ಕಾರದ ಕೂಡ ಮಾಡಲಿಲ್ಲ. ಪ್ರಜಾಪ್ರಭುತ್ವದ ವಿಚಾರ ಇಲ್ಲಿ ಸಾಕಷ್ಟು ಚರ್ಚೆಯಾಯಿತು.

ಪ್ರಜಾಪ್ರಭುತ್ವದ ಕಗ್ಗೊಲೆ ಮಾಡತಕ್ಕ ಪ್ರಚಾರ ಇಲ್ಲಿ ಸಾಕಷ್ಟು ಆಯಿತು. ಆದರೆ, ಸಂವಿಧಾನದ, ಒಂದು ನೇರವಾದ ಆದೇಶದ ಪ್ರಕಾರ, ಇವತ್ತು ಕಾಯಿದೆಯನ್ನು ಮಾಡಿದ್ದೇವೆ. ಸಂವಿಧಾನದ ಆದೇಶದ ಪ್ರಕಾರ ಕಾಯಿದೆಯನ್ನು ಮಾಡಿದ ತಕ್ಷಣ, ಚುನಾವಣೆಯನ್ನು ಮಾಡಬೇಕಾದ ಅವಶ್ಯಕತೆ ಇರಲಿಲ್ಲ. ಆದರೆ, ನಾವು ಚುನಾವಣೆಯನ್ನು ಪ್ರಾರಂಭ ಮಾಡಿದ್ದೇವೆ. ಗ್ರಾಮಪಂಚಾಯಿತಿಗೆ ಸುಮಾರು 80,630 ಸೀಟುಗಳಿಗೆ ಚುನಾವಣೆಯನ್ನು ಘೋಷಣೆ ಮಾಡಿದೆವು. ಚುನಾವಣೆ ಪ್ರಕ್ರಿಯೆಗಳು ನಡೆದಿವೆ. ಇದರಲ್ಲಿ ಈಗಾಗಲೇ, ಸುಮಾರು 73,649 ಸೀಟುಗಳು ಡಿಕ್ಲೇರ್ ಕೂಡ ಆಗಿವೆ. ಈ ಗ್ರಾಮ ಪಂಚಾಯಿತಿ ಚುನಾವಣೆಗಳಲ್ಲಿ ಜನತೆಯು ನಿರ್ಭಯವಾಗಿ, ಯಾವುದೇ ರೀತಿಯ ಭಯ, ಯಾವುದೇ ರೀತಿಯ ಹಿಂಸೆ ಇಲ್ಲದೆ ಅಭೂತಪೂರ್ವವಾದಂಥ, ಶಾಂತಿಯುತವಾದ ಚುನಾವಣೆ ಇವತ್ತು ಇಡೀ ದೇಶದಲ್ಲಿ ಆಗಿದ್ದರೆ ಅಥವಾ ಕರ್ನಾಟಕ ರಾಜ್ಯದಲ್ಲಿ ಆಗಿದ್ದರೆ, ಅದು ನಮ್ಮ ಕಾಂಗ್ರೆಸ್ ಪಕ್ಷ ನಮ್ಮ ಸರ್ಕಾರ ಕರ್ನಾಟಕ ರಾಜ್ಯದಲ್ಲಿ ಮೊನ್ನೆ ನಡೆದಿದೆ. ಇದು ದಾಖಲೆಯಲ್ಲಿರತಕ್ಕ ವಿಚಾರ. ಇದರಲ್ಲಿ ಯಾವುದೇ ರೀತಿಯ ಕಥೆ ಅಥವಾ ಯಾವುದೇ ರೀತಿಯ ಅತಿರೇಕ ಖಂಡಿತವಾಗಿಯೂ ಇಲ್ಲ. ಸನ್ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ಈಗಾಗಲೇ ಕೆಲವು ಅಂಕಿಸಂಖ್ಯೆಗಳನ್ನು ಕೂಡ ಕೊಟ್ಟಿದ್ದೇನೆ. ಇದನ್ನು ಪುನರಪಿ ಹೇಳತಕ್ಕಂಥ ಅವಶ್ಯಕತೆ ಇಲ್ಲದಿದ್ದರೂ ಕೂಡ, ದಾಖಲೆಯ ಉದ್ದೇಶದಿಂದ ಮತ್ತೊಮ್ಮೆ ಹೇಳಬೇಕಾಗಿದೆ. ಮಂಡಲ್ ಪಂಚಾಯ್ತಿ ಚುನಾವಣೆ, ಅದು ಪಕ್ಷದ ವತಿಯಿಂದ ಆದಂಥ ಚುನಾವಣೆ. ಮತ್ತು 1987ನೇ ಇಸವಿಯಲ್ಲಿ ಜನತಾ ದಳ ಅಧಿಕಾರದಲ್ಲಿರುವಾಗ ಆದಂಥ ಚುನಾವಣೆಗಳಲ್ಲಿ ವ್ಯಾಪಕವಾದ ಗಲಭೆಗಳು ಉಂಟಾದವು. ಬರೀ ಮಂಡಲ್ ಪಂಚಾಯಿತಿ ಚುನಾವಣೆಗಳಿಗೆ, ಇನ್ನು ಪ್ರಧಾನ ಮತ್ತು ಉಪಪ್ರಧಾನರ ಚುನಾವಣೆಯ ಬಗ್ಗೆ ಪ್ರತ್ಯೇಕವಾದ ಅಂಕಿಸಂಖ್ಯೆಗಳನ್ನು ಕೊಡುತ್ತೇನೆ. 1987ನೇ ಇಸವಿಯಲ್ಲಿ, ಮಂಡಲ್ ಪಂಚಾಯಿತಿಗೆ ಚುನಾವಣೆಗಳಾದಾಗ, 654 ಕಡೆಗಳಲ್ಲಿ ಸಂಘರ್ಷಣೆಗಳಾದವು ಪೋಲೀಸಿನವರು ಇಂತಹ ಮೊಕದ್ದಮೆಗಳನ್ನು ಅಥವಾ ಕ್ರಿಮಿನಲ್ ದಾವೆಗಳನ್ನು ದಾಖಲೆಗಳಲ್ಲಿ ರೆಕಾರ್ಡ್ ಮಾಡಿದ್ದಾರೆ. ಆಗ ಸರ್ಕಾರ ಇದ್ದದ್ದು, ಜನತಾ ದಳದ ಸರ್ಕಾರ ಅವರು ದಾಖಲಿಸಿದಂಥ ದಾಖಲೆಗಳಲ್ಲಿ ರೆಕಾರ್ಡ್ ಮಾಡಿದ್ದಾರೆ. ಆಗ ಸರ್ಕಾರ ಇದ್ದದ್ದು. ಜನತಾ ದಳದ ಸರ್ಕಾರ.

ಅವರು ದಾಖಲಿಸಿದಂಥ ದಾಖಲೆಗಳಲ್ಲಿ 654 ಮೊಕದ್ದಮೆಗಳು ಅಥವಾ ಕ್ರಿಮಿನಲ್ ದಾವೆಗಳಾಗಿವೆ. ಇದು ಯಾವ ಸಂದರ್ಭದಲ್ಲಿ ಆಯಿತು? ಆಗ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡ ಮತ್ತು ಮಹಿಳೆಯವರಿಗೆ ರಿಸರ್ವೇಷನ್ ಬಿಟ್ಟರೆ, ಬ್ಯಾಕ್‌ವರ್ಡ್ ಕ್ಲಾಸ್‌ನವರಿಗೆ ಯಾವುದೇ ರೀತಿಯ ರಿಸರ್ವೇಷನ್ ಇರಲಿಲ್ಲ. ಜೊತೆಗೆ, ಮಹಿಳೆಯವರಿಗೆ ಇಷ್ಟು ಗಾತ್ರದ ರಿಸರ್ವೇಷನ್ ಕೂಡ ಆಗ ಇರಲಿಲ್ಲ. ಈಗ 33 ಪರ್ಸೆಂಟ್ ರಿಸರ್ವೇಷನ್ ಇದ್ದರೂ ಕೂಡ

ಸುಮಾರು 43.67 ಪರ್ಸೆಂಟ್ ಅಂದರೆ 44 ಪರ್ಸೆಂಟ್ ಮಹಿಳೆಯರೇ ಗ್ರಾಮಪಂಚಾಯಿತಿಗಳಲ್ಲಿ ಚುನಾಯಿತರಾಗಿ ಬಂದಿದ್ದಾರೆ. ಅದೇ ಪ್ರಕಾರ ಬ್ಯಾಕ್‌ವರ್ಡ್ ಕ್ಲಾಸ್‌ನಲ್ಲಿ ಕೂಡ ವಿಶೇಷವಾದಂತಹ ಸಂಖ್ಯೆಯಲ್ಲಿ ಅವರು ಚುನಾಯಿತರಾಗಿ ಬಂದಿದ್ದಾರೆ. ಬ್ಯಾಕ್‌ವರ್ಡ್ ಕ್ಲಾಸ್‌ನಲ್ಲಿ 33-28 ಪರ್ಸೆಂಟ್ ಚುನಾಯಿತರಾಗಿ ಬಂದಿದ್ದಾರೆ. ಷೆಡ್ಯೂಲ್ ಕ್ಯಾಸ್ಟ್ 22.19 ಪರ್ಸೆಂಟ್ ಚುನಾಯಿತರಾಗಿ ಬಂದಿದ್ದಾರೆ. ಷೆಡ್ಯೂಲ್ ಟ್ರೈಬ್ 9.39 ಪರ್ಸೆಂಟ್ ಚುನಾಯಿತರಾಗಿ ಬಂದಿದ್ದಾರೆ. ಆದರೆ ಒಂದು ರೀತಿಯ ಕ್ರಾಂತಿಕಾರಕವಾದಂತಹ ಚುನಾವಣೆ ಮಹಾತ್ಮಗಾಂಧೀಯವರ ಗ್ರಾಮರಾಜ್ಯದಿಂದ ಗ್ರಾಮರಾಜ್ಯ ಆಗಬೇಕು ಎಂಬ ಒಂದು ಸಂದೇಶ ಏನು ಇದೆ ಅದನ್ನು ನಾವು ಚಾಚೂ ತಪ್ಪದೆ, ರಾಜೀವ್ ಗಾಂಧೀಯವರ ಕನಸ್ಸಿನಂತೆ ನಮ್ಮ ಇಂದಿನ ಪ್ರಧಾನಿಯವರಾದ ಸನ್ಮಾನ್ಯ ಶ್ರೀ ಪಿ.ವಿ. ನರಸಿಂಹರಾಯರು ಅದನ್ನು ಅನುಷ್ಠಾನ ಮಾಡಿ ಸಂವಿಧಾನ ತಿದ್ದುಪಡಿ ಮಾಡಿ ಬಹುಶಃ ಈ ರಾಷ್ಟ್ರದಲ್ಲಿ ಎಲ್ಲೂ ಕೂಡ ಹಿಂದುಳಿದವರಿಗೆ ಮೀಸಲಾತಿಯನ್ನು ಇಲ್ಲಿಯವರೆಗೂ ಕೊಡಲಿಲ್ಲ ಅಂತಹ ಒಂದು ಮೀಸಲಾತಿಯನ್ನು ಕರ್ನಾಟಕ ರಾಜ್ಯದಲ್ಲಿ ಹಿಂದುಳಿದ ವರ್ಗದವರಿಗೆ ಕೊಟ್ಟರು. ಈ ಚುನಾವಣೆಯನ್ನು ನಾವು ಬಹುಶಃ ಶಾಂತಿಯುತರಾಗಿ ನಡೆಸಿದ್ದೇವೆ. ಬಹುಶಃ ರಾಷ್ಟ್ರದ ಇತಿಹಾಸದಲ್ಲಿ ಇಂತಹ ಚುನಾವಣೆ ನಡೆದಿರಲಿಕ್ಕಿಲ್ಲ, ಕರ್ನಾಟಕದಲ್ಲಂತೂ ಇಂತಹ ಚುನಾವಣೆ ನಡೆದಿದೆ. ಸಣ್ಣ ಗ್ರಾಮಗಳಲ್ಲಿ ಚುನಾವಣೆ ಮಾಡಿದ್ದೇವೆ. ಹಿಂದೆ ಮಂಡಲ ಪಂಚಾಯತಿಗಳು ಇತ್ತು ಮಂಡಲ ಪಂಚಾಯತಿಗಳ ಚುನಾವಣೆಗಳು ಆದಾಗ ಇದು ಮರ್ಡರ್ ಪಂಚಾಯತಿಗಳ ಚುನಾವಣೆಗಳು ಆಯಿತು ಎಂದು ಕರ್ನಾಟಕ ರಾಜ್ಯದಲ್ಲಿ ಪ್ರತೀತ ಇತ್ತು ಆದರೆ ಇಷ್ಟು ದೊಡ್ಡ ಸಂಖ್ಯೆಯಲ್ಲಿ ಮಂಡಲ ಪಂಚಾಯಿತಿಗಳು ಇರಲಿಲ್ಲ. 80 ಸಾವಿರದ 631 ಪಂಚಾಯತಿಗಳು ಇರಲಿಲ್ಲ. ಆಗ ಮಂಡಲ ಪಂಚಾಯತಿಗಳು ಬಹುಶಃ ಬಹಳ ಕಡಿಮೆ ಅಂದರೆ 5 ಸಾವಿರ ಮಂಡಲ ಪಂಚಾಯತಿಗಳು ಮಾತ್ರ ಇದ್ದವು. I think is it very much less ಅಷ್ಟು ಇರಲಿಲ್ಲ. ಇವತ್ತು ಸುಮಾರು 80 ಸಾವಿರ ಒಟ್ಟು ಗ್ರಾಮ ಪಂಚಾಯತಿಗಳ ಸಂಖ್ಯೆಯಲ್ಲಿ ಪ್ರತಿನಿಧಿಗಳ ಸಂಖ್ಯೆ ಆಗ ಇದಕ್ಕೆ 25 ಪರ್ಸೆಂಟ್ ಕೂಡ ಇರಲಿಲ್ಲ, ಸಬ್‌ಜಕ್ಟ್ ಟು ಕರೆಕ್ಷನ್. ಇಷ್ಟು ದೊಡ್ಡ ಗಾತ್ರದಲ್ಲಿ ಗ್ರಾಮ ಪಂಚಾಯತಿಗಳ ಸದಸ್ಯರ ಚುನಾವಣೆ ಆಗಿದೆ. ಮತ್ತು ಮೀಸಲಾತಿಯ ಒಂದು ವಿಶೇಷವಾದ ಕ್ರಾಂತಿಕಾರಿ ಧೋರಣೆಯಿಂದ ಚುನಾವಣೆಗಳು ಆಗಿದೆ. ಯಾವ ವಿಶೇಷವಾದಂತಹ ಘಟನೆಗಳು ಕೂಡ ಆಗಲಿಲ್ಲ. ನಮಗೆ ಗೊತ್ತಿದೆ. ಈ ಗ್ರಾಮ ಪಂಚಾಯತಿಗಳ ಚುನಾವಣೆ ಆದ ಮೇಲೆ ನಾವು ಪ್ರಥಮ ಬಾರಿ ಗ್ರಾಮ ಪಂಚಾಯತಿಯ ಅಧ್ಯಕ್ಷರು ಉಪಾಧ್ಯಕ್ಷರು ಆ ಹಂತದಲ್ಲೂ ಕೂಡ ಮೀಸಲಾತಿಯನ್ನು ನಾವು ಅನುಷ್ಠಾನದಲ್ಲಿ ದೇಶದಲ್ಲೇ ಪ್ರಥಮ ಭಾರಿಗೆ ತಂದದ್ದು. ಕರ್ನಾಟಕ ರಾಜ್ಯದಲ್ಲೇ ಪ್ರಥಮ ಬಾರಿಗೆ ತಂದೆವು. ಹಿಂದೆ ಈ ರೀತಿಯ ಮೀಸಲಾಯ ಪರಿಕ್ರಮ ಇರಲಿಲ್ಲ. ತಮಗೆ ಗೊತ್ತಿದೆ ಒಂದು ರೀತಿ ಗ್ರಾಮದಲ್ಲಿ ಮಂಡಲ ಪಂಚಾಯಿತಿಗಳ ಚುನಾವಣೆಗಳು ಆಗುವಾಗ 1987ನೇ ಇಸವಿಯಲ್ಲಿ ಭೌಗೋಳಿಕವಾದಂತಹ ವಿಕೇಂದ್ರಿಕರಣವಾದರೂ ಕೂಡ ನಿಜವಾದಂತಹ ಅಧಿಕಾರ ಯಾವ ಕೆಳಗಿನ ಹಂತಕ್ಕೂ ಎಲ್ಲರಿಗೂ ಕೂಡ

ಸರಿಸಮಾನವಾಗಿ ಹಂಚಿಹೋಗಬೇಕೋ ಆ ಪ್ರಕ್ರಿಯೆ ಆಗಿರಲಿಲ್ಲ. ಆ ಕೆಲಸ ನಾವು ಮೊನ್ನೆ ಗ್ರಾಮ ಪಂಚಾಯತಿ ಚುನಾವಣೆ ಆಗುವಾಗ ಗ್ರಾಮ ಪಂಚಾಯತಿಗೆ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಚುನಾವಣೆ ಆಗುವಾಗ ನಿಜವಾದಂತಹ ಮ್ಯಾಕ್ರೋ ಮತ್ತು ಮೈಕ್ರೋ ಲೆವೆಲ್ decentralisation for the first time has taken place in the country and in the State......

ಅದು ಗೊತ್ತಿದೆ ಒಂದು ಸ್ಥಿತ್ಯಂತನ ಅಥವಾ ಒಂದು ಸೆಟಲ್ ಪವರ್ ಪ್ರೊಜೆಷನ್ ಅನ್ ಸೆಟಲ್ ಆಗುವಾಗ ಸ್ವಲ್ಪ ಸಂಘರ್ಷಣೆ ಆಗುತ್ತದೆ. ಮನಸ್ಸಿನಲ್ಲಿ ಸಂಘರ್ಷಣೆ ಆಗುತ್ತದೆ ಅಥವಾ ಭೌತಿಕವಾಗಿ ಕೂಡ ಕೆಲವು ರೀತಿ ಸಂಘರ್ಷಣೆ ಆಗುತ್ತದೆ. ನಮ್ಮ ನಿರೀಕ್ಷೆ ಏನು ಇತ್ತು ಅಂದರೆ ಇವತ್ತು ದೇಶದಲ್ಲಿ ಮೀಸಲಾತಿಯ ಬಗ್ಗೆ ಬಹಳ ದೊಡ್ಡ ಸಿದ್ಧಾಂತದ ಬಗ್ಗೆ ಮಾತನಾಡತಕ್ಕಂಥ ನಮ್ಮ ಪ್ರಧಾನ ವಿರೋಧಪಕ್ಷ ಏನು ಇದೆ ಆ ಪ್ರಧಾನ ವಿರೋಧ ಪಕ್ಷ ಇದರಲ್ಲಿ ಸಹಕಾರ ಮಾಡುತ್ತದೆ ಸ್ಪಂದಿಸುತ್ತದೆ ಎಂಬ ಒಂದು ವಿಶ್ವಾಸವನ್ನು ನಾವು ಇಟ್ಟುಕೊಂಡಿದ್ದೇವೆ. ಗ್ರಾಮಪಂಚಾಯತಿಯ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಚುನಾವಣೆಯಲ್ಲಿ ಅದರ ವಿಶ್ಲೇಷಣೆಯನ್ನು ಮಾಡುವುದಕ್ಕೆ ನಾನು ಅಪೇಕ್ಷೆ ಪಡುವುದಿಲ್ಲ ತಮಗೆ ಗೊತ್ತಿದೆ, ನಮ್ಮ ಪ್ರಧಾನ ವಿರೋಧಪಕ್ಷದಲ್ಲಿರತಕ್ಕಂಥವರು, ಅದರ ಪ್ರಮುಖ ನಾಯಕರಲ್ಲಿ ಕೆಲವರಿಗೆ ಗೊತ್ತಿದೆ ಹಾವನೂರು ಸಮಿತಿಯ ಮೀಸಲಾತಿಯ ಅನುಷ್ಠಾನ ಮಾಡುವಾಗ ಕೂಡ ಸರ್ಕಾರವನ್ನು ಬೆದರಿಸಿದಂಥ ಪ್ರಸಂಗ ನಡೆದಿದ್ದು ನಮಗೆ ಈಗಲೂ ಕೂಡ ನೆನಪು ಇದೆ. ಅಥವಾ ಸರ್ಕಾರದ ಮೀಸಲಾತಿ ನೀತಿಯನ್ನು ವಿರೋಧ ಮಾಡಿದಂತಹ ವಿಚಾರ ಕೂಡ ಬಹುಶಃ ಕರ್ನಾಟಕ ರಾಜ್ಯದ ಇತಿಹಾಸದ ಸ್ಥಿತಿಘಟಲದಿಂದ ಇನ್ನೂ ಮಾಸಿ ಹೋಗಿಲ್ಲ. ಅದೇ ಜನ ಇವತ್ತು ಮೀಸಲಾತಿಯ ಸಿದ್ಧಾಂತದ ಒಂದು ಕೆಮಾಪ್ಲೇಟನ್ನು ಹಾಕಿಕೊಂಡಂತಹ ನಮ್ಮ ಸನ್ಮಾನ್ಯ ವಿರೋಧಪಕ್ಷದ ಕೆಲವು ನಾಯಕರು ಅಥವಾ ಕೆಲವು ವಿರೋಧಪಕ್ಷದ ಕೆಲವು ವರ್ಗದವರು ನಮಗೆ ಗೊತ್ತಿದೆ ಯಾವಾಗ ಅಧಿಕಾರದ ನಿಜವಾದಂತಹ ಹಸ್ತಾಂತರ, ಅಧಿಕಾರದ ನಿಜವಾದಂತಹ ಒಂದು ಸ್ಥಿತ್ಯಂತರ, ಅಧಿಕಾರದ ಒಂದು ನಿಜವಾದಂತಹ ವಿಕೇಂದ್ರಿಕರಣ ಈಗ ಆಗುತ್ತದೆ ಅದನ್ನು ಸಹನೆ ಮಾಡತಕ್ಕಂಥ ಪರಿಸ್ಥಿತಿಯಲ್ಲಿ ಅವರು ಇಲ್ಲ. ಇವತ್ತು ಏನು ಈ ಮೂರು ದಿವಸಗಳಿಂದ ಈ ಪ್ರಸಂಗ ನಡೆದಿದೆ. ಏನು ಈ ಗ್ರಾಮಪಂಚಾಯತಿಯ ಚುನಾವಣೆಯ ಪ್ರಕ್ರಿಯೆ ವಿರುದ್ಧ ವಿಧಾನ ಸಭೆಯನ್ನು ಮುತ್ತಿಗೆ ಹಾಕತಕ್ಕಂಥ ಒಂದು ಪ್ರಕರಣ ಈ ಕರ್ನಾಟಕ ರಾಜ್ಯದಲ್ಲಿ ಆಗಿದೆ. ಇದು ಬರೀ ಕಾಂಗ್ರೆಸ್ ಸರ್ಕಾರದ ವಿರುದ್ಧ ಮಾಡಿದಂತಹ ಪ್ರಕ್ರಿಯೆ ಅಲ್ಲ. ಅಥವಾ ಅಧಿಕಾರ ರೂಢವಾಗಿರತಕ್ಕಂಥ ಒಂದು ಸರ್ಕಾರದ ಮೇಲೆ ಮಾಡಿದಂತಹ ಮುತ್ತಿಗೆ ಅಲ್ಲ. ಇದು ಇಡೀ ಕರ್ನಾಟಕ ರಾಜ್ಯದಲ್ಲಿ ಏನು ಒಂದು ಮೀಸಲಾತಿ ನೀತಿಯನ್ನು ನಾವು ಅನುಷ್ಠಾನ ಮಾಡಿದ್ದೇವೆ, ಯಶಸ್ವಿಯಾಗಿ ಅನುಷ್ಠಾನ ಮಾಡಿದ್ದೇವೆ. ಇದು ರಾಜಕೀಯವಾಗಿ ಬರೀ ಸಾಮಾಜಿಕವಾಗಿ ಕೆಲವು ಅಡ್ಮಿಷನ್‌ಗಳಲ್ಲಿ ಮತ್ತು ಎಂಪ್ಲಾಯ್‌ಮೆಂಟ್‌ಗಳಲ್ಲಿ ಮಾತ್ರ ಮೀಸಲಾತಿ ಇದ್ದಂತಹ ಈ ಮೀಸಲಾತಿ ಪ್ರಕ್ರಿಯೆಯನ್ನು ಇವತ್ತು ಯಶಸ್ವಿಯಾಗಿ ರಾಜಕೀಯ ಕ್ಷೇತ್ರದಲ್ಲಿ ನಿಜವಾದಂತಪ ರಾಜಕೀಯ ಅಧಿಕಾರವನ್ನು ಹಂಚಿತಕ್ಕಂಥ ಒಂದು ಪ್ರಕ್ರಿಯೆ ಕರ್ನಾಟಕ ರಾಜ್ಯದಲ್ಲಿ ಪ್ರಾರಂಭವಾಗಿದೆ. ಆ ಪ್ರಕ್ರಿಯೆ ವಿರುದ್ಧ ಇವತ್ತು ವಿರೋಧ ಪಕ್ಷದವರು ಮುತ್ತಿಗೆ ಹಾಕಿದ್ದಾರೆ ಎಂಬುದನ್ನು ಕರ್ನಾಟಕ ರಾಜ್ಯದ ಜನತೆ ತಿಳಿದುಕೊಳ್ಳಬೇಕಾಗಿದೆ. ಇವತ್ತು ಯಾವ ಒಂದು ಅಧಿಕಾರ ಚಲನಶೀಲ ಶಕ್ತಿಯನ್ನು ಪಡೆದು ಅದು ಒಂದು ರೀತಿಯಲ್ಲಿ ಅಧಿಕಾರ ಸ್ಟ್ಯಾಗ್‌ನೇಟ್ ಆಗಿತ್ತು. ಆ ಸ್ಟ್ಯಾಗ್‌ನೇಟ್ ಅದಂತಹ ಅಧಿಕಾರ ಇವತ್ತು ಚಲನಶೀಲ ಪ್ರವೃತ್ತಿಯನ್ನು ಪಡೆದು ಅಧಿಕಾರವನ್ನು ಪಡೆಯಲಾಗದೆ ಆ ಒಂದು ಅಧಿಕಾರ ಯಾವ ಒಂದು ಜನರಿಗೆ ಇನ್ ಎಕ್ಸೆಸಬಲ್ ಇತ್ತು ಆ ಜನರ ಪಾಲಿಗೆ ಅಧಿಕಾರವನ್ನು ದಕ್ಕಿಸಿಕೊಳ್ಳತಕ್ಕಂಥ ಸಂದರ್ಭದಲ್ಲಿ ಇವತ್ತು ಪ್ರಜಾಪ್ರಭುತ್ವದ ಪ್ರಕ್ರಿಯೆಯ ಮುಖಾಂತರ ಅಧಿಕಾರವನ್ನು

ತಪ್ಪಿಸಲು ಅಸಾಧ್ಯವಾಗತಕ್ಕಂಥ ಹತಾಶರಾಗಿರತಕ್ಕಂಥ ಯಾವ ಒಂದು ವಿರೋಧಪಕ್ಷಗಳು ಯಾವ ಒಂದು ಪಟ್ಟಭದ್ರಹಿತಾಸಕ್ತಿಗಳು ಇವೆ ಆ ಪಟ್ಟಭದ್ರಹಿತಾಸಕ್ತಿಗಳು ಈ ಸದನದ ಹೊರಗೆ ಮತ್ತು ಈ ಸದನದ ಒಳಗೆ ಇವತ್ತು ಕಾನೂನನ್ನು ತಮ್ಮ ಕೈಯಲ್ಲಿಟ್ಟುಕೊಂಡು ಈ ಮುತ್ತಿಗೆಯನ್ನು ಈ ರಾಷ್ಟ್ರದ ಈ ಪ್ರಜಾಪ್ರಭುತ್ವದ ಪ್ರಮುಖವಾದಂತಹ ಸಮಾಜಿಕ ನೀತಿಯ ಸಿದ್ಧಾಂತದ ಮೇಲೆ ಈ ಮುತ್ತಿಗೆಯನ್ನು ಮಾಡಿದ್ದಾರೆಂದು ಹೇಳಿದರೆ ಅದು ಅತಿಶಯೋಕ್ತಿ ಆಗಲಿಕ್ಕೆ ಇಲ್ಲ, ಈ ಮುತ್ತಿಗೆಯನ್ನು ಎದುರಿಸ ತಕ್ಕಂಥ ಕೆಲಸವನ್ನು ನಮ್ಮ ಪಕ್ಷದ ಮತ್ತು ನಮ್ಮ ಪಕ್ಷಕ್ಕೆ ಸಹಕಾರವನ್ನು ನೀಡಿದಂತಹ ನಮ್ಮ ಸನ್ಮಾನ್ಯ ಶಾಸಕರು ಮತ್ತು ನಮ್ಮ ಕರ್ನಾಟಕ ರಾಜ್ಯದ ಇಡೀ ಜನತೆ ಈ ಸಮಾಜದ ಕಟ್ಟಕಡೆಯಲ್ಲಿ ನಿಂತು ಧ್ವನಿ ಎತ್ತಲಾರದೆ, ಇವತ್ತು ಪ್ರಜಾಪ್ರಭುತ್ವದ ಉಸಿರನ್ನು ಪಡೆಯಲಾಗದೆ ನಿರ್ಬಲರಾದಂತಹ ದುರ್ಬಲರಾದಂತಹ ಜನ ಎದ್ದು ನಿಂತು ಈ ಮುತ್ತಿಗೆಯನ್ನು ಎದುರಿಸುತ್ತಾರೆ ಎಂಬುದನ್ನು ಈ ಜನ ಇವತ್ತು ತಿಳಿದುಕೊಳ್ಳುತ್ತಾರೆ ಎಂಬ ಒಂದು ಪ್ರಕ್ರಿಯೆ ಕರ್ನಾಟಕ ರಾಜ್ಯದಲ್ಲಿ ಇವತ್ತು ಪ್ರಾರಂಭವಾಗುತ್ತದೆ ಎಂಬುದನ್ನು ನಾನು ತಮ್ಮ ಮುಖೇನ ಕರ್ನಾಟಕ ರಾಜ್ಯದ ಜನತೆಗೆ ಮತ್ತು ನನ್ನ ಸ್ನೇಹಿತರಾದಂತಹ ವಿರೋಧಪಕ್ಷದಲ್ಲಿ ಇವತ್ತು ಪಟ್ಟಭದ್ರ ಹಿತಾಸಕ್ತಿಗಳ ಷಡ್ಯಂತರಕ್ಕೆ ಬಲಿಯಾಗಿ ತಾವು ಮೇಲ್ನೋಟಕ್ಕೆ ಬರೀ ಘೋಷಣೆಗಾಗಿ ಇವತ್ತು ಪ್ರಜಾಪ್ರಭುತ್ವದಲ್ಲಿ ಒಂದು ರೀತಿಯ ಹಿಪೋಕ್ರೇಟ್ ಆಗಿ ಸಿದ್ಧಾಂತವನ್ನು ಸಾರತಕ್ಕಂಥ ಜನ ಇನ್ನಾದರೂ ಕೂಡ ಎಚ್ಚೆತ್ತು ನಾಳೆ ಬರತಕ್ಕಂಥ ದಿವಸ ಆದರೂ ಇಲ್ಲಿ ಒಂದು ಪ್ರಜಾಪ್ರಭುತ್ವದ ದೊಡ್ಡ ಈ ಕ್ರಾಂತಿಕಾರಿ ಪ್ರಕ್ರಿಯೆಗೆ ತಾವು ಕೂಡ ಸ್ಪಂಧಿಸತಕ್ಕಂಥ ಒಂದು ಕೆಲಸ ಮಾಡಬೇಕು ಎಂದು ತಮ್ಮ ಮುಖೇನ ತಮ್ಮ ಸ್ನೇಹಿತರನ್ನು ಪುನಃ ಪುನಃ ನಾನು ವಿಶೇಷವಾಗಿ ವಿನಂತಿ ಮಾಡಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೆ, ಇವತ್ತು ಗ್ರಾಮಪಂಚಾಯಿತಿ ಚುನಾವಣೆಗಳ ಪ್ರಕ್ರಿಯೆ ಎರಡು ಹಂತದಲ್ಲಿ ಮುಗಿದಿದೆ.

ಒಂದನೇಯ ಹಂತದಲ್ಲಿ ಗ್ರಾಮ ಪಂಚಾಯತಿ ಚುನಾವಣೆಗಳಾಗಿವೆ. ಎರಡನೆಯ ಹಂತದಲ್ಲಿ ಅವುಗಳ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಚುನಾವಣೆಗಳಾಗಿದೆ. ಇದು ಯಶಸ್ವಿಯಾಗಿ ಆಗಿದೆ. ಗ್ರಾಮಪಂಚಾಯಿತಿ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಚುನಾವಣೆಯಲ್ಲಿ ಕೂಡ ಬರೀ 49 ಘಟನೆಗಳಾಯಿತು. ಆದರೆ ಹಿಂದೆ 87ನೇ ಇಸವಿಯಲ್ಲಿ ವಿರೋಧಪಕ್ಷದವರು ಚುನಾವಣೆ ಮಾಡಿದಾಗ ಸುಮಾರು 133ಸ್ಥಳಗಳಲ್ಲಿ ಹಿಂಸಾಚಾರಗಳಾಗಿವೆ. ಆ ಮೊಕದ್ದಮೆಗಳು 87ನೇ ಇಸವಿಯ ಕ್ರಿಮಿನಲ್ ದಾಖಲೆಗಳಲ್ಲಿ ಸೇರಿಕೊಂಡು ಹೋಗಿವೆ. ಹೀಗೆ ಎರಡು ಹಂತದಲ್ಲಿ ಚುನಾವಣೆ ಮಾಡಿದಂತಹ ಸರ್ಕಾರ, ನಾವು ಮೂರನೇ ಹಂತದಲ್ಲಿ ಈಗ ಚುನಾವಣೆ ಮಾಡಬೇಕೆಂದು ನಮ್ಮ ಅಪೇಕ್ಷೆಯನ್ನು ತಿಳಿಸಿದ್ದೇವೆ, ಸರ್ಕಾರ ಮತ್ತು ಎಲೆಕ್ಷನ್ ಕಮಿಶನ್ ಕೂಡ ಏಪ್ರಿಲ್ ನಲ್ಲಿ ಚುನಾವಣೆ ಮಾಡಬೇಕೆಂದು ಎಲ್ಲಾ ರೀತಿಯ ಸಿದ್ಧತೆಗಳನ್ನು ನಡೆಸಿದಂತಹ ವಿಚಾರ ಜಗಜ್ಜಾಹೀರಾಗಿತ್ತು. ವಿರೋಧಪಕ್ಷದ ನಾಯಕರಿಗೂ ಗೊತ್ತಿತ್ತು, ಇದು ಗೊತ್ತಿದ್ದರೂ ಕೂಡ ಈ ಮೂರು ಹಂತಗಳ ಪ್ರಕ್ರಿಯೆ ಮುಗಿಯುವರೆಗೆ ಸಹನೆಯಿಂದ ಜನತೆಯನ್ನು ಎದುರಿಸತಕ್ಕಂತಹ ನೈತಿಕ ಬಲ ನಮ್ಮ ವಿರೋಧ ಪಕ್ಷದಲ್ಲಿ ಈಗ ಉಳಿದಿಲ್ಲ, ಅದನ್ನು ಅವರು ಇವತ್ತು ಸಾಬೀತುಮಾಡಿಕೊಟ್ಟಿದ್ದಾರೆ. ನನಗೆ ಗೊತ್ತಿದೆ, ಸುಮಾರು 80 ಸಾವಿರ ಚಿಲ್ಲರೆ ಕ್ಷೇತ್ರಗಳಿಗೆ ಚುನಾವಣೆ ಮಾಡಿದಂತಹ ನಮ್ಮ ಸರ್ಕಾರಕ್ಕೆ ತಾಲ್ಲೂಕು ಮತ್ತು ಜಿಲ್ಲಾಪರಿಷತ್ತಿನ ಬರೀ 3900 ಕ್ಷೇತ್ರಗಳಿಗೆ ಚುನಾವಣೆ ಮಾಡುವ ಬಗ್ಗೆ ಯಾವ ಅನುಮಾನ, ಶಂಕೆ ನಮಗಿಲ್ಲ, 80 ಸಾವಿರ ಚಿಲ್ಲರೆ ಜಾಗಗಳಿಗೆ ನಾವು ಚುನಾವಣೆ ಮಾಡಿ ಜನತೆಯ ಮುಂದೆ ಬಂದಿದ್ದೇವೆ. ಇವತ್ತು ಈ ಸದನದ ಮುಂದೆ ಬಂದಿದ್ದೇವೆ. ಇನ್ನು ಬರೀ 3900 ಸ್ಥಾನಗಳಿಗೆ ಮಾತ್ರ ಚುನಾವಣೆ ಮಾಡುವುದು ಉಳಿದಿದೆ. 80 ಸಾವಿರ ಜಾಗಗಳಿಗೆ ಚುನಾವಣೆಯನ್ನು ಎದುರಿಸಿದ ನಮ್ಮ ಸರ್ಕಾರಕ್ಕೆ

ಬರೀ 3900 ಸ್ಥಾನಗಳಿಗೆ ಚುನಾವಣೆ ಮಾಡಲು ಹೆದರಬೇಕಾದ ಅವಶ್ಯಕತೆ ಇಲ್ಲ ಆದರೆ 80 ಸಾವಿರ ಚಿಲ್ಲರೆ ಜಾಗಗಳಿಗೆ ಚುನಾವಣೆಯಾದ ನಂತರ 3900 ಜಾಗಗಳಿಗೆ ಚುನಾವಣೆ ಆಗದಂತೆ ಸರ್ಕಾರವನ್ನು, ನಮ್ಮ ಪಕ್ಷವನ್ನು ರಾಜ್ಯದ ಜನತೆಯನ್ನು ಹೆದರಿಸುವಂತಹ ಒಂದು ಕೆಲಸವನ್ನು ವಿರೋಧಪಕ್ಷದವರು ಈ ಮೂರು ದಿವಸದಿಂದ ಮಾಡಿದ್ದುದು, ಒಂದು ಲೆಕ್ಕದಲ್ಲಿ ಅವರು ಯಶಸ್ವಿಯಾಗಿದ್ದಾರೆ. 3900 ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್ ಸ್ಥಾನಗಳಿಗೆ ಚುನಾವಣೆ ಮಾಡಬೇಕಾದ ಪ್ರಕ್ರಿಯೆ 27ಏಪ್ರಿಲ್‌ಗೆ ಮಾಡಲಿಕ್ಕೆ ನಿನ್ನೆ ಚುನಾವಣಾ ಆಯೋಗದವರು ಹೊರಡಿಸುವಂತಹ ಸಿದ್ಧತೆಯಲ್ಲಿದ್ದರು. ನಿನ್ನೆಯವರೆಗೂ ನಾವು ತಡೆಹಿಡಿಯಲಿಲ್ಲ. ಅದೇ ಮೊನ್ನೆಯವರೆಗೆ ಯಾವ ಬಗೆಯ ಶಿಫಾರಸನ್ನು ನಾವು ಚುನಾವಣಾ ಆಯೋಗಕ್ಕೆ ಸಲ್ಲಿಸಿರಲಿಲ್ಲ.ಚುನಾವಣೆಗೆ ಬೇಕಾದಂತಹ ಎಲ್ಲಾ ಸಿದ್ಧತೆಗಳು ನಡೆದು, ಸರ್ಕಾರ ಸಿದ್ಧವಾಗಿತ್ತು. ಪೋಲಿಸ್ ಸಿಬ್ಬಂದಿ ಸಿದ್ಧವಾಗಿತ್ತು.

ನಮ್ಮ ಕಾಂಗ್ರೆಸ್ ಪಕ್ಷ ಕೂಡ ಇದಕ್ಕೆ ಎಲ್ಲಾ ಸಿದ್ಧತೆಯನ್ನು ಮಾಡಿದೆ. ಇವತ್ತು ನಾಳೆ ಕೂಡ ನಾವು ಸಿದ್ಧವಾಗಿದ್ದೇವೆ. ಜನತೆಯನ್ನು ಎದುರಿಸಲಿಕ್ಕೆ ಕಾಂಗ್ರೆಸ್ ಪಕ್ಷ ಯಾವಾಗಲೂ ಸಿದ್ಧವಾಗಿದೆ. ಇದಕ್ಕೆ ಅಂಜತಕ್ಕಂತಹ ಜನ ನಾವಲ್ಲ. ಅಂಜಿ ಪರಾರಿಯಾಗತಕ್ಕಂತಹ ಜನ ಈ ವಿರೋಧಪಕ್ಷದವರು. ಅದು ಏಕೆ ಆಗಿದ್ದಾರೆ? ಗ್ರಾಮ ಪಂಚಾಯಿತಿ ಚುನಾವಣೆಗಳ ಪ್ರಕ್ರಿಯೆ ಏನಾಯಿತು ಎಂದು ಹೇಳಬೇಕಾದ ಅಪೇಕ್ಷೆ ನನಗಿರಲಿಲ್ಲ ಮೊನ್ನೆಯೂ ಕೂಡ ಇರಲಿಲ್ಲ. ಆದರೆ ಇವತ್ತು ಇದನ್ನು ವಿರೋಧಪಕ್ಷದವರು ರಾಜಕೀಯ ದಾಳವನ್ನಾಗಿ ಉಪಯೋಗ ಮಾಡುವುದಕ್ಕೆ ಪ್ರಾರಂಭ ಮಾಡಿದರು. ಅವರು ಏನು ಮಾಡಿದರು? There should be concensus among all the responsible national political parties for the success of political processes either in the country or in the State.

ಚುನಾವಣೆಯ ಪ್ರಕ್ರಿಯೆಗಳಲ್ಲಿ ವಿಶ್ವಾಸ ಇರಬೇಕಾಗುತ್ತದೆ. ಚುನಾವಣೆಯ ಪದ್ಧತಿಗಳಲ್ಲಿ ಜವಾಬ್ದಾರಿಯುತ ರಾಷ್ಟ್ರೀಯ ರಾಜಕೀಯ ಪಕ್ಷಗಳಿಗೆ ವಿಶ್ವಾಸ ಇರಬೇಕಾಗುತ್ತದೆ. ಇವತ್ತು ಎರಡು ಹಂತದಲ್ಲಿ ಸರ್ಕಾರ ಚುನಾವಣೆ ನಡೆಸಿತು. ಮೂರನೆಯ ಹಂತದ ಚುನಾವಣೆಯನ್ನು ನಿಲ್ಲಿಸಿದಂತಹ ಅಥವಾ ಬದಲಾವಣೆ ಮಾಡಿದಂತಹ ಸಂಪೂರ್ಣ ಜವಾಬ್ದಾರಿಯನ್ನು ವಿರೋಧ ಪಕ್ಷದವರು ಹೊರಬೇಕಾಗುತ್ತದೆ. ಏಕೆಂದರೆ ತಮಗೇ ಗೊತ್ತಿರುವಂತೆ ಎಲ್ಲಾ ಸಿದ್ಧತೆಗಳನ್ನು ಮಾಡಿದ್ದೇವೆ. ಇವತ್ತು ಸ್ಪಷ್ಟವಾಗಿ ನಾವು ಹೇಳುತ್ತಿದ್ದೇವೆ. ಯಾವುದೇ ಚುನಾವಣೆಯನ್ನು ಅದು ವಿಧಾನಸಭೆ ಚುನಾವಣೆಯಾಗಲಿ ಅಥವಾ ತಾಲ್ಲೂಕು ಪಂಚಾಯಿತಿ ಅಥವಾ ಜಿಲ್ಲಾಪರಿಷತ್ ಚುನಾವಣೆಯಾಗಲಿ ಅದನ್ನು ನಡೆಸುವ ಶಕ್ತಿ ನಮ್ಮ ಸರ್ಕಾರದಲ್ಲಿದೆ. ಆದರೆ ತಮಗೆ ಗೊತ್ತಿದೆ. ಈ ಚುನಾವಣೆಗಳಲ್ಲಿ ಗ್ರಾಮಪಂಚಾಯಿತಿ ಚುನಾವಣೆ ರಾಜಕೀಯ ಪಕ್ಷಗಳಿಂದ ಕಟ್ ಆಗಬಾರದು ಎಂಬ ನೀತಿ ನಿಯಮ, ಕಾನೂನುಗಳನ್ನು ಮಾಡಿದ್ದೇವೆ. ಅನೇಕ ಸ್ಥಳಗಳಲ್ಲಿ ರಾಜಕೀಯ ಪಕ್ಷದವರು, ಬೇರೆ ಬೇರೆ ರಾಜಕೀಯ ಪಕ್ಷದ ಬಗ್ಗೆ ಒಲವಿದ್ದವರು ಗ್ರಾಮದ ಪಂಚಾಯಿತಿಯ ಪ್ರೋಸೆಸ್‌ನಲ್ಲಿ ಪಾಲ್ಗೊಂಡಿದ್ದಾರೆ. ಅನೇಕ ಕಡೆ ಯೂನಾನಿಮಸಾಗಿ ಚುನಾವಣೆಯಾಗಿದ್ದಾರೆ. ಚುನಾವಣೆಯ ಪ್ರಕ್ರಿಯೆಯಲ್ಲಿ ಭಾಗವಹಿಸಿದಂತಹ ಯಶಸ್ವಿಯಾದಂತಹ ಸೋತಂಥ ಅಭ್ಯರ್ಥಿಗಳಿಗೆ ಈ ಸದನದ ಅಭಿನಂದನೆಗಳನ್ನು ನಾನು ಇವತ್ತು ತಿಳಿಸುತ್ತಿದ್ದೇನೆ. ಈ ಚುನಾವಣೆಗಳಲ್ಲಿ ಒಂದು ರೀತಿಯ ಸಾಮಾಜಿಕವಾದಂಥ ಅಂಧೋಲನ. ಭೂ ಮಸೂದೆ ಕರ್ನಾಟಕ ರಾಜ್ಯದಲ್ಲಿ ಅನುಷ್ಠಾನ ಮಾಡುವಾಗ ಬೇರೆ ಬೇರೆ ವರ್ಗದಲ್ಲಿ ಇದೇ ರೀತಿಯ ವಿಪ್ಲವ, ಸರ್ಕಾರದ ಕಾಯಿದೆ ಪ್ರಕಾರ ಸ್ಥಾಪನೆ ಮಾಡಿಕೊಟ್ಟಂತಹ ಹಕ್ಕನ್ನು ಗಳಿಸಬೇಕೆಂದು ತವಕ ಒಂದು ವರ್ಗದವರಿಗಾದರೆ ಈ ಅವಕಾಶವನ್ನು ತಪ್ಪಿಸಬೇಕು, ರೂಢಮೂಲವಾದ ಅಧಿಕಾರದಿಂದ ನಾವು ಜಾರಿಕೊಳ್ಳಬೇಕಾಗುತ್ತದೆ ಎಂಬ ಹತಾಶ ಮನೋಭಾವನೆ ಸಹಜವಾಗಿ ಇದೆ. ಆದರೆ

ರಾಜಕೀಯ ಪಕ್ಷಗಳ ಕೆಲಸವೇನು ಅಂತಹ ಭಾವನೆಗಳನ್ನು ನಾವು ಕೆರಳಿಸುವುದಲ್ಲ ಅಥವಾ ಆ ವಿಪ್ಲವವನ್ನು ನಾವು ರಾಜಕೀಯಕ್ಕೆ ಉಪಯೋಗ ಮಾಡಿಕೊಳ್ಳುವುದಲ್ಲ. ಆ ಭಾವನೆಗಳನ್ನು ಸಾಂತ್ವನಗೊಳಿಸಿ ಪೊಲಿಟಿಕಲ್ ಪ್ರೋಸೆಸನ್ನು ತುರ್ತಾಗಿ ಮುಗಿಸತಕ್ಕಂತಹ ಒಂದು ಜವಾಬ್ದಾರಿ ಬರಿ ಕಾಂಗ್ರೆಸ್ ಪಕ್ಷದವರದಲ್ಲ, ಈ ಜವಾಬ್ದಾರಿ ವಿರೋಧಪಕ್ಷದವರದೂ ಆಗಿದೆ. ಆದರೆ ಈ ಭಾವನೆಗಳಿಗೆ ಒಂದು ರೀತಿಯ ವಿರೂಪಕೊಟ್ಟು ಈ ಭಾವನೆಗಳನ್ನು ಮತ್ತಷ್ಟು ಕೆರಳಿಸಿ. ವಿಧಾನಸಭೆಯಲ್ಲಿ ಸ್ಟಾರ್ಲ್ ಮಾಡುವಂತಹ ಅಥವಾ ಮೂರು ದಿವಸಗಳಲ್ಲಿ ಇದನ್ನು ಸ್ಟಾಲ್ ಮಾಡುವಂತಹ ಚುನಾವಣಾ ಪ್ರಕ್ರಿಯೆ ಸಮಾಧಾನವಾಗಿ ಆಗುತ್ತಿರುವಾಗ ಜನಗಳ ಹೃದಯದಲ್ಲಿದ್ದ ಬೇಗುದಿಗೆ ಮತ್ತಷ್ಟು ಎಣ್ಣೆ ಹಾಕಿ ಜ್ವಲಿಸುವಂತಹ ಕೆಲಸ ಈ ಮೂರು ದಿವಸಗಳ ಕಾಲ ವಿರೋಧಪಕ್ಷದವರು ಮಾಡಿದ್ದಾರೆ. ಈ ಮನಸ್ಸಿನ ಭಾವನೆಗಳನ್ನು ಮತ್ತಷ್ಟು ಹೆಚ್ಚಿಸಿ ಮೂರನೆ ಹಂತದ ಚುನಾವಣೆಯಲ್ಲಿ ಇದು ವಿಶೇಷವಾದ ವಿಕೋಪವನ್ನು, ವಿಶೇಷವಾದ ವಿಕೃತರೂಪವನ್ನು, ವಿಶೇಷವಾದ ವಿಪ್ಲವರೂಪವನ್ನು ಧರಿಸತಕ್ಕಂತಹ ಒಂದು ಷಡ್ಯಂತರ ಇವತ್ತು ಕೆಲವು ಪಟ್ಟಭದ್ರಹಿತಾಶಕ್ತಿಗಳಿಂದ ಆಗಿದೆ. ನಮ್ಮ ವಿರೋಧಪಕ್ಷದ ಸ್ನೇಹಿತರು ಆ ಷಡ್ಯಂತರಕ್ಕೆ ಬಲಿಯಾಗಿದ್ದಾರೆ ಎಂದು ನಾವೆಲ್ಲರೂ ಬಹಳ ವಿಷಾದದಿಂದ, ದುಃಖದಿಂದ ಹೇಳುವ ವಿಚಾರ.

ನಿಜವಾಗಿ ಇವತ್ತು ಸ್ಟಾಲ್ ಮಾಡಬೇಕೆಂದಿಟ್ಟಂತಹ ಒಂದು ಪ್ರಕ್ರಿಯೆ, 3 ದಿವಸಗಳ ಕಾಲ ಸ್ಟಾಲ್ ಮಾಡಿದಂತಹ ಈ ವಿಚಾರ ಬಹುಶಃ ಈ ಸದನದಲ್ಲಿ ಸಾಕಷ್ಟು ಉಳಿಯುವುದಿಲ್ಲ. ಪ್ರಚಾರ ಬರುತ್ತದೆ. ಜನಗಳಲ್ಲಿ ಕೆಲವು ಶಕ್ತಿಗಳು, ಕೆಲವು ದುಷ್ಟ ಶಕ್ತಿಗಳು ನಮ್ಮ ಚುನಾವಣಾ ಪ್ರಕ್ರಿಯೆಯನ್ನು ಕೆಡಿಸಬೇಕೆಂದು ಕಾದುಕೊಂಡಂತಹ ಅಥವಾ ಅವರು ಮರೆಯುತ್ತಿದ್ದರು ಅಥವಾ ಅವರಿಗೆ ಬೆಂಬಲವಿಲ್ಲದೆ, ಸರಕಾರದ ಬೆಂಬಲ ಯಾವುದೇ ರಾಜಕೀಯ ಪಕ್ಷದ ಬೆಂಬಲ ಇಲ್ಲ. ಇದರಿಂದ ಈ ಪ್ರಜಾಪ್ರಭುತ್ವದ ಪ್ರಕ್ರಿಯೆಯನ್ನು ನಾವು ನಿಲ್ಲಿಸಲಿಕ್ಕಾಗುವುದಿಲ್ಲವೆಂದು ಹತಾಶರಾಗಿ ಮೂಲೆ ಸರಿದಿದ್ದಂತಹ ವ್ಯಕ್ತಿಗಳಿಗೆ ಇವತ್ತು ಜೀವ ತುಂಬುವಂತಹ ಕೆಲಸವನ್ನು ವಿರೋಧಪಕ್ಷದ ಸದಸ್ಯರು ಈ 3 ದಿವಸಗಳ ಕಾಲ ಈ ಸದನದ ಕಾರ್ಯಕಲಾಪವನ್ನು ಸ್ಟಾಲ್ ಮಾಡಿ ಇವತ್ತು ಈ ಕೆಲಸ ಮಾಡಿದರು. ಅವರ ದೃಷ್ಟಿಯಲ್ಲಿ ನಾವೇನೂ ಗೆದ್ದುಕೊಂಡು ಹೊರಗೆ ಹೋದೆವೆಂದಿರಬಹುದು. ಆದರೆ ಇವತ್ತು ರಾಜಕೀಯವಾಗಿ ಅವರು ಸೋತಿದ್ದಾರೆ. ಸೈದ್ಧಾಂತಿಕವಾಗಿ ಅವರು ಸೋತಿದ್ದಾರೆ. ಇದರಿಂದ ಪ್ರಜಾಪ್ರಭುತ್ವದ ಒಂದು ವಿಕೇಂದ್ರೀಕರಣ ವ್ಯವಸ್ಥೆಗೆ ಇವತ್ತು ಐತಿಹಾಸಿಕವಾದಂತಹ ಒಂದು ಅಪರಾಧವನ್ನು ವಿರೋಧ ಪಕ್ಷದ ಸದಸ್ಯರು ಮಾಡಿದ್ದಾರೆ ಎಂಬುದನ್ನು ನಾನು ವಿಶೇಷವಾಗಿ ವಿಚಾರ ಮಾಡಲಿಕ್ಕೆ ಅಪೇಕ್ಷೆ ಪಡುತ್ತಿದ್ದೇನೆ. ನನಗೆ ಗೊತ್ತಿದೆ, ಏಕೆ ಇವರು ಹತಾಶರಾಗಿದ್ದಾರೆಂದು. ಇವರು ಇವತ್ತು ವಿಶೇಷವಾಗಿ ಗ್ರಾಮಪಂಚಾಯತಿಯಲ್ಲಿ ಸೋಲನ್ನನುಭವಿಸಿದ್ದಾರೆ. ನಾವೂ ಕೂಡ ನಮ್ಮ ಪಕ್ಷದವರು ಒಂದು ಅಬ್ಜೆಕ್ಟೀವಾಗಿ . ಸರ್ವೆ ಮಾಡಿದ್ದೇವೆ. ಯಾವ ರೀತಿ ಗ್ರಾಮ ಪಂಚಾಯತಿಯಲ್ಲಿ ಯಾವ್ಯಾವ ಪಕ್ಷಕ್ಕೆ ಒಲವಿದ್ದವರು ಚುನಾಯಿತರಾಗಿ ಬಂದಿದ್ದಾರೆ, ಯಾವ್ಯಾವ ಪಕ್ಷಕ್ಕೆ ಅನುಕಂಪವಿದ್ದವರು ಚುನಾಯಿತರಾಗಿ ಬಂದಿದ್ದಾರೆ. ಯಾವ್ಯಾವ ಪಕ್ಷದ ಸದಸ್ಯರು ಚುನಾಯಿತರಾಗಿ ಬಂದಿದ್ದಾರೆ ಎಂಬ ಒಂದು ಸಮೀಕ್ಷೆ ನಾವು ಮಾಡಿದ್ದೇವೆ. ನಮ್ಮ ಸಮೀಕ್ಷೆಗಿಂತ 20-25 ಪರ್ಸೆಂಟ್ ಹೆಚ್ಚು ನಮ್ಮ ಕಾಂಗ್ರೆಸ್‌ನವರು ಚುನಾಯಿತರಾಗಿ ಬಂದಿದ್ದಾರೆಯೇ ಹೊರತಾಗಿ ಅದಕ್ಕಿಂತ ಕಡಿಮೆ ಬಂದಿಲ್ಲ. ಇದರ ಪ್ರಕಾರವೇ 73,649 ರಲ್ಲಿ, any body can verify, it is an open secret.

ಇದರಲ್ಲಿ ಗುಟ್ಟೇನೂ ಇಲ್ಲ. 36,782 ಮಂದಿ ಕಾಂಗ್ರೆಸ್‌ಗೆ ಅನುಕಂಪವಿದ್ದವರು ಕಾಂಗ್ರೆಸ್‌ನವರು ಗ್ರಾಮ ಪಂಚಾಯಿತಿಗಳಲ್ಲಿ ಚುನಾಯಿತರಾಗಿ ಬಂದಿದ್ದಾರೆ. ಅಂದರೆ

50 ಪರ್ಸೆಂಟಗಿಂತಲೂ ಹೆಚ್ಚು ಜನ ಬಂದಿದ್ದಾರೆ. 80 ಪರ್ಸೆಂಟೆಂದು ನಾನು ಹೇಳಿಯೇ ಇರಲಿಲ್ಲ, ಅದು ಪತ್ರಿಕೆಯಲ್ಲಿ ಬಂದು ಬಿಟ್ಟಿದೆ. ಜನತಾದಳ 19,077 ಮಂದಿ ಚುನಾಯಿತರಾಗಿದ್ದಾರೆ. ಅಂದರೆ 24 ಪರ್ಸೆಂಟ್ ಬಿಜೆಪಿಯವರು 8209 ಮಂದಿ ಬಂದಿದ್ದಾರೆ ಅಂದರೆ 9 ಪರ್ಸೆಂಟ್ ಕಳೆದ 91ರ ಪಾರ್ಲಿಮೆಂಟ್ ಚುನಾವಣೆಯಲ್ಲಿ 31 ಪರ್ಸೆಂಟ್ ಮತವನ್ನು ಪಡೆದಂತಹ ಬಿಜೆಪಿ ಇವತ್ತು 9 ಪರ್ಸೆಂಟಿಗೆ ಹೋಗಿ ಅಧಃ ಪತನಕ್ಕೆ ಇಳಿದಿದೆ. ಹಿಂದೆ ಅಧಿಕಾರ ರೂಢವಾಗಿದ್ದಂತಹ, ಹಿಂದೆ ಅಧಿಕಾರದಲ್ಲಿಂತಹ ಜನತಾದಳ ಕೂಡ 24 ಪರ್ಸೆಂಟಿಗೆ ಬಂದಿದೆ. ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ವಿಶೇಷವಾಗಿ ತನ್ನ ಮೇಲುಗೈ ಅನ್ನು ಸಾಧನೆ ಮಾಡಿದೆ. ಮುಂದೆ ಬರತಕ್ಕಂತಹ ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾಪರಿಷತ್ತಿನಲ್ಲಿಯೂ ಕೂಡ ನಮಗೆ ವಿಶೇಷವಾದ ಸೋಲಾಗುತ್ತದೆ, ಇದರ ಬಗ್ಗೆ ವಿಶೇಷವಾಗಿ ಗೊಂದಲ ಮಾಡಬೇಕು ಮತ್ತು ಜನತೆಯಲ್ಲಿ ಭೀತಿಯನ್ನು ಹುಟ್ಟಿಸಬೇಕು, ಮತದಾರರಲ್ಲಿ ಭೀತಿಯನ್ನು ಹುಟ್ಟಿಸಬೇಕೆಂದು ಇವತ್ತು ಈ ವಿಧಾನ ಸಭಾ ವೇದಿಕೆಯನ್ನು ಅವರು ದುರುಪಯೋಗ ಮಾಡಿದಂಥಾದ್ದು ಪ್ರಜಾಪ್ರಭುತ್ವಕ್ಕೆ ಮಾಡಿದಂತಹ ಅತಿ ದುರಂತ ಪ್ರಸಂಗವೆಂದು ನಾನು ಇಲ್ಲಿ ಇವತ್ತು ಹೇಳಲೇಬೇಕಾಗಿದೆ. 3 ದಿವಸಗಳ ಕಾಲ ಸತತವಾಗಿ ಒಂದು ನಿರ್ಣಯವನ್ನು ಸೂಚನೆ ಮಾಡಿಕೊಂಡು ಈ ಸದನದ ಕಾರ್ಯಕಲಾಪಗಳನ್ನು ನಿಲ್ಲಿಸತಕ್ಕಂತಹ ಕೆಲಸಕ್ಕೇನು ಕೈ ಹಾಕಿದ್ದಾರೆ ಅದನ್ನು ಖಂಡಿಸಬೇಕಾಗುತ್ತದೆ. ನಮ್ಮ ಸ್ನೇಹಿತರಲ್ಲಿ ಇರಬೇಕಾಗಿತ್ತು. ಅಥವಾ ಅವರು ಹೊರಗೆ ಹೋಗಿದ್ದಾರೆ ಅಥವಾ ಹೊರಗೆ ಹಾಕಲಾಗಿದೆ. ಈ ಕೆಲಸವನ್ನು ಮೊದಲ ದಿವಸವೇ ನಾವು ಮಾಡಬಹುದಾಗಿತ್ತು ಅಥವಾ ನಿನ್ನೆ ಮಾಡಬಹುದಾಗಿತ್ತು. ಆದರೂ ಕೂಡ ನಾವು ಅದನ್ನು ಮಾಡಲಿಕ್ಕೆ ಹೋಗಲಿಲ್ಲ.

1.35 ಪಿ.ಎಂ

ತಮ್ಮ ಮಧ್ಯಸ್ಥಿಕೆಯಲ್ಲಿ ಅವರ ಜೊತೆಯಲ್ಲಿ ಬೆಳಿಗ್ಗೆಯಿಂದ ರಾತ್ರಿಯವರಿಗೆ ಶಾಂತ ವಿಧಾನಗಳಿಂದ ನಾವು ಮಾತನಾಡಿದ್ದೇವೆ, ಸಮಾಲೋಚನೆ ಮಾಡಿದ್ದೇವೆ. ಎಲ್ಲಿ ಗಲಭೆ ಆಗಿದೆ, ಅಲ್ಲಿ ಡಿವಿಜನಲ್ ಕಮೀಷನರ್ ಅವರ ನೇತೃತ್ವದಲ್ಲಿ ನಾವು ವಿಚಾರಣೆ ಮಾಡಲಿಕ್ಕೆ ಸಿದ್ಧ ಇದ್ದೇವೆ ಎಂದು ಹೇಳಿದ್ದೇವೆ, ಅದಕ್ಕೆ ಅದನ್ನು ತಾವು ಸಾಕ್ಷಿ ಆಗಿದ್ದೀರಿ. ಅದಕ್ಕೆ ಅದನ್ನು ಕೂಡ ಅವರು ಒಪ್ಪಲಿಲ್ಲ, ನಾವು ಹೇಳಿದೆವು, ಸದನದ ಸಮಿತಿ ಬೇಕಾದರೆ ಅಲ್ಲಿ ಹೋಗಿ ವಿಚಾರ ಮಾಡಿ ಬರಲಿ. ನಮ್ಮಲ್ಲಿ ಅಡಗಿಸಲಿಕ್ಕೆ ಏನೂ ಇಲ್ಲ, ಒಂದು ಮುಕ್ತವಾದ, ನ್ಯಾಯವಾದ ಚುನಾವಣೆ ನಡೆದಿದೆ. ಅದನ್ನು ಬೇಕಾದರೆ ಪರಿಶೀಲನೆ ಮಾಡಿಕೊಂಡು ಒಂದು ವರದಿ ಕೊಡಲಿ. ಬಹುಶಃ ಅದು ಪರಮೋಚ್ಚ ಸಮಿತಿ. ಏಕೆಂದರೆ ಸದನದ ಸಮಿತಿಯಷ್ಟು ಒಂದು ಪರಮೋಚ್ಚವಾದಂತಹ ಸಮಿತಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇನ್ನೊಂದು ಇಲ್ಲ. ಅದಕ್ಕೆ ಕೂಡ ನಾವು ಒಪ್ಪಿಕೊಂಡೆವು. ಆದರೆ ಅದೂ ಅವರಿಗೆ ಬೇಕಾಗಿಲ್ಲ, ನ್ಯಾಯಾಂಗ ತನಿಖೆ ಆಗಬೇಕು ಎಂದು ಇವತ್ತು ಅವರು ಒತ್ತಾಯವನ್ನು ಹಾಕಿದ್ದಾರೆ. ಸನ್ಮಾನ್ಯ ಅಧ್ಯಕ್ಷರೆ, ತಾವು ಈ ಚುನಾವಣೆಗಳ ಇತಿಹಾಸವನ್ನು ಪರಾಂಬರಿಸಿ ನೋಡಬೇಕು. ಲೋಕಸಭೆಗೆ ಚುನಾವಣೆ ಆಗುತ್ತದೆ, ವಿಧಾನಸಭೆಗೆ ಚುನಾವಣೆ ಆಗುತ್ತದೆ, ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ಆಗುತ್ತದೆ. ಅಥವಾ ಕೋ ಆಪರೇಟೀವ್ ಸೊಸೈಟಿಗಳಿಗೆ ಚುನಾವಣೆ ಆಗುತ್ತದೆ. ನಾನು ಬಹಳ ವಿಚಾರ ಹೇಳುವುದಿಲ್ಲ, ಇತಿಹಾಸದ ಪುಟಗಳನ್ನು ತಾವೆಲ್ಲ ಸ್ವಲ್ಪ ನೋಡಿದರೆ ತಿಳಿಯುತ್ತದೆ. ನಾನೂ ಸಹ ಅದನ್ನು ತಿರುಗಿಸಿ ನೋಡಿದ್ದೇನೆ. ಎಲ್ಲೂ ಕೂಡ ಈ ಚುನಾವಣೆಯಲ್ಲಿ ನಡೆದಂತಹ ಗಲಭೆಗಳಿಗೆ ನ್ಯಾಯಾಂಗ ವಿಚಾರಣೆ ಆದದ್ದು ಸದನದ ಸಮಿತಿಯ ವಿಚಾರಣೆ ಆದದ್ದು ಇವತ್ತಿಗೆ ಕೂಡ ನಮ್ಮ ಕರ್ನಾಟಕದ ಇತಿಹಾಸದಲ್ಲಿ ನನ್ನ ನೆನಪಿನಲ್ಲಿ ಇಲ್ಲ, ಬಹುಶಃ ನಮ್ಮ ಅನೇಕ

ಸ್ನೇಹಿತರ ನೆನಪಿಯಲ್ಲಿಯೂ ಇಲ್ಲ. ಬಹುಶಃ ಸರ್ಕಾರದ ದಾಖಲೆಯಲ್ಲಿಯೂ ಕೂಡ ಇಲ್ಲ. ಗಲಭೆಗಳು ಆಗಿದೆ. 600 ಚಿಲ್ಲರೆ ಜಾಗಗಳಲ್ಲಿ 1987ಲ್ಲಿ ಗಲಭೆಗಳು ಆಗಿವೆ. ಯಾವ ಸದನದ ಸಮಿತಿಯ ವಿಚಾರಣೆ ಆಗಲಿಲ್ಲ, ಯಾವ ಡಿವಿಜನಲ್ ಕಮೀಷನರ್ ಅವರ ವಿಚಾರಣೆ ಆಗಲಿಲ್ಲ. ಯಾವ ನ್ಯಾಯಾಂಗ ವಿಚಾರಣೆ ಕೂಡ ಆಗಲಿಲ್ಲ. ಬಹುಶಃ ಇಡೀ ದೇಶದಲ್ಲಿ ಕೂಡ ಆಗುವುದಿಲ್ಲ. ಇವತ್ತು ನ್ಯಾಯಾಂಗ ವಿಚಾರಣೆಯನ್ನು ಪೋಲೀಸ್ ಗೋಲೀಬಾರ್ ಮೇಲೆ ಅಥವಾ ಯಾವುದೇ ಒಂದು ಪ್ರಕರಣದ ಮೇಲೆ ಚುನಾವಣೆಯ ಪ್ರಕ್ರಿಯೆ, ಇರಬಹುದು, ಜನ ಪ್ರತಿನಿಧಿಗಳು ಆಯ್ಕೆ ಆಗಬೇಕಾಗಿರತಕ್ಕ ಒಂದು ಸಂದರ್ಭದಲ್ಲಿ, ಪ್ರಸಂಗದಲ್ಲಿ ಮಾಡತಕ್ಕಂಥ ಒಂದು ಹೊಸ ಪದ್ಧತಿಯನ್ನು, ಹೊಸ ಪ್ರಕ್ರಿಯೆ ನಾವು ಮಾಡಿದ್ದೇ ಆದರೆ ನಾವು ಆಲೋಚನೆ ಮಾಡಬೇಕು, ಚುನಾವಣೆಯಲ್ಲಿ ಯಾವ ಪೋಲೀಸ್ ನಮ್ಮ ರಕ್ಷಣೆಗೆ ಬರಲಿಕ್ಕೆ ಸಾಧ್ಯ ಇಲ್ಲ. ಏಕೆಂದರೆ ಈ ರೀತಿಯ ಒಂದು ರಕ್ಷಣೆಗೆ ಹೋದಾಗ ಕೂಡ ಸೈದ್ಧಾಂತಿಕವಾಗಿ ಪ್ರಜಾಪ್ರಭುತ್ವದ ಅಥವಾ ಜನ ಪ್ರತಿನಿಧಿಗಳ ಒಂದು ಕಾನ್‌ಸೆಪ್ಟಿನ ದೃಷ್ಟಿಯಲ್ಲಿ ಇದು ಯಾವುದೂ ಕೂಡ ಸ್ವೀಕಾರಾರ್ಹವಾದ ಬೇಡಿಕೆ ಆಗುವುದಿಲ್ಲ. ನಾವು ಇದರ ವಿಚಾರದಲ್ಲಿ ಮೆಜಿಸ್ಟೀರಿಯಲ್ ಎನ್‌ಕ್ವೈರಿ ಮಾಡಿದ್ದೇವೆ. ಮತ್ತೊಂದು ವಿಚಾರ, ಎರಡೂ ಪ್ರಕರಣಗಳ ಬಗ್ಗೆ ಈ ಸದನದಲ್ಲಿ ಚರ್ಚೆ ಆಗಿದೆ. ಬಳ್ಳಾರಿಯ ಗಂಡಬೊಮ್ಮನಹಳ್ಳಿಯ ಪ್ರಕರಣದ ಬಗ್ಗೆ ಇಲ್ಲಿ ವ್ಯಾಪಕವಾಗಿ ಚರ್ಚೆ ಆಗಿದೆ. ಅಥವಾ ಗುಲ್ಬರ್ಗಾದ ಕರಡಿಕಲ್ಲು ಪ್ರಕರಣದ ಬಗ್ಗೆ ಕೂಡ ಸಾಕಷ್ಟು ಚರ್ಚೆ ಆಗಿದೆ. ಈ ಚರ್ಚೆಯ ಎಲ್ಲಾ ವಿಚಾರಗಳೂ ಕೂಡ ನಮ್ಮ ಕಡತದಲ್ಲಿದೆ. ಆ ಚರ್ಚೆಯಿಂದ ಒಡ ಮೂಡಿ ಬಂದಂತಹ ಒಂದು ವಿಚಾರ ಎಂದರೆ, ಅಲ್ಲಿ ಪೋಲೀಸ್ ಎಕ್ಸ್‌ಸೆಸ್ ಆಗಿದೆ ಎಂಬುದಾಗಿ ಯಾರೂ ಕೂಡ ಪ್ರಸ್ತಾಪ ಮಾಡಿಲ್ಲ. ವಿರೋಧ ಪಕ್ಷದವರು ಕೂಡ ಮಾಡಿದ್ದು ಇಲ್ಲ. ಅಥವಾ ಈ ಎರಡೂ ಪ್ರಕರಣಗಳನ್ನು ಮುಂದೊಡ್ಡಿ, ಈ ಎರಡು ಪ್ರಕರಣಗಳಲ್ಲಿ ಪೋಲೀಸ್ ಎಕ್ಸ್‌ಸೆಸ್ ಆಗಿದೆ, ಪೋಲೀಸ್ ನವರು ದುರುಪಯೋಗ ಮಾಡಿಕೊಂಡಿದ್ದಾರೆ, ಪೋಲೀಸ್ ನವರಿಂದ ಅಕ್ರಮ ಆಗಿದೆ ಎಂಬ ವಿಚಾರ, ಒಂದು ಶಬ್ದ ಕೂಡ ಇಲ್ಲಿ ಚರ್ಚೆಯಲ್ಲಿ ಬಂದಿದ್ದು ಇಲ್ಲ, ಅಪಾದನೆ ಯಾರೂ ಮಾಡಿದ್ದು ಇಲ್ಲ. ಅಥವಾ ಯಾವುದೇ ಒಂದು ಪೋಲೀಸ್ ಅಧಿಕಾರಿ ಮೇಲೆ, ಯಾವುದೇ ಹಂತದ ಪೋಲೀಸ್ ಅಧಿಕಾರಿಗಳ ಮೇಲೆ ಆಪಾದನೆಯನ್ನು ಸದನದಲ್ಲಿ ಆಗಲಿ ಅಥವಾ ಸದನದ ಹೊರಗಡೆ ಆಗಲಿ ಕೂಡ ಮಾಡಿದ್ದನ್ನು ಪತ್ರಿಕೆಯಲ್ಲಿಯೂ ಕೂಡ ತಾವು ಕಾಣಲಿಕ್ಕಿಲ್ಲ. ಅಥವಾ ಇಲ್ಲಿ ಕೂಡ ತಾವು ಸದನದ ಕಡತದಲ್ಲಿ ಕಾಣತಕ್ಕದ್ದು ಇಲ್ಲ. ಒಟ್ಟಾರೆ ನ್ಯಾಯಾಂಗ ವಿಚಾರಣೆ ಆಗಬೇಕು, ಎಕೆ ಆಗಬೇಕು ಎಂದು ಒಂದು ಶಬ್ದ ಕೂಡ ಕಡಿತದಲ್ಲಿ ಆಗಲಿ ಅಥವಾ ಹೊರಗಡೆ ಕೂಡ ನೀವು ಕಾಣಲಿಕ್ಕೆ ಇಲ್ಲ. ಅಲ್ಲಿ ಅದರ ಬದಲಾಗಿ ಎರಡೂ ಕಡೆ ಕೂಡ ಲಾಠಿ ಛಾರ್ಜ್ ಮಾಡಿದರು. ಆಮೇಲೆ ಟಿಯರ್ ಗ್ಯಾಸ್ ಮಾಡಿ, ರಬ್ಬರ್ ಬುಲೆಟ್ ಉಪಯೋಗಮಾಡಿದರು. ನನಗೆ ಗೊತ್ತಿದೆ, ಬಳ್ಳಾರಿಯ ಗಂಡ ಬೊಮ್ಮನಹಳ್ಳಿಯಲ್ಲಿ ಕೊನೆಗೆ ಇನ್ನೇನು ಪರಿಶಿಷ್ಟ ವರ್ಗಕ್ಕೆ ಸೇರಿದ ಅನೇಕ ಜನರನ್ನು ಸುಟ್ಟು ಭಸ್ಮ ಮಾಡುತ್ತಾರೆ ಎಂದು ಅನುಭವಕ್ಕೆ ಬಂದಮೇಲೆ ಮತ್ತೆ ಫೈರಿಂಗನ್ನು ಆರ್ಡರ್ ಮಾಡಿದ ಮೇಲೆ ಅನೇಕ ಜನರ ಪ್ರಾಣವನ್ನು ಉಳಿಸಿದಂತಹ ಒಂದು ಕೆಲಸ ಆಯಿತು. ಅನೇಕ ಜನರ ಪ್ರಾಣವನ್ನು ಉಳಿಸಿದಂತಹ ಒಂದು ತಪ್ಪಿಗೆ ಇವತ್ತು ನ್ಯಾಯಾಂಗ ವಿಚಾರಣೆ ಆಗಬೇಕು ಎಂದು ಈ ಸದನದಲ್ಲಿ ಯಾರಾದರೂ ಉದ್ದೇಶಿತವಾಗಿ ಹೇಳಿದರೆ ಅದು ರಾಜಕೀಯ ಉದ್ದೇಶದಿಂದ ನ್ಯಾಯಾಂಗ ವಿಚಾರಣೆ ಆಗಬೇಕೇ ಹೊರತು ಅಥವಾ ವಿರೋಧ ಪಕ್ಷದವರಿಗೆ ರಾಜಕೀಯ ಲಾಭ ಆಗಬೇಕು ಎಂಬ ಏಕೈಕ ಉದ್ದೇಶದಿಂದ ಈ ನ್ಯಾಯಾಂಗ ವಿಚಾರಣೆಯನ್ನು ಮಾಡಬೇಕೇ ಹೊರತು

ಬೇರೆ ತಾತ್ಪರ್ಯ ಇಲ್ಲ ಎಂಬುದನ್ನು ನಾವು ವಿಶೇಷವಾಗಿ ಮನಗಾಣಬೇಕಾಗಿದೆ. ಇಲ್ಲೂ ಕೂಡ ಅಷ್ಟೇ. ಒಂಬತ್ತು ಜನ ಚುನಾಯಿತರಾದಂತಹ ಪ್ರತಿನಿಧಿಗಳು ಆ ಚುನಾವಣೆಗೆ ಬರುವಂತಹ ಸಂದರ್ಭದಲ್ಲಿ ಆಯುಧದಿಂದ, ಶಸ್ತ್ರಾಸ್ತ್ರಗಳಿಂದ ಅವರನ್ನು ಎದುರಿಸಿ ಬಹುಶಃ ಅಲ್ಲಿ ಪೋಲೀಸ್ ಅಧಿಕಾರಿಗಳಿಗೆ ವಿಶೇಷವಾದ ಗಾಯ ಆಗಿದೆ. ತಹಶೀಲ್ದಾರ್ ರವರಿಗೆ ವಿಶೇಷವಾಗಿ ಗಾಯ ಆಗಿದೆ. ಅಲ್ಲಿಯೂ ಕೂಡ ಗೋಲಿಬಾರ್ ಮಾಡದೇ ಇದ್ದರೆ 9 ಜನ ಪಂಚಾಯತ್ ಸದಸ್ಯರ ಕೊಲೆ ಆಗುತ್ತಿತ್ತು ಮತ್ತು ಅನೇಕ ಜನರ ಕೊಲೆ ಆಗುತ್ತಾ ಇತ್ತು. ಅದನ್ನು ತಡೆ ಹಿಡಿದಂತಹ ಅವರ ಪ್ರಾಣವನ್ನು ರಕ್ಷಣೆ ಮಾಡಿದಂತಹ ಕೆಲಸ, ಅವರ ಪ್ರಾಣ ರಕ್ಷಣೆ ಮಾಡಲಿಕ್ಕೆ ಗೋಲೀಬಾರ್ ಮಾಡಿದಂತಹ ಪ್ರಸಂಗದಲ್ಲಿ ಇವತ್ತು ನ್ಯಾಯಾಂಗ ವಿಚಾರಣೆ ಮಾಡಿದರೆ ಮುಂದೆ ಯಾವ ಚುನಾಯಿತವಾದಂತಹ ಅಥವಾ ಮೆಜಾರಿಟಿ ಹೊಂದಿದಂತಹ ಪಕ್ಷ ಕೂಡ ಅಧಿಕಾರವನ್ನು ಗ್ರಹಣ ಮಾಡದೇ ಇರತಕ್ಕಂಥ ಒಂದು ಪರಿಸ್ಥಿತಿ ಕರ್ನಾಟಕ ರಾಜ್ಯದಲ್ಲಿ, ಈ ದೇಶದಲ್ಲಿ ಉದ್ಭವವಾಗುತ್ತದೆ. ಏಕೆಂದರೆ, ಮೆಜಾರಿಟಿ ಚುನಾಯಿತರಾಗಿರತಕ್ಕ ಸದಸ್ಯರು ಬಂದು ಅಧಿಕಾರ ಗ್ರಹಣ ಮಾಡಬೇಕು. ನಮ್ಮ ನಾಯಕರನ್ನು ಚುನಾವಣೆ ಮಾಡಬೇಕು,ಅಥವಾ ಅಧ್ಯಕ್ಷರನ್ನು ಉಪಾಧ್ಯಕ್ಷರನ್ನು ಚುನಾಯಿಸಬೇಕು ಎಂದು ಹೇಳಿ ಹೊರಟಾಗ ಅದನ್ನು ತಡೆದು ನಿಲ್ಲಿಸ ತಕ್ಕ ಒಂದು ಅಕ್ರಮವಾದ ಪರಿಸ್ಥಿತಿ ಏನು ಇದೆ, ಹಿಂಸಾಚಾರದಿಂದ ಅದನ್ನು ತಡೆಯಬೇಕು, ಅಂತಹ ಚುನಾವಣೆ ಆಗಬಾರದು ಎಂದು ಹೇಳಿ ನಿಲ್ಲಿಸತಕ್ಕ ಒಂದು ಪ್ರಕ್ರಿಯೆ ಇವತ್ತು ನಡೆದಾಗ ಇವತ್ತು ಅದಕ್ಕೆ ನ್ಯಾಯಾಂಗ ತನಿಖೆ ಆಗಬೇಕು ಎಂದು ಹೇಳತಕ್ಕ ಒಂದು ವಾದವನ್ನು ವಿರೋಧ ಪಕ್ಷದವರು ಇಡತಕ್ಕ ಪರಿಸ್ಥಿತಿಯನ್ನು ನೋಡಿದರೆ ಇದು ಆಶ್ಚರ್ಯವಾಗುತ್ತಿದೆ. ನಾನು ಇವತ್ತು ಆದರೂ ಕೂಡ ಸದನದ ಸಮಿತಿ ಆಗಲಿ ಎಂದು ಹೇಳಿದೆ. ಪೊಲಿಟಿಕಲ್ ಪ್ರೊಸೆಸ್‌ಗೆ ಸರಿಯಾಗಿ ಸ್ಪಂಧಿಸತಕ್ಕ ಜನ ಇವತ್ತು ಅಲ್ಲಿ ಹೋಗಿ ವಿಚಾರಣೆ ಮಾಡಿ ಖುದ್ದು ವರದಿ ತರುವುದು ಇದ್ದರೆ ಅದಕ್ಕೆ ನಾವು ಇವತ್ತು ಒಪ್ಪಿಗೆಯನ್ನು ಕೊಡತಕ್ಕ ಪರಿಸ್ಥಿತಿಯಲ್ಲಿ ಈ ಕೆಲಸ ಮಾಡಿದ್ದೇವೆ. ಆದ್ದರಿಂದ ಇವತ್ತು ಯಾವುದೇ ರೀತಿಯಲ್ಲಿ ಅವರು ಒಪ್ಪಲಿ. ವಿರೋಧ ಪಕ್ಷದವರು ಈ ರೀತಿ ಸದನದ ಕಾರ್ಯಕಲಾಪಗಳನ್ನು ತಡೆ ಹಿಡಿಯತಕ್ಕ ಕೆಲಸವನ್ನು ಇಲ್ಲಿ ಮಾಡಿದ್ದಾರೆ. ಈಗ ತಾಲ್ಲೂಕು ಪಂಚಾಯತ್ ಮತ್ತು ಜಿಲ್ಲಾ ಪರಿಷತ್ತು ಚುನಾವಣೆಯ ವಿಚಾರ. ಈಗ ಯಾವುದೇ ಚುನಾವಣೆಯನ್ನು ನಡೆಸಲಿಕ್ಕೆ ಆಗುವುದಿಲ್ಲ ಎಂಬ ವಾದ ಸರ್ಕಾರದ್ದು ಅಲ್ಲ. ಆದರೆ ನಮ್ಮ ಒಂದು ಅಭಿಪ್ರಾಯ ಇದೆ. ಚುನಾವಣೆಯನ್ನು ನಿಲ್ಲಿಸತಕ್ಕ ಕೆಲಸ ಸರ್ಕಾರದ್ದೂ ಅಲ್ಲ. ಇದು ಎಲೆಕ್ಷನ್ ಕಮೀಷನ್‌ಗೆ ಸೇರಿದಂತಹ ವಿಚಾರ. ಅದರ ಪ್ರಕ್ರಿಯೆಯಲ್ಲಿ ನಾವು ಕೈಹಾಕುವುದಿಲ್ಲ, ಆದರೆ ಎಲೆಕ್ಷನ್ ಕಮೀಷನ್ ನಮಗೆ ಒಂದು ಪತ್ರವನ್ನು ಬರೆದು, ಏಪ್ರಿಲ್ 27ಕ್ಕೆ ಚುನಾವಣೆಯನ್ನು ನಡೆಸತಕ್ಕ ವಿಚಾರವನ್ನು ನಮಗೆ ತಿಳಿಸಿದಾಗ, ಇವತ್ತು ಜಿಲ್ಲಾಧಿಕಾರಿಗಳ ಜೊತೆಯಲ್ಲಿ ನಮ್ಮ ಹೋಮ್ ಕಮೀಷನರ್ ಲಾ ಅಂಡ್ ಆರ್ಡರ್ ವಿಚಾರದಲ್ಲಿ ಸಮಾಲೋಚನೆ ಮಾಡಿದ್ದಾರೆ. ನಮ್ಮ ಡಿಜಿಪಿ ಅವರ ನಮ್ಮ ಸರ್ಕಾರಕ್ಕೆ ಒಂದು ವರದಿಯನ್ನು ಕೂಡ ಕಳಿಸಿದ್ದಾರೆ. ಆ ವರದಿ ಬಗ್ಗೆ ನಾನು ಇಷ್ಟೇ ಹೇಳಲಿಕ್ಕೆ ಅಪೇಕ್ಷೆ ಪಡುತ್ತಿದ್ದೇನೆ. ಇದು ಡಿ.ಜಿ.ಪಿ.ಯವರು ಬರೆದಂಥಾದ್ದು.

There is nothing wrong in giving the contents of the letter, I quote:

"The tension has developed during the election of president and Vice-president in number of places. In some places, there were allegations of kidnapping by one group or the other and 8 cases have been reported to the police. In some places there is a resentment of people of some villages regarding

location of Headquarters of the panchayat. In general, there is an under-current of tension due to reservation to SCs/STs/BCs and women.

There is an undercurrent. Ultimately it is a matter which we can control but there is an undercurrent. ಈ ಅಸಮಾಧಾನ ಇವೊತ್ತಿನ ಸಮಾಜದಲ್ಲಿರತಕ್ಕಂಥ ಸಂದರ್ಭದಲ್ಲಿ ನಾನು ಆಗಲೇ ಹೇಳಿದಂತೆ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ನಮ್ಮೆಲ್ಲಾ ರಾಜಕೀಯ ಪಕ್ಷಗಳ ಕರ್ತವ್ಯವೇನಿತ್ತು, ಇದರಲ್ಲಿ ಏನು ವಿಶ್ವಾಸವಿತ್ತು, ಸಾಮಾಜಿಕ ನೀತಿಯಲ್ಲಿ ವ್ಯವಸ್ಥೆ ಇದ್ದರೆ ಆ ಅಂಡರ್ ಕರೆಂಟ್ ಅನ್ನು ಸಾಂತ್ವನ ಮಾಡಿಕೊಂಡು ಪರಿಸ್ಥಿತಿಯನ್ನು ಸುಧಾರಿಸುವುದು ಬರೀ ನಮ್ಮ ಕರ್ತವ್ಯವಲ್ಲ, ಆ ಕರ್ತವ್ಯ ಅವರದಾಗಿತ್ತು. ಪ್ರಜಾಪ್ರಭುತ್ವದ ಈ ಸದ್ಭಾವನೆಗಳನ್ನು ಅರಿತುಕೊಳ್ಳತಕ್ಕ ಸಜ್ಜನಿಕೆ, ಸದ್ಭಾವನೆಗಳನ್ನು ಅರಿತು ಪ್ರಜಾಪ್ರಭುತ್ವದ ಪ್ರಕ್ರಿಯೆಯನ್ನು ಯಶಸ್ವಿಗೊಳಿಸತಕ್ಕ ಒಂದು ಮನೋಭೂಮಿಕೆ ವಿರೋಧ ಪಕ್ಷದವರಲ್ಲಿ ಇಲ್ಲದೇ ಹೋಯಿತಲ್ಲವೆನ್ನುವ ವ್ಯಥೆ ಇವೊತ್ತು ನನ್ನನ್ನು ಕಾಡುತ್ತಿದೆ.

The Director General of police has said further:

"The established leadership in the village appear to feel threatened due to this social change brought about in the panchayat Raj Act".

This is a radical change. A radical change which has taken place in the villages. A radical political change which has taken place in the villages which requires proper appreciation and understanding by all the political parties in Karnataka.

Unfortunately, that is lacking on the other side. I wanted this kind of an appreciation since you must make political process successful. ಪರಿಸ್ಥಿತಿಯನ್ನು ಮತ್ತಷ್ಟು ಬಿಗಡಾಯಿಸಿ ಇವೊತ್ತು ಮೂರನೆಯ ಚುನಾವಣಾ ಪ್ರಕ್ರಿಯೆಯನ್ನು ನೇರವಾಗಿ ನಿಲ್ಲಿಸತಕ್ಕಂಥ ಹೇಳಿಕೆ ಮಾಡದಿದ್ದರೂ ಕೂಡ ಅದಕ್ಕೆ ಬೇಕಾದಂಥ ಉಪ್ಪು ಅಥವಾ ತುಪ್ಪ ಅಥವಾ ಎಣ್ಣೆ ಹಾಕುವಂಥ ಕೆಲಸವನ್ನು ಅವರು ಇವೊತ್ತು ಬಹಳ ಯಶಸ್ವಿಯಾಗಿ ಮಾಡಿದ್ದಾರೆ.

ಅನಂತರ ಅವರು ಹೇಳುತ್ತಾರೆ:

"Though the elections are on non-Party lines, it has gravitated into Party affiliation while the President and Vice-President elections are taking place. This has further added to tensions during elections. Though there were incidents of violence during last Mandal Panchayati elections as it was for the first time these elections were helds, people were not fully aware of the impact of Democratic decentralisation.

ಗ್ರಾಮ ಪಂಚಾಯತಿ ಚುನಾವಣೆ ಆಗುವಾಗ ಅಥವಾ 1987ರಲ್ಲಿ ಮಂಡಲ ಪಂಚಾಯತಿ ಚುನಾವಣೆ ಆಗುವಾಗ This kind of gravitation of the political power or a democratic decentralization was not realised. ಗ್ರಾಮ ಪಂಚಾಯತಿ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಚುನಾವಣಾ ಸಂದರ್ಭದಲ್ಲಿ This was not naturally realised.

"During the last 3 years, I quote, the people in the villages have realised the importance of locally elected representives and hence they have taken very serious steps to capture the power."

While capturing the power it is but natural that tension will develop. However, the transition should be made very smooth. The transition of power will have to be made very smooth. That responsibility lies on all Political parties in Karnataka and in the country. There is a transition of power. If the political parties do not reconcile and compromise with this kind of transition of power, I do not think that Democracy would survive in this country. What the Opposition parties have done? They havee brought a blot on the process of political democracy which has sustained, settled in this country for all these 45 years. ಈ ಅಪರಾಧವನ್ನು ಇವೊತ್ತು ಕರ್ನಾಟಕ ರಾಜ್ಯದ ವಿರೋಧ ಪಕ್ಷದವರು ಖಂಡಿತವಾಗಿಯೂ ಹೊರಬಾರದು.

Further he says, -

"The above facts have created social tension in some villages. After the Land Reforms"

This is the professional report given by the Director General of Police.

"After the Land Reforms, the present Panchayat Raj Legislation has brought about radical changes in the Socio-political scenario in the rural areas. This far reaching legislation has also created a tension among the groups of people who are politically affiliated to various parties. Elections have been held for over 5600 panchayats. During the membership elections, no serious law and order incidents took place. Even in the president and Vice President elections, though elections have taken place for over 60-70% of the Panchayats, violent incidents have taken place only in 50 places. Lathi charge, tear gas and firing has taken place on 15 occasions. Police have been able to maintain the law and order firmly and did not allow the situation to go out of control in the Panchayat elections in the State, they dealt the situation firmly and tactfully. However, the elections have resulted in an under current of tension."

ಏಕೆಂದರೆ, ಲಾ ಅಂಡ್ ಆರ್ಡರ್ ಫೇಲ್ ಆಯಿತು ಎಂದು ನಮ್ಮ ಸ್ನೇಹಿತರೇನು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೋ ಅದರಲ್ಲಿ ಯಾವ ಸತ್ಯಾಂಶವೂ ಇಲ್ಲ. ಆದರೆ We will have to understand the tensions which is created, which under-current, which is fuelled by any political party. We will have to be conscious about that. We will have to look back, step back and work out a strategy to deal with such vested intrested who would like to foil the third phase of elections which are going to take place in Karnataka.

"However, the elections have resulted in an under current of tensions, among the various Communal groups and also politically allied groups. The

situation in some of the villages are yet to settle down to normalcy. Local police have intensified their efforts to see that remaining election takes place in a peaceful atmosphere. However, in the interest of maintenance of law and order and peace in rural areas it is advisable that the next phase of elections to local bodies may be held after a reasonable interval. This will facilitate easing of tension in the villages for conduct of elections in a more congenial atmosphere"

What is wrong?

ಸತತವಾಗಿ ಮೂರು ದಿನಗಳಿಂದ ವಿಶೇಷವಾದ ಲಾ ಅಂಡ್ ಆರ್ಡರ್ ಫೇಲ್ ಆಯಿತು, ಟೆನ್‌ಷನ್ ಆಯಿತು, ಡಿಸಾಸ್ಟರ್ ಆಯಿತು ಎಂದು ವರ್ಣಮಯವಾದಂಥ ಚಿತ್ರವನ್ನು ರಾಜ್ಯದ ಜನತೆಯ ಮುಂದೆ, ರಾಷ್ಟ್ರದ ಜನತೆಯ ಮುಂದೆ ಚಿತ್ರಿಸಿದಂಥ ಜನ, ಇವತ್ತು ಪ್ರಜಾಪ್ರಭುತ್ವದ ಮೇಲೆ ಮಸಿಯನ್ನು ಎರಚಲು ಪ್ರಯತ್ನ ಮಾಡಿದಂಥ ಜನ, ಅಂಥ ಮಸಿಯನ್ನು ತೆಗೆದು, ನಿರ್ಮೂಲಗೊಳಿಸಿ ಇವತ್ತು ಮೂರನೇ ಹಂತದ ಚುನಾವಣೆಯನ್ನು ಮಾಡಬೇಕೆಂದು ಹೊರಟಂಥ ನಮ್ಮ ಕರ್ನಾಟಕ ರಾಜ್ಯ ಸರ್ಕಾರದ ಉದ್ದೇಶವನ್ನು elections should be held fairly and peacefully because there are vast areas of people belonging to the weaker sections. We want them to participate without fear in the elections which are going to take place to the taluk and Zilla parishads. We have advised postponement because, with that kind of a stability and with that kind of a fearless situation, if it is created, these weaker sections who have been denied the power, which was inaccessible to them, they can come boldly and participate iin the elections to the taluk panchayat and Zilla panchayat. It is give them the courage, we have advised the elction commission that some time may be allowed to conduct the elections. It is to strengthen them, not to weaken the weaker sections, that is our objective.

ಇವತ್ತು ಅಧಿಕಾರವನ್ನು ನಾವು ಕೊಡುತ್ತೇವೆ, ಹಂಚುತ್ತೇವೆ. ದುರ್ಬಲವರ್ಗದವರಿಗೆ ಸಮಾಜದ ಕೊನೆಯ ವರ್ಗದವರಿಗೆ, ಶತಶತಮಾನಗಳಿಂದ ನೆಲಕ್ಕೆ ಅಪ್ಪಳಿಸಿರತಕ್ಕಂಥ ಜನರಿಗೆ ಸಹ ಪ್ರಜಾಪ್ರಭುತ್ವದ ಧ್ವನಿಯನ್ನು, ಅಧಿಕಾರವನ್ನು ಕೊಡುತ್ತೇವೆಂದು ಹೊರಟಂಥ ಕಾಂಗ್ರೆಸ್ ಪಕ್ಷ ನಮ್ಮ ಪಕ್ಷ. ಚುನಾವಣೆಯು ಕೇವಲ ಆಷಾಢಭೂತಿಯಾಗಿರತಕ್ಕ ಕ್ರಮವಾಗಬಾರದು. ಈ ಚುನಾವಣೆ ಬಹಳ ಮುಖ್ಯವಾದಂಥ. ಪರಿಣಾಮಕಾರಿಯಾಗಿ ಪ್ರಜಾಪ್ರಭುತ್ವದ ನಿಜವಾದ ತತ್ವಗಳ ಮೇಲೆ ಆಗಬೇಕು, ಹಿಂದುಳಿದ ಜನರಿಗೆ ಅಧಿಕಾರದ ಸೌಲಭ್ಯವನ್ನು ತಲುಪಿಸತಕ್ಕ ಉದ್ದೇಶದಿಂದ ಇವತ್ತು ಕೆಲವು ದಿನಗಳ ಕಾಲ ಚುನಾವಣೆಯನ್ನು ಮುಂದುವರೆಸತಕ್ಕ ಸಲಹೆಯನ್ನು, ಒಪೀನಿಯನ್‌ನ್ನು ನಾವು ಕೊಟ್ಟಿದ್ದೇವೆಯೇ ಹೊರತು ಮತ್ತಾವ ಉದ್ದೇಶವೂ ಇಲ್ಲ. ಆದರೆ ಇವರಿಗೆ ಅದು ಬೇಕಾಗಿಲ್ಲ. ಇವರಿಗೆ ಆಷಾಢಭೂತದ ಒಂದು ಕ್ಷತ್ರಿಮ ಚುನಾವಣೆಯ ನಾಟಕವಾದರೆ ಸಾಕು. ನಿಜವಾದಂಥ, ಹಿಂದುಳಿದಿರತಕ್ಕಂಥ, ಲಕ್ಷಾಂತರ ದುರ್ಬಲ ವರ್ಗದ ಜನರು ಇವತ್ತು ಅಧಿಕಾರವನ್ನು ಪಡೆಯಬೇಕೆಂದು ಆತುರವಾಗಿ ಬಂದಿರತಕ್ಕಂಥ ಸಮಯದಲ್ಲಿ

ರಾಷ್ಟ್ರದ ಪ್ರಜಾಪ್ರಭುತ್ವದ ಮೂಲ ವಾಹಿನಿಗೆ ಸೇರತಕ್ಕದ್ದು ಇವರಿಗೆ ಬೇಕಾಗಿಲ್ಲ. ಅದು ಇವರಿಗೆ ಅಗತ್ಯ ಇಲ್ಲವೆಂಬುದನ್ನು ಇಡೀ ರಾಷ್ಟ್ರಕ್ಕೆ ಜಾಹೀರ್ ಪಡಿಸಿದ್ದಾರೆ.

(ಉಪಾಧ್ಯಕ್ಷರಾದ ಶ್ರೀ **ಅಂಜನಾಮೂರ್ತಿಯವರು** ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಇವತ್ತು ಆ ಶಕ್ತಿಯನ್ನು ದುರ್ಬಲ ವರ್ಗದವರಿಗೆ, ಬಡವರಿಗೆ ತುಂಬಲು ಈ ಚುನಾವಣೆಯ ಪ್ರಕ್ರಿಯೆ ಕೆಲವು ದಿನಗಳ ಕಾಲ ಮುಂದಕ್ಕೆ ಹೋಗಬಹುದು. ನಾವು ಇವತ್ತು ಶುದ್ಧವಾದ ಚುನಾವಣೆಗಳನ್ನು ಮಾಡಿದ್ದೇವೆ. ಆದುದರಿಂದ ಈ ಮೂರು ದಿವಸಗಳ ಇವರ ಪ್ರಕ್ರಿಯೆ ಇಲ್ಲಿ ಮಾತ್ರ ಮಾಡಿದ್ದಾರೆಂದು ತಿಳಿದುಕೊಳ್ಳಬೇಡಿ. ಈ ಅಂಡರ್ ಕರೆಂಟ್‌ಗೆ ತುಪ್ಪ ಸುರಿಯುವಂತಹ ಪಟ್ಟಭದ್ರಾಹಿತಾಸಕ್ತಿಗಳನ್ನು ಎತ್ತಿ ಕಟ್ಟುವಂತಹ ಕಾರ್ಯಕ್ರಮ ಈ ಸದನದ ಹೊರಗೂ ನಡೆದಿದೆ. ಘೋರ್ಪಡೆಯವರೇ, as a Home Minister I am telling you. I do not want my ,weaker section to become the scapegoats. I do not want benami weaker sections to contest the elections and to give gain to those vested interests. I want real weaker sections to participate in the elections. that is why we have advised the election Commission. We have no fear to face the elections. We are the boldest to face the elections. I know, I have enough police force, I have sufficient police force to conduct these elections and there is no such apprehension but to give them the moral courage participate we have done it. Black mailing tacktics.

ಈ ಷಡ್ಯಂತರಗಳನ್ನು ಮುರಿಯತಕ್ಕಂಥ ಪ್ರಕ್ರಿಯೆಗಳನ್ನು ಇವತ್ತು ನಮ್ಮ ಸರ್ಕಾರ ಮಾಡಬೇಕಾಗಿದೆ. ಭೂ ಮಸೂದೆಯನ್ನು ಮಾಡುವಾಗಲೂ ಸಹ ಕಾಂಗ್ರೆಸ್ ಪಕ್ಷ ಕಾನೂನನ್ನು ಕಾನೂನಿಗಾಗಿ ಮಾಡಬೇಕು ಚುನಾವಣೆಗಾಗಿ ಮತಕ್ಕಾಗಿ ಈ ಭೂ ಮಸೂದೆಯನ್ನು ಮಾಡಲಿಲ್ಲ. ನಿಜವಾದಂತಹ ಭೂ ಮಸೂದೆಯ ಫಲ ಜನರಿಗೆ ಸಿಗಬೇಕು ಎನ್ನತಕ್ಕಂಥ ದೃಷ್ಟಿಯಿಂದ ಮಾನ್ಯ ದೇವರಾಜ್ ಅರಸ್ ಅವರು ಇರುವಾಗ ಈ ಕಾನೂನನ್ನು ಮಾಡಿದೆವು. ಗ್ರಾಮ ಪಂಚಾಯತ್ ಚುನಾವಣೆಗಳನ್ನು ಪ್ರತಿ ಹಳ್ಳಿಗಳಲ್ಲೂ ಇರುವಂತಹ ಕೆಲವು ಶಕ್ತಿಗಳಿಗೆ ವ್ಯಕ್ತಿಗಳಿಗೆ ಇವತ್ತು ಶಕ್ತಿಯನ್ನು ಅಥವಾ ಅವರಿಗೆ ಪುಷ್ಠಿಯನ್ನು ಕೊಡತಕ್ಕಂಥ ಒಂದು ದಿಸೆಯಲ್ಲಿ ಜನತಾದಳದವರು ಮಾಡಿದಂಥ ಮಂಡಲ್ ಪಂಚಾಯತ್ ಚುನಾವಣೆಯಲ್ಲಿ ವಿಶ್ವಾಸವಿರಲಿಲ್ಲ. ಇವತ್ತು ಗ್ರಾಮಾ ಪಂಚಾಯತ್‌ನಲ್ಲಿ ಕೊನೇ ಹಂತದ ಜನರಿಗೂ ಕೂಡ ಅಧಿಕಾರವನ್ನು ಕೊಡತಕ್ಕಂಥ ಅವರಿಂದ ಅಧಿಕಾರವನ್ನು ಚಲಾಯಿಸಬೇಕು. We don't want the backward classes and sch.castes or any one of these ladies to proxies to the vested interests in the gram panchayats on the taluk and zilla panchayats. We want them to be the real representatives of the respective classes. This is our purpose. With that kind of a principle we will fight. We can never be threatened or black-mailed or asked to step back from the stand that we have taken to take the real democracy to the people of this country.

ಆದುದರಿಂದ ಈ ಚುನಾವಣೆಯ ಪ್ರಕ್ರಿಯೆಗೆ ಮತ್ತೊಂದು ಕೆ.ಎಸ್.ಆರ್.ಟಿ.ಸಿ.ಯವರು ಕೂಡ ನಮಗೆ ನೋಟೀಸ್ ಕೊಟ್ಟಿದ್ದಾರೆ. ನಮಗೆ ಬಸ್ಸು ಬೇಕು ಚುನಾವಣೆಗೆ, the have threatened

ಅವರು ನೋಟೀಸ್ ಕೊಟ್ಟಿರು ಎಂದು ನಾವು ಏನಾದರೂ ಸೆಟಲ್ ಮಾಡಿ ಅವರು ಕೇಳಿದನ್ನೆಲ್ಲಾ ಕೊಡಬೇಕು, ನಮಗೆ ಬಸ್ ಆದರೂ ಸಿಗಲಿ ಚುನಾವಣೆ ಮಾಡೋಣ ಎಂದು ಹೇಳಿ, ಈ ರೀತಿಯಾಗಿ ಹೊರಟರೆ this will amount to load to the exchequer.

ಕೆ.ಎಸ್.ಆರ್.ಟಿ.ಸಿ. ಬಸ್ ನಡೆಯಬೇಕು. 18ನೇ ತಾರೀಖು ನಾವು ಸ್ಟ್ರೈಕ್ ಹೋಗುತ್ತೇವೆ. ಇಂಡೆಫನೆಟ್ ಸ್ಟ್ರೈಕ್ ಹೋಗುತ್ತೇವೆ ಎಂದು ಹೇಳಿದಾಗ ಬಸ್ಸ್ ಇಲ್ಲದೆ ನಮ್ಮ ಪ್ರಕ್ರಿಯೆ ನಡೆಯುವುದಿಲ್ಲ ವಿನಾಕಾರಣ ಚುನಾವಣಾ ಪ್ರಕ್ರಿಯೆಯನ್ನು ನಾವು ಮುಂದಕ್ಕೆ ಹಾಕುವುದಕ್ಕೆ ಆಗುವುದಿಲ್ಲ. All these factors have contributed.

Even now it is not too late for these opposition leaders to realise the major blunder they have committed against the democratic process. Because of their malafide act, the process of third phase of election is now stopped and they will go down in the history that they are the people who joined hands with the vested interests to prevent transfer of power to the real people who need power. Without political democratisation or political participation, the economic and social democracy or decentralisation has absolutely no meaning in this country.

ಅಧ್ಯಕ್ಷರೇ, ಹೌದು, ಈ ಚುನಾವಣೆಗಮ I want congenial atmosphere

ಯಾವುದೇ ಭಯೋತ್ಪಾದಕ ಪರಿಸ್ಥಿತಿ ಇಲ್ಲದೆ ಇವತ್ತು ಎಲ್ಲಾ ಹಿಂದುಳಿದ ವರ್ಗದವರು, ಬಡವರು, ಚುನಾವಣೆಯಲ್ಲಿ ಧೈರ್ಯವಾಗಿ ಮುನ್ನುಗ್ಗಿ, ನಾಮಿನೇಷನ್ ಮಾಡಿ ಪಾರ್ಟಿಸಿಫೇಟ್ ಮಾಡುವಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡತಕ್ಕಂತಹ ಪೊಲಿಟಿಕಲ್ ಎಕ್ಸರ್‌ಸೈಜನ್ನು ಕಾಂಗ್ರೆಸ್ ಪಕ್ಷದವರು ಮಾಡುತ್ತೇವೆ, ಆ ಧೈರ್ಯವನ್ನು ಜನರಲ್ಲಿ ನಾವು ತುಂಬುತ್ತೇವೆ.

ಇವರು ಅವರಿಗೆ ಹೆದರಿಸಬಹುದು.ಆದರೆ ಹೆದರತಕ್ಕಂತಹ ಜನ ಕರ್ನಾಟಕ ರಾಜ್ಯದಲ್ಲಿ ಇಲ್ಲ ಎಂಬುದನ್ನು ಇವರು ತಿಳಿದುಕೊಳ್ಳಬೇಕಾಗುತ್ತದೆ. ಆದುದರಿಂದ ಚುನಾವಣೆಯನ್ನು ಮುಂದೂಡಿರತಕ್ಕಂತಹ ಕಾರ್ಯಕ್ರಮದ ಬಗ್ಗೆ ಇವತ್ತು ಸದನಕ್ಕೆ ಮತ್ತು ನಮ್ಮ ಮತದಾರರಿಗೆ ಮತ್ತು ಕರ್ನಾಟಕದ ರಾಜ್ಯದ ಜನತೆಗೆ ಈ ವಿಚಾರಗಳನ್ನು ನಾವು ತಿಳಿಸಬೇಕಾಗುತ್ತದೆ. There is absolutely no malafide intention. It is only because I would like to see the people reconcile. But I am very happy. ಹಿಂದೆ ಲ್ಯಾಂಡ್ ರೆಫಾರ್ಮ್ಸ್ ಜಾರಿಗೆ ತಂದಾಗ ಇಲ್ಲಿ ರಕ್ತಪಾತ ಆಗುತ್ತದೆ, ಹಿಂಸೆಯಾಗುತ್ತದೆ, ರಕ್ತದ ಪ್ರವಾಹದ ಕೋಡಿ ಹರಿಯುತ್ತದೆ. The Landlords and also the Tenants have reconciled to this position. ಎಲ್ಲರೂ ಅದನ್ನು ಅಕ್ಸೆಪ್ಟ್ ಮಾಡಿದ್ದಾರೆ. ಅದು ವಿಶೇಷ ರೀತಿಯಲ್ಲಿ ಅನುಷ್ಠಾನವಾಗಿದೆ. ಅದೇ ರೀತಿಯಲ್ಲಿ ನನಗೆ ಗೊತ್ತಿದೆ. ಇವತ್ತು ನಾವೆಲ್ಲರೂ ಬದುಕತಕ್ಕಂತಹ ಸಮಾಜದ ನೆಮ್ಮದಿಯನ್ನು, ನಿಶ್ಚಿಂತೆಯಾಗಿ ಸಮಾಜದೇ ಒಂದು ಸ್ಥಿರೀಕರಣ ಮಾಡತಕ್ಕಂತಹ . ವ್ಯವಸ್ಥೆಯಲ್ಲಿ ಆಗಿರುವುದು ನಮಗೆ ಬಹಳ ಸಂತೋಷವಾಗಿದೆ. ಅದಕ್ಕಾಗಿ ನಾನು ಇಡೀ ಕರ್ನಾಟಕ ರಾಜ್ಯದ ಜನತೆಯನ್ನು ವಂದಿಸುತ್ತಿದ್ದೇನೆ. They are prepared to accept the reforms. This has been totally demonstrated by our voters. But unfortunately some self-seeking vested interest and politicians do not went this kind of transition to take place. Because they think [illegible]

ಅಲುಗಾಡುತ್ತದೆ. They get nourishment from the vested interest and not from the people who really want to have a predominant place in the democratic process. As a party and as a Government, we will fight against these vested interest and really we are going to see that this transition takes place, and embolden the weaker sections. We are giving hold for the weaker sections here that we are with you, you will be allowed to participate in the Elections whatever threat you receive at any level and the democratic process will be completed by our Government. ಅದನ್ನು ಸ್ವೀಕಾರ ಮಾಡತಕ್ಕ ವೇದಿಕೆ ಇವತ್ತು ಕರ್ನಾಟಕ ರಾಜ್ಯದಲ್ಲಿ ಆಗಿದೆ ಎಂಬುದನ್ನು ಹೇಳಿ, ನಮ್ಮ ಸ್ನೇಹಿತರು ಕನಿಷ್ಟ ಪಕ್ಷ ಈ ವಿಚಾರಗಳನ್ನು ತಿಳಿದು ನಾಳೆಯಾದರೂ ಕೂಡ ಪ್ರಜಾಪ್ರಭುತ್ವದ ಸಾಮಾಜಿಕ ನೀತಿಯ ತತ್ವಕ್ಕೆ ಬದ್ಧರಾಗಿ, ಅದರ ಮೇಲೆ ವಿಶ್ವಾಸವನ್ನು ಮತ್ತೆ ತೋರಿಸಿ ಈ ಸದನಕ್ಕೆ ಬಂದು ಈ ಪ್ರಜಾಪ್ರಭುತ್ವದ ಪ್ರಕ್ರಿಯೆಯಲ್ಲಿ ಭಾಗವಹಿಸಬೇಕು ಮತ್ತು ಮೂರನೇಯ ಹಂತದ ಚುನಾವಣೆಯ ಈ ಪ್ರಕ್ರಿಯೆಯಲ್ಲಿ ಯಾವುದೇ ರೀತಿಯಾದಂತಹ ಒಂದು ಸಾಮಾಜಿಕ ಆಂಧೋಲನಕ್ಕೆ ಅಥವಾ ಸಾಮಾಜಿಕ ವಿಪ್ಲವಕ್ಕೆ ಕಾರಣ ಕೊಡದೇ ಪಟ್ಟಭದ್ರ ಹಿತಾಸಕ್ತಿಗಳು ಅಲ್ಲಲ್ಲಿ ಇದಕ್ಕೆ ವಿಶೇಷವಾಗಿ ಇಗ್‌ನೈಟ್ ಮಾಡತಕ್ಕಂತಹ ಪ್ರವೃತ್ತಿಗಳನ್ನು ತಗ್ಗಿಸತಕ್ಕಂತಹ ಒಂದು ಕೆಲಸವನ್ನು ಜವಾಬ್ದಾರಿಯುತ ರಾಜಕೀಯ ಪಕ್ಷಗಳು ಮಾಡಬೇಕು ಎಂದು ಹೇಳಿ, ಇವತ್ತು ಯಾವುದೇ ರೀತಿಯ ಅರಾಜಕತೆ ಪರಿಸ್ಥಿತಿಯನ್ನು ಈ ಸದನದಲ್ಲಿ ಅಥವಾ ಹೊರಗಡೆ ಮಾಡದೇ ಪ್ರಜಾಪ್ರಭುತ್ವದ ವ್ಯವಸ್ಥೆಯನ್ನು ಸ್ಟಾಲ್ ಮಾಡತಕ್ಕಂತಹ ಒಂದು ಪರಿಸ್ಥಿತಿಯನ್ನು ನಿರ್ಮಾಣ ಮಾಡುವುದಕ್ಕೆ ಕರ್ನಾಟಕ ರಾಜ್ಯದ ಜನತೆ ಮತ್ತು ನಮ್ಮ ವಿರೋಧ ಪಕ್ಷದ ಮಾನ್ಯ ಸ್ನೇಹಿತರು ಕೂಡ ಸಹಕರಿಸಬೇಕೆಂದು ಪ್ರಾರ್ಥನೆ ಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ವರದಿಯನ್ನೊಪ್ಪಿಸುವುದು

ಶ್ರೀ ಜಿ. ರಾಜೂಗೌಡ (ಅಧ್ಯಕ್ಷರು, ಅಂದಾಜುಗಳ ಸಮಿತಿ) : ಮಾನ್ಯ ಉಪಾಧ್ಯಕ್ಷರೇ, ಅಂದಾಜು ಸಮಿತಿ ಅಧ್ಯಕ್ಷನಾದ ನಾನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಮೇಲಿನ ಆರನೆಯ ವರದಿಯನ್ನೊಪ್ಪಿಸುತ್ತಿದ್ದೇನೆ.

ಉಪಾಧ್ಯಕ್ಷರು : ವರದಿಯನ್ನೊಪ್ಪಿಸಲಾಯಿತು. ಈಗ ಸಭೆಯ ಕಲಾಪವನ್ನು ಮುಂದೂಡಲ್ಪಟ್ಟು ಮತ್ತೆ ಸಭೆ 3 ಗಂಟೆಗೆ ಸೇರುವುದು.

(ಸದನವು ಪುನಃ ಮಧ್ಯಾಹ್ನ 3.30 ಗಂಟೆಗೆ ಸಮಾವೇಶಗೊಂಡಿತು ಉಪಾಧ್ಯಕ್ಷರಾದ **ಶ್ರೀ ಆಂಜನಮೂರ್ತಿಯವರು** ಪೀಠವನ್ನಲಂಕರಿಸಿದರು.)

ಗಮನ ಸೆಳೆಯುವ ಸೂಚನೆಗಳು

1) ತೋಟಗಾರಿಕೆ ಬೆಳೆಗಳಿಗೆ ಹನಿ ನೀರಾವರಿ ಯೋಜನೆಯಿಂದ ತೊಂದರೆ.

+ ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಉಪಾಧ್ಯಕ್ಷರೆ, ತೋಟಗಾರಿಕೆ ಬೆಳೆಗಳಿಗೆ ಹನಿ ನೀರಾವರಿ ಯೋಜನೆಯಿಂದ ತೊಂದರೆಯುಂಟಾಗಿರುವುದರ ಬಗ್ಗೆ ತೋಟಗಾರಿಕೆ ರಾಜ್ಯ ಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ಎ. ಕೃಷ್ಣಪ್ಪ (ತೋಟಗಾರಿಕೆ ರಾಜ್ಯ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಭಾರತ ಸರ್ಕಾರ, 1993-94ನೇ ಸಾಲಿಗಾಗಿ ಕೇಂದ್ರ ಪುರಸ್ಕೃತ ಕೃಷಿಯಲ್ಲಿ ಪ್ಲಾಸ್ಟಿಕ್ ಬಳಕೆ ಯೋಜನೆಯಡಿಯಲ್ಲಿ 349.5 ಲಕ್ಷ ರೂಪಾಯಿಗಳಿಗೆ ಆಡಳಿತಾತ್ಮಕ ಮಂಜೂರಾತಿ

ನೀಡಿ, ಇದರಲ್ಲಿ ಪ್ರತಿ ಫಲಾನುಭವಿಗೆ ಶೇಕಡಾ 50ಘಟಕ ವೆಚ್ಚ ಅಥವಾ 15,000 ರೂಪಾಯಿಗಳ ಸಹಾಯಧನವನ್ನು 1 ಹೆಕ್ಟೇರ್ ಪ್ರದೇಶಗಳಲ್ಲಿ ಹನಿ ನೀರಾವರಿ ಪದ್ಧತಿ ಅಳವಡಿಸುವುದಕ್ಕಾಗಿ ನೀಡಲು ತಿಳಿಸಿದೆ. ಇದಕ್ಕೆ ಉತ್ತರವಾಗಿ ಕರ್ನಾಟಕ ಸರ್ಕಾರವು ಹಿಂದಿನ ಮಾರ್ಗಸೂಚಿಯಂತೆ ಒಂದು ಎಕರೆಯಿಂದ ಹತ್ತು ಎಕರೆ ತೋಟಗಾರಿಕೆ ಬೆಳೆಗಳಲ್ಲಿ ಹನಿ ನೀರಾವರಿ ಪದ್ಧತಿ ಅಳವಡಿಕೆಗಾಗಿ ಶೇಕಡಾ 50 ರಷ್ಟು ಘಟಕ ವೆಚ್ಚ ಅಥವಾ 50,000 ಸಹಾಯಧನ ನೀಡುವ ಪದ್ಧತಿಯನ್ನು ಮುಂದುವರೆಸಿಕೊಂಡು ಹೋಗಲು ಅನುಮತಿ ನೀಡಲು ಭಾರತ ಸರ್ಕಾರಕ್ಕೆ ವಿನಂತಿಸಲಾಯಿತು. ಭಾರತ ಸರ್ಕಾರ ಇದಕ್ಕೆ ಉತ್ತರವಾಗಿ 3-11-1993ರವರೆಗೆ ಸಹಾಯಧನಕ್ಕಾಗಿ ಅರ್ಜಿ ಸಲ್ಲಿಸಿರುವ ರೈತರಿಗೆ ಹಿಂದಿನ ಪದ್ಧತಿಯಂತೆ ಸಹಾಯಧನ ನೀಡಲು ತಿಳಿಸಿದೆ. ಅದರಂತೆ ಇಲಾಖೆಯಲ್ಲಿ 3-11-93ರವರೆಗೆ ಅರ್ಜಿ ಸಲ್ಲಿಸಿದ ರೈತರಿಗೆ ಸಹಾಯಧನವನ್ನು ಹಿಂದಿನ ಪದ್ಧತಿಯಂತೆ ನೀಡಿ, 3-11-93ರ ನಂತರ ಬಂದ ಅರ್ಜಿಗಳಿಗೆ ಹೊಸ ಪದ್ಧತಿಯಂತೆ ಸಹಾಯಧನ ನೀಡಲಾಗುತ್ತಿದೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಉಪಾಧ್ಯಕ್ಷರೆ, ಕೇಂದ್ರ ಸರ್ಕಾರದ ನೀತಿಯಿಂದಾಗಿ ಈ ವ್ಯವಸ್ಥೆಯನ್ನು ಬದಲಾಯಿಸಲಾಗಿದೆಯೆಂದು ಸಚಿವರು ಕೊಟ್ಟಿರುವ ಉತ್ತರದಲ್ಲಿ ತಿಳಿಸಿದ್ದಾರೆ. ಆದರೆ, ತಾವು ಒಂದು ಮಾತನ್ನು ಹೇಳಬೇಕಾಗುತ್ತದೆ. ಏನೆಂದರೆ, ಕೇಂದ್ರ ಸರ್ಕಾರದವರು ನೀತಿಯನ್ನು ಜಾರಿಗೊಳಿಸುವಾಗ ಇಡೀ ರಾಷ್ಟ್ರವನ್ನು ದೃಷ್ಟಿಯಲ್ಲಿಟ್ಟುಕೊಂಡು ಸಮಗ್ರವಾಗಿ ತೀರ್ಮಾನಿಸಿ ಜಾರಿಗೊಳಿಸುತ್ತಾರೆ. ಇವೊತ್ತು ಕರ್ನಾಟಕ ರಾಜ್ಯದಲ್ಲಿ ಒಂದು ಕಡೆ ವಿದ್ಯುತ್ ಅಭಾವವಿದ್ದರೆ ಮತ್ತೊಂದು ಕಡೆ ಸುಮಾರು 400,500 ಅಡಿಗಳಷ್ಟು ಆಳ ಬೋರ್ ಕೊರೆದರೂ ಕೂಡ ನೀರು ಬಾರದಿರುವಂಥ ಪರಿಸ್ಥಿತಿಯಲ್ಲಿ ಅವರಿಗೆ ಇನ್ನೂ ಹೆಚ್ಚಿನ ಪ್ರೋತ್ಸಾಹ ಕೊಡುವ ಮಟ್ಟದಲ್ಲಿ ನೀವು ತೀರ್ಮಾನ ಮಾಡಬೇಕಾಗಿತ್ತು. ಕೇವಲ ಭಾರತ ಸರ್ಕಾರದವರು ಕೊಟ್ಟಿರತಕ್ಕಂಥ ನಿರ್ದೇಶನ, ಅವರು ಕೊಟ್ಟಿರತಕ್ಕಂಥ ಹಣಕಾಸಿನ ಚೌಕಟ್ಟಿನೊಳಗೆ ಒಂದು ಯೋಜನೆಯನ್ನು ನಾವು ಅನುಷ್ಠಾನಗೊಳಿಸುತ್ತೇವೆಂದರೆ ಅದು ಸಾಧುವಲ್ಲ, ಆಗುವುದೂ ಇಲ್ಲ. ಇವೊತ್ತು ಸ್ಥಳೀಯವಾಗಿ ನಮ್ಮ ಪರಿಸ್ಥಿತಿ ಬೇರೆ ಇರಬೇಕಾದರೆ ತಾವು ಕರ್ನಾಟಕ ಸರ್ಕಾರದ ಪರವಾಗಿ ಕೊಟ್ಟಿರತಕ್ಕಂಥ ಕೊಡುಗೆಯಾದರೂ ಏನು?

ಇವತ್ತು ತಾವು ಯೋಚನೆ ಮಾಡಿ. ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಜನರ ನೋವು ಏನು ಎಂಬುದು ಗ್ರಾಮಾಂತರ ಪ್ರದೇಶದಿಂದ ಬಂದಿರುವ ತಮಗೆ ಗೊತ್ತಿದೆ. ವಿದ್ಯುಚ್ಛಕ್ತಿ ಇಲ್ಲದೆ ಸಾವಿರಾರು ಕೋಟಿ ರೂಪಾಯಿಗಳ ಬೆಳೆಯು ನಾಶವಾಗುತ್ತಿರುವ ಪರಿಸ್ಥಿತಿ ಇರಬೇಕಾದರೆ, ಇವತ್ತು ಬೇಸಿಗೆಯಲ್ಲಿ ಫಸಲು ಬಂದಿರುತ್ತದೆ, ಆದರೆ ಈ ಭತ್ತವನ್ನು ಕೊಯ್ಲು ಮಾಡತಕ್ಕ ಸಮಯದಲ್ಲಿ ಬೋರ್‌ವೆಲ್ಲಲ್ಲಿ ನೀರು ಬರದಿರತಕ್ಕ ಪರಿಸ್ಥಿತಿ ಇರಬೇಕಾದರೆ ಮತ್ತು ನಮ್ಮಲ್ಲಿ ಇರತಕ್ಕ ಅಡಿಕೆ ಮತ್ತು ತೆಂಗಿನ ತೋಟಗಳಲ್ಲಿ, ನಾವು ಅದಕ್ಕೆ ಹನಿ ನೀರಾವರಿ ಯೋಜನೆಯನ್ನು ಅಳವಡಿಸದಿದ್ದರೆ ಅದನ್ನೂ ಸಹ ಉಳಿಸಿಕೊಳ್ಳಲು ಸಾಧ್ಯವಿಲ್ಲದ ಪರಿಸ್ಥಿತಿ ನಮಗೆ ಇರಬೇಕಾದರೆ, ಇವತ್ತು ಎಲ್ಲಾ ರೈತರುಗಳು ತೋಟಗಾರಿಕೆಯ ಬೆಳೆಗಳನ್ನು ಉಳಿಸಿಕೊಳ್ಳಬೇಕಾದರೆ, ಅನಿವಾರ್ಯವಾಗಿ ಈ ಯೋಜನೆಯನ್ನು ಅಳವಡಿಸಿಕೊಳ್ಳಬೇಕಾಗಿರುವ ಪರಿಸ್ಥಿತಿಯಲ್ಲಿರಬೇಕಾದರೆ ನೀವು ಇರತಕ್ಕ ಮಾರ್ಗ ಸೂಚಿಯನ್ನು ಅನುಸರಿಸಿದ್ದೇವೆಂದು ಕೊಟ್ಟಿರತಕ್ಕದ್ದು, ಈ ಸೌಲಭ್ಯ ಯಾರಿಗೂ ಪ್ರಯೋಜನವಾಗುವುದಿಲ್ಲ. ತಮ್ಮಲ್ಲಿ ದಯಮಾಡಿ ನಾನು ಕೇಳುವುದೇನೆಂದರೆ, ಅದು ತಮಗೂ ಗೊತ್ತಿರತಕ್ಕದ್ದು. ನನ್ನ ಕ್ಷೇತ್ರದಲ್ಲಿ ಧರ್ಮವೀರ ಹಾರ್ಟಿಕಲ್ಚರ್ ಫಾರಂ ಇದೆ. ಇದು ಸರ್ಕಾರದ ಸ್ವಾಮ್ಯದಲ್ಲೇ ಬರುತ್ತದೆ. ಇದು ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ ಸುಮಾರು ಎರಡು ಕೋಟಿ ರೂಪಾಯಿಗಳ ಬಂಡವಾಳವನ್ನು ಹಾಕಿ ಅಭಿವೃದ್ಧಿ ಪಡಿಸಿದ್ದಾರೆ. ಆ ರೀತಿ ಮಾಡಿದ ಮೇಲೆ ಇದು

ಎಷ್ಟು ಫಸಲನ್ನು ತೆಗೆಯುತ್ತದೆ?? ಎಷ್ಟು ಲಾಭವನ್ನು ಗಳಿಸುತ್ತದೆ ಎಂಬ ಬಗ್ಗೆ ಅಂಕಿಅಂಶವನ್ನು ಇಟ್ಟುಕೊಳ್ಳಿ ನಿಮ್ಮ ತೋಟಗಾರಿಕೆ ಇಲಾಖೆಯ ವ್ಯಾಪ್ತಿಯಲ್ಲೇ ಬರತಕ್ಕ ಈ ಒಂದು ಫ್ಯಾರಂ ಇರಬೇಕಾದರೆ, ಅದರ ಪರಿಸ್ಥಿತಿ ಏನು ಎಂಬುದನ್ನು ಅಧ್ಯಯನ ಮಾಡಿ ಅದು ಸರ್ಕಾರಕ್ಕೆ ಸವಲತ್ತನ್ನು ಕೊಡುವ ಮಟ್ಟಕ್ಕೆ ನೀವು ಭರಿಸಬೇಕಾಗುತ್ತದೆ. ಆದರೆ ಮಾರ್ಗಸೂಚಿಯನ್ನು ಅನ್ವಯಿಸಿ ಇದನ್ನು ಕೊಡುಲು ಆಗುವುದಿಲ್ಲವೆನ್ನತಕ್ಕ ಮಾತನ್ನು ತಾವು ಹೇಳಿದರೆ ಅದರಿಂದ ಖಂಡಿತವಾಗಿ ಯಾವ ರೈತನಿಗೂ ಸಹಾಯವಾಗುವುದಿಲ್ಲ. ದಯಮಾಡಿ ತಾವು ಸರ್ಕಾರದ ಪರವಾಗಿ ಒಂದು ತೀರ್ಮಾನವನ್ನು ಮಾಡಬೇಕಾಗುತ್ತದೆ. ಈ ಸ್ಕೀಮ್ನು ಮಾಡುವುದರಿಂದ ರಾಜ್ಯಕ್ಕೆ ಎಷ್ಟು ಲಾಭವಾಗುತ್ತದೆ ಎನ್ನುವ ಬಗ್ಗೆ ಯೋಚನೆ ಮಾಡಬೇಕು. ಇವತ್ತು ಒಂದು ಕಡೆ ವಿದ್ಯುಚ್ಛಕ್ತಿ ಅಭಾವ, ಮತ್ತೊಂದು ಕಡೆ ನೀರು ಸಿಗದೇ ಇರತಕ್ಕ ಪರಿಸ್ಥಿತಿಯಲ್ಲಿ ಶಾಶ್ವತವಾದ ಬೆಳೆಗಳಾಗಿರುವ ತೆಂಗು ಮತ್ತು ಅಡಿಕೆ ಬೆಳೆಯನ್ನು ಉಳಿಸಬೇಕಾದರೆ ಹನಿ ನೀರಾವರಿ ಯೋಜನೆ ಬೇಕಾಗಿದೆ. ತೆಂಗು ಮತ್ತು ಅಡಿಕೆ ಬೆಳೆಗಾರರು ಹೆಚ್ಚಾಗಿ ಈ ಹನಿ ನೀರಾವರಿ ಯೋಜನೆಯನ್ನು ಅಳವಡಿಸಿಕೊಂಡಿರತಕ್ಕವರು. ಆದ್ದರಿಂದ ನಾನು ದಯಮಾಡಿ ಹೇಳುವುದೇನೆಂದರೆ, ನಿಮ್ಮ ಕೈಯಿಂದ, ಸರ್ಕಾರದ ಸಹಾಯದಿಂದ ಯಥಾಸ್ಥಿತಿ ಏನಿದೆ, ಮೊದಲು ಯಾವ ನಿಯಮಗಳಿತ್ತೋ ಅದನ್ನೇ ಮುಂದುವರಿಸಿಕೊಂಡು ಹೋಗಲು ಪ್ರಯತ್ನ ಪಡಬೇಕು. ನಾನೂ ಒಬ್ಬ ರೈತನ ಮಗನಾಗಿ ಈ ಮಾತನ್ನು ಹೇಳುತ್ತಿದ್ದೇನೆ. ಮೊದಲು ಇದ್ದಂಥ ನಿಯಮಗಳು ಬದಲಾವಣೆಯಾಗಿದೆಯೆಂದು ನನ್ನ ಕ್ಷೇತ್ರದ ಜನರಿಗಾರಿಗೂ ಗೊತ್ತಿಲ್ಲ. ಆದರೂ ಕೂಡ ನಮಗೆ ಸೌಲಭ್ಯ ಸಿಲಬಹುದು ಎನ್ನತಕ್ಕ ದೃಷ್ಟಿಯಿಂದ ಅನೇಕ ಜನ ರೈತರು ಪ್ರಯತ್ನ ಪಡುತ್ತಿದ್ದಾರೆ. ದಯಮಾಡಿ ಅಧ್ಯಕ್ಷರ ಮೂಲಕ ಕೇಳಿಕೊಳ್ಳುವುದೇನೆಂದರೆ, ಈ ವಿಧಾನ ಸಭೆಯಲ್ಲಿ ಒಂದು ವಿಷಯದ ಬಗ್ಗೆ ಹೇಳುವುದಾದರೆ, ನಮಗೆ ಬರತಕ್ಕ ಸರ್ಕಾರದಿಂದ ಹತ್ತು ಸಾವಿರ ರೂಪಾಯಿಗಳ ಸಬ್ಸಿಡಿಯನ್ನು ಪಡೆದುಕೊಳ್ಳಬೇಕಾದರೆ ಸುಮಾರು ನಾಲ್ಕೈದು ಸಾವಿರ ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ. ಈ ರೀತಿಯಾದ ಪರಿಸ್ಥಿತಿ ಇರಬೇಕಾದರೆ ಅಷ್ಟೊಂದು ಬಂಡವಾಳವನ್ನು ಹಾಕಿ ರೈತ ಯಾವ ರೀತಿಯಲ್ಲಿ ಪ್ರಯೋಜನವನ್ನು ಪಡೆದುಕೊಳ್ಳಬೇಕು? ಅದನ್ನೇ ನಂಬಿಕೊಂಡು ಮಾಡಿರುವ ರೈತರ ಪರಿಸ್ಥಿತಿ ಏನು ಎಂಬುದನ್ನು ನೋಡಿ ಹಿಂದೆ ಇದ್ದ ನಿಯಮಗಳನ್ನೇ ಯಥಾಸ್ಥಿತಿ ಮುಂದುವರೆಸತಕ್ಕ ಪ್ರಯತ್ನ ಮಾಡಬೇಕು. ಕರ್ನಾಟಕ ರಾಜ್ಯ ಸರ್ಕಾರದವರು ಈ ಜವಾಬ್ದಾರಿಯನ್ನರಿತು, ಸ್ಥಳೀಯ ಸಂಸ್ಥೆಗಳನ್ನು ಅರಿತುಕೊಂಡು ಕೊಡತಕ್ಕ ಪ್ರಯತ್ನ ಮಾಡಬೇಕು. ಇದರ ಬಗ್ಗೆ ನಿಮ್ಮ ತೀರ್ಮಾನ ಏನು ಎನ್ನತಕ್ಕದನ್ನು ಹೇಳಬೇಕು.

ಡಾ॥ ಎನ್.ಬಿ. ನಂಜಪ್ಪ: ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮಿತ್ರರು ಹೇಳಿದಂತೆ, 50 ಪರ್ಸೆಂಟ್ ಸಬ್ಸಿಡಿಯನ್ನು ಕೊಡತಕ್ಕದನ್ನು ಕೇಂದ್ರ ಸರ್ಕಾರದವರು ಮಾಡಿದ್ದಾರೆ. ಆದರೆ ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ, ಒಂದು ತೋಟವನ್ನು ಅದು ಅಡಿಕೆ ತೋಟ ಆಗಿರಬಹುದು, ತೆಂಗಿನ ತೋಟವಾಗಿರಬಹುದು, ಒಂದು ಸಲ ತೋಟವನ್ನು ಮಾಡಿದ ಮೇಲೆ ಅದಕ್ಕೆ ನೀರಾವರಿಯ ಅಗತ್ಯವಿರುತ್ತದೆ. ಆದರೆ ನೀರು ಮತ್ತು ವಿದ್ಯುಚ್ಛಕ್ತಿಯ ತೊಂದರೆಯಾಗುವುದರಿಂದ, ವಿದ್ಯುಚ್ಛಕ್ತಿ ಜನರೇಟರಿಗೆ ಸಬ್ಸಿಡಿ ಕೊಡತಕ್ಕಂಥದ್ದನ್ನು ಹನಿ ನೀರಾವರಿ ಯೋಜನೆಯಲ್ಲಿಯೇ ಸೇರಿಸಿದರೆ ಬಹಳಷ್ಟು ಅನುಕೂಲ ಆಗುತ್ತದೆಂದು ನಾನು ಹೇಳಬಯಸುತ್ತೇನೆ.

ಶ್ರೀ ಎಲ್.ಆರ್. ಶಿವರಾಮೇಗೌಡ: ಸನ್ಮಾನ್ಯ ಉಪಾಧ್ಯಕ್ಷರೆ, ಕೇಂದ್ರ ಸರ್ಕಾರದವರು ಎರಡು ಎಕರೆಯೊಳಗಿರುವವರಿಗೆ ಮಾತ್ರ ಒಂದು ಯುನಿಟ್ಗೆ ಸಬ್ಸಿಡಿಯನ್ನು ಕೊಡಬಹುದು ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಇದರ ವಿಪರ್ಯಾಸವನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಎರಡು ಎಕರೆ ಒಳಗಿರತಕ್ಕ ಯಾವುದೇ ಒಬ್ಬ ರೈತನಿಗೆ ಸಣ್ಣ ಬೋರ್ವೆಲ್ಲು

ಹಾಕಿಕೊಂಡರೂ ಅದರಿಂದ ಬರತಕ್ಕಂಥ ಕನಿಷ್ಠ ಪಕ್ಷ ಎರಡು ಇಂಚು ನೀರು ಸಾಕಾಗುತ್ತದೆ. ಹನಿ ನೀರಾವರಿ ಯೋಜನೆಯನ್ನು ಮಾಡಿರತಕ್ಕ ಉದ್ದೇಶವೇನು? ದೊಡ್ಡ ತೋಟಗಳಿದ್ದರೆ ಅದಕ್ಕೆ ನೀರನ್ನು ಬೋರ್‌ವೆಲ್ಲಿನಿಂದ ಅಥವಾ ಸಣ್ಣ ಹೊಳೆಯಿಂದ ಬರತಕ್ಕ ನೀರನ್ನು ಉಪಯೋಗ ಮಾಡಿ ಕೊಳ್ಳತಕ್ಕ ಸಂದರ್ಭದಲ್ಲಿ ಎಲ್ಲಾ ಕಡೆಗಳಿಗೂ ನೀರನ್ನು ಚೆನ್ನಾಗಿ ಸ್ಪ್ರೆಡ್ ಮಾಡುವುದಕ್ಕೆ ಬರುವುದಿಲ್ಲ. ಆದ್ದರಿಂದ ಮರಗಳ ಬುಡಕ್ಕೇ ಸಪರೇಟಾಗಿ ನೀರು ಹೋಗಿ ಒಳ್ಳೆಯ ಫಲ ಪಡೆಯಬೇಕು ಎನ್ನತಕ್ಕ ದೃಷ್ಟಿಯಿಂದ ಹನಿ ನೀರಾವರಿ ಯೋಜನೆಯನ್ನು ಮಾಡುತ್ತೇವೆ. ಆದರೆ ನೀವು ಇದನ್ನು ಎರಡೂವರೆ ಎಕರೆಗೆ ನಿಗದಿ ಮಾಡಿರತಕ್ಕ ಸಮಯದಲ್ಲಿ ಈ ಯೋಜನೆಯ ಪ್ರಯೋಜನೆ ಯಾವ ಒಬ್ಬ ರೈತನಿಗೂ ಆಗುವುದಿಲ್ಲ. ನಮ್ಮ ಭಾಗದಲ್ಲಿ ಬರತಕ್ಕ ಅಡಿಕೆ ಮತ್ತು ತೆಂಗಿನ ತೋಟಗಳನ್ನು ಹೊಂದಿರುವ ರೈತರು ಇದರ ಪ್ರಯೋಜನವನ್ನು ಪಡೆಯಬೇಕಾದರೆ ಐದು ಎಕರೆಗೂ ಮೇಲ್ಪಟ್ಟವರಿಗೆ ಈ ಯೋಜನೆಯನ್ನು ಮಾಡಿದರೆ ಮಾತ್ರ ಸಾಧ್ಯವಾಗುತ್ತದೆಯೇ ಹೊರತು ತಾವು ಎರಡೂವರೆ ಎಕರೆಗೆ ಇದನ್ನು ನಿಗದಿಮಾಡಿದರೆ ಯಾವ ರೈತನಿಗೂ ಪ್ರಯೋಜನವಾಗುವುದಿಲ್ಲ.

ಭಾರತ ಸರ್ಕಾರದವರು ಮಾಡುವಾಗ ಇಡೀ ಭಾರತದೇಶವನ್ನು ಲೆಕ್ಕ ಹಾಕಿಕೊಂಡು ಮಾಡುತ್ತಾರೆ. ಆದುದರಿಂದ ನೀವು ಕರ್ನಾಟಕಕ್ಕೆ ಸೀಮಿತವಾಗಿ ಹೊಸ ಯೋಜನೆಯನ್ನು ಮಾಡಬೇಕು. ಈಗ ಹಾಸನ ಜಿಲ್ಲೆಯಲ್ಲಿ ಒಂದರಲ್ಲೇ ಮಾರ್ಚಿ 31ನೇ ತಾರೀಖಿಗೆ 11ಲಕ್ಷ ರೂಪಾಯಿಗಳು ಹಣ ಉಳಿತಾಯವಾಗುತ್ತಿದೆ, ಬಿಡುಗಡೆಯಾಗಬೇಕಾಗಿಲ್ಲ. ಇವತ್ತು ಈ ಪರಿಸ್ಥಿತಿ ಇರುವಾಗ ಇದನ್ನು ನೀವು ಯೋಚನೆ ಮಾಡಿ. ಇವತ್ತಿನ ದಿವಸ ಭಾರತ ಸರ್ಕಾರ ನಿಯಮ ಕೊಟ್ಟಿದೆ, ಆ ನಿಯಮದ ಪ್ರಕಾರ ಹೇಳುತ್ತೇವೆಂದು ಹೇಳುವುದರ ಬದಲು ದಯಮಾಡಿ ರೈತರ ಬಗ್ಗೆ ಸ್ವಲ್ಪ ಕಾಳಜಿ ಇರಲಿ ಎಂದು ಹೇಳುತ್ತೇನೆ. ಅದರಲ್ಲೂ ಸಹ ಸಚಿವರಾಗಿರುವಂಥವರು ರೈತರ ಮಕ್ಕಳು. ಬಹುಶಃ ಬೆಂಗಳೂರಿನಲ್ಲಿರತಕ್ಕಂಥವರಿಗೆ ರೈತರ ಬಗ್ಗೆ ಎಷ್ಟು ಗೊತ್ತಿದೆಯೊ ನನಗೆ ಗೊತ್ತಿಲ್ಲ. ತಾವು ಕೃಷಿ ಸಚಿವರ ಜೊತೆಗೂಡಿ ಹನಿನೀರಾವರಿ ಮಾಡಬೇಕೆ? ಬೇಡವೇ? ಎಂಬುದನ್ನು ತೀವ್ರವಾಗಿ ಯೋಚನೆ ಮಾಡಬೇಕು. ಇದರ ಬಗ್ಗೆ ಕೇಂದ್ರ ಸರ್ಕಾರದಿಂದ ಯೋಜನೆಯನ್ನು ತರಿಸಿಕೊಳ್ಳಬೇಕೆಂದು ಮಾನ್ಯ ಅಧ್ಯಕ್ಷರ ಮುಖಾಂತರ ತಮ್ಮಲ್ಲಿ ವಿನಂತಿ ಮಾಡುತ್ತೇನೆ.

+ ಶ್ರೀ ಎ. ಕೃಷ್ಣಪ್ಪ: ಮಾನ್ಯ ಉಪಾಧ್ಯಕ್ಷರೇ, ರೈತರ ವಿಷಯದಲ್ಲಿ ನಮ್ಮ ಸದಸ್ಯರ ಕಳಕಳಿ ಏನಿದೆಅದು ಬಹಳ ಒಳ್ಳೆಯ ಕಳಕಳಿಯಾಗಿದೆ. ಆದರೆ ದೇಶಕ್ಕೆ ನೀತಿಯನ್ನು ಕೊಡುವುದು ಭಾರತ ಸರ್ಕಾರ. 10 ಎಕರೆ ಇದ್ದುದ್ದನ್ನು ಎರಡೂವರೆ ಎಕರೆಗೆ ತಂದಾಗ ಈ ಒಂದು ಹೊಸ ನೀತಿಯನ್ನು ಭಾರತ ಸರ್ಕಾರವು ರಾಷ್ಟ್ರಕ್ಕೆ ಕೊಟ್ಟಿದೆ, ನಾವು ಅವರನ್ನು ಕೇಳಿಯೇ ಇಲ್ಲ ಎಂದು ತಮಗೆ ಆ ಭಾವನೆ ಬರುವುದು ಬೇಡ. ನಾನು ಬೆಂಗಳೂರಿನಲ್ಲಿ ಇದ್ದೇನೆ. ರೈತಾಪಿ ಜನರ ಬಗ್ಗೆ ಏನಾದರೂ ಅಕ್ಕರೆ ಇದೆಯೇ? ಅದರ ಬಗ್ಗೆ ಏನಾದರೂ ವಿಚಾರ ಗೊತ್ತೆ? ಅಂದರೆ ನೀರು ವಿತರಣೆ ಮಾಡುವುದು, ಪವರ್ ಇವೆಲ್ಲಾ ಏನು ಹೇಳುತ್ತಿರಿ, ಅದರ ಬಗ್ಗೆ ಅವರಿಗೆ ಜಾಸ್ತಿ ತೋಟ ಇರಬಹುದು ನನಗೆ ಕಡಿಮೆ ತೋಟ ಇದೆ. ಆದರೆ ಕಸುಬು ಗೊತ್ತಿದೆ. ಈ ವಿಚಾರ ನಮ್ಮ ಗಮನಕ್ಕೆ ಬಂದಾಗ ಜರೂರಾಗಿ ಭಾರತ ಸರ್ಕಾರಕ್ಕೆ ನಾವು ಹೇಳಿದ್ದೇವೆ. ಈಗಾಗಲೇ ಈ ವರ್ಷ ಬಾಕಿ ಇದ್ದಂತಹ ಅರ್ಜಿಗಳನ್ನು ಹಳೆಯ ನೀತಿಯನ್ನು ಅನುಸರಿಸಿಕೊಂಡು ನಾವು ಪಡೆದುಕೊಂಡಿದ್ದೇವೆ. ಈ ವರ್ಷದಲ್ಲಿ ಕಡೆಯ ಪಕ್ಷ ಡಿಸೆಂಬರ್‌ವರೆಗೂ ಈ ಅರ್ಜಿಗಳನ್ನು ಪುರಸ್ಕಾರ ಮಾಡಿ ಹಣವನ್ನು ಪಾವತಿ ಮಾಡುವುದಕ್ಕೆ ನೀವು ಪರವಾನಗಿ ಕೊಡಬೇಕು

ಎಂಬ ವಿಚಾರದಲ್ಲಿ ಭಾರತ ಸರ್ಕಾರಕ್ಕೆ ಬರೆದು ಅದನ್ನು ಇವತ್ತು ಪಡೆದುಕೊಂಡಿದ್ದೇವೆ. ಅಲ್ಲಿ ನಮ್ಮ ಕಳಕಳಿಯನ್ನು ವ್ಯಕ್ತ ಮಾಡಿದ್ದೇವೆ. ಕೇವಲ ಕೆಲವೇ ಬೆಳೆಗಳಿಗೆ ಈ ಸೌಕರ್ಯವನ್ನು ಭಾರತ ಸರ್ಕಾರ ಕೊಡುವುದಿತ್ತು. ಇವತ್ತು ಎಲ್ಲಾ ಬೆಳೆಗಳಿಗೂ ಕೊಡುವಂತಹ ಹೊಸ ನೀತಿಯನ್ನು ಕೊಟ್ಟು ಅಲ್ಲೂ ಕೂಡ ಸ್ವಲ್ಪ ಮಟ್ಟಿಗೆ ರೈತರಿಗೆ ಸಹಾಯ ಮಾಡಿದ್ದಾರೆ. ಆದರೆ ಇವರು ಹೇಳಿರುವಂತಹ ಮಾತು ಏನೆಂದರೆ, ಹೆಚ್ಚು ಪ್ರದೇಶ ಕನಿಷ್ಠ ಪಕ್ಷ 10 ಎಕರೆ ಏನು ಇದೆಯೋ ಅದು 10 ಎಕರೆ ಇರಬೇಕು ಎನ್ನತಕ್ಕಂತ ಇವರ ವಾದ ಇಟ್ಟಿದ್ದಾರೆ. ಅವರು ಸಮಗ್ರವಾಗಿ ಎಲ್ಲಾ ರಾಜ್ಯ ಸರ್ಕಾರಗಳ ಮನವಿಗಳಿಗೆ ಪುರಸ್ಕಾರ ಮಾಡಬೇಕಾಗಿದೆ. ಅದರ ಬಗ್ಗೆ ನಾವು ಸತತವಾಗಿ ಭಾರತ ಸರ್ಕಾರದೊಡನೆ ಸಂಪರ್ಕವನ್ನು ಇಟ್ಟುಕೊಂಡಿದ್ದೇವೆ. ಮತ್ತೊಂದು ವಿಚಾರ ಏನೆಂದರೆ, ಪ್ರತಿಬಾರಿ 1 ಕೋಟಿ ರೂಪಾಯಿಗಳನ್ನು ಮಾತ್ರ ಇಡೀ ರಾಜ್ಯಕ್ಕೆ ಕೊಡುತ್ತಿದ್ದರು. ಇವತ್ತು ಬಹಳ ಸಂತೋಷದಿಂದ ಹೇಳಬೇಕಾಗಿದೆ. 6 ಕೋಟಿ ರೂಪಾಯಿಗಳನ್ನು ಭಾರತ ಸರ್ಕಾರದಿಂದ ನಾವು ಈ ಯೋಜನೆಯಲ್ಲಿ ನಮ್ಮ ಕಾಲದಲ್ಲಿ ತಂದುಕ್ಕೊಂಡಿದ್ದೇವೆ. ಹೋದ ವಾರದಲ್ಲಿ ಆದಂತಹ ಅಧಿಕಾರಿಗಳ ಸಭೆಯಲ್ಲಿ ನಾವು ಹೇಳಿದ್ದೇವೆ. 10 ಕೋಟಿ ರೂಪಾಯಿಗಳ ಅರ್ಜಿಗಳು ಬಂದರೂ ಕೂಡ ಪುರಸ್ಕಾರ ಮಾಡಿ, ಭಾರತ ಸರ್ಕಾರದಿಂದ ಹಣವನ್ನು ತರಿಸಿಕೊಡುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ ಎಂದು ಹೇಳಿದ್ದೇವೆ. ಎಷ್ಟು ಅರ್ಜಿಗಳು ಇವೆಯೋ ಅಷ್ಟು ಅರ್ಜಿಗಳನ್ನು ಈ ನೀತಿ ಪ್ರಕಾರವಾಗಿ ಪುರಸ್ಕಾರ ಮಾಡಿ ಹೇಳಿದ್ದೇವೆ. ಸಣ್ಣ ರೈತರಿಗೆ ಹೆಚ್ಚು ಅನುಕೂಲವಾಗಲಿ ಎಂದು 10 ಎಕರೆಯಿಂದ ಎರಡೂವರೆ ಎಕರೆಗೆ ಅವರು ತಂದಿರುವುದು. ಆದುದರಿಂದ ನಾವು ಇವತ್ತು ನಮ್ಮ ರೈತರ ಪರವಾಗಿ, ರಾಜ್ಯದ ಜನತೆಯ ಪರವಾಗಿ ಅವರ ಮೇಲೆ ತರುವಂತಹ ಪ್ರೆಶರ್‌ಅನ್ನು ಮಾಡುವಂಥಾದ್ದು ಏನಿದೆ ಅದನ್ನು ನಾನು ಖಂಡಿತವಾಗಿಯೂ ಮಾಡುತ್ತೇನೆಂದು ಮಾನ್ಯ ಸದಸ್ಯರಿಗೆ ಉತ್ತರವನ್ನು ಕೊಡುವುದಕ್ಕೆ ಬಯಸುತ್ತೇನೆ. ಶ್ರೀ ಜಯಚಂದ್ರರವರು ಭಾರತ ಸರ್ಕಾರದವರು ಕೊಡುವುದನ್ನು ನೀವು ಏನು ಕೊಡುವಂಥಾದ್ದು ಅವರು ಮೊದಲು ಮಾಡ್ತಿದ್ದನ್ನು ನೀವು ಬದಲು ಮಾಡುವುದು ಏನು ಮಹಾ ಮಾಡಿದ್ದುದು ನಮ್ಮ ಸರ್ಕಾರದವರು ಏನಾದರೂ ಮಾಡಬೇಕೆಂದು ಹೇಳಿದರು. ನಾವು ಆರ್ಥಿಕ ಸಂಪನ್ಮೂಲಗಳ ವಿಚಾರವನ್ನು ಇಟ್ಟುಕೊಂಡು ಹೆಚ್ಚು ಹೆಚ್ಚು ಸಹಾಯವನ್ನು ತೋಟಗಾರಿಕೆ ಇಲಾಖೆಗೆ ಮಾಡಿದ್ದೇವೆ. ನಮ್ಮ ಬಜೆಟ್‌ನಲ್ಲಿ ಇದ್ದುದ್ದನ್ನು ನಾವು ಈ ಸಾರಿ ಎರಡು ಪಟ್ಟು ಜಾಸ್ತಿ ಮಾಡಿದ್ದೇವೆ. 45 ಲಕ್ಷ ಸಸಿಗಳ ವಿತರಣೆ ಇದ್ದುದ್ದನ್ನು ಒಂದು ಕೋಟಿ ಮೇಲೆ ಮಾಡಬೇಕೆಂದು ಬಜೆಟ್ಟಲ್ಲಿ ಹಣವನ್ನು ಕೊಟ್ಟಿದ್ದೇವೆ. ಧರ್ಮವೀರಫಾರಂದಂತಹ ದೊಡ್ಡ ದೊಡ್ಡ ಫಾರಂಗಳಲ್ಲಿ ಬೋರ್‌ವೆಲ್ ಇಲ್ಲ, ಪವರ್ ಇಲ್ಲ, ಫೆನ್ಸಿಂಗ್ ಇಲ್ಲ, ಅವರಿಗೆ ಬೇಕಾದಂತಹ ಇನ್ಫ್ರಾಸ್ಟ್ರಕ್ಚರ್ ಇಲ್ಲ, ಜೀಪ್ ಇಲ್ಲ, ಅವೆಲ್ಲವನ್ನು ಇನ್ನು ಮೂರು ತಿಂಗಳಲ್ಲಿ, ಈ 25 ವರ್ಷಗಳ ಇತಿಹಾಸದಲ್ಲಿ ಈ ಇಲಾಖೆಗೆ ಶಕ್ತಿ ತುಂಬಿರಲಿಲ್ಲ, ಅದನ್ನು ತುಂಬುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಈ ಸಾರಿ ಆಯವ್ಯಯದಲ್ಲಿ ಅವಕಾಶ ಮಾಡಿಕೊಟ್ಟಿದ್ದಾರೆ. ಆದುದರಿಂದ ನಮಗೆ ಕಳಕಳಿ ಇಲ್ಲ ಎಂಬ ಮಾತನ್ನು ದಯಮಾಡಿ ತಾವು ವಾಪಸ್ಸು ತೆಗೆದುಕೊಳ್ಳಬೇಕು. ಭಾರತ ಸರ್ಕಾರದ ನೀತಿಯ ವಿಚಾರದಲ್ಲಿ ತಾವು ಏನು ಆತಂಕಗಳನ್ನು ವ್ಯಕ್ತ ಮಾಡಿದ್ದೀರಿ. ಅದನ್ನು ತತ್‌ಕ್ಷಣ ಸಂಬಂಧಪಟ್ಟ ಅಧಿಕಾರಿಗಳ ಮತ್ತು ಮಂತ್ರಿಗಳ ಹತ್ತಿರ ಸಮಾಲೋಚನೆ ಮಾಡುತ್ತೇನೆ ಎಂಬ ಆಶ್ವಾಸನೆಯನ್ನು ಮಾನ್ಯ ಮಿತ್ರರಿಗೆ ಕೊಡಬಯಸುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಉಪಾಧ್ಯಕ್ಷರೇ, ತಾವು ಕರ್ನಾಟಕ ರೈತಾಪಿ ಜನರಿಗೆ 1 ಕೋಟಿ ರೂಪಾಯಿ ಬದಲು 6 ಕೋಟಿ ರೂಪಾಯಿ ಸಹಾಯ

ಮಾಡಿರತಕ್ಕಂಥಾದ್ದು, ತಾವು ಕೊಟ್ಟಿರತಕ್ಕಂತಹ ಸೌಲಭ್ಯವನ್ನು ನಾನು ರೈತನ ಮಗನಾಗಿ ಸ್ವಾಗತ ಮಾಡುತ್ತಿದ್ದೇನೆ. ನಾನು ಅದರ ಬಗ್ಗೆ ಪ್ರಶ್ನೆ ಮಾತನಾಡುತ್ತಿಲ್ಲ. ನೀವು ಈಗ ಲಿಮಿಟ್ ಅನ್ನು ಕಡಿಮೆ ಮಾಡಿ ಕಡಿಮೆ ಮಾಡಿದ್ದರಿಂದ ಯಾವ ರೈತರಿಗೂ ಸಹ ಸಹಾಯ ಮಾಡುವುದಕ್ಕೆ ಆಗುವುದಿಲ್ಲ. ಇವತ್ತು ರೈತ ಎಂದರೆ 2 ಎಕರೆ ಭೂಮಿ ಇರುವವರು ರೈತರು ಅಥವಾ 10 ಎಕರೆ ಭೂಮಿ ಇರುವವರು ರೈತರು ಎಂದು ಡಿಫರೆನ್ಷಿಯೇಟ್ ಮಾಡುವುದಕ್ಕೆ ಆಗುವುದಿಲ್ಲ. ಈ ಹನಿ ನೀರಾವರಿ ಸೌಲಭ್ಯವನ್ನು ಪಡೆಯಬೇಕಾದರೆ ಕನಿಷ್ಟ 10 ಎಕರೆ ಎಂದು ನಾನು ಸ್ಟಾಂಡರ್ಡ್ ಫಿಕ್ಸ್ ಮಾಡಿದ್ದೀರಿ, That is the correct standard also. ಆ ಸ್ಟಾಂಡರ್ಡ್ ಫಿಕ್ಸ್ ಮಾಡಿರತಕ್ಕಂಥವರಿಗೆ ನೀವು ಮತ್ತೆ ಅದನ್ನು ಕಡಿಮೆ ಮಾಡಿದಾಗ ನಿಮ್ಮ ಮುಂದೆ ಖಂಡಿತ ಅಪ್ಲಿಕೇಷನ್ನನ್ನು ಹಾಕುವುದಕ್ಕೆ ಯಾರೂ ಬರುವುದಿಲ್ಲ. ಈಗ ಏನಾಯಿತೆಂದರೆ, 10 ಎಕರೆ ಎಂದು ರೈತರಿಗೆ ಪ್ರಚಾರವಾಯಿತು. ಪ್ರಚಾರವಾಗಿ ರೈತರು ಸೌಲಭ್ಯ ಪಡೆಯುವುದರೊಳಗೆ 2 ಎಕರೆಗೆ ಇಳಿಸಿದರೆ, ಈ ರೀತಿ ಪ್ರಚಾರ ಮಾಡಿದರೆ ಏನಾಗುತ್ತದೆ ಎಂದರೆ ನಾವುಗಳು ಈಗ ಅರ್ಜಿ ಹಾಕಿ ತಯಾರು ಮಾಡುವುದರೊಳಗೆ ಮತ್ತೆ ಅದನ್ನು 1 ಎಕರೆಗೆ ಇಳಿಸುತ್ತಾರೆ, ಆದ್ದರಿಂದ ಇದು ಹಾಕುವುದು ಬೇಡ ಎನ್ನುವಂತಹ ಮನೋಭಾವ ರೈತರಲ್ಲಿ ಬರುತ್ತದೆ. ಏಕೆಂದರೆ, ಏನಾದರೂ ಒಂದು ಪಾಲಿಸಿ ಮಾಡಿದರೆ ಅದು ಕನಿಷ್ಟ 3 ವರ್ಷ 5 ವರ್ಷ ಎನ್ನುವಂತಹ ಒಂದು ಸ್ಟಾಂಡರ್ಡ್ ಆದಂತಹ ನೀತಿ ಇರಬೇಕಾಗುತ್ತದೆ. ಆ ದೃಷ್ಟಿಯಿಂದ ನಾನು ಹೇಳುತ್ತಿರುವುದು. ನಮ್ಮ ರೈತರ ಕಳಕಳಿ ಇದರಲ್ಲಿ ಬರಬೇಕಾದರೆ ತಾವು ದಯಮಾಡಿ ಒಂದು ವರ್ಷದವರೆಗೂ ಕೂಡ ನೀವು ಆಯಿತು ಅದೇ ಸ್ಟಾಂಡರ್ಡನ್ನು ಮೆಂಟೇನ್ ಮಾಡಿ ನಮ್ಮ ಸರ್ಕಾರದ ಬೊಕ್ಕಸದಿಂದ ನಾನು ಕೊಡುತ್ತೇನೆ ಎನ್ನುವಂತಹ ಮಾತನ್ನು ತಾವು ಹೇಳಿದರೆ ಖಂಡಿತವಾಗಿಯೂ ಕೂಡ ನಾನು ರೈತರ ಪರವಾಗಿ ಅಭಿನಂದಿಸುತ್ತೇನೆ ಮತ್ತು ನಿಮ್ಮ ಬಗ್ಗೆ ಒಂದು ಮಾತು ಹೇಳಿದರೆ, ಇದು ಖಂಡಿತವಾಗಿಯೂ ನಿಮ್ಮ ಮನಸ್ಸಿಗೆ ನೋವು ಮಾಡುವುದಕ್ಕಾಗಿ ಅಲ್ಲ, ನಿಮ್ಮನ್ನು ಕೆರಳಿಸಿಯಾದರೂ ಕೂಡ ಕೆಲಸವನ್ನು ಮಾಡುತ್ತೀರಿ ಎನ್ನುವ ದೃಷ್ಟಿಯಿಂದ ಈ ಮಾತನ್ನು ಹೇಳಿದ್ದೇನೆ. ದಯಮಾಡಿ ತಾವು ಕೆರಳಿಯಾದರೂ ಕೂಡ ಇದಕ್ಕೆ ಉತ್ತರ ಕೊಡತಕ್ಕಂತಹ ಮನಸ್ಸನ್ನು ಮಾಡಬೇಕು.

ಶ್ರೀ ಎ. ಕೃಷ್ಣಪ್ಪ: ಮಾನ್ಯ ಉಪಾಧ್ಯಕ್ಷರೇ, ಅವರ ಕಳವಳ ಅರ್ಥವಾಗಿದೆ. ಭಾರತ ಸರ್ಕಾರದಲ್ಲಿ ಸಂಬಂಧಪಟ್ಟ ಮಂತ್ರಿಗಳ ಜೊತೆ ನಮ್ಮ ರಾಜ್ಯದ ಪಾರ್ಲಿಮೆಂಟು ಸದಸ್ಯರ ಸಹಾಯವನ್ನು ಪಡೆದುಕೊಂಡು ಒತ್ತಾಯವನ್ನು ಮಾಡುತ್ತೇವೆ.

(2) ರಾಜ್ಯದಲ್ಲಿ ಕೊಬ್ಬರಿ ಬೆಲೆ ಕುಸಿತದಿಂದ ರೈತರಿಗೆ ತೊಂದರೆ

ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ): ಮಾನ್ಯ ಉಪಾಧ್ಯಕ್ಷರೆ, ರಾಜ್ಯದಲ್ಲಿ ಕೊಬ್ಬರಿ ಬೆಲೆ ಕುಸಿತದಿಂದ ರೈತರಿಗೆ ತೊಂದರೆ ಉಂಟಾಗಿರುವ ಬಗ್ಗೆ ನಾನು ಮಾನ್ಯ ಕೃಷಿಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎ. ಕೃಷ್ಣಪ್ಪ (ತೋಟಗಾರಿಕೆ ರಾಜ್ಯ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆಯನ್ನು ನೀಡುವ ಕಾರ್ಯಕ್ರಮವು ಕೇಂದ್ರ ಸರ್ಕಾರದ ವ್ಯಾಪ್ತಿಗೆ ಒಳಪಡುತ್ತದೆ. ಪ್ರತಿ ವರ್ಷದಂತೆ 1994ನೇ ಸಾಲಿಗೆ ಒಣ ಕೊಬ್ಬರಿ (ಬಾಲೆಕೋಪ್ರ) ಮತ್ತು ಮಿಲ್ಲಿಂಗ್ ಕೊಬ್ಬರಿಗೆ ಬೆಂಬಲ ಬೆಲೆಯನ್ನು ಕೇಂದ್ರ ಸರ್ಕಾರದ ಸೂಚನೆ ಅನುಸಾರ ಈ ವರ್ಷವೂ ಶಿಫಾರಸ್ಸು ಮಾಡಲಾಗಿದೆ. ಶಿಫಾರಸ್ಸು ಮಾಡಿದ ದರಗಳು ಈ ಕೆಳಕಂಡಂತಿರುತ್ತವೆ :

ಒಣ ಕೊಬ್ಬರಿಗೆ (ಬಾಲ್ಕೋಪ್ರ) ರೂ. 3,150-00 ಪ್ರತಿ ಕ್ವಿಂಟಾಲ್ಗೆ
ಮಿಲ್ಲಿಂಗ್ ಕೊಬ್ಬರಿಗೆ ರೂ. 2;300-00
ಭಾರತ ಸರ್ಕಾರದ ಆದೇಶವನ್ನು ಕಾಯಲಾಗಿದೆ.

ಈ ಒಂದು ದರದಲ್ಲಿ ಕೊಡಬೇಕು ಎಂದು ಕರ್ನಾಟಕ ಈಗಾಗಲೇ ಭಾರತ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿದೆ.

+ ಶ್ರೀ ಎಲ್.ಆರ್. ಶಿವರಾಮೇಗೌಡ : ಮಾನ್ಯ ಉಪಾಧ್ಯಕ್ಷರೆ, ಕೊಬ್ಬರಿ ಬೆಲೆ ವಿಚಾರದಲ್ಲಿ, ಕಳೆದ 4 ವರ್ಷಗಳಿಂದ ನಾವು 3-4ಬಾರಿ ಈ ಸದನದಲ್ಲಿ ಚರ್ಚೆ ಮಾಡಿದ್ದೇವೆ. ಕಳೆದ ವರ್ಷ ಇದೇ ಮಿಲ್ಲಿಂಗ್ ಕೊಬ್ಬರಿ ಅಥವಾ ಹಲವಾರು ಕೊಬ್ಬರಿ ಬಗ್ಗೆ ನಮ್ಮ ಮಾನ್ಯ ಸಚಿವರು ಹೇಳಿರತಕ್ಕಂತಹ ವಿಚಾರದಲ್ಲಿ ತಿಪಟೂರಿನಲ್ಲಿ ಸಿಗತಕ್ಕಂತಹ ಕೊಬ್ಬರಿ ಬೆಲೆ ಕಳೆದ ವರ್ಷ ಕ್ವಿಂಟಾಲ್ಗೆ ನಾಲ್ಕೂವರೆ ಸಾವಿರದಿಂದ ಐದು ಸಾವಿರವರೆಗೆ ನಡೆಯಿತು. ಇವತ್ತು ಎರಡು, ಎರಡೂವರೆ ಸಾವಿರ ರೂಪಾಯಿಗೆ ತೆಗೆದುಕೊಳ್ಳತಕ್ಕಂತಹ ಶಕ್ತಿ ಇಲ್ಲ. ಇವನ್ನು ರೈತರ ಸ್ಥಿತಿ ಏನಾಗಿದೆ ಎಂದರೆ, ಹಿಂದೆ ನಮ್ಮ ತಿಪಟೂರಿನ ವಿಚಾರದಲ್ಲಿ ಒಂದು ಮಾತು ಹೇಳುತ್ತಿದ್ದರು, ಒಂದು ಕ್ವಿಂಟಾಲ್ ಕೊಬ್ಬರಿ ಕೊಟ್ಟರೆ ಒಂದು ತೊಲ ಚಿನ್ನ ಸಿಗುತ್ತದೆ ಎಂದು ಹೇಳುತ್ತಿದ್ದರು. ಇವತ್ತು ಒಂದು ಕ್ವಿಂಟಾಲ್ ಕೊಬ್ಬರಿ ಕೊಟ್ಟರೆ ತೇಯ್ದುಕೊಂಡು ಕುಡಿಯುವುದಕ್ಕೂ ಕೂಡ ಚಿನ್ನ ಸಿಗುವುದಿಲ್ಲ ಎನ್ನುವಂತಹ ಪರಿಸ್ಥಿತಿಯಲ್ಲಿ ರೈತ ನಿರ್ಮಾಣವಾಗಿದ್ದಾನೆ. ಇವತ್ತು ಕೊಬ್ಬರಿ ಬೆಲೆ ಒಂದು ಸಲ ಎರಡೂವರೆ ಸಾವಿರಕ್ಕೆ ಹೋಗುತ್ತದೆ, ಇನ್ನೊಂಧು ಸಲ 4 ಸಾವಿರಕ್ಕೆ ಹೋಗುತ್ತದೆ. ಏಕೆ ಈ ತರಹ ಏರಿಳಿತ ಆಗುತ್ತಿದೆ. ಈ ಏರಿಳಿತದಿಂದ ರೈತ ಉಳಿಯುವುದಕ್ಕೆ ಅವಕಾಶ ಇದೆಯೇ? ಇದು ಏಕೆ ಹೀಗೆ ಆಗುತ್ತದೆ ಎನ್ನುವುದರ ಬಗ್ಗೆ ಸರ್ಕಾರ ಒಂದು ಸಂಕ್ಷಿಪ್ತವಾಗಿ ಮತ್ತು ನಿರ್ದಿಷ್ಟವಾದಂತಹ ಒಂದು ಯೋಜನೆಯನ್ನು ರೂಪಿಸಿಕೊಳ್ಳದೇ ಹೋದರೆ ಇವತ್ತು ರೈತ ಬದುಕುವುದಕ್ಕೆ ಆಗುವುದಿಲ್ಲ. ತಮಗೆ ಗೊತ್ತಿದೆ, ನಮ್ಮ ಜಿಲ್ಲೆಯಲ್ಲಿ ತೆಂಗಿನ ತೋಟವನ್ನು ಪಡೆದಿರತಕ್ಕಂಥಾ ಕೆಲವೇ ಭಾಗ, ಅದರಲ್ಲಿ ರೈತ ಏನಾದರೂ ರೇಟ್ ಸಿಗುತ್ತದೆ ಎಂದು ತಿಪಟೂರಿಗೆ ತೆಗೆದುಕೊಂಡು ಹೋದರೆ ಈ ರೇಟಿನ ಏರಿಳಿತ ಒಂದು ಕಡೆ ಆದರೆ, ತಿಪಟೂರಿನ ವರ್ತಕರು ಇವತ್ತು ರೈತರನ್ನು ಎಕ್ಸ್‌ಪ್ಲಾಯಿಟ್ ಮಾಡತಕ್ಕಂಥ ವಿಚಾರದ ಬಗ್ಗೆ ನಾವು ಸಾಕಷ್ಟು ಗಮನ ಸೆಳೆದಿದ್ದೇವೆ. ನಾವು ಈ ಸದನದಲ್ಲಿ ಗಮನ ಸೆಳೆದಾಗ ಅಧಿಕಾರಿ ಮಿತ್ರರು ಅಲ್ಲಿ ಹೋಗಿ ಅದನ್ನು ಬಿಗಿ ಮಾಡುತ್ತಾರೆ. 2-3 ತಿಂಗಳು ಆದಮೇಲೆ ಆ ಬಿಗಿ ಬಿಟ್ಟರೆ ತಿರುಗಿ ಯಥಾಸ್ಥಿತಿಗೆ ರೈತರನ್ನು ಎಕ್ಸ್‌ಪ್ಲಾಯಿಟ್ ಮಾಡತಕ್ಕಂಥಾದ್ದು ನಿರಂತರವಾಗಿ ನಡೆಯುತ್ತಿದೆ. ಇದರ ಬಗ್ಗೆ ಒಂದು ನಿರ್ದಿಷ್ಟವಾದಂತಹ ಯೋಜನೆ ಹಾಕಿಕೊಳ್ಳಬೇಕೆಂದು ಹೇಳುತ್ತೇನೆ. ನಮ್ಮ ರಾಜ್ಯದಿಂದ ಆಯ್ಕೆಯಾಗಿರತಕ್ಕ ಲೋಕಸಭಾ ಸದಸ್ಯರುಗಳು ಏನು ಇದ್ದಾರೆ ಆ ಎಲ್ಲಾ ಸದಸ್ಯರುಗಳಿಂದ ಹೋರಾಟ ಮಾಡಿಸಿ ಕೇಂದ್ರ ಸರ್ಕಾರದ ಮೇಲೆ ಒತ್ತಡ ತರಿಸಿ, ಇವತ್ತು ಫಿಲಿಫೈನ್ಸ್ ಮತ್ತು ಹೊರರಾಜ್ಯಗಳಿಂದ ಏನು ಇಂಪೋರ್ಟ್ ಮಾಡಿಕೊಳ್ಳುತ್ತಿದ್ದಾರೆ; ಅದನ್ನು ನಿಲ್ಲಿಸದೇ ಹೋದರೆ ಈ ಬೆಲೆ ಏರಿಳಿತ ನಿಲ್ಲುವುದಿಲ್ಲ, ಇವತ್ತು ಏರಿಳಿತ ನಿಲ್ಲಿಸದೇಹೋದರೆ ನಮ್ಮ ಭಾಗದ ರೈತಾಪಿ ಜನ ಕೊಬ್ಬರಿ ಬೆಳೆಯುವವರ ಕತೆ ಚಿಂತಾಜನಕವಾಗುತ್ತದೆ. ಆದುದರಿಂದ ದಯಮಾಡಿ ಇದಕ್ಕೆ ನಿರ್ದಿಷ್ಟವಾದಂತಹ ಒಂದು ಯೋಜನೆಯನ್ನು ರೂಪಿಸಬೇಕು. ನಮ್ಮ ರಾಜ್ಯದಲ್ಲಿ ಬಹಳ ಅತ್ಯುತ್ತಮವಾಗಿ ಮತ್ತು ಜೋರಾಗಿ ನಡೆಯತಕ್ಕಂತಹ ಮಾರ್ಕೆಟ್ ತಿಪಟೂರಿನಲ್ಲಿದೆ. ಆ ತಿಪಟೂರಿನಲ್ಲಿ ರೈತಾಪಿ ಜನರನ್ನು ಇವತ್ತು ಏನು ಎಕ್ಸ್‌ಪ್ಲಾಯಿಟ್ ಮಾಡುತ್ತಿದ್ದಾರೆ, ಆ ವರ್ತಕರನ್ನು ಹತೋಟಿಗೆ ತರತಕ್ಕಂತಹ ಕೆಲಸವನ್ನು ನಿಮ್ಮ ಅಧಿಕಾರ ವರ್ಗದಿಂದ ಮಾಡಿಸಬೇಕು ಎಂದು ಈ ಸಂದರ್ಭದಲ್ಲಿ ನಿಮ್ಮ ಪರವಾಗಿ ವಿನಂತಿ ಮಾಡುತ್ತಿದ್ದೇನೆ.

+ ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಸಭಾಧ್ಯಕ್ಷರೇ, ನಮ್ಮ ಪ್ರಶ್ನೆಗಳು ತಮಗೆ ಅರ್ಥವಾಗಿದೆ, ತಮ್ಮ ಉತ್ತರವನ್ನು ನಾನು ನೋಡಿದ್ದೇನೆ, ನನ್ನ ಪ್ರಶ್ನೆಗೂ ನಿಮ್ಮ ಉತ್ತರಕ್ಕೂ ಸಂಬಂಧ ಇಲ್ಲ. ನಾನು ಕೇಳಿರುವುದು ಕೊಬ್ಬರಿ ಬೆಲೆ ಕುಸಿತದಿಂದಾಗಿ ರೈತರಿಗೆ ಆಗಿರತಕ್ಕಂಥ ತೊಂದರೆ ಬಗ್ಗೆ ನಿಮ್ಮ ಗಮನವನ್ನು ಸೆಳೆದಿದ್ದೇನೆ. ನೀವು ಕೊಟ್ಟಿರುವ ಉತ್ತರದಲ್ಲಿ, ಆಕಾಶ ತೋರಿಸುತ್ತಿದ್ದೀರಿ ಮತ್ತು ಕೇಂದ್ರ ಸರ್ಕಾರವನ್ನು ತೋರಿಸುತ್ತಿದ್ದೀರಿ. ನೀವು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುವುದನ್ನು ನಾನು ಕೇಳುತ್ತಿಲ್ಲ, ರೈತರಿಗಾದ ತೊಂದರೆಯನ್ನು ನಿವಾರಿಸುವುದಕ್ಕೋಸ್ಕರ ನೀವು ಏನು ಕಾರ್ಯಕ್ರಮವನ್ನು ಹಾಕಿ ಕೊಂಡಿದ್ದೀರಿ ಎನ್ನುವುದನ್ನು ತಿಳಿಸಿ. ನಾನು ಈಗ ಒಂದು ಮಾಹಿತಿಯನ್ನು ನಿಮಗೆ ಕೊಡುತ್ತೇನೆ. ಹೋದ ವರ್ಷ ಇದೇ ದಿವಸದಲ್ಲಿ ಸದನದಲ್ಲಿ ಪ್ರಸ್ತಾಪವಾದ ಸಂದರ್ಭದಲ್ಲಿ ನಾಲ್ಕು ಸಾವಿರದ ಆರುನೂರು ರೂಪಾಯವರೆಗೆ ಕೂಡ ಈ ಕೊಬ್ಬರಿಗೆ ಬೆಲೆ ಬಂದಿತ್ತು. ಇವತ್ತು ಅದೇ ಕೊಬ್ಬರಿಗೆ ಎರಡು ಸಾವಿರದ ನಾಲ್ಕು ನೂರು ರೂಪಾಯಿ ಮೇಲೆ ಹೋಗುತ್ತಿಲ್ಲ ಎಂಬ ಪರಿಸ್ಥಿತಿ ಇರಬೇಕಾದರೆ ರೈತರು ಹೇಗೆ ಬದುಕಬೇಕು, ಬಾಳಬೇಕು ಎಂದು ತಾವು ಚಿಂತನೆ ಮಾಡಿ. ತೆಂಗಿನ ಬೆಳೆ ಬೆಳೆಯಬೇಕಾದರೆ ಸರ್ಕಾರದಿಂದ ಕೊಡಬೇಕಾಗಿದ್ದಂತಹ ಸೌಲಭ್ಯಗಳು, ಸಬ್ಸಿಡಿ, ಫರ್ಟಿಲೈಸರ್‍ಗೆ ಆಗಲಿ ಇನ್ನೊಂದಕ್ಕಾಗಲಿ ಕಡಿವಾಣ ಮಾಡಿದ್ದೀರಿ. ಆದರೆ ಅದರ ಬೆಲೆ ಕುಸಿಯುತ್ತಿದೆ ಎಂದರೆ ಕೇಂದ್ರ ಸರ್ಕಾರದ ಕಡೆ ಡೆಲ್ಲಿ ಕಡೆ ತೋರಿಸುತ್ತೀರಿ ಅದು ಸಾಧ್ಯವಲ್ಲ, ಸರಿಯಲ್ಲ. ನಾನು ಹೆಚ್ಚಿನ ಮಾಹಿತಿಯನ್ನು ಕೊಡುತ್ತಿದ್ದೇನೆ. ಈಗಾಗಲೇ ತಾವು ಏನು 3150 ರೂಪಾಯಿಗಳನ್ನು ಶಿಫಾರಸ್ಸು ಮಾಡಿದಿರಿ, ಇವತ್ತು ನಾನು ಒಂದು ಪತ್ರಿಕೆಯಲ್ಲಿ ಓದಿದ್ದೇನೆ. ಈಗಾಗಲೇ ಕೇಂದ್ರ ಸರ್ಕಾರದವರು 3225 ರೂಪಾಯಿಗಳನ್ನು ಕೂಡ ನಿಗಧಿ ಮಾಡಿದ್ದಾರೆ ಎಂಬುದನ್ನು ನಾನು ಪತ್ರಿಕೆಯಲ್ಲಿ ಓದಿದ್ದೇನೆ. ನಾನು ನಿಮ್ಮ ಸರ್ಕಾರಕ್ಕೆ ಒಂದು ಹೆಜ್ಜೆ ಮುಂದಿಟ್ಟು ಹೇಳುತ್ತಿದ್ದೇನೆ. 3225 ರೂಪಾಯಿ ಏನು ಕೇಂದ್ರ ಸರ್ಕಾರದವರು ನಿಗಧಿ ಮಾಡುತ್ತಾರೆ ಇವತ್ತು ಆ ಬೆಲೆಗೆ ನಾನು ಕೊಡುವುದಕ್ಕೆ ತಯಾರಿದ್ದೇನೆ. ಇವತ್ತು ಅದನ್ನು ಕೊಂಡುಕೊಳ್ಳತಕ್ಕ ವ್ಯವಸ್ಥೆ ಮಾಡುವುದ್ದಕೆ ನಿಮಗೆ ಯಾವುದೇ ತರಹದ ವಿಧಾನ ಇದೆಯೇ ಎನ್ನತಕ್ಕಂಥಾದ್ದನ್ನು ತಾವು ದಯವಿಟ್ಟು ತಿಳಿಸಬೇಕು. ಇವತ್ತು ಯಾವುದೇ ವಿಧಾನ ಇಲ್ಲ. ಬೆಂಬಲ ಬೆಲೆ ಎಂದು ತಾವು ಏನು ಘೋಷಣೆ ಮಾಡುತ್ತೀರಿ ಅದಕ್ಕೆ ಅರ್ಥ ಇಲ್ಲ. ಒಂದು ಮಾತು ಸನ್ಮಾನ್ಯ ಕೃಷ್ಣಪ್ಪನವರ ಗಮನಕ್ಕೆ ತರುತ್ತೇನೆ. ಇಡೀ ತಿಪಟೂರಿನ ಮಾರುಕಟ್ಟೆ ಇರುವುದು ಕೇವಲ ಮೂರು ಜನರ ಕೈಯಲ್ಲಿ ಮಾತ್ರ. ಈ ಮೂರು ಜನ ಏನು ಹಂಚಿಕೊಂಡಿರುತ್ತಾರೆ, ಒಂದು ವಾರ ನಾನು ಹೋಗುತ್ತೇನೆ, ಇನ್ನೊಂದು ವಾರ ಇನ್ನೊಬ್ಬರು ಹೋಗಿ ಅವರ ಸ್ವಾರ್ಥಕ್ಕೋಸ್ಕರ ಅವರು ''ಕೋಟ್ಯಾಧೀಶ್ವರರಾಗಿದ್ದಾರೆ. ಇವತ್ತು ರೈತರನ್ನು ಅವರು ಕೊಳ್ಳೆ ಹೊಡೆದಿದ್ದಾರೆ. ರೈತರಿಗೆ ಬರುವ ಲಾಭಾಂಶ ಏನು ಇದೆ ಅದು ಸಂಪೂರ್ಣವಾಗಿ ಅವರ ಕೈವಶವಾಗಿದೆ. ಇವತ್ತು ಇದರ ಬಗ್ಗೆ ನಾನು ಹೆಚ್ಚಿಗೆ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ನೀವು ಸ್ಥಳೀಯವಾಗಿ ವರ್ತಕರನ್ನು ಹಿಡಿತದಲ್ಲಿಡತಕ್ಕದ್ದರ ಬಗ್ಗೆ ಯಾವುದೇ ತರಹದ ಒಂದು ವಿಧಾನ ಅಥವಾ ಕಾರ್ಯಕ್ರಮವನ್ನು ಕೈಗೊಂಡಿಲ್ಲ. ಅದಕ್ಕೋಸ್ಕರ ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ನಾನು ರೈತನಾಗಿ ಕೇಳತಕ್ಕಂಥದ್ದು, ತಂದೆ ಸಮಾನದಲ್ಲಿರತಕ್ಕಂಥ ಸರ್ಕಾರವನ್ನು ಕೇಳುತ್ತಿದ್ದೇನೆ. ನಾನು ಬೆಳೆದಿರತಕ್ಕ ಬೆಳೆಗೆ ನಾನು ಹಾಕಿರತಕ್ಕ ಬಂಡವಾಳ ಏನು ಇದೆ ಅದಕ್ಕೆ ಇವತ್ತು ಬಡ್ಡಿ ಸಹಿತ ಬಾರದೆ ಇರುವ ಬೆಲೆಗೆ ಕೊಬ್ಬರಿ ಮಾರಬೇಕಾಗಿದೆ. ನನಗೆ ಸರಿಯಾದ ಬೆಲೆ ಕೊಡಿ ಎನ್ನತಕ್ಕಂಥದ್ದನ್ನು ನಾನು ಕೇಳುವುದು. ನೀವು ಕೇಂದ್ರ ಸರ್ಕಾರದ ಕಡೆ ಕೈ ತೋರಿಸುವುದನ್ನು ಬಿಟ್ಟು ನನಗೆ ಯಾವ ರೀತಿ ಸಹಾಯ ಮಾಡುತ್ತೀರಿ ಎಂಬುದನ್ನು ದಯಮಾಡಿ ಸ್ಪಷ್ಟವಾಗಿ ಹೇಳಿ.

+ ಡಾ|| ಎನ್.ಬಿ. ನಂಜಪ್ಪ: ಮಾನ್ಯ ಅಧ್ಯಕ್ಷರೇ, ಈ ಕೊಬ್ಬರಿ ವಿಚಾರ ನಾವು ಏನು ಮಾಡುತ್ತಿದ್ದೀವೋ it is not an ordinary subject. ಕಳೆದ ಬಾರಿ ಇದರ

ಬಗ್ಗೆ ಸಾಕಾದಷ್ಟು ಚರ್ಚೆ ನಡೆದಿದೆ. ವೈಜ್ಞಾನಿಕವಾಗಿ ಇದಕ್ಕೆ ಬೆಲೆಯನ್ನು ನಿಗದಿ ಮಾಡಬೇಕಾಗಿದೆ. ಇವತ್ತು ಕೊಬ್ಬರಿಗೆ 3150 ರೂಪಾಯಿ ಇವರು ಏನು ನಿಗಧಿ ಮಾಡಿದ್ದೇವೆಂದು ಹೇಳಿದ್ದಾರೋ ಅಥವಾ 3225 ರೂಪಾಯಿ ಮಾಡುತ್ತೇವೆಂದು ಹೇಳಿದ್ದಾರೊ. ಇದು ಒಂದು ವರ್ಷ ತೆಂಗಿನ ಕಾಯಿಯನ್ನು ಕೆಡವಿ ಸಂಗ್ರಹಣೆ ಮಾಡಿ ಅದನ್ನು ಒಣಗಿಸಿ ಮಾರುವುದಕ್ಕೆ ಇದಕ್ಕೆ ವೈಜ್ಞಾನಿಕವಾಗಿ ಅವರು ಯೋಚನೆ ಮಾಡಬೇಕಾಗುತ್ತೆ. ತೆಂಗಿನ ಕಾಯಿಗೆ ಮೂರು ಸಾವಿರ ಅಥವಾ ನಾಲ್ಕು ಸಾವಿರ ರೂಪಾಯಿ ನಿಗದಿ ಮಾಡಿದರೆ ಅದು ವೈಜ್ಞಾನಿಕವಾಗಿ ಆಗುತ್ತದೆ. ಕೊಬ್ಬರಿಗೆ 3,150 ರೂಪಾಯಿ ಮಾಡಿದರೆ, ಆವರೇಜ್ ಬರತಕ್ಕಂಥಾದ್ದು 80 ಕೆ.ಜಿ. ಮಾತ್ರ ಬಹಳ ಚೆನ್ನಾಗಿ ತೋಟ ಇಟ್ಟುಕೊಂಡಿದ್ದರೆ ನೂರು ಕೆ.ಜಿ. ಅಥವಾ 150 ಕೆ.ಜಿ. ಬರುತ್ತದೆ, ಒಂದು ಸಾವಿರ ತೆಂಗಿನಕಾಯಿಗೆ. ಈ ರೀತಿ ಬೆಲೆಯನ್ನು ನಿಗದಿ ಮಾಡಿ ಇಲ್ಲಿ ಯೋಚನೆ ಮಾಡಿ, ನಮ್ಮ ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ನಿಮ್ಮ ನಿಗದಿತ ನಿಮ್ಮ ವರದಿಯನ್ನು ಕಳುಹಿಸಿ ಈ ತರಹ ಆಗಿದೆ ಎಲ್ಲಾ ಕುಸಿದು ಬಿದ್ದಿದೆ ಅನ್ನುವುದನ್ನು ಮನವರಿಕೆ ಮಾಡಿ ರಾಜ್ಯ ಸರ್ಕಾರದಿಂದ ರೈತರಿಗೆ ಏನು ಮಾಡಬೇಕು, ತೆಂಗಿನ ಕಾಯಿಗೆ ಮತ್ತು ಕೊಬ್ಬರಿಗೆ, ಕೇಂದ್ರ ಸರ್ಕಾರ ಏನು ಮಾಡಬೇಕು ಎಂದು ಹೇಳಿ. ಕಾಫಿ, ಟೀ ಮತ್ತು ಇನ್ನುಳಿದ ಏನೇನು ನಮ್ಮ ಅವಶ್ಯಕ ವಸ್ತುಗಳ ಇವೆ ಅವುಗಳನ್ನು ಹೇಗೆ ಮಾರುತ್ತಾರೋ ಆ ಆಧಾರದ ಮೇಲೆ ತೆಂಗಿನ ಕಾಯಿ ಮತ್ತು ಕೊಬ್ಬರಿಗೆ ಯೋಚನೆ ಮಾಡಬೇಕು. ಸಾಮಾನ್ಯ ತೋಟಗಳಲ್ಲಿ ಒಂದು ಸಾವಿರ ತೆಂಗಿನ ಕಾಯಿಗೆ ಕೊಬ್ಬರಿ 80 ಕೆ.ಜಿ. ಬರುತ್ತದೆ. ಬಹಳ ಚೆನ್ನಾಗಿ ನೀರಾವರಿ ಮಾಡಿದರೆ ಮಾತ್ರ 150 ಕೆ.ಜಿ. ಬರುತ್ತದೆ. ಆದುದರಿಂದ ನೀವು ಮಾಡಿರುವುದು ಯಾವುದಕ್ಕೂ ಆಗುವುದಿಲ್ಲ. ಇದರಿಂದ ರೈತರು ಸುಮ್ಮನೆ ಇರುವುದಕ್ಕೆ ಆಗುವುದಿಲ್ಲ. ಇನ್ನು ಸ್ವಲ್ಪ ದಿವಸ ಹೋದರೆ ನಾವೇ ಮುಂದಾಳುತನವನ್ನು ವಹಿಸಿ ರೈತರ ಬಗ್ಗೆ ಚಳುವಳಿಯನ್ನು ಪ್ರಾರಂಭ ಮಾಡಬೇಕಾಗುತ್ತದೆ. ಇದು ಏನೊ ಒಂದು ತರಹ ಕ್ಯಾಷುಯಲ್ ಸಬ್ಜೆಕ್ಟ್ ತರಹ ತೆಗೆದುಕೊಂಡು, ಈಗ ಎರಡು ವರ್ಷಗಳಿಂದ ನಾವು ಇದರ ಮೇಲೆ ನಿಮ್ಮನ್ನು ಕೇಳುತ್ತಿದ್ದರು ಕೂಡ nobody has bothered. About Arecanut something you have done. ನೀವು ಕಾಫಿ ಬೆಳಗಾರರಿಗೆ ಮಾಡಿದ್ದೀರಿ, ಆದರೆ ತೆಂಗಿನ ತೋಟಕ್ಕೆ ಈಗ ಬೇಕಾದಷ್ಟು ಕಾಯಿಲೆಗಳು ಬಂದಿದೆ. ಪ್ರೊಡಕ್ಷನ್ ಕಮ್ಮಿಯಾಗಿದೆ, ತೆಂಗಿನ ತೋಟಗಳೆಲ್ಲ ಒಣಗಿ ಹೋಗುತ್ತಿದೆ. ಇಷ್ಟೆಲ್ಲಾ ಇದ್ದರೂ ಕೂಡ what you have done to the particular farmers? You people have not bothered ತಾವುಗಳು ದಯವಿಟ್ಟು ಈ ಗಹನವಾದಂಥ ವಿಷಯವನ್ನು ಮನಸ್ಸಿನಲ್ಲಿಟ್ಟುಕೊಂಡು ಆದಷ್ಟು ಬೇಗ ಸರ್ಕಾರ ಮತ್ತು ಇದಕ್ಕೆ ಸಂಬಂಧಪಟ್ಟ ಮಂತ್ರಿಗಳು ಇದರ ಬಗ್ಗೆ ಚಿಂತನೆ ಮಾಡಿ ರೈತರಿಗೆ ಒಂದು ಸಮಾಧಾನವಾದ ವಿಷಯಗಳನ್ನು, ಅದಕ್ಕೆ ಬಂದಿರತಕ್ಕ ಕಷ್ಟಗಳನ್ನು ಪರಿಹಾರ ಮಾಡತಕ್ಕಂಥದರ ಬಗ್ಗೆ ನೀವು ಕಾರ್ಯೋನ್ಮುಖರಾಗಬೇಕು ಎಂದು ಮಾನ್ಯ ಅಧ್ಯಕ್ಷರ ಮೂಲಕ ನಿಮ್ಮನ್ನು ಕೇಳಿ ಕೊಳ್ಳುತ್ತಿದ್ದೇನೆ.

+ ಶ್ರೀ ಎ. ಕೃಷ್ಣಪ್ಪ: ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರು ಕಳುಹಿಸಿದಂಥ ಗಮನ ಸೆಳೆಯುವ ಸೂಚನೆಯಲ್ಲಿ ರಾಜ್ಯದಲ್ಲಿ ಕೊಬ್ಬರಿ ಬೆಲೆ ಕುಸಿತದಿಂದ ರೈತರು ಕಂಗಾಲಾಗಿರುವ ಬಗ್ಗೆ ಮಾನ್ಯ ಕೃಷ್ಣ ಮಂತ್ರಿಗಳು ಗಮನ ಸೆಳೆಯುತ್ತೇನೆ ಎಂದು ಇದೆ. ಇದನ್ನು ಕಳುಹಿಸಿರುವುದು ಹಾಗೆ. ಅವರು ಇಲ್ಲ ಎಂದು ಹೇಳಿ ಕಡತವನ್ನು ನನ್ನ ಕೈಗೆ ಕೊಟ್ಟಿದ್ದಾರೆ. ನಾನು ಕಡತದಲ್ಲಿ ಲಭ್ಯವಿರುವ ವಿಚಾರಗಳನ್ನು ಮಾನ್ಯ ಸದಸ್ಯರ ಮುಂದೆ ಇಟ್ಟಿದ್ದೇನೆ, ಆದರೂ ಕೂಡ ಅವರು ಹೇಳುವುದೇನೆಂದರೆ ಕೇಂದ್ರ ಸರ್ಕಾರ ಎಲ್ಲೋ ಕುಳಿತುಕೊಂಡು ತೀರ್ಮಾನ ಮಾಡಿದರೆ ಕರ್ನಾಟಕದಲ್ಲಿರುವ ರೈತರಿಗೆ ಅದು ಏನೂ ಸರಿಹೋಗುವುದಿಲ್ಲ, ಅವರ ಒಂದು ರಕ್ಷಣೆ ಆಗಿಲ್ಲ,

ಆರ್ಥಿಕ ಸಂಕಷ್ಟಗಳಿಗೆ ಪರಿಹಾರ ಇಲ್ಲ ಎಂದು ಹೇಳಿದ್ದಾರೆ. ಆದರೆ ನಾವು ಭಾರತ ಸರ್ಕಾರಕ್ಕೆ ಏನು ಶಿಫಾರಸ್ಸನ್ನು ಕಳುಹಿಸಿದ್ದೇವೆ, ಅದನ್ನು ಪೇಪರ್ನಲ್ಲಿ ನನ್ನ ಸ್ನೇಹಿತರು ಓದಿದ್ದಾರೆ. ಇವೆಲ್ಲವನ್ನೂ ನೋಡಿದಾಗ ಹಿಂದಿನ ವರ್ಷಗಳಲ್ಲಿಯೂ ಕೂಡ ಪ್ರಸ್ತಾಪ ಮಾಡಿದ್ದಾರೆ, ಇದು ಬಹಳ ಘನವಾದುದು, ಮುಖ್ಯವಾದುದು. ಕರ್ನಾಟಕ ರಾಜ್ಯ ಸರ್ಕಾರ ಆ ರೋಗ ಬಂದಿರುವಂತಹ ರೈತರ ವಿಚಾರದಲ್ಲಿ ಆ ಮರಗಳ ಬೆಲೆ ಹಾಳಾಗುತ್ತಿದೆ, ಉತ್ಪಾದನೆ ಕಡಿಮೆಯಾಗುತ್ತಿದೆ. ಇವೆಲ್ಲವನ್ನು ಹೇಳಿದ್ದಾರೆ. ಅದುದರಿಂದ ಈ ಸಂದರ್ಭದಲ್ಲಿ ನಾನು ಇಷ್ಟನ್ನು ಹೇಳಲಿಕ್ಕೆ ಬಯಸುತ್ತೇನೆ. ಆ ಭಾಗದ ಪ್ರತಿಷ್ಠೆಯ ಶಾಸನಸಭಾ ಸದಸ್ಯರು ಒಳಗೂಡಿ ಒಂದು ಮೀಟಿಂಗ್ ಮಾಡಲಿಕ್ಕೆ ನಾನು ತಯಾರಾಗಿದ್ದೇನೆ. ಭಾರತ ಸರ್ಕಾರದೊಡನೆ ಈ ವಿಚಾರವನ್ನು ಕೈಗೆತ್ತಿಕೊಳ್ಳಬೇಕು ಸಂಸತ್ ಸದಸ್ಯರ ಸಹಾಯದಿಂದ ಎಂದು ಹೇಳಿದ್ದಾರೆ. ಈ ಎರಡೂ ಸಲಹೆಗಳನ್ನೂ ಕೂಡ ನಾನು ಒಪ್ಪಿಕೊಳ್ಳುತ್ತೇನೆ. ಸದನ ಸಂದರ್ಭದಲ್ಲಿ ಒಂದು ಮೀಟಿಂಗ್‌ಗನ್ನು ಮಾಡಿ ಹೆಚ್ಚು ಮಾಹಿತಿಯನ್ನು ಪಡೆದುಕೊಂಡು ಸಂಬಂಧಪಟ್ಟವರ ಮೇಲೆ ಒತ್ತಡವನ್ನು ತಂದು ರಾಜ್ಯದ ರೈತರ ರಕ್ಷಣೆ ಮಾಡುವಂತಹ ದಿಕ್ಕಿನಲ್ಲಿ ಕೆಲಸ ಮಾಡುವುದಕ್ಕೆ ನಾನು ತಯಾರಾಗಿದ್ದೇನೆ ಎನ್ನುವ ಮಾತನ್ನು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ.

ಎರಡನೆಯದಾಗಿ ರೋಗ ಬಂದಿದೆ ಆ ರೋಗಕ್ಕೆ ಏನೂ ಪರಿಹಾರ ಮಾಡಿಲ್ಲ ಎಂದು ಡಾ|| ನಂಜಪ್ಪನವರು ಹೇಳಿದ್ದಾರೆ. ಅದು ಸರಿಯಲ್ಲ, ರೋಗ ಬಂದಿದೆ ಎಂದು ನನ್ನ ಗಮನಕ್ಕೆ ತಂದ ತಕ್ಷಣ ತಜ್ಞರ ಸಮಿತಿಯನ್ನು ನಿಮ್ಮ ಜಿಲ್ಲೆಗಳಿಗೆ, ತಾಲ್ಲೂಕುಗಳಿಗೆ ಕಳುಹಿಸಿದ್ದೇವೆ. ಅವತ್ತು ಶಿವರಾಮೇಗೌಡರು ಅಲ್ಲಿಯೇ ಕುಳಿತುಕೊಂಡು, ತಜ್ಞರು ಹೋದರೆ ಸಾಲದು ಹಣ ಬಿಡುಗಡೆ ಮಾಡಬೇಕು ಎಂದು ಹೇಳಿದರು. ನೀವು ಹೇಳಿದ ಒಂದು ವಾರದ ಒಳಗಡೆ 10 ಲಕ್ಷದ 83 ಸಾವಿರ ರೂಪಾಯಿ ಹಣವನ್ನು ಕರ್ನಾಟಕ ಸರ್ಕಾರ ಬಿಡುಗಡೆ ಮಾಡಿ ಎಲ್ಲೆಲ್ಲಿ ರೋಗಕ್ಕೆ ಗುರಿ ಆಗಿತ್ತೊ ಆ ಪ್ರದೇಶಗಳಲ್ಲಿ ತತ್‌ಕ್ಷಣ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲು ಅಧಿಕಾರಿಗಳಿಗೆ ಆದೇಶವನ್ನು ಕೊಟ್ಟಿದ್ದೆವು. ಅದೇ ರೀತಿ ಅಂತಹ ಪ್ರದೇಶಗಳಲ್ಲಿ ಅಧಿಕಾರಿಗಳು ಕೆಲಸ ಮಾಡುತ್ತಿದ್ದಾರೆ. ಇದರ ಜೊತೆಗೆ ಸೆಂಟ್ರಲ್ ಪ್ಲಾಂಟೇಷನ್ ರೀಸರ್ಚ್ ಸೆಂಟರ್ಗೂ ಕೂಡ ನಾನು ಭೇಟಿ ಕೊಟ್ಟು ರಾಷ್ಟ್ರ ಮಟ್ಟದಲ್ಲಿ ಇರುವಂತ ತಜ್ಞರ ಒಂದು ಸಹಾಯವನ್ನು ಪಡೆಯಲಿಕ್ಕೆ ಈಗಾಗಲೇ ಕಾಗದವನ್ನು ಬರೆದು ಗುಪ್ತ ಅವರ ಜೊತೆ ಮಾತುಕತೆ ಮಾಡಿ ಬಂದಿದ್ದೇವೆ. ಬಹುಶಃ ಇನ್ನು 8-10 ದಿವಸಗಳಲ್ಲಿ ರಾಷ್ಟ್ರಮಟ್ಟದಲ್ಲಿ ಇರುವಂತ ತಜ್ಞರು ಈ ರೋಗವನ್ನು ಹೇಗೆ ತಡೆಯಬೇಕು ಎಂಬುದರ ವಿಚಾರದಲ್ಲಿ ಕರ್ನಾಟಕದ ಆಯಾ ಪ್ರದೇಶಗಳಲ್ಲಿ ಅವರು ಪ್ರವಾಸ ಮಾಡಲಿದ್ದಾರೆ. ಇಷ್ಟು ಪ್ರಯತ್ನಗಳನ್ನೂ ಕೂಡ ನಾವು ಮಾಡಿದ್ದೇವೆ. ಈಗ ಕೊಬ್ಬರಿ ಬೆಲೆ ಬಿದ್ದು ಹೋಗಿದೆ, ರೈತರು ಕಂಗಾಲಾಗಿದ್ದಾರೆ ಎನ್ನುವ ವಿಚಾರದಲ್ಲಿ ಒಂದು ಪ್ರತ್ಯೇಕವಾದಂತ ಸಭೆಯನ್ನು ಮಾಡಿ ಭಾರತ ಸರ್ಕಾರ ಮತ್ತು ಸಂಬಂಧಪಟ್ಟವರ ಜೊತೆ ತುರ್ತಾಗಿ ಮಾತುಕತೆ ಮಾಡಲಿಕ್ಕೆ ಸರ್ಕಾರ ತಯಾರಾಗಿದೆ.

ಶ್ರೀ ಟಿ.ಬಿ. ಜಯಚಂದ್ರ: ತಾವು ಶಾಸಕರ ಸಭೆಯನ್ನು ಕರೆದು ಮಾತನಾಡುತ್ತೇನೆ ಎಂದು ಹೇಳಿದಿರಿ. ಆದರೆ ನಾನು ಆಗಲೇ ಮಾತನಾಡಿದಂತಹ ಸಂದರ್ಭದಲ್ಲಿ ಈಗಾಗಲೇ 3-4 ಜನ ವರ್ತಕರ ಕೈಹಿಡಿತದಲ್ಲಿದೆ ಎನ್ನುವುದಕ್ಕೆ ತಾವು ಉತ್ತರ ಕೊಟ್ಟಿರಲ್ಲ ಇದೇ ಸಾಕ್ಷಿ. ನಿನ್ನೆ ದಿವಸ ನಾನು ಊರಿನಿಂದ ಬರಬೇಕಾದರೆ ನನ್ನ ಕೊಬ್ಬರಿಯನ್ನು 2 ಸಾವಿರದ 4 ನೂರು ರೂಪಾಯಿಗೆ ಮಾರಾಟ ಮಾಡಲಾಗಿದೆ. ಆದರೆ ಇವತ್ತು ಅದರ ರೇಟು 3 ಸಾವಿರದ 6 ನೂರು ರೂಪಾಯಿ ಎಂದು ಹೇಳಬೇಕಾದರೆ ಮತ್ತು ವಿಧಾನಸಭೆಯಲ್ಲಿ ಇವತ್ತು ಇದು ಪ್ರಸ್ತಾಪ ಆಗುತ್ತದೆ ಎಂದು ಅಧಿಕಾರಿಗಳು ಮಾಹಿತಿಯನ್ನು ಕೊಟ್ಟು ಅದು 3 ಸಾವಿರದ 6 ನೂರು ರೂಪಾಯಿ ಎಂದು ಹೇಳಬೇಕಾದರೆ ಈ ಬಗ್ಗೆ ಶಾಶ್ವತವಾದ ಒಂದು ಪರಿಹಾರವನ್ನು ನಾವು

ಕಂಡು ಹಿಡಿಯಬೇಕಾಗಿದೆ. ಆದ್ದರಿಂದ ನಿಜವಾಗಿಯೂ ರೈತರಿಗೆ ಇದರಿಂದ ಪ್ರಯೋಜನ ಆಗಬೇಕಾದರೆ ನೀವು ಕೆಲವು ಶಾಸಕರ ಸಮಿತಿಯನ್ನು ಮಾಡಿ ತಿಪಟೂರಿಗೆ ಹೋಗಿ ಅಲ್ಲಿ ಇರತಕ್ಕಂಥ ರೈತ ಮುಖಂಡರುಗಳನ್ನು ಭೇಟಿ ಮಾಡಿ ಒಂದು ಸರಿಯಾದಂತಹ ವ್ಯವಸ್ಥೆ ಮಾಡಬೇಕು. ಇವತ್ತು ನಾನು ಹೇಳುತ್ತೇನೆ, ನನಗೆ ಬೇಕು ಎಂದಾಗ ಮೂರು ಸಾವಿರದ ಆರುನೂರು ರೂಪಾಯಿ ಮಾಡುವುದು, ಬೇಡ ಎಂದಾಗ ಎರಡು ಸಾವಿರದ ಇನ್ನೂರು ಮಾಡತಕ್ಕಂಥಾದ್ದು ಏನು ಇದೆ ಅಷ್ಟೊಂದು ಸ್ವಾತಂತ್ರವನ್ನು ವರ್ತಕರಿಗೆ ಕೊಟ್ಟಂಥ ಸಂದರ್ಭದಲ್ಲಿ ಇವತ್ತು ನೀವು ರೈತರಿಗೆ ಸಹಾಯ ಮಾಡಿದ ಹಾಗೆ ಆಗುವುದಿಲ್ಲ.

4.00 ಪಿ.ಎಂ.

ಆದುದರಿಂದ ರೈತ ಮುಖಂಡರನ್ನು ಕೇಳಿ ಇದರ ಬಗ್ಗೆ ಯಾವ ರೀತಿಯಲ್ಲಿ ಕಡಿವಾಣವನ್ನು ಹಾಕಬಹುದೆಂಬುದನ್ನು ಸರ್ಕಾರವರು ಕುಳಿತು ಮಾಡುವುದಕ್ಕೆ ಸಾಧ್ಯವಿದೆ. ಮಾನ್ಯ ಮಂತ್ರಿಗಳು ತಿಪಟೂರಿಗೆ ಬಂದು ಅಲ್ಲಿಯ ಶಾಸಕರ ಜೊತೆ ಕುಳಿತು ವಿಚಾರವಿನಿಮಯ ಮಾಡಿದರೆ ಇದು ಸಾಧ್ಯವಾಗುತ್ತದೆ. ಇಲ್ಲದೇ ಹೋದರೆ ನೀವು ಈ ಬೆಂಗಳೂರಿನಲ್ಲಿ ಕುಳಿತು ಸಭೆಯನ್ನು ಮಾಡುವುದರಿಂದ ಯಾವುದೇ ರೀತಿಯ ಪ್ರಯೋಜನಾ ಆಗುವುದಿಲ್ಲ. ಆದ್ದರಿಂದ ಅಲ್ಲಿಗೆ ಹೋಗಿ ವಿಚಾರ ವಿನಿಮಯ ಮಾಡುವುದಕ್ಕೆ ತೀರ್ಮಾನವನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಕೃಷ್ಣಪ್ಪ: ಪ್ರಥಮವಾಗಿ ವಿಚಾರವನ್ನು ಸರಿಯಾಗಿ ತಿಳಿದುಕೊಳ್ಳುವುದಕ್ಕೆ ಮೊದಲು ಒಂದು ಸಭೆ ನಡೆಯಲಿ. ತಿಪಟೂರಿಗೆ ಅಥವಾ ದೆಹಲಿಗೆ ಹೋಗುವಾಗ ಖಂಡಿತವಾಗಿ ನಾನು ನಿಮ್ಮ ಜೊತೆಯಲ್ಲಿ ಬರುತ್ತೇನೆ.

ನಿಯಮ 334ರ ಮೇರೆಗೆ

1. ಬೆಳಗಾವಿ ಜಿಲ್ಲೆಯ ಸಂಕೇಶ್ವರ ಮತ್ತು ಯಮಕನ ಮರಡಿ ಗ್ರಾಮದಲ್ಲಿ ವಿದ್ಯಾರ್ಥಿನಿಲಯ ಕಟ್ಟಲು ಮಂಜೂರಾತಿ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ): ಮಾನ್ಯ ಉಪಾಧ್ಯಕ್ಷರೆ, ಬೆಳಗಾವಿ ಜಿಲ್ಲೆಯ ಸಂಕೇಶ್ವರ ಮತಕ್ಷೇತ್ರದಲ್ಲಿ ಸಂಕೇಶ್ವರ ಪಟ್ಟಣ ವ್ಯಾಪ್ತಿಯಲ್ಲಿ ಸಮಾಜಕಲ್ಯಾಣ ಇಲಾಖೆಯಿಂದ ಸಂಕೇಶ್ವರ ಹಾಗೂ ಯಮಕನಮರಡಿ ಗ್ರಾಮದಲ್ಲಿ ವಿದ್ಯಾರ್ಥಿನಿಲಯ ಕಟ್ಟಲು ಸರ್ಕಾರ ಮಂಜೂರಾತಿ ನೀಡಿದ್ದು ನಿಜವೇ? ಸಂಕೇಶ್ವರದ ರಿವಿಜನ್ ಸರ್ವೆ ನಂ. 350 ಎ ನಲ್ಲಿ ಈ ಬಗ್ಗೆ 1 ಎಕರೆ ಜಮೀನು ಕೊಡುವಲ್ಲಿ ತಡವಾಗುತ್ತಿರುವುದಕ್ಕೆ ಕಾರಣವೇನು? ಹಾಗೂ ಕಟ್ಟಡ ನಿರ್ಮಿಸುವುದನ್ನು ಯಾವಾಗ ಪ್ರಾರಂಭ ಮಾಡಲಾಗುತ್ತದೆ. ಈ ಎಲ್ಲಾ ವಿವರಗಳಿಗೆ ಮಾನ್ಯ ಸಮಾಜ ಕಲ್ಯಾಣ ಸಚಿವರು ಸದನದಲ್ಲಿ ಹೇಳಿಕೆ ನೀಡಲು ವಿನಂತಿಸುತ್ತೇನೆ.

ಶ್ರೀ ಧರ್ಮಸಿಂಗ್ (ಸಮಾಜಕಲ್ಯಾಣ ಹಾಗೂ ಕಂದಾಯ ಸಚಿವರು): ಮಾನ್ಯ ಉಪಾಧ್ಯಕ್ಷರೆ,

ಬೆಳಗಾವಿ ಜಿಲ್ಲೆ ಸಂಕೇಶ್ವರದಲ್ಲಿ ಒಂದು ಹಿಂದುಳಿದ ವರ್ಗಗಳ ಸರ್ಕಾರಿ ವಿದ್ಯಾರ್ಥಿ ನಿಲಯ ಇದೆ. ಇಲ್ಲಿ 25 ವಿದ್ಯಾರ್ಥಿಗಳಿದ್ದು, ನಿಲಯ ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿದೆ.

ದಿನಾಂಕ 6.3.1992ರಲ್ಲಿ ಯಮಕನಮರಡಿಗೆ ವಿದ್ಯಾರ್ಥಿ ನಿಲಯವು ಮಂಜೂರಾಗಿದ್ದು, 1992-93ನೇ ಸಾಲಿನಲ್ಲಿ 50 ವಿದ್ಯಾರ್ಥಿಗಳಿಗಾಗಿ ಪ್ರಾರಂಭಿಸಲಾಗಿದೆ. ಈ ನಿಲಯವೂ ಸಹ ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿದೆ.

ಸಂಕೇಶ್ವರದ ವಿದ್ಯಾರ್ಥಿ ನಿಲಯಕ್ಕಾಗಿ ಸರ್ವೆ ನಂ. 356-ಎ. ನಲ್ಲಿ 20 ಗುಂಟೆ ಜಮೀನನ್ನು ಪಡೆದುಕೊಳ್ಳಲು ಪ್ರಯತ್ನಿಸಲಾಗಿದೆ. ಈ ಜಮೀನಿನಲ್ಲಿ ಅಕ್ರಮ ಸಾಗುವಳಿ ಇದ್ದು, ತೆರವು ಮಾಡಿಸಿ, ಮಂಜೂರು ಮಾಡುವ ಸಾಧ್ಯತೆ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಯಮಕನಮರಡಿ ಗ್ರಾಮದಲ್ಲಿ ಸರ್ಕಾರಿ ಜಮೀನು ಲಭ್ಯವಿರುವುದಿಲ್ಲ. ಈ ಎರಡೂ ಸ್ಥಳಗಳಲ್ಲಿ ಕಟ್ಟಡಕ್ಕಾಗಿ ಸ್ಥಳ ಒದಗಿಸಿಕೊಳ್ಳಲು ಜಿಲ್ಲಾಧಿಕಾರಿಗಳು ಪ್ರಯತ್ನಿಸುತ್ತಿದ್ದಾರೆ. ಸರ್ಕಾರಿ ಭೂಮಿ ಲಭ್ಯವಿಲ್ಲದಿರುವುದರಿಂದ, ದಾನ ರೂಪದಲ್ಲಿ ಖಾಸಗಿ ವ್ಯಕ್ತಿ ಅಥವಾ ಸಂಸ್ಥೆಗಳಿಂದ ಪಡೆದುಕೊಳ್ಳುವ ಸಾಧ್ಯತೆಯನ್ನು ಜಿಲ್ಲಾಧಿಕಾರಿಗಳು ಪರಿಶೀಲಿಸುತ್ತಿದ್ದಾರೆ.

2. ಬೆಳ್ತಂಗಡಿ ತಾಲ್ಲೂಕಿನಲ್ಲಿ ಖಾಲಿ ಇರುವ ವೈದ್ಯರ, ದಾದಿಯರ ಹಾಗೂ ಇತರೆ ಹುದ್ದೆಗಳನ್ನು ಭರ್ತಿ ಮಾಡುವುದು

ಶ್ರೀ ಕೆ. ಗಂಗಾಧರ ಗೌಡ (ಬೆಳ್ತಂಗಡಿ): ಮಾನ್ಯ ಉಪಾಧ್ಯಕ್ಷರೆ, ಬೆಳ್ತಂಗಡಿ ತಾಲ್ಲೂಕಿನಲ್ಲಿ ವೈದ್ಯರ, ದಾದಿಯರ ಹಾಗೂ ಇತರ ವೈದ್ಯಕೀಯ ನೌಕರರ ಹುದ್ದೆಗಳು ಖಾಲಿ ಆಗಿದ್ದರೂ ಸರ್ಕಾರ ಇಷ್ಟರವರೆಗೂ ಗಮನವನ್ನು ಕೊಡಲಿಲ್ಲ, ಇದರಿಂದಾಗಿ ಬೆಳ್ತಂಗಡಿಯ ಜನತೆ ತುಂಬಾ ನೊಂದಿದ್ದಾರೆ. ಕೇವಲ ಆಶ್ವಾಸನೆಗಳನ್ನು ಕೊಟ್ಟರೆ ಪ್ರಯೋಜನವಾಗುವುದಿಲ್ಲ. ಆದ್ದರಿಂದ ತುರ್ತಾಗಿ ಬೆಳ್ತಂಗಡಿ ತಾಲ್ಲೂಕಿನಲ್ಲಿರುವ ಎಲ್ಲಾ ಆಸ್ಪತ್ರೆಗಳಲ್ಲಿರುವ ವೈದ್ಯರ ಮತ್ತು ಆಸ್ಪತ್ರೆಗೆ ಸಂಬಂಧಪಟ್ಟ ಇತರೆ ನೌಕರರ ಹುದ್ದೆಗಳನ್ನು ತುಂಬಬೇಕಾಗಿ ಸರ್ಕಾರದ ಗಮನ ಸೆಳೆಯುತ್ತಿದ್ದೇನೆ. ಈ ಬಗ್ಗೆ ಸ್ಪಷ್ಟ ಉತ್ತರವನ್ನು ಬಯಸುತ್ತೇನೆ.

ಶ್ರೀ ಬಿ.ಎಸ್. ಪಾಟೀಲ್ ಸಾಸನೂರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಬೆಳ್ತಂಗಡಿ ತಾಲ್ಲೋಕಿನಲ್ಲಿ 10 ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಒಂದು ಸರ್ಕಾರಿ ಆಯುರ್ವೇದ ಆಸ್ಪತ್ರೆ ಹಾಗೂ 79 ಉಪ ಕೇಂದ್ರಗಳು ಇರುತ್ತವೆ. ಸದರಿ ತಾಲ್ಲೋಕಿನಲ್ಲಿರುವ ಆಸ್ಪತ್ರೆಗಳಲ್ಲಿ ಮಂಜೂರಾಗಿರುವ ವಿವಿಧ ಹುದ್ದೆಗಳ ವಿವರ ಈ ರೀತಿ ಇರುತ್ತದೆ.

ಹುದ್ದೆಯ ಹೆಸರು	ಮಂಜೂರಾತಿ	ಕಾರ್ಯನಿರ್ವಹಣೆ	ಖಾಲಿಹುದ್ದೆ
ವೈದ್ಯಾಧಿಕಾರಿ (ಸಹಾಯಕ ಶಸ್ತ್ರ ಚಿಕಿತ್ಸಕರು)	12	7	5 (ಒಂದು ಮಹಿಳಾ)
ಕ್ಷೇತ್ರ ಆರೋಗ್ಯ ಶಿಕ್ಷಕ	7	-	7
ಫಾರ್ಮಸಿಸ್ಟ್	11	5	6
ಹಿರಿಯ ಆರೋಗ್ಯ ಸಹಾಯಕ	9	4	5
ಕಿರಿಯ ಆರೋಗ್ಯ ಸಹಾಯಕ	22	9	13
ಹಿರಿಯ ಆರೋಗ್ಯ ಸಹಾಯಕಿ	10	10	-
ಕಿರಿಯ ಆರೋಗ್ಯ ಸಹಾಯಕಿ	79	74	5
'ಡಿ' ವಂಗಡ	24	18	6
ವಾಹನ ಚಾಲಕರು	2	1	1

ಗ್ರಾಮಾಂತರ ಪ್ರದೇಶಗಳಿಗೆ ಗುತ್ತಿಗೆ ಆಧಾರದ ವೈದ್ಯರನ್ನು ನೇಮಿಸುವ ಕಾರ್ಯ ಪ್ರಗತಿಯಲ್ಲಿದ್ದು, ಈ ನೇಮಕಾತಿಗಳಲ್ಲಿ ಅಲ್ಲದೇ ಸ್ನಾತಕೋತ್ತರ ಶಿಕ್ಷಣ ಮುಗಿಸಿ ಬರುವ ವೈದ್ಯರನ್ನು ನೇಮಿಸುವ ಮೂಲಕ ಖಾಲಿ ಇರುವ ವೈದ್ಯರ ಆದ್ಯತೆ ಮೇಲೆ

ಭರ್ತಿ ಮಾಡಲಾಗುವುದು. ಇಲಾಖಾ ನೇಮಕಾತಿ ಸಮಿತಿಯು ರಚನೆಯಾದ ಕೂಡಲೇ 'ಸಿ' ವರ್ಗದ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ತುಂಬಲಾಗುವುದು. 'ಡಿ' ಪಂಗಡದ ಖಾಲಿ ಹುದ್ದೆಗಳನ್ನು ತುಂಬಲು ಪ್ರತ್ಯೇಕ ಕ್ರಮಕೈಗೊಳ್ಳಲಾಗಿದೆ.

(3) ಸಾರ್ವಜನಿಕ ಶಿಕ್ಷಣ ಇಲಾಖೆಯ ಸಹಾಯಕ ವಿದ್ಯಾಧಿಕಾರಿಗಳ ಹಾಗೂ ಉಪ ನಿರ್ದೇಶಕರುಗಳ ಅಧಿಕಾರ ವ್ಯಾಪ್ತಿ

ಶ್ರೀ ಶಫಿ ಅಹಮದ್ (ತುಮಕೂರು) : ಮಾನ್ಯ ಅಧ್ಯಕ್ಷರೇ, ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿರುವ ಅನೇಕ ಖಾಸಗಿ ಪಾಠಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳ ಶಿಕ್ಷಕರ ಅನುಮೋದನೆಯನ್ನು ಈ ಮೊದಲು ತಾಲ್ಲೋಕಿನ ಸಹಾಯಕ ವಿದ್ಯಾಧಿಕಾರಿಗಳು ಹಾಗೂ ಉಪ ನಿರ್ದೇಶಕರುಗಳು ಮಾಡುತ್ತಿದ್ದು, ಇತ್ತೀಚೆಗೆ ಅಧಿಕಾರವನ್ನು ಸರ್ಕಾರವೇ ಇಟ್ಟುಕೊಂಡಿರುತ್ತದೆ. ಹೀಗಾಗಿ ದೂರದ ಊರುಗಳಲ್ಲಿರುವ ಅಧ್ಯಾಪಕರುಗಳಿಗೆ ಬೆಂಗಳೂರಿಗೆ ಬಂದು ತಮ್ಮ ಕೆಲಸಕಾರ್ಯಗಳನ್ನು ಮಾಡಿಸಿಕೊಳ್ಳಲು ಅಪಾರವಾದ ತೊಂದರೆಯಾಗುತ್ತಿರುವುದಾಗಿ ತಿಳಿದು ಬಂದಿದೆ. ಈ ಬಗ್ಗೆ ಮಾನ್ಯ ಶಿಕ್ಷಣ ಸಚಿವರು ಅಧಿಕಾರ ವಿಕೇಂದ್ರೀಕರಣದನ್ವಯ ಈ ಅಧಿಕಾರವನ್ನು ಮತ್ತೆ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಕೊಡಲು ಆದಷ್ಟು ಜಾಗ್ರತೆ ಆದೇಶ ಮಾಡಿದರೆ ಅಧ್ಯಾಪಕರ ಹಿತವನ್ನು ಕಾಪಾಡಿದಂತೆ ಆಗುತ್ತದೆ.

ಶ್ರೀ ಜಿ. ರಾಮಕೃಷ್ಣ (ವೈದ್ಯಕೀಯ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿರುವ ಖಾಸಗಿ ಪಾಠಶಾಲೆಗಳ ಶಿಕ್ಷಕರ ಅನುಮೋದನೆಯನ್ನು ಸಹಾಯಕ ಶಿಕ್ಷಣಾಧಿಕಾರಿಗಳು ಮತ್ತು ಉಪನಿರ್ದೇಶಕರುಗಳು ಮಾಡುತ್ತಿದ್ದುದು ನಿಜ. ಹುದ್ದೆಗಳನ್ನು ತುಂಬಲು ಸರ್ಕಾರವು ಆರ್ಥಿಕ ಮಿತವ್ಯಯ ಆದೇಶವನ್ನು ಜಾರಿಗೊಳಿಸಿದ್ದು ಅದು ಶಿಕ್ಷಣ ಇಲಾಖೆಗೂ ಅನ್ವಯಿಸುತ್ತಿತ್ತು. ಸರ್ಕಾರದ ಮತ್ತು ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿನ ಬೋಧಕ ಹುದ್ದೆಗಳನ್ನು ತುಂಬುವ ಅಗತ್ಯತೆಯನ್ನು ಮನಗಂಡು ಸರ್ಕಾರವು ಮಿತವ್ಯಯ ಆದೇಶವನ್ನು ನಿವೃತ್ತ, ನಿಧನ ಮತ್ತು ರಾಜೀನಾಮೆಯಿಂದ ತೆರವಾದ ಹುದ್ದೆಗಳನ್ನು ತುಂಬಲು ದಿನಾಂಕ 21-7-1992ರ ಆದೇಶದಲ್ಲಿ ಸಡಿಲಿಸಿತು. ನಂತರ ದಿನಾಂಕ 26.3.1993ರ ಆದೇಶದಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಪ್ರಸ್ತುತ ಖಾಲಿ ಇರುವ ಎಲ್ಲಾ ಹುದ್ದೆಗಳನ್ನು ತುಂಬಲು ಮತ್ತು ಮುಂದೆ ನಿಧನ, ಬಡ್ತಿ, ನಿವೃತ್ತಿ, ರಾಜೀನಾಮೆಯಿಂದ ತೆರವಾಗುವ ಹುದ್ದೆಗಳನ್ನು ಶಿಕ್ಷಣ, ಕಾರ್ಯದರ್ಶಿಗಳ ನಿರ್ದಿಷ್ಟ ಅನುಮೋದನೆ ಪಡೆದು ತುಂಬಲು ಆದೇಶಿಸಲಾಗಿದೆ. ಈ ಪ್ರಕಾರ ದಿನಾಂಕ 26.3,93ರ ನಂತರ ತೆರವಾಗುವ ಹುದ್ದೆಗಳನ್ನು ತುಂಬಲು ಶಿಕ್ಷಣ ಕಾರ್ಯದರ್ಶಿಗಳ ನಿರ್ದಿಷ್ಟ ಅನುಮೋದನೆ ಅಗತ್ಯವಿದೆ. ಸಹಾಯಕ ಶಿಕ್ಷಣಾಧಿಕಾರಿಗಳಾಗಲೀ, ಅಥವಾ ಉಪನಿರ್ದೇಶಕರುಗಳು ಆಗಲೀ ಈ ಅಧಿಕಾರವನ್ನು ಚಲಾಯಿಸಲು ಬರುವುದಿಲ್ಲ.

ಹಲವಾರು ಶಿಕ್ಷಣ ಸಂಸ್ಥೆಗಳು ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಮೀಸಲಾದ ಹುದ್ದೆಗಳನ್ನು ಬೇರೆ ವರ್ಗದ ಅಭ್ಯರ್ಥಿಗಳಿಂದ ತುಂಬಿದ್ದು, ಆ ರೀತಿ ತುಂಬಿದ ಹುದ್ದೆಗಳು ಬ್ಯಾಕ್ಲಾಗ್ ಹುದ್ದೆಗಳಾಗುತ್ತವೆ. ಸದರಿ ಬ್ಯಾಕ್ಲಾಗ್ ಹುದ್ದೆಗಳನ್ನು ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಂದಲೇ ತುಂಬತಕ್ಕದ್ದೆಂದು ಸರ್ಕಾರವು ಆದೇಶಿಸಿದೆ. ಈ ಆದೇಶವನ್ನು ಸರಿಯಾಗಿ ಅನುಷ್ಠಾನಗೊಳಿಸಿ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಂದಲೇ ತುಂಬತಕ್ಕದ್ದೆಂದು ಸರ್ಕಾರವು ಆದೇಶಿಸಿದೆ. ಈ ಆದೇಶವನ್ನು ಸರಿಯಾಗಿ ಅನುಷ್ಠಾನಗೊಳಿಸಿ ಪರಿಶಿಷ್ಟಜಾತಿ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಸೂಕ್ತ ಪ್ರಾತಿನಿಧ್ಯ ದೊರಕಿಸಿ ಕೊಡುವ ಅಗತ್ಯತೆ ಇದೆ. ಈ ಹಿನ್ನೆಲೆಯಲ್ಲಿ ಸಹಾಯಕ ಶಿಕ್ಷಣಾಧಿಕಾರಿಗಳಿಗೆ ಮತ್ತು ಉಪನಿರ್ದೇಶಕರುಗಳಿಗೆ ಶಿಕ್ಷಕರ ನೇಮಕಾತಿಯನ್ನು ಅನುಮೋದಿಸಲು ಇದ್ದ ಅಧಿಕಾರವನ್ನು ಸರ್ಕಾರ ಪಡೆದಿದೆ. ಮೀಸಲಾತಿ ನಿಯಮ ಮತ್ತು ಇತರ ಷರತ್ತುಗಳನ್ನು ಪೂರೈಸಲಾದ ಪ್ರಸ್ತಾವನೆಗಳನ್ನು

ಶೀಘ್ರವಾಗಿ ಇತ್ಯರ್ಥಪಡಿಸಲಾಗುತ್ತಿದೆ. ಆದುದರಿಂದ ಸಾರ್ವಜನಿಕರಿಗೆ ತೊಂದರೆಯಾಗಿದೆ ಎಂದು ಹೇಳಲಾಗುವುದಿಲ್ಲ. ಆದಾಗ್ಯೂ ಶಿಕ್ಷಕರ ನೇಮಕಾತಿಯನ್ನು ಅನುಮೋದಿಸುವ ಅಧಿಕಾರವನ್ನು ವಿಕೇಂದ್ರೀಕರಿಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ.

(4) ರಾಜ್ಯದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳನ್ನು ಭರ್ತಿಮಾಡುವುದು

ಶ್ರೀ ಡಿ.ಕೆ. ಶಿವಕುಮಾರ್ (ಸಾತನೂರು) : ಮಾನ್ಯ ಅಧ್ಯಕ್ಷರೇ, ಈಗ ಶಿಕ್ಷಕರ ಹುದ್ದೆಗೆ 18934 ಶಿಕ್ಷಕರನ್ನು ನೇಮಕ ಮಾಡಿಕೊಳ್ಳುವ ಬಗ್ಗೆ ಅರ್ಜಿಗಳನ್ನು ಕರೆದಿದ್ದು, ಈ ಅರ್ಜಿಗಳನ್ನು ಯಾವ ಆಧಾರದ ಮೇಲೆ ಆಯ್ಕೆ ಮಾಡುತ್ತಿರುವುದು ಮತ್ತು ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ತರಬೇತಿ ಪಡೆದ ನಿರುದ್ಯೋಗಿ ಶಿಕ್ಷಕರ ಸಂಘದವರು ವಿಧಾನ ಸೌಧದ ಮುಂದೆ ಧರಣಿ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ? ಇದರ ಬಗ್ಗೆ ಸರ್ಕಾರ ಹೇಳಿಕೆ ಕೊಡಬೇಕಾಗಿ ಕೋರುತ್ತೇನೆ.

ಶ್ರೀ ಜಿ. ರಾಮಕೃಷ್ಣ (ವೈದ್ಯಕೀಯ ಶಿಕ್ಷಣ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ರಾಜ್ಯದಲ್ಲಿ ಒಟ್ಟು 18934 ಪ್ರಾಥಮಿಕ ಶಾಲಾ ಶಿಕ್ಷಕರ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆಯು ಈಗಾಗಲೇ ಪ್ರಾರಂಭವಾಗಿರುತ್ತದೆ. ಈ ರೀತಿಯ ನೇಮಕಾತಿಯನ್ನು ಅಭ್ಯರ್ಥಿಗಳ ಅರ್ಹತೆಯ ಆಧಾರದ ಮೇಲೆ ನೇಮಕ ಮಾಡಲಾಗುತ್ತದೆ. ಒಟ್ಟು ಹುದ್ದೆಗಳಲ್ಲಿನ ಶೇಕಡ 50 ರಷ್ಟು ಹುದ್ದೆಗಳನ್ನು ಮಹಿಳೆಯರಿಗಾಗಿ ಮೀಸಲಿಡಲಾಗಿದೆ. ಅಲ್ಲದೆ, ಈ ನೇಮಕಾತಿಯಲ್ಲಿ 50,000 ಜನಸಂಖ್ಯೆಗೆ ಕಡಿಮೆ ಇರುವ ಪ್ರದೇಶದಲ್ಲಿ ಎಸ್.ಎಸ್.ಎಲ್.ಸಿ.ಯನ್ನು ವ್ಯಾಸಂಗ ಮಾಡಿ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ಶೇಕಡ 5ರಷ್ಟು ಕೃಪಾಂಕವನ್ನು ಅವರು ಪಡೆಯುವ ಸರಾಸರಿ ಶೇಕಡ ಅಂಕಕ್ಕೆ ಸೇರಿಸಲಾಗುವುದು. ಹಾಗೂ ಜಿಲ್ಲಾ ಪರಿಷತ್ ವತಿಯಿಂದ ನೇಮಕಗೊಂಡು ಹಾಲಿ ಕೆಲಸ ನಿರ್ವಹಿಸುತ್ತಿರುವ ಗೌರವಧನ ಶಿಕ್ಷಕರುಗಳಿಗೆ ಅವರುಗಳು ಸಲ್ಲಿಸಿರುವ ಪ್ರತಿ ವರ್ಷದ ಸೇವೆಗೆ ಶೇಕಡ 2 ರಷ್ಟು ಕೃಪಾಂಕವನ್ನು ಅವರುಗಳು ಪಡೆದ ಸರಾಸರಿ ಶೇಕಡ ಅಂಕಕ್ಕೆ ಸೇರಿಸಿ ಆಯ್ಕೆ ಮಾಡಲಾಗುವುದು. ಇಂತಹ ಅಭ್ಯರ್ಥಿಗಳಿಗೆ ವಯೋಮಿತಿಯ ನಿರ್ಬಂಧವಿರುವುದಿಲ್ಲ.

ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ತರಬೇತಿ ಪಡೆದ ನಿರುದ್ಯೋಗಿ ಶಿಕ್ಷಕರ ಸಂಘದವರು ವಿಧಾನ ಸೌಧದ ಮುಂದೆ ಧರಣಿ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ. ಈ ಬಗ್ಗೆ ಸದರಿ ಸಂಘದವರು ಸರ್ಕಾರಕ್ಕೆ ಯಾವುದೇ ಸೂಚನೆಯನ್ನು : ಮನವಿಯನ್ನು ಸಲ್ಲಿಸಿರುವುದಿಲ್ಲ.

ಚುನಾವಣಾ ಪ್ರಸ್ತಾವಗಳು

ಶ್ರೀ ಧರ್ಮಸಿಂಗ್ (ಕಂದಾಯ ಸಚಿವರು) : (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರ ಪರವಾಗಿ) : ಮಾನ್ಯ ಉಪಾಧ್ಯಕ್ಷರೆ,

ಅ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ 265(1)ನೇ ನಿಯಮದ ಅನುಸಾರವಾಗಿ ಈ ಸಭೆ ಸಾರ್ವಜನಿಕ ಲೆಕ್ಕ ಪತ್ರಗಳ ಸಮಿತಿ ಹನ್ನೆರಡು ಜನ ಸದಸ್ಯರನ್ನು ಚುನಾಯಿಸಬೇಕು.

ಆ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ 268(1)ನೇ ನಿಯಮದ ಅನುಸಾರವಾಗಿ ಈ ಸಭೆ ಅಂದಾಜುಗಳ ಸಮಿತಿಗೆ ಹದಿನೈದು ಜನ ಸದಸ್ಯರನ್ನು ಚುನಾಯಿಸಬೇಕು.

ಇ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ 271(1)ನೇ ನಿಯಮದ ಅನುಸಾರವಾಗಿ ಈ ಸಭೆ ಸಾರ್ವಜನಿಕ ಉದ್ದಿಮೆಗಳ ಸಮಿತಿಗೆ ಒಂಬತ್ತು ಜನ ಸದಸ್ಯರನ್ನು ಚುನಾಯಿಸಬೇಕು.

ಈ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ 272(1)ನೇ ನಿಯಮದ ಅನುಸಾರವಾಗಿ ಈ ಸಭೆ ಹಕ್ಕು ಭಾದ್ಯತ ಸಮಿತಿಗೆ ಏಳು ಜನ ಸದಸ್ಯರನ್ನು ಚುನಾಯಿಸಬೇಕು.

ಉ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ 277(1)ನೇ ನಿಯಮದ ಅನುಸಾರವಾಗಿ ಈ ಸಭೆ ಅಧೀನ ಶಾಸನ ಸಮಿತಿಗೆ ಎಂಟು ಜನ ಸದಸ್ಯರನ್ನು ಚುನಾಯಿಸಬೇಕು.

ಊ)ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ 282(1)ನೇ ನಿಯಮದ ಅನುಸಾರವಾಗಿ ಈ ಸಭೆ ಸರ್ಕಾರಿ ಭರವಸೆಗಳ ಸಮಿತಿಗೆ ಎಂಟು ಜನ ಸದಸ್ಯರನ್ನು ಚುನಾಯಿಸಬೇಕು.

ಋ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ 283(1)ನೇ ನಿಯಮದ ಅನುಸ್ಸಾರವಾಗಿ ಈ ಸಭೆ ಖಾಸಗೀ ಸದಸ್ಯರ ವಿಧೇಯಕಗಳ ಹಾಗೂ ನಿರ್ಣಯಗಳ ಸಮಿತಿಗೆ ಹತ್ತು ಜನ ಸದಸ್ಯರನ್ನು ಚುನಾಯಿಸಬೇಕು.

ೠ)ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ 286(1)ನೇ ನಿಯಮದ ಅನುಸಾರವಾಗಿ ಈ ಸಭೆ ಅನುಸೂಚಿತ ಹಾಗೂ ಅನುಸೂಚಿತ ವರ್ಗಗಳ ಕಲ್ಯಾಣ ಸಮಿತಿಗೆ ಒಂಭತ್ತು ಜನ ಸದಸ್ಯರನ್ನು ಚುನಾಯಿಸಬೇಕು.

ಎ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ 288ನೇ ನಿಯಮದ ಅನುಸಾರವಾಗಿ ಈ ಸಭೆ ಹಿಂದುಳಿದ ವರ್ಗಗಳ ಕಲ್ಯಾಣ ಸಮಿತಿಗೆ ಒಂಭತ್ತು ಜನ ಸದಸ್ಯರನ್ನು ಚುನಾಯಿಸಬೇಕು.

ಏ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ 353(2)ನೇ ನಿಯಮದ ಅನುಸಾರವಾಗಿ ಈ ಸಭೆ ವಸತಿ ಸೌಕರ್ಯಗಳ ಸಮಿತಿಗೆ ಎಂಟು ಜನ ಸದಸ್ಯರನ್ನು ಚುನಾಯಿಸಬೇಕು.

ಉಪಾಧ್ಯಕ್ಷರು : ಸದನದ ಸಮಿತಿಗಳ ಚುನಾವಣಾ ಪ್ರಸ್ತಾವವನ್ನು ಸದನದ ಮುಂದೆ ಮಂಡಿಸಲಾಯಿತು.

ಪ್ರಕಟಣೆ

ಸದಸ್ಯರ ಗೈರು ಹಾಜರಿಗೆ ಅನುಮತಿ ಕೋರಿಕೆ

ಉಪಾಧ್ಯಕ್ಷರು : ವಿಧಾನ ಸಭಾ ಸದಸ್ಯರಾದ ಶ್ರೀ ಅಲ್ಲಂ ವೀರಭದ್ರಪ್ಪ ಅವರು ದಿನಾಂಕ : 21-3-1994 ರಿಂದ ಆಯವ್ಯಯ ಉಪವೇಶನ ಮುಗಿಯುವವರೆಗೆ ಗೈರು ಹಾಜರಾಗಲು ಅನುಮತಿಯನ್ನು ಕೋರಿ ಪತ್ರವನ್ನು ಬರಿದಿರುತ್ತಾರೆ.

"ಶ್ರೀ ಅಲ್ಲಂ ವೀರಭದ್ರಪ್ಪರವರಿಗೆ ದಿನಾಂಕ : 21-3-1994ರಿಂದ ಆಯ-ವ್ಯಯ ಅಧಿವೇಶನದ ಅಂತ್ಯದವರೆಗೂ ವಿಧಾನ ಸಭೆಯ ಉಪವೇಶನಗಳಿಗೆ ಗೈರು ಹಾಜರಾಗಲು ಅನುಮತಿ ಕೊಡಬೇಕೆಂದು ಸದನವು ಅಪೇಕ್ಷಿಸುತ್ತದೆಯೆ"

(ಯಾವ ಸದಸ್ಯರೂ ವಿರೋಧ ವ್ಯಕ್ತಪಡಿಸಲಿಲ್ಲ)

ಉಪಾಧ್ಯಕ್ಷರು : ಮಾನ್ಯ ಸದಸ್ಯರಾದ ಶ್ರೀ. ಅಲ್ಲಂ ವೀರಭದ್ರಪ್ಪರವರಿಗೆ ಮೇಲ್ಕಂಡ ದಿನಾಂಕದಿಂದ ಗೈರು ಹಾಜರಾಗಲು ಅನುಮತಿಯನ್ನು ನೀಡಲಾಗಿದೆ.

ಉಪಾಧ್ಯಕ್ಷರು : ಸಾಮಾನ್ಯವಾಗಿ ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆಯನ್ನು ವಿರೋಧ ಪಕ್ಷದ ನಾಯಕರು ಪ್ರಾರಂಭಿಸಬೇಕಾಗುತ್ತದೆ. ಆದರೆ ಕಾರಣಾಂತರಗಳಿಂದ ಇಂದಿನ ಸಭೆ ಮುಗಿಯುವವರೆಗೆ ಅವರನ್ನು ಸದನದಿಂದ ಹೊರಗೆ ಹಾಕಿದ್ದರಿಂದ ಅವರು ಇಂದು ಪ್ರಾರಂಭಿಕ ಭಾಷಣ ಮಾಡಲು ಸಾಧ್ಯವಾಗುವುದಿಲ್ಲ. ಅವರು ನಾಳೆ ಸದನಕ್ಕೆ ಹಾಜರಾಗಿ ಸದನದ ಕಾರ್ಯಕಲಾಪಗಳಲ್ಲಿ ಸಕ್ರೀಯವಾಗಿ ಭಾಗವಹಿಸುತ್ತಾರೆಂಬ ನಂಬಿಕೆಯಿಂದ ಇಂದಿನ ಸಭೆಯನ್ನು ಮುಂದೂಡಲಾಗಿದೆ.

ಸದನದ ಕಲಾಪ ಮುಂದೂಡಿ ಮತ್ತೆ ನಾಳೆ ಬೆಳಿಗ್ಗೆ 9.30ಕ್ಕೆ ಸೇರುತ್ತದೆ.

(ಸದನವು ಸಂಜೆ 4 ಗಂಟೆ 15 ನಿಮಿಷಕ್ಕೆ ಮುಕ್ತಾಯವಾಗಿ ಪುನಃ ದಿನಾಂಕ 25ನೇ ಮಾರ್ಚ್ 1994 ರ ಶುಕ್ರವಾರದಂದು ಬೆಳಿಗ್ಗೆ 9 ಗಂಟೆ 30 ನಿಮಿಷಕ್ಕೆ ಸೇರಲು ನಿಶ್ಚಯಿಸಿತು.)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)

ಅಧ್ಯಕ್ಷರು : ನಾನು ಹೇಳುತ್ತಿದ್ದೇನೆ ದಯವಿಟ್ಟು ಕೇಳಿ ಪ್ರಶ್ನೋಕೋತ್ತರ ಮುಗಿದ ಮೇಲೆ ನಾನು ತಮಗೆ ಅವಕಾಶ ಮಾಡಿಕೊಡುತ್ತೇನೆ. ತಾವು ಈರೀತಿ ಮಾಡಿದರೆ ಹೇಗೆ?

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ : ಮಂಡಲ್ ಕಮೀಷನ್ ನೇಮಕ ಆಯಿತು. ಅದರ ರಿಪೋರ್ಟ್ ಬಂತು ಇಂದಿರಾಗಾಂಧಿ ಪ್ರಧಾನಿಯಾಗಿದ್ದಾಗ ಅದು ಮೂಲೆ ಗುಂಪು ಆಯಿತು. ಆವಾಗ ಮಾನ್ಯ ಮುಖ್ಯಮಂತ್ರಿಗಳು ಏನು ಮಾಡುತ್ತಿದ್ದರು?

ಅಧ್ಯಕ್ಷರು : ದೇಶಪಾಂಡೆಯವರೇ ತಾವು ನನ್ನ ಮಾತನ್ನು ಕೇಳಬೇಕು.

ಶ್ರೀ ಆರ್. ವಿ. ದೇಶಪಾಂಡೆ : ಇಲ್ಲಿ ಸಾಮಾಜಿಕ ನ್ಯಾಯ ಹಿಂದುಳಿದ ವರ್ಗಕ್ಕೆ ನಾವು ಕೊಟ್ಟಿದ್ದಾದರೂ ಏನು?

ಅಧ್ಯಕ್ಷರು : ತಮ್ಮ ಪ್ರಸ್ತಾವನೆಗೆ ನಾನು ಅವಕಾಶ ಮಾಡಿಕೊಡುತ್ತೇನೆ..

ಶ್ರೀ ಆರ್. ವಿ. ದೇಶಪಾಂಡೆ : ಆ ಕೀರ್ತಿ ನಮ್ಮ ಪಕ್ಷಕ್ಕೆ ಬರಬೇಕಾಗಿದೆ. ಇವರು ಮತ್ತು ಬಿ.ಜೆ.ಪಿ.ಯವರು ಶಾಮೀಲಾಗಿ ....

(ಗೊಂದಲ)

ಅಧ್ಯಕ್ಷರು : ದೇಶಪಾಂಡೆಯವರೇ ನಾನು ತಮಗೆ ಅವಕಾಶ ಮಾಡಿಕೊಡುತ್ತೇನೆ. ಆಗ ತಾವು ಏನು ಹೇಳಬೇಕೋ ಅದನ್ನು ಹೇಳಿ. ವಿರೋಧ ಪಕ್ಷದ ನಾಯಕರೇ ನಾನು ಹೇಳುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು : ನೋಡಿ ದೇಶಪಾಂಡೆಯವರೇ ನಾನು ಆತ್ಮೀಯತೆಯಿಂದ ಹೇಳುತ್ತಿದ್ದೇನೆ ತಾವು ಈ ರೀತಿ ಮಾಡುವುದು ಸರಿಯಲ್ಲ. ಇದನ್ನು ನಾನು ಒಪ್ಪುವುದಿಲ್ಲ. ತಾವು ಈ ರೀತಿ, ನನ್ನ ಮಾತಿಗೆ ....

(ಗೊಂದಲ)

ಅಧ್ಯಕ್ಷರು : ಕೇಳಿ ಸ್ವಾಮಿ ನಾನು ಅವಕಾಶ ಮಾಡಿಕೊಡುತ್ತೇನೆ. ತಮ್ಮದು ಏನುವಾದ ಇದೆ ಅದಕ್ಕೆ ನಾನು ಅವಕಾಶ ಮಾಡಿಕೊಡುತ್ತೇನೆ ಸ್ವಾಮಿ. ಪ್ರಶ್ನೋತ್ತರ ಮುಗಿಯಲಿ ನಾನು ಅವಕಾಶ ಮಾಡಿಕೊಡುತ್ತೇನೆ. ಸಂತೋಷದಿಂದ ತಾವು ನನಗೆ ಹೇಳಿ. ಆದರೆ ತಾವು ಹೀಗೆ ಕಲಾಪಕ್ಕೆ ಅಡ್ಡಿ ಮಾಡುವುದು ಸರಿಯಲ್ಲ.

(ಗೊಂದಲ)

ಅಧ್ಯಕ್ಷರು : ಅದು ಏನೇ ಇರಲಿ ತಾವು ಪ್ರಶ್ನೋತ್ತರ ನಂತರ ಪ್ರಸ್ತಾವನೆ ಮಾಡಿ ಮಾನ್ಯ ವಿರೋಧಪಕ್ಷದ ನಾಯಕರು ನಾನು ಹೇಳುವುದನ್ನು ಅಮಾನ್ಯ ಮಾಡುವುದು ಸರಿಯಲ್ಲ ಇದು. ನಾನು ತಮಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ ......

(ಗೊಂದಲ)

ಅಧ್ಯಕ್ಷರು : ಈಗ ನಾನು ಪ್ರಶ್ನೋತ್ತರ ಪ್ರಾರಂಭಿಸುತ್ತಿದ್ದೇನೆ. ಪ್ರಶ್ನೋತ್ತರ ನಂತರ ತಮ್ಮದು ತೆಗೆದುಕೊಳ್ಳುತ್ತೇನೆ.

(ಗೊಂದಲ)

ಅಧ್ಯಕ್ಷರು : ಎಲ್ಲರೂ ಕುಳಿತುಕೊಳ್ಳಿ.

ಅಧ್ಯಕ್ಷರು : ನಾನು ತಮಗೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಇದಕ್ಕೆ ಒಂದು ಪರಿಹಾರ ಕಂಡು ಹಿಡಿಯೋಣ ಅಂತ.

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ : ತಮ್ಮ ಪಾರ್ಟಿಯವರು 7 ದಿವಸ ಸದನದ ಕಾರ್ಯಕಲಾಪಗಳನ್ನು ಹಾಳು ಮಾಡಿದರು ಅದರ ಬಗ್ಗೆ ತಾವು ಏನು ಮಾಡಿದಿರಿ? ದಯಮಾಡಿ ತಪ್ಪು ತಿಳಿದುಕೊಳ್ಳಬಾರದು . ನಮ್ಮ ಬೇಡಿಕೆಗಳು ಎಲ್ಲಿಯವರೆಗೂ ಈಡೇರಿಸುವುದಿಲ್ಲ ಅಲ್ಲಿಯವರೆಗೂ ನಮ್ಮ ಗಲಾಟೆ ನಡೆಯುತ್ತದೆ. ನಮ್ಮ ಮನಸ್ಸಿನಲ್ಲಿ ಕಲಾಪ ಅಡ್ಡಿಮಾಡಬೇಕೆನ್ನುವ ಇಚ್ಛೆ ಇಲ್ಲ, ಚರ್ಚೆ ಮಾಡಲಿಕ್ಕೆ ಹಲವಾರು ವಿಷಯಗಳು ಇವೆ. ಆದರೆ ಮಾನ್ಯ ಮುಖ್ಯಮಂತ್ರಿಗಳಿಗೆ ಪುನಃ ನಾನು ವಿನಂತಿ ಮಾಡುತ್ತಿದ್ದೇನೆ. ಅವರು ನಮ್ಮ ಎರಡು ಬೇಡಿಕೆಗಳನ್ನು ಒಪ್ಪಿಕೊಳ್ಳಲಿ. ಆದರೆ ತಾವು ನಮ್ಮ ಇಲ್ಲದಿರುವಿಕೆಯಲ್ಲಿ ಈ ರೀತಿಯ ಆಪಾದನೆಗಳು ಮಾಡುವುದು ಸರಿಯಲ್ಲ.

ಅಧ್ಯಕ್ಷರು : ಅದಕ್ಕೆ ನಾನು ತಮಗೆ ಆಸ್ಪದ ಮಾಡಿಕೊಡುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯ ಮಂತ್ರಿಗಳು) : ಸದನಸಮಿತಿಯನ್ನು ಮಾಡಲಿಕ್ಕೆ ನಾನು ಈಗಾಗಲೇ ಒಪ್ಪಿಕೊಂಡಿದ್ದೇನೆ. ತಾವು ಏನಾದರೂ ಪರಿಹಾರ ಕಂಡುಹಿಡಿಯುವುದಿದ್ದರೆ ತಮ್ಮ ಛೇಂಬರ್ಸ್‌ಗೆ ಕರೆಸಿ ತಾವು ಮಾತನಾಡಿ ಆದರೆ ಪ್ರಶ್ನೋತ್ತರ ವೇಳೆಯಲ್ಲಿ ತಾವು ದಿನ ಈ ರೀತಿ ಮಾಡುವುದು ಸರಿಯಲ್ಲ .

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ, ಈ ಸದನಕ್ಕೆ ಒಂದು ಮಹತ್ತರವಾದ ಗೌರವ ಇದೆ. ನಿನ್ನೆಯ ದಿವಸ ನಾನು ಮಾತನಾಡುವಾಗ ಈ ಸದನವನ್ನು ತಪ್ಪುದಾರಿಗೆ ಎಳೆಯಬೇಕು ಅಂತ ಆಗಲಿ ಅಥವಾ ಈ ಸದನವನ್ನು ದುರುಪಯೋಗ ಮಾಡಿಕೊಳ್ಳಬೇಕು ಅಂತ ಆಗಲೀ ಎದ್ದು ನಿಂತವನಲ್ಲ, ತಮ್ಮಲ್ಲಿ ಮನವಿ ಮಾಡಿಕೊಂಡು ದಯವಿಟ್ಟು ನನಗೆ ಒಂದು ಅವಕಾಶ ಕೊಡಬೇಕು ಅಂತ ಹೇಳಿ. ಆಗ ವಿನಾ ಕಾರಣ ಕರುಣೆ ಇಲ್ಲದೆ ನನ್ನನ್ನು ಇಲ್ಲಿಂದ ಎತ್ತಿ ಹೊರಗೆ ಹಾಕಿಸಿದಿರಿ. ನಾವು ಏನು ಮಾಡಿದ್ದೆವು ಸ್ವಲ್ಪ ಹೇಳಿ. ನಾನು ಏನೂದರೂ ಈ ಸದನದಲ್ಲಿ ತಪ್ಪು ಮಾಡಿದ್ದೇನೆಯೇ ಎಲ್ಲರಿಗೂ ಒಂದು ಮಂತ್ರ ಮಾಡಿದಿರಿ. ಈಗ ಈ ಸದನ ನಡೆಯಬೇಕು ಎನ್ನತಕ್ಕಂಥಾದ್ದು ನಮ್ಮ ಇಚ್ಛೆ. ಆದರೆ ನಿಮ್ಮಿಬ್ಬರ ಗೊಂದಲ ನೋಡಿ ಒಂದು ಕಡೆ ಕಾಂಗ್ರೆಸ್ಸಿನವರು ಒಂದು ಕಡೆ ಜನತಾದಳದವರು ನಮ್ಮ ಮೇಲೆ ಅವರು ನಿಮ್ಮ ಆಮೇಲೆ ಅವರು ಆರೋಪಣೆ ಮಾಡುತ್ತಿದ್ದೀರಿ. ಈ ಸದನದಲ್ಲಿ ನಾವು ಕುಳಿತುಕೊಳ್ಳಬೇಕೇ ಅಥವಾ ಬಿಡಬೇಕೇ ಎನ್ನತಕ್ಕಂಥ ಅತ್ಯಂತ ಶೋಚನೀಯವಾದ ಪರಿಸ್ಥಿತಿ ಉಂಟಾಗಿದೆ ಈ ರಾಜ್ಯದ ಜನತೆ ಈ ಸದನದ ಪರಿಸ್ಥಿತಿಯನ್ನು ನೋಡುತ್ತಿದ್ದಾರೆ.

ಅಧ್ಯಕ್ಷರು : ನಾನು ಪ್ರಶ್ನೋತ್ತರ ಶುರು ಮಾಡುತ್ತಿದ್ದೇನೆ. ಆಮೇಲೆ ನಾನು ತಮಗೆ ಅವಕಾಶ ಕೊಡುತ್ತಿದ್ದೇನೆ. ಆದರೆ ಈ ರೀತಿ ನಾವು ಯಾವಾಗಲೂ ನಡೆಸಿಕೊಂಡು ಬಂದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ತಾಲ್ಲೂಕು ಪಂಚಾಯತ್ ಮತ್ತು ಜಿಲ್ಲಾಪಂಚಾಯತ್ ಚುನಾವಣೆಗಳನ್ನು ಮುಂದೆ ಹಾಕಿ ಈ ಸದನವನ್ನು ತಪ್ಪುದಾರಿಗೆ ಎಳೆದಿದ್ದಾರೆ. ಈ

ಸದನದ ಹಕ್ಕಿಗೆ ಚ್ಯುತಿ ತಂದಿದ್ದಾರೆ, ನಾವು ಇವರ ಕಾದಾಟದಲ್ಲಿ ಇಲ್ಲಿ ಕುಳಿತುಕೊಳ್ಳತಕ್ಕಂಥ ಪರಿಸ್ಥಿತಿ ಇದೆಯೇ? ನಾವು ಸಭಾತ್ಯಾಗ ಮಾಡಬೇಕಾಗುತ್ತದೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಇಡೀ ರಾಜ್ಯದಲ್ಲಿ ಅನೇಕ ಜ್ವಲಂತ ಸಮಸ್ಯೆಗಳು ಇವೆ. ಇದರ ಬಗ್ಗೆ ನಾವು ಈಗಾಗಲೇ ಪ್ರತಿಭಟನೆ ಮಾಡಿದ್ದೇವೆ. ತಾಲ್ಲೂಕು ಪಂಚಾಯಿತಿ ಜಿಲ್ಲಾ ಪಂಚಾಯಿತಿ ಚುನಾವಣೆಗಳನ್ನು ಸರ್ಕಾರ ಮುಂದೆ ಹಾಕಿದ್ದರ ಬಗ್ಗೆ ನಾವು ಈಗಾಗಲೇ ಪ್ರತಿಭಟನೆ ಮಾಡಿದ್ದೇವೆ. ಜನತಾ ದಳ ಮತ್ತು ಕಾಂಗ್ರೆಸ್ಸ್ ಇವರು ಇಬ್ಬರು ಸೇರಿ ಸದನವನ್ನು ನಡೆಯುವುದಕ್ಕೆ ಬಿಡುತ್ತಿಲ್ಲ ಇಡೀ ರಾಜ್ಯದಲ್ಲಿ ಅನೇಕ ಸಮಸ್ಯೆಗಳು ಇವೆ ಈ ಸಮಸ್ಯೆಗಳ ಬಗ್ಗೆ ಚರ್ಚೆಯಾಗಬೇಕಾದಂತಹ ಸಂದರ್ಭದಲ್ಲಿ ಸದನದಲ್ಲಿ ಅವಕಾಶ ಆಗುತ್ತಿಲ್ಲ..

(ಗೊಂದಲ)

ಅಧ್ಯಕ್ಷರು : ನಾಗರಾಜ್‌ರವರೇ, ಪ್ರೊಫೆಸರ್ ನಂಜುಂಡಸ್ವಾಮಿಯವರೇ ತಾವು ತಮ್ಮ ಸ್ಥಳಗಳಿಗೆ ಹೋಗಿ ಮಾತನಾಡಿ .....

(ಗೊಂದಲ)

(ಸನ್ಮಾನ್ಯ ಸದಸ್ಯರುಗಳಾದ ಶ್ರೀ ವಾಟಾಳ್ ನಾಗರಾಜ್, ಕೆ. ಈಶ್ವರಪ್ಪ, ಕಮ್ರೂಲ್‌ಇಸ್ಲಾಂ, ಪ್ರೊ:ನಂಜುಂಡಸ್ವಾಮಿ, ಇವರುಗಳು ಅಧ್ಯಕ್ಷರ ಪೀಠದ ಹತ್ತಿರ ಬಂದು ನಿಂತಿದ್ದರು.)

ಅಧ್ಯಕ್ಷರು : ದಯಮಾಡಿ ತಾವುಗಳು ತಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಂಡು ಕಾರ್ಯಕಲಾಪಗಳನ್ನು ನಡೆಸಲು ಸಹಕಾರ ನೀಡಿ.

ಶ್ರೀ ವಾಟಾಳ್ ನಾಗರಾಜ್ : ಚುನಾವಣೆಗಳನ್ನು ಮುಂದಕ್ಕೆ ಹಾಕಿದರ ಬಗ್ಗೆ ಚರ್ಚೆಗೆ ಅವಕಾಶ ಕೊಡುವುದಾದರೆ ನಮ್ಮ ಸ್ಥಳಗಳಿಗೆ ಹಿಂದಿರುಗುತ್ತೇವೆ.

ಅಧ್ಯಕ್ಷರು : ಮೊದಲು ನೀವುಗಳು ನಿಮ್ಮ ಸ್ಥಳಗಳಿಗೆ ಹೋಗಿ ಮಾತನಾಡಬಹುದಲ್ಲ!

ಶ್ರೀ ಕೆ. ಎಸ್. ಈಶ್ವರಪ್ಪ : ಯಾವುದೇ ಕಲಾಪಗಳು ನಡೆಯುವುದಕ್ಕೆ .....

ಶ್ರೀ ವಾಟಾಳ್ ನಾಗರಾಜ್ : ತಾವುಗಳು ಪ್ರಶ್ನೋತ್ತರ ವೇಳೆಯನ್ನು ಬದಿಗಿರಿಸಿ ಚುನಾವಣೆಗಳನ್ನು ಮುಂದೂಡಿದ ಬಗ್ಗೆ ಚರ್ಚೆಗೆ ಅವಕಾಶವನ್ನು ಕೊಡುತ್ತೇನೆ ಎಂದು ಹೇಳಿದರೆ ನಾನು ನಮ್ಮ ಸ್ಥಳಗಳಿಗೆ ಹೋಗುತ್ತೇವೆ.

ಶ್ರೀ ಕೆ. ಎಸ್. ಈಶ್ವರಪ್ಪ : ಜಿಲ್ಲಾಪರಿಷತ್, ಪಂಚಾಯತ್ ಸಮಿತಿಗಳ ಚುನಾವಣೆಗಳನ್ನು ಮುಖ್ಯ ಮಂತ್ರಿಯವರು ರಾಜ್ಯದಲ್ಲಿ ಶಾಂತಿ ಇಲ್ಲ ಎಂಬ ಕಾರಣಕ್ಕಾಗಿ ಮುಂದಕ್ಕೆ ಹಾಕಿದ್ದಾರೆ ...

ಅಧ್ಯಕ್ಷರು : ತಾವುಗಳು ಸ್ಥಳಕ್ಕೆ ಹೋಗಿ ಮಾತನಾಡಿ. ನಿಮ್ಮ ಪ್ರತಿಪಾದನೆ ಏನಿದೆ ಅದನ್ನು ಅಲ್ಲಿಂದ ಹೇಳಿ, ನಾನು ಬೇಡ ಎಂದು ಹೇಳುವುದಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಮುಖ್ಯಮಂತ್ರಿಯವರು ನಿನ್ನೆಯ ದಿನ ನಮ್ಮನ್ನು ಸಭೆಯಿಂದ ಎತ್ತಿಹಾಕಿಸಿದರು.....

ಶ್ರೀ ಕೆ.ಎಸ್. ಈಶ್ವರಪ್ಪ : ಮಂಡಳ ಪಂಚಾಯತಿ, ಜಿಲ್ಲಾ ಪಂಚಾಯತಿ, [illegible] [illegible] ಚುನಾವಣೆಗಳ ಬಗೆ ಮಾತನಾಡಲು ಅವಕಾಶ ಕೊಡಿ.

ಅಧ್ಯಕ್ಷರು : ನಿಮ್ಮ ಡೆಪ್ಯುಟಿ ಲೀಡರ್ ಏನು ಹೇಳುತ್ತಾರೆ ಅದನ್ನು ಕೇಳಿ.. ಎಲ್ಲರೂ ತಮ್ಮ ಸ್ಥಳಗಳಿಗೆ ಹೋಗಿ ನಿಮಗೆ ಏನು ಹೇಳ ಬೇಕೆಂದಿದೆಯೋ ಅದನ್ನು ಹೇಳಿ.

(ಅಧ್ಯಕ್ಷ ಪೀಠದ ಬಳಿ ನಿಂತಿದ್ದ ಮಾನ್ಯ ಸದಸ್ಯರುಗಳು ತಮ್ಮ ಸ್ಥಾನಗಳಿಗೆ ಹಿಂದಿರುಗಿದರು)

+ ಶ್ರೀ ರಾಮಕೃಷ್ಣ ಹೆಗಡೆ (ಬಸವನಗುಡಿ) : ಮಾನ್ಯ ಅಧ್ಯಕ್ಷರೇ, ತಮ್ಮ ಮುಖಾಂತರವಾಗಿ ಮುಖ್ಯಮಂತ್ರಿಯವರಲ್ಲಿ ಮತ್ತು ಸರಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಪ್ರಶ್ನೋತ್ತರದ ಸಮಯದಲ್ಲಿ ಇಂಥ ಮಹತ್ತರ ವಿಷಯವನ್ನು ಎತ್ತಿರತಕ್ಕಂಥದ್ದು ಇದೇನು ಮೊದಲನೇ ಸಲ ಅಲ್ಲ. ನಿಮಗೆ ನೆನಪಿಲ್ಲ ಅಂದರೆ ನಾನು ಅದನ್ನು ನೆನಪಿಸ ಬಯಸುತ್ತೇನೆ. ನಿನ್ನೆ ವಿರೋಧ ಪಕ್ಷದವರು ಮೂರು ಬೇಡಿಕೆಗಳನ್ನು ಇಟ್ಟಿದ್ದರು. ಮೊದಲನೇಯದು ಏನು ಗೋಲಿಬಾರ್ ಆಯಿತು, ಅದರ ವಿಚಾರದಲ್ಲಿ ನೈತಿಕ ಹೊಣೆಯನ್ನು ಹೊತ್ತು ಗೃಹಮಂತ್ರಿಗಳಾಗಿರತಕ್ಕಂಥ ಮುಖ್ಯ ಮಂತ್ರಿಯವರು ರಾಜೀನಾಮೆಯನ್ನು ಕೊಡಬೇಕು. ಅಂತ ಎರಡನೇಯದು ಮೀಸಲಾತಿ ವಿಚಾರದಲ್ಲಿ ಉಂಟಾದ ಗೊಂದಲ ಏನಿದೆ, ಅದರ ಬಗ್ಗೆ ವಿಚಾರ ನಡೆಸಲು ಸಮಿತಿಯನ್ನು ನೇಮಿಸಬೇಕು. ಮೂರನೇಯದು ಗೋಲೀಬಾರ್‌ನಿಂದ ಸತ್ತಂಥ, ಅಮೂಲ್ಯ ಜೀವಗಳ ಹರಣ ಏನಾಗಿದೆ ಅದರ ವಿಚಾರದಲ್ಲಿ ಏನು ಸತ್ಯ ಇದೆ ಎಂಬುದನ್ನು ತಿಳಿದುಕೊಳ್ಳಲು ನ್ಯಾಯಾಂಗ ತನಿಖೆಯಾಗಬೇಕು. ಈಗ ಈ ಮೂರು ಬೇಡಿಕೆಗಳಲ್ಲಿ ಮೊದಲನೇ ಬೇಡಿಕೆಯನ್ನು ತಳ್ಳಿ ಹಾಕಿದ್ದರು. ಅದಕ್ಕೆ ನನ್ನ ಆಕ್ಷೇಪವಿಲ್ಲ, ಗೃಹಖಾತೆಗೆ ಗೃಹಮಂತ್ರಿಗಳು ಪ್ರತ್ಯೇಕವಾಗಿ ಇದ್ದಿದ್ದರೆ ಆವಾಗ ನಾವು ಅವರ ರಾಜೀನಾಮೆ ಬಗ್ಗೆ ಹಠ ಹಿಡಿಯುತ್ತಾ ಇದ್ದೆವು. ಆದರೆ ಮುಖ್ಯಮಂತ್ರಿಗಳೇ ಗೃಹಮಂತ್ರಿಗಳಾಗಿರುವುದರಿಂದ ನಾವು ತಾತ್ಕಾಲಿಕವಾಗಿ ಅಷ್ಟಕ್ಕೆ ಬಿಟ್ಟಿದ್ದೇವೆ. ಎರಡನೇ ಬೇಡಿಕೆ ಬಗ್ಗೆ ಸದನದ ಸಮಿತಿಯನ್ನು ನೇಮಕ ಮಾಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಯವರು ಒಪ್ಪಿಕೊಂಡಿದ್ದಾರೆ. ನಾನು ಅವರಲ್ಲಿ ಇಷ್ಟೇ ಅರಿಕೆ ಮಾಡಿಕೊಳ್ಳುತ್ತಿದ್ದೇನೆ. ನ್ಯಾಯಾಂಗ ತನಿಖೆ ಮಾಡುವುದಕ್ಕೆ ಸರಕಾರಕ್ಕೆ ಸಂಕೋಚ ಏಕೆ? ಅಲ್ಲಿ ಪೊಲೀಸರಿಂದ ಅನ್ಯಾಯವಾಗಿದೆ, ಏಳು ಜನ ಅಮಾಯಕರ ಹತ್ಯೆ ಏನಾಯಿತು, ಆ ವಿಚಾರದ ಬಗ್ಗೆ ನಿಮ್ಮ ಮನಸ್ಸಿನಲ್ಲೇನಾದರೂ ಕೊರೆಯುತ್ತಾ ಇದೆಯೇ? ನನಗನ್ನಿಸಿದ ಪ್ರಕಾರ ಕೊರೆಯುತ್ತಾ ಇಲ್ಲ. ಒಂದು ವೇಳೆ ಕೊರೆಯುತ್ತಾ ಇದ್ದರೂ ಕೂಡ ಪೊಲೀಸರ ತಪ್ಪು ಇದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಲೇ ಬೇಕು. ಈ ಬಗ್ಗೆ ನಾನು ಎಷ್ಟು ಉದಾಹರಣೆಗಳನ್ನು ಕೊಡಲಿ, ಒಂದು ಉದಾಹರಣೆಯನ್ನು ಕೊಡುತ್ತೇನೆ. ನೀವು ವಿರೋಧ ಪಕ್ಷದ ನಾಯಕರಾಗಿದ್ದಾಗ ಒಂದು ವಿಚಾರ ಬಂತು. ಆಗ ನಾನು ನ್ಯಾಯಾಂಗ ತನಿಖೆ ಮಾಡಿಸುತ್ತೇನೆ ಎಂದು ಹೇಳಿದ್ದೇನೆ. ತಾವುಗಳು ಕೇಳಿದ್ದಕ್ಕೆ ಆ ವಿಚಾರದಲ್ಲಿ ನ್ಯಾಯಾಂಗ ತನಿಖೆ ಮಾಡಿಸುತ್ತೇನೆ ಎಂದು ಹೇಳಿದ್ದೇನೆ. ಮಾನ್ಯ ವಿರೋಧಪಕ್ಷದ ನಾಯಕರು ಒಪ್ಪಿಕೊಂಡಿದ್ದರಿಂದ ನಾನು ಮಾಡಿಸುತ್ತೇನೆಂದು ಹೇಳಿದ್ದೆ. ಈಗ ತಾವುಗಳು ಬುದ್ಧಿಚಾತುರ್ಯವನ್ನು ಅದೇ ರೀತಿಯಲ್ಲಿ ಹೃದಯವೈಶಾಲ್ಯತೆಯನ್ನು ಅದೇ ರೀತಿಯಲ್ಲಿ ತೋರಿಸಬಾರದೇಕೆ? ಎಲ್ಲಿ ಅಮಾಯಕ ಜನರ ಹತ್ಯೆಯಾಗುತ್ತದೆ, ಅಂಥ ಕಡೆಯಲ್ಲಿ ಸತ್ಯಾಂಶಗಳು ಹೊರಗಡೆ ಬರಬೇಕೋ? ಅಥವಾ ಬೇಡವೋ? ಈ ಕುರಿತು ಸರಕಾರದ ಕರ್ತವ್ಯ ಏನು? ಈಗ ನಾನು ಬಾಕಿ ವಿಚಾರಗಳಿಗೆ ಹೋಗುವುದಿಲ್ಲ. ಹಿಂದುಳಿದ ವರ್ಗಗಳ ಬಗ್ಗೆ ಯಾರಿಗೆ ಹೆಚ್ಚು ಕಳಕಳಿ ಇದೆ, ಯಾರಿಗೆ ಇಲ್ಲ ಎಂಬಿತ್ಯಾದಿ ವಿಚಾರಗಳು ಎಲ್ಲರಿಗೂ ಗೊತ್ತಿದ್ದ ವಿಚಾರಗಳೇ ಆಗಿವೆ. ಹಿಂದುಳಿದ ವರ್ಗಗಳ ಆಯೋಗವನ್ನು ನೇಮಿಸಿದವರು ಯಾರು? ಆಯೋಗದ ಶಿಫಾರಸ್ಸುಗಳು ಬಂದ ಮೇಲೆ ಹತ್ತು ವರ್ಷಗಳ ಕಾಲ ಅದನ್ನು ಆರ್ಕಾಯಿಸ್‌ನಲ್ಲಿ ಧೂಳು ತಿನ್ನುವುದಕ್ಕೆ ಬಿಟ್ಟವರು ಯಾರು? ಅದಾದ ಮೇಲೆ

ಅದನ್ನು ಇಂಪ್ಲಿಮೆಂಟ್ ಮಾಡುತ್ತೇವೆ ಎಂದು ಹೇಳಿದವರು ಯಾರು? ಆದಾದ ಮೇಲೆ ಅದರ ಬಗ್ಗೆ ಸರಕಾರವನ್ನು ಕಳೆದುಕೊಂಡವರು ಯಾರು? ಸುಪ್ರೀಂ ಕೋರ್ಟ್‌ನಲ್ಲಿ ವಾದವನ್ನು ಮಾಡಿದವರು ಯಾರು? ಇವುಗಳೆಲ್ಲವೂ ಜನರಿಗೆ ಗೊತ್ತು. ಆ ವಿಚಾರಗಳಿಗೆ ನಾನು ಹೋಗುವುದಿಲ್ಲ. ಇನ್ನು ಅಧಿವೇಶನ ಹೆಚ್ಚು ದಿವಸ ಇಲ್ಲ. ದಯವಿಟ್ಟು ಸಭೆಯ ಕಾರ್ಯಕಲಾಪಗಳನ್ನು ನಡೆಸಲೇ ಬೇಕು. ಅದನ್ನು ನಿಲ್ಲಿಸತಕ್ಕಂಥ ಮನಸ್ಸು ಕೂಡ ನಮಗಿಲ್ಲ. ಒಂದು ದುರ್ದೈವದ ವಿಚಾರ ಏನೆಂದರೆ ಇಲ್ಲಿ ಯಾವ ಸದಸ್ಯರೂ ಇಲ್ಲದೇ ಇದ್ದಾಗ ಮಾನ್ಯ ಮುಖ್ಯಮಂತ್ರಿಗಳು ವಿರೋಧಿ ಪಕ್ಷಗಳಿಂದ ಜನತಂತ್ರದ ಕಗ್ಗೊಲೆ..... ಎಂದು ಹೇಳಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಅದನ್ನು ನಾವು ನಿಮ್ಮಿಂದ ಕಲಿತದ್ದು. ತಾವುಗಳು ಈ ಕಡೆಯಲ್ಲಿ ಇರುವಾಗ ನಮ್ಮನ್ನು ಎತ್ತಿ ಹಾಕಿದ ಮೇಲೆ, ನಾವು ವಾಕ್‌ಔಟ್ ಮಾಡಿದ ಮೇಲೆ ಸಾವಿರಾರು ಪುಟಗಳ ಭಾಷಣವನ್ನು ತಾವು ಇಲ್ಲದಿದ್ದಾಗ ಮಾಡಿದ್ದೀರಿ. ಅದೇ ನೀವು ಹೇಳಿಕೊಟ್ಟ ಪಾಠವನ್ನು ಇವೊತ್ತು ನಾವು ಮಾಡುತ್ತಾ ಇದ್ದೇವೆ. ಆದ್ದರಿಂದ ತಮಗೆ ಈ ಬಗ್ಗೆ ಹೇಳತಕ್ಕಂಥ ನೈತಿಕ ಹಕ್ಕು ಇಲ್ಲವೇ ಇಲ್ಲ ಎಂದು ಹೇಳ ಬಯಸುತ್ತೇನೆ. ಆ ಇತಿಹಾಸದ ಪುಟಗಳನ್ನು ನಾವು ತಿರುಚಿ ಹಾಕುವುದಕ್ಕೆ ಹೋಗುವುದಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ : ಒಂದೊಂದು ಸಲ ಇತಿಹಾಸದ ಪುಟಗಳನ್ನು ತಿರುವಿ ಹಾಕುವುದು ಬಹಳ ಒಳ್ಳೆಯದು ಎಂದು ನಾನು ಹೇಳುತ್ತೇನೆ. ಆ ಮೂಲಕ ಆಗ ಆದಂಥ ಘಟನೆಗಳನ್ನು ಮತ್ತು ಈಗ ಆದಂಥ ಘಟನೆಗಳನ್ನು ನೋಡಬಹುದು. ಈಗಿನ ಘಟನೆಯಲ್ಲಿ ನೀವು ನಿನ್ನೆ ಎಲ್ಲಾ ಸದಸ್ಯರನ್ನು ಎತ್ತಿ ಹಾಕಿ, ಏನು ಹೇಳಿದ್ದೀರಿ? ನನ್ನ ಮತದಾರರ ಕ್ಷೇತ್ರ ಬಸವನಗುಡಿಯಲ್ಲಿ ಕಾರ್ಯಕ್ರಮ ಇತ್ತು ಅಲ್ಲಿಗೆ ಹೋಗಬೇಕಾಗಿತ್ತು ತಮ್ಮ ಭಾಷಣ ಕೇಳಿದ ಮೇಲೆ ಇಲ್ಲಿಗೆ ಬಂದಿದ್ದೇನೆ. ಆದ್ದರಿಂದ ನಾನು ಮುಖ್ಯಮಂತ್ರಿಯವರಲ್ಲಿ ದಯವಿಟ್ಟು ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ತಾವುಗಳು ಇದರ ಬಗ್ಗೆ ಹಠ ಮಾಡಬೇಡಿ. ಇದರಲ್ಲಿ ಪ್ರೆಸ್ಟೀಜ್ ಪ್ರಶ್ನೆ ಇಲ್ಲ. ಇದರಲ್ಲಿ ಸತ್ಯಾಂಶ ತಿಳಿದುಕೊಳ್ಳತಕ್ಕಂಥ ಅಗತ್ಯ ಇದೆ. ಆದ್ದರಿಂದ ಅದಕ್ಕೆ ಅವಕಾಶ ಮಾಡಿಕೊಡುತ್ತೀರಿ ಎಂಬ ವಿಶ್ವಾಸದಿಂದ ಅವರಲ್ಲಿ ಕಳಕಳಿಯ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ, ರಾಮಕೃಷ್ಣ ಹೆಗಡೆಯವರು ಬಹಳ ಹಿರಿಯರು. ಇಲ್ಲಿ ಏನಾಗಿದೆ ಅಂದರೆ, ಹಿರಿಯಕ್ಕನ ಚಾಳಿ ಮನೆ ಮಂದಿಗೆಲ್ಲಾ.... ಎಂಬ ಹಾಗೆ ಆಗಿದೆ.

ಶ್ರೀ ವಾಟಾಳ್ ನಾಗರಾಜ್ : ಇಷ್ಟು ಕಟುವಾದ ಆಪಾದನೆಯನ್ನು ನೀವು ಮಾಡಬಾರದು..

ಶ್ರೀ ರಾಮಕೃಷ್ಣ ಹೆಗಡೆ : ನಾನು ಏನು ಮಾಡಿದ್ದನೆಂದು ನಿಮಗೆಲ್ಲ ಗೊತ್ತು. ಎಷ್ಟೋ ಸಂದರ್ಭಗಳಲ್ಲಿ ಜ್ಯುಡಿಶಿಯಲ್ ಎನ್‌ಕ್ವಾಯರಿಯನ್ನು ಕೇಳದೆ ನಾನು ಮಾಡಿಸಿದ್ದೇನೆ. ವಿರೋಧಪಕ್ಷದವರು ಯಾವಾಗ ಕೇಳಿದರೋ ಅದಕ್ಕೆ ನಾನು ಎಂದೆಂದೂ ಇಲ್ಲವೆಂದು ಹೇಳಿರಲಿಲ್ಲ. ಅದಕ್ಕಾಗಿ ನನ್ನ ಹೆಜ್ಜೆಯ ಮೇಲೆ ನೀವು ಹೆಜ್ಜೆ ಇಟ್ಟು ಹೋಗಿ ಎಂದು ಹೇಳುತ್ತೇನೆ.....

ಶ್ರೀ ಎಂ. ವೀರಪ್ಪ ಮೊಯಿಲಿ : ಅದು ಹೌದಾಗಿದ್ದರೂ ಕೂಡ ಆದರಿಂದ ಏನಾಗಿದೆ? ತಾವುಗಳು ಬಹಳ ಉದಾತ್ತತೆಯಿಂದ, ಸೌಜನ್ಯತೆಯಿಂದ, ಜ್ಯುಡಿಶೀಯಲ್ ಕಮೀಷನ್‌ಗಳನ್ನು ಬಹಳ ಮಾಡಿರಬಹುದು. ಆದರ ಪರಿಣಾಮವು ಕೊನೆಯಲ್ಲಿ ಏನಾಯಿತು? ತಮಗೆ "ಕಮೀಷನ್ ಹೆಗಡೆ" ಯವರು ಎಂಬ ಹೆಸರು ಬಂತು. ಎಲ್ಲರೂ ಹಾಗೆ ಹೇಳುತ್ತಿದ್ದರು. ದಿನ ಬೆಳಿಗ್ಗೆ ಎದ್ದರೆ ಪ್ರತಿಯೊಂದಕ್ಕೂ ಹೆಗಡೆಯವರು

ಕಮಿಶನ್ ನೇಮಿಸುತ್ತಾರೆ ಎಂಬ ಹೆಸರು ಬಂತು. ಆದರೆ ತಾವುಗಳು ಒಳ್ಳೆಯ ಮನಸ್ಸಿನಿಂದ ಮಾಡಿದ್ದೀರಿ? ಆದರೆ ಅದಕ್ಕೆ ಬಂದ ಫಲಿತಾಂಶ ಏನು? ಅಲ್ಟಿಮೇಟ್ ಔಟ್‌ಪುಟ್ ಏನು? ಅದರಿಂದ ತಮಗೆ ಒಳ್ಳೆಯ ಹೆಸರು ತರಲಿಲ್ಲ, ಜವಾಬ್ದಾರಿಯನ್ನು ತಪ್ಪಿಸಿಕೊಳ್ಳುವುದಕ್ಕೋಸ್ಕರವಾಗಿ ಏನು ಕೆಲಸ ಮಾಡಬೇಕೋ ಅದಕ್ಕಾಗಿ ಕಮಿಶನ್ ನೇಮಿಸಿದರು ಎಂದು ನಾನು ಹೇಳುತ್ತಾ ಇಲ್ಲ, ಜನರು ಹೇಳುತ್ತಿದ್ದರು. ನಿಮ್ಮ ಉದ್ದೇಶವು ಒಳ್ಳೆಯದಾಗಿತ್ತು ಎಂದೇ ನಾನು ಹೇಳುತ್ತಿದ್ದೇನೆ. ಆದರೆ ಯಾವ ರಿಪೋರ್ಟ್‌ನಲ್ಲಿ ಏನು ಪರಿಣಾಮವಾಯಿತು ಎಂಬುದು ತಮಗೂ ಗೊತ್ತಿದೆ. ಆದ್ದರಿಂದ ಸನ್ಮಾನ್ಯ ರಾಮಕೃಷ್ಣ ಹೆಗಡೆಯವರು ಪ್ರಥಮ ದಿವಸವೇ ಇರುತ್ತಾ ಇದ್ದಿದ್ದರೆ ಈ ಘಟನೆಯು ಈ ಪರಿಸ್ಥಿತಿಗೆ ಬರುತ್ತಾ ಇರಲಿಲ್ಲ.

ನಿಮ್ಮವರಿಗೆ ಸ್ವಲ್ಪ ರಿಮೋಟ್ ಕಂಟ್ರೋಲ್ ಆಗಿಬಿಟ್ಟಿದೆ. ನೀವೇ ಸ್ವಲ್ಪ ಡೈರೆಕ್ಟ್ ಆಗಿ ಕಂಟ್ರೋಲ್ ಮಾಡಿದ್ದರೆ ಎಲ್ಲಾ ಸರಿ ಹೋಗುತ್ತಿತ್ತು. ಸ್ವಲ್ಪ ಜಾಸ್ತಿ ರಿಮೋಟ್ ಕಂಟ್ರೋಲಾಗಿದೆ. ತಾವು ನೇರವಾಗಿ ಜವಾಬ್ದಾರಿ ತೆಗೆದುಕೊಂಡು...

ಶ್ರೀ ಡಿ.ಬಿ. ಚಂದ್ರೇಗೌಡ : ನಮಗೆ ಭಗವಂತನಿಂದ ಸಿಕ್ಕುವುದಿಲ್ಲ ನಮಗೆ ಭಗವಂತ ಕಳಿಸುವುದಿಲ್ಲ. ನಿಮಗೆ ಭಗವಂತ ಕಳಿಸುತ್ತಾನೆ.

Sri. M. Veerappa Moily : Yes. That's what I said. I must congratulate your party for having responded to this kind of an electonic or a computer remote control. ಅದು ಆಗಿದೆ for that I should congratulate you.

ಈಗ ತಾವು ಬಂದಿದ್ದೀರಿ. Our control is directly here. ಸದನ ಹೇಗೆ ನಡೆಸಬೇಕೆಂದು ದಿನಬೆಳಿಗ್ಗೆಯಾದರೆ ನಾವು ಡೆಲ್ಲಿಗೆ ಕೇಳುವುದಿಲ್ಲ. ಆದರೆ ನಿಮಗೆ ಸದನ ಏನು ಮಾಡಬೇಕೆಂದು ಡೆಲ್ಲಿಯಿಂದಲೇ ಹೇಳಿಕೆ ಬರುತ್ತದೆ. ಅದರ ಪ್ರಕಾರ ಕುಣಿಯುತ್ತಿದ್ದೀರಿ. ಈ ಒಂದು ಹತಾಶ ಮನೋಭಾವನೆ ನಿಮ್ಮಲ್ಲಿರುವುದರಿಂದ ನಮಗೆ ವ್ಯಥೆಯಾಗುತ್ತಿದೆ.

ಶ್ರೀ ಆರ್. ಎಲ್. ಜಾಲಪ್ಪ : ನಮಗೇನು ಕಾಮನ್‌ಸೆನ್ಸ್ ಇಲ್ಲವೆಂದು ತಿಳಿದುಕೊಂಡಿರಾ? ನಾವೇನು ಬೊಂಬೆಗಳೇ? ಯಾರೋ ಮಾಡಿದರೆ ನಮ್ಮನ್ನು ಆ ಕೀಳು ಮಟ್ಟಕ್ಕೆ ತರಬೇಡಿ.

ಶ್ರೀ ಎಂ. ವೀರಪ್ಪಮೊಯಿಲಿ : ಮಾನ್ಯ ಜಾಲಪ್ಪನಂಥವರು ಇಂತಹ ಪರಿಸ್ಥಿತಿಗೆ ಏಕೆ ಬಂದರೋ ಎಂದು ಸ್ವಲ್ಪ ವ್ಯಥೆಯಾಗುತ್ತದೆ. ಸ್ವಾತಂತ್ರ್ಯ ಅಭಿಪ್ರಾಯವಿದ್ದವರು ಈ ಪರಿಸ್ಥಿತಿಗೆ ಬರಬಾರದು.

ಶ್ರೀ ಆರ್. ಎಲ್. ಜಾಲಪ್ಪ : ನಮ್ಮ ಹಣೆಬರಹ ನೀವೇನೋ ಬ್ಯಾಕ್‌ವರ್ಡ್ ಕ್ಲಾಸ್‌ನವರನ್ನು ಉದ್ಧಾರ ಮಾಡುತ್ತೀರೆಂದು ತಿಳಿದು ನಾವು ಬಾಯಿ ಮುಚ್ಚಿಕೊಂಡು ಸುಮ್ಮನೆ ಇದ್ದೆವು. ನಿಮ್ಮಿಂದಲೂ ಏನೂ ಆಗಲಿಲ್ಲ. ನೀವು ಹಿಂದುಳಿದ ವರ್ಗಕ್ಕೆ ಸೇರಿದವರು ತಾವು ಮುಖ್ಯ ಮಂತ್ರಿಯಾಗಿದ್ದೀರಿ ಈ ರಾಜ್ಯದ ಹಿಂದುಳಿದವರ್ಗದವರಿಗೇನಾದರೂ ಸಿಗುತ್ತದೆಂದು ನಾವು ಅಂದುಕೊಂಡಿದ್ದೆವು. ಇದ್ದುದ್ದನ್ನು ಕಿತ್ತುಕೊಂಡಿರಿ ನೀವು.

ಶ್ರೀ ಎಂ. ವೀರಪ್ಪ ಮೊಯಿಲಿ : ಬ್ಯಾಕ್‌ವರ್ಡ್ ಕ್ಲಾಸ್ ಉದ್ಧಾರ ಮಾಡಿ ಮಾಡಿ ನಿಮ್ಮ ಅವಸ್ಥೆ ಹೀಗಾಗಿದೆ. ಬ್ಯಾಕ್‌ವರ್ಡ್ ಕ್ಲಾಸ್ ಬಗ್ಗೆ ನೀವೇನು ಮಾತನಾಡುತ್ತೀರಿ? ಹಾವನೂರು ವರದಿಯನ್ನು ಮಣ್ಣು ಮುಕ್ಕಿಸಿ ಇವತ್ತು 95 ಪರ್ಸೆಂಟ್ ಪಾಪ್ಯುಲೇಷನ್‌ನ್ನೂ ಬ್ಯಾಕ್‌ವರ್ಡ್ ಕ್ಲಾಸ್ ಮಾಡಿ ಏನು ಪುರುಷಾರ್ಥ ಸಾಧಿಸಿದ್ದೀರಿ?

ಶ್ರೀ ಆರ್.ಎಲ್. ಜಾಲಪ್ಪ : ಚಿನ್ನಪ್ಪರೆಡ್ಡಿಯವರ ವರದಿ ಏನು ಮಾಡಿದಿರಿ? ಜೂನೊಳಗೆ ಜಾರಿಗೆ ತರುತ್ತೇವೆಂದು ಹೇಳಿದ್ದೀರಿ.

ಶ್ರೀ ಎಂ. ವೀರಪ್ಪ ಮೊಯಿಲಿ : ನಿಮ್ಮ ಸಮಯ - ಸಾಧಕತನ ನಮಗೆ ಬೇಡ.

ಶ್ರೀ ಧರ್ಮಸಿಂಗ್ : ನೀವು ಮಾಡಲಿಲ್ಲ, ಚಿನ್ನಪ್ಪ ರೆಡ್ಡಿ ಬಗ್ಗೆ ತಾವು ಹೇಳುತ್ತಿದ್ದೀರಿ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಮುಖ್ಯ ಮಂತ್ರಿಗಳೇಕೆ ಭಾವನಾತ್ಮರಾಗುತ್ತಾರೋ ಗೊತ್ತಿಲ್ಲ, 86 ರಲ್ಲಿ ನೀವು 93 ಪರ್ಸೆಂಟ್ ಕೊಟ್ರೆ ಅಂತೇ ಹೇಳಿದಿರಲ್ಲ ಅದನ್ನೇ ಇಲ್ಲಿ ಏಕೆ ಮೀಸಲಾತಿಯನ್ನು ಜಾರಿಗೆ ತಂದಿರಿ? ಶ್ರೀಮಾನ್ ರಾಮಕೃಷ್ಣ ಹೆಗಡೆಯವರ ಸರಕಾರ 86ರಲ್ಲಿ ಮಾಡಿದಂತಹ ಜಿ.ಓ. ಅನ್ನ ಲಾರ್ಜ್ ಸ್ಟಾಕ್ ಅಂಡ್ ಬ್ಯಾಲೆನ್ಸ್ ತೆಗೆದು ಪಂಚಾಯತ್‌ರಾಜ್ ಚುನಾವಣೆಗೆ ಮೀಸಲಾತಿಯನ್ನು ಘೋಷಣೆ ಮಾಡಿದರಲ್ಲ ಇವರು ಯಾವ ಸಾಚಾ? ಅವರು ಮಾಡಿದ್ದೂ ತಪ್ಪೆಂದಾಯಿತು .

ಶ್ರೀ ಎಂ. ವೀರಪ್ಪಮೊಯಿಲಿ : ನೀವು ಮಾಡಿದ ಪಾಪದ ಕರ್ಮಕ್ಕೆ ನಾವು ಅನುಭವಿಸುತ್ತಿದ್ದೇವೆ.

ಶ್ರೀ ಡಿ.ಬಿ. ಚಂದ್ರೇಗೌಡ : ಪಾಪದ ಶಿಶುವನ್ನು ಏಕೆ ಇಟ್ಟುಕೊಂಡಿದ್ದೀರಿ?

ಶ್ರೀ ಆರ್. ಎಲ್. ಜಾಲಪ್ಪ : ನಿಮಗೆಲ್ಲಾ ಬುದ್ಧಿ ಇರಲಿಲ್ಲವೇ ಬದಲಾವಣೆ ಮಾಡಬಹುದಿತ್ತಲ್ಲ,

ಶ್ರೀ ವಾಟಾಳ್ ನಾಗರಾಜ್ : ಇವರಿಬ್ಬರೂ ಪಾಪಿಗಳೇ,

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ರಾಮಕೃಷ್ಣ ಹೆಗಡೆಯವರೇ ಅದಕ್ಕೇ ನಾನು ಆಗಲೇ ಹೇಳಿದೆ. ಮೂರು ದಿವಸಗಳ ಹಿಂದೆ ತಾವು ಇಲ್ಲಿಗೆ ಬಂದಿದ್ದರೆ ಇಷ್ಟೆಲ್ಲ ಗೊಂದಲಕ್ಕೆ ಕಾರಣವಾಗುತ್ತಿರಲಿಲ್ಲ, ಮಾನ್ಯ ಹೆಗಡೆಯವರು ಮತ್ತು ವಿರೋಧ ಪಕ್ಷದ ನಾಯಕರು ತಿಳಿದುಕೊಳ್ಳಬೇಕು ನಾವೇನಾದರೂ ಇದನ್ನು ತಪ್ಪಿಸಿಕೊಳ್ಳಬೇಕು ಅಡಗಿಸಿಕೊಳ್ಳಬೇಕು ಅಥವಾ ಜವಾಬ್ದಾರಿಯಿಂದ ಜಾರಿಕೊಳ್ಳಬೇಕೆಂಬುದು ನಮ್ಮ ಸರಕಾರದ ಉದ್ದೇಶವಲ್ಲ. ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಮತ್ತೆ ಅದನ್ನೇ ನಾನು ರಿಪೀಟ್ ಮಾಡುವುದಕ್ಕೆ ಅಪೇಕ್ಷೆ ಪಡುವುದಿಲ್ಲ, ತಮ್ಮ ಚೇಂಬರಿಗೆ ಅವರನ್ನೂ ನಮ್ಮನ್ನೂ ಕರೆಯಿರಿ ಕರೆದು ಇದರ ಬಗ್ಗೆ ಇತ್ಯರ್ಥ ಮಾಡುವುದಿದ್ದರೆ ನಾನು ಸಿದ್ಧನಿದ್ದೇನೆ. ಸದನ ಸಮಿತಿ ಮಾಡುವುದಕ್ಕೆ ಒಪ್ಪಿದ್ದೇನೆ. ಸದನ ಸಮಿತಿಯಾಗಬೇಕು, ನ್ಯಾಯಾಂಗ ತನಿಖೆಯಾಗಬೇಕು ಇನ್ನೊಂದು ಏನಾಗಬೇಕೋ ಗೊತ್ತಿಲ್ಲ, ನಾವು ಒಂದು ಇತ್ಯರ್ಥಕ್ಕೆ ಸಮಾಧಾನಕ್ಕೆ ಬಂದು ತಾವೆಲ್ಲಾ ಇಲ್ಲಿ ಇದ್ದೇ ಎಲ್ಲಾ ಈ ಸದನದ ಕಾರ್ಯಕಲಾಪಗಳನ್ನು ನಡೆಸಬೇಕೆಂಬುದೇ ಇವತ್ತಿಗೂ ನಮ್ಮ ಇಚ್ಛೆಯಾಗಿದೆ. ಅದಕ್ಕಾಗಿ ನಾವು ರಿಕ್ವೆಸ್ಟ್ ಮಾಡಿದ್ದೇವೆ. ಇಡೀ ಸದನ ಮುಗಿಯುವವರೆಗೆ ವಿರೋಧ ಪಕ್ಷದ ನಾಯಕರನ್ನು ಹೊರಗೆ ಹಾಕಬೇಕಾದಂತಹ ಅವಶ್ಯಕತೆ ಇಲ್ಲ ಒಂದೇ ದಿವಸ ಸಾಕೆಂದು ನಾವು ಸ್ಪಷ್ಟವಾಗಿ ಮಾನ್ಯ ಅಧ್ಯಕ್ಷರನ್ನು ನಿನ್ನೆ ವಿನಂತಿಸಿಕೊಂಡಿದ್ದೇವೆ. ನಿಮ್ಮನ್ನು ಹೊರಗೆ ಹಾಕಿ ಏನೂ ವಿಚಾರ ಮಾಡಬೇಕೆಂದು ನಮ್ಮ ಅಪೇಕ್ಷೆ ಇಲ್ಲ, ಮುಂದೆ ಮಾತು ಬೆಳೆಸಲಿಕ್ಕೆ ಅವಕಾಶ ಕೊಡುವುದರ ಬದಲು ಮಾನ್ಯ ಅಧ್ಯಕ್ಷರು ಕರೆಸಿದರೆ ಮಾತನಾಡೋಣ. ಯಾವುದೇ ಒಂದು ಸಮಜಾಯಿಷಿ ಏನು, ಏನು ತೀರ್ಮಾನ ತಾವು ಕೊಡುತ್ತೀರಿ ಅದಕ್ಕೆ ನಾವು ಬದ್ಧರಾಗಿದ್ದೇವೆ.

ಪ್ರೊ ಎಂ. ಡಿ. ನಂಜುಂಡಸ್ವಾಮಿ : ನಿನ್ನೆಯಿಂದ ಮಾತನಾಡುವುದಕ್ಕೆ ನಾನು ಪ್ರಯತ್ನ ಮಾಡುತ್ತಿದ್ದೇನೆ. ಈಗೇನು ಮಾನ್ಯ ಮುಖ್ಯ ಮಂತ್ರಿಗಳ ಮಾತು ಕೇಳಿದರೆ ಇದೊಂದು ಮುಕ್ತಾಯದ ಹಂತಕ್ಕೆ ಬರುತ್ತದೆಂದು ಅನ್ನಿಸುತ್ತದೆ. ಕಳೆದ 3 ದಿವಸಗಳಿಂದ ಏನು ನಡೆಯಿತು ಅದನ್ನು ನಾನು ಬಹಳ ನೋವಿನಿಂದ ಹೇಳುತ್ತಿದ್ದೇನೆ.

10.15 ಎ.ಎಂ.

ಬಹಳ ಬೇಜವಾಬ್ದಾರಿ ಚಟುವಟಿಕೆ ಎಂದು ಹೇಳದೇ ಬೇರೆ ಮಾರ್ಗವೇ ಇಲ್ಲ. ಕಾರಣ ಇಷ್ಟೆ. ನಿನ್ನೆ ಪತ್ರಿಕೆಯಲ್ಲಿ ಏನು ಸುದ್ದಿ ಬಂತು, ಕರ್ನಾಟಕದಲ್ಲಿ ಹಿಂಸಾಚಾರ ಬುಗಿಲೆದ್ದಿದೆ, ಆ ಕಾರಣಕ್ಕಾಗಿ ಚುನಾವಣೆಯನ್ನು ಮುಂದೂಡಲಾಗಿದೆ. 27 ಸಾವಿರ ಗ್ರಾಮಗಳು ನಮ್ಮ ರಾಜ್ಯದಲ್ಲಿವೆ ಎಂದು ಮುಖ್ಯ ಮಂತ್ರಿಗಳೇ ಹೇಳಿದರು, 48 ಕಡೆಗಳಲ್ಲಿ ಸ್ವಲ್ಪ ಗಲಭೆಗಳಾಗಿವೆ ಎಂದು. ಆದರೆ ಪತ್ರಿಕಾ ವರದಿಯನ್ನು ನೋಡಿದರೆ ನಾವು ...

ಅಧ್ಯಕ್ಷರು : ಪ್ರೊಫೆಸರ್‌ರವರೇ, ಇದಕ್ಕೇನು ಪರಿಹಾರವನ್ನು ಹೇಳುತ್ತೀರೋ ಅಥವಾ ......

ಪ್ರೊ: ಎಂ.ಡಿ. ನಂಜುಂಡಸ್ವಾಮಿ : ಪರಿಹಾರವನ್ನು ಹೇಳುತ್ತಿದ್ದೇನೆ.ಈ ಗೊಂದಲವನ್ನು ಈಗೇನೂ ಮುಕ್ತಾಯ ಮಾಡುತ್ತಾರೆ. ಅಷ್ಟಕ್ಕೆ ನಿಂತರೆ ಸಾಲದು. ನಮ್ಮ ದೇಶದ ರಾಜಕೀಯ ಪಕ್ಷ ಪದ್ಧತಿ ಏನಿದೆ, ರಾಜಕೀಯ ಪಕ್ಷಗಳು ಏನಿದೆ, ಅವುಗಳೂ ಸಹಾ ತಿದ್ದುಪಡಿ ಮಾಡಿಕೊಳ್ಳುವ ಅವಶ್ಯಕತೆ ಇದೆ. ಆ ಮಾತನ್ನು ಹೇಳುವುದಕ್ಕೋಸ್ಕರವೇ ನಾನು ಎದ್ದು ನಿಂತಿದ್ದೇನ . ಆ 48 ಕಡೆ ಗಲಭೆ ಏನಾಗಿದೆ, ಏಕೆಂದರೆ, ನಾವು ಹಿಂಸಾಚಾರ ಬುಗಿಲೆದ್ದಿದೆ ಎಂದರೆ ನಮ್ಮ ತಪ್ಪನ್ನು ನಾವು ಸರಿ ಮಾಡಿಕೊಳ್ಳದೆ ಜನಗಳ ಮೇಲೆ ತಪ್ಪು ಹಾಕುವಂಥ ಒಂದು ಪ್ರಯತ್ನ ಮೂರು ದಿವಸದಿಂದ ನಡೆಯುತ್ತದೆ. ಯಾರು ಮಾಡಿದ್ದು 48 ಕಡೆ? ಯಾರು ಮಾಡಿದ್ದು? ಇದೇನು ಅಭ್ಯರ್ಥಿಗಳನ್ನು ಬಚ್ಚಿಡುವುದು, ಧರ್ಮಸ್ಥಳಕ್ಕೆ ಕರೆದುಕೊಂಡು ಹೋಗುವುದು, ತಿರುಪತಿಗೆ ಕರೆದುಕೊಂಡು ಹೋಗುವುದು, ಇದೇನು ಹೊಸದೇನಲ್ಲ. ಬಹಳ ದಿವಸಗಳಿಂದ ನಡೆಯುತ್ತಿದೆ.

ಅಧ್ಯಕ್ಷರು : ಪ್ರೊಫೆಸರ್‌ರವರೇ....

ಪ್ರೊ: ಎಂ.ಡಿ. ನಂಜುಂಡಸ್ವಾಮಿ : ಒಂದು ನಿಮಿಷ ಸಭಾಧ್ಯಕ್ಷರೇ.... ಬಹಳ ಮುಖ್ಯವಾದ ವಿಚಾರ. ಏಕೆಂದರೆ ಇನ್ನೂ ಪಕ್ಷಪದ್ಧತಿ ಉಳಿಯಬೇಕು ಈ ದೇಶದಲ್ಲಿ. ಅದೂ ವಿಶೇಷವಾಗಿ ಕರ್ನಾಟಕದಲ್ಲಿ. ಕರ್ನಾಟಕದಲ್ಲಿ ಬೇರೆ ರಾಜ್ಯಗಳಲ್ಲಿರುವಂಥ ಚಟುವಟಿಕೆ ಇನ್ನೂ ಪ್ರಾರಂಭವಾಗಿಲ್ಲ ನನ್ನ ದೃಷ್ಟಿಯಲ್ಲಿ ಪ್ರಾರಂಭವಾಗಕೂಡದು ಎಂದು ನನ್ನ ಆಸೆ, ಆ ಕಾರಣದಿಂದ ಮಾತನಾಡುತ್ತಿದ್ದೇನೆ. ಆದರೆ ಈ ರಾಷ್ಟ್ರೀಯ ರಾಜಕೀಯ ಪಕ್ಷಗಳು ಎಂದು ಏನಿವೆ, ಇವು ಈ ಅಭ್ಯರ್ಥಿಗಳನ್ನು ಬಚ್ಚಿಡುವುದು, ಅಪಹರಣ ಮಾಡುವುದನ್ನು ಮಾಡುವುದಕ್ಕೆ ಪ್ರಾರಂಭ ಮಾಡಿ ಬಹಳ ದಿವಸವಾಯಿತು. ಅದನ್ನು ಸರಿಪಡಿಸಿಕೊಳ್ಳುವಂಥ ಪ್ರಯತ್ನ ಯಾವುದೇ ಪಕ್ಷ ಮಾಡುತ್ತಿಲ್ಲ. ಇದನ್ನು ದಯವಿಟ್ಟು ತಾವು ರಾಷ್ಟ್ರೀಯ ರಾಜಕೀಯ ಪಕ್ಷಗಳು ಎಂದು ಏನಿದ್ದೀರಿ, ಈ ಒಂದನ್ನೂ ನೀವು ಸರಿಪಡಿಸಿಕೊಳ್ಳುವಂಥ ಒಂದು ಪ್ರಯತ್ನವನ್ನು ಇವತ್ತಿನಿಂದಲಾದರೂ ಪ್ರಾರಂಭ ಮಾಡಿ. ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ನಮ್ಮಲ್ಲಿ ಕರ್ನಾಟಕ ರಾಜ್ಯದಲ್ಲಿ ರಾಜಕೀಯ ಚಟುವಟಿಕೆ ಏನಿದೆ, ಇನ್ನೂ ಉತ್ತಮವಾದ ಪರಿಸ್ಥಿತಿಯಲ್ಲಿದೆ. ಜನರು ಬಹಳ ಗಂಭೀರವಾಗಿ ಚುನಾವಣೆಯನ್ನು ಈಗ ಪರಿಗಣಿಸುತ್ತಿದ್ದಾರೆ. ಚುನಾವಣೆ ಪ್ರಕ್ರಿಯೆಗಳನ್ನು, ಚುನಾವಣೆ ಚಟುವಟಿಕೆಗಳನ್ನು ನಾವು ಕಲುಷಿತಗೊಳಿಸಬಾರದು. ಯಾರು ಮುಖಂಡರು ಎಂದು ಓಡಾಡುತ್ತಿದ್ದೇವೆ ನಾವು, ಆ ಕಾರಣ ಏನು ಶಿಸ್ತನ್ನು ನಾವು ನಮ್ಮಲ್ಲಿ ಅಳವಡಿಸಿಕೊಳ್ಳಬೇಕು ನಮ್ಮ ರಾಜಕೀಯದಲ್ಲಿ, ಅದನ್ನು ಪ್ರಾರಂಭ ಮಾಡಬೇಕು. ಈ ಮಾತನ್ನು ನಾನು ಯಾವಾಗ ಹಾಸನ ಲೋಕಸಭಾ ಕ್ಷೇತ್ರದಲ್ಲಿ ಮೊದಲನೇ ಚುನಾವಣಾ ಕೊಲೆಯಾಯಿತೊ ಅವತ್ತೆ ನಾನು ಹೇಳಿದೆ. ಆ ಒಂದನೇ ಕೊಲೆಗೆ ಅದು ಮುಗಿಯಬೇಕು. ಎರಡನೇ ಕೊಲೆ ಕರ್ನಾಟಕದಲ್ಲಿ ಆಗಬಾರದು. ಚುನಾವಣಾ ಕೊಲೆ ಆಗಬಾರದು. ಇದನ್ನು ದಯವಿಟ್ಟು ಎಲ್ಲಾ

ರಾಜಕೀಯ ಪಕ್ಷಗಳು ಮಾಡಬೇಕೇ ಹೊರತು ನೀವು ಸದನ ಸಮಿತಿ ಮಾಡಿದರೆ ಏನು ಪ್ರಯೋಜನ? ಅಥವಾ ನ್ಯಾಯಾಂಗ ತನಿಖೆ ಮಾಡಿದರೆ ಏನು ಪ್ರಯೋಜನ? ನಿಮ್ಮನ್ನು ನೀವು ಸರಿಪಡಿಸಿಕೊಳ್ಳುವುದನ್ನು ಕಲಿಯಿರಿ ಮೊದಲು ಎಂದು ನಾನು ನಿಮ್ಮಿಬ್ಬರಿಗೂ ಹೇಳುವುದು. ಇಬ್ಬರೂ ಶಾಮೀಲಾಗಿ ಮಾಡುತ್ತಿದ್ದೀರಿ ಎನ್ನುವುದನ್ನು ನಿನ್ನೆ ಪತ್ರಿಕೆಯ ಮೂಲಕ ಆರೋಪವನ್ನು ನಾನು ಮಾಡಿದ್ದೇನೆ. ಚುನಾವಣೆಯನ್ನು ಮುಂದೂಡುವಂಥ ಹಿಂಸಾಚಾರ ಏನೂ ಕರ್ನಾಟಕದಲ್ಲಿ ಆಗಿಲ್ಲ.

Both of you are trying to make a mountain out of a molehill. both of you are guilty. You are answerable to the people.

ಜನಗಳಲ್ಲಿ ನೀವು ಕ್ಷಮಾಪಣೆ ಕೇಳಬೇಕು. ನಿಮ್ಮನ್ನು ನೀವು ಸರಿಮಾಡಿಕೊಳ್ಳಿ. ನಿಮ್ಮ ನಡವಳಿಕೆಯನ್ನು ತಿದ್ದಿಕೊಳ್ಳಿ. ಅನಂತರ ಎಲ್ಲಾ ಸರಿಹೋಗುತ್ತದೆ.

ಅಧ್ಯಕ್ಷರು : ಸಭೆಯ ಕಲಾಪಗಳನ್ನು 15 ನಿಮಿಷ ಮುಂದೂಡಿ ಪುನಃ ಸೇರೋಣ.

(ಸಭೆಯು 15 ನಿಮಿಷಗಳವರೆಗೆ ಮುಂದೂಡಲ್ಪಟ್ಟಿತು)

ಸದನವು ಪುನಃ ಮಧ್ಯಾಹ್ನ 12.50ಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ವಿ.ಎಸ್. ಕೌಜಲಗಿ) ಅವರು ಪೀಠವನ್ನಲಂಕರಿಸಿದ್ದರು.

(ಜನತಾ ದಳದ ಮಾನ್ಯ ಸದಸ್ಯರು ವೆಲ್‌ನಲ್ಲಿ ಧರಣಿ ಹೂಡಿದ್ದರು

ಗ್ರಾಮಪಂಚಾಯಿತಿಗಳಲ್ಲಿ ಅಧ್ಯಕ್ಷರು ಮತ್ತು ಉಪಾಧ್ಯಕ್ಷರುಗಳನ್ನು ಮೀಸಲಾತಿ ಆಧಾರದ ಮೇಲೆ ಚುನಾಯಿಸಿರುವ ಬಗ್ಗೆ

+ ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಸಂಸದೀಯ ಪರಂಪರೆಯಲ್ಲಿ ಯಾವಾಗಲೂ ಕೂಡ ವಿಚಾರ ಭೇದಗಳು ಬರುತ್ತವೆ. ತೀವ್ರವಾದಂತಹ ವಿಚಾರ ಭೇದಗಳು ಕೂಡ ಬರುತ್ತವೆ. ಅದರೆ ಈ ಸಂಸದೀಯ ವ್ಯವಸ್ಥೆಯ ಒಂದು ಯಶಸ್ಸು ಕೊನೆಗೆ ನಾವು ಪರಸ್ಪರ ವಿಚಾರವಿನಿಮಯ ಮಾಡಿ ಒಂದು ಇತ್ಯರ್ಥಕ್ಕೆ ಬರತಕ್ಕ ದಿಸೆಯಲ್ಲಿ ನಾವು ಪ್ರಾಮಾಣಿಕವಾದ ಪ್ರಯತ್ನ ಮಾಡಿದಾಗ ಆಗುತ್ತದೆ. ಈಗ 3 ದಿನಗಳಿಂದ ಇಷ್ಟು ದಿನಗಳ ಕಾಲ ಇಲ್ಲಿ ಚರ್ಚೆ ಆಯಿತು. ಸ್ಪಷ್ಟವಾಗಿ ಈ ಸದನದ ಮುಂದೆ ವಿಚಾರಗಳು ಬಂದಿವೆ. ಸದನದ ಹೊರಗೂ ಕೂಡ ವಿಚಾರಗಳು ಬಂದಿವೆ. ಗ್ರಾಮಪಂಚಾಯಿತಿ ಚುನಾವಣೆಗಳು ಶಾಂತಿಯುತವಾಗಿ ಆಗಿವೆ. ಸುಮಾರು 49 ಗ್ರಾಮಪಂಚಾಯಿತಿ ಚುನಾವಣೆಗಳಲ್ಲಿ ಯಾವುದೇ ಹಿಂಸಾಚಾರಗಳು ನಡೆಯಲಿಲ್ಲ. ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಚುನಾವಣೆಯಲ್ಲಿ ಕೂಡ ಎರಡು ಕಡೆ ಗೋಲಿಬಾರ್‌ಗಳನ್ನು ಬಿಟ್ಟರೆ 49 ಸಣ್ಣಪುಟ್ಟ ಘಟನೆಗಳು ನಡೆದಿದೆ. ಚುನಾವಣೆಗಳಲ್ಲಿ ಕೂಡ ಒಂದು ಕ್ರಾಂತಿಕಾರಿಯಾದ ಬದಲಾವಣೆ ಬಹಳ ಚೆನ್ನಾಗಿ ಇವತ್ತು ಆಗುತ್ತಿದೆ. ಗೋಲೀಬಾರ್ ವಿಚಾರದಲ್ಲಿ ಈಗ ನ್ಯಾಯಾಂಗ ವಿಚಾರಣೆ ಆಗಬೇಕೆಂದು ಹೇಳಿ ಸನ್ಮಾನ್ಯ ವಿರೋಧಪಕ್ಷದ ಸದಸ್ಯರು ಒತ್ತಾಯ ಮಾಡಿದಾಗ ನಾನು ಹೇಳಿದೆ ಏನಾದರೂ iota of evidence ಪೊಲೀಸ್ ಅತಿರೇಕದ ಬಗ್ಗೆ ಅಥವಾ ಪೊಲೀಸರು ಸರಿಯಾಗಿ ಕಾರ್ಯನಿರ್ವಹಿಸಲಿಲ್ಲ ಎಂಬ ಆಪಾದನೆ ಕೂಡ ಇದ್ದರೆ ನಾವು ನ್ಯಾಯಾಂಗ ವಿಚಾರಣೆ ಮಾಡುವುದಕ್ಕೆ ಅರ್ಥ ಇದೆ. ಏಕೆಂದರೆ ಈ ವರ್ಷ ಚುನಾವಣಾ ವರ್ಷ. ಚುನಾವಣಾ ಪ್ರಕ್ರಿಯೆಗಳಲ್ಲಿ ಇವತ್ತು ರಕ್ಷಣೆ ಕೊಡತಕ್ಕ ರಕ್ಷಣಾ ಸಿಬ್ಬಂದಿಯನ್ನು ನಾವು ಡೀಮಾರಲೈಸ್ ಮಾಡಿಕೊಂಡು ಕುಳಿತುಕೊಂಡರೆ ನಾಳೆ ನಾಮಿನೇಷನ್ ಮಾಡುವಾಗ ಆತಂಕ ಬರಬಹುದು. ಚುನಾವಣೆಗೆ ನಿಲ್ಲತಕ್ಕ ಅಭ್ಯರ್ಥಿಗೆ ಬಲೋದ್ಬಂಧನ ಮಾಡಬಹುದು. ಅಥವಾ ಮುಂದೆ ಬರತಕ್ಕ ತಾಲ್ಲೂಕು, ಜಿಲ್ಲಾ ಪರಿಷತ್ತಿನ ಚುನಾವಣೆಗಳಲ್ಲಿ, ಅಲ್ಲಿ ಕೂಡ ಏನು ದುರ್ಬಲ ವರ್ಗಗಳವರು ಇದ್ದಾರೆ ಅವರು

ನಾಮಿನೇಷನ್ ಮಾಡಿದ್ದರೂ ಕೂಡ ಆಮೇಲೆ ಅವರು ಅಧ್ಯಕ್ಷರ ಉಪಾಧ್ಯಕ್ಷರ ಸ್ಥಾನಕ್ಕೆ ನಿಲ್ಲುವಾಗ ತೊಂದರೆ ಬರಬಹುದು. ಇದೆಲ್ಲಾ ವ್ಯಾಪಕ ದೃಷ್ಟಿಯನ್ನು ಇಟ್ಟುಕೊಂಡು ಇವತ್ತು ಯಾವುದೇ ಒಂದು ಸೊಲ್ಲು, ಇವತ್ತು ಎರಡು ಗೋಲೀಬಾರ್ ಬಗ್ಗೆ ಆಪಾದನೆ ಇಲ್ಲದೆ ಇದ್ದ ಸಂದರ್ಭದಲ್ಲಿ in a vacuum ನ್ಯಾಯಾಂಗ ವಿಚಾರಣೆಯನ್ನು ಮಾಡಿದರೆ ಮುಂದೆ ಬರತಕ್ಕ ಚುನಾವಣಾ ಪ್ರಕ್ರಿಯೆಗೆ ತೊಂದರೆ ಬರಬಹುದು ಎಂಬ ವಿಚಾರವನ್ನು ನಾನು ಹೇಳುತ್ತಲೇ ಬಂದಿದ್ದೇನೆ. ಸಾಕಷ್ಟು ಚರ್ಚೆ ತಮ್ಮ ಸಮಕ್ಷಮದಲ್ಲಿ ಕೂಡ ಆಯಿತು. ಅಲ್ಲಿ ನಾನು ಹೇಳಿದೆ, ಸದನ ಸಮಿತಿ ಬೇಕಾದರೆ ಆಗಲಿ. ಸದನ ಸಮಿತಿಯವರು ಇವತ್ತು ಸಂಜೆಯೇ ಆ ಎರಡು ಪ್ರದೇಶಗಳಿಗೆ ಹೋಗಲಿ. ಗುಲ್ಬರ್ಗ ಜಿಲ್ಲೆಯ ಕರಡಕಲ್ ಗ್ರಾಮಕ್ಕೆ ಅಥವಾ ಬಳ್ಳಾರಿ ಜಿಲ್ಲೆಯ ಗಂಡಬೊಮ್ಮನಹಳ್ಳಿಗೆ ಬೇಕಾದರೆ ಇವತ್ತೇ ಹೋಗಲಿ, ಎರಡು ದಿವಸಗಳಲ್ಲಿ ಹೋಗಿ ವರದಿ ತರಲಿ. ಏನಾದರೂ ಸಮಿತಿ ಅಭಿಪ್ರಾಯದ ಪ್ರಕಾರ ನ್ಯಾಯಾಂಗ ವಿಚಾರಣೆ ಆಗಲಿ ಎಂದು ಆದರೆ ತಕ್ಷಣ ನಾನು ನ್ಯಾಯಾಂಗ ವಿಚಾರಣೆ ಕೂಡ ಮಾಡಲಿಕ್ಕೆ ಸಿದ್ಧನಿದ್ದನೆ ಎಂಬ ವಿಚಾರವನ್ನು ಕೂಡ ಹೇಳಿದ್ದೇನೆ. ಏಕೆಂದರೆ ಇದರಲ್ಲಿ ನಾನು ಪ್ರತಿಷ್ಠೆ ಇಟ್ಟುಕೊಳ್ಳುವುದಕ್ಕೆ ತಯಾರಿಲ್ಲ. ಏನಾದರೂ ಒಂದು ಸತ್ಯ ಹೊರಗೆ ಬರುವುದಿದ್ದರೆ ಅದನ್ನು ತಡೆಹಿಡಿದು ನಿಲ್ಲಿಸತಕ್ಕ ಒಂದು ಪ್ರವೃತ್ತಿಗೆ ನಾನು ನಿಲ್ಲುವುದಕ್ಕೆ ತಯಾರಿಲ್ಲ. ಆದರೆ ಗೃಹಮಂತ್ರಿಯಾಗಿ ಮುಖ್ಯಮಂತ್ರಿಯಾಗಿ ಸರ್ಕಾರದಿಂದ ಈ ಚುನಾವಣಾ ಪ್ರಕ್ರಿಯೆಯಲ್ಲಿ ಭಯ, ಬೆದರಿಕೆಗೆ ಇವತ್ತು ಪ್ರೀಮಿಯಂ ಸಿಗುತ್ತದೆ ಎಂಬ ಒಂದು ಧ್ವನಿ ಇವತ್ತು ಕರ್ನಾಟಕ ರಾಜ್ಯದಲ್ಲಿ ಕೊಡುವುದಕ್ಕೆ ಅಪೇಕ್ಷೆ ಪಡುವುದಿಲ್ಲ. Free and fair elections ಎಲ್ಲಾ ಹಂತದಲ್ಲಿ ಇವತ್ತು ಆಗಲಿಕ್ಕೆ ಏನು ಮಾಡಬೇಕೋ ಅದನ್ನು ಮಾಡಿದ್ದೇವೆ. ಅದನ್ನು ನಡೆಸಿದ್ದೇವೆ. ಮುಂದೆಯೂ ಕೂಡ ನಡೆಸುತ್ತೇವೆ. ನಾಳೆ ಕೂಡ ನಡೆಸುತ್ತೇವೆ. ಹಿಂಸಾಚಾರ ಆಗಿದೆ. ಚುನಾವಣೆ ನಿಂತಿದೆ ಎಂಬುದು ಸರಿಯಲ್ಲ. ಹಿಂಸಾಚಾರ ಕೂಡ ನಡೆದಿಲ್ಲ. ಅದನ್ನು ಹತೋಟಿಗೆ ತಂದಿದ್ದೇವೆ. ಹಿಂಸಾಚಾರ ನಿಲ್ಲಿಸತಕ್ಕ ಶಕ್ತಿ ಕೂಡ ನಮ್ಮ ಸರ್ಕಾರದಲ್ಲಿದೆ. ಆದರೆ ಸೋಷಿಯಲ್ ಟೆನ್‌ಷನ್ ಏನು ಹೋಗುತ್ತಿದೆ ಅದನ್ನು ನಾವೆಲ್ಲಾ ರಾಜಕಾರಣಿಗಳು, ರಾಜಕೀಯ ಪಕ್ಷಕ್ಕೆ ಸೇರಿದವರು ಪ್ರೊಫೆಸರ್ ನಂಜುಂಡಸ್ವಾಮಿಯವರು ಹೇಳಿದ ಪ್ರಕಾರ ಅಂಥ ಒಂದು ವಾತಾವರಣವನ್ನು ಕೆಡಿಸದೆ ಉಳಿಸಿಕೊಂಡು ಹೋಗತಕ್ಕ ದೃಷ್ಟಿಯಲ್ಲಿ ನಮ್ಮ ಇಲ್ಲಿಯ ಚರ್ಚೆ ಅಥವಾ ಸರ್ಕಾರದ ಕಾರ್ಯಕ್ರಮಗಳು ಅಥವಾ ಸರ್ಕಾರದ ರಕ್ಷಣೆ ಮುಖಾಂತರ ಪ್ರಕ್ರಿಯೆ ನಡೆಯಬೇಕು ಎಂಬ ಸದ್ಭಾವನೆಯ ವಾತಾವರಣ ನಿರ್ಮಿಸತಕ್ಕ ಒಂದೇ ಒಂದು ದೃಷ್ಟಿಯಲ್ಲಿ ನಾನು ಪ್ರತಿಷ್ಠೆ ಮೇಲೆ ನಿಂತಿಲ್ಲ ಅಧ್ಯಕ್ಷರೆ. ಯಾವುದೇ ವಿಚಾರಣೆ ಅಗತ್ಯವಿಲ್ಲ ಎಂದು ಹೇಳಿದ್ದೇನೆ.

ಆದರೂ ಡಿವಿಜನಲ್ ಕಮೀಷನರ್‌ರವರಿಂದ ವಿಚಾರ ಬೇಕಾದರೆ ಮಾಡುತ್ತೇವೆಂದು ಹೇಳಿದ್ದೇನೆ. ಎಲ್ಲಾ ಸರಿ. ತಾವು ಆ ದಿವಸ ಪಟ್ಟು ಹಿಡಿದಾಗ ಸದನದ ಸಮಿತಿ ಮಾಡೋಣ ಎಂದು ಹೇಳಿದ್ದೇವೆ. ಸದನದ ಸಮಿತಿ ಕೂಡ ನೀವು ಬೇಡ ಎಂದು ಹೇಳಿದ ಮೇಲೆ, ಸದನದ ಸಮಿತಿಯವರು ಅಲ್ಲಿಗೆ ಹೋಗಿ ಬಂದ ಮೇಲೆ ನ್ಯಾಯಾಂಗ ತನಿಖೆ ಬಗ್ಗೆ ವಿಚಾರ ಮಾಡೋಣ ಎಂದು ಹೇಳಿದ್ದೇವೆ. To this extent, as a Chief Minister, I have come down. It is with a view to take all of you with us.

ಈ ಒಂದು ಚುನಾವಣೆಗೆ ಮುಂದೆ ನಿಲ್ಲತಕ್ಕವರು ಕೇವಲ ಕಾಂಗ್ರೆಸ್ಸಿನವರಲ್ಲ. ತಾವೂ ನಿಲ್ಲಬೇಕಾಗುತ್ತದೆ. ಎಲ್ಲಪಕ್ಷದವರೂ ನಿಲ್ಲತಕ್ಕ ಸಂದರ್ಭದಲ್ಲಿ ಬಲೋದ್ಬಂಧನಕ್ಕೆ ಒಂದು ರೀತಿಯ ಬಲಾತ್ಕಾರಕ್ಕೆ, ಅಂತಹ ಒಂದು ಬಲಾತ್ಕಾರವನ್ನು ತಡೆಗಟ್ಟತಕ್ಕ ಪೊಲೀಸ್ ಸಿಬ್ಬಂದಿಗೆ ರಕ್ಷಣಾ ಇಲಾಖೆಗೆ ಇವತ್ತು ವಿಧಾನಸಭೆ ರಕ್ಷಣೆ ಕೊಡುತ್ತಾ ಇಲ್ಲ ಎನ್ನುವ ಒಂದು ಮನೋಭೂಮಿಕೆಯನ್ನು ಸೃಷ್ಟಿ ಮಾಡುವುದಕ್ಕೆ ಇವತ್ತು ನಾನು

ಬೀಳತಕ್ಕದ್ದಾಗಬಾರದು. ಸರ್ಕಾರ ಬೀಳತಕ್ಕದ್ದಾಗಬಾರದು ಅಥವಾ ವಿಧಾನಸಭೆ ಬೀಳತಕ್ಕದ್ದಾಗಬಾರದು ಎನ್ನುವ ಪ್ರಾಮಾಣಿಕವಾದ ಅನಿಸಿಕೆಯಿಂದ ಇವತ್ತು ನಾನು ಈ ಪ್ರಸ್ತಾಪ ಮಾಡುತ್ತಿದ್ದೇನೆ. ಇಲ್ಲಿ ತಾವು ಹೇಳಿದ್ದೇ ಆಗಬೇಕು, ಅದರಲ್ಲಿ ಫುಲ್‌ಸ್ಟಾಪ್ ಹಾಗೂ ಕಾಮಾ ಏನೂ ಬದಲಾವಣೆ ಆಗಬಾರದು, ಇದು ಪ್ರತಿಷ್ಠೆಯ ವಿಷಯ ಎಂದು ನಾನೂ ಕುಳಿತುಕೊಳ್ಳಬಾರದು, ವಿರೋಧಪಕ್ಷದವರೂ ಕುಳಿತುಕೊಳ್ಳಬಾರದು. ಇವತ್ತು ಬಹಳ ಸಂತೋಷದ ವಿಷಯ ಎಂದರೆ, ಪ್ರಮುಖ ವಿರೋಧಪಕ್ಷವಾದ ಜನತಾದಳ ಬಿಟ್ಟರೆ ನಾನು ಹೊರಗಡೆ ಕೊಟ್ಟ ಪ್ರಸ್ತಾವವನ್ನು ಬಿಜೆಪಿ ಮುಖಂಡರು ಒಪ್ಪಿಕೊಂಡಿದ್ದಾರೆ. ರೈತಸಂಘದವರು ಒಪ್ಪಿಕೊಂಡಿದ್ದಾರೆ, ಮಾನ್ಯ ವಾಟಾಳ್‌ನಾಗರಾಜ್ ಹಾಗೂ ಮಾನ್ಯ ಕಮರುಲ್ ಇಸ್ಲಾಮ್ ಅವರು ಒಪ್ಪಿಕೊಂಡಿದ್ದಾರೆ. ಇದು ನ್ಯಾಯವಾದ ಒಂದು ಸಲಹೆ ಮತ್ತು ನ್ಯಾಯವಾದ ವಿಚಾರ ಎಂದು ಹೇಳಿ ಒಪ್ಪಿಕೊಂಡ ಸಂದರ್ಭದಲ್ಲಿ ಮಾನ್ಯ ವಿರೋಧಪಕ್ಷದ ನಾಯಕರು ಹಾಗೂ ಸ್ನೇಹಿತರಾದ ದೇಶಪಾಂಡೆಯವರು ಹಾಗೂ ಅವರ ಸಹೋದ್ಯೋಗಿಗಳಲ್ಲಿ ನನ್ನ ವಿನಂತಿ ಎಂದರೆ, ದಯಮಾಡಿ ಇದರಲ್ಲಿ ಹಟ ಹಿಡಿಯಬೇಡಿ. ನೀವು ಹಿಡಿದಿದ್ದೇ ಆಗಬೇಕು ಬೇರೆ ಯಾವುದೂ ಕೂಡ ಒಪ್ಪಿಕೊಳ್ಳುವುದಿಲ್ಲವೆಂದರೆ ಅದು ಆಗುವುದಿಲ್ಲ. ಒಪ್ಪುವುದಿಲ್ಲ ಎನ್ನುವ ವಾದವನ್ನು ದಯಮಾಡಿ ಒಂದು ಸಂಸದೀಯ ಉಜ್ವಲ ಸತ್ಪರಂಪರೆಯ ಒಂದು ದೃಷ್ಟಿಯಿಂದ. ನಮ್ಮ ವೈಯಕ್ತಿಕವಾದ ಪಕ್ಷದ ಪ್ರತಿಷ್ಠೆಯನ್ನು ನಾವು ಇವತ್ತು ಸಂಸದೀಯ ಪರಂಪರೆಯ ದೃಷ್ಟಿಯಿಂದ ನಾವು ಸರಿದೂಗಿಸಿಕೊಂಡು ಸಮನ್ವಯತೆಯಿಂದ ಈ ಸದನವನ್ನು ನಡೆಸಿಕೊಂಡು ಹೋಗತಕ್ಕ ಸಹಕಾರವನ್ನು ತಾವು ದಯಮಾಡಿ ಕೊಡಬೇಕಾಗುತ್ತದೆ. ಅದಕ್ಕಾಗಿ ನಾನು ಇವತ್ತು ಬೆಳಿಗ್ಗೆ ಕೂಡ ಮಾನ್ಯ ಅಧ್ಯಕ್ಷರಲ್ಲಿ ವಿನಂತಿ ಮಾಡಿಕೊಂಡೆ. ತಾವು ಪುನಃ ಕರೆದು ಮಾತನಾಡಿ ಎಂದು ಹೇಳಿದ್ದೇನೆ. ಇವತ್ತು ನಮಗೆ ಮೆಜಾರಿಟಿ ಇದೆ ಎಂದು ಏನು ಬೇಕಾದರೂ ಮಾಡಬಹುದೆಂದು ಅಂತಹ ಒಂದು ಪದ್ಧತಿಗೆ ನಾವು ಇಳಿಯುವುದಕ್ಕೆ ಸಿದ್ಧರಿಲ್ಲ ಎನ್ನುವ ವಿಚಾರವನ್ನು ಹೇಳಿದ್ದೇವೆ. ಸಂಸದೀಯ ವ್ಯವಸ್ಥೆಯಲ್ಲಿ ಬಜೆಟ್ ಅಧಿವೇಶನ ಎನ್ನುವುದು ಅತ್ಯಂತ ಶ್ರೇಷ್ಠ ಹಾಗೂ ಪ್ರಮುಖ ಸ್ಥಾನವನ್ನು ಪಡೆದಿದೆ. ಇವತ್ತು ಬಜೆಟ್ ಪ್ರೆಸೆಂಟ್ ಮಾಡಿದ್ದುದು ಅದು ತಮ್ಮ ಮುಂದೆ ಇದೆ. ನಾವು ಮುಂದೆ ಬರತಕ್ಕ ವರ್ಷಗಳಲ್ಲಿ ಈ ಕರ್ನಾಟಕ ರಾಜ್ಯದ ಪ್ರಗತಿಯನ್ನು ಈ ನಾಡಿನ ಜನರ ಆಗುಹೋಗುಗಳನ್ನು, ನೋವು ನಲಿವುಗಳಿಗೆ ಸ್ಪಂಧಿಸತಕ್ಕ ಇಂತಹ ಒಂದು ಪವಿತ್ರ ವೇದಿಕೆಯನ್ನು ದಯಮಾಡಿ ತಾವು ಉಪಯೋಗ ಮಾಡಿಕೊಳ್ಳಬೇಕೆನ್ನುವ ಕಳಕಳಿಯ ಕರೆಯನ್ನು, ವಿನಂತಿಯನ್ನು ಮಾನ್ಯ ವಿರೋಧಪಕ್ಷದವರಿಗೆ ಇವತ್ತು ನೀಡುತ್ತಿದ್ದೇನೆ. 1991-92ನೇ ಸಾಲಿನ ಆಯವ್ಯಯ ಅಧಿವೇಶದಲ್ಲಿ ತಾವೂ ಕೂಡ ಭಾಷಣ ಮಾಡಿದ್ದೀರಿ. ತಾವು ಬಾಯ್ ಕಾಟ್ ಮಾಡಿದ್ದೀರಿ. ಆದುದರಿಂದ ಇದು ಎರಡನೇ ಬಾರಿ ಆಗುತ್ತದೆ. ನಾವು ಚುನಾಯಿತರಾಗಿ ಬಂದು ಜನರ ಸಮಸ್ಯೆಗಳನ್ನು ಚರ್ಚೆ ಮಾಡತಕ್ಕ ಈ ವೇದಿಕೆಯನ್ನು ನಾವು ಸದುಪಯೋಗಪಡಿಸಿಕೊಳ್ಳಬೇಕು. ಈ ವೇದಿಕೆಯನ್ನು ಬಿಟ್ಟು ನಾವು ಹೊರಗಡೆ ಪರ್ಯಾಯ ವೇದಿಕೆ ಎಂದರೆ ಜನತೆ ಮುಂದೆ ಹೋಗತಕ್ಕ ವೇದಿಕೆ. ಆದರೆ ಇವತ್ತು ಜನತೆ ನಮಗೆ ಈ ವೇದಿಕೆ ಉಪಯೋಗ ಮಾಡಿಕೊಳ್ಳಬೇಕೆಂದು ಇಲ್ಲಿಗೆ ಕಳುಹಿಸಿರುವಾಗ ಈ ವೇದಿಕೆಯನ್ನು ನಾವು ಉಪಯೋಗ ಮಾಡಿಕೊಂಡು ಕರ್ನಾಟಕ ರಾಜ್ಯದ ಸಮಗ್ರವಾದ ಜನರ ಅಭಿವೃದ್ಧಿಯನ್ನು, ಸಾಧನೆಯನ್ನು ಮಾಡುವುದಕ್ಕೆ ತಮ್ಮ ಸಲಹೆ ಸಹಕಾರಗಳನ್ನು ಖಂಡಿತವಾಗಿ ಕೊಡಬೇಕೆಂದು ನಾನು ಕಳಕಳಿಯ ವಿನಂತಿ ಮಾಡಿಕೊಂಡು, ಸದನದ ಸಮಿತಿಗೆ ಮಾನ್ಯ ದೇಶಪಾಂಡೆಯವರು ಒಪ್ಪಿಕೊಂಡರೆ, ನಾವು ಅದನ್ನು ಮಾಡುವುದಕ್ಕೆ ಸಿದ್ಧರಿದ್ದೇವೆ. ಬೇಕಿದ್ದರೆ 2-3 ದಿವಸಗಳಲ್ಲಿ ಆ ಪ್ರದೇಶಕ್ಕೆ ಹೋಗಿಬರಲಿ. ಅವರು ಅಲ್ಲಿಗೆ ಹೋಗಿ ಒಂದಮೇಲೆ ನ್ಯಾಯಾಂಗ ವಿಚಾರಣೆ ಆಗಬೇಕು ಎಂದರೆ ನಾನು ಅದಕ್ಕೆ ಅಂಜುವುದಿಲ್ಲ. ಆದರೆ ನಾವು ನೇರವಾಗಿ,- in a vacuum, when there is not even an iota of evidence or an iota charge levelled against actions both at Gulbarga and Bellary districts,

just for sake of prestige of few members of this House or outside, or just to buy political convenience or, to purchase pece from the opposition Leader, means, if I order for a judicial enquiry without any justifiable means, without any basis, I think, I, as a Chief Minister, would be accused by the future generation that just the sake of achieving my selfish end and for purchasing peace with the oposition leader, I have adopted this kind of a convenient method to escape criticism from the opposition leaders. I don't want that I should be putinto that kind of comfort at the cost of real merit of the case. It is not the political motivation which should drive me to constitute a judicial commission. It is merit and merit alone which should drive me to constitute a judicial commission. After all politics is an instrument. That is not an end in itself. politics, ultimately it should lead to the welfare of the people. The politics should ultimately lead to the excellent quality of life. That best tradition we should lay down both in this House and outside. Therefore, I think, I should not be persuaded to compromise the merit. I should not be asked to compromise for the prestige of any political party and I should not be asked to compromise for the sake of purchasing peace so that my position here can be secure or my position as chief minister can be comfortable so that my self-serving methods can be served by this kind of a commission.

ನಾವು ಇಲ್ಲಿ ಚುನಾಯಿತರಾಗಿ ಬರತಕ್ಕದ್ದು ರಾಜ್ಯದ ಜನತೆಯ ಪರವಾಗಿ. ನಾವು ಬರತಕ್ಕದ್ದು ನಮ್ಮ ವೈಯಕ್ತಿಕ ಕಮ್ಫರ್ಟ್ಸ್‌ಗಳಿಗಲ್ಲ, ಅಥವಾ ಯಾವುದೇ ನಮ್ಮ ಪಕ್ಷದ ಅನುಕೂಲಕ್ಕಲ್ಲ, ಅಥವಾ ಪ್ರತಿಷ್ಠಗಾಗಲಿಲ್ಲ. ನಾವು ಆಯ್ಕೆಯಾಗಿ ಬಂದಿರತಕ್ಕದ್ದು ಜನತೆಯ ಸೇವೆಯನ್ನು ಈ ಪವಿತ್ರವಾದ ಒಂದು ವೇದಿಕೆಯ ಮುಖೇನ ಒಂದು ಸಾಧನೆ ಮಾಡುವುದಕ್ಕೆ ಬಂದಿದ್ದೇವೆ ಎನ್ನುವುದನ್ನು ಹೇಳುತ್ತೇನೆ. ಸನ್ಮಾನ್ಯ ದೇಶಪಾಂಡೆಯವರು ಹಿರಿಯರು,ಸರ್ಕಾರದಲ್ಲಿ ಹಲವಾರು ವರ್ಷ ಕೆಲಸ ಮಾಡಿದ್ದಾರೆ. ಅದೇ ರೀತಿ ಅನೇಕ ಸಹೋದ್ಯೋಗಿಗಳೂ ಸಹ. ಹಾಗೆಯೇ ಮಾನ್ಯ ಚಂದ್ರೇಗೌಡರು ಈ ಸದನದ ಅಧ್ಯಕ್ಷ ಸ್ಥಾನದಲ್ಲಿ ಕುಳಿತು ಈ ಸದನವನ್ನು ನಡೆಸಿದಂತಹ ಅನುಭವಿಗಳು ಇದ್ದಾರೆ. ಸಂಸದೀಯ ಶ್ರೇಷ್ಠ ಪರಂಪರೆಯನ್ನು ಎತ್ತಿ ಹಿಡಿಯುವ ದೃಷ್ಟಿಯಿಂದ ಮುಂದೆ ಬರತಕ್ಕ ಸ್ಥಳೀಯ ಹಾಗೂ ವಿಧಾನಸಭಾ ಚುನಾವಣೆಗಳಲ್ಲಿ ರಾಜಕೀಯ ಸದ್ಭಾವನೆಯ ಸೃಷ್ಟಿ ಒಂದು ಪವಿತ್ರವಾದ ವಾತಾವರಣವನ್ನು ಉಳಿಸಿಕೊಂಡು, ಪೊಲಿಟಿಕಲ್ ಪ್ರಾಸೆಸ್‌ಗೆ ಯಾವುದೇ ರೀತಿಯಲ್ಲಿ ಬರತಕ್ಕ ಆತಂಕ ಭಾವನೆಗಳನ್ನು, ಶಂಕೆಯ ಭಾವನೆಗಳನ್ನು, ಭೀತಿಯ ಭಾವನೆಗಳನ್ನು ತಡೆಯುವ ದೃಷ್ಟಿಯಲ್ಲಿ, ತೊಡೆದುಹಾಕತಕ್ಕ ದೃಷ್ಟಿಯಲ್ಲಿ ಇವತ್ತು ತಾವು ಸಹಕರಿಸಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಚುನಾವಣೆಗಳ ಬಗ್ಗೆ ಒಂದು ವಿಚಾರ ಸ್ಪಷ್ಟ ಮಾಡುತ್ತಿದ್ದೇನೆ. ಯಾವುದೇ ಸ್ಥಳೀಯ, ತಾಲ್ಲೂಕು ಅಥವಾ ಜಿಲ್ಲಾ ಪರಿಷತ್ ಚುನಾವಣೆ ಬಗ್ಗೆ ಹಿಂಸಾಚಾರದ ಭಯದಿಂದ ಅಲ್ಲ, ಹಿಂಸಾಚಾರದ ವಾತಾವರಣ ಇದೆ ಎಂದು ಮುಂದುವರಿಸಿಲ್ಲ. ರಾಜಕೀಯ ಸದ್ಭಾವನೆಗಳ ವಾತಾವರಣ ಬರಲಿ. ಏನೊಂದು ಹೊಸ ರಾಜಕೀಯ. ಭೌತಿಕ ಹಾಗೂ ಸಾಮಾಜಿಕ

ವಿಕೇಂದ್ರೀಕರಣದ ವ್ಯವಸ್ಥೆಯಲ್ಲಿ ತಾವೂ ಜೊತೆಯಲ್ಲಿ ಸಹಭಾಗಿಗಳಾಗಿ, ಕ್ರಿಯಾಶೀಲರಾಗಿ ಚಲನಶೀಲ ಶಕ್ತಿಯನ್ನು ಸಮಾಜದಲ್ಲಿನ ಅತೀ ಕೆಳಗೆ ಇರತಕ್ಕ ಜನರಿಗೆ ಕೊಡತಕ್ಕ ದೃಷ್ಟಿಯಲ್ಲಿ ನಾವು ಜೊತೆಜೊತೆಯಾಗಿ ಹೋಗೋಣ. ಭಯ ಭೀತಿ ಇಲ್ಲದ ರೀತಿಯ ವಾತಾವರಣವನ್ನು ಕಲ್ಪಿಸಿ ಈ ಜನರೂ ಕೂಡ ಈ ಪ್ರಕ್ರಿಯೆಯಲ್ಲಿ ಭಾಗವಹಿಸ ತಕ್ಕ ವಾತಾವರಣವನ್ನು ಕಲ್ಪಿಸತಕ್ಕ ದೃಷ್ಟಿಯಲ್ಲಿ ಮಾತ್ರ ನಿನ್ನೆಯಲ್ಲ, ಮೊನ್ನೆ ಕೊಡಬೇಕಾದ ಕ್ಯಾಲೆಂಡರ್ ಆಫ್ ಇವೆಂಟ್ಸ್

25ನೇ ಏಪ್ರಿಲ್ಗೆ ಮಾಡುವ ಬದಲು, ಅದನ್ನು ನಾವು ಇವತ್ತು ಮುಂದುವರೆಸಬೇಕಾದಂಥ ಅವಶ್ಯಕತೆ ಬಂತೇ ಹೊರತು ಅದನ್ನು ತಕ್ಷಣ ಮಾಡಬೇಕಾದಂಥ ಪ್ರಕ್ರಿಯೆಗಳಿಗೆ ಅನುವು ಮಾಡಿಕೊಡುವುದಕ್ಕೆ ತಾವು ದಯಮಾಡಿ ಅನುಕೂಲಕರ ವಾತಾವರಣವನ್ನು ಕಲ್ಪಿಸಿಕೊಡಬೇಕು ಎಂದು ಹೇಳಿ ನಾನು ತಮ್ಮ ಮುಖೇನ ವಿನಂತಿ ಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೇ, ಕಳೆದ ಅಧಿವೇಶದಲ್ಲಿಯೂ ಕೂಡ ನಮ್ಮ ಕರ್ನಾಟಕ ರಾಜ್ಯದ ಜನತೆ ಯಾವರೀತಿ ತೊಂದರೆ ಅನುಭವಿಸಿರಬಹುದೆಂದು ತಾವು ಗಮನಿಸಿರಬಹುದು. ಕಳೆದ ಬಾರಿ ಕಾಂಗ್ರೆಸ್ ಶಾಸಕರು ಇದೇ ರೀತಿ ಧರಣಿ ಕುಳಿತಿದ್ದರಿಂದ ಕರ್ನಾಟಕ ರಾಜ್ಯದ ಜನತೆಗೆ ದ್ರೋಹ ಆಯಿತು. ಇವತ್ತು ಜನತಾದಳದವರು ಈ ರೀತಿ ಧರಣಿ ಕುಳಿತಿರುವುದರಿಂದ ಅನೇಕ ಸಮಸ್ಯೆಗಳನ್ನು ಚರ್ಚೆ ಮಾಡುವುದಕ್ಕೆ ನಮಗೆ ಅವಕಾಶ ಆಗುತ್ತಿಲ್ಲ.

ಶ್ರೀ ಎ.ಕೆ. ಅನಂತಕೃಷ್ಣ : ಕಾಂಗ್ರೆಸ್ಸಿನವರು ದ್ರೋಹ ಮಾಡಿದ್ದಾರೆ ಎಂಬ ಮಾತನ್ನು ಹೇಳಿದ್ದಾರೆ. ಅದನ್ನು ಒಪ್ಪುವುದಕ್ಕೆ ನಾವು ತಯಾರಿಲ್ಲ. ಅವರಿಗೆ ನಾವು ಏನು ದ್ರೋಹ ಮಾಡಿದ್ದೇವೆ?

ಶ್ರೀ ಕೆ.ಎಸ್. ಈಶ್ವರಪ್ಪ : ಈ ಎರಡೂ ಪಕ್ಷಗಳ ವ್ಯವಸ್ಥೆಯಿಂದ ಈ ರಾಜ್ಯದ ವಿಧಾನಸಭೆಗೆ ಒಂದು ರೀತಿಯ ಗ್ರಹಣ ಬಡಿದಂತಾಗಿ, ರಾಜ್ಯದ ಜನತೆ ಯಾವುದೇ ಸಮಸ್ಯೆಯನ್ನು ಚರ್ಚೆಮಾಡುವುದಕ್ಕೆ ಈ ವಿಧಾನಸಭೆಯ ಸದ್ವಿನಿಯೋಗ ಆಗುತ್ತಾ ಇಲ್ಲ, ಎಂಬುದನ್ನು ಮನಗಂಡಿದ್ದಾರೆ ಎನ್ನುವುದನ್ನು ತುಂಬಾ ನೊಂದು ಹೇಳಬೇಕಾಗುತ್ತದೆ. ಇಂತಹ ಒಂದು ಸಂದರ್ಭದಲ್ಲಿ ಈ ರಾಜ್ಯದಲ್ಲಿ ಅನೇಕ ಗೊಂದಲಗಳು ಆಗುತ್ತಾ ಇವೆ. ಅನೇಕ ಸಮಸ್ಯೆಗಳಿವೆ. ಎಲ್ಲಾ ಸಮಸ್ಯೆಗಳಿಗೆ ಚರ್ಚೆ ಮಾಡಬೇಕಾದಂಥ ವಿಧಾನಸಭೆ ಇವತ್ತು ಪಕ್ಷದ ಅಥವಾ ಯಾವುದೇ ವ್ಯಕ್ತಿಗಳ ಪ್ರತಿಷ್ಠೆಗೋಸ್ಕರ ಈ ಒಂದು ಸ್ಥಿತಿ ಬಂದಿರುವುದನ್ನು ನೋಡಿದರೆ ಇಡೀ ರಾಜ್ಯದ ಜನತೆ ನಮಗೆ ಖಂಡಿತವಾಗಿಯೂ ಕ್ಷಮಿಸಲಿಕ್ಕಿಲ್ಲ. ನಾನು ಅದಕ್ಕೋಸ್ಕರ ನಿಮ್ಮನ್ನು ಕೈಮುಗಿದು ಕೇಳುವುದು ಇಷ್ಟೇ. ಇಂತಹ ಸಂದರ್ಭದಲ್ಲಿ ವಿಚಾರವನ್ನು ವಿರೋಧ ಮಾಡುವುದಕ್ಕೆ ಒಂದು ವ್ಯವಸ್ಥೆ ಇದೆ. ಧರಣಿ ಕೂರುವುದಕ್ಕೆ ಒಂದು ವ್ಯವಸ್ಥೆ ಇದೆ. ಸಭಾತ್ಯಾಗ ಮಾಡುವುದಕ್ಕೂ ಒಂದು ವ್ಯವಸ್ಥೆ ಇದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಯಾವ ಹಂತದವರೆಗೆ ಮುಟ್ಟಬಹುದೋ ಅಲ್ಲಿಯವರೆಗೆ ಮುಟ್ಟಬಹುದು. ಅದುಬಿಟ್ಟು ಇಡೀ ರಾಜ್ಯದಲ್ಲಿ ನಮ್ಮದೊಂದು ಪ್ರತಿಷ್ಠೆ ಇದೆ, ಅದಕ್ಕೋಸ್ಕರ ಹೀಗೆ ಮಾಡುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ತಮ್ಮ ಮುಖಾಂತರ ನಾನು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ಮನವಿಯನ್ನು ಮಾಡುತ್ತೇನೆ. ಅವರೇ ಸ್ಪಷ್ಟವಾಗಿ ಹೇಳಿದ್ದಾರೆ. ಇಡೀ ಗ್ರಾಮಪಂಚಾಯತಿ ಚುನಾವಣೆ ನಡೆದಾಗ ಕೇವಲ ಎರಡು ಕಡೆ ಮಾತ್ರ ಗಲಭೆಯಾಗಿದೆ. ಸಾವು ನೋವು ಆಗಿದೆ ಅಂತ. ಇಂತಹ ಸಂದರ್ಭದಲ್ಲಿ ಇಡೀ ರಾಜ್ಯದಲ್ಲಿ ತಾಲ್ಲೂಕು ಪಂಚಾಯತಿ, ಜಿಲ್ಲಾ ಪಂಚಾಯತಿ ಚುನಾವಣೆಯನ್ನು ಮುಂದೂಡುವಂಥ ಅವಶ್ಯಕತೆ ಇಲ್ಲ ಎಂಬುದು ಮುಖ್ಯ ಮಂತ್ರಿಗಳ ಮಾತಿನಿಂದ ಸ್ಪಷ್ಟವಾಗುತ್ತಿದೆ. ಅದಕ್ಕೋಸ್ಕರ ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಈ

ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತಿ ಚುನಾವಣೆಗಳನ್ನು ಕೂಡ ಯಾವುದೋ ಒಂದು ಕಾರಣವನ್ನು ಕೊಟ್ಟು, ರಾಜಕೀಯವಾಗಿ ಇವರಿಗೆ ಆಗುತ್ತಾ ಇರತಕ್ಕಂಥ ತೊಂದರೆಗಳನ್ನು, ಪ್ರಜಾಪ್ರಭುತ್ವದ ಕಗ್ಗೊಲೆ ಮಾಡುವ ರೀತಿಯಲ್ಲಿ ಈ ಚುನಾವಣೆಗಳನ್ನು ಮುಂದೆ ಹಾಕುತ್ತಿರುವುದರಲ್ಲಿ ತುಂಬಾ ಅನ್ಯಾಯ ಇದೆ. ಅದಕ್ಕೋಸ್ಕರ ನಾನು ನನ್ನ ಪಕ್ಷದ ಪರವಾಗಿ ಕೂಡ ಜನತಾದಳದ ಮಿತ್ರರಿಗೆ ಮನವಿ ಮಾಡುತ್ತಿದ್ದೇನೆ. ಈ ರಾಜ್ಯದ ಜನತೆ ಏನು ಅಪೇಕ್ಷೆ ಪಟ್ಟಿದ್ದಾರೆ ಆ ರೂಪದಲ್ಲಿ ನಾವು ವಿಧಾನಸಭೆಯನ್ನು ಬಳಸಿಕೊಳ್ಳಬೇಕಾಗುತ್ತದೆ, ಈ ಪ್ರಯತ್ನ ಮಾಡಬೇಕು ಎನ್ನುವುದು ಒಂದು. ಎರಡನೇಯದಾಗಿ, ಇಲ್ಲಿ ಅನ್ಯಾಯ ಅಕಸ್ಮಾತ್ ನಡೆದಿದ್ದರೆ, ಗೋಲಿಬಾರ್ ಆಗಿ ಅನೇಕ ಜನ ಸತ್ತಿದ್ದರೆ, ಇದನ್ನು ಇಡೀ ವಿಧಾನಸಭೆ ನಾವು ಖಂಡನೆ ಮಾಡೋಣ. ಇದರಲ್ಲಿ ಪಕ್ಷದ ಪ್ರಶ್ನೆ ಇಲ್ಲ. ಇದಕ್ಕೋಸ್ಕರ ಒಂದು ಸದನ ಸಮಿತಿಯನ್ನು ಮಾಡಬಹುದು ಎಂದು ಸಹ ಮುಖ್ಯಮಂತ್ರಿಯವರು ಈಗಾಗಲೇ ಹೇಳಿದ್ದಾರೆ. ಈ ಸದನದ ಸಮಿತಿ ಮಾಡಿ ನಾವು ಹೋಗಿಬಿಟ್ಟು ಬರೋಣ. ಆ ಸದನ ಸಮಿತಿಯಲ್ಲಿ ಅನ್ಯಾಯವಾಗಿದೆ ಎಂದು ಗೊತ್ತಾದರೆ, ಖಂಡಿತವಾಗಿ ನ್ಯಾಯಾಂಗ ತನಿಖೆ ಆಗಲೇಬೇಕಾಗುತ್ತದೆ. ಈ ಒತ್ತಾಯವನ್ನು ನಾನು ಭಾರತೀಯ ಜನತಾಪಕ್ಷದ ಪರವಾಗಿ ತನಿಖೆ ಆಗಲೇಬೇಕಾಗುತ್ತದೆ. ಈ ಒತ್ತಯವನ್ನು ನಾನು ಭಾರತೀಯ ಜನತಾಪಕ್ಷದ ಪರವಾಗಿ ಮಾಡಿಯೇ ಮಾಡುತ್ತಿದ್ದೇನೆ. ಸದನಸಮಿತಿಯನ್ನು ಮಾಡಿ, ಅದರ ವಿಚಾರ ಮುಖಾಂತರ ನ್ಯಾಯಾಂಗ ತನಿಖೆಯನ್ನು ಕೂಡ ಮಾಡಬೇಕೆಂಬುದನ್ನು ಒಪ್ಪುತ್ತಾ, ಈ ಸಂದರ್ಭದಲ್ಲಿ ಈಗಲೂ ಕೂಡ ನಾನು ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಯನ್ನು ಮುಂದೂಡುವಂಥ ಕಾರಣವನ್ನು ಮುಖ್ಯಮಂತ್ರಿಯವರು ಸ್ಪಷ್ಟಮಾಡಿದ್ದಾರೆ. ಆದರೆ ಇಡೀ ರಾಜ್ಯದಲ್ಲಿ ಅಂತಹ ಪ್ರಶ್ನೆ ಏನೂ ಉದ್ಭವವಾಗಿಲ್ಲ. ಎರಡೇ ಕಡೆ ಮಾತ್ರ ಆಗಿದೆ. ಶಾಂತಿ, ಸುವ್ಯವಸ್ಥೆ ಹಾಳಾಗುವ ಪ್ರಶ್ನೆ ಇಲ್ಲ, ಇವರ ರಾಜಕೀಯ ಒಂದು ಅವ್ಯವಸ್ಥೆಯಲ್ಲಿ, ಇವರ ಕಾಂಗ್ರೆಸ್ ಪಕ್ಷದ ರಾಜಕೀಯದ ಗೊಂದಲದಲ್ಲಿ, ಈ ಚುನಾವಣೆಗಳನ್ನು ಮುಂದಕ್ಕೆ ಹಾಕಿ ಪ್ರಜಾಪ್ರಭುತ್ವದ ಕಗ್ಗೊಲೆಯಾಗುತ್ತಿದೆ, ಈ ಸಂದರ್ಭದಲ್ಲಿ ಮತ್ತೂ ಒತ್ತಾಯ ಮಾಡುತ್ತೇನೆ. ಯಾವುದೇ ಕಾರಣಕ್ಕೂ ಈ ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತಿ ಚುನಾವಣೆಗಳನ್ನು ಮುಂದೂಡಬಾರದು ಅಂತ ಹೇಳಿ, ಒತ್ತಾಯ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಅಧ್ಯಕ್ಷರೇ, ಗೋಲಿಬಾರ್ ಆಗಿರುವ ಬಗ್ಗೆ, ಈ ಸದನದಲ್ಲಿ ನ್ಯಾಯಾಂಗ ತನಿಕೆ ಆಗಬೇಕೆಂದು ಹೇಳಿ ಒಂದು ಒತ್ತಡ, ಒತ್ತಾಯ ಮತ್ತು ಸದನದ ಸಮಿತಿಯನ್ನು ನೇಮಕ ಮಾಡಬೇಕು ಎನ್ನುವುದು ನಮ್ಮ ಎರಡನೇ ಒತ್ತಾಯ ಅದಕ್ಕಾಗಿ ಈ ಸಂದರ್ಭದಲ್ಲಿ ಧರಣಿ ಪ್ರಾರಂಭವಾಯಿತು. ಆ ಧರಣಕ್ಕೆ ನಮ್ಮ ಸಂಪೂರ್ಣ ಬೆಂಬಲವನ್ನು ನಾವು ಮೊದಲನೇ ದಿವಸ ಕೊಟ್ಟಿದ್ದೇವೆ. ಎರಡನೇ ದಿನವೂ ಕೊಟ್ಟಿದ್ದೇವೆ. ಈ ಮಧ್ಯೆ ಮೂರನೇ ಪ್ರಶ್ನೆ ಇಲ್ಲಿ ಉದ್ಭವವಾಗಿರತಕ್ಕಂಥಾದ್ದು, ಈ ಶಾಸನಸಭೆ ನಡೆಯುವ ಸಂದರ್ಭದಲ್ಲಿ ಸರ್ಕಾರ ತಾಲ್ಲೂಕು ಪಂಚಾಯತಿ, ಜಿಲ್ಲಾ ಪಂಚಾಯಿತಿ ಚುನಾವಣೆಯನ್ನು ಈ ಸಭೆಯ ಗಮನಕ್ಕೂ ತರದೆ ಏಕಾಏಕಿಯಾಗಿ ಮುಂದುವರೆಸಿರತಕ್ಕಂಥಾದ್ದು. ಇದು ಬಹಳ ಅತ್ಯಂತ ಪ್ರಮುಖವಾದಂಥ ಪ್ರಶ್ನೆ, ನಾನು ಈ ಪರಿಸ್ಥಿತಿಗೆ ಯಾವ ಪಕ್ಷದವರು ಕಾರಣ ಅಂತ ಹೇಳಿ, ದೂಷಣೆ ಮಾಡಿಕೊಂಡು ಒಬ್ಬರಮೇಲೊಬ್ಬರು ಹಾಕಿಕೊಂಡು ಹೋಗತಕ್ಕಂಥ ಪರಿಸ್ಥಿತಿಗೆ ನಾನು ಹೋಗುವುದಿಲ್ಲ. ಶಾಸನಸಭೆ ಅನೇಕ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಬೇಕಾದಂಥ ಒಂದು ಪವಿತ್ರವಾದಂಥ ವೇದಿಕೆ. ಈ ವೇದಿಕೆಯಲ್ಲಿ ಶಾಂತರೀತಿಯಿಂದ ಯಾವುದೇ ಚರ್ಚೆ ಇಲ್ಲದೆ,ಮೂರು-ನಾಲ್ಕು ದಿವಸಗಳಿಂದ ಅನೇಕ ಒತ್ತಾಯ ಬೇಡಿಕೆಗಳ ಬಗ್ಗೆ ಧರಣೆ ನಡೆಯುತ್ತಿದೆ.ಒಂದು ಹಂತದಲ್ಲಿ ಮುಖ್ಯಮಂತ್ರಿಗಳು ಏನು ಹೇಳಿದ್ದಾರೆ ಎಂದರೆ, ನ್ಯಾಯಾಂಗ ತನಿಖೆಯನ್ನು ನಾನು ಖಂಡಿತವಾಗಿಯೂ

ನಡೆಸುವುದಕ್ಕೆ ಒಪ್ಪುವುದಿಲ್ಲ ಎಂಬ ಮಾತನ್ನು ಅವರು ಹೇಳಿಲ್ಲ. ಇವತ್ತಿನ ಅವರ ಧ್ವನಿ ಸ್ವಲ್ಪ ಬದಲಾವಣೆಯಾಗಿದೆ. ಏನು ಬದಲಾವಣೆ? ಈ ಸದನದ ಸಮಿತಿಯನ್ನು ಇವತ್ತೇ ನೇಮಕ ಮಾಡುತ್ತೇನೆ, ಈ ಸಮಿತಿ ಇವತ್ತೇ ಹೋಗಿ ನಾಳೆ ಸಂಜೆಯೊಳಗೆ, ಅಲ್ಲಿ ನ್ಯಾಯಾಂಗ ತನಿಖೆ ಆಗಬೇಕು ಅಂತ ಹೇಳಿ ಆ ಸಮಿತಿಯು ವರದಿಯನ್ನು ಕೊಟ್ಟರೆ, ತಕ್ಷಣ ನಾನು ನ್ಯಾಯಾಂಗ ತನಿಕೆಗೆ ಸಿದ್ಧನಿದ್ದೇನೆ ಎಂದು ಹೇಳಿದ್ದಾರೆ.ಇದು ನಿನ್ನೆಗೂ ಇವತ್ತಿಗೂ ಬದಲಾವಣೆಗೆಯಾಗಿರತಕ್ಕಂಥಾದ್ದು. ನಿನ್ನೆಯ ನಿಲುವಿನಲ್ಲೇ ಅವರು ಇದ್ದಿದ್ದರೆ, ನಾವ್ಯಾರೂ ಈ ಸರ್ಕಾರದ, ಅವರ ಮಾತಿಗೆ ಬೆಂಬಲ ಕೊಡುತ್ತಿರಲಿಲ್ಲ. ಇವತ್ತು ಒಂದು ಹಂತ ಕೆಳಗಿಳಿದು ಅವರು ಈ ಸದನ, ಒಬ್ಬ ನ್ಯಾಯಾಧೀಶರನ್ನು ನೇಮಕ ಮಾಡಿ ಏನು ತೀರ್ಪನ್ನು ಕೊಡಬೇಕು ಅಂತ ಹೇಳುತ್ತಾ ಇದ್ದಾರೆ, ಅದಕ್ಕಿಂತಲೂ ಅಷ್ಟೇ ಪವಿತ್ರವಾಗಿ ಈ ಸದನದ ಒಂದು ಸಮಿತಿ ಒಟ್ಟಾರೆ ಸಮಿತಿ, ಎಲ್ಲಕ್ಕಿಂತಲೂ ಎತ್ತರವಾದಂಥ ಒಂದು ಸಮಿತಿ. ಈ ಸಮಿತಿ ಕೂಡಲೇ ಹೋಗಿ ಒಂದು ದಿನಗಳಲ್ಲಿ ವರದಿಯನ್ನು ತಂದು ಕೊಟ್ಟರೆ. ಆ ವರದಿಗೆ ನಾವು ಸ್ಪಷ್ಟವಾಗಿ ಒಪ್ಪುತ್ತೇವೆ ಆ ವರದಿಯಲ್ಲಿ ತನಿಕೆ ಆಗಬೇಕು ಅಂತ ಹೇಳಿದರೆ, ಖಂಡಿತವಾಗಿಯೂ ಒಪ್ಪುತ್ತೇವೆ ಎನ್ನತಕ್ಕಂಥ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಇವತ್ತು ಸ್ವಲ್ಪ ತಮ್ಮ ಗಡಸಾದ ನೀತಿಯಿಂದ ಬದಲಾವಣೆಯಾಗಿ ಹೇಳಿದ್ದಾರೆ. ನಾನು ಆ ಒಂದು ಬದಲಾವಣೆಯನ್ನು ಸ್ವಾಗತಿಸುತ್ತೇನೆ. ಇವತ್ತು ಶುಕ್ರವಾರ, ಸದನದ ಮುಂದಕ್ಕೆ ಹೋಗುತ್ತದೆ. ಶನಿವಾರ, ಭಾನುವಾರ ಎರಡು ದಿವಸ ರಜೆ ಇದೆ.

ಇವತ್ತೇ ಅವರು ಸಮಿತಿಯನ್ನು ನೇಮಕ ಮಾಡಿ, ನಾಳೆ ಇಲ್ಲ ನಾಡದ್ದು ಆ ಸ್ಥಳಗಳಿಗೆ ಹೋಗಿ, ನಾಡಿದ್ದು ರಾತ್ರಿಯೊಳಗೆ ಆ ವರದಿಯನ್ನು ತಂದು ಸೋಮವಾರ ದಿವಸ ಮುಖ್ಯಮಂತ್ರಿಗಳಿಗೆ ಕೊಟ್ಟು, ಆ ವರದಿಯಲ್ಲಿ ನ್ಯಾಯಾಂಗ ತನಿಖೆ ನಡೆಯಲೇ ಬೇಕು ಎಂದಾದರೆ, ಅವರು ಒಪ್ಪಲೇಬೇಕಾಗುತ್ತದೆ. ಅವರು ಒಪ್ಪದೇ ಹೋದರೆ ನಾವು ಮುಂದಿನ ಹೋರಾಟವನ್ನು ಪ್ರಾರಂಭ ಮಾಡತಕ್ಕಂಥಾದ್ದು, ಇದು ಒಂದು ಒಳ್ಳೆಯ ಸೂಕ್ತವಾದ ಮಾರ್ಗ ಎನ್ನುವುದನ್ನು ನಾನಾದರೂ ಅಂದುಕೊಂಡಿದ್ದೇನೆ. ಎರಡನೆಯದಾಗಿ ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ವಿವರಣೆಯನ್ನು ಕೊಡಬೇಕು. ಈ ರಾಜ್ಯದಲ್ಲಿ ನಡೆಯಬೇಕಾದಂಥ ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿ ಚುನಾವಣೆಯನ್ನು ಮುಂದೂಡಿರತಕ್ಕಂಥ ನಿರ್ಧಾರ ಏನಿದೆ. ಈ ನಿರ್ಧಾರದ ಬಗ್ಗೆ, ಈ ಸದನದ ಹಕ್ಕಿಗೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ಅವರ ಸರ್ಕಾರ ಚ್ಯುತಿಯನ್ನು ತಂದಿದ್ದಾರೆ. ಈ ಸದನ ನಡೆಯುವಾಗ, ಇದು ಪ್ರಮುಖವಾದಂಥ ನಿರ್ಧಾರಗಳು. ಪ್ರಮುಖವಾದ ನಿರ್ಧಾರಗಳನ್ನು ಪ್ರಕರಣೆ ಮಾಡುವಾಗ, ಸದನದಲ್ಲೇ ಪ್ರಕಟಣೆ ಮಾಡಬೇಕು. ಸದನವನ್ನು ಇವರು ಕಡೆಗಣಿಸಿ, ಸದನವನ್ನು ಕೈಬಿಟ್ಟು ಹೊರಗಡೆಯಿಂದ ಅವರ ನಿರ್ಧಾರವನ್ನು ಪ್ರಕಟ ಮಾಡಿರುವಂಥಾದ್ದು, ಈ ಸದನದ ಹಕ್ಕಿಗೆ ಚ್ಯುತಿಯಾಗುತ್ತದೆ ಆದ್ದರಿಂದ ಮುಖ್ಯಮಂತ್ರಿಗಳ ಮೇಲೆ ಹಕ್ಕುಚ್ಯುತಿ ನಿರ್ಣಯವನ್ನು ಸಹ ನಾವು ಮಂಡಿಸತಕ್ಕಂಥ ಅವಕಾಶವೂ ಇಲ್ಲದೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಸರ್ಕಾರದವರಾಗಲೀ, ಮುಖ್ಯಮಂತ್ರಿಗಳಾಗಲೀ, ಪ್ರಕಟಣೆಯನ್ನು ಹೊರಡಿಸಿಲ್ಲ. ಚುನಾವಣಾ ಆಯೋಗ ಹೊರಡಿಸಿದೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಸತ್ಯ ಹೊರಗಡೆಗೆ ಬರಬೇಕಾಗುತ್ತದೆ. ಈ ಚುನಾವಣೆಯನ್ನು ಮುಂದೂಡಿರತಕ್ಕಥಾದ್ದು ಅಪರಾಧ. ಮತ್ತೊಂದು ತಮ್ಮಲ್ಲಿ ನಾನು ಮನವಿ ಮಾಡಿಕೊಳ್ಳುತ್ತಿದ್ದೇನೆ, ನಾನು ತಮ್ಮಲ್ಲಿ ಬಹಳ ಅಪಾರದ ಗೌರವವನ್ನು ಇಟ್ಟು ಕೊಂಡಿದ್ದೇನೆ. ನಮ್ಮನ್ನೆಲ್ಲ ಎತ್ತಿಎತ್ತಿ ಹೊರಗಡೆ ಹಾಕತಕ್ಕಂಥ ಪ್ರಸಂಗ ನಿನ್ನೆ ಏನೂ ಬಂದಿರಲಿಲ್ಲ.ನೀವು ಇನ್ನೊಂದು ಸಾರಿ ಸಭೆಯನ್ನು ಮುಂದೂಡಬಹುದಾಗಿತ್ತು, ಮತ್ತೆ ಚರ್ಚೆ ನಡೆಸಬಹುದಾಗಿತ್ತು. ಆದರೆ ನಮ್ಮನ್ನೆಲ್ಲ ಎತ್ತಿ ಹೊರಗಡೆ ಹಾಕತಕ್ಕಂಥ

ಪ್ರಸಂಗ, ಆ ಮಟ್ಟಕ್ಕೆ ಈ ಸದನ ತಲುಪಿರಲಿಲ್ಲ ಎನ್ನತಕ್ಕಂಥ ಮಾತನ್ನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಅದು ತಪ್ಪು, ಅಥವಾ ಸರಿ ಎಂದು ತಮ್ಮ ತೀರ್ಪನ್ನು ನಾನು ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. ಅದು ಆಗಬಾರದಾಗಿತ್ತು ಎನ್ನತಕ್ಕಂಥ ಮಾತನ್ನು, ಈ ಸದನದಲ್ಲಿ ಕಳಕಳಿಯಿಂದ ಮನವಿ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

1.20 ಪಿ.ಎಂ

Sri Qumaral Islam : Mr. Speaker Sir, while discussing on this issue I also submitted two demands in this House. One regarding ordering of judicial enquiry in places where firing took place and the other is, regarding constitution of the House Committee to probe in to the police firings. Our other friends in the opposition were also demanding these things and they wnet to the extent of holding dharna, but I did not join them Till yesterday. The Government and the Chief minister was not in favour of holding Judicial enquiries or consituting House Committee. But, today a proposal has come from the Chief Minsister that a House Committee would be constituted in this regard and that a house Committee would be constituted in this regard and after its submission of the report, if it feels a judicial enquiry is necessary, the Government will hold a judicial enquiry. I welcome this proposal. I request the Janatha Dal Members and others to accept it and call off their Dharna. Thank you.

ಶ್ರೀ ಎಂ.ಡಿ. ನಂಜುಂಡಸ್ವಾಮಿ : ಸನ್ಮಾನ್ಯ ಮುಖ್ಯಮಂತ್ರಿಗಳ ಮಾತುಗಳಿಗೆ ಮಾನ್ಯ ದೇಶಪಾಂಡೆಯವರು ಏನು ಉತ್ತರ ಕೊಡುತ್ತಾರೋ ನೋಡಿಕಂಡು ಅನಂತರ ನನಗೆ ಅವಕಾಶ ಕೊಡಿ ಅಂತ ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಆರ್ ವಿ. ದೇಶಪಾಂಡೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ ಮಾನ್ಯ ಮುಖ್ಯಮಂತ್ರಿಗಳು ಪ್ರಿಸ್ಟೀಜ್ ಬಗ್ಗೆ, ಅಪೋಜಿಷನ್ ಪ್ಲೀಜ್ ಮಾಡುವ ಬಗ್ಗೆ, ಚುನಾವಣೆ ಬಗ್ಗೆ ಹೀಗೆ ಹಲವಾರು ವಿಚಾರಗಳನ್ನೂ ಪ್ರಸ್ತಾಪ ಮಾಡಿದ್ದಾರೆ. ಒಂದು ಮಾತು ನಾನು ಬಹಳ ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಯಾವ ಪ್ರಿಸ್ಟೀಜ್ಗಾಗಿ, ಯಾವ ವ್ಯಕ್ತಿ ಸಲುವಾಗಿ ಬೇಡಿಕೆಗಳನ್ನು ಮನೆಯ ಮುಂದೆ ಇಟ್ಟಿಲ್ಲ, ನಾವೂ ಸಹ ಇಲ್ಲಿ ಎಫೆಕ್ಟೀವ್ ಆಗಿ ಜನರ ಪ್ರತಿನಿಧಿಗಳಾಗಿ ಕೆಲಸ ಮಾಡಬೇಕಾಗುತ್ತದೆ. ರಾಜ್ಯದಲ್ಲಿ ಹಲವಾರು ಕಡೆ ಕಿಡ್ನಾಪ್ ಅತ್ಯಾಚಾರಗಳು ನಡೆದಾಗ ರಾಜ್ಯದ ಬಳ್ಳಾರಿ ಮತ್ತು ಗುಲ್ಬರ್ಗ ಜಿಲ್ಲೆಯಲ್ಲಿ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಚುನಾವಣೆ ನಡೆದಾಗ ಪೋಲೀಸ್ ಫೈರಿಂಗ್ ಆದಾಗ ನಮ್ಮ ಕರ್ತವ್ಯವನ್ನು ನಾವು ಮಾಡಿಲ್ಲ ಅಂದರೆ ನಮಗೂ ಸಹ ನಾಡಿನ ಜನ ಕ್ಷಮೆ ಮಾಡುವುದಿಲ್ಲ. ಬಿ.ಜೆ.ಪಿ. ಸ್ನೇಹಿತರು ನಿನ್ನೆಯ ತನಕ ನಾವು ಸರ್ಕಾರದ ಜೊತೆ ಶಾಮೀಲಾಗಿ ಈ ಧರಣಿ ಮಾಡುತ್ತಿದ್ದೇವೆಂದು ಹೇಳಿದರು. ನಿನ್ನೆ ಅವರು ನಮ್ಮ ಜೊತೆ ಧರಣಿ ಮಾಡಲಿಕ್ಕೆ ಬಂದರು. ಆವಾಗ ಸದನದ ಸಮಯ ಮತ್ತು ಕಾರ್ಯಕಲಾಪಕ್ಕೆ ತೊಂದರೆ ಆಗುವುದು ಅವರಿಗೆ ಏತಕ್ಕೆ ತಿಳುವಳಿಕೆಗೆ ಬಂದಿಲ್ಲವೋ ನಮಗೆ ಗೊತ್ತಾಗುತ್ತಿಲ್ಲ. ಯಾವ ಕಾರ್ಯಕಲಾಪಕ್ಕೂ ಅಡ್ಡಿ ಬರಬೇಕು ಎನ್ನುವ ಇಚ್ಛೆ ನಮಗೆ ಇಲ್ಲ, ನಮ್ಮ ಸದಿಚ್ಛೆ ಇರುವುದೇ ಕಾರ್ಯಕಲಾಪ ನಡೆಯಬೇಕು ರಾಜ್ಯ ಹಲವಾರು ಸಮಸ್ಯೆಗಳ ಬಗ್ಗೆ ಇವತ್ತು ಚರ್ಚೆ ಆಗಬೇಕಾಗಿದೆ. ಮುಂಗಡ ಪತ್ರದ ಮೇಲೂ ಚರ್ಚೆ ಆಗಬೇಕಾಗಿದೆ. ಆದರೆ ಮಾನ್ಯ ಮುಖ್ಯಮಂತ್ರಿಗಳು

ಇವತ್ತು ನಾನು ಪ್ರಿಸ್ಟೀಜ್ ಮೇಲೆ ಇಲ್ಲ ಅಂತ ಹೇಳಿ ಪ್ರಿಸ್ಟೀಜ್ ಮೇಲೆ ಕುಳಿತಿದ್ದರೆ. ಅವರು ಅಪೋಜಿಷನ್ ನವರನ್ನು ಪ್ಲೀಜ್ ಮಾಡಿ ಮಾಡಬಹುದು ಎಂದು ಹೇಳಿದರು. ಯಾವ ಮುಖ್ಯಮಂತ್ರಿ ಆದರೂ ಅದನ್ನು ಮಾಡಬಾರದು.

ಅವರು ಹೇಳಿದ್ದು ತಪ್ಪು. ಒಬ್ಬ ಮುಖ್ಯಮಂತ್ರಿ ಆದ ನಂತರ ಆ ಪವಿತ್ರವಾದ ಸ್ಥಾನದಲ್ಲಿದ್ದಾಗ ಅವರು ಅಪೋಜಿಷನ್ ನವರು ನಿಜವಾದ ಬೇಡಿಕೆ ಇಟ್ಟಾಗ ಅವರು ಒಪ್ಪಿಕೊಳ್ಳಬೇಕಾಗುತ್ತದೆ. ಅವರ ದೃಷ್ಟಿಯಿಂದ ಅದು ಸರಿ ಇಲ್ಲ ಅಂದರೆ ಕೇವಲ ನಮ್ಮನ್ನು ಪ್ಲೀಜ್ ಮಾಡುವುದಕೋಸ್ಕರ ಒಪ್ಪಿಕೊಳ್ಳುವುದು ಬೇಡ. ಅದು ನಮಗೂ ಇಚ್ಛೆ ಇಲ್ಲ, ನಮಗೂ ಗೌರ್ನಮೆಂಟ್ನಿಂದ ಪ್ಲೀಜ್ ಬೇಕಾಗಿಲ್ಲ, ಅಥವಾ ನಮಗೆ ಸದನದ ಕಾರ್ಯಕಲಾಪಕ್ಕೆ ಅಡ್ಡಿ ಮಾಡಬೇಕು ಎನ್ನುವ ಇಚ್ಛೆ ಇಲ್ಲ ಆದರೆ ನಿಜವಾದ ಬೇಡಿಕೆಗಳು ಏನು ಇವೆ ಅದರ ಬಗ್ಗೆ ಸನದಲ್ಲಿ ಪ್ರಸ್ತಾಪ ಮಾಡಿದಾಗ ನಾವು ಸಹ ನಾಡಿನ ಜನರ ಒಂದು ಅಪವಾದಕ್ಕೆ ಗುರಿಯಾಗುತ್ತೇವೆ. ಇದನ್ನು ಸಹ ನಾನು ತಮ್ಮ ಗಮನಕ್ಕೆ ತರುತ್ತಾ ಇದ್ದೇನೆ. ಇವತ್ತು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಇದು ಚುನಾವಣೆ ವರ್ಷ ನಾನು ಪೋಲೀಸ್ ಫೈರಿಂಗ್‌ನಲ್ಲಿ ಎನ್ಕ್ವೈರಿ ಮಾಡಿದರೆ ಪೋಲೀಸ್ ಮಾರಲ್ ಡೀ ಮಾರಲೈಜ್ ಆಗಬಹುದು ಅಂತ ಹೇಳಿದರು. ಏಕೆ ಡೀ ಮಾರಲೈಜ್ ಆಗಬೇಕು? ಏನು ಕಾರಣ ಇದೆ? ಡೀ ಮಾರಲೈಜ್ ಆಗುವುದಕ್ಕೆ? ಇವತ್ತು ಮುಖ್ಯಮಂತ್ರಿಗಳ ದೃಷ್ಟಿಯಿಂದ ಪೋಲೀಸರು ಏನೂ ತಪ್ಪು ಮಾಡಿಲ್ಲ, ಸರಿಯಾಗಿದೆ ಪ್ರೈಮಾ ಫೇಸಿ ಕೇಸು ಇಲ್ಲ ಎಂದು ಅವರು ಹೇಳುತ್ತಾರೆ.ನಾನು ಕೇಳುತ್ತಿದ್ದೇನೆ ಬಳ್ಳಾರಿ ಮತ್ತು ಗುಲ್ಬರ್ಗದಲ್ಲಿ ಅದಂತಹ ಫೈರಿಂಗ್‌ನಲ್ಲಿ ಏನು 9 ಜನ ಸತ್ತಿದ್ದಾರೆ ಇದೇ ಪ್ರೈಮಾಫೇಸಿ ಕೇಸ್ ಅಲ್ಲವೇ? ಇಲ್ಲಿ ಕಳೆದ 6-7 ತಿಂಗಳುಗಳಿಂದ ಎರಡೂ ಕಡೆ ಮಂಡಲ್ ಹೆಡ್ಕ್ವಾರ್ಟ್ಸ್ ಬಗ್ಗೆ ಸಮಸ್ಯೆ ಇತ್ತು. ಟೆಂಷನ್ ಇತ್ತು ಇದು ಪೋಲೀಸಿನವರಿಗೆ ಗೊತ್ತಿದ್ದು ಇಲ್ಲಾ, ಹಾಗಾಗಿ ಪೋಲೀಸಿನವರು ಪ್ರಿಕಾಶನರಿ ಮೇಷರ್ಸ್ ತೆಗೆದುಕೊಳ್ಳಬೇಕಾಗಿತ್ತು. ಸರಿಯಾದ ಪ್ರಿಕಾಶನರಿ ಮೇಷರ್ಸ್ ಪೋಲೀಸಿನವರು ಇವತ್ತು ತೆಗೆದುಕೊಂಡಿದ್ದರೆ ಇಂತಹ ಒಂದು ಅನಾಹುತ ಆಗುತ್ತಾ ಇರಲಿಲ್ಲ, ಇದನ್ನು ಮಾನ್ಯ ಮುಖ್ಯಮಂತ್ರಿಗಳು ಒಪ್ಪಿಕೊಳ್ಳಬೇಕು. ಆ ಪ್ರಕಾರ ಟೆನ್ಷನ್ ಇತ್ತು ಅಂತ. ನಾವೇನು ಪೋಲೀಸರನ್ನು ಗಲ್ಲಿಗೆ ಹಾಕಿ ಅಂತ ಹೇಳುತ್ತಿಲ್ಲ, ಎನ್ಕ್ವೈರಿ ಮಾಡಿ ಅಂತ ಹೇಳುತ್ತಿದ್ದೇವೆ. ಏತಕ್ಕೆ ಪೋಲೀಸ್ ಎನ್ಕ್ವೈರಿ ಆಗಬಾರದು? ಏನು ತೊಂದರೆ ಇವೆ, ಮಾನ್ಯ ಮುಖ್ಯಮಂತ್ರಿಗಳು ಹೇಳಿದರು ಮತ್ತೊಂದು ಮಾತು ಇದು ಚುನಾವಣೆ ವರ್ಷ ಅಂತ ಹಾಗಾಗಿ ಪೋಲೀಸರ ಸಂರಕ್ಷಣೆ ಎಲ್ಲರಿಗೂ ಬೇಕಾಗುತ್ತದೆ ಆ ದೃಷ್ಟಿಯಿಂದ ಅವರನ್ನು ನಾವು ಡೀ ಮಾರಲೈಜ್ ಮಾಡುವ ಇಚ್ಛೆ ಇಲ್ಲ ಅಂತ ಹೇಳಿದರು. ನಾನು ಹೇಳುತ್ತಿದ್ದೇನೆ ಇದು ಚುನಾವಣೆ ವರ್ಷದ ಮೂಲಕ ಇವತ್ತು ನ್ಯಾಯಾಂಗ ತನಿಖೆ ಮಾಡುವ ಮಹತ್ವ ಬಹಳ ಹೆಚ್ಚಾಗಿದೆ ಏಕೆಂದರೆ ಪೋಲೀಸರು ಸರ್ಕಾರದ ಏಜೆಂಟರಾಗಿ ಕೆಲಸ ಮಾಡುವುದಿಲ್ಲ ಎನ್ನುವುದು ಸಾಬೀತು ಆಗಬೇಕಾಗಿದೆ. ಹಾಗಾಗಿ ಇವತ್ತು ಚುನಾವಣೆ ವರ್ಷದ ಮೂಲಕ ನ್ಯಾಯಾಂಗ ತನಿಖೆಯ ಮಹತ್ವ ಇನ್ನು ಹೆಚ್ಚಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಮತ್ತೊಂದು ಮಾತು ಹೇಳಿದರು.

ನಾನು ಸದನದ ಸಮಿತಿ ಮಾಡುತ್ತೇನೆ ಅವರು ಎರಡು ಮೂರು ದಿವಸದಲ್ಲಿ ಹೋಗಿ ಅವರು ರಿಪೋರ್ಟ್ ಕೊಡಲಿ ಅವರಡಿಯಲ್ಲಿ ಅವರು ನ್ಯಾಯಾಂಗ ತನಿಖೆ ಮಾಡಬೇಕೆನ್ನುವ ಅಭಿಪ್ರಾಯಕ್ಕೆ ಬಂದರೆ ಅದನ್ನು ಸಹ ಮಾಡುತ್ತೇನೆಂದು ಹೇಳಿದರು. ಇದು ನೋಡಲಿಕ್ಕೆ, ಕೇಳಲಿಕ್ಕೆ, ವಿಚಾರ ಮಾಡಲಿಕ್ಕೆ ಒಂದು ಒಳ್ಳೆಯ ಸಲಹೆ ಅಂತ ಕಾಣುತ್ತದೆ. ಆದರೆ ಇದು ಒಳ್ಳೆಯ ಸಲಹೆ ಅಲ್ಲ ಏಕೆಂದರೆ ಹೌಸ್ ಕಮಿಟಿಗೆ ಪೋಲೀಸ್ ಫೈರಿಂಗ್ ವಿಚಾರದಲ್ಲಿ ವಿಚಾರದ ಮಾಡುವುದಕ್ಕೆ ಆಗುವುದಿಲ್ಲ, ಲಾ ಅಂಡ್ ಆರ್ಡರ್ ಬಗ್ಗೆ ವಿಚಾರಣೆ ಮಾಡುವುದಕ್ಕೆ ಆಗುವುದಿಲ್ಲ, ಹೌಸ್

ಕಮಿಟಿ ಯಾರ ಹತ್ತಿರ ಹೋಗಬೇಕು ಬರಬೇಕು? ರಿಪೋರ್ಟ್ ಕೊಡುವುದಕ್ಕೆ ಹೇಗೆ ಸಾಧ್ಯ ಇದೆ? ಪ್ರಾಕ್ಟಿಕಲ್ ಆಗಿ ಸಾಧ್ಯ ಇದೆ ಏನು, ಪ್ರಾಕ್ಟಿಕಲ್ ಆಗಿ ಸಾಧ್ಯವಿಲ್ಲ. ಎರಡನೆಯದು, ಆ ಸಮಿತಿ ಕೂಡ ತನ್ನ ಅಭಿಪ್ರಾಯ ಕೊಡಬೇಕಾದರೆ ಅದಕ್ಕೆ ಒಂದು ಸಕಾರಣಗಳು ಕೊಡಬೇಕಾಗುತ್ತದೆ. ಬೇಕು ಅಂದ್ರೆ ಏಕೆ ಬೇಕು? ಬೇಡ ಅಂದ್ರೆ ಏಕೆ ಬೇಡ? ಹಾಗಾಗಿ ಇವತ್ತು ಸದನದ ಸಮಿತಿಗೂ ಈ ಒಂದು ಪೋಲೀಸ್ ಫೈರಿಂಗ್‌ನಲ್ಲಿ ಅಥವಾ ಯಾವುದೇ ಒಂದು ಇಂತಹ ಘಟನೆ ಆದಾಗ ವಿಚಾರಣೆ ಮಾಡಲು ಈ ಸಮಿತಿಗೆ ಅಧಿಕಾರ ಇಲ್ಲ. ಹಾಗಾಗಿ ಇಂತಹ ಒಂದು ಸಮಿತಿ ರಚನೆ ಆದರೂ ಸಹ ಆದರಿಂದ ಲಾಭ ಬರುವುದಿಲ್ಲ. ಸಲಹೆ ಕೊಡುವುದಕ್ಕೆ ಬರುವುದಿಲ್ಲ. ಅಲ್ಲಿ ಹೋಗಿ ಯಾರನ್ನು ಭೇಟಿ ಮಾಡುತ್ತೀರಿ? ಏನು ಮಾಡುತ್ತೀರಿ? ಯಾವ ಪ್ರಕಾರ ಸಲಹೆ ಕೊಡುತ್ತೀರಿ? ಅಧ್ಯಕ್ಷರೇ ಇಡೀ ನಮ್ಮ ಪಾರ್ಲಿಮೆಂಟರಿ ಡೆಮಾಕ್ರಸಿಯಲ್ಲಿ ಯಾವಾಗಲೂ ಸದನದ ಸಮಿತಿ ಹೋಗಿ ಅದರಿಂದ ಜ್ಯುಡಿಷಿಯಲ್ ಎನ್ಕ್ವೈರಿ ಆಗಿಲ್ಲ ಹಲವಾರು ಜ್ಯುಡಿಷಿಯಲ್ಲ ಎನ್ಕ್ವೈರಿಗಳು ಆಗಿದ್ದಾವೆ. ನಮ್ಮ ಕಾಲದಲ್ಲೂ ಆಗಿದ್ದಾವೆ ಅವರ ಕಾಲದಲ್ಲೂ ಆಗಿದ್ದಾವೆ ಯಾವ ಕಾಲದಲ್ಲೂ ನಾವು ಸಮಿತಿ ಕೈಯಲ್ಲಿ ರಿಪೋರ್ಟ್ ತೆಗೆದುಕೊಂಡಿಲ್ಲ. ಹಾಗಾಗಿ ಮಾನ್ಯ ಮುಖ್ಯಮಂತ್ರಿಗಳು ಪ್ರೆಸ್ಟೀಜ್ ಮೇಲೆ ಉಳಿಯಬಾರದು. ನಮ್ಮದು ಏನು ಪ್ರೆಸ್ಟೀಜ್ ಇಲ್ಲ, ಅವರು ನ್ಯಾಯಾಂಗ ತನಿಖೆಗೆ ಒಪ್ಪಿಕೊಳ್ಳಬೇಕು ಅವರು ಒಂದು ಮಾತು ಹೇಳಿದರು. ಅಲ್ಲಿಗೆ ಸದನದ ಸಮಿತಿ ಹೋಗಿ ಬರಲಿ ಅವರ ಅಭಿಪ್ರಾಯ ಕೇಳಿ ಮಾಡುತ್ತೇನೆ. ಅಂತ ಹೇಳಿದರು ಸದನದ ಸಮಿತಿಯಲ್ಲಿ ಹೋಗುವವರು ಯಾರು? ನಾವು ವಿರೋಧಪಕ್ಷದವರು ಹೋಗುತ್ತೇವೆ. ನಮ್ಮ ರೂಲಿಂಗ್ ಪಾರ್ಟಿ ಶಾಸಕರು ಬರುತ್ತಾರೆ. ಇವತ್ತು ಇಲ್ಲಿ ಸನ್ಮಾನ್ಯ ಕಮರುಲ್ ಇಸ್ಲಾಂ ಅವರು ನ್ಯಾಯಾಂಗ ತನಿಖೆ ಕೇಳಿದ್ದಾರೆ ಅವರು ಆ ಸಮಿತಿಯ ಸದಸ್ಯರು ಆಗುತ್ತಾರೆ. ರೈತ ಸಂಘದವರು ನ್ಯಾಯಾಂಗ ತನಿಖೆ ಕೇಳಿದ್ದಾರೆ ಅದು ಆ ಸಮಿತಿಯ ಸದಸ್ಯರು ಆಗುತ್ತಾರೆ. ಬಿಜೆಪಿ ಯವರು ಕೇಳಿದ್ದಾರೆ ನಾವು ಕೇಳಿದ್ದೇವೆ ಕಾಂಗ್ರೆಸ್ಸಿನವರು ಒಬ್ಬರೇ ಕೇಳಲ್ಲ. ಸದನದ ಎಲ್ಲಾ ಸದಸ್ಯರು ಯಾರು ಸಮಿತಿಯ ಸದಸ್ಯರು ಆಗುತ್ತಾರೆ, ಅವರು ಜ್ಯುಡಿಷಿಯಲ್ ಎನ್ಕ್ವೈರಿ ಆಗಬೇಕೆಂದು ಇಲ್ಲೇ ಕೇಳಿದ್ದಾರೆ.

ಹೀಗಿರುವಾಗ ಪುನಃ ಸದನದ ಸಮಿತಿ ಏತಕ್ಕೆ ಬೇಕು? ಏನು ಅವರ ಅಭಿಪ್ರಾಯ ಬದಲಾವಣೆ ಆಗುತ್ತದೆಯೋ ಇವರು ಅಭಿಪ್ರಾಯ ಕೊಡಬೇಕಾದರೆ ಜವಾಬ್ದಾರಿಯಿಂದ ಮಾತನಾಡಿರಬಹುದು ನನ್ನ ಎಲ್ಲಾ ಸ್ನೇಹಿತರು ನ್ಯಾಯಾಂಗ ತನಿಖೆಯನ್ನು ಕೇಳಬೇಕಾದರೆ ಬಹಳ ಜವಾಬ್ದಾರಿಯಿಂದ ಕೇಳಿರಬಹುದು ಎಲ್ಲಾ ಕಡೆ ವಿಚಾರ ಮಾಡಿ ಅಲ್ಲಿ ಅನ್ಯಾಯ ಆಗಿದೆ ಪೋಲೀಸಿನವರಿಂದ ಅನ್ಯಾಯ ಆಗಿದೆ ಎನ್ನುವ ತಿಳುವಳಿಕೆಯಿಂದ ಕೇಳಿರಬಹುದು ಇಲ್ಲಾ ಇಂತಹ ನ್ಯಾಯಾಂಗ ತನಿಖೆಯನ್ನು ಮನಸ್ಸು ಬಂದ ಹಾಗೆ ಕೇಳುವುದಕ್ಕೆ ಆಗುವುದಿಲ್ಲ. ಅವರೆಲ್ಲಾ ಜವಾಬ್ದಾರಿ ವ್ಯಕ್ತಿಗಳು. When responsible members have already asked for judicial enquiry what is the purpose in getting their report in the form of House Committee? The House Committee naturally consists of these members. Can they change their mind? If they change their mind, naturally we have to come to the conclusion that they have mislead the House by meaking such statements.

ಮಾನ್ಯ ಅಧ್ಯಕ್ಷರೇ, ಇವತ್ತು ಸದನದ ಸಮಿತಿ ವರದಿ ಬೇಕಾಗಿದೆ. ನ್ಯಾಯಾಂಗ ತನಿಖೆ ಆಗಬೇಕಾಗಿದೆ. ಇವತ್ತು ಮುಖ್ಯಮಂತ್ರಿಗಳು ಪಂಚಾಯತ್ ತಾಲ್ಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್ ಬಗ್ಗೆ ಕೂಡ ಹೇಳಿದರು. ಲಾ ಅಂಡ್ ಆರ್ಡರ್‌ದು ಸಮಸ್ಯೆ ಏನೂ ಇಲ್ಲ ಆದರೆ ಇವತ್ತು ಹಳ್ಳಿಗಳಲ್ಲಿ ನೆಮ್ಮದಿ ಇಲ್ಲ ಅಟ್ಮಾಸ್ಫಿಯರ್ ಸರಿಯಾಗಿಲ್ಲ. ಮಾನ್ಯ ಮುಖ್ಯಮಂತ್ರಿಗಳು ನಿಲುವಳಿ ಸೂಚನೆಯ ಮೇಲೆ ಉತ್ತರ ಕೊಡುವಾಗ ಆ ಮಾತು ಹೇಳಲಿಲ್ಲ. ಅವರು ಏನು ಹೇಳಿದರು

ನಿಮ್ಮ ಕಾಲದಲ್ಲಿ ನಿಮ್ಮ ಗೌರ್ನಮೆಂಟ್ ಇದ್ದಾಗೆ ಮಂಡಲ ಪಂಚಾಯತ್ ಚುನಾವಣೆ ಆದಾಗ he claimed that it went on very smoothly.

ಮುಂದುಹೋಗಿ ಹೇಳಿದರು ಕೇವಲ 49 ಘಟನೆಗಳಾದುವು ಎಂದು ಹಾಗಾದರೆ ಸಿಎಲ್ಪಿಯಲ್ಲಿ ಗಲಾಟೆಯಾದನಂತರ ಚುನಾವಣೆಯನ್ನು ಮುಂದಕ್ಕೆ ಹಾಕಬೇಕು ಎಂದು ಹೇಳಿದ ನಂತರ ಡಿಜಿಪಿ ಪತ್ರ ಬರೆಯುತ್ತಾರೆ ಲಾ ಅಂಡ ಆರ್ಡರ್ ಸರಿಯಾಗಿಲ್ಲ ಎಂದು. ಮುಖ್ಯಮಂತ್ರಿಗಳು ಹೋಂ ಮಿನಿಸ್ಟ್ರು ಇದ್ದಾರೆ, ಅಜರ್ನ್ಮೆಂಟ್ ಮೋಶನ್ ಮೇಲೆ ಇಲ್ಲಿ ಮುಖ್ಯಮಂತ್ರಿಗಳು ಸ್ಟೇಟ್ ಮೆಂಟ್ ಮಾಡುವಾಗ He was aware of the Situation.

ಇವತ್ತು ಸರ್ಕಾರಕ್ಕೆ ಚುನಾವಣೆ ಬೇಡ ಆಗಿದೆ. Electorate ನ್ನು ಫೇಸ್ ಮಾಡುವ ಶಕ್ತಿ ನಿಮಗೆ ಇಲ್ಲ ಹಾಗಾಗಿ ನೇರವಾಗಿ ಪ್ರಾಮಾಣಿಕವಾಗಿ ಹೇಳಿಬಿಡಿ, It was a political decision. I can concede; I can understand. A political Party has a right to take a decision. That we will not agree with you. We may oppose that decision. You can say it is your fate. ಹಾಗಾಗಿ ಅಧ್ಯಕ್ಷರೇ ನಮ್ಮ ಕಾಲದಲ್ಲಿ ಏನು ಘಟನೆಗಳಾದುವು ಅವನ್ನು ನಾನು ಒಪ್ಪಿಕೊಳ್ಳುವುದಕ್ಕೆ ತಯಾರಿಲ್ಲ ಆದರೂ ಕೂಡ I accept the argument. Then inspite of that, we held election for Zilla parishads. Why? was it because we belived in the decentralisation? Was it because we had a commitment? Was it because we had a will? Then why that will is not with you?

ನಿಮಗೆ ಆ ಕಮಿಟ್‌ಮೆಂಟ್ ಈಗ ಏತಕ್ಕಿಲ್ಲ ಏಕೆ ಈ ಸದನದ ಮೇಲೆ ವಿಶ್ವಾಸ ಇಲ್ಲ? ಹಾಗಾಗಿ ಅಧ್ಯಕ್ಷರೇ ಇಲ್ಲಿ ಯಾವ ಪ್ರಿಸ್ಟೀಜೂ ಇಲ್ಲ, ಯಾವ ಕಡೆ ಯಾರೂ ಪ್ಲೀಸ್ ಮಾಡುವ ಪ್ರಶ್ನೆಯೂ ಇಲ್ಲ, ನಾನು ಬಹಳ ವಿನಯದಿಂದ ಮುಖ್ಯಮಂತ್ರಿಗಳಿಗೆ ಹೇಳುತ್ತಿದ್ದೇನೆ. ಇವತ್ತು ಕಾರ್ಯಕಲಾಪ ಬಹಳ ಮಹತ್ವದ್ದಿದೆ, ನಮಗೆ ಅಡ್ಡಬರುವ ಇಚ್ಛೆ ಇಲ್ಲ ಪಾರ್ಲಿಮೆಂಟರಿ ಡೆಮಾಕ್ರಸಿಯಲ್ಲಿ ಕೆಲವು ಸಲ ಸಜೆಶನ್ಸ್ ಬಂದಾಗ ಅಪೋಜಿಶನ್ ಸಹ ಆ ಸಜೆಶನ್ಸ್ ಯೋಗ್ಯ ಇದ್ದರೆ ಒಪ್ಪಿಕೋ ಬೇಕಾಗುತ್ತದೆ. ಆದರೆ ಇವತ್ತು ಈ ಸರ್ಕಾರ ಪ್ರಿಸ್ಟೀಜ್ ಮೇಲೆ ನಿಂತು ಏನು ಸಜೆಶನ್ ಕೊಟ್ಟಿದೆ ಅದನ್ನು ಒಪ್ಪಿಕೊಳ್ಳುವುದಕ್ಕೆ ಆಗುವುದಿಲ್ಲ ಹಾಗಾಗಿ ಸಂತೋಷದಿಂದ ನಾನು ಹೇಳುತ್ತಿಲ್ಲಿ, ನಮಗೇನು ಇಲ್ಲಿ ಡಿಸ್ಟರ್ಬ್ ಮಾಡಬೇಕು, ಕಾರ್ಯಕ್ರಮ ಅಡ್ಡಮಾಡಬೇಕೆಂದು ನಮಗಿಲ್ಲ. Government has compelled us to go on dharna, and we will continue it till our demands are met.

Sri. A.K.Anantha Krishna : The issue before this House is whether we accept the proposal of Hon'ble Chief Ministers for the the constitution of a House Committee and await the report of the House Committee and if it is true, to order a a Judicial Enquiry. On that issue Mr. Vatal Nagaraj has spoken on it and given hisoinion. Mr. Qumarul Islam has given his opinion. I also wanted to raise the same issue. Instead of confining to that point, to go on talking at length about the election, postponement of election and so many other things, is diverting the attention of this House. That is my point of Order. Which is supreme? Is it the House Committee which is supreme at this stage when the offer is made by the Hon'ble Chief Minister or is it somebody a judicial Officer who is going to sit on the judgement of what we are likely to do? That is the point.

ಪ್ರೊ ಎಂ.ಡಿ.ನಂಜುಂಡಸ್ವಾಮಿ : ಅಧ್ಯಕ್ಷರೇ, ನಾನು ಬೆಳಿಗ್ಗೆ ಆಡಿದ ಮಾತನ್ನೇ ಮುಂದುವರೆಸುತ್ತಿದ್ದೇನೆ. ತಾವು ಇಲ್ಲಿ ಇರುವವರಿಗೆಲ್ಲಾ ಚುನಾವಣಾ ನಡವಳಿಕೆಗಳನ್ನು ಗುಣಾತ್ಮಕವಾಗಿ ಬದಲಾಯಿಸುವುದಲ್ಲಿ ಎಷ್ಟು ಜವಾಬ್ದಾರಿ ಇದೆ ಅದನ್ನು ನಾವು ಅರಿತು ಕೆಲಸ ಮಾಡಬೇಕು. ಪಂಚಾಯತಿ ಚುನಾವಣೆಗಳಲ್ಲಿ ಅಲ್ಲಲ್ಲಿ ಗಲಭೆ ಗೋಲಿಬಾರ್ ಆಗಿದೆ. ಗೋಲಿಬಾರ್ ನಡೆದಾಗ ಪೋಲೀಸರು ಹದ್ದುಮೀರಿ ಕೆಲಸ ಮಾಡಿದ್ದಾರೆಯೇ ಎನ್ನುವುದನ್ನು ತನಿಖೆ ಮಾಡುವ ಜವಾಬ್ದಾರಿ ಎಷ್ಟಿದೆಯೋ ಅಷ್ಟೇ ಜವಾಬ್ದಾರಿ ಜನತೆಯೂ ಹದ್ದುಮೀರಿದ್ದಾರೋ ಏನೋ ಎನ್ನುವುದನ್ನು ತನಿಖೆ ಮಾಡಿ ಅವರಿಗೂ ಬುದ್ಧಿವಾದ ಹೇಳುವಂಥಹುದು ಅವರ ನಡವಳಿಕೆ ತಿದ್ದುವ ಜವಾಬ್ದಾರಿ ನಮಗಿದೆ. ಈ ಕೆಲಸವನ್ನು ಎಲ್ಲ ರಾಜಕೀಯ ಪಕ್ಷಗಳು ಮಾಡಬೇಕು. ಅಂತಹ ಕೆಲಸವನ್ನು ಈಗ ಮುಖ್ಯಮಂತ್ರಿಗಳು ಏನು ಸಲಹೆ ಮಾಡುತ್ತಿದ್ದಾರೆ ಸದನ ಸಮಿತಿ, ಆ ಸದನ ಸಮಿತಿಯೂ ಮಾಡಬಹುದು, ಮಾಡಲೇಬೇಕು ಪೋಲಿಸರು ಹದ್ದುಮೀರಿದ್ದಾರೆ ಅನ್ನುವುದಲ್ಲ, ಪೋಲಿಸರು ಸರಿಯಾಗೇ ಕೆಲಸ ಮಾಡಿರಬಹುದು, ಪೋಲಿಸರು ಸರಿಯಾಗಿ ಕೆಲಸ ಮಾಡಿದ್ದರೆ ಅವರಿಗೆ ಬೆನ್ನುತಟ್ಟುವಂತಹ ಜವಾಬ್ದಾರಿಯೂ ನಮಗೇ ಇರುವುದು. ಏತಕ್ಕೆ ಈ ಮಾತು ಹೇಳುತ್ತಿದ್ದೇನೆ ಎಂದರೆ ಬರುವ ಪೂರ್ತಿ ವರ್ಷ ಚುನಾವಣಾ ವರ್ಷ. ನಾವು ಯಾವರೀತಿ ಪೋಲಿಸರು ಜನರ ಸಂಬಂಧ ಇಟ್ಟುಕೊಳ್ಳಬೇಕು, ಹೇಗೆ ಕಾನೂನು ಪಾಲನೆ ಮಾಡಬೇಕು, ಇದಕ್ಕೆ ಪೂರಕವಾಗಿ ನಾವು ಯಾವರೀತಿ ಕೆಲಸ ಮಾಡಬೇಕು ಎಂಬುದು ಇದು ಬಹಳ ಮುಖ್ಯವಾದ ವಿಚಾರ. ಆ ಕಾರಣ ನಾನು ಜನತಾದಳದಲ್ಲಿ ವಿನಂತಿಮಾಡಿಕೊಳ್ಳುವುದು ಮುಖ್ಯಮಂತ್ರಿಗಳು ಕೊಟ್ಟ ಸಲಹೆಯನ್ನು ದಯಮಾಡಿ ಒಪ್ಪಬೇಕು. ಒಪ್ಪಲಿಲ್ಲ ಎನ್ನುವುದಾದರೆ ನಾನು ಮುಖ್ಯಮಂತ್ರಿಗಳನ್ನು ತಮ್ಮ ಮೂಲಕ ವಿನಂತಿಮಾಡಿಕೊಳ್ಳುವುದು, ತಾವು ದಯಮಾಡಿ ಸದನದ ಸಮಿತಿ ರಚನೆ ಮಾಡಿ. ಸದನ ಸಮಿತಿ ಹೋಗಿಬರಲಿ ನ್ಯಾಯಾಂಗ ತನಿಖೆ ಅದಕ್ಕೆ ಅವಶ್ಯಕತೆ ಇದೆ ಅಂತ ಅನ್ನಿಸಿದರೆ ತಾವು ಆಶ್ವಾಸನೆ ಕೊಟ್ಟಿದ್ದೀರಿ ಹಾಗೆ ನೇಮಕ ಮಾಡಿ. ಇಲ್ಲ ಇದೇ ಹಠ ಮಾಡುವುದಾದರೆ ಮತ್ತೊಂದು ಜನತಾದಳದವರಲ್ಲಿ ವಿನಂತಿ ಏನೆಂದರೆ ನಮ್ಮನ್ನು ಆಯ್ಕೆ ಮಾಡಿ ಕಳಿಸಿದ್ದಾರಲ್ಲ ಅವರಿಗಾಗಿ ನಾವು ನಮ್ಮ ಕರ್ತವ್ಯವನ್ನೂ ಮಾಡಲು ಬಿಡಿ. ತಾವು ನಮ್ಮ ಕರ್ತವ್ಯ ಮಾಡುವುದಕ್ಕೆ ಅವಕಾಶ ಮಾಡಿಕೊಡುವ ರೀತಿಯಲ್ಲಿ ತೀರ್ಮಾನ ತೆಗೆದುಕೊಳ್ಳಿ ಅಂತ ವಿನಂತಿ ಮಾಡಿಕೊಳ್ಳುತ್ತೇನೆ.

+ ಶ್ರೀ ಡಿಬಿ. ಚಂದ್ರೇಗೌಡ : ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಒಂದು ಮಾತು ಹೇಳಿದರು ವ್ಯಾಖ್ಯಾನದಲ್ಲಿ ಯಾವುದೇiota of evidence ಇಲ್ಲದೆ ನ್ಯಾಯಾಂಗ ತನಿಖೆ ಆಜ್ಞೆ ಮಾಡುವುದು ಸರಿಯಲ್ಲ ಎನ್ನುವಂಥದು, ಅದು ಜವಾಬ್ದಾರಿಯುತ ಮಾತು ನಾನು ಅದನ್ನೂ ಒಪ್ಪುತ್ತೇನೆ. ಆದರೆ ಇಲ್ಲಿರುವುದು ನಮ್ಮ ಪ್ರಶ್ನೆ ಅದಲ್ಲ 7 ಜೀವಿಗಳು ಗುಂಡಿಗೆ ಬಲಿಯಾಗಿವೆ, ಆ ಜೀವಕ್ಕೆ ಈ ರಾಜ್ಯದಲ್ಲಿ ಬೆಲೆ ಇಲ್ಲವೇ? ಬೆಲೆ ಇದ್ದರೆ ಇಂತಹ ಪರಿಸ್ಥಿತಿ ಮತ್ತೊಮ್ಮೆ ಆಗಬಾರದು, ನಮ್ಮ ಬೇಡಿಕೆಯಲ್ಲಿ ಸಾಮಾನ್ಯವಾಗಿ ನಾವು ಜ್ಯುಡಿಶಿಯಲ್ ಎನ್ಕ್ವೈರಿ ಕೇಳುವಾಗ ಅಧಿಕಾರಿ ವರ್ಗ ಮಾಡಿ ಅಂತ ಕೇಳುತ್ತೇವೆ, ಅಧಿಕಾರಿ ವರ್ಗ ಮಾಡಿ ಕೇಳುತ್ತಿಲ್ಲ ನಾವು,ಅಧಿಕಾರಿಯನ್ನು ಅಮಾನತ್ತಿನಲ್ಲಿ ಅಂತ ಕೇಳುತ್ತೇವೆ, ಅಮಾನತ್ತಿನಲ್ಲಿಡಿ ಅಂತ ಕೇಳುತ್ತಿಲ್ಲ ಅಥವಾ ಅಧಿಕಾರಿಗಳು ಅಪರಾಧಿಗಳು ಎಂಬ ಅಪಾದನೆ ಮಾಡಿಲ್ಲ,ಇದು ನಮ್ಮ ಪ್ರತಿಷ್ಠೆಯ ಪ್ರಶ್ನೆಯೂ ಅಲ್ಲ ಮತ್ತೆ ಶಾಂತಿಯನ್ನು ಕಾಪಾಡಬೇಕೆಂಬ ಮುಖ್ಯಮಂತ್ರಿಗಳ ಮಾತು ಏನಿದೆ ಅದರಲ್ಲಿ ನಮಗೆ ಭಿನ್ನಾಭಿಪ್ರಾಯವಿಲ್ಲ. ನಾವು ಏನು ಕೇಳುತ್ತಿದ್ದೇವೆ, ರಾಮನಗರದಲ್ಲಿ ಗುಂಡುಹಾಕಿದರು, ಅಲ್ಲಿ ನ್ಯಾಯಾಂಗ ತನಿಖೆ ಆಯಿತು. ಸದನ ಸಮಿತಿ ಹೋಗಿತ್ತೇ? ಮೇಹಂ ಚುನಾವಣೆಯೊಳಗೆ ಚೌತಾಲರು ಗುಂಡು ಹಾಕಿದರು, ಅಲ್ಲಿ ನ್ಯಾಯಾಂಗ ತನಿಖೆಗೆ ಸದನ ಸಮಿತಿ ಕಳಿಸಲಿಲ್ಲ, ನಾನು ಅಧ್ಯಕ್ಷನಾಗಿ ಕೆಲಸ

ಮಾಡಿದ್ದೇನೆ. ತಮ್ಮಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಉಳಿದ ವಿಚಾರಗಳಿಗೆ, ಪೋಲಿಸ್ ಗೋಲಿಬಾರ್ ನಿಂದಾಗಿ ಜನ ಸತ್ತಿದ್ದಾರೆನ್ನುವುದಕ್ಕೆ ಏನು ಎವಿಡೆನ್ಸ್ ಕೊಡಬಹುದು ಸದನ ಸಮಿತಿ? ಎರಡನೆಯದು ಈ ಸದನ ಸಮಿತಿಗೆ ಸಾಂವಿಧಾನಿಕ ಅಧಿಕಾರ ಇಲ್ಲ. What is the constitutional authority for the House Committee to go into it? It is only the Commission of Enquiry Act that can go into the merits and demerits of the case.

ಆಮೇಲೆ ಪೋಲಿಸ್ ಡಿಮಾರಲೈಸ್ ಆಗುತ್ತದೆ ಎಂದು ಹೇಳಿದರು. ಪೋಲಿಸರು ಹೊರದೇಶದಿಂದ ಬಂದಿರೋರಲ್ಲ, ನಮ್ಮ ಜನವೇ, ನಮ್ಮ ರೈತರ ಮಕ್ಕಳೇ ಹೊರಗಡೆಯಿಂದ ಬಂದಿರೋರು ಕೆಲವರು ಇರಬಹುದು. ಈ ಸಮಿತಿಯ ವರದಿ ನ್ಯಾಯಾಂಗ ತನಿಖೆಯಿಂದ ಬಂದು ಪೋಲಿಸರು ಸರಿಯಾಗಿ ಕೆಲಸ ಮಾಡಿದ್ದಾರೆಂದರೆ That is a credit to the Government, that is a credit to the police Department, that is a credit to the law. I will not go into the details of other things. It is not a political convenience that we are asking for a judicial enquiry. It is the price the people have paid, whether they have paid the price rightly or wrongly. Innocent lives have been lost.

ನಾವು ಯಾವುದನ್ನು ಹೇಳುತ್ತಿದ್ದೇವೆ ಅದನ್ನು ತಾವು ಸ್ವಲ್ಪ ಕೇಳಿ. ಬಾಕಿ ವಿಚಾರಗಳು ಬೇಕಾದಷ್ಟಿವೆ ನಾನು ಅದಕ್ಕೆ ಹೋಗುವುದಿಲ್ಲ.

What is that the Government is going to lose? How is it that they are going to lose?

ಎಲ್ಲಾ ಮಾನ್ಯ ಹಿರಿಯ ಸದಸ್ಯರು ಹೇಳಿದ್ದಾರೆ ಜನರ ಪರವಾಗಿ ಕೆಲಸ ಮಾಡೋಣ ಎಂದು. ನಾವೇನು ಬೇರೆ ಹೇಳಿದ್ದೇವೆಯೇ? ಜನರನ್ನು ಕೊಂದಿದೆ ಅಂದರೆ ಇಲ್ಲ ಸರಿಯಾಗೇ ಕೊಂದರೆಂದು ತೀರ್ಮಾನವಾಗುತ್ತದೆ.

We must ourselves convinced before we present our case, through you, to this House.

ನಮ್ಮನ್ನೇಕೆ ಜನ ಆಯ್ಕೆ ಮಾಡಿ ಕಳಿಸಿದ್ದಾರೆಂದರೆ ಜನರ ಜೀವ ಹಾನಿಯಾದ ಸಮಯದಲ್ಲಿ ಶಾಸನ ಸಭೆಯಲ್ಲಿ ಇದನ್ನು ಚರ್ಚೆ ಮಾಡಿ ಆಡಳಿತಕ್ಕೆ ಸೀಮಿತವಾಗದಂತಹ ಅಥವಾ ಆಡಳಿತವನ್ನು ಮೀರಿದಂತಹ ನ್ಯಾಯಾಂಗವಾದಂತಹ ತನಿಖೆ ಯಾವುದು ಇದೆ ಇದರ ಬಗ್ಗೆ ಹೆಚ್ಚು ಒತ್ತು ಕೊಡಲಿ ಎಂದು ಕಳಿಸಿದ್ದಾರೆ. ಡಿವಿಜನಲ್ ಕಮೀಷನರ್‌ರಿಂದ ತನಿಖೆ ಮಾಡಿಸೋಣ ಅಂದೆವು ಸ್ವಾಮಿ, ನಾವೇನು ನ್ಯಾಯಾಂಗ ತನಿಖೆಯನ್ನು ಸುಪ್ರೀಂ ಕೋರ್ಟ್ನ ನ್ಯಾಯಾಧೀಶರನ್ನೇನಾದರೂ ಕರೆದುಕೊಂಡು ಬನ್ನಿ ಇಲ್ಲವೇ ಹೈಕೋರ್ಟ್ ನ್ಯಾಯಾಧೀಶರನ್ನು ಕರೆದುಕೊಂಡು ಬನ್ನಿ ಎಂದು ಹೇಳಲಿಲ್ಲ. ಜಿಲ್ಲಾ ನ್ಯಾಯಧೀಶಕರ ಕೈಯ್ಯಲ್ಲಿ ತನಿಖೆ ಮಾಡಿಸಿ ಆ ತನಿಖೆಯಿಂದಾಗಿ ಎಲ್ಲಾ ಸತ್ಯಾಂಶ ಹೊರಗೆ ಬರಲಿ. ಎರಡನೆಯದು ಮುಂದೆ ನಡೆಯತಕ್ಕಂತಹ ಚುನಾವಣೆಗೂ ಮಾರ್ಗದರ್ಶನ ಸಿಗಬಹುದು ನಮಗೆ. ಆ ಮಾರ್ಗದರ್ಶನವನ್ನು ಆಧಾರವನ್ನಾಗಿಟ್ಟುಕೊಂಡು ಮುಂದೆ ಚುನಾವಣೆಯಲ್ಲಿ ಎಷ್ಟರಮಟ್ಟಿಗೆ ಪೋಲೀಸ್ ಬಳಕೆಯನ್ನು ಮಾಡಿಕೊಳ್ಳಬಹುದೆನ್ನುವುದನ್ನು ಮಾಡಬಹುದು. ಎಂಬುದನ್ನು ತಿಳಿದುಕೊಳ್ಳಬಹುದು. ನನಗೆ ಗೊತ್ತಿಲ್ಲಪ್ಪ ಮಾನ್ಯ ಮಾಯಿಲಿಯವರು ಇಷ್ಟೊಂದು ಜನತಂತ್ರವಾದರೋ ನನಗೆ ಗೊತ್ತಿಲ್ಲಪ್ಪ ಇದರಿಂದೇನು ನಷ್ಟವಾಗುತ್ತದೆ?

ನನ್ನ ಮಟ್ಟಿಗೆ ಹೇಳುವುದಾದರೆ ಜನರ ಜೀವ ಅತ್ಯಂತ ಬೆಲೆಯಾದದ್ದು, ಅತ್ಯಂತ ಪವಿತ್ರವಾದದ್ದು.ಅದನ್ನು ನೀವು ರಕ್ಷಣೆ ಮಾಡಬೇಕಾಗುತ್ತದೆ. ಅದಕ್ಕಿಂತಲೂ ಪೋಲೀಸ್

ಇಲಾಖೆಯನ್ನು ರಕ್ಷಣೆ ಮಾಡತಕ್ಕಂಥಾದ್ದು ಆಗಬಾರದು ಚುನಾವಣೆಯಲ್ಲಿ ಪೋಲೀಸರ ಪ್ರವೇಶ ಆಗಬಾರದು. ನಮ್ಮಲ್ಲಿ ಗಲಭೆಯಾಗಿಲ್ಲ. ಬಹುತೇಕ 175ರಲ್ಲಿ 2 ಕಡೆ ಬಿಟ್ಟರೆ ಉಳಿದ 173 ತಾಲ್ಲೂಕಿನಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಸಮಾಧಾನವಾಗಿ ನಡೆದಿದೆ. ಇಲ್ಲಿ 2 ಕಡೆ ನಡೆದದ್ದು ಬಿಟ್ಟರೆ ಬೇರೆ ಕಡೆ ತೊಂದರೆಯಾಗಿಲ್ಲ. ಇಲ್ಲಿ ನಾನು ನನ್ನ ಕ್ಷೇತ್ರದ್ದು ಕೇಳುತ್ತಿದ್ದೇನೆಯೇ? ಒಂದು ವೇಳೆ ಇಂಥಾದ್ದೇ ಘಟನೆ ನಿಮ್ಮ ಕ್ಷೇತ್ರದಲ್ಲಾಗಿದ್ದರೆ ನೀವು ಏನು ಮಾಡುತ್ತಿದ್ದೀರಿ? ಇಲ್ಲವೇ ಮಾನ್ಯ ಮುಖ್ಯಮಂತ್ರಿಯವರ ಕ್ಷೇತ್ರದಲ್ಲಾಗಿದ್ದರೆ ಏನು ಮಾಡುತ್ತಿದ್ದೀರಿ? ಜನರಿಗೆ ಸಮಾಧಾನ ಕೊಡತಕ್ಕಂತಹ ಕೆಲಸವನ್ನು ನಾವು ಮಾಡಬೇಕು. ಸಮಿತಿಗೆ ನನ್ನ ವಿರೋಧ ಇಲ್ಲ. ನನ್ನ ದೃಷ್ಟಿಯಲ್ಲಿ ಶಾಸಕಾಂಗದ ಸಮಿತಿ ನ್ಯಾಯಾಂಗ ತನಿಖೆ ಮಾಡುವುದಕ್ಕೆ ಹೋಗತಕ್ಕಂಥಾದ್ದು ಒಂದು ಹೊಸ ಸಂಪ್ರದಾಯ ನನ್ನ ಅನುಭವದ ಆಧಾರದ ಮೇಲೆ ಹೇಳುವುದಾದರೆ ಸಂಸತ್ತಿನಲ್ಲಿ ಆಗಲೀ, ಶಾಸನ ಸಭೆಯಲ್ಲಿ ಆಗಲೀ ಅಥವಾ ಕರ್ನಾಟಕ ಶಾಸನ ಸಭೆಯಲ್ಲಿ ಆಗಲೀ ಒಂದು ದಿವಸವೂ ಇಂತಹ ಪ್ರಸ್ತಾಪವೆಂದೂ ಬಂದಿರಲಿಲ್ಲ. ನಾವು ನಮ್ಮ ಇತಿಮಿತಿಯೊಳಗೆ ಕೆಲಸ ಮಾಡಬೇಕಾಗುತ್ತದೆ. ಸಮಿತಿ ಕಳಿಸಿ ಆ ಸಮಿತಿಯ ತೀರ್ಮಾನದ ಮೇಲೆ ನ್ಯಾಯಾಂಗ ತನಿಖೆ ಮಾಡುತ್ತೇವೆಂಬ ತೀರ್ಮಾನ ಮಾಡುತ್ತೇವೆಂದು ಹೇಳತಕ್ಕಂಥಾದ್ದು ನನ್ನ ದೃಷ್ಟಿಯಲ್ಲಿ ಸರಿಯಲ್ಲ ಇದು ವಿಳಂಬ ನೀತಿ ಆಗುತ್ತಿದೆ. 2 ದಿವಸದಲ್ಲಿ ಅವರು ಹೋಗಿ ಬರುವುದಾದರೆ ಹೋಗಿ ಬರಲಿ ನಮ್ಮದೇನೋ ಅಭ್ಯಂತರವಿಲ್ಲ ಹೋಗಿ ಬಂದು ವರದಿ ಕೊಡಲಿ ನಿಜವಾ ನಾನಂತೂ ನನ್ನ ಅಭಿಪ್ರಾಯವನ್ನು ರೀ ಕನ್ಸಿಡರ್ ಮಾಡುತ್ತೇನೆ. ಆದರೆ ನಾವಿಲ್ಲಿ ಜವಾಬ್ದಾರಿಯಿಂದ ನ್ಯಾಯಾಂಗ ತನಿಖೆ ಆಗಬೇಕೆಂದು. ಜವಾಬ್ದಾರಿಯಿಂದ ನ್ಯಾಯಾಂಗದ ತನಿಕೆಯನ್ನು ಕೇಳಿ ನಾವು ಸದನ ಸಮಿತಿಗೆ ಒಪ್ಪಿದ್ದಾದ್ದರೆ ನಮ್ಮದು ಬೇಜವಾಬ್ದಾರಿಯಾಗುತ್ತದೆ. ನಾವು ಈ ಸದನದಲ್ಲಿ ಬೇಜವಾಬ್ದಾರಿಯಿಂದ ಮಾತನಾಡಿದ ಹಾಗಾಗುತ್ತದೆ. ನ್ಯಾಯಾಂಗ ತನಿಖೆ ಕೇಳಿ ಸಮಿತಿ ಹೋಗಿ ಬರಲಿ ಎಂದು ಒಪ್ಪಿಕೊಳ್ಳುವುದು ನಮಗೆ ಸಮಾಧಾನವಾಗುವುದಿಲ್ಲ. ನ್ಯಾಯಾಂಗ ತನಿಖೆಯನ್ನು ನಾವು ಕೇಳಿದ್ದೇವೆ.

ನಾನು ಬೇಜವಾಬ್ದಾರಿಯೆಂದು ಹೇಳಿಸಿಕೊಳ್ಳುವುದಕ್ಕೆ ಸಿದ್ದವಿಲ್ಲ. ನಮಗೆ ಸತ್ಯ ಶೋಧನೆಯ ಕೆಲಸ ಅಷ್ಟೆ ನಮಗೆ ಬೇಕಾಗಿರುವುದು. ಸಮಿತಿ ಮಾಡುವುದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ . ಜನರಿಗ ಸಮಾನಾಗಬೇಕು. ನ್ಯಾಯಾಂಗ ತನಿಖೆಯಿಂದ ಮಾತ್ರ ಅದು ಸಾಧ್ಯ. ಮಾನ್ಯ ಮುಖ್ಯಮಂತ್ರಿಗಳು ಉಳಿದ ಅನೇಕ ವಿಚಾರಗಳನ್ನು ಇಲ್ಲಿ ಹೇಳಿದ್ದಾರೆ ಅವರಿಗಿಂತ ಮುಂಚಿತವಾಗಿ ಅಂದರೆ 1971ರಲ್ಲಿ ನಾನು ಆರಿಸಿ ಬಂದಿದ್ದೇನೆ ಅವರ 1972ರಲ್ಲಿ ಬಂದವರು ಕೆಲವು ಇಲ್ಲಿ ನಿನ್ನೆ ಏನು ಹೇಳಬೇಕೋ ಅದನ್ನು ಹೇಳಿದ್ದರಿ. ಬೇಸಿಕ್ ಆಗಿ ಜನತಂತ್ರದಲ್ಲಿ ಚುನಾಯಿತ ಸದಸ್ಯರುಗಳಾಗಿ ಈ ಮನೆಯಲ್ಲಿ ಹೇಗೆ ಕೆಲಸ ಮಾಡಬೇಕೆಂದು ತಿಳಿಯಲಾರದಷ್ಟು ಮೂರ್ಖರು ನಾವು ಅಲ್ಲ ಮೌಢ್ಯವೂ ನಮಗೆ ಇಲ್ಲ ಮತ್ತು ಪ್ರೆಸ್ಟಿಜೂ ಇಲ್ಲ. ಜನರ ಜೀವ ಹರಣವಾಗಿದೆ ಅದಕ್ಕಾಗಿ ನಾವು ಮಾಡತಕ್ಕಂತಹ ಒಂದೇ ಒಂದು ಕೆಲಸ. ನ್ಯಾಯಾಂಗ ತನಿಖೆಯಿಂದ ಸತ್ಯ ಹೊರಗೆ ಬರಲಿ ಅಷ್ಟೇ ನಮ್ಮ ವಿಚಾರ.

ಶ್ರೀ ಎಂ.ಎಸ್.ಪಾಟೀಲ್ : ಮಾನ್ಯ ಅಧ್ಯಕ್ಷರೇ....

ಒಬ್ಬ ಮಾನ್ಯ ಸದಸ್ಯರು : ನಮಗೆ ಅವಕಾಶ ಕೊಡಿ. ಏನೇನಾಗಿದೆ ಆ ಕಥೆ ಹೇಳುವುದಕ್ಕೆ ನಮಗೆ ಅವಕಾಶ ಕೊಡಿ.

(ಗೊಂದಲ)

ಅಧ್ಯಕ್ಷರು : ಜನತಾ ದಳದ ವಿರೋಧ ಪಕ್ಷದ ನಾಯಕರು ಮತ್ತು ಸದಸ್ಯರಲ್ಲಿ ನಾನು ಪುನಃ ಕೇಳಿಕೊಳ್ಳುತ್ತೇನೆ. ಈಗಾಗಲೇ ಇದರ ಬಗ್ಗೆ ಕಳೆದ ಎರಡು ಮೂರು

ದಿವಸಗಳಿಂದ ಸಾಕಷ್ಟು ಚರ್ಚೆಯಾಗಿದೆ. ಈಗ ಅದಕ್ಕೆ ರೈತ ಸಂಘದವರು ಶ್ರೀಮಾನ್ ವಾಟಾಳ್ ನಾಗರಾಜ್ ರವರು, ಕಮರುಲ್ ಇಸ್ಲಾಂರವರು ಮತ್ತು ಬಿಜೆಪಿ ಸದಸ್ಯರು ಸಹಾ ಸದನದ ಸಮಿತಿಯನ್ನು ಮಾಡಿ ಅಲ್ಲಿಂದ ವರದಿ ಬಂದ ನಂತರ ನ್ಯಾಯಾಂಗ ತನಿಖೆ ಮಾಡಬೇಕೋ ಬಿಡಬೇಕೋ ಎನ್ನುವ ಬಗ್ಗೆ ಅವರು ಒಪ್ಪಿಕೊಂಡಿದ್ದಾರೆ. ತಾವು ಅದಕ್ಕೆ ಒಪ್ಪಿಕೊಂಡು ತಮ್ಮ ತಮ್ಮ ಸ್ಥಳಗಳಿಗೆ ಹೋಗಿ ಮುಂದಿನ ಕಲಾಪವನ್ನು ನಡೆಸಿಕೊಡುವುದಕ್ಕೆ ಅನುಕೂಲ ಮಾಡಿಕೊಡಬೇಕು ಎಂದು ಹೇಳಿ ನಾನು ತಮ್ಮಲ್ಲಿ ಬಹಳ ಆತ್ಮೀಯತೆಯಿಂದ ಕೇಳಿಕೊಳ್ಳುತ್ತೇನೆ.

(ನ್ಯಾಯಾಂಗ ತನಿಖೆ ಬೇಕೆ ಬೇಕು ಎಂದು ಜನತಾ ದಳದ ಸದಸ್ಯರು ಬಾವಿಯಲ್ಲಿ ನಿಂತು ಕೂಗುತ್ತಿದ್ದರು)

ಅಧ್ಯಕ್ಷರು : ಮಾನ್ಯ ಸದಸ್ಯರುಗಳು ತಮ್ಮ ಸ್ಥಾನಗಳಿಗೆ ಹೋಗಬೇಕು ಎಂದು ವಿನಂತಿಸಿಕೊಂಡಿದ್ದೆನು. ಆದರೆ ಅವರುಗಳು ನನ್ನ ಮನವಿಗೆ ಪುರಸ್ಕಾರ ಕೊಡದೆ ನನ್ನ ಅಧಿಕಾರದ ವಿಷಯದಲ್ಲಿ ಲಕ್ಷ್ಯವಿಲ್ಲದೆ ತಿರಸ್ಕಾರ ಮಾಡುತ್ತಾ ಸದನದ ಕಾರ್ಯಕಲಾಪಗಳಿಗೆ ಒಂದೇ ಸಮನಾಗಿ, ಉದ್ದೇಶ ಪೂರ್ವಕವಾಗಿ ಅಡಚಣೆಯನ್ನು ಉಂಟು ಮಾಡುತ್ತಿದ್ದಾರೆ. ಆದುದರಿಂದ ನಿಯಮ 331 ಮೇರೆಗೆ ಈ ಕೆಳಕಂಡ ಸದಸ್ಯರು ಸಭೆಯ ಕಲಾಪಗಳಿಗೆ ಸತತವಾಗಿ ಅಡ್ಡಿಪಡಿಸಿದ್ದಕ್ಕಾಗಿ ಈ ಸಭೆಯ ಕಲಾಪಗಳಲ್ಲಿ ಭಾಗವಹಿಸುವುದನ್ನು ನಿಷೇಧಿಸಲಾಗಿದೆ. ನಾನು ಈ ಕೆಳಕಂಡ ಮಾನ್ಯ ಸದಸ್ಯರನ್ನು ಹೆಸರಿಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ

ಶ್ರೀ ಡಿ.ಬಿ. ಚಂದ್ರೇಗೌಡ

ಶ್ರೀ ಬಿ.ಹಂಪನಗೌಡ

ಶ್ರೀ ಜೆ.ಸಿ.ಮಾಧುಸ್ವಾಮಿ

ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ

ಶ್ರೀ ಹೆಚ್.ಏಕಾಂತಯ್ಯನವರು

ಶ್ರೀ ಶಿವಾನಂದ ಕೌಜಲಗಿ

ಶ್ರೀ ಉಮೇಶ್ ಕತ್ತಿ

ಶ್ರೀ ವೈ.ಕೆ.ರಾಮಯ್ಯ

ಶ್ರೀ ಪಟ್ಟಣಶೆಟ್ಟಿ

ಶ್ರೀ ಪಿ.ಸಿ.ಸಿದ್ಧನಗೌಡರ್

ಶ್ರೀ ಆರ್.ಎಲ್.ಜಾಲಪ್ಪ

ಶ್ರೀ ಸಿ.ಭೈರೇಗೌಡ

ಶ್ರೀ ಬಿ.ಹೆಚ್.ಬನ್ನಿಕೋಡ್

ಶ್ರೀ ಪಾಟೀಲ್

(ಗೊಂದಲ)

(ನ್ಯಾಯಾಂಗ ತನಿಖೆ ಆಗಲೇ ಬೇಕು ಎಂದು ಜನತಾ ದಳದ ಸದಸ್ಯರುಗಳು ಒಕ್ಕೊರಲಿನಿಂದ ಬಾವಿಯಲ್ಲಿ ನಿಂತು ಕೂಗುತ್ತಿದ್ದರು)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ. ನಿನ್ನೆ ಪ್ರಸಂಗಕ್ಕೆ ಮತ್ತೆ ಹೋಗುವುದು ಬೇಡ.

ಶ್ರೀ ಬ್ಲೆಸಿಯಸ್ ಎಂ. ಡಿಸೋಜ : ಮಾನ್ಯ ಅಧ್ಯಕ್ಷರೇ, ತಮ್ಮ ಅಪ್ಪಣೆ ಪಡೆದು ಈ ಕೆಳಕಂಡ ಒಂದು ನಿರ್ಣಯವನ್ನು ಮಂಡಿಸುತ್ತೇನೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ, ಒಂದು ನಿಮಿಷ. ನೀವೆಲ್ಲ ತಯಾರಾಗಿದ್ದೀರಿ. ಆದರೆ ಒಂದು ನಿಮಿಷ. ನಿನ್ನೆಯ ಪ್ರಸಂಗಕ್ಕೆ ಮತ್ತೆ ಹೋಗುವುದು ಬೇಡ. ಒಂದು ಅವಕಾಶ ಮಾಡಿ. ನಿನ್ನೆ ಇವರನ್ನು ಅಮಾನತ್ತಿನಲ್ಲಿಟ್ಟು ಪ್ರತಿದಿನ ಏನಿದು ?

(ಗೊಂದಲ)

ಅಧ್ಯಕ್ಷರು : ತಮ್ಮ ತಮ್ಮ ಸ್ಥಳಗಳಿಗೆ ಹೋಗಿ ಎಂದು ಹೇಳಿದ್ದೇನಲ್ಲ. ಆ ರೀತಿ ಹೋಗುವುದಕ್ಕೂ ಅವರುಗಳು ತಯಾರಾಗಿಲ್ಲ. ಅದನ್ನು ಒಪ್ಪುವುದಿಲ್ಲ. ಇನ್ನೇನು ಮಾಡುವುದಕ್ಕಾಗುತ್ತದೆ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ಅವರನ್ನೆಲ್ಲ ಕೇಳಿಕೊಂಡು ಆಗಿದೆ. ಎಷ್ಟು ಸಾರಿ ಎಂದು ಅವರಿಗೆ, ಕೇಳಿಕೊಳ್ಳುವುದು.

(ಗೊಂದಲ)

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾರ್ಮಿಕ ಸಚಿವರು): ಮಾನ್ಯ ಅಧ್ಯಕ್ಷರೇ, ಈ ಕೆಳಕಂಡ ಮಾನ್ಯ ಸದಸ್ಯರುಗಳು ಅನಾವಶ್ಯಕವಾಗಿ ಸಭೆಯ ಕಾರ್ಯಕಲಾಪಗಳಿಗೆ ಅಡ್ಡಿಪಡಿಸುತ್ತಿರುವುದರಿಂದ ಅವರನ್ನು ಈ ಅಧಿವೇಶನ ಮುಗಿಯುವವರೆಗೆ ಸಭೆಗೆ ಹಾಜರಾಗದಂತೆ ನಿಷೇಧಿಸಬೇಕು.

ಅಧ್ಯಕ್ಷರು : ಪ್ರಸ್ತಾವವನ್ನು ಮಂಡಿಸಲಾಯಿತು.

ಪ್ರಸ್ತಾವವು ಅಂಗೀಕೃತವಾಗಿದೆ.

ಈ ಕೆಳಗೆ ಉಲ್ಲೇಖಿಸಿದ ಸದಸ್ಯರುಗಳನ್ನು ಸದರಿ ಅಧಿವೇಶನ ಮುಗಿಯುವವರೆಗೆ ಸಭೆಗೆ ಬಾರದಂತೆ ಆದೇಶಿಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ

ಶ್ರೀ ಡಿ.ಬಿ. ಚಂದ್ರೇಗೌಡ

ಶ್ರೀ ಬಿ. ಹಂಪನಗೌಡ

ಶ್ರೀ ಜೆ.ಸಿ. ಮಾಧುಸ್ವಾಮಿ

ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ

ಶ್ರೀ ಹೆಚ್. ಏಕಾಂತಯ್ಯ

ಶ್ರೀ ಶಿವಾನಂದ ಕೌಜಲಗಿ

ಶ್ರೀ ಉಮೇಶ ಕತ್ತಿ

ಶ್ರೀ ಪಟ್ಟಣಶೆಟ್ಟಿ

ಶ್ರೀ ಪಿಸ.ಸ ಸಿದ್ಧನಗೌಡರ

ಶ್ರೀ ಆರ್.ಎಲ್. ಜಾಲಪ್ಪ

ಶ್ರೀ ಸಿ. ಬೈರೇಗೌಡ

ಶ್ರೀ ಬಿ.ಹೆಚ್. ಬನ್ನಿಕೋಡ್

ಶ್ರೀ ಎಂ.ಎಸ್. ಪಾಟೀಲ್

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ, ದಯಮಾಡಿ ಈ ಮಟ್ಟಕ್ಕೆ ಹೋಗಬೇಡಿ. ಇದು ಪ್ರಜಾಪ್ರಭುತ್ವದ ಲಕ್ಷಣವಲ್ಲ.

ಅಧ್ಯಕ್ಷರು : ಸಭೆಯ ಕಲಾಪಗಳನ್ನು ಒಂದು ಗಂಟೆ ಮುಂದೂಡಿ ಪುನಃ ಮೂರು ಗಂಟೆಗೆ ಸೇರೋಣ.

(ಸದನವು 1-49 ಕ್ಕೆ ಮುಕ್ತಾಯಗೊಂಡು ಪುನಃ 3 ಗಂಟೆಗೆ ಸೇರಲು ನಿಶ್ಚಯಿಸಿತು)

(ಸಭೆಯು 3 ಗಂಟೆ 20 ನಿಮಿಷಕ್ಕೆ ಸಮಾವೇಶಗೊಂಡಿತು)

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠದಲ್ಲಿದ್ದರು)

+ ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೇ, ತಮ್ಮಲ್ಲಿ ನಾನು ಮನವಿ ಮಾಡಿಕೊಳ್ಳುತ್ತಿದ್ದೇನೆ. ಜನತಾ ದಳದ ಸದಸ್ಯರನ್ನು ದಯವಿಟ್ಟು ಇಡೀ ಸದನ ಪೂರ್ತ ಅಮಾನತ್ತುಗೊಳಿಸಿರುವಂಥದ್ದು ಸರಿಯಾದ ನಿರ್ಧಾರವಲ್ಲವೆಂದು ನಾನು ಅಂದುಕೊಂಡಿದ್ದೇನೆ. ಪ್ರಜಾಪ್ರಭುತ್ವದಲ್ಲಿ ಈ ತರಹ ನಿರ್ಧಾರ ತೆಗೆದುಕೊಳ್ಳುವುದು ಒಳ್ಳೆಯ ಚಿಷ್ನೆಯಲ್ಲ. ಈ ಧರಣಿ ನಡೆಸುವುದು ಪ್ರತಿಭಟನೆ ಮಾಡುವುದು, ಸಭಾತ್ಯಾಗ ಮಾಡುವುದು ಸರ್ಕಾರದ ಜೊತೆಯಲ್ಲಿ ಅನೇಕ ರೀತಿಯಲ್ಲಿ ಚರ್ಚೆ ಮಾಡುವುದು ನಮ್ಮ ಹಕ್ಕು. ಇದನ್ನು ತಾವು ಪ್ರತಿಷ್ಠೆಯ ಪ್ರಶ್ನೆ ಮಾಡಿಕೊಂಡು ನಿನ್ನೆ ಎಲ್ಲ ಸದಸ್ಯರನ್ನು ಹೊರಹಾಕಿದ್ದೇ ಸರಿಯಲ್ಲ ಎಂದು ನನ್ನ ವಾದ. ಮತ್ತು ಇವತ್ತು ಸಹ ಸಂಪೂರ್ಣ ಈ ಅಧಿವೇಶನ ಮುಗಿಯುವವರೆಗೂ ಅವರ್‍ಯಾರು ಒಳಕ್ಕೆ ಬರಬಾರದು ಎಂದು ಹೊರಕ್ಕೆ ಹಾಕಿರುವುದು ಪ್ರಜಾಪ್ರಭುತ್ವದ ನೀತಿಗೆ ಒಂದು ತಿಲಾಂಜಲಿಯನ್ನು ಹಾಕಿದಂತಾಗುತ್ತದೆ.

ಈ ಪರಿಸ್ಥಿತಿಯಲ್ಲಿ ಮತ್ತೊಮ್ಮೆ ಕುಳಿತು ಮಾತನಾಡತಕ್ಕಂತಹ ಅನೇಕ ವಿಧಾನಗಳಿವೆ. ಎಲ್ಲವನ್ನೂ ಗಾಳಿಗೆ ತೂರಿ ಅವರನ್ನು ಹೊರಕ್ಕೆ ಹಾಕಿರತಕ್ಕಂಥಾದ್ದು ಸರಿಯಲ್ಲ. ಪರಿಸ್ಥಿತಿಯನ್ನು ನೋಡಿದರೆ ಅಂದರೆ ಅವರೆಲ್ಲರನ್ನೂ ಹೊರಗೆ ಹಾಕಿ ಶಾಸನ ಸಭೆ ನಡೆಸತಕ್ಕಂತಹ ಪರಿಸ್ಥಿತಿ ಇಲ್ಲಿ ಉದ್ಭವವಾಗಿರಲಿಲ್ಲ. ಆದರೂ ನಾನು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಮಾನ್ಯ ವೀರಪ್ಪ ಮೊಯಿಲಿಯವರು ಆ ಒಂದು ಪರಿಸ್ಥಿತಿಗೆ ಹೋಗುತ್ತಾರೆಂದು ನಾನು ಅಂದುಕೊಂಡಿರಲಿಲ್ಲ, ನೀವು ಹಿಂದೆ ಸಂಸದೀಯ ಸಚಿವರೂ ಆಗಿದ್ದಿರಿ ನಂತರ ಮಾನ್ಯ ಮುಖ್ಯ ಮಂತ್ರಿಗಳಾದಿರಿ ತಾವು ನಡೆದುಕೊಳ್ಳತಕ್ಕಂತಹ ನೀತಿ ನಮಗೆ ಬಹಳ ಮೆಚ್ಚುಗೆಯಾಗಿತ್ತು. ನಿಮ್ಮ ಬಗ್ಗೆ ಅಪಾರವಾದ ಗೌರವವನ್ನು ಇಟ್ಟುಕೊಂಡಿರತಕ್ಕಂತಹವರು ನಾವು. ಆದರೆ ನಿನ್ನೆ ಇವತ್ತು ಮೊನ್ನೆಯಿಂದ ತಾವು ನಡೆದುಕೊಳ್ಳತಕ್ಕಂತಹ ರೀತಿ ತಾವು ಮಾಡಿದಂತಹ ರೀತಿಗಳೇನು ಇವೆ ಅವು ಸರಿಯಾದುದಲ್ಲ, ಪ್ರಜಾಪ್ರಭುತ್ವಕ್ಕೆ ಸರಿಯಾದುದಲ್ಲ ಒಳ್ಳೆಯ ಲಕ್ಷಣಗಳಲ್ಲ. ಎರಡನೆಯದಾಗಿ ನಿನ್ನೆ ಇಡೀ ಖಾಲಿ ಖುರ್ಚಿಗಳ ಎದುರಿಗೆ ನೀವು ವೀರಾವೇಶದಿಂದ ಭಾಷಣ ಹೊಡೆದಿದ್ದೀರಿ. ನೀವು ಅವರೆದುರಿಗೆ ಆಡಿದ್ದರೆ....

ಶ್ರೀ ಜಿ. ರಾಜೂಗೌಡ : ನನ್ನದೊಂದು ಕ್ರಿಯಾಲೋಪ ಇದೆ.

ಉಪಾಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್ರವರೇ, ಇದೇ ರೀತಿಯ ಹೇಳಿಕೆಯನ್ನು ಈ ಸದನದ ಮುಂದೆ ನಿನ್ನೆ ಮತ್ತು ಬೆಳಗಿನಿಂದ ಹೇಳುತ್ತಿದ್ದೀರಿ. ನಿಮಗೇ ಗೊತ್ತಿರುವ ಪ್ರಕಾರ ಅಧ್ಯಕ್ಷರ ಕೊಠಡಿಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳ ಸಮ್ಮುಖದಲ್ಲಿ ಹಿರಿಯ ಸದಸ್ಯರುಗಳ ಜೊತೆ ಏನು ಮಾತುಕತೆಯಾಯಿತು ಅದು ತಮಗೂ ಗೊತ್ತಿದೆ. ಹೀಗಿದ್ದರೂ ಕೂಡ ಬೆಳಗಿನಿಂದ ಇದೇ ರೀತಿ ಹೇಳುತ್ತಿದ್ದೀರಿ. ಈಗಲೂ ಅದೇ ಹೇಳುತ್ತಿದ್ದೀರಿ. ತಾವೇನು ಹೇಳುತ್ತೀರೋ ಬೇಗ ಮುಗಿಸಿ ಇನ್ನೂ ಪ್ರಶ್ನೋತ್ತರ ಕಾರ್ಯಕ್ರಮವಿದೆ.

ಶ್ರೀ ವಾಟಾಳ್ ನಾಗರಾಜ್ : ಈ ಸದನದಿಂದ ಅವರೆಲ್ಲರನ್ನೂ ಹೊರಗೆ ಹಾಕತಕ್ಕಂತಹ ಪರಿಸ್ಥಿತಿ ಬಂದಿತ್ತೇ? ಅಂತಹ ಉಲಬಣವಾದಂತಹ ಪರಿಸ್ಥಿತಿ ಬಂದಿರಲಿಲ್ಲವೆಂದು ನಾನು ಅಂದುಕೊಂಡಿದ್ದೇನೆ. ಆದ್ದರಿಂದ ತಾವು ಮತ್ತೊಮ್ಮೆ ತಮ್ಮ ತೀರ್ಪನ್ನು...

ಶ್ರೀ ಜಿ. ರಾಜೂಗೌಡ : ತಮ್ಮ ರೂಲಿಂಗ್ ಅನ್ನು ಪ್ರಶ್ನೆ ಮಾಡುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ತಮ್ಮ ತೀರ್ಪನ್ನು ಮತ್ತೊಮ್ಮೆ ಪರಿಶೀಲನೆ ಮಾಡಿ ಅವರು ಒಳಗೆ ಬರಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳು ಒಂದು ನಿರ್ಣಯವನ್ನು ಮಂಡಿಸಬೇಕು ಅದನ್ನು ಈ ಸದನ ಒಪ್ಪಬೇಕೆಂದು ನಾನು ಕಳಕಳಿಯ ಮನವಿ ಮಾಡುತ್ತೇನೆ. ಮಾನ್ಯ ಸಂಸದೀಯ ಸಚಿವರನ್ನು ಕೈಮುಗಿದು ಪ್ರಾರ್ಥನೆ ಮಾಡುತ್ತಿದ್ದೇನೆ....

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಈ ಸದನದಿಂದ ನಾವ್ಯಾರೂ ಅವರನ್ನೂ ಹೊರಗಡೆ ಹಾಕಿಲ್ಲ. ಅವರಾಗಿಯೇ ಹೊರಗೆ ಹೋಗುತ್ತೇವೆಂದು ಅತ್ಯಂತ ಆಸಕ್ತಿಯಿಂದ ಆಸೆಯಿಂದ ಹೊರಗೆ ಹಾಕಿಸಿಕೊಂಡಿದ್ದಾರೆ. ಈಗ ಇಬ್ಬರು ಮಾನ್ಯ ಸದಸ್ಯರುಗಳು ಇಲ್ಲಿ ಇದ್ದಾರೆ. ಅವರನ್ನು ಹೊರಗೆ ಹಾಕುವುದಕ್ಕೆ ನಮಗಿಷ್ಟವಿಲ್ಲ. ಹಾಕುವುದಿಲ್ಲ. ಅವರು ಇದ್ದರೂ ಕೂಡ ಸಭೆಯನ್ನು ನಡೆಸುತ್ತೇವೆ. ಅವರು ಬಂದು ಪುನಃ ಸಭೆಗೆ ಸಹಕರಿಸುತ್ತೇವೆ ಅಂದರೆ ಪುನಃ ಸಭೆಗೆ ಬಂದು ಕುಳಿತುಕೊಳ್ಳುತ್ತೇವೆಂದರೆ ಸಾಕು ನಾವು ಅದನ್ನೆಲ್ಲಾ ತಕ್ಷಣ ವಾಪಸ್ ತೆಗೆದುಕೊಳ್ಳುತ್ತೇವೆ. ಮಾನ್ಯ ವಾಟಾ ನಾಗರಾಜ್ರವರು ಏನು ಹೇಳಿದರು ಅದಕ್ಕೆ ನಮ್ಮ ಒಪ್ಪಿಗೆ ಇದೆ. ಮಾನ್ಯ ಮುಖ್ಯ ಮಂತ್ರಿಗಳ ಒಪ್ಪಿಗೆಯೂ ಕೂಡ ಇದೆ. ಅವರು ಸಭೆಗೆ ಬಂದು ಸಹಕರಿಸುತ್ತೇವೆಂದರೆ ಖಂಡಿತವಾಗಿ ವಾಪಸ್ ತೆಗೆದುಕೊಳ್ಳುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಅವರಿಂದ ನೀವು ಭರವಸೆ ತೆಗೆದುಕೊಂಡು ಮಾಡುವುದು ಬೇಡ. ಸತ್ಸಂಪ್ರದಾಯವನ್ನು ...

ಶ್ರೀ ಎಂ. ವೀರಪ್ಪ ಮೊಯಿಲಿ : ಅಷ್ಟು ಬೇಡ ನಾವು ಅದನ್ನು ನಿರೀಕ್ಷೆ ಮಾಡುವುದಿಲ್ಲ. ತಾವು ವ್ಯಕ್ತಪಡಿಸಿದಂತಹ ಸದ್ಭಾವನೆಗಳಿಗೆ ನಮ್ಮ ಸಹ ಮತವನ್ನು ಸೂಚಿಸಿ ತಾವೇ ಹೊರಗೆ ಹೋಗಿ ಅವರು ಬರುತ್ತಾರೆ ಕರೆಸಿ ಬಿಡಿ ಅಂತ ಹೇಳಿದರೆ ಬಹಳ ಸಂತೋಷದಿಂದ ಸ್ವಾಗತಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಈಗ ಅವರಲ್ಲಿಗೆ ಹೋಗಿ ಮಾತುಕತೆಯಾಡಿ ನೀವು ಬರುತ್ತೀರಾ ಇಲ್ಲವೇ ಎಂದು ಕೇಳುವುದರ ಬದಲು ನಾವು ನಮ್ಮ ಸದನದಲ್ಲಿ ಒಂದು ನಿರ್ಣಯವನ್ನು ಮಂಡಿಸುವ ಮೂಲಕ ಒಂದು ಸತ್ಸಂಪ್ರದಾಯವನ್ನು ಹಾಕೋಣ. ತಾವು ನಿರ್ಣಯವನ್ನು ಮಂಡಿಸಿ. ತಾವು ನಾಯಕರಾಗಿದ್ದೀರಿ ಮುಖ್ಯ ಮಂತ್ರಿಗಳಾಗಿದ್ದೀರಿ ಒಂದು ನಿರ್ಣಯ ಮಂಡಿಸಿ.

ಶ್ರೀ ಹಾರನಹಳ್ಳಿ ರಾಮಸ್ವಾಮಿ : ಮಾನ್ಯ ವಾಟಾಳ್ ನಾಗರಾಜ್‌ರವರ ಪ್ರಯತ್ನ ನಿಷ್ಫಲವಾಗಿದೆ ನಮ್ಮ ಪ್ರಯತ್ನಗಳೂ ನಿಷ್ಫಲವಾಗಿದೆ. ನಾವು ಎಷ್ಟು ಗೋಗರೆದುಕೊಳ್ಳಬೇಕೋ ಅಷ್ಟು ಗೋಗೆರೆದುಕೊಂಡಾಗಿದೆ. ಇದು ತಮಗೂ ಗೊತ್ತಿದೆ. ತಾವೂ ಬಹಳ ಶ್ರಮ ವಹಿಸಿ ಮಧ್ಯಸ್ಥಿಕ್ಕೆ ವಹಿಸಿದಿರಿ. ಅದರೂ ಸಹ ಸಾಧ್ಯವಾಗಿಲ್ಲ. ನಾಳೆ ಬೆಳಿಗ್ಗೆ ಅವರು ಸಭೆಗೆ ಬರುತ್ತೇವೆಂದರೆ ನಾವ್ಯಾರೂ ಬೇಡವೆಂದು ಹೇಳುವುದಿಲ್ಲ. ನಾವಾಗೇ ವಾಪಸ್ ತೆಗೆದುಕೊಳ್ಳುತ್ತೇವೆ. ಈಗೇನಾದರೂ ನಾವು ಆ ರೀತಿ ಮಾಡಿದರೆ ಅಪಹಾಸ್ಯಕ್ಕೆ ಗುರಿಯಾಗುತ್ತೇವೆ. ಈಗ ಮಾಡಿದ್ದು ತಪ್ಪೆಂದಾಗುತ್ತದೆ. ಆ ಪದ್ಧತಿ ಸರಿಯಲ್ಲ ಮಾನ್ಯ ಸದಸ್ಯರಲ್ಲಿ ಅಧ್ಯಕ್ಷರಲ್ಲಿ ನಾನು ಭಿನ್ನವಿಸಿಕೊಳ್ಳುವುದೇನೆಂದರೆ ಪ್ರಶ್ನೋತ್ತರ ಕಾಲ ನಡೆಸಿ ಮುಂದೆ ಬೇಕಾದರೆ ಮಾತನಾಡೋಣ.

ಶ್ರೀ ವಾಟಾಳ್ ನಾಗರಾಜ್ : ಹಿಂದೆ ಶಾಂತವೇರಿ ಗೋಪಾಲ ಗೌಡರನ್ನು ಈ ಸದನದಿಂದ ಹೊರಗೆ ಹಾಕಿದಾಗ ಅವರನ್ನೇನು ಕೇಳಿಕೊಂಡು ಬಂದು ಇಲ್ಲಿ ನಿರ್ಣಯ ಮಾಡಲಿಲ್ಲ. ಆಗ ಸದನದಲ್ಲಿ ಅಧ್ಯಕ್ಷರನ್ನು ಕೇಳಿ ಆಗ ನಾಯಕರಾದಂತಹವರು ಪುನಃ ನಿರ್ಣಯವನ್ನು ಮಂಡಿಸಿದರು. ಹಾಗೆ ನಿರ್ಣಯವನ್ನು ಮಂಡಿಸುವ ಮೂಲಕ ಅವರು ಮತ್ತೆ ಒಳಗೆ ಬಂದಂತಹ ನಿದರ್ಶನಗಳು ಈ ಸದನದಲ್ಲಿದೆ. ನಾವು ಅವರನ್ನು ಕೇಳಿ ಮಾಡಿ.......

ಶ್ರೀ ಹಾರನಹಳ್ಳಿ ರಾಮಸ್ವಾಮಿ : ವೃಥಾ ಕಂಠಶೋಷಣೆ ಏಕೆ ಮಾಡಿಕೊಳ್ಳೋಣ. ಹಿನ್ನೆಲೆ ತಮಗೆ ಗೊತ್ತಿದೆ. ಬರುವವರಾಗಿದ್ದರೆ ಬೆಳಗಿನಿಂದ 4-5 ತಾಸು ಕುಳಿತುಕೊಂಡು ಮಾತನಾಡಿದ್ದೇವೆ ಅದು ತಮಗೂ ಗೊತ್ತಿದೆ, ಅವರು ಬರುವವರಾಗಿದ್ದರೆ ಬರುತ್ತಿದ್ದರು. ತಾವೇ ನಾಯಕತ್ವ ವಹಿಸಿದ್ದಿರಿ ಒಂದು ದಿವಸ ತಾಳಿ ನಾಳೆ ದಿವಸ ಬೆಳಿಗ್ಗೆ ಇದೇ ಪ್ರಸಂಗವನ್ನು ಕುಳಿತುಕೊಂಡು ಚರ್ಚೆ ಮಾಡೋಣ.

ಶ್ರೀ ವಾಟಾಳ್ ನಾಗರಾಜ್ : ಒಂದು ನಿರ್ಣಯವನ್ನು ತಾವೇ ಮಂಡಿಸಿ. ಅದರಲ್ಲಿ ತಪ್ಪೇನೂ ಆಗುವುದಿಲ್ಲ. ಇದರಲ್ಲಿ ಯಾರ ಪ್ರತಿಷ್ಠೆಯೂ ಬರುವುದಿಲ್ಲ.

ಉಪಾಧ್ಯಕ್ಷರು : ಪ್ರಶ್ನೋತ್ತರ ಮುಗಿದ ನಂತರ ತಾವು ಕೇಳುವುದನ್ನು ಆಮೇಲೆ ಯೋಚನೆ ಮಾಡೋಣ.

ಶ್ರೀ ವಾಟಾಳ್ ನಾಗರಾಜ್ : ಪ್ರಶ್ನೋತ್ತರಕ್ಕೆ ಬೆಲೆ ಇಲ್ಲ ಸ್ವಾಮಿ. ಪ್ರಶ್ನೋತ್ತರಕ್ಕೆ ಆ ಶಕ್ತಿ ಹೋಗಿದೆ.

ಶ್ರೀ ಹಾರ್‍ನಳ್ಳಿ ರಾಮಸ್ವಾಮಿ : ನಿಮ್ಮ ಜೊತೆಯಲ್ಲಿ ನಾನೂ ಬರುತ್ತೇನೆ. ಕುಳಿತುಕೊಂಡು ಮಾತನಾಡೋಣ ಬನ್ನಿ.

ಶ್ರೀ ವಾಟಾಳ್ ನಾಗರಾಜ್ : ನನಗೆ ಬಹಳ ನೋವಾಗಿದೆ. ನೀವು ತೆಗೆದುಕೊಂಡಂಥ ನಿರ್ಧಾರ ಅಷ್ಟು ತೀರಾ ಜಾಸ್ತಿಯಾಯಿತು ಎನ್ನತಕ್ಕಂಥ ಮಾತನ್ನು ಹೇಳಿ ಅದನ್ನು ನಾನು ಸಂಪೂರ್ಣವಾಗಿ ವಿರೋಧ ಮನಾಡುತ್ತೇನೆ. ಮತ್ತೊಂದು ಈ ಚುನಾವಣೆಯನ್ನು ಏಕಾಏಕಿ ಮುಂದುವರಿಸಿರತಕ್ಕಂಥ ಸರ್ಕಾರದ ನೀತಿಯನ್ನು......

ಉಪಾಧ್ಯಕ್ಷರು : ತಾವು ಇದನ್ನು ನಿನ್ನೆಯೂ ಹೇಳಿದ್ದೀರಿ. ಬೆಳಿಗ್ಗೆಯೂ ಅದನ್ನೆ ಹೇಳಿದ್ದೀರಿ. ದಯಮಾಡಿ ಕುಳಿತುಕೊಳ್ಳಿ. ಶ್ರೀಮತಿ ಮೋಟಮ್ಮನವರು ಅವರ ಪರವಾಗಿ ಶ್ರೀ ಯು.ಕೆ. ಶಾಮಣ್ಣನವರು ಪ್ರಶ್ನೆಯನ್ನು ಕೇಳಬೇಕು.

(ಮಾನ್ಯ ಸದಸ್ಯರು ಗೈರು ಹಾಜರಾಗಿದ್ದರು)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೇ, ನಾನು ಸಹ ಈ ಚುನಾವಣೆಯನ್ನು ಮುಂದೂಡಿರತಕ್ಕಂಥ ನೀತಿಯನ್ನು ವಿರೋಧಿಸಿ ಧರಣಿ ಮಾಡುತ್ತಿದ್ದೇನೆ ಸ್ವಾಮಿ.

ಉಪಾಧ್ಯಕ್ಷರು : ಮುಂದಿನ ಪ್ರಶ್ನೆ ಬಾಬುರಾವ್ ಚವಾಣ್ರವರು

(ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್ರವರು ಬಂದು ಬಾವಿಯಲ್ಲಿ ಕುಳಿತರು)

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಉಪಾಧ್ಯಕ್ಷರೇ, ಕಳೆದ ಮೂರು ದಿನಗಳಿಂದ ಯಾವ ಕಾರಣಕ್ಕೋಸ್ಕರ ನಮ್ಮ ಪಕ್ಷ ನಮ್ಮ ಸಹದ್ಯೋಗಿಗಳೆಲ್ಲರೂ ಧರಣಿ ಮಾಡಿದ್ದಾರೆ ಎನ್ನತಕ್ಕಂಥದ್ದು ಇಡೀ ಸದನಕ್ಕೆ ಮತ್ತು ರಾಜ್ಯದ ಜನತೆಗೆ ಗೊತ್ತಿರತಕ್ಕಂಥ ವಿಚಾರ. ಆ ಕಾರಣದಿಂದ ಸರ್ಕಾರ ನಮ್ಮ ಬೇಡಿಕೆಗಳನ್ನು ಈಡೇರಿಸದೆ ಇರುವುದರಿಂದಾಗಿ ನಾವು ಧರಣಿಯನ್ನು ಮುಂದುವರಿಸಿಕೊಂಡು ಬಂದಿದ್ದೇವೆ ಎಂದು ಹೇಳಿ ನಾವು ಇವತ್ತು ಸಹಾ ಧರಣಿಯನ್ನು ಮುಂದುವರಿಸಿದ್ದೇವೆ. ಮಾನ್ಯ ಅಧ್ಯಕ್ಷರು, ಮುಖ್ಯಮಂತ್ರಿಗಳನ್ನು ಮತ್ತು ಸರ್ಕಾರದ ಇತರೆ ಮಂತ್ರಿಗಳನ್ನು ನಮ್ಮನ್ನೆಲ್ಲ ಕರೆಸಿ ಮಾತನಾಡಿದ್ದಾರೆ. ತೆರೆಮರೆಯಲ್ಲಿ ಇವೆಲ್ಲಾ ಆಗತಕ್ಕಂಥದ್ದೇ. ಪ್ರಜಾತಂತ್ರದ ಒಂದು ವ್ಯವಸ್ಥೆಯಲ್ಲಿ ಹಿಂದಿನಿಂದಲೂ ಸಹಿತ ಹೀಗೆ ಆಗಿದೆ. ಮಾತುಕತೆ ವಿಫಲವಾಗಿರುವುದರಿಂದಾಗಿ ನಮ್ಮ ಬೇಡಿಕೆಗಳನ್ನು ಒಪ್ಪದೇ ಇರುವುದರಿಂದಾಗಿ ನಮ್ಮ ಧರಣಿಯನ್ನು ನಾವು ಮುಂದುವರಿಸಬೇಕು ಎಂದು ಹೇಳಿ ತೀರ್ಮಾನ ಮಾಡಿದ್ದೇವೆ. ಈಗ ಮಾನ್ಯ ಸಂಸದೀಯ ಸಚಿವರಾಗಿರತಕ್ಕಂಥ ರಾಮಸ್ವಾಮಿಯವರು ಹೇಳುತ್ತಾರೆ, ಅವರು ನಾಳೆ ಬೆಳಿಗ್ಗೆ ಬರಲಿ ಎಂದು ಹೇಳಿ. ಬರತಕ್ಕಂಥ ಪ್ರಶ್ನೆಯೇ ಉದ್ಭವವಾಗುವುದಿಲ್ಲ. ಏಕೆಂದರೆ ಈ ಅಧಿವೇಶನ ಇರುವವರೆಗೂ ಸಹಿತ ನಮ್ಮನ್ನು ಹೊರಗಡೆ ಹಾಕಿ ಇದನ್ನು ನಾವು ಮಾಡಿಕೊಳ್ಳುತ್ತೇವೆ ಎಂದು ಹೇಳಿ ತೀರ್ಮಾನ ಮಾಡಿರುವುದರಿಂದಾಗಿ ನಿಮಗೆ ನಾವು ಅಡ್ಡಿ ಬರುವುದಿಲ್ಲ, ಆದರೆ ನಮ್ಮ ಧರಣಿಯನ್ನು ನಾವು ಮುಂದುವರಿಸುತ್ತೇವೆ.

ಶ್ರೀ ಬಾಬುರಾವ್ ಚವಾಣ್ : ಮಾನ್ಯ ಉಪಾಧ್ಯಕ್ಷರೇ, ನಾನು ಕೇಳುವುದು ಕರ್ನಾಟಕ ರಾಜ್ಯದಲ್ಲಿ ಲಂಬಾಣಿ ತಾಂಡಾಗಳಿಗೆ ಆಶ್ರಮ ಶಾಲೆಗಳನ್ನು......

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೇ......

ಉಪಾಧ್ಯಕ್ಷರು : ದಯಮಾಡಿ ವಾಟಾಳ್ ನಾಗರಾಜ್ರವರು ಕುಳಿತುಕೊಳ್ಳಬೇಕು. ಪ್ರಶ್ನೋತ್ತರ ವೇಳೆ ಆಗಲಿ. ಆಮೇಲೆ ಮಾತನಾಡೋಣ.

ಶ್ರೀ ವಾಟಾಳ್ ನಾಗರಾಜ್ : ಪ್ರಶ್ನೋತ್ತರವನ್ನು ಮೊಟಕು ಮಾಡಬೇಕು ಎನ್ನತಕ್ಕಂಥ ಉದ್ದೇಶ ಇಲ್ಲ.

ಉಪಾಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ. ಮೂರು ದಿವಸಗಳಿಂದ ಕಲಾಪ ಯಾವ ರೀತಿ ನಡೆದಿದೆ ಎಂದು ನಿಮಗೂ ಕೂಡ ಗೊತ್ತಿರುವಂಥ ವಿಚಾರ. ದಯಮಾಡಿ ಕುಳಿತುಕೊಳ್ಳಿ. ಪ್ರಶ್ನೋತ್ತರ ವೇಳೆ ಮುಗಿದ ಮೇಲೆ ನೋಡೋಣ.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೇ, ಸದನದ ಕಾರ್ಯಕಲಾಪ ಎಂದು ಹೇಳಿದರೆ ಮಕ್ಕಳಾಟಿಕೆ ಆಗಬಾರದು. ಅದಕ್ಕೊಂದು ಗೌರವ ಇದೆ. ಒಂದು ನಿಯಮ ಇದೆ. ಮೊನ್ನೆಯಿಂದ ಕೂಡ ಈ ಸದನವನ್ನು ಬಹಳ ಸಲುಗೆಯಿಂದ ತೆಗೆದುಕೊಳ್ಳುತ್ತಿದ್ದಾರೆ. ಪ್ರಶ್ನೋತ್ತರ ವೇಳೆ ಇದೆ. ಪ್ರಶ್ನೋತ್ತರ ವೇಳೆ ಆಗಲಿ. ಜೀರೋ ಅವರ್ ಇದ್ದಾಗ ಯಾವ ಪ್ರಶ್ನೆ ಇದ್ದರೂ ಎತ್ತಬಹುದು. ಆದ್ದರಿಂದ ನಾವು ಜವಾಬ್ದಾರಿಯುತವಾದಂಥ ಸದಸ್ಯರಿದ್ದೇವೆ. ಇಲ್ಲಿ ಸದನದ ಕಾರ್ಯಕಲಾಪವನ್ನು ನಡೆಸುವುದಕ್ಕೆ ಬಿಡಬೇಕಾಗುತ್ತದೆ. ಅದನ್ನು ಬಹಳ ಉದ್ದಕ್ಕೆ ಎಳೆಯಬಾರದು. ಏಕೆಂದರೆ ತಮ್ಮ ಸಜ್ಜನಿಕೆಯನ್ನು ಅಥವಾ ಈ ಸದನದ ಸಜ್ಜನಿಕೆಯನ್ನು ನಾವು ಇವತ್ತು ಮುರಿದು ಕೆಲಸ ಮಾಡುವುದಿದ್ದರೆ ಬಹುಶಃ ನಾವು ಯಾರು ಹೊರಗಿನವರು ಕಾನೂನುಬದ್ಧವಾಗಿ ಕೆಲಸ ಮಾಡಬೇಕು ಎಂದು ಹೇಳುವಂಥ ನೈತಿಕ ಹಕ್ಕು ಶಾಸಕರಾದಂಥ ನಮಗ್ಯಾರಿಗೂ ಇರುವುದಿಲ್ಲ. ಆದ್ದರಿಂದ ದಯಮಾಡಿ ತಾವು

ಕರೆದಿದ್ದೀರಿ ಪ್ರಶ್ನೋತ್ತರ ವೇಳೆ ಆಗಲಿ. ಮತ್ತೆ ಸದನದ ನಿಯಮಗಳ ಪ್ರಕಾರ ಏನು ಆಗಬೇಕೋ ಅದಕ್ಕೆ ನಾವು ಬದ್ಧರಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ನಾನು ಸದನದಲ್ಲಿದ್ದು ಕೆಲಸ ಮಾಡುವುದಕ್ಕೆ ತಯಾರಿದ್ದೇನೆ. ಒಂದು ಮಾತಿಗೆ ಈ ರೀತಿ ಸಿಟ್ಟು ಮಾಡಿಕೊಂಡು ಮಾತನಾಡಿದರೆ ಹೇಗೆ?

ಶ್ರೀ ಎಂ. ವೀರಪ್ಪ ಮೊಯಿಲಿ : ನಾಲ್ಕು ದಿವಸಗಳಿಂದ ನೋಡುತ್ತಿದ್ದೇನೆ. ನಾವು ಇಲ್ಲಿಗೆ ಶಾಸಕರಾಗಿ ಆಯ್ಕೆಯಾಗಿ ಬಂದಿದ್ದೇವೆ, ನಾವು ಪ್ರಮಾಣವನ್ನು ಕೂಡ ತೆಗೆದುಕೊಂಡಿದ್ದೇವೆ. ನಾವು ಇವತ್ತು ಸದನದ ಸಜ್ಜನಿಕೆಗೆ ತಲೆ ಬಾಗಬೇಕಾಗುತ್ತದೆ. ಪ್ರಜಾಪ್ರಭುತ್ವದ ಪದ್ಧತಿಗಳಿಗೆ ಒಳಗಾಗಬೇಕಾಗುತ್ತದೆ. ನಾಲ್ಕು ದಿವಸಗಳಿಂದ ಸತತವಾಗಿ ಇವತ್ತು ನಾವು ತೋಡಿಕೊಂಡಿದ್ದನ್ನು ನಮ್ಮನ್ನು ತಾವು ಸಲುಗೆ ಎಂದು ತಾವು ತಿಳಿದುಕೊಂಡು ಕೆಲಸ ನಡೆಸುವುದಿದ್ದರೆ ಯಾವ ಕಾರ್ಯಕಲಾಪ ಕೂಡ ಸರ್ಕಾರದಿಂದಲೂ ಮಾಡಲಿಕ್ಕಾಗುವುದಿಲ್ಲ. ಅಥವಾ ಶಾಸನಸಭೆಗಳೂ ಕೂಡ ಮಾಡುವುದಕ್ಕಾಗುವುದಿಲ್ಲ. ಇದನ್ನು ತಮಗೆ ಹೇಳಿದ್ದಲ್ಲ. ದಯಮಾಡಿ ತಾವು ತಿಳಿದುಕೊಳ್ಳಬಾರದು. ನಾನು ಮೂರು ನಾಲ್ಕು ದಿವಸಗಳಿಂದ ನಡೆದಂಥ ವಿದ್ಯಮಾನದ ಬಗ್ಗೆ ನಾನು ಹೇಳುತ್ತಿದ್ದೇನೆ. ದಯಮಾಡಿ ವಾಟಾಳ್ ನಾಗರಾಜ್‌ರವರ ಬಗ್ಗೆ ನನಗೆ ಬಹಳ ವಿಶ್ವಾಸವಿದೆ. ನಿಮ್ಮ ಬಗ್ಗೆ ಮಾತನಾಡಿದ್ದಲ್ಲ. ಈಗ ಪ್ರಶ್ನೋತ್ತರ ವೇಳೆ ನಡೆಯಲಿ. ಇದಕ್ಕೇ ಯಾರು ಆತಂಕ ತರತಕ್ಕಂಥದ್ದು ಸರಿಯಿಲ್ಲ. ತಾವು ದಯಮಾಡಿ ಮುಂದುವರಿಸಿ.

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಲಂಬಾಣಿ ತಾಂಡಾಗಳಲ್ಲಿ ಆಶ್ರಮ ಶಾಲೆ.

562 - ಶ್ರೀ ಬಾಬುರಾವ್ ಚವಾಣ್ (ಶಹಾಬಾದ್) : ಮಾನ್ಯ ಸಮಾಜ ಕಲ್ಯಾಣ ಮತ್ತು ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ರಾಜ್ಯದಲ್ಲಿ ಇರುವ ಲಂಬಾಣಿ ತಾಂಡಾಗಳಲ್ಲಿ ಆರ್.ಎಸ್.ಎನ್.ಟಿ. ಶಾಲೆಗಳ ಸಂಖ್ಯೆಗಳೆಷ್ಟು?*

ಆ) *ರಾಜ್ಯದಲ್ಲಿರುವ ಲಂಬಾಣಿ ತಾಂಡಾಗಳೆಷ್ಟು?*

ಇ) *ಇನ್ನುಳಿದ ಲಂಬಾಣಿ ತಾಂಡಾಗಳಲ್ಲಿ (ಆರ್.ಎಸ್.ಡಿ.ಎನ್.ಟಿ) ಶಾಲೆಗಳನ್ನು ಯಾವಾಗ ತೆರೆಯಲಾಗುವುದು?*

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಹಾಗೂ ಕಂದಾಯ ಸಚಿವರು) :

ಅ) 1981ರವರೆಗೆ ನೋಮ್ಯಾಡಿಕ್ ಟ್ರೈಬ್ಸ್, ಸೆಮಿ-ನೋಮ್ಯಾಡಿಕ್ ಟ್ರೈಬ್ಸ್ ಮತ್ತು ಡೀ-ನೋಟಿಫೈಡ್ ಟ್ರೈಬ್ಸ್, ಈ ಜನಾಂಗಗಳ ಅನುಕೂಲಕ್ಕಾಗಿಯೇ ಸಮಾಜ ಕಲ್ಯಾಣ ಇಲಾಖೆಯಿಂದ ನಡೆಸಲ್ಪಡುತ್ತಿದ್ದ 53 ಶಾಲೆಗಳನ್ನು ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಯ ವ್ಯಾಪ್ತಿಗೆ ತಂದು ವರ್ಗಾಯಿಸಲಾಯಿತು. ಆಮೇಲೆ 13.10.1986ರಂದು ಹೊರಡಿಸಿದ ಸರ್ಕಾರಿ ಆದೇಶದ ಪ್ರಕಾರ ಈ ಜನಾಂಗವನ್ನು ಗ್ರೂಪ್-ಎ, ಅಡಿ ಸೇರಿಸಿದ್ದರಿಂದ ಈ 53 ಆಶ್ರಮ ಶಾಲೆಗಳು ಮತ್ತು ಇತ್ತೀಚೆಗೆ ಪ್ರಾರಂಭಿಸಲ್ಪಟ್ಟ 12 ಆಶ್ರಮ ಶಾಲೆಗಳೂ ಸೇರಿ ಒಟ್ಟು 65 ಆಶ್ರಮ ಶಾಲೆಗಳು ಗ್ರೂಪ್-ಎ, ಅಡಿ ಬರುವ ಎಲ್ಲಾ ಜನಾಂಗಗಳ ಮಕ್ಕಳ ಅನುಕೂಲಕ್ಕಾಗಿ ಹಿಂದುಳಿದ

ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಯಿಂದ ನಡೆಸಲ್ಪಡುತ್ತಿದೆ. 1993-94ನೇ ಸಾಲಿನಲ್ಲಿ ಹೊಸದಾಗಿ 13 ಆಶ್ರಮ ಶಾಲೆಗಳಿಗೆ ಮಂಜೂರಾತಿ ನೀಡಲಾಗಿದೆ. ಇದಲ್ಲದೆ ಸಮಾಜ ಕಲ್ಯಾಣ ಇಲಾಖೆ ಲಮಾಣಿ ತಾಂಡಾಗಳಲ್ಲೇ ಪ್ರತ್ಯೇಕವಾಗಿ 16 ಆಶ್ರಮ ಶಾಲೆಗಳನ್ನು ನಡೆಸುತ್ತಿದೆ.

ಆ) ಒಟ್ಟು 1307 (ಇದರಲ್ಲಿ ತಾಂಡಗಳೂ, ಹಟ್ಟಿಗಳೂ ಸೇರಿವೆ)

ಇ) ಸಂಪನ್ಮೂಲಗಳನ್ನು ಮತ್ತು ಆದ್ಯತೆಗಳನ್ನು ಗಮನಿಸಿ ತೆರೆಯಲಾಗುವುದು.

ಶ್ರೀ ಬಾಬುರಾವ್ ಚವಾಣ್ : ಮಾನ್ಯ ಉಪಾಧ್ಯಕ್ಷರೇ, ನಾನು ಕೇಳತಕ್ಕಂಥ ಪ್ರಶ್ನೆ ಕರ್ನಾಟಕ ರಾಜ್ಯದಲ್ಲಿರುವ ಲಂಬಾಣಿ ತಾಂಡಾಗಳಲ್ಲಿ ಆರ್.ಎಸ್.ಡಿ.ಎನ್.ಟಿ ಆಶ್ರಮ ಶಾಲೆಗಳು ಎಷ್ಟು? ಎಷ್ಟನ್ನು ಮಾಡಬೇಕಾಗಿದೆ? ಮತ್ತೆ ಯಾವಾಗ ಮಾಡುತ್ತೀರಿ? ಇದಕ್ಕೆ ತೊಂದರೆಗಳೇನು ಎಂದು ಕೇಳಿದ್ದೇನೆ. ಮಾನ್ಯ ಮಂತ್ರಿಗಳು ಉತ್ತರದಲ್ಲಿ ಕರ್ನಾಟಕ ರಾಜ್ಯದಲ್ಲಿ 16 ಶಾಲೆಗಳನ್ನು ಮಾತ್ರ ಲಂಬಾಣಿ ತಾಂಡಾಗಳಿಗೆ ಕೊಟ್ಟಿದ್ದೇವೆ. ಪರಿಶಿಷ್ಟ ಜಾತಿ ಜನಾಂಗದವರಿಗೆ ಕೊಟ್ಟಿದ್ದೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಇನ್ನುಳಿದ ಲಂಬಾಣಿ ತಾಂಡಾಗಳಲ್ಲಿ (ಆರ್.ಎಸ್.ಡಿ.ಎನ್.ಟಿ) ಶಾಲೆಗಳನ್ನು ತಾವು ಯಾವಾಗ ಕೊಡುವಿರಿ ಎಂದು ಕೇಳಿದ್ದಕ್ಕೆ ಸಂಪನ್ಮೂಲಗಳನ್ನು ಮತ್ತು ಆದ್ಯತೆಗಳನ್ನು ಗಮನಿಸಿ ತೆರೆಯಲಾಗುವುದು ಎಂದು ಹೇಳಿದ್ದೀರಿ. ಮಾನ್ಯ ಮಂತ್ರಿಗಳನ್ನು ನಾನು ಕೇಳುತ್ತೇನೆ. ಈ ಲಂಬಾಣಿ ತಾಂಡಾಗಳು ಗ್ರಾಮಗಳಿಂದ ಬಹಳ ದೂರ ಅಂದರೆ 40-50 ಕಿಲೋಮೀಟರ್ ಹಂತದಲ್ಲಿದೆ. ಅಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗದ ವರಿಗೆ ಸೇರಿದ ಈ ತಾಂಡಾಗಳಲ್ಲಿ ಕೂಲಿ ಮಾಡತಕ್ಕಂಥ ಜನರು ಇರುತ್ತಾರೆ. ಆ ಮಕ್ಕಳಿಗೋಸ್ಕರ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಆ ತಾಂಡಾಗಳಿಗೆ ಆಶ್ರಮ ಶಾಲೆಗಳನ್ನು ತೆರೆಯುತ್ತೀರಾ ಅಥವಾ ಇಲ್ಲವೇ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಧರ್ಮಸಿಂಗ್ : ಮಾನ್ಯ ಉಪಾಧ್ಯಕ್ಷರೇ, ಇಲ್ಲಿಯವರೆಗೆ ನಾವು ಲಂಬಾಣಿ ತಾಂಡಾಗಳಲ್ಲಿ 65 ಆಶ್ರಮ ಶಾಲೆಗಳನ್ನು ತೆರೆಯಲಾಗಿದೆ ಮತ್ತು 93-94ನೇ ಸಾಲಿನಲ್ಲಿ 12 ಮತ್ತು 16 ಶಾಲೆಗಳನ್ನು ತೆಗೆದುಕೊಂಡಿದ್ದೇವೆ. ಒಟ್ಟು ತಾಂಡಾಗಳೆಷ್ಟು ಎಂದೂ ಕೂಡ ಮಾನ್ಯ ಸದಸ್ಯರು ಕೇಳಿದ್ದಾರೆ ಮತ್ತು ಪ್ರತಿಯೊಂದು ತಾಂಡಾಕ್ಕೆ ತೊಂದರೆ ಏನೆಂದರೆ ಲಂಬಾಣಿ ಜನಾಂಗವನ್ನು ಶೆಡ್ಯೂಲ್ಡ್ ಕ್ಯಾಸ್ಟಲ್ಲಿ ಸೇರಿಸಿರುವುದರಿಂದ ಎಸ್ಸಿಎಸ್ಟಿ ಹಾಸ್ಟೆಲ್ಗಳನ್ನು ಕೂಡ ಕೊಡುತ್ತಿದ್ದೇವೆ. ಆಶ್ರಮ ಶಾಲೆಗಳನ್ನು ಕೂಡ 94-95ನೇ ಸಾಲಿನಲ್ಲಿ ಕೊಡತಕ್ಕಂಥದ್ದು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಬಾಬುರಾವ್ ಚವಾಣ್ : ಮಾನ್ಯ ಉಪಾಧ್ಯಕ್ಷರೇ, ನಾನು ಕೇಳತಕ್ಕಂಥ ಪ್ರಶ್ನೆ ಮಾನ್ಯ ಮಂತ್ರಿಗಳಲ್ಲಿ ಇಷ್ಟೆ. ಲಂಬಾಣಿ ತಾಂಡಾಗಳಲ್ಲಿರುವ ಜನರು ವಲಸೆ ಹೋಗುತ್ತಾರೆ. ಬಾಂಬೆ, ಪೂನಾಗೆ ಕೆಲಸ ಮಾಡುವುದಕ್ಕೆ ಹೋಗುತ್ತಾರೆ. ತಮ್ಮ ಮಕ್ಕಳನ್ನು ಆಶ್ರಮ ಶಾಲೆಯಲ್ಲಿ ಬಿಟ್ಟು ಹೋಗತಕ್ಕಂಥ ಒಂದು ವಾಡಿಕೆ ಇದೆ. ಏಕೆಂದರೆ ಆಶ್ರಮ ಶಾಲೆ ಎಂದರೆ ಅಲ್ಲೇ ಊಟ ಮಾಡಿ ಅಲ್ಲೇ ಮಲಗಿಕೊಂಡು ರಾತ್ರಿ ಹಗಲು ಕೂಡ ಅಲ್ಲೇ ಇರುತ್ತಾರೆ. ಪರೀಕ್ಷೆ ಆದ ನಂತರ ಅವರ ಮಕ್ಕಳನ್ನು ಕರೆದುಕೊಂಡು ಹೋಗುತ್ತಾರೆ. ಅಲ್ಲೇ ಊಟ ಮಾಡಿ, ಅಲ್ಲೇ ವಿದ್ಯಾಭ್ಯಾಸ ಮಾಡಿಕೊಂಡು ಇರುವ ಹಾಗೆ ಆಶ್ರಮ ಶಾಲೆಗಳ ಸಂಖ್ಯೆಯನ್ನು ತಾವು ಹೆಚ್ಚಿಗೆ ಮಾಡುತ್ತೀರಾ? ಈ ಜನಾಂಗಕ್ಕೆ ಇದನ್ನು ಮಾಡುವುದರಿಂದ ಹೆಚ್ಚಿನ ಅನುಕೂಲವಾಗುತ್ತದೆ ಎನ್ನುವ ದೃಷ್ಟಿಯಿಂದ ಇದನ್ನು ಕೇಳುತ್ತಿದ್ದೇನೆ. ಇದನ್ನು ಯಾವಾಗ ಮಾಡುತ್ತೀರಿ? ಈ ತಾಂಡಾಗಳಿಗೆ ಬಹಳ ಕಡಿಮೆ ಶಾಲೆಗಳು ಇದೆ. ಈ ತಾಂಡಾವಾಗಲಿ, ವಡ್ಡರಗಡ್ಡಿಯಾಗಲಿ ಆ ರೀತಿ ಓಣಿ ಏನಿದೆ, ಆ ಭಾಗಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಮಾಡಬೇಕು. ಆ ದೃಷ್ಟಿಯಿಂದ ಕೊಡುತ್ತೀರಾ?

ಶ್ರೀ ಧರ್ಮಸಿಂಗ್ : ಮಾನ್ಯ ಸದಸ್ಯರು ಲಂಬಾಣಿ ತಾಂಡಾಗಳಿಗೆ ಬೇರೆ ಕೆಲಸಕಾರ್ಯಗಳಿಗೆ ಹೋಗತಕ್ಕಂಥ ಶ್ರಮಿಕ ವರ್ಗದ ಜನರಿದ್ದಾರೆ. ಅವರ ಮಕ್ಕಳಿಗೆ ಅನುಕೂಲವನ್ನು ಒದಗಿಸಿಕೊಡಬೇಕು ಎಂದು ಅವರು ಕೇಳತಕ್ಕಂಥ ಪ್ರಶ್ನೆಯಾಗಿದೆ ಅವರುಗಳಿಗಾಗಿಯೇ ವಿಶೇಷವಾಗಿ ಆಶ್ರಮ ಶಾಲೆಗಳನ್ನು ತೆರಯತಕ್ಕಂಥ ದಿಸೆಯಲ್ಲಿ ಸರ್ಕಾರ ಪ್ರಯತ್ನ ಮಾಡುತ್ತದೆ.

ಕೃಷಿ ಕಾರ್ಮಿಕರ ಕನಿಷ್ಠ ವೇತನ

595 - ಶ್ರೀ ಕೆ. ಸಿದ್ದಯ್ಯ (ಸಂತೇಮರನಹಳ್ಳಿ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಸ್ತುತ ಕೃಷಿ ಕಾರ್ಮಿಕರು ಪಡೆಯುತ್ತಿರುವ ಕನಿಷ್ಠ ವೇತನ ಮತ್ತು ಆ ವೇತನವು ಯಾವ ದಿನಾಂಕದಿಂದ ಅನ್ವಯಿಸುತ್ತದೆ.

ಆ) ವೇತನಗಳನ್ನು ಪರಿಷ್ಕರಿಸಲು ನಿಗಧಿತ ಅವಧಿಯು ಇದೆಯೇ?

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾರ್ಮಿಕ ಸಚಿವರು) :

ಅ) ಕನಿಷ್ಠ ವೇತನವನ್ನು ದಿನಾಂಕ 12-7-88ರಂದು ರೂ. 12 ರಿಂದ ರೂ. 17-65ರವರೆಗೆ ವಿವಿಧ ವರ್ಗಗಳಿಗೆ ನಿಗಧಿಪಡಿಸಲಾಗಿದೆ.

ಆ) ಹೌದು

ಶ್ರೀ ಕೆ. ಸಿದ್ದಯ್ಯ : ಮಾನ್ಯ ಉಪಾಧ್ಯಕ್ಷರೇ, ಇದರಲ್ಲಿ ಹಳ್ಳಿಗಳ ಕಡೆ ಅಭಿವೃದ್ಧಿ ಕಾರ್ಯಗಳನ್ನು ತೆಗೆದುಕೊಳ್ಳುವಾಗ ಮಾತ್ರ ವ್ಯವಸಾಯ ಕೂಲಿಕಾರರಿಗೆ ಅಂಥ ಕೆಲಸಕಾರ್ಯ ಸಿಗತಕ್ಕಂಥ ಅವಕಾಶ ಇದೆ ಎಂದು ಹೇಳುತ್ತೀರಿ. ಇಂಥ ಅಭಿವೃದ್ಧಿ ಕಾರ್ಯಗಳಲ್ಲಿ ಈಗ ರೋಡು ಕೆಲಸ ಮಾಡುವುದು, ಸಾಯಿಲ್ ಕನಸ್ವೇಷನ್ ಮತ್ತು ಹೂಳು ಎತ್ತತಕ್ಕಂಥ ವಿಚಾರ, ಈ ಕೆಲಸಗಳನ್ನಾದರೂ ಈ ವ್ಯವಸಾಯ ಕೂಲಿಗಾರರುಗಳಿಗೆ ಲೇಬರ್ ಕೋ-ಆಪರೇಟಿವ್ ಸೊಸೈಟಿಗಳ ಮೂಲಕ ಕೊಡುವುದಕ್ಕೆ ಸರ್ಕಾರ ಪರಿಶೀಲನೆ ಮಾಡುತ್ತದೆಯೇ? ಏತಕ್ಕೆ ಮಾಡಬಾರದು? ಈ ರೀತಿ ಮಾಡುವುದಾದರೆ ಆ ಬಡ ಜನಗಳು ಅಪಾರವಾದ ಶೋಷಣೆಗೆ ಒಳಗಾಗಿರತಕ್ಕಂಥದ್ದು. ಅವ್ಯವಹಾರಗಳು ಆಗಿಂದಾಗ್ಗೆ ನಡೆಯುವಂಥದ್ದೆಲ್ಲ ತಪ್ಪಿ ಹೋಗುತ್ತದೆ. ಅದಲ್ಲದೆ ಈ ದಿಸೆಯಿಂದ ಸರ್ಕಾರ ಎಷ್ಟು ಹಣ ಖರ್ಚು ಮಾಡುತ್ತದೆ, ಅದಕ್ಕೆ ತಕ್ಕ ಹಾಗೆ ಕೆಲಸವೂ ಸಹಾ ಹೆಚ್ಚಾಗಿ ಆಗತಕ್ಕಂಥ ಅವಕಾಶವಿರುವುದರಿಂದ ಲೇಬರ್ ಕೋ-ಆಪರೇಟಿವ್ ಸೊಸೈಟಿಗಳಿಗೆ ತಾವು ಎನ್ಕರೇಜ್ ಮಾಡಿ ಆ ಮೂಲಕ ನೀವು ಈ ಸಣ್ಣ ಕೆಲಸಗಳನ್ನು ಅವರಿಗೆ ಕೊಡುವುದಕ್ಕೆ ಸರ್ಕಾರ ಪರಿಶೀಲನೆ ಮಾಡುತ್ತದೆಯೇ ಸ್ವಾಮಿ?

ಶ್ರೀ ಬ್ಲೇಸಿಯಸ್ ಎಂ. ಡಿಸೌಜ : ಸನ್ಮಾನ್ಯ ಉಪಾಧ್ಯಕ್ಷರೆ, ಈ ಪ್ರಶ್ನೆ ಲೋಕೋಪಯೋಗಿ ಸಚಿವರ ಖಾತೆಗೆ ಸಂಬಂಧಿಸಿರುವುದರಿಂದ ಮಾನ್ಯ ಸದಸ್ಯರಾದ ಶ್ರೀ ಸಿದ್ಧಯ್ಯನವರು ಏನು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ ಈ ಬಗ್ಗೆ ಸಚಿವರಿಗೆ ತಕ್ಕ ಕ್ರಮ ತೆಗೆದುಕೊಳ್ಳಲು ಸೂಚಿಸುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಯ ಅತಿವೃಷ್ಟಿ ಪರಿಹಾರ

499 - ಶ್ರೀ ವಿಜಯಕುಮಾರ ಶೆಟ್ಟಿ (ಸುರತ್ಕಲ್) : ಮಾನ್ಯ ಸಮಾಜ ಕಲ್ಯಾಣ ಮತ್ತು ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1993ರ ಮಳೆಗಾಲದಲ್ಲಿ ಅತಿವೃಷ್ಟಿಯಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಮಾರು 10 ಕೋಟಿ ರೂ. ನಷ್ಟವಾಗಿರುವುದು ಕಂದಾಯ ಇಲಾಖೆಯ ಗಮನಕ್ಕೆ ಬಂದಿದೆಯೇ?

ಆ) ಮೇಲ್ಕಂಡ ನಷ್ಟಕ್ಕೆ ಒಳಗಾದವರಿಗೆ ಈವರೆಗೆ ನೀಡಲಾದ ಪರಿಹಾರದ ವಿವರಗಳೇನು?

ಇ) ಬಾಕಿ ಹಣವನ್ನು ಯಾವಾಗ ಬಿಡುಗಡೆ ಮಾಡಲಾಗುವುದು ?

ಶ್ರೀ ಧರ್ಮಸಿಂಗ್ (ಕಂದಾಯ ಮತ್ತು ಸಮಾಜ ಕಲ್ಯಾಣ ಸಚಿವರು):

ಅ) ಹೌದು

ಆ) ಪರಿಹಾರ ನೀಡಿರುವ ವಿವರಗಳು ಈ ಕೆಳಕಂಡಂತಿವೆ

		(ರೂ. ಲಕ್ಷಗಳಲ್ಲಿ)
(1)	ಜೀವ ಹಾನಿಗೆ	6.80
(2)	ಜಾನುವಾರು ಲುಕ್ಸಾನಿಗೆ	0.05
(3)	ವಾಸ್ತವ್ಯದ ಮನೆಗಳಿಗೆ ಆಗಿದ್ದ ಹಾನಿಗೆ	11.31
(4)	ನೀರಾವರಿ ಬಾವಿ ಮತ್ತು ಪಂಪು ಸೆಟ್ಟುಗಳ ಹಾನಿಗೆ	0.12
(5)	ಬೆಳೆ ಹಾನಿಗೆ	9.72
	ಒಟ್ಟು	28.00

ಇ) 1993ನೇ ಸಾಲಿನಲ್ಲಿ ಮಳೆಯಿಂದ ಖಾಸಗಿ ಆಸ್ತಿಗಳ ನಷ್ಟದಿಂದ ನೊಂದ ಸಂತ್ರಸ್ಥರಿಗೆ, ಸರ್ಕಾರಿ ಆದೇಶ ಸಂಖ್ಯೆ ಆರ್ಡಿ 167 ಟಿಎನ್‌ಆರ್ 88, ದಿನಾಂಕ 4.12.92 ಮತ್ತು 19.10.93ರನ್ವಯ ಈಗಾಗಲೇ ಪರಿಹಾರ ನೀಡಲಾಗಿದೆ. ಸಾರ್ವಜನಿಕ ಆಸ್ತಿಪಾಸ್ತಿಗಳ ದುರಸ್ತಿಗೆ ಬೇಕಾಗುವ ಹಣವನ್ನು ಪ್ರಕೃತಿ ವಿಕೋಪ ಪರಿಹಾರ ನಿಧಿಯಲ್ಲಿ ಲಭ್ಯವಿರುವ ಹಣವನ್ನು ಆಧರಿಸಿ ಬಿಡುಗಡೆ ಮಾಡಲಾಗುವುದು.

ಶ್ರೀ ವಿಜಯಕುಮಾರ್ ಶೆಟ್ಟಿ : ಸನ್ಮಾನ್ಯ ಉಪಾಧ್ಯಕ್ಷರೆ, ನವೆಂಬರ್ 8, 1993ರಂದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೆರೆ ಹಾವಳಿಯಿಂದಾಗಿ ಅಪಾರ ಹಾನಿಯುಂಟಾಗಿದ್ದು, ಹಾನಿಯ ಮೊತ್ತವನ್ನು ಅಂದಾಜು ಮಾಡಿರುವ ಪ್ರಕಾರ ಸುಮಾರು 10 ಕೋಟಿ ರೂಪಾಯಿಗಳು. ಆದರೆ, ಇದುವರೆಗೆ ಸರ್ಕಾರದಿಂದ ಪರಿಹಾರವಾಗಿ 10 ಲಕ್ಷ ರೂಪಾಯಿಗಳು ಮಾತ್ರ ಬಂದಿದೆ. ಬಹುಶಃ ಸಾರ್ವಜನಿಕ ಆಸ್ತಿ-ಪಾಸ್ತಿಗಳ ದುರಸ್ತಿಗೆ ಬೇಕಾದ ಹಣವನ್ನು ಪ್ರಕೃತಿ ವಿಕೋಪ ಪರಿಹಾರ ನಿಧಿಯಲ್ಲಿ ಲಭ್ಯವಿರುವ ಹಣವೆಂದು ಉತ್ತರ ಕೊಟ್ಟಿದ್ದಾರೆ. ಈ ಪ್ರಕೃತಿ ವಿಕೋಪವೆಂಬುದು ನಾವು ನಿರೀಕ್ಷಿಸದೆ ಬರುವಂಥಾದ್ದರಿಂದ ದಯವಿಟ್ಟು ಇದರ ಪರಿಹಾರಕ್ಕಾಗಿ ಹೆಚ್ಚಿನ ಹಣವನ್ನು ಖಂಡಿತವಾಗಿ ಮೀಸಲಿಟ್ಟು ಹಣವನ್ನು ಒದಗಿಸಿಕೊಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಮತ್ತು ಹಾನಿಯ ಅಂದಾಜನ್ನು ಯಾವಾಗಲೂ ತಹಶೀಲ್ದಾರ್‌ರವರ ಮುಖಾಂತರ ಮಾಡಿಸುತ್ತಿದ್ದಾರೆ. ತಹಶೀಲ್ದಾರರಿಗೆ ಬಹಳಷ್ಟು ಕೆಲಸವಿರುವುದರಿಂದ ಹಾನಿಯ ಅಂದಾಜು ಕಾರ್ಯವನ್ನು ತಾಲ್ಲೂಕು- ಪಂಚಾಯತಿ ಸಮಿತಿಯವರಿಗಾಗಲಿ ಅಥವಾ ಗ್ರಾಮ ಪಂಚಾಯತಿ ಸಮಿತಿಯವರಿಗಾಗಲಿ ವಹಿಸಿ ಜೊತೆಗೆ ಪಿಡಬ್ಲ್ಯೂಡಿ ಅಧಿಕಾರಿಗಳನ್ನು ಒಟ್ಟಿಗೆ ಸೇರಿಸಿ ಮಾಡಿಸುವುದು ಉತ್ತಮ. ಕಳೆದ ನವೆಂಬರ್ ತಿಂಗಳಿನಲ್ಲಿ ಅತಿವೃಷ್ಟಿಯುಂಟಾಗಿ ಏನೆಲ್ಲಾ ಕೆರೆ-ಕಟ್ಟೆ, ತೋಟಗರಿಗೆ ಹಾನಿಯಾಗಿವೆ, ಅದನ್ನು ಬರುವ ಮಳೆಗಾಲದೊಳಗಾಗಿ ದುರಸ್ತಿಪಡಿಸದಿದ್ದಲ್ಲಿ ಇನ್ನಷ್ಟು ತೊಂದರೆಗೀಡಾಗಬಹುದು. ಆದುದರಿಂದ, ಈ ವರ್ಷವೇ ತುರ್ತು ಆಧಾರದ ಮೇಲೆ ದುರಸ್ತಿಪಡಿಸುವ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್ : ಮಾನ್ಯ ಉಪಾಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅತಿವೃಷ್ಟಿಯಿಂದ ಎಷ್ಟು ಹಾನಿಯಾಗಿದೆ ಎಂಬುದನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಹಾನಿಯ ಮೊತ್ತ ನಮಗೆ ಲಭ್ಯವಾಗಿರತಕ್ಕಂಥ ಮಾಹಿತಿ ಪ್ರಕಾರ 8 ಕೋಟಿ 99 ಲಕ್ಷ ರೂಪಾಯಿಗಳು. ಇದಕ್ಕೆ ಪರಿಹಾರವಾಗಿ ಈಗಾಗಲೇ ಕೇವಲ 10 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆಯೆಂದು ಹೇಳುತ್ತಿದ್ದಾರೆ. ಆದರೆ, ನಾನು

ಹೇಳುತ್ತಿದ್ದೇನೆ: ಒಟ್ಟು 105 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಮತ್ತು ಈಗಾಗಲೇ ನಾವು ಬೆಂಗಳೂರಿನಲ್ಲಿ ಜಿಲ್ಲಾಧಿಕಾರಿಗಳ ಸಭೆ ಕರೆದು ದುರಸ್ತಿ ಕಾರ್ಯಗಳನ್ನು ಕೂಡಲೇ ಕೈಗೆತ್ತಿಕೊಳ್ಳಬೇಕೆಂದು ಆದೇಶ ಕೊಟ್ಟಿದ್ದೇವೆ. ಈ ದುರಸ್ತಿ ಕಾರ್ಯಗಳು ಪಿಡಬ್ಲ್ಯೂಡಿಗೆ ಸಂಬಂಧಪಟ್ಟದ್ದಾಗಿರಲಿ, ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆಗೆ ಸಂಬಂಧಿಸಿದ್ದಾಗಿರಲಿ ಇಲ್ಲವೆ ಬೇರೆ ಇಲಾಖೆಗಳಿಗೆ ಸಂಬಂಧಿಸಿದ್ದಾಗಿರಲಿ ದುರಸ್ತಿ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರ ಆದೇಶಿಸಿದೆ. ತಾವು ಹೇಳಿರುವ ಪ್ರಕಾರ ಬಿಡುಗಡೆ ಮಾಡಿರುವುದು 10 ಲಕ್ಷ ರೂಪಾಯಿಗಳಲ್ಲಿ 105 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಅತಿವೃಷ್ಟಿಯಾದಂಥ ಸಂದರ್ಭದಲ್ಲಿ ಏನೇನು ಹಾನಿಯಾಗಿದೆ, ಆಗ ಸಾಕಷ್ಟು ತಾತ್ಕಲಿಕ ಅಗತ್ಯ ಕ್ರಮಗಳನ್ನು ಕೂಡ ತೆಗೆದುಕೊಂಡಿದ್ದೇವೆ.

ಶ್ರೀ ವಿಜಯಕುಮಾರ್ ಶೆಟ್ಟಿ : ಈ ಕುರಿತು ನಾವು ಜಿಲ್ಲಾಧಿಕಾರಿಗಳನ್ನು ವಿಚಾರಿಸಿದಾಗ ಸರ್ಕಾರದಿಂದ ಬರಿ 25 ಲಕ್ಷ ರೂಪಾಯಿಗಳು ಮಾತ್ರ ಬಂದಿದೆಯೆಂದು ಹೇಳುತ್ತಾರೆ. ಹಾನಿಯ ಅಂದಾಜು ಮೊತ್ತ 10 ಕೋಟಿ ರೂಪಾಯಿಗಳಾಗಿದ್ದು, ಸರ್ಕಾರದಿಂದ 105 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆಯೆಂದು ತಾವು ಹೇಳಿದ್ದೀರಿ. ಆದರೆ, ಒಂದು ವಾರದ ಹಿಂದೆ 25 ಲಕ್ಷ ರೂಪಾಯಿಗಳನ್ನು ಮಾತ್ರ ಬಿಡುಗಡೆ ಮಾಡಲಾಗಿದೆ.

ಶ್ರೀ ಧರ್ಮಸಿಂಗ್ : ಈಗಾಗಲೇ ನಾನು ಹೇಳಿದಂತೆ 1 ಕೋಟಿ 5 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ದುರಸ್ತಿ ಕೆಲಸಗಳ ಜೊತೆಗೆ ಬೇರೆ ಕೆಲಸಗಳನ್ನು ವ್ಯವಸ್ಥಿತ ರೀತಿಯಲ್ಲಿ ಕಟ್ಟುನಿಟ್ಟಾಗಿ ಮಾಡುವುದಕ್ಕೆ ಜಿಲ್ಲಾಧಿಕಾರಿಗಳಿಗೆ ಆದೇಶ ಕೊಟ್ಟಿದ್ದೇವೆ. ಈ ಕುರಿತು ತಾವು ಜಿಲ್ಲಾಧಿಕಾರಿಗಳ ಸಂಪರ್ಕ ವಹಿಸಿಕೊಂಡಾಗ ಅವರು ಇತರ ಕೆಲಸಗಳನ್ನು ಕೈಗೆತ್ತಿಕೊಳ್ಳುತ್ತಾರೆ.

ಶ್ರೀ ವಿಜಯಕುಮಾರ್ ಶೆಟ್ಟಿ : ಮುಂದಿನ ಮಳೆಗಾಲ ಪ್ರಾರಂಭವಾಗುವರೆಗಾದರೂ ದುರಸ್ತಿ ಕಾರ್ಯವನ್ನು ಕೈಗೆತ್ತಿಕೊಳ್ಳಬೇಕು, ಇಲ್ಲವೆಂದರೆ ಮತ್ತಷ್ಟು ನಾಶವಾಗಿ ರೈತರಿಗೆ ಹಾನಿಯುಂಟಾಗುತ್ತದೆ. ಈಗಾಗಲೇ ಕೆರೆ-ಕಟ್ಟೆ, ತೋಟಗಳಿಗೆ ಅತಿವೃಷ್ಟಿಯಿಂದ ಹಾನಿಯುಂಟಾಗಿದ್ದು, ಇದನ್ನು ದುರಸ್ತಿಪಡಿಸದೆ ಹಾಗೆ ಬಿಟ್ಟರೆ ಮತ್ತಷ್ಟು ಬಿರುಕು ಬಿಟ್ಟು ಹೆಚ್ಚು ಹಾನಿಯಾಗುವ ಸಂಭವವಿರುವುದರಿಂದ ತುರ್ತು ಆಧಾರದ ಮೇಲೆ ಈ ವರ್ಷವೇ ಅಂದರೆ ಮಳೆಗಾಲ ಪ್ರಾರಂಭವಾಗುವುದಕ್ಕಿಂತ ಮುಂಚಿತವಾಗಿ ದುರಸ್ತಿ ಮಾಡಿಸುವುದಕ್ಕೆ ವ್ಯವಸ್ಥೆ ಮಾಡಬೇಕು.

ಶ್ರೀ ಧರ್ಮಸಿಂಗ್ : ಕಳೆದ ವರ್ಷ ಅತಿವೃಷ್ಟಿಯಿಂದ ಏನು ಹಾನಿಯಾಗಿದೆ, ಅದಕ್ಕೆ ಮುಂಜಾಗ್ರತೆ ಕ್ರಮ ಕೈಗೊಂಡಿದ್ದೇವೆ. ಮುಂಬರುವ ದಿನಗಳಲ್ಲಿಯೂ ಸಹ ಈ ಬಗ್ಗೆ ಸರಿಯಾದ ವ್ಯವಸ್ಥೆ ಮಾಡಬೇಕೆಂದು ಜಿಲ್ಲಾಧಿಕಾರಿಗಳಿಗೆ ಆದೇಶ ಕೊಟ್ಟಿದ್ದೇವೆ.

ಶ್ರೀ ವಿಜಯಕುಮಾರ್ ಶೆಟ್ಟಿ : ನೀವು ದುರಸ್ತಿ ಕೆಲಸ ಮಾಡಿಸಲಿಲ್ಲ, ದುರಸ್ತಿ ಮಾಡಿಸುವ ಕೆಲಸ ಬೇಕಾದಷ್ಟಿದೆ. ನಾವು ಜಿಲ್ಲಾಧಿಕಾರಿಗಳನ್ನು ಸಂಪರ್ಕಿಸಿ ಕೇಳಿದಾಗ ದುರಸ್ತಿ ಕಾರ್ಯಕ್ರಮಕ್ಕೆ ಕೇವಲ 25 ಲಕ್ಷ ರೂಪಾಯಿಗಳು ಮಾತ್ರ ಸರ್ಕಾರದಿಂದ ಬಿಡುಗಡೆಯಾಗಿದೆ ಎಂದು ಹೇಳುತ್ತಾರೆ.

ಶ್ರೀ ಧರ್ಮಸಿಂಗ್ : ನಮಗೆ ಬಂದಿರತಕ್ಕ ಅಂಕಿ-ಅಂಶಗಳ ಆಧಾರದ ಮೇಲೆ ಹೇಳಬೇಕೆಂದರೆ ಈಗಾಗಲೇ ಈ ಬಗ್ಗೆ ಜಿಲ್ಲಾಧಿಕಾರಿಗಳೊಡನೆ ಸಮಾಲೋಚಿಸಿದ್ದೇವೆ. ಸಾರ್ವಜನಿಕ ಹಾಗೂ ಖಾಸಗಿ ಆಸ್ತಿಗಳು ಸೇರಿದಂತೆ ಒಟ್ಟು 9ಕೋಟಿ ರೂಪಾಯಿಗಳಷ್ಟು ಹಾನಿಯಾಗಿದೆಯೆಂದು ಅಂದಾಜು ಮಾಡಲಾಗಿದ್ದು, ಇದಕ್ಕೆ ಪರಿಹಾರವಾಗಿ ಒಂದು ಕೋಟಿ 5 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆಯೆಂದು ಹೇಳುತ್ತಿದ್ದೇನೆ

ಮತ್ತು ಆಯಾ ಇಲಾಖೆಗಳ ವತಿಯಿಂದ ಇತರ ಕೆಲಸ ಕಾರ್ಯಗಳನ್ನು ತೆಗೆದುಕೊಳ್ಳುವುದಕ್ಕೂ ಆದೇಶ ಕೊಟ್ಟಿದ್ದೇನೆ.

ಶ್ರೀ ವಿಜಯಕುಮಾರ್ ಶೆಟ್ಟಿ : ಅತಿವೃಷ್ಟಿಯುಂಟಾಗಿ ಪ್ರವಾಹದಿಂದ ಹಾನಿಯುಂಟಾಗಿದ್ದು ಇದಕ್ಕೆ ಹಣವನ್ನು ಕಂದಾಯ ಇಲಾಖೆಯಿಂದ ಕೊಡಬೇಕು, ಬೇರೆ ಇಲಾಖೆಗಳವರು ದುರಸ್ತಿ ಕಾರ್ಯವನ್ನು ಹಮ್ಮಿಕ್ಕೊಳ್ಳುವುದಕ್ಕಾಗುವುದಿಲ್ಲವೆಂದು ಜಿಲ್ಲಾಧಿಕಾರಿಗಳು ಹೇಳುತ್ತಿದ್ದಾರೆ. ಏಕೆಂದರೆ, ಅವರ ಬಜೆಟ್ನಲ್ಲಿ ಇತರ ಕಾರ್ಯಕ್ರಮಗಳಿರುವುದರಿಂದ ಅವರು ಹಣ ಕೊಡುವುದಿಲ್ಲ.

ಶ್ರೀ ಧರ್ಮಸಿಂಗ್ : ಈ ಕುರಿತು ಜಿಲ್ಲಾಧಿಕಾರಿಗಳ ಜೊತೆ ಮಾತನಾಡೋಣ.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ : ಸನ್ಮಾನ್ಯ ಉಪಾಧ್ಯಕ್ಷರೆ, ಇದಕ್ಕೆ ಸಂಬಂಧಪಟ್ಟಂತೆ ನಾನು ಉಪ ಪ್ರಶ್ನೆಯನ್ನು ಕೇಳುತ್ತೇನೆ. ಅತಿವೃಷ್ಟಿಯಿಂದ ಹಾನಿಯಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 10 ಕೋಟಿ ರೂಪಾಯಿಯಷ್ಟು ನಷ್ಟವಾಗಿದೆಂದು, ಅದಕ್ಕೆ 25 ಲಕ್ಷ ರೂಪಾಯಿಗಳ ಪರಿಹಾರವನ್ನು ನೀಡಿದ್ದೇವೆಂದು ಹೇಳಿದ್ದೀರಿ. ಈಗ ಇನ್ನೂ ಒಂದು ಕೋಟಿ ಎರಡು ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆಂದು ಹೇಳಿದ್ದೀರಿ. ಇದೇ ರೀತಿ ಬೇರೆ ಭಾಗಗಳಲ್ಲಿ ಹಾನಿಯಾಗಿದ್ದರೂ ಸಹ ಹಣವನ್ನೇ ಬಿಡುಗಡೆ ಮಾಡಿಲ್ಲ. ಹಾನಿಯಾಗಿ ಸುಮಾರು ಆರು ತಿಂಗಳುಗಳಾಗಿದೆ. ಇನ್ನೇನು ಎರಡು ತಿಂಗಳಿನಲ್ಲಿ ಪುನಃ ಮಳೆಗಾಲ ಪ್ರಾರಂಭವಾಗುತ್ತದೆ. ಬೇರೆ ಭಾಗಗಳಲ್ಲಿ ಆಗಿರುವ ಹಾನಿಯ ಬಗ್ಗೆ ಯಾವಾಗ ಕೆಲಸವನ್ನು ತೆಗೆದುಕೊಳ್ಳುತ್ತೀರಿ?

ಶ್ರೀ ಧರ್ಮಸಿಂಗ್ : ಸಿ.ಆರ್.ಎಫ್. ನಿಂದ ನಮ್ಮ ರಾಜ್ಯಕ್ಕೆ ಒಟ್ಟು 27 ಕೋಟಿ ರೂಪಾಯಿಗಳೆಂದು ನಿಗದಿ ಮಾಡಿದ್ದಾರೆ. ರಾಜ್ಯದ ಪಾಲು 7 ಕೋಟಿ 75 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿತ್ತು. ಆದರೂ ಸಹ ನಾವು ಅದಕ್ಕೆ ವ್ಯತಿರಿಕ್ತವಾಗಿ 32 ಕೋಟಿ ರೂಪಾಯಿಗಳನ್ನು ಹೆಚ್ಚಾಗಿ ಖರ್ಚು ಮಾಡಿದ್ದೇವೆ. ರಾಜ್ಯದಲ್ಲಿ ಒಟ್ಟಾರೆ ನೆರೆಹಾವಳಿ, ಭೂಕಂಪ ಎಲ್ಲಾದಕ್ಕೂ ಸೇರಿ 60 ಕೋಟಿ ರೂಪಾಯಿಗಳನ್ನು ಪರಿಹಾರವಾಗಿ ಬಿಡುಗಡೆ ಮಾಡಿದ್ದೇವೆ. ಕೇಂದ್ರ ಸರ್ಕಾರದಿಂದ ಬರಬೇಕಾಗಿದ್ದ ಹಣವನ್ನು ಸಹ ನಿರೀಕ್ಷೆ ಮಾಡದೆ ನಮ್ಮ ರಾಜ್ಯ ಸರ್ಕಾರ ಪರಿಣಾಮಕಾರಿಯಾದ ರೀತಿಯಲ್ಲಿ ಕೆಲಸ ಮಾಡುವಂತೆ ಹಣವನ್ನು ಬಿಡುಗಡೆ ಮಾಡುವುದಕ್ಕೆ ನಾವು ಯಾವ ತಾರತಮ್ಯವನ್ನು ಮಾಡಲಿಲ್ಲ. ಹಾಸನ ಜಿಲ್ಲೆ ಮತ್ತು ಬೇರೆ ಬೇರೆ ಜಿಲ್ಲೆಗಳಿಗೆ ಸಹ ಹಣವನ್ನು ಬಿಡುಗಡೆ ಮಾಡಿದ್ದೇವೆ.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ : ಕೇಂದ್ರ ಸರ್ಕಾರದ ಮತ್ತು ರಾಜ್ಯ ಸರ್ಕಾರದ ಒಟ್ಟಾರೆ 60 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆಂದು ಹೇಳಿದ್ದಾರೆ. ನನ್ನ ಬೇಲೂರು ತಾಲ್ಲೂಕಿನಲ್ಲಿ ಅತಿವೃಷ್ಟಿಯಿಂದ ಒಂದು ಕೋಟಿ ಎರಡು ಲಕ್ಷ ರೂಪಾಯಿಗಳ ಹಾನಿಯಾಗಿದೆ. ಆದರೆ ನಮಗೆ ಬಿಡುಗಡೆ ಮಾಡಿರತಕ್ಕದ್ದು ಕೇವಲ ಮೂರು ಲಕ್ಷ ರೂಪಾಯಿಗಳು. ಈಗ ಕೆರೆಕಟ್ಟೆಗಳ ಒಡೆಯ ಹೋಗಿವೆ. ಅವುಗಳನ್ನು ರಿಪೇರಿ ಮಾಡಿ ಸುವ್ಯವಸ್ಥೆ ಮಾಡದಿದ್ದರೆ ಮುಂದಿನ ಸಾರಿಯೂ ಸಹ ಬೆಳೆಯಾಗುವುದಿಲ್ಲ, ಇದಕ್ಕೆ ತಾವು ಏನು ಹೇಳುತ್ತೀರಿ?

ಶ್ರೀ ಧರ್ಮಸಿಂಗ್ : ಅದರ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ಕರ್ನಾಟಕ ರಾಜ್ಯದ ಯಾವ್ಯಾವ ಜಿಲ್ಲೆಗಳಲ್ಲಿ ಹಾನಿಯಾಗಿದೆ ಅವುಗಳ ಬಗ್ಗೆ ಮುಂದೆ ಬರತಕ್ಕ ಮಳೆಗಾಲವನ್ನು ದೃಷ್ಟಿಯಲ್ಲಿಟ್ಟುಕೊಂಡು, ಪುನಃ ಅತಿವೃಷ್ಟಿಯಾಗುವ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಜಿಲ್ಲಾಧಿಕಾರಿಗಳಿಗೆ ನಾವು ಸೂಚನೆಯನ್ನು ಕೊಟ್ಟಿದ್ದೇವೆ. ಮತ್ತು ಅಂಥ ಕೆಲಸಕಾರ್ಯಗಳನ್ನು ತೆಗೆದುಕೊಳ್ಳುವ ಬಗ್ಗೆ ನಿರ್ದೇಶನವನ್ನು ಸಹ ಕೊಟ್ಟಿದ್ದೇವೆ.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ : ನಮ್ಮ ತಾಲ್ಲೂಕಿಗೆ ಕೇವಲ ಮೂರು ಲಕ್ಷ ರೂ.ಗಳ ಹಣವನ್ನು ಬಿಡುಗಡೆ ಮಾಡಿದ್ದೀರಿ. ಹಣವನ್ನೇ ತಾವು ಬಿಡುಗಡೆ ಮಾಡದಿದ್ದರೆ ನೀವು ಜಿಲ್ಲಾಧಿಕಾರಿಗಳಿಗೆ ಹೇಳಿದ್ದೇವೆಂದರೆ ಏನು ಇದರ ಅರ್ಥ.

ಶ್ರೀ ಧರ್ಮಸಿಂಗ್ : ಮಾನ್ಯ ಸದಸ್ಯರು ಇದರ ಬಗ್ಗೆ ಪ್ರತ್ಯೇಕವಾದ ಪ್ರಶ್ನೆಯನ್ನು ಕೇಳಿ, ಕರ್ನಾಟಕ ರಾಜ್ಯದಲ್ಲಿ 1990ನೇ ಇಸವಿಯಿಂದ ಇಲ್ಲಿಯವರೆಗೆ ಪ್ರತಿವರ್ಷ ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೇವೆ ಎನ್ನುವ ಬಗ್ಗೆ ಮತ್ತು ಈ ವರ್ಷ ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೇವೆ ಎನ್ನುವ ಬಗ್ಗೆ ಪ್ರಶ್ನೆಯನ್ನು ಕೇಳಿದರೆ ವಿವರಣೆಯನ್ನು ಕೊಡುತ್ತೇವೆ.

ಶ್ರೀ ಮಂಜುನಾಥ ಸಿ. ಕುನ್ನೂರ್ : ಮಾನ್ಯ ಉಪಾಧ್ಯಕ್ಷರೆ, ಅತಿವೃಷ್ಟಿಯಿಂದ ಬೆಳೆ ನಾಶವಾಗಿರುವುದಕ್ಕೆ ಎಲ್ಲಾ ಜಿಲ್ಲೆಗಳಿಗೆ ಹಣವನ್ನು ಕಳಿಸಲಾಗಿತ್ತು. ಆದರೆ ನಮ್ಮ ಧಾರವಾಡ ಜಿಲ್ಲೆಗೆ ಒಂದು ಸುತ್ತೋಲೆಯು ಬಂದಿದೆ. ಅದೇನೆಂದರೆ ಯಾವುದೇ ರೈತನಿಗೆ ಒಂದು ನಾಲ್ಕೈದು ಎಕರೆ ಜಮೀನು ಇದ್ದರೆ ಅದರಲ್ಲಿ ಕನಿಷ್ಟ ಪಕ್ಷ ಎಪ್ಪತ್ತೈದು ಭಾಗ ನಾಶವಾಗಿದ್ದರೆ ಮಾತ್ರ ಅಂಥ ರೈತರು ಬೆಳೆಯ ಪರಿಹಾರವನ್ನು ಪಡೆಯಲು ಸಾಧ್ಯವೆಂದು ಸುತ್ತೋಲೆ ಬಂದಿದೆ. ಈ ಸುತ್ತೋಲೆಯಿಂದ ಯಾವ ರೈತನಿಗೆ ಹಾನಿಯಾಗಿದ್ದು ಬೆಳೆಯ ಪರಿಹಾರ ದೊರಕದೇ ಇರತಕ್ಕ ಪರಿಸ್ಥಿತಿ ಬಂದಿದೆ. ಆದ್ದರಿಂದ ಮಾನ್ಯ ಸಚಿವರು ಈ ರೀತಿ ಏನು ಸುತ್ತೋಲೆಯನ್ನು ಕಳಿಸಿದ್ದಾರೋ ಅದನ್ನು ವಾಪಸ್ ತೆಗೆದುಕೊಂಡು ಎಷ್ಟು ನಷ್ಟವಾಗಿರುತ್ತದೆಯೋ ಅಷ್ಟು ಬೆಳೆಯ ಪರಿಹಾರವನ್ನು ಕೊಡಿಸಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್ : ಮೊದಲು ಪ್ರತಿ ಎಕರೆಗೆ ಐದುನೂರು ರೂಪಾಯಿಗಳ ಪರಿಹಾರವನ್ನು ಕೊಡುತ್ತಿದ್ದೇವು, ಆಗ ಜಿಲ್ಲಾಧಿಕಾರಿಗಳಿಗೆ ಸ್ವಲ್ಪ ಅಡಚಣೆಯಾಗುತ್ತಿತ್ತು. ಈಗ ಆ ಆಡಚಣೆಯನ್ನು ನಿವಾರಣೆ ಮಾಡಿದ್ದೇವೆ. ಧಾರವಾಡ ಜಿಲ್ಲೆಯಲ್ಲಿ ಸಹ ಸಾಕಷ್ಟು ಪರಿಹಾರವನ್ನು ಇಲ್ಲಿಯವರೆಗೆ ರೈತರಿಗೆ ಕೊಟ್ಟಿದ್ದೇವೆ. ಪ್ರತಿ ಎಕರೆಗೆ 500 ರೂ.ಗಳಂತೆ ಕೊಟ್ಟಿರುವ ಪರಿಹಾರದ ಒಟ್ಟು ಮೊತ್ತ ಮೂರು ಕೋಟಿ ಐವತ್ತೈದು ಲಕ್ಷವನ್ನು ಕರ್ನಾಟಕ ರಾಜ್ಯದ ಬೇರೆ ಬೇರೆ ಕಡೆಗೆ ಕೊಟ್ಟಿದ್ದೇವೆ.

ಶ್ರೀ ಮಂಜುನಾಥ ಸಿ. ಕುನ್ನೂರ್ : ಪರಿಹಾರವನ್ನು ಕೊಡುತ್ತಿರುವುದು ಸರಿ. ಆದರೆ ಯಾರಿಗೆ ಮುಕ್ಕಾಲು ಭಾಗ ನಷ್ಟವಾಗಿರುತ್ತದೆಯೋ ಅಂಥವರು ಮಾತ್ರ ಇದರ ಫಲಾನುಭವಿಗಳಾಗಲು ಅರ್ಹರು ಎನ್ನತಕ್ಕ ನಿರ್ಬಂಧವನ್ನು ಮಾಡಿದ್ದೀರಿ. ಆ ನಿರ್ಬಂಧವನ್ನು ತೆಗೆದು ಹಾಕಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್ : ಅದರ ಬಗ್ಗೆ ಸಹ ಈಗಾಗಲೆ ಹೇಳಿದ್ದೇನೆ. ಇದಕ್ಕೆ ಇರತಕ್ಕ ಅಡ್ಡಿಯನ್ನು ಕೂಡ ದೂರ ಮಾಡಿದ್ದೇವೆ.

ರಾಜ್ಯದಲ್ಲಿರುವ ಬೀಡಿ ಕಾರ್ಮಿಕರ ಸಂಖ್ಯೆ.

563 - ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯಾದ್ಯಂತ ಇರುವ ಬೀಡಿ ಕಾರ್ಮಿಕರ ಸಂಖ್ಯೆ ಎಷ್ಟು.

ಆ) ಅವರಿಗೆ ಸರ್ಕಾರದಿಂದ ದೊರಕುವ ಸೌಲಭ್ಯ ಎಷ್ಟು?

ಇ) ಮಂಡ್ಯ ಜಿಲ್ಲೆಯಲ್ಲಿ ಬೀಡಿ ಕಾರ್ಮಿಕರುಗಳನ್ನು ಗುರುತಿಸಲಾಗಿದೆಯೇ?

ಈ) ಹಾಗಿದ್ದಲ್ಲಿ, ಅವರ ಸಂಖ್ಯೆ ಎಷ್ಟು?

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾರ್ಮಿಕ ಸಚಿವರು) :

ಅ) ರಾಜ್ಯಾದ್ಯಂತ 2,86,462 ಬೀಡಿ ಕಾರ್ಮಿಕರಿದ್ದಾರೆ.

ಆ) 1) ವೈದ್ಯಕೀಯ ಸೌಲಭ್ಯ

2) ಬೋನಸ್

3) ರಜೆಯ ಸಂಬಳ

4) ರಾಷ್ಟ್ರೀಯ ಹಬ್ಬದ ರಜಾ

5) ಹೆರಿಗೆ ಸೌಲಭ್ಯ
6) ಆರ್ಥಿಕವಾಗಿ ಹಿಂದುಳಿದ ಬೀಡಿ ಕಾರ್ಮಿಕರಿಗೆ ಮನೆ ಕಟ್ಟಲು ಧನ ಸಹಾಯ.
7) ಸಾಮೂಹಿಕ ವಿಮಾ ಯೋಜನೆ.
8) ಬೀಡಿ ಕಾರ್ಮಿಕರ ಮಕ್ಕಳಿಗೆ ವಿದ್ಯಾರ್ಥಿ ವೇತನ ಹಾಗೂ ಅವರ ಮಕ್ಕಳಿಗೆ ಸಮವಸ್ತ್ರ (ಪ್ರಾಥಮಿಕ ಶಾಲೆಯವರೆಗೂ-ಕೇಂದ್ರ ಕಲ್ಯಾಣ ಸಂಸ್ಥೆಯಿಂದ)

ಇ) ಹೌದು

ಈ) 85.

ಶ್ರೀ ಎಂ.ಎಸ್. ಆತ್ಮಾನಂದ : ಸನ್ಮಾನ್ಯ ಉಪಾಧ್ಯಕ್ಷರೆ, ರಾಜ್ಯಾದ್ಯಂತ ಸುಮಾರು ಎರಡು ಲಕ್ಷದ ಎಂಬತ್ತೇಳು ಸಾವಿರ ಬೀಡಿ ಕಾರ್ಮಿಕರು ಇದ್ದಾರೆಂದು ಉತ್ತರದಲ್ಲಿ ಹೇಳಿದ್ದಾರೆ. ಇವರುಗಳಿಗೆ ಕೊಡತಕ್ಕ ಸೌಲಭ್ಯಗಳ ವಿವರಣೆಯನ್ನು ಸಹ ಇಲ್ಲಿ ಕೊಟ್ಟಿದ್ದಾರೆ. ಸರ್ಕಾರ ಇದರ ಸಲುವಾಗಿ ಒಟ್ಟಾರೆ ವಾರ್ಷಿಕವಾಗಿ ಎಷ್ಟು ಖರ್ಚು ಮಾಡುತ್ತದೆ ಎಂಬುದನ್ನು ಕೇಳಬಯಸುತ್ತೇನೆ. ಮತ್ತು ಮಂಡ್ಯ ಜಿಲ್ಲೆಯಲ್ಲಿ ಕೇವಲ ಎಂಭತ್ತೈದು ಬೀಡಿ ಕಾರ್ಮಿಕರನ್ನು ಗುರುತಿಸಲಾಗಿದೆ ಎಂದು ಉತ್ತರದಲ್ಲಿ ಹೇಳಿದ್ದಾರೆ. ಆದರೆ ಮಂಡ್ಯ ಜಿಲ್ಲೆಯಾದ್ಯಂತ ಸಹಸ್ರಾರು ಜನರು ಬೀಡಿ ಕಾರ್ಮಿಕರು ಇದ್ದು, ಅವರುಗಳು ಆರ್ಥಿಕವಾಗಿ ಬಹಳ ತೊಂದರೆಗೆ ಒಳಗಾಗಿದ್ದಾರೆ. ಇವರನ್ನೂ ಕೂಡ ಗುರುತಿಸತಕ್ಕ ಕೆಲಸವನ್ನು ಯಾವಾಗ ಕೈಗೊಳ್ಳುತ್ತೀರಿ ಮತ್ತು ಈ ಸೌಲಭ್ಯಗಳನ್ನು ಅವರಿಗೂ ಒದಗಿಸುತ್ತೀರಾ ಎಂದು ಕೇಳಬಯಸುತ್ತೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ :ಮಾನ್ಯ ಅಧ್ಯಕ್ಷರೇ, ಬೀಡಿ ಕಾರ್ಮಿಕರಿಗೆ ಬಹಳಷ್ಟು ಸವಲತ್ತುಗಳನ್ನು ಕೊಟ್ಟಿದ್ದೇವೆ. ಕರ್ನಾಟಕದಲ್ಲಿ 2,86,462 ಬೀಡಿ ಕಾರ್ಮಿಕರು ಪ್ರಾವಿಡೆಂಟ್ ಫಂಡ್ಗೆ ನೊಂದಾಯಿಸಿದ್ದಾರೆ. ಅದರಲ್ಲಿ ಸಾಧಾರಣವಾಗಿ 6 ಸಾವಿರ ಬೀಡಿ ಕಾರ್ಮಿಕರು ಕರ್ನಾಟಕದಲ್ಲಿ ಇದ್ದಾರೆ. ಮಂಡ್ಯ ಜಿಲ್ಲೆಯಲ್ಲಿ ಪ್ರಾವಿಡೆಂಟ್ ಫಂಡ್ಗೆ 85 ಜನ ಕಾರ್ಮಿಕರು ನೊಂದಾವಣೆಯಲ್ಲಿ ಇದ್ದಾರೆಂದು ಗೊತ್ತಾಗಿದೆ. ಅಲ್ಲೂ ಸಹ ಸಣ್ಣ ಸಣ್ಣ ಬೀಡಿ ಮಾಲೀಕರು ಬೀಡಿ ಉತ್ಪಾದನೆ ಮಾಡುವಾಗ ಐಡೆಂಟ್ಟಿಕಾರ್ಡ್ ಕೊಡುವುದಕ್ಕೆ ಹೇಳಿದ್ದೇವೆ. ನಾವು ಇದಕ್ಕೆ ಬಹಳಷ್ಟು ಸಮಯದಿಂದ ಕೆಲಸ ಮಾಡುತ್ತಿದ್ದೇವೆ. ಲೇಬರ್ ಡಿಪಾರ್ಟಿಮೆಂಟಿನಿಂದ ಸರ್ವೆ ಮಾಡಿಸುವುದಕ್ಕೆ ನಿಶ್ಚಯ ಮಾಡಿದ್ದೇವೆ. ಏಕೆಂದರೆ ಬಡ ಕಾರ್ಮಿಕರಿಗೆ ಈ ಎಲ್ಲಾ ಸವಲತ್ತುಗಳು ಸಿಗಬೇಕಾದರೆ ನಾವು ಅವರಿಗೆ ಐಡೆಂಟಿಟಿ ಕಾರ್ಡ್ ಕೊಡಬೇಕು. ಕೇಂದ್ರ ಸರ್ಕಾರದಿಂದ ಲೇಬರ್ ವೆಲ್ಫೇರ್ ಕಮೀಷನ್ ಆಫೀಸ್ ಎಂದು ಬೆಂಗಳೂರಿನಲ್ಲಿದೆ. ಇದರ ಮುಖಾಂತರ ಐಡೆಂಟಿಟಿ ಕಾರ್ಡ್ ಕೊಡುತ್ತಾ ಬಂದಿದ್ದೇವೆ. ಇನ್ನು ಮುಂದೆ ಲೇಬರ್ ಡಿಪಾರ್ಟ್ಮೆಂಟ್ನಿಂದಲೂ ಸಹ ಐಡೆಂಟಿಟಿ ಕಾರ್ಡ್ ಕೊಡಬೇಕೆಂದು ನಿಶ್ಚಯ ಮಾಡಿದ್ದೇವೆ. ಅದೇ ಪ್ರಕಾರ ಮಂಡ್ಯ ಜಿಲ್ಲೆಯಲ್ಲಿ ಸರ್ವೆ ಮಾಡಿ ಎಷ್ಟು ಜನ ಬೀಡಿ ಕಾರ್ಮಿಕರು ಇದ್ದಾರೆ. ಅವರಿಗೆ ಐಡೆಂಟಿಟಿ ಕಾರ್ಡ್ ಕೊಡುವ ಹಾಗೆ ನೋಡಿ ಕೊಳ್ಳುತ್ತೇವೆ.

ಶ್ರೀ ಎಂ.ಎಸ್. ಆತ್ಮಾನಂದ : 2 ಲಕ್ಷ 87 ಸಾವಿರ ಜನರಿಗೆ ಈ ಸೌಲಭ್ಯವನ್ನು ಕೊಡುವುದಕ್ಕೆ ವಾರ್ಷಿಕವಾಗಿ ಎಷ್ಟು ಹಣವನ್ನು ಖರ್ಚು ಮಾಡುತ್ತಿದೆ?

ಶ್ರೀ ಬ್ಲೇಸಿಯಸ್ ಎಂ. ಡಿಸೋಜ :ಕೇಂದ್ರದಿಂದ ನಮಗೆ ಈ ಎಲ್ಲಾ ಹಣ ಬರುತ್ತದೆ. ಕರ್ನಾಟಕ ಸರ್ಕಾರ ಯಾವ ಹಣವನ್ನು ಬೀಡಿ ಕಾರ್ಮಿಕರ ವೆಲ್ಫೇರ್ಗೋಸ್ಕರವಾಗಿ ಖರ್ಚು ಮಾಡುವುದಿಲ್ಲ, ಈ ವರ್ಷ 53 ಲಕ್ಷ ರೂ.ಗಳನ್ನು ಸ್ಕಾಲರ್ಶಿಪ್ ಮುಖಾಂತರ ಕೊಟ್ಟಿದ್ದಾರೆ. ಈ ವರ್ಷವೇ ಇನ್ನು 30ಲಕ್ಷ ರೂ.ಗಳನ್ನು ಮಂಜೂರು ಮಾಡುತ್ತೇವೆಂದು ಹೇಳಿದ್ದಾರೆ. ಇದುವರೆಗೂ ಆ ಹಣ ಬಂದಿಲ್ಲ, ಅದೇ ರೀತಿ ಮನೆಗಳನ್ನು ಕಟ್ಟುವುದಕ್ಕೆ

ನಾವು ಬೇಕಾದಷ್ಟು ಹಣವನ್ನು ಕೊಟ್ಟಿದ್ದೇವೆ. ಆದರೆ ಈ ವರ್ಷ ಕೊಡುವುದಕ್ಕೆ ಸಾಧ್ಯವಾಗಲಿಲ್ಲ. ಏಕೆಂದರೆ ಯಾರು ಹೊಸ ಮನೆಗಳನ್ನು ಕಟ್ಟಲಿಲ್ಲ. ಅದರ ಬಗ್ಗೆ ಇಷ್ಟರವರೆಗೂ ಬೇಡಿಕೆ ಬರಲಿಲ್ಲ. ಇದುವರೆಗೂ 1,435 ಮನೆಗಳನ್ನು ಕೊಟ್ಟಿದ್ದೇವೆ, ಸಬ್ಸಿಡಿ ರೂಪದಲ್ಲಿ ಹಣವನ್ನು ಕೊಟ್ಟಿದ್ದೇವೆ.

ಕಳ್ಳಂಬೆಳ್ಳ ಕ್ಷೇತ್ರದಲ್ಲಿ ಅನಧಿಕೃತ ಭೂಮಿಯ ಸಕ್ರಮ.

693 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಕಂದಾಯ ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಕಳ್ಳಂಬೆಳ್ಳ ಕ್ಷೇತ್ರದಲ್ಲಿ ಬರುವ 3 ತಾಲ್ಲೂಕಿನ ಭಾಗಗಳಿಂದಾಗಿ ಅಕ್ರಮವಾಗಿ ಸಾಗುವಳಿ ಮಾಡುತ್ತಿರುವ ಜಮೀನುಗಳನ್ನು ಸಕ್ರಮಗೊಳಿಸುವಂತೆ ಬಂದಿರುವ ಅರ್ಜಿಗಳೆಷ್ಟು?

2) ಅವುಗಳಲ್ಲಿ ಇದುವರೆವಿಗೂ ವಿಲೇವಾರಿ ಆಗಿರುವ ಅರ್ಜಿಗಳೆಷ್ಟು ಹಾಗೂ ಎಷ್ಟು ಅರ್ಜಿಗಳಿಗೆ ಹಕ್ಕು ಪತ್ರಗಳನ್ನು ವಿತರಿಸಲಾಗಿದೆ?

3) ಶಿರಾ ತಾಲ್ಲೂಕಿನಲ್ಲಿ ಸಮಿತಿಯು ಇದುವರೆವಿಗೂ ಒಂದು ಸಭೆಯನ್ನು ಕರೆಯದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

4) ಹಾಗಿದ್ದಲ್ಲಿ, ಕಳ್ಳಂಬೆಳ್ಳ ಕ್ಷೇತ್ರದಲ್ಲಿ ಉಳಿದಿರುವ ಅರ್ಜಿಗಳ ವಿಲೇವಾರಿಗಾಗಿ ಪ್ರತ್ಯೇಕ ಹೆಚ್ಚುವರಿ ಸಮಿತಿಯನ್ನು ನೇಮಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಧರ್ಮಸಿಂಗ್ (ಕಂದಾಯ ಮತ್ತು ಸಮಾಜ ಕಲ್ಯಾಣ ಸಚಿವರು) :

1) ಕಳ್ಳಂಬೆಳ್ಳ ಕ್ಷೇತ್ರದಲ್ಲಿ ಬರುವ 3 ತಾಲ್ಲೂಕಿನ ಭಾಗಗಳಿಂದಾಗಿ ಬಂದಿರುವ ಅರ್ಜಿಗಳ ಸಂಖ್ಯೆ :

1) ಹುಳಿಯಾರು (ಚಿಕ್ಕನಾಯಕನಹಳ್ಳಿ ತಾಲ್ಲೂಕು)	-	5683
2) ಹಾಗಲವಾಡಿ (ಗುಬ್ಬಿ ತಾಲ್ಲೂಕು)	-	2895
3) ಕಳ್ಳಂಬೆಳ್ಳ ಮತ್ತು ಬುಕ್ಕಾಪಟ್ಟಣ (ಶಿರಾ ತಾಲ್ಲೂಕು)	-	5371
ಒಟ್ಟು		13949

2) ಇದುವರೆವಿಗೆ ಆಗಿರುವ ವಿಲೇವಾರಿ

1) ಹುಳಿಯಾರು (ಚಿಕ್ಕನಾಯಕನಹಳ್ಳಿ ತಾಲ್ಲೂಕು)	-	299
2) ಹಾಗಲವಾಡಿ (ಗುಬ್ಬಿ ತಾಲ್ಲೂಕು)	-	831
3) ಕಳ್ಳಂಬೆಳ್ಳ ಮತ್ತು ಬುಕ್ಕಾಪಟ್ಟಣ (ಶಿರಾ ತಾಲ್ಲೂಕು)		ಇಲ್ಲ
ಒಟ್ಟು		1130

ಇದುವರೆವಿಗೂ ಯಾವುದೇ ಹಕ್ಕು ಪತ್ರವನ್ನು ಹಂಚಿರುವುದಿಲ್ಲ.

3) ಹೌದು.

4) ಕರ್ನಾಟಕ ಭೂಕಂದಾಯ ಕಾಯ್ದೆ ಕಲಂ 94ಎ ಅಡಿಯಲ್ಲಿ, ಒಂದು ತಾಲ್ಲೂಕಿಗೆ ಒಂದು ಸಮಿತಿಗಿಂತ ಹೆಚ್ಚಾಗಿ ರಚಿಸಲು ಈಗ ಅವಕಾಶವಿಲ್ಲ. ಆದರೆ ವಿಲೇವಾರಿ ಆಗದೆ ಉಳಿದಿರುವ ಪ್ರಕರಣಗಳು ಬಹಳಷ್ಟು ಇರುವ ಕಡೆಗಳಲ್ಲಿ ಇನ್ನೊಂದು ಹೆಚ್ಚುವರಿ ಸಮಿತಿಯನ್ನು ರಚಿಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಟಿ.ಬಿ. ಜಯಚಂದ್ರ : ನನ್ನ ಕ್ಷೇತ್ರದಲ್ಲಿ ಅಕ್ರಮವಾಗಿ ಸಾಗುವಳಿ ಮಾಡುತ್ತಿರುವ ಜಮೀನುಗಳನ್ನು ಸಕ್ರಮಗೊಳಿಸುವುದಕ್ಕೋಸ್ಕರ 14 ಸಾವಿರ ಅರ್ಜಿಗಳು ಬಂದಿವೆ. ಇಲ್ಲಿಯವರೆಗೆ ಒಂದು ಸಾವಿರ ಅರ್ಜಿಗಳು ವಿಲೇವಾರಿಯಾಗಿರತಕ್ಕಂಥಾದ್ದು. ಆದರೆ ಇದುವರೆಗೂ ಹಕ್ಕುಪತ್ರಗಳನ್ನು ಒಂದಕ್ಕೂ ಕೊಡುವುದಕ್ಕಾಗಲಿಲ್ಲವೆಂದು ತಮ್ಮ ಉತ್ತರದಲ್ಲಿ ಹೇಳಿದ್ದೀರಿ. ಇದಕ್ಕಾಗಿ ಹೆಚ್ಚುವರಿ ಸಮಿತಿಯನ್ನು ರಚನೆ ಮಾಡುವ

ವಿಷಯ ಈಗಾಗಲೇ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದೀರಿ. ನಾನು ಅದನ್ನು ಸ್ವಾಗತ ಮಾಡುವುದರ ಜೊತೆಗೆ ಅದರ ಹಿನ್ನಲೆಯಲ್ಲಿ ಕಂದಾಯ ಇಲಾಖೆಗೂ ಸುತ್ತೋಲೆ ಹೋಗಿದೆ. 31-3-94ರ ಒಳಗೆ ಎಲ್ಲಾ ಅರ್ಜಿಗಳನ್ನು ವಿಲೇವಾರಿ ಮಾಡಬೇಕೆಂದು ಸುತ್ತೋಲೆಯನ್ನು ಕಳುಹಿಸಿದ್ದೀರಿ. ರಾಜ್ಯಪಾಲರ ಭಾಷಣದಲ್ಲಿ ಸೆಪ್ಟೆಂಬರ್ ಅಂತ್ಯದೊಳಗಾಗಿ ಎಲ್ಲಾ ಅರ್ಜಿಗಳನ್ನು ವಿಲೇವಾರಿ ಮಾಡಬೇಕೆಂಬ ಮಾತನ್ನು ಹೇಳಿದ್ದೀರಿ. ಈಗ ನನ್ನ ಕ್ಷೇತ್ರದ ಮಟ್ಟಿಗೆ ಅರ್ಜಿಗಳು ವಿಲೇವಾರಿ ಆಗಿರುವ ಧಾಟಿಯನ್ನು ನೋಡಿದರೆ ಇನ್ನು 10 ವರ್ಷಗಳು ಇದಕ್ಕೆ ಬೇಕಾಗುತ್ತದೆ. ನನ್ನ ಪ್ರಶ್ನೆ ಏನೆಂದರೆ ಈ ರೀತಿ ಅರ್ಜಿಗಳ ವಿಲೇವಾರಿ ವಿಳಂಬವಾಗಿರುವುದರ ಬಗ್ಗೆ ಇವತ್ತು ಬಡತನದಲ್ಲಿ ಸಾಗುವಳಿ ಮಾಡುವಂತಹ ಜನರಿಗೆ ಸಹಾಯ ಮಾಡುವುದಕ್ಕೆ ನಮ್ಮ ಸರ್ಕಾರದವರಿಗೆ ಮನಸ್ಸು ಇದೆಯೆ? ಅಥವಾ ಇಲ್ಲವೋ? ಎನ್ನುವಂತಹ ಅನುಮಾನ ಬರುವಂತಹ ರೀತಿಯಲ್ಲಿ ಇವತ್ತು ಕೆಲಸ ನಡೆಯುತ್ತಿದೆ. ಶಿರಾ ತಾಲ್ಲೂಕಿನಲ್ಲಿ ಒಂದು ಸಭೆಯೂ ನಡೆದಿಲ್ಲ, ಆ ಪ್ರಶ್ನೆ ನನಗೆ ಬೇಡ. ಮಾನ್ಯ ಮುಖ್ಯಮಂತ್ರಿಯವರಲ್ಲಿ ಮನವಿ ಮಾಡಿದ ಮೇಲೆ ಒಂದು ಕಮಿಟಿಯಾಗಿದ್ದರೂ ಸಭೆ ನಡೆಯುವುದಕ್ಕೆ ಸಾಧ್ಯವಾಗುತ್ತಿಲ್ಲ, ಮಾನ್ಯ ಮುಖ್ಯಮಂತ್ರಿಗಳು ದಾವಣಗೆರೆಯಲ್ಲಿ ಭಾಷಣ ಮಾಡುವಂತಹ ಸಂದರ್ಭದಲ್ಲಿ ಹೆಚ್ಚುವರಿ ಸಮಿತಿಯನ್ನು ಮಾಡಿ ಜಮೀನುಗಳನ್ನು ವಿಲೇವಾರಿ ಮಾಡಿಸುತ್ತೇವೆ ಎಂದು ಆಶ್ವಾಸನೆಯನ್ನು ಕೊಟಿದ್ದಾರೆ.

ಈ ಆ್ಯಕ್ಟ್‌ಗೆ ತಿದ್ದುಪಡಿ ತರಬೇಕಾಗಿಲ್ಲ, ರೂಲ್ಸ್ ತರುವಂಥಾದ್ದು, ಅದಕ್ಕೋಸ್ಕರ ಇದನ್ನು ನಾಳೆಯೇ ಮಾಡುತ್ತೇವೆ ಎನ್ನುವಂತಹ ಆಶ್ವಾಸನೆಯನ್ನು ಕೊಡಬೇಕು. ಇನ್ನು 8-10 ದಿವಸಗಳಲ್ಲಿ ಮಾಡುವಂತಹ ಪ್ರಯತ್ನವನ್ನು ಮಾಡಿದರೆ ನಿಜಕ್ಕೂ ಹೆಚ್ಚಿನ ಸಹಾಯ ಮಾಡಿದಂತೆ ಆಗುತ್ತದೆ. ತಾವು ಅದನ್ನು ಖಂಡಿತವಾಗಿಯೂ ಸೆಪ್ಟೆಂಬರ್ ಒಳಗೆ ಮಾಡಿಕೊಟ್ಟಿದ್ದೆ ಆದರೆ ಮಾನ್ಯ ಮುಖ್ಯಮಂತ್ರಿಗಳ ಆಶ್ವಾಸನೆಯ ಪ್ರಕಾರ ಜಮೀನನ್ನು ನಾವು ಹಂಚುವುದಕ್ಕೆ ಸಹಾಯವಾಗುತ್ತದೆ. ವಿಶೇಷವಾಗಿ ತಮಗೆ ಹೇಳಬೇಕಾದರೆ 14 ಸಾವಿರ ಅರ್ಜಿಗಳಲ್ಲಿ ತಿರಸ್ಕೃತವಾಗತಕ್ಕಂಥಾದ್ದು ಕೇವಲ ಒಂದು ಸಾವಿರ ಕೂಡ ಇಲ್ಲ, 13ಸಾವಿರ ಜನರಿಗೆ ಸಹಾಯವಾಗುವಂತಹ ಕಾರ್ಯಕ್ರಮವಾಗುತ್ತದೆ. ಆದುದರಿಂದ ದಯಮಾಡಿ ಸ್ಪಷ್ಟವಾದಂತಹ ಉತ್ತರವನ್ನು ಕೊಡಬೇಕು.

ಶ್ರೀ ಧರ್ಮಸಿಂಗ್: ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಜಯಚಂದ್ರರವರು ಏನು ಪ್ರಸ್ತಾಪ ಮಾಡುತ್ತಿದ್ದಾರೆ ಅದನ್ನು ನಾನು ಒಪ್ಪುತ್ತಿದ್ದೇನೆ. ಅದಕ್ಕೆ ನಾನು ಬಹಳ ವಿವರವಾದ ಕಾರಣಗಳನ್ನು ಕೊಡುವುದಕ್ಕೆ ಸಿದ್ಧ, ಏಕೆಂದರೆ ಅಕ್ರಮ ಸಾಗುವಳಿಯನ್ನು ಸಕ್ರಮಗೊಳಿಸತಕ್ಕಂತಹ ರೀತಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ಈಗಾಗಲೇ 10 ಲಕ್ಷ 86 ಸಾವಿರ ಅಪ್ಲಿಕೇಷನ್ ಬಂದಿವೆ. ಒಟ್ಟು 25 ಲಕ್ಷ ಎಕರೆ ಜಮೀನನ್ನು ವಿತರಣೆ ಮಾಡಬೇಕಾಗಿದೆ. ನಾನು ಕಂದಾಯ ಮಂತ್ರಿಯಾದ ಮೇಲೆ ಎಲ್ಲಾ ಕಡೆ ಪರಿಶೀಲನೆ ಮಾಡಿದ ಮೇಲೆ ಇಲ್ಲಿಯವರೆಗೆ 3 ಲಕ್ಷ 6 ಸಾವಿರ ಎಕರೆ ಜಮೀನನ್ನು ವಿತರಣೆ ಮಾಡಿದ್ದೇವೆ. ಇದಕ್ಕೆ ಈಗಾಗಲೇ ನಾವು ಕ್ಯಾಬಿನೇಟ್ನಲ್ಲಿ ಕೂಡ ಮತ್ತು ಮುಖ್ಯಮಂತ್ರಿಗಳು ಸಾಕಷ್ಟು ಆಸಕ್ತಿ ವಹಿಸಿ ಇದು ಏಕೆ ಆಗುತ್ತಿಲ್ಲ, ಇದಕ್ಕೆ ಒಂದು ಟಾರ್ಗೆಟ್ ಇಟ್ಟು ಮಾಡಬೇಕು ಎನ್ನುವಂತಹ ನಿರ್ಣಯವನ್ನು ಈ ಸರ್ಕಾರ ತೆಗೆದುಕೊಂಡಾಗ ಈಗ ನಾವು ಎಲ್ಲಾ ಕಡೆಗೆ ಒಂದು ಸಮಿತಿ ಮಾಡಿ, ಇದು ತಿಂಗಳಿಗೆ 4 ಸಲ ಕುಳಿತುಕೊಳ್ಳಬೇಕು. ಕೊನೇಪಕ್ಷ 100 ಕೇಸ್ಗಳನ್ನು ಇತ್ಯರ್ಥ ಮಾಡಬೇಕು ಎನ್ನುವಂತಹ ರೀತಿಯಲ್ಲಿ ಈಗಾಗಲೇ ನಾವು ಆದೇಶವನ್ನು ಎಲ್ಲಾ ಕಡೆಗೆ ಕೊಟ್ಟಿದ್ದೇವೆ. ಕೆಲವು ಕಡೆ ಏನಾಗುತ್ತಿದೆಯೆಂದರೆ ಸಿರಾ ತಾಲ್ಲೂಕು ಮತ್ತು ಬೇರೆ ಕಡೆಯಿಂದ ಬರತಕ್ಕಂತಹ 3 ಕ್ಷೇತ್ರಗಳಲ್ಲಿ ಅಸೆಂಬ್ಲಿ ಕಾನ್ಸಿಟ್ಯೂಯನ್ಸಿಯಲ್ಲಿ ಇದು ಬಟವಾಡೆಯಾಗಿದೆ. ಇಲ್ಲಿಯವರೆಗೆ 13 ಸಾವಿರಕ್ಕಿಂತಲೂ ಹೆಚ್ಚು ಕೇಸ್ಗಳು ಇದ್ದರೂ ಕೂಡ ಇತ್ಯರ್ಥ ಆಗುತ್ತಿರುವುದು 11 ನೂರು ಏಕೆಂದರೆ ಇಲ್ಲಿಯವರೆಗೆ ಕಮಿಟಿ ಕುಳಿತಿಲ್ಲ, ನಾವು ಹೇಳಿದ್ದೇವೆ ಇಲ್ಲಿ ಇರತಕ್ಕಂತಹ ಛೇರ್ಮನ್ ಬರದೇ ಹೋದರೆ ಬೇರೆ ಛೇರ್ಮನ್ನು ಎಲೆಕ್ಟ್ ಮಾಡಿ ಆ

ಸಮಿತಿ ನಡೆಸಬೇಕು ಎನ್ನುವಂತಹ ಆದೇಶವನ್ನು ಕೊಟ್ಟಿದ್ದೇವೆ ಮತ್ತು ಎಲ್ಲಾ ಕಡೆಗೂ ಗೋಮಾಳ ನಿಗದಿಪಡಿಸತಕ್ಕಂತಹ ರೀತಿಯಲ್ಲಿ ಜಿಲ್ಲಾಧಿಕಾರಿಗಳು ಕಡೆಗೆ ಹೋಗಬೇಕಾಗಿತ್ತು ಆ ಜಿಲ್ಲಾಧಿಕಾರಿಗಳನ್ನು ಬಿಟ್ಟು ಅಸಿಸ್ಟೆಂಟ್ ಕಮಿಷನರವರಿಗೂ ಕೂಡ ಕೊಟ್ಟಿದ್ದೇವೆ. ಎಸಿ ಅಲ್ಲ, ತಹಸೀಲ್ದಾರ್ ಕೂಡ ವಹಿಸಿಕೊಳ್ಳಬೇಕು ಎಂದು ಶಿವಮೊಗ್ಗ ಶಾಸಕರು ಕೂಡ ಮನವಿ ಕೊಟ್ಟಿದ್ದಾರೆ. ನಾವು ಅದನ್ನೆಲ್ಲಾ ವಿಚಾರ ಮಾಡುತ್ತಿದ್ದೇವೆ. ಮತ್ತೇ ಈ ಒಂದು ಕಮಿಟಿ ಮಾಡತಕ್ಕಂತಹ ರೀತಿಯಲ್ಲಿ ಇರತಕ್ಕಂತಹ ಲ್ಯಾಂಡ್ ರೆವಿನ್ಯೂ ಆಕ್ಟಲ್ಲಿ ಕೂಡ ತಿದ್ದುಪಡಿ ಮಾಡಬೇಕೇ ಅಥವಾ ರೂಲ್ಸ್‌ನಲ್ಲಿ ಏನು ಅಮೆಂಡ್ಮೆಂಟ್ ಮಾಡಬೇಕು ಎನ್ನುವುದನ್ನು ಲಾ ಡಿಪಾರ್ಟ್ಮೆಂಟಿಗೆ ಕಳುಹಿಸಿದ್ದೇವೆ. ಅಲ್ಲಿಂದ ಬಂದ ಮೇಲೆ ಇದರ ಬಗ್ಗೆ ಒಂದು ಕಮಿಟಿ ಕಾನ್ಸಿಟ್ಯೂಟ್ ಮಾಡಿ 94ರೊಳಗೆ ಈ ಎಲ್ಲಾ ಅಪ್ಲಿಕೇಷನನ್ನು ಇತ್ಯರ್ಥ ಮಾಡುತ್ತೇವೆ.

ಶ್ರೀ ಟಿ.ಬಿ. ಜಯಚಂದ್ರ : ನೀವು ಇನ್ನು ಲಾ ಡಿಪಾರ್ಟ್ಮೆಂಟಿಗೆ ಕಳುಹಿಸಿದ್ದೇವೆ ಅಲ್ಲಿಂದ ಸಲಹೆ ಬಂದ ಮೇಲೆ ನಾವು ಮಾಡುತ್ತೇವೆ ಎನ್ನುವಂತಹ ಮಾತನ್ನು ಹೇಳಿದಿರಿ. ಅದಕ್ಕೆ ಇನ್ನು 2-3 ತಿಂಗಳು ಆಗುತ್ತದೆ. ಏಕೆಂದರೆ ನಾನು ಲಾಯರ್ ಆಗಿರತಕ್ಕಂಥವನು. ನೀವು ಲಾಯಕ್ ಆಗಿದ್ದೀರಿ. ಅದು ಗೊತ್ತಿರತಕ್ಕಂತಹ ವಿಷಯ. It is only an amendment for the rules. ಇದನ್ನು ತಾವೇ ಮಾಡಬಹುದು. ಈ ವಿಷಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಕೂಡ ಒಪ್ಪಿಗೆ ಕೊಟ್ಟಿದ್ದಾರೆ.

ಶ್ರೀ ಧರ್ಮಸಿಂಗ್ : ಕೇವಲ 15 ದಿವಸದ ಒಳಗೆ ತೀರ್ಮಾನ ತೆಗೆದುಕೊಂಡು we are going to constitute the extra Committees.

ಶ್ರೀ ಆರ್. ನಾರಾಯಣ್ : ಮಾನ್ಯ ಮಂತ್ರಿಗಳು ತಿಳಿಸಿದ ಪ್ರಕಾರ 10 ಲಕ್ಷ ಅರ್ಜಿಗಳಲ್ಲಿ 3 ಲಕ್ಷ ಅರ್ಜಿಗಳು ವಿಲೇವಾರಿ ಆಗಿದೆ ಎಂದರೆ 30 ಭಾಗವಾಗಿದೆ. ಉದಾಹರಣೆಗೆ ನಾನು ನಾಲ್ಕು ತಾಲ್ಲೂಕನ್ನು ಪ್ರತಿನಿಧಿಸುತ್ತೇನೆ, ಜಯಚಂದ್ರರವರು 3 ತಾಲ್ಲೂಕುಗಳನ್ನು ಪ್ರತಿನಿಧಿಸುತ್ತಾರೆ. ನಮಗೆ ಇಲ್ಲಿ ಬಹಳ ತೊಂದರೆಯಾಗುತ್ತದೆ. ಅದಕ್ಕೋಸ್ಕರ ಅಸೆಂಬ್ಲಿ ಕ್ಷೇತ್ರವಾರು ಒಂದು ಸಮಿತಿಗಳನ್ನು ಏನಾದರೂ ರಚಿಸಿದರೆ ಜವಾಬ್ದಾರಿ ನಮ್ಮ ಮೇಲೆ ಬೀಳುತ್ತದೆ. ಉದಾಹರಣೆಗೆ ಮಧುಗಿರಿ ತಾಲ್ಲೂಕಿನಲ್ಲಿ 8 ಸಾವಿರ ಅರ್ಜಿಗಳು ಇವೆ. ನಮ್ಮ ಪಕ್ಷದ ಮಿತ್ರರಾದ ಪರಮೇಶ್ವರ್‌ರವರು ಮಂತ್ರಿ ಆದಮೇಲೂ ಸಹ ಅವರೇ ಅಧ್ಯಕ್ಷರಾಗಿದ್ದಾರೆ. ವರದಿ ತರಿಸಿ ನೋಡಿ ಎಷ್ಟು ಅರ್ಜಿಯಾಗಿದೆ ಅಂತ ನಾವು ಯಾರಾದರೂ ಹೇಳುವುದಕ್ಕೆ ಹೋದರೆ ನಮ್ಮ ಮೇಲೆ ತಪ್ಪು ಭಾವನೆ ಬರತಕ್ಕಂಥಾದ್ದು ಇದೆ. ನಾವು ಅನ್ನುವ ಹಾಗೆ ಇಲ್ಲ, ಅನುಭವಿಸುವ ಹಾಗೆ ಇಲ್ಲ ಹಾಗೆ ಆಗಿದೆ. ನಮ್ಮ ಕ್ಷೇತ್ರದಲ್ಲೂ ಸಹ ಸಹಸ್ರಾರು ಅರ್ಜಿಗಳು ಇವೆ. ಇದು ಬಡವರಿಗೆ, ದೀನದಲಿತರಿಗೆ ಹರಿಜನರಿಗೆ ಹೆಚ್ಚಾಗಿ ಗೋಮಾಳವನ್ನು ಬಗರ್ ಹುಕುಂ ಮಾಡಿರತಕ್ಕಂಥಾದ್ದು ಅವರನ್ನು ಬಹಳಷ್ಟು ಜನ ಶೋಷಣೆ ಮಾಡತಕ್ಕಂಥಾದ್ದು ಅವರಿಂದ ಹಣ ಪಡೆಯತಕ್ಕಂತಹ ಬೇಕಾದಷ್ಟು ದೂರುಗಳು ಇವೆ. ಆದುದರಿಂದ ಇದನ್ನು ಬಹಳ ತ್ವರಿತವಾಗಿ ಡಿಡ್ಲೈನ್ ಮಾಡುತ್ತಾ ಮಾಡುತ್ತಾ ಎಕ್ಸ್ಟೆಂಡ್ ಮಾಡುತ್ತಾ ಹೋಗುತ್ತಿದ್ದೀವಿ. ಇದರ ಬಗ್ಗೆ ತೀವ್ರವಾಗಿ ಗಮನ ಹರಿಸಿ ಯಾರು ಇವತ್ತು ಬಡ ವರ್ಗದ ಜನ ಇದ್ದಾರೆ, ಹತ್ತಾರು ವರ್ಷಗಳಿಂದ ಬಗರ್ ಹುಕುಂ ಮಾಡಿದ್ದಾರೆ ಅವರಿಗೆ ಸಕ್ರಮಗೊಳಿಸತಕ್ಕಂತಹ ಕಾರ್ಯಕ್ರಮವನ್ನು ಬಹಳ ತೀವ್ರವಾಗಿ ಮಾಡಬೇಕಾಗಿದೆ. ಇದಕ್ಕೆ ಸಾಕಷ್ಟು ಅಸಮಧಾನ ಇದೆ. ನಾಲ್ಕು ವರ್ಷದಿಂದ ಹೇಳುತ್ತಲೇ ಇದ್ದೀರಿ, ನಾವು ಕೇಳುತ್ತಲೇ ಇದ್ದೇವೆ. ಆದುದರಿಂದ ಎಲ್ಲಿ ನ್ಯೂನ್ಯತೆ ಇದೆ ಅದನ್ನು ಸರಿಪಡಿಸುವುದರ ಜೊತೆಗೆ, ಎಲ್ಲಿ ಕ್ಷೇತ್ರವಾರು ಸಮಿತಿಗಳನ್ನು ಮಾಡಿದರೆ ಜವಾಬ್ದಾರಿಗೆ ಆಗುತ್ತದೆ ಎನ್ನುವ ಉತ್ತಮ ಸಲಹೆಯನ್ನು ನಾನು ಮಾಡುತ್ತೇನೆ.

ಶ್ರೀ ವಿಜಯಕುಮಾರ್ ಶೆಟ್ಟಿ : ಮಾನ್ಯ ಮಂತ್ರಿಗಳೇ, ಅಕ್ರಮವಾಗಿ 2 ಸೆಂಟ್ಸ್ 3 ಸೆಂಟ್ಸ್ ಜಾಗದಲ್ಲಿ ಮನೆ ಮಾಡಿ ಕುಳಿತಿದ್ದಾರೆ. 20 ವರಷಕ್ಕಿಂತ ಮೊದಲೇ ಅವರು ಕುಳಿತಿದ್ದಾರೆ. ಅವರಿಗೆ ರೇಷನ್ ಕಾರ್ಡ್ ಇದೆ, ಹೌಸ್ ನಂಬರ್ ಸಿಕ್ಕಿದೆ ಮತ್ತು ಅದಕ್ಕೆ ಸಂಬಂಧಪಟ್ಟ ಹಾಗೆ ಎಲ್ಲಾ ಸಿಕ್ಕಿದೆ. ಅದು ಅಕ್ರಮ ಆಗಿರುವುದನ್ನು ಸಕ್ರಮ ಮಾಡಿಕೊಡಬೇಕು.

ಶ್ರೀ ಧರ್ಮಸಿಂಗ್ : ಮಾನ್ಯ ನಾರಾಯಣ್ ಅವರು ಕೇಳಿದಂತಹ ಪ್ರಶ್ನೆಗೆ ಉತ್ತರವಾಗಿ ಸರ್ಕಾರ ಈಗಾಗಲೇ ತೀರ್ಮಾನ ತೆಗೆದುಕೊಂಡಿದೆ. ಮತ್ತು ಅಡಿಷನಲ್ ಏನೆಂದರೆ ಕಮಿಟಿ ಕಾನಸ್ಟ್ಯೂಟ್ ಮಾಡತಕ್ಕಂತಹ ರೀತಿಯಲ್ಲಿ 15 ದಿವಸದೊಳಗೆ ತೀರ್ಮಾನ ತೆಗೆದುಕೊಂಡು ಕನ್ಕ್ಲೂಡ್ ಮಾಡುತ್ತೇವೆ. ಅದರ ಬಗ್ಗೆ ನಾವು ಬಹಳ ಗಮನ ಕೊಟ್ಟಿದ್ದೇವೆ. ಏಕೆಂದರೆ ಈಗಾಗಲೇ ಎಲ್ಲಾ ವಿವರವನ್ನು ನಾವು ತರಿಸಿಕೊಂಡಾಗ ನಮ್ಮ ಟಾರ್ಗೆಟ್ ಎಷ್ಟು ಇತ್ತು ಅದರ ಪ್ರಕಾರ ಕೆಲಸವಾಗಿಲ್ಲ. ಮತ್ತು ವಿಜಯಕುಮಾರ್ ಶೆಟ್ಟಿಯವರ ಪ್ರಶ್ನೆ ಉದ್ಭವವಾಗುವುದಿಲ್ಲ. ಆದರೂ ಕೂಡ ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಶಾಸಕರ ಜೊತೆ ಸಮಾಲೋಚನೆ ಮಾಡಿದ್ದೇವೆ ಇದರ ಜೊತೆ ಸರ್ಕಾರ ಉಪ ಸಮಿತಿ ಕೂಡ ಮಾಡಿದೆ, ಈ ಉಪ ಸಮಿತಿ ಒಂದು ತಿಂಗಳ ಒಳಗಾಗಿ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತದೆ.

ಕೆ.ಯು.ಡಬ್ಲ್ಯು.ಎಸ್. ಇಲಾಖೆಯಿಂದ ತೆಗೆದುಕೊಂಡ ಕುಡಿಯುವ ನೀರು ಯೋಜನೆಗಳು.

716 - ಶ್ರೀ ಮಂಜುನಾಥ ಸಿ. ಕುನ್ನೂರ (ಶಿಗ್ಗಾಂವ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1993-94ನೇ ಸಾಲಿನಲ್ಲಿ ಕೆ.ಯು.ಡಬ್ಲ್ಯು.ಎಸ್. ಇಲಾಖೆಯಿಂದ ಎಷ್ಟು ಕುಡಿಯುವ ನೀರಿನ ಯೋಜನೆಗಳನ್ನು ತೆಗೆದುಕೊಳ್ಳಲಾಗಿದೆ ಹಾಗೂ ಅವು ಯಾವುವು ?*

ಆ) *ವಿವಿಧ ಯೋಜನೆಗಳಲ್ಲಿ ಖರ್ಚು ಮಾಡಿದ ಹಣವೆಷ್ಟು? ಅವು ಯಾವ ಹಂತದಲ್ಲಿದೆ ?*

ಇ) *ಶಿಗ್ಗಾಂ, ಸವಣೂರ, ಬಂಕಾಪುರ ಸಂಯುಕ್ತ ಕುಡಿಯುವ ನೀರಿನ ಯೋಜನೆಯ ಟ್ರೀಟ್ಮೆಂಟ್ ಪ್ಲಾಂಟ್ಗೆ ಟೆಂಡರ್ ಕರೆಯಲಾಗಿದೆಯೇ?*

ಈ) *ಸದರಿ ಯೋಜನೆಯ ಕೆಲಸ ಯಾವ ಹಂತದಲ್ಲಿದೆ?*

ಶ್ರೀ ಚೌಡಾ ರೆಡ್ಡಿ (ನಗರಾಭಿವೃದ್ಧಿ ಸಚಿವರು.) :

ಅ) 1993-94ನೇ ಸಾಲಿನಲ್ಲಿ ಹೊಸ ನೀರು ಸರಬರಾಜು ಯೋಜನೆಗಳನ್ನು ಕರ್ನಾಟಕ ಸರ್ಕಾರ ಮಂಜೂರು ಮಾಡಿದೆ.

(ವಿವರ ಅನುಬಂಧ-1ರಲ್ಲಿ)

ಆ) ಅನುಬಂಧ 1ನ್ನು ನೋಡುವುದು.

ಇ) ಹೌದು

ಈ) ಸದರಿ ಯೋಜನೆಯಡಿಯಲ್ಲಿ ನಾಗನೂರು ಕೆರೆಯನ್ನು ಆಳವಡಿಸುವ ಕೆಲಸ ಪ್ರಗತಿಯಲ್ಲಿದೆ. ಈ ಕೆರೆಯ ದಂಡೆಯನ್ನು ಬಲಗೊಳಿಸುವ ಕೆಲಸವನ್ನು ಸಹ ಕರ್ನಾಟಕ ರಾಜ್ಯ ನಿರ್ಮಾಣ ನಿಗಮದ ಮೂಲಕ ತೆಗೆದುಕೊಳ್ಳಲಾಗಿದೆ. ಈ ಯೋಜನೆಯ ಇತರೆ ಘಟಕಗಳನ್ನು ಹಂತಗಳಲ್ಲಿ ತೆಗೆದುಕೊಳ್ಳಲಾಗುವುದು. ಶಿಗ್ಗಾಂನಲ್ಲಿನ ಜಲ ಶುದ್ಧೀಕರಣ ಘಟಕದ ಕೆಲಸಕ್ಕೆ ಟೆಂಡರ್ ಕರೆಯಲಾಗಿದೆ ಮತ್ತು ಗುತ್ತಿಗೆದಾರರ ನೇಮಕದ ನಂತರ ಕೆಲಸವನ್ನು ಆರಂಭಿಸಲಾಗುವುದು. ಜನವರಿ 94ರ ಅಂತ್ಯದವರೆಗೆ ಈ ಯೋಜನೆಗೆ ಒಟ್ಟು ರೂ. 340.58 ಲಕ್ಷಗಳನ್ನು ಖರ್ಚು ಮಾಡಲಾಗಿದೆ.

ಅನುಬಂಧ -1

ಕ್ರ.ಸಂ.	ಯೋಜನೆಯ ಹೆಸರು	ಅಂದಾಜು ವೆಚ್ಚ (ಲಕ್ಷ ರೂ.ಗಳಲ್ಲಿ)	ಖರ್ಚು ಮಾಡಿರುವ ಹಣ (ಲಕ್ಷ ರೂ.ಗಳಲ್ಲಿ)	ಪ್ರಸ್ತುತ ಹಂತ
1)	ಹಳಿಯಾಳ	382.63	0.74	ಎಪಿ ಕೊಳವೆ ಮಾರ್ಗ ಮತ್ತು ಜಾಕ್ವೆಲ್ಗಳಿಗೆ ಟೆಂಡರುಗಳನ್ನು ಕರೆಯಲಾಗಿದೆ.
2)	ಮಧುಗಿರಿ	108.00	-	ಯೋಜನೆಯನ್ನು ಇತ್ತೀಚೆಗೆ ಮಂಜೂರು ಮಾಡಲಾಗಿದೆ. ಕೆಲಸವನ್ನು ಕೈಗೆತ್ತಿಕೊಳ್ಳಬೇಕಾಗಿದೆ.
3)	ಚಿಂತಾಮಣಿ	49.75	20.30	ಜಲಸಂಗ್ರಹಗಾರ ಕೆರೆಯ ಕೆಲಸ ಪ್ರಗತಿಯಲ್ಲಿದೆ.
4)	ಮಳವಳ್ಳಿ	400.00	-	ಯೋಜನೆಯನ್ನು ಇತ್ತೀಚೆಗೆ ಮಂಜೂರು ಮಾಡಲಾಗಿದೆ. ಕೆಲಸವನ್ನು ಕೈಗೆತ್ತಿಕೊಳ್ಳಬೇಕಾಗಿದೆ.
5)	ಕಾರ್ಕಳ	220-00	2.57	ವೆಂಟೆಂಡ್ ಡ್ಯಾಮ ಮತ್ತು ಹೆಡ್ ವರ್ಕ್ಸ್ ಕೆಲಸಗಳನ್ನು ತೆಗೆದುಕೊಳ್ಳಲಾಗಿದೆ. ಇತರೆ ಕೆಲಸಗಳನ್ನು ಇನ್ನೂ ತೆಗೆದುಕೊಳ್ಳಬೇಕಾಗಿದೆ.
6)	ಅಣ್ಣಿಗೇರಿ ನವಲಗುಂದ	189.77	0.00	ಕೆಲಸವನ್ನು ಕೈಗೆತ್ತಿಕೊಳ್ಳಬೇಕಾಗಿದೆ.
7)	ಇಂಡಿ	328.51	0.38	ಹೆಡ್ ವರ್ಕ್ಸ್ ಮತ್ತು ಎತ್ತರಿಸಿದೆ ಜಲಸಂಗ್ರಹಾಗಾರಗಳಿಗೆ ಟೆಂಡರ್ ಕರೆಯಲಾಗಿದೆ. ಮತ್ತು ಕೆಲಸಗಳನ್ನು ತೆಗೆದುಕೊಳ್ಳಲಾಗುವುದು.
8)	ಶೋರಾಪುರ	500.00	0.00	ಈ ಯೋಜನೆಯು ಇತ್ತೀಚೆಗೆ ಮಂಜೂರಾಗಿದ್ದು, ಕಾಮಗಾರಿಯನ್ನು ತೆಗೆದುಕೊಳ್ಳಬೇಕಾಗಿದೆ.

ಶ್ರೀ ಮಂಜುನಾಥ ಸಿ. ಕುನ್ನೂರು : ಮಾನ್ಯ ಸಭಾಧ್ಯಕ್ಷರೇ, ಸಿದ್ಧಾಪುರ ಮತ್ತು ಬಂಕಾಪುರ ಸಂಯುಕ್ತ ಕುಡಿಯುವ ನೀರಿನ ಯೋಜನೆಗೆ ಜಲ ಶುದ್ಧೀಕರಣ ಘಟಕವನ್ನು ಟೆಂಡರ್ ಕರೆಯಲಾಗಿದೆ ಎಂಬ ಪ್ರಶ್ನೆಯನ್ನು ಕೇಳಿದ್ದೇನೆ, ಅದಕ್ಕೆ ಹೌದು ಅಂತ ಉತ್ತರ ಕೊಟ್ಟಿದ್ದಾರೆ. ಜೊತೆಗೆ ಈ ಯೋಜನೆ ಯಾವ ಹಂತದಲ್ಲಿ ಎಂದಾಗ ನಾಗನೂರು ಕೆರೆ ಆಳ ತೆಗೆಯತಕ್ಕ ಕೆಲಸ ಪ್ರಗತಿಯಲ್ಲಿದೆ ಮತ್ತು ಈ ಕೆಲಸವನ್ನು ಕರ್ನಾಟಕ ರಾಜ್ಯ ನಿರ್ಮಾಣ ನಿಗಮಕ್ಕೆ ವಹಿಸಿ ಕೊಡಲಾಗಿದೆ. ಹಾಗೂ ಈ ಯೋಜನೆಯ ಕೆಲಸವನ್ನು ಹಂತ ಹಂತವಾಗಿ ತೆಗೆದುಕೊಳ್ಳಲಾಗುವುದು ಎಂದು ತಿಳಿಸಿದ್ದಾರೆ. ಈ ಜಲ ಶುದ್ಧೀಕರಣ ಘಟಕವನ್ನು ಕೂಡಲೇ ಅಲ್ಲಿ ಪ್ರಾರಂಭಿಸುವುದು ಅತಿ ಅವಶ್ಯಕತೆ ಇದೆ. ಈ ಜಲ ಶುದ್ಧೀಕರಣ ಘಟಕಕ್ಕೆ ಬೇಕಾಗಿರತಕ್ಕಂತಹ ಜಮೀನನ್ನು ಕೂಡ ಅಲ್ಲಿ ಭೂ ಮಾಲೀಕರಿಂದ ನಮ್ಮ ಕೆ.ಯು.ಡಬ್ಲ್ಯೂ ಇಲಾಖೆಯವರಿಗೆ ವಹಿಸಿಕೊಡಲಾಗಿದೆ. ಒಂದು ವೇಳೆ ಈ ಯೋಜನೆ ಹಂತ ಹಂತವಾಗಿ ತೆಗೆದುಕೊಳ್ಳುತ್ತಾ ನಾವು ನಿಧಾನ ಮಾಡುತ್ತಾ ಹೋದರೆ ಇದರ ಅಂದಾಜುವೆಚ್ಚ ಬಹಳ ಹೆಚ್ಚಾಗುತ್ತದೆ. ಆ ಕಾರಣದಿಂದ ಆದಷ್ಟು ಬೇಗನೆ ಮಾಡಿಕೊಡಬೇಕು ಅಂತ ಈ ವಿಚಾರವನ್ನು ಈ ಸಂದರ್ಭದಲ್ಲಿ ಕೇಳುತ್ತೇನೆ. ಮಾನ್ಯ ಅಧ್ಯಕ್ಷರೇ ಈ ಯೋಜನೆಯನ್ನು ತೆಗೆದುಕೊಂಡಾಗ ಶಿಗ್ಗಾವ್, ಕಲ್ಲೂರ್ ಮತ್ತು ಬಂಕಾಪುರಗಳ ಮಧ್ಯದಲ್ಲಿ ಬರತಕ್ಕಂತಹ ಕೆಲವು ಜಿಲ್ಲೆಗಳನ್ನು ಅವರು ಆಯ್ಕೆ ಮಾಡಿಕೊಂಡಿರುವುದಿಲ್ಲ ಅಲ್ಲಿ ಬರತಕ್ಕಂತಹ ಹಳ್ಳಿಗಳನ್ನು ಮತ್ತೆ ನೂತನ ಶಿಗ್ಗಾವಿಯಲ್ಲಿ ಕೆ.ಎಸ್.ಆರ್.ಪಿ. ಬಟಾಲಿಯನ್ ಕೂಡ ಆಗಿದೆ. ಹಾಗಾಗಿ ಈ ಜನಸಂಖ್ಯೆ ಪ್ರಮಾಣಕ್ಕೆ ಅನುಸಾರವಾಗಿ ನಾವು ಒಂದು ಕೆರೆಯ ಮತ್ತು ಯೋಜನೆಯ ಕೆಲಸವನ್ನು ಕೈಗೊಳ್ಳಬೇಕೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳಲ್ಲಿ ಕೇಳುತ್ತೇನೆ.

ಶ್ರೀ ಚೌಡರೆಡ್ಡಿ : ಸನ್ಮಾನ್ಯ ಉಪಾಧ್ಯಕ್ಷರೇ, ಪರಿಶೀಲಿಸುತ್ತೇನೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಚಿಕ್ಕಮಗಳೂರು ಜಿಲ್ಲೆಯಲ್ಲಿ ಆಶ್ರಯ ಅಂಬೇಡ್ಕರ್ ಮನೆಗಳು.

603 - ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಮಗಳೂರು ಜಿಲ್ಲೆಗೆ ಮಂಜೂರಾದ ಆಶ್ರಯ ಅಂಬೇಡ್ಕರ್ ಮನೆಗಳೆಷ್ಟು?

ಆ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಪ್ರತಿ ತಾಲ್ಲೂಕಿಗೆ ಮಂಜೂರಾಗಿರುವ ಆಶ್ರಯ ಅಂಬೇಡ್ಕರ್ ಮನೆಗಳೆಷ್ಟು?

ಇ) ಈ ಅಂಕಿ ಅಂಶವು ಸರ್ಕಾರಕ್ಕೆ ತೃಪ್ತಿಕರವಾಗಿದೆಯೇ?

ಶ್ರೀ ಗೋಪಿನಾಥ್ ಆರ್ ಸಾಂಡ್ರ (ವಸತಿ ಸಚಿವರು) :

ಅ) ಆಶ್ರಯ ಮನೆಗಳು - 3000

ಡಾ:ಅಂಬೇಡ್ಕರ್ ಯೋಜನೆಯ ಮನೆಗಳು - 861

ಆ)

ವಿಧಾನಸಭಾ ಕ್ಷೇತ್ರದ ಹೆಸರು	ಆಶ್ರಯ ಮನೆಗಳು	ಡಾ: ಅಂಬೇಡ್ಕರ್ ಮನೆಗಳು
1) ಶೃಂಗೇರಿ	500	98
2) ಮೂಡಿಗೆರೆ	500	122
3) ಚಿಕ್ಕಮಗಳೂರು	500	198
4) ಬೀರೂರು	500	148

5) ಕಡೂರು	500	147
6) ತರೀಕೆರೆ	500	148

ಇ) ಹೌದು. ಇದು ಮುಂದುವರೆದ ಯೋಜನೆಯಾಗಿದೆ.

ಕೆ.ಎಸ್.ಐ.ಸಿ. ಹಾಗೂ ಕೆ.ಎಸ್.ಎಂ.ಬಿ.ಯ ಪ್ರಗತಿ.

572 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್) : ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆ.ಎಸ್.ಐ.ಸಿ. ಮತ್ತು ಕೆ.ಎಸ್.ಎಂ.ಬಿ.ಗಳನ್ನು ಯಾವಾಗ ಪ್ರಾರಂಭಿಸಲಾಯಿತು;

ಆ) ಅವುಗಳ ಕಾರ್ಯಚಟುವಟಿಕೆಗಳೇನು;

ಇ) ಅವುಗಳು ಪ್ರಾರಂಭವಾದಾಗಿನಿಂದ ಇಲ್ಲಿಯವರೆವಿಗೆ ಯಾವ ಯಾವ ವರ್ಷಗಳಲ್ಲಿ ಎಷ್ಟೆಷ್ಟು ಪ್ರಮಾಣದ ನಷ್ಟವನ್ನು ಅನುಭವಿಸಿಕೊಂಡು ಬರುತ್ತಿದೆ;

ಈ) ಅದಕ್ಕೆ ಕಾರಣಗಳೇನು?

ಉ) ಅದನ್ನು ತಪ್ಪಿಸಲು ಸರ್ಕಾರದ ಮುಂದಿರುವ ಕ್ರಮಗಳೇನು?

ಊ) ಅವುಗಳನ್ನು ಖಾಸಗಿಯವರಿಗೆ ಮಾರಾಟ ಮಾಡುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಡಾ: ಜಿ.ಪರಮೇಶ್ವರ (ರೇಷ್ಮೆ ರಾಜ್ಯ ಸಚಿವರು.) :

ಅ) ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮವನ್ನು 1980ರಲ್ಲಿ ಪ್ರಾರಂಭಿಸಲಾಯ್ತು.

ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಯನ್ನು 5-11-1979ರಲ್ಲಿ ಪ್ರಾರಂಭಿಸಲಾಯ್ತು.

ಆ) ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮವು ರೇಷ್ಮೆ ನೇಯ್ಗೆ ಕಾರ್ಖಾನೆ, ಮೈಸೂರಿನಲ್ಲಿ ಅಪ್ಪಟ ರೇಷ್ಮೆ ಬಟ್ಟೆಗಳು (ಜರಿ, ಸಾದಾ ಮತ್ತು ಮುದ್ರಿತ) ಜೂಟು ರೇಷ್ಮೆ ಗಿರಣಿ, ಚನ್ನಪಟ್ಟಣದಲ್ಲಿ ರೇಷ್ಮೆದಾರ, ನಾಯಿಲ್ ಹಾಗೂ ಟಿ. ನರಸೀಪುರ ಮತ್ತು ಕನಕಪುರ ಘಟಕಗಳಲ್ಲಿ ರೇಷ್ಮೆ ದಾರಗಳನ್ನು ಉತ್ಪತ್ತಿ ಮಾಡಲಾಗುತ್ತಿದೆ.

ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಯ ಸ್ಥಾಪನೆಯ ಮುಖ್ಯ ಉದ್ದೇಶ, ರೇಷ್ಮೆ ಮಾರುಕಟ್ಟೆಯಲ್ಲಿ ನೂಲಿನ ಬೆಲೆಯು ಏರುಪೇರಾಗದಂತೆ ನೋಡಿಕೊಂಡು ಬೆಲೆ ಸ್ಥಿರೀಕರಣ ಮಾಡುವುದು, ನೂಲು ಬಿಚ್ಚುವವರ ಹಾಗೂ ರೇಷ್ಮೆ ಬೆಳೆಗಾರರ ಹಿತಾಸಕ್ತಿಯನ್ನು ಕಾಪಾಡುವುದು.

ಇ) ಕೆ.ಎಸ್.ಐ.ಸಿ.ಯ ನಷ್ಟದ ವಿವರಗಳು

		ಲಕ್ಷ ರೂ.ಗಳಲ್ಲಿ
1981-82 (7 ತಿಂಗಳು)	-	15.40
1982-83	-	43.74
1983-84	-	26.86
1984-85	-	277.84
1985-86	-	340.42
1986-87	-	425.91
1987-88	-	376.48
1988-89	-	388.79
1989-90	-	466.64
1990-91	-	347.25

1991-92	-	43.03
1992-93	-	67.81
1993-94	-	27.47

ಕೆ.ಎಸ್.ಎಂ.ಬಿ. ನಷ್ಟದ ವಿವರಗಳು
(ಡಿಸೆಂಬರ್ 1993ರವರೆಗೆ)

1979-80	-	3.01
1986-87	-	22.15
1992-93	-	478.23
1993-94	-	160.00

(ಫೆಬ್ರವರಿ 94ರವರೆಗೆ)

ಈ) ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತವು 1984-85 ರಿಂದಲೂ ನಷ್ಟದಲ್ಲಿರುತ್ತದೆ. ಅತೀ ಹೆಚ್ಚಿನ ಬಂಡವಾಳ ಹೂಡಿಕೆ ಮತ್ತು ಹೆಚ್ಚಿನ ಬಡ್ಡಿ ಪಾವತಿಯು, ನಷ್ಟಕ್ಕೆ ಕಾರಣವಾಗಿರುತ್ತದೆ. ಕಚ್ಚಾ ಸಾಮಾಗ್ರಿಗಳ ಅಭಾವ ಮತ್ತು ಮಾರುಕಟ್ಟೆಯಲ್ಲಾಗುತ್ತಿರುವ ವ್ಯತ್ಯಯದಿಂದಾಗಿ ನಿರ್ಧರಿತ ಮಟ್ಟದಲ್ಲಿ ಗುರಿ ತಲುಪಲು ಸಾಧ್ಯವಾಗುತ್ತಿಲ್ಲ.

ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ನಿಯಮಿತವು

1979-80: ಪ್ರಾರಂಭಿಕ ವರ್ಷ- ಪರಿಮಿತಿಗೊಂಡ ವಹಿವಾಟು.

1986-87 : ಒಟ್ಟು ವಹಿವಾಟಿನಲ್ಲಿ ಇಳಿತ ಹಾಗೂ ಗ್ರಾಹಕರಿಂದ ಅಸಮಾಧಾನಕರ ಹಣ ಮರುಪಾವತಿ ವಿಳಂಬದಿಂದ.

1992-93 : ರೇಷ್ಮೆ ಗೂಡಿಗೆ ತಗುಲಿದ ಅಂಟುಜಾಡ್ಯವಾದ ಎಪಿಲೆಮಿಕ್ ಮತ್ತು ಫೆಬ್ರಿನ್ ಗಂಟುರೋಗದಿಂದ ರೇಷ್ಮೆ ನೂಲಿನ ಉತ್ಪಾದನೆಯಲ್ಲಿ ಉಂಟಾದ ತೀವ್ರ ಕುಸಿತದಿಂದ ರೇಷ್ಮೆ ಮಾರುಕಟ್ಟೆಯಲ್ಲಿ ನೂಲಿನ ಬೆಲೆಯಲ್ಲಿ ವಿಪರೀತ ಏರಿಕೆಯಾಯಿತು.

ತದನಂತರ ಉತ್ತಮ ರೇಷ್ಮೆ ಬೆಳೆಯು ಒಂದು ರೇಷ್ಮೆ ಉತ್ಪಾದನೆಯು ನಿರೀಕ್ಷೆಗೂ ಮಿರಿ ಉತ್ಪಾದನೆಯಾಗಿ ರೇಷ್ಮೆ ನೂಲಿನ ಬೆಲೆ ತೀವ್ರವಾಗಿ ಕುಸಿದಾಗ ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಯು ಪರಿಸ್ಥಿತಿ ಪ್ರತಿಕೂಲವಾಗಿದ್ದರೂ ರೈತರ ಹಾಗೂ ನೂಲು ಬಿಚ್ಚುವವರ ಹಿತ ಕಾಪಾಡುವುದಕ್ಕಾಗಿ ಮತ್ತು ತನ್ನ ಸ್ಥಾಪನೆಯ ಮುಖ್ಯ ಉದ್ದೇಶವಾದ ಬೆಲೆ ಸ್ಥಿರೀಕರಣಕ್ಕಾಗಿ ಬೆಲೆಗಳ ತೀವ್ರ ಕುಸಿತವನ್ನು ತಡೆಯಲು ಬಹುಪಾಲು ರೇಷ್ಮೆಯನ್ನು ಖರೀದಿ ಮಾಡಿತ್ತು.

ಆ ಪರಿಸ್ಥಿತಿಯಲ್ಲಿ ಖರೀದಿ ಮಾಡಿದ ರೇಷ್ಮೆ ನೂಲನ್ನು ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಯು ತೀವ್ರ ಕುಸಿತಗೊಂಡ ಮಾರುಕಟ್ಟೆ ದರಗಳಲ್ಲಿ ಮಾರಾಟ ಮಾಡಿರುವ ಪರಿಣಾಮವಾಗಿ ಮಂಡಳಿಗೆ ನಷ್ಟವುಂಟಾಗಿರುತ್ತದೆ.

ಉ) ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತವು ಈಗ ಇರುವ ನಷ್ಟವನ್ನು ಸರಿಪಡಿಸಿ ಪುನಃ ಶ್ಚೇತನಗೊಳಿಸುವ ಉದ್ದೇಶದಿಂದ ನಿಗಮವು ದೀರ್ಘಾವಧಿ ಸಾಲ ನೀಡಿರುವ ಐಡಿಬಿಐ ಮತ್ತು ಇತರ ಬ್ಯಾಂಕುಗಳ ಮನವಿ ಮಾಡಿಕೊಂಡಿರುತ್ತದೆ. ಈ ಸಂಬಂಧವಾಗಿ ಐಡಿಬಿಐ ವಾಣಿಜ್ಯ ಸಂಸ್ಥೆ ಮತ್ತು ಬ್ಯಾಂಕುಗಳೊಡನೆ ಮಾತುಕತೆ ನಡೆದಿದ್ದು ಸಾಲ ಮರುಪಾವತಿ ಮಾಡುವ ಅವಧಿಯನ್ನು ವಿಸ್ತರಿಸುವುದರ ಜೊತೆಗೆ ಬಡ್ಡಿಯ ದರದಲ್ಲಿ ರಿಯಾಯಿತಿ ತೋರುವುದಾಗಿ ಮಾರ್ಚ್ 1992ರಂದು ಒಪ್ಪಿಕೊಂಡಿರುತ್ತಾರೆ.

ಹಣಕಾಸಿನ ಸಂಸ್ಥೆಯವರ ನಿಗಮದ ನಷ್ಟವನ್ನು ಸರಿಪಡಿಸಲು ಬಡ್ಡಿಯ ದರವನ್ನು ಶೇ.14ರಿಂದ ಶೇ. 11 ರಷ್ಟಕ್ಕೆ ದಿನಾಂಕ : 1-4-1985 ರಿಂದ 31-3-1992 ರವರೆಗೆ ಕಡಿಮೆ ಮಾಡಿರುತ್ತಾರೆ. ಅದೂ ಅಲ್ಲದೆ ಹಣಕಾಸಿನ ಸಂಸ್ಥೆಯವರು ದಿನಾಂಕ : 1-4-1985ರಿಂದ 31-12-1991ರವರೆಗೆ ಬಾಕಿಯಿರುವ ಬಡ್ಡಿಯ ಮೇಲೆ ಶೇ. 11 ರಂತೆ ಲೆಕ್ಕ ಮಾಡಿ ಅದರ ಮೇಲೆ ಶೇ. 8 ರಷ್ಟು ಚಕ್ರಬಡ್ಡಿ ವಿಧಿಸಿರುತ್ತಾರೆ. ಸರ್ಕಾರವು ಮೇಲ್ಕಂಡ ಪುನಃ ಶ್ಚೇತನದ ಅಂಗವಾಗಿ ಈಗಾಗಲೇ 300.00 ಲಕ್ಷ ರೂಪಾಯಿಗಳನ್ನು ಹಣಕಾಸಿನ ಸಂಸ್ಥೆಗಳಿಗೆ ಪಾವತಿ ಮಾಡಿರುತ್ತದೆ.

ಈಗ ಸಂಸ್ಥೆಯ ಕೆಲಸ ನಿರ್ವಹಣೆಯು ಉತ್ತಮಗೊಂಡಿದ್ದು ನಷ್ಟ ಪ್ರಮಾಣವನ್ನು ಕಡಿಮೆ ಮಾಡಲು ಉದ್ದೇಶಿಸಲಾಗಿದೆ. ಹಿಂದಿನ ನಷ್ಟದ ಪ್ರಮಾಣವನ್ನು ಆದಷ್ಟು ಬೇಗ ಕಡಿಮೆಗೊಳಿಸಿ ಸಂಸ್ಥೆಯು ಲಾಭದತ್ತ ಮುನ್ನಡೆಯಲು ಸರ್ವ ಪ್ರಯತ್ನ ಮಾಡಲಾಗುತ್ತಿದೆ.

ಕೆ.ಎಸ್.ಎಂ.ಬಿ. ಬೆಲೆಯಲ್ಲಿ ವಿಪರೀತ ಏರಿಳಿತವನ್ನು ತಡೆಯಲು ಹಾಗೂ ರೈತರ, ನೂಲು ಬಿಚ್ಚುವವರ ಮತ್ತು ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಯ ಹಿತದೃಷ್ಟಿಯಿಂದ ರೇಷ್ಮೆ ನೂಲಿಗೆ ಕನಿಷ್ಠ ಬೆಲೆ ನಿಗಧಿಪಡಿಸುವ ವಿಷಯ ಸರ್ಕಾರ ನಿರ್ಧರಿಸಿದೆ.

ಊ) ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ- ಇಲ್ಲ-

ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ - ಇಲ್ಲ -

ನೇಸರ್ಗಿಯಲ್ಲಿ ಸರ್ಕಾರಿ ಐ.ಟಿ.ಐ. ಪ್ರಾರಂಭಿಸುವ ಬಗ್ಗೆ.

639 Ē ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಧಾನ ಸಭೆಯಲ್ಲಿ ಆಶ್ವಾಸನೆ ನೀಡಿದ ಪ್ರಕಾರ ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ನೈಸರ್ಗಿ ಗ್ರಾಮದಲ್ಲಿ ಸರ್ಕಾರಿ ಐ.ಟಿ.ಐ. ಕಾಲೇಜನ್ನು ಪ್ರಾರಂಭಿಸಲು ಸರ್ಕಾರದವರು ಯಾವ ಕ್ರಮ ಕೈಗೊಂಡಿರುವರು;

ಆ) ಸಾರ್ವಜನಿಕರು ಕಟ್ಟಡವನ್ನು ಒದಗಿಸಲು ಮುಂದೆ ಬಂದಿದ್ದರೂ ಕೂಡ ಇಮುವರೆಗೂ ಆ ಕಾಲೇಜನ್ನು ಏಕೆ ಪ್ರಾರಂಭಿಸಿರುವುದಿಲ್ಲ;

ಇ) ಮಲೆನಾಡ ಅಭಿವೃದ್ಧಿ ಯೋಜನೆಯಲ್ಲಿ ಆ ಕೆಲಸಕ್ಕೆ ಹಣ ಒದಗಿಸಲು ಸಾಧ್ಯವಾಗದೇ ಇರುವುದರಿಂದ ಶಿಕ್ಷಣ ಇಲಾಖೆಯವರು ಹಣ ಒದಗಿಸಿ ಆ ಕಾಲೇಜನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳುವರೇ?

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾರ್ಮಿಕ ಸಚಿವರು) :

ಅ) ಆ ರೀತಿ ಆಶ್ವಾಸನೆ ನೀಡಿಲ್ಲ ಆದರೂ ಇದನ್ನು ಪರಿಶೀಲಿಸಲಾಗುವುದು.

ಆ) ಉದ್ಭವಿಸುವುದಿಲ್ಲ.

ಇ) ಪರಿಶೀಲಿಸಲಾಗುವುದು.

ಮುಲ್ಕಿಗೆ ಕುಡಿಯುವ ನೀರು ಸರಬರಾಜು ಯೋಜನೆ

568 - ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದರೆ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಲ್ಕಿಯ ಕುಡಿಯುವ ನೀರಿನ ಪೂರೈಕೆ ಬಗ್ಗೆ ಸರ್ಕಾರ ಏನು ಯೋಜನೆ ಕೈಗೊಂಡಿದೆ.

ಆ) ಅದಕ್ಕೆ ಅಂದಾಜು ಎಷ್ಟು ಖರ್ಚು ತಗಲುವುದು.

ಇ) ಕಳೆದ ನಾಲ್ಕು ವರ್ಷಗಳಲ್ಲಿ ಸರ್ಕಾರ ಮಾಡಿರುವ ಖರ್ಚು ಹಾಗೂ ಸಾಧನೆಗಳೇನು.

ಈ) ಅಲ್ಲಿಯ ಕುಡಿಯುವ ನೀರಿನ ಕೊರತೆಯನ್ನು ಸರ್ಕಾರ ಯಾವ ರೀತಿಯಲ್ಲಿ ನೀಗಿಸುವುದು.

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು) :

ಅ) ಮುಲ್ಕಿ ಪಟ್ಟಣದ ಕುಡಿಯುವ ನೀರಿನ ಅಭಿವೃದ್ಧಿ ಯೋಜನೆಯು ಸರ್ಕಾರಿ ಆದೇಶ ಸಂಖ್ಯೆ : ಹೆಚ್ಯುಡಿ:81: ಯುಡಬ್ಲ್ಯೂಎಸ್ 90 ದಿನಾಂಕ: 14-3-91ರಲ್ಲಿ ರೂ. 10.00 ಲಕ್ಷಗಳಿಗೆ ಮಂಜೂರಾತಿ ನೀಡಿದೆ.

ಆ) ಜನವರಿ 1994ರ ಅಂತ್ಯದವರೆಗೆ ಈ ಯೋಜನೆಗೆ ರೂ. 10.63 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪರಿಷ್ಕೃತ ಅಂದಾಜು ರೂ. 25.00 ಲಕ್ಷಗಳು ಆಗುತ್ತದೆ.

ಇ) ಜನವರಿ 1994 ಅಂತ್ಯದ ವೇಳೆಗೆ ಈ ಯೋಜನೆಗೆ ರೂ. 10.63 ಲಕ್ಷಗಳನ್ನು ವೆಚ್ಚಮಾಡಲಾಗಿದೆ. ವಿತರಣಾ ಕೊಳವೆಗಳನ್ನು ಹಾಕುವುದು, ಸಾರ್ವಜನಿಕ ನಲ್ಲಿಗಳು ಅಳವಡಿಸುವ ಕಾರ್ಯ ಸಂಪೂರ್ಣಗೊಂಡಿದೆ.

ಈ) ಈ ಮೇಲಿನ ಯೋಜನೆಯಲ್ಲಿನ ಕೆಲಸಗಳು ಸಂಪೂರ್ಣಗೊಂಡು, 4-2-93ರಲ್ಲಿ ಚಾಲು ಮಾಡಲಾಗಿದೆ. ಮೇಲಿನ ಯೋಜನೆ ಕೆಲಸಗಳಲ್ಲದೇ ಮುಲ್ಕಿ ಪಟ್ಟಣದ ಕುಡಿಯುವ ನೀರಿನ ಕೊರತೆಯನ್ನು ನೀಗಿಸಲು ಮತ್ತೊಂದು 9.14 ಮಿ. ವ್ಯಾಸ ಹಾಗೂ 9-14 ಮಿ. ಆಳದ ತೆರೆದ ಬಾವಿಯನ್ನು 2.20 ಲಕ್ಷ ರೂ. ಅಂದಾಜಿನಲ್ಲಿ ಹೇಜಮಾಡಿ ಹತ್ತಿರ ತೋಡಲಾಗಿದ್ದು ನೀರನ್ನು ಪುರಸಭೆಯ ಹತ್ತಿರ ಇರುವ ಮೇಲ್ಮಟ್ಟದ ಜಲಸಂಗ್ರಾಹಾಗಾರಕ್ಕೆ ಪಂಪು ಮಾಡಲು 110 ಮಿ.ಮಿ. ವ್ಯಾಸದ ಪಿವಿಸಿ ಕೊಳವೆ ಮಾರ್ಗದ ಕೆಲಸವನ್ನು ಸಧ್ಯದಲ್ಲೇ ಪೂರ್ಣಗೊಳಿಸಲಾಗುವುದು.

ಕರ್ನಾಟಕ ಗೃಹ ಮಂಡಳಿಯಿಂದ ಮನೆಗಳ ಹಸ್ತಾಂತರದಲ್ಲಿ ವಿಳಂಬ

622 - ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಗೃಹ ಮಂಡಳಿಯ ಅತಿ ದೊಡ್ಡ ಬಡಾವಣೆಯಾದ ಶಿವಮೊಗ್ಗ, ಕಲ್ಲಹಳ್ಳಿ ಎರಡನೇ ಹಂತದ 1250 ಮನೆಗಳು ಶೇಕಡಾ 90 ಭಾಗ ಕೆಲಸಗಳು ಮುಗಿದಿದ್ದು, ಇನ್ನೂ 10 ಭಾಗ ಕೆಲಸಗಳನ್ನು ಎರಡು ವರ್ಷದಿಂದ ಪೂರ್ಣಗೊಳಿಸದೇ ಹಂಚಿಕೆದಾರರಿಗೆ ಹಸ್ತಾಂತರ ಮಾಡದಿರುವುದಕ್ಕೆ ಕಾರಣವೇನು?

ಆ) ಬಾಕಿ ಉಳಿದ ಶೇಕಡಾ 10 ಭಾಗ ಕೆಲಸಕಾರ್ಯಗಳಿಗೆ ಎಷ್ಟು ಹಣ ಬೇಕಾಗುತ್ತದೆ.

ಇ) ಯಾವಾಗ ಪೂರ್ಣ ನಾಗರೀಕ ಸೌಲಭ್ಯಗಳೊಂದಿಗೆ ಮನೆಗಳನ್ನು ಗ್ರಾಹಕರಿಗೆ ಹಸ್ತಾಂತರಿಸಲಾಗುವುದು?

ಶ್ರೀ ಗೋಪಿನಾಥ್ ಆರ್. ಸಾಂಡ್ರ (ವಸತಿ ಸಚಿವರು) :

ಅ) ಒಳಚರಂಡಿ ವ್ಯವಸ್ಥೆ ವಿದ್ಯುದೀಕರಣದ ಕೆಲಸಗಳು ಪೂರ್ಣವಾಗುವ ಹಂತದಲ್ಲಿರುವುದರಿಂದ ಹಂಚಿಕೆದಾರರಿಗೆ ಹಸ್ತಾಂತರ ಮಾಡಿರುವುದಿಲ್ಲ.

ಆ) ಬಾಕಿ ಇರುವ ಕಾಮಗಾರಿಯನ್ನು ಪೂರ್ಣಗೊಳಿಸಲು ಸುಮಾರು 177 ಲಕ್ಷ ರೂಪಾಯಿಗಳು ಬೇಕಾಗುತ್ತದೆ.

ಇ) ಉಳಿದಿರುವ ನಾಗರೀಕ ಸೌಲಭ್ಯಗಳ ಕೆಲಸಗಳು ಪೂರ್ಣಗೊಂಡ ಕೂಡಲೇ ಮನೆಗಳನ್ನು ಗ್ರಾಹಕರಿಗೆ ಹಸ್ತಾಂತರಿಸಲಾಗುವುದು.

ಸುಬ್ರಮಣ್ಯ ನಗರ ಹಾಗೂ ಮಲ್ಲೇಶ್ವರಂ ನಡುವೆ ಹೋಗುವ ವಿದ್ಯಾರ್ಥಿಗಳಿಗೆ ಆಗಿರುವ ತೊಂದರೆ.

437 - ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸುಬ್ರಮಣ್ಯನಗರ 13ನೇ ಅಡ್ಡರಸ್ತೆಯಿಂದ ಮಲ್ಲೇಶ್ವರಂಗೆ ಹೋಗುವಲ್ಲಿ ಶಾಲಾ ವಿದ್ಯಾರ್ಥಿಗಳಿಗೆ ತೊಂದರೆಯುಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಆ ಕುರಿತಾಗಿ ಜರುಗಿಸಿದ ಸಕಾಲಿಕ ಕ್ರಮಗಳೇನು?

ಇ) ಇಲ್ಲವಾದಲ್ಲಿ ತೊಂದರೆಗಳನ್ನು ನಿವಾರಿಸದಿರಲು ಕಾರಣವೇನು?

ಈ) ಈ ಕುರಿತಾಗಿ ಯಾವಾಗ ಕ್ರಮಗಳನ್ನು ಕೈಗೊಂಡು ಪೂರೈಸಲಾಗುವುದು?

ಉ) ಈಗಾಗಲೇ ಕ್ರಮ ಪ್ರಾರಂಭವಾಗಿದ್ದಲ್ಲಿ ಅದನ್ನು ಎಷ್ಟು ಸಮಯದೊಳಗಾಗಿ ಮುಗಿಸಲಾಗುವುದು?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು.) :

ಅ) ಬಂದಿದೆ.

ಈ ಸ್ಥಳದಲ್ಲಿ ಪಾದಚಾರಿ ಕೆಳಸೇತುವೆ ಕಟ್ಟಲು ಸಾಧ್ಯತೆ ಇದ್ದು ಈ ಬಗ್ಗೆ ಸರ್ವೆ ಕಾರ್ಯವನ್ನು ಮಾಡಲಾಗಿದೆ. ಹಾಗೂ ಈ ಬಗ್ಗೆ ರೈಲ್ವೆ ಇಲಾಖೆಯವರ ಜತೆ ಚರ್ಚಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ರಾಜ್ಯದ ಸಕ್ಕರೆ ಕಾರ್ಖಾನೆಗಳು.

617 - ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಹಕಾರ ಮತ್ತು ಖಾಸಗಿ ವಲಯಗಳಲ್ಲಿ ಮಂಜೂರ್ಮಾಡಿರುವ ಕಾರ್ಖಾನೆಗಳ ಸಂಖ್ಯೆ ಎಷ್ಟು?

ಆ) ರಾಜ್ಯದಲ್ಲಿ ರೈತರು ಬೆಳೆಯುವ ಒಟ್ಟು ಕಬ್ಬಿನ ಪ್ರಮಾಣ ಎಷ್ಟು?

ಇ) ಆ ಪ್ರಮಾಣಕ್ಕೆ ತಕ್ಕಂತೆ ಕಬ್ಬನ್ನು ಅರೆಯಲು ಸಾಕಷ್ಟು ಸಕ್ಕರೆ ಕಾರ್ಖಾನೆಗಳು ಇವೆಯೇ?

ಈ) ಇಲ್ಲದಿದ್ದಲ್ಲಿ ಬೆಲ್ಲ ಮಾಡುವಲ್ಲಿ ರೈತರಿಗೆ ಸಹಾಯ ಮಾಡಲು ಸರಕಾರವು ಸಾಕಷ್ಟು ಸಕ್ಕರೆ ಕಾರ್ಖಾನೆಗಳನ್ನು ತೆರೆಯುವ ಕ್ರಮವನ್ನು ತೆಗೆದುಕೊಳ್ಳುವುದೇ?

ಡಾ: ಹೆಗ್ಗಪ್ಪ ಲಮಾಣಿ (ಸಕ್ಕರೆ ಸಚಿವರು.) :

ಅ) ಕೇಂದ್ರ ಸರ್ಕಾರವು ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಯಾವ ಹೊಸ ಸಕ್ಕರೆ ಕಾರ್ಖಾನೆಗಳ ಸ್ಥಾಪನೆಗೆ ಅನುಮತಿ ನೀಡಿರುವುದಿಲ್ಲ. ಆದರೆ ರಾಜ್ಯ ಸರ್ಕಾರವು ರಾಜ್ಯದಲ್ಲಿ ಇನ್ನೂ 14 ಸಕ್ಕರೆ ಕಾರ್ಖಾನೆಗಳ ಸ್ಥಾಪನೆಗಾಗಿ ಅನುಮತಿ ಪತ್ರ (ಸಹಕಾರಿ ವಲಯದಲ್ಲಿ ಆರು ಹಾಗೂ ಖಾಸಗಿ ವಲಯದಲ್ಲಿ ಎಂಟು) ನೀಡಬೇಕೆಂದು ಭಾರತ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತದೆ. ಈ ಪೈಕಿ 7 ಕಾರ್ಖಾನೆಗಳಿಗೆ ಅನುಮತಿ ಪತ್ರ ನೀಡಲು ಕೇಂದ್ರ ಪರಿಶೀಲನಾ ಸಮಿತಿ ಒಪ್ಪಿರುವುದಾಗಿ ತಿಳಿದುಬಂದಿದೆ.

ಆ) 1993-94ರ ಸಾಲಿಗೆ ಸಂಬಂಧಿಸಿದಂತೆ ರಾಜ್ಯದಲ್ಲಿ ಸುಮಾರು 175.49 ಲಕ್ಷ ಮೆ.ಟನ್ ಕಬ್ಬು ಉತ್ಪಾದನಾದನೆಯಾಗಿರುತ್ತದೆ.

ಇ) ಪ್ರಸ್ತುತ ರಾಜ್ಯದಲ್ಲಿ ರೈತರು ಬೆಳೆಯುವ ಎಲ್ಲಾ ಕಬ್ಬನ್ನು ಅರೆಯಲು ಸಾಕಾಗುವಷ್ಟು ಸಕ್ಕರೆ ಕಾರ್ಖಾನೆಗಳು ಇರುವುದಿಲ್ಲ. ಈ ಕಾರಣದಿಂದಲೇ ಹೊಸ

ಸಕ್ಕರೆ ಕಾರ್ಖಾನೆಗಳ ಸ್ಥಾಪನೆಗೆ ಹಾಗೂ ಕೆಲವು ಕಾರ್ಖಾನೆಗಳ ಹಾಲಿ ಇರುವ ಸಾಮರ್ಥ್ಯ ವಿಸ್ತರಣೆಗೆ ಸರ್ಕಾರವು ಕ್ರಮ ಕೈಗೊಂಡಿದೆ.

ಈ) ಬೆಲ್ಲದ ಬೆಲೆಯಲ್ಲಿ ಸಾಮಾನ್ಯವಾಗಿ ಏರಿಕೆ ಸ್ಥಿರವಾಗಿರುವುದಿಲ್ಲ. ಬೆಲ್ಲದ ಬೆಲೆಯಲ್ಲಿ ಏರು ಪೇರು ಉಂಟಾಗುತ್ತಿರುತ್ತದೆ. ಆಗ ಕಬ್ಬಿನ ಗಾಣದ ಮಾಲೀಕರು ಕೊಡುವ ಕಬ್ಬಿನ ಬೆಲೆಯಲ್ಲೂ ಏರು ಪೇರಾಗುತ್ತದೆ. ಬೆಲ್ಲದ ಬೆಲೆ ಕುಸಿದಾಗ ಕಬ್ಬಿನ ಗಾಣಗಳು ಸ್ಥಗಿತಗೊಂಡು ರೈತರು ಉತ್ಪಾದಿಸಿದ ಕಬ್ಬನ್ನು ಅರೆಯಲು ಸಾಕಷ್ಟು ವ್ಯವಸ್ಥೆ ಇಲ್ಲದಂತಹ ಪರಿಸ್ಥಿತಿ ಉಂಟಾಗುತ್ತದೆ. 1990-91 ಮತ್ತು 1991-92ನೇ ಸಾಲುಗಳಲ್ಲಿ ಈ ಅನುಭವ ರಾಜ್ಯದಲ್ಲಿ ಉಂಟಾಗಿರುತ್ತದೆ. ಅಲ್ಲದೆ, ಕಬ್ಬಿನ ರಸ ಸಕ್ಕರೆ ಕಾರ್ಖಾನೆಗಳಲ್ಲಿ ಕಬ್ಬಿನ ಗಾಣಗಳಿಗಿಂತ ಬಹಳ ಉತ್ತಮವಾಗಿರುತ್ತದೆ. ರೈತರು ಬೆಳೆದ ಕಬ್ಬನ್ನು ಸಕ್ಕರೆ ಕಾರ್ಖಾನೆಗಳ ಮೂಲಕ ಅರೆಯುವಂತಾಗುವ ಒಂದು ಶಾಶ್ವತ ವ್ಯವಸ್ಥೆ ಏರ್ಪಾಟು ಮಾಡುವುದು ಮತ್ತು ಆ ನಿಟ್ಟಿನಲ್ಲಿ ಪ್ರೋತ್ಸಾಹ ನೀಡುವುದು ರೈತರ, ರಾಜ್ಯದ ಮತ್ತು ರಾಷ್ಟ್ರದ ಹಿತದೃಷ್ಟಿಯಿಂದ ಒಳ್ಳೆಯದಾಗಿರುತ್ತದೆ.

ಮುಳಬಾಗಿಲು ಟೌನ್ನಲ್ಲಿ ಎಸ್.ಸಿ.ಕಾಲೇಜು ವಿದ್ಯಾರ್ಥಿನಿಲಯ.

714 - ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಲು) : ಮಾನ್ಯ ಸಮಾಜ ಕಲ್ಯಾಣ ಹಾಗೂ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ. *ಮುಳಬಾಗಲು ಪಟ್ಟಣದಲ್ಲಿ ಹರಿಜನ ಗಿರಿಜನ ಕಾಲೇಜು ವಿದ್ಯಾರ್ಥಿನಿಲಯ ಕಟ್ಟಲು ಯಾವಾಗ ಪ್ರಾರಂಭಿಸಲಾಯಿತು.*

ಆ. *ಆದರ ಒಟ್ಟು ಅಂದಾಜು ವೆಚ್ಚ ಎಷ್ಟು ಮತ್ತು ಒಟ್ಟು ಎಷ್ಟು ಕಟ್ಟಡಗಳನ್ನು ಕಟ್ಟಲಾಗುವುದು.*

ಇ. *ಇಷ್ಟು ವರ್ಷ ಆದರೂ ಮಂಜೂರಾತಿ ಕೊಡಲು ನಿಧಾನವಾಗಿರುವುದಕ್ಕೆ ಕಾರಣಗಳೇನು.*

ಈ. *ತಾಲ್ಲೂಕು ಸಮಿತಿ ಮತ್ತು ಜಿಲ್ಲಾ ಪರಿಷತ್ತಿನ ಹಣದಿಂದ ಆ ಕಟ್ಟಡ ಕಟ್ಟಲು ಪ್ರಾರಂಭ ಮಾಡಲು ಅನುಮತಿ ಕೊಡಲು ಇರುವ ತೊಂದರೆಗಳೇನು.*

ಉ. *ಕನಿಷ್ಠ ಮೊದಲನೆಯ ಅಂತಸ್ತನ್ನಾದರೂ ಕಟ್ಟಲು ಅನುಮತಿ ನೀಡಲಾಗುವುದೇ ?*

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಮತ್ತು ಕಂದಾಯ ಸಚಿವರು) :

ಅ. ವಿದ್ಯಾರ್ಥಿನಿಲಯದ ಕಟ್ಟಡ ಕಾಮಗಾರಿ ಇನ್ನೂ ಪ್ರಾರಂಭಿಸಿರುವುದಿಲ್ಲ.

ಆ. ಸದರಿ ವಿದ್ಯಾರ್ಥಿನಿಲಯ ಕಟ್ಟಡದ ಅಂದಾಜು ವೆಚ್ಚ ರೂ. 30.00 ಲಕ್ಷ. ಒಂದು ಕಟ್ಟಡ ಕಟ್ಟಲಾಗುವುದು.

ಇ. ಸದರಿ ವಿದ್ಯಾರ್ಥಿನಿಲಯದ ಕಟ್ಟಡ ನಿರ್ಮಾಣವನ್ನು ಜಿಲ್ಲಾ ಪಂಚಾಯತ್ ವತಿಯಿಂದ ಕಟ್ಟುವ ಷರತ್ತಿನ ಮೇರೆಗೆ ಸರ್ಕಾರಿ ಆದೇಶ ಸಂಖ್ಯೆ: ಎಸ್ಡಬ್ಲ್ಯೂಎಲ್. 396 ಎಸ್ಇಡಬ್ಲ್ಯೂ 90 ದಿ. 12-2-92ರಲ್ಲಿ ರೂ. 25 ಲಕ್ಷಗಳ ಅಂದಾಜಿಗೆ ಆಡಳಿತಾತ್ಮಕ ಮಂಜೂರಾತಿ ನೀಡಿತ್ತು. ಆದರೆ 1991-92 ಮತ್ತು 92-93ನೇ ಸಾಲಿನ ಜಿಲ್ಲಾ ಆಯವ್ಯಯದಲ್ಲಿ ಜಿಲ್ಲಾ ಪರಿಷತ್ತಿನವರು ಈ ವಿದ್ಯಾರ್ಥಿನಿಲಯದ ನಿರ್ಮಾಣಕ್ಕಾಗಿ ಹಣ ಒದಗಿಸಿಕೊಳ್ಳದಿದ್ದುದೇ ನಿಧಾನಕ್ಕೆ ಕಾರಣವಾಗಿದೆ.

ಈ) ಮತ್ತು ಉ) ಯಾವುದೇ ತೊಂದರೆ ಇರುವುದಿಲ್ಲ. ಸದರಿ ಕಟ್ಟಡದ ನಿರ್ಮಾಣಕ್ಕಾಗಿ ಜಿಲ್ಲಾ ಪರಿಷತ್ತು ಕಾಲು ಭಾಗದ ಹಣವನ್ನು ಒದಗಿಸಿಕೊಂಡಿರುವುದರಿಂದ 30.00 ಲಕ್ಷ ರೂ.ಗಳ ಪರಿಷ್ಕೃತ ವೆಚ್ಚಕ್ಕೆ ಆಡಳಿತಾತ್ಮಕ ಮಂಜೂರಾತಿ ನೀಡುವಂತೆ ಅವರಿಂದ ಬಂದ ಪ್ರಸ್ತಾವನೆಯನ್ನು ಪರಿಶೀಲಿಸಿ ದಿನಾಂಕ 22-3-94ರಂದು ಸರ್ಕಾರ ಆಡಳಿತಾತ್ಮಕ ಮಂಜೂರಾತಿಯನ್ನು ಸರ್ಕಾರಿ ಆದೇಶ ಸಂಖ್ಯೆ ಸಕಇ 321 ಪಕವಿ 91ರಲ್ಲಿ ಈಗಾಗಲೇ ನೀಡಲಾಗಿದೆ.

ರೈತರ ಜಮೀನು ಬೆಲೆ ನಿಗಧಿಪಡಿಸಲು ಸರ್ಕಾರ ರಚಿಸಿರುವ ತಾಲ್ಲೂಕು ಮಟ್ಟದ ಸಮಿತಿ ರಚನೆ.

643 - ಶ್ರೀ ಎ.ವಿ. ಉಮಾಪತಿ (ಹೊಳಲ್ಕೆರೆ) : ಮಾನ್ಯ ಕಂದಾಯ ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ರೈತರ ಜಮೀನಿಗೆ ಬೆಲೆ ನಿಗಧಿಪಡಿಸಲು ಸರ್ಕಾರ ತಾಲ್ಲೂಕಿನ ಮಟ್ಟದಲ್ಲಿ ಸಮಿತಿ ರಚಿಸಿರುವ ಸಮಿತಿಯಲ್ಲಿ ಕೇವಲ ಸರ್ಕಾರಿ ಅಧಿಕಾರಿಗಳೇ ಸದಸ್ಯರಾಗಿರುವುದರಿಂದ ಜಮೀನು ಬೆಲೆ ನಿಗಧಿಪಡಿಸುವಾಗ ತಾರತಮ್ಯ ಉಂಟಾಗುವ ಸಂಭವವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

(ಆ) ಹಾಗಿದ್ದಲ್ಲಿ, ಸದರಿ ಸಮಿತಿಗೆ ಖಾಸಗಿಯ ಎರಡು ಸದಸ್ಯರನ್ನು ನೇಮಿಸುವುದು ಸಾಧ್ಯವೆ?

ಶ್ರೀ ಧರ್ಮಸಿಂಗ್ (ಕಂದಾಯ ಮತ್ತು ಸಮಾಜ ಕಲ್ಯಾಣ ಸಚಿವರು.) :

(ಅ) ರೈತರ ಜಮೀನಿಗೆ ಮಾತ್ರವೇ ಬೆಲೆ ನಿಗಧಿಪಡಿಸಲು ತಾಲ್ಲೂಕು ಮಟ್ಟದ ಸಮಿತಿಗಳನ್ನು ರಚಿಸಿರುವುದಿಲ್ಲ, ರಾಜ್ಯದಲ್ಲಿರುವ ಎಲ್ಲಾ ಸ್ಥಿರಾಸ್ತಿಗಳ ಸರಿಯಾದ ಬೆಲೆಯನ್ನು ನಿಗಧಿಪಡಿಸಲು ಆಸ್ತಿಯ ನಿಜವಾದ ಮಾರುಕಟ್ಟೆ ಅಂದಾಜು ಬೆಲೆಯನ್ನು ಉಪ-ನೋಂದಣಿ ಕಛೇರಿಗಳಿಗೆ ಸಂಬಂಧಪಟ್ಟಂತೆ, ಆ ಪ್ರದೇಶಗಳಿಗೆ ಸಂಬಂಧಿಸಿದಂತೆ ನೋಂದಾಯಿಸಿರುವ ದಸ್ತಾವೇಜುಗಳ ಆಧಾರದ ಮೇಲೆ ಸ್ಥಿರಾಸ್ತಿಗಳ ಬೆಲೆ ನಿಗಧಿಪಡಿಸಲು ಸಮಿತಿಗಳನ್ನು ರಚಿಸಲಾಗಿದೆ.

ಲಭ್ಯವಿರುವ ಅಂಕಿ-ಅಂಶಗಳ ಆಧಾರದ ಮೇಲೆ ಆಸ್ತಿಗಳ ಮೌಲ್ಯ ನಿರ್ಧರಿಸುವುದರಿಂದ ಯಾವುದೇ ರೀತಿಯ ತಾರತಮ್ಯ ಉಂಟಾಗುವ ಸಂಭವವಿರುವುದಿಲ್ಲ.

(ಆ) ಉದ್ಭವಿಸುವುದಿಲ್ಲ.

ತಾಲ್ಲೋಕು ಮಟ್ಟದ ಅಕ್ರಮ-ಸಕ್ರಮ ಸಮಿತಿಗಳು.

13 - ಶ್ರೀ ಎಸ್. ಚಿಕ್ಕಮಾಧು (ಹುಣಸೂರು) : ಮಾನ್ಯ ಸಮಾಜ ಕಲ್ಯಾಣ ಮತ್ತು ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರದವರು ಈಗಾಗಲೇ ರಚಿಸಿರುವ ತಾಲ್ಲೂಕು ಮಟ್ಟದ "ಅಕ್ರಮ ಸಕ್ರಮ" ಸಮಿತಿಗಳ ಮೂಲಕ ರಾಜ್ಯದಲ್ಲಿ ಇದುವರೆಗೆ ಗುರುತಿಸಿರುವ ಒಟ್ಟು ಜಮೀನಿನ ಪ್ರಮಾಣವೆಷ್ಟು?

ಆ) ಅದರಲ್ಲಿ ಈಗಾಗಲೇ ಸಕ್ರಮಗೊಂಡಿರುವ ಭೂಮಿಯ ಪ್ರಮಾಣವೆಷ್ಟು ಮತ್ತು ಆ ರೀತಿ ಸಕ್ರಮಗೊಂಡ ಜಮೀನುಗಳಿಂದ "ಕಿಮ್ಮತ್ತು" ರೂಪದಲ್ಲಿ ಸರ್ಕಾರಕ್ಕೆ ಈಗಾಗಲೇ ಸಂದಾಯವಾಗಿರುವ ಮೊಬಲಗೆಷ್ಟು?

ಇ) ಈ ಬಗ್ಗೆ ಸರ್ಕಾರದ ಹಾಲಿ ನಿಯಮದಂತೆ ಈಗಾಗಲೇ ಸಕ್ರಮಗೊಂಡಿರುವ ಪ್ರತಿ ಒಂದು ಎಕರೆ ಜಮೀನಿಗೆ ಐದು ರೂ. ಕಂದಾಯದಂತೆ ಅದರ ಎರಡು ನೂರು ಪಟ್ಟು ಕಿಮ್ಮತ್ತು ಅಂದರೆ ಎಕರೆ ಒಂದಕ್ಕೆ ಅಂದಾಜು ಒಂದು ಸಾವಿರ ರೂ.ಗಳಿಗೂ ಮಿಗಿಲಾಗಿ ಈ ಕಿಮ್ಮತ್ತು ರೂಪದಲ್ಲಿ ವಸೂಲಿ ಮಾಡುತ್ತಿರುವುದು ದುರ್ಬಲ ವರ್ಗದ ವ್ಯವಸಾಯಗಾರರಿಗೆ ಸದರಿ ಹಣವನ್ನು ತುಂಬಲು ಆರ್ಥಿಕ ಶಕ್ತಿ ಇಲ್ಲದೆ ತೊಂದರೆಗೊಳಗಾಗಿರುವ ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರ ಈಗಾಗಲೇ ಕೈಗೊಂಡಿರುವ ಕ್ರಮಗಳೇನು?

ಉ) ಇಲ್ಲದಿದ್ದಲ್ಲಿ ಇನ್ನು ಮುಂದೆಯಾದರೂ ಈ ದುರ್ಬಲವರ್ಗದ ರೈತರ ಹಿತದೃಷ್ಟಿಯಿಂದ ಈ ಬಗ್ಗೆ ಕೈಕೊಳ್ಳಬಹುದಾದ ತುರ್ತು ರೀತಿಯ ನೀತಿ ನಿಯಮಗಳೇನು?

ಶ್ರೀ ಧರ್ಮಸಿಂಗ್ (ಕಂದಾಯ ಮತ್ತು ಸಮಾಜ ಕಲ್ಯಾಣ ಸಚಿವರು.) :

ಅ) 25,80,214 ಎಕರೆ ಜಮೀನನ್ನು ಸಕ್ರಮಗೊಳಿಸಲು ಅರ್ಜಿಗಳು ಬಂದಿರುತ್ತವೆ.

ಆ) 1,04,021 ಎಕರೆಗಳು ಸಕ್ರಮಗೊಳಿಸಿರುವ ವಿಸ್ತೀರ್ಣ. ರೂ. 82,82,932-00 ಸಂದಾಯವಾದ ಹಣ.

ಇ) ಕರ್ನಾಟಕ ಭೂ ಕಂದಾಯದ ಹಾಲಿ ನಿಯಮ 108 (ಜಿ)ಯಗಳ ಪ್ರಕಾರ ಭೂಮಿಯ ಬೆಲೆಯನ್ನು ಭೂ ಕಂದಾಯದ ಎರಡು ನೂರುಪಟ್ಟು ವಸೂಲು ಮಾಡಲಾಗುತ್ತಿದೆ.

ಈ) ಈ ಬಗ್ಗೆ ಹಲವಾರು ಶಾಸಕರುಗಳಿಂದ ವ್ಯಕ್ತವಾಗಿರುವ ಅಭಿಪ್ರಾಯದಂತೆ, ಈ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಉ) ಈಗ ಒದಗಿಸಿರುವ ಉತ್ತರದಿಂದ ಉದ್ಭವಿಸುವುದಿಲ್ಲ.

ಬಸವ ಕಲ್ಯಾಣ ಅಭಿವೃದ್ಧಿ ಪ್ರಾಧಿಕಾರ ರಚನೆ.

647 - ಶ್ರೀ ಬಸವರಾಜ ಪಾಟೀಲ್ ಅಟ್ಟೂರ್, (ಬಸವ ಕಲ್ಯಾಣ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯ ಬಸವಕಲ್ಯಾಣದ ಜನಸಂಖ್ಯೆ ಎಷ್ಟು?

ಆ) ಪ್ರಸಿದ್ಧ ಪ್ರವಾಸಿ ಹಾಗೂ ಯಾತ್ರಾಸ್ಥಳವಾದ ಬಸವ ಕಲ್ಯಾಣ ಪಟ್ಟಣವು ದಿನೇ ದಿನೇ ಬೆಳೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಬಸವಕಲ್ಯಾಣ ಅಭಿವೃದ್ಧಿ ಪ್ರಾಧಿಕಾರ ರಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಈ) ಹಾಗಿದ್ದಲ್ಲಿ, ಯಾವಾಗ ಆ ಪ್ರಾಧಿಕಾರವನ್ನು ರಚಿಸಲಾಗುವುದು?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು.)

ಅ) 42,712 (1991 ಜನಗಣತಿ ಪ್ರಕಾರ.)

ಆ) ಹೌದು.

ಇ) ಈ ಪ್ರಸ್ತಾವನೆ ಸಧ್ಯಕ್ಕೆ ಸರ್ಕಾರದ ಮುಂದೆ ಇಲ್ಲ.

ಈ) ಉದ್ಭವಿಸುವುದಿಲ್ಲ.

ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ತಾಲ್ಲೂಕು ಹೊಸಕೆರೆ ಸರ್ವೆ ನಂ. 88ರ ಬಗ್ಗೆ.

54 - ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : ಮಾನ್ಯ ಸಮಾಜ ಕಲ್ಯಾಣ ಮತ್ತು ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ತಾಲ್ಲೂಕು ಗೋಣಿಬೀಡು ಹೋಬಳಿ ಹೊಸಕೆರೆ ಗ್ರಾಮದ ಸರ್ವೆ ನಂ.88 ರ ಸರ್ಕಾರಿ ಕಾಡಿನಲ್ಲಿ 50 ಎಕರೆ ಪ್ರದೇಶವನ್ನು ಅರಣ್ಯ ಇಲಾಖೆಯವರು ಅಕ್ರಮವಾಗಿ ಪರಬಾರೆ ಮಾಡಿರುವುದರಿಂದ ಸರ್ಕಾರಕ್ಕೆ 30 ಲಕ್ಷ ರೂಪಾಯಿ ನಷ್ಟವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ, ಆ ಬಗ್ಗೆ ತೆಗೆದುಕೊಂಡ ಕ್ರಮವೇನು?

ಶ್ರೀ ಧರ್ಮಸಿಂಗ್ (ಕಂದಾಯ ಮತ್ತು ಸಮಾಜ ಕಲ್ಯಾಣ ಸಚಿವರು.) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಹರಿಶ್ಚಂದ್ರ ಘಾಟ್‌ನಲ್ಲಿರುವ ವಿದ್ಯುತ್ ಚಿತಾಗಾರ ಕುರಿತು

347 - ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹರಿಶ್ಚಂದ್ರ ಘಾಟ್ನಲ್ಲಿರುವ ವಿದ್ಯುತ್ ಚಿತಾಗಾರವನ್ನು ಯಾವಾಗ ಪ್ರಾರಂಭಿಸಲಾಯಿತು?*

ಆ) *ಶವವನ್ನು ಭಸ್ಮ ಮಾಡುವ ಆ ಯಂತ್ರದ ಆಯಸ್ಸು ಎಷ್ಟು?*

ಇ) *ಅಲ್ಲಿನ ಚಿತಾಗಾರದಿಂದ ಹೊರಬರುತ್ತಿರುವ ದುರ್ವಾಸನೆಯಿಂದ ಅಲ್ಲಿನ ಸುತ್ತಮುತ್ತಲ ನಿವಾಸಿಗಳ ಆರೋಗ್ಯದ ಬಗ್ಗೆ ದುಷ್ಪರಿಣಾಮ ಬೀರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಈ) *ಅದನ್ನು ತಡೆಗಟ್ಟಲು ಆಧುನಿಕ ಯಂತ್ರವನ್ನು ಅಳವಡಿಸುವುದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳುವುದೇ?*

ಉ) *ಹಾಗಿದ್ದಲ್ಲಿ ಎಷ್ಟು ದಿವಸಗಳಲ್ಲಿ ಅದನ್ನು ಕಾರ್ಯಗತ ಮಾಡಲಾಗುವುದು?*

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು) :

ಅ) ಜನವರಿ 1981ರಲ್ಲಿ

ಆ) 10000 ಶವಗಳನ್ನು ಸುಡುವವರೆವಿಗೂ.

ಇ) ಹೌದು

ಈ) ಹೌದು

ಉ) ತಜ್ಞರ ಅಭಿಪ್ರಾಯ ಪಡೆದ ನಂತರ.

ಅಪಘಾತಗಳ ಪರಿಹಾರ ಶಾಶ್ವತ ನಿಧಿ

527 - ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಸಮಾಜ ಕಲ್ಯಾಣ ಮತ್ತು ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಇತ್ತೀಚೆಗೆ ಬೆಂಗಳೂರು ಮತ್ತು ಸಿಂಧನೂರುಗಳಲ್ಲಿ ನಡೆದಂತಹ ಬೆಂಕಿ ಅಪಘಾತಗಳ ಪ್ರಕರಣಗಳಲ್ಲಿ ಮರಣ ಹೊಂದಿದವರ ಕುಟುಂಬಗಳಿಗೆ, ನೊಂದವರಿಗೆ ಮತ್ತು ಆಸ್ತಿಪಾಸ್ತಿಗಳನ್ನು ಕಳೆದುಕೊಂಡವರಿಗೆ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಕೊಟ್ಟಿರುವ ಹಣ ಎಷ್ಟು?*

ಆ) *ಪ್ರಧಾನಮಂತ್ರಿಗಳ ಪರಿಹಾರ ನಿಧಿಯಿಂದ ಅದಕ್ಕೆ ಪರಿಹಾರವೇನಾದರೂ ಬಂದಿದೆಯೇ?*

ಇ) *ಅಂತಹ ಅಪಘಾತಗಳ ಪರಿಹಾರಕ್ಕಾಗಿ ಶಾಶ್ವತ ನಿಧಿಯ ವ್ಯವಸ್ಥೆಯನ್ನು ಮಾಡಲು ಸಾಧ್ಯವೇ?*

ಶ್ರೀ ಧರ್ಮಸಿಂಗ್ (ಕಂದಾಯ ಮತ್ತು ಸಮಾಜ ಕಲ್ಯಾಣ ಸಚಿವರು) :

ಅ) ದಿನಾಂಕ 4.3.1994ರಂದು ಬೆಂಗಳೂರು ನಗರ ಮತ್ತು ಸಿಂಧನೂರುಗಳಲ್ಲಿ ಸಂಭವಿಸಿದ ಬೆಂಕಿ ದುರಂತಕ್ಕೆ ಸಂಬಂಧಿಸಿದಂತೆ, ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಯಾವುದೇ ಹಣವನ್ನು ನೀಡಿರುವುದಿಲ್ಲ; ಆದಾಗ್ಯೂ ನೊಂದ ಸಂತ್ರಸ್ಥರ ಸಂಕಷ್ಟ ನಿವಾರಿಸಲು ಕೆಳಕಂಡ ಪರಿಹಾರ ಹಾಗೂ ಪುನರ್ ವಸತಿ ಕಾರ್ಯಗಳನ್ನು ಕೈಗೊಳ್ಳಲಾಗಿದೆ

(ರೂ. ಲಕ್ಷಗಳಲ್ಲಿ)

ಸ್ಥಳ	ಮೃತಪಟ್ಟವರ ಕುಟುಂಬಗಳಿಗೆ ನೀಡಿದ ಅನುಕಂಪ ಭತ್ಯೆ	ಪರಿಹಾರ ಕೇಂದ್ರಗಳನ್ನು ನಡೆಸಲು ತಗುಲಿದ ವೆಚ್ಚ	ಗುಡಿಸಲು ನಾಶಕ್ಕೆ ನೀಡಿದ ಪರಿಹಾರ: ನಗದು ರೂಪ	ಕಟ್ಟಡ ಸಾಮಗ್ರಿಗಳ ರೂಪದಲ್ಲಿ	ಒಟ್ಟು	ಒಟ್ಟು ಪರಿಹಾರ
ಬೆಂಗಳೂರು ನಗರ	4.00	0.44.	10.15	-	10.15	14.59
ಸಿಂಧನೂರು	-	*	2.59	11.60	14.19	14.19

* ಸ್ಥಳೀಯ ಸರ್ಕಾರೇತರ ಸಂಸ್ಥೆಗಳ ನೆರವಿನಿಂದ ಪರಿಹಾರ ಕೇಂದ್ರಗಳನ್ನು ನಿರ್ವಹಿಸಲಾಗಿದೆ.

ಆ) ಪ್ರಧಾನ ಮಂತ್ರಿಗಳ ಪರಿಹಾರ ನಿಧಿಯಿಂದ ಯಾವುದೇ ಪರಿಹಾರ ಬಂದಿರುವುದಿಲ್ಲ.

ಇ) ಕೇಂದ್ರದ ಒಂಭತ್ತನೇ ಹಣಕಾಸು ಆಯೋಗದ ಶಿಫಾರಸಿನನ್ವಯ ಸ್ಥಾಪಿಸಲ್ಪಟ್ಟಿರುವ ರಾಜ್ಯ ಪ್ರಕೃತಿ ವಿಕೋಪ ಪರಿಹಾರ ನಿಧಿಯಲ್ಲಿ, ಆಕಸ್ಮಿಕ ಬೆಂಕಿ, ನೆರೆಹಾವಳಿ, ಬರ ಇತ್ಯಾದಿ ನೈಸರ್ಗಿಕ ವಿಕೋಪಗಳು ಸಂಭವಿಸಿದಾಗ ಪರಿಹಾರ ಮತ್ತು ಪುನರ್ವಸತಿ, ಕಾರ್ಯಗಳನ್ನು ಕೈಗೊಳ್ಳಬಹುದಾಗಿದೆ. ಆದ್ದರಿಂದ, ಇನ್ನಾವುದೇ ಶಾಶ್ವತ ನಿಧಿಯ ವ್ಯವಸ್ಥೆ ಮಾಡುವ ಅಗತ್ಯವಿಲ್ಲ.

ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ : 24 ಲಿಖಿತ ಮೂಲಕ ಉತ್ತರಿಸುವ 13ನೇ ಪಟ್ಟಿಯಲ್ಲಿರುವ 40 ಪ್ರಶ್ನೆಗಳ ಪೈಕಿ ಪ್ರಶ್ನೆಗಳ ಸಂಖ್ಯೆ 621, 622, 596, 571, 423, 425, 427, 564, 440 ಮತ್ತು 441 ಪ್ರಶ್ನೆಗಳನ್ನು ಹೊರತು ಪಡಿಸಿ ಉಳಿದ 30 ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ರಾಜ್ಯದಲ್ಲಿ ಕೆಲಸ ಕಳೆದಕೊಂಡಿರುವ ಪಟೇಲರುಗಳಿಗೆ ಆಡ್ಹಾಕ್ ವಿಶ್ರಾಂತಿ ವೇತನ

642 - ಶ್ರೀ ಎ.ವಿ. ಉಮಾಪತಿ (ಹೊಳಲ್ಕೆರೆ) : ಮಾನ್ಯ ಕಂದಾಯ ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅನುವಂಶೀಕ ಹಕ್ಕು ರದ್ದಿಯಾತಿ ಕಾಯ್ದೆ ಮೇರೆಗೆ ಹಕ್ಕು ಕಳೆದುಕೊಂಡ ಗ್ರಾಮಾಧಿಕಾರಿಗಳ ಪೈಕಿ ಶ್ಯಾನುಭೋಗರುಗಳಿಗೆ ಸರ್ಕಾರ ಕೋರ್ಟಿನ ಆದೇಶದಂತೆ 500.00 ರೂ. ಆಡ್ಹಾಕ್ ವಿಶ್ರಾಂತಿ ವೇತನ ಪಾವತಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಆ ರೀತಿ ರಾಜ್ಯದಾದ್ಯಂತ ಪಟೇಲರುಗಳಿಗೆ ತಿಂಗಳಿಗೆ ಕೇವಲ 100.00 ರೂ. ಮಾಸಿಕ ವಿಶ್ರಾಂತಿ ವೇತನ ಪಾವತಿ ಮಾಡುತ್ತಿರುವ ತಾರತಮ್ಯ ಕುರಿತು ಸದನದಲ್ಲಿ ಕಂದಾಯ ಮಂತ್ರಿಗಳು ತಾರತಮ್ಯ ನಿವಾರಣೆಗೆ ಸರ್ಕಾರದ ಕ್ರಮಗಳೇನು?

ಇ) ಪಟೇಲರಿಗೂ 500.00 ಮಾಸಿಕ ಆಡ್ಹಾಕ್ ವಿಶ್ರಾಂತಿ ವೇತನ ನೀಡುವ ಭರವಸೆ ನೀಡಿದ್ದು ಈವರೆವಿಗೂ ಆ ಬಗ್ಗೆ ಸರ್ಕಾರ ವಿಳಂಬ ನೀತಿ ಅನುಸರಿಸುತ್ತಿರಲು ಕಾರಣವೇನು?

ಈ) ಈಗಲಾದರೂ ಸರ್ಕಾರ ಆ ಬಗ್ಗೆ ತೀವ್ರ ಕ್ರಮ ಕೈಗೊಳ್ಳುವುದೇ?

ಶ್ರೀ ಧರ್ಮಸಿಂಗ್ (ಕಂದಾಯ ಮಂತ್ರಿಗಳು) :

ಅ) ಮತ್ತು ಆ) ದಿನಾಂಕ 1-2-63ರಂದು ಮಾಜಿ ಶ್ಯಾನುಭೋಗರುಗಳು ಸೇವೆಯಲ್ಲಿದ್ದು ಅನಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 16 (2)ರಡಿಯಲ್ಲಿ ಪರಿಗಣಿತ ಗ್ರಾಮಲೆಕ್ಕಿಗರಾಗಿ ಮುಂದುವರೆದು ಖಾಯಂ ಗ್ರಾಮಲೆಕ್ಕಿಗರಿಗೆ ಪ್ರಭಾರ ವಹಿಸಿಕೊಟ್ಟಿರುವ ಮಾಜಿ ಶ್ಯಾನುಭೋಗರಿಗೆ ಮಾಸಿಕ ರೂ. 500.00 ಗಳ ಅಡ್ಹಾಕ್ ಪಿಂಚಣಿ ನೀಡಲಾಗುತ್ತಿದೆ. (ಈ) ಉಪ ಪ್ರಶ್ನೆಗೆ ನೀಡಿರುವ ಉತ್ತರದಿಂದ ತಾರತಮ್ಯದ ಪ್ರಶ್ನೆ ಇಲ್ಲ.

(ಇ) ಈ ಬಗ್ಗೆ ಸರ್ಕಾರವು ವಿಷಯವನ್ನು ಪರಿಶೀಲಿಸಲಾಗುತ್ತಿದೆ ಎಂದು ತಿಳಿಸಲಾಗಿತ್ತು.

(ಈ) ಈಗ ಸರ್ಕಾರವು ಶ್ಯಾನುಭೋಗರಿಗೆ ಕೊಡುತ್ತಿರುವಂತೆ ಪಟೇಲರಿಗೂ ಸಹ ಮಾಸಿಕ ಅಡ್ಹಾಕ್ ವಿಶ್ರಾಂತಿ ವೇತನ ರೂ. 500.00 ನೀಡಲು ತೀರ್ಮಾನಿಸಿದೆ.

ರೈತರು ಸಹಕಾರ ಸಂಘಗಳಿಗೆ ಜಮೀನು ಆಧಾರ ಮಾಡುವಾಗ ರಿಜಿಸ್ಟ್ರೇಷನ್ ಶುಲ್ಕದಲ್ಲಿ ಹೆಚ್ಚಳ

644 - ಶ್ರೀ ಎ.ವಿ. ಉಮಾಪತಿ (ಹೊಳಲ್ಕೆರೆ) : ಮಾನ್ಯ ಕಂದಾಯ ಮತ್ತು ಸಮಾಜ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರೈತರು ವಿವಿಧ ಉದ್ದೇಶಗಳಿಗಾಗಿ ಸಹಕಾರ ಸಂಘಗಳಿಂದ ಸಾಲ ಪಡೆಯುವಾಗ ಸಹಕಾರ ಸಂಘಗಳಿಗೆ ತಮ್ಮ ಜಮೀನು ಆಧಾರ ಮಾಡುವಾಗಿನ ರಿಜಿಸ್ಟ್ರೇಷನ್ ಶುಲ್ಕವನ್ನು ಶೇ. 5 ನಿಗಧಿಪಡಿಸಿರುವುದು ಸರಿಯೇ?*

ಆ) *ಹಾಗಿದ್ದಲ್ಲಿ, ಅದು ರೈತರಿಗೆ ಹೆಚ್ಚು ಹೊರೆಯಲ್ಲವೇ?*

ಇ) *ಹಾಗಿದ್ದಲ್ಲಿ, ಅದನ್ನು ಸರ್ಕಾರ ಶೇಕಡಾ-5 ರಿಂದ ಶೇಕಡಾ - 3 ಅಥವಾ 2 ರಂತೆ ಕಡಿಮೆ ಮಾಡುವುದೇ?*

ಶ್ರೀ ಧರ್ಮಸಿಂಗ್ (ಕಂದಾಯ ಮತ್ತು ಸಮಾಜ ಕಲ್ಯಾಣ ಸಚಿವರು) :

ಅ) ಶೇಕಡಾ-2 ರಂತೆ ಮಾತ್ರ ವಿಧಿಸಲಾಗುತ್ತಿದೆ.

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

ರೇಷ್ಮೆ ಕಾರ್ಖಾನೆಗಳ ಪುನರ್ ನವೀಕರಣ

695 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ರೇಷ್ಮೆ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸರ್ಕಾರದ ಪರಿಮಿತಿಯಲ್ಲಿ ಇರುವ ರೇಷ್ಮೆ ಫಿಲಿಯೇಚರ್ಗಳು ಯಾವುವು?*

ಆ) *ಅವುಗಳನ್ನು ಯಾವಾಗ ಪ್ರಾರಂಭಿಸಲಾಯಿತು ಮತ್ತು ಪ್ರಾರಂಭದಲ್ಲಿದ್ದ ಬೇಸಿನ್ಗಳು ಎಷ್ಟು?*

ಇ) *ಅವುಗಳಲ್ಲಿ ಈಗ ಇರುವವು ಎಷ್ಟು ಹಾಗೂ ಇಲ್ಲಿಯವರೆಗೆ ಆಗಿರುವ ನಷ್ಟ ಎಷ್ಟು?*

ಈ) *ಸರ್ಕಾರದ ಪರಿಮಿತಿಯಲ್ಲಿದ್ದ ರೇಷ್ಮೆ ಕೈಗಾರಿಕೆಗಳನ್ನು ಕರ್ನಾಟಕ ರೇಷ್ಮೆ ಕೈಗಾರಿಕಾ ನಿಗಮದ ಮುಖಾಂತರ ಆಧುನೀಕರಣಕ್ಕಾಗಿ ಹೂಡಿದ ಬಂಡವಾಳ ಮತ್ತು ಸಧ್ಯದ ಪರಿಸ್ಥಿತಿಯಲ್ಲಿ ಅನುಭವಿಸುತ್ತಿರುವ ನಷ್ಟವೆಷ್ಟು?*

ಉ) *ಆಧುನೀಕರಿಸಿದ ಮೇಲೂ ಆ ಕಾರ್ಖಾನೆಗಳು ನಷ್ಟ ಅನುಭವಿಸುತ್ತಿದ್ದು ಆ ಬಗ್ಗೆ ಸರ್ಕಾರದ ಮುಂದಿನ ಯೋಜನೆಗಳೇನು?*

ಊ) ರೇಷ್ಮೆ ಸಮಗ್ರ ಅಭಿವೃದ್ಧಿ ದೃಷ್ಟಿಯಿಂದ ನಷ್ಟ ಅನುಭವಿಸುತ್ತಿರುವ ಕಾರ್ಖಾನೆಗಳನ್ನು ಮುಂದುವರೆಸಲು ಪ್ರಯತ್ನ ಮಾಡಲಾಗುವುದೇ?

ಋ) ರೇಷ್ಮೆ ಕಾರ್ಖಾನೆಗಳ ಪುನಃ ನವೀಕರಣ ಮತ್ತು ಪುನಃಶ್ಚೇತನಕ್ಕಾಗಿ ಸರ್ಕಾರದ ಗುರಿ ಏನು?

ಡಾ. ಜಿ. ಪರಮೇಶ್ವರ (ರೇಷ್ಮೆ ರಾಜ್ಯ ಸಚಿವರು) :

ಅ) 1) ಸರ್ಕಾರಿ ರೇಷ್ಮೆ ಕಾರ್ಖಾನೆ, ಕೊಳ್ಳೇಗಾಲ

2) ಸರ್ಕಾರಿ ರೇಷ್ಮೆ ಕಾರ್ಖಾನೆ, ಸಂತೇಮರಹಳ್ಳಿ

3) ಸರ್ಕಾರಿ ರೇಷ್ಮೆ ಕಾರ್ಖಾನೆ, ಮಾಂಬಳ್ಳಿ

4) ಸರ್ಕಾರಿ ರೇಷ್ಮೆ ಕಾರ್ಖಾನೆ, ಚಾಮರಾಜನಗರ.

ಆ) ಪ್ರಾರಂಭವಾದ ವರ್ಷಪ್ರಾರಂಭದಲ್ಲಿದ್ದ ಬೇಸಿನ್ಗಳ ಸಂಖ್ಯೆ

1)	ಕೊಳ್ಳೇಗಾಲ	1956-57	464
2)	ಸಂತೇಮರಹಳ್ಳಿ	1970-71	120
3)	ಮಾಂಬಳ್ಳಿ	1970-71	110
4)	ಚಾಮರಾಜನಗರ	1970-71	120

ಇ) ಈಗ ಇರುವ ಬೇಸಿನ್ಗಳ ಸಂಖ್ಯೆ ಈ ಕೆಳಗಿನಂತಿವೆ | **ಇಲ್ಲಿಯವರೆಗೆ ಆದ ನಷ್ಟ ರೂ. ಲಕ್ಷಗಳಲ್ಲಿ**

1)	ಕೊಳ್ಳೇಗಾಲ	50	1060.65
2)	ಸಂತೇಮರಹಳ್ಳಿ	50	579.21
3)	ಮಾಂಬಳ್ಳಿ	45	374.94
4)	ಚಾಮರಾಜನಗರ	43	472.57

ಈ) ಬಂಡವಾಳ ಹೂಡಿಕೆ ರೂ. 27.93 ಕೋಟಿ ಸಧ್ಯದ ಪರಿಸ್ಥಿತಿಯಲ್ಲಿ ಅನುಭವಿಸುತ್ತಿರುವ ನಷ್ಟ ರೂ. 734.83 ಲಕ್ಷಗಳು

ಉ) ನಷ್ಟ ಅನುಭವಿಸುತ್ತಿರುವ ಕಾರ್ಖಾನೆಗಳ (ಕಂಪನಿಯು) ಪುನಶ್ಚೇತನಕ್ಕಾಗಿ ಐ.ಡಿ.ಬಿ.ಐ. ಹಣಕಾಸು ಸಂಸ್ಥೆಯನ್ನು ಕೋರಲಾಗಿ ಐ.ಡಿ.ಬಿ.ಐ. ಸಂಸ್ಥೆಯು ವಿವರವಾಗಿ ಅಧ್ಯಯನ ನಡೆಸಿ ಕೆಲವು ರಿಯಾಯಿತಿ ಮತ್ತು ಪರಿಹಾರವನ್ನು ನೀಡಿರುತ್ತದೆ. ಸಧ್ಯದ ಪರಿಸ್ಥಿತಿಯಲ್ಲಿ ನಿಗಮನ ನಷ್ಟದ ಪ್ರಮಾಣವನ್ನು ಕಡಿಮೆ ಮಾಡಿಕೊಂಡು ಅಭಿವೃದ್ಧಿ ಪಥದತ್ತ ಸಾಗುತ್ತಿದೆ.

ಊ) ಹೌದು.

ಋ) 1) ಹಾಲಿ ಇರುವ ಬೇಸಿನ್ಗಳ ಜೊತೆಗೆ ಪ್ರತಿ ಕಾರ್ಖಾನೆಯಲ್ಲೂ 20 ಬೇಸಿನ್ಗಳನ್ನು ಹೆಚ್ಚಿಸುವ ಕ್ರಮ ಪರಿಶೀಲನೆಯಲ್ಲಿದೆ.

2) ಪ್ರತಿ ಘಟಕದಲ್ಲಿ ಮಲ್ಟಿ ಎಂಡ್ ಬೇಸಿನ್ಗಳನ್ನು ಸ್ಥಾಪಿಸಲಾಗುವುದು

ಜವಳಿ ಖಾತೆಯ ನೂಲಿನ ಗಿರಣಿಗಳ ಕುರಿತು

717 - ಶ್ರೀ ಮಂಜನಾಥ್ ಸಿ. ಕುನ್ನೂರ (ಶಿಗ್ಗಾಂವ) : ಮಾನ್ಯ ಜವಳಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಸಹಕಾರೀ ನೂಲಿನ ಗಿರಣಿಗಳಿವೆ ಅವುಗಳ ಲಾಭ ಮತ್ತು ನಷ್ಟಗಳ ವಿವರ ನೀಡುವುದು?

ಆ) ಹೊಸದಾಗಿ ಯಾವ ಸಹಕಾರಿ ನೂಲಿನ ಗಿರಣಿಗಳಿಗೆ ಪರವಾನಗಿ ನೀಡಲಾಗಿದೆ?

ಇ) ಸದರೀ ಸಹಕಾರಿ ನೂಲಿನ ಗಿರಣಿಗಳಿಗೆ ಯಾವ ಯಾವ ಯೋಜನೆಗಳಲ್ಲಿ ಮತ್ತು ಎಲ್ಲಿಂದ ಆರ್ಥಿಕ ಸಹಾಯ ಮಾಡಲಾಗುವುದು?

ಈ) ಹೊಸ ಜವಳಿ ನೀತಿಯ ಕಾರ್ಯಕ್ರಮಗಳೇನು?

ಶ್ರೀ ಹೆಚ್.ಕೆ. ಪಾಟೀಲ್ (ಜವಳಿ ರಾಜ್ಯ ಸಚಿವರು) :

ಅ) ಸಹಕಾರ ರಂಗದಲ್ಲಿ 18 ಗಿರಣಿಗಳು ನೋಂದಾಯಿತವಾಗಿದ್ದು ಅವುಗಳಲ್ಲಿ 12 ಗಿರಣಿಗಳು ಕೆಲಸ ಮಾಡುತ್ತಿದ್ದು 6 ಗಿರಣಿಗಳು ಇನ್ನೂ ಪ್ರಾರಂಭವಾಗಬೇಕಾಗಿದೆ. (ಲಾಭ ನಷ್ಟದ ವಿವರ ಅನುಬಂಧದಲ್ಲಿ ಕೊಡಲಾಗಿದೆ)

ಆ) ಹೊಸದಾಗಿ ಯಾವ ಸಹಕಾರಿ ನೂಲಿನ ಗಿರಣಿಗಳಿಗೂ ಪರವಾನಿಗೆ ನೀಡಿರುವುದಿಲ್ಲ.

ಇ) ಈ ಕೆಳಗಿನ ಸಹಕಾರಿ ನೂಲಿನ ಗಿರಣಿಗಳಿಗೆ ಎನ್ಸಿಡಿಸಿ 4ನೇ ಯೋಜನೆಯಲ್ಲಿ ವಿಶ್ವಬ್ಯಾಂಕ್ ಧನಸಹಾಯದೊಂದಿಗೆ ಪ್ರಾರಂಭಿಸಲು ಸರ್ಕಾರದಿಂದ ಎನ್ಸಿಡಿಸಿ ಕೇಂದ್ರ ಕಛೇರಿಗೆ ಕಳುಹಿಸಲಾಗಿದೆ.

ಅ) ಸಿದ್ಧೇಶ್ವರ ಸಹಕಾರಿ ನೂಲಿನ ಗಿರಣಿ, ಚಿಕ್ಕೋಡಿ, ಬೆಳಗಾಂ ಜಿಲ್ಲೆ.

ಆ) ಸಂಜಯ ಸಹಕಾರ ನೂಲಿನ ಗಿರಣಿ, ಹುಬ್ಬಳ್ಳಿ, ಧಾರವಾಡ ಜಿಲ್ಲೆ.

ಇ) ಸಹ್ಯಾದ್ರಿ ಸಹಕಾರಿ ನೂಲಿನ ಗಿರಣಿ, ಚನ್ನಗಿರಿ, ಶಿವಮೊಗ್ಗ ಜಿಲ್ಲೆ.

ಆದರೆ ಎನ್ಸಿಡಿಸಿ 4ನೇ ಯೋಜನೆಯ ವಿಶ್ವಬ್ಯಾಂಕಿನ ಅನುಮೋದನೆ ನೀಡುವುದು ತಡವಾಗಿರುವುದರಿಂದ ಜೂನ್ 94ಕ್ಕೆ ಮೊದಲು ಕಾರ್ಯರೂಪಕ್ಕೆ ಬರುವುದಿಲ್ಲವೆಂದು ತಿಳಿಸಿರುತ್ತಾರೆ. ಈಗ ಸಧ್ಯಕ್ಕೆ ಅನಿವಾಸಿ ಭಾರತೀಯರ ಸಂಘಗಳಿಂದ ಸಾಲ ಪಡೆಯುವ ಬಗ್ಗೆ ಪ್ರಯತ್ನಗಳನ್ನು ಮಾಡಲಾಗುತ್ತಿದೆ.

ಈ) ಜವಳಿ ಉದ್ಯಮದ ಸಮಗ್ರ ಅಭಿವೃದ್ಧಿಗೆ ಸಂಬಂಧಿಸಿದಂತೆ ಜವಳಿ ನೀತಿಯಲ್ಲಿ ಕಾರ್ಯಕ್ರಮಗಳನ್ನು ರೂಪಿಸಿದೆ. ರಾಜ್ಯದಲ್ಲಿ ನೂಲಿನ ಗಿರಣಿಗಳ ಕ್ಷೇತ್ರದ ಅಭಿವೃದ್ಧಿಗೆ ಸಂಬಂಧಿಸಿದಂತೆ ಈ ಕೆಳಗಿನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಅ) ರಾಜ್ಯದಲ್ಲಿ ಲಭ್ಯವಿರುವ ಸಂಪನ್ಮೂಲ ಬಳಸಿ ಸಹಕಾರ ಹಾಗೂ ಖಾಸಗಿ ಕ್ಷೇತ್ರದಲ್ಲಿ ಸ್ಥಾಪಿಸಲ್ಪಡುವ ಎಲ್ಲಾ ಜವಳಿ ಘಟಕಗಳಿಗೆ ನೆರವು ಸೌಲಭ್ಯ ಹಾಗೂ ಪ್ರೋತ್ಸಾಹ ನೀಡುವುದು.

ಆ) ಎಸ್.ಸಿ.ಡಿ.ಸಿ. ಐ.ಡಿ.ಬಿ.ಐ ನಬಾರ್ಡ್ ಹಾಗೂ ಇತರ ಹಣಕಾಸು ಸಂಸ್ಥೆಗಳಿಂದ ರಾಜ್ಯದ ಜವಳಿ ಉದ್ಯಮಕ್ಕೆ ನೆರವು ದೊರಕಿಸುವುದು.

ಇ) ಆ ಸಂಪ್ರದಾಯಕ ಸಂಪನ್ಮೂಲ ಬಳಸಿ ಮಾಲು ಉತ್ಪಾದಿಸಲು ಈ ದಿಸೆಯಲ್ಲಿ ಸಂಶೋಧನಾ ಕಾರ್ಯಕ್ರಮಗಳಿಗೆ ಪ್ರೋತ್ಸಾಹಿಸುವುದು.

ಈ) ನೂಲಿನ ಗಿರಣಿಗಳಲ್ಲಿ ಕೆಲಸ ಮಾಡುವ ಕಾರ್ಮಿಕರ ವೃತ್ತಿ ಕೌಶಲ್ಯ, ದಕ್ಷತೆ ಹಾಗೂ ಉತ್ಪಾದಕತೆಯನ್ನು ಉತ್ತಮಪಡಿಸಲು ನೂಲಿನ ಗಿರಣಿಗಳ ಕೆಲಸಗಾರರ ತರಬೇತಿಗೆ ವ್ಯವಸ್ಥೆಯನ್ನು ರೂಪಿಸುವುದು.

ಉ) ರೋಗಗ್ರಸ್ಥ ಹಾಗೂ ಮುಚ್ಚಲ್ಪಟ್ಟಿರುವ ಜವಳಿ ಕಾರ್ಖಾನೆಗಳನ್ನು ಪುನರಾರಂಭಿಸಲು ಈಗಾಗಲೇ ಬಿ.ಐ.ಎಫ್.ಆರ್. ಮಾದರಿಯಲ್ಲಿ ಖಾಸಗಿವಲಯದ ಕೈಗಾರಿಕೆಗಳಿಗೆ ಇರುವಂತೆಯೇ ಸಹಕಾರಿ ಕ್ಷೇತ್ರಕ್ಕೂ ಅದೇ ರೀತಿಯ ಕಾರ್ಯಕ್ರಮಗಳನ್ನು ರೂಪಿಸಲಾಗುವುದು.

ಊ) ರಾಜ್ಯದಲ್ಲಿ ನೂಲಿನ ಗಿರಣಿಗಳಿಗೆ ಸಂಶೋಧನೆ ಅಭಿವೃದ್ಧಿ ತಂತ್ರಜ್ಞಾನ ತರಬೇತಿ, ಮಾರ್ಗದರ್ಶನ ನೀಡಲು ನೂಲಿನ ಗಿರಣಿಗಳ ಸೇವಾಕೇಂದ್ರ ಸ್ಥಾಪಿಸುವುದು.

ಋ) ಜವಳಿ ಕ್ಷೇತ್ರದ ಎಲ್ಲಾ ಅಂಗದಲ್ಲಿ ಆಧುನೀಕರಣಕ್ಕೆ ಆದ್ಯತೆ ನೀಡುವುದು.

ಅನುಬಂಧ

ರಾಜ್ಯದಲ್ಲಿರುವ ಸಹಕಾರಿ ನೂಲಿನ ಗಿರಣಿಗಳ ಲಾಭ ನಷ್ಟದ ವಿವರಗಳು

ಕ್ರ.ಸಂ	ಗಿರಣಿಯ ಹೆಸರು		ಲಾಭ ನಷ್ಟ 1992-93
1)	ಗದಗ್ ಸಹಕಾರಿ ನೂಲಿನ ಗಿರಣಿ, ಹುಲಕೋಟಿ	(+)	14.43
2)	ಬನಹಟ್ಟಿ ಸಹಕಾರಿ ನೂಲಿನ ಗಿರಣಿ (ನಿ)	(+)	91.54
3)	ರೈತರ ಸಹಕಾರಿ ನೂಲಿನ ಗಿರಣಿ, ಹುಲಕೋಟಿ	(-)	145.50
4)	ಬೆಳಗಾಂ ಸಹಕಾರಿ ನೂಲಿನ ಗಿರಣಿ (ನಿ)	(-)	13.01
5)	ಮಲಪ್ರಭಾ ಸಹಕಾರಿ ನೂಲಿನ ಗಿರಣಿ, ಸವದತ್ತಿ	(-)	268.82
6)	ತುಂಗಭದ್ರಾ ಸಹಕಾರಿ ನೂಲಿನ ಗಿರಣಿ, ರಾಣಿಬೆನ್ನೂರ	(-)	88.50
7)	ಶ್ರೀ ಸೋಮೇಶ್ವರ ಸಹಕಾರಿ ನೂಲಿನ ಗಿರಣಿ, ಲಕ್ಷ್ಮೇಶ್ವರ	(-)	191.90
8)	ಬಿಜಾಪುರ ಸಹಕಾರ ನೂಲಿನ ಗಿರಣಿ (ನಿ)	(-)	185.05
9)	ಬಾಗಲಕೋಟೆ ಸಹಕಾರಿ ನೂಲಿನ ಗಿರಣಿ (1-7-91ರಿಂದ 31-3-93)	(-)	195.69
10)	ಸಹಕಾರಿ ನೂಲಿನ ಗಿರಣಿ ರಾಯಚೂರು (1-7-91 ರಿಂದ 31-3-93)	(-)	89.72
11)	ಶ್ರೀ ವೆಂಕಟೇಶ್ ಸಹಕಾರಿ ನೂಲಿನ ಗಿರಣಿ, ಅಣ್ಣಿಗೇರಿ	(-)	105.03
12)	ರೈತರ ಸಹಕಾರಿ ನೂಲಿನ ಗಿರಣಿ (ನಿ) ರಾಣಿಬೆನ್ನೂರು ಈಗ ತಾನೇ ಉತ್ಪಾದನೆಯನ್ನು ಪ್ರಾರಂಭಿಸಿದೆ.		

ಸ್ಥಾಪನೆಯಾಗಬೇಕಾಗಿರುವ ನೂಲಿನ ಗಿರಣಿಗಳು

1) ಶ್ರೀ ಸಿದ್ದೇಶ್ವರ ಸಹಕಾರಿ ನೂಲಿನ ಗಿರಣಿ (ನಿ) ಚಿಕ್ಕೋಡಿ, ಬೆಳಗಾವಿ ಜಿಲ್ಲೆ.
2) ಮಹಾವೀರ ಸಹಕಾರಿ ನೂಲಿನ ಗಿರಣಿ (ನಿ) ಬೆಡಕಿಹಾಳ್, ಬೆಳಗಾವಿ ಜಿಲ್ಲೆ
3) ಸಂಜಯ ಸಹಕಾರಿ ನೂಲಿನ ಗಿರಣಿ (ನಿ) ಹುಬ್ಬಳ್ಳಿ
4) ಸಹ್ಯಾದ್ರಿ ಸಹಕಾರಿ ನೂಲಿನ ಗಿರಣಿ (ನಿ) ಚನ್ನಗಿರಿ, ಶಿವಮೊಗ್ಗ ಜಿಲ್ಲೆ
5) ರಾಯ್ಬಾಗ್ ಸಹಕಾರಿ ನೂಲಿನ ಗಿರಣಿ (ನಿ) ರಾಯ್ಬಾಗ್
6) ಮುಲಗುಂದ್ ಸಹಕಾರಿ ನೂಲಿನ ಗಿರಣಿ (ನಿ) ಮುಲಗುಂದ್, ಧಾರವಾಡ ಜಿಲ್ಲೆ.

ಸಣ್ಣ ಕೈಗಾರಿಕಾ ಇಲಾಖೆಯ ಕೈಗಾರಿಕಾ ವಸಾಹತು

718 - ಶ್ರೀ ಮಂಜುನಾಥ್ ಸಿ. ಕುನ್ನೂರು (ಶಿಗ್ಗಾಂವ) : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮದ ವತಿಯಿಂದ ಶಿಗ್ಗಾಂವದಲ್ಲಿ ಕೈಗಾರಿಕಾ ಸಂಕೀರ್ಣದ ಕಟ್ಟಡ ಪ್ರಾರಂಭ ಮಾಡಲಾಗಿದೆಯೆ?

ಆ) ಸದರೀ ಕಟ್ಟಡ ಯಾರಿಗೆ ಟೆಂಡರ್ ಆಗಿದೆ, ಎಷ್ಟು ಹಣಕ್ಕೆ ಆಗಿದೆ?

ಇ) ಸದರೀ ಕಟ್ಟಡವನ್ನು ಎಷ್ಟು ದಿನಗಳಲ್ಲಿ ಮುಗಿಸಲಾಗುವುದು?

ಶ್ರೀ ಸಿ.ಆರ್. ಸಗೀರ್ ಅಹಮದ್ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು:

ಅ) ಹೌದು

ಆ) ಸದರೀ ಕಟ್ಟಡವು ಟೆಂಡರ್ ಮುಖಾಂತರ ಶ್ರೀ ಬಂಡೀವಡ್ಡರ್, ಹಾವೇರಿ, ಎಂಬ ಗುತ್ತಿಗೆದಾರರಿಗೆ ಆಗಿರುತ್ತದೆ.

ಮಳಿಗೆ	ರೂ.
4-ಸಿ ಮಾದರಿ	11,94,498-00
4-ಸೂಪರ್ ಮಿನಿ ಮಾದರಿ	4,40,182-00
ಒಟ್ಟು ಹಣ	16,34,680-00

ಇ) 1994ರ ಜೂನ್ ತಿಂಗಳಿನಲ್ಲಿ ಪೂರ್ಣಗೊಳಿಸಲಾಗುವುದು.

ಕಾರ್ಮಿಕ ಇಲಾಖೆಯ ಐ.ಟಿ.ಐ. ಕುರಿತು

720 - ಶ್ರೀ ಮಂಜುನಾಥ್ ಸಿ. ಕುನ್ನೂರು (ಶಿಗ್ಗಾಂವ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಎಷ್ಟು ಕೈಗಾರಿಕಾ ತರಬೇತಿ ಕೇಂದ್ರದ ಕಾಲೇಜುಗಳನ್ನು ಕಳೆದ 5 ವರ್ಷಗಳಲ್ಲಿ ಪ್ರಾರಂಭಿಸಲಾಗಿದೆ?

ಆ) ಧಾರವಾಡ ಜಿಲ್ಲಾ ಶಿಗ್ಗಾಂವ ತಾಲ್ಲೂಕಿನಲ್ಲಿ ಅಥವಾ ಸವಣೂರು ತಾಲ್ಲೂಕಿನಲ್ಲಿ ಕೈಗಾರಿಕಾ ತರಬೇತಿ ಕೇಂದ್ರದ ಕಾಲೇಜು ಪ್ರಾರಂಭ ಮಾಡಲಾಗುವುದೇ?

ಶ್ರೀ ಬ್ಲೇಸಿಯಸ್ ಎಂ. ಡಿಸೌಜ (ಕಾರ್ಮಿಕ ಸಚಿವರು) :

ಅ) 14

ಆ) ಸದ್ಯಕ್ಕೆ ಇಲ್ಲ

ಆಶ್ರಯ ಯೋಜನೆ ಕುರಿತು

619 - ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಶ್ರಯ ಯೋಜನೆಯಡಿಯಲ್ಲಿ ಎಷ್ಟು ಮನೆಯನ್ನು ಕಟ್ಟಲು ಕರ್ನಾಟಕ ಗೃಹ ಮಂಡಳಿಗೆ ಕೊಡಲಾಗಿರುವುದು?

ಆ) ಸಿಓಡಿ ತನಿಖೆಯಾಗಿ ಮನೆಯನ್ನು ಕಟ್ಟುವ ಕೆಲಸ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಆಶ್ರಯ ಯೋಜನೆಯಡಿಯಲ್ಲಿ ಮನೆಗಳನ್ನು ಕಟ್ಟದೆ ಕರ್ನಾಟಕ ಗೃಹ ಮಂಡಳಿ ನಿಲ್ಲಿಸಿರುವ ಕೆಲಸಕ್ಕೆ ಸರ್ಕಾರ ಬೇರೆ ವ್ಯವಸ್ಥೆಯನ್ನು ಏನಾದರೂ ಮಾಡುವುದೇ?

ಶ್ರೀ ಗೋಪಿನಾಥ್ ಆರ್. ಸಾಂಡ್ರ (ವಸತಿ ಸಚಿವರು) :

ಅ) ಸರ್ಕಾರಿ ಆದೇಶ ಸಂಖ್ಯೆ ಹೆಚ್ಯುಡಿ 352 ಕೆಹೆಚ್ಬಿ 92 ದಿನಾಂಕ 8-1-92ರಲ್ಲಿ 40,000 ಆಶ್ರಯ ಮನೆಗಳನ್ನು ಪೂರ್ಣಗೊಳಿಸಲು ಕರ್ನಾಟಕ ಗೃಹ ಮಂಡಳಿಗೆ ವಹಿಸಲಾಗಿತ್ತು.

ಆ) ಇಲ್ಲ

ಇ) ಸರ್ಕಾರಿ ಆದೇಶ ಸಂಖ್ಯೆ ಹೆಚ್ಚುಡಿ 352 ಕೆಪೆಚ್ಬಿ 92, ದಿನಾಂಕ 21-10-93ರಲ್ಲಿ ಕರ್ನಾಟಕ ಗೃಹ ಮಂಡಳಿಗೆ ವಹಿಸಿದ್ದ 40,000 ಆಶ್ರಯ ಮನೆಗಳ ಪೈಕಿ 24,944 ಮನೆಗಳನ್ನು ವಾಪಸ್ಸು ಪಡೆದು ಜಿಲ್ಲಾಧಿಕಾರಿಗಳಿಗೆ ನಿರ್ಮಾಣ ಮಾಡಲು ವಹಿಸಲಾಗಿದೆ. ಬಾಕಿ 15,056 ಮನೆಗಳ ಕಾಮಗಾರಿಯನ್ನು ಕರ್ನಾಟಕ ಗೃಹ ಮಂಡಳಿಗೆ ವಹಿಸಲಾಗಿದೆ. ಇವುಗಳಲ್ಲಿ ಫೆಬ್ರವರಿ 1994ರ ಅಂತ್ಯಕ್ಕೆ 6,233 ಮನೆಗಳು ಪೂರ್ಣಗೊಂಡಿವೆ. ಉಳಿದ 8,823 ಮನೆಗಳು ಪ್ರಗತಿಯ ವಿವಿಧ ಹಂತದಲ್ಲಿವೆ.

ಕರ್ನಾಟಕ ಗೃಹ ನಿರ್ಮಾಣ ಮಂಡಳಿಯ ವತಿಯಿಂದ ಮನೆಗಳ ಹಂಚಿಕೆ

620 - ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಕರ್ನಾಟಕ ಗೃಹ ಮಂಡಳಿಯ ವತಿಯಿಂದ ಹಂಚಿಕೆದಾರರಿಗೆ ಪೂರ್ಣ ನಾಗರೀಕ ಸೌಲಭ್ಯಗಳನ್ನೊಳಗೊಂಡ ಎಷ್ಟು ಮನೆಗಳು ಹಂಚಿಕೆಯಾಗಬೇಕಾಗಿರುವುದು?

ಆ) ಈವರೆಗೆ ಎಷ್ಟು ಹಂಚಿಕೆಯಾಗಿರುವುದು ಮತ್ತು ಹಂಚಿಕೆಯಾಗದೇ ಉಳಿದಿರುವುದು ಎಷ್ಟು?

ಇ) ಅವುಗಳ ಹಂಚಿಕೆಯಾಗದಿರುವುದಕ್ಕೆ ಕಾರಣವೇನು ಮತ್ತು ಎಷ್ಟು ದಿನಗಳಲ್ಲಿ ಹಂಚಿಕೆ ಪೂರ್ಣಗೊಳಿಸಲಾಗುವುದು?

ಶ್ರೀ ಗೋಪಿನಾಥ್ ಆರ್. ಸಾಂದ್ರ (ವಸತಿ ಸಚಿವರು) :

ಅ)	ಕ್ರ. ಸಂ.	ವಿಭಾಗ	ದಿನಾಂಕ 1.4.92 ರಿಂದ 31.3.93 ರವರೆಗೆ ಹಂಚಿಕೆ ಯಾದ ಮನೆಗಳ ಸಂಖ್ಯೆ	ದಿನಾಂಕ 1.4.98 ರಿಂದ ಇಂದಿನವರೆಗೆ ಹಂಚಿಕೆಯಾದ ಮನೆಗಳ ಸಂಖ್ಯೆ
	1.	ಮೆಟ್ರೋ-1	182	1920
	2.	ಮೆಟ್ರೋ-2	760	594
	3.	ಬಳ್ಳಾರಿ	253	179
	4.	ಗುಲ್ಬರ್ಗಾ	66	298
	5.	ಹಾಸನ	153	57
	6.	ಹುಬ್ಬಳ್ಳಿ	1136	49
	7.	ಬೆಳಗಾಂ	198	70
	8.	ಮಂಗಳೂರು	208	35
	9.	ಮೈಸೂರು	472	1561
	10.	ಶಿವಮೊಗ್ಗ	566	126
		ಒಟ್ಟು	3994	4889

ಇ) ಅರ್ಜಿಗಳು ಬಂದಂತೆ ಖಾಲಿ ಇರುವ ಮನೆಗಳನ್ನು ಹಂಚಿಕೆ ಮಾಡಲಾಗುತ್ತಿದೆ.

ಬೈಲಹೊಂಗಲ ತಹಶೀಲ್ದಾರ್ ಆಫೀಸ್ ಕಟ್ಟಡ ನಿರ್ಮಾಣ

640 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಕಂದಾಯ ಮತ್ತು ಸಮಾಜ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಳಗಾಂ ಜಿಲ್ಲೆ ಬೈಲಹೊಂಗಲ ತಹಶೀಲ್ದಾರ್ ಕಟ್ಟಡ ಕಟ್ಟಿಸುವ ಸಲುವಾಗಿ 10.00 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲಾಗುವುದೆಂದು ನೀಡಿದ ಆಶ್ವಾಸನೆ ನಿಜವೆ ?

ಆ) ಹಾಗಿದ್ದಲ್ಲಿ, ವಿಧಾನ ಸಭೆಯಲ್ಲಿ ನೀಡಿದ ಆಶ್ವಾಸನೆ ಪ್ರಕಾರ, ಈ ಕಟ್ಟಡಕ್ಕೆ 10.00 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಿದ್ದಲ್ಲಿ, ಯಾವಾಗ ಬಿಡುಗಡೆ ಮಾಡಲಾಗಿದೆ ಮತ್ತು ಇದುವರೆಗೂ ಬಿಡುಗಡೆ ಮಾಡದೆ ಇದ್ದಲ್ಲಿ ಯಾವಾಗ ಬಿಡುಗಡೆ ಮಾಡಲಾಗುವುದು ?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಮತ್ತು ಕಂದಾಯ ಮಂತ್ರಿಗಳು) :

ಅ) ನಿಜ.

ಆ) 1992ರಲ್ಲಿ ಮಿನಿ ವಿಧಾನ ಸೌಧ ನಿರ್ಮಾಣ ಮಾಡಲು ರೂ. 39.31 ಲಕ್ಷಗಳ ಅಂದಾಜಿಗೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ. ಅದರಂತೆ ಮಿನಿ ವಿಧಾನ ಸೌಧ ನಿರ್ಮಾಣದ ಸಲುವಾಗಿ 1992-93ರ ಸಾಲಿನಲ್ಲಿ ರೂ. 13.00 ಲಕ್ಷ ಮತ್ತು 93-94ರ ಸಾಲಿನಲ್ಲಿ 1.66 ಲಕ್ಷ ಒದಗಿಸಲಾಗಿದೆ.

ರಾಜ್ಯದಲ್ಲಿ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಇಲ್ಲದೇ ಇರುವುದರಿಂದ ತೊಂದರೆ

638 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಇಲ್ಲದೇ ಇರುವುದರಿಂದ ತೊಂದರೆಗೆ ಈಡಾಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಸರ್ಕಾರದವರು ಆ ಕಾರ್ಖಾನೆಗಳಿಗೆ ರಾಜ್ಯದ ಬೇರೆ ಕಡೆಯಿಂದ ಕಬ್ಬನ್ನು ಪೂರೈಸಲು ಯಾವ ಕ್ರಮ ಕೈಗೊಂಡಿರುವರು ?

ಇ) ಕಳೆದ ವರ್ಷ ಫೆಬ್ರವರಿ ಅಂತ್ಯದವರೆಗೆ ರಾಜ್ಯದಲ್ಲಿ ಇರುವ ಪ್ರತಿಯೊಂದೂ ಸಕ್ಕರೆ ಕಾರ್ಖಾನೆಯವರು ಎಷ್ಟು ಕಬ್ಬನ್ನು ನುರಿಸುವರು ? (ಪ್ರತಿಯೊಂದು ಕಾರ್ಖಾನೆಯ ಸಂಪೂರ್ಣವಾದ ವಿವರವನ್ನು ಕೊಡುವುದಾಗಬೇಕು)

ಈ) ಈ ವರ್ಷ ಪ್ರತಿಯೊಂದು ಫ್ಯಾಕ್ಟರಿಯವರು ಫೆಬ್ರವರಿ ಅಂತ್ಯದವರೆಗೆ ಎಷ್ಟು ಕಬ್ಬನ್ನು ನುರಿಸಿರುವರು ?

ಉ) ರಾಜ್ಯದಲ್ಲಿರುವ ಕಬ್ಬನ್ನು ಹೊರರಾಜ್ಯಕ್ಕೆ ಕಳುಹಿಸಿರುವುದರಿಂದ ರಾಜ್ಯದಲ್ಲಿರುವ ಸಕ್ಕರೆ ಕಾರ್ಖಾನೆಗಳನ್ನು ನಡೆಸಲು ತೊಂದರೆಯಾಗುತ್ತಿರುವ ಸಂಗತಿ ನಿಜವೇ ಮತ್ತು ಹೊರರಾಜ್ಯಗಳಿಗೆ ಕಬ್ಬನ್ನು ಕಳುಹಿಸಿರುವುದರಿಂದ ರಾಜ್ಯಕ್ಕೆ ಎಷ್ಟು ಆರ್ಥಿಕ ನಷ್ಟವಾಗಿರುವುದು ?

ಡಾ ಹೆಗ್ಗಪ್ಪ ಲಮಾಣಿ (ಸಕ್ಕರೆ ಸಚಿವರು) :

ಅ) ಬಂದಿದೆ

ಆ) ಪ್ರಸಕ್ತ ಸಾಲಿನಲ್ಲಿ ರಾಜ್ಯದಲ್ಲಿ ಬೆಳಗಾವಿ ಮತ್ತು ಬಿಜಾಪುರ ಜಿಲ್ಲೆಗಳನ್ನು ಬಿಟ್ಟರೆ ಉಳಿದೆಲ್ಲಾ ಜಿಲ್ಲೆಗಳಲ್ಲಿರುವ ಸಕ್ಕರೆ ಕಾರ್ಖಾನೆಗಳು ಕಬ್ಬಿನ ಕೊರತೆಯನ್ನು

ಅನುಭವಿಸುತ್ತಿವೆ. ಬೆಳಗಾವಿ ಮತ್ತು ಬಿಜಾಪುರ ಜಿಲ್ಲೆಯ ಕೆಲವು ಭಾಗಗಳಲ್ಲಿ ಹೆಚ್ಚುವರಿ ಕಬ್ಬು ಕಂಡುಬಂದಿದ್ದರೂ ಸದರಿ ಪ್ರದೇಶಗಳಿಂದ ಕಬ್ಬನ್ನು ಎತ್ತುವ ಮಾಡಲು ರಾಜ್ಯದ ಇತರೆ ಭಾಗದಲ್ಲಿರುವ ಯಾವುದೇ ಕಾರ್ಖಾನೆಗಳೂ ಮುಂದೆ ಬಂದಿರುವುದಿಲ್ಲ. ಅಥವಾ ಅನುಮತಿ ಕೋರಿ ಸರ್ಕಾರಕ್ಕೆ ಮನವಿ ಸಲ್ಲಿಸಿರುವುದಿಲ್ಲ. ಕಬ್ಬಿನ ಕೊರತೆ ಇರುವ ಕಾರ್ಖಾನೆಗಳು ತಮ್ಮ ಮೀಸಲು ಕ್ಷೇತ್ರದ ಹೊರಗಡೆಯಿಂದ ಕಬ್ಬನ್ನು ಎತ್ತುವಳಿ ಮಾಡಬೇಕೆಂದಾಗ ಸಾಗಾಣಿಕೆ ವೆಚ್ಚ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಕಬ್ಬಿನ ಕೊರತೆಯಿರುವ ಕಾರ್ಖಾನೆಗಳಿಂದ ಆರ್ಥಿಕವಾಗಿ ಸಾಧ್ಯತೆ ಇರುವಂತಹ ದೂರದೊಳಗೆ ಹೆಚ್ಚುವರಿ ಕಬ್ಬು ಲಭ್ಯವಿಲ್ಲದಿರುವುದರಿಂದ ಕಾರ್ಖಾನೆಗಳು ಮುಂದೆ ಬಂದಿರುವುದಿಲ್ಲ. ಬಿಜಾಪುರ ಮತ್ತು ಬೆಳಗಾವಿ ಜಿಲ್ಲೆಯಲ್ಲಿ ಕೊರತೆ ಉಂಟಾಗಬಹುದಾದ ಸಕ್ಕರೆ ಕಾರ್ಖಾನೆಗಳು ಸದರಿ ಜಿಲ್ಲೆಗಳಲ್ಲಿ ಇರುವ ಹೆಚ್ಚುವರಿ ಕಬ್ಬಿನ ಪ್ರದೇಶದಿಂದ ಸಾಗಾಣಿಕೆಗೆ ಅನುಮತಿ ನೀಡಿ ವ್ಯವಸ್ಥೆ ಮಾಡಬೇಕೆಂದು ಜಿಲ್ಲಾಧಿಕಾರಿಗಳಿಗೆ ತಿಳಿಸಲಾಗಿರುತ್ತದೆ.

ಇ) ಕಳೆದ ಫೆಬ್ರವರಿ ಅಂತ್ಯದಲ್ಲಿ ರಾಜ್ಯದಲ್ಲಿ 29 ಕಾರ್ಖಾನೆಗಳು ಕಾರ್ಯ ಮಾಡಿ 59.87 ಲಕ್ಷ ಮೆ.ಟನ್ ಕಬ್ಬನ್ನು ನುರಿಸಿದ್ದವು. ಪ್ರತಿಯೊಂದು ಕಾರ್ಖಾನೆಯವರು ನುರಿಸಿರುವ ಕಬ್ಬಿನ ಪ್ರಮಾಣದ ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

ಈ) ಈ ವರ್ಷ 27 ಸಕ್ಕರೆ ಕಾರ್ಖಾನೆಗಳು ಕಾರ್ಯಗತ ಮಾಡಿ ಫೆಬ್ರವರಿ 1994ರ ಅಂತ್ಯಕ್ಕೆ ಅರೆದಿರುವ ಒಟ್ಟು ಕಬ್ಬಿನ ಪ್ರಮಾಣ 52.79 ಲಕ್ಷ ಟನ್ನಗಳಾಗಿರುತ್ತವೆ.

ಉ) ರಾಜ್ಯದಲ್ಲಿ ಈ ವರ್ಷ ಬೆಳಗಾವಿ ಜಿಲ್ಲೆಯಿಂದ ಮಾತ್ರ ಜಿಲ್ಲಾಧಿಕಾರಿಗಳ ಅನುಮತಿ ಮೇರೆಗೆ 1,56,500 ಮೆ.ಟನ್ ಕಬ್ಬು ಮಹಾರಾಷ್ಟ್ರಕ್ಕೆ ಹೋಗಿರುತ್ತದೆ. ಇದರಿಂದ ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಯಾವ ವಿಧವಾದ ತೊಂದರೆಯಾಗಿರುವುದು ಕಂಡು ಬಂದಿರುವುದಿಲ್ಲ. ಅನುಮತಿ ಮೇರೆಗೆ ಹೋಗಿರುವ ಕಬ್ಬಿನಿಂದ ರಾಜ್ಯದ ಬೊಕ್ಕಸಕ್ಕೆ ಕೊಳ್ಳುವ ತೆರಿಗೆ ರೂಪದಲ್ಲಿ ರೂ. 61;84,750-00 ಜಮಾ ಆಗಿರುವುದರಿಂದ ರಾಜ್ಯಕ್ಕೆ ಯಾವ ನಷ್ಟವೂ ಆಗಿರುವುದಿಲ್ಲ.

ಅನುಬಂಧ - ಅ

ದಿನಾಂಕ 1-10-93ರಿಂದ 28-2-94ರವರೆವಿಗೆ ಸಕ್ಕರೆ ಕಾರ್ಖಾನೆಗಳ ಕಾರ್ಯಪ್ರಗತಿಯನ್ನು ಕಳೆದ ವರ್ಷದ ಇದೇ ಅವಧಿಯೊಡನೆ ಹೋಲಿಸಲಾಗಿದೆ.

(ಮೆ.ಟನ್ನಳಲ್ಲಿ)

ಕ್ರ.ಸಂ.	ಸಕ್ಕರೆ ಕಾರ್ಖಾನೆಗಳು	1993-94			1992-93		
		ನುರಿಸಿದ ಕಬ್ಬು	ಉತ್ಪಾದಿಸಿದ ಸಕ್ಕರೆ	ಶೇಕಡಾ ಇಳುವರಿ	ನುರಿಸಿದ ಕಬ್ಬು	ಉತ್ಪಾದಿಸಿದ ಸಕ್ಕರೆ	ಶೇಕಡಾ ಇಳುವರಿ
1.	ಸಹಕಾರಿ ವಲಯ :						
1.	ಭದ್ರಾ	142037	13442	9.46	167389	15412	9.20
2.	ಬೀದರ್	195180	16794	8.60	190047	18340	9.65
3.	ದಕ್ಷಿಣ ಕನ್ನಡ	53737	5045	9.39	55526	4231	7.67
4.	ದೂದ್ಗಂಗಾಕೃಷ್ಣಾ	256330	32102	12.52	267420	31160	11.65
5.	ಘಟಪ್ರಭಾ	155000	17662	11.39	187030	22008	11.76
6.	ಹಾಲಸಿದ್ದನಾಥ್	168660	19014	11.27	177850	19707	11.08
7.	ಹಿರಣ್ಯಕೇಶಿ	502845	56390	11.21	547009	60891	11.13
8.	ಹೇಮಾವತಿ	78225	7384	9.43	178825	17772	9.94
9.	ಕಂಪ್ಲಿ	- ಕೆಲಸ	ಪ್ರಾರಂಭಿಸಿಲ್ಲ	-	38393	4017	10.46
10.	ಕರ್ನಾಟಕ	113175	11603	10.25	131600	13777	10.47
11.	ಮಲಪ್ರಭಾ	409900	46512	11.42	365100	42068	11.52
12.	ನಂದಿ	129170	14115	10.93	53450	5651	11.17
13.	ಪಾಂಡವಪುರ	105673	10205	9.66	155636	14540	9.34
14.	ರಾಯಭಾಗ್	156845	20209	12.88	206595	23649	11.45
15.	ಶ್ರೀ ಶ್ರೀರಾಮ	77796	6684	8.59	163798	16145	9.86
16.	ಸಹಕಾರಿ	31530	2532	8.08	49216	5107	10.38
	ಒಟ್ಟು	2575923	279693	10.88	2934890	314475	10.72

1	2	3	4	5	6	7	8
2.	**ಸಾರ್ವಜನಿಕ : ಜಂಟಿ ವಲಯ :**						
1.	ಮೈಸೂರು ಪೇಪರ್ಮಿಲ್ಸ್	251122	25488	10.15	316850	32392	10.22
2.	ಮೈಶುಗರ್	293106	25736	8.78	441818	41712	9.44
3.	ದಾವಣಗೆರೆ	116307	11104	9.55	178866	16370	9.15
4.	ಗಂಗಾವತಿ	59990	5842	9.74	95540	9480	9.92
	ಒಟ್ಟು	720525	68170	9.46	1033074	99954	9.67
3.	**ಖಾಸಗಿ ವಲಯ :**						
1.	ಬನ್ನಾರಿ ಅಮ್ಮನ್	137848	13381	9.70	137690	13309	9.66
2.	ಚಾಮುಂಡೇಶ್ವರಿ	352635	33469	9.49	436160	42955	9.85
3.	ಗೋದಾವರಿ	597950	67849	11.35	421890	49764	12.00
4.	ಐಎಸ್ಆರ್ ಹೊಸಪೇಟೆ	87890	8587	9.77	152270	15546	10.21
5.	ಮಹದೇಶ್ವರ	ಕೆಲಸ	ಪ್ರಾರಂಭಿಸಿಲ್ಲ	-	57366	5519	9.62
6.	ಸಿರಗುಪ್ಪ-ಗೌರಿ	54185	4839	8.93	811940	7974	9.73
7.	ಸಿರಗುಪ್ಪ-ದೇಶನೂರು	84350	8776	10.40	62605	8395	10.21
8.	ತುಂಗಭದ್ರಾ	163290	16288	9.97	200770	21980	10.38
9.	ಉಗಾರ್	500450	62836	12.45	461155	58996	12.79
	ಒಟ್ಟು	1982698	216025	10.90	2018836	222338	11.01
	ರಾಜ್ಯದ ಮೊತ್ತ	5279146	563888	10.68	5986800	636767	10.64

ರಾಜ್ಯದಲ್ಲಿ ಹೊಸ ಸಕ್ಕರೆ ಕಾರ್ಖಾನೆಗಳ ಸ್ಥಾಪನೆ

637 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಹೊಸ ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪಿಸಲು ಎಷ್ಟು ಮನವಿಗಳು ಬಂದಿರುತ್ತವೆ (ಸಂಪೂರ್ಣವಾದ ವಿವರವನ್ನು ನೀಡುವುದಾಗಬೇಕು)?

ಆ) ಅವುಗಳಲ್ಲಿ ಎಷ್ಟು ಸಕ್ಕರೆ ಕಾರ್ಖಾನೆಗಳಿಗೆ ಷೇರು ಹಣ ಸಂಗ್ರಹಿಸಲು ಅನುಮತಿಯನ್ನು ನೀಡಲಾಗಿರುವುದು? (ಸಂಪೂರ್ಣವಾಗಿ ವಿವರವಾದ ಮಾಹಿತಿಯನ್ನು ಕೊಡುವುದಾಗಬೇಕು)

ಇ) ಈ ಷೇರು ಹಣವನ್ನು ಎಷ್ಟು ದಿವಸಗಳೊಳಗಾಗಿ ಕೂಡಿಸುವುದಾಗಬೇಕೆಂದು ನಿರ್ಧಾರವನ್ನು ಹಾಕಲಾಗಿರುವುದು?

ಈ) ಕೇಂದ್ರ ಸರ್ಕಾರದವರು ಹೊಸದಾಗಿ ಎಷ್ಟು ಸಕ್ಕರೆ ಕಾರ್ಖಾನೆಗಳನ್ನು ಪ್ರಾರಂಭಿಸಲು ಅನುಮತಿಯನ್ನು ನೀಡಿರುವವರು? (ಸಂಪೂರ್ಣ ಮಾಹಿತಿ ಕೊಡುವುದಾಗಬೇಕು)

ಡಾ ಹೆಗ್ಗಪ್ಪ ಲಮಾಣಿ (ಸಕ್ಕರೆ ಸಚಿವರು) :

ಅ) ರಾಜ್ಯದಲ್ಲಿ ಹೊಸ ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪಿಸಲು 63 ಮನವಿಗಳು ಬಂದಿರುತ್ತವೆ. ವಿವರವನ್ನು ಅನುಬಂಧ 'ಅ' ನಲ್ಲಿ ನೀಡಲಾಗಿದೆ.

ಆ) ಸಹಕಾರ ಕ್ಷೇತ್ರದಲ್ಲಿ 7 ಸಕ್ಕರೆ ಕಾರ್ಖಾನೆಗಳಿಗೆ ಷೇರು ಹಣ ಸಂಗ್ರಹಿಸಲು ಅನುಮತಿಯನ್ನು ನೀಡಲಾಗಿರುತ್ತದೆ. ಇವುಗಳಲ್ಲಿ 6 ಪ್ರಸ್ತಾವನೆಗಳು ಅನುಮತಿ ಪತ್ರ ನೀಡುವಿಕೆಗಾಗಿ ಭಾರತ ಸರ್ಕಾರದ ಮುಂದಿರುತ್ತದೆ ಮತ್ತು ಉಳಿದ ಒಂದು ಪ್ರಸ್ತಾವನೆಯು ಇನ್ನೂ ರಾಜ್ಯ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. ವಿವರಗಳನ್ನು ಅನುಬಂಧ 'ಆ' ದಲ್ಲಿ ನೀಡಲಾಗಿದೆ.

ಇ) ಷೇರು ಹಣವನ್ನು ಕೂಡಿಸುವ ಬಗ್ಗೆ ಗಡುವು ನಿಗಧಿಪಡಿಸಿರುವುದಿಲ್ಲ. ಕೇಂದ್ರ ಸರ್ಕಾರದಿಂದ ಅನುಮತಿ ಪತ್ರ ನೀಡುವ ಬಗ್ಗೆ ಗಡುವು ಇಲ್ಲದಿರುವುದರಿಂದ ಷೇರು ಕೂಡಿಸುವ ಬಗ್ಗೆ ಗಡುವು ನಿಗದಿಪಡಿಸುತ್ತಿಲ್ಲ.

ಈ) ಇತ್ತೀಚೆಗೆ ಕೇಂದ್ರ ಸರ್ಕಾರದವರು ರಾಜ್ಯದಲ್ಲಿ ಹೊಸದಾಗಿ ಸಕ್ಕರೆ ಕಾರ್ಖಾನೆಗಳನ್ನು ಪ್ರಾರಂಭಿಸಲು ಇನ್ನೂ ಯಾವ ಪ್ರಸ್ತಾವನೆಗೂ ಅಧಿಕೃತವಾಗಿ ಅನುಮತಿ ನೀಡಿರುವುದಿಲ್ಲ.

ಅನುಬಂಧ - ಅ

ಕರ್ನಾಟಕ ರಾಜ್ಯದಲ್ಲಿ ಹೊಸ ಸಕ್ಕರೆ ಕಾರ್ಖಾನೆ ಸ್ಥಾಪನೆಗಾಗಿ ಸಲ್ಲಿಸಿರುವ ಪ್ರಸ್ತಾವನೆಗಳ ವಿವರ

ಜಿಲ್ಲೆ		ಪ್ರಸ್ತಾವನೆಯ ಹೆಸರು	ಸಕ್ಕರೆ ಕಾರ್ಖಾನೆ ಸ್ಥಾಪಿಸಲು ಉದ್ದೇಶಿಸಿರುವ ಸ್ಥಳ	ಕ್ಷೇತ್ರ
1. ಬಿಜಾಪುರ :	1.	ರೈತರ ಸ.ಸ.ಕಾ.ನಿ.	ರನ್ನನಗರ	ಸಹಕಾರಿ ವಲಯ
	2.	ಕೃಷ್ಣಾ ಘಟಪ್ರಭಾ ಸ ಸ ಕಾ ನಿ	ಟರಡಲ್	”
	3.	ಮೈಸೂರು ಫ್ರೂಟ್ ಪ್ರಾಡಕ್ಟ್ ಬೆಂಗಳೂರು	ಸ್ಥಳ ಸೂಚಿಸಿಲ್ಲ	ಖಾಸಗಿ ವಲಯ
	4.	ಕೃಷ್ಣಾತೀರ ರೈತರ ಸ ಸ ಕಾ ಜಮಖಂಡಿ	ಚಿಕ್ಕಪಡಸಲಗಿ	ಕೋಆಪರೇಟಿವ್
	5.	ಭೀಮಾಶಂಕರ್ ಸ ಸ ಕಾ ಇಂಡಿ	ಮರಗೂರ್	”
	6.	ಮೆ ಚಾಮುಂಡೇಶ್ವರಿ ಶುಗರ್ಸ್ ಲಿ. ಬೆಂಗಳೂರು	ರನ್ನನಗರ ಮುಧೋಳ್ ತಾ	ಖಾಸಗಿ ವಲಯ
	7.	ದೇವಿ ಪಲನಿ ಸ್ವಾಮಿ ಮತ್ತು ಕಂ ಲಿ ಮದ್ರಾಸ್	ಇಂಡಿ	”
	8.	ಕೆ ಎಸ್ ಐ ಐ ಡಿ ಸಿ ಬೆಂಗಳೂರು	ಬಿಜಾಪುರ ಜಿಲ್ಲೆ	”
	9.	ಶಂಕರ್ ನಾರಾಯಣ ಶುಗರ್ಸ್ ಲಿ.	ಜಮಖಂಡಿ	”
	10.	ಕನೋರಿಯಾ ಇಂಡಸ್ಟ್ರೀಸ್ ಲಿ.	ಆಲಮಟ್ಟಿ	”
	11.	ಮುಧೋಸ್ ಶುಗರ್ಸ್ (ಎಸ್ಬಿ. ಪಾಟೀಲ್)	ಮುಧೋಳ್	”

		12.	ಜಮಖಂಡಿ ಶುಗರ್ಸ್	ಹಿರೇಪಡಸಲಗಿ .	”
2.	ಬೀದರ್	1.	ಅನುಭವ ಮಂಟಪ ಶುಗರ್ಸ್ ಲಿ. ಬೆಂಗಳೂರು	ಬಸವಕಲ್ಯಾಣ	ಖಾಸಗಿ ವಲಯ
		2.	ಮಹಾತ್ಮಾ ಗಾಂಧಿ ಸಸಕಾ ಭಾಲ್ಕಿ	ಹುಂಜಿ ಹಾಚಿಕತ್ರ	ಸಹಕಾರಿ ವಲಯ
		3.	ದಾಲ್ಮಿಯಾ ಸಿಮೆಂಟ್ಸ್ (ಭಾರತ ಲಿ ಹೊಸ ಡೆಲ್ಲ	ಮುತ್ತಂಗಿ, ಹುಮನಾಬಾದ್ ತಾ	ಖಾಸಗಿ ವಲಯ
		4.	ಜುವಾರಿ ಆಗ್ರೋ ಕೆಮಿಕಲ್ಸ್ ಲಿ. ಗೋವಾ	ಹಳ್ಳಿಖೇಡ್, ಹುಮ್ನಾಬಾದ್ ತಾ	”
		5.	ಕೆ ಎಸ್ ಐ ಡಿ ಸಿ ಬೆಂಗಳೂರು	ಬಸವಕಲ್ಯಾಣ	”
		6.	ತಿಕ್ಕವರಪ್ಪ ಶುಗರ್ಸ್ ಹೈದರಾಬಾದ್	ಬಸವಕಲ್ಯಾಣ	”
		7.	ವಾಸುದೇವಿ ಕೈಲಾಸ್	ಸಂಗಮ್	”
		8.	ಬಸವೇಶ್ವರ ಶುಗರ್ಸ್	ಬಸವಕಲ್ಯಾಣ	”
		9.	ಕೋತಾರೀ ಇಂಡಸ್ಟ್ರೀಸ್ ಕಾರ್ಪೊರೇಷನ್	ಬಸವಕಲ್ಯಾಣ	”
		10.	ತಿರು ಅರೋರನ್ ಶುಗರ್ಸ್ ಲಿ	ಬೀದರ್ ತಾಲ್ಲೂಕ್	”
		11.	ಸೌತ ಇಂಡಿಯಾ ವಿಸ್ಕೋಸ್ ಲಿ.	ಬೀದರ್	”
3.	ಉತ್ತರ ಕನ್ನಡ	1.	ಕೆ.ಎನ್. ಗುರುಸ್ವಾಮಿ ಮತ್ತು ಕಂ. ಬೆಂಗಳೂರು	ಮುರುಕವಾಡ,ಹಳಿಯಾಲ ತಾ	”
		2.	ಮೆ: ಗುರುಕೃಪಾ ಅರುಣಾ ಶುಗರ್ಸ್ ಮತ್ತು ಕೆಮಿಕಲ್ಸ್ ಬೆಂಗಳೂರು	ಹಳಿಯಾಲ	”
		3.	ಮೆ : ಇ ಐ ಡಿ ಪ್ಯಾರೀ (ಇಂಡಿಯಾ) ಲಿ. ಮದ್ರಾಸ್	ಹಳಿಯಾಲ	”
		4.	ಮೆ : ಮಲೆನಾಡು ಕಾಳಿಕಾಂಬ ಎಸ್ ಎಸ್ ಕೆ ಲಿ	ಬಸವಳ್ಳಿ	”
		5.	ವಸ್ಟ್ ಕೋಸ್ಟ್ ಪೇಪರ್ ಮಿಲ್ಸ್	ಹಳಿಯಾಳ	ಸಹಕಾರಿ ವಲಯ

4.	ಮಂಡ್ಯ	1.	ಕೊಪ್ಪಾ ಶುಗರ್ಸ್ ಪ್ರೋಜೆಕ್ಟ್ ಮದ್ದೂರು	ಕೊಪ್ಪಾ ಮದ್ದೂರು ತಾ	ಖಾಸಗಿ ವಲಯ
		2.	ಮೆ ಕೆ ಇ ಮೆಯಿದೂ ಪಾತಿಯಾರಾ	ಮಂಡ್ಯ ಜಿಲ್ಲೆ	”
		3.	ಮೆ. ನಾಶಾ ಮತ್ತು ಕಂ ಮದ್ರಾಸ್	ಹಾರಾಗುರ್, ಮಲವಳ್ಳಿ ತಾ :	”
5.	ಬೆಂಗಳೂರು	1.	ಮೂಕಾಂಬಿಕಾ ಶುಗರ್ಸ್	ರಾಮನಗರಂ	ಖಾಸಗಿ ವಲಯ
6.	ಶಿವಮೊಗ್ಗ	1.	ಕರ್ನಾಟಕ ಬ್ರೇವರೀಸ್ ಮತ್ತು ಡಿಸ್ಟಿಲರೀಸ್	ಚೆನ್ನಗಿರಿ	”
		2.	ಮೆ ಸಹ್ಯಾದ್ರಿ ಶುಗರ್ಸ್ ಲಿ.	ಚನ್ನಗಿರಿ	”
		3.	ಸೂರ್ಯಲಕ್ಷ್ಮೀ ಶುಗರ್ಸ್ ಮಿಲ್ಸ್	ಚನ್ನಗಿರಿ	”
		4.	ಮಲೆನಾಡು ಶುಗರ್ಸ್	ಅರಸನಘಟ್ಟ, ಭದ್ರಾವತಿ ತಾ	”
7.	ಮೈಸೂರು	1.	ಮೆ : ಅದಿಪರಾಶಕ್ತಿ ಶುಗರ್ಸ್	ಗುಂಡ್ಲುಪೇಟೆ ಅಥವಾ ಹೆಚ್ ಡಿ ಕೋಟೆ	”
		2.	ರ್‍ಯಾಮ್ಕೋ ಇಂಡಸ್ಟ್ರೀಸ್ ಮದ್ರಾಸ್	ಬನ್ನೂರು ಟಿ ನರಸೀಪುರ ತಾ	”
		3.	ಶ್ರೀವಿದ್ಯಾ	ನಂಜನಗೂಡು	”
		4.	ಶ್ರೀ ಪ್ರೇಂಗುಪ್ತಾ	ನಂಜನಗೂಡು	”
		5.	ಶ್ರೀ ಪಿ.ಕೆ. ಅಹಮದ್	ಮೈಸೂರು ಜಿಲ್ಲೆ	”
		6.	ದಿ ಈಸ್ವರನ್ ಕ್ಯಾಚರ್ ಟೀ ಕಂ ಲಿ	ಬನ್ನೂರು ಟಿ. ನರಸೀಪುರ ತಾ	”
		7.	ಕೆ. ಚಂದ್ರಪ್ರಕಾಶ್	ಬನ್ನೂರು ಟಿ. ನರಸೀಪುರ ತಾ	”
		8.	ಹೆಚ್. ದಾಸಪ್ಪಾ ಮತ್ತು ಸನ್ಸ್ (ಪ್ರೈ) ಲಿ	ಬನ್ನೂರು ಟಿ. ನರಸೀಪುರ ತಾ	”
		9.	ಹೆಚ್ ಯಶೋಧಮ್ಮ	ಬನ್ನೂರು ಟಿ. ನರಸೀಪುರ ತಾ	”
		10.	ಶ್ರೀ ದಯಾನಂದ ಸಾಗರ್	ರಂಗನಾಥಪುರಂ, ಟಿ. ನರಸೀಪುರ ತಾ	”

		11.	ಶ್ರೀ ಚಂದ್ರಶೇಖರ್	ಪೆರಿಯಾಪಟ್ಟಣ	”
		12.	ಶ್ರೀ ಇಂದಿರಾ ಶುಗರ್ಸ್,	ಮೈಸೂರು ಚೌಡಹಳ್ಳಿ	”
		13.	ಶ್ರೀ ಮನೋರಥ ಮರಕೆಂಟೈಲ್ಸ್ ಲಿ.	ಸತ್ಯಗಾಲ	”
8.	ಬೆಳಗಾಂ	1.	ಮಾರ್ಕಂಡೇಯ ಎಸ್ ಎಸ್ ಕೆ	ಬೆಳಗಾಂ ತಾ ಕಾಕಟಿ	ಸಹಕಾರಿ ವಲಯ
		2.	ಕರ್ನಾಟಕ ಸ್ಟೇಟ್ ಇಂಡಸ್ಟ್ರೀಯಲ್ ಇನ್ವೆಸ್ಟ್ಮೆಂಟ್ ಡೆವಲೆಪ್ಪಮೆಂಟ್ ಕಾರ್ಪೊರೇಷನ್ ಲಿ	ಸೆಗುಣ	ಖಾಸಗಿ ವಲಯ
		3.	ಸಿರಗುಪ್ಪಾ ಶುಗರ್ಸ್	ಸಿರಗುಪ್ಪಿ ಅಥಣಿ	”
		4.	ಶ್ರೀ ಎಸ್.ಬಿ. ಪಾಟೀಲ್, ವಿಜಯನಗರ್ ಅಗ್ರೋ ಇಂಡಸ್ಟ್ರೀಸ್ (ಪ್ರೈ) ಲಿ.	ಖಾಗವಾಡ್	”
		5.	ಮೆ: ಸಿಂಹಾದ್ರಿ ಶುಗರ್ಸ್ ಲಿ.	ರಾಯಬಾಗ್	”
		6.	ಮೆ ಆನಂದಿ ಶುಗರ್ಸ್ ಲಿ.	ಸಾರಪ್ಪ, ಹಿಕ್ಕೇರಿ ತಾ	”
		7.	ಮೆ ಸನಾತನ್ ಇನ್ವೆಸ್ಟ್ಮೆಂಟ್ ಕಂ. ಲಿ.	ತೊರ್ಗಲ್ ರಾಮದುರ್ಗ್ ತಾ	”
		8.	ಶ್ರೀ ರಾಮ ಕೋ ಶುಗರ್ ಪ್ಯಾಕ್ಟರಿ ಲಿ	ಬುಗಟೆ ಆಲೂರು, ಹುಕ್ಕೇರಿ ತಾ	”
		9.	ವೆಸ್ಟ್ಕೋಸ್ಟ್ ಪೇಪರ್ ಮಿಲ್ಸ್	ಖಾನಾಪುರ	”
		10.	ಸೋಮೇಶ್ವರ ಸಸಕಾ,ನಿ	ಬೈಲಹೊಂಗಲ	”
9.	ಧಾರವಾಡ	1.	ಮೆ ಮಂಜುನಾಥ ಎಸ್ ಎಸ್ ಕೆ (ನಿ)	ಅರವಟಗಿ ತಾ ಧಾರವಾಡ	ಖಾಸಗಿ ವಲಯ
10.	ಚಿತ್ರದುರ್ಗಾ	1.	ಶ್ರೀ ಎಸ್ ರಾಜಶೇಖರಪ್ಪ	ಮಲೆಬೆನ್ನೂರು ತಾ ಹರಿಹರ	”
11.	ಕೊಡಗು	1.	ಮೆ ಇ ಐ ಡಿ ಪ್ಯಾರೀ (ಇಂಡಿಯಾ ಲಿ)	ಕುಶಾಲನಗರ	”
12.	ಹಾಸನ	1.	ನರಸಿಂಹ ಶುಗರ್ಸ್	ಹೊಳೆನರಸೀಪುರ	”

ಅನುಬಂಧ 'ಆ'

ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಹೊಸ ಸಕ್ಕರೆ ಕಾರ್ಖಾನೆ ಸ್ಥಾಪನೆಗಾಗಿ ಶಿಫಾರಸ್ಸು ಮಾಡಲಾಗಿರುವ ಪ್ರಸ್ತಾವನೆಗಳ ವಿವರ

	ಪ್ರಸ್ತಾವನೆಯ ಹೆಸರು	ಸಕ್ಕರೆ ಕಾರ್ಖಾನೆ ಸ್ಥಾಪಿಸಲು ಉದ್ದೇಶಿಸಿರುವ ಸ್ಥಳ
1.	**ಸಹಕಾರಿ ಕ್ಷೇತ್ರ**	
1)	ಮಹಾತ್ಮಾ ಗಾಂಧಿ ಸಹಕಾರ ಸಕ್ಕರೆ ಕಾರ್ಖಾನೆ ಬಾಲ್ಕಿ. ಬೀದರ್ ಜಿಲ್ಲೆ	ಹಂಚಿ : ಹದಕ್ಯಾಳ, ಬೀದರ್ ಜಿಲ್ಲೆ
2)	ರೈತರ ಸಹಕಾರ ಸಕ್ಕರೆ ಕಾರ್ಖಾನೆ ಮುಧೋಳ್ ಬಿಜಾಪುರ ಜಿಲ್ಲೆ	ರನ್ನ, ನಗರ ಬಿಜಾಪುರ ಜಿಲ್ಲೆ
3)	ಕೃಷ್ಣಾ ಘಟಪ್ರಭಾ ಸಹಕಾರ ಸಕ್ಕರೆ ಕಾರ್ಖಾನೆ ತೆರದಾಳ ಬಿಜಾಪುರ ಜಿಲ್ಲೆ	ತೇರದಾಳ ಬಿಜಾಪುರ ಜಿಲ್ಲೆ
4)	ಕೃಷ್ಣಾ ತೀರ ರೈತರ ಸಹಕಾರ ಸಕ್ಕರೆ ಕಾರ್ಖಾನೆ ಚಿಕ್ಕಪಡಸಲಗಿ, ಜಮಖಂಡಿ ತಾಲ್ಲೂಕು ಬಿಜಾಪುರ ಜಿಲ್ಲೆ	ಚಿಕ್ಕಪಡಸಲಗಿ, ಬಿಜಾಪುರ ಜಿಲ್ಲೆ
5)	ಭೀಮಾ ಶಂಕರ ಸಹಕಾರ ಸಕ್ಕರೆ ಕಾರ್ಖಾನೆ, ಇಂಡಿ ಬಿಜಾಪುರ ಜಿಲ್ಲೆ	ಮರಗೂರು, ಬಿಜಾಪುರ ಜಿಲ್ಲೆ
6)	ಮಾರ್ಕೆಂಡೇಯ ಸಹಕಾರ ಸಕ್ಕರೆ ಕಾರ್ಖಾನೆ	ಕಾಕತಿ, ಬೆಳಗಾಂ ಜಿಲ್ಲೆ.
2.	**ರಾಜ್ಯ ಸ್ಕ್ರೀನಿಂಗ್ ಕಮಿಟಿಯ ಮುಂದೆ ಪರಿಶೀಲನೆಯಲ್ಲಿರುವ ಪ್ರಸ್ತಾವನೆಗಳು :**	
7)	ಸೋಮೇಶ್ವರ ಸಹಕಾರ ಸಕ್ಕರೆ ಕಾರ್ಖಾನೆ	ಬೈಲಹೊಂಗಲ ಬೆಳಗಾವಿ ಜಿಲ್ಲೆ

ರಾಜ್ಯದಲ್ಲಿ ರೇಷ್ಮೆ ಬೆಳೆದ ರೈತರಿಗೆ ಯೋಗ್ಯ ಬೆಲೆ ದೊರೆಯದೇ ಇರುವುದರಿಂದ ರೇಷ್ಮೆ ಉದ್ಯೋಗ ಸ್ಥಗಿತ

636 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ): ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ರೇಷ್ಮೆ ಬೆಳೆಗಾರರಿಗೆ ಯೋಗ್ಯ ಬೆಲೆ ಸಿಗದೆ ಇರುವುದರಿಂದ ರೇಷ್ಮೆ ಉದ್ಯೋಗ ಕಡಿಮೆ ಆಗಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸರ್ಕಾರದವರು ರೇಷ್ಮೆ ಉದ್ಯೋಗ ಕಡಿಮೆಯಾಗದಂತೆ ನಡೆದುಕೊಳ್ಳಲು ಯಾವ ಕ್ರಮ ಕೈಗೊಂಡಿರುವರು?

ಇ) ಬೆಳಗಾವಿ ಜಿಲ್ಲೆಯಲ್ಲಿ ರೇಷ್ಮೆ ಬೆಳೆ ಬೆಳೆಯಲು ಸಾಕಷ್ಟು ಅವಕಾಶಗಳಿದ್ದು ಆ ಜಿಲ್ಲೆಯಲ್ಲಿ ಹೆಚ್ಚಿನ ರೇಷ್ಮೆ ಬೆಳೆ ಬೆಳೆಯಲು ಸರ್ಕಾರದವರು ಹೆಚ್ಚಿನ ಪ್ರೋತ್ಸಾಹವನ್ನು ನೀಡುವರೆ?

ಈ) ಬೆಳಗಾವಿ ಜಿಲ್ಲೆಯಲ್ಲಿ ಎಷ್ಟು ಎಕರೆ ರೇಷ್ಮೆ ಬೆಳೆ ಬೆಳೆಯಲಾಗಿರುವುದು (ತಾಲ್ಲೂಕುವಾರು ಸಂಪೂರ್ಣವಾದ ವಿವರವನ್ನು ಕೊಡುವುದು)

ಡಾ. ಜಿ.ಪರಮೇಶ್ವರ (ರೇಷ್ಮೆ ರಾಜ್ಯ ಸಚಿವರು):

ಅ) ಬಂದಿದೆ.

ಆ) ರೇಷ್ಮೆ ಆಮದಿನಿಂದ ಸ್ಥಳೀಯ ರೇಷ್ಮೆ ಮತ್ತು ಗೂಡಿನ ಬೆಲೆ ಕುಸಿದಿದ್ದು ರೇಷ್ಮೆಗೆ ಹೊಸದಾದ ಜಿಲ್ಲೆಗಳಲ್ಲಿ ಅಂದರೆ ಉತ್ತರ ಕರ್ನಾಟಕದಲ್ಲಿ ಸ್ವಲ್ಪ ಮಟ್ಟಿಗೆ ಅಲ್ಲಲ್ಲಿ ರೇಷ್ಮೆ ಕಡ್ಡಿಯನ್ನು ತೆಗೆದು ಹಾಕಿರುವ ವರದಿಗಳು ಬಂದಿವೆ. ಇದಕ್ಕೆ ಮುಖ್ಯವಾದ ಕಾರಣ ಹೊರದೇಶದಿಂದ ಕಡಿಮೆ ಬೆಲೆಗೆ ದರ್ಜೆಯಿಲ್ಲದೆ ರೇಷ್ಮೆ ಆಮದು ಆಗುತ್ತಿರುವುದು. ಇದರಿಂದಾಗಿ ಗೂಡಿನ ಬೆಲೆಯು ಸಹ ಕಡಿಮೆಯಾಗಿದೆ. ಈ ರೀತಿಯಾಗಿ ಬೆಲೆಗಳು ಕುಸಿಯುತ್ತಿರುವುದನ್ನು ತಪ್ಪಿಸಲು ರಾಜ್ಯ ಸರ್ಕಾರವು ಕೇಂದ್ರ ಸರ್ಕಾರವನ್ನು ರೇಷ್ಮೆ ಆಮದನ್ನು ನಿಲ್ಲಿಸಬೇಕೆಂತಲೂ ಅಥವಾ ಆಮದು ಮಾಡಿಕೊಳ್ಳಲೇಬೇಕೆಂಬ ಪರಿಸ್ಥಿತಿ ಬಂದಲ್ಲಿ

1. ರಫ್ತು ಮಾಡುವ ರೇಷ್ಮೆ ಬೆಲೆ ಆಧಾರದ ಮೇಲೆ ಮುಂಗಡ ರಹದಾರಿ ಕೊಡುವ ಬದಲಾಗಿ ರಫ್ತು ಮಾಡಲು ಉಪಯೋಗಿಸಿದ ರೇಷ್ಮೆ ಪ್ರಮಾಣದ ಮೇಲೆ ರಹದಾರಿ ನೀಡುವುದು.
2. ರೇಷ್ಮೆ ವಸ್ತ್ರಗಳನ್ನು, ಸಿದ್ಧ ಉಡುಪುಗಳನ್ನು ಹಾಗೂ ರೇಷ್ಮೆಯಿಂದ ತಯಾರಿಸಿದ ಇತರೆ ವಸ್ತುಗಳನ್ನು ರಫ್ತು ಮಾಡುವುದಕ್ಕಿಂತ ಮುಂಚೆ ಕೇಂದ್ರ ರೇಷ್ಮೆ ಮಂಡಳಿಯಿಂದ ಪರಿಶೀಲಿಸಿ ಒಪ್ಪಿಗೆ ನೀಡುವುದು.
3. ಆಮದು ಮಾಡಿಕೊಳ್ಳುವ ರೇಷ್ಮೆ ಹಾಗೂ ರಫ್ತು ಮಾಡುವ ರೇಷ್ಮೆ ಸರಕುಗಳ ಪ್ರಮಾಣ 1 .4:1 ಕೆಜಿಗೆ ಬದಲಾಗಿ 1.2:1 ಕೆ.ಜಿ.ಗೆ ಇಳಿಸಲಾಗಿದೆ. ಮತ್ತೆ ಈ ಪ್ರಮಾಣವನ್ನು ಸಹ 1.1 ಕೆ.ಜಿ.ಗೆ ಇಳಿಸಬೇಕೆಂದುಕೋರಿಕೊಳ್ಳಲಾಗಿದೆ. ಹೊರಗಿನಿಂದ ರೇಷ್ಮೆಯನ್ನು ಆಮದು ಮಾಡಿಕೊಳ್ಳಲೇಬೇಕಾದ ಪ್ರಸಂಗ ಬಂದಲ್ಲಿ 2ಎ ಗ್ರೇಡ್ ಮತ್ತು ಅದಕ್ಕಿಂತಲೂ ಅಧಿಕ ಶ್ರೇಣಿಯ ರೇಷ್ಮೆಯನ್ನು ಆಮದು ಮಾಡಿಕೊಳ್ಳಬೇಕೆಂದು ಕೋರಲಾಗಿದೆ.

ಇ) ನೀಡಲಾಗುತ್ತಿದೆ.

ಈ) ಬೆಳಗಾವಿ ಜಿಲ್ಲೆಯಲ್ಲಿ ಹಾಲಿ ಇರುವ ಹಿಪ್ಪುನೇರಳೆ ಬೆಳೆ ತಾಲ್ಲೂಕುವಾರು ಕೆಳಕಂಡಂತೆ ಇದೆ.

ತಾಲ್ಲೂಕು	ಹಿಪ್ಪುನೇರಳೆ ವಿಸ್ತೀರ್ಣ ಎಕರೆಗಳಲ್ಲಿ
ಬೆಳಗಾಂ	218.20
ಬೈಲಹೊಂಗಲ	221.25
ಖಾನಾಪುರ	117. 20
ಹುಕ್ಕೇರಿ	416. 25
ಸವದತ್ತಿ	188.20
ರಾಮದುರ್ಗ	114. 20
ಗೋಕಾಕ್	674.35
ಅಥಣಿ	405.00
ರಾಯಭಾಗ್	100.20
ಚಿಕ್ಕೋಡಿ	712.15
ಒಟ್ಟು	3170.00

ಬಸವಕಲ್ಯಾಣದಲ್ಲಿ ಸೂರ್ಯಕಾಂತಿ ಬೆಳೆ ನಾಶ

646 - ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ):ಮಾನ್ಯ ಕಂದಾಯ ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಲ್ಲಿ ಅದರಲ್ಲೂ ಬಸವಕಲ್ಯಾಣ ತಾಲ್ಲೂಕಿನಲ್ಲಿ ಪ್ರಕೃತಿ ವಿಕೋಪದಿಂದ ಹಾಗೂ ರೋಗದಿಂದ ಸೂರ್ಯಕಾಂತಿ ಬೆಳೆಗೆ ಹಾನಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಬೀದರ್ ಜಿಲ್ಲೆಯಲ್ಲಿ ಆ ಬೆಳೆಯಿಂದ ರೈತರಿಗೆ ಉಂಟಾಗಿರುವ ನಷ್ಟವೆಷ್ಟು?

ಇ) ಸರ್ಕಾರವು ತೊಗರಿ ಬೆಳೆ ಹಾನಿಗೆ ಪರಿಹಾರ ನೀಡಿದ ರೀತಿಯಲ್ಲಿ ಬಸವಕಲ್ಯಾಣ ತಾಲ್ಲೂಕಿನಲ್ಲಿ ಸೂರ್ಯಕಾಂತಿ ಬೆಳೆ ನಾಶದಿಂದ ಹಾನಿಗೊಳಗಾದವರಿಗೆ ಪರಿಹಾರ ನೀಡುತ್ತದೆಯೇ?

ಶ್ರೀ ಧರ್ಮಸಿಂಗ್ (ಕಂದಾಯ ಹಾಗೂ ಸಮಾಜ ಕಲ್ಯಾಣ ಸಚಿವರು):

ಅ) ಹೌದು. ಬಸವಕಲ್ಯಾಣದ ಕೊಹಿನೂರು ಕಂದಾಯ ವೃತ್ತದಲ್ಲಿ ರೋಗದ ಕಾರಣದಿಂದ ಆದ ವರದಿಯಾಗಿದೆ.

ಆ) ಒಟ್ಟು 1,060 ಹೆಕ್ಟೇರ್ ಪ್ರದೇಶದಲ್ಲಿದ್ದ ಸೂರ್ಯಕಾಂತಿ ಬೆಳೆಯು ಹಾನಿಗೊಳಗಾಗಿರುತ್ತದೆ.

ಇ) ಪರಿಹಾರ ನಿಮಯಾವಳಿಗಳ ಪ್ರಕಾರ ಪ್ರಕೃತಿ ವಿಕೋಪದಿಂದ ಹಾನಿಗೊಳಗಾದ ಬೆಳೆಗೆ ಮಾತ್ರ ಸರ್ಕಾರಿ ಆದೇಶ ಸಂಖ್ಯೆ:ಆರ್‌ಡಿ: 167 ಟಿಎನ್‌ಆರ್ 88 ದಿನಾಂಕ 4.12.92 ಮತ್ತು 19.10.93 ತಿದ್ದುಪಡಿ ಆದಂತೆ, ಪರಿಹಾರ ನೀಡುವ ಅವಕಾಶವಿದೆ.

ಬಸವಕಲ್ಯಾಣದಲ್ಲಿ ಸಮಾಜ ಕಲ್ಯಾಣ ಇಲಾಖೆಯು ವತಿಯಿಂದ ನಡೆಸುತ್ತಿರುವ ವಸತಿ ಗೃಹಗಳ ಬಗ್ಗೆ

645 - ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ):ಮಾನ್ಯ ಕಂದಾಯ ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಸವಕಲ್ಯಾಣದಲ್ಲಿ ಸಮಾಜಕಲ್ಯಾಣ ಇಲಾಖೆ ವತಿಯಿಂದ ನಡೆಸುತ್ತಿರುವ ವಸತಿ ಗೃಹಗಳೆಷ್ಟು?

ಆ) ಅವುಗಳ ಪೈಕಿ ಎಷ್ಟು ವಸತಿಗೃಹಗಳು ಖಾಸಗಿ ಕಟ್ಟಡಗಳಲ್ಲಿ ನಡೆಯುತ್ತಿದೆ?

ಇ) ಬಸವಕಲ್ಯಾಣದಲ್ಲಿ ವಸತಿಗೃಹಗಳು ಖಾಸಗೀಕಟ್ಟಡಗಳಲ್ಲಿ ನಡೆಯುತ್ತಿರುವುದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹೊಸ ಕಟ್ಟಡ ಕಟ್ಟಲು ಜಾಗವಿರುವುದರಿಂದ 1994-95ರಲ್ಲಿ ಮಂಜೂರಾತಿ ನೀಡಲು ಸರ್ಕಾರ ಕ್ರಮ ಕೈಗೊಳ್ಳುತ್ತಿದೆಯೇ?

ಶ್ರೀ ಧರ್ಮಸಿಂಗ್ (ಕಂದಾಯ ಹಾಗು ಸಮಾಜ ಕಲ್ಯಾಣ ಸಚಿವರು):

ಅ) ಸಮಾಜ ಕಲ್ಯಾಣ ಇಲಾಖಾ ವತಿಯಿಂದ ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗಾಗಿ ಈ ಕೆಳಕಂಡ ವಿದ್ಯಾರ್ಥಿನಿಲಯಗಳನ್ನು ನಡೆಸಲಾಗುತ್ತಿದೆ.

1.	ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು	-	2
2.	ಮೆಟ್ರಿಕ್‌ನಂತರದ ವಿದ್ಯಾರ್ಥಿನಿಲಯ	-	1
	ಒಟ್ಟು		3

ಆ) ಒಂದು ಮೆಟ್ರಿಕ್‌ನಂತರದ (ಬಾಲಕರ) ವಿದ್ಯಾರ್ಥಿನಿಲಯ ಖಾಸಗಿ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ.

ಇ) ಹೌದು

ಈ) ಖಾಸಗಿ ಕಟ್ಟಡದಲ್ಲಿ ನಡೆಯುತ್ತಿರುವ ಎರಡು ವಿದ್ಯಾರ್ಥಿನಿಲಯಗಳ ಪೈಕಿ ಒಂದು ವಿದ್ಯಾರ್ಥಿ ನಿಲಯಕ್ಕೆ ನಿವೇಶನವನ್ನು ಪಡೆಯಲಾಗಿದೆ. ಮತ್ತೊಂದು ನಿವೇಶನವನ್ನು ಪಡೆಯಲು ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಹಣದ ಲಭ್ಯತೆಯನ್ನು ಆಧರಿಸಿ 94-95ನೇ ಸಾಲಿನಲ್ಲಿ ಸ್ವಂತ ಕಟ್ಟಡ ನಿರ್ಮಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಬಸವಕಲ್ಯಾಣದಲ್ಲಿ ಕೈಗಾರಿಕಾ ಶೆಡ್‌ಗಳ ಸ್ಥಾಪನೆ

648 - ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ): ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಸವಕಲ್ಯಾಣದಲ್ಲಿ ಕರ್ನಾಟಕ ರಾಜ್ಯ ಕೈಗಾರಿಕಾ ಅಭಿವೃದ್ಧಿ ಪ್ರಾಧಿಕಾರದವರು ಎಷ್ಟು ಎಕರೆ ಜಮೀನನ್ನು ಕೈಗಾರಿಕಾ ಶೆಡ್‌ಗಳನ್ನು ಸ್ಥಾಪಿಸುವ ಸಲುವಾಗಿ ರೈತರಿಂದ ಸ್ವಾಧೀನಪಡಿಸಿಕೊಂಡಿದ್ದಾರೆ?

ಆ) ಇಲ್ಲಿಯವರೆಗೆ ರೈತರಿಗೆ ಕೊಟ್ಟಿರುವ ಪರಿಹಾರ ಧನವೆಷ್ಟು?

ಇ) ಇಲ್ಲಿಯವರೆಗೆ ಯಾವುದೇ ಕೆಲಸಗಳನ್ನು ಕೈಗೊಳ್ಳದೇ ಇರಲು ಕಾರಣಗಳೇನು?

ಈ) ಯಾವಾಗ ಕೈಗಾರಿಕಾ ಶೆಡ್‌ಗಳನ್ನು ಸ್ಥಾಪಿಸುವ ಕೆಲಸಗಳನ್ನು ಕೈಗೆತ್ತಿಕೊಳ್ಳಲಾಗುವುದು?

ಶ್ರೀ ರಾಮಲಿಂಗರೆಡ್ಡಿ (ಭಾರಿ ಮತ್ತು ಮಧ್ಯಮ ಕೈಗಾರಿಕಾ ರಾಜ್ಯ ಸಚಿವರು):

ಅ) ಮಂಡಳಿಯು ಬಸವಕಲ್ಯಾಣದಲ್ಲಿ ಕೈಗಾರಿಕಾ ಪ್ರದೇಶವನ್ನು ಅಭಿವೃದ್ಧಿಪಡಿಸುವ ಸಲುವಾಗಿ 91 ಎಕರೆ 9 ಗುಂಟೆ ಜಮೀನನ್ನು ಸ್ವಾಧೀನಪಡಿಸಿಕೊಂಡಿದೆ. ಅದರ ಜೊತೆಗೆ 5 ಎಕರೆ 36 ಗುಂಟೆ ಹೆಚ್ಚುವರಿ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಮಂಡಳಿಯು ತೀರ್ಮಾನ ಕೈಗೊಂಡಿದ್ದು ಭೂ ಸ್ವಾಧೀನ ಕ್ರಮಗಳನ್ನು ಜಾರಿಯಲ್ಲಿವೆ.

ಆ) ಸದರಿ ಜಮೀನಿಗೆ ಒಪ್ಪಂದದ ಪ್ರಕಾರ, ಎಕರೆ ಒಂದಕ್ಕೆ ರೂ. 55,000-00 ದಂತೆ ಒಟ್ಟು ರೂ. 50,17,375-00ಗಳನ್ನು ಭೂ ಮಾಲೀಕರಿಗೆ ವಿತರಣೆ ಮಾಡಲು ಗುಲ್ಬರ್ಗಾ ವಿಶೇಷ ಭೂಸ್ವಾಧೀನ ಅಧಿಕಾರಿಯವರಿಗೆ ದಿನಾಂಕ : 20-3-91ರಂದು ಬಿಡುಗಡೆ ಮಾಡಲಾಗಿ ಸದರಿ ಹಣವನ್ನು ಭೂ ಮಾಲೀಕರಿಗೆ ಹಂಚಲಾಗಿದೆ.

ಇ) ಬೀದರ್ ಜಿಲ್ಲೆಯಲ್ಲಿ ನವಾಬಾದ್ ಕೊಲ್ಲಾರ್ ಗ್ರಾಮಗಳಲ್ಲಿ ಸುಮಾರು 1000 ಎಕರೆ ಜಮೀನು ಹುಮ್ನಾಬಾದ್ ಗ್ರಾಮಗಳಲ್ಲಿ ಸುಮಾರು 500 ಎಕರೆ ಜಮೀನುಗಳಲ್ಲಿ ಈಗಾಗಲೇ ಕೈಗಾರಿಕಾ ಪ್ರದೇಶಗಳನ್ನು ನಿರ್ಮಿಸಿದ್ದು ಕೈಗಾರಿಕಾಭಿವೃದ್ಧಿಯು ಸಾಕಷ್ಟು ಪ್ರಮಾಣದಲ್ಲಿ ಇರುವುದಿಲ್ಲ. ಆದುದರಿಂದ ಬಸವಕಲ್ಯಾಣದಲ್ಲಿ ಕೈಗಾರಿಕಾ ಪ್ರದೇಶವನ್ನು ನಿರ್ಮಿಸುವ ಕಾರ್ಯವು ಸ್ವಲ್ಪ ವಿಳಂಬವಾಗಿರುವುದು.

ಬಸವಕಲ್ಯಾಣದ ಕೈಗಾರಿಕಾ ಪ್ರದೇಶದ ರೂಪರೇಖೆಗಳನ್ನು ಈಗಾಗಲೇ ತಯಾರು ಮಾಡಲಾಗಿದ್ದು ಈ ಪ್ರದೇಶದ ದರವನ್ನು ನಿರ್ಧರಿಸುವ ಬಗ್ಗೆ ಮಂಡಳಿಯ ಕಾಮಗಾರಿ ಸಮಿತಿ (ವರ್ಕ್ಸ್ ಕಮಿಟಿ)ಯ ಸಲಹೆಯನ್ನು ಪಡೆದು ಕೈಗಾರಿಕಾ ಪ್ರದೇಶದ ರೂಪರೇಖೆಗಳನ್ನು ಅನುಮೋದನೆಗಾಗಿ ಸದ್ಯದಲ್ಲಿಯೇ ಮಂಡಳಿಯ ಸಭೆಗೆ ಮಂಡಿಸಲಾಗುವುದು.

ಈ) ಕೈಗಾರಿಕೆಯ ರೂಪರೇಖೆಗಳು ಅನುಮೋದಿತವಾದ ಕೂಡಲೇ ಕೈಗಾರಿಕಾ ಶೆಡ್‌ಗಳ ನಿರ್ಮಾಣ ಕಾರ್ಯವನ್ನು ತೆಗೆದುಕೊಳ್ಳಲಾಗುವುದು.

ಬೆಳಗಾಂ ಜಿಲ್ಲೆ ಸಾಂಬ್ರಾ ಗ್ರಾಮದಲ್ಲಿ ಆಶ್ರಯ ಯೋಜನೆ

594-ಶ್ರೀ ಕೆ.ಸಿ. ಮೂಡಗೇಕರ್ ದೇಸಾಯಿ (ಹಿರೇಬಾಗೇವಾಡಿ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂ ಜಿಲ್ಲೆ ಸಾಂಬ್ರಾ ಗ್ರಾಮ ಸರ್ವೆ ನಂ. 149ನ್ನು ಪಿ.ಡಬ್ಲ್ಯೂಡಿ. ಇಲಾಖೆಯಿಂದ ಶಿಫಾರಸ್ಸಾಗಿ ಆಶ್ರಯ ಯೋಜನೆಗೆ ಪಡೆಯಲಾಗಿದೆಯೇ?

ಆ) ಹಾಗಾದರೆ ಸರ್ಕಾರದ ಕ್ರಮವೇನು?

ಶ್ರೀ ಗೋಪಿನಾಥ್ ಆರ್. ಸಾಂಡ್ರ (ವಸತಿ ಸಚಿವರು):

ಅ) ಬೆಳಗಾಂ ಜಿಲ್ಲೆ ಸಾಂಬ್ರಾ ಗ್ರಾಮ ಸರ್ವೆ ನಂ. 149ರ ಪ್ರಸ್ತಾವನೆ ಲೋಕೋಪಯೋಗಿ ಇಲಾಖೆಯ ಅಧೀನದಲ್ಲಿದ್ದು, ಆಶ್ರಯ ಯೋಜನೆಗಾಗಿ ಶಿಫಾರಸ್ಸು ಮಾಡಲಾಗಿದೆ. ಚೀಫ್ ಎಕ್ಸಿಕ್ಯೂಟಿವ್ ಇಂಜಿನಿಯರ್‌ರವರಲ್ಲಿ ಪ್ರಸ್ತಾವನೆ ಇದ್ದು, ಲೋಕೋಪಯೋಗಿ ಇಲಾಖೆ ಧಾರವಾಡದಿಂದ ಮುಖ್ಯ ಅಭಾಯಂತರರ ಅನುಮತಿ ಪಡೆದ ನಂತರ ಸ್ವತ್ತನ್ನು ಆಶ್ರಯ ಯೋಜನೆಗೆ ಅನುಮತಿ ನೀಡಲಾಗುವುದು.

ಆ) ಧಾರವಾಡ ಲೋಕೋಪಯೋಗಿ ಇಲಾಖೆ ಮುಖ್ಯ ಅಭಿಯಂತರರಿಗೆ ಅನುಮತಿ ನೀಡಲು ಕೋರಲಾಗಿದೆ.

ಭೂ ಸುಧಾರಣೆಯಡಿಯಲ್ಲಿ ಪರಿಶಿಷ್ಟಜಾತಿ, ಪರಿಶಿಷ್ಟ ಪಂಗಡದವರಿಗೆ ಹೆಚ್ಚುವರಿ ಭೂಮಿ

597-ಶ್ರೀ ಕೆ.ಸಿದ್ದಯ್ಯ (ಸಂತೇಮಾರನಹಳ್ಳಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭೂ ಸುಧಾರಣೆಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳು ಮತ್ತು ಇತರರಿಗೆ ಹೆಚ್ಚುವರಿ ಭೂಮಿಯನ್ನು ವಿತರಿಸಲು ಸರ್ಕಾರವು ಯುಕ್ತ ಕ್ರಮ ಕೈಗೊಳ್ಳಲು ಪರಿಶೀಲಿಸಿರುತ್ತದೆಯೇ?

ಆ) ಭೂ ಸುಧಾರಣೆಯಡಿಯಲ್ಲಿ, ಪರಿಶಿಷ್ಟ ಜಾತಿಯವರಿಗೆ ಹೆಚ್ಚುವರಿ ಜಮೀನು ಹಂಚಿರುವುದು ಕಡಿಮೆಯೆಂದು, ಅದನ್ನು ತುಂಬಲು ಸರ್ಕಾರದ ಎಲ್ಲಾ ಹೆಚ್ಚುವರಿ ಜಮೀನನ್ನು ಪರಿಶಿಷ್ಟ ಜಾತಿಯವರಿಗೆ ಹಂಚಲು ಸರ್ಕಾರವು ಪರಿಶೀಲಿಸುವುದೇ?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಮತ್ತು ಕಂದಾಯ ಸಚಿವರು):

ಅ) ಹೌದು.

ಆ) ವಿಲೆಗಾಗಿ ಲಭ್ಯವಾಗುವ ಹೆಚ್ಚುವರಿ ಜಮೀನನ್ನು ಈಗಾಗಲೇ 75 ಶೇಕಡ ಈ ಜನಾಂಗದವರಿಗೆ ಹಂಚಲು ನಿರ್ಧರಿಸಿರುವುದರಿಂದ, ಇನ್ನೂ ಹೆಚ್ಚಿಸುವ ಪ್ರಸ್ತಾವನೆ ಯಾವುದೂ ಪರಿಶೀಲನೆಯಲ್ಲಿಲ್ಲ.

ಸರ್ಕಾರಿ ಸ್ವಾಮ್ಯದ ಲಿಡ್ಕರ್‌ನಲ್ಲಿನ ಅವ್ಯವಹಾರ

570-ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರಿ ಸ್ವಾಮ್ಯದ ಲಿಡ್ಕರ್ ಸಂಸ್ಥೆಯು ಯಾವಾಗ ಪ್ರಾರಂಭವಾಯಿತು?

ಆ) ಅದರಲ್ಲಿ ತೊಡಗಿಸಲಾಗಿರುವ ಬಂಡವಾಳವೆಷ್ಟು? ಹಾಗೂ ಅದರ ಚಟುವಟಿಕೆಗಳೇನು?

ಇ) ಅದು ಪ್ರಾರಂಭಗೊಂಡ ನಂತರದಿಂದ ಇಲ್ಲಿಯವರೆಗೆ ಯಾವ ಯಾವ ವರ್ಷಗಳಲ್ಲಿ ಲಾಭಪಡೆದಿದೆ ಹಾಗೂ ನಷ್ಟವನ್ನು ಅನುಭವಿಸಿದೆ?

ಈ) ಇತ್ತೀಚೆಗೆ ಆ ಸಂಸ್ಥೆಯಲ್ಲಿ ಕೆಲವು ಅವ್ಯವಹಾರಗಳು ಪತ್ತೆಯಾಗಿರುವುದು ನಿಜವೇ?

ಉ) ಹಾಗಿದ್ದಲ್ಲಿ, ಸರ್ಕಾರ ಆ ಬಗ್ಗೆ ಕೈಗೊಂಡಿರುವ ಕ್ರಮಗಳೇನು?

ಊ) ಆ ಸಂಸ್ಥೆಯನ್ನು ಖಾಸಗಿಯವರಿಗೆ ಮಾರಾಟ ಮಾಡುವ ಉದ್ದೇಶವಿದೆಯೇ?

ಶ್ರೀ ಸಿ.ಆರ್. ಸಗೀರ್ ಅಹಮದ್ (ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು):

ಅ) ಲಿಡ್ಕರ್ ಸಂಸ್ಥೆಯು ಅಕ್ಟೋಬರ್ 1976ರಲ್ಲಿ ಪ್ರಾರಂಭವಾಯಿತು.

ಆ) ಸರ್ಕಾರವು ಇದುವರೆವಿಗೂ ತೊಡಗಿಸಿರುವ ಒಟ್ಟು ಬಂಡವಾಳ ರೂ. 138.67 ಲಕ್ಷಗಳಾಗಿರುತ್ತದೆ. ಈ ನಿಗಮದ ಮುಖ್ಯ ಚಟುವಟಿಕೆಗಳು ಈ ಕೆಳಕಂಡಂತಿದೆ:

1) ಕರ್ನಾಟಕ ರಾಜ್ಯದಲ್ಲಿರುವ ಚರ್ಮ ಕುಶಲಕರ್ಮಿಗಳಿಗೆ ಮತ್ತು ಚರ್ಮೋದ್ಯಮದಲ್ಲಿ ತೊಡಗಿಸಿರುವ ಸಣ್ಣ ಪ್ರಮಾಣ ಘಟಕಗಳಿಗೆ ಮಾರುಕಟ್ಟೆ ಸಹಾಯ ಒದಗಿಸುವುದು.

2) ವಿವಿಧ ಯೋಜನೆಗಳಡಿಯಲ್ಲಿ ಚರ್ಮ ಕುಶಲ ಕರ್ಮಿಗಳಿಗೆ ಸೌಲಭ್ಯಗಳನ್ನು ಒದಗಿಸುವುದು.

3) ರಾಜ್ಯದಲ್ಲಿನ ಚರ್ಮೋದ್ಯಮದ ಬೆಳವಣಿಗೆಗೆ ಸಹಾಯ ಮಾಡುವುದು.

ಇ) ಲಿಡ್ಕರ್ ಸಂಸ್ಥೆಯು ಪ್ರಾರಂಭಗೊಂಡ ನಂತರದಿಂದ ಇಲ್ಲಿಯವರೆಗೂ ಯಾವ ಪಕ್ಷದಲ್ಲಿಯೂ ಲಾಭಗಳಿಸಿರುವುದಿಲ್ಲ. ಈ ಸಂಸ್ಥೆಯು 1991-92ನೇ ಸಾಲಿನವರೆಗೆ ಅನುಭವಿಸಿರುವ ಒಟ್ಟು ನಷ್ಟವು ರೂ. 446-00 ಲಕ್ಷಗಳಾಗಿರುತ್ತದೆ.

ಈ) ಕಂಟ್ರೋಲರ್, ಸ್ಟೇಟ್ ಅಕೌಂಟ್ಸ್ ಡಿಪಾರ್ಟ್‌ಮೆಂಟ್ ಇವರ 1987-88ರಿಂದ 1990-91ರ ಕ್ರೆಡಿಟ್ ವರದಿಯಲ್ಲಿ ಕೆಲವು ಲೋಪದೋಷಗಳನ್ನು ವರದಿ ಮಾಡಿದ್ದಾರೆ.

ಉ) ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಜರುಗಿಸಲಾಗುತ್ತಿದೆ.

ಊ) ಈ ನಿಗಮವು ಖಾಸಗೀಕರಣ ಬಗ್ಗೆ ಸದ್ಯಕ್ಕೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

ಕುಡುಬಿ ಜನಾಂಗವನ್ನು ಪರಿಶಿಷ್ಟ ವರ್ಗಕ್ಕೆ ಸೇರಿಸುವ ಬಗ್ಗೆ

500 - ಶ್ರೀ ವಿಜಯಕುಮಾರ್ ಶೆಟ್ಟಿ (ಸುರತ್ಕಲ್) : ಮಾನ್ಯ ಸಮಾಜ ಕಲ್ಯಾಣ ಮತ್ತು ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ "ಕುಡುಬಿ" ಜನಾಂಗದವರನ್ನು ಪರಿಶಿಷ್ಟ ವರ್ಗಕ್ಕೆ ಸೇರಿಸಲು ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆಯೇ?

ಆ) ಮೇಲ್ಕಂಡ ಜನಾಂಗದವರು ಅತ್ಯಂತ ಹಿಂದುಳಿದ ಸ್ಥಿತಿಯಲ್ಲಿದ್ದು ಈ ಜನಾಂಗದ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಉನ್ನತಿಗಾಗಿ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಮತ್ತು ಕಂದಾಯ ಸಚಿವರು):

ಅ) ಇಲ್ಲ.

ಆ) ಸರ್ಕಾರಿ ಆದೇಶ ಸಂಖ್ಯೆ ಎಸ್‌ಡಬ್ಲ್ಯೂ ಎಲ್ 66 ಬಿಸಿಎ 86 ದಿ: 13-10-86 ರನ್ವಯ ಕುಡುಬಿ ಜನಾಂಗವನ್ನು 'ಬಿ' ಗುಂಪಿನಡಿ ಸೇರಿಸಿದ್ದು ಈ ಜನಾಂಗದವರಿಗೆ ವಾರ್ಷಿಕ ಆದಾಯ ರೂ. 10000ಗಳ ಮಿತಿಯೊಳಗೆ ಶೈಕ್ಷಣಿಕ ಸಾಮಾಜಿಕ ಹಾಗೂ ಆರ್ಥಿಕ ಸೌಲಭ್ಯಗಳನ್ನು ಕೆಳಗಿನ ಯೋಜನೆಗಳ ಮೂಲಕ ಒದಗಿಸಲಾಗುವುದು.

1. ಕಾನೂನು ಪದವೀಧರರಿಗೆ ತರಬೇತಿ
2 .ಹಿಂದುಳಿದ ವರ್ಗಗಳ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ನವೋದಯ ಮಾದರಿಯಲ್ಲಿ ವಸತಿ ಶಾಲೆ ಸೌಲಭ್ಯ
3. ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು
4. ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು
5. ಶುಲ್ಕ ವಿನಾಯಿತಿ ಸೌಲಭ್ಯ
6. ಬೆರಳಚ್ಚು ಮತ್ತು ಶೀಘ್ರಲಿಪಿ ತರಬೇತಿ ಭತ್ಯೆ ನೀಡಿಕೆ.
7. ಮೆಟ್ರಿಕ್ ಪೂರ್ವ ಬಾಲಕ:ಬಾಲಕಿಯರ ವಿದ್ಯಾರ್ಥಿ ನಿಲಯಗಳು
8. ಖಾಸಗಿ : ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಿಗೆ ಅನುದಾನ
9. ವಿದ್ಯಾರ್ಥಿನಿಲಯಗಳಲ್ಲಿರುವವರಿಗೆ ಪ್ರೋತ್ಸಾಹಗಳು
10. ಹೊಲಿಗೆ ತರಬೇತಿ ಕೇಂದ್ರಗಳ ನಿರ್ವಹಣೆ
11. ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಆಟದ ಸಾಮಗ್ರಿಗಳ ಪೂರೈಕೆ
12. ಮಹಿಳಾ ಕಲ್ಯಾಣ ಕೇಂದ್ರಗಳು
13. ಮೆಟ್ರಿಕ್. ನಂತರದ ವಿದ್ಯಾರ್ಥಿನಿಲಯಗಳು

ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಕಾರ್ಯಕ್ರಮಗಳ ಮೂಲಕ

1. ಬಂಡವಾಳ ಹೂಡಿಕೆ : ಅಲ್ಪ ಹಣಕಾಸಿನ ಸಾಲಯೋಜನೆ
2. ಸ್ವಯಂ ಉದ್ಯೋಗಕ್ಕಾಗಿ ತರಬೇತಿ
3. ಡಿಪ್ಲೊಮೊ ವಿದ್ಯಾರ್ಥಿಗಳಿಗೆ ಫೋರ್‌ಮನ್‌ಶಿಪ್‌ನಲ್ಲಿ ತರಬೇತಿ
4. ವೃತ್ತಿ ಸಂಬಂಧ ತರಬೇತಿ ಕಾರ್ಯಕ್ರಮಗಳು

ಹುಕ್ಕೇರಿ ಪಟ್ಟಣಕ್ಕೆ ನೀರು ಪೂರೈಕೆ

481 - ಶ್ರೀ ಉಮೇಶ್ ವಿ. ಕತ್ತಿ (ಹುಕ್ಕೇರಿ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಕ್ಕೇರಿ ಪಟ್ಟಣಕ್ಕೆ ಯೋಜಿಸಲಾಗಿರುವ ಕೊಟಬಾಗಿ ನೀರು ಪೂರೈಕೆ ಯೋಜನೆ ಕಾರ್ಯ ಪೂರ್ಣಗೊಂಡಿದೆಯೇ ಹಾಗೂ ಶುದ್ಧ ನೀರು ಒದಗಿಸಲಾಗುತ್ತಿದೆಯೇ?

ಆ) ಅಲ್ಲಿ ನೀರು ಫಿಲ್ಟರೇಶನ್ ಟ್ಯಾಂಕ್ ನಿರ್ಮಿಸಲಾಗಿದೆಯೇ?

ಇ) ಇಲ್ಲವಾದಲ್ಲಿ ಅದನ್ನು ಯಾವಾಗ ನಿರ್ಮಿಸಲಾಗುತ್ತದೆ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):

ಅ) ಜಲ ಶುದ್ಧೀಕರಣಗಾರಕ್ಕೆ ಸಂಬಂಧಪಟ್ಟ ಕಾಮಗಾರಿಗಳನ್ನು ಹೊರತುಪಡಿಸಿ ಹುಕ್ಕೇರಿ ಪಟ್ಟಣಕ್ಕೆ ದಿ: 16-12-92ರಿಂದ ಕೊಟಾಬಾಗಿ ನೀರು ಪೂರೈಕೆ ಯೋಜನೆಯನ್ನು ಕಾರ್ಯಗತಗೊಳಿಸಲಾಗದೆ. ಹಾಗೂ ದಿ: 29-12-92 ರಿಂದ ಕ್ಲೋರಿನ್‌ಯುಕ್ತ ನೀರನ್ನು ಸರಬರಾಜು ಮಾಡಲಾಗುತ್ತಿದೆ

ಆ) ನೀರನ್ನು ಶುದ್ಧಪಡಿಸಲು ಸೆಟ್ಲಿಂಗ್ ಟ್ಯಾಂಕ್ ಹಾಗೂ ಸಂಬಂಧಪಟ್ಟ ಸಿವಿಲ್ ಕಾಮಗಾರಿಗಳು ಮುಗಿದಿದ್ದು ಅವುಗಳಿಗೆ ಯಂತ್ರೋಪಕರಣಗಳ ಪೂರೈಕೆ ಹಾಗೂ ಜೋಡಣೆ ಕಾರ್ಯ ಪ್ರಗತಿಯಲ್ಲಿವೆ.

ಇ) ಸೆಟ್ಲಿಂಗ್ ಟ್ಯಾಂಕ್ ಮತ್ತು ಸಂಬಂಧಪಟ್ಟ ಕಾಮಗಾರಿಗಳನ್ನು ಮೇ 1994ರ ಅಂತ್ಯದ ಒಳಗೆ ಮುಗಿಸಿ ಶುದ್ಧ ನೀರು ಸರಬರಾಜು ಮಾಡಲಾಗುವುದು.

ಹುಕ್ಕೇರಿ ಪುರಸಭೆಗೆ ಸರ್ಕಾರದ ವಿಶೇಷ ಅಭಿವೃದ್ಧಿ ಅನುದಾನ ಬಿಡುಗಡೆ

480 - ಶ್ರೀ ಉಮೇಶ್ ವಿ. ಕತ್ತಿ (ಹುಕ್ಕೇರಿ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಕ್ಕೇರಿ ಪುರಸಭೆಗೆ ಸರ್ಕಾರ ವಿಶೇಷ ಅಭಿವೃದ್ಧಿ ಅನುದಾನ ಬಿಡುಗಡೆ ಮಾಡಿದೆಯೇ?

ಆ) ಇಲ್ಲದಿದ್ದಲ್ಲಿ, ಅದಕ್ಕೆ ಕಾರಣವೇನು? ಮತ್ತು ಯಾವಾಗ ಎಷ್ಟು ಹಣ ಬಿಡುಗಡೆ ಮಾಡಲಾಗುತ್ತದೆ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):

ಅ) ಇಲ್ಲ.

ಆ) ರೂ. 250.00 ಲಕ್ಷಗಳನ್ನು ಬಿಡುಗಡೆ ಮಾಡಿ, ಮುಗಿದುಹೋಗಿರುವುದರಿಂದ ಕೊಡಲಾಗಿಲ್ಲ. ಹೆಚ್ಚುವರಿ ಹಣ ಬಿಡುಗಡೆ ಆದಲ್ಲಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಹುಕ್ಕೇರಿ ತಾಲ್ಲೂಕಿನಲ್ಲಿ (ಸಿಡಿಪಿ) ಬಾಲವಿಕಾಸ ಯೋಜನೆಯಡಿಯಲ್ಲಿ ಅಂಗನವಾಡಿ ಶಿಕ್ಷಕಿಯರ ನೇಮಕಾತಿ

479 - ಶ್ರೀ ಉಮೇಶ್ ವಿ. ಕತ್ತಿ (ಹುಕ್ಕೇರಿ) : ಮಾನ್ಯ ಸಮಾಜ ಕಲ್ಯಾಣ ಮತ್ತು ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಕ್ಕೇರಿ ತಾಲ್ಲೂಕಿನ (ಸಿಡಿಪಿ) ಬಾಲ ವಿಕಾಸ ಯೋಜನೆಯಡಿಯಲ್ಲಿ ಅಂಗನವಾಡಿ ಶಿಕ್ಷಕಿಯರನ್ನು ಶಾಸಕರ ಸಮಿತಿ ಗಮನಕ್ಕೆ ಬರದೆ ನೇಮಕ ಮಾಡಿಕೊಂಡ ಅಭ್ಯರ್ಥಿಗಳೆಷ್ಟು?

ಆ) ಅಂತಹ ಪ್ರಕರಣಗಳಲ್ಲಿ ಸಂಬಂಧಿಸಿದ ಅಧಿಕಾರಿಯ ಮೇಲೆ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಮತ್ತು ಕಂದಾಯ ಸಚಿವರು):

ಅ) ಸರ್ಕಾರದ ಗಮನಕ್ಕೆ ಬಂದಿಲ್ಲ, ಸರ್ಕಾರವು ರಚಿಸಿದ ಅಂಗನವಾಡಿ ಕಾರ್ಯಕರ್ತೆಯರ ಆಯ್ಕೆ ಸಮಿತಿಯಲ್ಲಿ 1991 ಮತ್ತು 1993ರಲ್ಲಿ ಆಯ್ಕೆ ಮಾಡುವಾಗ,

ಮಾನ್ಯ ಶಾಸಕರೂ ಹಾಜರಿದ್ದ ಸಮಯದಲ್ಲೇ ಹುಕ್ಕೇರಿ ಯೋಜನೆಯ ಎಲ್ಲಾ ಅಂಗನವಾಡಿ ಕಾರ್ಯಕರ್ತೆಯರನ್ನು ಆಯ್ಕೆ ಮಾಡಲಾಗಿದೆ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ವಿಶೇಷ ಘಟಕ ಯೋಜನೆ : ಗಿರಿಜನ ಉಪಯೋಜನೆ ಬಗ್ಗೆ

423- ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಸಮಾಜ ಕಲ್ಯಾಣ ಮತ್ತು ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1990-91, 1991-92, 1992-93, 1993-94ನೇ ಸಾಲಿನಲ್ಲಿ ವಿಶೇಷ ಘಟಕ ಯೋಜನೆ : ಗಿರಿಜನ ಉಪಯೋಜನೆ ಅನ್ವಯ (ಸ್ಪೆಷಲ್ ಕಾಂಪೋನೆಂಟ್ ಸ್ಕೀಂ) ರಾಜ್ಯ ಮತ್ತು ಕೇಂದ್ರ ಸರ್ಕಾರದ ಯೋಜನೆಯಡಿಯಲ್ಲಿ ಆಯಾ ಸಾಲಿನ ಆಯವ್ಯಯ ಪಟ್ಟಿಯಲ್ಲಿ ನಿಗದಿ ಮಾಡಿದ ಹಣವೆಷ್ಟು?*

ಆ) *ಅದರಲ್ಲಿ ಖರ್ಚಾದ ಹಣವೆಷ್ಟು?*

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಮತ್ತು ಕಂದಾಯ ಸಚಿವರು):

ಅ) ಮತ್ತು ರಾಜ್ಯ ಯೋಜನೆ ಮತ್ತು ವಿಶೇಷ ಕೇಂದ್ರೀಯ ಸಹಾಯದಡಿ ಒದಗಿಸಿರುವ ಹಣ ಮತ್ತು ಖರ್ಚಾದ ಹಣ ಈ ಕೆಳಗಿನಂತಿದೆ :

ರೂ. ಲಕ್ಷಗಳಲ್ಲಿ

1990-91		1991-92		1992-93		1993-94	
ಒದಗಿಸಿದ ಹಣ	ಖರ್ಚು	ಒದಗಿಸಿದ ಹಣ	ಖರ್ಚು	ಒದಗಿಸಿದ ಹಣ	ಖರ್ಚು	ಒದಗಿಸಿದ ಹಣ	ಖರ್ಚು
ವಿಶೇಷ ಘಟಕ ಯೋಜನೆ							
12834	12072	15316	12478	18736	16989	29352	18072
ಗಿರಿಜನ ಉಪಯೋಜನೆ							
1258	1206	3012	1736	2374	1676	4169	2239

ಶಿಕಾರಿಪುರ ನಗರದ 2 ನೇ ಹಂತದ ಕುಡಿಯುವ ನೀರಿನ ಅಭಿವೃದ್ಧಿ

424-ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1993-94ನೇ ಸಾಲಿನಲ್ಲಿ ಶಿಕಾರಿಪುರ ನಗರದ 2ನೇ ಹಂತದ ಕುಡಿಯುವ ನೀರಿನ ಅಭಿವೃದ್ಧಿ ಯೋಜನೆ ಮಂಜೂರಾತಿ ಮಾಡಲಾಗುವುದೇ?*

ಆ) *ಈ ಬಗ್ಗೆ ಅಂದಾಜು ಪಟ್ಟಿ ಸರ್ಕಾರದ ಕೈಸೇರಿದೆಯೇ? ಹಾಗೂ ಅದರ ಅಂದಾಜಿನ ಮೊತ್ತ ಎಷ್ಟು ?*

ಇ) *ಹೆಚ್ಚು ಜನಸಂಖ್ಯೆ ಇರುವ ಈ ನಗರಕ್ಕೆ ಕುಡಿಯುವ ನೀರಿನ ಅಭಾವವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):

ಅ) ಇಲ್ಲ

ಆ) ಹೌದು.

ರೂ. 49.00 ಲಕ್ಷಗಳ ಅಂದಾಜಿನ ಯೋಜನೆಯು ಸ್ವೀಕೃತಿಗೊಂಡಿದ್ದು, ಪ್ರಸ್ತುತ ಸರ್ಕಾರದ ಪರಿಶೀಲನೆಯಲ್ಲಿದ್ದು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯೊಂದಿಗೆ ಸಮಾಲೋಚಿಸಲಾಗುತ್ತಿದೆ.

ಇ) ಹೌದು.

ಕರ್ನಾಟಕ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ಹಾವೇರಿ ಇದರ ಆಡಳಿತ ಮಂಡಳಿಯ ಚುನಾಯಿತ ಸದಸ್ಯರ ಬಗ್ಗೆ

676 -ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ ಹಾವೇರಿ ಇದರ ಆಡಳಿತ ಮಂಡಳಿಯ ಚುನಾಯಿತ ಸದಸ್ಯರ ಸಂಖ್ಯೆ ಎಷ್ಟು ಹಾಗೂ ಸರ್ಕಾರ ನಾಮನಿರ್ದೇಶನ ಮಾಡಿದ ಸದಸ್ಯರ ಸಂಖ್ಯೆ ಎಷ್ಟು?

ಆ) ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸಿ ಸರ್ಕಾರ ಸದಸ್ಯರನ್ನು ನಾಮನಿರ್ದೇಶನ ಮಾಡಿರುವುದು ನಿಜವೇ?

ಇ) ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಮೇಲ್ಕಂಡ ಕಾರ್ಖಾನೆಯ ಸದಸ್ಯರನ್ನು ನಾಮನಿರ್ದೇಶನ ಮಾಡುವ ಬಗ್ಗೆ ಇದ್ದ ರಿಟ್ ಪೆಟಿಷನ್ ಹಾಗೂ ರಿಟ್ ಅಫೀಲ್‌ಗಳಲ್ಲಿ ಈ ವರೆಗೆ ಆಗಿರುವ ಆದೇಶಗಳೇನು, ಹಾಗೂ ಸರ್ಕಾರ ನ್ಯಾಯಾಲಯದ ಆದೇಶಗಳನ್ನು ಪಾಲಿಸಿದೆಯೇ (ಅದರ ವಿವರ ನೀಡಿ)?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು):

ಅ) ಚುನಾಯಿತ ಸದಸ್ಯರ ಸಂಖ್ಯೆ 18 ಸರ್ಕಾರದ ನಾಮ ನಿರ್ದೇಶನ ಮಾಡಿದ ಸದಸ್ಯರ ಸಂಖ್ಯೆ 11.

ಆ) ಇಲ್ಲ.

ಇ) ಕರ್ನಾಟಕ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ 3517:94 ರಲ್ಲಿ ದಿನಾಂಕ 11-2-94ರಂದು ಸರ್ಕಾರವು ಒಟ್ಟು ಸದಸ್ಯರ $\frac{1}{3}$ ಕ್ಕಿಂತ ಹೆಚ್ಚಿಗೆ ನಾಮ ನಿರ್ದೇಶನ ಮಾಡಬಾರದೆಂದು ಮಧ್ಯಂತರ ಆದೇಶ ನೀಡಿದೆ ಮತ್ತು ರಿಟ್ ಅರ್ಜಿ ಸಂಖ್ಯೆ 4245:94ರಲ್ಲಿ ದಿನಾಂಕ 16-2-94ರಂದು ಆಡಳಿತ ಮಂಡಳಿಯು ಪ್ರಥಮ ಸಭೆ ಹಾಗೂ ಚುನಾವಣೆಯನ್ನು ಕಾನೂನಿನ ಪ್ರಕಾರ ನಡೆಸುವಂತೆ ಹಾಗೂ ಕೇವಲ 6 ಮಂದಿ ನಾಮ ನಿರ್ದೇಶಿತ ಸದಸ್ಯರು ಮಾತ್ರ ಅದರಲ್ಲಿ ಭಾಗವಹಿಸುವಂತೆ ಮಧ್ಯಂತರ ಆದೇಶ ನೀಡಿದೆ. ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠವು ರಿಟ್ ಅಫೀಲ್ ಸಂಖ್ಯೆ ೫೮೦ ಮತ್ತು 581:94 (ಸಿಎಸ್)ಗಳಲ್ಲಿ ದಿನಾಂಕ 3-3-94 ರಂದು ಮಧ್ಯಂತರ ಆದೇಶ ನೀಡಿ ಮೇಲ್ಕಂಡ ರಿಟ್ ಅರ್ಜಿಗಳ ಎರಡೂ ಮಧ್ಯಂತರ ಆದೇಶಗಳಿಗೆ ತಡೆಯಾಜ್ಞೆ ನೀಡಿ ಆಡಳಿತ ಪದಾಧಿಕಾರಿಗಳ ಚುನಾವಣೆಯನ್ನು ಮುಂದೂಡಿರುತ್ತದೆ. ರಿಟ್ ಅರ್ಜಿ ಹಾಗೂ ರಿಟ್ ಅಫೀಲುಗಳು ಇನ್ನೂ ಅಂತಿಮವಾಗಿ ಇತ್ಯರ್ಥವಾಗಿಲ್ಲ.

ಕಡಂದಲೆ ವಿದ್ಯಾರ್ಥಿ ನಿಲಯ ಕುರಿತು

565-ಶ್ರೀ ಕೆ.ಸೋಮಪ್ಪ ಸುವರ್ಣ (ಮೂಡಬಿದರೆ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಡಂದಲೆಯ ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯವು ಬಾಡಿಗೆ ಕಟ್ಟಡದಲ್ಲಿದ್ದು ತುಂಬಾ ತೊಂದರೆ ಉಂಟಾದ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಅಲ್ಲಿಗೆ ಸ್ಥಳದ ಮಂಜೂರಾಗಿದೆಯೇ?

ಇ) ಸರ್ಕಾರವು ಆ ವಿದ್ಯಾರ್ಥಿನಿಲಯಕ್ಕೆ ಸ್ವಂತ ಕಟ್ಟಡ ರಚಿಸಲು ಏನು ಕ್ರಮ ಕೈಗೊಂಡಿದೆ?

ಈ) ಯಾವಾಗ ಅದಕ್ಕೆ ಸ್ವಂತ ಕಟ್ಟಡ ಒದಗಿಸಲಾಗುವುದು?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಮತ್ತು ಕಂದಾಯ ಸಚಿವರು) :

ಅ) ಇಲ್ಲಿರುವ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿದೆ.

ಆ) ಹೌದು. ಸರ್ವೆ ನಂಬರ್ 218-2ರಲ್ಲಿ ಒಂದು ಎಕರೆ ಜಮೀನನ್ನು ಇಲಾಖೆಯ ಸ್ವಾಧೀನಕ್ಕೆ ಪಡೆಯಲಾಗಿದೆ.

ಇ) ಸದರಿ ಸ್ಥಳದಲ್ಲಿ ಕಟ್ಟಲು ಉದ್ದೇಶಿಸಿರುವ ಕಟ್ಟಡದ ನಕ್ಷೆ ಮತ್ತು ಅಂದಾಜು ವೆಚ್ಚ ಈಗಾಗಲೇ ಸಿದ್ಧವಾಗಿದ್ದು, ತಾಂತ್ರಿಕ ಅನುಮೋದನೆ ಪಡೆಯಲಾಗುತ್ತಿದೆ.

ಈ) ಈ ಬಗ್ಗೆ 1994-95ನೇ ಶೈಕ್ಷಣಿಕ ವರ್ಷದಲ್ಲಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು.

ಮೂಡಬಿದ್ರೆ ಮತ್ತು ಮುಲ್ಕಿಯಲ್ಲಿ ಬಾಲಕಿಯರ ವಿದ್ಯಾರ್ಥಿನಿಲಯಗಳು

566-ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದರೆ) : ಮಾನ್ಯ ಸಮಾಜ ಕಲ್ಯಾಣ ಮತ್ತು ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೂಡಬಿದ್ರೆ ಮತ್ತು ಮುಲ್ಕಿಯಲ್ಲಿ ತೆರೆಯಬೇಕೆಂದಿರುವ ವಿದ್ಯಾರ್ಥಿನಿನಿಲಯದ ನಿರ್ಧಾರ ಯಾವ ಹಂತದಲ್ಲಿದೆ.

ಆ) ಸಾಕಷ್ಟು ವಿದ್ಯಾ ಸಂಸ್ಥೆಗಳನ್ನು ಹೊಂದಿರುವ ಆ ನಗರದಲ್ಲಿ ವಿದ್ಯಾರ್ಥಿನಿಯರಿಗೆ ಆಗುವ ತೊಂದರೆಯನ್ನು ಸರ್ಕಾರ ಪರಿಶೀಲಿಸಿದೆಯೇ?

ಇ) ಸರ್ಕಾರ ಯಾವಾಗ ಅಲ್ಲಿ ವಿದ್ಯಾರ್ಥಿನಿ ನಿಲಯ ತೆರೆಯುವುದು?

ಈ) ಅಲ್ಲಿ ವಿದ್ಯಾರ್ಥಿನಿ ನಿಲಯ ತೆರೆಯಲು ಸರ್ಕಾರಕ್ಕೆ ಇರುವ ತೊಂದರೆಯೇನು?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಮತ್ತು ಕಂದಾಯ ಸಚಿವರು):

ಅ) ಪರಿಶೀಲನೆಯಲ್ಲಿದೆ

ಆ) ಹೌದು

ಸರ್ಕಾರಕ್ಕೆ ಯಾವ ತೊಂದರೆಯೂ ಇಲ್ಲ, ಸಂಪನ್ಮೂಲಗಳನ್ನು ಮತ್ತು ಆದ್ಯತೆಯನ್ನು ಗಮನದಲ್ಲಿಟ್ಟುಕೊಂಡು ಈ ಸ್ಥಳದಲ್ಲಿ ವಿದ್ಯಾರ್ಥಿನಿಲಯಗಳನ್ನು ತೆರೆಯಲು ಕಾರ್ಯಕ್ರಮ ಕೈಗೊಳ್ಳಲಾಗುವುದು.

ಭೂ ಸುಧಾರಣೆಯಲ್ಲಿ ಬಾಕಿ ಇರುವ ವಿವಾದಗಳು

567-ಕೆ.ಸೋಮಪ್ಪ ಸುವರ್ಣ (ಮೂಡಬಿದಿರೆ): ಮಾನ್ಯ ಕಂದಾಯ ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂ ಸುಧಾರಣೆಯ ಎಷ್ಟು ಕೇಸುಗಳು ಇತ್ಯರ್ಥವಾಗದೆ ಬಾಕಿ ಉಳಿದಿರುತ್ತವೆ?

ಆ) ಕಳೆದ 20 ವರ್ಷಗಳಿಂದ ತೊಂದರೆ ಅನುಭವಿಸುತ್ತಿರುವ ಆ ಗೇಣಿದಾರರ ರಕ್ಷಣೆಗೆ ಸರ್ಕಾರ ಏನು ಕ್ರಮ ಕೈಕೊಂಡಿದೆ?

ಇ) ನ್ಯಾಯಾಲಯದ ಹಂತದಲ್ಲಿ ತೀರ್ಮಾನವಾಗುವಲ್ಲಿ ತಡವಾಗುತ್ತಿರುವುದರಿಂದ ಸರ್ಕಾರ ಶೀಘ್ರ ನ್ಯಾಯ ಒದಗಿಸಲು ಏನು ಕ್ರಮ ಕೈಗೊಳ್ಳುವುದು?

ಈ) ಇನ್ನೆಷ್ಟು ಸಮಯದೊಳಗೆ ಆ ಕೇಸುಗಳ ತೀರ್ಮಾನವನ್ನು ಮಾಡಲಾಗುವುದು?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಮತ್ತು ಕಂದಾಯ ಸಚಿವರು):

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂಸುಧಾರಣೆಯಡಿ ಒಟ್ಟು 3301 ಪ್ರಕರಣಗಳು ಬಾಕಿ ಇರುತ್ತದೆ.

ಆ) ದಕ್ಷಿಣ ಕನ್ನಡ ಜಿಲ್ಲೆಗೆ ನಾಲ್ಕು ಅಧಿಕ ಭೂ ನ್ಯಾಯ ಮಂಡಲಿಗಳನ್ನು 1992ರಲ್ಲಿ ಮಂಜೂರು ಮಾಡಿರುತ್ತದೆ. ಎಲ್ಲಾ ಭೂ ನ್ಯಾಯ ಮಂಡಲಿಗಳಿಗೂ ಭೂ ಸುಧಾರಣೆ ಪ್ರಕರಣಗಳನ್ನು ಇತ್ಯರ್ಥಗೊಳಿಸಲು ಗುರಿನಿಗಧಿಪಡಿಸಲಾಗಿದೆ. ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥ ಮಾಡುವ ಸಲುವಾಗಿ ಮುಂದಿನ ಸೂಕ್ತಕ್ರಮ ತೆಗೆದುಕೊಳ್ಳಲು ಅಡ್ವೋಕೇಟ್ ಜನರಲ್‌ರವರಿಗೆ ಈಗಾಗಲೇ ಪತ್ರ ಬರೆದಿರುತ್ತೆ. ಇದರ ಜತೆಗೆ ಪ್ರಕರಣಗಳ ಶೀಘ್ರ ವಿಲೇವಾರಿಗೆ ಸಹಾಯವಾಗಲು 'ವಿಶೇಷ ಟ್ರಿಬ್ಯೂನಲ್' Special Appellate Tribunal ರಚಿಸಲೂ ಸಹಾ ತೀರ್ಮಾನಿಸಿದ್ದು, ಈ ಸಂಬಂಧದ ವಿಧೇಯಕ ಸಹಾ ಸದನದಲ್ಲಿ ಈಗಾಗಲೇ ಮಂಡಿಸಲಾಗಿದೆ.

ಈ) ಮೇಲೆ ಹೇಳಿದಂತೆ, ಭೂ ನ್ಯಾಯ ಮಂಡಳಿಗಳಲ್ಲಿ ಬಾಕಿ ಇರುವ ಪ್ರಕರಣಗಳನ್ನು ಇತ್ಯರ್ಥಗೊಳಿಸಲು ಗುರಿ ನಿಗಧಿಪಡಿಸಲಾಗಿದೆ. ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳನ್ನು ಶೀಘ್ರ ಇತ್ಯರ್ಥಗೊಳಿಸಲು ಅನುಕೂಲವಾಗುವಂತೆ ಮುಂದಿನ ಸೂಕ್ತಕ್ರಮ ತೆಗೆದು ಕೊಳ್ಳಲು ಅಡ್ವೋಕೇಟ್ ಜನರಲ್‌ರವರಿಗೆ ಈಗಾಗಲೇ ಪತ್ರ ಬರೆದಿರುತ್ತೆ. ಬಾಕಿ ಇರುವ ಪ್ರಕರಣಗಳನ್ನು ಇಷ್ಟೇ ಕಾಲಮಿತಿಯಲ್ಲಿ ಇತ್ಯರ್ಥ ಮಾಡಲಾಗುತ್ತೆ ಎಂದು ಹೇಳುವುದು ಕಷ್ಟಕರವಾಗುತ್ತೆ. ಆದರೆ ಅವುಗಳ ಶೀಘ್ರ ವಿಲೆಗೆ ತೀವ್ರಕ್ರಮ ಜರುಗಿಸಲಾಗುತ್ತಿದೆ.

ಬೆಂಗಳೂರು ನಗರ ಜಿಲ್ಲೆಯಲ್ಲಿನ ನೋಟಿಫೈಡ್ ಏರಿಯಾಗಳ ಬಗ್ಗೆ

439-ಶ್ರೀ ಕೆ.ಲಕ್ಕಣ್ಣ (ರಾಜಾಜಿನಗರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರ ಜಿಲ್ಲೆಯಲ್ಲಿ ನೋಟಿಫೈಡ್ ಏರಿಯಾಗಳನ್ನು ಮಾಡಿರುವುದು ನಿಜವೇ?

ಆ) ಯಾವ ಯಾವ ಬಡಾವಣೆಗಳು ಈ ನೋಟಿಫೈಡ್ ಏರಿಯಾಕ್ಕೆ ಒಳಪಡುತ್ತವೆ?

ಇ) ಇದು ನಿಜವಾಗಿದ್ದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಾನೂನು ಪ್ರಕಾರ ಉಲ್ಲಂಘನೆಯಾಗುವುದಿಲ್ಲವೇ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):

ಅ) ಹೌದು ಸಂವಿಧಾನದ (74ನೇ ತಿದ್ದುಪಡಿ) ಕಾಯ್ದೆ 1992ರನ್ವಯ ರಾಜ್ಯದ ಮುನ್ಸಿಪಲ್ ನಿಯಮಗಳಿಗೆ 31-5-94ರ ಒಳಗೆ ತಿದ್ದುಪಡಿ ಮಾಡಬೇಕಾಗಿದ್ದು, ಅವರೆವಿಗೆ ಈ ಅಧಿಸೂಚಿತ ಪ್ರದೇಶ ಸಮಿತಿಗಳನ್ನು ತಾತ್ಕಾಲಿಕವಾಗಿ ಸೃಜಿಸಲಾಗಿದೆ.

ಆ) ಅಧಿಸೂಚಿತ ಪ್ರದೇಶ ಸಮಿತಿಗಳಿಗೆ ತಾತ್ಕಾಲಿಕವಾಗಿ ಸೇರ್ಪಡೆಯಾಗಿರುವ ಬಡಾವಣೆಗಳು ಮತ್ತು ಹಳ್ಳಿಗಳ ವಿವರಗಳನ್ನು ಲಗತ್ತಿಸಲಾಗಿದೆ.

ಇ) ಇಲ್ಲ.

ಸಾರಕ್ಕಿ ಅಧಿಸೂಚಿತ ಪ್ರದೇಶ

ಗ್ರಾಮಗಳು : ಬಡಾವಣೆಗಳು

1. ಸಾರಕ್ಕಿ ಕೆರೆ
2. ಜೆ.ಪಿ. ನಗರ
3. ಪುಟ್ಟೇನಹಳ್ಳಿ

4. ಜರಗನಹಳ್ಳಿ
5. ಯಳಚೇನಹಳ್ಳಿ
6. ಬಿಕಾಶಿಪುರ
7. ಕದಿರೇನಹಳ್ಳಿ
8. ಚಿಕ್ಕಕಲ್ಲಸಂದ್ರ
9. ಕತ್ತರಿಗುಪ್ಪೆ
10. ಇಟ್ಟಮಡು
11. ಹೊಸಕೆರೆಹಳ್ಳಿ
12. ಬಿ.ಎಸ್.ಕೆ. 3ನೇ ಹಂತ
13. ಪಂತರಪಾಳ್ಯ
14. ನಾಯುಂಡಹಳ್ಳಿ
15. ಕೆಂಪೇನಹಳ್ಳಿ
16. ಪಟ್ಟಣಗೆರೆ
17. ಹಲಗೆವಡೇರಹಳ್ಳಿ
18. ಚನ್ನಸಂದ್ರ
19. ವಳಗೆರೆಹಳ್ಳಿ
20. ನಾಗದೇವನಹಳ್ಳಿ
21. ಚೂಡೇನಪುರ
22. ಮೈಲಸಂದ್ರ

ಮಡಿವಾಳ ಅಧಿಸೂಚಿತ ಪ್ರದೇಶ

ಗ್ರಾಮಗಳು : ಬಡಾವಣೆಗಳು

1. ಮಡಿವಾಳ
2. ಈಜೀಪುರ
3. 1) ಕೋರಮಂಗಲ ಎನ್.ಎಂ.ಸಿ.ಟಿ.
   2) ಕೋರಮಂಗಲ
4. ಅಗರ
5. ಇಬ್ಬಲೂರು
6. ವೆಂಕೋಜಿರಾವ್ ಖಾನೆ
7. ಹೊಸೂರ್ ಸರ್ಜಾಪುರ ಲೇಔಟ್
8. ಎಳ್ಳುಕುಂಟೆ
9. ಶಿಂಗಸಂದ್ರ
10. ಹೊಂಗಸಂದ್ರ
11. ಬೊಮ್ಮನಹಳ್ಳಿ
12. ರೂಪೇನಹಳ್ಳಿ ಅಗ್ರಹಾರ
13. ಬಿ.ಟಿ.ಎಂ. ಸ್ಕೀಂ (6ನೇ)
14. ಬಿಳೇಕಹಳ್ಳಿ

15. ಅರಕೆರೆ
16. ಹುಳಿಮಾವು
17. ಜಕ್ಕಸಂದ್ರ
18. ಶ್ರೀನಿವಾಗಲು
19. ಶ್ರೀನಿವಾಗಲು ಕೆರೆ (ಬೆ)
20. ದೇವರಚಿಕ್ಕನಹಳ್ಳಿ
21. ನ್ಯಾನಪ್ಪನಹಳ್ಳಿ
22. ಕೋಡಿಚಿಕ್ಕನಹಳ್ಳಿ
23. ಹರಳಕುಂಟೆ

ಬೈಯಪ್ಪನಹಳ್ಳಿ ಅಧಿಸೂಚಿತ ಪ್ರದೇಶ

ಗ್ರಾಮಗಳು : ಬಡಾವಣೆಗಳು

1.ಬೈಯಪ್ಪನಹಳ್ಳಿ

1. ಬೈಯಪ್ಪನಹಳ್ಳಿ
2. ಕತ್ತಾಳೆಪಾಳ್ಯ
3. ಬಂಡೇಪಾಳ್ಯ
4. ನಾಗಯ್ಯನಪಾಳ್ಯ
5. ಸತ್ಯನಗರ

2.ಬಿನ್ನಮಂಗಲ ಮನವರ್ತೆ ಕಾವಲ್

1. ಬಿನ್ನಮಂಗಲೇ ಮನವರ್ತೆ ಕಾವಲ್ ಬಡಾವಣೆ

3.ಬೆನ್ನಿಗಾನಹಳ್ಳಿ

1. ಬೆನ್ನಿಗಾನಹಳ್ಳಿ ಬಡಾವಣೆ
2. ಮೈಕಲ್ ಪಾಳ್ಯ
3. ಉದಯಶೀಲಲ್ ಹಿಂಭಾಗದ ಬಡಾವಣೆ
4. ನಾಗವಾರಪಾಳ್ಯ
5. ನಾಗವಾರಪಾಳ್ಯ ಬಡಾವಣೆ
6. ಸಂಜೀವಪ್ಪ ಬಡಾವಣೆ
7. ಚಿಕ್ಕವೆಂಕಟಪ್ಪ ಬಡಾವಣೆ

4. ಬಾಣಸವಾಡಿ

1. ಬಾಣಸವಾಡಿ ಬಡಾವಣೆ
2. ಥೇರ್ರನ್ ಬಡಾವಣೆ
3. ಸೈನಿಕರ ಬಡಾವಣೆ
4. ಮುನಿನಂಜಪ್ಪ ಬಡಾವಣೆ
5. ಈರಪ್ಪರೆಡ್ಡಿ ಬಡಾವಣೆ
6. ನಾರಾಯಣಸ್ವಾಮಿ ಬಡಾವಣೆ
7. ಜೈ ಜವಾನ್‌ನಗರ ಬಡಾವಣೆ

8. ಪಟೇಲ್ ವೆಂಕಟಸ್ವಾಮಿ ಬಡಾವಣೆ
9. ರಾಮಗೋಪಾಲ್ ಬಡಾವಣೆ
10. ಮುನಿವೆಂಕಟಪ್ಪ ಬಡಾವಣೆ
11. ಪಾಪಯ್ಯ ಬಡಾವಣೆ
12. ಅಂಕರೆಡ್ಡಿ ಬಡಾವಣೆ
13. ಅಯ್ಯಣ್ಣ ರೆಡ್ಡಿ ಬಡಾವಣೆ
14. ರಾಜ್‌ರೆಡ್ಡಿ ಬಡಾವಣೆ
15. ಮುಕುಟಮ್ಮ ಬಡಾವಣೆ
16. ಎ.ಕೆ. ಕಾಲೋನಿ ಮತ್ತು ಜನತಾ ಕಾಲೋನಿ

5. ಚಿನ್ನಸಂದ್ರ ದಾಖಲೆ

1. ಪಾಪಮ್ಮ ಬಡಾವಣೆ
2. ಡಾಕ್ಟರ್ ಗೋಪಾಲರೆಡ್ಡಿ ಬಡಾವಣೆ
3. ಮುನಿನಂಜಪ್ಪ ಬಡಾವಣೆ
4. ಮುನಿನಂಜಮ್ಮ ಬಡಾವಣೆ
5. ಶೇಷಪ್ಪ ಬಡಾವಣೆ

6. ಚಿಕ್ಕಬಾಣಸವಾಡಿ

1. ಪಿಳ್ಳರೆಡ್ಡಿ ಬಡಾವಣೆ
2. ಮುನಿರೆಡ್ಡಿ ಬಡಾವಣೆ
3. ರಘುರಾಮರೆಡ್ಡಿ ಬಡಾವಣೆ

7. ಸುಬ್ಬಯ್ಯನ ಪಾಳ್ಯ

1. ಸಿ.ಎನ್.ಮುನಿಯಪ್ಪ ಬಡಾವಣೆ
2. ಗಾಡಿ ಬಚ್ಚಪ್ಪನ ಬಡಾವಣೆ
3. ಚತ್ರದ ಪಾಪಣ್ಣನ ಬಡಾವಣೆ

8. ವಿಜಿನಪುರ

1. ವಿಜಿನಪುರ
2. ಮಲ್ಲಪ್ಪ ಬಡಾವಣೆ
3. ನರಸಿಂಹರೆಡ್ಡಿ ಬಡಾವಣೆ
4. ಚಿನ್ನಪ್ಪ ಬಡಾವಣೆ
5. ರಾಮಪ್ಪ ಬಡಾವಣೆ
6. ಬೃಂದಾವನ ಬಡಾವಣೆ
7. ರಾಜರಾಜೇಶ್ವರಿ ಬಡಾವಣೆ
8. ಕೋದಂಡರಾಮರೆಡ್ಡಿ ಬಡಾವಣೆ
9. ಸುಬ್ರಮಣಿ ಬಡಾವಣೆ
10. ಜಯರಾಮರೆಡ್ಡಿ ಬಡಾವಣೆ
11. ಶ್ರೀನಿವಾಸರೆಡ್ಡಿ ಬಡಾವಣೆ
12. ವಿಜಿನಾಪುರ ಬಡಾವಣೆ

13. ಚಂದ್ರಶೇಖರ ಬಡಾವಣೆ
14. ಪೈ.ವೆ. ಬಡಾವಣೆ (ಕುವೆಂಪು ನಗರ)
15. ಓ.ಎಂ.ಟಿ.ಆರ್. ಬಡಾವಣೆ
16. ಶ್ರೀನಿವಾಸಪುರ (ಬಿ)
17. ಕೃಷ್ಣಯ್ಯನ ಪಾಳ್ಯ
18. ಸದಾನಂದ ನಗರ
19. ಅರಸಪ್ಪ ಬಡಾವಣೆ

ಮಹದೇವಪುರ ಅಧಿಸೂಚಿತ ಪ್ರದೇಶ

ಗ್ರಾಮಗಳು : ಬಡಾವಣೆಗಳು

ಬಿ. ನಾರಾಯಣಪುರ ಪಂಚಾಯಿತಿ

1. ಬಿ. ನಾರಾಯಣಪುರ
2. ಬಿ. ನಾರಾಯಣಪುರ ಬಡಾವಣೆ
3. ಎ. ನಾರಾಯಣಪುರ ಗ್ರಾಮಠಾಣ
4. ಆಂಧ್ರ ಕಾಲೋನಿ
5. ಜನತಾ ನಿವೇಶನಗಳ ಕಾಲೋನಿ
6. ವಿನೋದ ನಗರ
7. ಐ.ಟಿ.ಐ. ನೌಕರರ ಕಾಲೋನಿ
8. ಎ. ನಾರಾಯಣಪುರ ಬಡಾವಣೆ

ಮಹದೇವಪುರ

1. ಮಹದೇವಪುರ ಗ್ರಾಮಠಾಣ
2. ಮಹದೇವಪುರ ಬಡಾವಣೆ
3. ಗರುಡಾಚಾರ್ ಪಾಳ್ಯ
4. ರೂರಲ್ ಹೌಸಿಂಗ್ ಕೋಆಪರೇಟಿವ್ ಸೊಸೈಟಿ ಕಾಲೋನಿ
5. ಮುನೇಶ್ವರ ಬಡಾವಣೆ
6. ಲಕ್ಷ್ಮೀಸಾಗರ ಬಡಾವಣೆ
7. ಜನತಾನಿವೇಶನಗಳ ಕಾಲೋನಿ
8. ರಾಮಕ್ಕ ಬಡಾವಣೆ

ಹೂಡಿ ಪಂಚಾಯಿತಿ

1. ಹೂಡಿ ಗ್ರಾಮಠಾಣ
2. ಹೂಡಿ ಜನತಾ ನಿವೇಶನ ಕಾಲೋನಿ
3. ರಾಜಪಾಳ್ಯ
4. ಹೂಡಿ ಬಡಾವಣೆ
5. ತಿಗಳರ ಪಾಳ್ಯ

ಸಾದರಮಂಗಲ

1. ಸಾದರಮಂಗಲ ಗ್ರಾಮಠಾಣ
2. ಸಾದರಮಂಗಲ ಜನತಾ ನಿವೇಶನ ಕಾಲೋನಿ
3. ಕೊಡಿಗೇನಹಳ್ಳಿ

ವೈಟ್‌ಫೀಲ್ಡ್ ಪಂಚಾಯಿತಿ

1. ವೈಟ್‌ಫೀಲ್ಡ್ ಗ್ರಾಮಠಾಣ
2. ಢಾಡ್ಸ್ ವರ್ತ್ ಬಡಾವಣೆ
3. ಶ್ರೀಮತಿ ಜಯಗಣಪತಿ ಬಡಾವಣೆ
4. ಡಿಸೆಲ್ಸ್ ಬಡಾವಣೆ
5. ಪುರವಂತರ ಬಡಾವಣೆ
6. ಖಾಯಂ ಬಡಾವಣೆ
7. ವೈಟ್‌ಫೀಲ್ಡ್ ಜನತಾ ಕಾಲೋನಿ
8. ವೈಟ್‌ಫೀಲ್ಡ್ ಬಡಾವಣೆ

ಪಟ್ಟಂದೂರು ಅಗ್ರಹಾರ

1. ಪಟ್ಟಂದೂರು ಅಗ್ರಹಾರ
2. ಆರ್.ಜಿ.ನಾಯ್ಡು ಬಡಾವಣೆ
3. ಹೆಚ್.ಬಿ. ಮುನಿವೆಂಕಟಪ್ಪ ಬಡಾವಣೆ
4. ಕೆ.ಹೆಚ್.ಖಾನ್ ಬಡಾವಣೆ
5. ಅರುಣ ಮಣಿ ಬಡಾವಣೆ
6. ಸುಶೀಲಾರಾವ್ ಬಡಾವಣೆ
7. ಕಲ್ಪನಾ ನಾರಾಯಣ್ ಬಡಾವಣೆ
8. ವೇದಾ ರಾಮಸ್ವಾಮಿ ಬಡಾವಣೆ
9. ಪಟ್ಟಂದೂರು ಜನತಾ ಕಾಲೋನಿ

ನಲ್ಲೂರಹಳ್ಳಿ ಪಂಚಾಯಿತಿ

1. ನಲ್ಲೂರಹಳ್ಳಿ ಗ್ರಾಮಠಾಣ
2. ಕುಂಡ್ಲಹಳ್ಳಿ ಗ್ರಾಮಠಾಣ
3. ಎ.ಸಿ.ಎಸ್. ಬಡಾವಣೆ
4. ಸೊಣ್ಣೇನಹಳ್ಳಿ ಗ್ರಾಮಠಾಣ
5. ಆರ್. ನಾರಾಯಣಪುರ ಗ್ರಾಮಠಾಣ
6. ಚಿನ್ನಪ್ಪನಹಳ್ಳಿ

ಮುನ್ನೇ ಕೊಳಾಳ

1. ಮುನ್ನೇ ಕೊಳಾಳ
2. ಜನತಾ ಕಾಲೋನಿ
3. ಹೊಸ ಬಡಾವಣೆ
4. ಗಾಂಧಿನಗರ
5. ನೆಹರೂ ನಗರ

ಕಾಡು ಗೋಡಿ

1. ಕಾಡುಗೋಡಿ
2. ಶಂಕರ್ ದೀಕ್ಷಿತ್ ಕಾಲೋನಿ
3. ಪಂಚಾಯಿತಿ ಬಡಾವಣೆ
4. ಬೃಂದಾವನ ಬಡಾವಣೆ
5. ವಿಜಯಲಕ್ಷ್ಮಿ ಬಡಾವಣೆ

ಮೇಡಹಳ್ಳಿ

1. ಮೇಡ್ರಹಳ್ಳಿ ಬಡಾವಣೆ
2. ಪಾರ್ವತಿ ನಗರ
3. ಜ್ಯೋತಿ ನಗರ

ಭಟ್ಟರಹಳ್ಳಿ

1. ಭಟ್ಟರಹಳ್ಳಿ
2. ಆರ್.ಎಂ. ಎಸ್. ಕಾಲೋನಿ
3. ಸುಭಾಷ್ ನಗರ್
4. ಜಯರಾಮಶೆಟ್ಟಿ ಲೇಔಟ್

ದೇವರಜೀವನಹಳ್ಳಿ ಅಧಿಸೂಚಿತ ಪ್ರದೇಶ

ಗ್ರಾಮಗಳು : ಬಡಾವಣೆಗಳು

1. ದೇವರಜೀವನಹಳ್ಳಿ
2. ಕಾಡಗೊಂಡನಹಳ್ಳಿ
3. ಹೆಚ್.ಬಿ.ಆರ್. 1ನೇ ಹಂತ
4. ಕಾವಲ್ ಭೈರಸಂದ್ರ
5. ಶ್ಯಾಂಪುರ
6. ಕಾಚರಕನಹಳ್ಳಿ
7. ಲಿಂಗರಾಜಪುರ
8. ಬ್ಯಾಟ ಗುಟ್ಟೇಪಾಳ್ಯ
9. ನಾಗಾವಾರ
10. ಹೆಚ್.ಬಿ.ಆರ್. 2ನೇ ಹಂತ
11. ಹೆಚ್.ಬಿ.ಆರ್. 3ನೇ ಹಂತ
12. ಹೆಚ್.ಬಿ.ಆರ್. ಲೇಔಟ್
13. ಹೆಣ್ಣೂರು

ಹೆಬ್ಬಾಳ ಅಧಿಸೂಚಿತ ಪ್ರದೇಶ

ಗ್ರಾಮಗಳು : ಬಡಾವಣೆಗಳು

1. ಬ್ಯಾಟರಾಯನಪುರ
2. ಕೊಡಿಗೇಹಳ್ಳಿ

3. ಕೊಡಿಗೇಹಳ್ಳಿ ಪ್ಲಾಂಟೇಷನ್
4. ಕೋತಿ ಹೊಸಹಳ್ಳಿ
5. ಅಮೃತಹಳ್ಳಿ
6. ಕೆಂಪಾಪುರ
7. ಒಡ್ಡೇರಪುರ
8. ಅಳ್ಳಾಳ ಸಂದ್ರ
9. ಹೆಬ್ಬಾಳ
10. ತಿಂಡ್ಲು
11. ರಾಮಚಂದ್ರಪುರ
12. ಜಾರಕಬಂಡೆ ಕಾವಲ್ (ಗಂಗಮ್ಮನ ಗುಡಿ)
13. ಜಾರಕಬಂಡೆ ಕಾವಲ್ (ಮಹಮದ್ ಸಾಬ್‌ಪಾಳ್ಯ)
14. ಬಿ.ಇ .ಎಲ್.ಟೌನ್ ಷಿಪ್
15. ಸಿಂಗಾಪುರ
16. ದೊಡ್ಡಬೊಮ್ಮಸಂದ್ರ
17. ಪೂರ್ಣಪುರ
18. ಲೊಟ್ಟೆಗೊಲ್ಲಹಳ್ಳಿ
19. ಭೂಪ ಸಂದ್ರ
20. ನಾಗಶೆಟ್ಟಿಹಳ್ಳಿ
21. ಆರ್.ಎಂ.ವಿಲಾಸ್ 2ನೇ ಸ್ಟೇಜ್
22. ನರಸೀಪುರ
23. ಗೆದ್ದಲಹಳ್ಳಿ
24. ಜಾರಕಬಂಡೆಕಾವಲ್ .. ಸರ್ವೆ ನಂಬರ್ 17 ಮತ್ತು 18 ಹೊರತುಪಡಿಸಿ
25. ಗೇರಹಳ್ಳಿ
26. ಸುಂಕೇನಹಳ್ಳಿ (ಶ್ರೀನಿವಾಸನಗರ, ಇತರೆ)
27. ಚೋಳನಾಯಕನ ಹಳ್ಳಿ
28. ಗುಡ್ಡದಹಳ್ಳಿ
29. ವಿಶ್ವಸ್ಥಾನಾಗೇನಹಳ್ಳಿ
30. ಜಕ್ಕೂರು
31. ವೆಂಕಟಾಪುರ
32. ವೆಂಕಟೇಶಪುರ
33. ಶ್ರೀನಿವಾಸಪುರ

ದಾಸರಹಳ್ಳಿ ಅಧಿಸೂಚಿತ ಪ್ರದೇಶ

ಗ್ರಾಮಗಳು : ಬಡಾವಣೆಗಳು

1. ದಾಸರಹಳ್ಳಿ
2. ಪೀಣ್ಯ
3. ಲಗ್ಗೆರೆ

4. ಚೊಕ್ಕಸಂದ್ರ
5. ಪೀಣ್ಯಾ ಪ್ಲಾಂಟೇಶನ್
6. ಬಾಗಲಕುಂಟೆ
7. ಮಲ್ಲಸಂದ್ರ
8. ನಾಗಸಂದ್ರ
9. ಜಾಲಹಳ್ಳಿ
10. ಕಮ್ಮಗ್ರೊಂಡನಹಳ್ಳಿ
11. ಹೆಚ್.ಎಂ.ಟಿ. ಟೌನ್‌ಶಿಪ್
12. -ಅದೇ-
13. ನೆಲಕದರನಹಳ್ಳಿ
14. ಜಾರಕಬಂಡೆ ಕಾವಲ್ ಸರ್ವೆ ನಂಬರ್ 17 ಮತ್ತು 18 ಮಾತ್ರ.

ಸಾಣೇಗುರುವನಹಳ್ಳಿ ಅಧಿಸೂಚಿತ ಪ್ರದೇಶ

ಗ್ರಾಮಗಳು : ಬಡಾವಣೆಗಳು

1. ಸಾಣೇಗುರುವನಹಳ್ಳಿ
2. ವೆಸ್ಟ್‌ಆಫ್‌ಕಾರ್ಡ್‌ರೋಡ್
3. ಮಲ್ಲತ್ತಹಳ್ಳಿ
4. ಗಂಗೊಂಡನಹಳ್ಳಿ
5. ನಾಗರಬಾವಿ
6. ನಾಗರಭಾವಿ ಲೇಔಟ್
7. ಶ್ರೀ ಗಂಧದ ಕಾವಲ್
8. ಹೆಗ್ಗನಹಳ್ಳಿ
9. ಮೊಳಗಾಲು ನಾಗರಬಾವಿ ಲೇಔಟ್‌ನಲ್ಲಿ
10. ಸಜ್ಜೇಪಾಳ್ಯ ಸೇರಿರುತ್ತೆ.

ಕೋಡಿಬಸವಣ್ಣ ಬಡಾವಣೆ ರಸ್ತೆಯಿಂದ ಮಾಗಡಿ ರೋಡ್ ರಸ್ತೆ ಅಡ್ಡಲಾಗಿ ಕಟ್ಟಿರುವ ಸೇತುವೆ ಕೆಲಸ

440 - ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜಾಜಿನಗರ 6ನೇ ಬ್ಲಾಕ್ ಕೋಡಿ ಬಸವಣ್ಣ ಬಡಾವಣೆ ರಸ್ತೆಯಿಂದ ಮಾಗಡಿರೋಡ್ ರಸ್ತೆಗೆ ಅಡ್ಡಲಾಗಿ ಕಟ್ಟುತ್ತಿರುವ ಸೇತುವೆ ಕೆಲಸ ನಿಂತಿರುವುದು ಸರ್ಕಾರದ ಗಮನದಲ್ಲಿದೆಯೇ?

ಆ) ಹೀಗೆ ಅಪೂರ್ಣವಾಗಿರುವ ಕೆಲಸವನ್ನು ಯಾವಾಗ ಪೂರ್ತಿಗೊಳಿಸಲು ಸರ್ಕಾರ ಇಚ್ಛಿಸಿದೆ.

ಇ) ಈ ಕಾಮಗಾರಿಯನ್ನು ಅರ್ಧಕ್ಕೆ ನಿಲ್ಲಿಸಲು ಕಾರಣಗಳೇನು?

ಈ) ಇದರಿಂದಾಗಿ ಸ್ಥಳೀಯ ನಾಗರೀಕರಿಗೆ ಉಂಟಾಗಿರುವ ತೊಂದರೆಯನ್ನು ಗಣನೆಗೆ ತೆಗೆದುಕೊಂಡು ಆ ಸೇತುವೆಯಕಾರ್ಯವನ್ನು ಶೀಘ್ರವಾಗಿ ಪೂರ್ತಿಗೊಳಿಸಲು ಸರ್ಕಾರದವರು ಕ್ರಮ ಜರುಗಿಸುವರೇ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):

ಅ) ಹೌದು

ಆ) ವಿಷಯ ಅನುಮೋದನೆಗಾಗಿ ನಗರ ಪಾಲಿಕೆಯ ಕಾಮಗಾರಿ ಸ್ಥಾಯಿಸಮಿತಿಯ ಮುಂದಿದೆ. ಸ್ಥಾಯಿ ಸಮಿತಿಯ ಅನುಮೋದನೆ ನಂತರ ಕೆಲಸವನ್ನು ಕೈಗೆತ್ತಿಕೊಳ್ಳಲಾಗುವುದು.

ಇ) ಅಂದಾಜು ಪಟ್ಟಿಯನ್ನು ಮಾರ್ಪಾಡು ಮಾಡಿರುವುದರಿಂದ ಮತ್ತು ಗುತ್ತಿಗೆದಾರರು ಕಾಮಗಾರಿ ಕೆಲಸವನ್ನು ಅಪೂರ್ಣ ಮಾಡಿರುವುದರಿಂದ.

ಈ) ಹೌದು ಬಾಕಿ ಉಳಿದಿರುವ ಕಾಮಗಾರಿ ಕೆಲಸವನ್ನು ಇಲಾಖಾ ವತಿಯಿಂದ ಕಾಮಗಾರಿ ಸಮಿತಿಯ ಅನುಮೋದನೆ ಪಡೆದ ನಂತರ ಪೂರ್ಣಗೊಳಿಸಲಾಗುವುದು.

ಸಬ್-ರಿಜಿಸ್ಟ್ರಾರ್ ಮತ್ತು ಜಿಲ್ಲಾ ನೋಂದಣಿ ಕಛೇರಿಗಳಲ್ಲಿ ಕಂಪ್ಯೂಟರ್ ಅಳವಡಿಕೆ

434-ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ): ಮಾನ್ಯ ಕಂದಾಯ ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಸಬ್-ರಿಜಿಸ್ಟ್ರಾರ್ ಹಾಗೂ ಜಿಲ್ಲಾ ಸಂಘ ಸಂಸ್ಥೆಗಳ ನೋಂದಣಾಧಿಕಾರಿಗಳ ಕಛೇರಿಗಳಲ್ಲಿ ದಾಖಲೆಗಳನ್ನು ಕಾಯ್ದಿರಿಸುವ ವ್ಯವಸ್ಥೆಯು ಸಮರ್ಪಕವಾಗಿದೆಯೇ?

(ಆ) ಎನ್‌ಕಂಬ್ರೆನ್ಸ್ ಸರ್ಟಿಫಿಕೇಟ್ ಮುಂತಾಗಿ ಸಾರ್ವಜನಿಕರು ಪಡೆಯಬಯಸುವ ದಾಖಲೆ ಪತ್ರಗಳನ್ನು ಸದರಿ ಕಛೇರಿಯಲ್ಲಿ ಎಷ್ಟು ದಿನಗಳಲ್ಲಿ ಒದಗಿಸುವ ವ್ಯವಸ್ಥೆ ಸದ್ಯದಲ್ಲಿ ಜಾರಿಯಲ್ಲಿದೆ.

(ಇ) ಈ ವಿಳಂಬವನ್ನು ತಪ್ಪಿಸಲು ಕಂಪ್ಯೂಟರ್ ಅಳವಡಿಕೆ ಮುಂತಾದ ಆಧುನಿಕ ವ್ಯವಸ್ಥೆಯನ್ನು ಸರ್ಕಾರವು ಮಾಡಲಿಚ್ಛಿಸಿದೆಯೇ?

(ಈ) ವಿಶೇಷತಃ ಬೆಂಗಳೂರು ನಗರದಲ್ಲಿ ಇಂತಹಾ ವ್ಯವಸ್ಥೆಯನ್ನು ಮಾಡಿರುವುದರ ಜೊತೆಗೆ ದಾಖಲೆಗಳನ್ನು ಮೈಕ್ರೋ-ಫಿಲಂ ವ್ಯವಸ್ಥೆಯ ಮೂಲಕ ಸುವ್ಯವಸ್ಥಿತವಾಗಿ ಕಾಯ್ದಿರಿಸಲು ಸರ್ಕಾರವು ಕ್ರಮಗಳನ್ನು ಕೈಗೊಳ್ಳುವುದೇ?

ಶ್ರೀ ಧರ್ಮಸಿಂಗ್ (ಕಂದಾಯ ಮತ್ತು ಸಮಾಜ ಕಲ್ಯಾಣ ಸಚಿವರು):

ಅ) ಹಾಲಿ ಇರುವ ವ್ಯವಸ್ಥೆಯು ದಾಖಲೆಗಳನ್ನು ಕಾಯ್ದಿರಿಸಲು ಸಮರ್ಪಕವಾಗಿದೆ.

ಆ) ಎನ್‌ಕಂಬ್ರೆನ್ಸ್ ಸರ್ಟಿಫಿಕೇಟ್‌ಗಳನ್ನು ವಿತರಿಸಲು ಮತ್ತು ನೋಂದಣಿಯಾದ ದಸ್ತಾವೇಜುಗಳನ್ನು ಪ್ರತಿ ಮಾಡಿ ಹಿಂತಿರುಗಿಸಲು 10 ದಿವಸಗಳು ಹಾಗೂ ನಕಲು ಪ್ರತಿಗಳನ್ನು ವಿತರಿಸಲು 3 ದಿವಸಗಳ ಕಾಲಾವಕಾಶವನ್ನು ನಿಗಧಿಪಡಿಸಿದೆ.

ಇ) ಪರಿಶೀಲಿಸಲಾಗುವುದು.

ಈ) ಈ ದಿಸೆಯಲ್ಲಿ ಸರ್ಕಾರ ವೈಜ್ಞಾನಿಕ ಪದ್ಧತಿಯನ್ನು ಅಳವಡಿಸಲು ಸಮಗ್ರ ಚಿಂತನೆ ನಡೆಸಿದೆ.

ರಾಜಾಜಿನಗರಕ್ಕೆ ಸೇರಿದ 10ನೇ ಡಿವಿಜನ್ ತರಕಾರಿ ಮಾರುಕಟ್ಟೆಯ ದುರಸ್ತಿ

441- ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ರಾಜಾಜಿನಗರಕ್ಕೆ ಸೇರಿದ 10ನೇ ಡಿವಿಜನ್ ಸರಕಾರಿ ಮಾರುಕಟ್ಟೆಯ ಕಟ್ಟಡವು ದುರಸ್ತಿಯಾಗಬೇಕಾಗಿದೆ ಎಂಬುದು ಸರಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ, ಈ ಕುರಿತು ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಇ) ದುರಸ್ತಿ ಕಾರ್ಯವನ್ನು ಕಳೆದ 6 ವರ್ಷಗಳಿಂದಲೂ ಮಾಡದೇ ಇರುವುದರಿಂದ ಸಾರ್ವಜನಿಕರಿಗೆ ಮತ್ತು ವ್ಯಾಪಾರಿಗಳಿಗೆ ಉಂಟಾಗುತ್ತಿರುವ ಅನಾನುಕೂಲತೆಗಳನ್ನು ಬಗೆಹರಿಸಲು ಸರಕಾರವು ಸಕಾಲಿಕ ಕ್ರಮಗಳನ್ನು ಜರುಗಿಸಲಿಚ್ಛಿಸುತ್ತದೆಯೇ?

ಈ) ಸದರಿ ಕಟ್ಟಡದ ಮೊದಲ ಅಂತಸ್ತು ದುರಸ್ತಿ ಕಾರ್ಯವನ್ನು ಕೂಡಲೇ ಮಾಡಲು ಸರಕಾರವು ಕ್ರಮಕೈಗೊಳ್ಳುವುದೇ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):

ಅ) ಹೌದು.

ಆ) ಟೆಂಡರ್ಸ್ ಕರೆಯಲಾಗಿದೆ. ಟೆಂಡರ್ಸ್ ಅನುಮೋದನೆ ನಂತರ ಕಾಮಗಾರಿ ಕೆಲಸಗಳನ್ನು ಕೈಗೆತ್ತಿಕೊಳ್ಳಲಾಗುವುದು.

ಇ) -ಅದೇ-

ಈ) ಮೊದಲನೆ ಮಹಡಿ ಕಟ್ಟಲು ನ್ಯಾಯಾಲಯದ ತಡೆಯಾಜ್ಞೆ ಇರುತ್ತದೆ. ತಡೆಯಾಜ್ಞೆ ತೆರವಾದ ನಂತರ ಕ್ರಮತೆಗೆದುಕೊಳ್ಳಲಾಗುವುದು.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) : ಅಧ್ಯಕ್ಷರೇ, ಭಾರತದ ನಿಯಂತ್ರಕರು ಮಹಾಲೇಖಪಾಲಕರು, ನೀಡಿರುವ ಕರ್ನಾಟಕ ಸರ್ಕಾರದ 93ನೇ ಸಾಲಿನ ಮಾರ್ಚ್ 31ರ ಅಂತ್ಯದವರೆಗೆ ವಾಣಿಜ್ಯಕ್ಕೆ ಸಂಬಂಧಿಸಿದ ಲೆಕ್ಕಪರಿಶೋಧನಾ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವರದಿಯನ್ನು ಮಂಡಿಸಲಾಯಿತು.

ನಿಯಮ 334ರ ಮೇರೆಗೆ

1. ತುಮಕೂರು ಜಿಲ್ಲೆ ಶಿರಾ ತಾಲ್ಲೂಕು ಬುಕ್ಕಾಪಟ್ಟಣ ಹೋಬಳಿ ಚಿಕ್ಕಸಂದ್ರ ಕಾವಲ್ ಸರ್ವೆ ನಂ. 1ರ 256 ಎಕರೆ ಜಮೀನನ್ನು ಕಂದಾಯ ಇಲಾಖೆಗೆ ವರ್ಗ ಮಾಡುವುದು.

ಶ್ರೀ ಟಿ. ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಉಪಸಭಾಪತಿಯವರೆ, ತುಮಕೂರು ಜಿಲ್ಲೆ ಶಿರಾ ತಾಲ್ಲೂಕು ಬುಕ್ಕಾಪಟ್ಟಣ ಹೋಬಳಿ ಚಿಕ್ಕಸಂದ್ರ ಕಾವಲ್ ಸರ್ವೆ ನಂ.(1)ರ 256 ಎಕರೆ ಜಮೀನನ್ನು ಅರಣ್ಯ ಇಲಾಖೆಯಿಂದ ಬಿಡುಗಡೆಯಾಗಿದ್ದು ಕಂದಾಯ ಇಲಾಖೆಗೆ ಇದುವರೆಗೂ ವರ್ಗಾವಣೆ ಆಗಿರುವುದಿಲ್ಲ. ಈ ಕಾರಣ ಸ್ವಾಧೀನಾನುಭವದಲ್ಲಿರುವ ಅಕ್ರಮಸಾಗುವಳಿದಾರರಿಗೆ ಜಮೀನು ಮಂಜೂರು ಮಾಡಲು ತೊಂದರೆಯುಂಟಾಗಿರುತ್ತದೆ. ಆದಕಾರಣ ಅರಣ್ಯ ಇಲಾಖೆಯವರು ಕೂಡಲೇ ಕಂದಾಯ ಇಲಾಖೆಗೆ ಈ ಜಮೀನನ್ನು ವರ್ಗಾಯಿಸಲು ಅರಣ್ಯ ಖಾತೆ ಸಚಿವರನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ.ಪಿ. ಕೇಶವಮೂರ್ತಿ (ಅರಣ್ಯ ಖಾತೆ ರಾಜ್ಯ ಸಚಿವರು) : ಮಾನ್ಯ ಉಪಸಭಾಪತಿಯವರೇ,

ಸರ್ಕಾರಿ ಆದೇಶ ಸಂಖ್ಯೆ : ಆರ್‌ಡಿ 32 ಎಲ್‌ಎಡಿ 62 ದಿನಾಂಕ : 1-8-1964ರಂತೆ ಶಿರಾ ತಾಲ್ಲೂಕು ಬುಕ್ಕಾ ಪಟ್ಟಣ ಹೋಬಳಿ ಚಿಕ್ಕಸಂದ್ರ ಕಾವಲ್ ಸರ್ವೆನಂ. 1ರಲ್ಲಿ 253-34 ಎಕರೆ ಅರಣ್ಯ ಪ್ರದೇಶವನ್ನು ಅರಣ್ಯ ಇಲಾಖೆಯಿಂದ ಕಂದಾಯ ಇಲಾಖೆಗೆ ಹಸ್ತಾಂತರಿಸಲಾಗಿತ್ತು. ಆದರೆ, ಪುನಃ ಸರ್ಕಾರಿ ಆದೇಶ ಸಂಖ್ಯೆ :ಆರ್ ಡಿ 247 ಎಲ್‌ಜಿಟಿ 73 ದಿನಾಂಕ : 18-1-7 4ರಲ್ಲಿ ಅರಣ್ಯ ಇಲಾಖೆಯಿಂದ ಕಂದಾಯ ಇಲಾಖೆಗೆ ವರ್ಗಾಯಿಸಲ್ಪಟ್ಟಿದ್ದ, ಸದರಿ 253-34 ಎಕರೆ ಅರಣ್ಯ ಪ್ರದೇಶವನ್ನು ಅರಣ್ಯ ಇಲಾಖೆಯಲ್ಲಿಯೇ ಉಳಿಸಿಕೊಳ್ಳಲಾಗಿರುವ ಪ್ರಯುಕ್ತ, ಪ್ರಶ್ನಿತ 253-34 ಎಕರೆ ಅರಣ್ಯ ಪ್ರದೇಶವನ್ನು ಅರಣ್ಯ ಇಲಾಖೆಯಿಂದ ಕಂದಾಯ ಇಲಾಖೆಗೆ ವರ್ಗಾವಣೆ

ಮಾಡುವ ಪ್ರಮೇಯ ಉದ್ಭವಿಸುವುದಿಲ್ಲ. ಮತ್ತು ಮೇಲ್ಕಂಡ 253-34 ಎಕರೆ ಅರಣ್ಯ ಪ್ರದೇಶದಲ್ಲಿ ಯಾವುದೇ ಒತ್ತುವರಿ ಪ್ರಕರಣಗಳು ಇರುವುದಿಲ್ಲ.

2. ಸ್ನಾತಕೋತ್ತರ ಪರೀಕ್ಷೆಗೆ ಸೇವಾ ನಿರತ ವೈದ್ಯರ ಆಯ್ಕೆ

ಶ್ರೀ ಜಿ. ರಾಜುಗೌಡ (ಹಾನೂರು): ಮಾನ್ಯ ಉಪ ಸಭಾಪತಿಯವರೇ, ಸೇವಾನಿರತ ವೈದ್ಯರುಗಳನ್ನು ಒಂದು ನಿರ್ದಿಷ್ಟ ಅವಧಿಯ ಸೇವೆ ಸಲ್ಲಿಸಿದ ನಂತರ ಅವರುಗಳಿಂದ ಅರ್ಜಿಗಳನ್ನು ಆಹ್ವಾನಿಸಿ ಸ್ನಾತಕೋತ್ತರ ವ್ಯಾಸಂಗಕ್ಕೆ ಆಯ್ಕೆ ಮಾಡುವ ಪದ್ಧತಿ ರೂಢಿಯಲ್ಲಿದೆ. ಆದರೆ ಎರಡು ಸರದಿಯಿಂದಲೂ ಸೇವಾ ನಿರತ ವೈದ್ಯರುಗಳನ್ನು ಸ್ನಾತಕೋತ್ತರ ವ್ಯಾಸಂಗಕ್ಕೆ ಆಯ್ಕೆ ಮಾಡಿಲ್ಲವೆಂದು ತಿಳಿದುಬಂದಿದೆ. ಅದರಿಂದಾಗಿ ಬಹಳಷ್ಟು ಮಂದಿ ಸೇವಾ ನಿರತ ವೈದ್ಯರು ನಿರಾಶರಾಗಿದ್ದಾರೆ. ಈ ಹಿಂದೆ ಸ್ನಾತಕೋತ್ತರ ವ್ಯಾಸಂಗಕ್ಕಾಗಿ ಅರ್ಜಿಗಳನ್ನು ಕರೆದಿದ್ದು ಆಯ್ಕೆ ಮಾಡಲಿಲ್ಲವೆಂದೂ ಕೂಡ ತಿಳಿದುಬಂದಿದೆ.

ಆದ್ದರಿಂದ ಸರ್ಕಾರದ ಸೇವಾ ನಿರತ ವೈದ್ಯರುಗಳ ಬಗ್ಗೆ ತಾಳಿರುವ ಈ ನಿರ್ಲಕ್ಷ್ಯಭಾವನೆಗೆ ಕಾರಣವೇನು ಮತ್ತು ಇದಕ್ಕೆ ಜವಾಬ್ದಾರರು ಯಾರು ಎಂಬ ಬಗ್ಗೆ ಸದನಕ್ಕೆ ಮಾನ್ಯ ಆರೋಗ್ಯ ಸಚಿವರು ಹೇಳಿಕೆ ನೀಡುವುದಲ್ಲದೆ ಅರ್ಹರಾದ ವೈದ್ಯರನ್ನು ಸ್ನಾತಕೋತ್ತರ ವ್ಯಾಸಂಗಕ್ಕೆ ಪ್ರಸಕ್ತ ಸಾಲಿಗೆ ಆಯ್ಕೆ ಮಾಡುವ ಕ್ರಮವನ್ನು ಕೂಡಲೇ ಕೈಗೊಳ್ಳುವ ಬಗ್ಗೆ ಹೇಳಿಕೆ ನೀಡಬೇಕೆಂದೂ ಒತ್ತಾಯಿಸುತ್ತೇನೆ.

ಶ್ರೀ ಜಿ. ರಾಮಕೃಷ್ಣ (ವೈದ್ಯಕೀಯ ಶಿಕ್ಷಣ ಮಂತ್ರಿಗಳು) : ಮಾನ್ಯ ಉಪ ಸಭಾಪತಿಯವರೆ.

ಭಾರತ ಶ್ರೇಷ್ಠ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ : 607:92ರಲ್ಲಿ ಶ್ರೀ ಉನ್ನಿಕೃಷ್ಣನ್ ಮತ್ತು ಇತರರು ಹಾಗೂ ಆಂಧ್ರಪ್ರದೇಶ ಸರ್ಕಾರದ ಪ್ರಕರಣದ ಹಿನ್ನೆಲೆಯಲ್ಲಿ ನೀಡಿದ ತೀರ್ಪಿನ ಪ್ರಕಾರ ವೃತ್ತಿಪರ ಕೋರ್ಸ್‌ಗಳಾದ ವೈದ್ಯಕೀಯ, ದಂತ, ಇಂಜಿನಿಯರಿಂಗ್, ಫಾರ್ಮಸಿ ಮತ್ತು ನರ್ಸಿಂಗ್ ಕೋರ್ಸ್‌ಗಳ ಬಗ್ಗೆ ಪ್ರವೇಶ ನಿಯಮಾವಳಿಯನ್ನು ರಚಿಸಲಾಗಿದೆ. ಈ ಪ್ರವೇಶ ನಿಯಮಾವಳಿಯನ್ನು ಸ್ನಾತಕೋತ್ತರ ವ್ಯಾಸಂಗಕ್ಕೂ ಅನ್ವಯಿಸುವಂತೆ ಪರಿಶೀಲಿಸಲಾಗಿ, ಇದನ್ನು 1994-95ನೇ ಸಾಲಿನಿಂದ ಜಾರಿಗೊಳಿಸುವಂತೆ ಸರ್ಕಾರವು ತೀರ್ಮಾನಿಸಿದ್ದು, ಪ್ರಸ್ತುತ ಈ ಸಾಲಿನಲ್ಲಿಈ ಹಿಂದೆ ಜಾರಿಯಲ್ಲಿದ್ದಂತೆ ಪ್ರವೇಶವನ್ನು ಅಂತಿಮಗೊಳಿಸುವ ಬಗ್ಗೆ ಸರ್ಕಾರದ ಅಧಿಸೂಚನೆ ಸಂಖ್ಯೆ : 603 ಎಂಎಸ್‌ಎಫ್ 93 ದಿನಾಂಕ 7-9-1993ರಲ್ಲಿ ಆದೇಶ ಹೊರಡಿಸಲಾಗಿದೆ. ಹಾಗೂ ಸರ್ಕಾರದ ಪಾಲಿನ ಸ್ನಾತಕೋತ್ತರ ಕೋರ್ಸಿಗೆ ಪ್ರವೇಶ ಪರೀಕ್ಷೆಯನ್ನು ದಿನಾಂಕ 26-9-1993ರಂದು ನಡೆಸಲಾಗಿದೆ.

ಈ ಮಧ್ಯೆ ಕರ್ನಾಟಕ ರಾಜ್ಯ ಜ್ಯೂನಿಯರ್ ಡಾಕ್ಟರ್ ಅಸೋಸಿಯೇಷನ್‌ರವರು ಸರ್ಕಾರದ ಈ ನಿಲುವನ್ನು ಪ್ರಶ್ನಿಸಿ, ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ : 33351:93 ದಾಖಲಿಸಿದ್ದು, ಸ್ನಾತಕೋತ್ತರ ಪ್ರವೇಶವನ್ನು ಅರ್ಹತಾ ಆಧಾರದ ಮೇಲೆ ಭರ್ತಿ ಮಾಡುವಂತೆ ಕೋರಿರುತ್ತಾರೆ. ರಾಜ್ಯ ಉಚ್ಚನ್ಯಾಯಾಲಯವು ಸದರಿ ರಿಟ್ ಅರ್ಜಿಗೆ ತಡೆ ಆಜ್ಞೆ ನೀಡಲು ನಿರಾಕರಿಸಿದ್ದರಿಂದ, ಅರ್ಜಿದಾರರು ಉಚ್ಚ ನ್ಯಾಯಾಲಯದಲ್ಲಿ ರಿಟ್ ಅಪೀಲ್ ಸಂಖ್ಯೆ : 2357 ಮತ್ತು 2358:93ನ್ನು ದಾಖಲಿಸಿದ್ದು, ರಾಜ್ಯ ಉಚ್ಚ ನ್ಯಾಯಾಲಯವು 24-9-1993ರ ಆದೇಶದಲ್ಲಿ ನೀಡಿದ ತಡೆ ಆಜ್ಞೆಯಲ್ಲಿ ವೈದ್ಯಕೀಯ ಶಿಕ್ಷಣ ನಿರ್ದೇಶಕರಿಗೆ ಮತ್ತು ಸರ್ಕಾರಕ್ಕೆ ಸ್ನಾತಕೋತ್ತರ ಪರೀಕ್ಷೆಯ ಫಲಿತಾಂಶವನ್ನು ಈ ಬಗ್ಗೆ ನ್ಯಾಯಾಲಯದ ತೀರ್ಪು ಹೊರಬೀಳುವವರೆಗೆ ಪ್ರಕಟಿಸದಂತೆ ಆದೇಶಿಸಿದೆ. ಹಾಗೂ ಸಂಬಂಧಪಟ್ಟ ವಿಶ್ವವಿದ್ಯಾನಿಲಯ ಮತ್ತು ಕಾಲೇಜುಗಳಿಗೆ ಸ್ನಾತಕೋತ್ತರ ವ್ಯಾಸಂಗಕ್ಕಾಗಿ ಅಭ್ಯರ್ಥಿಗಳನ್ನು ಮುಂದಿನ ಆದೇಶದವರೆಗೂ ಸೇರ್ಪಡೆ ಮಾಡದಂತೆ ನಿರ್ದೇಶನ ನೀಡಿದೆ.

ರಾಜ್ಯ ಉಚ್ಚ ನ್ಯಾಯಾಲಯದ ದಿನಾಂಕ 7-11-1993ರ ಆದೇಶದಲ್ಲಿ ತಡೆಆಜ್ಞೆಯನ್ನು ತೆರವು ಮಾಡಿದ್ದು ಈ ಬಗ್ಗೆ ಸಲ್ಲಿಸಿರುವ ರಿಟ್ ಅಪೀಲುಗಳನ್ನು ವಜಾ ಮಾಡಿರುತ್ತಾರೆ. ಅರ್ಜಿದಾರರು ಈ ಬಗ್ಗೆ ಸುಪ್ರೀಂಕೋರ್ಟಿನಲ್ಲಿ ಎಸ್.ಎಲ್.ಪಿ. ಸಂಖ್ಯೆ : 18061:93 ಮತ್ತು 18062 :93ಅನ್ನು ದಾಖಲಿಸಿದ್ದು, ಸುಪ್ರೀಂಕೋರ್ಟ್ ದಿನಾಂಕ 19-11-1993ರ ಆದೇಶದಲ್ಲಿ ಸ್ನಾತಕೋತ್ತರದ ಪ್ರವೇಶದ ಬಗ್ಗೆ ಹೊರಡಿಸಿರುವ ಸರ್ಕಾರ ಅಧಿಸೂಚನೆ ಸಂಖ್ಯೆ : ಆಕುಕ 603 ಎಂಎಸ್‌ಎಫ್ 93 ದಿನಾಂಕ 7-9-1993ಕ್ಕೆ ತಡೆಆಜ್ಞೆಯನ್ನು ನೀಡಿದೆ. ತದನಂತರ ಸುಪ್ರೀಂ ಕೋರ್ಟ್ ದಿನಾಂಕ 14-1-1994ರ ಆದೇಶದಲ್ಲಿ ಈ ತಡೆಆಜ್ಞೆಯನ್ನು ತೆರವು ಮಾಡಿರುವುದರಿಂದ ಸ್ನಾತಕೋತ್ತರ ಪರೀಕ್ಷೆಗಾಗಿ ಮುಕ್ತ ಪಾಲಿನಲ್ಲಿ ಪರೀಕ್ಷೆಗೆ ಕುಳಿತಿರುವ ಅಭ್ಯರ್ಥಿಗಳ ಫಲಿತಾಂಶವನ್ನು ಈಗಾಗಲೇ ಪ್ರಕಟಿಸಿದೆ. ಹಾಗೂ ಸ್ನಾತಕೋತ್ತರ ತರಬೇತಿಗಾಗಿ ಸೇವಾ ನಿರತ ವೈದ್ಯರ ಆಯ್ಕೆ ಪಟ್ಟಿಯನ್ನು ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರಿಂದ ಸ್ವೀಕೃತವಾಗಿದೆ.

ಸ್ನಾತಕೋತ್ತರ ವ್ಯಾಸಂಗದ ಮುಕ್ತ ಸ್ಪರ್ಧೆಯ ಆಯ್ಕೆ ಪಟ್ಟಿಯನ್ನು ಎಲ್ಲಾ ಪ್ರಮುಖ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಈಗಾಗಲೇ ಪ್ರಕಟಿಸಲಾಗಿದೆ. ಹಾಗೂ ಸೇವಾ ನಿರತ ವೈದ್ಯರನ್ನು ಸ್ನಾತಕೋತ್ತರ ವ್ಯಾಸಂಗಕ್ಕಾಗಿ ಪ್ರತಿನಿಯೋಜಿಸುವ ಬಗ್ಗೆ ಕೆಲವೇ ದಿನಗಳಲ್ಲಿ ಆಯ್ಕೆ ಪಟ್ಟಿ ಮಾಡಿ ಅಂತಿಮಗೊಳಿಸಲಾಗುವುದು.

3. ಕೆ.ಆರ್.ಪೇಟೆಯ ಪ್ರಥಮದರ್ಜೆ ಕಾಲೇಜಿಗೆ 93-94ನೇ ಸಾಲಿಗೆ ಸೇರಲು ಪ್ರವೇಶ ಅವಕಾಶ ಮಾಡಿಕೊಡುವುದು.

ಶ್ರೀ ಎಂ. ಪುಟ್ಟಸ್ವಾಮಿಗೌಡ (ಕೆ.ಆರ್.ಪೇಟೆ) : ಮಾನ್ಯ ಅಧ್ಯಕ್ಷರೇ ಕೃಷ್ಣರಾಜಪೇಟೆಯಲ್ಲಿರುವ ಪ್ರಥಮ ದರ್ಜೆ ಕಾಲೇಜಿಗೆ 1993-94ನೇ ಸಾಲಿಗೆ ಸೇರಲು ಸುಮಾರು ವಿದ್ಯಾರ್ಥಿಗಳಿಂದ 700 ಅರ್ಜಿಗಳು ಬಂದಿದ್ದು ಪ್ರವೇಶಾವಕಾಶಕ್ಕೆ ತುಂಬಾ ತೊಂದರೆಯಾಗಿತ್ತು. ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿ ವಿದ್ಯಾರ್ಥಿನಿಯರು ಬೇರೆಕಡೆ ಹೋಗಿ ವ್ಯಾಸಂಗ ಮಾಡಲು ಪಕ್ಕದ ಕಾಲೇಜುಗಳಲ್ಲೂ ಹೆಚ್ಚಿಗೆ ಒತ್ತಡವಿದ್ದು ದಾಖಲಾತಿ ಸಾಧ್ಯವಿಲ್ಲವಾದುದರಿಂದ ದಿನಾಂಕ 13.7.93ರಂದು ಒಂದು ಮನವಿಯನ್ನು ಸಲ್ಲಿಸಿದ್ದು ದಿನಾಂಕ 13.7.93ರಂದು ಮುಖ್ಯಮಂತ್ರಿಯವರು ಕರೆದಿದ್ದ ಮಂಡ್ಯ ಜಿಲ್ಲಾ ಅಭಿವೃದ್ಧಿ ಸಮಿತಿಯಲ್ಲಿ ಪ್ರಸ್ತಾಪನೆ ಮಾಡಿದ್ದೇನೆ. ನನ್ನ ಪ್ರಸ್ತಾವನೆಯ ನಂತರ ಸಭೆಯಲ್ಲಿ ಮುಖ್ಯಮಂತ್ರಿಗಳು ವಿಶೇಷಾಧಿಕಾರಿಗಳಿಗೆ ಸೂಚನೆ ನೀಡಿ ಸಂಬಂಧಪಟ್ಟ ಇಲಾಖೆಯವರಿಗೆ ತ್ವರಿತವಾಗಿ ಮಂಜೂರಾತಿ ನೀಡುವಂತೆ ಆದೇಶ ನೀಡಿದ್ದಾರೆ. ಇದಾದನಂತರ ಸಂಬಂಧಪಟ್ಟ ವಿದ್ಯಾ ಇಲಾಖೆಯವರ ಮಾಡಿದ ಭರವಸೆಯ ಮೇಲೆ ಕಾಲೇಜಿನ ಪ್ರಾಂಶುಪಾಲರು ಹಳ್ಳಿಗೆ ಬಂದು ತರಗತಿಯನ್ನು ತೆಗೆದು ವಿದ್ಯಾರ್ಥಿಗಳನ್ನು ದಾಖಲ್ಮಾಡಿಕೊಂಡಿರುತ್ತಾರೆ. ಆದರೆ ಈವರೆಗೆ ಇಲಾಖೆಯ ವತಿಯಿಂದ ಮಂಜೂರಾತಿ ಲಭಿಸದೆ ವಿದ್ಯಾರ್ಥಿಗಳು ತುಂಬಾ ತೊಂದರೆಗೊಳಗಾಗಿರುತ್ತಾರೆ. ನನಗೆ ತಿಳಿದಿರುವಂತೆ ಕೆಲವು ಕಾಲೇಜುಗಳಿಗೆ ಅನುಮತಿ ದೊರಕಿದೆ ಎಂದು ತಿಳಿದುಬಂದಿದೆ. ಈ ಕಾರಣ ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ಪರೀಕ್ಷೆಗಳು ಸಮೀಪಿಸುತ್ತಿರುವುದರಿಂದ ಕೂಡಲೇ ಮಂಜೂರಾತಿ ನೀಡಿ ವಿದ್ಯಾರ್ಥಿಗಳು ಪರೀಕ್ಷೆಗೆ ಕೂಡಲು ಅವಕಾಶ ಮಾಡಿಕೊಡಬೇಕೆಂದು ತಮ್ಮ ಮೂಲಕ ಈ ಹೇಳಿಕೆಯನ್ನು ನೀಡುತ್ತಿದ್ದೇನೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮಾನ್ಯ ಉನ್ನತ ಶಿಕ್ಷಣ ಸಚಿವರ ಪರವಾಗಿ ನೀಡಿದ ಹೇಳಿಕೆ)

ಮಾನ್ಯ ಅಧ್ಯಕ್ಷರೇ 1993-94ನೇ ಸಾಲಿನಲ್ಲಿ ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲ್ಲೂಕಿನ ಪ್ರಥಮದರ್ಜೆ ಕಾಲೇಜಿನಲ್ಲಿ ಪ್ರಥಮ ಬಿ.ಎ. ತರಗತಿ (ಇತಿಹಾಸ,

ಅರ್ಥಶಾಸ್ತ್ರ ಮತ್ತು ಸಮಾಜಶಾಸ್ತ್ರ) ವಿಭಾಗಕ್ಕೆ ಅತಿ ಹೆಚ್ಚಿನ ಸಂಖ್ಯೆಯ ಅರ್ಜಿಗಳು ಪ್ರವೇಶಾವಕಾಶ ಕೋರಿ ಸ್ವೀಕೃತವಾದ್ದರಿಂದ ಕಾಲೇಜು ಶಿಕ್ಷಣ ನಿರ್ದೇಶನಾಲಯವು ಮೈಸೂರು ವಿಶ್ವವಿದ್ಯಾನಿಲಯದ ಅನುಮತಿಯನ್ನು ಕಾಯ್ದಿರಿಸಿ ಒಂದು ಹೆಚ್ಚುವರಿ ವಿಭಾಗವನ್ನು ತೆರೆದು ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶವನ್ನು ನೀಡಲಾಗಿದೆ. ಸಾರ್ವಜನಿಕ ಒತ್ತಾಯದ ಮೇಲೆ ಕಾಲೇಜಿನ ಪ್ರಾಂಶುಪಾಲರು ಪ್ರತ್ಯೇಕವಾಗಿ ಮೈಸೂರು ವಿಶ್ವವಿದ್ಯಾನಿಲಯವನ್ನು ಸದರಿ ಕಾಲೇಜಿನಲ್ಲಿ ಹೆಚ್ಚುವರಿ ವಿಭಾಗವನ್ನು ತೆರೆಯಲಾದ ಬಗ್ಗೆ ಮತ್ತು ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ನೀಡಲು ಅನುಮತಿ ಕೋರಿರುತ್ತಾರೆ. ವಿಶ್ವವಿದ್ಯಾನಿಲಯದ ಅನುಮತಿಯನ್ನು ಕಾಯಲಾಗಿದೆ. ಅನುಮೋದನೆ ದೊರೆತ ಕೂಡಲೇ ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಕೂಡಲು ಅವಕಾಶ ಕಲ್ಪಿಸಲಾಗುವುದು.

ಉಪಾಧ್ಯಕ್ಷರು : ಈಗ 1994-95ನೇ ಸಾಲಿನ ಆಯವ್ಯಯದ ಮೇಲಿನ ಮುಂದುವರಿದ ಸಾಮಾನ್ಯ ಚರ್ಚೆ

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಸನ್ಮಾನ್ಯ ಉಪಾಧ್ಯಕ್ಷರೇ ನಾನು ಸಂಬಂಧಪಟ್ಟ ಯಾವುದೇ ಕಾಗದಪತ್ರಗಳನ್ನು ಇವತ್ತು ತಂದಿಲ್ಲವಾದ ಕಾರಣ ಸೋಮವಾರಕ್ಕೆ ಮಾತನಾಡಲು ಅವಕಾಶವನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಖಾಸಗಿ ಕಾರ್ಯಕಲಾಪಗಳು

ಖಾಸಗಿ ಸದಸ್ಯರ ವಿಧೇಯಕ :

1993ರ ಕರ್ನಾಟಕ ಸಹಕಾರಿ ಸಂಘಗಳ (ತಿದ್ದುಪಡಿ) ವಿಧೇಯಕ ಮಂಡನೆಗೆ ಅನುಮತಿ ಕೋರಿಕೆ

ಪ್ರೊ. ಎಂ.ಡಿ. ನಂಜುಂಡಸ್ವಾಮಿ (ಧಾರವಾಡ-ಗ್ರಾಮಾಂತರ) : ಮಾನ್ಯ ಅಧ್ಯಕ್ಷರೇ 1993ನೇ ಸಾಲಿನ ಸಹಕಾರಿ ಸಂಘಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ಕೋರುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ "1993ರ ಸಹಕಾರಿ ಸಂಘಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಮಾನ್ಯ ಅಧ್ಯಕ್ಷರೇ 1993ನೇ ಸಾಲಿನ ಸಹಕಾರಿ ಸಂಘಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೇ, ತಾವು ಹೇಗೂ ಈ ತಿದ್ದುಪಡಿಯನ್ನು ತರುತ್ತಿದ್ದೀರಿ. ಅದಕ್ಕಾಗಿ ಪ್ರೊ ನಂಜುಂಡಸ್ವಾಮಿಯವರು ಇದನ್ನು ಮಂಡಿಸತಕ್ಕಂಥ ಅವಶ್ಯಕತೆ ಇಲ್ಲವೆಂದು ನಾನು ಭಾವಿಸುತ್ತೇನೆ. ಏತಕ್ಕೆಂದರೆ ಸಮಗ್ರವಾದಂಥ ಒಂದು ತಿದ್ದುಪಡಿಯನ್ನು ಸರ್ಕಾರದವರೇ ತರುತ್ತಿರುವಾಗ ಇದನ್ನು ಒಂದು ಕ್ರಾಂತಿಕಾರಕವಾಗಿ ಬದಲಾವಣೆ ಮಾಡಿ ತರಬೇಕೆಂದು ಮಾನ್ಯ ಸದಸ್ಯರು ತರುವಂಥ ಅವಶ್ಯಕತೆ ಇಲ್ಲವೆಂದು ನನ್ನ ಭಾವನೆ. ನೋಟೀಸ್ ಕಳುಹಿಸಿ ಅದನ್ನು ಮಾಡಲ್ ಬೈಲಾಗಳಲ್ಲಿ ಮತ್ತು ಪ್ಲಾನಿಂಗ್ ಕಮೀಷನರ್‌ರವರ ಒಂದು ಹೇಳಿಕೆಯ ಆಧಾರದ ಮೇಲೆ ಕೆಲವು ತಿದ್ದುಪಡಿಗಳನ್ನು ಮಾಡಿ ಅವುಗಳನ್ನು ಕೂಡ ಸಭೆಯ ಮುಂದೆ ತಂದಿದ್ದಾರೆ.

ನಾವು ಕೂಡ ಅದನ್ನು ಗಮನದಲ್ಲಿಟ್ಟುಕೊಂಡು ಯಾವ್ಯಾವುದು ಅವಶ್ಯಕತೆ ಇದೆ, ಯಾವುದು ತೆಗೆದುಕೊಳ್ಳಬಹುದು, ಯಾವುದನ್ನು ನಾವು ಅದರಲ್ಲಿ ಸೇರಿಸಬಹುದೆಂಬುದನ್ನು ಸಮಗ್ರವಾಗಿ ವಿಚಾರ ಮಾಡಿ ನಾವು ಈಗಾಗಲೇ ಪ್ರಿಂಟ್‌ಗೆ ಕೊಟ್ಟಿದ್ದೇವೆ. ಅದು ಪ್ರಿಂಟ್ ಆದ ತಕ್ಷಣ ಸದನದಲ್ಲಿ ಚರ್ಚೆಗೆ ಬರುತ್ತದೆ. ಅದರಲ್ಲಿ ಅವರು ಸಲಹೆ ಮಾಡಬಹುದು, ಅವರಿಗೆ ಬೇಕಾದುದು ಹೇಳಬಹುದು. ಅದಕ್ಕಾಗಿ ಈ ಒಂದು ಮಸೂದೆಯನ್ನು ಅವರು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಇದು ಸರಳವಾದ ವಿಚಾರ ಅಲ್ಲ. ಸರ್ಕಾರ ಯಾವುದೋ ಒಂದು ಮಸೂದೆಯನ್ನು ತಯಾರು ಮಾಡಿರಬಹುದು. ನೀವು ಮಂಡಿಸಿ, ಅದಕ್ಕೆ ನನ್ನ ಅಡ್ಡಿ ಇಲ್ಲ. ಆದಕಾರಣ ಈ ಮಸೂದೆಯನ್ನು ನಾನು ಈ ಸಂದರ್ಭದಲ್ಲಿ ಮಂಡಿಸುತ್ತಿದ್ದೇನೆ. ದಯವಿಟ್ಟು ಇದನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ಕೇಳಿ ಕೊಳ್ಳುತ್ತೇನೆ.

ಉಪಾಧ್ಯಕ್ಷರು : ಈಗ ಸದನದ ಕಲಾಪವನ್ನು ಮುಂದೂಡಿ ಮತ್ತೆ 29-3-94ರ ಸೋಮವಾರ ಬೆಳಿಗ್ಗೆ 11 ಗಂಟೆಗೆ ಸೇರುತ್ತದೆ.

(ಸದನವು ಸಂಜೆ 4 ಗಂಟೆ 16 ನಿಮಿಷಕ್ಕೆ ಮುಕ್ತಾಯವಾಗಿ, ಪುನಃ ದಿನಾಂಕ 28ನೇ ಮಾರ್ಚ್ 1994ರ ಸೋಮವಾರದಂದು ಬೆಳಿಗ್ಗೆ 11 ಗಂಟೆಗೆ ಸೇರಲು ನಿಶ್ಚಯವಾಯಿತು)

(+ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ಅನುಬಂಧ I

ಕರ್ನಾಟಕ ವಿಧಾನ ಸಭೆ

ಒಂಬತ್ತನೇ ವಿಧಾನ ಸಭೆ

(ಹನ್ನೊಂದನೇ ಅಧಿವೇಶನ)

ಕರ್ನಾಟಕ ಸಹಕಾರಿ ಸಂಘಗಳ (ತಿದ್ದುಪಡಿ) ವಿಧೇಯಕ, 1993

(1993ರ ವಿಧಾನ ಸಭಾ ವಿಧೇಯಕ ಸಂಖ್ಯೆ 47)

1959ರ ಕರ್ನಾಟಕ ಸಹಕಾರಿ ಸಂಘಗಳ ಅಧಿನಿಯಮವನ್ನು ಮತ್ತಷ್ಟು ತಿದ್ದುಪಡಿ ಮಾಡುವ ವಿಧೇಯಕ.

ಇದರಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ 1959ರ ಕರ್ನಾಟಕ ಸಹಕಾರಿ ಸಂಘಗಳ ಅಧಿನಿಯಮವನ್ನು (1959ರ ಕರ್ನಾಟಕ ಅಧಿನಿಯಮ ಸಂಖ್ಯೆ 11) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ, ಇದು ಭಾರತ ಗಣರಾಜ್ಯದ ನಲವತ್ನಾಲ್ಕನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದು.

1. ಪ್ರಸ್ತಾವನೆ : 1ನೇ ಪ್ರಕರಣಕ್ಕೆ ಮುಂಚೆ, ಈ ಮುಂದಿನಂತೆ ಸೇರಿಸತಕ್ಕುದು

1. ಸಹಕಾರಿ ಸಂಘಗಳು ಸ್ವಇಚ್ಛೆಯಿಂದ ರೂಪುಗೊಳ್ಳಲು ಮತ್ತು ಸ್ವಸಹಾಯ ಹಾಗೂ ಪರಸ್ಪರ ನೆರವು ಆಧಾರದ ಮೇಲೆ ಪ್ರಜಾ ಸಂಸ್ಥೆಗಳಾಗಿ ಪ್ರಜಾಸತ್ತಾತ್ಮಕವಾಗಿ ಕಾರ್ಯನಿರ್ವಹಿಸುವಂತೆ ಅನುಕೂಲ ಮಾಡುವ ಮತ್ತು ಅವುಗಳ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿ ಹೆಚ್ಚಿಸಲು ಜನತೆಯು ಸಮರ್ಥವಾಗುವ ಸಲುವಾಗಿ ಇದು ಭಾರತ ಗಣರಾಜ್ಯದ ನಲವತ್ನಾಲ್ಕನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕುದು.

i) ಸಹಕಾರಿ ಸಂಘಗಳ ರಾಜ್ಯ ನೀತಿ : ಎ) ಭಾರತ ಸಂವಿಧಾನದಲ್ಲಿ ಸ್ಥಾಪಿಸಿರುವಂತೆ, ರಾಜ್ಯದ ನೀತಿಯ ನಿರ್ದೇಶಕ ತತ್ವಗಳನ್ನು ಈಡೇರಿಸುವ ದಿಸೆಯಲ್ಲಿ ಸಮಾನತೆ, ಸಾಮಾಜಿಕ ನ್ಯಾಯ ಮತ್ತು ಆರ್ಥಿಕ ಅಭಿವೃದ್ಧಿಯ ಸಾಧನಗಳಾಗಿರುವ ಸಹಕಾರಿ ಸಂಘಗಳಿಗೆ ಉತ್ತೇಜನ ನೀಡುವುದು ರಾಜ್ಯದ ನೀತಿಯಾಗಿರತಕ್ಕುದು.

ಬಿ) ರಾಜ್ಯವು ಸಹಕಾರಿ ಸಂಘಗಳ ವ್ಯವಸ್ಥಾಪನೆ ಮತ್ತು ಕಾರ್ಯಾಚರಣೆಯಲ್ಲಿ ಮಧ್ಯೆ ಪ್ರವೇಶಿಸತಕ್ಕದಲ್ಲ, ಈ ದಿಸೆಯಲ್ಲಿ ರಾಜ್ಯವು ಸಹಕಾರಿ ಸಂಘಗಳನ್ನು, ಪರಸ್ಪರ ನೆರವು ಮತ್ತು ಸಹಕಾರಿ ತತ್ವಗಳನ್ನು ಆಧರಿಸಿ ತಮ್ಮ ವ್ಯವಹಾರ ನಿರ್ವಹಿಸುತ್ತಿರುವ ಅವುಗಳ ಆರ್ಥಿಕ ಮತ್ತು ಸಮಾಜಿಕ ಅಭಿವೃದ್ಧಿಗೆ ಸದಸ್ಯರ ಸ್ವಾಮ್ಯದ ವ್ಯವಸ್ಥಾಪನೆಯ ಮತ್ತು ನಿಯಂತ್ರಣದಲ್ಲಿರುವ ಪ್ರಜಾಸತ್ತಾತ್ಮಕ ಸಂಸ್ಥೆಗಳೆಂದು ಮಾನ್ಯ ಮಾಡತಕ್ಕುದು.

ii) ಸಹಕಾರಿ ತತ್ವಗಳು : ಈ ಮುಂದಿನವುಗಳು ಸಹಕಾರಿ ತತ್ವಗಳಾಗಿರತಕ್ಕುದು

(ಎ) ಸಹಕಾರಿ ಸಂಘದ ಸದಸ್ಯತ್ವವನ್ನು ಸ್ವಇಚ್ಛೆಯಿಂದ ಪಡೆದುಕೊಳ್ಳತಕ್ಕುದು ಮತ್ತು ಸಹಕಾರಿ ಸಂಘದ ಉಪಯೋಗ ಪಡೆಯಲು ಮತ್ತು ಸದಸ್ಯತ್ವದ ಹೊಣೆಗಾರಿಕೆಗಳನ್ನು ಅಂಗೀಕರಿಸಲು ಇಚ್ಛಿಸುವ ಎಲ್ಲ ವ್ಯಕ್ತಿಗಳಿಗೂ ಯಾವುದೇ ನಿರ್ಬಂಧವಿಲ್ಲದೆ ಅಥವಾ ಯಾವುದೇ ಸಾಮಾಜಿಕ, ರಾಜಕೀಯ ಜನಾಂಗೀಯ ಧಾರ್ಮಿಕ ಬೇಧಭಾವವಿಲ್ಲದೆ ಲಭ್ಯವಿರುತಕ್ಕುದು.

ಬಿ) ಸಹಕಾರಿ ಸಂಘಗಳು ಪ್ರಜಾಸತ್ತಾತ್ಮಕ ಸಂಸ್ಥೆಗಳಾಗಿವೆ. ಅವುಗಳ ವ್ಯವಹಾರಗಳನ್ನು ಸದಸ್ಯರು ಚುನಾಯಿಸಿದ ಅಥವಾ ಅವರ ಸಮ್ಮತಿಯ ಮೇರೆಗೆ ನೇಮಕ ಹೊಂದಿದ ಮತ್ತು ಅವರಿಗೆ ವಿಶ್ವಾಸಾರ್ಹವಾದ ವ್ಯಕ್ತಿಗಳು ನಿರ್ವಹಿಸತಕ್ಕುದು. ಪ್ರಾಥಮಿಕ ಸಹಕಾರಿ ಸಂಘಗಳ ಸದಸ್ಯರು ಮತ ಚಲಾಯಿಸುವ ಸಮಾನ ಹಕ್ಕುಗಳನ್ನು (ಒಬ್ಬರಿಗೆ ಒಂದು ಮತ) ಮತ್ತು ತಮ್ಮ ಸಹಕಾರಿ ಸಂಘಗಳಿಗೆ ಬಾಧಕವುಂಟು ಮಾಡುವ ನಿರ್ಧಾರಗಳಲ್ಲಿ ಭಾಗವಹಿಸುವ ಹಕ್ಕುಗಳನ್ನು ಹೊಂದಿರತಕ್ಕುದು. ಪ್ರಾಥಮಿಕ ಸಹಕಾರಿ ಸಂಘಗಳಲ್ಲದ ಸಹಕಾರಿ ಸಂಘಗಳಲ್ಲಿ ಆಡಳಿತ ನಿರ್ವಹಣೆಯನ್ನು ಒಂದು ಸೂಕ್ತ ರೀತಿಯಲ್ಲಿ ಪ್ರಜಾಸತ್ತಾತ್ಮಕ ಆಧಾರದ ಮೇಲೆ ನಿರ್ವಹಿಸತಕ್ಕುದು.

ಸಿ) ಶೇರು ಬಂಡವಾಳವನ್ನು ನಿಶ್ಚಿತವಾಗಿ ಮಿತಿಗೊಳಿಸಿ ದರದ ಬಡ್ಡಿ ಯಾವುದಾದರೂ ಇದ್ದರೆ ಅದರಲ್ಲಿ ಮಾತ್ರ ಪಡೆಯತಕ್ಕುದು.

ಡಿ) ಆ ಸಹಕಾರಿ ಸಂಘದ ಕಾರ್ಯಾಚರಣೆಯಿಂದ ಉದ್ಭವಿಸುವ ಆರ್ಥಿಕ ಫಲಿತಾಂಶಗಳು ಆ ಸಹಕಾರಿ ಸಂಘದ ಸದಸ್ಯರಿಗೆ ಸೇರಿದ ಮತ್ತು ಅದನ್ನು ಒಬ್ಬನು ಇತರರ ವೆಚ್ಚದಲ್ಲಿ ಲಾಭ ಪಡೆದುಕೊಳ್ಳದಿರುವ ರೀತಿಯಲ್ಲಿ ವಿತರಣೆ ಮಾಡತಕ್ಕುದು.

ಇದನ್ನು ಈ ಮುಂದಿನಂತೆ ಸದಸ್ಯರ ನಿರ್ಧಾರದ ಮೇರೆಗೆ ಮಾಡತಕ್ಕುದು.

i) ಸಹಕಾರಿ ಸಂಘದ ವ್ಯವಹಾರದ ಅಭಿವೃದ್ಧಿಗೆ ಉಪಬಂಧ ಕಲ್ಪಿಸುವ ಮೂಲಕ.

ii) ಸಾಮಾನ್ಯ ಸೇವೆಗಳ ಏರ್ಪಾಡಿನ ಮೂಲಕ. ಅಥವಾ

iii) ಸದಸ್ಯರಿಗೆ ಸಹಕಾರಿ ಸಂಘದೊಂದಿಗಿನ ಅವರ ವ್ಯವಹಾರದ ಪ್ರಮಾಣಾನುಸಾರವಾಗಿ ಅವರಿಗೆ ಹಂಚುವ ಮೂಲಕ.

ಇ) ಎಲ್ಲ ಸಹಕಾರಿ ಸಂಘಗಳು ತಮ್ಮ ಆರ್ಥಿಕ ಮತ್ತು ಪ್ರಜಾಸತ್ತಾತ್ಮಕಗಳೆರಡರ ಬಗೆಗಿನ ಕಾರ್ಯನೀತಿಗಳು ಮತ್ತು ತಾಂತ್ರಿಕತೆಯ ಸಂಬಂಧದಲ್ಲಿ ತಮ್ಮ ಸದಸ್ಯರು. ಅಧಿಕಾರಿಗಳು ಮತ್ತು ನೌಕರರು ಮತ್ತು ಸಾರ್ವಜನಿಕರಿಗೆ ಶಿಕ್ಷಣ ನೀಡಲು ವ್ಯವಸ್ಥೆ ಮಾಡತಕ್ಕುದು.

ಎಫ್) ಎಲ್ಲ ಸಹಕಾರಿ ಸಂಘಗಳು, ತಮ್ಮ ಸದಸ್ಯರು ಮತ್ತು ತಮ್ಮ ಸಮುದಾಯಗಳ ಹಿತಾಸಕ್ತಿಗೆ ಅನುಸಾರವಾಗಿ ಅತ್ಯುತ್ತಮ ಸೇವೆ ಸಲ್ಲಿಸುವ ದೃಷ್ಟಿಯಿಂದ, ವಿಶ್ವದಾದ್ಯಂತ ಸಹ ಪ್ರವರ್ತಕರ ಕ್ರಿಯಾ ಏಕತೆಯ ಸಾಧನೆಯನ್ನು ತಮ್ಮ ಗುರಿಯಾಗಿಟ್ಟುಕೊಂಡು, ಸ್ಥಳೀಯ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಇತರ ಸಹಕಾರಿ ಸಂಘಗಳ ಜೊತೆಗೆ ಪ್ರತಿಯೊಂದು ಕಾರ್ಯಸಾಧ್ಯ ಮಾರ್ಗದಲ್ಲಿ ಸಕ್ರಿಯವಾಗಿ ಸಹಕರಿಸತಕ್ಕುದು.

2. 2ನೇ ಪ್ರಕರಣದ ತಿದ್ದುಪಡಿ : 1) 2ನೇ ಪ್ರಕರಣದ ಖಂಡ (ಡಿ-1)ರಲ್ಲಿ "ರಿಜಿಸ್ಟ್ರಾರ್‌ರವರ ಪೂರ್ವ ಮಂಜೂರಾತಿಯೊಂದಿಗೆ" ಎಂಬ ಪದಗಳನ್ನು ಬಿಟ್ಟುಬಿಡತಕ್ಕುದು.

2. 2(ಎಫ್) ಖಂಡದಲ್ಲಿ "ಸದಸ್ಯ"ಎಂಬ ಪರಿಭಾಷೆಗೆ "ಸದಸ್ಯ" ಎಂದರೆ "ಸಹಕಾರಿ ಸಂಘಗಳು ಹಾಗೆ ಸೇರಿಸಿಕೊಳ್ಳಲಾದ ವ್ಯಕ್ತಿ" ಎಂಬುದನ್ನು ಪ್ರತಿಸ್ಥಾಪಿಸತಕ್ಕುದು.

3. 2 (ಜಿ)ಖಂಡದಲ್ಲಿ 'ಅಧಿಕಾರಿ'ಎಂಬ ಪರಿಭಾಷೆಗೆ, "ಅಧಿಕಾರಿ" ಎಂದರೆ "ಒಂದು ಸಹಕಾರಿ ಸಂಘದ ಯಾವುದೇ ಪದಕ್ಕೆ ಅಂಥ ಸಹಕಾರಿ ಸಂಘದಿಂದ ಚುನಾಯಿತನಾದ ಅಥವಾ ನೇಮಿತವಾದ ವ್ಯಕ್ತಿ" ಎಂಬ ಪದಗಳನ್ನು ಪ್ರತಿಸ್ಥಾಪಿಸತಕ್ಕುದು.

4. ಖಂಡ 2(ಹೆಚ್) ಅನ್ನು ಬಿಟ್ಟುಬಿಡತಕ್ಕುದು.

5. ಖಂಡ 2(ಐ) ಯಲ್ಲಿ "ರಿಜಿಸ್ಟ್ರಾರ್" ಎಂಬ ಪರಿಭಾಷೆಗೆ, "ರಿಜಿಸ್ಟ್ರಾರ್" ಎಂದರೆ "16ನೇ ಪ್ರಕರಣದ ಅಡಿಯಲ್ಲಿ ನೇಮಿತವಾದ ಸಹಕಾರಿ ಸಂಘಗಳ

ರಿಜಿಸ್ಟ್ರಾರ್ ಮತ್ತು ಈ ಅಧಿನಿಯಮದ ಅಡಿಯಲ್ಲಿ ರಿಜಿಸ್ಟ್ರಾರ್‌ರವರ ಎಲ್ಲ ಅಥವಾ ಯಾವುದೇ ಅಧಿಕಾರಗಳನ್ನು ಪ್ರದತ್ತಗೊಳಿಸಲಾಗಿರುವ ಯಾವನೇ ವ್ಯಕ್ತಿಯನ್ನು ಒಳಗೊಳ್ಳುತ್ತದೆ" ಎಂಬ ಪದಗಳನ್ನು ಪ್ರತಿಸ್ಥಾಪಿಸತಕ್ಕದು.

6. ಖಂಡ 2(ಜೆ)ಯನ್ನು ಬಿಟ್ಟುಬಿಡತಕ್ಕುದು

7. ಖಂಡ 2(ಜೆ-ಎಲ್)ನ್ನು ಬಿಟ್ಟುಬಿಡತಕ್ಕುದು.

8. ಹೊಸಖಂಡ 2(ಎಲ್) "ಕಾರ್ಯಾಚರಣೆ ಪ್ರದೇಶ"ಎಂದರೆ"ಯಾವ ಪ್ರದೇಶದಿಂದ ಸದಸ್ಯತ್ವವನ್ನು ಪಡೆದುಕೊಳ್ಳಲಾಗಿದೆಯೋ ಆ ಪ್ರದೇಶ" ಎಂಬುದನ್ನು ಸೇರಿಸತಕ್ಕುದು.

9. ಹೊಸ ಖಂಡ 2(ಎಂ) "ಮುಖ್ಯಕಾರ್ಯಾನಿರ್ವಾಹಕ" ಎಂದರೆ ಮಂಡಲಿಯು ನಿರ್ದೇಶಕ ಮಂಡಲಿಯ ಅಧೀಕ್ಷಣೆ, ನಿಯಂತ್ರಣ ಮತ್ತು ನಿರ್ದೇಶನಗಳಿಗೆ ಒಳಪಟ್ಟು, ಸಹಕಾರಿ ಸಂಘದ ವ್ಯವಹಾರಗಳ ವ್ಯವಸ್ಥಾಪನೆಯ ಕಾರ್ಯವನ್ನು ವಹಿಸಿಕೊಡಲಾಗಿರುವ ವ್ಯಕ್ತಿ" ಎಂಬ ಪದಗಳನ್ನು ಸೇರಿಸತಕ್ಕುದು.

10. ಹೊಸ ಖಂಡ 2(ಎನ್) "ಸಹಕಾರಿ ಆಧಾರ" ಈ ಅಧಿನಿಯಮದಲ್ಲಿ ಸೇರಿಸಲಾಗಿರುವ ಸಹಕಾರಿ ತತ್ವಗಳಿಗನುಸಾರವಾಗಿ" ಎಂಬ ಪದಗಳನ್ನು ಸೇರಿಸತಕ್ಕುದು.

11. ಹೊಸಖಂಡ 2(ಒ) - "ಸಂಯುಕ್ತ ಸಹಕಾರಿ ಸಂಘ" ಎಂದರೆ "ಸಹಕಾರಿ ಸಂಘಗಳಿಗೆ ಮಾತ್ರ ಸದಸ್ಯತ್ವವು ಲಭ್ಯವಿರುವ ಸಹಕಾರಿ ಸಂಘ" ಎಂಬುದನ್ನು ಸೇರಿಸತಕ್ಕುದು.

12. ಹೊಸ ಖಂಡ 2(ಪಿ) "ಪ್ರಾಥಮಿಕ ಸಹಕಾರಿ ಸಂಘಗಳ ಸಂಬಂಧದಲ್ಲಿ 'ಸರ್ವಸದಸ್ಯರ ನಿಕಾಯ'ಎಂದರೆ"ಆ ಸಹಕಾರಿ ಸಂಘಗಳ ಎಲ್ಲ ಸದಸ್ಯರು ಮತ್ತು ಒಂದು ಮಹಾಮಂಡಲಿಯ ಸಂಬಂಧದಲ್ಲಿ ಸದಸ್ಯ ಸಹಕಾರಿ ಸಂಘಗಳ ಎಲ್ಲ ನಿಯೋಗಿಗಳು" ಎಂಬುದನ್ನು ಸೇರಿಸತಕ್ಕುದು.

13. ಹೊಸ ಖಂಡ 2(ಎಲ್) - "ಸಾಮಾನ್ಯಸಭೆ" ಎಂದರೆ "ಸಹಕಾರಿ ಸಂಘದ ಸಾಮಾನ್ಯ ನಿಕಾಯದ ಸಭೆ" ಎಂಬುದನ್ನು ಸೇರಿಸತಕ್ಕುದು.

14. ಹೊಸ ಖಂಡ 2 (ಆರ್) "ಆಶ್ರಯ ಮರುಪಾವತಿ" ಎಂದರೆ "ವರ್ಷದ ಅವಧಿಯಲ್ಲಿ ಸದಸ್ಯರ ವ್ಯವಹಾರಗಳಿಗನುಗುಣವಾಗಿ ಅವರಿಗೆ ನೀಡುವ ವಾರ್ಷಿಕ ಮರುಪಾವತಿ" ಎಂಬುದನ್ನು ಸೇರಿಸತಕ್ಕುದು.

15. ಹೊಸ ಖಂಡ 2(ಎಸ್)'ರಾಜ್ಯ' ಎಂದರೆ 'ಕರ್ನಾಟಕ ರಾಜ್ಯ' ಎಂಬುದನ್ನು ಸೇರಿಸತಕ್ಕುದು.

16. ಹೊಸ ಖಂಡ 2(ಟಿ)-"ಪ್ರಾಥಮಿಕ ಸಹಕಾರಿ ಸಂಘ" ಎಂದರೆ "ಯಾವ ಸಹಕಾರಿ ಸಂಘದ ಸದಸ್ಯತ್ವವು ವ್ಯಕ್ತಿಗಳಿಗೆ ಮಾತ್ರ ಲಭ್ಯವಿದೆಯೊ ಆ ಒಂದು ಸಹಕಾರಿ ಸಂಘ" ಎಂಬುದನ್ನು ಸೇರಿಸತಕ್ಕುದು.

3.2 ಎ ಪ್ರಕರಣದ ತಿದ್ದುಪಡಿ :

(1) (1)ನೇ ಉಪಪ್ರಕರಣದಲ್ಲಿ "ರಿಜಿಸ್ಟ್ರಾರರ ನೇಮಕಾತಿ" ಎಂಬ ಶೀರ್ಷಿಕೆಯಲ್ಲಿ "ರಾಜ್ಯ ಸರ್ಕಾರವು ಈ ಅಧಿನಿಯಮದ ಅಡಿಯಲ್ಲಿ ಸಹಕಾರಿ ಸಂಘಗಳ ನೋಂದಣಿಗಾಗಿ ಮತ್ತು ಈ ಅಧಿನಿಯಮದ ಅಡಿಯಲ್ಲಿ ನಿರ್ದಿಷ್ಟಪಡಿಸಿರುವ ಇತರ ಪ್ರಕಾರ್ಯಗಳ ನಿರ್ವಹಣೆಗಾಗಿ ರಿಜಿಸ್ಟ್ರಾರ್ ನಿರ್ವಹಣೆಗಾಗಿ ರಿಜಿಸ್ಟ್ರಾರ್ ಅವರನ್ನು ಮತ್ತು ತಾನು ಸೂಕ್ತವೆಂದು ಭಾವಿಸುವಂಥ ಇತರ ಅಧಿಕಾರಿಗಳನ್ನು ನೇಮಕ ಮಾಡಬಹುದು" ಎಂಬುದನ್ನು ಪ್ರತಿಸ್ಥಾಪಿಸತಕ್ಕುದು.

(2) (2)ನೇ ಪ್ರಕರಣದಲ್ಲಿ; -

(ಎ) ಸಹಕಾರ ಇಲಾಖೆಯಲ್ಲಿ ಕಡೇ ಪಕ್ಷ 3 ವರ್ಷಗಳವರೆಗೆ ಸೇವೆ ಸಲ್ಲಿಸಿರುವ ಒಬ್ಬ ಹಿರಿಯ ಅಧಿಕಾರಿಯನ್ನು, ಅಥವಾ

(ಬಿ) ಯಾವುದೇ ಸಹಕಾರಿ ಸಂಘದಲ್ಲಿ ಕಡೇ ಪಕ್ಷ 3ವರ್ಷಗಳವರೆಗೆ ಮುಖ್ಯಕಾರ್ಯ ನಿರ್ವಾಹಕನಾಗಿ ಸೇವೆ ಸಲ್ಲಿಸಿರುವ ಅಧಿಕಾರಿಯನ್ನು; ಅಥವಾ

(ಸಿ) ಯಾವುದೇ ಸಹಕಾರಿ ಪ್ರವರ್ತಕ ನಿಕಾಯದಲ್ಲಿ ಅಥವಾ ಸಹಕಾರಿ ಸಂಘದ ಸಂಬಂಧದಲ್ಲಿ ವ್ಯವಹರಿಸುವ ಶೈಕ್ಷಣಿಕ ಸಂಸ್ಥೆಯಲ್ಲಿ ಕಡೇಪಕ್ಷ 3 ವರ್ಷಗಳವರೆಗೆ ಸೇವೆ ಸಲ್ಲಿಸಿರುವ, ಒಂದು ಹಿರಿಯ ಹುದ್ದೆಯನ್ನು ಅಥವಾ ಒಂದು ವಿಭಾಗ ಸ್ಥಾನವನ್ನು ಹೊಂದಿದವರನ್ನು - ರಿಜಿಸ್ಟ್ರಾರ್ ಆಗಿ ನೇಮಕಮಾಡತಕ್ಕುದು." ಎಂಬುದನ್ನು ಪ್ರತಿಸ್ಥಾಪಿಸತಕ್ಕುದು.

(3) (3)ನೇ ಉಪಪ್ರಕರಣವನ್ನು ಬಿಟ್ಟುಬಿಡತಕ್ಕುದು.

(4) (4)ನೇ ಉಪಪ್ರಕರಣವನ್ನು ಬಿಟ್ಟುಬಿಡತಕ್ಕುದು.

(5) (5)ನೇ ಉಪಪ್ರಕರಣವನ್ನು ಬಿಟ್ಟುಬಿಡತಕ್ಕುದು.

(6) (6)ನೇ ಉಪಪ್ರಕರಣವನ್ನು ಬಿಟ್ಟುಬಿಡತಕ್ಕುದು.

(7) (7)ನೇ ಉಪಪ್ರಕರಣದ / ರಿಜಿಸ್ಟ್ರಾರ್ ಅವರ ಪದಾವಧಿಯು ಕಡೇಪಕ್ಷ ಮೂರು ವರ್ಷಗಳಾಗಿರತಕ್ಕುದು ಎಂಬುದನ್ನು ಸೇರಿಸತಕ್ಕುದು.

4. **2 ಬಿ ಪ್ರಕರಣದ ತಿದ್ದುಪಡಿ** : ಬಿ ಪ್ರಕರಣ 1 ರಿಂದ 10ನೇ ಖಂಡಗಳನ್ನು ಈ ಮುಂದಿನಂತೆ ಮಾರ್ಪಾಡುಗೊಳಿಸತಕ್ಕುದು.

"ಸಹಕಾರಿ ನ್ಯಾಯಾಧೀಕರಣಗಳ ರಚನೆ : ರಾಜ್ಯ ಸರ್ಕಾರವು, ರಾಜ್ಯಪತ್ರದಲ್ಲಿ, ಅಧಿಸೂಚಿಸುವ ಮೂಲಕ, ಈ ಅಧಿನಿಯಮದ ಅಡಿಯಲ್ಲಿ ಅಪೀಲುಗಳೂ ಸೇರಿದಂತೆ ಇರುವ ವಿವಾದಗಳ ನ್ಯಾಯನಿರ್ಣಯಕ್ಕಾಗಿ ಸಹಕಾರಿ ನ್ಯಾಯಾಧೀಕರಣಗಳನ್ನು ರಚಿಸಬಹುದು, ಪರಂತು ನ್ಯಾಯಾಧೀಕರಣಕ್ಕೆ ಒಬ್ಬ ಜಿಲ್ಲಾ ನ್ಯಾಯಾಧೀಶರ ದರ್ಜೆಗಿಂತ ಕಡಿಮೆಯಿಲ್ಲದ ದರ್ಜೆಯ ಒಬ್ಬ ನ್ಯಾಯಿಕ ಅಧಿಕಾರಿಯನ್ನು ಒದಗಿಸತಕ್ಕುದು."

5. **4ನೇ ಪ್ರಕರಣದ ತಿದ್ದುಪಡಿ** : 4ನೇ ಪ್ರಕರಣವನ್ನು ಈ ಮುಂದಿನಂತೆ ಮಾರ್ಪಾಡುಗೊಳಿಸತಕ್ಕುದು.

ನೋಂದಾಯಿಸಬಹುದಾದ ಸಂಸ್ಥೆಗಳು :

(1) ಸಹಕಾರಿ ತತ್ವಗಳಿಗನುಸಾರವಾಗಿ ಸ್ವಸಹಾಯ ಮತ್ತು ಪರಸ್ಪರ ನೆರವಿನ ಮೂಲಕ ತನ್ನ ಸದಸ್ಯರ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗಾಗಿ ಉಪವಿಧಿಗಳಲ್ಲಿ ಉಪಬಂಧ ಕಲ್ಪಿಸುವಂತಹ ಒಂದು ಸಂಸ್ಥೆಯನ್ನು ಮಾತ್ರ ಈ ಅಧಿನಿಯಮದ ಅಡಿಯಲ್ಲಿ ಒಂದು ಸಹಕಾರಿ ಸಂಘವೆಂದು ನೋಂದಾಯಿಸಬಹುದು.

(2) ಸಹಕಾರಿ ಸಂಘದ ಪರಿಮಿತ ಹೊಣೆಗಾರಿಕೆಯೊಂದಿಗೆ ನೋಂದಾಯಿಸತಕ್ಕುದು.

6. **5ನೇ ಪ್ರಕರಣದ ತಿದ್ದುಪಡಿ** : 5ನೇ ಪ್ರಕರಣವನ್ನು ಬಿಟ್ಟುಬಿಡತಕ್ಕುದು.

7. **6,7 ಮತ್ತು 8ನೇ ಪ್ರಕರಣಗಳ ತಿದ್ದುಪಡಿ** : 6,7 ಮತ್ತು 8ನೇ ಪ್ರಕರಣಗಳನ್ನು ಈ ಮುಂದಿನಂತೆ ಮಾರ್ಪಾಡುಗೊಳಿಸತಕ್ಕುದು.

ನೋಂದಣಿಗಾಗಿ ಅರ್ಜಿ :

(1) ನೋಂದಣಿ ಮಾಡಿಸುವುದಕ್ಕಾಗಿ ಅರ್ಜಿಯನ್ನು ಖುದ್ದಾಗಿ ಅಥವಾ ನೋಂದಾಯಿತ ಅಂಚೆಯ ಮೂಲಕವಾಗಿ ರಿಜಿಸ್ಟ್ರಾರ್ ಅವರಿಗೆ ಸಲ್ಲಿಸತಕ್ಕುದು.

(2) ಅಂಥ ಪ್ರತಿಯೊಂದು ಅರ್ಜಿಯ ಜೊತೆಗೆ, -

(ಎ) ಪ್ರವರ್ತಕ ಸದಸ್ಯರು ಅಳವಡಿಸಿಕೊಂಡಿರುವಂತೆ ಸಹಕಾರಿ ಸಂಘದ ಪ್ರಸ್ತಾವಿತ ಉಪವಿಧಿಗಳ ಎರಡು ಪ್ರತಿಗಳು ;

(ಬಿ) ಸದಸ್ಯರ ವಿಳಾಸ, ವೃತ್ತಿ ಮತ್ತು ಸಮಾನ ಪಾಲ್ಗೊಳ್ಳುವಿಕೆಯೊಂದಿಗೆ ಅವರು ಹೆಸರುಗಳ ಪಟ್ಟಿಯು ;

(ಸಿ) ಪ್ರವರ್ತಕ ಸದಸ್ಯರಿಂದ ಚುನಾಯಿತರಾದ ಪ್ರಥಮ ಮಂಡಲಿಯ ಸದಸ್ಯರ ಪಟ್ಟಿಯು;

(ಡಿ) ಅಧ್ಯಕ್ಷರ ಸಹಿಯಿರುವ ಉಪವಿಧಿಗಳನ್ನು ಅಳವಡಿಸಿಕೊಳ್ಳಲಾದ ಸಭೆಯ ನಡವಳಿಕೆಗಳ ಯಥಾ ಪ್ರತಿಯು - ಇರತಕ್ಕುದು.

(3) ಪ್ರಸ್ತಾವಿತ ಪ್ರಾಥಮಿಕ ಸಹಕಾರಿ ಸಂಘದ ಸಂದರ್ಭದಲ್ಲಿ ಅಂಥ ಪ್ರತಿಯೊಂದು ಅರ್ಜಿಗೆ ವಿವಿಧ ಕುಟುಂಬಗಳಿಗೆ ಸೇರಿದ ಕಡೇಪಕ್ಷ 10 ಮಂದಿ ವ್ಯಕ್ತಿಗಳು ಸಹಿ ಮಾಡಿರಬೇಕು ಮತ್ತು ನೋಂದಣಿಯ ಪ್ರಾಧಿಕೃತ ಪ್ರಮಾಣಪತ್ರ ಮತ್ತು ನೋಂದಾಯಿತ ಅರ್ಜಿಯ ಮೂಲಕ ಅಧ್ಯಕ್ಷರಿಗೆ ಒಂದು ಪ್ರತಿಯನ್ನು ನೀಡತಕ್ಕುದು

(4) (3)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾಗಿರುವ ಷರತ್ತುಗಳನ್ನು ಪೂರೈಸದಿದ್ದರೆ, ರಿಜಿಸ್ಟ್ರಾರ್ ನಿರಾಕರಣೆಯ ಆದೇಶವನ್ನು ಅದರ ಕಾರಣಗಳ ಸಹಿತ ನೋಂದಾಯಿತ ಅಂಚೆಯ ಮೂಲಕ, ಅರ್ಜಿಯಲ್ಲಿ ನಿರ್ದಿಷ್ಟಪಡಿಸಿರುವಂಥ ಅರ್ಜಿದಾರರಿಗೆ, ಅರ್ಜಿಯನ್ನು ಸಲ್ಲಿಸಿದ ದಿನಾಂಕದಿಂದ ಅರವತ್ತು ದಿನಗಳೊಳಗೆ ಕಳುಹಿಸತಕ್ಕುದು.

(5) 60 ದಿನಗಳೊಳಗಾಗಿ ಯಾವುದೇ ನಿರಾಕರಣೆಯನ್ನು ತಿಳಿಸದಿದ್ದರೆ ಸಹಕಾರಿ ಸಂಘವನ್ನು ನೋಂದಾಯಿಸಲಾಗಿದೆಯೆಂದು ಭಾವಿಸತಕ್ಕುದು.

(6) ಸಹಕಾರಿ ಸಂಘವನ್ನು ನೋಂದಾಯಿಸಿರುವಲ್ಲಿ, ರಿಜಿಸ್ಟ್ರಾರರು ತಾವು ಸಹಿ ಮಾಡಿ ಮುದ್ರೆ ಹಾಕಿರುವ ಒಂದು ನೋಂದಾಯಿತ ಪ್ರಮಾಣ ಪತ್ರವನ್ನು ನೀಡತಕ್ಕುದು ಮತ್ತು ಅದು ಅದರಲ್ಲಿ ತಿಳಿಸಲಾಗಿರುವ ಸಹಕಾರಿ ಸಂಘ ಈ ಅಧಿನಿಯಮದ ಅಡಿಯಲ್ಲಿ ಯುಕ್ತವಾಗಿ ನೋಂದಾಯಿತವಾಗಿದೆಯೆಂಬುದಕ್ಕೆ ನಿರ್ಣಾಯಕ ಸಾಕ್ಷ್ಯವಾಗಿರತಕ್ಕುದು.

(7) (5)ನೇ ಉಪಪ್ರಕರಣದ ಅಡಿಯಲ್ಲಿ ಅರ್ಜಿದಾರರು ನಿರಾಕರಣೆಯ ಆದೇಶವನ್ನು ಸ್ವೀಕರಿಸಿರುವಲ್ಲಿ, ಅವರು ಈ ಆದೇಶದ ವಿರುದ್ಧವಾಗಿ ಸಹಕಾರಿ ನ್ಯಾಯಾಧೀಕರಣಕ್ಕೆ ಅಪೀಲು ಸಲ್ಲಿಸಬಹುದು. ಈ ವಿಚಾರದಲ್ಲಿ ನ್ಯಾಯಾಧೀಕರಣದ ತೀರ್ಮಾನವು ಅಂತಿಮವಾಗಿರತಕ್ಕುದು.

(8) **9ನೇ ಪ್ರಕರಣದ ತಿದ್ದುಪಡಿ** : ಈ ಮುಂದಿನಂತೆ ಒಂದು ಹೊಸ ಕಂಡಿಕೆಯನ್ನು ಸೇರಿಸತಕ್ಕುದು :

"ಸಹಕಾರಿ ಸಂಘದ ಉದ್ದೇಶಗಳನ್ನು ಈಡೇರಿಸುವ ದಿಸೆಯಲ್ಲಿ ನೋಂದಣಿಗೆ ಮೊದಲು ಸದ್ಭಾವನೆಯಿಂದ ಮಾಡಲಾದ ಎಲ್ಲ ವ್ಯವಹಾರಗಳನ್ನು ನೋಂದಣಿಯಾದ ತರುವಾಯ ಸಹಕಾರಿ ಸಂಘ ಮಾಡಿದ ವ್ಯವಹಾರಗಳೆಂದು ಭಾವಿಸತಕ್ಕುದು."

9. 10ನೇ ಪ್ರಕರಣದ ತಿದ್ದುಪಡಿ : (3)ನೇ ಉಪಪ್ರಕರಣದ ತರುವಾಯ ಈ ಮುಂದಿನ ಉಪಪ್ರಕರಣವನ್ನು ಸೇರಿಸತಕ್ಕುದು.

ಹೆಸರಿನ ಪ್ರದರ್ಶನ :

(1) ಪ್ರತಿಯೊಂದು ಸಹಕಾರಿ ಸಂಘವು ತನ್ನ ಹೆಸರನ್ನು ಮತ್ತು ಅದರ ನೋಂದಾಯಿತ ಕಚೇರಿಯ ವಿಳಾಸವನ್ನು ಮತ್ತು 1959ರ ಕರ್ನಾಟಕ ಸಹಕಾರಿ

ಸಂಘಗಳ ಅಧಿನಿಯಮದ ಅಡಿಯಲ್ಲಿ ನೋಂದಾಯಿಸಲಾದ ಪದಾವಳಿಯನ್ನು ಸ್ಪಷ್ಟವಾದ ರೀತಿಯಲ್ಲಿ ಎದ್ದುಕಾಣುವ ಸ್ಥಳದಲ್ಲಿ, ಎಂದರೆ :-

(ಎ) ಅದು ವ್ಯವಹಾರವನ್ನು ನಡೆಸುವ ಪ್ರತಿಯೊಂದು ಕಚೇರಿ ಅಥವಾ ಸ್ಥಳದಲ್ಲಿ;

(ಬಿ) ಎಲ್ಲ ನೋಟೀಸುಗಳಲ್ಲಿ ಮತ್ತು ಇತರ ಕಚೇರಿ ಪ್ರಕಟಣೆಗಳಲ್ಲಿ;

(ಸಿ) ಅದರ ಎಲ್ಲ ಒಪ್ಪಂದಗಳಲ್ಲಿ, ವ್ಯವಹಾರ ಪತ್ರಗಳಲ್ಲಿ, ಸರಕುಗಳಿಗೆ ನೀಡುವ ಆದೇಶಗಳಲ್ಲಿ, ಇನ್ವಾಯ್ಸ್‌ಗಳಲ್ಲಿ, ಲೆಕ್ಕಪತ್ರಗಳ ವಿವರಪಟ್ಟಿಗಳಲ್ಲಿ, ರಸೀದಿಗಳಲ್ಲಿ ಮತ್ತು ಸಾಲಪತ್ರಗಳಲ್ಲಿ; ಮತ್ತು

(ಡಿ) ಎಲ್ಲ ವಿನಿಮಯ ಪತ್ರಗಳಲ್ಲಿ, ಪ್ರಾಮಿಸರಿ ನೋಟ್‌ಗಳಲ್ಲಿ, ಹುಂಬರಹಗಳಲ್ಲಿ, ಹಣಕ್ಕಾಗಿ ಸಹಿ ಮಾಡುವ ಚೆಕ್ಕ್‌ಗಳಲ್ಲಿ ಮತ್ತು ಆರ್ಡರುಗಳಲ್ಲಿ ಅಥವಾ ಅದರ ಪರವಾಗಿ ಸಹಿ ಮಾಡಲಾದವುಗಳಲ್ಲಿ - ಪ್ರದರ್ಶಿಸತಕ್ಕುದು.

(2) ಪ್ರತಿಯೊಂದು ಸಹಕಾರಿ ಸಂಘದ ಹೆಸರು, 'ಸಹಕಾರಿ ಸಂಘ' ಮತ್ತು 'ನಿಯಮಿತ' ಎಂಬ ಪದಗಳನ್ನು ಅಥವಾ ಅದಕ್ಕೆ ಸಮಾನವಾದ ಪದವನ್ನು ಹೊಂದಿದ್ದು ರಾಜ್ಯದ ಆಡಳಿತ ಭಾಷೆಯಲ್ಲಿ ಇರತಕ್ಕುದು.

10. 11ನೇ ಪ್ರಕರಣದ ತಿದ್ದುಪಡಿ : 11ನೇ ಪ್ರಕರಣವನ್ನು ಬಿಟ್ಟು ಬಿಡತಕ್ಕುದು.

11. 12 ಮತ್ತು 13ನೇ ಪ್ರಕರಣಗಳ ತಿದ್ದುಪಡಿ : (1) ರಿಂದ (6)ನೇ ಉಪಪ್ರಕಣವೂ ಸೇರಿದಂತೆ 12ನೇ ಪ್ರಕರಣ ಮತ್ತು 13ನೇ ಪ್ರಕರಣವನ್ನು ಈ ಮುಂದಿನಂತೆ ಮಾರ್ಪಾಡುಗೊಳಿಸತಕ್ಕುದು.

ಉಪವಿಧಿಗಳ ತಿದ್ದುಪಡಿ :

(1) ಸಹಕಾರಿ ಸಂಘವು ತನ್ನ ಯಾವುದೇ ಉಪವಿಧಿಯನ್ನು ಮತ ಚಲಾಯಿಸಲು ಹಕ್ಕುಳ್ಳ ಒಟ್ಟು ಸದಸ್ಯತ್ವದ ಬಹುಸಂಖ್ಯೆಯ ಸದಸ್ಯರಿಂದ ಅಥವಾ ಹಾಜರಿದ್ದು ಮತನೀಡುವ ಮೂರನೇ ಎರಡರಷ್ಟು ಸಂಖ್ಯೆಯ ಸದಸ್ಯರಿಂದ - ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟು ಮಂದಿ ಸದಸ್ಯರಿಂದ ಸರ್ವಸದಸ್ಯರ ಸಭೆಯಲ್ಲಿ ಹೊರಡಿಸಲಾದ ನಿರ್ಣಯದ ಮೂಲಕ ತಿದ್ದುಪಡಿ ಮಾಡಬಹುದು.

ಪರಂತು, ಅಂಥ ಯಾವುದೇ ನಿರ್ಣಯವನ್ನು ನಿರ್ಣಯದ ಬಗೆಗಿನ ಲಿಖಿತ ನೋಟೀಸು ನೀಡಿದ ಕಡೇಪಕ್ಷ ಇಪ್ಪತ್ತು ಸ್ಪಷ್ಟ ದಿನಗಳಲ್ಲಲ್ಲದೆ ಮತ್ತು ಸಾಮಾನ್ಯ ಸಭೆಯು ಸಹಕಾರಿ ಸಂಘದ ಪ್ರತಿಯೊಬ್ಬ ಸದಸ್ಯನಿಗೆ ಪ್ರಸ್ತಾವಿತ ತಿದ್ದುಪಡಿಯ ಪ್ರತಿಯನ್ನು ನೀಡಿದಲ್ಲದೆ ಅಂಗೀಕರಿಸತಕ್ಕುದಲ್ಲ,

(2) ತಿದ್ದುಪಡಿಯ ನೋಂದಣಿಯ ಸಲುವಾಗಿನ ಒಂದು ಅರ್ಜಿಯನ್ನು ನಿರ್ಣಯವನ್ನು ಅಂಗೀಕರಿಸಲಾದ ದಿನಾಂಕದಂದು ಮೂವತ್ತು ದಿವಸಗಳೊಳಗಾಗಿ ರಿಜಿಸ್ಟ್ರಾರರಿಗೆ ನೋಂದಾಯಿತ ಅಂಚೆಯ ಮೂಲಕ ಕಳುಹಿಸತಕ್ಕುದು.

(3) ರಿಜಿಸ್ಟ್ರಾರರಿಗೆ ಕಳುಹಿಸಿದ ಪ್ರತಿಯೊಂದು ಅರ್ಜಿಗೆ ಸಮಿತಿಯ ಅಧ್ಯಕ್ಷರು ಮತ್ತು ಇಬ್ಬರು ಸದಸ್ಯರು ಸಹಿ ಹಾಕತಕ್ಕುದು ಮತ್ತು ಮುಂದಿನವುಗಳ ಜೊತೆಗಿರತಕ್ಕುದು.

(ಎ) ತಿದ್ದುಪಡಿಯನ್ನು ಅಳವಡಿಸಿಕೊಳ್ಳುವ ನಿರ್ಣಯದ ಒಂದು ಪ್ರತಿ.

(ಬಿ) ತಿದ್ದುಪಡಿಯನ್ನು ಅಂಗೀಕರಿಸಲಾದ ಸರ್ವಸದಸ್ಯರ ಸಭೆಯ ದಿನಾಂಕ.

(ಸಿ) ಸರ್ವಸದಸ್ಯರ ಸಭೆಯ ಸಂಬಂಧದಲ್ಲಿ ಹೊರಡಿಸಲಾದ ನೋಟೀಸಿನ ದಿನಾಂಕ,

(ಡಿ) ಅಂಥ ಸರ್ವಸದಸ್ಯರ ಸಭೆಯ ದಿನಾಂಕದಂದು ಮತ ಚಲಾಯಿಸುವ ಹಕ್ಕು ಹೊಂದಿರುವ ಸಹಕಾರಿ ಸಂಘದ ಹೆಸರು ಪಟ್ಟಿಯಲ್ಲಿರುವ ಸದಸ್ಯರ ಒಟ್ಟು ಸಂಖ್ಯೆ,

(ಇ) ಸರ್ವ ಸದಸ್ಯರ ಸಭೆಯಲ್ಲಿ ಹಾಜರಿದ್ದು ಮತ ಚಲಾಯಿಸುವ ಹಕ್ಕು ಹೊಂದಿದ್ದ ಸದಸ್ಯರ ಸಂಖ್ಯೆ,

(ಎಫ್)ನಿರ್ಣಯದ ಪರವಾಗಿ ಮತ ಚಲಾಯಿಸಿದ ಸದಸ್ಯರ ಸಂಖ್ಯೆ.

(4) ಪ್ರಸ್ತಾವಿತ ತಿದ್ದುಪಡಿಯು ಈ ಅಧಿನಿಯಮದ ಉಪಬಂಧಗಳ ಅನುಸಾರವಾಗಿದ್ದರೆ ರಿಜಿಸ್ಟ್ರಾರರು ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಅರವತ್ತು ದಿನಗಳೊಳಗಾಗಿ ತಿದ್ದುಪಡಿಯನ್ನು ನೋಂದಣಿ ಮಾಡತಕ್ಕದ್ದು.

(5)ರಿಜಿಸ್ಟ್ರಾರರು ನೋಂದಣಿಯಾದ 15ದಿನಗಳೊಳಗಾಗಿ ನೋಂದಾಯಿತ ತಿದ್ದುಪಡಿಯ ಒಂದು ಪ್ರತಿಯನ್ನು ತಾವು ಸಹಿ ಮಾಡಿ ಮುದ್ರೆ ಹಾಕಿರುವ ಒಂದು ಪ್ರಮಾಣ ಪತ್ರದೊಂದಿಗೆ ಸಹಕಾರಿ ಸಂಘಕ್ಕೆ ಕಳುಹಿಸತಕ್ಕದ್ದು ಮತ್ತು ಅಂಥ ಪ್ರಮಾಣಪತ್ರವು ತಿದ್ದುಪಡಿಯನ್ನು ವಿದ್ಯುಕ್ತವಾಗಿ ನೋಂದಣಿಯಾಗಿದೆ ಎಂಬುದಕ್ಕೆ ನಿರ್ಣಾಯಕ ರುಜುವಾತಾಗಿರತಕ್ಕದ್ದು.

(6) ಪ್ರಸ್ತಾವಿತ ತಿದ್ದುಪಡಿಯು ಅಧಿನಿಯಮಕ್ಕನುಸಾರವಾಗಿಲ್ಲದಿದ್ದರೆ, ರಿಜಿಸ್ಟ್ರಾರ್ ಅವರು ನಿರಾಕರಣೆಯ ಆದೇಶವನ್ನು ಅದರ ಕಾರಣಗಳೊಂದಿಗೆ (4)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಅವಧಿಯೊಳಗಾಗಿ ಸಹಕಾರಿ ಸಂಘಕ್ಕೆ ನೋಂದಾಯಿತ ಅಂಚೆಯ ಮೂಲಕ ಕಳುಹಿಸತಕ್ಕದ್ದು.

ಪರಂತು, ಸಹಕಾರಿ ಸಂಘಕ್ಕೆ ತನ್ನ ಮನವಿ ಸಲ್ಲಿಸಲು ಅವಕಾಶವನ್ನು ನೀಡಿದ ಹೊರತು ತಿದ್ದುಪಡಿಯನ್ನು ನೋಂದಣಿ ಮಾಡಲು ನಿರಾಕರಿಸುವ ಯಾವುದೇ ಆದೇಶವನ್ನು ಹೊರಡಿಸತಕ್ಕದ್ದಲ್ಲ.

(7) (6)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಅವಧಿಯೊಳಗಾಗಿ ಆ ಉಪಪ್ರಕರಣದ ಅಡಿಯಲ್ಲಿ ಯಾವುದೇ ನಿರಾಕರಣ ಆದೇಶವನ್ನು ಕಳುಹಿಸದಿದ್ದರೆ, ರಿಜಿಸ್ಟ್ರಾರ್ ಅವರು ಆ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ಅವಧಿಯ ಕೊನೆಯ ದಿನಾಂಕದಂದು ತಿದ್ದುಪಡಿಯನ್ನು ನೋಂದಾಯಿಸಿಕೊಂಡಿರುವುದಾಗಿ ಭಾವಿಸತಕ್ಕದ್ದು.

12. 14 (1 ರಿಂದ 7) ; 14ಎ (1 ರಿಂದ 6); 14 ಬಿ (1 ಮತ್ತು 2); 14 ಸಿ 15 (1 ರಿಂದ 3) ಪ್ರಕರಣಗಳ ತಿದ್ದುಪಡಿ :

14 (1 ರಿಂದ 7) ; 14ಎ (1 ರಿಂದ 6); 14 ಬಿ (1 ಮತ್ತು 2); 14 ಸಿ ಮತ್ತು 15 (1 ರಿಂದ 3) ನೇ ಪ್ರಕರಣಗಳನ್ನು ಈ ಮುಂದಿನಂತೆ ಮಾರ್ಪಾಡುಗೊಳಿಸತಕ್ಕದ್ದು.

ದಾಯಿತ್ವದ ಬದಲಾವಣೆ, ಆಸ್ತಿಗಳು ಮತ್ತು ಹೊಣೆಗಾರಿಕೆಗಳ ವರ್ಗಾವಣೆ, ಸಹಕಾರಿ ಸಂಘದ ವಿಭಜನೆ, ಸಂಯೋಜನೆ :

(1) ಸಹಕಾರಿ ಸಂಘವು, ತನ್ನ ಸರ್ವ ಸದಸ್ಯರ ಸಭೆಯ ನಿರ್ಣಯದ ಮೂಲಕ, ತನ್ನ ಪರಿಮಿತಿ ದಾಯಿತ್ವದ ವ್ಯಾಪ್ತಿಯನ್ನು ಬದಲಾಯಿಸಲು ನಿರ್ಧರಿಸಬಹುದು.

(2) ಸಹಕಾರಿ ಸಂಘವು, ತನ್ನ ಸರ್ವ ಸದಸ್ಯರ ಸಭೆಯ ನಿರ್ಣಯದ ಮೂಲಕ, ತನ್ನ ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು ಸಂಪೂರ್ಣವಾಗಿ ಅಥವಾ ಭಾಗಶಃವಾಗಿ ತನ್ನ ಸರ್ವಸದಸ್ಯರ ಸಭೆಯ ನಿರ್ಣಯದ ಮೂಲಕ ವರ್ಗಾವಣೆಗೆ ಒಪ್ಪಿಕೊಂಡ ಇತರ ಯಾವುದೇ ಸಹಕಾರಿ ಸಂಘಕ್ಕೆ ವರ್ಗಾಯಿಸಬಹುದು.

(3) ಸಹಕಾರಿ ಸಂಘವು, ತನ್ನ ಸರ್ವಸದಸ್ಯರ ಸಭೆಯ ನಿರ್ಣಯದ ಮೂಲಕ, ತಾನಾಗಿಯೇ ಎರಡು ಅಥವಾ ಹೆಚ್ಚು ಸಹಕಾರಿ ಸಂಘಗಳಾಗಿ ವಿಭಜನೆಗೊಳ್ಳಬಹುದು.

(4) ಯಾವುದೇ ಎರಡು ಅಥವಾ ಹೆಚ್ಚು ಸಹಕಾರಿ ಸಂಘಗಳು ಆಯಾ ಸರ್ವಸದಸ್ಯರ ಸಭೆಗಳ ನಿರ್ಣಯಗಳ ಮೂಲಕ ಸಂಯುಕ್ತವಾಗಿ ಹೊಸ ಸಹಕಾರಿ ಸಂಘವನು ರಚಿಸಲು ನಿರ್ಧರಿಸಬಹುದು

(5) ಈ ಪ್ರಕರಣದ ಅಡಿಯಲ್ಲಿನ ಸಹಕಾರಿ ಸಂಘದ ಪ್ರತಿಯೊಂದು ನಿರ್ಣಯವನ್ನು ಅದರ ಸರ್ವಸದಸ್ಯರ ಸಭೆಯಲ್ಲಿ ಮತಹಾಕಲು ಹಕ್ಕುಳ್ಳ ಒಟ್ಟು ಸದಸ್ಯರ ಬಹುಸಂಖ್ಯೆಯ ಸದಸ್ಯರು ಅಥವಾ ಹಾಜರಿರುವ ಸದಸ್ಯರ ಮೂರನೇ ಎರಡರಷ್ಟು ಸದಸ್ಯರು ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟು ಮಂದಿ ಸದಸ್ಯರು ಮತ ಚಲಾಯಿಸುವ ಮೂಲಕ ಅಂಗೀಕರಿಸತಕ್ಕುದು ಮತ್ತು ಅಂಥ ನಿರ್ಣಯವು ಸಂದರ್ಭಾನುಸಾರ, ದಾಯಿತ್ವ, ವರ್ಗಾವಣೆ, ವಿಭಜನೆ, ಸಂಯೋಜನೆಗಳ ಎಲ್ಲ ವಿವರಗಳನ್ನು ಒಳಗೊಂಡಿರತಕ್ಕುದು.

(6) ಈ ಪ್ರಕರಣದ ಅಡಿಯಲ್ಲಿ ಸಹಕಾರಿ ಸಂಘವು ಒಂದು ನಿರ್ಣಯವನ್ನು ಅಂಗೀಕರಿಸುವಲ್ಲಿ, ಅದು ನಿರ್ಣಯದ ಪ್ರತಿಯೊಂದಿಗೆ ಈ ಬಗ್ಗೆ ಒಂದು ನೋಟೀಸನ್ನು ತನ್ನ ಎಲ್ಲ ಸದಸ್ಯರುಗಳಿಗೆ, ಅದು ಸಂಯೋಜಿತವಾಗಿರುವ ಸಹಕಾರಿ ಸಂಘಗಳ ಮಹಾಮಂಡಲಿಗೆ ಮತ್ತು ತಮ್ಮ ಒಪ್ಪಿಗೆಯನ್ನು ನೀಡುವ ಲೇಣೆದಾರರಿಗೆ ನೀಡತಕ್ಕುದು. ಅನ್ಯಥಾ, ಅದಕ್ಕೆ ವಿರುದ್ಧವಾಗಿ ಯಾವುದೇ ಉಪವಿಧಿ ಅಥವಾ ಕರಾರು ಇದ್ದರೂ, ಯಾವನೇ ಸದಸ್ಯನು, ಸಹಕಾರಿ ಸಂಘಗಳ ಮಹಾ ಮಂಡಲಿ ಮತ್ತು ಲೇಣೆದಾರರು, ನೋಟೀಸನ್ನು ಜಾರಿಗೊಳಿಸಿದ ದಿನಾಂಕದಿಂದ ಒಂದು ತಿಂಗಳ ಅವಧಿಯಲ್ಲಿ ಸಂದರ್ಭಾನುಸಾರ ತಮ್ಮ ಶೇರುಗಳು, ಠೇವಣಿಗಳು, ಸಾಲಗಳು ಅಥವಾ ಸೇವೆಗಳನ್ನು ಹಿಂತೆಗೆದುಕೊಳ್ಳುವ ಸ್ವಾತಂತ್ರ್ಯವನ್ನು ಹೊಂದಿರತಕ್ಕದು.

(7) (6)ನೇ ಉಪ ಪ್ರಕರಣದ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗಾಗಿ ಹಕ್ಕನ್ನು ಚಲಾಯಿಸದಿರುವ ಯಾವನೇ ಸದಸ್ಯ, ಸಹಕಾರಿ ಸಂಘಗಳ ಮಹಾ ಮಂಡಲಿ ಅಥವಾ ಲೇಣೆದಾರನು ನಿರ್ಣಯವನ್ನು ಒಪ್ಪಿರುವುದಾಗಿ ಭಾವಿಸತಕ್ಕುದು.

(8) ಈ ಪ್ರಕರಣದ ಮೇರೆಗೆ ಸಹಕಾರಿ ಸಂಘವು ಅಂಗೀಕರಿಸದಿರುವ ನಿರ್ಣಯವು:

(ಎ) (i) ಎಲ್ಲ ಸದಸ್ಯರು, ಸಹಕಾರಿ ಸಂಘಗಳ ಮಹಾ ಮಂಡಲಿಯು ಮತ್ತು ಲೇಣೆದಾರನು (6)ನೇ ಉಪಪ್ರಕರಣ ಅಥವಾ (7)ನೇ ಉಪಪ್ರಕರಣದ ಅಡಿಯಲ್ಲಿ ನಿರ್ಣಯಕ್ಕೆ ಸಮ್ಮತಿಸುವವರೆಗೆ ಅಥವಾ ಸಮ್ಮತಿಸಿರುವುದಾಗಿ ಭಾವಿಸುವವರೆಗೆ ; ಅಥವಾ

(ii) (7)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾಗಿರುವ ಅವಧಿಯೊಳಗಾಗಿ ಅದರಲ್ಲಿ ಉಲ್ಲೇಖಿತವಾದ ಆಯ್ಕೆ ಸ್ವಾತಂತ್ರ್ಯವನ್ನು ಚಲಾಯಿಸಿರುವ ಸದಸ್ಯರು, ಸಹಕಾರಿ ಸಂಘಗಳ ಮಹಾ ಮಂಡಲಿಗಳು ಮತ್ತು ಲೇಣೆದಾರರ ಎಲ್ಲ ಕ್ಲೇಮುಗಳನ್ನು ಪೂರ್ಣವಾಗಿ ಪೂರೈಸುವವರೆಗೆ ಅಥವಾ ಅನ್ಯಥಾ ಪೂರೈಸುವವರೆಗೆ; ಮತ್ತು

(ಬಿ) (i) ದಾಯಿತ್ವದಲ್ಲಿನ ಬದಲಾವಣೆಯ ಸಂದರ್ಭದಲ್ಲಿ, ಸಂಬಂಧಪಟ್ಟ ಸಹಕಾರಿ ಸಂಘದ ಉಪವಿಧಿಗಳ ತಿದ್ದುಪಡಿಯನ್ನು ನೋಂದಾಯಿಸುವವರೆಗೆ ಅಥವಾ ನೋಂದಾಯಿಸಿರುವುದಾಗಿ ಭಾವಿಸುವವರೆಗೆ, ಅಥವಾ

(ii) ವಿಭಜನೆ ಅಥವಾ ಪರಿಯೋಜನೆಯ ಸಂದರ್ಭದಲ್ಲಿ ಸಂದರ್ಭಾನುಸಾರವಾಗಿ ಸಹಕಾರಿ ಸಂಘದ ಅಥವಾ ಸಹಕಾರಿ ಸಂಘಗಳ ಪ್ರಮಾಣ ಪತ್ರ ಅಥವಾ ನೋಂದಣಿ ಪತ್ರವನ್ನು ನೀಡುವವರೆಗೆ ಅಥವಾ ನೀಡಿರುವುದಾಗಿ ಭಾವಿಸುವವರೆಗೆ, ಜಾರಿಗೆ ಬರತಕ್ಕುದಲ್ಲ.

(9) (2)ನೇ ಉಪಪ್ರಕರಣದ ಅಡಿಯಲ್ಲಿ ಒಂದು ಸಹಕಾರಿ ಸಂಘವು ಅಂಗೀಕರಿಸಿದ ನಿರ್ಣಯವು ಜಾರಿಗೊಂಡಾಗ, ಆ ನಿರ್ಣಯವು ಹೆಚ್ಚಿನ ಯಾವುದೇ ಭರವಸೆ ನೀಡದ ವರ್ಗಾವಣೆ ಪಡೆಯುವದರಲ್ಲಿ ಆಸ್ತಿಗಳು ಮತ್ತು ದಾಯಿತ್ವಗಳನ್ನು ನಿಹಿತವಾಗಿದೆ ಎಂಬುದಕ್ಕೆ ಸಾಕಷ್ಟು ಮಟ್ಟಿನ ಹಸ್ತಾಂತರಣ ಪತ್ರವಾಗಿರತಕ್ಕುದು.

(10) (ಎ) ಸಹಕಾರಿ ಸಂಘದ ಸಂಪೂರ್ಣ ಆಸ್ತಿಗಳು ಮತ್ತು ದಾಯಿತ್ವಗಳನ್ನು ಮತ್ತೊಂದು ಸಹಕಾರಿಗೆ ವರ್ಗಾಯಿಸಿದಾಗ, ಅಥವಾ

(ಬಿ) ಸಂಘವು ಎರಡು ಅಥವಾ ಹೆಚ್ಚು ಸಹಕಾರಿ ಸಂಘಗಳಾಗಿ ವಿಭಜನೆಗೊಂಡಾಗ, - ಅಂಥ ಸಹಕಾರಿ ಸಂಘದ ನೋಂದಣಿಯು ರದ್ದಾಗತಕ್ಕುದು ಮತ್ತು ಆ ಸಹಕಾರಿ ಸಂಘವನ್ನು ವಿಘಟನೆಯಾಗಿರುವುದೆಂದು ಭಾವಿಸತಕ್ಕುದು ಮತ್ತು ಒಂದು ಸಹಕಾರಿ ನಿಕಾಯವಾಗಿ ಅಸ್ತಿತ್ವದಲ್ಲಿರುವುದು ನಿಂತು ಹೋಗತಕ್ಕುದು.

(11) ಎರಡು ಅಥವಾ ಹೆಚ್ಚು ಸಹಕಾರಿ ಸಂಘಗಳನ್ನು ಸಂಯೋಜಿಸಿ ಒಂದು ಹೊಸ ಸಹಕಾರಿ ಸಂಘವನ್ನು ರೂಪಿಸಿರುವಲ್ಲಿ, ಹಾಗೆ ಸಂಯೋಜನೆಗೊಂಡ ಸಹಕಾರಿ ಸಂಘಗಳ ನೋಂದಣಿಯ ರದ್ದಾಗತಕ್ಕುದು ಮತ್ತು ಅವುಗಳನ್ನು ವಿಘಟಿತಗೊಳಿಸಿರುವುದಾಗಿ ಭಾವಿಸತಕ್ಕುದು ಮತ್ತು ಸಹಕಾರಿ ನಿಕಾಯಗಳಾಗಿ ಅಸ್ತಿತ್ವದಲ್ಲಿ ನಿಂತುಹೋಗತಕ್ಕುದು.

13. 16 (1 ರಿಂದ 7)ನೇ ಪ್ರಕರಣ ಮತ್ತು 17 : 29 ಬಿ, 29 ಸಿ, 29 ಡಿ ಪ್ರಕರಣಗಳ ತಿದ್ದುಪಡಿ : 16 (1 ರಿಂದ 7)ನೇ ಪ್ರಕರಣ ಮತ್ತು 17 : 29 ಬಿ, 29 ಸಿ, 29 ಡಿ ಪ್ರಕರಣಗಳನ್ನು ಈ ಕೆಳಗಿನಂತೆ ಮಾರ್ಪಡಿಸತಕ್ಕುದು.

ಸದಸ್ಯತ್ವ :

(1) ಸಹಕಾರಿ ಸಂಘದ ಸೇವೆಗಳ ಅಗತ್ಯವಿರುವ ಸದಸ್ಯತ್ವದ ಹೊಣೆಗಾರಿಕೆಗಳನ್ನು ಅಂಗೀಕರಿಸಿ ಸಹಕಾರಿ ಸಂಘದ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಇತರ ಷರತ್ತುಗಳನ್ನು ಪೂರೈಸುವ ಮತ್ತು ಕರಾರು ಮಾಡಿಕೊಳ್ಳಲು ಸಕ್ಷಮನಾಗಿರುವ ಯಾವನೇ ವ್ಯಕ್ತಿಯನ್ನು ಸದಸ್ಯನನ್ನಾಗಿ ಮಾಡಿಕೊಳ್ಳಬಹುದು.

(2) ಸದಸ್ಯತ್ವವು ಯಾವುದೇ ಲಿಂಗಭೇದವಿಲ್ಲದೆ ಸಹಕಾರಿ ಸಂಘದ ತತ್ವಗಳಲ್ಲಿ ಉಪಬಂಧಿಸಿರುವಂತೆ ಲಭ್ಯವಿರತಕ್ಕುದು.

(3) ಪ್ರತಿಯೊಂದು ಸಹಕಾರಿ ಸಂಘವು ಸದಸ್ಯತ್ವವನ್ನು ಕೋರುವ ಮತ್ತು ಈಗಿರುವ ಸದಸ್ಯರುಗಳಿಗೆ ಒಂದು ಸಹಕಾರಿ ಶಿಕ್ಷಣ ವ್ಯಾಸಂಗ ಕ್ರಮವನ್ನು ಏರ್ಪಡಿಸತಕ್ಕುದು ಮತ್ತು ತನ್ನ ಸದಸ್ಯರು, ಸಿಬ್ಬಂದಿ ಮತ್ತು ನಿರ್ದೇಶಕರುಗಳ ಸಹಕಾರಿ ಶಿಕ್ಷಣ ಮತ್ತು ತರಬೇತಿಗೆ ಪ್ರತಿವರ್ಷ ಹಣವನ್ನು ಒದಗಿಸತಕ್ಕುದು.

(4) ಚುನಾಯಿತ ನಿರ್ದೇಶಕ ಮಂಡಲಿ ಅಥವಾ ಅಂಥ ಮಂಡಲಿಯು ಇಲ್ಲದಿರುವಲ್ಲಿ ಸರ್ವ ಸದಸ್ಯರ ಸಭೆಯು ಮಾತ್ರ ಸದಸ್ಯರನ್ನು ಸೇರಿಸಿಕೊಳ್ಳತಕ್ಕುದು.

(5) ಒಂದು ಸಹಕಾರಿ ಸಂಘದಲ್ಲಿ ಸದಸ್ಯತ್ವ ಪಡೆಯಲು ಮತ್ತು ಉಳಿಸಿಕೊಳ್ಳಲು ಸಹಕಾರಿ ಸಂಘದ ಉಪವಿಧಿಗಳಲ್ಲಿ ಒಳಗೊಂಡಿರಬಹುದಾದಂಥ ಅನರ್ಹತೆಗಳೇ ಅಲ್ಲದೆ ಈ ಮುಂದಿನ ನಿರ್ಬಂಧಗಳೂ ಸಹ ಅನ್ವಯಿಸತಕ್ಕುದು.

(ಎ) ಒಬ್ಬ ವ್ಯಕ್ತಿಯ ವ್ಯವಹಾರವು ಉಪವಿಧಿಯಲ್ಲಿ ನಿರ್ದಿಷ್ಟಪಡಿಸಿರುವಂಥ ಸಹಕಾರಿ ವ್ಯವಹಾರದೊಂದಿಗೆ ಅಡ್ಡಿಯಾಗಿರುವುದು ಅಥವಾ ಸ್ಪರ್ಧಿಸುವುದು, ಒಬ್ಬ ವ್ಯಕ್ತಿಯು ಸದಸ್ಯತ್ವ ಪಡೆದುಕೊಳ್ಳಲು ಅಥವಾ ಉಳಿಸಿಕೊಳ್ಳಲು ಅನರ್ಹನಾಗುವುದು.

(ಬಿ) ಒಬ್ಬ ವ್ಯಕ್ತಿಯು ಸಹಕಾರಿಯ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿರುವ ಕನಿಷ್ಠ ಮಟ್ಟಗಳ ಸಂಬಂಧದಲ್ಲಿನ ಸೇವೆಗಳನ್ನು ನಿರಂತರ 2 ವರ್ಷಗಳವರೆಗೆ ಉಪಯೋಗಿಸಿಕೊಳ್ಳದಿರುವುದು ಮತ್ತು ಸರ್ವ ಸದಸ್ಯರ ಸಭೆಯಲ್ಲಿ ಅವನ ಕಾರ್ಯ ನಿರ್ವಾಹಿಸದಿರುವಿಕೆಯನ್ನು ಕ್ಷಮಿಸುವುದು

- ಇದು ಅವನು ಸದಸ್ಯತ್ವವನ್ನು ಉಳಿಸಿಕೊಳ್ಳಲು ಅನರ್ಹನಾಗಿಸುವುದು.

(ಸಿ) ಒಬ್ಬ ವ್ಯಕ್ತಿಯು ಸಹಕಾರಿಯ ಸಂಘದ ನಿರಂತರ 3 ಸರ್ವ ಸದಸ್ಯರ ಸಭೆಗೆ ಹಾಜರಾಗದಿರುವುದು ಮತ್ತು ಅಂಥ ಗೈರುಹಾಜರಿಗೆ ಸರ್ವ ಸದಸ್ಯ ಮಂಡಲಿಯ ಸಮ್ಮತಿಯನ್ನು ಪಡೆಯದಿರುವುದು - ಇದು ಅವನು ಸದಸ್ಯತ್ವವನ್ನು ಉಳಿಸಿಕೊಳ್ಳಲು ಅನರ್ಹನಾಗಿಸುವುದು.

(ಡಿ) ಒಬ್ಬ ವ್ಯಕ್ತಿಯು ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿರುವ ಮೊತ್ತವನ್ನು ಮೀರಿ ಮತ್ತು ಅವಧಿಯನ್ನು ಮೀರಿ ಒಂದು ಸಹಕಾರಿ ಸಂಘಕ್ಕೆ ಸಂದಾಯ ಮಾಡಬೇಕಾಈ ಯಾವುದೇ ಹಣವನ್ನು ಕುರಿತಂತೆ ತಪ್ಪಿತಸ್ಥನಾಗಿರುವಲ್ಲಿ - ಇದು ಅವನು ಸದಸ್ಯತ್ವವನ್ನು ಉಳಿಸಿಕೊಳ್ಳಲು ಅನರ್ಹನಾಗಿಸುವುದು.

ಸಾಕಷ್ಟು ಕಾರಣವಿಲ್ಲದೆ ಯಾವುದೇ ಸಹಕಾರಿ ಸಂಘವು ಉಪವಿಧಿಗಳ ಅಡಿಯಲ್ಲಿ ಸದಸ್ಯತ್ವಕ್ಕೆ ಅರ್ಹನಾಗಿರುವ ಯಾರೇ ವ್ಯಕ್ತಿಗೆ ಪ್ರವೇಶವನ್ನು ನಿರಾಕರಿಸತಕ್ಕುದಲ್ಲ. ಹಾಗೆ ಪ್ರವೇಶವನ್ನು ನಿರಾಕರಿಸಿದಲ್ಲಿ, ಹಾಗೆ ತೆಗೆದುಕೊಂಡ ನಿರ್ಧಾರವನ್ನು ಕಾರಣಗಳ ಸಹಿತವಾಗಿ ಅಂಥ ವ್ಯಕ್ತಿಗೆ ನಿರ್ಧಾರ ತೆಗೆದುಕೊಂಡ ಹದಿನೈದು ದಿವಸಗಳೊಳಗೆ ಅಥವಾ ಸದಸ್ಯತ್ವಕ್ಕೆ ಅರ್ಜಿಯನ್ನು ಸಲ್ಲಿಸಿದ ದಿನಾಂಕದಿಂದ ಮೂವತ್ತು ದಿವಸಗಳೊಳಗೆ - ಇವುಗಳಲ್ಲಿ ಯಾವುದು ಮೊದಲೋ ಅದರೊಳಗೆ ನೋಂದಾಯಿತ ಅಂಚೆಯ ಮೂಲಕ ತಿಳಿಸತಕ್ಕುದು.

ಪರಂತು, ಸದಸ್ಯತ್ವಕ್ಕೆ ಅರ್ಜಿ ಸಲ್ಲಿಸಿದ ಮೂವತ್ತು ದಿವಸಗಳೊಳಗಾಗಿ, ಅಂಥ ಯಾವುದೇ ನಿರ್ಧಾರಗಳನ್ನು ತಿಳಿಸದಿದ್ದರೆ, ಆಗ ವ್ಯಕ್ತಿಯನ್ನು ಮೂವತ್ತೊಂದನೇ ದಿನದಂದು ಸಹಕಾರಿಯ ಸದಸ್ಯನಾಗಿ ಸೇರಿಸಿಕೊಂಡಿರುವುದಾಗಿ ಭಾವಿಸತಕ್ಕುದು.

ಒಬ್ಬ ವ್ಯಕ್ತಿಗೆ ನಿರ್ದೇಶಕ ಮಂಡಲಿಯು ಸದಸ್ಯತ್ವವನ್ನು ನಿರಾಕರಿಸಿರುವಲ್ಲಿ ಮಂಡಲಿಯ ನಿರ್ಧಾರದ ವಿರುದ್ಧ ಒಂದು ಅಪೀಲನ್ನು ಸರ್ವ ಸದಸ್ಯರ ಸಭೆಗೆ ಸಲ್ಲಿಸತಕ್ಕುದು. ಸರ್ವ ಸದಸ್ಯರ ಸಭೆಯ ನಿರ್ಧಾರದಿಂದ ಬಾಧಿತನಾದ ಯಾರೇ ಅರ್ಜಿದಾರನು ನಿರ್ಧಾರದ ಪರಿಶೀಲನೆಗಾಗಿ ಸಹಕಾರಿ ನ್ಯಾಯಾಧೀಕರಣಕ್ಕೆ ಅರ್ಜಿ ಸಲ್ಲಿಸಬಹುದು.

14. 18ನೇ (1 ರಿಂದ 4) ಪ್ರಕರಣದ ತಿದ್ದುಪಡಿ : 18ನೇ (1 ರಿಂದ 4) ಪ್ರಕರಣವನ್ನು ಬಿಟ್ಟುಬಿಡತಕ್ಕುದು.

15. 20 ಮತ್ತು 21ನೇ ಪ್ರಕರಣಗಳ ತಿದ್ದುಪಡಿ : 20 ಮತ್ತು 21ನೇ ಪ್ರಕರಣಗಳನ್ನು ಈ ಮುಂದಿನಂತೆ ಮಾರ್ಪಡಿಸತಕ್ಕುದು :

ಸದಸ್ಯರ ಮತಗಳು :

(1) ಸಂಘದ ಯಾರೇ ಸದಸ್ಯನು ಸಹಕಾರಿ ಸಂಘದ ವ್ಯವಹಾರಗಳ ಸಂಬಂಧದಲ್ಲಿ ಒಂದಕ್ಕಿಂತ ಹೆಚ್ಚು ಮತ ಹೊಂದಿರತಕ್ಕದಲ್ಲ.

(2) ಬಳಕೆದಾರರು ಸದಸ್ಯನು ಮಾತ್ರ ಮತ ಚಲಾಯಿಸುವ ಹಕ್ಕು ಹೊಂದಿರತಕ್ಕುದು.

(3) ಮತ ಚಲಾಯಿಸುವ ಸದಸ್ಯರು ಕೆಲವು ವಿದ್ಯಾರ್ಹತೆಗಳನ್ನು ಪೂರೈಸತಕ್ಕುದು.

(4) ಚುನಾವಣೆಗಳಲ್ಲಿ, ನಾಮನಿರ್ದೇಶಿತರಾದ ಯಾರೇ ವ್ಯಕ್ತಿಗಳು ಮತ ಚಲಾಯಿಸಲು ಮತ್ತು ಅಥವಾ ಚುನಾವಣೆಗಳಿಗೆ ಸ್ಪರ್ಧಿಸಲು ಹಕ್ಕುಳ್ಳವರಾಗಿರತಕ್ಕುದಲ್ಲ.

(5) ಚುನಾವಣೆಗಳ ಉದ್ದೇಶಗಳಿಗಾಗಿ, ಮತಗಳನ್ನು ರಹಸ್ಯ ಮತದಾನದ ಮೂಲಕ ಚಲಾಯಿಸತಕ್ಕುದು; ಸಹಕಾರಿ ಸಂಘದ ವ್ಯವಹಾರ, ನಿರ್ವಹಣೆ ನಿರ್ಧಾರ ತೆಗೆದುಕೊಳ್ಳುವ ಬಗೆಗಿನ ಇತರ ಉದ್ದೇಶಗಳಿಗೆ ಕೈಗಳನ್ನು ಎತ್ತುವ ಮೂಲಕ ಚಲಾಯಿಸತಕ್ಕುದು.

(6) ಮತಗಳು ಸಮಾನವಾಗಿ ಬಂದ ಸಂದರ್ಭದಲ್ಲಿ, ಅಧ್ಯಕ್ಷರು ಚುನಾವಣೆಗಳ ಸಂದರ್ಭ ಹೊರತುಪಡಿಸಿ ನಿರ್ಣಾಯಕ ಮತವನ್ನು ಚಲಾಯಿಸಬಹುದು.

(7) ವ್ಯವಹಾರ ನಿರ್ಧಾರಗಳ ವಿಚಾರಗಳಲ್ಲಿ ಆಶ್ರಯ ಮತ ತತ್ವಗಳ ಅನ್ವಯವಾಗುತ್ತದೆ. ವ್ಯವಹಾರಗಳಲ್ಲದ ನಿರ್ಧಾರಗಳಿಗೆ ಸಂಬಂಧಿಸಿದಂತೆ, ಒಬ್ಬ ವ್ಯಕ್ತಿ, ಒಂದು ಮತ ಎಂಬ ತತ್ವ ಅನ್ವಯವಾಗುತ್ತದೆ.

16. 22ನೇ (ಎ ಮತ್ತು ಬಿ) ಪ್ರಕರಣದ ತಿದ್ದುಪಡಿ : 22ನೇ (ಎ ಮತ್ತು ಬಿ) ಪ್ರಕರಣಗಳನ್ನು ಕೆಳಗಿನಂತೆ ಮಾರ್ಪಡಿಸತಕ್ಕುದು.

ಈಕ್ವಿಟಿ ಹೊಂದಲು ನಿರ್ಬಂಧಗಳು :

(1) ಪ್ರಾಥಮಿಕ ಸಹಕಾರಿ ಸಂಘದ ಯಾರೇ ಸದಸ್ಯರು, ಯಾವುದೇ ಕಾಲದಲ್ಲಿ ಹತ್ತನೇ ಒಂದರಷ್ಟಕ್ಕಿಂತ ಹೆಚ್ಚು ಪೇಯ್ಡ್ ಆಪ್ ಈಕ್ವಿಟ್ ಬಂಡವಾಳವನ್ನು ಹೊಂದಿರತಕ್ಕುದಲ್ಲ,

(2) ಯಾವುದೇ ಸಹಕಾರಿ ಸಂಘವು ಸರ್ಕಾರದಿಂದ ಈಕ್ವಿಟಿಯ ರೂಪದಲ್ಲಿ ಯಾವುದೇ ನಿಧಿಗಳನ್ನು ಸ್ವೀಕರಿಸತಕ್ಕುದಲ್ಲ,

17. ಪ್ರಕರಣ 23 (1 ಮತ್ತು 2): 23ಎ (1 ಮತ್ತು 2) 24 ಮತ್ತು 25ರ ತಿದ್ದುಪಡಿ : 23 (1 ಮತ್ತು 2): 23ಎ (1 ಮತ್ತು 2) 24 ಮತ್ತು 25ನೇ ಪ್ರಕರಣಗಳನ್ನು ಈ ಮುಂದಿನಂತೆ ಮಾರ್ಪಡಿಸತಕ್ಕದು :

ಸದಸ್ಯತ್ವವನ್ನು ಅಂತ್ಯಗೊಳಿಸುವುದು :

(1) ನಿರ್ದೇಶಕ ಮಂಡಲಿಯು, ಮತ ಚಲಾಯಿಸುವ ಹಕ್ಕುಳ್ಳ ಮಂಡಲಿಯ ಸದಸ್ಯರ ಒಟ್ಟುಸಂಖ್ಯೆ ಬಹು ಸಂಖ್ಯೆಯ ಸದಸ್ಯರಿಂದ ಮತ್ತು ಹಾಜರಿದ್ದು ಮತ ಚಲಾಯಿಸುವ ಸದಸ್ಯರ ಮೂರನೇ ಎರಡರಷ್ಟಕ್ಕಿಂತ ಕಡಿಮೆಯಿಲ್ಲದ ಮತ ಚಲಾಯಿಸುವ ಹಕ್ಕುಳ್ಳ ಸದಸ್ಯರು ಅಂಗೀಕರಿಸಿದ ನಿರ್ಣಯದ ಮೂಲಕ, ಸಹಕಾರಿಯ ಸೂಕ್ತ ಕಾರ್ಯನಿರ್ವಹಣೆಗೆ ಹಾನಿಕಾರಕವಾದ ಕೃತ್ಯ: ಲೋಪಗಳಿಗೆ ಸಹಕಾರಿಯಲ್ಲಿ ಒಬ್ಬ ವ್ಯಕ್ತಿಯ ಸದಸ್ಯತ್ವವನ್ನು ಅಂತ್ಯಗೊಳಿಸಬಹುದು. ಪರಂತು, ಅಂತಹ ವ್ಯಕ್ತಿಗೆ ಈ ಪರವಾಗಿ ಅಹವಾಲು ಹೇಳಿಕೊಳ್ಳುವ ಯುಕ್ತ ಅವಕಾಶ ಕೊಟ್ಟ ಹೊರತು ಆ ತನಕ ಸದಸ್ಯತ್ವವನ್ನು ಅಂತ್ಯಗೊಳಿಸತಕ್ಕುದಲ್ಲ,

(2) ನಿರ್ದೇಶಕ ಮಂಡಲಿಯು ಒಬ್ಬ ವ್ಯಕ್ತಿಯ ಸದಸ್ಯತ್ವವನ್ನು ಅಂತ್ಯಗೊಳಿಸಿರುವಲ್ಲಿ, ಸರ್ವಸದಸ್ಯರ ಮಂಡಲಿಗೆ ಅಪೀಲನ್ನು ಸಲ್ಲಿಸತಕ್ಕುದು ಮತ್ತು ಸರ್ವ ಸದಸ್ಯರ ಮಂಡಲಿಯ ತೀರ್ಮಾನವು ಅಂತಿಮವಾಗಿರತಕ್ಕುದು.

(3) ಸದಸ್ಯತ್ವವನ್ನು ಕಳೆದುಕೊಂಡಿರುವ ಯಾವುದೇ ವ್ಯಕ್ತಿಯು ಹಾಗೂ ಅಂತ್ಯಗೊಳಿಸಿದ ದಿನಾಂಕದಿಂದ ಒಂದು ವರ್ಷದವರೆಗೆ ಸಹಕಾರಿ ಸಂಘದ ಸದಸ್ಯನಾಗಿ ಪುನಃ ಪ್ರವೇಶಕ್ಕೆ ಅರ್ಹನಾಗಿರತಕ್ಕುದಲ್ಲ.

18. ಪ್ರಕರಣ 26 (1 ಮತ್ತು 4)ರ ತಿದ್ದುಪಡಿ : 26ನೇ ಪ್ರಕರಣವನ್ನು (1 ರಿಂದ 4) ಈ ಮುಂದಿನಂತೆ ಮಾರ್ಪಡಿಸತಕ್ಕುದು.

ಸದಸ್ಯರಲ್ಲದವರಿಗೆ ಸೇವೆಗಳ ಮೇಲೆ ನಿರ್ಬಂಧಗಳು :

ಸಹಕಾರಿ ಸಂಘದ ಸೇವೆಗಳು ಉಪವಿಧಿಗಳಲ್ಲಿ ಅನ್ಯತಾ ಉಪಬಂಧಿಸಿರುವ ಹೊರತು ಸದಸ್ಯರಿಗೆ ಮಾತ್ರ ಲಭ್ಯವಿರತಕ್ಕುದು.

19. 27ನೇ ಪ್ರಕರಣದ ತಿದ್ದುಪಡಿ : 27ನೇ ಪ್ರಕರಣವನ್ನು ಈ ಮುಂದಿನಂತೆ ಮಾರ್ಪಡಿಸತಕ್ಕುದು.

ಸರ್ವಸದಸ್ಯರ ಸಭೆ :

(1) ಅಧಿನಿಯಮದ ಉಪಬಂಧಗಳಿಗೆ ಮತ್ತು ಉಪವಿಧಿಗಳಿಗೆ ಒಳಪಟ್ಟು, ಒಂದು ಸಹಕಾರಿ ಸಂಘದ ಅಂತಿಮ ಅಧಿಕಾರವು ಅದರ ಸರ್ವಸದಸ್ಯರ ಮಂಡಲಿಯಲ್ಲಿ ನಿಹಿತವಾಗಿರತಕ್ಕುದು.

(2) ಒಂದು ಸಹಕಾರಿ ಸಂಘವು ಹಾಗೆ ಇಚ್ಛಿಸಿದಲ್ಲಿ, ಅದರ ಉಪನಿಧಿಗಳು ಸದಸ್ಯರಿಂದ ಆಯ್ಕೆ ಮಾಡಿ, ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿರುವಂಥ ರೀತಿಯಲ್ಲಿ ಮತ್ತು ಅಂಥ ಪ್ರಕಾರ್ಯಗಳೊಂದಿಗೆ ರಚಿಸಬೇಕಾಗಿರುವ, ಪ್ರತಿನಿಧಾನಾತ್ಮಕ ಸರ್ವ ಸದಸ್ಯ ನಿಕಾಯವನ್ನು ಉಪಬಂಧಿಸಬಹುದು. ಈ ಅಧಿನಿಯಮದಲ್ಲಿ ಸರ್ವಸದಸ್ಯ (ಸಾಮಾನ್ಯ) ನಿಕಾಯಕ್ಕೆ ಮಾಡಲಾದ ಯಾವುದೇ ಉಲ್ಲೇಖ ಅದು ಇರುವ ಕಡೆ ಪ್ರತಿನಿಧಾನಾತ್ಮಕ ಸರ್ವಸದಸ್ಯರ (ಸಾಮಾನ್ಯ) ನಿಕಾಯಕ್ಕೆ ಅನ್ವಯವಾಗತಕ್ಕುದು. ಆದಾಗ್ಯೂ, ಪರಂತು ಪ್ರತಿನಿಧಾನಾತ್ಮಕ ಸರ್ವಸದಸ್ಯ ನಿಕಾಯವು ಉಪವಿಧಿಗಳು ಪ್ರತಿನಿಧಾನಾತ್ಮಕ ಸರ್ವಸದಸ್ಯರ ನಿಕಾಯಕ್ಕೆ ತಿದ್ದುಪಡಿಗಳನ್ನು ರಚಿಸುವ ಅಧಿಕಾರವನ್ನು ಪ್ರದತ್ತಗೊಳಿಸಿರುವ ಉಪವಿಧಿಗಳಿಗೆ ಸಂಬಂಧಿಸಿದವುಗಳ ಹೊರತಾಗಿ ಪ್ರತಿ ನಿಧಾನಾತ್ಮಕ ಸರ್ವ ಸದಸ್ಯ ನಿಕಾಯವು ಸಹಕಾರಿ ಸಂಘದ ಉಪವಿಧಿಗಳನ್ನು ತಿದ್ದುಪಡಿ ಮಾಡುವ ಹಕ್ಕನ್ನು ಹೊಂದಿರತಕ್ಕುದಲ್ಲ.

(3) ಈ ಅಧಿನಿಯಮದ ಇತರ ಉಪಬಂಧಗಳು ಮತ್ತು ಉಪವಿಧಿಗಳಿಗೆ ಒಳಪಟ್ಟು ಸರ್ವಸದಸ್ಯ ನಿಕಾಯವು ಈ ಮುಂದಿನ ವಿಷಯಗಳೊಂದಿಗೆ ವ್ಯವಹರಿಸತಕ್ಕುದು.

(ಎ) ಮಂಡಲಿಯ ನಿರ್ದೇಶಕರುಗಳನ್ನು ಆಯ್ಕೆ ಮಾಡುವುದು

(ಬಿ) ಮಂಡಲಿಯ ನಿರ್ದೇಶಕರನ್ನು ತೆಗೆಯುವುದು ಮತ್ತು ಖಾಲಿ ಸ್ಥಾನಗಳನ್ನು ತುಂಬುವುದು.

(ಸಿ) ಮಂಡಲಿಯ ಮಂಡಿಸಿದ ವಾರ್ಷಿಕ ವರದಿಯನ್ನು ಪರಿಶೀಲಿಸುವುದು.

(ಡಿ) ಶಾಸನ ಪ್ರದತ್ತ ಲೆಕ್ಕಪರಿಶೋಧಕರು ಮತ್ತು ಆಂತರಿಕ ಲೆಕ್ಕಪರಿಶೋಧಕರನ್ನು ನೇಮಕ ಮಾಡುವುದು.

(ಇ) ಲೆಕ್ಕಪರಿಶೋಧಕರ ವರದಿಯನ್ನು ಮತ್ತು ಲೆಕ್ಕ ಪರಿಶೋಧಕ ವಿವರಣೆಯನ್ನು ಪರಿಶೀಲಿಸುವುದು.

(ಎಫ್) ಲೆಕ್ಕ ಪರಿಶೋಧನೆ ಪಾಲನೆ ವರದಿಯನ್ನು ಪರಿಶೀಲಿಸುವುದು.

(ಜಿ) 39ನೇ ಪ್ರಕರಣದ ಅಡಿಯಲ್ಲಿ ವಿಚಾರಣೆ ವರದಿ ಯಾವುದಾದರೂ ಇದ್ದರೆ ಅದರ ಮೇಲೆ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಮಾಡುವುದು.

(ಹೆಚ್) ನಿವ್ವಳ ಹೆಚ್ಚಳವನ್ನು ವಿಲೇ ಮಾಡುವುದು.

(ಐ) ಕಾರ್ಯಾಚರಣೆಗೆ ಸಂಬಂಧಿಸಿದ ಕೊರತೆ ಯಾವುದಾದರೂ ಇದ್ದರೆ, ಅದನ್ನು ಪರಿಶೀಲಿಸುವುದು.

(ಜೆ) ದೀರ್ಘಾವಧಿಯ ಯಥಾದೃಷ್ಯ ಯೋಜನೆ ಮತ್ತು ವಾರ್ಷಿಕ ಕಾರ್ಯಾಚರಣೆ ಯೋಜನೆಯ ಅನುಮೋದನೆ.

(ಕೆ) ವಾರ್ಷಿಕ ಬಜೆಟ್ನ ಅನುಮೋದನೆ.

(ಎಲ್) ನಿರ್ದಿಷ್ಟ ಮೀಸಲು ಮತ್ತು ಇತರ ನಿಧಿಗಳ ಸೃಜನೆ

(ಎಂ) ಮೀಸಲು ಮತ್ತು ಇತರ ನಿಧಿಗಳ ವಾಸ್ತವ ಬಳಕೆಯ ಪರಿಶೀಲನೆ.

(ಎನ್) ಇತರ ಸಹಕಾರಿ ಸಂಘಗಳಲ್ಲಿನ ಸಹಕಾರಿ ಸದಸ್ಯತ್ವದ ಬಗ್ಗೆ ವರದಿ.

(ಒ) ಇತರ ಸಹಕಾರಿ ಸಂಘದೊಂದಿಗೆ ಪಾಲುದಾರಿಕೆ.

(ಪಿ) ಯಾವದೇ ಪೂರಕ ಸಂಸ್ಥೆಯ ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳ ಪರಿಶೀಲನೆ.

(ಕ್ಯೂ) ನಿರ್ದೇಶಕರ ಮಂಡಲಿಯು ಸದಸ್ಯತ್ವಕ್ಕಾಗಿ ಸಲ್ಲಿಸಿರುವ ಅರ್ಜಿಯನ್ನು ತಿರಸ್ಕರಿಸಿರುವ ಅಥವಾ ಸದಸ್ಯತ್ವವನ್ನು ಅಂತ್ಯಗೊಳಿಸಿರುವ ವ್ಯಕ್ತಿಯ ಅಪೀಲನ್ನು ಪರಿಶೀಲಿಸುವುದು.

(ಆರ್) ನಿರ್ದೇಶಕರು ಅಥವಾ ಮುಖ್ಯ ಕಾರ್ಯನಿರ್ವಾಹಕ ಸಂಬಂಧಿಗಳಾಗಿದ್ದು ನೇಮಕಾತಿ ಹೊಂದಿರುವ ನೌಕರರ ಪಟ್ಟಿ.

(ಎಸ್) ಉಪವಿಧಿಗಳ ತಿದ್ದುಪಡಿ

(ಟಿ) ನಿರ್ದೇಶಕರುಗಳಿಗೆ ಮತ್ತು ಅಧಿಕಾರಿಗಳಿಗೆ ನಡವಳಿಕೆ ಸಂಹಿತೆ ರಚನೆ.

(ಯು) ಸದಸ್ಯರ ಸೇರ್ಪಡೆ ಮತ್ತು ಅಂತ್ಯಗೊಳಿಸುವಿಕೆ ಸಂಖ್ಯೆ.

(ವಿ) ಸಹಕಾರಿ ಸಂಘದ ವಿಸರ್ಜನೆ.

(ಡಬ್ಲ್ಯೂ) ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿರುವಂತಹ ಇತರ ಪ್ರಕಾರ್ಯಗಳು.

(4) ಸರ್ವಸದಸ್ಯರ ಸಭೆಗಳು ಮತ್ತು ಮಂಡಲಿಯ ಹಾಗೂ ಇತರ ಸಭೆಗಳ ನಡಾವಳಿಗಳು :

(1) ಪ್ರತಿಯೊಂದು ಸಹಕಾರಿ ಸಂಘವು, ಪ್ರತಿಯೊಂದು ಸರ್ವ ಸದಸ್ಯರ ಸಭೆಗಳು ಮತ್ತು ಅದರ ನಿರ್ದೇಶಕ ಮಂಡಲಿಯ ಪ್ರತಿಯೊಂದು ಸಭೆಯ ಎಲ್ಲ ನಡಾವಳಿಗಳನ್ನು ನಡಾವಳಿ ಪುಸ್ತಕದಲ್ಲಿ ದಾಖಲು ಮಾಡತಕ್ಕುದು.

(2) ಅಂಥ ನಡಾವಳಿಗಳನ್ನು ಸಭೆಯು ಮುಕ್ತಾಯವಾದ 30 ದಿನಗಳೊಳಗಾಗಿ ಆಹ್ವಾನಿತರಾದ ಎಲ್ಲ ವ್ಯಕ್ತಿಗಳಿಗೂ ತೋರಿಸತಕ್ಕುದು.

(3) ಹಾಗೆ ದಾಖಲು ಮಾಡಿದ ನಡಾವಳಿಗಳಿಗೆ ಸದರಿ ಸಭೆಗೆ ಅಧ್ಯಕ್ಷತೆ ವಹಿಸಿದ ವ್ಯಕ್ತಿ ಅಥವಾ ಸಭೆಗೆ ಹಾಜರಾದಂಥ ಮಂಡಲಿಯಿಂದ ಯುಕ್ತವಾಗಿ ಪ್ರಾಧಿಕೃತರಾದ ನಿರ್ದೇಶಕರು ರುಜು ಮಾಡತಕ್ಕುದು.

(4) ಸಹಕಾರಿ ಸಂಘದ ಉಪವಿಧಿಗಳು, ಮಂಡಲಿಯ ಮತ್ತು ಸರ್ವ ಸದಸ್ಯರ ಸಭೆಗಳನ್ನು ಎಷ್ಟು ಅಂತರಗಳಲ್ಲಿ ಮತ್ತು ಯಾವ ರೀತಿಯಲ್ಲಿ ನಡೆಸತಕ್ಕುದು ಎಂಬುದನ್ನು ನಿರ್ದಿಷ್ಟಪಡಿಸತಕ್ಕುದು, ಆದಾಗ್ಯೂ ಇದು ಒಂದು ವರ್ಷದಲ್ಲಿ ನಡೆಯಬೇಕೆಂದು ಅಗತ್ಯಪಡಿಸಿರುವ 4 ಮಂಡಲಿಯ ಸಭೆಗಳು ಮತ್ತು 1 ಸರ್ವ ಸದಸ್ಯರ ಸಭೆಗಿಂತ ಕಡಿಮೆ ಇರತಕ್ಕುದಲ್ಲ.

20. 28ನೇ **ಪ್ರಕರಣದ ತಿದ್ದುಪಡಿ** : 28ನೇ ಪ್ರಕರಣವನ್ನು ಈ ಮುಂದಿನಂತೆ ಮಾರ್ಪಾಟು ಮಾಡತಕ್ಕುದು :

ಸಭೆಗಳು :

(1) ಮಂಡಲಿಯು, ಕಡೇ ಪಕ್ಷ ಸಹಕಾರಿ ಸಂಘದ ಸದಸ್ಯರ ಹತ್ತನೇ ಒಂದು ಭಾಗದಷ್ಟು ಸಭೆ ಸೇರಬೇಕೆಂದು ಸಲ್ಲಿಸಿದ ಕೋರಿಕೆ ಅರ್ಜಿಯನ್ನು ಸ್ವೀಕರಿಸದ ದಿನಾಂಕದಿಂದ 30 ದಿನಗಳೊಳಗಾಗಿ ಅಥವಾ ಅದರಲ್ಲಿ ಉಪಬಂದಿಸಲಾದಂಥ ದಿನಾಂಕದೊಳಗಾಗಿ ಒಂದು ವಿಶೇಷ ಸರ್ವ ಸದಸ್ಯರ ಸಭೆಯನ್ನು ನಡೆಸತಕ್ಕುದು ಮತ್ತು ಅದರಲ್ಲಿ ಪ್ರಸ್ತಾವಿತ ಕಾರ್ಯಸೂಚಿ ಮತ್ತು ಯಾವ ಕಾರಣಕ್ಕಾಗಿ ಸಭೆಯ ಅವಶ್ಯಕತೆಯುಂಟಾಯಿತು ಎಂಬ ಕಾರಣಗಳು ಒಳಗೊಂಡಿರತಕ್ಕುದು.

(2) ಒಂದು ಸಹಕಾರಿ ಸಂಘವು ನಿಗದಿತ ಕಾಲದೊಳಗೆ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ನಡೆಸಲು ತಪ್ಪಿದಲ್ಲಿ ಮತ್ತು ಸಂಬಂಧಪಟ್ಟ ಫೆಡರೇಷನ್ ಸಹ ಸಭೆಯನ್ನು ನಡೆಸಲು ತಪ್ಪಿದಲ್ಲಿ ರಿಜಿಸ್ಟ್ರಾರರು 90 ದಿನಗಳು ಮುಕ್ತಾಯವಾದ ಮೇಲೆ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ಕರೆಯತಕ್ಕುದು.

21. 28ನೇ (1 ರಿಂದ 4) ಪ್ರಕರಣದ ತಿದ್ದುಪಡಿ :

28ಎ (1 ರಿಂದ 4) ಪ್ರಕರಣವನ್ನು ಈ ಮುಂದಿನಂತೆ ಮಾರ್ಪಾಟು ಮಾಡತಕ್ಕುದು:

ನಿರ್ದೇಶಕ ಮಂಡಲಿ :

(1) ಸಹಕಾರಿ ಸಂಘದ ಸರ್ವಸದಸ್ಯರ ಸಭೆಯನ್ನು ಉಪವಿಧಿಗಳಿಗನುಸಾರವಾಗಿ ನಿರ್ದೇಶಕ ಮಂಡಲಿಯನ್ನು ರಚಿಸತಕ್ಕುದು.

(2) ಮಂಡಲಿಯಲ್ಲಿರುವ ನಿರ್ದೇಶಕರ ಸಂಖ್ಯೆಯು ಉಪವಿಧಿಗಳಿನುಸಾರವಾಗಿರತಕ್ಕುದು. ಮುಖ್ಯ ಕಾರ್ಯ ನಿರ್ವಾಹಕನು ಮಂಡಲಿಯ ಪದನಿಮಿತ್ತ ಸದಸ್ಯನಾಗಿರತಕ್ಕುದು.

(3) ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಪ್ರಮಾಣಗಳ ಜೊತೆಗೆ, ಒಬ್ಬ ವ್ಯಕ್ತಿಯು ಅವನು/ ಅವಳು

(ಎ) ಯಾವುದೇ ಕಾಲದಲ್ಲಿ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದಂತೆ ಸದಸ್ಯನಾಗಿ ಮತ ಚಲಾಯಿಸುವ ಹಕ್ಕನ್ನು ಕಳೆದುಕೊಂಡಿದ್ದರೆ,

(ಬಿ) 25(6)ನೇ ಪ್ರಕರಣ ಮತ್ತು ಉಪವಿಧಿಗಳಲ್ಲಿ ನಿರ್ಧಿಷ್ಟಪಡಿಸಿದಂತೆ ಸದಸ್ಯನಾಗಿ ಮುಂದುವರೆಯುವ ಹಕ್ಕನ್ನು ಕಳೆದುಕೊಂಡಿದ್ದರೆ,

(ಸಿ) ಉಪನಿಧಿಗಳಲ್ಲಿ ನಿರ್ದಿಷ್ಟಪಡಿಸಿರುವ ಯಾವುದೇ ಅನರ್ಹತೆಗಳನ್ನು ಹೊಂದಿದ್ದರೆ ನಿರ್ದೇಶಕನಾಗಿ ಆಯ್ಕೆಯಾಗುವುದಕ್ಕೆ ಅನರ್ಹರಾಗಿರತಕ್ಕುದು.

(4) ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಪ್ರಮಾಣಗಳ ಜೊತೆಗೆ, ಒಬ್ಬ ವ್ಯಕ್ತಿಯು, ಅವನಾಗಲೀ/ ಅವಳಾಗಲೀ (3)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಅನರ್ಹತೆಯನ್ನು ಹೊಂದಿರುವಲ್ಲಿ ಮತ್ತು ಅಥವಾ

(ಎ) ಸ್ವತಃ ಅವನು/ ಅವಳು ನಿರಂತರ ಮೂರು ಸಭೆಗಳಿಗೆ ಗೈರುಹಾಜರಾಗಿದ್ದರೆ,

(ಬಿ) ಸ್ವತಃ ಅವನುಅವಳು ಯಾವುದೇ ಸರ್ವಸದಸ್ಯರ ಸಭೆಗೆ ಗೈರು ಹಾಜರಾಗಿದ್ದರೆ ಮತ್ತು ಅಂಥ ಗೈರುಹಾಜರಿಗೆ ಸರ್ವಸದಸ್ಯರಿಂದ ಸಮ್ಮತ ಪಡೆಯದೇ ಇದ್ದರೆ,

(ಸಿ) ಈ ಅಧಿನಿಯಮದ ಅಡಿಯಲ್ಲಿ ದಂಡ ವಿಧಿಸಿದ್ದರೆ-ನಿರ್ದೇಶಕನಾಗಿರುವುದು ರದ್ದಾಗತಕ್ಕುದು.

(5) ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಪ್ರಮಾಣಗಳ ಜೊತೆಗೆ, ಮಂಡಲಿಯ ಎಲ್ಲ ನಿರ್ದೇಶಕರು ಸಹಕಾರಿ ಸಂಘದ ನಿರ್ದೇಶಕರಾಗಿ ತಮ್ಮ ಪದಾವಧಿಯಲ್ಲಿ, -

(ಎ). ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿ ಕಾಲದೊಳಗಾಗಿ ಮತ್ತು ಅವರ ಪದಾವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ಅವರು ಚುನಾವಣೆಗಳನ್ನು ನಡೆಸದೇ ಇದ್ದರೆ ;

(ಬಿ) ಅವರು, ಸಹಕಾರಿ ಸಂಘದ ಲೆಕ್ಕ ವರ್ಷವು ಮುಕ್ತಾಯವಾದ 4 ತಿಂಗಳಳೊಳಗಾಗಿ ಅದರ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ಅಥವಾ ಸರ್ವಸದಸ್ಯರ ಕೋರಿಕೆ ಸಭೆಯನ್ನು ನಡೆಸದೆ ಇದ್ದರೆ,

(ಸಿ) ಅವರು, ಸರ್ವಸದಸ್ಯರ ಸಭೆಯ ಮುಂದೆ ಲೆಕ್ಕಪರಿಶೋಧಕರ ವರದಿಗಳೊಂದಿಗೆ ಪರಿಶೋಧಿತ ಲೆಕ್ಕಪತ್ರಗಳನ್ನು ಮಂಡಿಸದೆ ಇದ್ದರೆ -

ಮೂರು ವರ್ಷಗಳ ಅವಧಿಯವರೆಗೆ ನಿರ್ದೇಶಕರಾಗಿ ಆಯ್ಕೆಗೊಳ್ಳಲು ಮತ್ತು ಯಾವುದೇ ಸಹಕಾರಿ ಸಂಘದ ನಿರ್ದೇಶಕರಾಗಿ ಮುಂದುವರಿಯಲು ಅನರ್ಹರಾಗತಕ್ಕುದು.

(6) ಸಹಕಾರಿ ಸಂಘದ ನೋಂದಣಿಯ ತರುವಾಯದ ಮೊದಲ ಮೂರು ವರ್ಷಗಳನ್ನು ಹೊರತುಪಡಿಸಿ ಒಬ್ಬ ಸದಸ್ಯನು ಮಂಡಲಿಯ ನಿರ್ದೇಶಕನಾಗಿ ಆಯ್ಕೆಯಾಗಲು ಅರ್ಹನಾಗಬೇಕಾದರೆ ;

(ಎ) ಚುನಾವಣಾ ವರ್ಷದ ಕಡೇ ಪಕ್ಷ ಹಿಂದಿನ ನಿಕಟ 2 ವರ್ಷದ ಸಂಬಂಧದಲ್ಲಿ ಸಹಕಾರಿ ಸಂಘದ ಮತ ಚಲಾಯಿಸುವ ಸದಸ್ಯನಾಗಿರತಕ್ಕುದು.

(ಬಿ) ಸಹಕಾರಿ ಸಂಘದ ಚುನಾವಣೆಗಳ ಹಿಂದಿನ ನಿಕಟ ಎರಡು ಸರ್ವಸದಸ್ಯರ ಸಭೆಗಳಿಗೆ ಹಾಜರಾಗಿರತಕ್ಕುದು (ಪ್ರಕರಣ 29).

(7) ನಿರ್ದೇಶಕ ಮಂಡಳಿಯ ಅಧಿಕಾರಗಳು ಮತ್ತು ಪ್ರಕಾರ್ಯಗಳು

ಮಂಡಳಿಯು, ಉಪವಿಧಿಗಳಿಗನುಸಾರವಾಗಿ,-

(ಎ) ಸದಸ್ಯತ್ವವನ್ನು ಅಂಗೀಕರಿಸುವ ಮತ್ತು ಸಮಾಪನಗೊಳಿಸುವ,

(ಬಿ) ಅಧ್ಯಕ್ಷರು ಮತ್ತು ಇತರ ಪದಾಧಿಕಾರಿಗಳನ್ನು ಚುನಾಯಿಸುವ,

(ಸಿ) ಅಧ್ಯಕ್ಷರು ಮತ್ತು ಇತರ ಪದಾಧಿಕಾರಿಗಳನ್ನು ಪದದಿಂದ ತೆಗೆದುಹಾಕುವ,

(ಡಿ) ಮುಖ್ಯ ಕಾರ್ಯನಿರ್ವಾಹಕನನ್ನು ನೇಮಿಸುವ ಮತ್ತು ತೆಗೆದುಹಾಕುವ,

(ಇ) ಸಿಬ್ಬಂದಿ ವರ್ಗದ ಸಂಖ್ಯೆಯನ್ನು ಗೊತ್ತುಪಡಿಸುವ,

(ಎಫ್) ಸಂಬಂಧಿಸಿದ ಕಾರ್ಯನೀತಿಯನ್ನು ರೂಪಿಸುವ,

(ಜಿ) ಸದಸ್ಯರನ್ನು ಸಂಘಟಿಸುವ ಮತ್ತು ಸೇವೆಗಳನ್ನು ನೀಡುವ-ಅಧಿಕಾರ ಹೊಂದಿರತಕ್ಕುದು.

(2) ವಿದ್ಯಾರ್ಹತೆಗಳು, ನೇಮಕಾತಿ, ಸೇವಾ ಷರತ್ತುಗಳು ಮತ್ತು ಇತರ ಸಿಬ್ಬಂದಿ ವರ್ಗಕ್ಕೆ ಸಂಬಂಧಿಸಿದ ವಿಷಯಗಳು.

(3) ನಿಧಿಗಳ ಅಭಿರಕ್ಷೆ ಮತ್ತು ಹೂಡಿಕೆಗಳ ಸಂಹಿತೆ,

(4) ಲೆಕ್ಕಪತ್ರಗಳನ್ನು ಇಡುವ ವಿಧಾನ,

(5) ವಿವಿಧ ನಿಧಿಗಳ ಸಂಗ್ರಹಣೆ, ಉಪಯೋಗ ಮತ್ತು ವಿನಿಯೋಗ

(6) ದಾಖಲು ಮಾಡಬೇಕಾದ ಶಾಸನಪ್ರದತ್ತ ವಿವರಪಟ್ಟಿಗಳೂ ಸೇರಿದಂತೆ ಮೇಲ್ವಿಚಾರಣೆ, ಮತ್ತು ನಿರ್ವಹಣಾ ಮಾಹಿತಿ ವ್ಯವಸ್ಥೆ,

(7)ಸಹಕಾರಿ ಸಂಘದ ಪರಿಣಾಮಕಾರಿ ಕಾರ್ಯಪಾಲನೆಗೆ ಅವಶ್ಯಕವಾದಂಥ ಇತರ ವಿಷಯಗಳು ಮತ್ತ ವಿಚಾರಗಳು

(ಜಿ) ಸರ್ವಸದಸ್ಯರ ಅನುಮೋದನೆಗಾಗಿ ವಾರ್ಷಿಕ ವರದಿ, ವಾರ್ಷಿಕ ಹಣಕಾಸಿನ ವಿವರಣ ಪಟ್ಟಿ, ಯೋಜನೆ ಮತ್ತು ಬಜೆಟ್‌ಗಳ ಮಂಡನೆ,

(ಹೆಚ್) ಲೆಕ್ಕಪರಿಶೋಧನೆ ಮತ್ತು ಅನುಪಾಲನ ವರದಿಗಳನ್ನು ಪರಿಗಣಿಸಿ ಇವುಗಳನ್ನು ಸರ್ವಸದಸ್ಯ ನಿಕಾಯದ ಮುಂದೆ ಮಂಡಿಸುವುದು,

(ಐ) ಇತರ ಸಹಕಾರಿ ಸಂಘಗಳಲ್ಲಿನ ಸದಸ್ಯತ್ವದ ಪರಿಶೀಲನೆ.

(ಜೆ) ಸರ್ವಸದಸ್ಯ ನಿಕಾಯವು ಪ್ರತ್ಯಾಯೋಜಿಸಿದಂಥ ಇತರ ಪ್ರಕಾರ್ಯಗಳನ್ನು ಕೈಗೊಳ್ಳುವುದು -

-ಇವುಗಳಿಗೆ ಅಧಿಕಾರ ಹೊಂದಿರತಕ್ಕದ್ದು.

(2) ಅಧ್ಯಕ್ಷನು ನಿರ್ದೇಶಕ ಮಂಡಲಿಯು ಚುನಾಯಿತ ಸದಸ್ಯರೊಳಗಿನಿಂದ ಚುನಾಯಿತರಾದವರಾಗಿರತಕ್ಕುದು, ಮತ್ತು ಉಪವಿಧಿಗಳಿಗನುಸಾರವಾಗಿ -

(ಎ) ಮಂಡಲಿಯು ಮತ್ತು ಸರ್ವಸದಸ್ಯರ ಸಭೆಗಳಲ್ಲಿ ಅಧ್ಯಕ್ಷತೆ ವಹಿಸತಕ್ಕುದು.

(ಬಿ) ಚುನಾವಣೆಗಳ ವಿಷಯವನ್ನು ಹೊರತುಪಡಿಸಿ, ಮಂಡಲಿಯು ತೀರ್ಮಾನವಾಗಬೇಕಾಗಿರುವ ಯಾವುದೇ ವಿಷಯದ ಬಗ್ಗೆ ಸಮಾನ ಮತಗಳು ಬಂದ ಸಂದರ್ಭದಲ್ಲಿ ಎರಡನೆಯ ಮತವನ್ನು ಹೊಂದಿರತಕ್ಕುದು.

(ಸಿ) ಮಂಡಲಿಯು ರೂಪಿಸಿ ನಿರ್ದಿಷ್ಟಪಡಿಸಲಾದ ಕಾರ್ಯನೀತಿಯ ಅಥವಾ ಅಳವಡಿಸಿಕೊಳ್ಳಲಾದ ನಿರ್ಣಯಗಳ ಸಂಬಂಧದಲ್ಲಿ ಮಂಡಲಿಯು ಪ್ರತಿಯೋಜಿಸಿದಂಥ ಇತರ ಅಧಿಕಾರಗಳನ್ನು ಚಲಾಯಿಸತಕ್ಕುದು.

22.29ನೇ (1 ರಿಂದ 4) ಪ್ರಕರಣದ ತಿದ್ದುಪಡಿ : 29ನೇ (1 ರಿಂದ 4) ಪ್ರಕರಣವನ್ನು ಬಿಟ್ಟುಬಿಡತಕ್ಕುದು.

23.29ಎ (1 ರಿಂದ 64) ಪ್ರಕರಣದ ತಿದ್ದುಪಡಿ : 29ಎ ಪ್ರಕರಣವನ್ನು (1 ರಿಂದ 6) ಈ ಮುಂದಿನಂತೆ ಮಾರ್ಪಾಡು ಮಾಡತಕ್ಕುದು.

ಪದಾವಧಿ :

ಮಂಡಲಿಯ ನಿರ್ದೇಶಕರ ಪದಾವಧಿ, ಅಥವಾ ಉಪವಿಧಿಗಳು ಸರದಿಯ ಮೇಲೆ ನಿರ್ದೇಶಕರ ನಿವೃತ್ತಿಗಾಗಿ ಉಪಬಂಧಿಸಿರುವ, ಪ್ರತಿಯೊಬ್ಬ ನಿರ್ದೇಶಕರ ಪದಾವಧಿಯು,ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದಂಥ ಅವಧಿಯವರೆಗೆ ಇರತಕ್ಕುದು ಆದರೆ ಪದವನ್ನು ವಹಿಸಿಕೊಂಡ ದಿನಾಂಕದಿಂದ ಮೂರು ವರ್ಷಗಳ ಅವಧಿಯನ್ನು ಮೀರತಕ್ಕುದಲ್ಲ.

ಪರಂತು, ಆದಾಗ್ಯೂ ಸರ್ವಸದಸ್ಯರಿಂದ ಅವರ ಸಭೆಯಲ್ಲಿ ಮತ ಚಲಾಯಿಸುವ ಹಕ್ಕುಳ್ಳ ಸದಸ್ಯರ ಬಹುಮತದ ಮೂಲಕ ಅಥವಾ ಹಾಜರಿದ್ದು ಮತ ಚಲಾಯಿಸುವ ಸದಸ್ಯರ ಮೂರನೇ ಎರಡರಷ್ಟು ಸದಸ್ಯರ ಮೂಲಕ ಪದಾವಧಿಯನ್ನು ಸಮಾಪನಗೊಳಿಸಬಹುದು.

ಮತ್ತು ಪರಂತು, ಮೊದಲ ಮಂಡಲಿಯು ಸಹಕಾರಿ ಸಂಘದ ನೋಂದಣಿಯ ದಿನಾಂಕದಿಂದ 12 ತಿಂಗಳ ಅವಧಿಯನ್ನು ಮೀರತಕ್ಕುದಲ್ಲ.

24.30ನೇ (1 ರಿಂದ 5) ಪ್ರಕರಣದ ತಿದ್ದುಪಡಿ : 30ನೇ (1 ರಿಂದ 5) ಪ್ರಕರಣವನ್ನು ಬಿಟ್ಟುಬಿಡತಕ್ಕುದು.

25.03ಎ (1 ರಿಂದ 4) ಪ್ರಕರಣದ ತಿದ್ದುಪಡಿ : 30 ಎ (1 ರಿಂದ 4) ಪ್ರಕರಣವನ್ನು ಬಿಟ್ಟುಬಿಡತಕ್ಕುದು.

26.30ಬಿ (1 ರಿಂದ 3) ಪ್ರಕರಣದ ತಿದ್ದುಪಡಿ : 30 ಬಿ (1 ರಿಂದ 3) ಪ್ರಕರಣವನ್ನು ಬಿಟ್ಟುಬಿಡತಕ್ಕುದು.

27.7 40 ರಿಂದ 55ರವರೆಗಿನ ಪ್ರಕರಣಗಳ ತಿದ್ದುಪಡಿ : VIನೇ ಅಧ್ಯಾಯದಲ್ಲೊಳಗೊಂಡಿರುವ 40 ರಿಂದ 55 ವರೆಗಿನ ಪ್ರಕರಣಗಳನ್ನು ಬಿಟ್ಟುಬಿಡತಕ್ಕುದು.

28.56 ಮತ್ತು 57 (1 ರಿಂದ 4) ಪ್ರಕರಣಗಳ ತಿದ್ದುಪಡಿ : 56 ಮತ್ತು 57ನೇ (1 ರಿಂದ 4) ಪ್ರಕರಣಗಳನ್ನು ಈ ಮುಂದಿನಂತೆ ಏರ್ಪಾಟು ಮಾಡತಕ್ಕುದು.

ಹೆಚ್ಚುವರಿಯ ವಿಲೇ :

(1) ಯಾವುದೇ ವರ್ಷದಲ್ಲಿ, ಸಹಕಾರಿ ಸಂಘವು, ಆ ವರ್ಷದಲ್ಲಿ ಸದಸ್ಯರೊಂದಿಗೆ ನಡೆಸಿದ ವ್ಯವಹಾರದಲ್ಲಿ ಉಂಟಾದ ಹೆಚ್ಚುವರಿಯಲ್ಲಿ, ಅಂಥ ಹೆಚ್ಚುವರಿಯ ಶೇಕಡಾ 20ಕ್ಕಿಂತ ಹೆಚ್ಚಿನ ಆದರೆ ಶೇಕಡಾ 50ಕ್ಕೆ ಕಡಿಮೆಯಿಲ್ಲದ ಮೊತ್ತವನ್ನು ಆಶ್ರಯ ಸೋಡಿಯಂತೆ ಸದಸ್ಯರಿಗೆ ಮುಂದಕ್ಕೆ ಹಾಕಲಾದ ಸಂದಾಯವನ್ನು ಮಾಡತಕ್ಕುದು ಮತ್ತು ಸಹಕಾರಿ ಬ್ಯಾಂಕಿನಲ್ಲಿ ಠೇವಣಿದಾರರಿಗೆ ಲಭ್ಯವಾಗುವ ಬಡ್ಡಿಯ ಚಾಲ್ತಿ ದರವನ್ನು ಮೀರದ ದರದಲ್ಲಿ ಷೇರು ಬಂಡವಾಳದ ಮೇಲೆ ಬಡ್ಡಿಯನ್ನು ಸಂದಾಯ ಮಾಡತಕ್ಕುದು.

(2) ಸದಸ್ಯರಿಂದ ಪ್ರಾಪ್ತವಾದ ಉಳಿಕೆ ಹೆಚ್ಚುವರಿ ಮತ್ತು ಇತರರೊಂದಿಗೆ ನಡೆಸಿದ ವ್ಯವಹಾರಗಳಿಂದ ಪ್ರಾಪ್ತವಾದ ಪೂರ್ಣ ಹೆಚ್ಚುವರಿ ಮೊತ್ತವನ್ನು ಈ ಮುಂದೆ ಕೊಟ್ಟಿರುವ ವಿಧಾನದಲ್ಲಿ ಉಪಯೋಗಿಸತಕ್ಕುದು.

(ಎ) ಶೇಕಡಾ 25ಕ್ಕೆ ಕಡಿಮೆ ಇಲ್ಲದಂತೆ ಶಾಸನ ಪ್ರದತ್ತ ಮೀಸಲು ನಿಧಿಗೆ ಹಸ್ತಾಂತರಿಸತಕ್ಕುದು.

(ಬಿ) ಶೇಕಡಾ 20ಕ್ಕೆ ಕಡಿಮೆ ಇಲ್ಲದಂತೆ ಸಭೆಯ ಅನಿರೀಕ್ಷಿತ ನಷ್ಟಗಳಿಗೆ ಮೀಸಲಿನ ಬಗ್ಗೆ ಹಸ್ತಾಂತರಿಸತಕ್ಕುದು.

(ಸಿ) ಸಹಕಾರಿ ಸಂಘವು ಸಹಕಾರಿ ಯೂನಿಯನ್ನಿನ ಸದಸ್ಯ ಸಂಘವಾಗಿದ್ದಲ್ಲಿ, ಶೇಕಡಾ 30ರಷ್ಟರವರೆಗೆ ಸಹಕಾರಿ ಯೂನಿಯನ್‌ನೊಂದಿಗೆ ಸಹಕಾರಿ ಶಿಕ್ಷಣ ನಿಧಿಗೆ ಹಸ್ತಾಂತರಿಸಬಹುದು.

(ಡಿ) ಸರ್ವಸದಸ್ಯರ ತೀರ್ಮಾನಕ್ಕನುಸಾರವಾಗಿ ನೌಕರರಿಗೆ ಬೋನಸ್ ಸಂದಾಯ ಮಾಡತಕ್ಕುದು.

(ಇ) ಈಗಾಗಲೇ ಸರ್ಕಾರಿ ಈಕ್ವಿಟಿ ಪಾಲುದಾರಿಕೆ ಹೊದಿರುವಂಥ ಸಹಕಾರಿ ಸಂಘಗಳು ಈಕ್ವಿಟಿ ವಿಮೋಚನಾ ನಿಧಿಗೆ ಶೇಕಡಾ 20ಕ್ಕೆ ಕಡಿಮೆಯಿಲ್ಲದಂತೆ ಹಸ್ತಾಂತರಿಸತಕ್ಕುದು.

(ಎಫ್) ಸರ್ವಸದಸ್ಯರ ಸಭೆಯ ಮೂಲಕ ಅನುಮೋದನೆ ಪಡೆದ ಉದ್ದೇಶಗಳಿಗೆ ಸಾಮಾನ್ಯ ಸುರಕ್ಷಿತ ನಿಧಿಗೆ ಶೇಕಡಾ 5ಕ್ಕೆ ಕಡಿಮೆಯಿಲ್ಲದಂತೆ ಹಸ್ತಾಂತರಿಸತಕ್ಕುದು.

(ಜಿ) ಸಹಕಾರಿ ಸಂಘದ ಸಂಚಲನೆಯ ಅಭಿವೃದ್ಧಿಗೆ ಸಂಬಂಧಿಸಿದ ಯಾವುದೇ ಉದ್ದೇಶಕ್ಕಾಗಿ ಶೇಕಡಾ 3 ರಷ್ಟನ್ನು ಮೀರದಷ್ಟು ಹಣವನ್ನು ಕೊಡುಗೆಯಾಗಿ ಸಂದಾಯ ಮಾಡಬಹುದು.

(ಹೆಚ್) ಉಳಿಕೆ ಮೊತ್ತವನ್ನು, ಸರ್ವಸದಸ್ಯ ನಿಕಾಯವು ಸೃಜಿಸಿ ಇತರ ನಿಧಿಗಳು ಮತ್ತು ಮೀಸಲುಗಳಿಗೆ ಹಸ್ತಾಂತರಿಸತಕ್ಕುದು.

(ಐ) ಸದಸ್ಯರೊಳಗೆ ವಿಭಾಗ ಮಾಡಲಾಗದೇ ಇರತಕ್ಕಂಥ ಸದಸ್ಯರಲ್ಲದ ವ್ಯಕ್ತಿಗಳ ಕಾರಣದಿಂದಾಗಿ ಪ್ರಾಪ್ತವಾದ ಹೆಚ್ಚುವರಿಯನ್ನು ಸದಸ್ಯರೊಳಗೆ ಹಂಚಿಹಾಕತಕ್ಕುದಲ್ಲ ಮತ್ತು ಸಂಭಾವ್ಯ ಸದಸ್ಯರ ಈಕ್ವಿಟಿ ಪಾಲುದಾರಿಕೆಗೆ ಉಪಯೋಗಿಸಬಹುದು.

29.58ನೇ ಪ್ರಕರಣದ ತಿದ್ದುಪಡಿ : 58ನೇ ಪ್ರಕರಣವನ್ನು ಈ ಮುಂದಿನಂತೆ ಮಾರ್ಪಾಟು ಮಾಡತಕ್ಕುದು.

ವ್ಯವಹಾರಗಳ ಹೊರಗೆ ನಿಧಿಗಳ ಹೂಡಿಕೆ :

ಸಹಕಾರಿ ಸಂಘವು, ಅದರ ಉಪಯೋಗಕ್ಕೆ ಅಗತ್ಯವಿಲ್ಲದಂಥ ಅದರ ನಿಧಿಗಳನ್ನು ಅದರ ವ್ಯವಹಾರಗಳ ಹೊರಗೆ, ಎಂದರೆ :

(ಎ) ಅದು ಸದಸ್ಯನಾಗಿರುವಂಥ ಯಾವುದೇ ಫೆಡರಲ್ ಸಹಕಾರ ಸಂಘದಲ್ಲಿ;

(ಬಿ) ಒಂದು ಸ್ಥಳೀಯ ಸಹಕಾರಿ ಸಂಘ ಅಥವಾ ರಾಷ್ಟ್ರೀಕೃತ ಬ್ಯಾಂಕಿನಲ್ಲಿ,

(ಸಿ) ಯಾವುದೇ ಇತರ ಸಹಕಾರಿ ಸಂಘದ ಈಕ್ವಿಟಿಗಳಲ್ಲಿ,

(ಡಿ) 1982ರ ಭಾರತ ನ್ಯಾಸ ಅಧಿನಿಯಮದ 20ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಭದ್ರತೆಗಳಲ್ಲಿ,

(ಇ) ಸ್ಥಳೀಯ ಅಂಚೆ ಉಳಿತಾಯ ಬ್ಯಾಂಕಿನಲ್ಲಿ ಹೂಡಬಹುದು ಅಥವಾ ಠೇವಣಿ ಇಡಬಹುದು.

30.59ನೇ (1 ಮತ್ತು 2) ಪ್ರಕರಣದ ತಿದ್ದುಪಡಿ :

59ನೇ (1ಮತ್ತು 2)ಪ್ರಕರಣವನ್ನು ಈ ಮುಂದಿನಂತೆ ಮಾರ್ಪಾಟು ಮಾಡತಕ್ಕದು:

ಸಾಲ ಪಡೆಯುವುದರ ಮೇಲೆ ನಿರ್ಬಂಧ :

(1)ಒಂದು ಸಹಕಾರಿ ಸಂಘವು ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಬಹುದಾದಷ್ಟು ಮಟ್ಟಿಗೆ ಮತ್ತು ಅಂಥ ಷರತ್ತುಗಳ ಅಡಿಯಲ್ಲಿ ಯಾವುದೇ ಹೊರ ಮೂಲದಿಂದ ಡಿಬೆಂಚರುಗಳನ್ನು ಠೇವಣಿಗಳನ್ನು ಸಂಗ್ರಹಿಸಬಹುದು, ಸಾಲಗಳನ್ನು ಎತ್ತಬಹುದು ಮತ್ತು ಅನುದಾನಗಳನ್ನು ಸ್ವೀಕರಿಸಬಹುದು. ಆದಾಗ್ಯೂ, ಹೊರ ಮೂಲಗಳಿಂದ ಎತ್ತಲಾದ ಠೇವಣಿಗಳು ಮತ್ತು ಸಾಲಗಳು ಯಾವ ಕಾಲದಲ್ಲೂ ಸದಸ್ಯರ ನಿಧಿಗಳ ಮೊತ್ತ ಕಡಿಮೆ ಸಂಚಿತವಾದ ಸಂಸ್ಥೆಯ ಮೀಸಲಾತಿಯಲ್ಲಿ ಯಾವುದೇ ಖೋತಾ ಇದ್ದರೆ ಅದರ ಮೊತ್ತ ಇವುಗಳ ಹತ್ತರಷ್ಟನ್ನು ಮೀರತಕ್ಕುದಲ್ಲ.

(2)ಸಹಕಾರಿ ಸಂಘವು, ಪರಸ್ಪರವಾಗಿ ಕರಾರು ಮಾಡಿದಂಥ ನಿಬಂಧನೆಗಳು ಮತ್ತು ಷರತ್ತುಗಳು ಮೇಲೆ ತನ್ನ ಉದ್ದೇಶಗಳ ಪೂರೈಕೆಗಾಗಿ, ಅದು ಸರ್ಕಾರದಿಂದ ಅಥವಾ ಇತರ ಹಣಕಾಸು ಸಂಸ್ಥೆಯಿಂದ ನಿಧಿಗಳನ್ನು ಸ್ವೀಕರಿಸಬಹುದು ಮತ್ತು ಅಂಥ ಷರತ್ತಿನಲ್ಲಿ ನಿರ್ದೇಶಕ ಮಂಡಲಿಯ ಒಬ್ಬ ತಜ್ಞರನ್ನು ಸರ್ಕಾರ ಅಥವಾ ಇತರ ಹಣಕಾಸು ನೀಡಿಕೆ ಸಂಸ್ಥೆಯು ನಾಮನಿರ್ದೇಶಿಸುವ ಹಕ್ಕನ್ನು ಒಳಗೊಳ್ಳಬಹುದು.

31.61 ನೇ ಪ್ರಕರಣದ ತಿದ್ದುಪಡಿ :

61ನೇ ಪ್ರಕರಣವನ್ನು ಈ ಮುಂದಿನಂತೆ ಮಾರ್ಪಾಟು ಮಾಡತಕ್ಕುದು.

32.62ನೇ (1 ರಿಂದ 2) ಪ್ರಕರಣದ ತಿದ್ದುಪಡಿ :

62ನೇ (1 ರಿಂದ 2) ಪ್ರಕರಣವನ್ನು ಬಿಟ್ಟುಬಿಡತಕ್ಕುದು.

33. 63ನೇ (1 ರಿಂದ 6) ಪ್ರಕರಣದ ತಿದ್ದುಪಡಿ : 63ನೇ (1 ರಿಂದ 6) ಪ್ರಕರಣವನ್ನು ಈ ಮುಂದಿನಂತೆ ಮಾರ್ಪಾಟು ಮಾಡತಕ್ಕುದು.

ಲೆಕ್ಕಪರಿಶೋಧನೆ :

(1) ಸಹಕಾರಿ ಸಂಘವು ಅದರ ಲೆಕ್ಕಪತ್ರಗಳನ್ನು ಚಾರ್ಟೆರ್ಡ್ ಅಕೌಂಟೆಂಟ್‌ರಿಂದ ಅಥವಾ ಸಹಕಾರಿ ಇಲಾಖೆಯ ಒಬ್ಬ ಲೆಕ್ಕಪರಿಶೋಧಕನಿಂದ ಪರಿಶೋಧಿಸತಕ್ಕುದು.

(2) ಲೆಕ್ಕಪರಿಶೋಧಕನ ವರದಿಯು, ಸಹಕಾರಿ ಸಂಘದ ಲೆಕ್ಕಪತ್ರಗಳ ಮೇಲಣ ವರದಿಯ ಜೊತೆಗೆ ಸಭೆಗಳಲ್ಲಿನ ನಿರ್ದೇಶಕರ ಹಾಜರಾತಿ ಮಂಜೂರಾತಿಯಾದ ಸಾಲಗಳು ಮತ್ತು ಮುಂಗಡಗಳು, ಅಥವಾ ನಿರ್ದೇಶಕರು ಸಹಕಾರಿ ಸಂಘದೊಂದಿಗೆ ನಡೆಸಿದ ವ್ಯವಹಾರಗಳು, ಮಂಡಲಿಯ ಸಭೆಗಳ ಮೇಲಣ ವೆಚ್ಚ, ನಿರ್ದೇಶಕರಿಗೆ ಸಂದಾಯ ಮಾಡಿದ ಸಂಭಾವನೆ, ನಿರ್ದೇಶಕರಿಗೆ ತುಂಬಿಕೊಡಲಾದ ವೆಚ್ಚಗಳು, ಸದಸ್ಯರು, ಸಿಬ್ಬಂದಿ ವರ್ಗದವರು ನಿರ್ದೇಶಕರು ಮತ್ತು ಇತರರಿಗೆ ಶಿಕ್ಷಣ ಮತ್ತು ತರಬೇತಿಗಾಗಿ ಮಾಡಿದ ವೆಚ್ಚಗಳ ವರದಿಯನ್ನೊಳಗೊಂಡಿರತಕ್ಕುದು.

(3) ಹಣಕಾಸು ವರ್ಷವು ಮುಕ್ತಾಯವಾದ 45 ದಿನಗಳೊಳಗಾಗಿ ವಾರ್ಷಿಕ ಹಣಕಾಸಿನ ವಿವರಗಳನ್ನು ಲೆಕ್ಕಪರಿಶೋಧನೆಗಾಗಿ ಸಿದ್ಧಪಡಿಸಿ ಮಂಡಿಸಿದೆಯೆ ಎಂಬುದನ್ನು ಖಾತ್ರಿಪಡಿಸಿಕೊಳ್ಳುವುದು ನಿರ್ದೇಶಕ ಮಂಡಲಿಯ ಕರ್ತವ್ಯವಾಗಿರತಕ್ಕುದು.

(4) ಸರ್ವಸದಸ್ಯರ ನಿಕಾಯವು ಸಹಕಾರಿ ಸಂಘದ ಲೆಕ್ಕಪತ್ರಗಳನ್ನು ಪರಿಶೋಧಿಸುವುದಕ್ಕಾಗಿ ಒಬ್ಬ ಲೆಕ್ಕಪರಿಶೋಧಕನನ್ನು ನೇಮಿಸತಕ್ಕುದು, ಪರಂತು ಆದಾಗ್ಯೂ ಅದು ಫೆಡರಲ್ ಸಹಕಾರಿ ಸಂಘಕ್ಕೆ ಈ ಪ್ರಕಾರ್ಯವನ್ನು ವಹಿಸಬಹುದು.

(5) ನಿರ್ದೇಶಕರ ಮಂಡಲಿಯು ಲೆಕ್ಕಪರಿಶೋಧಕನ ಸಂಭಾನೆಯನ್ನು ನಿಗಧಿಪಡಿಸಬಹುದು ಮತ್ತು ಅದನ್ನು ಮಾಹಿತಿಗಾಗಿ ಸರ್ವಸದಸ್ಯರ ತರುವಾಯದ ಸಭೆಯಲ್ಲಿ ಸರ್ವಸದಸ್ಯರ ನಿಕಾಯದ ಮುಂದೆ ಮಂಡಿಸಬಹುದು.

(6) ಸರ್ವಸದಸ್ಯರ ನಿಕಾಯವು, ವಿಶೇಷ ಸಭೆಯಲ್ಲಿ, ಅಲ್ಲಿ ಹಾಜರಿರುವ ಮತ್ತು ಮತ ಚಲಾಯಿಸುವ ಹಕ್ಕುಳ್ಳ ಸದಸ್ಯರ ಬಹುಮತದ ಮೇಲೆ ನಿರ್ಣಯವೊಂದನ್ನು ಹೊರಡಿಸುವ ಮೂಲಕ ಲೆಕ್ಕಪರಿಶೋಧಕನನ್ನು ಪದದಿಂದ ತೆಗೆದುಹಾಕಬಹುದು.

(7)ಲೆಕ್ಕಪರಿಶೋಧನೆಗೆ ಪ್ರತಿಯೊಂದು ಸದಸ್ಯ ಸಭೆಗೆ ನೋಟೀಸನ್ನು ನೀಡತಕ್ಕುದು ಮತ್ತು ಅವರು ಸಭೆಗೆ ಹಾಜರಾಗಲು ಹಕ್ಕುಳ್ಳವನಾಗಿರತಕ್ಕುದು.

(8) ಸಹಕಾರಿ ಸಂಘದ ಲೆಕ್ಕಪರಿಶೋಧಕನ ಕೋರಿಕೆಯ ಮೇಲೆ, ಪ್ರಸ್ತುತ ಅಥವಾ ಹಿಂದಿನ ಅಧಿಕಾರಿಗಳು, ಸಮಿತಿಯ ಸದಸ್ಯರು, ಸಹಕಾರಿ ಸಂಘದ ಸದಸ್ಯರು ಅಥವಾ ನೌಕರರು

(ಎ)ಮಾಹಿತಿ ಮತ್ತು ಸ್ಪಷ್ಟನೆ ಒದಗಿಸತಕ್ಕುದು, ಮತ್ತು

(ಬಿ) ಲೆಕ್ಕಪರಿಶೋಧಕನ ಅಭಿಪ್ರಾಯದಲ್ಲಿ ಅವನು ಅವಳು ತಪಾಸಣೆ ಮಾಡಲು ಮತ್ತು ವರದಿ ನೀಡಲು ತಾವು ಸಮರ್ಥರಾಗುವುದಕ್ಕೆ ಅವಶ್ಯವಾದಂತೆ ಸಹಕಾರಿ ಸಂಘದ ದಾಖಲೆಗಳು, ದಸ್ತಾವೇಜುಗಳು, ಪುಸ್ತಕಗಳು, ಲೆಕ್ಕಪತ್ರಗಳು ಮತ್ತು ವೋಚರುಗಳನ್ನು ನೋಡುವುದಕ್ಕೆ ಕಲ್ಪಿಸಿಕೊಡತಕ್ಕುದು

(9) ಸಹಕಾರಿ ಸಂಘವು ಯುಕ್ತ ಸಮಯದಲ್ಲಿ ಅದರ ವಾರ್ಷಿಕಲೆಕ್ಕ ಪತ್ರಗಳ ಪರಿಶೋಧನೆ ನಡೆಸಲು ತಪ್ಪಿದಲ್ಲಿ, ಯುಕ್ತ ಸಮಯದಲ್ಲಿ ಲೆಕ್ಕಪರಿಶೋಧನೆ ನಡೆಸಬೇಕಾಗಿದ್ದ ದಿನಾಂಕದಿಂದ 90 ದಿನಗಳ ಅವಧಿಯೊಳಗಾಗಿ ಸಹಕಾರಿ ಸಂಘದ ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧಿಸುವಂತೆ ಮಾಡುವುದು ಸಹಕಾರಿ ಸಂಘದ ಯೂನಿಯನ್‌ಫೆಡರೇಷನ್ನ ಹೊಣೆಯಾಗಿರತಕ್ಕುದು.

ಅಂಥ ಲೆಕ್ಕಪರಿಶೋಧನೆ ನಡೆಸುವುದಕ್ಕೆ ತಗಲುವ ವೆಚ್ಚವನ್ನು ಸಹಕಾರಿ ಸಂಘ ಭರಿಸತಕ್ಕುದು.

ಯಾವುದೇ ಕಾರಣಕ್ಕಾಗಿ ಸಹಕಾರಿ ಸಂಘದ ಯೂನಿಯನ್ : ಫೆಡರೇಷನ್ ಲೆಕ್ಕ ಪರಿಶೋಧನೆ ನಡೆಸಲು ಅಸಮರ್ಥವಾದರೆ ರಿಜಿಸ್ಟ್ರಾರರು ಲೆಕ್ಕಪರಿಶೋಧಿಸಲಾದ ಸಹಕಾರಿ ಸಂಘದ ಲೆಕ್ಕಪತ್ರಗಳನ್ನು ಪಡೆಯತಕ್ಕುದು.

34. 64ರಿಂದ 69ನೇ ಪ್ರಕರಣದವರೆಗೆ ತಿದ್ದುಪಡಿ : 64ರಿಂದ 69ರ ವರೆಗಿನ ಪ್ರಕರಣವನ್ನು ಈ ಮುಂದಿನಂತೆ ಮಾರ್ಪಾಟು ಮಾಡತಕ್ಕುದು :

ವಿಚಾರಣೆ

(1) ರಿಜಿಸ್ಟ್ರಾರನು, ಸಂಬಂಧಪಟ್ಟ ಸಹಕಾರಿ ಸಂಘವು ಸೇರಿರುವಂಥ ಸಹಕಾರಿ ಸಂಘ, ಅಥವಾ ಯಾರಿಗೆ ಸಹಕಾರಿ ಸಂಘವು ಋಣಿಯಾಗಿರುವುದೋ ಅಂಥ ಲೇಣಿದಾರ ಅಥವಾ ಸಮಿತಿಯ ಸದಸ್ಯರ ಮೂರನೇ ಒಂದಕ್ಕೆ ಕಡಿಮೆಯಿಲ್ಲದಷ್ಟು ಸದಸ್ಯರು ಅಥವಾ ಸಹಕಾರಿ ಸಂಘದ ಸದಸ್ಯರ ಒಟ್ಟು ಸಂಖ್ಯೆಯ ಹತ್ತನೇ ಒಂದಕ್ಕೆ ಕಡಿಮೆಯಿಲ್ಲದಷ್ಟು ಸದಸ್ಯರ ಅರ್ಜಿಯ ಮೇಲೆ ಸಹಕಾರಿ ಸಂಘದ ರಚನೆ, ಕಾರ್ಯಗತಿ ಮತ್ತು ಆರ್ಥಿಕ ಸ್ಥಿತಿ ಇವುಗಳಿಗೆ ಸಂಬಂಧಿಸಿದಂತೆ ಅರ್ಜಿಯಲ್ಲಿ ಎತ್ತಲಾದ ನಿರ್ದಿಷ್ಟ ವಿಷಯಗಳ ಮೇಲೆ ಮಾಡಬೇಕಾಗಿರುವ ವಿಚಾರಣೆಯನ್ನು ನಡೆಸಬಹುದು.

(2) ರಿಜಿಸ್ಟ್ರಾರನು, ಅರ್ಜಿದಾರ ಅಥವಾ ಅರ್ಜಿದಾರರಿಂದ ನಡೆಸಬೇಕಾದ ವಿಚಾರಣೆಯ ವೆಚ್ಚವನ್ನು ಭರಿಸುವುದಕ್ಕೆ ಸಾಕಷ್ಟು ಶುಲ್ಕವನ್ನು ಸ್ವೀಕರಿಸಲಾಗಿದೆ ಎಂದು ಭಾವಿಸಿದ ತರುವಾಯ ವಿಚಾರಣೆಗೆ ಆದೇಶ ನೀಡತಕ್ಕುದು.

(3) ವಿಚಾರಣೆಗಾಗಿ ಆದೇಶ ಮಾಡಿದ ದಿನಾಂಕದಿಂದ ನಾಲ್ಕು ತಿಂಗಳುಗಳ ಒಳಗಾಗಿ ವಿಚಾರಣೆಯು ಪೂರ್ತಿಯಾಗತಕ್ಕುದು.

(4) ರಿಜಿಸ್ಟ್ರಾರನು, ವಿಚಾರಣೆಯು ಪೂರ್ತಿಯಾದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗಾಗಿ, ವಿಚಾರಣೆಯ ವರದಿಯನ್ನು

(ಎ) ಸಂಬಂಧಿಸಿದ ಸಹಕಾರಿ ಸಂಘಕ್ಕೆ,

(ಬಿ) ಅರ್ಜಿದಾರರಿಗೆ ಮತ್ತು ಅಂಥ ವರದಿಯನ್ನು ಸ್ವೀಕರಿಸುವುದಕ್ಕಾಗಿ ಅರ್ಜಿದಾರರು ಗೊತ್ತುಪಡಿಸಿದ ವ್ಯಕ್ತಿಗೆ.

(ಸಿ) ಸಹಕಾರಿ ಸಂಘದ ಯಾವನೇ ಸದಸ್ಯನಿಗೆ ಸಹಕಾರಿ ಸಂಘವು ಸದಸ್ಯನಾಗಿರುವಂಥ ಯಾವುದೇ ಫೆಡರೇಷನ್ನಿಗೆ, ರಿಜಿಸ್ಟ್ರಾರನಿಂದ ನಿರ್ದಿಷ್ಟಪಡಿಸಿದ ಶುಲ್ಕ ಸಂದಾಯ ಮಾಡಿದ ಯಾರೇ ಲೇಣಿದಾರನಿಗೆ ತಿಳಿಸತಕ್ಕುದು.

35. 70 (1 ರಿಂದ 3) ಮತ್ತು 71 (1 ರಿಂದ 4)ನೇ ಪ್ರಕರಣದ ತಿದ್ದುಪಡಿ

70 (1ರಿಂದ 3) ಮತ್ತು 71 (1 ರಿಂದ 4)ನೇ ಪ್ರಕರಣವನ್ನು ಈ ಮುಂದಿನಂತೆ ಮಾರ್ಪಾಟು ಮಾಡತಕ್ಕುದು.

ವಿವಾದಗಳ ಇತ್ಯರ್ಥ :

(1) ಒಂದು ಸಹಕಾರಿ ಸಂಘದ ರಚನೆ, ಆಡಳಿತ ಅಥವಾ ವ್ಯವಹಾರಗಳಿಗೆ ಸಂಬಂಧಿಸಿದಂತೆ

(ಎ) ಸದಸ್ಯರು, ಮಾಜಿ ಸದಸ್ಯರು ಮತ್ತು ಸದಸ್ಯರು ಮತ್ತು ಮೃತ ಸದಸ್ಯರ ಮೂಲಕ ಕ್ಲೇಮು ಮಾಡುವ ಸದಸ್ಯರೊಳಗೆ, ಅಥವಾ

(ಬಿ) ಸದಸ್ಯರು, ಮಾಜಿ ಸದಸ್ಯರು ಅಥವಾ ಒಬ್ಬ ಸದಸ್ಯ, ಮಾಜಿ ಸದಸ್ಯ ಅಥವಾ ಮೃತ ಸದಸ್ಯನ ಮೂಲಕ ಕ್ಲೇಮು ಮಾಡುವ ವ್ಯಕ್ತಿ ಮತ್ತು ಸಹಕಾರಿ ಸಂಘ ಅದರ ಮಂಡಲಿ ಅಥವಾ ಸಹಕಾರಿ ಸಂಘದ ಯಾರೇ ಅಧಿಕಾರಿ, ಏಜೆಂಟ್ ಅಥವಾ ನೌಕರರು ಅಥವಾ ಮಾಜಿ ಅಥವಾ ಈಗಿನ ಸಮಾಪಕರ ನಡುವೆ, ಅಥವಾ

(ಸಿ) ಒಂದು ಸಹಕಾರಿ ಸಂಘ ಅಥವಾ ಅದರ ಮಂಡಲಿ ಮತ್ತು ಯಾವುದೇ ಮಾಜಿ ಮಂಡಲಿ, ಯಾರೇ ಅಧಿಕಾರಿ, ಏಜೆಂಟ್ ಅಥವಾ ನೌಕರ, ಅಥವಾ ಯಾರೇ ಮಾಜಿ ಅಧಿಕಾರಿ, ಮಾಜಿ ಸದಸ್ಯನ ಮಾಜಿ ಏಜೆಂಟ್ ಅಥವಾ ಯಾರೇ ಮೃತ ಅಧಿಕಾರಿಯ ನಾಮನಿರ್ದೇಶಿತ ವ್ಯಕ್ತಿ, ವಾರಸುದಾರ ಅಥವಾ ಕಾನೂನು ಸಮ್ಮತ ಪ್ರತಿನಿಧಿಗಳು, ಅಥವಾ ಸಹಕಾರಿ ಸಂಘದ ಮೃತ ನೌಕರರ ನಡುವೆ, ಅಥವಾ

(ಡಿ) ಸಹಕಾರಿ ಸಂಘ ಮತ್ತು ಯಾವುದೇ ಇತರ ಸಹಕಾರಿ ಸಂಘದ ನಡುವೆ, ಅಥವಾ ಸಹಕಾರಿ ಸಂಘ ಮತ್ತು ಇತರ ಸಹಕಾರಿ ಸಂಘದ ಸಮಾಪಕರ ನಡುವೆ ಅಥವಾ ಸಹಕಾರಿ ಸಂಘದ ಸಮಾಪಕ ಮತ್ತು ಇತರ ಸಮಾಪಕರ ನಡುವೆ ಯಾವುದೇ ವಿವಾದ ಉಂಟಾದರೆ, ಅಂಥ ವಿವಾದಗಳನ್ನು ನ್ಯಾಯಾಲಯದಂತೆ ಕಾರ್ಯನಿರ್ವಹಿಸುವ ಸಹಕಾರಿ ನ್ಯಾಯಾಧೀಕರಣಕ್ಕೆ ಒಪ್ಪಿಸತಕ್ಕುದು.

36. 72 ರಿಂದ 75ನೇ ಪ್ರಕರಣದ ತಿದ್ದುಪಡಿ : 72ರಿಂದ 75ನೇ ಪ್ರಕರಣವನ್ನು ಈ ಮುಂದಿನಂತೆ ಮಾರ್ಪಾಟು ಮಾಡತಕ್ಕುದು.

(1) ಸದಸ್ಯರಿಂದ ವಿಸರ್ಜನೆ

ಈ ಪ್ರಕರಣದಲ್ಲಿ :

(ಎ) 'ಹಿತಾಸಕ್ತಿ' ಎಂದರೆ, ಒಂದು ಸಹಕಾರಿ ಸಂಘದಲ್ಲಿನ ಸದಸ್ಯನ ಹಿತಾಸಕ್ತಿ ಮತ್ತು ಇದು ಷೇರುಗಳು, ಸದಸ್ಯರ ಸಾಲಗಳು, ಯಾವುದೇ ಬಗೆಯ ಠೇವಣಿಗಳು ಮತ್ತು ಹೊಣೆಗಳು, ಎಂದರೆ :

(i) ಸಹಕಾರಿ ಸಂಘದ ಉಪವಿಧಿಗಳ ಕಾರಣದಿಂದಾಗಿ ಉಂಟಾದ,

(ii) ಸದಸ್ಯನಿಗೆ ಸಹಕಾರಿ ಸಂಘದ ಮೂಲಕ ಬಂದ ಠೇವಣಿಗಳು ಮತ್ತು ಹೊಣೆಗಳನ್ನು ಒಳಗೊಳ್ಳುತ್ತವೆ.

(ಬಿ) 'ಹಂಚಿಕೆಯಾಗದೇ ಇರುವ ಹೆಚ್ಚುವರಿ' ಹಣವು ಸಹಕಾರಿ ಸಂಘದ ಹೊಣೆಗಾರಿಕೆಗಳು ಮತ್ತು ಠೇವಣಿದಾರರ, ಸದಸ್ಯರ ಮತ್ತು ತೀರಿಕೆ ಮಾಡಿದ ಇತರ ಕ್ಲೇಮುಗಳ ತರುವಾಯ ಸಹಕಾರಿ ಸಂಘದ ವಿಘಟನೆಯ ತರುವಾಯ ಆಸ್ತಿಗಳ ಮಾರಾಟದಿಂದ ಬಂದ ಯಾವುದೇ ನಿವ್ವಳ ಉತ್ಪತ್ತಿಯನ್ನು ಒಳಗೊಳ್ಳತಕ್ಕುದು.

(2) ಸಹಕಾರಿ ಸಂಘದ ಸರ್ವಸದಸ್ಯ ನಿಕಾಯವು ಸಹಕಾರಿ ಸಂಘದ ವಿಘಟನೆಗೆ ಅಧಿಕಾರ ನೀಡಬಹುದು.

(3) ವಿಘಟನೆಗೆ ಅಧಿಕಾರ ನೀಡುವ ಉದ್ದೇಶಕ್ಕಾಗಿ ಪ್ರತಿಯೊಬ್ಬ ಸದಸ್ಯನಿಗೆ ಸರ್ವ ಸದಸ್ಯ ಸಭೆಯ ನೋಟೀಸೊಂದನ್ನು ಮಂಡಲಿಯು ಕಳುಹಿಸತಕ್ಕುದು.

(4) ಅಂಥ ಸರ್ವಸದಸ್ಯರ ಸಭೆಗೆ ಹಾಜರಾಗುವುದಕ್ಕಾಗಿ ಸಹಕಾರಿ ಸಂಘಗಳ ರಿಜಿಸ್ಟ್ರಾರರಿಗೆ, ಸಹಕಾರಿ ಸಂಘದೊಂದಿಗೆ ಸೇರಿಕೆಯಾಗಿ ಯಾವುದೇ ಫೆಡರೇಷನ್: ಫೇಡರೇಷನ್ನಳಿಗೆ ಪಾಲುದಾರಿಕೆ ಒಪ್ಪಂದವನ್ನು ಮಾಡಿಕೊಂಡಿರುವ ಯಾವುದೇ ಸಹಕಾರಿ ಸಂಘ ಸಂಘಗಳಿಗೆ ಲೆಕ್ಕಪರಿಶ್ಶೋಧಕರಿಗೆ ಮತ್ತು ಸಹಕಾರಿ ಸಂಘದ ಯಾವುದೇ ಪೂರಕ ಸಂಸ್ಥೆಗೆ ಸಭೆಗೆ ಹಾಜರಾಗಬೇಕೆಂದು ನೋಟೀಸನ್ನು ಸಹ ಕಳುಹಿಸತಕ್ಕುದು.

(5) (4)ನೇ ಉಪಪ್ರಕರಣದ ಅಡಿಯಲ್ಲಿನ ಪ್ರತಿನಿಧಿಗಳು ಸರ್ವಸದಸ್ಯ ಸಭೆಗೆ ಮಂಡನೆ ಮಾಡಲು ಹಕ್ಕು ಹೊಂದಿರತಕ್ಕುದು.

(6) (2)ನೇ ಉಪಪ್ರಕರಣದ ಉದ್ದೇಶಕ್ಕಾಗಿ, ಹಾಜರಿರುವ ಮತ್ತು ಮತ ಚಲಾಯಿಸುವ ಸದಸ್ಯರ ಮೂರನೇ ಎರಡರಷ್ಟು ಸಂಖ್ಯೆಯ ಸದಸ್ಯರ ವಿಶೇಷ ನಿರ್ಣಯದ ಮೂಲಕ ವಿಘಟನೆಯನ್ನು ಅನುಮೋದಿಸಿದಾಗ ಮಾತ್ರವೇ ವಿಘಟನೆಗೆ ಅಧಿಕಾರ ನೀಡಬಹುದು.

(7) ವಿಘಟನೆಗೆ ಅಧಿಕಾರ ನೀಡಿದ ದಿನಾಂಕದಿಂದ 15 ದಿನಗಳೊಳಗಾಗಿ, ಸಹಕಾರಿ ಸಂಘವು, ಸಹಕಾರಿ ಸಂಘದ ವಿಘಟನೆಗೆ ಸಂಬಂಧಿಸಿದ ಅಧಿಕಾರ ನೀಡಿಕೆಯ ಪ್ರತಿಯನ್ನು ಸಹಕಾರಿ ಸಂಘದ ರಿಜಿಸ್ಟ್ರಾರರಿಗೆ ನೋಂದಾಯಿತ ಅಂಚೆಯ ಮೂಲಕ ಕಳುಹಿಸತಕ್ಕುದು.

(8) (6)ನೇ ಉಪಪ್ರಕರಣಕ್ಕನುಸಾರವಾಗಿ ಅನುಮೋದಿಸಲಾದ ಅಧಿಕಾರ ನೀಡಿಕೆಯಲ್ಲಿ

(ಎ) ಸಹಕಾರ ಸಂಘದ ಆಸ್ತಿ ಮತ್ತು ಹೊಣೆಗಾರಿಕೆಗಳು

(ಬಿ) ಯಾವನೇ ಲೇಣಿದಾರನ ಕ್ಲೇಮುಗಳು

(ಸಿ) ಸದಸ್ಯರ ಸಂಖ್ಯೆ, ಮತ್ತು

(ಡಿ) ಸಹಕಾರಿ ಸಂಘದಲ್ಲಿನ ಸದಸ್ಯರ ಹಿತಾಸಕ್ತಿಯ ಸ್ವರೂಪ ಮತ್ತು ವ್ಯಾಪ್ತಿ ಇವುಗಳ ಬಗ್ಗೆ ನಿರೂಪಿಸುವುದು ಅಗತ್ಯವಾಗಿದೆ.

(9) (6)ನೇ ಉಪಪ್ರಕರಣಕ್ಕನುಸಾರವಾಗಿ ಹೊರಡಿಸಿದ ಒಂದು ವಿಶೇಷ - ನಿರ್ಣಯವನ್ನು ರಿಜಿಸ್ಟ್ರಾರರು ಅನುಮೋದಿಸಿದಾಗ, ಅವರು, ಎರಡು ವಾರಗಳವರೆಗೆ ವಾರಕ್ಕೊಮ್ಮೆ ರಾಜ್ಯ ಪತ್ರದಲ್ಲಿ ಮತ್ತು ಸಹಕಾರಿ ಸಂಘದ ರಿಜಿಸ್ಟ್ರಾರರ ಕಚೇರಿಯು ಇರುವ ಜಿಲ್ಲೆಯಲ್ಲಿ ಸಾಮಾನ್ಯವಾಗಿ ಪ್ರಚಲಿತದಲ್ಲಿರುವ ಸಮಾಚಾರ ಪತ್ರಿಕೆಗಳಲ್ಲಿ ಪ್ರಕಟಿಸುವಂತೆ ಮಾಡತಕ್ಕದು.

(10)ರಿಜಿಸ್ಟ್ರಾರನು, ಸಹಕಾರಿ ಸಂಘದಿಂದ, ನೇಮಿತರಾದ ಸಮಾಪಕನಿಂದ ಅಥವಾ ನ್ಯಾಸಧಾರಿಯಿಂದ ಅಥವಾ ಮಾಹಿತಿಯನ್ನು ಒದಗಿಸಲು ಅಗತ್ಯಪಡಿಸಲಾದ ಯಾವನೇ ಇತರ ವ್ಯಕ್ತಿಯಿಂದ :

(ಎ) ವಿಘಟನೆಯ ಪ್ರಗತಿ ;

(ಬಿ) ವಿತರಣೆ ಮಾಡದೆ ಉಳಿದ ಯಾವುದೇ ಹೆಚ್ಚುವರಿ ಹಣ ಅಥವಾ ಮೀಸಲು ನಿಧಿಯ ವಿತರಣೆ ;

(ಸಿ) ಈ ಪ್ರಕರಣಕ್ಕೆನುಸಾರವಾಗಿ ಸ್ಥಾಪಿಸಲಾದ ನ್ಯಾಸದ ಆಡಳಿತದ ಪ್ರಗತಿ : ಮತ್ತು

(ಡಿ) ಅವನು : ಅವಳು ಅಗತ್ಯಪಡಿಸಬಹುದಾದ ಯಾವುದೇ ಇತರ ಮಾಹಿತಿ (ಪ್ರಕರಣ 45)

ಇವುಗಳನ್ನು ತೋರಿಸುವ ವಾರ್ಷಿಕ ಅಥವಾ ಇತರ ವಿವರಣಾ ಪಟ್ಟಿಯನ್ನು ಅಗತ್ಯಪಡಿಸಬಹುದು.

(2) ರಿಜಿಸ್ಟ್ರಾರನಿಂದ ವಿಘಟನೆ :

(1) ಒಂದು ಸಹಕಾರಿ ಸಂಘವು,

(ಎ) ಅದರ ನೋಂದಣಿಯ ಪ್ರಮಾಣಪತ್ರದಲ್ಲಿ ತೋರಿಸಿರುವ ದಿನಾಂಕದ ತರುವಾಯದ ಎರಡು ವರ್ಷಗಳೊಳಗೆ ಯಾವುದೇ ವ್ಯವಹಾರವನ್ನು ಪ್ರಾರಂಭಿಸಿಲ್ಲವೆಂದು; ಅಥವಾ

(ಬಿ) ನಿರಂತರ ಎರಡು ವರ್ಷಗಳಲ್ಲಿ ಯಾವುದೇ ವ್ಯವಹಾರವನ್ನು ನಿರ್ವಹಿಸಿಲ್ಲವೆಂದು; ಅಥವಾ

(ಸಿ) ಸಹಕಾರಿ ತತ್ವಗಳು ಮತ್ತು ಈ ಅಧಿನಿಯಮದ ಉಪಬಂಧಗಳ ಅನುಸಾರವಾಗಿ ಕಾರ್ಯಾಚರಣೆ ಮಾಡುತ್ತಿಲ್ಲವೆಂದು

ರಿಜಿಸ್ಟ್ರಾರನಿಗೆ ನಂಬಲು ಸೂಕ್ತ ಕಾರಣಗಳಿದ್ದರೆ

ಅವನು : ಅವಳು, ಸಹಕಾರಿ ಸಂಘವು ವ್ಯವಹಾರ ನಡೆಸುತ್ತಿರುವುದೇ, ಅಥವಾ ಕಾರ್ಯಚರಣೆಯಲ್ಲಿರುವುದೇ, ಸಹಕಾರಿ ಸಂಘದ ಸ್ಥಾನಮಾನವನ್ನುಳಿಸಿಕೊಳ್ಳಲು ಇಚ್ಛಿಸುವುದೇ ಅಥವಾ ವಾರ್ಷಿಕ ವಿವರಣಾ ಪಟ್ಟಿಯನ್ನು ಒಪ್ಪಿಸುವುದೇ ಎಂದು ವಿಚಾರಿಸುವ ಪತ್ರವೊಂದನ್ನು ಸಹಕಾರಿ ಸಂಘದ ಮುಖ್ಯ ಕಾರ್ಯನಿರ್ವಾಹಕನಿಗೆ ಕಳುಹಿಸಿಕೊಡತಕ್ಕದು.

(2) (1)ನೇ ಉಪಪ್ರಕರಣಕ್ಕನುಸಾರವಾಗಿ ಅವನು : ಅವಳು ಪತ್ರವನ್ನು ಕಳುಹಿಸಿದ ದಿನಾಂಕದಿಂದ ಒಂದು ತಿಂಗಳೊಳಗೆ ರಿಜಿಸ್ಟ್ರಾರರು ಆ ಪತ್ರಕ್ಕೆ ಉತ್ತರವನ್ನು ಸ್ವೀಕರಿಸದಿದ್ದಲ್ಲಿ, ಅವನು : ಅವಳು, ಆ ತಿಂಗಳು ಮುಕ್ತಾಯವಾದ ತರುವಾಯ 14 ದಿವಸಗಳೊಳಗೆ, ಸಹಕಾರಿ ಸಂಘದ ಮುಖ್ಯ ಕಾರ್ಯನಿರ್ವಾಹಕನಿಗೆ, (1)ನೇ ಉಪಪ್ರಕರಣಕ್ಕನುಸಾರವಾಗಿ ಕಳುಹಿಸಿದ ಪತ್ರವನ್ನು ಉಲ್ಲೇಖಿಸಿ..

(ಎ) ಅವನು : ಅವಳಿಂದ ಆ ಪತ್ರಕ್ಕೆ ಯಾವುದೇ ಉತ್ತರವು ಬಂದಿಲ್ಲವೆಂದು ಮತ್ತು

(ಬಿ) ಈ ಉಪಪ್ರಕರಣದ ಮೇರೆಗೆ ಕಳುಹಿಸಿದ ಪಾತ್ರಕ್ಕೆ, ಆ ಪತ್ರವನ್ನು ಕಳುಹಿಸಿದ ದಿನಾಂಕದಿಂದ ಒಂದು ತಿಂಗಳೊಳಗೆ ಯಾವುದೇ ಉತ್ತರವನ್ನು ಸ್ವೀಕರಿಸದೆ ಇದ್ದರೆ, ಸಹಕಾರಿ ಸಂಘದ ಹೆಸರನ್ನು ವಜಾ ಮಾಡಬೇಕೆಂದು ಮತ್ತು ಸಹಕಾರಿ ಸಂಘವನ್ನು ವಿಘಟಿಸಬೇಕೆಂದು ರಾಜ್ಯಪತ್ರದಲ್ಲಿ ನೋಟೀಸೊಂದನ್ನು ಪ್ರಕಟಿಸಲಾಗುವುದೆಂದು ನಿರ್ದೇಶಿಸಿ ಸಹಕಾರ ಸಂಘದ ಮುಖ್ಯ ಕಾರ್ಯನಿರ್ವಾಹಕನಿಗೆ ಒಂದು ಪತ್ರವನ್ನು ಕಳುಹಿಸಿಕೊಡತಕ್ಕುದು.

(3) ರಿಜಿಸ್ಟ್ರಾರರು :

(ಎ) ಸಹಕಾರಿ ಸಂಘವು ವ್ಯವಹಾರವನ್ನು ನಿರ್ವಹಿಸುತ್ತಿಲ್ಲವೆಂದು, ಅಥವಾ ಕಾರ್ಯಾಚರಣೆ ಮಾಡುತ್ತಿಲ್ಲವೆಂದು ಅಥವಾ ಅದು ಸಹಕಾರಿ ಸಂಘದ ಸ್ಥಾನಮಾನಗಳನ್ನುಳಿಸಿಕೊಳ್ಳಲು ಇಚ್ಛಿಸುವುದಿಲ್ಲವೆಂದು ಅಥವಾ ವಾರ್ಷಿಕ ವಿವರಣಾ ಪಟ್ಟಿಯನ್ನು ಕಳುಹಿಸುತ್ತಿಲ್ಲವೆಂದು ಪತ್ರವನ್ನು ಸ್ವೀಕರಿಸಿದಲ್ಲಿ, ಅಥವಾ

(ಬಿ) ಅವನು : ಅವಳು, (2)ನೇ ಉಪಪ್ರಕರಣಕ್ಕನುಸಾರವಾಗಿ ಕಳುಹಿಸಿದ ಪತ್ರದ ದಿನಾಂಕದ ತರುವಾಯ ಒಂದು ತಿಂಗಳೊಳಗೆ ಆ ಪತ್ರಕ್ಕೆ ಉತ್ತರವಾಗಿ ಯಾವುದೇ ಪತ್ರ ಸ್ವೀಕೃತವಾಗದೇ ಇದ್ದರೆ ;

ಅವನು : ಅವಳು ಫೆಡರಲ್ ಸಹಕಾರಿ ಸಂಘದೊಂದಿಗೆ ಸಮಾಲೋಚಿಸಿದ ತರುವಾಯ ಅವನು : ಅವಳು ನೋಟೀಸೊಂದನ್ನು ಜಾರಿಮಾಡಿದ ದಿನಾಂಕದಿಂದ ಒಂದು ತಿಂಗಳ ಅವಧಿ ಮುಗಿಯುವಲ್ಲಿ, ತದ್ವಿರುದ್ಧವಾಗಿ ಸಹಕಾರ ಸಂಘವು ಕಾರಣವನ್ನು ತೋರಿಸದ ಹೊರತು ; ರಿಜಿಸ್ಟ್ರಾರನಿಂದ ಅದರ ಹೆಸರನ್ನು ವಜಾ ಮಾಡಲಾಗುವುದೆಂದು ಮತ್ತು ಸಹಕಾರಿ ಸಂಘವನ್ನು ವಿಘಟಿಸಲಾಗುವುದೆಂದು ನೋಟೀಸನ್ನು ರಾಜ್ಯ ಪತ್ರದಲ್ಲಿ ಪ್ರಕಟಿಸಬಹುದು ಮತ್ತು ಸಹಕಾರಿ ಸಂಘಕ್ಕೆ ಕಳುಹಿಸಿಕೊಡಬಹುದು.

(4) (3)ನೇ ಉಪಪ್ರಕರಣಕ್ಕನುಸಾರವಾಗಿ ಕಳುಹಿಸಿದ ನೋಟೀಸಿನಲ್ಲಿ ನಮೂದಿಸಿದ ಅವಧಿಯು ಮುಗಿದಲ್ಲಿ, ರಿಜಿಸ್ಟ್ರಾರರು, ಸಹಕಾರಿ ಸಂಘದಿಂದ ಈ ಹಿಂದೆಯೇ ತದ್ವಿರುದ್ಧವಾಗಿ ಕಾರಣ ತೋರಿಸಿದ ಹೊರತು ;

(ಎ) ಅವನು : ಅವಳು ಸಹಕಾರಿ ಸಂಘವು ಆಸ್ತಿಗಳು ಅಥವಾ ಹೊಣೆಗಾರಿಕೆಗಳನ್ನು ಹೊಂದಿದೆ ಎಂದು ಅಭಿಪ್ರಾಯಪಟ್ಟಲ್ಲಿ ವಿಘಟನೆಯ ಪ್ರಮಾಣಪತ್ರವನ್ನು ನೀಡಬಹುದು ; ಅಥವಾ

(ಬಿ) ಸಹಕಾರಿ ಸಂಘದ ವಿಘಟನೆಗಾಗಿ ಸಮಾಪಕನೊಬ್ಬನನ್ನು ನೇಮಕ ಮಾಡಬಹುದು.

(5) ಸಹಕಾರಿ ಸಂಘವು, ತನ್ನ ಸದಸ್ಯರಿಗೆ

(ಎ) ವಾರ್ಷಿಕ ಹಣಕಾಸು ಹೇಳಿಕೆಗಳ ಪ್ರತಿಯನ್ನು ಒದಗಿಸಿರುವ ಉದ್ದೇಶಕ್ಕಾಗಿ ಕರೆಯಲಾದ ಒಂದು ವಾರ್ಷಿಕ ಅಥವಾ ವಿಶೇಷ ಸಭೆಯಲ್ಲಿ, ಅಥವಾ

(ಬಿ) ಅದರ ಹಣಕಾಸು ವರ್ಷದ ಮುಕ್ತಾಯದ ತರುವಾಯದ 8 ತಿಂಗಳ ಅವಧಿಯೊಳಗಾಗಿ,

(ಸಿ) ಹಿಂದಿನ ಹಣಕಾಸು ವರ್ಷದ ಅವಧಿಯಲ್ಲಿ ನಡೆಸಿದ ವ್ಯವಹಾರಗಳ ಪರಿಶೀಲನೆಯ ಉದ್ದೇಶಕ್ಕಾಗಿ ಮತ್ತು ವಾರ್ಷಿಕ ಹಣಕಾಸು ವಿವರಣಪಟ್ಟಿಯ ಪ್ರತಿಯನ್ನು ಸದಸ್ಯರಿಗೆ ಮತ್ತು ರಿಜಿಸ್ಟ್ರಾರರಿಗೆ ಒದಗಿಸುವುದಕ್ಕಾಗಿ ಸಹಕಾರಿ ಸಂಘದ ವಿಶೇಷ ಸಭೆಯನು ಕರೆಯಲು ನಿರ್ದೇಶಕರನು ಅಗತ್ಯಪಡಿಸಬಹುದು; ಮತ್ತು

(ಡಿ) ಅವನು : ಅವಳು (೯) ಖಂಡಕ್ಕನುಸಾರವಾಗಿ ವಿಶೇಷ ಸಭೆಯನ್ನು ಕರೆಯಬೇಕೆಂದು ಅಗತ್ಯಪಡಿಸಿದಲ್ಲಿ ವಾರ್ಷಿಕ ಹಣಕಾಸಿನ ತಃಖ್ತೆ ವಿವರಪಟ್ಟಿಯ ಪ್ರತಿಯನ್ನು ಒದಗಿಸಲು ತಪ್ಪಿದರೆ; ಯಾವ ಅವಧಿಯೊಳಗೆ ವಿಶೇಷ ಸಭೆಯನ್ನು ಕರೆಯಬೇಕಾಗಿದೆ ಎಂಬ ಬಗ್ಗೆ ಅವಧಿಯನ್ನು ನಿರ್ಧರಿಸತಕ್ಕುದು.

(6) (5)ನೇ ಉಪಪ್ರಕರಣದಲ್ಲಿ ಕೊಡಲಾದ ಅವಧಿಯೊಳಗಾಗಿ ವಿಶೇಷ ಸಭೆಯನ್ನು ಕರೆಯಲು ನಿರ್ದೇಶಕರು ತಪ್ಪಿದರೆ, ರಿಜಿಸ್ಟ್ರಾರರು;

(ಎ) ಸಹಕಾರಿ ಸಂಘದ ಮತ್ತು ಸಹಕಾರಿ ಸಂಘದಲ್ಲಿ ಹಿತಾಸಕ್ತಿ ಹೊಂದಿರುವ ಸದಸ್ಯರ ಆರ್ಥಿಕ ಸ್ಥಿತಿಯ ಪರಿಶೀಲನೆಗಾಗಿ ; ಮತ್ತು

(ಬಿ) ಸಹಕಾರಿ ಸಂಘವನ್ನು ಮುಂದುವರಿಸಲು ಸದಸ್ಯರು ಇಚ್ಛಿಸುವರೇ ಎಂಬುದನ್ನು ತಿಳಿಯುವುದಕ್ಕಾಗಿ ವಿಶೇಷ ಸಭೆಯನ್ನು ಕರೆಯಬಹುದು.

(7) (ಎ) (6)ನೇ ಉಪಪ್ರಕರಣಕ್ಕನುಸಾರವಾಗಿ ಕರೆಯಲಾದ ವಿಶೇಷ ಸಭೆಯಲ್ಲಿ ಸದಸ್ಯರ ಗಣಪೂರ್ತಿ ಇಲ್ಲದಿದ್ದಲ್ಲಿ, ಅಥವಾ

(ಬಿ) ಸದಸ್ಯರು, ಸಹಕಾರಿ ಸಂಘವು ವ್ಯವಹಾರವನ್ನು ನಡೆಸಬೇಕೆಂದು ಮತ್ತು ಮಂಡಲಿಯು ಹಣಕಾಸಿನ ವಿವರಣ ಪಟ್ಟಿಯನ್ನು ಮಂಡಿಸಬೇಕೆಂದು ಪರಿಣಾಮಕಾರಿ ನಿರ್ಣಯಗಳನ್ನು ಹೊರಡಿಸಲು ತಪ್ಪಿದಲ್ಲಿ, ರಿಜಿಸ್ಟ್ರಾರರು ಸಹಕಾರಿ ಸಂಘದ ವಿಘಟನೆಗಾಗಿ ಸಮಾಪಕನನ್ನು ನೇಮಿಸಬಹುದು, ಅಥವಾ ಸಹಕಾರಿ ಸಂಘಕ್ಕೆ ಯಾವುದೇ ಆಸ್ತಿಗಳು ಅಥವಾ ಹೊಣೆಗಾರಿಕೆಗಳು ಇಲ್ಲವೆಂದು ರಿಜಿಸ್ಟ್ರಾರರಿಗೆ ಮನದಟ್ಟಾದಲ್ಲಿ, ಅವನು : ಅವಳು ವಿಘಟನೆಯ ಪ್ರಮಾಣಪತ್ರವನ್ನು ನೀಡಬಹುದು.

3. ನ್ಯಾಯಾಲಯ ಆದೇಶದ ಮೂಲಕ ವಿಘಟನೆ :

(1) ರಿಜಿಸ್ಟ್ರಾರ್ ಅಥವಾ ಹಿತಾಸಕ್ತಿಯಿರುವ ವ್ಯಕ್ತಿಯು ಸಹಕಾರಿ ಸಂಘಕ್ಕೆ ಪ್ರಸ್ತಾವಿತ ಅರ್ಜಿಯ ಮೂರು ತಿಂಗಳ ನೋಟೀಸನ್ನು ಕೊಟ್ಟ ತರುವಾಯ, ಸಹಕಾರಿ ಸಂಘವು,

(ಎ) ತಪ್ಪುಗ್ರಹಿಕೆಯಿಂದಾಗಿ ಅಥವಾ ಮೋಸದಿಂದಾಗಿ ಅದರ ನೋಂದಣಿಯನ್ನು ಪಡೆದಿರುವಲ್ಲಿ ;

(ಬಿ) ನೀತಿಬಾಹಿರ ಉದ್ದೇಶಗಳಿಗಾಗಿ ಅಸ್ತಿತ್ವದಲ್ಲಿರುವಲ್ಲಿ;

(ಸಿ) ರಿಜಿಸ್ಟ್ರಾರನಿಂದ ನೋಟೀಸನ್ನು ಪಡೆದ ತರುವಾಯ ಸ್ವಇಚ್ಛೆಯಿಂದ ಈ ಅಧಿನಿಯಮದ ಯಾವುದೇ ಉಪಬಂಧಗಳು ಅಥವಾ ಉಪವಿಧಿಗಳನ್ನು ಉಲ್ಲಂಘಿಸಿರುವಲ್ಲಿ;

(ಡಿ) ಸಹಕಾರದ ಆಧಾರದ ಮೇಲೆ ಕಾರ್ಯಾಚರಣೆ ಮಾಡದಿರುವಲ್ಲಿ - ಸಹಕಾರಿ ಸಂಘದ ವಿಘಟನೆಯ ಆದೇಶಕ್ಕಾಗಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಬಹುದು.

(2) ಆಸಕ್ತ ವ್ಯಕ್ತಿಯು ಈ ಪ್ರಕರಣಕ್ಕನುಸಾರವಾಗಿ ಅರ್ಜಿಹಾಕಿಕೊಂಡಿದ್ದಲ್ಲಿ, ಅವನು : ಅವಳು ಅವನ/ ಅವಳ ಅರ್ಜಿಯ ನೋಟೀಸನ್ನು ರಿಜಿಸ್ಟ್ರಾರರಿಗೆ ನೀಡತಕ್ಕುದು ಮತ್ತು ರಿಜಿಸ್ಟ್ರಾರರು ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗಲು ಮತ್ತು ಅಹವಾಲು ಕೇಳಲು ಹಕ್ಕುಳ್ಳವರಾಗಿರುತ್ತಾರೆ.

(3) ನ್ಯಾಯಾಲಯವು, ಈ ಪ್ರಕರಣಕ್ಕನುಸಾರವಾಗಿ ಅರ್ಜಿಯನ್ನು ಸ್ವೀಕರಿಸಿದಲ್ಲಿ ಅದು ಸಹಕಾರಿ ಸಂಘವನ್ನು ವಿಘಟಿತವಾಗುವಂತೆ ಅಥವಾ ಸಮಾಪನಗೊಳ್ಳುವಂತೆ ಆದೇಶಿಸಬಹುದು ಮತ್ತು ರಿಜಿಸ್ಟ್ರಾರನ ಮೇಲ್ವಿಚಾರಣೆಯಲ್ಲಿ ಸಂಘವನ್ನು ವಿಘಟಿಸಬಹುದು.

(4) ರಿಜಿಸ್ಟ್ರಾರರನು (3)ನೇ ಉಪಪ್ರಕರಣಕ್ಕನುಸಾರವಾಗಿ ಮಾಡಲಾದ ಆದೇಶವನ್ನು ಸ್ವೀಕರಿಸಿದಲ್ಲಿ, ಅವನು : ಅವಳು

(ಎ) ಆದೇಶವು ಸಹಕಾರಿ ಸಂಘದ ವಿಘಟನೆಗೆ ಸಂಬಂಧಿಸಿದ್ದಲ್ಲಿ, ವಿಘಟನೆಯ ಪ್ರಮಾಣ ಪತ್ರವನ್ನು ನೀಡತಕ್ಕುದು ; ಅಥವಾ

(ಬಿ) ಆದೇಶವು ಸಮಾಪನೆಗೆ ಸಂಬಂಧಿಸಿದ್ದಲ್ಲಿ, ರಿಜಿಸ್ಟ್ರಾರರ ಮೇಲ್ವಿಚಾರಣೆಯಲ್ಲಿ ಸಹಕಾರಿ ಸಂಘವನ್ನು ವಿಸರ್ಜಿಸತಕ್ಕುದು ಮತ್ತು ರಾಜ್ಯಪತ್ರದಲ್ಲಿ ನೋಟೀಸನ್ನು ಪ್ರಕಟಿಸತಕ್ಕುದು.

(4) **ಸಮಾಪಕನ ನೇಮಕ :**

ಸಹಕಾರಿ ಸಂಘವನ್ನು ಸಮಾಪನಗೊಳಿಸಬೇಕಾಗಿರುವಲ್ಲಿ ಮತ್ತು ವಿಘಟನೆಗೊಳಿಸಬೇಕಾಗಿರುವಲ್ಲಿ ಮತ್ತು ಸರ್ವಸದಸ್ಯರಿಂದ ಅಥವಾ ನ್ಯಾಯಾಲಯದಿಂದ ಯಾರೇ ಸಮಾಪಕನನ್ನು ನೇಮಕ ಮಾಡದೇ ಇರುವಲ್ಲಿ, ರಿಜಿಸ್ಟ್ರಾರನು ;

(ಎ) ಸಹಕಾರಿ ಸಂಘದ ವ್ಯವಹಾರಗಳನ್ನು ಸಮಾಪನಗೊಳಿಸಲು ಸಮಾಪಕನಾಗಿ ಯಾರೇ ವ್ಯಕ್ತಿಯನ್ನು ನೇಮಕ ಮಾಡಬಹುದು, ಅಥವಾ

(ಬಿ) ಅವನು : ಅವಳಿಗೆ ಸಹಕಾರಿ ಸಂಘವು ಯಾವುದೇ ಆಸ್ತಿ ಅಥವಾ ಹೊಣೆಗಾರಿಕೆಗಳನ್ನು ಹೊಂದಿಲ್ಲವೆಂದು ಅಭಿಪ್ರಾಯಪಟ್ಟಲ್ಲಿ ವಿಘಟನೆಯ ಪ್ರಮಾಣಪತ್ರವನ್ನು ನೀಡಬಹುದು.

(5) **ಸಮಾಪನ ಕರ್ತವ್ಯಗಳು :**

ಸಮಾಪಕನಾಗಿ ಅವನು : ಅವಳು ನೇಮಕವಾದ ಮೇಲೆ

(ಎ) (i) ರಿಜಿಸ್ಟ್ರಾರನು ಸಮಾಪಕನ ನೇಮಕಾತಿಯನ್ನು ಮಾಡದೇ ಇದ್ದಲ್ಲಿ, ರಿಜಸ್ಟ್ರಾರನಿಗೆ ಮತ್ತು

(ii) ಸಮಾಪಕನಿಗೆ ತಿಳಿದ ಪ್ರತಿಯೊಬ್ಬ ಕ್ಲೇಮುದಾರ ಮತ್ತು ಗೇಣಿದಾರನಿಗೆ ಅವನ: ಅವಳ ನೇಮಕಾತಿಯ ನೋಟೀಸನ್ನು ಕೂಡಲೇ ನೀಡತಕ್ಕದು

(ಬಿ) ನಿರಂತರ ಎರಡು ವಾರಗಳು, ವಾರಕ್ಕೊಮ್ಮೆ ರಾಜ್ಯಪತ್ರದಲ್ಲಿ ಮತ್ತು ಸಹಕಾರಿ ಸಂಘವು ಅದರ ನೋಂದಣಿ ಕಚೇರಿಯನ್ನು ಹೊಂದಿರುವ ಸ್ಥಳದಲ್ಲಿ ಪ್ರಕಟವಾಗುವ ಅಥವಾ ವಿತರಣೆಯಾಗುವ ಸಮಾಚಾರ ಪತ್ರಿಕೆಯಲ್ಲಿ ಅವನ : ಅವಳ ನೇಮಕಾತಿಯ ಬಗೆಗಿನ ನೋಟೀಸನ್ನು ಕೂಡಲೇ ಪ್ರಕಟಿಸತಕ್ಕುದು ಮತ್ತು ಸಹಕಾರಿ ಸಂಘವು ವ್ಯವಹಾರ ನಡೆಸುವ ಸ್ಥಳದಲ್ಲೆಲ್ಲಾ ಪ್ರತಿಯೊಂದು ಅಧಿಕಾರ ಕ್ಷೇತ್ರದಲ್ಲೂ ಸಮಾಪನೆಯ ಸೂಚನೆಯನ್ನು ನೀಡುವ ಜವಾಬ್ದಾರಿ ಕ್ರಮವನ್ನು ಕೈಕೊಳ್ಳತಕ್ಕುದು.

(ಸಿ) ಯಾರೇ ವ್ಯಕ್ತಿಯನ್ನು ಅಗತ್ಯಪಡಿಸಿ (ಎ) ಮತ್ತು (ಬಿ) ಖಂಡದಲ್ಲಿ ಸೂಚಿಸಿರುವ ನೋಟೀಸಿನಲ್ಲಿ ವ್ಯವಸ್ಥೆ ಮಾಡತಕ್ಕುದು.

(i) ಲೆಕ್ಕಪತ್ರವನ್ನು ಕೊಡುವುದಕ್ಕೆ ಮತ್ತು ಕೊಡಬೇಕಾಗಿರುವ ಯಾವುದೇ ಮೊತ್ತವನ್ನು ನಿರ್ದಿಷ್ಟಪಡಿಸಿದ ಕಾಲ ಮತ್ತು ಸ್ಥಳದಲ್ಲಿ ಸಮಾಪಕರಿಗೆ ಸಂದಾಯ ಮಾಡುವುದಕ್ಕಾಗಿ ಸಹಕಾರಿ ಸಂಘಕ್ಕೆ ಜವಾಬ್ದಾರಿನಾಗಿರತಕ್ಕುದು.

(ii) ಸಹಕಾರಿ ಸಂಘದ ಸ್ವತ್ತನ್ನು, ನಿರ್ದಿಷ್ಟಪಡಿಸಿದ ಕಾಲ ಮತ್ತು ಸ್ಥಳದಲ್ಲಿ ಸಮಾಪಕನಿಗೆ ಅದನ್ನು ಕೊಡುವುದಕ್ಕಾಗಿ ಸ್ವಾಧೀನದಲ್ಲಿಟ್ಟುಕೊಳ್ಳತಕ್ಕುದು; ಮತ್ತು

(iii) ಸಮಾಪನೆಗೊಂಡ ಅಥವಾ ಸಮಾಪನೆಯಾಗದ ಮುಂದೆ ಅಥವಾ ಈಗಿನ ವಿವರಗಳನ್ನವಲಂಬಿಸಿ ಸಮಾಪನೆ ಮಾಡದ ಅಥವಾ ನೋಟೀಸಿನ ಮೊದಲ ಪ್ರಕಟಣೆಯಾದ ತರುವಾಯದ ಎರಡು ತಿಂಗಳನ್ನು ಮೀರದೆ ಸಮಾಪಕನಿಗೆ

ಲಿಖಿತದಲ್ಲಿ ಕ್ಲೇಮು ಮಾಡುವುದಕ್ಕಾಗಿ ಸಹಕಾರಿ ಸಂಘಕ್ಕೆ ಪ್ರತಿಯಾಗಿ ಕ್ಲೇಮು ಹೊಂದಿರತಕ್ಕುದು.

(ಡಿ) ಸಹಕಾರಿ ಸಂಘದ ಸ್ವತ್ತನ್ನು ಅಭಿರಕ್ಷೆಗೆ ಮತ್ತು ನಿಯಂತ್ರಣಕ್ಕೆ ತೆಗೆದುಕೊಳ್ಳತಕ್ಕುದು.

(ಇ) ಸಹಕಾರಿ ಸಂಘದ ಹಣಕಾಸಿಗೆ ಸಂಬಂಧಪಟ್ಟ ನ್ಯಾಸಲೆಕ್ಕ ಖಾತೆಯನ್ನು ತೆರೆಯತಕ್ಕುದು ಮತ್ತು ನಿರ್ವಹಿಸತಕ್ಕುದು.

(ಎಫ್) ಅವನಿಂದ : ಅವಳಿಂದ ಸಹಕಾರಿ ಸಂಘದ ಹಣವನ್ನು ಸ್ವೀಕರಿಸಿದುದಕ್ಕೆ ಮತ್ತು ಸಂದಾಯ ಮಾಡಿದುದಕ್ಕೆ ಲೆಕ್ಕವಿಡತಕ್ಕುದು.

(ಜಿ) ಸಹಕಾರಿ ಸಂಘದ ವಿರುದ್ಧವಾಗಿ ಕ್ಲೇಮು ಹೊಂದಿರುವ ಸದಸ್ಯರು ಗೇಣಿದಾರರು ಮತ್ತು ಇತರ ವ್ಯಕ್ತಿಗಳ ಪ್ರತ್ಯೇಕ ಪಟ್ಟಿಗಳನ್ನು ಇಡತಕ್ಕುದು.

(ಹೆಚ್) ಅವನಾಗಲೀ : ಅವಳಾಗಲೀ, ಸಹಕಾರಿ ಸಂಘದ ಹಣ ಸಂದಾಯ ಮಾಡುವುದಕ್ಕೆ ಅಥವಾ ಅದರ ಹೊಣೆಗಾರಿಕೆಗಳನ್ನು ನಿರ್ವಹಿಸುವುದಕ್ಕೆ ಸಾಕಷ್ಟು ಅವಕಾಶ ಒದಗಿಸಲು ಅಸಮರ್ಥವಾಗಿರುವುದಾಗಿ ನಿರ್ಧರಿಸಿದಲ್ಲಿ ನಿರ್ದೇಶನಗಳಿಗಾಗಿ ರಿಜಿಸ್ಟ್ರಾರನಿಗೆ ಅರ್ಜಿ ಸಲ್ಲಿಸತಕ್ಕುದು, ಮತ್ತು

(ಐ) ಅವನ : ಅವಳ ನೇಮಕಾತಿಯಾದ ತರುವಾಯ ಕಡೇ ಪಕ್ಷ ಪ್ರತಿ ಆರು ತಿಂಗಳಿಗೊಮ್ಮೆ ಅಥವಾ ರಿಜಿಸ್ಟ್ರಾರನು ಅಗತ್ಯಪಡಿಸಿದಾಗಲೆಲ್ಲಾ ಸಮಾಪಕನು ಯುಕ್ತವೆಂದು ಪರಿಗಣಿಸುವಂಥ ಅಥವಾ ರಿಜಿಸ್ಟ್ರಾರನು ಅಗತ್ಯಪಡಿಸಿದಂಥ ಯಾವುದೇ ರೂಪದಲ್ಲಿ ಸಹಕಾರಿ ಸಂಘದ ಹಣಕಾಸಿನ ವಿವರಣಪಟ್ಟಿಗಳನ್ನು ರಿಜಿಸ್ಟ್ರಾರನಿಗೆ ಕೊಡತಕ್ಕುದು.

6. ಸಮಾಪಕನ ಅಧಿಕಾರಗಳು :

(1) ಸಮಾಪಕನು ;

(ಎ) ನ್ಯಾಯವಾದಿಗಳು, ಅಕೌಟೆಂಟರುಗಳು, ಇಂಜಿನಿಯರುಗಳು, ಮೌಲ್ಯ ನಿರ್ಣಾಯಕರು ಮತ್ತು ಇತರ ವೃತ್ತಿ ಸಂಬಂಧಿ ಸಲಹೆಗಾರರನ್ನು ಇಟ್ಟುಕೊಳ್ಳಬಹುದು.

(ಬಿ) ಸಹಕಾರಿ ಸಂಘದ ಹೆಸರಿನಲ್ಲಿ ಮತ್ತು ಅದರ ಪರವಾಗಿ ಯಾವುದೇ ಸಿವಿಲ್, ಕ್ರಿಮಿನಲ್ ಅಥವಾ ಆಡಳಿತಾತ್ಮಕ ಕ್ರಮ ಮತ್ತು ವ್ಯವಹರಣೆಗಳನ್ನು ಹೂಡಬಹುದು, ಅವುಗಳನ್ನು ಸಮರ್ಥಿಸಬಹುದು ಅಥವಾ ಭಾಗವಹಿಸಬಹುದು.

(ಸಿ) ಕ್ರಮಬದ್ಧ ಸಮಾಪನೆಗೆ ಅಗತ್ಯವಿರುವ ಸಹಕಾರಿ ಸಂಘದ ವ್ಯವಹಾರಗಳನ್ನು ನಿರ್ವಹಿಸಬಹುದು.

(ಡಿ) ಸಹಕಾರಿ ಸಂಘದ ಯಾವುದೇ ಸ್ವತ್ತನ್ನು ಸಾರ್ವಜನಿಕ ಹರಾಜಿನ ಮೂಲಕ ಅಥವಾ ಖಾಸಗಿ ಮಾರಾಟದ ಮೂಲಕ ಮಾರಾಟ ಮಾಡುವುದು.

(ಇ) ಸಹಕಾರಿ ಸಂಘದ ಹೆಸರಿನಲ್ಲಿ ಮತ್ತು ಪರವಾಗಿ ಎಲ್ಲ ಕಾರ್ಯಗಳನ್ನು ಮಾಡುವುದು ಮತ್ತು ಯಾವುದೇ ದಸ್ತಾವೇಜುಗಳನ್ನು ಬರೆದುಕೊಡುವುದು.

(ಎಫ್) ಸಹಕಾರಿ ಸಂಘದ ಸ್ವತ್ತಿನ ಭದ್ರತೆಯ ಮೇಲೆ ಹಣ ಸಾಲ ಪಡೆಯುವುದು.

(ಜಿ) ಸಹಕಾರಿ ಸಂಘದ ಪರವಾಗಿ ಅಥವಾ ವಿರುದ್ಧವಾಗಿ ಯಾವುದೇ ಕ್ಲೇಮುಗಳನ್ನು ಇತ್ಯರ್ಥಗೊಳಿಸುವುದು ಅಥವಾ ರಾಜಿ ಮಾಡಿಕೊಳ್ಳುವುದು; ಮತ್ತು

(ಹೆಚ್) ಸಹಕಾರಿ ಸಂಘದ ಸಮಾಪನಕ್ಕೆ ಮತ್ತು ಅದರ ಸ್ವತ್ತು ಮತ್ತು ನಿಧಿಗಳ ಹಂಚಿಕೆಗಾಗಿ ಅವಶ್ಯಕವೆಂದು ಅವನು : ಅವಳು ಪರಿಗಣಿಸುವಂಥ ಎಲ್ಲ ಕಾರ್ಯಗಳನ್ನು ಮಾಡುವುದು.

(2) ಯಾವನೇ ವ್ಯಕ್ತಿಯು, ಅವನ : ಅವಳ ಸ್ವಾಧೀನತೆಯಲ್ಲಿ ಅಥವಾ ಅವನ: ಅವಳ ಅಧೀನಲ್ಲಿರುವ ಸಹಕಾರಿ ಸಂಘದ ಯಾವುದೇ ಸ್ವತ್ತನ್ನು ಬಚ್ಚಿಟ್ಟಿದ್ದಾನೆಂದು, ತಡೆಹಿಡಿದಿದ್ದಾನೆಂದು ಅಥವಾ ದುರುಪಯೋಗಪಡಿಸಿಕೊಂಡಿದ್ದಾನೆಂದು ಸಮಾಪಕನಿಗೆ ನಂಬಲು ಕಾರಣಗಳಿದ್ದಲ್ಲಿ ಅವನು : ಅವಳು, ಆದೇಶದಲ್ಲಿ ಹೆಸರಿಸಲಾದ ಸಮಯದಲ್ಲಿ ಮತ್ತು ಸ್ಥಳದಲ್ಲಿ ನ್ಯಾಯಾಲಯದ ಮುಂದೆ ಹಾಜರಾಗಲು ಮತ್ತು ಪರೀಕ್ಷೆಗೊಳಗಾಗಲು ಆ ವ್ಯಕ್ತಿಯನ್ನು ಅಗತ್ಯಪಡಿಸುವಂತೆ ಆದೇಶ ನೀಡುವಂತೆ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಬಹುದು.

(3) (2)ನೇ ಉಪಪ್ರಕರಣದಲ್ಲಿ ಹೇಳಿದ ಪರೀಕ್ಷೆಯಿಂದ, ಸಹಕಾರಿ ಸಂಘದ ಸ್ವತ್ತನ್ನು ಯಾವನೇ ವ್ಯಕ್ತಿಯು ಬಚ್ಚಿಟ್ಟಿದ್ದಾನೆಂದು, ತಡೆಹಿಡಿದಿದ್ದಾನೆಂದು ಅಥವಾ ದುರುಪಯೋಗಪಡಿಸಿಕೊಂಡಿದ್ದಾನೆಂದು ತಿಳಿದುಬಂದಲ್ಲಿ, ನ್ಯಾಯಾಲಯವು ಆ ವ್ಯಕ್ತಿಯು ಸ್ವತ್ತನ್ನು ವಾಪಸು ನೀಡತಕ್ಕುದೆಂದು ಅಥವಾ ಸಹಕಾರಿ ಸಂಘದ ಪರವಾಗಿ ಸಮಾಪಕನಿಗೆ ಪರಿಹಾರವನ್ನು ಸಂದಾಯ ಮಾಡತಕ್ಕುದೆಂದು ಆದೇಶ ಮಾಡಬಹುದು.

(4) ಯಾವೊಬ್ಬ ಸಮಾಪಕನೂ ಅಥವಾ ಅವನ : ಅವಳ ಸಂಬಂಧಿಯು, ಸಹಕಾರಿ ಸಂಘದ ವ್ಯಾಪಾರದಲ್ಲಿರುವ ಸರಕಿನ ಅಥವಾ ಸ್ವತ್ತಿನ ಯಾವುದೇ ಭಾಗವನ್ನು ಪ್ರತ್ಯಕ್ಷವಾಗಿಯ್ಯಾಗಲಿ ಅಥವಾ ಪರೋಕ್ಷವಾಗಿಯಾಗಲಿ ಖರೀದಿಸತಕ್ಕುದಲ್ಲ.

7. ಅಂತಿಮ ಲೆಕ್ಕ :

(1) ಸಮಾಪಕನು ಸಹಕಾರಿ ಸಂಘದ ಸ್ವತ್ತಿನ ಪೈಕಿಯಿಂದ ಸಮಾಪನದ ವೆಚ್ಚಗಳನ್ನು ಸಂದಾಯ ಮಾಡತಕ್ಕುದು ಮತ್ತು ಸಹಕಾರಿ ಸಂಘದ ವಿರುದ್ಧದ ಎಲ್ಲ ಕ್ಲೇಮುಗಳ ಬಗ್ಗೆ ಸಂದಾಯ ಮಾಡತಕ್ಕುದು ಅಥವಾ ಸಾಕಷ್ಟು ಏರ್ಪಾಡು ಮಾಡತಕ್ಕುದು.

(2) ಸಹಕಾರಿ ಸಂಘದ ವಿರುದ್ಧ ಎಲ್ಲ ಕ್ಲೇಮುಗಳ ಸಂಬಂಧದಲ್ಲಿ ಸಂದಾಯ ಮಾಡಿದ ಅಥವಾ ಮಾರ್ಪಾಡು ಮಾಡಿದ ತರುವಾಯ, ಸಮಾಪಕನು, ತನ್ನ ಅಂತಿಮ ಲೆಕ್ಕಗಳ ಅನುಮೋದನೆಗಾಗಿ ಮತ್ತು ಉಪವಿಧಿಗಳಿಗನುಸಾರವಾಗಿ ಸಹಕಾರಿ ಸಂಘದ ಉಳಿದ ಸ್ವತ್ತನ್ನು ಹಣದ ಅಥವಾ ವಸ್ತು ರೂಪದಲ್ಲಿ ಹಂಚಲು ಅನುಮತಿಗಾಗಿ ರಿಜಿಸ್ಟ್ರಾರರಿಗೆ ಅರ್ಜಿ ಸಲ್ಲಿಸತಕ್ಕುದು.

(3) (2)ನೇ ಉಪಪ್ರಕರಣಕ್ಕನುಸಾರವಾಗಿ ಸಮಾಪಕನು ಸಲ್ಲಿಸಿದ ಅಂತಿಮ ಲೆಕ್ಕಗಳನ್ನು ರಿಜಿಸ್ಟ್ರಾರನು ಅನುಮೋದಿಸಿದಲ್ಲಿ, ಅವನು : ಅವಳು

(ಎ) ಸಹಕಾರಿ ಸಂಘದ ದಸ್ತಾವೇಜುಗಳ ಮತ್ತು ದಾಖಲೆಗಳ ಅಭಿರಕ್ಷೆ ಅಥವಾ ವಿಲೇವಾರಿಯ ಸಂಬಂಧದಲ್ಲಿ ನಿರ್ದೇಶನಗಳನ್ನು ನೀಡತಕ್ಕುದು; ಮತ್ತು

(ಬಿ) ಸಮಾಪಕನನ್ನು ಸೇವೆಯಿಂದ ಬಿಡುಗಡೆ ಮಾಡತಕ್ಕುದು.

(4) ರಿಜಿಸ್ಟ್ರಾರನು, (3)ನೇ ಉಪಪ್ರಕರಣಕ್ಕನುಸಾರವಾಗಿ ಸಮಾಪಕನನ್ನು ಸೇವೆಯಿಂದ ಬಿಡುಗಡೆ ಮಾಡಿದಲ್ಲಿ, ಅವನು : ಅವಳು, ವಿಘಟನೆಯ ಬಗ್ಗೆ ಪ್ರಮಾಣ ಪತ್ರವನ್ನು ನೀಡತಕ್ಕುದು.

(5) ಸಮಾಪಕನು ನೇಮಕಗೊಂಡ ಇಪ್ಪತ್ನಾಲ್ಕು ತಿಂಗಳುಗಳ ತರುವಾಯವಲ್ಲದ ವಿಘಟನಾ ಪ್ರಮಾಣಪತ್ರದಲ್ಲಿ ತೋರಿಸಿದ ದಿನಾಂಕದಂದು ಸಹಕಾರಿ ಸಂಘವು ಅಸ್ತಿತ್ವದಲ್ಲಿರುವುದು ನಿಂತುಹೋಗತಕ್ಕುದು.

37. **105ರಿಂದ 108ಎ ಪ್ರಕರಣಗಳ ತಿದ್ದುಪಡಿ :** 105ಎ ರಿಂದ 108ಎ ವರೆಗಿನ ಪ್ರಕರಣಗಳನ್ನು ಬಿಟ್ಟುಬಿಡತಕ್ಕುದು.

38. **109ರಿಂದ 111ಬಿ ಪ್ರಕರಣದ ತಿದ್ದುಪಡಿ :** 109ರಿಂದ 111 ಬಿ ವರೆಗಿನ ಪ್ರಕರಣಗಳನ್ನು ಈ ಮುಂದಿನಂತೆ ಮಾರ್ಪಾಟು ಮಾಡತಕ್ಕುದು

(1) **ಅಪರಾಧಗಳು**

ಈ ಮುಂದಿನವುಗಳು ಈ ಅಧಿನಿಯಮದ ಮೇರೆಗೆ ಅಪರಾಧ ಎನಿಸುತವೆ :

(ಎ) ಅಧಿನಿಯಮದ ಹಾಗೂ ಉಪವಿಧಿಗಳ ಉಪಬಂಧಗಳ ಉಲ್ಲಂಘನೆ;

(ಬಿ) ದಾಖಲೆಗಳ ಅಭಿರಕ್ಷೆ ಹೊಂದಲು ಅಧಿಕಾರ ಪಡೆದ ವ್ಯಕ್ತಿಗೆ ಸಹಕಾರಿ ಸಂಘಗಳ ದಾಖಲೆಗಳನ್ನು ಒಪ್ಪಿಸಲು ತಪ್ಪುವುದು.

(ಸಿ) ಸಹಕಾರಿ ಸಂಘದ ರಚನೆ, ಆಡಳಿತ ಮತ್ತು ವ್ಯವಹಾರದ ಸಂಬಂಧದಲ್ಲಿ ಮೋಸದ ಚಟುವಟಿಕೆಗಳಲ್ಲಿ ತೊಡಗುವುದು;

(ಡಿ) ಸಹಕಾರಿ ಸಂಘದ ನಿಧಿಗಳ ಮತ್ತು ಸ್ವತ್ತುಗಳ ದುರುಪಯೋಗ ಮಾಡುವುದು;

(ಇ) ಆಡಳಿತ ಮಂಡಳಿಗೆ ಚುನಾವಣೆಯನ್ನು ನಡೆಸುವಲ್ಲಿ 1956ರ ಜನತಾ ಪ್ರಾತಿನಿಧ್ಯ ಅಧಿನಿಯಮದ 123ನೇ ಪ್ರಕರಣದ ಅಡಿಯಲ್ಲಿ ಪರಿಭಾಷಿಸಲಾದಂಥ "ಭಷ್ಟಾಚರಣೆಯಲ್ಲಿ ತೊಡಗುವುದು.

(2) **ದಂಡನೆಗಳು :**

(ಎ) ಅಧಿನಿಯಮದ 42ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಅಪರಾಧಗಳನ್ನು ಮಾಡುವ ಯಾವನೇ ವ್ಯಕ್ತಿಯು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ, ಅಂಥ ವ್ಯಕ್ತಿಯ ಸಂಬಂಧದಲ್ಲಿ ಉದ್ಭವಿಸಬಹುದಾದ ಸಿವಿಲ್ ಅಥವಾ ಕ್ರಿಮಿನಲ್ ದಾಯಿತ್ವಗಳಿಗೆ ಬಾಧಕ ಉಂಟಾಗದಂತೆ, ಮಾಡಿದ ಪ್ರತಿಯೊಂದು ಅಪರಾಧಕ್ಕಾಗಿ 2000-00 ರೂ.ಗಳ ಜುಲ್ಮಾನೆಗೆ ಬದ್ಧನಾಗಿರತಕ್ಕುದು.

(ಬಿ) ಸಂಜ್ಞಾನವನ್ನು ತೆಗೆದುಕೊಳ್ಳುವ ಪ್ರಾಧಿಕಾರ :

ಸಹಕಾರಿ ಸಂಘಗಳ ನ್ಯಾಯಾಧೀಕರಣವು ಈ ಅಧಿನಿಯಮದ ಮೇರೆಗಿನ ಅಪರಾಧದ ಬಗ್ಗೆ ಸಂಜ್ಞಾನ ತೆಗೆದುಕೊಳ್ಳತಕ್ಕುದು.

39. **117ನೇ ಪ್ರಕರಣದ ತಿದ್ದುಪಡಿ :** 117ನೇ ಪ್ರಕರಣವನ್ನು ಬಿಟ್ಟುಬಿಡತಕ್ಕುದು.

40. **121ನೇ ಪ್ರಕರಣದ ತಿದ್ದುಪಡಿ :** 121ನೇ ಪ್ರಕರಣವನ್ನು ಬಿಟ್ಟುಬಿಡತಕ್ಕುದು.

41. **126 ಎ ಪ್ರಕರಣದ ತಿದ್ದುಪಡಿ (1 ಮತ್ತು 2) :** 126 ಎ (1 ಮತ್ತು 2) ಪ್ರಕರಣವನ್ನು ಬಿಟ್ಟುಬಿಡತಕ್ಕುದು.

42. **128ಎ ಪ್ರಕರಣದ ತಿದ್ದುಪಡಿ (1 ಮತ್ತು 2) :** 128ಎ (1 ಮತ್ತು 2 ಪ್ರಕರಣವನ್ನು ಬಿಟ್ಟುಬಿಡತಕ್ಕುದು

43. **129ನೇ ಪ್ರಕರಣದ ತಿದ್ದುಪಡಿ (1ರಿಂದ 4) :** 129ನೇ ಪ್ರಕರಣವನ್ನು (1ರಿಂದ 4) ಬಿಟ್ಟುಬಿಡತಕ್ಕುದು

44. **130ನೇ ಪ್ರಕರಣದ ತಿದ್ದುಪಡಿ :** 130ನೇ ಪ್ರಕರಣವನ್ನು ಬಿಟ್ಟುಬಿಡತಕ್ಕುದು.

45. **ಹೊಸ ಅಧ್ಯಾಯದ ಸೇರ್ಪಡೆ :** XVನೇ ಅಧ್ಯಾಯದ ತರುವಾಯ ಈ ಮುಂದಿನಂತೆ ಹೊಸ XVIನೇ ಅಧ್ಯಾಯವನ್ನು ಸೇರಿಸತಕ್ಕುದು ಮತ್ತು ಪ್ರಕರಣಗಳಿಗೆ ಈ ಮುಂದಿನಂತೆ ಸಂಖ್ಯೆ ನೀಡತಕ್ಕುದು.

ಉಪವಿಧಿಗಳು :

133. (1) ಅಧಿನಿಯಮವು ಉಪಬಂಧಿಸಿದ ನಿರ್ದಿಷ್ಟ ವಿಷಯಗಳನ್ನು ಹೊರತುಪಡಿಸಿ ಮತ್ತು ಉಪವಿಧಿಗಳ ನಿಯಂತ್ರಣಕ್ಕೊಳಪಡುವ, ಆದರೆ ಅವುಗಳನ್ನು ಉಲ್ಲಂಘಿಸಿದ ವಿಷಯಗಳನ್ನು ಹೊರತುಪಡಿಸಿ ಪ್ರತಿಯೊಂದು ಸಹಕಾರಿ ಸಂಘದ ಕಾರ್ಯನಿರ್ವಹಣೆಯನ್ನು ಅದರ ಉಪವಿಧಿಗಳ ಮೂಲಕ ನಿಯಂತ್ರಿಸತಕ್ಕುದು.

(2) ಸಹಕಾರಿ ಸಂಘದ ಉಪವಿಧಿಗಳು ಈ ಮುಂದಿನ ವಿಷಯಗಳ ಬಗ್ಗೆ ಉಪಬಂಧ ಕಲ್ಪಿಸಬಹುದು.

(ಎ) ಸಹಕಾರಿ ಸಂಘದ ಹೆಸರು, ವಿಳಾಸ ಮತ್ತು ಕಾರ್ಯಾಚರಣೆ, ಪ್ರದೇಶ

(ಬಿ) ಸದಸ್ಯರ ಸಾಮಾನ್ಯ ಅಗತ್ಯತೆಗಳಿಗಾಗಿ ತಿಳಿಸಲಾದ ಸಹಕಾರಿ ಸಂಘದ ಸ್ಪಷ್ಟ ಉದ್ದೇಶಗಳು ;

(ಸಿ) ಈ ಅಧಿನಿಯಮದಲ್ಲಿ ಹೇಳಿದ ಯಾವ ತತ್ವಗಳಿಗನುಸಾರವಾಗಿ ಸಹಕಾರ ಸಂಘವು ತನ್ನ ವ್ಯವಹಾರಗಳನ್ನು ನಡೆಸತಕ್ಕುದು.

(ಡಿ) ಅದರ ಸದಸ್ಯರಿಗೆ ಒದಗಿಸಬೇಕಾದ ಸೇವೆಗಳು

(ಇ) ಸದಸ್ಯತ್ವವನ್ನು ಪಡೆದುಕೊಳ್ಳುವುದಕ್ಕಾಗಿ ಅರ್ಹತೆ

(ಎಫ್) ಸದಸ್ಯತ್ವವನ್ನು ಪಡೆದುಕೊಳ್ಳುವುದಕ್ಕಾಗಿ ಕಾರ್ಯವಿಧಾನ

(ಜಿ) ಸದಸ್ಯನಾಗಿ ಮುಂದುವರಿಯುವುದಕ್ಕಾಗಿ ಷರತ್ತುಗಳು

(ಹೆಚ್) ಸಹಕಾರಿ ಸಂಘದ ಸೇವೆಯನ್ನು ಉಪಯೋಗಿಸಲು ಮುಂದುವರಿಯುವುದಕ್ಕಾಗಿ ಸದಸ್ಯನಾಗಲು ಇಚ್ಛಿಸುವವನು ಸದಸ್ಯತ್ವಕ್ಕಾಗಿ ಕೋರಿಕೆ ಸಲ್ಲಿಸಬೇಕಾದ ಕಾಲ ಪರಿಮಿತಿ.

(ಐ) ಸದಸ್ಯತ್ವವನ್ನು ಹಿಂತೆಗೆದುಕೊಳ್ಳುವ ಮತ್ತು ವರ್ಗಾವಣೆ ಮಾಡುವ ಕಾರ್ಯವಿಧಾನ

(ಜೆ) ಸದಸ್ಯತ್ವದಿಂದ ತೆಗೆದುಹಾಕುವುದು ಮತ್ತು ನಿಂತುಹೋಗುವುದಕ್ಕಾಗಿ ಕಾರ್ಯವಿಧಾನ.

(ಕೆ) ಸದಸ್ಯರ ಅಧಿಕಾರಗಳು

(ಎಲ್) ಪ್ರತಿಯೊಬ್ಬ ಸದಸ್ಯನು ವಾರ್ಷಿಕವಾಗಿ ಅಗತ್ಯಪಡಿಸಲಾದ ಕನಿಷ್ಠ ನಿರ್ವಹಣೆಯನ್ನು ನಿಗದಿಮಾಡುವುದು, ಇದಕ್ಕೆ ಪ್ರತಿಯಾಗಿ ಮತ ನೀಡುವ ಅಧಿಕಾರವೂ ಸೇರಿದಂತೆ ಸದಸ್ಯತ್ವ ಅಧಿಕಾರಗಳನ್ನು ಚಲಾಯಿಸಲು ಅರ್ಹನಾಗುವುದಕ್ಕಾಗಿ, ಸೇವೆಯನ್ನು ಉಪಯೋಗಿಸುವುದು, ಆರ್ಥಿಕ ವಿಷಯಗಳಿಗೆ ಬದ್ಧನಾಗಿರುವುದು ಮತ್ತು ಸಭೆಗಳಲ್ಲಿ ಭಾಗವಹಿಸುವುದು.

(ಎಂ) ಸದಸ್ಯನಿಂದ ಬಾಕಿ ಇರುವ ಯಾವುದೇ ಮೊಬಲಗಿನ ಸಂದಾಯದ ಸಂಬಂಧದಲ್ಲಿ ತಪ್ಪಿದುದರ ಪರಿಣಾಮಗಳು.

(ಎನ್) ಸಹಕಾರಿ ಸಂಘದ ಬಂಡವಾಳ, ಯಾವುದಾದರೂ ಇದ್ದರೆ, ಅದರ ಸ್ವರೂಪ ಮತ್ತು ಮೊಬಲಗು.

(ಓ) ಒಬ್ಬ ಸದಸ್ಯನು ವಂತಿಗೆ ನೀಡಬಹುದಾದ ಗರಿಷ್ಠ ಬಂಡವಾಳ

(ಪಿ) ಸಹಕಾರಿ ಸಂಘದಿಂದ ಕರಾರು ಮಾಡಿಕೊಂಡ ಸಾಲಗಳ ಬಗ್ಗೆ ಸದಸ್ಯನ ಭಾದ್ಯತೆಯ ಸ್ವರೂಪ ಮತ್ತು ಮಿತಿ.

(ಕ್ಯೂ) ಸಹಕಾರಿ ಸಂಘವು ಎತ್ತಬಹುದಾದ ನಿಧಿಗಳ ಮೂಲ ಮತ್ತು ರೀತಿ.

(ಆರ್) ನಿಧಿಗಳನ್ನು ಯಾವ ಉದ್ದೇಶಗಳಿಗಾಗಿ ವಿನಿಯೋಗಿಸಬೇಕೆಂಬುದು;

(ಎಸ್) ಠೇವಣಿಗಳನ್ನು, ಸಾಲಗಳನ್ನು, ಡಿಬೆಂಚರುಗಳನ್ನು ಮತ್ತು ಇತರ ನಿಧಿಗಳನ್ನು ಸಂಗ್ರಹಿಸಬಹುದಾದ ಮಿತಿ ಮತ್ತು ಷರತ್ತುಗಳು

(ಟಿ) ಇತರ ಹಣಕಾಸು ಸಂಸ್ಥೆಗಳಿಂದ ನಿವೇಶನ ನೆರವನ್ನು ಮತ್ತು ನೆರವನ್ನು ಕೇಳಬಹುದಾದ ಮತ್ತು ಪಡೆದುಕೊಳ್ಳಬಹುದಾದ ಷರತ್ತುಗಳು ಮತ್ತು ಉದ್ದೇಶಗಳು.

(ಯು) ಹೆಚ್ಚುವರಿಗಳ ವಿಲೇವಾರಿಯ ವಿಧಾನ.

(ವಿ) ವಿವಿಧ ನಿಧಿಗಳ, ಮೀಸಲು ನಿಧಿಯ ರಚನೆ ಮತ್ತು ಅವುಗಳ ಉದ್ದೇಶ.

(ಡಬ್ಲ್ಯೂ) ಸರ್ವಸದಸ್ಯರ ಸಭೆ ಹಾಗೂ ಇತರ ವಿಶೇಷ ಸಭೆಗಳನ್ನು ನಡೆಸುವ ವಿಧಾನ ಮತ್ತು ಅವುಗಳ ಗಣಪೂರ್ತಿ.

(ಎಕ್ಸ್) ಸರ್ವಸದಸ್ಯರ ಸಭೆಗಳ ನಡುವಿನ ಅಂತರ.

(ವೈ) ಸರ್ವಸದಸ್ಯರ ಸಭೆಯ ಪಾತ್ರ ಮತ್ತು ಸರ್ವಸದಸ್ಯರ ಸಭೆಯು ನಿರ್ವಹಿಸತಕ್ಕ ವಿಷಯಗಳು.

(ಝಡ್) ಉಪವಿಧಿಗಳನ್ನು ರಚಿಸುವ ಅಥವಾ ಮತ್ತು ತಿದ್ದುಪಡಿ ಮಾಡುವ ವಿಧಾನ.

(ಎಎ) ಚುನಾವಣೆಗಳನ್ನು ನಡೆಸುವ ಕಾರ್ಯವಿಧಾನ.

(ಬಿಬಿ) ಸಹಕಾರ ಸಂಘವು ಚುನಾವಣೆಗಳನ್ನು ನಡೆಸಲು ತಪ್ಪಿದ ಸಂದರ್ಭದಲ್ಲಿ ಚುನಾವಣೆಗಳನ್ನು ನಡೆಸುವ ಕಾರ್ಯವಿಧಾನ.

(ಸಿಸಿ) ನಿರ್ದೇಶಕ ಮಂಡಲಿಯ ಗಾತ್ರ ಮತ್ತು ರಚನೆ.

(ಡಿಡಿ) ನಿರ್ದೇಶಕನಾಗಲು ಅರ್ಹತೆ

(ಇಇ) ನಿರ್ದೇಶಕತ್ವವನ್ನು ಉಳಿಸಿಕೊಳ್ಳುವುದಕ್ಕಾಗಿ ಷರತ್ತುಗಳು

(ಎಫ್‌ಎಫ್) ನಿರ್ದೇಶಕ, ಅಧ್ಯಕ್ಷರ ಮತ್ತು ಪದಾಧಿಕಾರಿಗಳ ಪದಾವಧಿ.

(ಜಿಜಿ) ನಿರ್ದೇಶಕರನ್ನು ತೆಗೆದುಹಾಕುವುದಕ್ಕಾಗಿ ಮತ್ತು ಖಾಲಿ ಸ್ಥಾನಗಳನ್ನು ಭರ್ತಿ ಮಾಡುವುದಕ್ಕಾಗಿ ಕಾರ್ಯವಿಧಾನ.

(ಹೆಚ್‌ಹೆಚ್) ಮಂಡಲಿಯ ಸಭೆಯನ್ನು ನಡೆಸುವ ವಿಧಾನ ಮತ್ತು ಗಣಪೂರ್ತಿ

(ಐಐ) ಮಂಡಲಿಯ ಸಭೆಗಳ ನಡುವಿನ ಅಂತರ.

(ಜೆಜೆ) ಮಂಡಲಿಯ ಅಧಿಕಾರಿಗಳು ಮತ್ತು ಪ್ರಕಾರ್ಯಗಳು

(ಕೆಕೆ) ಅಧ್ಯಕ್ಷರೂ ಸೇರಿದಂತೆ, ಪದಾಧಿಕಾರಿಗಳ ಅಧಿಕಾರಗಳು ಮತ್ತು ಪ್ರಕಾರ್ಯಗಳು.

(ಎಲ್‌ಎಲ್) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಗಳು ಮತ್ತು ಪ್ರಕಾರ್ಯಗಳು

(ಎಂಎಂ) ಸದಸ್ಯರ ಹಿತಾಸಕ್ತಿಗೆ ವಿರುದ್ಧ ಕಾರ್ಯನಿರ್ವಹಿಸಿದ್ದುದಕ್ಕಾಗಿ ಮತ್ತು ಸದಸ್ಯರು ನಿರ್ದೇಶಕರು ಮತ್ತು ಸಿಬ್ಬಂದಿಯವರು ಕರ್ತವ್ಯಗಳನ್ನು ನೆರವೇರಿಸಿದ್ದುದಕ್ಕಾಗಿ ದಂಡನೆಗಳು.

(ಎನ್‌ಎನ್) ಲೆಕ್ಕಪರಿಶೋಧಕರ ನೇಮಕ ಮತ್ತು ಪಾತ್ರ ಮತ್ತು ಸಹಕಾರಿ ಸಂಘವು ಅದಕ್ಕಾಗಿ ಅವಶ್ಯಕ ವ್ಯವಸ್ಥೆ ಮಾಡಲು ತಪ್ಪಿದಲ್ಲಿ, ಲೆಕ್ಕ ಪರಿಶೋಧನೆ ನಡೆಸುವುದಕ್ಕಾಗಿ ಕಾರ್ಯ ವಿಧಾನ ಮತ್ತು ಲೆಕ್ಕಪರಿಶೋಧನೆಯನ್ನು ಪೂರೈಸಬೇಕಾದ ಕಾಲಮಿತಿ.

(ಓಓ) ಸಹಕಾರಿ ಸಂಘದ ಪರವಾಗಿ ದಸ್ತಾವೇಜುಗಳಿಗೆ ಸಹಿಮಾಡಲು ಮತ್ತು ದಾವೆಗಳನ್ನು ಮತ್ತು ಇತರ ಕಾನೂನು ವ್ಯವಹರಣೆಗಳನ್ನು ಹೂಡಲು ಮತ್ತು ಸಮರ್ಥಿಸಲು ಅಧಿಕಾರಿಗೆ ಅಥವಾ ಅಧಿಕಾರಿಗಳಿಗೆ ಅಧಿಕಾರ ನೀಡಿಕೆ.

(ಪಿಪಿ) ಸದಸ್ಯೇತರರೊಂದಿಗೆ ಸಹಕಾರಿ ಸಂಘವು ವ್ಯವಹರಿಸಬೇಕಾದ ನಿಬಂಧನೆಗಳು.

(ಕ್ಯೂಕ್ಯೂ) ಸಹಕಾರಿ ಸಂಘವು ಇತರ ಸಹಕಾರಿ ಸಂಘಗಳೊಂದಿಗೆ ಸೇರಿಕೊಳ್ಳಬಹುದಾದ ಬಗೆಗಿನ ನಿಬಂಧನೆಗಳು.

(ಆರ್‌ಆರ್) ಸಹಕಾರಿ ಸಂಘಗಳಲ್ಲದ ಇತರ ಸಂಘಗಳೊಳಗೆ ವ್ಯವಹರಿಸಬಹುದಾದ ಬಗ್ಗೆಗಿನ ನಿಬಂಧನೆಗಳು.

(ಎಸ್‌ಎಸ್) ಸಹಕಾರಿ ಸಂಘವು ಯಾವುದೇ ಸಹಕಾರಿ ಸಂಘಕ್ಕೆ ಅಥವಾ ಇತರ ಫೆಡರೇಷನ್ನಿಗೆ ವಹಿಸಿಕೊಡಬಹುದಾದ ಅಧಿಕಾರಗಳು ಯಾವುದಾದರೂ ಇದ್ದರೆ, ಅವು ಮತ್ತು ಯಾವ ಸಂದರ್ಭಗಳಲ್ಲಿ ಈ ಫೆಡರೇಷನ್ನುಗಳು ಮತ್ತು ಯಾವ ಸಂದರ್ಭಗಳಲ್ಲಿ ಈ ಅಧಿಕಾರಗಳನ್ನು ಚಲಾಯಿಸಬೇಕೆಂಬುದು.

(ಟಿಟಿ) ಸಮಾಪನವಾದರೆ, ಈ ನಿಧಿಗಳನ್ನು ವಿಲೇ ಮಾಡಬಹುದಾದ ವಿಧಾನ.

(ಯುಯು) ಸಹಕಾರಿ ಸಂಘದ ಲೆಕ್ಕ ವರ್ಷ.

(ವಿವಿ) ಸದಸ್ಯನ ಮರಣದ ಸಂದರ್ಭದಲ್ಲಿ ನಾಮನಿರ್ದೇಶಿತನ ಹೆಸರಿಗೆ ಷೇರುಗಳು ಮತ್ತು ಬಡ್ಡಿಯ ವರ್ಗಾವಣೆ

(ಡಬ್ಲ್ಯೂಡಬ್ಲ್ಯೂ) ಸಹಕಾರಿ ಸಂಘದ ಸಮಾಪನದ ವಿಧಾನ.

(ಎಕ್ಸ್‌ಎಕ್ಸ್) ಸದಸ್ಯೇತರರಿಗಾಗಿ ಸೇವೆಗಳು, ಯಾವುದಾದರೂ ಇದ್ದರೆ ಅವುಗಳ ನಿರ್ಬಂಧಗಳು.

134 **ಪೂರಕ ಸಂಘವನ್ನು ಅಭಿವೃದ್ಧಿಪಡಿಸುವುದು** : (1) ಯಾವುದೇ ಸಹಕಾರಿ ಸಂಘವು, ಸರ್ವಸದಸ್ಯರ ಸಭೆಯಲ್ಲಿ ಹಾಜರಿದ್ದ ಮತ್ತು ಮತನೀಡದ ಸದಸ್ಯರ ಬಹುಮತದಿಂದ ಅಂಗೀಕರಿಸಲಾದ ನಿರ್ಣಯದ ಮೂಲಕ, ಮೇಲೆ ಹೇಳಲಾದ ಉದ್ದೇಶಗಳ ಮುಂದುವರಿಕೆಗಾಗಿ ಒಂದು ಅಥವಾ ಹೆಚ್ಚು ಪೂರಕ ಸಂಘಗಳನ್ನು ಅಭಿವೃದ್ಧಿಪಡಿಸಬಹುದು ಮತ್ತು ಅಂಥ ಸಂಘ ಅಥವಾ ಸಂಘಗಳನ್ನು ಸರ್ವಸದಸ್ಯರ ಸಭೆಯಲ್ಲಿ ಒಪ್ಪಿಕೊಂಡಿರುವಂತೆ ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿನ ಮೂಲಕ ನೋಂದಾಯಿಸಬಹುದು.

(2) ಯಾವುದೇ ಅಂಥ ಪೂರಕ ಸಂಘದ ವಾರ್ಷಿಕ ವರದಿಗಳನ್ನು ಮತ್ತು ಲೆಕ್ಕಪತ್ರಗಳನ್ನು ಅಭಿವೃದ್ಧಿಪಡಿಸುತ್ತಿರುವ ಸಹಕಾರಿ ಸಂಘದ ಪ್ರತಿವರ್ಷದ ಸರ್ವಸದಸ್ಯರ ಸಭೆಯ ಮುಂದಿಡತಕ್ಕದ್ದು.

(3) (1)ನೇ ಉಪಪ್ರಕರಣದ ಮೇರೆಗೆ ರಚಿತವಾದ ಯಾವುದೇ ಪೂರಕ ಸಂಘವು ಸಹಕಾರಿ ಸಂಘದ ಸರ್ವಸದಸ್ಯರ ಸಭೆಯು ಅದರ ಅಸ್ತಿತ್ವವು ಅವಶ್ಯಕವೆಂದು ಭಾವಿಸುವಷ್ಟು ಕಾಲದವರೆಗೆ ಮಾತ್ರ ಅಸ್ತಿತ್ವದಲ್ಲಿರತಕ್ಕದ್ದು.

135. **ಸಹಕಾರಿ ಸಂಘಗಳ ಪಾಲುಗಾರಿಕೆ** :

ಯಾವುದೇ ಎರಡು ಅಥವಾ ಹೆಚ್ಚು ಸಹಕಾರಿ ಸಂಘಗಳು, ಪ್ರತಿಯೊಂದು ಸಹಕಾರಿ ಸಂಘದ ಸರ್ವಸದಸ್ಯರ ಸಭೆಯಲ್ಲಿ ಹಾಜರಿದ್ದ ಮತ್ತು ಮತನೀಡಿದ ಸದಸ್ಯರ ಬಹುಮತದಿಂದ ಅಂಗೀಕರಿಸಲಾದ ನಿರ್ಣಯದ ಮೂಲಕ, ಉಪವಿಧಿಗಳಡಿಯಲ್ಲಿ ಅನುಮತಿಸಬಹುದಾದ ಯಾವುದೇ ನಿರ್ದಿಷ್ಟ ವ್ಯವಹಾರಗಳನ್ನು ನಿರ್ವಹಿಸಲು, ಪರಸ್ಪರವಾಗಿ ಒಪ್ಪಿಕೊಳ್ಳಬಹುದಾದ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಪಾಲುಗಾರಿಕೆ ಕರಾರನ್ನು ಮಾಡಿಕೊಳ್ಳಬಹುದು.

ಅಂಥ ಪಾಲುದಾರಿಕೆಯ ಹೊಸ ಸಂಘದ ಸೃಜನೆಯನ್ನು ಅಗತ್ಯಪಡಿಸಿದಲ್ಲಿ ಭಾಗವಹಿಸುವ ಸಹಕಾರಿ ಸಂಘಗಳು ಅದರ ಸದಸ್ಯರಾಗಿರತಕ್ಕದ್ದು.

136 **ಸಹಕಾರಿ ಫೆಡರೇಷನ್ನುಗಳು : ಯೂನಿಯನ್ನುಗಳು** :

(1) ಪ್ರಾಥಮಿಕ ಮತ್ತು ಅಥವಾ ಸೆಕೆಂಡರಿ ಸಹಕಾರಿ ಸಂಘಗಳು ಸದಸ್ಯರಾಗಿರುವ ಸಂಘಗಳನ್ನು ಒಳಗೊಳ್ಳುವ ಫೆಡರಲ್ ಸಹಕಾರಿ ಸಂಘಗಳು: ಸಹಕಾರಿ ಯೂನಿಯನ್ನುಗಳನ್ನು ಸ್ಥಾಪಿಸಬಹುದು ಮತ್ತು ಅವು ಈ ಅಧಿನಿಯಮದ ಮೇರೆಗೆ ನೋಂದಣಿಗೆ ಅರ್ಹವಾಗಿರತಕ್ಕದ್ದು.

(2)ತಮ್ಮ ಘಟಕಗಳಿಗೆ ಸೇವೆ ಸಲ್ಲಿಸುವುದಕ್ಕಾಗಿ ಮತ್ತು ಅವುಗಳ ಉಪವಿಧಿಗಳಿಗನುಸಾರ, ಫೆಡರಲ್ ಸಹಕಾರಿ ಸಂಘಗಳು : ಯೂನಿಯನ್ನುಗಳು ಈ ಮುಂದಿನ ಪ್ರಕಾರ್ಯಗಳನ್ನು ನೆರವೇರಿಸಬಹುದು.

(ಎ) ಸಹಕಾರಿ ತತ್ವಗಳ ಪಾಲನೆಯನ್ನು ರಕ್ಷಿಸುವುದು.

(ಬಿ) ಸಹಕಾರಿ ಸಂಘಗಳನ್ನು ಅಭಿವೃದ್ಧಿಪಡಿಸುವುದು ಮತ್ತು ಸಂಘಟಿಸುವುದು ಮತ್ತು ಈ ಉದ್ದೇಶಕ್ಕಾಗಿ, ಮಾದರಿ ಉಪವಿಧಿಗಳನ್ನು ಮತ್ತು ವಿವಿಧ ವಿನಿಯಮಗಳನ್ನು ರೂಪಿಸುವುದಕ್ಕಾಗಿ ಮಾರ್ಗದರ್ಶನಗಳನ್ನು ಮತ್ತು ಸಹಕಾರಿ ಸಂಘಗಳ ಪರಿಶೀಲನೆಗಾಗಿ ಕಾರ್ಯನೀತಿಗಳನ್ನು ರೂಪಿಸುವುದು.

(ಸಿ) ಸಹಕಾರ ತರಬೇತಿ, ಶಿಕ್ಷಣ ಮತ್ತು ಮಾಹಿತಿ ಒದಗಿಸುವುದು ಮತ್ತು ಸಹಕಾರ ತತ್ವಗಳನ್ನು ಪ್ರಚಾರ ಮಾಡುವುದು.

(ಡಿ) ಸಂಶೋಧನೆ ಮತ್ತು ಮೌಲ್ಯಮಾಪನ ಕೈಕೊಳ್ಳುವುದು ಸದಸ್ಯ ಸಹಕಾರಿ ಸಂಘಗಳ ಭವಿಷತ್ ಅಭಿವೃದ್ಧಿಯೋಜನೆಗಳ ತಯಾರಿಕೆಯಲ್ಲಿ ನೆರವು ನೀಡುವುದು.

(ಇ) ಸದಸ್ಯ ಸಹಕಾರಿ ಸಂಘಗಳ ನಡುವೆ ಸೌಹಾರ್ದ ಸಂಬಂಧವನ್ನು ಏರ್ಪಡಿಸುವುದು.

(ಎಫ್) ತಮ್ಮಲ್ಲಿಯ ಹಾಗೂ ಸಹಕಾರಿ ಸಂಘಗಳ ನಡುವಿನ ಹಾಗೂ ಸದಸ್ಯರಲ್ಲಿಯ ವಿವಾದಗಳನ್ನು ಇತ್ಯರ್ಥಪಡಿಸುವಲ್ಲಿ ಸದಸ್ಯ ಸಹಕಾರಿ ಸಂಘಗಳಿಗೆ ಸಹಾಯ ಮಾಡುವುದು.

(ಜಿ) ಸದಸ್ಯ ಸಹಕಾರಿ ಸಂಘಗಳಿಗೆ ಹಿತಾಸಕ್ತಿಯನ್ನು ಪ್ರತಿನಿಧಿಸುವುದು ಮತ್ತು ಸಹಕಾರಿ ಸಂಘಗಳಿಗೆ ಅನುಕೂಲಕರವಾಗುವಂಥ ತತ್ವಗಳಿಗಾಗಿ ಮತ್ತು ಶಾಸನಗಳಿಗಾಗಿ ಚರ್ಚಿಸುವುದು.

(ಹೆಚ್) ಅದರ ಸದಸ್ಯರ ಪರವಾಗಿ ವ್ಯವಹಾರ ಸೇವೆಗಳನ್ನು ಕೈಕೊಳ್ಳುವುದು.

(ಐ) ಮಂಡಲಿಯ ಸಭೆಗಳಿಗೆ ಸದಸ್ಯ ಸಹಕಾರಿ ಸಂಘಗಳನ್ನು ಆಹ್ವಾನಿಸಿದ್ದರೆ, ಅವುಗಳು ಭಾಗವಹಿಸುವುದೂ ಸೇರಿದಂತೆ, ಸದಸ್ಯ ಸಂಘಗಳ ಸಹಕಾರ ಹಾಗೂ ಆಡಳಿತ ಸುಧಾರಣಾ ಸೇವೆಗಳನ್ನು ಒದಗಿಸುವುದು.

(ಜೆ) ಸದಸ್ಯ ಸಹಕಾರಿ ಸಂಘಗಳಲ್ಲಿ ಸಕಾಲಿಕವಾಗಿ ವಾರ್ಷಿಕ ಲೆಕ್ಕ ಪರಿಶೋಧನೆ ನಡೆಸುವುದನ್ನು ಖಚಿತಪಡಿಸಿಕೊಳ್ಳತಕ್ಕುದು.

(ಕೆ) ಸದಸ್ಯ ಸಹಕಾರಿ ಸಂಘಗಳಲ್ಲಿ ಸಕಾಲಿಕವಾಗಿ ಚುನಾವಣೆಗಳನ್ನು ನಡೆಸುವುದನ್ನು ಖಚಿತಪಡಿಸಿಕೊಳ್ಳುವುದು.

(ಎಲ್) ಸಾಮಾನ್ಯ ಸಭೆಗಳನ್ನು ನಿಯತವಾಗಿ ನಡೆಸುವಲ್ಲಿ ಸದಸ್ಯ ಸಹಕಾರಿ ಸಂಘಗಳಿಗೆ ಸಹಾಯ ಮಾಡುವುದು.

(ಎಂ) ಸದಸ್ಯ ಸಹಕಾರಿ ಸಂಘಗಳು ಪಾಲಿಸಬೇಕಾದ ನೀತಿ ಸಂಹಿತೆಯನ್ನು ರೂಪಿಸುವುದು.

(ಎನ್) ಸದಸ್ಯ ಸಹಕಾರಿ ಸಂಘಗಳಿಗಾಗಿ ಕಾರ್ಯಸಮರ್ಥವಾಗಿರುವಂಥ ವಿಧಿವಿಧಾನಗಳನ್ನು ರೂಪಿಸುವುದು.

(ಓ) ಕಾನೂನು ನೆರವು ಹಾಗೂ ಸಲಹೆಯನ್ನು ನೀಡುವುದು.

(ಪಿ) ಸದಸ್ಯ ಸಹಕಾರಿ ಸಂಘದ ಆದೇಶದಂತೆ ಇತರ ಸೇವೆಗಳನ್ನು ಒದಗಿಸುವುದು.

(3) (ಎ) ಫೆಡರಲ್ ಸಹಕಾರಿ ಸಂಘವು, ಸದಸ್ಯ ಸಹಕಾರಿ ಸಂಘವು ತನ್ನ ಸದಸ್ಯರ ಸರ್ವ ಸದಸ್ಯರ ಸಭೆಯನ್ನು ನಡೆಸಬೇಕೆಂದು ನಿರ್ದೇಶಕ ಮಂಡಲಿಯನ್ನು ಅಗತ್ಯಪಡಿಸಬಹುದು ಮತ್ತು ಸದಸ್ಯ ಸಹಕಾರಿ ಸಂಘದ ಶೇಕಡಾ 10ರಷ್ಟು ಸದಸ್ಯರು

ಹಾಗೆ ಸಭೆ ನಡೆಸುವಂತೆ ಫೆಡರೇಷನ್ನನ್ನು ಕೋರಿದ್ದಲ್ಲಿ ಹಾಗೆ ಮಾಡುವಂತೆ ನಿರ್ದೇಶಕ ಮಂಡಲಿಯನ್ನು ಕೋರತಕ್ಕುದು.

(ಬಿ) ಸದಸ್ಯ ಸಹಕಾರಿ ಸಂಘದ ನಿರ್ದೇಶಕ ಮಂಡಲಿಯು, ಕೋರಿಕೆಯನ್ನು ಸ್ವೀಕರಿಸಿದ 30 ದಿನಗಳೊಂದಿಗೆ ಸರ್ವ ಸದಸ್ಯರ ಸಭೆಯನ್ನು ನಡೆಸತಕ್ಕುದು, ಕೋರಿಕೆಯು, ವಿಷಯ ಸೂಚಿಯಲ್ಲಿ ಒಳಗೊಳ್ಳಬೇಕಾದ ವಿಷಯವನ್ನು ಒಳಗೊಂಡಿದ್ದು ಇವುಗಳನ್ನು ಸರ್ವಸದಸ್ಯರ ಸಭೆಯಲ್ಲಿ ವ್ಯವಹರಿಸಬೇಕು.

(ಸಿ) ಫೆಡರಲ್ ಸಹಕಾರಿ ಸಂಘದಿಂದ ಸಭೆ ನಡೆಸುವಂತೆ ಸಲ್ಲಿಸಿದ ಕೋರಿಕೆಯನ್ನು ಸ್ವೀಕರಿಸಿದ 30 ದಿನಗಳೊಂದಿಗೆ, ಸದಸ್ಯ ಸಹಕಾರಿ ಸಂಘವು ಸರ್ವಸದಸ್ಯರ ಸಭೆಯನ್ನು ನಡೆಸಲು ತಪ್ಪಿದಲ್ಲಿ, ಫೆಡರಲ್ ಸಹಕಾರಿ ಸಂಘದ ನಿರ್ದೇಶಕ ಮಂಡಲಿಯು ಸ್ವತಃ ಅವರು, ಕೋರಿಕೆಯಲ್ಲಿ ಸೇರಿಸಲಾಗಿರುವಂಥ ವಿಷಯಗಳ ಬಗ್ಗೆ ವ್ಯವಹರಿಸಲು ಅಂಥ ಸಭೆಯನ್ನು ಕರೆಯತಕ್ಕುದು.

4. (ಎ) ಫೆಡರಲ್ ಸಹಕಾರಿ ಸಂಘದ ಸರ್ವಸದಸ್ಯರ ಸಭೆಯು, ಸದಸ್ಯ ಸಹಕಾರಿ ಸಂಘದ ಪ್ರತಿನಿಧಿಗಳನ್ನು ಒಳಗೊಂಡಿರತಕ್ಕುದು.

(ಬಿ) ಸಹಕಾರಿ ಸಂಘ ಅಧ್ಯಕ್ಷರು, ಮುಂದಿನ ಹಂತದ ಸಹಕಾರಿ ಸಂಘದ ಪ್ರತಿನಿಧಿಯಾಗಿರತಕ್ಕುದು, ಪರಂತು ಅಧ್ಯಕ್ಷತೆ ವಹಿಸುವ ವ್ಯಕ್ತಿಯು, ಯಾವುದೇ ಕಾರಣಕ್ಕಾಗಿ ಪ್ರತಿನಿಧಿಸಲು ಸಾಧ್ಯವಾಗದಿದ್ದರೆ, ಮುಖ್ಯ ನಿರ್ವಾಹಕನನ್ನು ಅಥವಾ ಮಂಡಲಿಯ ಯಾವನೇ ಸದಸ್ಯನನ್ನು, ಪ್ರತಿನಿಧಿಯಾಗಿ ನಾಮನಿರ್ದೇಶಿಸಬಹುದು.

(ಸಿ) ಪ್ರತಿನಿಧಿಯು, ಸದಸ್ಯ ಸಹಕಾರಿ ಸಂಘದ ಪದದಲ್ಲಿ ಅವನು: ಅವಳು ಮುಂದುವರಿಯುವ ಅವಧಿಯವರೆಗೆ ಫೆಡರಲ್ ಸಹಕಾರಿ ಸಂಘದಲ್ಲಿ ತನ್ನ ಸಹಕಾರಿ ಸಂಘವನ್ನು ಪ್ರತಿನಿಧಿಸುವುದು ಮುಂದುವರಿಯತಕ್ಕುದು.

ಸಹಕಾರಿ ಯೂನಿಯನ್

(i) 23 (ಸಿ) ಪ್ರಕರಣದ ಮೇರೆಗೆ ರಚಿತವಾದ ಸಹಕಾರ ಶಿಕ್ಷಣ ನಿಧಿಯನ್ನು ರಚಿಸಬಹುದು ಮತ್ತು ನಿರ್ವಹಿಸಬಹುದು.

(ii) ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ಎಲ್ಲ ಬಗೆಯ ಸಹಕಾರಿ ಸಂಘಗಳ ಹಿತಾಸಕ್ತಿ ಮತ್ತು ಕಲ್ಯಾಣವನ್ನು ಪ್ರತಿನಿಧಿಸುವುದು.

(iii) ಹೊಸ ಬಗೆಯ ಸಹಕಾರಿ ಉದ್ಯಮಗಳನ್ನು ಉತ್ತೇಜಿಸುವುದು.

(iv) ಸಹಕಾರ ತತ್ವವನ್ನು ಅನ್ವಯಿಸುವ ಸಂಬಂಧದಲ್ಲಿ ಪ್ರಾಯೋಗಿಕ ಯೋಜನೆಗಳನ್ನು ಕೈಕೊಳ್ಳುವುದು.

(v) ಸಹಕಾರಿ ಸಂಘಗಳ ಪರವಾಗಿ ಮತ್ತು ಅವುಗಳ ನಡುವೆ ಸಂಪರ್ಕ ಕಲ್ಪಿಸುವುದು.

(vi) ಸಹಕಾರ ವಿಷಯದಲ್ಲಿ ಅಂಕಿ ಅಂಶಗಳ ಬ್ಯಾಂಕ್ ಆಗಿ ಸೇವೆ ಸಲ್ಲಿಸುವುದು.

137. ನಿಧಿಗಳ ಸಂಗ್ರಹಣೆ :

ಸಹಕಾರಿ ಸಂಘವು, ತನ್ನ ಸದಸ್ಯರಿಂದ, ಉಪವಿಧಿಗಳ ನಿರ್ದಿಷ್ಟಪಡಿಸಬಹುದಾದಂಥ ಮಿತಿಗಳು ಮತ್ತು ಷರತ್ತುಗಳ ಮೇರೆಗೆ ಈಕ್ವಿಟಿ ಬಂಡವಾಳ, ಠೇವಣಿಗಳನ್ನು, ಡಿಬೆಂಚರುಗಳನ್ನು, ಸಾಲಗಳನ್ನು, ಮತ್ತು ವಂತಿಗೆಗಳನ್ನು ಸಂಗ್ರಹಿಸಬಹುದು.

138. ಕೊರತೆಗಾಗಿ ಹೊಣೆ :

ಸಹಕಾರಿ ಸಂಘಕ್ಕೆ, ಯಾವುದೇ ವರ್ಷದ ಕಾರ್ಯನಿರ್ವಹಣೆಗೆ ಕೊರತೆಯುಂಟಾದಲ್ಲಿ ನಿರ್ದೇಶಕ ಮಂಡಲಿಯು, ಕೊರತೆ ಮೊಬಲಗನ್ನು ಮತ್ತು ಆ ಸಂಬಂಧದ ಕಾರಣಗಳನ್ನು ಸರ್ವಸದಸ್ಯರ ಸಭೆಯ ಮುಂದಿಡತಕ್ಕುದು.

139. ಮೀಸಲು ಮತ್ತು ಇತರ ನಿಧಿಗಳು :

(1) ಸಹಕಾರಿ ಸಂಘದ ಉದ್ದೇಶಗಳ ಈಡೇರಿಕೆಗಾಗಿ ಶಾಸನಪ್ರದತ್ತವಾದ ಮತ್ತು ಶಾಸನಪತ್ರದತ್ತವಲ್ಲದ ಮೀಸಲು ನಿಧಿಗಳನ್ನು ಸಹಕಾರಿ ಸಂಘವು ರಚಿಸಬಹುದು.

(2) ಮೀಸಲು ನಿಧಿಯನ್ನು ಮತ್ತು ಇತರ ನಿಧಿಗಳನ್ನು, ಅವುಗಳನ್ನು ಯಾವ ಉದ್ದೇಶಕ್ಕಾಗಿ ರಚಿಸಲಾಗಿದೆಯೋ ಆ ಉದ್ದೇಶಕ್ಕಾಗಿ ಅವಶ್ಯಕವಾದಾಗ ಉಪಯೋಗಿಸತಕ್ಕುದು ಆದರೆ ಅನ್ಯಥಾ ಸಹಕಾರಿ ಸಂಘದ ವ್ಯವಹಾರಗಳಿಗೂ ಉಪಯೋಗಿಸಬಹುದು.

140. ವಂತಿಗೆಯ ಮೇಲೆ ನಿರ್ಬಂಧ :

ಯಾವುದೇ ಸಹಕಾರಿ ಸಂಘವು, ಹಣದ ರೂಪದಲ್ಲಾಗಲಿ ಅಥವಾ ವಸ್ತು ರೂಪದಲ್ಲಾಗಲಿ, ಪ್ರತ್ಯಕ್ಷವಾಗಿಯಾಗಲಿ ಪರೋಕ್ಷವಾಗಿಯಾಗಲಿ, ರಾಜಕೀಯ ಪಕ್ಷದ ಅಥವಾ ಮತೀಯ ನಂಬಿಕೆಯ ಹಿತಾಸಕ್ತಿಯನ್ನು ಪೋಷಿಸುವ ಉದ್ದೇಶವನ್ನುಳ್ಳ ಸಂಸ್ಥೆಗೆ ವಂತಿಗೆ ನೀಡತಕ್ಕುದಲ್ಲ.

141. ಚುನಾವಣೆಗಳು :

(1) ಸಹಕಾರಿ ಸಂಘದ ನಿರ್ದೇಶಕರ ಮಂಡಲಿಗೆ ಚುನಾವಣೆಗಳನ್ನು ನಡೆಸುವುದು ಪದಧಾರಕ ಮಂಡಲಿಯ ಕರ್ತವ್ಯವಾಗಿರತಕ್ಕುದು.

(2) ಹೊರಹೋಗುವ ನಿರ್ದೇಶಕರ ಪದಾವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ, ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ಚುನಾವಣೆಗಳನ್ನು ನಡೆಸತಕ್ಕುದು.

(3) ನಿರ್ದೇಶಕರ ಪದಾವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ, ಮಂಡಲಿಯು ಅವಶ್ಯಕ ಕ್ರಮಗಳನ್ನು ಕೈಗೊಳ್ಳದಿದ್ದಲ್ಲಿ ಅಥವಾ ಮಂಡಲಿಯಲ್ಲಿ ನಿರ್ದೇಶಕರು ಉಳಿದಿರದಿದ್ದಲ್ಲಿ ಚುನಾವಣೆಯನ್ನು ನಡೆಸುವ ನಿರ್ದಿಷ್ಟ ಉದ್ದೇಶಕ್ಕಾಗಿ ತಾತ್ಕಾಲಿಕ ನಿರ್ದೇಶಕ ಮಂಡಲಿಯನ್ನು ನೇಮಕ ಮಾಡುವ ಉದ್ದೇಶಕ್ಕಾಗಿ ಸಹಕಾರಿ ಸಂಘದ ಒಟ್ಟು ಸದಸ್ಯರ ಶೇಕಡಾ 5 ರಷ್ಟು ಸದಸ್ಯರು ಜಂಟಿಯಾಗಿ ಸರ್ವಸದಸ್ಯರ ಸಭೆಯನ್ನು ಕರೆಯಬಹುದು.

(4) ಹಾಗೆ ನೇಮಿಸಲಾದ ತಾತ್ಕಾಲಿಕ ನಿರ್ದೇಶಕ ಮಂಡಲಿಯ ಪದಾವಧಿಯು ಮೂರು ತಿಂಗಳನ್ನು ಮೀರತಕ್ಕುದಲ್ಲ.

(5) ನಿರ್ದೇಶಕರ ಚುನಾವಣೆಯು, ಸರ್ವಸದಸ್ಯರ ಸಭೆಯಲ್ಲಿ ನಡೆಯತಕ್ಕುದು.

(6) ನಿರ್ದೇಶಕರು, ಅವರನ್ನು ಚುನಾಯಿಸಲಾದ ಅವಧಿಯವರೆಗೆ ಪದಧಾರಣ ಮಾಡತಕ್ಕುದು

ಮತ್ತು ಹೊಸದಾಗಿ ಚುನಾಯಿತರಾದ ಸದಸ್ಯರು ಈ ಅವಧಿಯ ಕೊನೆಯಲ್ಲಿ ಪದಧಾರಣ ಮಾಡತಕ್ಕುದು.

(7) ಉಪವಿಧಿಗಳಲ್ಲಿ ಪುನಾರಾಯ್ಕೆಗೆ ಅನುಮತಿಸಲಾಗಿದ್ದರೆ ನಿರ್ದೇಶಕರು, ಹಾಗೆ ಪುನರಾಯ್ಕೆಗೆ ಅರ್ಹರಾಗತಕ್ಕುದು.

(8) ಉಪವಿಧಿಗಳಿಗನುಸಾರವಾಗಿ ಯಾವುದೇ ಸದಸ್ಯ ಸಹಕಾರಿ ಸಂಘವು ಚುನಾವಣೆಗಳನ್ನು ನಡೆಸಲು ತಪ್ಪಿದರೆ, ರಿಜಿಸ್ಟ್ರಾರರಿಗೆ ತಿಳಿಸುವುದು ಫೆಡರಲ್ ಸಹಕಾರಿ ಸಂಘದ ಕರ್ತವ್ಯವಾಗಿರತಕ್ಕುದು.

(9) ನಾಮನಿರ್ದೇಶಕರ ಸಂಖ್ಯೆಯು, ನಿರ್ದೇಶಕರುಗಳ ಸಂಖ್ಯೆಗಿಂತ ಹೆಚ್ಚಾಗಿದ್ದಲ್ಲಿ ನಿರ್ದೇಶಕರ ಚುನಾವಣೆಯು ಗುಪ್ತಮತದಾನದ ಮೂಲಕ ನಡೆಯತಕ್ಕುದು.

(10) ನಿರ್ದೇಶಕ ಮಂಡಲಿಯಲ್ಲಿ ರಿಕ್ತತೆ ಉಂಟಾಗಿದ್ದಲ್ಲಿ ಮತ್ತು ನಿರ್ದೇಶಕರ ಗಣಪೂರ್ತಿ ಇದ್ದಲ್ಲಿ, ಉಳಿದ ನಿರ್ದೇಶಕರು ಮಂಡಲಿಯ ಎಲ್ಲ ಅಧಿಕಾರಗಳನ್ನು

ಚಲಾಯಿಸಬಹುದು ಅಥವಾ ಉಳಿದಿರುವ ಅವಧಿಯು 6 ತಿಂಗಳಿಗಿಂತ ಹೆಚ್ಚಿಗಿದ್ದರೆ, ಸಹ ಆಯ್ಕೆ ಮೂಲಕ, ಅರ್ಹ ವ್ಯಕ್ತಿಗಳಿಂದ ಮಂಡಲಿಯ ಉಳಿದ ಅವಧಿಗಾಗಿ ರಿಕ್ತಸ್ಥಾನವನ್ನು ಭರ್ತಿ ಮಾಡಬಹುದು.

(11) ನಿರ್ದೇಶಕರ ಮಂಡಲಿಯಲ್ಲಿ ರಿಕ್ತತೆ ಉಂಟಾಗಿದ್ದಲ್ಲಿ ಮತ್ತು ನಿರ್ದೇಶಕರ ಗಣಪೂರ್ತಿ ಇರದಿದ್ದಲ್ಲಿ, ಉಳಿದ ನಿರ್ದೇಶಕರು, ಉಳಿದ ಅವಧಿಗಾಗಿ ಯಾವುದೇ ರಿಕ್ತ ಸ್ಥಾನವನ್ನು ಭರ್ತಿ ಮಾಡಲು ಸದಸ್ಯರನ್ನು ಚುನಾಯಿಸುವುದಕ್ಕಾಗಿ ಸರ್ವಸದಸ್ಯರ ಸಭೆಯನ್ನು ಕರೆಯತಕ್ಕುದು.

(12)ನಿರ್ದೇಶಕರ ಮಂಡಳಿಗೆ ಚುನಾವಣೆಗಳನ್ನು ನಡೆಸಬೇಕಾಗಿದ್ದಾಗ, ಚುನಾವಣೆಗಳನ್ನು ನಡೆಸಲು ಸಹಕಾರಿ ಸಂಘವು ತಪ್ಪಿದಲ್ಲಿ, ಮತ್ತು ಫೆಡರಲ್ ಸಹಕಾರಿ ಸಂಘವು: ಯೂನಿಯನ್ ಚುನಾವಣಾ ಪ್ರಕ್ರಿಯೆಯನ್ನು ಪ್ರಾರಂಭಿಸಿರದಿದ್ದರೆ ರಿಜಿಸ್ಟ್ರಾರರು, ಚುನಾವಣೆಯು ನಡೆಯಬೇಕಾಗಿದ್ದ ದಿನಾಂಕದಿಂದ 90 ದಿನಗಳು ಮುಗಿದ ತರುವಾಯ ಚುನಾವಣೆಗಳು ನಡೆಯುವಂತೆ ಮಾಡತಕ್ಕುದು.

ಚುನಾವಣೆಗಳನ್ನು ನಡೆಸುವ ವೆಚ್ಚಗಳನ್ನು ಸಹಕಾರಿ ಸಂಘವು ವಹಿಸತಕ್ಕುದು.

142 ಸಿಬ್ಬಂದಿ :

(1) ಮುಖ್ಯ ನಿರ್ವಾಹಕರೂ ಸೇರಿದಂತೆ ಸಹಕಾರಿ ಸಂಘದ ಎಲ್ಲ ಸಿಬ್ಬಂದಿಯನ್ನು, ಮಂಡಲಿಯು ರಚಿಸಿದ ಮತ್ತು ಸರ್ವಸದಸ್ಯರ ಸಭೆಯು ಅನುಮೋದಿಸಿದಂಥ ಸಿಬ್ಬಂದಿ ನೀತಿ ಮತ್ತು ಷರತ್ತುಗಳಿಗನುಸಾರವಾಗಿ, ನೌಕರ ಭರ್ತಿ ಮಾಡತಕ್ಕುದು ನೇಮಕಾತಿ ಮಾಡತಕ್ಕುದು, ತೆಗೆದುಹಾಕತಕ್ಕುದು ಮತ್ತು ಮಾರ್ಗದರ್ಶನ ಮಾಡತಕ್ಕುದು.

(2) ಮುಖ್ಯ ನಿರ್ವಾಹಕರು, ಉಪವಿಧಿಗಳಲ್ಲಿ ಮತ್ತು ಕಾರ್ಯ ನೀತಿಗಳಲ್ಲಿ ನಿರ್ದಿಷ್ಟಪಡಿಸಿದಂಥ ಪ್ರಕಾರ್ಯಗಳನ್ನು ನೆರವೇರಿಸತಕ್ಕುದು ಮತ್ತು

(ಎ) ಸಹಕಾರಿ ಸಂಘದ ದೈನಂದಿನ ವ್ಯವಹಾರದ ಮೇಲೆ ಸಾಮಾನ್ಯ ನಿಯಂತ್ರಣ ಹೊಂದಿರತಕ್ಕುದು.

(ಬಿ) ಸಹಕಾರಿ ಸಂಘದ ಪರವಾಗಿ ದಾವೆ ಹೂಡುವುದಕ್ಕೆ ಮತ್ತು ದಾವೆಗೆ ಗುರಿಯಾಗುವ ವ್ಯಕ್ತಿಯಾಗಿರತಕ್ಕುದು.

(ಸಿ) ಸಹಕಾರಿ ಸಂಘದ ಪರವಾಗಿ, ಚೆಕ್ಕುಗಳು ಮತ್ತು ಇತರ ವರ್ಗಾವಣೆಯ ಲಿಖಿತಗಳಿಗೆ ಹಿಂಬರಹ ಬರೆಯಲು, ಸಹಿ ಮಾಡಲು ವ್ಯವಹರಿಸಲು ಮತ್ತು ಮಂಡಲಿಯು ಇಚ್ಛಿಸಬಹುದಾದಂಥ ಇತರ ವ್ಯಕ್ತಿಯೊಡನೆ, ಸಹಕಾರಿ ಸಂಘದ ಬ್ಯಾಂಕ್ ಖಾತೆಯನ್ನು ನಿರ್ವಹಿಸಲು ಅಧಿಕಾರ ಹೊಂದಿರತಕ್ಕುದು.

(ಡಿ) ಸಿಬ್ಬಂದಿ ನೌಕರಿ ಭರ್ತಿ, ಶಿಸ್ತು ನಿರ್ವಹಣೆ ಮತ್ತು ಅಭಿವೃದ್ಧಿಗಾಗಿ ಹೊಣೆಗಾರರಾಗಿರತಕ್ಕುದು.

(ಇ) ಸಹಕಾರಿ ಸಂಘದ ಪರವಾಗಿ, ಕರಾರು ಅಥವಾ ಒಪ್ಪಂದ ಮಾಡಿಕೊಳ್ಳುವ ವ್ಯಕ್ತಿಯಾಗಿರತಕ್ಕುದು.

(ಎಫ್) ಸಹಕಾರಿ ಸಂಘದ ದಾಖಲೆಗಳನ್ನು ಮತ್ತು ಲೆಕ್ಕಪತ್ರಗಳನ್ನು ಸರಿಯಾಗಿ ನಿರ್ವಹಿಸಲು ವ್ಯವಸ್ಥೆ ಮಾಡತಕ್ಕುದು.

(ಜಿ) ಹಣಕಾಸು ವರ್ಷವು ಮುಕ್ತಾಯವಾದ ದಿನಾಂಕದಿಂದ 30 ದಿನಗಳೊಳಗೆ, ಮಂಡಲಿಯ ಅನುಮೋದನೆಗಾಗಿ ಕರಡು ವಾರ್ಷಿಕ ವರದಿ ಹಾಗೂ ಹಣಕಾಸು ವಿವರಣ ಪಟ್ಟಿಯನ್ನು ಸಲ್ಲಿಸತಕ್ಕುದು.

(ಹೆಚ್) ಅಧ್ಯಕ್ಷತೆ ವಹಿಸಿರುವ ವ್ಯಕ್ತಿಯೊಡನೆ ಸಮಾಲೋಚಿಸಿ, ಉಪವಿಧಿಗಳಿಗನುಸಾರವಾಗಿ ಮಂಡಲಿಯ ಹಾಗೂ ಸರ್ವಸದಸ್ಯರ ಸಭೆಗಳನ್ನು ನಡೆಸತಕ್ಕುದು ಮತ್ತು ಅವುಗಳ ನಡಾವಳಿಗಳನ್ನು ದಾಖಲಿಸತಕ್ಕುದು.

(ಐ) ಕಾರ್ಯನೀತಿಗಳನ್ನು ಹಾಗೂ ಯೋಜನೆಗಳನ್ನು ರೂಪಿಸುವಲ್ಲಿ ಮಂಡಲಿಗೆ ನೆರವು ನೀಡತಕ್ಕುದು.

(ಜೆ) ಮಂಡಲಿಗೆ ಹೊಣೆಗಾರನಾಗಿರತಕ್ಕುದು.

(ಕೆ) ಸಹಕಾರಿ ಸಂಘದ ನಿರ್ವಹಣೆಯ ಮೇಲ್ವಿಚಾರಣೆಗಾಗಿ ಅವಶ್ಯವಾದ ಮಾಹಿತಿಯನ್ನು ಮಂಡಲಿಗೆ ಒದಗಿಸತಕ್ಕುದು.

(ಎಲ್) ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದಂತೆ ಅಥವಾ ಮಂಡಲಿಯ ಅಥವಾ ಸರ್ವಸದಸ್ಯರ ಸಭೆಯ ನಿರ್ಣಯದ ಮೂಲಕ ತೀರ್ಮಾನಿಸಲಾದಂತೆ ಯಾವುದೇ ಇತರ ಪ್ರಕಾರ್ಯವನ್ನು ನೆರವೇರಿಸತಕ್ಕುದು.

(3) ಸರ್ಕಾರದ ಅಧಿಕಾರಿಯು, ಅವನು/ ಅವಳು, ಸರ್ಕಾರದ ಸೇವೆಯಲ್ಲಿರುವಾಗ ಆಗಲಿ ಅಥವಾ ಆ ತರುವಾಯ ಮೂರು ವರ್ಷಗಳ ಅವಧಿಯವರೆಗಾಗಲಿ, ಯಾವುದೇ ಸಹಕಾರಿ ಸಂಘದಲ್ಲಿ ಯಾವುದೇ ಸಾಮರ್ಥ್ಯದಲ್ಲಿ ಸೇವೆ ಸಲ್ಲಿಸತಕ್ಕುದಲ್ಲ.

143. ನಿರ್ವಹಿಸಬೇಕಾದ ಲೆಕ್ಕಪತ್ರಗಳು ಮತ್ತು ದಾಖಲೆಗಳು :

(1) ಪ್ರತಿಯೊಂದು ಸಹಕಾರಿ ಸಂಘವು, ತನ್ನ ನೋಂದಾಯಿತ ಕಚೇರಿಯಲ್ಲಿ ಕೆಳಕಂಡ ಲೆಕ್ಕಪತ್ರಗಳನ್ನು ಮತ್ತು ದಾಖಲೆಗಳನ್ನು ಇಟ್ಟುಕೊಂಡು ಬರತಕ್ಕುದು.

(ಎ) ಕಾಲಕಾಲಕ್ಕೆ ಮಾಡಲಾದ ತಿದ್ದುಪಡಿಗಳ ಸಹಿತವಾಗಿ ರಾಜ್ಯ ಸಹಕಾರಿ ಸಂಘಗಳ ಅಧಿನಿಯಮದ ಒಂದು ಪ್ರತಿ.

(ಬಿ) ಸಭಾ ನಡಾವಳಿ ಪುಸ್ತಕ

(ಸಿ) ನೋಂದಣಿ ಪ್ರಮಾಣಪತ್ರ ಮತ್ತು ನೋಂದಾಯಿತ ಉಪವಿಧಿಗಳ ಪ್ರತಿ ಮತ್ತು ದಿನಾಂಕ ಸಹಿತವಾಗಿ ಕಾಲಕಾಲಕ್ಕೆ ನೋಂದಾಯಿತವಾದ ಅವುಗಳ ತಿದ್ದುಪಡಿಗಳ ಪ್ರತಿ.

(ಡಿ) ಅದು ಸದಸ್ಯ ಸಂಘವಾಗಿರುವ ಫೆಡರಲ್ ಸಹಕಾರಿ ಸಂಘದ ಮತ್ತು ಅದರ ಸದಸ್ಯ ಸಹಕಾರಿ ಸಂಘಗಳ ಅಧಿಕೃತ ಉಪವಿಧಿಗಳ ಪ್ರತಿ.

(ಇ) ಸಹಕಾರಿ ಸಂಘವು ಸ್ವೀಕರಿಸಿದ ಮತ್ತು ವೆಚ್ಚಮಾಡಿದ ಎಲ್ಲ ಮೊಬಲಗಿನ ಲೆಕ್ಕ ಮತ್ತು ಅವುಗಳ ಅನುಕ್ರಮ ಉದ್ದೇಶಗಳು.

(ಎಫ್) ಸಹಕಾರಿ ಸಂಘವು ಮಾಡಿದ ಸರಕುಗಳ ಎಲ್ಲ ಖರೀದಿಗಳು ಮತ್ತು ಮಾರಾಟಗಳ ಲೆಕ್ಕ.

(ಜಿ) ಸಹಕಾರಿ ಸಂಘದ ಸ್ವತ್ತುಗಳ ಮತ್ತು ಭಾದ್ಯತೆಗಳ ಲೆಕ್ಕ.

(ಹೆಚ್) ಒಟ್ಟು ಸದಸ್ಯತ್ವದ ಸಂಖ್ಯೆ ಮತ್ತು ಪ್ರತಿಯೊಬ್ಬ ಸದಸ್ಯರಿಗೆ ದೊರೆಯುವ ವಿವಿಧ ಸೇವೆಗಳನ್ನು ತೋರಿಸುವ ರಿಜಿಸ್ಟರು.

(ಐ) ಆರ್ಥಿಕ ವರ್ಷದ ಮುಕ್ತಾಯದ 30 ದಿನಗಳೊಳಗೆ ಚಾಲ್ತಿ ವರ್ಷಕ್ಕಾಗಿ ಮತನೀಡುವ ಅಧಿಕಾರವಿರುವ ಸದಸ್ಯರ ತಹಲ್ವರೆಗಿನ ಪಟ್ಟಿ.

(ಜೆ) ಮಂಡಲಿಯ ಕಾರ್ಯನೀತಿಗಳ ಪ್ರತಿಗಳು

(ಕೆ) ವಾರ್ಷಿಕ ವರದಿ ಹಾಗೂ ಲೆಕ್ಕಪರಿಶೋಧನಾ ವರದಿ.

(ಎಲ್) ಪರಂತು, ಸಹಕಾರಿ ಸಂಘವು ಶಾಖಾ ಕಚೇರಿಗಳನ್ನು ಹೊಂದಿರುವಲ್ಲಿ ಶಾಖೆಗೆ ಸಂಬಂಧಿಸಿದ ಲೆಕ್ಕಪತ್ರಗಳು ಮತ್ತು ದಾಖಲೆಗಳನ್ನು ಯಾವುದೇ ಅವಧಿಗಾಗಿ

ಆ ಅವಧಿಯು ಮುಕ್ತಾಯವಾದ 25 ದಿನಗಳೊಳಗೆ ನೋಂದಾಯಿತ ಕಚೇರಿಯಲ್ಲಿ ಲಭ್ಯವಿರುವಂತೆ ಮಾಡತಕ್ಕುದು.

(2) ಅಧಿನಿಯಮ, ಉಪವಿಧಿಗಳು ಸಭಾ ನಡವಳಿ ಪುಸ್ತಕ ಮತದಾರರ ಪಟ್ಟಿ ಮತ್ತು ಸದಸ್ಯರಿಗೆ ಸಂಬಂಧಪಡುವಂಥ ಲೆಕ್ಕಪತ್ರಗಳನ್ನು ಸಹಕಾರಿ ಸಂಘವು ನಿರ್ಧರಿಸಬಹುದಾದ ಶುಲ್ಕ ಸಂದಾಯಮಾಡಿದ ಮೇಲೆ ವ್ಯವಹಾರದ ವೇಳೆಯಲ್ಲಿ ಯಾವನೇ ಸದಸ್ಯನಿಗೆ ಲಭ್ಯವಿರುವಂತೆ ಮಾಡತಕ್ಕುದು.

(3) ಆಧಾರ ದಾಖಲೆಗಳೂ ಮತ್ತು ವೋಚರುಗಳ ಸಹಿತವಾಗಿ ಪ್ರತಿಯೊಂದು ಸಹಕಾರಿ ಸಂಘದ ಲೆಕ್ಕಪುಸ್ತಕಗಳನ್ನು, ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿಗೊಳಪಟ್ಟು ಉಪವಿಧಿಗಳಲ್ಲಿ ಉಪಬಂಧಿಸಬಹುದಾದಂಥ ಅವಧಿಗಾಗಿ ಸಂರಕ್ಷಿಸಿ ಇಡತಕ್ಕುದ್ದು.

(ಪ್ರಕರಣ 35)

144. ವಿವರಪಟ್ಟಿಗಳನ್ನು ಫೈಲು ಮಾಡುವುದು :

ಪ್ರತಿವರ್ಷ, ಆರ್ಥಿಕ ವರ್ಷದ ಮುಕ್ತಾಯದ 5 ತಿಂಗಳೊಳಗೆ ಪ್ರತಿಯೊಂದು ಸಹಕಾರಿ ಸಂಘವು ಈ ಮುಂದಿನ ಮಾಹಿತಿಯನ್ನು ಸಹಕಾರಿ ಸಂಘಗಳ ರಿಜಿಸ್ಟ್ರಾರರ ಕಚೇರಿಯಲ್ಲಿ ಫೈಲು ಮಾಡತಕ್ಕುದು.

(ಎ) ಚಟುವಟಿಕೆಗಳ ವಾರ್ಷಿಕ ವರದಿ.

(ಬಿ) ಪರಿಶೋಧಿತವಾದ ಲೆಕ್ಕಗಳ ವಿವರಣ ಪಟ್ಟಿ.

(ಸಿ) ಸರ್ವಸದಸ್ಯರ ಸಭೆಯು ಅನುಮೋದಿಸಿದಂತೆ ಹೆಚ್ಚುವರಿ ವಿಲೇವಾರಿಗಾಗಿ ಯೋಜನೆ.

(ಡಿ) ನಿರ್ದೇಶಕರ ಹೆಸರುಗಳ ಮತ್ತು ಅವರ ಪದಾವಧಿಯ ಪಟ್ಟಿ

(ಇ) ಸಹಕಾರಿ ಸಂಘದ ಉಪವಿಧಿಗಳ ತಿದ್ದುಪಡಿಗಳ ಪಟ್ಟಿ

(ಎಫ್) ಸರ್ವಸದಸ್ಯರ ಸಭೆಯನ್ನು ನಡೆಸುವ ದಿನಾಂಕ ಮತ್ತು ನಡೆಸಬೇಕಾದ ಚುನಾವಣೆಗಳನ್ನು ನಡೆಸುವುದಕ್ಕೆ ಸಂಬಂಧಿಸಿದಂತೆ ಘೋಷಣೆ.

ಉದ್ದೇಶಗಳ ಮತ್ತು ಕಾರಣಗಳ ಹೇಳಿಕೆ

ಭಾರತದ ಯೋಜನಾ ಆಯೋಗವು ಸಿದ್ಧಪಡಿಸಿದ (ಮೇ 1991) ಮಾದರಿ ಸಹಕಾರಿ ಸಂಘಗಳ ಅಧಿನಿಯಮವನ್ನು ಜಾರಿಗೊಳಿಸಲು 1959ರ ಕರ್ನಾಟಕ ಸಹಕಾರಿ ಸಂಘಗಳ ಅಧಿನಿಯಮವನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ. ಆದ್ದರಿಂದ ಈ ವಿಧೇಯಕ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ

ವಿಧಾನಸಭಾ ಸದಸ್ಯರು.

ಬಾಬುಗೌಡ ಪಾಟೀಲ್

ವಿಧಾನಸಭಾ ಸದಸ್ಯರು

ಎನ್.ಹೆಚ್. ಮುತ್ತಲಗೇರಿ

ಕಾರ್ಯದರ್ಶಿ

BLANK PAGE

ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಸೋಮವಾರ ೨೮ನೇ ಮಾರ್ಚ್ ೧೯೯೪, ಚೈತ್ರ ೧೪, ಶಕ ೧೯೧೫

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

೧೧.೧೫ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : (ಶ್ರೀ ವಿ. ಎಸ್. ಕೌಜಲಗಿ)ರವರು

ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು.

ನಿಲುವಳಿ ಸೂಚನೆ

ಗ್ರಾಮ ಪಂಚಾಯಿತಿ ಚುನಾವಣೆಗಳಲ್ಲಿ ಸರ್ಕಾರದ ಹಸ್ತಕ್ಷೇಪವಾಗಿರುವ ಬಗ್ಗೆ

ಶ್ರೀ ಪಿ.ಜಿ.ಆರ್. ಸಿಂಧ್ಯಾ (ವಿರೋಧ ಪಕ್ಷದ ಉಪ ನಾಯಕರು) : ಮಾನ್ಯ ಅಧ್ಯಕ್ಷರೇ, ಈ ಅಧಿವೇಶನ ಪ್ರಾರಂಭವಾದ ಮೊದಲನೇ ದಿವಸದಿಂದಲೂ ಸಹ ನಾವು ಸರ್ಕಾರದ ಮುಂದೆ ಬೇಡಿಕೆಯನ್ನು ಇಟ್ಟು, ಈ ಮಂಡಲ್ ಪಂಚಾಯತಿ ಮತ್ತು ಗ್ರಾಮಪಂಚಾಯತಿ ಚುನಾವಣೆಗಳಲ್ಲಿ ನಡೆದಿರತಕ್ಕಂಥ....

ಅಧ್ಯಕ್ಷರ : ಪ್ರಶ್ನೋತ್ತರ ವೇಳೆ ಮುಗಿಯಲಿ......

+ ಶ್ರೀ ಪಿ.ಜಿ.ಆರ್. ಸಿಂಧ್ಯಾ : ಪ್ರಶ್ನೋತ್ತರ ಕಾಲ ಆದ ಮೇಲೆ ತಾವು ನಡೆಸುವುದು ಇದ್ದೇ ಇದೆ ಸ್ವಾಮಿ. ನಮಗೆಲ್ಲಾ ನೀವು ಸಸ್ಪೆಂಡ್ ಮಾಡಿಸಿದ್ದೀರಿ. ಸರ್ಕಾರದವರು ನಮ್ಮನ್ನು ಸಸ್ಪೆಂಡ್ ಮಾಡಿಸಿದ್ದಾರೆ. ವಿರೋಧಪಕ್ಷದ ನಾಯಕರನ್ನು ಸಸ್ಪೆಂಡ್ ಮಾಡಿದ್ದೀರಿ. ಅಂತಹ ಸಂದರ್ಭದಲ್ಲಿ ನಾವು ಸದನದಲ್ಲಿ ಕುಳಿತುಕೊಂಡು ಪ್ರಶ್ನೆಗಳನ್ನು ಕೇಳುವುದು, ಸರ್ಕಾರದವರು ಉತ್ತರಗಳನ್ನು ಕೊಡತಕ್ಕಂಥಾದ್ದು ಇದ್ದೇ ಇದೆ. ನಿಮಗೆ ಒಂದು ಉದಾಹರಣೆ ಹೇಳುತ್ತೇನೆ. ಧಾರವಾಡ ಜಿಲ್ಲೆ ನರಗುಂದ ತಾಲ್ಲೂಕಿನಲ್ಲಿ ಮಳೆ ಬಿದ್ದು ಸಾವಿರಾರು ಮನೆಗಳು ಮುರಿದು ಬಿದ್ದಿವೆ. ಅಲ್ಲಿ ಜನ ವಾಸ ಮಾಡಲಿಕ್ಕೆ ಅವಕಾಶ ಇಲ್ಲ, ಜಂಕ್‌ಶೀಟ್‌ನ ಮನೆಗಳಲ್ಲಿ ದನಕರುಗಳಂತೆ ಅವರು ಅಲ್ಲಿ ವಾಸ ಮಾಡುತ್ತಿದ್ದಾರೆ, ಎರಡು ವರ್ಷಗಳ ಹಿಂದೆ 500 ರೂಪಾಯಿಗಳ ಪರಿಹಾರ ಕೊಟ್ಟಿದ್ದರೆ, ಮತ್ತೆ ಅವರಿಗೆ ಒಂದು ಪೈಸೆ ದುಡ್ಡು ಸಹ ಕೊಟ್ಟಿಲ್ಲ. 21ನೇ ತಾರೀಖಿನಿಂದ ಸಾವಿರಾರು ಜನ ರೈತರುಗಳು ಧರಣಿ ಮಾಡುತ್ತಿದ್ದಾರೆ. ಕೊನೆಯಪಕ್ಷ ಕರ್ಟೆಸಿಗೋಸ್ಕರ ಡೆಪ್ಯುಟಿ ಕಮೀಷನರ್ ಹೋಗಿ ವಿಜಿಟ್ ಮಾಡತಕ್ಕಂಥಾದ್ದು ಅಥವಾ ಜಿಲ್ಲಾ ಮಂತ್ರಿಗಳು ಹೋಗಿ ಸೌಜನ್ಯಕ್ಕೋಸ್ಕರ ನೋಡತಕ್ಕಂಥಾದ್ದು ಆಗಿಲ್ಲ. ಪ್ರಶ್ನೋತ್ತರ ಮುಗಿಯಲಿ ಅಂತ ತಾವು ಹೇಳುತ್ತೀರಿ; ತಾವು ಈ ಸಭೆಗೆ ಉನ್ನತ ಸ್ಥಾನದಲ್ಲಿರತಕ್ಕಂಥವರು. ತಮ್ಮ ಬಗ್ಗೆ ತಮಗೆ ಗೌರವ ಇದೆ. ಆದರೆ ಸರ್ಕಾರದವರನ್ನು ನಾವು ಸ್ಪಷ್ಟವಾಗಿ ಕೇಳುತ್ತಿದ್ದೇವೆ. ಗ್ರಾಮಪಂಚಾಯತಿ, ಚುನಾವಣೆಗಳಲ್ಲಿ ನಡೆದಿರತಕ್ಕಂಥಾ ಅನ್ಯಾಯ ಏನು ಇದೆ. ಮತ್ತು ಸರ್ಕಾರದ ಹಸ್ತಕ್ಷೇಪ ಏನು ಇದೆ ಇದರ ಬಗ್ಗೆ ಮತ್ತು ಗೋಲಿಬಾರ್ ಆಗಿ ಏನು ಅಮಾಯಕರು ಸತ್ತಿದ್ದಾರೆ ಇದರ ಬಗ್ಗೆ ನ್ಯಾಯಾಂಗ ತನಿಖೆ ಆಗಬೇಕು ಎನ್ನತಕ್ಕಂಥ ಬೇಡಿಕೆಯನ್ನು ನಾವು ಸರ್ಕಾರದ ಮುಂದೆ ಇಟ್ಟಿದ್ದೇವೆ. ಈಗ ಪ್ರಜಾತಂತ್ರದ ವ್ಯವಸ್ಥೆಯಲ್ಲಿ ಈ ರೀತಿ ಬೇಡಿಕೆ ಮಾಡತಕ್ಕಂಥಾದ್ದು, ಧರಣಿ ಮಾಡರತಕ್ಕಂಥಾದ್ದು ಹೋರಾಟ ಮಾಡತಕ್ಕಂಥಾದ್ದು ನಾವು ಮಾಡಲೇಬೇಕಾಗುತ್ತದೆ. ಜನಗಳು ನಮ್ಮನ್ನು ...

ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ. ನೀವು ಆಡಳಿತಪಕ್ಷದ ಜೊತೆಯಲ್ಲಿ ಮುಖ್ಯಮಂತ್ರಿಗಳ ಜೊತೆಯಲ್ಲಿ ಶಾಮೀಲಾಗಿದ್ದೀರಿ ಎನ್ನತಕ್ಕಂಥ ಮಾತನ್ನು ಸಹ ನಮಗೆ ಜನರು ಹೇಳುತ್ತಾರೆ, ಅದಕ್ಕಾಗಿ ಹೋರಾಟ ಮಾಡಬೇಕಾಗುತ್ತದೆ. ಆ ಕಾರಣದಿಂದ ನಾವು ಏನು ನ್ಯಾಯಾಂಗತನಿಖೆಯನ್ನು ಕೇಳಿದ್ದೇವೆ, ಆ ನ್ಯಾಯಾಂಗ ತನಿಖೆಯನ್ನು ಮಾಡಲು ಸರ್ಕಾರದವರು ನಮ್ಮ ಜೊತೆಯಲ್ಲಿ ಏನು ಮಾತುಕತೆ ಮಾಡಬೇಕಾಗಿಲ್ಲ. ಮುಖ್ಯಮಂತ್ರಿಗಳು ಏಕೆ ಹಿಂದುಮುಂದು ನೋಡುತ್ತಿದ್ದಾರೆ? ಈಗ ಎಷ್ಟು ನ್ಯಾಯಾಂಗ ತನಿಖೆಗಳನ್ನು ನಾವು ಮಾಡಿಲ್ಲ. ಹಾಗಾದರೆ ಪೋಲೀಸಿನವರೆಲ್ಲಾ ಡೀ ಮಾರಲೈಜ್ ಆಗಿ ಹೋಗಿಬಿಟ್ಟಿದ್ದರ ಆ ಸಂದರ್ಭದಲ್ಲಿ. ಒಂದು ನ್ಯಾಯಾಂಗ ತನಿಖೆ ಬಗ್ಗೆ ನೀವು ಪ್ರೆಸ್ಟೀಜ್ ಇಶ್ಯೂ ಏಕೆ ಮಾಡಿಕೊಳ್ಳಬೇಕು ಹೇಳಿ. ಇದು ನಮಗೂ ಸಹ ಅರ್ಥವಾಗುತ್ತಿಲ್ಲ. ಇದನ್ನು ನಾವು ಪ್ರತಿಭಟನೆ ಮಾಡುತ್ತಿದ್ದೇವೆ. ಯಾವುದೇ ಕಾರಣದಿಂದಲೂ ಸಹ ಇದರಿಂದ ನಾವು ಹಿಂದೆ ಸರಿಯತಕ್ಕಂಥ ಪ್ರಶ್ನೆ ಬರುವುದಿಲ್ಲ. ತಾವು ನಮ್ಮ ವಿರೋಧಪಕ್ಷದ ನಾಯಕರುಗಳನ್ನು ಮತ್ತು ಸದಸ್ಯರನ್ನು ಸಹ ಹೊರಗಡೆ ಎತ್ತಿ ಹಾಕಿಸಿದ್ದೀರಿ? ಬಹುಶಃ ಕಳೆದ 5 ವರ್ಷಗಳ ನಮ್ಮ ವಿಧಾನಸಭೆಯ ಇತಿಹಾಸದಲ್ಲಿ ಇಂತಹ ಘಟನೆ ನಡೆದಿರತಕ್ಕಂಥಾದ್ದು ಇಲ್ಲ. ನಮ್ಮ ನಾಯಕರಾಗಿರತಕ್ಕಂಥ ಮಾನ್ಯ ರಾಮಕೃಷ್ಣ ಹೆಗಡೆಯವರು ಇವತ್ತು ಇದರ ಬಗ್ಗೆ ಮಾತನಾಡಬೇಕಾಗಿತ್ತು. ಆದರೆ ಇವತ್ತು ಅವರ ತಾಯಿಗೆ ಹುಷಾರು ಇಲ್ಲದೆ ಆಸ್ಪತ್ರೆಯಲ್ಲಿದ್ದಾರೆ. ಆದ್ದರಿಂದ ಅವರು ಅಧಿವೇಶನಕ್ಕೆ ಬಂದಿಲ್ಲ. ಆದರೆ ಒಂದು ಮಾತು ಮಾತ್ರ ಹೇಳುತ್ತಿದ್ದೇನೆ, ಮಾನ್ಯ ರಾಮಕೃಷ್ಣ ಹೆಗಡೆಯವರು ಇದನ್ನು ಪ್ರತಿಭಟನೆ ಮಾಡಿ ನ್ಯಾಯಾಂಗ ತನಿಖೆಯನ್ನು ಮಾಡಬೇಕು ಅಂತ ಹೇಳಿ ಬಹಳ ಒತ್ತಾಯ ಮಾಡಿದಾಗ ಅವರ ಮಾತಿಗೂ ಸಹ ನೀವು ಬೆಲೆ ಕೊಡಲಿಲ್ಲ. ನಮಗೇನೋ ಅರ್ಥವಾಗುತ್ತಿಲ್ಲ, ಸರ್ಕಾರ ಇಷ್ಟೊಂದು ಬಿಗಿ ಧೋರಣೆಯನ್ನು ಇದು ಒಂದು ಪ್ರೆಸ್ಟೀಜ್ ಇಶ್ಯೂ ಅಂತ ಹೇಳಿ ತೆಗೆದುಕೊಂಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಅಥವಾ ಅವರ ಸಚಿವ ಸಂಪುಟದ ಸದಸ್ಯರುಗಳು ಏಕೆ ಈ ರೀತಿ ಮಾಡಿಕೊಂಡಿದ್ದಾರೆಂದು ನನಗಂತೂ ಅರ್ಥವಾಗುತ್ತಿಲ್ಲ. ಆದ್ದರಿಂದ ನಾವು ಇದನ್ನು ವಿರೋಧ ಮಾಡುತ್ತಿದ್ದೇವೆ. ಈ ಬಗ್ಗೆ ಸರ್ಕಾರದವರು ನ್ಯಾಯಾಂಗ ತನಿಖೆಯನ್ನು ಮಾಡಲೇಬೇಕು ಎನ್ನುವುದನ್ನು ಒತ್ತಾಯ ಮಾಡಿ ನಾವು ಇವತ್ತು ನಮ್ಮ ಧರಣಿಯನ್ನು ಮುಂದುವರಿಸುತ್ತಿದ್ದೇವೆ;

(ಜನತಾ ದಳದ ಸದಸ್ಯರು ಧರಣಿ ಪ್ರಾರಂಭ ಮಾಡಿದರು.)

+ ಶ್ರೀ ಬಸವರಾಜಪಾಟೀಲ್ ಅಟ್ಟೂರು (ಬಸವಕಲ್ಯಾಣ) : ಮಾನ್ಯ ಅಧ್ಯಕ್ಷರೇ, ನಮ್ಮ ಮಾನ್ಯ ಉಪ ನಾಯಕರು ಹೇಳಿದ ಹಾಗೆ ನಮ್ಮ ಜನತಾ ದಳದ ಎಲ್ಲಾ ಸದಸ್ಯರನ್ನು ತಾವು ಸಸ್ಪೆಂಡ್ ತಾವು ಸಸ್ಪಂಡ್ ಮಾಡಿದ್ದೀರಿ. ಇದು ಕಾನೂನು ಬಾಹಿರವಾದಂತಾದ್ದು. ಪ್ರಜಾಪ್ರಭುತ್ವದ ಒಂದು ಪದ್ಧತಿಯಲ್ಲಿ ವಿರೋಧಪಕ್ಷ ಇರಲೇಬೇಕು. ವಿರೋಧಪಕ್ಷದವರು ಏನಾದರೂ ಕೇಳಿದರೆ ಸರ್ಕಾರದವರು ಅದಕ್ಕೆ ಒಂದು ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಬೇಕು. ಇವತ್ತು ನಾವು ಇಲ್ಲಿ ಹೇಳುತ್ತಿರುವುದು ಒಂದು ನ್ಯಾಯಾಂಗ ತನಿಖೆ ಆಗಲೇಬೇಕು ಅಂತ. ಗ್ರಾಮಪಂಚಾಯಿತಿ ಚುನಾವಣೆಯಲ್ಲಿ ಕಾನೂನು ಬಾಹಿರವಾದಂತಹ ಕಾನೂನುಗಳನ್ನು ಮಾಡಿಕೊಂಡು ಜನರಿಗೆ ಮೋಸ ಮಾಡಿದ್ದಾರೆ, ಈ ಸರ್ಕಾರದವರು. ಇವತ್ತು ಸರ್ಕಾರದ ಮುಂದೆ ನಮ್ಮ ಬೇಡಿಕೆ ಏನಿದೆ ಅಂದರೆ ನ್ಯಾಯಾಂಗ ತನಿಖೆ ಆಗಬೇಕು ಎಂದು. ಗ್ರಾಮಪಂಚಾಯತಿ ಚುನಾವಣೆಯಲ್ಲಿ ಸರ್ಕಾರದವರು ಸಾಕಷ್ಟು ಕೈವಾಡ ಎಸಗಿದ್ದಾರೆ. ಗ್ರಾಮಪಂಚಾಯತಿಗಳಲ್ಲಿ ನಮಗೆ ಸಾಕಷ್ಟು ತೊಂದರೆ ಕೊಟ್ಟಿದ್ದಾರೆ. ರೂಲಿಂಗ್ ಪಾರ್ಟಿಯವರು ಸಾಕಷ್ಟು ಸವಿಸ್ತಾರವಾದಂತಹ ಉಪಯೋಗವನ್ನು ತೆಗೆದುಕೊಂಡಿದ್ದಾರೆ ಎನ್ನುವಂತಹ ಮಾತನ್ನು

ಸಿಂಧ್ಯಾರವರು ಇದ್ದಾರೆ, ಜೀವರಾಜಆಳ್ವರವರು ಇದ್ದಾರೆ. ಮತ್ತು ನಮ್ಮ ಶಾಸಕರನ್ನು ಮತ್ತು ವಿರೋಧಪಕ್ಷದ ನಾಯಕರನ್ನು ಕರೆಸಿಕೊಂಡು ಒಂದು ಒಪ್ಪಂದಕ್ಕೆ ಬಂದು ನ್ಯಾಯಾಂಗ ತನಿಖೆ ಆಗಬೇಕು ಅಂತ ಏನು ನಾವು ಮತ್ತು ನಮ್ಮ ಮುಖಂಡರು ಕೇಳುತ್ತಿದ್ದೇವೆ ಆ ಬೇಡಿಕೆಯನ್ನು ಈಡೇರಿಸಬೇಕೆಂದು ನಾನು ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತಿದ್ದೇನೆ ಮತ್ತು ನಮ್ಮ ವಿರೋಧಪಕ್ಷದ ಉಪನಾಯಕರು ಹೇಳಿದಂತೆ ನಾವು ಸಹ ಇದಕ್ಕೆ ಸಂಪೂರ್ಣವಾದ ಬೆಂಬಲವನ್ನು ವ್ಯಕ್ತಪಡಿಸಿ ಧರಣಿ ಮಾಡುತ್ತೇವೆ.

+ ಡಾ|| ಜೀವರಾಜ ಆಳ್ವ (ಮಲ್ಲೇಶ್ವರ) : ಮಾನ್ಯ ಅಧ್ಯಕ್ಷರೇ, ಸಭಾನಾಯಕರು ಈ ಹಿಂದೆ ಪಾರ್ಲಿಮೆಂಟರಿ ಸಚಿವರಾಗಿದ್ದರು. ಪ್ರತಿ ಸಾರಿ ವಿಧಾನ ಸಭೆಯಲ್ಲಿ ವಿರೋಧಪಕ್ಷದ ಮತ್ತು ಸರ್ಕಾರದ ನಡುವೆ ಜಂಜಾಟ ನಡೆದಾಗ he always believed in conciliatory approach and which was helpful. ಯಾವತ್ತೂ ಕೂಡ ಒಂದು ಜಿಗಟಿನ ಒಂದು ಕಾಂಪ್ಲಿಕ್ಟ್ ಸ್ಥಿಚುಯೇಶನ್ ಬಂದಾಗ ಅದನ್ನು ಸರಿಪಡಿಸಲಿಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದರು. ಆದರೆ ಈ ಸಾರಿ ಏಕೆ ಇಷ್ಟು ಹಠ ಹಿಡಿದುಕೊಂಡು ಕೂತಿದ್ದಾರೆಂದು ನನಗೆ ಅರ್ಥವಾಗುತ್ತಿಲ್ಲ. ನಾನು ಮೊನ್ನೆ ಬ್ರೀಚ್ ಆಫ್ ಪ್ರಿವಿಲೇಜ್ ಅಂತ ಹೇಳಿದೆ. ತಾವು ಮನವಿ ಮಾಡಿಕೊಂಡ್ರಿ ಸದಸ್ಯರು ಕೂತುಕೊಳ್ಳಬೇಕು ಎಂದು; ತಮ್ಮ ಅಪ್ಪಣೆಗೆ ಮನ್ನಣೆ ಕೊಟ್ಟು ನಾವೆಲ್ಲಾ ನಮ್ಮ ಆಸನಗಳನ್ನು ಸ್ವೀಕಾರ ಮಾಡಿದೆವು. ನಂತರ ಈ ಪರಿಸ್ಥಿತಿ ನಿರ್ಮಾಣ ಆಯಿತು. ನಾನು ತಮ್ಮಲ್ಲಿ ಒಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈಗಲೂ ಸಮಯ ಮಿಂಚಿ ಹೋಗಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಅಸ್ವಸ್ಥರಾಗಿದ್ದಾರೆಂದು ತಿಳಿದು ಬಂದಿದೆ. ಉಪ ಮುಖ್ಯಮಂತ್ರಿಗಳು ಇದ್ದಾರೆ. ಪಾರ್ಲಿಮೆಂಟರಿ ಮಂತ್ರಿಗಳು ಇದ್ದಾರೆ, ರಂಗನಾಥ್ರವರು ಇದ್ದಾರೆ. ಈಗಲೂ ಕೂಡ ಈ ಮನೆಯನ್ನು ಸ್ವಲ್ಪ ಕಾಲ ಮುಂದೂಡಿ ಮಂತ್ರಿಮಂಡಲದ ಸದಸ್ಯರು ಮುಖ್ಯಮಂತ್ರಿಗಳಿಗೆ ಒಳ್ಳೆಯ ಒಂದು ಸಲಹೆ ಕೊಡಲಿ. ಏಕೆಂದರೆ ನಮ್ಮ ಕಾಲದಲ್ಲಿ ಜ್ಯುಡಿಷಿಯಲ್ ಪ್ರೋಬ್ ಎಷ್ಟು ಮಾಡಿದ್ದೇವೆ ಅಂದರೆ ಹೆಗಡೆಯವರು ಕಮಿಷನ್ ಮುಖ್ಯಮಂತ್ರಿಗಳು ಎಂದು he has made slight remarks. But, it has to be conceded every time there has been a firing. ಒಂದು ಮಾತನ್ನು ಮುಂದುವರೆದು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. Whenever there has been a lockup death there has been a judicial probe, ಅಂತ ಹೇಳಿದಿರಿ. ಇವತ್ತು seven brutal killings, ಈ ತರಹ ಆದ ಮೇಲೆ ಯಾವ ಪ್ರಜಾಪ್ರಭುತ್ವದ ಬುನಾದಿ ಮೇಲೆ ನಾವು ಸಮಾಜವನ್ನು ಕಟ್ಟಬೇಕು ಅಂತ ಬಹಳ ಒಂದು ಐತಿಹಾಸಿಕ ಭಾಷಣವನ್ನು ಬಜೆಟ್ ಭಾಷಣದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೇಳುವುದರ ಮೂಲಕ ಇಡೀ ದೇಶದಲ್ಲಿ ಆಗದೇ ಇರುವುದನ್ನು ನಾವು ಮಾಡಿ ತೋರಿಸಿದ್ದೇನೆ, ಪ್ರಥಮ ಹಂತ ಆರಂಭವಾಗಿದೆ ಅಂತ ಹೇಳಿದರು. ಅದೇ ಮೂರು ದಿವಸದ ನಂತರ ಹೇಳುತ್ತಾರೆ ಈ ಜಿಲ್ಲಾ ಪರಿಷತ್ತು ಪಂಚಾಯತ್ ಚುನಾವಣೆಗಳಲ್ಲಿ ಬಹಳ ಅನ್ಯಾಯ ನಡೆದಿದೆ, ಕಾನೂನು ಸುವ್ಯವಸ್ಥೆ ಪರಿಸ್ಥಿತಿ ಚೆನ್ನಾಗಿಲ್ಲ ಅಂತ ಹೇಳಿ ನಮ್ಮ ಡಿ.ಜಿ.ಪಿ. ಮತ್ತು ಚೀಫ್ ಸೆಕ್ರೆಟರಿಯವರು ಅಭಿಪ್ರಾಯ ಪಟ್ಟಿದ್ದರಿಂದ ಈ ಹಂತದ ಚುನಾವಣೆಗಳನ್ನು ಮುಂದಕ್ಕೆ ಹಾಕಿದ್ದೇವೆಂದು ಹೇಳುತ್ತಾರೆ. ಇದಂತೂ ನಿಜ, ಅದು ನಿಮ್ಮಿಂದ ಆಗಿದೆಯೇ ಅಥವಾ ನಮ್ಮಿಂದ ಆಗಿದೆಯೋ ಗೊತ್ತಿಲ್ಲ. ಈಗ ಅದು, the entire blame cannot be put on the law and order machinery. ಇವತ್ತು ಪೋಲೀಸ್ರು ಡೀಮಾರಲೈಜ್ ಆಗುತ್ತಾರೆಂದು ಹೇಳುವಂತಹ ಏನು ಒಂದು ವೆರಿ ಸ್ಲಿಪರಿ ಆರ್ಗ್ಯುಮೆಂಟ್ ಅಂತ ನಾವು ಹೇಳುತ್ತೇವೆ, ಅದನ್ನು ನಾವು ನಂಬಲಿಕ್ಕೆ ತಯಾರಾಗಿಲ್ಲ. ಇವತ್ತು ಹಲವಾರು ಸಲ ನ್ಯಾಯಂಗ ತನಿಖೆ ಆಗಿದೆ. ಅತ್ಯಂತ ಕ್ಲಿಷ್ಟಪರಿಸ್ಥಿತಿಯಲ್ಲಿ ಪೋಲೀಸ್ ಅಧಿಕಾರಿಗಳ ಮೇಲೆ ಕ್ರಿಮಿನಲ್ ಪ್ರೊಸಿಡಿಂಗ್ ಆಗಿದೆ.

ತಮ್ಮ ಅಭಿಪ್ರಾಯ ನಮಗೆ ಗೊತ್ತಿದೆ. ತಾವು ಕೂಡ ಈ ನ್ಯಾಯಾಂಗ ತನಿಖೆ ಬಗ್ಗೆ ಹೆಚ್ಚು ಆಲೋಚನೆ ಮಾಡುವಂತಹ ಅಗತ್ಯ ಇಲ್ಲ. It is not just a firing, it is not a provocative firing. It is the very fabric on which we want to have to foundation; that is being threathened. ಅದು ಯಾರಿಂದಲೇ ಆಗಲಿ ಹಿಂದುಳಿದ ವರ್ಗದವರಿಗೆ ಅನ್ಯಾಯ ಆಗಲಿ, ಎಸ್.ಸಿ.ಎಸ್.ಟಿ. ಆಗಲಿ ಮೇಲ್ವರ್ಗದ ಅಥವಾ ಕೆಳವರ್ಗದ ಹಿಂದುಳಿದ ವರ್ಗದ ಮೇಲೆ ಆದಂತಹ ಹತ್ಯೆ ಅಂತ ಆಗಲಿ, whatever logical argument you may have putforward, that has to be conceded. ಇವತ್ತು ನ್ಯಾಯಾಂಗ ತನಿಖೆ ಬಗ್ಗೆ ನಾವು ಏನು ನಿಮ್ಮ ಹತ್ತಿರ ಯಾವ ಪ್ಯಾರಾಮಿಟರ್ಸ್ ಹಾಕಬೇಕು, ಟರ್ಮ್ಸ್ ಆಫ್ ರೆಫರೆನ್ಸ್ ಹಾಕಬೇಕು ಎಂದು ನಾವು ಹೇಳುತ್ತಿಲ್ಲ. ಯಾವ ರೀತಿ ಅನ್ಯಾಯ ಆಗಿದೆ. ನಮ್ಮ ಮೇಲೆ ಅಪನಂಬಿಕೆ ಬಂದಿದೆ, ನೀವು ಅದನ್ನು ಹೋಗಲಾಡಿಸಬೇಕು. ಇವತ್ತು ಘೋರ್ಪಡೆಯವರು ಒಂದು ಮಾತನ್ನು ಏನು ಹೇಳಿದ್ದಾರೆ, ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಮಾಡಬೇಕು. We leave it to you. Let it be a district judge. We don't specify that it should be High Court or a Supreme Court judge. We did not specify that it should be done either by S.C. or H.C. judge and we also did not specify the terms of reference. All that we demanded was to have judicial enquiries because there are clear accusations on the part of Governmental machinery being partisan and the Governmental machinery has been used to exploit election results. We have made strong accusations in this regard.

ಇಲ್ಲಿ ನನ್ನ ಮಿತ್ರರಾದ ಯಡಿಯೂರಪ್ಪನವರು ಒಂದು ಕಡೆ ಹೇಳುತ್ತಾ ಇದ್ದಾರೆ. ಅವರನ್ನು ರಾಜಕೀಯವಾಗಿ ಟೀಕೆ ಮಾಡಲು ಹೋಗುತ್ತಿಲ್ಲ, ಯಾಕೆಂದರೆ ಅವರಿಗೆ ಗೊತ್ತಿದೆ. ಅವರ ಬಲ ಈಗ ಏನೂ ಇಲ್ಲ. ಜಿಲ್ಲಾ ಪಂಚಾಯತ್ ಮತ್ತು ಮಂಡಳ ಪಂಚಾಯತ್ಗಳಲ್ಲಿ ಅವರು ಎಲ್ಲೂ ಗೆದ್ದಿಲ್ಲ, ಮಂಗಳೂರು ಅಥವಾ ಶಿವಮೊಗ್ಗದಲ್ಲಿ ಸ್ವಲ್ಪ ಗೆದ್ದಿದ್ದಾರೆ. ಆದರೆ ಅತ್ಯಂತ ತೀಕ್ಷ್ಣವಾದ ಟೀಕೆ ಬರುವುದು ನಮ್ಮ ಮತ್ತು ನಿಮ್ಮ ಮೇಲೆ ಮಾತ್ರ. ಅವರು ನಾವುಗಳು ಶಾಮೀಲಾಗಿದ್ದೇವೆ ಎಂದು ಕೂಡ ಹೇಳುತ್ತಾರೆ. ಇವೊತ್ತು ಸಸ್ಪೆಂಡ್ ಮಾಡಲು ಕೂಡ ನಿಮ್ಮ ಜೊತೆಯಲ್ಲಿ ಮಾತನಾಡಿಕೊಂಡು....

+ ಶ್ರೀ ಬಿ.ಎಸ್. ಯಡಿಯೂರಪ್ಪ: ತಾವುಗಳು ನಮ್ಮ ವಿಚಾರ ಮಾತನಾಡಿದ್ದೀರಿ. ಆದರೆ ನಿಮ್ಮ ಅಡ್ರೆಸ್ ಇಡೀ ರಾಜ್ಯದಲ್ಲಿಯೇ ಇಲ್ಲ. ನೀವು ಎಲ್ಲಿದ್ದೀರಿ ಎಂಬ ಬಗ್ಗೆ ಪರದಾಡುತ್ತಾ ಇದ್ದೀರಿ. ಗ್ರಾಮಪಂಚಾಯತ್ಗಳಲ್ಲಿ ಅಧ್ಯಕ್ಷರು ಎಲ್ಲಿದ್ದಾರೆಂದು ಹುಡುಕಿಕೊಂಡು ಯಾರ್ಯಾರನ್ನೋ ಮಾಡಲು ಹೋಗಿ ಫೈಲ್ಯೂರ್ ಆಗಿ ಇಲ್ಲಿ ಧರಣಿ ಕುಳಿತುಕೊಂಡು ನಾಟಕವಾಡಿ ಮಾಡಬೇಕಾದ ನಿಮ್ಮ ಕರ್ತವ್ಯವನ್ನು ಮಾಡಿದ್ದೇನೆ ಸುಮ್ಮನೇ ಈ ಕೆಲಸ ಏಕೆ ಮಾಡುತ್ತಿದ್ದೀರಿ? ಪ್ರಾಮಾಣಿಕವಾಗಿ ನಿಮ್ಮ ಅನಿಸಿಕೆಗಳು ಏನಾದರೂ ಇದ್ದರೆ ಹೇಳಿ. ಯಾಕೆಂದರೆ ಶೇಕಡಾ 30 ಭಾಗ ನಾವು ಗೆದ್ದಿದ್ದೇವೆ. ಇಲ್ಲಿ 30 ಸಾವಿರ ಜನರ ಒಂದು ಕಾನ್ಫರೆನ್ಸ್ ಮಾಡಬೇಕೆಂದಿದ್ದೇವೆ. ಆ ಕಾನ್ಫರೆನ್ಸ್ ಮಾಡುವುದಕ್ಕೆ ನೀವೂ ಅವರೂ ಸೇರಿಕೊಂಡು ಚುನಾವಣೆಯ ನೆಪ ಒಡ್ಡಿ ಅದನ್ನು ಮಾಡಲು ಬಿಡಲಿಲ್ಲ, ಇನ್ನೂ ಬೇಕಾದರೆ ಒಂದು ಪ್ರದರ್ಶನವನ್ನು ಮಾಡೋಣ. ನಿಮ್ಮ ಬೆಂಬಲಿಗರನ್ನು ನೀವು ಕರೆದುಕೊಂಡು ಬನ್ನಿರಿ. ನಮ್ಮವರು ಎಷ್ಟು ಜನ ಗೆದ್ದಿದ್ದಾರೆ ಎಂದು ನಾವು ಕರೆದುಕೊಂಡು ಬರುತ್ತೇವೆ. ಆಗ ಜನರ ಎದುರು ಫಿಸಿಕಲ್ ವೆರಿಫಿಕೇಶನ್ ಆಗಲಿ, ಜನರು ನೋಡಲಿ. ಇವೊತ್ತು ಇಡೀ ರಾಜ್ಯದಲ್ಲಿ [illegible]

ಅಸ್ತಿತ್ವವನ್ನು ನೀವೇ ಕಳೆದುಕೊಂಡಿರುವಾಗ ಈ ಸದನದಲ್ಲಿ ಧರಣಿ ಮಾಡುವುದರ ಮೂಲಕ ನಾವು ಬದುಕಿದ್ದೇವೆ ಎಂದು ಈ ನಾಡಿನ ಜನರಿಗೆ ತೋರಿಸಲು ಹೊರಟಿದ್ದೀರಲ್ಲ! ಇವೊತ್ತು ವಿರೋಧ ಪಕ್ಷದ ಮುಖಂಡರು ನ್ಯಾಯಾಂಗ ತನಿಖೆಯಾಗಬೇಕೆಂದು ಏನು ಹೇಳಿದ್ದಾರೆ, ಅದನ್ನು ನಾವು ಸಹ ಒಪ್ಪಿದ್ದೇವೆ ಮತ್ತು ಅದು ತಪ್ಪು ಎಂದು ನಾನು ಹೇಳುತ್ತಾ ಇಲ್ಲ. ಈ ಕಡೆ ಕುಳಿತಿರುವ ವಿರೋಧ ಪಕ್ಷದ ನಾಯಕರ ಅಪೇಕ್ಷೆ ಏನಿದೆ, ಮೊನ್ನೆ ನಡೆದಿರುವ ಚುನಾವಣೆಗಳಲ್ಲಿ 7 ಜನರು ಗೋಲೀಬಾರ್ನಲ್ಲಿ ಏನು ಸತ್ತಿದ್ದಾರೆ, ಇದರ ಬಗ್ಗೆ ನ್ಯಾಯಾಂಗ ತನಿಖೆಯಾಗಬೇಕೆಂಬ ಅವರ ಬೇಡಿಕೆಗೆ ನಮ್ಮ ಸಹಮತ ಇದೆ. ಇವೊತ್ತು ಅದಕ್ಕೆ ಮಾನ್ಯ ಮುಖ್ಯಮಂತ್ರಿಯವರು ಸದನ ಸಮಿತಿ ಮಾಡುತ್ತೇನೆ. ಅವರು ಹೋಗಿ ನೋಡಿಕೊಂಡು ಬಂದು ನ್ಯಾಯಾಂಗ ತನಿಖೆಯನ್ನು ಮಾಡಬೇಕೆಂದು ಸಮಿತಿಯು ಹೇಳಿದರೆ ಅದನ್ನು ಮಾಡಲು ನಾನು ಸಿದ್ಧನಿದ್ದೇನೆ ಎಂದು ಕೂಡ ಹೇಳಿದ್ದಾರೆ. ಇಷ್ಟು ಹೇಳಿದ ಮೇಲೆಯೂ ಸಹ ತಾವು ಒಪ್ಪದಿದ್ದರೆ ಹೇಗೆ? ಬಜೆಟ್ ಅಧಿವೇಶನದಲ್ಲಿ ರಾಜ್ಯದ ಜನತೆಯ ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚೆಯಾಗಬೇಕಾಗಿದೆ, ಇನ್ನೂ ಹಲವಾರು ವಿಷಯಗಳ ಬಗ್ಗೆ ಇಲ್ಲಿ ಚರ್ಚೆಯಾಗಬೇಕಾಗಿದೆ. ಅದಕ್ಕಾಗಿ ಈ ಸದನವನ್ನು ನಾವೆಲ್ಲರೂ ಉಪಯೋಗ ಮಾಡಿಕೊಳ್ಳಬೇಕಾಗಿದೆ. ಈಗ ಇದು ಯಾವ ಮಟ್ಟಕ್ಕೆ ಇಳಿದಿದೆ ಎಂಬ ಬಗ್ಗೆ ತಾವುಗಳು ತಪ್ಪು ತಿಳಿದುಕೊಳ್ಳದಿದ್ದರೆ ಹೇಳ ಬಯಸುತ್ತೇನೆ. ಇಲ್ಲಿ ಮುಖ್ಯಮಂತ್ರಿಯವರು ಕುಳಿತುಕೊಂಡು ಇವರ ಪಕ್ಷದ ಅಧ್ಯಕ್ಷರಾದ ದೇವೇಗೌಡರಿಗೆ ಡೆಲ್ಲಿಗೆ ಫೋನ್ ಮಾಡಿ ಸದನ ಮುಂದೂಡಬೇಕೋ ಬೇಡವೋ ಎಂದು ಅವರನ್ನು ಕೇಳುತ್ತಾರೆ. ಅವರು ನಾಳೆಯವರೆಗೂ ಮುಂದೂಡಿ ಎಂದು ಹೇಳುತ್ತಾರೆ. ಅವರು ಆಮೇಲೆ ಎತ್ತಿ ಹಾಕಿ ಎಂದು ಹೇಳುತ್ತಾರೆ, ನೀವು ಹಾಗೆಯೇ ಮಾಡುತ್ತೀರಿ. ಈ ಮಟ್ಟಕ್ಕೆ ಆಡಳಿತ ಪಕ್ಷದವರು ಹೋಗಬಹುದು.. ನಾನು ಅದಕ್ಕೆ ಸಾಕ್ಷಿ ಬೇಕಾದರೂ ಕೊಡಬಲ್ಲೆ.

ಡಾ॥ ಜೀವರಾಜ್ ಆಳ್ವ: ನೀವು ಏನೇನೋ ಮಾತನಾಡುತ್ತಿದ್ದೀರಾ.....

SRI M. MALLIKARJUNA KHARGE : We strongly protest. We do not accept it.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ: ಮುಖ್ಯಮಂತ್ರಿಗಳು ಎಲ್ಲಿಗೆ ಯಾವಾಗ ಮತ್ತು ಯಾವ ನಂಬರ್ಗೆ ಫೋನ್ ಮಾಡಿದ್ದರು ಎಂಬುದನ್ನು ಬೇಕಾದರೂ ಹೇಳುತ್ತೇನೆ. ಅದನ್ನು ಸಾಬೀತು ಮಾಡುತ್ತೇನೆ.

ಡಾ॥ ಜೀವರಾಜ ಆಳ್ವ: ಅವರು ಸಾಬೀತು ಮಾಡಲಿ.....

(ಗೊಂದಲ)

ಅಧ್ಯಕ್ಷರು: ಯಡಿಯೂರಪ್ಪನವರು ಕುಳಿತುಕೊಳ್ಳಬೇಕು......

ಶ್ರೀ ಕೆ.ಎಸ್. ಈಶ್ವರಪ್ಪ: ನಮ್ಮ ರಾಜ್ಯದ ಮುಖ್ಯಮಂತ್ರಿಯವರು ದೇವೇಗೌಡರ ಜೊತೆಗೆ ಮಾತನಾಡಿಲ್ಲ ಎಂದು ಸಾಬೀತಾದರೆ ನಾನು ನನ್ನ ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಡುತ್ತೇನೆ. ಅವರು ಮಾತನಾಡಿದ ಫೋನ್ ನಂಬರ್, ಯಾವತ್ತು ಫೋನ್ ಮಾಡಿದರು, ಎಷ್ಟು ಹೊತ್ತಿಗೆ ಫೋನ್ ಮಾಡಿದರು, ಏನೇನು ಮಾತನಾಡಿದರು ಎಂಬ ಬಗ್ಗೆ ದಾಖಲೆ ಸಮೇತ ವಿವರಗಳನ್ನು ಕೊಡುತ್ತೇನೆ.

ಡಾ॥ ಜೀವರಾಜ ಆಳ್ವ: ಆಯಿತು, ದಾಖಲೆ ಕೊಡಿ. I pose a challenge to

ಶ್ರೀ ಬಿ.ಎಸ್. ಯಡಿಯೂರಪ್ಪ: ಈ ಒಂದು ಮಟ್ಟಕ್ಕೆ ಆಡಳಿತ ಮತ್ತು ವಿರೋಧ ಪಕ್ಷದವರು ನಡೆದುಕೊಳ್ಳುವುದಾದರೆ ಹೇಗೆ? ರಿಪೋರ್ಟ್ ಕಂಟ್ರೋಲ್ ವಿಚಾರ ಹೇಳಿದ್ದೀರಿ. ಹಾಗಾದರೆ ನಿಮಗೂ ದೇವೇಗೌಡರು ರಿಪೋರ್ಟ್ ಕಂಟ್ರೋಲ್ ಆಗಿದ್ದಾರೆಯೇ? ಇಲ್ಲಿ ಸದನವನ್ನು ಹೇಗೆ ನಡೆಸಬೇಕೆಂದು ಮುಖ್ಯಮಂತ್ರಿಯವರು ಡೆಲ್ಲಿಗೆ ಫೋನ್ ಮಾಡಿ ಕೇಳುತ್ತಾರೆ. ಆಮೇಲೆ ನಮ್ಮನ್ನು ಸಸ್ಪೆಂಡ್ ಮಾಡಿ ಎಂದು ಹೇಳಿದ ಮೇಲೆ ನೀವು ಸಸ್ಪೆಂಡ್ ಮಾಡುತ್ತೀರಿ.

DR. JEEVARAJ ALVA : ಇಲ್ಲ..... It's rubbish and nonsense.

(Interruption)

ಅಧ್ಯಕ್ಷರು: ನಾನು ಆಳ್ವರವರಿಗೆ ಮಾತನಾಡಲು ಅನುಮತಿ ಕೊಟ್ಟಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೇ, ಯಾವ ಒಂದು ನಿಯಮ ಪ್ರಕಾರ ಈ ಸದನದ ಕಾರ್ಯ ಕಲಾಪಗಳನ್ನು ನಡೆಸುತ್ತಿದ್ದೀರಿ? ಏಕೆಂದರೆ, ಈ ಸದನದ ಕಸ್ಟೋಡಿಯನ್ ಆಗಿ ತಾವು ನಮಗೆ ಮಾತ್ರ ನಿಯಮಾವಳಿಗಳನ್ನು ಅನುಸರಿಸುವಂತೆ ಹೇಳುತ್ತೀರಿ. ಆದರೆ ಅವರಿಗೆ ಹೇಳುತ್ತಿಲ್ಲ.

ಅಧ್ಯಕ್ಷರು: ಯಡಿಯೂರಪ್ಪನವರೇ, ತಾವು ದಯಮಾಡಿ ಕುಳಿತುಕೊಳ್ಳಿ. ಆಳ್ವರವರು ಮಾತನಾಡಲಿ.

ಡಾ|| ಜೀವರಾಜ ಆಳ್ವ: ದೇವೇಗೌಡರು ಈ ಸದನದ ಸದಸ್ಯರು ಅಲ್ಲ. ಅವರು ಇಲ್ಲಿ ಇಲ್ಲ. ಅವರ ಹೆಸರನ್ನು ಇಲ್ಲಿ ತರುವುದು ಸರಿಯಲ್ಲ. ಆದರೂ ಕೂಡ ಸರಕಾರದ ಜೊತೆಯಲ್ಲಿ ಅವರು ಏನೋ ವ್ಯವಹಾರವನ್ನು ಮಾಡಿದ್ದಾರೆಂದು ಹೇಳುವುದ್ದಾರೆ ನಾನು ಸರಕಾರದವರನ್ನೇ ಕೇಳುತ್ತೇನೆ, ಅದೇನೆಂದು ಸರಕಾರದವರೇ ಹೇಳಲಿ. ನಾನು ಒಂದು ಮಾತನ್ನು ಸೂಚ್ಯವಾಗಿ ಹೇಳಬಯಸುತ್ತೇನೆ. ಏನೆಂದರೆ....

ಶ್ರೀ ಬಿ.ಎಸ್. ಯಡಿಯೂರಪ್ಪ: ಇಲ್ಲಿಂದ ಡೆಲ್ಲಿಗೆ ಯಾವಾಗ? ಎಲ್ಲಿ? ಎಷ್ಟು ಸಮಯದಲ್ಲಿ? ಯಾವ ನಂಬರ್ಗೆ ಫೋನ್ ಮಾಡಿದ್ದು? ಇತ್ಯಾದಿ ವಿವರಗಳನ್ನು ಕೊಡುತ್ತೇನೆ. ವಾಟಾಳ್ ನಾಗರಾಜ್ರವರಿಗೂ ಕೂಡ ಗೊತ್ತಿದೆ.... ಈ ರೀತಿಯಲ್ಲಿ ಅಪವಿತ್ರ ಮೈತ್ರಿ ಮಾಡಿಕೊಂಡು ಮುಂದುವರಿಯುತ್ತೀರಿ....

ಶ್ರೀ ವಾಟಾಳ್ ನಾಗರಾಜ್: ಯಡಿಯೂರಪ್ಪನವರು ನನ್ನ ಹೆಸರನ್ನು ಸಾಕ್ಷಿ ಎಂದು ಹೇಳಿದ್ದಾರೆ. ಆದ್ದರಿಂದ ನನಗೆ ಮಾತನಾಡಲು ಅವಕಾಶ ಕೊಡಿ...

(ಗೊಂದಲ)

ಡಾ|| ಜೀವರಾಜ ಆಳ್ವ: ಒಂದು ನಿಮಿಷ, ಮಾನ್ಯ ಯಡಿಯೂರಪ್ಪನವರೇ, ತಾವು ಸ್ವಲ್ಪ ಸಮಯ ಕೊಟ್ಟರೆ......

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಈ ವಿಷಯಗಳನ್ನೆಲ್ಲ ಪ್ರಶ್ನೋತ್ತರವಾದ ಮೇಲೆ ತೆಗೆದುಕೊಳ್ಳುವುದು ಒಳ್ಳೆಯದು.

ಡಾ|| ಜೀವರಾಜ ಆಳ್ವ: ನೀವು ಪಾರ್ಲಿಮೆಂಟರಿ ವ್ಯವಹಾರಗಳ ಮಂತ್ರಿಗಳಾಗಿದ್ದೀರಿ. ತಾವು ಇಲ್ಲಿಯೂ ಕೂತು ಕೆಲಸ ಮಾಡಿದ್ದೀರಿ, ಈ ವಿರೋಧ ಪಕ್ಷದಲ್ಲಿ ಕೂತು 70 ಜನ ಇಲ್ಲಿ ಬಾವಿಯಲ್ಲಿ ಕೂತರು. ಆಗ ಸಸ್ಪೆಂಡ್ ಮಾಡಿದರಾ? ಎತ್ತಿ ಹೊರಗೆ ಹಾಕಿದರಾ?

ಶ್ರೀ ಎಸ್.ಎಂ. ಕೃಷ್ಣಾ (ಉಪ ಮುಖ್ಯಮಂತ್ರಿಗಳು) : ಅವರನ್ನು ಸಸ್ಪೆಂಡ್ ಮಾಡುವುದೊಂದೇ ಅಲ್ಲ, ಅವರನ್ನು ಡಿಸ್ಮೆಂಬರ್ ಮಾಡುವುದಕ್ಕೆ ನಾವು ರೆಡಿಯಾಗಿದ್ದೆವು.

ಡಾ॥ ಜೀವರಾಜ ಆಳ್ವ : ಮಾಡಿದಿರಾ?

ಶ್ರೀ ಎಸ್.ಎಂ. ಕೃಷ್ಣಾ : ಮಾಡಬೇಕೆಂಬ ಉದ್ದೇಶವಿತ್ತು. We have made that intention very very clear.

DR. JEEVARAJ ALVA : Sir, I beg to differ.

ಶ್ರೀ ಹಾರನಹಳ್ಳಿ ರಾಮಸ್ವಾಮಿ : ಪ್ರಶ್ನೋತ್ತರ ಮೊದಲು ಆಗಲಿ.

ಡಾ॥ ಜೀವರಾಜ ಆಳ್ವ : ಒಂದು ಮಾತನ್ನು ಮಾನ್ಯ ಯಡಿಯೂರಪ್ಪನವರು ಹೇಳಿದರು.ಮಾನ್ಯ ಯಡಿಯೂರಪ್ಪನವರು ಇವತ್ತು ಶಾಮೀಲಾಗಿದ್ದಾರೆಂದು ಭಾಷಣ ಮಾಡಿದರು. ಇದಕ್ಕೆ ಮಾನ್ಯ ಅಧ್ಯಕ್ಷರೇ, ನೀವೇ ಸಾಕ್ಷಿ. ಇಲ್ಲಿರುವಂತಹ ಪ್ರತಕರ್ತರೇ ಸಾಕ್ಷಿ. ಜೀವರಾಜ್ ಆಳ್ವ ಅವರು ಭಾಷಣ ಮಾಡಿದಾಗ ಕಾಂಗ್ರೆಸ್ನವರು ಕರತಾಡನ ಮಾಡಲಿಲ್ಲ, ಯಡಿಯೂರಪ್ಪನವರು ಭಾಷಣ ಮಾಡಿದಾಗ ಚಪ್ಪಾಳೆ ಹೊಡೆದರು. ಯಾರಿಗೆ ಯಾರು ಶಾಮೀಲಾಗಿದ್ದಾರೆ ಅಂತ.....

ಶ್ರೀ ಕರಿಯಣ್ಣ : ಮಾನ್ಯ ಅಧ್ಯಕ್ಷರೆ, ನನ್ನದೊಂದು ಪಾಯಿಂಟ್ ಆಫ್ ಆರ್ಡರ್ ಇದೆ. ಸನ್ಮಾನ್ಯ ಸಂಸದೀಯ ಸಚಿವರು ಪ್ರಶ್ನೋತ್ತರವಾದ ಮೇಲೆ ಮಾತನಾಡಲಿ ಎಂದು ಹೇಳಿದ್ದಾರೆ. ಇದನ್ನು ಬಗೆಹರಿಸುತ್ತೀರಾ ಇಲ್ಲವೇ ಅದೇ ಸಮಾಚಾರವನ್ನು ಮಾತನಾಡುವುದಕ್ಕೆ ತಾವು ಅವರಿಗೆ ಅನುಮತಿ ಕೊಡುತ್ತೀರಾ? ಅವರ ಕೈಯ್ಯಲ್ಲಿ ಅದೇ ಭಾಷಣವನ್ನು ಏಕೆ ಮಾಡಿಸುತ್ತಿದ್ದೀರಿ?

ಡಾ॥ ಜೀವರಾಜ ಆಳ್ವ : ರಾಜ್ಯದ ಬಡ್ಜೆಟ್ ವಿಚಾರದಲ್ಲಿ ಭಾಷಣ ಮಾಡಬೇಕೆಂದು, ಮಾತನಾಡಬೇಕೆಂದು ನಮ್ಮ ಉತ್ತಮವಾದ ಸಲಹೆಗಳನ್ನು ಸರಕಾರಕ್ಕೆ ಕೊಡಬೇಕೆಂದು ನಮ್ಮ ಆಸೆ ಇದೆ. ಆದರೆ ನಮ್ಮನ್ನು you have denied us the opportunity. You have deprived us deliberately ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತೂ ಸಹ ಸಮಯ ಮಿಂಚಿ ಹೋಗಿಲ್ಲ, ಅತ್ಯಂತ ವಿನಯ ಪೂರ್ವಕವಾಗಿ ಸರಕಾರದ ವ್ಯವಸ್ಥೆ, ಪ್ರಜಾಪ್ರಭುತ್ವದ ವ್ಯವಸ್ಥೆಯ ಮೇಲೆ ನಂಬಿಕೆ ಇಟ್ಟು ಹೇಳುತ್ತಿದ್ದೇವೆ. ಇವತ್ತು ಮತ್ತೆ ಮಾನ್ಯ ಮುಖ್ಯ ಮಂತ್ರಿಗಳನ್ನು ಕರೆಸಿ ಅವರಿಂದ ಅನುಮತಿ ತೆಗೆದುಕೊಳ್ಳಿ ಮತ್ತು ಜ್ಯುಡಿಷಿಯಲ್ ಪ್ರೋಬ್ ಮಾಡಿ. ನಾವೇನು ಟರ್ಮ್ಸ್ ಆಫ್ ರೆಫರೆನ್ಸ್ ಕೇಳೋಲ್ಲ, ಡಿಸ್ಟ್ರಿಕ್ಟ್ ಜಡ್ಜ್ ಇಲ್ಲವೇ ರಿಟೈರ್ಡ್ ಜಡ್ಜ್ ನೇಮಕ ಮಾಡಿ. It is and ethical question. It is ethical norms in Democracy. ಎಂದು ಹೇಳುತ್ತೇವೆ. ಇಷ್ಟು ಕ್ಲಿಷ್ಟವಾದ ಪ್ರಶ್ನೆಯನ್ನು ಎತ್ತಿದ್ದೇವೆ. ಹೌಸ್ ಸಮಿತಿ ಬಗ್ಗೆ ತಾವು ಹೇಳಿದ್ದೀರಿ. ಅದಕ್ಕೆ ಪೂರಕವಾಗಿ ಹೌಸ್ ಸಮಿತಿ ಒಪ್ಪಿದರೆ ನ್ಯಾಯಾಂಗ ತನಿಖೆ ಮಾಡುವುದಿದೆ ಎಂದು ಹೇಳುತ್ತಿದ್ದೀರಿ. ಆದರೆ ಈ ಜ್ಯುಡಿಷಿಯಲ್ ಪ್ರೋಬ್ ಮಾಡುವುದಕ್ಕೆ ಈ ಪರಿಸ್ಥಿತಿ ಬಂದಾಗ ಮಾನ್ಯ ವಿರೋಧ ಪಕ್ಷದ ನಾಯಕರು ನಮ್ಮ ನಾಯಕರು ಏನು ಸಲಹೆ ಕೊಟ್ಟಿದ್ದಾರೆ ಇದರ ಬಗ್ಗೆ ಗಂಭೀರವಾಗಿ ವಿಚಾರ ಮಾಡಬೇಕು. ಅರ್ಧಗಂಟೆ ಸಭೆಯನ್ನು ಮುಂದೂಡಿದರೆ ಏನೂ ಆಗುವುದಿಲ್ಲ. ಮಾನ್ಯ ಯಡಿಯೂರಪ್ಪನವರಿಗೆ ಒಂದು ಮಾತನ್ನು ಹೇಳಬಯಸುತ್ತೇನೆ.

ಅಧ್ಯಕ್ಷರು : ಅದು ಬೇರೆ ವಿಚಾರ. ಅದು ಬೇಡ. ಸರಕಾರ ಈಗ ಏನು ಹೇಳುತ್ತದೆ ಕೇಳೋಣ.

ಅಧ್ಯಕ್ಷರು : ಅದು ಬೇರೆ ವಿಚಾರ. ಅದು ಬೇಡ. ಸರಕಾರ ಈಗ ಏನು ಹೇಳುತ್ತದೆ ಕೇಳೋಣ.

ಡಾ।। ಜೀವರಾಜ ಆಳ್ವ : ನಾವು 30 ಪರ್ಸೆಂಟ್ ಗೆದ್ದಿದ್ದೇವೆಂದು ಮಾನ್ಯ ಯಡಿಯೂರಪ್ಪನವರು ಹೇಳಿದರು. ಸದಸ್ಯರು ಬೇಡ. ಅವರ ಮಂಡಲ ಪ್ರಧಾನರು ಗೆದ್ದವರಿದ್ದಾರಲ್ಲ, 30 ಸಾವಿರವೆಂದು ಹೇಳುತ್ತೀರಲ್ಲ, ಆ ವಿವರವನ್ನು ಆರ್‌ಎಸ್‌ಎಸ್ ವರ್ಕರ್ಸ್, ಅಖಿಲಭಾರತ ವಿದ್ಯಾರ್ಥಿಪರಿಷತ್ತಿನಿಂದ ತರಿಸುತ್ತೀರಾ? ನಿಮ್ಮ ಧಾಟಿ ಗೊತ್ತಿದೆ. ಈ ಮಂಡಲ ಅಧ್ಯಕ್ಷರು ಎಷ್ಟು ಜನ ಗೆದ್ದಿದ್ದಾರೆ ಅವರನ್ನು ತಂದು ಪೆರೇಡ್ ಮಾಡಿಸಿ. ನಾವು ಸಹ ರೆಡಿಯಾಗಿದ್ದೇವೆ.

ಶ್ರೀ ಕೆ.ಎಸ್. ಈಶ್ವರಪ್ಪ : ರಾಜ್ಯದ ಬಿ.ಜೆ.ಪಿ. ಪಕ್ಷದ ಅಧ್ಯಕ್ಷನಾಗಿ ನಾನು ಈ ಸವಾಲನ್ನು ಸ್ವೀಕಾರ ಮಾಡುತ್ತಿದ್ದೇನೆ. ಡೇಟ್ ಫಿಕ್ಸ್ ಮಾಡಲಿ.

ಅಧ್ಯಕ್ಷರು : ಮಾನ್ಯ ಆಳ್ವ ಅವರೇ, ತಮ್ಮ ಮುಂದಿರುವ ಪ್ರಶ್ನೆ ಬಗ್ಗೆ ಅಷ್ಟೇ ಮಾತನಾಡಿ, ನಾನು ಅವಕಾಶ ಕೊಡುತ್ತೇನೆ. ತಾವು ಆದಷ್ಟು ಬೇಗ ಮುಗಿಸಿ. ನಂತರ ಸರಕಾರ ಏನು ಹೇಳುತ್ತದೆ ಕೇಳೋಣ.

ಡಾ।। ಜೀವರಾಜ್ ಆಳ್ವ : ನೀವೂ ಅದನ್ನು ಸ್ವೀಕಾರ ಮಾಡಿ, ನಾವೂ ಅದನ್ನು ಸ್ವೀಕಾರ ಮಾಡುತ್ತೇವೆ. ನಮ್ಮ ಹಿರಿಯ ನಾಯಕರನ್ನು ಹೊರಗೆ ಇಟ್ಟಿದ್ದೇವೆ. ಅಂದರೆ ನಮಗೆ ನೋವಾಗುವುದಿಲ್ಲವೇ? ತಾವು ಸಭಾಧ್ಯಕ್ಷತೆ ವಹಿಸಿ, ಈ ರೀತಿ ಸಭೆಯನ್ನು ನಡೆಸಿಕೊಂಡು ಹೋಗಲಿಕ್ಕೆ ಈ ಕಡೆ ನೋಡಿದಾಗ ತಮ್ಮ ಮನಸ್ಸಿಗೆ ನೋವಾಗುವುದಿಲ್ಲವೇ?

ಅಧ್ಯಕ್ಷರು : ತಮ್ಮ ಪ್ರಸ್ತಾವನೆ ಮುಗಿದ ನಂತರ, ಸರಕಾರವೇನು ಹೇಳುತ್ತದೆ ಕೇಳೋಣ.

ಡಾ।। ಜೀವರಾಜ್ ಆಳ್ವ : ಇವತ್ತು ಅರ್ಧ ಗಂಟೆ ಸಭೆಯನ್ನು ಮುಂದೂಡಿ ಮಾನ್ಯ ಮುಖ್ಯ ಮಂತ್ರಿಗಳನ್ನು ಕರೆಸಿ. ಉಪ ಮುಖ್ಯ ಮಂತ್ರಿಗಳು ಮತ್ತು ಕಾನೂನು ಮಂತ್ರಿಗಳು ಮಾನ್ಯ ಮುಖ್ಯ ಮಂತ್ರಿಗಳನ್ನು ಭೇಟಿಯಾಗಿ ಬಂದು ಹೇಳಲಿ. ಕೋಪದಲ್ಲಿ ವೀರಾವೇಶದಲ್ಲಿ ಅವರು ಮಾತನಾಡಿದ್ದಾರೆ.

ಒಬ್ಬ ಮಾನ್ಯ ಸದಸ್ಯರು : ಕಳೆದ 4 ದಿವಸಗಳಿಂದ ಇದೇ ನಡೆಯುತ್ತಿದೆ. ಇವತ್ತು ನಾಲ್ಕು ಜನ ಬರುತ್ತಾರೆ; ನಾಳೆ ನಾಲ್ಕು ಜನರು ಬರುತ್ತಾರೆ; ದಿನವೂ ಇದನ್ನೇ ಕೇಳಿದ್ದಾಯಿತು. ಅವರಿಗೆ ಭಾಷಣ ನಿಲ್ಲಿಸಲಿಕ್ಕೆ ಹೇಳಿ.

ಡಾ।। ಜೀವರಾಜ್ ಆಳ್ವ : ಪ್ರಯತ್ನ ಮಾಡಲಿ. ಮಾನ್ಯ ರಂಗನಾಥುವರು, ಕೃಷ್ಣ ಅವರು ಮಾನ್ಯ ಕಾನೂನು ಮಂತ್ರಿಗಳು ಮಾನ್ಯ ಮುಖ್ಯ ಮಂತ್ರಿಗಳನ್ನು ಭೇಟಿಯಾಗಿ ಇಂತಹ ಭಾವನೆಗಳನ್ನು ವಿಧಾನ ಸಭೆಯಲ್ಲಿ ಸದಸ್ಯರು ವ್ಯಕ್ತಪಡಿಸಿದ್ದಾರೆಂದು ತಿಳಿಸಲಿ. If they have reason, logical counselling. In the spur of the moment, ಇದರಲ್ಲಿ ಆಗುವುದಿಲ್ಲವೆಂದು ಪ್ರತಿಷ್ಠೆಯ ವಸ್ತುವಾಗಿ ಇದನ್ನು ಏನು ಎತ್ತಿ ಹಿಡಿದಿದ್ದಾರೆ, ಅದು ಸರಿಯಲ್ಲ, ಹಾಗೆ ಹಿಡಿಯಬಾರದೆಂದು ನಾನು ತಮ್ಮ ಮೂಲಕ ವಿನಂತಿಸುತ್ತೇನೆ.

(ಗೊಂದಲ)

ಶ್ರೀ ಕರಿಯಣ್ಣ: 23ನೇ ತಾರೀಖಿನಿಂದ ಬರೇ ಅಜರ್ನ್ ಮಾಡುವುದು, ಹೊರಗಡೆ ಹೋಗುವುದು ಎಂದರೆ ತಾವು ಅಸೆಂಬ್ಲಿ ಯಾವಾಗ ನಡೆಸುವುದಕ್ಕೆ ಸಾಧ್ಯ ಆಗುತ್ತದೆ, ತಾವು ಅಧ್ಯಕ್ಷರಾಗಿದ್ದೀರಿ ಹೇಳಿ. ಈಗ ಜನರಿಗೆ ನಾವು ಕೇಳಬೇಕು. ಈಗ ಬಜೆಟ್ ಇದೆ. ಮಾರ್ಚ್ ಎಂಡ್ನಲ್ಲಿದ್ದೇವೆ. ನಾವು ಏನು ಚರ್ಚೆ ಮಾಡಬೇಕೆಂದು ಮೊದಲು ನಿರ್ಧಾರ ಮಾಡಿ.

ಅಧ್ಯಕ್ಷರು : ವಾಟಾಳ್ ನಾಗಾರಾಜ್ ಅವರೇ, ತಾವು ಪ್ರಶ್ನೋತ್ತರ ಮುಗಿದ ನಂತರ ಹೇಳಿ.

(ಗೊಂದಲ)

ಶ್ರೀ ಕರಿಯಣ್ಣ : ಪ್ರಶ್ನೋತ್ತರ ಕಾಲ ಮುಗಿದ ನಂತರ ಅವರು ಹೇಳಲಿ. ಎಲ್ಲರೂ ಮಾಡುವುದಾದರೆ ಹೇಗೆ?

ಅಧ್ಯಕ್ಷರು : ಸರ್ಕಾರ ಏನು ಹೇಳುತ್ತದೆ ಸ್ವಲ್ಪ ಕೇಳೋಣ. ಪ್ರತಿದಿನ ಇದೇ ಕಾರ್ಯಕ್ರಮ ಮಾಡುವುದಕ್ಕೆ ಆಗುತ್ತದಾ? ಪ್ರತಿದಿನ ಇದೇ ರೀತಿ ನಡೆಯುತ್ತಿದೆ.

ಶ್ರೀ ವಾಟಾಳ್ ನಾಗರಾಜ್ : ನಾನು ಏನು ಹೇಳುತ್ತಿದ್ದೇನೆ ಎಂದರೆ.....

ಅಧ್ಯಕ್ಷರು : ಸರ್ಕಾರ ಏನು ಹೇಳುತ್ತದೆ ಎನ್ನುವುದನ್ನು ತಾವು ಕೇಳುವುದಿಲ್ಲವೇ?

(ಗೊಂದಲ)

ಶ್ರೀ ಕರಿಯಣ್ಣ : ಇದೇ ರೀತಿ ನಡೆಯುತ್ತಿದೆ, ಇದೇನು ಸದನವೋ ಅಥವಾ ಏನೆಂದು ತಿಳಿದುಕೊಂಡಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ನಾನು ಹೇಳಿದ ಮೇಲೆ ಅವರು ಹೇಳಲಿ ಸ್ವಾಮಿ. ಈಗ ನಾನು ಏನು ಹೇಳಬೇಕೆಂದಿದ್ದೆ ಅಂದರೆ....

ಅಧ್ಯಕ್ಷರು : ತಾವು ಏನು ಹೇಳುವುದು ಇದ್ದರೂ ಪ್ರಶ್ನೋತ್ತರ ಕಾಲ ಮುಗಿದ ನಂತರ ಹೇಳಿ.

ಶ್ರೀ ವಾಟಾಳ್ ನಾಗರಾಜ್ : ನಾನು ಮಾನ್ಯ ಸಂಸದೀಯ ಸಚಿವರಲ್ಲಿ ಒಂದು ಪ್ರಸ್ತಾವನ ಮಾಡುತ್ತಿದ್ದೇನೆ.

(ಗೊಂದಲ)

ಶ್ರೀ ಕರಿಯಣ್ಣ : ಅವರು ಪ್ರಶ್ನೋತ್ತರ ಮುಗಿದ ನಂತರ ಹೇಳಲಿ. ಪ್ರತಿ ದಿವಸ ಇದೇ ಆದರೆ ಹೇಗೆ? ಇದಕ್ಕೆ ಒಂದು ನೀತಿನಿಯಮ ಇಲ್ಲದೇ ಇದ್ದರೆ ಹೇಗೆ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನಾನು ಎರಡು ನಿಮಿಷ ಹೇಳುತ್ತೇನೆ.

ಅಧ್ಯಕ್ಷರು : ಬರೇ ಪ್ರಸ್ತಾವನೆ ಆಯಿತು.

(ಗೊಂದಲ)

ಶ್ರೀ ಕರಿಯಣ್ಣ : ಸದನದಲ್ಲಿ ಬರೇ ಇದನ್ನೇ ಮಾಡಿಕೊಂಡು ಹೋದರೆ,.....

(ಗೊಂದಲ)

ಅಧ್ಯಕ್ಷರು : ಆಯಿತು, ಕರಿಯಣ್ಣನವರೇ, ಕುಳಿತುಕೊಳ್ಳಿ.

ಶ್ರೀ ಕರಿಯಣ್ಣ : ಪ್ರಶ್ನೋತ್ತರ ಕಾಲಕ್ಕೆ ಅವಕಾಶ ಕೊಡಿ ದಿವಸ ಇದೇ ರೀತಿ ಚರ್ಚೆ ಮಾಡುವುದಾದರೆ ಸದನವನ್ನೇ ರದ್ದು ಮಾಡಿ ಬಿಡಿ. ನಾವು ಏನು ಚರ್ಚೆ ಮಾಡಬೇಕು ಎಂದು ನಾನೂ ನಿಯಮಾವಳಿ ಇಲ್ಲವೇ? 23ನೇ ತಾರೀಖಿನಿಂದ 28ನೇ ತಾರೀಖು ಆಯಿತು. ದಿವಸ ಇದೇ ಆದರೆ ವಿಧಾನಸಭೆಗೆ ಯಾವುದೇ

ನಿಯಮಾವಳಿ ಇಲ್ಲವಾ ಶಾಸಕರಿಗೆ ಯಾವುದೇ ನಿಯಮಾವಳಿ ಇಲ್ಲವಾ? ಎಷ್ಟು ಸಾರಿ ಮುಖ್ಯಮಂತ್ರಿಗಳು ಇದಕ್ಕೆ ಉತ್ತರ ಹೇಳಬೇಕು.

ಅಧ್ಯಕ್ಷರು : ತಾವು ಪ್ರಸ್ತಾವನೆ ಮಾಡುತ್ತೀರೋ ಅಥವಾ ನಾನು ಮುಂದೆ ಹೋಗಲೋ?

ಶ್ರೀ ವಾಟಾಳ್ ನಾಗರಾಜ್ : ನಮಗೆ ಹೇಳಲು ಅವಕಾಶ ಕೊಡಿ. ಒಟ್ಟಿಗೆ ಐದಾರು ಜನರು ಮಾತನಾಡುತ್ತಿದ್ದರೆ ನಾನು ಹೇಗೆ ಮಾತನಾಡಲಿ.

(ಗೊಂದಲ)

ಅಧ್ಯಕ್ಷರು : ಅವರು ಪ್ರಶ್ನೋತ್ತರದ ಸಲುವಾಗಿ ಕೇಳುತ್ತಿದ್ದಾರೆ.

ಶ್ರೀ ಕರಿಯಣ್ಣ : ನಾವು ಕೇಳಬೇಕಾಗಿತ್ತು, ನೀವು ಸಪೋರ್ಟ್ ಮಾಡಿದ್ದೀರಿ.

ಅಧ್ಯಕ್ಷರು : ಕರಿಯಣ್ಣನವರೇ, ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎ.ಕೆ. ಅನಂತಕೃಷ್ಣ : ನನ್ನದು ಪಾಯಿಂಟ್ ಆಫ್ ಆರ್ಡರ್ ಇದೆ. ಏನೆಂದರೆ, ಸದಸ್ಯರುಗಳು ತಮ್ಮನ್ನು ಉದ್ದೇಶಿಸಿ ಮಾತನಾಡಿದ್ದಾರೆ. ತಾವು ಸಾಕಷ್ಟು ಅವಕಾಶವನ್ನು ಕೊಟ್ಟಿದ್ದೀರಿ. ನಮ್ಮ ಅಭ್ಯಂತರ ಏನೂ ಇಲ್ಲ. ಈಗ ಸಂಭಾಷಣೆ ಪರಸ್ಪರ ಆಗಿ ನಂತರ ಬಾವಿಗೆ ಹೋಗಿ ಕುಳಿತುಕೊಳ್ಳುತ್ತೇವೆ, ಧರಣಿ ಮಾಡುತ್ತೇವೆ, ಸತ್ಯಾಗ್ರಹ ಮಾಡುತ್ತೇವೆ ಎಂದು. ಇತ್ತ ಕಡೆ ತಿರುಗಿಕೊಂಡು ಕೂಗಾಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ಅದು ಸೂಕ್ತವಾಗಿದೆಯೇ, ಸೂಕ್ತವಾಗಿ ಕಾಣುತ್ತಿದೆಯೇ? ಅವರವರ ಸ್ಥಾನದಲ್ಲಿ ಕುಳಿತುಕೊಂಡು ಮಾತನಾಡಬೇಕು ಎಂದು ಹೇಳುವಂತಹವರು ಬಾವಿಯಿಂದ ಏಕೆ ಕೂಗಾಡಬೇಕು. ದಯವಿಟ್ಟು ಇದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಸಭೆಯಲ್ಲಿ ಎಷ್ಟರಮಟ್ಟಿಗೆ, ಯಾರ ಮೇಲೆ ನಿಯಂತ್ರಣ ಹಾಕಬೇಕು ಎನ್ನುವುದನ್ನು ಕೂಡ ನಾವು ಸಭೆಯಲ್ಲಿ ನಿರೀಕ್ಷೆ ಮಾಡುತ್ತಿದ್ದೇವೆ. ನಾವು ಎಂಟು ಜನ ನಿಂತು ಮಾತನಾಡಲು ಅನುಮತಿ ಕೇಳಿದರೆ ನಮಗೆ ಅವಕಾಶ ಸಿಗುವುದಿಲ್ಲ. ಈ ತರಹ ಗಲಭೆಗಳು ನಡೆಯುತ್ತಿದ್ದರೆ ಇದನ್ನು ಎಷ್ಟರಮಟ್ಟಿಗೆ ನಾವು ನೋಡಿಕೊಳ್ಳುವುದು. ಮುಖ್ಯವಾಗಿ ನಾನು ಒಂದು ಹೇಳುತ್ತೇನೆ. ಮೂಲಭೂತವಾದ ಪ್ರಶ್ನೆ ಏನು ಅವರು ಒಂದು ಅಜರ್ನ್ಮೆಂಟ್ ಮೋಷನ್ ತಂದರು. ಅದು ಬಿದ್ದು ಹೋಯಿತು. ಸಭೆಯು ಮೆಜಾರಿಟಿ ಒಪೀನಿಯನ್ ಕೊಟ್ಟಿತು. ಅದಾದ ನಂತರ ಅವರು ಬಾವಿಗೆ ಇಳಿದರು. ಸರ್ಕಾರ ಅವರ ಮೇಲೆ ಕ್ರಮ ತೆಗೆದುಕೊಳ್ಳಲು ಸಭೆಯ ಅನುಮತಿ ಪಡೆದು ಆಯಿತು. ಈಗ ಸಭೆಗೂ ಗೌರವ ಅವರು ಕೊಡುವುದಿಲ್ಲ. ಸದನ ಸಮಿತಿ ಮಾಡುತ್ತವೆಂದರೆ ಅದಕ್ಕೂ ಗೌರವ ಕೊಡುವುದಿಲ್ಲ.

ಅಧ್ಯಕ್ಷರು : ಅದನ್ನು ಸರ್ಕಾರ ಹೇಳಿದೆ, ತಾವು ಕುಳಿತುಕೊಳ್ಳಿ.

ಶ್ರೀ ಎ.ಕೆ. ಅನಂತಕೃಷ್ಣ : ಅದಕ್ಕೆ ತೀರ್ಮಾನ ಬೇಕಾಗಿದೆ. ಸುಮ್ಮನೇ ಇವರು ಹೇಳುತ್ತಿರುವುದು, ನಾವು ಕೇಳಿಕೊಂಡು ಹೋಗುವುದು. ನಮ್ಮ ಮುಖ್ಯವಾದ ವಿಷಯಗಳು ಇವೆ; ಅದನ್ನು ಗಮನಕ್ಕೆ ತೆಗೆದುಕೊಳ್ಳದೇ ಹೋದರೆ ಹೇಗೆ? ಸಮಯವಿಲ್ಲ ಸಂದರ್ಭ ಇಲ್ಲ, ಹೇಗೆಂದರೆ ಹಾಗೆ ಮಾತನಾಡುತ್ತಿರುವುದು. ಮೊನ್ನೆ ಈಶ್ವರಪ್ಪನವರು ಹೇಳುತ್ತಿದ್ದರು. ಏನೆಂದರೆ.....

ಅಧ್ಯಕ್ಷರು : ತಾವು ಕುಳಿತುಕೊಳ್ಳಿ.

ಶ್ರೀ ಎ.ಕೆ. ಅನಂತಕೃಷ್ಣ: ನಾನು ಕುಳಿತುಕೊಳ್ಳುವುದಿಲ್ಲ, ಹೊರಗೆ ಹೋಗಿ ಎಂದರೆ ಹೋಗಿ ಬಿಡುತ್ತೇನೆ. I have lost my interest in the Membership of this House. You really do not allow me to speak.

ಅಧ್ಯಕ್ಷರು : ಅನಂತಕೃಷ್ಣ ಅವರೇ, ತಾವು ಏನು ಹೇಳಬೇಕಾಗಿದೆ.

ಶ್ರೀ ಎ.ಕೆ. ಅನಂತಕೃಷ್ಣ: ಬೇರೆಯವರಿಗೆ ಮಾತನಾಡಲು ಗಂಟೆಗಟ್ಟಲೆ ಅವಕಾಶ ಕೊಡುತ್ತೀರಿ.

ಅಧ್ಯಕ್ಷರು : ನೀವು ನಿಮ್ಮ ವಿಷಯವನ್ನು ಪ್ರಸ್ತಾವನೆ ಮಾಡಿ. ನಿರ್ಣಯ ನನಗೆ ಬಿಟ್ಟಿದ್ದು. ವಾಟಾಳ್ ನಾಗರಾಜ್ ಅವರೇ, ತಾವು ಹೇಳಿ.

ಶ್ರೀ ಅಜೀಜ್ ಸೇಠ್ : ಮಾನ್ಯ ಅಧ್ಯಕ್ಷರೆ, ನೀವು ನಮ್ಮ ಕಡೆ ನೋಡುವುದಿಲ್ಲ; ನಮಗೆ ಅವಕಾಶ ಕೊಡುವುದಿಲ್ಲ.

ಅಧ್ಯಕ್ಷರು : ಕ್ವೆಶ್ಚನ್ ಅವರ್ ಆದ ನಂತರ ಮಾತನಾಡಿ.

ಶ್ರೀ ಅಜೀಜ್ ಸೇಠ್ : ಅವರೆಲ್ಲರೂ ಕ್ವೆಶ್ಚನ್ ಅವರ್ ಆದ ನಂತರ ಮಾತನಾಡಿದ್ದಾರಾ ?

ಅಧ್ಯಕ್ಷರು : ಅವರು ಎತ್ತಿದಂತಹ ವಿಚಾರ ಬೇರೆ. ತಾವು ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ : ಅನಂತಕೃಷ್ಣ ಅವರು ಕ್ರಿಯಲೋಪ ಎತ್ತಿದ್ದಾರೆ.

ಅಧ್ಯಕ್ಷರು : ಅವರು ಹೇಳಿದ್ದಕ್ಕೆ ಅರ್ಥವೂ ಇಲ್ಲ, ಕ್ರಿಯಾಲೋಪವೂ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ನಾವು ಹೇಳಿದ ಮೇಲೆ ಬೇಕಾದರೆ ಕ್ರಿಯಾ ಲೋಪವನ್ನು ತಳ್ಳಿಹಾಕಿ.

ಅಧ್ಯಕ್ಷರು : ಅವರು ಹೇಳಿದ್ದಕ್ಕೆ, ಅದರಲ್ಲಿ ಏನೂ ಇಲ್ಲ ಎಂದು ಹೇಳಿದೆ.

ಶ್ರೀ ಎ.ಕೆ. ಅನಂತಕೃಷ್ಣ: ನಾನು ಹೇಳಿದ್ದಕ್ಕೆ ಏನೂ ಅರ್ಥವೇ ಇಲ್ಲ ಎಂತಲೋ ?

ಅಧ್ಯಕ್ಷರು : ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಕರಿಯಣ್ಣ: ವಾಟಾಳ್ ನಾಗರಾಜ್ ಅವರು ಯಾವುದರಲ್ಲಿ ಕ್ರಿಯಾಲೋಪ ಇದೆ ಎಂದು ಹೇಳುತ್ತಾರೆ ?

ಅಧ್ಯಕ್ಷರು : ಕರಿಯಣ್ಣನವರೇ, ತಾವು ಕುಳಿತುಕೊಳ್ಳಿ.

\+ ಶ್ರೀ ವಾಟಾಳ್ ನಾಗರಾಜ್ : 21ನೇ ತಾರೀಖಿನ ದಿವಸ ಈ ಸದನ ಪ್ರಾರಂಭವಾದ ಮೊದಲನೆಯ ದಿವಸ ಆಯವ್ಯಯ ಮಂಡನೆ ಆಯಿತು. ಬಹಳ ಸುಗಮವಾಗಿ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಆಯವ್ಯಯ ಭಾಷಣವನ್ನು ಸುದೀರ್ಘವಾಗಿ ಓದಿದಾಗ ಶಾಂತ ವಾತವರಣ ನಿರ್ಮಾಣ ಆಗಿತ್ತು. ಅಲ್ಲಿಂದ ಇಲ್ಲಿಯವರೆಗೆ ಒಂದಲ್ಲ ಒಂದು ದೃಷ್ಟಿಯಿಂದ ಸದನದ ಕಲಾಪಗಳು, ಹೆಜ್ಜೆ ಹೆಜ್ಜೆಗೂ ಮುಂದಕ್ಕೆ ಹೋಗುತ್ತಿದೆ ಮತ್ತು ಬದಲಾವಣೆ ಆಗುತ್ತಿದೆ ಎಂದು ಬಹಳ ನೋವಿನಿಂದ ಹೇಳಬೇಕಾಗಿದೆ. ಧರಣಿ ನಡೆದಿದೆ. ಅಂದರೆ ಈ ಎಲ್ಲ ಪ್ರಸಂಗಗಳು ಪ್ರಜಾಪ್ರಭುತ್ವದಲ್ಲಿ ನಡೆಯುವುದಕ್ಕೆ ಆಗುವುದಿಲ್ಲ ಎನ್ನತಕ್ಕ ಪ್ರಶ್ನೆ ಅಲ್ಲ, ನಾನು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ತಮ್ಮಲ್ಲೂ ಹಾಗೂ ಈ ಸದನದಲ್ಲಿರತಕ್ಕ ಹಿರಿಯ ಸಚಿವರಲ್ಲೂ ಮನವಿ ಮಾಡುತ್ತೇನೆ. ಈಗ ನಮ್ಮ ಎದುರಿಗೆ ಮೂರು ಜನ ಹಿರಿಯ ಸಚಿವರು ಇದ್ದಾರೆ. ಮಾನ್ಯ ಕೃಷ್ಣ ಅವರು ಮಾನ್ಯ ರಂಗನಾಥ್ ಅವರು,

ಮಾನ್ಯ ರಾಮಸ್ವಾಮಿ ಅವರು, ಮಾನ್ಯ ಖಂಡ್ರೆಯವರೂ, ಮಾನ್ಯ ಖರ್ಗೆ ಅವರೂ ಇದ್ದಾರೆ. ನಾನು ಏನು ಹೇಳುತ್ತಿದ್ದೇನೆ ಎಂದರೆ ಧರಣಿ ಮಾಡುವುದಕ್ಕೆ ಹೊರಟಂತಹ ಸದಸ್ಯರನ್ನು ಏಕಾಏಕಿ ಇಡೀ ಸದನ ನಡೆಯುವರೆಗೆ ತಾವು ಏನು ಸಸ್ಪೆಂಡ್ ಮಾಡಿದ್ದೀರಿ, ಈ ಕ್ರಮ ತಪ್ಪು ಎಂದು ಹೇಳುವುದಕ್ಕೆ ನಾನು ಹೋಗುವುದಿಲ್ಲ. ಈ ಕ್ರಮ ಸರಿ ಎಂದೂ ಹೇಳುವುದಕ್ಕೆ ಹೋಗುವುದಿಲ್ಲ. ತಾವು ಈ ತಮ್ಮ ಕ್ರಮವನ್ನು ಪುನರ್ ಪರಿಶೀಲನೆ ಮಾಡಬೇಕು. ನಾನು ಅದನ್ನು ಬಹಳ ಒತ್ತಾಯ ಮಾಡಿ ಹೇಳುತ್ತಿದ್ದೇನೆ. ದಯಮಾಡಿ ಇಂತಹ ಒಂದು ನಿರ್ಣಯವನ್ನು ಸರ್ಕಾರವೇ ಮಂಡಿಸಬೇಕು. ಈ ಸರ್ಕಾರಕ್ಕೆ ನಾನು ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ಆ ನಿರ್ಣಯ ಮಂಡಿಸಿ ಈ ಸದನದಿಂದ ಯಾರನ್ನು ಹೊರಗಡೆ ಹಾಕಿದ್ದಾರೆ ಅವರನ್ನು ಮತ್ತೆ ಸದನಕ್ಕೆ ಕರೆಸುವ ವ್ಯವಸ್ಥೆಯನ್ನು ಮಾಡಬೇಕಾಗಿದೆ. ಮೊದಲನೆಯದಾಗಿ ಈ ನಿರ್ಣಯವನ್ನು ಆ ಕಡೆಯಿಂದ ಮಂಡಿಸಬೇಕು. ಇದು ಹಿಂದೆ ಅನೇಕ ಬಾರಿ ನಡೆದಿದೆ. ನಾನು ತಮಗೆ ತಿಳಿಸಿದ್ದೇನೆ. ಹಿಂದೆ ಶ್ರೀಮಾನ್ ಗೋಪಾಲ ಗೌಡರನ್ನು ಇದೇ ಸದನದಲ್ಲಿ ಅಧಿವೇಶನದಿಂದ ಸುಮಾರು 30 ದಿನಗಳ ಕಾಲ ಹೊರಗೆ ಹಾಕಿ ಮತ್ತೆ 5 ದಿನದ ನಂತರ ಇಲ್ಲಿ ನಿರ್ಣಯ ಮಂಡಿಸಿ ಅವರನ್ನು ಈ ಸದನಕ್ಕೆ ಬರಮಾಡಿಕೊಂಡಂತಹ ನಿದರ್ಶನಗಳು ಇದೆ. ಈ ಸದನದಲ್ಲಿ ವಿರೋಧ ಪಕ್ಷದವರು ಆಡಳಿತ ಪಕ್ಷದವರು ಒಟ್ಟಿಗೆ ಸೇರಿ ಸದನ ನಡೆಸಿದರೆ ಒಂದು ರೀತಿ ಚೆನ್ನಾಗಿ ಇರುತ್ತದೆ. ಇದರಲ್ಲಿ ಯಾರೂ ಇರಬಾರದು ಎಂತಲ್ಲ. ಶ್ರೀಮಾನ್ ಯಡಿಯೂರಪ್ಪನವರು ಇಲ್ಲಿ ಪಾರ್ಲಿಮೆಂಟ್ ಸದಸ್ಯರ ಹೆಸರನ್ನು ತಂದಿದ್ದಾರೆ. ಅವರು ಏನು ಹೇಳಿದ್ದಾರೆಂದರೆ ಮಾನ್ಯ ವಾಟಾಳ್ ನಾಗರಾಜ್ ಅವರಿಗೂ ಗೊತ್ತು ಎಂದು ಹೇಳಿದ್ದಾರೆ. ಇತ್ತೀಚಿನ ದಿನಗಳಲ್ಲಿ ರಾಜಕೀಯ ಕಲುಷಿತವಾಗಿದೆ. ಯಡಿಯೂರಪ್ಪನವರು ಯಾರ ಜೊತೆ ಮಾತನಾಡುತ್ತಾರೋ, ಗೊತ್ತಿಲ್ಲ, ಮಾನ್ಯ ದೇವೇಗೌಡರು ಯಾರ ಜೊತೆ ಮಾತನಾಡುತ್ತಾರೋ, ಇವರು ಯಾರ ಜೊತೆ ಮಾತನಾಡುತ್ತಾರೋ ನನಗೆ ಗೊತ್ತಿಲ್ಲ. ಈ ಬಗ್ಗೆ ಬಹಳ ದೊಡ್ಡ ಗೊಂದಲ ಆಗಿದೆ. ಯಾರ ಜೊತೆಯಲ್ಲಿ ಯಾರು ಮಾತನಾಡುತ್ತಾರೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಮಾನ್ಯ ದೇವೇಗೌಡರೂ ಮಾತನಾಡಿದ್ದು ಸರಿ ಇಲ್ಲ ಎಂದು ಇಲ್ಲಿ ಹೇಳುವುದಕ್ಕೆ ಆಗುವುದಿಲ್ಲ. ಅಕಸ್ಮಾತ್ ಮಾತನಾಡಿರಬಹುದು. ಯಾವ ಯಾವ ಸಂದರ್ಭದಲ್ಲಿ ಏನೇನು ಮಾತನಾಡಿದ್ದಾರೋ ಆ ವಿಚಾರಗಳು ಏನು ಎನ್ನತಕ್ಕದ್ದು ಮಾನ್ಯ ಯಡಿಯೂರಪ್ಪನವರಿಗೆ ಗೊತ್ತಿದೆ. ಈ ಬಗ್ಗೆ ಅವರು ರೆಕಾರ್ಡ್ ಇಟ್ಟಿರಬಹುದು. ಇದು ವಾಟಾಳ್ ನಾಗರಾಜ್ ಅವರಿಗೂ ಗೊತ್ತು ಎಂದು ಹೇಳಿದ್ದಾರೆ. ಆದರೆ ನನ್ನ ಹತ್ತಿರ ರೆಕಾರ್ಡ್ ಇಲ್ಲ, ಅವರ ಹತ್ತಿರ ರೆಕಾರ್ಡ್ ಇರಬಹುದು, ನನಗೆ ಗೊತ್ತಿಲ್ಲ. ಆ ಮಾತುಕತೆ ನಡೆದಿರಬಹುದು. ಅದರ ಬಗ್ಗೆ ನಾನು ಮುಂದಕ್ಕೆ ಹೋಗುವುದಿಲ್ಲ. ಇವತ್ತು ನೇರವಾಗಿ ನಾನು ಒಂದು ಪ್ರಶ್ನೆಗೆ ಬರುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ದೇವೇಗೌಡರ ಜೊತೆ ಮಾನ್ಯ ಮುಖ್ಯಮಂತ್ರಿಗಳು ಮಾತನಾಡಿದ್ದು ತಮಗೆ ಗೊತ್ತೋ ಇಲ್ಲವೋ?

(ಗೊಂದಲ)

ಅಧ್ಯಕ್ಷರು: ಮಾನ್ಯ ಯಡಿಯೂರಪ್ಪನವರೇ, ತಾವು ಕುಳಿತುಕೊಳ್ಳಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾತನಾಡಿದ್ದು ತಪ್ಪು ಎಂದು ಹೇಳುವುದಿಲ್ಲ.

(ಗೊಂದಲ)

ಅಧ್ಯಕ್ಷರು : ಯಡಿಯೂರಪ್ಪನವರೇ, ತಾವು ಕುಳಿತುಕೊಳ್ಳಬೇಕು. ನಾನು ಅಲೋ ಮಾಡುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ :ಮಾನ್ಯ ಮುಖ್ಯಮಂತ್ರಿಗಳು ಮಾನ್ಯ ದೇವೇಗೌಡರ ಜೊತೆ ಮಾತನಾಡಿದ್ದಾರೆ. ನೀವು ತೀರ್ಮಾನ ತೆಗೆದುಕೊಳ್ಳಬೇಕು. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಅಧಿಕೃತ ಪಕ್ಷಕ್ಕೆ ಇದು ಗೌರವ ತರುವುದಿಲ್ಲ. ನಾನು ಪ್ರೂವ್ ಮಾಡುತ್ತೇನೆ.

(ಗೊಂದಲ)

ಅಧ್ಯಕ್ಷರು : ತಾವು ಕುಳಿತುಕೊಳ್ಳಬೇಕು. ನಾನು ನಿಮಗೆ ಮಾತನಾಡಲು ಅಲೋ ಮಾಡುವುದಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನಾನು ಹೇಳುತ್ತಿರುವ ವಿಚಾರ ಏನೆಂದರೆ, ಸರ್ಕಾರದವರು ಏನು ತಮ್ಮ ನಿಲುವಿನಿಂದ ಹಠ ಹಿಡಿದಿದ್ದಾರೆ. ಅದರಿಂದ ಸ್ವಲ್ಪ ಮುಂದೆ ಸರಿದು ತಮ್ಮ ತಮ್ಮ ಪ್ರತಿಷ್ಠೆ ಪ್ರಶ್ನೆಯನ್ನು ಬದಿಗೊತ್ತಿ ಈಗ ಈ ಸದನದಲ್ಲಿರತಕ್ಕ ಮಹತ್ತರವಾದ ಗೌರವನ್ನು ಉಳಿಸುವ ಮನಸ್ಸು ಮಾಡಬೇಕಾಗುತ್ತದೆ. ಮತ್ತು ಧರಣಿ ಮಾಡುತ್ತಾ ಇರತಕ್ಕ ಜನತಾ ದಳದವರೂ ಸಹ ಸ್ವಲ್ಪ ಮನಸ್ಸು ಮಾಡಬೇಕಾಗುತ್ತದೆ. ಅದನ್ನು ಬಿಟ್ಟು ತಮ್ಮದ್ದೇ ಆದ ಪ್ರತಿಷ್ಠೆಗೆ ಅವರು ಹೋಗತಕ್ಕ ಮಾತನ್ನು ನಾನು ಒಪ್ಪುವುದಿಲ್ಲ. ಮತ್ತೊಂದು ವಿಷಯ. ಮಾನ್ಯ ಮುಖ್ಯಮಂತ್ರಿಗಳು ತಮ್ಮ ಗಡಸು ಧ್ವನಿಯಿಂದ ಸ್ವಲ್ಪ ಇಳಿದಿದ್ದಾರೆ ಎನ್ನುವುದಕ್ಕೆ ಒಂದು ನಿದರ್ಶನ ಇದೆ; ಅದೇನೆಂದರೆ,

11.45 ಎ.ಎಂ.

ಒಂದು ಸದನ ಸಮಿತಿಯನ್ನು ನೇಮಕ ಮಾಡಿ ಅದು ಆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ನಂತರ ನ್ಯಾಯಾಂಗ ತನಿಖೆ ಮಾಡಬೇಕೆಂದು ಆ ಸದನ ಸಮಿತಿ ಹೇಳಿದರೆ ನಾವು ನ್ಯಾಯಾಂಗ ತನಿಖೆ ಮಾಡುವುದಕ್ಕೆ ಸಿದ್ಧರಿದ್ದೇವೆ ಎನ್ನುವಂಥ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ನಾನು ಇತರ ಮಾನ್ಯ ಸದಸ್ಯರುಗಳಿಗೆ ಹೇಳುತ್ತಿದ್ದೇನೆ; ಇವೊತ್ತೇ ಬೇಕಾದರೆ ಸದನ ಸಮಿತಿ ನೇಮಕ ಈ ಕ್ಷಣವೇ ನಾವು ಅಲ್ಲಿಗೆ ಹೋಗಿ ಈ ಸಂಜೆಯೊಳಗಾಗಿ ಆ ಕುರಿತು ವರದಿಯನ್ನು ಒಪ್ಪಿಸಿದರೂ ಸರ್ಕಾರ ನ್ಯಾಯಾಂಗ ತನಿಖೆ ಮಾಡಿಸಲು ಕ್ರಮ ಕೈಗೊಳ್ಳಬೇಕಾಗುತ್ತದೆ. ಆದರೆ, ನಾನು ಕಳಕಳಿಯಿಂದ ಪ್ರಾರ್ಥಿಸಿಕೊಳ್ಳುತ್ತಿರುವುದೇನೆಂದರೆ, ಇಲ್ಲಿರುವ ಒಬ್ಬಿಬ್ಬರು ಸದಸ್ಯರು ಅಲ್ಲಿಗೆ ಹೋಗಲು ಸಿದ್ಧರಿಲ್ಲವೆಂದರೆ ನಾವು, ರೈತ ಸಂಘದವರು ಮತ್ತು ಬಿ.ಜೆ.ಪಿ. ಯವರು ಹೋಗುವುದಕ್ಕೆ ಸಿದ್ಧರಿದ್ದೇವೆ. ಸದನ ಸಮಿತಿ ನೇಮಿಸಿ ನಮ್ಮನ್ನು ಕಳುಹಿಸಿಕೊಡಿ; ನಾವು ಅಲ್ಲಿಗೆ ತೆರಳಿ ವಿಚಾರಿಸಿ ನಾಳೆಯೊಳಗಾಗಿ ಒಂದು ವರದಿಯನ್ನು ತೆಗೆದುಕೊಂಡು ಬರುತ್ತೇವೆ. ನಂತರ, ಆ ವರದಿ ಆಧಾರದ ಮೇಲೆ ಸರ್ಕಾರ ತೀರ್ಮಾನಕ್ಕೆ ಬರಲಿ. ಇದಕ್ಕೆ ಪೂರ್ವಭಾವಿಯಾಗಿ ಈಗ ತಾವು ಒಂದು ನಿರ್ಣಯವನ್ನು ಮಂಡಿಸಿ ಯಾರ್‍ಯಾರನ್ನು ಅಮಾನತ್ತುಗೊಳಿಸಿದ್ದೀರಿ, ಅದನ್ನು ರದ್ದು ಮಾಡಿ, ಅವರೆಲ್ಲರೂ ಒಳಗಡೆ ಬರಬೇಕೆಂದೂ, ಎರಡನೆಯದಾಗಿ, ಈಗ ಸದನವನ್ನು ಅರ್ಧ ಗಂಟೆ ಮುಂದೂಡಿ ತಮ್ಮ ಕಾರ್ಯಾಲಯಕ್ಕೆ ಕರೆದು ಈ ಕುರಿತು ಮಾತುಕತೆಯಾಡಿದರೆ ಒಂದು ತಿಳಿ ವಾತಾವರಣ ಬರುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ದಯವಿಟ್ಟು ತಾವು ಆ ಕೆಲಸ ಮಾಡಬೇಕು.

ಶ್ರೀ ಅಜೀಜ್ ಸೇಠ್ : ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ಈ ಸಾಲಿನ ಆಯವ್ಯಯ ಪತ್ರವನ್ನು ಮಂಡಿಸಿದ ದಿವಸದಿಂದ ಮತ್ತು ಅದರ ಮಾರನೆ ದಿವಸದಿಂದ ಯಾವುದೇ ಕಾರ್ಯ ಕಲಾಪಗಳು ನಡೆಯುತ್ತಿಲ್ಲ, ಮುಂದಕ್ಕೂ ನಡೆಯುವುದಿಲ್ಲ. ಆದುದರಿಂದ, ವೋಟ್ ಆನ್ ಅಕೌಂಟ್ ತೆಗೆದುಕೊಂಡು ವಿಧಾನಸಭೆಯನ್ನು ಮುಂದೂಡಿ.

ಶ್ರೀ ವಾಟಾಳ್ ನಾಗರಾಜ್ : ಇದು ಸರಿಯಲ್ಲ. ಸದನದಲ್ಲಿ ಏನಿದು? ಸದನವೆಂದರೆ ಗೌರವವಿಲ್ಲವೆ? ಇದನ್ನು ಯಾರಾದರೂ ಒಪ್ಪುತ್ತಾರೆಯೇ? ಇದು ಸಾಧ್ಯವಿಲ್ಲ. ಇದೇನೂ ಅವರ ಸ್ವಂತ ಆಸ್ತಿಯಲ್ಲ.

ಅಧ್ಯಕ್ಷರು : ಅವರಿಗೂ ಸದನದಲ್ಲಿ ಮಾತನಾಡುವ ಹಕ್ಕು ಇರುವುದರಿಂದ ಹೇಳಲಿ. ತಾವು ಸಹ ಮಾತನಾಡಿ.

ಶ್ರೀ ಅಜೀಜ್ ಸೇಠ್ : ಅವರು ಸದನವನ್ನು ನಡೆಸುವುದಕ್ಕೆ ಅವಕಾಶ ಕೊಡಬಾರದೆಂಬ ತೀರ್ಮಾನ ಮಾಡಿದ್ದಾರೆ. ಆದುದರಿಂದ, ವೋಟ್ ಆನ್ ಅಕೌಂಟ್ ತೆಗೆದುಕೊಂಡು ವಿಧಾನಸಭೆಯನ್ನು ಮುಂದೂಡಿ ಅವರನ್ನು ಮನೆಗೆ ಕಳುಹಿಸಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈಗ ಸತ್ಯ ಏನೆಂದು ಗೊತ್ತಾಯಿತು ತಾನೆ? ಇವರು ಗಲಾಟೆ ಮಾಡಬೇಕು, ಧರಣಿ ಕುಳಿತುಕೊಳ್ಳಬೇಕು, ರಾಜ್ಯದಲ್ಲಿ ಲಾ ಅಂಡ್ ಆರ್ಡರ್ ಸಿಚ್ಯುಯೇಷನ್ ಕೆಟ್ಟಿದೆ. ಹೀಗಿದ್ದರೂ ಬಜೆಟ್ ಅನ್ನು ಪಾಸ್ ಮಾಡಿಕೊಂಡು ಹೋಗಬೇಕು. ಅವರು ಹೇಳಿದ ಅರ್ಥವೇನು? ಇಲ್ಲೊಂದು ತಂತ್ರ ನಡೆಯುತ್ತಿದೆ. ಸದನದ ಕಾರ್ಯಕಲಾಪಗಳನ್ನು ನಡೆಸದೆ, ರಾಜ್ಯದ ಜ್ವಲಂತ ಸಮಸ್ಯೆಗಳ ಕುರಿತು ಚರ್ಚೆಯಾಗದೆ ಬಜೆಟ್ ಪಾಸ್ ಮಾಡಿಕೊಂಡು ಹೋಗುವ ತಂತ್ರ ಸದನದಲ್ಲಿ ನಡೆದಿದೆ.

+ ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಯವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದಂಥ ವಾಟಾಳ್ ನಾಗರಾಜ್‌ರವರು ಬಹಳ ಗಹನವಾದಂಥ ಸೂಚನೆಯನ್ನು ಮಂಡಿಸಿದ್ದಾರೆ. ಅದಕ್ಕೆ ಪೂರ್ವಭಾವಿಯಾಗಿ ಮಾನ್ಯ ಸದಸ್ಯರಾದಂಥ ಡಾ: ಜೀವರಾಜ್ ಆಳ್ವರವರು ಈಗ ಒದಗಿ ಬಂದಿರತಕ್ಕಂಥ ಈ ಪರಿಸ್ಥಿತಿಯನ್ನು ತಿಳಿ ಮಾಡುವ ದಿಕ್ಕಿನಲ್ಲಿ ಸರ್ಕಾರ ಪ್ರತಿಷ್ಠೆ ಮೇಲೆ ನಿಲ್ಲಬಾರದು ಎನ್ನತಕ್ಕಂಥ ವಿಶ್ಲೇಷಣೆ ಮಾಡುವ ಕಾಲದಲ್ಲಿ partisan attitude ನಿಂದ ಚುನಾವಣೆಗಳು ನಡೆದಿದೆ ಎನ್ನತಕ್ಕಂಥ ಆರೋಪ ಮಾಡಿದ್ದಾರೆ, ಮತ್ತು ಒಂದು ಸೂಕ್ಷ್ಮವಾದಂಥ ವಿಚಾರವನ್ನು ಅವರು ಪ್ರಸ್ತಾಪಿಸಿದರು. ಅವರು ಇದನ್ನು ಪ್ರಸ್ತಾಪಿಸದೇ ಇದ್ದಿದ್ದರೆ ನಾನು ಇದರ ಗೋಜಿಗೆ ಹೋಗುತ್ತಿರಲಿಲ್ಲ. ಏನೆಂದರೆ, ನಾವು ಮುಖ್ಯಮಂತ್ರಿಗಳ ಜೊತೆ ಶಾಮೀಲಾಗಿಲ್ಲವೆಂದು ತೋರಿಸುವುದಕ್ಕೋಸ್ಕರ.... ನನಗೆ ಇದೊಂದು ಚಿದಂಬರ ರಹಸ್ಯವಾಗಿ ಉಳಿದಿರತಕ್ಕಂಥಾದ್ದು. ನ್ಯಾಯಾಂಗ ತನಿಖೆ ಮಾಡಬೇಕೆಂದು ಅಪೇಕ್ಷೆ ಮಾಡಿ ಕೇಳತಕ್ಕಂಥ ಕಾಲದಲ್ಲಿ, ಒತ್ತಾಯಿಸತಕ್ಕಂಥ ಕಾಲದಲ್ಲಿ ಆ ಪರಿಸ್ಥಿತಿಯಲ್ಲಿ ಏನು ನಡೆದಿದೆ ಎನ್ನುವ ಆಧಾರದ ಮೇಲೆ ನಾವು ನ್ಯಾಯಾಂಗ ತನಿಖೆಗಾಗಿ ಕೇಳಬೇಕು. ಮಧುಗಿರಿಯ ಪ್ರಕರಣದಲ್ಲಾಗಲಿ, ಮತ್ತೊಂದು ಪ್ರಕರಣದಲ್ಲಾಗಲಿ ನ್ಯಾಯಾಂಗ ತನಿಖೆಯನ್ನು ಆಗಿನ ವಿಧಾನ ಸಭೆಯಲ್ಲಿ ಡಿಮಾಂಡ್ ಮಾಡಿದಾಗ ಒಂದು ವಿಶೇಷವಾದ ಬೆಳವಣಿಗೆ ಇತ್ತು. ಆದುದರಿಂದ ನ್ಯಾಯಾಂಗ ತನಿಖೆಗೆ ಒಪ್ಪಲಾಗಿತ್ತು. ಆದಾದ ಮೇಲೆ ಹಲವಾರು ನ್ಯಾಯಾಂಗ ತನಿಖೆಗಳನ್ನು ಈ ಹಿಂದಿನ ಸರ್ಕಾರಗಳು ಮಾಡಿವೆ. ಈ ಸರ್ಕಾರವು ಕೂಡ ನ್ಯಾಯಾಂಗ ತನಿಖೆಗೆ ವಿರುದ್ಧ ಇಲ್ಲ. ಆದರೆ ಒಂದು ನ್ಯಾಯಾಂಗ ತನಿಖೆ ಮಾಡಬೇಕಾದರೆ ಅದಕ್ಕೆ ಪ್ರೈಮ ಫೇಸಿ ಒಂದು ಕೇಸನ್ನು ನೀವು ಕೊಡಬೇಕಾಗಿದೆ. ಇದುವರೆಗೆ ನೀವು ಕಳೆದ ಐದು ದಿವಸಗಳ ರೆಕಾರ್ಡನ್ನು ಮಾನ್ಯ ಡಾ: ಆಳ್ವರವರು ಹೋಗಿ ನೋಡಲಿ, ಯಾರಾದರೂ

ಒಬ್ಬ ಮಾನ್ಯ ಸದಸ್ಯರು ಪೋಲೀಸರ ಮೇಲೆ ಏನಾದರೂ ಆರೋಪಣೆ ಮಾಡಿದ್ದಾರೆಯೇ? ನ್ಯಾಯಾಂಗ ತನಿಖೆ ಪ್ರಶ್ನೆ ಯಾವಾಗ ಬರುತ್ತದೆ ಎಂದರೆ ನೇರವಾಗಿ ಪೋಲೀಸರು ಅತಿಕ್ರಮ ಮಾಡಿದ್ದಾರೆ ಎಂದು ನೇರವಾಗಿ ಆರೋಪಣೆ ಮಾಡಿದಾಗ ನ್ಯಾಯಾಂಗ ತನಿಖೆ ಪ್ರಶ್ನೆ ಸಹಜವಾಗಿ ಉದ್ಭವಿಸುತ್ತದೆ. ನಿಮ್ಮ ಪ್ರಶ್ನೆ ಏನಾಗಿದೆ ಎಂದರೆ ಮಾನ್ಯ ಹೆಗಡೆಯವರು ಇಲ್ಲಿ ಇದ್ದು ಭಾಷಣ ಮಾಡುವಾಗ ಏಳು ಜನ ಅಮಾಯಕರು ಸತ್ತಿದ್ದಾರೆ; ಅಷ್ಟೇ ಸಾಕು ನ್ಯಾಯಾಂಗ ತನಿಖೆ ಮಾಡಿ ಎಂದು ಹೇಳುತ್ತಾರೆ. ಈ ರಾಜ್ಯದಲ್ಲಾಗಲಿ, ಈ ದೇಶದಲ್ಲಾಗಲಿ, ಲಾ ಅಂಡ್ ಆರ್ಡರ್ ಅದನ್ನು ಮೇಂಟೇನ್ ಮಾಡತಕ್ಕಂತಹ, ಅದನ್ನು ನಿರ್ವಹಣೆ ಮಾಡತಕ್ಕಂತಹ ಜವಾಬ್ದಾರಿ ಯಾರು ಸರ್ಕಾರ ನಡೆಸುತ್ತಾರೋ ಅವರ ಮೇಲೆ ಇದೆ. ಆದುದರಿಂದ ಗೋಲಿಬಾರಿನಿಂದ ಎಲ್ಲಿ ಜನ ಸಾಯುತ್ತಾರೋ ಅಲ್ಲಿ ತತಕ್ಷಣ ನಾವು ನ್ಯಾಯಾಂಗ ತನಿಖೆ ಮಾಡಬೇಕು ಎನ್ನುವ ಒಂದು ಸಾರ್ವತ್ರಿಕ ನಿರ್ಧಾರ ತೆಗೆದುಕೊಂಡರೆ ಅದು ಬೇರೆ ವಿಚಾರ. ಅದಕ್ಕೋಸ್ಕರ ಸ್ವಾತಂತ್ರ್ಯ ಬಂದ ಮೇಲೆ ನಾವು ಎಲ್ಲೆಲ್ಲಿ ಗೋಲಿಬಾರ್ ಆಗುತ್ತದೆ ಅಲ್ಲಿ ತಾನೇ ತಾನಾಗಿ It is somekind of insulation, it is some kind of inbuilt safety. ಮತ್ತೊಂದು ಮಾತು ಹೇಳಿದರು. ಸ್ವಲ್ಪ ಕರೆಸಿ ಮಾತನಾಡಿ ಅಂತ. ಮೂರು ದಿವಸಗಳಿಂದ ಸತತವಾಗಿ ಕರೆಸಿ ಮಾತನಾಡಿದರು. ಯಾರ್‍ಯಾರ ಜೊತೆಯಲ್ಲಿ ಮಾತನಾಡಬೇಕೋ ಅವರೆಲ್ಲರ ಜೊತೆಯಲ್ಲಿ ಮುಖ್ಯ ಮಂತ್ರಿಗಳು ಮಾತನಾಡಿದ್ದಾರೆ. ಹೆಸರು ಹೇಳಿ ಪ್ರಯೋಜನವಿಲ್ಲ. ಯಾರ್‍ಯಾರ ಜೊತೆಯಲ್ಲಿ ಮಾತನಾಡಿದರೆ ಈ ಕಗ್ಗಂಟು ಬಿಡಿಸುವುದಕ್ಕೆ ಸಾಧ್ಯ ಅಂತ ಹೇಳಿ ಅವರ ಮನಸ್ಸಿಗೆ ತಿಳುವಳಿಕೆ ಬಂತೋ ಅವರ ಜೊತೆಯಲ್ಲೆಲ್ಲ ತಮ್ಮ ಸ್ವಪ್ರತಿಷ್ಠೆಯನ್ನು ಬಿಟ್ಟು ಅವರು ಮಾತನಾಡಿದ್ದಾರೆ. ನೀವು ಕೆಳಗೆ ಇಳಿಯಿರಿ ಎಂದು ಹೇಳಿದರೆ ನೆಲದಿಂದ ಕೆಳಗೆ ಹೋಗಲಿಕ್ಕೆ ಸಾಧ್ಯವಿಲ್ಲ. ಈ ಗೌರವಾನ್ವಿತ ಸದನದ ಸಮಿತಿಗಿಂತಲೂ ನ್ಯಾಯಾಂಗ ತನಿಖೆಗೆ ನೀವು ಹೆಚ್ಚು ಮಹತ್ವ ಕೊಡುತ್ತೀರೇನು? ನಿಮ್ಮ ಪ್ರತಿಷ್ಠೆಯ ಪ್ರಶ್ನೆ ಏನಾಯಿತು? ನೀವು ಆಬ್ಜೆಕ್ಟೀವ್ ಆಗಿ ಇರುವುದಕ್ಕೆ ಸಾಧ್ಯವಿಲ್ಲವೇ? ಕುಷ್ಟಗಿ ಪ್ರಕರಣದಲ್ಲಿ ನಿಮ್ಮ ಹೇಳಿಕೆ ಮೇಲೆ ಎಡಬಲ ನೋಡದೆ ಹಿಂದೆ ಮುಂದೆ ನೋಡದೆ, ಯಾರಿಗೂ ಹೇಳದೆ ಕೇಳದೆ ಈ ಸದನ ಸಮಿತಿಯನ್ನು ರಚನೆ ಮಾಡಲಾಯಿತು. ಇವತ್ತು ಒಂದು ಹೆಜ್ಜೆ ಮುಂದೆ ಹೋಗಿದ್ದೇವೆ. ನಾವು ಪ್ರತಿಷ್ಠೆ ಮೇಲೆ ನಿಲ್ಲಲಿಲ್ಲ ಎಂಬುದಕ್ಕೆ ಮಾನ್ಯ ವಾಟಾಳ್ ನಾಗರಾಜ್‌ರವರು ಸಾಕ್ಷಿ. ಅವರು ಸರ್ವ ತಂತ್ರ ಸ್ವತಂತ್ರ ವ್ಯಕ್ತಿ. ಹಲವಾರು ಬಾರಿ ಅವರು ವಸ್ತು ನಿಷ್ಠವಾಗಿ ಹೇಳಿದ್ದಾರೆ. ಮುಖ್ಯ ಮಂತ್ರಿಗಳು ಪ್ರತಿಷ್ಠೆಯ ಮೇಲೆ ನಿಲ್ಲಲಿಲ್ಲ, ಪ್ರತಿಷ್ಠೆಯ ಮೇಲೆ ನಿಲ್ಲುತ್ತೇವೆಂದು ಹೇಳಿದ್ದಾರೆ. ಸದನ ಸಮಿತಿ ಬೇಡ ಎಂದು ಹೇಳಬೇಕಾಗಿತ್ತು. ಮತ್ತು ಕ್ವಾಲಿಫೈಡ್ ಸದನ ಸಮಿತಿ ಏನೆಂದರೆ ಮಾನ್ಯ ಗೌರವಾನ್ವಿತ ಸದಸ್ಯರು ಅಲ್ಲಿ ಹೋಗಿ ನೋಡಲಿ. ಜನರ ಹತ್ತಿರ ವಿಚಾರಿಸಿ ಪ್ರೈಮ ಫೇಸಿಗೆ ಅವರಿಗೆ "even a semblance of evidence that is the phrase which he has used.

ಸ್ವಲ್ಪ ನಮಗೆ ಅಲ್ಲಿ ಪೋಲೀಸರದ್ದು ಎಕ್ಸೆಸ್ ಆಯಿತು ಎನ್ನತಕ್ಕಂತಹ ಸುಳ್ಳನ್ನು ಗೊತ್ತಾದರೆ ತಾವು ಬಂದು ನನಗೆ ವರದಿ ಕೊಡಿ. ಆ ವರದಿಯ ಆಧಾರದ ಮೇಲೆ ನಾವು ನ್ಯಾಯಾಂಗ ತನಿಖೆ ಮಾಡುತ್ತೇವೆ. ಯಾವ ಜವಾಬ್ದಾಯುತ ಮುಖ್ಯ ಮಂತ್ರಿ ಇದಕ್ಕಿಂತಲೂ ಹೆಚ್ಚು ಹೋಗ ಬಲ್ಲ ಎನ್ನುವುದನ್ನು ತಾವು ಯೋಚನೆ ಮಾಡಿ. ನಿಜ ಇದೊಂದು ದುರಾದೃಷ್ಟಕರವಾದ ಬೆಳವಣಿಗೆ. ಸದನದ ವಿರೋಧಪಕ್ಷದ ನಾಯಕರನ್ನು ಇತರ ಹಿರಿಯ ಸದಸ್ಯರನ್ನು ಹೊರಗೆ ಹಾಕಿ ಸಿಂಧ್ಯರವರಂತಹ ಮಾನ್ಯ ಸದಸ್ಯರನ್ನು ಬಾವಿಯಲ್ಲಿ ನಿಲ್ಲಿಸಿ ನಾವು ಈ ಸದನದ ಕೆಲಸ ಕಾರ್ಯಗಳನ್ನು ಮಾಡಬೇಕಾಗಿರತಕ್ಕಂತಹದ್ದು ಬಹಳ ದುರದೃಷ್ಟಕರವಾದ ಬೆಳವಣಿಗೆ. ಆದರೆ ನನ್ನ ಜ್ಞಾಪಕ ಹಿಂದಿನ ದಿನಗಳಿಗೆ ಹೋಗುತ್ತದೆ. 1985-86-87ರ ಜ್ಞಾಪಕ ಇಲ್ಲಿ ಇಲ್ಲೇ

66 ಜನ ನಮ್ಮ ಕಾಂಗ್ರೆಸ್ ಪಕ್ಷದ ಸದಸ್ಯರು ಧರಣಿ ಹೂಡಿದ್ದರು. ಆಗ ನಮ್ಮ ಹೆಚ್.ಟಿ. ಚೌಡಯ್ಯನವರು ಇಲ್ಲಿ ಸದಸ್ಯರಾಗಿದ್ದರು. ಅವರು ಇಲ್ಲಿ ಧರಣಿ ಕುಳಿತು ಹೊರಗಡೆ ಹೋಗುವುದಿಲ್ಲ ಎಂದರು. ಆಗ ಅವರಿಗೆ ನಮ್ಮ ಮನೆಯಿಂದ ರಾಗಿಮುದ್ದೆಯನ್ನು ಕಳುಹಿಸಿದ ಜ್ಞಾಪಕ ನನಗೆ ಜ್ಞಾಪಕ ಬರುತ್ತಿದೆ.

ಶ್ರೀ ವಾಟಾಳ್ ನಾಗರಾಜ್ : ಈಗಲೂ ಇವರು ಇಲ್ಲೇ ಇರುತ್ತೇವೆ, ಎಂದರೆ ರಾಗಿ ಮುದ್ದೆ ಕೊಡೋಣ.

ಶ್ರೀ ಎಸ್.ಎಂ. ಕೃಷ್ಣ: ಅದುದರಿಂದ ಸರ್ಕಾರದ ಮೂಲಕ ಈ ಮಾತುಕತೆಯಾಗಬೇಕೆಂದು ಶ್ರೀ ವಾಟಾಳ್ ನಾಗರಾಜ್‌ರವರು ಹೇಳಿದ್ದಾರೆ. ಜಾನ್ ಕೆನಡಿಯವರು "Let us not negotiate out of fear. But let us never fear to negotiate ಎಂದು ಹೇಳಿದರು.

ಆದ್ದರಿಂದ ಧಾರಾಳವಾಗಿ ಅಧ್ಯಕ್ಷರ ಕೊಠಡಿಗೆ ಬನ್ನಿ, ನಾವೂ ಬರುತ್ತೇವೆ. ಈಗ ಮತ್ತೊಂದು ಸಲಹೆ ಮಾಡಿದ್ದೀರಿ. ನಾನು ಮತ್ತು ಗೌರವನಾನ್ವಿತ ಸಚಿವರಾದ ಶ್ರೀ ರಂಗನಾಥ್‌ರವರು ಮತ್ತು ಪಾರ್ಲಿಮೆಂಟರಿ ಸಚಿವರಾದಂತಹ ಶ್ರೀ ಹಾರನಹಳ್ಳಿ ರಾಮಸ್ವಾಮಿಯವರು ಈಗಾಗಲೇ ಈ ವಿಚಾರವನ್ನು ಸದನದ ಮುಂದೆ ಇರಬೇಕೆಂದು ತೀರ್ಮಾನ ಮಾಡಿಕೊಂಡಿದ್ದೆವು. ಏನೆಂದರೆ ಬೇಷರತ್ತಾಗಿ ಈ ಸದನ ಏನು ತೀರ್ಮಾನ ತೆಗೆದುಕೊಂಡಿದೆ, ಅದನ್ನು ರಿವೋಕ್ ಮಾಡಿ ಅವರಿಗೆ ಮತ್ತೆ ಆಹ್ವಾನವನ್ನು ಕೊಟ್ಟು, ಸದನದ ಸಭೆಯಲ್ಲಿ ಅವರೂ ಸಕ್ರಿಯವಾಗಿ ಪಾಲ್ಗೊಳ್ಳಲಿ ಎನ್ನುವಂತಹ ನಿರ್ಣಯವನ್ನು ಮಾಡಬೇಕು ಎಂದು ಸಿದ್ಧರಾಗಿಯೇ ಬಂದಿದ್ದು. ಅಷ್ಟರಲ್ಲಿ ಮಾನ್ಯ ಅಜೀಜ್‌ಸೇಟ್ ಅವರು ಎದ್ದರು, ಡಾ|| ಜೀವರಾಜ ಆಳ್ವಾ ಅವರು, ಮಾನ್ಯ ಯಡಿಯೂರಪ್ಪನವರು ಎದ್ದರು. ಮಾನ್ಯ ಅಜೀಜ್‌ಸೇಟ್ ಅವರಿಗೆ ಇದೆಲ್ಲವನ್ನು ನೋಡಿ ಅವರಿಗೆ ಬಹಳ ಜಿಗುಪ್ಸೆ, ಬಂದಿದೆ. ನಮ್ಮ ಪಾರ್ಲಿಮೆಂಟರಿ ಪ್ರಜಾಸತ್ತೆಯನ್ನು ಇಡೀ ರಾಜ್ಯ ನಮ್ಮ ಕಡೆ ನೋಡುತ್ತಿದೆ. ಆದುದರಿಂದ ನೀವು ಪ್ರತಿಷ್ಠೆಯನ್ನು ಬಿಡಿ.

ಶ್ರೀ ವಾಟಾಳ್ ನಾಗರಾಜ್ : ಅವರು ಹಗಲು ರಾತ್ರಿ ಮೂರು ದಿನ ಸತ್ಯಾಗ್ರಹ ಮಾಡಿದ್ದರು.

ಶ್ರೀ ಎಸ್.ಎಂ. ಕೃಷ್ಣ: ನಾವೆಲ್ಲ ಒಂದೇ ಗರಡಿಯಲ್ಲಿ ಸಾಮು ಮಾಡಿದಂತಹ ವ್ಯಕ್ತಿಗಳು. ಆದುದರಿಂದ ಅಲ್ಲಿ, ಇಲ್ಲಿ ಎಲ್ಲಾ ಕಡೆ ಓಡಾಡಿ ಈಗ ಇವೆಲ್ಲ ನಡೆದಿರತಕ್ಕದ್ದು. ಆ ದೃಷ್ಟಿಯಿಂದ ಮಾನ್ಯ ವಾಟಾಳ್ ನಾಗರಾಜ್‌ರವರ ಸಲಹೆಗೆ ನನ್ನ ಮತ್ತು ಸರ್ಕಾರದ ಪೂರ್ಣ ಸಹಮತವಿದೆ. ಮಾನ್ಯ ಸದಸ್ಯರುಗಳನ್ನು ಪ್ರಶ್ನೋತ್ತರದ ನಂತರ ಅಧ್ಯಕ್ಷರ ಕೊಠಡಿಗೆ ಕರೆಯುತ್ತೇವೆ. ಅಲ್ಲಿ ಮಾತನಾಡಿ ಒಂದು ಇತ್ಯಾರ್ಥಕ್ಕೆ ಬರೋಣ.

ಡಾ|| ಜೀವರಾಜ ಆಳ್ವ : ಮಾನ್ಯ ಕೃಷ್ಣರವರು ನನ್ನ ಭಾಷಣಕ್ಕೆ ವಿಶ್ಲೇಷಣೆಯನ್ನು ಕೊಟ್ಟರು. ಒಂದು ಮಾತನ್ನು ಸೂಚ್ಯವಾಗಿ ಹೇಳುವುದೆಂದರೆ ಮೂರು ದಿವಸಗಳ ಅಧಿವೇಶನದಲ್ಲಿ ನಡೆದಂತಹ ನಡವಳಿಕೆಯಲ್ಲಿ There was no strong plea for the judicial probe. What can be the minimal? When the entire fabric of democratic system of which....

SRI K.H. RANGANTH : from any Member in respect of Police excesses...

DR. JEEVARAJ ALVA : I am going beyond that. That is exactly what I want to streads. The entire democratic fabric is being destroyed. ಯಾವ ಪ್ರಜಾಪ್ರಭುತ್ವದ ಬುನಾದಿಯ ಮೇಲೆ ಈ ರಾಜ್ಯವನ್ನು, ಈ ರಾಷ್ಟ್ರವನ್ನು ಕಟ್ಟಿದ್ದೇವೆ

ಎಂಬ ಮಾತನ್ನು ಕೊಟ್ಟಿದ್ದಾರೋ, ಅಧಿಕಾರ ವಿಕೇಂದ್ರೀಕರಣ ಮಾಡುತ್ತೇವೆಂದು ಹೇಳಿದ್ದಾರೋ, ಯಾವ ಪ್ರಜಾಪ್ರಭುತ್ವದ ಆಧಾರದ ಮೇಲೆ ಈ ವಿಧಾನ ಸಭೆಗೆ ಗೆದ್ದು ಬಂದಿದ್ದೇವೆಯೋ ಅದಕ್ಕೆ ಧಕ್ಕೆ ಬಂದಿದೆ. ನೀವು ನಮ್ಮಿಂದ ಆಗಿದೆ ಎಂದು ಹೇಳಬಹುದು. ಸರ್ಕಾರವನ್ನು ಉಪಯೋಗಿಸಿ ಮಾಡಿದ್ದೇವೆಂದು ಹೇಳಿಬಹುದು. ಬಿ.ಜೆ.ಪಿ. ಯವರು ನೀವು ಇಬ್ಬರೂ ಶಾಮೀಲಾಗಿ ಮಾಡಿದ್ದೇವೆ. ಎಂಬ ದೊಡ್ಡ ಆರೋಪವನ್ನು ನಮ್ಮ ಮೇಲೆ ಹೇಳಬಹುದು. ನಾನು ಅದಕ್ಕೆ ಹೇಳಿದ್ದೇನೆ. ಈ ಏಳು ಸಾವು because of the firing and the reasons for it and the political implications. ಅದನ್ನು ಅರ್ಥಮಾಡಿಕೊಳ್ಳುವುದಕ್ಕೆ ಜೂಡಿಶಿಯಲ್ ಪ್ರೋಬ್ ಮಾಡಿ ಎಂದು ಕೇಳುತ್ತಿದ್ದೇವೆ. ಈ ಏಳು ಮರಣಗಳು ಯಾವುದಾದರೂ ಮತೀಯ ಗಲಭೆಯಿಂದ ಆಯಿತಾ, ಡಕಾಯಿತಿಯಿಂದ ಆಯಿತಾ? ಇವತ್ತು ಕರ್ನಾಟಕದಲ್ಲಿ ಏಳು ಜನರು ಸತ್ತಿದ್ದಾರೆ ಅದು ಮೇಲ್ವರ್ಗದ ಜಾತಿಯೇ ಇರಲಿ, ಅವರು ಕರ್ನಾಟಕ ಸಾಮಾನ್ಯ ಪ್ರಜೆಗಳೇ ಇರಲಿ ಈ 7 ಜನರು ಏಕೆ ಸತ್ತರು. ನಮ್ಮ ಪ್ರಜಾಪ್ರಭುತ್ವ The experiment that you have meted out on the people of Karnataka, Is'nt that true?

ಇವತ್ತು ನಾಲ್ಕು ಕೋಟಿ ಕನ್ನಡಿಗರ ಮೇಲೆ, ಕರ್ನಾಟಕ ಜನತೆಯ ಮೇಲೆ ಜಿಲ್ಲಾ ಪರಿಷತ್ತು ಎಕ್ಸ್‌ಪರಿಮೆಂಟ್ ಅಂತೆ, ಅದು ಏನೇ ಇರಲಿ, it may not be palatable; may be 30% to 40% of the people are against the Electoral system.

ನೀವು ಜಿಲ್ಲಾಪರಿಷತ್ತು ಮತ್ತು ಮಂಡಲ್ ಪಂಚಾಯತ್ ಬಗ್ಗೆ ಬಜೆಟ್ ಭಾಷಣದಲ್ಲಿ ಹೇಳಿದ್ದೀರಿ. ಮುಂದಿನ ಬಜೆಟ್ ಭಾಷಣದಲ್ಲಿ ಪ್ರಥಮಾಂತದಲ್ಲಿ ಈ ಏಳು ಜನರು ಹೇಗೆ ಸತ್ತರು ಎಂದು ಹೇಳುವುದಕ್ಕೆ ತಯಾರಾಗಿದ್ದೀರಾ ನೀವು? ಇವತ್ತು ಜನತಾದಳದ ಕಾರ್ಯಾಧ್ಯಕ್ಷನಾಗಿ ನಾನು ಹೇಳುತ್ತಿದ್ದೇನೆ. Our experiment, our lapses, our inherent, weaknesses and political failure on the part of every political Party, I do not deny.

ಇವತ್ತು ಜನತಾ ದಳದ ಕಾರ್ಯಾಧ್ಯಕ್ಷನಾಗಿ ನಾವು ಹೇಳುತ್ತಿದ್ದೇನೆ ನಮ್ಮಿಂದಲೇ ತಪ್ಪಾಗಿದೆ. ಇಲ್ಲ ಎಂದು ಹೇಳುವುದಕ್ಕೆ ತಯಾರಾಗಿಲ್ಲ. ಆದರೆ ಗುರುತರವಾದ ಆಪಾದನೆಯನ್ನು ಹೊತ್ತು ಕೊಳ್ಳುವುದಕ್ಕೆ ತಯಾರಾಗಿಲ್ಲ. ಆದರೆ ನಾವು ರಾಜಕೀಯ ವ್ಯಕ್ತಿಗಳಾಗಿ ವೈಯಕ್ತಿಕವಾಗಿ ಪಂಚಾಯತ್ ಚುನಾವಣೆಯಲ್ಲಿ ಗೆಲ್ಲುವುದಕ್ಕೆ ಯಾರೋ ಒಬ್ಬರು ಈ ರೀತಿ ಮಾಡಿರಬಹುದು. Our accusation against you is, you have used the official machinery. That is the most shameful act.

ಮಾನ್ಯ ಕೃಷ್ಣರವರು ನನ್ನ ಮಾತಿನ ಅರ್ಥ ಅರಿತರೂ ಕೂಡ ವಿಶ್ಲೇಷಣೆಗೆ ನಾನು ಹೋಗಿಲ್ಲ. ಶಾಮೀಲು ಎನ್ನುವುದು it is a very cursory thing. ಮಾನ್ಯ ಯಡಿಯೂರಪ್ಪನವರು ಪಾರ್ಲಿಮೆಂಟರಿ ಸದಸ್ಯರಾದ ಮಾನ್ಯ ದೇವೇಗೌಡರ ಹೆಸರನ್ನು ತಂದಿರುವುದು ಅನ್ಯಾಯ. In legislative function, sanity, sanctity..

ಶ್ರೀ ಬಿ.ಎಸ್. ಯಡಿಯೂರಪ್ಪ: ಸನ್ಮಾನ್ಯ ಅಧ್ಯಕ್ಷರೇ, ಪಾರ್ಲಿಮೆಂಟರಿ ಸಿಸ್ಟಂನಲ್ಲಿ ಅದು ಧರ್ಮ. ನಾನು ಅವರ ಹೆಸರನ್ನು ಬೇರೆ ಅರ್ಥದಲ್ಲಿ ತರಲಿಲ್ಲ. ಸದನದ ಸಮಿತಿ ಮಾಡುವುದರಿಂದ ಯಾವುದೇ ಉಪಯೋಗವಾಗುವುದಿಲ್ಲ ಎಂದು.....

ಶ್ರೀ ಹಾರನಹಳ್ಳಿ ರಾಮಸ್ವಾಮಿ: ನಮ್ಮ ಸಭೆಯ ಕಾರ್ಯಕಲಾಪಗಳು ಯಾವಾಗ ಪ್ರಾರಂಭ ಮಾಡಬೇಕು ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತಿದ್ದೇನೆ. ಶೂನ್ಯ ವೇಳೆಯಲ್ಲಿ ತಾವೆಲ್ಲಾ ಈ ಬಗ್ಗೆ ಮಾತನಾಡಿ.

ಅಧ್ಯಕ್ಷರು : ಇದೇ ಆದರೆ ಕಲಾಪವನ್ನು ಹೇಗೆ ನಡೆಸುವುದು ?

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರು ಈಲ್ಡ್ ಆಗಿದ್ದಾರೆ. ನನಗೆ ಅಧಿಕಾರ ಇಲ್ಲವೇ ಮಾತನಾಡುವುದಕ್ಕೆ. ಅಧ್ಯಕ್ಷರು ಅಪ್ಪಣೆ ಕೊಟ್ಟಮೇಲೂ ಸಹ. ಮಾನ್ಯ ಎಸ್.ಎಂ. ಕೃಷ್ಣನವರು ಹಿರಿಯ ಉಪ ಮುಖ್ಯಮಂತ್ರಿಗಳು ಬಹಳ ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ದಯಮಾಡಿ ಈ ಕಡೆ ಇರುವಂತಹ ಜನತಾ ದಳದ ಸ್ನೇಹಿತರು ಅದಕ್ಕೆ ಒಪ್ಪಿಗೆ ಕೊಟ್ಟು ನಾವು ಮುಂದೆ ಸಹಕರಿಸುತ್ತೇವೆ ಎನ್ನುವುದಾದರೆ ತಾವು ಅರ್ಧ ಗಂಟೆ ಸಭೆಯನ್ನು ಅಡ್ಜರ್ನ್ ಮಾಡಿ ಮಾತುಕತೆಗೆ ಕರೆಯುವುದು ಸೂಕ್ತ. ಇಲ್ಲಾ ಎನ್ನುವುದಾದರೆ ಸದನದ ಕಾರ್ಯಕಲಾಪಗಳು ನಡೆಯಲಿ, ಅನೇಕ ಜ್ವಲಂತ ಸಮಸ್ಯೆಗಳು ಚರ್ಚೆ ಆಗದೇ ಇರುವಂತಹ ಒಂದು ಪರಿಸ್ಥಿತಿ ಇದೆ. ದೇವೇಗೌಡರ ಬಗ್ಗೆ ನಾನು ಆರೋಪ ಮಾಡುತ್ತಾ ಇಲ್ಲ. ಆದರೆ ಹಿರಿಯ ಸದಸ್ಯರಾಗಿ ಮಾಜಿ ಮಂತ್ರಿಗಳಾಗಿ ಮತ್ತು ಲೋಕಸಭಾ ಸದಸ್ಯರಾಗಿ ಅವರು ಈ ಸದನ ಸಮಿತಿಯಿಂದ ಏನೂ ಉಪಯೋಗವಾಗುವುದಿಲ್ಲವೆನ್ನುವಂತಹ ಮಾತನ್ನು ಆಡಿರುವುದರಿಂದ ನಮಗೆ ಅಪಮಾನ ಮಾಡಿದಂತಾಗುತ್ತದೆ.

ಅದನ್ನು ಅನಿವಾರ್ಯವಾಗಿ ಇಲ್ಲಿ ಹೇಳಬೇಕಾಗುತ್ತದೆ. ಒಬ್ಬ ನ್ಯಾಯಾಧೀಶರಿಂದ ಜ್ಯುಡಿಷಿಯಲ್ ಎನ್‌ಕ್ವಯರಿ ಆಗಲು ನಾಲ್ಕು ತಿಂಗಳು ಆದರೆ ಆಗ ಯಾವ ಸರ್ಕಾರ ಬರುತ್ತದೋ, ಹೋಗುತ್ತದೋ ಗೊತ್ತಿಲ್ಲ. ಅದಕ್ಕಿಂತ ಒಳ್ಳೆಯ ಕೆಲಸ ನಾವು ಸದನದ ಸದಸ್ಯರೇ ಮಾಡಿಕೊಂಡು ಬರಬಹುದು. ನಾವು ಸಲಹೆ ಕೊಟ್ಟಂತೆ ಸರ್ಕಾರ ಮಾಡುತ್ತದೆ ಎಂದು ಹೇಳಿದಮೇಲೆ ಏಕೆ ಈ false prestige ಮೇಲೆ ನಿಂತುಕೊಂಡು ಯಾವುದೇ ಕಾರ್ಯಕಲಾಪ ನಡೆಯುದಂತೆ ಮಾಡುತ್ತೀರಿ. ಇಷ್ಟೇ ನಾನು ನಿಮಗೆ ಹೇಳುವುದಕ್ಕೆ ಇಚ್ಛೆ ಪಡುವಂತಾದ್ದು. ನಿಮ್ಮ ಮೇಲೆ ಏಕೆ ನಾನು ಆರೋಪ ಮಾಡಲಿ ? ಮಾನ್ಯ ದೇವೇಗೌಡರ ಬಗ್ಗೆ ಗೌರವ ಇದೆ. ಆದರೆ ಇತ್ತೀಚಿನ ದಿವಸಗಳಲ್ಲಿ ನೀವೆಲ್ಲಾ ಗೊಂದಲದಲ್ಲಿ ಇದ್ದೀರಿ. ಅದೇ ಸಮಸ್ಯೆ ಆಗಿರುವಂತಾದ್ದು. ಮಾನ್ಯ ಉಪಮುಖ್ಯಮಂತ್ರಿಗಳೇ ಹೇಳಿದರು, ಅದು ಚಿದಂಬರ ರಹಸ್ಯ ಎಂದು. ನೀವೇ ಅಲ್ಲಿ ಅನೇಕ ಸಚಿವರು ಜನತಾ ದಳದ ಮುಖಂಡರು ಹೇಳಿದ ಹಾಗೆ ಇವತ್ತು ಸರ್ಕಾರ ನಡೆಯುತ್ತಿದೆ ಎಂದು ಹೇಳಿದ್ದೀರಿ. ನೀವೇ ಆರೋಪ ಮಾಡುತ್ತಿದ್ದೀರಿ. ಹಾಗಿದ್ದರೆ ಅದು ಚಿದಂಬರ ರಹಸ್ಯವಾಗಿದೆಯೇ ? ಅದು ಸತ್ಯಸಂಗತಿ. ಇಡೀ ಜನತೆಗೆ ಗೊತ್ತಿರುವಂತಹ ಸಂಗತಿ.

DR. JEEVARAJ ALVA : I am giving a totally different dimension. ಮಾನ್ಯ ರಂಗನಾಥ್‌ರವರು, ಮಾನ್ಯ ಕೃಷ್ಣರವರು ಸ್ವಲ್ಪ ಗಮನ ಕೊಡಬೇಕು. ಏಕೆಂದರೆ ಯಾವುದರಿಂದ ಪ್ರಜಾಪ್ರಭುತ್ವದ ವ್ಯವಸ್ಥೆಗೆ ಧಕ್ಕೆ ಬರುತ್ತದೋ ಯಾವುದರಿಂದ ಅಪಮಾನ ಆಗಿದೆಯೋ, ಅದಕ್ಕೆ......

(ಗೊಂದಲ)

ಅಧ್ಯಕ್ಷರು : ತಾವುಗಳೆಲ್ಲರೂ ಮಾತನಾಡಿ. ಈಗ ನಾನು ಮಾತನಾಡುವುದಕ್ಕೆ ಅವರನ್ನು ಕರೆದಿದ್ದೇನೆ.

ಶ್ರೀ ಕರಿಯಣ್ಣ : ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ಉತ್ತರ ಕೊಟ್ಟಾಯಿತು. ಈಗ ಮಾನ್ಯ ಉಪಮುಖ್ಯಮಂತ್ರಿಗಳು ಸಹ ಉತ್ತರ ಕೊಟ್ಟಿದ್ದಾರೆ. ಉತ್ತರ ಕೊಟ್ಟಮೇಲೆ ಬರೇ ಚರ್ಚೆನೆ ಆದರೆ ಈ ಸದನ ಯಾವ ಕಾಲಕ್ಕೆ ಅಂತ್ಯವಾಗುತ್ತದೆ. ಇದು ಯಾವಾಗ ಮುಗಿಯುತ್ತದೆ. ಏನು ನೀವು ಕಾರ್ಯಕಲಾಪಕ್ಕೆ ಬರುತ್ತೀರೋ ಇಲ್ಲವೋ, ಅಥವಾ ಬಜೆಟ್ ಚರ್ಚೆ ಆಗುತ್ತದೋ ಇಲ್ಲವೋ ಎನ್ನುವಂತಹ ಅನುಮಾನ ಬಂದಿದೆ. ಏನು ಸ್ವಾಮಿ, ಈ ಸದನದ ಬಗ್ಗೆ ಇರತಕ್ಕಂತಹ ಮಹತ್ವವಾದ ಗೌರವ

ಹೋಗುತ್ತಿದೆ. ಈ ಮೌಲ್ಯಗಳನ್ನು ಕಳೆದುಕೊಳ್ಳುವಂತಹ ರೀತಿಯಲ್ಲಿ ಮಾತನಾಡಿದರೆ ಇದಕ್ಕೆ ಯಾವತ್ತು ಕೊನೆ ಹೇಳಿ. ಮಾನ್ಯ ಉಪಮುಖ್ಯಮಂತ್ರಿಗಳು ಉತ್ತರ ಕೊಟ್ಟರು, ಇದರ ಮೇಲೂ ಚರ್ಚೆಯಾದರೆ ಇದಕ್ಕೆ ಏನಾದರೂ ಒಂದು ರೀತಿ ನೀತಿ ಇದೆಯೇ? ಅವರು ಉತ್ತರ ಕೊಟ್ಟರು ಎಂದು ಇವರು ಹೇಳುವುದು, ಇವರು ಉತ್ತರ ಕೊಟ್ಟರು ಎಂದು ಅವರು ಹೇಳುವುದು. ಸರ್ಕಾರ ಉತ್ತರ ಕೊಟ್ಟಮೇಲೆ ಒಂದು ರೀತಿಯಲ್ಲಿ ತಾವು ಅದಕ್ಕೆ ಮಾನ್ಯತೆ ಕೊಡಬೇಕು.

ಡಾ|| ಜೀವರಾಜ್ ಆಳ್ವ: ಈಗ ಮಾನ್ಯ ಉಪಮುಖ್ಯಮಂತ್ರಿಗಳು "there was not a strong plea for judicial probe ಎಂದು ಹೇಳಿದರು. My partinent question to the august chair and all those who are assembled here, ಪ್ರತಿಯೊಬ್ಬ ಸದಸ್ಯರ ಹತ್ತಿರ ನಾನು ಆತ್ಮಾವಲೋಕನ ಮಾಡಿ ಎಂದು ಹೇಳುತ್ತಿದ್ದೇನೆ. ಇವತ್ತು ನಿಮ್ಮ ಮಂಡಲ್ ಪಂಚಾಯತಿಯಲ್ಲಿ ಮಂಡಲ್ ಪಂಚಾಯತ್ ಅಧ್ಯಕ್ಷರನ್ನು ಆರಿಸಲಿಕ್ಕೆ ಸದಸ್ಯರನ್ನು ಕಿಡ್‌ನ್ಯಾಪ್ ಮಾಡಿರುವುದು ನಿಜ ತಾನೇ. ಈ ಗಲಾಟೆಯಲ್ಲಿ 7 ಜನ ಅಮಾಯಕರು ಏನು ಸತ್ತಿದ್ದಾರೆ, ಅವರ ಪರವಾಗಿ ಪ್ರಶ್ನೆ ಕೇಳುತ್ತಿದ್ದೇನೆ. ನಿಮ್ಮ so called experiment, if you are not clear, if your law and order was not efficient enough, why have you failed? ತಮ್ಮಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ, ಈಗಲೂ ತಾವು ಸಭೆಯನ್ನು ಅಡ್ಜರ್ನ್ ಮಾಡಿ ;

ಅಧ್ಯಕ್ಷರು: ನಾನು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ, ಪ್ರಶ್ನೋತ್ತರ ವೇಳೆಯನ್ನು ಪ್ರಾರಂಭಿಸುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ: ಮಾನ್ಯ ಅಧ್ಯಕ್ಷರೆ, ಮಾನ್ಯ ಉಪಮುಖ್ಯ ಮಂತ್ರಿಗಳು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಸಂಸದೀಯ ವ್ಯವಹಾರಗಳ ಮಂತ್ರಿಗಳು ತಮ್ಮ ಪಕ್ಷದ 70 ಜನ ಸದಸ್ಯರುಗಳು ಇಲ್ಲಿ ಮೂರು ದಿನ ಧರಣಿ ಮಾಡುವ ಸಂದರ್ಭದಲ್ಲಿ ತಾವು ಈ ಮಾತನ್ನು ಹೇಳಿದ್ದರೆ ನಾನು ನಿಮ್ಮ ಮಾತನ್ನು ಮೆಚ್ಚುತ್ತಿದ್ದೆ. ಮತ್ತು ನಿಮಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೆ. ಮಾನ್ಯ ಅಧ್ಯಕ್ಷರೇ, ನಾನು ಸರ್ಕಾರದಲ್ಲಿ ಕೇಳಿಕೊಳ್ಳುವುದು ಏನೆಂದರೆ, ನಿಮ್ಮ ಸಂಸದೀಯ ವ್ಯವಹಾರದಲ್ಲಿ.......

ಶ್ರೀ ಬಿ.ಎಸ್. ಯಡಿಯೂರಪ್ಪ: ಒಂದು ಸಾರಿ ಧರಣಿ ಕುಳಿತ ಮೇಲೆ ಮತ್ತೆ ಅವರ ಜಾಗಕ್ಕೆ ಬಂದು ಮಾತನಾಡಲು ಅವಕಾಶ ಇಲ್ಲ, ಆದರೂ ಇದನ್ನು ಎಲ್ಲಿಯವರೆಗೆ ಮುಂದುವರೆಸಿಕೊಂಡು ಹೋಗುತ್ತೀರಾ?

ಅಧ್ಯಕ್ಷರು: ಯಡಿಯೂರಪ್ಪನವರೇ ನೀವು ಕುಳಿತುಕೊಳ್ಳಿ. ಪದೇ ಪದೇ ಏಕೆ ಎದ್ದು ನಿಲ್ಲುತ್ತೀರಿ. ನೀವು ಹೇಗೆ ಮಾತನಾಡುತ್ತಿದ್ದರೆ ಕಲಾಪಗಳು ಹಿಂದಕ್ಕೆ ಹೋಗುವುದಿಲ್ಲವೇ?

ಶ್ರೀ ಪಿ.ಜಿ.ಆರ್, ಸಿಂಧ್ಯ: ಅಧ್ಯಕ್ಷರೇ, ಸರ್ಕಾರಕ್ಕೆ ಸ್ವಲ್ಪ ಸೌಜನ್ಯವನ್ನು ತೋರಿಸುವ ನಮ್ಮ ನಾಯಕರನ್ನು ಹಾಗೂ ಬೇರೆ ಎಲ್ಲಾ ಸದಸ್ಯರನ್ನೂ ಸಹ ಪೂರ್ತಿ ಅಧಿವೇಶನ ಮುಗಿಯುವರೆಗೂ ಸಹಿತ ನೀವು ಹೊರಗಡೆ ಹಾಕಿದ್ದೀರಾ ಇದರ ಬದಲು ನ್ಯಾಯಾಂಗ ತನಿಖೆಯನ್ನು ಘೋಷಿಸಬೇಕಾಗಿತ್ತು. ಇದರಲ್ಲಿ ಪ್ರೈಮಾ ಫೇಸಿ ಏನೂ ಇಲ್ಲ ಎನ್ನತಕ್ಕಂತಹ ಮಾತನ್ನು ಸರ್ಕಾರದವರು ಹೇಳಿರುವುದರಿಂದ ನೀವು ನಮ್ಮನ್ನು ಕರೆಸಿ ತೆರೆ ಮರೆಯಲ್ಲಿ ನಿಮ್ಮ ಕೋಣೆಯಲ್ಲಿ ಮಾತನಾಡತಕ್ಕಂಥ ಹಂತ ಸಂಪೂರ್ಣವಾಗಿ ಮುಗಿದು ಹೋಗಿದೆ. ಈಗ ಸರ್ಕಾರದ ಧೋರಣೆಯನ್ನು ಸಂಪೂರ್ಣವಾಗಿ ಕಂಡಿದ್ದೇವೆ. ಸರ್ಕಾರ ತಳೆದಿರುವ ನಿಲುವು ಸರಿಯಲ್ಲ; ನಮ್ಮ ಪಕ್ಷದ ನಾಯಕರನ್ನು ಹಾಗೂ ನಮ್ಮೆಲ್ಲರನ್ನು ಸಹಿತ ನೀವು ಹೊರ ಹಾಕಿರುವುದು ಸರಿಯಲ್ಲ; ಅನ್ನತಕ್ಕಂಥಾದ್ದು

ನಮ್ಮ ಪ್ರತಿಭಟನೆ ಎರಡನೆಯದಾಗಿ ನ್ಯಾಯಾಂಗ ತನಿಖೆ ಆಗಬೇಕು ಎಂದು ಕೇಳಿದ್ದೇವೆ. ನಾವು ಅಧಿಕಾರದಲ್ಲಿ ಇದ್ದಾಗ ಆರು ವರ್ಷಗಳ ಕಾಲ ಎಷ್ಟೊಂದು ನ್ಯಾಯಾಂಗ ತನಿಖೆಗಳನ್ನು ನಾವು ಮಾಡಲಿಲ್ಲ. ಸದನ ಸಮಿತಿಯಲ್ಲಿ ನಮಗೆ ನಂಬಿಕೆ ಇದೆಯೋ ಇಲ್ಲವೋ ಆ ಪ್ರಶ್ನೆ ಅಲ್ಲ, ಸದನ ಸಮಿತಿಯನ್ನು ನಾವು ಕೇಳಿದ್ದೇವೆ. ಏತಕ್ಕೋಸ್ಕರ ಅಂದರೆ ಅಡ್‌ಮಿನಿಸ್ಟ್ರೇಟಿವ್ ಲ್ಯಾಪ್ಸಸ್ ಏನಾದರು ಆಗಿದೆಯೇ ಎಂದು ತಿಳಿಯಲು ಡೆಪ್ಯುಟಿ ಕಮಿಷನರ್‌ಗಳು ಎಮ್‌ಎಲ್‌ಗಳು ಹೇಳಿದ ಹಾಗೆ ಕೇಳಿದ್ದಿರಾ? ರಾಜಕೀಯ ಒತ್ತಡ ಹಾಕಿದ್ದೀರಾ ಇಲ್ಲವೂ ಅನ್ನುವುದನ್ನು ತಿಳಿಯುವುದಕ್ಕೆ ನಾವು ಸದನ ಸಮಿತಿಯನ್ನು ಕೇಳಿದ್ದೇವೆ. ನ್ಯಾಯಾಂಗ ತನಿಖೆ ಕೇಳಿರುವುದು ಪೋಲೀಸ್ ಎಕ್ಸಸ್ ಆಗಿದೆಯೋ ಇಲ್ಲವೋ ಅಂತ ನೋಡಲು ಒಂದು ವರ್ಷ ಪೋಲೀಸ್ ಎಕ್ಸಸ್ ಆಗಿಲ್ಲ ಅನ್ನುವುದಾದರೆ ನೀವು ಎರಡು ತಿಂಗಳು ಟೈಮ್ ಕೊಡಿ, ಜ್ಯುಡಿಷಿಯಲ್ ಪ್ರೋಬ್‌ಗೆ ಒಬ್ಬ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರನ್ನು ನೀವು ಅಪಾಯಿಂಟ್ ಮಾಡಿ ಎರಡು ತಿಂಗಳ ಒಳಗೆ ಅವರು ರಿಪೋರ್ಟ್ ಕೊಡಲಿ. ಅದರಲ್ಲಿ ನಿಮ್ಮ ಸರ್ಕಾರಕ್ಕೆ ಅಥವಾ ಪೋಲಿಸಿನವರಿಗೆ ಶಹಬಾಸ್‌ಗಿರಿ ಕೊಟ್ಟರೆ ನಿಮಗೆ ರಾಜಕೀಯವಾಗಿ ಅನುಕೂಲವಾಗುತ್ತದೆ. ಆದುದರಿಂದ ಮಾನ್ಯ ಅಧ್ಯಕ್ಷರೇ, ಜನತಾ ದಳದ ಸದಸ್ಯರು ಏನೋ ಪ್ರಿಸ್ಟೀಜ್ ಪಾಯಿಂಟ್ ಮಾಡಿಕೊಂಡು ಹೊರಗಡೆ ಇದ್ದಾರೆ ಎನ್ನತಕ್ಕಂತಹ ಪ್ರಶ್ನೆ ಇಲ್ಲಿ ಉದ್ಭವವಾಗುವುದಿಲ್ಲ. ಇವತ್ತು ಈ ಕಡೆ ಯಾರ್‍ಯಾರು ನಮಗೆ ತತ್ವ ಬೋಧನೆ ಮಾಡುವುದಕ್ಕೆ ಬಂದಿದ್ದಾರೆ ಅವರು ಇದನ್ನು ಮಾಡಿದ್ದಾರೆ. ಈಗ ಅವರಿಗೆ ಅನುಕೂಲ ಆಗುವುದಿಲ್ಲ ಎಂದು ಹೇಳಿ ಈ ಮಾತನ್ನು ಹೇಳುತ್ತಿದ್ದಾರೆ.

ಅಧ್ಯಕ್ಷರು : ಈಗ ಪ್ರಶ್ನೋತ್ತರ ಶ್ರೀಮತಿ ಮೋಟಮ್ಮ

(ವಿರೋಧ ಪಕ್ಷದ ಸದಸ್ಯರೆಲ್ಲರೂ ಬಾವಿಯಲ್ಲಿ ಕುಳಿತು ಧರಣಿ ನಡೆಸಿದರು ಮತ್ತು ನ್ಯಾಯಾಂಗ ತನಿಖೆ ಆಗಲೇಬೇಕೆಂದು ಘೋಷಣೆಗಳನ್ನು ಕೂಗಿದರು)

ಶ್ರೀಮತಿ ಮೋಟಮ್ಮ: ಅಧ್ಯಕ್ಷರೇ, ನಾನು 610 ನೇ ಪ್ರಶ್ನೆಯನ್ನು ಕೇಳುತ್ತೇನೆ.

(ಈ ಸಮಯದಲ್ಲಿ ವಿರೋಧ ಪಕ್ಷದ ಸದಸ್ಯರು ಬಾವಿಯಲ್ಲಿ ಕುಳಿತು ಧರಣಿ ನಡೆಸುತ್ತಾ ಸಭೆಯ ಕಾರ್ಯಕಲಾಪಗಳಿಗೆ ಅಡಚಣೆ ಉಂಟು ಮಾಡುತ್ತಿದ್ದರು)

ಶ್ರೀ ವಾಟಾಳ್ ನಾಗರಾಜ್ : ನಾನು ತಮಗೆ ಸಲಹೆ ಕೊಟ್ಟೆ, ಏನೆಂದರೆ, ಸಭೆಯನ್ನು 10 ನಿಮಿಷ ಮುಂದೂಡಿ ಎಂದು ಹೇಳಿದೆ, ನನ್ನ ಸಲಹೆ ಇಲ್ಲಿ ಏನೂ ಗೌರವ ಬರಲಿಲ್ಲ. ಮತ್ತು ಅಮಾನತ್ತಿನಲ್ಲಿರುವವರನ್ನು ಒಂದು ನಿರ್ಣಯ ಮಾಡಿ ಮತ್ತೆ ಶಾಸನ ಸಭೆಗೆ ಕರೆಯುವ ವಾತಾವರಣ ನಿರ್ಮಾಣ ಮಾಡಿ ಎಂದು ಹೇಳಿದೆ, ಅದಕ್ಕೂ ಸಹ ಗೌರವ ಬರಲಿಲ್ಲ, ಆದರೂ ನೀವು ಪ್ರಶ್ನೋತ್ತರ ಕಾಲ ಪ್ರಾರಂಭಗೊಳಿಸುವುದಾದರೆ ನನಗೆ ಬಹಳ ಮನಸ್ಸಿಗೆ ನೋವು ಆಗುತ್ತಿದೆ. ಈ ವಾತಾವರಣದಲ್ಲಿ ನಾನು ಇಲ್ಲಿ ಇರುವ ಬದಲು ಸಭಾತ್ಯಾಗ ಮಾಡುವುದು ಒಳ್ಳೆಯದು ಎಂದು ನಾನು ತಮಗೆ ಕೈ ಮುಗಿದು ಹೋಗುತ್ತಿದ್ದೇನೆ.

ಶ್ರೀ ಎಸ್.ಎಮ್. ಕೃಷ್ಣ: ಮಾನ್ಯ ಅಧ್ಯಕ್ಷರೇ, ವಾಟಾಳ್ ನಾಗರಾಜ್‌ರವರು ಸರ್ಕಾರವನ್ನು ತಪ್ಪಿಗೆ ಸಿಕ್ಕಿಸಬಾರದು ಅಂದರು. ನಾವು ಮಾನ್ಯ ವಿರೋಧ ಪಕ್ಷದ ಸದಸ್ಯರನ್ನು ಅಧ್ಯಕ್ಷರ ಕೊಠಡಿಗೆ ಕರೆಸುವುದಕ್ಕೆ ಅಧ್ಯಕ್ಷರೇ ಒಪ್ಪುವುದಾದರೆ ಕರೆದು ಮಾತನಾಡುವುದಕ್ಕೆ ನಾವು ಸಿದ್ಧ ಎಂದು ಈಗಾಗಲೇ ಹೇಳಿದ್ದೇನೆ.

ಶ್ರೀ ಹಾರ್‍ನಳ್ಳಿ ರಾಮಸ್ವಾಮಿ : ನಾವಾಗಿ ಹೊರಗಡೆ ಹಾಕಲಿಲ್ಲ, ನೀವು ಬಲವಂತದಿಂದ ಆ ಪ್ರಸಂಗವನ್ನು ಹುಟ್ಟಿಸಿಕೊಂಡು ಹಾಕಿಸಿಕೊಂಡಿದ್ದೀರಿ. ಮಾನ್ಯ

ಅಧ್ಯಕ್ಷರೇ, ನಮ್ಮ ಸರ್ಕಾರವಾಗಲೀ, ಆಡಳಿತ ಪಕ್ಷವಾಗಲಿ, ವಿರೋಧ ಪಕ್ಷದ ನಾಯಕರನ್ನು ಹೊರಗೆ ಹಾಕಬೇಕು ಅವರ ಸದಸ್ಯರನ್ನು ಸಹ ಹೊರ ಹಾಕಬೇಕು ಎನ್ನುವ ಭಾವನೆ ಸರ್ವಥಾ ನಮಗೆ ಇರಲಿಲ್ಲ, ಈಗಲೂ ಇಲ್ಲ. ಈಗಾಗಲೇ ನಮ್ಮ ಉಪ ಮುಖ್ಯ ಮಂತ್ರಿಗಳು ತಾವೆಲ್ಲಾ ವಾಪಸ್ಸು ಬರಬೇಕೆಂದು ಕೇಳಿಕೊಂಡಿದ್ದಾರೆ. ಆದರೆ ನಾವು ಹೇಳಿದ ಹಾಗೆ ಆಗಬೇಕು ಎಂದು ಅವರು ಹೇಳುವುದು ಸರಿಯಲ್ಲ. ಇದರ ಉದ್ದೇಶ ಏನೆಂದರೆ ಅವರಿಗೆ ಈ ಸಭೆಯಲ್ಲಿ ಭಾಗವಹಿಸಲು ಇಷ್ಟವಿಲ್ಲ, ಈ ಸಭೆಯಲ್ಲಿ ಮುಂಗಡಪತ್ರದ ಮೇಲೆ ಮಾತನಾಡಲು ಅವರಿಗೆ ಇಷ್ಟವಿಲ್ಲ, ಸರ್ಕಾರದ ತಪ್ಪು ಒಪ್ಪುಗಳನ್ನು ಎತ್ತಿ ತೋರಿಸಲು ಅವರಿಗೆ ಇಷ್ಟವಿಲ್ಲ, ಆ ಕಾರಣದಿಂದ ಅವರು ಒಂದು ನೆಪ ಮಾಡಿಕೊಂಡು ಈ ರೀತಿ ಮಾಡುತ್ತಿದ್ದಾರೆ ಎಂದು ನಾವು ಭಾವಿಸಬೇಕಾಗಿದೆ. ಅವರೆಲ್ಲರೂ ಬಹಳ ಹಿರಿಯರು; ಬಹಳ ಅನುಭವಿಕರಾಗಿದ್ದಾರೆ. ಈ ದೇಶದಲ್ಲಿ ಒಳ್ಳೆಯ ಹೆಸರನ್ನು ತೆಗೆದುಕೊಂಡಿದ್ದಾರೆ. ಆದರೆ ನಿಯಮಗಳನ್ನು ಗಾಳಿಗೆ ತೂರಿ ಕೆಲಸ ಮಾಡುವುದು ಬೇಡ. ಸರ್ಕಾರದ ನಿಲುವಿನಲ್ಲಿ ಯಾವುದೇ ಬದಲಾವಣೆ ಇಲ್ಲ. ಈ ಒಂದು ಮೂಲಭೂತ ಅಂಶಗಳನ್ನು ತಿಳಿದುಕೊಂಡು ಈಗಲೂ ಸಹ ತಾವು ಒಪ್ಪಿದರೆ ನಾವು ನಿರ್ಣಯ ವಾಪಸ್ಸು ತೆಗೆದುಕೊಳ್ಳಲು ನಮ್ಮ ಉಪಮುಖ್ಯಮಂತ್ರಿಯವರು ಹೇಳಿದ ಹಾಗೆ ನಾವು ಸಿದ್ಧರಿದ್ದೇವೆ. ಅವರು ಈ ಸಭೆಯ ಕಾರ್ಯಕಲಾಪಗಳಲ್ಲಿ ಬಂದು ಭಾಗವಹಿಸಲಿ. ಏನಾದರೂ ಮಾತನಾಡುವುದು ಇದ್ದರೆ ಪ್ರಶ್ನೋತ್ತರ ಆದಮೇಲೆ ಮಾತನಾಡಲಿ.

ಶ್ರೀ ವಾಟಾಳ್ ನಾಗರಾಜ್ : ಪ್ರಶ್ನೋತ್ತರ ಆದಮೇಲೆ ಕರೆಸುವುದು, ಮಾತನಾಡುವುದು ಎಂದು ಹೇಳುವುದು ಸರಿಯೇ ?

ಅಧ್ಯಕ್ಷರು : ಶ್ರೀಮತಿ ಮೋಟಮ್ಮನವರೇ, ತಮ್ಮ ಪ್ರಶ್ನೆಗೆ ಉಪ ಪ್ರಶ್ನೆಯನ್ನು ತಾವು ಕೇಳಬಹುದು....

ಶ್ರೀಮತಿ ಮೋಟಮ್ಮ: ಮಾನ್ಯ ಸಚಿವರು ಉತ್ತರವನ್ನು ಒದಗಿಸಿದಿದ್ದಾರೆ. ಇದರಲ್ಲಿ...

(ಗೊಂದಲ)

ಶ್ರೀ ಹಾರನಹಳ್ಳಿ ರಾಮಸ್ವಾಮಿ : ಈ ಕಡೆ ಇರುವ ಆಡಳಿತಪಕ್ಷದ ಸದಸ್ಯರುಗಳಿಗೆ ಆತ್ಮಗೌರವ ಇದೆ. ಸರ್ಕಾರಕ್ಕೆ ಆತ್ಮಗೌರವ ಇದೆ. ಬಗ್ಗುವುದಕ್ಕೆ ಭೂಮಿಯ ಮಟ್ಟದವರೆಗೆ ಬಗ್ಗಬಹುದು. ಆದರೆ ತಲೆಯನ್ನು ಭೂಮಿಯಿಂದ ಕೆಳಗಡೆ ಇಟ್ಟುಕೊಳ್ಳಲು ಸಾಧ್ಯವಿಲ್ಲ.

ಶ್ರೀ ವಾಟಾಳ್ ನಾಗರಾಜ್ : ನಾನು ಹೊರಗಡೆ ಹೋಗುತ್ತಿದ್ದೇನೆ. ಈ ವಾತಾವರಣದಿಂದ ನನಗೆ ಬಹಳ ನೋವಾಗಿದೆ. ನೀವು ಇದನ್ನು ಸರಿಪಡಿಸತಕ್ಕದ್ದು, ಹಾಗೂ ಒಂದು ತಿಳಿ ವಾತಾವರಣವನ್ನು ನಿರ್ಮಾಣ ಮಾಡುವುದರಲ್ಲಿ ನಿಮಗೆ ಇಚ್ಛೆಯಿಲ್ಲ.

ಶ್ರೀ ಹಾರನಹಳ್ಳಿ ರಾಮಸ್ವಾಮಿ : ನಾವು ಸಿದ್ಧರಾಗಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಇದರಿಂದ ನನ್ನ ಮನಸ್ಸಿಗೆ ನೋವಾಗಿದೆ. ಪ್ರಶ್ನೋತ್ತರ ಮುಗಿದಮೇಲೆ ಇದರ ಬಗ್ಗೆ ಮಾತನಾಡೋಣ ಎಂದು ಹೇಳಿದರೆ ಹೇಗೆ ? ಅದು ನನಗೆ ಅರ್ಥವಾಗುತ್ತಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಇದು ಸರಿಯಾದ ಮಾರ್ಗವಲ್ಲ. ತಾವು ಸಂಖ್ಯಾ ಬಲವಿದೆ ಎಂದು ಏನು ಬೇಕಾದರೂ ಮಾಡಬಹುದು ಎಂದು ತಿಳಿದುಕೊಂಡಿದ್ದೀರಿ.

(ವಾಟಾಳ್ ನಾಗರಾಜ್ ಅವರು ಈ ಹಂತದಲ್ಲಿ ಸಭಾತ್ಯಾಗ ಮಾಡಿದರು)

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಆರಾಧನಾ ಯೋಜನೆ ಕುರಿತು

610 - ಶ್ರೀಮತಿ ಮೋಟಮ್ಮ (ಮೂಡಿಗೆರೆ): ಮಾನ್ಯ ಕಾನೂನು ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆರಾಧನಾ ಯೋಜನೆಯಲ್ಲಿ ಚಿಕ್ಕಮಗಳೂರು ಜಿಲ್ಲೆಗೆ ಮಂಜೂರಾದ ಹಣವೆಷ್ಟು?

ಆ) ಆದರಲ್ಲಿ ಪ್ರತಿ ತಾಲ್ಲೂಕಿಗೆ ಮಂಜೂರಾದ ಹಣವೆಷ್ಟು?

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಮುಜರಾಯಿ ಸಚಿವರು):

ಅ)

1991-92ರಲ್ಲಿ ರೂ. 13,64,710-00
1992-93ರಲ್ಲಿ ರೂ. 14,40,000-00
1993-94ರಲ್ಲಿ ರೂ. 9,10,000-00

ಆ)

ಕ್ರ.ಸಂ	ತಾಲ್ಲೂಕು	ಬಿಡುಗಡೆ ಮಾಡಿರುವ ಅನುದಾನ ರೂ., ಸಾವಿರಗಳಲ್ಲಿ
1)	ಚಿಕ್ಕಮಗಳೂರು	11,42,225-00
2)	ಮೂಡಿಗೆರೆ	3,47,100-00
3)	ಕೊಪ್ಪ	2,18,000-00
4)	ಶೃಂಗೇರಿ	49,000-00
5)	ತರೀಕೆರೆ	2,98,000-00
6)	ಕಡೂರು	5,77,000-00
7)	ನರಸಿಂಹರಾಜಪುರ	86,000-00
	ಒಟ್ಟು	27,17,325-00

ಉಳಿಕೆ ರೂ. 9,97,380-00ಗಳನ್ನು ಸರ್ಕಾರದ ವತಿಯಿಂದ ಬಿಡುಗಡೆ ಮಾಡಿದ್ದು ಧಾರ್ಮಿಕ ದತ್ತಿ ಆಯುಕ್ತರ ವತಿಯಿಂದ, ಜಿಲ್ಲೆಗೆ ಬಿಡುಗಡೆ ಮಾಡಲಾಗುವುದು.

ಶ್ರೀಮತಿ ಮೋಟಮ್ಮ : ತಾವು ಉತ್ತರದಲ್ಲಿ ಚಿಕ್ಕಮಗಳೂರು ಜಿಲ್ಲೆಗೆ 27,17,325-00 ರೂ.ಗಳನ್ನು ಮಂಜೂರು ಮಾಡಿರುವುದಾಗಿ ತಿಳಿಸಿರುತ್ತೀರಿ.

(ಜನತಾದಳದ ಸದಸ್ಯರುಗಳು ಭಾವಿಯಲ್ಲಿ ನಿಂತುಕೊಂಡು "ನ್ಯಾಯಾಂಗ ತನಿಖೆ ಆಗಲೇಬೇಕು" ಎಂದು ಕೂಗುತ್ತಿದ್ದರು)

ಶ್ರೀಮತಿ ಮೋಟಮ್ಮ: ಚಿಕ್ಕಮಗಳೂರು ತಾಲ್ಲೂಕಿಗೆ 11,42,225-00 ರೂ.ಗಳನ್ನು ಬಿಡುಗಡೆ ಮಾಡಿದ್ದೀರಿ. ತಾವು ಈ ರೀತಿ ಚಿಕ್ಕಮಗಳೂರು ಜಿಲ್ಲೆಗೆ ಬಿಡುಗಡೆ ಮಾಡಿರುವ ಹಣ ಕಡಿಮೆ ಇದೆ. ಇದನ್ನು ಹೆಚ್ಚು ಮಾಡುತ್ತೀರಾ?

ಶ್ರೀ ಹಾರನಹಳ್ಳಿ ರಾಮಸ್ವಾಮಿ: ತಾಲ್ಲೂಕುಗಳಿಗೆ ಬಿಡುಗಡೆ ಮಾಡಿರುವ ಹಣದಲ್ಲಿ ವ್ಯತ್ಯಾಸವಿರುವುದು ನಿಜ. ಸ್ಥಳದ ಅವಶ್ಯಕತೆಗಳ ಮೇಲೆ ಹಣವನ್ನು ಒದಗಿಸಲಾಗಿದೆ. ನೀವು ಎಷ್ಟು ಯೋಜನೆಗಳನ್ನು ಕೊಟ್ಟಿದ್ದೀರೋ ಹಾಗೂ ಎಷ್ಟು ಕೆಲಸಗಳನ್ನು ಸೂಚಿಸಿದ್ದೀರೋ ಅದರ ಆಧಾರದ ಮೇಲೆ ಹಣ ಬಿಡುಗಡೆಯಾಗುತ್ತದೆ. ಇನ್ನೂ ಹೆಚ್ಚು ಹಣ ಬೇಕಾದರೆ ಒದಗಿಸಲು ಸರ್ಕಾರ ಸಿದ್ಧವಿದೆ.

ಶ್ರೀಮತಿ ಮೋಟಮ್ಮ: ಇದನ್ನು ನಾನು ಒಪ್ಪುವುದಿಲ್ಲ. ತಾಲ್ಲೂಕುವಾರು ಹಣವನ್ನು ಬಿಡುಗಡೆ ಮಾಡಬೇಕು. ಒಂದು ತಾಲ್ಲೂಕಿಗೆ ಹೆಚ್ಚು ಒಂದು ತಾಲ್ಲೂಕಿಗೆ ಕಡಿಮೆ ಕೊಡುವುದು ಸರಿಯಲ್ಲ.

(ಜನತಾದಳದ ಶಾಸಕರುಗಳು ಭಾವಿಯಲ್ಲಿ ನಿಂತುಕೊಂಡು "ಕಾಂಗ್ರೆಸ್ ಸರ್ಕಾರಕ್ಕೆ ಧಿಕ್ಕಾರ; ನ್ಯಾಯಾಂಗ ತನಿಖೆ ಆಗಲೇಬೇಕು" ಎಂದು ಕೂಗುತ್ತಿದ್ದರು)

ಶ್ರೀಮತಿ ಮೋಟಮ್ಮ: ಉಳಿದ ಹಣವಾದ 9,97,380-00 ರೂ.ಗಳನ್ನು ಯಾವಾಗ ಬಿಡುಗಡೆ ಮಾಡುತ್ತೀರಾ?

ಶ್ರೀ ಹಾರನಹಳ್ಳಿ ರಾಮಸ್ವಾಮಿ: ಸದ್ಯದಲ್ಲೇ ಅದನ್ನು ಬಿಡುಗಡೆ ಮಾಡಲಾಗುವುದು.

ಶ್ರೀಮತಿ ಮೋಟಮ್ಮ: ಚಿಕ್ಕಮಗಳೂರು ಜಿಲ್ಲೆಯಲ್ಲಿ ಎಷ್ಟು ದೇವಸ್ಥಾನಗಳಿಗೆ ಹಣ ಬಿಡುಗಡೆ ಮಾಡಿದ್ದೀರಾ ಎಂಬುದನ್ನು ತಿಳಿಸುತ್ತೀರಾ?

ಶ್ರೀ ಹಾರನಹಳ್ಳಿ ರಾಮಸ್ವಾಮಿ: ಚಿಕ್ಕಮಗಳೂರು ಜಿಲ್ಲೆಯಲ್ಲಿ ಎಷ್ಟು ದೇವಸ್ಥಾನಗಳಿಗೆ ಹಣ ಬಿಡುಗಡೆ ಮಾಡಿದ್ದೇವೆ ಎಂಬ ವಿವರ ನನ್ನ ಹತ್ತಿರ ಇಲ್ಲ. ಅದನ್ನು ತರಿಸಿ ಮಾನ್ಯ ಸದಸ್ಯರಿಗೆ ಒದಗಿಸುತ್ತೇನೆ.

(ಜನತಾದಳದ ಶಾಸಕರುಗಳು ಭಾವಿಯಲ್ಲಿ ನಿಂತುಕೊಂಡು "ಕಾಂಗ್ರೆಸ್ ಸರ್ಕಾರಕ್ಕೆ ಧಿಕ್ಕಾರ" ಎಂದು ಕೂಗುತ್ತಿದ್ದರು)

ಶ್ರೀಮತಿ ಮೋಟಮ್ಮ: ಕೂಡಲೆ ಐದು ಲಕ್ಷ ರೂ.ಗಳನ್ನು ಪ್ರತಿ ತಾಲ್ಲೂಕಿಗೂ ಬಿಡುಗಡೆ ಮಾಡುತ್ತೀರಾ?

(ಗೊಂದಲ)

ಅಧ್ಯಕ್ಷರು: ಮಾನ್ಯ ವಿರೋಧ ಪಕ್ಷದ ಉಪನಾಯಕರಾದ ಸಿಂಧ್ಯಾರವರು ಮತ್ತು ಇತರ ಸದಸ್ಯರುಗಳಿಗೆ ನಾನು ಪುನಃ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ತಾವು ತಮ್ಮ ತಮ್ಮ ಸ್ಥಳಗಳಿಗೆ ಹೋಗಿ ಸಭೆಯ ಕಾರ್ಯಕಲಾಪಗಳನ್ನು ನಡೆಸಲು ಅನುಕೂಲ ಮಾಡಿಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಡಾ|| ಜೀವರಾಜ ಆಳ್ವ: ನ್ಯಾಯಾಂಗ ತನಿಖೆ ಮಾಡಿಸಬೇಕು.

12.15 ಪಿ.ಎಂ

(ಜನತಾ ದಳದ 6 ಮಂದಿ ಸದಸ್ಯರು ವೆಲ್‌ನಲ್ಲಿ ನಿಂತು ನ್ಯಾಯಾಂಗ ತನಿಖೆ ಆಗಲೇಬೇಕೆಂದು ಘೋಷಣೆ ಕೂಗುತ್ತಿದ್ದರು)

ಅಧ್ಯಕ್ಷರು: ಮಾನ್ಯ ಸದಸ್ಯರು ತಮ್ಮ ಸ್ಥಾನಗಳಿಗೆ ಹೋಗಬೇಕೆಂದು ವಿನಂತಿಸಿಕೊಂಡಿದ್ದೇನೆ. ಆದರೆ ಅವರುಗಳು ನನ್ನ ಮಾತಿಗೆ ಪುರಸ್ಕಾರ ಕೊಡದೆ ನನ್ನ ಅಧಿಕಾರ ವಿಷಯದಲ್ಲಿ ಲಕ್ಷ್ಯ ಇಲ್ಲದೆ ಸದನದ ಕಾರ್ಯಕಲಾಪಗಳಿಗೆ ಒಂದೇ ಸಮವಾಗಿ ಉದ್ದೇಶಪೂರ್ವಕವಾಗಿ ಅಡಚಣೆ ಉಂಟು ಮಾಡುತ್ತಿದ್ದಾರೆ. ಆದುದರಿಂದ ನಾನು ನಿಯಮ 331ರ ಮೇರೆಗೆ

ಈ ಕೆಳಕಂಡ ಸದಸ್ಯರು ಸದನದ ಕಾರ್ಯಕಲಾಪಗಳಿಗೆ ಸತತವಾಗಿ ಅಡ್ಡಿ ಉಂಟು ಮಾಡುತ್ತಿರುವುದರಿಂದ ಅವರು ಈ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸುವುದನ್ನು ನಿಷೇಧಿಸಲಾಗಿದೆ. ನಾನು ಈ ಕೆಳಕಂಡ ಮಾನ್ಯ ಸದಸ್ಯರನ್ನು ಹೆಸರಿಸುತ್ತೇನೆ

1. ಶ್ರೀ ಪಿ.ಜಿ.ಆರ್. ಸಿಂಧ್ಯ
2. ಶ್ರೀ ಹೆಚ್.ವೈ. ಮೇಟಿ
3. ಶ್ರೀ ಅಜಯ್‌ಕುಮಾರ್ ಸರ್‌ನಾಯಕ್
4. ಶ್ರೀ ಜಿ.ಜಿ. ವಲಗುತ್ತಿ
5. ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್
6. ಡಾ|| ಜೀವರಾಜ್ ಆಳ್ವ

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ : ಮಾನ್ಯ ಸದಸ್ಯರುಗಳಾದ ಪಿ.ಜಿ.ಆರ್. ಸಿಂಧ್ಯ ಅಜಯ್‌ಕುಮಾರ್ ಸರ್‌ನಾಯಕ್, ಡಾ|| ಜೀವರಾಜ್ ಆಳ್ವ, ಹೆಚ್.ವೈ. ಮೇಟಿ, ಬಸವರಾಜ್ ಪಾಟೀಲ್ ಅಟ್ಟೂರ್, ಜಿ.ಜಿ. ಎಲಗುತ್ತಿ, ಇವರುಗಳನ್ನು ಸದರಿ ಅಧಿವೇಶನ ಮುಗಿಯುವವರೆಗೆ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸದಂತೆ ತಡೆಯಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, ಮಾನ್ಯ ಸದಸ್ಯರುಗಳಾದ ಪಿ.ಜಿ.ಆರ್. ಸಿಂಧ್ಯ, ಅಜಯ್‌ಕುಮಾರ್ ಸರ್‌ನಾಯಕ್, ಡಾ|| ಜೀವರಾಜ್ ಆಳ್ವ, ಹೆಚ್.ವೈ. ಮೇಟಿ, ಬಸವರಾಜ್ ಪಾಟೀಲ್ ಅಟ್ಟೂರ್, ಜಿ.ಜಿ. ಎಲಗುತ್ತಿ, ಇವರುಗಳನ್ನು ಸದರಿ ಅಧಿವೇಶನ ಮುಗಿಯುವ ವರೆಗೆ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸದಂತೆ ತಡೆಯುವುದು.

(ನಿರ್ಣಯ ಅಂಗೀಕಾರವಾಯಿತು)

ಅಧ್ಯಕ್ಷರು : ಮೇಲೆ ಉಲ್ಲೇಖಿಸಿದ ಸದಸ್ಯರನ್ನು ಅಧಿವೇಶನ ಮುಗಿಯುವವರೆಗೆ ಸಭೆಗೆ ಬಾರದಂತೆ ಆದೇಶಿಸುತ್ತೇನೆ.

(ಜನತಾ ದಳದ 6 ಮಂದಿ ಸದಸ್ಯರು ನ್ಯಾಯಾಂಗ ತನಿಖೆ ಆಗಲೇಬೇಕೆಂದು ಘೋಷಣೆ ಕೂಗುತ್ತಾ ಹೊರ ನಡೆದರು)

ಶ್ರೀಮತಿ ಮೋಟಮ್ಮ: ಈ ಗಲಾಟೆಯಲ್ಲಿ ನನ್ನ ಪ್ರಶ್ನೆಗೆ ಕೊಟ್ಟ ಉತ್ತರ ಏನು ಎಂದು ಅರ್ಥವಾಗಲಿಲ್ಲ. 9 ಲಕ್ಷ ರೂಪಾಯಿಗಳನ್ನು ಕೂಡಲೇ ಬಿಡುಗಡೆ ಮಾಡಬೇಕು ಮತ್ತು ಪ್ರತಿ ತಾಲ್ಲೂಕಿಗೆ 5 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕರಿಯಣ್ಣ: ಮಾನ್ಯ ಅಧ್ಯಕ್ಷರೆ, ಆರಾಧನಾ ದೇವಸ್ಥಾನಗಳಿಗೆ ಪ್ರತಿ ಶಾಸಕರ ಕ್ಷೇತ್ರಕ್ಕೆ 5-5 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇವೆಂದು ಹೇಳಿದ್ದರು. ಆದರೆ ಇದುವರೆಗೆ ಬಿಡುಗಡೆ ಮಾಡಲಿಲ್ಲ. ಚಿಕ್ಕಮಗಳೂರು ಜಿಲ್ಲೆಗೆ ಹೆಚ್ಚಿಗೆ ಬೇಡಿಕೆ ಇತ್ತು ಎಂದು ಕೊಟ್ಟಿರಿ. ನಾವು ಕೂಡ ಬೇಡಿಕೆಯನ್ನು ಸಲ್ಲಿಸಿದ್ದೇವೆ. ನಮ್ಮಲ್ಲಿ ಕೂಡ ಬೇಡಿಕೆ ಜಾಸ್ತಿ ಇದೆ. ಪ್ರತಿ ಶಾಸಕರ ಕ್ಷೇತ್ರಕ್ಕೆ 5 ಲಕ್ಷ ರೂಪಾಯಿಗಳನ್ನು ಕೊಡಬೇಕಾಗಿತ್ತು. ಅದಾದರೂ ಕೊಡಬೇಕೆಂದು ಮಂತ್ರಿಗಳಲ್ಲಿ ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ. ಕೇವಲ ಒಂದೇ ಕಡೆ ಕೊಡಬಾರದು, ಆಯಾಯ ಕ್ಷೇತ್ರಕ್ಕೆ 5

ಲಕ್ಷ ರೂಪಾಯಿ ಕೊಡಬೇಕೆಂದು ಏನು ನಿಯಮ ಮಾಡಿದ್ದಾರೆ, ಆ ರೀತಿ ಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ತಮ್ಮ ಮೂಲಕ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಎಲ್ಲ 224 ಕ್ಷೇತ್ರಗಳಿಗೂ ಈ ವರ್ಷ 1993-94ರಲ್ಲಿ ಇರತಕ್ಕ ಹಣವನ್ನು ಸಮಾನವಾಗಿ ಹಂಚಿದ್ದೇವೆ. ಒಂದೊಂದು ಕ್ಷೇತ್ರಕ್ಕೆ ಒಂದು ಲಕ್ಷದ 30 ಸಾವಿರ ರೂಪಾಯಿಗಳನ್ನು ಕಳುಹಿಸಿಕೊಡಲಾಗಿದೆ. ಸದ್ಯದಲ್ಲೇ ಇನ್ನೂ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಲಾಗುವುದು.

1991ರಿಂದ 94 ಸಾಲುಗಳಲ್ಲಿ ಧಾರ್ಮಿಕದತ್ತಿ ಇಲಾಖೆಯಿಂದ ಹಣಬಿಡುಗಡೆಯಾದ ಬಗ್ಗೆ

735 - ಶ್ರೀ ಬಸವಂತರೆಡ್ಡಿ, ಮೋತಕಪಲ್ಲಿ (ಸೇಡಂ) : ಮಾನ್ಯ ಕಾನೂನು ಹಾಗೂ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) *1991-92, 1992-93, 1993-94 ಸಾಲುಗಳಲ್ಲಿ ಕರ್ನಾಟಕ ರಾಜ್ಯದಲ್ಲಿ ಧಾರ್ಮಿಕ ದತ್ತಿ ಇಲಾಖೆಯಿಂದ ದೇವಸ್ಥಾನ ಜೀರ್ಣೋದ್ಧಾರಕ್ಕಾಗಲಿ, ದೇವಸ್ಥಾನ ಕಟ್ಟಡಕ್ಕಾಗಲಿ, ಕಲ್ಯಾಣ ಮಂಟಪಕ್ಕಾಗಲಿ ಇತ್ಯಾದಿ ಶೀರ್ಷಿಕೆಗಳು ಮಂಜೂರಿ ಮಾಡಿ ಬಿಡುಗಡೆ ಮಾಡಿ ರೂ ಹಣ ಎಷ್ಟು (ಜಿಲ್ಲಾವಾರು ವಿವರ ನೀಡುವುದು)*

ಆ) *1991-92,1992-93 ಹಾಗೂ 1993-94 ಸಾಲುಗಳಲ್ಲಿ ಗುಲ್ಬರ್ಗಾ ಜಿಲ್ಲೆಯಲ್ಲಿ ಎಲ್ಲಾ ಶೀರ್ಷಿಕೆಯಲ್ಲಿ ಮಂಜೂರಾಗಿರುವ ಹಣ ಎಷ್ಟು? (ತಾಲ್ಲೂಕುವಾರು ಹಾಗೂ ಗ್ರಾಮವಾರು ವಿವರ ನೀಡುವುದು)*

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಮುಜರಾಯಿ ಸಚಿವರು) :

ಅ)

ವರ್ಷ	ಜೀರ್ಣೋದ್ಧಾರ (ಆಯವ್ಯಯದಲ್ಲಿ	ನಿರ್ಮಾಣ ಒದಗಿಸಿದಂತೆ)	ಒಟ್ಟು ಮಂಜೂರು	ಬಿಡುಗಡೆ
1991-92	60.00	60.00	120.00	120.00
1992-93	160.00	120.00	280.00	280.00
1993-94	120.00	100.00	180.00	17.71
ಆ)				
1991-92			9.95	9.95
1992-93			22.85	22.85
1993-94			11.85	0.70

ಪಟ್ಟಿ ಲಗತ್ತಿಸಿದೆ.

ಕ್ರ ಸಂ.	ಜಿಲ್ಲೆಯ ಹೆಸರು	1991-92 2250-00-800 1-04 ನಿರ್ಮಾಣ ಗಳು	2,250-00-800 1-05 ದುರಸ್ತಿ ಮತ್ತು ರಿಪೇರಿ	1992-93 ನಿರ್ಮಾಣ 04	ರಿಪೇರಿ	1993- 94 ನಿರ್ಮಾಣ [illegible]	ದುರಸ್ತಿ ಮತ್ತು ರಿಪೇರಿ-05
1	2	3	4	5	6	7	8
1)	ಬೆಂಗಳೂರು ನಗರ	1,45,000-00	1,65,000-00	2,65,000-00	6,40,000	2,70,000-00	95,000-00
2)	ಬೆಂಗಳೂರು ಗ್ರಾಮಾಂತರ	1,40,000-00	1,60,000-00	2,50,000-00	5,85,000	2,75,000-00	4,85,000-00
3)	ಬೆಳಗಾಂ	4,75,000-00	2,30,000-00	5,20,000-00	8,60,000	6,35,000-00	4,90,000-00
4)	ಬೀದರ್	2,85,000-00	1,40,000-00	2,70,000-00	5,35,000	1,50,000-00	2,40,000-00
5)	ಬಿಜಾಪುರ	2,50,000-00	1,80,000-00	2,70,000-00	2,85,000	2,35,000-00	3,60,000-00
6)	ಬಳ್ಳಾರಿ	1,80,000-00	1,70,000-00	2,90,000-00	4,00,000	1,40,000-00	2,40,000-00
7)	ಚಿಕ್ಕಮಗಳೂರು	1,45,000-00	2,00,000-00	16,90,000-00	7,30,000	2,05,000-00	3,60,000-00
8)	ಚಿತ್ರದುರ್ಗ	2,10,000-00	2,30,000-00	4,80,000-00	3,90,000	3,50,000-00	3,88,000-00
9)	ದಕ್ಷಿಣ ಕನ್ನಡ	3,95,000-00	6,65,000-00	15,70,000-00	19,05,000	7,10,000-00	8,70,000-00
10)	ಧಾರವಾಡ	4,95 ,000-00	3,60,000-00	5,30,000-00	10,00,000	6,21,000-00	5,05,000-00
11)	ಗುಲ್ಬರ್ಗಾ	4,85,000-00	5,10,000-00	10,10,000-00	12,75,000	6,55,000-00	5,35,000-00
12)	ಹಾಸನ	2,85,000-00	2,30,000-00	3,35,000-00	7,70,000	5,12,000-00	6,70,000-00
							71,000-00
							3,00,000-00
13)	ಕೋಲಾರ	1,50,000-00	1,80,000-00	95,000-00	4,56,000	3,55,000-00	5,00,000-00
14)	ಕೊಡಗು	1,80,000-00	1,55,000-00	5,30,000-00	3,05,000	1,37,000-00	2,50,000-00
15)	ಮಂಡ್ಯ	2,15,000-00	2,95,000-00	4,30,000-00	3,65,000	1,80,000-00	6,10,000-00
16)	ಮೈಸೂರು	1,25,000-00	1,40,000-00	5,75,000-00	16,39,000	5,70,000-00	10,60,000-00
17)	ರಾಯಚೂರು	4,90,000-00	8,70,000-00	8,15,000-00	12,60,000	3,60,000-00	3,70,000-00
18)	ಶಿವಮೊಗ್ಗ	3,25,000-00	4,50,000-00	11,70,000-00	4,50,000	5,50,000-00	6,57,000-00
19)	ತುಮಕೂರು	2,50,000-00	3,80,000-00	5,10,000-00	7,95,000	3,30,000-00	7,18,000-00
20)	ಉತ್ತರ ಕನ್ನಡ	2,80,000-00	2,90,000-00	3,95,000-00	5,90,000	2,60,000-00	4,30,000-00
21)	ಹೊರರಾಜ್ಯಗಳು				7,45,000		3,00,000-00
		60,00,000-00	60,00,000-00	1,20,00,000-00	1,60,00,000	75,00,000-00	1,10,000-00

ಗುಲ್ಬರ್ಗಾ ತಾಲ್ಲೂಕು 1991-92

1) ಶ್ರೀ ರೇವಣಸಿದ್ಧೇಶ್ವರ ಮಠ ಬ್ರಹ್ಮಪುರ ಗುಲ್ಬರ್ಗಾ	10,000-00
2) ಶ್ರೀ ಮಾರುತಿ ದೇವಸ್ಥಾನ ಗೋಗಿಗ್ರಾಮ ಗುಲ್ಬರ್ಗಾ ತಾ:	10,000-00
3) ಶ್ರೀ ದೇವಿಮರಿಯಮ್ಮ ದೇವಸ್ಥಾನ ಶಿವಾಜಿನಗರ, ಗುಲ್ಬರ್ಗಾ ತಾ:	10,000-00
4) ಶ್ರೀ ಸೋಕುಳಸಾಳಿ ಸಮಾಜ, ಹೋಳಿಕಟ್ಟಾ ಮತ್ತಾಪುರ ಗುಲ್ಬರ್ಗಾ	50,000-00
5) ಶ್ರೀ ಡಾ। ಅಂಬೇಡ್ಕರ್ ಕಲ್ಯಾಣ ಮಂಟಪ ಗುಲ್ಬರ್ಗಾ	40,000-00
6) ಶ್ರೀ ಮಲ್ಲಿಕಾರ್ಜುನ ದೇವಸ್ಥಾನ ತಾಜಾಸುಲ್ತಾನಪುರ ಗುಲ್ಬರ್ಗಾ	10,000-00
	1,30,000-00

ಅಫ್ಜಲ್ಪುರ ತಾಲ್ಲೂಕು

1) ಶ್ರೀ ಬಸವೇಶ್ವರ ದೇವಸ್ಥಾನ ಆತಮಾರು ಗ್ರಾಮ ಅಫಜಲ್ಪುರ ತಾ:	15,000-00
2) ಶ್ರೀ ಸಾವಿರಲಿಂಗದೇವಸ್ಥಾನ ಬಂದರವಾಡ	15,000-00
3) ಶ್ರೀ ಬೀರಲಿಂಗೇಶ್ವರ ದೇವಸ್ಥಾನ, ಗೊಬ್ಬುರ ಗ್ರಾಮ (ಬಿ)	30,000-00
	60,000-00

ಸೇಡಂ ತಾಲ್ಲೂಕು

1) ಶ್ರೀ ಅಂಜನೇಯಸ್ವಾಮಿ ದೇವಸ್ಥಾನ ಮೊತಕಪಲ್ಲಿ ಸೇಡಂ ತಾ:	10,000-00
2) ಶ್ರೀ ಆಂಜನೇಯಸ್ವಾಮಿ ದೇವಸ್ಥಾನ ದಾಡದನ್ನ ಸೇಡಂ ತಾ:	10,000-00
	20,000-00

ಆಳಂದ ತಾಲ್ಲೂಕು 1991-92

1) ಶ್ರೀ ಶರಣಬಸವೇಶ್ವರ ದೇವಸ್ಥಾನ ದಂಡಾಪುರ ಗ್ರಾಮ ಆಳಂದ ತಾ:	25,000-00
2) ಶ್ರೀ ಆಜಾದ್ಮಹಾರಾಜ ದೇವಸ್ಥಾನ, ಬೆಣ್ಣಿಕಿರೂರು ಆಳಂದ ತಾ:	10,000-00
3) ಶ್ರೀ ಹನುಮಾನ್ ದೇವಸ್ಥಾನ, ಜಿತಲಿಯಗ್ರಾಮ ಆಳಂದ ತಾ:	10,000-00
4) ಶ್ರೀ ರೇವಣಸಿದ್ಧೇಶ್ವರ ದೇವಸ್ಥಾನ, ಆಳಂದ ತಾ:	10,000-00
5) ಶ್ರೀ ಯಲ್ಲಮ್ಮ ದೇವಸ್ಥಾನ, ದಂಗಾಪುರ ಆಳಂದ ತಾ:	10,000-00
	65,000-00

ಯಾದಗಿರಿ ತಾಲ್ಲೂಕು

1) ಶ್ರೀ ಹನುಮಾನ್ ದೇವಸ್ಥಾನ, ರಾಣಿಗುಂದಿಗ್ರಾಮ ಯಾದಗಿರಿ ತಾ:	10,000-00
2) ಶ್ರೀ ವೀರಭದ್ರೇಶ್ವರ ದೇವಸ್ಥಾನ, ಚಂದ್ರಕಿಗ್ರಾಮ -”-	10,000-00
3) ಶ್ರೀ ಹನುಮಾನ್ ದೇವಾಗುಡಿ ಮುನಗಲ್‌ಗ್ರಾಮ -”-	10,000-00
4) ಶ್ರೀ ಹನುಮಾನ್ ದೇವಸ್ಥಾನ, ಹೂರೆಂಚಿ ಗ್ರಾಮ -”-	10,000-00
5) ಶ್ರೀ ಹನುಮಾನ್ ದೇವಸ್ಥಾನ, ಕ್ಯಾಸೆಫನಳ್ಳಿ	10,000-00

6) ಶ್ರೀ ಸುಗುರೇಶ್ವರ ದೇವಸ್ಥಾನ, -"-	10,000-00
7) ಶ್ರೀ ಹನುಮಾನ್ ದೇವಸ್ಥಾನ, ಕಟ್ಟಿಗೆ ನರಸಪುರ ಗ್ರಾಮ	10,000-00
8) ಶ್ರೀ ಹನುಮಾನ್ ದೇವಸ್ಥಾನ, ಬಾಚಾರಗ್ರಾಮ	10,000-00
9) ಶ್ರೀ ರಾಮಲಿಂಗೇಶ್ವರ ದೇವಸ್ಥಾನ,ಕೋಟೆ ಲಿಂಗೇಶ್ವರ -"-	10,000-00
10) ಶ್ರೀ ದಿಗ್ಗಿರೇಶ್ವರ ದೇವಸ್ಥಾನ,ಕನ್ನೆಗೇರ ಯಾದಗಿರಿ ತಾ:	20,000-00
11) ಶ್ರೀ ವಾಲ್ಮೀಕಿ ದೇವಸ್ಥಾನ ಯಾದಗಿರಿ ನಗರ	50,000-00
12) ಶ್ರೀ ಹನುಮಾನ್ ದೇವಸ್ಥಾನ, ಚಾಕ್ಲೇರ ಯಾದಗಿರಿ ತಾ:	15,000-00
13) ಶ್ರೀ ಯಲ್ಲಾಲಿಂಗ ದೇವಸ್ಥಾನ ಶೆಟ್ಟಿಗೇರ ಯಾದಗಿರಿ ತಾ:	10,000-00
14) ಶ್ರೀ ಹನುಮಾನ್ ದೇವಸ್ಥಾನ ಅಸ್ಲಾಪುರ -"-	10,000-00
15) ಶ್ರೀ ಜೈಹನುಮಾನ್ ದೇವಸ್ಥಾನ, ಡಾ|| ಬಿ.ಆರ್.ಅಂಬೇಡ್ಕರ್‌ನಗರ ಯಾದಗಿರಿ	10,000-00
16) ಶ್ರೀ ಬೀರಲಿಂಗೇಶ್ವರ ದೇವಸ್ಥಾನ ರಾಣಿಗುಂದಿಗ್ರಾಮ -"-	10,000-00
17) ಶ್ರೀ ಹನುಮಾನ್ ದೇವಸ್ಥಾನ, ಈಡೂರು ಯಾದಗಿರಿ	20,000-00
18) ಶ್ರೀ ಯಲ್ಲಾಲಿಂಗಶಿವಯೋಗಿ ದೇವಸ್ಥಾನ -"-	15,000-00
	2,50,000-00

ಸುರಪುರ ತಾಲ್ಲೂಕು 1991-92

ಕ್ರ. ಸಂ.	ಧಾರ್ಮಿಕ ಸಂಸ್ಥೆಯ ಹೆಸರು	ಮೊತ್ತ	ಆದೇಶ ಸಂಖ್ಯೆ
1)	ಶ್ರೀ ಶರಣುಗುಳೇಶ್ವರ ದೇವಸ್ಥಾನ, ಸೂಡೂರುಗ್ರಾಮ ಸುರುಪುರ ತಾ:	10,000-00	ಆರ್.ಡಿ150 ಎಂಎಲ್‌ಡಿ 91 ದಿ: 31-10-91
2)	ಶ್ರೀ ಹುಚ್ಚಪಿಡ್ಡಯ್ಯ ದೇವಸ್ಥಾನ, ಮಾನಗುಂಡಾಲ ಸುರಪುರ	10,000-00	-"-
3)	ಶ್ರೀ ನೀಲಕಂಠರಾವ್ ದೇವಸ್ಥಾನ ನೀಲಕಂಠಗುದ್ದಿ ಗ್ರಾಮ ಸುರಪುರ	10,000-00	-"-
4)	ಶ್ರೀ ಹನುಮಾನ್ ದೇವಸ್ಥಾನ ರಾಜನಕೊಳ್ಳೂರು ಸುರಪುರ ತಾ	10,000-00	-"-
5)	ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ, (ಕಲ್ಯಾಣ ಮಂಟಪ) ಸುರಪುರ ತಾ	50,000-00	ಆರ್.ಡಿ 168 ಎಂಎಲ್.ಡಿ. 91, ದಿ: 31-10-91
6)	ಶ್ರೀ ಹುಲಗಮ್ಮ ದೇವಸ್ಥಾನ (ಶೆಟ್ಟಿಮಾಲಾ) ಸುರಪುರ ತಾ	15,000-00	-"-
7)	ಶ್ರೀ ಬಸವೇಶ್ವರ ದೇವಸ್ಥಾನ ಏವೂರು ಗ್ರಾಮ ಸುರಪುರ ತಾ	15,000-00	-"-
8)	ಶ್ರೀ ಸಂಗಮೇಶ್ವರ ದೇವಸ್ಥಾನ (ಕಲ್ಯಾಣ ಮಂಟಪ) ವಜ್ಜಲ ಸುರಪುರ ತಾ	25,000-00	-"-
9)	ಶ್ರೀ ಹನುಮಾನ್ ದೇವಸ್ಥಾನ, ನಗನೂರು,		ಆರ್.ಡಿ.150,

	ಕೆಂಬಾವಿ ವಿಭಾಗ ಸುರಪುರ ತಾ	10,000-00	ಎಂಎಲ್.ಡಿ. 91 ದಿ: 28-3-92
10)	ಶ್ರೀ ಹನುಮಾನ್ ದೇವಸ್ಥಾನ ವದ್ದನಕಿರದಳ್ಳಿ ಸುರಪುರ	10,000-00	-"-
11)	ಶ್ರೀ ವೇಣು ಗೋಪಾಲಸ್ವಾಮಿ ದೇವಸ್ಥಾನ ಸುರಪುರ	40,000-00	ಆರ್.ಡಿ. 168: ಎಎಲ್.ಡಿ. 91 ದಿ: 28-3-91
12)	ಶ್ರೀ ದೇವ ದೇವಸ್ಥಾನ ಯಮನೂರು ಸುರಪುರ ತಾ	15,000-00	ಆರ್.ಡಿ.150 ಎಂಎಲ್.ಡಿ .91 ದಿ: 31-10-91
		2,20,000-00	

ಶಹಪೂರ ತಾಲ್ಲೂಕ್ 1991-92

1)	ಶ್ರೀ ದಂಡಗುಂಡ ಬಸವಣ್ಣ ದೇವಸ್ಥಾನ ಬೋಗಿಪೇಟ ಗ್ರಾಮ	ಶಹಾಪೂರ ತಾ:	10,000-00
2)	ಶ್ರೀ ಹನುಮಾನ್ ದೇವಸ್ಥಾನ ಬೋವಿ ಕಾಡಂಗೇರ,	-"-	20,000-00
3)	ಶ್ರೀ ಮಲ್ಲೇಶ್ವರನ ದೇವಸ್ಥಾನ ಹೊಸಕೆರೆ	-"-	10,000-00
4)	ಶ್ರೀ ಹನುಮಾನ್ ದೇವಸ್ಥಾನ ಸೈಬಾಪುರ	-"-	10,000-00
5)	ಶ್ರೀ ಸಿದ್ಧೇಲಿಂಗೇಶ್ವರ ದೇವಸ್ಥಾನ ಕಲ್ಯಾಣ ಮಂಟಪ ಸುಕ್ಷೇತ್ರ ಮಮಾದ್ ಪುರ	-"-	15,000-00
			65,000-00

ಚಿತ್ತಾಪುರ ತಾಲ್ಲೂಕು

1)	ಶ್ರೀ ಶಿವಯೋಗಿಶ್ವರ ದೇವಸ್ಥಾನ ದೇವನ ತೇಡನೂರು ಗ್ರಾಮ ಚಿತ್ತಾಪುರ ತಾಲ್ಲೂಕು	-"-	10,000-00
1)	ಶ್ರೀ ಗುರುದೇವದತ್ತ ನೂತನ ಮಂದಿರ ರಾಂಪುರಹಳ್ಳಿ ಚಿತ್ತಾಪುರ ತಾ:		10,000-00
			20,000-00

ಜೇವರ್ಗಿ ತಾಲ್ಲೂಕ್

1)	ಶ್ರೀ ದ್ಯುವಮ್ಮ ದೇವಿ ಟ್ರಸ್ಟ್ ಕಮಿಟಿ ನಚೊಳಿ ಗ್ರಾಮ ಜೇವರ್ಗಿ ತಾಲ್ಲೂಕು		10,000-00
2)	ಶ್ರೀ ಹನುಮಾನ್ ದೇವಸ್ಥಾನ ಬಡಗೇರಿ ಗ್ರಾಮ	-"-	10,000-00
3)	ಶ್ರೀ ಹನುಮಾನ್ ಮಂದಿರ ಗೌನಹಳ್ಳಿ ಗ್ರಾಮ	-"-	10,000-00
4)	ಶ್ರೀ ಬೀರಲಿಂಗೇಶ್ವರ ದೇವಸ್ಥಾನ ಕೊಂಡಗೂಳಿ ಗ್ರಾಮ	-"-	10,000-00
5)	ಶ್ರೀ ಚಂದ್ರರಬಸವೇಶ್ವರ ದೇವಸ್ಥಾನ ಕೆಲ್ಲೂರ	-"-	10,000-00

6)	ಶ್ರೀ ಯಲ್ಲಮ್ಮ ದೇವಸ್ಥಾನ ಜೇವರ್ಗಿ -"-	10,000-00
		70,000-00

ಚಿಂಚೋಳಿ ತಾಲ್ಲೂಕು

1)	ಶ್ರೀ ಮಲ್ಲಿಕಾರ್ಜುನ ದೇವಸ್ಥಾನ ಸರಸಾಂಬ ಗ್ರಾಮ ಚಿಂಚೋಳಿ ತಾ:	25,000-00
2)	ಶ್ರೀ ರೇವಣಸಿದ್ದೇಶ್ವರ ದೇವಸ್ಥಾನ ರಟಕಲ್ ಗ್ರಾಮ -"-	25,000-00
3)	ಶ್ರೀ ಹನುಮಾನ್ ದೇವಸ್ಥಾನ ಹಸಿರೆಗುಂಡಿಗೆ -"-	15,000-00
4)	ಶ್ರೀ ವೀರಭದ್ರಸ್ವಾಮಿ ದೇವಸ್ಥಾನ ಚಾಂಗ್ಲೇರ -"-	10,000-00
		75,000-00

1)	ಶ್ರೀ ಬಸವೇಶ್ವರ ದೇವಸ್ಥಾನ ಯಾಲಕಂಜಿ	10,000-00
2)	ಶ್ರೀ ಬೀರೇಲಿಂಗೇಶ್ವರ ದೇವಸ್ಥಾನ ಬಿರಿಯಾಳ (ಬಿ)	10,000-00
		20,000-00

ಗುಲ್ಬರ್ಗಾ ತಾಲ್ಲೂಕು 1992-93

ಕ್ರ. ಸಂ.	ದೇವಸ್ಥಾನದ ಹೆಸರು ಮತ್ತು ಗ್ರಾಮ	ಮಂಜೂರಾದ ಮೊಬಲಗು ರೂ.
1)	ಶ್ರೀ ವೀರಭದ್ರೇಶ್ವರಸ್ವಾಮಿ ದೇವಸ್ಥಾನ ಮಹಾಗಾಁ	20,000-00
2)	ಶ್ರೀ ಅಂಬೇಡ್ಕರ್ ಕಲ್ಯಾಣ ಮಂಟಪ	1,00,000-00
3)	ಶ್ರೀ ಬುದ್ಧವಿಹಾರ್, ಕೋಸನೂರು	1,00,000-00
4)	ಶ್ರೀ ದತ್ತಾತ್ರೇಯ ದೇವಸ್ಥಾನ ಗಾಣಗಪುರ	4,00,000-00
5)	ಶ್ರೀ ಸೋಮಕುತಾರಿ ಸಮಾಜ ಹೋಳಿಕ ಬೈ ಕುಕಲೆಯಾಪುರ ಕಲ್ಯಾಣ ಮಂಟಪ ಗುಲ್ಬರ್ಗಾ	30,000-00
6)	ಶ್ರೀ ಹನುಮಾನ್ ದೇವಸ್ಥಾನ ವಿಠಲನಗರ	25,000-00
7)	ಶ್ರೀ ಹನುಮಾನ್ ದೇವಸ್ಥಾನ ಪುಟಾಣಿಗಲ್ಲಿ	30,000-00
8)	ಶ್ರೀ ವೀರಭದ್ರಸ್ವಾಮಿ ದೇವಸ್ಥಾನ, ಚಿಂಚೋಳಿ ರಾಯಗೋಡ	25,000-00
9)	ಶ್ರೀ ದೇವಿ ಮರಿಯಮ್ಮ ಶ್ರೀ ಸೇವಾಲಾಲ್ ಮಹಾರಾಜ ದೇವಸ್ಥಾನ ಶಿವಾಜಿನಗರ	15,000-00
		7,45,000-00

ಚಿತ್ತಾಪುರ

ಕ್ರಮ ಸಂ.	ದೇವಸ್ಥಾನದ ಹೆಸರು ಮತ್ತು ಗ್ರಾಮ	ಮಂಜೂರಾದ ಮೊಬಲಗು
1)	ಶ್ರೀ ವೆಂಕಟೇಶ್ವರ ದೇವಸ್ಥಾನ, ರಾವಣೂರು ಗ್ರಾಮ	40,000-00
2)	ಶ್ರೀ ಗುರುದೇವ ದತ ನೂತನ ಮಂದಿರ, ರಾಮಪುರ	30,000-00

3) ಶ್ರೀ ರಾಮಲಿಂಗೇಶ್ವರ ದೇವಸ್ಥಾನ,ರಾವರ ಗ್ರಾಮ	25,000-00
	95,000-00

ಸೇಡಂ ತಾಲ್ಲೂಕು

ಕ್ರಮ ಸಂ.	ದೇವಸ್ಥಾನದ ಹೆಸರು ಮತ್ತು ಗ್ರಾಮ	ಮಂಜೂರಾದ ಮೊಬಲಗು
1)	ಶ್ರೀ ಆಂಜನೇಯಸ್ವಾಮಿ ದೇವಸ್ಥಾನ	10,000-00
2)	ಶ್ರೀ ಬಲಭೀಮ ಮೋತಕಲ್ಲ ಕಲ್ಯಾಣ ಮಂಟಪ ಸೇಡಂ ತಾಲ್ಲೂಕು	40,000-00
3)	ಶ್ರೀ ವೀರಾಂಜನೇಯಸ್ವಾಮಿ ದೇವಸ್ಥಾನ, ಇಳಿಕಲ್ ಗ್ರಾಮ	20,000-00
4)	ಶ್ರೀ ಶರಣ ಬಸವೇಶ್ವರ ದೇವಸ್ಥಾನ, ಮುಗನೂರು	20,000-00
5)	ಶ್ರೀ ಸೇವಾಲಾಲ್ ಮರಗಮ್ಮ ದೇವಸ್ಥಾನ, ಮಾಳಖೇಡ ಕುಡಸೇಷನ್ ತಂಡ	40,000-00

ಅಫಜಲ್ಪುರ ತಾಲ್ಲೂಕು

ಕ್ರಮ ಸಂ.	ದೇವಸ್ಥಾನದ ಹೆಸರು ಮತ್ತು ಗ್ರಾಮ	ಮಂಜೂರಾದ ಮೊಬಲಗು
1)	ಶ್ರೀ ಶಿವಯೋಗೀಶ್ವರ ದೇವಸ್ಥಾನ ಇಂಚರಗಡ್ಡೆ ಅಪ್ಪಜಲ್ಪುರ	10,000-00
2)	ಶ್ರೀ ಹನುಮಾನ್ ದೇವಸ್ಥಾನ ರೇವೂರ	15,000-00
3)	ಶ್ರೀ ಬಸವೇಶ್ವರ ದೇವಸ್ಥಾನ, ಅಥನೂರು	15,000-00
4)	ಶ್ರೀ ಹನುಮಾನ್ ದೇವಸ್ಥಾನ, ಅಪ್ಪಜಲ್ಪುರ	15,000-00
5)	ಶ್ರೀ ಸೇವಾಲಾಲ್ ಮಹಾರಾಜ ಜಗದಾಂಬ ದೇವಸ್ಥಾನ, ಚಾಚಾಪುರ ತಾಂಡ	20,000-00
		75,000-00

ಆಳಂದ ತಾಲ್ಲೂಕು

ಕ್ರಮ ಸಂ.	ದೇವಸ್ಥಾನದ ಹೆಸರು ಮತ್ತು ಗ್ರಾಮ	ಮಂಜೂರಾದ ಮೊಬಲಗು
1)	ಶ್ರೀ ಮಲ್ಲಿಕಾರ್ಜುನ ದೇವಸ್ಥಾನ, ದಸಂಗಪುರ	10,000-00
2)	ಶ್ರೀ ಹನುಮಾನ್ ದೇವಸ್ಥಾನ, ಚಿಂಚೋಳಿ	10,000-00
3)	ಶ್ರೀ ಬೀಳಲಿಂಗೇಶ್ವರ ದೇವಸ್ಥಾನ,ಅಯ್ಯಪತಿ ಜಂಗಲ್	10,000-00
4)	ಶ್ರೀ ಹನುಮಾನ್ ದೇವಸ್ಥಾನ,ಚಿಂಚೋಳಿ	10,000-00
5)	ಶ್ರೀ ಮಲ್ಲಿಕಾರ್ಜುನಸ್ವಾಮಿ ದೇವಸ್ಥಾನ,ಸಾಳದಂಬ	15,000-00
6)	ಶ್ರೀ ಸಿದ್ದೇಶ್ವರ ದೇವಸ್ಥಾನ,ಕಾಜರಿ ಗ್ರಾಮ	10,000-00
7)	ಶ್ರೀ ಧರ್ಮಶಾಲಾ ನಿರ್ಮಾಣ ಆಳಂದ ಟೌನ್,	40,000-00
8)	ಶ್ರೀ ಬೀರಲಿಂಗೇಶ್ವರ ದೇವಸ್ಥಾನ,ಆಳಂದ ಟೌನ್	25,000-00
9)	ಶ್ರೀ ಮಲ್ಲಿಕಾರ್ಜುನಸ್ವಾಮಿ ದೇವಸ್ಥಾನ, ಸಂಗಾಪುರ	25,000-00
10)	ಶ್ರೀ ಶರಣಬಸವೇಶರಸ್ವಾಮಿ ದೇವಸ್ಥಾನ,ಹುಬಳಿ	20,000-00

11) ಶ್ರೀ ಸೇವಾಲಾಲ್ ಮಹಾರಾಜ ಮತ್ತು ಜಗದಂಬ ದೇವರು ದೇವಸ್ಥಾನ,ಚೌಡಾಪುರ	20,000 00
12) ಶ್ರೀ ಹನುಮಾನ್ ದೇವಸ್ಥಾನ, ಇಕ್ಕಳಕಿ	30,000-00
13) ಶ್ರೀ ರಾಮಲಿಂಗ ಚೌಡೇ[illegible] ದೇವಸ್ಥಾನ, ಚುಂಚನ ಸೂರುಗ್ರಾಮ	30,000-00
14) ಶ್ರೀ ಮ[illegible]ರ್ಜುನಸ್ವಾಮಿ ದೇವಸ್ಥಾನ, ರುದ್ರವಾಡಿ	50,000-00
	3,05,000-00

ಚಿಂಚೋಳಿ ತಾಲ್ಲೂಕು

ಕ್ರ. ಸಂ.	ದೇವಸ್ಥಾನದ ಹೆಸರು ಮತ್ತು ಗ್ರಾಮ	ಮಂಜೂರಾದ ಮೊಬಲಗು ರೂ.
1)	ಶ್ರೀ ವೀರಭದ್ರೇಶ್ವರ ದೇವಸ್ಥಾನ, ರಾಯಕೋಡ್	15,000-00
2)	ಶ್ರೀ ಸಿದ್ಧೇಶ್ವರಸ್ವಾಮಿ ದೇವಸ್ಥಾನ, ಚಿಂಚೋಳಿ	10,000-00
3)	ಶ್ರೀ ಜಗದೀಶ್ವರ ಮಂದಿರ, ಕರ್ಚಖೇಡ್	40,000-00
4)	ಶ್ರೀ ಸಿದ್ಧೇಶ್ವರಸ್ವಾಮಿ ದೇವಸ್ಥಾನ, ಜೀರ್ಣೋದ್ಧಾರ ಕಮಿಟಿ ರುದ್ನೂರು	40,000-00
		1,05,000-00

ಯಾದಗಿರಿ ತಾಲ್ಲೂಕು

ಕ್ರ. ಸಂ.	ದೇವಸ್ಥಾನದ ಹೆಸರು ಮತ್ತು ಗ್ರಾಮ	ಮಂಜೂರಾದ ಮೊಬಲಗು ರೂ.
1)	ಶ್ರೀ ಮಾರುತಿ ದೇವಸ್ಥಾನ, ಗುರುಮಿಟಕಲ್	15,000-00
2)	ಶ್ರೀ ಯಲ್ಲಮ್ಮ ದೇವಸ್ಥಾನ, ಗುರುಮಿಟಕಲ್ ಹರಿಜನವಾಡಿ	10,000-00
3)	ಶ್ರೀ ರಾಮಲಿಂಗೇಶ್ವರ ದೇವಸ್ಥಾನ, ರಾಣಗುಸ್ಕಂ	10,000-00
4)	ಶ್ರೀ ರಾಮಲಿಂಗೇಶ್ವರ ದೇವಸ್ಥಾನ, ವಡ್ಡರಗಲ್ಲಿ ಯಲ್ಲೇರಿಗ್ರಾಮ	10,000-00
5)	ಶ್ರೀ ಹನುಮಾನ್ ದೇವಸ್ಥಾನ ಎಸ್. ಹೊಸಹಳ್ಳಿ	30,000-00
		75,000-00

ಸುರಪುರ ತಾಲ್ಲೂಕು

ಕ್ರ. ಸಂ.	ದೇವಸ್ಥಾನದ ಹೆಸರು ಮತ್ತು ಗ್ರಾಮ	ಮಂಜೂರಾದ ಮೊಬಲಗು ರೂ.
1)	ಶ್ರೀ ಜೀವೇಶ್ವರ ಕಲ್ಯಾಣ ಮಂಟಪ, ರಾಯಪೇಟೆ	25,000-00
2)	ಶ್ರೀ ಚೌಡೇಶ್ವರಿ ದೇವರು ದೇವಸ್ಥಾನ, ತಿಮ್ಮಾಪುರ	15,000-00
3)	ಶ್ರೀ ಮುಜಿನಂದನಂ ದೇವಸ್ಥಾನ, ಜೀಗರಿಹಾಳಗ್ರಾಮ	15,000-00
4)	ಶ್ರೀ ಹನುಮಾನ್ ದೇವಸ್ಥಾನ, ಕಾಡ್ಕಲ್	10,000-00
5)	ಶ್ರೀ ಹನುಮಾನ್ ದೇವಸ್ಥಾನ,ಬಂದರ ತಳಹಳ್ಳಿ	10,000-00
6)	ಶ್ರೀ ಸೇವಾಲಾಲ್ ಜಗದಂಬ ದೇವಸ್ಥಾನ ಕೊಳೆಹಾಳತಾಂಡ	15,000-00

7)	ಶ್ರೀ ಬಸವೇಶ್ವರ ದೇವಸ್ಥಾನ ಕೋಡಿಕಾಲ್	50,000-00
8)	ಶ್ರೀ ಸಿದ್ಧಲಿಂಗೇಶ್ವರಸ್ವಾಮಿ ದೇವಸ್ಥಾನ, ದೊಡ್ಡಸೊಲ್ಲಾಪುರ	40,000-00
9)	ಶ್ರೀ ಸಂಗಮೇಶ್ವರ ದೇವಸ್ಥಾನ, ಕಕ್ಕೇರ ಗ್ರಾಮ	20,000-00
10)	ಶ್ರೀ ಆಂಜನೇಯಸ್ವಾಮಿ ದೇವಸ್ಥಾನ ಕಾಚಾಪುರ	25,000-00
		2, 25,000-00

ಶಹಾಪುರ ತಾಲ್ಲೂಕು

ಕ್ರ. ಸಂ.	ದೇವಸ್ಥಾನದ ಹೆಸರು ಮತ್ತು ಗ್ರಾಮ	ಮಂಜೂರಾದ ಮೊಬಲಗು ರೂ.
1)	ಶ್ರೀ ಹನುಮಾನ್ ದೇವಸ್ಥಾನ ಮಂಡೇಕಲ್	15,000-00
2)	ಶ್ರೀ ಹನುಮಾನ್ ದೇವಸ್ಥಾನ ಸೈನಾಪುರ	10,000-00
3)	ಶ್ರೀ ಹನುಮಾನ್ ದೇವಸ್ಥಾನ ಅಳ್ಳಳ್ಳಿ	15,000-00
4)	ಶ್ರೀ ಹನುಮಾನ್ ದೇವಸ್ಥಾನ ಪರರಪುರಿ	10,000-00
5)	ಶ್ರೀ ಬೀರಲಿಂಗೇಶ್ವರ ದೇವಸ್ಥಾನ, ಹುರಸಗುಂಡಗಿಗ್ರಾಮ	10,000-00
6)	ಶ್ರೀ ಬೀರಲಿಂಗೇಶ್ವರ ದೇವಸ್ಥಾನ, ಶಿರನಾಳ	20,000-00
7)	ಶ್ರೀ ಹನುಮಾನ್ ದೇವಸ್ಥಾನ, ಕುರಿಗಾಳ	10,000-00
8)	ಶ್ರೀ ದೇನಮ್ಮ ದೇವಸ್ಥಾನ, ಇಂಗಳಗಿ	25,000-00
9)	ಶ್ರೀ ಬೀರಲಿಂಗೇಶ್ವರ ದೇವಸ್ಥಾನ, ಇಕ್ಕೂರು	25,000-00
10)	ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ, ಹಳೇಪೇಟೆ	30,000-00
		1,70,000-00

ಕ್ರ. ಸಂ.	ದೇವಸ್ಥಾನದ ಹೆಸರು ಮತ್ತು ಗ್ರಾಮ	ಮಂಜೂರಾದ ಮೊಬಲಗು ರೂ.
1)	ಸೋಮಲಿಂಗೇಶ್ವರ ದೇವಸ್ಥಾನದ ನದಿ ಸಿನ್ನೂರು ಗ್ರಾಮ	15,000-00
2)	ಶ್ರೀ ಹನುಮಾನ್ ದೇವಸ್ಥಾನ ಅವಳಗ	10,000-00
3)	ಶ್ರೀ ಚಂಡೇಶ್ವರ ದೇವಸ್ಥಾನ ಮದನ ಹಿಪ್ಪರಗ	10,000-00
4)	ಶ್ರೀ ವಿಠಲ ರುಕ್ಮಿಣಿ ದೇವಸ್ಥಾನ ಕಣ್ಣೆ ಸುಲ್ತಾನಾಳ ಕಮಾಲಪುರ	30,000-00
5)	ಶ್ರೀ ಹನುಮಾನ್ ದೇವಸ್ಥಾನ, ಪಾಳೇಬೆಳಗುಂಡೆ	30,000-00
6)	ಶ್ರೀ ಹನುಮಾನ್ ದೇವಸ್ಥಾನ, ಗೋರಗಿನ್ನೂರು	20,000-00
		1,15,000-00

1992-93

1)	ಗುಲ್ಬರ್ಗಾ	7,45,000-00
2)	ಆಳಂದ	3,05,000-00
3)	ಶೋರಪುರ	2,25,000-00
4)	ಶಹಾಪುರ	1,70,000-00
5)	ಚಿತ್ತಾಪುರ	95,000-00
6)	ಚಿಂಚೋಳಿ	1,05,000-00

7)	ಯಾದಗೀರ್	75,000-00
8)	ಸೇಡಂ	1,30,000-00
9)	ಜೇವರ್ಗಿ	2,45,000-00
10)	ಅಪ್ಪಜಲ್ಪುರ	75,000-00
		1,15,000-00
		22,85,000-00

ಜೇವರ್ಗಿ

ಕ್ರ. ಸಂ.	ದೇವಸ್ಥಾನದ ಹೆಸರು ಮತ್ತು ಗ್ರಾಮ	ಮಂಜೂರಾದ ಮೊಬಲಗು ರೂ.
1)	ಶ್ರೀ ಬಸವೇಶ್ವರಸ್ವಾಮಿ ದೇವಸ್ಥಾನ,ಹುಲ್ಲೂರು	15,000-00
2)	ಶ್ರೀ ಮಹಾಲಕ್ಷ್ಮಿದೇವಸ್ಥಾನ, ಹುಲ್ಲೂರು ಗ್ರಾಮ	15,000-00
3)	ಶ್ರೀ ಅಪೋಪಸಿ ಕೆಳಗಿನ ಮೆಡ	10,000-00
4)	ಶ್ರೀ ಶಿವನಂಜುಂಡೇಶ್ವರ ದೇವಸ್ಥಾನ, ಜೇಮಗೆ	15,000-00
5)	ಶ್ರೀ ಸಂಗಮೇಶ್ವರ ದೇವಸ್ವಾನ, ನೂಡೂರು	20,000-00
6)	ಶ್ರೀ ಸಿದ್ಧಬಸವೇಶ್ವರ ದೇವಸ್ಥಾನ, ಕೋಲ್ಕಾರ	20,000-00
7)	ಶ್ರೀ ಹನುಮಾನ್ ದೇವಸ್ಥಾನ, ನರಿಬೋಳಿ	15,000-00
8)	ಶ್ರೀ ಜವಳಗದ ಕಲ್ಯಾಣ ಮಂಟಪ ಜೇವರ್ಗಿ	20,000-00
9)	ಶ್ರೀ ಗ್ರಾಮದೇವತೆ ದ್ಯಾಮವ್ವದೇವಿ ಟ್ರಸ್ಟ್‌ಕಮಿಟಿ ನಾಗತಿ	15,000-00
10)	ಶ್ರೀ ಚರಬಸವೇಶ್ವರ ದೇವಸ್ಥಾನ, ಕಲ್ಯಾಣಮಂಟಪ ಕೆಳ್ಳೂರು	30,000-00
11)	ಶ್ರೀ ಬೀರಲಿಂಗೇಶ್ವರ ದೇವಸ್ಥಾನ, ಅಂದೋಳ	25,000-00
12)	ಶ್ರೀ ಹನುಮಾನ್ ದೇವಸ್ಥಾನ ಜೇವರ್ಗಿ ಟೌನ್	25,000-00
13)	ಶ್ರೀ ಕಾಳಿಕಾದೇವಿ ದೇವಸ್ಥಾನ ನಳೋಗಿ	20,000-00
		2,45,000-00

ಯಾದಗಿರಿ ತಾಲ್ಲೂಕು 1993-94

1)	ಶ್ರೀ ಚನ್ನಕೇಶ್ವರ ದೇವಸ್ಥಾನ, ಜೈಗ್ರಾಮ	20,000-00
2)	ಶ್ರೀ ಗುಂಜಾಲಮ್ಮ ದೇವಸ್ಥಾನ ಗುಜನೂರು	10,000-00
3)	ಶ್ರೀ ಹನುಮಾನ್ ದೇವಸ್ಥಾನ ಚಳಗೆರೆ	20,000-00
4)	ಶ್ರೀ ಹನುಮಾನ್ ದೇವಸ್ಥಾನ ಸಂಕ್ಷೇಪುರ ಗ್ರಾಮ	20,000-00
5)	ಶ್ರೀ ಹನುಮಾನ್ ದೇವಸ್ಥಾನ ಜೇಲೇರಿ ಗ್ರಾಮ	20,000-00
6)	ಶ್ರೀ ಹನುಮಾನ್ ದೇವಸ್ಥಾನ ಗೋಪಾಲಪುರ	20,000-00
7)	ಶ್ರೀ ಹನುಮಾನ್ ದೇವಸ್ಥಾನ ಲಾರಂಚ	20,000-00
8)	ಶ್ರೀ ಹನುಮಾನ್ ದೇವಸ್ಥಾನ ಲಿಂಗೇರಿ ಗ್ರಾಮ	20,000-00
9)	ಶ್ರೀ ಹನುಮಾನ್ ದೇವಸ್ಥಾನ ಅಲ್ಲಿಪುರ	20,000-00
		1,70,000-00

ಆಳಂದ ತಾಲ್ಲೂಕು

1) ಶ್ರೀ ಬೀರಲಿಂಗೇಶ್ವರ ದೇವಸ್ಥಾನ ಬಿಕೆ.ಸಲಗರ ಗ್ರಾಮ	15,000-00
2) ಶ್ರೀ ಶಂಕರ ಲಿಂಗೇಶ್ವರ ದೇವಸ್ಥಾನ ಮಡಿಹಾಳ ಗ್ರಾಮ	20,000-00
3) ಶ್ರೀ ಹನುಮಾನ್ ಮಂದಿರ ಕಟ್ಟಡ ಚಿತ್ತಲಿ ಗ್ರಾಮ	20,000-00
4) ಶ್ರೀ ಮಾಣಿಕೇಶ್ವರ ದೇವಸ್ಥಾನ ತಡಕಲ್ ಗ್ರಾಮ	15,000-00
5) ಶ್ರೀ ಯಲ್ಲಮ್ಮಾ ದೇವಿ ದೇವಸ್ಥಾನ ಕೆನಗಂಚಿ	15,000-00
6) ಶ್ರೀ ದತ್ತಾತ್ರೇಯ ದೇವಸ್ಥಾನ ಕಡಗಂಚಿ	40,000-00
	1,25,000-00

ಸುರಪುರ ತಾಲ್ಲೂಕು

1) ಶ್ರೀ ಕೆಂಚಮ್ಮಾ ದೇವಸ್ಥಾನ ದೇವರ ಗೊನಾಳ	15,000-00
2) ಶ್ರೀ ಗದ್ದೆಮ್ಮಾ ದೇವಸ್ಥಾನ ಜಂಗಿನಗಟ್ಟಿ ಗ್ರಾಮ	15,000-00
3) ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ ಕಲ್ಯಾಣ ಮಂಟಪ	20,000-00
4) ಶ್ರೀ ಬಸವೇಶ್ವರ ದೇವಸ್ಥಾನ ಸವಿತ ಸಮಾಜ	20,000-00
	70,000-00

ಶಹಾಪುರ ತಾಲ್ಲೂಕು 1993-94

1) ಶ್ರೀ ಹನುಮಾನ ದೇವಸ್ಥಾನ ಬಿರನೂರು ಗ್ರಾಮ	15,000-00
2) ಶ್ರೀ ಹನುಮಾನ ದೇವಸ್ಥಾನ ಕಕಸಗೀರ	15,000-00
3) ಶ್ರೀ ಮಲ್ಲೇಶ್ವರ ದೇವಸ್ಥಾನ ಮಲಗತ್ತಿ	15,000-00
4) ಶ್ರೀ ಹನುಮಾನ ದೇವಸ್ಥಾನ ರಸ್ತಾಪುರ	20,000-00
5) ಶ್ರೀ ದೇವಮ್ಮಾ ದೇವಸ್ಥಾನ ದರಿಯಾಪುರ	15,000-00
6) ಶ್ರೀ ಗುರುರಾಜ ದೇವಸ್ಥಾನ ಶಹಪುರ	20,000-00
	1,00,000-00

ಚಿತ್ತಾಪುರ ತಾಲ್ಲೂಕು

1) ಶ್ರೀ ಬಸವಲಿಂಗೇಶ್ವರ ದೇವಸ್ಥಾನ ಸೂಲಹಳ್ಳಿ	15,000-00
2) ಶ್ರೀ ಬಸವೇಶ್ವರ ದೇವಸ್ಥಾನ ರಜೊಳ ಸೇಡಂ ಕ್ಷೇತ್ರ	20,000-00
3) ಶ್ರೀ ದೇವಿ ಮಂದಿರ ಅಲ್ಲೂರು ಕೇ ಸೇಡಂ ಕ್ಷೇತ್ರ	10,000-00
4) ಶ್ರೀ ಸೇವಾಲಾಲ್ ದೇವಸ್ಥಾನ ಬಸಪ್ಪಗುಡಿ ವಾಡಿ ಜೆಂಕ್ಷನ್	15,000-00
5) ಶ್ರೀ ಕೋಲಿ ಸಿದ್ಧೇಶ್ವರ ದೇವಸ್ಥಾನ ನಲವಾರ	15,000-00
6) ಶ್ರೀ ಅಣ್ಣಾಲಿಂಗೇಶ್ವರ ದೇವಸ್ಥಾನ ಕಲ್ಯಾಣ ಮಂಟಪ	25,000-00
7) ಶ್ರೀ ಬಸವಲಿಂಗೇಶ್ವರ ದೇವಸ್ಥಾನ ಸೂಲಹಳ್ಳಿ	20,000-00
	1,20,000-00

ಸೇಡಂ ತಾಲ್ಲೂಕು

1) ಶ್ರೀ ಸಂಗಮೇಶ್ವರ ದೇವಸ್ಥಾನ ಕುರುಕುಂಟೆ	30,000-00
2) ಶ್ರೀ ಬಲಭೀಮಸೇನ ದೇವಸ್ಥಾನ ಪೊತಕಪಲ್ಲಿ ಗ್ರಾಮ	20,000-00

3) ಶ್ರೀ ವೀರಭದ್ರೇಶ್ವರ ದೇವಸ್ಥಾನ ಕೋಲುಕುಂದಾ	25,000-00
4) ಶ್ರೀ ಈಶ್ವರ ದೇವಸ್ಥಾನ ನಡೆಪಲ್ಲಿ	10,000-00
	85,000-00

ಜೇವರ್ಗಿ ತಾಲ್ಲೂಕು 1993-94

1) ಶ್ರೀ ದೇವಮ್ಮ ದೇವಸ್ಥಾನ ನರಜೊಳಿ	20,000-00
2) ಶ್ರೀ ಟೆಂಪಲ್ ಕಮಿಟಿ ಜವಳಗಿ	15,000-00
3) ಶ್ರೀ ಕೋರಿ ಸಿದ್ಧೇಶ್ವರ ಟೆಂಪಲ್ ಕಮಿಟಿ ಖಾಕ್ಕೆಂಡಿ	15,000-00
4) ಶ್ರೀ ದೇವಿ ದೇವಮ್ಮ ದೇವಸ್ಥಾನ ನರಚೇಳಿ	20,000-00
5) ಶ್ರೀ ದೇವಿ ಮಂದಿರ ಗಂವಾರ ಗ್ರಾಮ	25,000-00
6) ಶ್ರೀ ಶರಲಾಸವೇಶ್ವರ ದೇವಸ್ಥಾನ ಹರಳಗುಂಡಗಿ	50,000-00
	145,000-00

ಗುಲ್ಬರ್ಗಾ ತಾಲ್ಲೂಕು

1) ಶ್ರೀ ಸೇವಾಲಾಲ್ ಮಹಾರಾಜ ದೇವಸ್ಥಾನ ಮರುದುಂಬಿ ತಾಂಡ	25,000-00
2) ಶ್ರೀ ರಾಚುವೇಶ್ವರ ಸ್ವಾಮಿ ದೇವಸ್ಥಾನ ಕಿರುಣಗಿ ಗ್ರಾಮ	15,000-00
3) ಶ್ರೀ ಸೇವಾಲಾಲ್ ಮಹಾಲಿಂಗೇಶ್ವರ ದೇವಸ್ಥಾನ ನಾಗನಹಳ್ಳಿ ಹನುಮಾನ ನಗರ ತಾಂಡ	20,000-00
4) ಶ್ರೀ ವೀರಭದ್ರೇಶ್ವರ ದೇವಸ್ಥಾನ ಮಹಾಗ್ರಾಮ ಗುಲ್ಬರ್ಗಾ	20,000-00
5) ಶ್ರೀ ದೇವಿ ಮಾರಿಯಮ್ಮ ದೇವಸ್ಥಾನ ಹಾಗೂ ಸೇವಾ ಲಾಲ್ ಮಹಾರಾಜ ದೇವಸ್ಥಾನ ಶಿವಾಜಿನಗರ ಬಡಾವಣೆ	20,000-00
6) ಶ್ರೀ ಮಲ್ಲಿಕಾರ್ಜುನ ದೇವಸ್ಥಾನ ಕುಮಸಿ ಗ್ರಾಮ	20,000-00
7) ಶ್ರಿ ಸೇವಾಲಾಲ್ ದೇವಿ ಮಾರಿಯಮ್ಮ ದೇವಸ್ಥಾನ ನವನೀಹಾಳ್	20,000-00
8) ಶ್ರೀ ಸುಕುಳ ನಾಳಿ ಸಮಾಜ ಮುತ್ತರಪುರ ಗುಲ್ಬರ್ಗಾ	20,000-00
	1,60,000-00

ಚಿಂಚೋಳಿ ತಾಲ್ಲೂಕು 1993-94

1) ಶ್ರೀ ಜಗದೀಶ್ವರ ಮಂದಿರ ಕಡಚನ ಕೇಟ್	30,000-00
2) ಶ್ರೀ ಗಂಗಾಧರ ಚಿಕ್ಕಪ್ರಭು ದೇವಾಲಯ ಕೊಟ್ಟಂಕೊಟ್ಟ	30,000-00
3) ಶ್ರೀ ಶ್ರೀ ಗ್ರಾಮ ದೇವತೆಯ ಕಲ್ಯಾಣ ಮಂಟಪ ನಿಡಗುಂದ ಗ್ರಾಮ	10,000-00
4) ಶ್ರೀ ಸೇವಾದಾಸ್ ಮಹಾರಾಜ ದೇವಾಲಯ ಪಾಲಾತಾಗ್ರಾಮ	15,000-00
5) ಶ್ರೀ ಶ್ರೀ ಮರುಗಮ ದೇವಸ್ಥಾನ ಸಾಲೇಬೀಮನಹಳ್ಳ	20,000-00
6) ಶ್ರೀ ಹನುಮಾನ ದೇವಸ್ಥಾನ ಸಾಲೆಬೀರನಹಳ್ಳಿ	20,000-00
7) ಶ್ರೀ ನರಸಿಂಹ ದೇವಸ್ಥಾನ ಮಾರುಪಲ್ಲಿ	15,000-00
8) ಶ್ರೀ ಸಿದ್ಧೇಶ್ವರ ದೇವಸ್ಥಾನ ರುದ್ನೊರು	50,000-00
9) ಶ್ರೀ ಜಗದೀಶ್ವರ ದೇವಸ್ಥಾನ ಬಿಂಬೇಡ	20,000-00
	2,10,000-00

ಶ್ರೀ ಬಸವಂತ ರೆಡ್ಡಿ ಮೋತಕಪಲ್ಲಿ: ಮಾನ್ಯ ಅಧ್ಯಕ್ಷರೆ, ಧಾರ್ಮಿಕ ದತ್ತಿ ಇಲಾಖೆಯ ವತಿಯಿಂದ ದೇವಸ್ಥಾನಗಳ ಜೀರ್ಣೋದ್ಧಾರಕ್ಕಾಗಿ ಪ್ರತಿ ವರ್ಷ ಬಿಡುಗಡೆ ಮಾಡಿರುವ ಹಣದ ಪಟ್ಟಿಯನ್ನು ನೋಡಿದರೆ ಕೆಲವು ದೇವಸ್ಥಾನಗಳಿಗೆ ಬಹಳಷ್ಟು ಹೆಚ್ಚು, ಕೆಲವು ದೇವಸ್ಥಾನಗಳಿಗೆ ಬಹಳಷ್ಟು ಕಡಿಮೆ ಹಣ ಬಿಡುಗಡೆ ಮಾಡಿದ್ದಾರೆ. ಈ ವ್ಯತ್ಯಾಸ ಮಾಡಿದ್ದು ಏಕೆ? ಈ ವರ್ಷವಾದರೂ ವ್ಯತ್ಯಾಸ ಇಲ್ಲದೆ ಸರಿಸಮಾನವಾಗಿ ಎಲ್ಲ ದೇವಸ್ಥಾನಗಳಿಗೆ ಎಲ್ಲ ಕ್ಷೇತ್ರಗಳಿಗೆ ಹಣ ಕೊಡಬಹುದೆ?

ಶ್ರೀ ಹಾರ್ನಳ್ಳಿ ರಾಮಸ್ವಾಮಿ: ಮಾನ್ಯ ಅಧ್ಯಕ್ಷರೆ, ವ್ಯತ್ಯಾಸ ಏನು ಮಾಡಿಲ್ಲ. ಒದಗಿಸಲಾದಂತಹ ಹಣದಲ್ಲಿ ನಮ್ಮ ಶಾಸಕರು ಮತ್ತು ಚುನಾವಣಾ ಕ್ಷೇತ್ರದವರು, ತಾಲ್ಲೂಕಿನವರು ಮತ್ತೆ ಇಲಾಖೆಯ ವತಿಯಿಂದ ಬಂದಂತ ವರದಿಗಳ ಆಧಾರದ ಮೇಲೆ ಅರ್ಧ ಕೆಲಸ ಆಗಿರುವುದಕ್ಕೆ ಪ್ರಾಧಾನ್ಯತೆ ಕೊಟ್ಟಿದೆ. ಬಾಕಿ ಶಾಸಕರ ಮತ್ತು ಶಾಸಕರ ಕ್ಷೇತ್ರದ ಅವಶ್ಯಕತೆಯನ್ನು ಅವಲಂಬಿಸಿ ಎಲ್ಲರಿಗೂ ಕೊಡಲಾಗಿದೆ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ: ಆ ಪ್ರಕಾರ ಒಂಪೇ ಸಾರಿ ಒಂದೊಂದು ಕ್ಷೇತ್ರಕ್ಕೆ 7 ಲಕ್ಷ, 10 ಲಕ್ಷ ಬಿಡುಗಡೆ ಆಗಿದೆ. ಒಂದೊಂದು ಕ್ಷೇತ್ರಕ್ಕೆ ಕೇವಲ 20 ಸಾವಿರದಂತೆ ಹಣ ಬಿಡುಗಡೆ ಮಾಡಿದ್ದಾರೆ. ಇದರ ಬಗ್ಗೆ ತಾರತಮ್ಯ ಇಲ್ಲದೆ ಎಲ್ಲ ಕ್ಷೇತ್ರಗಳಿಗೂ ಸರಿಸಮಾನವಾಗಿ ಅವರ ಬೇಡಿಕೆ ಪ್ರಕಾರ ಹಣ ಬಿಡುಗಡೆ ಮಾಡಬೇಕು. ಎಲ್ಲ ಶಾಸಕರು ತಮ್ಮ ಬೇಡಿಕೆ ಪಟ್ಟಿಯನ್ನು ಏನು ಕೊಟ್ಟಿದ್ದಾರೆ. ಆದರಂತೆ ಎಲ್ಲರಿಗೂ ನೋಡಿ ಈ ಅನುದಾನವನ್ನು ಬಿಡುಗಡೆ ಮಾಡಬೇಕೆಂದು ನನ್ನ ವಿನಂತಿ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ: ಈಗ ಏನಾಗಿದೆ ಎಂದರೆ ಅರ್ಧ ಕೆಲಸ ಆಗಿರುವ ಕಡೆ ಸ್ವಲ್ಪ ಹೆಚ್ಚು ಹಣ ಕೊಟ್ಟು ಆ ಕೆಲಸವನ್ನು ಮುಗಿಸುವುದಕ್ಕೆ ಪ್ರಯತ್ನ ಮಾಡಲಾಗಿದೆ. ಮತ್ತೆ ಈ ವರ್ಷ ಒದಗಿಸಲಾಗಿದಂತಹ ಹಣದಲ್ಲಿ ಸಾಮಾನ್ಯವಾಗಿ ಎಲ್ಲ ಕ್ಷೇತ್ರಗಳಿಗೂ ಸಮಾನವಾಗಿ ಹಂಚಲಾಗಿದೆ. ಆದುದರಿಂದ ತಮ್ಮ ಪ್ರಶ್ನೆಯಲ್ಲಿ ಉಪ ಪ್ರಶ್ನೆ ಉದ್ಭವವಾಗುವುದಿಲ್ಲ. ಎಲ್ಲಿಯಾದರೂ ಅವಶ್ಯಕತೆ ಇರುವ ಕಡೆ ಹಣ ಬಂದಿಲ್ಲವೆಂದು ತಾವು ತೋರಿಸಿದರೆ ಅದನ್ನು ಸರಿ ಮಾಡೋಣ.

ಅಧ್ಯಕ್ಷರು: ಷಫಿ ಅಹಮದ್ ಅವರೆ, ತಮ್ಮ ಪ್ರಶ್ನೆಗೆ ಮಂತ್ರಿಗಳು ಸಮಯ ಕೇಳಿದ್ದಾರೆ.

ಶ್ರೀ ಷಫಿ ಅಹಮದ್: ಕಳೆದ ಅಧಿವೇಶನದಲ್ಲಿದೆ ಈ ಪ್ರಶ್ನೆ ಕೇಳಿದ್ದೆ. ಈಗಲೂ ಸಚಿವರು ಸಮಯ ಕೇಳಿದ್ದಾರೆ. ಉತ್ತರ ಕೊಟ್ಟಿದ್ದರೆ ಸೂಕ್ತವಾಗಿತ್ತು. ನಮ್ಮ ಕ್ಷೇತ್ರದಲ್ಲಿ ಕೆಲಸ ಆಗಿರುವ ಕಡೆ ಎಲ್.ಓ.ಸಿ. ಬಿಡುಗಡೆ ಆಗಿಲ್ಲ. ಹಣ ಬಿಡುಗಡೆ ಮಾಡಿ ಕೆಲಸ ಮುಂದುವರಿಸಿದರೆ ಸೂಕ್ತವೆಂದು ಮಾನ್ಯ ಸಚಿವರಲ್ಲಿ ವಿನಂತಿ.

ಡಾ|| ಆರ್. ಬಿ. ಚೌಧರಿ: ನಮಗೆ ಜಿಲ್ಲಾ ಪರಿಷತ್ತಿನಿಂದ ಮಾಹಿತಿ ಬರಲಿಲ್ಲ. ಆದುದರಿಂದ ಸಮಯ ಕೇಳಲಾಗಿದೆ.

ಅಧ್ಯಕ್ಷರು: ಅವರು ಹಣ ಬಿಡುಗಡೆಗೆ ಕೇಳಿದ್ದಾರೆ. ಅವರನ್ನು ಕರೆದು ಮಾತನಾಡಿ ಡಾ||ಆರ್.ಬಿ. ಚೌಧರಿ. ಹಣ ಬಿಡುಗಡೆಗೆ ಪ್ರಯತ್ನ ನಡೆಯುತ್ತಿದೆ.

ಉತ್ತರ ಕನ್ನಡ ಜಿಲ್ಲೆಯ ಶರಾವತಿನದಿಗೆ ಕಟ್ಟಿರುವ ಹೊನ್ನಾವರ ಸೇತುವೆ ದುರಸ್ತಿ ಕುರಿತು

598 - ಶ್ರೀ ಬಸವರಾಜು (ಬ್ರಹ್ಮಾವರ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಶರಾವತಿ ನದಿಗೆ ಹೊನ್ನಾವರ ಸೇತುವೆ ದುರಸ್ತಿ ನಿಮಿತ್ತ ಭಾರಿ ವಾಹನಗಳು ಈ ಮಾರ್ಗವನ್ನು ಕ್ರಮಿಸಿ ಸಂಚರಿಸುವ ಬದಲು ಬ್ರಹ್ಮಾವರ -ಬಾರಕೂರು- ಬಡ್ಕಲ್ ಕಟ್ಟೆ ಬಾಳೆಬರೆ -ಘಾಟಿ ಮಾರ್ಗದಲ್ಲಿ ಸಂಚರಿಸುವುದು ನಿಜವೇ?

ಆ) ಭಾರಿ ವಾಹನಗಳ ದಟ್ಟಣೆಯಿಂದ ಬಾರಕೂರು ನಂತರದ ರಸ್ತೆಯು ಹಾಳಾಗಿರುವುದರಿಂದ ಸಾರ್ವಜನಿಕರಿಗೆ ತೊಂದರೆ ಆಗುವುದು ನಿಜವೇ?

ಇ) ಲೋಕೋಪಯೋಗಿ ಇಲಾಖೆ ಈ ಸಾಲಿನಲ್ಲಿ ಸದರಿ ರಸ್ತೆಯ ದುರಸ್ತಿ ಕಾರ್ಯ ಮಾಡಲು ಕ್ರಮ ಕೈಗೊಳ್ಳುವುದೇ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):

ಅ) ಕೆಲವು ಭಾರಿ ವಾಹನಗಳು ಶರಾವತಿ ನದಿಯಲ್ಲಿ ಸೇತುವೆ ಹತ್ತಿರ ನಡೆಸುತ್ತಿರುವ ಬಾರ್ಜ್ ಮೂಲಕವೂ ಕೆಲವು ವಾಹನಗಳು ಸದರಿ ರಸ್ತೆಯ ಮೂಲಕವೂ ಸಂಚರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಹೌದು.

ಇ) ಸದರಿ ರಸ್ತೆಯ ಅತಿ ಕೆಟ್ಟು ಹೋದ ಭಾಗಗಳನ್ನು ಒಟ್ಟು 11.46 ರೂ.ಗಳ ವೆಚ್ಚದಲ್ಲಿ ದುರಸ್ತಿಪಡಿಸಲಾಗುತ್ತಿದೆ. ಅನುದಾನ ಲಭ್ಯತೆಯನ್ನು ಅನುಸರಿಸಿ ಈ ರಸ್ತೆಯನ್ನು ಸುಸ್ಥಿತಿಯಲ್ಲಿಡಲು ಹಂತಹಂತವಾಗಿ ಅಭಿವೃದ್ಧಿ ಕಾರ್ಯಕ್ರಮವನ್ನು ತೆಗೆದುಕೊಳ್ಳಲಾಗುವುದು?

ಶ್ರೀ ಪಿ. ಬಸವರಾಜು: ಮಾನ್ಯ ಅಧ್ಯಕ್ಷರೆ, ಬಾರಕೂರು ಬಡ್ಕಲ್ಕಟ್ಟೆ ಬಾಳೆಬರೆ ರಸ್ತೆಗಳು ಹಾಳಾದುದರ ಬಗ್ಗೆ ಪ್ರಶ್ನೆ ಕೇಳಿದ್ದೆ. ಎರಡು ವರ್ಷಗಳ ಹಿಂದೆ ಶರಾವತಿ ಸೇತುವೆ ಹಾಳಾಗಿ ಭಾರಿ ವಾಹನಗಳು ಈ ರಸ್ತೆಯಲ್ಲಿ ತಿರುಗಾಡಿದ್ದರಿಂದ ರಸ್ತೆ ಹಾಳಾಗಿದೆ. ಈ ವರ್ಷ ಮುಗಿದರೂ ರಿಪೇರಿ ಮಾಡಿಲ್ಲ, ಯಾವಾಗ ರಿಪೇರಿ ಮಾಡುತ್ತೀರೆಂದು ಕೇಳಬಯಸುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್: ಮಾನ್ಯ ಅಧ್ಯಕ್ಷರೆ, ರಿಪೇರಿ ಮಾಡಿಲ್ಲವೆಂದು ಅಲ್ಲ. ರಸ್ತೆ ಕೆಟ್ಟು ಹೋಗಿದೆ. ಆ ಭಾಗದಲ್ಲಿ ಹೆಚ್ಚು ವಾಹನಗಳು ಓಡಾಡುತ್ತಿರತಕ್ಕದ್ದು ನಿಜ. ಕೆಲವು ಆಯ್ದ ಭಾಗಗಳಲ್ಲಿ ಕೆಟ್ಟಿರುವುದನ್ನು ಸರಿಪಡಿಸುವುದಕ್ಕೋಸ್ಕರ 11 ಲಕ್ಷದ 40 ಸಾವಿರ ರೂಪಾಯಿಗಳನ್ನು ಒದಗಿಸಲಾಗಿದೆ.

ಶ್ರೀ ಪಿ. ಬಸವರಾಜ್: ಮಾನ್ಯ ಸಚಿವರು, ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೆ ಬಂದಾಗ ರಸ್ತೆ ರಿಪೇರಿ ಮಾಡಿಕೊಡುತ್ತೇವೆಂದು ಆಶ್ವಾಸನೆ ನೀಡಿದ್ದರು. ತಮ್ಮ ಇಂಜಿನಿಯರಿಂಗ್ ಇಭಾಗಕ್ಕೆ 20 ಲಕ್ಷ ರೂಪಾಯಿಗಳ ಎಸ್ಟಿಮೇಟ್ ಬಂದಿದೆ. ಆದಷ್ಟು ಬೇಗ ಅದನ್ನು ಮಂಜೂರು ಮಾಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್: ಆ ರಸ್ತೆ ತುಂಬಾ ಉದ್ದವಾಗಿದೆ. 52 ಕಿಲೋಮೀಟರ್ ಉದ್ದ ಇದೆ.

ಶ್ರೀ ಎ. ಬಸವರಾಜ್: ಅದರಲ್ಲಿ 9 ಕಿಲೋಮೀಟರ್ ಕುಂದಾಪುರ ಭಾಗಕ್ಕೆ ಬರುತ್ತದೆ. 18 ಕಿಲೋಮೀಟರ್ ರಸ್ತೆಗೆ 20 ಲಕ್ಷ ರೂಪಾಯಿ ಎಸ್ಟಿಮೇಟ್ ಬಂದಿದೆ.

ಶ್ರೀ ಕೆ.ಹೆಚ್. ರಂಗನಾಥ್: ಹಣದ ಪರಿಸ್ಥಿತಿ ನೋಡಿಕೊಂಡು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಪಿ. ಬಸವರಾಜ್: ಮಾರ್ಚ್ ಅಂತ್ಯದೊಳಗೆ ರಿಪೇರಿ ಮಾಡಿಸಿಕೊಡಿ ಎಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್: ಆ ಪ್ರಕಾರ ಹೇಳಿದರೆ ಸುಳ್ಳು ಭರವಸೆ ಆಗುತ್ತದೆ. ಇವತ್ತು ತಾರೀಖು 28. ಇನ್ನು 3 ದಿನಗಳಲ್ಲಿ ಮಾರ್ಚ್ ಮುಗಿಯುತ್ತದೆ. ಆದ್ದರಿಂದ ಅದು ಹೇಗೆ ಆಗುತ್ತದೆ? ಮಾಡಿಸಿಕೊಡೋಣ.

ವಿದ್ಯುಚ್ಛಕ್ತಿ ಉಪಕರಣಗಳು ದೊರೆಯುವುದಿಲ್ಲದರ ಬಗ್ಗೆ

656 - ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ): ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ರಾಜ್ಯದಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯೆಂದು ನಾಗರೀಕ ಸೌಲಭ್ಯಗಳನ್ನು ಕಲ್ಪಿಸಲು ಸಮರ್ಪಕವಾದ ಉಪಕರಣಗಳನ್ನು ಕಲ್ಪಿಸದಿರುವುದು ಸರ್ಕಾರದ ಗಮನದಲ್ಲಿ ಇದೆಯೇ? ಹಾಗಿದ್ದಲ್ಲಿ ಅದಕ್ಕೆ ಕಾರಣವೇನು?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):

ಅ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಸಾರ್ವಜನಿಕರ ಅನುಕೂಲಕ್ಕಾಗಿ ಮುಖ್ಯವಾಗಿ ಕುಡಿಯುವ ನೀರಿನ ಸ್ಥಾವರಗಳು, ಬೀದಿ ದೀಪಗಳು ಇತ್ಯಾದಿಗಳಿಗೆ ವಿದ್ಯುತ್ ಸಂಪರ್ಕ ಒದಗಿಸಲು ಶ್ರಮ ವಹಿಸುತ್ತಿದೆ. ಇದಕ್ಕಾಗಿ ಅಗತ್ಯವಿರುವ ವಿದ್ಯುತ್ ವಿತರಣಾ ಟ್ರಾನ್ಸ್ಫಾರ್ಮರ್, ವಿದ್ಯುತ್ ತಂತಿ ಇತ್ಯಾದಿ ಸಾಮಗ್ರಿಗಳನ್ನು ಖರೀದಿಸಿ ಬಳಸಲಾಗುತ್ತಿದೆ. ಅಲ್ಲದೇ ವಿದ್ಯುತ್ ಬೇಡಿಕೆಯನ್ನು ಪೂರೈಕೆ ಮಾಡಲು ಮತ್ತು ಒಳ್ಳೆಯ ವೋಲ್ಟೇಜಿನಲ್ಲಿ ವಿದ್ಯುತ್ ಸರಬರಾಜು ಮಾಡಲು ಮಂಡಳಿಯು. ಹೊಸ ವಿದ್ಯುತ್ ಸ್ವೀಕರಣ ಕೇಂದ್ರಗಳನ್ನು ಹೊಸ ಉಪಕೇಂದ್ರಗಳನ್ನು ಪ್ರತಿ ವರ್ಷ ನಿರ್ಮಾಣ ಮಾಡುತ್ತಿದೆ. ಇದಕ್ಕಾಗಿ, ಮಂಡಳಿಯು ಏಷಿಯನ್ ಅಭಿವೃದ್ಧಿ ಬ್ಯಾಂಕ್, ಪವರ್ ಫೈನಾನ್ಸ್ ಕಾರ್ಪೊರೇಷನ್, ಗ್ರಾಮೀಣ ವಿದ್ಯುದ್ದೀಕರಣ ನಿಗಮ ಮುಂತಾದ ಸಂಸ್ಥೆಗಳಿಂದ ಸಾಲವನ್ನು ಪಡೆಯುತ್ತಿದೆ.

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಅಧ್ಯಕ್ಷರೇ, ಇಡೀ ರಾಜ್ಯದಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯು ವಿದ್ಯುತ್ತನ್ನು ಒದಗಿಸತಕ್ಕಂಥ ವಿಚಾರದಲ್ಲಿ ರೈತರಿಗೆ, ಕೈಗಾರಿಕೋದ್ಯಮಿಗಳಿಗೆ, ಕುಡಿಯುವ ನೀರಿನ ಬಗ್ಗೆ ಹೀಗೆ ಅನೇಕ ಸಮಸ್ಯೆಗಳು ಬರುತ್ತಿರುವುದನ್ನು ಪ್ರತಿನಿತ್ಯವೂ ನಾವು ಕಾಣುತ್ತಿದ್ದೇವೆ. ರೈತರು ಪಂಪ್ಸೆಟ್ಟುಗಳನ್ನು ಹಾಕಿದ್ದರೂ ವಿದ್ಯುತ್ಸಂಪರ್ಕ ಕೊಡದೆ ವರ್ಷಗಟ್ಟಲೆ ವಿಳಂಬ ಆಗಿರುತ್ತದೆ. ಸಾಮಗ್ರಿಗಳ ತೊಂದರೆಯ ವಿಚಾರದಲ್ಲಿ ಪಂಪ್ಸೆಟ್ಟುಗಳಿಗೂ ಕೂಡ ವಿದ್ಯುತ್ತಿನ ಸಂಪರ್ಕವಾಗುತ್ತಿಲ್ಲ. ಅದೇ ರೀತಿ ಸಣ್ಣ ಕೈಗಾರಿಕೆಗಳು ಇಡೀ ರಾಜ್ಯದಲ್ಲಿ ಕೆ.ಎಫ್.ಸಿ. ಯಿಂದ, ಬ್ಯಾಂಕುಗಳ ಮುಖಾಂತರ ಲೋನ್ಗಳನ್ನು ತೆಗೆದುಕೊಂಡು ಸಂಪೂರ್ಣವಾಗಿ ಕೆಲಸ ಮಾಡಿಕೊಂಡಿರುತ್ತಾರೆ. ಮೆಷಿನರಿ ಬಂದಾಗಿರುತ್ತದೆ. ಬಿಲ್ಡಿಂಗ್ ಕಟ್ಟಾಗಿದೆ, ಲ್ಯಾಂಡ್ ಎಲ್ಲ ಖರೀದಿ ಮಾಡಿಯಾಗಿದೆ. ಇಷ್ಟೆಲ್ಲ ಆಗಿದ್ದರೂ ಕೂಡ ವಿದ್ಯುಚ್ಛಕ್ತಿ ಇಲ್ಲವೆಂಬ ಒಂದೇ ಒಂದು ಕಾರಣದಿಂದ ಇಡೀ ರಾಜ್ಯದಲ್ಲಿ ಸ್ಥಾಪಿಸಿರುವ ಅನೇಕ ಇಂಡಸ್ಟ್ರಿಗಳು ಪ್ರಾರಂಭವಾಗಿಲ್ಲ. ಇದಕ್ಕೆ ತುಂಬ ಪ್ರಮುಖವಾದ ಕಾರಣ ವಿದ್ಯುಚ್ಛಕ್ತಿಯ ಸಣ್ಣಪುಟ್ಟ ಉಪಕರಣಗಳು ಇಲ್ಲವೆಂಬ ಉತ್ತರ ಬರುತ್ತಿದೆ. ಅದೇ ರೀತಿ ಗ್ರಾಮಾಂತರ ಪ್ರದೇಶದಲ್ಲಿ ಕುಡಿಯುವ ನೀರಿನ ವ್ಯವಸ್ಥೆಯೂ ಎಲ್ಲ ರೀತಿಯಲ್ಲೂ ಆಗಿರುತ್ತದೆ. ಆದರೆ ವಿದ್ಯುತ್ತಿನ ಸಂಪರ್ಕವಿಲ್ಲದೆ ನೀರಿನ ತೊಂದರೆ ಕೂಡ ಇಡೀ ರಾಜ್ಯದಲ್ಲಿ ಉಂಟಾಗಿರುತ್ತದೆ. ಇದಲ್ಲದೆ ವಿಶೇಷ ಘಟಕ ಯೋಜನೆಗಳು ಗ್ರಾಮಾಂತರ ಪ್ರದೇಶಗಳಲ್ಲಿ ಆಗಬೇಕಾಗಿದೆ. ಅಲ್ಲೂ ಕೂಡ ಒಂದು ಲಕ್ಷರೂಪಾಯಿಗಳಿಗಿಂತ ಜಾಸ್ತಿಯಾದರೆ ಕೊಡುವುದಿಲ್ಲವೆಂದು ಹೇಳುತ್ತಿದ್ದಾರೆ. ಇದರಿಂದಾಗಿ ವಿದ್ಯುತ್ ಸಂಪರ್ಕವಿಲ್ಲದೆ ಯೋಜನೆಗಳು ಕೂಡ ಪ್ರಾರಂಭವಾಗುತ್ತಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳು ಶಿವಮೊಗ್ಗಕ್ಕೆ ಬಂದಿದ್ದರು. ಆ ಸಂದರ್ಭದಲ್ಲಿ ಈ ವಿದ್ಯುತ್ ಇಲಾಖೆಯ ಕಾರ್ಯವೈಖರಿಗಳ ಬಗ್ಗೆ ಇಡೀ ಜನರು ಅಲ್ಲಿ ಛೀಮಾರಿ ಹಾಕಿದ್ದು ಸನ್ಮಾನ್ಯ ಮುಖ್ಯಮಂತ್ರಿಗಳವರಿಗೆ ಗೊತ್ತಿರುತ್ತದೆ. ಅದಕ್ಕೋಸ್ಕರ ಇಡೀ

ರಾಜ್ಯದಲ್ಲಿ ರೈತರಿಗೆ ಆಗುತ್ತಿರುವ ತೊಂದರೆಗಳ ಬಗ್ಗೆ ಈ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತಿದೆ? ಸನ್ಮಾನ್ಯ ಉಪಮುಖ್ಯಮಂತ್ರಿಗಳು ಈ ದಿಸೆಯಲ್ಲಿ ಏನಾದರೂ ಯೋಚನೆ ಮಾಡಿದ್ದಾರಾ? ಈ ರಾಜ್ಯಕ್ಕೆ ಅನುಕೂಲ ಮಾಡುವುದಕ್ಕೆ ಏನಾದರೂ ಯೋಚನೆ ಮಾಡುತ್ತೀರಾ ಎಂದು ತಮ್ಮ ಮೂಲಕ ಕೇಳಲಿಕ್ಕೆ ಇಚ್ಛಿಪಡುತ್ತಿದ್ದೇನೆ.

ಶ್ರೀ ಎಸ್.ಎಂ. ಕೃಷ್ಣ: ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ವಿದ್ಯುತ್ ವಿತರಣೆಯ ಬಗ್ಗೆ ಏನು ಕೊರತೆಗಳನ್ನು ನಮೂದಿಸಿದ್ದಾರೆ, ಅದರಲ್ಲಿ ಯಾವುದೇ ಉತ್ಪ್ರೇಕ್ಷೆ ಇಲ್ಲ ಎಂಬುದನ್ನು ನಾನು ಒಪ್ಪುತ್ತೇನೆ. ವಿದ್ಯುತ್ ವಿತರಣಾ ಚೌಕಟ್ಟಿನಲ್ಲಿ ನಾನು ಈ ರಾಜ್ಯದ ಜನತೆಯಮುಂದೆ ಅಪರಾಧಿ ಸ್ಥಾನದಲ್ಲಿ ನಿಂತಿದ್ದೇನೆ ಎನ್ನತಕ್ಕಂಥ ಮನೋಭಾವನೆ ನನಗೆ ಬಂದಿದೆ. ಆದರೆ ಇದಕ್ಕೆ ಕಾರಣಗಳೇನು ಎನ್ನುವುದರ ಬಗ್ಗೆ ಮಾನ್ಯ ಸಭೆಯ ಸದಸ್ಯರು ಸ್ವಲ್ಪ ಮಟ್ಟಿಗೆ ಮೆಲುಕು ಹಾಕಿದರೆ ಈ ಒಂದು ದುರವಸ್ಥೆ ಏತಕ್ಕೆ ಬಂದಿತು ಎಂಬುದು ನಮಗೆ ಸ್ವಲ್ಪ ಅರ್ಥವಾಗುತ್ತದೆ. ನಾವು ಉತ್ಪಾದನೆ ಮಾಡತಕ್ಕಂಥ ವಿದ್ಯುತ್ ಏನಿದೆ ಅದು ನಮ್ಮ ಅಗತ್ಯತೆಗಳಿಗೆ ಸಾಕಾಗುತ್ತಿಲ್ಲ. ಜೊತೆಗೆ ನಮಗೆ ಕೇಂದ್ರ ಸರ್ಕಾರದಿಂದ ಬರುತ್ತಿರತಕ್ಕಂಥ 500 ಮೆಘಾವಾಟ್ ಸಾಮರ್ಥ್ಯದ ವಿದ್ಯುತ್ ಪ್ರಮಾಣವೇನಿದೆ ಅದೂ ಕೂಡ ಯಾವ ಪ್ರಕಾರದಲ್ಲಿ ಬರಬೇಕೋ ಆ ಪ್ರಕಾರದಲ್ಲಿ ಬರುತ್ತಿಲ್ಲವಾದ್ದರಿಂದ ನಾವು ಈ ಓಲ್ಟೇಜ್ ಫ್ಲಕ್ಚುಯೇಷನ್ಸ್, ಸ್ಕಿಪಿಂಗ್ಸ್ ಇವುಗಳೆಲ್ಲವನ್ನೂ ಕೂಡ ಅನುಭವಿಸಬೇಕಾಗುತ್ತಿದೆ. ತಮಗೆ ಹೇಳುವುದಾದರೆ ಈ ಸದರನ್ ಗ್ರಿಡ್ ಸೆಂಟರ್ ಏನಿದೆ, ಈ ಗ್ರಿಡ್ನಲ್ಲಿ ಡಿಸ್ಟೈನ್ ಇಲ್ಲದಿರತಕ್ಕಂಥದ್ದೇ ಇವತ್ತಿನ ನಮ್ಮ ರಾಜ್ಯದ ವಿದ್ಯುತ್ ಕೊರತೆಗೆ ಮತ್ತು ವಿದ್ಯುತ್ ಅಸ್ತವ್ಯಸ್ತತೆಗೆ ಕಾರಣ ಭೂತವಾಗಿದೆ ಎಂದು ತಮ್ಮಲ್ಲಿ ಹೇಳುತ್ತೇನೆ. ಈಗ ರಾಮಗೊಂಡಮ್ನಿಂದ ಕೇಂದ್ರದವರು ನಮಗೆ ವಿದ್ಯುತ್ತು ಏನು ಸರಬರಾಜು ಮಾಡುತ್ತಿದ್ದಾರೆ ಅದು ನಮ್ಮಲ್ಲಿ ಬರಬೇಕಾಗಿದ್ದರೆ, ನಾವು ಮತ್ತು ಕೇರಳದವರು, ಟೈಲ್ ಎಂಡ್‌ನಲ್ಲಿರುವ ಕಾರಣ ನಮಗೆ ಕೊನೇಭಾಗ ಬರುತ್ತದೆ. ನನ್ನ ಒಂದು ಅಂದಾಜಿನ ಪ್ರಕಾರ ಆಂಧ್ರಪ್ರದೇಶದ ಸರ್ಕಾರದವರು ದಿನಕ್ಕೆ ಸುಮಾರು 4ರಿಂದ 5 ಮಿಲಿಯನ್ ಯೂನಿಟ್ಸ್ ಜಾಸ್ತಿ ಅನುಭವಿಸುತ್ತಿದ್ದಾರೆ. ಏತಕ್ಕೆಂದರೆ ಅವರಿಗೂ ಕೂಡ ಆ ವಿದ್ಯುತ್ ಹರಿದು ಬರುತ್ತಿರತಕ್ಕಂಥ ಕಡಪಾಜಿಲ್ಲೆಯಲ್ಲಿ ಸಾವಿರಾರು ಪಂಪ್‌ಸೆಟ್ಟುಗಳು ಇವೆ. ಆದ್ದರಿಂದ ಆ ಪಂಪ್‌ಸೆಟ್ಟಿಗೆ ಅವರು ವಿದ್ಯುತ್ತನ್ನು ಒದಗಿಸಿ, ಅನಂತರ ನಮಗೆ ಒದಗಿಸಬೇಕಾಗಿದೆ. ನಮ್ಮ ಫ್ರೀಕ್ವೆನ್ಸಿ ಕೊನೆಪಕ್ಷ ಮಿನಿಮಮ್ 50 ಇರಬೇಕು. ಇವತ್ತು ನಮಗೆ ದಕ್ಕುತ್ತಿರತಕ್ಕಂಥದ್ದು 47.2, 47.8 ಹೀಗಾಗಿದೆ. ಇದನ್ನು ನಾವು ಆಗಿಂದಾಗ್ಗೆ ಆಂಧ್ರ ಪ್ರದೇಶದ ಸರ್ಕಾರಕ್ಕೆ ಮತ್ತು ಕೇಂದ್ರ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ಸದಸ್ಯರಿಗೆ ಜ್ಞಾಪಕವಿರಬಹುದು. ಈ ವಿಚಾರದಲ್ಲಿ ಕಳೆದ ವರ್ಷ ಇದೇ ಬೇಸಿಗೆಯಲ್ಲಿ ಇಂತಹ ಅವಸ್ಥೆ ನಮ್ಮ ರಾಜ್ಯಕ್ಕೆ ಬಂದಾಗ ನಾನು ಆಂಧ್ರದ ಮುಖ್ಯಮಂತ್ರಿಗಳನ್ನು ಭೇಟಿಮಾಡಿದ್ದರಿಂದ ಕೊಂಚಮಟ್ಟಿಗೆ ಸುಧಾರಣೆಯನ್ನು ತರುವುದಕ್ಕೆ ಸಾಧ್ಯವಾಯಿತು. ನಾನು ಈ ಶಾಸನಸಭೆ ಮುಗಿದ ತಕ್ಷಣ ಮತ್ತೆ ಆಂಧ್ರಪ್ರದೇಶಕ್ಕೆ ಹೋಗಿ ಆಂಧ್ರದ ಮುಖ್ಯಮಂತ್ರಿಗಳ ಸಹಕಾರವನ್ನು ಕೇಳಿ ಈಗಿನ ವ್ಯವಸ್ಥೆಯಲ್ಲಿ ಕೊಂಚಮಟ್ಟಿಗಾದರೂ ಸುಧಾರಣೆಯನ್ನು ತರುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಉಪಮುಖ್ಯಮಂತ್ರಿಗಳು ವಿದ್ಯುತ್ ಉತ್ಪಾದನೆ ನಮ್ಮ ಅಗತ್ಯ ಪೂರೈಸುವಷ್ಟಿಲ್ಲ ಎಂದು ಹೇಳಿದ್ದಾರೆ. ಇದು ಸತ್ಯವಾದ ಸಂಗತಿ. ಆದರೆ ನಮ್ಮ ಪ್ರಶ್ನೆ ಇಲ್ಲಿರುವುದು ಏನೆಂದರೆ, ಇದಕ್ಕಾಗಿ ಅಗತ್ಯವಿರುವಂಥ ವಿದ್ಯುತ್ ಸಾಮಗ್ರಿಗಳಿರಬಹುದು,ಟ್ರಾನ್ಸ್‌ಫಾರ್ಮರ್ ಇರಬಹುದು, ವಿದ್ಯುತ್ ತಂತಿ ಇರಬಹುದು ಇವುಗಳು ನಮ್ಮಲ್ಲಿ ಸ್ಟಾಕ್ ಇದೆಯೋ ಇಲ್ಲವೋ? ಪರಿಸ್ಥಿತಿ ಏನಾಗಿದೆ? ನಾನು ಒಂದು ಉದಾಹರಣೆ ಕೊಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಶಿವಮೊಗ್ಗಕ್ಕೆ ಬಂದಾಗ

ಈ ಬಗ್ಗೆ ಅಲ್ಲಿ ಚರ್ಚೆ ಆಯಿತು. ಶಿವಮೊಗ್ಗ ಜಿಲ್ಲೆಯಲ್ಲಿ 50-60 ಕಡೆ ಟ್ರಾನ್ಸ್‌ಫಾರ್ಮರ್ ಹಾಕಿದ್ದೀರಿ. ಆದರೆ ಡಿ.ಓ.ಎಲ್.ಓ. ಕಟ್‌ಔಟ್ಸ್ ಎನ್ನುವುದಕ್ಕೋಸ್ಕರ ಕನೆಕ್ಷನ್ ಕೊಟ್ಟಿಲ್ಲ. ಈ ರೀತಿ ಒಂದು ವಿದ್ಯುತ್ ಉತ್ಪಾದನೆ ಕಡೆ ವಿಶೇಷವಾದಂಥ ಆಸಕ್ತಿ ವಹಿಸಿ ಆದ್ಯತೆ ಮೇಲೆ ವಿದ್ಯುತ್ ಉತ್ಪಾದನೆ ಕಡೆ ಗಮನ ಕೊಡುವುದರಲ್ಲಿ ಸರ್ಕಾರ ವಿಫಲವಾಗಿದೆ. ತಾವು ಗಮನ ಕೊಡುತ್ತಿಲ್ಲ, ಇದೊಂದು: ಎರಡನೆಯದು, ಇರುವಂಥ ವ್ಯವಸ್ಥೆಯಲ್ಲಿ ಬೇಕಾದಂಥ ಟ್ರಾನ್ಸ್‌ಫಾರ್ಮರ್ಸ್, ತಂತಿ ಇತ್ಯಾದಿಗಳನ್ನು ಕೊಟ್ಟು ತಕ್ಷಣ ಕನೆಕ್ಷನ್ ಕೊಡುವ ಕೆಲಸ ಆಗುತ್ತಿಲ್ಲ. ಇವತ್ತು ಬೇಸಿಗೆ ಪ್ರಾರಂಭವಾಗಿದೆ. ಕುಡಿಯುವ ನೀರಿನ ಸಮಸ್ಯೆ ಇದೆ. ಅಧ್ಯಕ್ಷರೇ, ತಮಗೆ ಗೊತ್ತಿರಬಹುದು. ನನ್ನ ಲೆಕ್ಕದ ಪ್ರಕಾರ ಸುಮಾರು 12 ಸಾವಿರಕ್ಕೂ ಹೆಚ್ಚು ಜನ ಕರ್ನಾಟಕ ರಾಜ್ಯದಲ್ಲಿ ಕಳೆದ ಎರಡು ಮೂರು ವರ್ಷಗಳಿಂದ ಬೋರ್‌ವೆಲ್ಲುಗಳನ್ನು ತೆಗೆದು ಮೋಟಾರ್‌ಗಳನ್ನು ಇತರೇ ಜನ ಇರಬಹುದು, ಎಸ್.ಸಿ.ಎಸ್.ಟಿ. ಜನ ಇರಬಹುದು, ಇಡಿಸಿದ್ದರೂ ಸಹ ಮೋಟಾರ್‌ಗಳು ವಿದ್ಯುತ್ ಕನೆಕ್ಷನ್ ಕೊಡದೇ ಇರುವುದರಿಂದ ಸ್ಟಾರ್ಟ್ ಆಗುತ್ತಿಲ್ಲ. ಇದು ಸಾವಿರಾರು ಸಂಖ್ಯೆ ಇದೆ. ಆದ್ದರಿಂದ ತಾವು ಕೊನೇಪಕ್ಷ ವಿದ್ಯುತ್ ಉತ್ಪಾದನೆ ಜಾಸ್ತಿ ಮಾಡಿ ಅದನ್ನು ಸರಿಪಡಿಸುವುದು ಮುಂದೆ ಆಯಿತು. ಈಗ ತಾತ್ಕಾಲಿಕವಾಗಿ ಅಗತ್ಯವಿರುವಂಥ ತಂತಿ, ಟ್ರಾನ್ಸ್‌ಫಾರ್ಮರ್ ಇವುಗಳನ್ನು ಕೊಟ್ಟು ಅದನ್ನು ಸರಿಪಡಿಸಿ ಅವರ ನೆಮ್ಮದಿಯಿಂದ ಜೀವನ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ? ಅಧ್ಯಕ್ಷರೇ ತಾವು ಬೇಕಾದರೆ ವೆರಿಫೈ ಮಾಡಿಸಿ. ಇಡೀ ರಾಜ್ಯದಲ್ಲಿ ಗ್ರಾಮೀಣ ಪ್ರದೇಶದಲ್ಲಿ 100ಕ್ಕೆ 50ಕ್ಕಿಂತ ಹೆಚ್ಚು ಭಾಗದಲ್ಲಿ ವಿದ್ಯುತ್ ದೀಪಗಳಿದ್ದರೂ ಸಹ ಸಾಯಂಕಾಲ ಅವು ಹತ್ತುವುದಿಲ್ಲ. ವೋಲ್ಟೇಜ್ ಡ್ರಾಪ್ ಆಗಿ ಸರಿಯಾಗಿ ವಿದ್ಯುಚ್ಛಕ್ತಿ ಸರಬರಾಜಿಲ್ಲ. ಪಂಪ್‌ಸೆಟ್ಟುಗಳು ಸ್ಟಾರ್ಟ್ ಆಗುತ್ತಿಲ್ಲ. ಈ ವಿಚಿತ್ರ ಪರಿಸ್ಥಿತಿ ಇರಬೇಕಾದರೆ ಅದನ್ನು ಸರಿಪಡಿಸುವುದಕ್ಕೆ ತಾವು ತಕ್ಷಣ ಏನು ಕ್ರಮ ತೆಗೆದುಕೊಳ್ಳ ಬಹುದೆಂದು ಹೇಳುತ್ತೀರಾ?

ಶ್ರೀ ಎಸ್.ಎಂ. ಕೃಷ್ಣ: ಮಾನ್ಯ ಸದಸ್ಯರು ಶಿವಮೊಗ್ಗ ಜಿಲ್ಲೆ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನಿಜ. ಕಟ್ ಔಟ್ಟುಗಳಿಗೋಸ್ಕರ ಕೆಪಾಸ್ಟಿಟರ್‌ಗಳಿಗೋಸ್ಕರ, ಬೂಸ್ಟರ್‌ಗಳಿಗೋಸ್ಕರ, ಟ್ರಾನ್ಸ್‌ಫಾರ್ಮರ್‌ಗಳಿಗೋಸ್ಕರ ಜಾಸ್ತಿ ಹಣ ಬೇಕು. ಇವುಗಳನ್ನು ಖರೀದಿಸಬೇಕಾದರೆ ಮೊದಲೇ ನಾವು ಆರ್ಡರ್ ಮಾಡಬೇಕು. ಆದರೆ ಕೆಪಾಸಿಟರ್‌ಗಳು, ಬೂಸ್ಟರ್‌ಗಳು ಮತ್ತು ಕಟೌಟ್ಟುಗಳು ಏನಿವೆ ಇವುಗಳು ಸುಲಭವಾಗಿ ಜಿಲ್ಲಾ ಕೇಂದ್ರದಲ್ಲಿ ಸಿಗತಕ್ಕ ವ್ಯವಸ್ಥೆಯನ್ನು ಮಾಡುವುದಕ್ಕೆ ನಾನು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ಸೂಚನೆಯನ್ನು ಕೊಡುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ: ಸನ್ಮಾನ್ಯ ಅಧ್ಯಕ್ಷರೆ, ಈ ಕೆ.ಇ.ಬಿ. ಇಲಾಖೆಯಿಂದ ಸಣ್ಣ ಕೈಗಾರಿಕೆಗಳನ್ನು ಆರಂಭ ಮಾಡುವುದಕ್ಕೆ ಮುಂಚೆಯೇ ಪವರ್ ನಿಮಗೆ ಕೊಡುತ್ತೇನೆ ಎಂದು ಸರ್ಟಿಫಿಕೇಟ್ ಕೊಡುತ್ತಾರೆ. ಆ ಒಂದು ನಂಬಿಕೆ ಮೇಲೆ ಸಣ್ಣ ಕೈಗಾರಿಕೆಯವರು ಲ್ಯಾಂಡ್ಸ್ ಖರೀದಿ ಮಾಡಿದ್ದಾರೆ, ಬಿಲ್ಡಿಂಗ್ಗಳನ್ನು ಖರೀದಿ ಮಾಡಿದ್ದಾರೆ. ಮೆಷಿನರಿ ತಂದಿದ್ದಾರೆ. ಕೆ.ಎಸ್.ಎಫ್.ಸಿ. ಮತ್ತು ಬ್ಯಾಂಕುಗಳಿಂದ ಲೋನ್ ತೆಗೆದುಕೊಂಡಿದ್ದಾರೆ. ಎಲ್ಲವೂ ಕಂಪ್ಲೀಟ್ ರೆಡಿಯಾಗಿದೆ. ಈಗಿರುವ ಪರಿಸ್ಥಿತಿಯಲ್ಲಿ ಪವರ್ ಮಾತ್ರ ಅವರಿಗೆ ಸಪ್ಲೈ ಮಾಡದೇ ಇರುವುದರಿಂದ ಆ ಯೂನಿಟ್ಗಳು ಪ್ರಾರಂಭವಾಗುತ್ತಿಲ್ಲ. ವಿದ್ಯುತ್ ಕೊರತೆಯಿಂದ ಕೈಗಾರಿಕೆಗಳು ಪ್ರಾರಂಭವಾಗಿಲ್ಲ ಎನ್ನುವುದನ್ನು ಬ್ಯಾಂಕಿನವರು ಮತ್ತು ಕೆ.ಎಸ್.ಎಫ್.ಸಿ.ಯವರು ಕೇಳುವುದಿಲ್ಲ. ಅವರು ನಮಗೆ ಲೋನ್ ವಾಪಸ್ ಕೊಟ್ಟಿಲ್ಲ ಎಂದು ಬೀಗ ಹಾಕಿಕೊಂಡು ಬರುತ್ತಿದ್ದಾರೆ. ಅದಕ್ಕೋಸ್ಕರ ಸಣ್ಣ ಕೈಗಾರಿಕೆಗಳು ಪ್ರಾರಂಭ ಆಗುವುದಕ್ಕೆ ಏನು ತಯಾರಾಗಿ ನಿಂತಿವೆ ಅವರಿಗೆ ಅನುಕೂಲ ಮಾಡುವ ದೃಷ್ಟಿಯಿಂದ ಬಡ್ಡಿ ಮನ್ನಾ ಮಾಡುವುದಲ್ಲದೆ ಬ್ಯಾಂಕುಗಳು ಮತ್ತು ಕೆ.ಎಸ್.ಎಫ್.ಸಿ. ಯವರು ಸಾಲ ಮರುಪಾವತಿಗೆ ಒತ್ತಾಯ ಮಾಡದೇ ಇರುವ ರೀತಿಯಲ್ಲಿ ಸೂಚನೆ ಕೊಡುತ್ತೀರಾ? ಸಾಲ ಕಟ್ಟದಿದ್ದರೆ ಹರಾಜು ಹಾಕುತ್ತಾರೆಂದು ಅವರು ಬೀಗ ಹಾಕಿಕೊಂಡು ಹೊರಟಿದ್ದಾರೆ.

ಶ್ರೀ ಎಸ್.ಎಂ. ಕೃಷ್ಣ: ಮಾನ್ಯ ಸದಸ್ಯರಾದ ಶ್ರೀ ಈಶ್ವರಪ್ಪನವರು ಹೇಳಿದ ಮಾತಿನಲ್ಲಿ ಬಹಳ ಅರ್ಥ ಇದೆ. ನನಗೂ ಬೇಕಾದಷ್ಟು ದೂರುಗಳು ಮುಖ್ಯವಾಗಿ ಸಣ್ಣ ಉದ್ದಿಮೆದಾರರಿಂದ ಬರುತ್ತಿವೆ. ಏಕೆಂದರೆ ಕೆ.ಎಸ್.ಎಫ್.ಸಿ.ಯವರು ನಿರ್ದಾಕ್ಷಿಣ್ಯವಾಗಿ ಜಪ್ತಿ ಮಾಡುತ್ತಾರೆ, ಬೀಗಮುದ್ರೆ ಹಾಕುತ್ತಾರೆ. ಮತ್ತೆ ಅವರ ಇಂಟರೆಸ್ಟ್ ರೇಟ್ ಕೂಡ ಟ್ಯಾಕ್ಸಿ ಮೀಟರ್ ತರಹ ಓಡುತ್ತಲೇ ಇರುತ್ತದೆ. ಇದು ಅತ್ಯಂತ ದುರ್ಭರವಾದ ಸನ್ನಿವೇಶ. ನಾನು ಹಿಂದೆ ಉದ್ದಿಮೆ ಮಂತ್ರಿಯಾಗಿ ಈ ಕಷ್ಟವನ್ನು ಅರಿತಿದ್ದೇನೆ. ಈ ಕಷ್ಟ ್ತು ಆದರೂ ಕೂಡ ಇವತ್ತು ಬಹಳ ಅಕ್ಯೂಟ್ ಪಾಯಿಂಟ್ಗೆ ರೀಚ್ ಆಗಿದೆ. ಆದ್ದರಿಂದ ನಾನು ಕೆ.ಎಸ್.ಎಫ್.ಸಿ.ಯವರನ್ನು ವಿದ್ಯುಚ್ಛಕ್ತಿ ಮಂಡಲಿಯವರನ್ನು ಮತ್ತು ಸಣ್ಣ ಉದ್ದಿಮೆದಾರರ ಮಹಾ ಸಂಘದ ಪದಾಧಿಕಾರಿಗಳನ್ನು ಕರೆಸಿ ಒಂದು ಮೀಟಿಂಗ್ ಮಾಡಿ ಒಂದು ಸೂಕ್ತವಾದಂಥ ನಿರ್ಧಾರವನ್ನು ತೆಗೆದುಕೊಳ್ಳುತ್ತೇನೆ.

ಬಳ್ಳಾರದ ಗೊಲ್ಲರಹಟ್ಟಿಕೆರೆ ನಿರ್ಮಾಣ ಕುರಿತು

699 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ): ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಳ್ಳಾರದ ಗೊಲ್ಲರಹಟ್ಟಿ ಕೆರೆ ನಿರ್ಮಾಣಕ್ಕಾಗಿ ಈಗಾಗಲೇ ಸರ್ಕಾರ ಸ್ವಾಧೀನ ಪಡಿಸಿಕೊಂಡಿರುವ ಜಮೀನಿನ ವಿವರ ಮತ್ತು ಇಲ್ಲಿಯವರೆಗೆ ಸರ್ಕಾರದಿಂದ ಪಾವತಿ ಆಗಿರುವ ಹಣವೆಷ್ಟು?

ಆ) ಆ ಕೆರೆಯ ನಿರ್ಮಾಣದ ಅಂದಾಜು ವೆಚ್ಚವೆಷ್ಟು?

ಇ) ಸರ್ಕಾರದವರು ಸ್ವಾಧೀನಪಡಿಸಿಕೊಳ್ಳಲು ಮತ್ತೊಮ್ಮೆ ಅಧಿಸೂಚನೆ ಹೊರಡಿಸಿರುವರೇ?

ಈ) ಕೇವಲ ಒಂದೇ ಕುಟುಂಬದ ಸೌಲಭ್ಯಕ್ಕಾಗಿ ಕೆರೆಯ ನಿರ್ಮಾಣ ಮಾಡುತ್ತಿರುವುದು ಮತ್ತು ಬೆಲೆ ಇಲ್ಲದ ಜಮೀನಿಗೆ, ಲಕ್ಷಾಂತರ ರೂಪಾಯಿಗಳನ್ನು ಬಿಡುಗಡೆ ಮಾಡಿ ಕಂದಾಯ ಇಲಾಖೆ ಮತ್ತು ನೀರಾವರಿ ಇಲಾಖೆಯವರು ಸರ್ಕಾರವನ್ನು ವಂಚಿಸುತ್ತಿರುವುದು ಸರ್ಕಾರವನ್ನು ವಂಚಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಆ ಬಗ್ಗೆ ಸರ್ಕಾರದ ಕ್ರಮವೇನು?

ಡಾ|| ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು):

ಅ) ಬಳ್ಳಾರದ ಗೊಲ್ಲರಹಟ್ಟಿ ಕೆರೆ ನಿರ್ಮಾಣಕ್ಕಾಗಿ 16 ಎಕರೆ 03 ಗುಂಟೆ ಜಮೀನನ್ನು ಸ್ವಾಧೀನಪಡಿಸಿಕೊಂಡಿದ್ದು ಇದಕ್ಕೆ 11,35,626 ರೂ.ಗಳನ್ನು ಪಾವತಿ ಮಾಡಲಾಗಿದೆ.

ಜಂಟಿ ಮೋಜಣಿ ಅಳತೆಯ ಪ್ರಕಾರ 11 ಎಕರೆ 17 ಗುಂಟೆ ಹೆಚ್ಚುವರಿ ವಿಸ್ತೀರ್ಣವನ್ನು ಭೂಸ್ವಾಧೀನ ಪಡಿಸಿಕೊಳ್ಳಲಾಗಿದ್ದು ಈ ಹೆಚ್ಚುವರಿ ಜಮೀನಿಗೆ ಪರಿಹಾರ ಹಣವನ್ನು ನಿಗಧಿಪಡಿಸಿರುವುದಿಲ್ಲ.

ಆ) ಮಂಜೂರಾಗಿರುವ ಅಂದಾಜು ವೆಚ್ಚ 4.99 ಲಕ್ಷ ರೂಪಾಯಿಗಳು.

ಇ) ಜಂಟಿ ಮೋಜಣಿ ಅಳತೆಯ ಪ್ರಕಾರ ಹೆಚ್ಚುವರಿಯಾಗಿ ಭೂಸ್ವಾಧೀನಪಡಿಸಿಕೊಳ್ಳಬೇಕಾದ 11 ಎಕರೆ 17 ಗುಂಟೆ ಜಮೀನಿಗೆ ಅಧಿಸೂಚನೆ ಹೊರಡಿಸಲಾಗಿದೆ. ಇನ್ನಾವುದೇ ಅಧಿಸೂಚನೆ ಹೊರಡಿಸಿಲ್ಲ.

ಈ) ಈ ಕೆರೆ ನಿರ್ಮಾಣದಿಂದ 41 ಕುಟುಂಬಗಳು ನೀರಾವರಿ ಸೌಲಭ್ಯ ಪಡೆಯುತ್ತವೆ. ಭೂಸ್ವಾಧೀನವಾದ ಜಮೀನುಗಳ ಬೆಲೆಯನ್ನು ಮಾರುಕಟ್ಟೆ ಬೆಲೆ ಮತ್ತು ವಾಸ್ತವಿಕ ಅಂಶಗಳ ಆಧಾರದ ಮೇಲೆ ನಿರ್ಧರಿಸಲಾಗಿರುತ್ತದೆ. ಆದ್ದರಿಂದ ಕಂದಾಯ ಇಲಾಖೆ ಹಾಗೂ ನೀರಾವರಿ ಇಲಾಖೆ ಸರ್ಕಾರವನ್ನು ವಂಚಿಸುತ್ತಿರುವ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೇ, ಈ ಕೆರೆಯ ಅಂದಾಜು ವೆಚ್ಚ 4.99 ಲಕ್ಷ ರೂಪಾಯಿಗಳು. ಈ ವೆಚ್ಚದಲ್ಲಿ ಅಕ್ವಿಸಿಷನ್ ಹಣವೂ ಸೇರಿರುತ್ತದೆ. ಆದರೆ ಅವರು 16 ಎಕರೆ ಸ್ವಾಧಿನ ಪಮಾಡಿಕೊಳ್ಳುವುದಕ್ಕೆ 12 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಈಗ ಅದು ಸಾಲದು ಎಂದು ಹೇಳಿ ಇನ್ನೂ 12 ಎಕರೆಯನ್ನು ಸ್ವಾಧೀನ ಮಾಡಿಕೊಳ್ಳುವುದಕ್ಕೆ ಅಧಿಸೂಚನೆ ಹೊರಡಿಸಿದ್ದಾರೆ. ಒಂದು ವಿಚಾರ ಹೇಳುತ್ತೇನೆ. ನಾನೂ ಕೂಡಾ ಅಂದಾಜು ಸಮಿತಿಯ ಸದಸ್ಯನಾಗಿದ್ದೆ. ತಾವೂ ಕೂಡಾ ಸಚಿವರಾಗುವುದಕ್ಕಿಂತ ಮೊದಲು ಅಂದಾಜು ಸಮಿತಿಯ ಸದಸ್ಯರಾಗಿದ್ದಿರಿ. ಈ ವಿಷಯದಲ್ಲಿ ನಾವಿಬ್ಬರೂ ಭಾಗಿ ಆಗಿದ್ದೆವು. ಈ ವಿಚಾರದಲ್ಲಿ ಅಂದಾಜು ಸಮಿತಿಯಲ್ಲಿ ಕೂಡಾ ಚರ್ಚೆ ಆಗಿ ಒಂದು ನಿರ್ದೇಶನವನ್ನು ಸರ್ಕಾರಕ್ಕೆ ಕೊಟ್ಟಿದ್ದೆವು. ಈ ಬಗ್ಗೆ ಸಮಗ್ರವಾದ ವಿಚಾರಣೆ ಮಾಡತಕ್ಕ ಬಗ್ಗೆ ಲೋಕಾಯುಕ್ತಕ್ಕೆ ಒಪ್ಪಿಸಬೇಕೆಂಬ ವಿಚಾರವನ್ನು ಸರ್ಕಾರದ ಮುಂದೆ ಇಟ್ಟಾಗ, ಅದನ್ನು ಸರ್ಕಾರ ಒಪ್ಪಿ ಲೋಕಾಯುಕ್ತಕ್ಕೆ ಕಳುಹಿಸುವುದರ ಬಗ್ಗೆ ಹೇಳಿದ್ದು ಪ್ರೊಸೀಡಿಂಗ್ಸ್‌ನಲ್ಲಿ ಇದೆ. ಅಷ್ಟು ನಿರ್ದೇಶನ ಕೊಟ್ಟರೂ ಕೂಡಾ ಇವತ್ತು ಮತ್ತೆ ಜಮೀನು ಬೇಕು ಎಂದು ಅಧಿಸೂಚನೆ ಹೊರಡಿಸತಕ್ಕ ಪ್ರಯತ್ನ ಮಾಡಿರಬೇಕಾದರೆ ಸದನದ ಅಂದಾಜು ಸಮಿತಿಯ ನಿರ್ದೇಶನವನ್ನು ಇವತ್ತು ಉಲ್ಲಂಘನೆ ಮಾಡಿರತಕ್ಕ ಅಧಿಕಾರಿಗಳು ಯಾರೇ ಇರಲಿ, ಅವರನ್ನು ಸಸ್ಪೆಂಡ್ ಮಾಡತಕ್ಕ ಪ್ರಯತ್ನವನ್ನು ಮಾಡುತ್ತೀರಾ? 49 ಕುಟುಂಬಗಳು ಎಂದು ಉತ್ತರದಲ್ಲಿ ಕೊಟ್ಟಿದ್ದೀರಿ. ಇಲ್ಲಿ 49 ಕುಟುಂಬಗಳಿಗೆ ನೀರಾವರಿ ಆಗುವುದಿಲ್ಲ. ತಾವೂ ಸಚಿವರಾದ ಮೇಲೆ ಆ ಕೆರೆಯನ್ನು ತೋರಿಸಿದ್ದೇನೆ. ಒಬ್ಬ ಶ್ರೀಮಂತನಿಗೆ ಸೇರಿದ 120 ಎಕರೆ ಜಮೀನು ಇದೆ. ಅವನದೇ ಜಮೀನು ಅಕ್ವೈರ್ ಆಗಿರತಕ್ಕದ್ದು. ಇದರಲ್ಲಿ ಕೆಲವು ಭಾಗ ಮುಳುಗಡೆಯಾಗಿ ಕಾಂಪನ್ಸೇಷನ್ ತೆಗೆದುಕೊಳ್ಳುತ್ತಿದ್ದಾನೆ. ಆ ಕೆರೆಯ ಅನುಕೂಲ ಕೂಡಾ ಆತನಿಗೇ ಆಗತಕ್ಕದ್ದು. ನೀರಾವರಿ ಅವರಿಗೇನೇ ಆಗತಕ್ಕದ್ದು. ಅವರ ಮನೆಯಲ್ಲಿರುವ ಆಳುಕಾಳುಗಳ ಹೆಸರನ್ನು ಸೇರಿಸಿ ಇವತ್ತು ಆ ಬಡವರ ಹೆಸರಿನಲ್ಲಿ ಲೂಟಿ ಮಾಡತಕ್ಕ ಕೆಲಸ ಮಾಡುತ್ತಿದ್ದಾರೆ. ನಿಮ್ಮ ಜೂನಿಯರ ಎಂಜಿನಿಯರ್, ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಎಂಜಿನಿಯರ್ ಮತ್ತು ಅಸಿಸ್ಟೆಂಟ್ ಕಮೀಷನರ್ ಹೀಗೆ ಎಲ್ಲರೂ ಇದರಲ್ಲಿ ಶಾಮೀಲು ಆಗಿದ್ದಾರೆ. ಇವತ್ತು ಈ ವಿಚಾರ ಲೋಕಾಯುಕ್ತಕ್ಕೆ ರೆಫರ್ ಆಗಿದ್ದರೆ ಅದು ವಿಚಾರಣೆ ಆಗಿದೆಯೇ? ವಿಚಾರಣೆ ಆಗುವುದಕ್ಕೆ ತಡವಾಗಿದ್ದರೆ ನಿಮ್ಮ ಅಧಿಕಾರಿಗಳು ಯಾವುದೇ ಕಡತಗಳನ್ನು ಕೊಡುವುದಕ್ಕೆ ಪ್ರಯತ್ನ ಮಾಡಿಲ್ಲ, ಅಥವಾ ಕೊಟ್ಟಿಲ್ಲ. ಇವತ್ತು ಅದನ್ನು ಕೊಟ್ಟಿದ್ದಾರಾ? ಏನಾಗಿದೆ? ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ? ಇದರಲ್ಲಿ ಸರ್ಕಾರ, ಸರ್ಕಾರಿ ಅಧಿಕಾರಿಗಳು, ಶಾಮೀಲು ಆಗಿಲ್ಲವೇ? ದಯಮಾಡಿ ಈ ಬಗ್ಗೆ ವಿಚಾರ ಮಾಡಬೇಕೆಂದು ಹೇಳುತ್ತೇನೆ.

ಡಾ|| ಆರ್.ಬಿ. ಚೌಧರಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದಹಾಗೆ ಬಳ್ಳಾರದ ಗೊಲ್ಲರಹಟ್ಟಿ ಕೆರೆಯ ನಿರ್ಮಾಣಕ್ಕೆ ಮೊದಲು 16 ಎಕರೆ 3 ಗುಂಟೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಯಿತು. ಅನಂತರ ಜಂಟಿ ಮೋಜಣಿ ಆಜ್ಞೆ ಪ್ರಕಾರ ಪುನಃ 11.17 ಎಕರೆ ಹೆಚ್ಚುವರಿ ಭೂಸ್ವಾಧೀನಪಡಿಸಿಕೊಳ್ಳಬೇಕೆಂದು ಪರಿಹಾರ ಹಣವನ್ನು ನಿಗದಿಪಡಿಸಲಾಯಿತು. ಮೊದಲ 16 ಎಕರೆ 3 ಗುಂಟೆ ಜಮೀನನ್ನು ಏನು ಸ್ವಾಧೀನಪಡಿಸಿಕೊಳ್ಳಲಾಗಿದೆ ಅದು ಒಂದು ಫಲವತ್ತಾದ ಭೂಮಿ ಎಂದು ಎಕರೆಗೆ 15 ಸಾವಿರ ರೂಪಾಯಿ ಅಂದಾಜು ಮಾಡಿದ್ದಾರೆ. ಆ ಪ್ರಕಾರ 11,35,626 ರೂಪಾಯಿ ಪಾವತಿ ಮಾಡಲಾಗಿದೆ. ಮತ್ತೆ 11 ಎಕರೆ 17 ಗುಂಟೆ ಯಾವುದೇ ಹೆಚ್ಚುವರಿ ಪರಿಹಾರಧನವನ್ನು ಇದುವರೆಗೆ ನೀಡಿಲ್ಲ. ಮತ್ತೆ ತಾವು ಹೇಳಿದಹಾಗೆ ಅಂದಾಜು ಸಮಿತಿಯಲ್ಲಿ ನಾನೂ ಸದಸ್ಯನಾಗಿದ್ದೆ. ಆಗ ಈ ಅಪಸ್ವರ ಎದ್ದಿದ್ದು ನಿಜ. ಆಗ ಇದು ಲೋಕಾಯುಕ್ತಕ್ಕೆ ರೆಫರ್ ಆಯಿತು. ಲೋಕಾಯುಕ್ತದ ರಿಜಿಸ್ಟ್ರಾರ್ ಅವರು ಕೂಡ ಒಂದು ವಿವರವಾದ ಮಾಹಿತಿ ಕೇಳಿದ್ದಾರೆ. ಅದನ್ನು ಕೂಡಲೇ ಕಳುಹಿಸಬೇಕೆಂದು ನಾನೂ ಕೂಡಾ ನಮ್ಮ ಅಧಿಕಾರಿಗಳಿಗೆ ಆಜ್ಞೆ ಮಾಡಿದ್ದೇವೆ. ತಾವು ಒಂದೇ

ಕುಟುಂಬದ್ದು ಎಂದು ಹೇಳುತ್ತಿದ್ದೀರಿ. ಸಾಧಾರಣವಾಗಿ ಒಂದೇ ಕುಟುಂಬದ ಸಲುವಾಗಿ ಇಂತಹ ಒಂದು ಯೋಜನೆಯನ್ನು ಕೈಗೊಳ್ಳುವುದಕ್ಕಾಗುವುದಿಲ್ಲ. ಆದಾಗ್ಯೂ ಕೂಡಾ 41 ಕುಟುಂಬಗಳಿಗೆ ಅನುಕೂಲ ಆಗುವ ಒಂದು ನೀರಾವರಿ ಯೋಜನೆ ಎಂದು ನನಗೆ ಸಿಕ್ಕ ಮಾಹಿತಿ ಪ್ರಕಾರ ತಿಳಿದು ಬಂದಿದೆ. ಈ ಯೋಜನೆ ಜಿಲ್ಲಾಪರಿಷತ್ ವ್ಯಾಪ್ತಿಗೆ ಒಳಪಟ್ಟಿದ್ದು. ನಮ್ಮ ಮೈನರ್ ಇರಿಗೇಷನ್ ಇಲಾಖೆಗೆ ಒಳಪಟ್ಟಿಲ್ಲ. ಇದು ಜಿಲ್ಲಾಪರಿಷತ್ ವ್ಯಾಪ್ತಿಯಲ್ಲಿ ಇರುವುದರಿಂದ ನಿಧಾನವಾಗಿ ಈ ಮಾಹಿತಿಗಳು ಸಿಗುತ್ತಿವೆ. ಮತ್ತೆ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಬೇಕೆಂದು ಹೇಳಿದ್ದೀರಿ. ಈಗಾಗಲೇ ಈ ವಿಚಾರ ಲೋಕಾಯುಕ್ತ ಮುಂದೆ ಇರುವುದರಿಂದ ಇದರ ಬಗ್ಗೆ ಸೂಕ್ತ ಪರಿಶೀಲನೆ ಮಾಡಿ ಕ್ರಮ ಕೈಗೊಳ್ಳುತ್ತೇವೆಂದು ಹೇಳುತ್ತೇನೆ. ಮತ್ತೆ 5 ಲಕ್ಷ ರೂಪಾಯಿ ಪರಿಹಾರದ ಬಗ್ಗೆ ಹೇಳಿದ್ದೀರಿ. ಅದನ್ನು ತಡೆಹಿಡಿಯುತ್ತೇನೆಂದು ಹೇಳುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ಜಿಲ್ಲಾಪರಿಷತ್ತು ಹಾಗೂ ಸಣ್ಣ ನೀರಾವರಿ ಇಲಾಖೆ ಎಂದು ಹೇಳುತ್ತಿದ್ದೀರಿ. ಹಣವನ್ನು ವಿತರಣೆ ಮಾಡುವುದಕ್ಕೆ ನಾವು ಮಾಡಿರತಕ್ಕ ವ್ಯವಸ್ಥೆಯಲ್ಲಿ ಜಿಲ್ಲಾಪರಿಷತ್ತು ಎಂದು ಮಾಡಿರತಕ್ಕದ್ದು. ಆದರೆ ಅಡ್ಮಿನಿಸ್ಟ್ರೇಷನ್ ಸ್ಯಾಂಕ್ಷನ್ನ್ನು ಸರ್ಕಾರಕ್ಕೆ ಬರಬೇಕು. ತಾವು ಸಣ್ಣ ನೀರಾವರಿ ಖಾತೆ ಸಚಿವರು ಆಗಿದ್ದೀರಿ. ತಮಗೆ ಇದರ ಬಗ್ಗೆ ಕಂಟ್ರೋಲ್ ಇದೆ. ತಮಗೆ ಅಧಿಕಾರ ಇದೆ. ಜಿಲ್ಲಾಪರಿಷತ್ತು ಆದಾಕ್ಷಣ ತಾವು ಮಾಡಬಾರದು ಎಂದು ಇಲ್ಲ. ಇಲ್ಲಿ ಮುಖ್ಯವಾಗಿ ಬಂದರಿತಕ್ಕದ್ದು ಏನೆಂದರೆ ಎಂಜಿನಿಯರಿಂಗ್ ಇಲಾಖೆಯವರು, ಅಸಿಸ್ಟೆಂಟ್ ಕಮೀಷನರ್ ಶಾಮೀಲಾಗಿ 5 ಲಕ್ಷ ರೂಪಾಯಿಗಳ ಮುಗಿಯತಕ್ಕ ಕೆಲಸಕ್ಕೆ ಸುಮಾರು 40 ಲಕ್ಷ ರೂಪಾಯಿಗಳ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದರಾದ್ದರಿಂದ ಹಣ ದುರ್ವ್ಯವಹಾರವಾಗಿದೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರೆಂದು ಹೇಳಬೇಕು. ಈ ವಿಚಾರ ಲೋಕಾಯುಕ್ತಕ್ಕೆ ಹೋಗಿದೆ. ಅದ ಬಂದ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ? ತಾವು ಹೇಳತಕ್ಕ ಪ್ರಕಾರವೇ ಸಲೇಷನ್ ಸೇರಿಕೊಂಡರೂ 3 ಲಕ್ಷ ರೂಪಾಯಿ ಆಗುವುದಿಲ್ಲ. ತಾವು ಉತ್ತರದಲ್ಲಿ ಎಕರೆಗೆ 15 ಸಾವಿರ ರೂಪಾಯಿ ಎಂದು ಹೇಳಿದ್ದೀರಿ. ಇದರಿಂದ 12 ಎಕರೆಗೆ ಎಷ್ಟು ಆಗುತ್ತದೆ? 12 ಲಕ್ಷ ಆಗುತ್ತದೆಯೋ? ಎಕರೆಗೆ 15 ಸಾವಿರ ಅಲ್ಲ, 85 ಸಾವಿರದಂತೆ ಕೊಟ್ಟಿದ್ದಾರೆ. ದಯಮಾಡಿ ಯಾರೊಬ್ಬರನ್ನಾದರೂ ಸಸ್ಪೆಂಡ್ ಮಾಡಿ. ಆಗ ಬುದ್ಧಿ ಬರುತ್ತದೆ. ಇದರಿಂದ ಮುಂದೆ ಆಗುವ ತಪ್ಪು ತಪ್ಪುತ್ತದೆ. ಮತ್ತು ಈ ಬಗ್ಗೆ ಸಮಗ್ರವಾದ ವಿಚಾರಣೆ ಮಾಡುವ ಬಗ್ಗೆ ಆಶ್ವಾಸನೆ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಡಾ|| ಆರ್.ಬಿ. ಚೌಧ : ಮಾನ್ಯ ಅಧ್ಯಕ್ಷರೇ, ಪರಿಹಾರ ಕೊಟ್ಟಿದ್ದು ಸಲೇಷನ್ ಸೇರಿ; ಗಿಡ, ಮರ, ಬಾವಿ ಎಲ್ಲಾ ಕೂಡಿಸಿ 11 ಲಕ್ಷ ರೂಪಾಯಿ ಆಗಿದೆ. ಅದರ ಪ್ರಕಾರ ಕೊಟ್ಟಿದ್ದು ಆಗಿದೆ. ಆಗಲೇ ನಾನು ಹೇಳಿದ ಹಾಗೆ ಇದು ಲೋಕಾಯುಕ್ತ ವ್ಯಾಪ್ತಿಗೆ ಒಳಪಟ್ಟಿರುವುದರಿಂದ ಪರಿಶೀಲನೆ ಮಾಡಿ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳುತ್ತೇನೆ.

ತಿರುಪತಿ ತಿರುಮಲೆಯ ಅತಿಥಿ ಗೃಹಗಳ ಸಂಖ್ಯೆ ಕುರಿತು

454 - ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ) : ಮಾನ್ಯ ಕಾನೂನು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶ್ರೀ ತಿರುಮಲ ತಿರುಪತಿ ಕ್ಷೇತ್ರ ಪ್ರದೇಶದಲ್ಲಿ ಇರತಕ್ಕಂಥ ಸರ್ಕಾರದ ವಸತಿ ಗೃಹಗಳು ಎಷ್ಟು?

ಆ) ರಾಜ್ಯದಿಂದ ಅಲ್ಲಿಗೆ ಹೋಗತಕ್ಕಂತ ಯಾತ್ರಿಕರ ಸಂಖ್ಯೆಗನುಗುಣವಾಗಿ ವಸತಿ ಗೃಹಗಳನ್ನು ಕಲ್ಪಿಸಲಾಗಿದೆಯೇ?

ಇ) ಇಲ್ಲವಾದಲ್ಲಿ ಅದಕ್ಕೆ ಕಾರಣಗಳೇನು?

ಈ) ಗಣನೀಯ ಸಂಖ್ಯೆಯಲ್ಲಿ ರಾಜ್ಯದಿಂದ ಅಲ್ಲಿಗೆ ಹೋಗುವ ಯಾತ್ರಾರ್ಥಿಗಳ ಅನುಕೂಲಕ್ಕಾಗಿ ಇನ್ನಷ್ಟು ವಸತಿಗೃಹಗಳನ್ನು ಕಟ್ಟಿಸುವ ಯೋಜನೆಯು ಸರ್ಕಾರದ ಮುಂದಿದೆಯೇ?

ಉ) ಹಾಗಿದ್ದಲ್ಲಿ ಆ ಬೇಡಿಕೆಯನ್ನು ಯಾವಾಗ ಈಡೇರಿಸಲಾಗುವುದು?

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಮುಜರಾಯಿ ಸಚಿವರು):

ಅ) ತಿರುಮಲದಲ್ಲಿ ಕರ್ನಾಟಕ ರಾಜ್ಯ ಛತ್ರದಲ್ಲಿರುವ ವಸತಿ ಗೃಹಗಳ ವಿವರ)

1)	ಕರ್ನಾಟಕ ಪ್ರವಾಸಿ	50 ಕೊಠಡಿಗಳು
2)	ಕರ್ನಾಟಕ ಕಲ್ಯಾಣ ಮಂಟಪ	24 ಕೊಠಡಿಗಳು
3)	ಕಾಟೇಜುಗಳು (17)	48 ಕೊಠಡಿಗಳು
4)	ಅತಿಥಿ ಗೃಹ	8 ಕೊಠಡಿಗಳು
5)	ನಿರೀಕ್ಷಣಾ ಭವನ	2 ಕೊಠಡಿಗಳು

ಆ) ಯಾತ್ರಿಗಳ ಸಂಖ್ಯೆ ಇಷ್ಟೆ ಎಂಬುದು ನಿರ್ಧರಿಸಲು ಮಾಹಿತಿ ಲಭ್ಯವಿಲ್ಲ, ಸಾಧ್ಯವಾದಷ್ಟು ಸೌಲಭ್ಯ ಒದಗಿಸಲಾಗಿದೆ.

ಇ) ಸಾಕಷ್ಟು ಜಾಗದ ಕೊರತೆ

ಈ) ಹೌದು

ಉ) ಟಿ.ಟಿ.ಡಿ ಪ್ರಾಧಿಕಾರದಿಂದ ಅಸಮತಿ ದೊರೆತ ಕೂಡಲೇ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಕೆ. ಲಕ್ಕಣ್ಣ: ಮಾನ್ಯ ಅಧ್ಯಕ್ಷರೇ, ಶ್ರೀ ತಿರುಮಲ ತಿರುಪತಿ ಕ್ಷೇತ್ರದಲ್ಲಿ ಕರ್ನಾಟಕ ಸರ್ಕಾರದ ವಸತಿಗೃಹಗಳ ಸಂಖ್ಯೆ 130 ಎಂದು ಹೇಳಿದ್ದಾರೆ. ಅದರಲ್ಲಿ 50 ವಸತಿಗೃಹಗಳನ್ನು ಕರ್ನಾಟಕ ಪ್ರವಾಸೋದ್ಯಮ ಇಲಾಖೆಗೆ ವಹಿಸಿಕೊಟ್ಟಿದ್ದು, ಉಳಿದವು 80 ಮಾತ್ರ. ರಾಜ್ಯದಿಂದ ಅಲ್ಲಿಗೆ ಸಾವಿರಾರು, ಯಾತ್ರಾರ್ಥಿಗಳು ಹೋಗುತ್ತಿದ್ದು, ಇವು ಸಾಲುವುದಿಲ್ಲ. ಇನ್ನೂ ಹೆಚ್ಚು ಕಟ್ಟಬೇಕಾಗಿದೆ. ಈ ದಿಸೆಯಲ್ಲಿ ಒಬ್ಬ ಸ್ಪೆಷಲ್ ಆಫೀಸರ್ ವಸತಿ ಗೃಹ ಕಟ್ಟತಕ್ಕ ದಾನಿಗಳನ್ನು ಕೂಡಿಸಿ ಪ್ಲಾನ್ ಕೊಟ್ಟರೆ ಅಲ್ಲಿನ ಒಬ್ಬ ಅಧಿಕಾರಿ ಹಕ್ಕುಪತ್ರ ಇಲ್ಲ ಎಂದು ರಿಜೆಕ್ಟ್ ಮಾಡುತ್ತಿದ್ದಾರೆ. ಮಾನ್ಯ ಸಚಿವರು ಅದನ್ನು ಪರಿಶೀಲಿಸಿ ಪ್ಲಾನ್ ಸ್ಯಾಂಕ್ಷನ್ ಮಾಡಿದರೆ ಅಲ್ಲಿ 100 ವಸತಿಗೃಹಗಳನ್ನು ಕಟ್ಟಬಹುದು. ಈ ಬಗ್ಗೆ ಮಾನ್ಯ ಸಚಿವರು ಏನು ಹೇಳುತ್ತಾರೆ?

ಶ್ರೀ ಹಾರ್ನಳ್ಳಿ ರಾಮಸ್ವಾಮಿ: ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿರತಕ್ಕ ಮಾತು ನಿಜ. ಲಕ್ಷಾವಧಿ ಯಾತ್ರಿಕರು ಅಲ್ಲಿಗೆ ಹೋಗುತ್ತಿದ್ದಾರೆ. ಅವರಿಗೆ ಅಲ್ಲಿ ಈಗಿರತಕ್ಕ ವಸತಿಗೃಹಗಳು ಸಾಲದು. ಅದಕ್ಕಾಗಿ 103 ಕೊಠಡಿಗಳ ಒಂದು ಸಂಕೀರ್ಣ ಕಟ್ಟುವುದಕ್ಕೆ ಸರ್ಕಾರ ಎಲ್ಲಾ ತಯಾರಿ ನಡೆಸಿದೆ. ಅಲ್ಲಿ ಇರುವ ಅಧಿಕಾರ ವರ್ಗದವರೂ ಕೂಡ ಎಲ್ಲಾ ಕ್ರಮಗಳನ್ನು ತೆಗೆದುಕೊಂಡಿದ್ದಾರೆ. ಶ್ರೀ ತಿರುಮಲ ತಿರುಪತಿ ಕ್ಷೇತ್ರ ದೇವಸ್ಥಾನದ ಸಮಿತಿಯು ಒಪ್ಪಿಗೆ ಕೊಡಬೇಕೆಂದು ಸರ್ಕಾರ ಕೇಳಿದೆ. ನಿನ್ನೆ ದಿವಸ ಆ ಸಮಿತಿಯ ಅಧ್ಯಕ್ಷರು, ನಮ್ಮ ಉತ್ತರ ಕನ್ನಡ ಜಿಲ್ಲೆಯ ಶಿರಸಿ ಹತ್ತಿರ ಸೋಂಧಿ ಮಠಕ್ಕೆ ಬಂದಿದ್ದರು. ಅಲ್ಲಿ ನಾನು ಈ ಬಗ್ಗೆ ಅವರ ಹತ್ತಿರ ವಿಸ್ತಾರವಾದ ಮಾತುಕತೆ ನಡೆಸಿದ್ದೇನೆ. ನಮ್ಮ ಧಾರ್ಮಿಕ ದತ್ತಿ ಆಯುಕ್ತರು ಸಹಾ ಖುದ್ದಾಗಿ ಹೋಗಿ ಹೇಳಿದ್ದಾರೆ. ಅವರಿಂದ ಸಧ್ಯದಲ್ಲೇ ಒಪ್ಪಿಗೆ ದೊರೆಯುವ ಸಂಭವ ಇದೆ. ಒಪ್ಪಿಗೆ ದೊರೆತ ತಕ್ಷಣವೇ ನಾವು ಈ ಕೆಲಸ ಮಾಡುವುದಕ್ಕೆ ಸಿದ್ಧ ಇದ್ದೇವೆ. ಒಂದು ದೋಷ ಏನೆಂದರೆ ಪ್ರತಿ ಸಾರಿ ಕರ್ನಾಟಕದ ಪರವಾಗಿ ಮುಖ್ಯ

ತಿರುಪತಿ ತಿರುಮಲ ದೇವಸ್ಥಾನ ಸಮಿತಿಯಲ್ಲಿ ಒಬ್ಬರು ಸದಸ್ಯರು ಇರುತ್ತಿದ್ದರು. ಈಗ ಹಾಲಿ ಸಮಿತಿಯಲ್ಲಿ ನಮ್ಮ ಸದಸ್ಯರು ಇಲ್ಲ ನಾನು ಮತ್ತು ನಮ್ಮ ಮುಖ್ಯಮಂತ್ರಿಗಳು ಇಬ್ಬರೂ ಆಂಧ್ರ ಪ್ರದೇಶದ ಮುಖ್ಯಮಂತ್ರಿಗಳಿಗೆ ಪತ್ರವನ್ನು ಬರೆದು ಒಬ್ಬರಾದರೂ ಕರ್ನಾಟಕದ ಸದಸ್ಯರು ಸಮಿತಿಯಲ್ಲಿ ಇರಬೇಕೆಂದು ಕೇಳಿಕೊಂಡಿದ್ದೇವೆ. ಅದು ಅವರ ಪರಿಶೀಲನೆಯಲ್ಲಿದೆ ಎಂದು ಭಾವಿಸುತ್ತೇನೆ. ಹಾಗೆ ಅದರೆ ಕರ್ನಾಟಕ ಸರ್ಕಾರದ ಹಕ್ಕು ಮತ್ತು ಅಲ್ಲಿಗೆ ಹೋಗತಕ್ಕ ನಮ್ಮ ಭಕ್ತಾಧಿಗಳಿಗೆ ಅನುಕೂಲ ಮಾಡುವುದಕ್ಕೆ ಸಾಕಷ್ಟು ಸೌಲಭ್ಯಗಳನ್ನು ನಾವು ಒದಗಿಸಬಹುದು.

12 45 ಪಿ.ಎಂ

ಶ್ರೀ ಕೆ. ಲಕ್ಕಣ್ಣ: ಮಾನ್ಯ ಅಧ್ಯಕ್ಷರೇ, ನಾವು ಕೇಳುವುದಿಲ್ಲ. ಒತ್ತಾಯ ಮಾಡಬೇಕು. ಇದು ಕೃಷ್ಣದೇವರಾಯನ ಕಾಲದಿಂದ, ಸಾವಿರಾರು ವರ್ಷಗಳಿಂದ, ಬಂದಿರತಕ್ಕ ನಮ್ಮ ಹಕ್ಕು. ಮೊದಲನೇ ಪೂಜೆ ನಮ್ಮ ಕರ್ನಾಟಕದಿಂದ ಆಗಬೇಕು, ಇದು ಮಹಾರಾಜರ ಕಾಲದಲ್ಲೇ ತೀರ್ಮಾನ ಆಗಿದೆ. ಆದರೆ, ಇದಕ್ಕೆ ಹಕ್ಕುಪತ್ರ ಇಲ್ಲವೆಂದು ಒಬ್ಬ ಅಧಿಕಾರ ರಿಜೆಕ್ಟ್ ಮಾಡುವುದಾದರೆ, ತುಂಬಾ ಅವಮಾನ. ಈ ದಿಸೆಯಲ್ಲಿ ಮಾನ್ಯಮಂತ್ರಿಗಳು ಖುದ್ದಾಗಿ ಹೋಗಿ, ನಕ್ಷೆಯನ್ನು ಮಂಜೂರ್ಮಾಡಿಸಿಕೊಟ್ಟು ಕಟ್ಟಡಗಳನ್ನು ಬೇಗ ಕಟ್ಟತಕ್ಕ ವ್ಯವಸ್ಥೆ ಮಾಡಬೇಕೆಂದು ಈ ಸಭೆಯ ಮುಖಾಂತರ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ: ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿರುವುದು ನಿಜವಾಗಿದೆ. ಸರ್ಕಾರ ಈ ಬಗ್ಗೆ ಸರ್ವಪ್ರಯತ್ನವನ್ನು ಮಾಡುತ್ತಿದೆ, ಒತ್ತಾಯವನ್ನೂ ಹಾಕುತ್ತಿದೆ. ಆಂಧ್ರ ಮುಖ್ಯಮಂತ್ರಿಯವರಿಗೂ ತಿಳಿಸಿ, ಅವರಿಂದಲೂ ಕೂಡ ಒತ್ತಾಯವನ್ನು ಹಾಕಿಸಿ, ಆ ಸಮಿತಿಯಿಂದ ಆದಷ್ಟು ಬೇಗ ಅನುಮತಿ ದೊರೆಯುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಮಂಗಳೂರಿನ ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳ ಕಛೇರಿ ಕಟ್ಟಡ ನಿರ್ಮಾಣ ಕುರಿತು

501 - ಶ್ರೀ ವಿಜಯಕುಮಾರ ಶೆಟ್ಟಿ (ಸುರತ್ಕಲ್): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರಿನ ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳ ನೂತನ ಕಟ್ಟಡ ನಿರ್ಮಾಣ ಕಾರ್ಯವನ್ನು ಎಂದು ಆರಂಭಿಸಲಾಗಿದೆ?

ಆ) ಆ ಕಟ್ಟಡ ನಿರ್ಮಾಣದ ಅಂದಾಜು ವೆಚ್ಚವೆಷ್ಟು?

ಇ) ಆ ಕಟ್ಟಡವನ್ನು ಯಾವಾಗ ಸಂಪೂರ್ಣಗೊಳಿಸಲಾಗುವುದು?

ಈ) ಆ ಕಟ್ಟಡ ನಿರ್ಮಾಣದ ವಿಳಂಬಕ್ಕೆ ಕಾರಣಗಳೇನು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಮಂತ್ರಿಗಳು):

ಅ) ಮೊದಲನೇ ಹಂತದ ಕಾಮಗಾರಿಯನ್ನು ದಿನಾಂಕ 20-9-85ರಲ್ಲಿ ಆರಂಭಿಸಲಾಗಿರುತ್ತದೆ.

ಆ) ಮೂರು ಹಂತಕ್ಕೆ ಮಂಜೂರಾದ ಅಂದಾಜು ರೂ. 222.00 ಲಕ್ಷ ರೂ.ಗಳು (ಮೊದಲನೇ ಹಂತದ ಅಂದಾಜು ಮೊತ್ತ 82.60 ಲಕ್ಷ ರೂ.ಗಳು)

ಇ) ಮೊದಲನೇ ಹಂತದ ಕಾಮಗಾರಿ ಈಗ ಪೂರ್ಣಗೊಂಡಿರುತ್ತದೆ. ಉಳಿದ ಎರಡನೇ ಹಂತದ ಕಾಮಗಾರಿಗೆ ಗುತ್ತಿಗೆಯನ್ನು ಕರೆಯಲು ಕ್ರಮ ಕೈಗೊಳ್ಳಲಾಗುತ್ತಿದೆ.

ಈ) ಕಟ್ಟಡದ ತಳಪಾಯದಲ್ಲಿ ಮೆದು ಮಣ್ಣು ದೊರಕಿ ವಿನ್ಯಾಸ ಬದಲಾವಣೆ ಮಾಡಿ, ಪೈಲ್ ಫೌಂಡೇಶನ್ ಅಳವಡಿಸಲು ತೆಗೆದುಕೊಂಡ ಸಮಯದಿಂದ ಕೆಲಸ ವಿಳಂಬವಾಗಿದೆ.

ಶ್ರೀ ವಿಜಯಕುಮಾರ ಶೆಟ್ಟಿ: ಸನ್ಮಾನ್ಯ ಅಧ್ಯಕ್ಷರೇ, ಮಂಗಳೂರಿನ ಜಿಲ್ಲಾಧಿಕಾರಿಗಳ ಕಚೇರಿ ಕಟ್ಟಡದ ಕೆಲಸ 1985ರಲ್ಲಿ ಪ್ರಾರಂಭವಾಗಿದೆ. ಅದಕ್ಕೆ ಇಷ್ಟರಮಟ್ಟಿಗೆ 82 ಲಕ್ಷ ಮಾತ್ರ ಸ್ಯಾಂಕ್ಷನ್ಮಾಡಿ, ಈ 10 ವರ್ಷದಲ್ಲಿ 82 ಲಕ್ಷದ ಕಾಮಗಾರಿ ಆಗಿದೆ. ಇದರ ಒಟ್ಟು ಅಂದಾಜುವೆಚ್ಚ 222 ಲಕ್ಷ ಎಂದು ಹಾಕಿದ್ದಾರೆ. ಬಹುಶಃ ಬಾಕಿ 141 ಲಕ್ಷ ಖರ್ಚು ಮಾಡುವುದಕ್ಕೆ ಮತ್ತು ಈ ವ್ಯವಸ್ಥೆ ಮಾಡುವುದಕ್ಕೆ ಎಷ್ಟು ಸಮಯ ಬೇಕೋ ಎಂದು ಗೊತ್ತಾಗುವುದಿಲ್ಲ. ಅಷ್ಟರಲ್ಲಿ ಈಗಿರತಕ್ಕ ದರಗಳೂ ಕೂಡ ಜಾಸ್ತಿಯಾಗುತ್ತವೆ. ಆದ್ದರಿಂದ, ಈ ಕಾಮಗಾರಿಯನ್ನು ಆದಷ್ಟು ಬೇಗ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಅದೇ ಪ್ರಕಾರ, ನಮ್ಮ ಜಿಲ್ಲೆಯಲ್ಲಿ, ಬೇರೆ ಬೇರೆ ಕಡೆಗಳಲ್ಲಿ ಹೆಚ್ಚಿಗೆ ಬಾಡಿಗೆ ಕೊಡತಕ್ಕ ಸರ್ಕಾರಿ ಕಛೇರಿಗಳೂ ಇವೆ. ರೆಂಟ್ ಕಂಟ್ರೋಲ್ ಮುಖಾಂತರ ಮನೆಗಳನ್ನು ಏನು ಕೊಡುತ್ತಿದ್ದಾರೆ, ಆ ಮನೆಗಳನ್ನು ಸರ್ಕಾರಿ ಕಛೇರಿಗಳಾಗಿ ಮಾಡಲು ಅವಕಾಶ ಕೊಡಬೇಕೆಂದು ಸನ್ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್: ಮಾನ್ಯ ಅಧ್ಯಕ್ಷರೇ, ಈಗ ಸಾಕಷ್ಟು ವಿಳಂಬವಾಗಿದೆ. ಆದರೆ, ನಿನ್ನೆ ಮೊದಲನೇ ಹಂತದ ಕಟ್ಟಡದ ಉದ್ಘಾಟನೆ ಆಗಬೇಕಾಗಿತ್ತು, ಅದರ ಪ್ರಾರಂಭೋತ್ಸವ ಆಗಬೇಕಾಗಿತ್ತು. ಇದಕ್ಕೆ ಕಾರ್ಯಕ್ರಮ ಹಮ್ಮಿಕೊಂಡಿದ್ದರು, ಮಾನ್ಯ ಮುಖ್ಯಮಂತ್ರಿಗಳೂ ಹೇಳಿದ್ದರು. ಆದರೆ, ಕಾರಣಾಂತರದಿಂದ ಅದು ಮುಂದೆ ಹೋಗಿದೆ. ಈಗ ಮೊದಲನೇ ಹಂತದ ಕಟ್ಟಡ ಆಗಿದೆ. ಇದು ಪ್ರಾರಂಭವಾದ ಮೇಲೆ, ಅಲ್ಲಿ ಕೆಲವು ಕಛೇರಿಗಳನ್ನು ಹಾಕಿ, ಮುಂದೆ ಶೀಘ್ರವಾಗಿ ಕೆಲಸ ಮುಗಿಸತಕ್ಕಂತಾದ್ದು ನಡೆಯುತ್ತದೆ.

ಶ್ರೀ ವಿಜಯಕುಮಾರ ಶೆಟ್ಟಿ: ರೆಂಟ್ ಕಂಟ್ರೋಲಿನಲ್ಲಿ ಕೆಲವು ಮನೆಗಳು ಇವೆ. ಅವುಗಳನ್ನು ಸರ್ಕಾರಿ ಕಛೇರಿಗಳಾಗಿ ಮಾಡುವುದು ಒಳ್ಳೆಯದು. ಬೇರೆ ಕಡೆ ಬಾಡಿಗೆ ಕೊಡುವುದರಿಂದ, ಸರ್ಕಾರಕ್ಕೆ ಸಿಕ್ಕಾಪಟ್ಟೆ ಬಾಡಿಗೆಗಾಗಿ ಹಣವೂ ಹೋಗುತ್ತಿದೆ.

ಶ್ರೀ ಕೆ.ಹೆಚ್. ರಂಗನಾಥ್: ಮಾನ್ಯ ಸದಸ್ಯರ ಸಲಹೆಯನ್ನು ಗಮನದಲ್ಲಿಟ್ಟುಕೊಳ್ಳಲಾಗುವುದು.

ಬೆಂಗಳೂರು ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿಗೆ ಸಾಕಷ್ಟು ವಿದ್ಯುತ್ ಸರಬರಾಜು ಮಾಡುವ ಬಗ್ಗೆ

804 - ಶ್ರೀ ಎ.ಕೆ. ಅನಂತ ಕೃಷ್ಣ (ಶಿವಾಜಿನಗರ): ಮಾನ್ಯ ರಾಜ್ಯ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ವಿಭಾಗಕ್ಕೆ ಸೇರಿದ ಕಾವೇರಿ ಯೋಜನೆಯ ಮೂಲದಲ್ಲಿ ಮತ್ತು ಕೆಲವು ಹಂತಗಳಲ್ಲಿ ಇರುವ ನೀರು ಸರಬರಾಜು ಪಂಪ್ಗಳಿಗೆ ಸರಿಯಾಗಿ ವಿದ್ಯುಚ್ಛಕ್ತಿ ಒದಗಿಸದೇ ಇರುವುದರಿಂದ ಬೆಂಗಳೂರಿನ ನಾಗರೀಕರು ಸರಿಯಾಗಿ ನೀರು ಪಡೆಯದೇ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ನೀರನ್ನು ಪಂಪ್ ಮಾಡಲು ಸರಿಯಾದ ವಿದ್ಯುತ್ತನ್ನು ಒದಗಿಸಲು ಬೆಂಗಳೂರಿನ ನಾಗರಿಕರಿಗೆ ಅದರಲ್ಲೂ ಬೇಸಿಗೆ ಮತ್ತು ಹಬ್ಬಗಳ ಸಮಯಗಳಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಕೆ.ಎ. ನಿಸಾರ್ ಅಹಮದ್ (ಇಂಧನ ರಾಜ್ಯ ಸಚಿವರು): ಇವರ ಪರವಾಗಿ ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):

ಅ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿಗೆ ಸೇರಿದ ನೀರು ಸರಬರಾಜು ಮಾಡುವ ಸ್ಥಾವರಗಳಿಗೆ ಆದ್ಯತೆ ಮೇರೆಗೆ ಅವರ ಬೇಡಿಕೆಗೆ ತಕ್ಕಂತೆ ವಿದ್ಯುತ್ ಸರಬರಾಜನ್ನು ಮಾಡುತ್ತಿದೆ. ಆದಾಗ್ಯೂ ಕೆಲವು ಸಂದರ್ಭಗಳಲ್ಲಿ ಪೂರ್ಣ ವ್ಯವಸ್ಥೆಯಲ್ಲಿಯೇ ಕಡಿಮೆ ಓಲ್ಟೇಜ್ ಪರಿಸ್ಥಿತಿ ಉಂಟಾದಾಗ ನೀರು ಪಂಪ್ ಮಾಡುವ ಸ್ಥಾವರುಗಳಿಗೆ ಸ್ವಲ್ಪ ಮಟ್ಟಿಗೆ ತೊಂದರೆಯಾಗಿದೆ.

ಆ) ಮಂಡಳಿಯು ಕೇಂದ್ರ ವಿದ್ಯುತ್ ಸ್ಥಾವರಗಳಿಂದ ಸರಿಯಾದ ಪ್ರಮಾಣದ ಓಲ್ಟೇಜನ್ನು ಕೊಡುವಂತೆ ಪವರ್ ಗ್ರಿಡ್ ಕಾರ್ಪೋರೇಷನ್ನು ಸತತವಾಗಿ ಒತ್ತಾಯಿಸುತ್ತಿದೆ. ಈಗ ಓಲ್ಟೇಜ್ ಪರಿಸ್ಥಿತಿಯು ಉತ್ತಮಗೊಂಡಿದ್ದು ನೀರು ಪಂಪ್ ಮಾಡಲು ಅಷ್ಟು ತೊಂದರೆಯಾಗುತ್ತಿಲ್ಲ.

ಶ್ರೀ ಎ.ಕೆ. ಅನಂತಕೃಷ್ಣ: ಮಾನ್ಯ ಅಧ್ಯಕ್ಷರೇ, ಇದು ಬಹಳ ಗಂಭೀರವಾದ ಪ್ರಶ್ನೆ. ಇದು ಬೆಂಗಳೂರು ನಗರದ 50 ಲಕ್ಷ ಜನಗಳ ಕುಡಿಯುವ ನೀರಿನ ವಿಷಯವಾಗಿದೆ. ಆದರೂ ಇದಕ್ಕೆ ಸಾಧಾರಣವಾಗಿ ಕೊಡುವಂಥ ಉತ್ತರವನ್ನು ಕೊಟ್ಟಿದ್ದಾರೆ. ನಾನು ಮಾನ್ಯ ಉಪ ಮುಖ್ಯಮಂತ್ರಿಗಳಲ್ಲಿ ಕೇಳಬಯಸುತ್ತೇನೆ. ಜಲಮಂಡಳಿಯ ಅಧ್ಯಕ್ಷರು ಮತ್ತು ವಿದ್ಯುಚ್ಛಕ್ತಿ ಮಂಡಳಿಯ ಅಧ್ಯಕ್ಷರು ಇಬ್ಬರೂ ನಾನ್ ಟೆಕ್ನೋಕ್ರಾಟ್ಸ್. ಅವರ ಜೊತೆಯಲ್ಲಿ ಕೆಲಸ ಮಾಡುವಂಥ ಟೆಕ್ನೋಕ್ರಾಟ್ಸ್ ಏನಿದ್ದಾರೆ, ಇವರಲ್ಲಿ ಯಾವುದೇ ರೀತಿಯ ಹೊಂದಾಣಿಕೆ ಇಲ್ಲದಿರುವ ಕಾರಣದಿಂದ ಮೂಲಭೂತವಾಗಿ ತೊಂದರೆಯಾಗುತ್ತಿದೆ. ನಾನು ಸಾಧಾರಣವಾಗಿ ಅವರಲ್ಲಿ ಮಾತನಾಡಿದಾಗಲೂ ಇದೇ ಅರ್ಥ ಬರುತ್ತಿದೆ ಮತ್ತು ಜನರಲ್ಲಿಯೂ ಕೂಡ ಇದೇ ಅರ್ಥ ಬರುತ್ತಿದೆ. ಈ ವಿಷಯವನ್ನು ಮಾನ್ಯ ಮಂತ್ರಿಗಳು ಗಮನಕ್ಕೆ ತೆಗೆದುಕೊಂಡಿದ್ದಾರೆಯೇ ಮತ್ತು ಇದರ ಬಗ್ಗೆ ಏನು ಹೇಳುತ್ತಾರೆ?

ಶ್ರೀ ಎಸ್.ಎಂ. ಕೃಷ್ಣ: ಮಾನ್ಯ ಅಧ್ಯಕ್ಷರೇ, ಜಲಮಂಡಳಿಯ ಅಧ್ಯಕ್ಷರು ಕೆಲವು ದಿವಸಗಳ ಹಿಂದೆ, ನನ್ನ ಕಡೆಗೆ ಬಂದು, ತೊರೆಕಾಡನಹಳ್ಳಿಯಲ್ಲಿ ವೋಲ್ಟೇಜ್ ಕಡಿಮೆ ಇರುವುದರಿಂದ, ಯಾವ ಪ್ರಮಾಣದಲ್ಲಿ ನೀರು ಬೆಂಗಳೂರು ನಗರಕ್ಕೆ ದೊರೆಯಬೇಕಾಗಿತ್ತೋ, ಅದು ದೊರೆಯುವುದಕ್ಕೆ ಸಾಧ್ಯವಾಗುತ್ತಿಲ್ಲವೆಂದು ಹೇಳಿದರು. ಆ ದಿವಸವೇ ನಾನು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಟೆಕ್ನಿಕಲ್ ಮೆಂಬರ್ ಒಬ್ಬರಿಗೆ ಸೂಚನೆ ಮಾಡಿ, ಇದರ ಬಗ್ಗೆ ತುರ್ತು ಗಮನವನ್ನು ಹರಿಸಬೇಕು ಮತ್ತು ಸಂಬಂಧಪಟ್ಟಂಥ ಮಾನ್ಯ ಸದಸ್ಯರು ಮತ್ತಿತರ ಅಧಿಕಾರಿಗಳ ಸಭೆಯನ್ನು ಸೇರಿಸಿ, ಅಲ್ಲಿ ಇದರ ಚರ್ಚೆಯಾಗಬೇಕೆಂದು ಹೇಳಿ, ನಮ್ಮ ಇಂಧನ ಇಲಾಖೆಯ ಕಾರ್ಯದರ್ಶಿಯವರಿಗೂ ಸೂಚನೆ ಕೊಟ್ಟಿದ್ದೆನು. ಅದರ ಪ್ರಕಾರ ಒಂದು ಸಭೆಯನ್ನು ಮಾಡಿ, ತೊರೆಕಾಡನಹಳ್ಳಿಯಿಂದ ವಾಟರ್ ಪಂಪ್ ಮಾಡಬೇಕು, ಅದಕ್ಕೆ ಮುಕ್ತ ವಿದ್ಯುಚ್ಛಕ್ತಿ ದೊರಕುವಂಥ ರೀತಿಯಲ್ಲಿ ಏರ್ಪಾಡು ಮಾಡಿದ್ದೇವೆಂದು ನನಗೆ ವರದಿಯನ್ನು ಕೊಟ್ಟಿದ್ದಾರೆ. ಎರಡನೇ ಪ್ರಶ್ನೆ ಈ ನಾನ್ ಟೆಕ್ನೋಕ್ರಾಟ್ಸ್ ಮತ್ತು ಟೆಕ್ನೋಕ್ರಾಟ್ಸ್ ವಿಚಾರ. ಕಳೆದ ಒಂದು ವರ್ಷದ ನನ್ನ ಅನುಭವದಲ್ಲಿ, ನನಗೂ ಇದೇ ರೀತಿಯ ಅನುಮಾನ ಬರುವುದಕ್ಕೆ ಪ್ರಾರಂಭವಾಗಿದೆ. ಈ ಅನುಮಾನವನ್ನು ಪರಿಹರಿಸುವುದಕ್ಕೆ ಇನ್ನು 15-20 ದಿವಸಗಳಲ್ಲಿ ನನ್ನ ಗಮನವನ್ನು ಹರಿಸುತ್ತೇನೆ.

ಶ್ರೀ ಎ.ಕೆ. ಅನಂತಕೃಷ್ಣ: ಮಾನ್ಯ ಅಧ್ಯಕ್ಷರೇ, ಮಾನ್ಯ ಉಪ ಮುಖ್ಯಮಂತ್ರಿಗಳು ನನ್ನ ಅಭಿಪ್ರಾಯಕ್ಕೆ ಸಹಮತವನ್ನು ಕೊಟ್ಟಿರುವುದಕ್ಕಾಗಿ ಅವರಿಗೆ ವಂದಿಸುತ್ತೇನೆ. ನಾನು ಈಗಾಗಲೇ ಹೇಳಿದಹಾಗೆ ಬೆಂಗಳೂರು ನಗರದ 50 ಲಕ್ಷ ಜನಸಂಖ್ಯೆಯ ಕುಡಿಯುವ ನೀರಿನ ಪ್ರಶ್ನೆ ಇದು. ಮಾನ್ಯ ಮಂತ್ರಿಗಳು ಹೇಳಿದ ಹಾಗೆ ಆ ಸಭೆಗೆ ನಾನೂ

ಕೂಡ ಹೋಗಿದ್ದೆ. ನನ್ನ ಪ್ರಾರ್ಥನೆಯ ಆಧಾರದ ಮೇಲೆಯೇ ಆ ಸಭೆಯನ್ನೂ ಕೂಡ ಏರ್ಪಾಡು ಮಾಡಿದರು. ಆ ಸಭೆಯಲ್ಲಿ ನಾನು ಅರ್ಥಮಾಡಿಕೊಂಡಿದ್ದು, ಟೆಕ್ನೋಕ್ರಾಟ್ಸ್ ಮತ್ತು ನಾನ್-ಟೆಕ್ನೋಕ್ರಾಟ್ಸ್‌ಗಳಲ್ಲಿ ಯಾವುದೇ ರೀತಿಯ ಹೊಂದಾಣಿಕೆ ಇಲ್ಲದೇ ಇರುವುದು. ಸರಿಯಾಗಿ ಒಬ್ಬರನ್ನೊಬ್ಬರು ಅರ್ಥಮಾಡಿಕೊಳ್ಳದೇ ಇರುವಂತಾದ್ದು, ಒಬ್ಬೊಬ್ಬರೂ ಅವರವರ ಅಭಿಪ್ರಾಯಗಳೇ ಸರಿ, ಅವರು ನಡೆದುಕೊಳ್ಳುವುದೇ ಸರಿ ಎನ್ನುವ ಮಟ್ಟಿಗೆ ಅಲ್ಲಿನ ವಾತಾವರಣ ಇದೆ. ಸಾಧಾರಣವಾಗಿ ಯಾವುದೇ ಒಂದು ಮಂಡಳಿಯ, ಮುಖ್ಯಾಧಿಕಾರಿ ಯಾರಿದ್ದಾರೆ, ಅದೂ ಆಡಳಿತಕ್ಕೆ ಸಂಬಂಧಪಟ್ಟ ಜಾಗದಲ್ಲಿ, ಆಡಳಿತಾಧಿಕಾರಿಯಾಗಿ, ಪ್ರೊಫೆಷನಲ್ ಆಗಿರುವುದು ಸರಿ. ಆದರೆ, ಟೆಕ್ನಿಕಲ್ ಆಗಿ ಮ್ಯಾನೇಜ್ ಮಾಡುವಂಥ ಜಾಗದಲ್ಲಿ, ನಾನ್ ಟೆಕ್ನಿಕಲ್ ಇರುವ ಕಾರಣಕ್ಕಾಗಿ ಈ ರೀತಿಯಾಗುತ್ತದೆಂದು ತಮ್ಮಲ್ಲಿ ಹೇಳುತ್ತೇನೆ. ನನಗೆ ತಿಳಿದುಬಂದಹಾಗೆ, ಈ ಗ್ರಿಡ್ಡಿಂದ ಬೇಕಾದಷ್ಟು ಸಹಾಯ ಬರದೇ ಇರುವುದಕ್ಕೆ ಕಾರಣ, ಅಲ್ಲಿನ ಟೆಕ್ನೋಕ್ರಾಟ್ಸ್ ಜೊತೆಯಲ್ಲಿ ನಮ್ಮ ಮಂಡಳಿಯ ಮುಖ್ಯಾಧಿಕಾರಿಗಳು ಮಾತುಕತೆ ನಡೆಸಿ, ಒಂದು ತೀರ್ಮಾನಕ್ಕೆ ಬರದೇ ಇರುವುದು ಒಂದು ಕಾರಣ. ಆದ್ದರಿಂದ ಮಾನ್ಯ ಉಪ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ, ತಾವು ಆಡಳಿತದಲ್ಲಿ ಯಾವ ರೀತಿಯ ಬದಲಾವಣೆ ಮಾಡಿಕೊಳ್ಳಬೇಕೋ ಮಾಡಿಕೊಳ್ಳಿ. ಟೆಕ್ನೋಕ್ರಾಟ್ಸ್ ಮತ್ತು ನಾನ್ ಟೆಕ್ನೋಕ್ರಾಟ್ಸ್ ಮಧ್ಯೆ ಏನು ವಿಪರ್ಯಾಸ ಇದೆ ಅದನ್ನೂ ಸರಿಮಾಡಿಕೊಳ್ಳಿ. ಆದರೆ, 50 ಲಕ್ಷ ಜನಸಂಖ್ಯೆಗೆ ದಿನಂಪ್ರತಿ ಏನು ನೀರು ಸರಬರಾಜು ಆಗಬೇಕಾಗಿದೆ. ಅದಕ್ಕಾಗಿ ಸಹಸ್ರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಅಲ್ಲಿ ತೊಂದರೆಯಾಗುವುದು ಬೇಡ. ಅದರಲ್ಲಿಯೂ ನಾವೀಗ ಬೇಸಿಗೆ ಕಾಲದಲ್ಲಿದ್ದೇವೆ. ನೀರು ಇಲ್ಲದೇ ಹೋದರೆ ಬಹಳ ತೊಂದರೆಯಾಗುತ್ತದೆ. ಜೊತೆಗೆ ಕಾವೇರಿ 4ನೇ ಹಂತದ ಯೋಜನೆಯನ್ನೂ ತೆಗೆದುಕೊಳ್ಳುತ್ತಾ ಇದ್ದೇವೆ. ಇಂತಹ ಸಂದರ್ಭದಲ್ಲಿ ವಿದ್ಯುಚ್ಛಕ್ತಿ ಮಂಡಳಿಯಿಂದ ನೇರವಾಗಿ ಎಷ್ಟು ವೋಲ್ಟೇಜ್ನಲ್ಲಿ, ಎಷ್ಟು ಗಾತ್ರದಲ್ಲಿ ಪವರ್ ಸಪ್ಲೈ ಆಗಬೇಕಾಗಿದೆ ಅದನ್ನು ಕೊಡುವಂಥ ಕೆಲಸವನ್ನು ಮಾಡಬೇಕು. ತನ್ಮೂಲಕ ಬೆಂಗಳೂರು ನಗರದ ನಾಗರೀಕರಿಗೆ ಹಾಗೂ ಸುತ್ತಮುತ್ತಲಿನ ನಾಗರೀಕರಿಗೆ ನೀರಿನ ತೊಂದರೆ ಇಲ್ಲದಂತೆ ಮಾಡುತ್ತೀರಾ ಎಂದು ಕೇಳಬಯಸುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ: ನನಗೆ ಬಂದಿರತಕ್ಕ ವರದಿಯ ಪ್ರಕಾರ, ಮಾನ್ಯ ಅನಂತಕೃಷ್ಣ ಅವರು ಯಾವಾಗ ಹೋಗಿ ಸಭೆಯಲ್ಲಿ ಭಾಗವಹಿಸಿದರೋ, ಅದಾದಮೇಲೆ ಸ್ವಲ್ಪ ಸುಧಾರಣೆಯಾಗಿದೆ ಎಂದು ತಿಳಿದುಬಂದಿದೆ. ಇನ್ನೂ ಹೆಚ್ಚು ಸುಧಾರಣೆಯಾಗಬೇಕೆಂದು ಅವರು ಬಯಸುವುದಾದರೆ ಟೆಕ್ನಿಕಲ್ ಮೆಂಬರ್ಸ್ ತೊರೆಕಾಡನಹಳ್ಳಿಗೆ ಹೋಗಿ, ಅಲ್ಲಿ ಏನು ತೊಂದರೆಯಾಗಿದೆ, ಅಲ್ಲಿ ಟ್ರಾನ್ಸ್ಫಾರ್ಮರ್ಸ್ ಬೇಕೋ, ಬೂಸ್ಟರ್ಸ್ ಬೇಕೋ ಅಥವಾ ಕೆಪಾಸಿಟರ್ಸ್ ಬೇಕೋ ಎಂಬುದನ್ನು ತಿಳಿದು, ಯುದ್ಧೋಪಾದಿಯಲ್ಲಿ ಕೆಲಸ ಮಾಡಬೇಕೆಂದು ಇವತ್ತೇ ನಿರ್ದೇಶನ ಕೊಡುತ್ತೇನೆ.

ಶ್ರೀ ಎಂ. ನಾರಾಯಣ ಸ್ವಾಮಿ: ಮಾನ್ಯ ಅಧ್ಯಕ್ಷರೇ, ಸರ್ಕಾರ ಸದನದ ಸಮಿತಿಗೆ ಒಪ್ಪಿಕೊಳ್ಳಬೇಕು, ನ್ಯಾಯಾಂಗ ತನಿಖೆಗೆ ಒಪ್ಪಿಕೊಳ್ಳಬೇಕು. ಸರ್ಕಾರ ಅನೇಕ ಸಾರಿ ತಾಲ್ಲೂಕು ಪಂಚಾಯ್ತಿ ಸಮಿತಿ, ಜಿಲ್ಲಾ ಪಂಚಾಯ್ತಿ ಸಮಿತಿ.......

ಅಧ್ಯಕ್ಷರು: ನೀವೇನು ಕೇಳುತ್ತಿದ್ದೀರಿ, ಅದು ಈ ಪ್ರಶ್ನೆಗೆ ಸಂಬಂಧ ಇಲ್ಲ. ಈಗ ಪ್ರಶ್ನೋತ್ತರ ಕಾಲ ನಡೆದಿದೆ.....

ಶ್ರೀ ಎಂ. ನಾರಾಯಣ ಸ್ವಾಮಿ: ನ್ಯಾಯಾಂಗ ತನಿಖೆಯಾಗಲೇಬೇಕು, ಇದಕ್ಕೆ ಸರ್ಕಾರ ಒಪ್ಪಿಕೊಳ್ಳಲೇಬೇಕು.

(ಶ್ರೀ ಎಂ. ನಾರಾಯಣ ಸ್ವಾಮಿಯವರು, ಅಧ್ಯಕ್ಷರ ಮುಂಭಾಗದ ಆವರಣದಲ್ಲಿ ಧರಣಿ ಕುಳಿತರು)

ಉಡುತೊರೆ ಜಲಾಶಯ ಯೋಜನೆ ಕುರಿತು

732 - ಶ್ರೀ ಜಿ. ರಾಜುಗೌಡ (ಹನೂರು) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಉಡುತೊರೆ ಜಲಾಶಯ ಯಾವಾಗ ಪ್ರಾರಂಭವಾಯಿತು ?

ಆ) ಈ ಯೋಜನೆ ಯಾವಾಗ ಮುಗಿಯ ಬೇಕಿತ್ತು ?

ಇ) ಯೋಜನೆ ಪ್ರಾರಂಭದಲ್ಲಿ ಇದರ ವೆಚ್ಚ ಎಷ್ಟು ಎಂದು ಅಂದಾಜು ಮಾಡಲಾಗಿದ್ದಿತು ?

ಈ) ಇದುವರೆವಿಗೂ ಆಗಿರುವ ವೆಚ್ಚ ಎಷ್ಟು ?

ಉ) ಅದು ಮುಗಿಯಬೇಕಾದರೆ ಇನ್ನೂ ಎಷ್ಟು ಹಣ ಬೇಕಾಗುವುದು ಮತ್ತು ಯಾವಾಗ ಮುಗಿಸಲಾಗುವುದು ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು) :

ಅ) ಜನವರಿ 1990ರಲ್ಲಿ ಪ್ರಾರಂಭವಾಯಿತು

ಆ) 1996 ರಲ್ಲಿ ಮುಗಿಯಬೇಕಾಗಿದೆ.

ಇ) ರೂ. 3230 ಲಕ್ಷಗಳು

ಈ) ರೂ. 3688.39 ಲಕ್ಷಗಳು (ಫೆಬ್ರವರಿ 1994ರ ಅಂತ್ಯದವರೆವಿಗೆ)

ಉ) ಇಂದಿನ ದರಗಳ ಪ್ರಕಾರ ಪೂರೈಸಲು ಬೇಕಾಗುವ ಬಾಕಿ ಹಣ 21.18 ಕೋಟಿ ರೂ.ಗಳು. ಈ ಯೋಜನೆಯನ್ನು 1997ರಲ್ಲಿ ಪೂರ್ಣಗೊಳಿಸುವ ಉದ್ದೇಶವಿದೆ.

ಶ್ರೀ ಜಿ. ರಾಜುಗೌಡ : ಮಾನ್ಯ ಅಧ್ಯಕ್ಷರೇ, ಈ ಉಡುತೊರೆ ಯೋಜನೆಯು ಸಕಾಲದಲ್ಲಿ ಮುಗಿದಿದ್ದರೆ ಎಷ್ಟು ವೆಚ್ಚವಾಗುತ್ತಿತ್ತು, ಆಗ ಒಂದು ಎಕರೆ ನೀರಾವರಿಗೆ ಎಷ್ಟು ವೆಚ್ಚವಾಗುತ್ತಿತ್ತು, ಈಗ ಎಷ್ಟಾಗಿದೆ ಎಂದು ತಿಳಿಸಬೇಕು, ಹಾಗೂ ಇದು ಪ್ರಾರಂಭವಾಗಿ ಬಹಳ ವರ್ಷಗಳಾಗಿವೆ ಇದನ್ನು ಯಾವಾಗ ಮುಗಿಸುತ್ತೀರಿ. ಮೊದಲಿನ ಅಂದಾಜುವೆಚ್ಚ ಎಷ್ಟು, ಈಗಿನ ಅಂದಾಜುವೆಚ್ಚ ಎಷ್ಟು ಎಂಬುದನ್ನು ದಯಮಾಡಿ ತಿಳಿಸುತ್ತೀರಾ ?

ಶ್ರೀ ಎಸ್.ಎಂ. ಕೃಷ್ಣ: ಇದು ವಿಳಂಬವಾಗಿ ನಡೆದಿರತಕ್ಕಂಥಾ ಯೋಜನೆ 1978ರಲ್ಲಿ ಇದಕ್ಕೆ ಆಡಳಿತಾತ್ಮಕ ಮಂಜೂರಾತಿ ನೀಡಲಾಯಿತು. ಸುಮಾರು 36 ಕೋಟಿ ರೂಪಾಯಿಗಳು 1530 ಮೀಟರ್ ಉದ್ದದ ಮಣ್ಣಿನ ಏರಿ ಕೆಲಸವೂ ಪ್ರಗತಿಯಲ್ಲಿದ್ದು ಸ್ಪಿಲ್ವೇ ಮತ್ತು ಸಂಬಂಧಪಟ್ಟ ಕೆಲಸಗಳು ಆಗಬೇಕಾಗಿದೆ. ನಾಲೆ ಕೆಲಸಗಳನ್ನು ಕೂಡ ಪ್ರಾರಂಭಿಸಬೇಕಾಗಿದೆ. ಇದುವರೆಗೂ ಕೂಡ 26 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇನೆ. ಇದನ್ನು ಸಂಪೂರ್ಣಗೊಳಿಸಬೇಕಾಗಿದ್ದರೆ ಸುಮಾರು ಇನ್ನೂ 21 ಕೋಟಿ ರೂಪಾಯಿಗಳು ಬೇಕಾಗುತ್ತದೆ. ನಮ್ಮ ಅಂದಾಜಿನ ಪ್ರಕಾರ 1997ನೇ ಇಸವಿಯಲ್ಲಿ ಇದನ್ನು ಪೂರ್ಣಗೊಳಿಸಬಹುದು ಎನ್ನತಕ್ಕಂಥ ಮಹತ್ವಾಕಾಂಕ್ಷೆ ಇದೆ.

ಶ್ರೀ ಜಿ. ರಾಜುಗೌಡ : ಮಾನ್ಯ ಅಧ್ಯಕ್ಷರೇ ಈ ಯೋಜನೆ ಪ್ರಾರಂಭವಾಗಿದ್ದು 1978ರಲ್ಲಿ ತಾವು ತಮ್ಮ ಮೊದಲನೆ ಯೋಜನೆಯ ವರದಿ ಪ್ರಕಾರ ಇದನ್ನು 5 ವರ್ಷಗಳಲ್ಲಿ ಮುಗಿಸಬೇಕು ಎನ್ನತಕ್ಕಂಥಾದ್ದು ಇತ್ತು. ಇದು ಪ್ರಾರಂಭವಾಗಿ ಸುಮಾರು 15 ವರ್ಷಗಳು ಆಗಿದೆ. ಅವಾಗ ಬೇಕಾಗಿದ್ದು ಸುಮಾರು 15 ಕೋಟಿ ಈಗ 100 ಕೋಟಿ ರೂಪಾಯಿಗಳವರೆಗೆ ಆಗುತ್ತದೆಂದು ತಾವು ಹೇಳುತ್ತೀರಿ. ಜೊತೆಗೆ ಯಾವಾಗ ರೈತನಿಗೆ ನೀರು ಕೊಡುತ್ತೀರಿ ಎನ್ನತಕ್ಕಂಥಾದ್ದು. ತಾವು ಇನ್ನೂ ಕಾಲುವೆ ಕೆಲಸವೇ

ಪ್ರಾರಂಭ ಮಾಡಿಲ್ಲ, ಬಹಳ ಡಿಲೇ ಆಗುತ್ತಿದೆ. ಬಹುಶಃ ಈ ಯೋಜನೆ ಬಿಟ್ಟರೆ ಬೇರೆ ಯಾವ ಯೋಜನೆಯೂ ಆ ತಾಲ್ಲೂಕಿನಲ್ಲಿ ಇಲ್ಲ. ಈ ಯೋಜನೆಯನ್ನು ಸಕಾಲದಲ್ಲಿ ಮುಗಿಸಿದ್ದರೆ ಒಂದು ಎಕರೆಗೆ ನೀರಾವರಿ ಮಾಡುವುದಕ್ಕೆ ಎಷ್ಟು ಖರ್ಚು ಆಗುತ್ತಿತ್ತೋ ಈಗ ಅದರ ಪ್ರಮಾಣ ಎಷ್ಟು ಆಗಿದೆ ಎನ್ನುವುದನ್ನು ದಯಮಾಡಿ ತಿಳಿಸಿ.

ಶ್ರೀ ಎಸ್.ಎಂ. ಕೃಷ್ಣ: ಮಾನ್ಯ ಅಧ್ಯಕ್ಷರೇ, 5 ವರ್ಷಗಳ ಅವಧಿಯಲ್ಲಿ ಈ ಯೋಜನೆಯನ್ನು ಪೂರೈಸಿದರೆ ನಾವು ಇನ್ನೂ ಇಷ್ಟು ಪ್ರಮಾಣದಲ್ಲಿ ಹಣವನ್ನು ಖರ್ಚು ಮಾಡಬೇಕಾಗಿರಲಿಲ್ಲ. ಆದರೆ ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ನಾವು ವ್ಯಾಪಕವಾದಂತಹ ನೀರಾವರಿ ಕಾಮಗಾರಿಗಳನ್ನು ಇಡೀ ರಾಜ್ಯದಲ್ಲಿ ಕೈಗೆ ತೆಗೆದುಕೊಂಡಿರುವುದರಿಂದ ಸಂಪನ್ಮೂಲಗಳನ್ನು ಯಾವ ಪ್ರಮಾಣದಲ್ಲಿ ಯಾವ ಯೋಜನೆಗೆ ಕೊಡಬೇಕು ಎನ್ನುವುದರ ಬಗ್ಗೆ ನಮ್ಮ ಕೈಗಳು ಕಟ್ಟಿರುವುದರಿಂದ ಈ ಯೋಜನೆಯು ಮಂದಗತಿಯಲ್ಲಿ ನಡೆಯುತ್ತಿದೆ. ಹೋದ ವರ್ಷದ ಹಣಕಾಸಿನ ವರ್ಷದಲ್ಲಿ 18 ಕೋಟಿಯನ್ನು ಇದಕ್ಕೆ ನಿಗದಿ ಮಾಡಿದ್ದು 8 ಕೋಟಿಯನ್ನು ಮಾತ್ರ ಜನವರಿಯವರೆಗೆ ಖರ್ಚು ಮಾಡಲಾಗಿದೆ. 94-95ನೇ ಇಸವಿಯ ಬಜೆಟ್ನಲ್ಲಿ ಕೂಡ ಸುಮಾರು ಹದಿನೆಂಟುವರೆ ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. ಈ ವಿಚಾರದಲ್ಲಿ ಮಾನ್ಯ ಸದಸ್ಯರ ಕಳಕಳಿಯನ್ನು ನಾನು ಅರ್ಥಮಾಡಿಕೊಂಡಿದ್ದೇನೆ.

ರಸ್ತೆ ಹಾಗೂ ಕಟ್ಟಡಗಳ ಮೇಲಣ ವೆಚ್ಚವಾದ ಹಣದ ವಿವರ ಕುರಿತು

607 - ಶ್ರೀಮತಿ. ಸುಮ ವಸಂತ (ವಿರಾಜಪೇಟೆ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1992-93 ಮತ್ತು 1993-94ನೇ ಸಾಲಿನಲ್ಲಿ ಆಯವ್ಯಯದಲ್ಲಿ ಕಟ್ಟಡ ಮತ್ತು ರಸ್ತೆ ಅಭಿವೃದ್ಧಿಗೆ ಕೊಡಗು ಜಿಲ್ಲೆಗೆ ಮಂಜೂರಾದ ಹಣ ಎಷ್ಟು?*

ಆ) *ಅದರಲ್ಲಿ ಎಷ್ಟು ಹಣ ಬಿಡುಗಡೆಯಾಗಿದೆ?*

ಇ) *ಹಣ ಬಿಡುಗಡೆ ಸರಿಯಾಗಿ ಆಗದೆ ಕಾಮಗಾರಿಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಈ) *ಗುತ್ತಿಗೆದಾರರಿಗೆ ಹಣ ಬಿಡುಗಡೆಯಾಗದೆ ಕೆಲಸ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ?*

ಉ) *ಆ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ?*

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):

ಅ) ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿದಂತೆ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಸರ್ಕಾರದಿಂದ ಬಿಡುಗಡೆಯಾದ ಹಣ ಭರವಸೆ ಪತ್ರ ಅನುಸರಿಸಿ ಆಯಾ ವಿಭಾಗದ ಅನುದಾನ ಲಭ್ಯತೆಯಂತೆ ಹಂಚಲಾಗಿದೆ.

ಈ) ಕೆಲಸ ಯಾವುದೂ ನಿಂತಿರುವುದಿಲ್ಲ.

ಉ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಅನುಬಂಧ

ಕೊಡಗು ಜಿಲ್ಲೆಯಲ್ಲಿ ಕಾಮಗಾರಿಗಳ ಬಗ್ಗೆ ಆರ್ಥಿಕ ಪ್ರಗತಿಯ ವಿವರ

(ಲಕ್ಷ ರೂ.ಗಳು)

	92-93		93-94	
ಕಾಮಗಾರಿಗಳು	ಮಂಜೂರಾದ ಹಣ	ಹಣ ಬಿಡುಗಡೆಯಾಗಿ 92 93ರಲ್ಲಿ ಆಗಿರುವ ವೆಚ್ಚ	ಮಂಜೂರಾದ ಹಣ	ಹಣ ಬಿಡುಗಡೆಯಾಗಿ ಫೆಬ್ರವರಿ 94 ರವರೆಗೆ ಆಗಿರುವ ವೆಚ್ಚ
ರಸ್ತೆಗಳು	163.45	166.44	393.47	119.94
ಕಟ್ಟಡಗಳು	70.30	67.74	113.91	39.80
ಒಟ್ಟು	233.85	234.28	507.38	159.74

ಶ್ರೀಮತಿ ಸುಮಾ ವಸಂತ್ : ಮಾನ್ಯ ಅಧ್ಯಕ್ಷರೇ, ನಾನು ಈ ದಿನ ಒಂದು ಮಾತನ್ನು ಬಹಳ ವಿಷಾದದಿಂದ ಹೇಳಬೇಕಾಗುತ್ತದೆ. ಕೊಡಗು ಜಿಲ್ಲೆಯಲ್ಲಿ ತಮಗೆಲ್ಲಾ ತಿಳಿದ ಹಾಗೆ ಅಲ್ಲಿ 8 ತಿಂಗಳು ಮಳೆ ಇರುತ್ತದೆ. ಕೇವಲ 4 ತಿಂಗಳು ಮಾತ್ರ ಕೆಲಸ ಕಾರ್ಯಗಳನ್ನು ಮಾಡಬಹುದು. 1993-94ನೇ ಸಾಲಿನಲ್ಲಿ 393 ಲಕ್ಷ ರೂಪಾಯಿಗಳು ಮಂಜೂರಾಗಿದ್ದ ಹಣದಲ್ಲಿ ಕೇವಲ 119 ಲಕ್ಷ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದಾರೆ. ಎಂದು ಹೇಳಿ ಇಲ್ಲಿ ಉತ್ತರದಲ್ಲಿ ಕೊಟ್ಟಿದ್ದಾರೆ. 93-94ನೇ ಸಾಲಿನಲ್ಲಿ ಮಂಜೂರಾಗಿದ್ದ ಹಣವನ್ನು ಖರ್ಚು ಮಾಡಿದ್ದ ಮೇಲೆ ಇವರು 94-95ನೇ ಸಾಲಿನಲ್ಲಿ ಏನು ಹಣ ಬಿಡುಗಡೆ ಮಾಡುತ್ತಾರೆಂದು ನಾನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ.

ಶ್ರೀ ಕೆ.ಎಚ್. ರಂಗನಾಥ್ : ಮಾನ್ಯ ಅಧ್ಯಕ್ಷರೇ, ಅದು ಒಂದು ಹೈಪೋಥಿಕೇಟೆಡ್. ಇದು ಅವರು ಊಹೆ ಮಾಡಿರತಕ್ಕಂಥ ಪ್ರಶ್ನೆಗೆ ಉತ್ತರ ಏನು ಹೇಳುವುದಕ್ಕೆ ಆಗುತ್ತದೆ ಅಂದರೆ ಹಣ ಖರ್ಚಾಗಿಲ್ಲ. ಮಾನ್ಯ ಸದಸ್ಯರು ಹೇಳಿದ ಹಾಗೆ 393 ಲಕ್ಷ ರೂಪಾಯಿಗಳು ಮಂಜೂರಾಗಿದ್ದು ಅಲ್ಲಿ ಬಿಡುಗಡೆ ಆಗಿರತಕ್ಕಂಥಾದ್ದು 119 ಲಕ್ಷ ರೂ.ಗಳು ಆ 393 ರಲ್ಲಿ ಒಂದು ಕೋಟಿ ಎಪ್ಪತ್ತು ಲಕ್ಷದ ಒಂದು ಸೇತುವೆ ಕೂಡ ಸೇರಿದೆ. ಮೊನ್ನೆ ಮೊನ್ನೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರ ವಿಚಾರ ಮಾಡಿದೆ. ಅದ್ದರಿಂದ ಅದನ್ನು ಕಳೆದರೆ 1 ಕೋಟಿ 6 ಲಕ್ಷದಷ್ಟು ಹಣ ಒದಗಿಸಲು ಆಗಿಲ್ಲ. ಅದರಿಂದ ನನಗೆ ಸಂತೋಷ ಆಗಿದೆ ಎಂದು ನಾನು ಅಂದುಕೊಳ್ಳುವುದಿಲ್ಲ. 92-93ರಲ್ಲಿ ಒದಗಿಸಿದ ಹಣ ಅದಕ್ಕಿಂತಲೂ ಸ್ವಲ್ಪ ಹೆಚ್ಚು ಹಣ ಖರ್ಚು ಮಾಡಿದ್ದಾರೆ. ಮಾನ್ಯ ಸದಸ್ಯರು ಹೇಳಿದಹಾಗೆ ಕೊಡಗು ಜಿಲ್ಲೆಗೆ ಹೆಚ್ಚು ಹಣ ನಾವು ಕೊಡಬೇಕಾಗಿದೆ. ಅಲ್ಲಿ ಖರ್ಚು ಮಾಡತಕ್ಕಂತಹ ಹಣ ರಸ್ತೆಗಳ ಮೇಲೆಯೇ. ನಾವು ಹೆಚ್ಚು ಖರ್ಚು ಮಾಡಬೇಕಾಗುತ್ತದೆ. ಕಾರಣಾಂತರಗಳಿಂದ ಹಣ ಖರ್ಚು ಮಾಡಲಿಕ್ಕೆ ಸಾಧ್ಯವಾಗಲ್ಲ. ಮಾನ್ಯ ಸದಸ್ಯರ ಕಳಕಳಿಯನ್ನು ಗಮನದಲ್ಲಿಟ್ಟುಕೊಂಡು ಮುಂದೆ ಹೆಚ್ಚು ಖರ್ಚು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀಮತಿ ಸುಮಾ ವಸಂತ್ : ಮಾನ್ಯ ಅಧ್ಯಕ್ಷರೇ ಒಂದು ವಿಚಾರ ಹೇಳುವುದಕ್ಕೆ ಬಯಸುತ್ತೇನೆ. ವೀರರಾಜಪೇಟೆ ಕೇರಳ ಮತ್ತು ಮಾಕೂಟ ರಸ್ತೆ ಅದಕ್ಕೆ ಕಳೆದ

ಇನ್ನೂ ಇಲ್ಲೇ ಇದೆ. ಮಾರ್ಚಿಕೊನೆ ಆಗುತ್ತಾ ಬಂತು. ಆ ಕೆಲಸವನ್ನು ಇವರು ಯಾವಾಗ ಶುರು ಮಾಡುತ್ತಾರೆ, ಮಳೆ ನಮ್ಮಲ್ಲಿ ಈಗಾಗಲೇ ಶುರು ಆಗಿದೆ. ಅಲ್ಲಿ ಅಧಿಕಾರಿಗಳನ್ನು ಕೇಳಿದರೆ ಜಲ್ಲಿ ಇಲ್ಲ, ಡಾಂಬರ್ ಇಲ್ಲ, ಟ್ರೆಜರಿ ಬ್ಯಾನ್ ಇದೆ, ಹಣ ಮಂಜೂರಾತಿ ಆಗಿಲ್ಲ ಅಂತ ಉತ್ತರ ಹೇಳುತ್ತಿದ್ದಾರೆ. ಹಾಗಿದ್ದರೆ ಇವರು ಯಾವಾಗ ಈ ಕೆಲಸಗಳನ್ನು ಮಾಡಿಸಿಕೊಡುತ್ತಾರೆಂದು ನಾನು ಕೇಳ ಬಯಸುತ್ತೇನೆ.

ಶ್ರೀ ಕೆ.ಎಚ್. ರಂಗನಾಥ್ : ಅವರು ಈಗ ಪ್ರಸ್ತಾಪ ಮಾಡಿದ್ದಾರೆ. ಅದನ್ನು ನಾನು ಈ ದಿವಸವೇ ತೆಗೆಸಿ ನೋಡುತ್ತೇನೆ.

ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಪ್ರಾಧಿಕಾರದಿಂದ ಬರುತ್ತಿರುವ ಎಲ್.ಓ.ಸಿ. ಹಣ ಕುರಿತು

574 - ಶ್ರೀ ಬಾಬೂರಾವ್ ಚವಾಣ್ (ಶಹಾಬಾದ್) : ಮಾನ್ಯ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಪ್ರಾಧಿಕಾರದಿಂದ ಬರುತ್ತಿರುವ ಎಲ್.ಓ.ಸಿ. ಹಣ ಮತ ಕ್ಷೇತ್ರವಾರು ಬಿಡುಗಡೆ ಮಾಡಲಾಗುವುದೋ ಅಥವಾ ತಾಲ್ಲೂಕವಾರು ಬಿಡುಗಡೆ ಮಾಡಲಾಗುವುದೋ?*

ಆ) *ಹಾಗಾದರೆ ಸರ್ಕಾರವು ಸರಿಸಮನಾದ ರೀತಿಯಲ್ಲಿ ಶಾಸಕರ ಮತಕ್ಷೇತ್ರಗಳಿಗೆ ಕೊಡುವುದೇ?*

ಇ) *ಈ ಬಗ್ಗೆ ಸರ್ಕಾರದ ನಿಲುವು ಏನು?*

ಶ್ರೀ ರಂಗದೇವ ರಾಯುಲು (ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು) :

ಅ) ಇಲ್ಲ. ಇಲಾಖಾವಾರು ಬಿಡುಗಡೆ ಮಾಡಲಾಗುವುದು.

ಆ) ಭೌತಿಕ ಪ್ರಗತಿಯನ್ನು ಪರಿಗಣಿಸಿ ಹಣವನ್ನು ಹಂಚಲಾಗುತ್ತಿದೆ.

ಇ) ಪ್ರಾದೇಶಿಕ ಅಸಮತೋಲನವನ್ನು ನಿವಾರಿಸಿ ಎಲ್ಲಾ ಪ್ರದೇಶವನ್ನು ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಡಿಯಲ್ಲಿ ಅಭಿವೃದ್ಧಿಗೊಳಿಸಲು ಉದ್ದೇಶಿಸಲಾಗಿದೆ.

ಶ್ರೀ ಬಾಬುರಾವ್ ಚವಾಣ್ : ಮಾನ್ಯ ಅಧ್ಯಕ್ಷರೇ, ನಾನು ಕೇಳತಕ್ಕಂಥ ಪ್ರಶ್ನೆ ಏನೆಂದರೆ ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಲಿಯಿಂದ ಎಂ.ಎಲ್.ಎ. ಗ್ರಾಂಟ್ಸ್ ಮತ್ತು ನಾನ್. ಎಂ.ಎಲ್.ಎ ಗ್ರ್ಯಾಂಟ್ಸ್ ಅಂತ ಎರಡು ರೂಪದಿಂದ ಸರ್ಕಾರದಿಂದ ಹಣ ಬಿಡುಗಡೆ ಆಗುತ್ತಿದೆ. ಆದರೆ ಎಂ.ಎಲ್.ಎ ಗ್ರ್ಯಾಂಟ್ಸ್ನಲ್ಲಿ ಪ್ರತಿ ಎಂ.ಎಲ್.ಎ.ಗೆ ಒಂದು ಕೋಟಿ 50 ಲಕ್ಷ ರೂಪಾಯಿಯನ್ನು 3 ವರ್ಷಗಳಿಗೋಸ್ಕರ ಕೊಟ್ಟಿದ್ದೀರಿ. ಆದರೆ ಒಂದು ತಾಲ್ಲೂಕಿನಲ್ಲಿ ಮೂರು ಜನ ಶಾಸಕರುಗಳು ಇರುವುದರಿಂದ ತಾಲ್ಲೂಕು ಅಧಿಕಾರಿಗಳು ಬರತಕ್ಕಂಥ ಹಣದಲ್ಲಿ ಸಮವಾಗಿ ಖರ್ಚು ಮಾಡಬೇಕಾಗಿತ್ತು.ಆದರೆ ಅವರು ಏನು ಮಾಡಿದ್ದಾರೆಂದರೆ ಹೆಚ್.ಕೆ.ಡಿ.ಪಿ. ದುಡ್ಡನ್ನು ಒಬ್ಬರು ಶಾಸಕರಿಗೆ ಜಾಸ್ತಿ ಖರ್ಚು ಮಾಡಿದ್ದಾರೆ ಇನ್ನೊಬ್ಬ ಶಾಸಕರಿಗೆ ಖರ್ಚು ಮಾಡಿಲ್ಲ, ಏಕೆಂದರೆ ಕೆಲಸವನ್ನೇ ಶುರು ಮಾಡಿಲ್ಲ. ಒಬ್ಬ ಶಾಸಕರಿಗೆ ಕೆಲಸ ಶುರು ಮಾಡಿದ್ದಾರೆ ಮತ್ತು ಜಾಸ್ತಿ ಹಣ ಖರ್ಚು ಮಾಡಿದ್ದಾರೆ. 1.50 ಕೋಟಿ ಮೀರಿ 1.87 ಕೋಟಿವರೆಗೆ ಖರ್ಚು ಮಾಡಿದ್ದಾರೆ. 1.50 ಕೋಟಿಯನ್ನು ಕ್ರಾಸ್ ಮಾಡಲಿಕ್ಕೆ ಯಾರು ಅಧಿಕಾರ ಕೊಟ್ಟರು. ಹಾಗೆ ಇನ್ನೊಬ್ಬ ಶಾಸಕರಿಗೆ ಹಣ ಖರ್ಚು ಮಾಡಿಲ್ಲ, ಕೆಲಸ ಶುರು ಮಾಡಿಲ್ಲ, ಒಂದು ತಾಲ್ಲೂಕಿನಲ್ಲಿ 3 ಜನ ಎಂಎಲ್ಎ ಇರುವುದರಿಂದ ಸರಿಸಮಾನವಾದ ರೀತಿಯಲ್ಲಿ ಅಧಿಕಾರಿಗಳು ಖರ್ಚು ಮಾಡುತ್ತಿಲ್ಲ. ಆದ್ದರಿಂದ ನಾನು ಮಾನ್ಯ ಮಂತ್ರಿಗಳಲಿ ಕೇಳುತ್ತಿದ್ದೇನೆ, ತಾವು ಎಂ.ಎಲ್.ಎ ಗ್ರ್ಯಾಂಟ್ಸ್ ಅಂತ ಏನು ಕೊಡುತ್ತಿದ್ದೀರಿ

ಹೆಚ್ ಕೆ.ಡಿ.ಬಿ. ಯಲ್ಲಿ ಅದನ್ನು ಎಲ್ಲಾ ಎಂ.ಎಲ್.ಎ ಗಳಿಗೆ ಕೊಡುತ್ತಿದ್ದೀರಿ. ಇದನ್ನು ಮತಕ್ಷೇತ್ರದ ಪ್ರಕಾರ ಮತಕ್ಷೇತ್ರವಾರು ಹಣವನ್ನು ರಿಲೀಜ್ ಮಾಡುತ್ತೀರಾ? ತಾಲ್ಲೂಕು ಅಧಿಕಾರಿಗೆ ಅಧಿಕಾರ ಕೊಟ್ಟರೆ 3 ಎಂ.ಎಲ್.ಎ ಗಳಲ್ಲಿ ಒಬ್ಬರಿಗೆ ಜಾಸ್ತಿ ಖರ್ಚು ಮಾಡುತ್ತಾರೆ ಒಬ್ಬರಿಗೆ ಕಡಿಮೆ ಖರ್ಚು ಮಾಡುತ್ತಾರೆ. ಆದ್ದರಿಂದ ತಾವು ಮತಕ್ಷೇತ್ರವಾರು ಬಿಡುಗಡೆ ಮಾಡುತ್ತೀರಾ ಅಂತ ನಾನು ಕೇಳುತ್ತೇನೆ. ಅದನ್ನು ಮಾಡಲಿಕ್ಕೆ ತೊಂದರೆ ಏನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೇ, ಪ್ರತಿ ಮತಕ್ಷೇತ್ರಕ್ಕೆ 50 ಲಕ್ಷ ರೂಪಾಯಿ ಪ್ರತಿ ವರ್ಷ ಖರ್ಚು ಮಾಡಬೇಕು ಎಂದು ನಿಗಧಿಪಡಿಸಿದ್ದೇವೆ. ಅದರ ಪ್ರಕಾರ 3 ವರ್ಷ ಎಸ್ಟಿಮೇಟನ್ನು ತೆಗೆದುಕೊಂಡು ಸುಮಾರು 1 ಕೋಟಿ 50 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕು ಅಂತ ಹೇಳಿ ತೀರ್ಮಾನ ತೆಗೆದುಕೊಂಡು ಅದೇ ರೀತಿಯಾಗಿ ಪ್ರತಿಯೊಂದು ಕ್ಷೇತ್ರದಲ್ಲೂ ಖರ್ಚು ಮಾಡುತ್ತಿದ್ದಾರೆ. ಅವರು ಹೇಳುವುದು ಏನೆಂದರೆ ಒಂದು ಕೋಟಿ 50 ಲಕ್ಷ ರೂಪಾಯಿಗಳೆಂದು ನಮ್ಮಲ್ಲಿ ನಿಗದಿ ಮಾಡಿದರೂ ಕೂಡ ಇವತ್ತು ಅದು ಖರ್ಚಾಗಿಲ್ಲ, ಅದಕ್ಕಾಗಿ ಇದು ಅನ್ಯಾಯವಾಗಿದೆ, ಇದನ್ನು ಸರಿಪಡಿಸಬೇಕು ಎಂದು ಏನು ಹೇಳುತ್ತಿದ್ದಾರೆ ಅದನ್ನು ನಾನು ಕೂಡ ಒಪ್ಪುತ್ತೇನೆ ಕನಿಷ್ಟ ಪಕ್ಷ ಒಂದು ಕೋಟಿ 50 ಲಕ್ಷ ರೂಪಾಯಿ ಅವರಿಗೆ ಏನು ಅವರ ಪಾಲಿಗೆ ಬರಬೇಕು ಅಷ್ಟು ಹಣವನ್ನು ಖರ್ಚು ಮಾಡತಕ್ಕಂಥ ನಿರ್ದೇಶನವನ್ನು ನಾನು ಕೊಡುತ್ತೇನೆ.

ಶ್ರೀ ಬಾಬುರಾವ್ ಚವಾಣ್: ಮಾನ್ಯ ಅಧ್ಯಕ್ಷರೇ ನಿರ್ದೇಶನ ಕೊಟ್ಟರೆ ನಮ್ಮ ಸಮಸ್ಯೆ ಪರಿಹಾರ ಆಗುವುದಿಲ್ಲ, ಏಕೆಂದರೆ ತಾವು ಬರತಕ್ಕಂಥ ದುಡ್ಡನ್ನು ಜಿಲ್ಲಾ ಪರಿಷತ್ತಿನವರಿಗೆ ಕೊಡುತ್ತೀರಿ ಜಿಲ್ಲಾ ಪರಿಷತ್ತಿನಿಂದ ತಾಲ್ಲೂಕು ಆಫೀಸ್ಗೆ ಕೊಡುತ್ತಾರೆ. ನಂತರ ಅವರು ಒಬ್ಬ ಎಂ.ಎಲ್.ಎ ಗೆ ಜಾಸ್ತಿ ಖರ್ಚು ಮಾಡುತ್ತಾರೆ ಒಬ್ಬ ಎಂ.ಎಲ್.ಎ ಗೆ ಕಡಿಮೆ ಖರ್ಚು ಮಾಡುತ್ತಾರೆ. ನಾನು ಹೇಳತಕ್ಕಂಥವಾದ ಏನು ಇದೆ ಅಂದರೆ, ತಾವು ಬರತಕ್ಕಂಥ ದುಡ್ಡನ್ನು ಮತಕ್ಷೇತ್ರವಾರು ವರ್ಕ್ಪ್ರೋಫೋಜ್ ಮಾಡಿದಾಗ 1 ಕೋಟಿ 50 ಲಕ್ಷ ರೂಪಾಯಿ ಅಂತ ಪ್ರತಿಯೊಬ್ಬ ಎಂ.ಎಲ್.ಎ ಗೆ ಯಾವಾಗ ಕೊಡುತ್ತೀರಿ ಆ ರೀತಿ ಕೊಡುವಾಗ ಸರಿಸಮಾನವಾಗಿ ಶಾಸಕರಿಗೆ ಕೊಡಿ. ಸರಿಸಮಾನವಾದ ರೀತಿಯಲ್ಲಿ ಕೆಲಸ ಆಗಲಿ. ಈ ರೀತಿ ಕೆಲಸ ಮಾಡಿಲ್ಲ ಅಧಿಕಾರಿ ಅಂದ್ರೆ, ಅವರ ಬಗ್ಗೆ ನಾವು ಕಂಪ್ಲೇಂಟ್ ಮಾಡಬೇಕು. ಅವರ ಬೆನ್ನಹತ್ತಬೇಕು. ಇದು ಒಂದೇ ಕೆಲಸ ವಿನಹಃ ನಮ್ಮ ಕೆಲಸ ಅಲ್ಲಿ ಆಗುವುದಿಲ್ಲ. ನಮ್ಮದು ಏನೂ ಅಭಿವೃದ್ಧಿ ಆಗುವುದಿಲ್ಲ, ಆದ್ದರಿಂದ ನಾನು ಮಾನ್ಯ ಮಂತ್ರಿಯವರಿಗೆ ಕೇಳುತ್ತಿದ್ದೇನೆ. ತಾವು ಕೊಡತಕ್ಕಂಥ ದುಡ್ಡನ್ನು ಅದೇ ತಾಲ್ಲೂಕು ಆಫೀಸ್ಗೆ ಕೊಡಿ, ಮತಕ್ಷೇತ್ರ ವಾರು ಎಷ್ಟು ದುಡ್ಡು ಬರುತ್ತಿದೆ, ಇಂತಹ ಮತಕ್ಷೇತ್ರಕ್ಕೆ ಇಂತಿಷ್ಟು ಪರ್ಸೆಂಟ್ ಹಣ ಅಂತ ಆ ತಾಲ್ಲೂಕು ಅಧಿಕಾರಿಗೆ ಕೊಡಿ. ಅಥವಾ ಜಿಲ್ಲಾಧಿಕಾರಿಗೆ ಕೊಡಿ. ಆದರೆ ನೀವು ಮತಕ್ಷೇತ್ರವಾರು ಮಾಡಿದರೆ ಸರಿಸಮಾನವಾದ ರೀತಿಯಲ್ಲಿ ಅಧಿಕಾರಿಗಳು ಕೆಲಸ ಮಾಡುತ್ತಾರೆ. ಇಲ್ಲದಿದ್ದರೆ ಏನು ಮಾಡುತ್ತಾರೆ ಅಂದರೆ ಇವರು ನನಗೆ ಟ್ರಾನ್ಸ್ಫರ್ ಮಾಡುತ್ತೇನೆಂದರು, ಅದಕ್ಕಾಗಿ ಇವರ ಕಡೆ ಹೆಚ್ಚು ಖರ್ಚು ಮಾಡಿಬಿಡುತ್ತಾರೆ.

ಅಧ್ಯಕ್ಷರು: ತಾವು ಉಪ ಪ್ರಶ್ನೆ ಕೇಳಿ.

ಶ್ರೀ ಬಾಬುರಾವ್ ಚವಾಣ್: ಮಾನ್ಯ ಅಧ್ಯಕ್ಷರೇ, ನಾನು ಏಕೆ ಇದನ್ನೆಲ್ಲಾ ಹೇಳುತ್ತಿದ್ದೇನೆಂದರೆ, ನನ್ನ ಮತಕ್ಷೇತ್ರಕ್ಕೆ ಕೇವಲ 80 ಲಕ್ಷ ರೂಪಾಯಿಗಳನ್ನು ಮಾತ್ರ

ಖರ್ಚು ಮಾಡಿದ್ದಾರೆ. ನಾಲ್ಕು ವರ್ಷಗಳಿಂದ ಹೆಚ್.ಕೆ.ಡಿ.ಪಿ. ಬಂದ ನಂತರ ಒಬ್ಬ ಶಾಸಕರಿಗೆ ಒಂದು ಕೋಟಿ 87 ಲಕ್ಷ ರೂಪಾಯಿ ಖರ್ಚು ಮಾಡಿದ್ದಾರೆ ದುಡ್ಡು ಖರ್ಚಾಗಿ ಹೋಗಿದೆ. ನಾನು ಪ್ರತಿ ಮೀಟಿಂಗ್ನಲ್ಲೂ 80 ಲಕ್ಷ ರೂ. ಮಾತ್ರ ಏತಕ್ಕೆ ನನ್ನ ಮತಕ್ಷೇತ್ರಕ್ಕೆ ಖರ್ಚು ಮಾಡಿದ್ದೀರಿ, ಒಂದು ಕೋಟಿ 50 ಲಕ್ಷ ರೂಪಾಯಿಗಳಿಗೆ ಏತಕ್ಕೆ ರೀಚ್ ಆಗಿಲ್ಲ. ಅಂತ ಕೇಳಿದಾಗ ಸರಿಯಾದ ಉತ್ತರ ಸಿಗುವುದಿಲ್ಲ. ದುಡ್ಡು ಬರುತ್ತಿರುವುದು ಒಬ್ಬ ಎಂ.ಎಲ್.ಎ ಗೆ ಹೋಗುತ್ತಿದೆ. ನಮ್ಮ ಪಾಲಿನ ದುಡ್ಡು ಬರುತ್ತಿಲ್ಲ. ಆದ್ದರಿಂದ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ, ಯಾವಾಗ ತಾವು ಒಂದು ಕೋಟಿ 50 ಲಕ್ಷ ರೂಪಾಯಿ ಒಂದು ಮತಕ್ಷೇತ್ರಕ್ಕೆ ನಿಗದಿ ಮಾಡಿದ್ದಿರಿ. ಕೆಲಸ ಕೂಡ ಮತಕ್ಷೇತ್ರವಾರು ಮಾಡಿದಿರಿ, ರೂಪರೇಷೆಗಳನ್ನು ಕೂಡ ಮತಕ್ಷೇತ್ರವಾರು ಮಾಡಿದಿರಿ; ಆದರೆ ದುಡ್ಡು ಕೊಡುವ ಸಮಯದಲ್ಲಿ ಏಕೆ ಮತಕ್ಷೇತ್ರವಾರು ಮಾಡಿಲ್ಲ? ಅದು ತಾಲ್ಲೂಕು ವೈಜ್ ಮಾಡಿದ್ದರಿಂದ ಒಬ್ಬರಿಗೆ ಹೆಚ್ಚು ಒಬ್ಬರಿಗೆ ಕಡಿಮೆ ಹಣ ಖರ್ಚು ಮಾಡುವುದರಿಂದ ಬಹಳ ಅನ್ಯಾಯವಾಗುತ್ತಿದೆ. ಆದ್ದರಿಂದ ನಾನು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತಿದ್ದೇನೆ. ಇದೂ ಕೂಡ ಸರಿಸಮಾನವಾಗಿ ಶಾಸಕರಿಗೆ ಬರಬೇಕು. ಒಬ್ಬರಿಗೆ ಜಾಸ್ತಿ ಒಬ್ಬರಿಗೆ ಕಡಿಮೆ ಆಗಬಾರದು ಅಂತ ಕೇಳುತ್ತಿದ್ದೇನೆ. ಅದು ಮಾಡಿಕೊಡುತ್ತೀರಾ ಎಂದು ದಯವಿಟ್ಟು ತಿಳಿಸಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗಾಗಲೇ ನಾನು ಹೇಳಿದ್ದೇನೆ ಮತ್ತು ಒಪ್ಪಿಕೊಂಡಿದ್ದೇನೆ. ಯಾಕೆಂದರೆ ಕ್ಷೇತ್ರದಲ್ಲಿ 1 ಕೋಟಿ 50 ಲಕ್ಷ ರೂ.ಗಳು ಕಾಮಗಾರಿಗಾಗಿ ಖರ್ಚಾಗಬೇಕಾಗಿತ್ತು. ಅದು ಆಗಿಲ್ಲ ಎಂಬ ಮಾತನ್ನು ಅವರು ಹೇಳಿದ್ದಾರೆ. ಆ ಒಂದು ಕೋಟಿ 50 ಲಕ್ಷ ರೂಪಾಯಿಗಳನ್ನು ನಾವು ಖರ್ಚು ಮಾಡಿಸುತ್ತೇವೆ. ಎಲ್‌ಒಸಿ ಕೂಡ ಅದರ ಪ್ರಕಾರವೇ ಸಿಗುತ್ತದೆ. ತಮಗೆ ಗೊತ್ತಿರುವ ಹಾಗೆ ಕ್ಷೇತ್ರವಾರು ಎಲ್‌ಒಸಿಯನ್ನು ಬಿಡುಗಡೆ ಮಾಡುವುದಿಲ್ಲ. ಹೆಚ್ಕೆಡಿಬಿಗೆ ಡಿವಿಜನಲ್ ಕಮೀಶನರ್ ಹಣ ಬಿಡುಗಡೆ ಮಾಡುತ್ತಾರೆ. ಒಂದು ಕಡೆಯಲ್ಲಿ ಹೆಚ್ಚಿಗೆ ಕೆಲಸವಾದಾಗ ಹೆಚ್ಚು ಹಣವನ್ನು ಬಿಡುಗಡೆ ಮಾಡುತ್ತಾರೆ, ಇನ್ನೊಂದು ಕಡೆಯಲ್ಲಿ ಕಡಿಮೆ ಕೆಲಸವಾದಾಗ ಕಡಿಮೆ ಹಣವನ್ನು ಬಿಡುಗಡೆ ಮಾಡುತ್ತಾರೆ. ಆದರೆ ತಮ್ಮ ಕ್ಷೇತ್ರದಲ್ಲಿ 1 ಕೋಟಿ 50 ಲಕ್ಷಗಳಲ್ಲಿ ಕೇವಲ 80 ಲಕ್ಷ ರೂ.ಗಳನ್ನು ಮಾತ್ರ ಬಿಡುಗಡೆ ಮಾಡಿದ್ದಾರೆ. ಇನ್ನೂ 70 ಲಕ್ಷ ರೂಪಾಯಿಗಳ ಕೆಲಸವಾಗಿಲ್ಲ ಎಂಬ ವಾದವನ್ನು ಹೇಳುತ್ತಿದ್ದೀರಿ. ಅಷ್ಟು ಕೆಲಸವನ್ನು ನಾವು ಮಾಡಸಿಯೇ ಮಾಡಿಸುತ್ತೇವೆ. ಯಾಕೆಂದರೆ, ಅಷ್ಟರ ಮಟ್ಟಿಗೆ ಅವರಿಗೆ ನಿಗದಿ ಪಡಿಸಿದಂಥ ಹಣ ಇದೆ. ಆ ಹಣವನ್ನು ಖರ್ಚು ಮಾಡತಕ್ಕಂಥಾದ್ದರ ಬಗ್ಗೆ ಕಾಳಜಿಯನ್ನು ವಹಿಸಿ ಅದೇ ರೀತಿಯಾಗಿ ಹಣದ ಬಿಡುಗಡೆಯನ್ನು ಕೂಡ ಮಾಡುತ್ತೇವೆ.

ಶ್ರೀ ಬಾಬುರಾವ್ ಚೌಹಾಣ್ : ನಮ್ಮ ಅವಧಿ ಮುಗಿಯಲು ಇನ್ನು ಐದು ತಿಂಗಳುಗಳು ಮಾತ್ರ ಇದೆ. ಅಷ್ಟರೊಳಗೆ 70 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೀರಾ ಎಂದು ತಿಳಿಸಬೇಕು.

ಅಧ್ಯಕ್ಷರು : ತಾವು ದಯಮಾಡಿ ಕುಳಿತುಕೊಳ್ಳಿ.

ಚು.ಗು.ಪ್ರ.ಸಂಖ್ಯೆ : 253 (801) ಅನ್ನು ಶ್ರೀ ಪಾಟೀಲ್ ನಾಗರಾಜಪ್ಪವರ ಪರವಾಗಿ ಶ್ರೀ ಬಿ.ಎಸ್. ಯಡಿಯೂರಪ್ಪನವರು ಕೇಳಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗಾಗಲೇ ನಾನು ಹೇಳಿದ್ದೇನೆ ಮತ್ತು ಒಪ್ಪಿಕೊಂಡಿದ್ದೇನೆ. ಯಾಕೆಂದರೆ ಕ್ಷೇತ್ರದಲ್ಲಿ 1 ಕೋಟಿ 50 ಲಕ್ಷ ರೂ.ಗಳು ಕಾಮಗಾರಿಗಾಗಿ ಖರ್ಚಾಗಬೇಕಾಗಿತ್ತು. ಅದು ಆಗಿಲ್ಲ ಎಂಬ ಮಾತನ್ನು ಅವರು ಹೇಳಿದ್ದಾರೆ. ಆ ಒಂದು ಕೋಟಿ 50 ಲಕ್ಷ ರೂಪಾಯಿಗಳನ್ನು ನಾವು ಖರ್ಚು ಮಾಡಿಸುತ್ತೇವೆ. ಎಲ್‌ಒಸಿ ಕೂಡ ಅದರ ಪ್ರಕಾರವೇ ಸಿಗುತ್ತದೆ. ತಮಗೆ ಗೊತ್ತಿರುವ ಹಾಗೆ ಕ್ಷೇತ್ರವಾರು ಎಲ್‌ಒಸಿಯನ್ನು ಬಿಡುಗಡೆ ಮಾಡುವುದಿಲ್ಲ. ಹೆಚ್ಚೆಂದರೆ ಡಿವಿಜನಲ್ ಕಮೀಶನರ್ ಹಣ ಬಿಡುಗಡೆ ಮಾಡುತ್ತಾರೆ. ಒಂದು ಕಡೆಯಲ್ಲಿ ಹೆಚ್ಚಿಗೆ ಕೆಲಸವಾದಾಗ ಹೆಚ್ಚು ಹಣವನ್ನು ಬಿಡುಗಡೆ ಮಾಡುತ್ತಾರೆ, ಇನ್ನೊಂದು ಕಡೆಯಲ್ಲಿ ಕಡಿಮೆ ಕೆಲಸವಾದಾಗ ಕಡಿಮೆ ಹಣವನ್ನು ಬಿಡುಗಡೆ ಮಾಡುತ್ತಾರೆ. ಆದರೆ ತಮ್ಮ ಕ್ಷೇತ್ರದಲ್ಲಿ 1 ಕೋಟಿ 50 ಲಕ್ಷಗಳಲ್ಲಿ ಕೇವಲ 80 ಲಕ್ಷ ರೂ.ಗಳನ್ನು ಮಾತ್ರ ಬಿಡುಗಡೆ ಮಾಡಿದ್ದಾರೆ. ಇನ್ನೂ 70 ಲಕ್ಷ ರೂಪಾಯಿಗಳ ಕೆಲಸವಾಗಿಲ್ಲ ಎಂಬ ವಾದವನ್ನು ಹೇಳುತ್ತಿದ್ದೀರಿ. ಅಷ್ಟು ಕೆಲಸವನ್ನು ನಾವು ಮಾಡಿಸಿಯೇ ಮಾಡಿಸುತ್ತೇವೆ. ಯಾಕೆಂದರೆ, ಅಷ್ಟರ ಮಟ್ಟಿಗೆ ಅವರಿಗೆ ನಿಗದಿ ಪಡಿಸಿದಂಥ ಹಣ ಇದೆ. ಆ ಹಣವನ್ನು ಖರ್ಚು ಮಾಡತಕ್ಕಂಥಾದ್ದರ ಬಗ್ಗೆ ಕಾಳಜಿಯನ್ನು ವಹಿಸಿ ಅದೇ ರೀತಿಯಾಗಿ ಹಣದ ಬಿಡುಗಡೆಯನ್ನು ಕೂಡ ಮಾಡುತ್ತೇವೆ.

ಶ್ರೀ ಬಾಬುರಾವ್ ಚೌಹಾಣ್ : ನಮ್ಮ ಅವಧಿ ಮುಗಿಯಲು ಇನ್ನು ಐದು ತಿಂಗಳುಗಳು ಮಾತ್ರ ಇದೆ. ಅಷ್ಟರೊಳಗೆ 70 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೀರಾ ಎಂದು ತಿಳಿಸಬೇಕು.

ಅಧ್ಯಕ್ಷರು : ತಾವು ದಯಮಾಡಿ ಕುಳಿತುಕೊಳ್ಳಿ.

ಚು.ಗು.ಪ್ರ.ಸಂಖ್ಯೆ : 253 (801) ಅನ್ನು ಶ್ರೀ ವಾಟಾಳ್ ನಾಗರಾಜ್‌ರವರ ಪರವಾಗಿ ಶ್ರೀ ಬಿ.ಎಸ್. ಯಡಿಯೂರಪ್ಪನವರು ಕೇಳಬಹುದು.

ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಗಳ ಸಂಖ್ಯೆ

805 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) *ಕರ್ನಾಟಕ ರಾಜ್ಯದಲ್ಲಿರುವ ರಾಷ್ಟ್ರೀಯ ಹೆದ್ದಾರಿಗಳ ಸಂಖ್ಯೆ ಎಷ್ಟು ಹಾಗೂ ಅವುಗಳು ಯಾವುವು ?*

ಆ) *ರಾಜ್ಯದಲ್ಲಿರುವ ರಾಜ್ಯ ಹೆದ್ದಾರಿಗಳ ಸಂಖ್ಯೆ ಎಷ್ಟು ಮತ್ತು ಅವುಗಳು ಯಾವುವು ?*

ಇ) *ಹಿಂದುಳಿದ ಗಡಿ ಪ್ರದೇಶದ ಚಾಮರಾಜನಗರದಿಂದ ಕೊಯಮತ್ತೂರಿಗೆ ಹೋಗುವ ರಸ್ತೆ ತೀವ್ರ ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?*

ಈ) *ಅದರ ದುರಸ್ತಿಗಾಗಿ ಕೈಗೊಂಡ ಕ್ರಮವೇನು ?*

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು :

ಅ) 7 ರಾಷ್ಟ್ರೀಯ ಹೆದ್ದಾರಿಗಳಿವೆ. ವಿವರ ಅನುಬಂಧ-1ರಲ್ಲಿ ನೀಡಿದೆ.

ಆ) 78 ರಾಜ್ಯ ಹೆದ್ದಾರಿಗಳಿವೆ. ವಿವರ ಅನುಬಂಧ-2ರಲ್ಲಿ ನೀಡಿದೆ.

ಇ) ಸರ್ಕಾರದ ಗಮನಕ್ಕೆ ಬಂದಿದೆ.

ಈ) ಚಾಮರಾಜನಗರ ವಿಭಾಗದ ವ್ಯಾಪ್ತಿಯಲ್ಲಿ ಬರುವ ಸದರಿ ರಸ್ತೆಯ ಭಾಗವನ್ನು 92-93ರ ಸಾಲಿನಲ್ಲಿ 15 ಲಕ್ಷ ರೂ.ಗಳ ವೆಚ್ಚದಲ್ಲಿ ಆಯ್ದ ಭಾಗಗಳನ್ನು ದುರಸಿ ಪಡಿಸಿದೆ. 1993-94ರ ಸಾಲಿನಲ್ಲಿ 22 ಲಕ್ಷ ರೂ.ಗಳ ಅಂದಾಜಿನಲ್ಲಿ ಆಯ್ದ

ಭಾಗಗಳನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ. ಈ ರಸ್ತೆಯ ಅಭಿವೃದ್ಧಿಯನ್ನು ಹಂತ ಹಂತವಾಗಿ ಅನುದಾನ ಲಭ್ಯತೆಯನ್ನು ಅನುಸರಿಸಿ ಮಾಡಲಾಗುವುದು.

ಅನುಬಂಧ -1

ರಾಜ್ಯದಲ್ಲಿ ಇರುವ ರಾಷ್ಟ್ರೀಯ ಹೆದ್ದಾರಿಗಳ ಪಟ್ಟಿ

ಕ್ರ. ಸಂ.	ರಾಷ್ಟ್ರೀಯ ಹೆದ್ದಾರಿ ಸಂಖ್ಯೆ	ಹಾದುಹೋಗುವ ಸ್ಥಳ	ರಾಜ್ಯದಲ್ಲಿ ಹಾದುಹೋಗುವ ರಾಷ್ಟ್ರೀಯ ಹೆದ್ದಾರಿ ಉದ್ದ
1)	ರಾ.ಹೆ.4	ಮದರಾಸು - ಕೋಲಾರ - ಬೆಂಗಳೂರು - ಹುಬ್ಬಳ್ಳಿ - ಬೆಳಗಾವಿ - ಪೂನಾ - ಬೊಂಬಾಯಿ.	700 ಕಿಮೀ
2)	ರಾ.ಹೆ. 4ಎ	ಬೆಳಗಾವಿ - ಖಾನಾಪುರ - ಅನಮೋದ್- ಪಂಜಿಮ್	84ಕಿಮೀ
3)	ರಾ.ಹೆ. 7	ವಾರಣಾಸಿ(ಕಾಶಿ) - ನಾಗಪುರ - ಹೈದರಾಬಾದ್ - ಕರ್ನೂಲು - ಬಾಗೇಪಲ್ಲಿ - ಬೆಂಗಳೂರು - ಕೃಷ್ಣಗಿರಿ - ಮದರಾಸು - ಕನ್ಯಾಕುಮಾರಿ	128 ಕಿಮೀ
4)	ರಾ.ಹೆ.9	ಪೂನಾ - ಸೊಲ್ಲಾಪುರ - ಹುಮ್ನಾಬಾದ್- ಹೈದರಾಬಾದ್ - ವಿಜಯವಾಡ	75 ಕಿಮೀ
5)	ರಾ.ಹೆ. 13	ಚಿತ್ರದುರ್ಗ- ಹೊಸಪೇಟೆ - ಬಿಜಾಪುರ - ಸೊಲ್ಲಾಪುರ	390 ಕಿಮೀ
6)	ರಾ.ಹೆ. 17	ಪನವೇಲ್- ಪಣಜಿ - ಕಾರವಾರ - ಕುಂದಾಪುರ - ಉಡುಪಿ - ಮಂಗಳೂರು - ಕಣ್ಣಾನೂರು - ತಿರುಚೂರು.	300 ಕಿಮೀ
7)	ರಾ.ಹೆ. 48	ಬೆಂಗಳೂರು - ನೆಲಮಂಗಲ - ಕುಣಿಗಲ್- ಹಾಸನ - ಸಕಲೇಶಪುರ - ಮಂಗಳೂರು	320 ಕಿಮೀ
			ಒಟ್ಟು ಉದ್ದ 1,997 ಕಿ.ಮೀ

ಲೋಕೋಪಯೋಗಿ ಇಲಾಖೆ ವ್ಯಾಪ್ತಿಯಲ್ಲಿರುವ ರಾಜ್ಯ ಹೆದ್ದಾರಿಯು ವಿವರಗಳು

ಕ್ರ ಸಂ.	ರಾಜ್ಯ ಹೆದ್ದಾರಿಯ ಹೆಸರು ಹಾಗೂ ಜಿಲ್ಲೆಯ ವ್ಯಾಪ್ತಿ	ರಸ್ತೆಯು ಒಟ್ಟು ಉದ್ದ
1	2	3
1)	ರಾಜ್ಯ ಹೆದ್ದಾರಿ-1	
	ರಾಜ್ಯ ಹೆದ್ದಾರಿ - ಗಂಗಾಮೂಲ (ಗಣಪತಿ ಕಟ್ಟೆ) ದಿಂದ ಶೃಂಗೇರಿ ಕೊಪ್ಪ ತೀರ್ಥಹಳ್ಳಿ ಆನಂದಪುರ, ಶಿಕಾರಿಪುರ, ಹಾನಗಲ್ ತಡಸ್ ರಾಜ್ಯ ಹೆದ್ದಾರಿ -4.	
	ದಕ್ಷಿಣ ವಲಯದಲ್ಲಿದ್ದ ಉದ್ದ	
	1) ಚಿಕ್ಕಮಗಳೂರು ವಿಭಾಗ	65.00
	2) ಶಿವಮೊಗ್ಗ ವಿಭಾಗ	142.40
	ದಕ್ಷಿಣ ವಲಯದ ಮೊತ್ತ	207.40
	ಉತ್ತರ ವಲಯದಲ್ಲಿ ಉದ್ದ	
	1) ಧಾರವಾಡ ಜಿಲ್ಲೆ	60.44
	ಒಟ್ಟು ಮೊತ್ತ	267.84
2)	ರಾಜ್ಯ ಹೆದ್ದಾರಿ-2	
	ರಾಜ್ಯ ಹೆದ್ದಾರಿ - ಸಿರ್ಸಿ, ಉಕ್ಕುಂಟೆ, ಹಾವೇರಿ, ಮೈಲಾರ ಹರಪನಹಳ್ಳಿ ಕೂಡ್ಲಿಗಿ ಮೊಳಕಾಲ್ಮೂರು ರಾಜ್ಯದ ಗಡಿ (ಸಿರ್ಸಿ, ಉಕ್ಕುಂಬಿ ಹಂಪನಹಳ್ಳಿ, ಕೂಡ್ಲಿಗಿ ಇವುಗಳನ್ನು ಹೊರತುಪಡಿಸಿ ಇವುಗಳು ಈಗಾಗಲೇ ರಾಜ್ಯ ಹೆದ್ದಾರಿಯು ಭಾಗಗಳಾಗಿಸಿ).	
	ದಕ್ಷಿಣ ವಲಯದಲ್ಲಿನ ಉದ್ದ	
	1) ಚಿತ್ರದುರ್ಗ ಜಿಲ್ಲೆ	18.20
	ಉತ್ತರ ವಲಯದಲ್ಲಿನ ಉದ್ದ	
	1) ಬಳ್ಳಾರಿ ಜಿಲ್ಲೆ	70.60
	2) ಧಾರವಾಡ ಜಿಲ್ಲೆ	75.73
	3) ಉತ್ತರ ಕನ್ನಡ ಜಿಲ್ಲೆ (ಕಾರವಾರ)	10.70
	ಉತ್ತರ ವಲಯದ ಮೊತ್ತ	157.03
	ಒಟ್ಟು ಮೊತ್ತ	175.23
3)	ರಾಜ್ಯ ಹೆದ್ದಾರಿ -3	
	ರಾಜ್ಯ ಹೆದ್ದಾರಿ ತಮಿಳುನಾಡು ರಾಜ್ಯ ಗಡಿಯಿಂದ ಕನಕಪುರ ರಾಮನಗರ ಮಾಗಡಿ ಸೋಲೂರು ಸೋಪುರದಲ್ಲಿ ಕೊರಟಗೆರೆ ಮಧುಗಿರಿ ಪಾವಗಡ ಆಂದ್ರದ ರಾಜ್ಯ ಗಡಿಗೆ.	
	ದಕ್ಷಿಣ ವಲಯ	
	1) ಬೆಂಗಳೂರು (ಗ್ರಾಮಾಂತರ ಜಿಲ್ಲೆ)	141.20

2) ತುಮಕೂರು ಜಿಲ್ಲೆ	107.80
ದಕ್ಷಿಣ ವಲಯದ ಮೊತ್ತ	248.80
4) ರಾಜ್ಯ ಹೆದ್ದಾರಿ ರಾಜ್ಯ ಹೆದ್ದಾರಿ ಆಲಂದಳ್ಳಿಯಿಂದ (ಮಹಾರಾಷ್ಟ್ರ ಗಡಿ ನಾನಡೆಡ್ಡಿಂದ) ಆಂಧ್ರ ಗಡಿಗೆ	
1) ಬೀದರ್ ಜಿಲ್ಲೆ	69.00
5) ರಾಜ್ಯ ಹೆದ್ದಾರಿ -5 ರಾಜ್ಯ ಹೆದ್ದಾರಿ ಬಾಗೇಪಲ್ಲಿ ಮತ್ತು ಬಂಗಾರು ಪೇಟೆಯನ್ನು ಚಿಂತಾಮಣಿ ಮತ್ತು ಕೋಲಾರದ ಮೂಲಕ ಸೇರುವ ರಸ್ತೆ.	
1) ಕೋಲಾರ ಜಿಲ್ಲೆ	106.00
6) ರಾಜ್ಯ ಹೆದ್ದಾರಿ -6 ರಾಜ್ಯ ಹೆದ್ದಾರಿ ಕಾರವಾರ ಬೈಗಾ ಜಿಲ್ಲಾಪುರ ಮಂಚ ಗೊಂಡು ಬಂಕಾಪುರ (ರಾಜ್ಯ ಹೆದ್ದಾರಿ 4ರ ಮೇಲೆ) ಸಾವನೂರು ಗದಗ್ ಗಜೇಂದ್ರಗಡ ಕುಷ್ಟಗಿ ಹಿಲ್ಕಲ್ ಮೂಲಕ ಹಾದು ಹೋಗುವ ರಸ್ತೆ.	
1) ಧಾರವಾಡ ಜಿಲ್ಲೆ	145.97
2) ರಾಯಚೂರು ಜಿಲ್ಲೆ	24.40
3) ಬಿಜಾಪುರ ಜಿಲ್ಲೆ	7.50
4) ಉ.ಕ (ಕಾರವಾರ)	141.05
ಒಟ್ಟು	319.05
7) ರಾಜ್ಯ ಹೆದ್ದಾರಿ -6 ಎ ರಾಜ್ಯ ಹೆದ್ದಾರಿ ರಾಷ್ಟ್ರೀಯ ಹೆದ್ದಾರಿ 13 ರಿಂದ ಹಿಲ್ಕಲ್ ಹತ್ತಿರದಿಂದ ಕುಷ್ಟಗಿ ಬೇವೂರು ಕೊಪ್ಪಳಗೆ ಮತ್ತು ರಾಜ್ಯ ಹೆದ್ದಾರಿ ಶ12 ಅನ್ನು ಸೇರುವ ರಸ್ತೆ.	
1) ರಾಯಚೂರು ಜಿಲ್ಲೆ	49.06
2) - ಡಿಟೋ - ಕುಷ್ಟಗಿ ಕೊಡಗಿಗುಪ್ಪ ರಸ್ತೆ	20.00
ಒಟ್ಟು	69.06
8) ರಾಜ್ಯ ಹೆದ್ದಾರಿ 7 ರಾಜ್ಯ ಹೆದ್ದಾರಿ ಶ್ರೀರಂಗಪಟ್ಟಣ ಪಾಂಡವಪುರ ಕೆ.ಆರ್.ಪೇಟೆ ಚೆನ್ನರಾಯಪಟ್ಟಣ ಅರಸೀಕೆರೆ ಮೂಲಕ ಹೋಗುವ ರಸ್ತೆ.	
1) ಹಾಸನ ಜಿಲ್ಲೆ	51.20
2) ಮಂಡ್ಯ ಜಿಲ್ಲೆ	56.30
ಒಟ್ಟು	107.50
9) ರಾಜ್ಯ ಹೆದ್ದಾರಿ 8 ರಾಜ್ಯ ಹೆದ್ದಾರಿ ಹಿರೇಸಾಡ್ ಶ್ರವಣಬೆಳಗೊಳ ಚನ್ನರಾಯಪಟ್ಟಣ ಹೊಳೆನರಸೀಪುರ ಅರಕಲಗೂಡು ಅನಿವಾರ ಸಂತೆ ಮೂಲಕ ಹೋಗುವ ರಸ್ತೆ	
1) ಹಾಸನ ಜಿಲ್ಲೆ	28.80

2) - ಡಿಟೋ -	60.30
3) ಕೊಡಗು- ಜಿಲ್ಲೆ	4.40
ಒಟ್ಟು	93.50

10) ರಾಜ್ಯ ಹೆದ್ದಾರಿ 9
ರಾಜ್ಯ ಹೆದ್ದಾರಿ ಯಲಹಂಕ ಕುಡುಮನಕುಂಟೆ ಗ್ರಾಮ (ಹಿಂದೂಪೂರ) (ಆಂಧ್ರ ಪ್ರದೇಶ)ಕ್ಕೆ ಹೋಗುವ ರಸ್ತೆ ದೊಡ್ಡ ಬಳ್ಳಾಪುರ ಮತ್ತು ಗೌರಿಬಿದನೂರು ಮೂಲಕ ಸೇರುವ ರಸ್ತೆ.

1) ಬೆಂಗಳೂರು ನಗರ ಜಿಲ್ಲೆ	16.80
2) ಬೆಂಗಳೂರು (ಗ್ರಾಮಾಂತರ ಜಿಲ್ಲೆ)	25.80
3) ಕೋಲಾರ ಜಿಲ್ಲೆ	31.40
ಒಟ್ಟು	74.00

11) ರಾಜ್ಯ ಹೆದ್ದಾರಿ 10
ರಾಜ್ಯ ಹೆದ್ದಾರಿ ಶಿರಸಾಂಬ ಗ್ರಾಮ (ಮಹಾರಾಷ್ಟ್ರ ರಾಜ್ಯ ಗಡಿಯ ವಾಗ್ದಾಯಿಂದ ಕಿಬ್ಬನಹಳ್ಳಿ (ಆಂಧ್ರ ಗಡಿಯ ಕೋಡುಗಲ್ಲೆ) ಆಂಧ್ರ ಗುಲ್ಬರ್ಗಾ ಮತ್ತು ಸೇಲಂ ಮೂಲಕ ಸೇರುವ ರಸ್ತೆ.

1) ಗುಲ್ಬರ್ಗಾ ಜಿಲ್ಲೆ	146.60

12) ರಾಜ್ಯ ಹೆದ್ದಾರಿ 11
ರಾಜ್ಯ ಹೆದ್ದಾರಿ ರಾಜ್ಯದ ಗಡಿಯಿಂದ ಹುಲಸೂರು : ಬಾಲಕುಂದ ಬಸವಕಲ್ಯಾಣ ಮುದ್ದ ಮನಗಾನ್ ಮೂಲಕ ಹೋಗುವ ರಸ್ತೆ.

1) ಬೀದರ್ ಜಿಲ್ಲೆ	56.80
2) ಗುಲ್ಬರ್ಗಾ ಜಿಲ್ಲೆ	7.00
ಒಟ್ಟು	63.80

13) ರಾಜ್ಯ ಹೆದ್ದಾರಿ 12
ರಾಜ್ಯ ಹೆದ್ದಾರಿ ಜೇವರ್ಗಿ ಮತ್ತು ಸಂಕೇಶ್ವರವನ್ನು ರಾಜ್ಯಹೆದ್ದಾರಿ 4 ರಲ್ಲಿ ಸಂಪರ್ಕಿಸುವ ರಸ್ತೆ ಸಿಂಧಗಿ ಬಿಜಾಪುರ ಅಥಣಿ ತೋಡಬಾಳ್ ಚಿಕ್ಕೋ ಮೂಲಕ ಹೋಗುವ ರಸ್ತೆ

1) ಬೆಳಗಾವಿ ಜಿಲ್ಲೆ	137.70
2) ಬಿಜಾಪುರ ಜಿಲ್ಲೆ	122.40
3) ಗುಲ್ಬರ್ಗಾ ಜಿಲ್ಲೆ	37.40
ಒಟ್ಟು	237.50

14) ರಾಜ್ಯ ಹೆದ್ದಾರಿ 12 ಎ
ರಾಜ್ಯ ಹೆದ್ದಾರಿ ಸಂಪರ್ಕಿಸುವ ರಸ್ತೆ (ಮಹಾರಾಷ್ಟ್ರ ಕನಮೋಡಿಗೆ ಗಡಿ ಜಾಥಾ ಮೂಲಕ ಹಾದು ಹೋಗುವ ರಸ್ತೆ.

1) ಬಿಜಾಪುರ ರಸ್ತೆ	23.30

15) ರಾಜ್ಯ ಹೆದ್ದಾರಿ 13
ರಾಜ್ಯ ಹೆದ್ದಾರಿ ಮೇನಸೂಗೂರನ್ನು ಸಂಪರ್ಕಿಸುವ ರಸ್ತೆ ಆಂಧ್ರ ಪ್ರದೇಶದ ಮೆಹಬೂಬ್ ನಗರದ ಮೂಲಕ ಕಟೆಡುಪ್ಪು ಸೇರುವ ರಸ್ತೆ (ಆಂಧ್ರದ ಗಡಿಯ ಆಥೋಣಿಯನ್ನು ಸೇರುವ ರಸ್ತೆ ರಾಯಚೂರು ಮೂಲಕ ಹೋಗುವ ರಸ್ತೆ.

1) ರಾಯಚೂರು ಜಿಲ್ಲೆ	51.50

16) ರಾಜ್ಯ ಹೆದ್ದಾರಿ 14
ರಾಜ್ಯ ಹೆದ್ದಾರಿ ರಾಯದುರ್ಗ ಬಾದಾಮಿ ಪಟ್ಟದಕಲ್ ಮತ್ತು ಹೊನಗುಂಡನ್ನು ಸೇರುವ ರಸ್ತೆ.

1) ಬಿಜಾಪುರ ರಸ	83.50
2) ಬೆಳಗಾವಿ	11.70

17) ರಾಜ್ಯ ಹೆದ್ದಾರಿ 15
ರಾಜ್ಯ ಹೆದ್ದಾರಿ ವಾರಂಪಲ್ಲಿಯನ್ನು ರಾಯಚೂರ್ಗೆ ಸಂಪರ್ಕಿಸುವ ರಸ್ತೆ ಔರಾದ್ ಸಂತಪುರ ಬೀದರ್ ಚಿಂಚೋಳಿ ಸೇಡಂ ಯಾದಗೀರ್ಹಟ್ಟಿಗಡೂರ್ ದೇವದುರ್ಗ ಮುಖಾಂತರ ಹೋಗುವ ರಸ್ತೆ.

1) ಬೀದರ್ ಜಿಲ್ಲೆ	90.60
2) ಗುಲ್ಬರ್ಗಾ ಜಿಲ್ಲೆ	147.30
3) ರಾಯಚೂರು ಜಿಲ್ಲೆ	51.80
ಒಟ್ಟು	289.70

18 ರಾಜ್ಯ ಹೆದ್ದಾರಿ 16
ರಾಜ್ಯ ಹೆದ್ದಾರಿ ಸಿಂಧಗಿಯನ್ನು ಮಹಪುರದೊಡನೆ ಸಂಪರ್ಕಿಸುವ ರಸ್ತೆ.

1) ಬಿಜಾಪುರ ಜಿಲ್ಲೆ	24.0
2) ಗುಲ್ಬರ್ಗಾ ಜಿಲ್ಲೆ	52.7
ಒಟ್ಟು	76.7

19) ರಾಜ್ಯ ಹೆದ್ದಾರಿ 17
ರಾಜ್ಯ ಹೆದ್ದಾರಿ ಬೆಂಗಳೂರನ್ನು ಬಂಡಿಪುರಕ್ಕೆ ಸಂಪರ್ಕಿಸುವ ರಸ್ತೆ ರಾಮನಗರ ಚನ್ನಪಟ್ಟಣ ಮದ್ದೂರು ಮಂಡ್ಯ ಶ್ರೀರಂಗಪಟ್ಟಣ ಮೈಸೂರು ನಂಜನಗೂಡು ಗುಂಡ್ಲುಪೇಟೆ ಮುಖಾಂತರ ಹೋಗುವ ರಸ್ತೆ.

1) ಬೆಂಗಳೂರು ನಗರ ಸಭೆ	15.30
2) ನಗರ ಪರಿಮಿತಿಯಲ್ಲಿನ ರಸ್ತೆ	9.50
3) ಬೆಂಗಳೂರು ಗ್ರಾಮಾಂತರ ಜಿಲ್ಲೆ	48.60
4) ಮಂಡ್ಯ ಜಿಲ್ಲೆ	60.00
5) ಮೈಸೂರು ಜಿಲ್ಲೆ	94.00
ಒಟ್ಟು	227.40

20) ರಾಜ್ಯ ಹೆದ್ದಾರಿ 17 ಎ
ರಾಜ್ಯ ಹೆದ್ದಾರಿ ಮೈಸೂರನ್ನು ಹಸನೂರ್ ಘಾಟ್ಗೆ ಸಂಪರ್ಕಿಸುವ ರಸ್ತೆ (ತಮಿಳುನಾಡು ಗಡಿ ಕೊಯಮತ್ತೂರಿಗೆ) ಕೊಳ್ಳೇಗಾಲ ಮತ್ತು ಬಿಳಿಗಿರಿ ರಂಗನಬೆಟ್ಟದ ಮೂಲಕ ಹೋಗುವ ರಸ್ತೆ

1) ಮೈಸೂರು ರಸ್ತೆ	110.2

21) ರಾಜ್ಯ ಹೆದ್ದಾರಿ 17-ಬಿ
ರಾಜ್ಯ ಹೆದ್ದಾರಿ - (ನಂಜನಗೂಡನ್ನು ಪುಂಜನೂರ್ ಗ್ರಾಮಕ್ಕೆ ಸಂಚರಿಸುವ ರಸ್ತೆ (ತಮಿಳುನಾಡು ಗಡಿ ಕೊಯಮತ್ತೂರಿಗೆ) ಚಾಮರಾಜನಗರದ ಮುಖಾಂತರ ಹೋಗುವ ರಸ್ತೆ.

1) ಮೈಸೂರು ಜಿಲ್ಲೆ	75.0

22) ರಾಜ್ಯ ಹೆದ್ದಾರಿ 17 -ಸಿ
ರಾಜ್ಯ ಹೆದ್ದಾರಿ ಗುಂಡ್ಲುಪೇಟೆಯನ್ನು ಮದ್ದೂರಿಗೆ ಸಂಪರ್ಕಿಸುವ ರಸ್ತೆ (ಕೇರಳದ ರಾಜ್ಯ ಗಡಿಯಲ್ಲಿ ಸುಲ್ತಾನ್ ಬತ್ತೇರಿಯನ್ನು ಸೇರುವ ರಸ್ತೆ.

1) ಮೈಸೂರು ಜಿಲ್ಲೆ	35.4

23) ರಾಜ್ಯ ಹೆದ್ದಾರಿ 17 -ಡಿ
ರಾಜ್ಯ ಹೆದ್ದಾರಿ - ಮೈಸೂರನ್ನು ಬಾವಳಿ ಗ್ರಾಮವನ್ನು ಸಂಪರ್ಕಿಸುವ ರಸ್ತೆ (ಕೇರಳ ರಾಜ್ಯದ ಗಡಿಯ ಮಾನಂತಾಡಿಗೆ ಹೆಗ್ಗಡದೇವನಕೋಟೆಯ ಮುಖಾಂತರ

1) ಮೈಸೂರು ಜಿಲ್ಲೆ	93.00

24) ರಾಜ್ಯ ಹೆದ್ದಾರಿ 17 - ಇ
ರಾಜ್ಯ ಹೆದ್ದಾರಿ ಬೆಂಗಳೂರನ್ನು ಮಾಗಡಿಗೆ ಸಂಪರ್ಕಿಸುವ ರಸ್ತೆ ತಿಪ್ಪಗೊಂಡನಹಳ್ಳಿ ಮುಖಾಂತರ ಹೋಗುವ ರಸ್ತೆ (ಬೆಂಗಳೂರು ಮಾಗಡಿ ಹುಲಿಯೂರುದುರ್ಗ ರಸ್ತೆ.)

1) ಬೆಂಗಳೂರು (ನಗರ)	29.20
2) ಬೆಂಗಳೂರು (ಗ್ರಾಮಾಂತರ)	15.00
3) ಬೆಂಗಳೂರು ನಗರ ಸರಹದ್ದಿನ ರಸ್ತೆ	8.00
ಒಟ್ಟು	52.20

25) ರಾಜ್ಯ ಹೆದ್ದಾರಿ 18
ರಾಜ್ಯ ಹೆದ್ದಾರಿ ಮುಧೋಳನ್ನು ನಿಪ್ಪಾಣಿಯೊಡನೆ ಸಂಪರ್ಕಿಸುವ ರಸ್ತೆ ಚಿಕ್ಕೋಡಿಯ ಮುಖಾಂತರ.

1). ಬಿಜಾಪುರ	27.8
2) ಬೆಳಗಾವಿ	82.7
ಒಟ್ಟು	110.5

26) ರಾಜ್ಯ ಹೆದ್ದಾರಿ 19
ರಾಜ್ಯ ಹೆದ್ದಾರಿ - ಶ್ರೀರಂಗಪಟ್ಟಣವನ್ನು ಬೀದರ್‌ಗೆ ಸಂಪರ್ಕಿಸುವ ರಸ್ತೆ ನಾಗಮಂಗಲ ಚಿಕ್ಕನಾಯಕನಹಳ್ಳಿ ಹಿರಿಯೂರು ಚಳ್ಳಕೆರೆ ಬಳ್ಳಾರಿ ಸಿರಗುಪ್ಪ ಸಿಂದನೂರು ಲಿಂಗಸೂಗೂರು ಷೋರಾಪುರ ಷಹಪುರ ಜೇವರ್ಗಿ ಗುಲ್ಬರ್ಗಾ ಮತ್ತು ಹುಮನಾಬಾದ್ ಮುಖಾಂತರ ಹೋಗುವ ರಸ್ತೆ.

ದಕ್ಷಿಣ ವಲಯ	
1) ಚಿತ್ರದುರ್ಗ ಜಿಲ್ಲೆ	157.80
2) ಮಂಡ್ಯ ಜಿಲ್ಲೆ	71.70
3) ತುಮಕೂರು ಜಿಲ್ಲೆ	83.40
ದಕ್ಷಿಣ ವಲಯದ ಮೊತ್ತ	312.90
ಉತ್ತರ ವಲಯ	
1) ಬಳ್ಳಾರಿ ಜಿಲ್ಲೆ	85.30
2) ಬೀದರ್ ಜಿಲ್ಲೆ	59.10
3) ಗುಲ್ಬರ್ಗಾ ಜಿಲ್ಲೆ	191.00
4) ರಾಯಚೂರು ಜಿಲ್ಲೆ	101.40
ಉತ್ತರ ವಲಯದ ಮೊತ್ತ	436.80
ಒಟ್ಟು ಮೊತ್ತ	749.70

27) ರಾಜ್ಯ ಹೆದ್ದಾರಿ 19 ಎ
ರಾಜ್ಯ ಹೆದ್ದಾರಿ ಹುಳಿಯಾರನ್ನು ಆನಗೋಡುಗೆ ಸಂಪರ್ಕಿಸುವ ರಸ್ತೆ ಹೊಳಲ್ಕೆರೆ ಮತ್ತು ಹೊಸದುರ್ಗ ಮುಖಾಂತರ.

1) ಚಿತ್ರದುರ್ಗ ಜಿಲ್ಲೆ	101.90
2) ತುಮಕೂರು ಜಿಲ್ಲೆ	6.80
ಒಟ್ಟು	108.70

28) ರಾಜ್ಯ ಹೆದ್ದಾರಿ 20
ರಾಜ್ಯ ಹೆದ್ದಾರಿ ರಾಯಚೂರನ್ನು ಬಾಚಿಯೊಡನೆ ಸಂಪರ್ಕಿಸುವ ರಸ್ತೆ (ಮಹಾರಾಷ್ಟ್ರ ರಾಜ್ಯ ಗಡಿಯ ವೆನ್ಗುರ್ಲಾಗೆ) ಲಿಂಗಸೂಗೂರು ಹುನಗುಂದ ಬಾಗಲಕೋಟೆ ಲೋಕಾಪುರ ಯರಗಟ್ಟಿ ಮತ್ತು ಬೆಳಗಾವಿ ಮುಖಾಂತರ.

1) ಬೆಳಗಾವಿ ಜಿಲ್ಲೆ	106.00
2) ಬಿಜಾಪುರ ಜಿಲ್ಲೆ	120.10
3) ಹುನಗುಂದ ನಗರ ಪ್ರದೇಶದಲ್ಲಿ ಬರುವ ರಾಯಚೂರು ಬಾಚಿ ರಸ್ತೆ.	2.00
4) ರಾಯಚೂರು ಜಿಲ್ಲೆ	125.80
ಒಟ್ಟು	353.90

29) ರಾಜ್ಯ ಹೆದ್ದಾರಿ 21
ರಾಜ್ಯ ಹೆದ್ದಾರಿ ಹಳೇಬೀಡು ಹಾಸನ ಅರಕುಲಗೂಡು
ಪೆರಿಯಾಪಟ್ಟಣ ಕೊನೂರು ರಾಜ್ಯ ಗಡಿಯ
ಮುಖಾಂತರ ಹೋಗುವ ರಸ್ತೆ.

1) ಹಾಸನ ಜಿಲ್ಲೆ	89.40
2) ಕೊಡಗು ಜಿಲ್ಲೆ	37.60
3) ಮೈಸೂರು ಜಿಲ್ಲೆ	35.20
ಒಟ್ಟು	162.20

30) ರಾಜ್ಯ ಹೆದ್ದಾರಿ 22
ರಾಜ್ಯ ಹೆದ್ದಾರಿ ಗುಲ್ಬರ್ಗಾ ಅಪಚಲ್ಪುರ ಹೊಸೂರು
ಮತ್ತು ರಾಜ್ಯ ಗಡಿಯನ್ನು ಸಂಪರ್ಕಿಸುವ ರಸ್ತೆ

1) ಗುಲ್ಬರ್ಗಾ ಜಿಲ್ಲೆ	96.24

31) ರಾಜ್ಯ ಹೆದ್ದಾರಿ 23
ರಾಜ್ಯ ಹೆದ್ದಾರಿ ರಾಯಚೂರನ್ನು ಗಿನಿಗೆರಾವನ್ನು
ಸಂಪರ್ಕಿಸುವ ರಸ್ತೆ ಮಾನ್ವಿ ಸಿಂಧನೂರು ಮತ್ತು
ಗಂಗಾವತಿಯ ಮೂಲಕ ಹೋಗುವ ರಸ್ತೆ.

1) ರಾಯಚೂರು ಜಿಲ್ಲೆ	161.60

32) ರಾಜ್ಯ ಹೆದ್ದಾರಿ 24
ರಾಜ್ಯ ಹೆದ್ದಾರಿ ತರೀಕೆರೆಯನ್ನು ಹೊಸದುರ್ಗಕ್ಕೆ
ಸಂಪರ್ಕಿಸುವ ರಸ್ತೆ ವಿವಿ ಪುರ ಹಿರಿಯೂರು
(ರಾ ಹೆ 4) ಮುಂದೆ ರಾಜ್ಯದ ಗಡಿಯವರೆಗೆ

1) ಚಿಕ್ಕಮಗಳೂರು ಜಿಲ್ಲೆ	34.00
2) ಚಿತ್ರದುರ್ಗ ಜಿಲ್ಲೆ	102.50
ಒಟ್ಟು	136.50

33) ರಾಜ್ಯ ಹೆದ್ದಾರಿ 25
ರಾಜ್ಯ ಹೆದ್ದಾರಿ ಹೊಸಪೇಟೆಯನ್ನು ಮಂಗಳೂರನ್ನು
ರಾ ಹೆ 17 ರಲ್ಲಿ ಸಂಪರ್ಕಿಸುವ ರಸ್ತೆ ಹರಪನಹಳ್ಳಿ
ಹರಿಹರ ಹೊನ್ನಾಳಿ ಆಗುಂಬೆ ಕಾರ್ಕಳ ಮುಖಾಂತರ
ಹೋಗುವ ರಸ್ತೆ.

ದಕ್ಷಿಣ ವಲಯ	
1) ಚಿತ್ರದುರ್ಗ ಜಿಲ್ಲೆ	38.00
2) ಮಂಗಳೂರು ದ.ಕ. ಜಿಲ್ಲೆ	96.60
3) ಶಿವಮೊಗ್ಗ ಜಿಲ್ಲೆ	148.00
ದಕ್ಷಿಣ ವಲಯದ ಒಟ್ಟು ಮೊತ್ತ	282.60
ಉತ್ತರ ವಲಯ	
1) ಬಳ್ಳಾರಿ ಜಿಲ್ಲೆ	91.4
ಒಟ್ಟು ಮೊತ್ತ (ಉತ್ತರ ಮತ್ತು ದಕ್ಷಿಣ ವಲಯಗಳು ಸೇರಿ)	374.0

34) ರಾಜ್ಯ ಹೆದ್ದಾರಿ 25 ಎ
ರಾಜ್ಯ ಹೆದ್ದಾರಿ ಆಗುಂಬೆಯನ್ನು ಮಲ್ಪೆಯೊಡನೆ
ಸಂಪರ್ಕಿಸುವ ರಸ್ತೆ ಹೆಬ್ರಿ ಉಡುಪಿ ಮುಖಾಂತರ

1) ದ.ಕ. ಮಂಗಳೂರು ಜಿಲ್ಲೆ	43.40

35) ರಾಜ್ಯ ಹೆದ್ದಾರಿ 26
ರಾಜ್ಯ ಹೆದ್ದಾರಿ ಹೊನ್ನಾಳಿ ಅಯನೂರು ಅರಸಾಳು
ಹೊಸನಗರ ಹುಲಿಕಲ್ಲು ಬೆಂದೂರುಗಳನ್ನು ಸಂಪರ್ಕಿಸುವ ರಸ್ತೆ.

1) ದ.ಕ. ಮಂಗಳೂರು ಜಿಲ್ಲೆ	17.20
2) ಶಿವಮೊಗ್ಗ ಜಿಲ್ಲೆ	131.50
ಒಟ್ಟು	148.70

36) ರಾಜ್ಯ ಹೆದ್ದಾರಿ 27
ರಾಜ್ಯ ಹೆದ್ದಾರಿ ಸಕಲೇಶಪುರ (ರಾಹೆ 48) ಸೋಮವಾರಪೇಟೆ
ಮಡಿಕೇರಿ ವಿರಾಜಪೇಟೆಯನ್ನು ಸಂಪರ್ಕಿಸುವ ರಸ್ತೆ.

1) ಹಾಸನ ಜಿಲ್ಲೆ	25.20
2) ಕೊಡಗು ಜಿಲ್ಲೆ	105.90
ಒಟ್ಟು	131.10

37) ರಾಜ್ಯ ಹೆದ್ದಾರಿ 28
ರಾಜ್ಯ ಹೆದ್ದಾರಿ ಸೂಪ ಹುಳಿಯೂರು ಧಾರವಾಡ
ಹೆಬ್ಬೂರುಗಳನ್ನು ಸಂಪರ್ಕಿಸುವ ರಸ್ತೆ.

1) ಧಾರವಾಡ ಜಿಲ್ಲೆ	56.85
2) ಉ.ಕ. ಕಾರವಾರ ಜಿಲ್ಲೆ	35.30
ಒಟ್ಟು	92.15

38) ರಾಜ್ಯ ಹೆದ್ದಾರಿ 29
ರಾಜ್ಯ ಹೆದ್ದಾರಿ ಲಿಂಗಸೂಗೂರು ಮುರಗಲ್ ತಾವರೆಕೆರೆ
ಗಂಗಾವತಿ ಕಂಪ್ಲಿ ಕುಡುತಿಕೆಗಳನ್ನು ಸಂಪರ್ಕಿಸುವ ರಸ್ತೆ
(ಲಿಂಗಸೂಗೂರು ಮಡಗಲ್‌ಗಳನ್ನು ಹೊರತುಪಡಿಸಿ)

1) ಧಾರವಾಡ ಜಿಲ್ಲೆ	32.80
2) ರಾಯಚೂರು ಜಿಲ್ಲೆ	84.00
ಒಟ್ಟು	116.80

39) ರಾಜ್ಯ ಹೆದ್ದಾರಿ 30
ರಾಜ್ಯ ಹೆದ್ದಾರಿ ಸಿಂಧನೂರು ನರಗುಂದ್‌ಗೆ ಸಂಪರ್ಕಿಸುವ
ರಸ್ತೆ ಕುಷ್ಟಗಿ ಮತ್ತು ರೋಣ ಮುಖಾಂತರ.

1) ಧಾರವಾಡ ಜಿಲ್ಲೆ	74.60
2) ರಾಯಚೂರು ಜಿಲ್ಲೆ	81.60
ಒಟ್ಟು	156.20

40) ರಾಜ್ಯ ಹೆದ್ದಾರಿ 31
ರಾಜ್ಯ ಹೆದ್ದಾರಿ ಜಾಥಾ ಅನಂತಪುರ ಅಥಣಿ
ಗುರುಲಾಪುರ ಗೋಕಾಕ್ ನೇಸರಿ ಬೈಲಹೊಂಗಲ್
ಖಾನಾಪುರ (ರಾಹೆ 4 ಎನಲ್ಲಿ) ಜಂಬೋಟಿ ಕೊನಕುಂಟಿ
ಗೋವಾ ಗಡಿಯನ್ನು ಸಂಪರ್ಕಿಸುವ ರಸ್ತೆ.

1) ಬೆಳಗಾವಿ ಜಿಲ್ಲೆ	244.80

41) ರಾಜ್ಯ ಹೆದ್ದಾರಿ 32
ರಾಜ್ಯ ಹೆದ್ದಾರಿ ಉಮರ್ಗ ಗಡಿ ಅಲಂದ ಮಹಾಗಾನ್ ಕೊಡಲಿ ಸೂಳೆಪೇಟೆ ಚಿಂಚೋಳಿ ರಸ್ತೆಯಿಂದ ರಾಜ್ಯ ಹೆದ್ದಾರಿ 15ನ್ನು ಸೂಳೆ ಪೇಟೆ ಹತ್ತಿರ ಸೇರುವ ರಸ್ತೆ

1) ಗುಲಬರ್ಗಾ ಜಿಲ್ಲೆ	118.6

42) ರಾಜ್ಯ ಹೆದ್ದಾರಿ 33
ರಾಜ್ಯ ಹೆದ್ದಾರಿ ಕೊಳ್ಳೇಗಾಲ ಮಳವಳ್ಳಿ ಮದ್ದೂರು ಕುಣಿಗಲ್ ತುಮಕೂರು ಕೊರಟಗೆರೆಯಿಂದ ರಾಜ್ಯ ಹೆದ್ದಾರಿ 3ನ್ನು ಕೊರಟಗೆರೆ ಹತ್ತಿರ ಸೇರುವ ರಸ್ತೆ.

1) ಮಂಡ್ಯ ಜಿಲ್ಲೆ	59.5
2) ಮೈಸೂರು ಜಿಲ್ಲೆ	14.4
3) ತುಮಕೂರು ಜಿಲ್ಲೆ	93.80
ಒಟ್ಟು	167.70

43) ರಾಜ್ಯ ಹೆದ್ದಾರಿ 34
ರಾಜ್ಯ ಹೆದ್ದಾರಿ ಧಾರವಾಡವನ್ನು ಅನಮೋಡ್‌ಗೆ ಸಂಪರ್ಕಿಸುವ ರಸ್ತೆ (ಧಾರವಾಡ ಗೋವಾ ರಸ್ತೆ)

1) ಬೆಳಗಾವಿ ಜಿಲ್ಲೆ	31.40
2) ಧಾರವಾಡ ಜಿಲ್ಲೆ	29.90
ಒಟ್ಟು	61.30

44) ರಾಜ್ಯ ಹೆದ್ದಾರಿ 35
ರಾಜ್ಯ ಹೆದ್ದಾರಿ ಶಿಡ್ಲಘಟ್ಟದಿಂದ ರಾಜ್ಯದ ಗಡಿಯವರೆಗೆ ಹೊಸಕೋಟೆ ಮತ್ತೆ ಅನೇಕಲ್ ಮುಖಾಂತರ

1) ಬೆಂಗಳೂರು (ನಗರ) ಜಿಲ್ಲೆ	52.90
2) ಬೆಂಗಳೂರು (ಗ್ರಾ) ಜಿಲ್ಲೆ	18.50
3) ಕೋಲಾರ ಜಿಲ್ಲೆ	17.30
ಒಟ್ಟು	88.7

45) ರಾಜ್ಯ ಹೆದ್ದಾರಿ 37
ರಾಜ್ಯ ಹೆದ್ದಾರಿ ಸುಬ್ರಹ್ಮಣ್ಯವನ್ನು ಉಡುಪಿಗೆ ಸಂಪರ್ಕಿಸುವ ರಸ್ತೆ ಧರ್ಮಸ್ಥಳ ಬೆಳ್ತಂಗಡಿ ಕಾರ್ಕಳ ಮುಖಾಂತರ

1) ದ.ಕ. ಜಿಲ್ಲೆ ಮಂಗಳೂರು	131.00

46) ರಾಜ್ಯ ಹೆದ್ದಾರಿ 39
ರಾಜ್ಯ ಹೆದ್ದಾರಿ ಬೆಂಗಳೂರನ್ನು ಹೆಸರುಘಟ್ಟದೊಡನೆ ಸಂಪರ್ಕಿಸುವ ರಸ್ತೆ

1) ಬೆಂಗಳೂರು ನಗರ ಜಿಲ್ಲೆ	13.40

47) ರಾಜ್ಯ ಹೆದ್ದಾರಿ 40
ರಾಜ್ಯ ಹೆದ್ದಾರಿ ಬಳ್ಳಾರಿಯನ್ನು ಕೂಡುವಿಕೆ ಹರಪನ ಹಳ್ಳಿಯೊಡನೆ ಸಂಪರ್ಕಿಸುವ ರಸ್ತೆ ಸಂಡೂರು ಕೂಡ್ಲಿಗಿ (ಹರಪನಹಳ್ಳಿ ಕೊಟ್ಟೂರು ಸಂಡೂರು ಕೋಂಡಗಲ್ ರಸ್ತೆ.

1) ಬಳ್ಳಾರಿ ಜಿಲ್ಲೆ	99.4

48) ರಾಜ್ಯ ಹೆದ್ದಾರಿ 41
ರಾಜ್ಯ ಹೆದ್ದಾರಿ ಶಿರಾಡಾನ್ ಗ್ರಾಮ (ಮಹಾರಾಷ್ಟ್ರ ರಾಜ್ಯದ ಗಡಿಯ ಪಂಡರಾಪುರ ಲಿಂಗಸೂಗೂರನ್ನು ಸಂಪರ್ಕಿಸುವ ರಸ್ತೆ, ಬಲ್ಕಿ ಇಂಡಿ ಹೂವಿನಹಪ್ಪರಗಿ ಮುದ್ದೆ ಬಿಹಾಳ ಮತ್ತು ನಾರಾಯಣಪುರ ಡ್ಯಾಂ ಮುಖಾಂತರ

1) ಬಿಜಾಪುರ ಜಿಲ್ಲೆ	129.00
2) ಬಿಜಾಪುರ ಜಿಲ್ಲೆ	17.0
ಬಿಜಾಪುರ ಜಿಲ್ಲೆ (ಕೃಷ್ಣ ಮೇಲ್ದಂಡೆ ಯೋಜನೆಯ ಅಧೀನದಲ್ಲಿವೆ)	21.0
ರಾಯಚೂರು	23.6
ಒಟ್ಟು	190.6

49) ರಾಜ್ಯ ಹೆದ್ದಾರಿ 41 ಎ
ರಾಜ್ಯ ಹೆದ್ದಾರಿ ಮುದ್ದೆ ಬಿಹಾಳನಿಂದ ಹುನಗುಂದಗೆ

1) ಬಿಜಾಪುರ ಜಿಲ್ಲೆ	15.0
2) ಬಿಜಾಪುರ ಜಿಲ್ಲೆ (ಮುದ್ದೆಬಿಹಾಳ ತೊಂಡಗದರಿ ತೊಂಗದರಿ ರಾ.ಹೆ 13 ತಾತ್ಕಾಲಿಕ ಮಾರ್ಗ)	16.2
ಒಟ್ಟು	31.2

50) ರಾಜ್ಯ ಹೆದ್ದಾರಿ 41 ಬಿ
ರಾಜ್ಯ ಹೆದ್ದಾರಿ 41 ಅನ್ನು ರಾ.ಹೆ. 13 ಅನ್ನು ಸಂಪರ್ಕಿಸುವ ರಸ್ತೆ ಹೂವಿನಪಡರಗಿ ಬಸವನ ಬಾಗೇವಾಡಿ ಮತ್ತು ಮನಗುಳಿ ಮುಖಾಂತರ.

1) ಬಿಜಾಪುರ ಜಿಲ್ಲೆ	11.5
2) ಡಿಟ್ಟೋ ಬಿಜಾಪುರ ಬಾಗೇವಾಡಿ ರಸ್ತೆ (ಮನಗುಳಿಯಿಂದ ಬಾಗೇವಾಡಿ (ರಾ.ಹೆ 13 ರ ತಾತ್ಕಾಲಿಕ ಮಾರ್ಗ)	21.8
ಒಟ್ಟು	33.3

51) ರಾಜ್ಯ ಹೆದ್ದಾರಿ 42
ರಾಜ್ಯ ಹೆದ್ದಾರಿ ಅಂಕೋಲವನ್ನು ಜೋಳದರ ಗ್ರಾಮ ಆಂಧ್ರ ಗಡಿಯವರೆಗೆ ಯಲ್ಲಾಪುರ ಕೆಜಿಎಫ್ ಹುಬ್ಬಳ್ಳಿ ಗದಗ್ ಕೊಪ್ಪಳ ಹೊಸಪೇಟೆ ಮತ್ತು ಬಳ್ಳಾರಿಯ ಮುಖಾಂತರ

1) ಬಿಜಾಪುರ ಜಿಲ್ಲೆ	91.1

2) ಧಾರವಾಡ ಜಿಲ್ಲೆ 132.2
3) ರಾಯಚೂರು 43.6
4) ಉ.ಕ. ಜಿಲ್ಲೆ ಕಾರವಾರ 91.0
ಒಟ್ಟು 357.9

52) ರಾಜ್ಯ ಹೆದ್ದಾರಿ 42 ಎ
ರಾಜ್ಯ ಹೆದ್ದಾರಿ 48 ಅನ್ನು ಗಂಗಾವತಿಯೊಡನೆ ಸಂಪರ್ಕಿಸುವ ರಸ್ತೆ 8.0

53) ರಾಜ್ಯ ಹೆದ್ದಾರಿ 48
ರಾಜ್ಯ ಹೆದ್ದಾರಿ ಕುಮುಟಾವನ್ನು ಕೊಡಮಡುಗೆ
ಸಂಪರ್ಕಿಸುವ ರಸ್ತೆ (ಆಂಧ್ರ ಗಡಿಯ ದೊಡ್ಡಂಗಡಿ)
ಸಿದ್ಧಾಪುರ ಸೊರಬ ಶಿಕಾರಿಪುರ ಹೊನ್ನಾಳಿ ಬಸವ
ಪಟ್ಟಣ ಚಿತ್ರದುರ್ಗ ಚಳ್ಳಕೆರೆ ಮತ್ತು ಪಾವಗಡ ಮುಖಾಂತರ

ದಕ್ಷಿಣ ವಲಯ
1) ಚಿತ್ರದುರ್ಗ ಜಿಲ್ಲೆ 118.30
2) ತುಮಕೂರು ಜಿಲ್ಲೆ 42.0
3) ಶಿವಮೊಗ್ಗ ಜಿಲ್ಲೆ 140.60
ದಕ್ಷಿಣ ವಲಯದ ಒಟ್ಟು ಮೊತ್ತ 300.90

ಉತ್ತರ ವಲಯ
1) ಉ.ಕ. ಜಿಲ್ಲೆ ಕಾರವಾರ 84.0
ಒಟ್ಟು ಮೊತ್ತ 384.90

54) ರಾಜ್ಯ ಹೆದ್ದಾರಿ 50
ರಾಜ್ಯ ಹೆದ್ದಾರಿ ಚಿತ್ರದುರ್ಗವನ್ನು ಭದ್ರಾವತಿಯೊಡನೆ
ಸಂಪರ್ಕಿಸುವ ರಸ್ತೆ ಹೊಳಲ್ಕೆರೆ ಚೆನ್ನಗಿರಿ (ಚಿತ್ರದುರ್ಗ
ಭದ್ರಾವತಿ ರಸ್ತೆ) ಮಾರ್ಗವಾಗಿ
1) ಚಿತ್ರದುರ್ಗ ಜಿಲ್ಲೆ 47.00
2) ಶಿವಮೊಗ್ಗ ಜಿಲ್ಲೆ 49.40
ಒಟ್ಟು 98.40

55) ರಾಜ್ಯ ಹೆದ್ದಾರಿ 52
ರಾಜ್ಯ ಹೆದ್ದಾರಿ ಆಗುಂಬೆಯನ್ನು ಬೈಂದೂರಿಗೆ ಸಂಪರ್ಕಿಸುವ
ರಸ್ತೆ ರಾಷ್ಟ್ರೀಯ ಹೆದ್ದಾರಿ 17 ರಲ್ಲಿ
1) ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು 88.80

56) ರಾಜ್ಯ ಹೆದ್ದಾರಿ 57
ರಾಜ್ಯ ಹೆದ್ದಾರಿ ಬೆಳಗೆರೆಯನ್ನು ತರೀಕೆರೆಗೆ ಸಂಪರ್ಕಿಸುವ
ರಸ್ತೆ. ಕೃಷ್ಣರಾಜ ಸಾಗರ ಹೊಳೇನರಸೀಪುರ ಹಾಸನ
ಬೇಲೂರು ಮತ್ತು ಚಿಕ್ಕಮಗಳೂರು ಮಾರ್ಗವಾಗಿ
1) ಚಿಕ್ಕಮಗಳೂರು ಜಿಲ್ಲೆ 66.60
2) ಬೈಪಾಸ್ ರಸ್ತೆ 3.20
3) ಹಾಸನ ಜಿಲ್ಲೆ 96.40
4) ಮೈಸೂರು ಜಿಲ್ಲೆ 38.75
ಒಟ್ಟು 204.9

57) ರಾಜ್ಯ ಹೆದ್ದಾರಿ 58
ರಾಜ್ಯ ಹೆದ್ದಾರಿ ಮೂಡಿಗೆರೆಯನ್ನು ರಾಜ್ಯದ ಗಡಿಗೆ ಸಂಪರ್ಕಿಸುವ ರಸ್ತೆ ಆಂಧ್ರ ವೆಂಕಟಗಿರಿ ಕೋಟೆಗೆ ಸೇರುವ ರಸ್ತೆ ಬೇಲೂರು ಹಳೇಬೀಡು ಬಾಣಾವಾರ ಹುಳಿಯೂರು ಗೌರಿಬಿದನೂರು, ಚಿಕ್ಕಬಳ್ಳಾಪುರ ಚಿಂತರಮಣಿ, ಶ್ರೀರಂಗಪಟ್ಟಣ ಮುಳಬಾಗಿಲು ಮುಖಾಂತರ ಹೋಗುವ ರಸ್ತೆ

1)	ಚಿಕ್ಕಮಗಳೂರು ಜಿಲ್ಲೆ	17.00
2)	ಹಾಸನ ಜಿಲ್ಲೆ	91.20
3)	ಕೋಲಾರ ಜಿಲ್ಲೆ	50.40
4)	ತುಮಕೂರು ಜಿಲ್ಲೆ	125.30
5)	ಕೋಲಾರ ಜಿಲ್ಲೆ	105.90
	ಒಟ್ಟು	389.80

58) ರಾಜ್ಯ ಹೆದ್ದಾರಿ 63
ರಾಜ್ಯ ಹೆದ್ದಾರಿ ಬಿಜಾಪುರವನ್ನು ರಾಷ್ಟ್ರೀಯ ಹೆದ್ದಾರಿ 13ಅನ್ನು ಹುಬ್ಬಳ್ಳಿಯನ್ನು ರಾ.ಹೆ. 4ರಲ್ಲಿ ನರಗುಂದ ನವಲಗುಂದಾ ಮುಖಾಂತರ ಹೋಗುವ ರಸ್ತೆ

1)	ಬಿಜಾಪುರ ಜಿಲ್ಲೆ	118.9	
2)	ಧಾರವಾಡ ಜಿಲ್ಲೆ	78.2	
	ಒಟ್ಟು		197.1

59) ರಾಜ್ಯ ಹೆದ್ದಾರಿ 64
ರಾಜ್ಯ ಹೆದ್ದಾರಿ ಕಡೂರನ್ನು ಬಂಟ್ವಾಳದೊಡನೆ ಸಂಪರ್ಕಿಸುವ ರಸ್ತೆ ಚಿಕ್ಕಮಗಳೂರು ಮೂಡಿಗೆರೆ ಬೆಳ್ತಂಗಡಿ ಮಾರ್ಗವಾಗಿ ಸೇರುವ ರಸ್ತೆ

1)	ಚಿಕ್ಕಮಗಳೂರು ಜಿಲ್ಲೆ	100.5
2)	ದ.ಕ. ಜಿಲ್ಲೆ ಮಂಗಳೂರು	66.6
	ಒಟ್ಟು	167.1

60) ರಾಜ್ಯ ಹೆದ್ದಾರಿ 64ಎ
ರಾಜ್ಯ ಹೆದ್ದಾರಿ ಬೆಳ್ತಂಗಡಿಯನ್ನು ಮುಲ್ಕಿಯೊಡನೆ ಸಂಪರ್ಕಿಸುವ ರಸ್ತೆ ಮೂಡಬಿದ್ರಿಯ ಮುಖಾಂತರ

1)	ದಕ್ಷಿಣ ಕನ್ನಡ ಮಂಗಳೂರು ಜಿಲ್ಲೆ	57.40

61) ರಾಜ್ಯ ಹೆದ್ದಾರಿ 65
ರಾಜ್ಯ ಹೆದ್ದಾರಿ ಬಿಜಾಪುರವನ್ನು ರಾ.ಹೆ. 13ರಲ್ಲಿ ಧಾರವಾಡವನ್ನು ರಾ.ಹೆ.4.ರಲ್ಲಿಯೂ ಸಂಪರ್ಕಿಸುವ ರಸ್ತೆ ಜಮಖಂಡಿ ಮುಡೋಳ್ ಲೋಕಾಪುರ ರಾಮದುರ್ಗ ಸವದತ್ತಿ ಮುಖಾಂತರ

1)	ಬೆಳಗಾವಿ ಜಿಲ್ಲೆ	80.4	
2)	ಬಿಜಾಪುರ ಜಿಲ್ಲೆ	110.8	
3)	ಧಾರವಾಡ ಜಿಲ್ಲೆ	20.7	
	ಒಟ್ಟು		211.0

62) ರಾಜ್ಯ ಹೆದ್ದಾರಿ 66
ರಾಜ್ಯ ಹೆದ್ದಾರಿ ಪಡುಬಿದ್ರಿಯನ್ನು ಕೊಟ್ಟಿಗೆ ಹಾರದೊಡನೆ ಸಂಪರ್ಕಿಸುವ ರಸ್ತೆ ಕಾರ್ಕಳ ಬಡಗೋಳಿ ಮಲ್ಲೇಶ್ವರ ಕಳಸ ಮೂಗುಂದಿಯ ಮುಖಾಂತರ

1) ಚಿಕ್ಕಮಗಳೂರು ಜಿಲ್ಲೆ	94.00
2) ದ.ಕ. ಜಿಲ್ಲೆ ಮಂಗಳೂರು	55.50
ಒಟ್ಟು	149.50

63) ರಾಜ್ಯ ಹೆದ್ದಾರಿ 66ಎ
ರಾಜ್ಯ ಹೆದ್ದಾರಿ 66ಅನ್ನು ಬಿಳಮಂಡೆಯ ಹತ್ತಿರ ಮಂಗಳೂರಿಗೆ ಹೋಗುವ ರಸ್ತೆಯನ್ನು ರಾ.ಹೆ.17ರಲ್ಲಿ ಸೇರುವ ರಸ್ತೆ ಕಟೀಲು ಬಾಜ್ಪೆ ಮುಖಾಂತರ.

1) ದ.ಕ. ಮಂಗಳೂರು ಜಿಲ್ಲೆ	47.70

64) ರಾಜ್ಯ ಹೆದ್ದಾರಿ 68
ರಾಜ್ಯ ಹೆದ್ದಾರಿ ತುಮಕೂರನ್ನು ರಾ. ಹೆ. 4ರಲ್ಲಿ ಹೊನ್ನಾವರವನ್ನು ರಾ. ಹೆ. 17ರಲ್ಲಿಯೂ ಸಂಪರ್ಕಿಸುವ ರಸ್ತೆ ಗುಬ್ಬಿ ತಿಪಟೂರು ಅರಸೀಕೆರೆ ಕಡೂರು ತರೀಕೆರೆ ಭದ್ರಾವತಿ ಶಿವಮೊಗ್ಗ ಸಾಗರ ತಾಳಗುಪ್ಪ ಮುಖಾಂತರ

ದಕ್ಷಿಣ ವಲಯ

ಚಿಕ್ಕಮಗಳೂರು ಜಿಲ್ಲೆ	58.20
2) ಹಾಸನ ಜಿಲ್ಲೆ	132.00
3) ಶಿವಮೊಗ್ಗ ಜಿಲ್ಲೆ	118.35
4) ತುಮಕೂರು ಹೊನ್ನಾವರ ಬೈಪಾಸ್ ರಸ್ತೆ	9.25
5) ತುಮಕೂರು ಜಿಲ್ಲೆ	87.80
6) ತುಮಕೂರು ನಗರದಲ್ಲಿನ ಭಾಗಗಳು	3.60
ದಕ್ಷಿಣವಲಯದ ಮೊತ್ತ	309.20
ಉತ್ತರ ವಲಯ	
ಉ.ಕ. ಕಾರವಾರ	71.13
ಒಟ್ಟು ಮೊತ್ತ	380.33

65) ರಾಜ್ಯ ಹೆದ್ದಾರಿ 68ಎ
ರಾಜ್ಯ ಹೆದ್ದಾರಿ ತಿಪಟೂರನ್ನು ಹಾಸನದೊಡನೆ ರಾ.ಹೆ. 40ರಲ್ಲಿ ಸಂಪರ್ಕಿಸುವ ರಸ್ತೆ

1) ಹಾಸನ ಜಿಲ್ಲೆ	37.60
2) ತುಮಕೂರು ಜಿಲ್ಲೆ	11.40
ಒಟ್ಟು	49.90

66) ರಾಜ್ಯ ಹೆದ್ದಾರಿ 69
ರಾಜ್ಯ ಹೆದ್ದಾರಿ ಕುಮಟಾವನ್ನು ರಾ.ಹೆ.4ರೊಡನೆ ಸಂಪರ್ಕಿಸುವ ರಸ್ತೆ ಸಿರಸ್ಸಿ ಮುಂಡಗೋಡು ಮತ್ತು ಕಡಪಾ ಮುಖಾಂತರ

1) ಧಾರವಾಡ ಜಿಲ್ಲೆ	16.0
2) ಧಾರವಾಡ ಜಿಲ್ಲೆ	123.2
ಒಟ್ಟು	139.2

67) ರಾಜ್ಯ ಹೆದ್ದಾರಿ 74
ರಾಜ್ಯ ಹೆದ್ದಾರಿ ನೆಲಮಂಗಲವನ್ನು ರಾ.ಹೆ.4ರಲ್ಲಿ ಚಿಕ್ಕಬಳ್ಳಾಪುರವನ್ನು ರಾ.ಹೆ. 7ರಲ್ಲಿ ಸಂಪರ್ಕಿಸುವ ರಸ್ತೆ (ದೊಡ್ಡಬಳ್ಳಾಪುರದ ಮುಖಾಂತರ)

1) ಕೋಲಾರ ಜಿಲ್ಲೆ	13.30
2) ಬೆಂಗಳೂರು (ಗ್ರಾಮಾಂತರ)	49.50
ಒಟ್ಟು	62.80

68) ರಾಜ್ಯ ಹೆದ್ದಾರಿ 74ಎ
ರಾಜ್ಯ ಹೆದ್ದಾರಿ ನದಿಯನ್ನು ಬೆಂಗಳೂರಿನೊಡನೆ ಸಂಪರ್ಕಿಸುವ ರಸ್ತೆ ದೇವನಹಳ್ಳಿ ಮುಖಾಂತರ (ದೇವನಹಳ್ಳಿಯಿಂದ ಬೆಂಗಳೂರಿಗೆ)

1) ಬೆಂಗಳೂರು ಗ್ರಾ. ಜಿಲ್ಲೆ	9.80
2) ಕೋಲಾರ ಜಿಲ್ಲೆ	4.80
ಒಟ್ಟು	14.6

69) ರಾಜ್ಯ ಹೆದ್ದಾರಿ 82
ರಾಜ್ಯ ಹೆದ್ದಾರಿ ಹೊಸಕೋಟೆಯನ್ನು ರಾ.ಹೆ.4ರಲ್ಲಿ ಗೌನಪಲ್ಲಿಯೊಡನೆ ಸಂಪರ್ಕಿಸುವ ರಸ್ತೆ ಮುಂದಕ್ಕೆ ಆಂಧ್ರಪ್ರದೇಶದ ಕಡಪದೊಡನೆ ಚಿಂತಾಮಣಿಯ ಮೂಲಕ ಸೇರುವ ರಸ್ತೆ.

1) ಬೆಂಗಳೂರು ಗ್ರಾ. ಜಿಲ್ಲೆ	23.20
2) ಕೋಲಾರ ಜಿಲ್ಲೆ	64.40
ಒಟ್ಟು	87.6

70) ರಾಜ್ಯ ಹೆದ್ದಾರಿ 86
ರಾಜ್ಯ ಹೆದ್ದಾರಿ ಬೆಂಗಳೂರನ್ನು ಮೈಸೂರಿನೊಡನೆ ಸಂಪರ್ಕಿಸುವ ರಸ್ತೆ ಕನಕಪುರ ಮಳವಳ್ಳಿ ಮತ್ತು ಬನ್ನೂರು ಮೂಲಕ

1) ಬೆಂಗಳೂರು ನಗರ	22.24
2) ಬೆಂಗಳೂರು ನಗರ ಪರಿಮಿತಿ ರಸ್ತೆ	8.16
3) ಬೆಂಗಳೂರು ಗ್ರಾಮಾಂತರ	47.00
4) ಮಂಡ್ಯ ಜಿಲ್ಲೆ	40.50
5) ಮೈಸೂರು ಜಿಲ್ಲೆ	29.60
ಒಟ್ಟು	147.50

71) ರಾಜ್ಯ ಹೆದ್ದಾರಿ 86ಎ
ರಾಜ್ಯ ಹೆದ್ದಾರಿ ಬೆಂಗಳೂರನ್ನು ತಮಿಳುನಾಡು ರಾಜ್ಯ ಗಡಿಯನ್ನು ಸೇರುವ ರಸ್ತೆ ಬನ್ನೇರುಘಟ್ಟ ಆನೇಕಲ್ ಮುಖಾಂತರ.

1) ಬೆಂಗಳೂರು ನಗರ ಜಿಲ್ಲೆ	40.50
2) ಬೆಂಗಳೂರು ನಗರ ಪರಿಮಿತಿಯ ರಸ್ತೆ	8.20
ಒಟ್ಟು	48.70

72) ರಾಜ್ಯ ಹೆದ್ದಾರಿ 86ಬಿ
ರಾಜ್ಯ ಹೆದ್ದಾರಿ 3ನ್ನು ಕನಕಪುರ ಎಂ.ಎ ಸಂಗಮಕ್ಕ ಹೋಗುವ ರಸ್ತೆಯ ಹತ್ತಿರ ಸೇರುವ ರಸ್ತೆ

ಬೆಂಗಳೂರು ಗ್ರಾಮಾಂತರ ಜಿಲ್ಲೆ	30.00

73) ರಾಜ್ಯ ಹೆದ್ದಾರಿ 88
ರಾಜ್ಯ ಹೆದ್ದಾರಿ ಮೈಸೂರನ್ನು ಬಂಟ್ವಾಳಮೊದಿನ್ ಸಂಪರಕಿಸುವ ರಸ್ತೆ ಹುಣಸೂರು ಪೆರಿಯಾಪಟ್ಟಣ ಕುಶಾಲನಗರ ಶುಂಠಿಕೊಪ್ಪಲು ಮಡಿಕೆರೆ ಸೂಳ್ಯ ಮತ್ತು ಪುತ್ತೂರು ಮುಖಾಂತರ ಹೋಗುವ ರಸ್ತೆ

1) ಕೊಡಗು ಜಿಲ್ಲೆ	60.20
2) ಮಂಗಳೂರು ಜಿಲ್ಲೆ	71.90
3) ಮೈಸೂರು ಜಿಲ್ಲೆ	88.30
ಒಟ್ಟು	220.40

74) ರಾಜ್ಯ ಹೆದ್ದಾರಿ 88ಎ
ರಾಜ್ಯ ಹೆದ್ದಾರಿ ಹುಣಸೂರನ್ನು ವಿರಾಜಪೇಟೆಯೊಡನೆ ಸಂಪರ್ಕಿಸುವ ರಸ್ತೆ

1) ಕೊಡಗು ಜಿಲ್ಲೆ	30.00
2) ಮೈಸೂರು ಜಿಲ್ಲೆ	22.60
ಒಟ್ಟು	55.60

75) ರಾಜ್ಯ ಹೆದ್ದಾರಿ 88ಬಿ
ರಾಜ್ಯ ಹೆದ್ದಾರಿ ಮಡಿಕೇರಿಯನ್ನು ಮುಕುಟ ಗ್ರಾಮದೊಡನೆ ಸಂಪರ್ಕಿಸುವ ರಸ್ತೆ (ಕೇರಳ ರಾಜ್ಯ ಗಡಿಯಿಂದ ಖಾನಾಪುರಕ್ಕೆ ಹೋಗುವ ರಸ್ತೆ) ಸಿದ್ಧಾಪುರ ಮತ್ತು ವಿರಾಜಪೇಟೆಯ ಮೂಲಕ.

1) ಕೊಡಗು ಜಿಲ್ಲೆ	69.70

76) ರಾಜ್ಯ ಹೆದ್ದಾರಿ 88ಸಿ
ರಾಜ್ಯ ಹೆದ್ದಾರಿ ಕಲ್ಲಡಕವನ್ನು ಕೇರಳ ರಾಜ್ಯದ ಗಡಿಯಿಂದ ಖಾನಾಪುರಕ್ಕೆ

1) ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು	22.80

77) ರಾಜ್ಯ ಹೆದ್ದಾರಿ 93
ರಾಜ್ಯ ಹೆದ್ದಾರಿ ಖಾನಾಪುರವನ್ನು ರಾಷ್ಟ್ರೀಯ ಹೆದ್ದಾರಿ 4.00 ನಲ್ಲೂ ತಾಳಗುಪ್ಪದೊಡನೆ ಸಂಪರ್ಕಿಸುವ ರಸ್ತೆ ಹಳಿಯಾರು ಯಲ್ಲಾಪುರ ಸಿರ್ಸಿ ಮತ್ತು ಸಿದ್ಧಾಪುರವನ್ನು ಸಂಪರ್ಕಿಸುವ ರಸ್ತೆ

1) ಬೆಳಗಾವಿ ಜಿಲ್ಲೆ	37.00
2) ಧಾರವಾಡ ಜಿಲ್ಲೆ	4.05
3) ಉ.ಕ. ಜಿಲ್ಲೆ ಕಾರವಾರ	154.75
ಒಟ್ಟು	195.80

78) ರಾಜ್ಯ ಹೆದ್ದಾರಿ 95
ರಾಜ್ಯ ಹೆದ್ದಾರಿ ಖಾನಾಪುರವನ್ನು ಸದಾಶಿವಗಡಕ್ಕೆ
ಸಂಪರ್ಕಿಸುವ ರಸ್ತೆ ಲೋಂಡಾ ಮತ್ತು ಸೂಪದ ಮುಖಾಂತರ

1) ಉತ್ತರ ಕನ್ನಡ ಜಿಲ್ಲೆ ಕಾರವಾರ		120.20
ಒಟ್ಟು ರಾಜ್ಯ ಹೆದ್ದಾರಿಗಳ ಉದ್ದ		
1) ದಕ್ಷಿಣ ವಲಯದ ಮೊತ್ತ	5795	(ನಗರಸಭೆ ಪುರಸಭೆಯ
2) ಉತ್ತರವಲಯ ಮೊತ್ತ	5493	ಪರಿಮಿತಿಯಲ್ಲಿನ ರಸ್ತೆ
ಒಟ್ಟು	11288	ಗಳೂ ಸೇರಿದಂತೆ)

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದ ರಾಷ್ಟ್ರೀಯ ಹೆದ್ದಾರಿಗಳ ಬಗ್ಗೆ 1993-94ನೇ ಸಾಲಿನಲ್ಲಿ ಎಷ್ಟು ಖರ್ಚು ಮಾಡಬೇಕೆಂದು ತಾವು ಯೋಚನೆ ಮಾಡಿದ್ದೀರಿ? ಅದಕ್ಕೆ ಎಷ್ಟು ಹಣವನ್ನು ತೆಗೆದಿಟ್ಟಿದ್ದೀರಿ? ಅದರಲ್ಲಿ ಎಷ್ಟು ಖರ್ಚಾಗಿದೆ ಎಂಬ ಬಗ್ಗೆ ತಿಳಿಸಬೇಕು. ಈ ರಾಷ್ಟ್ರೀಯ ಹೆದ್ದಾರಿಗಳ ಕಾಮಗಾರಿಗೋಸ್ಕರ ಹಿಂದುಳಿದ ಪ್ರದೇಶ ಹಾಗೂ ಗಡಿ ಪ್ರದೇಶವಾದ ಚಾಮರಾಜನಗರ-ಕೊಯಮತ್ತೂರು ರಸ್ತೆ ತೀವ್ರ ಹದಗೆಟ್ಟಿರುವುದು ತಮ್ಮ ಗಮನಕ್ಕೆ ಬಂದಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಹೀಗೆ ತುಂಬಾ ಅಗತ್ಯ ಇರುವಂಥ ಕೆಲಸಗಳಿಗೆ ಈ ವರ್ಷ ಹೆಚ್ಚು ಹಣವನ್ನು ಬಿಡುಗಡೆ ಮಾಡಿ ಪೂರ್ಣ ಮಾಡಲು ಹೆಚ್ಚಿನ ಒಂದು ಆದ್ಯತೆಯನ್ನು ಕೊಟ್ಟು ಆ ಕೆಲಸ ಮಾಡಿಸಿಕೊಡಲು ಗಮನ ಕೊಡಬೇಕೆಂದು ತಮ್ಮಲ್ಲಿ ಒತ್ತಾಯ ಮಾಡಿಕೊಳ್ಳುತ್ತೇನೆ.

ಶ್ರೀ ಕೆ.ಹೆಚ್ ರಂಗನಾಥ್: ಮಾನ್ಯ ಅಧ್ಯಕ್ಷರೇ, ಮೊದಲನೇ ಉಪಪ್ರಶ್ನೆಗೆ ಪ್ರತ್ಯೇಕ ನೋಟೀಸ್ಸು ಕೊಡಬೇಕು. ಆ ಪ್ರಶ್ನೆಗೆ ಉತ್ತರಿಸಲು ನಾನು ತಯಾರಾಗಬೇಕಾಗಿದ್ದು ಅದಕ್ಕೆ ಸಮಯ ಬೇಕಾಗುತ್ತದೆ. 1993-94ನೇ ಸಾಲಿಗೆ ರಾಷ್ಟ್ರೀಯ ಹೆದ್ದಾರಿಗಳಿಗೆ ಬೇಕಾಗುವ ಹಣವನ್ನು ಕೇಂದ್ರ ಸರ್ಕಾರದವರು ಕೊಡುತ್ತಾರೆ. ಅದನ್ನು ನಾವು ಖರ್ಚು ಮಾಡುತ್ತೇವೆ. ಮಾನ್ಯ ಸದಸ್ಯರು ಕೊನೆಯ ಉಪ-ಪ್ರಶ್ನೆಯನ್ನು ಏನು ಪ್ರಸ್ತಾಪ ಮಾಡಿದ್ದಾರೆ, ಅದಕ್ಕೆ ನಾನು ಕೂಡ ಹೆಚ್ಚು ಗಮನವನ್ನು ಕೊಟ್ಟಿದ್ದೇನೆ. ಈಗಾಗಲೇ 1992-93ರಲ್ಲಿ 15 ಲಕ್ಷ ರೂ.ಗಳನ್ನು ಖರ್ಚು ಮಾಡಿದ್ದೇವೆ. ಹಾಗೆಯೇ ಈಗಾಗಲೇ ಅದು ಬಜೆಟ್ಟಿನಲ್ಲಿ ಇಲ್ಲದಿದ್ದರೂ ಕೂಡ 22 ಲಕ್ಷ ರೂಪಾಯಿಗಳನ್ನು ಅದಕ್ಕೆ ವ್ಯವಸ್ಥೆ ಮಾಡಿದ್ದೇವೆ ಮತ್ತು ಈ ವರ್ಷ ಅದಕ್ಕೆ ಹೆಚ್ಚು ಆದ್ಯತೆಯನ್ನು ಕೊಟ್ಟು ಮಾಡಲು ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ತಾವು ಚಾಮರಾಜ ನಗರ ವಿಭಾಗದ ವ್ಯಾಪ್ತಿಯಲ್ಲಿ ಏನೇನು ಕೆಲಸ ಮಾಡದ್ದೀರಿ ಎಂಬುದನ್ನು ಹೇಳಿದ್ದೀರಿ. ಮೂಲ ಪ್ರಶ್ನೆ ಏನೆಂದರೆ ಚಾಮರಾಜನಗರದಿಂದ ಕೊಯಮತ್ತೂರಿಗೆ ಹೋಗುವ ರಸ್ತೆ ಏನಿದೆ, ಅದು ತೀರಾ ಹದಗೆಟ್ಟಿದೆ; ಈ ವರ್ಷವಾದರೂ ಆದ್ಯತೆಯ ಮೇರೆಗೆ ಹೆಚ್ಚು ಹಣವನ್ನು ಬಿಡುಗಡೆ ಮಾಡಿ ಆ ಕೆಲಸವನ್ನು ಮಾಡಿಸಲು ಪ್ರಯತ್ನ ಮಾಡುತ್ತೀರಾ?

ಶ್ರೀ ಕೆ.ಹೆಚ್. ರಂಗನಾಥ್: ಅದಕ್ಕೆ ಈಗಾಗಲೇ 1992-93ರಲ್ಲಿ 15 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಿದ್ದೇವೆ. ಈಗ ಮತ್ತೆ ಅದಕ್ಕೆ ಗ್ರಾಂಟ್ ಬಜೆಟ್ಟಿನಲ್ಲಿ ಇಲ್ಲದಿದ್ದರೂ ಕೂಡ 22 ಲಕ್ಷ ರೂ.ಗಳ ಅಡಿಶನಲ್ ಗ್ರಾಂಟ್ ಕೊಟ್ಟು ಮಾಡಿಸುತ್ತಾ ಇದ್ದೇವೆ. ಹಾಗೆಯೇ 1994-95ರಲ್ಲಿ ಇನ್ನೂ ಹೆಚ್ಚಿನ ಆದ್ಯತೆಯನ್ನು ಕೊಡುತ್ತೇವೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ವಿಶ್ವೇಶ್ವರಯ್ಯ ನಾಲಾ ಅಚ್ಚುಕಟ್ಟು ಪ್ರದೇಶ ಕುರಿತು

726 - ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ): ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಶ್ವೇಶ್ವರಯ್ಯ ನಾಲಾ ಅಚ್ಚುಕಟ್ಟು ಪ್ರದೇಶದಲ್ಲಿ ತಲಾ ಎಕರೆಗೆ ವೆಚ್ಚ ಮಾಡುತ್ತಿರುವ ನಿರ್ವಹಣಾ ವೆಚ್ಚವೆಷ್ಟು?

ಆ) ಈ ಮೊಬಲಗು ಯಾವಾಗ ನಿಗದಿಗೊಳಿಸಲಾಗಿದೆ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):

ಅ) 1989-90 ರಿಂದ 1992-93ರ ಸಾಲಿನವರೆಗೆ ಸರಾಸರಿ ಎಕರೆ ಒಂದಕ್ಕೆ 130-00 ರೂಪಾಯಿಗಳು.

ಆ) ಇದು 1987-88ನೇ ಸಾಲಿನಿಂದ ಚಾಲ್ತಿಯಿಂದಿರುತ್ತದೆ.

ಗಡಿ ಪ್ರದೇಶಾಭಿವೃದ್ಧಿ ಯೋಜನೆಯಡಿಯಲ್ಲಿ ಭಾಗ್ಯ ಜ್ಯೋತಿ ದೀಪಗಳನ್ನು ಅಳವಡಿಸುವ ಬಗ್ಗೆ

796 - ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು): ಮಾನ್ಯ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗಡಿ ಪ್ರದೇಶಾಭಿವೃದ್ಧಿ ಯೋಜನೆಯಡಿಯಲ್ಲಿ ಹರಿಜನ ಗಿರಿಜನರಿಗೆ ಮೀಸಲಾಗಿಸಿರುವ ಹಣದಲ್ಲಿ ಭಾಗ್ಯಜ್ಯೋತಿ ದೀಪಗಳನ್ನು ಬಡವರ ಮನೆಗಳಿಗೆ ಅಳವಡಿಸಲು ಸರ್ಕಾರಕ್ಕೆ ಮನವಿ ಬಂದಿದೆಯೇ?

ಆ) ಹಾಗಿದ್ದಲ್ಲಿ ಅದರ ಬಗ್ಗೆ ಸರ್ಕಾರದವರು ತೆಗೆದುಕೊಂಡಿರುವ ತೀರ್ಮಾನವೇನು?

ಶ್ರೀ ಶ್ರೀರಂಗದೇವ ರಾಯಲು (ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು):

ಅ) ಹೌದು.

ಆ) ಸರ್ಕಾರದ ಪರಿಶೀಲನೆಯಲ್ಲಿದೆ.

ತುಂಗಾ ಮೇಲ್ದಂಡೆ ಯೋಜನೆ ಜಾರಿ ಕುರಿತು

765 - ಶ್ರೀ ಮಂಜುನಾಥ್ ಸಿ. ಕುನ್ನೂರ್ (ಶಿಗ್ಗಾಂವ): ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಂಗಾ ಮೇಲ್ದಂಡೆ ಯೋಜನೆಯನ್ನು ಜಾರಿಗೆ ತರುವಾಗ ಮಾಲತಿ ಜಲಾನಯನ ಮುಳುಗಡೆಯಾಗುವದೆ.

ಆ) ತುಂಗಾ ಮೇಲ್ದಂಡೆ ಯೋಜನೆಯ ಬಗ್ಗೆ ತಜ್ಞರಿಂದ ಸಂಪೂರ್ಣವಾಗಿ ವರದಿ ತಯಾರು ಮಾಡಲಾಗಿದೆಯೇ.

ಇ) ತುಂಗಾ ಮೇಲ್ದಂಡೆ ಯೋಜನೆ ಜಾರಿಗೆ ತರುವಾಗ ಮಾಲತಿ ಜಲಾನಯನ ಗಾಜನೂರಿನ ಹತ್ತಿರ 1200 ಪ್ಲಾಟಿನ ಗೇಟ್ ಕಟ್ಟೆ ಜಾರಿಗೆ ತಂದರೆ ಧಾರವಾಡ ಜಿಲ್ಲೆಯ ಶಿಗ್ಗಾಂವ, ಸವಣೂರ್, ಶಿರಹಟ್ಟಿ, ಮುಂಡರಗಿ ಮುಂತಾದ ತಾಲ್ಲೂಕುಗಳ ಪ್ರದೇಶಕ್ಕೆ ನೀರಾವರಿ ತೊಂದರೆಯಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಈ) ಹಾಗಿದ್ದಲ್ಲಿ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):

ಅ) ಇಲ್ಲ

ಆ) ಹೌದು

ಇ) ಮತ್ತು ಈ) ಈ ಯೋಜನೆಯ ವ್ಯಾಪ್ತಿಯಲ್ಲಿ ಧಾರವಾಡ ಜಿಲ್ಲೆಯ ಶಿಗ್ಗಾಂಡ, ಸವಣೂರ, ಶಿರಹಟ್ಟಿ, ಮುಂಡರಗಿ ತಾಲ್ಲೂಕುಗಳು ಸೇರಿರುವುದಿಲ್ಲವಾದ್ದರಿಂದ ಈ ಪ್ರಶ್ನೆಗಳು ಉದ್ಭವಿಸುವುದಿಲ್ಲ.

ಅಧ್ಯಕ್ಷರು : ಇಲ್ಲಿಗೆ ಪ್ರಶ್ನೋತ್ತರ ಅವಧಿ ಮುಗಿಯಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಮಾನ್ಯ ಅಧ್ಯಕ್ಷರೇ, ದಿನಾಂಕ: 28-3-1994ರಂದು ಲಿಖಿತ ಮೂಲಕ ಉತ್ತರಿಸುವ 14ನೇ ಪಟ್ಟಿಯಲ್ಲಿರುವ 57 ಪ್ರಶ್ನೆಗಳ ಪೈಕಿ, ಪ್ರಶ್ನೆಗಳ ಸಂಖ್ಯೆ- 652:794:678:650:696:654:447:485:453:623:665: ಕ್ರಮಾಂಕದ ಪ್ರಶ್ನೆಗಳನ್ನು ಹೊರತುಪಡಿಸಿ ಉಳಿದ 45 ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಉತ್ತರವನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಸೇಡಂ ತಾಲ್ಲೋಕಿನ ಅಲಿಪೂರ ಕೆರೆಯ ಒಳಗಡೆ ಮುಳುಗಿರುವ ರೈತರ ಬೆಳೆಗೆ ಪರಿಹಾರ ನೀಡುವ ಬಗ್ಗೆ

736 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಅಲ್ಲಿಪೂರ ಕೆರೆ ಕೆಲಸ ಪ್ರಾರಂಭವಾಗಿ ಆಯಕಟ್ಟಿನ ಒಳಗಿರುವ ಭೂಮಿಯಲ್ಲಿ ಕಳೆದೆರೆಡು ವರ್ಷದಿಂದ ಮಣ್ಣು ತೆಗೆದು ಏರಿಗೆ ಉಪಯೋಗಿಸಿ ಬೆಳೆ ಇಲ್ಲದೆ ನಷ್ಟ ಹೊಂದಿರುವ ರೈತರಿಗೆ ಬೆಳೆಯ ಹಾಗೂ ಭೂಮಿ ಪರಿಹಾರ ಧನ ನೀಡಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಭೂಸ್ವಾಧೀನಪಡಿಸಿಕೊಳ್ಳುವ ವಿಧಿ ವಿಧಾನ ಪೂರ್ತಿ ಆಗದೆ, ರೈತರಿಗೆ ತಮ್ಮ ಭೂಮಿಯ ಬೆಲೆ ಕೇಳಲು ಅವಕಾಶ ನೀಡದೆ ಒತ್ತಾಯದಿಂದ ಬಡ ರೈತರ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳುವುದು ಸರಿಯೇ;

ಇ) ಈಗಲಾದರೂ ಎರಡು ವರ್ಷಗಳಿಂದ ನಷ್ಟವಾಗಿರುವ ಬೆಳೆಯ ಬೆಲೆ ಹಾಗೂ ಭೂ ಪರಿಹಾರ ಧನ ಮಾರ್ಕೆಟ್ಟು ಬೆಲೆಯಂತೆ ಅತೀ ಶೀಘ್ರದಲ್ಲಿ ಕೊಡುವ ವ್ಯವಸ್ಥೆ ಮಾಡಲಾಗುವುದೇ?

ಡಾ|| ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಅಲಿಪೂರ ಕೆರೆಯ ಏರಿಯ ಕೆಲಸಕ್ಕೆ ಮುಳುಗಡೆ ಹೊಂದಲಿರುವ ಪ್ರದೇಶ ಭೂಮಿಯಿಂದ ಮಣ್ಣು ತೆಗೆದು ಉಪಯೋಗಿಸಲಾಗುತ್ತಿದೆ. ಈ ಭೂಮಿಯಲ್ಲಿ ಯಾವುದೇ ಬೆಳೆ ಇಲ್ಲದಿದ್ದಾಗ ಮಣ್ಣು ತೆಗೆದುಕೊಂಡಿರುವ ಕಾರಣ ಬೆಳೆ ಪರಿಹಾರ ಕೊಡುವ ಪ್ರಮೇಯ ಉಂಟಾಗುವುದಿಲ್ಲ. ಆದರೆ ಭೂ ಪರಿಹಾರಕ್ಕೆ ಸಂಬಂಧಿಸಿದಂತೆ ಎಲ್ಲಾ ಪ್ರಕರಣಗಳು ಭೂಸ್ವಾಧೀನ ಕಾಯ್ದೆಯ ಪ್ರಕಾರ ಭೂಮಾಲೀಕರಿಗೆ ನೋಟೀಸ್ಗಳನ್ನು ಜಾರಿಗೊಳಿಸಿದ್ದು ಐತೀರ್ಪು ತನಿಖೆ ನಡೆದಿರುತ್ತದೆ. ಪರಿಹಾರ ಧನವನ್ನು ಬಡ್ಡಿ ಸಮೇತ ಪಾವತಿ ಮಾಡಲು ಶೀಘ್ರಕ್ರಮ ಕೈಗೊಳ್ಳಲಾಗುವುದು.

ಆ) ಭೂಮಾಲೀಕರಿಗೆ ಭೂಸ್ವಾಧೀನ ಕಾಯಿದೆ ಕಲಂ 9(1) ಮತ್ತು 10ರ ಅನ್ವಯ ತಮ್ಮ ಜಮೀನುಗಳಿಗೆ ಬೆಲೆ ಕೇಳಲು ಅವಕಾಶವಿದ್ದು ಒತ್ತಾಯದ ಪ್ರಶ್ನೆ ಬರುವುದಿಲ್ಲ.

ಇ) 2 ವರ್ಷಗಳಿಂದಲೂ ಭೂಸ್ವಾಧೀನ ಪ್ರಕರಣಗಳ ಪ್ರಕ್ರಿಯೆಗಳು ಜಾರಿಯಲ್ಲಿದ್ದು, ಕಾಯಿದೆಯಲ್ಲಿ ಇಷ್ಟು ಅವಧಿಗಿಂತಲೂ ಹೆಚ್ಚಿಗೆ ಅವಕಾಶ ಇದ್ದು ಅವಧಿಯ ಒಳಗಾಗಿ ಮೇಲೆ (ಅ)ನಲ್ಲಿ ತಿಳಿಸಿದಂತೆ ಪರಿಹಾರವನ್ನೂ ಪಾವತಿ ಮಾಡಲಾಗುವುದು. ಬೆಳೆಯ ಪರಿಹಾರ ಧನವನ್ನು ಇಲಾಖೆಯ ನಿಯಮಾನುಸಾರ ಪೂರೈಸಲಾಗುವುದು.

ಕರ್ನಾಟಕ ನಿರ್ಮಾಣ ನಿಗಮದ ಪ್ರಗತಿಯ ಬಗ್ಗೆ

658 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್) : ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ನಿರ್ಮಾಣ ನಿಗಮವನ್ನು ಯಾವಾಗ ಪ್ರಾರಂಭಿಸಲಾಯಿತು?

ಆ) ಅದಕ್ಕೆ ಹೂಡಲಾಗಿರುವ ಸರ್ಕಾರಿ ಬಂಡವಾಳವೆಷ್ಟು?

ಇ) ಅದರ ಕಾರ್ಯ ಚಟುವಟಿಕೆಗಳೇನು?

ಈ) ಅದರಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ವರ್ಗದ ಸಂಖ್ಯೆ ಎಷ್ಟು?

ಉ) ಆ ನಿಗಮವು ಪ್ರಾರಂಭವಾದಾಗಿನಿಂದ ಇಲ್ಲಿಯವರೆವಿಗೆ ಎಷ್ಟು ಲಾಭವನ್ನು ಗಳಿಸಿದೆ. ಇಲ್ಲವೇ ಎಷ್ಟು ಪ್ರಮಾಣದ ನಷ್ಟವನ್ನು ಅನುಭವಿಸಿದೆ. (ವರ್ಷಾವಾರು ಅಂಕಿ ಅಂಶಗಳನ್ನು ನೀಡುವುದು)

ಊ) ಆ ನಿಗಮವನ್ನು ಮುಚ್ಚುವ ಬಗ್ಗೆ ಸರ್ಕಾರವು ಪರಿಶೀಲಿಸುವುದೇ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) 13-9-1968

ಆ) 205.00 ಲಕ್ಷ ರೂ.ಗಳು

ಇ) ಅಣೆಕಟ್ಟು ಸೇತುವೆ, ಕಟ್ಟಡಗಳು ರಸ್ತೆ, ರಹದಾರಿಗಳು, ಕಾಲುವೆ ಹಾಗೂ ಸುರಂಗಗಳ ನಿರ್ಮಾಣ ಕಾರ್ಯ

ಈ) ಒಟ್ಟು - 326
ನಿಯೋಜಿತರು - 62
ನಿಗಮದವರು - 264

ಉ) ನಿಗಮವು ಪ್ರಾರಂಭವಾದಾಗಿನಿಂದ ಇದುವರೆಗೂ ಅನುಭವಿಸಿರುವ ಲಾಭ ಮತ್ತು ನಷ್ಟಗಳನ್ನು ಕೂಡಿ ಹಾಕಿದಲ್ಲಿ 31-3-93ರವರೆಗೆ ಒಟ್ಟು 76.15 ಲಕ್ಷ ರೂ.ಗಳಷ್ಟು ನಷ್ಟ ಶೇಖರಣೆಯಾಗಿರುತ್ತದೆ. ವಿವರವನ್ನು ಅನುಬಂಧದಲ್ಲಿ ನೀಡಿದೆ.

ಊ) ಈ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿಲ್ಲ.

ಅನುಬಂಧ

1969-1993ರ ವರೆಗೆ ಕರ್ನಾಟಕ ರಾಜ್ಯ ನಿರ್ಮಾಣ ನಿಗಮದ ಲಾಭ, ನಷ್ಟದ ವಾರ್ಷಿಕ ವಿವರಗಳು

ವರ್ಷ	ಲಾಭ (ಲಕ್ಷ ರೂ.ಗಳಲ್ಲಿ)	ನಷ್ಟ (ಲಕ್ಷ ರೂ.ಗಳಲ್ಲಿ)
1969	0.05	-
1969-70	-	2.71
1970-71	-	10.78

1971-72	-	8.67
1972-73	-	18.63
1973-74	-	22.29
1974-75	-	28.00
1975-76	-	19.03
1976-77	-	14.00
1977-78	-	8.09
1978-79	-	28.50
1979-80	-	29.33
1980-81	-	51.07
1981-82	-	13.76
1982-83	-	36.71
1983-84	-	53.54
1984-85	-	61.06
1985-86	28.91	-
1986-87	9.92	-
1987-88	-	45.26
1988-89	-	67.94
1989-90	-	8.79
1990-91	30.28	-
1991-92	152.85	-
1992-93(ಪ್ರಾವಿಷನಲ್)	230.00	-
	452.01	528.16
ನಷ್ಟ -	528.16	
ಲಾಭ -	452.01	
ನಿವ್ವಳ ನಷ್ಟ -	76.15	

ಸೇಡಂ ತಾಲ್ಲೋಕಿನ ಕೆಲವು ಪ್ರಾಂತ್ಯಕ್ಕೆ ವಿದ್ಯುತ್ ಕಡಿತ ಕುರಿತು

733 - ಶ್ರೀ ಬಸವಂತ ರೆಡ್ಡಿ ಮೋತಕಪಲ್ಲಿ (ಸೇಡಂ): ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಆಂಧ್ರ ಗಡಿ ಪ್ರಾಂತ್ಯಕ್ಕೆ ಹೊಂದಿಕೊಂಡಿರುವ ಗ್ರಾಮಗಳಲ್ಲಿ ಗುರುಮಿಠಕಲ್ ಪವರ್ ಸಬ್ ಸ್ಟೇಷನ್‌ನಿಂದ ವಿದ್ಯುಚ್ಛಕ್ತಿ ಸರಬರಾಜು ಆಗುವುದನ್ನು ಪ್ರತಿದಿನ ಬೆಳಿಗ್ಗೆ 3.00 ಗಂಟೆ, ಸಾಯಂಕಾಲ 3.00 ಗಂಟೆ ಕಡಿತ ಮಾಡಲು ಕಾರಣವೇನು?*

ಆ) *ಈ ಪ್ರಕಾರ ಬೆಳಿಗ್ಗೆ 5.00 ಗಂಟೆಯಿಂದ 8.00 ಗಂಟೆಯವರೆಗೆ, ಸಾಯಂಕಾಲ 5.00 ಗಂಟೆಯಿಂದ 8.00 ಗಂಟೆಯವರೆಗೆ ಕಡಿತವಾದರೆ ವಿದ್ಯುಚ್ಛಕ್ತಿ ಇದ್ದು ಪ್ರಯೋಜನವೇನು?*

ಇ) ಇದರಿಂದ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ರೈತರ ನೀರಾವರಿಗೆ ಹಾಗೂ ಗ್ರಾಮೀಣ ಪ್ರದೇಶದ ರೈತರಿಗೆ ವಾರ್ತೆ ಸಮಾಚಾರಗಳಿಂದ ವಂಚಿತರಾಗುವುದು ನಿಜವಲ್ಲವೇ;

ಈ) ಬೇರೆ ಭಾಗದಲ್ಲಿ ಈ ಪ್ರಕಾರ ಆರು ಘಂಟೆ ವಿದ್ಯುಚ್ಛಕ್ತಿ ಕಡಿತವಾಗದಿರುವುದು ನಿಜವೇ

ಉ) ಗಡಿ ಪ್ರಾಂತ್ಯದ ನಾಗರೀಕರಿಗೆ, ವಿದ್ಯಾರ್ಥಿಗಳಿಗೆ ತೊಂದರೆ ಕೊಡುವುದನ್ನು ತಪ್ಪಿಸಲು ಮಧ್ಯಾಹ್ನದ ವೇಳೆಯಲ್ಲಿ 1-2 ಘಂಟೆಗಳು ಮಾತ್ರ ವಿದ್ಯುಚ್ಛಕ್ತಿ ಕಡಿಮೆ ಮಾಡಿ ಅನುಕೂಲ ಮಾಡಿಕೊಡಬಹುದೇ

ಶ್ರೀ ಕೆ.ಎ. ನಿಸಾರ್ ಅಹಮದ್ (ಇಂಧನ ರಾಜ್ಯ ಸಚಿವರು):

ಅ) ಗುರುಮಿಠಕಲ್ಲಲ್ಲಿರುವ 33:11 ಕೆ.ವಿ. ಪವರ್ ಸಬ್‌ಸ್ಟೇಷನ್ನಿಗೆ ಷಹಪುರದಲ್ಲಿರುವ 110:33ಕೆ.ವಿ. ಪವರ್ ಸಬ್‌ಸ್ಟೇಷನ್‌ನಿಂದ ವಿದ್ಯುತ್ ಸರಬರಾಜಾಗುತ್ತಿದೆ. ಷಹಪುರ ಈ ಪವರ್ ಸಬ್‌ಸ್ಟೇಷನ್ ಓವರ್ಲೋಡ್ ಆಗುತ್ತಿರುವುದರಿಂದ, ಇದರ ನಿವಾರಣೆಗಾಗಿ ಗುರುಮಿಠಕಲ್, ಕೊಂಕಲ್, ಯಾದಗಿರಿಗಳಲ್ಲಿರುವ 33:11 ಕೆ.ವಿ. ಪವರ್ ಸಬ್ ಸ್ಟೇಷನ್ಗಳಲ್ಲಿ ಬೆಳಿಗ್ಗೆ ಮತ್ತು ಸಂಜೆ ವೇಳೆಗಳಲ್ಲಿ ನಿಯಮಿತ ಲೋಡ್ ಷೆಡ್ಡಿಂಗ್ನು ಜಾರಿಗೊಳಿಸಲಾಗಿದೆ. ಈ ರೀತಿಯ ಲೋಡ್ ಷೆಡ್ಡಿಂಗ್ನು ಜಾರಿಗೊಳಿಸಲು ಇದ್ದಲ್ಲಿ ಷಹಪುರದ 110:33ಕೆ.ವಿ. ಪವರ್ ಸಬ್ ಸ್ಟೇಷನ್ನಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹೆಚ್ಚಿನ ಮೌಲ್ಯದ 10 ಎಂವಿಎ ಸಾಮರ್ಥ್ಯದ ಪವರ್ ಟ್ರಾನ್ಸ್ಫಾರ್ಮರ್ಗೆ ಧಕ್ಕೆ ಉಂಟಾಗುವ ಸಂಭವವಿದೆ. ಆ ರೀತಿ ಧಕ್ಕೆ ಉಂಟಾದಲ್ಲಿ ವಿದ್ಯುತ್ ಸರಬರಾಜು ಸಂಪೂರ್ಣವಾಗಿ ಅಸ್ತವ್ಯಸ್ತಗೊಳ್ಳುವುದು.

ಆ) ಮತ್ತು ಇ) ಅನಿವಾರ್ಯ ಪರಿಸ್ಥಿತಿಯಿಂದಾಗಿ ಈ ರೀತಿಯ ಲೋಡ್ ಶೆಡ್ಡಿಂಗ್ನು ನಿರ್ವಹಿಸಲಾಗುತ್ತಿದೆ. ಷಹಾಪುರದ 110:33 ಕೆ.ವಿ. ಪವರ್ ಸಬ್ ಸ್ಟೇಷನ್ನಿನ ಓವರ್ಲೋಡ್ ಆಗುವಿಕೆಯನ್ನು ತಪ್ಪಿಸಲು ಇನ್ನೊಂದು 10 ಎಂ.ವಿ.ಎ. ಸಾಮರ್ಥ್ಯದ 110:33 ಕೆ.ವಿ. ಪವರ್ ಟ್ರಾನ್ಸ್ಫಾರ್ಮರ್ನ್ನು ಷಹಾಪುರದ 110:33 ಕೆ.ವಿ. ಪವರ್ ಸಬ್ಸ್ಟೇಷನ್ನಿನಲ್ಲಿ ಸ್ಥಾಪಿಸಲು ಈಗಾಗಲೇ ಕ್ರಮ ಕೈಗೊಂಡಿದ್ದು, ಆದಷ್ಟು ಶೀಘ್ರಗತಿಯಲ್ಲಿ ಈ ಕಾರ್ಯವನ್ನು ಪೂರ್ಣಗೊಳಿಸಲಾಗುವುದು. ಅಲ್ಲಿಯವರೆಗೆ ಸಾರ್ವಜನಿಕರು ಮಂಡಳಿಯೊಡನೆ ಸಹಕರಿಸಬೇಕಾಗಿದೆ.

ಈ) ನಿಜವಲ್ಲ, ಗುರುಮಿಠಕಲ್ಲಲ್ಲಿರುವ 33:11 ಕೆ.ವಿ. ಪವರ್ ಸಬ್ ಸ್ಟೇಷನ್ ಅಲ್ಲದೇ ಕೊಂಕಲ್, ಯಾದಗೀರ್, ಮತ್ತು ಶೋರಾಪುರಗಳಲ್ಲಿರುವ 33:11 ಕೆ.ವಿ. ಪವರ್ ಸಬ್ಸ್ಟೇಷನ್ಗಳಲ್ಲಿ ನಿಯಮಿತ ಲೋಡ್ ಷೆಡ್ಡಿಂಗ್‌ನ್ನು ನಿರ್ವಹಿಸಲಾಗುತ್ತಿದೆ.

ಉ) ಪ್ರಶ್ನೆಯ 'ಅ' ಭಾಗಕ್ಕೆ ನೀಡಿರುವ ಉತ್ತರದಲ್ಲಿ ತಿಳಿಸಿರುವಂತೆ ಸದ್ಯದ ಅನಿವಾರ್ಯ ಪರಿಸ್ಥಿತಿಯಲ್ಲಿ ಇದನ್ನು ಈಡೇರಿಸುವುದು ಕಷ್ಟಕರವಾಗಿದೆ. ಷಹಾಪುರದ 110:33 ಕೆ.ವಿ. ಪವರ್ ಸಬ್ಸ್ಟೇಷನ್ನಿನಲ್ಲಿ ಇನ್ನೊಂದು 10 ಎಂ.ವಿ.ಎ. ಸಾಮರ್ಥ್ಯದ 110:33 ಕೆ.ವಿ. ಪವರ್ ಟ್ರಾನ್ಸ್‌ಫಾರ್ಮರನ್ನು ಆದಷ್ಟು ಶೀಘ್ರಗತಿಯಲ್ಲಿ ಸ್ಥಾಪಿಸಿ, ಗಡಿ ಪ್ರಾಂತ್ಯದ ನಾಗರೀಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಲಾಗುವುದು.

ಕಾಗಿನಾ ನದಿಯ ಮೇಲೆ ನಿರ್ಮಾಣವಾಗುವ ಕೆರೆಯ ಆಯುಕಟ್ಟಿನ ಬಗ್ಗೆ

734 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ): ಮಾನ್ಯ ಉಪಮುಖ್ಯಮಂತ್ರಿಗಳು ... ಪ್ರಶ್ನೆಗಳಿಗೆ ಉತ್ತರವನ್ನು ... ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಕಾಗಿನಾ ನದಿಯ ಮೇಲೆ ನಿರ್ಮಾಣವಾಗುವ ಕೆರೆಯ ಆಯಕಟ್ಟಿನಲ್ಲಿ ಎಡಗಾ ಗ್ರಾಮದ ಭೂಮಿ ಯೋಜನೆಯ ನಕಾಶೆಯಂತೆ ಮುಳುಗಡೆಯಾಗದಿದ್ದರೆ ಸಹ ಎಡಗಾ ಗ್ರಾಮ ಸಮೀಪ ಏತ ನೀರಾವರಿ ಯೋಜನೆ ಮಂಜೂರಿಯಾಗಿದ್ದು ಕೈಬಿಡಲು ಕಾರಣವೇನು ?

ಆ) ಈಗಲಾದರೂ 1994-95ನೇ ಸಾಲಿನಲ್ಲಿ ಈ ಏತ ನೀರಾವರಿ ಯೋಜನೆಯನ್ನು ಎಡಗಾ ಗ್ರಾಮ ಸಮೀಪ ನಿರ್ಮಾಣ ಮಾಡಿ ಬಡ ರೈತರಿಗೆ ನೀರಾವರಿಗಾಗಿ ಅನುಕೂಲ ಮಾಡಿಕೊಡಲಾಗುವುದೇ ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು) :

ಅ) ಎಡಗಾ ಗ್ರಾಮದ ಸಮೀಪ ಏತ ನೀರಾವರಿ ಯೋಜನೆ ಮಂಜೂರಾಗಿಲ್ಲದ ಕಾರಣ ಸದರಿ ಏತ ನೀರಾವರಿ ಯೋಜನೆಯನ್ನು ತೆಗೆದುಕೊಳ್ಳುವ ಅಥವಾ ಕೈಬಿಡುವ ಪ್ರಮೇಯವೇ ಇಲ್ಲ.

ಆ) (ಅ) ಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿನ ರಸ್ತೆಗಳ ನಿರ್ಮಾಣ ಕುರಿತು

649 - ಶ್ರೀ ಮಲ್ಲಾರಗೌಡ ಎಸ್. ಪಾಟೀಲ್ (ಸಂಕೇಶ್ವರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ರಸ್ತೆಗಳ ನಿರ್ಮಾಣ ಮಾಡುತ್ತಿರುವ (ಥಿಕನೆಸ್) ಪದ್ಧತಿ ಯಾವುದು.

ಆ) ಹೈದರಾಬಾದ್ ಅಭಿವೃದ್ಧಿ ಪ್ರಾಧಿಕಾರ ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ ಎಷ್ಟು ಕಿ.ಮೀ ರಸ್ತೆ ತಯಾರು ಮಾಡಲಾಗಿದೆ ಹಾಗೂ ಅದಕ್ಕೆ ತಗುಲಿದ ಖರ್ಚು ಎಷ್ಟು.

ಇ) ಮಲೆನಾಡು ಅಭಿವೃದ್ಧಿ ರಸ್ತೆಗಳ ನಿರ್ಮಾಣದಲ್ಲಿ ಯಾವ ಪದ್ಧತಿಯನ್ನು ಅನುಸರಿಸಲಾಗುತ್ತಿದೆ ?

ಈ) ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಪ್ರಾಧೀಕಾರವು ಅನುಸರಿಸುತ್ತಿರುವ ಪದ್ಧತಿಯನ್ನು ಮಲೆನಾಡು ಅಭಿವೃದ್ಧಿ ಕೆಲಸಕ್ಕೆ ಯಾಕೆ ಅನುಸರಿಸುತ್ತಿಲ್ಲ ?

ಉ) ಈ ಎರಡೂ ಮಂಡಳಿಗಳಲ್ಲಿ ಆ ಕೆಲಸಗಳ ಹಿನ್ನೆಲೆಯಲ್ಲಿ ಗುತ್ತಿಗೆದಾರರಿಗೆ ಕೊಡಬೇಕಾಗಿರುವ ಹಣವೆಷ್ಟು ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯ ಉನ್ನತ ಮಟ್ಟದ ಸಮಿತಿಯಿಂದ ಅನುಮೋದನೆಗೊಂಡ ಕೆಲಸಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಈ ಯೋಜನೆಯಡಿಯಲ್ಲಿ ರಸ್ತೆಗಳ ಸುಧಾರಣೆ ಕೆಲಸಗಳಿಗಾಗಿ ರಸ್ತೆಯ ವರ್ಗ ಪರಿಗಣಿಸಿ ಹಾಗೂ ಮೊದಲು ಇದ್ದ ರಸ್ತೆಯ ಸ್ಥಿತಿಗತಿಗಳ ಸರ್ವೇ ಮಾಡಿ ಪ್ರಾಯೋಗಿಕ ಪರೀಕ್ಷೆಗಳ ಮೂಲಕ ಹಾಗೂ ವಾಹನ ಸಾಂದ್ರತೆಯನ್ನು ಅನುಲಕ್ಷಿಸಿ, (ಸಿಬಿಆರ್ ಮೌಲ್ಯಕ್ಕನುಗುಣವಾಗಿ) ರಸ್ತೆಯನ್ನು ಸದೃಢವಾಗಿ ನಿರ್ಮಿಸಲು ಬೇಕಾಗುವ ವಿವಿಧ ರಸ್ತೆಗಳ ದಪ್ಪವನ್ನು ಅಂದಾಜು ಪತ್ರಿಕೆಯಲ್ಲಿ ಅಳವಡಿಸಿ ರಸ್ತೆಗಳನ್ನು ನಿರ್ಮಾಣ ಮಾಡುವ ಪದ್ಧತಿಯನ್ನು ಅನುಸರಿಸಲಾಗಿದೆ.

ಆ) ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಪ್ರಾಧಿಕಾರ ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ ಸುಧಾರಣೆ ಮಾಡಲಾದ ರಸ್ತೆಗಳ ಉದ್ದ ಹಾಗೂ ಅದಕ್ಕೆ ತಗುಲಿದ ವೆಚ್ಚದ ಜಿಲ್ಲಾವಾರು ವಿವರಗಳು ಈ ಕೆಳಗಿನಂತಿವೆ.

ಜಿಲ್ಲೆ	ತಯಾರಾದ ರಸ್ತೆ ಉದ್ದ	ಫೆಬ್ರುವರಿ 94ರ ಕೊನೆಯವರೆಗೆ ತಗಲಿದ ವೆಚ್ಚ.
ಗುಲಬರ್ಗಾ	289.20 ಕಿಮೀ.	1741.995 ಲಕ್ಷ ರೂ.
ಬೀದರ್	144.40 ಕಿಮೀ.	678.719 ಲಕ್ಷ ರೂ.
ಬಳ್ಳಾರಿ	148.40 ಕಿಮೀ.	749.350 ಲಕ್ಷ ರೂ.
ರಾಯಚೂರು	267.00 ಕಿಮೀ.	794.390 ಲಕ್ಷ ರೂ.
ಒಟ್ಟು	849.00 ಕಿ.ಮೀ.	3964.454 ಲಕ್ಷ ರೂ.

ಇ) ಮಲೆನಾಡು ಅಭಿವೃದ್ಧಿ ರಸ್ತೆಗಳ ನಿರ್ಮಾಣ ವಿಷಯದಲ್ಲಿ ಶಾಸಕರು, ಲೋಕಸಭಾ ಸದಸ್ಯರು, ವಿಧಾನಪರಿಷತ್ ಸದಸ್ಯರುಗಳ ಪ್ರಸ್ತಾವನೆಗಳನ್ನು ಮಲೆನಾಡು ಅಭಿವೃದ್ಧಿ ನಿಗಮಕ್ಕೆ ಅನುಮೋದನೆಗಾಗಿ ಸಲ್ಲಿಸಲಾಗುತ್ತಿದೆ. ನಿಗಮದಿಂದ ಅನುಮೋದನೆಯಾದ ವಿವಿಧ ಕಾಮಗಾರಿಗಳನ್ನು ಮಾತ್ರ ಲೋಕೋಪಯೋಗಿ ನಿಯಮಾವಳಿಯ ಪ್ರಕಾರ ನಿರ್ವಹಿಸಲಾಗುತ್ತಿದೆ ಹಾಗೂ ರಸ್ತೆಯ ವರ್ಗ ಮತ್ತು ಸ್ಥಿತಿಗತಿಗಳನ್ನು ಪರಿಗಣಿಸಿ ರಸ್ತೆಯ ದಪ್ಪಗಳನ್ನು ನಿರ್ಧರಿಸಲಾಗುವುದು.

ಈ) ಇದು ನೀತಿ ನಿಯಮದ ವಿಷಯವಿರುವುದರಿಂದ ಈ ವಿಷಯದಲ್ಲಿ ಮಲೆನಾಡು ಅಭಿವೃದ್ಧಿ ಮಂಡಳಿ ರೂಪಿಸಿದ ನೀತಿ ನಿಯಮಗಳಿಗನುಸಾರವಾಗಿ ಕೆಲಸವನ್ನು ಕೈಗೆತ್ತಿಕೊಳ್ಳಬೇಕಾಗುವುದು.

ಉ) 1) ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಯೋಜನೆಯಡಿಯಲ್ಲಿ ಗುತ್ತಿಗೆದಾರರಿಗೆ ಇಂದಿನವರೆಗೆ ಕೊಡಬೇಕಾಗಿರುವ ಜಿಲ್ಲಾವಾರು ಹಣದ ವಿವರ ಕೆಳಗಿನಂತಿದೆ.

(ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿದಂತೆ)

ಗುಲಬರ್ಗಾ	50.35 ಲಕ್ಷ ರೂ.ಗಳು
ಬೀದರ್	31.25 ಲಕ್ಷ ರೂ.ಗಳು
ಬಳ್ಳಾರಿ	22.90 ಲಕ್ಷ ರೂ.ಗಳು
ರಾಯಚೂರು	79.20 ಲಕ್ಷ ರೂ.ಗಳು
	18 3.70 ಲಕ್ಷ ರೂ.ಗಳು

2) ಮಲೆನಾಡು ಅಭಿವೃದ್ಧಿ ಯೋಜನೆಯಡಿಯಲ್ಲಿ ಗುತ್ತಿಗೆದಾರರಿಗೆ ಕೊಡಬೇಕಾಗಿರುವ ಜಿಲ್ಲಾವಾರು ಹಣದ ವಿವರ ಕೆಳಗಿನಂತಿದೆ. (ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿದಂತೆ)

ಬೆಳಗಾಂ ಜಿಲ್ಲೆ	4.12 ಲಕ್ಷ ರೂ.ಗಳು
ಧಾರವಾಡ ಜಿಲ್ಲೆ	
ಕಾರವಾರ ಜಿಲ್ಲೆ	12.00 ಲಕ್ಷ ರೂ.ಗಳು
	16.12 ಲಕ್ಷ ರೂ.ಗಳು

ವೀರಾಜಪೇಟೆ ಮತ ಕ್ಷೇತ್ರಕ್ಕೆ ವಿಶೇಷ ಅನುದಾನ ಬಿಡುಗಡೆ ಮಾಡುವ ಬಗ್ಗೆ

605 - ಶ್ರೀಮತಿ ಸುಮಾ ವಸಂತ (ವೀರಾಜಪೇಟೆ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವೀರಾಜಪೇಟೆ ತಾಲ್ಲೂಕು ವಿಧಾನಸಭಾ ಕ್ಷೇತ್ರಕ್ಕೆ ವಿಶೇಷ ಅನುದಾನವನ್ನು ಕಾಮಗಾರಿಗಾಗಿ ಬಿಡುಗಡೆ ಮಾಡಲಾಗಿದೆಯೇ.

ಆ) ಹಾಗಿದ್ದಲ್ಲಿ, ಈವರೆಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ.

ಇ) ಮೈಸೂರು-ಹುಣಸೂರು-ಪಿರಿಯಾಪಟ್ಟಣ ರಸ್ತೆ ಮತ್ತು ಮೈಸೂರು - ಹುಣಸೂರು - ವೀರಾಜಪೇಟೆ ಕೇರಳ ರಸ್ತೆಯಲ್ಲಿ ತೀವ್ರ ವಾಹನ ಸಂಚಾರದ ಒತ್ತಡವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಈ) ಹಾಗಿದ್ದಲ್ಲಿ, ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಲಾಗಿರುವುದು.

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ವೀರಾಜಪೇಟೆ ವಿಧಾನಸಭಾ ಕ್ಷೇತ್ರದ ಲೋಕೋಪಯೋಗಿ ಇಲಾಖೆಯ ರಸ್ತೆ ಅಭಿವೃದ್ಧಿ ಕಾರ್ಯಕ್ರಮದಲ್ಲಿ 10 ಲಕ್ಷ ರೂ.ಗಳಿಗೆ ಹಾಗೂ ಗಿರಿ ಪ್ರದೇಶ ಅಭಿವೃದ್ಧಿ ಯೋಜನೆ ಅಡಿ 53.00 ಲಕ್ಷ ರೂ.ಗಳ ಕಾರ್ಯಕ್ರಮಕ್ಕಾಗಿ 93-94ನೇ ಸಾಲಿನಲ್ಲಿ ವಿಶೇಷ ಅನುದಾನ ನೀಡಲಾಗಿದೆ.

ಆ) ಕಾಮಗಾರಿಗಳ ಅಂದಾಜಿಗೆ ಮಂಜೂರಾತಿ ನೀಡಿದ್ದು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಕಾಮಗಾರಿ ನಡೆದಂತೆ ಬೇಡಿಕೆ ಅನುಸರಿಸಿ ಹಣ ಭರವಸೆ ಪತ್ರವನ್ನು ನೀಡಬೇಕಿರುತ್ತವೆ. ಕೊಡಗು ಲೋಕೋಪಯೋಗಿ ಇಲಾಖೆ ವಿಭಾಗಕ್ಕೆ ಒಟ್ಟು 159.74 ಲಕ್ಷ ರೂ.ಗಳನ್ನು ಫೆಬ್ರವರಿ 94ರವರೆಗೆ ಬಿಡುಗಡೆ ಆಗಿದೆ.

ಇ) ಇವು ರಾಜ್ಯ ಹೆದ್ದಾರಿಗಳಾಗಿದ್ದು, ತೀವ್ರವಾದ ವಾಹನ ಸಂಚಾರದ ಒತ್ತಡ ಇರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಈ) ಈ ರಸ್ತೆಗಳನ್ನು ವಾಹನ ಸಂಚಾರಕ್ಕೆ ಅಡೆತಡೆ ಇರದಂತೆ ಆಗಿಂದ್ದಾಗೆ ಬಿದ್ದಿರುವ ಗುಂಡಿಗಳನ್ನು ಮುಚ್ಚಿ ಡಾಂಬರು ಮಾಡಿ, ವಾಹನ ಸಂಚಾರಕ್ಕೆ ಯೋಗ್ಯವಾಗಿಡಲಾಗಿದೆ. ಹಾಗೂ ಮೈಸೂರು-ವಿರಾಜಪೇಟೆ-ಕೇರಳ ರಸ್ತೆ (ಮಾಕುಟ ರಸ್ತೆ)ಯ ಆಯ್ದ ಭಾಗಗಳ ಡಾಂಬರೀಕರಣಕ್ಕೆ 93-94ನೇ ಸಾಲಿನಲ್ಲಿ 15.00 ಲಕ್ಷ ರೂ. ಅಂದಾಜಿನ ಕಾಮಗಾರಿಗೆ ಗುತ್ತಿಗೆ ಮಂಜೂರಾಗಿದೆ. ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

ಕಾರಂಜಾ, ಚುಳಕಿ ನಾಲಾ ಹಾಗೂ ಅಪ್ಪರ್ ಮುಲ್ಲಾಮಾರಿ ಯೋಜನೆಗಳನ್ನು ಕುರಿತು

700 - ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ) : ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾರಂಜಾ, ಚುಳಕಿ ನಾಲಾ ಹಾಗೂ ಅಪ್ಪರ್ ಮುಲ್ಲಾಮಾರಿ ಯೋಜನೆಗಳನ್ನು ಯಾವಾಗ ಪ್ರಾರಂಭಿಸಲಾಯಿತು;

ಆ) ಇಲ್ಲಿಯವರೆಗೆ ಆ ಯೋಜನೆಗಳಿಗೆ ಖರ್ಚು ಮಾಡಿದ ಹಣವೆಷ್ಟು;

ಇ) ಈ ಯೋಜನೆಗಳನ್ನು ಯಾವಾಗ ಪೂರ್ಣಗೊಳಿಸಬೇಕಾಗಿತ್ತು;

ಈ) ಆ ಯೋಜನೆಗಳಿಗೆ 1994-95 ರಲಿ ಖರ್ಚು ಮಾಡಿದ ಹಣವೆಷ್ಟು;

ಉ) ಕಾರಂಜಾ ಯೋಜನೆಗೆ ಪ್ರತಿವರ್ಷ 50 ಕೋಟಿ ರೂಪಾಯಿಗಳನ್ನು ಒದಗಿಸಲಾಗುವುದೆಂದು ಸರ್ಕಾರ ಘೋಷಿಸಿದೆಯೇ;

ಊ) ಹಾಗಿದ್ದಲ್ಲಿ, 1994-95ರಲ್ಲಿ ಆ ಹಣವನ್ನು ಬಿಡುಗಡೆ ಮಾಡಲಾಗಿದೆಯೇ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು) :

ಅ) ಕಾರಂಜಾ ಯೋಜನೆಯನ್ನು 1970ರಲ್ಲಿ ಮತ್ತು ಚುಳಕಿನಾಲಾ ಮತ್ತು ಮೇಲ್ದಂಡೆ ಮುಲ್ಲಾಮಾರಿ ಯೋಜನೆಗಳನ್ನು 1978-79ರಲ್ಲಿ ಪ್ರಾರಂಭಿಸಲಾಯಿತು.

ಆ)	1) ಕಾರಂಜಾ ಯೋಜನೆ	10,347 ಲಕ್ಷಗಳು
	2) ಚುಳಕಿನಾಲಾ ಯೋಜನೆ	1,289 ಲಕ್ಷಗಳು
	3) ಮೇಲ್ದಂಡೆ ಮುಲ್ಲಾಮಾರಿ ಯೋಜನೆ	1,819 ಲಕ್ಷಗಳು

ಇ) ಈಗಾಗಲೇ ಪೂರ್ಣಗೊಳಿಸಬೇಕಾಗಿತ್ತು.

ಈ) 1993-94ರಲ್ಲಿ ಫೆಬ್ರವರಿ 1994ರ ವರೆಗೆ ಮಾಡಲಾದ ಖರ್ಚು.

ಕಾರಂಜಾ ಯೋಜನೆ(1,054 ಲಕ್ಷ ರೂ.)

ಚುಳಕಿನಾಲಾ ಯೋಜನೆ(245 ಲಕ್ಷ ರೂ.)

ಮೇಲ್ದಂಡೆ ಮುಲ್ಲಾಮಾರಿ ಯೋಜನೆ(103 ಲಕ್ಷ ರೂ.).

ಉ) ಹೌದು.

ಊ) ಪರಿಶೀಲಿಸಲಾಗುತ್ತಿದೆ.

ಸವಣೂರ ಪಟ್ಟಣದಲ್ಲಿ 110 ಕೆ.ವಿ. ಸ್ಟೇಷನ್ ಸ್ಥಾಪಿಸುವ ವಿಚಾರ ಕುರಿತು

768 - ಶ್ರೀ ಮಂಜುನಾಥ್ ಸಿ. ಕುನ್ನೂರ್ (ಶಿಗ್ಗಾಂವ್) : ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸವಣೂರ ಪಟ್ಟಣದಲ್ಲಿ ಕರ್ನಾಟಕ ವಿದ್ಯುತ್ ಮಂಡಳಿ (ಕೆಇಬಿ) ಇಲಾಖೆಯಿಂದ 110 ಕೆ.ವಿ. ಸ್ಟೇಷನ್ 1993-94ರ ಆಯವ್ಯಯದಲ್ಲಿ ಮಂಜೂರಾಗಿದೆಯೇ?

ಆ) ಹಾಗಿದ್ದಲ್ಲಿ ಅದನ್ನು ಎಷ್ಟು ದಿವಸಗಳಲ್ಲಿ ಪ್ರಾರಂಭ ಮಾಡಲಾಗುವುದು?

ಇ) ಧಾರವಾಡ ಜಿಲ್ಲೆಯಲ್ಲಿ ಬೇರೆ ಕಡೆಗೆ 100 ಕೆ.ವಿ. ಸ್ಟೇಷನ್ ಕರ್ನಾಟಕ ವಿದ್ಯುತ್ ಮಂಡಳಿ (ಕೆಇಬಿ) ಇಲಾಖೆಯಿಂದ ಪ್ರಾರಂಭ ಮಾಡಲಾಗಿದೆಯೇ?

ಶ್ರೀ ಎಸ್.ಎಂ ಕೃಷ್ಣ (ಉಪ ಮುಖ್ಯಮಂತ್ರಿಗಳು) :

ಅ) ಇಲ್ಲ.

ಆ) ಇದು ಉದ್ಭವಿಸುವುದಿಲ್ಲ.

ಇ) ಧಾರವಾಡ ಜಿಲ್ಲೆಯ ಗೋಪನ ಕೊಪ್ಪದಲ್ಲಿ (ಹುಬ್ಬಳ್ಳಿ ಸಮೀಪ) 110 ಕೆ.ವಿ. ವಿದ್ಯುತ್ ಸಬ್‌ಸ್ಟೇಷನ್ನಿನ ನಿರ್ಮಾಣ ಕಾರ್ಯವನ್ನು ಪ್ರಾರಂಭ ಮಾಡಲಾಗಿದೆ.

ರಾಜ್ಯದಲ್ಲಿ ಎ.ಪಿ.ಪಿ ಹುದ್ದೆ ಆಯ್ಕೆ ಮಾಡಿಕೊಂಡಿದ್ದರ ಕುರಿತು

767 - ಶ್ರೀ ಮಂಜುನಾಥ್ ಸಿ. ಕುನ್ನೂರ್ (ಶಿಗ್ಗಾಂವ್) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ 1993-94ನೇ ಸಾಲಿನಲ್ಲಿ ಎಷ್ಟು ಅಸಿಸ್ಟೆಂಟ್ ಪಬ್ಲಿಕ್ ಪ್ರಾಸಿಕ್ಯೂಟರ್ ಹುದ್ದೆಗಳನ್ನು ಆಯ್ಕೆ ಮಾಡಿಕೊಳ್ಳಲಾಯಿತು;

ಆ) *ಸದರೀ ಹುದ್ದೆಗಳನ್ನು ಆಯ್ಕೆ ಮಾಡಿಕೊಳ್ಳುವಾಗ ಎಷ್ಟು ಜನ ಅಭ್ಯರ್ಥಿಗಳು ಪರೀಕ್ಷೆಗೆ ಕುಳಿತು ಕೊಂಡಿರುವರು;*

ಇ) *ಎಷ್ಟು ಜನ ಅಭ್ಯರ್ಥಿಗಳಿಗೆ ಸಂದರ್ಶನಕ್ಕೆ ಕರೆಯಲಾಯಿತು.*

ಈ) *ಸಂದರ್ಶನಕ್ಕೆ ಬಂದ ಅಭ್ಯರ್ಥಿಗಳ ಹಾಗೂ ಆಯ್ಕೆಕೊಂಡ ಅಭ್ಯರ್ಥಿಗಳು ಎಷ್ಟು ಅಂಕಗಳನ್ನು ಲಿಖಿತ ಪರೀಕ್ಷೆಯಲ್ಲಿ ಹಾಗೂ ಮೌಖಿಕ ಪರೀಕ್ಷೆಯಲ್ಲಿ ಪಡೆದು ಕೊಂಡಿದ್ದಾರೆ (ಸಂಪೂರ್ಣ ವಿವರ ನೀಡುವುದು);*

ಉ) *ಆಯ್ಕೆಕೊಂಡ ಅಭ್ಯರ್ಥಿಗಳನ್ನು ಯಾವ ನಿಯಮದ ಪ್ರಕಾರ ಆಯ್ಕೆ ಮಾಡಿಕೊಳ್ಳಲಾಯಿತು ಹಾಗೂ ಅನುಸರಿಸಿದ ಕ್ರಮಗಳೇನು?*

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ಕರ್ನಾಟಕ ರಾಜ್ಯದಲ್ಲಿ 1993-94ನೇ ಸಾಲಿನಲ್ಲಿ 96 ಜನ ಅಭ್ಯರ್ಥಿಗಳನ್ನು ಅಸಿಸ್ಟೆಂಟ್ ಪಬ್ಲಿಕ್ ಪ್ರಾಸಿಕ್ಯೂಟರ್ ಹುದ್ದೆಗೆ ಆಯ್ಕೆ ಮಾಡಿಕೊಳ್ಳಲಾಗಿದೆ.

ಆ) 1202 ಅಭ್ಯರ್ಥಿಗಳು

ಇ) 290 ಅಭ್ಯರ್ಥಿಗಳು ಲಿಖಿತ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದು, ಸಂದರ್ಶನಕ್ಕೆ ಕರೆಯಲು ಅರ್ಹರಾಗಿದ್ದರು. ಅವರುಗಳ ಪೈಕಿ 282 ಅಭ್ಯರ್ಥಿಗಳು ಸಂದರ್ಶನಕ್ಕೆ ಹಾಜರಾಗಿದ್ದರು.

ಈ) ಲಿಖಿತ ಪರೀಕ್ಷೆಯಲ್ಲಿ ಕನಿಷ್ಠ ಅಂಕಗಳನ್ನು ಪಡೆದ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಕರೆಯಲಾಗುವುದು. ಸಂದರ್ಶನದಲ್ಲಿ ಆಯಾಯ ದಿವಸವೇ ಆಯ್ಕೆ ಸಮಿತಿಯ ಅಧ್ಯಕ್ಷರ ಕಛೇರಿಯ ಸೂಚನಾಫಲಕದಲ್ಲಿ ಪ್ರಕಟಿಸಲಾಗಿದೆ.

ಉ) ಆಯ್ಕೆಗೊಂಡ ಅಭ್ಯರ್ಥಿಗಳನ್ನು ಕರ್ನಾಟಕ ಸರ್ಕಾರಿ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶನಾಲಯ (ವೃಂದ ಮತ್ತು ನೇಮಕಾ) ತಿದ್ದುಪಡಿಗಳನ್ವಯ ಹಾಗೂ ಕರ್ನಾಟಕ ಸರ್ಕಾರಿ (ಸಾಮಾನ್ಯ ನೇಮಕಾತಿ) ನಿಯಮಗಳ, 1977ರ ಪ್ರಕಾರ ಆಯ್ಕೆ ಮಾಡಲಾಗಿದೆ.

ಸವಣೂರ ತಾಲ್ಲೂಕು ಕಳನೂರ ಹಾಗೂ ಕುಣಿಮೆಳ್ಳಿಹಳ್ಳಿ ಬ್ಯಾರೇಜ್ ಕೆಲಸದ ಪ್ರಗತಿ ಕುರಿತು

766 - ಶ್ರೀ ಮಂಜುನಾಥ್ ಸಿ. ಕುನ್ನೂರ್ (ಶಿಗ್ಗಾಂವ್) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ರಾಜ್ಯದಲ್ಲಿ ವಿವಿಧ ನದಿಗಳಿಗೆ ಎಷ್ಟು ಬ್ಯಾರೇಜ್ಗಳನ್ನು 1993-94ರಲ್ಲಿ ಶಂಕು ಸ್ಥಾಪನೆ ಮಾಡಲಾಗಿದೆ ಹಾಗೂ ಅವುಗಳಲ್ಲಿ ಎಷ್ಟನ್ನು ಕೈಗೆತ್ತಿಕೊಳ್ಳಲಾಗಿದೆ (ವಿವರ ನೀಡುವುದು);*

ಆ) *ಶಿಗ್ಗಾಂವ ವಿಧಾನ ಸಭಾ ಕ್ಷೇತ್ರ ಸವಣೂರ ತಾಲ್ಲೂಕು ಕಳಸೂರ ಹಾಗೂ ಕುಣಿಮೆಳ್ಳಿ ಹಳ್ಳಿ ಬ್ಯಾರೇಜ್ ಕೆಲಸ ಯಾವ ಹಂತದಲ್ಲಿದೆ;*

ಇ) *ಸದರೀ ಕಾಮಗಾರಿಗಳನ್ನು ಎಷ್ಟು ದಿನಗಳಲ್ಲಿ ಮುಗಿಸಲಾಗುವುದು?*

ಡಾ|| ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಈ ಕೆಳಗೆ ತೋರಿಸಿದ ನದಿಗಳಿಗೆ ಬ್ಯಾರೇಜ್ಗಳನ್ನು 1993-94ರಲ್ಲಿ ಶಂಕುಸ್ಥಾಪನೆ ಮಾಡಲಾಗಿದೆ.

1) ಘಟಪ್ರಭಾ ನದಿಗೆ ಅವರಾದಿ ಹತ್ತಿರ ತಾ: ಗೋಕಾಕ ಜಿಲ್ಲೆ, ಬೆಳಗಾಂ.

2) ವೇದಗಂಗಾ ನದಿಗೆ ಪುನ್ನರಗಿ ಹತ್ತಿರ ತಾ: ಚಿಕ್ಕೋಡಿ, ಜಿಲ್ಲೆ, ಬೆಳಗಾಂ.

3) ದೊರಿಹಳ್ಳಕ್ಕೆ ಹತ್ತಳ್ಳಿ ಹತ್ತಿರ ತಾ: ಇಂಡಿ ಜಿಲ್ಲೆ ಬಿಜಾಪುರ.

4) ವರದಾ ನದಿಗೆ ಕಳಸೂರ ಹತ್ತಿರ ತಾ: ಸವಣೂರ ಜಿಲ್ಲೆ ಧಾರವಾಡ.

5) ಭೀಮಾ ನದಿಗೆ ಕವಳೂರ ಹತ್ತಿರ ತಾ: ಯಾದಗಿರ ಜಿಲ್ಲೆ : ಗುಲ್ಬರ್ಗಾ.

6) ಕರಂಜಾ ನದಿಗೆ ಆನಂದವಾಡಿ ನೀಡಬಾನ ಹತ್ತಿರ ತಾ: ಬಾಲ್ಕಿ ಜಿಲ್ಲೆ ಬೀದರ್.

ಕ್ರಮಸಂಖ್ಯೆ 1.2.3 ಮತ್ತು 5 ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ.

ಆ) ಸವಣೂರ ತಾಲ್ಲೂಕಿನ ಕಳನೂರ ಬ್ಯಾರೇಜ್ ನಿರ್ಮಾಣದ ಅಂದಾಜು ಪಟ್ಟಿಯು ಪರಿಶೀಲನೆಯ ಹಂತದಲ್ಲಿದೆ.

ಕುಣಿಮೆಳ್ಳಿಹಳ್ಳಿ ಬ್ಯಾರೇಜ್ ನಿರ್ಮಾಣದ ಕೆಲಸವನ್ನು ಕರ್ನಾಟಕ ರಾಜ್ಯ ನಿರ್ಮಾಣ ನಿಗಮಕ್ಕೆ ವಹಿಸಿಕೊಡಲಾಗಿದೆ. ಬ್ಯಾರೇಜದ ತಳಪಾಯದ ಕಾಂಕ್ರೆಟ್ ಪೂರ್ಣಗೊಂಡು ಕಂಬಗಳು 1 ಮೀ ಎತ್ತರ ಮುಗಿಯುವ ಹಂತದಲ್ಲಿವೆ. ಕಬ್ಬಿಣದ ಗೇಟುಗಳನ್ನು ಸರಬರಾಜು ಮಾಡಲಾಗಿದೆ. ನಿಗಮಕ್ಕೆ 22.00 ಲಕ್ಷ ರೂ.ಗಳನ್ನು ಪಾರತಿ ಮಾಡಬೇಕಾಗಿದ್ದರಿಂದ ನಿಗಮದವರು ಕೆಲಸ ಸ್ಥಗಿತಗೊಂಡಿದೆ.

ಇ) ಕಳಸೂರ್ ಬ್ಯಾರೇಜ್ ನಿರ್ಮಾಣದ ಅಂದಾಜಿಗೆ ಅನುಮೋದನೆಯಾದ ಮತ್ತು ಹಣಕಾಸಿನ ಲಭ್ಯತೆಗನುಗುಣವಾಗಿ ಈ ಬ್ಯಾರೇಜುಗಳನ್ನು ಪೂರ್ಣಗೊಳಿಸಲಾಗುವುದು.

ಅಕ್ಕೂರ್ ಮೇಲೆ ಉಪಕೇಂದ್ರಕ್ಕೆ 12.5ಎಂ.ವಿ.ಎ. ಟ್ರಾನ್ಸ್ಫಾರಂನ್ನು ಅಳವಡಿಸುವುದರ ಬಗ್ಗೆ

770 - ಶ್ರೀ ಸಾದತ್ ಅಲಿ ಖಾನ್ (ಚನ್ನಪಟ್ಟಣ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರವು ಕಳೆದ ವಿಧಾನ ಸಭೆಯಲ್ಲಿ ಆ ಅಕ್ಕೂರ್ ಮೇಲೆ ವಿದ್ಯುತ್ ಉಪಕೇಂದ್ರವನ್ನು ಮಾರ್ಚಿ 94ರಲ್ಲಿ ಪಾಲನೆ ಮಾಡಲಾಗುವುದು ಎಂದು ಆಶ್ವಾಸನೆ ಕೊಟ್ಟಿರುವುದು ನಿಜವೇ?

ಆ) ಹಾಗಿದ್ದಲ್ಲಿ, ಈ ಉಪಕೇಂದ್ರವನ್ನು ಚಾಲನೆಗೊಳಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ?

ಇ) ಇದುವರೆಗೂ ಅಕ್ಕೂರ್ ಮೇಲೆ ಉಪಕೇಂದ್ರಕ್ಕೆ 12.5 ಎಂವಿಎ ಟ್ರಾನ್ಸ್ಫಾರ್ಮರ್ನ್ನು ಅಳವಡಿಸಲು ಕಳುಹಿಸದಿರುವುದು ನಿಜವೇ?

ಈ) ಹಾಗಿದ್ದಲ್ಲಿ, ಈ ಟ್ರಾನ್ಸ್ಫಾರ್ಮರ್ನ್ನು ಅಕ್ಕೂರ್ ಮೇಲೆಗೆ ಕಳುಹಿಸದಿರಲು ಕಾರಣವೇನು?

ಉ) ಈ ಉಪಕೇಂದ್ರವನ್ನು ಚಾಲನೆಗೊಳಿಸುವ ನಿಗದಿಯಾದ ದಿನಾಂಕವನ್ನು ತಿಳಿಸುವುದು.

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು) :

ಅ) ಮಂಡಳಿಯು ಮಾರ್ಚ್ 94ರಲ್ಲಿ ಈ ಕೆಲಸವನ್ನು ಪೂರ್ಣಗೊಳಿಸಲು ಆದಷ್ಟು ಪ್ರಯತ್ನ ಮಾಡುತ್ತಿದೆ. ಆದರೆ ದಾರಿ ನಿರ್ಮಾಣದಿಂದ ಟ್ರಾನ್ಸ್ಮಿಷನ್ ಲೈನ್ ತೆಗೆದುಕೊಂಡು ಹೋಗಲು ಸ್ವಲ್ಪ ಅಡಚಣೆಯಾಗುತ್ತಿದೆ.

ಆ) ಈ ಸಮಸ್ಯೆಯನ್ನು ಬಗೆಹರಿಸಲು ಮಂಡಳಿಯು ರೈತರೊಡನೆ ಮಾತುಕತೆ ನಡೆಸಿ ಆದಷ್ಟು ಪ್ರಯತ್ನ ಮಾಡುತ್ತಿದೆ.

ಇ) ಅಕ್ಕೂರ್ ಮೇಲೆ ಉಪ ಕೇಂದ್ರಕ್ಕೆ 12.5 ಎಂವಿಎ ಟ್ರಾನ್ಸ್ಫಾರ್ಮರ್ [illegible] ಈಗಿಗೆ 6.3 ಎಂವಿಎ ಟ್ರಾನ್ಸ್ ಫಾರ್ಮರ್ ಸಾಕಾಗುತ್ತದೆ.

ಏಪ್ರಿಲ್94ರಲ್ಲಿ 6.3 ಎಂವಿಎ ಟ್ರಾನ್ಸ್ಫಾರ್ಮರ್ಗಳು ಬರುವ ನಿರೀಕ್ಷೆ ಇದೆ. ಸರಬರಾಜನಿಂದ ಬಂದ ತಕ್ಷಣ ಒಂದು 6.3 ಎಂವಿಎ ಪವರ್ ಟ್ರಾನ್ಸ್ಫಾರ್ಮರ್ನ್ನು ಅಕ್ಕೂರ್ ಮೇಲೆಗೆ ಕಳುಹಿಸಲಾಗುವುದು.

ಈ) 'ಇ' ಭಾಗದ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಉ) ಟ್ರಾನ್ಸ್ಮಿಷನ್ ಲೈನ್ ಕೆಲಸ ಮಾಡಲು ದಾರಿ ಸುಗಮವಾದ ತಕ್ಷಣವೇ ಈ ಉಪಕೇಂದ್ರವನ್ನು ಚಾಲನೆಗೊಳಿಸಲಾಗುವುದು.

ಚಿಕ್ಕಮಗಳೂರು ಬಳಿ ಕಣ್ವಾ ನದಿಗೆ ಅಡ್ಡಲಾಗಿ ವೆಂಟೆಡ್ ಡ್ಯಾಂ ನಿರ್ಮಿಸುವುದರ ಬಗ್ಗೆ

769 - ಶ್ರೀ ಸಾದತ್ ಅಲಿಖಾನ್ (ಚನ್ನಪಟ್ಟಣ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಮಗಳೂರು ಬಳಿ ಕಣ್ವಾ ನದಿಗೆ ಅಡ್ಡಲಾಗಿ ವೆಂಟೆಡ ಡ್ಯಾಂ ನಿರ್ಮಿಸುವ ಬಗ್ಗೆ ಸರ್ಕಾರದಲ್ಲಿ ಪ್ರಸ್ತಾವನೆ ಬಾಕಿ ಉಳಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ 1994-95ನೇ ಸಾಲಿನ ಹಾಲಿ ಆಯವ್ಯಯದಲ್ಲಿ ಸೇರಿಸುವ ಬಗ್ಗೆ ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು?

ಡಾ|| ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಪ್ರಸ್ತಾವನೆ ಸರ್ಕಾರದಲ್ಲಿ ಬಾಕಿ ಉಳಿದಿಲ್ಲ.

ಆ) ಇದನ್ನು ಪರಿಶೀಲಿಸಲಾಗುವುದು.

ಕೃಷ್ಣ ಡೆವಲಪ್ಮೆಂಟ್ ಅಥಾರಿಟಿ ಬಿಲ್ಲನ್ನು ಅನುಷ್ಠಾನ ಮಾಡುವ ಬಗ್ಗೆ

651 - ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷ್ಣಾ ಅಭಿವೃದ್ಧಿ ಪ್ರಾಧಿಕಾರದ ವಿಧೇಯಕವನ್ನು ವಿಧಾನ ಸಭೆಯಲ್ಲಿ ಯಾವಾಗ ಅಂಗೀಕರಿಸಲಾಯಿತು;

ಆ) ಅದನ್ನು ಕೇಂದ್ರ ಸರ್ಕಾರಕ್ಕೆ ಒಪ್ಪಿಗೆಗೆ ಯಾವಾಗ ಕಳುಹಿಸಲಾಯಿತು;

ಇ) ಇಲ್ಲಿಯವರೆಗೆ ಆ ವಿಧೇಯಕವನ್ನು ಅನುಷ್ಠಾನ ಮಾಡುವಲ್ಲಿ ವಿಳಂಬ ಆಗಿರುವುದಕ್ಕೆ ಕಾರಣಗಳೇನು?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು) :

ಅ) ದಿನಾಂಕ 30-3-92 ರಂದು ಅಂಗೀಕರಿಸಲಾಯಿತು.

ಆ) ದಿನಾಂಕ 11-5-92 ರಂದು ಕಳುಹಿಸಲಾಯಿತು.

ಇ) ಕೇಂದ್ರ ಸರ್ಕಾರದ ಅನುಮೋದನೆಯನ್ನು ನಿರೀಕ್ಷಿಸಲಾಗಿದೆ.

ಸೇಡಂ ತಾಲ್ಲೋಕಿನ ಕಾಗಿನಾ ನದಿಯ ಮೇಲೆ ಕೆರೆ ನಿರ್ಮಾಣ ಕುರಿತು

737 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗ ಜಿಲ್ಲೆಯ ಸೇಡಂ ತಾಲ್ಲೂಕಿನ ಕಾಗಿನಾ ನದಿಯ ಮೇಲೆ 2000 ಸಾಲಿನೊಳಗಾಗಿ ಕೆರೆ ನಿರ್ಮಾಣವಾಗುತ್ತದೆಂದು ಆ ಕೆರೆ ಒಳಗೆ ಕುರುಕುಂಟಾ, ಹೈಯಾಳ್ ಇತ್ಯಾದಿ ಗ್ರಾಮಗಳ ಭೂಮಿ ಮುಳುಗಡೆಯಾಗುತ್ತದೆಂದು ಏತ ನೀರಾವರಿಗಾಗಿ ಅನುಮತಿ ನೀಡಲಾರದ್ದು, ನಿಜವೇ?

ಆ) ಒಂದು ವೇಳೆ ಈ ಕಾಗಿನಾ ನದಿ ಮೇಲೆ ಎರಡು ಸಾವಿರ ಸಾಲಿನೊಳಗಾಗಿ ಕೆರೆ ನಿರ್ಮಾಣವಾಗಬೇಕಾದರೆ ಈಗಾಗಲೇ ಎಲ್ಲಾ ವಿಧಿ-ವಿಧಾನಗಳು ಪೂರ್ತಿಯಾಗಿ ಕೆಲಸ ಪ್ರಾರಂಭಿಸಿದಲ್ಲಿ ಮಾತ್ರ ಆ ಕೆರೆ ಕೆಲಸ ಏನಾದರೂ ಸ್ವಲ್ಪ ಮಟ್ಟಿಗೆ ಅವಧಿಯಲ್ಲಿ ಆಗುವುದು ಖಚಿತವಷ್ಟೆ?

ಇ) ಒಂದು ಕಡೆ ಏತ ನೀರಾವರಿ ಮಂಜೂರಿಗಾಗಿ ಆತಂಕ ಮಾಡಿ ರೈತರಿಗೆ ನೀರಾವರಿಗೆ ಅನುಕೂಲವಾಗದಂತೆ ಆದರೂ ಕೆರೆ ನಿರ್ಮಾಣ ಮಾಡುವುದು ಖಚಿತವಿಲ್ಲದಂತಾಗಿದೆಯಲ್ಲವೇ?

ಈ) ಈ ಪ್ರಕಾರ ರೈತರಿಗೆ ನೀರಾವರಿಗಾಗಿ ಯಾವ ಯೋಜನೆಗಳಿಂದ ಅತಿ ಶೀಘ್ರವಾಗಿ ಯಾವ ಸಾಲಿನಲ್ಲಿ ಅನುಕೂಲ ಮಾಡಿಕೊಡಲಾಗುವುದು.

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು) :

ಅ) ಕುರಕುಂಟ, ಐಹಾಳ್ ಏತ ನೀರಾವರಿ ಯೋಜನೆಗಳಡಿ ಉದ್ದೇಶಿಲಾಗಿರುವ ಅಚ್ಚುಕಟ್ಟು ಪ್ರದೇಶವು ಕಾಗಿನ ನದಿಗೆ ಅಡ್ಡಲಾಗಿ ಉದ್ದೇಶಿಸಿರುವ ಕಾಗಿನ ಮಧ್ಯಮ ನೀರಾವರಿ ಯೋಜನೆಯ ಮುಳುಗಡೆ ಪ್ರದೇಶದಲ್ಲಿ ಬರುವುದರಿಂದ ಈ ಎರಡು ಏತ ನೀರಾವರಿ ಯೋಜನೆಗಳನ್ನು ಕೈಗೊಳ್ಳಬೇಕೇ ಇಲ್ಲವೇ ಎಂಬ ಬಗ್ಗೆ ಸುದೀರ್ಘವಾಗಿ ಪರಿಶೀಲಿಸಿ ನಂತರ ನಿರ್ಣಯ ತೆಗೆದುಕೊಳ್ಳಲಾಗುವುದು.

ಆ) ಮತ್ತು ಇ) ಕಾಗಿನ ಮಧ್ಯಮ ನೀರಾವರಿ ಯೋಜನೆಯನ್ನು ಕ್ರಿ.ಶ. 2000 ಇಸವಿಯೊಳಗೆ ಪೂರ್ಣಗೊಳಿಸುವ ಕಾರ್ಯಕ್ರಮವಿದೆ.

ಈ) ಈ ಯೋಜನೆಯ ವರದಿಯನ್ನು ತಯಾರಿಸಿ ತಾಂತ್ರಿಕ ಸಮಿತಿಯ ಒಪ್ಪಿಗೆ ಪಡೆದ ನಂತರವೇ ಇದರ ಕಾಮಗಾರಿಯನ್ನು ಪ್ರಾರಂಭಿಸಬೇಕಾಗಿದೆ.

ಬಸವ ಕಲ್ಯಾಣದಲ್ಲಿ ಸಿವಿಲ್ ನ್ಯಾಯಾಲಯವನ್ನು ಎಲ್ಲಾ ದಿನಗಳಲ್ಲೂ ನಡೆಸುವ ಬಗ್ಗೆ

701 - ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಸವ ಕಲ್ಯಾಣದಲ್ಲಿ ವಾರದಲ್ಲಿ ಎಷ್ಟು ದಿನ ಸಿವಿಲ್ ನ್ಯಾಯಾಲಯವು ಕೆಲಸ ಮಾಡುತ್ತಿದೆ;

ಆ) ವಾರದಲ್ಲಿ ಎರಡು ದಿನ ಬಾಲ್ಕಿಯಲ್ಲಿ ಆ ನ್ಯಾಯಾಲಯ ನಡೆಯುವುದರಿಂದ ಬಸವ ಕಲ್ಯಾಣದಲ್ಲಿ ಸಿವಿಲ್ ಕಟ್ಲೆಗಳು ನಡೆಯಲು ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಇ) ಹಾಗಿದ್ದಲ್ಲಿ ವಾರದ ಎಲ್ಲಾ ದಿನಗಳಲ್ಲೂ ಸಿವಿಲ್ ನ್ಯಾಯಾಲಯವನ್ನು ಬಸವ ಕಲ್ಯಾಣದಲ್ಲಿ ನಡೆಸಲು ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ?

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ವಾರದಲ್ಲಿ 4 ದಿನಗಳು ಸಿವಿಲ್ ನ್ಯಾಯಾಲಯವು ಕೆಲಸ ಮಾಡುತ್ತಿದೆ.

ಆ) ಈ ವ್ಯವಸ್ಥೆಯಿಂದ ತೊಂದರೆಯಾಗುತ್ತಿರುವುದರ ಬಗ್ಗೆ ಯಾವುದೇ ದೂರುಗಳು ಸರ್ಕಾರಕ್ಕೆ ಬಂದಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ತುಂಗಾ ಮೇಲ್ದಂಡೆ ನೀರಾವರಿ ಯೋಜನೆ ಜಾರಿ ಕುರಿತು

679 - ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಂಗಾ ಮೇಲ್ದಂಡೆ ನೀರಾವರಿ ಯೋಜನೆ ಅನಾವೃಷ್ಟಿಯಿಂದ ಸತತ ಹಾನಿಗೊಳಗಾಗುತ್ತಿರುವ ಧಾರವಾಡ ಜಿಲ್ಲೆಯ(1) ಹಿರೇಕೆರೂರು (2) ರಾಣಿಬೆನ್ನೂರು (3) ಹಾವೇರಿ ಹಾನಗಲ್ಲು ತಾಲ್ಲೂಕುಗಳ ರೈತರಿಗೆ ವರದಾನ ಆಗಬಲ್ಲದು ಅನ್ನುವುದನ್ನು ಸರ್ಕಾರ ಗಮನಿಸಿದೆಯೇ?

ಆ) ಆ ಯೋಜನೆಯನ್ನು ಎರಡು ಸಾವಿರ ಇಸವಿಯೊಳಗಾಗಿ ಬಚಾವತ್ ತೀರ್ಪಿನ ಅನುಗುಣವಾಗಿ ಪೂರ್ಣಗೊಳಿಸಲು ಸರ್ಕಾರ ಯೋಚಿಸಿದೆಯೇ?

ಇ) ಆ ಬಗ್ಗೆ ಇಲ್ಲಿಯವರೆಗೆ ತೆಗೆದುಕೊಂಡ ಕ್ರಮಗಳೇನು?

ಈ) ಈ ಯೋಜನೆಯ ಕಾಮಗಾರಿಯನ್ನು ಪ್ರಾರಂಭಿಸಲಾಗಿದೆಯೇ?

ಉ) ಪ್ರಾರಂಭಿಸದಿದ್ದಲ್ಲಿ ನಿರ್ದಿಷ್ಟವಾಗಿ ಯಾವಾಗ ಪ್ರಾರಂಭಿಸಲಾಗುವುದು ಹಾಗೂ 93-94ರಲ್ಲಿ ಆ ಕಾಮಗಾರಿಗೆ ಒದಗಿಸಿದ ಮತ್ತು ಖರ್ಚು ಮಾಡಿದ ಹಣವೆಷ್ಟು?

ಊ) 94-95ರ ಆಯವ್ಯಯದಲ್ಲಿ ಆ ಯೋಜನೆಗೆ ಒದಗಿಸಲು ಉದ್ದೇಶಿಸಿರುವ ಹಣದ ಮೊತ್ತವೆಷ್ಟು?

ಋ) ರಾಜ್ಯದ ಯಾವ ಯಾವ ನೀರಾವರಿ ಯೋಜನೆಗಳನ್ನು ಕೇಂದ್ರದ ಮಂಜೂರಾತಿಗೆ ಕಳುಹಿಸಲಾಗಿದೆ?

ೠ) ಈವರೆಗೆ ಮಂಜೂರಾಗಿರುವ ಯೋಜನೆಗಳು ಯಾವುವು ಹಾಗೂ ಕೇಂದ್ರದ ಮಂಜೂರಾತಿ ಇಲ್ಲದೆ ಪ್ರಾರಂಭಿಸಿರುವ ಯೋಜನೆಗಳು ಯಾವುವು?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಯವರು) :

ಅ) ಹೌದು

ಆ) ಹೌದು.

ಇ) ಈ ಯೋಜನೆಯ ಪರಿಷ್ಕೃತ ಅಂದಾಜನ್ನು ಕೇಂದ್ರ ಜಲ ಆಯೋಗಕ್ಕೆ ಅನುಮೋದನೆಗಾಗಿ ಸಲ್ಲಿಸಲಾಗಿದೆ.

ಈ) ಇಲ್ಲ.

ಉ) 1993-94ನೇ ಸಾಲಿನಲ್ಲಿ ಈ ಯೋಜನೆಗೆ 500 ಲಕ್ಷ ರೂ.ಗಳನ್ನು ಒದಗಿಸಿದ್ದು, ಪರಿಷ್ಕೃತ ಅನುದಾನ ರೂ.200 ಲಕ್ಷ ಫೆಬ್ರವರಿ ಮಾಹೆಯ ಅಂತ್ಯದವರೆಗೆ ರೂ. 111.62 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

ಊ) ಪರಿಶೀಲಿಸಲಾಗುತ್ತಿದೆ.

ಋ) ಮತ್ತು ೠ) ಲಗತ್ತಿಸಿರುವ ಅನುಬಂಧದಲ್ಲಿ ವಿವರಗಳನ್ನು ನೀಡಲಾಗಿದೆ.

ಅನುಬಂಧ

ವಿಧಾನಸಭಾ ಸದಸ್ಯರಾದ ಶ್ರೀ ಬಿ.ಹೆಚ್. ಬನ್ನಿಕೋಡ್ ಅವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 679ಕ್ಕೆ ಉತ್ತರ.

ಅ) ಕೇಂದ್ರ ಸರ್ಕಾರಕ್ಕೆ ಕಳುಹಿಸಿರುವ ಯೋಜನೆಗಳು

(ಕಾಮಗಾರಿಗಳನ್ನು ಪ್ರಾರಂಭಿಸಲಾಗದಿರುವ ಯೋಜನೆಗಳು)

1) ರಾಮತಾಳ್. ಏತ ನೀರಾವರಿ.

2) ಭೀಮ ನೀರಾವರಿ ಯೋಜನೆ

3) ಭೀಮ ಏತ ನೀರಾವರಿ.

4) ಕೃಷ್ಣ ಮೇಲ್ದಂಡೆ ಯೋಜನೆ ಎರಡನೇ ಹಂತ

5) ತುಂಬ ಮೇಲ್ದಂಡೆ ಯೋಜನೆ.

ಆ) ಕೇಂದ್ರ ಸರ್ಕಾರದ ಅನುಮೋದನೆ ಇಲ್ಲದೆ ಪ್ರಾರಂಭಿಸಲಾಗಿರುವ ಯೋಜನೆಗಳು

1) ವರಾಹಿ

2) ಹಾರಂಗಿ

3) ಹೇಮಾವತಿ

4) ಕಬಿನಿ

5) ಡಿ. ದೇವರಾಜ್ ಅರಸ ಕಾಲುವೆ

6) ಯಗಚಿ

7) ಅರ್ಕಾವತಿ

8) ಚಿಕ್ಲಿ ಹೊಳೆ

9) ಮಚ್ಚನಕೊಪ್ಪಲು

10) ಇಗ್ಗಲೂರು

11) ಕಾಮಸಮುದ್ರ

12) ಉಡುತೊರೆಹಳ್ಳ

13) ಕಾಜೀನಹಳ್ಳಿ

ಕೊಡಗು ಜಿಲ್ಲೆಗೆ ಆರಾಧನ ಯೋಜನೆಗೆ ಮಂಜೂರಾದ ಹಣದ ವಿವರ ಕುರಿತು

608 - ಶ್ರೀಮತಿ ಸುಮಾ ವಸಂತ (ವಿರಾಜಪೇಟೆ) : ಮಾನ್ಯ ಕಾನೂನು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೊಡಗು ಜಿಲ್ಲೆಗೆ ಆರಾಧನಾ ಯೋಜನೆಯನ್ವಯ ಮಂಜೂರಾದ ಹಣ ಎಷ್ಟು ?

ಆ) ಆ ಯೋಜನೆಯನ್ವಯ ಕಟ್ಟುವ ದೇವಸ್ಥಾನಗಳೆಷ್ಟು (ತಾಲ್ಲೂಕುವಾರು ವಿವರ ಕೊಡುವುದು)

ಇ) ಇಪ್ಪರವರೆಗೆ ಬಿಡುಗಡೆಯಾದ ಹಣವೆಷ್ಟು ?

ಈ) ಮಾರ್ಚ್ 94ರ ಒಳಗಾಗಿ ಹಣ ಬಿಡುಗಡೆ ಮಾಡಲಾಗುವುದೇ ?

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಮುಜರಾಯಿ ಸಚಿವರು) :

ಅ) ರೂ. 17,32,855-00

ಆ) ಒಟ್ಟು 31 ದೇವಸ್ಥಾನಗಳನ್ನು ಕಟ್ಟಲಾಗಿದೆ.

ಮಡಿಕೇರಿ ತಾಲ್ಲೂಕು	10
ವಿರಾಜಪೇಟೆ	13
ಸೋಮವಾರಪೇಟೆ ತಾ:	8
	31

ಇ) ರೂ. 13,42,855-00

ಈ) ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯಲ್ಲಿರುವ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡುವುದರ ಬಗ್ಗೆ

606 - ಶ್ರೀಮತಿ ಸುಮಾ ವಸಂತ್ (ವಿರಾಜಪೇಟೆ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯಲ್ಲಿ ಲೈನ್ಮೆನ್ಗಳು ಮೀಟರ್ ರೀಡರ್‌ಗಳು ಮತ್ತು ಇತರ ಸಿಬ್ಬಂದಿಗಳು ಸಾಕಷ್ಟು ಪ್ರಮಾಣದಲ್ಲಿ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು (ತಾಲ್ಲೂಕುವಾರು ವಿವರ ಕೊಡುವುದು)

ಇ) ಈ ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡಲು ಎಷ್ಟು ಸಮಯ ಬೇಕಾಗುವುದು?

ಶ್ರೀ ಕೆ.ಎ. ನಿಸಾರ್ ಅಹಮದ್ (ಇಂಧನ ರಾಜ್ಯ ಸಚಿವರು) :

ಅ) ಹೌದು.

ಆ) ಹಾಲಿ ಖಾಲಿ ಇರುವ ಒಟ್ಟು ಹುದ್ದೆಗಳ ಸಂಖ್ಯೆ :223. ತಾಲ್ಲೂಕುವಾರು ವಿವರಗಳು ಕೆಳಕಂಡಂತಿದೆ.

ಮಡಿಕೇರಿ	74
ವಿರಾಜಪೇಟೆ	87
ಸೋಮವಾರ ಪೇಟೆ	62
ಒಟ್ಟು	223

ಇ) ಹಾಲಿ ಖಾಲಿ ಇರುವ ಹುದ್ದೆಗಳನ್ನು ಕೆಲವುಗಳನ್ನು ಭರ್ತಿ ಮೂಲಕ ಆದಷ್ಟು ಶೀಘ್ರಗತಿಯಲ್ಲಿ ತುಂಬಲಾಗುವುದು. ಬಾಕಿ ಉಳಿಯುವ ಖಾಲಿ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಸರ್ಕಾರದ ಅನುಮತಿ ಬೇಕಾಗುತ್ತದೆ. ಇದು ದೊರೆತ ನಂತರ ನೇಮಕಾತಿಯ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗುವುದು.

ಧಾರವಾಡ ಜಿಲ್ಲೆಯ ಹಿರೇಕೆರೂರು ತಾಲ್ಲೋಕಿನ ಅಬಲೂರು ಗ್ರಾಮಕ್ಕೆ ರಸ್ತೆ ನಿರ್ಮಾಣ ಕುರಿತು.

680 - ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವರಕವಿ ಸರ್ವಜ್ಞನ ಜನ್ಮಸ್ಥಳವಾದ ಧಾರವಾಡ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನ ಅಬಲೂರು ಗ್ರಾಮಕ್ಕೆ ಸುವ್ಯವಸ್ಥಿತ ರಸ್ತೆ ನಿರ್ಮಿಸಲು ಅಬಲೂರು ಮಾರ್ಗವಾಗಿ ಕೋಡ-ಹಿರೇಕೆರೂರು ರಸ್ತೆ ಕಾಮಗಾರಿಗೆ ತಗಲುವ ವೆಚ್ಚವೆಷ್ಟು;

ಆ) ಆ ಕಾಮಗಾರಿಗೆ ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿ ದೊರಕಿದೆಯೇ? ಮತ್ತು ಈವರೆಗೆ ಆ ಕಾಮಗಾರಿಗೆ ಮಾಡಿರುವ ವೆಚ್ಚವೆಷ್ಟು?

ಇ) ಆ ಕಾಮಗಾರಿಯನ್ನು ಅಂದಾಜಿಗೆ ಅನುಗುಣವಾಗಿ ಎಷ್ಟು ಹಂತದಲ್ಲಿ ಕಾರ್ಯಗತ ಮಾಡಲಾಗುವುದು ಮತ್ತು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):

ಅ) ಅಬಲೂರು ಮಾರ್ಗವಾಗಿ ಕೋಡ-ಹಿರೇಕೆರೂರು ರಸ್ತೆಯನ್ನು ಸುಧಾರಣೆ ಮಾಡುವ ಕಾಮಗಾರಿಗೆ ತಗಲುವ ವೆಚ್ಚ 30.09 ಲಕ್ಷ ರೂ.ಗಳೆಂದು ಅಂದಾಜು ಮಾಡಲಾಗಿದೆ.

ಆ) ಮೊದಲ ಹಂತದಲ್ಲಿ 13.69 ಲಕ್ಷ ರೂ.ಗಳಿಗೆ ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಿ ದೊರೆತಿದೆ. ಇಲ್ಲಿಯವರೆಗೆ ಒಟ್ಟು 3.00 ಲಕ್ಷ ರೂ. ವೆಚ್ಚವಾಗಿದೆ.

ಇ) ಈ ರಸ್ತೆಯನ್ನು 2 ಹಂತಗಳಲ್ಲಿ ತೆಗೆದುಕೊಳ್ಳಲು ಯೋಜಿಸಲಾಗಿದೆ. ಮೊದಲಿನ ಹಂತವನ್ನು ಡಿಸೆಂಬರ್ 94ರ ಒಳಗಾಗಿ ಮುಗಿಸಲಾಗುವುದು. ಎರಡನೇ ಹಂತವನ್ನು ಅನುದಾನದ ಲಭ್ಯತೆಯನ್ನು ಅನುಸರಿಸಿ ಮುಂದಿನ ಸಾಲಿನಲ್ಲಿ ತೆಗೆದುಕೊಳ್ಳುವ ಬಗ್ಗೆ ಪರಿಶೀಲಿಸಲಾಗುವುದು.

ವಿರಾಜಪೇಟೆ ಮಾಕುಟ್ಟ ರಸ್ತೆ ದುರಸ್ತಿ ಕುರಿತು

609 - ಶ್ರೀಮತಿ ಸುಮಾ ವಸಂತ್ (ವಿರಾಜಪೇಟೆ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವೀರಾಜಪೇಟೆ ಮಾಕುಟ್ಟ ರಸ್ತೆಯು ವಾಹನ ಸಂಚಾರಕ್ಕೆ ಕಳೆದ 7-8 ವರ್ಷಗಳಿಂದ ಯೋಗ್ಯಕರವಾಗಿಲ್ಲದಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸದರಿ ರಸ್ತೆಯನ್ನು ದುರಸ್ಥಿ ಪಡಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಇ) 1993-94ನೇ ಸಾಲಿನಲ್ಲಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ?

ಈ) ಒಟ್ಟು 1993-94ನೇ ಸಾಲಿನಲ್ಲಿ ಖರ್ಚಾದ ಹಣ ಎಷ್ಟು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):

ಅ) ಈ ರಸ್ತೆಯ ಕೆಲವು ಭಾಗಗಳು ನಾದುರಸ್ಥಿಯಲ್ಲಿದ್ದುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಸದ್ರಿ ರಸ್ತೆಯಲ್ಲಿ ಉಂಟಾಗಿದ್ದ ಗುಂಡಿಗಳನ್ನು ಡಾಂಬರು ಜಲ್ಲಿ ಸಮೇತ ಮುಚ್ಚಿ ರಸ್ತೆಯನ್ನು ವಾಹನ ಸಂಚಾರಕ್ಕೆ ಯೋಗ್ಯವಾಗಿ ಇಡಲಾಗಿದೆ. ಅಲ್ಲದೆ ಪ್ರಸ್ತುತ 93-94 ಆಯವ್ಯಯದಲ್ಲಿ ಈ ರಸ್ತೆಯ ಚಾಚು 50 ರಿಂದ 69.7 ಕಿ.ಮೀ ರ ಆಯ್ದ ಭಾಗಗಳ ಅಭಿವೃದ್ಧಿಯನ್ನು 15 ಲಕ್ಷ ರೂ.ಗಳ ಅಂದಾಜಿನಲ್ಲಿ ಕೈಗೆತ್ತಿಕೊಳ್ಳಲಾಗಿದೆ. ಗಿರಿ ಪ್ರದೇಶ ಅಭಿವೃದ್ಧಿ ಯೋಜನೆಯಲ್ಲಿ ಈ ರಸ್ತೆ ಅಭಿವೃದ್ಧಿಗೆ ಒಟ್ಟು ರೂ. 9.5 ಲಕ್ಷಗಳ ಕಾಮಗಾರಿಗಳನ್ನು ಮಂಜೂರು ಮಾಡಲಾಗಿದ್ದು ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.

ಇ) ಈ ರಸ್ತೆಗೆ ನಿರ್ವಹಣೆ ಹಾಗೂ ದುರಸ್ಥಿಗೆ ಪ್ರಸ್ತುತ ಸಾಲಿನಲ್ಲಿ ಒಟ್ಟು ರೂ. 22.645 ಲಕ್ಷ ಮೊತ್ತದ ಕಾಮಗಾರಿಗಳ ಕಾರ್ಯಕ್ರಮಕ್ಕೆ ಅನುಮೋದನೆ ನೀಡಲಾಗಿದೆ.

ಈ) 1993-94ನೇ ಸಾಲಿನಲ್ಲಿ ಈ ರಸ್ತೆ ಮೇಲೆ ಫೆಬ್ರವರಿ 94ರ ವರೆಗೆ ಆದ ಒಟ್ಟು ಖರ್ಚು ರೂ. 11,32,482 ಆಗಿರುತ್ತದೆ.

ಗುಬ್ಬಿ ತಾಲ್ಲೂಕಿನಲ್ಲಿನ ವಿದ್ಯುತ್ ಅಭಾವವನ್ನು ಹೋಗಲಾಡಿಸುವ ಬಗ್ಗೆ

698 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಬ್ಬಿ ತಾಲ್ಲೂಕು ಹಾಗಲವಾಡಿ ಪ್ರದೇಶದಲ್ಲಿ ಇತ್ತೀಚೆಗೆ ವಿದ್ಯುಚ್ಛಕ್ತಿ ಸರಬರಾಜಿನ ತೊಂದರೆಯಿಂದ ಅನೇಕ ದಿನಗಳಿಂದ ಜನರು ಕತ್ತಲಲ್ಲೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಆ ಪ್ರದೇಶಕ್ಕೆ ವಿದ್ಯುಚ್ಛಕ್ತಿ ಸರಬರಾಜು ಬಲಪಡಿಸಲು ಇಲಾಖೆಯು ಹಾಕಿಕೊಂಡಿರುವ ಕಾರ್ಯಕ್ರಮವೇನು?

ಇ) ಗುಬ್ಬಿ ತಾಲ್ಲೂಕಿನ ಹೊಸಕೆರೆಗೆ ಒಂದು ಉಪ ವಿದ್ಯುತ್ ಸ್ಥಾವರ (ಸಬ್ ಸ್ಟೇಷನ್) ಮಂಜೂರಾಗಿದ್ದು ಇದುವರೆಗೂ ಕಾರ್ಯಗತಗೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ, ಹಾಗಲವಾಡಿ ಹೋಬಳಿಯಲ್ಲಿ ವಿದ್ಯುತ್ ಅಭಾವ, ಓಲ್ಟೇಜ್ ಏರುಪೇರು ಸರಿಪಡಿಸಲು ಸರ್ಕಾರದ ನಿರ್ದಿಷ್ಟ ಕ್ರಮ ಮತ್ತು ಯೋಜನೆಗಳೇನು?

ಶ್ರೀ ಕೆ.ಎ. ನಿಸಾರ್ ಅಹಮದ್ (ಇಂಧನ ರಾಜ್ಯ ಸಚಿವರು) :

ಅ) ಹೌದು

ಆ) ಹಾಲಿ ಹಾಗಲವಾಡಿ ಪ್ರದೇಶಕ್ಕೆ ಚಿಕ್ಕನಾಯಕನಹಳ್ಳಿಯಲ್ಲಿರುವ 110:11 ಕೆ.ವಿ. ವಿದ್ಯುತ್ ಉಪ ಕೇಂದ್ರದಿಂದ ವಿದ್ಯುತ್ ಸರಬರಾಜಾಗುತ್ತಿರುವುದರಿಂದ ವಿದ್ಯುತ್ ಸರಬರಾಜಿನಲ್ಲಿ ಆಗಾಗ್ಗೆ ಅಡಚಣೆಯುಂಟಾಗುತ್ತಿದೆ. ಇದರ ನಿವಾರಣೆಗಾಗಿ ಗುಬ್ಬಿ ತಾಲ್ಲೂಕಿನ ನಿಟ್ಟೂರಿನಲ್ಲಿರುವ 110:11 ಕೆವಿ ವಿದ್ಯುತ್ ಉಪಕೇಂದ್ರದಿಂದ ಹಾಗಲವಾಡಿ ಪ್ರದೇಶಕ್ಕೆ ವಿದ್ಯುತ್ ಸರಬರಾಜನ್ನು ಏರ್ಪಾಟು ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಇಲ್ಲ. ಈ ಸಂಬಂಧದ ಪ್ರಸ್ತಾವನೆಯು ಮಂಡಳಿಯ ಪರಿಶೀಲನೆಯಲ್ಲಿದೆ.

ಈ) ಪ್ರಶ್ನೆಯ 'ಅ' ಭಾಗದ ಉತ್ತರದಲ್ಲಿ ತಿಳಿಸಿರುವಂತೆ ಹಾಗಲವಾಡಿ ಪ್ರದೇಶಕ್ಕೆ ನಿಟ್ಟೂರಿನಲ್ಲಿರುವ 110:11 ಕೆವಿ ವಿದ್ಯುತ್ ಉಪಕೇಂದ್ರದಿಂದ ವಿದ್ಯುತ್ ಸರಬರಾಜನ್ನು ವ್ಯವಸ್ಥೆ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಇದಕ್ಕಾಗಿ ನಿಟ್ಟೂರಿನಿಂದ ಹಾಗಲವಾಡಿಗೆ ಒಂದು 11 ಕೆವಿ ಎಕಸ್ಪ್ರೆಸ್ ಫೀಡರ್ ಅನ್ನು ನಿರ್ಮಾಣ ಮಾಡಲಾಗುತ್ತಿದ್ದು, ಕೆಲಸವು ಪ್ರಗತಿಯಲ್ಲಿದೆ. ಈ ಕಾರ್ಯವು ಪೂರ್ಣಗೊಂಡ ನಂತರ ಹಾಗಲವಾಡಿ ಪ್ರದೇಶದಲ್ಲಿ ವಿದ್ಯುತ್ ಸರಬರಾಜಿನ ಪರಿಸ್ಥಿತಿಯು ಸುಧಾರಣೆಗೊಳ್ಳುವುದು.

ಏತ ನೀರಾವರಿ ನಿಗಮಗಳನ್ನು ಮುಚ್ಚುವ ಬಗ್ಗೆ

657 - ಶ್ರೀ ಗುರುಪಾದಪ್ಪ ನಾಗಮಾರಹಳ್ಳಿ (ಔರಾದ್) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಲ್ಲೆಲ್ಲಿ ಏತ ನೀರಾವರಿ ನಿಗಮವನ್ನು ಸ್ಥಾಪಿಸಲಾಗಿದೆ?

ಆ) ಅವುಗಳನ್ನು ಯಾವಾಗ ಸ್ಥಾಪಿಸಲಾಯಿತು?

ಇ) ಅವುಗಳನ್ನು ಯಾವ ಉದ್ದೇಶಗಳನ್ನಿಟ್ಟುಕೊಂಡು ಸ್ಥಾಪಿಸಲಾಯಿತು?

ಈ) ಅದಕ್ಕೆ ಹೂಡಲಾಗಿರುವ ಬಂಡವಾಳವೆಷ್ಟು?

ಉ) ಅಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ವರ್ಗದ ಸಂಖ್ಯೆಯೆಷ್ಟು?

ಊ) ನಿಗಮ ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ ಸಿಬ್ಬಂದಿ ವರ್ಗಕ್ಕೆ ಸಂಬಳ ಮತ್ತು ಇತರೆ ಭತ್ಯೆಗಳಿಗಾಗಿ ಪ್ರತಿವರ್ಷ ವೆಚ್ಚ ಮಾಡಲಾಗುತ್ತಿರುವ ಹಣವೆಷ್ಟು?

ಋ) ಆ ನಿಗಮವನ್ನು ಪ್ರಾರಂಭಿಸಿದ ಉದ್ದೇಶ ಸಫಲವಾಗಿದೆಯೇ?

ೠ)ಆ ನಿಗಮವನ್ನು ಮುಚ್ಚುವ ಬಗ್ಗೆ ಸರ್ಕಾರ ಪರಿಶೀಲಿಸುವುದೇ?

ಡಾ|| ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು):

ಅ) ಕಾವೇರಿ ಜಲಾನಯನ ಪ್ರದೇಶದಲ್ಲಿ ಕಾವೇರಿ ಜಲಾನಯನ ಏತ ನೀರಾವರಿ ನಿಗಮವನ್ನು ಮೈಸೂರಿನಲ್ಲಿ ಸ್ಥಾಪಿಸಲಾಗಿದೆ. ಹಾಗೂ ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಕೃಷ್ಣಾ ಜಲಾನಯನ ಏತ ನೀರಾವರಿ ನಿಗಮವನ್ನು ಬಿಜಾಪುರದಲ್ಲಿ ಸ್ಥಾಪನೆ ಮಾಡಲಾಗಿದೆ.

ಆ) ಅವುಗಳನ್ನು ಕ್ರಮವಾಗಿ 2-6-86ರಂದು ಮೈಸೂರಿನಲ್ಲಿ ಹಾಗೂ 9-6-86ರಂದು ಬಿಜಾಪುರದಲ್ಲಿ ಸ್ಥಾಪಿಸಲಾಗಿದೆ.

ಇ) ರಾಜ್ಯದಲ್ಲಿ ಜಲಸಂಪನ್ಮೂಲವನ್ನು ಗರಿಷ್ಠ ಪ್ರಮಾಣದಲ್ಲಿ ಉಪಯೋಗಿಸಿಕೊಂಡು ಶೀಘ್ರಗತಿಯಲ್ಲಿ ಏತ ನೀರಾವರಿ ಯೋಜನೆಗಳ ಕಾಮಗಾರಿಯನ್ನು ವಾಣಿಜ್ಯ ಬ್ಯಾಂಕುಗಳಿಂದ ಸಾಲ ಪಡೆದುಕೊಂಡು ಪೂರ್ಣಗೊಳಿಸಲು ಈ ನಿಗಮವನ್ನು ಸ್ಥಾಪಿಸಲಾಯಿತು.

ಈ) ತಲಾ 55 ಲಕ್ಷ ರೂ.ಗಳ ಬಂಡವಾಳವಿದೆ.

ಉ)

	ನಿಗಮದ ಸಿಬ್ಬಂದಿ	ಎರವಲು ಸಿಬ್ಬಂದಿ	ಒಟ್ಟು
ಕಾವೇರಿ ಜಲಾನಯನ ಏತ ನೀರಾವರಿ ನಿಗಮ	193	11	204
ಕೃಷ್ಣಾ ಜಲಾನಯನ ಏತ ನೀರಾವರಿ ನಿಗಮ	163	11	174
	356	22	678

ಊ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಋ) ಇಲ್ಲ

ೠ) ಹೌದು

ತುಮಕೂರು ಜಿಲ್ಲೆಯಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಒದಗಿಸಿರುವ ಹಣದ ಬಗ್ಗೆ

697 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1993-94ರ ಸಾಲಿನಲ್ಲಿ ತುಮಕೂರು ಜಿಲ್ಲೆಯ ಅಭಿವೃದ್ಧಿ ಕಾರ್ಯಗಳಿಗಾಗಿ ಸರ್ಕಾರ ಒದಗಿಸಿದ ಹಣವೆಷ್ಟು ಹಾಗೂ ತಾಲ್ಲೂಕುವಾರು ಮಾಡಿದ ಖರ್ಚು ಎಷ್ಟು?

ಆ) ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರರು ಅನುಮತಿ ಪಡೆಯದೆ ಸಾಮಗ್ರಿಗಳನ್ನು ಖರೀದಿಸಿ ಹಣ ದುರುಪಯೋಗ ಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಆ ಬಗ್ಗೆ ಸರ್ಕಾರದವರು ತೆಗೆದುಕೊಂಡ ಕ್ರಮವೇನು?

ಈ) ಕಳ್ಳಂಬೆಳ್ಳ ಕ್ಷೇತ್ರದಲ್ಲಿ ವಿವಿಧ ಬಾಬ್ತಿಗಾಗಿ ಮಂಜೂರಾದ ಹಣವೆಷ್ಟು ಹಾಗೂ ವಿತರಿಸಿದ ಹಣವೆಷ್ಟು ಮತ್ತು ಇನ್ನೂ ಕೊಡಬೇಕಾದ ಹಣ ಎಷ್ಟು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):

ಅ) ತುಮಕೂರು ಜಿಲ್ಲೆಯ ಲೋಕೋಪಯೋಗಿ ವಿಭಾಗದ ಕಾಮಗಾರಿಗಳಿಗೆ ವಿವಿಧ ಶೀರ್ಷಿಕೆಯಡಿ 1993-94ನೇ ಸಾಲಿಗೆ ಒದಗಿಸಿರುವ ಅನುದಾನ ಮತ್ತು 2/94ರವರೆಗೆ ಮಾಡಿರುವ ಖರ್ಚಿನ ವಿವರ ಈ ಕೆಳಕಂಡಂತಿದೆ

(ಲಕ್ಷಗಳಲ್ಲಿ)

ತಾಲ್ಲೂಕು	ಅನುದಾನ	ಖರ್ಚು
ತುಮಕೂರು	923.625	63.93
ಗುಬ್ಬಿ	"	37.31
ಕುಣಿಗಲ್	"	19.89
ತುರುವೇಕೆರೆ	"	23.86
ತಿಪಟೂರು	"	21.63
ಚಿಕ್ಕನಾಯಕನಹಳ್ಳಿ	"	15.99
ಶಿರಾ	"	33.04
ಕೊರಟಗೆರೆ	"	15.20
ಮಧುಗಿರಿ	"	67.39
ಪಾವಗಡ	"	14.11
ಒಟ್ಟು	923.625	312.35

ಆ) ಕೆಲವು ಸಾಮಗ್ರಿಗಳನ್ನು ಖರೀದಿಸಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದ್ದು ವಿಷಯಗಳನ್ನು ಪರಿಶೀಲಿಸಲಾಗುತ್ತಿದೆ.

ಇ) ಪರಿಶೀಲಿಸಿದ ನಂತರ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಈ) ಕಳ್ಳಂಬೆಳ್ಳ ಕ್ಷೇತ್ರಕ್ಕೆ ಅಭಿವೃದ್ಧಿ ಕಾಮಗಾರಿಗಳಿಗೆ 1993-94ನೇ ಸಾಲಿಗೆ ವಿವಿಧ ಶೀರ್ಷಿಕೆಯಡಿಯಲ್ಲಿ 91.274 ಲಕ್ಷ ರೂ.ಗಳ ಅನುದಾನ ಲಭ್ಯವಿದ್ದು ಇಲ್ಲಿಯವರೆಗೆ 47.236 ಲಕ್ಷ ರೂ.ಗಳ ಪ್ರಗತಿ ಸಾಧಿಸಿ 16.319 ಲಕ್ಷ ರೂ.ಗಳ ಖರ್ಚು ಮಾಡಿದ್ದು ಇನ್ನೂ 39.92 ಲಕ್ಷ ರೂ.ಗಳನ್ನು ಪಾವತಿ ಮಾಡಬೇಕಾಗಿದೆ.

ಹೈಡ್ರೋ ಇಲೆಕ್ಟ್ರಿಕ್ ಉತ್ಪಾದನೆಗಾಗಿ ಯೋಜಿಸಿರುವ ಯೋಜನೆಗಳ ವಿವರ ಕುರಿತು

653 - ಶ್ರೀ ಮಲ್ಲಾರಿ ಗೌಡ. ಎಸ್. ಪಾಟೀಲ (ಸಂಕೇಶ್ವರ): ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೇಕೆದಾಟು, ಆಲಮಟ್ಟಿ ನಾರಾಯಣಪುರ ಶಿವನಸಮುದ್ರಂ ಮತ್ತು ಗೋಕಾವ ಎಡದಂಡೆ ಭಾಗಗಳಲ್ಲಿ ಮೊ॥ ವಿದ್ಯುತ್ ಘಟಕ ಹಾಗೂ ಇನ್ನೂ ಹೆಚ್ಚು ಅವಕಾಶವಿರುವ ವಿದ್ಯುತ್ ಉತ್ಪಾದನಾ ಘಟಕದ ಪ್ರಾರಂಭಕ್ಕಾಗಿ ಸರ್ಕಾರದ ಕಾರ್ಯಕ್ರಮ ಏನು?

ಆ) ವಿದ್ಯುತ್ ಉತ್ಪಾದನೆಗಾಗಿ ಅಣುಸ್ಥಾವರ ಹಾಗೂ ಥರ್ಮಲ್ ಪವರ್ ಸ್ಟೇಷನ್ನನ ನಿರ್ಮಾಣಕ್ಕಾಗಿ ಪರರಾಷ್ಟ್ರದಿಂದ ಕರ್ನಾಟಕ ಸರ್ಕಾರಕ್ಕೆ ವಿನಂತಿ ಮಾಡಿರುವ ಕಂಪನಿಗಳ ಹೆಸರುಗಳೇನು?

ಇ) 1992-93 ಮತ್ತು 1993-94ರಲ್ಲಿ ಹೊಸ ವಿದ್ಯುತ್ ಉತ್ಪಾದನೆ ಪ್ರಾರಂಭ ಮಾಡಿರುವ ಘಟಕಗಳಾವುವು (ಪಟ್ಟಿಯನ್ನು ಕೊಡುವುದು)

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):

ಅ) ಅಲ್ಲಿಪಟ್ಟಿ, ನಾರಾಯಣಪುರ, ಮತ್ತು ತಣ್ಣೀರುಹಳ್ಳದಲ್ಲಿ 660 ಮೆ. ವ್ಯಾಟ್ ವಿದ್ಯುತ್ ಯೋಜನೆಯನ್ನು ಅಭಿವೃದ್ಧಿಪಡಿಸಲು ಮೆ. ವಿಷಿಯಾ ಪವರ್ ಕಂಪನಿ, ಯು.ಎಸ್.ಎ. ಸಂಸ್ಥೆಯೊಂದಿಗೆ ತಿಳುವಳಿಕಾ ಜ್ಞಾಪನಾಪತ್ರಕ್ಕೆ ಈಗಾಗಲೇ ಸಹಿ ಹಾಕಲಾಗಿದೆ.

ದೂಪದಲ್ ಯೋಜನೆಯನ್ನು (24 ಮೆ. ವ್ಯಾಟ್) ಗೋಕಾಕ್ ಮಿಲ್ಸ್‌ನವರಿಗೆ ಕ್ಯಾಪ್ಟೀವ್ ವಿದ್ಯುತ್ ಉತ್ಪಾದಿಸಲು ಗುತ್ತಿಗೆ ನೀಡಲಾಗಿದೆ. ಶಿವನಸಮುದ್ರ ಮತ್ತು ಮೇಕೆದಾಟು ಯೋಜನೆಗಳನ್ನು ಕಾವೇರಿ ಜಲವಿವಾದ ಇತ್ಯರ್ಥದ ನಂತರ ತೆಗೆದುಕೊಳ್ಳಲಾಗುವುದು.

ಮೇಲಿನ ಯೋಜನೆಗಳಲ್ಲದೇ ಮಹದಾಯಿ, ಬೇಡ್ತಿ, ಅಘನಾಶಿನಿ ಮತ್ತು ನೇತ್ರಾವತಿ ನದಿಕೊಳ್ಳಗಳಲ್ಲಿ ಜಲವಿದ್ಯುತ್ ಯೋಜನೆಗಳನ್ನು ಸ್ಥಾಪಿಸುವ ಉದ್ದೇಶವಿದೆ.

ಆ) ಈ ಕೆಳಗಿನ ಶಾಖೋತ್ಪನ್ನ ವಿದ್ಯುತ್ ಯೋಜನೆಗಳನ್ನು ಅಭಿವೃದ್ಧಿಪಡಿಸಲು ಈಗಾಗಲೇ ಪರ ರಾಷ್ಟ್ರದ ಖಾಸಗಿ ವಲಯದವರೊಂದಿಗೆ ತಿಳುವಳಿಕಾ ಜ್ಞಾಪನಾ ಪತ್ರಕ್ಕೆ ಸಹಿ ಹಾಕಲಾಗಿದೆ.

1) ಮಂಗಳೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರ: ಘಟಕ ಸಾಮರ್ಥ್ಯ 1000 ಮೆ. ವ್ಯಾಟ್: ಕೋಜೆಂಟ್ರಿಕ್ಸ್, ಯು.ಎಸ್.ಎ
2) ಹೊಸಪೇಟೆ ಶಾಖೋತ್ಪನ್ನ ವಿದ್ಯುತ್ ಕೇಂದ್ರ : ಘಟಕ ಸಾಮರ್ಥ್ಯ 500 ಮೆ. ವ್ಯಾಟ್: ಸ್ಟಾರ್ ಇಂಟರ್‌ನ್ಯಾಷನಲ್, ಯು.ಎಸ್.ಎ ಸಂಸ್ಥೆ
3) ರಾಯಚೂರು ವಿದ್ಯುತ್ ಕೇಂದ್ರ, ವಿಸ್ತರಣೆ ಹಂತ ಘಟಕ, ಘಟಕ ಸಾಮರ್ಥ್ಯ 500 ಮೆ. ವ್ಯಾಟ್. ಮೆ: ಪಬ್ಲಿಕ್ ಪವರ್ ಇಂಟರ್‌ನ್ಯಾಷನಲ್, ಯು.ಎಸ್.ಎ

ರಾಜ್ಯ ಸರ್ಕಾರವು [illegible] ವಿದ್ಯುತ್ ಯೋಜನೆಗಳ ಸ್ಥಾಪನೆಗೆ ಯಾವ ಸಂಸ್ಥೆಯೊಂದಿಗೂ ಒಪ್ಪಂದ ಮಾಡಿಕೊಂಡಿರುವುದಿಲ್ಲ.

ಇ) 1992-93ರಲ್ಲಿ ಈ ಕೆಳಕಂಡ ಹೊಸ ವಿದ್ಯುತ್ ಉತ್ಪಾದನಾ ಕೇಂದ್ರಗಳು ಉತ್ಪಾದನೆಯನ್ನು ಪ್ರಾರಂಭಿಸಿವೆ

ಶರಾವತಿ ವಿದ್ಯುದಾಗಾರದ ವಿದ್ಯುತ್ [illegible] 4.4 ರಿಂದ 57.6 ಮೆ.ವ್ಯಾಟ್ ಘಟಕ ಸಾಮರ್ಥ್ಯವನ್ನು ಹೆಚ್ಚಿಸಲಾಗಿದೆ

ಮಾಣಿ (ಡ್ಯಾಂ) ವಿದ್ಯುದಾಗಾರ	1	4.5	4.5 ಮೆ.ವ್ಯಾಟ್
ಘಟಪ್ರಭಾ ವಿದ್ಯುದಾಗಾರ	2	16	32 ಮೆ.ವ್ಯಾಟ್
ಡೀಸೆಲ್ ವಿದ್ಯುತ್ ಘಟಕ (ಯಲಹಂಕ)	2	21.32	42.64 ಮೆ.ವ್ಯಾಟ್
ಶಿವಪುರ ವಿದ್ಯುದಾಗಾರ	2	9	18 ಮೆ.ವ್ಯಾಟ್

1993-94ರಲ್ಲಿ ಈ ಕೆಳಕಂಡ ಹೊಸ ವಿದ್ಯುತ್ ಉತ್ಪಾದನಾ ಕೇಂದ್ರಗಳು ಉತ್ಪಾದನೆಯನ್ನು ಪ್ರಾರಂಭಿಸಿವೆ.

ಮಾಣಿ ಡ್ಯಾಂ ವಿದ್ಯುದಾಗಾರ	1	4.5	4.5 ಮೆ.ವ್ಯಾಟ್
ಗಣೇಕಲ್ ವಿದ್ಯುದಾಗಾರ	1	0.35	0.35 ಮೆ.ವ್ಯಾಟ್
[illegible]	1	4.5	4.5 ಮೆ.ವ್ಯಾಟ್

ಶರಾವತಿ ವಿದ್ಯುದಾಗಾರದ ವಿದ್ಯುತ್ ಘಟಕ ಸಾಮರ್ಥ್ಯವನ್ನು ಹೆಚ್ಚಿಸಲಾಗಿದೆ	1	14.4	14.4 ಮೆ.ವ್ಯಾಟ್
ಡೀಸಲ್ ವಿದ್ಯುತ್ ಘಟಕ(ಯಲಹಂಕ)	4	21.32	85.28 ಮೆ.ವ್ಯಾಟ್

ಮಂಡ್ಯ ವಿಭಾಗ ಮಂಡ್ಯ, ಇಲ್ಲಿಗೆ ಅನುದಾನ ಬಿಡುಗಡೆಯಾಗದಿರುವ ಬಗ್ಗೆ

575 - ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ವಿಭಾಗ, ಮಂಡ್ಯಕ್ಕೆ ಅನುದಾನ (ಎಲ್‌ಒಸಿ) ಬಿಡುಗಡೆಯಾಗದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ಅನುದಾನ ಬಿಡುಗಡೆ ಮಾಡಲು ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆ?

ಇ) ಮಂಡ್ಯ ಜಿಲ್ಲೆಯಲ್ಲಿ ಎಷ್ಟು ಕಿ.ಮೀ. ರಸ್ತೆಯನ್ನು ಮೇಲ್ದರ್ಜೆಗೆ ಏರಿಸಲಾಗಿದೆ (ವಿಧಾನಸಭಾ ಕ್ಷೇತ್ರವಾರು ಪ್ರತ್ಯೇಕ ಮಾಹಿತಿ ನೀಡುವುದು)

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):--

ಅ) ಸರ್ಕಾರದಿಂದ ಹಣ ಭರವಸೆ ಪತ್ರ ಬಿಡುಗಡೆಯಾದ ಪ್ರಮಾಣದಲ್ಲಿ ಲೋಕೋಪಯೋಗಿ ಮಂಡ್ಯ ವಿಭಾಗಕ್ಕೂ ಹಣ ಭರವಸೆ ಪತ್ರ ಬಿಡುಗಡೆ ಮಾಡಲಾಗುತ್ತಿದೆ. ಪ್ರಸಕ್ತ ಸಾಲಿನ ಫೆಬ್ರವರಿ 94ರವರೆವಿಗೆ 310.96 ಲಕ್ಷ ರೂ.ಗಳ ವೆಚ್ಚವನ್ನು ಮಾಡಲಾಗಿದೆ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ

ಇ) 426.90 ಕಿಮೀ

ಕ್ಷೇತ್ರ	ಕಿ.ಮೀ
1) ಕೆರಗೋಡು	50.00
2) ಮದ್ದೂರು	50.00
3) ಮಳವಳ್ಳಿ	48.70
4) ಕಿರುಗಾವಲ್	49.20
5) ನಾಗಮಂಗಲ	50.00
6) ಕೆ.ಆರ್. ಪೇಟೆ	50.00
7) ಶ್ರೀರಂಗಪಟ್ಟಣ	48.00
8) ಪಾಂಡವಪುರ	51.50
9) ಮಂಡ್ಯ	29.50

ಉಡುಪಿ ತಾಲ್ಲೋಕಿನಲ್ಲಿ ವಿದ್ಯುತ್ ಸೌಲಭ್ಯವನ್ನು ಕೆಲವು ಸ್ಥಳಗಳಿಗೆ ಕಲ್ಪಿಸುವ ಬಗ್ಗೆ

593 - ಶ್ರೀ ಪಿ. ಬಸವರಾಜ್ (ಬ್ರಹ್ಮಾವರ): ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ತಾಲ್ಲೂಕು ಕೊಡವೂರು ಗ್ರಾಮದಲ್ಲಿ ಸಂಪೂರ್ಣ ವಿರಳವಾಗಿ 41ನೇ ಬಿರೂರು ಗ್ರಾಮದ (ಕಾಪಾಡಿ, ನೇಮುಟ್ಟು, ಕಂಬಳ ಬ್ಯಾಗ್ವಾದು) ಸ್ಥಳಗಳಲ್ಲಿ ಈವರೆಗೆ ವಿದ್ಯುತ್ ಸಂಪರ್ಕ ಕಲ್ಪಿಸದೇ ಇರುವುದು ನಿಜವೇ?

ಈ) ಹಾಗಿದ್ದಲ್ಲಿ ಸಾರ್ವಜನಿಕರ ಈ ಮೂಲಭೂತವಾದ ಅವಶ್ಯಕತೆಯನ್ನು ಇಲಾಖೆ ಕೂಡಲೇ ಪೂರೈಸುವುದೇ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):

ಅ) ಉಡುಪಿ ತಾಲ್ಲೂಕಿನ ಕೆಂಜೂರು ಮತ್ತು 41 ಶಿರೂರು ಗ್ರಾಮಗಳನ್ನು ಈಗಾಗಲೇ ವಿದ್ಯುದ್ದೀಕರಿಸಲಾಗಿದೆ. ಆದರೆ 41ನೇ ಶಿರೂರು ಗ್ರಾಮದ ಮಜರೆಗಳಾದ ಹಾವಾಡಿ, ನೇಮಟ್ಟು ಮತ್ತು ಅಂಬಡೆ ಬಾಗ್ಯಾರು ಈ ಸ್ಥಳಗಳಿಗೆ ಇದುವರೆಗೆ ವಿದ್ಯುತ್ ಸಂಪರ್ಕ ಒದಗಿಸಿಲ್ಲ.

ಆ) 1994-95ರ ಸಾಲಿನಲ್ಲಿ ಈ ಮಜರೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ವಿಷಯವನ್ನು ಗಮನಿಸಲಾಗುವುದು.

ಕೇಂದ್ರ ಸರ್ಕಾರದ ಯೋಜನೆ ಅನ್ವಯ ಎನ್. ಡಬ್ಲ್ಯೂ ಎಂ.ಪಿ. ಸ್ಕೀಮ್ ಅಡಿಯಲ್ಲಿ ಅಂಜನಾಪುರ-ಅಂಬ್ಲಿಗೊಳ ಜಲಾಶಯದ ಅಭಿವೃದ್ಧಿಗೆ ಹಣ ಮಂಜೂರು ಮಾಡುವ ಬಗ್ಗೆ

448 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ): ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೇಂದ್ರ ಸರ್ಕಾರದ ಯೋಜನೆ ಅನ್ವಯ (4701 ಹೆಡ್ನಲ್ಲಿ) ಎನ್.ಡಬ್ಲ್ಯೂ.ಎಮ್.ಪಿ. ಯೋಜನೆ ಅಡಿಯಲ್ಲಿ ಅಂಜನಾಪುರ-ಅಂಬ್ಲಿಗೊಳ ಜಲಾಶಯದ ಅಭಿವೃದ್ಧಿಗೆ ಹಣ ಮಂಜೂರಾಗಿದೆಯೇ?

ಆ) ಈ ಯೋಜನೆ ಅನ್ವಯ ಈ ಎರಡು ಜಲಾಶಯದ ಅಡಿಯಲ್ಲಿ ಈವರೆಗೆ ಆಗಿರುವ ಪ್ರಗತಿ ಎಷ್ಟು?

ಇ) ಈವರೆಗೆ ಪಾವತಿ ಮಾಡಿರುವ ಹಣವೆಷ್ಟು?

ಈ) ಶಿಕಾರಿಪುರ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಇಲಾಖೆ ವತಿಯಿಂದ 2702 ಹೆಡ್ಡ ಕೆಳಗೆ ಕೆರೆ ಕಾಮಗಾರಿ ಕೆಲಸ ನಡೆದಿದ್ದು ಅದೇ ರೀತಿ 2701 ಹೆಡ್ಡ ಕೆಳಗೆ ಕಾಮಗಾರಿ ಕೆಲಸಗಳಾಗಿದ್ದು, ಈ ಬಗ್ಗೆ ಹಣ ಬಿಡುಗಡೆ ಮಾಡದಿರಲು ಕಾರಣವೇನು?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):

ಅ) ಮಂಜೂರಾಗಿದೆ

ಆ)

ಅಂಜನಾಪುರ	ಅಂಬ್ಲಿಗೊಳ
ರೂ. 8.24 ಲಕ್ಷಗಳಷ್ಟು ಪ್ರಗತಿಯಾಗಿರುತ್ತದೆ	ರೂ. 8.76 ಲಕ್ಷಗಳಷ್ಟು ಪ್ರಗತಿಯಾಗಿರುತ್ತದೆ.

ಇ) ಅಂಜನಾಪುರ - ರೂ. 7.00 ಲಕ್ಷಗಳು
ಅಂಬ್ಲಿಗೊಳ - ರೂ. 8.76 ಲಕ್ಷಗಳು

ಈ) ಹಣವನ್ನು ಕಾಲಕಾಲಕ್ಕೆ ಸರಿಯಾಗಿ ಬಿಡುಗಡೆ ಮಾಡಲಾಗಿದೆ.

ಸಾಗರ ಸೊರಬ, ಶಿಕಾರಿಪುರ 110 ಕೆ.ವಿ. ಸಬ್ ಸ್ಟೇಷನ್ ಮಂಜೂರಾತಿ ಬಗ್ಗೆ

445 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ): ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಾಗರ - ಸೊರಬ - ಶಿಕಾರಿಪುರ 110 ಕೆ.ವಿ. ಸಬ್ ಸ್ಟೇಷನ್ [illegible]

ಆ) ಈ ಕಾಮಗಾರಿಗಾಗಿ ಸರ್ಕಾರದಿಂದ ಆಗಿರುವ ಖರ್ಚು ಎಷ್ಟು?

ಇ) ಈ ಕಾಮಗಾರಿ ಬಗ್ಗೆ ಕರೆದ ಟೆಂಡರ್ ಇಲಾಖೆಯಿಂದ ಅನುಮೋದನೆ ಸಿಕ್ಕಿದೆಯೇ?

ಈ) ಸಿಗದಿದ್ದಲ್ಲಿ ಅದಕ್ಕೆ ಕಾರಣವೇನು?

ಉ) ಶಿಕಾರಿಪುರ ತಾಲ್ಲೂಕಿಗೆ ಈ ಸಬ್ ಸ್ಟೇಷನ್ ಆಗದಿದ್ದರೆ, ವಿದ್ಯುತ್ ಸರಬರಾಜಿನ ವ್ಯವಸ್ಥೆಯೇ ಕುಸಿದು ಬೀಳುವ ಸಂಭವವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):

ಅ) ಹೌದು.

ಆ) ಫೆಬ್ರವರಿ 94ರ ಅಂತ್ಯದವರೆಗೆ ಖರ್ಚಾಗಿರುವ ಹಣದ ಮೊತ್ತ ರೂ. 3,39,295-00

ಇ) ಇಲ್ಲ.

ಈ) ಟರ್ನ್‌ಕೀ ಆಧಾರದ ಮೇಲೆ ಕರೆಯಲಾಗಿರುವ ಟೆಂಡರ್‌ಗಳನ್ನು ಪರಿಶೀಲಿಸಲಾಗುತ್ತಿದ್ದು ಪರಿಶೀಲನೆಯ ನಂತರ ಇತ್ಯರ್ಥಪಡಿಸಲಾಗುವುದು.

ಉ) ಶಿಕಾರಿಪುರ ತಾಲ್ಲೂಕಿನಲ್ಲಿ ವಿದ್ಯುತ್ ಸರಬರಾಜಿನ ವ್ಯವಸ್ಥೆಯಲ್ಲಿ ಪ್ರಸ್ತುತ ತಲೆದೋರಿರುವ ಸಮಸ್ಯೆಗಳು ಮಂಡಳಿಯ ಗಮನಕ್ಕೆ ಬಂದಿದ್ದು, ಸೊರಬದಲ್ಲಿ ಉದ್ದೇಶಿತ 110 ಕೆವಿ ಸಬ್ ಸ್ಟೇಷನ್ ಕಾರ್ಯಾಚರಣೆ ಮಾಡಿದ ನಂತರ ಪರಿಹಾರಗೊಳ್ಳುವುದು.

ಶಿಕಾರಿಪುರ ತಾಲ್ಲೂಕು ಸನ್ಯಾಸಿಕೊಪ್ಪ ಏತ ನೀರಾವರಿ ಯೋಜನೆ ಬಗ್ಗೆ

444 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ): ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಕಾರಿಪುರ ತಾಲ್ಲೂಕ್ ಸನ್ಯಾಸಿಕೊಪ್ಪ ಏತ ನೀರಾವರಿ ಯೋಜನೆ ಆಯವ್ಯಯದಲ್ಲಿ (ಬಜೆಟ್‌ನಲ್ಲಿ) ಯಾವ ಯಾವ ವರ್ಷ ಸೇರಿದೆ?

ಆ) ಶಿಕಾರಿಪುರ ತಾಲ್ಲೂಕಿನ ಬರಗಾಲ ಪೀಡಿತ ರೈತರಿಗೆ ವರದಾನವಾಗುವ ಈ ಕೆಲಸ ಪ್ರಾರಂಭಿಸದಿರಲು ಕಾರಣವೇನು?

ಇ) ಶಿವಮೊಗ್ಗ ಜಿಲ್ಲೆಯಲ್ಲಿ ಈ ಲಿಫ್ಟ್ ಇರಿಗೇಷನ್ ಇಲಾಖೆಯಿಂದ ಯಾವ ಯಾವ ಕಾಮಗಾರಿ ಕೈಗೊಳ್ಳಲಾಗಿದೆ?

ಡಾ|| ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು):

ಅ) ಈ ಏತ ನೀರಾವರಿ ಯೋಜನೆಯು 1984-85ರಿಂದೀಚೆಗೆ ಆಯವ್ಯಯದಲ್ಲಿ ಸೇರಿರುವುದಿಲ್ಲ.

ಆ) ಈ ಯೋಜನೆಯ ಅಚ್ಚುಕಟ್ಟು ಪ್ರದೇಶವು ಅಂಜನಾಪುರ ಜಲಾಶಯದ ಬಲನಾಲೆಯ ಅಚ್ಚುಕಟ್ಟು ಪ್ರದೇಶದಲ್ಲಿ ಬರುವುದರಿಂದಲೂ ಹಾಗೂ ಈ ಯೋಜನೆಗೆ ನೀರಿನ ಆಸರೆಗಾರಿ ಕುಮದ್ವತಿ ನದಿಯಲ್ಲಿ ನೀರು ಸಾಕಷ್ಟು ಲಭ್ಯವಿಲ್ಲದಿರುವುದರಿಂದ ಈ ಕೆಲಸವನ್ನು ಪ್ರಾರಂಭಿಸಿಲ್ಲ.

ಇ) ಕೃಷ್ಣಾ ಜಲಾನಯನ ಏತ ನೀರಾವರಿ ನಿಗಮದಿಂದ ಯಾವ ಕಾಮಗಾರಿಯನ್ನು ಕೈಗೊಂಡಿರುವುದಿಲ್ಲ.

ಕಾವೇರಿ ಕೃಷ್ಣ ಏತ ನೀರಾವರಿ ನಿಗಮಗಳ ಪ್ರಗತಿ ಕುರಿತು

446 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ): ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾವೇರಿ ಕೃಷ್ಣಾ ಜಲಾನಯನದ ಅಡಿಯಲ್ಲಿ 2 ಏತ ನೀರಾವರಿ ರಚನೆ ಆಗಿದ್ದು 1990-91, 91-92, 92-93, 92-94ನೇ ಸಾಲುಗಳಲ್ಲಿ ಈ ನಿಗಮಗಳ ಸಿಬ್ಬಂದಿ ವರ್ಗಕ್ಕೆ ಆಗಿರುವ ಖರ್ಚು ಎಷ್ಟು?

ಆ) ಈ ಮೇಲ್ಕಂಡ 4 ವರ್ಷಗಳಲ್ಲಿ ಜಿಲ್ಲಾವಾರು ಎಷ್ಟು ಕಾಮಗಾರಿ ಕೈಗೊಳ್ಳಲಾಗಿದೆ ಹಾಗೂ ಕೆಲಸ ಪೂರ್ಣ ಆಗಿರುವುದೆಷ್ಟು?

ಡಾ|| ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು):

ಅ) ಕಾವೇರಿ ಮತ್ತು ಕೃಷ್ಣಾ ಜಲಾನಯನ ಏತ ನೀರಾವರಿ ನಿಗಮಗಳ ಸಿಬ್ಬಂದಿಗಾಗಿ ಆಗಿರುವ ವೆಚ್ಚ ಈ ಕೆಳಕಂಡಂತಿದೆ:

ಕ್ರ ಸಂ	ಸಾಲುವಾರು ವೆಚ್ಚ	ಸಿಬ್ಬಂದಿ ವರ್ಗಕ್ಕೆ ಖರ್ಚಾದ ವೆಚ್ಚ (ಲಕ್ಷ ರೂ.ಗಳಲ್ಲಿ)
1)	1990-91	107.51
2)	1991-92	113.23
3)	1992-93	143.80
4)	1993-94	137.54

ಆ) 4 ವರ್ಷಗಳಲ್ಲಿ ಈ ಕೆಳಗೆ ಜಿಲ್ಲಾವಾರು ವಿವರಗಳಲ್ಲಿ ಹೇಳಿರುವಂತೆ ಕಾವೇರಿ ಜಲಾನಯನ ಏತ ನೀರಾವರಿ ನಿಗಮದಿಂದ 19 ಹಾಗೂ ಕೃಷ್ಣಾ ಜಲಾನಯನ ಏತ ನೀರಾವರಿ ನಿಗಮದಿಂದ 6 ಹೀಗೆ ಒಟ್ಟು 25 ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಇಲ್ಲಿಯವರೆಗೆ ಯಾವುದೇ ಕಾಮಗಾರಿಯೂ ಪೂರ್ಣಗೊಂಡಿಲ್ಲ. ಈ ಮಧ್ಯೆ ನಿಗಮಗಳನ್ನು ಮುಚ್ಚಿ ಆ ನಂತರ ನಿಗಮಗಳು ಕೈಗೊಂಡಿರುವ ಕಾಮಗಾರಿಗಳನ್ನು ನೀರಾವರಿ ಇಲಾಖೆಯಿಂದ ಮುಂದುವರಿಯಲು ಪರಿಶೀಲಿಸಲಾಗುತ್ತಿದೆ.

ಮೈಸೂರು	5	ಬಿಜಾಪುರ	3
ಮಂಡ್ಯ	6	ಧಾರವಾಡ	2
ಕೊಡಗು	1	ಬೆಳಗಾವಿ	1
ಬೆಂಗಳೂರು	1	ಒಟ್ಟು	6
ದಕ್ಷಿಣ ಕನ್ನಡ	1		
ಹಾಸನ	2		
ಚಿಕ್ಕಮಗಳೂರು	3		
ಒಟ್ಟು	19		

ಬೀರನಹೊಳೆ ಬಳಿಯ ಚಿಕ್ಕಸೇತುವೆ ಕಾಮಗಾರಿ ಕಳಪೆಯಾಗಿರುವುದರ ಬಗ್ಗೆ

483 - ಶ್ರೀ ಉಮೇಶ್ ವಿ. ಕತ್ತಿ (ಹುಕ್ಕೇರಿ): ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಘಟಪ್ರಭಾ ಅಯಕಟ್ಟು ಪ್ರದೇಶದಲ್ಲಿ ಬರುವ ಬೀರನಹೊಳೆ ಬಳಿಯ ಚಿಕ್ಕ ಸೇತುವೆ ನಿರ್ಮಾಣ ಕಾರ್ಯದೋಷ ಯುಕ್ತವಾಗಿ ಅದು ಈಗಾಗಲೇ ಬಿರುಕು ಬಿಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

[illegible] ಏನಾದರೂ ಕೈಗೊಳ್ಳಲಾಗಿದೆಯೇ?

ಈ) ಈ ಪ್ರಕರಣಕ್ಕೆ ಹೊಣೆಯಾಗಿರುವವರ ಮೇಲೆ ಸರ್ಕಾರ ಕಾನೂನು ರೀತ್ಯ ಕ್ರಮ ತೆಗೆದುಕೊಳ್ಳುವುದೇ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):

ಅ) ಬಿರುಕು ಬಿಟ್ಟಿರುವುದಿಲ್ಲ. 1992ರಲ್ಲಿ ಪ್ರವಾಹದಿಂದ ಹಾನಿಯಾಗಿರುವುದನ್ನು ದುರಸ್ತಿ ಮಾಡಲಾಗಿದೆ.

ಆ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಘಟಪ್ರಭಾ ಯೋಜನೆಯ ಧೂಪದಾಳ ಜಲಾಶಯದಲ್ಲಿನ ಹೂಳು ತೆಗೆಯುವುದರ ಬಗ್ಗೆ

484 - ಶ್ರೀ ಉಮೇಶ್ ವಿ. ಕತ್ತಿ (ಹುಕ್ಕೇರಿ): ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಘಟಪ್ರಭಾ ಯೋಜನೆಯ ಧೂಪದಾಳ ಜಲಾಶಯದಲ್ಲಿ ತುಂಬಿಕೊಂಡಿರುವ ಹೂಳು ತೆಗೆಯಲು ಸರ್ಕಾರ ಕ್ರಮ ಕೈಗೊಂಡಿದೆಯೇ?

ಆ) ಈ ಹೂಳು ಕೊಂಡೊಯ್ಯಲು ಅನುಕೂಲವಾಗುವಂತೆ ಜಲಾಶಯ ಪ್ರದೇಶದಲ್ಲಿ ಒಂದು ಸೇತುವೆ ನಿರ್ಮಿಸಿ ಕೊಡಬೇಕೆಂದು ಆ ಭಾಗದ ರೈತರ ಬಹು ವರ್ಷದ ಬೇಡಿಕೆಯನ್ನು ಸರ್ಕಾರ ಈಡೇರಿಸುತ್ತದೆಯೇ?

ಇ) ಆ ಸೇತುವೆಗಾಗಿ ಯೋಜನೆ ರೂಪಿಸಲಾಗಿದೆಯೇ?

ಈ) ಹಾಗಿದ್ದರೆ ಅದರ ವೆಚ್ಚವೆಷ್ಟು?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):

ಅ) ಇಲ್ಲ

ಆ) ಪ್ರಶ್ನೆ ಉದ್ಭವಿಸುವುದಿಲ್ಲ

ಇ) ಇಲ್ಲ

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ಹುಕ್ಕೇರಿ ತಾಲ್ಲೂಕಿನಲ್ಲಿ ವಿದ್ಯುತ್ ನಿಲುಗಡೆ ಬಹಳವಾಗಿ ಆಗುತ್ತಿರುವ ಬಗ್ಗೆ

486 - ಶ್ರೀ ಉಮೇಶ್ ವಿ. ಕತ್ತಿ (ಹುಕ್ಕೇರಿ): ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಕ್ಕೇರಿ ತಾಲ್ಲೂಕು ವಿದ್ಯುತ್ ಸಹಕಾರ ಸಂಘದಿಂದ ವಿದ್ಯುತ್ ನಿಲುಗಡೆ ಬಹಳ ಆಗುತ್ತಿದ್ದು ಅದರಿಂದಾಗಿ ಆ ಭಾಗದ ರೈತರಿಗೆ ಆಗುತ್ತಿರುವ ತೊಂದರೆ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಅದನ್ನು ಹೋಗಲಾಡಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳುವುದು?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):

ಅ) ಹೌದು

ಆ) ಹುಕ್ಕೇರಿ ತಾಲ್ಲೂಕಿನಲ್ಲಿ ವಿದ್ಯುತ್ ಸರಬರಾಜಿನ ಸುಧಾರಣೆಗಾಗಿ ಒಡಕಲ್ಲಿನಲ್ಲಿ ಒಂದು 110:11 ಕೆ.ವಿ. ವಿದ್ಯುತ್ ಉಪಕೇಂದ್ರವನ್ನು ಕಣಗಲೆ ಮತ್ತು ಗುಡಾಸ್ ಗ್ರಾಮಗಳಲ್ಲಿ ತಲಾ ಒಂದೊಂದು 33:11 ಕೆ.ವಿ. ವಿದ್ಯುತ್ ಉಪ ಕೇಂದ್ರಗಳನ್ನು ನಿರ್ಮಾಣ ಮಾಡಲು ಪ್ರಸ್ತಾವನೆಗಳು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಮುಂದಿದೆ.

ಆದರೆ ಹುಕ್ಕೇರಿ ತಾಲ್ಲೂಕು ವಿದ್ಯುತ್ ಸಹಕಾರ ಸಂಘವು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ವಿದ್ಯುತ್ ಬಳಕೆಯ ಬಗ್ಗೆ ಹೆಚ್ಚಿನ ಪ್ರಮಾಣದ ಬಾಕಿಯನ್ನು ನೀಡಬೇಕಾಗಿರುವುದರಿಂದ ಹುಕ್ಕೇರಿ ತಾಲ್ಲೂಕಿನಲ್ಲಿ ವಿದ್ಯುತ್ ಸರಬರಾಜಿನ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಆರ್ಥಿಕ ಮುಗ್ಗಟ್ಟಿನ ಪರಿಸ್ಥಿತಿ ಉಂಟಾಗಿದೆ.

ದೇಲಂತಬೆಟ್ಟು ಸೇತುವೆ ನಿರ್ಮಾಣ ಕುರಿತು.

576-ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದರೆ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳಪೇಟೆ-ಕಿನ್ನಿಗೋಳಿ-ತಾಳಿಪಾಡಿ ರಸ್ತೆಯಲ್ಲಿ ದೇಲಂತಬೆಟ್ಟು ಸೇತುವೆ ಈತನಕ ಆಗದೆ ಜನರಿಗೆ ಆಗುತ್ತಿರುವ ತೊಂದರೆ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಆ ಸೇತುವೆಯನ್ನು ಯಾವಾಗ ನಿರ್ಮಿಸಲಾಗುವುದು?

ಇ) ಆ ಸೇತುವೆಗೆ ಎಷ್ಟು ಖರ್ಚು ತಗಲಬಹುದು?

ಈ) ಆ ಸೇತುವೆಯು ಬಹಳ ಆವಶ್ಯಕತೆಯಿರುವ ಬಗ್ಗೆ ಸರ್ಕಾರ ಶೀಘ್ರ ರಚನೆಗೆ ಏನು ಕ್ರಮ ಕೈಗೊಳ್ಳುವುದು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):

ಅ) ಬಂದಿದೆ.

ಆ) 1994-95ರ ಸಾಲಿನ ಹೊಸ ಕಾಮಗಾರಿಗಳ ಆಯವ್ಯಯ ಪಟ್ಟಿಯಲ್ಲಿ ಸೇರಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಈ ಸೇತುವೆ ಕಾಮಗಾರಿಗೆ ರೂ. 75.00 ಲಕ್ಷಗಳ ಅಂದಾಜು ವೆಚ್ಚ ಆಗಬಹುದೆಂದು ಅಂದಾಜಿಸಲಾಗಿದೆ.

ಈ) ಈ ಸೇತುವೆ ಕಾಮಗಾರಿಯು ಮೊದಲು ಜಿಲ್ಲಾ ಪರಿಷತ್ ವ್ಯಾಪ್ತಿಯಲ್ಲಿದ್ದು, ದಿನಾಂಕ 6-5-92ರಲ್ಲಿ ರಸ್ತೆಯನ್ನು ಜಿಲ್ಲಾ ಮುಖ್ಯ ರಸ್ತೆಯನ್ನಾಗಿ ಮೇಲ್ದರ್ಜೆಗೇರಿಸಲ್ಪಟ್ಟಿದ್ದು, ಅಂದಿನಿಂದ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ತೆಗೆದುಕೊಳ್ಳಲಾಗಿದೆ. 94-95ನೇ ಸಾಲಿನ ಆಯವ್ಯಯದಲ್ಲಿ ಸೇರಿಸಲು ಪರಿಶೀಲಿಸಲಾಗುವುದು.

ಜಂಗರ ಗುಂಡಿಯು ಏತ ನೀರಾವರಿ ಯೋಜನೆ ಕುರಿತು

577 - ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದರೆ): ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಂಗರ ಗುಂಡಿಯು ಏತ ನೀರಾವರಿ ಯೋಜನೆಗೆ ಅಂದಾಜು ಪಟ್ಟಿಯಂತೆ ಎಷ್ಟು ಖರ್ಚು ತಗಲುವುದು?

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೃಹತ್ ನೀರಾವರಿಗೆ ಅನುಕೂಲವಿದ್ದು ಅಂತಹ ಏತ ನೀರಾವರಿಯನ್ನು ಕೈಗೊಳ್ಳುವಾಗ ಸರ್ಕಾರ ಬಹಳ ತಡ ಮಾಡಲು ಕಾರಣವೇನು?

ಇ) ಈ ಬಾರಿಯ ಮುಂಗಡ ಪತ್ರದಲ್ಲಿ ಹಣ ಒದಗಿಸಲಾಗಿದ್ದರೂ ಆ ಕೆಲಸ ಕಾರ್ಯಗತವಾಗದ ಬಗ್ಗೆ ಜನರು ಬಹಳ ಬೇಸರಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಸರ್ಕಾರ ಆ ಕೆಲಸವನ್ನು ಯಾವಾಗ ಪೂರ್ತಿಗೊಳಿಸುವುದು?

ಡಾ॥ ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು):

ಅ) ಸುಮಾರು 29.10 ಲಕ್ಷ ರೂ.ಗಳು

ಆ) ಈ ಯೋಜನೆಯನ್ನು ವಿತ ನೀರಾವರಿ ನಿಗಮದಿಂದ 3:93ರ ನಂತರ ಸಣ್ಣ ನೀರಾವರಿ ಇಲಾಖೆಗೆ ಹಸ್ತಾಂತರಿಸಲಾಗಿದ್ದು, ನಂತರ ಅಂದಾಜು ಪಟ್ಟಿ ತಯಾರಿಸಿರುವುದರಿಂದ ಹಾಗೂ ಈ ಯೋಜನೆಗೆ 1993-94ನೇ ಸಾಲಿನಲ್ಲಿ ಸಾಕಷ್ಟು ಅನುದಾನವಿಲ್ಲದಿದ್ದ ಕಾರಣ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ತಡವಾಗಿದೆ.

ಇ) ಬಂದಿದೆ

ಈ) ಅಂದಾಜಿಗೆ ಅನುಮೋದನೆ ನೀಡಿದ ನಂತರ ಅನುದಾನದ ಲಭ್ಯತೆಯ ಮೇಲೆ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು.

ಹುಕ್ಕೇರಿ ತಾಲ್ಲೂಕಿನ ಇಲೆಕ್ಟ್ರಿಕ್ ಸೊಸಾಯಿಟಿಯು ವಿದ್ಯುತ್ ವಿತರಣಾ ಕೇಂದ್ರಕ್ಕೆ ಅರ್ಜಿ ಸಲ್ಲಿಸಿರುವ ಬಗ್ಗೆ

487 - ಶ್ರೀ ಉಮೇಶ್ ವಿ. ಕತ್ತಿ (ಹುಕ್ಕೇರಿ): ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹುಕ್ಕೇರಿ ತಾಲ್ಲೂಕಿನ ಇಲೆಕ್ಟ್ರಿಕ್ ಸೊಸಾಯಿಟಿ ಎಷ್ಟು ವಿದ್ಯುತ್ ವಿತರಣಾ ಕೇಂದ್ರ ಬೇಡಿ ಅರ್ಜಿ ಸಲ್ಲಿಸಿದೆ?*

ಆ) *ಸಲ್ಲಿಸಿದಲ್ಲಿ ಅವು ಯಾವ ಯಾವುವು ಮತ್ತು ಯಾವಾಗ ಅರ್ಜಿ ಸಲ್ಲಿಸಲಾಗಿದೆ?*

ಇ) *ಅಲ್ಲಿ ವಿತರಣಾ ಕೇಂದ್ರ ಮಂಜೂರಾತಿ ಕೊಡದೇ ಇ... ಕಾರಣವೇನು?*

ಈ) *ಅಲ್ಲಿ ವಿತರಣಾ ಕೇಂದ್ರಗಳಿಲ್ಲದೇ ರೈತರಿಗೆ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಉ) *ಬಂದಿದ್ದಲ್ಲಿ ಮಂಜೂರಾತಿ ಕೊಟ್ಟು ಸರಿಪಡಿಸಲಾಗುವುದೇ?*

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):

ಅ) ಮೂರು ವಿದ್ಯುತ್ ಉಪಕೇಂದ್ರಗಳನ್ನು ಬೇಡಿ ಅರ್ಜಿ ಸಲ್ಲಿಸಿದೆ

ಆ) ಅವು ಯಾವುವೆಂದರೆ ಹಿಡಕಲ ಗ್ರಾಮದಲ್ಲಿ 110:11 ಕೆ.ವಿ. ವಿದ್ಯುತ್ ಉಪಕೇಂದ್ರ ಕಣಗಲ್ ಮತ್ತು ಗುಡಾಸ್ ಗ್ರಾಮಗಳಲ್ಲಿ ತಲಾ 33:11 ಕೆ.ವಿ. ವಿದ್ಯುತ್ ಉಪಕೇಂದ್ರಗಳು ಈ ವಿದ್ಯುತ್ ಉಪಕೇಂದ್ರಗಳ ನಿರ್ಮಾಣಕ್ಕೆ ಮನವಿಯನ್ನು ಹುಕ್ಕೇರಿ ತಾಲ್ಲೂಕು ಗ್ರಾಮೀಣಾ ವಿದ್ಯುತ್ ಸಹಕಾರ ಸಂಘವು ಡಿಸೆಂಬರ್ 92ರಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ಸಲ್ಲಿಸಿದೆ.

ಇ) ಪ್ರಸ್ತಾವನೆಗಳು ಮಂಡಳಿಯ ಪರಿಶೀಲನೆಯಲ್ಲಿದೆ. ಆದರೆ ಸದರೀ ಹುಕ್ಕೇರಿ ತಾಲ್ಲೂಕು ಗ್ರಾಮೀಣಾ ವಿದ್ಯುತ್ ಸಹಕಾರ ಸಂಘವು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ಸುಮಾರು 1 ಕೋಟಿ ರೂ.ಗಳ ಬೃಹತ್ ಪ್ರಮಾಣದ ಬಾಕಿಯನ್ನು ನೀಡಬೇಕಾಗಿರುವುದರಿಂದ, ಆರ್ಥಿಕ ಮುಗ್ಗಟ್ಟಿನ ಪರಿಸ್ಥಿತಿ ಉಂಟಾಗಿದೆ.

ಈ) ಹೌದು

ಉ) ಪ್ರಸ್ತಾವನೆ ಬಂದಾಗ ಸರ್ಕಾರ ಇದನ್ನು ಸೂಕ್ತವಾಗಿ ಪರಿಶೀಲಿಸಲಾಗುವುದು

ಜಲವಿದ್ಯುತ್ ಕೇಂದ್ರ ಕುರಿತು

452 - ಶ್ರೀ ಕೆ. ಲಕ್ಷ್ಮಣ್ಣ (ರಾಜಾಜಿನಗರ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಂಷಾ ಜಲವಿದ್ಯುತ್ ಕೇಂದ್ರವು ಯಾವ ವರ್ಷದಲ್ಲಿ ಪ್ರಾರಂಭವಾಯಿತು?

ಆ) ದಿನಂಪ್ರತಿ ಎಷ್ಟು ಮೆ.ವ್ಯಾಟ್ಸ್ ವಿದ್ಯುತ್ತು ಅಲ್ಲಿ ಉತ್ಪಾದಿಸಲಾಗುತ್ತಿದೆ?

ಇ) ಇತ್ತೀಚಿನ ದಿವಸಗಳಲ್ಲಿ ಅಲ್ಲಿ ವಿದ್ಯುಚ್ಛಕ್ತಿ ಉತ್ಪಾದನೆಯು ಕಡಿಮೆಯಾಗಿದೆ ಎಂಬ ವಿಚಾರ ನಿಜವೇ?

ಈ) ನಿಜವಾಗಿದ್ದಲ್ಲಿ ಅದಕ್ಕೆ ಕಾರಣಗಳೇನು?

ಉ) ಶರಾವತಿ ಜಲವಿದ್ಯುತ್ ಕೇಂದ್ರವು ಯಾವ ವರ್ಷದಲ್ಲಿ ಪ್ರಾರಂಭವಾಯಿತು ಮತ್ತು ಅದರ ವಿದ್ಯುತ್ ಉತ್ಪಾದನೆಯ ಸಾಮರ್ಥ್ಯ ಎಷ್ಟು?

ಊ) ಈಗ ಅಲ್ಲಿ ಉತ್ಪಾದನೆಯಾಗುತ್ತಿರುವ ವಿದ್ಯುಚ್ಛಕ್ತಿಯ ಪ್ರಮಾಣವೆಷ್ಟು?

ಋ) ಪ್ರತಿದಿನ ಉತ್ಪಾದಿಸಲಾಗುತ್ತಿದ್ದ ವಿದ್ಯುಚ್ಛಕ್ತಿಯ ಪ್ರಮಾಣವು ಕಡಿಮೆಯಾಗಿರುವುದು ನಿಜವೇ?

ೠ) ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಕೆ.ಎ. ನಿಸಾರ್ ಅಹಮದ್ (ಇಂಧನ ರಾಜ್ಯ ಸಚಿವರು):

ಅ) 1939ರಲ್ಲಿ ಪ್ರಾರಂಭವಾಯಿತು

ಆ) ಸರಾಸರಿ 16 ಮೆಗಾವ್ಯಾಟ್ಸ್ ವಿದ್ಯುತ್ತು ಉತ್ಪಾದಿಸಲಾಗುತ್ತಿದೆ.

ಇ) 19-1-1994ರಿಂದ 8-3-1994ರವರೆಗೆ ವಿದ್ಯುಚ್ಛಕ್ತಿ ಉತ್ಪಾದನೆಯು ಕಡಿಮೆಯಾಗಿತ್ತು.

ಈ) ಎರಡನೇ ಜನರೇಟರ್‌ಗೆ ಜೋಡಿಸಲ್ಪಟ್ಟಿರುವ ಟರ್ಬೈನ್ ದುರಸ್ತಿಗೆ ಒಳಪಟ್ಟಿದ್ದುದರಿಂದ ವಿದ್ಯುಚ್ಛಕ್ತಿ ಉತ್ಪಾದನೆಯು ಕಡಿಮೆಗೊಂಡಿತ್ತು. ದುರಸ್ತಿ ಕಾರ್ಯವನ್ನು 8-3-94ರಂದು ಪೂರ್ಣಗೊಳಿಸಿ ಸದರೀ ಜನರೇಟರ್ ಟರ್ಬೈನನ್ನು ಸರಿಪಡಿಸಲಾಗಿದೆ.

ಉ) ಶರಾವತಿ ಜಲವಿದ್ಯುತ್ ಕೇಂದ್ರವು 1964ನೇ ವರ್ಷದಲ್ಲಿ ಪ್ರಾರಂಭವಾಯಿತು. ಅದರ ವಿದ್ಯುತ್ ಉತ್ಪಾದನೆಯ ಸಾಮರ್ಥ್ಯ ವರ್ಷಕ್ಕೆ 4300 ಮಿಲಿಯನ್ ಯೂನಿಟ್ಟುಗಳು.

ಊ) 1993-94ನೇ ಅವಧಿಯ ಫೆಬ್ರವರಿ ತಿಂಗಳ ಅಂತ್ಯದವರೆಗೆ ಒಟ್ಟು 4338 ಮಿಲಿಯನ್ ಯೂನಿಟ್ ವಿದ್ಯುಚ್ಛಕ್ತಿಯನ್ನು ಉತ್ಪಾದಿಸಿದ್ದು ಅದು ಈ ವರ್ಷದಲ್ಲಿ ಇಲ್ಲಿಯವರೆಗೆ ಹಾಕಿಕೊಂಡಿದ್ದ ನಿರ್ದಿಷ್ಟ ಗುರಿಯಾದ 4231 ಮಿಲಿಯನ್ ಯೂನಿಟ್ಟಿಗಿಂತ ಹೆಚ್ಚಾಗಿದ್ದು ಗುರಿಗಿಂತ ಹೆಚ್ಚು ಉತ್ಪಾದನೆಯನ್ನು ಮಾಡಲಾಗಿದೆ. ಅಂದರೆ 107 ಮಿಲಿಯನ್ ಯೂನಿಟ್ ಉತ್ಪಾದನೆ ಹೆಚ್ಚಿದೆ.

ಋ) ಮೇಲೆ ತಿಳಿಸಿರುವಂತೆ ಉತ್ಪಾದನೆಯ ಪ್ರಮಾಣ ಕಡಿಮೆಯಾಗಿಲ್ಲ.

ೠ) ಉದ್ಭವಿಸುವುದಿಲ್ಲ.

ಲೋಕೋಪಯೋಗಿ ಇಲಾಖೆಯಲ್ಲಿರುವ ಮುಖ್ಯ ಅಭಿಯಂತರರುಗಳ ಹುದ್ದೆಗಳ ಕುರಿತು

451 - ಶ್ರೀ ಕೆ. ಲಕ್ಷ್ಮಣ್ಣ (ರಾಜಾಜಿನಗರ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಲೋಕೋಪಯೋಗಿ ಇಲಾಖೆಯಲ್ಲಿ ಇರುವ ಒಟ್ಟು ಮುಖ್ಯ ಇಂಜಿನಿಯರ್‌ಗಳ ಹುದ್ದೆಗಳೆಷ್ಟು?

ಆ) ಆ ಇಲಾಖೆಗೆ ಅಷ್ಟು ಮುಖ್ಯ ಇಂಜಿನಿಯರ್ ಹುದ್ದೆಗಳ ಅವಶ್ಯಕತೆ ಇದೆಯೇ?

ಇ) ಇದ್ದಲ್ಲಿ, ಅವರುಗಳಿಗೆ ಸಮರ್ಪಕವಾಗಿ ಕಾರ್ಯಭಾರವನ್ನು ಹಂಚಲಾಗಿದೆಯೇ?

ಈ) ಅಷ್ಟೊಂದು ಮುಖ್ಯ ಇಂಜಿನಿಯರ್‌ಗಳು ಇದ್ದರೂ ಕೂಡ ಇಲಾಖೆಯಲ್ಲಿ ಕಾರ್ಯದಕ್ಷತೆಯು ನಿರೀಕ್ಷಿತ ಮಟ್ಟದಲ್ಲಿ ಇರದೇ ಇರಲು ಕಾರಣಗಳೇನು?

ಉ) ಮುಖ್ಯ ಇಂಜಿನಿಯರ್‌ಗಳ ಹುದ್ದೆಗಳಲ್ಲಿ ಮೀಸಲಾತಿಯನ್ನು ಕಟ್ಟುನಿಟ್ಟಾಗಿ ಅನುಸರಿಸಲಾಗಿದೆಯೇ?

ಊ) ಇಲ್ಲವಾದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):

ಅ) 03

ಆ) ಇದೆ.

ಇ) ಹೌದು.

ಈ) ಅವರ ಕಾರ್ಯದಕ್ಷತೆಯು ನಿರೀಕ್ಷಿತ ಮಟ್ಟ ತಲುಪಿಲ್ಲದ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಉ) ಮೀಸಲಾತಿ ನಿಯಮಾವಳಿಯು ಮುಖ್ಯ ಇಂಜಿನಿಯರ್ ವೃಂದಕ್ಕೆ ಅನ್ವಯಿಸುವುದಿಲ್ಲ.

ಊ) ಉದ್ಭವಿಸುವುದಿಲ್ಲ.

ಕಲಘಟಗಿ ತಾಲ್ಲೂಕಿನಲ್ಲಿ ಸಾವಿಹಳ್ಳಿ ಮತ್ತು ಸೋಮನಕೊಪ್ಪ ನೀರಾವರಿ ಯೋಜನೆಗಳನ್ನು ಕುರಿತು

490 - ಶ್ರೀ ಪಿ.ಸಿ. ಸಿದ್ದನಗೌಡರ (ಕಲಘಟಗಿ): ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಲಘಟಗಿ ತಾಲ್ಲೂಕು ಸಾವಿಹಳ್ಳಿ ಮತ್ತು ಸೋಮನಕೊಪ್ಪ ನೀರಾವರಿ ಯೋಜನೆಗಳಿಗೆ ಯಾವಾಗ ಮಂಜೂರಾತಿ ನೀಡಲಾಗಿದೆ?

ಆ) ಇದರಿಂದ ಒಟ್ಟು ಎಷ್ಟು ಎಕರೆಯು ಪ್ರದೇಶಕ್ಕೆ ನೀರಾವರಿ ಆಗುತ್ತದೆ?

ಇ) ಈ ಯೋಜನೆಗಳಿಗೆ ಬೇಕಾದಂಥ ಭೂಮಿಯನ್ನು ರೈತರುಗಳಿಂದ ಸ್ವಾಧೀನಪಡಿಸಿಕೊಳ್ಳಲಾಗಿದೆಯೇ ಹಾಗೂ ಇಲ್ಲಿಯವರೆಗೆ ಆ ನೀರಾವರಿ ಕಾಮಗಾರಿಗಳಿಗೆ ಎಷ್ಟು ಹಣ ಖರ್ಚಾಗಿದೆ?

ಈ) ಈ ಯೋಜನೆಯನ್ನು ಯಾವಾಗ ಮುಗಿಸಬೇಕಾಗಿತ್ತು ಹಾಗೂ ಇದು ವಿಳಂಬವಾಗಿರುವುದಕ್ಕೆ ಕಾರಣವೇನು?

ಡಾ|| ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು):

ಅ) 10.324 ಲಕ್ಷ ರೂ.ಗಳ ಅಂದಾಜುಪಟ್ಟಿಗೆ ಸರ್ಕಾರದಿಂದ ದಿನಾಂಕ 16-6-1973ರಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ. ಪರಿಷ್ಕೃತ ಅಂದಾಜು 175 ಲಕ್ಷ ರೂ.ಗಳಿಗೆ ತಯಾರಿಸಲ್ಪಟ್ಟಿದ್ದು ತಾಂತ್ರಿಕ ಸಮಿತಿಯ ಪರಿಶೀಲನೆಯಲ್ಲಿದೆ.

ಆ) 668 ಎಕರೆ

ಇ) 173 ಎಕರೆ 5 ಗುಂಟೆ ಭೂಮಿಯನ್ನು, ಸ್ವಾಧೀನಪಡಿಸಿಕೊಳ್ಳಲಾಗಿದೆ.

ಈ) 22.40 ಲಕ್ಷ ರೂ. ಇಲ್ಲಿಯವರೆಗೆ ಖರ್ಚಾಗಿದೆ.

ಉ) *1976-77ರಲ್ಲಿ ಮುಗಿಸಲಾಗಿತ್ತು. ಭೂ ಸ್ವಾಧೀನಕ್ಕೆ ರೈತರಿಂದ ಅಡ್ಡಿ ಮತ್ತು ತಾಂತ್ರಿಕ ಹಾಗೂ ವಿನ್ಯಾಸದ ಬದಲಾವಣೆಯಿಂದ ವಿಳಂಬವಾಗಿದೆ.*

ಕಲಘಟಗಿ ತಾಲ್ಲೂಕಿನಲ್ಲಿ 33 ಕೆ.ವಿ. ವಿದ್ಯುತ್ ಸ್ಟೇಷನ್ ಪ್ರಾರಂಭದ ಬಗ್ಗೆ

492 - ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕಲಘಟಗಿ ತಾಲ್ಲೂಕು ಕರಡಿಕೊಪ್ಪದಲ್ಲಿ 33 ಕೆವಿ ವಿದ್ಯುತ್ ಸ್ಟೇಷನನ್ನು ಪ್ರಾರಂಭ ಮಾಡಲು ಸರ್ಕಾರ ಕ್ರಮ ಕೈಗೊಂಡಿದೆಯೇ?*

ಆ) *ಆ ಗ್ರಾಮದಲ್ಲಿ ಸರಿಯಾಗಿ ವಿದ್ಯುಚ್ಛಕ್ತಿ ಪೂರೈಕೆಯಾಗದೇ ರೈತರಿಗೆ ತೊಂದರೆ ಆಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?*

ಇ) *ಅಲ್ಲಿ ವಿದ್ಯುತ್ ಸ್ಟೇಷನನ್ನು ಯಾವಾಗ ಪ್ರಾರಂಭಿಸಲಾಗುವುದು?*

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು) :

ಅ) ಇಲ್ಲ

ಆ) ಪ್ರಸ್ತುತ ಈ ಗ್ರಾಮದಲ್ಲಿ ವಿದ್ಯುತ್ ಸರಬರಾಜು ಸಮರ್ಪಕವಾಗಿದೆ. ಇನ್ನೂ ಹೆಚ್ಚಿನ ಸಮರ್ಪಕ ರೀತಿಯಲ್ಲಿ ವಿದ್ಯುತ್ ಸರಬರಾಜು ಮಾಡಲು ಧರ್ಮಾಪುರದಲ್ಲಿರುವ 33:11 ಕೆವಿ ವಿದ್ಯುತ್ ಉಪಕೇಂದ್ರದಿಂದ ಒಂದು 11 ಕೆವಿ ಫೀಡರನ್ನು ನಿರ್ಮಾಣ ಮಾಡುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಇ) ಪ್ರಶ್ನೆಯ 'ಅ' ಭಾಗಕ್ಕೆ ನೀಡಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಕಲಘಟಗಿ ತಾಲ್ಲೂಕಿನ ಮಡಿಕೆ ಹೊನ್ನಳ್ಳಿ ಏತ ನೀರಾವರಿ ಯೋಜನೆ ಕುರಿತು

489 - ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕಲಘಟಗಿ ತಾಲ್ಲೂಕು ಮಡಕಿಹೊನ್ನಳ್ಳಿ ಏತ ನೀರಾವರಿ ಯೋಜನೆ ಮಂಜೂರು ಮಾಡಲಾಗಿದೆಯೇ?*

ಆ) *ಮಾಡಿದ್ದಲ್ಲಿ ಅದಕ್ಕೆ ತಗಲುವ ಹಣವೆಷ್ಟು?*

ಇ) *ಆ ಕೆಲಸಕ್ಕೆ 1993-94ರಲ್ಲಿ ಎಷ್ಟು ಹಣ ಖರ್ಚು ಮಾಡಲಾಗಿದೆ ಹಾಗೂ ಆ ಯೋಜನೆ ಯಾವಾಗ ಮುಗಿಯುತ್ತದೆ?*

ಡಾ|| ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

ಮೂಡಬಿದರೆಯಲ್ಲಿ ವಿದ್ಯುತ್ ತೊಂದರೆ ಉಂಟಾಗಿರುವ ಬಗ್ಗೆ

580 - ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದರೆ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮೂಡಬಿದರೆಯಲ್ಲಿ ಸಬ್-ಸ್ಟೇಷನ್ ಆದ ಬಳಿಕ ವಿದ್ಯುತ್ತಿನ ಸರಬರಾಜಿನಲ್ಲಿ ತೊಂದರೆಯಾಗಲು ಕಾರಣವೇನು?*

ಆ) *ಅಲ್ಲಿಗೆ ಬೇಕಾದ ಟ್ರಾನ್ಸ್‌ಫಾರ್ಮರ್‌ಗಳನ್ನು ಯಾವಾಗ ಒದಗಿಸಲಾಗುವುದು ಮತ್ತು ನೌಕರರನ್ನು ಯಾವಾಗ ಒದಗಿಸಲಾಗುವುದು?*

ಇ) ಮೂಡಬಿದರೆಯಲ್ಲಿ ಸೆಕ್ಷನ್ ಆಫೀಸನ್ನು ಸಬ್-ಡಿವಿಜನ್ ಆಫೀಸಾಗಿ ಪರಿವರ್ತಿಸಲಾಗುವುದೆಂದು ಸದನದಲ್ಲಿ ಇತ್ತಿದ್ದ ಆಶ್ವಾಸನೆಯನ್ನು ಯಾವಾಗ ಕಾರ್ಯಗತಗೊಳಿಸಲಾಗುವುದು ?

ಶ್ರೀ ಕೆ.ಎ. ನಿಸಾರ್ ಅಹಮದ್ (ಇಂಧನ ರಾಜ್ಯ ಸಚಿವರು):

ಅ) ಮೂಡಬಿದರೆಯಲ್ಲಿ ಸಬ್-ಸ್ಟೇಷನ್ ಕಾರ್ಯಾರಂಭ ಮಾಡಿದ ನಂತರ ವಿದ್ಯುತ್ ಸರಬರಾಜು ಗಣನೀಯವಾಗಿ ಸುಧಾರಣೆ ಗೊಂಡಿದೆ ಮತ್ತು ಹೆಚ್ಚಿನ ಪ್ರಮಾಣದ ತೊಂದರೆ ಉಂಟಾಗುತ್ತಿಲ್ಲ.

ಆ) ಮೂಡಬಿದರೆಯ 110-11 ಕೆವಿ ಸಬ್-ಸ್ಟೇಷನ್ನಿನಲ್ಲಿ ಈಗಾಗಲೇ 10 ಎಂವಿಎ ಸಾಮರ್ಥ್ಯದ ಪವರ್ ಟ್ರಾನ್ಸ್ಫಾರ್ಮರ್ ಕಾರ್ಯನಿರ್ವಹಿಸುತ್ತಿದ್ದೆ. ಹೀಗಾಗಿ ಈ ಸಬ್-ಸ್ಟೇಷನ್ಗೆ ಪವರ್ ಟ್ರಾನ್ಸ್-ಫಾರ್ಮರನ್ನು ಒದಗಿಸುವ ಪ್ರಶ್ನೆ ಉದ್ಭವಿಸುವುದಿಲ್ಲ. ಸದರೀ ವಿದ್ಯುತ್ ಸಬ್-ಸ್ಟೇಷನ್ಗೆ ಪಾಳಿ ಕೆಲಸ ಮತ್ತು ನಿರ್ವಹಣೆ ಕೆಲಸಕ್ಕೆ ಅಗತ್ಯವಿರುವ ಹುದ್ದೆಗಳನ್ನು ಮಂಜೂರು ಮಾಡಲಾಗಿದೆ. ನಿರ್ವಹಣೆ ಕೆಲಸಕ್ಕೆ ಮಂಜೂರಾಗಿರುವ ಹುದ್ದೆಗಳನ್ನು ಈಗಾಗಲೇ ಭರ್ತಿ ಮಾಡಲಾಗಿದ್ದು, ಪಾಳಿ ಕೆಲಸಕ್ಕೆ ಮಂಜೂರಾಗಿರುವ ಹುದ್ದೆಗಳನ್ನು ಆದಷ್ಟು ಜಾಗ್ರತೆ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಇ) ಇದರ ಬಗ್ಗೆ ಅಗತ್ಯವಿರುವ ಅಂಕಿ. ಅಂಶ ಮತ್ತು ಮಾಹಿತಿಗಳನ್ನು ಸಂಗ್ರಹಿಸಲಾಗಿದ್ದು, ಪ್ರಸ್ತಾವನೆಯನ್ನು ರೂಪಿಸಲಾಗುತ್ತಿದೆ. ಆದಷ್ಟು ಶೀಘ್ರಗತಿಯಲ್ಲಿ ಪ್ರಸ್ತಾವನೆಯನ್ನು ರೂಪಿಸಿ, ಮಂಡಳಿಯ ಮಂಜೂರಾತಿ ಸಲ್ಲಿಸಲಾಗುವುದು.

ಕಟೀಲು ಬೈಪಾಸು ರಸ್ತೆ ನಿರ್ಮಾಣ ಕುರಿತು

578-ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದರೆ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಟೀಲು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಬಳಿ ಅಗಲ ಕಿರಿದಾದ ರಸ್ತೆಯಿಂದಾಗಿ ಯಾವಾಗಲೂ ವಾಹನ ತಡೆ ಇರುವ ಕಾರಣ, ಬೈಪಾಸು ರಸ್ತೆ ರಚನೆ ಯಾವಾಗ ಮಾಡಲಾಗುವುದು ?

ಆ) ಕಳೆದ ವರ್ಷದ ಅಧಿವೇಶನದಲ್ಲಿ ಈ ರಸ್ತೆಯನ್ನು ಕೂಡಲೇ ಮಾಡಲಾಗುವುದು ಎಂದು ತಿಳಿಸಿದರೂ ಸರಕಾರ ಈ ತನಕ ಕ್ರಮ ಕೈಗೊಳ್ಳದಿರಲು ಕಾರಣವೇನು ?

ಇ) ಈ ಬೈಪಾಸ್ ರಸ್ತೆ ರಚಿಸಲು ಎಷ್ಟು ಖರ್ಚಾಗಬಹುದು ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):

ಅ) ಸದರಿ ಬೈಪಾಸ್ ರಸ್ತೆ ನಿರ್ಮಾಣಕ್ಕೆ ಸುಮಾರು 11 ಎಕರೆ ಖಾಸಗಿ ಜಮೀನನ್ನು ಭೂಸ್ವಾಧೀನ ಪಡಿಸಬೇಕಿದ್ದು, ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) 1993-94ನೇ ಸಾಲಿನ ಆಯವ್ಯಯದಲ್ಲಿ ಅನುದಾನದ ಕೊರತೆಯಿಂದಾಗಿ ಈ ಕಾಮಗಾರಿಯನ್ನು ತೆಗೆದುಕೊಳ್ಳಲಾಗಲಿಲ್ಲ. 1994-95ನೇ ಸಾಲಿನಲ್ಲಿ ಈ ಕಾಮಗಾರಿಯನ್ನು ತೆಗೆದುಕೊಳ್ಳುವ ವಿಷಯವು ಪರಿಶೀಲನೆಯಲ್ಲಿದೆ.

ಇ) ಸುಮಾರು 25 ಲಕ್ಷ ರೂ.ಗಳ ಅಂದಾಜು ಆಗುತ್ತದೆ.

ಕಿಂದಿ ಅಣೆಕಟ್ಟು ನಿರ್ಮಾಣ ಕುರಿತು

579 - ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದರೆ): ಮಾನ್ಯ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

...ಅಣೆಕಟ್ಟಿನ ನಿರ್ಮಾಣದಿಂದ ಎಷ್ಟು ನೀರಾವರಿ ಸೌಲಭ್ಯ ದೊರಕಬಹುದು?

ಆ) ..... ಎಷ್ಟು ಎಕರೆ ಕ್ಷೇತ್ರಕ್ಕೆ ನೀರಿನ ಸೌಲಭ್ಯ ಲಭಿಸುವುದು?

ಇ) ಜನರು ಅಲ್ಲಿ ಕಟ್ಟು ಹಾಕಲು ಉತ್ಸುಕರಾಗಿದ್ದು, ಸರ್ಕಾರ ಅಣೆಕಟ್ಟಿನ ನಿರ್ಮಾಣ ಯಾವಾಗ ಮಾಡುವುದು?

ಈ) ಆ ಅಣೆಕಟ್ಟಿನ ನಿರ್ಮಾಣದಿಂದ ಎರಡೂ ಕಡೆಯ ಜನರಿಗೆ ನದಿ ದಾಟುವ ಅನುಕೂಲ ಆಗುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆ?

ಡಾ|| ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು):

ಅ) ಸುಮಾರು 15.00 ಲಕ್ಷಗಳು.

ಆ) ಸುಮಾರು 150 ಎಕರೆಗೆ ನೀರಾವರಿ ಸೌಲಭ್ಯ ಒದಗಿಸಬಹುದು.

ಇ) ಕಾಮಗಾರಿಯ ಶಕ್ಯತಾನುಸಾರ ಮತ್ತು ಆಯವ್ಯಯದಲ್ಲಿ ಸೇರ್ಪಡೆಯಾದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಈ) ಬಂದಿದೆ.

ಕಲಘಟಗಿಯ ವಿದ್ಯುತ್ ಮಂಡಳಿಗೆ ಎಲ್ಲ ರೀತಿಯ ಸೌಲಭ್ಯಗಳನ್ನು ಒದಗಿಸುವ ಬಗ್ಗೆ

401 - ಶ್ರೀ ಪಿ.ಸಿ. ಶಿವನಗೌಡರ್ (ಕಲಘಟಗಿ): ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಲಘಟಗಿಯಲ್ಲಿ ಹೊಸದಾಗಿ ವಿದ್ಯುಚ್ಛಕ್ತಿ ಮಂಡಳಿಯ ಸೆಕ್ಷನ್ ಆಫೀಸನ್ನು ತೆರೆಯಲಾಗಿದೆಯೇ?

ಆ) ಹಾಗಿದ್ದಲ್ಲಿ ಆ ಕಛೇರಿಯ ಅಧಿಕಾರಿಗಳಿಗೆ ಹಾಗೂ ಸಿಬ್ಬಂದಿ ವರ್ಗದವರಿಗೆ ಜೀಪು ಹಾಗೂ ಇತರ ಸೌಲಭ್ಯಗಳನ್ನು ನೀಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಆ ತಾಲ್ಲೂಕಿನಲ್ಲಿ ಲೈನ್‌ಮನ್‌ಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಆ ಕಛೇರಿಗೆ ಎಲ್ಲಾ ಸೌಲಭ್ಯಗಳನ್ನು ಒದಗಿಸಲು ಹಾಗೂ ಲೈನ್‌ಮನ್‌ಗಳನ್ನು ನೇಮಿಸಲು ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):

ಅ) ಇಲ್ಲ. 1991ರಲ್ಲೇ ಮಂಡಳಿಯ ಉಪ ವಿಭಾಗೀಯ ಕಛೇರಿಯನ್ನು ಕಲಘಟಗಿಯಲ್ಲಿ ಪ್ರಾರಂಭಿಸಲಾಗಿದೆ.

ಆ) ಈ ಉಪ ವಿಭಾಗಕ್ಕೆ ಅಗತ್ಯವಿರುವ ಜೀಪು ಮತ್ತು ಕಛೇರಿಗೆ ಬೇಕಾಗುವ ಸಾಮಗ್ರಿಗಳನ್ನು ಮಂಡಳಿಯು ಒದಗಿಸಿದೆ.

ಇ) ಹೌದು

ಈ) ಪ್ರಶ್ನೆಯ 'ಆ' ಭಾಗಕ್ಕೆ ನೀಡಿರುವ ಉತ್ತರದಿಂದ ಜೀಪು ಮತ್ತು ಕಛೇರಿ ಸಾಮಗ್ರಿಗಳನ್ನು ಒದಗಿಸುವ ಪ್ರಶ್ನೆ ಉದ್ಭವಿಸುವುದಿಲ್ಲ. ಖಾಲಿ ಇರುವ ಲೈನ್‌ಮನ್‌ಗಳ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.

ಕರ್ನಾಟಕ ವಿದ್ಯುತ್ ಮಂಡಳಿಯು ವಿದ್ಯುತ್ ದರ ಹೆಚ್ಚಿಸಿರುವ ಬಗ್ಗೆ

660 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಬೀದರ್): ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ವಿದ್ಯುತ್ ಮಂಡಳಿಯು ಕಳೆದ 4 ವರ್ಷಗಳಲ್ಲಿ ಎಷ್ಟು ಬಾರಿ ವಿದ್ಯುತ್ ದರಗಳನ್ನು ಹೆಚ್ಚಿಸಿದೆ?

ಆ) ಅದಕ್ಕೆ ಕಾರಣಗಳೇನು?

ಇ) ಈ ದರಗಳ ಹೆಚ್ಚಳದಿಂದಾಗಿ ವಿದ್ಯುತ್ ಮಂಡಳಿಯು ಮೇಲ್ಕಂಡ ಅವಧಿಯಲ್ಲಿ ಎಷ್ಟು ಆದಾಯವನ್ನು ನಿರೀಕ್ಷಿಸಿತ್ತು ಹಾಗೂ ಎಷ್ಟು ಆದಾಯ ಬಂದಿರುವುದು?

ಈ) ಒಂದು ವೇಳೆ ವಿದ್ಯುಚ್ಛಕ್ತಿ ಮಂಡಳಿಯು ನಷ್ಟದಿಂದ ನಡೆಯುತ್ತಿದ್ದಲ್ಲಿ ಕಳೆದ 4 ವರ್ಷಗಳಲ್ಲಿ ಪ್ರತಿ ವರ್ಷ ಎಷ್ಟು ನಷ್ಟವನ್ನು ಅನುಭವಿಸುತ್ತಿದೆ?

ಉ) ವಿದ್ಯುತ್ ಮಂಡಳಿಯನ್ನು ಕಾಯಕಲ್ಪಗೊಳಿಸಲು ಸರ್ಕಾರದ ಮುಂದಿರುವ ಕ್ರಮಗಳೇನು?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):

ಅ) ಕಳೆದ 4 ವರ್ಷಗಳಲ್ಲಿ ಮೂರು ಬಾರಿ ವಿದ್ಯುತ್ ದರಗಳನ್ನು ಪರಿಷ್ಕರಿಸಲಾಗಿದೆ.

ಆ) ಮುಖ್ಯ ಕಾರಣಗಳು:

1) ವಿದ್ಯುತ್ ಉತ್ಪಾದನೆ ಸಂಸ್ಥೆಗಳಾದ ಕರ್ನಾಟಕ ವಿದ್ಯುತ್ ನಿಗಮ, ಎನ್.ಟಿ.ಪಿ.ಸಿ. ಎನ್.ಎಲ್.ಸಿ. ಮತ್ತು ಎಂ.ಎ.ಪಿ.ಪಿ. ವಿದ್ಯುತ್ ಮಾರಾಟದ ಬೆಲೆಯನ್ನು ಹೆಚ್ಚಿಸಿದ್ದು 1990-91ರಿಂದ ಮಂಡಳಿಯು ಖರೀದಿಸುತ್ತಿರುವ ವಿದ್ಯುತ್ತಿಗಾಗಿ ನೀಡುತ್ತಿರುವ ಹಣ ದ್ವಿಗುಣಗೊಂಡಿದೆ.

2) ಮಂಡಳಿಯ ದಿನನಿತ್ಯದ ಉಪಯೋಗಕ್ಕೆ ಬಳಸಲಾಗುವ ಸಾಮಗ್ರಿಗಳ ಬೆಲೆ ಗಣನೀಯ ಪ್ರಮಾಣದಲ್ಲಿ ಹೆಚ್ಚಳಗೊಂಡಿದೆ. ಕಾರ್ಯ ಮತ್ತು ಪಾಲನೆಯ ವೆಚ್ಚವೊಂದರಲ್ಲೇ ವಾರ್ಷಿಕ 187 ಕೋಟಿ ರೂ.ಗಳ ಏರಿಕೆ ಉಂಟಾಗಿದೆ.

3) ವಿವಿಧ ಸುಧಾರಣೆ ಕಾರ್ಯಗಳಿಗಾಗಿ ಮಂಡಳಿಯು ವಿವಿಧ ಹಣಕಾಸು ಸಂಸ್ಥೆಗಳಿಂದ ಪಡೆದಿರುವ ಸಾಲಕ್ಕೆ ಬಡ್ಡಿಯನ್ನು ಪಾವತಿ ಮಾಡಬೇಕಾಗಿದೆ.

4) ವಿದ್ಯುಚ್ಛಕ್ತಿ (ಸರಬರಾಜು) ಕಾಯ್ದೆ 1948ರ ಪ್ರಕಾರ ಕನಿಷ್ಠ ಶೇಕಡ 3 ರಷ್ಟು ಅಧಿಕೃತ (ರೇಟ್ ಆಫ್ ರಿಟರ್ನ್) ಯನ್ನು ಗಳಿಸುವುದು ಕಡ್ಡಾಯವಾಗಿದೆ

ಇ) ಕಳೆದ [illegible] ವರ್ಷಗಳಲ್ಲಿ ನಿರೀಕ್ಷಿಸಿದ್ದ ಆದಾಯ ಮತ್ತು ಸಂದಾಯವು ಕೆಳಕಂಡಂತಿದೆ.

ವರ್ಷ	ಮೊಬಲಗು ಕೋಟಿ ರೂ.ಗಳಲ್ಲಿ
1990-91	103.92
1991-92	216.46
1992-93	130.46
1993-94	134.23 (ಅಂದಾಜು)

ಈ) ವಿದ್ಯುಚ್ಛಕ್ತಿ (ಸರಬರಾಜು) ಕಾಯ್ದೆ 1948ರ ಪ್ರಕಾರ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು [illegible] ಶೇಕಡ 3 ರಷ್ಟು ಅಧಿಕೃತ (ರೇಟ್ ಆಫ್ ರಿಟರ್ನ್) ಯನ್ನು ಗಳಿಸಬೇಕಾಗಿರುವುದರಿಂದ ನಷ್ಟದಲ್ಲಿ ವ್ಯವಹರಿಸುವಂತಿಲ್ಲ. ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಶೇಕಡ 40ರಷ್ಟು ವಿದ್ಯುತ್ತನ್ನು ನೀರಾವರಿ ಪಂಪ್‌ಸೆಟ್ಟು ಬಳಕೆದಾರರಿಗೆ ಕೃಷಿಗಾಗಿ ಉಚಿತವಾಗಿ ಸರಬರಾಜು ಮಾಡುತ್ತಿದ್ದು, [illegible] ಪ್ರತಿ [illegible] ಕನಿಷ್ಠ [illegible] ದರಗಳಲ್ಲಿ [illegible] 345 ಕೋಟಿ ರೂ.ಗಳ ನಷ್ಟವಾಗುವುದು [illegible]

ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಕನಿಷ್ಠ ಶೇಕಡ 3 ರಷ್ಟು ಅಧಿಕೃತ (ರೇಟ್ ಆಫ್ ರಿಟರ್ನ್ಸ್) ಯನ್ನು ಕಾಪಾಡಿಕೊಂಡು ಬರಲು ಗ್ರಾಮೀಣ ವಿದ್ಯುದ್ದೀಕರಣದ ಬಗ್ಗೆ ಸಹಾಯಧನವನ್ನು ಸರ್ಕಾರದಿಂದ ಪಡೆಯುತ್ತಿದೆ.

ಉ) ವಿದ್ಯುತ್ ಮಂಡಳಿಯನ್ನು ಕಾಯಕಲ್ಪಗೊಳಿಸಲು ಸರ್ಕಾರ ಒಂದು ಜಂಟಿ ಸಮಿತಿಯನ್ನು ರಚಿಸಿದೆ. ಇದರ ಬಗ್ಗೆ ಸರ್ಕಾರ ಸಮಾಲೋಚಿಸುತ್ತಿದೆ.

ಅಧ್ಯಕ್ಷರು : ಮಂಡಿಸಲಾಯಿತು.

ವರದಿಗಳನ್ನೊಪ್ಪಿಸುವುದು

ಶ್ರೀ ಅಂಜನಮೂರ್ತಿ (ಉಪಾಧ್ಯಕ್ಷರು) : ಮಾನ್ಯ ಅಧ್ಯಕ್ಷರೇ, ವಿಧಾನಸಭೆಯ ಅರ್ಜಿಗಳ ಸಮಿತಿಯ 3ನೇ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು : ವರದಿಯನ್ನು ಸಭೆಗೆ ಒಪ್ಪಿಸಲಾಯಿತು.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೇ, ಸಭೆಯ ಮುಂದಿಡಲಾದ ಕಾಗದ ಪತ್ರಗಳ ಸಮಿತಿಯ 13ನೇ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು : ವರದಿಯನ್ನು ಸಭೆಗೆ ಒಪ್ಪಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಎಂ. ನಾರಾಯಣ ಸ್ವಾಮಿ (ಜನತಾದಳ) ಯವರು "ನ್ಯಾಯಾಂಗ ತನಿಖೆ ನಡೆಸಲೇ ಬೇಕು, ಕಾಂಗ್ರೆಸ್ ಸರ್ಕಾರ ರಾಜೀನಾಮೆ ಕೊಡಲೇ ಬೇಕು" ಎಂದು ಘೋಷಣೆ ಕೂಗುತ್ತಿದ್ದರು.)

ನಿರ್ಣಯ

ಶ್ರೀ ಎಂ. ನಾರಾಯಣಸ್ವಾಮಿ (ಜನತಾದಳ) ಅವರನ್ನು ಅಧಿವೇಶನ ಮುಗಿಯುವವರೆಗೆ ಸಭೆಗೆ ಹಾಜರಾಗದಂತೆ ನಿಷೇಧಿಸುವುದು

ಅಧ್ಯಕ್ಷರು : ಮಾನ್ಯ ಸದಸ್ಯರು ತಮ್ಮ ಸ್ಥಳಕ್ಕೆ ಹೋಗಬೇಕೆಂದು ನಾನು ಮತ್ತೊಮ್ಮೆ ವಿನಂತಿಸುತ್ತೇನೆ. ಇಲ್ಲವಾದಲ್ಲಿ ನಾನು ಕ್ರಮ ತೆಗೆದುಕೊಳ್ಳುತ್ತೇನೆ. ಮಾನ್ಯ ಸದಸ್ಯರು ತಮ್ಮ ಸ್ಥಾನಕ್ಕೆ ಹೋಗಬೇಕೆಂದು ನಾನು ವಿನಂತಿ ಮಾಡಿಕೊಂಡರೂ ಅವರು ನನ್ನ ಮನವಿಗೆ ಪುರಸ್ಕಾರ ಕೊಡದೆ ನನ್ನ ಅಧಿಕಾರದ ವಿಷಯದಲ್ಲಿ ಲಕ್ಷ್ಯವಿಲ್ಲದೆ ತಿರಸ್ಕಾರ ಮಾಡುತ್ತಾ ಸದನದ ಕಾರ್ಯಕಲಾಪಗಳಿಗೆ ಒಂದೇ ಸಮನಾಗಿ ಮತ್ತು ಉದ್ದೇಶಪೂರ್ವಕವಾಗಿ ಅಡಚಣೆಯುಂಟು ಮಾಡುತ್ತಿದ್ದಾರೆ. ಆದುದರಿಂದ ನಿಯಮ 331ರ ಮೇರೆಗೆ ಈ ಸದಸ್ಯರು ಸಭೆಯ ಕಾರ್ಯಕಲಾಪಗಳಿಗೆ ಸತತವಾಗಿ ಅಡ್ಡಿಪಡಿಸಿದುದಕ್ಕಾಗಿ ಈ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸುವುದನ್ನು ನಿಷೇಧಿಸಲಾಗಿದೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, ತಮ್ಮ ಅಪ್ಪಣೆ ಪಡೆದು ಈ ಕೆಳಗಿನ ನಿರ್ಣಯವನ್ನು ಮಂಡಿಸುತ್ತೇನೆ. "ಶ್ರೀ ನಾರಾಯಣಸ್ವಾಮಿಯವರು ಅನಾವಶ್ಯಕವಾಗಿ ಸಭೆಯ ಕಾರ್ಯಕಲಾಪಗಳಿಗೆ ಅಡ್ಡಿಪಡಿಸುತ್ತಿರುವುದರಿಂದ ಅವರನ್ನು ಈ ಸಭೆಯ ಅಧಿವೇಶನ ಮುಗಿಯುವವರೆಗೆ ಸಭೆಗೆ ಹಾಜರಾಗದಂತೆ ನಿಷೇಧಿಸಬೇಕು.

ಅಧ್ಯಕ್ಷರು : ಪ್ರಸ್ತಾವನೆಯನ್ನು ನಾನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವವೇನೆಂದರೆ, ಶ್ರೀ ಎಂ. ನಾರಾಯಣಸ್ವಾಮಿ ಅವರು ಸದನದ ಕಾರ್ಯಕಲಾಪಗಳಿಗೆ ಅಡ್ಡಿಪಡಿಸುತ್ತಿರುವುದರಿಂದ

ಿವರನ್ನು ಈ ಸಭೆಯ ಅಧಿವೇಶನ ಮುಗಿಯುವವರೆಗೆ ಸಭೆಗೆ ಬಾರದಂತೆ ನಿಷೇಧಿಸುವುದು"

(ನಿರ್ಣಯ ಅಂಗೀಕಾರವಾಯಿತು)

ಅಧ್ಯಕ್ಷರ ಅನುಮತಿ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ಮಾತೃ ಭಾಷೆಯಲ್ಲಿ ಶಿಕ್ಷಣ ಕಡ್ಡಾಯವಾಗಬೇಕೆಂದು ಸರ್ವೋಚ್ಛ ನ್ಯಾಯಾಲಯದ ತೀರ್ಪನ್ನು ಜಾರಿಗೊಳಿಸುವುದರ ಬಗ್ಗೆ

+ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಅಧ್ಯಕ್ಷರೇ, ಮಾತೃ ಭಾಷೆಯಲ್ಲಿ ಶಿಕ್ಷಣ ಮಾಧ್ಯಮ ಕಡ್ಡಾಯವಾಗಬೇಕೆನ್ನುವಂತಹ ಸರ್ವೋಚ್ಛನ್ಯಾಯಾಲಯದ ತೀರ್ಪನ್ನು ಅನುಷ್ಠಾನ ಮಾಡಬೇಕೆಂದು ಮತ್ತು ಅದಕ್ಕೆ ಬೇಕಾದಂತಹ ಸರಕಾರದ ಆದೇಶವನ್ನು ಹೊರಡಿಸಬೇಕೆಂದು ಕನ್ನಡ ಶಕ್ತಿ ಕೇಂದ್ರ ಡಾ||ಚಿದಾನಂದ ಮೂರ್ತಿಯವರು ಗೋಪಾಲ ಗೌಡ ವೃತ್ತದ ಬಳಿ ಅಮರಣಾಂತ ಉಪವಾಸಮಾಡುತ್ತಿದ್ದಾರೆ. ಸರ್ವೋಚ್ಛ ನ್ಯಾಯಾಲಯ ಈ ರೀತಿ ತೀರ್ಪನ್ನು ಕೊಟ್ಟ ಕ್ಷಣದಲ್ಲಿಯೇ ಸರಕಾರ ಸರ್ಕಾರಿ ಆಜ್ಞೆಯನ್ನು ಹೊರಡಿಸಿ ಅದು ಕಾರ್ಯಗತವಾಗುವಂತಹ ಕಳಕಳಿಯನ್ನು ವ್ಯಕ್ತಪಡಿಸಬೇಕಾಗಿತ್ತು. ಮಂಡ್ಯದ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕ್ರಮವಾದಂತಹ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಕಳಕಳಿಯಿಂದ ತಕ್ಷಣ ಸಂಬಂಧಪಟ್ಟ ಸರಕಾರಿ ಆಜ್ಞೆಯನ್ನು ಹೊರಡಿಸುತ್ತೇವೆಂದು ಹೇಳಿದ್ದಾರೆ. ಸರಕಾರಕ್ಕೆ ಕನ್ನಡದ ಬಗ್ಗೆ ಕಳಕಳಿ ಇದ್ದರೆ ಸರ್ವೋಚ್ಛ ನ್ಯಾಯಾಲಯ ತನ್ನ ತೀರ್ಪನ್ನು ಕೊಟ್ಟ ಕ್ಷಣದಲ್ಲಿ ಇದನ್ನು ಕಾರ್ಯಗತ ಮಾಡುವಂತಹ ಸರಕಾರಿ ಆಜ್ಞೆಯನ್ನು ನೀವು ಹೊರಡಿಸಬೇಕಾಗಿತ್ತು. ಕನ್ನಡ ನಾಡಿನ ಜನತೆಯ ಪರವಾಗಿ ಇಂತಹ ಒಬ್ಬ ಹಿರಿಯರಾದ ಶ್ರೀ ಚಿದಾನಂದ ಮೂರ್ತಿಯವರು ಅಮರಣಾಂತ ಉಪವಾಸ ಮಾಡುವಂತಹ ಪರಿಸ್ಥಿತಿಗೆ ತಂದಿರುವುದು ಕನ್ನಡ ನಾಡಿನ ಜನರಿಗೆ ಒಂದು ಅಪಮಾನವಾದಂತಹ ಕೆಲಸ ಮಾಡಿದ ಹಾಗಾಗುತ್ತದೆ. ಕರ್ನಾಟಕ ರಾಜ್ಯದಲ್ಲಿ ಕನ್ನಡದ ಸರಕಾರ ಇದೆಯೋ ಅಥವಾ ಬೇರೆ ಸರಕಾರ ಇದೆಯೋ, ಸರಕಾರ ಏನು ಮಾಡುತ್ತಿದೆ ಎಂಬ ಗೊಂದಲದಲ್ಲಿ ಜನ ಇರುವಂತಹ ಪರಿಸ್ಥಿತಿ ಒದಗಿ ಬಂದಿದೆ. ನಿಮಗೂ ಕಳಕಳಿ ಇದೆ ಎಂದು ನನ್ನ ಭಾವನೆ ಇದೆ. ಸಾಹಿತಿಗಳು ಅನೇಕ ದೊಡ್ಡದೊಡ್ಡ ವ್ಯಕ್ತಿಗಳು, ಮಾನ್ಯ ನರಸಿಂಹಮಯ್ಯನವರು, ಹಾಮಾನಾಯಕ್ ಅವರು ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಗೊರೂರು ಚನ್ನಬಸಪ್ಪನವರು ಹೀಗೆ ಎಲ್ಲರೂ ಇದರ ಬಗ್ಗೆ ಒತ್ತಾಯ ಮಾಡುತ್ತಿರುವಂತಹ ಪರಿಸ್ಥಿತಿ ಇದೆ. ರಾಜ್ಯಾದ್ಯಂತ ಗೋಕಾಕ್ ಚಳುವಳಿ ಮಾದರಿ ಚಳುವಳಿಯನ್ನು ಪ್ರಾರಂಭ ಮಾಡುವಂತಹ ಪರಿಸ್ಥಿತಿ ಒದಗಿ ಬರಬಹುದು. ಆದ್ದರಿಂದ ನನ್ನ ಕಳಕಳಿ ಇರುವಂಥಾದ್ದು ಈ ಕ್ಷಣಕ್ಕೆ ದಿನಾಂಕ 1-4-94ರಿಂದ ಇದು ಕಾರ್ಯರೂಪಕ್ಕೆ ಬರುವಂತೆ ಸರಕಾರಿ ಆಜ್ಞೆಯನ್ನು ಹೊರಡಿಸಬೇಕೆಂದು ನಾನು ವಿನಂತಿಸುತ್ತೇನೆ. ಕೇವಲ ಸರಕಾರೀ ಆಜ್ಞೆ ಹೊರಡಿಸಿದರೆ ಮಾತ್ರ ಆಗುವುದಿಲ್ಲ, ಸರಕಾರಿ ಆದೇಶವನ್ನು ಸಮಗ್ರವಾಗಿ ಕಾರ್ಯರೂಪಕ್ಕೆ ತರಲು ಅಧಿಕಾರಿಗಳ ಜೊತೆಯಲ್ಲಿ ಶಿಕ್ಷಣ ಕ್ಷೇತ್ರದ ಪ್ರತಿನಿಧಿಗಳನ್ನು ಸೇರಿಸಿ ಒಂದು ಸಮಿತಿ ರಚನೆ ಮಾಡಿ, ಸರ್ವೋಚ್ಛ ನ್ಯಾಯಾಲಯದ ತೀರ್ಪು ಕಾರ್ಯರೂಪಕ್ಕೆ ಬರುವಂತೆ ನೋಡಿಕೊಳ್ಳಬೇಕು. ಈ ಕಾರ್ಯಕ್ರಮವನ್ನು ಜಾರಿಗೆ ತರದೇ ಹೋದರೆ ನಾವೂ ಕೂಡ ಅಲ್ಲಿಗೇ ಹೋಗಿ ಉಪವಾಸ ಕುಳಿತುಕೊಳ್ಳುವಂತಹ ಪರಿಸ್ಥಿತಿ ಬರಬಹುದು. ಇಲ್ಲಿರುವ ಯಾವುದೇ ಸದಸ್ಯರಿಗೆ ಈ ಸರಕಾರೀ ಆಜ್ಞೆಯನ್ನು ಹೊರಡಿಸುವುದಕ್ಕೆ ಅಭ್ಯಂತರವಿಲ್ಲವೆಂದು ನಾನಾದರೂ ಭಾವಿಸಿದ್ದೇನೆ. ಇದು 1-4-94ರಿಂದ ಜಾರಿಗೆ ಬರುವಂತೆ ಸರಕಾರಿ ಆಜ್ಞೆಯನ್ನು ಹೊರಡಿಸಬೇಕು. ಅವುಗು ...

ಉಪವಾಸ ಕೂಡದಂತೆ ಇವತ್ತೇ ಅದನ್ನು ರದ್ದುಪಡಿಸುವ ಕೆಲಸವಾಗಬೇಕು. ಇದು ಸರ್ಕಾರಕ್ಕೇ ಅಪಮಾನವೆಂದು ನಾನು ಏಕೆ ಹೇಳಿದೆ ಅಂದರೆ ಇಂತಹ ವಿಷಯಗಳ ಬಗ್ಗೆ ಕನ್ನಡ ನಾಡಿನ ಜನರು ಸಾಹಿತಿಗಳು ಕನ್ನಡ ನಾಡಿನ ಉಳಿವಿಗೋಸ್ಕರ ಹೋರಾಟ ಮಾಡಬಹುದು. ಈ ಬೇಡಿಕೆಯನ್ನು ಒತ್ತಾಯಿಸಿ ಅಮರಣಾಂತ ಉಪವಾಸ ಕೂಡಬಹುದು. 26ರ ಮಾರ್ಚ್ ಒಳಗೆ ಸರಕಾರಿ ಆಜ್ಞೆಯನ್ನು ಇದಕ್ಕೆ ಸಂಬಂಧಪಟ್ಟಂತೆ ಹೊರಡಿಸದಿದ್ದರೆ ನಾನು ಅಮರಣಾಂತ ಉಪವಾಸ ಮಾಡುವುದು ಅನಿವಾರ್ಯ. ಅನಿವಾರ್ಯವಾಗಿ ನಾನು ಈ ಕೆಲಸ ಮಾಡುತ್ತೇನೆಂದು ಶ್ರೀ ಚಿದಾನಂದ ಮೂರ್ತಿಯವರು ಹೇಳಿದ್ದರು, ವಿನಂತಿ ಮಾಡಿದ್ದರು ಹಾಗೂ ಎಚ್ಚರಿಕೆ ಕೂಡ ಲಿಖಿತ ಮೂಲಕ ಕೊಟ್ಟಿದ್ದರು. ಅದು ಎಲ್ಲಾ ಪತ್ರಿಕೆಗಳಲ್ಲಿ ಕೂಡ ಬಂದಿತ್ತು ಇದಕ್ಕೆ ಮೀನಾಮೇಷ ಮಾಡಿ ಆ ಪರಿಸ್ಥಿತಿ ಏಕೆ ಉದ್ಭವವಾಗುವ ಹಾಗೆ ಮಾಡಿಕೊಂಡಿರೋ ನನಗೆ ಅರ್ಥವಾಗುತ್ತಿಲ್ಲ. 1-4-94ರಿಂದ ಇದು ಕಾರ್ಯರೂಪಕ್ಕೆ ಬರುವಂತೆ ಸರಕಾರಿ ಆಜ್ಞೆಯನ್ನು ಕೂಡಲೇ ಹೊರಡಿಸಬೇಕು.

1.15 ಪಿ.ಎಂ.

ಇದರ ಜೊತೆಗೆ ಅಧಿಕಾರಿಗಳ ಜೊತೆಯಲ್ಲಿ ಸಾಹಿತಿಗಳನ್ನು ಹೊಂದಿಕೊಂಡಂತೆ ಸರಿಯಾದ ಒಂದು ಅನುಷ್ಠಾನ ಸಮಿತಿಯನ್ನು ಮಾಡಿ, ಇದನ್ನು ಕಾರ್ಯರೂಪಕ್ಕೆ ತರುವಂತಹ ಪ್ರಯತ್ನ ಮಾಡಬೇಕು. ಇವತ್ತು ಅವರು ಅಮರಣಾಂತ ಉಪವಾಸ ನಿಲ್ಲಿಸುವುದಕ್ಕೆ ಉಪವಾಸ ನಿಲ್ಲಿಸುವುದಕ್ಕೆ ಸರ್ಕಾರ ತೀವ್ರತರವಾದಂತಹ ಕಾರ್ಯಕ್ರಮವನ್ನು ರೂಪಿಸಬೇಕೆಂದು ಈ ಸಂದರ್ಭದಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ: ಇದು ಹೊಸದೇನೂ ಅಲ್ಲ.

ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ): ಮಾನ್ಯ ಅಧ್ಯಕ್ಷರೆ, ಈ ವಿಷಯವಾಗಿ ಈ ಸದನದಲ್ಲಿ ಯಾವುದೇ ವಾದ ವಿವಾದಕ್ಕೆ ಅವಕಾಶ ಇಲ್ಲ ಎಂದು ನಾನು ಭಾವಿಸುತ್ತೇನೆ. ಮಾನ್ಯ ಡಾ|| ಚಿದಾನಂದ ಮೂರ್ತಿಯವರಿಗೂ ಮತ್ತು ಮಾನ್ಯ ಮುಖ್ಯಮಂತ್ರಿಗಳಿಗೂ ಈ ವಿಷಯವಾಗಿ ಈ ಒಂದೆ ಕಾಗದಪತ್ರದ ಮೂಲಕ ಮಾತುಕತೆ ಕೂಡ ನಡೆದಿದೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಕಾಗದ ಬರೆದಿದ್ದಾರೆ. ಇವತ್ತು ಸಂಬಂಧಪಟ್ಟ ಇಲಾಖೆಯವರು ಕೂಡ ಬಹಳ ತೀವ್ರವಾಗಿ ಕಾರ್ಯಗತ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಹಾಗೆಯೇ ಮಾನ್ಯ ಮುಖ್ಯಮಂತ್ರಿಗಳು ಕೂಡ ಸಾಕಷ್ಟು ಸಲ ಬಹಿರಂಗವಾಗಿ ಹೇಳಿದ್ದಾರೆ. ಸರ್ವೋಚ್ಚ ನ್ಯಾಯಾಲಯ ಏನು ತೀರ್ಮಾನ ಮಾಡಿದೆ. ಆ ತೀರ್ಮಾನದ ಪ್ರಕಾರ ರಾಜ್ಯಮಟ್ಟದಲ್ಲಿ ಇದನ್ನು ಜಾರಿಗೆ ತರುತ್ತೇವೆಂದು ಹೇಳಿದ್ದಾರೆ. ಅದು ಯಾವ ಕಾರಣಕ್ಕೋ ಗೊತ್ತಿಲ್ಲ, ನಮ್ಮ ಜನಕ್ಕೆ ವಿವರಣೆ ಸೂಕ್ತವಾಗಿ ಏತಕ್ಕೆ ಗೊತ್ತಾಗುತ್ತಿಲ್ಲ ಎಂದು ನನಗೆ ಅರ್ಥ ಆಗುತ್ತಾ ಇಲ್ಲ. ಬಹಳ ಜನಕ್ಕೆ ಸರ್ಕಾರದ ನಿಲುವು ಅರ್ಥ ಆಗಿಲ್ಲ. ಆದ್ದರಿಂದ ಸರ್ಕಾರದ ನಿಲುವು ಸರ್ವೋಚ್ಚ ನ್ಯಾಯಲಯವು ಎತ್ತಿ ಹಿಡಿದಂತಹ ವಿಷಯವಾಗಿ ಏನಿದೆ ಎಂಬ ಬಗ್ಗೆ ಒಂದು ವಿವರಣೆಯನ್ನು ಎಲ್ಲರ ಮನಸ್ಸೂ ಒಪ್ಪುವಂತಹ ರೀತಿಯಲ್ಲಿ ಕೊಡಬೇಕೆಂದು ನಾನೂ ಕೂಡ ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ): ಮಾನ್ಯ ಅಧ್ಯಕ್ಷರೆ, ಸುಪ್ರೀಂ ಕೋರ್ಟಿನ ಆದೇಶ ಬರುತ್ತಿದ್ದ ಹಾಗೆ ಇದನ್ನು ಮೊದಲನೆಯದಾಗಿ ಜಾರಿಗೆ ತರಬೇಕಾಗಿತ್ತು. ಮಾತೃ ಭಾಷೆಯಲ್ಲಿ ಶಿಕ್ಷಣ ಮಾಧ್ಯಮ ಮಾಡೇ ಮಾಡುತ್ತೇವೆಂದು ಹೇಳಿದ್ದರೂ ಅದನ್ನು ಜಾರಿಗೆ ತರಲಿಲ್ಲ. ಅದಾದ ನಂತರ ಮಾನ್ಯ ಮುಖ್ಯಮಂತ್ರಿಗಳು ಸರ್ಕಾರ ಕೂಡ ಈ ವಿಚಾರದಲ್ಲಿ ಒಪ್ಪಿಗೆ ಕೊಟ್ಟಿದೆ ನಾವು ಜಾರಿ ಮಾಡುತ್ತೇವೆಂದು ಹೇಳಿದ್ದರು. ಆದರೆ ಕೇವಲ ಘೋಷಣೆ ಮಾಡುವುದಕ್ಕೆ ಸರ್ಕಾರ ತುಂಬಾ ಪ್ರವೀಣ [illegible] ಒಂದೊಂದು ಕಡೆ [illegible]

ಒಂದೊಂದು ಘೋಷಣೆ ಮಾಡುತ್ತಾರೆ. ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೂ ಕೂಡ ಒಂದೊಂದು ಮಾದರಿ ಕನ್ನಡ ಶಾಲೆ ಮಾಡುತ್ತೇವೆ ಎಂದು ಸ್ಪಷ್ಟವಾಗಿ ಹೇಳಿದ್ದರು. ಆದರೆ ಅದರ ಸುತ್ತೋಲೆ ಆಗಲಿ ಅಥವಾ ಆರ್ಡರ್ ಆಗಲೀ ಇನ್ನೂ ಕೂಡ ಬಂದಿಲ್ಲ. ಮೊನ್ನೆಯ ದಿವಸ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಹೋಗಿ ಪ್ರತಿ ಗ್ರಾಮ ಪಂಚಾಯತಿಗೆ ಒಂದೊಂದು ಗ್ರಂಥಾಲಯ ಕೊಡುತ್ತೇವೆ ಎಂದು ಹೇಳಿದರು. ಇವರ ಕೈಯಲ್ಲಿ ಆಗುವಂತಹುದನ್ನು ಘೋಷಣೆ ಮಾಡಲಿ. ಕನ್ನಡದ ಬಗ್ಗೆ ಏಕೆ ಇಷ್ಟೊಂದು ತಾತ್ಸಾರವೆಂದು ನಮಗೆ ಅರ್ಥ ಆಗುತ್ತಿಲ್ಲ. ಸನ್ಮಾನ್ಯ ಡಾ|| ಚಿದಾನಂದಮೂರ್ತಿಯವರು ಅನೇಕ ದಿನದ ಮುಂಚೆ ಘೋಷಣೆ ಮಾಡಿದ್ದಾರೆ. 26ನೇ ತಾರೀಖಿನ ಒಳಗಡೆ ಸರ್ಕಾರ ಈ ಕಡೆಗೆ ಗಮನ ಕೊಡಲಿಲ್ಲ ಎಂದರೆ ಮಾತೃ ಭಾಷೆಯಲ್ಲಿ ಕನ್ನಡ ಮಾಧ್ಯಮವನ್ನು ಜಾರಿ ಮಾಡಲಿಲ್ಲ ಎಂದರೆ ನಾನು ಅಮರಣಾಂತ ಉಪವಾಸ ಕೂರುತ್ತೇನೆಂದು ಹೇಳಿದ್ದಾರೆ. ಆದರೆ ಅಮರಣಾಂತ ಉಪವಾಸ ಕೂರುತ್ತೇನೆಂದು ಹೇಳಿದ್ದಾರೆ. ಆದರೆ ಅಮರಣಾಂತ ಉಪವಾಸ ರಾಷ್ಟ್ರದ ಖ್ಯಾತ ವ್ಯಕ್ತಿಗಳು ಕೂರುವಂತಹ ಸ್ಥಿತಿಯನ್ನು ಈ ರಾಜ್ಯ ಸರ್ಕಾರ ಏತಕ್ಕೆ ತರುತ್ತಿದೆ? ಕನ್ನಡದ ಬಗ್ಗೆ ಏಕೆ ಇಷ್ಟೊಂದು ತಾತ್ಸಾರ ಮಾಡುತ್ತಿದ್ದಾರೆ? ಹೋರಾಟ ಆಗಬೇಕು, ಗಲಭೆಗಳು ಆಗಬೇಕು, ದೊಂಬಿಗಳು ಆಗಬೇಕು, ಆಗ ಮಾತ್ರ ಈ ಸರ್ಕಾರ ಕನ್ನಡದ ಬಗ್ಗೆ ಗಮನ ಕೊಡುವುದು ಭಯ ನನಗೆ ಆಗುತ್ತಿದೆ. ಆದ್ದರಿಂದ ನಾನು ಒತ್ತಾಯ ಮಾಡುವುದು ಏನೆಂದರೆ, ಕೇವಲ ಇಲ್ಲಿ ಆಶ್ವಾಸನೆ ಕೊಡುವುದು ಮಾತ್ರವಲ್ಲ, ಆ ದಿಕ್ಕಿನಲ್ಲಿ ಕಾರ್ಯಪ್ರವೃತ್ತರಾಗಬೇಕಾಗುತ್ತದೆ. ಇಲ್ಲಿ ಕೊಟ್ಟಂತಹ ಅನೇಕ ಆಶ್ವಾಸನೆಗಳು, ಆಶ್ವಾಸನೆಗಳಾಗಿಯೇ ಉಳಿದಿವೆ. ಕನ್ನಡದ ಬಗ್ಗೆ ಕನಿಷ್ಟ ಗಮನ ಹರಿಸಲಿ. ಚುನಾವಣಾ ಪ್ರಣಾಳಿಕೆಯಲ್ಲಿ ಏನು ಘೋಷಣೆ ಮಾಡುತ್ತಿದ್ದಾರೆ. ಆ ಘೋಷಣೆಗಳು ವೋಟ್ ತೆಗೆದುಕೊಳ್ಳುವಂಥ ತಂತ್ರಗಳು ಆಗುತ್ತಿವೆಯೇ ವಿನಹ ಬೇರೆ ಏನೂ ಇಲ್ಲ. ಕನ್ನಡವನ್ನು ಈ ತಂತ್ರಕ್ಕೆ ಬಳಸಿಕೊಳ್ಳುವುದು ಬೇಡ. ಡಾ|| ಚಿದಾನಂದ ಮೂರ್ತಿಯವರಂತಹ ವ್ಯಕ್ತಿಗಳ ಪ್ರಾಣ ಈ ರಾಜ್ಯಕ್ಕೆ ತುಂಬಾ ಬೇಕಾಗಿದೆ. ಇಂತಹವರ ಬಗ್ಗೆ ಚೆಲ್ಲಾಟ ಆಡಬೇಕಾದಂತಹ ಅವಶ್ಯಕತೆ ಸರ್ಕಾರಕ್ಕೆ ಇಲ್ಲ. ಇದರ ಬಗ್ಗೆ ತಕ್ಷಣ ಒಂದು ಆರ್ಡರ್ ಹೊರಡಿಸಬೇಕು ಎಂದು ಕೇಳುವುದಕ್ಕೆ ತುಂಬಾ ಸಂಕೋಚ ಆಗುತ್ತದೆ. ನಾಚಿಕೆ ಎನಿಸುತ್ತದೆ. ಏಕೆಂದರೆ ಇದು ಸರ್ಕಾರದ ಕರ್ತವ್ಯ ಕನ್ನಡದ ಬಗ್ಗೆ ಘೋಷಣೆ ಮಾಡಿ, ಆರ್ಡರ್ ಮಾಡಿ ಎಂದು ಕೇಳುವಂತಹ ಸ್ಥಿತಿ ಕರ್ನಾಟಕ ರಾಜ್ಯದಲ್ಲಿ ಕನ್ನಡ ನಾಡಿನಲ್ಲಿ ಬಂದಿರುವುದು ತುಂಬಾ ಶೋಚನೀಯ. ಸರ್ಕಾರ ಈ ದಿಕ್ಕಿನಲ್ಲಿ ತಕ್ಷಣ ಕಾರ್ಯಪ್ರವೃತ್ತರಾಗಬೇಕು. ಒಂದರಿಂದ ನಾಲ್ಕನೇ ತರಗತಿಯವರೆಗೆ ಈಗಾಗಲೇ ಇಂಗ್ಲೀಷ್ ಮಾಧ್ಯಮಿಕ ಶಾಲೆಗಳು ಈ ರಾಜ್ಯದಲ್ಲಿ ರಾಜ್ಯದ ಜನತೆಯ ಹಣವನ್ನು ಏನು ಲೂಟಿ ಮಾಡುತ್ತಿವೆ. ಅದನ್ನು ಕೂಡ ರದ್ದು ಮಾಡುತ್ತೇವೆ ಎಂದು ಹೇಳಿಕೆಯನ್ನು ಇಲ್ಲಿ ಕೊಡಬೇಕು. ಈ ದಿಕ್ಕಿನಲ್ಲಿ ಕಾರ್ಯಪ್ರವೃತ್ತರಾಗುತ್ತೇವೆ ಎಂದು ಈ ಸದನದಲ್ಲಿ ತಿಳಿಸಬೇಕು. ಇಡೀ ರಾಜ್ಯದ ಜನ ಒಂದು ರೀತಿಯಾದ ಆಸಕ್ತಿಯಿಂದ ನೋಡುತ್ತಿದ್ದಾರೆ. ಡಾ:: ಚಿದಾನಂದ ಮೂರ್ತಿಯವರು ಅಮರಣ ಉಪವಾಸ ಏನು ಮಾಡುವುದಕ್ಕೆ ಹೊರಟಿದ್ದಾರೆ, ಅದನ್ನು ಕೂಡಲೇ ನಿಲ್ಲಿಸುವ ದಿಕ್ಕಿನಲ್ಲಿ ತಕ್ಷಣ ಕ್ರಮ ಕೈಗೊಳ್ಳಬೇಕೆಂದು ಈ ಸಂದರ್ಭದಲ್ಲಿ ಏನು ಒತ್ತಾಯ ಮಾಡುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್: ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದವರೂ ಇಲ್ಲ. ನಮ್ಮ ಅಸೆಂಬ್ಲಿಯಲ್ಲಿ ಇಬ್ಬರೇ ಮಂತ್ರಿಗಳು ಇದ್ದಾರೆ. ನಮ್ಮ ಹಣೆಬರಹ. ದಯವಿಟ್ಟು ತಾವು ಇದಕ್ಕೆ ಏನಾದರೂ ಮಾರ್ಗದರ್ಶನ ನೀಡಬೇಕು ಎಂದು ಮನವಿ ಮಾಡುತ್ತಿದ್ದೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯ ಸರ್ಕಾರ ಈ ಹಿಂದೆ ಕನ್ನಡ ಭಾಷೆಯಲ್ಲಿ ಅಥವಾ ತಾಯಿ ನುಡಿಯಲ್ಲಿ ಪ್ರಾಥಮಿಕ ಶಿಕ್ಷಣ ಕೊಡಬೇಕು ಎನ್ನುವ

ವಿಚಾರದಲ್ಲಿ ಒಂದು ನಿರ್ಧಾರವನ್ನು ತೆಗೆದುಕೊಂಡು ಈ ಬಗ್ಗೆ ಕಾರ್ಯಕ್ರಮವನ್ನು ತೆಗೆದುಕೊಳ್ಳುವಂತಹ ಪ್ರಯತ್ನ ನಡೆಸಿದೆ. ಅನಂತರ ಇದು ಸರ್ವೋಚ್ಚ ನ್ಯಾಯಾಲಯದ ಮುಂದೆ ಹೋಗಿ ಕರ್ನಾಟಕ ರಾಜ್ಯದಲ್ಲಿ ಈಗಾಗಲೇ ತೀರ್ಮಾನ ಮಾಡಿರುವ ನೀತಿ ಏನು ಇದೆ, ಅದು ಸರಿಯಾಗಿ ಇದೆ, ಅದನ್ನು ಅನುಸರಿಸಬೇಕು ಎಂದು ಹೇಳಿ ಸರ್ವೋಚ್ಚ ನ್ಯಾಯಾಲಯ ತೀರ್ಪನ್ನು ಕೊಟ್ಟಿತು. ಸರ್ವೋಚ್ಚ ನ್ಯಾಯಾಲಯ ಕೊಟ್ಟಿರತಕ್ಕ ತೀರ್ಪಿನ ಬಗ್ಗೆ ಕರ್ನಾಟಕ ಸರ್ಕಾರವೇನು ತೀರ್ಮಾನ ಮಾಡಿದೆ, ಅಂದರೆ ಪ್ರಾಥಮಿಕ ತರಗತಿಯಿಂದ ಕನ್ನಡ ಒಂದೇ ಅಲ್ಲ. ಅವರವರ ಮಾತೃ ಭಾಷೆಯ ಮುಖಾಂತರವೇ ಶಿಕ್ಷಣ ಆಗಬೇಕು ಎನ್ನುವ ಸಿದ್ಧಾಂತವನ್ನು ರಾಜ್ಯ ಸರ್ಕಾರ ಒಪ್ಪಿದೆ. ಅದನ್ನು ಸರ್ವೋಚ್ಚ ನ್ಯಾಯಾಲಯ ಕೂಡ ಒಪ್ಪಿಕೊಂಡು ಬಂದಿದೆ. ಅದಾದ ನಂತರ ಡಾ: ಚಿದಾನಂದ ಮೂರ್ತಿಯವರು ಸರ್ಕಾರಕ್ಕೆ ಪತ್ರ ಬರೆದು ಇದನ್ನು ಆಚರಣೆಗೆ ತರಬೇಕೆಂದು ಕೇಳಿದರು. ಆ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ತಾರೀಖು 16.03.94ರಂದು ಅವರನ್ನೂ, ಮಾನ್ಯ ಜಿ. ನಾರಾಯಣ್ ಗೊ.ರೂ. ಚನ್ನಬಸಪ್ಪ, ಎಲ್.ಎಸ್. ಶೇಷಗಿರಿರಾವ್ ಅವರನ್ನೂ ಕರೆಸಿ ಮಾತನಾಡಿ, ಸರ್ವೋಚ್ಚ ನ್ಯಾಯಾಲಯದ ತೀರ್ಮಾನವನ್ನು ಜಾರಿಗೊಳಿಸುತ್ತೇವೆ ಎಂದು ಅವರಿಗೆ ಭರವಸೆಯನ್ನು ಕೂಡ ಕೊಟ್ಟರು. ಅನಂತರ ಇದೇ ಅಂಶವನ್ನು ಆಯವ್ಯಯದ 38ನೇ ಖಂಡಿಕೆಯಲ್ಲಿ ಪುನಃ ಸರ್ಕಾರ ಘೋಷಣೆ ಮಾಡಿದೆ. "ಮಕ್ಕಳ ಪ್ರಾಥಮಿಕ ಶಿಕ್ಷಣ ಅವರ ಮಾತೃಭಾಷೆಯ ಮೂಲಕವೇ ನಡೆಯಬೇಕೆಂಬುದು ಎಲ್ಲಾ ಶಿಕ್ಷಣತಜ್ಞರ ಅಭಿಪ್ರಾಯ. ಈ ಅಭಿಪ್ರಾಯವನ್ನು ರಾಜ್ಯ ಸರ್ಕಾರವು ಸಂಪೂರ್ಣವಾಗಿ ಒಪ್ಪುತ್ತದೆ. ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಿಗೆ ಸಂಬಂಧಿಸಿದಂತೆ ಸರ್ಕಾರದ ಭಾಷಾ ನೀತಿಯನ್ನು ಘೋಷಿಸಿ 1989ರಲ್ಲಿ ಸರ್ಕಾರಿ ಆದೇಶ ಒಂದನ್ನು ಹೊರಡಿಸಲಾಗಿತ್ತು. ಈ ಸರ್ಕಾರಿ ಆದೇಶವನ್ನು ಸರ್ವೋಚ್ಚ ನ್ಯಾಯಾಲಯವು ಸ್ಥಾಪಿಸಿರುತ್ತದೆ. ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಜಾರಿಗೆ ತರಲು ರಾಜ್ಯಸರ್ಕಾರವು ಸಂಪೂರ್ಣವಾಗಿ ಬದ್ಧವಾಗಿದೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಇವರ ಉಪದೇಶ ನಮಗೆ ಬೇಕಾಗಿಲ್ಲ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ: ನಾನು ಮುಗಿಸುತ್ತೇನೆ. ನಾನು ಪೂರ್ತಿ ಹೇಳಿದ ಮೇಲೆ ತಾವು ಹೇಳಿ.

ಶ್ರೀ ವಾಟಾಳ್ ನಾಗರಾಜ್: ನಿಮ್ಮ ಉಪದೇಶ ಬೇಕಾಗಿಲ್ಲ. ಸರ್ವೋಚ್ಚ ನ್ಯಾಯಾಲಯದ ತೀರ್ಪು ಯಾವಾಗ ಬಂತು? ಸುತ್ತಿಬಳಸಿ ಮಾತನಾಡುವುದು ಬೇಡ. ತಾವು ಆಯವ್ಯಯ ಭಾಷಣ ಓದಬೇಕಾಗಿಲ್ಲ. ಸರ್ಕಾರಿ ಪತ್ರಗಳನ್ನು ಓದಬೇಕಾಗಿಲ್ಲ. ಸರ್ವೋಚ್ಚ ನ್ಯಾಯಾಲಯದ ತೀರ್ಪು ಸರ್ಕಾರಕ್ಕೆ ಯಾವಾಗ ತಲುಪಿತು? ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ನೇರವಾಗಿ ಒಪ್ಪಿಕೊಳ್ಳುವುದಕ್ಕೆ ಇರತಕ್ಕಂಥಹ ಆತಂಕ ಏನು? ಅಡ್ಡಿ ಏನು? ಅದನ್ನು ಹೇಳಲಿ. ಎಷ್ಟೋ ಸಾರಿ ಸಾಹಿತಿಗಳು, ಕವಿಗಳು ಸರ್ಕಾರಕ್ಕೆ ಹೇಳಿದ್ದಾರೆ. ಇವತ್ತು ಅಂತಿಮವಾಗಿ ಡಾ|| ಚಿದಾನಂದ ಮೂರ್ತಿಯವರು ಅಮರಣ ಉಪವಾಸ ಕೂತಿದ್ದಾರೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ: ನಾನು ಯೀಲ್ಡ್ ಆಗಿಲ್ಲ.

ಶ್ರೀ ವಾಟಾಳ್ ನಾಗರಾಜ್: ನೇರವಾಗಿ ಹೇಳಲಿ. ಈ ರೀತಿ ಸುತ್ತಿ ಬಳಸಿ ಹೇಳುವುದು ಬೇಡ. ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಒಪ್ಪಿದ್ದಾರಾ ಎಂದು ಹೇಳಲಿ.

[illegible] ಹೇಳುತ್ತಾರೆ?

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಈ ಸಭೆಗೆ ನೀತಿ ನಿಯಮಗಳು ಏನಾದರೂ ಇದೆಯಾ ಎಂದು ಕೇಳಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ನೇರವಾಗಿ ಹೇಳಲಿ. ಈ ರೀತಿ ಸುತ್ತಿ ಬಳಸಿ ಹೇಳತಕ್ಕ ನೀತಿ ಸರಿಯಲ್ಲ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ನಾನು ಏನು ಹೇಳುತ್ತಿದ್ದೆ. ಅಂದರೆ ಮುಂಗಡ ಪತ್ರದಲ್ಲೂ ಸಹ ಸರ್ಕಾರ ಪುನಃ ಇದನ್ನು ಘೋಷಣೆ ಮಾಡಿದೆ ಎಂದು. ಅದಾದ ನಂತರ ಇವರನ್ನೂ ಕರೆದು ಮಾತನಾಡಿ ಸಮಾಧಾನ ಮಾಡಿ ಕಳಿಸಿ ಆಯಿತು. ದುರದೃಷ್ಟವಶಾತ್ ಡಾ|| ಚಿದಾನಂದ ಮೂರ್ತಿಯವರು ಉಪವಾಸ ಸತ್ಯಾಗ್ರಹವನ್ನು ಪ್ರಾರಂಭ ಮಾಡಿದ್ದಾರೆ. ಅವರು ಉಪವಾಸ ಸತ್ಯಾಗ್ರಹ ಮಾಡಕೂಡದು. ಅವರಿಗೆ ಇರತಕ್ಕ ಕಳಕಳಿ ಸರ್ಕಾರಕ್ಕೆ ಖಂಡಿತ ಗೊತ್ತಿದೆ. ಆದ್ದರಿಂದ ಈ ದಿವಸ ಮುಂಜಾನೆ ಮಾನ್ಯ ಮುಖ್ಯಮಂತ್ರಿಗಳು ಹಾಗೂ ನನ್ನ ಹಾಜರಿಯಲ್ಲಿ ಕರ್ನಾಟಕದ ಹಿರಿಯ ಸಾಹಿತಿಗಳಾದಂಥ ಡಾ|| ಹಾಮಾ ನಾಯಕ್, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಗೊ.ರೂ. ಚನ್ನಬಸಪ್ಪ, ಕನ್ನಡ ಪ್ರಾಧಿಕಾರದ ಅಧ್ಯಕ್ಷರಾದ ಜಿ. ನಾರಾಯಣ, ಪ್ರೊ: ಎಲ್.ಎಸ್. ಶೇಷಗಿರಿರಾವ್‌ರವರು, ಡಾ|| ನರಸಿಂಹಯ್ಯನವರು ಇಷ್ಟು ಜನ ಸದಸ್ಯರ ಜೊತೆ ಕುಳಿತುಕೊಂಡು ಎಲ್ಲಾ ವಿಷಯಗಳನ್ನು ಕೂಲಂಕುಷವಾಗಿ ಚರ್ಚೆ ಮಾಡಿ ಸರ್ವಸಮ್ಮತವಾದ ಒಂದು ಹೇಳಿಕೆಯನ್ನು ತಯಾರು ಮಾಡಿ ಒಂದು ಪತ್ರವನ್ನು ಕೂಡ ಡಾ|| ಚಿದಾನಂದ ಮೂರ್ತಿಯವರಿಗೆ ಮಾನ್ಯ ಮುಖ್ಯಮಂತ್ರಿಗಳು ಬರೆದಿದ್ದಾರೆ. ಆ ಪತ್ರದ ಒಕ್ಕಣೆ ಹೀಗೆ ಇದೆ:

ಮಾನ್ಯರೆ,

ದಿನಾಂಕ 16.03.94ರಂದು ತಾವು, ಶ್ರೀ ಜಿ ನಾರಾಯಣ, ಗೊ.ರೂ. ಚನ್ನಬಸಪ್ಪ, ಪ್ರೊ: ಎಲ್. ಎಸ್. ಶೇಷಗಿರಿ ರಾವ್ ಅವರುಗಳೊಡನೆ ಭೇಟಿಮಾಡಿದಾಗ ನಮ್ಮ ಸರ್ಕಾರದ ಭಾಷಾ ನೀತಿಯನ್ನು ಸ್ಪಷ್ಟಪಡಿಸಿದ್ದು ಇತ್ತೀಚೆಗೆ ಸರ್ವೋಚ್ಚ ನ್ಯಾಯಾಲಯವು ನೀಡಿದ ತೀರ್ಪಿಗೆ ಬದ್ಧವಾಗಿದೆ ಎಂಬುದನ್ನು ತಿಳಿಸಿದ್ದೇವೆ. ನನ್ನ ಮುಂಗಡ ಪತ್ರದಲ್ಲಿ 38ನೇ ಖಂಡಿಕೆಯಲ್ಲಿ ಸೂಚಿಸಿರುವಂತೆ 1989ರ ಸರ್ಕಾರಿ ಆದೇಶವನ್ನು ಸರ್ವೋಚ್ಚ ನ್ಯಾಯಾಲಯವು ಎತ್ತಿ ಹಿಡಿದಿರುವುದರಿಂದ ಅದನ್ನು ಜಾರಿಗೊಳಿಸಲು ರಾಜ್ಯ ಸರ್ಕಾರ ಸಂಪೂರ್ಣವಾಗಿ ಬದ್ಧವಾಗಿದೆ".

ಆದರೂ ಸಂಪರ್ಕದ ಕೊರತೆಯಿಂದ ತಾವು ಉಪವಾಸ ಸತ್ಯಾಗ್ರಹ ಕುಳಿತುಕೊಂಡಿದ್ದೀರಿ. ಇಂದು ಬೆಳಿಗ್ಗೆ ಡಾ|| ಹಾ.ಮಾ. ನಾಯಕ್, ಡಾ|| ಹೆಚ್. ನರಸಿಂಹಯ್ಯ, ಪ್ರೊ|| ಎಲ್. ಎಸ್. ಶೇಷಗಿರಿರಾವ್, ಜಿ. ನಾರಾಯಣ ಮತ್ತು ಗೊ.ರು. ಚೆನ್ನಬಸಪ್ಪನವರು ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರಾದ ಶ್ರೀ ಹಾರ್ನಳ್ಳಿ ರಾಮಸ್ವಾಮಿಯವರ ಸಮ್ಮುಖದಲ್ಲಿ ನನ್ನನ್ನು ಭೇಟಿ ಮಾಡಿದ್ದರು. ಈ ಸಂದರ್ಭದಲ್ಲಿ ನಾನು ಮತ್ತೆ ಸ್ಪಷ್ಟಪಡಿಸುವುದೇನೆಂದರೆ, ಸರ್ವೋಚ್ಚ ನ್ಯಾಯಾಲಯದ ತೀರ್ಪಿಗನುಗುಣವಾಗಿ ಒಂದರಿಂದ ನಾಲ್ಕನೇ ತರಗತಿವರೆಗಿನ ಪ್ರಾಥಮಿಕ ಹಂತದ ಶಿಕ್ಷಣವನ್ನು ಮಾತೃಭಾಷೆಯಲ್ಲಿ ನಡೆಸಲು ಸರ್ಕಾರ ಬದ್ಧವಾಗುವುದು. 1994-95ರ ಶೈಕ್ಷಣಿಕ ವರ್ಷದಿಂದಲೇ ಇದನ್ನು ಜಾರಿಗೊಳಿಸಲಾಗುವುದು. ಈ ಸಂಬಂಧ ತಕ್ಷಣ ಕ್ರಮ ಕೈಗೊಳ್ಳಲು ಶಿಕ್ಷಣ ಇಲಾಖೆಯಲ್ಲಿ ಪ್ರಕ್ರಿಯೆಯು ಆರಂಭವಾಗಿದೆ. ಆದುದರಿಂದ, ತಾವು ದಯವಿಟ್ಟು ತಮ್ಮ ಉಪವಾಸ ಸತ್ಯಾಗ್ರಹವನ್ನು ನಿಲ್ಲಿಸಬೇಕೆಂದು ಕೋರುತ್ತೇನೆಂದು ಪತ್ರ ಬರೆದಿದ್ದಾರೆ. ಈ ಪತ್ರವನ್ನು ಅವರಿಗೆ ಕಳುಹಿಸಿದ್ದಾರೆ. ಇದಾದ ನಂತರ ಅವರೆಲ್ಲರೂ ಒಮ್ಮತದಿಂದ ತೀರ್ಮಾನ ಮಾಡಿ.....

ಶ್ರೀ ವಾಟಾಳ್ ನಾಗರಾಜ್: ಈ ಕ್ಷಣದಿಂದಲೇ ಜಾರಿಗೊಳಿಸಿದ್ದೇವೆಂದು ಹೇಳಬೇಕು. 'ಶೈಕ್ಷಣಿಕ ವರ್ಷದಿಂದಲೇ ಜಾರಿಗೊಳಿಸಲಾಗುವುದು' ಎಂಬುದು ಸರಿಯಲ್ಲ. ಸರ್ಕಾರದ ನೀತಿ ಸರಿಯಿಲ್ಲ, ಇದು ವಿಳಂಬ ನೀತಿಯಾಗಿದೆ. ಸರ್ಕಾರದ ವಿಳಂಬ ನೀತಿಯನ್ನು ವಿರೋಧಿಸಿ ನಾನು ಧರಣಿ ಮಾಡುತ್ತೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ: ನೀವೊಬ್ಬರೇ ಕನ್ನಡಪ್ರೇಮಿಗಳಲ್ಲ, ಇಲ್ಲಿರತಕ್ಕಂಥ ಎಲ್ಲರೂ ಕನ್ನಡ ಪ್ರೇಮಿಗಳೇ.

ಶ್ರೀ ವಾಟಾಳ್ ನಾಗರಾಜ್: ಈ ಕ್ಷಣದಿಂದ ಜಾರಿಗೊಳಿಸಲು ಒಪ್ಪಿದ್ದೇವೆಂದು ಹೇಳಬೇಕು. ಇಂತಹ ನಾಟಕ ಬೇಕಾಗಿಲ್ಲ, ಇದು ಸರಿಯಲ್ಲ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಸದನದ ಬಾವಿಯೊಳಕ್ಕೆ ಬಂದು ಧರಣಿ ಆರಂಭಿಸಿದರು)

ಶ್ರೀ ಹಾರ್ನಳ್ಳಿ ರಾಮಸ್ವಾಮಿ: ಈಗ ಕೈಗೊಂಡ ತೀರ್ಮಾನವೇನಿದೆ, ಇದನ್ನು ನಿಯೋಗದೊಂದಿಗೆ ಬಂದಂಥ ಎಲ್ಲಾ ಮಹಾನ್ ನಾಯಕರೂ ಡಾ||ಚಿದಾನಂದ ಮೂರ್ತಿಯವರ ಪರವಾಗಿ ಒಪ್ಪಿಕೊಂಡಿದ್ದಾರೆ. ಆದುದರಿಂದ, ಈಗಲಾದರೂ ಡಾ||ಚಿದಾನಂದ ಮೂರ್ತಿಯವರು ತಮ್ಮ ಉಪವಾಸ ಸತ್ಯಾಗ್ರಹವನ್ನು ನಿಲ್ಲಿಸಬೇಕೆಂದು ನಾವು ಈ ಸದನದ ಮುಖಾಂತರ ಅವರನ್ನು ಕೇಳಿಕೊಳ್ಳುತ್ತಿದ್ದೇವೆ.

(ಈ ಸಂದರ್ಭದಲ್ಲಿ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಬಾವಿಯೊಳಗೆ ನಿಂತು ಮಾತನಾಡುತ್ತಿದ್ದರು)

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ತಾವು ಸದನದ ಕಾರ್ಯಕಲಾಪಗಳಿಗೆ ಈ ತರಹ ಅಡ್ಡಿ ಮಾಡುವುದರಿಂದ ಕನ್ನಡದ ಅಭಿಮಾನ ಬೆಳೆಯುವುದಿಲ್ಲ. ಸರ್ಕಾರ ಮಾಡಿರುವ ಒಳ್ಳೆಯ ಕಾರ್ಯವನ್ನು ನೀವು ಒಪ್ಪಿಕೊಳ್ಳದಿದ್ದರೆ ನಾವೇನು ಮಾಡುವುದು? ಈಗಿನ ಸಮಸ್ಯೆಯನ್ನು ಡಾ||ಚಿದಾನಂದ ಮೂರ್ತಿಯವರ ಮನಸ್ಸಿಗೆ ಸಮಾಧಾನಕರವಾಗಿ ಅವರು ಒಪ್ಪುವ ರೀತಿಯಲ್ಲಿ ಪರಿಹರಿಸಿದ್ದರೂ ಶ್ರೀಮಾನ್ ವಾಟಾಳ್ ನಾಗರಾಜ್‌ರವರು ಈ ರೀತಿ ಹೇಳುವುದು ಸರಿಯಲ್ಲ. ಈ ವಿಚಾರದಲ್ಲಿ ಸರ್ಕಾರದ ನಿಲುವು ಸ್ಪಷ್ಟವಾಗಿದೆ. ಈ ಕ್ಷಣದಿಂದ ಇದನ್ನು ಸರ್ಕಾರ ಒಪ್ಪಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಇವೊತ್ತೇ ತಾವು ಅವರ ಜೊತೆ ಮಾತುಕತೆ ನಡೆಸಿ ಒಂದು ಸರ್ಕಾರಿ ಆಜ್ಞೆ ಹೊರಡಿಸಬೇಕು. ಅಲ್ಲಿ ಡಾ|| ಚಿದಾನಂದ ಮೂರ್ತಿಯವರು ಏನು ಆಮರಣಾಂತ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ, ಅದನ್ನು ನಿಲ್ಲಿಸಿದ್ದಾರೆಯೇ? ಅವರು ನಿಮ್ಮ ಮಾತುಕತೆಗೆ ಒಪ್ಪಿಕೊಂಡಿದ್ದಾರೆಯೇ? ಎರಡನೆಯದಾಗಿ, ಪ್ರಮುಖವಾಗಿರತಕ್ಕಂಥಾದ್ದು ಏನೆಂದರೆ, ಅಲ್ಲಿ ಆಮರಣಾಂತ ಉಪವಾಸ ಸತ್ಯಾಗ್ರಹ ಮಾಡುತ್ತಿರುವಂಥ ಡಾ|| ಚಿದಾನಂದ ಮೂರ್ತಿಯವರಿಗೆ ಮಾತ್ರ ಸೀಮಿತವಾದಂಥ ವಿಷಯ ಇದಲ್ಲ. ಇದು ಇಡೀ ಕನ್ನಡ ನಾಡಿನ ಜನರಿಗೆ ಸಂಬಂಧಿಸಿದ ವಿಚಾರವಾದುದರಿಂದ ಇವೊತ್ತು ಸರ್ವೋಚ್ಚ ನ್ಯಾಯಾಲಯದ ತೀರ್ಪು ಬಂದ ನಂತರ 'ಈ ಕ್ಷಣದಿಂದಲೇ ಇದು ಕಾರ್ಯರೂಪಕ್ಕೆ ಬಂದಿದೆ' ಎಂದು ಒಂದು ಸರ್ಕಾರಿ ಆಜ್ಞೆಯನ್ನು ಈಗಾಗಲೇ ಹೊರಡಿಸಬೇಕಾಗಿತ್ತು. ಆದರೆ, ಆ ರೀತಿ ಮಾಡದೆ ಅವರು ಆಮರಣಾಂತ ಉಪವಾಸ ಸತ್ಯಾಗ್ರಹ ಮಾಡುವಂಥ ಪರಿಸ್ಥಿತಿಗೆ ಬರುವವರೆಗೆ ನೀವು ಏನು ಮಾಡುತ್ತಿದ್ದೀರಿ; ಸುಪ್ರೀಂ ಕೋರ್ಟ್ ತೀರ್ಪಿನಂತೆ ಈ ಕ್ಷಣದಿಂದಲೇ ಜಾರಿಗೆ ತರುತ್ತಿದ್ದೇವೆ ಎನ್ನುವಂಥ ಒಂದು ಸರ್ಕಾರಿ ಆಜ್ಞೆ ಹೊರಡಿಸಬೇಕೆಂದು ನಾವು ಒತ್ತಾಯಿಸುತ್ತಿದ್ದೇವೆ. ಮೂರನೆಯದಾಗಿ, ನನ್ನ ಬಹಳ ಪ್ರಮುಖವಾದಂಥ [illegible] ಏನೆಂದರೆ, ತಾವು ಅನೇಕ ಸರ್ಕಾರಿ ಆಜ್ಞೆಗಳನ್ನು

ಹೊರಡಿಸಿದ ನಂತರವೂ ಅದು ಕಾರ್ಯರೂಪಕ್ಕೆ ಬರುವುದಿಲ್ಲ, ಇದನ್ನು ಸಮರ್ಪಕವಾಗಿ ಕಾರ್ಯರೂಪಕ್ಕೆ ತರುವುದಕ್ಕೋಸ್ಕರ ಅಧಿಕಾರಿಗಳು ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ಆಳವಾಗಿ ಅಧ್ಯಯನ ಮಾಡಿರುವಂಥ ಶಿಕ್ಷಣ ಕ್ಷೇತ್ರದಲ್ಲಿ ಆಳವಾಗಿ ಅಧ್ಯಯನ ಮಾಡಿರುವಂಥ ಶಿಕ್ಷಣ ತಜ್ಞರನ್ನೊಳಗೊಂಡಂತೆ ಒಂದು ಸಮಿತಿ ರಚಿಸಿ ಕನ್ನಡವೇ ಎಲ್ಲ ಹಂತದಲ್ಲಿಯೂ ಅನುಷ್ಠಾನಕ್ಕೆ ಬರುವ ರೀತಿಯಲ್ಲಿ ಕಾರ್ಯರೂಪಕ್ಕೆ ತರಬೇಕು. ಇನ್ನು ಮಾನ್ಯ ಸದಸ್ಯರಾದ ಈಶ್ವರಪ್ಪನವರು ಪ್ರಸ್ತಾಪಿಸಿದಂತೆ, ರಾಜ್ಯದಲ್ಲಿ ಈಗಾಗಲೇ ಇಂಗ್ಲೀಷ್ ಮಾಧ್ಯಮ ಶಾಲೆಗಳೇನಿವೆ, ಇವುಗಳಿಗೆ ಪ್ರೋತ್ಸಾಹ ಕೊಡುವುದು ಒಳ್ಳೆಯ ಪ್ರವೃತ್ತಿಯಲ್ಲ, ಕಾನ್ವೆಂಟ್ ಸಂಸ್ಕೃತಿಯನ್ನು ತೊಲಗಿಸಬೇಕು. ಕನ್ನಡ ನಾಡಿನಲ್ಲಿ ಎಲ್ಲರೂ ಕನ್ನಡ ಶಾಲೆಯಲ್ಲೇ ಓದಬೇಕಾಗುತ್ತದೆ. ಕನ್ನಡ ಭಾಷೆಯನ್ನೇ ಕಲಿಯಬೇಕಾಗುತ್ತದೆ. ಇದರ ಕಡೆ ತಾವು ಗಮನ ಕೊಡುತ್ತಿಲ್ಲ. ಇದರ ಬಗ್ಗೆ ತಮ್ಮ ಸರ್ಕಾರಿ ಆಜ್ಞೆಯನ್ನು ಯಾವಾಗ ಹೊರಡಿಸುತ್ತೀರಿ? ಇಂದಿನಿಂದಲೇ ಜಾರಿಗೆ ಬರುವಂತೆ ಹೊರಡಿಸುತ್ತೇವೆ" ಎಂದು ಸ್ಪಷ್ಟವಾಗಿ ತಾವು ಕನ್ನಡ ಶಬ್ದಗಳಲ್ಲಿ ಹೇಳಿದರೆ ಅದಕ್ಕೆ ಸದಸ್ಯರಾದ ವಾಟಾಳ್ ನಾಗರಾಜ್‌ರವರೂ ಒಪ್ಪುತ್ತಾರೆ, ನಾವೂ ಒಪ್ಪುತ್ತೇವೆ. ಇದರಲ್ಲಿ ಬೇರಾವುದೇ ಪ್ರತಿಷ್ಠೆ ಇಲ್ಲ. ಇದರ ಬಗ್ಗೆ ಸರ್ಕಾರಕ್ಕೇನೂ ಆಸಕ್ತಿಯಿಲ್ಲವೆಂದೂ ನಾವು ಹೇಳುತ್ತಿಲ್ಲ. ಇವೊತ್ತು ವಾಟಾಳ್ ನಾಗರಾಜ್ ರವರ ಆಗ್ರಹವೇನೆಂದರೆ, ಸರ್ವೋಚ್ಚ ನ್ಯಾಯಾಲಯದ ತೀರ್ಪು ಯಾವಾಗ ಬಂತು, ಅಲ್ಲಿಂದ ಇಲ್ಲಿಯವರೆಗೆ ಕ್ರಮ ಕೈಗೊಳ್ಳುವುದಕ್ಕೆ ಏತಕ್ಕೆ ವಿಳಂಬ ಮಾಡಿದಿರಿ? ಈ ಬಗ್ಗೆ ಆಮರಣಾಂತ ಉಪವಾಸ ಸತ್ಯಾಗ್ರಹ ಮಾಡುವಂಥ ಪರಿಸ್ಥಿತಿ ಏಕೆ ತಂದಿರಿ? ಇವೊತ್ತು ತಾನಾಗೇ ಸರ್ಕಾರ ಈ ಕ್ರಮ ಕೈಗೊಂಡಿದ್ದಲ್ಲ.

ಅನೇಕ ವರ್ಷಗಳ ಹೋರಾಟದ ಪರಿಶ್ರಮದಿಂದ ಸರ್ಕಾರ ಈ ನಿಲುವಿಗೆ ಬರುತ್ತಿದೆ. ಸರ್ಕಾರ ಸಹಜವಾಗಿಯೇ ಇದನ್ನು ಮಾಡಬೇಕಾಗಿತ್ತು; ಸುಪ್ರಿಂ ಕೋರ್ಟ್ ತೀರ್ಪಿಗೆ ಕಾಯುವ ಅಗತ್ಯ ಸರ್ಕಾರಕ್ಕಿರಲಿಲ್ಲ. ಈಗಲಾದರೂ ಕಾರ್ಯರೂಪಕ್ಕೆ ತರುವುದಕ್ಕೆ ಒಂದು ಸರ್ಕಾರಿ ಆಜ್ಞೆ ಹೊರಡಿಸಿ ಅವರ ಆಮರಣಾಂತ ಉಪವಾಸ ಸತ್ಯಾಗ್ರಹವನ್ನು ನಿಲ್ಲಿಸುವಂಥ ಒಂದ ಪ್ರಯತ್ನ ಮಾಡಬೇಕು. ಇಲ್ಲದಿದ್ದರೆ ಇದರ ಬಗ್ಗೆ ರಾಜ್ಯಾದ್ಯಂತ ಬೆಂಕಿ ಹತ್ತಿಕೊಂಡು, ಜನರು ಬೀದಿಗಿಳಿದು ಹೋರಾಟ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಡಿ. ಇದನ್ನೇ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಕೇಳುತ್ತಿದ್ದಾರೆ. ನಾನೂ ಕೇಳುತ್ತಿದ್ದೇನೆ. ದಯಮಾಡಿ ಈ ಕುರಿತು ಸರ್ಕಾರದ ನಿಲುವನ್ನು ಸ್ಪಷ್ಟಪಡಿಸಿ.

+ಶ್ರೀ ಡಿ. ಹಲಗೇಗೌಡ (ಪಾಂಡವಪುರ): ಮಾನ್ಯ ಅಧ್ಯಕ್ಷರೆ, ಕನ್ನಡ ಬಗೆಗಿನ ಅಭಿಮಾನ ಕೇವಲ ವಿರೋಧ ಪಕ್ಷದವರಿಗೆ ಮಾತ್ರ ಸೀಮಿತವಲ್ಲ, ಅದು ಅವರ ಸ್ವತ್ತೂ ಅಲ್ಲ, ಆಡಳಿತ ಪಕ್ಷದಲ್ಲೂ ಕೂಡ ಕನ್ನಡದ ಬಗ್ಗೆ ಅಭಿಮಾನವಿಟ್ಟುಕೊಂಡವರಿದ್ದಾರೆ. ಆದರೆ, ಡಾ|| ಚಿದಾನಂದ ಮೂರ್ತಿಯವರಿಗೆ ಸರ್ಕಾರದಲ್ಲಿ ನಂಬಿಕೆಯಿಲ್ಲದೆ ಆಮರಣಾಂತ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆಂದು ಇದರ ಅರ್ಥವಲ್ಲ. ಇಲ್ಲಿ ಕೆಲವು ವಿಚಾರಗಳಿವೆ. ಏನೆಂದರೆ, ಇಂಗ್ಲೀಷ್ ಮಾಧ್ಯಮ ಶಾಲೆಗಳವರು ಮಾರ್ಚ್-ಏಪ್ರಿಲ್ ತಿಂಗಳಿನಲ್ಲೇ ಪ್ರವೇಶಾವಕಾಶವನ್ನು ಮುಗಿಸಿ ಏಪ್ರಿಲ್ ತಿಂಗಳಿನಲ್ಲೇ ತರಗತಿಯನ್ನು ಪ್ರಾರಂಭಿಸುತ್ತಾರಾದ್ದರಿಂದ ಸರ್ಕಾರಿ ಆಜ್ಞೆ ಆಗುವ ಮೊದಲೇ ಅವರು ತರಗತಿಗಳನ್ನು ಪ್ರಾರಂಭಿಸಿ ವರ್ಷದ ಮಧ್ಯದಲ್ಲಿ ಕನ್ನಡ ಮಾಧ್ಯಮದಲ್ಲಿ ಪ್ರಾರಂಭಿಸುವುದಕ್ಕಾಗುವುದಿಲ್ಲವೆನ್ನುವ ಸಬೂಬು ಹೇಳುತ್ತಿದ್ದಾರೆ. ಆ ದೃಷ್ಟಿಯಿಂದ ಏಪ್ರಿಲ್ ತಿಂಗಳ ಮೊದಲ ವಾರದಲ್ಲಿ ಪ್ರವೇಶಾವಕಾಶವನ್ನು ಪ್ರಕಟಿಸಿ ಮುಂದೆ ಯಾವುದೇ ಇಂಗ್ಲೀಷ್ ಮಾಧ್ಯಮ ಶಾಲೆಯಲ್ಲಿ ಒಂದರಿಂದ ನಾಲ್ಕನೇ ತರಗತಿವರೆಗೆ ಇಂಗ್ಲೀಷ್ ತರಗತಿಗಳನ್ನು ಪ್ರಾರಂಭ ಮಾಡದ ಹಾಗೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕೆನ್ನುವುದರ ಬಗ್ಗೆ ಮಾತ್ರ ಅವರ ಕಾಳಜಿ ಇದೆಯೇ ಹೊರತು ಮತ್ತೇನೂ ಅಲ್ಲ. ಆದುದರಿಂದ, ಈ ವಿಚಾರದ ಬಗ್ಗೆ ಇಲ್ಲಿ

ನಾವು ಏನು ಚರ್ಚಿಸಿದ್ದೇವೆ, ಮತ್ತು ಸರ್ಕಾರ ಏನು ಕ್ರಮ ಕೈಗೊಂಡಿದೆ, ಇದನ್ನು ಡಾ: ಚಿದಾನಂದ ಮೂರ್ತಿಯವರಿಗೆ ತಿಳಿಸಬೇಕು. ಈ ವಿಷಯ ತಿಳಿಸಿದರೆ ಅವರು ಇದಕ್ಕೆ ಒಪ್ಪುತ್ತಾರೆಂದು ನಾನೂ ಕೂಡ ಭಾವಿಸುತ್ತೇನೆ. ವಿಷಯವನ್ನು ಡಾ|| ಚಿದಾನಂದ ಮೂರ್ತಿಯವರಿಗೆ ತಿಳಿಸಲು ಸಚಿವರ ಜೊತೆ ನಾನೂ ಕೂಡ ತೆರಳಿ ಸರ್ಕಾರದ ಕಾರ್ಯಕ್ರಮವೇನಿದೆ, ಅದನ್ನು ಜಾರಿಗೆ ಕೊಟ್ಟೇ ಕೊಡುತ್ತೇವೆಂದು ತಿಳಿಸೋಣ. ಇದಕ್ಕೆ ಅವರೂ ಕೂಡ ಒಪ್ಪುತ್ತಾರೆನ್ನುವುದರಲ್ಲಿ ನನಗೆ ಅನುಮಾನವಿಲ್ಲ. ಆದುದರಿಂದ, ನಮ್ಮ ರಾಜ್ಯದಲ್ಲಿ ಆಂಗ್ಲ ಮಾಧ್ಯಮ ಶಾಲೆಗಳೇನಿವೆ, ಅವುಗಳು ಆತುರಾತುರವಾಗಿ ತರಗತಿಗಳನ್ನು ಪ್ರಾರಂಭಿಸುವುದಕ್ಕೆ ಅವಕಾಶ ಕೊಡಬಾರದು, ಆ ದಿಕ್ಕಿನಲ್ಲಿ ಸರ್ಕಾರ ಶೀಘ್ರ ಕಾರ್ಯ ಪ್ರವೃತ್ತವಾಗಬೇಕೆಂದು ಸರ್ಕಾರದಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಮಾನ್ಯ ವಾಟಾಳ್ ನಾಗರಾಜ್‌ರವರು ಈಗಲಾದರೂ ತಮ್ಮ ಸ್ಥಾನಕ್ಕೆ ಬಂದು ಕುಳಿತುಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್ : ನಾನು ನನ್ನ ಸ್ಥಾನಕ್ಕೆ ಹೋಗುವುದಿಲ್ಲ; ನೀವು ಏನು ಹೇಳುತ್ತೀರೋ ಹೇಳಿ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಸರ್ಕಾರಕ್ಕೆ ಸರ್ವೋಚ್ಚ ನ್ಯಾಯಾಲಯದ ತೀರ್ಪು ಯಾವತ್ತು ತಲುಪಿದೆ? ಎಂದು ಕೇಳಿದ್ದೀರಿ. ಸರ್ವೋಚ್ಚ ನ್ಯಾಯಲಯ ತನ್ನ ತೀರ್ಪನ್ನು ಸರ್ಕಾರಕ್ಕೆ ದಿನಾಂಕ 13.1.94ರಂದು ಸಲ್ಲಿಸಿದ್ದು, ಇದರ ತೀರ್ಮಾನವಾಗಿರುವುದು ದಿನಾಂಕ 8.12.93ರಲ್ಲಿ. ತೀರ್ಪು ಬಂದ ನಂತರ ಸರ್ಕಾರ ಆಯವ್ಯಯ ಪತ್ರವನ್ನು ಮಂಡನೆ ಮಾಡುವುದಕ್ಕಿಂತ ಮುಂಚಿತವಾಗಿ ತೀರ್ಮಾನಮಾಡಿದ್ದು, ಡಾ||ಚಿದಾನಂದ ಮೂರ್ತಿಯವರ ಪತ್ರ ಸರ್ಕಾರಕ್ಕೆ ಮುಟ್ಟಿದ ನಂತರ ಅವರನ್ನು ಕರೆಸಿ ಸುಪ್ರೀಂ ಕೋರ್ಟ್ ತೀರ್ಪಿಗನುಗುಣವಾಗಿ ಜಾರಿಗೆ ಕೊಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಈ ವಿಷಯವನ್ನು ಆಯವ್ಯಯ ಪತ್ರದಲ್ಲೂ ಸೇರಿಸಿದ್ದೇವೆ. ಇವೊತ್ತು ಕೂಡ ಪತ್ರ ಬರೆದ್ದಿದ್ದಾರೆ. ನಮ್ಮ ಹತ್ತಿರ 4-5 ಜನ ಮಹಾನ್ ನಾಯಕರು ಬಂದು ಮಾತನಾಡಿದನಂತರ, ಅವರ ಒಪ್ಪಿಗೆ ಮೇರೆಗೆ ಈ ಪತ್ರ ಕಳುಹಿಸಿ ಕೊಟ್ಟಿದ್ದೇವೆ. ಡಾ|| ಚಿದಾನಂದ ಮೂರ್ತಿಯವರು ತಮ್ಮ ಅಮರಣಾಂತ ಉಪವಾಸ ಸತ್ಯಾಗ್ರಹ ನಿಲ್ಲಿಸಿದ್ದಾರೋ? ಇಲ್ಲವೋ? ಎಂಬುದನ್ನು ತಿಳಿದುಕೊಳ್ಳಲು ಈಗಾಗಲೇ ಹೇಳಿ ಕಳುಹಿಸಿದ್ದೇವೆ. ವಿಷಯ ಗೊತ್ತಾದ ನಂತರ ನಾನು ತಮಗೆ ತಿಳಿಸುತ್ತೇನೆ.

ಶ್ರೀ ಡಿ. ಹಲಗೇಗೌಡ : ಸರ್ಕಾರ ಇಂತಹ ತೀರ್ಮಾನ ತೆಗೆದುಕೊಂಡಿದೆ, ಆದ್ದರಿಂದ, ತಾವು ಉಪವಾಸ ಸತ್ಯಾಗ್ರಹ ನಿಲ್ಲಿಸಬೇಕೆಂದು ತಾವು ಹೇಳಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರು ಅಮರಣಾಂತ ಉಪವಾಸ ಸತ್ಯಾಗ್ರಹ ಮಾಡುತ್ತಿರುವ ಸ್ಥಳಕ್ಕೆ ತಾವು ಹೋಗಿ ಸದನದ ಅಭಿಪ್ರಾಯವನ್ನೂ ತಿಳಿಸಿ, ಇದು ಇಡೀ ಕನ್ನಡ ನಾಡಿನ ಜನರ ಅಪೇಕ್ಷೆಯಾಗಿರುವುದರಿಂದ ಸರ್ಕಾರಿ ಆಜ್ಞೆ ಹೊರಡಿಸುತ್ತಿದ್ದೇವೆ, ಇನ್ನು ತಾವು ಅಮರಣಾಂತ ಉಪವಾಸ ಸತ್ಯಾಗ್ರಹ ಮಾಡುವ ಅಗತ್ಯವಿಲ್ಲವೆಂದು ಅವರ ಮನವೊಲಿಸುವ ಪ್ರಯತ್ನ ಮಾಡಬೇಕು.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಈಗ ಹೇಳಿ ಕಳುಹಿಸಿದ್ದೇವೆ, ಅವರು ಇನ್ನೂ ತಮ್ಮ ಉಪವಾಸ ಸತ್ಯಾಗ್ರಹ ನಿಲ್ಲಿಸದೆ ಇದ್ದರೆ ನಾನೇ ಅವರನ್ನು ಭೇಟಿ ಮಾಡಿ ವಿಷಯ ತಿಳಿಸುತ್ತೇನೆ.

SRI QAMARUL ISLAM : I have given call attention notice regarding the acute situation of drinking water in Gulbarga city. There is 42 degree celsius temperature and there is a population of 4 lakh. I have given the

notice on 19th. So far it has not come. Kindly assume me, Sir, that tomorrow or day after tomorrow your goodself will take it up.

MR. SPEAKER : I will take it up.

ಅಧ್ಯಕ್ಷರು : ಈಗ ಸದನ ಮುಂದುವರೆದು ಮತ್ತೆ ಮಧ್ಯಾಹ್ನ 2.30 ಗಂಟೆಗೆ ಸೇರುವುದು.

(ಸದನವು 1 ಗಂಟೆ 34 ನಿಮಿಷಕ್ಕೆ ಮುಂದೂಡಲಾಯಿತು)

(ಸಭೆಯು ಮಧ್ಯಾಹ್ನ 3-20ಕ್ಕೆ (ಮತ್ತೆ ಪ್ರಾರಂಭವಾಯಿತು) (ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಅಧ್ಯಕ್ಷರು : ಈಗ ವಿತ್ತೀಯ ಕಾರ್ಯಕಲಾಪ 1994-95ನೇ ಆಯವ್ಯಯದ ಮೇಲಿನ ಚರ್ಚೆ.

ವಿತ್ತೀಯ ಕಾರ್ಯಕಲಾಪಗಳು

+ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಅಧ್ಯಕ್ಷರೇ, 1994-95ನೇ ಸಾಲಿನ ಈ ಆಯವ್ಯಯ ಪತ್ರದ ಮೇಲಿನ ಚರ್ಚೆಯನ್ನು ತುಂಬ ದುಃಖದಿಂದ ನಾನು ಪ್ರಾರಂಭಮಾಡುತ್ತಿದ್ದೇನೆ. ಬಹುಶಃ ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಇಂಥ ಪರಿಸ್ಥಿತಿ ಬಂದಿರಲಿಲ್ಲ. ಅಧಿಕೃತವಾಗಿ ಬಜೆಟ್ಟು ಮಂಡನೆ ಮಾಡಿದಮೇಲೆ ಪ್ರಮುಖವಾಗಿ ವಿರೋಧ ಪಕ್ಷದ ನಾಯಕರು ಭಾಷಣವನ್ನು ಪ್ರಾರಂಭ ಮಾಡಬೇಕಾಗಿತ್ತು. ಆ ಕೆಲಸವನ್ನು ಮಾಡುವುದಕ್ಕೆ ವಿರೋಧಪಕ್ಷದ ನಾಯಕರಾಗಲಿ,ಅವರ ಸದಸ್ಯರಾಗಲಿ ಇಲ್ಲಿ ಇಲ್ಲ. ಬಹುಶಃ ನಾನಾದರೂ ಅಂದುಕೊಂಡಿದ್ದೇನೆ. ಆ ಕಡೆ ಟ್ರೆಜರಿ ಬೆಂಚ್ನಲ್ಲಿ ಕುಳಿತುಕೊಂಡಿರುವ ನಮ್ಮ ಸ್ನೇಹಿತರು ಸಹ ಸ್ವಲ್ಪ ಸಂಯಮದಿಂದ ನಡೆದುಕೊಂಡು ಗ್ರಾಮಪಂಚಾಯಿತಿ ಅಧ್ಯಕ್ಷರ ಚುನಾವಣೆ ಸಂದರ್ಭದಲ್ಲಿ ಆದ [illegible] ಗಲಭೆ ಬಗ್ಗೆ ಅವರ ಒಂದು ಬೇಡಿಕೆ ಏನು ಇತ್ತು ಅದರ ಬಗ್ಗೆ ನ್ಯಾಯಾ[illegible] [illegible]ನಿಖೆ ಆಗಬೇಕು ಎಂದು ಹೇಳಿ ಒಂದು ರೀತಿಯ ಕಪಿಮುಷ್ಠಿ ಮಾಡಿ, ಇದು ಆಗಲೇ ಬೇಕು ಎಂದು ಒತ್ತಾಯ ಮಾಡಿದಾಗ ತಾವಾದರು ಸ್ವಲ್ಪ ತಗ್ಗಿನಡೆದು ವಿರೋಧ ಪಕ್ಷದ ಮುಖಂಡರ ಮಾತಿಗೆ ಮನ್ನಣೆಯನ್ನು ಕೊಟ್ಟು ನ್ಯಾಯಂಗ ತನಿಖೆಗೆ ಅವಕಾಶ ಮಾಡಿಕೊಟ್ಟಿದ್ದರೆ ಅವರು ಸಹ ಈ ಕಲಾಪದಲ್ಲಿ ಭಾಗವಹಿಸುತ್ತಿದ್ದರು ಎಂದು ಕಾಣುತ್ತದೆ. ಇದರಲ್ಲಿ ಆಡಳಿತ ಪಕ್ಷದವರು ತಪ್ಪು ಮಾಡಿದ್ದಾರೆಂದು ಹೇಳುವುದಕ್ಕಿಂತ ಹೆಚ್ಚಾಗಿ ಈ ಪ್ರಜಾ ತಂತ್ರದ ವ್ಯವಸ್ಥೆಯಲ್ಲಿ ಆಡಳಿತ ಪಕ್ಷಕ್ಕಿಂತ ದೊಡ್ಡ ಜವಾಬ್ದಾರಿ ವಿರೋಧ ಪಕ್ಷದಲ್ಲಿ ಇದೆ. ಆಡಳಿತ ಪಕ್ಷದಲ್ಲಿ ಯಾರೂ ಬೇಕಾದರೂ ಇರಬಹುದು. ಆದರೆ ವಿರೋಧ ಪಕ್ಷದಲ್ಲಿ ಇದ್ದುಕೊಂಡು ಸರ್ಕಾರ ತಪ್ಪುದಾರಿಗೆ ಹೋಗುವಂತೆ ನೋಡಿಕೊಳ್ಳಬೇಕಾಗುತ್ತದೆ. ಇಂತಹ ಪ್ರಮುಖವಾದಂತಹ ಬಜೆಟ್ ಮಂಡನೆ, ಮಾಡುವಂತಹ ಸಂದರ್ಭದಲ್ಲಿ ಕಳೆದ ಒಂದು ವರ್ಷದಲ್ಲಿ ಪ್ರಗತಿ ಏನಾಗಿದೆ. ಮುಂದೆ ಏನು ಆಗಬೇಕಾಗಿದೆ ಎಂಬುದರ ಬಗ್ಗೆ ಬೆಳಕು ಚೆಲ್ಲಬೇಕಾದಂತಹ ವಿರೋಧ ಪಕ್ಷದ ನಾಯಕರು ತಮ್ಮ ಕರ್ತವ್ಯವನ್ನು ನಿರ್ವಹಿಸದೆ ಒಂದು ರೀತಿ ಪಲಾಯನವಾದ ಮಾಡಿದ್ದಾರೆ ಎಂದು ಅತ್ಯಂತ ದುಃಖದಿಂದ ನಾನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಬಹುಶಃ ಕರ್ನಾಟಕದ ಇತಿಹಾಸದಲ್ಲಿಯೂ ಸಹ ನನ್ನ ಅನುಭವದಲ್ಲಿ ವಿರೋಧ ಪಕ್ಷದ ನಾಯಕರು ಈ ಬಜೆಟ್ಟಿನ ಬಗ್ಗೆ ಭಾಷಣ ಪ್ರಾರಂಭ ಮಾಡುವುದರ ಬದಲಾಗಿ

ವಿರೋಧ ಪಕ್ಷದಲ್ಲಿ ಇರುವಂತ ನಾನು ಪ್ರಾರಂಭ ಮಾಡುವಂತಹ ಪರಿಸ್ಥಿತಿ ಒದಗಿ ಬಂದಿದೆ.

ಶ್ರೀ ಎಸ್ ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು) : ಮಾನ್ಯ ಯಡಿಯೂರಪ್ಪನವರಿಗೆ ಜ್ಞಾಪಕ ಇರಬಹುದು, ಎರಡು ವರ್ಷಗಳ ಕೆಳಗೆ ವಿರೋಧ ಪಕ್ಷದ ಸದಸ್ಯರೆಲ್ಲರೂ ಸಾರಾಸಗಟು ಬಡ್ಜೆಟ್ಟ್ ಅಧಿವೇಶನವನ್ನು ದೂರ ಮಾಡಿ ಶ್ರೀಮಾನ್ ಹನುಮಂತಯ್ಯನವರ ವಿಗ್ರಹದ ಕೆಳಗೆ ಕೂತಿದ್ದರು. ಆಗ ನಾನು ಅಲ್ಲಿಕೂತಿದ್ದೆ. ಕೊನೆಗೆ ಶ್ರೀಮಾನ್ ಇದಿನಬ್ಬನವರು ಬಡ್ಜೆಟ್ ಬಗ್ಗೆ ಚರ್ಚೆಯನ್ನು ಪ್ರಾರಂಭ ಮಾಡಿದರು.

ಶ್ರೀ ಬಿ.ಎಸ್. ಯಡಿಯೂರಪ್ಪ : ಅದು ಸಹ ಸರಿಯಲ್ಲ; ಇವತ್ತಾದ ಘಟನೆ ಸಹ ಸರಿಯಲ್ಲ. ಆಡಳಿತ ಪಕ್ಷದಲ್ಲಿ ಅಜೀರ್ಣವಾಗುವಷ್ಟು ಬಹುಮತ ತಮಗೆ ಸಿಕ್ಕಿದೆ ಎಂದು ಹೇಳಿ ಯಾವ ರೀತಿಯಿಂದ ನೀವು ನಡೆದುಕೊಳ್ಳಬೇಕು ಆ ರೀತಿ ನೀವು ನಡೆದುಕೊಳ್ಳದಿದ್ದರೆ ಅದರ ಪರಿಣಾಮ ಆ ಬಡ್ಜೆಟ್ ಅಧಿವೇಶನದಲ್ಲಿ ಮೇಲೆ ಆಗುತ್ತದೆ. ಅಧಿಕೃತ ವಿರೋಧಪಕ್ಷದ ನಾಯಕರು ಮಾತನಾಡಲಿಲ್ಲ. ಇಂತಹ ಒಂದು ವಿಚಿತ್ರವಾದಂತಹ ಉಸಿರು ಕಟ್ಟುವಂತಹ ಒಂದು ಪರಿಸ್ಥಿತಿಯಲ್ಲಿ ಅನಿವಾರ್ಯವಾಗಿ ನನ್ನ ಕರ್ತವ್ಯವನ್ನು ನಿರ್ವಹಿಸುವ ದೃಷ್ಟಿಯಿಂದ ನಾನು ಈ ಬಡ್ಜೆಟ್ಟಿನ ಬಗ್ಗೆ ನನ್ನ ಮಾತನ್ನು ಪ್ರಾರಂಭ ಮಾಡುತ್ತಿದ್ದೇನೆ. ಬಹುಶಃ ವೀರಪ್ಪಮೊಯಿಲಿ ಅವರು ಮಂಡಿಸುವ ಕಾಂಗ್ರೆಸ್ ಸರ್ಕಾರದ ಐದನೇ ಹಾಗೂ ಈ ಅಧಿಕಾರ ಅವಧಿಯ ಕೊನೆಯ ಮುಂಗಡ ಪತ್ರ ಇದು. ಚುನಾವಣೆ ಇನ್ನು 4-5 ತಿಂಗಳಲ್ಲಿ ನಿಶ್ಚಿತವಾದ ದಿನಾಂಕದಲ್ಲಿ ನಡೆಯಬೇಕಾಗಿದೆ ಅಥವಾ ಇವತ್ತಿನ ರಾಜಕೀಯ ಅಸ್ಥಿರತೆ ವಾತಾವರಣ ನೋಡಿದಾಗ ಬಹುಶಃ ಈ ಮಂತ್ರಿಮಂಡಲದ ವಿಸ್ತರಣೆ ಮಾಡುವುದಕ್ಕೆ ಆಗದಂತಹ ವಿಚಿತ್ರವಾದ ಪರಿಸ್ಥಿತಿಯಲ್ಲಿ ಸಿಕ್ಕಿಕೊಂಡು ಒಂದೆರಡು ತಿಂಗಳಲ್ಲಿ ವಿಧಾನಸಭಾ ಚುನಾವಣೆ ನಡೆದರೂ ಸಹ ಆಶ್ಚರ್ಯ ಆಗದೆ ಇರುವಂತಹ ವಿಚಿತ್ರವವಾದ ಸಂದರ್ಭದಲ್ಲಿ ನಾನು ಮಾತನಾಡುತ್ತಿದ್ದೇನೆ. ಬಹುಶಃ ಇವತ್ತು ರಾಜ್ಯದ ಪರಿಸ್ಥಿತಿಯನ್ನು ನೋಡಿದರೂ ಸಹ ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಮುಂದೆ ಬಡ್ಜೆಟ್ಟಿನ ಮಂಡನೆ ಮಾಡುವಂತಹ ಅವಕಾಶ ನಿಮಗೆ ಸಿಗುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ಈ ನಾಡಿನ ಜನ ನಿಮ್ಮನ್ನು ಕ್ಷಮಿಸುವುದಿಲ್ಲ. ಒಂದು ರೀತಿ ವಚನಭ್ರಷ್ಟ ಸರ್ಕಾರ ಇದು. ಏನು ಭರವಸೆಗಳನ್ನು ಚುನಾವಣೆ ಸಂದರ್ಭದಲ್ಲಿ ಕೊಟ್ಟಿದ್ದಿರಿ ಹಾಗೂ ತಮ್ಮ ಚುನಾವಣೆ ಪ್ರಣಾಳಿಕೆಯಲ್ಲಿ ಹೇಳಿದ್ದಿರಿ ಅದು ಯಾವುದನ್ನು ಈಡೇರಿಸದೆ ಕೇವಲ ಕುರ್ಚಿಗೋಸ್ಕರ, ಸ್ಥಾನಮಾನಕ್ಕೋಸ್ಕರ ಬಡಿದಾಡತ್ತಾ ಜನಹಿತವನ್ನು ಸಂಪೂರ್ಣವಾಗಿ ಮರೆತಿರುವ ಸರ್ಕಾರ ಇದು. ಈಗ ಉಪಮುಖ್ಯ ಮಂತ್ರಿಗಳು ಇಲ್ಲಿದ್ದಾರೆ. ಈ ಬಜೆಟ್ ಮೇಲೆ ಜನತಾ ಪಕ್ಷದ ಶಾಸಕರಿಗೆ ಎಷ್ಟು ಆಸಕ್ತಿ ಇದೆ ವಿರೋಧ ಪಕ್ಷದ ಶಾಸಕರಿಗೆ ಎಷ್ಟು ಆಸಕ್ತಿ ಇದೆ ಎಂಬುದನ್ನು ನಾನು ವರ್ಣನೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ..

ಶ್ರೀ ಎ. ನಾಗರಾಜ್ : ನಿಮ್ಮ ಪಕ್ಷದವರು ಕೇವಲ ನಾಲ್ಕು ಜನ ಇದ್ದಾರೆ. ನೀವು ಮೊದಲು ತಿಳಿದು ಮಾತನಾಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಆದರೆ, ಕೊನೆಯ ಪಕ್ಷ ಆ ಮುಂದಿನ ಕುರ್ಚಿಯಲ್ಲಿ ಏನು ಪ್ರಮುಖ ಅಧಿಕಾರಿಗಳು ಕುಳಿತುಕೊಳ್ಳಬೇಕಾಗಿತ್ತು. ಪ್ರಮುಖ ಅಧಿಕಾರಿಗಳು ಇರಬೇಕು ಎಂದು ತಾವು ಏನು ನಿರೀಕ್ಷೆ ಮಾಡಿದ್ದಿರಿ, ಆ ಅಧಿಕಾರಿಗಳು ಸಹ ಇಲ್ಲಿ ಕುಳಿತಿಲ್ಲ, ಯಡಿಯೂರಪ್ಪನವರೇ, ಇಲ್ಲಿ ನಾವು ನಾಲ್ಕು ಜನರಲ್ಲಿ ಇಬ್ಬರು ಇದ್ದಿರಿ, ಎಲ್ಲಿ ಹೋದರು ಇನ್ನಿಬ್ಬರು ಅಂತ ಅವರು ಕೇಳಿದರು. ತಮಗೆ ಗೊತ್ತಿದೆ, ಸನ್ಮಾನ್ಯ ಅಧ್ಯಕ್ಷರೇ, ವಿರೋಧ ಪಕ್ಷದವರಿಗೂ ಗೊತ್ತಿದೆ, ಆ ಕಡೆ ಕುಳಿತಿರುವವರಿಗೆ ಗೊತ್ತಿದೆ. ಕೊನೆಯ ಪಕ್ಷ ವಿರೋಧ ಪಕ್ಷದಲ್ಲಿ ಕುಳಿತಿರುವ ನಾವು ಇಷ್ಟು ಕಡಿಮೆ ಸಂಖ್ಯೆಯಲ್ಲಿದ್ದರೂ ಸಹ ಬೇರೆಲ್ಲ ಕೆಲಸಗಳನ್ನು ಬದಿಗೊತ್ತಿ ಸದನದ

ಕಾರ್ಯಕಲಾಪ ನಡೆಯಬೇಕಾದರೆ ಒಂದು ನಿಮಿಷ ಆ ಕಡೆ ಈ ಕಡೆ ಹೋಗದೆ ನಾವು ಕುಳಿತುಕೊಳ್ಳುತ್ತಿದ್ದೇವು. ಅನಿವಾರ್ಯ ಕಾರಣದಿಂದ ಒಬ್ಬಿಬ್ಬರು ಹೊರಗಡೆ ಹೋಗಬಹುದು. ತಮ್ಮ ಬಗ್ಗೆ ನಾನು ಆರೋಪ ಮಾಡುತ್ತಿಲ್ಲ.ಜವರೆ ಏತಕ್ಕೆ ಬರುಬರುತ್ತಾ ಜನರು ಆಯ್ಕೆ ಮಾಡಿ ಕಳುಹಿಸಿರತಕ್ಕ ನಾವು ನಮ್ಮ ಸ್ವಾರ್ಥಕ್ಕೋಸ್ಕರ ನಮ್ಮ ಸಂಪೂರ್ಣ ಕರ್ತವ್ಯವನ್ನು ನಿರ್ಲಕ್ಷ್ಯ ಮಾಡುತ್ತಿದ್ದೇವೆಂಬ ಭಾವನೆ ಈ ರಾಜ್ಯದ ಜನತೆಯಲ್ಲಿ ಮೂಡಿರುವುದರಿಂದ ಈ ವಿಷಯವನ್ನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ. ನಾನು ಉಪಮುಖ್ಯಮಂತ್ರಿಯವರಿಗೆ ಮನವರಿಕೆ ಮಾಡಿಕೊಡುತ್ತೇನೆ. 1989ರಲ್ಲಿ ಕರ್ನಾಟಕ ರಾಜ್ಯ ವಿಧಾನಸಭೆಯ ಚುನಾವಣೆ ನಡೆದ ಸಂದರ್ಭದಲ್ಲಿ ನಿಮ್ಮ ಚುನಾವಣೆ ಪ್ರಣಾಳಿಕೆಯಲ್ಲಿ ರಾಜ್ಯದ ಜನತೆಗೆ ಏನು ಭರವಸೆ ಕೊಟ್ಟಿದ್ದಿರಿ. ಏನು ಸಾಧನೆ ಮಾಡಿದ್ದೀರಿ, ಎಂಬುದನ್ನು ತಿಳಿಸಬೇಕು. ಏಕೆಂದರೆ ಇನ್ನೊಂದು ಬಡ್ಜೆಟ್ ಮಂಡನೆ ಮಾಡುವ ಪರಿಸ್ಥಿತಿ ಇಲ್ಲ, ಇನ್ನು 2-3 ಚುನಾವಣೆಗಳು ಆಗತಕ್ಕ ಸಂದರ್ಭದಲ್ಲಿ ಕನಿಷ್ಠ ಪಕ್ಷ ಚುನಾವಣೆ ಪ್ರಣಾಳಿಕೆಯಲ್ಲಿ ಏನು ಭರವಸೆ ಕೊಟ್ಟಿದ್ದಿರಿ, ಅದರಲ್ಲಿ ತಾವು ಏನು ಸಾಧನೆ ಮಾಡಿದ್ದೀರಿ ಎಂಬ ಬಗ್ಗೆ ಅಂಕಿ ಅಂಶಗಳನ್ನು, ಈ ಬಡ್ಜೆಟ್ನಲ್ಲಿ ಕೊಡುತ್ತೀರಿ ಎಂದು ನಾನು ತಿಳಿದುಕೊಂಡಿದ್ದೆ.

ಆದರೆ ಅದನ್ನು ನೀವು ಇದುವರೆಗೂ ಕೊಟ್ಟಿಲ್ಲ. ನೀವು ಈ ರಾಜ್ಯದ ಜನರ ಮುಂದೆ ನಾಲ್ಕು ಮುಂಗಡ ಪತ್ರಗಳನ್ನು ಮಂಡಿಸಿದ್ದೀರಿ. ಆದ್ಯತೆ ಕ್ಷೇತ್ರಗಳಾದ ನೀರಾವರಿ, ಕೃಷಿ, ವಿದ್ಯುತ್ ಉತ್ಪಾದನೆ, ಗ್ರಾಮೀಣ ಕ್ಷೇತ್ರ, ಹರಿಜನ ಗಿರಿಜನರ ಅಭಿವೃದ್ಧಿ ದೃಷ್ಟಿಯಿಂದ ಈ ನಾಲ್ಕು ಬಡ್ಜೆಟ್‌ಗಳಲ್ಲಿ ಎಷ್ಟು ಹಣವನ್ನು ತೆಗೆದು ಇಟ್ಟಿದ್ದಿರಿ, ಅದರಲ್ಲಿ ಏನು ಸಾಧನೆ ಮಾಡಿದ್ದೀರಿ, ಎಂಬುದರ ಬಗ್ಗೆ ಒಂದು ವೈಟ್ ಪೇಪರನ್ನು ಈ ನಾಡಿನ ಜನರ ಮುಂದಿಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಏತಕ್ಕೆಂದರೆ ಈ ರೀತಿ ಅಂಕಿ ಅಂಶಗಳನ್ನು ಸ್ಪಷ್ಟವಾದ ರೂಪದಲ್ಲಿ ನೀವು ಇಟ್ಟಾಗ ಮಾತ್ರ ನಿಮ್ಮ ಸಾಧನೆ ಏನು ಎಂಬುದು ಜನರಿಗೆ ಗೊತ್ತಾಗುತ್ತದೆ. ನಾಲ್ಕೂವರೆ ವರ್ಷದಲ್ಲಿ ಯಾವ ರೀತಿ ಒಂದು ವಚನಭ್ರಷ್ಟ ಸರ್ಕಾರ ಜನರ ಹಿತವನ್ನು ಸಂಪೂರ್ಣವಾಗಿ ಮರೆತಿದೆ ಎಂಬುದು ರಾಜ್ಯದ ಜನತೆಗೆ ಗೊತ್ತಾಗುತ್ತದೆ. ಅಂಕಿ ಅಂಶಗಳನ್ನು ಒದಗಿಸುವುದು ಸರ್ಕಾರದ ಕರ್ತವ್ಯ ಕೂಡ ಆಗಿದ್ದು ಅದನ್ನು ತಾವು ಮಾಡಿಲ್ಲ. ಈಗಲಾದರೂ ಅದನ್ನು ಒದಗಿಸಿ ಎಂದು ನಾನು ಒತ್ತಾಯ ಮಾಡುತ್ತೇನೆ. ಈ ಬಡ್ಜೆಟ್ಭಾಷಣ ಮಾಡುವುದಕ್ಕೆ ಮುಂಚೆ ಇನ್ನೂ ಒಂದೆರಡು ದಿವಸಗಳಲ್ಲಿ ಎಲ್ಲಾ ಅಂಕಿಅಂಶಗಳನ್ನು ಒಳಗೊಂಡ ಒಂದು ವೈಟ್ ಪೇಪರನ್ನು ಈ ಸದನದ ಮುಂದೆ ಇಡಿ. ಅದರಿಂದ ರಾಜ್ಯದ ಜನತೆಗೆ ತಾವು ಏನು ಮಾಡಿದ್ದೀರಿ, ಏನು ಮಾಡಿಲ್ಲ, ಎಂಬ ಸತ್ಯಸಂಗತಿಯನ್ನು ಮನವಟ್ಟು ಮಾಡಿಕೊಡಬಹುದು. ಆದ್ದರಿಂದ ಈ ವಿವರಗಳನ್ನು ಒಳಗೊಂಡ ವೈಟ್ ಪೇಪರನ್ನು ಪ್ರಕಟ ಮಾಡಬೇಕೆಂದು ಮತ್ತೊಮ್ಮೆ ಒತ್ತಾಯ ಮಾಡುತ್ತೇನೆ.

ಸ್ವಾಮಿ, ಒಂದು ಬಡ್ಜೆಟ್ ಎಂದರೆ ಏನು? ಪರ್ಫಾರ್ಮೆನ್ಸ್ ಬಡ್ಜೆಟ್ ಒಂದು ವರ್ಷದಲ್ಲಿ ಏನೇನು ಮಾಡಿದ್ದೀರಿ, ಎಷ್ಟು ಹಣವನ್ನು ಯಾವ ಯಾವ ಆದ್ಯತೆ ಕ್ಷೇತ್ರಗಳಿಗೆ ತೆಗೆದು ಇಟ್ಟಿದ್ದೀರಿ, ಅದರಲ್ಲಿ ಎಷ್ಟು ಖರ್ಚಾಗಿದೆ ಎಂಬುದನ್ನು ತಿಳಿಸಬೇಕಾಗಿತ್ತು. ಬಹುಶಃ ಮೊದಲ ಬಾರಿಗೆ ಈ ಐದನೆಯ ಆಯವ್ಯಯ ಪತ್ರ ತುಂಬಾ ಭಾರವಾಗಿದೆ. ಹೆಚ್ಚು ಪೇಜುಗಳನ್ನು ಒಳಗೊಂಡಿದೆ. ಈ ಬಡ್ಜೆಟ್ಗೆ ಯಾವ ಒಂದು ಪಾವಿತ್ರತೆ ಇರಬೇಕಾಗಿತ್ತು ಅದು ಸಂಪೂರ್ಣ ಕಳೆದುಕೊಂಡು ಜನರಿಗೆ ವಂಚನೆ ಮಾಡತಕ್ಕ ಆಯವ್ಯಯ ಆಗಿದೆ. ಇದು ಒಂದು ಫಾಲ್ಸ್ ಡಾಕ್ಯುಮೆಂಟ್. ಈ 1994-95ರ ಆಯವ್ಯಯ ಪತ್ರ ಒಂದು ಫಾಲ್ಸ್ ಡಾಕ್ಯುಮೆಂಟ್ ಎಂದು ಹೇಳುತ್ತೇನೆ. ಆ ಮನೆಯನ್ನು ಅದ್ದದಾರಿಗೆ ಎಳೆಯುಲು ಅಂಕಿಅಂಶಗಳನ್ನು ನೀಡಿದ

ಸರಿಯಾದ ರೀತಿಯಲ್ಲಿ ಚರ್ಚೆ ಮಾಡಲು ಸಾಧ್ಯವಾಗದೆ ಈ ಮನೆಯನ್ನು ಮಿಸ್ಲೀಡ್ ಮಾಡುವಂಥ ಬಜೆಟ್ ಇದಾಗಿದೆ ಎಂದು ಹೇಳಬಯಸುತ್ತೇನೆ. ಈ ಆಯವ್ಯಯ ಪತ್ರದ ಪಾವಿತ್ರತೆಯನ್ನು ತಾವು ಹಾಳು ಮಾಡಿದ್ದೀರಿ ಎಂದು ನಾನು ಅನಿವಾರ್ಯವಾಗಿ ಹೇಳಬೇಕಾಗಿದೆ. ಆರು ತಿಂಗಳವರೆಗೆ ಅಂದರೆ 1994ರ ಸೆಪ್ಟೆಂಬರ್ 30 ವರೆಗೆ ಏನು ಲೇಖಾನುದಾನ ಪಡೆಯಬೇಕು ಎಂದು ಹೇಳಿದ್ದೀರಿ, ಬಹುಶಃ ಇದು ಒಂದು ಪ್ರಜಾತಂತ್ರ ವ್ಯವಸ್ಥೆಯ ಕಗ್ಗೊಲೆ ಎಂದು ಹೇಳಬಯಸುತ್ತೇನೆ. ಇವತ್ತು ಲೇಖಾನುದಾನ ಪಡೆಯುವುದಕ್ಕೆ ಅನಿವಾರ್ಯ ಪ್ರಸಂಗ ಏನೂ ಇಲ್ಲ. ತಾವು ಕಮಿಟಿ ಸಿಸ್ಟಮ್ ಮಾಡಿದ್ದೀರಿ. ಅದಕ್ಕೆ ಈ ರೀತಿ ಮಾಡಿದ್ದೀರಿ ಎಂದು ಹೇಳಬಹುದು. ಆದರೆ ಆರು ತಿಂಗಳವರೆಗೆ ಈ ಲೇಖಾನುದಾನ ಪಡೆದುಕೊಳ್ಳುವ ಅಗತ್ಯವಿರಲಿಲ್ಲ. ಈ ಸದನದಲ್ಲಿ ಇರುವಂಥ ನಮ್ಮ ಸದಸ್ಯರುಗಳು ಏಪ್ರಿಲ್ ಪೂರ್ತಿ ಕುಳಿತುಕೊಂಡು ಕಮಿಟಿಯಲ್ಲಿ ಸಹ ಚರ್ಚೆ ಮಾಡಿ ಇದರ ವರದಿಯನ್ನು ತರಿಸಿಕೊಂಡು ಬೇಗ ಮಾಡಬಹುದಾಗಿತ್ತು. ಒಂದೆರಡು ತಿಂಗಳಿಗೆ ಮಾತ್ರ ಲೇಖಾನುದಾನ ಪಡೆಯಬಹುದಾಗಿತ್ತು.

ಶ್ರೀ ಎಸ್.ಎಂ. ಕೃಷ್ಣ: ತಕ್ಷಣ ಕರೆಯುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಆರು ತಿಂಗಳು ಲೇಖಾನುದಾನ ಪಡೆಯುವಂಥ ಉದ್ದೇಶ ಏನು ಎಂಬುದು ಎಲ್ಲರಿಗೂ ಗೊತ್ತಾಗುತ್ತದೆ. ನನಗಂತೂ ಈ ಸದನ ಮತ್ತೆ ಸೇರುತ್ತದೆ ಎಂಬ ವಿಶ್ವಾಸ ಇಲ್ಲ. ಮತ್ತು ಈ ನಾಡಿನ ಜನರಿಗೂ ಇಲ್ಲ. ಏತಕ್ಕೆಂದರೆ ನಮಗೆ ಗೊತ್ತಿದೆ. ಇವತ್ತಿನ ರಾಜಕೀಯ ಗೊಂದಲದ ಪರಿಸ್ಥಿತಿಯಲ್ಲಿ ಎಲ್ಲಾ ರೀತಿಯಲ್ಲೂ ರಾಜಕೀಯ ಹೊಂದಾಣಿಕೆ ಮಾಡಿಕೊಳ್ಳಲು ಪ್ರಯತ್ನ ಮಾಡಿದರೂ ಸಹ ಮಂತ್ರಿಮಂಡಲ ವಿಸ್ತರಣೆ ಸಂದರ್ಭದಲ್ಲಿ ಮತ್ತೆ ಒಂದು ರೀತಿಯ ಅಸ್ಥಿರತೆ ತಾಂಡವವಾಡುತ್ತಿದೆ.

ಇದನ್ನೆಲ್ಲಾ ಸುಧಾರಿಸುವುದಕ್ಕೆ ಸಾಧ್ಯವಿಲ್ಲ ಎಂಬ ಪರಿಸ್ಥಿತಿ ನಿಮಗೆ ಒದಗಿ ಬಂದಿರುವುದರಿಂದ ಈ ರೀತಿ ಆರು ತಿಂಗಳ ಲೇಖಾನುದಾನ ಪಡೆದು ನೇರವಾಗಿ ವಿಧಾನಸಭಾ ಚುನಾವಣೆಗೆ ಹೋಗುವ ಸಂಚು ನಡೆಸಿದ್ದೀರಿ ಎನ್ನುವುದು ನನಗೆ ಗೊತ್ತಿದೆ. ಇದು ಸಾಧ್ಯವಿಲ್ಲವೆಂದು ನಿಮಗೆ ಮನದಟ್ಟಾದ ಮೇಲೆ ಈ ಕಾಂಗ್ರೆಸ್ ಎಂಬ ಒಂದು ಸರ್ಕಸ್ ಕಂಪನಿಯನ್ನು ಇಷ್ಟು ದಿವಸ ತೆಗೆದುಕೊಂಡು ಬಂದಿರುವುದೇ ಬಹಳ ದೊಡ್ಡ ಹೆಚ್ಚುಗಾರಿಕೆ. ನಾನು ಮುಖ್ಯ ಮಂತ್ರಿಗಳವರಿಗೆ ಧನ್ಯವಾದಗಳನ್ನರ್ಪಿಸುತ್ತೇನೆ. ಇದು ಸಣ್ಣ ಸಂಗತಿಯಲ್ಲ. ಇಷ್ಟೊಂದು ಕಷ್ಟಪಟ್ಟು ಇಷ್ಟು ಬಡಿದಾಟ, ಕಚ್ಚಾಟ ಇದ್ದರೂ ಸಹ ಅದರ ಮಧ್ಯದಲ್ಲಿ ಇವರನ್ನು ಹೊಂದಾಣಿಕೆ ಮಾಡಿಕೊಂಡು ಇಷ್ಟು ದಿವಸ ಬಂದಿದ್ದೀರಲ್ಲಾ, ಅದೇ ಒಂದು ದೊಡ್ಡ ದಾಖಲೆ; ಅದೇ ನಿಮ್ಮ ಸಾಧನೆ. ಅದಕ್ಕಾಗಿ ನಿಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಆದರೆ ಮತ್ತೆ ಇನ್ನೂ ಕೆಲವು ತಿಂಗಳು ಈ ರೀತಿ ಮುಂದುವರಿದುಕೊಂಡು ಹೋಗಬಹುದೆಂಬ ಧೈರ್ಯವನ್ನು ತಾವು ಮಾಡದೆ ತಮ್ಮ ಮನಸ್ಸಿನಲ್ಲಿ ಏನಿದೆ ಎಂಬುದನ್ನು ಹೇಳಿ. ದೆಲ್ಲಿ ದೊರೆಗಳ ಅನುಮತಿಗಾಗಿ ತಾವು ಕಾಯುತ್ತಿರಬಹುದು. ನಾನು ಹೇಳುತ್ತೇನೆ. ಅಲ್ಪಸ್ವಲ್ಪ ನಿಮ್ಮ ಉಳಿವಿನ ದೃಷ್ಟಿಯಿಂದ ಆದಷ್ಟು ಬೇಗ ವಿಧಾನಸಭೆಯನ್ನು ವಿಸರ್ಜನೆ ಮಾಡಿ ಚುನಾವಣೆ ನಡೆಸಬೇಕೆಂದು ನಿಮ್ಮ ಮನಸ್ಸಿನಲ್ಲಿದೆ; ಅದು ಸರಿಯಾದ ಸಂಗತಿ. ಕನ್ನಡ ನಾಡಿನ ನಾಲ್ಕೂವರೆ ಕೋಟಿ ಜನತೆಯ ಹಿತದೃಷ್ಟಿಯಿಂದ ಆ ಒಂದು ತೀರ್ಮಾನವನ್ನು ಆದಷ್ಟು ಬೇಗ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ತಾವು ನೀರಾವರಿ ಸಚಿವರಾಗಿದ್ದೀರಿ, ನಾನು ನಿಮ್ಮನ್ನು ಕೇಳುತ್ತೇನೆ, ಒಬ್ಬ ಉಪಮುಖ್ಯ ಮಂತ್ರಿ, ನಾನು ಮಂಡ್ಯ ಜಿಲ್ಲೆಯವನು, ನಮ್ಮ ಜಿಲ್ಲೆಯ ನಾಯಕರಾಗಿ ರೈತನ ಉಸಿರಾಗಿರುವ ನೀರಾವರಿ ಕ್ಷೇತ್ರ, ದೊಡ್ಡ ನೀರಾವರಿ ಖಾತೆ ನಿಮಗೆ ಇದೆ, ವಿದ್ಯುತ್ ಕ್ಷೇತ್ರ ನಿಮಗೆ ಇದೆ. ತಾವು ಒಂದು ಸಾರಿ

ಬೇಸರ ಮಾಡಿಕೊಂಡು ರಾಜೀನಾಮೆ ಕೊಟ್ಟು ಹೋಗಿದ್ದೀರಿ. ಬಹುಶಃ ಆ ಕೆಲಸ ಮಾಡಿದ್ದರೆ ನಿಮಗೆ ಗೌರವ ಜಾಸ್ತಿಯಾಗುತ್ತಿತ್ತು. ನೀವೇ ಸ್ಪಷ್ಟವಾಗಿ ಹೇಳಿದ್ದೀರಿ; ಏನೆಂದರೆ ಈ ರಾಜ್ಯದ ಮುಖ್ಯ ಮಂತ್ರಿಗಳಿಗೆ ನೀರಾವರಿ ಯೋಜನೆ ಬಗ್ಗೆ ಕಳಕಳಿ ಇಲ್ಲ. ಅದಕ್ಕೆ ಬೇಕಾದ ಹಣ ಬಿಡುಗಡೆ ಮಾಡುವುದಕ್ಕೆ ಅವರು ಸಿದ್ಧರಿಲ್ಲ, ನಾನು ತೆಗೆದುಕೊಳ್ಳುವ ಸ್ಥಿತಿಯಲ್ಲಿಲ್ಲ. ಸುಮಾರು 125 ಕೋಟಿ ರೂಪಾಯಿಗಳಿಗೂ ಹೆಚ್ಚು ಹಣ ಕೆಲಸ ಮಾಡಿದಂತ ಕಂಟ್ರಾಕ್ಟರಿಗೆ ಹಣ ಪಾವತಿಯಾಗಿಲ್ಲವೆಂಬ ಅಣಿಮುತ್ತುಗಳನ್ನು ತಾವು ಆಡಿದ್ದೀರಿ; ತಾವು ಈಗ ಇಲ್ಲವೆಂದರೆ ನಾನು ಏನೂ ಮಾಡುವುದಕ್ಕಾಗುವುದಿಲ್ಲ.

(ಉಪಾಧ್ಯಕ್ಷರು ಪೀಠವನ್ನಲಂಕರಿಸಿದರು).

ಶ್ರೀ ಎಸ್.ಎಂ. ಕೃಷ್ಣ: ಕೆಲವು ಸಮಯ ಇಂಥ distorted version of my stand - ಅದು ತಕ್ಷಣ ರೆಕಾರ್ಡಿಗೆ ಹೊರಟು ಹೋದರೆ ಮುಂದೆ ಓದಿದವರು ಅದರ ಬಗ್ಗೆ ತಪ್ಪು ತಿಳಿದುಕೊಳ್ಳುವುದು ಬೇಡ. ನಾನು ಯಾವತ್ತೂ ಕೂಡ ಮುಖ್ಯಮಂತ್ರಿಗಳಿಗೆ ನೀರಾವರಿ ವಿಚಾರದಲ್ಲಿ ಆಸಕ್ತಿ ಇಲ್ಲ ಎಂದು ಹೇಳಲಿಲ್ಲ. ನಾನು ಹೇಳಿರತಕ್ಕದ್ದುಆದರೂ ಬಡ್ಜೆಟ್ಟಿನಲ್ಲಿ ಎಷ್ಟು ಹಣ ಒದಗಿಸಲಾಗಿದೆ ಅಷ್ಟು ಹಣ ಆ ಇಲಾಖೆಗೆ ಒದಗಿಸಿ ಆ ಇಲಾಖೆಯವರು ತಮ್ಮದ್ದೇ ಆದ ಒಂದು ಕಾರ್ಯಕ್ರಮದ ಚೌಕಟ್ಟಿನಲ್ಲಿ ಆ ವರ್ಷವಿಡೀ ಏನು ಕಾರ್ಯಕ್ರಮಗಳನ್ನು ಹಮ್ಮಿಕ್ಕೊಳ್ಳಬೇಕೋ ಆ ಕಾರ್ಯಕ್ರಮಗಳನ್ನು ಮಾಡುವುದಕ್ಕೆ ಅನುವು ಮಾಡಿಕೊಡತಕ್ಕದ್ದು ಮುಂಗಡ ಪತ್ರದ ಒಂದುಕಾನ್ಸೆಪ್ಟ್ ಆಗಬೇಕೆಂದು ಹೇಳಿದ್ದೇನೆ. ಆಮೇಲೆ ಇತ್ತೀಚಿನ ದಿನಗಳಲ್ಲಿ budget exercise has become irrelevant. ಎಂದು ಹೇಳಿದ್ದೇನೆ. ಅದು ಕಡತದಲ್ಲಿದೆ. ಆದರೆ ಮುಖ್ಯ ಮಂತ್ರಿಗಳಿಗೆ ನೀರಾವರಿ ವಿಚಾರದಲ್ಲಿ ಆಸಕ್ತಿ ಇಲ್ಲವೆಂಬ ಮಾತನ್ನು ನಾನು ಹೊರಗಡೆಯೂ ಹೇಳಿಲ್ಲ. ನಾನು ಅಂಕಿಅಂಶಗಳನ್ನು ಕೊಟ್ಟಿದ್ದೇನೆ, ನೂರು ಕೋಟಿ ರೂಪಾಯಿಗಳ ಬಾಕಿ ಕೊಡಬೇಕಾಗಿದೆ ಎಂದು ಹೇಳಿದ್ದೇನೆ. ಒಂದು ಸಾರಿ 140 ಕೋಟಿ ರೂಪಾಯಿಗಳಾಗಿದೆ. 160 ಕೋಟಿ ರೂಪಾಯಿ ಆಗಿದೆ ಎಂದು ಆಗಿಂದಾಗ್ಗೆ ನಮ್ಮ ಜನಗಳಿಗೆ ತಿಳಿಯುವ ರೀತಿಯಲ್ಲಿ ಎಷ್ಟು ಅರಿಯರ್‍ಸ್ ಇದೆ ಎಂದು ಸೂಚಿಸಿದ್ದೇನೆಯೇ ಹೊರತು ಅವರಿಗೆ ಆಸಕ್ತಿ ಇಲ್ಲ ಎಂಬ ಆಪಾದನೆಯನ್ನು ನಾನು ಮಾಡಿಲ್ಲ. ಬಹುಶಃ ಹಿಂದಿನವರು ಮಾಡಿದ್ದನ್ನು ನೆನಸಿಕೊಂಡು ನೀವು ಹೇಳುತ್ತಿದ್ದೀರೋ ಏನೋ ಗೊತ್ತಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ: ತಾವು ಅಲ್ಲಿ ಕುಳಿತಾಗ ಇವತ್ತಿನ ರಾಜಕೀಯ ಪರಿಸ್ಥಿತಿಯಲ್ಲಿ ಹಾಗೇ ಹೇಳಬೇಕು. ನಾನು ದಾಖಲೆ ಬೇಕಾದರೆ ಕೊಡುತ್ತೇನೆ. ನಿಮ್ಮ ಬಗ್ಗೆ ನಾನು ಮಾತನಾಡಬೇಕಾದರೆ ತುಂಬಾ ಜವಾಬ್ದಾರಿಯಿಂದ ಮಾತನಾಡಬೇಕು.

ಶ್ರೀ ಎಸ್.ಎಂ. ಕೃಷ್ಣ: ದಾಖಲೆ ಕೊಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ನಾನು ತಮಗೆ ಕಳುಹಿಸಿಕೊಡುತ್ತೇನೆ. ಇನ್ನೊಂದು ಪ್ರಶ್ನೆ ಕೇಳುತ್ತೇನೆ. ಏನೆಂದರೆ ಇಷ್ಟೊಂದು ಪ್ರಮುಖವಾಗಿರುವ ದೊಡ್ಡ ನೀರಾವರಿ ಇಲಾಖೆಯ ಸಚಿವರಾಗಿ ಸಂಪುಟದಲ್ಲಿ ಎರಡನೇ ಪ್ರಮುಖ ಸ್ಥಾನದಲ್ಲಿದ್ದು ಕೊಂಡು, ಉಪಮುಖ್ಯಮಂತ್ರಿ ಸ್ಥಾನದಲ್ಲಿದ್ದುಕೊಂಡು ನೀವೇ ನಿಮ್ಮ ಇಲಾಖೆಗೆ ಬೇಕಾದ, ಬಡ್ಜೆಟ್ಟಿನಲ್ಲಿ ತೆಗೆದಿಟ್ಟಿರುವ ಹಣವನ್ನು ತೆಗೆದುಕೊಳ್ಳುವುದಕ್ಕೆ ಆಗಲಿಲ್ಲವೆಂದರೆ ಹೇಗೆ? ಹೋದಸಾರಿ ತಮ್ಮ ಇಲಾಖೆಯ ಬೇಡಿಕೆ ಬಗ್ಗೆ ಚರ್ಚೆ ಆಗಬೇಕಾದರೆ ತಾವೇ ಇಲ್ಲಿ ಕುಳಿತು ಭಾಷಣ ಮಾಡಿದಿರಿ. ಬಚಾವತ್ ಆಯೋಗದ ತೀರ್ಪಿನಂತೆ ಕೃಷ್ಣ ಜಲಾನಯನ ಕೆಲಸ ಮುಗಿಯಬೇಕಾದರೆ ವರ್ಷಕ್ಕೆ ಎಷ್ಟೆಷ್ಟು ಹಣಬೇಕು ಎಂದು 2 ಸಾವಿರ ವರ್ಷದವರೆಗೆ ಅಂಕಿ ಅಂಶಗಳನ್ನು ಕೊಟ್ಟಿರಿ. ಅಲ್ಲಿಯವರೆಗೆ ಯಾರು ಬದುಕಿ ಇರುತ್ತಾರೋ ಯಾರು ಸಾಯುತ್ತಾರೋ ಮುಂದೆ ನೋಡೋಣ. ನೀವು ಹೇಳಿದರಲ್ಲ

ಆ ಪ್ರಕಾರ ಹೋದ ಮಾರ್ಚ್‌ನಲ್ಲಿ, ಈಗ ತೆಗೆದಿಟ್ಟಿರುವ ಹಣವನ್ನು ಕೃಷ್ಣ ಕಾವೇರಿಗೆ ಪೂರ್ಣ ಖರ್ಚು ಮಾಡಿದ್ದೀರಾ? ತಾವು ಎದೆ ಮುಟ್ಟಿಕೊಂಡು ಹೇಳಿ. ಮಾರ್ಚಿ ಕೊನೆಯಲ್ಲಿ 125 ಕೋಟಿ ರೂಪಾಯಿಗಳಿಗೂ ಹೆಚ್ಚು ಹಣ ಈ ನಿಮಿತ್ತಕ್ಕಾ ನಿಮ್ಮ ಇಲಾಖೆಗೆ ಕೆಲಸ ಮಾಡಿರುವ ಕಂಟ್ರಾಕ್ಟರಿಗೆ ಬಾಕಿ ಬಿಲ್ ಪಾವತಿ ಆಗದೆ ಅವರೆಲ್ಲರೂ ಹೇಮಾವತಿ ನೀರಾವರಿ ಕಛೇರಿಯ ಮುಂದೆ ಬೀಗ ಹಾಕಿ ಧರಣಿ ಕುಳಿತದ್ದು ಸುಳ್ಳು ಏನು? ನಿನ್ನೆ ನಾನು ಕೆ.ಆರ್.ಪೇಟೆಗೆ ಹೋಗಿಬಂದೆ. ಆ ಭಾಗದಲ್ಲಿ ನಿಮ್ಮ ಇಲಾಖೆಯ ಕೆಲಸ ಕಾರ್ಯಗಳ ಬಗ್ಗೆ ಜನ ಮಾತನಾಡಿದ್ದು ಕೇಳಿಬಂದಿದ್ದೇನೆ. ನನ್ನ ನೋವು ಇಷ್ಟೆ; ಕೊನೇಪಕ್ಷ ಒಬ್ಬ ರೈತನ ಮಗನಾಗಿ ಇಂಥ ಉನ್ನತ ಸ್ಥಾನ ನಿಮಗೆ ಸಿಕ್ಕಿದಾಗ, ಈ ನಾಡಿನ ರೈತರ ಋಣ ತೀರಿಸುವುದಕ್ಕೋಸ್ಕರ ನೀರಾವರಿ ಇಲಾಖೆಗೆ ತೆಗೆದಿಟ್ಟಿರಬೇಕು ಹಣವನ್ನು ಪೂರ್ಣವಾಗಿ ಉಪಯೋಗ ಮಾಡಿಕೊಳ್ಳುವುದಕ್ಕೆ ಆಗದಿದ್ದರೆ ಒಂದು ಕ್ಷಣ ಸಹ ಆ ಖುರ್ಚಿಯಲ್ಲಿ ಹೇಗೆ ಮುಂದುವರಿಯುತ್ತೀರಿ? ಹೇಗೆ ನಿಮ್ಮ ಮನಸ್ಸು ಒಪ್ಪುತ್ತದೆ? ಬಹುಶಃ ನಿಮ್ಮಂಥವರು ಧೈರ್ಯ ಮಾಡಿ ಈ ಕಾಂಗ್ರೆಸ್ ಸರ್ಕಾರ ನೀರಾವರಿ ಯೋಜನೆಗೆ ಆದ್ಯತೆ ಕೊಡುತ್ತಿಲ್ಲ, ಕಾವೇರಿ ಟ್ರಿಬ್ಯುನಲ್ ಮುಂದೆ ವಾದ ಮಾಡುವ ಸಂದರ್ಭದಲ್ಲಿ ನಿಮ್ಮ ಸರ್ಕಾರ ಸಂಪೂರ್ಣ ವಿಫಲವಾಗಿ ರೈತನ ತಲೆಯ ಮೇಲೆ ಕಲ್ಲು ಹಾಕಿರುವ ಕಾರಣಕ್ಕಾಗಿಯಾದರೂ ನೀರಾವರಿ ಇಲಾಖೆಗೆ ಅಗತ್ಯ ಇದ್ದಂತೆ ಹಣವನ್ನು ಒದಗಿಸಬೇಕು. ತಾವು ಕೇಳಿರಬಹುದು, ಬಂಗಾರಪ್ಪನವರು ಮುಖ್ಯ ಮಂತ್ರಿಯಾಗಿ ಇಲ್ಲಿ ಕುಳಿತಾಗ ನೀರಾವರಿ ಯೋಜನೆಗೆ ಒಂದು ಸಾವಿರ ಕೋಟಿ ರೂಪಾಯಿ ಖರ್ಚುಮಾಡುತ್ತೇವೆಂದು ಹೇಳಿದರು. ಈಗ ಅವರು ಎಲ್ಲಿದ್ದಾರೆಂಬ ಪ್ರಶ್ನೆ ಅಲ್ಲ. ಆವತ್ತು ಸಹ ನಿಮ್ಮ ಸರ್ಕಾರ ಇತ್ತು ತಾನೆ? ಇವತ್ತು ಸಹ ನಿಮ್ಮನ್ನು ನಂಬಿಕೊಂಡಿರುವ ರೈತ ಸಮುದಾಯಕ್ಕೆ ಏನು ಹೇಳುತ್ತೀರಿ? ಮುಖ್ಯ ಮಂತ್ರಿಗಳ ಜೊತೆಗೆ ಹೊಂದಾಣಿಕೆ ಮಾಡಿಕೊಳ್ಳುವುದು ಬಿಡುವುದು ಪ್ರಮುಖವಾದ ಅಂಶ ಅಲ್ಲ. ನೀರಾವರಿ ಇಲಾಖೆಯನ್ನು ನಿಭಾಯಿಸಿಕೊಂಡು ಹೋಗುವುದರಲ್ಲಿ ಯಾವ ನಾಡಿನ ರೈತನ ಉಸಿರಾಗಿರುವ ವಿದ್ಯುತ್ ಕ್ಷೇತ್ರದಲ್ಲಿ ಉತ್ಪಾದನೆ ಜಾಸ್ತಿ ಮಾಡಿ ರೈತರ ಪ್ರಗತಿಗೆ ಕಾರಣವಾದ ವಿದ್ಯುತ್ತನ್ನು ಸರಬರಾಜು ಮಾಡಿ ಜನ ನೆಮ್ಮದಿಯಿಂದ ಜೀವನ ಮಾಡುವ ಪ್ರಮುಖ ಇಲಾಖೆಯನ್ನು ಇಟ್ಟುಕೊಂಡು ಅದಕ್ಕೆ ಬೇಕಾದ ಹಣ ಬಿಡುಗಡೆ ಮಾಡಿ ಜನ ನೆಮ್ಮದಿಯಿಂದ ಜೀವನ ಮಾಡುವ ರೀತಿಯಲ್ಲಿ ಸರ್ಕಾರದ ಪರಿಸ್ಥಿತಿ ಇಲ್ಲದಿದ್ದರೆ ಉಪ ಮುಖ್ಯಮಂತ್ರಿಯಾಗಿ ಹೇಗೆ ನೀವು ಮುಂದುವರಿಯುತ್ತೀರಿ? ನಿಜವಾಗಿ ನಿಮಗೆ ಕಳಕಳಿ ಇದ್ದರೆ ಯಾವ ದಿವಸ ನೀವು ಮನಸ್ಸಿಗೆ ನೋವು ಮಾಡಿಕೊಂಡು ಬೇಡ ಅಪಮಾನವಾಗಿದೆ ಎಂದು ಸದನದಿಂದ ಹೊರಗೆ ಹೋದಿರಿ; ಈಗಲೂ ನಾನು ಅಪಾದನೆ ಮಾಡುತ್ತೇನೆ. ಒಂದು ಕ್ಷಣ ಸಹ ನೀವು ಆ ಸ್ಥಾನದಲ್ಲಿ ಉಪ ಮುಖ್ಯಮಂತ್ರಿಯಾಗಿ ಎರಡು ಇಲಾಖೆಗಳನ್ನು ಸರಿಯಾಗಿ ನಿಭಾಯಿಸುವುದಕ್ಕೆ ಆಗದಿದ್ದರೆ ಆ ಜಾಗದಲ್ಲಿ ಮುಂದುವರಿಯುವುದು ಸರಿಯಲ್ಲ, ದಯವಿಟ್ಟು ರಾಜೀನಾಮೆ ಕೊಟ್ಟು ಮನೆಗೆ ಹೋಗಿ ಎಂದು ನಾನು ಈ ನಾಡಿನ ಜನರ ಪರವಾಗಿ ವಿನಂತಿಸುತ್ತೇನೆ. ನಾನು ತಮಗೆ ವಿವರಗಳನ್ನು ಕೊಡುತ್ತೇನೆ; ಅಂಕಿಅಂಶಗಳನ್ನು ಕೊಡುತ್ತೇನೆ. ಈ ಬಡ್ಜೆಟ್ಟಿನಲ್ಲಿ ಹಿಂದಿನ ವರ್ಷದ ಸಾಧನೆಯ ಯಾವುದೇ ಒಂದು ಸ್ಪಷ್ಟ ಚಿತ್ರ ಇಲ್ಲ. ಈ ಬಡ್ಜೆಟ್ ಕೇವಲ ಅಂಕಿಅಂಶಗಳ ಒಂದು ಕಸರತ್ತು ಆಗಿದೆಯೇ ವಿನಹ ಸಾಧನೆಯ ಬಗ್ಗೆ ಪ್ರಾಮಾಣಿಕವಾದ ವರದಿ ಏನು ಇರಬೇಕಾಗಿತ್ತು ಅದು ಇಲ್ಲ. ನಾನು ಅನೇಕ ಸಾರಿ ತಿರುಗಮುರುಗ ಓದಿನೋಡಿ ಏನೇನು ತಿಳಿದುಕೊಳ್ಳುವುದಕ್ಕೆ ಸಾಧ್ಯ ಎಂದು ನೋಡಿದೆ. ನಾನೇನು ಅಂಥ ವಿದ್ಯಾವಂತನಲ್ಲ, ಬುದ್ಧಿವಂತನಲ್ಲ, ಸಾಮಾನ್ಯ ರೈತನ ಮಗ. ಏನಾದರೂ ಸ್ವಲ್ಪ ತಿಳಿದುಕೊಂಡು ಬಡ್ಜೆಟ್ ಬಗ್ಗೆ ಮಾತನಾಡೋಣವೆಂದು ತಿರುಗಮುರು[illegible] ನೋಡಿದೆ. ಯಾರಿಗೂ ಅರ್ಥವಾಗದ ವೀರಪ್ಪ ಮೊಯಿಲಿಯವರ ಬಡ್ಜೆಟ್ [illegible]

ಬುದ್ಧಿವಂತಿಕೆ ಇವರಲ್ಲಿ ಆಗಬಾರದು. ಹೋದಸಾರಿ 1993-94ರಲ್ಲಿ ವೀರಪ್ಪ ಮೊಯಿಲಿಯವರೇ ಮುಖ್ಯಮಂತ್ರಿಯಾಗಿ - ಆಯವ್ಯಯವನ್ನು ಮಂಡನೆ ಮಾಡಿದ್ದು ಇದೆ. ಆ ಸಮಯದಲ್ಲಿ, ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ಏನೇನು ಸಾಧನೆ ಮಾಡಿದರು. ಎಷ್ಟು ಹಣ ಖರ್ಚಾಗಿದೆ ಎಂಬ ಎಲ್ಲ ಅಂಕಿ ಅಂಶಗಳನ್ನು ಇಟ್ಟಿದ್ದರು. ಆದರೆ ಅದೇ ವೀರಪ್ಪ ಮೊಯಿಲಿಯವರು ತಮ್ಮ ಒಂದು ವರ್ಷದ ಸಾಧನೆ ಬಗ್ಗೆ ಬಡ್ಜೆಟ್ ಮಂಡನೆ ಮಾಡುವ ಸಂದರ್ಭದಲ್ಲಿ ಯಾವುದೇ ಇಲಾಖೆಗಳ ಬಗ್ಗೆ ಎಷ್ಟು ಹಣ ತೆಗೆದಿಟ್ಟಿದ್ದಾರೆ, ಎಷ್ಟು ಹಣ ಫೆಬ್ರುವರಿಯವರೆಗೆ ಖರ್ಚಾಗಿವೆ, ಎನ್ನುವ ಯಾವುದೇ ವಿವರ ಕೊಡದೆ,ಜನರ ಕಣ್ಣಿಗೆ ಮಣ್ಣೆರಚುವ ಕುತಂತ್ರ ಬಡ್ಜೆಟ್ ಇಟ್ಟಿದ್ದಾರೆ. ಮುಂದಿನ ವರ್ಷದ ಅಭಿವೃದ್ಧಿ ಬಗ್ಗೆ ಯಾವುದೇ ಸ್ಪಷ್ಟ ಚಿತ್ರಣ ಇದರಲ್ಲಿ ಇಲ್ಲ. ಬಹಳ ದೊಡ್ಡ ಮಾತನ್ನು ರಾಜ್ಯದ ಮುಖ್ಯಮಂತ್ರಿಗಳು ಹೇಳಿದರು. ಅವರು ಇಂದು ಇರಬೇಕಾಗಿತ್ತು. ಆದರೆ ಅವರ ಆರೋಗ್ಯ ಸರಿಯಿಲ್ಲದ ಕಾರಣ ತಾವು ಇದ್ದೀರಿ ಚಿಂತೆ ಇಲ್ಲ. ನಿಮ್ಮ ಮನಸ್ಸು ಒಪ್ಪುತ್ತದೆಯೇ? ಜನವರಿ 26ರಂದು ಎಲ್ಲಾ ಪತ್ರಿಕೆಗಳಲ್ಲಿ ದೊಡ್ಡ ಜಾಹಿರಾತು ಕೊಟ್ಟರು. ನಾವು ಬಹಳ ಸ್ಪಷ್ಟವಾಗಿ ಹೇಳಿದೆವು. ಏನೆಂದರೆ ಯಾವುದೇ ಕಾರಣಕ್ಕೆ 3025 ಕೋಟಿ ರೂಪಾಯಿ ಯೋಜನಾ ಮೊತ್ತ ಏನಿದೆ, ಆ ಗುರಿ ಮುಟ್ಟುವುದಕ್ಕಾಗುವುದಿಲ್ಲ ಎಂದು; ಆವತ್ತಿನಿಂದ ಇವತ್ತಿನವರೆಗೆ ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಳ್ಳುವ ಶಕ್ತಿ ನಿಮಗೆ ಇಲ್ಲ. ಯೋಜನಾ ವೆಚ್ಚ 3025 ಕೋಟಿ ರೂಪಾಯಿಗಳಾಗಬಹುದೆಂದು ನಿರೀಕ್ಷೆ ಮಾಡಿರಬಹುದು; ಆದರೆ ಅದು 2200 ಕೋಟಿ ರೂಪಾಯಿಗಳನ್ನು ದಾಟುವುದಿಲ್ಲ; ಈ ಮಾತನ್ನು ಆವತ್ತಿನಿಂದ ಇವತ್ತಿನವರೆಗೆ ಹೇಳಿಕೊಂಡು ಬಂದೆವು. ತಾವು ಎದ್ದುನಿಂತುಕೊಂಡು ಹೇಳುತ್ತೀರಾ? ಮಾರ್ಚ್ 28ಕ್ಕೆ ನಾವು ಇಲ್ಲಿ ಕುಳಿತಿದ್ದೇವೆ, ಯೋಜನಾ ವೆಚ್ಚ 3025 ಕೋಟಿ ರೂಪಾಯಿಗಳೆಂದು ಇಡೀ ದೇಶದಲ್ಲಿ ಇದೊಂದು ದಾಖಲೆ ಎಂದು ಡಂಗೂರ ಸಾರಿದರಲ್ಲ, ಇವತ್ತು ಏನಾಗಿದೆ? ಯಾವುದೂ ಮಾಡುವುದಕ್ಕೆ ಸಾಧ್ಯವಿಲ್ಲ. ಅದನ್ನು ಜನರಿಗೆ ಹೇಳಿ ಹೊಸ ಆಶಾಭಾವನೆ ಹುಟ್ಟಿಸಿ ಅವರನ್ನು ನಿರಾಶೆ ಮಾಡುವ ರಾಜಕೀಯ ಡೊಂಬರಾಟ ನಡೆಸುವುದು ನಿಮ್ಮ ಮುಖ್ಯ ಮಂತ್ರಿಗಳಿಗೆ ಬೇಕಿತ್ತೆ ಸ್ವಾಮಿ?

ಅವರು ಏನು ಹೇಳಿದ್ದಾರೆ? ಅಂದರೆ, 1993-94ರ ವರ್ಷಕ್ಕೆ 3025 ಕೋಟಿ ರೂಪಾಯಿಗಳ ವಾರ್ಷಿಕ ಯೋಜನಾ ಕರಡ ನಕ್ಷೆಯನ್ನು ರೂಪಿಸಲಾಗಿದೆ, ಇದಕ್ಕೆ ಹಿಂದಿನ ವರ್ಷದ ಅನುದಾನಕ್ಕಿಂತ 58 ಪರ್ಸೆಂಟ್ ಹೆಚ್ಚಾಗಿದೆ. ರಾಜ್ಯದಲ್ಲಿ ಪ್ರತಿಯೊಬ್ಬ ವ್ಯಕ್ತಿಗೆ ಮಾಡಲಾಗುತ್ತಿರುವ ಯೋಜನಾ ವೆಚ್ಚ 671 ರೂಪಾಯಿ ಆಗಿದೆ. ಇದು ನಮ್ಮ ದೇಶದಲ್ಲಿಯೇ ಅತಿ ಹೆಚ್ಚಿನ ವೆಚ್ಚವಾಗಿದೆ. ಕರ್ನಾಟಕ ಸರ್ಕಾರವು ಸಾಧಿಸಿರುವ ಗಣನೀಯವಾದ ಸಂಪನ್ಮೂಲ ಕ್ರೋಢೀಕರಣ ಪ್ರಯತ್ನ ಮತ್ತು ಯೋಜನಾ ಅನುಷ್ಠಾನದಲ್ಲಿ ಸಾಧಿಸಿರುವ ಅಪೂರ್ವ ಯಶಸ್ಸಿಗಾಗಿ ಭಾರತದ ಯೋಜನಾ ಆಯೋಗವು ಶ್ಲಾಘನೆಯನ್ನು ವ್ಯಕ್ತಪಡಿಸಿದೆ ಎಂದು; ಅಂದರೆ ಸತ್ಯಕ್ಕೆ ದೂರವಾದಂಥ ಅಂಕಿಅಂಶಗಳನ್ನು ಹೇಳಿ ನಾಡಿನ ಜನರಿಗೆ ವಂಚನೆ ಮಾಡಿ, 3025 ಕೋಟಿ ವಾರ್ಷಿಕ ಯೋಜನಾ ಕರಡು ನಕ್ಷೆಯನ್ನು ತಯಾರು ಮಾಡಿದ್ದೇವೆಂದು ಹೇಳಿ, ಇವತ್ತು ಮಾರ್ಚ್ 28ನೇ ತಾರೀಖಿಗೆ ಹೋಗುವಂಥ ಈ ಕಾಲದಲ್ಲಿ 2200 ಕೋಟಿ ರೂಪಾಯಿಗಳ ಯೋಜನಾ ವೆಚ್ಚ ಖರ್ಚು ಮಾಡುವುದಕ್ಕೆ ಸಾಧ್ಯವಿಲ್ಲದಂಥ ಪರಿಸ್ಥಿತಿಯಲ್ಲಿ ನೀವು ಕುಳಿತಿದ್ದೀರಿ ಹೀಗಾದರೆ ಈ ನಾಡಿನ ಜನ ಕ್ಷಮಿಸುತ್ತಾರೆಯೇ? ಅಥವಾ ಇದಕ್ಕೆ ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಅದಕ್ಕೆ ಬೇಕಾದಂಥ ಸತ್ಯವಾದಂಥ ಅಂಕಿಅಂಶಗಳನ್ನು ತಾವು ಪ್ರಕಟಿಸುತ್ತೀರಾ ಎಂದು ನಾನು ತಿಳಿದುಕೊಂಡಿದ್ದೇನೆ. ನಾನು ಹೇಳುತ್ತೇನೆ. 3025 ಕೋಟಿಯಲ್ಲ, ಅದು 2200 ಕೋಟಿಯನ್ನು ಸಹ ದಾಟುವುದಿಲ್ಲ. ಬಹುಶಃ ಇಷ್ಟು ವರ್ಷಗಳ ಇತಿಹಾಸ... ಪ್ಲಾನ್ ಎಕ್ಸ್‌ಪೆಂಡೀಚರನ್ನು ಜಾಸ್ತಿಮಾಡುತ್ತೇವೆಂದು ದೊಡ್ಡಅಂಕಿಅಂಶಗಳನ್ನು ಜಾಹೀ...

ಮಾಡಿಕೊಂಡು ಪ್ರಚಾರ ಮಾಡಿಕೊಂಡು ಅದನ್ನು ಸಾಧನೆ ಮಾಡುವುದಕ್ಕಾಗದೆ ಒಂದು ರೀತಿ ಅಪರಾಧಿಸ್ಥಾನದಲ್ಲಿ ನಿಲ್ಲುವಂತಹ ಒಂದು ಪರಿಸ್ಥಿತಿ ಇವತ್ತು ನಿಮಗೆ ಬಂದಿದೆ ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಬಹುಶಃ ಈ ಯೋಜನಾ ವೆಚ್ಚ 800-900 ಕೋಟಿ ರೂಪಾಯಿ ತಾವು ಹೇಳುವುದಕ್ಕಿಂತ ಕಡಿಮೆಯಾಗಿರತಕ್ಕಂಥ ಈ ಸಂದರ್ಭದಲ್ಲಿ ಇದರ ಗಂಭೀರ ಪರಿಣಾಮ ಅಭಿವೃದ್ಧಿ ಕಾರ್ಯಗಳ ಕಡೆ ಏನು ಪರಿಣಾಮವಾಗುತ್ತದೆ ಎನ್ನುವ ಸಂಗತಿಯನ್ನು ಹೇಳುವಂಥ ಅಗತ್ಯವಿಲ್ಲ. ಅದರ ಪರಿಣಾಮ ಜನರ ಮೇಲೆ ಏನಾಗುತ್ತದೆ ಎನ್ನುವುದನ್ನು ಈ ಸಂದರ್ಭದಲ್ಲಿ ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಬಹುಶಃ ತಾವು ಒಪ್ಪುತ್ತೀರಿ ಎಂದು ಕಾಣುತ್ತದೆ. ದೇಶದಲ್ಲೇ ಈ ತಲಾಅತ್ಯಧಿಕ ತೆರಿಗೆ ದರ ಕರ್ನಾಟಕ ರಾಜ್ಯದಲ್ಲಿದೆ.

ಈ ತೆರಿಗೆ ದರ ಏನಿದೆ ಇದನ್ನು ಬೇರೆ ಬೇರೆ ರಾಜ್ಯಗಳಿಗೆ ಹೋಲಿಕೆ ಮಾಡಿ ನೋಡಿದೆ ಅತ್ಯಂತ ಅಧಿಕ ತೆರಿಗೆಯನ್ನು ನಾವು ಕೊಡುತ್ತಿದ್ದೇವೆ. ಆದರೂ ಸರ್ಕಾರದ ಖಜಾನೆ ಖಾಲಿಯಾಗಿದೆ; ಸರ್ಕಾರಿ ನೌಕರರಿಗೆ ಸಂಬಳವನ್ನು ಕೊಡುವುದದೇಕ್ಕೋಸ್ಕರ ಕಷ್ಟವಾದ ಪರಿಸ್ಥಿತಿ ಬಂದಿದೆ. ನೀರಾವರಿ ಇಲಾಖೆಯಲ್ಲಿ ಸುಮಾರು 125 ಕೋಟಿ, ಲೋಕೋಪಯೋಗಿ ಇಲಾಖೆಯಲ್ಲಿ ಸುಮಾರು 75 ಕೋಟಿ ಅಂದರೆ ಅಂದಾಜು ಫೆಬ್ರವರಿ ಕೊನೆಗೆ ಈಗಾಗಲೇ ಕಾಮಗಾರಿ ಮಾಡಿರುವಂಥ ಕಂಟ್ರಾಕ್ಟರರಿಗೆ ನೀವು ಪಾವತಿ ಮಾಡಬೇಕಾಗಿರತಕ್ಕಂಥ ಹಣ 200 ಕೋಟಿ ರೂಪಾಯಿಗಳನ್ನು ದಾಟುತ್ತದೆ. ಸ್ವಾಮಿ, ಈ ರೀತಿಯಾದರೆ ಅದನ್ನೇ ನಂಬಿಕೊಂಡು ಕೆಲಸಮಾಡಿದಂಥ ಕಂಟ್ರಾಕ್ಟರುಗಳ ಗತಿ ಏನಾಗಬಹುದು. 100 ಕ್ಕೆ ತಿಂಗಳಿಗೆ ಶೇಕಡ 4-5 ರೂಪಾಯಿಗಳಂತೆ ಬಡ್ಡಿಕೊಟ್ಟು ಬಡ್ಡಿಗೆ ಸಾಲ ತಂದು ಇನ್ವೆಸ್ಟ್ ಮಾಡಿರತಕ್ಕಂಥ ಕಂಟ್ರಾಕ್ಟರುಗಳ ಗತಿ ಏನಾಗಬಹುದು ಎಂದು ಯೋಚನೆ ಮಾಡಿದಿರೇನು? ಮಾರ್ಚ್ ಕೊನೆಯಲ್ಲಿ ಯಾವ ಸರ್ಕಾರ ಮಂಜೂರಾಗಿರತಕ್ಕಂಥ ಕೆಲಸವನ್ನು ಹಗಲುರಾತ್ರಿ ಮಾಡಿ ಮುಗಿಸಬೇಕೆಂದು ನಿಮ್ಮ ಅಧಿಕಾರಿಗಳಿಗೆ ಸೂಚನೆ ಕೊಡಬೇಕಾಗಿತ್ತೋ ಅದರ ಬದಲಿಗೆ ಇವತ್ತು ನಿಮ್ಮ ಮುಖ್ಯಮಂತ್ರಿಗಳು ಶಿವಮೊಗ್ಗಕ್ಕೆ ಬಂದಾಗ, ನಮ್ಮ ಜಿಲ್ಲೆಯ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಚರ್ಚೆ ಮಾಡುವಂಥ ಕಾಲದಲ್ಲಿ ಹೇಳಿದರು, ನೀವು ಮುಂದೆ ಸಾಗುತ್ತಿದ್ದೀರಾ, ನಿಶ್ಚಿತವಾದಂಥ ಮುಂದಿನ ಕೆಲಸ ಮಾಡುತ್ತಿದ್ದೀರಾ? ಎಂದು ಕೇಳಿದರು. ನಂತರೇ ಸುಮಾರು ಮೂರುವರೆ ಕೋಟಿ ರೂಪಾಯಿ ಲೋಕೋಪಯೋಗಿ ಇಲಾಖೆ, ಶಿವಮೊಗ್ಗ ಡಿವಿಜನ್ನಲ್ಲಿ ಏನು ಬಾಕಿ ಇದೆ, ಅದನ್ನು ನಾನು ಬೆಂಗಳೂರಿಗೆ ಹೋದ ತಕ್ಷಣ ಪಾವತಿ ಮಾಡುತ್ತೇವೆಂದು ಹೇಳಿದ ಈ ರಾಜ್ಯದ ಮುಖ್ಯಮಂತ್ರಿಗಳು ಬಹುಶಃ ನಿನ್ನೆಮೊನ್ನೆಯವರೆಗೂ ಒಂದು ಪೈಸೆಯನ್ನು ಕೂಡ ಕಳುಹಿಸಿ ಕೊಡಲಿಲ್ಲ. ಇದು ನಿಮ್ಮ ಹಣಕಾಸಿನ ಒಂದು ಪರಿಸ್ಥಿತಿ. ಸ್ವಾಮಿ ಕೊಟ್ಟಂಥ ಚೆಕ್ಕುಗಳು ಬೌನ್ಸಾಗಿ ವಾಪಸ್ ಆಗುತ್ತಿವೆ. ಅದೆಷ್ಟು ಸಾವಿರ ಚೆಕ್ಕೇಕು ಹೇಳಿ. ಗುಲ್ಬರ್ಗಾ ಜಿಲ್ಲೆಗೆ ತೊಗರಿ ಬೆಳೆಗೆ ಪರಿಹಾರ ಕೊಟ್ಟಂಥ ಚೆಕ್ಕಳಿರಬಹುದು, ಈ ನಿಮಿಷದವರೆಗೆ ಕ್ಯಾಷ್ ಆಗಿಲ್ಲವೆಂದರೆ ಇದು ನಿಮಗೆ ಗೌರವವೆನಿಸುತ್ತದೆಯೇ? ಸರ್ಕಾರದ ಚೆಕ್ಕಳನ್ನು ಕೊಟ್ಟರೆ ಅದು ಬೌನ್ಸಾಗಿ ವಾಪಸ್ ಬರುತ್ತದೆ. ಮಾರ್ಚ್ಕೊನೆಯಲ್ಲಿ ಕಳೆದ 6 ತಿಂಗಳಿಂದ ಕೆಲಸ ಮಾಡಿದಂಥ ವ್ಯಕ್ತಿಗಳಿಗೆ ಬಿಲ್ ಪಾವತಿ ಮಾಡುವಂಥ ಶಕ್ತಿ ನಿಮಗೆ ಇಲ್ಲ. ಈ ರೀತಿ ಸರ್ಕಾರವನ್ನು ನಡೆಸುವುದಕ್ಕೆ ಜನರು ಆಶೀರ್ವಾದವನ್ನು ಮಾಡಿ ಜೀರ್ಣವಾಗುವಷ್ಟು ಬಹುಮತವನ್ನು ತಮಗೆ ಕೊಟ್ಟರೇನು? ನಿಮ್ಮ ಹಣಕಾಸಿನ ಪರಿಸ್ಥಿತಿ ಎಷ್ಟು ಹದಗೆಟ್ಟಿದೆ ಎಂದರೆ ವೃದ್ಧಾಪ್ಯವೇತನ, ವಿಧವಾವೇತನ, ಅಂಗವಿಕಲರವೇತನ ಇವು ಕೂಡ ಎರಡು ಮೂರು ತಿಂಗಳಿಂದ ಕೆಲವು ಜಿಲ್ಲೆಗಳಿಗೆ ಬಂದಿಲ್ಲವೆಂದು ನಿಮ್ಮ ಉತ್ತರದಲ್ಲಿದೆ. ನೀವೇ ಕೊಟ್ಟಿರತಕ್ಕಂಥ ಸರ್ಕಾರಿ ಉತ್ತರದಲ್ಲಿದೆ. ಈ ಎಲ್ಲ ಆರ್ಥಿಕ ವಿಷಮತೆಗೆ ಸರ್ಕಾರದ ಅದಕ್ಷತೆ ಹಾಗೂ ದುರಾಡಳಿತವೇ ಕಾರಣವಾಗಿದೆ. ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಳ್ಳುವಲ್ಲಿ ಸಂಪೂರ್ಣವಾಗಿ ವಿಫಲವಾದಂಥದ್ದು ಕಾರಣವಾಗಿದೆ. ರಾಜ್ಯದ ಪ್ರಮುಖ ಆದಾಯ ಬರುವಂಥ ಮಾರಾಟ ತೆರಿಗೆ ಇರಬಹುದು.

ಸ್ಟಾಂಪ್ ಡ್ಯೂಟಿ ಇರಬಹುದು, ಇತ್ಯಾದಿ ಸಂಗ್ರಹವನ್ನು ನೀವು ನಿರೀಕ್ಷೆ ಮಾಡಿದಷ್ಟು ಸಂಗ್ರಹ ಮಾಡಲಿಕ್ಕೆ ಆಗದಿರುವುದೇ ಇದೆಲ್ಲದಕ್ಕೂ ಕಾರಣವಾಗಿದೆ. ರಾಜ್ಯದ ಅಬಕಾರಿ ತೆರಿಗೆಯ ಆದಾಯ ಸಹ ಸರ್ಕಾರದ ನೇರ ಹಸ್ತಕ್ಷೇಪದಿಂದ ನೀವು ಎಷ್ಟು ನಿರೀಕ್ಷೆಮಾಡಿದ್ದಿರಿ ಅಷ್ಟು ಹಣ ಬರಲಿಲ್ಲ. ಆ ಎಕ್ಸೈಸ್ ಕಂಟ್ರಾಕ್ಟ್ದಾರರ ಕಪಿಮುಷ್ಟಿಯಲ್ಲಿ ಇಲ್ಲ ಎನ್ನುವ ಪೌರುಷದ ಮಾತನಾಡಿದರಲ್ಲ ಆ ನಿಮ್ಮ ಮುಖ್ಯಮಂತ್ರಿಗಳು ಆದರೆ ಈಗ ಏನಾಗಿದೆ ಸ್ವಾಮಿ?

3.30 ಪಿ.ಎಂ.

ಈ ಬಗ್ಗೆ ಪತ್ರಿಕೆಯಲ್ಲಿ ಬಂದಿರುವಂಥ ವರದಿಯನ್ನು ನೋಡಿದಾಗ ಬಹುಶಃ ನಾಚಿಕೆಯಿಂದ ನಾವು ತಲೆ ತಗ್ಗಿಸಬೇಕಾಗುತ್ತದೆ. ಎಕ್ಸೈಸ್ ತೆರಿಗೆ ವಸೂಲು ಮಾಡುವಂಥ ಸಂದರ್ಭದಲ್ಲಿ ಆ ಬಾಟಲ್ಗಳ ಮೇಲೆ ತೆರಿಗೆಯನ್ನು ಸಂಗ್ರಹ ಮಾಡುವಂಥ ಲೇಬಲ್ಗಳನ್ನು ಅಂಟಿಸುತ್ತಾರಲ್ಲ ಅದು ಕೋಟ್ಯಾಂತರ ರೂಪಾಯಿ ಬೆಲೆ ಬಾಳುವಂಥ ಲೇಬಲ್ಗಳನ್ನು ಬೀದರ್ನಲ್ಲಿ ಬೆಂಗಳೂರಿನಲ್ಲಿ ಹಾಗೂ ಬೇರೆ ಬೇರೆ ಕಡೆಗಳಲ್ಲಿ ಪೊಲೀಸ್ ಅಧಿಕಾರಿಗಳು ಹಿಡಿದರು. ಕನಿಷ್ಠ 3-4 ಕೋಟಿ ರೂಪಾಯಿ ನಮ್ಮ ರಾಜ್ಯದ ಬೊಕ್ಕಸಕ್ಕೆ ಬರಬೇಕಾದ ತೆರಿಗೆ ಹಣ ಡೂಪ್ಲಿಕೇಟ್ ಲೇಬಲ್ ಅಂಟಿಸುವುದರ ಮೂಲಕ ಲೂಟಿಯಾಗುತ್ತಿದೆ ಎಂಬ ವರದಿಯನ್ನು ತಾವು ಓದಿದ್ದೀರಲ್ಲ ಸ್ವಾಮಿ? ಕಳೆದ ಎರಡು ವರ್ಷಗಳಿಂದ ಸತತವಾಗಿ ಈ ರೀತಿ ಎಕ್ಸೈಜ್ ಲಾಬಿಗೆ ಸಿಕ್ಕಿಲ್ಲವೆಂದು ನೀವು ದೊಡ್ಡ ದೊಡ್ಡ ಭಾಷಣಗಳನ್ನು ಮಾಡಿದಿರಿ. ಆದರೆ ಸತತವಾಗಿ ಬೇರೆ ಬೇರೆ ಪ್ರಿಂಟಿಂಗ್ ಪ್ರೆಸ್ನಲ್ಲಿ ಈ ರೀತಿ ಕೃತಕವಾದ ಲೇಬಲ್ಗಳನ್ನು ಪ್ರಿಂಟ್ ಮಾಡಿಕೊಂಡು ಹೆಂಡ ಶರಾಬುಗಳನ್ನು ಮಾರುವಂಥ ವ್ಯವಸ್ಥೆಗೆ ಪರೋಕ್ಷವಾಗಿ ಬೆಂಬಲ ಕೊಡುತ್ತಿದ್ದೀರಿ ತಾನೆ? ಅಥವಾ ನಿಮ್ಮ ಸರ್ಕಾರ ಬದುಕಿದ್ದರೆ, ಈ ಇಲಾಖೆ ಬಗ್ಗೆ ಕಳಕಳಿ ಇದ್ದರೆ ಈ ರೀತಿ ರಾಜಾರೋಷವಾಗಿ ಪ್ರಿಂಟಿಂಗ್ ಪ್ರೆಸ್ನಲ್ಲಿ ಸರ್ಕಾರವೇ ಮುದ್ರಣ ಮಾಡಬೇಕಾದಂಥದ್ದನ್ನು ಖಾಸಗಿಯವರು ಡೂಪ್ಲಿಕೇಟ್ ರಶೀತಿಗಳನ್ನು ಪ್ರಿಂಟ್ ಮಾಡಿ ಅಂಟಿಸಿಕೊಂಡು ಶರಾಬುಗಳನ್ನು, ವಿಸ್ಕಿ ಬ್ರಾಂಡಿಗಳನ್ನು ಮಾರುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಲ್ಲ, ಇದು ನಿಮ್ಮ ದುರಾಡಳಿತಕ್ಕೆ ಸಾಕ್ಷಿ ತಾನೆ? ಇಷ್ಟಾದರೂ ಅಧಿಕಾರದಲ್ಲಿ ಹೇಗೆ ಮುಂದುವರೆಯುತ್ತಾರೆ ಸ್ವಾಮಿ, ನಿಮ್ಮ ಮುಖ್ಯಮಂತ್ರಿಗಳು? ಮುಖ್ಯಮಂತ್ರಿಗಳಾಗಿ ಎಕ್ಸೈಜ್ ಇಲಾಖೆಯನ್ನು ನೋಡಿಕೊಳ್ಳುವಂಥ ಈ ಸಂದರ್ಭದಲ್ಲಿ ತಮ್ಮ ಕಾಲು ಬುಡದಲ್ಲಿ, ತಮ್ಮ ಕಣ್ಮುಂದೆ ಸರ್ಕಾರದ ಬೊಕ್ಕಸಕ್ಕೆ ಬರಬೇಕಾದ ಕೋಟ್ಯಾಂತರ ರೂಪಾಯಿಗಳು ಹೆಂಡದ ದೊರೆಗಳ ಪಾಲುಗುತ್ತದೆ ಎಂದು ಹೇಳುವುದಾದರೆ ಅವರು ಮುಖ್ಯಮಂತ್ರಿಗಳಾಗಿ ಹೇಗೆ ಮುಂದುವರೆಯುತ್ತಾರೆ ಸ್ವಾಮಿ? ನಿಮ್ಮಗಳ ಸಹಕಾರ ಇಲ್ಲದೇನೆ ನಿಮ್ಮ ಅಧಿಕಾರಿಗಳ ಸಹಕಾರ ಇಲ್ಲದೇನೆ ಈ ರೀತಿಯ ಅವ್ಯವಹಾರಗಳು ರಾಜ್ಯದಲ್ಲಿ ನಡೆಯುವುದಕ್ಕೆ ಸಾಧ್ಯವಿದೆಯೇ? ಮಾನ್ಯ ಭೀಮಣ್ಣ ಖಂಡ್ರೆಯವರು ಇಲ್ಲಿಲ್ಲ. ಕೆ.ಎಸ್.ಆರ್.ಟಿ.ಸಿ. ಇಲಾಖೆಯಲ್ಲಿ ಇಂದು ಏನಾಗಿದೆ ಸ್ವಾಮಿ? ಇನ್ನೊಂದು ಡೂಪ್ಲಿಕೇಟ್ ಟಿಕೇಟ್ಗಳನ್ನು ಪ್ರಿಂಟ್ ಮಾಡಿಕೊಂಡು ಹಂಚುವಂಥ ಕೆಲಸ ಕೆ.ಎಸ್.ಆರ್.ಟಿ.ಸಿ. ಮಿನಿಸ್ಟರ್ ಇರುವಂಥ ಜಿಲ್ಲೆಯಲ್ಲಿ ಪ್ರಾರಂಭವಾಗಿದೆ ತಾನೆ? ಅದೆಷ್ಟು ಕೋಟಿ ರೂಪಾಯಿ ಈ ರೀತಿ ಡೂಪ್ಲಿಕೇಟ್ ಟಿಕೇಟ್ಗಳನ್ನು ಪ್ರಿಂಟ್ ಮಾಡುತ್ತಾ ಇರಬಹುದು? ನಿಮ್ಮ ಸರ್ಕಾರ ಬದುಕಿದ್ದರೆ, ಈ ರೀತಿ ಅವ್ಯವಹಾರಗಳು ಮುಂದುವರೆಸಿಕೊಂಡು ಹೋಗುವುದಕ್ಕೆ ಬಿಡುತ್ತಾ ಇದ್ದಿರೇನು? ಹೇಳಿ, ಯಡಿಯೂರಪ್ಪನವರೇ, ನಾವು ಮಾಡುತ್ತಿದ್ದೆವು. ಆದರೆ ನಮಗೆ ಬಿಡುವಿಲ್ಲ ಎಂದು ಹೇಳಿ. ನಮ್ಮ ಬಡಿದಾಟದಲ್ಲಿ ನಾವು ತಲ್ಲೀನರಾಗಿದ್ದೇವೆ. ಗೊಂದಲದಲ್ಲಿ ನಾವು ಸಿಕ್ಕಿಹಾಕಿಕೊಂಡಿದ್ದೇವೆ. ಸ್ವತಂತ್ರವಾಗಿ ನಾವು ಕೆಲಸ ಮಾಡುವುದಕ್ಕೆ ಆಗುತ್ತಿಲ್ಲ. ಮಂತ್ರಿಗಳಾಗಿ ಬಿಡುವಿನಿಂದ ಕೆಲಸ ಮಾಡುದಕ್ಕೆ ಆಗುತ್ತಿಲ್ಲ. ಅಜೀರ್ಣವಾಗುವಷ್ಟು ಬಹುಮತ ಇದ್ದರೂ ಬಡಿದಾಡುವಂಥ ದುಸ್ಥಿತಿ ನಮಗೆ ಬಂದಿದೆ ಎಂಬುದನ್ನು ಒಪ್ಪಿಕೊಳ್ಳಿ ಹಾಗೂ ಜನರಲ್ಲಿ ಕ್ಷಮಾಪಣೆ

ಕೇಳಿ.. ಇದಾವುದನ್ನೂ ಮಾಡದೆ ಸರ್ಕಾರದ ಬೊಕ್ಕಸವನ್ನು ಲೂಟಿ ಮಾಡುತ್ತಾ ಯಾವ ರೆವಿನ್ಯೂ ಸರ್ಕಾರದ ಬೊಕ್ಕಸಕ್ಕೆ ಬರಬೇಕಾಗಿತ್ತೋ ಅದು ಯಾರದೋ ಕಿಸೆಗೆ ಸೇರುವಂಥ ಪರಿಸ್ಥಿತಿಯನ್ನು ಇವತ್ತು ಕರ್ನಾಟಕ ರಾಜ್ಯದಲ್ಲಿ ಕಾಣುತ್ತಿದ್ದೇವೆ.

1994-95ರ ಮುಂಗಡ ಪತ್ರದಲ್ಲಿ 60 ಕೋಟಿ ರೂಪಾಯಿಗಳಷ್ಟು ಹೊಸ ತೆರಿಗೆ ಹಾಕಿದ್ದೀರಿ. ಇದರ ನಂತರವೂ ಸಹ 237 ಕೋಟಿ 61 ಲಕ್ಷ ರೂಪಾಯಿಗಳಷ್ಟು ಕೊರತೆಯನ್ನು ಈ ಬಜೆಟ್ಟಲ್ಲಿ ತೋರಿಸಿದ್ದಾರೆ. ಬಹುಶಃ ತಾವು ಒಪ್ಪುತ್ತೀರಿ, ಐದು ವರ್ಷಗಳ ಪ್ರಥಮ ಬಾರಿಗೆ ಚಾಲ್ತಿ ವರ್ಷದ 1993-94ರ ಪರಿಷ್ಕೃತ ಅಂದಾಜು ಜಮಾಗಳನ್ನು 310 ಕೋಟಿ ರೂಪಾಯಿಯಷ್ಟು ಕಡಿಮೆ ಮಾಡಿದ್ದೀರಿ. ಪುನಃ ಅಂದಾಜು ಮಾಡುವ ಸಂದರ್ಭದಲ್ಲಿ 6983 ಕೋಟಿ ಇದ್ದುದು 6672 ಕೋಟಿಗೆ ಇಳಿದಿದೆ. ಅಂದರೆ ಇಂದಿನ ಒಂದು ಆರ್ಥಿಕ ಕುಸಿತದಿಂದ ಈ ಒಂದು ಪರಿಸ್ಥಿತಿ ಬಂದು ಮುಟ್ಟಿದೆ. ಇದರ ಪರಿಣಾಮ ಈ ವರ್ಷದ ಕೊನೆಯಲ್ಲಿ ಮತ್ತೆ ಡಿಫಿಸಿಟ್ ಜಾಸ್ತಿಯಾಗಿ ಮುಂದಿನ ವರ್ಷದ ಬಜೆಟ್ಟಲ್ಲಿ ಕೊರತೆ ಜಾಸ್ತಿಯಾಗಿ ಇಲ್ಲವೇ ಯೋಜನಾ ಹೂಡಿಕೆಯಲ್ಲಿ ಮತ್ತೆ ಕಡಿತ ಮಾಡುವುದಕ್ಕೆ ಹೊರಡಬಹುದು. ಅಥವಾ ಈಗ ಜನತೆಯಿಂದ ಮುಚ್ಚಿಡುತ್ತಾ ಇರುವಂಥ ನಿಶ್ಚಿತವಾದ ಹೊಸ ತೆರಿಗೆಯನ್ನು ಅಥವಾ ಈಗ ಯಾವರೀತಿ ಕೆಲಸ ಮಾಡಿದಂಥ ಕಂಟ್ರಾಕ್ಟುದಾರರಿಗೆ ನೀರಾವರಿ ಮತ್ತು ಲೋಕೋಪಯೋಗಿ ಇಲಾಖೆಯಲ್ಲಿ 200ಕೋಟಿ ರೂಪಾಯಿ ಬಾಕಿ ಉಳಿಸಿಕೊಂಡಿದ್ದಾರೋ ಅದನ್ನು ಮುಂದಿನ ವರ್ಷಕ್ಕೆ ತೋರಿಸಿಕೊಂಡು ಹೋಗಬಹುದು. ಹಿಂದೆಯೂ ಇದೇ ಕೆಲಸ ಮಾಡಿದರು. ಹೋದ ವರ್ಷ ಯಾವುದನ್ನು ಪಾವತಿ ಮಾಡುವುದಕ್ಕೆ ಆಗಲಿಲ್ಲ, ಅದನ್ನು ಮುಂದಿನ ವರ್ಷಕ್ಕೆ ಏನು ಜಮಾ ಮಾಡಿಕೊಂಡು ಖರ್ಚು ತೋರಿಸಿಕೊಂಡಿರಿ. ಇವತ್ತು ಅದೇ ಸ್ಥಿತಿ ಇದೆ. ಮುಂದೆಯೂ ಅದೇ ಸ್ಥಿತಿ ಇರುತ್ತದೆ. ನಾನೇನು ಹೇಳುವುದಕ್ಕೆ ಹೊರಟಿದ್ದೇನೆ ಅಂದರೆ ಸನ್ಮಾನ್ಯ ಉಪಮುಖ್ಯಮಂತ್ರಿಗಳೇ,ಸತ್ಯಸಂಗತಿಯನ್ನು ತೋರಿಸಿ. ಅಲ್ಲಿ ಯಾರೇ ಕೂತಿರಬಹುದು. ಏನು ಮ್ಯಾಜಿಕ್ ಮಾಡಿ ಹಣವನ್ನು ತರುವುದಕ್ಕಾಗುತ್ತದೆಯೇ ?

ನಮ್ಮ ಸಂಪನ್ಮೂಲಗಳನ್ನು ನೋಡಿಕೊಂಡು ಅದಕ್ಕೆ ತಕ್ಕಂತೆ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಪ್ರಾಮಾಣಿಕವಾಗಿ ಇಂತಹದ್ದು ಮಾಡುವುದಕ್ಕೆ ಸಾಧ್ಯ, ಇಂತಹದ್ದು ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಬೇಕು. ಈ ಸತ್ಯಸಂಗತಿಯನ್ನು ಮರೆಮಾಚಿ ಜನರಿಗೆ ವಂಚನೆ ಮಾಡತಕ್ಕದ್ದು ಏನಿದೆ, ಇದು ಬಹಳ ದಿವಸ ನಡೆಯುವುದಿಲ್ಲವೆಂದು ಈ ಸಂದರ್ಭದಲ್ಲಿ ಈ ಅಂಕಿಅಂಶಗಳ ಮೂಲಕ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತೆ ಈ ದಾಖಲೆಯ ಈ ಒಂದು ತೆರಿಗೆಯ ಹೊರೆ ಏನಿದೆ, ಇದು ಈ ಬಡ್ಜೆಟ್ಟಿನ ಇನ್ನೊಂದು ಕರಾಳ ಮುಖವನ್ನು ಗಮನಿಸಬೇಕೆಂದು ನಾನು ಹೇಳುತ್ತೇನೆ. ಮುಂದಿನ ವರ್ಷದ ತೆರಿಗೆಯು ನಿರೀಕ್ಷೆ ಸುಮಾರು ಒಂದು ಸಾವಿರ ಕೋಟಿಯಷ್ಟು ಜಾಸ್ತಿಯಾಗುತ್ತದೆ. ಜಾಸ್ತಿಯಾಗುವಂತಹ ತೆರಿಗೆ ಹಣವನ್ನು ಕರ್ನಾಟಕ ರಾಜ್ಯದ ನಾಲ್ಕೂವರೆ ಕೋಟಿ ಜನರಿಂದ ಸಂಗ್ರಹಣೆ ಮಾಡಬೇಕಾಗಿದೆ ತಾನೇ ? ನಿಮ್ಮ ಒಟ್ಟು ತೆರಿಗೆ ಜಮಾದಂತೆ 5,995 ಕೋಟಿ 20 ಲಕ್ಷ ತಲಾ ಹೊರೆ ಈ ವರ್ಷದ್ದು 1,332 ರಂತೆ ಬೀಳುತ್ತಾ ಇದೆ. ಬಹುಶಃ ಈ ಮಟ್ಟದ ತೆರಿಗೆ ದೇಶದಲ್ಲೇ ಅತ್ಯಂತ ಅಧಿಕ ಆಗಿದೆ ಎನ್ನುವ ಮಾತನ್ನು ನಾನ ಹೇಳಲು ಇಚ್ಛೆಪಡುತ್ತೇನೆ. ಮುಂದೆ ಈ ರಾಜ್ಯದ ಜನರ ಜೀವನ ಇನ್ನೂ ಹೆಚ್ಚಿನ ಸಂಕಷ್ಟಕ್ಕೆ ಸಿಗುವ ಒಂದು ವಿಷಮ ಪರಿಸ್ಥಿತಿಗೆ ನಮ್ಮ ಜನರನ್ನು ತಳ್ಳುತ್ತಿದ್ದೀರಿ ಎನ್ನುವ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ತಾವು 10ನೇ ಹಣಕಾಸು ಆಯೋಗದ ಮುಂದೆ ರಾಜ್ಯದ ಇಂದಿನ ಒಂದು ಪರಿಸ್ಥಿತಿ ಬಗ್ಗೆ ಮನದಟ್ಟು ಮಾಡುವ ಪ್ರಾಮಾಣಿಕ ಪ್ರಯತ್ನ ಮಾಡಬೇಕಾಗಿತ್ತು.

ಉದಾಹರಣೆಗೆ ನಾವು ಮಲೆನಾಡು ಅಭಿವೃದ್ಧಿ ಬಗ್ಗೆ ವಿಶೇಷ ಗಮನವನ್ನು ಕೊಡುತ್ತಿದ್ದೇವೆ. ಹೈದರಾಬಾದ್ ಕರ್ನಾಟಕದ ಅಭಿವೃದ್ಧಿ ಬಗ್ಗೆ ವಿಶೇಷ ಪ್ರಯತ್ನ

ಪಡುತ್ತಿದ್ದೇವೆ. ಗಡಿ ಪ್ರದೇಶದ ಅಭಿವೃದ್ಧಿಗೆ ಗಮನ ಕೊಡುತ್ತಿದ್ದೇವೆ. ಅತಿವೃಷ್ಟಿ, ನೆರೆಹಾವಳಿ, ಬರಗಾಲಕ್ಕೆ ನಾವು ಸಿಕ್ಕಿದ್ದೇವೆ. ಅಭಿವೃದ್ಧಿ ಮಟ್ಟಗಳ ಈ ಪರಿಳಿತಗಳನ್ನು ಪರಿಣಾಮಕಾರಿಯಾಗಿ ಹತ್ತನೇ ಆಯೋಗದ ಮುಂದೆ ಮಂಡನೆ ಮಾಡಿ ಹೆಚ್ಚಿನ ಅನುದಾನ ಪಡೆಯುವಂತಹ ಒಂದು ಪ್ರಾಮಾಣಿಕವಾದ ಪ್ರಯತ್ನವನ್ನು ಸಹಾ ನಿಮ್ಮ ಸರ್ಕಾರ ಮಾಡಿಲ್ಲ. ಅನೇಕ ವರ್ಷಗಳಿಂದ ನಾವು ಜಿಲ್ಲೆಗಳ ಪುನರ್ ರಚನೆ ಬಗ್ಗೆ ಮಾತನಾಡುತ್ತಿದ್ದೇವೆ. ಇದಕ್ಕಾಗಿ ವಾಸುದೇವರಾವ್ ಸಮಿತಿ ಆಯಿತು, ಹುಂಡೇಕೇರ್ ಸಮಿತಿ ಮಾಡಿದಿರಿ, ಗದ್ದಿಗೌಡರ್ ಅವರ ವರದಿ ಬಂತು. ಬಹುಶಃ ಇಷ್ಟು ವರ್ಷಗಳು ಆದರೂ ಸಹಾ ಈ ವರದಿಗಳನ್ನು ಜಾರಿಗೆ ತರುವಂತಹ ಯಾವುದೇ ಪ್ರಾಮಾಣಿಕ ಪ್ರಯತ್ನ ಮಾಡಲಿಲ್ಲ. ಪಕ್ಕದ ಕೇರಳದಲ್ಲಿ 8 ಜಿಲ್ಲೆಗಳು ಇದ್ದುದ್ದನ್ನು 14 ಜಿಲ್ಲೆಗಳಾಗಿ ಮಾಡಿಕೊಂಡರು. ತಮಿಳುನಾಡು ರಚನೆಯಾಗಿದ್ದಾಗ ಇದ್ದಂತಹ 27 ಜಿಲ್ಲೆಗಳನ್ನು ಈಗ 35 ಜಿಲ್ಲೆಗಳಾಗಿ ಅವರು ಮಾಡಿಕೊಂಡರು. ಆದರೆ ಕರ್ನಾಟಕದಲ್ಲಿ ಮಾತ್ರ ಬೆಂಗಳೂರು ನಗರ ಜಿಲ್ಲೆ ಬಿಟ್ಟರೆ ಬೇರೆ ಯಾವ ಹೊಸ ಜಿಲ್ಲೆಗಳನ್ನು ಮಾಡಲಿಲ್ಲ. ಯಶಸ್ವಿಯಾಗಿ ಜಿಲ್ಲಾ ಆಡಳಿತವನ್ನು ನಡೆಸಬೇಕು ಎಂದು ಇದ್ದರೆ, ಅಭಿವೃದ್ಧಿ ಕೆಲಸಗಳ ಸಾಧನೆ ಆಗಬೇಕೆಂದು ಇದ್ದರೆ ಈ ಜಿಲ್ಲೆಗಳ ಪುನರ್ ರಚನೆ ಆಗಬೇಕಾಗಿತ್ತು. ಆ ಕಡೆ ನೀವು ಗಮನ ಕೊಡಬೇಕಾಗಿತ್ತು. ಇದರಿಂದ ಕೇಂದ್ರದ ಅನುದಾನಕ್ಕೂ ಸಹಾ 9ನೇ 10ನೇ ಆಯೋಗದ ಹಣಕಾಸು ಸಮಿತಿ ಮುಂದೆ ಪರಿಣಾಮಕಾರಿಯಾಗಿ ಇತರಕ್ಕ ಪರಿಸ್ಥಿತಿಯನ್ನು ತಿಳಿಸಿ ಹೆಚ್ಚಿನ ಹಣವನ್ನು ಪಡೆಯುವುದಕ್ಕೆ ವಿಶೇಷವಾದ ಪ್ರಯತ್ನವನ್ನು ಮಾಡಬಹುದಾಗಿತ್ತು. ಅಧಿಕಾರವನ್ನು ಬಿಟ್ಟು ಹೋಗುತ್ತಿರುವಂತಹ ಈಗಿನ ಕೊನೆಗಾಲದಲ್ಲಾದರೂ ಸಹ ಆ ಮೂರೂ ಸಮಿತಿಗಳು ಕೊಟ್ಟಂತಹ ವರದಿಯ ಆಧಾರದ ಮೇಲೆ ಜಿಲ್ಲೆಗಳನ್ನು ಹೆಚ್ಚು ಮಾಡುವುದರ ಕಡೆಗೆ ನೀವು ವಿಶೇಷವಾದ ಗಮನ ಕೊಡಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ.

ಕೇಂದ್ರ ಸರ್ಕಾರದ ಹೊಸ ಆರ್ಥಿಕ ನೀತಿಯನ್ನು ಅನಾವಶ್ಯಕವಾಗಿ ರಾಜ್ಯದ ಮುಂಗಡ ಪತ್ರದಲ್ಲಿ ತಾವು ಶ್ಲಾಘನೆ ಮಾಡಿದ್ದೀರಿ. ಎಲ್ಲಾ ರಾಜ್ಯಗಳ ಒಂದು ಒಟ್ಟು ಯೋಜನೆಗೆ 1993-94ರಲ್ಲಿ ಪರಿಷ್ಕೃತ ಕೇಂದ್ರೀಯ ಅನುದಾನ 21 ಸಾವಿರ ಕೋಟಿ ರೂಪಾಯಿಗಳು ಆಗಿದ್ದರೆ 1994-95ನೇ ಸಾಲಿಗೆ 19 ಸಾವಿರ ಕೋಟಿ ರೂಪಾಯಿಗಳನ್ನು ಮಾತ್ರ ನಿಗದಿ ಮಾಡಿದ್ದಾರೆ. ಅಂದರೆ 2 ಸಾವಿರ ಕೋಟಿ ರೂಪಾಯಿ ಕಡಿಮೆ ಆಯಿತು. ಆದರೂ ಸಹ ಕೇಂದ್ರದ ಹೊಸ ಆರ್ಥಿಕ ನೀತಿಯನ್ನು ಅನಾವಶ್ಯಕವಾಗಿ ಶ್ಲಾಘನೆ ಮಾಡಿ ಇನ್ನೊಂದು ಪುಟವನ್ನು ಅದಕ್ಕಾಗಿ ಇಟ್ಟಿದ್ದೀರಿ. ಇದರ ಉದ್ದೇಶ ಏನು? ಈಗಲಾದರೂ ವಾಸ್ತವಿಕ ವಿಷಯವನ್ನು ತಿಳಿದುಕೊಳ್ಳುವ ಪ್ರಯತ್ನವನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಲು ಇಷ್ಟಪಡುತ್ತೇನೆ. ಸಾರ್ವಜನಿಕ ಉದ್ದಿಮೆಗಳ ಗತಿ ಏನಾಗಿದೆ? ಈ ಸರ್ಕಾರಿ ಉದ್ದಿಮೆಗಳು ಒಂದು ರೀತಿ ಬಿಳಿಯಾನೆಗಳಾಗಿ ಈ ಬಾರಿಯ ನಿಮ್ಮ ಸಮೀಕ್ಷೆಯಲ್ಲೇ ಇವುಗಳ ನಷ್ಟದ ಬಗ್ಗೆ ಹೇಳಿದ್ದೀರಿ. 124 ಕೋಟಿ 36 ಲಕ್ಷ ನಷ್ಟ ಉಂಟಾಗಿದೆ ಎಂದು ಹೇಳಿದ್ದೀರಿ. ಇದರಲ್ಲಿ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಎನ್ಜಿಇಎಫ್, ಕೆಎಸ್ ಅಂಡ್ ಡಿಎಲ್ - ಇವು ಮೂರು ಸಹ ದೊಡ್ಡ ನಷ್ಟಕ್ಕೆ ಒಳಗಾದ ಸಂಸ್ಥೆಗಳು. ಬಹುಶಃ ಸರ್ಕಾರದ ಬೇಜವಾಬ್ದಾರಿತನದಿಂದ, ನಿಮ್ಮ ಅಧಿಕಾರಿಗಳ ಅಸಡ್ಡೆಯಿಂದ, ಮತ್ತೆ ಬಿಳಿ ಆನೆಗಳಂತೆ ಅಲ್ಲೇ ಒಳಗಡೆಯೇ ತಿಂದು ತೇಗುತ್ತಿರುವ ಘಟಸರ್ಪಗಳು ಜಾಸ್ತಿಯಾಗಿರುವುದರಿಂದ ಬಹುಶಃ ಈ ರೀತಿ ಲುಕ್ಸಾನು ಆಗುತ್ತಿರಬಹುದು. ಇದನ್ನು ಸರಿಪಡಿಸುವ ಯಾವುದೇ ಒಂದು ಪ್ರಾಮಾಣಿಕ ಪ್ರಯತ್ನ ತಾವು ಮಾಡಿಲ್ಲ. ನೀರಾವರಿ ಯೋಜನೆ ಬಗ್ಗೆ ಬಹಳ ಸಾಧನೆ ಮಾಡಿದ್ದೇವೆ ಎಂದು ಹೇಳುತ್ತಿದ್ದೀರಿ. ನೀವು ಆ ದಿವಸ ಇಲ್ಲಾ ಯಡಿಯೂರಪ್ಪನವರೇ, ಆ ರೀತಿ ಹಣವನ್ನು ಕೊಟ್ಟಿಲ್ಲ ಎನ್ನುವಂತಹ ಮಾತನ್ನು ಪದೇ ಪದೇ ಹೇಳಿದ್ದೇನೆ ಎನ್ನುವ ಮಾತನ್ನು ತಾವು ಹೇಳಿದ್ದೀರಿ. ಆದರೆ ಕಾವೇರಿ, ಕೃಷ್ಣ ಜಲಾನಯನ ಪ್ರದೇಶಕ್ಕೆ 1993-94ನೇ ಸಾಲಿನಲ್ಲಿ ಎಷ್ಟು ತೆಗೆದಿಟ್ಟದ್ದೀರಿ?

ಎಷ್ಟು ಖರ್ಚು ಮಾಡಿದ್ದೀರಿ? ದಯಮಾಡಿ ಅದನ್ನು ಸ್ಪಷ್ಟ ಪಡಿಸುವ ಕೆಲಸವನ್ನು ತಾವು ಮಾಡಬೇಕಾಗಿದೆ. 1993-94ರಲ್ಲಿ 850ಕೋಟಿ ರೂಪಾಯಿಗಳನ್ನು ತಾವು ತೆಗೆದಿಟ್ಟಿದ್ದೀರಿ. ತಾವು ಈ ಇಲಾಖೆಯನ್ನು ವಹಿಸಿಕೊಂಡ ಮೇಲೆ ಕೊನೇ ಪಕ್ಷ ಆ ಕೃಷ್ಣ ಬೇಸಿನ್ ರೈತರಾದರೂ ಉಳಿದುಕೊಳ್ಳುತ್ತಾರೆ, ಅವರ ಬದುಕಿಗೆ ತಾವು ದಾರಿದೀಪ ಆಗುತ್ತೀರಿ ಎಂದು ನಾನು ತಿಳಿದಿದ್ದೆ.

ಅದಕ್ಕೇ ನಾನು ತಮ್ಮನ್ನು ಪ್ರಾರಂಭದಲ್ಲಿ ಸ್ವಲ್ಪ ಚಿವುಟಿ ಮಾತನಾಡಿ ಎಚ್ಚಿಸುವಂತಹ ಪ್ರಯತ್ನ ಮಾಡಿದ್ದು. ಕೃಷ್ಣಾ ಬೇಸಿನ್ನಲ್ಲಿ ಈ ಬಾರಿ 301 ಕೋಟಿ ರೂಪಾಯಿ ಖರ್ಚು ಮಾಡುತ್ತೇವೆಂದು ತಾವೇ ಹತ್ತಾರು ಬಾರಿ ಹೇಳಿದ್ದೀರಿ. ಆದರೆ ಮಾರ್ಚ್ ಕೊನೆಯಲ್ಲಿ ಇವತ್ತು ಇದ್ದೇವೆ, ನಾನು ನಿಮಗೆ ಕೇಳುತ್ತೇನೆ, 200 ಕೋಟಿ ರೂಪಾಯಿ ದಾಟಿದೆಯೇ? ಸ್ವಾಮಿ? ಏತಕ್ಕೋಸ್ಕರ ಈ ಮಾತನ್ನು ಹೇಳುತ್ತೀರಿ? ಅದಕ್ಕೆ ನಾನು ಹೇಳಿದ್ದು. ನಿಮ್ಮ ಸರ್ಕಾರವಿದ್ದಾಗ, ನೀವು ಅಧಿಕಾರದಲ್ಲಿದ್ದಾಗ ಏನು ಮಾಡುತ್ತೀರಿ ಎಂದು ಅಷ್ಟೇ ನೀವು ಹೇಳಬೇಕಾಗಿತ್ತು. ಹೋದ ಸಾರಿ ಬಡ್ಜೆಟ್ ಭಾಷಣದಲ್ಲಿ ಇಲಾಖಾವಾರು ಚರ್ಚೆ ಆದ ಸಂದರ್ಭದಲ್ಲಿ 2000ನೇ ವರ್ಷದವರೆಗೆ ಏನು ಮಾಡುತ್ತೇವೆಂದು ಅಂಕಿಅಂಶಗಳನ್ನು ಕೊಟ್ಟಿರಲ್ಲಾ, ನೀವೇ ಶಾಶ್ವತವಾಗಿ ಅಧಿಕಾರದಲ್ಲಿ ಇರುತ್ತೇವೆ ಎನ್ನುವ ಭ್ರಮೆಯಲ್ಲಿ. ಆದರೆ ನೀವು ಇದ್ದಾಗ ಈ ಕೃಷ್ಣಾ ಬೇಸಿನ್ನಲ್ಲಿ 301 ಕೋಟಿ ರೂಪಾಯಿ ಖರ್ಚು ಮಾಡುವ ಕಾಲದಲ್ಲಿ, ಯಡಿಯೂರಪ್ಪನವರೇ ನಾನು 350 ಕೋಟಿ ರೂಪಾಯಿ ಜಾಸ್ತಿ ಮಾಡಿದ್ದೇನೆ ಇನ್ನೂ 50 ಕೋಟಿ ರೂಪಾಯಿ ಜಾಸ್ತಿ ಮಾಡಿದ್ದೇನೆ ಎಂದು ಹೇಳುವಂತಹ ನೈತಿಕ ಶಕ್ತಿ ನಿಮಗೆ ಬರಬೇಕಾಗಿತ್ತು. ನಿಮ್ಮಂತಹ ಹಿರಿಯರು ಆ ಇಲಾಖೆ ವಹಿಸಿಕೊಂಡ ಮೇಲೆ ಆ ರೀತಿ ಬರಬೇಕಾಗಿತ್ತು. ಇಲ್ಲದೇ ಇದ್ದರೆ ಪ್ರಾಮಾಣಿಕವಾಗಿ ಒಪ್ಪಿಕೊಳ್ಳಿ. ಇಲ್ಲಾ ಯಡಿಯೂರಪ್ಪನವರೇ, ನನಗೆ ಇದರಲ್ಲಿ ಕಳಕಳಿ ಇದೆ, ಮುಖ್ಯಮಂತ್ರಿಯವರಿಗೆ ಕಳಕಳಿ ಇಲ್ಲ, ನಮ್ಮ ಸರ್ಕಾರಕ್ಕೆ ಕಳಕಳಿ ಇಲ್ಲ, ಅದಕ್ಕಾಗಿ ಬೇಸರ ಬಂದಿದೆ, ಇಂತಹ ಉಸಿರು ಕಟ್ಟುವ ಪರಿಸ್ಥಿತಿಯಲ್ಲೂ ಅನಿವಾರ್ಯವಾಗಿ ನಾನು ಮುಂದುವರಿಯುತ್ತಿದ್ದೇನೆ ಎನ್ನುವ ಸತ್ಯಸಂಗತಿಯನ್ನಾದರೂ ತಾವು ಹೇಳಬೇಕಾಗಿತ್ತು. ಅದನ್ನು ಹೇಳದೆ, "ಹಾವು ಸಾಯಬಾರದು ಕೋಲು ಮುರಿಯಬಾರದು", ಎನ್ನುವ ರೀತಿ ನಿಮ್ಮ ಒಂದು ನಿಲುವು ಏನಿದೆ ಇದು ಬಹುಶಃ ಜನರು ಮೆಚ್ಚುವ ಕೆಲಸ ಅಲ್ಲ ಎನ್ನುವ ಮಾತನ್ನು ಸಹ ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ವಿದ್ಯುಚ್ಛಕ್ತಿ ವಲಯದಲ್ಲಿ ಅಂತೂ ಮಾನ್ಯ ಮುಖ್ಯಮಂತ್ರಿಗಳು ಕಾಲದಿಂದ ಕಾಲಕ್ಕೆ ಭಾರಿ ಹೇಳಿಕೆಗಳನ್ನು ಕೊಡುತ್ತಿದ್ದಾರೆ. ಕಳೆದ ಜನವರಿ 26ನೇ ತಾರೀಖಿನ ಸರ್ಕಾರದ ಜಾಹೀರಾತನ್ನು ನಾನು ಇಡೀ ರಾಜ್ಯದಲ್ಲಿ ಹಂಚಿಕೊಂಡು, ಹೇಳಿಕೊಳ್ಳುತ್ತಾ ತೆಗೆದುಕೊಂಡು ಹೋಗುತ್ತಿದ್ದೇನೆ; ಎಂದು ದೊಡ್ಡ ಮಾತನ್ನು ಹೇಳಿದರು. 2930 ಮೆಗಾವಾಟ್ಸ್ ಸ್ಥಾಪಿತ ಸಾಮರ್ಥ್ಯದ ಬಗ್ಗೆ ಸಾರಿ ಸಾರಿ ಪ್ರಚಾರವನ್ನು ಮಾಡಿದ್ದಾರೆ. ಅದರ ವಿವರ ಈ ರೀತಿ ಇದೆ:

"ವಿದ್ಯುತ್ ಶಕ್ತಿಯ ಸಾಧನೆ. ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆಯ ಸಾಮರ್ಥ್ಯಕ್ಕೆ 1995ರ ವೇಳೆಗೆ ಮತ್ತೆ ಒಟ್ಟು 2930 ಮೆಗಾವಾಟ್ಸ್ ವಿದ್ಯುತ್ಸೇರ್ಪಡೆಯಾಗಲಿದೆ. ಮಂಗಳೂರು, ರಾಯಚೂರು ಮತ್ತು ಹೊಸಪೇಟೆಯಲ್ಲಿ ಶಾಖೋತ್ಪನ್ನ ಯೋಜನೆಗಳನ್ನು 7.300 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಕಾರ್ಯಗತ ಗೊಳಿಸಲು ನಿರ್ಧರಿಸಲಾಗಿದೆ. ಇಷ್ಟರಲ್ಲೇ ಈ ಯೋಜನೆಯಲ್ಲಿ ಖಾಸಗೀ ಕ್ಷೇತ್ರವೂ ಸೇರಿದಂತೆ ಎಲ್ಲ ಕ್ಷೇತ್ರಗಳೂ ಪಾಲ್ಗೊಳ್ಳುವುದರಿಂದ 16,800 ಕೋಟಿ ರೂಪಾಯಿಗಳ ಬಂಡವಾಳ ಹೂಡಿಕೆಯ ನಿರೀಕ್ಷೆ ಇದೆ."

ಸ್ವಾಮಿ ತಾವು ಹೇಳಬಹುದು; ಯಡಿಯೂರಪ್ಪನವರೇ ಖಾಸಗೀ ಕ್ಷೇತ್ರದಲ್ಲಿ ದೊಡ್ಡ ಪ್ರಮಾಣದಲಿ ಹಣವನ್ನು ತೊಡಗಿಸುತ್ತಿದ್ದೇವೆ, ಈ ವಿದ್ಯುತ್ ಉತ್ಪಾದನೆಗೆ

ನಾವು ಹೆಚ್ಚಿನ ಪ್ರಯತ್ನವನ್ನು ಮಾಡುತ್ತಿದ್ದೇವೆ ಎನ್ನುವ ಮಾತನ್ನು ತಾವು ಹೇಳಬಹುದು. ಆದರೆ ನಾನು ನಿಮಗೆ ಕೇಳುತ್ತೇನೆ. 1993-94ನೇ ಸಾಲಿನಲ್ಲಿ ನೀವೇ ನಡೆಸುತ್ತಿರುವ ಇಲಾಖೆಗೆ 699 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ ಎಂದು ಹೇಳಿದಿರಲ್ಲಾ, ಅದರಲ್ಲಿ ಎಷ್ಟು ಖರ್ಚು ಮಾಡಿದ್ದೀರಿ ಸ್ವಾಮಿ? 1994-95ನೇ ಸಾಲಿಗೆ ಇಷ್ಟು ಉದ್ದುದ್ದ ಭಾಷಣ ಮಾಡಿ ಈ ತುದಿಗೆ ನಿಮ್ಮನ್ನು ಕರೆದುಕೊಂಡು ಹೋಗಿ ಮುಟ್ಟಿಸುತ್ತೇವೆ ಎಂದು ಜನರಿಗೆ ಆಕಾಶ ತೋರಿಸಿ ತೆಗೆದಿಟ್ಟಿರುವ ಹಣ 600 ಕೋಟಿ ರೂಪಾಯಿಗಳು ಮಾತ್ರ. ಖಾಸಗೀ ವಲಯಕ್ಕೆ ವಿದ್ಯುಚ್ಛಕ್ತಿ ಉತ್ಪಾದನೆ ಹೊಣೆಯನ್ನು ಒಪ್ಪಿಸುವ ಮಾತನ್ನು 1990ರಿಂದ ಹೇಳಿಕೊಳ್ಳುತ್ತಾ ಬರುತ್ತಿದ್ದೀರಿ. 1992ರಲ್ಲಿ ಈ ಬಗ್ಗೆ ಟೆಂಡರ್ ಕರೆದು ಪ್ರಕಟಣೆ ಹೊರಡಿಸಿ ಎಲ್ಲಾ ಆಗಿದೆ ಎಂದ ಮೇಲೆ ಅದು ಯಾವ ಸ್ಥಿತಿಯಲ್ಲಿ ಇದೆ ಎನ್ನುವ ಬಗ್ಗೆ ಭಗವಂತ ಕಾಪಾಡಬೇಕು. ಕೊನೇ ಪಕ್ಷ ತಾವು ಈ ಇಲಾಖೆಯಲ್ಲಿ ಇರುವ ಸಂದರ್ಭದಲ್ಲಿ ನೀರಾವರಿ ಇಲಾಖೆಗೆ ಕೊನೇ ಪಕ್ಷ ಒಂದು ಸಾವಿರ ಕೋಟಿ ರೂಪಾಯಿಗಳನ್ನು, ಬೇರೆ ಎಲ್ಲ ಕಾರ್ಯಕ್ರಮಗಳನ್ನು ಬದಿಗೊತ್ತಿ ಖರ್ಚು ಮಾಡುತ್ತೇವೆ, ನಾಡಿನ ಜನರಿಗೆ ಭರವಸೆ ಕೊಡುತ್ತಿದ್ದೇವೆ, ಪಾಪಕ್ಕೆ ಪ್ರಾಯಶ್ಚಿತ ಎಂದುಕೊಂಡು ನಾಲ್ಕೂವರೆ ವರ್ಷ ಕಳೆದು ಮನೆಗೆ ಹೋಗುತ್ತಿರುವ ಕಾಲದಲ್ಲಾದರೂ ಸಹ ಈ ನಾಲ್ಕೂವರೆ ಕೋಟಿ ಜನರ ಋಣ ತೀರಿಸುತ್ತೇವೆ, ಈ ಸಾಹಸ ಮಾಡುತ್ತಿದ್ದೇವೆ ಎಂದು ಹೇಳಬಹುದಾಗಿತ್ತಲ್ಲವೇ ನೀವು? ಆ ರೀತಿ ಹಣವನ್ನು ನೀವು ನಿಮ್ಮ ಇಲಾಖೆಗೆ ತೆಗೆದುಕೊಳ್ಳುವಂತಹ ಒಂದು ಪ್ರಾಮಾಣಿಕ ಪ್ರಯತ್ನವನ್ನು ಮಾಡಬಹುದಾಗಿತ್ತಲ್ಲವೇ? ಏಕೆ ಮಾಡಲಿಲ್ಲ? ಆ ಶಕ್ತಿ ನಿಮಗೆ ಇದೆ. ಆದರೂ ಏಕೆ ಮಾಡುತ್ತಿಲ್ಲ ಎನ್ನುವ ಗುಟ್ಟು ನಮಗೆ ಅರ್ಥವಾಗುತ್ತಿಲ್ಲ. ಬಹುಶಃ ಯಾವಾಗ ಮಾಡುತ್ತೀರಿ ಎಂದು ನೋಡೋಣ. ಏನು ಮಾಡೋಣ ಮುಖ್ಯಮಂತ್ರಿಗಳು ಎದುರುಗಡೆ ಇಲ್ಲ. ನಿಮ್ಮ ಮುಖ್ಯಮಂತ್ರಿಗಳು ಏನು ಹೇಳಿದರು ಸ್ವಾಮಿ? ಮಾನ್ಯ ಬಂಗಾರಪ್ಪನವರು ಯಾರು? ನಿಮ್ಮ ಮುಖ್ಯಮಂತ್ರಿಗಳಾಗಿದ್ದವರು. ಅಲ್ಲ ಎಂದು ನೀವು ಹೇಳುವುದಕ್ಕೆ ಸಾಧ್ಯವಿಲ್ಲ.

1993-94ನೇ ಸಾಲಿನಲ್ಲಿ ಅವರು ಮಾಡಿದ ಕೆಲಸಗಳ ಅಂಕಿಅಂಶ ಕೊಟ್ಟು ಜಾಲಾಡುವಂಥ ಕೆಲಸವನ್ನು ಈ ರಾಜ್ಯದ ಹೊಸ ಮುಖ್ಯಮಂತ್ರಿಗಳಾದ ಶ್ರೀಮಾನ್ ವೀರಪ್ಪಮೊಯ್ಲಿಯವರು ಮಾಡಿಬಿಟ್ಟರು. ಅದು ಮಾಡಿದ ಮೇಲೆ, ತಾನು ಮುಂದೆ ಬಜೆಟ್ ಮಂಡನೆ ಮಾಡುವಂಥ ಸಂದರ್ಭದಲ್ಲಿ, ಅಪರಾಧಿ ಸ್ಥಾನದಲ್ಲಿ ನಿಂತು ಅಂಕಿಅಂಶಗಳನ್ನು ಕೊಡಬೇಕಾಗುತ್ತದೆ, ಎಚ್ಚರದಿಂದ ಮಾತನಾಡಬೇಕು ಎಂಬ ವಿವೇಚನೆ ಇದೆಯೇನು ಅವರಿಗೆ. ಅವರು ಏನು ಹೇಳಿದರು. ಇದು 1993-94ರ ಆಯವ್ಯಯ; ಪ್ಯಾರಾ 42. 1986-87ರಲ್ಲಿ ಕೃಷ್ಣಾ ನದಿ ಕಣಿವೆ ಪ್ರದೇಶಕ್ಕೆ ಒಂದು, ಮತ್ತು ಕಾವೇರಿ ನದಿ ಕಣಿವೆ ಪ್ರದೇಶಕ್ಕೆ ಮತ್ತೊಂದು ಹೀಗೆ ರಚಿಸಲಾಗಿದ್ದ ಎರಡು ಏತ ನೀರಾವರಿ ನಿಗಮಗಳು ಯಾವುದೇ ರೀತಿಯಲ್ಲಿ ಉಪಯುಕ್ತವಾಗಿಲ್ಲವೆಂಬುದು ರುಜುವಾತಾಗಿದೆ. ಈ ನಿಗಮಗಳನ್ನು ಸ್ಥಾಪಿಸಿದಂದಿನಿಂದ ಅವುಗಳಿಗೆ ಬಜೆಟ್ನಲ್ಲಿ ನಿಗದಿ ಮಾಡಿದ್ದ 8 ಕೋಟಿ ರೂಪಾಯಿಗಳಲ್ಲಿ 6.9 ಕೋಟಿ ರೂಪಾಯಿಗಳು ಸಿಬ್ಬಂದಿ ವೆಚ್ಚಕ್ಕಾಗಿಯೇ ವಿನಿಯೋಗಿಸಲಾಗಿದೆ. ಆದ್ದರಿಂದ 1993ರ ಏಪ್ರಿಲ್ನಿಂದ ಈ ಎರಡು ನಿಗಮಗಳನ್ನು ರದ್ದುಪಡಿಸಲಾಗುವುದು ಮತ್ತು ಅವುಗಳ ಕಾರ್ಯವನ್ನು ನೀರಾವರಿ ಇಲಾಖೆಗೆ ವಹಿಸಿಕೊಡಲಾಗುವುದು.

ಹಾಗಿದ್ದರೆ ನಾನು ನಿಮ್ಮನ್ನು ಕೇಳುತ್ತೇನೆ, ಈ ನಿಮ್ಮ ಬಜೆಟ್ನಲ್ಲಿ ಈ ಎರಡು ನಿಗಮಗಳನ್ನು ರದ್ದುಮಾಡಿದ ಮೇಲ, ನೀರಾವರಿ ಇಲಾಖೆಗೆ ವಹಿಸಿಕೊಂಡಮೇಲೆ, ಏನು ಸಾಧನೆ ಮಾಡಿದ್ದೀರಿ ಎಂಬ ಬಗ್ಗೆ ಒಂದು ವಾಕ್ಯ ಹುಡುಕಿಕೊಡುತ್ತೀರಾ? ಹಾಗಿದ್ದರೆ, ಮಾನ್ಯ ಬಂಗಾರಪ್ಪನವರನ್ನು ಏಕೆ ಟೀಕೆ ಮಾಡಿದಿರಿ. ಅವರು 8 ಕೋಟಿ ರೂಪಾಯಿ ತೆಗೆದಿಟ್ಟಿದ್ದರಲ್ಲಿ"

ಶ್ರೀ ಎಸ್.ಎಂ. ಕೃಷ್ಣ: ಅದು ಬಂಗಾರಪ್ಪನವರು ಮಾಡಿದ್ದಲ್ಲ, ಅವರ ಹಿಂದಿನವರು ಮಾಡಿದ್ದು.

ಶ್ರೀ ಬಿ.ಎಸ್. ಯಡಿಯೂರಪ್ಪ: ಅಂದರೆ ಬಂಗಾರಪ್ಪನವರೂ ಸೇರಿಕೊಂಡರು. ಅವರು ಬಂದಾಗಲೂ ಆ ನಿಗಮಗಳಿದ್ದವು. ಇಂಜಿನಿಯರುಗಳನ್ನು ಕೂಡಿಸಿ, ಪುಕ್ಕಟೆ ಸಂಬಳ ಕೊಟ್ಟಿರಲ್ಲ; ಅದೇ ಕೆಲಸವನ್ನು ನೀವು ಈಗ ಮಾಡಿದ್ದೀರಾ. ನಾನು ಅವರೊಬ್ಬರಿಗೆ ಹೇಳುತ್ತಿಲ್ಲ, ನೀವೇನು ಮಾಡಿದಿರಿ. ಇಲ್ಲಿ ಏನು ಹೇಳಿದಿರಿ. ಯಾವುದೇ ಕಾರಣಕ್ಕೂ ಸಹ, ಈ ಎರಡು ನಿಗಮಗಳನ್ನು ರದ್ದು ಮಾಡಿ, ಈ ಕಾರ್ಯವನ್ನು ನೀರಾವರಿ ಇಲಾಖೆಗೆ ವಹಿಸಿಕೊಡುತ್ತೇವೆ ಎಂದು ಹೇಳಿದಿರಿ. ತಾವು ಉತ್ತರ ಕೊಡುವಂಥ ಸಂದರ್ಭದಲ್ಲಿ, ನಾವು ನಾಲ್ಕೇ ಜನ ಸದಸ್ಯರು ಇರುವುದು. ಕೊನೇ ಪಕ್ಷ ಇವತ್ತು ಮಾತನಾಡುವ ಅವಕಾಶ ಸಿಕ್ಕಿದೆ. ಏಕೆಂದರೆ, ನಿಮ್ಮ ಮುಖ್ಯಮಂತ್ರಿಗಳು ಬುದ್ಧಿವಂತರು ಇದ್ದಾರೆ. ಯಾವುದನ್ನು ನಾವು ಹೇಳುತ್ತೇವೆ, ಅದಕ್ಕೆ ಅವರು ಉತ್ತರ ನೇರವಾಗಿ ಕೊಡುವುದಿಲ್ಲ. ಸೌತ್ ಕೆನರಾದವರನ್ನು ಈ ದೃಷ್ಟಿಯಿಂದಲಾದರೂ ಅಪ್ರಿಷಿಯೇಟ್ ಮಾಡಬೇಕು. ಹೀಗೆ ಬನ್ನಿ ಎಂದರೆ, ಅವರು ಹಾಗೆ ಬಳಸಿಕೊಂಡು ಬರುತ್ತಾರೆ. ನಮ್ಮ ಮನೋರಮಾ ಮಧ್ವಾರಾಜ್‌ರವರು, ಹಿರಿಯ ಸಚಿವರು, ಈ ಮಾತಿಗೆ ಅವರು ಬೇಜಾರು ಮಾಡಿಕೊಳ್ಳುವುದಿಲ್ಲ, ಅದು ಬುದ್ಧಿವಂತಿಕೆಯ ಲಕ್ಷಣ; ಅದನ್ನು ಎಲ್ಲರೂ ಅಪ್ರಿಷಿಯೇಟ್ ಮಾಡಬೇಕು. ಆದರೆ, ಜನರಿಗೆ, ಸತ್ಯಕ್ಕೆ ದೂರವಾದ ಮಾತನ್ನು ಹೇಳಿ, ಸದಾಕಾಲ ಹೀಗೆ ಮುಂದುವರಿದುಕೊಂಡು ಹೋಗುವುದು ಸರಿಯಲ್ಲ, ಮನೋರಮಾ ಮಧ್ವಾರಾಜ್‌ರವರು ತುಂಬಾ ಸತ್ಯ ಹೇಳುತ್ತಾರೆ, ಅವರ ಬಗ್ಗೆ ನಾನು ಹೇಳುತ್ತಾ ಇಲ್ಲ, ನಾನು ಮುಖ್ಯಮಂತ್ರಿಗಳ ಬಗ್ಗೆ ಮಾತನಾಡುತ್ತಿದ್ದೇನೆ.

ಆದ್ದರಿಂದ, ಅವರು ತಪ್ಪು ತಿಳಿದುಕೊಳ್ಳುವ ಅಗತ್ಯವಿಲ್ಲ. ನೀವು ಏನು ಹೇಳಿದಿರಿ, ಎರಡು ನಿಗಮಗಳನ್ನು ರದ್ದು ಮಾಡುತ್ತೇವೆ, ಅವುಗಳ ಕೆಲಸವನ್ನು ನೀರಾವರಿ ಇಲಾಖೆಗೆ ವಹಿಸಿ ಕೊಡುತ್ತೇವೆಂದು ಹೇಳಿದಿರಿ. ಸ್ವಾಮಿ, ನಾನು ಹೇಳುತ್ತೇನೆ, ಈ ದಿವಸದವರೆಗೆ, ಈ ಎರಡೂ ಏತನೀರಾವರಿಗೆ ಸಂಬಂಧಪಟ್ಟಂತೆ, 80 ಜನ ಇಂಜಿನಿರ್ಗಳು ಸೇರಿ ಒಟ್ಟು 140 ಜನ ಸಿಬ್ಬಂದಿವರ್ಗಕ್ಕೆ ಪ್ರತಿ ತಿಂಗಳಿಗೆ ಅವರನ್ನು ಕೂಡಿಸಿಕೊಂಡು ಏಳೂವರೆ ಲಕ್ಷ ರೂಪಾಯಿ ಸಂಬಳ ಕೊಡುತ್ತಾ ಇದ್ದೀರಿ. ನೀವೇನಾದರೂ ನಿಮ್ಮ ಇಲಾಖೆಯನ್ನು ಸರಿಯಾಗಿ ನೋಡಿಕೊಳ್ಳುತ್ತಿದ್ದರೆ, ಕಳಕಳಿ ಇದ್ದಿದ್ದರೆ, ಈ ಇಂಜಿನಿಯರುಗಳನ್ನು ಬೇರೆ ಬೇರೆ ಕಡೆಗೆ ವರ್ಗಾವಣೆ ಮಾಡುವಂಥ ಕೆಲಸವನ್ನಾದರೂ ಮಾಡಬೇಕಾಗಿತ್ತಲ್ಲ. ಆ ಇಂಜಿನಿಯರುಗಳು ಬಂದು ನಮಗೆ ಹೇಳುತ್ತಾರೆ, ನಮಗೆ ಒಂದು ರೂಪಾಯಿಯ ಕೆಲಸವೂ ಇಲ್ಲ, ತಿಂಗಳಿಗೆ ಏಳೂವರೆ ಲಕ್ಷ ರೂಪಾಯಿಗಳ ಸಂಬಳ ಕೊಡುತ್ತಿದ್ದಾರೆ. ಆಡಳಿತ ಪಕ್ಷದವರಂತೂ ಸತ್ತಿದ್ದಾರೆ. ನೀವಾದರೂ ಬದುಕಿದ್ದೀರಾ ಎಂದು ಜನ ಕೇಳುತ್ತಿದ್ದಾರೆ. ಆದರೆ, ಈ ವಿಷಯ ಏಕೆ ಹೇಳುವುದಿಲ್ಲ, ಏಕೆ ಮಾತನಾಡುವುದಿಲ್ಲ, ಅಂದರೆ, ನಿಮಗೆ ಬಿಡುವು ಇಲ್ಲ, ಅಲ್ಲಿ ಏಳೂವರೆ ಲಕ್ಷ ರೂಪಾಯಿ ಪ್ರತಿ ತಿಂಗಳೂ ಸಂಬಳ ತೆಗೆದುಕೊಂಡು, ಕೆಲಸ ಮಾಡಬೇಕಾದ 8 0 ಜನ ಇಂಜಿನಿಯರ್ಸ್ ಕೈಕಟ್ಟಿ ಕುಳಿತುಕೊಂಡಿದ್ದಾರೆ. ಪುಕ್ಕಟೆ ಸಂಬಳ ಕೊಡುತ್ತಿದ್ದೀರಿ. ಇದಕ್ಕಾಗಿ ನಿಮ್ಮನ್ನು ಉಪ ಮುಖ್ಯಮಂತ್ರಿಗಳನ್ನಾಗಿ ಮಾಡಲಾಗಿದೆಯೇ. ನೀವು ಇದೆಲ್ಲವನ್ನೂ ನೋಡಬೇಕಾಗಿತ್ತಲ್ಲ. ನಿಮ್ಮ ಅಧಿಕಾರಿ ಕೈಕಟ್ಟಿಕೊಂಡು ಕುಳಿತಿರಬೇಕಾದರೆ, ಅವರನ್ನು ಬೇರೆ ಕಡೆ ಉಪಯೋಗ ಮಾಡಿಕೊಳ್ಳಬೇಕೆಂಬ ಯೋಚನೆ ಬೇಡವೆ? ಸರ್ಕಾರ ಬರುತ್ತೆ, ಹೋಗುತ್ತೆ, ಘಟ್ಟಿಯಾಗಿರುವಂತೆ ಅಧಿಕಾರಿಗಳ ಬಗ್ಗೆ ಗಮನ ಕೊಡದೆ ಪುಕ್ಕಟೆಯಾಗಿ ಏಳೂವರೆ ಲಕ್ಷ ರೂಪಾಯಿ ಸಂಬಳ ಕೊಟ್ಟುಕೊಂಡು ಕುಳಿತಿದ್ದೀರಲ್ಲ; ಇದು ಯಾರಪ್ಪನ ಮನೆ ಗಂಟು ಸ್ವಾಮಿ. ಈ ನಾಡಿನ ಜನ ಕೊಟ್ಟ ತೆರಿಗೆ ಹಣ ತಾನೇ. ಬೇರೆ ಅಭಿವೃದ್ಧಿ ಕಾರ್ಯಗಳಿಗೆ ದುಡ್ಡಿಲ್ಲದೆ ಒದ್ದಾಡುತ್ತಿರುವಂಥ ಸಂದರ್ಭದಲ್ಲಿ, ಮನಬಂದಂತೆ,

ಜನರನ್ನು ಶೋಷಣೆ ಮಾಡಿ, ಒಂದೊಂದು ಪೈಸೆ ತೆರಿಗೆಯನ್ನು ಸಂಗ್ರಹ ಮಾಡುವಂಥ ಈ ಕಾಲದಲ್ಲಿ, ಅದನ್ನು ಸರಿಯಾದ ರೀತಿಯಲ್ಲಿ ಉಪಯೋಗ ಮಾಡಿಕೊಳ್ಳುವಂಥ ಕೆಲಸ ಮಾಡಬೇಡವೇ? ಆ ಅಧಿಕಾರಿಗಳನ್ನು ಬೇರೆ ಕಡೆಗೆ ವರ್ಗಾವಣೆ ಮಾಡಿ ಅವರಿಂದ ಕೆಲಸವನ್ನು ಮಾಡಿಸಿಕೊಳ್ಳುವಂಥ ಪುರುಸೊತ್ತು ನಿಮಗಿಲ್ಲವೆನ್ನುವುದಾದರೆ, ಮುಂದೆ ಏನಾಗಬಹುದು.

ಇನ್ನು ಗ್ರಾಮೀಣ ಅಭಿವೃದ್ಧಿ ಬಗ್ಗೆ, ಬಹಳ ಕಳಕಳಿ ಇರುವಂಥ ಪಕ್ಷ ನಿಮ್ಮದು. ಇಂದು ಜಿಲ್ಲಾ ಪರಿಷತ್ ವ್ಯವಸ್ಥೆ ಏನಾಗಿದೆ. ಸಕಾಲಕ್ಕೆ ಹಣವನ್ನು ಬಿಡುಗಡೆ ಮಾಡಿದ್ದೀರಾ? ಅಭಿವೃದ್ಧಿ ಕಾರ್ಯಗಳನ್ನು ನಡೆಸುತ್ತಿದ್ದೀರಾ? ತಾವೇ ಇವತ್ತು ಕೊಟ್ಟಿರುವಂಥ ಉತ್ತರದಲ್ಲಿ 1993-94ನೇ ಸಾಲಿನಲ್ಲಿ ಪ್ಲಾನ್ ಅಲೋಕೇಷನ್ ತಾವು ಮಾಡಿದ್ದು 771ಕೋಟಿ 31 ಲಕ್ಷಕ್ಕೆ ಯೋಜನೇತರ ಮೊತ್ತ 1085 ಕೋಟಿ 98ಲಕ್ಷಕ್ಕೆ ಯೋಜನಾ ವೆಚ್ಚ ನೀವು ಬಿಡುಗಡೆ ಮಾಡಿರುವಂತಾದ್ದು ಜಿಲ್ಲಾಪರಿಷತ್ತುಗಳಿಗೆ ಕೇವಲ 556 ಕೋಟಿ 50 ಲಕ್ಷ. ಯೋಜನೇತರ ಮೊತ್ತ 1085 ಕೋಟಿ 98 ಲಕ್ಷ ಬಿಡುಗಡೆ ಮಾಡಬೇಕಾದ ಕಡೆ ನೀವು ಬಿಡುಗಡೆ ಮಾಡಿರುವುದು 679 ಕೋಟಿ 71 ಲಕ್ಷ ಮಾತ್ರ. ಅಂದರೆ, 621 ಕೋಟಿ ರೂಪಾಯಿಗಳಷ್ಟು ಇವತ್ತು ಕಡಿಮೆ ವೆಚ್ಚ ಮಾಡಿದ್ದೀರಿ. ಹೀಗಾದರೆ ಅಲ್ಲಿಯ ಅಭಿವೃದ್ಧಿ ಕಾರ್ಯಗಳು ಹೇಗಾಗುತ್ತವೆ. ನಾನ್ ಪ್ಲಾನ್ ಎಕ್ಸಪೆಂಡೀಚರ್ ಬಗ್ಗೆ ನಾನು ಚಿಂತೆ ಮಾಡುವುದಿಲ್ಲ, ಕೊನೇಪಕ್ಷ ಪ್ಲಾನ್ ಎಕ್ಸಪೆಂಡೀಚರ್ ಬಗ್ಗೆ ಪೂರ್ಣ ಹಣವನ್ನು ಬಿಡುಗಡೆ ಮಾಡುವುದಕ್ಕೆ ನಿಮಗೇನು ತೊಂದರೆಯಾಗಿತ್ತು. ಅಂದರೆ ನಿಮ್ಮ ಹತ್ತಿರ ಹಣಕಾಸು ಇಲ್ಲ, ದುಡ್ಡಿಲ್ಲ. ಸಂಪನ್ಮೂಲಗಳ ಕೊರತೆ ಇದೆ, ಸತ್ಯಸಂಗತಿಯನ್ನು ಜನರಿಗೆ ಹೇಳುತ್ತಿಲ್ಲ. ಯಾವುದಾದರೂ ಒಂದು ಬಾಬಿನಲ್ಲಿ ನೀವು ಹೇಳಿದಂತೆ, ಕೆಲಸ ಮಾಡಿರುವಂಥ ಒಂದು ಉದಾಹರಣೆ ಇದೆಯೇ ಎನ್ನುವುದನ್ನು ಈ ಸಂದರ್ಭದಲ್ಲಿ ನಿಮ್ಮನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ರೈತರಿಗಂತೂ ಒಂದು ರೀತಿಯ ದ್ರೋಹವನ್ನೇ ಮಾಡಿಬಿಟ್ಟಿದ್ದೀರಿ. ಅನೇಕ ಭರವಸೆಗಳನ್ನು ಕೊಟ್ಟು, ಮಣ್ಣಿನ ಮಕ್ಕಳು ನಾವು 100ಕ್ಕೆ 90 ಜನ ಆಯ್ಕೆ ಮಾಡಿ ಬಂದರೂ ಸಹ, ಯಡಿಯೂರಪ್ಪ ಇಲ್ಲಿ ಕೂಗಿ, ಕೂಗಿ ತನ್ನ ಗಂಟಲು ಕಿತ್ತುಕೊಂಡು ಹೋಯಿತೇ ಹೊರತು ನಾನು ಶೋಷಣೆ ಮಾಡಿಕೊಂಡನೇ ಹೊರತು, ಪ್ರಾಮಾಣಿಕವಾಗಿ ಆ ಬಗ್ಗೆ ಗಮನಕೊಟ್ಟಿದ್ದೀರಾ? ಸ್ವಾಮಿ, ನೀವು ಈಗೇನು ಹೇಳುತ್ತೀರಿ ಅಂದರೆ ನನ್ನದು ಅಪಪ್ರಚಾರ, ರೈತರ ಸಾಲ ಎನ್ನುವಂಥ ಮಾತನ್ನು ಯಡಿಯೂರಪ್ಪ ರಾಜ್ಯದ ಉದ್ದಗಲಕ್ಕೂ ಹೇಳಿಕೊಂಡು ಬಂದ; ಇದು ನಮಗೇನೂ ಸಂಬಂಧವಿಲ್ಲ ಎನ್ನುವ ಮಾತನ್ನು ತಾವು ಹೇಳಿದಿರಿ. ಅನೇಕ ಸಾರಿ ನಿಮ್ಮ ಮುಖ್ಯಮಂತ್ರಿಗಳು ಹೇಳಿದ್ದಾರೆ. ನನಗೆ ಇನ್ನೂ ಬಹಳ ವಿಷಯಗಳು ಹೇಳಬೇಕಾದ್ದು ಇದೆ. ಏಕೆಂದರೆ, ಆಮೇಲೆ ನೀವು ಸಿಗುವುದಿಲ್ಲ. ಚುನಾವಣೆಗೆ ಹೋದ ಮೇಲೆ ನೀವು ಅಲ್ಲಿರುವುದಿಲ್ಲವೆಂಬುದು ನನಗೆ ಗೊತ್ತಿದೆ. ನಿಮ್ಮ ಕರ್ನಾಟಕ ವಿಧಾನ ಸಭಾ ಚುನಾವಣೆ ಪ್ರಣಾಳಿಕೆಯಲ್ಲಿ ರೈತರ ಬಗ್ಗೆ ಬಹಳ ಕಳಕಳಿ ಇರುವಂಥ ಜನ ನಾವು ಎಂದು ಹೇಳಿದಿರಿ.

ಯಡಿಯೂರಪ್ಪ ಹೇಳಿದ ಎಂದು ಹೇಳಿ, ರಾಜ್ಯದ ಉದ್ದಗಲಕ್ಕೆ ನನ್ನ ವಿರುದ್ಧ ಅಪಪ್ರಚಾರ ಮಾಡಿಕೊಂಡು ಬಂದ ನೀವು ಈ ಬಗ್ಗೆ ಏನು ಹೇಳಿದಿರಿ; ಚುನಾವಣಾ ಪ್ರಣಾಳಿಕೆ, ಪೇಜ್ 9. ಮುಂದಿನ ವಿಷಯಕ್ಕೆ ನಾನು ಹೋಗುವುದಿಲ್ಲ. ಕಾಂಗ್ರೆಸ್ ಪಕ್ಷದ ಪ್ರಸಿದ್ಧಿ ಘೋಷಣೆಯನ್ನು ಪ್ರಧಾನಿ ರಾಜೀವ್ ಗಾಂಧಿಯವರು ಘೋಷಿಸಿದ್ದಾರೆ. ಕರ್ನಾಟಕದ ಸಮಸ್ತ ಕೃಷಿಕರ ಪರವಾಗಿ, ಈ ದಿಟ್ಟ ನಿರ್ಧಾರಕ್ಕಾಗಿ, ಕಾಂಗ್ರೆಸ್ಪಕ್ಷ ಪ್ರಧಾನಿಯವರನ್ನು ಅಭಿನಂದಿಸುತ್ತದೆ. ಅಲ್ಲದೆ, ಕಗ್ಗಂಟಾಗಿರುವ ಕೃಷಿಕರ ಸಾಲವನ್ನು ಮನ್ನಾ ಮಾಡುವಂತೆ ಪ್ರಧಾನಿಯವರನ್ನು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಒತ್ತಾಯಿಸುತ್ತದೆ."ಎಂದು ಹೇಳಿದ್ದೀರಿ. ನಾನು ಇಲ್ಲಿ ಈ ವಿಷಯ ಎತ್ತಿದರೆ, ನೀವು

ಇಲ್ಲೇಕೆ ಬೊಬ್ಬೆ ಹೊಡೆಯುತ್ತೀರಿ, ಅಲ್ಲಿ ಪ್ರಧಾನಿಯವರು ನಮ್ಮವರೇ ಇದ್ದಾರೆ, ಅಲ್ಲಿ ಹೋಗಿ ಧರಣಿ ಮಾಡಿ ಎಂದು ಹೇಳಿದರು. ಈ ದೇಶಕ್ಕೆ ಅನ್ನ ಕೊಡತಕ್ಕ ರೈತ, ಅನ್ನದಾತ, ಬೆಳೆದಂಥ ಬೆಳೆಗೆ ಯೋಗ್ಯ ಬೆಲೆ ಸಿಗದೇ ಬಡ್ಡಿ, ಸುಸ್ತಿ ಬಡ್ಡಿ ಭಾರದಲ್ಲಿ, ಸಾಲಗಾರನ ಮಗನಾಗಿ ಸಾಯುತ್ತಾ ಇದ್ದಾನೆ. ಅವನಿಗೇನಾದರೂ ಪರಿಹಾರ ಹುಡುಕಬೇಕು, ಎಂಬ ಕಳಕಳಿ ಇಟ್ಟುಕೊಂಡು, ಚುನಾವಣಾ ಪ್ರಣಾಳಿಕೆಯಲ್ಲಿ ನೀವೇ ಹೇಳಿದ್ದೀರಿ ತಾನೆ. ಇದು ಜಾರಿ ಆಗದೇ ಇದ್ದರೆ ಬೇರೆ ವಿಷಯ. ಹಣಕಾಸಿನ ಕೊರತೆ ಇರುತ್ತದೆ. ಆದ್ದರಿಂದ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದ್ದೆಲ್ಲಾ ಆಗಬೇಕೆಂದು ನಾವೂ ಕೂಡ ಹೇಳುತ್ತಾ ಇಲ್ಲ. ಆದರೆ, ನಾನು ಹೇಳುವಂತಾದ್ದು ಈ ನಯವಂಚನೆ ಕೆಲಸ ಏಕೆ ಮಾಡುತ್ತೀರಿ. ಕೊನೇಪಕ್ಷ ನಾನು ನಿಮ್ಮನ್ನು ಕೇಳುತ್ತೇನೆ; ಈ ಹಿನ್ನೆಲೆಯಲ್ಲಿ ಅದೆಷ್ಟು ಸಾರಿ ಪ್ರಧಾನಿಯವರಿಗೆ ಪತ್ರ ಬರೆದಿದ್ದೀರಿ. ಚುನಾವಣಾ ಪ್ರಣಾಳಿಕೆಯಲ್ಲಿ 10 ಸಾವಿರದವರೆಗೆ ಸಾಲ ಮನ್ನಾ ಮಾಡುವುದಕ್ಕೆ ಪ್ರಧಾನಿಯವರನ್ನು ಒತ್ತಾಯ ಮಾಡುತ್ತೇವೆಂದು ಹೇಳಿದಿರಲ್ಲ, ಆ ಪತ್ರಗಳನ್ನು ಈ ಸಭೆಯ ಮುಂದೆ ಮಂಡನೆ ಮಾಡಿ. ಅಂದರೆ, ಚುನಾವಣಾ ಪ್ರಣಾಳಿಕೆಯಲ್ಲಿ ಬೇಕಾದಂಥ ಸುಳ್ಳುಗಳನ್ನು ಹೇಳಿಕೊಂಡು ಜನರನ್ನು ವಂಚನೆ ಮಾಡಿ, ಬಡವನ ಪರಿಸ್ಥಿತಿಯ ದುರ್ಲಾಭ ಪಡೆದು, ಅಧಿಕಾರಕ್ಕೆ ಬರುವುದರಲ್ಲಿ ನೀವು ಯಶಸ್ವಿಯಾಗಿದ್ದೀರೇ ವಿನಹ, ಅದನ್ನು ಸರಿಪರಿಸುವಂಥ ಪ್ರಾಮಾಣಿಕ ಪ್ರಯತ್ನ ಮಾಡಿದ್ದೀರಾ. ನಾನು ಹತ್ತು ಬಾರಿ ತಮ್ಮಲ್ಲಿ ವಿನಂತಿ ಮಾಡಿದೆ. ಕೊನೇಪಕ್ಷ ನಮ್ಮ ಸರ್ಕಾರದ ಬೊಕ್ಕಸದಲ್ಲಿ ಕೆಲವು ಬಾಬುಗಳನ್ನು ಕಡಿಮೆ ಮಾಡಿ, ಅತಿವೃಷ್ಟಿ, ನೆರೆ ಹಾವಳಿ, ಭೂಕಂಪಕ್ಕೆ ತುತ್ತಾಗಿರುವಂಥ ಈ ರೈತನ ಬಡ್ಡಿ, ಸುಸ್ತಿ ಬಡ್ಡಿಯನ್ನಾದರೂ ಮನ್ನಾಮಾಡಿ, ಮರು ಸಾಲ ಕೊಡುವಂಥ ವ್ಯವಸ್ಥೆ ಮಾಡಿ; ರೈತನು ತನ್ನ ಕಾಲ ಮೇಲೆ ತಾನು ನಿಲ್ಲುವಂಥ ವ್ಯವಸ್ಥೆ ಮಾಡಿ ಎಂದು ವೀರೇಂದ್ರಪಾಟೀಲರು ಮುಖ್ಯಮಂತ್ರಿಯಾಗಿ, ವಿಧಾನ ಸಭೆಯೊಳಗೆ ಬಂದ ಮೊದಲನೇ ದಿವಸವೇ ನಾನು ಧರಣಿ ಕುಳಿತುಕೊಂಡೆ. ಆವತ್ತೂ ಕೂಡ 5 ದಿವಸ ಸದನ ನಡೆಯಲಿಲ್ಲ.

ವೀರೇಂದ್ರ ಪಾಟೀಲರು ನನ್ನ ಬಗ್ಗೆ ಸಿಟ್ಟು ಮಾಡಿಕೊಂಡರು. ಆದರೆ, ಅವತ್ತು ಸಾಲ ವಸೂಲಾತಿಗೆ ತಡೆಯಾಜ್ಞೆಯನ್ನು ಕೊಟ್ಟರಿ. ಈ ನಾಡಿನ ಜನ ಸಾಲ ಮನ್ನಾ ಆಗಬಹುದು ಎಂದು ನಂಬಿಕೊಂಡರು. ಆದರೆ, ಇವತ್ತು ನಮಗೆ ಛೀಮಾರಿ ಹಾಕುತ್ತಿದ್ದಾರೆ. ನಿನ್ನೆ ನಿಮ್ಮ ಕ್ಷೇತ್ರದ ಮಂಡ್ಯ ಜಿಲ್ಲೆಗೆ ಹೋಗಿ ಬಂದೆ. ಆಗ ಹತ್ತು ಚೀಟಿಗಳು ಜನರಿಂದ ಬಂದವು. ನಾನು ಹೇಳಿದೆ, ನಾನು ಹೇಳಿಲ್ಲ, ನಿಮ್ಮ ಕೃಷ್ಣಾ ಅವರ ಪಾರ್ಟಿ, ಕಾಂಗ್ರೆಸ್ ಪಕ್ಷ ಹೇಳಿರುವುದು. ನಮ್ಮದು ನಾಲ್ಕು ಜನ ಇರುವಂಥ ಪಕ್ಷ, ನಾನು ಹೇಗೆ ಹೇಳಲಿ. ಎಂದು ಹೇಳಿದೆ. ಎಸ್.ಎಂ. ಕೃಷ್ಣರವರು ನಿಮ್ಮ ಕಡೆ ಬಂದಾಗ, ಅವರು ಮುಂದೆ ಹೋಗುವುದಕ್ಕೆ ಬಿಡಬೇಡಿ, ರಸ್ತೆಗೆ ಅಡ್ಡ ನಿಂತುಕೊಳ್ಳಿ ಎಂದು ಹೇಳಿದೆ. ನಿಮ್ಮ ಕ್ಷೇತ್ರದಲ್ಲಿ, ನಿಮ್ಮ ಚುನಾವಣಾ ಪ್ರಣಾಳಿಕೆಯನ್ನು ಓದಿ ಬಂದೆ.

4.20 ಪಿ.ಎಂ.

ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಚುನಾವಣಾ ಪ್ರಣಾಳಿಕೆಯಲ್ಲಿ ಮತ್ತು ಬಜೆಟ್ನಲ್ಲಿ ಹೇಳುವಂತಹ ಮಾತುಗಳಿಗೆ ಸ್ವಲ್ಪ ಬೆಲೆ ಇರುತ್ತದೆ. ಜನರು ಅದನ್ನು ನಂಬುತ್ತಾರೆ. ಆದ್ದರಿಂದ ಯಾವುದನ್ನು ಮಾಡುವುದಕ್ಕೆ ಸಾಧ್ಯ ಇದೆ ಬಹುತೇಕ ಅಂತಹ ಮಾತುಗಳನ್ನಾದರೂ ಹೇಳುವಂತಹ ಒಂದು ಪ್ರಾಮಾಣಿಕ ಪ್ರಯತ್ನ ಮಾಡಲಿಲ್ಲ, ಕೊನೆಯ ಪಕ್ಷ ಈಗಲಾದರೂ ಮಾಡಬಹುದು. ಏಕೆಂದರೆ ಚುನಾವಣೆಗೆ ನೀವು ಹೋಗಬೇಕಾಗಿದೆ. ಈ ಬಜೆಟ್ನಲ್ಲಿ ಹೇಳುವುದಕ್ಕಿಂತ ವೀರಪ್ಪಮೊಯಿಲಿಯವರದ್ದು ಒಂದು [illegible] [illegible] ಏನೆಂದರೆ ಚುನಾವಣೆ ಹತ್ತಿರ ಹತ್ತಿರ ಬಂದಂತೆ ಏನಾದರೂ

ಒಂದು 10 ಮಾತುಗಳನ್ನು ಹೇಳಿ ಪರಿಸ್ಥಿತಿಯನ್ನು ಹೇಗೋ ಮಾಡಿ ದಾಟುವಂತಹ ಪ್ರವೃತ್ತಿ ಅವರದ್ದು. ನೀವು ಅನುಭವಿಸಿದ್ದೀರಿ ನಿಮಗೆ ಗೊತ್ತಿದೆ, ಏನೆಂದರೆ, ನೀವು ಅವರ ಪಕ್ಕದಲ್ಲೇ ಕುಳಿತುಕೊಂಡು ಅನುಭವಿಸಿದ್ದೀರಿ. ಹೇಗೆ ಅವರು ಮುಖ್ಯಮಂತ್ರಿಗಳಾಗಿ ಚಾಣಾಕ್ಷತನದಿಂದ ಮಾತನಾಡುತ್ತಾರೆ ಎನ್ನುವುದು ನಿಮಗೆ ಗೊತ್ತಿದೆ. ಈಗಲಾದರೂ ನಾನು ನಿಮಗೆ ಹೇಳುತ್ತೇನೆ, ನಿಜವಾಗಿಯೂ ಈ ಚುನಾವಣಾ ಪ್ರಣಾಳಿಕೆಗೆ ಏನಾದರೂ ಒಂದು ಅರ್ಥ ಬರಬೇಕು ಅಂತ ಇದ್ದರೆ ಕೊನೆಯ ಪಕ್ಷ ಈ ರಾಜ್ಯದ ಜನರಲ್ಲಿ ಕ್ಷಮಾಪಣೆ ಕೇಳಿ 10 ಸಾವಿರದ ವರೆಗಿನ ಸಾಲವನ್ನು ಮನ್ನಾ ಮಾಡುವುದಕ್ಕೆ ಆಗಲಿಲ್ಲ ಎಂದು; ಕೇಂದ್ರದಲ್ಲಿ ಇವತ್ತು ಬೇರೆ ಸರ್ಕಾರ ಇಲ್ಲ ಇವತ್ತು ನಿಮ್ಮದ್ದೇ ಸರ್ಕಾರ ಇದೆ. ಕೊನೆಯಪಕ್ಷ ಒಂದು 10 ಪತ್ರಗಳನ್ನು ಬರೆದು ಪ್ರಧಾನಿಯವರನ್ನು ಭೇಟಿ ಮಾಡಿ ಈ ರಾಜ್ಯದ ಜನರ ಪರಿಸ್ಥಿತಿಯನ್ನು ಅವರಿಗೆ ಮನವರಿಕೆ ಮಾಡಿ ಬಡ್ಡಿ ಸುಸ್ತಿ ಬಡ್ಡಿಮನ್ನಾ ಮಾಡುತ್ತೇವೆ ಅದಕ್ಕೆ ಸಹಾಯ ಮಾಡಿ ಅಂತ ಆದರೂ ಕೇಳಬಹುದಿತ್ತು. ಅದನ್ನೂ ಮಾಡದೇ ಈ ರೈತ ಸಮೂಹಕ್ಕೆ ದ್ರೋಹ ಮಾಡುವಂತಹ ಕೆಲಸ ಮಾಡುತ್ತಿದ್ದೀರಿ. ನಿಮ್ಮ ಅಧಿಕಾರಿಗಳಿಗೆ ಯಾರು? ಏನು ಗೊತ್ತಿದೆ ಹೊಲ ಗದ್ದೆ ನೋಡಿದ್ದಾರೇನು? ಅಲ್ಲಿ ಸಭೆ ಸೇರಿದಾಗ ಮುಖ್ಯಮಂತ್ರಿಗಳ ಎದುರುಗಡೆ ವಿರೋಧಪಕ್ಷದ ನಾಯಕರುಗಳು ಎದುರುಗಡೆ ಹೋಗಿ ಹೇಗೆ ಕೋ ಅಪರೇಟೀವ್ ಸೊಸೈಟಿಗಳು ಮುಳುಗಿ ಹೋಗುತ್ತವೆ ಎಂದು ಅಂಕಿಅಂಶಗಳನ್ನು ಹೇಳಿ ಎಲ್ಲರನ್ನೂ ತೃಪ್ತಿ ಪಡಿಸುವಂತಹ ಕೆಲಸ ಮಾಡುತ್ತಾರೆಯೇ ಹೊರತು ಅತಿವೃಷ್ಟಿ ನೆರೆಹಾವಳಿ ಭೂಕಂಪಗಳಿಗೆ ತುತ್ತಾಗಿರತಕ್ಕಂಥ ರೈತನ ಪರಿಸ್ಥಿತಿ ಏನಾಗಿದೆ ಎಂಬುದರ ಚಿಂತನೆ ನಿಮ್ಮ ಅಧಿಕಾರಿಗಳಿಗೆ ಇದೆಯೇ? ಅಧಿಕಾರಿಗಳು ಹೇಳಿದಂತೆ ನಾವು ಕೆಲಸ ಮಾಡುವುದಾದರೆ ಜನ ಏಕೆ ನಮ್ಮನ್ನು ಚುನಾಯಿಸಿ ಕಳುಹಿಸಿಕೊಡಬೇಕಾಗಿತ್ತು? ಇಂತಹ ವಿಶೇಷ ಸಂದರ್ಭ ಬಂದಾಗ ಅಧಿಕಾರಿಗಳ ಮೂಲಕ ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಂಡು ಅವನ ನೆರವಿಗೆ ಬರುವಂತಹ ಧೈರ್ಯ ಬಾರದೆ ಇದ್ದರೆ ಈ ಅಜೀರ್ಣವಾಗುವಷ್ಟು ಬಹುಮತ ಕೊಟ್ಟಂತಹ ಈ ನಾಡಿನ ಮಣ್ಣಿನ ಮಕ್ಕಳಿಗೆ ನೀವು ದ್ರೋಹ ಮಾಡುತ್ತಿದ್ದೀರಿ ಅಂತ ಹೇಳದೆ ಇನ್ನೇನು ಹೇಳಬೇಕು ಸ್ವಾಮಿಯ ನಿಮಗೆ ರೈತನ ಬಗ್ಗೆ ಪ್ರಾಮಾಣಿಕ ಕಳಕಳಿ ಇದ್ದಿದ್ದರೆ ಇವತ್ತಿನ ಪರಿಸ್ಥಿತಿ ಬರುತ್ತಾ ಇತ್ತೇನು ಎನ್ನುವಂತಹ ಮಾತನ್ನು ಸಹ ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ನಿಮ್ಮ ಮುಖ್ಯಮಂತ್ರಿಗಳು ಏನೇನು ಮಾತುಗಳನ್ನು ಹೇಳಿದರು ಸ್ವಾಮಿ? 1991-92ರಲ್ಲಿ 2 ಲಕ್ಷ 35 ಸಾವಿರ ಮನೆಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದ್ದರೂ 1992ರ ಡಿಸೆಂಬರ್‌ವರೆಗೆ ಕೇವಲ 1579 ಮನೆಗಳನ್ನು ಮಾತ್ರ ಪೂರ್ಣಗೊಳಿಸಲಾಗಿದೆ. ಈ ಕಾರ್ಯಕ್ರಮವನ್ನು ಪುನಃ ಪರಿಶೀಲಿಸಿ ನಂತರ 160.5 ಕೋಟಿ ರೂಪಾಯಿಗಳ ಒಟ್ಟು ವೆಚ್ಚದಲ್ಲಿ 1993ರ ಜೂನ್ ವೇಳೆಗೆ ಒಂದು ಲಕ್ಷದ ಆರು ಸಾವಿರ ಮನೆಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ. ಇದರ ಜೊತೆಗೆ 93-94ರಲ್ಲಿ ಇನ್ನೂ ಒಂದು ಲಕ್ಷ ಮನೆಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ. ಇದರ ಜೊತೆಗೆ 93-94ರಲ್ಲಿ ಇನ್ನೂ ಒಂದು ಲಕ್ಷ ಮನೆಗಳ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗುವುದು ಎಂದು; ಯಾರು ಹೇಳಿದರು? ನಿಮ್ಮ ಪಕ್ಕದಲ್ಲಿ ಕುಳಿತುಕೊಂಡಂತಹ ಹಾಲಿ ಮುಖ್ಯಮಂತ್ರಿಗಳು, ಬಂಗಾರಪ್ಪನವರು ಏನೂ ಸಾಧಿಸಲಿಲ್ಲ ನಾನು ಕಡಿಯುತ್ತೇನೆಂದು ಹೇಳಿದಂತಹ ಅಂಕಿಅಂಶಗಳಿವು. ನಾನು ನಿಮ್ಮನ್ನು ಕೇಳುತ್ತೇನೆ ಸ್ವಾಮಿ, 2 ಲಕ್ಷ 35 ಸಾವಿರ ಮನೆಗಳಲ್ಲಿ ಕೇವಲ 1579 ಮನೆಗಳನ್ನು ಕಟ್ಟಿದ್ದರು ಅದಕ್ಕೆ 160 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿ 1 ಲಕ್ಷ 6 ಸಾವಿರ ಮನೆಗಳನ್ನು ಕಟ್ಟುತ್ತೇವೆ, ಅದೂ ಅಲ್ಲದೆ ಇನ್ನೂ ಒಂದು ಲಕ್ಷ ಮನೆಗಳನ್ನು ಕಟ್ಟುತ್ತೇವೆ. 2 ಲಕ್ಷದ 6 ಸಾವಿರ ಮನೆಗಳನ್ನು ಕಟ್ಟಬೇಕಾಗಿತ್ತು. ಸ್ವಾಮಿ ಎಲ್ಲಿಯಾದರೂ, ಈ ಬಜೆಟ್ ಪುಸ್ತಕದಲ್ಲಿ ನಾನು ಈ ರೀತಿ ಹೇಳಿದ್ದೆ, ಇಷ್ಟು ಮನೆಗಳನ್ನು ನಾನು ಕಟ್ಟಿದ್ದೇನೆ.

ಇಷ್ಟು ಮನೆಗಳನ್ನು ನಾನು ಇನ್ನು ಕಟ್ಟುವವನಿದ್ದೇನೆ ಎಂಬ ವಿವರ ಏನಾದರೂ ಇದೆಯೇ ಸ್ವಾಮಿ? ಮತ್ತೆ ಎರಡು ಲಕ್ಷ ಮನೆ ಯಾವುದೋ ಸೂರು ತೆಗೆದು ನೀವು ಏನೋ ಮಾಡುತ್ತೇನೆಂದು ಹೇಳಿದಿರಲ್ಲ; ನೆರಳು ಭಾಗ್ಯ ಏನಾಯಿತು ಸ್ವಾಮಿ? ಆ ಗುಡಿಸಲು ಎಲ್ಲಾ ತೆಗೆದು ಅಲ್ಲಿ ಸೂರು ಹಾಕಿ 3 ಸಾವಿರ ರೂಪಾಯಿ ಪ್ರಯೋಜನದಾರರಿಗೆ ಖರ್ಚು ಮಾಡಿ ಒಂದು ಲಕ್ಷ ಮನೆಗಳನ್ನು ಕಟ್ಟುತ್ತೇನೆಂದು ಹೇಳಿದಿರಲ್ಲ, ಅಂತಹ ಒಂದು ಮನೆ ಕಟ್ಟಿದ್ದೀರಾ ಸ್ವಾಮಿ? ಇದು ವಚನ ಭ್ರಷ್ಟ ಸರ್ಕಾರ ಅಲ್ಲವೇ? ಜನತೆಗೆ ಸುಳ್ಳು ಅಂಕಿಅಂಶಗಳನ್ನು ಕೊಟ್ಟು ದ್ರೋಹ ಮಾಡುವುದೇ ಕಾಂಗ್ರೆಸ್ ಸಂಸ್ಕೃತಿ ಏನು? ಅಂದ್ರೆ ಯಾವ ರೀತಿ ಜನಗಳಿಗೆ ವಂಚನೆ ಮಾಡುತ್ತಿದ್ದೀರಾ? ನಂಬಿಕೆ ದ್ರೋಹ ಮಾಡುತ್ತಿದ್ದೀರಾ ಎಂಬುದು ಇದರಿಂದಲೇ ತಿಳಿಯುತ್ತದೆ. ನಿಮ್ಮ ಲೆಕ್ಕದ ಪ್ರಕಾರ ಕಳೆದ ಮೂರು ವರ್ಷದಲ್ಲಿ ತಾಲ್ಲೂಕಿಗೆ ಸಾವಿರ ಮನೆಗಳು ವರ್ಷಕ್ಕೆ ಆಗಬೇಕಾಗಿತ್ತು. ಯಾವುದಾದರೂ ಒಂದು ತಾಲ್ಲೂಕಿನಲ್ಲಿ ಒಂದು ವರ್ಷದಲ್ಲಿ 3 ಸಾವಿರ ಮನೆಗಳು ಆಗಬೇಕಾದ ಕಡೆ 300 ಮನೆಗಳಾದರೂ ಆಗಿರುವಂತಹ ತಾಲ್ಲೂಕು ಯಾವುದಾದರೂ ಇದೆ ಏನು? ನಿಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಏನು ಹೇಳಿದ್ದೀರಾ ಸ್ವಾಮಿ? ನಾಳೆ ಸ್ವಲ್ಪ ಎಚ್ಚರಿಕೆಯಿಂದ ಚುನಾವಣಾ ಪ್ರಣಾಳಿಕೆಯಲ್ಲಿ ಬರೆಯಬೇಕಾಗುತ್ತದೆ ಉಪ ಮುಖ್ಯಮಂತ್ರಿಗಳೇ?

ಇನ್ನು ಮುಂದೆ ಹೇಗೆ ಬೇಕೋ ಹಾಗೆ ಬರೆಯುವುದಕ್ಕೆ ಜನ ಬಿಡುವುದಿಲ್ಲ ಜನ ಹಿಡಿದು ಕೇಳುತ್ತಾರೆ, ದೊಣ್ಣೆ ಎತ್ತಿಕೊಂಡು ಬರುತ್ತಾರೆ. ನಿಮಗೂ ಮರೆತು ಹೋಗಿರುತ್ತದೆ, ಹೇಳುತ್ತೇನೆ ಕೇಳಿ. ಹಿಂದೆ ಜನತಾ ದಳದವರು ಇದ್ದಾಗ ಬಹುಶಃ ಯಡಿಯೂರಪ್ಪನವರೇ ನಮ್ಮನ್ನು ಜಾಗ್ರತರನ್ನಾಗಿ ಮಾಡಿದ್ದೀರಾ? ಎಂದು ಹೇಳುತ್ತಿದ್ದರು. ಇರಲಿ ಬಿಡಿ, ಈಗ ಹೇಗೂ ವಿರೋಧಪಕ್ಷದವರು ನಮ್ಮನ್ನು ಬಿಟ್ಟರೆ ಬೇರೆ ಯಾರೂ ಇಲ್ಲ, ತಮಗೆ ಬೇಕಾದಂತೆ ಸಭೆ ನಡೆಸಿಕೊಂಡು ಹೋಗಬಹುದಲ್ಲ, ಬಹಳ ಮಜ ಇದೆ, ಮಾಡ್ರಿ; ಪ್ರಮುಖ ವಿರೋಧಪಕ್ಷ ನಿಮ್ಮದು ಒಂದು ರೀತಿ ಹೊಂದಾಣಿಕೆ ಇದ್ದಂತೆ. ಅವರು ಬೇಕು ಅಂದಾಗ ಇಲ್ಲಿ ಇರುತ್ತಾರೆ, ಬೇಡ ಅಂದಾಗ ಹೋಗುತ್ತಾರೆ. ನೀವು ಅವರನ್ನು ಯಾವಾಗ ಎತ್ತಿ ಹಾಕಬೇಕೋ ಆವಾಗ ಎತ್ತಿ ಹಾಕಿಸುತ್ತೀರಾ ಆಹಾ ಏನ್ರಿ ಇದು, ಬಹಳ ಮಜಾ ಇದೆ, ನಡೆಸುತ್ತಿದ್ದೀರಿ ನಡೆಸಿ.

ಶ್ರೀ ಎಸ್.ಎಂ. ಕೃಷ್ಣಾ: ಸ್ಪೀಕರ್‌ರವರ ಕೊಠಡಿಯಲ್ಲಿ ಏನು ನಡೆಯಿತು ಎನ್ನುವುದಕ್ಕೆ ನೀವೇ ಸಾಕ್ಷಿ. ನೀವು ಕಣ್ಣಾರೆ ನೋಡಿ ಈ ರೀತಿ ಅಪಾದನೆ ನಮ್ಮ ಮೇಲೆ ಮಾಡುತ್ತಿದ್ದಿರಲ್ಲ, ಇದು ಸರಿಯೇ? ನಾವು ಎತ್ತಿ ಹಾಕಿಸಿದ್ದೇವೆ ಅಂತ ಅವರು ಹೇಳದರಂತೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಅಲ್ಲಿ ನಮ್ಮ ಲಾ ಮಿನಿಸ್ಟರ್ ಹೇಳಿದರು, ಏನೆಂದರೆ, ನೀವೇ ನಮಗೆ ಹೇಳಿ ಹೊತ್ತಾಕಿಸಿಕೊಂಡ್ರಿ, ನಮಗೇನೂ ನಿಮ್ಮನ್ನು ಕಳುಹಿಸಬೇಕು ಅಂತ ಇರಲಿಲ್ಲ ಎಂದು.

ಶ್ರೀ ವಾಟಾಳ್ ನಾಗರಾಜ್: ಯಡಿಯೂರಪ್ಪನವರು ಒಳಗಡೆ ನಡೆದಿದ್ದನ್ನು ಒಂದು ತರಹ ಹೇಳುತ್ತಾ ಇಲ್ಲಿ ಒಂದು ತರಹ ಹೇಳುತ್ತಾರೆ. ಅದು ಅವರ ವೈಶಿಷ್ಟ್ಯ.

ಶ್ರೀ ಬಿ.ಎಸ್. ಯಡಿಯೂರಪ್ಪ: ನಾನು ಬಹಳ ಜವಾಬ್ದಾರಿ ಸ್ಥಾನದಲ್ಲಿದ್ದೇನೆ. ನಾನು ಇಷ್ಟು ಮಾತ್ರ ಹೇಳುತ್ತೇನೆ. ಅವತ್ತು ನನ್ನ ಕಣ್ಣಲ್ಲಿ ನೀರು ಬಂತು. ಒಂದು ಆಡಳಿತ ಪಕ್ಷವಾಗಿ ವಿರೋಧಪಕ್ಷದ ನಾಯಕರ ಜೊತೆಯಲ್ಲಿ ಮಾತನಾಡಬೇಕಾಗುತ್ತೆ. ಮನೆಗೆ ಕರೆಸಿ ಮಾತನಾಡಬೇಕಾಗುತ್ತೆ. ರಾಜ್ಯದ ಜನರ ಹಿತದೃಷ್ಟಿಯಿಂದ ನಾನು

ಸಹ ನಿಮ್ಮ ಮನಗೆ ಬರಬೇಕಾಗುತ್ತೆ, ಚರ್ಚೆ ಮಾಡಬೇಕಾಗುತ್ತೆ, ಇವರ ಬಗ್ಗೆ ನನ್ನದೇನೂ ಭಿನ್ನಾಭಿಪ್ರಾಯ ಇಲ್ಲ. ಆದರೆ ಧರಣಿ ಹೇಗೆ ನಡೆಯಬೇಕು. ಎಷ್ಟು ದಿವಸ ನಡೆಯಬೇಕು? ಯಾವಾಗ ಎತ್ತಿ ಹಾಕಬೇಕು ಅಂತ ಆಡಳಿತ ಪಕ್ಷದವರು ವಿರೋಧಪಕ್ಷದ ನಾಯಕರ ಪಕ್ಷದ ಅಧ್ಯಕ್ಷರ ಜೊತೆ ದೂರವಾಣಿ ಮೂಲಕ ಡೆಲ್ಲಿಗೆ ಮಾತನಾಡಿ ತೀರ್ಮಾನ ತೆಗೆದುಕೊಂಡು ಇದು ಮುಗಿಯುವಂತಹ ಸ್ಥಿತಿ ಬಂದಿತ್ತು. ಇದನ್ನೆಲ್ಲಾ ನಾಗರಾಜುರವರು ಹೇಳುವುದಕ್ಕೆ ಹಿಂದೆ ಮುಂದೆ ನೋಡುತ್ತಾರೆ; ಅದು ಬೇರೆ ವಿಷಯ. ಧರಣಿ ಮುಗಿಸಿ ನೀವು ಹೋಗ್ರಪ್ಪ, ಇದು ಸರಿಯಲ್ಲ ಏನೋ ಹೌಸ್ ಕಮಿಟಿ ಮಾಡುವುದಕ್ಕೆ ಸರ್ಕಾರದವರು ಇಚ್ಛೆಪಟ್ಟಿದ್ದಾರೆ, ಮಾಡಲಿ, ಹೋಗಿ ನೋಡಿಕೊಂಡು ಬರೋಣ ಅಂತ ಒಪ್ಪಿಕೊಳ್ಳುವಂತಹ ಸ್ಟೇಜ್ ಬಂದಾಗ ಇಲ್ಲಾ ಡೆಲ್ಲಿಗೆ ಮಾತನಾಡಿ ಅಂತ ಅವರು ಹೇಳಿದರು ಅಂತ ಡೆಲ್ಲಿಗೆ ಮಾತನಾಡಿ, ಇಲ್ಲಾ ಇಲ್ಲಾ ಇದನ್ನು ನಾಳೆವರೆಗೆ ಸ್ವಲ್ಪ ಮುಂದೂಡಿ ಆಮೇಲೆ ನಮ್ಮನ್ನು ನೀವು ಎತ್ತಿ ಹಾಕುವಿರಂತೆ ಅಂತ ಹೇಳಿ ಅಡ್ಜಸ್ಟ್ ಮಾಡಿಕೊಳ್ಳುತ್ತೀರಾ ಅಂದ್ರೆ ಈ ನಾಲ್ಕುವರೆ ಕೋಟಿ ಜನರ ಗತಿ ಏನಾಗಬೇಕು ಸ್ವಾಮಿ? ಮತ್ತೆ ನೀವು ಏನು ಹೇಳಿದ್ದೀರಾ ಎಂದು ಈ ಶಬ್ದಗಳನ್ನು ನೋಡಿ. ಹಸಿ ಸುಳ್ಳು ಹೇಳುವುದರಲ್ಲಿ ಜನರನ್ನು ವಂಚನೆ ಮಾಡುವುದರಲ್ಲಿ ನಿಮ್ಮನ್ನು ಬಿಟ್ಟರೆ ಬೇರೆ ಇಲ್ಲ ಸ್ವಾಮಿ. ಕಳೆದ 46 ವರ್ಷಗಳಿಂದ

ಶ್ರೀ ವಾಟಾಳ್ ನಾಗರಾಜ್: ಇವರು ಇಲ್ಲಿ ನಿಂತುಕೊಂಡು ಸುಳ್ಳನ್ನು ನಿಜದ ಮೇಲೆ ಹೊಡೆದಂತೆ ಹೇಳುತ್ತಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೇ.....

ಉಪಾಧ್ಯಕ್ಷರು: ಮಾನ್ಯ ಯಡಿಯೂರಪ್ಪನವರು ಇದುವರೆಗೂ ಹಸಿ ಸುಳ್ಳು ಹಸಿ ಸುಳ್ಳು ಅಂತ ಹೇಳುತ್ತಾರೆ....

ಶ್ರೀ ಬಿ.ಎಸ್. ಯಡಿಯೂರಪ್ಪ: ಜನತಾಪಕ್ಷದ ಸರ್ಕಾರ ಆಡಳಿತದಲ್ಲಿ ಮೂಲೆಗುಂಪಾಗಿದ್ದು ಇವರ ದುರಾದೃಷ್ಟಕರ ಅಂತ ಹೇಳಿ ಅವರ ಬಗ್ಗೆ ಹೇಳಿ ಮುಂದೆ ಏನು ಹೇಳುತ್ತೀರಾ ಅಂದರೆ, ಈ ಜನತಾ ಮನೆ ಯೋಜನೆಯನ್ನು ನಮ್ಮ ಸರ್ಕಾರ ಪುನಃಚ್ಚೇತನ ಗೊಳಿಸಿ ಇನ್ನು 5 ವರ್ಷಗಳಲ್ಲಿ ರಾಜ್ಯದಲ್ಲಿ ಪ್ರತಿಯೊಂದು ಬಡಕುಟುಂಬಕ್ಕೂ ಮನೆ ಕಟ್ಟಿಕೊಡುವ ದೊಡ್ಡ ಪ್ರಮಾಣದ ಯೋಜನೆಯನ್ನು ಕಾರ್ಯಗತಗೊಳಿಸಲಾಗುವುದು, ಇದರಲ್ಲಿ ಪರಿಶಿಷ್ಟ ಜನಾಂಗ ವರ್ಗ ಹಾಗೂ ಬುಡಕಟ್ಟು ಜನಾಂಗ ಹಾಗೂ ದುರ್ಬಲವರ್ಗದವರ ಹಿತಕ್ಕೆ ವಿಶೇಷ ಗಮನಕೊಡಲಾಗುವುದು ಎಂದು ಏನು ಹೇಳಿದ್ದೀರಿ?

ಶ್ರೀ ವಾಟಾಳ್ ನಾಗರಾಜ್: ಇವರು ಸತ್ತ ಕುದುರೆ ಹಿಡಿದುಕೊಂಡು ಹೊಡೆಯುತ್ತಿದ್ದಾರೆ. ಇದು ಯಾವ ಕಾಲದ್ದು, ಬರೆದು ಯಾವ ಕಾಲ ಆಯಿತು, ಅದು ಎಷ್ಟು ದಿವಸ ಆಯಿತು, ಎಲ್ಲೋ ಇವರು ಹಳೆ ಪುಸ್ತಕದ ಅಂಗಡಿಯಲ್ಲಿ ಇದನ್ನು ಹುಡುಕಿ ತಂದಿದ್ದಾರೆ. ನಿಮ್ಮಲ್ಲಿ ಅದುಇಲ್ಲ ಅಂತ ಕಾಣುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ನಾನು ಏಕೆ ಇದನ್ನು ಇಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆಂದರೆ ನಿಮ್ಮನ್ನು ತೊಳೆಯುವುದಕ್ಕೆ ಹೋದಾಗ ಜಾಲಾಡುವುದಕ್ಕೆ ಹೋದಾಗ ಈ ಚುನಾವಣೆ ಪ್ರಣಾಳಿಕೆಯೇ ನಮಗೆ ಆಧಾರ. ಅದಕ್ಕೆ ನಾನು ಪ್ರಾರಂಭದಲ್ಲಿ ಒಂದು ಮಾತು ಏನು ಹೇಳಿದೆ, ತಾವು ಅದಕ್ಕೆ ಕಿವಿ ಕೊಟ್ಟಿದ್ದೀರಾ ಅಂತ ಅಂದುಕೊಂಡಿದ್ದೇನೆ. ಕಳೆದ 4 ವರ್ಷಗಳ ಈ ಬಜೆಟ್ನಲ್ಲಿ ಏನು ಹೇಳಿದ್ದೀರಾ ಏನು ಸಾಧಿಸಿದ್ದಿರಾ ಎಂಬ ಬಗ್ಗೆ ಅಂಕಿಅಂಶಗಳ ವೈಟ್ಪೇಪರ್ ಅನ್ನು ನಾವ ಡಿಮ್ಯಾಂಡ್ ಮಾಡುತ್ತಿದ್ದೇವೆ.

ಶ್ರೀ ಎಸ್.ಎಂ. ಕೃಷ್ಣಾ: ಇದನ್ನೇ ಉತ್ತರ ಪ್ರದೇಶದಲ್ಲಿ ಮಧ್ಯಪ್ರದೇಶದಲ್ಲಿ ನಾವು ಮಾಡಿದ್ದು, ನಿಮ್ಮ ಚುನಾವಣಾ ಪ್ರಣಾಳಿಕೆಯನ್ನು ನಾವು ಹಿಡಿದುಕೊಂಡು ಹೋಗಿ ಅಲ್ಲಿ ಜನಗಳ ಮುಂದೆ ಹೇಳಿದ್ದು.

ಶ್ರೀ ಬಿ.ಎಸ್. ಯಡಿಯೂರಪ್ಪ: ಸರಿ, ಇಲ್ಲಿ ಪ್ರಶ್ನೆ ಏನೆಂದರೆ ಅನೇಕ ಕಾರ್ಯಕ್ರಮಗಳ ಬಗ್ಗೆ ತಾವು ಹೇಳಿದಿರಿ; ಅಕ್ಷಯ ಆರಾಧನಾ ವಿಶ್ವ, ಬೀದಿಭಾಗ್ಯ ರುದ್ರಭೂಮಿ, ನೇತ್ರಯೋಜನೆ ಏಕಲವ್ಯ ಪ್ರಶಸ್ತಿ ಎಲ್ಲಾ ಆಯಿತು. ಕಳದ ಸಲ ಬೆಳ್ಳಿ ಬೆಳಕು, ಉದ್ಯೋಗ ಜ್ಯೋತಿ, ಕೆರೆ ಕಲ್ಯಾಣ, ಸಂಪದ, ನೀಲಿ ಕ್ರಾಂತಿ, ಸಾಗರದೀಪ, ನೆರಳಿನ ಭಾಗ್ಯ, ಆಶಾಕಿರಣ ಯೋಜನೆಗಳ ಬಗ್ಗೆ ಹೇಳಿದ್ದು ಬಂಗಾರಪ್ಪನವರದ್ದು. ಹೊಸ ಹೆಜ್ಜೆ, ಹೊಂಬಳ್ಳಿ, ನೆಮ್ಮದಿ, ಸುರಕ್ಷಾ, ಹೀಗೆ ಏನ್ನೇನೋ ಹೊಸ ಹೊಸ ಕಾರ್ಯಕ್ರಮಗಳ ಬಗ್ಗೆ ಹೇಳಿದ್ದೀರಿ. ನೀವು ಜನರಿಗೆ ಯಾವ ರೀತಿಯಲ್ಲಿ ವಂಚನೆ ಮಾಡುತ್ತಾ ಇದ್ದೀರಿ ಎಂದು ಹೇಳಬಯಸುತ್ತೇನೆ. ನಾನು ಆರಾಧನ ಯೋಜನೆಯ ಬಗ್ಗೆ ದಿನಾಂಕ 3-1-1994ರಂದು ಇಲ್ಲಿ ಒಂದು ಪ್ರಶ್ನೆಯನ್ನು ಕೇಳಿದ್ದೆ. 1993-94ನೇ ಸಾಲಿನಲ್ಲಿ ಆರಾಧನಾ ಯೋಜನೆಗಾಗಿ ಎಷ್ಟು ಹಣವನ್ನು ಮೀಸಲಾಗಿಟ್ಟಿದೆ? ಎಂದು ಕೇಳಿದ್ದಕ್ಕೆ 1993-94ನೇ ಸಾಲಿಗೆ ಐದು ಕೋಟಿಗಳು ಇದ್ದು, ಅದನ್ನು ಈಗ 10 ಕೋಟಿ ರೂ.ಗಳಿಗೆ ಏರಿಸಲಾಗಿದೆ ಎಂದು ಹೇಳಿ ಮತ್ತೆ ಈ ಹಣವನ್ನು ಬಿಡುಗಡೆ ಮಾಡಲಾಗಿದೆಯೇ ಎಂದು ಕೇಳಿದ್ದಕ್ಕೆ ಇದುವರೆಗೂ ಯಾವ ಹಣವನ್ನು ಬಿಡುಗಡೆ ಮಾಡಿರುವುದಿಲ್ಲ ಎಂದು ಉತ್ತರಿಸಿದ್ದಾರೆ, ನಾನು ಇದನ್ನು ಹೇಳಿದರೆ ನೀವು ನಂಬಲಿಕ್ಕಿಲ್ಲ. ನಾನು ಅದನ್ನು ತಮಗೇ ಕೊಡುತ್ತೇನೆ. ತಾವುಗಳೇ ನೋಡಿ. ಅದೇ ರೀತಿಯಲ್ಲಿ ನಿಮ್ಮ ಬಿಡಿಎ ಎಂಬ ಸಂಸ್ಥೆ ಇದೆ. ಅದು ಏನು ಮಾಡಿದೆ? ಬೆಂಗಳೂರು ನಗರದ ಸ್ಥಿತಿ ಇವೊತ್ತು ಏನಾಗಿದೆ ಸ್ವಾಮಿ? ನಾನು ಈ ಬಗ್ಗೆ ಕೂಡ ಒಂದು ಪ್ರಶ್ನೆಯನ್ನು ಕೇಳಿದ್ದೆ. ಇದುವರರೆಗೂ ಬಿಡಿಎದವರು ಎಷ್ಟು ಜಮೀನನ್ನು ಅಕ್ವಾಯರ್ ಮಾಡಿಕೊಂಡಿದ್ದಾರೆ? ಅದರ ಮೂಲಕ ಎಷ್ಟು ಜನ ಬಡವರಿಗೆ ಸೈಟ್ಗಳನ್ನು ಕೊಟ್ಟಿದ್ದೀರಿ ಎಂದು ಕೇಳಿದ್ದೆ. ಅದಕ್ಕೆ ಕಳೆದ ಮೂರು ವರ್ಷಗಳಿಂದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ನಿವೇಶನ ಹಂಚಿಕೆಯ ಪ್ರಕಟಣೆ ಹೊರಡಿಸಿ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ. ಮತ್ತು ಈ ಅವಧಿಯಲ್ಲಿ ನಿವೇಶನಗಳನ್ನು ನೀಡಲಾಗಿಲ್ಲ.

1992-93ರಲ್ಲಿ 1987-88ರ ಪ್ರಕಟಣೆಗೆ ಅನುಗುಣವಾಗಿ ಹಂಚಿಕೆಯಾದ 2390 ಜನರಿಗೆ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ ಎಂದು ಹೇಳಿದ್ದಾರೆ. ಅಂದರೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಕಳೆದ ನಾಲ್ಕು ವರ್ಷಗಳಿಂದ ಸೈಟ್ಗಳು ಬೇಕೇ ಎಂದು ಅರ್ಜಿಗಳನ್ನು ಕರೆದಿಲ್ಲ, ಯಾರಿಗೂ ಸೈಟ್ಗಳನ್ನು ಕೊಟ್ಟಿಲ್ಲ ಅಂದಮೇಲೆ ಆ ಬಿಡಿಎ ನಮಗೆ ಏಕೆ ಬೇಕು? ಏತಕ್ಕಾಗಿ ಆ ಇಲಾಖೆಯನ್ನು ಇಟ್ಟುಕೊಂಡಿದ್ದೀರಿ? ಯಾಕೆ ಅವರಿಗೆ ಸಂಬಳ ಕೊಡುತ್ತಿದ್ದೀರಿ? ಯಾವುದೋ ಸೊಸೈಟಿಯವರು ಬಡಬಗ್ಗರಿಗೆ ಸೈಟ್ಗಳನ್ನು ಕೊಡುತ್ತಾ ಇದ್ದರು. ಅದರಲ್ಲಿ ಕೆಲವರು ಲೂಟಿ ಮಾಡಿರಬಹುದು. ಅಂಥವರ ಮೇಲೆ ನಿಮ್ಮ ಅಧಿಕಾರಿಗಳು ಬಿಗಿಯಾದ ನಿಲುವನ್ನು ತೆಗೆದುಕೊಂಡಿದ್ದರೆ ಅದು ಕೂಡ ಆಗುತ್ತಿರಲಿಲ್ಲ. ಒಟ್ಟಿನಲ್ಲಿ ಸೈಟ್ ಬೇಕಾದವರಿಗೆ 40-50 ಸಾವಿರ ರೂ.ಗಳಿಗೆ ಒಂದು ಸೈಟ್ ಸಿಗುತ್ತಾ ಇತ್ತು. ಅವರ ಬಾಯಿಗೂ ಮಣ್ಣು ಹಾಕಿ ಅದನ್ನು ನಿಲ್ಲಿಸಿದ್ದೀರಿ. ಯಾವ ಸೊಸೈಟಿಗಳು ಅನ್ಯಾಯ ಮಾಡುತ್ತಿವೆ ಎಂದು ನೋಡಿ ಅವುಗಳನ್ನು ಸರಿಯಾಗಿ ನೋಡಿಕೊಳ್ಳಲು ಕೂಡ ನಿಮ್ಮಿಂದ ಆಗಲಿಲ್ಲ. ಆದರೆ ನಿಮ್ಮ ಬಿಡಿಎದವರು ನೀವೇ ಕೊಟ್ಟ ಲಿಖಿತ ಉತ್ತರದ ಪ್ರಕಾರ ಒಂದು ಸೈಟನ್ನು ಕೂಡ ಹಂಚಿಲ್ಲ. ಈ ರೀತಿಯಲ್ಲಿ ಜನರಿಗೆ ವಂಚನೆ ಮಾಡುವಂಥ ಒಂದು ರಾಜಕಾರಣವನ್ನು ತಾವುಗಳು ಮಾಡಿಕೊಂಡು ಬಂದಿದ್ದೀರಿ. ನೀವು ನಿಗದಿಯಾದ ಸಮಯಕ್ಕೆ ಸಾರ್ವತ್ರಿಕ

ಚುನಾವಣೆಯನ್ನು ಮಾಡುತ್ತೀರಾ ಎಂದು ಮಾನ್ಯ ಉಪ-ಮುಖ್ಯಮಂತ್ರಿಯವರಲ್ಲಿ ಕೇಳಬಯಸುತ್ತೇನೆ. ಒಂದು ವೇಳೆ ನೀವು ಮುಂದೆ ಹಾಕಲು ಹೋದರೂ ಕೂಡ ಬಹುಶಃ ಶೇಷನ್ ಬಿಡಲಾರರು ಎಂದು ಕಾಣುತ್ತದೆ. ಅವರು ಇಲ್ಲದಿದ್ದರೆ ಏನು ಬೇಕಾದರೂ ಆಗುತ್ತಾ ಇತ್ತು. ಆದರೆ ಈಗ ಇನ್ನೇನು ಈಗಲೋ, ಆಗಲೋ, ಎನ್ನುವಂಥ ಕಾಲದಲ್ಲಿ ಈ ಮಂತ್ರಿಮಂಡಲದ ವಿಸ್ತರಣೆಯ ಬಗ್ಗೆ ಮಾತನಾಡುವುದು ಏಕೆ? ಆನೆಗಾತ್ರದ ಮಂತ್ರಿಮಂಡಲವನ್ನು ಇಟ್ಟುಕೊಂಡು, ಇನ್ನೇನು ಮುಗಿಯಿತು ಹೊತ್ತುಕೊಂಡು ಹೋಗೋಣ ಎಂಬ ಸ್ಥಿತಿಯಲ್ಲಿ, ಇನ್ನು ಎರಡು ಮೂರು ತಿಂಗಳಲ್ಲಿ ಚುನಾವಣೆ ನಡೆಯಬೇಕೆಂದು ಹೇಳುವ ಕಾಲದಲ್ಲಿ ಮತ್ತೆ ಮಂತ್ರಿಮಂಡಲದ ವಿಸ್ತರಣೆಯನ್ನು ಮಾಡುವುದು ನಿಮ್ಮ ಜನಹಿತ ಕಾರ್ಯವೇ? ಇವೊತ್ತು ಮಂತ್ರಿಗಳ ಬಲವನ್ನು ವಿಸ್ತರಣೆ ಮಾಡಿಕೊಂಡು ಯಾರೋ ಕೆಲವರು ಕೋಟ್ಯಾಧಿಪತಿಗಳಾಗುವುದನ್ನು ಈ ನಾಡಿನ ಜನರು ಸಹಿಸುವುದಿಲ್ಲ.

ಈ ಮಂತ್ರಿಮಂಡಲದ ವಿಸ್ತರಣೆ ಮಾಡಿ ಅವರು ಈ ನಾಡಿನ ಹಿತಕ್ಕೋಸ್ಕರ ಕೆಲಸ ಮಾಡಬೇಕಾಗುತ್ತದೆ. ಒಂದು ಮಂತ್ರಿಮಂಡಲ ಇದ್ದಮೇಲೆ ಇನ್ನೂ ವಿಸ್ತರಣೆ ಏಕೆ? ವಿಸ್ತರಣೆ ಮಾಡಿ ಬಂದವರು ಯಾವ ಇಲಾಖೆ ಏನು ಎಂದು ತಿಳಿದುಕೊಳ್ಳುವುದರಲ್ಲಿಯೇ ಸಮಯ ಮುಗಿದು ಹೋಗುತ್ತದಲ್ಲವೇ? ಅಂದರೆ ಈ ವಿಸ್ತರಣೆಯ ಹಿಂದೆ ಈ ನಾಡಿನ ಜನರ ಹಿತವಿಲ್ಲ, ಇದರಲ್ಲಿ ನಿಮ್ಮ ಸ್ವಂತ ಹಿತಮಾತ್ರ ಇದೆ. ಯಾರ್ಯಾರೋ ಮಂತ್ರಿಗಳು ಆದರು. ನಾನು ಶಾಸಕನಾಗಿಯೇ ಏತಕ್ಕೆ ಸಾಯಬೇಕು? ನಾನು ಕೂಡ ಮಂತ್ರಿಯಾಗಿ ಸಾಯುತ್ತೇನೆ ಎಂಬ ಹುಚ್ಚು ಕೆಲವರಿಗಾದರೆ, ಕೆಲವರಿಗೆ ಮುಖ್ಯಮಂತ್ರಿಯಾಗಿ ಸಾಯೋಣ ಎಂಬ ಹುಚ್ಚು. ಹಾಗಾದರೆ ಜನರು ಬಹುಮತದಿಂದ ನಿಮ್ಮನ್ನು ಆಯ್ಕೆ ಮಾಡಿದ್ದು ಇದಕ್ಕಾಗಿಯೇ? ಇನ್ನೊಂದು ಮಾತನ್ನು ಹೇಳಬಯಸುತ್ತೇನೆ. ಈ ಕಂಪ್ಯೂಟರ್ ಹಗರಣದ ಬಗ್ಗೆ ಕ್ರಿಮಿನಲ್ ಮೊಕದ್ದಮೆ ಹೂಡುವುದಕ್ಕೋಸ್ಕರ ಮಂತ್ರಿಮಂಡಲದವರು ಅನುಮತಿಯನ್ನು ಕೊಟ್ಟಿದ್ದೀರಿ ಎಂದು ಕೇಳಿದ್ದೇವೆ. ಯಾವ ಕಂಪ್ಯೂಟರ್ ಹಗರಣದಲ್ಲಿ ಈ ವಿರೋಧ ಪಕ್ಷದಲ್ಲಿ ಕುಳಿತವರು ಕೋರ್ಟ್ ಕಚೇರಿಗಳಿಗೆ ಹೋಗಿ ಸದನದಲ್ಲಿ ಪ್ರಸ್ತಾಪ ಮಾಡಿ 1 ಕೋಟಿ 67 ಲಕ್ಷ ರೂ.ಗಳನ್ನು ಒಂದೇ ದಿವಸ ಅಡ್ವಾನ್ಸ್ ಕೊಟ್ಟಿರುವುದು ಅನ್ಯಾಯ. ಯಾವುದೇ ಕಾನೂನಿನ ಇತಿಮಿತಿಯಲ್ಲಿ ಸರಕಾರದವರು ಕೆಲಸ ಮಾಡಿಲ್ಲ ಎಂದು ನಾವುಗಳು ಕೂಗಿದಾಗ ಆ ಬಗ್ಗೆ ಸಾಬೀತು ಮಾಡಿ, ಅವರು ಮಾಡಿದ್ದೇ ಸರಿ ಎಂದು ನೀವುಗಳು ಅಲ್ಲಿ ಕುಳಿತುಕೊಂಡು ಹೇಳಿ. ಅವರಿಗೆ ಆಗ ಬೆಂಬಲವನ್ನು ಕೊಟ್ಟಿದ್ದೀರಿ. ಮಂತ್ರಿಮಂಡಲದ ಸಭೆಯಲ್ಲಿ ಇದೇ ಬಂಗಾರಪ್ಪನವರು ರ್‍ಯಾಟಿಫೈ ಮಾಡುವುದಕ್ಕೋಸ್ಕರ ಸಭೆಯಲ್ಲಿ ಈ ವಿಷಯವನ್ನು ತಂದಾಗ ಈಗ ಮುಖ್ಯ ಮಂತ್ರಿಯಾಗಿರತಕ್ಕಂಥ ಮೊಯಿಲಿಯವರು ಕಣ್ಣುಮುಚ್ಚಿಕೊಂಡು ಸಹಿ ಮಾಡಿ ಈಗ ಮುಖ್ಯಮಂತ್ರಿಯಾದ ತತ್‌ಕ್ಷಣ ಸಿಬಿಐ ತನಿಖೆ ಮಾಡಹೊರಟಿದ್ದೀರಿ? ಯಾಕೆ? ಅವರು ಕಾಂಗ್ರೆಸ್ ಪಕ್ಷವನ್ನು ಬಿಟ್ಟಿದ್ದಾರೆ ಎಂದು ಕಾರಣವೇ? ಅವರು ನಿಮ್ಮ ಪಕ್ಷದಲ್ಲಿ ಇದ್ದಿದ್ದರೆ ಸಿಬಿಐ ತನಿಖೆಯಾಗುತ್ತಿರಲ್ಲ. ಅವರು ಈ ದೇಶದ ಪ್ರಧಾನಿಯವರ ಬಗ್ಗೆ ಹಗುರವಾಗಿ ಮಾತನಾಡಲು ಶುರುವಾದಾಗ ಇದು ಪ್ರಾರಂಭವಾಯಿತು. ಆಗ ಅವರಿಗೆ ಬಿಸಿ ಮುಟ್ಟಿಸುವುದಕ್ಕೋಸ್ಕರ ಸಿಬಿಐ ತನಿಖೆಗೆ ಒಳಪಡಿಸಿದ್ದೀರಿ. ಆ ಬಗ್ಗೆ ನಮ್ಮ ಅಭ್ಯಂತರವಿಲ್ಲ. ಆದರೆ ಯಾವ ಮಂತ್ರಿಮಂಡಲದಲ್ಲಿ ನೀವೆಲ್ಲರೂ ಕುಳಿತು ಅದಕ್ಕೆ ಸಹಿ ಮಾಡಿ ಒಪ್ಪಿಗೆ ಕೊಟ್ಟು ಈಗ ಅವರ ಮೇಲೆ ಕ್ರಮ ತೆಗೆದುಕೊಳ್ಳುವ ಹಕ್ಕು ನಿಮಗೆ ಇದೆಯೇ? ಎಂದು ಕೇಳ ಬಯಸುತ್ತೇನೆ.

ಕೊಲೆ ಮಾಡುವುದು ತಪ್ಪು, ಹಾಗೆಯೇ ಕೊಲೆ ಮಾಡುವವನಿಗೆ ಬೆಂಬಲ ಕೊಡುವುದು ಸಹ ತಪ್ಪು ಎಂದತು ಸುಪ್ರಸಿದ್ಧ ವಕೀಲರಾದ ತಮಗೂ ಗೊತ್ತಿದೆ ತಾನೆ. ಯಾವ ರೀತಿ ನಿಮ್ಮಲ್ಲಿ ರಾಜಕಾರಣ ನಡೆಯುತ್ತಿದೆ ಅಂದರೆ ನಿಮ್ಮ

ಒಟ್ಟಾಗಿದ್ದಾಗ ಬಾರಾಖೂನ್ ಮಾಫ್ ಏನು ಬೇಕಾದರೂ ಮಾಡಿದರೂ ನಡೆಯುತ್ತದೆ. ಒಂದು ಚೂರು ಏನಾದರೂ ಪಕ್ಷ ಬಿಟ್ಟು ಹೋಗುತ್ತಾರೆಂದರೆ ಉಳಿದವರಿಗೆ ಎಚ್ಚರಿಕೆ ನೋಡು ಮಾನ್ಯ ಬಂಗಾರಪ್ಪನವರನ್ನೇ ಬಿಟ್ಟಿಲ್ಲ, ಸಿಬಿಐ ತನಿಖೆಯಾಗುತ್ತಿದೆ, ಇದಕ್ಕೇನು ಮಾಡುತ್ತೀರಾ ಎಂದು ಹೇಳುತ್ತಾರೆ. ಈ ಕ್ಲಾಸಿಕ್ ಕಂಪ್ಯೂಟರ್ ಹಗರಣದಲ್ಲಿ ಮಾನ್ಯ ಬಂಗಾರಪ್ಪನವರ ಮಂತ್ರಿಮಂಡಲದಲ್ಲಿ ಇದಕ್ಕೆ ಬೆಂಬಲ ಕೊಟ್ಟಂತಹ ಎಲ್ಲ ಸಚಿವರೂ ಅಪರಾಧಿಗಳೇ ಹೊರತು ಕೇವಲ ಬಂಗಾರಪ್ಪನವರೊಬ್ಬರೇ ಅಲ್ಲ. ಕೇವಳ ಒಬ್ಬ ಅಲೆಕ್ಸಾಂಡರ್ ಅಲ್ಲ, ಸೆಕ್ರೆಟರಿಯೇಟ್ ಅಲ್ಲ. ಅಲೆಕ್ಸಾಂಡರನ್ನು ನಿಮಗೆ ತಕ್ಕಂತೆ ಕುಣಿಸಿಕೊಂಡು ದುರುಪಯೋಗ ಮಾಡಿಕೊಂಡರಲ್ಲ, ಆ ಎಲ್ಲಾ ಸಚಿವರೂ ಜವಾಬ್ದಾರರು. ಈ ಉನ್ನತವಾದಂತಹ ಸ್ಥಾನದಲ್ಲಿ ಮುಖ್ಯ ಕಾರ್ಯದರ್ಶಿಯಾಗಿ ಇದ್ದುಕೊಂಡು ಇಡೀ ನಾಡಿನ ಅಧಿಕಾರವನ್ನು ಹತೋಟಿಯಲ್ಲಿಟ್ಟುಕೊಂಡು ನಾಡಿನ ಜನರ ಅಭಿವೃದ್ಧಿ ಮಾಡಬೇಕಾದಂತಹ ವ್ಯಕ್ತಿ ಮನ ಬಂದಂತೆ ಕಾನೂನು ಬಾಹಿರವಾಗಿ ಕೆಲಸ ಮಾಡುವುದಕ್ಕೆ ಕೈ ಬಿಟ್ಟಿರಲ್ಲ, ಅದು ಈ ಮಂತ್ರಿಮಂಡಲದ ತಪ್ಪು. ನಿಮ್ಮ ಕರ್ತವ್ಯವನ್ನು ನೀವು ಸರಿಯಾಗಿ ನಿರ್ವಹಿಸಿದ್ದರೆ ಇವತ್ತು ಈ ಪರಿಸ್ಥಿತಿ ಬರುತ್ತಿತ್ತೇನು? ಬಂಗಾರಪ್ಪನವರ ಬಗ್ಗೆ ಕ್ಲಾಸಿಕ್ ಕಂಪ್ಯೂಟರ್ ಹಗರಣದಲ್ಲಿ ಸಿಬಿಐ ಕ್ರಮ ತೆಗೆದುಕೊಳ್ಳುವುದಕ್ಕೆ ಹೊರಟಿದ್ದೀರಲ್ಲ, ಈ ರಾಜ್ಯದ ಹಾಲಿ ಮುಖ್ಯ ಮಂತ್ರಿಗಳು ಅವತ್ತು ಏನು ಹೇಳಿದರು ಎಂಬುದನ್ನು ವಿಚಾರ ಮಾಡಬೇಕಾಗುತ್ತದೆ. ಗೃಹ ಮಂಡಲಿಯ ಅವ್ಯವಹಾರದ ಬಗ್ಗೆ ಪ್ರಸ್ತಾಪ ಮಾಡಿ ಈ ಶತಮಾನದ ದೊಡ್ಡ ಹಗರಣವೆಂದು ಟಿವಿ ಸಂದರ್ಶನದಲ್ಲಿ ಇಡೀ ದೇಶ 80 ಕೋಟಿ ಜನರಿಗೆ ಸಂದೇಶ ಕೊಟ್ಟರು. ಈ ಬಗ್ಗೆ ನಡೆದ ಸಿ.ಓ.ಡಿ ತನಿಖೆ ನಿಮ್ಮ ಕೈಗೆ ಏತಕ್ಕೆ ಬಂದಿಲ್ಲ. ಸಚಿವ ಸಂಪುಟದಲ್ಲಿದ್ದುಕೊಂಡು ಈ ಶತಮಾನದ ಹಗರಣವೆಂದು, ಗೃಹ ಮಂಡಲಿಯಲ್ಲಿ ಯಾವ ಬಡವರ ಮನೆಗಳನ್ನು ಕಟ್ಟಬೇಕಾದಂತಹ 25 ಕೋಟಿ ರೂಪಾಯಿಗಳು ಇತ್ತು, ಅದನ್ನು ಅಧಿಕಾರಿಗಳು, ಗೃಹ ಮಂಡಲಿಯ ಅಧ್ಯಕ್ಷರೂ ಸೇರಿಕೊಂಡು ನುಂಗಿ ನೀರು ಕುಡಿದರು, ಅವರು ಇವತ್ತಿನವರೆಗೂ ಜೈಲಿಗೆ ಹೋಗಿಲ್ಲ ಏಕೆ? ಅವರು ನಿಮ್ಮ ಜೊತೆಯಲ್ಲಿದ್ದಾರೆ ಎಂತಲಾ? ನಿಮ್ಮನ್ನು ಬಿಟ್ಟು ಹೋದರೆ ಅಪರಾಧ. ಕಳ್ಳತನ ಮಾಡಬಾರದು, ಆದರೆ ನಿಮ್ಮ ಜೊತೆಯಲ್ಲಿದ್ದು ಏನು ಮಾಡಿದರೂ ಹೊಂದಿಕೊಂಡು ಹೋಗುತ್ತಿದ್ದೀರಿ. ನಿಜವಾಗಲೂ ಈ ಸ್ಥಾನಕ್ಕೆ ಹೆಚ್ಚು ಬೆಲೆ ಯಾವಾಗ ಬರುತ್ತಿತ್ತು ಅಂದರೆ ಬಂಗಾರಪ್ಪನವರ ಬಗ್ಗೆ ಯಾವ ರೀತಿ ನಡೆದುಕೊಂಡಿರೋ, ಯಾವ ರೀತಿ ತಮ್ಮ ಕರ್ತವ್ಯವನ್ನು ನಿರ್ವಹಿಸುತ್ತಿದ್ದೀರೋ, ಯಾವ ರೀತಿ ಕಾನೂನಿನಂತೆ ಕ್ರಮ ತೆಗೆದುಕೊಳ್ಳುವುದಕ್ಕೆ ಹೊರಟಿದ್ದಾರೋ ಅದೇ ರೀತಿ ಗೃಹ ಮಂಡಲಿಯಲ್ಲಿ ಆದಂತಹ ಅವ್ಯವಹಾರದ ಬಗ್ಗೆ ಕ್ರಮ ತೆಗೆದುಕೊಂಡಿದ್ದರೆ ನಾಡಿನ ಜನ ಒಪ್ಪುತ್ತಿದ್ದರು. ಸಿ.ಓ.ಡಿ. ತನಿಖೆ ಮಾಡಿದ ಹಾಗೆ ಮಾಡಿ ಎಲ್ಲಿ ಈ ಕ್ಯಾಂಪ್ ಬಿಟ್ಟು ಬಂಗಾರಪ್ಪನವರ ಕ್ಯಾಂಪಿಗೆ ಕಗೋಡು ತಿಮ್ಮಪ್ಪನವರು ಹೋಗುತ್ತಾರೋ ಎಂದು ಹೆದರಿ ನಿಮ್ಮ ಜೊತೆಯಲ್ಲಿ ಇಟ್ಟುಕೊಳ್ಳುವುದಕ್ಕೋಸ್ಕರ ಈ ಸಿ.ಓ.ಡಿ ತನಿಖೆಯ ನಾಟಕ ಮಾಡುತ್ತಿದ್ದೀರಾ? ಈ ನಾಡಿನ ಜನರಿಗೆ ನಿಜ ಹೇಳಬೇಕಾಗುತ್ತದೆ. ನೀವು ಮಾಡಿದ್ದನ್ನೆಲ್ಲವನ್ನೂ ಒಪ್ಪಿಕೊಂಡು ಕೂತುಕೊಳ್ಳುವುದಕ್ಕೆ ಆಗುತ್ತದೆಯೇ? ಮಾನ್ಯ ಜಾಫರ್ ಷರೀಫ್ ಅವರ ಮೇಲೆ ಆರೋಪ ಮಾಡುವುದಕ್ಕೆ ನಾನು ಸಿದ್ಧನಿಲ್ಲ. ಬೆಂಗಳೂರು ಸುತ್ತಮುತ್ತ ಜಾಫರ್ ಷರೀಫ್ ಅವರು ಸೇರಿದಂತೆ ಅವರ ಕುಟುಂಬದ ಸದಸ್ಯರು ಸೇರಿಕೊಂಡು ಸುಮಾರು ನೂರು ಕೋಟಿಗೂ ಹೆಚ್ಚು ಬೆಲೆ ಬಾಳುವಂತಹ......

ಉಪಾಧ್ಯಕ್ಷರು : ಬಜೆಟ್ಟಿಗೂ ಇದಕ್ಕೂ ಸಂಬಂಧವಿಲ್ಲ. ತಾವು ಮಾತನಾಡುವುದು ನೋಡಿದರೆ ಅವಿಶ್ವಾಸ ನಿರ್ಣಯದ ಮೇಲೆ ಮಾತನಾಡಿದ ಹಾಗೆ ಮಾತನಾಡುತ್ತಿದ್ದೀರಿ. ಬಜೆಟ್ ಮೇಲೆ ಮಾತನಾಡದೆ ವಿಷಯಾಂತರ ಮಾಡುತ್ತಿದ್ದೀರಿ.

ಶ್ರೀ ಎಸ್.ಎಂ. ಕೃಷ್ಣ: ಒಂದು ಕನ್ವೆನ್ಷನ್ ಏನು ಅಂದರೆ, ಸಂಸತ್ತಿನ ಸದಸ್ಯರೊಬ್ಬರ ಹೆಸರನ್ನು ವಿವಾದಾತ್ಮಕವಾದಂತಹ ವಿಚಾರಗಳಿಗೆ ಎಳೆಯತಕ್ಕಂಥಾದ್ದು

ಸಾಮಾನ್ಯವಾಗಿ ಯಾವ ಶಾಸನ ಸಭೆಯಲ್ಲೂ ಅದಕ್ಕೆ ಅವಕಾಶ ಇಲ್ಲ. ಮಾನ್ಯ ಯಡಿಯೂರಪ್ಪನವರು ಬಹಳ ನುರಿತ ಶಾಸನ ಸಭಾ ಸದಸ್ಯರು ಮತ್ತು ರಾಷ್ಟ್ರೀಯ ಪಕ್ಷದ ಕಾರ್ಯದರ್ಶಿಗಳಾಗಿದ್ದಾರೆ. ಆದ್ದರಿಂದ ಈ ಒಂದು ಮಿತಿಯನ್ನು ದಯವಿಟ್ಟು ಅವರು ಅನುಸರಿಸುತ್ತಾರೆಂದು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ನಾನು ಅವರ ಮೇಲೆ ಆರೋಪ ಮಾಡುತ್ತಿಲ್ಲ. ಅವರು ಆರೋಪಕ್ಕೊಳಗಾಗದೆ ಪ್ರಾಮಾಣಿಕರಾಗಿ ಹೊರಕ್ಕೆ ಬರಬೇಕೆಂದು ಕಳಕಳಿ ಇರುವಂತಹ ವ್ಯಕ್ತಿ ನಾನು. ಮಾನ್ಯ ಉಪಾಧ್ಯಕ್ಷರೆ, ಮುಖ್ಯ ಮಂತ್ರಿಯಾದವರು ಮತ್ತು ಉಪ ಮುಖ್ಯಮಂತ್ರಿಯಾದಂತಹವರು ಭೂ ಹಗರಣದ ಬಗ್ಗೆ ಮುಖ್ಯ ಕಾರ್ಯದರ್ಶಿಗಳಾದ ಲಿನ್ ಅವರ ಮೂಲಕ ತನಿಖೆ ಮಾಡಿಸಿ ಸತ್ಯ ಸಂಗತಿಯನ್ನು ಹೊರಕ್ಕೆ ತರುತ್ತೇವೆಂಬ ಭರವಸೆಯನ್ನು ಈ ನಾಡಿನ ಜನರಿಗೆ ಏನು ಕೊಟ್ಟರು, ಅದನ್ನು ಜಾರಿಗೆ ತರಬೇಕಾಗುತ್ತದೆ. ಈ ರಾಜ್ಯದ ಮುಖ್ಯ ಮಂತ್ರಿಗಳು ಏಕೆ ಈ ವರದಿಯನ್ನು ಇದುವರೆಗೂ ಸಭೆಯ ಮುಂದೆ ಇಡಲಿಲ್ಲ. ಇದನ್ನು ಎಲ್ಲಿಯವರೆಗೆ ಮುಚ್ಚಿಡುತ್ತೀರಿ ಇದೇ ಪ್ರಶ್ನೆ ಇಲ್ಲಿ ಇರುವಂಥದ್ದು. ನಿಮ್ಮ ಮಂತ್ರಿ ಮಂಡಲದ ಸದಸ್ಯರಾದ ಹುಚ್ಚಮಾಸ್ತಿಗೌಡರು ಏಕೆ ಸದಸ್ಯ ಸಮಿತಿಯನ್ನು ಮಾಡಿ ಇದರ ಬಗ್ಗೆ ನೋಡಿಕೊಳ್ಳಿ ಎಂದು ಕೊಟ್ಟಿರಲ್ಲ, ಅಂದರೆ ಯಾವಾಗ ಅದನ್ನು ಹೊರ ತರುತ್ತೀರಿ. ನಿಮಗೆ ಯಾರು ಬೇಡ ಅವರ ಬಗ್ಗೆ ಶೀಘ್ರವಾಗಿ ತನಿಖೆಯಾಗುತ್ತದ, ನಿಮಗೆ ಯಾರು ಬೇಕು ಅವರು ಅಪರಾಧಿ ಸ್ಥಾನದಲ್ಲಿ ನಿಂತು ಏನು ಬೇಕಾದರೂ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ನಿಮ್ಮ ಪಕ್ಷ ಬಿಟ್ಟು ಹೊರಕ್ಕೆ ಯಾರು ಹೋಗುತ್ತಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಿ. ನಿಮ್ಮ ಜೊತೆಯಲ್ಲಿದ್ದವರು ಏನು ಬೇಕಾದರೂ ಮಾಡಿದರೂ ಬಾರಾಖೂನ್ ಮಾಫ್, ಮಾಡುತ್ತಿದ್ದೀರಾ ಎಂದು ಜನ ತಿಳಿದುಕೊಳ್ಳುತ್ತಿದ್ದಾರೆ. ನೀವೂ ಅಪರಾಧಿ ಸ್ಥಾನದಲ್ಲಿ ನಿಲ್ಲುವವರಿದ್ದೀರಿ ತಾನೆ. ಹಳ್ಳಿಗೆ ಹೋದಾಗ ಈ ನಾಡಿನ ಜನರು ನಿಮ್ಮನ್ನು ಹಿಡಿದುಕೊಂಡು ಕೇಳುವವರಿದ್ದಾರೆ. ಕಂಪ್ಯೂಟರ್ ಹಗರಣದ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ, ಅದೇ ರೀತಿ ಭೂ ಹಗರಣದ ಬಗ್ಗೆ ಕೂಡ ಕ್ರಮ ತೆಗೆದುಕೊಳ್ಳಬೇಕಾಗಿತ್ತು. ಇವತ್ತು ಜನ ಜಾಗೃತರಾಗಿದ್ದಾರೆ.

ಸತ್ಯ ಸಂಗತಿಯನ್ನು ಜನರಿಗೆ ತಿಳಿಸಬೇಕಾಗುತ್ತದೆ. ನಿಮ್ಮ ಮನೆಯ ವ್ಯವಹಾರ ಅಲ್ಲ ಅದು. ಅವನು ಎಷ್ಟು ಉತ್ಕೃಷ್ಟ ಪರಿಸ್ಥಿತಿಯಲ್ಲಿ ಇರಲಿ, ಈ ದೇಶದ ಪ್ರಧಾನಿಗೂ ಒಂದೇ ಕಾನೂನು ಆ ಗುಡಿಸಲಿನಲ್ಲಿ ವಾಸ ಮಾಡುವಂತಹ ಬಡವನಿಗೂ ಒಂದೇ ಕಾನೂನು. ತಪ್ಪು ಹೌದೋ ಅಲ್ಲವೋ ಎಂದು ಗೊತ್ತಾಗಬೇಕಾದರೆ ತನಿಖೆ ಆಗಬೇಕಾಗುತ್ತದೆ. ಅವತ್ತಿನ ಕಂದಾಯ ಸಚಿವರನ್ನು ಮಂತ್ರಿ ಮಂಡಲದಿಂದ ಒಂದು ಆದೇಶವನ್ನು ನೀಡಿದರು ಎಂದು ವಜಾ ಮಾಡುವುದಕ್ಕೆ ಆಗುತ್ತದೆ. ಆದರೆ ಅವತ್ತಿನಿಂದ ಇವತ್ತಿನವರೆಗೆ ಇದನ್ನು ಮುಚ್ಚಿಡುವ ಅಗತ್ಯ ಏನು ಇದೆ? ನೀವು ಉತ್ತರ ಕೊಡುವಂತಹ ಸಂದರ್ಭದಲ್ಲಿ ಈ ತನಿಖೆ ಎಲ್ಲಿಗೆ ಬಂದಿದೆ ಎಂದು ತಿಳಿಸಬೇಕಾಗುತ್ತದೆ. ಶ್ರೀ ಲಿನ್ ಅವರು ಏನು ವರದಿಯನ್ನು ಕೊಟ್ಟಿದ್ದಾರೆ, ಮಾನ್ಯ ಹುಚ್ಚಮಾಸ್ತಿಗೌಡರು ಇವತ್ತು ಸಚಿವರಾಗಿ ಇದರ ಬಗ್ಗೆ ಏನು ತನಿಖೆ ಮಾಡಿದ್ದಾರೆ, ಎಂದು ಕೇಳುವಂತಹ ಅಧಿಕಾರ ನನಗೆ ಇದೆ. ಜೊತೆಗೆ ಅದನ್ನು ತಿಳಿದುಕೊಳ್ಳುವಂತಹ ಅಗತ್ಯ ಈ ನಾಡಿನ ನಾಲ್ಕೂವರೆ ಕೋಟಿ ಜನರಿಗೆ ಇದೆ. ಅದಕ್ಕಾಗಿ ನಾನು ಇಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ. ಇವತ್ತು ಪತ್ರಿಕೆಯಲ್ಲಿ ಓದಿದೆ.

ನಮ್ಮ ಸನ್ಮಾನ್ಯ ಮಾಜಿ ಸಚಿವರಾದ ಜಾರ್ಜ್ ಅವರ ಆಪ್ತ ಸಹಾಯಕರಾದ ಶ್ರೀ ಸಣ್ಣೀರ್ ಎನ್ನುವವರ ಬಗ್ಗೆ ಲೋಕಾಯುಕ್ತದಿಂದ ತನಿಖೆ ಮಾಡಿಸಿದ್ದೀರಿ. ತುಂಬಾ ಸಂತೋಷ. 60-70 ಲಕ್ಷ ರೂಪಾಯಿ ಸಿಕ್ಕಿದೆ. ಅದನ್ನು ನೋಡೋಣ. ಅದು ಬೇರೆ

ವಿಚಾರ. ಇದರ ಬಗ್ಗೆ ಬೇಡ. ಆದರೆ ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆ ಎಂದರೆ ಜಾರ್ಜ್ ಅವರ ಪ್ರೈವೇಟ್ ಸೆಕ್ರೆಟರಿ ಬಗ್ಗೆಯೇ ಏತಕ್ಕೆ? ಅವರು ಮಾತ್ರ ನಿಮ್ಮ ಕೈಗೆ ಸಿಕ್ಕಿದರು. ಅಂದರೆ ನನಗೆ ಏನು ಅನಿಸುತ್ತದೆ ಎಂದರೆ ನಿಮ್ಮಿಂದ ಹೊರಗೆ ಹೋದವರು ಯಾರು ಇದ್ದಾರೆ ಅವರ ಬಗ್ಗೆ ತನಿಖೆ ಮಾಡುತ್ತಿದ್ದೀರಿ. ಇವತ್ತು ನಾನು ಹೇಳುತ್ತಿದ್ದೇನೆ, ದಾಖಲೆ ಕೊಡುತ್ತೇನೆ, ನಾನು ಛಾಲೆಂಜ್ ಮಾಡುತ್ತಿದ್ದೇನೆ. 5-6 ಜನ ಸಚಿವರನ್ನು ಬಿಟ್ಟು ಮಾನ್ಯ ಬಂಗಾರಪ್ಪನವರ ಮಂತ್ರಿ ಮಂಡಲದಲ್ಲಿ ಸಚಿವರಾಗಿದ್ದಂತಹ ಅನೇಕ ಜನ ಕಾನೂನು ಬಾಹಿರವಾಗಿ ಕೋಟ್ಯಾಂತರ ರೂಪಾಯಿ ಮಾಡಿಕೊಂಡಿದ್ದಾರೆ. ನಾನು ದಾಖಲೆಗಳನ್ನು ಕೊಡುವುದಕ್ಕೆ ಸಿದ್ಧವಿದ್ದೇನೆ, ಸಿಬಿಐ ತನಿಖೆ ಮಾಡಿಸುತ್ತೀರಾ? ನಾನು ದಾಖಲೆ ಕೊಡುತ್ತೇನೆ. ಅವತ್ತು ಏನು ಆಸ್ತಿ ಇತ್ತು? ಇವತ್ತು ಏನು ಆಸ್ತಿ ಇದೆ, ಏನೇನು ಆಗಿದೆ ಎಂದು ಹೇಳುತ್ತೇನೆ. ಇವತ್ತು ಕರ್ನಾಟಕ ಜನ ನಿಮ್ಮನ್ನು ನಂಬಿ ಏನು ಅಧಿಕಾರವನ್ನು ಕೊಟ್ಟರು ಅವರಿಗೇ ನೀವು ವಂಚನೆ ಮಾಡುತ್ತಿದ್ದೀರಿ. ತಾವು ಹೇಳಿದಂತೆ ಪ್ರಾಮಾಣಿಕವಾಗಿ ಅಧಿಕಾರವನ್ನು ಮಾಡುವಂತಹ ಪ್ರಯತ್ನ ಮಾಡಲಿಲ್ಲ, ಜನರ ಕಣ್ಣೀರನ್ನು ಒರೆಸುವಂತಹ ಪ್ರಾಮಾಣಿಕ ಪ್ರಯತ್ನ ಮಾಡಲಿಲ್ಲ. ಯಾವುದೋ ಸಣ್ಣ ಪುಟ್ಟ ಅಧಿಕಾರಿಗಳ ಬಗ್ಗೆ ಕ್ರಮ ತೆಗೆದುಕೊಳ್ಳುವಂತಹದೆ ನಿಮಗೆ, ಇದರ ಬಗ್ಗೆ ಜವಾಬ್ದಾರಿ ಇಲ್ಲವ್ವೋ? ತನಿಖೆ ಮಾಡಬೇಡಿ ಎಂದು ನಾನು ಹೇಳುತ್ತಿಲ್ಲ, ಆದರೆ ಇದನ್ನು ಎಲ್ಲರಿಗೂ ಅನ್ವಯ ಮಾಡಿ. ಬೇಕಾದವರಿಗೆ ಒಂದು, ಬೇಡವಾದವರಿಗೆ ಒಂದು. ಒಂದು ಕಣ್ಣಿಗೆ ಬೆಣ್ಣೆ ಇನ್ನೊಂದು ಕಣ್ಣಿಗೆ ಸುಣ್ಣ ಎನ್ನುವ ನೀತಿ ಬೇಡ.

25ನೇ ನವೆಂಬರ್ 92ರಂದು ಒಂದು ಹೇಳಿಕೆಯನ್ನು ಮಾನ್ಯ ವೀರಪ್ಪ ಮೊಯಿಲಿಯವರು ಮುಖ್ಯಮಂತ್ರಿಗಳು ಆದ ತಕ್ಷಣ ಕೊಟ್ಟರು. ಮಾನ್ಯ ಮುಖ್ಯಮಂತ್ರಿಗಳೂ ಸೇರಿ ಸಚಿವ ಸಂಪುಟದ ಸದಸ್ಯರೆಲ್ಲ ಇನ್ನು ಮುಂದೆ ನೀತಿ ಸಂಹಿತೆಯ ಅನುಶಾಸನಕ್ಕೆ ಕಡ್ಡಾಯವಾಗಿ ಬದ್ಧ ಎಂದು ಹೇಳಿಕೆ ಕೊಟ್ಟರು. ಬೆಳಿಗ್ಗೆ 10.30 ರಿಂದ 1.30 ಮಧ್ಯಾಹ್ನ 3.30ರಿಂದ 5.30 ರವರೆಗೆ ವಿಧಾನ ಸೌಧದಲ್ಲಿ ಸಂದರ್ಶಕರನ್ನು ಭೇಟಿ ಆಗಬೇಕು. ಸಂದರ್ಶಕರು ಇರಲಿ, ನಿಮ್ಮ ಮನೆಯ ಬಾಗಿಲು ಸುತ್ತಿ ಸುತ್ತಿ, ವಿಧಾನ ಸೌಧದ ಬಾಗಿಲು ಹತ್ತಿ ಹತ್ತಿ ನಮ್ಮ ಜನಗಳು ಅವರ ಸಂಕಷ್ಟಗಳನ್ನು ಹೇಳುವುದಕ್ಕೆ ಮಂತ್ರಿಗಳು ಸಿಕ್ಕದೇ ಇರುವಂತಹ ಪರಿಸ್ಥಿತಿ ಇದೆ. ಅನೇಕ ಮಂತ್ರಿಗಳ ಕೊಠಡಿ ಬಾಗಿಲು ತೆಗೆದಿಲ್ಲ, ನಾನು ಅದಕ್ಕಾಗಿ ಹೇಳುವುದು, ಏಕೆ ಮಂತ್ರಿ ಆಗಬೇಕು ಎಂದು ಒದ್ದಾಡುತ್ತಿದ್ದೀರಿ ಎಂದು. ಬಾಗಿಲೇ ತೆಗೆಯದೇ ಇರುವಂತಹ ಮಂತ್ರಿಗಳು ಇದ್ದಾರೆ, ತಮ್ಮ ಕರ್ತವ್ಯ ನಿರ್ವಹಿಸದೇ ಇರವಂತಹ ಮಂತ್ರಿಗಳು ಇದ್ದಾರೆ. ಮಂತ್ರಿಗಳು ಸಚಿವ ಸಂಪುಟದ ಸಭೆಗೇ ಬರುವುದಿಲ್ಲ, ಪರವಾಗಿಲ್ಲ ನೋಡೋಣ ಎನ್ನುವಂತಹ ಮಂತ್ರಿಗಳೂ ಇದ್ದಾರೆ. ಈ ಪರಿಸ್ಥಿತಿ ಬಂದಿದೆ. ಇದು ಯಾರಿಗೆ ಗೌರವ ತರುತ್ತದೆ? ಈ ನೀತಿ ಸಂಹಿತೆ ಹಾಕಿ ಎಂದು ನಾವು ಹೇಳಿದ್ದೇವಾ ಹೊಸ ಹೊಸ ಹೇಳಿಕೆಗಳು ಅಬ್ಬಬ್ಬ ಆಗ ಪತ್ರಿಕೆಗಳವರು ಬರೆದರು, ಬರೆದರು, ಮಾನ್ಯ ವೀರಪ್ಪ ಮೊಯಿಲಿಯವರು ಮುಖ್ಯ ಮಂತ್ರಿಗಳಾಗಿ ಹೇಳುವಂತಹ ಒಂದೊಂದು ಮಾತುಗಳೂ ವೇದ ವಾಕ್ಯ ಆಗಿ ಹೋಯಿತು. ಮುಖ ಪುಟದಲ್ಲಿ ದೊಡ್ಡ ದೊಡ್ಡ ಅಕ್ಷರಗಳಲ್ಲಿ ಪ್ರಚಾರ ಕೊಟ್ಟರು. ನಾನು ನಿಮ್ಮನ್ನು ಕೇಳಿದೆ, ಏಕೆ ಮಂತ್ರಿಗಳು ಸಿಗುತ್ತಿಲ್ಲ. ನಿಮ್ಮ ಮಂತ್ರಿಗಳು ಎಲ್ಲಿಗೆ ಹೋಗುತ್ತಾರೆ? ಅವರು ಸಿಗದಿದ್ದರೆ ಏಕೆ ಈ ನೀತಿ ಸಂಹಿತೆ. ತೆಗೆದು ಹಾಕಿಯೆಂದು ಹೇಳಿದೆ.

ಶ್ರೀ ಎಸ್.ಎಂ. ಕೃಷ್ಣ: ನೀತಿ ಸಂಹಿತೆ ಘೋಷಣೆಯಲ್ಲಿ ಏನೂ ತಪ್ಪು ಇಲ್ಲ ತಾನೇ. ಅದನ್ನು ಆಚರಣೆಗೆ ತರದೇ ಹೋದರೆ ಅದು ಬೇರೆ ವಿಚಾರ. ಆದರೆ ಘೋಷಣೆ ಮಾಡುವುದರಲ್ಲಿ ತಪ್ಪು ಏನು ಇದೆ?

ಶ್ರೀ ವಾಟಾಳ್ ನಾಗರಾಜ್: ಘೋಷಣೆ ಮಾಡುವುದರಲ್ಲಿ ತಪ್ಪಿಲ್ಲ. ಆಚರಣೆಯಲ್ಲಿ ಇಲ್ಲ ಎಂದು ಅವರು ಹೇಳುತ್ತಿರುವುದು. ಆಚರಣೆಯಲ್ಲಿ ಏನಾದರೂ ಇದೆಯೋ?

ಶ್ರೀ ಎಸ್.ಎಂ. ಕೃಷ್ಣ: ಆಚರಣೆಯಲ್ಲಿ ಸ್ವಲ್ಪ ತಿದ್ದಿಕೊಳ್ಳಿ ಎಂದು ಬುದ್ಧಿವಾದ ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ಮುಪ್ಪಿನಲ್ಲಿ ಯಾರು ಬುದ್ಧಿವಾದ ಹೇಳುವುದು. ಇನ್ನು ಮಂತ್ರಿಗಳೆಲ್ಲಾ ತಮ್ಮ ತಮ್ಮ ಆಸ್ತಿ ಪಾಸ್ತಿ ಸಾಲ ಸೋಲಗಳ ವಿವರವನ್ನು ಲೋಕಾಯುಕ್ತಕ್ಕೆ ವರದಿ ಸಲ್ಲಿಸಬೇಕು ಎಂದಿದ್ದರು. ನೀವು ಸಲ್ಲಿಸಿದ್ದರೆ ಒಪ್ಪಿಕೊಳ್ಳುತ್ತೇನೆ. ಅಂದರೆ ಇದನ್ನೆಲ್ಲಾ ಏಕೆ ಹೇಳಿಕೆ ಎಂದರೆ, ಡಿಸೆಂಬರ್ 1992ರಲ್ಲಿ ಏಳು ಸಾವಿರ ಶಿಕ್ಷಕರ ಹುದ್ದೆಗಳನ್ನು ತುರ್ತಾಗಿ ಮಾಡುತ್ತೇವೆ ಎಂದು ಹೇಳಿದರು,ಮಾಡಿದರಾ? ಮಾಡುತ್ತೇವೆ ಎಂದು ಹೇಳಿದಿರಿ, ಮಾಡಿ. ಜನವರಿ 93, ನಾಲ್ಕನೇ ತಾರೀಖು ಹೇಳಿದರು. ರಾಜ್ಯದ ಹೆದ್ದಾರಿಯಲ್ಲಿ ಬಾರ್, ಮದ್ಯದ ಅಂಗಡಿಗಳು ಬಂದ್ ಎಂದು. ಫೆಬ್ರವರಿ ಐದರಂದು ಹೇಳಿದರು.

ಶ್ರೀ ಎಸ್.ಎಂ. ಕೃಷ್ಣ: ತೆಗೆದಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ನೀವು ಹೀಗೆ ಹೇಳಿದರೆ ಹೇಗೆ? 100ಕ್ಕೆ ಒಂದು ತೆಗೆದಿದ್ದಾರೆ. ನೀವು ನೋಡಿ ಬನ್ನಿ. ನೀವು ಉತ್ತರ ಕೊಡಬೇಕಾದರೆ ಹೇಳಿ.

ಶ್ರೀ ಎಸ್.ಎಂ. ಕೃಷ್ಣ: ಕೆಲವರು ಕೋರ್ಟುಗಳಿಗೆ ಹೋಗಿ ಸ್ಟೇ ತಂದಿರಬಹುದು. ಆದರೆ ಏನು ನೀತಿ ಘೋಷಣೆ ಮಾಡಿದ್ದೇವೆ. ಆಘೋಷಣೆಯ ಅನುಷ್ಠಾನವಾಗುತ್ತಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ: 1993ರಲ್ಲಿ ಸಾಹಿತ್ಯ ಸಮ್ಮೇಳನಾಧ್ಯಕ್ಷರು ಮತ್ತು ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಿಗೆ ಪ್ರೋಟೋಕಾಲ್ ಸೌಲಭ್ಯತದೊಂದಿಗೆ ಕಾರ್ ಕೊಡುತ್ತೇವೆ ಎಂದರು, ಕೊಟ್ಟಿರಾ ಕಾರನ್ನು?

ಶ್ರೀ ವಾಟಾಳ್ ನಾಗರಾಜ್: ಎಲ್ಲಿ ಕೊಟ್ಟಿದ್ದಾರೆ? ಕೊಟ್ಟಿಲ್ಲ. ನೀವು ತಪ್ಪು ಹಾದಿಗೆ ಹೋಗಬೇಡಿ. ಒಂದು ಜಟಕಾ ಗಾಡಿ ಸಹ ಕೊಟ್ಟಿಲ್ಲ. ಮಾತನಾಡಿ ಪ್ರಯೋಜನ ಇಲ್ಲ. ಸುಮ್ಮನೇ ಏಕೆ ಮಾತನಾಡುತ್ತೀರಿ.

ಶ್ರೀ ಎಸ್.ಎಂ. ಕೃಷ್ಣ: ನನಗೆ ತಿಳಿದ ಮಟ್ಟಿಗೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಿಗೆ ಕಾರನ್ನು ಕೊಟ್ಟಿದ್ದಾರೆ.

ಶ್ರೀ ವಾಟಾಳ್ ನಾಗರಾಜ್: ಕೊಟ್ಟಿಲ್ಲ ಸ್ವಾಮಿ. ಅವರೇ ಯಾವುದೋ ಬಾಡಿಗೆ ಕಾರ್ ತೆಗೆದುಕೊಂಡು ಓಡಿಸುತ್ತಿದ್ದಾರೆ. ಅದು ನಿಮ್ಮ ಕಾರ್ ಅಲ್ಲ. ನನಗೆ ಗೊತ್ತಿದೆ. ನೀವು ಹೀಗೆ ಮಾತನಾಡುತ್ತಿದ್ದೀರಲ್ಲ. ಈ ಕ್ಷಣದವರೆಗೆ ಒಂದು ಸರ್ಕಾರೀ ಕಾರನ್ನು ಅವರಿಗೆ ಕೊಟ್ಟಿಲ್ಲ. ಅದರಲ್ಲಿ ಏನೂ ಅನುಮಾನ ಇಲ್ಲ. ನೀವು ಹೊರಗಡೆ ಬೋರ್ಡ್ ಹಾಕಿದ್ದೀರಿ. ಏಪ್ರಿಲ್ ಒಂದರಿಂದ ಕನ್ನಡ ಕಡ್ಡಾಯ ಎಂದು ಮುಂದಿನ ಏಪ್ರಿಲ್ ಬಂತು. ಭೂತಗಳ ಫೋಟೋ ಕಂಡ ಹಾಗೆ ಕಾಣುತ್ತದೆ. ಸುತ್ತಲೂ ಭೂತದ ಸೃಷ್ಟಿ ಆಗಿದೆ. ಏಪ್ರಿಲ್ ಒಂದರಿಂದ ಕನ್ನಡವನ್ನು ಕಡ್ಡಾಯವಾಗಿ ಜಾರಿ ಮಾಡುತ್ತೇವೆ ಎಂದು ಹೇಳಿದ್ದೀರಿ. ನಾಳೆ ಏಪ್ರಿಲ್ ಒಂದು ಬರುತ್ತದೆ. ಯಾವಾಗ ಕಾರ್ ಕೊಟ್ಟಿದ್ದೀರಿ, ಖಂಡಿತ ಇಲ್ಲ. ನೀವು ಸಾಮಾನ್ಯವಾಗಿ ಹೇಳಲಾರಿರಿ. ಏಕೆ ಹೀಗೆ ಹೇಳಿದ್ದೀರಿ.

ಶ್ರೀ ಎಸ್.ಎಂ. ಕೃಷ್ಣ: ಘೋಷಣೆಗಳಲ್ಲಿ ನಂಬಿಕೆ ಇಟ್ಟಿರತಕ್ಕವನು ನಾನು. ಆದ್ದರಿಂದ ಏಪ್ರಿಲ್ ಒಂದರಲ್ಲಿ ಅವರು ಏನು ಘೋಷಣೆ ಮಾಡಿದ್ದಾರೆ.

ಏಪ್ರಿಲ್ ಒಂದಕ್ಕೆ ಆದರೂ ಅದು ಜಾರಿ ಆಗುತ್ತದೆ ಎಂದು ತಿಳಿದುಕೊಂಡು ಆಶಾದಾಯಕ ದೃಷ್ಟಿಯಲ್ಲಿ ಹೇಳಿದ್ದಾರೆ. ಈಗ ಚೆಕಪ್ ಮಾಡುತ್ತೇನೆ

ಶ್ರೀ ವಾಟಾಳ್ ನಾಗರಾಜ್: ಇವತ್ತು ತಾರೀಖು 28, 29, 30, 31 ಮೂರು ದಿವಸ ಇದೆ. ಈ ಮೂರು ದಿವಸದಲ್ಲಿ ಕಾರನ್ನು ಒದಗಿಸಿ, ಕನ್ನಡವೇ ಆಡಳಿತ ಭಾಷೆ ಎಂದು ಜಾರಿಗೆ ತರುತ್ತೀರಾ? ಇವೆಲ್ಲಾ ಮಾಡುತ್ತೀರೋ? ಖಂಡಿತ ಮಾಡುವುದಕ್ಕೆ ಸಾಧ್ಯ ಇಲ್ಲ. ಏನೂ ಇಲ್ಲ. ಏಪ್ರಿಲ್ ಒಂದರಂದು ಈ ರಾಜ್ಯದ ಜನತೆಯನ್ನು ಮೂರ್ಖರನ್ನಾಗಿ ಮಾಡುತ್ತೀರಿ. ಆ ಕೆಲಸದಲ್ಲಿ ಸಂಪೂರ್ಣವಾಗಿ ಯಶಸ್ವಿಯಾಗಿದ್ದೀರಿ, ಅದನ್ನು ಬಿಟ್ಟರೆ ಬೇರೆ ಏನೂ ಮಾಡಿಲ್ಲ.

ಶ್ರೀ ಎಸ್.ಎಂ. ಕೃಷ್ಣ: ಒಂದು ತಿದ್ದುಪಡಿ ಮಾನ್ಯ ಯಡಿಯೂರಪ್ಪನವರೆ, ಕಾರನ್ನು ಕೊಟ್ಟಿಲ್ಲ. ಕೊಪ್ಪಳ ಸಾಹಿತ್ಯ ಸಮ್ಮೇಳನದ ಭಾಷಣ ತಾನೇ ತಾವು ಹೇಳುತ್ತಿರುವುದು. ಆ ಭಾಷಣ ಆದನಂತರ ವ್ಯಾವಹಾರಿಕವಾಗಿ ಅನುಕೂಲ ಆಗತಕ್ಕ ರೀತಿಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಸನ್ಮಾನ್ಯ ಅಧ್ಯಕ್ಷರು ಯಾವುದೇ ಜಿಲ್ಲೆಯಲ್ಲಿ ಪ್ರವಾಸ ಹೋದರೂ ಕೂಡ ಜಿಲ್ಲಾಧಿಕಾರಿಗಳು ಅವರಿಗೆ ಒಂದು ಕಾರನ್ನು ಕೊಡತಕ್ಕದ್ದು ಮತ್ತು ನಮ್ಮ ಸರ್ಕಾರಿ ಅತಿಥಿ ಗೃಹದಲ್ಲಿ ಸರ್ಕಾರೀ ಅತಿಥಿಯಾಗಿ ಅವರನ್ನು ನೋಡಿಕೊಳ್ಳಬೇಕು ಎನ್ನತಕ್ಕಂಥ ಒಂದು ಸುತ್ತೋಲೆಯನ್ನು ಈಗಾಗಲೇ ಕಳಿಸಿದ್ದಾರೆ. ಆ ಸುತ್ತೋಲೆಯ ಪ್ರಕಾರ ಮೊನ್ನೆ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು ಮಂಡ್ಯ ಜಿಲ್ಲೆಗೆ ಬಂದಿದ್ದಾಗ ಅವರಿಗೆ ಜಿಲ್ಲಾಧಿಕಾರಿಗಳು ಕಾರನ್ನು ಒದಗಿಸಿದ್ದಾರೆ. ನಮ್ಮ ಅತಿಥಿ ಗೃಹದಲ್ಲಿ ಸರ್ಕಾರಿ ಅತಿಥಿಯಾಗಿ ಅವರು ಮಂಡ್ಯದಲ್ಲಿ ಇದ್ದರು.

ಶ್ರೀ ವಾಟಾಳ್ ನಾಗರಾಜ್: ನಮ್ಮ ಕೊಪ್ಪಳದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಿಗೆ ಕಾರ್ ಕೊಟ್ಟಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಸಮ್ಮೇಳನಾಧ್ಯಕ್ಷರಿಗೆ ಸಚಿವ ಸಂಪುಟ ದರ್ಜೆಯ ಸ್ಥಾನಮಾನಗಳನ್ನು ಕೊಟ್ಟು ಅವರಿಗೆ ಒಂದು ಭವ್ಯವಾದ ಕಾರನ್ನು ಒದಗಿಸುತ್ತೇವೆ ಎಂದು ಹೇಳಿದರು. ಮಂಡ್ಯದ ಸಮ್ಮೇಳನಾಧ್ಯಕ್ಷರಿಗೆ ಕಾರ್ ಬಂದಿರಲಿಲ್ಲ. ಕೊಪ್ಪಳದ ಸಮ್ಮೇಳನಾಧ್ಯಕ್ಷರಿಗೆ ಈ ಕ್ಷಣದವರೆಗೆ ಕಾರ್ ಬಂದಿರಲಿಲ್ಲ. ಮೊನ್ನೆ ಮಂಡ್ಯಕ್ಕೆ ಅಧ್ಯಕ್ಷರು ಬಂದಿದ್ದಾಗ ಸೌಜನ್ಯಕ್ಕಾಗಿ ರೂಮ್ಗಳು ಖಾಲಿ ಇದ್ದವೆಂದು ಕಾಣುತ್ತದೆ ಕೊಟ್ಟಿರಬಹುದು. ಇದರ ಬಗ್ಗೆ ನನ್ನ ತಕರಾರು ಇಲ್ಲ. ನೀವು ಸ್ಪಷ್ಟವಾಗಿ ಹೇಳಿ. ಹೋದ ವರ್ಷ ಸಾಹಿತ್ಯ ಸಮ್ಮೇಳನಾಧ್ಯಕ್ಷರಿಗೆ ಅವರ ಮನೆ ಬಾಗಿಲಿಗೆ ಕಾರನ್ನು ಒದಗಿಸುತ್ತೇವೆ ಎಂದು ಹೇಳಿದ್ದರು. ಅವರಿಗೆ ಕಾರನ್ನು ಕೊಟ್ಟಿದ್ದೀರಾ? ಅವರು ಅದರಲ್ಲಿ ಎಲ್ಲಾದರೂ ಓಡಾಡಿದ್ದಾರಾ? ಆ ಕಾರಿನ ಡ್ರೈವರ್ ಯಾರು? ಆ ಕಾರನ್ನು ಯಾವಾಗ ಕೊಟ್ಟಿದ್ದೀರಿ? ಅದನ್ನು ಸ್ವಲ್ಪ ಹೇಳಿ.

ಶ್ರೀ ಎಸ್.ಎಂ. ಕೃಷ್ಣ: ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರಿಗೆ ಕಾರ್ ಕೊಡುತ್ತೇವೆಂದು ಹೇಳಿದ್ದೇವೆ. ಆದರೆ ಅವರು ಬೇಡ ಎಂದರು.

ಶ್ರೀ ವಾಟಾಳ್ ನಾಗರಾಜ್: ಏಕೆ ಹೇಳಿದರು ಗೊತ್ತೇನು? ನೀವು ಬರೀ ಸುಳ್ಳು ಹೇಳುತ್ತೀರಿ. ಅವರ ಮೂತಿ ಹಾಳು ಮಾಡುತ್ತೀರಿ ಎಂದು ಅವರಿಗೆ ಗೊತ್ತಾಗಿ ಅವರು ಬೇಡ ಎಂದು ಹೇಳಿದರು. ಹೋದ ವರ್ಷ ಅವರಿಗೆ ಕಾರ್ ಕೊಟ್ಟಿಲ್ಲ. ಏನೂ ಕೊಟ್ಟಿಲ್ಲ. ಯಾವುದೋ ಒಂದು ಸಭೆ ಸಮಾರಂಭಕ್ಕೆ ಹೋಗಿ ಅದ್ದೂರಿಯಾದ ಭಾಷಣ ಹೊರಡಿಸಿ ಬಿಡುತ್ತೀರಿ. ಕಾರ್ ಕೊಡುತ್ತೇವೆ, ಅದು ಕೊಡುತ್ತೇವೆ ಇದು ಕೊಡುತ್ತೇವೆ ಎಂದು ಹೇಳುತ್ತೀರಿ. ಆದ್ದರಿಂದ ನಾನು ಹೇಳುತ್ತಿದ್ದೇನೆ. ಈ ಒಂದು ಭೀತಿಯಿಂದ ಕೊಡುತ್ತೇವೆ ಎಂದರೂ ಅವರು ಬೇಡ ಎಂದು ಹೇಳಿದ್ದಾರೆ. ಅಷ್ಟೇ ಹೊರತಾಗಿ ಹಳೆಯದನ್ನು ಮರೆಸಿ ಹೊಸದು ಹೇಳುವುದು [illegible]

ಶ್ರೀಮತಿ ಮೋಟಮ್ಮ: ಅಧ್ಯಕ್ಷರಿಗೆ ಕಾರ್ ಬೇಕೇ ಬೇಕು ಎಂದರೆ ಕೊಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್: ಇಲ್ಲ, ಕೊಡುವುದಿಲ್ಲ, ನಿಮಗೆ ಕೊಟ್ಟ ಕಾರನ್ನು ಸಹ ಕಿತ್ತುಕೊಳ್ಳುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಇವರು ಯಾವ ರೀತಿ ಭರವಸೆಯನ್ನು ಕೊಡುತ್ತಾರೆಂದರೆ, ಬೆಂಗಳೂರು ವರ್ತುಲ ರೈಲ್ವೆ ಕೆಲಸ ಬರುವ ಹಣಕಾಸು ವರ್ಷದಿಂದ ಪ್ರಾರಂಭವಾಗುತ್ತದೆ ಎಂದು 19ನೇ ಫೆಬ್ರವರಿ 93ರಂದು ಈ ನಾಡಿನ ಜನತೆಗೆ ಹೇಳಿದರು. ಅದರಂತೆ ಆರಂಭವಾಗಿದೆಯೇ ಕೆಲಸ?

ಶ್ರೀ ಎಸ್.ಎಂ. ಕೃಷ್ಣ : ಅದಕ್ಕೆಲ್ಲಾ ನಾವು ಸಂಪನ್ಮೂಲಗಳನ್ನು ರೂಢಿಸಿಕೊಳ್ಳಬೇಕಾಗುತ್ತದೆ. ಆರಂಭ ಅಂದರೆ ಷುರು ಮಾಡುವುದಕ್ಕೆ ಬರುತ್ತದಾ? ನೀಲಿ ನಕಾಶೆ ತಯಾರು ಆಗಬೇಕು. ಪ್ರಾಜೆಕ್ಟ್ ರಿಪೋರ್ಟ್ ತಯಾರು ಆಗಬೇಕು. ಆ ಪ್ರಾಜೆಕ್ಟ್ ರಿಪೋರ್ಟ್ಗೆ ನಾವು ಹಣ ಎಲ್ಲೆಲ್ಲಿಂದ ತೆಗೆದುಕೊಂಡು ಬರಬೇಕು ಎಂದು ಎಲ್ಲ ಯೋಚನೆ ಮಾಡಬೇಕಾಗುತ್ತವೆ.

ಶ್ರೀ ಕೆ.ಎಸ್. ಈಶ್ವರಪ್ಪ: ಬಹಳ ಚೆನ್ನಾಗಿ ರೈಲ್ ಬಿಡುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್: 1993ರಿಂದ ಇಲ್ಲಿಯವರೆಗೆ ನಕಾಶೆ ಕೂಡ ತಯಾರಾಗಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ: ಎಷ್ಟು ಕೆಲಸ ಆಗಿದೆ ಹೇಳಲಿ.

ಶ್ರೀ ವಾಟಾಳ್ ನಾಗರಾಜ್: ಇದು ಬಹಳ ಸುಲಭ. ನೀವು ಏಕೆ ಹೀಗೆ ಹೇಳುತ್ತಿದ್ದೀರಿ ಎಂದು ನನಗೆ ಅರ್ಥವೇ ಆಗುತ್ತಾ ಇಲ್ಲ. ಪ್ರತಿ ಒಂದಕ್ಕೂ ಬಹಳ ಕಷ್ಟದಿಂದ ನೀವು ಸುತ್ತಿ ಬಳಸಿ ವಕಾಲತ್ತು ವಹಿಸಿ ಮಾತನಾಡುತ್ತಿದ್ದೀರಿ. ಇದು ಏಕೆಂದು ನನಗೆ ಅರ್ಥ ಆಗುತ್ತಿಲ್ಲ.

4.50 ಪಿ.ಎಂ

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾರ್ಚ್ 4, 1993ರಂದು ವಿಧಾನ ಪರಿಷತ್ನ ಒಳಗಡೆ, ಮುಂದಿನ ಏಳು ವರ್ಷಗಳಲ್ಲಿ ಇಪ್ಪತ್ತಾರು ಲಕ್ಷ ಯುವಕರಿಗೆ ಉದ್ಯೋಗವನ್ನು ಒದಗಿಸಿಕೊಡುತ್ತೇವೆಂದು ಮುಖ್ಯ ಮಂತ್ರಿಗಳು ಹೇಳಿದರು. ಆದರೆ ಸ್ವಾಮಿ, ಒಂದು ವರ್ಷವಾಯಿತು ಆ ಮಾತನ್ನು ಹೇಳಿ. ಆದರೆ ತಾವು ಒಂದು ಲಕ್ಷ ಜನ ಯುವಕರಿಗೆ ಉದ್ಯೋಗವನ್ನು ಕೊಟ್ಟಿದ್ದೀರಾ? ಅನಂತರ ಬೇಕಾದರೆ ಇಪ್ಪತ್ತಾರು ಲಕ್ಷದ ಬಗ್ಗೆ ಮಾತನಾಡೋಣ. ಹಾಗೆಯೇ ಬಹಳ ಜವಾಬ್ದಾರಿಯಿಂದ ಮಾರ್ಚ್ 23ನೇ ತಾರೀಖಿನಂದು ಇನ್ನೊಂದು ಮಾತನ್ನು ಹೇಳಿದರು. ಅದೇನೆಂದರೆ ಉನ್ನತ ಅಧಿಕಾರಿಗಳ ಭ್ರಷ್ಟಚಾರದ ಪ್ರಕರಣಗಳ 'ಬಿ' ರಿಪೋರ್ಟನ್ನು ಪರಿಶೀಲಿಸುವಂತೆ ಲೋಕಾಯುಕ್ತಕ್ಕೆ ಕೋರಲಾಗುವುದೆಂದು. ಯಾವ್ಯಾವ ಉನ್ನತ ಅಧಿಕಾರಿಗಳ ಬಗ್ಗೆ ಇದುವರೆಗೆ 'ಬಿ' ರಿಪೋರ್ಟನ್ನು ಕೊಟ್ಟಿದ್ದೀರಿ? ಅವುಗಳ ಬಗ್ಗೆ ಪುನರ್ ಪರಿಶೀಲನೆ ಮಾಡುವುದಕ್ಕೋಸ್ಕರ ಆದೇಶವನ್ನು ಕೊಟ್ಟಿದ್ದೀರಿ? ಆ ರೀತಿ ಕೊಟ್ಟಿದ್ದರೆ ಯಾರ್ಯಾರದ್ದು ಪುನರ್ ಪರಿಶೀಲನೆ ಮಾಡಿ ವರದಿಯನ್ನು ಕೊಟ್ಟಿದ್ದಾರೆ? ಅದರ ಬಗ್ಗೆ ತಾವು ಈ ಸದನಕ್ಕೆ ಹೇಳಬೇಕಲ್ಲವೆ? ಆ ಸಂದರ್ಭದಲ್ಲಿ ಯಾವುದೋ ಒಂದು ಕಾರಣಕ್ಕಾಗಿ ಬೇಜವಾಬ್ದಾರಿಯುತವಾದ ಭರವಸೆಗಳನ್ನು ಈ ನಾಡಿನ ಜನರಿಗೆ ಕೊಡುವುದಕ್ಕೆ ಬರುವುದಿಲ್ಲ. ನಾನು ವರ್ತುಲ ರೈಲ್ವೆಯ ಬಗ್ಗೆ ಕೇಳಿದಾಗ, ತಾವು ಇದನ್ನು ಹೇಗೆ ಒಂದೇ ದಿನಕ್ಕೆ ಮಾಡಲು ಸಾಧ್ಯವಾಗುತ್ತದೆ, ಅದಕ್ಕೆ ಪ್ರಾರಂಭಿಕ ಕೆಲಸಗಳಾದ ಸರ್ವೆ, ನೀಲಿ ನಕ್ಷೆ ಮುಂತಾದ ಕೆಲಸಗಳು ಆಗಬಾರದೆ ಯಡಿಯೂರಪ್ಪನವರೆ ಎಂದು ಹೇಳಿದಿರಿ. ಆದರೆ ಮುಂದಿನ

ಹಣಕಾಸಿನ ವರ್ಷದಲ್ಲಿ ಕೆಲಸವೇ ಪ್ರಾರಂಭವಾಗುತ್ತದೆಂದು ಹೇಳಿದಂಥ ಮಾತು ಇಲ್ಲಿದೆ. ನಾನು ಪ್ರತಿಯೊಂದರ ಬಗ್ಗೆಯೂ ಸಹ ತಮಗೆ ವಿವರಗಳನ್ನು ಕಳಿಸಿಕೊಡುತ್ತೇನೆ. ನಾನೇನು ಬರೇ ಸುಮ್ಮನೆ ಬರೆದುಕೊಂಡು ಬಂದು ಇಲ್ಲಿ ಹೇಳುತ್ತಿಲ್ಲ. ಮಾರ್ಚ್ 3, 1993ರಂದು ಚಿನ್ನಪ್ಪರೆಡ್ಡಿ ವರದಿಯನ್ನು ಜೂನ್ ಅಂತ್ಯದೊಳಗೆ ಜಾರಿಗೆ ತರಲಾಗುವುದೆಂದು ಹೇಳಿದರು. ಆ ವಿಷಯ ಪತ್ರಿಕೆಗಳಲ್ಲಿ ಬಹಳ ದೊಡ್ಡ ದೊಡ್ಡ ಅಕ್ಷರಗಳಲ್ಲಿ ಬಂತು. ಆದರೆ ಇವತ್ತು ಅದು ಏನಾಯಿತು? ಸೆಪ್ಟೆಂಬರ್ 15 1993ರೊಳಗೆ ಇಪ್ಪತ್ತು ಕೋಟಿ ಸಸಿಗಳನ್ನು ನೆಡತಕ್ಕ ಕಾರ್ಯಕ್ರಮ ಹಾಕಿಕೊಳ್ಳಲಾಗುವುದೆಂದು 29ನೇ ಜೂನ್ 93ರಲ್ಲಿ ಹೇಳಿದರು. ಆ ಕಾರ್ಯಕ್ರಮವೇನಾಯಿತು? ರಾಜ್ಯದಲ್ಲಿ ವಿದ್ಯುತ್ ಕಡಿತವನ್ನು ಸಂಪೂರ್ಣವಾಗಿ ರದ್ದು ಮಾಡಲಾಗುವುದೆಂದು ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಆದರೆ ಪುಣ್ಯಕ್ಕೆ ಉಪ ಮುಖ್ಯ ಮಂತ್ರಿಗಳು ಅದನ್ನು ಹೇಳಿಲಿಲ್ಲ.

ಶ್ರೀ ಎಸ್.ಎಂ. ಕೃಷ್ಣ: ರದ್ದು ಮಾಡಿದ್ದೇವಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ: ರದ್ದು ಮಾಡಿದ್ದು ಎಲ್ಲಿ ಇದೆ? ಅದು ಬರುವಂತೆಯೂ ಇಲ್ಲ. ಅಲ್ಲಿ ರದ್ದು ಮಾಡಿದ್ದರೆ ಏನು ಪ್ರಯೋಜನ? ಮಾಡದಿದ್ದರೆ ಏನು ಪ್ರಯೋಜನ? ಅಲ್ಲಿ ವಿದ್ಯುತ್ ಬಂದು ಮೋಟಾರ್ಪಂಪ್ ಸ್ಟಾರ್ಟ್ ಆಗಿ ದೀಪ ಹತ್ತಿಕೊಂಡು ಉರಿದರೆ ನೀವು ವಿದ್ಯುತ್ ಕಡಿತವನ್ನು ರದ್ದು ಮಾಡಿದ್ದಕ್ಕೆ ಸಾರ್ಥಕವಾಗುತ್ತದೆ. ಅದನ್ನು ಬಿಟ್ಟು ಏನೂ ಉಪಯೋಗವಾಗದೆ ಅದನ್ನು ರದ್ದು ಮಾಡಿದರೆ ಏನು ಪ್ರಯೋಜನ? ಹಾಗೆಯೇ ಮಾನ್ಯ ಮುಖ್ಯ ಮಂತ್ರಿಗಳು ಇನ್ನೊಂದು ಬಹಳ ದೊಡ್ಡ ಮಾತನ್ನು ಹೇಳಿದ್ದಾರೆ. ಅದೇನೆಂದರೆ 3ನೇ ಆಗಸ್ಟ್ 1993ರಲ್ಲಿ ಆಡಳಿತಾತ್ಮಕ ಮಂಜೂರಾತಿ ದೊರೆತಿರತಕ್ಕ ಎಲ್ಲಾ ಕಾಮಗಾರಿಗಳನ್ನು ಹತ್ತು ದಿನದೊಳಗೆ ಪ್ರಾರಂಭ ಮಾಡದಿದ್ದರೆ ತೀವ್ರ ಕ್ರಮ ತೆಗೆದುಕೊಳ್ಳಲಾಗುವುದೆಂದು ಅಧಿಕಾರಿಗಳ ಸಭೆಯಲ್ಲಿ ಅಧಿಕಾರಿಗಳಿಗೆ ಹೇಳಿದ್ದಾರೆ. ಆಗಸ್ಟ್ 15ರಂದು ಗ್ರಾಮೀಣ ಮಹಿಳೆಯರ ನೆರವಿಗೆ ಇಂದಿರಾ ಗಾಂಧಿ ಜ್ಯೋತಿಯ ಕಾರ್ಯಕ್ರಮವೆಂದು ಒಂದು ಯೋಜನೆಯನ್ನು ಪ್ರಾರಂಭ ಮಾಡಲಾಗುವುದೆಂದು ಹೇಳಿದರು. ಅದು ಪತ್ರಿಕೆಗಳ ಮುಖ ಪುಟದಲ್ಲಿ ದೊಡ್ಡ ಅಕ್ಷರಗಳಲ್ಲಿ ಬಂತು ಆ ಯೋಜನೆ ಬಗ್ಗೆ ಏನು ಮಾಡದ್ದೀರಿ? ಸೆಪ್ಟೆಂಬರ್ 5 1993ರಂದು ಮುಂದಿನ ಮಾರ್ಚ್ 1994ರ ಒಳಗೆ ಐದು ಸಾವಿರ ಪ್ರಾಥಮಿಕ ಶಾಲಾ ಶಿಕ್ಷಕರುಗಳನ್ನು ನೇಮಕ ಮಾಡಿಕೊಳ್ಳುವ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದೆಂದು ಹೇಳಿದರು. ಸೆಪ್ಟೆಂಬರ್ ಒಂಭತ್ತರಂದು ಅಬ್ಕಾರಿ ನೀತಿಗೆ ಸಂಬಂಧಿಸಿದಂತೆ ಸದ್ಯದಲ್ಲಿ ಶ್ವೇತ ಪತ್ರವನ್ನು ಹೊರಡಿಸಲಾಗುವುದೆಂದು ಹೇಳಿದರು. ಎಲ್ಲಿ ಹೊರಡಿಸಿದಿರಿ? 26ನೇ ಅಕ್ಟೋಬರ್ 1993ರಂದು ಹಿಂದುಳಿದ ವರ್ಗದವರಿಗೆ ಹೊಸ ವರ್ಷದ ಕೊಡುಗೆಯಾಗಿ ಕುರುಬರ ಸಮ್ಮೇಳನದಲ್ಲಿ ಚಿನ್ನಪ್ಪರೆಡ್ಡಿ ವರದಿಯನ್ನು ಮುಂದಿನ ವರ್ಷದ ಆರಂಭದಲ್ಲಿ ಸಂಪೂರ್ಣವಾಗಿ ಜಾರಿಗೊಳಿಸಲಾಗುವುದೆಂದು ಹೇಳಿದರು. ನಾನು ಇಲ್ಲಿ ಏಕೆ ಈ ರೀತಿ ವಿವರವಾಗಿ ಹೇಳುತ್ತಿದ್ದೇನೆಂದರೆ ಕಳೆದ ನಾಲ್ಕೂವರೇ ವರ್ಷಗಳಲ್ಲಿ ತಾವು ಇದೇ ರೀತಿ ಸತ್ಯಕ್ಕೆ ದೂರವಾದಂಥ ಸುಳ್ಳು ಭರವಸೆಗಳನ್ನು ನೀಡಿ ಜನರಿಗೆ ವಂಚನೆಯನ್ನು ಮಾಡಿ ಕಾಲ ಹರಣ ಮಾಡತಕ್ಕ ಕೆಲಸವನ್ನು ಮಾಡಿದ್ದೀರಿ. ಇವತ್ತು ಹಣಕಾಸಿನ ಪರಿಸ್ಥಿತಿ ತೀವ್ರವಾಗಿ ಹದಗೆಟ್ಟು ಸರ್ಕಾರಿ ನೌಕರರಿಗೆ ಸಂಬಳವನ್ನು ಕೊಡಲು ಆಗದೇ ಇರತಕ್ಕ ಪರಿಸ್ಥಿತಿ ಒದಗಿ ಬಂದಿದೆ. ಕಾಮಗಾರಿ ಕೆಲಸಗಳನ್ನು ಮಾಡಿರುವ ಗುತ್ತಿಗೆದಾರರಿಗೆ ಹಣವನ್ನು ಕೊಡದೇ ಇರುವುದರಿಂದ ಅವರುಗಳು ಸತ್ಯಾಗ್ರಹ ಚಳುವಳಿಯನ್ನು ಮಾಡತಕ್ಕ ಪರಿಸ್ಥಿತಿಗೆ ಹಣಕಾಸಿನ ಪರಿಸ್ಥಿತಿ ಬಂದಿದೆ. ಇಷ್ಟೆಲ್ಲಾ ಪರಿಸ್ಥಿತಿ ಇದ್ದರೂ ಸಹ ಹೊಸ ಬಜೆಟ್ನಲ್ಲಿ

ಹಲವಾರು ಹೊಸ ಯೋಜನೆಗಳ ಬಗ್ಗೆ ಹೇಳಿದ್ದೀರಿ. ಈ ಬಜೆಟ್ ಕೇವಲ ಚುನಾವಣೆಯ ಪ್ರಣಾಳಿಕೆ ಇದನ್ನು ಬಜೆಟ್ ಎಂದು ನಾನು ಹೇಳಬಯಸುವುದಿಲ್ಲ.

ಇದು ಒಂದು ರೀತಿಯಾದ ಚುನಾವಣೆಯ ಮ್ಯಾನಿಫೆಸ್ಟೋ ಅಷ್ಟೇ ಹೊರತಾಗಿ ತಾವು ಏನು ಬಜೆಟನ್ನು ಪ್ರಕಟ ಮಾಡಿದ್ದೀರಿ, ಅದು ಜನರನ್ನು ವಂಚನೆ ಮಾಡತಕ್ಕ ಬಜೆಟ್ ಆಗಿದೆ ಎಂದು ಹೇಳಬೇಕಾಗುತ್ತದೆ. ಹಣ ಕಾಸಿನ ಪರಿಸ್ಥಿತಿ ತೀವ್ರವಾಗಿ ಹದಗೆಟ್ಟಿ ಜನರ ಹಿತರಕ್ಷಣೆಯನ್ನು ಸಂಪೂರ್ಣವಾಗಿ ಮರೆತಿರತಕ್ಕ ನಿಮಗೆ ನಾನು ಕೈ ಮುಗಿದು ಪ್ರಾರ್ಥನೆ ಮಾಡಿಕೊಳ್ಳುತ್ತಿದದೇನೆ, ಈ ನಾಡಿನ ಜನರ ಹಿತದೃಷ್ಟಿಯಿಂದ ಒಂದು ಕ್ಷಣವೂ ತಮಗೆ ಅಧಿಕಾರದಲ್ಲಿ ಮುಂದುವರೆಯತಕ್ಕ ನೈತಿಕ ಹಕ್ಕು ಇಲ್ಲ ಎನ್ನತಕ್ಕ ಮಾತನ್ನು ಹೇಳುತ್ತಿದ್ದೇನೆ. ಮತ್ತೆ ತಾವು ಆರು ತಿಂಗಳ ಲೇಖಾನುದಾನವನ್ನು ಪಡೆಯತಕ್ಕಂಥ ಬೇಡಿಕೆಯನ್ನು ಏನು ಇಟ್ಟಿದ್ದೀರಿ ಅದನ್ನು ಯಾವುದೇ ಕಾರಣದಿಂದ ನಾವು ಬೆಂಬಲಿಸದೆ, ಅದನ್ನು ಸಂಪೂರ್ಣವಾಗಿ ವಿರೋಧಿಸುತ್ತೇನೆ. ಯಾವ ಕಾರಣಕ್ಕೂ ಸಹ ಇದು ಸಾಧ್ಯವಿಲ್ಲವೆಂದು ಹೇಳುತ್ತೇನೆ. ತಾವು ಅಧಿಕಾರದಲ್ಲಿ ಮುಂದುವರೆಯತಕ್ಕ ನೈತಿಕ ಹಕ್ಕನ್ನು ಕಳೆದುಕೊಂಡಿರತಕ್ಕ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿಯ ಬಗ್ಗೆ ದೊಡ್ಡ ದೊಡ್ಡ ಭಾಷಣವನ್ನು ಮಾಡಿದ್ದೀರಿ. ಪಂಚಾಯಿತಿಗಳ ಚುನಾವಣೆಯನ್ನು ಮುಂದಕ್ಕೆ ಹಾಕಲು ಪ್ರತಿಪಕ್ಷಗಳು ಹೊಣೆ ಎಂದು ಮುಖ್ಯ ಮಂತ್ರಿಗಳು ಹೇಳಬೇಕಾದರೆ, ಇವತ್ತು ತಮಗೆ ಏನಾದರೂ ಸ್ವಲ್ಪ ಜವಾಬ್ದಾರಿ ಇದ್ದರೆ ಡಿಸೆಂಬರ್ ಕೊನೆಯೊಳಗೆ ಚುನಾವೆಯನ್ನು ನಡೆಸುತ್ತಿದ್ದಿರಿ. ಆ ರೀತಿ ಚುನಾವಣೆಯನ್ನು ನಡೆಸುತ್ತೇವೆಂದು ಸುಪ್ರೀಮ್ ಕೋರ್ಟ್‌ಗೆ ತಾವೇ ಅಂಡರ್ ಟೇಕ್ಕು ಕೊಟ್ಟಿದ್ದೀರಿ. ನಿಗದಿಯಾದ ಸಮಯದಲ್ಲಿ ಚುನಾವಣೆ ಆಗದಿದ್ದರೆ ರಾಜೀನಾಮೆಯನ್ನು ಕೊಡುತ್ತೇನೆಂದು ಮಾನ್ಯ ಘೋರ್ಪಡೆಯವರು ಈ ನಾಡಿನ ಜನರಿಗೆ ಘೋಷಣೆ ಮಾಡಿದರು. ಮೂರು ಬಾರಿ ಚುನಾವಣೆಯ ದಿನಾಂಕವನ್ನು ನಿಶ್ಚಯ ಮಾಡಿದಿರಿ. ಆದರೆ ಆ ದಿನಾಂಕಗಳಂದು ಚುನಾವಣೆ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡದೆ ಕೊನೆಗೆ ಏಪ್ರಿಲ್ 4 ರಂದು ನೋಟಿಫಿಕೇಷನನ್ನು ಹೊರಡಿಸಿ ಏಪ್ರಿಲ್ 27 ರಂದು ಚುನಾವಣೆ ಮಾಡುತ್ತೇವೆಂದು ನಿಶ್ಚಯ ಮಾಡಿದಿರಿ. ಅದೂ ಕೂಡ ಈ ಸದನ ನಡೆಯತಕ್ಕ ಸಂದರ್ಭದಲ್ಲಿ, ಈ ಸದನವನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳದೆ ನಾವು ಇವತ್ತು ಚುನಾವಣೆಯನ್ನು ನಡೆಸತಕ್ಕ ಪರಿಸ್ಥಿತಿಯಲ್ಲಿಲ್ಲ, ನಾವೇ ತೋಡಿರತಕ್ಕ ಬಾವಿಗೆ ನಾವೇ ಬೀಳಬೇಕಾಗುತ್ತದೆ, ಮಂಡಲ ಪಂಚಾಯಿತಿಯ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಸ್ಥಾನಗಳ ಮೀಸಲಾತಿಯ ಪಾಲಿಸಿಯ ಬಗ್ಗೆ ಗೊಂದಲ ಉಂಟಾಗಿದೆ, ಜನರು ನಮಗೆ ಬಡಿಗೆಯನ್ನು ತೆಗೆದುಕೊಂಡು ಹೊಡೆಯತಕ್ಕ ಪರಿಸ್ಥಿತಿ ಬಂದಿದೆ ಎಂದು ತಮ್ಮ ಸಿ.ಎಲ್.ಪಿ. ಸಭೆಯಲ್ಲಿ ಪಂಚಾಯಿತಿಗಳ ಚುನಾವಣೆಯನ್ನು ನಡೆಸುವುದು ಬೇಡವೆಂದು ಅಭಿಪ್ರಾಯವನ್ನು ವ್ಯಕ್ತಪಡಿಸಿ ಆ ರೀತಿ ತೀರ್ಮಾನವನ್ನು ತೆಗೆದುಕೊಂಡು, ಈ ಸದನವು ನಡೆಯುತಕ್ಕ ಸಮಯದಲ್ಲಿ ಲಾ ಅಂಡ್ ಆರ್ಡರ್ ವ್ಯವಸ್ಥೆ ಸರಿಯಾಗಿಲ್ಲ ಸಮಾಜದಲ್ಲಿ ಅಶಾಂತಿಯ ವಾತಾವರಣ ಮೂಡಿದೆ ಎಂದು ಚುನಾವಣೆಯನ್ನು ಮುಂದಕ್ಕೆ ಹಾಕಿರುವ ಬಗ್ಗೆ ಪತ್ರಿಕೆಗಳಲ್ಲಿ ಬಂದಿದೆ.

ಶ್ರೀ ಎಸ್.ಎಂ. ಕೃಷ್ಣ: ಪಂಚಾಯಿತಿಯ ಚುನಾವಣೆಯ ವಿಚಾರದಲ್ಲಿ ಅವುಗಳನ್ನು ಮುಂದಕ್ಕೆ ಹಾಕುವುದಕ್ಕೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ವಿರೋಧ ಪಕ್ಷಗಳೇ ಕಾರಣ ಎನ್ನುವುದನ್ನು ಮಾನ್ಯ ಯಡಿಯೂರಪ್ಪನವರಿಗೆ ಸ್ಥಿರೀಕರಿಸುವುದಕ್ಕೆ ನಾವು ಸಿದ್ಧನಾಗಿದ್ದೇವೆ. ನಾವು ಸುಪ್ರೀಮ್ ಕೋರ್ಟ್‌ಗೆ ಕೊಟ್ಟಿರತಕ್ಕ ಮಾತಿನಂತೆ ಈ ಸದನಕ್ಕೆ ಮತ್ತು ಜನತೆಗೆ ಕೊಟ್ಟಿರುವ ಮಾತಿನಂತೆ 85 ಸಾವಿರ ಜನ ಪ್ರತಿನಿಧಿಗಳನ್ನು ಮಂಡಲ ಪಂಚಾಯಿತಿಯ ಚುನಾವಣೆಯಲ್ಲಿ ಆರಿಸತಕ್ಕ ದೊಡ್ಡ ಯಾಗವನ್ನೇ ಮಾಡಿದ್ದೇವೆ. ಮತ್ತು ಆ ಯಾಗದಲ್ಲಿ ನಾವು ಸಂಪೂರ್ಣವಾಗಿ ಯಶಸ್ವಿಯಾಗಿದ್ದೇವೆ. ಆದರೆ ಆ ಚುನಾವಣೆಯಲ್ಲಿ ನಿಮ್ಮ ಪಕ್ಷದವರು ಎಷ್ಟು ಸ್ಥಾನಗಳಲ್ಲಿ ಆರಿಸಿ ಬಂದರು, ನಮ್ಮ

ಪಕ್ಷದವರು ಎಷ್ಟು ಸ್ಥಾನಗಳಲ್ಲಿ ಆರಿಸಿ ಬಂದರು ಎನ್ನತಕ್ಕ ಪ್ರಶ್ನೆ ಮುಖ್ಯವಲ್ಲ. ನಾವು ಆ ಚುನಾವಣೆಯನ್ನು ಶಾಂತಿಯುತವಾಗಿ ನಡೆಸಿದ್ದೇವೆ. ಕೊನೆಗೆ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಚುನಾವಣೆಯನ್ನು ನಡೆಸುವ ಹಂತ ಬಂದಾಗ, ಎಲ್ಲಾ ರಾಜಕೀಯ ಪಕ್ಷಗಳೂ ಕೂಡ ಕೈ ಹಾಕುವುದಕ್ಕೆ ಪ್ರಾರಂಭವಾಗಿ ಜನಸಾಮಾನ್ಯರಲ್ಲಿ ತೀವ್ರ ಸ್ವರೂಪದ ಸಾಮಾಜಿಕ ಸಂಘರ್ಷಣೆ ಪ್ರಾರಂಭ ಆಯಿತು. ಇದೇ ಕಾರಣಕ್ಕಾಗಿ ಗೋಲೀಬಾರ್ ಆಯಿತು, ಅದರ ಬಗ್ಗೆ ನ್ಯಾಯಾಂಗ ತನಿಖೆ ಮಾಡಬೇಕು ಎಂದು ಸರ್ಕಾರದ ಮೇಲೆ ಬಲವಾದಂಥ ಒತ್ತಡವನ್ನು ಅವರು ತರುತ್ತಿದ್ದಾರೆ. ಇದು ಏನನ್ನು ಸೂಚಿಸುತ್ತದೆಂದರೆ ಸಿಮ್ಟಮ್, ಈ ಡಿಸೀಸ್ ಏನು ಇದೆ, ಇದು ಅದರ ಸಿಮ್ಟಮ್ಯಾಟಿಕ್, ಆದ್ದರಿಂದ ಸರ್ಕಾರದವರು ಮತ್ತು ಪೋಲೀಸ್ ಮಹಾ ನಿರ್ದೇಶಕರು ಏನು ಆಲೋಚನೆ ಮಾಡಿದರೆಂದರೆ, ಒಂದು ಚುನಾವಣೆಗೂ ಮತ್ತೊಂದು ಚುನಾವಣೆಗೂ ಒಂದು ರೀತಿಯ ರೀಜನಬಲ್ ಇಂಟರ್ವೆಲ್ ಇರಬೇಕು so that social forces can get settled themselves. ಆ ದೃಷ್ಟಿಯಿಂದ ಈ ಚುನಾವಣೆಯನ್ನು ಮುಂದಕ್ಕೆ ಹಾಕಿದ್ದೇವೆಯೇ ಹೊರತು ಜನರನ್ನು ಚುನಾವಣೆಯಲ್ಲಿ ಎದುರಿಸುವುದಕ್ಕೆ ನಮಗೆ ಶಕ್ತಿ ಇಲ್ಲವೆಂದು ಅಲ್ಲ. ಆದ್ದರಿಂದ ಈ ಚುನಾವಣೆಯನ್ನು ಎದುರಿಸುವುದನ್ನು ಬಿಟ್ಟು ನಾವು ಅದರಿಂದ ಪಲಾಯನದ ದಾರಿಯನ್ನು ಹಿಡಿದಿದ್ದೇವೆಂದು ತಾವು ತಿಳಿದುಕೊಳ್ಳುವುದಾದರೆ ಅದು ತಮ್ಮ ಭ್ರಮೆ, ಭ್ರಾಂತಿ ಎಂದು ನಾನು ಹೇಳಬಲ್ಲೆ. ಮತ್ತೊಂದು ವಿಚಾರವೇನೆಂದರೆ, ತಾವೇ ಹೇಳಿ, ಮೊದಲು ಯಾವ ಚುನಾವಣೆಯನ್ನು ಮಾಡೋಣ? ವಿಧಾನ ಸಭೆಯ ಚುನಾವಣೆಯನ್ನು ಮಾಡೋಣವೆ? ಅಥವಾ ತಾಲ್ಲೂಕು ಪಂಚಾಯಿತಿಗಳ ಚುನಾವಣೆಯನ್ನು ಮೊದಲು ಮಾಡೋಣವೆ? ತಮಗೆ ಯಾವುದು ಬೇಕೋ ಅದನ್ನು ಮಾಡಲು ನಾವು ಸಿದ್ಧರಾಗಿದ್ದೇವೆ. ಆದ್ದರಿಂದ ಸಾಮಾಜಿಕ ಘರ್ಷಣೆಗಳನ್ನು ಸ್ವಲ್ಪ ಕಡಿಮೆ ಮಾಡಲು ಪ್ರಯತ್ನ ಮಾಡಬೇಕು. ಮಿಕ್ಕ ಯಾವ ರಾಜ್ಯಗಳಲ್ಲಿ ಮಂಡಲ ಪಂಚಾಯಿತಿಗಳ ಚುನಾವಣೆಯನ್ನು ಮಾಡಿದ್ದಾರೆ? ರಾಜಾಸ್ಥಾನದಲ್ಲಿ, ಮತ್ತೊಂದು ರಾಜ್ಯದಲ್ಲಿ ಚುನಾವಣೆಯನ್ನು ಮಾಡಿದ್ದಾರೆ? ನೋಡಿ, ಮಾಡಿದ್ದರೆ ಬೆರಳು ಮಾಡಿಚಿ ತೋರಿಸಿ ನಾವು ಚುನಾವಣೆಯನ್ನು ಮಾಡಿದ್ದೇ ಒಂದು ದೊಡ್ಡ ಅಪರಾಧವಾಗಿದೆ ಎನ್ನತಕ್ಕ ರೀತಿಯಲ್ಲಿ ನೀವು ನಮ್ಮ ಮೇಲೆ ಅಪವಾದದ ಗೂಬೆಯನ್ನು ಕೂರಿಸಲು ಪ್ರಯತ್ನ ಮಾಡುತ್ತಿದ್ದೀರಲ್ಲ, ಮಾನ್ಯ ಯಡಿಯೂರಪ್ಪನವರೆ, ಏನು ಈ ನಿಮ್ಮ ವಿಪರ್ಯಾಸ?

ಶ್ರೀ ಪಾಟಾಳ್ ನಾಗರಾಜ್: ಇದು ಯಾರ ವಿಪರ್ಯಾಸವೋ? ನಿಮ್ಮದೋ? ಅವರದ್ದೋ? ಒಟ್ಟಿನಲ್ಲಿ ಆ ದೇವರೇ ಕಾಪಾಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ: ಒಂದು ಸತ್ಯ ಸಂಗತಿಯನ್ನು ತಾವು ಮರೆಮಾಚುತ್ತಿದ್ದೀರಿ. ಅದೇನೆಂದರೆ, ಯಾವ ಸಂದರ್ಭದಲ್ಲಿ ಯಾದವೀ ಕಲಹ ಕಾಂಗ್ರೆಸ್ನಲ್ಲಿ ಉಂಟಾಗಿತ್ತೋ, ಆಗ ಮುಖ್ಯಮಂತ್ರಿಗಳನ್ನು ಬದಲಾವಣೆ ಮಾಡಬೇಕೆಂದು ಹಠ ತೊಟ್ಟು ಇಲ್ಲಿ ಧರಣಿ ಕುಳಿತು ಕೊಂಡಾಗ ಅದಕ್ಕೆ ಚಾಣಾಕ್ಷತನದಿಂದ ಮುಖ್ಯಮಂತ್ರಿ ವೀರಪ್ಪಮೊಯಿಲಿಯವರು ಗ್ರಾಮ ಪಂಚಾಯತ್ ಚುನಾವಣೆಯನ್ನು ಘೋಷಣೆ ಮಾಡಿದರು. ಆ ಚುನಾವಣೆಯನ್ನು ಘೋಷಣೆ ಮಾಡದೇ ಇದ್ದಿದ್ದರೆ ಅವರ ಮುಖ್ಯಮಂತ್ರಿ ಗಿರಿ ಉಳಿಯುವುದಿಲ್ಲ ಎಂಬುದು ಅವರಿಗೆ ಸ್ಪಷ್ಟವಾಗಿ ಗೊತ್ತಿತ್ತು. ಈ ಕಡೆ ಕುಳಿತವರು ಗ್ರಾಮಪಂಚಾಯತ್, ತಾಲ್ಲೂಕು ಪಂಚಾಯತ್, ಜಿಲ್ಲಾ ಪಂಚಾಯತ್ ಚುನಾವಣೆಗಳನ್ನು ನಡೆಸಬಾರದೆಂದು ಹೇಳಿಲ್ಲ. ನಮ್ಮ ಬಿ.ಜೆ.ಪಿ.ಯವರು ಸಹ ಎಂದೂ ಹೇಳಿಲ್ಲ. ಎರಡನೆಯದು ನಿಜವಾಗಿ ನಿಮಗೆ ಕಳಕಳಿ ಇದ್ದರೆ ಈ ಗ್ರಾಮ ಪಂಚಾಯತ್ ಚುನಾವಣೆಯ ಜೊತೆಗೆ ತಾಲ್ಲೂಕು ಪಂಚಾಯತ್, ಜಿಲ್ಲಾ ಪಂಚಾಯತ್ ಚುನಾವಣೆಗಳನ್ನು ಮಾಡಬಹುದಾಗಿತ್ತಲ್ಲಾ? ಕೋಟ್ಯಾಂತರ ರೂ.ಗಳನ್ನು ಉಳಿಸಬಹುದಾಗಿತಲ್ಲಾ? ಮತದಾರರು ಸಾಲಾಗಿ ಬಂದು ಯಾರಿಗೆ ಬೇಕೋ ಅವರಿಗೆ ಓಟು ಕೊಟ್ಟು ಹೋಗುತ್ತಿದ್ದರಲ್ಲಾ;

ಶ್ರೀ ಎಸ್.ಎಂ. ಕೃಷ್ಣ: ಈಗ ಮೂರು ಚುನಾವಣೆಗಳನ್ನು ಒಟ್ಟಿಗೆ ನಡೆಸುವುದಕ್ಕೆ ಆಗುತ್ತಿರಲಿಲ್ಲ. ಒಂದು ಚುನಾವಣೆ ಪಕ್ಷಾತೀತವಾಗಿ ನಡೆಯುವಂತಹ ಚುನಾವಣೆ. ಇನ್ನು ಎರಡು ಚುನಾವಣೆಗಳು ಪಕ್ಷಾಧಾರಿತವಾಗಿ ನಡೆಸುವಂತಹ ಚುನಾವಣೆಗಳು. ಅದು ಹೇಗೆ ಅವುಗಳನ್ನು ಜೋಡಿಸಲು ಸಾಧ್ಯ; ನಮಗಂತೂ ಗೊತ್ತಾಗುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ: ಹಾಗಾದರೆ ಇದೇ ಚುನಾವಣಾ ಆಯೋಗ ಡಿಸೆಂಬರ್ 31ರವರೆಗೆ ನಾಮಪತ್ರವನ್ನು ಸಲ್ಲಿಸಿ ಜನವರಿ 23ಕ್ಕೆ ಚುನಾವಣೆಯನ್ನು ಮಾಡುತ್ತೇವೆಂದು ಹೇಳಿದಾಗ ನೀವು ಏತಕ್ಕೆ ಒಪ್ಪಿಗೆ ಕೊಡಲಿಲ್ಲ. ಮತ್ತೆ ಜನವರಿ 17ಕ್ಕೆ ನಾಮಪತ್ರ ಹಾಕುವುದಕ್ಕೆ ಶುರು ಮಾಡಿ ಚುನಾವಣೆಯನ್ನು ನಡೆಸುತ್ತೇವೆಂದು ಹೇಳಿದರು. ಎರಡು ಬಾರಿ ಚುನಾವಣೆಯನ್ನು ಮುಂದೂಡಿದರು. ನಿಮ್ಮ ಪೋಲೀಸ್ ಮಹಾ ನಿರ್ದೇಶಕರು ಮತ್ತು ರಾಜ್ಯದ ಮುಖ್ಯ ಕಾರ್ಯದರ್ಶಿಯವರು ರಾಜ್ಯದಲ್ಲಿ ಅಶಾಂತಿ ವಾತಾವರಣ ತಲೆದೋರಿದೆ ಎಂದು ಹೇಳಿದ್ದಾರೆ. ಸದನದ ಒಳಗಡೆ ನೀವು ಕೊಟ್ಟಿರುವಂತಹ ಉತ್ತರ ನಿಶ್ಚಿತವಾದಂತಹ ದಿನಾಂಕದಲ್ಲಿ ನೀವು ಚುನಾವಣೆಗಳನ್ನು ನಡೆಸುತ್ತೇವೆಂದು ವಿಧಾನ ಪರಿಷತ್ತಿನಲ್ಲಿ ಹೇಳಿದ್ದೀರಿ. ಒಂದು ವೇಳೆ ಈ ರಾಜ್ಯದಲ್ಲಿ ಆ ರೀತಿಯ ಅಶಾಂತಿಯ ವಾತಾವರಣ ಇದ್ದರೆ ಆ ಬಗ್ಗೆ ಈ ಸದನದಲ್ಲೇ ಚರ್ಚೆ ಮಾಡಿ ಸದನದ ಅಭಿಪ್ರಾಯವನ್ನು ತೆಗೆದುಕೊಳ್ಳಬಹುದಾಗಿತ್ತು. ಪೋಲೀಸ್ ಮಹಾ ನಿರ್ದೇಶಕರು, ಅಧಿಕಾರಿಗಳು ರಾಜ್ಯದಲ್ಲಿ ಗ್ರಾಮ ಪಂಚಾಯತ್ ಚುನಾವಣೆಯಿಂದ ಅಶಾಂತಿಯ ಪರಿಣಾಮ ಉಂಟಾಗಿದೆ ಎಂದು ಏನು ಹೇಳುತ್ತಾರೋ, ಇದಂತೂ ಬೇಜವಾಬ್ದಾರಿಯ ಪರಮಾವಧಿಯ ಹೇಳಿಕೆ ಎಂದು ಹೇಳುತ್ತೇನೆ. ಈ ಸದನದಲ್ಲಿ ಇದರ ಬಗ್ಗೆ ಚರ್ಚೆಯಾಗಬೇಕಾಗಿತ್ತು. ಈ ಹೌಸ್ನ ವಿಶ್ವಾಸವನ್ನು ತೆಗೆದುಕೊಳ್ಳಬೇಕಾಗಿತ್ತು. ಇಲ್ಲಿ ಸರ್ವಾಧಿಕಾರ ಮಾಡುವುದಕ್ಕಾಗುವುದಿಲ್ಲ. ನೀವೇನು ಈ ರಾಜ್ಯದ ಸರ್ವಾಧಿಕಾರಿಗಳು ಅಲ್ಲ. ಸತ್ಯ ಸಂಗತಿ ಏನು ಎಂಬುದನ್ನು ಜನರಿಗೆ ಹೇಳೋಣ. ಜನತಾದಳದ ಸ್ನೇಹಿತರು ಬಜೆಟ್ ಅಧಿವೇಶನದ ಸಂದರ್ಭದಲ್ಲಿ ಪ್ರಮುಖವಾದ ವಿಷಯಗಳನ್ನು ಚರ್ಚೆ ಮಾಡುವಂತಹ ಸಂದರ್ಭದಲ್ಲಿ ಯಾವುದೋ ಕೆಲವು ಕಡೆಗಳಲ್ಲಿ ಗೋಲಿಬಾರ್ ಆಗಿದ್ದು ಹೇಳಿದರು. ಆದರೆ ಇವರ ಕಾಲದಲ್ಲೂ ಗೋಲಿಬಾರ್ ಆಗಿತ್ತು. ಮುಖ್ಯಮಂತ್ರಿಗಳೇ ಹೇಳಿದ ಪ್ರಕಾರವೇ ಆ ಸಂದರ್ಭದಲ್ಲಿ 600-700 ಗಲಭೆಗಳು ನಡೆದಿತ್ತು. ಆದರೂ ಆ ದಿವಸಗಳಲ್ಲಿ ಚುನಾವಣೆಗಳು ಮುಂದಕ್ಕೆ ಹೋಗಲಿಲ್ಲ. ಇವತ್ತು ಚುನಾವಣೆಗಳನ್ನು ಎದುರಿಸುವುದಕ್ಕೆ ಆಗದೇ ನೀವು ಒಂದು ಧರಣಿ ಕುಳಿತುಕೊಳ್ಳಿ, ಅಶಾಂತಿಯ ವಾತಾವರಣ ಉಂಟಾಗಿದೆ ಎಂಬ ವರದಿಯನ್ನು ತರಿಸುತ್ತೇವೆ ಎಂದು ಎಲ್ಲಾ ನಾಟಕೀಯವಾಗಿ ಎಲ್ಲರನ್ನೂ ಸದನದಲ್ಲೇ ಕೂರಿಸಿಕೊಂಡು ನಮ್ಮ ಕಣ್ಣ ಮುಂದೆಯೇ ಒಂದು ವರದಿಯನ್ನು ನಿಮ್ಮ ಅಧಿಕಾರಿಗಳು ಕಳುಹಿಸುತ್ತಾರೆ. ಆ ಹೌಸ್ಗೆ ಗೌರವವಿದೆಯೇ? ಜನರು ನಮ್ಮನ್ನು ಆಯ್ಕೆ ಮಾಡಿ ಕಳುಹಿಸಿದ್ದಾರೆ. ಈ ಸದನದ ಒಳಗಡೆ ನಮಗೆ ಯಾವ ಮರ್ಯಾದೆ ಇದೆ ಎಂಬುದನ್ನು ಕೇಳುತ್ತೇನೆ. ಪೋಲೀಸ್ ಮಹಾ ನಿರ್ದೇಶಕರು ಮತ್ತು ಮುಖ್ಯ ಕಾರ್ಯದರ್ಶಿಯವರು ಈ ಚುನಾವಣಾ ಆಯೋಗಕ್ಕೆ ಈ ವರದಿಯನ್ನು ಕೊಟ್ಟು ಅಕ್ಷಮ್ಯ ಅಪರಾಧ ಮಾಡಿದ್ದಾರೆಂದು ಹೇಳುತ್ತೇನೆ. ಏಕೆಂದರೆ ಇದು ಸತ್ಯಕ್ಕೆ ದೂರವಾದಂತಹ ಸಂಗತಿ. ರಾಜ್ಯದಲ್ಲಿ ಈ ರೀತಿ ಭಾವಿಸುವಂತಹ ಅಶಾಂತಿಯ ವಾತಾವರಣ ಇರಲಿಲ್ಲ. ಹಾಗೇನಾದರೂ ಇದೆ ಎನ್ನುವುದಕ್ಕೆ ಕಾರಣವಾದರೂ ಇದ್ದರೆ ಕೆಲವು ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ಚುನಾವಣೆಗಳನ್ನು ಮಾಡಿ ಅದರ ಅನುಭವದ ಆಧಾರದ ಮೇಲೆ ನೀವು ರಿಸರ್ವೇಷನ್ ಪಾಲಿಸಿಯನ್ನು ನಿಶ್ಚಯ ಮಾಡಬಹುದಾಗಿತ್ತು. ಆಗ ನಾವು ಯಾರೂ ಇದನ್ನು ವಿರೋಧ ಮಾಡುತ್ತಿರಲಿಲ್ಲ. ಇದೆಲ್ಲದರ ಮಧ್ಯೆ ಚುನಾವಣೆ ಆಗಿದ್ದರೆ, ತಪ್ಪುಗಳು ಆಗಿದ್ದರೆ, ಗೊಂದಲ ಆಗಿದ್ದರೆ, ಅದನ್ನು ಸರಿಪಡಿಸಿಕೊಂಡು ಮುಂದೆ ಹೋಗುವಂತಹ ಪ್ರಯತ್ನವನ್ನು ಮಾಡಬೇಕಾಗಿತ್ತು.

ಉಪಾಧ್ಯಕ್ಷರು : ಮಾನ್ಯ ಯಡಿಯೂರಪ್ಪನವರೇ, ತಾವು ಬಜೆಟ್ ಮೇಲೆ ಚರ್ಚೆಯನ್ನು ಜಾಗ್ರತೆ ಮುಗಿಸಿ,

ಶ್ರೀ ಬಿ.ಎಸ್. ಯಡಿಯೂರಪ್ಪ: ಅಧಿಕಾರ ವಿಕೇಂದ್ರೀಕರಣದಲ್ಲಿ ನಿಮಗೆ ನಂಬಿಕೆ ಇಲ್ಲ. ನಾಳೆ ಚುನಾವಣೆಗಳನ್ನು ನಡೆಸುವುದಕ್ಕೆ ಹೋದರೆ ಜನರು ನಿಮಗೆ ಛೀಮಾರಿ ಹಾಕುವರು. ಚುನಾವಣೆ ಫಲಿತಾಂಶ ನಾಳೆ ಬರುವ ವಿಧಾನಸಭಾ ಚುನಾವಣಾ ಮೇಲೆ ಆಗಿ ನೀವು ಮನೆಗೆ ಹೋಗುತ್ತೀರಾ ಎನ್ನುವ ಭಯದಿಂದ ತಾಲ್ಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್ ಚುನಾವಣೆಗಳನ್ನು ಮುಂದೂಡುವಂಥ ಒಂದು ಷಡ್ಯಂತರವನ್ನು ಏನು ಮಾಡಿದ್ದೀರಿ, ಇದಕ್ಕೆ ನಿಮ್ಮ ಜೊತೆಗೆ ಜನತಾದಳದವರು ಶಾಮೀಲಾಗುತ್ತೇವೆಂದು ಕೈ ಜೋಡಿಸಿದ್ದಾರೆ.

(ಗೊಂದಲ)

ಶ್ರೀಮತಿ ಮೋಟಮ್ಮ: ನೀವು ಮೂರನೆ ಸ್ಥಾನದಲ್ಲಿ ನಿಂತುಕೊಂಡು ನಮ್ಮನ್ನು ಮನೆಗೆ ಹೋಗುತ್ತಿರಾ ಎಂದು ಹೇಳುತ್ತಿದ್ದೀರಾ?

ಶ್ರೀ ಎಸ್.ಎಂ. ಕೃಷ್ಣ: ಮಾನ್ಯ ಯಡಿಯೂರಪ್ಪನವರೇ, ಆಗಲೇ ಭ್ರಮೆ ಎಂದು ಹೇಳಿಯಾಯಿತು, ಈಗ ಭ್ರಾಂತಿ ಎಂದು ಹೇಳಿಯಾಯಿತು. ಇದು ಚುನಾವಣಾ ವರ್ಷ. ನಾವೆಲ್ಲಾ ಬೇಡ ಎಂದರೂ ಚುನಾವಣೆಗೆ ಹೋಗಲೇಬೇಕಾಗುತ್ತದೆ. ಆದುದರಿಂದ ಅದರ ಬಗ್ಗೆ ಪರಾಕ್ರಮದ ಮಾತುಗಳನ್ನು ನಾವೂ ಆಡಬಾರದು. ಕಳೆದ 5 ದಿವಸಗಳಲ್ಲಿ ಈ ಸದನದಲ್ಲಿ ಏನು ನಡೆದಿದೆ, ಅದು ಇದೇ ರಾಜ್ಯದಾದ್ಯಂತ ಏನು ನಡೆಯುತ್ತಿದೆ ಎಂಬುದರ ಕೈಗನ್ನಡಿಯಾಗಿದೆ. ಇಲ್ಲಿ ಆಸನಗಳು ಏಕೆ ಖಾಲಿಯಾಗಿವೆ? ಈ ಸೋಷಿಯಲ್ ಟೆನ್ಷನ್ನಿಂದಾಗಿ ಪ್ರತ್ಯೇಕವಾಗಿ ಈ ಸ್ಥಾನಗಳು ಖಾಲಿಯಾಗಿರತಕ್ಕದ್ದು.

ಆದುದರಿಂದ ನಿಮಗೆ ಚುನಾವಣೆ ಮಾಡಬೇಕು ಎನ್ನುವ ಅವಸರ. ಆದರೆ ನಮಗೆ ಚುನಾವಣೆವನ್ನು ಮಾಡಬೇಕು ಎನ್ನುವ ಅಭಿಪ್ರಾಯ ಇದೆ. ಆದರೆ ಯಾವ ಕಾಲದಲ್ಲಿ ಯಾವ ರೀತಿ ಆ ಚುನಾವಣೆಗಳು ಆಗಬೇಕೆಂಬುದು ಪ್ರಾಮುಖ್ಯ, ಶಾಂತಿಯುತವಾದ ಭೂಮಿಕೆಯಲ್ಲಿ, ಶಾಂತಿಯುತವಾದಂತಹ ಸನ್ನಿವೇಶದಲ್ಲಿ ಹಾಗೂ ಚೌಕಟ್ಟಿನಲ್ಲಿ ಈ ಚುನಾವಣೆಗಳನ್ನು ಮಾಡಬೇಕು ಎನ್ನುವುದು ನಮ್ಮ ಇರಾದೆ, ನಮ್ಮ ಕರ್ತವ್ಯ, ಮತ್ತು ನಮ್ಮ ಅಭಿಪ್ರಾಯ. ಆದರೆ ನೀವು ಇಡೀ ರಾಜ್ಯವೇ ಬೆಂಕಿ ಹತ್ತಿಕೊಂಡು ಉರಿಯುತ್ತಿರುವಾಗಲೇ ಚುನಾವಣೆ ಮಾಡಿಬಿಡಿ ಎಂದು ಹೇಳುತ್ತೀರಿ. ಅದಕ್ಕೆ ನಾವು ತಯಾರಾಗಿಲ್ಲ. ಜನಗಳಿಗೆ ನಾವು ಹೇಳುತ್ತೇವೆ, ನಾವು ಜನಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತೇವೆ. ಏಕೆಂದರೆ 80ಸಾವಿರ ಪ್ರತಿನಿಧಿಗಳನ್ನ ಆರಿಸಿ ಕೊಡುವುದಕ್ಕೆ ಅವಕಾಶ ಮಾಡಿಕೊಟ್ಟಂತಹ ಪಕ್ಷ, ಅವಕಾಶ ಮಾಡಿಕೊಟ್ಟಂತಹ ಸರ್ಕಾರ ಇನ್ನು ಕೇವಲ 3300 ಜನ ಪ್ರತಿನಿಧಿಗಳನ್ನು ಆರಿಸಿಕೊಡುವುದಕ್ಕೆ ಅವಕಾಶ ಮಾಡಿಕೊಡುವುದಿಲ್ಲ ಎಂದು ನೀವು ಹೇಳಿದರೆ ಜನ ನಂಬುವುದಿಲ್ಲ. ಅದಕ್ಕೂ ನಾವು ಅವರಿಗೆ ಅವಕಾಶ ಕೊಡುತ್ತೇವೆ. ವಿಧಾನ ಸಭಾ ಸದಸ್ಯರನ್ನು ಹೊಸದಾಗಿ ಆಯ್ಕೆ ಮಾಡತಕ್ಕಂತಹ ಅವಕಾಶವನ್ನು ಯಾವಾಗ ಕೊಡುತ್ತೇವೋ ಹೇಳುವುದಕ್ಕೆ ಬರುವುದಿಲ್ಲ. ಆದುದರಿಂದ, ಈ ಚುನಾವಣೆಗಳು ಸಹ ನಡೆಯುತ್ತವೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಅದರ ರಿಮೋಟ್ ಕಂಟ್ರೋಲ್ ಡೆಲ್ಲಿಯಲ್ಲಿ ಇದೆ. ನಿಮ್ಮ ಕೈಯಲ್ಲಿ ಏನು ಇದೆ. ನನ್ನ ಪ್ರಶ್ನೆ ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯತಿ ಚುನಾವಣೆಯನ್ನು ಮುಂದೂಡಬೇಕಾದರೆ ಈ ಸದನದಲ್ಲಿ [illegible] ವಿಶ್ವಾಸವನ್ನು ತೆಗೆದುಕೊಳ್ಳಲಿಲ್ಲ.

ಉಪಾಧ್ಯಕ್ಷರು : ನೀವು ಪೂರ್ತಿಯಾಗಿ ಪಂಚಾಯತ್ ಎಲೆಕ್ಷನ್ ಬಗ್ಗೇನೆ ಮಾತನಾಡುತ್ತಿದ್ದೀರಿ. ನೀವು ಇವತ್ತು ಬಜೆಟ್ ಬಗ್ಗೆ ಮಾತನಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷರೇ, ನೀವು ಒಪ್ಪುತ್ತೀರೋ ಇಲ್ಲವೋ ಹೇಳಿ, ಈ ಕಡೆ ಇರುವಂತಹ ನಮ್ಮ ಜನತಾ ದಳದ ಸ್ನೇಹಿತರು ಹೇಳಿದಂತೆ ರಾಜ್ಯದಲ್ಲಿ ಲಾ ಅಂಡ್ ಆರ್ಡರ್ ಸಿಚ್ಯುಯೇಷನ್ ಹದಗೆಟ್ಟಿದೆ. ಗ್ರಾಮ ಪಂಚಾಯಿತಿಯಲ್ಲಿ ಅಧ್ಯಕ್ಷರ, ಉಪಾಧ್ಯಕ್ಷರ ಚುನಾವಣೆಯಲ್ಲಿ ಗೊಂದಲದ ವಾತಾವರಣ ಉಂಟಾಗಿದೆ, ಅಶಾಂತಿ ವಾತಾವರಣ ಉಂಟಾಗಿದೆ ಎನ್ನುವುದನ್ನು ನೀವು ಒಪ್ಪುವುದಾದರೆ, ಹಾಗೂ ಈ ಸಂಬಂಧ ಗೋಲಿಬಾರ್ ನಡೆದಿರುವುದರ ಬಗ್ಗೆ ನ್ಯಾಯಾಂಗ ತನಿಖೆಯನ್ನು ನಡೆಸುವುದಕ್ಕೆ ಏಕೆ ಹಿಂದುಮುಂದು ನೋಡುತ್ತೀರಿ. ಎರಡನೆಯದಾಗಿ ನಾನು ಅತ್ಯಂತ ಗೌರವದಿಂದ ನಿಮ್ಮನ್ನು ಕೇಳುತ್ತಿದ್ದೇನೆ, ಚುನಾವಣೆ ಮುಂದೂಡುವುದಕ್ಕೆ ನಿಮಗೆ ಬಹುಮತ ಇದ್ದರೆ, ನೀವು ಮಾಡಿ. ಅದಕ್ಕೆ ನನ್ನದೇನೂ ಅಭ್ಯಂತರವಿಲ್ಲ. ಆದರೆ, ಸದನ ನಡೆಯುತ್ತಿರಬೇಕಾದರೆ ಈ ಸದನದ ಅಭಿಪ್ರಾಯವನ್ನು ಪಡೆಯದೇ ನಮ್ಮ ಅಭಿಪ್ರಾಯಗಳನ್ನು ತೆಗೆದುಕೊಳ್ಳದೇ ನಿಮ್ಮ ಮುಖ್ಯಮಂತ್ರಿಗಳು ನಿಮ್ಮ ಸಿಎಲ್ಪಿ ಮೀಟಿಂಗ್ನಲ್ಲಿ ಕುಳಿತುಕೊಂಡು ಚರ್ಚೆ ಮಾಡಿ ಪಕ್ಷದ ಒಂದು ತೀರ್ಮಾನದ ರೀತಿಯಲ್ಲಿ ನಿಮ್ಮ ಅಧಿಕಾರಿಗಳು ನಿಮ್ಮ ಕೈಗೊಂಬೆಯಾಗಿ ವರದಿಯನ್ನು ಕಳುಹಿಸಿಕೊಡುವ ಮಟ್ಟಿಗೆ ಅಧಿಕಾರಿಗಳನ್ನು ದುರುಪಯೋಗ ಮಾಡಿಕೊಳ್ಳುತ್ತಿರುವುದು ಏನಿದೆ, ಇದು ಅಕ್ಷಮ್ಯ ಅಪರಾಧ. ನಾನು ನಿಮ್ಮನ್ನು ಒತ್ತಾಯ ಮಾಡುತ್ತಿದ್ದೇನೆ, ಯಾವ ನಿಮ್ಮ ಮುಖ್ಯಕಾರ್ಯದರ್ಶಿಗಳು, ಪೋಲೀಸ್ ಮಹಾ ನಿರ್ದೇಶಕರು ಆ ಚುನಾವಣಾ ಆಯೋಗಕ್ಕೆ ಪತ್ರ ಬರೆದಿದ್ದಾರೆ, ಆ ಪತ್ರವನ್ನು ಇಲ್ಲಿ ಟೇಬಲ್ ಮೇಲೆ ಇಡಿ. ನಾವೂ ಅದನ್ನು ನೋಡಬೇಕಾಗಿದೆ. ಇವತ್ತು ನಾನು ಒತ್ತಾಯ ಮಾಡುತ್ತಿದ್ದೇನೆ, ಸದನದ ಸಮಿತಿ ಕಳುಹಿಸಿ ಕೊಡಿ. ಏಕೆಂದರೆ ನಿಮ್ಮ ಅಧಿಕಾರಿಗಳು ಕೊಟ್ಟಿರುವಂತಹ ವರದಿ ಸತ್ಯಕ್ಕೆ ದೂರವಾದದು. ಇದು ನಿಜ, ರಿಸರ್ವೇಷನ್ ವ್ಯವಸ್ಥೆ ವಿಷಯದಲ್ಲಿ ಒಂದು ರೀತಿಯ ಅತೃಪ್ತಿ ಇರಬಹುದು. ಅಸಮಾಧಾನ ಇರಬಹುದು. ಮುಂದೆ ಅನುಭವದ ಆಧಾರದ ಮೇಲೆ ಅದನ್ನು ತಿದ್ದಿಕೊಳ್ಳುವುದಕ್ಕೆ ಅವಕಾಶ ಇತ್ತು. ಅದು ಯಾವುದನ್ನು ಮಾಡದೇ ಚುನಾವಣೆ ಘೋಷಣೆ ಮಾಡಿ ಅಧಿಕಾರಿಗಳು ಲಕ್ಷಾಂತರ ರೂಪಾಯಿ ಖರ್ಚು ಮಾಡಿ ತಿಂಗಳುಗಟ್ಟಲೆ ಸಿದ್ಧತೆ ಮಾಡಿಕೊಂಡು ಏಕಾಏಕಿ ಈ ಒಂದು ಚುನಾವಣೆಗಳನ್ನು ಮುಂದೂಡಿರುವಂತಾದ್ದು ನಿಮ್ಮ ರಾಜಕೀಯ ಸ್ವಾರ್ಥಕ್ಕೆ ಹೊರತು ರಾಜ್ಯದ ಜನರ ಹಿತಕ್ಕೋಸ್ಕರ ಅಲ್ಲ. ಈ ಚುನಾವಣೆ ಪಕ್ಷದ ಹೆಸರಿನಲ್ಲಿ ನಡೆಯುತ್ತದೆ. ಪಕ್ಷದ ಚಿಹ್ನೆಯಲ್ಲಿ ನಡೆಯುತ್ತದೆ. ಈ ಫಲಿತಾಂಶ ನಾಳೆ ವಿಧಾನ ಸಭಾ ಚುನಾವಣೆಯಲ್ಲಿ ಆಗುತ್ತದೆ ಎನ್ನುವ ಭಯದಿಂದ ಈ ಚುನಾವಣೆಗಳನ್ನು ಮುಂದೂಡುವಂತಹ ತಂತ್ರಗಾರಿಕೆ ಮಾಡಿ ಪ್ರಜಾತಂತ್ರದ ವ್ಯವಸ್ಥೆಯನ್ನು ಕಗ್ಗೊಲೆ ಮಾಡುವಂತಹ ಪ್ರಯತ್ನವನ್ನು ಮಾಡಿದ್ದೀರಿ. ಸರ್ವಾಧಿಕಾರಿಯಂತೆ ವರ್ತನೆ ಮಾಡಿದ್ದೀರಿ. ಈ ಬಜೆಟ್ನಲ್ಲಿ ಈ ನಾಡಿನ ಜನರಿಗೆ ಯಾವ ರೀತಿಯೂ ಅನುಕೂಲ ಆಗುವಂತಹ ಸಂಗತಿಗಳು ಇಲ್ಲವೇ ಇಲ್ಲ ಎಂದು ವಿರೋಧ ಮಾಡಿ ಇಷ್ಟೊತ್ತು ಸನ್ಮಾನ್ಯ ಉಪಾಧ್ಯಕ್ಷರು ಶಾಂತ ರೀತಿಯಿಂದ ಮೊದಲ ಬಾರಿಗೆ ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳು ಅರ್ಪಿಸಿ, ನಾನು ಕುಳಿತುಕೊಳ್ಳುತ್ತೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಯಡಿಯೂರಪ್ಪನವರು ಆರಾಧನಾದಲ್ಲಿ ಒಂದು ಪೈಸನೂ ಕೊಟ್ಟಿಲ್ಲ ಎಂದು ಹೇಳಿದರು ಎಂದು ಕಾಣುತ್ತದೆ. ಈಗಾಗಲೇ ನಾವು ಅದಕ್ಕೆ 3 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿ ಜಿಲ್ಲಾಧಿಕಾರಿಗಳಿಗೆ ಪ್ರತಿಯೊಂದು ಶಾಸನ ಸಭಾ ಕ್ಷೇತ್ರಕ್ಕೂ ಒಂದು ಲಕ್ಷ 30 ಸಾವಿರ [illegible] ತಲುಪುವಂತೆ ಏರ್ಪಾಡು ಮಾಡಿದ್ದೇವೆ. ಇನ್ನು 3 ಕೋಟಿ....

ಶ್ರೀ ಬಿ.ಎಸ್. ಯಡಿಯೂರಪ್ಪ: ಯಾವಾಗ ಕೊಟ್ಟಿದ್ದು.

ಶ್ರೀ ಪಾರ್ಶ್ವಳ್ಳಿ ರಾಮಸ್ವಾಮಿ: ಇದು ತೀರ್ಮಾನವಾಗಿದ್ದು 10 ದಿವಸದ ಒಂದ್ಲೆ. 10 ದಿವಸದ ಒಂದೇನೆ ಕಳುಹಿಸಿದ್ದೇವೆ; ನಿಮ್ಮ ಲೆಕ್ಕಾಚ್ಚಾರ ತೆಗೆದು ನೋಡಿ.

ಶ್ರೀ ವಾಟಾಳ್ ನಾಗರಾಜ್: ತಾವು ಒಂದು ಕ್ಷೇತ್ರಕ್ಕೆ ಎಷ್ಟು ಕೊಟ್ಟಿದ್ದೀರಿ.

ಶ್ರೀ ಪಾರ್ಶ್ವಳ್ಳಿ ರಾಮಸ್ವಾಮಿ: ಒಂದೊಂದು ಕ್ಷೇತ್ರಕ್ಕೆ 1 ಲಕ್ಷದ 30 ಸಾವಿರ ಕೊಟ್ಟಿದ್ದೇವೆ.

ಶ್ರೀ ವಾಟಾಳ್ ನಾಗರಾಜ್: ಈಗ ನನ್ನ ಕ್ಷೇತ್ರಕ್ಕೆ ಸ್ವಲ್ಪ ಹೆಚ್ಚು ಕಡಿಮೆ 50 ಲಕ್ಷ ರೂಪಾಯಿಗಳನ್ನು ಎಲ್ಲಾ ದೇವಸ್ಥಾನಗಳಿಗೆ ಸೇರಿಕೊಡಬೇಕಾಗಿದೆ. ಅಂತಹದ್ದರಲ್ಲಿ ಕೊನೇ ಪಕ್ಷ ನೀವು ಅದರ ಕಾಲು ಭಾಗವಾದರೂ ಕೊಡಬೇಕು. ಈ ಒಂದೂಕಾಲು ಲಕ್ಷ ರೂಪಾಯಿಗಳನ್ನು ಪಡೆದು ಯಾವ್ಯಾವ ದೇವರುಗಳಿಗೆ ಹಂಚೋಣ ಹೇಳಿ.

ಶ್ರೀ ಪಾರ್ಶ್ವಳ್ಳಿ ರಾಮಸ್ವಾಮಿ: ಮಾನ್ಯ ವಾಟಾಳ್ ನಾಗರಾಜ್ರವರಿಗೆ ಅರಿಕೆ ಮಾಡಿಕೊಳ್ಳುವುದೇನೆಂದರೆ, ಒಂದು ಲಕ್ಷ, 30 ಸಾವಿರ ರೂಪಾಯಿ ಆರಾಧನಾ ಯೋಜನೆಯಲ್ಲಿ ಕೊಟ್ಟಿದ್ದೇವೆ; ಅದಲ್ಲದೆ ಸುಮಾರು 1 ಕೋಟಿ ರೂಪಾಯಿಗಳನ್ನು ಎಲ್ಲಾ ಕ್ಷೇತ್ರಗಳಿಗೂ ಸ್ವಲ್ಪ ಸಮನಾಗಿ ಬರುವಂತೆ ಆ ದೇವಸ್ಥಾನಗಳ ರಿಪೇರಿ ಅಥವಾ ದೇವಸ್ಥಾನಗಳನ್ನು ಕಟ್ಟುವುದು, ಕಲ್ಯಾಣ ಮಂಟಪ ಇವುಗಳಿಗೆಲ್ಲ ಹಂಚಿದ್ದೇವೆ. ಇನ್ನೂ ಹೆಚ್ಚಿಗೆ ಹಂಚಲು ನನ್ನ ಪ್ರಯತ್ನಗಳು ನಡೆದಿದೆ.

ಶ್ರೀ ವಾಟಾಳ್ನಾಗರಾಜ್: ದೇವರು ನಿಮಗೆ ಒಳ್ಳೆಯದು ಮಾಡಲಿ.

+ ಶ್ರೀ ಕಾಗೋಡು ತಿಮ್ಮಪ್ಪ (ಸಾಗರ): ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಹಣಕಾಸಿನ ಸಚಿವರಾಗಿ 94-95ನೇ ಸಾಲಿನ ಆಯವ್ಯಯ ಪತ್ರವನ್ನು ಮಂಡಿಸಿದ ಮೇಲೆ ಮಾನ್ಯ ವಿರೋಧ ಪಕ್ಷದ ನಾಯಕರು ಚರ್ಚೆಯನ್ನು ಪ್ರಾರಂಭ ಮಾಡಬೇಕಾಗಿತ್ತು. ದುರದೃಷ್ಟವಶಾತ್ ಇವತ್ತು ಆ ಕೆಲಸ ಅವರಿಂದ ಆಗಲಿಲ್ಲ. ವಿರೋಧ ಪಕ್ಷದವರಿಗೆ ವರ್ಷಕ್ಕೆ ಒಂದು ಸಾರಿ ಸಿಗುವಂತಹ ಈ ಸಂದರ್ಭವನ್ನು ಬಳಸಿಕೊಳ್ಳಬೇಕಾದಂತಹ ಜಾಣ್ಮೆ ಅವರಿಗೆ ಸೇರಿದಂತಾದ್ದು. ಮತ್ತೊಂದು ಸಾರಿ ಒಂದು ವರ್ಷದ ಅವಧಿಯಲ್ಲಿ ನೀವು ಈ ಆಯವ್ಯಯದ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಸಿಗುವುದಿಲ್ಲ. ಯಾವುದೋ ಕೆಲಸ ಕಾರಣಗಳನ್ನು, ನೆಪಗಳನ್ನು ಮುಂದಿಟ್ಟು ಇಂತಹ ಸದವಕಾಶವನ್ನು ಉಪಯೋಗಿಸಿಕೊಳ್ಳದೇ ಇರುವಂತಹ ಒಂದು ಪ್ರಯತ್ನ ಏನಿದೆ, ಇದು ಸಾರ್ವಜನಿಕರ ದೃಷ್ಟಿಯಿಂದ, ರಾಜ್ಯದ ಜನರ ದೃಷ್ಟಿಯಿಂದ ಬಹಳ ಅಪರಾಧ ಎಂದು ಹೇಳಬೇಕಾಗಿದೆ. ವಿರೋಧ ಪಕ್ಷದವರಿಗಾಗಿಯೇ ಕಳೆದ 4-5 ದಿವಸದಿಂದ ಅವರಿಗೆ ಅವಕಾಶ ಕೊಡಬೇಕು, ಅವರೂ ಚರ್ಚೆಯಲ್ಲಿ ಪಾಲ್ಗೊಳ್ಳಬೇಕು, ಅವರು ಈ ಚರ್ಚೆಯಲ್ಲಿ ಪಾಲ್ಗೊಳ್ಳುವುದರಿಂದ ರಾಜ್ಯದ ಜನರ ಹಿತಚಿಂತನೆಯನ್ನು ಇಲ್ಲಿ ಮಾಡುವುದಕ್ಕೆ ಸಾಧ್ಯ ಎನ್ನುವ ಒಂದು ಕಾರಣದಿಂದಾಗಿ ಸದನವನ್ನು ಮುಂದೂಡಬೇಕಾದಂತಹ ಪ್ರಯತ್ನ ನಡೆಯಿತು. ಇದರ ಅರ್ಥ ಇದರ ಗಾಂಭೀರ್ಯತೆಯನ್ನು ಈ ನಿಮಿಷದವರೆಗೂ ಸಹ ಮಾನ್ಯ ವಿರೋಧ ಪಕ್ಷಗಳು ಅರ್ಥ ಮಾಡಿಕೊಳ್ಳಲಿಲ್ಲವೆಂದು ನಾವು ಬಹಳ ದುಃಖದಿಂದ ಈ ಮಾತನ್ನು ಹೇಳಬೇಕಾಗಿದೆ, ಶ್ರೀಮಾನ್ ವಾಟಾಳ್ ನಾಗರಾಜ್‌ರವರು ಸಹ ಹೇಳಿದ್ದಾರೆ; ಸ್ವಲ್ಪ ತೂಕ ಹಾಕಿ ನೋಡಿ; ಹಾಗೆ ವಿರೋಧ ಪಕ್ಷವನ್ನು ದೂರ ಇಟ್ಟು ಸದನವನ್ನು ನಡೆಸಬೇಕು ಎನ್ನುವಂತಹ ಅಪೇಕ್ಷೆ ಈ ಭಾಗದಲ್ಲಿ ಇರತಕ್ಕಂತಹ ಜನರಿಗೆ ಅಥವಾ ಸರ್ಕಾರಕ್ಕೆ ಇದ್ದಿದ್ದರೆ, ಕಳೆದ ಒಂದು ವಾರದಿಂದ ಈ ಸದನವನ್ನು ಮುಂದೂಡಿ ಅವರಿಗೋಸ್ಕರ ಕಾಯಬೇಕಾದಂತಹ ಅವಶ್ಯಕತೆ ಇರಲಿಲ್ಲ.

ಶ್ರೀ ಪಾಟಾಳ್ ನಾಗರಾಜ್: ಅದಕ್ಕೇ ಹೊತ್ತು ಹೊರಗಡೆ ಹಾಕಿ ಎಂದು ಕೂಗಿಕೊಳ್ಳುತ್ತಾ ಇದ್ದಿರಿ.

ಶ್ರೀ ಕಾಗೋಡು ತಿಮ್ಮಪ್ಪ: ಇಲ್ಲಾ, ಪೂಜೆ ಮಾಡಿ ಕುಳಿತುಕೊಳ್ಳಿ ಎಂದು ಹೇಳುತ್ತೇವೆ.

ಶ್ರೀ ಪಾಟಾಳ್ ನಾಗರಾಜ್: ಈಗ ಪೂಜೆ ಮಾಡುವ ಮಾತು ಆಡುತ್ತೀರಿ ಆಗ ಮಾತ್ರ ಹೊತ್ತು ಹೊರಗಡೆ ಹಾಕಿ ಎಂದು ಹೇಳುತ್ತಿದ್ದೀರಿ. ನೀವು ಎರಡನ್ನು ಹೇಳುತ್ತೀರಲ್ಲ, ಹೇಗೆ?

ಶ್ರೀ ಕಾಗೋಡು ತಿಮ್ಮಪ್ಪ: ಇಲ್ಲಿ ಆ ಕೆಲಸವನ್ನೇ ಮಾಡಬೇಕು, ಇಲ್ಲದಿದ್ದ ನಿಮ್ಮನ್ನು ಅಲ್ಲಿ ಕೂರಿಸಿಕೊಂಡು ದೂಪಾರ್ತಿ ಹಚ್ಚಿ ಪೂಜೆ ಮಾಡುವುದಕ್ಕೆ ಆಗುವುದಿಲ್ಲ ಇಲ್ಲಿ ನಾವು ಸದನವನ್ನು ನಡೆಸುವುದಕ್ಕೆ ಬಂದಿದ್ದೇವೆ. ಜನರ ಮುಂದೆ ಆಯವ್ಯಯವನ್ನು ಇಟ್ಟಿದ್ದೇವೆ ಮತ್ತು ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಬಂದಿದ್ದೇವೆ. ನಿಮಗೆ ಎಷ್ಟು ಅವಕಾಶಗಳು ಇರುತ್ತದೋ ಹಕ್ಕು ಭಾದ್ಯತೆಗಳು ಇರುತ್ತದೋ, ಆ ಹಕ್ಕುಭಾದ್ಯತೆಗಳನ್ನು ನಿರ್ವಹಿಸಿಕೊಂಡು....

ಶ್ರೀ ಪಾಟಾಳ್ ನಾಗರಾಜ್: ಇಷ್ಟೆಲ್ಲಾ ಆದಮೇಲೆ ನಿಮಗೆ ದೂಪ ಮಂಗಳಾರತಿ ಎತ್ತಬೇಕು ಎಂದು ಹೇಳುತ್ತೀರಲ್ಲ, ಈ ಮೊಸಳೆ ಕಣ್ಣೀರು ಏಕೆ ಬೇಕು. ನೀವೇ ಎತ್ತಿ ಹೊರಗೆ ಹಾಕಿಸಿದ್ದೀರಿ. ಈಗ ಅವರು ಇರಬೇಕಾಗಿತ್ತು; ಅದೃಷ್ಟವೋ ದುರಾದೃಷ್ಟವೋ ಅವರು ಇದರಲ್ಲಿ ಭಾಗವಹಿಸಬೇಕಾಗಿತ್ತು ಎಂದು ಹೇಳಿ ಈ ಮೊಸಳೆ ಕಣ್ಣೀರು ಏಕೆ?

ಶ್ರೀ ಕಾಗೋಡು ತಿಮ್ಮಪ್ಪ: ಏಕೆಂದರೆ ಅವರನ್ನು ಕಳಿಸಬೇಕಾದಂತಹ ಅನಿವಾರ್ಯ ಪರಿಸ್ಥಿತಿ ಉಂಟಾದಾಗ ಆ ರೀತಿ ಮಾಡಬೇಕಾಯಿತು. ನಮಗೆ ನೀವು ಇರಬೇಕು ಮೊದಲನೇ ದಿವಸ ನಾನು ಭಾಷಣ ಮಾಡಬೇಕು ಎಂದು ಸೂಚನೆ ಬಂದಿದ್ದ ಆದರೂ ಕೂಡ ವಿರೋಧ ಪಕ್ಷದವರೇ ಮಾತನಾಡಬೇಕು ಎನ್ನುವ ಕಾ... 1,2,3ನೇ ದಿವಸದವರೆಗೂ ಸಭೆಯನ್ನು ಮುಂದೂಡಲ್ಪಟ್ಟಿತು. ಯಾವಾಗ ... ಎತ್ತಿಹಾಕಿದ್ದೇವೆ, ಅನಿವಾರ್ಯವಾಗಿ ಬೇರೆ ಏನೂ ಕಾರಣ.....

ಶ್ರೀ ಪಾಟಾಳ್ ನಾಗರಾಜ್: ಮೊದಲು ಹೊರಗಡೆ ಕಳುಹಿಸಿ, ಕಳುಹಿಸಿ ಎಂದು ನೀವು ಒಕ್ಕೊರಲಿನಿಂದ ಕೂಗುತ್ತಿದ್ದಿರಿ. ನಮ್ಮನ್ನು ಹೊರಗಡೆ ಕಳುಹಿಸುವಾಗ ನೀವು ಟೇಬಲ್ ಕುಟ್ಟುತ್ತಿದ್ದೀರಿ. ನೀವು ಈಗ ಮಾತನಾಡುವುದು ನೋಡಿದರೆ ಅದರಲ್ಲೂ ಕಾಗೋಡು ತಿಮ್ಮಪ್ಪನವರು ಬೇರೆ ಯಾರಾದರೂ ಆಗಿದ್ದರೆ ನಾನು ಈ ಮಾತು ಹೇಳುತ್ತಿರಲಿಲ್ಲ; ನೀವು ಮೊದಲು ವಿರೋಧ ಪಕ್ಷದಲ್ಲಿ ಇದ್ದು, ಸಮಾಜವಾದಿ ಸಿದ್ಧಾಂತಕ್ಕೆ, ತತ್ವಕ್ಕೆ ನೀವು ಅಂಟಿಕೊಂಡಂತಹ ಜನ. ನಿಮ್ಮ ಬಾಯಲ್ಲಿ ಇಂಥ ಅಣಿಮುತ್ತುಗಳು ಬರುವುದಾದರೆ ಅದೇನೆಂದು ನನಗೆ ಅರ್ಥವಾಗುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ: ನಾವು ವಿರೋಧ ಪಕ್ಷದಲ್ಲಿ ಕುಳಿತು ಕೆಲಸ ಮಾಡತಕ್ಕ ಕಾಲದಲ್ಲಿ ಇಂಥ ದುಸ್ಥಿತಿಯನ್ನು ಕಂಡಿರಲಿಲ್ಲ.

ಶ್ರೀ ಪಾಟಾಳ್ ನಾಗರಾಜ್: ಅದನ್ನು ಒಪ್ಪಿಕೊಳ್ಳಬಹುದು, ಏಕೆಂದರೆ ಆಗ 180 ಜನ ಕಾಂಗ್ರೆಸ್ಸಿನವರು ಇರಲಿಲ್ಲ ಅವತ್ತು 90 ಜನ ಇದ್ದರು.

ಶ್ರೀ ಕಾಗೋಡು ತಿಮ್ಮಪ್ಪ: ವಿರೋಧ ಪಕ್ಷದಲ್ಲಿ ಕುಳಿತು ಕೆಲಸ ಮಾಡುವ ಸಂದರ್ಭದಲ್ಲಿ ಯಾವುದನ್ನು ಮುರಿಯುವ ಹಂತಕ್ಕೆ ಹೋಗಬಾರದು. ಒತ್ತಾಯ ಮಾಡಬೇಕು. ಸರ್ಕಾರವನ್ನು ಮಣಿಸತಕ್ಕ ಪ್ರಯತ್ನ ಮಾಡಬೇಕು. ಆದರೆ ಆ ಪ್ರಯತ್ನ ಮುರಿಯುವುದಕ್ಕೆ ಅವಕಾಶ ಆಗಬಾರದು. ಅದು ಜಾತ್ಯತೀತ ತಂತ್ರ. ಆ ಜಾತ್ಯ

ತಂತ್ರವನ್ನು ಉಪಯೋಗಿಸಿಕೊಳ್ಳುವ ಒಂದೇ ಕಾರಣದಿಂದ ಈ ಮಾತನ್ನು ಹೇಳಿದ್ದೇನೆ. ಆದುದರಿಂದ 4 ದಿನಗಳ ಕಾಲ ವಿರೋಧ ಪಕ್ಷಕ್ಕೋಸ್ಕರ ನಾವು ಇವತ್ತು ತಡವಾಗಿ ಚರ್ಚೆ ಪ್ರಾರಂಭ ಮಾಡಿರುವಾಗ ಸೌಜನ್ಯಕ್ಕೋಸ್ಕರವಾದರೂ ಮಾನ್ಯ ವಾಟಾಳ್ ನಾಗರಾಜ್ರವರು ಎರಡು ಮಾತುಗಳನ್ನು ಹೇಳುವುದರ ಬದಲು ನಮ್ಮನ್ನು ದೂಷಣೆ ಮಾಡುತ್ತಾರಲ್ಲ, ಅವರಿಗೆ ಏನೆಂದು ಹೇಳಬೇಕೆಂದು ನನಗೆ ಅರ್ಥವಾಗುವುದಿಲ್ಲ. ಅದನ್ನು ಒಂದು ಭಾಗ ಬಿಟ್ಟು ಬಿಡೋಣ.

ಶ್ರೀ ಎ. ಕೃಷ್ಣಪ್ಪ: ಬಹುಶಃ ಮಾನ್ಯ ವಾಟಾಳ್ ನಾಗರಾಜ್ ಅವರಿಗೆ ಜ್ಞಾಪಕ ಇಲ್ಲವೆಂದು ಕಾಣುತ್ತದೆ. ಹೋದಸಾರಿ ತಾವು ಈ ಸದನದಲ್ಲಿ ಸದಸ್ಯರಾಗಿರಲಿಲ್ಲ. ನಮಗೆ ಸಮಯ ಕೊಡದೆ 66 ಜನರನ್ನು ಏನು ಎತ್ತಿ ಹಾಕಿದರು ಬಹುಶಃ ಅದು ತಮಗೆ ನೆನಪಿಲ್ಲವೆಂದು ಕಾಣುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ: ಆದುದರಿಂದ ಆ ಭಾಗದ ಶಾಸಕರ ಸೌಜನ್ಯಕ್ಕೆ ಒಂದು ಮಿತಿ ಇದೆ. ನಾವು ವಿರೋಧ ಪಕ್ಷಕ್ಕೆ ಯಾವುದೇ ಸಂದರ್ಭದಲ್ಲಿ ಕೂಡ ಅವರ ಗೌರವಕ್ಕೆ ಚ್ಯುತಿ ಬರುವ ರೀತಿಯಲ್ಲಿ ನಡೆದುಕೊಂಡಿಲ್ಲ. ಅವರಿಗೆ ಎಲ್ಲಾ ಗೌರವ ನೀಡಿದ್ದೇವೆ. ಅದನ್ನು ಉಳಿಸಿಕೊಳ್ಳಲಿಲ್ಲವೆಂದು ಪ್ರಾರಂಭಿಕವಾಗಿ ಹೇಳುತ್ತಿದ್ದೇನೆ. ಮಾನ್ಯ ಅಧ್ಯಕ್ಷರೆ, ಈ ಚರ್ಚೆಯನ್ನು ಪ್ರಾರಂಭ ಮಾಡಿರತಕ್ಕ ಮಾನ್ಯ ಶಾಸಕರಾದ ಶ್ರೀ ಯಡಿಯೂರಪ್ಪನವರು ಗುಡುಗಾಡಿ ಬಿಟ್ಟಿದ್ದಾರೆ. ನಾನು ಏನೋ ಹಳೆಯ ಶಾಸಕರು, ಬಹಳ ಅನುಭವ ಇದೆ, ಒಂದು ಆಯವ್ಯಯದಲ್ಲಿ ಏನು ನ್ಯೂನತೆಗಳಿವೆ, ಏನು ಹೊಸ ಆದೇಶಗಳಿವೆ, ಏನು ಕಾರ್ಯಕ್ರಮಗಳು ಇವೆ, ಹಿಂದಿನ ಕಾರ್ಯಕ್ರಮಗಳು ಏನಾಗಿವೆ ಇದನ್ನೆಲ್ಲ ಸ್ವಲ್ಪ ಹೋಲಿಸಿ ಸುದೀರ್ಘವಾಗಿ ಅರ್ಥಗರ್ಭಿತವಾಗಿ, ವ್ಯಾಪಕವಾಗಿ ಚರ್ಚೆ ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೆ. ಅವರು ಏನಿಲ್ಲ, ಒಂದೇ ಭಾಷೆ, ಒಂದೇ ರಾಗ ಗುಡುಗು, ಸಿಡಿಲು ರಭಸದಿಂದ ಬಂದು ಒಂದೇ ಸಾರಿ ಮಳೆ ಹೊಡೆದು ಬಿಡುತ್ತದಲ್ಲ ಆ ರೀತಿ ಹೇಳಿ ಕುಳಿತರು. ನಾನು ನೋಡಿದೆ ಏನು ನಡೆಯುತ್ತದೆ ಎಂದು. ಅವರು ಹೇಳಿದರು. ಕಾಗೋಡು ತಿಮ್ಮಪ್ಪನವರ ತನಿಖೆ ಏನಾಯಿತು ಎಂದು. ದಯವಿಟ್ಟು ಅದರ ಆಜ್ಞೆ ತರಿಸಿ ನೋಡಲಿ. ಏನಾದರೂ ಕಾಗೋಡು ತಿಮ್ಮಪ್ಪನವರ ಮೇಲೆ ಅಥವಾ ಮಾಜಿ ಗೃಹ ಮಂಡಲಿಯ ಅಧ್ಯಕ್ಷರ ಮೇಲೆ ತನಿಖೆ ನಡೆದಿದ್ದರೆ, ತನಿಖೆ ನಡೆಸಬೇಕೆಂದು ಆದೇಶ ಇದ್ದರೆ ನೀವು ಅದನ್ನು ಉಚ್ಚಾರ ಮಾಡಿ.

ನೀವೂ ಶಾಸಕರು, ನಾನು ಶಾಸಕ. ಇವತ್ತು ಪ್ರಸ್ತಾಪ ಮಾಡುವಾಗ ಸ್ವಲ್ಪ ಗಂಭೀರವಾಗಿ ಮಾಡಬೇಕೇ ಹೊರತು ಬಹಳ ಲಘುವಾಗಿ ಮಾಡಬಾರದು. ಆ ಚರ್ಚೆ ಯಾರನ್ನು ಕುರಿತಾಗಿದೆ ಎಂಬುದನ್ನು ತಿಳಿದುಕೊಂಡು ಆಮೇಲೆ ಮಾತನಾಡಿ. ರೈಲ್ವೆ ಸಚಿವರ ವಿಚಾರದಲ್ಲಿ ಏನಾಯಿತು ಎಂದು ಹೇಳಿದರು. ದಯವಿಟ್ಟು ಲ್ಯಾಂಡ್ ರೆವಿನ್ಯೂ ಆಕ್ಟ್, ಲ್ಯಾಂಡ್ ರಿಫಾರಮ್ಸ್ ಆಕ್ಟ್ ತೆಗೆದು ನೋಡಿ. ಒಂದು ವೇಳೆ ಭೂಮಿಯನ್ನು ಹಿಡುವಳಿಗಿಂತ ಜಾಸ್ತಿ ಯಾರಾದರೂ ಸಂಪಾದನೆ ಮಾಡಿದ್ದರೆ ಯಾವ ರೀತಿ ವಿಚಾರ ಮಾಡಬೇಕು. ಯಾವ ಫಾರಂನಲ್ಲಿ ವಿಚಾರ ಮಾಡಬೇಕೆಂದು ನೋಡಿ. ಲ್ಯಾಂಡ್ ರಿಫಾರಮ್ಸ್ ವೈಯಲೇಟ್ ಆಗಿದ್ದರೆ ನೋಡಿ. ಅದನ್ನು ವಿಧಾನ ಸೌಧದಲ್ಲಿ ಮಾಡುವುದಕ್ಕೆ ಬರುವುದಿಲ್ಲ. ಟ್ರಿಬ್ಯೂನಲ್ ಮಾಡುವ ಕೆಲಸವನ್ನು ಮಂತ್ರಿಗಳು ಮಾಡುವುದಕ್ಕೆ ಬರುವುದಿಲ್ಲ. ತಹಸೀಲ್ದಾರರು ಮಾಡುವ ಕೆಲಸವನ್ನು ಇಲ್ಲಿರತಕ್ಕ ಮಂತ್ರಿಗಳು ಮಾಡುವುದಕ್ಕೆ ಬರುವುದಿಲ್ಲ. ಅದಕ್ಕೂ ಕಾನೂನು ಇದೆ. ಕ್ರಮ ಇದೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ನಾನು ಕಾಗೋಡು ತಿಮ್ಮಪ್ಪನವರನ್ನು ಕೇಳುತ್ತೇನೆ. ಗೃಹ ಮಂಡಲಿಯಲ್ಲಿ ಅದಷ್ಟು ಅವ್ಯವಹಾರನೋ, ವ್ಯವಹಾರನೋ, ಕಾನೂನು

ಖಾಚಿರಥಾದ ಕ್ರಮವೇ ಎಂದು. ಗೃಹ ಮಂಡಲಿಯ ಅಧ್ಯಕ್ಷರಾಗಿ ಅಲ್ಲಿ ಅವ್ಯವಹಾರಗಳು ನಡೆಯಬಾರದೆಂದು ನಿಮ್ಮನ್ನು ಅಧ್ಯಕ್ಷರಾಗಿ ಮಾಡಿದ ಮೇಲೆ ಅಲ್ಲಿ ಆ ರೀತಿ ಅವ್ಯವಹಾರ ನಡೆಯದಂತೆ ನೋಡಿಕೊಳ್ಳುವುದು ಅಧ್ಯಕ್ಷರ ಜವಾಬ್ದಾರಿ ಕರ್ತವ್ಯ ಆಗಿತ್ತು. ಅದನ್ನು ತಾವು ಮಾಡದಿದ್ದರೆ ಅದು ಅಪರಾಧವಾಗುತ್ತದೆಂದು ಭಾವಿಸುತ್ತೇನೆ. ಎರಡನೆಯದಾಗಿ ಜಾಫರ್ ಷರೀಫ್ ಅವರ ಬಗ್ಗೆ ನಾನು ಏನೂ ಹೇಳಿಲ್ಲ. ನಾನು ಏನು ಹೇಳುವುದಕ್ಕೆ ಇಚ್ಛಿಪಡುತ್ತೇನೆಂದರೆ, ರಾಜ್ಯದ ಇತಿಹಾಸದಲ್ಲಿ ಒಂದು ಅವ್ಯವಹಾರ ನಡೆದಿದೆ ಶಾಸಕರು ಯಾರಾದರೂ ಆರೋಪ ಮಾಡಿ ಆರೋಪದ ಪಟ್ಟಿ ಮಾಡಿ ಮಂತ್ರಿಗಳಿಗೆ ಕೊಟ್ಟಾಗ ಮಂತ್ರಿಮಂಡಲದ ಸಮಿತಿ ಮಾಡಿ ಅವರ ಮೂಲಕ ತನಿಖೆ ಮಾಡಿದ್ದು ಇತಿಹಾಸದಲ್ಲಿ ನಡೆದಿದೆಯೇ? ಅಂಥ ಒಂದು ಉದಾಹರಣೆ ಕೊಡಿ. ಶ್ರೀ ಲಿನ್ ಅವರಿಂದ ತನಿಖೆ ಮಾಡಿಸಿ, ವರದಿ ಕೊಡಿಸುತ್ತೇನೆಂದು ಮುಖ್ಯ ಮಂತ್ರಿಗಳು ಹೇಳಿ, ನಂತರ ಅಲ್ಲಿಂದ ಕಿತ್ತುಕೊಂಡು ಒಬ್ಬ ಮಂತ್ರಿಗಳಿಗೆ ಆ ಜವಾಬ್ದಾರಿಯನ್ನು ಕೊಟ್ಟು ಅಕ್ರಮ ಅಪರಾಧ ಮಾಡಿದ್ದು ಸತ್ಯವನ್ನು ಮರೆಮಾಚುವ ಕೆಲಸ ಆಗುವುದಿಲ್ಲವೆ? ಜನ ಅಪನಂಬಿಕೆಯಿಂದ ನೋಡುವುದಿಲ್ಲವೆ, ದಯವಿಟ್ಟು ಹೇಳಿ.

ಶ್ರೀ ಕಾಗೋಡು ತಿಮ್ಮಪ್ಪ: ನಾನು ಎಲ್ಲಾ ವಿಷಯಗಳನ್ನು ಪತ್ರಿಕೆಗಳಲ್ಲಿ ಓದಿದ್ದೇನೆ. ಆದರೆ ಏನಿದೆ? ಭೂಸುಧಾರಣಾ ಕಾನೂನು ಪ್ರಕಾರ ಒಬ್ಬ ವ್ಯವಸಾಯಗಾರ ಆದರೆ ಅವನ ಒಂದು ಸೀಲಿಂಗ್ವರೆಗೆ ಜಮೀನನ್ನು ಸಂಪಾದನೆ ಮಾಡುವುದಕ್ಕೆ ಸಂಪೂರ್ಣ ಅಧಿಕಾರ ಇದೆ. ಒಂದು ವೇಳೆ ಅವನು ಸ್ವಾಧೀನಪಡಿಸಿಕೊಂಡಂತಹ್ದು ಅಥವಾ ಭೂಮಿಯನ್ನು ಹೊಂದಿರತಕ್ಕದ್ದು ಅಕ್ರಮವಾಗಿದ್ದರೆ ಅಲ್ಲಿರತಕ್ಕ ಅಸಿಸ್ಟೆಂಟ್ ಕಮಿಷನರ್ಗೆ ಎನ್ಕ್ವೈರಿ ಮಾಡುವುದಕ್ಕೆ ಅವಕಾಶ ಇದೆ. ಅದನ್ನು ಅಲ್ಲಿ ಅವರು ಮಾಡಬೇಕು. ಬಹುತೇಕ ಹಿಡುವಳಿಗಿಂತ ಜಾಸ್ತಿ ಇದ್ದರೆ ಸ್ಥಳೀಯ ಅಸಿಸ್ಟೆಂಟ್ ಕಮಿಷನರ್ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತಾರೆ. ಅದಕ್ಕೆ ಇಲ್ಲಿ ಅವಕಾಶ ಇಲ್ಲ. ಡಿವಿಜನಲ್ ಕಮೀಷನರ್ ಅವರಿಗೆ ತನಿಖೆ ಮಾಡುವುದಕ್ಕೆ ಏನು ಅಧಿಕಾರ ಇದೆ? ಏನಾದರೂ ಆಪಾದನೆ ಬಂದರೆ ದೂರು ಬಂದರೆ ಅಲ್ಲಿರತಕ್ಕ ಲ್ಯಾಂಡ್ ಟ್ರಿಬ್ಯೂನಲ್ ಛೇರ್ಮನ್ ಆಗಿರತಕ್ಕ ಅಸಿಸ್ಟೆಂಟ್ ಕಮೀಷನರ್ ಮಾಡತಕ್ಕ ಕೆಲಸವನ್ನು ಅವರಿಗೆ ವಹಿಸಿಕೊಡಬೇಕು. ಆದುದರಿಂದ ನಾನು ಯಡಿಯೂರಪ್ಪನವರಿಗೆ ಹೇಳುತ್ತೇನೆ, ಈಗಲೂ ಕೂಡ ಶಿಕಾರಿಪುರ ತಾಲ್ಲೂಕಿನಲ್ಲಿ ಎ.ಸಿ.ಯವರು ಅಧ್ಯಕ್ಷರು ತಾನೆ? ಲ್ಯಾಂಡ್ ಟ್ರಿಬ್ಯೂನಲ್ ಛೇರ್ಮನ್ ತಾನೆ? ತಾವು ಸದಸ್ಯರಾಗಿ ಕೆಲಸ ಮಾಡಿದ್ದೀರಿ. ಲ್ಯಾಂಡ್ ಟ್ರಿಬ್ಯೂನಲ್ನಲ್ಲಿ ಆದ ತೀರ್ಮಾನದ ವಿರುದ್ಧವಾಗಿ ಏನಾದರೂ ಮಾಡುವುದಕ್ಕೆ ಸರ್ಕಾರಕ್ಕೆ ಏನು ಅಧಿಕಾರ ಇದೆ ಎಂದು ನಿಮಗೆ ಗೊತ್ತಿದೆ ಅಲ್ಲವೇ? ಒಂದು ವೇಳೆ ತಹಶೀಲ್ದಾರರು, ಪಹಣಿ ರೆಕಾರ್ಡ್ ಬರೆದಂತಹ ಸಂದರ್ಭದಲ್ಲಿ ಅನ್ಯಾಯವಾ ಗಿದ್ದರೆ ಅಸಿಸ್ಟೆಂಟ್ ಕಮಿಷನರ ಮುಂದೆ ಅಪೀಲು ಹೋಗಲು ಅವಕಾಶ ಇದೆಯೇ ಹೊರತು ಸರ್ಕಾರಕ್ಕೆ ಇಲ್ಲ. ಆದುದರಿಂದ ಅಂಥ ದೂರುಗಳನ್ನು ಬಹಳ ವ್ಯಾಖ್ಯಾನ ಮಾಡಿ ಹೇಳುವುದರಲ್ಲಿ ಅರ್ಥ ಇಲ್ಲ. ಆದುದರಿಂದ ಸ್ವಲ್ಪ ಗಂಭೀರವಾಗಿ ಇಂಥ ವಿಚಾರಗಳು ಬಂದಾಗ ಪ್ರಸ್ತಾಪ ಮಾಡುವುದನ್ನು ಕಲಿಯಬೇಕೆಂದು ಒಂದು ಮಾತನ್ನು ಯಡಿಯೂರಪ್ಪನವರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಸಂದರ್ಭದಲ್ಲಿ ಆಯವ್ಯಯದ ಬಗ್ಗೆ ಮಾತನಾಡತಕ್ಕದ್ದು ತಮಗೆ ಬಹಳ ಮುಖ್ಯವಾದ ವಿಷಯವಾಗಿತ್ತು. ಮುಖ್ಯ ಮಂತ್ರಿಗಳು ಹಣಕಾಸಿನ ಸಚಿವರಾಗಿ ಈ ಆಯವ್ಯಯವನ್ನು ಮಂಡಿಸುವಾಗ ಇದರ ಬಗ್ಗೆ ತಾವು ಏನೂ ಹೇಳಲಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ: ನಾನು ನೇರವಾಗಿ ನೀವು ಗೃಹ ಮಂಡಲಿಯ ಅಧ್ಯಕ್ಷರಾಗಿ ಅಲ್ಲಿ ಅವ್ಯವಹಾರ ನಡೆಯದಂತೆ, ಆ ಹಣವನ್ನು ಸರಿಯಾದವರಿಗೆ ತಲುಪಿಸಿ ಮನೆ ಕಟ್ಟುವಂತೆ ನೋಡಿಕೊಳ್ಳುವುದರಲ್ಲಿ ಸಂಪೂರ್ಣವಾಗಿ ತಾವು

ವಿಫಲರಾಗಿದ್ದೀರಿ ಎಂದು ಹೇಳಿದೆ. ಆ ಪಾಪಕ್ಕೆ ನೀವು ಜವಾಬ್ದಾರರಲ್ಲವೇ? ಆ ಕಾರ್ಯ ನಿರ್ವಹಿಸುವುದರಲ್ಲಿ ವಿಫಲರಾಗಿಲ್ಲವೇ? ಅದರ ಬಗ್ಗೆ ತಾವು ಹೇಳಬೇಕಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ: ಆ ವಿಷಯವನ್ನು ನಾನು ಈಗ ಬಹಿರಂಗ ಪಡಿಸುವುದಕ್ಕೆ ಆಗುವುದಿಲ್ಲ. ಪಾಪ ಪುಣ್ಯದ ಕೆಲಸವನ್ನು ಮಾಡುವುದಕ್ಕೆ ಇಲ್ಲಿ ನಾನು ಕುಳಿತಿಲ್ಲ, ನೀವು ಭೂನ್ಯಾಯ ಮಂಡಲಿಯಲ್ಲಿ ಪಾಪ ಮಾಡಿದ್ದೀರಲ್ಲ, ಆ ಪಾಪದ ಕೆಲಸವನ್ನು ನಾನು ಮಾಡಿಲ್ಲ. ಪಾಪ ಪುಣ್ಯ ಇತ್ಯರ್ಥ ಆಗಬೇಕಾದರೆ ಎನ್ಕ್ವೈರಿ ಆಗಿ ರಿಪೋರ್ಟ್ ಬರಲಿ. ಆಗ ನಾನು ಏನು ಮಾಡಿದ್ದೇನೆಂದು ಗೊತ್ತಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ನಾನು ಏನು ಪಾಪ ಮಾಡಿದ್ದೇನೆಂದು ದಯವಿಟ್ಟು ಹೇಳಿ. ಈ ಸದನದಲ್ಲಿ ಯಾರು ಬೇಕಾದರೂ ನಾನು ಪಾಪ ಮಾಡಿದ್ದೇನೆಂದು ಹೇಳಿ, ಅದು ತನಿಖೆಯಾಗಲಿ. ಒಂದು ಸಣ್ಣ ತಪ್ಪು ಇದ್ದರೆ ಹೇಳಿ ನಾನು ಒಪ್ಪಿಕೊಳ್ಳುವುದಕ್ಕೆ ತಯಾರಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ: ಸಂದರ್ಭ ಬಂದಾಗ ಹೇಳುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ: ಸಂದರ್ಭ ಯಾವಾಗ ಬರುತ್ತೋ ಗೊತ್ತಿಲ್ಲ. ಸಂದರ್ಭ ಬಂದಾಗ ಹೇಳುತ್ತೇನೆಂಬುವುದಕ್ಕೆ ನಾವು ಧೈರ್ಯವಾಗಿ ನಿಮ್ಮ ಮೇಲೆ ಚಾರ್ಜ್ ಮಾಡುತ್ತಿದ್ದೇವೆ. ಕಾನೂನು ಬಾಹಿರವಾಗಿ ನೀವು ಆರ್ಡರ್ ಮಾಡಿದ್ದರಿ, ನಾವು ದಾಖಲೆಗಳನ್ನು ಕೊಡುವುದಕ್ಕೆ ತಯಾರಿದ್ದೇವೆ

ಶ್ರೀ ಕಾಗೋಡು ತಿಮ್ಮಪ್ಪ: ನಿಮಗೆ ಉತ್ತರ ಹೇಳುವ ಸಂದರ್ಭ ಬಂದಾಗ ಹೇಳುತ್ತೇನೆ, ಈಗ ಬೇಡ.

ಶ್ರೀ ಕೆ.ಎಸ್. ಈಶ್ವರಪ್ಪ: ಯಾವತ್ತಾದರೂ ಅದು ಬರಲಿ ಎಂದು ಭಗವಂತನನ್ನು ಪ್ರಾರ್ಥಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ: ಈಶ್ವರಪ್ಪನವರೆ, ಸುಮ್ಮನೆ ಟೇಬಲ್ ತಟ್ಟಿ ಬಡಿದು ಹೆದರಿಸಬೇಡಿ. ಆದುದರಿಂದ ಇವತ್ತು ಮುಖ್ಯಮಂತ್ರಿಗಳು ಈ ಆಯವ್ಯಯವನ್ನು ಮಂಡಿಸತಕ್ಕ ಸಂದರ್ಭದಲ್ಲಿ ಬಡವರ ಆದ್ಯತೆಯನ್ನು ಗುರುತಿಸಿದ್ದಾರೆ ರಾಜ್ಯ ಪಾಲರ ಭಾಷಣದಲ್ಲಿ ರಾಜ್ಯದ ಅಭಿವೃದ್ಧಿಯನ್ನು ಸಾಧಿಸುವಾಗ ಯಾವ ದಾರಿಯಲ್ಲಿ ಹೋಗಬೇಕು ಯಾವ ಆದ್ಯತೆಯನ್ನು ನಾವು ಗಮನಿಸಬೇಕು ಎಂಬುದನ್ನು ಸೂಚ್ಯವಾಗಿ ಪ್ರಸ್ತಾಪ ಮಾಡಿದ್ದಾರೆ. ಹಾಗೂ ಅದನ್ನು ಕಾರ್ಯಗತ ಮಾಡತಕ್ಕ ಕೆಲಸವನ್ನು ಈ ಆಯವ್ಯಯದಲ್ಲಿ ಮುಖ್ಯ ಮಂತ್ರಿಗಳು ಹಣಕಾಸಿನ ಸಚಿವರಾಗಿ ಮಾಡಿದ್ದಾರೆ. ವಿಶೇಷವಾಗಿ ಒಂದು ರಾಜ್ಯದ ಅಭಿವೃದ್ಧಿ ಆಗಬೇಕಾದರೆ ಸಮಾಜದ ಎಲ್ಲ ವರ್ಗದ ಜನರಿಗೂ ಅದರ ಪ್ರತಿಫಲ ಹೋಗಬೇಕು. ಇವತ್ತು ಎಂತಹ ಸಮಾಜ ಇದೆಯೆಂದರೆ ಅನೇಕ ಏರುಪೇರುಗಳಿಂದ ಕೂಡಿರತಕ್ಕ ಸಮಾಜವಿದೆ. ಅನೇಕ ದೋಷಗಳಿಗೆ ಒಳಗಾಗಿರತಕ್ಕ ಸಮಾಜವಿದೆ. ಅನೇಕ ವರ್ಗಗಳು ಇವೆ. ಹಿಂದುಳಿದಿರತಕ್ಕ ಜನರಿದ್ದಾರೆ, ಹರಿಜನರಿದ್ದಾರೆ, ಅಲ್ಪಸಂಖ್ಯಾತರಿದ್ದಾರೆ, ಬಡವರಿದ್ದಾರೆ, ಕಾರ್ಮಿಕರಿದ್ದಾರೆ.

5.20 ಪಿ.ಎಂ

ಈ ಜನರ ಬಗ್ಗೆ ಈ ಸಮಾಜದಲ್ಲಿ ಸಮಾನತೆಯನ್ನು ತರಬೇಕೆಂಬ ಅಪೇಕ್ಷೆ, ಸಮಾಜವಾದದಲ್ಲಿ ನಂಬಿಕೆ ಇರತಕ್ಕಂಥ ಪ್ರತಿಯೊಬ್ಬರೂ ಇದನ್ನ ಪ್ರತಿಪಾದನೆ ಮಾಡತಕ್ಕಂಥ ವಿಷಯವಾಗಿದೆ. ಸರ್ಕಾರಕ್ಕೆ ಸಮಾಜವಾದದಲ್ಲಿ ನಂಬಿಕೆ ಇರುವಂಥ ಕಾರಣಕ್ಕಾಗಿ ಯಾವ ವರ್ಗ ಸಮಾಜದಲ್ಲಿ ಇವತ್ತು ಶೋಷಣೆಗೆ ಒಳಗಾಗಿದೆ, ಅನ್ಯಾಯಕ್ಕೆ ಒಳಗಾಗಿದೆ, ಅಸಮಾನತೆಯ ಶೋಷಣೆಗೆ ಒಳಗಾಗಿದೆ, ಆ ಸಮಾಜವನ್ನು ಗುರುತಿಸಿ ಅದಕ್ಕೆ ಆರ್ಥಿಕ ಬಲವನ್ನು, ಸಾಮಾಜಿಕ ರಕ್ಷಣೆಯನ್ನು ಕೊಡತಕ್ಕಂಥದ್ದು

ಬಹಳ ಮುಖ್ಯವಾದುದು. ಇವತ್ತು ಈ ಸರ್ಕಾರ ಆದ್ಯತೆಯನ್ನು ಮೊದಲು ಗುರುತಿಸುವಾಗ ಒಂದು ಸಮಗ್ರವಾದಂಥ ಅಭಿವೃದ್ಧಿಯನ್ನು ಸಾಧಿಸಬೇಕಾದರೆ ಇಲ್ಲಿ ಸಮಾನತೆಯ ಕಲ್ಪನೆಗಳನ್ನು ಇಟ್ಟುಕೊಂಡು ಅಭಿವೃದ್ಧಿಯ ಕಾರ್ಯಕ್ರಮಗಳನ್ನು ರೂಪಿಸಬೇಕಾಗುತ್ತದೆ. ಅದಕ್ಕೆ ಹಣಕಾಸನ್ನು ಒದಗಿಸಬೇಕಾಗುತ್ತದೆ. ಈ ಹಿನ್ನೆಲೆಯನ್ನು ನಮ್ಮ ಆದ್ಯತೆಗಳನ್ನು ರೂಪಿಸುವಾಗ ಆಯವ್ಯಯದಲ್ಲಿ ವಿಶೇಷವಾಗಿ ಹರಿಜನರಿಗೆ, ಹಿಂದುಳಿದಿರತಕ್ಕಂಥ ಜನರಿಗೆ ಅಲ್ಪಸಂಖ್ಯಾತರಿಗೆ ಮಹಿಳೆಯರಿಗೆ ಮಕ್ಕಳಿಗೆ ಇವರ ಕಲ್ಯಾಣ ಕಾರ್ಯಕ್ರಮ ಸರ್ಕಾರಕ್ಕೆ ಮೊದಲನೆಯ ಪ್ರಾಶಸ್ತ್ಯವಾಗಿ ಆದ್ಯತೆಯನ್ನು ಕಂಡಿದೆ. ಬಹುಶಃ ಇದಕ್ಕಿಂತ ಹೆಚ್ಚಿನ ಆದ್ಯತೆ ಇನ್ನು ಯಾವ ಸರ್ಕಾರವೂ ಮಾಡಲಿಕ್ಕೆ ಸಾಧ್ಯವಿಲ್ಲ, ಏತಕ್ಕೆಂದರೆ ಈ ವರ್ಗದ ಜನರನ್ನು ಪ್ರತಿನಿಧಿಸತಕ್ಕಂಥ ಪಕ್ಷ ಮತ್ತು ಸರ್ಕಾರ ಆಗಿದ್ದರೆ ಮಾತ್ರ ಸಾಧ್ಯವಾಗುತ್ತದೆ. ನಮ್ಮದು ಅವರ ಏಳಿಗೆಯನ್ನು ಬಯಸತಕ್ಕಂಥ ಸರ್ಕಾರ ಆಗಿದೆ, ಅವರ ಪುರೋಭಿವೃದ್ಧಿಯನ್ನು ಭಾವಿಸತಕ್ಕಂಥ ಸರ್ಕಾರವಾಗಿದೆ. ಆ ಕಾರಣಕ್ಕಾಗಿ ಯಾವ ಜನರ ಬೆಂಬಲದಿಂದ ಅಧಿಕಾರಕ್ಕೆ ನಾವು ಇವತ್ತು ಬಂದಿರುತ್ತೇವೆಯೋ, ಯಾರ ಆಶೀರ್ವಾದದಿಂದ ಇವತ್ತು ಅಧಿಕಾರಕ್ಕೆ ನಾವು ಬಂದಿರುತ್ತೇವೆಯೋ, ಯಾರ ಬಲದಿಂದ ಇವತ್ತು ಸರ್ಕಾರವನ್ನು ರಚನೆ ಮಾಡಿದ್ದೇವೆಯೋ, ಅವರ ಆಶೀರ್ವಾದ ಬಲದಿಂದ ಅವರಿಗೆ ನಮ್ಮ ಪ್ರತಿಫಲವನ್ನು ಕಾಣಿಕೆಯನ್ನು ಮತ್ತು ಆ ಜನರ ಏಳಿಗೆಯನ್ನು ಕುರಿತು ಚಿಂತನೆ ಮಾಡತಕ್ಕಂಥ ಒಂದು ವಿಶೇಷವಾದಂಥ ಪ್ರಯತ್ನ ಈ ಆಯವ್ಯಯದಲ್ಲಿ ನಡೆದಿದೆ. ಇಂಥ ಒಂದು ಪ್ರಯತ್ನವನ್ನು ನೋಡತಕ್ಕಂಥ ಸೌಜನ್ಯಶೀಲತೆ, ದೃಷ್ಟಿಕೋನ ಇಲ್ಲದಿರತಕ್ಕಂಥ ವಿರೋಧಪಕ್ಷದವರ ಟೀಕೆಗೆ ನಾವು ಹೆದರಬೇಕಾದಂಥ ಅಗತ್ಯವಿಲ್ಲ. ಏನಾದರೂ ನಾವು ಹೇಳುವುದರಲ್ಲಿ ಸಂಶಯಪಟ್ಟುಕೊಂಡರೆ, ಸಂಕುಚಿತ ಮನೋಭಾವವಿದ್ದರೆ ನಾವು ನಮ್ಮ ಆದ್ಯತೆಯನ್ನು ಗುರುತಿಸಿಕೊಂಡು ಅದಕ್ಕೆ ರೂಪಗೊಂಡಿರತಕ್ಕಂಥ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರತಕ್ಕಂಥ ಪ್ರಯತ್ನದಲ್ಲಿ ಸಂಘಟಿತ ಪ್ರಯತ್ನವನ್ನು ನಾವು ಮಾಡುವುದಾದರೆ ಖಂಡಿತವಾಗಿ ಈ ಆಯವ್ಯಯದಿಂದ ನಾವು ಕೊಟ್ಟಂಥ ಆಶ್ವಾಸನೆಯನ್ನು ಈಡೇರಿಸುತ್ತೇವೆ.

ಕಳೆದ ಚುನಾವಣೆಯ ಕಾಲದಲ್ಲಿ ಯಾವ ಭರವಸೆಯನ್ನು ನೀಡಿ ಅಧಿಕಾರಕ್ಕೆ ಬಂದಿರುತ್ತೇವೆಯೋ ಆ ಭರವಸೆಯನ್ನು ಪರಿಪೂರ್ಣವಾಗಿ ಇವತ್ತು ನಾವು ಕಾರ್ಯಗತ ಮಾಡುತ್ತೇವೆನ್ನತಕ್ಕಂಥ ಹೆಗ್ಗಳಿಕೆಯಿಂದ ಈ ಮಾತನ್ನು ಇವತ್ತು ನಾನು ಹೇಳಲಿಕ್ಕೆ ಪ್ರಯತ್ನ ಪಡುತ್ತಿದ್ದೇನೆ. ಆ ದೃಷ್ಟಿಯಿಂದ ವಿಶೇಷವಾಗಿ ಮಾನ್ಯ ಮುಖ್ಯಮಂತ್ರಿಯವರನ್ನು ಅಭಿನಂದಿಸುತ್ತೇನೆ. ಏತಕ್ಕೆಂದರೆ ಅವರು ಒಬ್ಬ ಬಡವರ ಕುಟುಂಬದಿಂದ ಬಂದವರಾಗಿ ಕಷ್ಟ ಪಟ್ಟು ಇವತ್ತು ಈ ಸ್ಥಾನಕ್ಕೆ ಬಂದವರಾಗಿ ಅವರು ಈ ಒಂದು ಆಯವ್ಯಯವನ್ನು ಮಂಡಿಸುವಾಗ ಸರ್ಕಾರದ ಕೆಲಸವನ್ನು ಕುರಿತು ಚಿಂತನೆ ಮಾಡುವಾಗ ಸರ್ಕಾರದ ಅಭಿವೃದ್ಧಿಯ ಬಗ್ಗೆ ಆಲೋಚನೆ ಮಾಡುವಾಗ ಈ ಮೊದಲನೆಯ ಆದ್ಯತೆಯನ್ನು ಯಾರಿಗೆ ಕೊಟ್ಟಿದ್ದಾರೆಂದರೆ ಅವರಿಗೆ ಹೃದಯದಲ್ಲಿ ನೋವಿದೆಯಲ್ಲ ಆ ಜನರಿಗೆ ನೋವಿನ ಶಮನವನ್ನು ಪರಿಹರಿಸುವ ದೃಷ್ಟಿಯಿಂದ ಇವತ್ತು ಕೆಲವು ಪರಿಹಾರಗಳನ್ನು ಕೊಟ್ಟಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ಅದಕ್ಕಾಗಿ ನಾವೆಲ್ಲರೂ ಸೇರಿ ಇವತ್ತು ಅವರಿಗೆ ಕೃತಜ್ಞತೆಯನ್ನು ಸಲ್ಲಿಸಬೇಕು. ಇದು ಪ್ರಾಮಾಣಿಕವಾಗಿ ಕಾರ್ಯಗತವೂ ಆಗಬೇಕು. ಬರೀ ಮಾತಿನಿಂದ ನಡೆಯುವುದಿಲ್ಲ, ಕಾರ್ಯಗತನೂ ಆಗಬೇಕು. ಏತಕ್ಕೆಂದರೆ ಮಾನ್ಯ ಯಡಿಯೂರಪ್ಪನವರು ಇಷ್ಟೆಲ್ಲ ಮಾತು ಕೊಟ್ಟುಬಿಟ್ಟಿರಿ, ಆದರೆ ಯಾವ ಕೆಲಸವೂ ಕೂಡ ಆಗಲಿಲ್ಲ ಎಂದು ಹೇಳಿದರು. ಅದನ್ನು ಒಪ್ಪುತ್ತೇನೆ. ಮುಖ್ಯಮಂತ್ರಿಯಾಗಿ ಒಂದು ಮಾತನ್ನು ರಾಜ್ಯದ ಜನತೆಗೆ ಕೊಟ್ಟರೆ ಅದನ್ನು ಕಾರ್ಯಗತ ಮಾಡಬೇಕು ಯಾವುದೋ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಿಗೆ ಕೊಟ್ಟಂಥ ಮಾತಿನ ಪ್ರಕಾರ ಕಾರು ಕೊಟ್ಟಿಲ್ಲವೆಂದು ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದರು. ಅದರಲ್ಲಿ ವಿಶೇಷವೇನಿದೆ, ಸರ್ಕಾರ ಅವರಿಗೆ ಒಂದು ಪ್ರೊಟೊಕಾಲ್ ಎಂದು

ಕೊಡತಕ್ಕಂಥದ್ದು ಇದೆ. ಪ್ರೋಟೆಕಲ್ ಎಂದರೆ ಕಾರನ್ನು ಕೊಡುವುದೇ ಒಂದು ಪ್ರೋಟೆಕಲ್ ಆಗುವುದಿಲ್ಲ. ಮಾನ್ಯ ವಾಟಾಳ್ ನಾಗರಾಜ್‌ರವರಿಗೆ ತೊಂದರೆ ಏನು ಬಂದಿದೆ ಎಂದರೆ ಪ್ರೋಟೆಕಲ್ ಎಂದರೆ ಅರ್ಥವೇನೆಂದು. ಕಾರ್ ಕೊಡುವುದರಿಂದ ಪ್ರೋಟೆಕಲ್ ಆಗುವುದಿಲ್ಲ. ಒಬ್ಬ ಮಂತ್ರಿ ಹೋದರೆ ಅಥಿತಿ ಗೃಹದಲ್ಲಿ ಸೂಕ್ತ ಸ್ಥಾನಮಾನಗಳನ್ನು ಕೊಡಬೇಕು, ಗೌರವವನ್ನು ಕೊಡಬೇಕು, ಒಬ್ಬ ಅಧಿಕಾರಿ ಹೋಗಿ ಅವರನ್ನು ಸ್ವಾಗತ ಮಾಡಬೇಕು, ಇದೆಲ್ಲ ಇರತಕ್ಕಂಥದ್ದು. ಬರೀ ಕಾರನ್ನು ಕೊಡುವುದರಿಂದ ಆಗುವುದಿಲ್ಲ. ಅದನ್ನು ನಾನು ಒಪ್ಪುತ್ತೇನೆ, ಏತಕ್ಕೆಂದರೆ ನಮ್ಮ ತಾಯಿ ಭಾಷೆಯನ್ನು ಪ್ರತಿನಿಧಿಸತಕ್ಕಂಥ ಒಂದು ಸಂಸ್ಥೆ ರಾಜ್ಯದಲ್ಲಿ ಇದೆ. ಅದರ ಅಧ್ಯಕ್ಷರಾದವರಿಗೆ ನಾವು ಗೌರವವನ್ನು ಕೊಡಬೇಕು. ಅದು ಏನಾದರೂ ಬಿಟ್ಟು ಹೋಗಿದ್ದರೆ ನಾವೆಲ್ಲರೂ ಸೇರಿ ಸರಿ ಮಾಡೋಣ. ಆದರೆ ನೀವೇನು ಮಾಡುತ್ತೀರಿ ಎಂದರೆ ಕನ್ನಡಕ್ಕೆ ಏಕೈಕವೀರ ನಾನೆ ಎಂದು ಹೇಳುವುದಕ್ಕೆ ಹೋಗುತ್ತೀರಿ.

ಶ್ರೀ ವಾಟಾಳ್ ನಾಗರಾಜ್ : ನಾನು ಹೇಳುತ್ತಿಲ್ಲ, ಆ ರೀತಿ ತಾವು ಹೇಳುತ್ತಿರುವುದು, ಸ್ವಾಮಿ ಇವತ್ತಿನ ದಿನ ನಾನು ಅವರಿಗೆ ಧಾರೆ ಎರೆದಿದ್ದೇನೆ, ಈಗ ಅವರು ಏಕೈಕ ಚಕ್ರವರ್ತಿಯಾಗಿರಲಿ, ಅವರಿಗೆ ತಮ್ಮ ಮೂಲಕ ಧಾರೆಯನ್ನು ಎರೆಯುತ್ತಿದ್ದೇನೆ. ಅದು ಕಡತದಲ್ಲಿ ಹೋಗಿದೆ, ಸ್ವಾಮಿ ಇವತ್ತಿನ ದಿನ ಅವರಿಗೆ ಧಾರೆ ಎರೆದಿದ್ದೇನೆ. ಈಗ ಅವರು ಏಕೈಕ ಚಕ್ರವರ್ತಿಯಾಗಿರಲಿ, ಅವರಿಗೆ ಈ ಮೂಲಕ ಧಾರೆಯನ್ನು ಎರೆಯುತ್ತಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ : ನಮಗೆ ಅಂತ ಅಭಿಲಾಷೆ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ನಿಮಗೇನೋ ಒಂದು ರೀತಿಯಾದ ಅಸೂಯೆ ಬಂದಿರಬಹುದು. ಆದ್ದರಿಂದ ಶ್ರೀಯುತರಾದ ನಮ್ಮ ಸ್ನೇಹಿತರಾದಂಥ ಶ್ರೀಮಾನ್ ಕಾಗೋಡು ತಿಮ್ಮಪ್ಪನವರಿಗೆ ಬಹಿರಂಗವಾಗಿ ಧಾರೆ ಎರೆದು ಅವರಿಗೆ ನಮ್ಮ ನಾಯಕತ್ವವನ್ನು ಕೊಡುತ್ತಿದ್ದೇವೆ.

ಶ್ರೀ ಬಿ.ಎಂ. ಇದಿನಬ್ಬ : ಅಧ್ಯಕ್ಷರೆ, ಈಗ ಕನ್ನಡ ನಾಡಿನಲ್ಲಿ ಕನ್ನಡ ಉಳಿಯಬೇಕು, ಬೆಳೆಯಬೇಕು, ಅಭಿವೃದ್ಧಿ ಹೊಂದಬೇಕು, ಪ್ರಗತಿ ಪಥದಲ್ಲಿ ಮುಂದೆ ಸಾಗಬೇಕು ಎಂದು ಹೇಳುವಂಥ ಬಯಕೆ ಕನ್ನಡ ನಾಡಿನ ಕನ್ನಡಿಗರಲ್ಲಿ ಇದ್ದೇ ಇದೆ. ಆದ್ದರಿಂದ ಒಬ್ಬರಿಂದಲೇ ಇದೆಲ್ಲಾ ಆಗುತ್ತದೆ ಎಂದು ಯಾರೂ ಜಗಳ ಮಾಡುವುದು ಬೇಡ. ಒಂದು ಮೆಣಸಿನಿಂದ ಯಾವುದೇ ಪದಾರ್ಥ ಆಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಯಾರು ಹೇಳಿದ್ದಾರೆ ಒಬ್ಬರಿಂದ ಆಗುತ್ತದೆ ಎಂದು.

ಶ್ರೀ ಬಿ.ಎಂ. ಇದಿನಬ್ಬ : ನೀವಾಗಲೀ ಅವರಾಗಲೀ....

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೆ, ನೀವು ಕನ್ನಡದ ಬಗ್ಗೆ ಬಹಳ ಆಳವಾಗಿ ಅಭ್ಯಾಸ ಮಾಡಿದ್ದೀರಿ. ಇವರೂ ಅಭ್ಯಾಸ ಮಾಡಿದ್ದಾರೆ. ಪತ್ರಕರ್ತರು, ನಮ್ಮ ಅಧಿಕಾರಿಗಳು, ಅಲ್ಲಿ ಕುಳಿತಿರುವವರು, ಇಲ್ಲಿರುವವರು, ಮೇಲಿರುವವರು ಎಲ್ಲರೂ ಮಾಡಿದ್ದಾರೆ.

ಶ್ರೀ ಬಿ.ಎಂ. ಇದಿನಬ್ಬ : ಅಧ್ಯಕ್ಷರೇ, ನಾನು ವಾಟಾಳ್ ನಾಗರಾಜ್ ಎಂದು ಹೇಳಿಲ್ಲ, ಎಲ್ಲರೂ ಕೂಡಿದರೆ ಮಾತ್ರ ಬೆಳವಣಿಗೆ ಆಗುತ್ತದೆ ಎಂದು ಹೇಳಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ನೀವು ಮಾಡಬಾರದಂಥ ಇತಿಹಾಸಗಳನ್ನು ಮಾಡಿದ್ದೀರಿ. ತ್ಯಾಗ, ಬಲಿದಾನ ಮಾಡಿದ್ದೀರಿ. ಸಂತೋಷ ಆಯಿತಾ?

ಶ್ರೀ ಬಿ.ಎಂ. ಇದಿನಬ್ಬ: ಎಲ್ಲರೂ ಕಾಯಾ ವಾಚಾ ಮನಸಾ ಕೂಡಿ ಕೆಲಸ ಮಾಡಿದರೆ ಮಾತ್ರ ಖಂಡಿತ ಫಲ ಸಿಗುತ್ತದೆ. ಅದರಲ್ಲಿ ಸಂಶಯ ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ: ಅಧ್ಯಕ್ಷರೆ, ಈ ಸದನದ 224 ಜನರೂ ಕೂಡ ಕನ್ನಡದ ಬಗ್ಗೆ ಅಷ್ಟೇ ಅಭಿಮಾನವನ್ನು ಹೊಂದಿದ್ದಾರೆ.

ಶ್ರೀ ವಾಟಾಳ್ ನಾಗರಾಜ್: ಈ ಸದನದ ಸದಸ್ಯರು, ಮಾಜಿ ಸದಸ್ಯರು, ಮುಂದೆ ಬರತಕ್ಕ ಸದಸ್ಯರು ಎಲ್ಲರೂ ಕನ್ನಡದ ಅಭಿಮಾನಿಗಳು.

ಶ್ರೀ ಕಾಗೋಡು ತಿಮ್ಮಪ್ಪ: ಹೌದು. ಆದರೆ ನಿಮಗೂ ನಮಗೂ ಒಂದು ವ್ಯತ್ಯಾಸ ಏನೆಂದರೆ ನಾವು ಚಳುವಳಿ ಮಾಡಿ ಜೈಲಿಗೆ ಹೋಗುತ್ತೇವೆ. ಆದರೆ ಕತ್ತೆ ಮೆರವಣಿಗೆ ಮಾಡುವುದಕ್ಕೆ ಹೋಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್: ಕತ್ತೆ, ನಾಯಿ, ನರಿ ಏನು ಬೇಕಾದರೂ ಉಪಯೋಗ ಮಾಡಿಕೊಳ್ಳುತ್ತೇವೆ. ಜನರು ಒಪ್ಪಿದರೆ ಒಪ್ಪಬಹುದು. ಬಿಟ್ಟರೆ ಬಿಡಬಹುದು. ನಿಮ್ಮಿಂದ ನಾನು ಸರ್ಟಿಫಿಕೇಟ್ ತೆಗೆದುಕೊಳ್ಳಬೇಕಾ? ಏನು ಸುಮ್ಮನೆ ಮಾತನಾಡುತ್ತೀರಿ? ಈಗ ಯಡಿಯೂರಪ್ಪನವರ ಬಗ್ಗೆ ಹೇಳಿದಿರಿ, ಏನೆಂದರೆ ಅವರು ಸಂಬಂಧವಿಲ್ಲದ ಭಾಷಣವನ್ನು ಮಾಡಿದರು, ಆಯವ್ಯಯದ ಮೇಲಿನ ಹೋಲಿಕೆ ಕೊಟ್ಟಿಲ್ಲ, ಅವರ ಪ್ರೌಢಿಮೆ ತೋರಿಸಿಲ್ಲ ಎಂದು. ಈಗ ನಿಮ್ಮದೇನು ನಡೆಯುತ್ತಿದೆ ಭಾಷಣ? ಕತ್ತೆ ಬಗ್ಗೆ ಭಾಷಣ ಮಾಡುತ್ತಾ ಇದ್ದೀರಿ. ಇದು ನ್ಯಾಯವೆ? ಕೂತ್ಕೊಳ್ಳಿ ತಿಮ್ಮಪ್ಪನವರೇ, ಏನು ಮಾತನಾಡುತ್ತೀರಿ

ಶ್ರೀ ಕಾಗೋಡು ತಿಮ್ಮಪ್ಪ: ಅಧ್ಯಕ್ಷರೆ, ವಾಟಾಳ್ ನಾಗರಾಜ್ರ ಹೋರಾಟದ ಬಗ್ಗೆ ನನಗೆ ಅಪಾರವಾದ ಗೌರವ ಇದೆ. ಅನೇಕ ಸಂದರ್ಭಗಳ ಅಗತ್ಯ ಇರಲಿ, ಇಲ್ಲದಿರಲಿ, ಕನ್ನಡದ ಬಗ್ಗೆ ಯಾರೂ ಮಾತನಾಡದೇ ಇರುವ ಸಂಧರ್ಭದಲ್ಲಿ ಒಂದು ಕೂಗನ್ನು ಹಾಕುತ್ತಲೇ ಇರುತ್ತಾರೆ. ಅದಕ್ಕೋಸ್ಕರ ಅವರಿಗೇ ಗೌರವ ಸಲ್ಲಿಸಬೇಕು ಎಂದು ಹೇಳುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್: ಇಷ್ಟಾದರೂ ಒಪ್ಪಿಕೊಂಡಿರಲ್ಲ ತಾವು. ಅದಕ್ಕಾಗಿ ನಿಮಗೆ ಸಾಷ್ಟಾಂಗ ನಮಸ್ಕಾರಗಳು.

ಶ್ರೀ ಕಾಗೋಡು ತಿಮ್ಮಪ್ಪ : ಒಪ್ಪಲೇಬೇಕು. ಅದನ್ನು ಮರೆತು ಬಿಡುವುದಕ್ಕಾಗುತ್ತದೆಯೇ? ಅದಕ್ಕೋಸ್ಕರವಾಗಿ ಕನ್ನಡ ಸಾಹಿತ್ಯ ಸಂಸ್ಥೆಯ ಅಧ್ಯಕ್ಷರಿಗೆ ಸಲ್ಲಬೇಕಾದ ಗೌರವವನ್ನು ಸಲ್ಲಿಸೋಣ. ಏಕೆಂದರೆ ಅವರಿಗೆ ಸಲ್ಲುವುದು ಒಂದೇ, ನಮಗೆ ಸಲ್ಲುವುದೂ ಒಂದೇ. ಆದ್ದರಿಂದ ಅದನ್ನು ಮಾಡೋಣ. ಸರ್ಕಾರದ ಆದ್ಯತೆ ಕುರಿತು ಪ್ರಸ್ತಾಪ ಮಾಡುತ್ತಿದ್ದೆ. ಇದರಲ್ಲಿ ವಿಶೇಷವಾಗಿ ಈ ಸಾರಿ ಜನರ ಮೇಲೆ ಹೊಸ ತೆರಿಗೆಯನ್ನು ಹಾಕಿಲ್ಲ. ಕೇವಲ 60 ಕೋಟಿ ರೂಪಾಯಿಯಷ್ಟು ತೆರಿಗೆಯನ್ನು ಹಾಕಿದ್ದಾರೆ. ನಮ್ಮ ಮುಂದೆ ಇರತಕ್ಕ ಕೆಲಸದ ಹೊರೆಯನ್ನು ಅಭಿವೃದ್ಧಿಯ ಹೊರೆಯನ್ನು ನಾವು ವಿಶ್ಲೇಷಣೆ ಮಾಡಿ ನೋಡಿದರೆ ನಮಗೆ ಎಷ್ಟು ದುಡ್ಡು ಬಂದರೂ ಸಾಕಾಗುವುದಿಲ್ಲ. ಇವತ್ತು ಕೃಷ್ಣಾ ಜಲಾನಯನ ಪ್ರದೇಶದ ಎಲ್ಲ ಅಣೆಕಟ್ಟುಗಳನ್ನು ಪೂರ್ಣ ಮಾಡಿ 2000ನೇ ವರ್ಷದೊಳಗೆ ನಮಗೆ ಕೊಟ್ಟಂಥ ನೀರನ್ನು ಸಂಪೂರ್ಣವಾಗಿ ಬಳಕೆ ಮಾಡಬೇಕಾದರೆ 2500 ಕೋಟಿ ರೂಪಾಯಿಗಳು ಬೇಕು ಎಂದು ಪ್ರಸ್ತಾಪ ಮಾಡಿದ್ದೀರಿ. ಅದೇ ರೀತಿ ಕಾವೇರಿ ನೀರಿನ ಬಳಕೆ ಮಾಡಬೇಕಾದರೆ ಸುಮಾರು 2000 ಕೋಟಿ ರೂಪಾಯಿಗಳು ಬೇಕು ಎಂದು ಅಂದಾಜು ಮಾಡಿದ್ದಾರೆ. ಬರುವ ನಾಲ್ಕೈದು ವರ್ಷಗಳಲ್ಲಿ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ನೀರಾವರಿ ಯೋಜನೆಗಳನ್ನು ಕಾರ್ಯಗತ ಮಾಡಬೇಕಾದರೆ ನಮಗೆ ಹಣ ಬೇಕಾಗುತ್ತದೆ. ಆದ್ದರಿಂದ ಈ ವರ್ಷ ಹೊಸ ತೆರಿಗೆ ದೊಡ್ಡ

ಪ್ರಮಾಣದಲ್ಲಿ ಬೀಳಬಹುದು ಎಂದು ನಿರೀಕ್ಷಣೆ ಇದ್ದ ಜನರಿಗೆ ಇವತ್ತು ಒಂದು ನೆಮ್ಮದಿಯನ್ನು ಈ ಆಯವ್ಯಯ ತಂದುಕೊಟ್ಟಿದೆ. ಏನೆಂದರೆ ತೀರಾ ಕಡಿಮೆ ಪ್ರಮಾಣದಲ್ಲಿ ತೆರಿಗೆ ಹಾಕಿದ್ದಾರೆ. ಕೊರತೆ ಕಡಿಮೆ ಮಾಡುವ ಕೆಲಸವನ್ನು ಮಾಡಿದ್ದಾರೆ. ಇಷ್ಟೆಲ್ಲಾ ಮಾಡಿದರೂ ಕೂಡ ಇವತ್ತಿನ ಚಾಲ್ತಿ ವರ್ಷದಲ್ಲಿ ನಮ್ಮ ತೆರಿಗೆಯ ವಸೂಲಿ ಅಧಿಕ ಪ್ರಮಾಣದಲ್ಲಿ ಜಾಸ್ತಿಯಾಗಿದೆ.

ಇದನ್ನು ವಿಶ್ಲೇಷಣೆ ಮಾಡಿ ಹೇಳಬೇಕಾಗಿದೆ. ಆಯವ್ಯಯದಲ್ಲಿ ಇಟ್ಟ ಹಣ ಅದು ಅಬ್ಕಾರಿ ಬಾಬಿನಿಂದ ಬರುವ ಹಣ ಆಗಿರಬಹುದು ಅಥವಾ ಸೇಲ್ಸ್ ಟ್ಯಾಕ್ಸಿನಿಂದ ಬರುವ ಹಣ ಇರಬಹುದು, ಒಟ್ಟಿನಲ್ಲಿ ಕಳೆದ ವರ್ಷ ಏನು ಗುರಿ ಇಟ್ಟುಕೊಂಡಿದ್ದೆವು ಅದಕ್ಕಿಂತ ಹೆಚ್ಚು ಅಂದರೆ ಈ ವರ್ಷ ಅಬ್ಕಾರಿ ಇಲಾಖೆಯಲ್ಲಿ ಸುಮಾರು 161 ಕೋಟಿ ರೂಪಾಯಿಗಳಷ್ಟು ಹೆಚ್ಚಿನ ತೆರಿಗೆ ಬಂದಿದೆ. ಸುಮಾರು 500 ಕೋಟಿ ರೂಪಾಯಿಗಳನ್ನು ನಿರೀಕ್ಷಣೆ ಮಾಡಿದ್ದರೆ 661 ಕೋಟಿ ರೂಪಾಯಿಗಳನ್ನು ವಸೂಲಾಗಿದ್ದು 161 ಕೋಟಿ ರೂಪಾಯಿ ಜಾಸ್ತಿ ಬಂದಿದೆ. ತೆರಿಗೆ ವಸೂಲಿಯಲ್ಲಿ ಚಾಲ್ತಿ ವರ್ಷದಲ್ಲಿ ಕಳೆದ ವರ್ಷವನ್ನು ಹೋಲಿಸಿ ನೋಡಿದರೆ ಅಧಿಕ ಪ್ರಮಾಣದಲ್ಲಿ ವಸೂಲಿ ಆಗಿದೆ. ನಮಗೆ ಸ್ವಲ್ಪ ತೊಂದರೆಯಾಯಿತು. ರಾಜಕೀಯವಾಗಿ ತೊಂದರೆ ಆಯಿತು. ಸಾಕಷ್ಟು ಗೊಂದಲ ಆಯಿತು. ಲಕ್ಷ್ಯ ಕೊಡುವುದಕ್ಕೆ ಸ್ವಲ್ಪ ವ್ಯತ್ಯಾಸ ಆಯಿತು. ಇಷ್ಟೆಲ್ಲಾ ಗೊಂದಲದಲ್ಲಿ ಕೂಡ ಇಷ್ಟೆಲ್ಲಾ ಅನುಕೂಲ ಇದ್ದರೂ ಕೂಡ ನಾವು ತೆರಿಗೆ ವಸೂಲಿ ಕ್ರಮವನ್ನು ಹಿಂದಿನ ವರ್ಷಕ್ಕೆ ಹೋಲಿಸಿ ನೋಡಿದರೆ ಈ ವರ್ಷ ನಿಜವಾಗಿಯೂ ಒಳ್ಳೆಯ ಕೆಲಸ ಮಾಡಿದ್ದೇವೆ. ಪ್ರಗತಿಯನ್ನು ಮಾಡಿದ್ದೇವೆ. ಹೆಚ್ಚಿನ ತೆರಿಗೆಯನ್ನು ಸಂಗ್ರಹಣೆ ಮಾಡುವುದರಲ್ಲಿ ಸರ್ಕಾರ ಯಶಸ್ವಿಯಾಗಿದೆ. ಈ ಬಗ್ಗೆ ವಿರೋಧಪಕ್ಷದಿಂದ ನಮಗೆ ಸರ್ಟಿಫಿಕೇಟ್ ಬರಬೇಕಾಗಿತ್ತು.

ಏಕೆಂದರೆ ಒಂದು ಮಾತನ್ನು ಎಕ್ಸೈಸ್ ಲಾಬಿ, ಎಕ್ಸೈಸ್ ಲಾಬಿ ಎಂದು ಅವರು ಹೇಳುತ್ತಿದ್ದರು. ಹಾಗೆಂದು ತಾವು ಟೀಕೆ ಮಾಡುತ್ತೀರಲ್ಲಾ, ವೀರಪ್ಪ ಮೊಯಿಲಿಯವರು ಈಗ ಹೋಗಿ ಎಕ್ಸೈಸ್ಲಾಬಿಗೆ ಸೇರಿದ್ದಾರೆಂದು ಹೇಳುತ್ತಿದ್ದೀರಲ್ಲಾ, ಹಾಗೇ ಅದೇ ಎಕ್ಸೈಸ್ ಲಾಬಿಯಿಂದ ಸುಮಾರು 161 ಕೋಟಿ ರೂಪಾಯಿಗಳನ್ನು ನಿರೀಕ್ಷೆಗಿಂತೂ ಜಾಸ್ತಿ ವಸೂಲು ಮಾಡಿರಬೇಕಾದರೆ ಯಾರ ಪರವಾಗಿ ಲಾಬಿ ಇದೆ ಈ ಸರ್ಕಾರದಲ್ಲಿ ಎಂದು ತಾವು ತೂಕ ಹಾಕಿ ನೋಡುವುದು ಬೇಡವೇ? ಪ್ರಸಕ್ತ ವರ್ಷದಲ್ಲಿ ತೆರಿಗೆ ಸಂಗ್ರಹಣೆಯನ್ನು ಚೆನ್ನಾಗಿ ಮಾಡಿಕೊಂಡು, ಇವತ್ತು ಕಾಮಗಾರಿ ದೃಷ್ಟಿಯಿಂದ ಪ್ರಸಕ್ತ ವರ್ಷದಲ್ಲಿ ಹಿಂದೆಂದೂ ಆಗದೇ ಇರತಕ್ಕಂತಹ ಅಭಿವೃದ್ಧಿ ಕಾರ್ಯಗಳನ್ನು ಪ್ರಾರಂಭ ನಾವು ಮಾಡಿದ್ದೇವೆ. ಅದಕ್ಕೆ ಬೇಕಾದಷ್ಟು ಹಣವನ್ನು ಇವತ್ತು ಕೊಡಬೇಕಾದ ಸಂದರ್ಭ ಒದಗಿಬಂದಿದೆ. ಹೌದು ಇನ್ನೂ ಅನೇಕ ಕಡೆಗಳಲ್ಲಿ ಬಿಲ್ಲುಗಳನ್ನು ಪಾವತಿ ಮಾಡಬೇಕಾದ ಸಂದರ್ಭ ಇದೆ. ಅವುಗಳನ್ನು ನಾವು ಈ ತಿಂಗಳ ಒಳಗಾಗಿ ಪಾವತಿ ಮಾಡುತ್ತೇವೆ ಎನ್ನತಕ್ಕ ಭರವಸೆಯನ್ನು ಸಹಾ ನೀಡಿದ್ದಾರೆ. ಆ ಭರವಸೆಯನ್ನು ಈಡೇರಿಸಬೇಕಾದರೆ ಹಣದ ಕ್ರೋಢೀಕರಣ ಆಗಬೇಕು. ಇವತ್ತು ಆ ಕೆಲಸವನ್ನು ಈ ಸರ್ಕಾರ ಯಶಸ್ವಿಯಾಗಿ ಮಾಡಿದೆ. ಆ ರೀತಿ ಮಾಡಿರುವ ಕಾರಣಕ್ಕಾಗಿ ಮುಂದಿನ ವರ್ಷ ಉತ್ತಮವಾದ ಕೆಲಸಕ್ಕೆ ಸರ್ಕಾರ ಕೈ ಹಾಕಿದೆ. ಸಾಮಾನ್ಯ ಜನರ, ಬಡವರ ಏಳಿಗೆಗೋಸ್ಕರ, ಸಮಾಜದ ದುರ್ಬಲರ ಏಳಿಗೆಗೋಸ್ಕರ ಆದ್ಯತೆಯ ಆಧಾರದ ಮೇಲೆ ಇವತ್ತು ಸರ್ಕಾರ ಯೋಜನೆಗಳನ್ನು ರೂಪಿಸಿದೆ. ಆ ದೃಷ್ಟಿಯಿಂದ ಇವತ್ತು ಕಡಿಮೆ ತೆರಿಗೆಯನ್ನು ಹಾಕಿದ್ದಾರೆ. ಯಾವ ಬಡವರ ಮೇಲೂ ತೆರಿಗೆ ಹಾಕಿಲ್ಲ. ಬಡವರು ಉಪಯೋಗ ಮಾಡತಕ್ಕ ವಸ್ತುಗಳ ಮೇಲೆ ತೆರಿಗೆಯನ್ನು ಹಾಕಿಲ್ಲ, ಅದರ ಬದಲಾಗಿ ಬಡವ ಕೊಳ್ಳತಕ್ಕ ಸೀಮೆ ಎಣ್ಣೆ ಮೇಲೆ ತೆರಿಗೆ ಕಡಿಮೆ ಮಾಡಿದ್ದಾರೆ. ಅದೇ ರೀತಿ ಬಡವ ಕೊಳ್ಳತಕ್ಕ ಅಕ್ಕಿಗೆ 1 ಕೆ.ಜಿ.ಗೆ ರೂಪಾಯಿ ಕಡಿಮೆ ಮಾಡಿದ್ದಾರೆ.

ಅಂದರೆ, ನಮ್ಮ ಕೆಲಸ, ನಮ್ಮ ದೃಷ್ಟಿ, ನಾವು ಹೋಗತಕ್ಕ ದಾರಿ, ಬಡವರ ಏಳಿಗೆ ಬಗ್ಗೆ, ಅವರಿಗೆ ಹೊರೆ ಆಗದ ರೀತಿಯಲ್ಲಿ ತೆರಿಗೆಯನ್ನು ಹಾಕತಕ್ಕ ಒಂದು ಸಂಪ್ರದಾಯವನ್ನು ನಾವು ಈ ಸಾರಿ ಪಾಲನೆ ಮಾಡಿದ್ದೇವೆ. ಇವತ್ತು ವಿರೋಧಪಕ್ಷ ಇದನ್ನು ಸ್ವಾಗತ ಮಾಡಬೇಕಾಗಿತ್ತು ಆದರೆ ಆ ಕೆಲಸ ಇವತ್ತು ಮಾಡಲಿಲ್ಲ. ನಮ್ಮ ಬಿಜೆಪಿ ಪಕ್ಷದ ಯಡಿಯೂರಪ್ಪ ಅವರಾದರೂ ಸ್ವಾಗತ ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೆ. ಆದರೆ ಅವರ ಬಗ್ಗೆ ಪ್ರಸ್ತಾಪವೇ ಇಲ್ಲ. ಆ ಕೆಲಸವನ್ನು ಶ್ರೀಮಾನ್ ನಾರಾಯಣರಾವ್ ಮಾಡುತ್ತಾರೆ, ನನಗೆ ಗ್ಯಾರಂಟಿ ಗೊತ್ತು. ಅವರು ಮಾತ್ರ ಅದರ ಬಗ್ಗೆ ಹಿಂದೆ ಹೋಗುವುದಿಲ್ಲ. ಸ್ವಾಗತ ಮಾಡೇ ಮಾಡುತ್ತಾರೆ. ಏಕೆಂದರೆ, ಅವರೂ ಕೂಡಾ ಒಂದು ರೀತಿಯಲ್ಲಿ ಬಡವರ ಪರವಾಗಿ ಇರತಕ್ಕಂತಹ ಜನ. ಅವರು ಸ್ವಾಗತ ಮಾಡೇ ಮಾಡುತ್ತಾರೆ. ಆದುದರಿಂದ ಬಹಳ ಕಡಿಮೆ ತೆರಿಗೆಯನ್ನು ಹಾಕುವುದರ ಮುಖಾಂತರ......

ಶ್ರೀ ಕೆ.ಎಸ್. ಈಶ್ವರಪ್ಪ : ಈ ರಾಜ್ಯದಲ್ಲಿ ನೀವು ಯಾವಾಗ ರಾಜಕೀಯ ಪ್ರಾರಂಭ ಮಾಡಿದಿರೋ ಅವತ್ತಿನಿಂದ ಇವತ್ತಿನವರೆಗೂ ಎಲ್ಲ ಪಾರ್ಟಿಗಳನ್ನು ಒಡೆದೂ, ಒಡೆದೂ, ಒಡೆದೂ ಈಗ ನಮ್ಮನ್ನೂ ಒಡೆಯುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಿ. ಅದರಲ್ಲಿ ತಾವು ಯಶಸ್ವಿ ಆಗುವುದಿಲ್ಲ. ನಿಮ್ಮ ಜೀವನವೆಲ್ಲಾ ಒಡೆದು ಆಳುವ ರಾಜಕೀಯವೇ. ನಿಮ್ಮ ಜೀವನ ಪೂರ್ತಾ ಹಾಗೆ ನಡೆದುಕೊಂಡು ಬಂತು. ಇಲ್ಲೂ ಅದೇ ಪ್ರಯತ್ನವನ್ನು ಮತ್ತೇ ಮಾಡುತ್ತಿದ್ದೀರಿ. ಇದರಲ್ಲಿ ತಾವು ನಮ್ಮನ್ನು ಒಡೆಯುವುದಕ್ಕೆ ಆಗುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ತಮಗೆ ಇನ್ನೂ ಸಮಯ ಸಿಗಲಿಲ್ಲ. ಅದರ ಬಗ್ಗೆ ತಾವು ಆಸಕ್ತಿ ವಹಿಸಿಲ್ಲ. ಹಾಗಾಗಿ ಸ್ವಲ್ಪ ಸಮಾಧಾನ ನಿಮಗೆ ಸಿಕ್ಕಿದೆ. ಈಶ್ವರಪ್ಪನವರೇ, ತಾವು ಹೊಸದಾಗಿ ಬಂದಿದ್ದೀರಿ. ತಾವು ಒಳ್ಳೆಯವರು ಇದ್ದೀರಿ. ತಮಗೆ ಅಧ್ಯಕ್ಷ ಸ್ಥಾನವನ್ನು ಕೊಟ್ಟಿದ್ದಾರೆ. ತಾವು ಈ ರಾಜ್ಯದಲ್ಲಿ ಹಿಂದುಳಿದಿರತಕ್ಕವರಾದ್ದರಿಂದ ನಿಮಗೆ ಅಧ್ಯಕ್ಷ ಸ್ಥಾನವನ್ನು ಕೊಟ್ಟಿದೆ. ತಾವು ಮುಂದೆ ಬನ್ನಿ. ಒಳ್ಳೆಯ ನಾಯಕರಾಗಿ ಏಕೆಂದರೆ, ನಿಮ್ಮದು ಒಂದು ಸಮಾಜ. ನಮ್ಮಂತೆ ಹಿಂದುಳಿದಿರತಕ್ಕ ಸಮಾಜ. ಮೊದಲ ಬಾರಿಗೆ ನಿಮಗೆ ರಾಜ್ಯ ಮಟ್ಟದಲ್ಲಿ ಅಧ್ಯಕ್ಷ ಸ್ಥಾನ ಸಿಕ್ಕಾಗ ನೀವು ಒಳ್ಳೆಯ ನಾಯಕರಾಗಿ. ಏಕೆಂದರೆ ನಿಮ್ಮ ಜನಾಂಗದಲ್ಲಿ ಕುರುಬರು ಹಿಂದುಳಿದವರಲ್ಲಿ ದೊಡ್ಡ ಸಂಖ್ಯೆಯಲ್ಲಿ ಇರತಕ್ಕ ಒಂದು ಸಮಾಜ. ಅದರಲ್ಲಿ ಒಳ್ಳೆಯ ನಾಯಕರು ರಾಜ್ಯ ಮಟ್ಟದ ನಾಯಕರು ಆಗಬೇಕೆಂದು ಅಪೇಕ್ಷೆ ಇದೆ. ಅದಕ್ಕೆ ಬೇಕಾದ ಪ್ರಯತ್ನವನ್ನು ಮಾಡಿ. ಇವತ್ತು ತಮಗೆ ಏನು ಅವಕಾಶ ಸಿಕ್ಕಿದೆ. ಅದನ್ನು ಉಪಯೋಗ ಮಾಡಿಕೊಳ್ಳಿ. ನಾನು ಒಡೆಯುತ್ತೇನೋ ಬಿಡುತ್ತೇನೋ ಅದು ಬೇರೆ ವಿಚಾರ. ಅದಕ್ಕೆ ಹೋಗಬೇಡಿ. ಒಡೆಯುವುದಾದರೆ ನಿಮ್ಮನ್ನೇ ಒಡೆಯುವುದಕ್ಕೆ ಸಾಧ್ಯ ಇದೆ.

ಶ್ರೀ ಕೆ.ಎಸ್. ಈಶ್ವರಪ್ಪ : ತಾವು ಏನೇನೋ ಆಶೋತ್ತರಗಳನ್ನು ಇಟ್ಟುಕೊಂಡಿದ್ದೀರಿ. ತಾವು ಅನೇಕರನ್ನು ಒಡೆದಿದ್ದೀರಿ. ಆದರೆ ಇದನ್ನು ಮಾಡುವುದಕ್ಕೆ ಸಾಧ್ಯವಿಲ್ಲ, ಇದರಲ್ಲಿ ನೀವು ಯಶಸ್ವಿಯಾಗುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೇ, ಇವತ್ತು ಸರ್ಕಾರದವರು ಆದ್ಯತೆಯನ್ನು ಗುರ್ತಿಸಿದ್ದಾರೆ. ಈ ಆದ್ಯತೆಯಲ್ಲಿ ವಿಶೇಷವಾಗಿ ನಮ್ಮ ಹಿಂದುಳಿದ ವರ್ಗದವರು, ಪರಿಶಿಷ್ಟ ಜಾತಿ ಹಾಗೂ ಪಂಗಡದವರು ಹಾಗೂ ಮಹಿಳೆಯರಿಗೆ ಸೇರಿರತಕ್ಕದ್ದು. ಮುಂದಿನ ವರ್ಷ ಸುಮಾರು 147 ಕೋಟಿ ರೂಪಾಯಿಗಳನ್ನು ಪರಿಜನರಿಗೆ ವಿಶೇಷ ಘಟಕ ಯೋಜನೆಯಲ್ಲಿ ಖರ್ಚು ಮಾಡತಕ್ಕ ಎಲ್ಲಾ ಹಣವನ್ನು ಕ್ರೋಢೀಕರಣ ಮಾಡಿ ಒಂದು ಹೊಸ ಯೋಜನೆಯನ್ನು ಮಾಡಬೇಕೆಂದು ಒಂದು

ಪ್ರಸ್ತಾಪವನ್ನು ಮಾಡಿದ್ದಾರೆ. ನಾನು ಅಧ್ಯಕ್ಷರ ಮುಖಾಂತರ ಸರ್ಕಾರಕ್ಕೆ ಅತ್ಯಂತ ಒತ್ತಾಯ ಪೂರ್ವಕವಾಗಿ ಕೇಳುತ್ತೇನೆ. ಈ ಹಣ ಅತ್ಯಂತ ಅರ್ಥಪೂರ್ಣವಾಗಿ ಖರ್ಚು ಆಗಬೇಕು. ಈ ಸಮಾಜದ ಯಾವ ವರ್ಗಕ್ಕೆ ನಾವು ಈ ಹಣ ಕೊಡುತ್ತಿದ್ದೇವೆ ಆ ವರ್ಗ ಅದನ್ನು ಪಡೆದು ಸಮೃದ್ಧಿ ಹೊಂದಬೇಕು. ಅವರು ಆರ್ಥಿಕವಾಗಿ ಮೇಲೆ ಬರಬೇಕು. ಇದಕ್ಕೆ ಮೂಲಭೂತವಾದ ಸಿದ್ಧತೆಗಳು ಆಗಬೇಕು. ಅದಕ್ಕೆ ನಾನು ಅನೇಕ ಜನ ಈ ವರ್ಗಕ್ಕೆ ಸೇರಿದವರ ಜೊತೆ ಮಾತನಾಡಿದ್ದೇನೆ. ನೀವು ಇದಕ್ಕೆ ಪ್ರಯತ್ನ ಮಾಡಬೇಕು. ಕಾರಣ ಏನೆಂದರೆ, ನೀವು ಅನೇಕ ರೀತಿಯಿಂದ ಕೊಡತಕ್ಕಹಣ ಅನಾವಶ್ಯಕವಾಗಿ ಇವತ್ತು ವ್ಯಯ ಆಗುತ್ತದೆ. ನಾವು ಖರ್ಚು ಮಾಡುತ್ತಿದ್ದೇವೆ. ಆದರೆ ಅಷ್ಟೇ ಪ್ರಮಾಣದಲ್ಲಿ ಆ ವರ್ಗದ ಆರ್ಥಿಕ ಉನ್ನತಿ ಆಗುತ್ತಾ ಇಲ್ಲ. ಇವತ್ತು ಅನೇಕ ದೋಷಗಳು ಇವೆ. ಇವತ್ತು 10 ಸಾವಿರ ರೂಪಾಯಿಗಳನ್ನು ಅವರಿಗೆ ಕೊಟ್ಟರೆ ಅದನ್ನು ಬಳಸಿಕೊಳ್ಳತಕ್ಕ ವಿಧಾನ ಅವರಿಗೆ ಗೊತ್ತಿಲ್ಲ. ಅವನಿಗೆ ಕೈಗಾರಿಕೆಗಾಗಿ ಸಹಾಯ ಮಾಡಿದರೆ ಕೈಗಾರಿಕೆ ಬೆಳೆಸುವ ವಿಧಾನ ಅವರಿಗೆ ಗೊತ್ತಿಲ್ಲ. ಅವರಲ್ಲಿ ಕೈಗಾರಿಕೆ ಬೆಳೆಸತಕ್ಕ ಸಂಸ್ಕೃತಿ ಇಲ್ಲ. ಆ ಹಿನ್ನೆಲೆಯಲ್ಲಿ ಆತ ಬಂದವನಲ್ಲ. ಈ ವರ್ಗಕ್ಕೆ ಸಹಾಯ ಮಾಡುತ್ತೇವೆ. ಆದರೆ ಮಾಡಿದ ಸಹಾಯ ಅವರ ಕೈಯಲ್ಲಿ ಉಳಿಯುತ್ತದೆಯೇ? ಅದನ್ನು ಉಪಯೋಗಿಸಿಕೊಂಡು ಆತ ಆರ್ಥಿಕವಾಗಿ ಮುಂದೆ ಬಂದಿದ್ದಾನೆಯೇ? ಇದನ್ನು ಚಿಂತನೆ ಮಾಡಬೇಕಾದ ಅಗತ್ಯ ತೀವ್ರ ಅಗತ್ಯವಾಗಿದೆ. ಕೋಟಿಗಟ್ಟಲೆ ಹಣವನ್ನು ಖರ್ಚು ಮಾಡಿ ಆ ಹಣ ಎಲ್ಲಿ ಹೋಯಿತು ಎಂದು ಹುಡುಕಿದರೆ ಅದು ಸಿಗುತ್ತಾ ಇಲ್ಲ. ಇವತ್ತು ಹೀಗಾಗಿದೆ. ಆ ದೃಷ್ಟಿಯಿಂದ ಈ ವರ್ಷ ಸುಮಾರು 2 ಲಕ್ಷ ಕುಟುಂಬಗಳನ್ನು ಆರ್ಥಿಕ ವ್ಯವಸ್ಥೆಯಲ್ಲಿ ಮುಂದೆ ತರಬೇಕೆಂದು ಅಪೇಕ್ಷೆ ಇಟ್ಟುಕೊಂಡು ಆ ಹಣವನ್ನು ಕ್ರೋಢೀಕರಣ ಮಾಡಿ ಖರ್ಚು ಮಾಡುವುದಕ್ಕೆ ಏನು ಪ್ರಯತ್ನ ಮಾಡಿದ್ದೇವೋ ವಿಶೇಷವಾಗಿ ಅದರಲ್ಲಿ ಒಂದು ಕೆಲಸ ಮಾಡಬೇಕು. ನಾವು ಹಿಂದೆ ಒಂದು ಸಲ ಆಲೋಚನೆ ಮಾಡಿದ್ದೆವು. ಏನೆಂದರೆ, ಈ ವಿಶೇಷ ಘಟಕ ಯೋಜನೆಯಲ್ಲಿ ಬಾವಿ ಕೊಡುತ್ತೇವೆ. ಪಂಪು ಕೊಡುವುದಿಲ್ಲ. ಪಂಪು ಕೊಡದೇ ಹೋದರೆ ಬಾವಿ ಕೊಟ್ಟು ಏನು ಪ್ರಯೋಜನ? ಇದರಲ್ಲಿ ಕೂಡಾ ಇನ್ನೊಂದು ಭೂಮಿ ಕೊಳ್ಳುವ ಕಾರ್ಯಕ್ರಮ ಇದೆ. ಇವತ್ತು ಹರಿಜನಗಿರಿಜನರಿಗೆ ಯಾರು ಭೂಮಿಯನ್ನು ಕೊಡುತ್ತಾರೆ? ಯಾರೂ ಕೊಡುವುದಿಲ್ಲ. ಎಲ್ಲಿಯಾದರೂ ಕೊಟ್ಟರೆ ಯಾತಕ್ಕೂ ಬೇಡದ ಬಂಜರು ಭೂಮಿ ಸಿಗುತ್ತದೆ. ನಮ್ಮ ತಾಲ್ಲೂಕಿನಲ್ಲಿ ಯಾರೂ ಭೂಮಿ ಕೊಡುವುದಿಲ್ಲ. ಈ ವಿಚಾರ ಮಾನ್ಯ ಕರಿಯಣ್ಣನವರಿಗೂ ತಿಳಿದಿದೆ. ನೀರಾವರಿ ಪ್ರದೇಶದಲ್ಲಿ ಇವತ್ತು 50 ಸಾವಿರ ರೂಪಾಯಿಗಳನ್ನು ಒಂದು ಎಕರೆ ಕೊಡುವುದಿಲ್ಲ. 10 ಸಾವಿರ ರೂಪಾಯಿ ಕೊಟ್ಟು ಬಂಜರು ಭೂಮಿ ಕೊಟ್ಟರೆ ಏನು ಪ್ರಯೋಜನ? ಇವತ್ತು ಈ ಜನರ ಬಗ್ಗೆ ಕಳಕಳಿ ಉಳ್ಳಂತಹ ಜನರಲ್ಲಿ ಕರಿಯಣ್ಣನವರೂ ಒಬ್ಬರು. ಅವರ ಬಗ್ಗೆ ಚಿಂತನೆ ಮಾಡುವಂತಹವರು. ಆ ಸಮಾಜದ ಏಳಿಗೆ ಬಗ್ಗೆ ಚಿಂತನೆ ಮಾಡತಕ್ಕ ನೀವು ಕುಳಿತು, ಈ ವರ್ಗಕ್ಕೆ ಕೊಟ್ಟಿರತಕ್ಕ ಹಣ ನಿಜಕ್ಕೂ ಪ್ರಾಮಾಣಿಕವಾಗಿ ಅವರ ಉನ್ನತಿಗೆ, ಅಭಿವೃದ್ಧಿಗೆ ವೆಚ್ಚ ಆಗುವ ರೀತಿಯಲ್ಲಿ ಪ್ರಯತ್ನ ಮಾಡಬೇಕು. ವಸ್ತುಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಕಾರ್ಯಕ್ರಮಗಳನ್ನು ರೂಪಿಸಬೇಕು. ಇಲ್ಲದಿದ್ದರೆ ಪೇಪರ್ ಮೇಲೆ ಆಗುವ ಕಾರ್ಯಕ್ರಮ ರೂಪಿಸಿದರೆ ಎಲ್ಲಾ ಹಾಳಾಗುತ್ತದೆ.

ಆದುದರಿಂದ ಯಾವ ಯಾವ ಹರಿಜನ ಗಿರಜನ ಕುಟುಂಬಕ್ಕೆ ಇವತ್ತು ಭೂಮಿ ಇದೆ ಅವರಿಗೆ ಬೋರ್‌ವೆಲ್ ಹಾಕಬೇಕು ಅಥವಾ ತೆರೆದ ಬಾವಿ ಹಾಕಬೇಕು, ಅದನ್ನು ತೆಗೆಸಿ ಅವರಿಗೆ ಪಂಪುಸೆಟ್ಟು ಕೊಡುವ ಕೆಲಸ ಮಾಡಬೇಕು. ಅದಕ್ಕೆ 50 ಸಾವಿರ ಅಥವಾ 1 ಲಕ್ಷ ರೂಪಾಯಿ ಖರ್ಚು ಆಗಬಹುದು. ಆದರೂ ಕೂಡಾ ಚಿಂತೆ ಇಲ್ಲ. ಇಂತಹ ಯೋಜನೆಯಿಂದ ಆ ಕುಟುಂಬಕ್ಕೆ ಸಹಾಯ ಮಾಡಿದರೆ

ಅದು ಸರ್ವಸ್ವತಂತ್ರವಾಗಿ ಜೀವನ ಮಾಡತಕ್ಕ, ಸ್ವಾವಲಂಬಿಯಾಗತಕ್ಕ ಒಂದು ಪ್ರಯತ್ನಕ್ಕೆ ನಾವು ಅವರನ್ನು ತಂದು ನಿಲ್ಲಿಸತಕ್ಕ ಕೆಲಸ ಮಾಡಬೇಕು. ಸುಮ್ಮನೆ ಚರ್ಚೆಮಾಡುವುದಕ್ಕಿಂತಲೂ ಈ ಆಯವ್ಯಯ ಆದಮೇಲೆ ನಿಮ್ಮಲ್ಲಿ ಕೆಲವರು ಯುವಕರಾದರೂ ಕೂತು ಈ ಕಾರ್ಯಕ್ರಮವನ್ನು ವಿಶೇಷ ರೀತಿಯಲ್ಲಿ ರೂಪಿಸಿ ಅನುಷ್ಠಾನಕ್ಕೆ ಏಪ್ರಿಲ್ 1ನೇ ತಾರೀಖಿನಿಂದ ಬರುವ ಹಾಗೆ ಕೆಲಸ ಮಾಡಬೇಕು. ಇಲ್ಲದಿದ್ದರೆ ಮುಂದಿನ ಮಾರ್ಚಿವರೆಗೆ ಹಣವನ್ನು ಖರ್ಚು ಮಾಡಿಲ್ಲ ಎಂದು ಹಳಿ ಆಗ ಆಚೆ ಈಚೆ ಪುಡುಕಿ ಹಣವನ್ನು ಖರ್ಚು ಮಾಡುವುದರೊಳಗೆ ಏನು ಪ್ರಯೋಜನ? ಮೊನ್ನೆ ನಾನು ಒಂದು ಕಡೆ ಹೋಗಿದ್ದೆ. ವ್ಯಕ್ತಿಗತವಾಗಿ ಖರ್ಚು ಮಾಡುವ ಯೋಜನೆ ಅಡಿಯಲ್ಲಿ ಪಿಕಪ್ ಕಟ್ಟಿದ್ದಾರೆ. ಅಲ್ಲ ನೀರೇ ಬರುವುದಿಲ್ಲ. ನಾನು ಅಲ್ಲಿ ಬೈದು ಬಂದೆ. ಆದ್ದರಿಂದ ಈ ಒಂದು ಹಣವನ್ನು ಏನು ಮುಖ್ಯಮಂತ್ರಿಗಳು ಒದಗಿಸಿದ್ದಾರೆ, ಈ 147 ಕೋಟಿ ರೂಪಾಯಿಗಳು ಮುಂದಿನ 12 ತಿಂಗಳಲ್ಲಿ ಈ ವರ್ಗದ ಏಳಿಗೆಗೆ ಖರ್ಚು ಮಾಡತಕ್ಕ ಒಂದು ಕಾರ್ಯಶೀಲತೆಯ ಬಗ್ಗೆ ಸರ್ಕಾರಕ್ಕೆ ನಾವು ಒತ್ತಾಯ ಪೂರ್ವಕವಾಗಿ ಹೇಳಬೇಕು. ಆ ಕಾರ್ಯಶೀಲತೆ ಸರ್ಕಾರಕ್ಕೆ ಬರಬೇಕಾದರೆ ನಾವೂ ಕಾರಣರಾಗಿ ನಾವು ಸ್ವಲ್ಪ ಒತ್ತಾಯವನ್ನು ತರತಕ್ಕ ಪ್ರಯತ್ನ ಮಾಡಿದರೆ ಖಂಡಿತವಾಗಿ ಇದು ಕಾರ್ಯರೂಪಕ್ಕೆ ಬರುತ್ತದೆ. ಪ್ರತಿ ವರ್ಷ ಇದೇ ಪ್ರಮಾಣದಲ್ಲಿ 2 ಲಕ್ಷ 25ಸಾವಿರ ಕುಟುಂಬಗಳನ್ನು ನಾವು ಆರ್ಥಿಕವಾಗಿ ಮೇಲೆತ್ತತಕ್ಕ ಪ್ರಯತ್ನ ಮಾಡುವುದಾದರೆ ಮುಂದಿನ 5 ವರ್ಷಗಳಲ್ಲಿ ಈ ವರ್ಗದಲ್ಲಿ ವಿಶೇಷವಾದ ಬೆಳಕನ್ನು, ಉತ್ತಮವಾದ ವಾತಾವರಣವನ್ನು ನಿರ್ಮಾಣ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಈ ಕಾರ್ಯಕ್ರಮವನ್ನು ಜಾರಿಗೆ ತರುವುದಕ್ಕೆ ಹೆಚ್ಚು ಆಸಕ್ತಿ ವಹಿಸಬೇಕಾದ ಕೆಲಸ ಮತ್ತು ಸರ್ಕಾರದ ಮುಂದೆ ಇದೆ. ಅದನ್ನು ಮಾನ್ಯ ಮುಖ್ಯಮಂತ್ರಿಗಳು ಮಾಡುತ್ತಾರೆನ್ನುವ ವಿಶ್ವಾಸ ನನಗಿದೆ.

ಏಕೆಂದರೆ ಅವರು ಬಡತನದಿಂದ ಬಂದವರು; ಅವರಿಗೆ ಬಡತನ ಏನೆಂದು ಗೊತ್ತಿದೆ. ಬಡವರಿಗೆ ರೂಪಿಸಿರತಕ್ಕ ಕಾರ್ಯಕ್ರಮ ಏನಿದೆ, ಇದು ಯಶಸ್ವಿಯಾಗಿ ಕಾರ್ಯರೂಪಕ್ಕೆ ಬರಬೇಕು. ಇದರಲ್ಲಿ ಶ್ರಮ ಇದೆ, ಇದರಲ್ಲಿಯೇ ಪರಿಶ್ರಮ ಇದೆ. ಇಂತಹ ಕಾರ್ಯಕ್ರಮಕ್ಕೆ ನಾವು ನಮ್ಮ ಸರ್ವ ತ್ಯಾಗವನ್ನೂ ಮಾಡತಕ್ಕ ಪ್ರಯತ್ನ ಮಾಡುವುದಾದರೆ, ಖಂಡಿತವಾಗಿಯೂ ನಮ್ಮ ಸರ್ಕಾರಕ್ಕೆ, ನಾವೇನು ಕಾರ್ಯಕ್ರಮ ರೂಪಿಸಿದ್ದೇವೆ, ಇದರಿಂದ ಒಳ್ಳೆಯ ಹೆಸರು ಬರುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವತ್ತು ಹಿಂದುಳಿದ ವರ್ಗಗಳಿಗೆ ಸಂಬಂಧಪಟ್ಟಂತೆ ಚಿನ್ನಪ್ಪರೆಡ್ಡಿ ವರದಿಯನ್ನು ಜಾರಿಗೆ ತರುತ್ತೇವೆಂದು ಈ ಸದನದಲ್ಲಿ ಹೇಳಿದ್ದಾರೆ. ನಾನೂ ಕೂಡ ಈಗಲೂ ಇದನ್ನು ಜಾರಿಗೆ ಕೊಡಬೇಕೆಂದು ಹೇಳುವವ ಮತ್ತು ಒತ್ತಾಯ ಮಾಡುವವ. ಮಾನ್ಯ ವೀರಪ್ಪ ಮೊಯ್ಲಿಯವರ ಕಾಲದಲ್ಲಿ ಇದು ಜಾರಿಗೆ ಬರದೇಹೋದರೆ, ಮುಂದೆ ನಾವು ಇದರ ಬಗ್ಗೆ ಹೇಳಿಕೊಳ್ಳುವುದಕ್ಕೆ ನೈತಿಕ ಹಕ್ಕು ಉಳಿಯುವುದಿಲ್ಲ. ಏಕೆಂದರೆ, ಹಿಂದುಳಿದವರಾಗಿ ನಮ್ಮ ಪರವಾಗಿ ಬಂದು, ನಾವೇ ಅಧಿಕಾರದಲ್ಲಿದ್ದು, ನೀವು ಹೇಳಿದ ಪ್ರಕಾರ ಮಾಡದೇ ಹೋದರೆ, ನಾಳೆ ನೈತಿಕವಾಗಿ ನಾವು ಏನನ್ನು ಜನರ ಮುಂದೆ ಹೇಳುವುದಕ್ಕಾಗುತ್ತದೆ. ಇವತ್ತು ಯಾವುದೋ ಒಂದು ಪ್ರಯತ್ನದಿಂದ, ಹೋರಾಟದಿಂದ, ಅಧಿಕಾರ ಸ್ಥಾನ ಬಂದಿದೆ. ... ವಿ. ಅತ್ಯಂತ ಸಣ್ಣ ಸಮಾಜಕ್ಕೆ ಸೇರಿರತಕ್ಕಂಥವರು ಕರ್ನಾಟಕ ರಾಜ್ಯದ ಮುಖ್ಯಮಂತ್ರಿ ಸ್ಥಾನದ ಚುಕ್ಕಾಣಿಯನ್ನು ಹಿಡಿದಿದ್ದಾರೆಂದರೆ, ಇದೊಂದು ವಿಶಿಷ್ಟವಾದ, ವಿಶೇಷವಾದ ಚಾರಿತ್ರಿಕ ಘಟನೆ. ಇವತ್ತು ನಿಮಗೆ ಇಂತಹ ಸಂದರ್ಭ ಸಿಕ್ಕಿದಾಗ, ಈ ವರ್ಗದಿಂದ ಬಂದಂಥ ನೀವು, ಈ ಒಂದು ತೀರ್ಮಾನ ಮಾಡಲೇಬೇಕು; ಇದರಿಂದ ನೀವು ತಪ್ಪಿಸಿಕೊಳ್ಳುವುದಕ್ಕಾಗುವುದಿಲ್ಲ. ಮಾನ್ಯ ಯಡಿಯೂರಪ್ಪನವರು ಹೇಳುವುದರ ಜೊತೆಗೆ, ಈ ಒತ್ತಾಯವನ್ನು ನಾನು ಕೂಡ, ಈಗಲೂ ಮಾಡುತ್ತೇನೆ; ಮತ್ತು ಹೇಳುತ್ತೇನೆ. ಇದನ್ನು ಶೀಘ್ರಗತಿಯಿಂದ ಜಾರಿಗೆ ಕೊಡಬೇಕು. ಇದರ ಜೊತೆಗೆ ಕೇವಲ

ಮೀಸಲಾತಿಯನ್ನು ಜಾರಿಗೆ ತರುವುದರಿಂದ ಹಿಂದುಳಿದ ವರ್ಗದ ಅಭಿವೃದ್ಧಿಯಾಗುತ್ತದೆಂದು ನಾವ್ಯಾರು ತಿಳಿದುಕೊಳ್ಳುವುದಕ್ಕೆ ಹೋಗುವುದಿಲ್ಲ. ಇವತ್ತು ಸರ್ಕಾರಿ ಕ್ಷೇತ್ರದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಉದ್ಯೋಗಗಳು ಇಲ್ಲ; ಕಡಿಮೆ ಇವೆ. ಇವತ್ತು ಈ ವರ್ಗದ ಜನರಿಗೆ, ಬೇರೆ ಬೇರೆ ಕ್ಷೇತ್ರಗಳಲ್ಲಿ ಉದ್ಯೋಗವನ್ನು ಸೃಷ್ಟಿ ಮಾಡತಕ್ಕ ಅಥವಾ ಉದ್ಯೋಗವನ್ನು ಕೊಡತಕ್ಕ ಕೆಲಸ ಮಾಡಬೇಕು. ಅವರನ್ನು ಆರ್ಥಿಕ ಕ್ಷೇತ್ರದಲ್ಲಿ ತಳ್ಳಬೇಕು. ಅಲ್ಲಿ ಅವರನ್ನು ದುಡಿಮೆಗೆ ಹೆಚ್ಚಿಸಬೇಕು. ಆರ್ಥಿಕವಾಗಿ ಉನ್ನತಿಗೆ ಬರಬೇಕಾದರೆ, ಯಾವ ಯಾವ ಲಾಭದಾಯಕ ಉದ್ಯೋಗ ಕ್ಷೇತ್ರಗಳಿವೆ, ಅಂತಹ ಕ್ಷೇತ್ರಗಳಲ್ಲಿ ಇವರನ್ನು ತೊಡಗಿಸತಕ್ಕ ಕೆಲಸ ಮಾಡಬೇಕು. ಆ ಕೆಲಸ ಮಾಡಬೇಕಾದರೆ, ಹಿಂದುಳಿದ ವರ್ಗದ ಅಭಿವೃದ್ಧಿ ನಿಗಮದ ಮುಖಾಂತರ ಹೆಚ್ಚಿನ ಕೆಲಸ ಮಾಡಬೇಕು. ಆದರೆ, ಈ ನಿಗಮಕ್ಕೆ ಕೊಟ್ಟಂಥ ಹಣ ತುಂಬಾ ಕಡಿಮೆ. ಕೇವಲ 10 ಕೋಟಿ ರೂಪಾಯಿಗಳನ್ನು ಕೊಟ್ಟರೆ ಏನಾಗುತ್ತದೆ. ಇವತ್ತು ಹರಿಜನ ಗಿರಿಜನರ ಅಭಿವೃದ್ಧಿ ನಿಗಮಕ್ಕೆ ಕೊಟ್ಟ ಹಣ ಕಡಿಮೆ ಇದೆ. ಈ ನಿಗಮಕ್ಕೆ ಹೆಚ್ಚಿಗೆ ಹಣವನ್ನು ಕೊಟ್ಟರೆ, ಅದು ಬ್ಯಾಂಕುಗಳ ಮುಖಾಂತರ ಸಹಾಯವನ್ನು ಪಡೆದು, ಶೇಕಡ 25ರಷ್ಟು ಸಹಾಯಧನವನ್ನು ಕೊಟ್ಟು, ಅನೇಕ ಕಾರ್ಯಕ್ರಮಗಳ ಮೂಲಕ ಉದ್ಯೋಗಗಳನ್ನು ಸೃಷ್ಟಿ ಮಾಡತಕ್ಕ ಕೆಲಸವನ್ನು ಮಾಡಲು ಸಾಧ್ಯವಾಗುತ್ತದೆ. ಅದರಲ್ಲಿ ಒಂದು ಹೋಟೆಲ್ ಉದ್ಯೋಗ. ಇದನ್ನು ಹರಿಜನರು ಮಾಡಿದರೆ, ಹಿಂದುಳಿದವರು ಮಾಡಿದರೆ, ಅಷ್ಟು ಸುಲಭವಾಗಿ ಲಾಭ ಮಾಡುವುದಕ್ಕಾಗುವುದಿಲ್ಲ. ಅನೇಕ ಹೊಸ ಉದ್ಯೋಗ ಬಂತು, ಅಥವಾ ಯಾವುದೋ ಹೊಸ ಯೋಜನೆ ಬಂತು ಎಂದರೆ, ಸಾಲ ಸಿಗುತ್ತದೆ, ಸಬ್ಸಿಡಿ ಸಿಗುತ್ತದೆಂದು ಅನೇಕ ಜನರು ಒಂದೊಂದು ಸಾರಿ ಈ ಕೆಲಸಕ್ಕೆ ಕೈ ಹಾಕುತ್ತಾರೆ. ಆದರೆ, ಈ ಕೆಲಸದಿಂದ ಅವರು ಉನ್ನತಿಯಾಗುವುದಿಲ್ಲ. ಕಾರಣವೇನೆಂದರೆ, ಅದಕ್ಕೆ ಬೇಕಾದ ಇನ್ಫ್ರಾಸ್ಟ್ರಕ್ಚರ್, ಸೋಷಿಯಲ್ ಇನ್ಫ್ರಾಸ್ಟ್ರಕ್ಚರ್ ಇರುವುದಿಲ್ಲ. ಅವನಿಗೆ ಬೆಂಬಲ ಕೊಡುವವರು ಇರುವುದಿಲ್ಲ.

ಆದ್ದರಿಂದ, ಈ ವರ್ಗದವರು ಪ್ರಾರಂಭ ಮಾಡಿದ ಉದ್ಯೋಗ ಕ್ಷೇತ್ರವನ್ನು ಸಮೀಕ್ಷೆ ಮಾಡಿ, ಸರಿಯಾದ ದಾರಿಯಲ್ಲಿ ತೆಗೆದುಕೊಂಡು ಹೋಗುವಂಥ ಪ್ರಯತ್ನ ಮಾಡದೇ ಹೋದರೆ, ಅವನಿಗೆ ಕೊಟ್ಟಂಥ ಹಣ ಲಾಭದಾಯಕವಾಗಿ ಪರಿವರ್ತನೆಯಾಗುವುದಿಲ್ಲ. ಈ ದೃಷ್ಟಿಯಿಂದ ಹಿಂದುಳಿದ ವರ್ಗಕ್ಕೆ ಕೊಡುವಂಥ ಪ್ರಯೋಜನವನ್ನು ಹೆಚ್ಚು ಮಾಡಬೇಕು. ಈಗ, ಈ ನಿಗಮಕ್ಕೆ ಕೊಟ್ಟಿರತಕ್ಕ ಹಣ ಸಾಕಾಗುವುದಿಲ್ಲ. ಆದ್ದರಿಂದ, ಇದನ್ನು ಹೆಚ್ಚು ಮಾಡಬೇಕೆಂಬ ಒತ್ತಾಯವನ್ನೂ ಕೂಡ ಮಾಡುತ್ತೇನೆ. ಇದರ ಜೊತೆಗೆ, ಮಹಿಳೆಯರ ಮತ್ತು ಮಕ್ಕಳ ಕಲ್ಯಾಣಕ್ಕೋಸ್ಕರವಾಗಿ ವಿಶೇಷವಾದ ಕಾರ್ಯಕ್ರಮವನ್ನು ರೂಪಿಸಿದ್ದಾರೆ. ಇದು ಬಹಳ ಒಳ್ಳೆಯದು. ಏಕೆಂದರೆ, ಬೆಳೆಯುತಕ್ಕ ಮಕ್ಕಳಿಗೆ ಎಷ್ಟು ರಕ್ಷಣೆ ಕೊಡುತ್ತೇವೆ, ಯಾವ ರೀತಿಯಾಗಿ ಅವರನ್ನು ಸಮೃದ್ಧವಾಗಿ ಬೆಳೆಸುತ್ತೇವೆಯೋ, ಆ ಬೆಳವಣಿಗೆಯಲ್ಲಿ ಅತ್ಯಂತ ಉತ್ತಮ ಪ್ರಜೆಯಾಗಿ ಅವರು ಬೆಳೆದು ಬರುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದಲೇ ಹಿರಿಯರು ಹೇಳುತ್ತಾರೆ. "ಗಿಡವಾಗಿ ಬಗ್ಗದ್ದು, ಮರವಾಗಿ ಬಗ್ಗೀತೆ" ಎಂದು. ಸಸಿಯಾಗಿದ್ದ ಕಾಲದಲ್ಲಿ ಇವುಗಳನ್ನು ಸಾಕತಕ್ಕಂಥ, ಬೆಳೆಸತಕ್ಕಂಥ ಕೆಲಸವನ್ನು ಮಾಡಬೇಕು. ಇವತ್ತು ಮಹಿಳೆಯರೂ ಕೂಡ ಸಮಾಜದಲ್ಲಿ ಅರ್ಧ ಭಾಗದಷ್ಟು ಇದ್ದಾರೆ. ಶೋಷಣೆಗೆ ಸಿಕ್ಕಿದ ಯಾವುದಾದರೂ ವರ್ಗ ಇದ್ದರೆ, ಅದು ಹರಿಜನ ಗಿರಜನರು ಹೇಗೋ, ಇವತ್ತು ಹಿಂದುಳಿದವರು ಹೇಗೋ, ಹಾಗೆಯೇ ಈ ಸಮಾಜದ ಎಲ್ಲಾ ವರ್ಗದ ಮಹಿಳೆಯರೂ ಕೂಡ ಇದ್ದಾರೆ. ಸಂಪ್ರದಾಯದಿಂದ, ಮೂಢ ನಂಬಿಕೆಯಿಂದ ಬಲಿಪಶುವಾದಂಥವರು ಈ ಸಮಾಜದ ಸ್ತ್ರೀಯರು. ಆ ವರ್ಗ, ಆ ಜಾತಿ, ಈ ಜಾತಿ ಎಂದು ನಾನು ಹೇಳುವುದಿಲ್ಲ. ಎಲ್ಲಾ ಜಾತಿಯ, ಎಲ್ಲಾ ವರ್ಗಕ್ಕೆ ಸೇರಿದ ಮಹಿಳೆಯರು ಅತ್ಯಂತ ಶೋಷಣೆಗೆ ಒಳಗಾಗಿದ್ದಾರೆಂದರೆ ಅಥವಾ ಸಂಪ್ರದಾಯಕ್ಕೆ, ಮೂಢ ನಂಬಿಕೆಗೆ ಬಲಿಪಶುವಾಗಿದ್ದಾರೆಂದರೆ, ಅತಿಶಯೋಕ್ತಿ ಆಗಲಾರದು. ಅವರ ಏಳಿಗೆಯನ್ನು ಕುರಿತು

ಚಿಂತನೆ ಮಾಡುವುದು ಇದೀ ಸಮಾಜಕ್ಕೆ ಸೇರಿದೆ. ಆದ್ದರಿಂದ, ಈ ಆಯವ್ಯಯದಲ್ಲಿ ಈ ಚಿಂತನೆ ಮಾಡಿರುವುದು, ಇದಕ್ಕೆ ವಿಶೇಷವಾದ ಕಾರ್ಯಕ್ರಮವನ್ನು ರೂಪಿಸಿರುವುದು, ಒಂದು ಹೊಸ ಕಸರತ್ತು, ಒಂದು ಹೊಸ ಮಜಲು. ಈ ದೃಷ್ಟಿಯಿಂದ ಇವತ್ತು, ಇದನ್ನು ಸ್ವಾಗತ ಮಾಡತಕ್ಕ ಕೆಲಸ...........

ಉಪಾಧ್ಯಕ್ಷರು : ತಾವಿನ್ನೂ ಎಷ್ಟು ವೇಳೆ ತೆಗೆದುಕೊಳ್ಳುತ್ತೀರಿ ?

ಶ್ರೀ ಕಾಗೋಡು ತಿಮ್ಮಪ್ಪ : ತಾವು ಎಷ್ಟು ಸಮಯ ಹೇಳಿದರೆ, ಅಷ್ಟು ಅಥವಾ ಇನ್ನು ಅರ್ಧ ಗಂಟೆ ಮಾತನಾಡುತ್ತೇನೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ : 6 ಗಂಟೆಗೆ ಕಾಮನ್ವೆಲ್ತ್ ಪಾರ್ಲಿಮೆಂಟರಿ ಸಭೆ ಇದೆ. ಈಗ ಎರಡು ಬಿಲ್ಲುಗಳನ್ನು ತೆಗೆದುಕೊಳ್ಳಬಹುದು. ಅವರು ನಾಳೆ ಚರ್ಚೆಯನ್ನು ಮುಂದುವರಿಸಬಹುದು.

ಉಪಾಧ್ಯಕ್ಷರು : ಈಗ ಬಿಲ್ಲುಗಳನ್ನು ತೆಗೆದುಕೊಳ್ಳೋಣ. ತಾವು ನಾಳೆ ಮುಂದುವರಿಸಿ.

ಶ್ರೀ ಕಾಗೋಡು ತಿಮ್ಮಪ್ಪ : ಆಗಬಹುದು.

ಕರ್ನಾಟಕ ಅತ್ಯಾವಶ್ಯಕ ಸೇವೆಗಳ ನಿರ್ವಹಣಾ ವಿಧೇಯಕ 1994 ಪರ್ಯಾಲೋಚನಾ ಪ್ರಸ್ತಾವ

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, 1994 ರ ಕರ್ನಾಟಕ ಅತ್ಯಾವಶ್ಯಕ ಸೇವೆಗಳ ನಿರ್ವಹಣಾ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಈ ವಿಧೇಯಕದ ಕಾಪಿಯನ್ನು ಸಹ ನಮಗೆ ಕೊಟ್ಟಿಲ್ಲ. ಇದು ಪ್ರಮುಖವಾದ ಬಿಲ್ ಇದೆ. ಇದರ ಬಗ್ಗೆ ಚರ್ಚೆಯಾಗಬೇಕಾಗಿದೆ. ಇದನ್ನು ಪಾಸ್ ಮಾಡಿಕೊಳ್ಳುವುದಕ್ಕೆ ನಮ್ಮದೇನೂ ಅಭ್ಯಂತರ ಇಲ್ಲ. ಜೊತೆಗೆ ತಮಗೆ ಬಹುಮತ ಇದೆ. ದಯಮಾಡಿ ಇದನ್ನು ನಾಳೆ ತೆಗೆದುಕೊಳ್ಳಬಹುದು.

ಉಪಾಧ್ಯಕ್ಷರು : ಆಯಿತು. ನಾಳೆ ತೆಗೆದುಕೊಳ್ಳೋಣ. ಈಗ ಒಂದು ಸಂದೇಶವಿದೆ. ಅದು ಕಾಮನ್ವೆಲ್ತ್ ದಿನಾಚರಣೆಯ ಸಂದೇಶ.

ಸಂದೇಶ

'ಕಾಮನ್ ವೆಲ್ತ್ ದಿನಾಚರಣೆ ಸಂದೇಶ 1994"

ಕಾಮನ್ವೆಲ್ತ್ ಮುಖ್ಯಸ್ಥೆಯಾದ ಘನತೆವೆತ್ತ ಮಹಾರಾಣಿಯವರಿಂದ ಕಾಮನ್ವೆಲ್ತ್ ದಿನಾಚರಣೆಯ ಸಂಬಂಧದಲ್ಲಿ ನನಗೆ ಬಂದಿರುವ 14ನೇ ಮಾರ್ಚ್ 1994ರ ದಿನಾಂಕದ ಸಂದೇಶವು ಈ ಕೆಳಗಿನಂತಿದೆ.

ಈ ವರ್ಷದ ಅತಿ ಜನಪ್ರಿಯವಾದ ಕಾಮನ್ವೆಲ್ತ್ ಕಾರ್ಯಕ್ರಮವೆಂದರೆ ಕೆನಡಾದ ವಿಕ್ಟೋರಿಯಾದಲ್ಲಿ ನಡೆಯುವ ಕಾಮನವೆಲ್ತ್ ಕ್ರೀಡೆಗಳು ಹಾಗೂ ತತ್ಸಂಬಂಧಿ ಉತ್ಸವ, ಅಭಿವೃದ್ಧಿಯ ನಾನಾ ಹಂತಗಳಲ್ಲಿರುವ ಚಿಕ್ಕ ಹಾಗೂ ಬೃಹತ್ ರಾಷ್ಟ್ರಗಳ ಪ್ರತಿನಿಧಿಗಳ ಮೂಲಕವಾಗಿ ವಿಶ್ವದಾದ್ಯಂತವೂ ಲಕ್ಷೋಪಲಕ್ಷ ಮಂದಿ ಮಹತ್ಸಾಧನೆಯ ಈ ಮಹೋತ್ಸವದ ಈ ಆಚರಣೆಯನ್ನು ವೀಕ್ಷಿಸುತ್ತಾರೆ. ಅಬಾಲವೃದ್ಧರಾಗಿ ಬಹುತೇಕ ನಾವೆಲ್ಲರೂ ಪ್ರೇಕ್ಷಕರಾಗಿಯೋ, ಪಾತ್ರಧಾರಿಗಳಾಗಿಯೋ ಕ್ರೀಡೆಯಲ್ಲಿ ಆಸಕ್ತರಾಗಿದ್ದೇವೆ. ಅಥವಾ ಪಾಲ್ಗೊಂಡಿದ್ದೇವೆ. ಇದರಿಂದಾಗಿ ಕ್ರೀಡೆಯನ್ನು ಈ ಸಾಲಿನ ಕಾಮನ್ವೆಲ್ತ್ ದಿನಾಚರಣೆಯ ವಸ್ತು ವಿಷಯವಾಗಿ ಆಯ್ದುಕೊಂಡಿರುವುದು ಉಚಿತವಾಗಿದೆ.

ವ್ಯಕ್ತಿಗತವಾಗಿ ಹಾಗೂ ರಾಷ್ಟ್ರಗಳಾಗಿ ತಮ್ಮ ಉತ್ಕರ್ಷದಲ್ಲಿ ಕ್ರೀಡೆಯು ನಿರ್ವಹಿಸುವ ಪಾತ್ರ ಎಷ್ಟು ಪ್ರಮುಖವಾದುದೆಂಬುದನ್ನು ಕಾಮನ್ವೆಲ್ತ್ ರಾಷ್ಟ್ರಗಳ ಮುಖ್ಯಸ್ಥರುಗಳು ಕಳೆದ ವರ್ಷ ಸೈಪ್ರೆಸ್ನಲ್ಲಿ ಸಭೆ ಸೇರಿದ ಸಂದರ್ಭದಲ್ಲಿ ಕಂಡುಕೊಂಡರು. ನಾವು ಒಂದು ಚಿಕ್ಕ ಅಥವಾ ಹೆಚ್ಚು ಪ್ರಸಿದ್ಧವಲ್ಲದ ದೇಶದ ನಾಗರೀಕರಾಗಿದ್ದ ಪಕ್ಷದಲ್ಲೂ ನಮ್ಮ ರಾಷ್ಟ್ರವು ಕ್ರೀಡೆಯೊಂದರಲ್ಲಿ ಮಿಂಚಿದರೆ ವಿಶ್ವವೇದಿಕೆಯಲ್ಲಿ ನಾವು ಸ್ಥಾನ ಪಡೆಯುತ್ತೇವೆ. ಪ್ರಗತಿ ಸಾಧಿಸಲು ಹೆಣಗಿದೆವಾದಲ್ಲಿ, ದೈಹಿಕ ಹಾಗೂ ಮಾನಸಿಕ ಶಿಕ್ಷಣಗಳ ಸಾಧನೆಯಲ್ಲಿ ಇನ್ನೂ ಹೆಚ್ಚು ಕಠಿಣವಾದ ಗುರಿಗಳತ್ತ ನಾವು ದೃಷ್ಟಿಹರಿಸಿದಲ್ಲಿ, ಪ್ರಯೋಜನ ನಮ್ಮದೇ. ಒಂದು ತಂಡದ ಸದಸ್ಯರಾಗಿ ನಾವು ಕ್ರೀಡೆಯಲ್ಲಿ ಭಾಗವಹಿಸಿದಲ್ಲಿ, ಪರಸ್ಪರ ಬಲಾಬಲಗಳನ್ನು ಕಂಡುಕೊಳ್ಳುತ್ತೇವೆ ಅಲ್ಲದೆ ಪರಸ್ಪರರ ದೌರ್ಬಲ್ಯಗಳನ್ನು ಕಡಿಮೆ ಮಾಡಿಕೊಳ್ಳುವುದೂ ನಮಗೆ ಸಾಧ್ಯವಾಗುತ್ತದೆ. ಸೋಲು ಮತ್ತು ಗೆಲುವು ಎಂದರೆ ಏನು ಹಾಗೂ ಅದೃಷ್ಟದ ಆಟ ಎಷ್ಟು ಎಂಬುದನ್ನು ನಾವು ಕಂಡುಕೊಳ್ಳುತ್ತೇವೆ. ಸಕಲ ಸೌಕರ್ಯಗಳುಳ್ಳ ಅಥವಾ ಯಾವ ಸೌಲಭ್ಯವೂ ಇಲ್ಲದ ಹಿನ್ನೆಲೆಯಿಂದ ನಾವು ಬಂದಿದ್ದ ಪಕ್ಷದಲ್ಲೂ ನಮ್ಮಲ್ಲಿನ ಯಾರೊಬ್ಬರೂ ದೈವದತ್ತವಾದ ಪ್ರತಿಭೆಯನ್ನು ಪಡೆದು ಹುಟ್ಟಿರಲು ಸಾಧ್ಯವಿದೆ. ಉನ್ನತ ಮಟ್ಟದ ಕೌಶಲ್ಯವನ್ನು ರೂಢಿಸಿಕೊಳ್ಳುವವರನ್ನು ನಾನು ಕೊಂಡಾಡುತ್ತೇವೆ. ಇಚ್ಛಾಶಕ್ತಿ ಹಾಗೂ ಸಮರ್ಪಣಾ ಮನೋಭಾವಕ್ಕೆ ಅವರು ಆದರ್ಶ ಮಾದರಿಯೊಂದನ್ನು ನಮಗೆಲ್ಲಾ ರೂಪಿಸಿಕೊಡುತ್ತಾರೆ. ಸ್ಪರ್ಧೆಯು ಕಡುಕಷ್ಟಕರವಾದುದಲ್ಲದೆ, ಇದು ಎಲ್ಲರಿಗೂ ಸಾಧ್ಯವಾಗುವಂಥದಲ್ಲ. ಯಾವುದೇ ಕ್ರೀಡೆಗೆ ಮೂಲಭೂತ ಸೌಲಭ್ಯ, ಸಮಾಯಾವಕಾಶ ಮುಂತಾದ ಅನುಕೂಲಗಳು ಎಲ್ಲರಲ್ಲೂ ಇರುವುದಿಲ್ಲ. ಕ್ರೀಡೆಯು ಶ್ರೇಷ್ಠಾತಿ ಶ್ರೇಷ್ಠವಾದುದು ಮಾತ್ರವಲ್ಲ ವಿವಿಧ ರಾಷ್ಟ್ರಗಳ ಹಾಗೂ ಭಾಷೆಗಳ ಜನ ಸಮುದಾಯವು ಪರಸ್ಪರ ಹೃದಯ ಸಂವಾದದಲ್ಲಿ ತೊಡಕುಗಳು ಬಹುಶಃ ಅತ್ಯುತ್ತಮವಾದ ವಿಧಾನವೂ ಹೌದು. ಕ್ರೀಡೆಯು ಸಂಬಂಧ ಸೇತುವೆಯನ್ನು ನಿರ್ಮಿಸಬಲ್ಲದಲ್ಲದೆ ಅಡ್ಡಿ ಆತಂಕಗಳ ಅಡ್ಡಗೋಡೆಗಳನ್ನು ನಿರ್ನಾಮ ಮಾಡುತ್ತದೆ. ಸರ್ವೇಸಾಮಾನ್ಯವಾಗಿ ಚರ್ಚಿಸಲು ಸಾಧ್ಯವಾಗುವ ಸರಕನ್ನೂ ಒಳಗೊಂಡ ಇದು ಚೇತೋಹಾರಿಯೂ ಮನೋರಂಜಕ ಸಹಚರಿಯೂ ಆಗಿದೆ.

ಜೀವನವೆಂಬ ಓಟದ ಸ್ಪರ್ಧೆಯಲ್ಲಿ ನಾವೆಲ್ಲರೂ ಭಾಗಿಗಳಾಗಲೇ ಬೇಕು. ಕೆಲವೊಮ್ಮೆ ಕಲ್ಲುಮುಳ್ಳುಗಳ ದುರ್ಗಮವಾದ ಹಾದಿಯನ್ನು ಕ್ರಮಮಿಸಬೇಕಾಗುತ್ತದೆ. ಸ್ವಪ್ರಯತ್ನದಿಂದ ಸಾಗಿದೆವಾದರೆ ಮಾರ್ಗಕ್ರಮಣ ಮಾಡುವುದು ಅಸಾಧ್ಯ ಎಂಬಷ್ಟರ ಮಟ್ಟಿಗೆ ಅಡಚಣೆಗಳು ಒದಗಿ ಬರುತ್ತವೆ. ಆದರೆ, ಹಾದಿಗುಂಟ, ನಾವೆಲ್ಲ ಪರಸ್ಪರ ಸಹಾಯ ಸೌಹಾರ್ದಗಳ ವಿನಿಮಯದಲ್ಲಿ ತೊಡಗಿ ಸಾಗಿದೆವಾದರೆ ಸ್ಪರ್ಧೆಯು ಸುಗಮವೂ ಸಹನೀಯವೂ ಆಗುವಂತೆ ಮಾಡಲು ನಮಗೆ ಸಾಧ್ಯವಿದೆ. ಐವತ್ತು ಮಂದಿಯ ಕಾಮನ್ವೆಲ್ತ್ ಸದಸ್ಯರಾದ ನಮ್ಮಲ್ಲಿ ಸಹಕಾಯಕತ್ವವೂ ಸ್ನೇಹಶೀಲವೂ ಆದ ಸ್ಪರ್ಧೆ ಸಾಧ್ಯವಿದೆ. ಪ್ರತಿಯೊಬ್ಬರ ಜೀವನವನ್ನೂ ಉತ್ತಮಗೊಳಿಸುವ ಸಲುವಾಗಿ ನಮ್ಮ ಸಂಪನ್ಮೂಲಗಳನ್ನು ಮತ್ತು ಶಕ್ತಿಮೂಲಗಳನ್ನು ನಾವು ಒಗ್ಗೂಡಿಸಬಹುದಾಗಿದೆ. ನಿಜಕ್ಕೂ ನಾವು ಗೆಲ್ಲಬೇಕಾದ ಬಹುಮಾನವೆಂದರೆ ಇದು.

ಈಗ ಸದನವನ್ನು ಮುಂದೂಡಿ, ನಾಳೆ ಬೆಳಿಗ್ಗೆ 11-00 ಗಂಟೆಗೆ ಮತ್ತೆ ಸಮಾವೇಶವಾಗುವುದು.

(ಸದನವು ಸಂಜೆ 5-52ಕ್ಕೆ ಮುಕ್ತಾಯವಾಗಿ ಮತ್ತೆ ದಿನಾಂಕ 29-3-94ರಂದು ಬೆಳಿಗ್ಗೆ 11 ಗಂಟೆಗೆ ಸೇರಲು ನಿಶ್ಚಯಿಸಿತು)

+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ).

L. A. Vol. : IV
No. of Copies 680

KARNATAKA LEGISLATURE SECRETARIAT

Published under Rule 336 of the Rules of Procedure and Conduct of Business in the Legislative Assembly

AND

Printed by the Director, Printing, Stationery and Publications at the Government Press, Bangalore-560 001

KSA LIBRARY, B'lore
B020633
328.32402 548 LAD,1994
JJ48